ಸಂಪುಟ
೩೩

ಇತಿಹಾಸ ದರ್ಶನ

೨೦೧೮



ಸಂಪಾದಕರು

ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜಸ್ವಾಮಿ

KARNATAKA ITIHASA ACADEMY
कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು

ಕರ್ನಾಟಕ ಇತಿಹಾಸ ಅಕಾದೆಮಿಯ ೩೧ ಉದ್ಘಾಟನಾ ಸಮಾರಂಭ



ಡಾ. ವೀರಣ್ಣ ರಾಜೂರ ಅವರಿಂದ ಕರ್ನಾಟಕ ಇತಿಹಾಸ ಅಕಾದೆಮಿಯ 31ನೆಯ ವಾರ್ಷಿಕ ಸಮ್ಮೇಳನದ ಉದ್ಘಾಟನೆ
ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ, ಕೊಪ್ಪಳ

ಇತಿಹಾಸ ದರ್ಶನ

ITIHASA DARSANA - *Volume 33* / 2018

ಸಂಪುಟ ೩೩ / ೨೦೧೮

೨೦೧೭ರ ಅಕ್ಟೋಬರ್ ೨೮ರಿಂದ ೩೦ರವರೆಗೆ ಕರ್ನಾಟಕ ಇತಿಹಾಸ ಅಕಾದೆಮಿ(ರಿ) ಹಾಗೂ ಕರ್ನಾಟಕ ರಾಜ್ಯಪ್ರಾಚ್ಯ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ ಶ್ರೀ ಗವಿಸಿದ್ಧೇಶ್ವರ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಕೊಪ್ಪಳ, ಬಿ.ಸಿ. ಪಾಟೀಲ ಟ್ರಸ್ಟ್ ಕೊಪ್ಪಳ, ಇವರ ಆಶ್ರಯದಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೩೧ನೆಯ ವಾರ್ಷಿಕ ಸಮ್ಮೇಳನದಲ್ಲಿ ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜಸ್ವಾಮಿ

KARNATAKA ITIHASA ACADEMY
ಕರ್ನಾಟಕ ಇತಿಹಾಸ ಅಕಾದೆಮಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA - *Volume 33* / 2018

The volume of the scholarly papers presented and
Proceedings of the 31st Annual Conference

The Karnataka Ithihasa Academy (Regd.,)
S.G.V.V. Trust Gavisiddeswara Arts & Science College, Koppal &
B.C. Patil Trust, Koppal
on 28th, 29th & 30th October 2017

Published by : Secretary
Karnataka Itihasa Academy (Regd.)
B.M. Sri Pratistana, 3rd Main Road,
Narasimharaja Colony, Bengaluru - 560 019.

karnatakaitihasaacademy25@gmail.com

www.karnatakaitihasaacademy.org

Edited by : **Devarakondareddy**
G.K. Devarajaswamy

ಪುಟಗಳು : ೫೯೨ + xxxii + Col. Photos XII

Pages : 592 + xxxii + Co. Photos XII

Price : ₹ **750**

ಬೆಲೆ : ₹ ೭೫೦

ISBN No. 978-81-921255-8-9


ಆರ್ಥಿಕ ನೆರವು: ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.
ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.

Printed at
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA Bangalore
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨



॥ಶ್ರೀ ಜಗದ್ಗುರು ರೇಣುಕಾಚಾರ್ಯ: ಪ್ರಸೀದತು॥

ಮಾನವ ಧರ್ಮಕ್ಕೆ ಜಯವಾಗಲಿ।
ಧರ್ಮದಿಂದಲೇ ವಿಶ್ವಕ್ಕೆ ಶಾಂತಿ॥



ಸಾಹಿತ್ಯ–ಸಂಸ್ಕೃತಿ ಸಂವರ್ಧಿಸಲಿ।
ಶಾಂತಿ–ಸಮೃದ್ಧಿ ಸರ್ವರಿಗಾಗಲಿ॥

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು
ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು

ಬಾಳೆಹೊನ್ನೂರು 577112 ಚಿಕ್ಕಮಗಳೂರು ಜಿಲ್ಲೆ ಕರ್ನಾಟಕ ರಾಜ್ಯ

ದಿನಾಂಕ : 07–10–2018 ವಾಸ್ತವ್ಯ : ಮಲಯಾಚಲ ತಪೋಭೂಮಿ

ಶುಭಾಶೀರ್ವಾದ ಸಂದೇಶ

ಭಾರತದಲ್ಲಿ ಅಧ್ಯಾತ್ಮ ಸಂಪತ್ತು ಸಾಕಷ್ಟಿದೆ. ಶಾಂತಿ ಸಾಮರಸ್ಯದ ಬದುಕಿಗೆ ಮತ್ತು ಇತಿಹಾಸದ ಅರಿವು ಮುಖ್ಯ. ಜೀವನದ ಮೌಲ್ಯಗಳು ಅಂತ್ಯಗೊಂಡರೆ ಅದರೊಂದಿಗೆ ಮಾನವೀಯತೆ ಅಂತ್ಯವಾಗುತ್ತದೆ. ಯುವ ಜನಾಂಗಕ್ಕೆ ಇತಿಹಾಸದ ಅರಿವು ಅಗತ್ಯ. ವರ್ತಮಾನ ಮತ್ತು ಭವಿಷ್ಯತ್ತುಗಳಿಗೆ ಹಿಂದಿನ ಇತಿಹಾಸ ಅಡಿಪಾಯ. ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಇತಿಹಾಸದ ಪ್ರಜ್ಞೆ ಅವಶ್ಯಕವೆಂಬುದನ್ನು ಮರೆಯಬಾರದು. ಜಗತ್ತು ಬೆಳಗಲು ಸೂರ್ಯ ಬೇಕು. ಸಾಹಿತ್ಯ ಸಂವರ್ಧಿಸಲು ಹಿಂದಿನ ಇತಿಹಾಸ ಪರಂಪರೆಯ ಅರಿವು ಮುಖ್ಯ.

ಬಾಳಿನಲ್ಲಿ ಸಂಸ್ಕೃತಿ ಸಂಸ್ಕಾರ ಇಲ್ಲದೇ ಹೋದರೆ ಬಾಳು ಬೆಳಗದು. ಬಾಳಿನ ಉತ್ಕರ್ಷತೆಗೆ ಧರ್ಮ ಪರಿಪಾಲನೆ – ಸಾಹಿತ್ಯ ಚಿಂತನ ಅವಶ್ಯಕ. ಮನುಷ್ಯನಾಗಿ ಬದುಕುವುದು ಸಂಸ್ಕೃತಿಯ ಲಕ್ಷಣ. ಮನುಷ್ಯತ್ವ ಮರೆತು ಬಾಳಿದರೆ ಅವನತಿ ಕಟ್ಟಿಟ್ಟ ಬುತ್ತಿ. ಜೀವ ಸಂಪತ್ತು ಸೌಂದರ್ಯ ಇರುವ ಮುನ್ನ ಮೂರು ಫಳಿಗೆಯ ಬಾಳು ಉಜ್ವಲಗೊಳ್ಳಬೇಕು. ಅರಿವಿಲ್ಲದ ಅಧಮರೊಂದಿಗೆ ಹೋರಾಡುವುದಕ್ಕಿಂತ ಸಜ್ಜನರೊಡನೆ ಸಂಸ್ಕೃತಿ ಸಾಹಿತ್ಯ ಹಂಚಿಕೊಂಡು ಬಾಳುವುದು ಹೆಚ್ಚು ಶ್ರೇಯಸ್ಕರ. ಹೃಯದ ಪರಿವರ್ತನೆಯಾಗದ ವಿನಃ ಎಷ್ಟೆ ವಿದ್ಯಾವಂತನಾದರೂ ಜೀವನ ವ್ಯರ್ಥ. ತಾನು ಪರಿವರ್ತನೆಗೊಂಡು ಇನ್ನೊಬ್ಬರಿಗೆ ಹೇಳಿದಾಗ ಅದು ಜನ ಮನದ ಮೇಲೆ ಅಚ್ಚಳಿಯದ ಪ್ರಭಾವ ಬೀರುತ್ತದೆ.

ಧರ್ಮ ಮತ್ತು ವಿಜ್ಞಾನ ಎಲ್ಲರಿಗೂ ಅವಶ್ಯಕ. ಧರ್ಮವಿಲ್ಲದ ವಿಜ್ಞಾನ, ವಿಜ್ಞಾನವಿಲ್ಲದ ಧರ್ಮ ಬೆಳೆಯುವುದು ಬಲು ಕಷ್ಟ. ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಎರಡು ಕೂಡಾ ಅಷ್ಟೇ ಅವಶ್ಯಕ. ಕಟ್ಟಡದಲ್ಲಿರುವ ಬುನಾದಿ ಕಲ್ಲು ಯಾರ ಕಣ್ಣಿಗೂ ಕಾಣಿಸದು. ಆದರೆ ಆ ಭವ್ಯ ಕಟ್ಟಡ ತಲೆ ಎತ್ತಿ ನಿಂತಿರುವುದು ಭದ್ರ ಬುನಾದಿಯ ಕಲ್ಲುಗಳಿಂದ ಎಂಬುದನ್ನು ಎಷ್ಟೋ ಜನರು ಮರೆತು ಬಿಡುತ್ತಾರೆ. ಧರ್ಮ ಸಂಸ್ಕೃತಿಯ ಉತ್ಕರ್ಷತೆಗೆ ಹಿಂದಿನ ಇತಿಹಾಸ ಪರಂಪರೆ ಪೂರಕವೆಂಬುದನ್ನು ಮರೆಯಬಾರದು. ರಾಷ್ಟ್ರ ಮತ್ತು ರಾಷ್ಟ್ರಧರ್ಮ ಬೆಳೆದು ಬರುವ ಅವಶ್ಯಕತೆಯಿದೆ. ದೇಶದ ಬೆಳವಣಿಗೆಗೆ ಅಸಿ ಮಸಿ ಕೃಷಿ ಬಹು ಮುಖ್ಯ. ಅತಿ ಶತ್ರುಗಳನ್ನು ನಿಯಂತ್ರಿಸಬಹುದು. ಆದರೆ ಮಿತಿ ಶತ್ರುಗಳನ್ನು ನಿಯಂತ್ರಿಸುವುದು ಕಷ್ಟ. ಇಂದಿನ ಪರಿಸ್ಥಿತಿ ಕೂಡಾ ಅದೇ ಆಗಿದೆ ಎಂದರೆ ತಪ್ಪಾಗದು.

ಕರ್ನಾಟ ಇತಿಹಾಸ ಅಕಾಡೆಮಿ (ರಿ) ಪ್ರತಿ ವರುಷ ವಾರ್ಷಿಕ ಸಮ್ಮೇಳನ ನಡೆಸುತ್ತಾ ಬಂದಿದೆ. ಸಂಶೋಧನೆ, ಇತಿಹಾಸ, ಸಾಂಸ್ಕೃತಿಕ ಚರಿತ್ರೆಗಳ ಪ್ರಬಂಧಗಳ ಸಂಪುಟಗಳನ್ನು ಇತಿಹಾಸ ಅಕಾಡೆಮಿ ಪ್ರಕಟಿಸುತ್ತ ಬಂದಿದೆ. 32ನೇ ವಾರ್ಷಿಕ ಸಮ್ಮೇಳನವು ಬಾಗಲಕೋಟೆ ಜಿಲ್ಲೆ ಶಿವಯೋಗಮಂದಿರದಲ್ಲಿ ಅಕ್ಟೋಬರ್ 26 ರಿಂದ 28ರ ವರೆಗೆ ಜರುಗಲಿರುವುದು ಸಂತೋಷದ ಸಂಗತಿ. ಕಳೆದ 14 ವರ್ಷಗಳಿಂದ ಇತಿಹಾಸ ದರ್ಶನ ಸಂಪುಟ ಪ್ರಕಟಣೆಗೆ ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ ರೂ. 25000/– (ಇಪ್ಪತ್ತೈದು ಸಾವಿರ) ರೂಪಾಯಿಗಳನ್ನು ಆಶೀರ್ವಾದ ಪೂರ್ವಕವಾಗಿ ಕಳಿಸುತ್ತಲೇ ಬಂದಿದೆ. ಈ ವರ್ಷವು ಸಹ 25000/– ರೂ. ಕರ್ನಾಟಕ ಬ್ಯಾಂಕಿನ ಚೆಕ್ಕನ್ನು ಕಳಿಸಲಾಗಿದೆ. 32ನೇ ವಾರ್ಷಿಕ ಸಮ್ಮೇಳನ ಹಾಗೂ ಇತಿಹಾಸ ದರ್ಶನ ಸಂಪುಟ ಪ್ರಕಟಣೆ ಕಾರ್ಯಗಳು ಯಶಸ್ವಿಯಾಗಿ ಜರುಗಲೆಂದು ಹೃದಯ ತುಂಬಿ ಶುಭ ಹಾರೈಸುತ್ತೇವೆ.

ಪರಮ ದಯಾಳು ಶ್ರೀ ಪಾರ್ವತಿ ಪರಮೇಶ್ವರರು, ಶ್ರೀ ಜಗದ್ಗುರು ರೇಣುಕಾಚಾರ್ಯರು ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಸರ್ವರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಶುಭಾಶೀರ್ವಾದಗಳೊಂದಿಗೆ

ಶ್ರೀ ರಂಭಾಪುರಿ ಜಗದ್ಗುರುಗಳು
ಬಾಳೆಹೊನ್ನೂರು



ಡಾ. ಶ್ರೀನಿವಾಸ ವಿ. ಪಾಡಿಗಾರ ಇವರಿಂದ ಇತಿಹಾಸ ದರ್ಶನ ಸಂಪುಟ 32 ಬಿಡುಗಡೆ ಸಮಾರಂಭ
ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ, ಕೊಪ್ಪಳ

31ನೇ ವಾರ್ಷಿಕ ಸಮ್ಮೇಳನದ ಪೋಷಕರು



ಪರಮಪೂಜ್ಯ ಶ್ರೀ ಮ.ನಿ.ಪ್ರ.ಜ. ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು
ಸಂಸ್ಥಾನ ಗವಿಮಠ ಕೊಪ್ಪಳ

ಶ್ರೀ ಗವಿಸಿದ್ದೇಶ್ವರರ ಗದ್ದುಗೆ, ಗವಿಮಠ, ಕೊಪ್ಪಳ





ಗವಿಮಠ ಮಹಾಸಂಸ್ಥಾನ, ಕೊಪ್ಪಳ



ಡಾ. ಪಿ.ಎನ್. ನರಸಿಂಹಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿಯ

ಮೂವತ್ತೊಂದನೇ ವಾರ್ಷಿಕ ಸಮ್ಮೇಳದ ಸರ್ವಾಧ್ಯಕ್ಷರು

2017



ರೆಡಪ್ಪಹಳ್ಳಿ ಅವರ 'ರಾಯಚೂರು ಕೋಟೆ' ಪುಸ್ತಕ ಡಾ. ಆರ್. ಗೋಪಾಲ ಅವರಿಂದ ಬಿಡುಗಡೆ



ಡಾ. ಶ್ಯಾಮಲ ಸಿ.ಆರ್. ಅವರ 'ಪೂರ್ವ ಕರ್ನಾಟಕದ ಪಾಳೆಯಗಾರರು' ಪುಸ್ತಕ ಡಾ. ಆರ್. ಗೋಪಾಲ ಅವರಿಂದ ಬಿಡುಗಡೆ



ಬೈಸಾನಿ ರುಕ್ಮಣಮ್ಮ ರತ್ನಂ ಶೆಟ್ಟಿ ಫ್ಯಾಮಿಲಿ ಚಾರಿಟಬಲ್ ಟ್ರಸ್ಟ್ ವತಿಯಿಂದ 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿ ಪುರಸ್ಕೃತರಾದ ಡಾ. ಶ್ರೀನಿವಾಸ ಎಚ್. ರಿತ್ತಿ ಅವರಿಗೆ ಶ್ರೀ ಅಶೋಕ್ ಕುಮಾರ್‌ರವರಿಂದ ನಗದು ಗೌರವಾರ್ಪಣೆ



ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ ಡಾ. ಎಂ.ಜಿ. ನಾಗರಾಜ್ ಶ್ರೀಮತಿ ಪದ್ಮಾ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರು ಸ್ಥಾಪಿಸಿರುವ ದತ್ತಿಯಿಂದ "ಸಂಶೋಧನ ಶ್ರೀ" ಪ್ರಶಸ್ತಿ ಪುರಸ್ಕೃತರಾದ ಪ್ರೊ. ಲಕ್ಷ್ಮಣ್ ತೆಲಗಾವಿ ಅವರಿಗೆ ಸನ್ಮಾನ



ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ ಪುರಸ್ಕೃತ ಡಾ. ಎಂ.ಜಿ. ಮಂಜುನಾಥ್ ಅವರಿಗೆ ಸನ್ಮಾನ



ನೊಳಂಬಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಕೆ.ಆರ್. ಬಸವರಾಜು ಅವರಿಗೆ ಸನ್ಮಾನ



ನಾಯಕಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಸಿ.ಆರ್. ಶ್ಯಾಮಲ ಅವರಿಗೆ ಸನ್ಮಾನ



ಡಾ. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ (ಅತ್ಯುತ್ತಮ ಪ್ರಾಗೈತಿಹಾಸಿಕ ಲೇಖನಕ್ಕೆ)
ಪ್ರಶಸ್ತಿ ಪುರಸ್ಕೃತರಾದ ಡಾ. ಎಸ್. ವೈ. ಸೋಮಶೇಖರ್ ಅವರಿಗೆ ಸನ್ಮಾನ



ಶ್ರೀಯುತ ವೇಮಗಲ್ ಸೋಮಶೇಖರ್ ಅವರಿಗೆ ಅಕಾದೆಮಿಯಿಂದ ವಿಶೇಷ ಗೌರವಾರ್ಪಣೆ



ಶ್ರೀಮತಿ ಸುಮಂಗಲ ಪಾಟೀಲ ಮಹಿಳಾ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಸೀತಾಲಕ್ಷ್ಮೀರಾವ್
ಅವರಿಗೆ ಡಾ. ಎಸ್.ಕೆ. ಜೋಶಿ ಅವರಿಂದ ಸನ್ಮಾನ



31ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಪಿ.ಎನ್. ನರಸಿಂಹ ಮೂರ್ತಿ ಅವರಿಗೆ ಸನ್ಮಾನ



ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ಕೆಂ.ಎಂ. ಲೋಕೇಶ್, ಕುಲಸಚಿವರು, ಮಂಗಳೂರ ವಿ.ವಿ ಅವರಿಂದ ಭಾಷಣ



31ನೇ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಗಣ್ಯ ಅತಿಥಿಗಳು : ಡಾ. ಎ.ವಿ. ಬಳ್ಳುಳ್ಳಿ, ಮಕ್ಕಳ ತಜ್ಞರು, ಪ್ರೊ. ಸೋಮಲಾಪುರ ಮಲ್ಲಿಕಾರ್ಜುನ, ಡಾ. ಬಿ. ರಾಜಶೇಖರಪ್ಪ, ಡಾ. ದೇವರಕೊಂಡರೆಡ್ಡಿ, ಪ್ರೊ. ಮನೋಹರ ದಾದ್ಮಿ, ಶ್ರೀ ಸಿ.ಬಿ. ಪಾಟೀಲ



31ನೇ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿದ ಡಾ. ಬಿ. ರಾಜಶೇಖರಪ್ಪ ಅವರಿಗೆ ಸನ್ಮಾನ



31ನೇ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಶ್ರೀ ಬಿ.ಸಿ. ಪಾಟೀಲ ಟ್ರಸ್ಟ್‌ನ ಡಾ. ಸಿ.ಬಿ. ಪಾಟೀಲ ಕೊಪ್ಪಳ ಅವರಿಗೆ ಸನ್ಮಾನ



ಗೋಷ್ಠಿಯಲ್ಲಿ ವಿದ್ವಾಂಸರ ಉಪಸ್ಥಿತಿ

: ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ : 2017 ಹರಿಹರ ದಾವಣಗೆರೆ ಜಿಲ್ಲೆ



ಐತಿಹಾಸಿಕ ಪರಂಪರೆ ಉಳಿಸಿ
ಕಾರ್ಯಕ್ರಮ ಉದ್ಘಾಟನೆ
ಡಾ. ಎಸ್. ಎಚ್. ಪ್ಯಾಟಿ ಪ್ರಾಂಶುಪಾಲರು
ಶ್ರೀಮತಿ ಗಿರಿಯಮ್ಮ ಆರ್.ಕಾಂತಪ್ಪ ಶ್ರೇಷ್ಠಿ
ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ
ಹರಿಹರ



ಶ್ರೀ ಡಿ. ನರಸಿಂಹಪ್ಪ
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹರಿಹರ
ಅವರಿಂದ
ಭಿತ್ತಿ ಪತ್ರ ಬಿಡುಗಡೆ



ಐತಿಹಾಸಿಕ ಪರಂಪರೆ ಉಳಿಸಿ
2017 ಹರಿಹರ
ಕಾರ್ಯಕ್ರಮದಲ್ಲಿ ಸಭಿಕರು

: ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ : 2017 ಹರಿಹರ ದಾವಣಗೆರೆ ಜಿಲ್ಲೆ



ಶ್ರೀಯುತ ಎಚ್.ಎಸ್. ಸ್ವಾಮಿಗೌಡ
ದುದ್ದ, ಹಾಸನ ಜಿಲ್ಲೆ ಅವರಿಗೆ
ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ
ವಿಶೇಷ ಸನ್ಮಾನ



ಭಿತ್ತಿ ಪತ್ರ ಬಿಡುಗಡೆ ಮಾಡಿದ
ಶ್ರೀ ಡಿ. ನರಸಿಂಹಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು
ಅವರಿಗೆ
ಡಾ. ದೇವರಕೊಂಡಾರೆಡ್ಡಿ ಅವರಿಂದ
ಸನ್ಮಾನ



ಶ್ರೀ ಡಿ.ಎಂ. ಮಂಜುನಾಥಯ್ಯ
ಅಧ್ಯಕ್ಷರು
ಸಾಹಿತ್ಯ ಸಂಗಮ (ರಿ.) ಹರಿಹರ
ಅವರಿಗೆ ಗಣ್ಯರಿಂದ ಸನ್ಮಾನ

ಅಕಾದೆಮಿಯ ಪ್ರವಾಸ – ಜುಲೈ 2018















ಅಧ್ಯಕ್ಷರ ನುಡಿ

ಕರ್ನಾಟಕ ಇತಿಹಾಸ ಅಕಾದೆಮಿಯು ೩೨ ವರ್ಷಗಳನ್ನು ಪೂರೈಸಿ ೩೩ನೆಯ ವರ್ಷಕ್ಕೆ ಕಾಲಿರಿಸುತ್ತಿದೆ. ಇದಕ್ಕೆ ಕಾರಣಕರ್ತರಾದ ಇತಿಹಾಸ ಅಕಾದೆಮಿಯ ಸದಸ್ಯರಿಗೆ, ಕಾರ್ಯಕಾರಿ ಸಮಿತಿ ಸದಸ್ಯರಿಗೆ, ನೆರವು ನೀಡಿದ ಮಹಾನುಭಾವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

೧೯೮೫ರಲ್ಲಿ ಆರಂಭವಾದ ಕರ್ನಾಟಕ ಇತಿಹಾಸ ಅಕಾದೆಮಿಯು ಜಿ.ಎಸ್. ದೀಕ್ಷಿತ್, ಸೂರ್ಯನಾಥ ಕಾಮತ್, ಶ್ರೀನಿವಾಸ ರಿತ್ತಿ, ಕೆ.ವಿ. ರಮೇಶ್ ಮುಂತಾದ ಹಿರಿಯರು, ಅನುಭವಿಗಳು ತೋರಿದ ದಾರಿಯಲ್ಲಿ ಸಾಗುತ್ತಿದೆ. ಇಡೀ ಸಂಘಟನೆ ಕರ್ನಾಟಕ ಸಂಸ್ಕೃತಿ ಮತ್ತು ಇತಿಹಾಸ ಅಧ್ಯಯನಕ್ಕೆ ಒತ್ತು ಕೊಡುತ್ತಿದೆ. ಇತ್ತೀಚೆಗೆ ಪಠ್ಯಗಳಲ್ಲಿ ಇತಿಹಾಸ ವಿಷಯ ಗೌಣವಾಗುತ್ತಿದ್ದು ಇದರ ಪರಿಣಾಮ ಇಂದಿನ ಯುವಜನತೆಗೆ ದೇಶದ ಪರಂಪರೆ ಬಗೆಗಿನ ಜ್ಞಾನ ಕಡಿಮೆಯಾಗುತ್ತಿದೆ. ಭಾರತ ಹಾಗೂ ದಕ್ಷಿಣ ಭಾರತದ ಇತಿಹಾಸವನ್ನು ರಚಿಸಿದವರು ಉತ್ತರದ ವಿದ್ವಾಂಸರು ಮತ್ತು ತಮಿಳುನಾಡಿನ ವಿದ್ವಾಂಸರು. ಇವರುಗಳು ಅವರ ಪ್ರಾಂತ್ಯಗಳ ಇತಿಹಾಸಕ್ಕೆ ನೀಡಿದ ಮಹತ್ವ ಕರ್ನಾಟಕಕ್ಕೆ ನೀಡಲಿಲ್ಲ. ಕರ್ನಾಟಕದ ಇತಿಹಾಸ ಕುರಿತು ಇಲ್ಲಿನ ಅನೇಕ ವಿದ್ವಾಂಸರಿಗೆ ಅಸಡ್ಡೆ. ಏಕೆಂದರೆ ಇವರೆಲ್ಲ ಓದಿಕೊಂಡಿದ್ದು, ಮೇಲೆ ಹೆಸರಿಸಿದ ವಿದ್ವಾಂಸರ ಕೃತಿಗಳನ್ನು. ಹೀಗಾಗಿ ಕ್ರಿ.ಶ.೬೦೦ರಿಂದ ಕ್ರಿ.ಶ.೧೨೦೦ರವರೆಗೆ ೬೦೦ ವರ್ಷಗಳ ಕಾಲ ಕಾವೇರಿಯಿಂದ ನರ್ಮದೆಯವರೆಗೆ ರಾಜ್ಯಭಾರ ಮಾಡಿದ್ದರೂ ಇತಿಹಾಸ ಪುಟಗಳಲ್ಲಿ ಇವರ ಬಗ್ಗೆ ಬರೆದಿರುವುದು ಕಡಿಮೆ. ಇಂತಹ ಕರ್ನಾಟಕದ ರಾಜರ ಬಗ್ಗೆ ಬರೆದು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ವಿದ್ವಾಂಸರ ಕೊರತೆ ಕರ್ನಾಟಕದಲ್ಲಿದೆ ಇದನ್ನು ಹೋಗಲಾಡಿಸುವ ಜವಾಬ್ದಾರಿ ಎಲ್ಲರ ಮೇಲಿದೆ.

ಈ ವರ್ಷದ ಪರಂಪರೆ ಉಳಿಸಿ ಕಾರ್ಯಕ್ರಮವನ್ನು (೨೦೧೮) ಗಬ್ಬೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಇತಿಹಾಸಾಭಿಮಾನಿಗಳ ಹಾಗೂ ರಾಯಚೂರು ಜಿಲ್ಲಾ ಇತಿಹಾಸ ಅಕಾದೆಮಿಯ ಆಶ್ರಯದಲ್ಲಿ ನಡೆಸಲಾಯಿತು. ಜಿಲ್ಲೆಯ ಅನೇಕ ಆಸಕ್ತರು, ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ದಿನ ಗದಗಿನ ಹವ್ಯಾಸಿ ಇತಿಹಾಸಕ್ತರಾದ ಅಬ್ದುಲ್ ರಜಾಕ್ ದಸ್ತಗೀರ್ ಕಟ್ಟಿಮನಿ ಅವರನ್ನು ಸನ್ಮಾನಿಸಲಾಯಿತು.

ಈ ವರ್ಷದ ೩೨ನೆಯ ಸಮ್ಮೇಳನವನ್ನು ನಡೆಸಲು ಹೆಗಲೆಣೆಯಾಗಿ ಬಾದಾಮಿಯ ಶೀಲಾಕಾಂತ ಪತ್ತಾರ ಮತ್ತು ಇಷ್ಟಲಿಂಗ ಸಿರಸಿಯವರು ಶ್ರಮಿಸುತ್ತಿದ್ದಾರೆ. ಶ್ರೀಮದ್ವೀರಶೈವ ಶಿವಯೋಗಮಂದಿರ, ಬಾದಾಮಿ ಇದರ ಅಧ್ಯಕ್ಷರಾದ ಪರಮಪೂಜ್ಯ ಡಾ॥ ಸಂಗನಬಸವಸ್ವಾಮಿಗಳು ಸಮ್ಮತಿಸಿದ್ದಾರೆ. ಇವರಿಗೆ ಅಕಾದೆಮಿಯು ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

ಅಕಾದೆಮಿಯ ಜಾಲತಾಣವು ಈಗ ಹೊಸ ರೀತಿಯಲ್ಲಿ ರಚಿಸಲಾಗಿದೆ. ಬಹಳಷ್ಟು ಜನರು ಅದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರ ನಿರ್ವಹಣೆಯನ್ನು ಶ್ರೀಮತಿ ಸೀತಾಲಕ್ಷ್ಮಿರಾವ್ ಅವರು ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅಕಾದೆಮಿಯ ಜಾಲತಾಣವೇ ಪ್ರಧಾನ ಸಂವಹನ ಮಾಧ್ಯಮವಾಗುವುದರಲ್ಲಿ ಸಂದೇಹವಿಲ್ಲ. ಇದರ ವಾರ್ಷಿಕ ವೆಚ್ಚವನ್ನು ದೇವರಕೊಂಡಾರೆಡ್ಡಿಯವರ ಅಭಿನಂದನಾ ಸಮಿತಿಯವರು ಇಟ್ಟಿರುವ ದತ್ತಿಯಿಂದ ಮಾಡಲಾಗುತ್ತಿದೆ.

ಅಕಾದೆಮಿಯು ಹೊರತರುತ್ತಿರುವ ಇತಿಹಾಸ ದರ್ಶನ ಸಂಪುಟದ ಪ್ರಕಟಣೆಗೆ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ವೀರಸಿಂಹಾನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯಭಗವತ್ಪಾದರು ಪ್ರತಿವರ್ಷದಂತೆ ಈ ವರ್ಷವೂ ರೂ.೨೫,೦೦೦/- ಗಳನ್ನು ನೀಡಿದ್ದಾರೆ. ಸತತ ೧೪ ವರ್ಷಗಳಿಂದ ಈ ಧನ ಸಹಾಯವನ್ನು ಮಾಡುತ್ತಾ ಬಂದಿರುವ ಇವರಿಗೆ ಅಕಾದೆಮಿ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕಳೆದ ವರ್ಷ ನಮ್ಮ ಬೇರೆ ಬೇರೆ ಕಾರ್ಯಕ್ರಮಗಳಿಗೆ ರೂ. ೩,೦೦,೦೦೦/- ಗಳನ್ನು ನೀಡಿದೆ. ಅಕಾದೆಮಿ ಮೇಲಿನ ಅಭಿಮಾನದಿಂದ ಅನೇಕರು ತಮ್ಮ ಕೈಲಾದಷ್ಟು ಧನಸಹಾಯವನ್ನು ಮಾಡಿದ್ದಾರೆ. ಇವರಿಗೆ ನಮ್ಮ ಕೃತಜ್ಞತೆಗಳು.

ಈ ವರ್ಷ ಇನ್ನೂ ಎರಡು ದತ್ತಿಗಳು ನಮ್ಮ ಅಕಾದೆಮಿಯಲ್ಲಿ ಸ್ಥಾಪಿಸಲಾಗಿದೆ. ಶ್ರೀನಿವಾಸ ಹಾವನೂರರ ಹೆಸರಿನಲ್ಲಿ ಡಾ. ಸಿ.ಆರ್. ಶ್ಯಾಮಲ ಅವರು ಒಂದು ದತ್ತಿಯನ್ನು ಸ್ಥಾಪಿಸಿದ್ದಾರೆ. ಇದು ರೂ.೧೦,೦೦೦/- ನಗದು ಮತ್ತು ಪ್ರಶಸ್ತಿ ಫಲಕವನ್ನು ಹೊಂದಿರುತ್ತದೆ. ಇನ್ನೊಂದು ಸಿ.ಬಿ. ಪಾಟೀಲರು ತಮ್ಮ ತಾಯಿ ಸುಮಂಗಲಾ ಪಾಟೀಲ ಹೆಸರಿನಲ್ಲಿ ಸಂಶೋಧಕಿಯರಿಗೆ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ಇದು ರೂ.೧೦,೦೦೦/- ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಅಕಾದೆಮಿ ಮೇಲೆ ನಂಬಿಕೆ ಇಟ್ಟು ದತ್ತಿ ಇರಿಸಿದ ಈ ಎಲ್ಲಾ ಮಹನೀಯರಿಗೆ ಕೃತಜ್ಞತೆಗಳು

ಅಕಾದೆಮಿಯ ಬೆಳವಣಿಗೆಯಲ್ಲಿ ದುಡಿದವರನ್ನು, ದುಡಿಯುವವರನ್ನು ಸ್ಮರಿಸಿ ಅಕಾದೆಮಿಯು ಉತ್ತರೋತ್ತರಾಭಿವೃದ್ಧಿಯಾಗಲೆಂದು ಆಶಿಸುತ್ತೇನೆ.

೧೨, ಅಕ್ಟೋಬರ್, ೨೦೧೮ **ದೇವರಕೊಂಡಾರೆಡ್ಡಿ**

ಬೆಂಗಳೂರು.

ಸಂಪಾದಕೀಯ

ಕರ್ನಾಟಕ ಇತಿಹಾಸ ಅಕಾದೆಮಿಯು ೩೧ನೆಯ ವಾರ್ಷಿಕ ಸಮ್ಮೇಳನಗಳನ್ನು ಆಚರಿಸಿ ೩೨ನೆಯ ವರ್ಷಕ್ಕೆ ಕಾಲಿಡುತ್ತಿದೆ. ಹಾಗೆಯೇ ಕರ್ನಾಟಕ ಇತಿಹಾಸ ಅಕಾದೆಮಿಯ ಪ್ರತಿಷ್ಠಿತ ಪ್ರಕಟಣೆಯದ **'ಇತಿಹಾಸ ದರ್ಶನ' ೩೩ನೆಯ ಸಂಪುಟವನ್ನು** ಶಿವಯೋಗಮಂದಿರ ಬಾದಾಮಿಯಲ್ಲಿ ಬಿಡುಗಡೆಗೊಳಿಸುತ್ತಿದ್ದೇವೆ. ಈ ನಮ್ಮ ಬೆಳವಣಿಗೆಯಲ್ಲಿ ಸರ್ಕಾರಗಳು, ಮಠಮಾನ್ಯಗಳು, ಸಂಘಸಂಸ್ಥೆಗಳು, ವ್ಯಕ್ತಿಗಳ ಪಾತ್ರವನ್ನು ನಾವು ಅಲ್ಲಗೆಳೆಯುವಂತಿಲ್ಲ.

ಇತಿಹಾಸ ದರ್ಶನ ೩೩ನೆಯ ಸಂಪುಟವು ೨೦೧೭ರ ಅಕ್ಟೋಬರ್ ೨೮–೩೦ ರವರೆಗೆ ಕರ್ನಾಟಕ ಇತಿಹಾಸ ಅಕಾದೆಮಿಯು ಕೊಪ್ಪಳದ ಗವಿಸಿದ್ದೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜು ಹಾಗೂ ಬಿ.ಸಿ. ಪಾಟೀಲ ಟ್ರಸ್ಟ್, ಕೊಪ್ಪಳ ಇವರ ಸಹಯೋಗದಲ್ಲಿ ಕೊಪ್ಪಳದಲ್ಲಿ ನಡೆಸಿದ ೩೧ನೆಯ ವಾರ್ಷಿಕ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧಗಳ ಸಂಪುಟವಾಗಿದೆ. ಈ ಸಮ್ಮೇಳನದಲ್ಲಿ ೧೬೦ ಪ್ರಬಂಧಗಳು ಮಂಡಿತವಾಗಿದ್ದವು. ಇವುಗಳಲ್ಲಿ ಸಂಪಾದಕ ಮಂಡಳಿಯಿಂದ ಆಯ್ಕೆಯಾದ ೧೩೩ ಪ್ರಬಂಧಗಳು ಮುದ್ರಣವಾಗಿವೆ. ಕಳೆದ ಮೂವತ್ತೆರಡು ವರ್ಷಗಳಿಂದ ನಿರಂತರವಾಗಿ ಅಕಾದೆಮಿಯ ಈ ಪ್ರಕಟಣೆ ಹೊರಬರುತ್ತಿದೆ. ಇದು ಹೆಮ್ಮೆಯ ವಿಷಯವಾಗಿದೆ.

ಈ ಸಂಪುಟದ ಮುದ್ರಣಕ್ಕೆ ಪ್ರಾಚ್ಯವಸ್ತು, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರಿಂದ ಸಹಾಯ ಪಡೆದಿದ್ದೇವೆ. ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯಭಗವತ್ಪಾದರು, ಬಾಳೆಹೊನ್ನೂರು ಇವರು ಪ್ರತಿವರ್ಷವೂ ಈ ಸಂಪುಟದ ಪ್ರಕಟಣೆಗೆ ರೂ.೨೫,೦೦೦ ಆಶೀರ್ವಾದಪೂರ್ವಕವಾಗಿ ಹದಿನಾಲ್ಕು ವರ್ಷಗಳಿಂದ ನೀಡುತ್ತಾ ಬಂದಿದ್ದಾರೆ. ಇವರೆಲ್ಲರಿಗೂ ಸಂಪಾದಕರು ಋಣಿಗಳಾಗಿದ್ದಾರೆ.

ಇತ್ತೀಚೆಗೆ ಹಿರಿಯ ಸಂಶೋಧಕರ ಜೊತೆಗೆ ಯುವಸಂಶೋಧಕರೂ ಆಸಕ್ತಿಯಿಂದ ಪ್ರಬಂಧಗಳನ್ನು ಮಂಡಿಸುತ್ತಿದ್ದು, ಸಂಶೋಧನಾಕ್ಷೇತ್ರದಲ್ಲಿ ಹೊಸ ಆಶಾಭಾವನೆ ಮೂಡಲು ಸಾಧ್ಯವಾಗಿದೆ. ಇದರೊಂದಿಗೆ ಸಂಶೋಧನಾ ಪ್ರಬಂಧಗಳ ಗುಣಮಟ್ಟವನ್ನು ಕಾಪಾಡಿಕೊಳ್ಳುವಲ್ಲಿ ಎಲ್ಲರ ಜವಾಬ್ದಾರಿ ಹೆಚ್ಚಾಗಿದೆ. ಈ ಸಂಶೋಧನಾ ಪ್ರಬಂಧಗಳನ್ನು ಅಕಾದೆಮಿಯ ವೆಬ್‌ಸೈಟ್ ಮೂಲಕ ವಿದ್ವಾಂಸರು ಮತ್ತು ಆಸಕ್ತರು ಓದುತ್ತಿರುವುದರಿಂದ ಎಚ್ಚರಿಕೆಯ ಹೆಜ್ಜೆಯನ್ನು ಇಡಬೇಕಾಗಿದೆ. ಈ ವರ್ಷ ನಮ್ಮ ಈ 'ಇತಿಹಾಸ ದರ್ಶನ' ಸಂಪುಟವನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾನದಂಡಗಳಿಗೆ ತರಲು ಪ್ರಯತ್ನಿಸಿ ಲೇಖನದ ಹೆಸರು ಹಾಗೂ ಲೇಖಕರ ಹೆಸರುಗಳನ್ನು ಅದಕ್ಕೆ ತಕ್ಕಂತೆ ಉಲ್ಲೇಖಿಸಿ ಮಾರ್ಪಾಡುಗಳನ್ನು ಮಾಡಲಾಗಿದೆ. ತಾವು ಈ ಬದಲಾವಣೆಯನ್ನು ಸ್ವೀಕರಿಸುವಿರೆಂದು ಭಾವಿಸಿದ್ದೇವೆ.

ಇತಿಹಾಸ ದರ್ಶನ ಸಂಪುಟ ೩೩ ಹೊರಬರಲು ನೆರವಾದ ಇತಿಹಾಸ ಅಕಾದೆಮಿಯ ಕಾರ್ಯಕಾರಿ ಸಮಿತಿ, ಇತಿಹಾಸ ದರ್ಶನ ಸಂಪಾದನಾ ಮಂಡಳಿ, ೩೧ನೆಯ ವಾರ್ಷಿಕ ಸಮ್ಮೇಳನಕ್ಕೆ ಸಹಯೋಗ ನೀಡಿದ್ದ ಕೊಪ್ಪಳದ ಬಿ.ಸಿ. ಪಾಟೀಲ ಟ್ರಸ್ಟ್, ಗವಿಸಿದ್ದೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜು, ಕೊಪ್ಪಳ, ಇ–ಮೇಲ್‌ನಲ್ಲಿ ಬಂದಿದ್ದ ಲೇಖನಗಳನ್ನು ಸಂಕಲಿಸಿದ ಶ್ರೀಮತಿ ನಿರ್ಮಲಾ ಎಸ್.ವೈ. ಹಾಗೂ ಶ್ರೀಮತಿ ಸಂಧ್ಯಾ ವಿ., ಲೇಖನಗಳ ಕರಡಚ್ಚು ತಿದ್ದುವಲ್ಲಿ ಸಹಕರಿಸಿದ್ದ ಶ್ರೀ ಕೆ.ಎಲ್.ರಾಜಶೇಖರ್, ಶ್ರೀ ಬಿ.ಎಸ್. ಗುರುಪ್ರಸಾದ್, ಶ್ರೀ ರೇಣುಕಸ್ವಾಮಿ ಒಡೆಯರ್ ಬಿ.ಈ, ನಳಿನಿ ವೆಂಕಟೇಶ್, ಅಂದವಾಗಿ ಮುದ್ರಿಸಿದ ಲಕ್ಷ್ಮಿ ಮುದ್ರಣಾಲಯದ ಶ್ರೀ ಕೆ.ಎಸ್. ಮಂಜು ಅವರಿಗೂ ಡಿ.ಟಿ.ಪಿ ಮಾಡಿ ಚಿತ್ರಗಳನ್ನು ಸಂಯೋಜಿಸಿದ ಶ್ರೀ ಪಿ.ಎಸ್. ಸುಬ್ರಮಣಿಬಾಬು, ಶ್ರೀಮತಿ ಮಾಲಾ ಎಂ. ಹಾಗೂ ಸಿಬ್ಬಂದಿ ವರ್ಗಕ್ಕೂ, ಇತಿಹಾಸ ದರ್ಶನದ ಸಂಪಾದಕ ಮಂಡಳಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

೧೨ ಅಕ್ಟೋಬರ್ ೨೦೧೮, ಶುಕ್ರವಾರ
ಶಾಲಿವಾಹನ ಶಕ: ೧೯೪೦
ವಿಳಂಬಿನಾಮ ಸಂವತ್ಸರ
ಆಶ್ವಯುಜ, ಶುಕ್ಲ ಚತುರ್ಥಿ.

ದೇವರಕೊಂಡಾರೆಡ್ಡಿ
ಜಿ.ಕೆ. ದೇವರಾಜಸ್ವಾಮಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಕಾರ್ಯಕಾರಿ ಸಮಿತಿ

(೨೩.೧೦.೨೦೧೬ರಲ್ಲಿ ಆಯ್ಕೆಯಾದವರು)

ಅಧ್ಯಕ್ಷರು

ಡಾ॥ ದೇವರಕೊಂಡಾರೆಡ್ಡಿ

ಉಪಾಧ್ಯಕ್ಷರು

ಡಾ॥ ಎಂ.ಜಿ. ನಾಗರಾಜ್

ಡಾ॥ ಎಚ್.ಎಸ್. ಗೋಪಾಲರಾವ್

ಪ್ರಧಾನ ಕಾರ್ಯದರ್ಶಿ

ಪ್ರೊ. ಜಿ.ಕೆ. ದೇವರಾಜಸ್ವಾಮಿ

ಕಾರ್ಯದರ್ಶಿಗಳು

ಶ್ರೀ ಕೆ.ಎಲ್. ರಾಜಶೇಖರ್

ಡಾ. ಸಂಧ್ಯಾ ವಿ.

ಕೋಶಾಧ್ಯಕ್ಷರು

ಶ್ರೀ ಎಂ.ಬಿ. ಪಾಟೀಲ್

ಸದಸ್ಯರು

ಡಾ॥ ಎ.ಕೆ. ಶಾಸ್ತ್ರಿ, ಶಿರಸಿ

ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಶ್ರೀ ಪ್ರಭಾಕರ್ ಎಂ.ಎನ್., ಮೈಸೂರು

ಡಾ॥ ಅಮರೇಶ್ ಯತಗಲ್, ಬಿಜಾಪುರ

ಪ್ರೊ. ಮುರುಗೇಶಿ ಟಿ., ಉಡುಪಿ

ಡಾ॥ ಹನುಮಾಕ್ಷಿ ಗೋಗಿ, ಧಾರವಾಡ

ಶ್ರೀ ಬಸವರಾಜ್ ಟಿ.ಎಚ್.ಎಂ. ಬಳ್ಳಾರಿ

ಶ್ರೀ ಕಲ್ಲಪ್ಪ ಮಹದೇವಪ್ಪ ಗರಗ, ಗದಗ

ಶ್ರೀ ಸಿ.ಬಿ. ಪಾಟೀಲ, ಕೊಪ್ಪಳ

ಶ್ರೀ ಸಿದ್ದಗಿರಿ ಓ.ಎಲ್. ಚಂದ್ರೇಗೌಡ, ಚಿಕ್ಕಮಗಳೂರು

ಪ್ರೊ. ಲಕ್ಷ್ಮಣ್ ತೆಲಗಾವಿ, ಧಾರವಾಡ

ಡಾ॥ ಎಫ್.ಟಿ. ಹಳ್ಳಿಕೇರಿ, ಯಾದಗಿರಿ

ಡಾ॥ ಲಿಂಗರಾಜು, ಮಂಡ್ಯ

ಡಾ॥ ಚಂದ್ರಶೇಖರ್ ಎಚ್. ಬೆಂಗಳೂರು

ಶ್ರೀ ಸುಮತೀಂದ್ರ ನಾಡಿಗ್, ದಾವಣಗೆರೆ

ಶ್ರೀ ಗುರುಪ್ರಸಾದ್ ಬಿ.ಎಸ್., ಬೆಂಗಳೂರು

ಶ್ರೀ ಗುರುಶಾಂತಪ್ಪ ವಿ.ಪಿ., ಬೆಂಗಳೂರು

ಡಾ. ಎಸ್.ಕೆ. ಮೇಲಾಕಾರ, ಧಾರವಾಡ

ಶ್ರೀ ಇಷ್ಟಲಿಂಗ ಶಿರಸಿ, ಬಾದಾಮಿ

ಪರಿವಿಡಿ

ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು

ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೧. **ಡಾ॥ ಎಂ. ಚಿದಾನಂದಮೂರ್ತಿ**
೧೫-೧೭ ಮೇ ೧೯೮೭
ಕರ್ನಾಟಕ ಇತಿಹಾಸ ಅಕಾದೆಮಿ
ಬೆಂಗಳೂರು



೨. **ಡಾ॥ ಜಿ. ಎಸ್. ಗಾಯಿ**
೨೩-೨೪ ಅಕ್ಟೋಬರ್ ೧೯೮೮
ಸಿದ್ಧಗಂಗಾಕ್ಷೇತ್ರ : ಡಾ। ಶಿವಕುಮಾರ ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ ಇತಿಹಾಸ ಪರಿಷತ್ತು, ತುಮಕೂರು



೩. **ಡಾ॥ ಶ್ರೀನಿವಾಸ ರಿತ್ತಿ**
೧೦-೧೧ ಜೂನ್ ೧೯೮೯
ಶ್ರೀ ಮ. ನಿ. ಪ್ರ. ಜ॥ ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಗದಗ



೪. **ಡಾ॥ ಎಸ್. ಆರ್. ರಾವ್**
೨೧-೨೨ ಜುಲೈ ೧೯೯೦
ಡಾ॥ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ, ದಾವಣಗೆರೆ



೫. **ಡಾ॥ ಬಾ. ರಾ. ಗೋಪಾಲ್**
೧೨-೧೪ ಜುಲೈ ೧೯೯೧
ಚಿನ್ಮೂಲಾದ್ರಿ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ



೬. **ಡಾ॥ ಕೆ. ವಿ. ರಮೇಶ್**
೧೧-೧೩ ಜುಲೈ ೧೯೯೨
ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ
ರಾಯಚೂರು



೭. **ಡಾ॥ ಅ. ಸುಂದರ**
೨೩-೨೫ ಜುಲೈ ೧೯೯೩
ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೆ. ಎಸ್. ಎಸ್. ಸಂಸ್ಥೆ, ಮೈಸೂರು



೮. **ಡಾ॥ ಎಂ. ಎಂ. ಕಲಬುರ್ಗಿ**
೯-೧೦ ಜುಲೈ ೧೯೯೪
ಶ್ರೀ ಎಂ. ವೈ. ಘೋರ್ಪಡೆ
ಕರ್ನಾಟಕ ಸೇವಾ ಸಂಘ
ಸೊಂಡೂರು



೯. **ಡಾ॥ ಎ.ವಿ. ನರಸಿಂಹಮೂರ್ತಿ**
೯-೧೧ ಸೆಪ್ಟೆಂಬರ್ ೧೯೯೫
ಶ್ರೀ ಮ. ನಿ. ಪ್ರ. ಸಿದ್ಧರಾಮ ಮಹಾಸ್ವಾಮಿಗಳು - ಶ್ರೀ ನಾಗನೂರು ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ ಬೆಳಗಾವಿ





೧೦. **ಡಾ॥ ಜಿ. ಎಸ್. ದೀಕ್ಷಿತ್**
೭-೯ ಜೂನ್ ೧೯೯೬
ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಶ್ರೀ ಮ. ನಿ. ಪ್ರ. ಶಿವಯೋಗಿ ಮಹಾಸ್ವಾಮಿಗಳು ಶ್ರೀ ಮುರುಘಾಮಠ ಧಾರವಾಡ




೧೧. **ಪ್ರೊ॥ ಕೆ. ಅಭಿಶಂಕರ್**
೨೫-೨೭ ಅಕ್ಟೋಬರ್ ೧೯೯೭
ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ ಶಿರಸಿ



೧೨. **ಡಾ॥ ಎಸ್. ನಾಗರಾಜು**
೧೪-೧೬ ನವೆಂಬರ್ ೧೯೯೮
ಕರ್ನಾಟಕ ಇತಿಹಾಸ ಅಕಾದೆಮಿ
ದಿ ಮಿಥಿಕ್ ಸೊಸೈಟಿ, ಬೆಂಗಳೂರು



೧೩. **ಡಾ॥ ಶ್ರೀನಿವಾಸ ಹಾವನೂರ**
೧೧-೧೩ ಜೂನ್ ೧೯೯೯
ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್ ಮತ್ತು ಆಯೋಜಕರಾದ ಶ್ರೀ ಕುಂ.ಬಾ.ಸದಾಶಿವಪ್ಪ ಸ್ವಾಗತ ಸಮಿತಿ, ಹರಪನಹಳ್ಳಿ




೧೪. **ಶ್ರೀ ಸಿ. ಟಿ. ಎಂ. ಕೊಟ್ರಯ್ಯ**
೮-೧೦ ಜುಲೈ ೨೦೦೦
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ
ಹಂಪಿ

ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ	ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೧೫. ಡಾ|| ಜ್ಯೋತ್ಸ್ನಾ ಕಾಮತ್
೧೩-೧೫ ಅಕ್ಟೋಬರ್ ೨೦೦೧
ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು
ಪೇಜಾವರ ಮಠಾಧೀಶರು, ಉಡುಪಿ




೧೬. ಡಾ. ಎ.ಕೆ. ಶಾಸ್ತ್ರಿ
೨೨-೨೪ ಸೆಪ್ಟೆಂಬರ್ ೨೦೦೨
ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು
ಶ್ರೀ ರಾಮಚಂದ್ರಾಪುರ ಮಠ
ಹೊಸನಗರ



೧೭. ಡಾ. ಎಸ್. ರಾಜಶೇಖರ್
೧೩-೧೫ ಸೆಪ್ಟೆಂಬರ್ ೨೦೦೩
ವಿಶ್ವಚೇತನ ಸಂಸ್ಥೆ
ಬಾದಾಮಿ



೧೮. ಶ್ರೀ ಕೆಳದಿ ಗುಂಡಾ ಜೋಯಿಸ್
೨೪-೨೬ ಸೆಪ್ಟೆಂಬರ್ ೨೦೦೪
ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠ
ಚನ್ನ-ಚೇತನ ಪ್ರಕಾಶನ ಮತ್ತು ಹಿರೇಕಲ್ಮಠ
ಹೊನ್ನಾಳಿ




೧೯. ಡಾ. ಬಿ.ವ್ಹಿ. ಶಿರೂರ
೧೧-೧೩ ಸೆಪ್ಟೆಂಬರ್ ೨೦೦೫
ಶ್ರೀ ಕೊತ್ತಲ ಬಸವೇಶ್ವರ
ಭಾರತೀಯ ಶಿಕ್ಷಣ ಸಂಸ್ಥೆ, ಸೇಡಂ



೨೦. ಡಾ. ಸೂರ್ಯನಾಥ ಕಾಮತ್
೯-೧೧ ಸೆಪ್ಟೆಂಬರ್ ೨೦೦೬
ಶ್ರೀ ರಾಘವೇಂದ್ರ ಸ್ವಾಮಿಗಳ ಮಠ
ನಂಜನಗೂಡು




೨೧. ಪ್ರೊ. ಲಕ್ಷ್ಮಣ್ ತೆಲಗಾವಿ
೮-೧೦ ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿಯ
ರಾಮನಗರ, ಹಗರಿಬೊಮ್ಮನಹಳ್ಳಿ
ಶ್ರೀರಾಮ ಯುವಕ ಸಂಘ



೨೨. ಡಾ. ವಸುಂಧರಾ ಫಿಲಿಯೋಜಾ
೧೮-೨೧ ಸೆಪ್ಟೆಂಬರ್ ೨೦೦೮
ಧರ್ಮಸ್ಥಳ ಮಂಜುನಾಥೇಶ್ವರ
ದೇವಾಲಯ ಸಂಸ್ಥೆ, ಧರ್ಮಸ್ಥಳ



೨೩. ಡಾ. ಎಂ.ಜಿ. ನಾಗರಾಜ್
೧೦-೧೨ ಅಕ್ಟೋಬರ್ ೨೦೦೯
ಶ್ರೀ ಜಗದ್ಗುರು ರಂಭಾಪುರಿ
ವೀರ ಸಿಂಹಾಸನ ಮಹಾಸಂಸ್ಥಾನ ಪೀಠ
ಬಾಳೆಹೊನ್ನೂರು



೨೪. ಡಾ. ಎಂ.ಎಸ್. ಕೃಷ್ಣಮೂರ್ತಿ
೧೩-೧೫ ನವೆಂಬರ್ ೨೦೧೦
ಶ್ರೀ ಆದಿಚುಂಚನಗಿರಿ
ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ




೨೫. ಡಾ. ಎಚ್.ಎಸ್.ಗೋಪಾಲರಾವ್
೯-೧೧ ಸೆಪ್ಟೆಂಬರ್ ೨೦೧೧
ದಿ ಮಿಥಿಕ್ ಸೊಸೈಟಿ
ಬೆಂಗಳೂರು




೨೬. ಡಾ. ಎಸ್.ವಿ. ವೆಂಕಟೇಶಯ್ಯ
೨೨-೨೪ ಸೆಪ್ಟೆಂಬರ್ ೨೦೧೨
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್
ಶೃಂಗೇರಿ




೨೭. ಡಾ. ಎಸ್.ಕೆ. ಜೋಷಿ
೨೧-೨೩ ಸೆಪ್ಟೆಂಬರ್ ೨೦೧೩
ದಿ ಮಿಥಿಕ್ ಸೊಸೈಟಿ
ಬೆಂಗಳೂರು




೨೮. ಡಾ. ಕೆ.ಜಿ. ವಸಂತ ಮಾಧವ
೨೬-೨೮ ಸೆಪ್ಟೆಂಬರ್ ೨೦೧೪
ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು
ಶಿರ್ವ, ಉಡುಪಿ ಜಿಲ್ಲೆ
ಉಡುಪಿ



೨೯. ನಾಡೋಜ ಪ್ರೊ. ಹಂಪ ನಾಗರಾಜಯ್ಯ
೨೯-೩೧ ಅಕ್ಟೋಬರ್ ೨೦೧೫
ಕರ್ನಾಟಕ ಸಂಘ (ರಿ.) ಮಂಡ್ಯ
ಮಂಡ್ಯ ಜಿಲ್ಲೆ



೩೦. ಪ್ರೊ. ಕೆ. ಪದ್ದಯ್ಯ
೨೨-೨೪ ಅಕ್ಟೋಬರ್ ೨೦೧೬
ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿ.ವಿ, ಧಾರವಾಡ



ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೩೧. ***ಡಾ. ಪಿ.ಎನ್. ನರಸಿಂಹಮೂರ್ತಿ***
೨೮–೩೦ ಅಕ್ಟೋಬರ್ ೨೦೧೭
ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ
ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ
ಮತ್ತು ಶ್ರೀ ಬಿ.ಸಿ. ಪಾಟೀಲ ಟ್ರಸ್ಟ್
ಕೊಪ್ಪಳ



೩೨. ***ಡಾ. ಬಿ. ರಾಜಶೇಖರಪ್ಪ***
೨೬–೨೮ ಅಕ್ಟೋಬರ್ ೨೦೧೮
ಶ್ರೀಮದ್ವೀರಶೈವ ಶಿವಯೋಗಮಂದಿರ
ಸಂಸ್ಥೆ, ಶಿವಯೋಗಮಂದಿರ, ಬಾದಾಮಿ
ತಾಲ್ಲೂಕು, ಬಾಗಲಕೋಟೆ ಜಿಲ್ಲೆ



ಡಾ. ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಸನ್ಮಾನಿತರು

[ಪ್ರಾರಂಭ : ೨೦೦೧ ರಿಂದ ನಗದು ಹತ್ತು ಸಾವಿರ ರೂಪಾಯಿಗಳು]

---

೧ ***ಡಾ. ಕೆ.ವಿ. ರಮೇಶ***
೧೫ನೇ ವಾರ್ಷಿಕ ಸಮ್ಮೇಳನ
ಅಕ್ಟೋಬರ್ ೨೦೦೧
ಉಡುಪಿ




೨ ***ಡಾ. ಶ್ರೀನಿವಾಸ ರಿತ್ತಿ***
೧೬ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೨
ಹೊಸನಗರ



೩ ***ಡಾ. ದೇವರಕೊಂಡಾರೆಡ್ಡಿ***
೧೭ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೩
ಬಾದಾಮಿ



೪ ***ಡಾ. ಬಿ. ರಾಜಶೇಖರಪ್ಪ***
೧೮ನೇ ಸಮ್ಮೇಳನ
ಸೆಪ್ಟಂಬರ್ ೨೦೦೪
ಹೊನ್ನಾಳಿ



೫ ***ಡಾ. ಕೆ.ಆರ್. ಗಣೇಶ್***
೧೯ನೇ ಸಮ್ಮೇಳನ
ಸೆಪ್ಟಂಬರ್ ೨೦೦೫
ಸೇಡಂ



೬ ***ಡಾ. ಎಂ.ಜಿ. ನಾಗರಾಜ್***
೨೦ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೬
ನಂಜನಗೂಡು



೭ ***ಡಾ. ಎಚ್.ಎಸ್. ಗೋಪಾಲರಾವ್***
೨೧ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿ



೮ ***ಡಾ. ಪಿ.ಎನ್. ನರಸಿಂಹಮೂರ್ತಿ***
೨೨ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೮
ಧರ್ಮಸ್ಥಳ




೯ ***ಶ್ರೀಮತಿ ಹನುಮಾಕ್ಷಿ ಗೋಗಿ***
೨೩ನೇ ಸಮ್ಮೇಳನ
ಅಕ್ಟೋಬರ್ ೨೦೦೯
ಬಾಳೇಹೊನ್ನೂರು




೧೦ ***ಡಾ. ಪಿ.ವಿ. ಕೃಷ್ಣಮೂರ್ತಿ***
೨೪ನೇ ಸಮ್ಮೇಳನ
ನವೆಂಬರ್ ೨೦೧೦
ಆದಿಚುಂಚನಗಿರಿ



೧೧ ***ಶ್ರೀ ಕೆ. ಮೊಹಮ್ಮದ್ ಶರೀಫ್***
೨೫ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೧
ಬೆಂಗಳೂರು



೧೨ ***ಶ್ರೀ ಸೀತಾರಾಮ್ ಜಾಗೀರ್‌ದಾರ್***
೨೬ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೨
ಶೃಂಗೇರಿ




ಸಂಖ್ಯೆ	ದಿನಾಂಕ–ವರ್ಷ/ಸ್ಥಳ	ಸ್ಥಳ

೧೩ ***ಡಾ. ಆರ್. ಶೇಷಶಾಸ್ತ್ರಿ***
೨೭ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೩
ಬೆಂಗಳೂರು



೧೪ ***ಶ್ರೀ ಎಚ್.ಎಂ. ನಾಗರಾಜರಾವ್***
೨೮ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೪
ಶಿರ್ವ, ಉಡುಪಿ ಜಿಲ್ಲೆ.



೧೫ ***ಡಾ. ಡಿ.ವಿ. ಪರಮಶಿವಮೂರ್ತಿ***
೨೯ನೇ ಸಮ್ಮೇಳನ
ಅಕ್ಟೋಬರ್ ೨೦೧೫
ಮಂಡ್ಯ



೧೬ ***ಡಾ. ಎಸ್.ವಿ. ಪಾಡಿಗರ್***
೩೦ನೇ ಸಮ್ಮೇಳನ
ಅಕ್ಟೋಬರ್ ೨೦೧೬
ಕ.ವಿ.ವಿ., ಧಾರವಾಡ



೧೭ ***ಡಾ. ಎಂ.ಜಿ. ಮಂಜುನಾಥ್***
೩೧ನೇ ಸಮ್ಮೇಳನ
ಅಕ್ಟೋಬರ್ ೨೦೧೭
ಗವಿಮಠ, ಕೊಪ್ಪಳ






೧೮ ***ಶ್ರೀ ಆನಂದ ಎಸ್. ಕುಂಬಾರ***
೩೨ನೇ ಸಮ್ಮೇಳನ
ಅಕ್ಟೋಬರ್ ೨೦೧೮
ಶಿವಯೋಗಮಂದಿರ, ಬಾದಾಮಿ



ಶ್ರೇಷ್ಠ ಇತಿಹಾಸತಜ್ಞರಿಗಾಗಿ ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಸನ್ಮಾನ್ಯ
ಶ್ರೀಮತಿ ವರಲಕ್ಷ್ಮೀ ಮತ್ತು ಶ್ರೀ ಅಶೋಕ್‌ಕುಮಾರ್ ಅವರು ಸ್ಥಾಪಿಸಿರುವ

"ಇತಿಹಾಸ ಸಂಸ್ಕೃತಿಶ್ರೀ" ಪ್ರಶಸ್ತಿ

[ಪ್ರಾರಂಭ : ೨೦೧೨ ರಿಂದ ನಗದು ಒಂದು ಲಕ್ಷ ರೂಪಾಯಿಗಳು]

೧. ೨೬ನೆಯ ಸಮ್ಮೇಳನ ೨೨.೦೯.೨೦೧೨ ಶೃಂಗೇರಿ	ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯ ಮಹಾಸಂಸ್ಥಾನಮ್, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್, ಶೃಂಗೇರಿ	ಪ್ರೊ. ಲಕ್ಷ್ಮಣ್ ತೆಲಗಾವಿ	
೨. ೨೭ನೆಯ ಸಮ್ಮೇಳನ ೨೧.೦೯.೨೦೧೩ ಬೆಂಗಳೂರು	ದಿ ಮಿಥಿಕ್ ಸೊಸೈಟಿ, ಬೆಂಗಳೂರು	ಡಾ. ಸೂರ್ಯನಾಥ ಕಾಮತ್	
೩. ೨೮ನೆಯ ಸಮ್ಮೇಳನ ೨೬.೦೯.೨೦೧೪ ಶಿರ್ವ	ಮೂಲ್ಕಿ ಸುಂದರರಾಮ್‌ಶೆಟ್ಟಿ ಕಾಲೇಜು, ಉಡುಪಿ ಜಿಲ್ಲೆ	ಡಾ. ಅ. ಸುಂದರ	
೪. ೨೯ನೆಯ ಸಮ್ಮೇಳನ ೨೯.೧೦.೨೦೧೫ ಮಂಡ್ಯ	ಕರ್ನಾಟಕ ಸಂಘ (ರಿ). ಮಂಡ್ಯ ಜಿಲ್ಲೆ	ಡಾ. ಎಂ.ಜಿ. ನಾಗರಾಜ್	
೫. ೩೦ನೆಯ ಸಮ್ಮೇಳನ ೨೨.೧೦.೨೦೧೬ ಧಾರವಾಡ	ಕನ್ನಡ ಸಂಶೋಧನಾ ಸಂಸ್ಥೆ ಕರ್ನಾಟಕ ವಿ.ವಿ., ಧಾರವಾಡ	ಡಾ. ಎಸ್. ರಾಜಶೇಖರ್	
೬. ೩೧ನೆಯ ಸಮ್ಮೇಳನ ೨೮.೧೦.೨೦೧೭ ಕೊಪ್ಪಳ	ಗವಿಮಠ, ಕೊಪ್ಪಳ	ಡಾ. ಶ್ರೀನಿವಾಸ ರಿತ್ತಿ	
೭. ೩೨ನೆಯ ಸಮ್ಮೇಳನ ೨೬.೧೦.೨೦೧೮ ಶಿವಯೋಗಮಂದಿರ	ಶಿವಯೋಗಮಂದಿರ ಬಾದಾಮಿ	ಡಾ. ಕೆಳದಿ ಗುಂಡಾಜೋಯಿಸ್	

ಮೇಲಣ ಮಠದ ಲಿಂ. ಶ್ರೀ ವೇ.ಎಸ್. ಸಿದ್ದಣ್ಣಯ್ಯ ಮತ್ತು ಲಿಂ. ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ (ರಿ).
ಅರಸೀಕೆರೆ, ಇವರು ಸ್ಥಾಪಿಸಿರುವ

"ನೊಳಂಬಶ್ರೀ" ಪ್ರಶಸ್ತಿ

[ಪ್ರಾರಂಭ : ೨೦೧೫ ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

---

೧. ೨೯ನೆಯ ಸಮ್ಮೇಳನ
೨೯.೧೦.೨೦೧೫ ಮಂಡ್ಯ
ಮಂಡ್ಯ — ಕರ್ನಾಟಕ ಸಂಘ (ರಿ). — ಡಾ. ಎಂ.ಎಸ್. ಕೃಷ್ಣಮೂರ್ತಿ





೨. ೩೦ನೆಯ ಸಮ್ಮೇಳನ
೨೨.೧೦.೨೦೧೬
ಧಾರವಾಡ — ಕನ್ನಡ ಸಂಶೋಧನಾ ಸಂಸ್ಥೆ ಕರ್ನಾಟಕ ವಿ.ವಿ., ಧಾರವಾಡ — ಡಾ. ಎಚ್. ಜಯಮ್ಮ ಕರಿಯಣ್ಣ



೩. ೩೧ನೆಯ ಸಮ್ಮೇಳನ
೨೮.೧೦.೨೦೧೭
ಕೊಪ್ಪಳ — ಗವಿಮಠ, ಕೊಪ್ಪಳ — ಪ್ರೊ. ಕೆ.ಆರ್. ಬಸವರಾಜು





೪. ೩೨ನೆಯ ಸಮ್ಮೇಳನ
೨೬.೧೦.೨೦೧೮
ಶಿವಯೋಗಮಂದಿರ — ಶಿವಯೋಗಮಂದಿರ, ಬಾದಾಮಿ — ಡಾ. ಬಿ. ನಂಜುಂಡ ಸ್ವಾಮಿ

ಶ್ರೀಮತಿ ವಿ. ಗೌರಮ್ಮ, ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ
ಡಾ. ಎಂ.ಜಿ. ನಾಗರಾಜ್, ಶ್ರೀಮತಿ ಪದ್ಮ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರುಗಳು
ಸ್ಥಾಪಿಸಿರುವ

"ಸಂಶೋಧನಶ್ರೀ" ಪ್ರಶಸ್ತಿ


[ಪ್ರಾರಂಭ : ೨೦೧೬ ರಿಂದ, ನಗದು ಇಪ್ಪತ್ತೈದು ಸಾವಿರ ರೂಪಾಯಿಗಳು]

೧. ೩೦ನೆಯ ಸಮ್ಮೇಳನ ೨೨.೧೦.೨೦೧೬ ಧಾರವಾಡ	ಕನ್ನಡ ಸಂಶೋಧನಾ ಸಂಸ್ಥೆ ಕರ್ನಾಟಕ ವಿ.ವಿ., ಧಾರವಾಡ	ಡಾ. ಬಿ. ರಾಜಶೇಖರಪ್ಪ	
೨. ೩೧ನೆಯ ಸಮ್ಮೇಳನ ೨೮.೧೦.೨೦೧೭ ಕೊಪ್ಪಳ	ಗವಿಮಠ, ಕೊಪ್ಪಳ	ಪ್ರೊ. ಲಕ್ಷ್ಮಣ್ ತೆಲಗಾವಿ	
೩. ೩೨ನೆಯ ಸಮ್ಮೇಳನ ೨೬.೧೦.೨೦೧೮ ಶಿವಯೋಗಮಂದಿರ	ಶಿವಯೋಗಮಂದಿರ, ಬಾದಾಮಿ	ಡಾ. ಕೆ. ಬಿ. ಶಿವತಾರಕ್	

ಪ್ರೊ. ಲಕ್ಷ್ಮಣ್ ತೆಲಗಾವಿ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ

"ನಾಯಕ ಶ್ರೀ" ಪ್ರಶಸ್ತಿ

[ಪ್ರಾರಂಭ : ೨೦೧೭ ರಿಂದ, ನಗದು ಹದಿನೈದು ಸಾವಿರ ರೂಪಾಯಿಗಳು]

೧. ೩೧ನೆಯ ಸಮ್ಮೇಳನ ೨೮.೧೦.೨೦೧೭ ಕೊಪ್ಪಳ	ಗವಿಮಠ, ಕೊಪ್ಪಳ	ಡಾ. ಸಿ.ಆರ್. ಶಾಮಲ, ಮುಂಬೈ	
೨. ೩೨ನೆಯ ಸಮ್ಮೇಳನ ೨೬.೧೦.೨೦೧೮ ಶಿವಯೋಗಮಂದಿರ	ಶಿವಯೋಗಮಂದಿರ, ಬಾದಾಮಿ	ಡಾ. ಡಿ.ಎನ್. ಯೋಗೀಶ್ವರಪ್ಪ	

ಪ್ರೊ. ಕೆ. ಪದ್ದಯ್ಯ : ಡೆಕ್ಕನ್ ಕಾಲೇಜು, ಪುಣೆ ಇವರು ಸ್ಥಾಪಿಸಿರುವ

ಡಾ. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡ್

[ಪ್ರಾರಂಭ: ೨೦೧೭ರಿಂದ, ನಗದು ಎರಡು ಸಾವಿರ ರೂಪಾಯಿಗಳು – ಪ್ರಾಗೈತಿಹಾಸಿಕ ಸಂಶೋಧನ ಲೇಖನಕ್ಕೆ]

೧. ೩೧ನೆಯ ಸಮ್ಮೇಳನ ೨೮.೧೦.೨೦೧೭ ಕೊಪ್ಪಳ	ಗವಿಮಠ, ಕೊಪ್ಪಳ	ಡಾ. ಎಸ್.ವೈ. ಸೋಮಶೇಖರ್	
೨. ೩೨ನೆಯ ಸಮ್ಮೇಳನ ೨೬.೧೦.೨೦೧೮ ಶಿವಯೋಗಮಂದಿರ	ಶಿವಯೋಗಮಂದಿರ, ಬಾದಾಮಿ	ಶ್ರೀ ಕೆ. ರೇವಣಸಿದ್ಧಯ್ಯ	

ಡಾ. ಸಿ.ಆರ್. ಶ್ಯಾಮಲ ಅವರು ಸ್ಥಾಪಿಸಿರುವ

ಡಾ ಶ್ರೀನಿವಾಸ್ ಹಾವನೂರ ಸ್ಮರಣಾರ್ಥ ಪ್ರಶಸ್ತಿ

[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು – ಸ್ಮಾರಕಗಳ ಸಂಶೋಧನೆ / ಆ ವರ್ಷ ಪ್ರಕಟವಾದ ಸಂಶೋಧನಾ ಕೃತಿಗೆ]

೧. ೩೨ನೆಯ ಸಮ್ಮೇಳನ ೨೬.೧೦.೨೦೧೮ ಶಿವಯೋಗಮಂದಿರ	ಶಿವಯೋಗಮಂದಿರ, ಬಾದಾಮಿ	ಡಾ. ಬೆಂ. ಶಾ. ಶ್ಯಾಮಲಾ ರತ್ನಕುಮಾರಿ	

ಬಿ.ಸಿ. ಪಾಟೀಲ ಟ್ರಸ್ಟ್, ಕೊಪ್ಪಳ, ಇವರು ಸಂಶೋಧಕಿಯರಿಗೆ ನೀಡುವ

ಸುಮಂಗಲಾ ಪಾಟೀಲ ಪ್ರಶಸ್ತಿ

[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು]

೧. ೩೧ನೆಯ ಸಮ್ಮೇಳನ ೨೮.೧೦.೨೦೧೭ ಕೊಪ್ಪಳ	ಗವಿಮಠ, ಕೊಪ್ಪಳ	ಶ್ರೀಮತಿ ಸೀತಾಲಕ್ಷ್ಮೀರಾವ್	
೨. ೩೨ನೆಯ ಸಮ್ಮೇಳನ ೨೬.೧೦.೨೦೧೮	ಶಿವಯೋಗ ಮಂದಿರ ಬಾದಾಮಿ	ಡಾ. ಸ್ಮಿತಾ ಸುರೇಬಾನಕರ್	

ಡಾ. ಸೂರ್ಯನಾಥ ಯು. ಕಾಮತ್ ಅವರ ಹೆಸರಿನಲ್ಲಿ ಸ್ಥಾಪಿಸಿರುವ

ಸೂರ್ಯಕೀರ್ತಿ ಪ್ರಶಸ್ತಿ

[ಪ್ರಾರಂಭ : ೨೦೧೮ರಿಂದ, ನಗದು ಹತ್ತು ಸಾವಿರ ರೂಪಾಯಿಗಳು – ಇತಿಹಾಸ ಸಂಶೋಧಕರಿಗೆ]

೧. ೩೨ನೆಯ ಸಮ್ಮೇಳನ ೨೬.೧೦.೨೦೧೮ ಶಿವಯೋಗಮಂದಿರ	ಶಿವಯೋಗಮಂದಿರ ಬಾದಾಮಿ	ಡಾ. ಎಚ್. ಚಂದ್ರಶೇಖರ್ ಎಚ್.	

ಡಾ. ದೇವರಕೊಂಡಾರೆಡ್ಡಿ ಅವರ ಅಭಿನಂದನಾ ಸಮಿತಿಯು ಸ್ಥಾಪಿಸಿರುವ ದತ್ತಿಯಿಂದ ಬರುವ ಬಡ್ಡಿಯಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ

ಅಂತರ್ಜಾಲ ನಿರ್ವಹಣೆ

[ಪ್ರಾರಂಭ : ೨೦೧೬ರಿಂದ, ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳು]

ಕರ್ನಾಟಕ ಇತಿಹಾಸ ಅಕಾದೆಮಿ ೩೧ನೆಯ ವಾರ್ಷಿಕ ಸಮ್ಮೇಳನ

ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್ ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ, ಕೊಪ್ಪಳ

ದಿನಾಂಕ ೨೮ ಅಕ್ಟೋಬರ್ ೨೦೧೭

ಸಮ್ಮೇಳನಾಧ್ಯಕ್ಷರು : ಡಾ. ಪಿ.ಎನ್. ನರಸಿಂಹಮೂರ್ತಿ

ಅಧ್ಯಕ್ಷೀಯ ಭಾಷಣ*

ಸರ್ವೇಭ್ಯೋ ದೇವೇಭ್ಯೋ ಗುರುಭ್ಯೋ ನಮಃ

ವೇದಿಕೆಯಲ್ಲಿ ಉಪಸ್ಥಿತರಿರುವ ಎಲ್ಲ ಆಢ್ಯಮಹನೀಯರೇ, ನನ್ನೆದುರಿಗೆ ವಿರಾಜಮಾನರಾಗಿರುವ ಇತಿಹಾಸ ಅಕಾದೆಮಿಯ ಬಂಧು ಬಾಂಧವರೆ, ಅತಿಥಿ ಅಭ್ಯಾಗತರೇ ಮಹಿಳೆಯರೇ ಮತ್ತು ಮಹನೀಯರೆ – ನಿಮ್ಮೆಲ್ಲರಿಗೂ ನನ್ನ ಅಭಿಮಾನಪೂರ್ವಕ ನಮನಗಳು.

ಅಚ್ಛೋದ ಸರಸ್ಸಿನಂತೆ ಇದ್ದ ಈ ಪ್ರಾಚೀನ ಕೊಪ್ಪಣ ಪುಣ್ಯತೀರ್ಥದಲ್ಲಿ ನಿಮ್ಮೊಂದಿಗೆ ನಾನು ಮಿಂದೇಳುವ ಸದವಕಾಶವನ್ನು ಕರ್ನಾಟಕ ಇತಿಹಾಸ ಅಕಾದೆಮಿಯು ಈ ಬಾರಿ ನನಗೆ ದಯಪಾಲಿಸಿದೆ. ಇದಕ್ಕಾಗಿ ಇತಿಹಾಸ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಇತಿಹಾಸ ಅಕಾದೆಮಿಯು ಈಗ ತನ್ನ ೩೧ನೆಯ ವಸಂತದ ಸಂತಸದಲ್ಲಿದೆ. ಈ ಸಂತಸಕ್ಕೆ ಮೂಲಕಾರಣೀಭೂತರು ಡಾ. ಸೂರ್ಯನಾಥ ಕಾಮತರು ಇವರಿಗೆ ನನ್ನ ಗೌರವಪೂರ್ವಕ ನಮನಗಳು. ಅಂತೆಯೇ ಅಕಾದೆಮಿಯ ಈ ಹಿಂದಿನ ವಾರ್ಷಿಕ ಸಮ್ಮೇಳನಗಳಲ್ಲಿ ಅಧ್ಯಕ್ಷಸ್ಥಾನ ಅಲಂಕರಿಸಿದ್ದ ಎಲ್ಲ ಹಿರಿಯ ವಿದ್ವಾಂಸರನ್ನೂ ನೆನೆಯುತ್ತಾ ಅವರ ಕೃಪಾಶೀರ್ವಾದ ನನ್ನ ಮೇಲಿದೆಯೆಂದು ಭಾವಿಸಿ ಇತಿಹಾಸ ಅಕಾದೆಮಿಯು ಈ ಬಾರಿ ಕರುಣಿಸಿರುವ ಉನ್ನತ ಗೌರವವನ್ನು ಅತ್ಯಂತ ವಿನಯಪೂರ್ವಕ ಸ್ವೀಕರಿಸಿದ್ದೇನೆ ಎಂದು ಹೇಳಲು ಬಯಸುತ್ತೇನೆ.

ಇಂದಿನಿಂದ ಮೂರು ದಿನಗಳ ಕಾಲ ನಡೆಯುವ ಈ ಮಹತ್ತಿನ ಸಮ್ಮೇಳನ ಕೊಪ್ಪಳದ ಎಸ್.ಜಿ.ವ್ಹಿ.ವ್ಹಿ.ಟ್ರಸ್ಟ್‌ನ ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ ಮತ್ತು ಶ್ರೀ ಬಿ.ಸಿ. ಪಾಟೀಲ ಟ್ರಸ್ಟ್, ಕೊಪ್ಪಳ ಇವರ ಸಂಯುಕ್ತಾಶ್ರದಲ್ಲಿ ನಡೆಯುತ್ತಿದೆ. ೨೦೧೦ರ ಆಗಸ್ಟ್ ತಿಂಗಳಿನಲ್ಲಿ ಕೊಪ್ಪಳ ನಗರದಲ್ಲಿ ನಾನು ಕೈಗೊಂಡ ಒಂದು ಕಿರು ಕ್ಷೇತ್ರಾಧ್ಯಯನ ಕಾರ್ಯದಲ್ಲಿ ನೆರವಾದವರು ಶ್ರೀ ಗವಿಸಿದ್ದೇಶ್ವರ ಮಹಾವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕರು ಹಾಗೂ ಅವರ ಶಿಷ್ಯರು. ಇವರುಗಳ ನೆರವಿನಿಂದ ಗವಿಮಠ ಮತ್ತು ಪಾಲ್ಕಿಗುಂಡು ಬೆಟ್ಟಗಳನ್ನು ಹಾಗೂ ಕೊಪ್ಪಳದ ಇನ್ನಿತರ ಐತಿಹಾಸಿಕ ಸ್ಥಳಗಳನ್ನು ಸುತ್ತಾಡಿ ಬಂದೆ. ಅದೇ ಸಂದರ್ಭದಲ್ಲಿ ಒಂದು ಸುಂದರ ಸಂಜೆಯ ಶುಭದಿನದಂದು ನಾನು ಸೇರಿದಂತೆ ಹಲವು ಮಿತ್ರರಿಗಾಗಿ ಸಿ.ಬಿ. ಪಾಟೀಲರು ತಮ್ಮ ಮನೆಯಲ್ಲಿ ಔತಣಕೂಟ ಏರ್ಪಡಿಸಿದ್ದರು. ಕೊಪ್ಪಳದ ಅತ್ಯಂತ ಸ್ವಾದಿಷ್ಟ ಭೋಜನದ ರುಚಿ ಅಂದು ನಮಗೆ ಆಯಿತು. ಭೋಜನವನ್ನು ಉಣಬಡಿಸಿದ ಶ್ರೀ ಪಾಟೀಲರು ಹಾಗೂ ಅವರ ಮನೆಮಂದಿ ಎಲ್ಲರೂ ನನ್ನ ಬಗ್ಗೆ ತೋರಿದ ಗೌರವಾದರಗಳು ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿದವು. ಈಗ ಶ್ರೀ ಪಾಟೀಲರ ಟ್ರಸ್ಟ್ ಹುಟ್ಟಿಕೊಂಡಿದೆ. ಇದೊಂದು ಸಂತೋಷದ ವಿಷಯ.

ಆಶ್ಚರ್ಯವೆಂದರೆ ಈ ಎರಡೂ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಈ ಸಮ್ಮೇಳನ ನಡೆಯುತ್ತಿದೆ. ಇವುಗಳ ಪರಮಾತಿಥ್ಯ ಸವಿರುಚಿ ಅನುಭವಿಸಲು ನನಗೆ ಮತ್ತೊಮ್ಮೆ ಅವಕಾಶ ದೊರೆತಿದೆ. ಈ ಯೋಗಾಯೋಗ ಸಂದರ್ಭಕ್ಕಾಗಿ ಈ ಎರಡೂ ಸಂಸ್ಥೆಗಳಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇದೇ ಸಂದರ್ಭದಲ್ಲಿ ಈ ವರ್ಷ ಪಿಹೆಚ್.ಡಿ. ಪದವಿ ಪಡೆದ ಹಾಗೂ ವಿವಿಧ ಸಂಘಸಂಸ್ಥೆಗಳು ಮತ್ತು ಮಹನೀಯರಿಂದ ಸ್ಥಾಪಿತವಾದ, ಅಕಾದೆಮಿಯ ಮೂಲಕ ಕೊಡಮಾಡುವ ಅತ್ಯುನ್ನತ ಪ್ರಶಸ್ತಿಗಳಿಗೆ ಭಾಜನರಾದ ಗೌರವಾನ್ವಿತ ವಿದ್ವಾಂಸರುಗಳಿಗೆ ನನ್ನ ಶುಭಕಾಮನೆಗಳು.

I

ಕೊಪಣನಗರ ಎಂಬ ಹೆಸರೇ ನನಗೆ ರೋಮಾಂಚನದ ಅನುಭವ ನೀಡುತ್ತದೆ. ಕೊಪ್ಪಳದ ಸುತ್ತಮುತ್ತೆಲ್ಲಾ ಹರಡಿರುವ ಬೆಟ್ಟಗುಡ್ಡಗಳಲ್ಲಿ ಶಿಲಾಯುಗಗಳ ಕಾಲಗಳ ವಿವಿಧ ರೀತಿಯ ಅವಶೇಷಗಳು ಇವೆ. ಇವು ಕೊಪ್ಪಳದ ಇತಿಹಾಸ ರಚಿಸುವಲ್ಲಿ ಪ್ರಮುಖ ಆಕರಗಳಾಗಿವೆ. ಇವು ಈ ಭಾಗದಲ್ಲಿ ಮಾನವ ಬೆಳವಣಿಗೆಯ ವಿವಿಧ ಹಂತಗಳ ಚಿತ್ರಣ ನೀಡುತ್ತವೆ. ಆದರೂ ಸಂಶೋಧಕರಲ್ಲಿರುವ ಸಾಮಾನ್ಯ ನಂಬಿಕೆ ಏನೆಂದರೆ – ಕೊಪ್ಪಳದ ನೈಜ ಇತಿಹಾಸ ಪ್ರಾರಂಭವಾಗುವುದು ಮೌರ್ಯಚಕ್ರವರ್ತಿ ಅಶೋಕನ ಕಾಲದಿಂದ. ಇದಕ್ಕೆ ಮುಖ್ಯ ಕಾರಣ ಇಲ್ಲಿಯ ಗವಿಮಠ ಮತ್ತು ಪಾಲ್ಕಿಗುಂಡುಗಳಲ್ಲಿ ದೊರೆತಿರುವ ಎರಡು ಲಘುಬಂಡೆಗಲ್ಲು ಶಾಸನಗಳು. ಕರ್ನಾಟಕಕ್ಕೆ ಅಂದಿನಿಂದ ಬೌದ್ಧಧರ್ಮದ ಪರಿಚಯ ಈ ಭಾಗದ ಮೂಲಕ ಆಯಿತು ಎಂಬುದು ಇತಿಹಾಸ.

ಕೊಪ್ಪಣದ ಶಾಸನೋಕ್ತ ಇತಿಹಾಸ ಪ್ರಾರಂಭವಾಗುವುದು ಅಶೋಕನ ಕಾಲದಿಂದ ಎಂಬುದಂತೂ ತತ್ಕಾಲೀನ ಆಧಾರಗಳ ನೆಲೆಯಲ್ಲಿ ಸರಿ. ಆದರೆ ಅದಕ್ಕೂ ಹಿಂದಿನ ಕಾಲದ ಇತಿಹಾಸವನ್ನು ತಿಳಿಯಲು ನಾವು ಯಾವ ಯಾವ ಹಂತಗಳಲ್ಲಿ ಎಷ್ಟು ಪ್ರಯತ್ನ ಮಾಡಿದ್ದೇವೆ? ನನ್ನ ತಿಳುವಳಿಕೆಯ ಪ್ರಕಾರ ಯಾವುದೇ ರೀತಿಯ ಪ್ರಯತ್ನಗಳೂ ಈವರೆಗೆ ಆಗಿಲ್ಲ. ಕೇವಲ ಪ್ರಾಕ್ಚಾರಿತ್ರಿಕ ನೆಲೆಗಳ ಶೋಧ ಆದರೆ ಸಾಕೆ? ನೆರೆಯ ಹಂಪೆಯಲ್ಲಿ ಶಾತವಾಹನರ ಕಾಲದ ಅವಶೇಷಗಳು ದೊರೆತಿವೆ. ಗುಲ್ಬರ್ಗಾ ಜಿಲ್ಲೆಯ ಸನ್ನತಿ ಮತ್ತು ಕನಗಾನಹಳ್ಳಿಗಳಲ್ಲಿ ಮೌರ್ಯ ಪೂರ್ವಕಾಲದ ಅವಶೇಷಗಳು ದೊರೆತಿವೆ. ಪ್ರಾರಂಭಿಕ ಹಂತದಲ್ಲಿ ಈ ಸ್ಥಳಗಳು ಅಶೋಕನ ಕಾಲದ ಪ್ರಮುಖ ಬೌದ್ಧಕೇಂದ್ರಗಳೆಂದು ಗುರುತಿಸಲ್ಪಟ್ಟಿದ್ದವು. ಈಗ ನವಶೋಧಗಳ ಮೂಲಕ ಅವುಗಳ ಪ್ರಾಚೀನ ಇತಿಹಾಸದ ದ್ವಾರಗಳು ತೆರೆದುಕೊಳ್ಳುತ್ತಿವೆ. ಈ ರೀತಿಯ ಶೋಧಕಾರ್ಯ ಮತ್ತು ಅಧ್ಯಯನಗಳು ಕೊಪ್ಪಳದ ಬಗ್ಗೆ ಆಗಿಲ್ಲ. ಇದೊಂದು ದೊಡ್ಡ ಕೊರತೆ.

ಶೃತಕೇವಲಿ ಭದ್ರಬಾಹು ಮತ್ತು ಚಂದ್ರಗುಪ್ತ ಮೌರ್ಯರೊಂದಿಗೆ ದಕ್ಷಿಣಕ್ಕೆ ಬಂದ ದೊಡ್ಡ ಸಂಖ್ಯೆಯ ಜೈನಮುನಿಸಂಘವು ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದ್ದನ್ನು ಐತಿಹಾಸಿಕ ಸತ್ಯ ಎಂದು ಪುರಸ್ಕರಿಸಿದ್ದೇವೆ. ಆದರೆ ಅವರು ಯಾವ ಮಾರ್ಗವಾಗಿ ಬಂದರು ಎಂಬ ಬಗ್ಗೆ ಯಾವುದೇ ರೀತಿಯ ಚಿಂತನೆಯನ್ನು ಈವರೆಗೆ ಮಾಡಿಲ್ಲ. ಒಂದು ಮಹತ್ವಪೂರ್ಣವಾದ ವಿಷಯದ ಬಗ್ಗೆ ಈ ರೀತಿಯ ಅವಜ್ಞೆ ಸರಿಯೇ? ಮೌರ್ಯಪೂರ್ವಕಾಲದ ಅವಶೇಷಗಳು ಸನ್ನತಿಯಲ್ಲಿ ದೊರೆತಿರುವುದು ಸರಿಯಷ್ಟೆ. ಈ ನಿಟ್ಟಿನಲ್ಲಿನಲ್ಲಿ ನಾವು ಜಿನಮುನಿಸಂಘಗಳ ಪ್ರಯಾಣದ ಮಾರ್ಗದ ಬಗ್ಗೆ ಏಕೆ ವಿವೇಚಿಸಬಾರದು?

ಈ ಬಗ್ಗೆ ನನ್ನ ಅಭಿಪ್ರಾಯವನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ಜಿನಮುನಿ ಸಂಘಗಳು ಬೃಹದ್ ಸಂಖ್ಯೆಯಲ್ಲಿದ್ದು ಒಟ್ಟಿಗೆ ಬಂದಿರಲು ಸಾಧ್ಯವಿಲ್ಲ. ತಂಡೋಪತಂಡವಾಗಿ ಬಂದು ಅಲ್ಲಲ್ಲೆ ತಮ್ಮ ವಿಶ್ರಾಂತಿ ವಿಹಾರಗಳನ್ನು ಸ್ಥಾಪಿಸಿ ಮುಂದುವರೆದಿರಬಹುದು. ಇದು ತಮ್ಮ ನಂತರ ಬಂದ ಗುಂಪಿಗೆ ಒಳ್ಳೆಯ ಮಾರ್ಗದರ್ಶನ ನೀಡಿದೆ. ಉತ್ತರ ಕರ್ನಾಟಕದಲ್ಲಿ ಇಂತಹ ಹಲವಾರು ವಿಹಾರಕೇಂದ್ರಗಳು ಆಗ ಹುಟ್ಟಿಕೊಂಡಿವೆ. ಸನ್ನತಿಯು ಇಂತಹ ಜಿನವಿಹಾರಕೇಂದ್ರಗಳಲ್ಲಿ ಒಂದಾಗಿರಬಹುದು.

ತುಂಗಭದ್ರೆಯ ಉತ್ತರಕ್ಕೆ ಹಿರೇಹಳ್ಳದ ದಂಡೆಯ ಮೇಲಿದ್ದ ಕೊಪ್ಪಣ ಆಗ ಪ್ರಾಯಶಃ ಉತ್ತರದಿಂದ ದಕ್ಷಿಣಕ್ಕೆ ತೆರಳುವವರಿಗೆ ಮಹಾದ್ವಾರದಂತಿದ್ದಿರಬಹುದು. ಪ್ರಾಚೀನ ಕರ್ನಾಟಕದ ಸಂಪರ್ಕಮಾರ್ಗಗಳ ಬಗ್ಗೆ ಸರಿಯಾದ ಅಧ್ಯಯನ ನಡೆದಿದ್ದರೆ ನನ್ನ ಮಾತುಗಳ ಸತ್ಯಾಸತ್ಯತೆಯ ಅರಿವಾಗುತ್ತಿತ್ತು. ಕೊಪ್ಪಣಕ್ಕೆ ಸಮೀಪವೇ ಇರುವ ಹಂಪೆಯ ಬಳಿ ರಾಮಾಯಣ ಕಾಲದ ಕಿಷ್ಕಿಂದೆ ಇತ್ತೆಂಬುದು ಈಗ ಇತಿಹಾಸ. ಇದು ವಾಯುಸುತ ಆಂಜನೇಯನ ಜನ್ಮಸ್ಥಳ. ಇಲ್ಲೇ ಶ್ರೀರಾಮನು ಸುಗ್ರೀವಾದಿ ವಾನರ ಪ್ರಮುಖರನ್ನು ಭೇಟಿಯಾದುದು. ಇಲ್ಲೇ ಶ್ರೀರಾಮನ ಪರಮಭಕ್ತನೂ ಸೇವಕನೂ ಆದ ಆಂಜನೇಯನಿಗೆ ಶ್ರೀರಾಮನ ದರ್ಶನವಾದುದು. ಮುಂದಿನದು ಶ್ರೀರಾಮಕಥೆ. ಇದರ ಆಧಾರದಲ್ಲಾದರೂ ನಮ್ಮ ಪ್ರಾಚೀನ ಸಂಪರ್ಕ ಮಾರ್ಗಗಳ ಬಗೆಗೆ ಅಧ್ಯಯನ ಮಾಡಬಾರದೇ? ಆಯಕಟ್ಟಿನ ಸ್ಥಳದಲ್ಲಿದ್ದ ಪ್ರಾಚೀನ ಕೊಪ್ಪಣನಗರವು ದಕ್ಷಿಣಕ್ಕೆ ಹೆಬ್ಬಾಗಿಲಾಗಿತ್ತು ಎನ್ನುವುದು ಅತಿಶಯೋಕ್ತಿ ಆಗಲಾರದು.

ಪ್ರಾಯಶಃ ಆ ಕಾಲಕ್ಕೆ ತಕ್ಕಂತೆ ಕೊಪ್ಪಣವು ಒಂದು ಮಹಾನ್‌ನಗರವಾಗಿರಬೇಕು. ವ್ಯಾಪಾರ–ವಹಿವಾಟುಗಳ ಪ್ರಮುಖ ಕೇಂದ್ರಸ್ಥಾನವಾಗಿದ್ದು ನಾನಾಕಡೆಗಳಿಂದ ಬರುತ್ತಿದ್ದ ವರ್ತಕ ಸಮುದಾಯಕ್ಕೆ ರಕ್ಷಿತಸ್ಥಾನ ಆಗಿರಬೇಕು. ಅಲ್ಲಿಯ ಆಡಳಿತ ಶಾಂತಿ, ಸಮೃದ್ಧಿ ನೆಲೆಸುವಂತೆ ಮಾಡಿದೆ. ಈ ವಾತಾವರಣವು ಅಧಿಕ ಸಂಖ್ಯೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬರುತ್ತಿದ್ದ ಜಿನಮುನಿಸಂಘಗಳಿಗೆ ವಿಹಾರಾರ್ಥ ಅತ್ಯಂತ ಕ್ಷೇಮಕರ ತಾಣವಾಗಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಅಲ್ಲದೇ

ಅತ್ಯಂತ ವಿಶಾಲ ಪ್ರದೇಶದಲ್ಲಿ ಹರಡಿದ್ದ ಈ ನಗರವು ಒಳ್ಳೆಯ ನೀರಿನ ಆಸರೆ ಹೊಂದಿತ್ತು. ಇದೂ ಸಹ ಅಧಿಕ ಸಂಖ್ಯೆಯ ಜಿನಮುನಿಗಳು ಇಲ್ಲಿ ಬಿಡಾರ ಹೂಡಲು ಸಹಕಾರಿಯಾಗಿತ್ತು. ಇವರ ಆಹಾರ ಹಿತ-ಮಿತವಾಗಿದ್ದರಿಂದ ಕೊಪ್ಪಳ ನಗರದ ಜನಸಮುದಾಯಕ್ಕೆ ಮುನಿಗಳಿಗೆ ಆಹಾರವೊದಗಿಸುವ ಸಮಸ್ಯೆಯೇ ಆಗಲಿಲ್ಲ. ಈ ಸುಂದರ ವಾತಾವರಣಕ್ಕೆ ಚಂದ್ರಗುಪ್ತಮೌರ್ಯನ ಸಹಿತ ತಮ್ಮ ಶಿಷ್ಯರೊಂದಿಗೆ ಪ್ರವೇಶಿಸಿದ ಭದ್ರಬಾಹು ಮುನಿಗಳು ಕೆಲಕಾಲ ಇಲ್ಲಿ ತಂಗಿದ್ದು ವಿಶ್ರಾಂತಿ ಪಡೆದಿದ್ದಾರೆ. ಆ ಸಂದರ್ಭದಲ್ಲಿ ಸ್ಥಳೀಯರಿಗೆ ಪ್ರವಚನಗಳ ಮೂಲಕ ಜ್ಞಾನಧಾರೆ ಮಾಡಿದ್ದಾರೆ. ಆನಂತರ ಮುಂದಕ್ಕೆ ಶ್ರವಣಬೆಳಗೊಳದತ್ತ ಪ್ರಯಾಣ ಬೆಳೆಸಿದ್ದಾರೆ. ಇದು ಈಗ್ಗೆ ಕೆಲವರ್ಷಗಳ ಹಿಂದೆ ಕೊಪ್ಪಳ ನಗರದಲ್ಲಿ ನಡೆಸಿದ ಕಿರು ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಾನು ಪಡೆದುಕೊಂಡ ಅನುಭವ.

ಇದು ಒಂದು ಪ್ರಮುಖವಾದ ವಿಷಯ, ಸಮಸ್ಯೆಯಲ್ಲ. ಸ್ವಲ್ಪ ಜಟಿಲವಾಗಿರಬಹುದು. ಆದರೆ ನಮ್ಮ ಶ್ರದ್ಧಾಪೂರ್ವಕ ಪ್ರಯತ್ನದಿಂದ ಜಟಿಲತೆಯನ್ನು ನಿವಾರಿಸಿಕೊಳ್ಳಬಹುದು. ಈ ಭಾಗದ ಎಲ್ಲ ಹಿರಿಯ ಕಿರಿಯ ವಿದ್ವಾಂಸರಲ್ಲಿ ನನ್ನ ಒಂದು ಕಳಕಳಿಯ ಮನವಿ. ಶ್ರದ್ಧೆ ಮತ್ತು ಛಲ ಮನೋಭಾವದಿಂದ ನೀವು ಈ ವಿಷಯದ ಬಗ್ಗೆ ಸಂಶೋಧನೆ ನಡೆಸಿ ಅಧ್ಯಯನಶೀಲತೆಯೊಂದಿಗೆ ಒಳ್ಳೆಯ ರೀತಿಯ ಪ್ರಯತ್ನ ಕೈಗೊಳ್ಳಿ. ನಿಷ್ಪಕ್ಷಪಾತವಾಗಿ ಮಾಹಿತಿ ಸಂಗ್ರಹಿಸಿ ದಾಖಲಿಸಿಕೊಳ್ಳಿ. ಆನಂತರ ತುಲನಾತ್ಮಕವಾಗಿ ಮಾಹಿತಿಗಳ ಅಧ್ಯಯನ ಮಾಡಿ. ಅದರ ಫಲಶೃತಿಯನ್ನು ಜನತೆಗೆ ನೀಡಿ. ನೆನಪಿಡಿ ನಿಮ್ಮ ಈ ಕಾರ್ಯದಿಂದ ನಿಮಗರಿವಿಲ್ಲದಂತೆಯೇ ಕೊಪ್ಪಳದ ಪ್ರಾಚೀನ ಇತಿಹಾಸದ ಬಗ್ಗೆ ಹೊಸ ಹೊಸ ಮಾಹಿತಿಗಳನ್ನು ನೀಡುವಿರಿ. ಅಷ್ಟೇ ಅಲ್ಲ ಈ ಭಾಗದಲ್ಲಿ ಜೈನಧರ್ಮದ ಪ್ರಾಚೀನತೆಯ ಬಗ್ಗೆಯೂ ಹೊಸ ಬೆಳಕನ್ನು ಚೆಲ್ಲುವಿರಿ. ಇದು ನಿಮ್ಮಿಂದ ಕರ್ನಾಟಕ ಇತಿಹಾಸಕ್ಕೆ ದೊರೆಯುವ ಅದ್ಭುತವಾದ ಕೊಡುಗೆಯಾಗುತ್ತದೆ. ಕರ್ನಾಟಕ ಇತಿಹಾಸ ಅಕಾದೆಮಿಯ ಸ್ಥಾಪಿತ ಉದ್ದೇಶವೂ ಇದೆ. ಇದರ ಸ್ಥಾಪಕ ಮಹೋದಯರಾದ ಡಾ. ಸೂರ್ಯನಾಥ ಕಾಮತರಿಗೆ ಈ ಸಾಧನೆ ಮೂಲಕ ನೀವು ಕೊಡುವ ಮಹೋನ್ನತ ಗೌರವದ ಕೊಡುಗೆ ಆಗುತ್ತದೆ.

II

ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು ಪದೇ ಪದೇ ಒಂದು ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ. ಈ ಪ್ರಸ್ತಾಪ ಪ್ರತಿಷ್ಠಿತ ಗೋಷ್ಠಿಗಳಲ್ಲೇ ಆಗುತ್ತಿದೆ. ಆ ವಿಷಯವೇನೆಂದರೆ –

"ಕರ್ನಾಟಕಕ್ಕೆ ಅಶೋಕ ಒಂದು ಧರ್ಮವನ್ನು ಪರಿಚಯಿಸಿದೆ. ಅದು ಬೌದ್ಧಧರ್ಮ ಇದರ ಪ್ರಚಾರಕ್ಕಾಗಿ ಈತ ಕೊಪ್ಪಳದಲ್ಲಿ ನಾಲ್ಕು ವರ್ಷಗಳ ಕಾಲ ತಂಗಿದ್ದ. ಇದಕ್ಕೆ ಏನು ಕಾರಣ ಗೊತ್ತೆ? ಅಲ್ಲಿಯವರೆಗೆ ಕರ್ನಾಟಕದಲ್ಲಿ ಯಾವ ಧರ್ಮವೂ ಇರಲಿಲ್ಲ!"

ಈ ವಿಷಯದ ಬಗ್ಗೆ ಪ್ರಸ್ತುತ ಸಂದರ್ಭದಲ್ಲಿ ನಾನು ಎರಡು ಮಾತುಗಳನ್ನು ಅಡಬೇಕೆಂದು ಇಚ್ಛಿಸುತ್ತೇನೆ.

ಈ ಮಾತುಗಳು ಯಾವುದೇ ಸಾಮಾನ್ಯ ವ್ಯಕ್ತಿಯದಲ್ಲ. ಬದಲಿಗೆ ಇತಿಹಾಸ ಪ್ರಾಧ್ಯಾಪಕರೊಬ್ಬರ ಅಭಿಪ್ರಾಯಗಳು. ಅಶೋಕ ತನ್ನ ೧೩ನೆಯ ಶಿಲಾಲೇಖದಲ್ಲಿ ಈ ರೀತಿ ಹೇಳಿದ್ದಾನೆ – "ನನ್ನ ಸಾಮ್ರಾಜ್ಯದಲ್ಲಿ ಬಾಂಹಣರು (ಬ್ರಾಂಹ್ಮಣರು), ಚಮಣರು (ಸಮಣ/ಶ್ರಮಣರು) ಇಲ್ಲದ ಗ್ರಾಮವೇ ಇಲ್ಲ"

"ನತಿ ಚಷಿ ಜನಪದೆ ಯಾತನದಿ ಇಮೆ ನಿಕಾಯಾ ಆನಂತಾಯೊನೆಷು

ಬಂದನೆ ಚಾ ಷಮನೆ ಜಾನಾತಿ ಚಾಕುವಾಪಿ ಜನಪದಷಿಯತಾನದಿ

ಮನುಷಾನಃ ಏಕತಲಷ ಪಿಪಾಕ್ಷಡಪಿನೋ ನಾಮಪಷಾದ್"

[ಶಾಸನ ಪಾಠ ಸಾಲು ೪-೫] [Hultzsch: Ashokan Inscriptions: C.I.I. Vol.I]

ಈ ಶಾಸನ ಅಶೋಕನು ಕೊಪ್ಪಳದಲ್ಲಿ ಹಾಕಿಸಿದ ಶಾಸನಕ್ಕಿಂತ ಮೊದಲಿನದು. ಕರ್ನಾಟಕ ಆ ವೇಳೆಗಾಗಲೇ ಅಶೋಕನ ಸಾಮ್ರಾಜ್ಯದೊಳಗೆ ಇತ್ತು. ಅಂದ ಮೇಲೆ ಜೈನ (ಸಮಣ) ಮತ್ತು ವೈದಿಕ (ಬಾಂಮಣ) ಧರ್ಮಗಳೆರಡೂ ಕರ್ನಾಟಕದಲ್ಲಿ ಇದ್ದವು ಎಂದಾಯಿತು.

ಮೌರ್ಯ ವಂಶಸ್ಥಾಪಕನಾದ ಚಂದ್ರಗುಪ್ತ ಮೌರ್ಯನು ತನ್ನ ಅಧಿಕಾರಾವಧಿಯ ಕೊನೆಯಲ್ಲಿ ಮಗನಿಗೆ ಪಟ್ಟಕಟ್ಟಿ ತಾನು ಶೃತಕೇವಲಿ ಭದ್ರಬಾಹುಮುನಿಗಳೊಂದಿಗೆ ದಕ್ಷಿಣದತ್ತ ಪ್ರಯಾಣ ಬೆಳೆಸಿ ಶ್ರವಣಬೆಳಗೊಳದಲ್ಲಿ ನೆಲೆಸಿದ ವಿಚಾರ ಮೇಲೆ ಪ್ರಸ್ತಾಪಿಸಿದೆ. ಅಶೋಕ ಚಕ್ರವರ್ತಿ ಚಂದ್ರಗುಪ್ತನ ಮೊಮ್ಮಗ.

ವಿಷಯ ಇಷ್ಟು ನಿಚ್ಚಳವಾಗಿವಾಗಿರುವಾಗ "ಅಲ್ಲಿಯವರೆಗೆ ಕರ್ನಾಟಕದಲ್ಲಿ ಯಾವ ಧರ್ಮವೂ ಇರಲಿಲ್ಲ" ಎಂಬ ಮಾತನ್ನು ಹೇಗೆ ನಂಬಲು ಸಾಧ್ಯ? ಇದೊಂದು "ಏನಕೇನ ಪ್ರಕಾರೇಣ ....."ದ ರೀತಿಯ ಹೇಳಿಕೆಯಲ್ಲವೆ?

ಆಶೋಕನೇ ತನ್ನ ಅನೇಕ ಶಿಲಾಲೇಖಗಳಲ್ಲಿ ಬಾಂಹಣ, ಸಮಣ, ಆಜೀವಿಕ ಮತ್ತು ಸಂಘ [ಬೌದ್ಧಸಂಘ]ಗಳಲ್ಲಿ ಉಲ್ಲೇಖಿಸಿದ್ದಾನೆ. ಈ ಬಗ್ಗೆ ಅವನಲ್ಲಿ ಯಾವ ಗೊಂದಲವೂ ಇರಲಿಲ್ಲ. [Hultzsch: C.I.I. Vol.I, Rock Edicts, No.III, IV, VIII, IX, XI, XIII etc.] 'ಸಮಣ' ಎಂಬ ಪದವು 'ಶ್ರಮಣ'ಕ್ಕೆ ಸಂವಾದಿಯಾಗಿದ್ದು, ಇದು ಜೈನರನ್ನು ಉಲ್ಲೇಖಿಸುವುದೇ ಆಗಿದೆ ಎಂದು ಎಸ್.ಆರ್. ಶರ್ಮ ಅವರು ಬಹಳ ಹಿಂದೆಯೇ ಸ್ಪಷ್ಟಪಡಿಸಿದ್ದಾರೆ. [S.R. Sharma: Jainism and Karnataka Culture, Dharwad, 1940, p.7]

ಇನ್ನು ಅಶೋಕ ಬೌದ್ಧಧರ್ಮ ಪ್ರಚಾರಕ್ಕಾಗಿ ನಾಲ್ಕು ವರ್ಷಗಳ ಕಾಲ ಇಲ್ಲೇ ವಾಸ್ತವ್ಯ ಹೂಡಿದ್ದ ಎಂಬ ಮಾತು. ಶಾಸನಾಧ್ಯಯಕ್ಕೆ ಸಂಬಂಧಿಸಿದ ವಿಷಯ ಇದಾದ್ದರಿಂದ ಕಿಂಚಿತ್ ವಿವರಣೆ ಈ ಬಗ್ಗೆ ಅವಶ್ಯ.

ಉಪಲಬ್ಧವಿರುವ ಮಾಹಿತಿ ಪ್ರಕಾರ ಬೌದ್ಧಧರ್ಮ ಪ್ರಚಾರಕ್ಕಾಗಿ ಅಶೋಕನು ಬೌದ್ಧಸಂಘಗಳನ್ನು ವನವಾಸಿಕಾ [ಬನವಾಸಿ], ಮಹಿಷಮಂಡಲ [ಇಂದಿನ ಮೈಸೂರು ಭಾಗ] ಮತ್ತು ಸಿಂಹಳಗಳಿಗೆ ಕಳುಹಿಸಿದ [R.K. Moorkeji: Ashoka, pp.32-34]. ತನ್ಮೂಲಕ ದಕ್ಷಿಣ ಭಾರತ ಮತ್ತು ಸಿಂಹಳಗಳಲ್ಲಿ ಬೌದ್ಧಧರ್ಮ ಪ್ರಚಾರಕಾರ್ಯ ನಡೆಸಿದ. ಆದರೆ ಆತ ಇಲ್ಲೇ ಬಂದು ನೆಲೆಸಿ ಈ ಕಾರ್ಯ ಮಾಡಿದ ಎಂಬ ಮಾಹಿತಿ ಇಲ್ಲೆಲ್ಲೂ ಇಲ್ಲ. ಕೊಪ್ಪಳದ ಶಾಸನಗಳಲ್ಲಾಗಲೀ, ಕರ್ನಾಟಕದಲ್ಲಿ ದೊರೆಯುವ ಈತನ ಇತರ ಶಾಸನಗಳಲ್ಲಾಗಲೀ ಈ ಮಾಹಿತಿ ಇಲ್ಲ. ಅಂದ ಮೇಲೆ ಅಶೋಕನ ಶಾಸನಗಳ ಮಾಹಿತಿಯೇ ಸರಿಯಾಗಿ ಇಲ್ಲದೆ ಕೊಟ್ಟ ಹೇಳಿಕೆ ಇದಾಗಿದೆ. ಶಾಸನಾಭ್ಯಾಸಿಗಳು ಯಾವುದೇ ಶಾಸನವನ್ನೂ ಹಲವು ಬಾರಿ ಓದಿ ಅರ್ಥೈಸಿಕೊಂಡಲ್ಲಿ ಈ ರೀತಿಯ ಎಡವಟ್ಟುಗಳು ಆಗುವುದಿಲ್ಲ.

III

ಕರ್ನಾಟಕದಲ್ಲಿ ಶಾಸನ ಶೋಧ ಮತ್ತು ಅಧ್ಯಯನಕ್ಕೆ ಒಂದು ಭವ್ಯ ಇತಿಹಾಸ ಇದೆ. ಮೊದಲಿಗೆ ಈ ಕಾರ್ಯಕ್ಕೆ ನಾಂದಿ ಹಾಡಿದವರು ಬಿ.ಎಲ್. ರೈಸ್ ಮತ್ತು ಜೆ.ಎಫ್. ಫ್ಲೀಟ್. ಇವರು ಹುಟ್ಟು ಹಾಕಿದ ಪರಂಪರೆ ಭವ್ಯವಾದ್ದು. ಇದರಿಂದ ಭಾರತೀಯ ಶಾಸನ ಪಂಡಿತದಿಗ್ಗಜರೇ ಕರ್ನಾಟಕದತ್ತ ಮುಖ ಮಾಡುವಂತಾಯಿತು. ಈ ಪರಂಪರೆಯ ಕೊನೆಯ ಕೊಂಡಿಯಂತಿರುವವರು ವಯೋವೃದ್ಧರೂ, ಜ್ಞಾನವೃದ್ಧರೂ ಆದ ಡಾ. ಶ್ರೀನಿವಾಸ ರಿತ್ತಿಯವರು. ಇವರುಗಳ ಸಾಧನೆ ಮಹತ್ತಾದುದು. ಇದರಿಂದ ಅಶೋಕನ ಶಾಸನಗಳ ದೊಡ್ಡ ಭಂಡಾರವೇ ಕರ್ನಾಟಕದಲ್ಲಿ ದೊರೆತಿದೆ. ಇದರಲ್ಲಿ ಅತ್ಯಂತ ಪ್ರಮುಖವಾದುದು ಮಸ್ಕಿಯ ಶಿಲಾಲೇಖ. ಕೊಪ್ಪಳ ಜಿಲ್ಲೆಯ ಈ ಶಾಸನ ಇಡೀ ದೇಶಕ್ಕೆ ಪ್ರಮುಖವಾದುದು. ಕಾರಣ ಪ್ರಪ್ರಥಮ ಬಾರಿಗೆ ದೇವಾನಾಂಪ್ರಿಯ ಪ್ರಿಯದರ್ಶಿ ಎಂಬ ಚಕ್ರವರ್ತಿಯ ಹೆಸರು **ಅಶೋಕ** ಎಂಬುದನ್ನು ವಿಶ್ವಕ್ಕೆ ಸಾರಿತು.

ಕರ್ನಾಟಕದಲ್ಲಿ ದೊರೆತಿರುವ ಶಾಸನ ಸಂಪತ್ತು ಅಪಾರವಾದುದು. ಇವು ಬೆಳಕಿಗೆ ಬಂದ ಕಥೆಯೂ ರೋಚಕವಾಗಿದೆ. ಇದಕ್ಕೆ ಕಾರಣೀಭೂತರಾದ ಎಲ್ಲರನ್ನೂ ನಾವು ಈ ಸಂದರ್ಭದಲ್ಲಿ ನೆನೆಯುವುದು ಕರ್ತವ್ಯ.

ದುರ್ಗಮವಾದ ಸ್ಥಳಗಳಲ್ಲಿ ಪತ್ತೆಯಾಗಿರುವ ಈ ಶಾಸಗಳ ಇರುವಿಕೆಯನ್ನು ಪತ್ತೆ ಮಾಡುವ ಹವ್ಯಾಸ ಕೆಲವೇ ಮಂದಿ ವಿದ್ವಾಂಸರಲ್ಲಿದೆ. ಇವರ ಕಾರ್ಯ ಅತ್ಯಂತ ಶ್ಲಾಘನೀಯ. ಇದಕ್ಕೊಂದು ಉತ್ತಮ ನಿದರ್ಶನ ಕೊಡಲು ಬಯಸುತ್ತೇನೆ.

೧೯೨೯-೩೦ನೇ ವರ್ಷದಲ್ಲಿ ಕದಂಬ ಮಯೂರಶರ್ಮನ ಇಂದಿನವರೆಗೂ ಏಕೈಕ ಎಂದೇ ಖ್ಯಾತಿ ಹೊಂದಿರುವ ಶಾಸನವೊಂದನ್ನು ಎಂ.ಹೆಚ್. ಕೃಷ್ಣ ಅವರು ಚಂದ್ರವಳ್ಳಿಯಲ್ಲಿ ಪತ್ತೆ ಮಾಡಿದರು. ಇದನ್ನು ವಿದ್ವಾಂಸರ ಗಮನಕ್ಕೂ ತಂದರು [೧೯೨೯ರ ಎಂ.ಎ.ಆರ್. ಪು. ೫೦-೬೦ ಇದು ಪ್ರಕಟವಾದ್ದು ೧೯೧೧ರಲ್ಲಿ]. ಇದು ಚಂದ್ರವಳ್ಳಿ ಶಾಸನ ಎಂದೇ ಹೆಸರು ಪಡೆದು ವಿದ್ವಾಂಸರಲ್ಲಿ ಪ್ರಸಿದ್ಧವಾಯಿತು. ಹಲವಾರು ಮಂದಿ ಖ್ಯಾತನಾಮರು ಇದರ ಬಗ್ಗೆ ವ್ಯಾಖ್ಯಾನಿಸಿ ಲೇಖನಗಳನ್ನು ಬರೆದರು. ಆದರೆ ಶಾಸನ ಇರುವ ಸ್ಥಳದ ಬಗ್ಗೆ ಚಿಂತೆ ಇರಲಿಲ್ಲ. ಸ್ಥಳೀಯರೂ ಈ ಪ್ರಖ್ಯಾತ ಶಾಸನ ಇರುವಿಕೆಯ ಬಗ್ಗೆ ಚಿಂತಿಸಲಿಲ್ಲ.

ಈಗ್ಗೆ ಕೆಲದಶಕಗಳ ಹಿಂದೆ ಸ್ಥಳೀಯ ತರುಣ ವಿದ್ವಾಂಸರೊಬ್ಬರು ಶಾಸನದ ಸ್ಥಳ ಪತ್ತೆ ಮಾಡಿ, ಅದರ ಪಡಿಯಚ್ಚು ತೆಗೆದು, ಶುದ್ಧಪಾಠವನ್ನು ಸಿದ್ಧಮಾಡಿದರು. ಇದು ಕೊಟ್ಟ ಮುಖ್ಯ ಮಾಹಿತಿ ಇಡೀ ವಿದ್ವಾಂಸ ಪ್ರಪಂಚವನ್ನೇ ಬೆರಗುಗೊಳಿಸಿದೆ. ಹಿಂದೆ ತಿಳಿದಿದ್ದಂತೆ ಈ ಶಾಸನ ಇಲ್ಲ. ಬದಲಿಗೆ ಇಂತಿದೆ –

೧ ಇದರ ಭಾಷೆ ಪ್ರಾಕೃತವಲ್ಲ. ಸಂಸ್ಕೃತ.

೨ ಮಯೂರಶರ್ಮನ ಹೆಸರು ಶಾಸನದಲ್ಲಿ ಮಯೂರವರ್ಮ್ಮ ಎಂದೇ ಇದೆ.

೩ ಹಿಂದೆ ತಿಳಿದಿದ್ದಂತೆ ಮಯೂರಶರ್ಮನ ಯಾವುದೇ ರಾಜಕೀಯ ಸಾಧನೆ ಇಲ್ಲಿ ದಾಖಲಾಗಿಲ್ಲ.

೪ಹಿಂದೆ ತಿಳಿದಿದ್ದಂತೆ ಮಯೂರಶರ್ಮ ಚಂದ್ರವಳ್ಳಿಯಲ್ಲಿ ಯಾವುದೇ ತಟಾಕ ನಿರ್ಮಾಣ ಮಾಡಲಿಲ್ಲ. ಬದಲಿಗೆ ಇದ್ದ ಪ್ರಾಚೀನ ತಟಾಕವನ್ನು ಪುನರ್‌ನವೀಕರಿಸಿದ.

೫ ವಾನವಾಸಕದಲ್ಲಿ ತನ್ನ ನೆಲೆಯನ್ನು ಸ್ಥಾಪಿಸಿದ್ದ.

೬ಕುಪಣಚಮೋ . . . ಎಂಬಾತ ಈ ಶಾಸನವನ್ನು ಬರೆದ.

ಈ ಅದ್ಭುತ ಸಾಧನೆ ಮಾಡಿದವರು ಈಗ ಹಿರಿಯ ವಿದ್ವಾಂಸರಾಗಿರುವ ಚಿತ್ರದುರ್ಗದ ಡಾ. ಬಿ. ರಾಜಶೇಖರಪ್ಪನವರು. ['ಚಂದ್ರವಳ್ಳಿ ಶಾಸನದ ಮೇಲೆ ಹೊಸ ಬೆಳಕು' – ದುರ್ಗ ಶೋಧನ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧]

ಶಾಸನದ ಶುದ್ಧ ಪಾಠ ದೊರೆಯದಿದ್ದಲ್ಲಿ ಆಗುವ ಅನಾಹುತ ಇದು. ಶಾಸನದ ಪಡಿಯಚ್ಚನ್ನು ತೆಗೆಯುವುರಿಂದ ಹಿಡಿದು ಅದರ ಶುದ್ಧ ಪಾಠ ಸಿದ್ಧಮಾಡುವವರೆಗೆ ಎಷ್ಟು ಎಚ್ಚರಿಕೆ ವಹಿಸುತ್ತೇವೆಯೋ ಅಷ್ಟು ಒಳ್ಳೆಯದು.

ಲೂಯಿ ರೈಸ್‌ರವರು ಕಿಗ್ಗದ ಒಂದು ಶಾಸನಪಾಠವನ್ನು ಪ್ರಕಟಿಸುವಾಗ ಒಂದು ಕಡೆ "ಕುನ್ದವರ್ಮರಸಂ ಮುಡಿಮೆ ಗೆಯೆ" ಎಂದು ಓದಿದ್ದಾರೆ. ಇದರ ಅರ್ಥ "ಕುನ್ದವರ್ಮಸರು ಮಡಿದಾಗ" [E.C., (Rice) Vol.6, Koppa, 38]. ಕರ್ನಾಟಕದ ಕರಾವಳಿಯನ್ನಾಳಿದ ಆಳುಪ ವಂಶಕ್ಕೆ ಪ್ರಮುಖವಾದ ಈ ಶಾಸನವನ್ನು ಡಾ. ಕೆ.ವಿ. ರಮೇಶ ಅವರು ಸಿದ್ಧಪಡಿಸಿದ ಪಾಠದ ಪ್ರಕಾರ ಇದು "ಕುನ್ದವರ್ಮರಸಂ ಮುದಿಮೆಗೆಯೆ" ಎಂದಿದೆ. ಇದರ ಅರ್ಥ "ಕುನ್ದವರ್ಮರಸರು ಆಳುತ್ತಿದ್ದಾಗ" [K.V. Ramesh: A History of South Kanara, Dharwad, 1970, pp.44-45]. ಶಾಸನ ಓದುವಲ್ಲಿ ಒಂದು ಅಕ್ಷರ ವ್ಯತ್ಯಾಸವಾದರೆ ಏನಾಗಬಹುದು ಎಂಬುದಕ್ಕೆ ಇದೊಂದು ಸುಂದರ ಉದಾಹರಣೆ.

ಇಂತಹ ಉದಾಹರಣೆಗಳು ಬಹಳಷ್ಟಿವೆ. ತರುಣ ಸಂಶೋಧಕರು ಈ ಬಗ್ಗೆ ಗಮನ ಹರಿಸಿ ಅಧ್ಯಯನ ಮಾಡಿದಲ್ಲಿ ಇದು ಅವರಿಗೆ ಒಳ್ಳೆಯ ಫಲ ನೀಡುತ್ತದೆ.

ಶಾಸನ ಅಧ್ಯಯನದಲ್ಲಿ ಕ್ಷೇತ್ರಕಾರ್ಯ ಬಹಳ ಮುಖ್ಯ. ಇದು ಶಾಸನಗಳ ಅಧ್ಯಯನ ಮತ್ತು ಮರು ಅಧ್ಯಯನದ ಆಪದ್ಬಾಂಧವನಂತೆ ಸಹಕರಿಸುತ್ತದೆ. ಆದರೆ ಎಲ್ಲ ಹಂತಗಳಲ್ಲೂ ಇದನ್ನು ನಿರೀಕ್ಷಿಸುವುದು ಸರಿಯಲ್ಲ. ಅಂತಹ ಸಂದರ್ಭಗಳಲ್ಲಿ ಮಾಡುವ ಪ್ರಥಮ ಅಧ್ಯಯನ ಪ್ರಮುಖಪಾತ್ರ ವಹಿಸುತ್ತದೆ. ಎಲ್ಲ ತಪ್ಪು, ಒಪ್ಪುಗಳಿಗೆ ಇಲ್ಲೇ ಬೀಜಾಂಕುರವಾಗುತ್ತದೆ. ಇದಕ್ಕೆ ಸೂಕ್ತವಾದ ಉದಾಹರಣೆಗಳ ಸರಮಾಲೆಯನ್ನೇ ಕೊಡಬಹುದು. ಇದನ್ನೇ ಪ್ರತ್ಯೇಕವಾಗಿ ಅಧ್ಯಯನ ಮಾಡಿದರೆ ಅದೊಂದು ಉತ್ತಮ ಕೊಡುಗೆಯಾಗುತ್ತದೆ. ಆದರೆ ಈ ಬಗ್ಗೆ ಬಹಳ ಎಚ್ಚರಿಕೆಯ ಮತ್ತು ನಿಷ್ಪಕ್ಷಪಾತ ನಡೆ ಬಹಳ ಮುಖ್ಯ.

IV

ಹಿಂದೆ ಸಾಮಾನ್ಯ ಕಾರಣಗಳಿಗೂ ಶಾಸನಗಳನ್ನು 'ಕೂಟ' ಎಂದು ವರ್ಗೀಕರಿಸುವ ರೂಢಿ ಇತ್ತು. ಹೀಗೆ ವರ್ಗೀಕರಿಸಲ್ಪಟ್ಟ ಗಂಗ ತಾಮ್ರಶಾಸನಗಳ ನೈಜತೆ ಹೊಸ ಶೋಧಗಳಿಂದ ಪ್ರಕಟವಾಗಿದೆ. ಈಗಲೂ ಈ ಪದ್ಧತಿ ಮುಂದುವರೆದಿದೆ. ಹೆಚ್ಚಿನ ವೇಳೆಗಳಲ್ಲಿ ಇದು ಏಕಪಕ್ಷೀಯ ನಡೆಯಾಗಿ ಕಾಣುತ್ತದೆ. ಈ ಬಗ್ಗೆ ವಿದ್ವಾಂಸರಲ್ಲಿ ಸಂಯಮ ಇರುವುದು ಸೂಕ್ತ. ಶಾಸನಗಳ ತುಲನಾತ್ಮಕ ಮರು ಅಧ್ಯಯನ ಇಲ್ಲಿಯ ತೊಡಕನ್ನು ನಿವಾರಿಸಲು ಅತ್ಯಂತ ಸಹಕಾರಿ.

ಹೀಗೆಂದ ಮಾತ್ರಕ್ಕೆ ಕೂಟ ಶಾಸನಗಳು ಇಲ್ಲ ಎಂದು ನಾನು ಹೇಳುವುದಿಲ್ಲ. ಹಿಂದೆ ಭಾರತಕ್ಕೆ ಬಂದ ಬ್ರಿಟಿಷ್ ಅಧಿಕಾರಿಗಳು ಪಾಣಿನೀಯ ಗ್ರಂಥಗಳನ್ನು ಅಭ್ಯಾಸ ಮಾಡಿ ಅದರ ಆಧಾರದಲ್ಲಿ ಶಾಸನಗಳಲ್ಲಿ ಭಾಷಾ ಶುದ್ಧತೆಯ ಬಗ್ಗೆ ಪ್ರತಿಪಾದಿಸಿದರು. ಇವರುಗಳಿಂದ ಹುಟ್ಟಿಕೊಂಡ ಭಾರತೀಯ ದೊಡ್ಡ ತಜ್ಞ ಪರಂಪರೆ ಇದನ್ನೇ ಮುಂದುವರೆಸಿತು.

ಇದರಿಂದ ಶಾಸನಗಳು ಕೊಡುತ್ತಿದ್ದ ನಾನಾ ರೀತಿಯ ವಿಷಯಗಳ ಅಧ್ಯಯನಕ್ಕೆ ತೊಡಕಾಗಿತ್ತು. ಅಲ್ಲದೆ ಎಲ್ಲ ಕಡೆ ವಿದ್ಯಾವಂತ ಸಮಾಜವನ್ನು ನಿರೀಕ್ಷಿಸುವುದು ಎಷ್ಟು ಸರಿ?

ಈಗ ಪರಿಸ್ಥಿತಿ ಬದಲಾಗಿದೆ. ಪ್ರಾದೇಶಿಕ ನೆಲೆಗಟ್ಟಿನಲ್ಲಿ ಅಪಾರ ಪ್ರಮಾಣದ ಶಾಸನಗಳು ದೊರೆತಿವೆ, ದೊರೆಯುತ್ತಿವೆ. ಹೆಚ್ಚಿನವು ಪ್ರಾದೇಶಿಕ ಭಾಷೆಯಲ್ಲೇ ಇವೆ. ರಾಜಕೀಯ ವಿಷಯ ಬಿಟ್ಟು ಶಾಸನಗಳು ಕೊಡುವ ಇತರೇ ವಿಷಯಗಳ ಅಧ್ಯಯನದತ್ತ ಸಂಶೋಧಕರು ಗಮನ ಹರಿಸಿದ್ದಾರೆ. ಇದೊಂದು ಸಂತೋಷದ ವಿಷಯ. ನಮ್ಮ ಸಾಂಸ್ಕೃತಿಕ ಇತಿಹಾಸದ ವಿರಾಡ್ ಸ್ವರೂಪ ಇದರಿಂದ ತೆರೆದುಕೊಳ್ಳುತ್ತಿದೆ. ಪ್ರಾದೇಶಿಕ ನೆಲೆಯಲ್ಲೂ ಆಯಾ ಭಾಗದ ಭಾಷಾ ಪ್ರಯೋಗ, ವೈವಿಧ್ಯತೆ ಇತ್ಯಾದಿಗಳ ದರ್ಶನ ನಮಗಾಗುತ್ತಿದೆ. ಇದು ಅಲ್ಲಿಯ ಜನರ ಸ್ವಭಾವವನ್ನು ಪರಿಚಯಿಸುತ್ತದೆ. ಶಾಸನಾಧ್ಯಯನದಲ್ಲಿ ಭಾಷಾ ಅಶುದ್ಧತೆ ಕಂಡುಬಂದಲ್ಲಿ ಆ ಬಗ್ಗೆ ಒಂದು ವಾಕ್ಯ ಬರೆಯಿರಿ. ಆದರೆ ಅದನ್ನೇ ಮುಖ್ಯ ಅಂಶವನ್ನಾಗಿ ಮಾಡಬೇಡಿ. ನನ್ನ ದೃಷ್ಟಿಯಲ್ಲಿ ಶಾಸನಗಳಲ್ಲಿ ಭಾಷಾಶುದ್ಧತೆ ಇರಬೇಕೆಂದೇನೂ ಇಲ್ಲ. ಆದರೆ ನೀವು ಬರೆಯುವ ಭಾಷೆ ಶುದ್ಧವಾಗಿರಲಿ.

೧೧ರಿಂದ ೧೩ನೆಯ ಶತಮಾನದ ವರೆಗಿನ ಕಾಲ ಹೊಯ್ಸಳ ಮತ್ತು ಕಲ್ಯಾಣ ಚಾಲುಕ್ಯರದು ಇವರಿಗೆ ಅಪಾರ ಸಂಖ್ಯೆಯ ಸಾಮಂತ ಅರಸರೂ ಇದ್ದರು. ಇವರ ಕಾಲದಲ್ಲಿ ದೀರ್ಘ ಶಾಸನಗಳು ಹೆಚ್ಚಾಗಿ ದೊರೆಯುತ್ತವೆ. ಸಾಹಿತ್ಯ, ಅಲಂಕಾರ, ರಚನಾ ಕುಶಲತೆಗಳ ಗುಣಮಟ್ಟ ಇವುಗಳ ಪ್ರದರ್ಶನ ಇಲ್ಲಿ ಅಧಿಕ. ಉದ್ದಾಮ ಪಂಡಿತರೂ, ಸಾಹಿತಿಗಳೂ ಮತ್ತು ಶಾಸನಕವಿಗಳೂ ಆಗ ಇಲ್ಲಿದ್ದರು. ಕವಿಯ ಶಕ್ತಿಗೆ ತಕ್ಕಂತೆ ಉತ್ಪ್ರೇಕ್ಷೆಯ ಪ್ರೌಢಿಮೆಯನ್ನು ಈ ಕಾಲದ ಶಾಸನಗಳು ಬಿಂಬಿಸುತ್ತವೆ. ವಿಡಂಬನೆಯನ್ನು ವಾಸ್ತವತೆಯ ನೆಲೆಯಲ್ಲಿ ಅಳೆಯಬೇಕು. ಇತಿಹಾಸದ ಅಂಶಗಳನ್ನು ಎಚ್ಚರಿಕೆಯಿಂದ ವಿಶ್ಲೇಷಿಸಬೇಕು. ಇಲ್ಲದಿದ್ದಲ್ಲಿ ಆಭಾಸಗಳಾಗುವುದು ಸಹಜ.

ವಿಜಯನಗರ ಕಾಲ

ವಿಜಯನಗರದ ಕಾಲಕ್ಕೆ ಬಂದಾಗ ಇದು ಪತನದ ಹಾದಿ ಹಿಡಿಯುವುದನ್ನು ಕಾಣುತ್ತೇವೆ. ರಾಜಕೀಯ ಮತ್ತು ಆರ್ಥಿಕವಾಗಿ ಆಗ ಸಮಾಜ ಬಲಿಷ್ಠವಾಯಿತು. ವಿದ್ಯೆ ಮತ್ತು ಜ್ಞಾನದ ಕಡೆ ಗಮನ ಕುಂಠಿತವಾಯಿತು. ಧರ್ಮ ಮತ್ತು ಆಚರಣೆಗಳು ಒಂದು ರೀತಿಯಲ್ಲಿ ಯಾಂತ್ರೀಕೃತವಾದುವು. ಬಹುತೇಕ ನಡೆದ ವ್ಯವಹಾರಗಳು, ಧರ್ಮಕಾರ್ಯಗಳು ದಾಖಲೆಗೊಂಡವು. ವಿಷಯ ನಿರೂಪಣೆಯಲ್ಲಿ ಜನ ಹೆಚ್ಚಾಗಿ ಸರಳತೆಯನ್ನೇ ಬಯಸಿದರು. ಹಾಗಾಗಿ ಈ ಕಾಲದ ಶಾಸನಗಳು ವಿಷಯವನ್ನು ನೇರವಾಗಿ ಮತ್ತು ಸರಳವಾಗಿ ಪ್ರಸ್ತಾಪಿಸಿವೆ. ಇದರಿಂದಾಗಿ ಕನ್ನಡ ಶಾಸನಗಳ ಸಂಖ್ಯೆ ಅಪಾರವಾಗಿ ಬೆಳೆಯಿತು.

ಪಾಣಿನೀಯ ವಿದ್ವಾಂಸರು ಈ ಕಾಲದ ಶಾಸನಗಳನ್ನು ಕೇವಲ **'ವ್ಯವಹಾರಿಕ'** ಎಂದು ವರ್ಗೀಕರಿಸಬಹುದು. ಹೇಳಬೇಕಾದ್ದನ್ನು ಯಾವ ವಿಡಂಬನೆ, ಅಲಂಕಾರಗಳ ಗೊಂದಲವಿಲ್ಲದೆ ಸರಳವಾಗಿ ಮತ್ತು ನೇರವಾಗಿ ಹೇಳಿರುವುದು ಈ ಭಾವನೆಗೆ ಕಾರಣವಿರಬಹುದು. ಆದರೆ ಶಾಸನಗಳು ಕೇವಲ ಪಂಡಿತರಿಗಾಗಿ ಇದ್ದುದಲ್ಲ, ಸಾಮಾನ್ಯರಿಗೂ ತಲುಪಬೇಕಾದ ಮಾಹಿತಿಗಳನ್ನು ಹೊಂದಿದ್ದುವು. ವಿಜಯನಗರ ಕಾಲದಲ್ಲಿ ಶಾಸನಗಳು ಈ ಬಂಧನದಿಂದ ದೂರವಾದವು. ಇವು ಜನಸ್ನೇಹಿಯಾದವು. ವಿಷಯಗಳು ಸಾಮಾನ್ಯರಿಗೂ ಮುಟ್ಟುವಂತಾಯಿತು. ಇದರಿಂದ ಉತ್ತೇಜಿತರಾದ ಜನಸಾಮಾನ್ಯರೂ ತಮಗೆ ತೋರಿದ ಧರ್ಮಕಾರ್ಯಗಳನ್ನು ಮಾಡಿದರು. ಅವನ್ನು ತಮ್ಮದೇ ಆದ ರೀತಿಯಲ್ಲಿ ಶಾಸನಾಂಕಿತಗೊಳಿಸಿದರು. ಇದರಿಂದ ಕನ್ನಡ ನಾಡಿನಾದ್ಯಂತ ಸಾಮಾನ್ಯ ವಿದ್ಯಾಪ್ರಸರಣ ಹರಡಿದ್ದು, ಜನಸಾಮಾನ್ಯರಿಗೂ ಅದು ತಲುಪಿ ಬಹುತೇಕ ಜನ ಅಕ್ಷರಸ್ತರಾಗಿದ್ದರು ಎಂಬುದು ಪರೋಕ್ಷವಾಗಿ ನಿರೂಪಗೊಂಡಿದೆ. ಇದೊಂದು ಮಹತ್ತರವಾದ ಸಾಧನೆ. ಈ ನಿಟ್ಟಿನಲ್ಲಿ ಯೋಚಿಸಿದಾಗ **ವಿಜಯನಗರಕಾಲೀನ ಕನ್ನಡ ಶಾಸನಗಳು ನಾಡಿನಾದ್ಯಂತ ವಿದ್ಯಾಪ್ರಸರಣದ ಬಗ್ಗೆ ಮೌನಕ್ರಾಂತಿಯನ್ನೇ ಮಾಡಿವೆ**. ಇದು ಈ ಸಾಮ್ರಾಜ್ಯದ ಸಾಧನೆಗಳ ಕಿರೀಟಕ್ಕೆ ಸೇರಿಸಿದ ಒಂದು ಸ್ವರ್ಣಗರಿ.

ಅಕ್ಷರಸ್ಖಾಲಿತ್ಯ

ಶಾಸನಗಳಲ್ಲಿ ಅಕ್ಷರಸ್ಖಾಲಿತ್ಯ ಒಂದು ಸಾಮಾನ್ಯ ದೃಶ್ಯ. ಇದು ಮೂರು ಹಂತಗಳಲ್ಲಿ ಆಗುವ ಸಾಧ್ಯತೆಗಳಿವೆ. ಮೊದಲಿಗೆ ಶಾಸನ ರಚಿಸಿದ ಕವಿ. ಇವರಿಂದ ತಪ್ಪು ಆಗುವ ಸಂಭವ ಬಹಳ ಕಡಿಮೆ. ಎರಡನೆಯದಾಗಿ ಶಾಸನ ಪಾಠವನ್ನು ಶಿಲೆ ಅಥವಾ ತಾಮ್ರದ ಹಲಗೆಗಳ ಮೇಲೆ ಬರೆದುಕೊಟ್ಟಾತ. ಕೆಲವೊಮ್ಮೆ ಶಾಸನ ಕವಿಯ ಬರಹ (ಅಕ್ಷರ) ಸ್ಪಷ್ಟವಾಗದಿದ್ದಾಗ ತಪ್ಪುಗಳು ಸಹಜವಾಗಿ ಮೂಡುತ್ತವೆ. ತಪ್ಪಿನ ಅರಿವಾದಾಗ ಅದನ್ನು ತಿದ್ದಿದ ಸಂದರ್ಭಗಳೂ ಇವೆ.

ಮೂರನೆಯದಾಗಿ ಶಾಸನವನ್ನು ಕೆತ್ತುವಾತ. ಈತ ಸಾಮಾನ್ಯ ಅಕ್ಷರ ಬಲ್ಲವ. ಕಲ್ಲಿನ ಮೇಲೆ ಬರೆದ ಶಾಸನವನ್ನು ಕಷ್ಟಪಟ್ಟಾದರೂ ಓದುವ ಶಕ್ತಿ ಇವನಲ್ಲಿತ್ತು. ಇಲ್ಲಿ ಕೆತ್ತುವಾಗಿನ ಸಂದರ್ಭದಲ್ಲಿ ಕೆಳಗಿನ ಅಕ್ಷರಗಳು. ಪದಗಳೂ ಮಾಸಿಹೋಗುವ ಸಂದರ್ಭಗಳಿವೆ. ಆದರೆ ಕವಿಯಿಂದ ಆದ ತಪ್ಪಿಗೆ ಈತ ಹೊಣೆಯಲ್ಲ.

ಇಲ್ಲಿ ಒಂದು ಉದಾಹರಣೆ ಕೊಡುವುದು ಅವಶ್ಯ. ಚಲುಕ್ಯ ಅರಸು ವಿನಯಾದಿತ್ಯನ ಕ್ರಿ.ಶ.೬೯೧–೯೨ರ ಮನೋರ್ ತಾಮ್ರಶಾಸನ [E.C. Vol.28, pp.27 eff.]ವನ್ನು ಇದಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರ ಪ್ರಶಸ್ತಿ ಭಾಗದಲ್ಲಿ –

"ಚಲುಕ್ಯನಾಂ ಕುಲಂ ಅಲಂಕರಿಷ್ಣೋಃ ಅಶ್ವಮೇಧಾವಭೃತ ಸ್ನಾನ ಪವಿತ್ರೀಕೃತ ಗಾತ್ರಸ್ಯ ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ಕೀರ್ತಿವರ್ಮ ರಾಜಸ್ಯ" ಎಂದಿದೆ.

ಇದು ಒಂದನೆಯ ಪುಲಿಕೇಶಿಯ ಮಗ ಕೀರ್ತಿವರ್ಮನೂ ಅಶ್ವಮೇಧಯಾಗ ಮಾಡಿದವ ಎಂಬ ಅರ್ಥವನ್ನು ಕೊಡುತ್ತದೆ. "ಇದು ಇತರ ಶಾಸನಗಳಿಂದ ತಿಳಿದುಬರುವ ಸಂಗತಿಗೆ ವಿರುದ್ಧವಾದುದು" ಎಂದು ಕೆ.ವಿ. ರಮೇಶ ಅವರು ಅಭಿಪ್ರಾಯಪಡುತ್ತಾರೆ [ಕರ್ನಾಟಕ ಶಾಸನ ಸಮೀಕ್ಷೆ: ಬೆಂಗಳೂರು ವಿಶ್ವವಿದ್ಯಾಲಯ, ೧೯೯೧, ಪು.೩೫]. ಮಂಗಳೇಶನ ಮಹಾಕೂಟ ಸ್ತಂಭಶಾಸನದಲ್ಲಿ ಒಂದನೆಯ ಪುಲಕೇಶಿಗೆ "ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭ" ಎಂಬ ಬಿರುದು ಇತ್ತು ಎಂಬ ಮಾಹಿತಿ ಇದೆ. [ಇಂಡಿಯನ್ ಆ್ಯಂಟಿಕ್ವೇರಿ, ಸಂ. ೧೯, ಪು. ೭ರಿಂದ].

ಇಲ್ಲಿ ಆಗಿರುವ ಒಂದು ಪದದ ಲೋಪವನ್ನು ಅರ್ಥೈಸಿಕೊಂಡ, ರಮೇಶ ಅವರು ಅದನ್ನು ಬಹಳ ಸಮರ್ಥವಾಗಿ ಸರಿಪಡಿಸಿದ್ದಾರೆ. ಇಲ್ಲಿ "ಸೂನೋ" ಎಂಬ ಪದ ಲುಪ್ತವಾಗಿರುವುದನ್ನು ಗಮನಿಸಿ ಶಾಸನ ಶುದ್ಧಪಾಠ ಹೀಗಿರಬೇಕೆಂದು ಸೂಚಿಸಿದ್ದಾರೆ. ಅದೇನೆಂದರೆ –

"ಚಲುಕ್ಯನಾಂ ಕುಲಂ ಅಲಂಕರಿಷ್ಣೋಃ ಅಶ್ವಮೇಧಾವಭೃತ ಸ್ನಾನ
ಪವಿತ್ರೀಕೃತ ಗಾತ್ರಸ್ಯ ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭ ಸೂನೋಃ
ಮಹಾರಾಜಾಧಿರಾಜ ಪರಮೇಶ್ವರ ಶ್ರೀ ಕೀರ್ತಿವರ್ಮ ರಾಜಸ್ಯ"

ಇದರ ಅರ್ಥ ಅಶ್ವಮೇಧ ಯಾಗವನ್ನು ಮಾಡಿದ (ಒಂದನೆಯ) ಪುಲಕೇಶಿಯ ಮಗ ಶ್ರೀ ಕೀರ್ತಿವರ್ಮ [ಕರ್ನಾಟಕ ಶಾಸನ ಸಮೀಕ್ಷೆ: ಪು. ೩೪–೩೫].

ಇದು ಬರೆದಾತನಾಗಲೀ, ಕೆತ್ತಿದಾತನಾಗಲೀ ಮಾಡಿದ ತಪ್ಪಲ್ಲ. ಬದಲಾಗಿ ಶಾಸನ ರಚಿಸಿದ ಕವಿಯಿಂದಲೇ ಆದ ತಪ್ಪು.

ಕೆತ್ತುವಾತನಿಂದಾಗುವ ತಪ್ಪು ಬಹಳ ಇವೆ. ಇಲ್ಲಿ ಒಂದು ನಿದರ್ಶನವನ್ನು ಗಮನಿಸೋಣ. ಈಗ್ಗೆ ಸುಮಾರು ನಾಲ್ಕು ದಶಕಗಳಿಗೂ ಹಿಂದೆ ಕಾರ್ಕಳ ತಾಲೂಕಿನ ಕೆದಿಂಜೆ ಗ್ರಾಮದಲ್ಲಿ ನನಗೊಂದು ಹೊಸ ಶಿಲಾಶಾಸನ ದೊರೆಯಿತು. ಅದರಲ್ಲಿದ್ದ ತೇದಿ ವಿವರ ಶಕವರ್ಷ ೧೦೩೯, ಪ್ರಭವ, ಆಶ್ವೀಜ, ಬ.೩. ಇಲ್ಲಿ ಉಲ್ಲೇಖಿತವಾದ ರಾಜ ಶ್ರೀ ವೀರ ಹರಿಯಪ್ಪ ಒಡೆಯ. ಶಾಸನದಲ್ಲಿ ಬಳಕೆಯಾಗಿರುವುದು ೧೪ನೆಯ ಶತಮಾನದ ಲಿಪಿ. ಶಕ ೧೦೩೯ (ಕ್ರಿ.ಶ.೧೧೧೭)ರಲ್ಲಿ ಇದ್ದುದು ಹೇವಿಳಂಬಿ, ಪ್ರಭವ ಸಂವತ್ಸರವಲ್ಲ. ಆ ಕಾಲದಲ್ಲಿ ತುಳುನಾಡನ್ನು ಆಳುತ್ತಿದ್ದವರು ಆಳುಪರು. ಇವರಲ್ಲಿ ಯಾರಿಗೂ ವೀರ ಹರಿಯಪ್ಪ ಒಡೆಯ ಎಂಬ ಹೆಸರಿರಲಿಲ್ಲ. ಲಿಪಿಯ ಆಧಾರದಲ್ಲಿ ನೋಡಿದಾಗ ವಿಜಯನಗರ ಚಕ್ರವರ್ತಿ ಇಮ್ಮಡಿ ಹರಿಹರನಿಗೆ ಇದು ಸರಿಹೊಂದುತ್ತದೆ. ಈ ಆಧಾರದಲ್ಲಿ ಶಕವರ್ಷ ೧೩೦೯ ಇರಬಹುದೇ ಎಂದು ಬದಲಿಸಿ ನೋಡಿದಾಗ ಶಾಸನದಲ್ಲಿರುವ ತೇದಿವಿವರ ಕ್ರಿ.ಶ.೧೩೮೭, ಸೆಪ್ಟೆಂಬರ್ ೨೦ (ಸೋಮವಾರಕ್ಕೆ) ಸರಿಹೊಂದಿತು. ಇದು ಇಮ್ಮಡಿ ಹರಿಹರನ ರಾಜ್ಯಾಡಳಿತ ಕಾಲವೂ ಹೌದು. ಇದು ಒಂದು ಸಂಖ್ಯೆ ಸ್ಥಾನಪಲ್ಲಟದಿಂದಾದ ಪ್ರಮಾದ. ಇಂತಹ ಪ್ರಮಾದಗಳ ಉದಾಹರಣೆ ಬಹಳ ಇವೆ. ಇದು ಕೆತ್ತುವಾತನಿಂದಾದ್ದು. ಎಚ್ಚರಿಕೆ ಅವಲೋಕನ ಇಂತಹ ತಪ್ಪುಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳಲು ಸಹಕಾರಿಯಾಗುತ್ತದೆ.

ಕಾಲನಿರ್ಣಯ

ಶಾಸನಗಳ ಕಾಲನಿರ್ಣಯ ಬಹಳ ಮುಖ್ಯವಾದುದು. ಇದು ಸಮಕಾಲೀನ ವಿಷಯಗಳನ್ನು ನಿಚ್ಚಳಗೊಳಿಸುತ್ತವೆ. ಸಾಮಾನ್ಯವಾಗಿ ಶಾಸನಗಳಲ್ಲಿ ಶಕವರ್ಷ, ಕಲಿವರ್ಷ ಸಂವತ್ಸರ ಸಹಿತವಾಗಿ ತೇದಿವಿವರಗಳಿರುತ್ತವೆ. ಈ ವಿವರಗಳು

ಸರಿಯಾಗಿದ್ದಲ್ಲಿ ಕಾಲನಿರ್ಣಯ ಕರಾರುವಾಕ್ಕಾಗಿರುತ್ತದೆ. ಕೆಲವೊಮ್ಮೆ ಶಕವರ್ಷ ಅಥವಾ ಸಂವತ್ಸರದ ಉಲ್ಲೇಖ ಇಲ್ಲದಿರುವುದು ಇದೆ. ಆದರೆ ಇದರಿಂದ ಹೆಚ್ಚೇನು ತೊಡಕಾಗುವುದಿಲ್ಲ.

ಆದರೆ ಹಿಂದಿನ ಶಾಸನ ಸಂಪುಟಗಳನ್ನು ನೋಡಿದಾಗ ಹೆಚ್ಚಿನ ಕಡೆಗಳಲ್ಲಿ ಸರಿಯಾಗಿ ಕಾಲನಿರ್ಣಯವಾಗದಿರುವುದನ್ನು ಕಾಣುತ್ತೇವೆ. ಇಲ್ಲವೆ ಯಾವುದಾದರೂ ಒಂದು ಸಾಮಾನ್ಯ ಕಾರಣಕ್ಕೂ ಕಾಲನಿರ್ಣಯ ಸಾಧ್ಯವಿಲ್ಲ ಎಂಬ ಟಿಪ್ಪಣಿ ಕಾಣುತ್ತೇವೆ. ಕೆಲವೊಮ್ಮೆ ಲಿಪಿಯ ಕಾಲವನ್ನು ದಾಖಲಿಸದಿರುವುದೂ ಇದೆ.

ಸಾಮಾನ್ಯ ಕಾರಣಗಳನ್ನು ಮುಂದಿಟ್ಟು ಕಾಲನಿರ್ಣಯ ಮಾಡದಿರುವುದು ಸರಿಯಾದ ಕ್ರಮವಲ್ಲ. ಲಿಪಿಯ ಕಾಲ ಮತ್ತು ಶಾಸನಗಳು ಕೊಡುವ ಆಂತರಿಕ ಮಾಹಿತಿ ಆಧಾರದಲ್ಲಾದರೂ ಕಾಲಗಣನೆಯನ್ನು ಸೂಚ್ಯವಾಗಿ ಮಾಡಬಹುದು. ಇದು ಹಲವು ಸಮಸ್ಯೆಗಳನ್ನು ನಿವಾರಿಸಲು ಸಹಕಾರಿಯಾಗುತ್ತವೆ. ಸಂಶೋಧಕರಲ್ಲಿ ನನ್ನದೊಂದು ಮನವಿ. ಹೊಸ ಶಾಸನಗಳು ದೊರೆಕಿದಾಗ ಅದರಲ್ಲಿ ಶಕವರ್ಷದ ಉಲ್ಲೇಖ ಇಲ್ಲದಿದ್ದಲ್ಲಿ ಲಿಪಿಯ ಕಾಲ (ಶತಮಾನ) ವನ್ನಾದರೂ ತಪ್ಪದೇ ಉಲ್ಲೇಖಿಸಿ, ಮುಂದಿನ ಪೀಳಿಗೆಗೆ ನೀವು ಮಾಡುವ ಮಹದುಪಕಾರ ಇದು.

ಆರೋಪಗಳು

ಇತ್ತೀಚಿನ ದಶಕಗಳನ್ನು ಶಾಸನಗಳ ಬಗ್ಗೆ ನಾನಾ ರೀತಿಯ ಆರೋಪಗಳು ಹುಟ್ಟಿಕೊಳ್ಳುತ್ತಿವೆ. ಇದು ಖೇದದ ಸಂಗತಿಯಾದರೂ ಕೆಲವನ್ನು ಇಲ್ಲಿ ದಾಖಲಿಸಬೇಕು.

೧. ಶಾಸನಗಳನ್ನು ಹಾಕಿಸಿದವರು ರಾಜರು. ಅವರಿಗೆ ಬೇಕಾದ ರೀತಿಯಲ್ಲಿ ಇದನ್ನು ಹಾಕಿಸಿಕೊಂಡಿದ್ದಾರೆ; ಸಾಧನೆಗಳಿಲ್ಲದಿದ್ದರೂ, ಹೊಗಳಿಕೆಯೇ ಅದರ ಜೀವಾಳ; ಇಲ್ಲಿ ಸತ್ಯಕ್ಕೆ ದೂರಾದ ಅಂಶಗಳೇ ಜಾಸ್ತಿ, ಇತ್ಯಾದಿ. ಹೀಗಾಗಿ ಅವು ನಂಬಿಕೆಗೆ ಅರ್ಹವಲ್ಲ. ಆದ್ದರಿಂದ ಅವು ಇತಿಹಾಸದ ಆಕರಗಳಲ್ಲ.

ಬಹುತೇಕ ಶಾಸನಗಳನ್ನು ರಾಜರು ಹಾಕಿಸಿದ್ದಿರಬಹುದು. ಅವರ ಆಜ್ಞಾವರ್ತಿಗಳಾದ ಅಧಿಕಾರಗಳು ರಾಜರ ಅಪ್ಪಣೆ ಪಡೆದು ಹಾಕಿಸಿದ ಶಾಸನಗಳೂ ಈ ವರ್ಗಕ್ಕೆ ಸೇರುತ್ತವೆ. ಇಲ್ಲಿ ರಾಜ ಅಥವಾ ಅಧಿಕಾರಿ ಹಾಕಿಸಿದ ಮಾತ್ರಕ್ಕೆ ಅವು ನಗಣ್ಯವಾಗುವುದಾದರೂ ಹೇಗೆ? ಶಾಸನದಲ್ಲಿನ ಕಾಲ, ರಾಜ ಮತ್ತು ವಂಶದ ಹೆಸರು, ಅವರುಗಳು ಮಾಡಿದ ಕಾರ್ಯ – ಇವೆಲ್ಲವೂ ಅಲ್ಲಿ ಅನಿವಾರ್ಯವಾಗಿ ಇರಬೇಕಾದ ವಿಷಯಗಳೇ. ಇವು ಆ ಕಾಲದ ಇತಿಹಾಸ ರಚನೆಗೆ ಬೇಕಾದ ಅಮೂಲ್ಯ ಸಮಕಾಲೀನ ಆಕರಗಳು. ಉತ್ಪ್ರೇಕ್ಷಿತ ಭಾಗಗಳನ್ನು ಗುರುತಿಸುವ ಮತ್ತು ಬಿಡುವ ಸ್ವಾತಂತ್ರ್ಯ ಸಂಶೋಧಕನಿಗೆ ಇದೆ. ಹೀಗಿರುವಲ್ಲಿ ಕೇವಲ ರಾಜ ಹಾಕಿಸಿದ್ದು ಎಂದ ಮಾತ್ರಕ್ಕೆ ಅವನ್ನು ದೂರೀಕರಿಸುವುದು ಎಷ್ಟು ಸರಿ?

ಇಲ್ಲಿ ಒಂದು ಪ್ರಶ್ನೆ ಸಹಜವಾಗಿ ಏಳುತ್ತದೆ. ಅದೇನೆಂದರೆ – ಎಲ್ಲ ಶಾಸನಗಳನ್ನು ರಾಜರು ಹಾಕಿಸಿದ್ದೇ? ಇದಕ್ಕೆ ನೇರ ಉತ್ತರ. "ಇಲ್ಲ" ಎಂದು. ಇದು ಎಲ್ಲ ಶಾಸನ ಸಂಶೋಧಕರಿಗೂ ತಿಳಿದಿರುವ ವಿಷಯ. ಕರ್ನಾಟಕದಲ್ಲಿ ಇದುವರೆವಿಗೆ ದೊರೆತಿರುವ ಅಧಿಕಾಧಿಕ ಶಾಸನಗಳಲ್ಲಿ ರಾಜರುಗಳು ಹಾಕಿಸಿದಕ್ಕಿಂತ ಇತರರು ಹಾಕಿಸಿದ ಶಾಸನಗಳೇ ಅಧಿಕ ಸಂಖ್ಯೆಯಲ್ಲಿವೆ. ಎಷ್ಟೋ ಶಾಸನಗಳೂ ಖಾಸಗೀ ವ್ಯಕ್ತಿಗಳ ಕಾರ್ಯದಿಂದಾಗಿ ಹುಟ್ಟಿಕೊಂಡಿವೆ. ಅವರ ದಾನದ ಕಟ್ಟಳೆಯನ್ನು ಅವರೇ ನಿರ್ಧರಿಸಿದ್ದಾರೆ. ನೆಪಮಾತ್ರಕ್ಕೆ ಅಥವಾ ಗೌರವಸೂಚಕವಾಗಿ ರಾಜರ ಹೆಸರನ್ನು ಉಲ್ಲೇಖಿಸಿದ್ದಾರೆ. ರಾಜರ ಹೆಸರನ್ನೇ ಉಲ್ಲೇಖಿಸದೆ ಮಾಡಿದ ಕಾರ್ಯಗಳನ್ನು ದಾಖಲಿಸದ ಶಾಸನಗಳೂ ಬಹಳ ಇವೆ. ಇವುಗಳಲ್ಲಿ ನಾವು ಕಾಣುವುದು. ಸಾಮಾನ್ಯರಿಂದ, ಸಾಮಾನ್ಯರಿಗಾಗಿ ರೂಪುಗೊಂಡ ನಿಯಮಗಳು. ಇವು ರಾಜಾಜ್ಞೆಗಿಂತ ಹೆಚ್ಚು ಕ್ರಿಯಾಶೀಲವಾಗಿ ಸಂಬಂಧಿತ ಭಾಗಗಳಲ್ಲಿ ಗೌರವಿಲ್ಪಟ್ಟಿದ್ದವು. ಸಮಗ್ರ ಕರ್ನಾಟಕದಲ್ಲಿ ದೊರೆತ ಶಾಸನಗಳ ಪರಿಚಯ ಇದ್ದಲ್ಲಿ ಮಾತ್ರ ಇದರ ಅನುಭವ ಆಗುತ್ತದೆ. ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ, ಶಾಸನಗಳನ್ನು ಸಾರಾಸಗಟಾಗಿ ರಾಜರು ಹಾಕಿಸಿದ್ದು ಎಂದು ದೂರೀಕರಿಸುವುದು ದುರದೃಷ್ಟಕರ ಮತ್ತು ಏಕಪಕ್ಷೀಯ ನಿರ್ಧಾರ. ಸಂಶೋಧನೆಯಲ್ಲಿ ಪೂರ್ವಾಗ್ರಹ ಚಿಂತನೆ ಎನ್ನುವುದು ಒಂದು ದೊಡ್ಡ ದೋಷ.

೨. ಪುರುಷ ಶಾಸನಗಳು

ಇತ್ತೀಚಿನ ಸ್ತ್ರೀವಾದಿ ಚಿಂತಕರಿಂದ ಬಂದಿರುವ ಆರೋಪ–ಶಾಸನಗಳು ಪುರುಷಪ್ರಧಾನವಾಗಿವೆ. ಇಲ್ಲಿ ಮಹಿಳೆಯರ ಕಡೆಗಣನೆಯಾಗಿದೆ. ಶಾಸನಗಳು ಆಯಾ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಿತಿಗಳನ್ನು

ಬಿಂಬಿಸುತ್ತವೆ. ಇವು ಇಂದಿನ ಕಾಲದ ಚಿಂತನೆಗಳಿಗೆ ಹೊಂದಿಕೊಂಡಂತಿವೆ. ಇಂದಿನ ಚಿಂತನೆಗಳೊಂದಿಗೆ ಅವುಗಳ ತುಲನೆ ಮತ್ತು ಅವುಗಳಲ್ಲಿ ಕೊರತೆ ಹುಡುಕುವುದು ಎಷ್ಟು ಸರಿ? ಸ್ತ್ರೀವಾದ ಎಂಬುದು ಹುಟ್ಟಿದ್ದೇ ಇತ್ತೀಚಿನ ದಶಕಗಳಲ್ಲಿ. ಅದನ್ನು ಶತಮಾನಗಳ ಹಿಂದಿನ ಶಾಸನಗಳಲ್ಲಿ ತುರುಕಿ ದೋಷ ಹುಡುಕುವುದು ಸರಿಯೇ? ಇಂದಿನ ಸಮಾಜದ ಬದಲಾದ ಪರಿಸ್ಥಿತಿಯಲ್ಲಿ ಬೆಳೆಯುವ ಚಿಂತನೆಗೆ ಅನುಗುಣವಾಗಿ ಪ್ರಾಚೀನ, ಸಮಾಜ, ಇತಿಹಾಸ ಬೆಳೆಯಲಿಲ್ಲ ಎಂಬ ವಾದ ಹಾಸ್ಯಾಸ್ಪದವಲ್ಲವೇ?

ಇಷ್ಟಕ್ಕೂ ಶಾಸನಗಳಲ್ಲಿ ಮಹಿಳೆಯರ ಕಡೆಗಣನೆ ಆಗಿದೆಯೆ? ಇದಕ್ಕೆ ನೇರ ಮತ್ತು ಸ್ಪಷ್ಟ ಉತ್ತರ – "ಇಲ್ಲ". ಅಧ್ಯಯನದ ಕೊರತೆಯೇ ಇಂತಹ ವಾದಗಳಿಗೆ ಕಾರಣ. ಸಾಂದರ್ಭಿಕವಾಗಿ ಇದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು.

ಶಾತವಾಹನ ರಾಜರು ತಮ್ಮನ್ನು ತಮ್ಮ ತಾಯಿಯ ಹೆಸರಿನಿಂದಲೇ ಗುರುತಿಸಿ ಕೊಂಡಿದ್ದಾರೆ. ರಾಣಿ ನಯನಿಕ ತಾನೇ ಸ್ವಲ್ಪ ಕಾಲ ರಾಜ್ಯಭಾರ ಮಾಡಿದಳು. ಈ ಕಾಲದಲ್ಲಿ ಸ್ತ್ರೀಯರೂ ಆಡಳಿತದಲ್ಲಿ ಭಾಗಿಗಳಾಗಿ "ಮಹಾಸೇನಾಪತಿ" ಮತ್ತು "ಮಹಾ ತಲವಾರ"ರಾಗಿ ಕಾರ್ಯ ನಿರ್ವಹಿಸಿದ್ದಾರೆ. ಶಾಸನಗಳೇ ಕೊಡುವ ಮಾಹಿತಿ ಇದು.

ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಹೊಯ್ಸಳ ಮುಂತಾದ ಕಾಲಗಳಲ್ಲಿ ಸ್ತ್ರೀಯರು ನಾನಾ ರೀತಿಯಲ್ಲಿ ಸಾರ್ವಜನಿಕ ಹುದ್ದೆಗಳನ್ನು ಅಲಂಕರಿಸಿ, ದಕ್ಷ ಆಡಳಿತಗಾರರಾಗಿ ಕಾರ್ಯ ನಿರ್ವಹಿಸಿದ್ದರು. ಇಮ್ಮಡಿ ಪುಲಕೇಶಿಯ ಸೊಸೆ "ಅಭಿನವ ಸರಸ್ವತಿ" ಎಂಬ ಬಿರುದಾಂಕಿತಳಾಗಿದ್ದಳು. ಚಲುಕ್ಯ ರಾಜಕುಮಾರಿ ಹಾಗೂ ಆಳುಪರಾಣಿ – ಕುಂಕುಮದೇವಿ ಧರ್ಮಕಾರ್ಯ ಪ್ರವೀಣೆಯಾಗಿದ್ದಳು. ಹೊಯ್ಸಳ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿರುವ ಹೆಸರು ರಾಣಿ ಶಾಂತಲೆಯದು, ಮತ್ತೂ ಹೇಳುವುದಾದರೆ ದಾನಚಿಂತಾಮಣಿ ಅತ್ತಿಮಬ್ಬೆ ಮತ್ತು ಮಹಾಸತಿ ದೇಕಬ್ಬೆಯರ ಹೆಸರುಗಳು ಈ ಸಂದರ್ಭದಲ್ಲಿ ನೆನಪಾಗುವುದಿಲ್ಲವೇ?

ತುಳುನಾಡಿನಲ್ಲಿ ಮಾತೃಪ್ರಧಾನ ಸಮಾಜವೇ ಇತ್ತು, ಈಗಲೂ ಇದೆ. ಇಲ್ಲಿ ಆಳಿದ ಆಳುಪ ವಂಶವೊಂದನ್ನು ಹೊರತುಪಡಿಸಿ ಉಳಿದೆಲ್ಲಾ ರಾಜವಂಶಗಳೂ ಈ ಪರಂಪರೆಯಲ್ಲೇ ಬಂದವು. ಆಳುಪ ರಾಣಿಯರು ಮತ್ತು ರಾಜಕುವರಿಯರು ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಭಾಗಿಗಳಾಗಿ ತಮ್ಮದೇ ಆದ ಛಾಪು ಮಾಡಿಸಿದ್ದಾರೆ. ಸಂದಿಗ್ಧ ಸಮಯದಲ್ಲಿ ರಾಜ್ಯಭಾರದ ಹೊಣೆ ಹೊತ್ತು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದವಳು ಹೊಯ್ಸಳ ಮೂರನೆಯ ಬಲ್ಲಾಳನ ರಾಣಿ ಚಿಕ್ಕಾಯಿ ತಾಯಿ [ಇತಿಹಾಸ ದರ್ಶನ, ೧೯೧೨, ಇದರಲ್ಲಿ ನನ್ನ ಲೇಖನ, "ಆಳುಪ ರಾಣಿಯರು ಮತ್ತು ರಾಜಕುವರಿಯರು"]. ಅಷ್ಟೇ ಏನು ತುಳುನಾಡಿನ ಪ್ರಾಚೀನ ಬಂದರು ನಗರಗಳಾದ ಬಾರಕೂರು ಮತ್ತು ಬಸರೂರು ಹಾಗು ಸುತ್ತಮುತ್ತಲು ದೊರೆತಿರುವ ಬಹುತೇಕ ಶಾಸನಗಳು ಸಾಮಾಜಿಕ ಚಟುವಟಿಕೆಗಳಲ್ಲಿ ಮಹಿಳೆಯರ ಪಾತ್ರವನ್ನೇ ಬಿಂಬಿಸುತ್ತವೆ.

ಮೇಲೆ ವಿವರಿಸಿರುವ ನಿದರ್ಶನಗಳು ದೊರೆತಿರುವುದು ಶಾಸನಗಳಿಂದಲೇ. ಕರ್ನಾಟಕದ ಪ್ರತಿಯೊಂದು ಭಾಗವೂ ಇಂತಹ ಮಹಿಳಾ ಸಾಹಸಗಾಥೆಗಳ ಆಗರವಾಗಿದೆ. ಈಗ ಹೇಳಿ ಕರ್ನಾಟಕದಲ್ಲಿ ದೊರೆಯುವ ಶಾಸನಗಳ ಅಧ್ಯಯನ ಮಾಡದಿರುವುದು ಯಾರ ತಪ್ಪು?

೩. ಬಲಪಂಥೀಯ–ಎಡಪಂಥೀಯವಲ್ಲ

ಶಾಸನ ಅಧ್ಯಯನದ ಬಗ್ಗೆ ಈಗ ಹೊಸದೊಂದು ರೀತಿಯ ಆರೋಪ ಹುಟ್ಟಿಕೊಳ್ಳುತ್ತಿದೆ. ಇದು ಬಲಪಂಥೀಯ, ಎಡಪಂಥೀಯವಲ್ಲ, ಎಂಬ ವಾದ. ಈ ಬಗ್ಗೆ ಶಾಸನ ಅಧ್ಯಯನ ಮಾಡುವವರಿಗೆ ಯಾವ ಅಡ್ಡಿ ಇದೆ? ಮೂಲತಃ ಶಾಸನಗಳೂ ಆಕರ ಸಾಮಗ್ರಿಗಳು. ಸಂಶೋಧಕ ಇದರ ಮಾಹಿತಿಯನ್ನು ಕೊಡುವ "ಕಾರ್ಯವಾಹಕ" ಅಷ್ಟೆ. ಇತಿಹಾಸಕಾರ ತನ್ನ ಅಧ್ಯಯನದ ವಿಷಯಕ್ಕೆ ಅನುಗುಣವಾಗಿ ಈ ಮಾಹಿತಿಗಳನ್ನು ಬಳಸಿಕೊಳ್ಳಬೇಕು. ಈ ಸಂದರ್ಭದಲ್ಲಿ ಯಾವ ಪಂಥದ ವಿಚಾರಧಾರೆಯನ್ನಾದರೂ ಹರಿಸಲು ಸಾಧ್ಯವಿದೆ. ಆದರೆ ಕೇವಲ ಶಾಸನಾಧ್ಯಯನ ಯಾವುದೇ 'ಪಂಥೀಯ ಅಧ್ಯಯನ' ಆಗಲು ಸಾಧ್ಯವಿಲ್ಲ.

೪. ಶಾಪಾಶಯಗಳಲ್ಲಿ ವರ್ಗಸಂಘರ್ಷ

ಇತ್ತೀಚಿನ ಇನ್ನೊಂದು ವಿಚಾರಧಾರೆ ಎಂದರೆ – ಶಾಸನದ ಶಾಪಾಶಯಗಳಲ್ಲಿ ವರ್ಗಸಂಘರ್ಷ ಇದೆ. ಇಲ್ಲಿರುವ ಪುಣ್ಯಫಲವನ್ನು ಮೇಲ್ವರ್ಗಕ್ಕೂ, ಪಾಪಫಲವನ್ನು ಕೆಳವರ್ಗಕ್ಕೂ ಹಂಚಿ ಈ ರೀತಿಯಲ್ಲಿ ವರ್ಗಸಂಘರ್ಷ ಇದೆ ಎಂದು ಹೇಳುವುದು ಇವರ ವಾದ.

ಶಾಸನಗಳ ಕೊನೆ ಭಾಗದಲ್ಲಿ ಕಂಡುಬರುವ ಎರಡು ಪ್ರಮುಖ ಶ್ಲೋಕಗಳೆಂದರೆ–

೧)"ದಾನಪಾಲನಯೋ ರ್ಮಧ್ಯೆ ದಾನಾತ್ ಶ್ರೇಯೋನುಪಾಲನಂ

ದಾನತ್ ಸ್ವರ್ಗಮವಾಪ್ನೋತಿ ಪಾಲನಾದಚ್ಯುತ ಪದಂ ॥

ಇದರ ಅರ್ಥ: ದಾನ ಮಾಡುವವನ ಮತ್ತು ಅದನ್ನು (ಪ್ರಾಮಾಣಿಕವಾಗಿ) ಪಾಲಿಸುವವರ ನಡುವೆ ದಾನಿಗಿಂತ ಶ್ರೇಷ್ಠ ಅದನ್ನು ಪಾಲಿಸಿದವ. ದಾನಿಯು ಸ್ವರ್ಗಕ್ಕೆ ಹೋದರೆ ಪಾಲಿಸಿದಾತ ಅಚ್ಚುತ ಪದಕ್ಕೇ ಸೇರುತ್ತಾನೆ.

೨)"ಸ್ವದತ್ತಂ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ
ಪರದತ್ತಾಪಹರೇಣ ಸ್ವದತ್ತ ನಿಷ್ಫಲಂ ಭವೇತ್ ॥

ಇದರ ಅರ್ಥ: ತಾನಾಗಿ ಕೊಟ್ಟಿದ್ದಕ್ಕಿಂತಾ ಬೇರೆಯವರು ಕೊಟ್ಟಿದ್ದನ್ನು ರಕ್ಷಿಸುವುದು ಪುಣ್ಯಪ್ರದವಾದುದು. ಪರರು ಕೊಟ್ಟಿದ್ದನ್ನು ಅಪಹರಿಸಿದರೆ ತಾನು ಕೊಟ್ಟಿದ್ದನ್ನು ಫಲವಿಲ್ಲದಂತೆ ಮಾಡುತ್ತದೆ.

ಇಂತಹ ಹಲವಾರು ರೀತಿಯ ಶಾಪಾಶಯಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ಇದರ ಮೂಲ ಉದ್ದೇಶ ಮಾಡಿದ ಧರ್ಮಕಾರ್ಯವನ್ನು ರಕ್ಷಿಸುವುದು. ಜನರಿಗೆ ಪಾಪಭೀತಿ ಇದ್ದಲ್ಲಿ ಮಾಡಿದ ಧರ್ಮವನ್ನು ಕೆಡಿಸುವುದಿಲ್ಲ ಎಂಬ ಮಾನವ ಸಹಜ ನಂಬಿಕೆಯೇ ಶಾಸನಗಳಲ್ಲಿ ಪುಣ್ಯ. ಪಾಪಗಳ ಮಾಹಿತಿಗೆ ಕಾರಣವಾಗಿದೆ. ಇಲ್ಲಿ ವರ್ಗಭೇದಕ್ಕಾಗಲೀ ಅಥವಾ ಸಂಘರ್ಷಕ್ಕಾಗಲೀ ಅವಕಾಶವೇ ಇಲ್ಲ.

ಆದರೂ ಕೆಲವರು ಇದರಲ್ಲಿನ ಪಾಪಫಲವನ್ನು ನೀಚಕುಲಕ್ಕೂ, ಪುಣ್ಯಫಲವನ್ನು ಉಚ್ಚಕುಲಕ್ಕೂ ಹಂಚಿ ವರ್ಗಸಂಘರ್ಷ ಹೀಗಿತ್ತು ಎಂದು ಹೇಳುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಏನಾದರೂ ಮಾಡಿ ದೂಷಣೆ, ಆರೋಪಗಳನ್ನು ಮಾಡಬೇಕೆಂಬ ಮನೋಭಾವವನ್ನಷ್ಟೇ ಇದು ಪ್ರತಿಬಿಂಬಿಸುತ್ತದೆ.

ಸಮಾಜದಲ್ಲಿನ ನೈತಿಕ ಮಟ್ಟವನ್ನು ಅಳೆಯಲು ತುಂಬಾ ಸಹಕಾರಿಯಾಗಬಲ್ಲ ಸಮಕಾಲೀನ ಆಕರಗಳೆಂದರೆ ಶಾಸನಗಳಲ್ಲಿ ಇರುವ ಶಾಪಾಶಯಗಳು. ಕಾಲದಿಂದ ಕಾಲಕ್ಕೆ ಇದರಲ್ಲಿ ಕಂಡುಬರುವ ವೈವಿಧ್ಯತೆಯು ಸಮಾಜದ ನೈತಿಕತೆಯ ಏರುಪೇರುಗಳನ್ನು ಬಿಂಬಿಸುತ್ತವೆ. ಇದು ಸಮಾಜವನ್ನು ಸಮಷ್ಟೀ ರೂಪದಲ್ಲಿ ಕಂಡಿದೆಯೇ ಹೊರತು ವರ್ಗಬೇಧ ರೂಪದಲ್ಲಿ ಅಲ್ಲ. ಸಾಮಾನ್ಯರೂ ತಾವು ಮಾಡಿದ ಧರ್ಮಗಳನ್ನು ದಾಖಲಿಸುವುದಕ್ಕಾಗಿ ಶಾಸನಗಳನ್ನು ಹಾಕಿಸಿದ್ದಾರೆ. ಇಲ್ಲೂ ತಮ್ಮ ಧರ್ಮಕಾರ್ಯದ ರಕ್ಷಣೆಗಾಗಿ ಶಾಪಾಶಯಗಳನ್ನು ಹಾಕಿಸಿದ್ದಾರೆ. ಕೆಲವೊಮ್ಮೆ ತಮ್ಮ ಕುಟುಂಬದವರೇ ಧರ್ಮವನ್ನು ಕೆಡಿಸಿದರೆ ಅವರು ಯಾವ ಪಾಪಕ್ಕೆ ಒಳಗಾಗುತ್ತಾರೆ, ಅವರಿಗೆ ಏನು ಶಿಕ್ಷೆ ಮತ್ತು ದಂಡ ತೆರಬೇಕಾದರೆ ಎಷ್ಟು ದಂಡ – ಈ ಎಲ್ಲ ಮಾಹಿತಿಗಳು ಶಾಸನಗಳಲ್ಲಿವೆ. ರಾಜ ತಪ್ಪು ಮಾಡಿದರೆ, ಬ್ರಾಹ್ಮಣ, ಮಂತ್ರಿ, ಅಧಿಕಾರಿ ಇತ್ಯಾದಿಯಾಗಿ ಯಾರೇ ತಪ್ಪು ಮಾಡಿದರೂ ಅವರಿಗೆ ಅಥವಾ ಅವರುಗಳಿಗೆ ಶಿಕ್ಷೆ, ದಂಡ ಏನು, ಎಷ್ಟು ಎಂಬುದನ್ನು ಶಾಸನಗಳಲ್ಲಿ ಕಾಣಬಹುದು. ಇದರಲ್ಲಿ ರಾಜ, ಅಧಿಕಾರಿ ಮೇಲುವರ್ಗದ ಜನರು ತೆರುವ ದಂಡ ಮತ್ತು ಅನುಭವಿಸುವ ಶಿಕ್ಷೆ ಪ್ರಮಾಣ ಹೆಚ್ಚು ಎಂಬುದು ಗಮನಿಸಬೇಕಾದ ಪ್ರಮುಖ ಸಂಗತಿ. ಈ ಎಲ್ಲ ಮಾಹಿತಿಯೂ ಶಾಸನಗಳಲ್ಲೇ ದೊರೆಯುತ್ತವೆ. ಇದನ್ನು ಗಣನೆಗೆ ತೆಗೆದುಕೊಂಡಾಗ ಶಾಸನ ಹಾಕಿಸಿದವರ ಭಾವನೆಗಳು ಸರಿಯಾಗಿ ಅರ್ಥವಾಗುತ್ತವೆ; ತನ್ಮೂಲಕ ಪ್ರಾಮುಖ್ಯತೆಯೂ ಅರಿವಾಗುತ್ತದೆ. ಆಗ ದೋಷಾರೋಪಗಳನ್ನು ಮಾಡುವ ಸಾಧ್ಯತೆ ಶೂನ್ಯವಾಗುತ್ತದೆ.

ಇತಿಹಾಸ ಈಗ್ಗೆ ಹೆಚ್ಚು ಅವಕೃಪೆಗೆ ಗುರಿಯಾಗುತ್ತಿರುವ ವಿಷಯವಾಗಿದೆ. ಇದರ ಅಧ್ಯಯನ ಮತ್ತು ಅಧ್ಯಾಪನಗಳೆರಡೂ ಕುಂಠಿತವಾಗುತ್ತಿವೆ. ಇದರ ಪುನರುತ್ಥಾನ ಹಿಂದೆಂದಿಗಿಂತಲೂ ಈಗ ಹೆಚ್ಚು ಅವಶ್ಯಕವೆನಿಸಿದೆ. ಉಪಕಾರ ಸ್ಮರಣೆಯ ವಿಷಯದಲ್ಲಿ ಅವಜ್ಞೆ ಉಂಟಾಗಿದೆ. ಮಾಹಿತಿ ಪಡೆದರೂ ಅದನ್ನು ಸ್ಮರಿಸುವುದು; ವಿದ್ವಾಂಸರು ಮತ್ತು ಹಿರಿಯರಿಂದ ಬರೆಸಿಕೊಂಡದ್ದನ್ನು ತಿರುಚಿ ಪ್ರಕಟಿಸುವುದು; ಮೂಲ ಲೇಖಕರನ್ನು ಸ್ಮರಿಸದೇ ಹೆಸರಿಸದೆ ಪುಟಗಟ್ಟಲೇ ಉದ್ಧರಿಸಿ,

ತಮ್ಮದೆಂದು ಬಿಂಬಿಸಿ ಕೃತಿಚೌರ್ಯ ಮಾಡುವುದು ವಿದ್ವಾಂಸರ(?) ಕೆಟ್ಟ ನಡಾವಳಿಯ ಗುಣಗಳು. ಇದೆಲ್ಲವೂ ಕೊನೆಗೊಂಡಾಗ ಇತಿಹಾಸ ಸಂಶೋಧನೆ ಪುಟಿದೆದ್ದ ಚಿನ್ನವಾಗುತ್ತದೆ. ಹಾಗಾಗಲಿ ಎಂದು ಆಶಿಸುತ್ತೇನೆ.

ನಾವು ಎಷ್ಟೇ ಜಾಗ್ರತೆ ವಹಿಸಿದರೂ ಕೆಲವೊಮ್ಮೆ ತಪ್ಪಾಗುವ ಸಾಧ್ಯತೆಗಳಿವೆ. ಆಗ ಮಾಹಿತಿ ಕೊಡು–ಕೊಳ್ಳುವಿಕೆ ಭಾವ ಮುಕ್ತವಾಗಿದ್ದರೆ ಬಹಳ ಒಳ್ಳೆಯದು. ಈ ಬಗ್ಗೆ ಫ್ಲೀಟರ ಮಾತು ನಮಗೆ ದಾರಿದೀಪ – "ದೇವರು ಆರೋಗ್ಯ ಮತ್ತು ಆಯಸ್ಸು ದಯಪಾಲಿಸಿದಲ್ಲಿ ನಾನೇ ಕಂಡುಹಿಡಿದು ತಯಾರಿಸಿರುವ ಹಲವಾರು ಶಾಸನಪಾಠಗಳನ್ನು ಪುನರ್ ಪರಿಶೀಲಿಸಿ, ಆಗಿರಬಹುದಾದ ತಪ್ಪುಗಳನ್ನು ತಿದ್ದಬೇಕೆಂಬ ಮನಸ್ಸಿದೆ". ಒಟ್ಟಿನಲ್ಲಿ ನಮ್ಮ ಕಾರ್ಯ ಒಳ್ಳೆಯ ಜ್ಞಾನ, ಕರ್ತವ್ಯ ನಿಷ್ಠೆ ಮತ್ತು ಎಚ್ಚರಿಕೆಯಿಂದ ಕೂಡಿದ್ದಲ್ಲಿ ಇತಿಹಾಸಕಾರರಿಗೆ ಕರಾರುವಾಕ್ಕಾದ, ಸಮಕಾಲೀನ ಮತ್ತು ನಂಬಿಕಾರ್ಹ ಶಾಸನ (ಕಲ್ಬರಹ ಮತ್ತು ತಾಮ್ರಪಟ್ಟೆ ಬರಹ) ಆಕರಗಳನ್ನು ಕೊಡುವುದರಲ್ಲಿ ಸಂದೇಹವಿಲ್ಲ.

ಆತ್ಮೀಯರೇ, ಬಹಳಷ್ಟು ಮಾತನಾಡಿದೆ. ನೀವೆಲ್ಲರೂ ತಾಳ್ಮೆಯಿಂದ ಕೇಳಿದ್ದೀರಿ. ಇದಕ್ಕಾಗಿ ಎಲ್ಲರಿಗೂ ನನ್ನ ವಿನಯಪೂರ್ವಕ ನಮನಗಳು. ಎಲ್ಲರಿಗೂ ನನ್ನ ಶುಭಕಾಮನೆಗಳು, ಮತ್ತೊಮ್ಮೆ ನಮಸ್ಕಾರ.

೧

ಕುಣಿಗಲ್ ಪರಿಸರದ ಕಬ್ಬಿಣದ ಕುಲುಮೆಗಳ ಶೋಧ

ಕೆ. ರೇವಣಸಿದ್ದಯ್ಯ*

ಭೂಮಿಯ ಮೇಲೆ ಮಾನವಜೀವಿ ಉಗಮಗೊಂಡು ಕಾಲಕ್ರಮೇಣ ಆತನ ಕಾರ್ಯ ಚಟುವಟಿಕೆಗಳು ಅಭಿವೃದ್ಧಿ ಹೊಂದುತ್ತಾ ಬಂದವು. ಪ್ರಾಗಿತಿಹಾಸದ ಕಾಲದಲ್ಲಿ ಮಾನವನು ನದಿ–ಹಳ್ಳ, ಕಾಡು–ಮೇಡು, ಬೆಟ್ಟ–ಗುಡ್ಡಗಳಲ್ಲಿ ವಾಸವವಾಗಿದ್ದನು. ಆತನ ಬುದ್ಧಿವಿಕಾಸದ ಸುದೀರ್ಘವಾದ ಹಂತವನ್ನು ಆದಿಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗ, ಶಿಲಾ ತಾಮ್ರಯುಗ ಹಾಗೂ ಕಬ್ಬಿಣದ ಬೃಹತ್ ಶಿಲಾಯುಗವೆಂದು ವಿಂಗಡಿಸಲಾಯಿತು. ನವಶಿಲಾಯುಗ ಸಂಸ್ಕೃತಿಯಲ್ಲಿ ತಾವು ವಾಸವಾಗಿರುವ ಭೌಗೋಳಿಕ ಲಕ್ಷಣಗಳಿಗೆ ಹೊಂದಿಕೊಂಡಂತೆ ಒಂದು ಗುಂಪಿನವರು ಕೃಷಿಯನ್ನು ಆರಂಭಿಸಿದರು. ಈ ಯುಗದ ಕೊನೆಯ ಹಂತದಲ್ಲಿ ಅದಿರಿನಿಂದ ತಾಮ್ರವನ್ನು ತಯಾರಿಸುವ ಕಲೆಯನ್ನು ಕಂಡುಕೊಡರು. ಆನಂತರ ಕಬ್ಬಿಣದ ಉತ್ಪಾದನೆಯು ಆರಂಭವಾಯಿತು. ತಾಮ್ರ ಮತ್ತು ಕಬ್ಬಿಣದ ತಯಾರಿಕೆಯಿಂದಾಗಿ ಜನಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು.

ಕಬ್ಬಿಣ ಉತ್ಪಾದನೆಯ ಪ್ರಾಚೀನತೆ: ಒಂದು ಹೇಳಿಕೆಯ ಪ್ರಕಾರ ಕ್ರಿ.ಪೂ. ೪೦೦೦ ವರ್ಷಗಳ ಹಿಂದೆಯೇ ಕಬ್ಬಿಣದ ಬಳಕೆ ಇದ್ದಿತ್ತು, ಇದಕ್ಕೆ ಸಂಬಂಧಿಸಿದ ಕೆಲವು ಕುರುಹುಗಳು ದೊರಕಿವೆ. ದಕ್ಷಿಣ ಆಫ್ರಿಕಾದಲ್ಲಿ ವರ್ಣದ್ರವ್ಯ ಪಡೆಯಲು ಕಬ್ಬಿಣದ ಅದಿರನ್ನು ತೋಡಿ ತೆಗೆಯುವ ಗಣಿಕೆಲಸ ನಡೆಯುತ್ತಿತ್ತೆಂದು ತೋರುತ್ತದೆ. ಮಧ್ಯಶಿಲಾಯುಗದಲ್ಲಿ ಪ್ರಾರಂಭವಾದ ಈ ಕಾಲ ಕ್ರಮೇಣ ವಿಶ್ವದಾದ್ಯಂತ ಹರಡಿತ್ತು.[೧]

ಭಾರತದ ಮಟ್ಟಿಗೆ ಹೇಳುವುದಾದರೆ ಕಬ್ಬಿಣದ ಬಳಕೆ ಉತ್ತರ ಭಾರತದಿಂದ ದಕ್ಷಿಣಕ್ಕೆ ಹರಡಿತ್ತೆಂದೂ, ಗಂಗಾನದಿಯ ಬಯಲಿನಲ್ಲಿ ವರ್ಣರಂಜಿತ ಬೂದು ಮಡಿಕೆಗಳ ಮತ್ತು ಮಧ್ಯಭಾರತದಲ್ಲಿ ಕಪ್ಪು–ಕೆಂಪು ಮಡಿಕೆಗಳನ್ನು ಬಳಸುತ್ತಿದ್ದ ಜನರಿಂದ ಪ್ರಾರಂಭವಾಯಿತೆಂದು ಕೆಲವರ ಅಭಿಪ್ರಾಯವಾಗಿದೆ. ಧಾರವಾಡ ಜಿಲ್ಲೆಯ ಹಳ್ಳೂರಿನ ಉತ್ಖನನದಿಂದ ಅಲ್ಲಿ ತಯಾರಾದ ಕಬ್ಬಿಣದ ಉಪಕರಣಗಳ ಕಾಲವನ್ನು C–೧೪ ತಂತ್ರಜ್ಞಾನದ ಮೂಲಕ ಕ್ರಿ.ಪೂ. ೧೧ನೇ ಶತಮಾನದಲ್ಲಿ ತಯಾರಾದವೆಂದು ತಿಳಿದುಬಂದಿದೆ. ಇದರಿಂದ ಕಬ್ಬಿಣದ ಉತ್ಪಾದನೆ ಭಾರತದಲ್ಲಿ ಏಕಕಾಲದಲ್ಲಿ ಪ್ರಾರಂಭವಾದುದನ್ನು ಸೂಚಿಸುತ್ತದೆ.[೨]

ಕರ್ನಾಟಕದಲ್ಲಿ ಬ್ರಹ್ಮಗಿರಿ, ಹಳ್ಳೂರು, ಹೆರಕಲ್, ಕೋಮಾರನಹಳ್ಳಿ, ಕುಡಿತಿನಿ ಮುಂತಾದ ಸ್ಥಳಗಳಲ್ಲಿ ಕ್ರಿ.ಪೂ. ೧೧ನೇ ಶತಮಾನದಿಂದ ೩ನೇ ಶತಮಾನದವರೆಗೆ ಬೃಹತ್ ಶಿಲಾ ಸಂಸ್ಕೃತಿಯಲ್ಲಿ ಕಬ್ಬಿಣದ ಉತ್ಪಾದನೆ ಕಂಡುಬಂದಿದೆ. ಈ[೩] ಯುಗದಲ್ಲಿ ಸಣ್ಣ ಪ್ರಮಾಣದಲ್ಲಿ ಕಬ್ಬಿಣವನ್ನು ಉತ್ಪಾದಿಸಲಾಗುತ್ತಿತ್ತು. ವಿಶೇಷವೆಂದರೆ ಹೊಸಪೇಟೆ–ಸಂಡೂರು–ಬಳ್ಳಾರಿಯವರೆಗೆ ಹರಡಿರುವ ಕಬ್ಬಿಣದ ಅದಿರನ್ನು ಹೊಂದಿದ ಬೆಟ್ಟದ ಆಶ್ರಯದಲ್ಲಿ ಬೃಹತ್ ಪ್ರಮಾಣದ ಕಬ್ಬಿಣದ ಕಾರ್ಯಾಗಾರವೇ ಬೆಳೆದುಬಂದಿತು. ಇಲ್ಲಿ ತಯಾರಾದ ಕಬ್ಬಿಣದ ಉಪಕರಣಗಳು ಸುತ್ತಮುತ್ತಲಿನ ಸ್ಥಳಗಳಿಗೆ ರಫ್ತಾಗುತ್ತಿದ್ದವು.

ಕಬ್ಬಿಣ ತಯಾರಿಕೆಯ ತಂತ್ರಜ್ಞಾನ: ನೈಸರ್ಗಿಕವಾದ ಅದಿರನ್ನು ಕರಗಿಸಿ ತಾಮ್ರ, ಚಿನ್ನವನ್ನು ಪಡೆಯುವ ಕಲೆ ಕಬ್ಬಿಣಕ್ಕಿಂತಲೂ ಪ್ರಾಚೀನವಾದುದು. ಇದಕ್ಕೆ ಕಾರಣ ತಾಮ್ರದ ಅದಿರನ್ನು ಕರಗಿಸಲು ೧೨೦೦ ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖ ಬೇಕಾದರೆ, ಕಬ್ಬಿಣದ ಅದಿರನ್ನು ಕರಗಿಸಲು ೧೮೦೦ ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖ ಬೇಕಾಗುತ್ತದೆ. ಸ್ಥಳೀಯ ಬೆಟ್ಟಗುಡ್ಡಗಳಲ್ಲಿ ಸಿಗುವಂತಹ ಕಬ್ಬಿಣದ ಅದಿರನ್ನು ತಂದು ಪುಡಿಮಾಡಿ ಎತ್ತರವಾದ ಬಂಡೆಗಳ ಮಧ್ಯೆ ಹಾಕಲಾಗುತ್ತಿತ್ತು. ಅದರಲ್ಲಿರುವ ಮಣ್ಣಿನ ಅಂಶ ನೀರಿನೊಂದಿಗೆ ಹರಿದು ಹೋಗಿ ಪುಡಿ ಅದಿರು ಮುಂದೆ ಬಂದು ನಿಲ್ಲುತ್ತಿತ್ತು, ಇದನ್ನು ಇದ್ದಿಲಿನೊಡನೆ ಕುಲುಮೆಗೆ ಹಾಕಿ ಗಾಳಿ ಹಾಕಲಾಗುತ್ತಿತ್ತು, ಅದಕ್ಕೆ ಕೆಳಗೆ ಒಂದು ರಂಧ್ರವನ್ನು ಬಿಟ್ಟು ನಳಿಕೆಯನ್ನು ಕೂಡಿಸಲಾಗುತ್ತಿತ್ತು, ಈ ನಳಿಕೆಯಿಂದ ಅದಿರು ಕರಗಿ ಸೋರುತ್ತಿದ್ದ ಕಬ್ಬಿಣದ ರಸವನ್ನು ಜೇಡಿಮಣ್ಣಿನ ಮೂಸೆಗಳಲ್ಲಿ ತುಂಬಿ ಇಡಲಾಗುತ್ತಿತ್ತು. ನಂತರ ತಮಗೆ ಬೇಕಾದಂತಹ ಆಯುಧಗಳನ್ನು ತಯಾರಿಸುವ ತಂತ್ರಜ್ಞಾನವನ್ನು ಬಲ್ಲವರಾಗಿದ್ದರು.

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ & ಪುರಾತತ್ವ ಅಧ್ಯಯನ ವಿಭಾಗ, ಕವಿವಿ, ಹಂಪಿ, ವಿದ್ಯಾರಣ್ಯ–೫೮೩.೨೭೬. ಮೊ. ೮೯೭೧೭೩೪೨೦೦

ಕುಣಿಗಲ್ ಪರಿಸರದಲ್ಲಿಯೂ ಪಾರಂಪರಿಕವಾಗಿ ಕಬ್ಬಿಣದ ಉತ್ಪಾದನೆಯಾಗುತ್ತಿತ್ತು ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ನೆಲೆಗಳನ್ನು ಗುರ್ತಿಸಿ ಬೆಳಕಿಗೆ ತರಲಾಗಿದೆ. ಅಂತಹ ಪ್ರಮುಖ ಕಬ್ಬಿಣದ ಕುಲುಮೆಗಳು ಈ ಕೆಳಗಿನಂತಿವೆ.

ಮೋದೂರು: ಈ ಗ್ರಾಮವು ಕುಣಿಗಲ್ ತಾಲೂಕಿನಿಂದ ಸುಮಾರು ೧೪ ಕಿ.ಮೀ. ದೂರದಲ್ಲಿದ್ದು, ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಮೋದೂರು ಗ್ರಾಮವು ಗುಡ್ಡದ ತಿಮ್ಮಪ್ಪನ ದೇವಾಲಯದಿಂದ ಪ್ರಸಿದ್ಧಿ ಪಡೆದುಕೊಂಡಿದೆ. ಮೋದೂರು ಗ್ರಾಮದ ಪುರಾತನ ಹೆಸರು **"ಮೇದೂರು ಪಟ್ಟಣ"** ಎಂಬುದಾಗಿ ಕರೆಯಲ್ಪಡುತ್ತಿತ್ತೆಂದು ಸ್ಥಳೀಯರು ತಿಳಿಸಿದರು. ಈ ಗ್ರಾಮದ ಮತ್ತೊಂದು ವಿಶೇಷತೆ ಎಂದರೆ ಕುಲುಮೆ ಹಟ್ಟಿ, ಗಾಣಿಗರ ಹಟ್ಟಿ, ಕುಂಬಾರರ ಹಟ್ಟಿ ಹಾಗೂ ಮರಾಠರ ಹಟ್ಟಿ ಎಂಬ ವೃತ್ತಿ ಆಧಾರಿತ ಸಮುದಾಯಗಳು ನೆಲೆಯೂರಿದ್ದವು ಎಂಬುದನ್ನು ಸಾಕ್ಷೀಕರಿಸುತ್ತದೆ. ಪುರಾತನ ಕಾಲದಿಂದಲೂ ಮೇದೂರು ಪಟ್ಟಣದಲ್ಲಿ ವಂಶಪಾರಂಪರಿಕವಾಗಿ ವೃತ್ತಿ ಆಧಾರಿತ ಕುಲಕಸುಬುಗಳು ಸ್ಥಳೀಯ ಜನರ ಅವಶ್ಯಕತೆಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದ್ದವು ಎಂಬ ಅಂಶವನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಲಾಗಿದೆ.

ಇತ್ತೀಚೆಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮೋದೂರು ಗ್ರಾಮದಲ್ಲಿ ಪಾರಂಪರಿಕವಾಗಿ ಕಬ್ಬಿಣವನ್ನು ಉತ್ಪಾದಿಸುತ್ತಿದ್ದಂತಹ **ಕಬ್ಬಿಣದ ಕುಲುಮೆಯು** ಬೆಳಕಿಗೆ ಬಂದಿದೆ. ಈ ಕಬ್ಬಿಣದ ಕುಲುಮೆಯು ಸುಮಾರು ೩ ಹೆಕ್ಟೇರ್ ವಿಸ್ತೀರ್ಣದಲ್ಲಿದ್ದು, ಕುಣಿಗಲ್ ಪರಿಸರದಲ್ಲಿ ಕಬ್ಬಿಣದ ಉತ್ಪಾದನೆ ಮತ್ತು ಅವಶ್ಯಕತೆಯ ಬಗ್ಗೆ ಮನದಟ್ಟು ಮಾಡಿಕೊಡುತ್ತದೆ. ಕುಲುಮೆಹಟ್ಟಿ ಪ್ರದೇಶದಲ್ಲಿ ರಾಶಿಗಟ್ಟಲೆ ಬಿದ್ದಿರುವಂತಹ ಕಬ್ಬಿಣದ ಕಿಟ್ಟದರಾಶಿ, ಕೊಳವೆಯಾಕಾರದ ಸುಟ್ಟಮಣ್ಣಿನ ಮೂಸೆಗಳು, ಬೂದಿದಿಬ್ಬದಂತಹ ಮಣ್ಣಿನ ಅವಶೇಷ ಯಥೇಚ್ಛವಾಗಿ ಕಂಡುಬಂದಿದೆ. ಇಲ್ಲಿನ ಸ್ಥಳೀಯ ರೈತರು ಕುಲುಮೆಹಟ್ಟಿಯ ಬೂದಿದಿಬ್ಬದ ಮಣ್ಣನ್ನು ತಮ್ಮ ಕೃಷಿ ಜಮೀನಿಗೆ ಬಳಸಿಕೊಂಡಿದ್ದಾರೆ. ಮಣ್ಣಿನ ಗುಡ್ಡೆಯಂತೆ ಎತ್ತರವಾಗಿದ್ದ ಈ ಕುಲುಮೆ ಹಟ್ಟಿಯು ಸುಮಾರು ೧೦ ಅಡಿಯಷ್ಟು ಆಳಕ್ಕೆ ಹೋಗಿದೆ. ಈ ಬೂದಿದಿಬ್ಬದ ದಡದಲ್ಲಿ ಮಡಿಕೆ ಚೂರುಗಳು, ಕಬ್ಬಿಣದ ಕಿಟ್ಟ, ಹಾಗೂ ಸುಟ್ಟಂತಹ ಮಣ್ಣಿನ ಮೂಸೆಗಳು ಸಿಲಿಕಿಕೊಂಡು ವಸತಿದಿಬ್ಬದ ರಚನೆಯಂತೆ ಕಂಡುಬರುತ್ತದೆ. ಈ ಕುಲುಮೆಹಟ್ಟಿಯು ಮೋದೂರು ಪರಿಸರದಲ್ಲಿನ ಕಬ್ಬಿಣದ ಉತ್ಪಾದನೆಯ ಬಗ್ಗೆ ಸಾಕ್ಷೀಕರಿಸಿದೆ.

ಮೇದೂರು ಗ್ರಾಮದಲ್ಲಿರುವ ಕುಲುಮೆಹಟ್ಟಿಯು ವಿಜಯನಗರ ಕಾಲದಲ್ಲಿ ಕಬ್ಬಿಣದ ಉತ್ಪಾದನೆಯನ್ನು ಪ್ರಾರಂಭಿಸಿರಬಹುದು. ಮೌಖಿಕ ಅಂಶಗಳನ್ನು ಗಮನಿಸಿದರೆ ವಿಜಯನಗರ ಅರಸರ ಆಡಳಿತದ ಅವಧಿಯಲ್ಲಿ ಮೇದೂರು ಪಟ್ಟಣವು ಪ್ರಸಿದ್ಧ ಆಯುಧಗಾರವಾಗಿ ಕಾರ್ಯನಿರ್ವಹಿಸಿದ್ದು, ಆನಂತರದಲ್ಲಿ ಮೈಸೂರು ಒಡೆಯರ ಕಾಲಕ್ಕೂ ಮುಂದುವರೆದು ಕಬ್ಬಿಣ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿತ್ತೆಂದು ತಿಳಿದುಬರುತ್ತದೆ. ಮೇದೂರು ಪಟ್ಟಣದಲ್ಲಿನ ಕಬ್ಬಿಣದ ಕುಲುಮೆಯು ಸ್ಥಳೀಯ ಸೈನ್ಯದ ತುಕಡಿಗೆ ಅವಶ್ಯಕವಾದಂತಹ ಯುದ್ದೋಪಕರಣಗಳನ್ನು ಒದಗಿಸುತ್ತಿತ್ತು.

ಈ ಕುಲುಮೆಹಟ್ಟಿಗೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಹುಳಿಯಾರು ಗಣಿಯಿಂದ ಕಬ್ಬಿಣದ ಅದಿರನ್ನು ಬಳಸಿಕೊಂಡು ಕಬ್ಬಿಣವನ್ನು ಉತ್ಪಾದಿಸಿರಬಹುದು, ಎಂಬುದಾಗಿ ಊಹಿಸಿದರೂ ಸಹ ಈ ಕುಲುಮೆಹಟ್ಟಿಯ ಬಗ್ಗೆ ನಿಖರವಾಗಿ ಕಾಲಮಾನವನ್ನು ಖಚಿತಪಡಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸಂಶೋಧಕರು ಮುಂದಿನ ದಿನಗಳಲ್ಲಿ ಮೇದೂರಿನ ಕುಲುಮೆಹಟ್ಟಿಯ ಬಗ್ಗೆ ಹೆಚ್ಚಿನ ಸಂಶೋಧನೆಗಳನ್ನು ನಡೆಸಬೇಕಾಗಿದೆ.

ಕುಲುಮೇಪಾಳ್ಯ : ಕುಣಿಗಲ್ ತಾಲೂಕಿನ ಹುತ್ತರಿದುರ್ಗ ಬೆಟ್ಟದ ಸಮೀಪದಲ್ಲಿರುವ ಕುಲುಮೇಪಾಳ್ಯದಲ್ಲಿ ಕಬ್ಬಿಣದ ಕುಲುಮೆಯೊಂದು ಇತ್ತೀಚೆಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಶೋಧನೆಗೊಂಡಿದೆ. ಮಾಗಡಿ ಮತ್ತು ಕುಣಿಗಲ್ ಗಡಿಯಲ್ಲಿರುವ ಕುಲುಮೇಪಾಳ್ಯವು ಕಬ್ಬಿಣದ ಉತ್ಪಾದನೆಗೆ ಪ್ರಸಿದ್ಧಿ ಪಡೆದುಕೊಂಡಿತ್ತು. ಕುಲುಮೇಪಾಳ್ಯ ಗ್ರಾಮದಲ್ಲಿ ಪಾರಂಪರಿಕವಾಗಿ ಕಬ್ಬಿಣದ ಉತ್ಪಾದನೆ ನಡೆಯುತ್ತಿತ್ತು ಎಂಬುದನ್ನು ಸ್ಥಳನಾಮದ ನಿಷ್ಪತ್ತಿಯಿಂದ ಸ್ಪಷ್ಟವಾಗುತ್ತದೆ. ಇದೇ ಗ್ರಾಮದ ಹೊರ ವಲಯದಲ್ಲಿ **"ಕುಲುಮೆ ತಿಟ್ಟು"** ಎಂದು ಕರೆಯಲ್ಪಡುವ ಸ್ಥಳದಲ್ಲಿ ಕಬ್ಬಿಣದ ಕುಲುಮೆ ಬೆಳಕಿಗೆ ಬಂದಿದೆ. ಕುಲುಮೆ ತಿಟ್ಟು ಎಂಬುದಾಗಿ ಕರೆಯಲ್ಪಡುವ ನೆಲೆಯು ಅದೇ ಗ್ರಾಮದ ಗೋವಿಂದಯ್ಯ ಎಂಬುವವರಿಗೆ ಸೇರಿದ್ದು ಸುಮಾರು ೩ ಹೆಕ್ಟೇರ್ ವಿಸ್ತೀರ್ಣದಲ್ಲಿದೆ. ಪ್ರಸ್ತುತ ಈ ನೆಲೆಯು ಕೃಷಿ ಜಮೀನಾಗಿ ಪರಿವರ್ತನೆಯಾಗಿದ್ದು ಕಬ್ಬಿಣದ ಕಿಟ್ಟ, ಮಡಿಕೆ ಚೂರುಗಳು ಹಾಗೂ ಸುಟ್ಟ ಮಣ್ಣಿನ ಮೂಸೆಗಳು ರಾಶಿಗಟ್ಟಲೆ ಕಂಡುಬರುತ್ತದೆ. ಪ್ರಸ್ತುತ ಈ ನೆಲೆಯು ಕೃಷಿ ಚಟುವಟಿಕೆಗೆ ಒಳಪಟ್ಟಿರುವ ಕಾರಣ ಅಳಿದುಳಿದ ಅವಶೇಷಗಳಿಂದ ಅಧ್ಯಯನ ಕೈಗೊಳ್ಳಲಾಗಿದೆ. ಇಂದಿಗೂ ಸಹ ಕುಲುಮೇಪಾಳ್ಯ ಗ್ರಾಮದಲ್ಲಿ ಕಬ್ಬಿಣದ ಕುಲುಮೆಗಳು ಪ್ರಚಲಿತದಲ್ಲಿದ್ದು ಅನೇಕ ಕಂಬಾರರ (ಆಚಾರಿಗಳು) ಕುಟುಂಬಗಳು ಜೀವನವನ್ನು ಸಾಗಿಸುತ್ತಿವೆ.

ಈ ಕಬ್ಬಿಣದ ಕುಲುಮೆಯು ಮಧ್ಯಕಾಲೀನ ಯುಗಕ್ಕೆ ಸಂಬಂಧಿಸಿದ್ದು ಪ್ರಮುಖ ಆಯುಧಗಾರವಾಗಿ ಕಾರ್ಯ ನಿರ್ವಹಿಸಿರಬಹುದು. ಕಾರಣ ಎಲಹಂಕ ನಾಡಪ್ರಭು ಕೆಂಪೇಗೌಡರ ಆಡಳಿತ ಅವಧಿಯಲ್ಲಿ ಹುತ್ತರೀದುರ್ಗ, ಭೈರವದುರ್ಗ, ಸಾವನದುರ್ಗ, ಹುಲಿಯೂರುದುರ್ಗಗಳು ಪ್ರಮುಖ ಸೈನಿಕ ನೆಲೆಗಳಾಗಿದ್ದವು. ಪ್ರಾಯಶಃ ಹುತ್ತರೀ ದುರ್ಗದ ಸಮೀಪದಲ್ಲಿ ಕುಲುಮೇಪಾಳ್ಯವು ಕಂಡುಬರುವುದರಿಂದ ಶಸ್ತ್ರಾಸ್ತ್ರಗಳ ಉತ್ಪಾದನೆಯ ಆಯುಧಗಾರವಾಗಿತ್ತು ಎಂಬುದು ಸತ್ಯಕ್ಕೆ ಹತ್ತಿರವಾಗಿದೆ. ಸ್ಥಳೀಯವಾಗಿ ಸಿಗುವಂತಹ ಕಬ್ಬಿಣದ ಅದಿರಿನಿಂದ ಕಬ್ಬಿಣವನ್ನು ಉತ್ಪಾದಿಸಿ ತಮ್ಮ ಅವಶ್ಯಕತೆಗೆ ಬೇಕಾದಂತಹ ಆಯುಧ ಉಪಕರಣಗಳನ್ನು ತಯಾರಿಸಿಕೊಳ್ಳುವ ಪಾರಂಪರಿಕ ಜ್ಞಾನವನ್ನು ತಿಳಿದುಕೊಂಡಿದ್ದರು. ಕುಲುಮೇಪಾಳ್ಯದ ಸುತ್ತಮುತ್ತಲೂ ತಟಸಂದ್ರ, ಹೊಸೂರು, ರಂಗನಪಾಳ್ಯ, ಗೌಡಯ್ಯನಪಾಳ್ಯ, ಹುತ್ತರಿ, ಹಾಲುವಾಗಿಲು, ಕತ್ತರೀಘಟ್ಟ ಹಾಗೂ ಹುತ್ತರೀದುರ್ಗ ಬೆಟ್ಟ ಕಂಡುಬರುತ್ತದೆ. ಈ ಕಬ್ಬಿಣದ ಕುಲುಮೆಗೆ ಕತ್ತರೀಘಟ್ಟ ಗ್ರಾಮಕ್ಕೆ ಸಮೀಪದಲ್ಲಿರುವ ಮಣ್ಣುಗುಡ್ಡೆ ಎಂಬ ಪ್ರದೇಶದಿಂದ ತಂದಂತಹ ಕಬ್ಬಿಣದ ಅದಿರನ್ನು ಕುಲುಮೆಯಲ್ಲಿ ಹಾಕಿ ನಿರ್ದಿಷ್ಟ ಪ್ರಮಾಣದಲ್ಲಿ ಬೆಂಕಿಯ ಶಾಖವನ್ನು ಕೊಟ್ಟು ಹದ ಹಿಡಿಯಲಾಗುತ್ತಿತ್ತು. ತದನಂತರದಲ್ಲಿ ಸೈನ್ಯಕ್ಕೆ ಬೇಕಾದಂತಹ ರಕ್ಷಣಾ ಸಾಮಗ್ರಿಗಳು ಹಾಗೂ ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು.

ಮಣ್ಣುಗುಡ್ಡೆ ಪ್ರದೇಶದಲ್ಲಿ ಸಿಗುವಂತಹ ಅದಿರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣದ ಅಂಶವಿದ್ದು ಆಯುಧ ತಯಾರಿಕೆಗೆ ಪ್ರಸಿದ್ಧತೆ ಪಡೆದುಕೊಂಡಿದೆ. ಈ ಮಣ್ಣುಗುಡ್ಡೆಯ ರಚನೆಯ ಬಗ್ಗೆ ಸ್ಥಳೀಯರಲ್ಲಿ ದಂತಕತೆಯೊಂದಿದೆ. ಶ್ರಮಜೀವಿಗಳಾದಂತಹ ಬೋವಿ/ವಡ್ಡ ಜನಾಂಗದವರು ಕುಣಿಗಲ್ ಮತ್ತು ಕೊತ್ತಗೆರೆ ಕೆರೆಗಳನ್ನು ಕಟ್ಟಿಮುಗಿಸಿದ ನಂತರ ತಮ್ಮ ಪರಿಕರಗಳಾದ ಹಾರೆ–ಗುದ್ದಲಿ–ಮಂಕರಿಗಳನ್ನು ಈ ಪ್ರದೇಶದಲ್ಲಿ ತಂದು ಕೊಡವಿದರಂತೆ, ಬಿದ್ದಂತಹ ಮಣ್ಣು ರಾಶಿಯಾಗಿ ದೊಡ್ಡಗಾತ್ರದ ಮಣ್ಣಿನ ದಿಣ್ಣೆಯಾಗಿ ನಿರ್ಮಾಣವಾಯಿತು, ಅಂದಿನಿಂದ ಮಣ್ಣುಗುಡ್ಡೆ ಅಥವಾ ಮಣ್ಣುಗುಡ್ಡೆಪಾಳ್ಯವಾಗಿ ಪ್ರಸಿದ್ಧಿ ಪಡೆಯಿತು ಎಂಬುದನ್ನು ಸ್ಥಳೀಯರು ಹೇಳುತ್ತಾರೆ.[೩]

ಮಾನಗಲ್ಲು: ಮಾನಗಲ್ಲು ಎಂಬ ಸ್ಥಳವು ಕುಣಿಗಲ್ ಮತ್ತು ಮಾಗಡಿ ತಾಲೂಕಿನ ಗಡಿಭಾಗದಲ್ಲಿ ಕಂಡುಬರುತ್ತದೆ. ಮಾನಗಲ್ಲು ಎಂಬುದು ಪ್ರಾಗಿತಿಹಾಸದ ನೆಲೆಯಾಗಿದ್ದು ಅನೇಕ ಕುರುಹುಗಳು ಪತ್ತೆಯಾಗಿವೆ. ಮಾನಗಲ್ಲು ಗ್ರಾಮದ ಹೊರವಲಯದಲ್ಲಿನ ದುರ್ಗಮವಾದ ಪ್ರದೇಶದಲ್ಲಿ ಈ ನೆಲೆಯು ಕಂಡುಬರುತ್ತದೆ. ಸುತ್ತಲೂ ಗುಡ್ಡಗಳಿಂದ ಆವೃತ್ತವಾಗಿದ್ದು, ಸಮತಟ್ಟು ಪ್ರದೇಶದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಶಿಲಾವೃತ್ತ ಸಮಾಧಿಗಳು, ಕಬ್ಬಿಣದ ಕಿಟ್ಟ, ಸುಟ್ಟ ಮಣ್ಣಿನ ಮೂಸೆಗಳು ಹಾಗೂ ಶಿಲಾಯುಧಗಳು ಶೋಧನೆಯಾಗಿವೆ. ಬೃಹತ್ ಶಿಲಾಯುಗದ ಸಮಾಧಿಗಳ ಹಾಸುಪಾಸಿನಲ್ಲಿ ಕಬ್ಬಿಣದ ಕುಲುಮೆಗಳು ಕಂಡುಬರುವುದು ಸಾಮಾನ್ಯ ಸಂಗತಿಯಾಗಿದ್ದು, ಮಾನಗಲ್ಲು ಸಹ ಮೇಲಿನ ಎಲ್ಲಾ ಲಕ್ಷಣಗಳನ್ನು ಒಳಗೊಂಡಿರುವುದರಿಂದ ಬೃಹತ್ ಶಿಲಾಯುಗದ ಕಬ್ಬಿಣ ಸಂಸ್ಕೃತಿಯೊಂದಿಗೆ ಸಂಬಂಧವನ್ನು ಕಲ್ಪಿಸಬಹುದಾಗಿದೆ.

ಮಾನಗಲ್ಲು, ಮಾಗಡಿ, ರಾಮನಗರ ಹಾಗೂ ಕನಕಪುರ ಪರಿಸರದಲ್ಲಿ ವಿಶೇಷವಾಗಿ ಇರುಳಿಗರ ಜನಾಂಗದಲ್ಲಿ ಕಲ್ಲುಸೇವೆ ಪದ್ದತಿ ಎಂಬ ಆಚರಣೆ ಜೀವಂತವಾಗಿದೆ. ಈ ಕಲ್ಲುಸೇವೆ ಆಚರಣೆ ನಡೆಯುವ ಬೆಟ್ಟದ ಪಕ್ಕದಲ್ಲಿಯೇ ಕಬ್ಬಿಣಯುಗದ ಸಮಾಧಿಗಳಿರುವುದು ವಿಶೇಷವಾಗಿದ್ದು, ಬೃಹತ್ ಶಿಲಾಯುಗದ ಶವಸಂಸ್ಕಾರ ಪದ್ದತಿಗೂ ಈ ಕಲ್ಲುಸೇವೆ ಶವಸಂಸ್ಕಾರ ಪದ್ದತಿಗೂ ಸಾಮ್ಯತೆಗಳಿರುವುದರಿಂದ ಈ ಕಲ್ಲುಸೇವೆಯೇ ಸುಮಾರು ೩೦೦೦ ವರ್ಷಗಳ ಹಿಂದಿನ ಪದ್ದತಿಯ ಮುಂದುವರಿಕೆಯಾಗಿರುವ ಸಾಧ್ಯತೆಗಳಿವೆ ಎಂಬ ಸತ್ಯವನ್ನು ತಳ್ಳಿಹಾಕುವಂತಿಲ್ಲ. ಈ ಶವಸಂಸ್ಕಾರ ಪದ್ದತಿಯು ನಾಡಿನ ಅನೇಕ ಭಾಗಗಳಲ್ಲಿ ಇಂದಿಗೂ ಜೀವಂತವಾಗಿದ್ದು ವಿಶಿಷ್ಟ ರೂಪಗಳನ್ನು ಪಡೆದುಕೊಂಡಿದೆ. ವಿಶೇಷ ಅಂದರೆ ಕೆಲವು ಬುಡಕಟ್ಟು ಜನಾಂಗಗಳಲ್ಲಿ ಇಂದಿಗೂ ಸಹ ಕಲ್ಲುಸೇವೆ ಪದ್ದತಿ, ಕಲ್ಲುಮಲ್ಲಯ್ಯನ ಸೇವೆ ಎಂಬ ಶವಸಂಸ್ಕಾರ ಪದ್ದತಿಗಳು ಆಚರಣೆಯಲ್ಲಿರುವುದನ್ನು ಕಾಣಬವುದಾಗಿದೆ.[೪]

ಹುತ್ರಿದುರ್ಗದ ಬೆಟ್ಟ ಮತ್ತು ಅಳಲುಕುಪ್ಪೆಯ ಸಮೀಪದಲ್ಲಿ ಕಬ್ಬಿಣದ ನಿಕ್ಷೇಪವುಳ್ಳ ಕರಿಕಲ್ಲುಗಳು ಕಂಡುಬರುತ್ತವೆ. ಅಳಲುಕುಪ್ಪೆಯ ಮೂರುಗುಡ್ಡೆಯ ಆಗ್ನೇಯಕ್ಕಿರುವ ಕರಿಗೌಡನ ದೊಡ್ಡಿಯಲ್ಲಿ ಇತ್ತೀಚಿನವರೆಗೂ ಕುಲುಮೆಗಳನ್ನು ಹೊಂದಿದ್ದ ಕಬ್ಬಿಣದ ಆಚಾರಿಗಳು ಇದ್ದರು. ಈ ಗುಡ್ಡದಿಂದ ನೈರುತ್ಯಕ್ಕೆ ಒಂದೂವರೆ ಕಿ.ಮೀ. ದೂರದಲ್ಲಿ ಆಚಾರಿಕಟ್ಟೆ ಎಂಬ ಕಟ್ಟೆಯೊಂದು ಇಂದಿಗೂ ಸಾಕ್ಷಿಯಾಗಿದೆ.[೫]

ಮಾಗಡಿ ತಾಲೂಕಿನ ಗಟ್ಟಿಪುರ ಎಂಬುದು ಕಬ್ಬಿಣವನ್ನು ಉತ್ಪಾದಿಸುವ ಕುಲುಮೆ ಪ್ರದೇಶವಾದ್ದರಿಂದ ಇಂದಿಗೂ ಸಹ ಕಬ್ಬಿಣದ ಕಿಟ್ಟದ ಅವಶೇಷಗಳು ಹೆಚ್ಚಾಗಿ ದೊರೆಯುವುದರಿಂದ ಗಟ್ಟಿಪುರ ಎಂಬ ಸ್ಥಳನಾಮ ಬಂದಿದೆ. ಈ



ಮೋದೂರು ಗ್ರಾಮದಲ್ಲಿರುವ ಕಬ್ಬಿಣದ ಕುಲುಮೆ (ಕುಲುಮೆಹಟ್ಟಿ)



ಮೋದೂರಿನ ಕುಲುಮೆಹಟ್ಟಿಯಲ್ಲಿ ಸಿಕ್ಕಂತಹ ಸುಟ್ಟಿರುವ ಮಣ್ಣಿನ ಮೂಸೆಗಳು






ಮೋದೂರು ಗ್ರಾಮದ ಕುಲುಮೆಹಟ್ಟಿಯಲ್ಲಿ ಸಿಕ್ಕಂತಹ ಮಣ್ಣಿನ ಮೂಸೆ ಮತ್ತು ಕಬ್ಬಿಣದ ಕಿಟ್ಟ




ಮಾನಗಲ್ಲು ಗುಡ್ಡದಲ್ಲಿ ಆಚರಣೆಯಲ್ಲಿರುವ ಕಲ್ಲುಸೇವೆ ಪದ್ಧತಿಯ ಶವಸಂಸ್ಕಾರದ ಕುರುಹು



ಮಾನಗಲ್ಲು ಗುಡ್ಡದ ತಪ್ಪಲಿನಲ್ಲಿರುವ ನೈಸರ್ಗಿಕ ಕಲ್ಲಾಸರೆ



ಕುಪ್ಪೆಪಾಳ್ಯದ ಬೂದಿದಿಬ್ಬದಲ್ಲಿ ಸಿಕ್ಕಂತಹ ಕಬ್ಬಿಣದ ಕಿಟ್ಟ ಮತ್ತು ಮಡಿಕೆ ಚೂರು



ಕುಲುಮೇಪಾಳ್ಯ ಗ್ರಾಮದ ಕುಲುಮೇ ತಿಟ್ಟಿನಲ್ಲಿ ಸಿಕ್ಕಂತಹ ಕಬ್ಬಿಣದ ಕಿಟ್ಟ



ಉಜ್ಜಿನಿ ಗ್ರಾಮದ ಕೋಟೆ ಬಾಗಿಲಿನಲ್ಲಿ ಸಿಕ್ಕಂತಹ ಕಬ್ಬಿಣದ ಕಿಟ್ಟ (ಕಿಟ್ಟದ ಕಲ್ಲು)

ಗಟ್ಟಿಪುರದಲ್ಲಿ ರಾಶಿಗಟ್ಟಲೇ ಬಿದ್ದಿರುವ ಕಬ್ಬಿಣದ ಕಿಟ್ಟ, ಕಪ್ಪು ಮತ್ತು ಕೆಂಪು ವರ್ಣದ ಮಡಿಕೆ ಚೂರುಗಳು ಶೋಧನೆಯಾಗಿವೆ. ಈ ನೆಲೆಯ ಸಮೀಪದಲ್ಲಿಯೇ ಬೃಹತ್ ಶಿಲಾಯುಗ ಸಂಸ್ಕೃತಿಯ ಅನೇಕ ಶಿಲಾವೃತ್ತ ಸಮಾಧಿಗಳು ಪತ್ತೆಯಾಗಿವೆ. ಮಳೆಗಾಲದಲ್ಲಿ ಹರಿಯುವ ಹಳ್ಳ ತೊರೆಗಳ ನೀರಿನಲ್ಲಿ ತೊಳೆದು ಬಂದು ಒತ್ತರಿಸುತ್ತಿದ್ದ ಕಪ್ಪುಮರಳಿನಿಂದ ಕಬ್ಬಿಣದ ಗಟ್ಟಿ ತಯಾರಿಸುವುದನ್ನು ಬ್ರಿಟಿಷ್ ಸರ್ವೆ ಅಧಿಕಾರಿಯಾದ ಫ್ರಾನ್ಸಿಸ್ ಬುಕಾನನ್ ಮೈಸೂರು ಸಂಸ್ಥಾನದಲ್ಲಿ ಭೌಗೋಳಿಕ ಸರ್ವೇಕ್ಷಣೆ ಕೈಗೊಂಡಾಗ ಗಟ್ಟಿಪುರದಲ್ಲಿ ಖುದ್ದಾಗಿ ನೋಡಿ ವರದಿ ಮಾಡಿದ್ದಾನೆ. ಇದರಂತೆ ಕೂಲಿಯಾಳುಗಳಿಂದ ಸಂಗ್ರಹಿಸಿದ ಕಪ್ಪುಮರಳನ್ನು, ಎಮ್ಮೆ ಚರ್ಮದ ತಿದಿಗಳಿಂದಾದ ಊದು ಕುಲುಮೆಗಳಲ್ಲಿ ಭಟ್ಟಿ ಇಳಿಸಿದ ಅಶುದ್ದ ಕಬ್ಬಿಣದ ತುಂಡನ್ನು, ಮತ್ತೊಮ್ಮೆ ಕುಲುಮೆಯಲ್ಲಿ ಕೆಂಪಾಗಿ ಕಾಯಿಸಿ, ಅಡಿಗಲ್ಲು ಮೇಲಿಟ್ಟು ಸುತ್ತಿಗೆಯಿಂದ ಚೆನ್ನಾಗಿ ಬಡಿದಾಗ, ಅಶುದ್ದ ಕಬ್ಬಿಣದ ಪುಡಿಯು ಉದುರಿ, ಪರಿಶುದ್ದ ಕಬ್ಬಿಣದ ಗಟ್ಟಿ ಉಳಿಯುತ್ತಿತ್ತು. ಇಂತಹ ಗಟ್ಟಿಗಳಿಂದ ಅವಶ್ಯಕವಾದ ಆಯುಧ ಮತ್ತಿತರ ಸಾಧನಗಳನ್ನು ತಯಾರಿಸಲಾಗುತ್ತಿತ್ತು. ಸ್ಥಳ ಪರಿಶೀಲನೆಯ ಸಂದರ್ಭದಲ್ಲಿ ಚಿನ್ನ ತೊಳೆವ ಕಟ್ಟೆ ಇತ್ತೆಂದು ತಿಳಿಯಿತು.[೬]

ಬ್ಯಾನರ್ಜಿ ಅವರ "ಐರನ್ ಇಂಡಸ್ಟ್ರೀಸ್ ಇನ್ ಸೌತ್ ಇಂಡಿಯಾ" ಎಂಬ ಕೃತಿಯಲ್ಲಿ ದಕ್ಷಿಣಭಾರತದಲ್ಲಿ ಅತಿ ಹೆಚ್ಚು ಕಬ್ಬಿಣದ ಅದಿರು ಇರುವ ಪ್ರದೇಶವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ವಿಶೇಷವಾಗಿ ಮೈಸೂರು ರಾಜ್ಯ ಉತ್ತಮ ಗುಣಮಟ್ಟದ ಅತಿ ಹೆಚ್ಚು ಕಬ್ಬಿಣದ ಅದಿರು ಇರುವ ಪ್ರದೇಶವಾಗಿದೆ. ವೇದಾವತಿ ನದಿ ತೀರದ ಭೂಪ್ರದೇಶಗಳಾದ ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಗಿರಿ, ಕುದುರೆಮುಖ, ಚಿತ್ರದುರ್ಗ ಜಿಲ್ಲೆಯ ವಜ್ರಾ, ಸಾಸಲು, ಹೊಸದುರ್ಗ, ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ, ಬಳ್ಳಾರಿ ಜಿಲ್ಲೆಯ ಸಂಡೂರು, ಹೊಸಪೇಟೆ ಮತ್ತು ಬಳ್ಳಾರಿಯ ಪ್ರದೇಶಗಳು ಕಬ್ಬಿಣದ ಅದಿರು ಕಂಡುಬರುವ ಭೂಭಾಗಗಳಾಗಿವೆ.[೭]

ಹಾಗೆಯೇ ಕುಣಿಗಲ್ ಪರಿಸರದ ಗಂಗ್ಡಾನಹಳ್ಳಿ (ಗಂಗೇನಹಳ್ಳಿ), ತೆಪ್ಪಸಂದ್ರ, ಅಂದಲಗೆರೆ, ಉಜ್ಜಿನಿ ಹಾಗೂ ಮಾಗಡಿ ಪರಿಸರದ ಕಲ್ಯ, ಅಳಲುಕುಪ್ಪೆ, ಕುಪ್ಪೇಪಾಳ್ಯದಲ್ಲಿ ಕಬ್ಬಿಣದ ಉತ್ಪಾದನೆಗೆ ಸಂಬಂಧಿಸಿದಂತೆ ಅನೇಕ ಅವಶೇಷಗಳು ಪತ್ತೆಯಾಗಿದ್ದು, ಕಬ್ಬಿಣದ ಉತ್ಪಾದನೆ ಮತ್ತು ತಂತ್ರಜ್ಞಾನವನ್ನು ಮನದಟ್ಟು ಮಾಡಿಕೊಡುತ್ತದೆ. ಈ ಮೇಲ್ಕಂಡ ಅಂಶಗಳನ್ನು ಗಮನಿಸಿದರೆ ಕುಣಿಗಲ್ ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಕಬ್ಬಿಣದ ಉತ್ಪಾದನೆಯು ಪ್ರಗತಿಯಲ್ಲಿತ್ತು ಎಂಬುದನ್ನು ಕಬ್ಬಿಣದ ಕುಲುಮೆಗಳು ಸಾಕ್ಷಿಯಾಗಿವೆ.

ಅಡಿಟಿಪ್ಪಣಿಗಳು

೧. ವಾಸುದೇವ ಬಡಿಗೇರ್(ಲೇ), ಹಂಪಿ ಪರಿಸರದ ಲೋಹಶಾಸ್ತ್ರ ಕಲೆ, ಇತಿಹಾಸ ದರ್ಶನ, ಸಂಪುಟ–೧೪, ಪು. ೨೩.

೨. ಅದೇ, ಪು. ೨೪.

೩. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸ್ಥಳೀಯರಿಂದ ಪಡೆದುಕೊಂಡ ಮಾಹಿತಿ ವಿವರ.

೪. ಕೆ. ರೇವಣಸಿದ್ದಯ್ಯ(ಲೇ), ಹುತ್ರಿದುರ್ಗ ಪರಿಸರದ ನವಶೋಧಿತ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿ ನೆಲೆಗಳು, ಇತಿಹಾಸ ದರ್ಶನ, ಸಂಪುಟ ೩೧, ಪು. ೧೪.

೫. ಹಂ.ಗು. ರಾಜೇಶ್ (ಲೇ), ಮಾಗಡಿ ತಾಲೂಕು ಅಳಲುಕುಪ್ಪೆಯ ಸಮೀಪ ಬೃಹತ್ ಶಿಲಾಯುಗದ ಸಮಾಧಿಗಳ ಶೋಧ, ಇತಿಹಾಸ ದರ್ಶನ, ಸಂಪುಟ ೩೧, ಪು. ೭.

೬ ಮುನಿರಾಜಪ್ಪ, ಮಾಗಡಿ ಸೀಮೆಯ ಇತಿಹಾಸ–ಸಂಸ್ಕೃತಿ, ಸ್ಫೂರ್ತಿ ಪ್ರಕಾಶನ, ಹೊಸಪಾಳ್ಯ, ಮಾಗಡಿ ತಾಲೂಕು, ೨೦೦೫, ಪು. ೧೪೬

೭. ಎಸ್.ಜಿ. ರಾಮದಾಸ್ ರೆಡ್ಡಿ, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯, ಪು. ೭೧.

೨

ಅರೆ ಗುಡ್ಡ ನೆಲೆಯ ಪ್ರಾಗಿತಿಹಾಸ ವರ್ಣಚಿತ್ರ: ಪ್ರಪಂಚದಲ್ಲಿಯ ಮೊದಲ ನಕಾಶೆ!

ಆರ್. ಮೋಹನ್*

ಗವಿ-ಕಲ್ಲಾಸರೆ ವರ್ಣ ಮತ್ತು ಗೀರು ಚಿತ್ರಗಳ ಬಗ್ಗೆ ಅನೇಕರಿಗೆ ತಿಳಿದಿಲ್ಲ. ಈ ಕುರಿತು ಭೂಗೋಳಶಾಸ್ತ್ರಜ್ಞರು, ಪ್ರಾಕ್ತನಶಾಸ್ತ್ರಜ್ಞರು, ಮತ್ತು ಹವ್ಯಾಸಿ ಸಂಶೋಧಕರು ಸುಮಾರು ೧೫೦ ವರ್ಷಗಳಿಂದಲೂ ಪ್ರಪಂಚದ ಅನೇಕ ದೇಶಗಳಲ್ಲದೇ, ಭಾರತದಲ್ಲಿಯೂ ಪ್ರಾಗಿತಿಹಾಸಿಕ ವರ್ಣಚಿತ್ರಗಳನ್ನು ಶೋಧಿಸಿ ಅವುಗಳ ಕೂಲಂಕಷ ಅಭ್ಯಾಸ ನಡೆಸುತ್ತಿದ್ದಾರೆ. ಪ್ರಾಗಿತಿಹಾಸಿಕ ಹಾಗೂ ಇತಿಹಾಸ ಕಾಲದ ವರ್ಣಚಿತ್ರ ಗವಿಗಳು, ಕಲ್ಲಾಸರೆಗಳು ಮತ್ತು ಬಯಲು ಬಂಡೆ ಚಿತ್ರಗಳು ಅಸಂಖ್ಯಾತವಾಗಿ ಬೆಟ್ಟಗುಡ್ಡಗಳಲ್ಲಿ ಕಂಡುಬರುತ್ತವೆ. ಅವು ಮಾನವನ ಭಾವನೆಗಳನ್ನು ವ್ಯಕ್ತಪಡಿಸುವ ಸಂಕೇತಗಳಾಗಿದ್ದು, ಅಂದಿನ ಜನರ ಜೀವನ ಶೈಲಿಯನ್ನು ತಿಳಿಯುವಲ್ಲಿ ಹೆಚ್ಚು ಸಹಕಾರಿಯಾಗಿವೆ. ಮಲಪ್ರಭಾ ನದಿ ತೀರದಲ್ಲಿ ಶಿಲಾಯುಗ ಸಂಸ್ಕೃತಿಗೆ ಸೇರಿದ ಹಲವಾರು ನೆಲೆಗಳ[1] ಜೊತೆಗೆ ೩೫ಕ್ಕೂ ಹೆಚ್ಚು ಇಂತಹ ನೆಲೆಗಳು ಬೆಳಕಿಗೆ ಬಂದಿವೆ[2] ಪ್ರಸ್ತುತ ಈ ಲೇಖನವು ಪ್ರಮುಖವಾಗಿ ಅರೆಗುಡ್ಡ ನೆಲೆಯಲ್ಲಿ ಕಂಡುಬಂದಿರುವ ಹಾಗೂ ಪ್ರಪಂಚದಲ್ಲಿಯೇ ಮೊದಲೆನ್ನಬಹುದಾದ ನಕಾಶೆ ವರ್ಣಚಿತ್ರವನ್ನು ಕುರಿತದ್ದಾಗಿದೆ

ಅರೆ ಗುಡ್ಡ ನೆಲೆಯು ಬಾದಾಮಿಯಿಂದ ಉತ್ತರಕ್ಕೆ ೧೧ ಕಿ.ಮೀ. ದೂರದಲ್ಲಿದ್ದು ಕುಟಕನಕೇರಿ ಹಳ್ಳಿಯ ವ್ಯಾಪ್ತಿಗೆ ಸೇರಿದೆ. ಈ ಹಳ್ಳಿಯ ಉತ್ತರ ಹಾಗೂ ವಾಯುವ್ಯ ದಿಕ್ಕಿಗೆ ವ್ಯಾಪಿಸಿರುವ ಗುಡ್ಡಗಾಡು ಪರಿಸರದಲ್ಲಿ ಸಾಕಷ್ಟು ಮರಳುಕಲ್ಲಿನ ಶ್ರೇಣಿಯಲ್ಲಿ ಕಲ್ಲಾಸರೆಗಳಿದ್ದು, ಈ ಪ್ರದೇಶದಲ್ಲಿ ಆದಿ ಮಾನವ ತನ್ನ ಛಾಪನ್ನು ಮೂಡಿಸಿದ್ದಾನೆ. ಇದರಲ್ಲಿ ಆನೆ ಫಡಿ ಕಲ್ಲಾಸರೆಯು ಅತ್ಯಂತ ಪ್ರಮುಖವಾಗಿದೆ.

ಭೌಗೋಳಿಕವಾಗಿ ಈ ಗುಡ್ಡವು ಕುದುರೆ ಲಾಳಾಕೃತಿಯಾಕಾರದಲ್ಲಿದ್ದು ಒಟ್ಟು ೧೧ ಕಲ್ಲಾಸರೆಗಳಿಂದ ಕೂಡಿದೆ ಹಾಗೂ ಇಲ್ಲಿನ ೭ ಕಲ್ಲಾಸರೆಗಳಲ್ಲಿ ಅಂತ್ಯ ಹಳೇ ಶಿಲಾಯುಗದಿಂದ ಇತಿಹಾಸ ಕಾಲದವರೆಗಿನ ವರ್ಣಚಿತ್ರಗಳನ್ನು ಕಾಣಬಹುದಾಗಿದೆ. ಆನೆ ಫಡಿಯಲ್ಲಿನ ಚಿತ್ರವು ಈ ಶ್ರೇಣಿಯ ಪ್ರದೇಶವನ್ನು ಪ್ರತಿನಿಧಿಸುವಂತಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ಇದು ಕೇವಲ ಪ್ರಾಗಿತಿಹಾಸ ವರ್ಣಚಿತ್ರವಲ್ಲದೇ ನಕಾಶೆಯಾಗಿದೆ. ಇದು ಅತ್ಯಂತ ಪ್ರಾಚೀನ ಅಂದರೆ ಪ್ರಪಂಚದಲ್ಲಿಯೇ ಮೊದಲು ಮೂಡಿಸಿದ ನಕಾಶೆಯೆಂದರೆ ತಪ್ಪಾಗಲಾರದು.

ಆನೆ ಫಡಿಯ ಚಿತ್ರವು ನಕಾಶೆಯನ್ನಷ್ಟೇ ಪ್ರತಿನಿಧಿಸದೆ ಕೆಲವು ವಿಶಿಷ್ಠ ಲಕ್ಷಣಗಳನ್ನು ಒಳಗೊಂಡಿದೆ. ಈ ಚಿತ್ರವು ಮೂರು ಕಾಲಘಟ್ಟಗಳನ್ನು ಒಳಗೊಂಡಿದ್ದು ಕಾಲಕ್ರಮೇಣವಾಗಿ ಮೂರು ಹಂತಗಳನ್ನು ಹೊಂದಿದ್ದು, ಒಂದರ ಮೇಲೊಂದು ಎಂಬಂತೆ ಮೂಡಿಸಿದ್ದು ಪಾರದರ್ಶಕ ತಂತ್ರಗಾರಿಕೆಯನ್ನು ನೋಡಬಹುದು. ಈ ನಕಾಶೆಯು ಸೂಕ್ಷ್ಮ ಶಿಲಾಯುಗದ ಅಂತಿಮ ಕಾಲಘಟ್ಟಕ್ಕೆ ಸೇರುತ್ತದೆ (ಚಿತ್ರ ೧).


ಮೊದಲಿನ ಹಂತ (ಅಂತ್ಯ ಹಳೇ ಶಿಲಾಯುಗ)

ಜ್ಯಾಮಿತಿ ಚಿತ್ರಗಳು ಮಾನವನ ಕಲಾ ಸೃಷ್ಟಿಯ ಮೊದಲ ಹಂತವೆಂಬುದು ಜಗತ್ತಿನ ವಿದ್ವಾಂಸರ ವಾದ. ಉದಾಹರಣೆಗೆ, ರಾಜಸ್ಥಾನದ ಚಂದ್ರವತಿ ನೆಲೆಯಲ್ಲಿ ದೊರೆತ ಅಂತ್ಯ ಹಳೇ ಶಿಲಾಯುಗ ತಿರುಳಿನ ಮೇಲೆ ವಜ್ರಾಕೃತಿ ವಿನ್ಯಾಸವಿರುವುದನ್ನು ಹೆಸರಿಸಬಹುದು. ಹಾಗೇ ನೋಡುವುದಾದರೆ ಆನೆ ಫಡಿಯಲ್ಲಿನ ಕಲ್ಲಾಸರೆಯಲ್ಲಿರುವ ಮೊದಲ ಹಂತಕ್ಕೆ ಸೇರಿದ ವಜ್ರಾಕೃತಿಯಲ್ಲಿರುವ ವರ್ಣಚಿತ್ರವು ಹೆಚ್ಚು ವಿಶಿಷ್ಠತೆಯನ್ನು ಪಡೆದುಕೊಂಡಿದೆ. ಹಾಗೆಯೇ ಇಂತಹ ಚಿತ್ರಗಳು ಮಲಪ್ರಭಾ ನದಿ ತೀರದಲ್ಲಿ ಹೆಚ್ಚಾಗಿ ವರ್ಣ ಹಾಗೂ ಗೀರು ಚಿತ್ರಗಳಲ್ಲಿ ಕಂಡುಬಂದಿರುವುದು ಭಾರತದಲ್ಲಿಯೇ ಅಲ್ಲದೇ ಪ್ರಪಂಚದ ಸಂಸ್ಕೃತಿಯ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತದೆ.

* ಡೆಕ್ಕನ್ ಕಾಲೇಜ್, ಸ್ನಾತಕೋತ್ತರ ಮತ್ತು ಸಂಶೋಧನ ಸಂಸ್ಥೆ, ಸ್ವಾಯತ್ತ ವಿಶ್ವವಿದ್ಯಾನಿಲಯ, ಪುಣೆ-೪೧೧೦೦೬. ಮೊ. ೯೯೮೦೭೭೪೭೧೬



ಚಿತ್ರ ೧. ಅರೆಗುಡ್ಡದ ಆನೆ ಫಡಿಯಲ್ಲಿರುವ ವರ್ಣಚಿತ್ರ



ಚಿತ್ರ ೨. ಅರೆ ಗುಡ್ಡ ನೆಲೆಯ ಚಿತ್ರಣ

ಜಿಂಕೆಯನ್ನು ಓಡುವ ಭಂಗಿಯಲ್ಲಿ ತೋರಿಸಲಾಗಿದೆ. ಆಮೆಯನ್ನು ದಪ್ಪ ಗೆರೆಗಳಿಂದ ಹಾಗೂ ಒಬ್ಬ ಮನುಷ್ಯ ತನ್ನ ಎರಡು ಕೈಗಳನ್ನು ಮೇಲೆತ್ತಿ ತನ್ನ ಬೆರಳುಗಳನ್ನು ಅಗಲಿಸಿರುವಂತೆ ಹಾಗೂ ಸಮಾನಂತರ ಲಂಬ ರೇಖೆಗಳನ್ನು ದೇಹ ಮತ್ತು ಕೈ ಭಾಗದಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದ ಬಲ ಮೂಲೆಯಲ್ಲಿರುವ ಚಿತ್ರಗಳು ಪ್ರಾಣಿಗಳಂತೆ ಕಂಡುಬರುತ್ತವೆ.


ಎರಡನೇ ಹಂತ (ಸೂಕ್ಷ್ಮ ಶಿಲಾಯುಗ)

ಎರಡು ಕಾಡು ಹಂದಿಯ ಚಿತ್ರಗಳಿದ್ದು ಅದರಲ್ಲೊಂದರ ಕಾಲಿನ ಮೇಲೆ ಅಡ್ಡ ಗೆರೆಗಳನ್ನು ಕಾಣಬಹುದು. ಉಳಿದ ಮೂರು ಚಿತ್ರಗಳು ಜಿಂಕೆಗಳಾಗಿವೆ.

ಕೊನೆಯ ಹಂತ (ಸೂಕ್ಷ್ಮ ಶಿಲಾಯುಗದ ಕೊನೆಯ ಭಾಗ)

ಈ ಹಂತದಲ್ಲಿನ ವರ್ಣಚಿತ್ರವು ಅತ್ಯಂತ ಪ್ರಮುಖವಾಗಿದ್ದು, ಪ್ರಪಂಚದಲ್ಲಿಯೇ ಮೊದಲು ಮೂಡಿಸಿದ ನಕಾಶೆಯಾಗಿದೆ. ಈ ಚಿತ್ರವು ಆಯಾತಕಾರದ ದಪ್ಪ ಗೆರೆಯನ್ನು ಹೊಂದಿದ್ದು, ಅದು ಕುದುರೆ ಲಾಳಾಕೃತಿಯನ್ನು ಪ್ರತಿನಿಧಿಸುತ್ತದೆ. ಇದರಲ್ಲಿನ ಒಟ್ಟು ೧೧ ದಪ್ಪ ವರ್ತುಲ ಅಥವಾ ಚುಕ್ಕೆಗಳು ಮೂರು ಸಾಲುಗಳಲ್ಲಿದ್ದು, ಅವು ಕುದುರೆ ಲಾಳಾಕೃತಿಯಲ್ಲಿನ ಕಲ್ಲಾಸರೆಗಳನ್ನು ಪ್ರತಿನಿಧಿಸುತ್ತವೆ (ಚಿತ್ರ ೨).

ಮೊದಲ ಸಾಲು (ಎಡದಿಂದ ಬಲಕ್ಕೆ)



೧. ಆನೆ ಫಡಿ

೨. ಜೂಮ್‌ಜೂಮ್ ಫಡಿ

೩. ಫಡಿಯಮ್ಮ ಫಡಿ

೪. ಚಿಕ್ಕ ಪಾರಿವಾಳ ಫಡಿ

೫. ಬಾಗು ಫಡಿ

ಮಧ್ಯದ ಸಾಲು (ಬಲದಿಂದ ಎಡಕ್ಕೆ)

೧. ಅಂದರ್ ಫಡಿ – ಅ

೨. ಅಂದರ್ ಫಡಿ – ಆ

೩. ಕರಡಿ ಗವಿ

೪. ದೊಡ್ಡ ಪಾರಿವಾಳ ಘಡಿ – ಅ

೫. ದೊಡ್ಡ ಪಾರಿವಾಳ ಘಡಿ – ಆ

ಕೆಳಗಿನ ಸಾಲು

೧. ಪಾರಿವಾಳ ಘಡಿ

ಈ ನೆಲೆಯಲ್ಲಿ ಸಾಕಷ್ಟು ವರ್ಣಚಿತ್ರಗಳು, ಕಲ್ಲುಳಿಗಳ ಜೊತೆಗೆ ಸೂಕ್ಷ್ಮ ಶಿಲಾಯುಗದ ಉಪಕರಣಗಳು (ಚಿತ್ರ ೩), ಬೃಹತ್ ಶಿಲಾಯುಗದ ಶಿಲಾಗೋರಿಗಳು ಅಂದರೆ ಶಿಲಾಕೋಣೆ, ಶಿಲಾ ವೃತ್ತ ಹಾಗೂ ಶಿಲಾ ವೃತ್ತದೊಳಗೆ ಶಿಲಾ ರಾಶಿಯನ್ನು ಕಾಣಬಹುದಾಗಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ಈ ನೆಲೆಯು ಪ್ರಪಂಚದಲ್ಲಿಯೇ ವಿಶಿಷ್ಠ ಹಾಗೂ ವಿಭಿನ್ನವಾಗಿದ್ದು, ಇನ್ನು ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ.

[ನನಗೆ ಎಲ್ಲ ರೀತಿಯ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡಿದ ನನ್ನ ಪೂಜ್ಯ ಗುರುಗಳಾದ ಪ್ರೊ. ಅ. ಸುಂದರ, ಪ್ರೊ. ಸುಷ್ಮ ಜಿ ದೇವ್ ಅವರಿಗೆ ಹೃದಯಪೂರ್ವಕ ನಮನಗಳು. ಹಾಗೆಯೇ ಕಾರ್ಯಕ್ಷೇತ್ರ ಅನ್ವೇಷಣೆ ಹಾಗೂ ತಾಂತ್ರಿಕತೆಯಲ್ಲಿ ಸಹಕರಿಸಿದ ನನ್ನ ಸ್ನೇಹಿತರಾದ ಹೇಮಂತ್ ದಳವಿ, ಚಂದ್ರಕಾಂತ್ ಕಲ್‌ವಾಂಕರ್, ಆರ್. ಅರ್ಜುನ್, ಮೋಹನ್ ಪಾರ್ಥಿ, ಪ್ರವೀಣ್ ಕುಮಾರ್, ಕೆ ಮತ್ತು ಈ ವೇಳೆಯಲ್ಲಿ ತಂಗಲು ವ್ಯವಸ್ಥೆ ಮಾಡಿಕೊಟ್ಟ ಶ್ರೀ ಇಷ್ಟಲಿಂಗ ಸಿರಿಸಿ ಹಾಗೂ ಸಂಶೋಧನೆಗೆ ಧನಸಹಾಯ ನೀಡಿದ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ನವದೆಹಲಿರವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.]

ಅಡಿಟಿಪ್ಪಣಿಗಳು

೧. ಫೂಟ್, ಆರ್.ಬಿ. ೧೯೧೬. ***ದಿ ಫೂಟ್ ಕಲೆಕ್ಷನ್ ಆಫ್ ದಿ ಇಂಡಿಯನ್ ಪ್ರಿ ಹಿಸ್ಟಾರಿಕ್ ಆ್ಯಂಡ್ ಪ್ರೊಟೋ ಹಿಸ್ಟಾರಿಕ್ ಆ್ಯಂಟಿಕ್ವಿಟೀಸ್: ನೋಟ್ಸ್ ಆನ್ ದೇರ್ ಏಜಸ್*** ಆ್ಯಂಡ್ ಡಿಸ್ಟ್ರಿಬ್ಯೂಷನ್ಸ್, ಮದ್ರಾಸ್ ಸರಕಾರ, ಮದ್ರಾಸ್.

೨. ಜೋಶಿ, ಆರ್.ವಿ. ೧೯೫೫. ***ಪ್ಲಿಸ್ಟೋಸಿನ್ ಸ್ಟಡೀಸ್ ಇನ್ ದಿ ಮಲಪ್ರಭ ಬೇಸಿನ್***, ಡೆಕ್ಕನ್ ಕಾಲೇಜ್, ಪೊ.ಗ್ರಾ.ರಿ.ಇ. ಪುಣೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಜೋಶಿ, ಆರ್.ವಿ. ೧೯೫೬. ಮಾರ್ಫಾಲಜಿಕಲ್ ಅನಲೆಸಿಸ್ ಆಫ್ ಮಲಪ್ರಭ ಬೇಸಿನ್ (ಇನ್ ಮೈಸೂರು ಸ್ಟೇಟ್) ಬಾಂಬೆ, ಜಿಯೋಗ್ರಾಫಿಕಲ್ ಮ್ಯಗಜಿನ್ ೩೩–೩೯.

ಮತ್‌ಪಲ್, ಯಶ್‌ಪಾಲ್ ಮತ್ತು ಇ. ನ್ಯೂಮಯರ್. ೧೯೮೧. ಮೆಸೊಲಿತಿಕ್ ರಾಕ್ ಪೈಟಿಂಗ್ಸ್, ಡಿಸ್ಟ್ರಿಕ್ಟ್ ಬಿಜಾಪುರ, ಕರ್ನಾಟಕ. *ಇಂಡಿಯನ್ ಆರ್ಕಿಯಾಲಜಿ: ಎ ರಿವಿವ್ ೧೯೭೮–೭೯:೯೬.*

ಮೋಹನ ಆರ್. ೨೦೧೩. ನ್ಯೂಲಿ ಡಿಸ್ಕವರಿಡ್ ರಾಕ್ ಅರ್ಟ್ ಸೈಟ್ಸ್ ಇನ್ ನಾರ್ಥ್ ಕರ್ನಾಟಕ. ಅನುರ ಮನತುಂಗ ಆ್ಯಂಡ್ ಸಿ.ಡಿ.ಎಸ್. ವೆಟ್ಟ್ವಿ (***ಏಷ್ಯನ್ ಅರ್ಟ್, ಕಲ್ಚರ್ ಆ್ಯಂಡ್ ಹೆರಿಟೆಜ್***) ಪುಟ ೧೯೧–೧೯೮. ಇಂಟರ್‌ನ್ಯಾಷನಲ್ ಅಸೋಸಿಯೆಷನ್ ಫಾರ್ ಏಷ್ಯನ್ ಹೆರಿಟೇಜ್, ಸಂಟರ್ ಫಾರ್ ಏಷ್ಯನ್ ಸ್ಟಡೀಸ್, ಯೂನಿವರ್ಸಿಟಿ ಆಪ್ ಕೆಲಾನಿಯ, ಶ್ರೀಲಂಕಾ.

ಮೋಹನ ಆರ್. ೨೦೧೫. ***ರೀಡಿಂಗ್ ರಾಕ್ ಅರ್ಟ್: ಇಟರ್‌ಪ್ರಿಟೀಂಗ್ ಟೆಂಪರಲ್ ಆ್ಯಂಡ್ ಜಿಯೊಗ್ರಾಪಿಕ್ ವ್ಯಾರಿಯಬಿಲಿಟಿ ಇನ್ ದಿ ಲೋಯರ್ ಮಲಪ್ರಭ ಬೇಸಿನ್***, ಕರ್ನಾಟಕ. ಪಿಎಚ್.ಡಿ. ಮಹಾ ಪ್ರಬಂಧ (ಅಪ್ರಕಟಿತ), ಡೆಕ್ಕನ್ ಕಾಲೇಜ್, ಪೋಸ್ಟ್ ಗ್ರಾಜ್ಯೇಟ್ ಅಂಡ್ ರಿಸರ್ಾಚ್ ಇನ್ಸ್ಟಿಟ್ಯೂಟ್, ಪುಣೆ

ನ್ಯೂಮಯರ್, ಇ. ೧೯೯೩. ***ಲೈನ್ಸ್ ಆನ್ ಸ್ಟೋನ್ಸ್: ದಿ ಪ್ರಿ ಹಿಸ್ಟಾರಿಕ್ ರಾಕ್ ಆಫ್ ಇಂಡಿಯ***. ಮನೋಹರ್ ಪ್ರಕಾಶನ ಆ್ಯಂಡ್ ಡಿಸ್ಟ್ರಿಬ್ಯೂಷನ್ಸ್, ನ್ಯೂ ಡೆಲ್ಲಿ.

ಪಪ್ಪು ಆರ್. ಎಸ್. ಮತ್ತು ಎಸ್. ಈ. ದೇವ್. ೧೯೯೪. ***ಮ್ಯಾನ್‌ಲ್ಯಾಂಡ್ ರಿಲೇಶನ್‌ಶಿಪ್ಸ್ ಡ್ಯೂರಿಂಗ್ ಪೇಲಿಯೊಲಿಥಿಕ್ ಟೆಮ್ಸ್*** ಇನ ದಿ ***ಕಲ್ಲದ್ಗಿ ಬೇಸಿನ್***. ಡೆಕ್ಕನ್ ಕಾಲೇಜ್, ಪೊ.ಗ್ರಾ.ರಿ.ಇ. ಪುಣೆ.

ಸೋನವನೆ ವಿ.ಎಚ್. ೧೯೮೭. ಆ್ಯನ್ ಎನ್‌ಗ್ರೆವಿಡ್ ಮೆಸೋಲಿತಿಕ್ ಚೋರ್ ಫ್ರಮ್ ಚಂದ್ರವತಿ, ರಾಜಸ್ತಾನ್, ಅರ್ಕಿಯಾಲಜಿ ಆ್ಯಂಡ್ ಹಿಸ್ಟರಿ (ಪಾಂಡೆ ಬಿ. ಎಮ್. ಆ್ಯಂಡ್ ಚೌಟ್ಟಪೋದಯ ಬಿ.ಡಿ. ಸಂಪಾದಕೀಯ) ಪುಟ. ೫೩–೫೬. ಡೆಲ್ಲಿ: ಅಗನ್ ಕಲಾ ಪ್ರಕಾಶನ.

ಸುಂದರ ಅ. ೧೯೭೫. ***ದಿ ಅರ್ಲಿ ಚೆಂಬರ್ ಟೂಂಬ್ಸ್ ಆಫ್ ಸೌತ್ ಇಂಡಿಯ***, ಕಂನ್ಸೆಪ್ಟ್ ಪಬ್ಲಿಷ್ ಕಂಪನಿ, ನ್ಯೂ ಡೆಲ್ಲಿ.

೩

ಕೊಂಚಗೇರಿಯ ಬೂದಿದಿಬ್ಬ ಹಾಗೂ ಸಿದ್ದರಾಂಪುರದ ಪ್ರಾಗೈತಿಹಾಸಿಕ ವರ್ಣಚಿತ್ರಗಳು

ಹೆಚ್.ಎಂ. ತಿಪ್ಪೇಶ*

ಕೊಂಚಗೇರಿಯು ಸಿರುಗುಪ್ಪ ತಾಲೂಕಿನಿಂದ ೨೭ ಕಿ.ಮೀ. ಹಾಗೂ ಜಿಲ್ಲಾ ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿದೆ. ರಾಬರ್ಟ್ ಬ್ರೂಸ್‌ಫೂಟ್ ಅವರು ಈ ನೆಲೆಯಲ್ಲಿ ಉಂಗುರಕಲ್ಲು ಹಾಗೂ ಮಡಕೆಯ ಭಾಗಗಳನ್ನು ಪತ್ತೆಹಚ್ಚಿದ್ದಾರೆ.[೧] ಈ ಗ್ರಾಮದ ಸುತ್ತಮುತ್ತ ಕ್ಷೇತ್ರಕಾರ್ಯ ಕೈಗೊಂಡಾಗ ಹೊಸದಾಗಿ ಬೂದಿದಿನ್ನೆ (Ashmound) ಅಥವಾ ಬೂದಿ ದಿಬ್ಬವನ್ನು ಪತ್ತೆಹಚ್ಚಲಾಯಿತು. ಪುರಾತತ್ವ ಅಧ್ಯಯನಗಳಲ್ಲಿ ಬೂದಿದಿನ್ನೆಗಳು ಆಥವಾ ಬೂದಿ ದಿಬ್ಬಗಳ ಸಮಸ್ಯೆ ಅನೇಕ ವಿದ್ವಾಂಸರ ಆಸಕ್ತಿಯನ್ನು ಕೆರಳಿಸಿದೆ. ಇಂಥ ವಿವರಗಳು ನೂತನ ಶಿಲಾಯುಗ, ಶಿಲಾ–ತಾಮ್ರಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಎಲ್ಲಾ ಹಂತಗಳಲ್ಲೂ ಇಂಥ ಬೂದಿದಿಬ್ಬಗಳು ನಿರ್ಮಾಣವಾಗಿವೆ. ಅವುಗಳ ಬಗ್ಗೆ ಆಲ್ಚಿನ, ರಾಮಿರೆಡ್ಡಿ, ಮಜುಮದಾರ್, ರಾಜುಗುರು, ಪದ್ದಯ್ಯ, ಸುಂದರ ಮೊದಲಾದವರು ಅಧ್ಯಯನ ಮಾಡಿ ತಮ್ಮ ತಮ್ಮ ಅಧ್ಯಯನಾಧಾರಿತ ಅಭಿಪ್ರಾಯ ಮಂಡಿಸಿದ್ದಾರೆ.

ಆಲ್ಚಿನ್ ಅವರು ತಮ್ಮ 'ನಿಯ್ಯೂಲಿತಿಕ್ ಕ್ಯಾಟಲ್ ಕೀಪರ್ಸ್ ಆಫ್ ಸೌಥ್ ಇಂಡಿಯಾ: ಎ ಸ್ಟಡಿ ಆಫ್ ಡೆಕ್ಕನ್ ಆಶ್ ಮೌಂಡ್ಸ್' ಎಂಬ ಕೃತಿಯಲ್ಲಿ ಬೂದಿದಿನ್ನೆ ನೆಲೆಗಳು ದನಕರುಗಳ ದೊಡ್ಡಿಗಳಾಗಿದ್ದು, (ದನಗಳನ್ನು ನಿಲ್ಲಿಸುವ ಸ್ಥಳ) ಇಲ್ಲಿ ಕ್ರಮೇಣ ದೊಡ್ಡ ಪ್ರಮಾಣದಲ್ಲಿ ಸಗಣಿ ಸಂಗ್ರಹವಾಗುತಿತ್ತು. ಅದನ್ನೆ ಸುಡಲಾಗುತ್ತಿತ್ತು. ಇಂಥ ಕ್ರಿಯೆ ಮೇಲಿಂದ ಮೇಲೆ ಅದೇ ಜಾಗದಲ್ಲಿ ಜರುಗುತ್ತಿದ್ದರಿಂದ ಕಾಲಕ್ರಮೇಣ ಅದು ಪದರುಗಳಾಗಿ ರಚನೆಯಾಗುತ್ತಿತ್ತು ಎಂದು ಅಭಿಪ್ರಾಯಿಸಿದ್ದಾರೆ. ರಾಮಿರೆಡ್ಡಿಯವರು ಇವು ಮೂಲದಲ್ಲಿ ಕಬ್ಬಿಣದ ಅದಿರನ್ನು ಸಂಗ್ರಹಿಸಿ ಲೋಹ ತಯಾರಿಸುವುದಕೋಸ್ಕರ ಸುಟ್ಟಿದ್ದರಿಂದ ಉಂಟಾದ ದಿನ್ನೆಗಳು ಎಂದು ವಿವರಿಸಿದ್ದಾರೆ.[೨] ರಾಬರ್ಟ ಬ್ರೂಸ್‌ಫೂಟ್ ಅವರು ನವ ಶಿಲಾಯುಗದ ಜನರು ಜಾನುವಾರುಗಳ ದೊಡ್ಡ ದೊಡ್ಡ ಮಂದೆಗಳನ್ನು ಸಾಕುತ್ತಿದ್ದರೆಂದೂ ಜಾನುವಾರುಗಳ ಸಗಣಿಯನ್ನು ಒಂದೆಡೆ ಗುಡ್ಡೆಹಾಕಿ ಅದು ತ್ಯಾಜ್ಯವಾದ್ದರಿಂದ ಕಾಲದಿಂದ ಕಾಲಕ್ಕೆ ಸುಡುತ್ತಿದ್ದರು ಇಲ್ಲವೇ ಸಗಣಿಯ ಈ ಗುಡ್ಡೆಗಳಿಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಅವು ಸುಟ್ಟು ಬೂದಿಯಾಗುತ್ತಿದ್ದವೆಂದು ಅಭಿಪ್ರಾಯಿಸಿದ್ದಾರೆ. ಮಜುಮದಾರ ಮತ್ತು ರಾಜಗುರು ಅವರು ಇವು ಮೂಲತಃ ದೊಡ್ಡಿಗಳಲ್ಲ ದೊಡ್ಡಿಗಳಿಂದ ಸಗಣಿಯನ್ನು ಸಂಗ್ರಹಿಸಿ ಬೇರೆಡೆಯಲ್ಲಿ ಒಟ್ಟುತ್ತಿದ್ದರು ಅಂತಹ ಒಟ್ಟಿದ ನೆಲೆಗಳು ಬೂದಿದಿಬ್ಬಗಳು ಎಂದಿದ್ದಾರೆ. ಪದ್ದಯ್ಯ ಅವರು ಇವು ದನಗಳ ಸೆಗಣಿ ಸುಡುವುದರಿಂದ ಉಂಟಾಗಿದ್ದು, ಆದರೆ ಅದರ ಉದ್ದೇಶವು ಇದರ ಬೆಂಕಿಯು ದಿನಗಟ್ಟಲೆ ಇದ್ದುದರಿಂದ ಸಾಕಿದ ಪ್ರಾಣಿಗಳನ್ನು ಹಾಗೂ ಮನುಷ್ಯರನ್ನು ಹಿಡಿಯಲು ಬರುತ್ತಿದ್ದ ಕಾಡು ಪ್ರಾಣಿಗಳನ್ನು ದೂರವಿಡಲು ಇದೊಂದು ಕ್ರಮವಾಗಿತ್ತೆಂದು ಆಭಿಪ್ರಾಯಿಸಿದ್ದಾರೆ. ಆದರೆ ಸುಂದರ ಅವರು ಇಂಥ ದಿನ್ನೆಗಳು ಪ್ರಾಯಶಃ ಆಚರಣೆ ದೋತ್ಯಕವಾಗಿ ನಿರ್ಮಾಣವಾಗಿದ್ದಿರಬಹುದೆಂದು ವಿವರಿಸಿದ್ದಾರೆ. ಇಂಥ ಬೂದಿದಿನ್ನೆಯು ಕೊಂಚಗೇರಿಯ ಗ್ರಾಮದ ಅಬ್ಬೆನಾಗಪ್ಪ ಎಂಬುವರ ಜಮೀನನಲ್ಲಿ ಸುಮಾರು ಒಂದು ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಇದು ಮೃದುವಾದ ಮತ್ತು ಗಟ್ಟಿಯಾಗಿ ಕಲ್ಲು–ಗಾಜಿನಂತಾದ ಬೂದಿಯ ಪದರುಗಳಿಂದ ಕೂಡಿದೆ. ಇಲ್ಲಿರುವ ಬೂದಿದಿನ್ನೆಯು ಹೆಚ್ಚು ಎತ್ತರದಲ್ಲಿ ಇಲ್ಲವಾದರೂ ೫.೪ ಅಡಿ ಕನಿಷ್ಟ ಎತ್ತರದಲ್ಲಿದೆ. ಕೆಳಸ್ತರದಲ್ಲಿ ಬೂದಿಬಣ್ಣದ ಮಡಕೆಯ ಚೂರು ಹಾಗೂ ಮೇಲ್ಮಟ್ಟದಲ್ಲಿ ಕಿಟ್ಟರೂಪದ ಮಣ್ಣಿನಹೆಟ್ಟೆ (ಗರಸಿನಸೆಟ್ಟು) ಇವೆ. ಹಾಗೂ ಸಣ್ಣ ಮೂಳೆ ಅವಶೇಷಗಳು ಸಹ ಕಂಡುಬಂದಿವೆ. ಸ್ಥಳೀಯರು ಈ ಮಣ್ಣನ್ನು ಮನೆಗಳ ಮೇಲೆ ಹಾಕಲು ಮತ್ತು ಫಲವತ್ತತೆಗಾಗಿ ಹೊಲಗಳಿಗೆ ತೆಗೆದುಕೊಂಡು ಹೋಗುತ್ತಿದ್ದರಿಂದ ಮೇಲಿನಿಂದ ತಳಭಾಗದವರೆಗೆ ಸ್ತರಗಳನ್ನು ಗುರುತಿಸಲು ಮತ್ತು ಅವಶೇಷಗಳನ್ನು ಪತ್ತೆಹಚ್ಚಲು ಸಹಾಯಕವಾಗಿದೆ. ಇದೇ ತರಹದ ಬೂದಿದಿಬ್ಬಗಳು ಜಿಲ್ಲೆಯ ಕಪ್ಪುಗಲ್ಲು, ಸಂಗನಕಲ್ಲು, ಕುಡುತಿನಿ, ಕಾಕುಬಾಳು, ವೆಂಕಟಾಪುರ ಮುಂತಾದ

* ಹುಲಿಕೆರೆ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ–೫೮೩೨೧೮. ಮೊ. ೯೮೮೩೧೩೯೫೮೩



ಕೊಂಚಗೇರಿ ಬೂದಿದಿಬ್ಬ ಮತ್ತು ಕಲ್ಲಿನ ಉಪಕರಣಗಳು



ಸಿದ್ದರಾಂಪುರದ ವರ್ಣಚಿತ್ರಗಳು

ಸ್ಥಳಗಳಲ್ಲಿ ಕಂಡುಬಂದಿವೆ. ಇಂಥ ಬೂದಿದಿನ್ನೆಗಳ ಬಗ್ಗೆ ವಿಭಿನ್ನ ಅಭಿಪ್ರಾಯಗಳಿದ್ದರೂ ಅವು ಕಂಡುಬಂದಿರುವ ಭೌಗೋಳಿಕ ಪರಿಸರವನ್ನು ಗಮನಿಸಿದರೆ ಬಳ್ಳಾರಿ, ರಾಯಚೂರು, ಗುಲ್ಬರ್ಗ ಆಂಧ್ರ ಭಾಗದಲ್ಲಿ ಕಾಡುಬೆಟ್ಟ ಶಿಲೆಗಳಿಂದ ಆವೃತಗೊಂಡ ಈ ಪ್ರದೇಶಗಳಲ್ಲಿ ಒಂದು ಕಾಲದಲ್ಲಿ ಕೃಷಿಗೆ ಯೋಗ್ಯವಾದ ಭೂಮಿ ಇರಲಿಲ್ಲವೆಂದು ತೋರುತ್ತದೆ. ಬಹಳ




ಎ. ಹರಿಹರಪುರದ ಶಿಲಾ ವೃತ್ತಗಳು








ದೇಶಾಣಿ – ಗೊಲ್ಲರಹಟ್ಟಿಯ ನಿಲುವುಗಲ್ಲು, ಶಿಲಾವೃತ್ತಗಳು



ಕಾನೀಹಳ್ಳಿಯಲ್ಲಿ ದೊರೆತ ನವಶಿಲಾಯುಗದ ಕೊಡಲಿ













ಆದಿಹಳ್ಳಿಯ ನಿಲುವುಗಲ್ಲುಗಳು ಮತ್ತು ಡಾಲ್ಮೆನ್

ಆದಿಹಳ್ಳಿ

ಅರಸೀಕೆರೆಯಿಂದ ಸುಮಾರು ೧೨ ಕಿ.ಮೀ. ಅಂತರದಲ್ಲಿ ಆದಿಹಳ್ಳಿ ಗ್ರಾಮವಿದೆ. ಗ್ರಾಮದ ರೈಲೆನಿಲ್ದಾಣದ ಬಳಿ ಪಟೇಲರಾದ ಮಹಾಲಿಂಗಣ್ಣನವರ ಹೊಲದಲ್ಲಿ ೪ ನಿಲುವುಗಲ್ಲುಗಳಿವೆ. ಮೊದಲನೆ ನಿಲುವುಗಲ್ಲು ಸುಮಾರು ೧೦೦ ಇಂಚು ಎತ್ತರ, ೬೦ ಇಂಚು ಅಗಲ, ೧೫ ಇಂಚು ದಪ್ಪವಿದ್ದು ಚೌಕಾಕಾರದಲ್ಲಿದೆ. ಇದರ ಹಿಂಬದಿಯಲ್ಲಿ ೩ನೇ ನಿಲುವುಗಲ್ಲು ೪೨ ಇಂಚು ಎತ್ತರ, ೫೦ ಇಂಚು ಅಗಲ, ೧೦ ಇಂಚು ದಪ್ಪವಿದೆ. ೩ನೇ ನಿಲುವುಗಲ್ಲು ತ್ರಿಕೋನಾಕಾರದಲ್ಲಿದ್ದು ತುಂಡಾಗಿದೆ. ಸಮೀಪದಲ್ಲಿಯೇ ೪ನೇ ನಿಲುವುಗಲ್ಲಿನ ಸುತ್ತ ಗಿಡ-ಬಳ್ಳಿಗಳು ಬೆಳೆದುಕೊಂಡಿವೆ. ಇದರ ಸಮೀಪದಲ್ಲಿ ೫ನೇ ನಿಲುವುಗಲ್ಲು ೫೦ ಇಂಚು ಎತ್ತರ, ೩೦ ಇಂಚು ಅಗಲದಿಂದ ಕೂಡಿದೆ.

ದೊಡ್ಡಕಲ್ಲಯ್ಯನವರ ಹೊಲದಲ್ಲಿ ಚೌಕಾಕಾರದಿಂದ ಕೂಡಿದ ೫ ನಿಲುವುಗಳು ಇವೆ. ೩ ನಿಲುವುಗಳಲ್ಲಿ ೯೦ ಇಂಚು ಎತ್ತರವಾಗಿದ್ದರೆ ೩ ನಿಲುವುಗಲ್ಲುಗಳು ೬೫ ಇಂಚು ಎತ್ತರವಾಗಿವೆ. ಹಿರೇಬೀರಲಿಂಗೇಶ್ವರ ದೇವಾಲಯದ ಹಿಂಭಾಗದ ಕಲ್ಲಪ್ಪನವರ ಹೊಲದಲ್ಲಿ ಒಂದು ನಿಲುವುಗಲ್ಲಿದೆ. ಇದನ್ನು ನೆಟ್ಕಲ್ಲು ಎಂದು ಕರೆಯುತ್ತಾರೆ. ೯೦ ಇಂಚು ಎತ್ತರ, ೫೦ ಇಂಚು ಅಗಲದಿಂದ ಕೂಡಿದೆ.

ಆದಿಹಳ್ಳಿ-ಗೊಲ್ಲರಹಟ್ಟಿಯ ಶಂಕರಪ್ಪ ಬಿನ್ ಸಣ್ಣಸಿದ್ದಪ್ಪನವರ ಹೊಲದಲ್ಲಿ ಒಂದು ಡಾಲ್ಮೆನ್ ಪತ್ತೆಯಾಗಿದೆ. ಇದರಲ್ಲಿ ಕಲ್ಗುಳಿ ಇರುವುದನ್ನು ಗಮನಿಸಬಹುದು. ಇದನ್ನು ಸ್ಥಳೀಯರು ಬೂತಪ್ಪನೆಂದು ಪೂಜಿಸುತ್ತಾರೆ.

ದೇಶಾಣಿ-ಗೊಲ್ಲರಹಟ್ಟಿ

ಅರಸೀಕೆರೆಯಿಂದ ಸುಮಾರು ೧೮ ಕಿ.ಮೀ. ಅಂತರದಲ್ಲಿರುವ ದೇಶಾಣಿ-ಗೊಲ್ಲರಹಟ್ಟಿಯು ಹುಂಡಿಗನಾಳು ಗ್ರಾಮಪಂಚಾಯಿತಿ, ಜಾವಗಲ್ಲು ಹೋಬಳಿಗೆ ಸೇರಿದ ಗ್ರಾಮವಾಗಿದೆ. ಇಲ್ಲಿ ಲಂಬಾಣಿಗಳು ವಾಸಿಸುತ್ತಿದ್ದಾರೆ. 'ನೆಟ್ಕಲ್ಲು ಬಾರೆ' ಎಂದು ಕರೆಯುವ ಪ್ರದೇಶದಲ್ಲಿ ಮಂಜನಾಯ್ಕನವರ ಹೊಲದಲ್ಲಿ ಸುಮಾರು ೧೫೦ ಇಂಚು ಎತ್ತರ, ೭೦ ಇಂಚು ಅಗಲ, ೧೫ ಇಂಚು ದಪ್ಪವಿರುವ ನಿಲುವುಗಲ್ಲಿದೆ. ಸಮೀಪದಲ್ಲಿ ಮಾದಾಪುರ ಬಸವಣ್ಣನವರ ಹೊಲದಲ್ಲಿ ೨ ನಿಲುವುಗಲ್ಲುಗಳಿವೆ. ಇಲ್ಲಿಂದ ಸುಮಾರು ೧ ಕಿ.ಮೀ. ಅಂತರದಲ್ಲಿ ಮಂಜನಾಯ್ಕನವರ ಹೊಲದಲ್ಲಿ ತುಂಡಾದ ನವಶಿಲಾಯುಗದ ಮೂರು ಇಂಚಿನ ಕೊಡಲಿ ಪತ್ತೆಯಾಗಿದೆ. ವಿವಿಧ ಅಳತೆಗಳಿಂದ ಕೂಡಿದ ೧೩ ಶಿಲಾವೃತ್ತಗಳು, ಒಂದರ ಪಕ್ಕ ಒಂದರಂತೆ ಸಾಲಾಗಿವೆ. ಕೆಲವು ಶಿಲಾವೃತ್ತಗಳು ಕೃಷಿ ಚಟುವಟಿಕೆಯಿಂದ ಹಾನಿಗೊಂಡಿವೆ.

ಈ ನೆಲೆಗಳು ಬೆಟ್ಟಗುಡ್ಡ ಪ್ರದೇಶಗಳ ಸಮೀಪ ಇವೆ. ಜನರಿಗೆ ಮೂಲ ಸೌಕರ್ಯಗಳನ್ನು ಲಭಿಸುತ್ತಿದ್ದರಿಂದ ಇಲ್ಲಿ ಮಾನವ ನೆಲೆಸಿದ್ದನೆಂದು ಈ ಸ್ಮಾರಕಗಳ ಮೂಲಕ ತಿಳಿಯಬಹುದುದಾಗಿದೆ. ಈ ಪ್ರದೇಶದಲ್ಲಿ ಕುರುಬರು, ಲಂಬಾಣಿಗಳು, ಗೊಲ್ಲರು ಪ್ರಸ್ತುತ ಹೆಚ್ಚಾಗಿ ವಾಸಿಸುತ್ತಿದ್ದಾರೆ. ಕೃಷಿಪ್ರಧಾನ ಕಸುಬಾಗಿದ್ದು, ಜೊತೆಯಲ್ಲಿ ಪಶುಸಂಗೋಪನೆಯನ್ನು ಮಾಡುತ್ತಿದ್ದಾರೆ. ಬಾಣಾವರ, ಬೆಂಡೆಕೆರೆ ಸುತ್ತಮುತ್ತ ನಾಲ್ಕೈದು ಕಿ.ಮೀ. ಅಂತರದಲ್ಲಿ ಹಲವು ಶಿಲಾಯುಗದ ನೆಲೆಗಳನ್ನು ವಿದ್ವಾಂಸರು ಶೋಧಿಸಿದ್ದಾರೆ. ಹೆಚ್ಚಾಗಿ ನಿಲುವುಗಲ್ಲುಗಳು ಪತ್ತೆಯಾಗಿವೆ. ವೈಜ್ಞಾನಿಕ ಉತ್ಖನನದ ಮೂಲಕ ಅಧ್ಯಯನ ಕೈಗೊಂಡಲ್ಲಿ ಹೆಚ್ಚಿನ ವಿಷಯಗಳನ್ನು ತಿಳಿಯಬಹುದಾಗಿದೆ.

[ಕ್ಷೇತ್ರಕಾರ್ಯದ ವೇಳೆ ಸಹಕರಿಸಿದ ಅಭಿಷೇಕ್ ಒಡೆಯರ್, ಬಾಣಾವರದ ವೆಂಕಟೇಶ ಬಿ.ಎಂ., ಕಾನೀಹಳ್ಳಿಯ ಚಿದಾನಂದ, ಎ. ಹರಿಹರಪುರದ ಅಜಯ್, ಮಂಜುನಾಥ, ದೇಶಾಣಿ ಗೊಲ್ಲರಹಟ್ಟಿಯ ಮಂಜನಾಯ್ಕ ಹಾಗೂ ಆದಿಹಳ್ಳಿಯ ಕಲ್ಲಪ್ಪ ಮತ್ತು ದಿಲೀಪ್‌ಕುಮಾರ್‌ರವರಿಗೆ ಧನ್ಯವಾದಗಳು].

ಅಡಿಟಿಪ್ಪಣಿಗಳು

೧. ಪ್ರವೀಣ್ ಬೆಳ್ತಂಗಡಿ, ಡಾ. ಹನುಮನಾಯಕ, ೨೦೧೪, 'ಅರಸೀಕೆರೆ ತಾಲೂಕಿನ ಬೃಹತ್ ಶಿಲಾಯುಗದ ನೆಲೆಗಳು ಒಂದು ಅಧ್ಯಯನ' ಇತಿಹಾಸ ದರ್ಶನ, ಸಂಪುಟ ೨೯, ಪು. ೪.

೨. ಪ್ರೊ. ಅ. ಸುಂದರ ೧೯೯೭, 'ಪ್ರಾಗಿತಿಹಾಸ ಕಾಲದ ನಿರ್ಮಿತಿ ಮತ್ತು ಚಿತ್ರಕಲೆ' ಪ್ರ.ಸಂ. ಪ್ರೊ. ಬಿ. ಷೇಕ್ ಅಲಿ, ಸಂ. ಸಂಪಾದಕ ಪ್ರೊ. ಅ. ಸುಂದರ, 'ಕರ್ನಾಟಕ ಚರಿತ್ರೆ', ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಪ್ರವೀಣ ಬೆಳ್ತಂಗಡಿ, ಡಾ. ಹನುಮನಾಯಕ, ೨೦೧೪, ಅದೇ., ಪು. ೫.

೪. Prof. M. Sheshadri, 1971, Report on the Excavation at R. Narasipur, Govt. of Mysore, Bangalore.


ಮೆಣಸಿನಡು ಪರಿಸರದ ನವಶಿಲಾಯುಗದ ಆಯುಧಗಳ ಶೋಧ

ಜಿ.ಕೆ. ಶಿವರಾಜ*

ಚಿತ್ರದುರ್ಗ ಜಿಲ್ಲೆಯಲ್ಲಿರುವ ಹೊಸದುರ್ಗ ತಾಲೂಕು ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವಿಶಿಷ್ಟವಾಗಿದೆ. ಅರೆ ಮಲೆನಾಡು ಪ್ರದೇಶದ ಭಾಗವಾಗಿರುವ ಇಲ್ಲಿನ ಭೂಮಿ ಫಲವತ್ತತೆಯಿಂದ ಕೂಡಿದ್ದು ಮರಳು ಮಿಶ್ರಿತ ಕೆಂಪುಮಣ್ಣು, ಮರಬಮಣ್ಣು, ಕಬ್ಬಿಣದ ಅಂಶವನ್ನೊಳಗೊಂಡ ಮಣ್ಣು, ಕರಲು ಮಣ್ಣು, ಕಪ್ಪು ಮಣ್ಣು ಮುಂತಾದ ಮಣ್ಣಿನ ವೈವಿಧ್ಯಗಳನ್ನು ಕಾಣಬಹುದು. ಈ ತಾಲೂಕು ಪರಿಸರದಲ್ಲಿ ವೇದಾ ಮತ್ತು ಆವತಿ ಎಂಬ ಎರಡು ಪುಟ್ಟ ನದಿಗಳು ಸೇರಿ ವೇದಾವತಿ ನದಿಯಾಗಿ ಹರಿಯುತ್ತದೆ. ತಾಲೂಕಿನ ಶ್ರೀರಾಂಪುರ (ಬೂದಿಹಾಳು) ಮತ್ತು ಕಿಟ್ಟದಾಳ್ ಗ್ರಾಮದಲ್ಲಿ ಪ್ರಾಗೈತಿಹಾಸಿಕ ನೆಲೆಗಳನ್ನು ಈ ಹಿಂದೆಯೆ ಗುರುತಿಸಲಾಗಿದೆ. ಇತ್ತೀಚೆಗೆ ಗರಗ, ಸೂಜಿಗಲ್ಲು, ಗೂಳಿಹಳ್ಳಿ, ದೊಡ್ಡಘಟ್ಟ, ಗೂಳಿಹಟ್ಟಿ ಭೋವಿಹಟ್ಟಿ, ಡಿ. ಮಲ್ಲಾಪುರ, ಬನಸೀಹಳ್ಳಿ, ದುಗ್ಗಾವರ, ಹಿಂಡೆದೇವರಹಟ್ಟಿ, ಕಿಟ್ಟದಾಳು, ತಣಿಗೆಕಲ್ಲು, ಸಿರಾಪ್ಪನಹಳ್ಳಿ, ಲಂಬಾಣಿಹಟ್ಟಿ, ಅಜ್ಜಿಗುಡ್ಡಗಳಲ್ಲಿ ನವ ಶಿಲಾಯುಗದ ನೆಲೆಗಳನ್ನು ಶೋಧಿಸಲಾಗಿದೆ.

ಪ್ರಸ್ತುತ ನವಶಿಲಾಯುಗದ ನೆಲೆ ಶೋಧ





ಪ್ರಸ್ತುತ ನವಶಿಲಾಯುಗಕ್ಕೆ ಸಂಬಂಧಿಸಿದಂತೆ ಹೊಸದುರ್ಗ ತಾಲ್ಲೂಕಿನ ಮೆಣಸಿನಡು, ಮೆಣಸಿನೋಡು ಅಥವಾ ಮೆಣಸಿನಾಡು ಎಂಬ ಗ್ರಾಮದಲ್ಲಿ ಪ್ರಸ್ತುತ ನವಶಿಲಾಯುಗದ ಆಯುಧಗಳು ಕಂಡುಬಂದಿವೆ. ಈ ಗ್ರಾಮದಲ್ಲಿ ದೊರೆತಿರುವ ಆಯುಧಗಳು ಪೂಜೆಗೆ ಅಥವಾ ಆರಾಧನೆಗೆ ಒಳಗಾಗಿವೆ. ಈ ಗ್ರಾಮವು ಹೊಸದುರ್ಗ ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದವರೆಗೆ ಹುಳಿಯಾರು ಮಾರ್ಗವಾಗಿ ಬಂದು ನಂತರ ಹ್ಯಾಂಡ್‌ಪೋಸ್ಟ್ ಕ್ರಾಸ್‌ನಿಂದ ೩ ಕಿ.ಮೀ. ದೂರದಲ್ಲಿ ಮತ್ತೋಡು ಮಾರ್ಗದಲ್ಲಿದೆ. ಈ ಪರಿಸರವು ಸಹಜವಾಗಿ ಮಾನವನ ವಾಸಕ್ಕೆ, ಜೀವನ ನಿರ್ವಹಣೆಗೆ ಅನುಕೂಲಕರವಾಗಿದೆ. ಈ ಗ್ರಾಮದಲ್ಲಿ ಶಾಸನೋಕ್ತ ವೀರಗಲ್ಲು ಹಾಗೂ ಒಂದು ಹೊಯ್ಸಳರ ಕಾಲಕ್ಕೆ ಸೇರಿದ ದೇವಾಲಯವಿದೆ.

* ಸಂಶೋಧಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬. ಮೊ. ೯೯೦೧೭೩೬೦೮೮



ಮತ್ತೋಡು ಮಾರ್ಗವಾಗಿ ಹೋಗುವಾಗ ರಸ್ತೆಯ ಬಲಭಾಗದಲ್ಲಿ ಬರುವ ಒಂದು ಚಿಕ್ಕ ಗುಡಿಯಲ್ಲಿ ಈ ಆಯುಧಗಳು ಕಂಡುಬರುತ್ತವೆ. ಈ ಗುಡಿಗೆ ಮಾರಮ್ಮನ ಗುಡಿ ಎಂದು ಕರೆಯುತ್ತಾರೆ. ಈ ಆಯುಧಗಳು ಕೂಡ್ಲಿಗಿ ಪ್ರದೇಶದ ಹಾಲಸಾಗರ ಹಾಗೂ ಗುಡೇಕೋಟೆ ಪರಿಸರದಲ್ಲಿ ಕಟ್ಟೆಯಮೇಲೆ ಪ್ರತಿಷ್ಠಾಪನೆ ಮಾಡಿ ಪೂಜಿಸುತ್ತಿದ್ದ ಆಯುಧಗಳಂತೆ ಇವೆ. ಈ ಗ್ರಾಮದ ಸಮೀಪದಲ್ಲಿ ವೇದಾವತಿ ನದಿಯು ಇದೆ. ಮೆಣಸಿನಡು ಗ್ರಾಮದಲ್ಲಿ ಕಂಡುಬರುವ ಎರಡು ಆಯುಧಗಳು ೧೮ ಸೆ.ಮೀ. ಉದ್ದ, ೯ ಸೆ.ಮೀ. ಅಗಲ ಸಮಗಾತ್ರದಲ್ಲಿವೆ. ಇವು ಡೈಕ್ ಶಿಲೆಗಳಿಂದ ನಿರ್ಮಾಣಗೊಂಡಿವೆ. ಜುಂಜಪ್ಪನ ಗದ್ದಿಗೆ ಎಂದು ಕರೆಯುವ ಕಟ್ಟೆಯಲ್ಲಿ ಮತ್ತೊಂದು ನವಶಿಲಾಯುಗದ ಆಯುಧವನ್ನು ಇಟ್ಟಿರುವುದು ಗಮನಿಸಬಹುದಾಗಿದೆ. ಈ ಶಿಲಾಯುಧವು ೨೧ ಸೆ.ಮೀ. ಉದ್ದ, ೧೧ ಸೆ.ಮೀ. ಅಗಲವಿದೆ. ಈ ಪ್ರದೇಶಗಳಲ್ಲಿ ನವಶಿಲಾಯುಗದ ಆಯುಧಗಳು ದೊರೆತಿದ್ದು ಇವುಗಳನ್ನು ಇಲ್ಲಿಯ ಜನರು ಆರಾಧಿಸುವುದರಿಂದ ಅವರ ನಂಬಿಕೆಗೆ ದಕ್ಕೆ ಆಗಬಾರದೆಂಬ ಕಾರಣಕ್ಕಾಗಿ ಆಯುಧಗಳನ್ನು ಅಲ್ಲಿಯೇ ಇರಿಸಲಾಯಿತು. ಅವುಗಳ ಛಾಯಚಿತ್ರ ಮಾತ್ರ ಸೆರೆ ಹಿಡಿಯಲಾಯಿತು. ಇಂದಿಗೂ ಕೂಡ ಪ್ರಾಗೈತಿಹಾಸಿಕ ಕುರುಹುಗಳು ಜನರ ನಂಬಿಕೆ ಆಚರಣೆಗಳ ಮೂಲಕ ಈ ರೀತಿಯ ಸಂರಕ್ಷಣೆಗೆ ಒಳಗೊಂಡಿರುವುದು ಹೆಮ್ಮೆಯ ವಿಷಯವಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಮೆಣಸಿನ ನಾಡು ಗ್ರಾಮದಲ್ಲಿ ಕಂಡುಬಂದಿರುವ ಶಿಲಾಯುಧಗಳು ನವಶಿಲಾಯುಗ ಕಾಲದ ಮಾನವನು ತನ್ನ ದೈನಂದಿನ ಅಗತ್ಯಕ್ಕಾಗಿ ಉಪಯೋಗಿಸಿಕೊಂಡ ಉಪಕರಣಗಳಾಗಿವೆ. ಈ ಎಲ್ಲಾ ವಿವರಗಳಿಂದಾಗಿ ಮೆಣಸಿನ ನಾಡು ಪ್ರದೇಶವು ನವಶಿಲಾಯುಗದ ನೆಲೆಯಾಗಿತ್ತೆಂದು ತಿಳಿಯುತ್ತದೆ. ಇನ್ನೂ ಈ ಭಾಗದಲ್ಲಿ ಹೆಚ್ಚಿನ ಸಂಶೋಧನೆ ಕೈಗೊಂಡಾಗ ಮತ್ತಷ್ಟು ಪ್ರಾಗೈತಿಹಾಸಿಕ ಕುರುಹುಗಳನ್ನು ಬೆಳಕಿಗೆ ತರಬಹುದಾದ ಸಾಧ್ಯತೆಗಳಿವೆ.

[ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಗೆಳೆಯರಾದ ತಿಪ್ಪೇಶ ಹೆಚ್.ಎಂ., ರಾಣಿ.ಸಿ., ಕುಮಾರ.ಎನ್. ಹಾಗೂ ಜಗದೀಶ ಜಿ.ವಿ. ಅವರಿಗೂ ಕೃತಜ್ಞತೆಗಳು]

ಆಕರ ಗ್ರಂಥಗಳು

೧. ಲಕ್ಷ್ಮಣ್ ತೆಲಗಾವಿ (ಸಂ), ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭.

೨. ಡಾ. ಆರ್. ಗೋಪಾಲ್(ಸಂ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೫.

೩. ಡಾ. ಎಸ್. ತಿಪ್ಪೇಸ್ವಾಮಿ, ಹೊಸದುರ್ಗ ತಾಲ್ಲೂಕಿನ ಅಜ್ಜಿ ಗುಡ್ಡದಲ್ಲಿ ಪ್ರಾಗಿತಿಹಾಸ ಕಾಲದ ತಾಮ್ರದ ಕೊಡಲಿಯ ಪತ್ತೆ, ಇತಿಹಾಸ ದರ್ಶನ ಸಂ. ೨೭, ಬೆಂಗಳೂರು, ೨೦೧೨.

೪. ಎನ್. ಎಸ್. ಮಹಂತೇಶ, ಹೊಸದುರ್ಗ ತಾಲ್ಲೂಕಿನ ಕೆಲವು ಪ್ರಾಗೈತಿಹಾಸಿಕ ನೆಲೆಗಳ ಶೋಧ, ಇತಿಹಾಸ ದರ್ಶನ ಸಂ. ೨೬, ಬೆಂಗಳೂರು, ೨೦೧೧.

೫. ಎನ್. ಎಸ್. ಮಹಂತೇಶ, ಹೊಳಲ್ಕೆರೆ ತಾಲ್ಲೂಕಿನಲ್ಲಿ ಕೆಲವು ಬೃಹತ್ ಶಿಲಾಯುಗದ ನೆಲೆಗಳ ಶೋಧ, ಇತಿಹಾಸ ದರ್ಶನ ಸಂ. ೨೬, ಬೆಂಗಳೂರು, ೨೦೧೨.

೬. ಡಾ. ಎಸ್.ವೈ. ಸೋಮಶೇಖರ್, ಸಂಗೇನಹಳ್ಳಿ ಕೆರೆ ಪರಿಸರದಲ್ಲಿ ಹಳೆಯ ಶಿಲಾಯುಗದ ಕೈಕೊಡಲಿ ಪತ್ತೆ, ಇತಿಹಾಸ ದರ್ಶನ ಸಂ. ೩೨, ಬೆಂಗಳೂರು, ೨೦೧೭.

೬

ಹಾಲಸಾಗರ ಸಮೀಪ ಬೃಹತ್ ಶಿಲಾಯುಗದ ಸಮಾಧಿಗಳ ಶೋಧ

ಆರ್. ಮಂಜನಾಯ್ಕ*

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಗುಡೇಕೋಟೆ ಹೋಬಳಿ ಹಾಲಸಾಗರದ ಆಗ್ನೇಯ ದಿಕ್ಕಿಗಿರುವ ಮಲ್ಲಪ್ಪನಬೆಟ್ಟದ ಪರಿಸರದಲ್ಲಿ ನಡೆಸಿದ ಕ್ಷೇತ್ರಕಾರ್ಯದ ಸಂದರ್ಭಗಳಲ್ಲಿ ಶೋಧಿಸಲ್ಪಟ್ಟ ಬೃಹತ್ ಶಿಲಾಯುಗದ ಸಮಾಧಿಗಳನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ. ಈ ಪ್ರದೇಶವು ಕೂಡ್ಲಿಗಿ ತಾಲೂಕಿನ ಗಡಿ ಪ್ರದೇಶವಾಗಿದ್ದು ಈ ಬೆಟ್ಟದ ದಕ್ಷಿಣ ದಿಕ್ಕಿಗೆ ಚಿತ್ರದುರ್ಗ ಜಿಲ್ಲೆ ಮೊಳಕಲ್ಮೂರು ತಾಲೂಕಿನ ಗಡಿಗ್ರಾಮವಾದ ಭಟ್ಟರಹಳ್ಳಿಯು ಹೊಂದಿಕೊಂಡಿದೆ. ಹಾಲಸಾಗರ ಗ್ರಾಮವು ತಾಲೂಕು ಕೇಂದ್ರದಿಂದ ಪೂರ್ವಕ್ಕೆ ೨೯ ಕಿ.ಮೀ. ದೂರದಲ್ಲಿದೆ. ಈ ನೆಲೆಯು ಗ್ರಾನೈಟ್ ಶಿಲೆಯ ಬೆಟ್ಟ-ಗುಡ್ಡಗಳಿಂದ ಕೂಡಿರುವ ಪ್ರದೇಶವಾಗಿದ್ದು ನೈಸರ್ಗಿಕವಾಗಿ ಇಲ್ಲಿಯ ನೆಲ ಕೆಂಪು ಮತ್ತು ಮರಳು ಮಿಶ್ರಮಣ್ಣಾಗಿದ್ದು ಮರಳಿನ ರೂಪದಲ್ಲಿದೆ. ತಾಲೂಕಿನಲ್ಲಿ ಹೆಸರಾಂತ ನದಿಗಳಿಲ್ಲವಾದರೂ ತುಂಗಭದ್ರ ಉಪನದಿಗಳಾದ ಚಿಕ್ಕಹಗರಿ ಮತ್ತು ಚಿನ್ನಹಗರಿ (ಜನಿಗಿಹಳ್ಳಗಳು) ಹರಿಯುತ್ತಿದ್ದು ಅಲ್ಪಸ್ವಲ್ಪ ನೀರಾವರಿಗೆ ನೆರವಾಗಿದೆ. ಇದೆಲ್ಲವೂ ಭೌಗೋಳಿಕವಾಗಿ ಶಿಲಾಯುಗದ ಮಾನವರು ನೆಲೆಗೊಳ್ಳಲು ಬೇಕಾದ ಪೂರಕ ವಾತಾವರಣವು ಈ ಪರಿಸರದಲ್ಲಿ ನಿರ್ಮಾಣಗೊಂಡಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಅಲ್ಲದೆ, ಈ ಗ್ರಾಮದ ಸುತ್ತಮುತ್ತಲಲ್ಲಿ ಅಪ್ಪೇನಹಳ್ಳಿ, ಮಹದೇವಪುರ, ಗುಡೇಕೋಟೆ ಮತ್ತು ಕೆ. ರಾಯಪುರ ನೆಲೆಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಶಿಲಾಸಮಾಧಿಗಳನ್ನು ಈ ಹಿಂದೆ ಸಂಶೋಧಿಸಲಾಗಿದೆ.

ಮಲ್ಲಪ್ಪನಬೆಟ್ಟದ ಮೇಲೆ ಪೂರ್ವ ಭಾಗದಲ್ಲಿ ಒಂದೇ ಕಡೆ ಐದು ಬೃಹತ್ ಶಿಲಾಯುಗದ ಶಿಲಾಗೋರಿಗಳು ಇವೆ. ಇವುಗಳು ಹಾಳಾಗಿದ್ದು ನೆಟ್ಟಕಲ್ಲುಗಳು ಮತ್ತು ಹಾಸುಬಂಡೆಗಳು ಸುತ್ತಲೂ ಚದುರಿವೆ. ಇವುಗಳಲ್ಲಿನ ಕಲ್ಲುಚಪ್ಪಡಿಗಳ ಅಳತೆಗಳು ಈ ಮುಂದಿನಂತಿವೆ. ಉತ್ತರ ಭಾಗಕ್ಕೆ ಬಿದ್ದಿರುವ ಕಲ್ಲುಚಪ್ಪಡಿಯು ಎರಡು ಭಾಗವಾಗಿದ್ದು ಅದರಲ್ಲಿ ಉತ್ತರದಲ್ಲಿರುವ ಕಲ್ಲುಚಪ್ಪಡಿಯು ೧೬೦ ಸೆಂ.ಮೀ. ಅಗಲ, ೨೯೦ ಸೆಂ.ಮೀ. ಉದ್ದ ಮತ್ತು ೧೦ ಸೆಂ.ಮೀ. ದಪ್ಪವುಳ್ಳದಾಗಿದೆ. ಇದೇ ಚಪ್ಪಡಿಯ ಇನ್ನೊಂದು ಭಾಗವು ದಕ್ಷಿಣದ ಕಡೆ ಬಿದ್ದಿದ್ದು ಇದು ೨೬೦ ಸೆಂ.ಮೀ. ಅಗಲ, ೨೯೦ ಸೆಂ.ಮೀ. ಉದ್ದ ಮತ್ತು ೧೦ ಸೆಂ.ಮೀ. ದಪ್ಪವುಳ್ಳದಾಗಿದೆ. ದಕ್ಷಿಣ ಭಾಗಕ್ಕೆ ಬಿದ್ದಿರುವ ಕಲ್ಲುಚಪ್ಪಡಿಯು ೨೬೦ ಸೆಂ.ಮೀ. ಉದ್ದ, ೨೫೦ ಸೆಂ.ಮೀ. ಅಗಲ ಮತ್ತು ೧೦ ಸೆಂ.ಮೀ. ದಪ್ಪವುಳ್ಳದಾಗಿದೆ. ಮಧ್ಯಭಾಗದಲ್ಲಿ ನೆಟ್ಟ ಎರಡು ಕಲ್ಲುಗಳಿದ್ದು ಇವುಗಳು ೧೦೦ ಸೆಂ.ಮೀ. ಉದ್ದ, ೧೨೦ ಸೆಂ.ಮೀ. ಎತ್ತರ ಮತ್ತು ೧೦ ಸೆಂ.ಮೀ. ದಪ್ಪವುಳ್ಳದಾಗಿವೆ. ಇದರ ಮುಂಭಾಗದಲ್ಲಿ ಬಿದ್ದಿರುವ ಕಲ್ಲುಚಪ್ಪಡಿಯು ೧೬೦ ಸೆಂ.ಮೀ. ಉದ್ದ, ೧೫೦ ಸೆಂ.ಮೀ. ಅಗಲ ಮತ್ತು ೧೦ ಸೆಂ.ಮೀ. ದಪ್ಪವುಳ್ಳದಾಗಿದೆ. ಇವುಗಳಲ್ಲದೇ ಸುತ್ತಲೂ ಮುರಿದಿರುವ ಕಲ್ಲುಚಪ್ಪಡಿಗಳು ಹರಡಿವೆ.

ಮಲ್ಲಪ್ಪನಬೆಟ್ಟದ ಉತ್ತರದ ಕೆಳಭಾಗದಲ್ಲಿನ ಇಳಿಜಾರು ಪ್ರದೇಶದಲ್ಲಿ ಪಾಲಯ್ಯ ತಂದೆ ಸಣ್ಣಲಿಂಗಯ್ಯನವರ ಹೊಲದ ಬಳಿಯಿರುವ ಸಮಾಧಿಯನ್ನು ಸ್ಥಳಿಯರು ಮಲ್ಲಪ್ಪನ ಪಾದ ಎಂದು ಕರೆಯುತ್ತಾರೆ. ಈ ಶಿಲಾಸಮಾಧಿಯ ರಚನೆಗೆ ಗ್ರಾನೈಟ್ ಶಿಲೆಯ ಚಪ್ಪಡಿಕಲ್ಲುನ್ನು ಬಳಸಿ ನಿರ್ಮಾಣಮಾಡಲಾಗಿದ್ದು ನಿಧಿಗಳ್ಳರ ಕೃತ್ಯಕ್ಕೆ ಒಳಗಾಗಿ ನಾಶವಾಗಿದೆ. ಪ್ರಸ್ತುತದಲ್ಲಿ ಒಂದು ಕಲ್ಲುಚಪ್ಪಡಿ ಮಾತ್ರ ಉಳಿದಿದ್ದು ಉತ್ತರಾಭಿಮುಖವಾಗಿದೆ. ಇದು ೧೮ ಸೆಂ.ಮೀ. ದಪ್ಪ, ೧೧೦ ಸೆಂ.ಮೀ. ಅಗಲ ಮತ್ತು ೧೬೫ ಸೆಂ.ಮೀ. ಎತ್ತರವುಳ್ಳದಾಗಿದ್ದು ಮಧ್ಯಭಾಗದಲ್ಲಿ ೪೦ ಸೆಂ.ಮೀ. ಅಗಲ ಮತ್ತು ೮೦ ಸೆಂ.ಮೀ. ಎತ್ತರವುಳ್ಳ ಕಿಂಡಿಯನ್ನು ಹೊಂದಿದೆ. ಈ ಕಿಂಡಿಯು ಆಯತಾಕಾರವಾಗಿದೆ. ಆದ್ದರಿಂದ ಇದು ಕಿಂಡಿಕೋಣೆ ಸಮಾಧಿಯಾಗಿರುವ ಸಾಧ್ಯತೆಯಿದೆ. ಈ ಕಲ್ಲಿನ ಮೇಲ್ಭಾಗದಲ್ಲಿ ೩೦ ಸೆಂ.ಮೀ. ಅಗಲ ಮತ್ತು ೩೦ ಸೆಂ.ಮೀ. ಎತ್ತರವುಳ್ಳ ಅರ್ಧಚಂದ್ರಾಕೃತಿಯ ಆಕಾರದಲ್ಲಿದೆ.

---

* ಪುರಾತತ್ವ ಸಹಾಯಕರು, ಕಮಲಾಪುರ, ಹಂಪಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ-೫೮೩೨೨೧. ಮೊ. ೯೯೪೫೪೧೫೫೧೮





ಹಾಲಸಾಗರ – ಆಗ್ನೇಯ ದಿಕ್ಕಿಗಿರುವ ಮಲ್ಲಪ್ಪನ ಬೆಟ್ಟದ ಮೇಲಿರುವ ಸಮಾಧಿಗಳ ಕಲ್ಲುಗಳು ಚೆಲ್ಲಾಪಿಲ್ಲಿಯಾಗಿರುವುದು.





ಹಾಲಸಾಗರ – ಆಗ್ನೇಯಕ್ಕೆ ಪಲ್ಲಯ್ಯ ತಂದೆ ಸಣ್ಣಲಿಂಗಯ್ಯನವರ ಹೊಲದ ಬದಿಯಲ್ಲಿರುವ ಹಾದಿಕೋಣೆ ಸಮಾಧಿಗಳು.





ಹಾಲಸಾಗರ – ಆಗ್ನೇಯಕ್ಕಿರುವ ಬೆಟ್ಟದ ಅಂಚಿನಲ್ಲಿರುವ ಸಮಾಧಿಗಳ ಕಲ್ಲುಗಳು ಚೆಲ್ಲಾಪಿಲ್ಲಿಯಾಗಿರುವುದು.



ಹಾಲಸಾಗರ – ಆಗ್ನೇಯಕ್ಕಿರುವ ಬಯಲು ಪ್ರದೇಶದಲ್ಲಿನ ಸಮಾಧಿಗಳನ್ನು ನಿಧಿಗಳ್ಳರು ಹಾಳು ಮಾಡಿರುವುದು.

ಈ ಸಮಾಧಿಯ ಪಶ್ಚಿಮಕ್ಕೆ ಸುಮಾರು ೫೦ ಮೀಟರ್ ದೂರದಲ್ಲಿ ಮತ್ತೊಂದು ಶಿಲಾಸಮಾಧಿಯಿದ್ದು ಇದನ್ನು ಸ್ಥಳೀಯರು ನುಂಕಪ್ಪನ ಪಾದ ಎಂದು ಕರೆಯುತ್ತಾರೆ. ಈ ಶಿಲಾ ಸಮಾಧಿಯ ರಚನೆಗೆ ಗ್ರಾನೈಟ್ ಶಿಲೆಯ ಚಪ್ಪಡಿಕಲ್ಲುನ್ನು ಬಳಸಿ ನಿರ್ಮಾಣ ಮಾಡಲಾಗಿದ್ದು ನಿಧಿಗಳ್ಳರ ಕೃತ್ಯಕ್ಕೆ ಒಳಗಾಗಿ ನಾಶವಾಗಿದೆ. ಪ್ರಸ್ತುತದಲ್ಲಿ ಒಂದು ಕಲ್ಲುಚಪ್ಪಡಿ ಮಾತ್ರ ಉಳಿದಿದ್ದು ಪಶ್ಚಿಮಾಭಿಮುಖವಾಗಿದೆ. ಇದು ೭ ಸೆಂ.ಮೀ. ದಪ್ಪ, ೧೨೫ ಸೆಂ.ಮೀ. ಅಗಲ ಮತ್ತು ೨೦೦ ಸೆಂ.ಮೀ. ಎತ್ತರವುಳ್ಳದಾಗಿದ್ದು ಮಧ್ಯಭಾಗದಲ್ಲಿ ೪೦ ಸೆಂ.ಮೀ. ಅಗಲ ಮತ್ತು ೭೦ ಸೆಂ.ಮೀ. ಎತ್ತರವುಳ್ಳ ಕಿಂಡಿಯನ್ನು ಹೊಂದಿದೆ. ಈ ಕಿಂಡಿಯು ಆಯತಕಾರವಾಗಿದೆ. ಆದ್ದರಿಂದ ಇದು ಕಿಂಡಿಕೋಣೆ ಸಮಾಧಿಯಾಗಿರುವ ಸಾಧ್ಯತೆಯಿದೆ.

ಬೃಹತ್ ಶಿಲಾಯುಗದ ಸಮಾಧಿಗಳು ಕಬ್ಬಿಣಯುಗಕ್ಕೆ ಸೇರಿದವಾಗಿದ್ದು, ಕರ್ನಾಟಕದಲ್ಲಿ ಇವುಗಳ ಕಾಲವನ್ನು ಕ್ರಿ.ಪೂ. ೧೨೦೦ ರಿಂದ ಕ್ರಿ.ಪೂ. ೨೫೦ ಎಂದು ಪುರಾತತ್ವತಜ್ಞರು ಗುರುತಿಸಿದ್ದಾರೆ. ಬೃಹತ್ ಶಿಲಾಯುಗದ ಗೋರಿಗಳು ಗುಡ್ಡಗಳ ಮೇಲೆ ಕಂಡುಬರುವುದು ಅಪರೂಪವಾಗಿದೆ. ಅಂತಹ ಅಪರೂಪದ ನೆಲೆಗಳಲ್ಲಿ ಮಲ್ಲಪ್ಪನಬೆಟ್ಟದ ನೆಲೆಯೂ ಒಂದಾಗಿದೆ. ಇಂತಹ ಸಮಾಧಿಗಳು ಕೂಡ್ಲಿಗಿ ತಾಲೂಕಿನ ಹಲವು ಕಡೆ ಕಂಡುಬಂದಿದ್ದು. ನಮ್ಮ ದುರಾದೃಷ್ಟಕ್ಕೆ ಇಲ್ಲಿಯ ಹಳ್ಳಿಯ ಜನರು ಈ ಜಾಗವನ್ನು ಆಕ್ರಮಿಸಿಕೊಂಡು ಸಮಾಧಿಗಳನ್ನು ಕೆಡವಿ ಬೇಸಾಯ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಜನರಿಗೆ ಇವುಗಳ ಮಹತ್ವವನ್ನು ತಿಳಿಸಿದರೂ ಏನು ಪ್ರಯೋಜನವಾಗುತ್ತಿಲ್ಲ. ಜೊತೆಗೆ ನಿಧಿ ಆಸೆಗಾಗಿ ಕೆಲವು ಗೋರಿಗಳು ನಿಧಿಗಳ್ಳರಿಂದ ನಾಶವಾಗಿರುವುದನ್ನು ಸಹ ನಾವು ಕಾಣಬಹುದು. ಹಾಗಾಗಿ ಇವುಗಳಿಗೆ ರಕ್ಷಣೆ ಒದಗಿಸಬೇಕಾಗಿದೆ.

[ಈ ಲೇಖನ ಸಿದ್ಧಪಡಿಸಲು ನನಗೆ ಸಲಹೆ ಸೂಚನೆಗಳನ್ನು ನೀಡಿದ ನನ್ನ ಮಾರ್ಗದರ್ಶಕರು ಹಾಗೂ ವಿದ್ಯಾಗುರುಗಳಾದ ಡಾ. ಸರ್ವಮಂಗಳ ಜಿ. ಅವರಿಗೆ ಹಾಗೆಯೇ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ನಮ್ಮ ಕಛೇರಿಯ ಹನುಮಂತಪ್ಪ ದುರ್ಗಪ್ಪ ಮತ್ತು ಪತ್ರಕರ್ತ ಭೀಮಸಮುದ್ರ ರಂಗನಾಥ, ಹಾಲಸಾಗರ ಊರಿನವರಾದ ಸುಫಾಲಿ ಶಿವಣ್ಣ, ಜಿ. ತಿಪ್ಪೇಸ್ವಾಮಿ ಮತ್ತು ಆಂಜನೇಯ ಅವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.]

ಆಕರ ಗ್ರಂಥಗಳು

೧. ಷೇಕ್ಅಲಿ ಬಿ. ಮತ್ತು ಸುಂದರ ಅ., ೧೯೯೭, ಕರ್ನಾಟಕ ಚರಿತ್ರೆ ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩. ವಿರೂಪಾಕ್ಷಿ, ಪೂಜಾರಹಳ್ಳಿ, ೨೦೦೬, ಚಿನ್ನಹಗರಿ ಸಿರಿ, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ.

೪. ಇತಿಹಾಸ ದರ್ಶನ ಸಂಪುಟಗಳು.

೫. Gururaja Rao B.K., 1972, The Megalithic Culture in South India, Prasaranga, Mysore University, Mysore.

೭

ಅಮ್ಮಾನಹಳ್ಳಿಯ ಬೃಹತ್ ಶಿಲಾಸಮಾಧಿಗಳ ಶೋಧ

ಡಿ.ಸಿ. ರಾಮಕೃಷ್ಣಯ್ಯ*

ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿ ನೆಲೆಗಳು ಕಂಡುಬಂದಿವೆ. ಇವೆಲ್ಲವೂ ಪ್ರಾದೇಶಿಕವಾಗಿ ದೊರೆಯುವ ವಿವಿಧ ಮಾದರಿಯ ಶಿಲೆಗಳನ್ನು ಬಳಸಿ ನಿರ್ಮಿಸಿರುವ ಶಿಲಾಸಮಾಧಿಗಳಾಗಿವೆ. ಇಂತಹ ಬೃಹತ್ ಶಿಲಾಸಮಾಧಿಗಳು ರಾಮನಗರ ಜಿಲ್ಲೆಯಲ್ಲಿ ಕೂಡಾ ಕಂಡುಬಂದಿದ್ದು, ಜಿಲ್ಲೆಯ ಪ್ರಾಗಿತಿಹಾಸ ತಿಳಿಯುವಲ್ಲಿ ಮಹತ್ವದ ಆಕರಗಳಾಗಿವೆ. ರಾಮನಗರ ಜಿಲ್ಲೆಯ ಕನಕಪುರ ತಾಲೂಕು ಭೌಗೋಳಿಕವಾಗಿ ಹೆಚ್ಚು ವಿಸ್ತೀರ್ಣ ಮತ್ತು ಅರಣ್ಯ ಪ್ರದೇಶವನ್ನು ಹೊಂದಿದೆ. ನೈಸರ್ಗಿಕವಾಗಿರುವ ಈ ತಾಲೂಕಿನ ಹರಿಹರ, ಸಂಬಾಪುರ, ತಿಗಳರಹೊಸಳ್ಳಿ, ಗುತ್ತಲಹುಣಸೆ, ಕುಪ್ಪೆದೊಡ್ಡಿ, ಮರಳೇಗವಿಮಠ ಮೊದಲಾದ ಪ್ರದೇಶಗಳಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಕಂಡುಬಂದಿವೆ. ಇದರ ಹಿನ್ನೆಲೆಯಲ್ಲೇ ಬಾಣಂತಿಮಾರಮ್ಮನ ಬೆಟ್ಟ ಪರಿಸರದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಬೃಹತ್ ಶಿಲಾಸಮಾಧಿಗಳನ್ನು ಹೊಸದಾಗಿ ಪತ್ತೆಹಚ್ಚಲಾಗಿದೆ.

ಕನಕಪುರ ತಾಲೂಕು ಕೇಂದ್ರದ ಪಶ್ಚಿಮದ ಬಾಣಂತಿಮಾರಮ್ಮನ ಬೆಟ್ಟಕ್ಕೆ ೩ ಕಿ.ಮೀ. ದೂರದಲ್ಲಿರುವ ಅಮ್ಮಾನಳ್ಳಿ ಬಯಲು ಎಂಬ ಸ್ಥಳದಲ್ಲಿ ಇತ್ತೀಚೆಗೆ ಮುವತ್ತು (೩೦) ಬೃಹತ್ ಶಿಲಾಸಮಾಧಿಗಳು ಕಂಡುಬಂದಿವೆ. ದಟ್ಟವಾದ ಅರಣ್ಯವಿರುವ ಈ ಬೆಟ್ಟಕ್ಕೆ ಬಾಣಂತಿ ಮಾರಮ್ಮನ ಬೆಟ್ಟವೆಂಬ ಹೆಸರು ಬರುವುದಕ್ಕೆ ಸ್ಥಳೀಯರಲ್ಲಿ ಚಾರಿತ್ರಿಕ ಐತಿಹ್ಯ ಪರಂಪರಾನುಗತವಾಗಿ ಬೆಳೆದು ಬಂದಿದೆ. ಇಲ್ಲಿ ಹಿಂದೆ ಅಮ್ಮಾನಳ್ಳಿ ಎಂಬ ಊರು ಇತ್ತು ಆದರೆ ಅರಣ್ಯ ಇಲಾಖೆಯವರು ಅವರನ್ನು ಒಕ್ಕಲೆಬ್ಬಿಸಿದ್ದರಿಂದ ಬೇರೆ ಬೇರೇ ಸ್ಥಳಗಳಿಗೆ ಹೋಗಿದ್ದಾರೆ ಎಂದು ಕೂತಗೊಂಡನಹಳ್ಳಿ ಮತ್ತು ಇರುಳಿಗರ ಕಾಲೋನಿ ಗ್ರಾಮದವರು ಹೇಳುತ್ತಾರೆ. ಸ್ಥಳೀಯರ ಮಾಹಿತಿ ಹಾಗೂ ಅಮ್ಮಾನಳ್ಳಿ ಬಯಲಿನಲ್ಲಿ ಜಮೀನಿನ ಬದ್ದುಗಳಿರುವುದು ಇಲ್ಲಿ ವಸತಿ ನೆಲೆಯಿತ್ತೆಂದು ತಿಳಿಯುತ್ತದೆ.

ಇಲ್ಲಿರುವ ಶಿಲಾಸಮಾಧಿಗಳನ್ನು ಸ್ಥಳಿಯರು ಪಾಂಡವರ ಮನೆಗಳು ಹಾಗೂ ಪಾಂಡವರ ಗುಡಿಗಳು ಎಂದು ಕರೆಯುತ್ತಾರೆ. ಇಲ್ಲಿ ಕಂಡುಬಂದಿರುವ ಸಮಾಧಿಗಳು ಚೌಕಾರವಾಗಿದ್ದು ಎಂಟು ಅಡಿ ಉದ್ದ, ಆರು ಅಡಿ ಅಗಲ ನಾಲ್ಕು ಅಡಿ ಎತ್ತರವಾಗಿವೆ. ಚೌಕ ಆಕಾರವಾಗಿರುವ ಶಿಲಾ ತೊಟ್ಟಿಯ ಮೇಲೆ ಮೂರು ಅಡಿಯಷ್ಟು ದಪ್ಪವಿರುವ ಕಲ್ಲುಚಪ್ಪಡಿಯನ್ನು ಮುಚ್ಚಲಾಗಿದೆ. ಸಮಾಧಿಗಳ ಪೂರ್ವಕಲ್ಲಿನಲ್ಲಿ ಒಂದು ಕಿಂಡಿಯನ್ನು ಬಿಡಲಾಗಿದೆ. ಇವುಗಳನ್ನು ಕಿಂಡಿಕೋಣೆ ಸಮಾಧಿ ಅಥವಾ ಹಾದಿಕೋಣೆ ಸಮಾಧಿಗಳೆಂದು ಕರೆಯುತ್ತಾರೆ. ಇಲ್ಲಿ ಕಂಡುಬಂದಿರುವ ಸಮಾಧಿಗಳು ಕನಕಪುರ ತಾಲೂಕಿನ ಇತರೆ ಸ್ಥಳಗಳಲ್ಲಿ ಇರುವ ಸಮಾಧಿಗಳಿಗಿಂತ ವಿಶೇಷವಾಗಿ ನಿರ್ಮಾಣವಾಗಿರುವುದು ಕಂಡುಬರುತ್ತದೆ. ಅಂತಹ ವಿಶೇಷತೆಯೆಂದರೆ ಶಿಲಾಸಮಾಧಿಯ ಪೂರ್ವದ ಕಲ್ಲಿನಲ್ಲಿರುವ ಕಿಂಡಿ 'ಯು' ಆಕಾರದಲ್ಲಿದೆ. ಸಮಾಧಿಯ ಒಳಭಾಗದ ಕಲ್ಲನ್ನು ನಯಗೊಳಿಸಲಾಗಿದೆ. ಈ ಸಮಾಧಿಗಳನ್ನು ಕ್ಲೋಸ್‌ಪೇಟ್ ಗ್ರಾನೈಟ್ ಎಂದು ಪ್ರಸಿದ್ಧವಾಗಿರುವ 'ಬೂದು ಕೆಂಪು' ಬಣ್ಣದ ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಿರುವುದು ವಿಶೇಷವಾದ ಸಂಗತಿಯಾಗಿದೆ. ಇಲ್ಲಿ ಕಂಡುಬಂದಿರುವ **'ಯು'** ಆಕಾರದ ಕಿಂಡಿ ಲಕ್ಷಣಗಳಿರುವ ಶಿಲಾಸಮಾಧಿಗಳು ಬಳ್ಳಾರಿ ಜಿಲ್ಲೆಯ ಹೂವಿನಡಗಲಿ ಸ್ಥಳದಲ್ಲಿ ಕೂಡ ಕಂಡುಬರುತ್ತವೆ. ಅಮ್ಮಾನಳ್ಳಿ ಬಯಲಿನಲ್ಲಿ ಕಂಡುಬಂದಿರುವ ಸಮಾಧಿಗಳನ್ನು ಗಮನಿಸಿದರೆ ಬೃಹತ್ ಶಿಲಾಯುಗದ ಕೊನೆಯ ಕಾಲಘಟ್ಟದಲ್ಲಿ ನಿರ್ಮಾಣವಾಗಿರಬಹುದು ಎನಿಸುತ್ತದೆ.

ಅಮ್ಮಾನಳ್ಳಿಯಲ್ಲಿ ಕಂಡು ಬಂದಿರುವ ಬೃಹತ್ ಶಿಲಾಸಮಾಧಿಗಳಲ್ಲಿ ಹದಿನೈದು ಶಿಲಾ ಸಮಾಧಿಗಳು ಇಂದಿಗೂ ಕೂಡ ಸುಸ್ಥಿಯಲ್ಲಿವೆ. ಅವುಗಳಲ್ಲಿ ನಾಲ್ಕು ಸಮಾಧಿಗಳು ಮಾತ್ರ ಭೂಮಿಯ ಮೇಲ್ಭಾಗಕ್ಕೆ ಪೂರ್ಣ ಪ್ರಮಾಣದಲ್ಲಿ ಕಾಣುತ್ತವೆ. ಉಳಿದ ಹನ್ನೊಂದು ಶಿಲಾ ಸಮಾಧಿಗಳು ಮಣ್ಣಿನಲ್ಲಿ ಹೂತಿದ್ದು, ಅವುಗಳ ಮೇಲೆ ಮುಚ್ಚಿರುವ ಕಲ್ಲು

* **ದೊಡ್ಡಬೆಟ್ಟಳ್ಳಿ ಗ್ರಾಮ, ನಾರಾಯಣಪುರ ಅಂಚೆ, ಕಸಬಾ, ಕನಕಪುರ ತಾಲ್ಲೂಕು, ರಾಮನಗರ–೫೬೨೧೧೭. ಮೊ. ೯೫೩೮೦೨೪೪೪೩**







ಚಪ್ಪಡಿಗಳು ಮಾತ್ರ ಕಾಣುತ್ತವೆ. ಇನ್ನು ಉಳಿದ ಹದಿನೈದು ಶಿಲಾ ಸಮಾದಿಗಳು ನಿಧಿ ಶೋಧಕರ ದಾಳಿಗಳಿಂದ ಸಂಪೂರ್ಣವಾಗಿ ನಾಶವಾಗಿವೆ. ಈ ಸಮಾಧಿಗಳ ಬಳಿ ಕಪ್ಪು ಮತ್ತು ಕೆಂಪು ಮಿಶ್ರಿತ ಬಣ್ಣದ ಮಡಿಕೆ ಚೂರುಗಳು ದೊರೆತಿವೆ. ಅವುಗಳು ಜೇಡಿಮಣ್ಣು ಬಳಸಿ ಚಕ್ರದ ಮೇಲೆ ತಿರುಗಿಸಿ ನಯವಾಗಿ ತಯಾರಿಸಿದ ಮಡಿಕೆಯ ಚೂರುಗಳಾವೆ. ಈ ಲಕ್ಷಣಗಳ ಬೃಹತ್ ಶಿಲಾಯುಗ ಸಂಸ್ಕೃತಿಯಲ್ಲಿ ಬಳಸಿರುವುದು ಅಧ್ಯಯನಗಳಿಂದ ತಿಳಿದುಬಂದಿದೆ. ಇಲ್ಲಿನ ಇರುಳಿಗ ಸಮುದಾಯದವರು ಪೂಜಿಸುತ್ತಾರೆ ಹಾಗೂ ಅವರಲ್ಲಿ ಇತ್ತೀಚಿನವರೆಗೂ ಕಲ್ಲುಮಲ್ಲಯ್ಯನ ಸೇವೆ ಆಚರಣೆ ರೂಢಿಯಲ್ಲಿತ್ತು. ಇವುಗಳನ್ನು ಗಮನಿಸಿದರೆ ಶಿಲಾಯಗ ಸಂಸ್ಕೃತಿಗೂ ಇರುಳಿಗ ಬುಡಕಟ್ಟು ಸಂಸ್ಕೃತಿಗೂ ಸಾಮ್ಯತೆಗಳಿವೆ. ಆದರೆ ಅದೇ ಸ್ಪಷ್ಟ ನಿಲುವಲ್ಲ ಅವುಗಳ ಕುರಿತು ಹೆಚ್ಚು ಸಂಶೋಧನೆ ಮಾಡಬೇಕಾಗಿದೆ.

ಅಮ್ಮಾಗನಳ್ಳಿ ಬಯಲಿನ ಶಿಲಾಸಮಾಧಿಗಳು ಕಂಡುಬಂದಿರುವ ಪರಿಸರವನ್ನು ಗಮನಿಸಿದರೆ ಅರಣ್ಯ ಪ್ರದೇಶವಾಗಿದ್ದು, ಗುಹೆಗಳು, ಕಲ್ಲಾಸರೆಗಳು ಹೆಚ್ಚು ಕಂಡುಬರುವುದರಿಂದ ಅವುಗಳಲ್ಲಿ ಶಿಲಾಯಗಕ್ಕೆ ಸೇರಿದ ಬಂಡೆ ಚಿತ್ರಗಳು ಆಯುಧಗಳು ಕಂಡುಬರುವ ಸಾಧ್ಯತೆಗಳಿವೆ. ಈ ಬೆಟ್ಟಕ್ಕೆ ಹೊಂದಿಕೊಂಡಂತೆ ಮುರುಕಣೆ ಬೆಟ್ಟ, ಉದಾರಹಳ್ಳಿ ಬೆಟ್ಟ, ಬಸವನ ದೊಡ್ಡಿ ಬೆಟ್ಟ, ಕೆರೆಮೇಗಳದೊಡ್ಡಿ ಬೆಟ್ಟಸಾಲುಗಳಿದ್ದು ಉದಾರಹಳ್ಳಿ ಮೊದಲಾದ ಸ್ಥಳಗಳಲ್ಲಿ ಶಿಲಾಸಮಾಧಿ ನೆಲೆಗಳು ಕಂಡುಬಂದಿವೆ. ಇಲ್ಲಿನ ಪರಿಸರ ನೈಸರ್ಗಿಕವಾಗಿ ಸಂಪತ್ಭರಿತವಾಗಿರುವದರಿಂದ ಮಾನವ ಜೀವನ ನಡೆಸಲು ಅನುಕೂಲಕರವಾದ ಸ್ಥಳವಾಗಿತ್ತೆಂದು ತಿಳಿಯುತ್ತದೆ. ಇವುಗಳ ಹಿನ್ನಲೆಯಲ್ಲಿ ಬಾಣಂತಿಮಾರಮ್ಮನ ಬೆಟ್ಟದಲ್ಲಿ ಕ್ಷೇತ್ರಕಾರ್ಯ ಕೈಗೊಂಡರೆ ಪ್ರಾಗೀತಿಹಾಸ ಕಾಲದ ಕುರುಹುಗಳನ್ನು ಸಂಶೋಧಿಸಲು ಸಾಧ್ಯತೆಯಿದೆ.

[ಕೂತಗೊಂಡನಹಳ್ಳಿಯ ಸ್ನೇಹಿತರಾದ ಕೃಷ್ಣಮೂರ್ತಿ ಕೆ.ವಿ. ಹಾಗೂ ಇರುಳಿಗರ ಕಾಲೋನಿಯ ಶಿವಲಿಂಗಯ್ಯ, ವೆಂಕಟಸ್ವಾಮಿ ಧರ್ಮಯ್ಯ, ಶಿವಾನಂದ ಇವರ ಸಹಾಯದಿಂದ ಅಮ್ಮಾಗನಳ್ಳಿ ಸ್ಥಳದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಈ ಬೃಹತ್ ಶಿಲಾ ಸಮಾಧಿಗಳನ್ನು ಪತ್ತೆ ಹಚ್ಚಲು ಸಾಧ್ಯವಾಯಿತು. ಕ್ಷೇತ್ರಕಾರ್ಯದಲ್ಲಿ ಜೊತೆಗೆ ಬಂದು ಸಹಕರಿಸಿದ ಹಿರಿಯರು ಮತ್ತು ಸ್ನೇಹಿತರಿಗೆ ನನ್ನ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. M.K. Gururaja Rao, Megalithic Culture of South India, University of Mysore, 1972.

೨. ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ. (ಸಂ), ಇತಿಹಾಸ ದರ್ಶನ, ಸಂಪುಟ–೧೨, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ೧೯೯೭.

೩. ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ. (ಸಂ), ಇತಿಹಾಸ ದರ್ಶನ, ಸಂಪುಟ–೧೩, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು ೧೯೯೮.

೪. ಶಿವತಾರಕ್ ಕೆ.ಜಿ., ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು.ಸಂ. ೧೮.

೫. ಷೇಕ್ ಅಲಿ (ಪ್ರಸಂ), ಸುಂದರ ಅ (ಸ.ಸಂ), ಕರ್ನಾಟಕ ಚರಿತ್ರೆ, (ಸಂ. ೧), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧ ಪು.ಸಂ. ೧೦೩.

೬ ಸೂರ್ಯನಾಥ ಕಾಮತ್, ಕೃಷ್ಣಮೂರ್ತಿ ಪಿ.ವಿ (ಸಂ), ಇತಿಹಾಸ ದರ್ಶನ, ಸಂಪುಟ–೧೧, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ೧೯೯೬.

೮

ಒಬೇನಹಳ್ಳಿ ಮತ್ತು ಕ್ಯಾತಗೊಂಡನಹಳ್ಳಿಯ ಬೃಹತ್ ಶಿಲಾಯುಗ ನೆಲೆಗಳ ಶೋಧ


ಜಿ.ಎನ್. ರವೀಶ*

ನೈಸರ್ಗಿಕ ಸಂಪತ್ಭರಿತವಾಗಿರುವ ತುಮಕೂರು ಜಿಲ್ಲೆಯಲ್ಲಿ ಆದಿ, ಮಧ್ಯ ಹಾಗೂ ಅಂತ್ಯ ಹಳೇ ಶಿಲಾಯುಗದ, ಸೂಕ್ಷ್ಮ ಶಿಲಾಯುಗದ ನೂತನ ಶಿಲಾಯುಗದ ಶಿಲಾ ತಾಮ್ರಯುಗದ ಮತ್ತು ಬೃಹತ್ ಶಿಲಾಯುಗದ ಅನೇಕ ಪ್ರಾಗೈತಿಹಾಸಿಕ ನೆಲೆಗಳಿವೆ. ಇವುಗಳಲ್ಲಿ ಬೃಹತ್ ಶಿಲಾಯುಗದ ನೆಲೆಗಳು ೩೮ ಇದ್ದು, ಅವುಗಳಲ್ಲಿ ೧೭ ವಸತಿ ನೆಲೆಗಳಾದರೆ, ಪಾಂಡವರಕಲ್ಲು, ಮೋರಿಯರ ಮನೆ ಎಂದು ಕರೆಯಲ್ಪಡುವ ಕಲ್ಲುವೃತ್ತ, ಕಲ್ಮನೆ, ನಿಲಸುಗಲ್ಲು, ಸ್ವಸ್ತಿಕ್, ಚಪ್ಪಟೆಯಾಕಾರದ ಹಾಸುಗಲ್ಲು[೧] ಮೊದಲಾದಂತಹ ಶಿಲಾಗೋರಿಗಳಿರುವ ೨೧ ನೆಲೆಗಳು ಕಂಡುಬರುತ್ತವೆ. ಕೆಲವೆಡೆ ವಸತಿ ನೆಲೆಗಳಲ್ಲೂ ಶಿಲಾಗೋರಿಗಳು ಕಂಡುಬರುತ್ತವೆ. ಕಪ್ಪು, ಹೊಳಪುಳ್ಳ ಕಪ್ಪು ಮತ್ತು ಕೆಂಪುಮೃತ್‌ಪಾತ್ರೆಯ ಅವಶೇಷಗಳು ಕಂಡುಬರುತ್ತವೆ.

ಕ್ಯಾತಗೊಂಡನಹಳ್ಳಿಯ ಗ್ರಾಮದ ಮಧ್ಯೆ ಇರುವ ಹೆಬ್ಬಂಡೆಯಲ್ಲಿ ೪ ಮೀ. x ೪ ಮೀ. ವ್ಯಾಸದ ವೃತ್ತಾಕಾರದ ಕಲ್ಲು ಚಪ್ಪಟೆ ಮಾದರಿಯ ಶಿಲಾಗೋರಿ ಹಾಗೂ ಪಾವಗಡ ತಾಲೂಕಿನ ಒಬೇನಹಳ್ಳಿ ಗ್ರಾಮದ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಸುಮಾರು ೩೦ ಕಲ್ಲುವೃತ್ತ, ಕಲ್ಮನೆ, ನಿಲಸುಗಲ್ಲು, ಸ್ವಸ್ತಿಕ್, ಚಪ್ಪಟೆಯಾಕಾರದ ಹಾಸುಗಲ್ಲು, ಸ್ವಸ್ತಿಕ್ ಸಮಾಧಿ ಸುತ್ತಲೂ ಇರುವ ನಿಲುವುಗಲ್ಲು ಮಾದರಿ, ವೃತ್ತ ನಿಲುವುಗಲ್ಲು ಮಾದರಿಯ ಸಮಾಧಿಗಳು ಜಿಲ್ಲೆಯಲ್ಲೇ ಶ್ರೀಮಂತ ಸಂಸ್ಕೃತಿ ಇತ್ತು ಎಂಬುದನ್ನು ಸೂಚಿಸುವ ೧ ಮೀ. x ೧ ಮೀ., ೪ ಮೀ. x ೪ ಮೀ., ೩ ಮೀ. x ೩ಮೀ., ೫ ಮೀ. x ೫ ಮೀ., ೩.೭೧ ಮೀ. x ೩.೭೧ ಮೀ,. ೭ ಮೀ. x ೭ ಮೀ., ೮ ಮೀ. x ೮ ಮೀ., ೧೦ ಮೀ. x ೧೦ ಮೀ. ವ್ಯಾಸವಿರುವ ಸಮಾಧಿಗಳು ಕಂಡುಬರುತ್ತವೆ. ಸ್ವಸ್ತಿಕ್ ಸಮಾಧಿ ಸುತ್ತಲೂ ಇರುವ ನಿಲುವುಗಲ್ಲು ಮಾದರಿಯ ಶಿಲಾಗೋರಿಗಳು ಗುಡ್ಡದ ಮೇಲೆ ಇರುವುದರಿಂದ ಬಹುಶಃ ಇವು ಯಾವುದೂ ಮುಖ್ಯ ವ್ಯಕ್ತಿಗಳ ಸಮಾಧಿಗಳಿರಬಹುದು. ಏಕೆಂದರೆ ಈ ಮಾದರಿಯ ಸಮಾಧಿ ಬಿಟ್ಟು ಬೇರೆ ಯಾವ ಮಾದರಿಯ ಸಮಾಧಿಗಳು ಇಲ್ಲಿ ಕಂಡುಬರುವುದಿಲ್ಲ. ಉಳಿದ ಮಾದರಿಯ ಸಮಾಧಿಗಳು ಗುಡ್ಡದ ಕೆಳಭಾಗದಲ್ಲಿ ಕಂಡುಬರುತ್ತವೆ. ಸ್ವಸ್ತಿಕ್ ಮತ್ತು ಕಂಡಿಕೋಣಿ ಸಮಾಧಿ ಸುತ್ತಲೂ ಇರುವ ನಿಲುವುಗಲ್ಲು ಮಾದರಿಯ ಶಿಲಾಗೋರಿಗಳ ವಿಶೇಷತೆ ಎಂದರೆ ಈ ಮಾದರಿಯ ಶಿಲಾಗೋರಿಗಳು ಆಂಧ್ರ ಪ್ರದೇಶದ ಕಡಪ ಜಿಲ್ಲೆಯ ದೇವಂದಲಪಲ್ಲಿ[೨] ಮತ್ತು ಟಿ. ಸುಂದುಪಲ್ಲಿ (ರಾಯಚೋಟಿ)[೩] ಹಾಗೂ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಮಲ್ಲಚಂದಿರಮ್[೪] ಹಾಗೂ ಮೊರಲೆಪರ[೫] ಎಂಬಲ್ಲಿಯೂ ಸಹ ಕಂಡುಬರುತ್ತವೆ. ಕಡಪ, ಕೃಷ್ಣಗಿರಿ ಮತ್ತು ಪಾವಗಡ ಈ ಮೂರು ಬೃಹತ್‌ಶಿಲಾಯುಗ ನೆಲೆಗಳ ಜನರ ಮಧ್ಯೆ ಏನಾದರೂ ಸಂಬಂಧ ಇದ್ದಿರಲೆಬೇಕು. ಏಕೆಂದರೆ ಈ ಮೂರು ಪ್ರದೇಶಗಳಲ್ಲಿ ಯಾವ ಬದಲಾವಣೆಯು ಇಲ್ಲದ ಒಂದೆ ಮಾದರಿಯ ಸಮಾಧಿಗಳು ಸುಮಾರು ೩೦೦ರಿಂದ ೬೦೦ ಕಿ.ಮೀ. ಅಂತರದಲ್ಲಿ ಕಂಡುಬರುತ್ತವೆ ಒಂದೇ ಗುಂಪಿನ ಸಮುದಾಯ ಇಲ್ಲಿ ವಾಸಿಸುತ್ತಿದ್ದರು ಎಂಬುದನ್ನು ಖಚಿತಪಡಿಸುತ್ತದೆ. ವಲಸೆ ಎಂಬುದು ಯಾವ ಭಾಗದಿಂದ ಇಲ್ಲಿಗೆ ಆರಂಭವಾಯಿತು ಎಂಬುದು ಮತ್ತಷ್ಟು ಅಧ್ಯಯನ ಕೈಗೊಂಡಾಗ ಮಾತ್ರ ಈ ಭಾಗದ ಕೌತುಕದ ಸಂಗತಿಗಳ ಮೇಲೆ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಯಾವ ಬೃಹತ್‌ಶಿಲಾಯುಗ ನೆಲೆಯಲ್ಲೂ ಈ ಮಾದರಿಯ ಶಿಲಾಗೋರಿಗಳು ಕಂಡುಬರುವುದಿಲ್ಲ. ಆ ಕಾರಣದಿಂದ ಇವು ವಿಶೇಷವೆನಿಸಿಕೊಳ್ಳುತ್ತವೆ. ಒಬೇನಹಳ್ಳಿಯಲ್ಲಿ ಕಂಢುಬರುವ ಉಳಿದ ಮಾದರಿಯ ಸಮಾದಿಗಳು ಒಂದೇ ಸಂಸ್ಕೃತಿಯಲ್ಲಿ ಬೇರೆ ಬೇರೆ ನಂಬಿಕೆ, ರೂಢಿ, ಸಂಪ್ರದಾಯಗಳನ್ನು ಆಚರಿಸುವ ಸಮುದಾಯಗಳು ಇದ್ದವು ಎಂಬುದನ್ನು ಸೂಚಿಸುತ್ತವೆ. ವಿಶೇಷವಾಗಿ ಈ ಸಂಸ್ಕೃತಿಯ ಕುರುಹುಗಳು ಮೌರ್ಯ, ಶಾತವಾಹನಯುಗ ಆರಂಭವಾದರೂ ಇಲ್ಲಿ ಇನ್ನೂ ಈ ಸಂಸ್ಕೃತಿ ಜೀವಂತಿಕೆಯಿಂದ ಇತ್ತು ಎಂಬುದಕ್ಕೆ ಪ್ರಾಚ್ಯಾವಶೇಷ ಮತ್ತು ಐತಿಹ್ಯಗಳಿಂದ ಸ್ಪಷ್ಟವಾಗುತ್ತದೆ. ಈ ಪರಿಸರದಲ್ಲಿ ಹೇರಳ ಶಿಲಾಸಮುಚ್ಚಯ ಮತ್ತು ಅರಣ್ಯಸಂಪತ್ತು, ಬೇಟೆಗಾಗಿ ಪ್ರಾಣಿಸಂಕುಲ ಇದಿದ್ದರಿಂದ ಹೊರ ಜಗತ್ತಿನೊಂದಿಗೆ

* ಗುಂಡಾರ್ಲಹಳ್ಳಿ, ಬ್ಯಾಡನೂರು (ಅಂಚೆ), ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ-೫೬೧೨೦೨. ಮೊ. ೯೭೪೧೯೪೧೭೧೪





ಕಂಡಿಕೋಣೆ ಮತ್ತು ಆದಿಕೋಣೆ ಸಮಾಧಿಗಳು – ಒಬೇನಹಳ್ಳಿ






ಸ್ವಸ್ತಿಕ್ ಸಮಾಧಿ ಸುತ್ತಲೂ ನಿಲುವುಗಲ್ಲು ಮಾದರಿಗಳು



ಕಂಡಿಕೋಣೆ ಸಮಾಧಿ ಸುತ್ತಲೂ ನಿಲುವುಗಲ್ಲು ಮಾದರಿ



ವೃತ್ತಾಕಾರದ ಕಲ್ಲುಚಪ್ಪಟೆ ಮಾದರಿ



ಸ್ವಸ್ತಿಕ್ ಮಾದರಿ



ವೃತ್ತಾಕಾರದ ಕಲ್ಲು ಮಾದರಿ

ಹೊಂದಿಕೊಳ್ಳುವ ಇಲ್ಲವೆ ಪರಿವರ್ತನೆ ಹೊಂದುತ್ತಿದ್ದ ಸಮಾಜಕ್ಕೆ ಅನುಗುಣವಾದ ಜೀವನ ಶೈಲಿಯನ್ನು ರೂಡಿಸಿಕೊಳ್ಳುವ ಪ್ರಮೇಯವನ್ನು ಇವರಿಗೆ ಉಂಟುಮಾಡಿಲ್ಲ. ಹಾಗಾಗಿ ಕರ್ನಾಟಕದ ಇತರೆಡೆಗಳಲ್ಲಿ ಬೃಹತ್ ಶಿಲಾಯುಗ ಅಂತ್ಯವಾದರೂ ಈ ಪರಿಸರದ ಬಹುತೇಕ ನೆಲೆಗಳಲ್ಲಿ ಇನ್ನೂ ಜೀವಂತಿಕೆಯಿಂದ ಇರುವಂತಹದ್ದು ಸ್ಪಷ್ಟವಾಗುತ್ತದೆ. ನಿಲುವುಗಲ್ಲು ಮಾದರಿಯ ಶಿಲಾಗೋರಿ ಮಾದರಿಯ ಮತ್ತೊಂದು ವಿಶೇಷವೆಂದರೆ ಸ್ವಸ್ತಿಕ್ ಮತ್ತು ಕಂಡಿಕೋಣೆ ಮಾದರಿಯ ಸಮಾದಿಗಳು ಕಾಡುಮೃಗ ಅಥವಾ ಶತೃಗಳಿಂದ ಹಾಳಾಗದಿರಲೆಂದು ಅವುಗಳ ಸುತ್ತಲೂ ನಿಲುವುಗಲ್ಲುಗಳನ್ನು ನೆಟ್ಟಿದ್ದಾರೆ. ಇದನ್ನು ಗಮನಿಸಿದರೆ ಬಹುಶಃ ಇವರಿಗೆ ಆಕಾಲಘಟ್ಟಕ್ಕಾಗಲೇ ತಮ್ಮ ನಂಬಿಕೆ, ಆಚರಣೆ, ಪೂರ್ವಜರ ಅಸ್ಥಿಗಳನ್ನು ರಕ್ಷಿಸಬೇಕೆಂಬ ಕಲ್ಪನೆ ಬಂದಿರುವುದು ಆಶ್ಚರ್ಯಕರ ಸಂಗತಿಯೇ ಸರಿ. ಜೋತೆಗೆ ಸಮಾಧಿಗಳಲ್ಲಿ ತಮ್ಮ ಪೂರ್ವಜರ ಇಷ್ಟದ ಬೆಲೆಬಾಳುವ ವಸ್ತುಗಳನ್ನು ಇಡುತ್ತಿದ್ದರಿಂದ ಅವುಗಳನ್ನು ಪಡೆಯುವ ಕಳ್ಳಕಾಕರ ಗುಂಪು ಇತ್ತೆಂದು ಸಹ ಇದರಿಂದ ವೇದ್ಯವಾಗುತ್ತದೆ. ಹಾಗಾಗಿ ಅಂದಿನ ಮನುಷ್ಯನ ಜೀವನ ಶೈಲಿ ಹೇಗಿತ್ತು ಎಂಬುದು ಇಂತಹ ಸೂಕ್ಷ್ಮ ಸಂಗತಿಗಳನ್ನು ಗ್ರಹಿಸಿಕೊಂಡಾಗ ಮಾತ್ರ ಅರ್ಥವಾಗುತ್ತದೆ.

ಕಾಲಮಾನ

ಈ ಮಾದರಿಯ ದೆವಂದಲಪಲ್ಲಿ ಮತ್ತು ರಾಯಚೋಟಿಯ ಶಿಲಾಗೋರಿಗಳನ್ನು ರಾಯಲಸೀಮೆ ಪರಿಸರದಲ್ಲಿ ಕೈಗೊಂಡ C14 ಆಧಾರದ ಮೇಲೆ ಕ್ರಿ.ಪೂ. ೫೦೦ ಎಂದೂ, ಮಲ್ಲಚಂದಿರಮ್‌ನಲ್ಲಿ ಕ್ರಿ.ಪೂ. ೧೦೦೦ರಿಂದ ಕ್ರಿ.ಪೂ. ೩೦೦ ಎಂದೂ, ಮೊರಲೆಪರ, ಮನಕುಲಮ್ (ಮದುರೈ ಸಮೀಪ) ಎಂಬಲ್ಲಿ ಕ್ರಿ.ಪೂ. ೩೦೦ರಿಂದ ಕ್ರಿ.ಶ. ೩೦೦ ಎಂದೂ ಗಂಡಿರಾಜನ್, ಸಾಂಭಶಿವಾರೆಡ್ಡಿ, ರಘುಬಾಬು ಕಾಲಮಾನವನ್ನು ನಿಗದಿಪಡಿಸಿದ್ದಾರೆ. ಅದೇ ರೀತಿ ತುಮಕೂರು ಜಿಲ್ಲೆಯಲ್ಲೂ ಈಗಾಗಲೇ ಹಲವು ವಿದ್ವಾಂಸರು ಬೃಹತ್‌ಶಿಲಾಯುಗ ನೆಲೆಗಳಲ್ಲಿ ದೊರತೆ ಪ್ರಾಚ್ಯ ಅವಶೇಷಗಳ ಆಧಾರದ ಮೇಲೆ ಈ ಸಂಸ್ಕೃತಿಯ ಕಾಲಮಾನವನ್ನು ಕ್ರಿ.ಪೂ. ೧೨೦೦ರಿಂದ ಕ್ರಿ.ಶ. ೨೫೧ ಎಂದು ಗುರುತಿಸಿದ್ದಾರೆ. ಹಾಗಾಗಿ ಒಬೇನಹಳ್ಳಿಯ ಬೃಹತ್‌ಶಿಲಾಯುಗ ನೆಲೆಯ ಮಡಿಕೆ ಅವಶೇಷಗಳಿಗೂ ಜಿಲ್ಲೆಯ ಇತರೆ ನೆಲೆಯ ಮಡಕೆ ಅವಶೇಷಗಳಿಗೂ ಯಾವ ವ್ಯತ್ಯಾಸ ಇಲ್ಲದ ಕಾರಣ ಈ ಕಾಲಘಟ್ಟವನ್ನೇ ಅದಕ್ಕೂ ಅನ್ವಯಿಸಬಹುದು.

ಅಡಿಟಿಪ್ಪಣಿಗಳು

೧. ನಂಜುಂಡಸ್ವಾಮಿ ಬಿ. ೨೦೦೨, ಕಲ್ಪಸಿರಿ, ಪುಟ ೫೪.

೨. The Hindu ,june-24-2012, Megalithic Burial Site Found in Kadapaa (Devandlapalli).

೩. Wikimapia.org- Megalithic Burial site -3/Rayachoti- Megalithic Zone.

೪. The Hindu, Urban Invasion, Mallachandiram.

೫. www.Megalithic.co.uk/article- Moralepara Dolmens -burial chember in India.

೬

ವಾನಭದ್ರೇಶ್ವರ ಬೆಟ್ಟ ಪರಿಸರದ ಪ್ರಾಚ್ಯಾವಶೇಷಗಳು: ಸಾಂಸ್ಕೃತಿಕ ಮಹತ್ವ

ಶರಣಬಸಪ್ಪ ಕೋಲ್ಕಾರ್*

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಮಲ್ಲಾಪುರ ಗ್ರಾಮ ವ್ಯಾಪ್ತಿಯಲ್ಲಿ ಬರುವ ಈ ಬೆಟ್ಟವು ಗಂಗಾವತಿ ನಗರದಿಂದ ಪಶ್ಚಿಮಕ್ಕೆ ಸುಮಾರು ಆರು ಕಿ.ಮೀ. ದೂರದಲ್ಲಿದೆ. ವಾನಭದ್ರೇಶ್ವರ ಬೆಟ್ಟವು ಜಿಲ್ಲೆಯ ಪ್ರಸಿದ್ಧ 'ಏಳುಗುಡ್ಡ' ಬೆಟ್ಟ ಸಾಲುಗಳ ಪೂರ್ವ ಸೆರಗಿನಲ್ಲಿದೆ. ಸುತ್ತೆಲ್ಲ ಹಲವಾರು ಗಿರಿ ಶ್ರೇಣಿಗಳಿವೆ. ಈ ಬೆಟ್ಟವು ಸುಮಾರು ೬೦೦ ಮೀ ಎತ್ತರವಾಗಿದೆ. ಬೆಟ್ಟದ ಮೇಲೆ ವಾನಭದ್ರೇಶ್ವರ ಶಿವ ದೇವಾಲಯವಿದೆ. ಹಾಗಾಗಿ ಬೆಟ್ಟವನ್ನು ಅದೇ ಹೆಸರಿನಿಂದ ಗುರುತಿಸಲಾಗಿದೆ.

ವಾನಭದ್ರೇಶ್ವರ ಬೆಟ್ಟ ಪರಿಸರವು ಭೌಗೋಳಿಕವಾಗಿ, ಪ್ರಾಕ್ಚಾರಿತ್ರಿಕವಾಗಿ, ಪೌರಾಣಿಕವಾಗಿ,[೧] ಚಾರಿತ್ರಿಕವಾಗಿ ಮಾನವನ ವಾಸ್ತವ್ಯದ ತಾಣವಾಗಿದ್ದಿತು. ಬೆಟ್ಟ ಪರಿಸರದಲ್ಲಿ ನಡೆಸಿದ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಪ್ರಾಚ್ಯಾವಶೇಷಗಳು ಹಾಗೂ ಅವುಗಳಿಂದ ಬಿಂಬಿತವಾಗುವ ಈ ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ಗುರುತಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಪ್ರಾಚೀನ ನೆಲೆ

ವಾನಭದ್ರೇಶ್ವರ ದೇವಾಲಯದ ಎದುರಿನಲ್ಲಿ ವಿಶಾಲವಾದ ಬಯಲಿದೆ. ಉತ್ತರ ದಕ್ಷಿಣವಾಗಿ ವಿಸ್ತರಿಸಿರುವ ಈ ಬಯಲು ಉತ್ತರ ತುದಿಯಲ್ಲಿ ಹಲವಾರು ಕಲ್ಲುಬಂಡೆಗಳಿವೆ. ಈ ಬಂಡೆಗಳ ಸುತ್ತ-ಮುತ್ತಲೂ ಬೂದಿ ಮಿಶ್ರಿತ ಹಾಳು ಮಣ್ಣಿದೆ. ಇಲ್ಲಿ ಆಯುಧಗಳು, ಉಪಕರಣಗಳು, ಮಡಕೆಚೂರುಗಳು ಕಂಡುಬರುತ್ತವೆ. ಹಾಗಾಗಿ ಇದೊಂದು ಪ್ರಾಚೀನ ವಾಸ್ತವ್ಯದ ನೆಲೆಯಾಗಿರುವುದನ್ನು ಗುರುತಿಸಬಹುದು. ನೈಸರ್ಗಿಕ ಕಲ್ಲುಗುಂಡುಗಳು, ನೈಸರ್ಗಿಕ ನೀರಿನ ದೊಣೆಗಳು, ವಿಶಾಲವಾದ ಬಯಲು ಇಲ್ಲಿರುವುದರಿಂದ ಸಹಜವಾಗಿ ಪ್ರಾಚೀನ ಮಾನವರು ವಸತಿಗಾಗಿ ಇದನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಬಂಡೆಗಳಲ್ಲಿ ಅಡಗಿಕೊಂಡು ಬೇಟೆ ಮಾಡಲು ಪೂರಕವಾಗಿರುವ ಪರಿಸರ, ಕೃಷಿ ಹಾಗೂ ಪಶುಸಂಗೋಪನೆಗೆ ಪೂರಕವಾಗಿರುವ ವಿಶಾಲವಾದ ಬಯಲು ಮತ್ತು ನೀರಿನ ದೊಣೆಗಳು ಸಹಕಾರಿಯಾಗಿದ್ದವು. ಈ ನೆಲೆಯಲ್ಲಿ ಕಂಡು ಬರುವ ಪ್ರಾಚ್ಯಾವಶೇಷಗಳನ್ನು ಕೆಳಕಂಡಂತೆ ಗಮನಿಸಬಹುದು.

ಸೂಕ್ಷ್ಮ ಶಿಲೋಪಕರಣಗಳು

ನೆಲೆಯಲ್ಲಿ ಶಿಲೆಯಿಂದ ಮಾಡಿದ ತುಂಡಾದ ಬ್ಲೇಡ್‌ಗಳು ಹಾಗೂ ಬ್ಲೇಡ್ ತಯಾರಿಕೆಯ ಸಂದರ್ಭದಲ್ಲಿ ಉಂಟಾದ ಹಲವಾರು ಚಕ್ಕೆಗಳು ಕಂಡುಬರುತ್ತಿವೆ. ಜೊತೆಗೆ ಸಮಾನಾಂತರ ಅಂಚುಗಳನ್ನುಳ್ಳ ಅಲಗುಗಳು, ಸಣ್ಣಚೂರಿಯ ತಂದ ಅಲಗುಗಳು, ಮೊನೆಗಳು ಇವೆ. ಇವುಗಳನ್ನು ಹೆಚ್ಚಾಗಿ ಶಿಲಿಕಾ ಶಿಲೆಯ ವರ್ಗದ ಹಾಲುಬಣ್ಣದ ಕ್ವಾರ್ಟ್‌ಜ್ [ಬಿಳಿಬೆಣಚುಕಲ್ಲು] ಹಾಗೂ ಚರ್ಟ್ ಗಲ್ಲಿಂದ ತಯಾರಿಸಲಾಗಿದೆ. ಇವು ತುಲನಾತ್ಮಕವಾಗಿ ಗಾತ್ರದಲ್ಲಿ ಅತಿ ಸಣ್ಣದಾಗಿವೆ. ಇಂತಹ ಸೂಕ್ಷ್ಮ ಕಲ್ಲಿನ ಉಪಕರಣಗಳನ್ನು ಕೋಲು ಅಥವಾ ಎಲುಬಿನ ಹಿಡಿಗಳಿಗೆ ಒಂದರ ಪಕ್ಕದಲ್ಲೊಂದರಂತೆ ಜೋಡಿಸಿ, ಮನೆಗೆಲಸಗಳಿಗೆ, ಬೆಳೆ, ಹುಲ್ಲು ಕೊಯ್ಲಿಗೆ, ಬೇಟೆಯಾಡಲು ಮೊದಲಾದ ಉಪಯುಕ್ತ ಸಂಯುಕ್ತ ಉಪಕರಣಗಳನ್ನು (Composite Tools) ತಯಾರಿಸಿಕೊಳ್ಳಲಾಗುತ್ತಿತ್ತು.[೨] ಒಟ್ಟಿನಲ್ಲಿ ವಾನಭದ್ರೇಶ್ವರರ ಬೆಟ್ಟ ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗ ಕಾಲದಲ್ಲಿ ಮಾನವನ ಜೀವನ ಚಟುವಟಿಕೆ ಪ್ರಾರಂಭವಾಯಿತೆನ್ನಬಹುದು. ಈ ಯುಗದ ಕಾಲಮಾನವನ್ನು ಇಂಗಾಲಗಳ ವಿಧಾನದಿಂದ ಗೊತ್ತುಪಡಿಸಿದಂತೆ ಇಂದಿಗೆ ೨೫೦೦೦ ವರ್ಷಗಳಿಂದ ೧೦,೦೦೦ ವರ್ಷಗಳನ್ನು ಪೂರ್ವದಲ್ಲಿ ಇತ್ತೆಂದು ತಿಳಿಯುತ್ತದೆ. ಹಾಗಾಗಿ ಇವೆಲ್ಲ ಸ್ಥಿತ್ಯಂತರ ಅಥವಾ ಸೂಕ್ಷ್ಮ ಶಿಲಾಯುಗ (Mesolithic) ಕಾಲಕ್ಕೆ ಸೇರಿದವೆಂದು ಹೇಳಬಹುದು.

* ಪ್ರಾಚಾರ್ಯರು, ಕೆ.ಎಸ್.ಸಿ. ಮಹಿಳಾ ಮಹಾವಿದ್ಯಾಲಯ, ಗಂಗಾವತಿ-೫೮೩೨೨೭. ಮೊ. ೯೮೪೫೨೩೭೦೫೫

ನವ ಶಿಲಾಯುಗದ ಆಯುಧೋಪಕರಣಗಳು

ಪ್ರಾಚೀನ ನೆಲೆಯಲ್ಲಿ ವಿವಿಧ ಗಾತ್ರದ ಶಿಲಾಯುಧಗಳು, ಶಿಲೋಪಕರಣಗಳು ಕಂಡುಬಂದಿವೆ. ವಿಶೇಷವಾಗಿ ಅಧಿಕ ಸಂಖ್ಯೆಯಲ್ಲಿ ಕೈಗೊಡಲಿಗಳು, ಉಳಿಗಳು, ಬಾಚಿಗಳು, ಬೆಣ್ಣೆ, ಕವಣೆಕಲ್ಲುಗಳು, ಮುಂತಾದ ವಿವಿಧ ಅಳತೆಯ ಕಲ್ಲುಗಳು, ಹೆರೆಯುವ ಕಲ್ಲುಗಳು ದೊರೆಯುತ್ತವೆ. ಶಿಲಾಯುಧಗಳನ್ನು ದಖನ್ನಿನ ಕಪ್ಪು ಕಲ್ಲಿನಲ್ಲಿ (ವಜ್ರದುಂಡಿ–ಡೊಲರೈಟ್) ತಯಾರಿಸಲಾಗಿದೆ. ಇವುಗಳ ರಚನಾ ವಿನ್ಯಾಸಗಳಿಂದ ಇವು ನೂತನ ಶಿಲಾಯುಗ ಕಾಲದ ಆಯುಧಗಳೆನ್ನುವುದು ಸ್ಪಷ್ಟ. ಇವುಗಳನ್ನು ನವಶಿಲಾಯುಗ ಸಂಸ್ಕೃತಿಯ ಜನರು ಕತ್ತರಿಸಲು, ಸೀಳಲು ಕೊರೆಯಲು ಮುಂತಾದ ದೈನಂದಿನ ಗೃಹಕೃತ್ಯಗಳಿಗೆ ಉಪಯೋಗಿಸುತ್ತಿದ್ದರು.

ಉದ್ಯಮ ನೆಲೆ

ಇಲ್ಲಿ ಅಧಿಕ ಸಂಖ್ಯೆಯಲ್ಲಿ ಶಿಲಾಯುಧಗಳು, ಅರ್ಧತುಂಡಾದ ಆಯುಧಗಳು, ಕಲ್ಲಿನ ಚಕ್ಕೆಗಳು, ಗುಂಡುಕಲ್ಲುಗಳು ಕಂಡು ಬರುತ್ತಿರುವುದರಿಂದ ಇದು ಆಯುಧೋಪಕರಣ ತಯಾರಿಕಾ ಉದ್ಯಮ ನೆಲೆಯಾಗಿತ್ತೆಂದು ತರ್ಕಿಸಬಹುದು. ಈ ಅಭಿಪ್ರಾಯಕ್ಕೆ ಪೂರಕವಾಗಿ ಇಲ್ಲಿಯ ನೈಸರ್ಗಿಕ ನೀರಿನ ದೊಣೆಗಳ ಸುತ್ತಲಿನ ಬಂಡೆಗಳಲ್ಲಿ ಉಜ್ಜು ಕುಳಿಗಳಿರುವುದು. ಆಯುಧಗಳನ್ನು ಒಂದೇ ಕಡೆ ಉಜ್ಜಿ ನಯಗೊಳಿಸಿರುವುದರಿಂದ ಇಂಥ ಕುಳಿಗಳು ಉಂಟಾಗಿವೆ.

ಮಡಕೆ ಚೂರುಗಳು

ಪ್ರಾಚೀನ ನೆಲೆಯಲ್ಲಿ ಶಿಲಾಯುಧಗಳ ಜೊತೆಗೆ ಬೂದು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು ಕಂಡುಬರುತ್ತವೆ. ಕೆಲವು ರಂಧ್ರವುಳ್ಳದವು ಬೂದುಗೆಂಪಿನ ಮಡಕೆಚೂರುಗಳು ಇವೆ. ರಂಧ್ರಗಳು ಬೇಳೆಕಾಳು ಗಾತ್ರದಲ್ಲಿವೆ. ಇವು ಚಿಕ್ಕ ಚಿಕ್ಕ ತುಂಡಾಗಿರುವುದರಿಂದ ಅವುಗಳ ಪೂರ್ಣರೂಪವನ್ನು ಗ್ರಹಿಸಲು ಸಾಧ್ಯವಾಗುತ್ತಿಲ್ಲ.

ಕಬ್ಬಿಣ ಯುಗ ಬೃಹತ್ ಶಿಲಾಯುಗಕಾಲದ ಮೃತ್ಪಾತ್ರೆಗಳು

ವಾನಭದ್ರೇಶ್ವರ ಬೆಟ್ಟದ ಪೂರ್ವಬದಿಯಲ್ಲಿರುವ ಒಂದು ಗವಿಯಲ್ಲಿ ಕೆಲವು ಮೃತ್ಪಾತ್ರೆಯ ಚೂರುಗಳು, ನಳಿಕೆಯ ತುಂಡುಗಳನ್ನು ಕಂಡು ಬಂದಿವೆ. ಇವು ಮೇಲೆ ಗಮನಿಸಿದ ಮಡಕೆ ಚೂರುಗಳಿಗಿಂತ ಭಿನ್ನವಾಗಿವೆ. ಕಪ್ಪುಬಣ್ಣದಲ್ಲಿರುವ ಇವು ಹೊಳಪುಳ್ಳದ್ದಾಗಿವೆ. ಇವು ದೊಡ್ಡ ಚೂರುಗಳಾಗಿವುದರಿಂದ ಅವುಗಳ ಮೂಲ ಪಾತ್ರೆಗಳ ಸ್ವರೂಪವನ್ನು ಗ್ರಹಿಸಬಹುದು. ಇವು ಅಗಲಬಾಯಿಯ ಬಟ್ಟಲುಗಳು, ಭುಜದ ಭಾಗದಲ್ಲಿ ಕೊಳವೆಯುಳ್ಳ ಗಿಂಡಿಗಳು, ಬಟ್ಟಲುಗಳ ಅವಶೇಷಗಳಾಗಿವೆ. ಇಂಥ ಮಡಕೆಗಳು ಕಬ್ಬಿಣ ಯುಗ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲ (ಪ್ರ.ಶ.ಪೂ. ೧೨೦೦–೨೦೦) ದಲ್ಲಿ ಪ್ರಚಲಿತದಲ್ಲಿದ್ದವು. ಹಾಗಾಗಿ ಇವು ಅದೇ ಕಾಲದವೆಂದು ನಿರ್ಧರಿಸಬಹುದಾಗಿದೆ.

ವರ್ಣಚಿತ್ರಗಳ ವೈಶಿಷ್ಟ್ಯತೆ

ವಾನಭದ್ರೇಶ್ವರ ಬೆಟ್ಟ ಪರಿಸರದಲ್ಲಿ ಸುಮಾರು ಆರು ಕಲ್ಲಾಸರೆಗಳಲ್ಲಿ ವರ್ಣ ಚಿತ್ರಗಳಿರುವುದು ಈಗಾಗಲೇ ತಿಳಿದಿದೆ.[೩] ಇಲ್ಲಿಯ ವರ್ಣಚಿತ್ರಗಳು ನವಶಿಲಾಯುಗ ಹಾಗೂ ಕಬ್ಬಿಣ ಯುಗದ ಬೃಹತ್ ಶಿಲಾಯುಗ ಕಾಲಕ್ಕೆ ಸಂಬಂಧಿಸಿವೆ. ವಿಶೇಷವೆಂದರೆ ಮನುಷ್ಯ ಚಿತ್ರಗಳ ಶೈಲಿಯಿಂದಾಗಿ ಇಲ್ಲಿಯ ಚಿತ್ರಗಳು ಹಂಪಿ–ಗಂಗಾವತಿ ಪ್ರದೇಶದ ತುಂಗಭದ್ರಾ ನದಿ ಪರಿಸರದ ವರ್ಣಚಿತ್ರಗಳಲ್ಲಿ ಕಬ್ಬಿಣ ಯುಗದ ಬೃಹತ್ ಶಿಲಾಯುಗದ ಚಿತ್ರಗಳು ಯಾವುವು? ಹಾಗೂ ನವಶಿಲಾಯುಗದ ಚಿತ್ರಗಳು ಯಾವುವು ಎಂಬುದನ್ನು ಪ್ರತ್ಯೇಕಿಸಿ ಅಧ್ಯಯನ ಮಾಡಲು ಸಹಕಾರಿಯಾಗಿವೆ.

ಇಲ್ಲಿಯ ನವಶಿಲಾಯುಗ ನೆಲೆಯ ಗವಿಯೊಂದರಲ್ಲಿ ದ್ವಿತ್ರಿಕೋನಾಕಾರದ ಮುಂಡದ ಮನುಷ್ಯ ಚಿತ್ರವು ನವಶಿಲಾಯುಗ ಕಾಲವೆಂದು ಹಾಗೂ ವಾನಭದ್ರೇಶ್ವರ ಗುಡಿಯ ಹಿಂಬದಿಯ ಕೆಲವು ಗವಿಗಳಲ್ಲಿ ಇರುವ ಬೃಹತ್ ಶಿಲಾಯುಗದ ಕಲ್ಲು ಗೊಂಬೆ ಆಕಾರದ ಮನುಷ್ಯ ಚಿತ್ರಗಳು ತಕ್ಕ ಮಟ್ಟಿಗೆ ಮಾನವ ಆಕಾರದಲ್ಲಿವೆ. ಇವು ಮನುಷ್ಯನಂತೆ ಸ್ಪಷ್ಟವಾಗಿ ಕತ್ತು, ಭುಜಗಳು, ಕೈಗಳು ಅಗಲ ಎದೆ, ಸಪೂರ ಸೊಂಟ, ಅಗಲ ಪುಷ್ಠಭಾಗ, ತೊಡೆಗಳು ಸಹಿತ ಕಾಲುಗಳನ್ನು ಹೊಂದಿರುವ ಮನುಷ್ಯ ಚಿತ್ರಗಳಾಗಿವೆ. ಈ ಹೋಲಿಕೆಯಿಂದ ಇಂಥಹ ಮನುಷ್ಯ ಚಿತ್ರಗಳನ್ನು ಕಬ್ಬಿಣ ಯುಗದ ಬೃಹತ್ ಶಿಲಾಯುಗದ ಚಿತ್ರಗಳೆಂದು ಸ್ಪಷ್ಟವಾಗಿ ನಿರ್ಧರಿಸಲು ಸಾಧ್ಯವಾಯ್ತು. ಇಂಥ ನಿರ್ಧಾರವನ್ನು ಕೊಪ್ಪಳ ಹಂಪಿ ಪರಿಸರದ ಇತರ ಹಲವಾರು ನೂತನ ಶಿಲಾಯುಗ ಹಾಗೂ ಕಬ್ಬಿಣ ಯುಗ ಬೃಹತ್ ಶಿಲಾಯುಗದ ನೆಲೆಗಳ ವರ್ಣಚಿತ್ರಗಳೊಂದಿಗೆ ತುಲನಾತ್ಮಕ ಅಧ್ಯಯನ ನಡೆಸಿ ಈ ಅಭಿಪ್ರಾಯಕ್ಕೆ ಬರಲಾಗಿದೆ.

ಸಮಾರೋಪ

ವಾನಭದ್ರೇಶ್ವರ ಬೆಟ್ಟ ಪರಿಸರದ ಪ್ರಾಚ್ಯಾವಶೇಷಗಳ ಅಧ್ಯಯನದ ಹಿನ್ನೆಲೆಯಲ್ಲಿ ಇಲ್ಲಿ ಸೂಕ್ಷ್ಮಶಿಲಾಯುಗ, ನವಶಿಲಾಯುಗ ಹಾಗೂ ಬೃಹತ್ ಶಿಲಾಯುಗಗಳ ಕಾಲದ ಸಂಸ್ಕೃತಿಯ ಅನುಚಾನವಾಗಿ ಬೆಳೆದುಬಂದಿರುವುದು ಸ್ಪಷ್ಟವಾಗುತ್ತದೆ. ವಿಶೇಷವಾಗಿ ನವಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಹೇಳುವುದಾದರೆ ಇದು ತೆಕ್ಕಲಕೋಟೆ, ಸಂಗನಕಲ್ಲು, (ಬಳ್ಳಾರಿ ಜಿಲ್ಲೆ) ಕಡೇಬಾಗಿಲು, ತಾವರಗೆರೆ (ಕೊಪ್ಪಳ ಜಿಲ್ಲೆ)[೪] ಯಂತೆ ಇದು ಕೂಡ ಒಂದು ಬೆಟ್ಟದ ಮೇಲಿನ ವಸತಿ ನೆಲೆಯಾಗಿದೆ. ಅಷ್ಟೇ ಅಲ್ಲದೇ ಇದು ಉದ್ಯಮನೆಲೆಯಾಗಿತ್ತೆಂಬುದು ಕೂಡಾ ಸ್ಥಳೀಯವಾಗಿ ಮಹತ್ವದ ಸಂಗತಿಯಾಗಿದೆ. ವಿಶೇಷವಾಗಿ ಇಲ್ಲಿಯ ವರ್ಣಚಿತ್ರಗಳ ಸೂಕ್ಷ್ಮ ಅಧ್ಯಯನದಿಂದ ಕೊಪ್ಪಳ-ಹಂಪಿ ಪರಿಸರದಲ್ಲಿ ನವಶಿಲಾಯುಗದ ಚಿತ್ರಗಳು ಯಾವವು ಹಾಗೂ ಬೃಹತ್ ಶಿಲಾಯುಗದ ಚಿತ್ರಗಳು ಯಾವವು ಎಂಬುದನ್ನು ನಿರ್ಧರಿಸಲು ಸಹಾಯಕವಾಗಿವೆ. ಈ ಹಿನ್ನೆಲೆಯಲ್ಲಿ ಇದೊಂದು ಪ್ರಾಕ್ಚಾರಿತ್ರಿಕವಾಗಿ ತುಂಬಾ ಮಹತ್ವದ ನೆಲೆ ಎಂಬುದಾಗಿ ನಿರ್ಧರಿಸಬಹುದು. ಇಲ್ಲಿಯ ಪ್ರಾಚ್ಯಾವಶೇಷಗಳು ನೆಲೆಯು ವಿವಿಧ ಕಾಲಘಟ್ಟಗಳ ಸಾಂಸ್ಕೃತಿಕ ಇತಿಹಾಸದ ನಿರಂತರತೆಯನ್ನು ಬಿಂಬಿಸುತ್ತ ಆಯಾ ಕಾಲಘಟ್ಟಗಳ ಸಾಂಸ್ಕೃತಿಕ ಬದುಕಿನ ಅಂಶಗಳನ್ನು ನಿರೂಪಿಸಲು ಸಹಾಯಕವಾಗಿವೆ ಎನ್ನಬಹುದು. ಈ ಹಿನ್ನೆಲೆಯಲ್ಲಿ ಕೊಪ್ಪಳ ಹಂಪಿ ಪರಿಸರದ ತುಂಗಭದ್ರಾ ನದಿ ಪ್ರದೇಶದಲ್ಲಿ ಅತ್ಯಂತ ಮಹತ್ವದ ನೆಲೆಯಾಗಿ ವಾನಭದ್ರೇಶ್ವರ ಬೆಟ್ಟ ಪರಿಸರವು ಗೋಚರಿಸುತ್ತದೆ.

ಅಡಿಟಿಪ್ಪಣಿಗಳು

೧. ಸಿದ್ಧಲಿಂಗೇಶ್ವರ ಸ್ವಾಮಿ, ೧೯೮೩, ಶ್ರೀ ಪಂಪಾಮಹಾತ್ಮೆ, ಶ್ರೀಗುರು ವೃಷಭಾಶ್ರಮ, ಹೊಳಗುಂದಿ, ಪುಟ ೧೫೦-೧೬೨.

೨. ಸುಂದರ, ಅ, ೧೯೯೭, ಕರ್ನಾಟಕ ಚರಿತ್ರೆ, ಸಂ.೧, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ ೧೫೦-೭೦.

೩. ಶರಣಬಸಪ್ಪ ಕೋಲ್ಕಾರ, ೨೦೧೦, ಶಿಲಾಯುಗದ ಗವಿಚಿತ್ರಗಳು, ಬಸವ ಪ್ರಕಾಶನ, ಗುಲಬರ್ಗಾ, ಪುಟ ೧೦೭-೧೧೭.

೪. ಸುಂದರ, ಅ, ೧೯೯೭, ಪೂರ್ವೋಕ್ತ.

೧೦

ತಮಟಕಲ್ಲು: ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸಿಕ ನೆಲೆ

ಲಕ್ಷ್ಮಣ್ ತೆಲಗಾವಿ*

ಪ್ರಾಗೈತಿಹಾಸಿಕ ನಿಗೂಢತೆಯನ್ನು ಮೈಗೂಡಿಸಿಕೊಂಡಿರುವಂಥಾದ್ದು ತಮಟಕಲ್ಲು ಪರಿಸರ. ಚಿತ್ರದುರ್ಗ-ಚಂದ್ರವಳ್ಳಿ ಪ್ರಾಚೀನ ನಿವೇಶನಗಳಿಗೆ ಉತ್ತರದಿಕ್ಕಿನಲ್ಲಿ ಕೇವಲ ಆರು ಕಿಲೊಮೀಟರ್ ಅಂತರದಲ್ಲಿದ್ದರೂ ಈತನಕ ಪುರಾತಾತ್ವಿಕ ಹಾಗೂ ಚಾರಿತ್ರಿಕ ಅಧ್ಯಯನಗಳಿಗೆ ಈ ನಿವೇಶನ ಅಷ್ಟಾಗಿ ಒಳಪಡದಿರುವುದು ವಾಸ್ತವ. ಇಲ್ಲಿ ಶೋಧಗೊಂಡ ಕೆಲವು ಪುರಾತಾತ್ವಿಕ ಅವಶೇಷಗಳ ಆಧಾರದಿಂದ, ತಮಟಕಲ್ಲು ಪರಿಸರದ ಹಿನ್ನೆಲೆಯು ಕ್ರಿಸ್ತಶಕಾರಂಭಕಾಲದಿಂದ, ಅಂದರೆ ಶಾತವಾಹನ ಮಹಾರಥಿಗಳ ಆಡಳಿತಾವಧಿಯಿಂದ ಆರಂಭಗೊಳ್ಳುವ ಎಲ್ಲ ಲಕ್ಷಣಗಳನ್ನು ಒಳಗೊಂಡಿದೆ. ಈ ಪರಿಸರದಲ್ಲಿ ದೊರೆತ ಎರಡು ಪ್ರಾಚೀನ ಶಾಸನಪಾಠಗಳನ್ನು ಬಿ.ಎಲ್. ರೈಸ್ ಅವರು ೧೯೦೩ರಲ್ಲಿ ಹೊರತಂದ ಚಿತ್ರದುರ್ಗಜಿಲ್ಲೆಯ ಶಾಸನಗಳುಳ್ಳ ೧೧ನೇ ಸಂಪುಟದಲ್ಲಿ ಸೇರಿಸಿದನಂತರ (ಚಿತ್ರದುರ್ಗ ೪೨ ಮತ್ತು ೪೩, ಕ್ರಿ.ಶ.ಸು. ೫೦೦) ಅದು ವಿದ್ವಾಂಸರ ಗಮನವನ್ನು ಅಪಾರವಾಗಿ ಸೆಳೆಯಿತು. ಆ ನಂತರ ಇತರ ಶಾಸನಾಧ್ಯಾಯಿಗಳಿಂದ ಈ ಶಾಸನಪಾಠದ ಪರಿಷ್ಕರಣೆ ಇತ್ಯಾದಿ ಕಾರ್ಯ ಮುಂದುವರೆದು ತಮಟಕಲ್ಲಿನ ಹೆಸರು ಇನ್ನಷ್ಟು ಪ್ರಚಾರಕ್ಕೆ ಬರುವಂತಾಯಿತು. ಈಚೆಗೆ ಇಲ್ಲಿಯ ಗುಡ್ಡದಲ್ಲಿ ಚಿತ್ರದುರ್ಗ ಸಂಶೋಧನ ತಂಡವು ಮೂರ್‍ನಾಲ್ಕು ಸಾಲುಗಳುಳ್ಳ ಇನ್ನೊಂದು ಪ್ರಾಚೀನ ಬಂಡೆಬರಹವನ್ನು ಪತ್ತೆಹಚ್ಚಿರುತ್ತದೆ.

ತಮಟಕಲ್ಲು : ಸ್ಥಳನಾಮದ ಹಿನ್ನೆಲೆ

'ತಮಟಕಲ್ಲು' ಎಂಬುದು ತಾಮ್ರಲೋಹ ಸಂಬಂಧವಾದ (ತಾಮ್ರಿಕ) ಎಡೆ. ಇದು ತಾಮ್ರಕುಟ್ಟಕರು ನೆಲೆಸಿದ್ದ ತಾಮ್ರಸಾಲೆಯೆನಿಸಿದ್ದು, ತಾಮ್ರಭಸ್ಮತಯಾರಿಕೆಯ ಕೇಂದ್ರವಾಗಿದ್ದಿತೆನ್ನಲಾಗಿದೆ. ನಮ್ಮ ಪುರಾತನರು ಬಳಸಿಕೊಳ್ಳಲಾರಂಭಿಸಿದ ಲೋಹಗಳಲ್ಲಿ ತಾಮ್ರವೇ ಮೊದಲನೆಯದೆಂಬುದು ಗಮನಾರ್ಹ. ತಾಮ್ರದ ಅದಿರುಗಳಿಂದ ಲೋಹವನ್ನು ಬೇರ್ಪಡಿಸಿ ಪಡೆಯುವ ವಿಧಾನ ಸರಳವಾದುದು ಮಾತ್ರವಲ್ಲ, ಆ ಲೋಹದೊಡನೆ ತವರ, ಸತುವು, ನಿಕ್ಕಲ್ ಮೊದಲಾದ ಲೋಹಗಳನ್ನು ಬೆರೆಸಿ ಬಹೋಪಯೋಗಿ ಮಿಶ್ರಲೋಹವನ್ನು ತಯಾರಿಸಬಹುದೆನ್ನುತ್ತಾರೆ ಲೋಹಶಾಸ್ತ್ರಜ್ಞರು.

ಅಲ್ಲಿಯೇ ದೊರೆತಿರುವ ಬಂಡೆಬರಹ. ತಮಟಕಲ್ಲುಗುಡ್ಡದಲ್ಲಿ ಮಾಳನಾಯಕನ ಮಗ ಬುಸಿಯನಾಯಕನೆಂಬವನು ತಮಂಡಿಯಕಲ್ಲ ನರಸಿಂಹದೇವರ ಗುಹಾಲಯಕ್ಕೆ ಕಲ್ಲುಹಾದಿಯನ್ನು ಮಾಡಿಸಿದುದನ್ನು ಅರುಹುತ್ತದೆ ಈ ಬರಹದ ಬುಡದಲ್ಲಿ ಬಿಲ್ಲು-ಬಾಣಸಹಿತವಿರುವ ಬುಸಿಯನಾಯಕನ ರೇಖಾಕೃತಿಯೂ ಇದೆ. ಈ ಬಂಡೆಬರಹದ ಕಾಲಮಾನ ೧೮ನೇ ಶತಮಾನ. ಇಲ್ಲಿನ ನರಸಿಂಹದೇವರು (ರಂಗಸ್ವಾಮಿ) ನೆಲೆಸಿರುವುದು ಈ ಗುಡ್ಡದ ಎರಡು ಬೃಹತ್‌ಬಂಡೆಗಳ ಮಧ್ಯದ ಇಕ್ಕಟ್ಟಾದ ಸೀಳಿನ ಆಳದಲ್ಲಿ. ಇಲ್ಲಿರುವ ಬಂಡೆಗಳ ಮೇಲೆ ಬೇರೆ ಕೆಲವು ಬರಹಗಳೂ ಮಂಡಲಾಕೃತಿ, ಜ್ಯಾಮಿತಿಯಾಕೃತಿ ಮತ್ತಿತರ ತಂತ್ರಸಂಬಂಧಿ ಸಂಕೇತಗಳುಳ್ಳ ರೇಖಾಕೃತಿಗಳೂ ಕಂಡುಬರುತ್ತವೆ. ಈ ಸಂಕೇತಗಳೊಡನೆ ಈ ದೇವನೆಲೆಯ ನಿಗೂಢತೆಯನ್ನು ಇನ್ನಷ್ಟು ಉದ್ದೀಪಿಸುವ ಪ್ರಯತ್ನ ಕೈಗೊಂಡಂತೆ ಕಾಣಿಸುತ್ತದೆ. ಇತರೆ ಬಂಡೆ ಚಾಚುಗಳಲ್ಲಿ ಸಾಕಷ್ಟು ಅಳಿಸಿಹೋದಂತಿರುವ ಕೆಲವು ಬಿಳಿವರ್ಣದ ರೇಖಾಚಿತ್ರಗಳ ಕುರುಹುಗಳೂ ಕಾಣಿಸುವುದುಂಟು.

ಇಂದಿನ ತಮಟಕಲ್ಲನ್ನು 'ತಮಂಡಿಯಕಲ್ಲು' ಎಂದು ಈ ಬಂಡೆಬರಹದಲ್ಲಿ ಉಲ್ಲೇಖಿಸಿರುವುದು ಗಮನಾರ್ಹ. ಇಲ್ಲಿ 'ತಮಂಡಿ' ಎಂಬುದು 'ತಮ್ಮಡಿ'ಯ ಆಡುರೂಪ. 'ತಮ್ಮಡಿ' ಎಂದರೆ ತಾಮ್ರಲೋಹ. 'ತಂಬಟ'ವೆಂದರೆ ತಾಮ್ರ [ತಂಬ(<ತಾಮ್ರ)]; 'ತಂಬಟಿಗ'ನೆಂದರೆ ತಾಮ್ರದ ಕೆಲಸ ಮಾಡುವವನು. ತಮಟಕಲ್ಲು ಸ್ಥಳನಾಮದ ಹಿನ್ನೆಲೆಯಲ್ಲಿ ತಾಮ್ರಲೋಹ ಉತ್ಪಾದನೆಯ, ಬಳಕೆಯ ಲಕ್ಷಣಗಳಿರುವುದು ಸ್ಪಷ್ಟ.

* # ೧೫, ಸೋಮಶೇಖರ ನಿಲಯ, ಯಲ್ಲಮ್ಮದೇವಿ ಹೌಸಿಂಗ್ ಸೊಸೈಟಿ, ರಜತಗಿರಿ, ಧಾರವಾಡ-೫೮೦೦೦೪. ಮೊ. ೯೪೪೯೧೦೬೬೫೩

ತಮಟಕಲ್ಲು ಸ್ಥಳನಾಮಕ್ಕೆ ಸಂಬಂಧಿಸಿದಂತೆ ಸ್ಥಳೀಯರು ಒದಗಿಸುವ ವಿವರಣೆ ಕುತೂಹಲಕಾರಿಯಾದುದಷ್ಟೆ ಅಲ್ಲ, ಜನಪದರ ಮನೋಧರ್ಮಕ್ಕೆ ತಕ್ಕ ಉದಾಹರಣೆಯೆನಿಸುತ್ತದೆ. ಈ ವಿವರಣೆ ಈ ಗುಡ್ಡದ ತುದಿಯಲ್ಲಿ ಬೋರಲುಹಾಕಿದಂತಿರುವ ಬಟ್ಟಲಾಕಾರದ ನೈಸರ್ಗಿಕ ಬಂಡೆಯನ್ನು ಕುರಿತದ್ದು. ಬೋರಲಾಕಾರದ ವಿಶಾಲಬಂಡೆಯ ಒಳಚಾಚು ಟೊಳ್ಳಾಗಿದ್ದು, ಅಲ್ಲಿ ಬೇರೆ ಬೇರೆ ಹಂತಗಳಲ್ಲಿ ಮೂಡಿಸಲಾಗಿರುವ ಕೆಲವು ಅಸ್ಪಷ್ಟ ಬಿಳಿವರ್ಣಚಿತ್ರಗಳಿರುವುದು ವಿಶೇಷ. ಈ ಬಂಡೆಯ ಬುಡದಲ್ಲಿ ಪುಟ್ಟ ಕಲ್ಲಿನ ವಿಗ್ರಹವನ್ನು ಸ್ಥಾಪಿಸಲಾಗಿದ್ದು, ಈ ನೆಲೆ ಪೂಜಾಎಡೆಯಂತೆ ಪರಿವರ್ತಿತವಾಗಿದೆ. ಈ ಜಾಗವನ್ನು ತಲುಪಲು ತೀರಾ ಅಪಾಯಕಾರಿಯಾದ ಕಡಿದಾದ ಬಂಡೆಯನ್ನು ಆಶ್ರಯಿಸಿ ಏರಬೇಕು. ಏನೇ ಇದ್ದರೂ ಸ್ಥಳೀಯರು ಈ ಬಟ್ಟಲಾಕಾರದ ಬಂಡೆಯನ್ನು 'ತಮಟೆಕಲ್ಲು' (ನಗಾರಿಕಲ್ಲು?) ಎಂತಲೇ ಗುರುತಿಸಿದ್ದು, ಅದರ ದೆಸೆಯಿಂದಲೇ ತಮಟಕಲ್ಲು ಎಂಬ ಹೆಸರು ನಿಷ್ಪನ್ನಗೊಂಡುದಾಗಿ ವ್ಯಾಖ್ಯಾನಿಸುತ್ತಾರೆ.

ಇಂಗಳದಹಾಳು ಪರಿಸರ : ತಾಮ್ರ ಅದಿರಿನ ನಿಕ್ಷೇಪವುಳ್ಳ ಎಡೆ

ಚಿತ್ರದುರ್ಗದ ಆಗ್ನೇಯಕ್ಕೆ ಎಂಟು ಕಿಲೋಮೀಟರ್ ಅಂತರದಲ್ಲಿರುವ ಇಂಗಳದಹಾಳುಗುಡ್ಡ ಪರಿಸರವು ತಾಮ್ರ ಅದಿರಿನ ನಿಕ್ಷೇಪವುಳ್ಳ ಬಹುಮುಖ್ಯ ಎಡೆಯೆಂದು ಭೂವಿಜ್ಞಾನಿಗಳು ಗುರುತಿಸಿರುತ್ತಾರೆ. ಹಾಗೆಯೇ, ಇಂಗಳದಹಾಳಿನ ದಕ್ಷಿಣಕ್ಕೆ ಬೆಳ್ಳಿಗುಡ್ಡವಿದ್ದು, ಇದರ ಪಶ್ಚಿಮದಲ್ಲಿ ತಾಮ್ರ ಅದಿರಿನ ನಿಕ್ಷೇಪಗಳು ಕಂಡುಬಂದಿವೆ. ಇಲ್ಲೆಲ್ಲ ತಾಮ್ರಲೋಹಕ್ಕೆಂದು ತೋಡಲಾಗಿರುವ ಗಣಿಗಳಿವೆ. ಬೆಳ್ಳಿಗುಡ್ಡವು ಸಲ್ಫೈಡ್‌ವಲಯವಾಗಿದ್ದು, ಇದು ಉತ್ತರ–ದಕ್ಷಿಣವಾಗಿ ಸುಮಾರು ೩೦ ಕಿ.ಮೀ. ಉದ್ದ ಹಾಗೂ ೩ ಕಿ.ಮೀ. ಅಗಲದವರೆಗೆ ಹಬ್ಬಿಕೊಂಡಿರುವಂಥಾದ್ದು. ಈ ಕ್ಷೇತ್ರದಲ್ಲಿ ದೊರೆಯುವ ಖನಿಜಗಳೆಂದರೆ ಕಬ್ಬಿಣ, ತಾಮ್ರ ಮತ್ತು ಸೀಸಗಳ ಸಲ್ಫೈಡ್ ಅದಿರುಗಳು. ತಮಟಕಲ್ಲು ಸಹಾ ಇದರ ವ್ಯಾಪ್ತಿಗೊಳಪಟ್ಟಿರುತ್ತದೆ. ಈ ಕ್ಷೇತ್ರದ ಮಧ್ಯಭಾಗದಲ್ಲಿ ಈ ಅದಿರುಗಳು ವಿಶೇಷವಾಗಿ ಸಂಗ್ರಹಗೊಂಡಿರುತ್ತವೆ. ಈ ಪ್ರದೇಶದಲ್ಲಿ ಸೀಸಲೋಹದ ವಿಪುಲತೆಯ ಕಾರಣವಾಗಿಯೂ ಚಂದ್ರವಳ್ಳಿಯ ಶಾತವಾಹನ ಮಹಾರಥಿಗಳು ತಮ್ಮ ನಾಣ್ಯಗಳನ್ನು ಸೀಸಲೋಹದಲ್ಲಿಯೇ ಠಂಕಿಸಿದುದು ಸಹಜವೇ ಆಗಿರುತ್ತದೆ. ಭೂವಿಜ್ಞಾನಿಗಳ ಪ್ರಕಾರ, ಇಂಗಳದಹಾಳು ಗಣಿಯ ಕಾಲಮಾನವನ್ನು ಈ ಶಾತವಾಹನ ಮಹಾರಥಿಗಳ ಆಳ್ವಿಕೆಯ ಅವಧಿಗೆ (ಕ್ರಿ.ಶ. ೨ನೇ ಶತಮಾನ) ನಿಗದಿಪಡಿಸಬಹುದು.

ಇಂಗಳದಹಾಳಿನಲ್ಲಿ ತಾಮ್ರಸಾರವನ್ನು ಪಡೆಯುವ ಕೆಲಸವಾರಂಭವಾದುದು ೧೯೭೩–೭೪ರಲ್ಲಿ. ಈಚಿನ ಸಂಶೋಧನೆಯ ಪ್ರಕಾರ, ಇಂಗಳದಹಾಳು ಪ್ರದೇಶದಲ್ಲಿ ಒಂದು ಟನ್ನಿಗೆ ಶೇ. ೧೮ ತಾಮ್ರದ ಪ್ರಮಾಣವಿದೆ; ಹಾಗೂ ಇದರಿಂದ ಸುಮಾರು ೧ ಲಕ್ಷ ಟನ್ ಅದಿರು ದೊರೆಯಬಹುದಾಗಿದೆ. ಇನ್ನೊಂದು ಸಮೀಕ್ಷೆಯ ಪ್ರಕಾರ, ಇಂಗಳದಹಾಳುಗಣಿಯಲ್ಲಿ ಈಗಾಗಲೇ ತೋಡಿ ತೆಗೆಯಲಾದ ತಾಮ್ರದ ಅದಿರು ೨೯೨ ಟನ್‌ಗಳು ಹಾಗೂ ಅದರ ಶೇಕಡ ತಾಮ್ರಾಂಶ ಅಥವಾ ದರ್ಜೆ ೦.೮೨; ಅನ್ವೇಷಣೆಯಿಂದ ಸಿದ್ಧಪಡಿಸಲಾದ ಅದಿರು ೩,೩೯೪ ಟನ್‌ಗಳು ಹಾಗೂ ಶೇಕಡ ತಾಮ್ರಾಂಶ ೦.೮೫; ಇನ್ನು ದೊರೆಯಬಹುದಾದ ಅದಿರು ೧,೪೧೩ ಟನ್‌ಗಳು ಹಾಗೂ ಶೇಕಡ ತಾಮ್ರಾಂಶ ೦.೭೩. ಒಟ್ಟು ಟನ್‌ಗಳು ೫,೦೯೯ ಹಾಗೂ ಒಟ್ಟು ಶೇಕಡ ತಾಮ್ರಾಂಶ ೦.೮೧. ಈ ನಿಟ್ಟಿನಲ್ಲಿ, ಕರ್ನಾಟಕ ಸರಕಾರವು ಸ್ಥಾಪಿಸಿದ 'ಚಿತ್ರದುರ್ಗ ಕಾಪರ್ ಕಂಪನಿ ಲಿಮಿಟೆಡ್' ಕಾರ್ಯಪ್ರವೃತ್ತವಾಗಿದ್ದಿತಲ್ಲದೆ, ೧೯೮೫ರಲ್ಲಿ 'ಹಟ್ಟಿ ಗೋಲ್ಡ್‌ಮೈನ್ಸ್ ಕಂಪನಿ'ಯಲ್ಲಿ ಸಂಪೂರ್ಣ ಅಂತರ್ಗತವಾಯಿತು. ಆ ನಂತರದಲ್ಲಿ ಇಂಗಳದಹಾಳು ಗಣಿಪ್ರದೇಶಕ್ಕೆ ಸಮೀಪವಿರುವ ಕುಂಚಿಗನಹಾಳು ಗಣಿಗಳಲ್ಲಿ ಬಂಗಾರದ ಅದಿರು ದೊರೆತುದನ್ನು ವರದಿ ಮಾಡಲಾಗಿರುತ್ತದೆ.

ತಮಟಕಲ್ಲು ನಿವೇಶನ : ತಾಮ್ರೋತ್ಪಾದನ ಘಟಕದ ನೆಲೆ

ಚಿತ್ರದುರ್ಗ ಪರಿಸರದ ಇಂಗಳದಹಾಳು, ಬೆಳ್ಳಿಗುಡ್ಡ ಮತ್ತು ಕುಂಚಿಗನಹಾಳುಗಳು ಮಾತ್ರವಲ್ಲದೆ, ಈ ಹೋಬಳಿ ವ್ಯಾಪ್ತಿಯಲ್ಲಿರುವ ಗೋನೂರು, ಗೊಲ್ಲರಹಟ್ಟಿ, ಚಿಕ್ಕೇನಹಳ್ಳಿ, ಗುಡ್ಡದರಂಗವ್ವನಹಳ್ಳಿಗಳ ಬಳಿಯಲ್ಲೂ ಪೂರ್ವಜರು ಗಣಿತೋಡಿ ತಾಮ್ರಲೋಹ ಸಂಗ್ರಹಿಸಿರುವುದು ಕಂಡುಬಂದಿರುತ್ತದೆ. ತಮಟಕಲ್ಲು ಸಹಾ ಇದೇ ಗಣಿವಲಯದಲ್ಲಿದ್ದರೂ ಇಲ್ಲಿ ಗಣಿಗಾರಿಕೆ ನಡೆದ ಯಾವ ಸೂಚನೆಗಳೂ ದೊರೆಯುವುದಿಲ್ಲ. ಆದರೆ ಇಲ್ಲಿ ಕುಲುಮೆದರ್ಜೆಯ ತಾಮ್ರವನ್ನು ಉತ್ಪಾದಿಸುವ ಘಟಕವಿದ್ದುದು ದೃಢಪಟ್ಟಿರುತ್ತದೆ. ಈ ಕಾರಣದಿಂದಲೇ, ತಮಟಕಲ್ಲು ನಿವೇಶನದಲ್ಲಿ ತಾಮ್ರಪಟ್ಟದ ತಯಾರಿಕೆಯಲ್ಲಿ ಅಗತ್ಯವಿರುವ ತಾಮ್ರಗರ್ಭ ಅಥವಾ ಮೈಲುತುತ್ತ (ಕಾಪರ್ ಸಲ್ಫೇಟ್) ವಿಪುಲವಾಗಿ ದೊರೆಯುವುದನ್ನು ಕಾಣಬಹುದು.

ತಮಟಕಲ್ಲುಗುಡ್ಡದ ಮಧ್ಯಭಾಗದ ವಿಶಾಲ ಹಾಗೂ ಸಮತಟ್ಟಾದ ಅಂಗಳದಲ್ಲಿ ತಾಮ್ರಸಂಸ್ಕರಣೆಗೆ ಸಂಬಂಧಿಸಿದ ಕುಲುಮೆಗಳ ಕುರುಹುಗಳು ಗೋಚರಿಸುತ್ತವೆ. ಈ ಪ್ರದೇಶವು ಕುಲುಮೆಗಳಿಂದ ಹೊರಹೊಮ್ಮಿದ ಕಿಟ್ಟ, ಬೂದಿ ಇತ್ಯಾದಿಗಳಿಂದ



ತಮಟಕಲ್ಲು ಗುಡ್ಡ



ಗುಡ್ಡದ ಮಧ್ಯದಲ್ಲಿರುವ ತಾಮ್ರ ಸಂಸ್ಕರಣ ಘಟಕಗಳ ನಿವೇಶನ

ತುಂಬಿಹೋಗಿದೆ. ಇಲ್ಲಿನ ತಾಮ್ರೋತ್ಪಾದನೆಯ ಕಾರ್ಯದಲ್ಲಿ ಅಥವಾ ಕುಲುಮೆ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದವರು ಬೃಹತ್‌ಶಿಲಾಯುಗ ಅಥವಾ ಕಬ್ಬಿಣಯುಗದ ಜನರೆಂಬುದು ಈಗಾಗಲೇ ನಿರ್ಣಯಿಸಲ್ಪಟ್ಟಿರುವ ಅಂಶ. ಈ ನಿವೇಶನದಲ್ಲಿ ದೊರೆತಿರುವ ವಸ್ತು-ವಿಶೇಷಗಳು ಇಲ್ಲಿ ನೆಲೆಸಿದ್ದ ಸಮುದಾಯದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಿವೆ.




ತಮಟಕಲ್ಲು ನಿವೇಶನದಲ್ಲಿ ದೊರೆತಿರುವ ವಸ್ತುಗಳು




ತಾಮ್ರಸಂಸ್ಕರಣದಲ್ಲಿ ಬಳಸಲಾಗುತ್ತಿದ್ದ ಮೈಲುತ್ತುತ್ತದ ಉಂಡೆಗಳು



ದಂತದ ಬಳೆಗಳ ತುಣುಕುಗಳು



ಬಿಳಿವರ್ಣ ರೇಖೆಗಳುಳ್ಳ ಕೆಂಪುವರ್ಣದ ಮಡಕೆ



ಬಿಳಿವರ್ಣ ರೇಖೆಗಳುಳ್ಳ ಕೆಂಪುವರ್ಣದ ಮಡಕೆ



ಬಿಳಿವರ್ಣ ರೇಖೆಗಳುಳ್ಳ ಕೆಂಪುವರ್ಣದ ಮಡಕೆ




ಬಿಳಿವರ್ಣ ರೇಖೆಗಳುಳ್ಳ ಕೆಂಪುವರ್ಣದ ಮಡಕೆ



ಸುಟ್ಟ ಇಟ್ಟಿಗೆ ತುಂಡುಗಳು



ಕಲ್ಲಿನ ನಂದಿ ವಿಗ್ರಹ



'ತಮಂಡಿಯ ಕಲ್ಲು' ಉಲ್ಲೇಖವಿರುವ ಬುಸಿಯನಾಯಕನ ಬಂಡೆಬರಹ
(೧೮ನೇ ಶತಮಾನ)



ವಾನರನನ್ನು ಹೋಲುವ ವ್ಯಕ್ತಿಯ (?) ಕಲ್ಲಿನ ವಿಗ್ರಹ

ಪ್ರಾಗೈತಿಹಾಸಿಕ ಕುರುಹುಗಳು

ಬೃಹತ್‌ಶಿಲಾಯುಗ-ಆದಿಚಾರಿತ್ರಿಕಯುಗ-ಶಾತವಾಹನಕಾಲೀನ ನೆಲೆಗಳು ಚಿತ್ರದುರ್ಗ ತಾಲ್ಲೂಕಿನ ಚಿಪ್ಪಿನಕೆರೆ, ತುರುವನೂರು ಹೋಬಳಿಯ ಬೆಳಗಟ್ಟ, ಬಗ್ಗಲುರಂಗವ್ವನಹಳ್ಳಿ, ಕೂನಬೇವು, ಚಿನ್ನೂರುತಿಪ್ಪಯ್ಯನಹಟ್ಟಿ, ನರೇನಹಾಳು, ದೊಡ್ಡಮರಡಿ ಮೊದಲಾದೆಡೆಗಳಲ್ಲಿ ಶೋಧಗೊಂಡಿವೆ. ಈ ನಿವೇಶನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಪ್ಪು-ಕೆಂಪು ಮಡಕೆಗಳ ಚೂರುಗಳು, ಕಬ್ಬಿಣದ ಬಳೆಗಳು, ಎಲುಬಿನಚೂರುಗಳು, ಮಣಿಗಳು, ಜಾಡಿಗಳು, ಕವಣೆಯಕಲ್ಲುಗಳು- ಹೀಗೆ ನಾನಾ ತೆರನಾದ ಅವಶೇಷಗಳು ಕಂಡುಬರುತ್ತವೆ. ಬಿಳಿವರ್ಣದ ರೇಖಾಚಿತ್ರಗಳಿಂದ ಅಲಂಕರಿಸಿರುವ ಮಡಕೆಗಳು ಇಲ್ಲೆಲ್ಲ ಹರಡಿಕೊಂಡಿವೆ. ಚಿಪ್ಪಿನಕೆರೆಯಿಂದ ದಕ್ಷಿಣಕ್ಕೆ ೧೫ ಕಿ.ಮೀ. ಹಾಗೂ ಬೆಳಗಟ್ಟದಿಂದ ಪೂರ್ವಕ್ಕೆ ೮ ಕಿ.ಮೀ. ಅಂತರದಲ್ಲಿರುವ ತಮಟಕಲ್ಲು ನಿವೇಶನವೂ ಈಗ ಇವುಗಳ ಸಾಲಿಗೆ ಸೇರುತ್ತಲಿದೆ.

ತಮಟಕಲ್ಲು ನಿವೇಶನದಲ್ಲಿ ದೊರೆತಿರುವ ಅವಶೇಷಗಳು ಈ ಮೇಲಿನ ಇತರೆ ನಿವೇಶನಗಳಲ್ಲಿ ಕಂಡುಬಂದಿರುವ ವಸ್ತುಗಳೊಡನೆ ನೇರವಾಗಿ ಹೋಲುತ್ತವೆ. ಈ ನಿವೇಶನದಲ್ಲಿಯೂ ಕೆಂಪುವರ್ಣದ ಮಡಕೆಚೂರುಗಳು ವಿಪುಲವಾಗಿ ದೊರೆಯುತ್ತವೆ. ಈ ಮೃತ್ಪಾತ್ರೆಗಳ ಮೂಲ ಆಕಾರದ ಸ್ಪಷ್ಟ ಚಿತ್ರಣ ದೊರೆಯುವುದಿಲ್ಲವಾದರೂ ಈ ಪಾತ್ರೆಗಳ ಹೊರಮೈಯನ್ನು ಬಿಳಿವರ್ಣದ ರೇಖಾಚಿತ್ರಗಳಿಂದ ಆಕರ್ಷಕವಾಗಿ ಅಲಂಕರಿಸುವ ಸಂಸ್ಕೃತಿಯನ್ನು ಇಲ್ಲಿಯೂ ಮುಂದುವರೆಸಲಾಗಿದೆ ಯೆನ್ನಬಹುದು; ಅಥವಾ ಈ ಸಂಸ್ಕೃತಿಯ ಪಾತ್ರೆಗಳು ಸನಿಹದ ಚಂದ್ರವಳ್ಳಿಪಟ್ಟಣದಿಂದ ತಂದಿದ್ದವಿರಬಹುದೆ? ಸಂಸ್ಕೃತಿ ಪ್ರಸಾರಕ್ಕೆ ಇದು ಒಳ್ಳೆಯ ಉದಾಹರಣೆಯೆನಿಸುತ್ತದೆ.

ತಮಟಕಲ್ಲು ನಿವೇಶನದಲ್ಲಿ ದೊರೆತಿರುವ ಇತರೆ ವಸ್ತು-ವಿಶೇಷಗಳಲ್ಲಿ ದಂತದಬಳೆ, ಕಬ್ಬಿಣದ ಮೊಳೆ, ಕಬ್ಬಿಣದ ತುಣುಕು, ಮಣಿ, ಮಡಕೆಯ ಬಿಲ್ಲೆ, ಮಧ್ಯದಲ್ಲಿ ರಂಧ್ರವಿರುವ ಬಿಲ್ಲೆ, ತಾಮ್ರೋತ್ಪಾದನೆಯಲ್ಲಿ ವಿಶೇಷವಾಗಿ ಬಳಸಲಾಗುತ್ತಿದ್ದ ಮೈಲುತುತ್ತದ ಉಂಡೆಗಳು, ಚಿಲುಮೆ, ಮಣ್ಣಿನ ಹಣತೆ, ಶಿಲಾಯುಧಗಳ ತುಂಡುಗಳು, ದೊಡ್ಡಗಾತ್ರದ ಸುಟ್ಟಇಟ್ಟಿಗೆಗಳು, ಪ್ರಾಣಿಗಳ ದಂತಾವಶೇಷಗಳು, ನಂದಿ ಮತ್ತು ಕೈಜೋಡಿಸಿಕೊಂಡು ವಿಧೇಯನಾಗಿ ಬಾಗಿನಿಂತಿರುವ ವಾನರನನ್ನು ಹೋಲುವ ವ್ಯಕ್ತಿಯೋರ್ವನ ಶಿಲಾಮೂರ್ತಿಗಳು, ಗಣೇಶವಿಗ್ರಹ, ಬಳಪ ಮೊದಲಾದುವು ಪ್ರಮುಖವಾದುವು. ಅಲ್ಲದೆ, ಗುರುತಿಸಲಾಗದ ಇನ್ನು ಎಷ್ಟೋ ವಸ್ತುಗಳು ಈ ನಿವೇಶನದಲ್ಲಿ ಸಂಗ್ರಹಗೊಂಡಿವೆ.

ಪುರಾತಾತ್ವಿಕವಾಗಿ ಮಾತ್ರವಲ್ಲದೆ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಯೂ ಆಗಿ ಮಹತ್ವ ಪಡೆದುಕೊಂಡಿರುವ ತಮಟಕಲ್ಲು ನಿವೇಶನವು ಪ್ರತ್ಯೇಕ ಹಾಗೂ ವೈಜ್ಞಾನಿಕ ಶೋಧಗಳಿಗೆ ಇದೀಗ ತನ್ನನ್ನು ತೆರೆದುಕೊಂಡಿದೆಯೆನ್ನಲಡ್ಡಿಯಿಲ್ಲ. ಈ ನಿವೇಶನದ ಪ್ರಾಚೀನ ಇತಿಹಾಸದ ಮೇಲೆ ಹೊಸಬೆಳಕು ಹಾಯಿಸಲು ಇಲ್ಲಿ ವ್ಯವಸ್ಥಿತ ಭೂಶೋಧನಕಾರ್ಯ ಕೈಗೊಳ್ಳುವ ಅಗತ್ಯವಿದೆ. ಚಿತ್ರದುರ್ಗ ಪರಿಸರದಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿರುವ ಯುವ ಸಂಶೋಧಕರು, ಇಂಥಾ ಹಲವಾರು ಅಲಕ್ಷಿತ ಹಾಗೂ ಸೀಮಿತಕ್ಷೇತ್ರಗಳುಳ್ಳ ನಿವೇಶನಗಳತ್ತಲೂ ಗಮನ ಹರಿಸುವುದು ಸೂಕ್ತ. ಇದರಿಂದ ಚಿತ್ರದುರ್ಗ-ಚಂದ್ರವಳ್ಳಿ-ಇಂಗಳದಹಾಳು-ತಮಟಕಲ್ಲು ಹಾಗೂ ನೆರೆಯ ಗತಸಂಸ್ಕೃತಿಗಳ ನಡುವಣ ಪರಸ್ಪರ ಸಂಬಂಧಗಳನ್ನು ನಿಖರವಾಗಿ ಗುರುತಿಸಿಕೊಡಲು ಹಾಗೂ ಚಿತ್ರದುರ್ಗ ಪರಿಸರದ ಪುರಾತಾತ್ವಿಕ ಅಧ್ಯಯನವನ್ನು ತಕ್ಕಮಟ್ಟಿಗಾದರೂ ಅಂತಿಮಗೊಳಿಸಲು ಸಾಧ್ಯವಾಗಬಹುದು.

ಆಕರ ಗ್ರಂಥಗಳು

೧. B. RamaRao, 1953, Recollections of an Indian Geologist, The Mysore Geologists' Association, Bangalore.

೨. B.N. Sri Sathyan (C.Ed.), 1967, Chitradurga District Gazetteer, Government of Mysore, Bangalore.

೩. R. Shankar, 'How Old are the Old Mine Workings of Ingaldhal (Karnataka)?', The Journal of the Geological Society of India, Vol. 33, No. 1, 1989.

೪. L.C. Curtis, B.P. Radhakrishna, 1995, Hatti Gold Mine into the 21st Century, Geological Society of India, Bangalore.

೫. ಟಿ.ವಿ. ಶಿವರುದ್ರಪ್ಪ, 'ಚಿತ್ರದುರ್ಗ ಜಿಲ್ಲೆಯ ಭೂ ಇತಿಹಾಸ', ಹರತಿಸಿರಿ (ಹೆಚ್.ವಿ. ವೀರನಾಯಕ 'ಹರತಿ' ನೆನಪಿನ ಸಂಪುಟ), ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭.

೬ ಕೆ. ಗವಿಶೆಟ್ಟಿ, ೧೯೯೫, ಕರ್ನಾಟಕದ ಖನಿಜ ಸಂಪತ್ತು, ದಿವ್ಯಜ್ಯೋತಿ ಪ್ರಕಾಶನ, ಬೆಂಗಳೂರು.

೭. ಎಸ್.ವೈ. ಸೋಮಶೇಖರ, 'ಚಿತ್ರದುರ್ಗ ತಾಲ್ಲೂಕು ಚಿಪ್ಪಿನಕೆರೆಯಲ್ಲಿ ಕಂಡುಬಂದಿರುವ ಪ್ರಾಕ್ಚಾರಿತ್ರಿಕ ಕುರುಹುಗಳು', ಇತಿಹಾಸ ದರ್ಶನ, ಸಂಪುಟ ೧೧, ೧೯೯೬.

೮. ಬಿ.ಪಿ. ರಾಧಾಕೃಷ್ಣ, ೨೦೦೩, ಕರ್ನಾಟಕದ ಖನಿಜ ಸಂಪತ್ತು, ಜಿಯಾಲಾಜಿಕಲ್ ಸೊಸೈಟಿ ಆಫ್ ಇಂಡಿಯಾ, ಬೆಂಗಳೂರು.

೯. ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನ ಯುಗ (ಕ್ರಿ.ಪೂ. ೩– ಕ್ರಿ.ಶ. ೩), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಎಸ್. ತಿಪ್ಪೇಸ್ವಾಮಿ, 'ಚಿತ್ರದುರ್ಗ ತಾಲ್ಲೂಕಿನ ಮತ್ತಷ್ಟು ಪ್ರಾಗೈತಿಹಾಸಿಕ ನೆಲೆಗಳು', ಇತಿಹಾಸ ದರ್ಶನ, ಸಂಪುಟ ೨೨, ೨೦೦೭.

೧೧. ಎಸ್.ವೈ. ಸೋಮಶೇಖರ, ಎಸ್ ತಿಪ್ಪೇಸ್ವಾಮಿ, 'ಚಿತ್ರದುರ್ಗ ತಾಲ್ಲೂಕು ನರೇನಾಳು ಪರಿಸರದ ಬೃಹತ್‌ಶಿಲಾಯುಗ ಸಮಾಧಿನೆಲೆಗಳ ಶೋಧ', ಇತಿಹಾಸ ದರ್ಶನ, ಸಂಪುಟ ೨೩, ೨೦೦೮.

೧೨. ಎಸ್.ಜಿ. ರಾಮದಾಸರೆಡ್ಡಿ, ೨೦೦೯, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩. ಎಸ್.ವೈ. ಸೋಮಶೇಖರ (ಸಂ.), ೨೦೧೦, ಬ್ರಹ್ಮಗಿರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಲಕ್ಷ್ಮಣ್ ತೆಲಗಾವಿ, 'ತಮಟಕಲ್ಲು ಬುಸಿಯನಾಯಕನ ಬಂಡೆಬರಹ' (ಪ್ರಬಂಧ–ಅಪ್ರಕಟಿತ).

೧೫. ಕೆ.ಎಸ್. ಶರತ್‌ಬಾಬು, ಚಿತ್ರದುರ್ಗಜಿಲ್ಲಾ ಪರಿಸರದ ಪ್ರಾಗಿತಿಹಾಸ (ಪಿಎಚ್.ಡಿ. ಮಹಾಪ್ರಬಂಧ, ೨೦೧೮).

೧೧

ಕೊಪ್ಪಳದ ಚಂದ್ರಾಮ ಬಂಡೆಯ ನಿಗೂಢ ಹೆಜ್ಜೆಗಳು

ದೇವರಕೊಂಡಾರೆಡ್ಡಿ*


ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಒಂದಾದ ಕೊಪ್ಪಳವು ಅದೇ ಹೆಸರಿನ ಜಿಲ್ಲಾ ಕೇಂದ್ರವಾಗಿದ್ದ ತುಂಗಭದ್ರಾ ನದಿಯ ಉತ್ತರಕ್ಕಿದೆ. ಕ್ರಿ.ಶ. ಏಳು ಮತ್ತು ಎಂಟನೆಯ ಶತಮಾನದಿಂದ ಜೈನ ಧರ್ಮದ ಮೂಲಕ ಪ್ರಸಿದ್ಧವಾದ ಈ ಸ್ಥಳವು ಕವಿರಾಜ ಮಾರ್ಗಕಾರನ ತಿರುಳ್ಗನ್ನಡ ಪ್ರದೇಶದಲ್ಲಿ ಹೆಸರುಗೊಂಡ ಸ್ಥಳಗಳಲ್ಲಿ ಒಂದಾಗಿದೆ. ಕ್ರಿ.ಪೂ. ಮೂರನೆಯ ಶತಮಾನದಲ್ಲಿದ್ದ ಅಶೋಕನ ಎರಡು ಲಘು ಶಿಲಾಶಸನಗಳು ಇಲ್ಲಿ ದೊರೆತಿದ್ದರೂ ಅವುಗಳಲ್ಲಿ ಕೊಪ್ಪಳದ ಹೆಸರಿನ ಉಲ್ಲೇಖವಿಲ್ಲ. ಚೀನಾ ಪ್ರವಾಸಿ ಹೂವನ್ ಚಾಂಗನು ಉಲ್ಲೇಖಿಸುವ ಕೊಂಕಿನ ಪುಲೋ ಎಂಬುದೇ ಕೊಪ್ಪಳವೆಂಬ ವಾದವಿದೆ. ಇದು ಬಿಟ್ಟರೆ ಕೊಪ್ಪಳ ತಾಲೂಕಿನ ಹಲಗೇರಿಯ ಶಾಸನದಲ್ಲಿ ಕೊಪಣದ ಉಲ್ಲೇಖ ಬಂದಿದೆ (ಕವಿಶಾಸಂ ॥ ಕೊಪ್ಪ ೨೨) ಕೊಪ್ಪಳದ ಸುತ್ತಮುತ್ತ ಪ್ರಾಗೈತಿಹಾಸಿಕ ಕುರುಹುಗಳು ದೊರೆತಿದ್ದು ಇದರ ಇತಿಹಾಸ ಕ್ರಿ.ಪೂ. ೧೦೦೦ಕ್ಕೆ ಹೋಗುತ್ತದೆ.

ಕೊಪ್ಪಳವು ಸುತ್ತಲೂ ಬೆಟ್ಟಗುಡ್ಡಗಳಿಂದ ಕೂಡಿದ್ದು ಉತ್ತರ ದಿಕ್ಕಿಗೆ ಬಯಲನ್ನು ಹೊಂದಿದೆ. ಅಶೋಕನ ಕಾಲದಿಂದಲೂ ಜನವಸತಿ ಪ್ರದೇಶವಾಗಿದ್ದ ಈ ಪ್ರದೇಶದಲ್ಲಿ ಮೊದಮೊದಲು ಬೌದ್ಧ ಧರ್ಮದ ಕುರುಹುಗಳು ಕಾಣಬರುತ್ತವೆ. ಅಶೋಕನ ಶಾಸನಗಳು ದೊರೆತಿರುವ ಪಾಲ್ಕಿಗುಂಡು ಪ್ರದೇಶ ಮತ್ತು ಈಗಿನ ಗವಿಮಠ ಪ್ರದೇಶವು ಆರಂಭದಲ್ಲಿ ಬೌದ್ಧ ನೆಲೆಗಳಾಗಿದ್ದವು. ಮುಂದೆ ಇವು ಎರಡೂ ನೆಲೆಗಳು ಜೈನ ನೆಲೆಗಳಾಗಿ ಪರಿವರ್ತನೆಯಾಗುತ್ತವೆ. ಪಾಲ್ಕಿ ಗುಂಡು ಬೆಟ್ಟದ ಮೇಲೆ ನಮಗೆ ಸಿಗುವ ಜೈನ ಕುರುಹುಗಳು ಮುಂದೆ ಬೆಟ್ಟದ ಕೆಳಗಿನ ಗ್ರಾಮಕ್ಕೆ ಸ್ಥಳಾಂತರವಾಗುತ್ತವೆ. ಕ್ರಿ.ಶ. ೧೦ನೆಯ ಶಮತಾನದ ನಂತರ ಕೊಪ್ಪಳದ ಈಗಿನ ಚಂದ್ರಾಮ ಬಂಡೆ ಪ್ರದೇಶವು ಜೈನಧರ್ಮದ ಕೇಂದ್ರವಾಗಿ ಮಾರ್ಪಡುತ್ತದೆ. ಈ ಪ್ರದೇಶ ಗುಹೆಗಳಿಂದ ಬಂಡೆಗಳಿಂದ ಕೂಡಿದ್ದು, ನೀರಿನ ಆಸರೆ ಇದ್ದು ಮುನಿಗಳ ವಾಸಕ್ಕೆ ಯೋಗ್ಯವಾಗಿರುತ್ತದೆ. ಹೀಗಾಗಿ ಇಲ್ಲಿ ಅನೇಕ ಮುನಿಗಳು ಇದ್ದ ಹಾಗೂ ತಮ್ಮ ಜೀವವನ್ನು ಮುಡುಪಿದ ಕುರುಹಾಗಿ ಅನೇಕ ಬಂಡೆ ಶಾಸನಗಳು ದೊರೆತಿವೆ.

ಈ ಚಂದ್ರಾಮ ಬಂಡೆಯನ್ನು ಕೊಪ್ಪಳದ ಈಗಿನ ಜೈನ ಬಸದಿಯ ಸಮೀಪದಿಂದ ಹತ್ತಲು ಹಳೆಯ ಕಾಲದ ಮೆಟ್ಟಿಲುಗಳಿವೆ. ಇತ್ತೀಚೆಗೆ ಹೊಸ ಮೆಟ್ಟಿಲುಗಳನ್ನೂ ಮಾಡಿರುತ್ತಾರೆ. ಈ ಬಂಡೆಯ ಮೇಲೆ ನೀರಿನ ಎರಡು ಸಹಜ ದೊಣೆಗಳಿವೆ. ಈ ಬಂಡೆಯ ಪಶ್ಚಿಮಕ್ಕೆ ಇನ್ನೊಂದು ನೀರಿನ ದೊಣೆ ಇದೆ. ಒಂದು ದೊಡ್ಡ ಗುಂಡು ಚಂದ್ರಾಮ ಬಂಡೆಯ ಮೇಲೆ ಇದ್ದು ಸಹಜ ಗವಿಯನ್ನು ಸೃಷ್ಟಿಸಿದೆ. ಈ ಪ್ರದೇಶದಲ್ಲಿನ ಕಲ್ಲು ಹೆಚ್ಚಿಗೆ ಸವೆದಿದ್ದು ಒಂದು ಕಾಲದಲ್ಲಿ ಇಲ್ಲಿ ಜನರ ಓಡಾಟ, ಚಟುವಟಿಕೆ ಹೆಚ್ಚಿಗೆ ಇದ್ದದ್ದನ್ನು ಸೂಚಿಸುತ್ತದೆ.

ಇಂತಹ ಚಂದ್ರಾಮ ಬಂಡೆಯಲ್ಲಿ ಬಂಡೆಯ ಮೇಲೆ ಹೆಜ್ಜೆಗಳನ್ನು ಮೂಡಿಸಿದ್ದು ಇವು ಒಂದೇ ರೀತಿಯಲ್ಲಿಲ್ಲ. ಜೊತೆಗೆ ಒಂದೇ ಕಡೆ ಇಲ್ಲ. ಚಂದ್ರಾಮ ಬಂಡೆಯ ದಕ್ಷಿಣದ ಬಂಡೆಯ ಬಳಿಯಿಂದ ಆರಂಭವಾಗುವ ಹೆಜ್ಜೆಗಳು ಅದೇ ಬಂಡೆಯ ಉತ್ತರದ ಜೈನ ಶಾಸನಗಳವರೆಗೂ ಮುಂದುವರಿದಿದೆ. ಈ ಹೆಜ್ಜೆಗಳು ಕವಲಾಗಿ ಪಶ್ಚಿಮಕ್ಕಿರುವ ನೀರಿನ ಆಸರೆಗೆ ಒಂದು ಶಾಖೆ ಬಂದಿದ್ದರೆ, ಅದು ಅಲ್ಲಿಂದ ಮುಂದುವರಿದು ಪಶ್ಚಿಮದ ನೀರಿನ ಆಸರೆಗೂ ಬಂದಿವೆ. ಈ ಪಶ್ಚಿಮದ ನೀರಿನ ಆಸರೆಯ ಬಳಿ ಮೇಲ್ಭಾಗದಲ್ಲಿ ಇಕ್ಕಟ್ಟಾದ ಗವಿಯೊಂದಿದ್ದು ಕೊಳದ ಕಲ್ಲಿನಲ್ಲಿಯೇ ಹೆಜ್ಜೆಗಳನ್ನು ಮೂಡಿಸಿ ಗವಿಯವರೆಗೂ ಬಿಡಿಸದ್ದಾರೆ. ಗವಿಯು ಸಹಜ ಗವಿಯಾಗಿದ್ದು ಒಬ್ಬ ಸಣ್ಣ ಮನುಷ್ಯ ಇಕ್ಕಟ್ಟಾಗಿ ಕುಳಿತು ತೆವಳುವಷ್ಟಿದೆ. ಏಳುವ ಪ್ರಶ್ನೆಯೆಂದರೆ ನೀರಿನ ಕೊಳ ಕಣ್ಣಿಗೆ ಕಾಣುವಂತಿದ್ದರೂ ಅದಕ್ಕೂ ಹೆಜ್ಜೆಗಳನ್ನು ಕಲ್ಲಿನಲ್ಲಿ ಮೂಡಿಸುವ ಅವಶ್ಯಕತೆ ಏನಿತ್ತು ಎಂಬುದು. ಮತ್ತೆ ಒಂದೇ ಸಾಲಿನಲ್ಲಿ ದಕ್ಷಿಣದ ದೊಡ್ಡ ಗುಂಡಿನಿಂದ ಉತ್ತರದ ಶಾಸನ ಬಂಡೆಗಳವರೆಗೆ ಕಣ್ಣಿಗೆ ಕಾಣುವಂತೆ ಸಮತಟ್ಟಾದ ನೆಲ ಇದ್ದರೂ ಅಷ್ಟು ದೂರಕ್ಕೂ ಸುಮಾರು ೨೦೦ ಅಡಿಗಳವರೆಗೆ ಹೆಜ್ಜೆಗಳನ್ನೂ ಒಂದಾದ ಮೇಲೊಂದರಂತೆ ಬಿಡಿಸಿರುವುದು ಕುತೂಹಲಕ್ಕೆ ಎಡೆಮಾಡಿದೆ. ಇಂದು ಈ ಹೆಜ್ಜೆಗಳನ್ನು ನಾವು ಹೆಜ್ಜೆಯನ್ನಿಟ್ಟು ನಡೆಯುವುದು ಕಷ್ಟದ ಕೆಲಸ. ಕಲ್ಲಿನಲ್ಲಿ ಕೊರೆದಿರುವ ಹೆಜ್ಜೆಗಳು ಮನುಷ್ಯನ ಹೆಜ್ಜೆಯ ಅಳತೆಯಲ್ಲಿಯೇ ಇವೆ. ಆದರೆ

* # ೩೫/೧, ೨೦ನೆಯ ಮುಖ್ಯರಸ್ತೆ, ವೆಂಕಟೇಶ್ವರ ಲೇಔಟ್, ಬಿ.ಟಿ.ಎಂ. ೧ನೇ ಹಂತ, ಬೆಂಗಳೂರು-೫೬೦೦೭೮. ಮೊ. ೯೫೯೧೯೮೭೯೧೮



ಹೆಜ್ಜೆಗಳು ಎಂದಾಗ ಬಹಳ ಅಲಂಕಾರಿಕವಾಗಿ ಏನಿಲ್ಲ. ಹೆಜ್ಜೆಗಳು ಕೆಲವೆಡೆ ಸರಿಸುಮಾರು ಆಯತಾಕಾರದಲ್ಲಿದ್ದರೆ ಕೆಲವೆಡೆ ಹಿಮ್ಮಡಿ ಕಡೆ ಚಿಕ್ಕದಾಗಿದ್ದು ಬೆರಳುಗಳ ಕಡೆಗೆ ಅಗಲವಾಗಿದೆ. ಆದರೆ ಬಹಳಷ್ಟು ಹೆಜ್ಜೆಗಳು ಆಯತಾಕಾರದಲ್ಲಿರುವುದೇ ಹೆಚ್ಚು. ಕೆಲವು ಕಡೆ ಮೂಲ ಹೆಜ್ಜೆಗಳ ಸಾಲಿನಿಂದ ಎತ್ತದ ಸ್ಥಳಕ್ಕೆ ಮಾರ್ಗದರ್ಶನ ಮಾಡುವ ಹೆಜ್ಜೆಗುರುತುಗಳನ್ನು ಆರಂಭದಲ್ಲಿ ಹೆಜ್ಜೆಗಳನ್ನು ಬಿಡಿಸಿ ಎತ್ತರಕ್ಕೆ ಹತ್ತಬೇಕಾದಾಗ ಮೆಟ್ಟಿಲಾಗಿ ಪರಿವರ್ತಿಸಿರುವುದು ಉಂಟು. ಇವು ಬಯಲಿಗೆ ಬಂದ ನಂತರ ಹೆಜ್ಜೆಗಳಾಗಿ ಪರಿವರ್ತನೆಗೊಂಡಿವೆ. ಜಲಮೂಲ/ಕೊಳದ ಬಳಿಗೆ ಹೋದ ಮೇಲೆ ನಂತರ ಕಾಣುವುದಿಲ್ಲ. ಈ ಚಂದ್ರಾಮ ಬಂಡೆಯ ಪಶ್ಚಿಮಕ್ಕೆ ಒಂದು ಕೊಳವಿದ್ದು ಕೊಳದಿಂದ ಸುಮಾರು ೨೦ ಅಡಿ ಎತ್ತರದಲ್ಲಿ ಒಂದೇ ಕಲ್ಲಿನಲ್ಲಿ ಉಂಟಾಗಿರುವ ಗವಿ ಇದೆ. ಕಡಿದಾದ ಈ ಗವಿಗೆ ಹೋಗಲು ಸಾಧ್ಯವಾಗುವಂತೆ ಕೊಳದಿಂದ ಮೆಟ್ಟಿಲುಗಳನ್ನು ಕೊರೆದಿದ್ದಾರೆ. ಮೆಟ್ಟಿಲುಗಳೆಂದರೆ ಹೆಜ್ಜೆಗಳನ್ನು ಇಟ್ಟುಕೊಂಡು ಒಬ್ಬ ಮನುಷ್ಯ ಕಷ್ಟಪಟ್ಟು ಹತ್ತಬಹುದಾದದಷ್ಟು ಇಕ್ಕಟ್ಟಾಗಿ ಬಿಡಿಸಲಾಗಿದೆ.


ಈ ಗವಿ ಯಾವ ಕಾರ್ಯಕ್ಕೆ ಬಳಕೆಯಾಗುತ್ತಿತ್ತೆಂದು ಊಹಿಸುವುದು ಕಷ್ಟ. ಏಕೆಂದರೆ ಈ ಗವಿಯ ಆಕಾರ ಒಬ್ಬ ಸಣ್ಣಗಿರುವ ಮನುಷ್ಯ ಕುಳಿತು ತೆವಳಲು ಆಗುವಂತಿದೆ. ಈ ಕೊಳದ ಉತ್ತರದ ಭಾಗದಲ್ಲಿ ಟೊಳ್ಳಾದ ಬಂಡೆಯೊಂದು ಹಿಂದಿನ ಬೆಟ್ಟಕ್ಕೆ ಅಂಟಿಕೊಂಡಂತಿತ್ತು. ಆದರೆ ಯಾವುದೋ ಕಾಲದಲ್ಲಿ ಅದು ಮುರಿದಿದೆ.

ಈ ಮೇಲಿನ ವಿವರಗಳು ಕೊಪ್ಪಳದ ಚಂದ್ರಾಮ ಬಂಡೆಯ ಭೌತಿಕ ವಿವರಣೆಯಾಯಿತು. ಆದರೆ ಹೆಜ್ಜೆಗಳು ಯಾವ ಕಾಲದಲ್ಲಿ ಅಥವಾ ಯಾರ ಕಾಲದಲ್ಲಿ ಕಂಡರಣೆಯಾಯಿತೆಂಬ ಬಗ್ಗೆ ಮಾಹಿತಿ ಇಲ್ಲ. ಚಂದ್ರಾಮ ಬಂಡೆಯಲ್ಲಿನ ಚಟುವಟಿಕೆಗಳು ಜೈನ ಶಾಸನಗಳೊಂದಿಗೆ ಸಂಬಂಧ ಹೊಂದಿವೆ. ಉಳಿದಂತೆ ಬೌದ್ಧವಾಗಲಿ, ವೈದಿಕ ಧರ್ಮದವರ ಚಟುವಟಿಕೆಗಳು ಇಲ್ಲಿ ಕಾಣುತ್ತಿಲ್ಲ. ಹೀಗಾಗಿ ಜೈನರ ಉಚ್ಛ್ರಾಯ ಸ್ಥಿತಿಯ ಕಾಲದಲ್ಲಿ ಈ ಹೆಜ್ಜೆಗಳು ನಿರ್ಮಾಣವಾಗಿರಬೇಕು. ಇದೂ ಕೂಡ















ಊಹೆ ಮಾತ್ರ. ಕ್ರಿ.ಶ. ೭ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೆ ಕೊಪ್ಪಳದ ಈ ಭಾಗ ಜೈನಧರ್ಮದ ಹೆಚ್ಚಿನ ಚಟುವಟಿಕೆಯ ಕೇಂದ್ರವಾಗಿತ್ತು ಬಹುಶಃ ಕ್ರಿ.ಶ. ೧೦ನೆಯ ಶತಮಾನದ ಅಂತ್ಯದಲ್ಲಿ ಈ ಹೆಜ್ಜೆ ಗುರುತುಗಳನ್ನು ಮೂಡಿಸಿರಬೇಕು. ಯಾರೋ ಒಬ್ಬ ಪ್ರಸಿದ್ಧ ಮುನಿಯೊಬ್ಬರು ಇಲ್ಲಿ ನೆಲೆಸಿದ್ದು ಅವರು ಈ ಬೆಟ್ಟದಲ್ಲಿ ನಡೆದಾಡಿದ ಹೆಜ್ಜೆ ಗುರುತುಗಳನ್ನು ಆ ಕಾಲದ ಭಕ್ತರು ಮೂಡಿಸಿರಬೇಕೆಂದು ಊಹಿಸಬಹುದಾಗಿದೆ.

೧೩ನೆಯ ಶತಮಾನದ ನಂತರ ಇಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ಚಟುವಟಿಕೆಗಳು ಕಡಿಮೆಯಾಗಿ ಶ್ರೀ ವೈಷ್ಣವ ಹಾಗೂ ಇಸ್ಲಾಂ ಕುರುಹುಗಳು ಕಾಣಿಸಿಕೊಳ್ಳುತ್ತವೆ. ಚಂದ್ರಾಮ ಬಂಡೆಯ ಪಶ್ಚಿಮಕ್ಕೆ ಇರುವ ಕೊಳದ ಬಳಿ ಇರುವ ಸಹಜ ಗವಿಗೂ ಮಾನವನಿರ್ಮಿತ ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಇವು ಹೆಜ್ಜೆ ಗುರುತುಗಳಲ್ಲ. ಗವಿಗೆ ಹತ್ತಿ ಹೋಗಲು ಮಾಡಿರುವ ಮೆಟ್ಟಿಲುಗಳು. ಇಷ್ಟಾದರೂ ಚಂದ್ರಾಮ ಬಂಡೆಯ ಹೆಜ್ಜೆ ಗುರುತುಗಳ ರಚನೆ ನಿಗೂಢವಾಗಿಯೇ ಉಳಿಯುತ್ತದೆ.

೧೨

ತೀರ್ಥಹಳ್ಳಿಯ ಸಾಂತರಸರ ಕಾಲದ ಅಪ್ರಕಟಿತ ಶಾಸನಗಳು

ಜಿ.ಕೆ. ದೇವರಾಜಸ್ವಾಮಿ[*] ಎಲ್. ರಾಘವೇಂದ್ರ[**]

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಿಂದ ಹದಿನೈದು ಕಿ.ಮೀ. ದೂರದಲ್ಲಿ ದಾನಸಾಲೆ ಎಂಬ ಗ್ರಾಮವಿದೆ. ದಾನಶಾಲೆಯಲ್ಲಿ ಕ್ರಿ.ಶ. ೧೧೦೩ರ ತ್ರಿಭುವನಮಲ್ಲ ಸಾಂತರಸನ ಕಾಲದ ಪ್ರಸಿದ್ಧ ಶಾಸನವು ಪಾಳುಬಸದಿಯ ದಿಬ್ಬದ ಮೇಲಿದೆ. ಈ ಪ್ರದೇಶಕ್ಕೆ ಒಳಗೊಂಡಂತೆ ಕುಕ್ಕೆ ಎಂಬ ಊರಿದೆ. ಇಲ್ಲಿಯ ರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಪ್ರಸ್ತುತ ಎರಡು ಶಾಸನ ಹಾಗೂ ಸವೆದ ತುಂಡು ಶಾಸನ ಮತ್ತು ಶಿಲ್ಪಗಳು ಇವೆ.

ದೊರೆತಿರುವ ಎರಡು ಶಾಸನಗಳು ಹೊಂಬುಜ ಸಾಂತರರ ಕಾಲಕ್ಕೆ ಸೇರಿದವುಗಳಾಗಿವೆ. ಐತಿಹಾಸಿಕ ವ್ಯಕ್ತಿಯಾದ ಜಿನದತ್ತರಾಯನು ಹೊಂಬುಜಕ್ಕೆ ಆಗಮಿಸಿ ಅಲ್ಲಿ ಪದ್ಮಾವತೀ ದೇವಿಯನ್ನು ಸ್ಥಾಪಿಸಿದನೆಂದು ಐತಿಹ್ಯವಿದೆ. ಇವನು ಸಿದ್ಧಾಂತ ಕೀರ್ತಿ ಗುರುಗಳ ಮಾರ್ಗದರ್ಶನದಿಂದ ಹೊಂಬುಜವನ್ನು ರಾಜಧಾನಿಯನ್ನಾಗಿಸಿದ್ದಲ್ಲದೆ, ಹೊಂಬುಜದ ಸುತ್ತಲಿನ ಕೋಟೆ, ಹಾಗೂ ಸಾಗರ ತಾಲ್ಲೂಕು ಗೋವರ್ಧನ ಗಿರಿ ನಿರ್ಮಿಸಿದನೆಂದು ಶಾಸನ ತಿಳಿಸುತ್ತದೆ.

ಜಿನದತ್ತರಾಜನಿಂದ ಆರಂಭವಾದ ಸಾಂತರ ರಾಜ್ಯಮನೆತನವು, ಮುಂದಿನ ರಾಜರ ಆಡಳಿತದಿಂದ ವಿಸ್ತಾರವಾಗಿ ಶಿವಮೊಗ್ಗ ಜಿಲ್ಲೆಗೆ ಸೇರಿದ ಶಿಕಾರಿಪುರ, ಸಾಗರ, ಸೊರಬ, ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕುಗಳನ್ನೊಳಗೊಂಡು ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಮೂಡುಗೆರೆ, ಕೊಪ್ಪ, ಕಳಸ ಹಾಗೂ ಕಿಗ್ಗದ ಅಕ್ಕಪಕ್ಕ ಪ್ರದೇಶವು ಸೇರಿದ್ದವು. ಈ ಒಟ್ಟು ಪ್ರದೇಶವು 'ಸಾಂತಳಿಗೆ ಸಾಸಿರ' ಎಂಬ ಪುಟ್ಟ ರಾಜ್ಯವಾಗಿತ್ತು.

ಸಾಂತರರು ಯಾವಾಗಲೂ ಸಾಮಂತರಾಗಿಯೇ ಇದ್ದವರು. ಅವರು ಮಹಾಮಂಡಲೇಶ್ವರ ತನಕ್ಕಿಂತ ಮೇಲೇರಲಿಲ್ಲ. ಆದರೆ ತಮ್ಮ ಪಾಲಿಗೆ ಬಂದ ಹೊಣೆಯನ್ನು ಸರಿಯಾಗಿ ನಿರ್ವಹಿಸಿದರು. ಅಂದಂದಿನ ಒತ್ತಡ ಮತ್ತು ಅನಿವಾರ್ಯತೆಗೆ ಹೊಂದಿಕೊಂಡು ಚಲನಶೀಲರಾಗಿದ್ದುದು ಈ ಮನೆತನದ ಜೀವಂತಿಕೆಯ ಲಕ್ಷಣ[೧].

ಜಿನದತ್ತನಿಂದ ಪ್ರಾರಂಭವಾಗಿ ಹಲವಾರು ರಾಜರುಗಳ ಆಳಿದ ನಂತರ ಒಂಬತ್ತನೆಯ ಶತಮಾನದ ಕಡೆಯಲ್ಲಿ ಆಳಿದ ತೊಲಾಪುರುಷ ವಿಕ್ರಮ ಸಾಂತರನು ಬಹಳ ಪ್ರಸಿದ್ಧನಾದವನು. ಸಾಂತರರ ವಂಶಕ್ಕೆ ಕೀರ್ತಿ ತಂದು ನಿಲ್ಲಿಸಿದವನು. ಸಾಂತರರ ಕ್ರಮಬದ್ಧ ವಂಶವೃಕ್ಷವು ವಿಕ್ರಮ ಸಾಂತರನಿಂದ ಪ್ರಾರಂಭವಾಗುವುದು ಎಂಬ ಕೃಷ್ಣರಾವ್ ಎಂ.ವಿ. ಹಾಗೂ ಕೇಶವಭಟ್ಟ ಅವರ ಅಭಿಪ್ರಾಯವು ಯೋಗ್ಯವಾಗಿದೆ.

ಮಹೋಗ್ರ ವಂಶಕ್ಕೆ ಸೇರಿದ ವಿಕ್ರಮ ಸಾಂತರನು ಹಿರಣ್ಯಗರ್ಭ ದಾನದಿಂದ ಹಿಡಿದು ಮಹಾದಾನಗಳನ್ನು ಮಾಡಿದನೆಂದು ಶಾಸನಗಳು ತಿಳಿಸುತ್ತವೆ.

ಹಿರಣ್ಯಗರ್ಭಮಿರ್ದು ಮಹಾದಾನಂ ಮಡಿಯಧಿವಾಸದ
ಪಲಬರರಸುಗಳಂ ಕೊಂದು ಮೋಡಿಸಿಯಂ
ತೆಂಕಸೂಲದ ಹೊಳೆ ಪಡುವ ತವನಸಿ ಬಡಗಂ ಬಂದಗೆ
ಮೇರೆಯಾಗೆ ಸಾನ್ತಳಿಗೆ ಸಾಸಿರ ನಾಡುಮಂ
ಏಕಾಯತ್ತಂಮ್ಮಾಡಿ ಕುದುಕಾಚಾರ್ಯ್ಯನುಂ
ದಾನವಿನೋದನುಂ ವಿಕ್ರಮ ಸಾನ್ತರನುಮೆನಿಸಿದಂ[೨]

ವಿಕ್ರಮ ಸಾನ್ತರನು ಹಲವಾರು ದಾನಾದಿಗಳನ್ನು ಮಾಡಿದನೆಂದೂ, ಯುದ್ಧದಲ್ಲಿ ಹಲವರನ್ನು ಕೊಂದನೆಂದು ಶಾಸನಗಳು ಬಣ್ಣಿಸಿವೆ. ಪ್ರಸ್ತುತ ಕುಕ್ಕೆ ಗ್ರಾಮದ ಈ ಶಾಸನವೂ ಇವನ ಕಾಲದ್ದಾಗಿದೆ.

* # ೫೭, 'ತ್ರಯೀ', ಮೈಸೂರು ಲ್ಯಾಂಪ್ಸ್ ಲೇಔಟ್, ಚನ್ನನಾಯಕನಪಾಳ್ಯ, ೨ನೇ ಹಂತ, ನಾಗಸಂದ್ರ ಅಂಚೆ, ಬೆಂಗಳೂರು-೭೩. ಮೊ. ೯೪೮೦೪೮೧೦೫೦೭
** ಶಿಕ್ಷಕರು, ೧೭ನೇ ಅಡ್ಡರಸ್ತೆ, ಸೊಪ್ಪುಗುಡ್ಡೆ, ತೀರ್ಥಹಳ್ಳಿ, ಶಿವಮೊಗ್ಗ-೫೭೭೪೩೨. ಮೊ. ೯೪೪೮೪೩೬೮೭೦

ಈ ಶಾಸನದಲ್ಲಿ ಕಾಲ ನಿರ್ದೇಶಿಸಲು ಆಗುವುದಿಲ್ಲ, ಶಾಸನದ ಮೊದಲ ಆರು ಸಾಲುಗಳು ಸವೆದಿವೆ. ಇತರ ಶಾಸನಾಧಾರದಿಂದ ತಿಳಿಯಬಹುದಾಗಿದೆ.

ಶಾಸನದ ಕಾಲ : ಹೊಂಬುಜದ [E.C. ೧೫, ಹೊಸನಗರ ೧೦೮] ಶಾಸನವು ಕಾಲವನ್ನು ನಿರ್ದೇಶಿಸಿದೆ. ಈ ಶಾಸನದ ಪ್ರಶಸ್ತಿ ಭಾಗ ಹಾಗೂ ಪ್ರಸ್ತುತ ಕುಕ್ಕೆ ಶಾಸನದ ಪ್ರಶಸ್ತಿ ಭಾಗವು ಒಂದೇ ಸಮನಾಗಿದೆ. ಹೊಂಬುಜದ ಶಾಸನದಲ್ಲಿ 'ವಿಕ್ರಮಾದಿತ್ಯ ಶಾನ್ತರಂ ಶಕವರ್ಷ ಮೆಣ್ಬುನೂಱಿಪ್ಪತ್ತನೆಯ ವರ್ಷಂಪ್ರವರ್ತಿಸೆ' ಎಂದಿದೆ. ಅಂದರೆ ಶಕವರ್ಷ ೮೨೦ ಎಂದರೆ ಕ್ರಿ.ಶ. ೮೯೮ ಆಗಿದ್ದು, ಅದೇ ಕಾಲದಲ್ಲಿ ವಿಕ್ರಮಸಾನ್ತರನು ಆಳುತ್ತಿದ್ದುದು ಸ್ಪಷ್ಟ. ಆದ್ದರಿಂದ ಪ್ರಸ್ತುತ ಶಾಸನದ ಕಾಲವನ್ನು ಕ್ರಿ.ಶ. ೯೦೦ರ ಕಾಲದ್ದೆಂದು ಪರಿಗಣಿಸಬಹುದು.

ಶಾಸನವು ಮೂರು ಅಡಿ ಎತ್ತರ ಒಂದೂವರೆ ಅಡಿ ಅಗಲವಾಗಿದೆ, ಯಾವುದೇ ಚಿತ್ರವಿಲ್ಲ, ಶಾಸನವು ಬಳಪದ ಕಲ್ಲಿನದಾಗಿದ್ದು ಹಲಸಿನ ಮರದ ಬುಡದಲ್ಲಿ ನಿಲ್ಲಿಸಲಾಗಿದೆ. ಹದಿನೇಳು ಸಾಲುಗಳು ಮಾತ್ರ ಕಾಣಿಸುತ್ತವೆ. ಶಾಸನ ಕಲ್ಲಿನ ಹಿಂಬದಿಯಲ್ಲಿ ಅಮೃತ ಕಲಶದ ರೀತಿಯಲ್ಲಿ ಗೀರುಚಿತ್ರ ಬಿಡಿಸಲಾಗಿದೆ. ಶಾಸನದ ಮೊದಲ ಭಾಗವು ತುಂಬಾ ಸವೆದಿದೆ. ಪಾಠ ನಷ್ಟವಾಗಿದೆ.

ಶಾಸನದ ಪಾಠ [ಕಾಲ ಕ್ರಿ.ಶ. ಸು. ೮೯೮]



೧) ಸ್ವಸ್ತಿ . . . . ಶ್ರೀ
೨) ಸಮ್ಬ . ಕ . . . .
೩) ವ್ಯ ಚಿತ್ತ . . . .
೪) ನ ಮೆ ಮ್ಬಯ . . . . .
೫) ಪ್ರಿ
೬) . . . . ಸ್ವಸ್ತ್ಯ
೭) ನವದ್ಯ ದರ್ಶನ ಮಹೋಗ್ರ
೮) ಕುಲತಿಲಕ ನಯ ಪ್ರತಾ
೯) ಪ ಸಂಮ್ಪನ್ನಂ ಪರಚಕ್ರ ಗಂ
೧೦) ಣ್ಡಂ ಸೆಣ್ಡಮಲ್ಲಾತಂ ಕಾರ್ಮ್ಮುಕ
೧೧) ರಾಮಾಮಾತ್ಯ ಮಹೋದ್ವಿರಳಗ್ರ
೧೨) ನಾರಾಯಣ ಕಲಿಕಾಲ ಬ್ರಹ್ಮ
೧೩) ಶ್ರೀ ವಿಕ್ರಮಾದಿತ್ಯ ಸಾನ್ತರಂ ತೊ
೧೪) ಲಾ ಪುರುಷಮು ಹಿರಣ್ಯಗರ್ಭ
೧೫) ಮುಮಿಟ್ಟು ೧೦೦ ನೂರು ಗದ್ಯಾಣ
೧೬) ಹೊನ್ನಕೊ . . . ರ ಕೊಟ್ಟು ಸ
೧೭) ಮುನಮಾ . . . . . . ಜೆಯ್ಯ

ಸಾರಾಂಶ : ನಿಷ್ಕಳಂಕ (ಅನವದ್ಯ) ವಾದ, ಮಹಾ ಉಗ್ರ ವಂಶಕ್ಕೆ ಕುಲ ತಿಲಕನಾದ. ಪ್ರತಾಪಸಂಪನ್ನ, ಪರಚಕ್ರಗಂಡ, ಸೆಣ್ಡಮಲ್ಲ, ಕಾರ್ಮುಕರಾಮ, ಉಗ್ರನಾರಾಯಣ, ಕಲಕಾಲ ಬ್ರಹ್ಮ ಎಂದು ವಿಕ್ರಮ ಸಾನ್ತರನನ್ನು ಶಾಸನವು ಹೊಗಳಿದೆ. ಇವನು ತುಲಾಪುರುಷ ಹಾಗೂ ಹಿರಣ್ಯಗರ್ಭ ದಾನಗಳನ್ನು ಮಾಡಿ ನೂರು ಗದ್ಯಾಣ ಹೊನ್ನನ್ನು ದಾನ ಮಾಡಿರುವುದನ್ನು ಶಾಸನವು ವಿಶೇಷವಾಗಿ ತಿಳಿಸಿದೆ.

ವಿಕ್ರಮ ಸಾನ್ತರನಿಗೆ, ತೊಲಾಪುರುಷ ಶಾನ್ತರ, ವಿಕ್ರಮಾದಿತ್ಯ ಶಾನ್ತರ ಎಂಬ ಹೆಸರುಗಳಿದ್ದುದು ಶಾಸನದಿಂದ ತಿಳಿಯುತ್ತದೆ. ಇವನು ಕ್ರಿ.ಶ. ಒಂಬತ್ತನೇ ಶತಮಾನದ ಕೊನೆ ಹತ್ತನೇ ಶತಮಾನದ ಆರಂಭದಲ್ಲಿದ್ದು ಸಾಕಷ್ಟು ಪ್ರಸಿದ್ಧನಾಗಿದ್ದನು

ಶಾಸನಾಧಾರದಿಂದ ಇವನ ಕಾಲವನ್ನು ಕ್ರಿ.ಶ. ೮೮೦ರಿಂದ ೯೨೦ರವರೆಗೆ ಎಂದು ತಿಳಿಯಬಹುದು. 'ಸಾಂತರರಿಗೆ ಗಂಗರ ಗೆಳೆತನವಿದ್ದರೂ, ರಾಷ್ಟ್ರಕೂಟರ ಸಾಮನ್ತರಾಗಿದ್ದರು. ಅದರಿಂದ ಸಾಂತರರ ಅರಸ ವಿಕ್ರಮ ಸಾಂತರನು ತಮ್ಮ ಎರೆಯರಾದ ರಾಷ್ಟ್ರಕೂಟ ಮುಮ್ಮಡಿ ಇಂದ್ರರಾಜ ದೋರನ ಪರವಾಗಿ ಹೋರಾಡಿದನು. ಆದರೆ ಹೋರಾಟದಲ್ಲಿ ಗಂಗರ ರಾಜನಿಂದ ವಿಕ್ರಮ ಸಾಂತರನು ಕ್ರಿ.ಶ. ೯೨೦ರಲ್ಲಿ ಹತನಾದನು. ತಲೆಯನ್ನು ಕತ್ತರಿಸಲಾಯಿತು.[೨] ವಿಕ್ರಮಸಾನ್ತರನು ಈ ದಾನವನ್ನು ದಾನಸಾಲೆಯ ಪ್ರದೇಶದಲ್ಲಿ ದಾನ ಮಾಡಿರುವುದನ್ನು ಶಾಸನ ದಾಖಲಿಸಿದೆ. ಯಾವ ವಿಷಯಕ್ಕೆ ದಾನ ನೀಡಿದನೆಂಬುದು ಸ್ಪಷ್ಟವಿಲ್ಲ.

ಮತ್ತೊಂದು ಶಾಸನ : ಮೇಲಿನ ಶಾಸನದ ಪಕ್ಕದಲ್ಲಿಯೇ ಇನ್ನೊಂದು ಶಾಸನದ ಕಲ್ಲನ್ನು ನಿಲ್ಲಿಸಲಾಗಿದೆ. ಶಾಸನವು ಮೂರು ಅಡಿ ಎತ್ತರ ಹಾಗೂ ಒಂದು ಅಡಿ ಅಗಲವಾಗಿದೆ. ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ. ಶಾಸನವು ಮೇಲ್ಭಾಗ ಹಾಗೂ ಕೆಳ ಬಲಭಾಗಕ್ಕೆ ಬರೆಯಲ್ಪಟ್ಟಿದೆ. ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿ ಹಾಗೂ ವಿಷಯಾಧಾರದಿಂದ ಇದನ್ನು ಕ್ರಿ.ಶ. ೧೯೩೦ರ ಕಾಲದ್ದೆನ್ನಬಹುದಾಗಿದೆ.

ಶಾಸನವು ಹದಿನಾಲ್ಕು ಸಾಲುಗಳನ್ನು ಹೊಂದಿದೆ. ಶಿಲ್ಪವು ಶಾಸನದ ಮಧ್ಯದಲ್ಲಿ ಬಲಕ್ಕೆ ಕೊರೆದಿದೆ. ಮೇಲೆ ಹಸು ಮತ್ತು ಕರುವಿನ ಉಬ್ಬುಶಿಲ್ಪ ಕೆಳಭಾಗದಲ್ಲಿ ಸ್ತ್ರೀಯು ಕುಳಿತಿದ್ದು, ಬಲಕೈ ಅಭಯ ನೀಡುತ್ತಿರುವಂತಿದೆ. ಎಡಕೈ ತೊಡೆಯ ಮೇಲೆ ಊರಿದಂತಿದೆ. ಶಿಲ್ಪವು ತೀರಾ ಸಾಮಾನ್ಯವಾಗಿದೆ.

ಶಾಸನ ಪಾಠ

೧) @ ಸ್ವಸ್ತಿಶ್ರೀ ಚಾ
೨) ಗಿ ಜೋಗಮ(ಬ್ಬೆ)
೩) ಗ ಳ್ಸಾನ್ತರ ನರಸಿ
೪) ಯಪ್ಪ ಸುಗ್ಗಬ್ಬೆ
೫) ಇಪ್ಪತ್ತು ಗದ್ಯಾಣ
೬) ಹೊನ್ನಕೊಟ್ಟು ಸಾಲೆ
೭) ಯ
೮) ಮಾ
೯) ಡಿ
೧೦) ದಳು
೧೧) ಮಂಗ
೧೨) ಳಮ
೧೩) ಹಾ
೧೪) ಶ್ರೀ





ಸಾರಾಂಶ : ಸಾಂತರನ ಅರಸಿಯಾದ ಸುಗ್ಗಬ್ಬೆಯು ಇಪ್ಪತ್ತು ಗದ್ಯಾಣ ಹೊನ್ನ ಕೊಟ್ಟು ಸಾಲೆ ಮಾಡಿದಳು. ಜೋಗಮಬ್ಬೆ ಸುಗ್ಗಬ್ಬೆ ಇಬ್ಬರೂ ಸೇರಿ ದಾನ ನೀಡಿದ್ದಾರೆ ಎಂದರೆ ಮಾಡಿದಳು ಪ್ರಯೋಗವಿದೆ.

ಪಾಠದಲ್ಲಿ ಚಾಗಿ ಎಂಬುದು ಚಾಗಿ ಸಾಂತರ ಚಲಂದಕರಾಮ (ಕ್ರಿ.ಶ. ೯೨೦-೩೨) ನಾಗಿದ್ದಾನೆ. ಇವನು ವಿಕ್ರಮಾದಿತ್ಯ ಸಾನ್ತರನ ಮಗ. ಇವನ ಪತ್ನಿ ಅಳುಪರ ರಣಂಜಯನ ಮಗಳು ಏಂಜಲದೇವಿ. ಶಾಸನೋಕ್ತ ಜೋಗಮಬ್ಬೆಯು ಚಾಗಿ ಸಾನ್ತರನ ಅಬ್ಬೆಯಾದಲ್ಲಿ, ಇವಳ ಬಗ್ಗೆ ಬೇರೆ ಶಾಸನಗಳಲ್ಲಿ ಮಾಹಿತಿ ಲಭ್ಯವಿಲ್ಲ. ಚಾಗಿ ಸಾನ್ತರನ ಪತ್ನಿ ಬನವಾಸಿಯ

ಕಾಮದೇವನ ಮಗಳು ಲಕ್ಷ್ಮಿ ಎಂದು ಶಾಸನಗಳು ತಿಳಿಸುತ್ತವೆ. ಹಾಗಾದರೆ ವಿಕ್ರಮ ಸಾನ್ತನಿಗೆ ಜೋಗಮಬ್ಬೆ ಮತ್ತೊಬ್ಬಳು ರಾಣಿಯಾಗಿರಬೇಕು ಎಂದು ಊಹಿಸಬೇಕಾಗುತ್ತದೆ.

ಸಾನ್ತರ ನರಸಿ ಸುಗ್ಗಬ್ಬೆ ಎಂಬಲ್ಲಿ, ಚಾಗಿ ಸಾನ್ತರನ ಅರಸಿ ಅಳುಪ ಅರಸು ಮನೆತನದ ಏಂಜಲದೇವಿ ಎಂಬುದು ಈಗಾಗಲೇ ಶಾಸಗಳಿಂದ ತಿಳಿದಿದೆ. ಹಾಗಾದಲ್ಲಿ ಸುಗ್ಗಬ್ಬೆ ಚಾಗಿ ಸಾನ್ತರನ ಇನ್ನೊಬ್ಬಳು ರಾಣಿಯಾಗಿರಬೇಕು. ಆಗ ಜೋಗಮಬ್ಬೆ ಮತ್ತು ಸುಗ್ಗಬ್ಬೆ ಅತ್ತೆ ಸೊಸೆ ಎಂದು ಪರಿಗಣಿಸಬಹುದು. ಜೋಗಮಬ್ಬೆ ಆದ ಮೇಲೆ ಶಾಸನದಲ್ಲಿ ಸವೆದಿದೆ (ಮ) ಎಂದು ಪರಿಗಣಿಸಿದರೆ ಜೋಗಮಬ್ಬೆಯ ಮಗಳೂ ಸಾನ್ತರನ ಅರಸಿ ಸುಗ್ಗಬ್ಬೆ ಎಂದು ಅರ್ಥೈಸಿದರೆ ತಾಯಿ–ಮಗಳು ಆಗುತ್ತಾರೆ. ಹಾಗೂ 'ಮರ್ಮ್ಮಳ್' ಎಂದು ಓದುವ ಸಾಧ್ಯತೆ (ಮೊಮ್ಮಗಳು) ಇದ್ದರೂ ಶಾಸನದ ಕಲ್ಲಿನಲ್ಲಿ ಸ್ಥಳವಿಲ್ಲ. ಒಟ್ಟಾರೆ ಸಾನ್ತರನ ಅರಸಿ ಸುಗ್ಗಬ್ಬೆ ಎಂದು ಹೇಳಿದ್ದರೂ ಜೋಗಮಬ್ಬೆ ಯಾರೆಂಬುದು ಸ್ಪಷ್ಟವಿಲ್ಲ. 'ಸುಗ್ಗಬ್ಬೆ ಸಾಲೆಯ ಮಾಡಿದಳು' ಎಂದು ಹೇಳಬಹುದು. ಸಾಲೆ ಅಥವಾ 'ಶಾಲೆ' ಹಾಗೂ 'ಭೋಜನ ಶಾಲೆ' ಎಂದೂ ತಿಳಿಯಬಹುದಾಗಿದೆ. ಸಾಂತರನನ್ನು ಚಾಗಿ ಸಾನ್ತರ ಎಂದು ಪರಿಗಣಿಸಬಹುದು ಶಾಸನದಲ್ಲಿ 'ಚಾ' ಅಕ್ಷರವಿರುವಲ್ಲಿ ಸ್ವಲ್ಪ ಸವೆದಿದೆ.

ಈ ಶಾಸನವಿರುವ ಸ್ಥಳವು ದಾನಸಾಲೆ ಊರಿಗೆ ಸಮೀಪವಿದೆ. ದಾನಸಾಲೆಯಲ್ಲಿ ಕ್ರಿ.ಶ. ೧೧೦೩ರ ಶಾಸನದಲ್ಲಿ[೪] ತ್ರಿಭುವನಮಲ್ಲ ಸಾಂತರ ದೇವ ಬಸದಿ ನಿರ್ಮಿಸಿ ದಾನಗಳನ್ನು ನೀಡಿರುವುದು ತಿಳಿಯುತ್ತದೆ. ಈ ದೊಡ್ಡ ಶಾಸನದಲ್ಲಿ ಹೇಳಿದ ಬಸದಿ ನೆಲಸಮವಾಗಿ ಮಣ್ಣಿನ ದಿಬ್ಬವಿದೆ. ಶಾಸನ ಹಾಗೂ ಎರಡು ನಿಸಿಧಿ ಕಲ್ಲುಗಳು ಪ್ರಸ್ತುತ ದಾನಸಾಲೆಯಲ್ಲಿ ಕಾಡಿನ ನಡುವೆ ಈ ಸ್ಥಳಗಳು ಸುತ್ತುವರಿದಿವೆ. ಪ್ರಸ್ತುತ ಶಾಸನದ ಕಾಲವನ್ನು ಕ್ರಿ.ಶ. ಸು. ೯೩೦ ಎಂದು ಪರಿಗಣಿಸಬಹುದು. ಆಕಾಲದಲ್ಲಿ ಸುಗ್ಗಬ್ಬೆ ಮಾಡಿಸಿದ್ದ ಸಾಲೆ ಮುಂದಿನ ದಿನಗಳಲ್ಲಿ 'ದಾನ ಸಾಲೆ' ಎಂದು ಹೆಸರು ಪಡೆದಿರಬೇಕು. ಅಂದರೆ ಕ್ರಿ.ಶ. ೧೧೦೩ರ ಕಾಲದ ಪ್ರಸಿದ್ಧ ಬಸದಿಗೂ ಮೊದಲು ಈ ಸ್ಥಳ ದಾನಸಾಲೆಯು ಜೈನ ಕೇಂದ್ರವಾಗಿದೆ. ಪ್ರಸ್ತುತ ಶಾಸನವು ಸಾಂತರನ ಅರಸಿ 'ಸಾಲೆ' ಮಾಡಿಸಿರುವ ಬಗ್ಗೆ ತಿಳಿಸಿದೆ. ಮತ್ತು ರಾಷ್ಟ್ರಕೂಟರ ಕಾಲದಲ್ಲೇ ಈ ಸ್ಥಳವು ಪ್ರಸಿದ್ಧ ಜೈನ ಕೇಂದ್ರವನ್ನಾಗಿ ಸಾಂತರರು ಮಾಡಿರುವುದನ್ನು ತಿಳಿಸುತ್ತದೆ.

ಇದರ ಪಕ್ಕದಲ್ಲೇ ಇನ್ನೊಂದು ಕಲ್ಲು ಇದರಂತೆಯೇ ಇದೆ. ಅದೂ ಇದರಷ್ಟೆ ಎತ್ತರ ಅಗಲವಾಗಿದ್ದು ಕೆಳಭಾಗದಲ್ಲಿ ಎಡಕ್ಕೆ ಹಸು ಕರುವಿನ ಚಿತ್ರ, ಪಕ್ಕದಲ್ಲಿ ಮನುಷ್ಯ ಕುಳಿತಿರುವಂತೆ ಇದೆ. ಮೇಲ್ಭಾಗದಲ್ಲಿ ಶಾಸನ ಬರೆದಿದ್ದು, ಅಲ್ಲಲ್ಲಿ ಕೆಲವು ಅಕ್ಷರ ಕಾಣಿಸುತ್ತಿವೆ. ಉಳಿದಂತೆ ತುಂಬಾ ಸವೆದಿದೆ. ಈ ಎಲ್ಲಾ ಶಾಸನ ಕಲ್ಲುಗಳನ್ನೂ ಮಚ್ಚುಗತ್ತಿಯನ್ನು ಹರಿತ ಮಾಡಲು ಬಳಸಿದ್ದಾರೆ.

[ಕ್ಷೇತ್ರ ಕಾರ್ಯಕ್ಕೆ ಕರೆದುಕೊಂಡು ಹೋದ ಗಣವಳ್ಳಿ ಸತ್ಯನಾರಾಯಣ ಪತ್ರಿಕಾ ವರದಿಗಾರರು ತೀರ್ಥಹಳ್ಳಿ ಇವರಿಗೆ ಹಾಗೂ ಪಾಠ ಪರಿಷ್ಕರಣೆ ಮಾಡಿಕೊಟ್ಟ ಗೆಳೆಯ ಎಸ್. ಕಾರ್ತಿಕ್, ಬೆಂಗಳೂರು ಇವರಿಗೆ ಧನ್ಯವಾದಗಳು].

ಅಡಿಟಿಪ್ಪಣಿಗಳು

೧. ಹೊಂಬುಜ ವೈಭವ, ಹಂ.ಪ. ನಾಗರಾಜಯ್ಯ, ಸ್ವಪ್ನ, ೨೦೧೩, ಪುಟ ೩.

೨. E.C. 16, ಹೊಸನಗರ, ಹುಂಚ–೮೦, ಸಾಲು ೧೩–೧೪.

೩. ಹೊಂಬುಜದ ವೈಭವ, ಹಂ.ಪ. ನಾಗರಾಜಯ್ಯ, ಸ್ವಪ್ನ–೨೦೧೩, ಪುಟ ೫೨.

೪. E.C. 13, ತೀರ್ಥಹಳ್ಳಿ ೧೭೩, (VII ತೀರ್ಥ ೧೯೨), ದಾನಶಾಲೆ.

೧೩

ಅಪ್ರಕಟಿತ ಆತ್ಮಾರ್ಪಣೆ ಶಿಲ್ಪಗಳು ಮತ್ತು ಹೊಸ ಶೋಧ

ಕೆ.ಆರ್. ನರಸಿಂಹನ್*

ಜಕ್ಕೂರನ್ನು ವಿಮಾನ ಹಾರಾಟ ತರಬೇತಿ ಕೇಂದ್ರವನ್ನಾಗಿ ಹಲವು ದಶಕಗಳಿಂದ ಗುರುತಿಸಿಕೊಂಡಿದೆ. ಇದು ಬೆಂಗಳೂರು ಮಹಾನಗರದ ಉತ್ತರ ದಿಕ್ಕಿನ ಯಲಹಂಕದ ವಿಶೇಷವಾದೊಂದು ಪ್ರದೇಶವಾಗಿದೆ.

ಆರಂಭಿಕ ನೋಟಕ್ಕೆ ಜಕ್ಕೂರು ಹೊಯ್ಸಳರ ಆಧಿಪತ್ಯಕ್ಕೆ ಒಳಪಟ್ಟಿದ್ದನ್ನು ಇಲ್ಲಿನ ಪ್ರಕಟಿತ ಶಾಸನದಿಂದ ತಿಳಿಯುತ್ತೇವೆ. ಜಕ್ಕೂರಿನಲ್ಲಿದ್ದ ಅಲ್ಲಾಳನಾಥ ದೇವರ ಅಮೃತಪಡಿ ನೈವೇದ್ಯಗಳಿಗೆ ಅಲ್ಲಾಳಸಂದ್ರ ಗ್ರಾಮವನ್ನು ಕೊಡುಗೆಯಾಗಿ ನೀಡಿದ್ದ ಚಾರಿತ್ರಿಕ ಸಂಗತಿಯು ಜಕ್ಕೂರಿನ ಧಾರ್ಮಿಕ ಪರಂಪರೆಯ ನೋಟಕ್ಕೆ ನಿದರ್ಶನವಾಗಿದೆ. ಇದೀಗ ಇಲ್ಲಿ ಹೊಸದಾಗಿ ಶೋಧಿತವಾಗಿರುವ ಶಾಸನವು ಜಕ್ಕೂರಿನ ಇತಿಹಾಸ ನೋಟವನ್ನು ಹತ್ತನೇ ಶತಮಾನಕ್ಕೆ ಕೊಂಡೊಯ್ಯುವುದಾಗಿದ್ದರೆ, ಇದೇ ಸ್ಥಳದಲ್ಲಿ ಲಭ್ಯವಾಗಿರುವ ವಿಶಿಷ್ಟವಾದ ಸ್ಮಾರಕದಿಂದ ಇಲ್ಲಿನ ಧಾರ್ಮಿಕ ಜಗತ್ತು ವಿಸ್ತರಿಸುವಂತಿದೆ.

ಜಕ್ಕೂರಿನ ಹೊಸ ಶಾಸನ

ಜಕ್ಕೂರಿನ ಹೊಸ ಶಾಸನವು ಐದು ಸಾಲುಗಳದಾಗಿದ್ದು ಅದರ ಪಾಠವನ್ನು ಇಲ್ಲಿ ಗಮನಿಸಬಹುದಾಗಿದ್ದು ಅದು ಹೀಗಿರುತ್ತದೆ:

೧. :ಳ್ಗಂಗವಾಡಿ ತೊಂಭತ್ತಾರುಸಾಯಿ

೨. ರಮನೇಕಛತ್ರಚ್ಛಾಯೆಯೊಳರಸುಗೆಯ್ಯು

೩. ತ್ತಿರೆ ಸ್ವಸ್ತಿ ಸಮಸ್ತ ಪ್ರಸಸ್ತಿಸಹಿತ ಶ್ರೀಮತ್

೪. ನವಲಕ್ಕದಹಳಾಧಿಪತಿಯಪ್ಪ ಬಲ್ಲವ

೫. ಪತಿರಾಯಂಗೊಬೆಟ್ಟದ ಬಿರುದೆಸೆದೇವನ ಕಾಳಗ

ಶಾಸನದ ಆರಂಭದ ಎರಡು ಅಥವಾ ಮೂರಕ್ಷರಗಳು ಶಿಲೆಯ ಭಾಗ ಒಡೆದು ಹೋಳಾದ ಕಾರಣಕ್ಕೆ ಲಭ್ಯವಿರುವುದಿಲ್ಲ. ಉಳಿದಂತೆ ಶಾಸನದ ಭಾಗ ಸ್ಪಷ್ಟವಿದೆ. ಇದರಲ್ಲಿನ 'ಗಂಗವಾಡಿತೊಂಭತ್ತಾರು ಸಾವಿರ' ಎಂಬುದು ಗಂಗ ಸಾಮ್ರಾಜ್ಯದ ಆಡಳಿತ ಪರಿಧಿಯನ್ನು ಸೂಚಿಸುವುದಾಗಿದ್ದು, ಏಕಚಕ್ರಾಧಿಪತ್ಯವನ್ನು ಹೇಳುತ್ತಿದೆ. ಇದರ ಒಡೆತನವನ್ನು ಹೊಂದಿದವನಾಗಿ, ಸಮಸ್ತ ಪ್ರಶಸ್ತಿ ಸಹಿತನಾದ 'ನವಲಕ್ಕದಹಳಾಧಿಪತಿಯೊಬ್ಬನನ್ನು ಅರಿತುಕೊಳ್ಳಲು ಇಲ್ಲಿ ಅವಕಾಶವಿದೆ. ಈತನನ್ನು 'ಬಲ್ಲವಪತಿರಾಯ'ನೆಂದು ಕರೆಯಲಾಗಿದ್ದು ಈತನಿಗೆ 'ಗೊಬೆಟ್ಟ' ಎಂಬ ಬಿರುದೂ ಇದ್ದದ್ದನ್ನು ತಿಳಿಸುತ್ತದೆ. ಇವನ ಕಾಳಗದ ಸೂಚನೆ ಶಾಸನದಲ್ಲಿದೆ. ಇಲ್ಲಿ ಸಂಭವಿಸಿದ ಯುದ್ಧವು ಯಾವುದೆಂಬುದನ್ನು ಅರಿತುಕೊಳ್ಳುವುದಕ್ಕೆ ಸಹಾಯಕ ಸಾಮಗ್ರಿಗಳು ಸದ್ಯಕ್ಕೆ ಲಭ್ಯವಿರುವುದಿಲ್ಲ. ಇದೊಂದು ಪ್ರಶಸ್ತಿ ಶಾಸನವಾಗಿದೆ.

ಇತಿಹಾಸದ ಹಿನ್ನೆಲೆಯಲ್ಲಿ ಜಕ್ಕೂರಿನ ಹೊಸ ಶಾಸನವನ್ನು ಸ್ಥೂಲವಾಗಿ ಗಮನಿಸಬಹುದು. ಗಂಗ ರಾಷ್ಟ್ರಕೂಟರ ಸಾಮರಸ್ಯವನ್ನು ಇಲ್ಲಿನ ಶಾಸನವು ಸೂಚಿಸುವಂತಿದೆ. ಆದರೆ ಇದರಲ್ಲಿ ಉಲ್ಲೇಖಗೊಂಡಿರುವ ಶಾಸನದ ಕಡೆಯಲ್ಲಿನ 'ಕಾಳಗ'ವೆಂಬ ಶಬ್ದವು ಕುತೂಹಲಕ್ಕೆಡೆ ಮಾಡುವಂತಿದೆ. ಇಲ್ಲಿ ದಾಖಲೆಗೊಂಡ ಕಾಳಗವು ಜಕ್ಕೂರಿನ ಸುತ್ತಲಿನ ಹತ್ತಾರು ಮೈಲಿಗಳಲ್ಲಿ ಸಂಭವಿಸಿರಬಹುದಾದ ಯಾವುದಾದರೊಂದು 'ಯುದ್ಧ'ವನ್ನು ನಿರ್ದೇಶಿಸುವಂತಿರಬೇಕು.

ಇಲ್ಲಿನ ಶಾಸನದ ಕಾಲವನ್ನುಇತರ ಐತಿಹಾಸಿಕ ಘಟನೆಗಳಿಂದ ಆಲೋಚಿಸಬೇಕಾದ ಅಗತ್ಯವಿರುತ್ತದೆ. 'ನನಲಕ್ಕದಳಾಧಿಪತಿ'ಯೆಂಬುದು ಇದೇ ಬಿರುದು ಹೊಂದಿ ಖ್ಯಾತನಾದ, 'ಗೊಬೆಟ್ಟ'ನೆಂಬ ಬಿರುದಾಂಕಿತನಾದವನು ಬಹುಪಾಲು

---

* ನಿವೃತ್ತ ಪ್ರಾಧ್ಯಾಪಕ, # ೨೦೩, 'ಸಿಂಚನ', ೧೦ನೇ 'ಎ' ಅಡ್ಡರಸ್ತೆ, '೧ನೇ ಮುಖ್ಯರಸ್ತೆ, ಮಾರುತಿನಗರ, ಯಲಹಂಕ, ಬೆಂಗಳೂರು. ಮೊ. ೯೪೪೮೪೧೩೦೪೫







ಗೋವರ್ಧನನನ್ನು ವಶಪಡಿಸಿಕೊಂಡ ರಾಷ್ಟ್ರಕೂಟರ ದೊರೆಯಾದ ಮೂರನೇ ಇಂದ್ರರಾಜನ (ಕಾಲ ಹತ್ತನೇ ಶತಮಾನ) ಯಾವುದಾದರೂ ಸಮರದ ವೃತ್ತಾಂತವೂ ಆಗಿರಬಹುದೆಂಬ ಸಾಧ್ಯತೆಯನ್ನು ನಿರಾಕರಿಸುವಂಥದ್ದೇನಲ್ಲ.

ಜಕ್ಕೂರಿನ ಸ್ಮಾರಕವು ಧಾರ್ಮಿಕ ಆತ್ಮಬಲಿದಾನದ ಪ್ರಕಾರಕ್ಕೆ ಹತ್ತಿರವಿರುವುದೆನ್ನಬಹುದು. ಇದರ ಹಿನ್ನೆಲೆಯಲ್ಲಿ ಧರ್ಮವೊಂದೆ ಮುಖ್ಯವಾದದ್ದಾಗಿದ್ದು ಮತ್ತಾವುದೇ ಶೌರ್ಯದ ಘಟನೆಗಳೊಂದಿಗೆ ಸಮೀಕರಿಸುವುದು ಸದ್ಯದಲ್ಲಿ ಸಾಧ್ಯವಿಲ್ಲ.

ಜಕ್ಕೂರಿನ ಶಿಲ್ಪವು ಸುಮಾರು ಏಳು ಅಡಿ ಎತ್ತರವಿದ್ದು, ನಾಲ್ಕು ಅಡಿ ಅಗಲವಿದೆ. ಇತರ ವೀರಶಿಲ್ಪಗಳಂತೆಯೆ ಇದನ್ನು ಸಹ ಮೂರು ಹಂತಗಳಲ್ಲಿ ಬಿಡಿಸಿದ್ದಾರೆ. ಇಲ್ಲಿನ ಶಿಲ್ಪವು ಪ್ರಮಾಣಬದ್ಧ ಕೆತ್ತನೆಯಿಂದ, ಒಪ್ಪ ಓರಣಗಳಿಂದ ಕೂಡಿದ್ದಾಗಿದೆ. ಕೆಳಹಂತದಲ್ಲಿ ಸುಲಕ್ಷಣಶೋಭಿತವಾದ ಅಶ್ವವೊಂದನ್ನು ರಾಹುತ (ಸೇವಕ) ಹಿಡಿದು ನಿಂತಿದ್ದಾನೆ. ಕುದುರೆಯು ಸಾಧಾರಣ ಅಲಂಕರಣದಿಂದ ಕಂಡುಬರುತ್ತದೆ. ಎರಡನೆಯ ಅಥವಾ ಮಧ್ಯ ಹಂತದಲ್ಲಿ ಶಿಲ್ಪಸೌಂದರ್ಯಕ್ಕೆ ಸಾಕ್ಷಿಯಾದ ಕೆತ್ತನೆಯಿದೆ. ಸತಿ ಪತಿಗಳೊಂದಾದ ಭಕ್ತಿಯೆಂದು ಇದನ್ನು ತಿಳಿಯಲವಕಾಶವಿದೆ. ಪ್ರತಿಷ್ಠಿತ ವ್ಯಕ್ತಿಯಾಗಿದ್ದನೆಂಬುದರಲ್ಲಿ ಅನುಮಾನವಿಲ್ಲ. ಅಲಂಕಾರಭೂಷಿತನಾದ ಪುರುಷನು ತನ್ನೆರಡು ಕೈಗಳನ್ನು ಎದೆಯ ಸಮೀಪದಲ್ಲಿ 'ಧ್ಯಾನಭಂಗಿ'ಯಲ್ಲಿ ಹಿಡಿದಿದ್ದಾನೆ. ಈತನ ಮಡಿಸಿದ ಎರಡು ಕಾಲುಗಳು ಸಹ ವಿಶೇಷವಾದ ಆಸನದಂತೆಯೇ ಕಂಡುಬರುವುದಾಗಿದೆ. ಪುರುಷನ ಬಲಭಾಗಕ್ಕೆ ಕುಳಿತ ಮಹಿಳೆ ಕಂಡುಬರುತ್ತಾಳೆ. ಈಕೆಯೂ ಸಹ ಪುರುಷನನ್ನೇ ಹೋಲುವ ಭಂಗಿಯಲ್ಲಿ ಕುಳಿತವಳಾಗಿದ್ದಾಳೆ. ಅಲಂಕರಣವೂ ಕಂಡುಬರುತ್ತದೆ. ಆದರೆ ತನ್ನೆರಡು ಕೈಗಳಲ್ಲಿ 'ಪತ್ರ' ಇಲ್ಲವೆ 'ಪುಷ್ಪ'ವೊಂದನ್ನು ಹಿಡಿದು ಧನ್ಯತೆಯಿಂದ (ಪತಿಗೆ) ಸಮರ್ಪಣೆ ಮಾಡುತ್ತಿದ್ದಾಳೆ. ಇವರೀರ್ವರ ನಡುವೆ ಪೀಠಸ್ಥವಾದ, ಪೂಜಾರ್ಹ ಶಂಖವಿರುತ್ತದೆ. ಇದಲ್ಲದೆ ಮಹಿಳೆಯ ಪಕ್ಕಕ್ಕೆ ಕಮಂಡಲವನ್ನಿಟ್ಟಿರುವುದು ಕಾಣುತ್ತದೆ. ಇನ್ನುಳಿದ ಮೇಲಿನ ಮೂರನೇ ಹಂತದಲ್ಲಿ ಸ್ವರ್ಗದ ಚಿತ್ರಣವಿದೆ. ಇಲ್ಲಿಯೂ ಸಹ ಸತಿಪತಿಯರಿಬ್ಬರ ಚಿತ್ರವಿರುವುದು ವಿಶೇಷವೆನ್ನಬಹುದು.

ಜಕ್ಕೂರಿನಲ್ಲಿ ಲಭ್ಯವಾದ ಸ್ಮಾರಕವನ್ನು ಹೋಲುವಂತಿರುವ ಇನ್ನೂ ಹಲವಾರು ಶಿಲ್ಪಗಳನ್ನು ಇತರೆಡೆಗಳಲ್ಲಿಯೂ ಕಾಣಬಹುದೆಂಬುದಕ್ಕೆ ಮಾಲೂರು ಮಡಿವಾಳ, ಗೌರಿಬಿದನೂರು ನಗರಗೆರೆಗಳ ಉದಾಹರಣೆಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು.

ಬ್ಯಾಡರಹಳ್ಳಿಯ ಬಲಿದಾನ ಶಿಲ್ಪ

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ದೇವನಹಳ್ಳಿಯು ತಾಲ್ಲೂಕು ಕೇಂದ್ರವಾಗಿದೆ. ದೇವನಹಳ್ಳಿ–ದೊಡ್ಡಬಳ್ಳಾಪುರ ಮುಖ್ಯರಸ್ತೆಯಲ್ಲಿ ಸುಮಾರು ಹನ್ನೆರಡು ಕಿ.ಮೀ. ಸಾಗಿ ಬಂದು, ಮುಖ್ಯರಸ್ತೆಯ ಬಲಬದಿಯಲ್ಲಿ ಸುಮಾರು ಎರಡು ಕಿ.ಮೀ. ದೂರದಲ್ಲಿ ಸಿಗುವ ಗ್ರಾಮ ಬ್ಯಾಡರಹಳ್ಳಿ ಗ್ರಾಮದ ಹೊರವಲಯದಲ್ಲಿ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಮರಗಳ ಹೊದರಿನ ನಡುವೆ ವಿಶಿಷ್ಟವಾದೊಂದು ಸ್ಮಾರಕ ಶಿಲ್ಪವನ್ನು ಹಾಗೂ ಇದರಪಕ್ಕದಲ್ಲಿ ತಮಿಳು ಶಾಸನವನ್ನು ನೋಡಬಹುದು. ಶಾಸನ–ಶಿಲ್ಪಗಳಿಗೆ ಒಂದಕ್ಕೊಂದು ಸಂಬಂಧವಿದ್ದಿರಬಹುದಾದ ಸಾಧ್ಯತೆಯಿದೆ.

ಬ್ಯಾಡರಹಳ್ಳಿಯ ಆತ್ಮಬಲಿದಾನ ಶಿಲ್ಪವು ಹಲವು ಕಾರಣಗಳಿಂದಾಗಿ ವಿಭಿನ್ನವಾದದ್ದೆಂದು ಹೇಳಬಹುದು. ಇಲ್ಲಿರುವ ಶಿಲ್ಪದ ಮೊದಲ ಹಂತದಲ್ಲಿ ರಾಜಲಾಂಛನವಾದ ಬೆಳ್ಗೊಡೆಯನ್ನು ಸಾಲಂಕೃತ ಶೋಭಿತವಾದ ಕುದುರೆಯ ಮೇಲೆ ಹಿಡಿದ ಪುರುಷನನ್ನು ಕಾಣುತ್ತೇವೆ. ಈತನೊಬ್ಬ ರಾಜನ ಸಮೀಪದ ವ್ಯಕ್ತಿಯಾಗಿರುವ ಸಾಧ್ಯತೆಯಿದೆ. ಮುಂದಿನದು ಸಾಲು ಮೆರವಣಿಗೆ ದೃಶ್ಯವಾಗಿದೆ. ಚಾಮರ ಸತ್ತಿಗೆಗಳನ್ನು ಹಿಡಿದ ನಾರಿಯರು, ಅವರ ಮುಂಭಾಗದಲ್ಲಿ ಗೋಪುರದಂತಹ ಸಾಧನವಿರುತ್ತದೆ. ಅನಂತರ ಕಹಳೆ ಮೊಳಗಿಸುತ್ತಿರುವ ವಾದ್ಯಗಾರ; ಗಂಟೆಜಾಗಟೆ, ಕಮಂಡಲ, ಶಂಖಗಳಂತಹ ಪರಿಕರಗಳನ್ನು ಕಾಣಬಹುದು. ಇವೆಲ್ಲವೂ ಸಹ ಆತ್ಮಾರ್ಪಣೆ ಇಲ್ಲವೇ ಅಗ್ನಿಪ್ರವೇಶಕ್ಕೆ ಸಿದ್ಧತೆಗೊಂಡಿರುವುದನ್ನು ತಿಳಿಸಿಕೊಡುವಂತಿದೆ.

ಎರಡನೆಯ ಹಂತದಲ್ಲಿ ವೀರಾಸನದೊಂದಿಗೆ ಕುಳಿತ ಶ್ರೇಷ್ಠ ಪುರುಷನೊಂದಿಗೆ ಪದ್ಮಾಸನವನ್ನು ಹಾಕಿ ಕುಳಿತ ವೀರರಮಣಿಯಂತೆ ಕಾಣುವ ಮಹಿಳೆಯಿದ್ದಾಳೆ. ಇಲ್ಲಿನ ಮಹಿಳೆಯ ಚಿತ್ರ ಜಕ್ಕೂರಿನ ಮಹಿಳೆಯೊಂದಿಗೆ ಹೋಲಬಹುದಾಗಿದ್ದು, ಧ್ಯಾನಾವಸ್ಥೆಯಲ್ಲಿ ಕಂಡರಿಸಿರುವುದೇ ಇಲ್ಲಿನ ವ್ಯತ್ಯಾಸವಷ್ಟೇ ಆಗಿದೆ. ಆದರೆ ಇಲ್ಲಿನ ಪುರುಷಚಿತ್ರ ವಿಭಿನ್ನವೆಂದೇ ಹೇಳಬೇಕು. ಈತನೊಬ್ಬ ರಾಜಪುರುಷನಾಗಿರುವ ಎಲ್ಲ ಸಾಧ್ಯತೆಗಳಿವೆ. ಈತನಲ್ಲಿ ಕಂಡುಬರುವ ಎಲ್ಲ ಲಕ್ಷಣಗಳೂ ಇದನ್ನೇ ಪ್ರತಿಪಾದಿಸುತ್ತವೆ. ವಿಶಿಷ್ಟವಾದ ತುರುಬು, ಅಗಲವಾದ ಕರ್ಣಕುಂಡಲಗಳನ್ನು ಈತ ಧರಿಸಿರುತ್ತಾನೆ. ಕಂಠೀಹಾರ, ಎದೆ–ಕಟಿಭಾಗಗಳಲ್ಲಿ ಧರಿಸಿರುವ ಇತರ ಅಲಂಕರಣ ಸಾಮಗ್ರಿ, ಬಲಗೈಲಿ ಹಿಡಿದಿರುವ ವೀರಾಯುಧಗಳು ಈತನ ಧೀರೋದಾತ್ತ ನಿಲುವಿಗೆ ಸಾಕ್ಷಿಯಾಗಿವೆ. ಎಡಗೈಯನ್ನು ಮೊಣಕಾಲಿನ ಮೇಲೆ ಇಳಿಬಿಟ್ಟು ಕುಳಿತಿರುವ ಈತನ ಗಾಂಭೀರ್ಯವನ್ನು ಗಮನಿಸಿದರೆ ದಿಟಕ್ಕೂ ಈತನೊಬ್ಬ ರಾಜಶ್ರೇಷ್ಠ.

ಇಲ್ಲಿನ ಶಿಲ್ಪದ ಪಕ್ಕದಲ್ಲಿರುವ ಶಿಲೆಯ ಮೇಲಿರುವ ತಮಿಳು ಶಾಸನವು ಹಲವು ಮಹತ್ವದ ವಿಚಾರಗಳಿಂದ ಕೂಡಿದೆ (ನೋಡಿ: ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ ದೇವನಹಳ್ಳಿ ಶಾಸನ ಸಂಖ್ಯೆ ೧೪) ಇದರ ಕಾಲವನ್ನು ಕ್ರಿ.ಶ. ೧೦೬೭ ಎಂದು ಶಾಸನ ಸಂಪಾದಕರಾದ ಡಾ. ಬಿ.ಎಲ್. ರೈಸ್ ಅವರು ಹೇಳಿರುತ್ತಾರೆ. ವಿಕ್ರಮ ಸೋಳಮಂದಲದ ಸಣ್ಣೆನಾಡಿನ ತಿಪ್ಪೂರಿನ ಜಮೀನುದಾರನಾದ ರಾಯರಾಯ ವೇಳಾನ್ / ವಾಸವೈಯನ್ ಎಂಬಾತನ ಹೆಂಡತಿ ಸೋಮಕ್ಕ ಎಂಬಾಕೆಯು ಅಗ್ನಿಪ್ರವೇಶ ಮಾಡಿದಳು ಎಂಬ ಭಾವಾರ್ಥವನ್ನು ನೀಡಿರುತ್ತಾರೆ. ಇದು ಸದ್ಯಕ್ಕೆ ನಿರ್ಣಾಯಕವಾದದ್ದೆಂದು ಹೇಳಲಾಗದಾದರೂ, ಇದರ ಬಗ್ಗೆ ಮರುಚಿಂತನೆ ಅಗತ್ಯವಾಗಿದೆ. ಆದರೆ ಇಲ್ಲಿರುವ ಶಿಲ್ಪವನ್ನು ಚಾಳುಕ್ಯ–ಚೋಳರ ನಡುವಿನ ಸಂಘರ್ಷಗಳಲ್ಲಿನ ಯಾವುದಾದರೂ ಘಟನೆಗೆ ಸಂಬಂಧಿಸಿದ್ದೆಂದು ಊಹಿಸಬಹುದಾಗಿದೆ.

[ಇತಿಹಾಸ–ಸಂಶೋಧಕ ಕೆ. ಧನಪಾಲ್, ಶಾಸನ ತಜ್ಞ ಡಾ. ಪಿ.ವಿ. ಕೃಷ್ಣಮೂರ್ತಿ, ಜಕ್ಕೂರು ನಿವಾಸಿ ಶ್ರೀನಿವಾಸಮೂರ್ತಿ, ಶ್ರೀಕಂಠಪ್ಪ ಹಾಗೂ ದೇವನಹಳ್ಳಿಯ ನಿವೃತ್ತ ಶಿಕ್ಷಕ ಗುರುಸಿದ್ದಪ್ಪ ಮಿತ್ರರೆಲ್ಲರಿಗೆ ನನ್ನ ಕೃತಜ್ಞತೆಗಳು.]

ಹೆಸರಘಟ್ಟದ ಅಪ್ರಕಟಿತ ಶಾಸನ

ಕೆ. ಧನಪಾಲ್* ಕೆ.ಆರ್. ನರಸಿಂಹನ್**

ಅರ್ಕಾವತಿ ನದಿಯ ದಂಡೆಯ ಮೇಲಿರುವ ಹೆಸರಘಟ್ಟವು ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿದ ಹೋಬಳಿ ಕೇಂದ್ರವಾಗಿದೆ. ಇದನ್ನು ಇಂದು ಅಂತರರಾಷ್ಟ್ರೀಯ ಮಟ್ಟದ ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಒಂದು ಪ್ರಮುಖ ಸ್ಥಳವಾಗಿ ಗುರುತಿಸಲಾಗುತ್ತದೆ. 'ಶಿವನಸಮುದ್ರ'ವೆಂದು ವಿಜಯನಗರದ ಅರಸರ ಕಾಲದಲ್ಲಿ ಬಣ್ಣಿಸಲಾದ ಹೆಸರಘಟ್ಟವು ಅಗ್ರಹಾರವಾಗಿ ಸಹ ಪ್ರಸಿದ್ಧವಾದದ್ದು. ಶೈವ-ವೈಷ್ಣವ ಧರ್ಮಸಮನ್ವಯದಂತೆ ಕಂಡುಬರುವ ಇಲ್ಲಿನ ಆಂಜನೇಯ ದೇವಾಲಯದ ಮುಂದೆ ಪ್ರಾಚೀನ ಕನ್ನಡ ಶಾಸನವನ್ನು ಶೋಧಿಸಲಾಗಿದೆ.


ಕನ್ನಡಲಿಪಿ-ಭಾಷೆಗಳಲ್ಲಿರುವ ಇಲ್ಲಿನ ಶಾಸನವನ್ನು ಕೆರೆಯ ದಂಡೆಯ ಚಂದ್ರಮೌಳೇಶ್ವರ ದೇವಾಲಯದ ಮುಂಭಾಗದಲ್ಲಿ ಆಂಜನೇಯ ದೇವಾಲಯದ ಗೋಡೆಗೆ ಒರಗಿಸಿಟ್ಟಿರುವ ಎರಡು ಪ್ರತ್ಯೇಕ ಕಲ್ಲುಬಂಡೆಗಳ ಮೇಲೆ ಹತ್ತು ಸಾಲುಗಳಲ್ಲಿ ಬರೆಯಲಾಗಿದೆ. ಇದನ್ನು ಜೋಡಿಸಿಕೊಂಡು ಆಯಾ ಸಾಲುಗಳಿಗೆ ಅನುಗುಣವಾಗಿ ಅಲ್ಲೊಮ್ಮೊಮ್ಮೆ ಕಂಡುಬರುವ ಅಕ್ಷರ ಸಾಹಿತ್ಯಗಳನ್ನು ಸರಿಪಡಿಸಿಕೊಂಡು ಲಿಪಿತಜ್ಞರಾದ ಡಾ. ಪಿ.ವಿ. ಕೃಷ್ಣಮೂರ್ತಿ ಮತ್ತು ವಿದ್ವಾಂಸ ಎಸ್. ಕಾರ್ತೀಕ್ ಅವರ ನೆರವಿನಿಂದ ಪೂರ್ಣಪಾಠವನ್ನು ಸಿದ್ಧಪಡಿಸಲಾಗಿದೆ.

'ಸ್ವಸ್ತಿಸಕವರ್ಷಂ ೯೪೧ ಸಿದ್ಧಸಂವತ್ಸರಂ ಪ್ರವರ್ತಿಸುತ್ತಿರೆ...' ಎಂದು ಆರಂಭವಾಗುವ ಶಾಸನದ ಕಾಲವನ್ನು ಕ್ರಿ.ಶ. ೧೦೧೯ರ ಸಿದ್ಧಾರ್ಥ ಸಂವತ್ಸರಕ್ಕೆ ಸೇರಿಸಬಹುದು. ಮುಂದಿನ ಸಾಲಿನಲ್ಲಿ ಬರುವ **'ಎಲ್ವಾ ವಿಷಯೇ...**[೧] ರಾಜೇಂನ್ದ್ರಚೋದೇವರ್...' ಎಂಬ ಶಾಸನದ ಮಾತುಗಳಿಂದ ಇದು ಚೋಳರ ಪ್ರಸಿದ್ಧ ದೊರೆಯಾದ ರಾಜೇಂದ್ರಚೋಳನ ಆಳ್ವಿಕೆಯ ಕಾಲದ್ದೆಂದು ತಿಳಿಯಬಹುದಾಗಿದೆ. (ಆಳ್ವಿಕೆಯ ಕಾಲ ೧೦೧೪ರಿಂದ ೧೦೪೪) ಇಲ್ಲಿಗೆ ಸಮೀಪದ ಆಳ್ವಿಕೆಯ ಸೋಲದೇವನಹಳ್ಳಿಯಲ್ಲಿ, ಐಗಂಡಪುರಗಳಲ್ಲಿ ಸಹ **ರಾಜೇಂದ್ರಚೋಳ**[೨]ನ ಕಾಲದ ಶಾಸನಗಳಿರುವುದು ಗಮನಾರ್ಹವಾಗಿದೆ. ಇಲ್ಲಿನ 'ಎಲ್ವಾ ವಿಷಯ'ವೆಂಬುದು ಎಲಹಂಕದ ಮೊದಲ ಪ್ರಸ್ತಾಪವೇ ಆಗಿದೆ. ಮುಂದಿನ ಭಾಗದಲ್ಲಿ ಶಾಸನಕ್ಕೆ ಸಂಬಂಧಪಡುವ ವಸ್ತು-ವಿಷಯಗಳಿದ್ದು ಅದರ ವಿವರಣೆಯಿಂದ ಕೆಲವು ಮಹತ್ವದ ವಿಚಾರಗಳು ವ್ಯಕ್ತವಾಗುವಂತಿವೆ.

ನನ್ದಿ[೩]ಯ ಬಾಳಶಕ್ತಿಪಂಡಿತರು ಬಂದು**ಬಾಣವರ**[೪]ದಲ್ಲಿ ಎರಡು**ಭಳಾರಿ**[೫]ಗಳನ್ನು, ನಾಗಮರದಲ್ಲಿ ಒಂದು ಭಳಾರಿಯನ್ನು, ಏರಿಯ ಮೇಲೆ (ಇದು ಇಂದಿನ ಹೆಸರಘಟ್ಟದ ಅರ್ಕಾವತಿ ಕೆರೆಕಟ್ಟೆ ಇರಬೇಕು) **ಭಗವತಿ**[೬]ಯನ್ನು ಬೀರೇದೇವರನ್ನು ಪ್ರತಿಷ್ಠೆ ಮಾಡುತ್ತಾರೆ. ದೇವರ ಪೂಜಾಕೈಂಕರ್ಯಗಳಿಗಾಗಿ ಭೂದಾನ ನೀಡಲಾಗಿದೆ. ಬಾಣವರದ **ಭಟ್ಟಾರಿಕೆ**[೭]ಗೆ ೧೦ ಕೊಳಗ ಗದ್ದೆ, **ನಾಗಮರ**[೮]ದ ಭಟ್ಟಾರಕಿಗೆ ೧೦ ಕೊಳಗ ಗದ್ದೆ, ಏರಿಯ ಮೇಲಿನ ಭಗವತಿಗೆ ೫ ಕೊಳಗ ಗದ್ದೆ, ೧ ಗದ್ಯಾಣ, **ಬೀರ**[೯]ನಿಗೆ ೫ ಕೊಳಗ ಗದ್ದೆಗಳನ್ನು ದಾನವಾಗಿ ನೀಡಲಾಗಿದೆ. ಇಲ್ಲಿ ನೀಡಲಾದ ದಾನವು ಗದ್ದೆಯ ರೂಪದಲ್ಲಿದ್ದು ಅದರ ಪ್ರಮಾಣವನ್ನು ಕೊಳಗಗಳಲ್ಲಿ ಹೇಳಲಾಗಿದೆ. ಇದಲ್ಲದೆ ಅಂದಿನ ಕಾಲದಲ್ಲಿ ಚಲಾವಣೆಯಲ್ಲಿದ್ದ ಬಂಗಾರದ ಗದ್ಯಾಣದ ಪ್ರಸ್ತಾಪವೂ ಶಾಸನದಲ್ಲಿ ಕಂಡುಬಂದಿರುತ್ತದೆ.

ಶಾಸನೋಕ್ತವಾಗಿರುವ ದಾನಿಗಳನ್ನು ನಾಡಿನ ಗಾವುಂಡನಾದ **ಗಂಗಯ್ಯ**[೮]ನು ಮತ್ತು ಗಂಗಯ್ಯನ ಮಗನಾದ ಜೇದಮ್ಮನಾದ (ಜಯಧರ್ಮ) ಸಾವಂತಿಕ (ಸಾಮಂತ?) **ಸಕ್ತಿಗಾಮುಂಡ**[೮] ಎಂದು ಹೇಳಲಾಗಿದೆ. ಇಲ್ಲಿ ಬಂದಿರುವ ಭಟ್ಟಾರಕಿ-ಭಗವತಿ-ಬೀರ ಎಂಬ ಹೆಸರಿನ ದೇವರುಗಳ ಪ್ರಸ್ತಾಪಗಳು ಕೆಲವೊಂದು ಶಾಸನಗಳಲ್ಲಿ ಮತ್ತು ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಭಟಾರಿ ಎಂಬುದು ಭಳಾರಿ ಎಂಬುದರ ಮತ್ತೊಂದು ರೂಪವಾಗಿದೆ. ಆರಾಧನಾ ಪಂಥದ ಆರಂಭ ಹಂತಗಳನ್ನು ಇಲ್ಲಿನ ಹೆಸರುಗಳು ಸೂಚಿಸುತ್ತವೆ. ಶಾಸನದಲ್ಲಿ ಉಲ್ಲೇಖವಾಗಿರುವ ಸ್ಥಳಗಳ ಬಗ್ಗೆ ಗಮನಿಸುವುದಾದರೆ ಬಾಣವರವು ಇಲ್ಲಿಗೆ ಸಮೀಪದಲ್ಲಿರುವ ಬಾಣಾವರ ಆಗಿರುತ್ತದೆ. ನಾಗಮರ ಎಂಬುದು ನಾಗವಾರ ಆಗಿರುವ ಸಾಧ್ಯತೆಗಳು

* # ೧೧/೧೨, ಮಾರುತಿ ಆಸ್ಪತ್ರೆ ಹಿಂಭಾಗ, ಮಾರುತಿನಗರ, ಯಲಹಂಕ, ಬೆಂಗಳೂರು-೫೬೦೦೬೪. ಮೊ. ೯೭೪೧೪೮೮೭೭೧
** # ೨೦೩, ಸಿಂಚನ, ಮೊದಲನೇ 'ಎ' ಮೈನ್, ಮಾರುತಿನಗರ, ಯಲಹಂಕ, ಬೆಂಗಳೂರು-೫೬೦೦೬೪. ಮೊ. ೯೪೪೮೪೧೩೦೪೫



ಹೆಚ್ಚಾಗಿವೆ. ಏರಿಯ ಮೇಲಣ ಭಗವತಿ–ಬೀರ ಎಂಬುದು ಹೆಸರಘಟ್ಟದ ಕೆರೆಯ ಮೇಲಿರುವ ಪ್ರಾಚೀನ ದೇವಾಲಯದ ಆರಾಧನಾ ಮೂರ್ತಿಗಳಾಗಿರಬೇಕು ಎಂದು ಊಹಿಸಬಹುದಾಗಿದೆ.

ಹೆಸರಘಟ್ಟದ ಶಾಸನವನ್ನು ನಾಥಪಂಥದ ಹಿನ್ನೆಲೆಯಲ್ಲಿ ಮುಖ್ಯವಾದದ್ದೆಂಬುದಾಗಿ ಗಮನಿಸುವುದಕ್ಕೆ ಹೆಚ್ಚಿನ ಅವಕಾಶಗಳಿವೆ. ಈಗಾಗಲೇ ಪ್ರಸ್ತಾಪಿಸಲಾಗಿರುವ ಸೋಲದೇವನಹಳ್ಳಿ ಮತ್ತು ಐಗಂಡಪುರಗಳಲ್ಲಿರುವ ಕನ್ನಡ–ತಮಿಳು ಶಾಸನಗಳ ಜೊತೆಯಲ್ಲಿ ಹೆಸರಘಟ್ಟದ ಹೊಸ ಶೋಧಿತ ಶಾಸನವನ್ನು ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ತೊಡಗಿಸಿದಲ್ಲಿ ಸ್ಪಷ್ಟ ಹಾಗೂ ಸಮರ್ಥವಾದ ವಿಚಾರಗಳು ಅರಿವಾದೀತು.

ಶಾಸನ ಪಾಠ

೧ ಸ್ವಸ್ತಿ ಸಕವರ್ಷಂ ೯೪೧ ನೆಯ ಸಿದ್ದ ಸಂವತ್ಸರಂ ಪ್ರವರ್ತ್ತಿಸು

೨ ತ್ತಿರೆಎಲ್ಲಾವಿಷೇಯ ಮಂಡನೇ[ಘೊ*]ಣ್ಣ ಶ್ರೀರಾಜೇನ್ದ್ರಚೋಳದೇವರ್

೩ ಪ್ರಿಥ್ವೀರಾಜ್ಯಂಗೆಯುತ್ತಿರೆ ನನ್ದಯ ಬಾಳಶಕ್ತಿಪಂಡಿತರ್ ಬನ್ದು ಬಾಣ

೪ ವರದ ಭಳಾರಿರ್ಗ್ಗಮಂ ನಾಗಮರದ ಭಳಾರಿಯಮಂ ಏರಿ

೫ ಯ ಮೇಗಣ ಭಗವತಿಯವಂಬೀರನುವೊಂ ಮಾಡಿಸಿದರ್ ಬಾ

೬ ಣವರದ ಭಟ್ಟಾರಕೆಗೆಗಳ್ದೆಕೊಳಗ ೧೦ ನಾಗಮರ ಭಟ್ಟಾರಕಿ

೭ ಗೆ ಗಳ್ದೆಕೊಳಗ ೧೦ ಭಗವ್ವತಿಗೆ ಗಳ್ದೆಕೊಳಗ ೫ [ಶಜ್ಞ*] । ನಿಜ ಗ ೧

೮ [ಬೀರಗೆ] ಕೊಳಗ ೫ ನಾಳ್ಗಾವುಣ್ಣ ಗಂಗಯ್ಯ[ನ್*] ಮಗಂ ಜೇದಮ್ಮನಾದ ಸಾವಂತ್ತಿ

೯ ಕ ಸಕ್ತಿಗಾಮುಣ್ಣಂ ಬಿಟ್ಟರ್ ಧರ್ಮ್ಮವನಳಿದವಂ ಕಪಿಲೆ ಬಾಣರಾಸಿ

೧೦ ಯನಳಿದೊಂ

(ಇಲ್ಲಿನ 'ಶಕಟರೇಫ' 'ರಳ'ಗಳನ್ನು ರಕಾರ, ಳಕಾರಗಳನ್ನಾಗಿ ಬಳಸಿರುವುದನ್ನು ಗಮನಿಸಬೇಕಾಗಿ ಕೋರಲಾಗಿದೆ).

[ಡಾ. ಆರ್. ಗೋಪಾಲ್, ನಿರ್ದೇಶಕರು, ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆ, ಡಾ. ಪಿ.ವಿ. ಕೃಷ್ಣಮೂರ್ತಿ, ಶಾಸನ ತಜ್ಞರು, ಶ್ರೀ ಕಾರ್ತೀಕ್, ಬಹುಶ್ರುತ ವಿದ್ವಾಂಸರು, ಶ್ರೀ ವಿಶ್ವನಾಥ್, ಹೆಸರಘಟ್ಟ, ಜೋಗಪಾಳ್ಯದ ಶ್ರೀ ತಾಯಪ್ಪನವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.]

ಅಡಿಟಿಪ್ಪಣಿಗಳು

೧) **'ಎಲ್ವಾ ವಿಷಯ'**–ಶಾಸನದಲ್ಲಿರುವ ಈ ಪದವನ್ನು ಎಲಹಂಕ ನಾಡಿಗೆ ಅನ್ವಯಿಸಬಹುದಾಗಿದೆ. ಶಾಸನಗಳಲ್ಲಿ ಮೊದಲಿಗೆ ಕನ್ನಡ ಭಾಷೆಯಾಗಿರುವ ಪ್ರಯೋಗವಾಗಿದ್ದು ಇದಕ್ಕೆ ಹೆಸರಘಟ್ಟದ ಇಲ್ಲಿನ ಹೊಸ ಶಾಸನವೇ ಉದಾಹರಣೆಯಾಗಿರುತ್ತದೆ. ಆಲೂರು, ಐಗಂಡಪುರ, ಸೋಲದೇವನಹಳ್ಳಿಗಳ ಶಾಸನಗಳಲ್ಲಿ ಬಳಕೆಯಾಗಿರುವ 'ಇಲಾಮರಿದೇಸ' 'ಎಲವೂರು' ಎಂಬ ತಮಿಳು ಪ್ರಯೋಗಗಳು ಸಹ ಇದಕ್ಕೆ ಸಂವಾದಿಯಾದ ಪದಗಳಾಗಿವೆ. ಇಂದಿನ 'ಎಲಹಂಕ' ಹತ್ತು ಶತಮಾನಗಳ ಕಾಲದ ವಿಸ್ತಾರತೆ ಹೊಂದಿದ್ದೆನ್ನಬಹುದು.

೨) **'ರಾಜೇಂದ್ರಚೋಳ'**– ಈತ ಚೋಳ ವಂಶದ ಪ್ರಸಿದ್ಧ ದೊರೆಯಾಗಿದ್ದುರಾಜರಾಜನ ಮಗನಾಗಿದ್ದ. ಆಳ್ವಿಕೆಯ ಕಾಲ ೧೦೧೪ರಿಂದ ೧೦೪೪ ಆಗಿರುತ್ತದೆ. ಉತ್ತರದ ಗಂಗೆಯನ್ನು ದಕ್ಷಿಣಕ್ಕೆ ತಂದವನಾದ ಕಾರಣ 'ಗಂಗೈಕೊಂಡ'ನಾದ. ತಮಿಳುನಾಡಿನ 'ಗಂಗೈಕೊಂಡ ಚೋಳಪುರಂ'ನ ನಿರ್ಮಾಣಕ್ಕೆ ಕಾರಣನಾದ ಈತನ ಆಳ್ವಿಕೆಯ ಕಾಲದ ಬಹುಪಾಲು ಶಾಸನಗಳಲ್ಲಿ ಆಳ್ವಿಕೆಯ ವರ್ಷದ ಉಲ್ಲೇಖವಿರುತ್ತದೆ. ಅದರೆ ಇಲ್ಲಿನ ಶಾಸನದಲ್ಲಿ ಶಕವರ್ಷ ಸಂವತ್ಸರದ ಹೆಸರು ಗಳಿರುವುದು ವಿಶೇಷವಾದದ್ದೆನ್ನಬಹುದು.

೩) **'ಬಾಣವರ'**–ಇದು ಇಂದಿನ ಚಿಕ್ಕಬಾಣಾವರವೆಂಬ ಸ್ಥಳವಾಗಿ ಪ್ರಸಿದ್ಧವಾಗಿದೆ. ಇಲ್ಲಿನ ಶಾಸನದಲ್ಲಿ ಮಾತ್ರವಲ್ಲದೆ ಇದರ ಉಲ್ಲೇಖವು ಇನ್ನಿತರ ಶಾಸನಗಳಲ್ಲಿ ದೊರಕುತ್ತಿದೆ. 'ಬಾಣಪುರ' 'ಬಾಣವುರ'ವೆಂಬ ಪ್ರಯೋಗವು ಸೋಲದೇವನಹಳ್ಳಿ ಆಲೂರು ಐಗಂಡಪುರದಲ್ಲಿನ (ನಂ. ೦೧, ೦೭ಎ,೩೭) ಶಾಸನಗಳಲ್ಲಿರುತ್ತದೆ. ಇದೊಂದು ಪ್ರಮುಖವಾದ ವಾಣಿಜ್ಯ ಕ್ಷೇತ್ರವಾಗಿದ್ದಿರಬೇಕೆಂಬುದಕ್ಕೆ ಇಲ್ಲಿನ ವರ್ತಕನಿತ್ತ ವಿನೋದಮಾಣಿಕಶೆಟ್ಟಿಯು ನಿದರ್ಶನವಾಗಿದ್ದಾನೆ. 'ಬಾಣಪುರೇ ಭಕ್ತ್ಯ ದಂಡನಾಯಕವಾಮನಃ'–ಎಂಬುದಾಗಿ ಸೋಲದೇವನಹಳ್ಳಿ ಶಾಸನದಲ್ಲಿರುತ್ತದೆ. ಅಪ್ಪಣಯ್ಯನ ಮಗನೂ ಆಗಿದ್ದ ವಾಮನ ಯುದ್ದವಲ್ಲದೇವನ ದಂಡನಾಯಕನಾಗಿದ್ದ 'ಬಾಣಪುರ'ವಾಗಿದ್ದ ಬಾಣಾವರವು ಇತಿಹಾಸ ಪರಂಪರೆಯ ಪ್ರಸಿದ್ಧ ತಾಣವೆನ್ನಬಹುದು.

೪) ಭಳಾರಿ । ಭಟಾರಿ । ಭಗವತಿ । ಬೀರ

ಇಲ್ಲಿನ ಶಾಸನದಲ್ಲಿ ಉಕ್ತವಾಗಿರುವ ಹೆಸರುಗಳಾಗಿದ್ದು ಇವು ದೈವ ಸಂಬಂಧವಾದದ್ದು. ದೇವ–ದೇವಿಯರಿಗೆ ಅನ್ವಯವಾಗುವ ಇಲ್ಲಿ ಉಲ್ಲೇಖಿಸಲಾಗಿರುವ ನಾಮಧೇಯಗಳು ಬಹುಪಾಲು ವನದೇವತೆಯರಿಗೆ ಅನ್ವಯವಾಗುತ್ತವೆ. ತದನಂತರದಲ್ಲಿ ಅರಾಧನೆಯ ಸ್ವರೂಪ ಬದಲಾದ ಕಾರಣ ಇವರ ಹೆಸರುಗಳೂ ಪರಿವರ್ತನೆಗೊಂಡಿದ್ದಿರಬೇಕು. 'ಪಿಡಾಂ' ಎಂಬ ಹೆಸರೂ 'ಭಳಾರಿ'ಗೆ ಸಮಾನಾಂತರವಾಗಿ ಬಳಕೆಗೊಂಡಿದ್ದು ಈಕೆಯ ಅರಾಧನೆ ಚೋಳರ ಆಳ್ವಿಕೆಯ ಕಾಲದಲ್ಲಿ ವ್ಯಾಪಕಗೊಂಡಿತು.

೫) **'ನನ್ದಿ'**ಯ ಸ್ಥಳನಾಮದ ಉಲ್ಲೇಖವನ್ನು ಶಾಸನದಲ್ಲಿ ಕಾಣುತ್ತೇವೆ. ಇದು ಇಂದಿನ ಸುಪ್ರಸಿದ್ಧವಾದ, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಅದೇ ತಾಲ್ಲೂಕಿಗೆ ಸೇರಿದ ಇತಿಹಾಸದಲ್ಲಿ ಪ್ರಾಮುಖ್ಯತೆ ಗಳಿಸಿರುವ ನಂದಿಬೆಟ್ಟ ಮತ್ತು ನಂದಿ ಗ್ರಾಮವೇ ಆಗಿದೆ. ಪೂರ್ವಗಂಗರು 'ನನ್ದಿಗಿರಿನಾಥ'ರಾಗಿದ್ದರೆಂಬುದು ಇಲ್ಲಿ ಸ್ಮರಣಾರ್ಹವಾದದ್ದು. ಕೋಲಾರ, ಬೆಂಗಳೂರು ಜಿಲ್ಲೆಗಳ ಅನೇಕ ಶಾಸನಗಳಲ್ಲಿ 'ನಂದಿ'ಯ ಪ್ರಸ್ತಾಪವಿದೆ. ಬಾಳಶಕ್ತಿಪಂಡಿತರು ನಂದಿಯಲ್ಲಿ ಚಾರಿತ್ರಿಕ ಮಹತ್ವವನ್ನು ಪಡೆದ ಮಹಾಮರುಷರಾಗಿದ್ದಿರಬೇಕು.

೬) **'ನಾಗಮರ'**–ಇದು ಇಂದಿನ ನಾಗವಾರವಿರಬಹುದು ಎಂಬುದನ್ನು ಆಲೋಚಿಸಬೇಕಾಗುತ್ತದೆ. ನಾಗವಾರದ ಉಲ್ಲೇಖವು ಬೆಂಗಳೂರಿನ ಒಂದೆರಡು ಶಾಸನಗಳಲ್ಲಿ ಲಭ್ಯವಿದೆ.

೭) **'ನಾಳ್ಗಾವುಂಡ ಗಂಗಯ್ಯ'**–ಇಲ್ಲಿ ಪ್ರಸ್ತಾಪಿತನಾದ 'ಗಂಗಯ್ಯ' ಯಾರೆಂಬ ಬಗ್ಗೆ ನಿರ್ದಿಷ್ಟವಾಗಿ ಈಗ ಸದ್ಯದಲ್ಲಿ ಅರಿಯಲಾಗುತ್ತಿಲ್ಲವಾದರೂ, ಸೋಲದೇವನಹಳ್ಳಿಯ ಶಾಸನದಲ್ಲಿ ಕುಕ್ಕನೂರ್‌ನಾಡ 'ನಾಳ್ಗಾವುಂಡ ಗಂಗ' ಎಂಬ ಉಲ್ಲೇಖವಿದೆ. ಇನ್ನು ಈತನ ಮಗ 'ಜೇದಮ್ಮನಾದ ಸಾವಂತಿಕಸಕ್ತಿಗಾವುಂಡ' ಎಂದು ಹೇಳಿರುವುದರಲ್ಲಿನ 'ಸಾವಂತಿ' ಎಂಬುದು 'ಸಾವಂದಿ' ಅಗಿದ್ದಿರಬಹುದಾಗಿದೆ. ಇತ್ತೀಚೆಗೆ ಕಲ್ಲೂರಿನಲ್ಲಿ ದೊರೆತ ಹೊಸ ಶಾಸನದಲ್ಲಿ (ಇದರ ವಿವರಗಳು ಸದ್ಯದಲ್ಲಿ ಪ್ರಕಟಗೊಳ್ಳಲಿವೆ) 'ಸಾವಂಡಿ' ಸ್ಥಳದ ಉಲ್ಲೇಖವಿದೆ. (=ಸಾವಂತಿ/ದಿ) ಇದು ಸಾವನದುರ್ಗವಾಗಿರುವ ಎಲ್ಲ ಸಾಧ್ಯತೆಗಳು ನಿಚ್ಚಳವಾಗಿವೆ. ಇದರ ಆಳ್ವಿಕೆ ಸಾವಂತಿಕಸಕ್ತಿಗಾವುಂಡನದಾಗಿತ್ತೆಂದು ಅಭಿಪ್ರಾಯ ಪಡಬಹುದಾಗಿದೆ.

ಮಾಂಗೋಡು ಸುಬ್ರಹ್ಮಣ್ಯ ದೇವಾಲಯದ ಅಪ್ರಕಟಿತ ಶಾಸನ

ಟಿ. ಮುರುಗೇಶಿ*

ಅಚ್ಚ ಕನ್ನಡದ ಈ ಪುಟ್ಟ ಶಾಸನ ಎಂಟು ಸಾಲುಗಳಲ್ಲಿ ಪೂರ್ವದ ಹಳಗನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಶಾಸನ ಕ್ರಿ.ಶ. ೯ನೇ ಶತಮಾನದ ಆರಂಭ ಕಾಲಕ್ಕೆ ಸೇರಿದ ಶಾಸನವಾಗಿದೆ. ಶಾಸನ ಸ್ವಸ್ತಿಶ್ರೀ ಎಂಬ ಮಂಗಳ ಪದದೊಂದಿಗೆ ಪ್ರಾರಂಭವಾಗಿದೆ. ನವ್ರನಾ ಆಳು ಪಾಲ ಆಚಿಯ ಎಂಬುವವನು ಶ್ವೇತವಾಹನ ಬಲವಂತವಾಗಿ ಉದಯಪುರ (ಈಗಿನ ಉದ್ಯಾವರ)ದ ಒಳ ನುಗ್ಗುವಾಗ (ಉದಯಪುರ ಮಾನ್ಪೊಗುವಲಿ) ಆತನನ್ನು ಇರಿದು, ಕಳೇಬರವನ್ನು ಸುಟ್ಟು, ತಾನೂ ಹೋರಾಡಿ ಮಡಿದು ಸ್ವರ್ಗಾಲಯವನ್ನು ಸೇರಿದ (ಶ್ವರ್ಗಾಲಯಕ್ಕೇರಿದೋನ್)ನೆಂದು ಶಾಸನದಲ್ಲಿ ಹೇಳಲಾಗಿದೆ.

ಶಾಸನದ ಪಾಠ

೧. @ ಸ್ವಸ್ತಿಶ್ರೀ ನವ್ರನಾ ಆಳು ಪಾ

೨. ಲ ಆಚಿಯ ಸ್ವೇತವಾಹ

೩. ನನ್ ಉದಯಪುರಮಾನ್ಪೊಗು

೪. ವಲ್ಲಿ ಎಜಿದು ಕೋಶ [ಕರೊಟ್ಟಿ]

೫. ಕ (ಕಿ) ಉರಿಳ ತ (ವ) ದೊಹವಳು ವಿರೊ ಮಟಿದೊನ್

೬. ಆ (ಅ) ದರಣ್ಗ (ವ) ಕ್ಕೆ ಧರೆಗೀಶ ನಿಜಿಸಿದೋನ್


೭ ------

೮. ಎಜಿದು ಶ್ವರ್ಗಾಲಯಕ್ಕೇಜಿದೊನ್

ಶಾಸನದ ಐತಿಹಾಸಿಕ ಮಹತ್ವ

ಕರ್ನಾಟಕದ ಪಶ್ಚಿಮ ಕರಾವಳಿ ಮತ್ತು ಮಲೆನಾಡು ಭೂಪ್ರದೇಶಗಳ ಆಳ್ವಿಕೆ ನಡೆಸುತ್ತಿದ್ದ ರಾಜ ಮನೆತನವನ್ನು ಆಳುಪ ರಾಜಮನೆತನವೆಂದು ಇತಿಹಾಸಕಾರರು ಕರೆದಿದ್ದಾರೆ. ಕ್ರಿ.ಶ. ೫ನೇ ಶತಮಾನದ ಹಲ್ಮಿಡಿ ಶಾಸನದಲ್ಲಿ ಆಳಪಗಣದ ಉಲ್ಲೇಖವಿದೆ.[೧] ಅದೇ ಶಾಸನ ಭಟರಿ ಕುಲದ ಪಶುಪತಿಯನ್ನು ಹೆಸರಿಸುತ್ತದೆ. ನಂತರ ಅಧಿಕಾರಕ್ಕೆ ಬಂದ ಆಳುಪರನ್ನು ಶಾಸನಗಳಲ್ಲಿ ಪಾಂಡ್ಯ ಕುಲದವರೆಂದು ಕರೆಯಲಾಗಿದೆ.[೨] ಆದ್ದರಿಂದ, ಆಳುಪ ಎಂಬುದನ್ನು ಒಂದು ರಾಜಮನೆತನವಾಗಿ ಪರಿಗಣಿಸಬೇಕೋ ಅಥವಾ ಗಣ ಎಂದು ಪರಿಗಣಿಸಬೇಕೋ ಎಂಬ ಜಿಜ್ಞಾಸೆ ಕಾಡತೊಡಗುತ್ತದೆ. ಗಣ ಎಂದರೆ ವಿವಿಧ ಕುಲಗಳನ್ನು ಒಳಗೊಂಡ ಒಂದು ಸಮೂಹ. ಗಣ, ಋಗ್ವೇದ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಒಂದು ಸಾಮಾಜಿಕ ವ್ಯವಸ್ಥೆಯಾಗಿದ್ದಿರಬೇಕು. "ಗಣಗಳ ಉಲ್ಲೇಖವಂತೂ ಋಗ್ವೇದದಲ್ಲಿ ಹಲವೆಡೆ ಬರುತ್ತದೆ. ಅಲ್ಲಿ ಗಣವೆಂದರೆ ಯಾವುದಾದರೊಂದು ಕಟ್ಟು–ಕಟ್ಟಳೆಯನ್ನು ಅನುಸರಿಸಿ ಅದರಂತೆ ನಡೆದುಕೊಳ್ಳುವ ಜನರ ಗುಂಪು ಅಷ್ಟೆ"[೩] ಎಂದು ಡಾ. ಎಸ್.ಕೆ. ರಾಮಚಂದ್ರ ರಾವ್ ವಿವರಿಸಿದ್ದಾರೆ. ಕ್ರಿ.ಶ. ೭–೮ನೇ ಶತಮಾನದ ಪೊಳಲಿ ಅಮ್ಮುಂಜೆ ಶಾಸನದಲ್ಲಿ,[೪] "ಪಾಣ್ಡ್ಯಾ ನಾಮಾಳುಪೇನ್ದ್ರಾಣಾಂ ಅವ್ಯಾಸುಸ್ಸಪ್ತಮಾತರಂ" ಎಂದು ವರ್ಣಿಸಲಾಗಿದೆ. ಅಂದರೆ, ಪಾಂಡ್ಯ ಹೆಸರಿನ ಆಳಪರಿಗೆ ಇಂದ್ರರಾದವರನ್ನು ಸಪ್ತಮಾತೃಕೆಯರು ರಕ್ಷಿಸುವರು ಎಂದು ಅರ್ಥ. ಸಪ್ತಮಾತೃಕೆಯರನ್ನು ತುಳುನಾಡಿನಲ್ಲಿ ಸಿರಿಗಳೆಂದು ಕರೆಯಲಾಗುತ್ತದೆ. ಕ್ರಿ.ಶ. ೮ನೇ ಶತಮಾನದ ಬೆಳ್ಮಣ್ಣು ತಾಮ್ರಪಟ ಶಾಸನದಲ್ಲಿ,[೫] ಕ್ಷಿತಿಪತಿ ಕಾರ್ವೊಳಕ್ಕೆ ಅಂದರೆ ದೊರೆಗಳನ್ನು

* ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ, ಎಂ.ಎಸ್.ಆರ್.ಎಸ್. ಕಾಲೇಜು, ಶಿರ್ವ–೫೭೪೧೧೬. ಮೊ. ೯೪೪೮೨೫೨೧೮೩೩



ತಾಯಿ ಕಾಯುತ್ತಾಳೆ ಎಂದರ್ಥ. ಈ ಉಲ್ಲೇಖಗಳು ಆಳುಪರ ಮಾತೃಮೂಲದ ಗಣ ವ್ಯವಸ್ಥೆಯನ್ನು ಧ್ವನಿಸುವುದಿಲ್ಲವೆ? ಹೀಗೆ ಪರಿಗಣಿಸಿದರೆ ಮಾತ್ರ ಆಳುಪ ಚರಿತ್ರೆಯಲ್ಲಿ ಏಕೆ ವಿವಿಧ ಕುಲದವರು ಆಳ್ವಿಕೆ ಮಾಡಿದರು ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ದೊರೆಯುತ್ತದೆ. ಇಲ್ಲದೆ ಹೋದರೆ, ಸಾಂತರ ರಾಜಮನೆತನದ ಕುಂಡಣ ಹಾಗೂ ಇತರರು ಏಕೆ ಆಳುಪ ಚಕ್ರವರ್ತಿಗಳಾಗಿ ಆಳ್ವಿಕೆ ಮಾಡಿದರು ಎಂಬ ಪ್ರಶ್ನೆ, ಪ್ರಶ್ನೆಯಾಗಿಯೇ ಉಳಿಯುತ್ತದೆ. ಈ ಹಿನ್ನೆಲೆಯಲ್ಲಿ ಪ್ರಖ್ಯಾತ ಶಾಸನ ವಿದ್ವಾಂಸರಾಗಿದ್ದ ಹುಲ್ಷ್‌ರವರ ಅಭಿಪ್ರಾಯ ಗಮನೀಯವಾಗಿದೆ. ಚೆಂಗಾಳ್ವರು, ಕೊಂಗಾಳ್ವರು, ನಾಡಾಳ್ವರು, ಸಾಂತರರೂ, ಕಳಸ-ಕಾರ್ಕಳದ ದೊರೆಗಳು ಪ್ರಾಚೀನ ಆಳುಪರೊಂದಿಗೆ ಸಂಬಂಧಿಸಿದ ಕುಟುಂಬಗಳಂತೆ ಕಂಡುಬರುತ್ತದೆ.[೬] ಎಂದು ಬರೆಯುತ್ತಾರೆ. ಈ ಬಗ್ಗೆ ಇನ್ನೂ ಆಳವಾದ ಅಧ್ಯಯನ ಮತ್ತು ಚರ್ಚೆಯ ಅಗತ್ಯವಿದೆ.

ದಖ್ಖನ್ನಿನಲ್ಲಿ ಬಾದಾಮಿ ಚಾಲುಕ್ಯರ ಅವನತಿ ಹಾಗೂ ರಾಷ್ಟ್ರಕೂಟರ ಆಗಮನ ಆಳುಪರ ರಾಜಕೀಯ ಜೀವನದ ಮೇಲೆ ತೀವ್ರವಾದ ಪರಿಣಾಮವನ್ನುಂಟು ಮಾಡಿತು. ಚಾಲುಕ್ಯರ ಅಧೀನದಲ್ಲಿ ಕದಂಬ ಮಂಡಲಾಧೀಶ್ವರರಾಗಿ ಬನವಾಸಿಯಿಂದ ಆಳ್ವಿಕೆ ಮಾಡುತ್ತಿದ್ದ ಆಳುಪರು ರಾಷ್ಟ್ರಕೂಟರ ಆಗಮನದೊಂದಿಗೆ ಕದಂಬ ಮಂಡಲದ ಮೇಲಿನ ತಮ್ಮ ಅಧಿಕಾರವನ್ನು ಕಳೆದುಕೊಂಡರು. ರಾಷ್ಟ್ರಕೂಟ ಮೂರನೇ ಗೋವಿಂದನ ಕಾಲದಲ್ಲಿ ನಡೆದ ಮಾವಳಿ ಕದನದಲ್ಲಿ ಪರಾಜಿತನಾದ ಆಳುಪ ೨ನೇ ಚಿತ್ರವಾಹನ, ತನ್ನ ಪರಂಪರಾಗತ ತುಳುನಾಡಿಗೆ ಹಿಂತಿರುಗಬೇಕಾಯಿತು.

ತುಳುನಾಡಿಗೆ ಎರಡನೇ ಚಿತ್ರವಾಹನನ ಆಗಮನ, ಆಳುಪರ ಎರಡು ಬಣಗಳ ನಡುವೆ ತೀವ್ರ ಅಂತಃಕಲಹಕ್ಕೆ ಕಾರಣವಾಗುತ್ತದೆ. ಈ ಅಂತಃಕಲಹ ತಲೆಮಾರುಗಳ ಕಾಲ ಮುಂದುವರಿಯುತ್ತದೆ. ಆಳುಪರ ರಾಜಧಾನಿ ಉದಿಯಾವರ (ಈಗಿನ ಉದ್ಯಾವರ), ಈ ಅಂತಃಕಲಹಗಳಿಗೆ ರಂಗಭೂಮಿಯಾಗಿತ್ತು.

೨ನೇ ಚಿತ್ರವಾಹನ ಮತ್ತು ರಣಸಾಗರನ ನಡುವೆ ನಡೆದ ಅಂತಃಕಲಹದಲ್ಲಿ, ೨ನೇ ಚಿತ್ರವಾಹನ ಜಯಸಾಧಿಸಿ ಉದಿಯಾವರವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ. ಪರಾಜಿತ ರಣಸಾಗರ ತನ್ನ ಪಟ್ಟು ಬಿಡದೆ ಹೋರಾಡಿ, ೨ನೇ ಚಿತ್ರವಾಹನನ್ನು ಕೊಂದು ಮತ್ತೆ ಉದಿಯಾವರವನ್ನು ತನ್ನ ವಶಕ್ಕೆ ಪಡೆದುಕೊಳ್ಳುತ್ತಾನೆ. ೨ನೇ ಚಿತ್ರವಾಹನನ ಮಗ ಶ್ವೇತವಾಹನ, ರಣಸಾಗರನ ವಿರುದ್ಧ ಹೋರಾಡಿ, ಆತನನ್ನು ಕೊಂದು ಉದಿಯಾವರವನ್ನು ತನ್ನ ಕೈವಶ ಮಾಡಿಕೊಳ್ಳುತ್ತಾನೆ.

ರಣಸಾಗರನ ಮರಣಾನಂತರ ಆತನ ಮಗ ಪೃಥ್ವೀಸಾಗರ, ಶ್ವೇತವಾಹನನನ್ನು ವಿರೋಧಿಸಿ ಹೋರಾಡಿ ಉದ್ಯಾವರದ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸುತ್ತಾನೆ.[೭] ಉದಿಯಾವರ ಹಾಗೂ ಇತರ ಪ್ರದೇಶಗಳಲ್ಲಿ ಈ ಅಂತಃಕಲಹಗಳಿಗೆ ಸಾಕ್ಷಿಯಾಗಿ ಅನೇಕ ವೀರಗಲ್ಲುಗಳು ಕಂಡುಬರುತ್ತವೆ.

ನಾನು ಮಾಂಗೋಡುವಿನಲ್ಲಿ ಸಂಶೋಧಿಸಿದ,[೮] ಪ್ರಸ್ತುತ ಅಧ್ಯಯನದ ಶಾಸನ, ಶ್ವೇತವಾಹನ ಮರಣವನ್ನು ಖಚಿತಪಡಿಸುತ್ತದೆ. ಈ ವೀರಗಲ್ಲು ನಿಲ್ಲಿಸಿದ ಶಾಸನೋಕ್ತ ಧರೆಗೀಶ, ಪೃಥ್ವೀಸಾಗರನೆಂದು ಇದರಿಂದ ಸ್ಪಷ್ಟವಾಗುತ್ತದೆ.

ಪೃಥ್ವೀಸಾಗರನ ಪರವಾಗಿ ಹೋರಾಡಿ ಮಡಿದ ಶಾಸನೋಕ್ತ ಪಾಲ ಆಚಿಯ ಎಂಬುವನು ನವ್ರನಾ ಆಳು ಎಂದು ಶಾಸನ ಪರಿಚಯಿಸುತ್ತದೆ. ಆದ್ದರಿಂದ, ಇದೇ ಮೊದಲ ಬಾರಿಗೆ ಆಳುಪ ಚರಿತ್ರೆಗೆ ಸಂಬಂಧಿಸಿದ ನವ್ರ ಮತ್ತು ಪಾಲ ಆಚಿಯ ಎಂಬ ಇಬ್ಬರು ವ್ಯಕ್ತಿಗಳನ್ನು ಮಾಂಗೋಡು ಶಾಸನ ಪರಿಚಯಿಸಿದೆ. ಆದರೆ, ಈ ನವ್ರ ಯಾರು ಎಂಬ ಮಾಹಿತಿ ಶಾಸನದಲ್ಲಿ ಇಲ್ಲ.

ನವ್ರ ಎಂಬ ಪ್ರಾಚೀನ ಉಲ್ಲೇಖಗಳು ಸಂಗಂ ಮತ್ತು ವಿದೇಶಿ ಬರವಣಿಗೆಗಳಲ್ಲಿ ಕಂಡುಬರುತ್ತವೆ. ಓರ್ವ ಅನಾಮಿಕ ಗ್ರೀಕ್ ಬರಹಗಾರನ ಪೆರಿಪ್ಲೆಸ್ ಆಫ್ ದಿ ಎರಿತ್ರಿಯನ್ ಸೀ ಎಂಬ ಕ್ರಿ.ಶ. ೨೪೭ರ ಗ್ರಂಥದಲ್ಲಿ, ನವ್ರಾ ಎಂಬ ಕರಾವಳಿ ನಗರವನ್ನು ಉಲ್ಲೇಖಿಸಿದ್ದು, ಅದನ್ನು ಈಗಿನ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಎಂದು ಸಾಮಾನ್ಯವಾಗಿ ಗುರುತಿಸಬಹುದಾಗಿದೆ-ಎಂದು ಬಾಂಬೆ ಗ್ಯಾಸೆಟಿಯರ್‌ನಲ್ಲಿ ವಿವರಿಸಲಾಗಿದೆ.[೯] ಗ್ರೀಕ್ ಮತ್ತು ರೋಮಿನ ವರ್ತಕರು ನಿಳಿವನ್ನು ನವ್ಜೂ ಎಂದು ಕರೆದರು.[೧೦] ಈ ಉಲ್ಲೇಖಗಳಲ್ಲಿ "ನವ್ರ" ಒಂದು ಸ್ಥಳನಾಮವಾಗಿ ಬಂಧಿರುವುದು ಸ್ಪಷ್ಟವಾಗುತ್ತದೆ. ಆದರೆ, ಶಾಸನದಲ್ಲಿ "ನವ್ರ" ವ್ಯಕ್ತಿ ನಾಮವಾಗಿ ಕಂಡುಬರುತ್ತದೆ. ಆದ್ದರಿಂದ, ನವ್ರ ಎಂಬ ಸಾಹಿತ್ಯಿಕ ಉಲ್ಲೇಖಗಳಿಗೂ, ಶಾಸನೋಕ್ತ ನವ್ರ ಎಂಬ ಉಲ್ಲೇಖಕ್ಕೂ ಪರಸ್ಪರ ಸಂಬಂಧವಿರಲಾರದೆಂದು ಭಾವಿಸಬೇಕಾಗುತ್ತದೆ.

[ದಿ. ೦೫.೦೭.೨೦೧೫ರಂದು ದೇವಾಲಯದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಶ್ರೀ ಎ.ಎಂ. ಹೆಗ್ಡೆಯವರ ವಿನಂತಿಯ ಮೇರೆಗೆ ಭೇಟಿ ಮಾಡಿ, ಕಾಲೇಜಿನ ಪುರಾತತ್ವ ವಿದ್ಯಾರ್ಥಿಗಳಾದ ಕು. ಸಂಗೀತಾ, ಲೋಹಿತ್ ಮತ್ತು ಅನಿಲ್‌ರವರ ಸಹಕಾರದೊಂದಿಗೆ ಶಾಸನದ ಪ್ರತಿ ಮಾಡಲಾಯಿತು. ಶಾಸನಾಧ್ಯಯನದಲ್ಲಿ ಚಿತ್ರದುರ್ಗದ ಡಾ. ರಾಜಶೇಖರಪ್ಪನವರು ಉಪಯುಕ್ತ ಸಲಹೆಗಳನ್ನು ನೀಡಿ ಸಹಕರಿಸಿರುತ್ತಾರೆ. ಇವರೆಲ್ಲರಿಗೂ ನಾನು ಅಭಾರಿಯಾಗಿದ್ದೇನೆ.]

ಅಡಿಟಿಪ್ಪಣಿಗಳು

೧. ಷಟ್ಟರ್ ಷ, ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಪುಟ ೪೧, ೨೦೧೪.

೨. Ramesh K.V., A History of South Kanara, Pp. Karnataka Iniversity, Dharwar. 1970.

೩. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ-ಹಿನ್ನೆಲೆ, ಪುಟ ೭೭-೭೮, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು೧೯೭೫.

೪. ರಮೇಶ್ ಕೆ.ವಿ., ಶರ್ಮ ಎಂ.ಜೆ., ಸಂ., ತುಳುನಾಡಿನ ಶಾಸನಗಳು, ಪು. ೧೧, ಉಡುಪಿ, ೧೯೭೮.

೫. ಮೇಲಿನದ್ದೆ, ಪುಟ ೧೩, ೧೯೭೮.

೬ Epigraphia India, vol. 9. Pp. 16, a6, New Delhi, 1981.

೭. Ibid., Pp. 69-83, 1970.

೮. Deccan Chronicle, Inscription of Alupa period discovered at Mamgodu in Udupi, 28.12.2016.

೯. Bombay Gazatter, Pp. 78.

೧೦. ಶ್ರೀಕೃಷ್ಣ ಭಟ್ ಅರ್ತಿಕಜೆ, ಅನು., ತುಳುನಾಡ ಇತಿಹಾಸ (ಮೂ. ತುಳುನಾಟ್ಟು ವರಲಾಱು) ಪು. ೭೯, ಮಂಗಳೂರು, ೨೦೦೫.

೧೬

ಕುಲಶೇಖರ ಪಾಂಡ್ಯ ಪಟ್ಟಿಗದೇವನ ಪೊಳಲಿ ಶಾಸನ

ಪುಂಡಿಕ್ಯಾಗಣಪಯ್ಯ ಭಟ್*

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿ, ಪಲ್ಗುಣಿ ನದಿಯ ದಂಡೆಯ ಮೇಲಿರುವ ಪೊಳಲಿ ತುಳುನಾಡಿನ ಒಂದು ಪ್ರಸಿದ್ಧ ಧಾರ್ಮಿಕ ಕ್ಷೇತ್ರ. ಸುಮಾರು ೨.೫ ಮೀ. ಎತ್ತರದ ರಾಜರಾಜೇಶ್ವರಿ ದೇವಿಯ ಮೃಣ್ಮಯ ವಿಗ್ರಹವು ಆರಾಧನೆಗೊಳ್ಳುತ್ತಿರುವ ಇಲ್ಲಿನ ರಾಜರಾಜೇಶ್ವರಿ ದೇವಾಲಯವನ್ನು ತುಳುನಾಡಿನ ಅತ್ಯಂತ ಪ್ರಾಚೀನ ದೇಗುಲಗಳಲ್ಲೊಂದು ಎಂದು ಪರಿಗಣಿಸಲಾಗುತ್ತದೆ. ಈ ದೇವಾಲಯದ ಪ್ರಾಂಗಣದಲ್ಲಿರುವ ಆಳುಪರ ಆಳ್ವಿಕೆಯ ಕಾಲದ ಕ್ರಿ.ಶ. ೭-೮ನೇ ಶತಮಾನಕ್ಕನ್ವಯಿಸುವ ಶಾಸನವು[೧] ಈ ದೇವಾಲಯದ ಪ್ರಾಚೀನತೆಯನ್ನು ಸ್ಪಷ್ಟಪಡಿಸುತ್ತದೆ. ಅಲ್ಲದೆ, ಈ ದೇವಾಲಯದ ಪರಿಸರದಲ್ಲಿ ಕ್ರಿ.ಶ. ೭-೮ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದ ಅವಧಿಯ ಆಳುಪಯುಗದ ಏಳು ಶಾಸನಗಳು ಈ ಮೊದಲೇ ಬೆಳಕಿಗೆ ಬಂದಿದ್ದು[೨] ಇವು ಪೊಳಲಿಯು ಆಳುಪ ಅರಸರ ಆಳ್ವಿಕೆಯ ಕಾಲದಲ್ಲಿ ಒಂದು ಮಹತ್ವದ ರಾಜಕೀಯ ಚಟುವಟಿಕೆಗಳ ಕೇಂದ್ರವೂ ಆಗಿತ್ತೆಂಬುದನ್ನು ನಿರೂಪಿಸುತ್ತವೆ. ಪ್ರಸ್ತುತ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯಗಳು ಪ್ರಗತಿಯಲ್ಲಿದ್ದು ಈ ಕಾಮಗಾರಿಗಳ ಸಂದರ್ಭದಲ್ಲಿ ಆಳುಪ ಅರಸ ಒಂದನೆಯ ಕುಲಶೇಖರ ಪಾಂಡ್ಯ ಪಟ್ಟಿಗದೇವನ ಅಪ್ರಕಟಿತ ಶಿಲಾಶಾಸನವೊಂದು ಪತ್ತೆಯಾಗಿದೆ.

ಈ ಶಾಸನವನ್ನು ಹೊಂದಿರುವ ಶಿಲಾಫಲಕವನ್ನು ಗರ್ಭಗೃಹದ ಎಡಭಾಗದಲ್ಲಿ, ಅದಕ್ಕೆ ತಾಗಿಕೊಂಡಿರುವ ಇಕ್ಕಟ್ಟಾದ ಕೋಣೆಯೊಂದರಲ್ಲಿ ಅಡಿಮೇಲಾಗಿ ಇರಿಸಲಾಗಿತ್ತು. ಹೀಗೆ ಅಡಿಮೇಲಾಗಿ ಇರಿಸಲಾಗಿದ್ದ ಶಾಸನ ಫಲಕದ ಹಿಂಭಾಗದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿ ಅದನ್ನು ಲೋಹದ ದೇವತಾ ವಿಗ್ರಹಗಳ ಅಭಿಷೇಕಕ್ಕಾಗಿ ಬಳಸಲಾಗುತ್ತಿತ್ತು. ಅಕ್ಷರಗಳನ್ನು ಹೊಂದಿರುವ ಶಾಸನ ಫಲಕದ ಮಧ್ಯಭಾಗದಲ್ಲಿ ಸುಮಾರು ೪೦ ಸೆಂ.ಮೀ. ವ್ಯಾಸವನ್ನು ಹೊಂದಿರುವಂತೆ ಸುಮಾರು ೬ ಸೆಂ.ಮೀ. ಅಗಲಕ್ಕೆ ವೃತ್ತಾಕಾರವಾಗಿ ಕಲ್ಲಿನ ಚೆಕ್ಕೆಗಳನ್ನು ಕಿತ್ತು ತೆಗೆದಿರುವುದನ್ನು ನೋಡಿದಾಗ ಮೊದಲಿಗೆ ಶಾಸನದ ಈ ಭಾಗವನ್ನೇ ದೇವತಾ ವಿಗ್ರಹಗಳ ಅಭಿಷೇಕ ಶಿಲೆಯಾಗಿ ಸಜ್ಜುಗೊಳಿಸಲು ಪ್ರಯತ್ನಿಸಿದಂತೆ ತೋರುತ್ತದೆ. ಇದರಿಂದಾಗಿ ಶಾಸನದ ಕೆಲವು ಅಕ್ಷರಗಳು ತ್ರುಟಿತಗೊಂಡಿವೆ.

ಈ ಶಾಸನವನ್ನು ೯೧ ಸೆಂ.ಮೀ. ಎತ್ತರ ಹಾಗೂ ಮೇಲ್ಭಾಗದಲ್ಲಿ ೬೧ ಸೆಂ.ಮೀ. ಮತ್ತು ತಳಭಾಗದಲ್ಲಿ ೪೬ ಸೆಂ.ಮೀ. ಅಗಲವನ್ನು ಹೊಂದಿರುವ, ಆಕರ್ಷಕವಾಗಿ ಸಜ್ಜುಗೊಳಿಸಿರುವ ಶಿಲಾಫಲಕವೊಂದರಲ್ಲಿ ಕೆತ್ತಲಾಗಿದೆ. ೨೦ ಸಾಲುಗಳಲ್ಲಿ ಸುಂದರವಾದ ಮತ್ತು ಸ್ಪಷ್ಟವಾದ ಅಕ್ಷರಗಳಲ್ಲಿ ಲಿಖಿತವಾಗಿರುವ ಈ ಶಾಸನದ ಭಾಷೆ ಮತ್ತು ಲಿಪಿ ಕನ್ನಡ. ಶಾಸನ ಫಲಕದ ತಳಭಾಗದಲ್ಲಿ ಸು. ೮ ಸೆಂ.ಮೀ. ಅಗಲದ ಪಟ್ಟಿಕೆಯೊಂದನ್ನು ರೂಪಿಸಲಾಗಿದೆ. ಈ ಪಟ್ಟಿಕೆಯಲ್ಲಿ ಮೂರು ಭಾಗಗಳಿದ್ದು, ಮಧ್ಯದ ಭಾಗದಲ್ಲಿ ಓರ್ವ ಸ್ತ್ರೀಯ ಜೊತೆಯಲ್ಲಿ ರಾಜಭಂಗಿಯಲ್ಲಿ ಆಸೀನನಾಗಿರುವ ಓರ್ವ ಪುರುಷ ಮತ್ತು ಅದರ ಎಡಬಲ ಭಾಗಗಳಲ್ಲಿ ಸಿಂಹದ ಚಿತ್ರಿಕೆಗಳನ್ನು ಕೆತ್ತಲಾಗಿದೆ.

ಶಾಸನದ ಪಾಠ

೦೧ ಸ್ವಸ್ತಿ ಶ್ರೀ ಗಣಪತಯೇ ನಮಃ।

೦೨ ಸ್ವಸ್ತಿ...........ಂಗಳು ೧೧೦೫

೦೩ ನೆಯ..............ಸದೊಳು

೦೪ ಶ್ರೀ.....[ಶಾ?ಳ?] ಕುಲಶೇಖರ....ರಿಗದೆ

೦೫ .ಂ ಸು[ಖ]ಸ[ಂ]ಕಥಾವಿನೋದದಿಂರಾಜ್ಯಂಗೆ.. ತಮಿ

* ಡಾ. ಪುಂಡಿಕ್ಯಾಗಣಪಯ್ಯ ಭಟ್, ಪ್ರಾಂತ್ಯ, ಅಂಚೆ ಕೊಡಂಗಲ್ಲು-೫೭೪೧೯೭. ಮೊಡಬಿದಿರೆ. ಮೊ. ೯೪೪೮೯೬೪೪೩೪

೦೬ ತ್ತ[ಮಿ]ರೆತತ್ಪಾದಪದ್ಮೋಪಜೀವಿಯಪ್ಪಂ ಕು ... ಭವೆ
೦೭ [ಸಿ?/ಗಿ?] .... ಬಳಿಯ ಬಳಿವೆಯ ನಂಬಿ ತನ್ನಾ...ಶ್ರೀ
೦೮ .....ಪ್ಪಂತಾಗಿ ವೇಳೆಗೊಂಡು ವೇಳಾವಾಳಿಯ..
೦೯ .ಬಸಲೆದಾಳ್ವಖೇಡಮಱುಸಾಸಿರ ತ ...
೧೦ ಕ್ರಮಂ ಪೊಗಳಲ್ಕೆನಸಿದ ವೀರ ಸಾ[ಹಸಂ] ಮಂ
೧೧ ಗ[ಳ[ಮ[ಹಾ]ಶ್ರೀ ॥ ಇನ್ತು ಸ್ವಾ .... ನಾ
೧೨ ಗಿ [ಸ್ರಾ?] . [ಪ]ರಿಚ್ಛೇದಂ ಗೆ[ಯ್ದು] .... ಯ ನಂ
೧೩ ಬಿಯಜೋಳ[ಕ್ಕ].....ವನನ್ವಯ
೧೪ ಕ್ಕಂ ಪಾಣ್ಡ್ಯಪಟ್ಟಿಗ.. ಮಾ(ಮೊ?)ಡ(ದ?)ಲಾಗಿ ರಾಜ್ಯಂ
೧೫ ಗೆಯ್ವರಸುಗಳು ರಕ್ಷಿಸುವುದ(ದೆ)ನ್ತೆನ್ದಡೆ
೧೬ ಸ್ವಾಮಿಗೆದಪ್ಪಿದ[ಭ್ರು]ತ್ಯನಧೋಮಾರ್ಗ್ಗದೆರೌರವಕ್ಕೆ
೧೭ ಗಳಗಳನಿಳಿಗು[೦*] ಸ್ವಾಮಿ ಸುಭೃತ್ಯನನಳಿದ ದಾವಜಿ
೧೮ ವಡದುಜಿಪಲಂಣ್ಮೆ [ಧಾ?/ವಾ?] ... ಜಿಯ ॥ ನೆಂಬುದದು
೧೯ ಕಾರಣದಿಂ [ಸು]ಧಂರ್ಮ್ಮ[೦ ರ]ಕ್ಷಿಸುವುದು ಮಂಗಳ ।
೨೦ ಮಹಾಶ್ರ ॥ ದೇಸಿ[ಯಾ]ಚಾರಿಯ ಲಿಖಿತಂ ॥

ಶಾಸನದ ತಾತ್ಪರ್ಯ: ಪಾಂಡ್ಯ ಪಟ್ಟಿಗ [ದೇವ] ಎಂಬ ಅಭಿಧಾನವನ್ನು ಹೊಂದಿದ್ದ, ಆಳ್ವಖೇಡ ಆರುಸಾವಿರ ರಾಜ್ಯವನ್ನು ಆಳುತ್ತಿದ್ದ ಆಳುಪ ಅರಸ ಒಂದನೆಯ ಕುಲಶೇಖರನ ಆಳ್ವಿಕೆಯ ಕಾಲದಲ್ಲಿ ಆತನ ವೇಳೆವಾಳಿಯಾಗಿದ್ದ ಬಳಿವೆಯ ನಂಬಿ ಎಂಬಾತ ಪ್ರಾಣಾರ್ಪಣೆಯನ್ನು ಮಾಡಿ (ವೇಳೆಗೊಂಡು) ವೀರ ಸಾಹಸವನ್ನು ಮೆರೆದ ಸಂಗತಿಯನ್ನು ಈ ಶಾಸನವು ದಾಖಲಿಸುತ್ತದೆ. ತನ್ನ ಸ್ವಾಮಿಗೆ ತಪ್ಪಿದ ಭೃತ್ಯನು ನರಕಭಾಜನನಾಗುತ್ತಾನೆ ಮತ್ತು ಸ್ವಾಮಿನಿಷ್ಠನಾದ ಭೃತ್ಯನನ್ನು ಅಳಿಯದೆ ಕಾಪಾಡುವುದು ಪಾಂಡ್ಯಪಟ್ಟಿಗನೂ ಸೇರಿದಂತೆ ರಾಜ್ಯವನ್ನಾಳುವ ಅರಸುಗಳು ಪಾಲಿಸಬೇಕಾದ ಧರ್ಮವೂ ಹೌದು ಎಂಬಂತಹ ಮಾತುಗಳೂ ಇಲ್ಲಿ ಉಲ್ಲೇಖಗೊಂಡಿವೆ.

ಶಾಸನದ ಕಾಲ: ಶಾಸನದ ಎರಡನೆಯ ಸಾಲಿನ ಕೊನೆಗೆ ೧೦೩೯ ಎಂಬ ಉಲ್ಲೇಖವಿದ್ದು ಇದನ್ನು ಶಾಸನದ ಕಾಲದ ಉಲ್ಲೇಖ ಎಂದು ತಿಳಿಯಬಹುದು. ೧೨ನೇ ಶತಮಾನದ ಉತ್ತರಾರ್ಧಕ್ಕನ್ವಯಿಸುವ ಈ ಶಾಸನದಲ್ಲಿ ಉಲ್ಲೇಖಿತನಾದ ಕುಲಶೇಖರನು ಕ್ರಿ.ಶ. ಸು. ೧೧೬೦-೧೨೨೦ರ ಅವಧಿಯಲ್ಲಿ ತುಳುನಾಡಿನಲ್ಲಿ ಆಳ್ವಿಕೆ ನಡೆಸಿದ ಆಳುಪ ವಂಶದ ಅರಸ ಒಂದನೇ ಕುಲಶೇಖರ ಎಂಬುದರಲ್ಲಿ ಅನುಮಾನವಿಲ್ಲ. ಪ್ರಸ್ತುತ ಶಾಸನದಲ್ಲಿ ಉಲ್ಲೇಖಿತವಾದ ೧೦೩೯ ಎಂಬುದನ್ನು ಶಕ ವರ್ಷ ಎಂದು ಪರಿಗಣಿಸಬಹುದಾಗಿದೆ. ತಿಥಿ, ವಾರ ಇತ್ಯಾದಿ ವಿವರಗಳು ಇಲ್ಲಿ ತ್ರುಟಿತವಾಗಿವೆ. ಶಕ ೧೦೩೯ ಎಂದರೆ ಕ್ರಿ.ಶ. ೧೧೧೭ಕ್ಕೆ ಸರಿಹೊಂದುತ್ತದೆ. ಆದರೆ ಇಲ್ಲಿ ಒಂದು ಚಿಕ್ಕ ಗೊಂದಲವಿದೆ. ಒಂದನೇ ಕುಲಶೇಖರನ ಆಳ್ವಿಕೆಯ ಕಾಲಾವಧಿಯನ್ನು ಕೆ.ವಿ. ರಮೇಶ್‌ರವರು ಕ್ರಿ.ಶ. ೧೧೬೦ರಿಂದ ೧೨೨೦ ಎಂಬುದಾಗಿ ಸಮರ್ಥನೀಯವಾಗಿಯೇ ನಿಗದಿಗೊಳಿಸಿದ್ದಾರೆ[೩] ಹಾಗಿದ್ದಾಗ ಒಂದನೇ ಕುಲಶೇಖರನ ಪ್ರಸ್ತುತ ಶಾಸನವು ಕ್ರಿ.ಶ. ೧೧೧೭ರದು ಎಂದು ಸ್ವೀಕರಿಸಲು ಕಷ್ಟವಾಗುತ್ತದೆ. ಈ ಶಾಸನದಲ್ಲಿ ಕಾಲದ ಉಲ್ಲೇಖವು ೧೦೯೩ರ ಬದಲು ೧೦೩೯ ಎಂದು ತಪ್ಪಾಗಿ ನಮೂದಾಗಿರುವ ಸಾಧ್ಯತೆಯನ್ನು ಅಲ್ಲಗಳೆವಂತಿಲ್ಲ. ಕಾಲವನ್ನು ನಮೂದಿಸುವಾಗ ಅಂಕೆಗಳು ಸ್ಥಾನಪಲ್ಲಟವಾಗಿರುವ ಪ್ರಮಾದಗಳು ತುಳುನಾಡಿನ ಶಾಸನಗಳಲ್ಲಿ ಕಂಡುಬರುವುದು ಅಪರೂಪವೇನೂ ಅಲ್ಲ. ಕುಂದಾಪುರ ತಾಲ್ಲೂಕಿನ ಬಿಜೂರು ಶಾಸನದಲ್ಲಿ ಶಕವರ್ಷ ೯೪೮ರ ಬದಲು ೯೮೪ ಎಂದು ನಮೂದಿತವಾಗಿರುವುದು[೪] ಮತ್ತು ಕಾರ್ಕಳ ತಾಲೂಕಿನ ಕೆದಿಂಜೆ ಶಾಸನದಲ್ಲಿ ೧೩೦೯ರ ಬದಲು ೧೦೩೯ ಎಂದು ಉಲ್ಲೇಖಿತವಾಗಿರುವುದನ್ನು[೫] ಈ ರೀತಿಯ ಪ್ರಮಾದಕ್ಕೆ ಉದಾಹರಣೆಗಳಾಗಿ ಸೂಚಿಸಬಹುದು. ಆದ್ದರಿಂದ ಪ್ರಸ್ತುತ ಶಾಸನದ ಕಾಲವನ್ನು ಶಕವರ್ಷ ೧೦೯೩ ಅಂದರೆ ಕ್ರಿ.ಶ. ೧೧೭೧ಕ್ಕೆ ಅನ್ವಯಿಸುವುದು ಸೂಕ್ತವಾದೀತು. ಹಾಗಾದಾಗ ಈ ಶಾಸನವನ್ನು ಒಂದನೇ ಕುಲಶೇಖರನ ಆಳ್ವಿಕೆಯ ಅವಧಿಯೊಳಗೆ ಅಳವಡಿಸಲು ಯಾವುದೇ ಸಮಸ್ಯೆಯಾಗುವುದಿಲ್ಲ.



ಶಾಸನದ ವಿಷಯ ವಿಶ್ಲೇಷಣೆ: ಶಾಸನವು ಸ್ವಸ್ತಿ ಶ್ರೀಗಣಪತಯೇ ನಮಃ ಎಂಬ ಪ್ರಾರ್ಥನಾ ವಾಕ್ಯದೊಂದಿಗೆ ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ ಆಳುಪರ ಶಾಸನಗಳಲ್ಲಿ ದೀರ್ಘವಾದ ಪ್ರಾರ್ಥನಾ ಶ್ಲೋಕಗಳಿರುವುದಿಲ್ಲ. ಓಂ ನಮಃ ಶಿವಾಯ, ಶ್ರೀಗಣಾಧಿಪತಯೇ ನಮಃ, ಶ್ರೀ ಗಣಪತಯೇ ನಮಃ ಮೊದಲಾದ ಚಿಕ್ಕ ಸಾಲುಗಳಿಗಷ್ಟೆ ಪ್ರಾರ್ಥನಾ ವಾಕ್ಯಗಳು ಸೀಮಿತಗೊಂಡಿರುತ್ತವೆ. ಶಾಸನದನಾಲ್ಕನೇ ಸಾಲಿನಲ್ಲಿ ಆಳುಪ ಅರಸ ಕುಲಶೇಖರನ ಹೆಸರು ಮತ್ತು ೧೪ನೇ ಸಾಲಿನಲ್ಲಿ ಪಾಂಡ್ಯ ಪಟ್ಟಿಗ[ದೇವ] ಎಂಬ ಉಲ್ಲೇಖವೂ ಕಾಣಿಸಿಕೊಳ್ಳುತ್ತದೆ. ಈಗಾಗಲೇ ಪ್ರಸ್ತಾಪಿಸಲಾಗಿರುವಂತೆ ಈ ಶಾಸನೋಲ್ಲೇಖಿತ ಕುಲಶೇಖರನು ಆಳುಪ ಅರಸನಾಗಿದ್ದಒಂದನೆಯ ಕುಲಶೇಖರನಾಗಿದ್ದು ಪಟ್ಟಿಗದೇವ ಎಂಬುದು ಆತನ ಉಪಾಧಿಯಿರುವಂತೆ ತೋರುತ್ತದೆ. ಒಂದನೇ ಕುಲಶೇಖರನನ್ನು ಪಟ್ಟಿಯೊಡೆಯ ಎಂಬ ಉಪಾಧಿಯಿಂದಲೂ ಗುರುತಿಸಲಾಗುತ್ತಿತ್ತೆಂಬುದನ್ನು ವರಾಂಗ ಶಾಸನವು ನಿರೂಪಿಸುತ್ತಿದ್ದರೆ[೬] ಪಾಂಡ್ಯಪಟ್ಟಿಗದೇವ ಎಂಬುದು ಆತನ ಉಪನಾಮವಾಗಿ ತ್ತೆಂಬುದನ್ನು ಪೊಳಲಿಯಲ್ಲೇ ಗುರುತಿಸಲಾದ ಒಂದನೇ ಕುಲಶೇಖರನ ತೇದಿರಹಿತವಾದ ಇನ್ನೊಂದು ಶಾಸನವು ಸ್ಪಷ್ಟಪಡಿಸುತ್ತದೆ[೭] ಆಳುಪರ ಪ್ರಾರಂಭದ [೮–೯ನೇ ಶತಮಾನ] ಅರಸರಾದ ಎರಡನೆಯ ಆಳುವರಸ, ರಣಸಾಗರ ಮೊದಲಾದ ಅರಸರು 'ಪಟ್ಟಿಯೊಡೆಯ' ಎಂಬ ಉಪಾಧಿಯನ್ನು ಹೊಂದಿದ್ದರೆಂಬುದು ಶಾಸನೊಲ್ಲೇಖಗಳಿಂದ ತಿಳಿದುಬರುತ್ತದೆ. ಪಟ್ಟಿಯೊಡೆಯ ಎಂಬ ಉಪಾಧಿಯು ಆಳುಪ ಅರಸರು ಪಟ್ಟಿ ಪೊಂಬುಚ್ಚಪುರದ ಮೇಲೆ ಹೊಂದಿದ್ದ ಅಧಿಕಾರವನ್ನು ಸೂಚಿಸುತ್ತದೆ ಎಂದು ಕೆ.ವಿ. ರಮೇಶ ಅಭಿಪ್ರಾಯಪಟ್ಟಿದ್ದಾರೆ[೮] ಆದರೆ ಪಟ್ಟಿಯೊಡೆಯ ಎಂಬ ಉಪಾಧಿಯು ಪಟ್ಟಿ ಪೊಂಬುಚ್ಚಪುರ ಅಲ್ಲ ಬದಲಾಗಿ ಅದು ಕುಂದಾಪುರ ತಾಲೂಕಿನ ಹಟ್ಟಿಯಂಗಡಿಯನ್ನು ಸೂಚಿಸುತ್ತದೆ ಎಂಬುದು ಪಿ.ಎನ್. ನರಸಿಂಹಮೂರ್ತಿಯವರ ಅಭಿಮತ[೯] ಪಟ್ಟಿಗದೇವ ಎಂಬುದು ಪಟ್ಟಿಯೊಡೆಯ ಎಂಬ ಪದದ ಇನ್ನೊಂದು ರೂಪ ಎಂದು ಸ್ವೀಕರಿಸಿದರೆ ತಪ್ಪಾಗಲಾರದು

ಶಾಸನದ ೯ನೇ ಸಾಲಿನಲ್ಲಿ ಬರುವ 'ಆಳ್ವಖೇಡಮರುಸಾಸಿರ' ಎಂಬ ಉಲ್ಲೇಖ ಅತ್ಯಂತ ಮಹತ್ವದ್ದು. ಶಾಸನದಲ್ಲಿ ಇದು ಒಂದನೇ ಕುಲಶೇಖರನ ಆಳ್ವಿಕೆಯ ಪ್ರದೇಶ ಎಂಬ ಅರ್ಥದಲ್ಲಿ ಬಳಕೆಯಾಗಿರುವುದು ಸ್ಪಷ್ಟ. ತುಳುನಾಡಿನ ಹೊರಭಾಗದಲ್ಲಿ ಗುರುತಿಸಲಾದ ಕೆಲವು ರಾಷ್ಟ್ರಕೂಟರ[೧೦] ಮತ್ತು ಹೊಯ್ಸಳರ ಶಾಸನಗಳಲ್ಲಿ[೧೧] ಆಳುಪರ ಆಳ್ವಿಕೆಯ ಪ್ರದೇಶ ಎಂಬ ಅರ್ಥದಲ್ಲಿ ತುಳುನಾಡನ್ನು ಆಳ್ವಖೇಡಮರುಸಾಸಿರ, ಆಳ್ವಖೇಡ, ಆಳ್ವರಖೇಡ ಎಂಬ ಹೆಸರಿನಿಂದ ಗುರುತಿಸಲಾಗಿರುವುದು ಕಂಡುಬರುತ್ತದೆ. ಆದರೆ ತುಳುನಾಡಿನ ಒಳಗೆ ಈ ತನಕ ಬೆಳಕಿಗೆ ಬಂದ ಯಾವುದೇ ಶಾಸನದಲ್ಲೂ ಆಳ್ವಖೇಡ ಎಂಬ ಉಲ್ಲೇಖ ಕಂಡುಬಂದಿಲ್ಲ. ಈ ದೃಷ್ಟಿಯಿಂದ ಪ್ರಸ್ತುತ ಶಾಸನವು ತುಳುನಾಡಿನೊಳಗೆ ಈತನಕ ಪತ್ತೆಯಾದ ಶಾಸನಗಳ ಪೈಕಿ 'ಆಳ್ವಖೇಡ' ಎಂಬ ಹೆಸರಿನ ಉಲ್ಲೇಖವನ್ನು ಹೊಂದಿರುವ ಏಕಮಾತ್ರ ಶಾಸನ ಎನ್ನಬಹುದು.

ಶಾಸನದ ನಂತರದ ಭಾಗದಲ್ಲಿ ಕುಲಶೇಖರನ ವೇಳೆವಾಳಿಯಾಗಿದ್ದ ಬಳಿವೆಯ ನಂಬಿ ಎಂಬಾತ ತನ್ನ ಆತ್ಮಾರ್ಪಣೆಯನ್ನು ಮಾಡುವ ಮೂಲಕ ವೀರಸಾಹಸವನ್ನು ಮೆರೆದನೆಂದು ಹೇಳಲಾಗಿದೆ. ಬಳಿವೆ ಎಂಬುದು ಸ್ಥಳನಾಮವಾಗಿರುವ ಸಾಧ್ಯತೆಯಾಗಿದ್ದು ಪೊಳಲಿಯ ಪರಿಸರದಲ್ಲಿ ಈ ಸ್ಥಳವನ್ನು ಗುರುತಿಸಲು ಅಸಾಧ್ಯವಾಗಿದೆ. ನಂಬಿಯು ಪ್ರಾಣಾರ್ಪಣೆ ಮಾಡಿಕೊಳ್ಳಬೇಕಾಗಿ ಬಂದ ಸಂದರ್ಭದ ಯಾವುದೇ ವಿವರಗಳೂ ಶಾಸನದಲ್ಲಿ ದಾಖಲಾಗಿಲ್ಲ.

ಶಾಸನದ ಮುಂದಿನ ಭಾಗ ಕುತೂಹಲಕಾರಿಯಾಗಿದೆ. ಇಲ್ಲಿ ಕಂಡುಬರುವ "ಸ್ವಾಮಿಗೆ ತಪ್ಪಿದ ಭೃತ್ಯನಧೋಮಾರ್ಗ್ಗದೆರೌರವಕ್ಕೆ ಗಳಗಳನಿಳಿಗುಂ", ಅಂದರೆ ರಾಜನಿಗೆ ನಿಷ್ಠೆಯನ್ನು ತೋರಿಸುವಲ್ಲಿ ವಿಫಲನಾದ ಸೇವಕನು (ವೇಳೆವಾಳಿ) ನರಕ ಭಾಜನನಾಗುತ್ತಾನೆ, ಎಂಬ ಉಲ್ಲೇಖವು ವಿಚಾರಯೋಗ್ಯವಾಗಿದೆ. ಈ ಉಲ್ಲೇಖವು ಈ ಹಿಂದೆ ಯಾವನೋ ವೇಳೆವಾಳಿಯು ರಾಜನಿಷ್ಠೆಗೆ ತಪ್ಪಿ ನಡೆದ ಸಂಗತಿಯನ್ನು ಸೂಚ್ಯವಾಗಿ ವ್ಯಕ್ತಪಡಿಸುತ್ತಿದೆಯೇ ಎಂಬ ಅನುಮಾನಕ್ಕೆ ಎಡೆಮಾಡಿಕೊಟ್ಟರೆ ಅಚ್ಚರಿಯಲ್ಲ. ಈ ಹಿನ್ನೆಲೆಯಲ್ಲಿ ಈಗಾಗಲೇ ಪ್ರಸ್ತಾಪಿಸಲಾಗಿರುವ ಪೊಳಲಿಯಲ್ಲಿ ಈ ಹಿಂದೆ ಪತ್ತೆಯಾದ ಕುಲಶೇಖರ ಪಾಂಡ್ಯಪಟ್ಟಿಗ ದೇವನ ತೇದಿರಹಿತ ಶಾಸನದಲ್ಲಿರುವ ವಿವರಗಳು ಗಮನಾರ್ಹವೆನಿಸುತ್ತವೆ. ಈ ಶಾಸನದಲ್ಲಿ ಕುಲಶೇಖರನ ಆಳ್ವಿಕೆಯಲ್ಲಿ ಬೀರವಡಿಚಂದಯ್ಯ ಎಂಬಾತ ವೇಳೆವಾಳಿಗೆ ತಪ್ಪಿ ನಡೆದನೆಂಬ ಒಂದು ಅತ್ಯಪರೂಪದ ಪ್ರಸಂಗವನ್ನು ಪ್ರಸ್ತಾಪಿಸಲಾಗಿದೆ. ಈ ತೇದಿರಹಿತ ಶಾಸನವು ಪ್ರಸ್ತುತ ಶಾಸನಕ್ಕಿಂತ ಪೂರ್ವದ್ದಾಗಿರಬೇಕು ಮತ್ತು ಸ್ವಾಮಿಗೆ ತಪ್ಪಿ ನಡೆದರೆ ನರಕ ಪ್ರಾಪ್ತಿಯಾಗುತ್ತದೆ ಎಂಬ ಪ್ರಸ್ತುತ ಶಾಸನದಲ್ಲಿರುವ ಉಲ್ಲೇಖಕ್ಕೆ ಬೀರವಡಿಚಂದಯ್ಯನು ವೇಳೆವಾಳಿಗೆ ತಪ್ಪಿ ನಡೆದ ಘಟನೆಯೇ ಪ್ರೇರಕವಾಗಿರಬೇಕು ಎಂದು ತೀರ್ಮಾನಿಸಿದರೆ ತಪ್ಪಾಗಲಾರದು. ಸ್ವಾಮಿ ನಿಷ್ಠನಾದ ಭೃತ್ಯನನ್ನು ರಕ್ಷಿಸುವುದು ರಾಜನಧರ್ಮ ಮಾತ್ರವಲ್ಲದೆ ಅಂತಹ ಭೃತ್ಯನನ್ನು ರಾಜನು ಆಳಿದನಾದರೆ ಅದು ಶಿಕ್ಷಾರ್ಹವಾಗುತ್ತದೆ ಎಂಬ ಪರೋಕ್ಷ ಸೂಚನೆಯೂ ಈ ಶಾಸನದಲ್ಲಿ ವ್ಯಕ್ತವಾಗಿರುವುದು ಗಮನಾರ್ಹವಾಗಿದೆ. "ದೇಸಿ[ಯಾ]ಚಾರಿಯಲಿಖಿತಂ" ಎಂಬ ವಾಕ್ಯದೊಂದಿಗೆ ಶಾಸನವು ಕೊನೆಗೊಳ್ಳುತ್ತದೆ.

ಶಾಸನದ ತಳಭಾಗದಲ್ಲಿ ಮೂರು ಅಂಕಣಗಳನ್ನು ರೂಪಿಸಲಾಗಿದ್ದು ಮಧ್ಯದ ಅಂಕಣದಲ್ಲಿ ಆಸೀನ ಭಂಗಿಯಲ್ಲಿರುವ ಓರ್ವ ಪುರುಷ ಮತ್ತು ಸ್ತ್ರೀಯ ಚಿತ್ರವನ್ನು ಕೆತ್ತಲಾಗಿರುವುದನ್ನು ಗಮನಿಸಬಹುದು. ಈ ಚಿತ್ರದಲ್ಲಿರುವ ಪುರುಷನು ಬಳಿವೆಯ ನಂಬಿಯಾಗಿರುವ ಸಾಧ್ಯತೆಯನ್ನು ಅಲ್ಲಗಳೆವಂತಿಲ್ಲ.

[ಈ ಶಾಸನದ ಪಾಠವನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ಹಿರಿಯ ಸಂಶೋಧಕ ಡಾ. ಬಿ. ರಾಜಶೇಖರಪ್ಪ ಇವರಿಗೆ ಕೃತಜ್ಞತೆಗಳು.]

ಅಡಿಟಿಪ್ಪಣಿಗಳು

೧. ರಮೇಶ್ .ಕೆ.ವಿ ಮತ್ತು ಎಂ.ಜೆ. ಶರ್ಮ, ತುಳುನಾಡಿನ ಶಾಸನಗಳು, ಉಡುಪಿ ೧೯೭೮, ಸಂಖ್ಯೆ ೨, ಪು. ೧೧.

೨. ARSIE 1927-28, No. 370, 371, 374, 375, 377, 379, 380.

೩. Ramesh.K.V., A History of SouthKanara, Dharwar, 1970, p-118.

೪. ನರಸಿಂಹಮೂರ್ತಿ.ಪಿ.ಎನ್. ಕುಂದನಾಡಿನ ಶಾಸನಗಳು, ಉಡುಪಿ ೨೦೦೭, ಪು. ೧೪೯.

೫. ಡಾ. ಪಿ.ಎನ್. ನರಸಿಂಹಮೂರ್ತಿಯವರು ಕೊಪ್ಪಳದಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿಯ ೩೧ನೆಯ ವಾರ್ಷಿಕ ಸಮ್ಮೇಳನದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಈ ಶಾಸನವನ್ನು ಉಲ್ಲೇಖಿಸಿದ್ದಾರೆ.

೬ South Indian Inscriptions,Vol. XXVII, No. 242, lines-35-36.

೭. ರಮೇಶ್.ಕೆ.ವಿ ಮತ್ತು ಎಂ.ಜೆ. ಶರ್ಮ, ಪೂರ್ವೋಕ್ತ, ಸಂಖ್ಯೆ ೩೦. ಈ ಶಾಸನದಲ್ಲಿ ಶ್ರೀಮತ್ಕುಲ ಷೇ[ಖರ]ಪಾಂಡ್ಯಪಟ್ಟಿಗದೇವ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದ್ದರೂ ಆತನನ್ನು ಒಂದನೇ ಕುಲಶೇಖರನೆಂದು ಗುರುತಿಸುವ ಬದಲು ಆತಟುಗಿಂತ ಒಂದು ತಲೆಮಾರಿಗೆ ಹಿಂದೆ ರಾಜ್ಯವನ್ನಾಳಿದ ಪಾಂಡ್ಯಪಟ್ಟಿಯೊಡೆಯ ಎಂದು ಕೆ.ವಿ. ರಮೇಶ್‌ರವರು ತಪ್ಪಾಗಿ ಗುರುತಿಸಿದ್ದಾರೆ. ನೋಡಿ Ramesh .K.V, AHistory of South Kanarap-108.

೮. K.V. Ramesh, A History of South Kanara, p. 105.

೯. ನರಸಿಂಹಮೂರ್ತಿ.ಪಿ.ಎಸ್., ಹಟ್ಟಿಯಂಗಡಿ ಒಂದು ಐತಿಹಾಸಿಕ ಸಮೀಕ್ಷೆ, ೧೯೮೬, ಪು. ೨-೪.

೧೦. K.V. Ramesh, A History of South Kanara, p. 26, 89-90.

೧೧. EC IX.(1990), ಬೇಲೂರು ೧೯೦, EC X (೧೯೯೭), ಅ.ಕೆರೆ ೯೫, ಚ.ಪಟ್ನ ೭೧, ೭೨, ೮೫, ಇತ್ಯಾದಿ.

೧೭

ಕುಣಿ ಬೆಳಕೆರೆಯ ಅಪ್ರಕಟಿತ ಶಾಸನ

ಮಂಜುಳಾ ಆಚಾರ್*

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು ಕೇಂದ್ರ ಸ್ಥಾನದಿಂದ ೧೬ ಕಿ.ಮೀ. ದೂರದಲ್ಲಿ ಕುಣಿಬೆಳಕೆರೆ ಗ್ರಾಮವಿದೆ.

ಈ ಗ್ರಾಮದ ಕಲ್ಲೇಶ್ವರ ದೇವಾಲಯದ ಜೀರ್ಣೋದ್ದಾರ ಮಾಡುವ ಸಂದರ್ಭದಲ್ಲಿ ಶಾಸನ ಪತ್ತೆ ಆಗಿದೆ, ಇದು ೧೧ನೇ ಶತಮಾನಕ್ಕೆ ಸೇರಿದ್ದು, ಇದರ ಕಾಲ ಕ್ರಿ.ಶ. ೧೧೫೮. ಶಾಸನವು ೨೬ ಸಾಲುಗಳನ್ನು ಹೊಂದಿದೆ. ಶಾಸನದ ಭಾಷೆ ಕನ್ನಡ ಮತ್ತು ಸಂಸ್ಕೃತದಲ್ಲಿದ್ದು, ಅದರ ಲಿಪಿ ನಂದಿ ನಾಗರಿಯಲ್ಲಿದೆ. ಶಾಸನದ ಕಲ್ಲು ೩೭x೨೧ ಇಂಚು ಅಳತೆಯಲ್ಲಿದೆ.

ಶಾಸನದ ಮೇಲಿನ ಪಟ್ಟಿಯಲ್ಲಿ ಶಿವಲಿಂಗ, ನಂದಿ ಶಿಲ್ಪಗಳಿವೆ. ಪ್ರಾರಂಭದಲ್ಲಿ ಹರನನ್ನು ಕೊನೆಯಲ್ಲಿ ಹರಹರಿಯನ್ನು ಸ್ತುತಿಸುತ್ತದೆ. ಶಾಸನದ ಪ್ರಾರಂಭದಲ್ಲಿ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ಎಂಬ ಶಿವಸ್ತುತಿ ಇದೆ. ಚಾಲುಕ್ಯ ವಿಕ್ರಮ ಕಾಲದ ೪ನೇಯ ವ್ಯಯ ಸಂವತ್ಸರದ ಪುಷ್ಯ ೧೪ ಸೊಮವಾರ ಉತ್ತರಾಯಣ ಸಂಕ್ರಮಣ ಮಹಾ ತಿಥಿಯಂದು ಅಂದರೆ ಹುಣ್ಣಿಮೆ ದಿನ ಸೋಮವಾರದಂದು ಚಾಲುಕ್ಯ ತ್ರಿಬುವನಮಲ್ಲನ ಆಡಳಿತಾವಧಿಯಲ್ಲಿ ಅವನ ದಂಡನಾಯಕ ಗೋವಿಂದರಸನ ಸಾಮಾಂತಾಧಿಪತಿ ಸಿಂಗರಸನು ನೊಳಂಬವಾಡಿ ೩೨,೦೦೦ ದಲ್ಲಿ ಉಚ್ಚಂಗಿ ನೆಲೆಬೀಡಿನಲ್ಲಿ ಕೊಗಳ ೫೦೦ರ ಒಳಗಿನ ಕಂಪಣ ೭೦ರಲ್ಲಿನ ಕುಣಿಬೆಳಕೆರೆ ಒಂದು ಅಗ್ರಹಾರವಾಗಿತ್ತು. ಈ ಗುಣಿ ಬೆಳ್ಕೆರೆ ಅಗ್ರಹಾರದ ಭದ್ರೇಶ್ವರ ಮಹಾದೇವರಿಗೆ ದೇವರ ಅಂಗಭೋಗ, ನೈವೇದ್ಯಕ್ಕೆ ಆ ಗ್ರಾಮದ ಮಹಾರಾಜರ ಸಮ್ಮುಖದಲ್ಲಿ ಭೂಮಿ ದಾನ ಬಿಡಲಾಗಿದೆ. ಶಾಸನದ ಕೊನೆಯ ಭಾಗದಲ್ಲಿ ಅಬ್ಬೊಜ್ಜನ ಉಲ್ಲೇಖ ಇದ್ದು, ಬಹುಶಃ ಶಿಲ್ಪಿಯ ಹೆಸರು ಇರಬೇಕೆನಿಸುತ್ತದೆ.

ದಾನ ಬಿಡುವಾಗ ಹಿರಿಯ ಸೋಮೇಶ್ವರ ದೇವರಿಗೂ ದಾನ ಬಿಡಲಾಗಿದೆ. ಭದ್ರೇಶ್ವರ ದೇವರ ಪೂಜೆ ಪುರಸ್ಕಾರ, ನೈವೇದ್ಯ, ವಾಜರ ಸತ್ರಕ್ಕೆ ಹಿರಿಯ ಶಾಸನದಲ್ಲಿರುವ ಗದ್ದೆ, ಬೆದ್ದಲೆ, ಪೆರ್ಜುಂಕದ ಪನ್ನಾಯವಡ್ಡರಾವಳದ ಎಲ್ಲಾ ಸುಂಕ, ಎಲೆ ಇತ್ಯಾದಿ ದಾನ ಬಿಡಲಾಗಿದೆ. ಇಲ್ಲಿ ದಶವನ್ದೆ ಮತ್ತು ದಾನ ಎಂಬುದನ್ನು ಗಮನಸಬಹುದು. [ಪೆರ್ಜುಂಕದ ಪನ್ನಾಯವಡ್ಡರಾವಳದ ಎಲ್ಲಾ ಸುಂಕದಶವನ್ಥೆ ಮೋ ಮತ್ತು ಎಲೆಯ... ಎಂದು ಶಾಸನ ತ್ರುಟಿತವಾಗಿದೆ. ಕುಣಿ ಬೆಳಕೆರೆ ಗ್ರಾಮಕ್ಕೆ ಕುಣಿ ಎಂಬ ಪದ ಯಾವಾಗ ಬಂದಿರುವುದು ಎಂಬುದಕ್ಕೆ ಯಾವುದೇ ಆಧಾರಗಳು ಇಲ್ಲ. ಶಾಸನದಲ್ಲಿ ಬೆಳಕೆರೆ ಎಂಬ ಉಲ್ಲೇಖಗಳು ಮಾತ್ರ ಸಿಗುತ್ತದೆ.

ಶಾಸನದ ಪಾಠ

೧) ಓಂ ನಮಃ ಶಿವಾಯ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯ ನಗರಾರಂ.

೨) ಭ ಮೂಲಸ್ಥಂಭಾಯ ಶಂಭವೇ ಶ್ರೀ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಥ್ವಿವಲ್ಲಭ.

೩) .... ಚಾಳುಕ್ಯ ವಿಕ್ರಮ ಕಾಲದ ೪ನೇ ವ್ಯಯ ಸಂವತ್ಸರದ.

೪) ....

೫) ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟಾರಕ ಸತ್ಯಾಶ್ರಯ ಕುಲ ತಿಲಕ ಚಾಲುಕ್ಯಾಭರಣ ಶ್ರೀ ಮ,

೬) ತ್ರಿಭುವನ ಮಲ್ಲ ದೇವರ ವಿಜಯ ರಾಜ್ಯ ಮುತ್ತರೊತ್ತರಾಬಿವೃದ್ಧಿ ಪ್ರವರ್ದಮಾನ ಮಾಚಂದ್ರಾರ್ಕ ತಾರಂಭಂ ಸಲವತ

೭) ಮಿರೆ ಶ್ರೀ ತತ್ಪಾದಪದ್ಮೋಪಜೀವಿ ಶ್ರೀ ಸ್ವಸ್ತಿ ಸಮಸ್ತ ಲೋಕೈಕ ವಿಖ್ಯಾತ ಮನುಜ ಮಾಂದಾಂತ

೮) ನ ಪರಿಮಿತ ಶಕ್ತಿ ಪ್ರದಾನನಂ/ ನಿಕಿಳ ನೀತಿ ಚತುರಾನನ ಬಂಧು ಜನ...........ನರಸ/ವಿವೇಕ ಮುಕುಂದ ಸತ್ಯರಾಧೆಯ

* ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ-೫೮೧೧೧೦. ಮೊ. ೯೯೧೬೧೮೮೫೮೬

೯) .... ಗೋತ್ರ ವಿಪತ್ರ ಸುಜನೈಕ ಮಿತ್ರದಾನ ವಿನೋದ ....ವಿನೋದ ದ್ವಿಜ ಕುಲ ....ಕೀರ್ತಿ ರತ್ನಾಕರ
೧೦) .... ನಿರ್ಮಳ ಗುಣಾಳಾಂಕಾರ ವಂದಿ ಜನಾದಾರ .... ಗೋತ್ರಯ .... ವಿಮತೇಜ
೧೧) ....ಬೃಹಸ್ಪತಿ ವಾಜಿಕುಲಾಂಭರ ದ್ವಿಮಸಿ .... ಚೂಡಾಮಣಿ ಸತ್ಯ .... ನೀತಿ ಚಾಣಕ್ಯ
೧೨) ಶ್ರೀ ಮತ್ತು ವಿಳಾಸ ಪುರಾವಧಿಶ್ವರ ವರಪ್ರಸಾದ ಲಬ್ದನೇಕ ನಾಮಾದಿ ವಿಳಯಂ ಸಕಳತೇಜ ನಿಳಯ ನಾ
೧೩) ಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ಮದಗ್ರಹಾರ ಬೆಳ್ಸರೆಯ ಪ್ರಭು ಮಂತ್ರೋತ್ಸಾಹ ಶಕ್ತಿತ್ರಯರಪ್ಪ
೧೪) ಪ್ರವೊತ್ತಮಯ್ಯ ನಾಯಕರು ಆಯಯ್ಯ ಮಗನಾರಾಯಣ ಮಯ್ಯನು ಮುನ್ನನ ಮೂರು(ಮಿ)ತೊಂಟ ಪೊರಗಾಗಗಿ ಆಯಿ
೧೫) ನೂರು (ಅ) ಮತ್ರ್ಯ (ಕ) ಬಳಿಯ ನೆಲೆಯಾದ .... ಮ ....ಯಲ್ಲಿ ....ಜೀವಿತಮಂ ಕಳದು ಮಿ
೧೬) ತಮ ಮತ್ತಂ...ಗದ್ಯಾಣ ಪೊನ್ನ ....ಮೂಡಲ ಕಡಲಿಯದ ಕಡಂಗೊಟ್ಟದರೆ ವೃದ್ಧಿಚು ಮತ್ತಂ ತೊಂಟದ ಎಲಿಯದೆರೆ
೧೭) ಯ ಮಾ ಅ (ಡಿ) ಳಿದ ಪೊನ್ನ ಪಾ ಕಾಯಮಮಂ ಇನ್ತನಿತು ಭದ್ರೆಶ್ವರ ದೇವರ್ಗೆ, ತ್ಯರ್ಥ್ಥ ಮೂಲೆಗೆ ಪೂಜೆಪು
೧೮) ನ ಸ್ಕಾರ ನೈವೇದ್ಯ ವಾಜರನ ಸತ್ರಕೆ ಬಿಟ್ಟರ್ತವದಾ ಮಾರ್ಗ ಮತ್ತಂ ಪಿರಿಯ ಶಾಸನದೊಳಗುಳ್ಳ ಗರ್ದ್ದೆ
೧೯) ಬೆದ್ದಲೆಯರನಿತು............ ಪರಿಸೂತ್ರದೊಳಗಣ .... ಮುಂ ದೇವ ಗೊಳಗಮುಂ ಧರ್ಮಗೊಳಗಮಂ
೨೦) ಪೆರ್ಜುಂಕದ ಪನ್ನಾಯದ ವಡ್ಡರಾವಳದ ಎಲ್ಲಾ ಸುಂಕದೆ ದಶವನ್ದೆ ಮುಂ ಎಲೆಯ ....ದ............
೨೧) ಇ .... ಹಿ [ಡಿ] ತಂಬುಲಿಗ್ಗಿರು ಪಾವಗತಿ (ಅ) ವರು ಮತ್ತಂ ಬೋಜಗರುಂ ಮೂವತ್ತು ಹೆ[ಅ] ಂಗೊ
೨೨) ಪಾಗವಂತ [ಮಿ] ವರು ಎಲ್ಲಾ ಪುಣ್ಯ ತಿರ್ಥಂ ಸಹಿತ ದೊಳಗಾಗಿ ಹಿರಿಯ ಸೋಮಶ್ವರ ದೇವರ್ಗೆ ಎರಡು
೨೩) ವರೆ ಭದ್ರೇಶ್ವರ ದೇವರ್ಗೆ .... ಇನ್ತ ಧರ್ಮವನಾನೊರ್ವ ಪ್ರತಿಪಾಲಿಸಿದಾತಂ ಗಂಗಾತೀರ
೨೪) ಓರುಕ್ಷೇತ್ರ ವಾರಣಾಸಿಯಲ್ಲಿ ಸಾಸಿರ್ವವೇದ ಪಾರಗರಪ್ಪ ಬ್ರಾಹ್ಮಣಗಳ ಸಹಸ್ರ ಕವಿಯ ಕೂಡುಂಕೋಳ
೨೫) ಮ. ನ್ಮ....... ಸಿದಾನಗೆಯ್ದು ಪಳಮಕ್ಕು/ ಇ ಧರ್ಮವನಾವ ನೋಗ್ವನಳಿ ಹಾತ ಪಂಚ ಮಹಾ ಪಾತಕ ನಕ್ಕು/ ಸ್ವ
೨೬) ದತ್ತ ಪರದತ್ತ ವಾಯೋಹತತಿ ವಸುಂದರಾ ಕೂಡ್ಡಿವರ್ಧ ಸಹಸ್ರಾಸ ವಿಷ್ಟಾಯಾಂ ಜಾಯೇತಿ ಕ್ರಿಮಿ..............
೨೭) ವೃದ್ದಿಯ ಚ . ಕೆ............ ದ.. ಮ......ಮಕ.... ಬ್ಯಮಪ್ಪ ಲಕ್ಷೀಯ ತೇಜಯಮಕ
೨೮) ರಾ. ಮ.ಕೆ ಪುಣ್ಯಾಭಾಜನ...........
೨೯) ಬಾನ್ದವ ವಾಜರುಳ ಪ್ರದೇಪಕ ನೆಡೆ ಮದುಹಿಳ ಕಾಳದೊಳು ತೊಟ್ಟು ನರನ್ತರ ಮಾರ್ಪವಾದ ಮಾಡದೆಯೋಗ ಮ [ಒ] ರ್ಪುದೆ
೩೦) ಬುಧಜನಾಶ್ರಯ ನೊಳು ತೊಡರೆಂಬುದಿಲ್ಲಾ ಕನ್ನಡಿ ವಿ [ಪಿ] ಡಿದನ್ತಿ ಕೀರ್ತಲತೆ ಪದುದತ್ತಲ ಜಡ ಮೆಯ್ದುಲೆದಡೆಪದೊ
೩೧) ದ್ವಿಜಕುಲೊತ್ತಮನೆಂಬುದದನ್ತು ಮಾರ್ಪಡೆ ಮಂದರರಂಗಿಯುಂ ಸಿರಿಯುಂ ಸದಿರ್ದ್ಧಾ ಬೋಧಿಯುಂ...ಕ[ರಿ]ಯ/ ......
೩೨) ದರೆ ಯುಂ ನಿಲ್ವಿನ ಮಂದುವರಂ ನಿಲ್ಕೆಕೀ ತಿರ್ಪುದಾತನ ಮನ।ದಾನ ವಿನೋದನಂ ಬಂಧು ಗುಣಾಂಬುದಿಯಂಬುದು
೩೩) ....ಮಮಬುದ ನಾನಿಸದಿಯ ಕಳ್ಪಕ್ಕರು ವೆಂಬುದುವಾಜಿಕುಳ ಪ್ರದೀಪನ
೩೪) ನೆನೆಸೆವಿಬುಧ ದರೆಯೊಳಪ್ಪ ಡೂವೋತ್ತಮನೆಂಬ.... ॥ ಹರಿಹರಪಾದ ಪಂಕಜನಾಮ ವಿಪ್ರಕುಲದಾಸ ಸರಸ್ವ....
೩೫) ....ಗಣಮಿತ್ರ ಭದ್ರೇಶ್ವರ ದೇವತಾ ಮೂರ್ತಿ ಮೂದಲ ಮೂಂ ಮಾಡಿದ ನಾಲದಿಂಬರ ತೊತ್ತ ಅಬ್ಬೋಜ.ಸ

೧೮

ಕಾಗಿನೆಲ್ಲಿಯ ಎರಡು ಅಪ್ರಕಟಿತ ತುರುಗೋಳ್ ವೀರಗಲ್ಲು ಶಾಸನಗಳು

ಆರ್. ಶೇಜೇಶ್ವರ*

ಕಾಗಿನೆಲ್ಲಿ ಗ್ರಾಮವು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಹೊಸೂರು ಹೋಬಳಿಯ ಕಾಗಿನೆಲ್ಲಿ ಗ್ರಾಮಪಂಚಾಯತಿ ಕೇಂದ್ರ ಗ್ರಾಮವಾಗಿದ್ದು, ಈ ಗ್ರಾಮದ ಹಿರೆಕೆರೆ ಹತ್ತಿರ ಚೌಡಮ್ಮನ ದೇವರು ಎಂದು ಕರೆಯುವ ಸ್ಥಳದಿಂದ ೧೦೦ ಮೀಟರ್ ಅಂತರದಲ್ಲಿ ಈ ಎರಡು ತುರುಗೊಳ್ ವೀರಗಲ್ಲು ಶಾಸನಗಳು ಕಂಡುಬರುತ್ತವೆ.

ಶಾಸನೋಕ್ತ ತುರುಗೊಳ್ ವೀರಗಲ್ಲು

ಈ ಶಾಸನೋಕ್ತ ವೀರಗಲ್ಲು ೧ ಮೀಟರ್ ೩೪ ಸೆ.ಮೀ. ಉದ್ದ ಹಾಗೂ ೪೭ ಸೆ.ಮೀ. ಆಗಲವಾಗಿದ್ದು ನೈಸ್ ಶಿಲೆಯಿಂದ ಕೂಡಿದ್ದು ಮೂರು ಪಟ್ಟಿಕೆಗಳನ್ನು ಹೊಂದಿದೆ, ಮೊದಲ ಹಾಗೂ ಎರಡನೇ ಪಟ್ಟಿಕೆಯಲ್ಲಿ ಶಾಸನವಿದ್ದು ಶಾಸನವು ತುಂಬಾ ತ್ರುಟಿತವಾಗಿರುವುದನ್ನು ಕಾಣಬಹುದು, ಈ ವೀರಗಲ್ಲನ್ನು ಕೆಳಗಿನಿಂದ ಮೇಲ್ಭಾಗಕ್ಕೆ ವಿವರಿಸಲಾಗಿದೆ.

ಕೆಳಗಿನ ಪಟ್ಟಿಕೆಯಲ್ಲಿ ವೀರನು ತುರುಗಳ ರಕ್ಷಣೆಗಾಗಿ ಹೋರಾಡುವದನ್ನು ಕಾಣಬಹುದು, ಇಲ್ಲಿ ವೀರನನ್ನು ಶತ್ರುವಿನ ಶಿಲ್ಪಕ್ಕಿಂತ ಗಾತ್ರದಲ್ಲಿ ದೊಡ್ಡದಾಗಿ ಕೆತ್ತಲಾಗಿದೆ, ವೀರನು ಕರ್ಣಕುಂಡಲ, ಕೊರಳಲ್ಲಿ ಹಾರ, ತೋಳಬಂದಿ, ಸೊಂಟದಲ್ಲಿ ಕತ್ತಿಯನ್ನು ಧರಿಸಿದ್ದು ಕೂದಲನ್ನು ಮುಡಿಕಟ್ಟಿ, ವೀರಗಚ್ಚೆಯನ್ನು ಹಾಕಿ ಬಟ್ಟೆಯ ಅಂಚನ್ನು ಕುಚ್ಚಗಳ ರೀತಿ ಬಿಟ್ಟಿರುವುದನ್ನು ಕಾಣಬಹುದು, ವೀರನು ಎಡಗೈಯಲ್ಲಿರುವ ಬರ್ಜಿ ಅಥವಾ ಈಟಿಯ ಆಯುಧದಿಂದ ಶಿರವನ್ನು ಭೇದಿಸಿರುವುದು ಬಲಗೈಯಲ್ಲಿರುವ ಆಯುಧದಿಂದ ಇನ್ನೊಬ್ಬ ಶತ್ರುವಿನ ಶಿರಭೇದನ ಮಾಡಿ ಆಯುಧವು ಕುದುರೆಯ ಶಿರಕ್ಕೆ ನಾಟಿರುವುದು ಕಂಡುಬರುತ್ತದೆ, ವೀರನ ಎದುರಿಗೆ ಇಬ್ಬರು ಶತ್ರುಗಳು ಕುದುರೆಯ ಮೇಲೆ ಕುಳಿತು ಈಟಿ ಅಥವಾ ಭರ್ಜಿಯನ್ನು ಹಿಡಿದು ವೀರನ ವಿರುದ್ಧ ಹೋರಾಡುತ್ತಿರುವ ದೃಶ್ಯ ಕುದುರೆಗಳ ಮೇಲೆ ಇಬ್ಬರು ಶತ್ರುಗಳು ವೀರನ ವಿರುದ್ಧ ಈಟಿ ಅಥವಾ ಭರ್ಜಿಯಿಂದ ಕಾದಾಡುವ ದೃಶ್ಯ ಕುದುರೆಗಳ ಕೆಳಗೆ ವ್ಯಕ್ತಿಯು ಬಿದ್ದಿರುವ ದೃಶ್ಯ ವೀರನ ಹಿಂದೆ ಇಬ್ಬರು ಸೈನಿಕರು ಅಥವಾ ವ್ಯಕ್ತಿಗಳು ನಿಂತಿರುವುದು ಹಾಗೂ ವೀರನ ಹಿಂದೆ ಒಂದರ ಮೇಲೆ ಒಂದರಂತೆ ಐದು ಗೋವುಗಳನ್ನು ಕಂಡರಿಸಲಾಗಿದೆ ಈ ಗೋವುಗಳ ಮೇಲೆ ಒಬ್ಬ ವೀರನ ಚಿತ್ರವನ್ನು ಸಹಾ ಕೆತ್ತಲಾಗಿದೆ.

ಎರಡನೇ ಪಟ್ಟಿಕೆಯಲ್ಲಿ ವೀರನು ಪಲ್ಲಕ್ಕಿ ಅಥವಾ ಮಂಟಪದಲ್ಲಿ ಅಂಜಲಿ ಮುದ್ರೆಯಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವನು ಪಕ್ಕದಲ್ಲಿ ಅಪ್ಸರೆಯರು ಪಲ್ಲಕ್ಕಿ ಅಥವಾ ಮಂಟಪವನ್ನು ಹಿಡಿದು ಇನ್ನೊಂದು ಕೈಯಲ್ಲಿ ಚಾಮರ ಹಿಡಿದಿರುವುದು ಕಂಡುಬರುತ್ತದೆ, ಇವರ ಮೇಲ್ಭಾಗದಲ್ಲಿ ಸಂಗೀತ ವಾದ್ಯ ನುಡಿಸುತ್ತಿರುವುದನ್ನು ಕಾಣಬಹುದು.

ಮೇಲಿನ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಈ ಲಿಂಗವನ್ನು ಯತಿಯು ಪೂಜಿಸುತ್ತಿರುವುದು, ವೀರನು ಅಂಜಲಿ ಮುದ್ರೆಯಲ್ಲಿ ಪದ್ಮಾಸನದಲ್ಲಿ ಕುಳಿತಿರುವುದು ಶಿವಲಿಂಗದ ಮುಂದೆ ಶಿವನ ವಾಹನ ನಂದಿ ಇದ್ದು ನಂದಿಯ ಮೇಲ್ಭಾಗದಲ್ಲಿ ಸೂರ್ಯಚಂದ್ರ ಇದ್ದು ವೀರಗಲ್ಲಿನ ಮೇಲ್ಭಾಗದಲ್ಲಿ ಕೀರ್ತಿಮುಖವನ್ನು ಕೆತ್ತಲಾಗಿದ್ದು ಕೀರ್ತಿ ಮುಖದಲ್ಲಿರುವ ಮಣಿಸರವು ಕೆಳಗೆ ಇಳಿಬಿದ್ದಿದೆ.

ಶಾಸನದ ಪಾಠ

ಈ ವೀರಗಲ್ಲಿನಲ್ಲಿ ಹನ್ನೆರಡು ಸಾಲುಗಳಿದ್ದು ಮೊದಲ ಪಟ್ಟಿಕೆಯಲ್ಲಿ ಏಳು ಸಾಲುಗಳು ಹಾಗೂ ಎರಡನೇ ಪಟ್ಟಿಕೆಯಲ್ಲಿ ಐದು ಸಾಲುಗಳಿವೆ. ಇದರಲ್ಲಿ ಮೊದಲ ಪಟ್ಟಿಕೆಯ ಐದು ಸಾಲುಗಳು ತ್ರುಟಿತವಾಗಿದ್ದು ಓದಲು ಕಷ್ಟಸಾಧ್ಯವಾಗಿವೆ.

* ಸಹಾಯಕ ನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು & ಪರಂಪರೆ ಇಲಾಖೆ, ಶಿವಪ್ಪ ನಾಯಕ ಅರಮನೆ, ಶಿವಮೊಗ್ಗ, ಮೊ. ೯೧೬೪೫೫೦೫೦೭

ಮೊದಲ ಪಟ್ಟಿಕೆ

೧ ಸ್ವಸ್ತಿ ಶ್ರೀ ಯಾದವನಾರಾಯಣ ಭುಜಬಳ ಪ್ರ

೨ (ತಾ ಪ) ವೀರರಾಮಚಂದ್ರರಾಯ

೩

೪

೫ ಪಾಠಗಳು ಸವೆದಿದೆ

೬

೭

ಎರಡನೇ ಪಟ್ಟಿಕೆ

೮ . . ಸುರಲೋಕ ಪ್ರಾಪ್ತನಾದ। ಆತಂಗೆಆಕಾ . ನ ರ .

೯ ಯಲುಗೊಡ್ಡಯ . . . ಆತಂಗೆ ನೆತ್ತರುಗೊಡಿಗೆ ಜ

೧೦ ಡಿಗೇನಹಳಿಯಲಿ . . . . . . ಯಿಪ್ಪತಯ್ದು ಕಂಬ(ಬೆತ್ತ)ಲು ಸಲುವುದು

೧೧ ಯಿದಕೆಆರು ಅಳುಹಿದವರು ವಾರಣಾಸೆಯಲು ಕವಿಲ್ಯ

೧೨ ಯಂ ಕೊಂದ ದೋಶಾ ಮಂಗಳ ಮಹಾ ಶ್ರೀ ಶ್ರೀಶ್ರೀ

ಶಾಸನದ ಸಾರಂಶ: ಈ ಶಾಸನವು ಸೇವುಣರದೊರೆ ವೀರರಾಮಚಂದ್ರರಾಯನ ಕಾಲದ್ದಾಗಿದೆ, ಇಲ್ಲಿ ತುರುಗೊಳ್ ಕದನದಲ್ಲಿ ಹೋರಾಡಿ ಮಡಿದಿರುವ ವೀರನ ಹೆಸರಿರುವ ಅಕ್ಷರಗಳು ತೃಟಿತವಾಗಿರುವುದರಿಂದ ವೀರನ ಹೆಸರು ಕಂಡುಬರುವುದಿಲ್ಲ, ಸುರಲೋಕ ಪ್ರಾಪ್ತನಾದ ವೀರನಿಗೆ ಇಪ್ಪತ್ತೈದು ಕಂಬ ಬೆದ್ದಲು ಭೂಮಿಯನ್ನು ಬಹುಶ: ಹೊನ್ನಾಳಿ ತಾಲೂಕಿನ ಗಡಿಯಲ್ಲಿ ಬರುವ ಜೀನಹಳ್ಳಿ ಅಂದರೆ ಕಾಗೆನೆಲ್ಲಿಯಿಂದ ಸುಮಾರು ೬ ಕಿ.ಮೀ ದೂರದಲ್ಲಿ ಬರುವ ಈ ಹಳ್ಳಿಯಿರಬಹುದೆಂದು ಇಲ್ಲಿ ದಾನ ನೀಡಿರಬಹುದೆಂದು ಅಂದಾಜಿಸಲಾಗಿದೆ, ಕೊನೆಯಲ್ಲಿ ಈ ಶಾಸನವನ್ನು ಯಾರಾದರು ಹಾಳು ಮಾಡಿದರೆ ವಾರಣಾಸಿಯಲ್ಲಿ ಬ್ರಾಹ್ಮಣರನ್ನುಕೊಂದ ಶಾಪಕ್ಕೆ ಹೊಗುವರುಎಂದು ತಿಳಿಯಬಹುದಾಗಿದೆ.

ಎರಡನೇ ಶಾಸನೋಕ್ತ ತುರುಗೊಳ್ ವೀರಗಲ್ಲು

ಈ ಶಾಸನೋಕ್ತ ವೀರಗಲ್ಲು ೧ ಮೀಟರ್ ೩೪ ಸೆ.ಮೀ. ಉದ್ದ ಹಾಗೂ ೪೩ ಸೆ.ಮೀ. ಆಗಲವಾಗಿದ್ದು ನೈಸ್ ಶಿಲೆಯಿಂದ ಕೂಡಿದ್ದು ಮೂರು ಪಟ್ಟಿಕೆಗಳನ್ನು ಹೊಂದಿದೆ, ಮೊದಲ, ಎರಡನೇ ಹಾಗೂ ಮೂರನೇ ಪಟ್ಟಿಕೆಯಲ್ಲಿ ಶಾಸನವನ್ನು ನೋಡಬಹುದು ಶಾಸನವು ಅಲ್ಲಲ್ಲಿ ತೃಟಿತವಾಗಿರುವುದನ್ನು ಕಾಣಬಹುದು. ಈ ವೀರಗಲ್ಲನ್ನು ಕೆಳಗಿನಿಂದ ಮೇಲ್ಭಾಗಕ್ಕೆ ವಿವರಿಸಲಾಗಿದ್ದು

ಕೆಳಗಿನ ಪಟ್ಟಿಕೆಯಲ್ಲಿ ವೀರನು ತುರುಗಳ ರಕ್ಷಣೆಗಾಗಿ ಹೋರಾಡುವದನ್ನು ಕಾಣಬಹುದು ಇಲ್ಲಿ ವೀರನನ್ನು ಶತ್ರುವಿನ ಶಿಲ್ಪಕ್ಕಿಂತ ಗಾತ್ರದಲ್ಲಿ ದೊಡ್ಡದಾಗಿ ಕೆತ್ತಲ್ಪಟ್ಟಿದೆ, ವೀರನು ಕರ್ಣಕುಂಡಲ, ಕೊರಳಲ್ಲಿ ಹಾರ, ತೋಳಬಂದಿ, ಸೊಂಟದಲ್ಲಿ ಕತ್ತಿಯನ್ನು ಧರಿಸಿದ್ದು ಕೂದಲನ್ನು ಮುಡಿಕಟ್ಟಿ, ವೀರಗಚ್ಚೆಯನ್ನು ಹಾಕಿ ಬಟ್ಟೆಯ ಅಂಚನ್ನು ಕುಚ್ಚಗಳ ರೀತಿ ಬಿಟ್ಟಿರುವುದನ್ನು ಕಾಣಬಹುದು, ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಶತ್ರುವಿನ ಹೊಟ್ಟೆಯಲ್ಲಿ ನಾಟಿರುವಂತೆ ಬಾಣವನ್ನು ಬಿಟ್ಟಿರುವುದು ಹಿಂಭಾಗದಿಂದ ಇನ್ನೊಬ್ಬ ವೀರ ಬಾಣವನ್ನು ಕೊಡುತ್ತಿರುವುದು ವೀರನ ಎದುರಿಗೆ ಇಬ್ಬರು ಶತ್ರುಗಳು ಒಬ್ಬರು ಗುರಾಣಿ ಒಬ್ಬರು ಬರ್ಚಿಯನ್ನು ಹಿಡಿದು ಹೋರಾಡುತ್ತಿರುವುದು ಇವರ ಕೆಳಗೆ ಇಬ್ಬರು ಶತ್ರುಗಳು ಬರ್ಚಿಯನ್ನು ಹಿಡಿದು ವೀರನಿಗೆ ಬೆನ್ನು ಮಾಡಿ ಓಡುತ್ತಿರುವುದು ವೀರನ ಕೆಳಗೆ ಒಬ್ಬ ಶತ್ರು ಬಿದ್ದಿರುವುದು ವೀರನ ಹಿಂಬದಿಯಲ್ಲಿ ಒಂದರ ಮೇಲೆ ಒಂದರಂತೆ ಮೂರು ಗೋವುಗಳನ್ನು ಕಂಡರಿಸಲಾಗಿದೆ, ಈ ಗೋವುಗಳ ಮೇಲೆ ಒಬ್ಬ ಬಾಣ ಕೊಡುತ್ತಿರುವ ಸೇವಕನ ಚಿತ್ರವನ್ನು ಸಹಾ ಕೆತ್ತಲಾಗಿದೆ.




ಎರಡನೇ ಪಟ್ಟಿಕೆಯಲ್ಲಿ ವೀರನು ಪಲ್ಲಕ್ಕಿ ಅಥವಾ ಮಂಟಪದಲ್ಲಿ ಅಂಜಲಿ ಮುದ್ರೆಯಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿರುವನು ಪಕ್ಕದಲ್ಲಿ ಅಪ್ಸರೆಯರು ಪಲ್ಲಕ್ಕಿ ಅಥವಾ ಮಂಟಪವನ್ನು ಹಿಡಿದು ಇನ್ನೊಂದು ಕೈಯಲ್ಲಿ ಚಾಮರ ಹಿಡಿದಿರುವುದು ಕಂಡುಬರುತ್ತದೆ.

ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ವೀರನು ಅಂಜಲಿಮುದ್ರೆಯಲ್ಲಿ ಪದ್ಮಾಸನದಲ್ಲಿ ಕುಳಿತಿರುವುದು ಕಂಡುಬರುತ್ತದೆ. ಮೇಲ್ಭಾಗದಲ್ಲಿ ಸೂರ್ಯ ಇದ್ದು ವೀರಗಲ್ಲಿನ ಮೇಲ್ಭಾಗದಲ್ಲಿ ಕೀರ್ತಿಮುಖವನ್ನು ಕೆತ್ತಲಾಗಿದ್ದು ಕೀರ್ತಿಮುಖದಲ್ಲಿರುವ ಮಣಿಸರವು ಕೆಳಗೆ ಇಳಿಬಿದ್ದಿದೆ. ಶಿವಲಿಂಗದ ಎಡಭಾಗ ಸ್ವಲ್ಪ ಭಾಗ ಹೊಡೆದು ಹೋಗಿರುವುದು ಕಂಡುಬರುತ್ತದೆ.

ಶಾಸನದ ಪಾಠ

ಈ ವೀರಗಲ್ಲಿನಲ್ಲಿ ಹದಿನಾಲ್ಕು ಸಾಲುಗಳಿದ್ದು ಮೊದಲ ಪಟ್ಟಿಕೆಯಲ್ಲಿ ಮೂರು ಸಾಲುಗಳಿದ್ದು ಎರಡನೇ ಪಟ್ಟಿಕೆಯಲ್ಲಿ ನಾಲ್ಕು ಸಾಲುಗಳಿವೆ ಮೂರನೇ ಪಟ್ಟಿಕೆಯಲ್ಲಿ ಏಳು ಸಾಲುಗಳಿವೆ, ಈ ಶಾಸನದಲ್ಲಿ ಅಲ್ಲಲ್ಲಿ ಸ್ವಲ್ಪ ಭಾಗ ತೃಟಿತವಾಗಿದೆ.

ಮೊದಲಪಟ್ಟಿಕೆ

೧ ಸ್ವಸ್ತಿ ಶ್ರೀಮತು ಯಾದವ ನಾರಾಯಣ ಬುಜಬಳ

೨ ಪ್ರತಾಪಚಕ್ರವರ್ತಿ ಶ್ರೀ ವೀರರಾಮಚಂದ್ರರಾಯ . . . .

೩ . . . ನೆಯಜಯ ಸಂವತ್ಸರದ . . . . . .

ಎರಡನೇ ಪಟ್ಟಿಕೆ

೪ ಸುಖಸಂಕಥಾ ವಿನೋದದಿಂ ರಾಜ್ಯಂಗೆಯುತ್ತಮಿರೆ ತತ್ಪಾ

೫ ದಪದ್ಮೋಪಜೀವಿ . . . . . .

೬ ರಿದು ತುರುವಂಕೊಂಡು ಹೋಹಲಿ ಗಡಿಯಂಕರಾಮ .ಡಿ ಅ . .

೭ . . . ಚ ಗಂಡ . . . . . .

ಮೂರನೆಯ ಪಟ್ಟಿಕೆ

೮ ರಿಯ . ನಾಗನು .ಗಿ . .ರಿದು . . . ಸುರಲೋಕ ಪ್ರಾ

೯ ಪ್ತನಾದನು ಆತನ ವೀರ ಸಿರಿಯ ಪೋ . . . .

೧೦ ಸಿತು . . . ಬಿಟ ರು . . . . ಅವರ ನಾ . . . .

೧೧ ಹುರು . ದಿ ಸರಾ . . . . . ಬಿಟ್ಟ . . .

೧೨ ಮಲಿ .ಯ ಹ . (ಬೆ)ದ್ದಲು೨ ಕಂಬ ಕೇಯಿ . . . .

೧೩ . . . . . ನಂ ಸಲ್ದಮಿರೆ ಯಿದಳಿದವನು ವಾರಣಸಿ . . .

೧೪ . . ಕವಿಲೆಯಕೊಂದ ದೋಸ ಮಂಗಳ ಮಹಾ ಶ್ರೀ ಶ್ರೀಶ್ರೀ

ಶಾಸನದ ಸಾರಂಶ: ಈ ಶಾಸನವು ಸೇವುಣರದೊರೆ ವೀರರಾಮಚಂದ್ರರಾಯನ ಕಾಲದ್ದಾಗಿದೆ, ಇಲ್ಲಿ ಗೋವುಗಳನ್ನು ಕೊಂಡು ಹೋಗುವಾಗ ಗಡಿಯಂಕರಾಮ ಎಂಬ ಬಿರುದುಳ್ಳವನು ಶತ್ರುಗಳ ವಿರುದ್ಧ ಹೋರಾಡಿ ವೀರ ಮರಣವನ್ನೊಪ್ಪಿರಬಹುದು, ಆದ್ದರಿಂದ ಅವನಿಗೆ ಎರಡು ಕಂಬ ಬೆದ್ದಲು ಭೂಮಿಯನ್ನು ದಾನ ನೀಡಿರುವುದನ್ನು ತಿಳಿಯಬಹುದು. ಕೊನೆಯಲ್ಲಿ ಈ ಶಾಸನವನ್ನು ಯಾರಾದರು ಹಾಳು ಮಾಡಿದರೆ ವಾರಣಸಿಯಲ್ಲಿ ಬ್ರಾಹ್ಮಣರನ್ನು ಕೊಂದ ಶಾಪಕ್ಕೆ ಹೊಗುವರು ಎಂದು ತಿಳಿಯಬಹುದಾಗಿದೆ.

ಮೇಲಿನ ಎರಡು ಶಾಸನಗಳು ಕ್ರಿ.ಶ. ಸು ಒಂಬತ್ತನೇ ಶತಮಾನದಿಂದ ಹದಿನಾಲ್ಕನೇ ಶತಮಾನದವರೆಗೆ ಆಳ್ವಿಕೆಯನ್ನು ಮಾಡಿದ ಸೇವುಣರ ಕಾಲದವು. ಇವರಲ್ಲಿ ಒಂದನೇ ಸಿಂಘಣ, ಬಿಲ್ಲಮ, ಕೃಷ್ಣ ಪ್ರಸಿದ್ಧ ದೊರೆಗಳಾಗಿದ್ದರು ಸಿಂಘಣಾ–೨ರ ಮೊಮ್ಮಗ ರಾಮಚಂದ್ರ ಇವರು ಕ್ರಿ.ಶ. ೧೨೭೧ರಿಂದ ೧೩೯೯ರವರೆಗೆ ಅಳ್ವಿಕೆಯನ್ನು ಮಾಡಿದರು. ಈ ರಾಮಚಂದ್ರನ ಕಾಲದವು ಈ ಎರಡು ಶಾಸನಗಳು ಇವರ ಕಾಲದಲ್ಲಿ ಕಾಗೆನೆಲ್ಲಿಯಿಂದ ಹದಿನೈದು ಕಿ.ಮೀ. ದೂರದಲ್ಲಿರುವ ಬೆಳಗುತ್ತಿಯನ್ನು ಸೇವುಣರ ಸಾಮಂತರಾಗಿದ್ದ ಬೆಳಗುತ್ತಿಯ ಸಿಂಧರು ಅಳ್ವಿಕೆ ಮಾಡುತ್ತಿದ್ದರು, ಆದ್ದರಿಂದ ಸಾಮಂತ ಬೆಳಗುತ್ತಿ ಸಿಂಧರಸರು ಈ ತುರುಗೋಳ್ ವೀರಗಲ್ಲನ್ನು ರಾಜನ ಹೆಸರಿನಲ್ಲಿ ಮಡಿದ ವೀರನಿಗೋಸ್ಕರ ಈ ಶಾಸನವನ್ನು ಹಾಕಿಸಿರುವುದು ಕಂಡು ಬರುತ್ತದೆ.

[ಈ ಪ್ರಬಂಧವನ್ನು ರಚನೆ ಮಾಡುವಲ್ಲಿ ಸಹಕರಿಸಿದ ಡಾ. ಜಗದೀಶ, ನಾಗರಾಜಪ್ಪ ಹಾಗೂ ನನ್ನ ಗುರುಗಳು ಸಂಶೋಧನಾ ಮಾರ್ಗದರ್ಶಕರಾದ ಡಾ. ಹನುಮನಾಯಕ ಇವರುಗಳಿಗೆ ಅಭಾರಿಯಾಗಿರುತೇನೆ.]

೧೯

'ಚನ್ನರಾಯಪಟ್ಟಣ ತಾಲೂಕಿನ ಗೌಡಗೆರೆಯ ಅಪ್ರಕಟಿತ ತುಱುಗೋಳ್ ಶಾಸನ

ಎಸ್. ಶಿಲ್ಪ*

ಬೆಂಗಳೂರು ಮತ್ತು ಚನ್ನರಾಯಪಟ್ಟಣದ ಹೆದ್ದಾರಿಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಗೌಡಗೆರೆ ಎಂಬ ಪುಟ್ಟ ಗ್ರಾಮ. ಆ ಗ್ರಾಮದ ಕೆರೆಯ ಪಕ್ಕದಲ್ಲಿರುವ ಶಿವನ ದೇವಾಲಯದ ಹೊರಭಾಗದಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದ ಕೆಲವು ಅವಶೇಷಗಳಿವೆ. ಅವುಗಳಲ್ಲಿ ಕಾಲಭೈರವನ ಶಿಲ್ಪ ಹಾಗೂ ಮೂರು ವೀರಗಲ್ಲುಗಳಿದ್ದು, ಆ ಮೂರು ವೀರಗಲ್ಲಿನಲ್ಲಿ ಒಂದು ಶಾಸನೋಕ್ತ ಅಪ್ರಕಟಿತ ವೀರಗಲ್ಲಾಗಿದೆ.

ಶಾಸನೋಕ್ತ ಸ್ವರೂಪ

ಶಿಲಾಶಾಸನವು ಸುಮಾರು ಮೂರು ಅಡಿ ಎತ್ತರ, ಒಂದುವರೆ ಅಡಿ ಅಗಲವಿದ್ದು, ಅದು ತುರುಗೋಳ್ ಶಾಸನವಾಗಿದೆ. ಆ ತುರುಗೋಳ್ ಶಾಸನದಲ್ಲಿ ಮೂರು ಹಂತಗಳಿದ್ದು, ಕೆಳಗಿನ ಮೊದಲ ಹಂತದ ಸ್ವಲ್ಪ ಭಾಗವು ಭೂಮಿಯಲ್ಲಿ ಹುದುಗಿಕೊಂಡಿದೆ. ಆ ಮೊದಲ ಭಾಗದಲ್ಲಿ ವೀರನು ಈಟಿ ಮತ್ತು ಗುರಾಣಿಯನ್ನು ಹಿಡಿದು ಶತ್ರುವಿನೊಂದಿಗೆ ಹೋರಾಡುತ್ತಿರುವ ದೃಶ್ಯವಿದೆ. ವೀರನ ಹಿಂಬದಿಯಲ್ಲಿ ವೀರನ ಪಾಳೆಯದವನೆ ಆದ ಬಿಲ್ಲುಧಾರಿಯೊಬ್ಬನಿದ್ದಾನೆ, ಹಾಗೆ ವೀರನು ರಕ್ಷಿಸಿದ ತುರುಗಳ ಗುಂಪು ಇದೆ. ತುರುಗಳ್ಳರು ಸಹ ಆಯುಧಗಳನ್ನು ಹಿಡಿದು ವೀರನೊಂದಿಗೆ ಹೋರಾಡುತ್ತಿರುವಂತಿದೆ. ವೀರಗಲ್ಲಿನಲ್ಲಿ ತುರುಕಾಳಗದ ದೃಶ್ಯವು ಕಣ್ಣಿಗೆ ಕಟ್ಟುವಂತೆ ಶಿಲ್ಪಿ ಕಡೆದಿದ್ದಾನೆ. ಇನ್ನು ಎರಡನೇ ಹಂತದಲ್ಲಿ ವೀರಮರಣವನ್ನು ಹೊಂದಿದ ವೀರನನ್ನು ಸುರಾಂಗನೆಯರು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿರುವ ದೃಶ್ಯವಿದೆ. ವೀರನು ಕುಳಿತಿರುವ ವಿಮಾನದ ಕೆತ್ತನೆಯು ಆಕರ್ಷಕವಾಗಿದೆ. ಮೂರನೇ ಹಂತ ಅಂದರೆ ಶಾಸನದ ಲಲಾಟದಲ್ಲಿ ಶಿವಲಿಂಗದ ಇಕ್ಕೆಲಗಳಲ್ಲಿ ನಂದಿ ಇದ್ದು ಯತಿಯೊಬ್ಬ ಶಿವಲಿಂಗಕ್ಕೆ ಕೈ ಮುಗಿದು ಕುಳಿತಿರುವಂತಿದೆ. ಶಾಸನದಲ್ಲಿ ಎರಡು ಪಟ್ಟಿಕೆಗಳಿದ್ದು ಅದರಲ್ಲಿ ಮೇಲಿನ ಭಾಗದ ಪಟ್ಟಿಕೆಯಲ್ಲಿ ಶಾಸನವಿದ್ದು ಕೆಳಗಿನ ಪಟ್ಟಿಕೆ ಶಾಸನರಹಿತವಾಗಿ, ಅರ್ಧಕ್ಕೆ ನಿಂತಂತಿದೆ. ಶಾಸನದಲ್ಲಿ ಒಟ್ಟು ೫ ಸಾಲುಗಳಿದ್ದು ಲಿಪಿ ಹೊಯ್ಸಳ ಲಿಪಿಯಾಗಿದ್ದು ಸುಸ್ಥಿತಿಯಲ್ಲಿದ್ದು ಓದಬಹುದಾಗಿದೆ.

ಶಾಸನದ ಪಾಠ

೧. ಶ್ರೀ ನಮಸ್ತುಂಗ ಸಿರಶ್ಚುಂಬಿ ಚಂದ್ರ ಚಾಮರ

೨. ಚಾರವೇ ತ್ರೈಳೋಕ್ಯ ನಗರಾರಂಭ ಮೂಲ ಸ್ತಂಭಾಯ

೩. ಸಂಭವೇ ॥ ಸಖ ವರ್ಷಂ ೧೧೩೬ ನೇ ಭಾವ ಸಂವತ್ಸರದ ಕಾ


೪. ರ್ತಿಕ ೫ ಶು ವಾರದಂದು ಗರುಡಗೆಱೆಯ ರತಗೌಡನ ಮಗ

೫. ಮಲಗೌಡ ತುಱುವಂ ಮಗುರ್ಚಿ ದೇವಲೋಕ ಪ್ರಾಪ್ತನಾದವನು ಶ್ರೀ

ಶಾಸನದ ವಿಶ್ಲೇಷಣೆ

ಕರ್ನಾಟಕದಲ್ಲಿ ಹಸುಗಳನ್ನು ಅನಾದಿ ಕಾಲದಿಂದಲೂ ಸಂಪತ್ತಾಗಿ ಜನರು ಭಾವಿಸಿದ್ದರು. ಇಂತಹ ಸಂಪತ್ತನ್ನು ಕದಿಯಲು ಬರುತ್ತಿದ್ದ ತುರುಗಳ್ಳರೊಂದಿಗೆ ಹೋರಾಡಿ ಮರಣ ಹೊಂದುತ್ತಿದ್ದ ವೀರರ ಬಗ್ಗೆ ತಿಳಿಸಲು ಅಥವಾ ವೀರನನ್ನು ಶ್ಲಾಘಿಸಲು ಶಾಸನಗಳನ್ನು ಹಾಕಿಸಲಾಗುತ್ತಿತ್ತು. ಕರ್ನಾಟಕದಾದ್ಯಂತ ಇಂತಹ ಶಾಸನ ಕಲ್ಲುಗಳು ಹೇರಳವಾಗಿ ದೊರೆಯುತ್ತವೆ. ತುರುಗೋಳ್ ಕಲ್ಲುಗಳು ಶಾಸನಸಹಿತ ಮತ್ತು ಶಾಸನರಹಿತವಾಗಿಯೂ ದೊರೆಯುವುದು. ಪ್ರಸ್ತುತ

* # ೧೪೪೭, ೧೨ನೇ ಅಡ್ಡರಸ್ತೆ, ೨೧ನೇ ಮುಖ್ಯರಸ್ತೆ, ಸೆಕ್ಟರ್-೧, ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು-೫೬೦೧೦೨. ಮೊ. ೯೯೦೨೪೬೧೬೦೨

ತುರುಗೋಳ್ ಹಿಂದೆಯೇ ಹೇಳಿದಂತೆ ಶಾಸನೋಕ್ತವಾಗಿದೆ. ಈ ಶಾಸನದಲ್ಲಿ ಉಕ್ತವಾದ ಕಾಲ "ಶಕ ವರ್ಷ ೧೧೩೬ ಭಾವ ಸಂವತ್ಸರಾದ ಕಾರ್ತಿಕ ಬಹುಳ ೫ ಶುಕ್ರವಾರ" ಎಂದಿದೆ. ಅಂದರೆ ಶಾಸನವು ಕ್ರಿ.ಶ. ೧೨೧೪ನೇ ಇಸವಿಯ ಅಕ್ಟೋಬರ್ ೯ನೇ ತಾರೀಖು ಗುರುವಾರಕ್ಕೆ ಸರಿಹೊಂದುವುದು. ಆ ಕಾಲಕ್ಕೆ ಹೊಯ್ಸಳರ ದೊರೆ ವೀರಬಲ್ಲಾಳನು (ಕ್ರಿ.ಶ. ೧೧೭೩-೧೨೨೦) ಆಳ್ವಿಕೆ ನಡೆಸುತ್ತಿದ್ದನು. ಸಮಯ ಹಾಗೂ ಶಾಸನದ ಲಿಪಿಯ ಆಧಾರದಿಂದಲೂ ಈ ಶಾಸನವು ಹೊಯ್ಸಳರ ಕಾಲಘಟ್ಟಕ್ಕೆ ಸೇರಿರುವಂತದ್ದು ಸ್ಪಷ್ಟವಾಗುತ್ತದೆ. ಆದರೆ ಬಹಳ ವಿಶೇಷವೆಂದರೆ ಕ್ರಿ.ಶ. ೧೨೧೪ರ ಈ ಶಾಸನದಲ್ಲಿ ಹೊಯ್ಸಳರ ದೊರೆ ಇಮ್ಮಡಿ ಬಲ್ಲಾಳನ (ವೀರಬಲ್ಲಾಳನ) ಹೆಸರಿನ ಉಲ್ಲೇಖ ಇಲ್ಲದಿರುವುದು ಗಮನಿಸಬಹುದು.

ವೀರನ ಹೆಸರು ಮಲಗೌಡ ಈತ ಗರುಡಗೆರೆಯ ರತಗೌಡನ ಮಗ. ಮಲಗೌಡನು ತುರುವನ್ನು ಕಳ್ಳರಿಂದ ರಕ್ಷಿಸಿ ಸಾವನ್ನಪ್ಪಿರುವ ವಿಷಯ ಶಾಸನದಲ್ಲಿ ಉಲ್ಲೇಖವಾಗಿದೆ. ವೀರಮರಣ ಹೊಂದಿದ ವೀರನಾದ ಮಲಗೌಡನ ಸ್ಮರಣಾರ್ಥವಾಗಿ ಆತನ ತಂದೆ ರತಗೌಡ ಅಥವಾ ವೀರನ ಸಂಬಂಧಿಕರು ಈ ಶಾಸನವನ್ನು ಹಾಕಿಸಿದ್ದಿರಬಹುದು.

'ಗರುಡಗೆರೆಯ ರತಗೌಡ' ಎಂಬ ಉಲ್ಲೇಖ ಶಾಸನದಲ್ಲಿ ದೊರೆಯುತ್ತದೆ. ಆ ಗರುಡಗೆರೆ ಪ್ರಸ್ತುತ ಜನರ ಆಡುಬಳಕೆಯಲ್ಲಿ 'ಗೌಡಗೆರೆ' (ಗರುಡಗೆರೆ>ಗೌಡಗೆರೆ)ಯಾಗಿದೆ. ಹೊಯ್ಸಳರ ಕಾಲದಲ್ಲಿ ಪ್ರಚಲಿತದಲ್ಲಿದ್ದ 'ಗರುಡ ಪದ್ಧತಿ' ಮತ್ತು ಗರುಡ ಪದ್ಧತಿಯನ್ನು ಅನುಸರಿಸುತ್ತಿದ್ದ ಗರುಡರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬಹುದು.

ಶಾಸನವು ಸರಳವಾಗಿದ್ದು, ಆರಂಭದಲ್ಲಿ ಶೈವ ಶ್ಲೋಕವಿದ್ದು, ಉಳಿದಂತೆ ಎಲ್ಲವೂ ಗದ್ಯದಿಂದ ಕೂಡಿದೆ. ಯಾವ ಕಾವ್ಯಾತ್ಮಕ ಅಂಶವು ಕಂಡುಬರುವುದಿಲ್ಲ. ಶಾಸನದ ಕವಿ, ಲಿಪಿಕಾರ ಹಾಗೂ ರೂವಾರಿಗಳ ಉಲ್ಲೇಖವೂ ಇಲ್ಲ. ಹಾಗಾಗಿ ಗ್ರಾಮದ ಸಾಮಾನ್ಯನೊಬ್ಬನು ಈ ಶಾಸನವನ್ನು ರಚಿಸಿರಬಹುದು.

[ಈ ಶಾಸನವನ್ನು ಓದಲು ಮತ್ತು ಲೇಖನ ಸಿದ್ಧಪಡಿಸಲು ಸಹಾಯ ಮಾಡಿದ ನನ್ನ ಮಾರ್ಗದರ್ಶಕರಾದ ಡಾ. ಎಂ.ಜಿ. ಮಂಜುನಾಥ್‌ರವರಿಗೆ ಹಾಗೂ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಹಕರಿಸಿದ ಸ್ಥಳೀಯರಾದ ಎಲ್. ಮಂಜುನಾಥ್‌ರವರಿಗೆ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. ಎಪಿಗ್ರಾಫಿಯ ಕರ್ನಾಟಿಕ ಸಂಪುಟ-೧೦ (ಪರಿಷ್ಕೃತ), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೭.

೨. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವಿದ್ಯಾನಿಲಯ, ಹಂಪಿ, ೧೯೯೯.

೩. ಶೇಷಶಾಸ್ತ್ರಿ ಆರ್., ಕರ್ನಾಟಕ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೪. Swamykannu Pillai L.D. AN INDIAN EPHEMERIS, Vol 3&4, Govt. Press Madrass, 1922.

೧೦

ಅಗ್ರಹಾರ ಬಾಚಹಳ್ಳಿಯ ಎರಡು ಅಪ್ರಕಟಿತ ಶಾಸನಗಳು

ಎಸ್. ನಾಗರಾಜಪ್ಪ*

ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲೂಕಿನಲ್ಲಿರುವ ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿನ ಹುಣಸೇಶ್ವರ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡುವಾಗ ಎರಡು ಹೊಸ ಶಾಸನಗಳು ಬೆಳಕು ಕಂಡಿವೆ.[೧] ಈ ದೇವಾಲಯ ಸುತ್ತಲಿರುವ ಕೆಲವು ಶಾಸನಗಳು ಈಗಾಗಲೆ ಪ್ರಕಟವಾಗಿವೆ.[೨] ಹುಣಸೇಶ್ವರ ದೇವಾಲಯದ ನವರಂಗದ ದಕ್ಷಿಣ ಗೋಡೆಗೆ ಹೊಂದಿಕೊಂಡಿರುವ ದೇವಕೋಷ್ಠದ ಎಡ ಮತ್ತು ಬಲಬದಿಯ ಅರೆಗಂಬಗಳಲ್ಲಿ ಪ್ರಸ್ತುತ ವಿವರಿಸುತ್ತಿರುವ ಎರಡು ಅಪ್ರಕಟಿತ ಶಾಸನಗಳನ್ನು ಕಂಡರಿಸಲಾಗಿದೆ. ಈ ಶಾಸನಗಳ ಪ್ರಕಟಣೆಯ ಜೊತೆಗೆ ಇವುಗಳಲ್ಲಿ ಉಕ್ತವಾಗಿರುವ ಕೆಲವು ಐತಿಹಾಸಿಕ ವ್ಯಕಿಗಳ ಕುರಿತು ಚರ್ಚಿಸುವ ಪ್ರಯತ್ನವನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ.

ಸಂಸ್ಕೃತ ಭಾಷೆಯಲ್ಲಿರುವ ಶಾಪಾಶಯಗಳನ್ನು ಹೊರತುಪಡಿಸಿ, ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆಯಲಾಗಿರುವ ಈ ಶಾಸನಗಳು ತೇದಿರಹಿತವಾಗಿವೆ. ಲಿಪಿಯ ಸ್ವರೂಪ ಮತ್ತು ವಿಷಯದ ಹಿನ್ನೆಲೆಯಲ್ಲಿ ಇವು ಕ್ರಿ.ಶ. ೧೨ನೆಯ ಶತಮಾನಕ್ಕೆ ಸೇರುತ್ತವೆ. ಶಾಸನದ ಲಿಪಿಯಲ್ಲಿ ಯಾವುದೇ ವಿಶೇಷ ವ್ಯತ್ಯಾಸಗಳಿಲ್ಲ ಮತ್ತು ಭಾಷೆಗೆ ಸಂಬಂಧಿಸಿದಂತೆ ಕೆಲವು ಕಾಗುಣಿತ ದೋಷಗಳು ಇವೆ.

ಒಂದನೆಯ ಶಾಸನ

ಇದು ದೇವಕೋಷ್ಠದ ಬಲಬದಿಯ ಅರೆಗಂಬದಲ್ಲಿ ಕೊರೆಯಲಾದ ಶಾಸನ. ಹೊಯ್ಸಳ ಅರಸ ಮಹಾಮಂಡಳೇಶ್ವರ ಜಗದೇಕಮಲ್ಲ ಹೊಯ್ಸಳದೇವನು ರಾಜಧಾನಿ ದೋರಸಮುದ್ರದ ನೆಲೆವೀಡಿನಿಂದ ಆಳುತ್ತಿದ್ದುದನ್ನು ತಿಳಿಸುತ್ತದೆ. ಇತರೆ ಹೊಯ್ಸಳ ಶಾಸನಗಳಲ್ಲಿ ಕಂಡುಬರುವಂತಹ 'ತಳಕಾಡು ಗಂಗವಾಡಿ ನೊಳಂಬವಾಡಿ ಹಾನುಗಲ್ಲುಗೊಂಡ ಭುಜಬಳ ವೀರಗಂಗ' ಎಂಬ ಬಿರುದುಗಳಿಂದ ಅರಸನನ್ನು ವರ್ಣಿಸಲಾಗಿದೆ.[೩]

ಶಾಸನವು ೬ ಸಲಗೆ ಗದ್ದೆ ಮತ್ತು ಎಲೆಯ ಒಂದು ಹೇಜಿನ ಮೇಲೆ ವಿಧಿಸಿದ ಒಂದು ಹಾಗ ಮತ್ತು ಒಂದು ತಲೆವೊರೆ ಎಲೆಯ ಹೇಜಿನ ಮೇಲೆ ವಿಧಿಸಿದ ೧ ವೀಸ ತೆರಿಗೆಯನ್ನು ಹೊಯ್ಸಳೇಸ್ವರ ಮತ್ತು ಮೂಲಸ್ಥಾನದೇವರಿಗೆ ಮಹಾಪ್ರಭು ಹೊಯ್ಸಳಸೆಟ್ಟಿಯು ಲೋಕಾಭರಣ ಪಂಡಿತರ ಕಾಲನ್ನು ತೊಳೆದು ದಾನ ನೀಡಿದ್ದನ್ನು ತಿಳಿಸುತ್ತದೆ. ಇದರ ಜೊತೆಗೆ ೧೫ ಸಲಗೆ ಗದ್ದೆ, ೧೦ ಕೊಳಗ ಬೆದ್ದಲು ಭೂಮಿ ಹಾಗೂ ೫೦೦ ಗುಳಿಯ ಎಲೆಯ ತೋಟವನ್ನು ಹೊಯ್ಸರಾಜ ಎನ್ನುವ ಕಲ್ಕುಟಿಗನಿಗೆ ದಾನ ನೀಡಲಾಗಿದೆ. ಬಹುಶಃ ಈ ಎರಡೂ ಶಾಸನಗಳ ರಚನೆಗಾಗಿ ಹೊಯ್ಸರಾಜನಿಗೆ ಈ ದಾನವನ್ನು ನೀಡಿದ್ದಿರಬಹುದು.

ಶಾಸನದ ಪಠ್ಯ

೧ ಸ್ವಸ್ತಿ ಶ್ರೀಮನ್ಮಹಾಮಣ್ಡಳೇಶ್ವರ ತಳಕಾಡು ಗಂಗ

೨ ವಾಡಿ ನೊಳಂಬವಾಡಿ ಬನವಾಸೆ ಹಾನುಂಗಲ್ಲುಗೊಂ

೩ ಡ ಭುಜಬಳ ವೀರಗಂಗ ಜಗದೇಕಮಲ್ಲ ಹೊ

೪ ಯ್ಸಳದೇವರು ದೋರಸಮುದ್ರದ ನೆಲೆಬೀಡಿನ

೫ ಲು ಪ್ರಿ(ಪೃ)ಥ್ವೀರಾಜ್ಯಂಗೆಯ್ಯುತ್ತಮಿರೆ [||*] ತತ್ಪಾದಪದ್ಮೋ

೬ ಪಜೀವಿ ಸ್ವಸ್ತಿ ಶ್ರೀಮನ್ಮಹಾಪ್ರಭು ಹೊ

* ಸಹಾಯಕ ಅಧೀಕ್ಷಕ ಶಾಸನತಜ್ಞರು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಹೆಬ್ಬಾಳ, ಮೈಸೂರು–೫೭೦೦೧೬. ಮೊ. ೮೯೦೪೪೬೩೯೩೧

೭ ಯ್ಸಳಸೆಟ್ಟಿಯರು ಮೂಲಸ್ಥಾನದ ದೇವರಿಂಗೆ
೮ ಹೊಯ್ಸಳೇಶ್ವರ ದೇವರಿ[ಂ*]ಗೆ ಲೋಕಾಭರಣ ಪಂಡಿ
೯ ತರ ಕಾಲಂಕರ್ಚ್ಚಿ ಧಾರಾಪೂರ್ವಕಂ ಮಾಡಿ ಬಿಟ್ಟ
೧೦ ಗಳ್ದೆ ಸಲಗೆ ಏಳು ಬೆಳ್ದಲೆ ಸಲಗೆ ರಾಡ
೧೧ ದೇವರಾಯ ಎಲೆಯ ಹೇಱಿಂಗೆ ಹಾಗ ತ
೧೨ ಲೆವೊಱಿಗೆ ವೀಸ ದೇವರಿಂಗೆ ಬಿಟ್ಟ ದೇವ
೧೩ ದತ್ತಿ [॥*] ನವಿಶಂ ವಿಶಮಿತ್ಯಾಹು ದೇವಸ್ವ
೧೪ ವಿಶಮುತ್ಯತೇ ವಿಶಮೇಕಾಕಿನ [ಂ*] ಹಂತಿ
೧೫ . ಸ್ವ ಮುತ್ರ ಪವಿತ್ರಿಕಂ [॥*] ಕಲ್ಕುಟಿಗ
೧೬ ಹೊಯ್ಸರಾಜಂಗೆ ಬಿಟ್ಟ ಗಳ್ದೆ ಸಲಗೆ ೧ [೫]
೧೭ ಬೆದ್ದಲೆ ಕೊಳಗ ಹತ್ತು ಆಯ್ನೂಱು
೧೮ ಗುಳಿಯ ತೋಂಟ [॥*]

ಎರಡನೆಯ ಶಾಸನ

ಈ ಶಾಸನವನ್ನು ದೇವಕೋಷ್ಠದ ಎಡಬದಿಯ ಅರೆಗಂಬದಲ್ಲಿ ಕೊರೆಯಲಾಗಿದೆ. ಈ ಶಾಸನವು ೧೫ ಸಾಲುಗಳ ಬರವಣಿಗೆ ಹೊಂದಿದ್ದು, ಸ್ವಸ್ತಿ ಎಂಬ ಮಂಗಳ ಸೂಚಕ ಪದದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಶ್ರೀಮನ್ಮಹಾಪ್ರಧಾನಿ ದಂಡನಾಯಕ ಬಾಚಿಮಯ್ಯ ಎನ್ನುವ ಪ್ರಮುಖನನ್ನು ಪರಿಚಯಿಸುತ್ತದೆ. ಪ್ರಸ್ತುತ ಶಾಸನವು ಎರಡು ದಾನಗಳನ್ನು ಒಳಗೊಂಡಿದೆ. ಸಾವಿರ ಗುಳಿಗಳ ಎಲೆಬಳ್ಳಿಯ ತೋಟದಿಂದ ಸಂಗ್ರಹಿಸಿದ ಎಲೆಯ ಹೇಱುಗಳ ಮೇಲೆ ವಿಧಿಸುವ ಹೆರ್ಜ್ಜುಂಕವನ್ನು ಬಾಚಿಮಯ್ಯನ ಅಧೀನಾಧಿಕಾರಿಯಾದ ದಂಡನಾಯಕ ಹೆಳತಿಮ್ಮಯ್ಯನು ಹೊಯ್ಸಳೇಶ್ವರ ದೇವರಿಗೆ ದಾನ ನೀಡಿದ್ದನ್ನು ಶಾಸನದ ಮೊದಲನೆಯ ದಾನದ ಭಾಗವು ತಿಳಿಸುತ್ತದೆ. ಸಾವಿರ ಗುಳಿಯ ತೋಟದ ಎಲೆಯ ಹೇಱುಗಳ ಮೇಲೆ ಅಂದರೆ ಎಲೆಯ ಕಟ್ಟುಗಳ ಒಂದು ಹೊರೆಯ ಮಾರಾಟದಿಂದ ಬರುವ ಸುಂಕ (ಪನ್ನಾಯ)ವನ್ನು ಹೊಯ್ಸಳೇಸ್ವರ ದೇವರಿಗೆ ಮನ್ಮಹಾಪ್ರಧಾನ ಹೆಗ್ಗಡೆ ವಿಟ್ಟಪಯ್ಯ ದಾನ ನೀಡಿದ್ದು ಈ ಶಾಸನದಲ್ಲಿ ಉಕ್ತವಾಗಿರುವ ಎರಡನೆಯ ದತ್ತಿ. ಈ ಎರಡೂ ದಾನಗಳನ್ನು ಲೋಕಾಭರಣ ದೇವರಿಗೆ ಧಾರಾಪೂರ್ವಕವಾಗಿ ನೀಡಲಾಗಿರುವುದು ಗಮನೀಯ ಸಂಗತಿ. ಶಾಸನವು ಸ್ವದತ್ತಂ ಪರದತ್ತಂ . . . ಎಂಬ ಶಾಪಾಶಯದೊಂದಿಗೆ ಅಂತ್ಯವಾಗಿರುವುದನ್ನು ಕಾಣಬಹುದು.

ಶಾಸನದ ಪಠ್ಯ

೧ ಸ್ವಸ್ತಿ ಶ್ರೀಮನ್ಮಹಾಪ್ರಧಾನ ದಂಡನಾಯಕ
೨ ಬಾಚಿಮಯ್ಯನ ದಂಡನಾಯಕ ಹೆ
೩ ಳತಿಮಯ್ಯನುಂ ಶ್ರೀ ಹೊಯ್ಸಳೇಶ್ವರ
೪ ದೇವರಿಂಗೆ ಸಾಯಿರ ಗೂ(ಗು)ಳಿಯ
೫ ತೋಂಟದ ಯೆ(ಎ)ಲೆಯ ಹೇಱಿಂನ ಹೆರ್ಜ್ಜುಂಕ
೬ ವಂ ಲೋಕಾಭರಣದೇವರಿಂಗೆ ಧಾರಾಪೂ
೭ ರ್ವ್ವಕಂ ಮಾಡಿ ಬಿಟ್ಟ ದೇವದತ್ತಿ [॥*] ಸ್ವಸ್ತಿ
೮ ಶ್ರೀಮನ್ಮಹಾಪ್ರಧಾನ ಹೆಗ್ಗಡೆ ವಿ
೯ ಟ್ಟಪಯ್ಯ ಶ್ರೀಹೊಯ್ಸಳೇಶ್ವರ ದೇವರಿಂ

೧೦ ಗೆ ಸಾಯಿರ ಗುಳಿಯ ತೋಂಟದ ಯೆ(ಎ)
೧೧ ಲೆಯ ಹೇಜಿನ ಪಂನ್ನಾಯವ ಗುರು
೧೨ ಗಳ್ಗೆ ಧಾರಾಪೂರ್ವಕಂ ಮಾಡಿ ಬಿಟ್ಟ ದೇವದ
೧೩ ತ್ತಿ [।।*] ಸ್ವದತ್ವ(ತ್ತ)ಂ ಪರದತ್ವಾ(ತ್ತ)ರ್ವಾವಾಯೋ ಹ
೧೪ ರೇತಿ ವಸುಂನ್ಧರಾ ಸ(ಶ)ಷ್ಟಿರ್ವರ್ಶ(ರ್ಷ) ಸಹ
೧೫ ಶ್ರಾ(ಸ್ರಾ)ಣಿ ವಿಷ್ಟಾಯ [ಂ*] ಜಾಯತೇ ಕ್ರಿಮಿ[ಃ*] [।।*]

ಕ್ರಿ.ಶ. ೧೨ನೆಯ ಶತಮಾನದ ಲಿಪಿ ವೈಶಿಷ್ಟ್ಯವುಳ್ಳ ತೇದಿರಹಿತವಾಗಿರುವ ಈ ಶಾಸನಗಳಲ್ಲಿ, ಎರಡನೆಯ ಶಾಸನವು ಅರಸನ ಹೆಸರನ್ನು ಉಲ್ಲೇಖಿಸುವುದಿಲ್ಲ. ಮೊದಲನೆಯ ಶಾಸನವು ಹೊಯ್ಸಳ ಅರಸ ಮಹಾಮಂಡಳೇಶ್ವರ ಜಗದೇಕಮಲ್ಲ ಹೊಯ್ಸಳದೇವನು ರಾಜಧಾನಿ ದೋರಸಮುದ್ರದ ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳಿದೆ. ಇವನನ್ನು ಕಲ್ಯಾಣ ಚಾಳುಕ್ಯ ಅರಸ ಇಮ್ಮಡಿ ಜಗದೇಕಮಲ್ಲನಿಂದ ಪರಾಜಿತನಾದ ಹೊಯ್ಸಳದೊರೆ ಒಂದನೆಯ ನರಸಿಂಹನೆಂದು ಗುರುತಿಸಬಹುದು. ನರಸಿಂಹನು ಧರಿಸಿದ 'ಜಗದೇಕಮಲ್ಲ' ಎಂಬ ಬಿರುದು, ಕಲ್ಯಾಣ ಚಾಲುಕ್ಯರ ಅರಸ ಇಮ್ಮಡಿ ಜಗದೇಕಮಲ್ಲನ ಸಾರ್ವಭೌಮತ್ವವನ್ನು ಒಪ್ಪಿ, ಅವನ ಮಹಾಮಂಡಳೇಶ್ವರನಾಗಿದ್ದನ್ನು ಸೂಚಿಸುತ್ತದೆ.[೪]

ಎರಡನೆಯ ಶಾಸನವು ಶ್ರೀಮನ್ಮಹಾಪ್ರಧಾನಿ ದಂಡನಾಯಕ ಬಾಚಿಮಯ್ಯನನ್ನು ಹೆಸರಿಸಿದೆ. ತುಮಕೂರು ಜಿಲ್ಲೆಯ ಕೈದಾಳ ಶಾಸನವು[೫] (ಕ್ರಿ.ಶ.೧೧೫೧) ಅದಳ ಕುಲಕ್ಕೆ ಸೇರಿದ, ಮಱುಗರೆ ನಾಡಿನ ಆಡಳಿತ ನಡೆಸುತ್ತಿದ್ದ ಸಾಮಂತ ಗೂಳಿ ಬಾಚಿದೇವನನ್ನು ಉಲ್ಲೇಖಿಸಿದೆ. ಬಾಚಿ, ಬಾಚ, ಬಾಚಯ್ಯ ಎಂದೂ ಸಹ ಕರೆಯಲಾಗುತ್ತಿದ್ದ ಇವನ ಮತ್ತು ಆರು ತಲೆಮಾರಿನ ಇವನ ಪೂರ್ವಜರನ್ನು ಈ ಶಾಸನವು ಅತ್ಯಂತ ಸೊಗಸಾಗಿ ವರ್ಣಿಸಿದೆ. ಬಾಚಿದೇವನನ್ನು 'ಧರೆಗೆಸವ ನಾಲ್ಕು ಸಮೆಯದ ಸಿರಿಕಲ್ಪಾವನೀರುಹಂ ಬುಧಜನಕೆ ದೊರೆವತ್ತ ಪೆಂಪಿನಿಂದಂ ಪಿರಿಯಂ ಧರ್ಮಾವತಾರ ಗಂಗನ ಪುತ್ರಂ' ಎಂದು ಬಣ್ಣಿಸಿದೆ. ಇವನು ಹಲವಾರು ದೇವಾಲಯಗಳನ್ನು, ಬಸದಿಗಳನ್ನು, ಕೆರೆಕಟ್ಟೆಗಳನ್ನು ನಿರ್ಮಿಸಿದ್ದು, ಅವುಗಳ ಪಾಲನೆಗಾಗಿ ಉದಾರವಾಗಿ ದಾನ ನೀಡಿದ್ದನೆಂದು ಈ ಶಾಸನವು ಹೇಳಿದೆ. ಇದೇ ಜಿಲ್ಲೆಯ ಕೊಂಡಾಪುರದ ಕ್ರಿ.ಶ. ೧೧೫೧ರ ಶಾಸನವು ಮಹಾಸಾಮಂತ, ಮಱುಗರೆ ನಾಡನ್ನು ಆಳುತ್ತಿದ್ದ ಗೂಳಿಯ ಬಾಚಿದೇವನನ್ನು ಹೆಸರಿಸಿದ್ದು, ಈತ ಅನೇಕ ಜಿನಭವನ, ಶಿವ ಮತ್ತು ವಿಷ್ಣು ದೇಗುಲಗಳನ್ನು ಕಟ್ಟಿಸಿದ ಮತ್ತು ಜೀರ್ಣೋದ್ಧಾರ ಮಾಡಿಸಿದನೆಂದು ತಿಳಿಸುತ್ತದೆ.[೬] ಕೈದಾಳ ಮತ್ತು ಕೊಂಡಾಪುರದ ಶಾಸನಗಳು ಒಂದನೆಯ ನರಸಿಂಹನ ಕಾಲದವುಗಳಾಗಿದ್ದು, ಬಾಚನು ಈತನ ಮಹಾಸಾಮಂತನಾದಿದ್ದನು. ಹಾಗಾಗಿ, ಅಗ್ರಹಾರ ಬಾಚಹಳ್ಳಿ ಶಾಸನದ ಬಾಚಿಮಯ್ಯ ಹಾಗೂ ಕೈದಾಳ ಮತ್ತು ಕೊಂಡಾಪುರದ ಶಾಸನಗಳ ಗೂಳಿಯ ಬಾಚಿದೇವ ಇಬ್ಬರೂ ಅಭಿನ್ನವೆಂದು ನಿಸ್ಸಂದೇಹವಾಗಿ ಗುರುತಿಸಬಹುದು. ಈ ಮೇಲಿನ ಆಧಾರಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಲೇಖನದಲ್ಲಿ ಪ್ರಕಟಿಸುತ್ತಿರುವ ಎರಡು ಶಾಸನಗಳು ಹೊಯ್ಸಳ ಅರಸ ಒಂದನೆಯ ನರಸಿಂಹನ ಕಾಲದಲ್ಲಿ ಹೊರಡಿಸಲಾಗಿದೆ ಎನ್ನುವುದು ಸ್ಪಷ್ಟ.

ಈ ಮೇಲಿನ ಎರಡೂ ಶಾಸನಗಳಲ್ಲಿ ಕಂಡುಬರುವ ಯತಿ ಲೋಕಾಭರಣ ಪಂಡಿತನ ಉಲ್ಲೇಖ ಗಮನೀಯವಾದದ್ದು. ಪ್ರಸ್ತುತ ಶಾಸನಗಳೂ ಒಳಗೊಂಡಂತೆ ಕರ್ನಾಟಕದ ಒಟ್ಟು ೧೫ ಶಾಸನಗಳಲ್ಲಿ ಇವನ ಉಲ್ಲೇಖವಿದೆ (ಕೋಷ್ಟಕವನ್ನು ಗಮನಿಸಿ).[೭] ಈ ಶಾಸನಗಳಲ್ಲಿ ಈತ ದಾನವನ್ನು ಸ್ವೀಕರಿಸಿದವನಂತೆ ಪ್ರತಿಬಿಂಬಿತನಾಗಿದ್ದು, ಲೋಕಾಭರಣ, ಲೋಕಾಭರಣ ಪಂಡಿತ, ಲೋಕಾಭರಣ ಮುನೀಂದ್ರ, ಲೋಕಾಭರಣ ಮುನಿ, ಲೋಕಾಭರಣದೇವ ಮತ್ತು ಲೋಕಾಭರಣ ಗುರುದೇವ ಎಂದು ಕರೆಯಲಲಾಗಿದೆ. ಶಾಸನಗಳ ಆಧಾರದಿಂದ ಹೇಳುವುದಾದರೆ ಈತ ಇಂದಿನ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನಲ್ಲಿರುವ ಕುರುವತ್ತಿಯಲ್ಲಿ ವಾಸವಾಗಿದ್ದ. ಕುರುವತ್ತಿಯ ಆಹವಮಲ್ಲೇಶ್ವರ ದೇವರಿಗೆ ಎರಡನೆಯ ಬಲ್ಲಾಳ ಮತ್ತು ಇತರ ಅರಸರು ದಾನ ನೀಡಿರುವುದನ್ನು ಈ ಯತಿಯು ಸ್ವೀಕರಿಸಿರುವುದರಿಂದ ಬಹುಶಃ ಲೋಕಾಭರಣ ಪಂಡಿತನು ಆ ದೇಗುಲದ ಸ್ಥಾನಿಕನಾಗಿದ್ದಿರಬಹುದು ಎಂದು ಊಹಿಸಬಹುದು. ಈ ದೇವಾಲಯಕ್ಕೆ ಇಮ್ಮಡಿ ಬಲ್ಲಾಳ ನೀಡಿದ ಬಹುತೇಕ ದಾನಗಳನ್ನು ಲೋಕಾಭರಣಮುನಿಯೇ ಸ್ವೀಕರಿಸಿದ್ದು, ರಾಜಗುರು ಎಂದು ಉಲ್ಲೇಖಿತವಾಗಿರುವುದರಿಂದ ಇವನು ಇಮ್ಮಡಿ ಬಲ್ಲಾಳನ ರಾಜಗುರುವಾಗಿರುವ ಸಾಧ್ಯತೆಯಿದೆ. ಅರಸಿಕೆರೆ ತಾಲೂಕಿನ ಕುರುವಂಕ ಗ್ರಾಮದಲ್ಲಿನ ಇಮ್ಮಡಿ ಬಲ್ಲಾಳನ ಕ್ರಿ.ಶ. ೧೧೮೬ರ ಶಾಸನವು ಇವನನ್ನು ತ್ರೈಲೋಕ್ಯಶಕ್ತಿಯ ದೀಕ್ಷಾಪುತ್ರನೆಂದು ಬಣ್ಣಿಸಿದೆ.[೮] ಪ್ರಸ್ತುತ ಅಗ್ರಹಾರ ಬಾಚಹಳ್ಳಿ ಶಾಸನಗಳು ಲೋಕಾಭರಣ ಪಂಡಿತನನ್ನು ಉಲ್ಲೇಖಿಸುವ ಅತ್ಯಂತ ಪ್ರಾಚೀನ ಶಾಸನಗಳೆಂಬುದು

ಗಮನೀಯ ಸಂಗತಿ. ಸಾಧಾರಣವಾಗಿ ಕಾಳಾಮುಖ ಯತಿಗಳ ಹೆಸರು ರಾಸಿ, ಜೀಯ, ಪಂಡಿತ ಎಂದು ಅಂತ್ಯಗೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೋಕಾಭರಣನ ಅಭಿದಾನವೂ ಪಂಡಿತ ಎಂದು ಕೊನೆಗೊಂಡಿರುವುದು ಇವನೊಬ್ಬ ಕಾಳಾಮುಖ ಯತಿ ಎಂಬುದನ್ನು ಖಚಿತಪಡಿಸುತ್ತದೆ. ಹಾಗಾಗಿ, ಈತ ಇಮ್ಮಡಿ ಬಲ್ಲಾಳನ ಕಾಲದ ಪ್ರಮುಖ ಕಾಳಾಮುಖ ಗುರುವಾಗಿದ್ದ ಎನ್ನಬಹುದು. ತನ್ನ ತೀರ್ಥಯಾತ್ರೆಯ ಸಮಯದಲ್ಲಿ ಅಗ್ರಹಾರ ಬಾಚಹಳ್ಳಿಗೆ ಭೇಟಿ ನೀಡಿ ಪ್ರಮುಖರಿಂದ ಈ ಮೇಲಿನ ದಾನಗಳನ್ನು ಸ್ವೀಕರಿಸಿದ್ದಿರಬಹುದು.

ಕಬ್ಬಾಹುನಾಡನ್ನು ಆಳುತ್ತಿದ್ದ ಮತ್ತು ಮೂಲಿಗ ಕುಲಕ್ಕೆ ಸೇರಿದ ಮಹಾಪ್ರಭು ಗಂಡನಾರಾಯಣಸೆಟ್ಟಿ ಮತ್ತು ಮಾಕವ್ವೆ, ಅವರ ಮಗ ಮಹಾಪ್ರಭು ಹೊಯ್ಸಳಸೆಟ್ಟಿ ಮತ್ತು ಅವನ ಪತ್ನಿ ಮಾಚವ್ವೆ ನಾಯಕಿತಿ ಹಾಗೂ ಅವರ ಉತ್ತರಾಧಿಕಾರಿಗಳು ಹೊಯ್ಸಳ ಅರಸರ ಲೆಂಕರಾಗಿದ್ದ ಸಂಗತಿ ಈ ದೇವಾಲಯದ ಪ್ರಾಂಗಣದಲ್ಲಿ ದೊರೆತ ಶಾಸನಗಳು ತಿಳಿಸುತ್ತವೆ. ಇವರನ್ನು 'ಶ್ರೀಮನ್ಮೂಲಿಗಕುಲ ಕಮಲಮಾರ್ತ್ತಣ್ಡರುಂ ಹೊಯ್ಸಳೇಶ್ವರ ದೇವರ ಪಾದಾರವಿಂದ ಮಕರಂದ ಮತ್ತಭೃಂಗರುಂ' ಎಂದೂ, 'ಶ್ರೀಮನ್ಮಹಾಸಾವಂತರುಂ ನಾನಾದೇಸಿಯಿಂ ಸೆಟ್ಟಿಪಟ್ಟಂ ತಳೆದ ಗಂಡನಾರಾಯಣರುಂ ಹೊಯ್ಸಳಲೆಂಕನಿಸ್ಸಂಕ' ಎಂದೂ ಶಾಸನಗಳು ವಿಧವಿಧವಾಗಿ ಬಣ್ಣಿಸಿವೆ.[೯] ಇವರುಗಳ ಪ್ರಶಸ್ತಿ ಮತ್ತು ಹೆಸರುಗಳು ದೃಢಪಡಿಸುವಂತೆ, ಇವರು ವ್ಯಾಪಾರ-ವಾಣಿಜ್ಯ ಚಟುವಟಿಕೆಗಳ ಜೊತೆಗೆ ಹೊಯ್ಸಳ ಆಡಳಿತದ ಭಾಗವಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ತಮ್ಮ ಒಡೆಯನಿಗಾಗಿ ಪ್ರತಿಜ್ಞೆ ಸ್ವೀಕರಿಸಿದ್ದ ಇವರುಗಳು ಒಡೆಯನ ಮರಣದ ನಂತರ ಪ್ರತಿಜ್ಞೆ ಮಾಡಿದವರೆಲ್ಲರೂ ತಮ್ಮ ಪ್ರಾಣತ್ಯಾಗ ಮಾಡಿರುವುದಕ್ಕೆ ಇಲ್ಲಿನ ಗರುಡಕಂಭ ಮತ್ತು ಶಾಸನಗಳು ಸಾಕ್ಷಿಯಾಗಿವೆ.

ಒಂದು ಕಾಲದಲ್ಲಿ ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದ ಅಗ್ರಹಾರ ಬಾಚಹಳ್ಳಿಯು ಅಗ್ರಹಾರವೂ ಅಗಿದ್ದಿತು. ಸಣ್ಣ ಹಳ್ಳಿಯಾಗಿರುವ ಈ ಗ್ರಾಮವನ್ನು ಇಂದು ಸಂತೆ ಬಾಚಹಳ್ಳಿ ಎಂದೂ ಸಹ ಕರೆಯಲಾಗುತ್ತಿದೆ.[೧೦] 'ಸಂತೆ' ಪದಕ್ಕೆ ವ್ಯಾಪಾರ-ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದ ಸ್ಥಳ ಎನ್ನುವ ಅರ್ಥವಿದ್ದು, ಇದೊಂದು ಪ್ರಸಿದ್ಧ ವ್ಯಾಪಾರಿ ಕೇಂದ್ರವಾಗಿತ್ತು ಎನ್ನುವುದನ್ನು ಸೂಚಿಸುತ್ತಿದೆ.

ಶಾಸನಗಳಲ್ಲಿ ಉಲ್ಲೇಖವಾಗಿರುವ ಹೊಯ್ಸಳೇಶ್ವರ ಮತ್ತು ಮೂಲಸ್ಥಾನೇಶ್ವರ ದೇವಾಲಯಗಳು ಇಂದಿಗೂ ಗ್ರಾಮದಲ್ಲಿವೆ. ಪ್ರಸ್ತುತ ಶಾಸನಗಳು ಪತ್ತೆಯಾಗಿರುವ ಹುಣಸೇಶ್ವರ ದೇವಾಲಯವೇ ಹೊಯ್ಸಳೇಶ್ವರ ದೇವಾಲಯ. ಗ್ರಾಮದ ಈಶಾನ್ಯಕ್ಕೆ ಕೆರೆಯ ಬಳಿಯಲ್ಲಿ ಭಗ್ನಾವಸ್ಥೆಯಲ್ಲಿರುವ ಅಮೃತೇಶ್ವರ ದೇವಾಲಯ ಬಹುಶಃ ಮೂಲಸ್ಥಾನೇಶ್ವರ ದೇವಾಲಯ ಎಂದು ಗುರುತಿಸಬಹುದು.

ಲೋಕಾಭರಣ ಪಂಡಿತನನ್ನು ಉಲ್ಲೇಖಿಸುವ ಶಾಸನಗಳ ಕೋಷ್ಠಕ

ಕ್ರ.ಸಂ.	ಸ್ಥಳ	ತಾಲೂಕು	ಜಿಲ್ಲೆ	ಶಾಸನದ ಕಾಲ	ರಾಜ	ಉಲ್ಲೇಖಗಳು
೧.	ಅಗ್ರಹಾರ ಬಾಚಹಳ್ಳಿ	ಕೃಷ್ಣರಾಜಪೇಟೆ	ಮಂಡ್ಯ	ಕ್ರಿ.ಶ. ೧೨-೧೩ ನೆಯ ಶತಮಾನ	ಒಂದನೆಯ ನರಸಿಂಹ	ಎಆರ್‌ಐಇ ನಂ.ಬಿ.೧೦೭ ಆಫ್ ೨೦೧೬-೧೭
೨.	ಅಗ್ರಹಾರ ಬಾಚಹಳ್ಳಿ	ಕೃಷ್ಣರಾಜಪೇಟೆ	ಮಂಡ್ಯ	ಕ್ರಿ.ಶ. ೧೨-೧೩ ನೆಯ ಶತಮಾನ	ಒಂದನೆಯ ನರಸಿಂಹ	ಎಆರ್‌ಐಇ ನಂ.ಬಿ. ೧೦೮ ಆಫ್ ೨೦೧೬-೧೭
೩.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೧೮೧, ಡಿಸೆಂಬರ್ ೨೫ ಶುಕ್ರವಾರ	ಗುತ್ತವಂಶದ ಇಮ್ಮಡಿ ವಿಕ್ರಮಾದಿತ್ಯ	ಎಸ್‌ಐಐ IX, ಭಾ. I, ಸಂ. ೩೮೯ ; ಕವಿಶಾಸಂ-೧, ಹಡ-೧೭
೪.	ಕುರುವಂಕ	ಅರಸೀಕೆರೆ	ಹಾಸನ	ಕ್ರಿ.ಶ. ೧೧೮೬ ಜನವರಿ ೭, ಶುಕ್ರವಾರ	ಇಮ್ಮಡಿ ಬಲ್ಲಾಳ	ಇ.ಸಿ. ಸಂಪುಟ-x, ಅರ-೫೯
೫.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೧೮೯	ಇಮ್ಮಡಿ ಬಲ್ಲಾಳ	ಎಸ್‌ಐಐ IX, ಭಾ. I, ಸಂ. ೩೬೨; ಕವಿಶಾಸಂ-೧, ಹಡ-೬
೬.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೧೯೪, ಮಾರ್ಚ್ ೨೫ ಶುಕ್ರವಾರ	ಇಮ್ಮಡಿ ಬಲ್ಲಾಳ (ಬಾಗುಳಿಯ ನೆಲೆವೀಡಿನಲ್ಲಿದ್ದಾಗ)	ಎಸ್‌ಐಐ IX, ಭಾ. I, ಸಂ. ೩೨೦ ಕವಿಶಾಸಂ-೧, ಹಡ-೧೪

೭.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೧೯೫	ಇಮ್ಮಡಿ ಬಲ್ಲಾಳ	ಎಸ್‌ಐಐ IX,ಭಾ. I,ಸಂ. ೩೯೦;ಕವಿಶಾಸಂ–೧, ಹಡ–೧೮
೮.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೧೯೪ ಜೂನ್ ೧ ಭಾನುವಾರ	ಇಮ್ಮಡಿ ಬಲ್ಲಾಳ	ಎಸ್‌ಐಐ IX, ಭಾ. I, ಸಂ. ೩೨೩;ಕವಿಶಾಸಂ–೧, ಹಡ– ೪
೯.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೨೦೧, ಜನವರಿ–೮ ಸೋಮವಾರ	ಇಮ್ಮಡಿ ಬಲ್ಲಾಳ	ಕವಿಶಾಸಂ–೧, ಹಡ–೧೫
೧೦.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೨೦೩, ಡಿಸೆಂಬರ್ ೨೦ ಶನಿವಾರ	. . . .	ಕವಿಶಾಸಂ–೧, ಹಡ–೩
೧೧.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೨೦೪ ಏಪ್ರಿಲ್ ೧೫, ಗುರುವಾರ	ಇಮ್ಮಡಿ ಬಲ್ಲಾಳ	ಎಆರ್‌ಐಇ ಬಿ. ೨೧೬ ಆಫ್ ೧೯೫೨–೫೩; ಕವಿಶಾಸಂ–೧, ಹಡ–೧೧
೧೨.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೨೦೫, ಜೂನ್ ೯ ಶುಕ್ರವಾರ	ಇಮ್ಮಡಿ ಬಲ್ಲಾಳ	ಎಆರ್‌ಐಇ ಬಿ. ೨೨೦ ಆಫ್ ೧೯೧೮;ಕವಿಶಾಸಂ–೧,ಹಡ–೫
೧೩.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೨೦೮, ಜುಲೈ ೨೮ ಶುಕ್ರವಾರ	ಇಮ್ಮಡಿ ಬಲ್ಲಾಳ	ಎಆರ್‌ಐಇ ನಂ. ಬಿ. ೨೨೦ ಆಫ್ ೧೯೧೮;ಕವಿಶಾಸಂ–೧, ಹಡ–೪
೧೪.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೨–೧೩ನೆಯ ಶತಮಾನ	ಇಮ್ಮಡಿ ಬಲ್ಲಾಳ	ಎಸ್‌ಐಐ IX, ಭಾ. I, ಸಂ. ೩೩೭ ಕವಿಶಾಸಂ–೧, ಹಡ–೧೬
೧೫.	ಕುರುವತ್ತಿ	ಹೂವಿನ ಹಡಗಲಿ	ಬಳ್ಳಾರಿ	ಕ್ರಿ.ಶ. ೧೨–೧೩ನೆಯ ಶತಮಾನ	ಗುತ್ತವಂಶದ ಇಮ್ಮಡಿ ವಿಕ್ರಮಾದಿತ್ಯ	ಎಸ್‌ಐಐ IX, ಭಾ. I, ಸಂ. ೩೯೧;ಕವಿಶಾಸಂ–೧,ಹಡ–೧೯

ಅಡಿಟಿಪ್ಪಣಿಗಳು

೧. ಈ ಶಾಸನಗಳ ಬಗ್ಗೆ ಮಾಹಿತಿ ನೀಡಿದ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್ ಶ್ರೀ ಸ್ವಾಮಿನಾಥನ್ ನಟರಾಜನ್ ಅವರಿಗೆ ಅನಂತ ಧನ್ಯವಾದಗಳು. ARIE No. B. 107-108 of 2016-17.

೨. ಎಪಿಗ್ರಫಿಯಾ ಕರ್ನಾಟಿಕಾ (ಪರಿಷ್ಕೃತ) (ಇಸಿ) ಸಂ. ೬, ಕೃಷ್ಣರಾಜಪೇಟೆ ೭೭–೮೪, ಎಂ.ಎ.ಆರ್. – ೧೯೧೫, ಪು. ೫೫, ARIE No. B. 109-116 of 2016-17.

೩. ಈ ವಂಶದ ಹಲವು ಅರಸರ ಶಾಸನಗಳಲ್ಲಿ ಈ ಬಿರುದುಗಳಿವೆ.

೪. William Coelho,1950,*The Hoysala Vamsa,* Indian Historical Research Institute, Bombay, pp.119-120.

೫. ಇಸಿ., (ಪರಿಷ್ಕೃತ) ಸಂ. ೨೪, ತುಮಕೂರು ೧೧.

೬. ಅದೇ, ತುಮಕೂರು ೨೪.

೭. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್. ವ್ಯಾ. IX, ಭಾಗ – I (ಎಸ್‌ಐಐ). ಶಾಸನ ಸಂಖ್ಯೆ–೩೨೦, ೩೨೩, ೩೩೭, ೩೮೯, ೩೬೨, ೩೯೦, ಮತ್ತು ೩೯೧. ಮತ್ತು ದೇವರಕೊಡಾರೆಡ್ಡಿ (ಸಂ.) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, (ಕವಿಶಾಸಂ), ಬಳ್ಳಾರಿ ಜಿಲ್ಲೆ, ಹೂವಿನ ಹಡಗಲಿ–೪–೧೯. ಇದರ ಜೊತೆಗೆ ಕೋಷ್ಟಕವನ್ನು ಗಮನಿಸಿ.

೮. ಇಸಿ., ಸಂ. ೧೦, ಅರಸಿಕೆರೆ ೫೯.

೯. ಅದೇ, ಸಂ. ೬, ಕೃಷ್ಣರಾಜಪೇಟೆ ೮೨–೮೪.

೧೦. ಈ ವಿಷಯವನ್ನು ಪ್ರಸ್ತುತ ಲೇಖಕನಿಗೆ ತಿಳಿಸಿದ ಡಾ. ಎನ್.ಎಸ್. ಶಿವರುದ್ರಸ್ವಾಮಿಯವರಿಗೆ ಧನ್ಯವಾದಗಳು.

೨೧

ಬಾಗಳಿಯ ಅಪ್ರಕಟಿತ ತುಱುಗೋಳ್ ವೀರಗಲ್ಲು ಶಾಸನ

ಎಂ. ಕೊಟ್ರೇಶ್*

ಬಾಗಳಿಯು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ. ಇದು ತಾಲ್ಲೂಕು ಕೇಂದ್ರ ಹರಪನಹಳ್ಳಿಯಿಂದ ೧೨ ಕಿ.ಮೀ. ದೂರದಲ್ಲಿದೆ. ಈ ಬಾಗಳಿ ಗ್ರಾಮದ ಉತ್ತರಕ್ಕೆ ಕೆರೆ ಏರಿಯ ಹಿಂಭಾಗದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಸುಂದರವಾದ ಕಲ್ಲೇಶ್ವರ ದೇವಾಲಯವಿದೆ. ಈ ದೇವಾಲಯದ ನೈರುತ್ಯಕ್ಕೆ ಈ ವೀರಗಲ್ಲು ಶಾಸನವನ್ನು ಇರಿಸಲಾಗಿದೆ. ಸ್ಥಳೀಯರ ಮಾಹಿತಿಯಂತೆ ಕ್ರಿ.ಶ. ೨೦೦೧ರಲ್ಲಿ ಕೆರೆ ಏರಿಯಲ್ಲಿ ಈ ವೀರಗಲ್ಲು ಶಾಸನ ದೊರೆತಿದ್ದು, ಅದನ್ನು ತಂದು ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ಇರಿಸಲಾಗಿದೆ ಎನ್ನುತ್ತಾರೆ.

ಈ ಶಾಸನೋಕ್ತ ವೀರಗಲ್ಲು ನಾಲ್ಕು ಅಡಿ ಎತ್ತರ ಒಂದುವರೆ ಅಡಿ ಅಗಲವಾಗಿದೆ. ಇದು ನೀಲಿ ಮಿಶ್ರಿತ ಬಳಪದ ಶಿಲೆಯಲ್ಲಿದೆ. ಮೂರು ಹಂತಗಳಲ್ಲಿರುವ ವೀರಗಲ್ಲಿನ ಪಟ್ಟಿಕೆಗಳಲ್ಲಿ ಶಾಸನವನ್ನು ಕಡೆಯಲಾಗಿದೆ. ಕೆಳಗಿನ ಹಂತದ ಕೆಳಪಟ್ಟಿಕೆಯಲ್ಲಿ ಮೂರು ಸಾಲುಗಳ ಶಾಸನವಿದೆ. ಇದರ ಮೇಲ್ಭಾಗದ ಮೊದಲ ಪಟ್ಟಿಕೆಯಲ್ಲಿ ತುರುಗಳು ಹಾಗೂ ಕದನ ನಿರತರ ಪಡೆಯಿದೆ. ಅದರಲ್ಲಿ ತುರುಗಳ ಮುಂಭಾಗದಲ್ಲಿ ವೀರರಿಬ್ಬರು ಕಾದಾಡುವ ದೃಶ್ಯ ಅವರ ಕಾಲಿನ ಕೆಳಗೆ ಇಬ್ಬರು ತುಳಿತಕ್ಕೊಳಗಾಗಿ ಇರುವಂತೆ ಇದೆ. ಮಧ್ಯದ ಎರಡನೇ ಪಟ್ಟಿಕೆಯಲ್ಲಿ ಇಬ್ಬರು ವೀರರನ್ನು ಸ್ವರ್ಗಕ್ಕೆ ಸ್ತ್ರೀಯರು ಹೊತ್ತೊಯ್ಯುವಂತೆ ಚಿತ್ರಿಸಲಾಗಿದೆ. ಇದು ಬಾದಾಮಿ ಚಾಲುಕ್ಯರ ಶಿಲ್ಪ ಮಾದರಿಯಲ್ಲಿದೆ. ಮೇಲಿನ ಮೂರನೇ ಪಟ್ಟಿಕೆಯಲ್ಲಿ ವೀರರಿಬ್ಬರು ಪೀಠದ ಮೇಲೆ ಆಸೀನರಾಗಿದ್ದಾರೆ. ಇವರ ಪಕ್ಕದಲ್ಲಿ ಚಾಮರಧಾರೆಯರ ಉಬ್ಬು ಶಿಲ್ಪಗಳಿವೆ. ಈ ಶಿಲ್ಪಗಳ ಹಿಂಬದಿಯ ಶಿಲೆಯಲ್ಲಿ ಕೆತ್ತನೆಯಿದೆ. ಪೂರ್ಣ ಮೇಲ್ಭಾಗದ ಪಟ್ಟಿಕೆಯು ಲಲಾಟ ಭಾಗವಾಗಿದೆ. ಅದು ರಾಷ್ಟ್ರಕೂಟರ ಮಾದರಿಯಲ್ಲಿದೆ. ಇಲ್ಲಿ ಯಾವುದೇ ದೇವತಾ ಶಿಲ್ಪಗಳಿಲ್ಲ.

ನಾಲ್ಕು ಪಟ್ಟಿಕೆಗಳಲ್ಲಿ ಒಟ್ಟು ಆರು ಸಾಲು ಪಾಠವಿದೆ. ನಾಲ್ಕನೇ ಪಟ್ಟಿಯ ಕೊನೆಯ ಎರಡು ಸಾಲುಗಳು ಬಹಳ ತ್ರುಟಿತವಾಗಿದೆ.

ಶಾಸನ ಪಾಠ

೧. ಸ್ವಸ್ತಿ ಸಕ ನೃಪ ಕಾಲಾತೀತ ಸಂವತ್ಸರ ಸತಂಗ ೧೧೦೧ ನೆ

೨. ಯ ಸರ್ವ್ವಧಾರಿ ಸವತ್ಸರ ಪ್ರವರ್ತ್ತಿಸೆ ಬೀರವರ್ಮ್ಮನುತ್ತಂಬಾಸೆನ್ತೆರನಾಗಿ

೩. ನಾಳು ಜಾತಿ ಧರ್ಮ್ಮಮಂ ಕಿಡಿಸೆ ಬಾಳ್ಗುಳಿಯಲ್ಲಪನುಗ್ರಹಸಮರ್ತ್ಥರಪ್ಪ ಪುರುಷರು

೪. ಪತಿವ್ರತಾಗುಣವುಳ್ಳ ಸ್ತ್ರೀಯರುಚರಳಯ್ವುಗಳು ಪ್ರತಿಪಾಲಿಸಿ ತಮ್ಮ ಜಾತಿ ಧರ್ಮ್ಮಮಂ .

೫. ಳಲಿಯಳೆ ಕಾಳಾ । ಬಟಿಯ್ವದಿಬರ ಸ್ತ್ರೀ ಬಾಗೂರ್ಜ್ಜಱ ಬಾಸ ಬೆಸಗೆಯ್ಯಂಣ ಕಕಾಳನಂಗಳ

೬. . . . . ಆತನ (ಮಗ)ವೊಗಟ(ರ್ಬ)ತುಱು . . . . ತುಱುವನಿಕ್ಕಿಸಿಕೊಣ್ಡು ಸತ್ತಮ್

ಶಾಸನದ ಕಾಲದ ಭಾಗ ಸ್ವಲ್ಪ ಸವೆದಿರುವುದರಿಂದ ಕಾಲಕ್ಕೂ ಸಂವತ್ಸರಕ್ಕೂ ತಾಳೆಯಾಗುತ್ತಿಲ್ಲ.

ಶಾಸನದ ಪ್ರಮುಖ ಅಂಶಗಳು

೧. ಈ ವೀರಗಲ್ಲು ಶಾಸನದ ಮೇಲಿನಿಂದ ಕೆಳಕ್ಕೆ ಎರಡನೇ ಪಟ್ಟಿಕೆಯಲ್ಲಿ ಹಿಂಬದಿಗೆ ಇರುವ ಮೋಡಗಳ ಚಿತ್ರಗಳು, ಸ್ತ್ರೀಯರು ಗಾಳಿಯಲ್ಲಿ ಹಾರುವ ಹಾಗೂ ವೀರರಿಬ್ಬರನ್ನು ಹೊತ್ತೊಯ್ಯುವ ದೃಶ್ಯ, ಮೇಲ್ಭಾಗದ ಲಲಾಟ ಕೆತ್ತನೆ

* ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. ಮೊ. ೯೪೪೮೪೮೦೧೫೪೬



ಇವುಗಳನ್ನು ಗಮನಿಸುವುದಾದರೆ ರಾಷ್ಟ್ರಕೂಟರ ಕೊನೆಯ ಕಾಲಘಟ್ಟ ಅಥವಾ ಕಲ್ಯಾಣ ಚಾಲುಕ್ಯರ ಆರಂಭ'ದ ವೀರಗಲ್ಲು ಶಾಸನವೆಂದು ನಿರ್ಧರಿಸಬಹುದು.

೨. ವೀರಗಲ್ಲು ಶಾಸನದ ಲಿಪಿಯ ಸ್ವರೂಪವು ಕೂಡ ರಾಷ್ಟ್ರಕೂಟರ ಕೊನೆಯ ಹಂತದಲ್ಲಿದಂತಿದೆ.

೩. ಶಾಸನದ ಆರಂಭದಲ್ಲಿ ಸಕ ೧೧೦೧ನೇ ಎಂದು ಓದಿದರೆ ಕ್ರಿ.ಶ. ೧೧೭೯ ಎಂದಾಗುತ್ತದೆ. ಶಾಸನ ಉಲ್ಲೇಖಿತ ಸರ್ವಧಾರಿ ಸಂವತ್ಸರವನ್ನು ಸ್ವಾಮಿ ಕಣ್ಣನ್ ಪಿಳ್ಳೆ ಅವರ ಕ್ಯಾಲೆಂಡರ್ ಆಧರಿಸಿ ನೋಡುವುದಾದರೆ ಇದಕ್ಕೆ ಸರಿಹೊಂದುವುದಿಲ್ಲ. ಸರ್ವಧಾರಿ ಸಂವತ್ಸರವು ಶಕ ೧೯೧ರಲ್ಲಿ ಬರುತ್ತದೆ. ಹಾಗಾದರೆ ಈ ಶಾಸನದ ಕಾಲ ಶಕ ೧೯೧ ಎಂದರೆ ಕಾಲದ ನಿರ್ಧಾರದಲ್ಲಿ ಸ್ವಲ್ಪ ಗೊಂದಲ ಏರ್ಪಡುತ್ತದೆ.



೪. ಶಾಸನದಲ್ಲಿ ಬಾಳುಗ್ಗಳಿ ಹೆಸರು ಪ್ರಸ್ತಾಪವಾಗಿದೆ. ಇದು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಹೋಬಳಿ ಕೇಂದ್ರ ಹಾಗೂ ಶಾಸನವಿರುವ ಸ್ಥಳ.

೫. ಶಾಸನದ ಬಹಳ ಮುಖ್ಯ ಅಂಶವೆಂದರೆ ಜಾತಿ ಧರ್ಮಮಂ ಕಿಡಿಸೆ ಎಂಬುದು ಈ ತೆರನಾದ ಉಲ್ಲೇಖ ಬಂದಿರುವ ಶಾಸನಗಳು ಅಪರೂಪ. ಜಾತಿ ಎಂದರೆ ಸ್ತ್ರೀ, ಹೆಣ್ಣಿನ ಮೇಲೆ ಅತ್ಯಾಚಾರ ಎಂದಿರಬೇಕು. ಈ ವೀರಗಲ್ಲು ಪೆಣ್ಣುಯಲ್ ಅನ್ನು ಸಂಕೇತಿಸು





ತ್ತಿರಬಹುದು. ಧರ್ಮಮಂ ಎಂಬುದು ಕಿಡಿಸೆ ಎಂದು ಹಲವಾರು ವೀರಗಲ್ಲು ಶಾಸನಗಳಲ್ಲಿ ಪ್ರಸ್ತಾಪವಾಗಿದೆ. ಆದರೆ ಜಾತಿ ಧರ್ಮಮಂ ಕಿಡಿಸೆ ಎಂಬ ಉಲ್ಲೇಖಗಳಿರುವುದು ಅಪರೂಪ.

೬. ಶಾಸನದ ಕೊನೆಯಲ್ಲಿ ಕಾಳ ಮತ್ತು ಆತನ ಮಗ ತುರುಗಳನ್ನು ಸೆರೆ ಹಿಡಿದುಕೊಂಡು ಬರುವಾಗ ಆಕ್ರಮಣಕ್ಕೊಳಗಾಗಿ ಸತ್ತರು ಎಂದಿದೆ.

[ಶಾಸನಪಾಠದ ಪರಿಷ್ಕರಣೆಯಲ್ಲಿ ಸಹಕರಿಸಿದ ಡಾ. ಡಿ.ವಿ. ಪರಮಶಿವಮೂರ್ತಿ, ಕುಲಸಚಿವರು (ಮೌಲ್ಯಮಾಪನ) ಅವರಿಗೆ ಹಾಗೂ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಶಿವರಾಜು ಹಾಗು ಶುಭ, ಸಿರಾ ಅವರಿಗೆ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ.), ೧೯೯೮, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಶ್ರೀಕಂಠಶಾಸ್ತ್ರಿ ಎಸ್. ೧೯೭೫, ಭಾರತೀಯ ಸಂಸ್ಕೃತಿ, ಮಾನಸ ಗಂಗೋತ್ರಿ, ಮೈಸೂರು.

೩. ಕೊಟ್ರೇಶ್ ಎಂ. ೨೦೧೦, ಹರಪನಹಳ್ಳಿ ತಾಲ್ಲೂಕಿನ ರಕ್ಷಣಾ ಸ್ಮಾರಕಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೪. ಶಿವತಾರಕ್ ಕೆ.ಬಿ. ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೫. ಪರಮಶಿವಮೂರ್ತಿ ಡಿ.ವಿ. ೧೯೯೯, ಕನ್ನಡ ಶಾಸನಶಿಲ್ಪ ಹಂಪಿ, ಕನ್ನಡ ವಿಶ್ವವಿದ್ಯಾನಿಲಯ.

೨೨

ಬೆಳಗಾವಿ ದೇಗಾವೆಯ ಲಕ್ಷ್ಮೀದೇವರಸನ ಅಪ್ರಕಟಿತ ಶಾಸನ

ಎಸ್.ವೈ. ನಿರ್ಮಲಾ*

ಈ ಶಾಸನವು ೧೯ ಸಾಲುಗಳನ್ನು ಒಳಗೊಂಡಿದ್ದು ೧೨ನೆಯ ಶತಮಾನಕ್ಕೆ ಸೇರುತ್ತದೆ.

ಸ್ವಸ್ತಿಶ್ರೀ ಎಂದು ಪ್ರಾರಂಭವಾಗುವ ಈ ಶಾಸನವು ಮಹಾಮಂಡಲೇಶ್ವರ ಲಕ್ಷ್ಮೀದೇವರಸನು ದೇವಗ್ರಾಮದ ನೆಲೆವೀಡಿನಲ್ಲಿದ್ದಾಗ ಹೊರಡಿಸಿದ ಶಾಸನವಾಗಿದೆ. ಈ ಶಾಸನವು ಅಲ್ಲಲ್ಲಿ ತ್ರುಟಿತಗೊಂಡಿದೆ.

ಶಾಸನವು ಕಾಲವನ್ನು ಶಕವರ್ಷ ೧೧೧೫ನೆಯ ಪರಿಧಾವಿ ಸಂವತ್ಸರದ ವೈಸಾ[ಖ] ಬಹುಳ ೫ ಬ್ರಿಹವಾರವೆಂದು ಉಲ್ಲೇಖಿಸಿದೆ. ಆದರೆ ಪರಿಧಾವಿ ಸಂವತ್ಸರವು ಸಕವರ್ಷ ೧೧೧೪ರಲ್ಲಿ ಬರುತ್ತದೆ. ಪ್ರಮಾಧಿ ಸಂವತ್ಸರವು ೧೧೧೫ರಲ್ಲಿ ಬಂದಿದ್ದು ಶಕವರ್ಷ ಹೊಂದಾಣಿಕೆಯಾಗುತ್ತಿಲ್ಲ. ಪರಿಧಾವಿ ಸಂವತ್ಸರದ ವೈಶಾಖ ಬಹುಳ ಪಂಚಮಿ ಬ್ರಿಹವಾರವೆಂದರೆ ಇದು ಕ್ರಿ.ಶ. ಮೇ ೪, ೧೧೧೪ರ ಸೋಮವಾರಕ್ಕೆ ಸರಿಹೊಂದುತ್ತದೆ. ಆದರೆ ಶಾಸನವು ಶಕವರ್ಷ ೧೧೧೫ ಎಂದಿರುವುದರಿಂದ ಕಾಲವು ಕ್ರಿ.ಶ. ಏಪ್ರಿಲ್ ೨೩, ಶುಕ್ರವಾರಕ್ಕೆ ಸರಿಹೊಂದಿಸಬಹುದಾಗಿದೆ. ಒಟ್ಟಾರೆಯಾಗಿ ಶಾಸನದ ಕಾಲವು ಕ್ರಿ.ಶ.ಕ್ಕೆ ಹೊಂದಾಣಿಕೆಯಾಗುತ್ತಿಲ್ಲ.

ಹೊಲೆಯ ನಾಯಕನು ದೇಗಾವೆ ಗ್ರಾಮದಲ್ಲಿ ಶಿಥಿಲವಾದ ಸಿವಾಲಯವೊಂದನ್ನು ಪುನರ್ ಪ್ರತಿಷ್ಠಾಪನೆಯನ್ನು ಮಾಡಿಸಿದ ಬಗ್ಗೆ ಮಾಹಿತಿ ನೀಡಿದ್ದು, ಇದೇ ಸಂದರ್ಭದಲ್ಲಿ ತೇಜೋರಾಶಿ ಗುರುಗಳಗೆ ೩೫೦ ಕಂಬಕೈ ಹಾಗೂ ಪಂನಕೈ ನಿವೇಶನವನ್ನು ಸೋಮಜಿಯನು ದಾನ ಕೊಟ್ಟದ್ದನ್ನು ದಾಖಲಿಸಿದೆ. ದಾನಸ್ಥಳದ ಮೇರೆಗಳನ್ನು ಶಾಸನವು ಉಲ್ಲೇಖಿಸಿದೆ.

ದೇವಾಲಯಕ್ಕೆ ಸಂಬಂಧಿಸಿದ ಚಂದಯ್ಯ, ಮೇಲುಕಯ್ಯ, ಮಾದ ಹಾಗೂ ಅದೇ ಸ್ಥಳದ ಸೋಮಜೀಯ ಮುಂತಾದ ವ್ಯಕ್ತಿಗಳ ಸಮಕ್ಷಮದಲ್ಲಿ ತೇಜೋರಾಸಿ ಗುರುಗಳಿಗೆ ಇನ್ನೂರು ಐವತ್ತು ಕಂಬಕೈ ಮತ್ತು ಪಂನಕೈ ಅಳತೆಯ ನವೇಶನವನ್ನು ಆರುವಣವನ್ನು ಸೇಸೆಯನ್ನು ಸರ್ವನಮಸ್ಯವಾಗಿ ಬಿಟ್ಟಿದ್ದನ್ನು ಉಲ್ಲೇಖಿಸಿದೆ.

ಶಾಸನ ಮುಂದುವರೆಯುತ್ತ ಅದೇ ಸ್ಥಳದ ಪ್ರಜೆಗಳಿಗೆ ಏನನ್ನೋ ದಾನ ಕೊಟ್ಟದ್ದನ್ನು ಹೇಳಿದೆ. ದಾನ ಕೊಟ್ಟ ಭಾಗ ತ್ರುಟಿತವಾಗಿದ್ದು ವಿವರಗಳು ತಿಳಿಯುತ್ತಿಲ್ಲ. ಕೃಷಿಗೆ ಸಂಬಂಧಿಸಿದ ಸೂಚನೆಯೂ ಶಾಸನದ ತ್ರುಟಿತ ಭಾಗದಲ್ಲಿದೆ. ಅಲ್ಲಿನ ಬ್ರಾಹ್ಮಣರಿಗೆ ೫೦ ಕಂಬಕೈ ಅಳತೆಯ ಮನೆಯನ್ನು ಕೊಟ್ಟ ದಾಖಲೆ ಇದೆ. ಈ ದಾನದ ವಸ್ತುಗಳಿಗೆ ತೊಂದರೆಕೊಟ್ಟಲ್ಲಿ ಅಂತಹವರಿಗೆ ವಾರಣಾಸಿಯಲ್ಲಿ ಹಸುಗಳನ್ನು ಕೊಂದ ಫಲವನ್ನು ಅನುಭವಿಸುವರು ಎಂಬ ಶಾಪಾಶಯದೊಂದಿಗೆ ಶಾಸನ ಮುಕ್ತವಾಯವಾಗಿದೆ.

ಅಂದಿನ ದೇವಗ್ರಾಮೆಯೇ ಇಂದಿನ ದೇಗಾವೆ(ವಿ).

ಶಾಸನದ ಪಾಠ

೧ ಸ್ವಸ್ತಿ ಶ್ರೀಮನ್ಮಹಾಮಂಡಳೇಸ್ವರ ಲಕ್ಷ್ಮೀದೇವರಸ

೨ ರು ದೇವಗ್ರಾಮೆಯ ನೆಲೆವೀಡಿನಲು

೩ ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಿ . ಸಕವ

೪ ರ್ಷ ೧೧೧೫ನೆಯ ಪರಿಧಾವಿ ಸಂವತ್ಸರದ ವೈಸಾ

೫ . ಬ ೫ ಬ್ರಿ ವೊನಲ ಹೆಳೆಯ ಹೊಲೆಯ ನಾಯಕನು

೬ ಆ ಸ್ಥಳದಲಿ ಸಿವಾಲಯುವಂ ಮಾಡಿ ಪುನಪ್ರತಿಷ್ಟಾ .

---

* # ೨೨೩, ೩ನೇ ಅಡ್ಡರಸ್ತೆ, ಸಿ.ಟಿ. ಬೆಡ್, ತ್ಯಾಗರಾಜನಗರ, ಬೆಂಗಳೂರು-೫೬೦೦೨೮. ಮೊ. ೯೩೪೨೨೮೫೯೦೫





೭ .ಯ . . . . ಯ ಪಾ . ಪೊಲಯ್ಯ ತೆಂಕ

೮ . ತ ಕೆರೆಯ ಮೂಲಸ್ಥಾನದ ಚಂದಯ್ಯ . . ದಕ್ಷ

೯ . ಮೂಲಸ್ಥಾನದ ಮೇಲುಕಯ್ಯ . . ತಿಯ ಮಾದ

೧೦ ಆ ಸ್ಥಳದ ಸೋಮಜೀಯ ಜಾಕಡದಾಳದ ಪಡುವ

೧೧ ಬಿಯ ಅಂತವರ ಸನಿದಾನದಲು ನಣಡಿಗೆ ತೇಜೋರಾ

೧೨ ಸಿ ಗುರುಗಳಿಗೆ ಯಿನ್ನೂರಯ್ವತ್ತು ಕಂಬಕೈ ಪಂನಿಕೆ

೧೩ ಯ ನಿವೇಸಣವ ಅರುವಣ .

೧೪ ಸೇಸೆ ವೊಸಗೆಯಂ ನ . ಸರ್ವ್ವ ನಮಸ್ಯವಾಗಿ ಬಿಟ್ಟಿದ

೧೫ ತ್ತಿ ಯಿ ಸ್ಥಳದ ಸಪ್ರಜೆಗಳಿಗೆ ಆ . . .

೧೬ . . . ಳಿದಡೆ ಮೇಟಿಗೊಳಗವ ಬಿಟ್ಟಮ ಬ್ರಹ್ಮ

೧೭ ಣರಿಗೆ ಅಯ್ವತ್ತು ಕಂಬಕೈ ಮನೆ ಯಿದಕೆ ಆರೇ

೧೮ ನು ಬಾಧೆಯ ಮಾಡಿದರು ವಾರಣಾಸಿಯಲಿ

೧೯ ಕಪಿಲೆಯ ಕೊಂಡ ಫಲಮನೆಯ್ವರ್ .

[ಶಾಸನವನ್ನು ಒದಗಿಸಿದ ಧಾರವಾಡದ ಶ್ರೀ ಪೂಜಾರ್ ಅವರಿಗೆ, ಶಾಸನಪಾಠವನ್ನು ತಿಳಿಸಿಕೊಟ್ಟ ಗುರುಗಳಾದ ಡಾ. ದೇವರಕೊಂಡಾರೆಡ್ಡಿಯವರಿಗೆ ನನ್ನ ವಂದನೆಗಳು]

೨೩

ಹೊಯ್ಸಳ ದೊರೆ ವಿಷ್ಣುವರ್ಧನನ ಕೆಂಬಾಳಿನ ಅಪ್ರಕಟಿತ ಶಾಸನ

ಬಿ.ವಿ. ಸತೀಶ್ ಕುಮಾರ್*

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಕೆಂಬಾಳಿನ ಪಾಳು ಮಲ್ಲೇಶ್ವರ ದೇವಾಲಯದ ಆವರಣದಲ್ಲಿ ಈ ಶಾಸನವಿದೆ. ಊರಿನ ಸ್ಥಳೀಯರ ಪ್ರಕಾರ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಿರ್ಮಿಸುವಾಗ ಭೂಮಿಯಲ್ಲಿ ದೊರೆತಿದ್ದು, ಈ ಶಾಸನವನ್ನು ಪಾಳು ಮಲ್ಲೇಶ್ವರ ದೇವಾಲಯದ ಬಳಿ ತಂದು ನಿಲ್ಲಿಸಿದ್ದಾರೆ. ಶಾಸನವು ಸುಮಾರು ನಾಲ್ಕು ಅಡಿ ಎತ್ತರ ಒಂದುವರೆ ಅಡಿ ಅಗಲವಾಗಿದ್ದು, ದಪ್ಪನಾದ ಬಳಪದ ಕಲ್ಲಿನದಾಗಿದೆ. ಶಾಸನವನ್ನು ರಚಿಸಲು ಕಲ್ಲನ್ನು ಸಮತಟ್ಟಾಗಿ ಮಾಡಿದ್ದಾರೆ. ಶಾಸನದಲ್ಲಿ ಎರಡು ಹಂತವಿದ್ದು, ಶಾಸನದ ಲಲಾಟದಲ್ಲಿ ಶಂಖ ಚಕ್ರ ಗದೆ ಹಿಡಿದ ಅಭಯ ಹಸ್ತ ನೀಡಿರುವ ನಾರಯಣನ ಶಿಲ್ಪವಿದ್ದು, ಅಲಂಕಾರ ಭೂಷಿತನಾಗಿದ್ದಾನೆ. ಅರ್ಚಕನೊಬ್ಬ ದೇವರಿಗೆ ಗಂಟೆ ಹಿಡಿದು ಪೂಜೆ ಮಾಡುತ್ತಿರುವ ದೃಶ್ಯವಿದೆ. ನಂತರ ಎಡಭಾಗದಲ್ಲಿ ವಿಷ್ಣುವಿನ ವಾಹನ ಗರುಡನ ಶಿಲ್ಪವಿದೆ. ಬಲಭಾಗದಲ್ಲಿ ಹಸು ಕರುಗಳಿದ್ದು, ಜೊತೆಗೆ ಸೂರ್ಯ ಚಂದ್ರರ ಚಿತ್ರವೂ ಇದೆ. ಕೆಳಭಾಗದಲ್ಲಿ ಒಟ್ಟು ೩೭ ಸಾಲುಗಳ ಶಾಸವಿದೆ. ಲಿಪಿಯು ಹೊಯ್ಸಳ ಲಿಪಿಯಾಗಿದ್ದು, ತುಂಬಾ ಸುಂದರವಾಗಿದೆ. ಶಾಸನವು ಸುಸ್ಥಿತಿಯಲ್ಲಿದ್ದು, ಕೆಳಭಾಗದ ೨ ಸಾಲು ಮತ್ತು ಅಲ್ಲಲ್ಲಿ ಸ್ವಲ್ಪ ತ್ರುಟಿತವಾಗಿದೆ. ಇಡೀ ಶಾಸನವನ್ನು ಓದಬಹುದು.

ಶಾಸನದ ಪಾಠ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ

೨. ಮೂಲಸ್ತಂಭಾಯ ಶಂಭವೇ॥ ಮೇಘಶ್ಯಾಮಂ ಪೀತಕೌಶೇಯವಾಸಂ

೩. ಶ್ರೀವತ್ಸಂಗಂ ಕೌಸ್ತುಭೋದ್ಭಾಸಿತಾಂಗಂ ಪುಣ್ಯೋಪೇತಂ ಪುಣ್ಡರೀಕಾ

೪. ಯತಾಕ್ಷಾಂ ವಿಷ್ಣುಂ ವಂದೇ ಸರ್ವಲೋಕೈಕನಾಥಂ . ವಿಷ್ಣುದೇವಮಂ .

೫. ಸ್ವಸ್ತಿ ಸಮದಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ದ್ವಾರಾವತಿ ಪು

೬. ರವರಾದೀಶ್ವರಂ ಯಾದವಕುಳಾಂಬರದ್ಯುಮಣಿ ಸಮ್ಯಕ್ತಚೂಡಾಮಣಿ ಮ

೭ ಲಪರೊಳುಗಣ್ಡಾದ್ಯನೇಕ ನಾಮಾವಳಿ ಸಮಾಳಂಕ್ರಿತರಪ್ಪ ಶ್ರೀಮತ್ರಿಭು

೮. ವನಮಲ್ಲ ತಳಕಾಡುಗೊಂಡ ಭುಜಬಳ ವೀರಗಂಗ ಪೊಯ್ಸಳ ವಿಷ್ಣುವರ್ಧನ

೯. ದೇವರು ಗಂಗವಾಡಿ ತೊಭತ್ತಾಱು ಸಾಸಿರಮುಂ ನೊಳಂಬವಾಡಿ ಮೂವತ್ತಿ

೧೦. ರ್ಚ್ಛಾಸಿರಮು ಬನವಸಿ ಪನ್ನಿಚ್ಛಾಸಿರಮುಂ ಹಾನುಂಗಲು ಕಡಂಬಳಿಕೆ ಕೋಗಳಿಯ

೧೧. ಮೂಡಲು ನಂಗಲಿ ತೆಂಕಲು ಕೊಂಗು ಪಡುವಲಾಳ್ವಖೇಡಂ ಬಡಗಲು ಹೆದ್ದೊಱೆ

೧೨. ಯಾದಿಯಾಗಿ ದುಷ್ಟನಿಗ್ರಹಂ ಶಿಷ್ಟ ಪ್ರತಿಪಾಳನದಿ ಸುಖಸಂಕಥಾವಿನೋ

೧೩. ದದಿಂ ರಾಜ್ಯಂಗೆಯ್ಯುತುಮಿರೆ ತತ್ಪಾದ ಪದ್ಮೋಪಜೀವಿ @ ಸ್ವಸ್ತಿ ಶ್ರೀಮನ್ಮ

೧೪. ಹಪ್ರಧಾನಂ ಸರ್ವಾದಿಕಾರಿ ಸೇನಾಧಿಪತಿ ಹಿರಿಯ ಮನೆವೆಗ್ಗಡೆ ಬಲ್ಲ

೧೫. ಯ್ಯಂಗಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಿರೆ .

* ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿವಿ, ಮೈಸೂರು-೦೬. ಮೊ. ೯೫೩೮೨೭೪೩೨೬

೧೬. ಶ್ರೀ ಕಾಂಚಿಪುರವರಾಧೀಶ್ವರಂ ಕಯ್ದಾಳನಾಡಾಳ್ವ ಗಂಗ ಹೆಮ್ಮಾಡಿಗೌಡನಮ
೧೭. ಗಂ ಕೆಂಬಾಳ ಕಪ್ಪಗೌಡನ ಮಗ ಸೋಮಯನಾಯಕನಮಗ ಬಲ್ಲಗೌಡನ ಅ
೧೮. ಣ ಮಾಚೆಯನಾಯಕನು ಮುನ್ತಾಗಿಳ್ದು ಊರ ಅಱುವತ್ತೊಕ್ಕಲು ಸಹಿತ
೧೯. ಮಿಳ್ದು ಶ್ರೀ ಕೇಶವ ದೇವರ ಪ್ರತಿಷ್ಠೆಯಂ ಮಾಡಿ ದೇಗುಲ ಮಾಡಿಸಿ ಬಲ್ಲಯ
೨೦. ರ ಕುಲತಿಲಕನಪ್ಪ ಕೆಂಬಾಳ ಬಲ್ಲಗೌಡ ಶ್ರೀ ಕೇಶವ ದೇವರ ನೈವೇದ್ಯಕೆ ಬೆದ್ದಲು
೨೧. ಗದ್ದೆ ಕರಡಿಗೆಱೆಯ ತುಂಬನ ಮೊದಲಲು ಸಲಗೆ ನಾಲ್ಕು॥ ದೇವರ ನನ್ದಾದೀವಿ
೨೨. ಗೆಗೆ ನವಿಲೆಯ ದಾರಿಯಿನ್ದ ತೆಂಕಲು ಬೆದ್ದಲೆ ಕಮ್ಮ ಮೂನೂಱು॥ ಗಾಣ
೨೩. ಒನ್ದು॥ ತೋಟ ಒನ್ದು॥ ಇನ್ತಿ ಧರ್ಮ್ಮವಂ ವಾರುವದ ಚೌಡಿಯ ಸಾಹಣಿಯುಂ
೨೪. ಬದ್ದ್ರಯನ ಮಹಾದೇವಸಾಹಣಿಯುಂ ಬಿಲ್ಲಯಸಾಹಣಿ ಮುನ್ತಾಗಿ॥
೨೫. ಚಾಳುಕ್ಯ ವಿಕ್ರಮಕಾಲದ ಸಕ ವರುಷ ೧೧೧೫ ನೆಯ ಆಂಗೀರ
೨೬. ಸಂವತ್ಸರದ ಶ್ರಾವಣ ಸುದ್ದ ತದಿಗೆ ಆದಿತ್ಯವಾರ ಬ್ಯತೀಪಾತದಂನ್ದು ಬ
೨೭. ಬಲ್ಲಗೌಡನುಂ ಆಲಯ್ಯನ ಜನನಿ ಬಾಗಬ್ಬೆಗೌಡಿಯುಂ ಆಲಯ್ಯನ ಸತಿ ಕೇ
೨೮. ತಿ ಗೌಡಿಯುಂ ಆಲಯ್ಯನ ಪುತ್ರ ಮಲ್ಲಯನುಂ ಮಾಚೆಯನುಂ ಇನ್ತು
೨೯. ತಮ್ಮ ಪುತ್ರ ಮಿತ್ರಕಳತ್ರಾದಿಗಳೆ[*]ಲ್ಲಮೊನ್ದಾಗಿ॥ ಸ್ವಸ್ತಿಯಮ
೩೦. ನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೋನ ಅನುಷ್ಠಾಣ ಜಪಸಮಾ
೩೧. ಧಿಶೀಳಗುಣ ಸಂಪನ್ನರಪ್ಪ ಶ್ರೀಮತು ಕೇಸಿಯಹಳ್ಳಿಯ ಪ
೩೨. ರಶಿವಪಣ್ಡಿತರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಸರ್ವ್ವನಮಶ್ಯೆವಾಯಂ
೩೩. ಮಾಡಿ ಕೊಟ್ಟ ದತ್ತಿ॥ ಸ್ವದತ್ತಂ ಪರದತ್ತಂ ವಾಯೋ ಹರೇತಿ ವಸುಂಧರಾಂ . . .
೩೪. ರ್ಷಸಹಶ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ॥ ದಯಯಿಂದಿತಿದಷಷ್ಟಿರ್ವ್ವ
೩೫. ಂಗಾಯುಂ ಮಹಾಶ್ರೀಯುಮಕುಮಿದಂ ಕಾಯದೇ ಕಾಯೆ . . .
೩೬. ಮ ಕ್ಷೇತ್ರಂಗಳೊಳು ಬಾಣರಾಸಿರಯೊಳೆ ಕೋಟಿ ಮುನೀಂದ್ರರ
೩೭. . . । ಕೊನ್ದುದೊನ್ದುಯಸಂ ಸಾಗ್ಗರೊವಿದೆನ್ವಯಾಜಿದಪುದಿಶ್ರಳೊಕ

ಶಾಸನದ ವಿಷಯ

ಶಾಸನ ದಾನಶಾಸನವಾಗಿದ್ದು, ಶಾಸನದಲ್ಲಿ **"ಚಾಳುಕ್ಯ ವಿಕ್ರಮಕಾಲದ ಸಕ ವರುಷ ೧೧೧೫ ನೆಯ ಆಂಗೀರ ಸಂವತ್ಸರದ ಶ್ರಾವಣ ಸುದ್ದ ತದಿಗೆ ಆದಿತ್ಯವಾರ ಬ್ಯತೀಪಾತದಂನ್ದು"** ಎಂದು ಉಲ್ಲೇಖವಿದೆ. ಚಾಲುಕ್ಯ ವಿಕ್ರಮಕಾಲ' ಎಂಬುದು ಹೊಯ್ಸಳರು ಚಾಲುಕ್ಯರ ಅಧೀನದಲ್ಲಿದ್ದರೆಂದು ತಿಳಿಯುತ್ತದೆ. ಶಕ ವರ್ಷ ತಪ್ಪಾಗಿದೆ. ಇನ್ನು ಆಂಗೀರಸ ಸಂವತ್ಸರ ವಿಷ್ಣುವರ್ಧನ ಆಳ್ವಿಕೆಯಲ್ಲಿ ಕ್ರಿ.ಶ. ೧೧೫೨ರಲ್ಲಿ ಬರುವುದು. ಇದಕ್ಕೂ ಮುಂಚೆ ಎಂದರೆ ಕ್ರಿ.ಶ. ೧೦೯೨ಕ್ಕೂ ಆಂಗೀರಸ ಸಂವತ್ಸರ ಬರುವುದು. ಅದು ವಿನಯಾದಿತ್ಯನ ಆಳ್ವಿಕೆಯ ಕಾಲವಾಗುವುದು. ಹಾಗಾಗಿ ಕ್ರಿ.ಶ. ೧೧೫೨ ಜುಲೈ ೬ ಭಾನುವಾರಕ್ಕೆ ಸರಿಹೊಂದುವುದು. ಆದರೆ ಅಂದು ಸೂರ್ಯಗ್ರಹಣ ಇರಲಿಲ್ಲ. ಒಟ್ಟಾರೆಯಾಗಿ ವಿಷ್ಣುವರ್ಧನನ ಆಳ್ವಿಕೆಯ ಕೊನೆಯ ದಿನಗಳು ಎಂದು ಹೇಳಬಹುದು.

ಶಾಸನವು ಕ್ರಿ.ಶ. ೧೧೫೨ರ ಕಾಲದ್ದಾಗಿದ್ದು, ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನವಾಗಿದೆ. ವಿಷ್ಣುವರ್ಧನನು ಈ ವಂಶದ ಪ್ರಸಿದ್ಧ ದೊರೆಯಾಗಿದ್ದು, ಕ್ರಿ.ಶ. ೧೧೦೮ರಿಂದ ೧೧೫೨ರವರೆಗೆ ಆಳ್ವಿಕೆ ನಡೆಸಿದನು. ಹೊಯ್ಸಳರು ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ಮಾಂಡಳಿಕರಾಗಿದ್ದು, ವಿಷ್ಣುವರ್ಧನನು ಅವರಿಂದ ಸ್ವತಂತ್ರ ಹೊಂದಲು ಪ್ರಯತ್ನಿಸಿ ವಿಫಲನಾದನು ಆದರೆ ಹೊಯ್ಸಳ ದೊರೆಗಳಲ್ಲಿ ಹಿಂದೆಂದು ಕಾಣದ ಏಳಿಗೆಯು ಇವನ ಕಾಲದಲ್ಲಿ ಹೊಂದಿತು. ಶಾಸನದಲ್ಲಿ ಮಂಗಳ ಶ್ಲೋಕದ ನಂತರ

"ಸ್ವಸ್ತಿ ಸಮದಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ದ್ವಾರವತಿಪುರವರಾದೀಶ್ವರಂ ಯಾದವ ಕುಳಾಂಬರದ್ಯುಮಣಿ ಸಮ್ಯಕ್ತಚೂಡಾಮಣಿ ಮಲಪರೊಳುಗಣ್ಡದ್ಯನೇಕ ನಾಮಾವಳಿ ಸಮಾಳಂಕ್ರಿತರಪ್ಪ ಶ್ರೀಮತ್ರಿಭುವನಮಲ್ಲ ತಳಕಾಡುಗೊಂಡ ಭುಜಬಲ ವೀರಗಂಗ"

ಎಂದು ವಿಷ್ಣುವರ್ಧನನ ಹಲವು ಬಿರುದುಗಳನ್ನು ಶಾಸನವು ಉಲ್ಲೇಖಿಸಿದೆ. ವಿಷ್ಣುವರ್ಧನನು ಚೋಳರನ್ನು ಸೋಲಿಸಿ, ಹಾಗೆಯೇ ಸುತ್ತಮುತ್ತಲ ಚಿಕ್ಕ ಪುಟ್ಟ ರಾಜರನ್ನು ಸೋಲಿಸಿ ಪ್ರಬಲನಾಗುತ್ತಾನೆ. ಉತ್ತರದಲ್ಲಿ ಕಲ್ಯಾಣ ಚಾಲುಕ್ಯರ ವಿರುದ್ಧ ಕಾರ್ಯಾಚರಣೆ ನಡೆಸಿ ಸ್ವಾತಂತ್ರ ಹೊಂದಲು ಪ್ರಯತ್ನಿಸಿ, ಸ್ವತಂತ್ರ ಹೊಯ್ಸಳ ಸಾಮ್ರಾಜ್ಯವನ್ನು ಸ್ಥಾಪಿಸಲು ಶ್ರಮಿಸಿ ವಿಫಲನಾದನು. ಬಂಕಾಪುರದವರಗೆ ರಾಜ್ಯವನ್ನು ವಿಸ್ತರಿಸಿದನು. ಆ ಹಿನ್ನೆಲೆಯಲ್ಲಿ ಶಾಸನವು ಆತನ ರಾಜ್ಯದ ವಿಸ್ತಾರವನ್ನು ಕುರಿತಾಗಿ

"ಹೊಯ್ಸಳ ವಿಷ್ಣುವರ್ಧನದೇವರು ಗಂಗವಾಡಿ ತೊಂಭತ್ತಾರು ಸಾಸಿರಮುಂ ನೊಳಂಬವಾಡಿ ಮೂವತ್ತಿಚ್ಚಾಸಿರಮು ಬನವಾಸಿ ಪನ್ನಿಚ್ಚಾಸಿಮುಂ ಹಾನುಂಗಲು ಕಡಂಬಳಿಕೆ ಕೊಗಳಿಯ ಮೂಡಲು ನಂಗಲಿ ತೆಂಕಲು ಕೊಂಗು ಪಡುವಲಾಳ್ವಖೇಡಂ ಬಡಗಲು ಹೆದ್ದೊಱೆಯಾದಿಯಾಗಿ ದುಷ್ಟನಿಗ್ರಹಂ ವಿಶಿಷ್ಟ ಪ್ರತಿಪಾಳನದಿ ಸುಖಸಂಕಥಾ ವಿನೋದದಿಂ ರಾಜ್ಯಂ ಗೆಯ್ಯುತುಮಿರೆ."

ಎಂದು ಉಲ್ಲೇಖಿಸುವುದು. ಅಂದರೆ ಗಂಗವಾಡಿ–೯೬೦೦೦, ನೊಳಂಬವಾಡಿ–೩೨೦೦೦, ಬನವಾಸಿ–೧೨೦೦೦, ಹಾನುಗಲ್ಲು, ಕದಂಬಳಿಕೆ, ಕೋಗಳಿ ಮುಂತಾದ ಪ್ರದೇಶಗಳನ್ನು ಗೆದ್ದು ಅವನ ಆಳ್ವಿಕೆಯಲ್ಲಿ ಹೊಯ್ಸಳ ರಾಜ್ಯವು ಪೂರ್ವದಲ್ಲಿ ನಂಗಲಿ (ಕೋಲಾರ), ಪಶ್ಚಿಮದಲ್ಲಿ ಆಳ್ವಖೇಡ, ಉತ್ತರದಲ್ಲಿ ಹೆದ್ದೊರೆ (ಕೃಷ್ಣಾ ನದಿ), ದಕ್ಷಿಣದಲ್ಲಿ ಕೊಂಗು(ಕೊಯಮುತ್ತೂರು)ವರೆಗೆ ವಿಸ್ತರಿಸಿ ದುಷ್ಟರನ್ನು ಸಂಹರಿಸಿ, ಶಿಷ್ಟರನ್ನು ರಕ್ಷಿಸಿ ಸುಖದಿಂದ ರಾಜ್ಯವಾಳುತ್ತಿದ್ದನು ಎಂದು ತಿಳಿಸುತ್ತದೆ.

ವಿಷ್ಣುವರ್ಧನನ ಪದ್ಮೋಪಜೀವಿಯಾದ ಶ್ರೀಮನ್ಮಹಾಪ್ರಧಾನ, ಸರ್ವಾಧಿಕಾರಿ, ಸೇನಾಧಿಪತಿ ಬಾಲಿಯ ಮನೆವೆಗ್ಗಡೆ **'ಬಲ್ಲಯ್ಯ'** ಅಥವಾ **'ಬಲ್ಲಗೌಡ'**ನ ಉಲ್ಲೇಖವಿದೆ. ಈತ ಕೈದಾಳದ ಗಂಗ ವಂಶದವನಾಗಿದ್ದು, ಆತನ ವಂಶಾವಳಿಯನ್ನು ಶಾಸನದಲ್ಲಿ

"ಸ್ವಸ್ತಿ ಶ್ರೀಮನ್ಮಹಪ್ರಧಾನಂ ಸರ್ವಾದಿಕಾರಿ ಸೇನಾಧಿಪತಿ ಹಿರಿಯ ಮನೆವೆಗ್ಗಡೆ ಬಲ್ಪಯ್ಯಂಗಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಿರೆ . ಶ್ರೀಕಾಂಚಿಪುರವರಾಧೀಶ್ವರಂ ಕಯ್ದಾಳನಾಡಾಳ್ವ ಗಂಗ ಹೆಮ್ಮಾಡಿಗೌಡನ ಮಗಂ ಕೆಂಬಾಳ ಕಪ್ಪಗೌಡನ ಮಗ ಸೋಮಯ ನಾಯಕನಮಗ ಬಲ್ಲಗೌಡನ ಅಣ ಮಾಚೆಯನಾಯಕನು" ಎಂದು ಉಲ್ಲೇಖವಿದೆ. ಅಂದರೆ ಶ್ರೀಕಾಂಚಿಪುರವರಾಧೀಶ್ವರ ಎಂಬ ಬಿರುದಾಂಕಿತನಾದ ಕಯ್ದಾಳನಾಡಳ್ವ ಗಂಗಹೆಮ್ಮಾಡಿಗೌಡ, ಆತನ ಮಗ ಕೆಂಬಾಳ ಕಪ್ಪಗೌಡ, ಆತನ ಮಗ ಸೋಮೆಯನಾಯಕ, ಆತನ ಮಗ ಬಲ್ಲಗೌಡ, ಬಲ್ಲಗೌಡನ ಅಣ್ಣ ಮಾಚೆಯನಾಯಕ. ಬಲ್ಲಗೌಡನು ಕೆಂಬಾಳನ್ನು ಆಳುತ್ತಿದ್ದನು ಎಂದು ತಿಳಿಯುತ್ತದೆ.

ಶಾಸನದಲ್ಲಿ ಬಲ್ಲಗೌಡ ಮತ್ತು ಆತನ ಅಣ್ಣ ಮಾಚೆಯನಾಯಕನು ಸೇರಿ ಕೇಶವ ದೇವಾಲಯವನ್ನು ಕಟ್ಟಿಸಿ ಕೇಶವ ದೇವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿಸಿದನು. ಆದರೆ ಎಲ್ಲಿ ಎಂದು ಉಲ್ಲೇಖವಿಲ್ಲ. ಬಹುಶಃ ಕೆಂಬಾಳಿನಲ್ಲಿಯೇ ಇರಬಹುದು. ಏಕೆಂದರೆ ಶಾಸನ ದೊರೆತ ಸ್ಥಳದಲ್ಲಿ ಒಂದು ಬದಿ ಮಲ್ಲೇಶ್ವರನ ಪುಟ್ಟ ದೇವಾಲಯವಿದ್ದರೆ, ಮತ್ತೊಂದು ಕಡೆ ಪಾಳು ಬಿದ್ದ ದೇವಾಲಯವಿದೆ. ಬಹುಶಃ ಅದೇ ಕೇಶವ ದೇವಾಲಯವಾಗಿರಬಹುದು. ಪ್ರಸ್ತುತ ಯಾವ ಕುರುಹು ಉಳಿಯದಷ್ಟು ಪಾಳುಬಿದ್ದಿದೆ. ಮುಂದೆ ಬಲ್ಲಗೌಡನು ಕೇಶವ ದೇವಾಲಯವನ್ನು ಕಟ್ಟಿಸಿದ ನಂತರ ಕೇಶವ ದೇವರ ನಿತ್ಯ ನೈವೇದ್ಯಕ್ಕೆ ಬೆದ್ದಲು ಗದ್ದೆ ನಾಲ್ಕು ಸಲಗೆ ಭೂಮಿಯನ್ನು ಕೊಟ್ಟನು. ಜೊತೆಗೆ ವಾರುವದ ಚೌಡೆಯಸಾಹಣಿ, ಭದ್ರಯನ ಮಹಾದೇವಸಾಹಣಿ, ಬಿಲ್ಲಯಸಾಹಣಿ ಮುಂತಾದವರು ಸೇರಿ ದೇವರ ನಂದಾದೀಪಕ್ಕೆ ಒಂದು ಗಾಣ ಮತ್ತು ಭೂಮಿಯನ್ನು ಕೊಟ್ಟರು. ಊರಿನ ಮತ್ತೊಂದು ಕುಟುಂಬವಾದ ಬಲ್ಲಗೌಡ, ಆಲಯ್ಯ, ಆತನ ತಾಯಿ ಬಾಗಬ್ಬೆಗೌಡಿ, ಸತಿ ಕೇತಿಗೌಡಿ, ಪುತ್ರ ಮಾಚಯ್ಯರು ಸಹ ದಾನವನ್ನು ಸಮಸ್ತ ಅರವತ್ತೊಕ್ಕಲಿನವರ ಮುಂದೆ **'ಕೇಸಿಹಳ್ಳಿಯ ಪರಶಿವಪಂಡಿತ'**ನ ಕಾಲನ್ನು ತೊಳೆದು, ದಾನದ ಭೂಮಿಗೆ ಎಲ್ಲ ತೆರಿಗೆಯಿಂದ ಮುಕ್ತಗೊಳಿಸಿ ದಾನವನ್ನು ಕೊಟ್ಟಿದ್ದಾರೆ.

ಶಾಸನವು ವೈಷ್ಣವ ದಾನಶಾಸನವಾಗಿದ್ದು, ಶಾಸನದಲ್ಲಿ ಕೇಶವ ದೇವರ ಪ್ರತಿಷ್ಠೆ ಮಾಡಿಸಿ ದಾನ ನೀಡಿದ ಉಲ್ಲೇಖವಿದೆ. ಶಾಸನದ ಆರಂಭದಲ್ಲಿ ಪ್ರಸಿದ್ಧ ಶೈವ ಮಂಗಳಶ್ಲೋಕವಾದ

"ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರ ಚಾರವೇ
ತ್ರೈಲೋಕ್ಯ ನಗರಾರಂಭ ಮೂಲಸ್ತಂಬಾಯ ಶಂಭವೇ॥"

ಎಂಬ ಸಾಲುಗಳಿದೆ. ಇದು ಬಾಣಭಟ್ಟನ ಹರ್ಷಚರಿತೆಯ ಮಂಗಳ ಶ್ಲೋಕವಾಗಿದ್ದು, ಕರ್ನಾಟಕದ ಹೆಚ್ಚಿನ ಶಾಸನಗಳಲ್ಲಿ ಇದು ಬಳಕೆಯಾಗಿದೆ. ಶಾಸನವು ಶೈವವಾಗಲಿ ಅಥವಾ ವೈಷ್ಣವವಾಗಲಿ, ಮೇಲಿನ ಮಂಗಳ ಶ್ಲೋಕ ಇರಲೇಬೇಕು ಎನ್ನುವಷ್ಟು ಜನಪ್ರಿಯವಾಗಿತ್ತು. ಅದರ ನಂತರ ವೈಷ್ಣವ ಶ್ಲೋಕವಿದ್ದು, ವಿಷ್ಣುಸಹಸ್ರನಾಮದಲ್ಲಿರುವ

"ಮೇಘಶ್ಯಾಮಂ ಪೀತಕೌಶೇಯವಾಸಂಶ್ರೀವತ್ಸಾಗಂ ಕೌಸ್ತುಭೋದ್ಭಾಸಿತಾಂಗಂ
ಪುಣ್ಯೋಪೇತಂ ಪುಂಡರಿಕಾ ಯತಕ್ಷಾಂ ವಿಷ್ಣುಂ ವಂದೇ ಸರ್ವ ಲೋಕೈಕನಾಥಂ॥"


ಎಂಬ ಶ್ಲೋಕವಿದೆ. ವೈಷ್ಣವ ಶಾಸನವಾದರು ಶಾಸನದ ಆರಂಭದಲ್ಲಿ ರೂಢಿ ಎಂಬಂತೆ ಶೈವ ಶ್ಲೋಕವಿದೆ. ಒಂದು ರೀತಿ ಶೈವ ಮತ್ತು ವೈಷ್ಣವ ಧರ್ಮದ ಸಮನ್ವಯತೆ ಎಂದು ಹೇಳಬಹುದು. ಹಾಗೆಯೇ ಶಾಸನ ದೊರೆತ ಸ್ಥಳದಲ್ಲಿ ಮಲ್ಲೇಶ್ವರ ದೇವಾಲಯವು ಇದೆ. ಜೊತೆಗೆ ದಾನವನ್ನು ಸ್ವೀಕರಿಸಿದ ದಾನಪ್ರತಿಗ್ರಹಿ ಕೇಸಿಹಳ್ಳಿಯ ಪರಶಿವಪಂಡಿತ. ಈತನ ಹೆಸರು ನೋಡಿದರೆ ಈತ ಕಾಳಮುಖ ಶೈವನಾಗಿದ್ದಾನೆ. ಶೈವ ಧಾರ್ಮಿಕ ಗುರುವು ವೈಷ್ಣವ ದೇವಾಲದ ಪೂಜಾಕೈಂಕರ್ಯಕ್ಕಾಗಿ ದಾನವನ್ನು ಸ್ವೀಕರಿಸಿದ್ದಾನೆ. ದಾನಪ್ರತಿಗ್ರಹಿಯಾದ ಪರಶಿವಪಂಡಿತನು ವೈಯಕ್ತವಾಗಿ ಶೈವನಾದರು ರಾಜನು ಅನುಸರಿಸಿದ ಅಂದರೆ ವಿಷ್ಣುವರ್ಧನನು ಸ್ವೀಕರಿಸಿದ ವೈಷ್ಣವಧರ್ಮದ ಬಗ್ಗೆ ಗೌರವ ತೋರಿಸಿದ್ದಾನೆ.

ದಾನಿಗಳಲ್ಲಿ ಚೌಡಿಯ ಸಾಹಣಿ, ಮಹಾದೇವ ಸಾಹಣಿ ಮತ್ತು ಬಿಲ್ಲಯ್ಯಸಾಹಣಿ ಎಂಬ ಕೆಲವು ಸಾಹಣಿಗಳ ಹೆಸರು ಉಲ್ಲೇಖವಿದೆ. ಬಹುಶಃ ಇವರು ಸ್ಥಳೀಯರಾಗಿದ್ದು, ವಿಷ್ಣುವರ್ಧನ ಅಥವಾ ಆತನ ಸೇನಾಧಿಪತಿ ಬಲ್ಲಗೌಡನ ಸೇನೆಯಲ್ಲಿನ ಕುದುರೆ ಅಥವಾ ಆನೆಗಳ ತರಬೇತುದಾರರಾಗಿ, ಕೆಂಬಾಳಿನಲ್ಲಿ ನೆಲೆಸಿದ್ದರು. ದಾನಿಗಳಲ್ಲಿ ಮತ್ತೊಂದು ಕುಟುಂಬ ಆಲಯ್ಯ. ಈತನ ತಾಯಿ ಬಾಗಬ್ಬೆಗೌಡಿ, ಅವನ ಮಡದಿ ಕೇತಿಗೌಡಿಯರು ದಾನಿಗಳಾಗಿದ್ದಾರೆ. ದೇವರ ಶ್ರೀಕಾರ್ಯಕ್ಕೆ ಸ್ತ್ರೀಯರು ಸಹ ದಾನಿಯಾಗಿರುವುದು ಹೊಯ್ಸಳರ ಕಾಲದ ಸ್ತ್ರೀಯರ ಸ್ಥಾನಮಾನವನ್ನು ತಿಳಿಸುವುದು. ಹಾಗೆಯೇ ದೇವರಿಗೆ ದಾನ ನೀಡುವಾಗ 'ಅಱುವತ್ತೊಕ್ಕಲು ಸಹಿತ' ಎಂದಿದೆ. ಅಂದರೆ ಊರಿನ ಅಭಿವೃದ್ಧಿ ಕಾರ್ಯದಲ್ಲಿ ಊರಿನ ಸಮಸ್ತರು ಇದ್ದು ಅವರ ಸಹಮತ ಇದ್ದುದು ಸೂಚಿಸುತ್ತದೆ.

ಶಾಸನದ ವಿಶ್ಲೇಷಣೆ

ಶಾಸನವು ಸರಳವಾಗಿದ್ದು, ಆರಂಭದಲ್ಲಿ ಸಂಸ್ಕೃತದ ಶೈವ ಮತ್ತು ವೈಷ್ಣವ ಶ್ಲೋಕವಿದೆ. ಹಾಗೆಯೇ ಶಾಸನದ ಕಡೆಯಲ್ಲಿ ಸಂಸ್ಕೃತದ ಶಾಪಶಯಿವಿದೆ. ಉಳಿದಡೆ ಶಾಸನವು ಗದ್ಯದಲ್ಲಿದೆ. ಶಾಸನದಲ್ಲಿ ಪದ್ಯ ಇಲ್ಲದ ಕಾರಣ ಶಾಸನದಲ್ಲಿ ಕಾವ್ಯಾತ್ಮಕ ಅಂಶ ಇಲ್ಲವೆಂದೇ ಹೇಳಬಹುದು. ಶಾಸನದ ಅಂತ್ಯದಲ್ಲಿ ರಚನಾಕಾರ ಅಥವಾ ಶಾಸನ ಕವಿಯ ಉಲ್ಲೇಖವಿಲ್ಲ. ಜೊತೆಗೆ ಲಿಪಿಕಾರ ಮತ್ತು ರೂವಾರಿಯ ಉಲ್ಲೇಖವೂ ಇಲ್ಲ. ಶಾಸನದ ಸಾಲುಗಳಲ್ಲಿ ಹಲವು ಕಡೆ ಅಕ್ಷರ ದೋಷ ಮತ್ತು ಅಕ್ಷರ ಪಲ್ಲಟ ಕಂಡುಬರುವುದು. ಉದಾಹರಣೆಗೆ 'ವಾರಣಾಸಿ' ಎಂದು ಬರೆಯಲು 'ಬಾಣಾರಾಸಿ' ಎಂದಿದೆ.

ಕೆಂಬಾಳು ಪ್ರದೇಶವು ಆಗಿನ ನೀರ್ಗುಂದನಾಡಿನ ಕುಮಾರವೃತ್ತಿಗೆ ಸೇರಿತ್ತು. ಹೊಯ್ಸಳ ವಂಶದ ದೊರೆಗಳಿಗೆ ಕೆಂಬಾಳು ತುಂಬಾ ಹತ್ತಿರವಾಗಿತ್ತು. ಏಕೆಂದರೆ ಇದುವರೆಗೂ ಹೊಯ್ಸಳರ ಒಟ್ಟು ೫ ಶಾಸನಗಳು ದೊರೆತಿದ್ದು ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ ೧೦ರಲ್ಲಿ ಪ್ರಕಟವಾಗಿದೆ. ಪ್ರಸ್ತುತ ಶಾಸನವು ಆರನೇಯ ಶಾಸನವಾಗಿದೆ. ಕ್ರಿ.ಶ. ೧೦೯೮ರಲ್ಲಿ ವಿನಯಾದಿತ್ಯನ ಆಳ್ವಿಕೆಯಲ್ಲಿ ಕೆಂಬಾಳಿನಲ್ಲಿ ಒಂದು ಕೆರೆ ನಿರ್ಮಾಣವಾದ ಉಲ್ಲೇಖವಿದೆ.[೧] ನಂತರ ಮೊದಲನೇ ನಾರಸಿಂಹನು ತನ್ನ ಅಂಗರಕ್ಷಕನಾಗಿದ್ದ ಬೆಳ್ಳಪ್ಪನಾಯಕನ ಮಗಳು ಗೌರಲದೇವಿಯನ್ನು ವಿವಾಹವಾಗುವನು. ಅವರಿಬ್ಬರ ಪುತ್ರ ಕುಮಾರ ಎಱೆಯಂಗನು ಕ್ರಿ.ಶ. ೧೧೬೮ರಲ್ಲಿ ಕೆಂಬಾಳನ್ನು ಆಳುತ್ತಿದ್ದನು.[೨] ನಂತರದ ಒಂದು ಶಾಸನೋಕ್ತ ವೀರಗಲ್ಲಿನಲ್ಲಿ ಉಲ್ಲೇಖವಿರುವಂತೆ ವೀರಬಲ್ಲಾಳನ ರಾಣಿ ಚೋಳಮಹಾದೇವಿಯು ಕೆಂಬಾಳಿನಲ್ಲಿ ಆಳ್ವಿಕೆ ನಡೆಸುತ್ತಿದ್ದಳು.[೩] ಮುಂದೆ ಕ್ರಿ.ಶ. ೧೨೩೫ರಲ್ಲಿ ಇಮ್ಮಡಿ ನಾರಸಿಂಹನು ತನ್ನ ಸಚಿವನಾದ ವಿಶ್ವನಾಥನಿಗೆ ಕೆಂಬಾಳನ್ನು ದಾನವಾಗಿ ಕೊಟ್ಟನು. ವಿಶ್ವನಾಥನು ಅಲ್ಲಿ ಶ್ರೀಲಕ್ಷ್ಮೀನಾರಸಿಂಹ ದೇವಾಲಯವನ್ನು ಕಟ್ಟಿಸಿ ಕೆಂಬಾಳನ್ನು 'ಶ್ರೀವೀರಲಕ್ಷ್ಮೀ ನರಸಿಂಹಪುರ'ವೆಂದು ಪ್ರತಿನಾಮಕರಣ ಮಾಡಿದನು.[೪] ಗ್ರಾಮದಲ್ಲಿರುವ ಮತ್ತೊಂದು ಶಾಸನೋಕ್ತ ವೀರಗಲ್ಲಿನಲ್ಲಿ ಮುಮ್ಮಡಿ ನಾರಸಿಂಹನ ಆಳ್ವಿಕೆಯಲ್ಲಿ ಆತನ ಮಲ ಸಹೋದರ ರಾಮನಾಥನ ವಿರುದ್ಧ ಯುದ್ಧ ಮಾಡುವಾಗ, ಕೆಂಬಾಳಿನ ಹೊಂನೆಯನೆಂಬ ವೀರನು ಗಜಕಾಳಗದಲ್ಲಿ ವೀರಮರಣವನ್ನು ಹೊಂದಿದನು.[೫] ಪ್ರಸ್ತುತ ಅಪ್ರಕಟಿತ ಶಾಸನದಿಂದ ಕೆಂಬಾಳಿನಲ್ಲಿ ವಿಷ್ಣುವರ್ಧನನ ಕಾಲದಲ್ಲಿ ಕ್ರಿ.ಶ.





೧೧೫೨ರಲ್ಲಿ ಕೈದಾಳದ ಗಂಗ ಮನೆತನದವರು ಆಡಳಿತಾಧಿಕಾರಿಗಳಾಗಿದ್ದು, ಅಲ್ಲಿ ಕೇಶವ ದೇವಾಲಯವನ್ನು ನಿರ್ಮಾಣ ಮಾಡಿಸಿದರು ಎಂದು ತಿಳಿಯುತ್ತದೆ. ಪ್ರಸ್ತುತ ವಿಷ್ಣುವರ್ಧನನ ಈ ಅಪ್ರಕಟಿತ ಶಾಸನ ದೊರೆತಿರುವುದರಿಂದ ಗಂಗ ಮನೆತನದ ಸದಸ್ಯನೊಬ್ಬ ವಿಷ್ಣುವರ್ಧನನ ಸೇನಾಪತಿಯಾಗಿದ್ದನು. ವಿಷ್ಣುವರ್ಧನನು ವೈಷ್ಣವ ಧರ್ಮವನ್ನು ಸ್ವೀಕರಿಸಿ ಕೇಶವ, ನಾರಾಯಣ ಎಂಬ ಹಲವು ವೈಷ್ಣವ ದೇವಾಲಯಗಳನ್ನು ಕಟ್ಟಿಸಿದನು. ಹಾಗೆಯೇ ರಾಜನ ಪ್ರಸನ್ನತೆಗಾಗಿ ಅವನ ಅಧಿಕಾರಿ ಬಲ್ಲಗೌಡ ಮತ್ತು ಆತನ ಸಹೋದರ ಕೇಶವ ದೇವಾಲಯವನ್ನು ಕೆಂಬಾಳಿನಲ್ಲಿ ಕಟ್ಟಿಸಿದರು. ಒಟ್ಟಾರೆಯಾಗಿ ಕೆಂಬಾಳು ಹೊಯ್ಸಳರ ಆಳ್ವಿಕೆಯಲ್ಲಿ ಪ್ರಮುಖ ಗ್ರಾಮವಾಗಿತ್ತು ಎಂದು ತಿಳಿದು ಬರುತ್ತದೆ.

[ಅಪ್ರಕಟಿತ ಶಾಸನದ ಪಠ್ಯವನ್ನು ಓದಲು ಸಹಾಯ ಮಾಡಿದ ಗುರುಗಳಾದ ಡಾ. ಎಂ.ಜಿ. ಮಂಜುನಾಥ್‌ರವರಿಗೆ ಹಾಗೂ ಕ್ಷೇತ್ರಕಾರ್ಯಕ್ಕೆ ಸಹಾಯ ಮಾಡಿದ ಮಿತ್ರ ಮಂಜುನಾಥ ಎಲ್. ರವರಿಗೆ ನನ್ನ ವಂದನೆಗಳು.]

ಅಡಿಟಿಪ್ಪಣಿಗಳು

೧. ಎ.ಕ. ೧೦, ಚನ್ನರಾಯಪಟ್ಟಣ, ೭೪, ಕ್ರಿ.ಶ. ೧೯೭೮, ಪರಿಷ್ಕೃತ ಸಂಪುಟ, ಪುಟ ಸಂ. ೫೦೨.

೨. ಎ.ಕ. ೧೦, ಚನ್ನರಾಯಪಟ್ಟಣ, ೭೧, ಕ್ರಿ.ಶ. ೧೧೬೮, ಪರಿಷ್ಕೃತ ಸಂಪುಟ, ಪುಟ ಸಂ. ೪೯೯.

೩. ಎ.ಕ. ೧೦, ಚನ್ನರಾಯಪಟ್ಟಣ, ೭೨, ೧೨–೧೩ನೇ ಶತಮಾನ, ಪರಿಷ್ಕೃತ ಸಂಪುಟ, ಪುಟ ಸಂ. ೫೦೦.

೪. ಎ.ಕ. ೧೦, ಚನ್ನರಾಯಪಟ್ಟಣ, ೭೦, ಕ್ರಿ.ಶ. ೧೨೩೫, ಪರಿಷ್ಕೃತ ಸಂಪುಟ, ಪುಟ ಸಂ. ೪೯೫.

೫. ಎ.ಕ. ೧೦, ಚನ್ನರಾಯಪಟ್ಟಣ, ೭೩, ೧೩ನೇ ಶತಮಾನ, ಪರಿಷ್ಕೃತ ಸಂಪುಟ, ಪುಟ ಸಂ. ೫೦೨.

ಆಕರ ಗ್ರಂಥಗಳು

ಕನ್ನಡ ಕೃತಿಗಳು

೧. ಕೇಶವಭಟ್ಟ ಎಂ.ವಿ. & ಕೃಷ್ಣರಾವ್ ಎಂ.(ಸಂ) : **ಕರ್ನಾಟಕದ ಇತಿಹಾಸ ದರ್ಶನ**, ಬೆಂಗಳೂರು. ೧೯೭೭.

೨. ದಿವಾಕರ್.ಆರ್.ಆರ್. (ಸಂ) : **ಕರ್ನಾಟಕದ ಪರಂಪರೆ ಸಂಪುಟ** ೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೪.

೩. ನರಸಿಂಹಮೂರ್ತಿ ಎ.ವಿ. : ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ಐದನೇ ಮುದ್ರಣ, ೨೦೧೧.

೪. ಮಂಜುನಾಥ ಎಂ.ಜಿ., ದೇವರಾಜಸ್ವಾಮಿ ಜಿ.ಕೆ., ಕನ್ನಡ ಲಿಪಿ ವಿಕಾಸ, ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ, ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ, ೨೦೦೪.

೫. ಸುಂದರ ಅ. (ಪ್ರ.ಸಂ), **ಕರ್ನಾಟಕ ಚರಿತ್ರೆ ಸಂಪುಟ ೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೭.

ಆಂಗ್ಲ ಕೃತಿಗಳು

೧. Derret J.D.M., **The Hoysalas**, A Medival Indian Royal Family, Oxford University Press, London, 1957.

೨. Desai P.B., **A History of Karnataka**, Kannda Research Institute, Karnataka University, Dhawar, 1970.

೩. Swamykannu Pillai L.D., **AN INDIAN EPHEMERIS,** Vol III, Govt. Press, Madrass, 1922.

೪. William Coehlo : **THE HOYSALA VAMSHA,** Indian Historical Institute.

೫. St. Xavier's College, Bombay. 1950.

ಶಾಸನ ಸಂಪುಟ ಮತ್ತು ವಿಶ್ವಕೋಶ

೧. **ಎಪಿಗ್ರಾಫಿಯ ಕರ್ನಾಟಿಕ** ಸಂಪುಟ ೧೦, ಪರಿಷ್ಕೃತ ಸಂಪುಟ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨. **ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೯.

ನಿಘಂಟು

೧. **ಕನ್ನಡ ನಿಘಂಟು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಎರಡನೇ ಮುದ್ರಣ, ೨೦೧೦.

೨೪

ತ್ರಿಪುರ ಸಾವಿರದ ಹೊಯ್ಸಳ ವಿನಯಾದಿತ್ಯನ ಅಪ್ರಕಟಿತ ವೀರಗಲ್ಲು ಶಾಸನ

ಹೆಚ್.ಆರ್. ಪಾಂಡುರಂಗ*

ಪ್ರಾಚೀನ ಕರ್ನಾಟಕವನ್ನು ಆಳಿದ ಪ್ರಮುಖ ರಾಜಮನೆತನಗಳಲ್ಲಿ ದ್ವಾರಸಮುದ್ರದ ಹೊಯ್ಸಳ ವಂಶ ಪ್ರಸಿದ್ಧವಾದುದು. ಕ್ರಿ.ಶ. ೧೦೦೦ರಿಂದ ೧೩೪೬ರ ಕಾಲಘಟ್ಟದಲ್ಲಿ, ಸಳನಿಂದ ೪ನೆಯ ಬಲ್ಲಾಳನವರೆಗೆ ೩೪೬ ವರ್ಷಗಳ ದೀರ್ಘಾವಧಿಯಲ್ಲಿ ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ಮಹಾಮಂಡಲೇಶ್ವರರಾಗಿ ನಂತರ ಹೊಯ್ಸಳ ಸಾಮ್ರಾಜ್ಯದ ಚಕ್ರವರ್ತಿಗಳಾಗಿ ಕರ್ನಾಟಕವನ್ನು ಆಳಿ ಕರ್ನಾಟಕದ ಶಿಲ್ಪಕಲೆಗೆ, ಸಂಸ್ಕೃತಿಗೆ ಅಮೂಲ್ಯ ಕೊಡುಗೆ ನೀಡಿ ಹೊಯ್ಸಳರು ಕರ್ನಾಟಕದ ಇತಿಹಾಸದಲ್ಲಿ ಚಿರಸ್ಥಾಯಿಗಳಾಗಿದ್ದಾರೆ.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ೬ನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾಗಿ ಗಂಗವಾಡಿ ೯೬೦೦೦ದ ವಿಶಾಲ ಪ್ರಾಂತ್ಯವನ್ನು ಸೊಸೆವೂರು ನೆಲೆವೀಡಿನಿಂದ ಆಳುತ್ತಿದ್ದ. ವಿನಯಾದಿತ್ಯ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಅಧಾರಸ್ಥಂಭದಂತಿದ್ದ ದೊರೆ ಹಾಗೂ ಹೊಯ್ಸಳ ರಾಜವಂಶ ಪ್ರವರ್ಧಮಾನಕ್ಕೆ ಬರಲು ಕಾರಣೀಭೂತನಾಗಿದ್ದ. ಹೊಯ್ಸಳರ ತವರು ಸೊಸೆವೂರು (ಶಶಕಪುರ) ಅಂದರೆ ಇಂದಿನ ಮೂಡಿಗೆರೆ ತಾಲೂಕಿನ ಅಂಗಡಿ ಗ್ರಾಮ, ಇಲ್ಲಿಗೆ ಸಮೀಪದ ಬಣಕಲ್ ಹೋಬಳಿಯ ತ್ರಿಪುರ ಸಾವಿರ ಎಂದು ಹೊಯ್ಸಳ ಸಾಮ್ರಾಜ್ಯದ ಆಡಳಿತ ಭಾಗವಾಗಿದ್ದ ತ್ರಿಪುರ ಗ್ರಾಮ ಇಂದಿಗೂ 'ತ್ರಿಪುರ ಸಾವಿರ' ಎಂದೇ ಕರೆಯಲ್ಪಡುತ್ತಿದೆ. ಈ ತ್ರಿಪುರ ಗ್ರಾಮದ ಬಿಳುಗುಳದ ಶ್ರೀ ರಾಧಾಕೃಷ್ಣರವರ ಕಾಫಿತೋಟದ ಎತ್ತರದ ದಿಬ್ಬದಲ್ಲಿ ಕಾಫಿ ಗಿಡಗಳ ಮಧ್ಯೆ ಎರಡು ವೀರಗಲ್ಲುಗಳು ಇವೆ. ಮೊದಲನೆಯದು ಹೊಯ್ಸಳ ದೊರೆ ಮಲೆಪರೊಳ್ಗಂಡ ವಿನಯಾದಿತ್ಯನ ಆಳ್ವಿಕೆಯ ಕಾಲದ ಲಿಪಿ ಸಹಿತ ವೀರಗಲ್ಲು ಹಾಗೂ ಇನ್ನೊಂದು ನಂತರದ ಹೊಯ್ಸಳರ ಲಿಪಿರಹಿತ ವೀರಗಲ್ಲಾಗಿದೆ.

ವೀರಗಲ್ಲು ಶಾಸನ

ಈ ವೀರಗಲ್ಲನ್ನು ಕನ್ನಡ ಲಿಪಿ ಹಾಗೂ ಭಾಷೆಯಲ್ಲಿ ಬರೆಯಲಾಗಿದ್ದು ಬಳಪದ ಕಲ್ಲಿನಿಂದ ಕೆತ್ತಲಾಗಿದೆ. ೩ ಪಟ್ಟಿಕೆಗಳನ್ನು ಹೊಂದಿದೆ. ವೀರಗಲ್ಲಿನ ಕೆಳಪಟ್ಟಿಕೆಯ ಎಡಭಾಗದಲ್ಲಿ ಕೋಟೆಬಾಗಿಲು, ಕೋಟೆಯ ತೆನೆ ಹಾಗೂ ಕೋಟೆಯ ಮೇಲೆ ನಿಂತ ವೀರನೊಬ್ಬನ ಕೈಯಲ್ಲಿ ಗುಂಡುಕಲ್ಲಿನಂಥ ಆಯುಧವಿದೆ. ಬಲಭಾಗದಲ್ಲಿ ಸೇನಾಪತಿಯೊಬ್ಬ ಅಂಗರಕ್ಷಕ ಯೋಧರೊಂದಿಗೆ ಅಶ್ವಾರೂಢನಾಗಿ ಯುದ್ಧಕ್ಕೆ ತೆರಳುತ್ತಿರುವ ದೃಶ್ಯ ಸುಂದರವಾಗಿ ಕೆತ್ತಲ್ಪಟ್ಟಿದೆ. ಮಧ್ಯದ ಪಟ್ಟಿಕೆಯ ಎಡಭಾಗದ ಮೂಲೆಯಲ್ಲಿ ರಣರಂಗದಲ್ಲಿ ವೀರನೊಬ್ಬನ ಶರೀರಕ್ಕೆ ೩ ಖಡ್ಗಗಳು ಚುಚ್ಚಿಕೊಂಡಿದ್ದು, ವೀರನ ದೇಹ ನೆಲದ ಮೇಲೆ ಬಿದ್ದಿದ್ದು ಅವನ ಖಡ್ಗ ಅವನ ತಲೆ ಹತ್ತಿರ ಬಿದ್ದಿರುವ ದೃಶ್ಯ ಹಾಗೂ ಎಡಭಾಗದಲ್ಲಿ ಮೃತವೀರನನ್ನು ಅಪ್ಸರೆಯರಿಬ್ಬರು ತಮ್ಮ ತೋಳಿನಾಸರೆಯಲ್ಲಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಕೆತ್ತಲ್ಪಟ್ಟಿದೆ. ಮೂರನೆಯ ಪಟ್ಟಿಕೆಯಲ್ಲಿ ಸ್ವರ್ಗ ಸೇರಿದ ಮೃತ ವೀರ ಚತುಷ್ಪಾದಾಸನಾರೂಢನಾಗಿ ಅಪ್ಸರೆಯರಿಂದ ನುಡಿಸಲ್ಪಟ್ಟ ಸಂಗೀತ ವಾದನ ಆಸ್ವಾದಿಸುತ್ತಿರುವ ದೃಶ್ಯ ಚಿತ್ರಿಸಲ್ಪಟ್ಟಿದೆ. ಶಾಸನ ಸಹಿತ ಈ ವೀರಗಲ್ಲು ನಾಲ್ಕೂವರೆ ಅಡಿ ಎತ್ತರ, ಒಂದೂ ಮುಕ್ಕಾಲು ಅಡಿ ಅಗಲ ಹಾಗೂ ಅರ್ಧ ಅಡಿ ದಪ್ಪವಿದ್ದು, ಸುಂದರವಾಗಿ ನಿಪುಣ ಶಿಲ್ಪಿಯೊಬ್ಬನಿಂದ ಕಲಾತ್ಮಕವಾಗಿ ಕೆತ್ತಲ್ಪಟ್ಟಿದೆ. ಈ ವೀರಗಲ್ಲಿನ ಮೇಲಿನ ಪಟ್ಟಿಕೆ ಶಿರೋಭಾಗದಿಂದ ಅರ್ಧ ಚಂದ್ರಾಕೃತಿಯ ಒಂದು ಸಾಲಿನ ಹೊಯ್ಸಳರ ಕಾಲದ ಹಳೆಗನ್ನಡ ಲಿಪಿ ವೀರಗಲ್ಲಿನ ಎಡಭಾಗದ ಅಂಚಿನಲ್ಲಿ ಮೇಲಿನಿಂದ ಕೆಳಗಿನವರೆಗೂ ಬರೆಯಲ್ಪಟ್ಟಿದೆ. ಎರಡನೆಯ ಪಟ್ಟಿಕೆಯ ಮೂರು ಸಾಲು, ಕೆಳಪಟ್ಟಿಕೆಯ ನಾಲ್ಕು ಸಾಲು, ವೀರಗಲ್ಲಿನ ಭಲ ಅಂಚಿನಲ್ಲಿ ಎರಡು ಸಾಲು ವೀರಗಲ್ಲಿನ ಶಿರೋಭಾಗದ ಎಡನೆತ್ತಿಯ ಮೇಲೆ ಮೂರು

* ಕೃಷಿ ಅಧಿಕಾರಿ, ಕಳಸ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ–೫೭೭೧೭೫. ಮೊ. ೯೪೪೯೫೪೧೧೬೨

ಸಾಲು ಹಾಗೂ ಎಡಪಾರ್ಶ್ವದಲ್ಲಿ ಒಂದು ಸಾಲು ಬರಹವಿದೆ. ಶಿರೋಭಾಗದ ನೆತ್ತಿಯ ಮೇಲೆ ಸೂರ್ಯ ಮತ್ತು ಅರ್ಧಚಂದ್ರರ ರೇಖಾಚಿತ್ರವಿದೆ. ಒಟ್ಟು ಹದಿನಾಲ್ಕು ಸಾಲಿನ ಹಳೆಗನ್ನಡ ಬರಹ ಕೊರೆಯಲಾಗಿದೆ.

ಶಾಸನದ ಪಾಠ

ಮೇಲ್ಭಾಗ ಮತ್ತು ಬಲಭಾಗದ ಅಂಚಿನಲ್ಲಿ

೧. ಶ್ರೀ ಮಲೆಪರೊಳಗಣ್ಡ ಬಿನಯಿತ್ತ ಹೊಯ್ಸಳಂ ಚಂಗಾಳ್ವನೊಡನೆ ಹಡೆವಳ ಬಸವಯ್ಯಂ [ಅ]ವನ ವೇಳೆವಳಿಯಿಂ ಕೊನ್ದ[ರು] । [ತದ] ನಂತರಂ ಹಡೆವಳ ಬಸವಯ್ಯನ ಪುತ್ರ ಕಳಸಣ್ಣಂ

ಒಂದನೆಯ ಪಟ್ಟಿಕೆ

೨. ಬಿಪ್ಪರ ದೇಗುಲವಂ ಮಾಡಿಸಿದಂ ಗುರದೆ[ಱೆ] ೧ ಗದ್ಯಾನಂ ಹೊನ್ನಂ

೩. ಶ್ರೀ ಬಿನಯಿತ್ತ ಹೊಯ್ಸಳ ನಿನ್ನ ಮಾಣಿಸಿದಂ ಮನೆಗೆ ಮಂತ್ರಿ ಮೊ

೪. ನೆಗೆ ಬಣ್ವನಾಗಿ ಸಾಧಿಸಿ ಕೊಟ್ಟ ತ್ರಿವಳಿಗೆಯ ಮಾಹರಾಜ

ಎರಡನೆಯ ಪಟ್ಟಿಕೆ

೫. ನುವಂ ಸತ್ತಿಗನುವಂ ದೆಸೆಪಟ್ಟ [ಬಿ]ಡಿಸಿದುದಕ್ಕೆ ಮೆಚ್ಚಿ ಶ್ರೀಮನ್ಮಹಾ

೬. ಮಣ್ಡಳೇಸ್ವರಂ ತ್ರಿಭುವನಮಲ್ಲಂ ಎಱೆಯಂಗರಸರ್ ತನ್ನ ಪ್ರತಿ

೭ ಪತ್ತ್ಯವಂ ಕೊಟ್ಟಾಳಿಸಿದಂ ಸ್ವತ್ತಿ ಸಖ ವರಿಶಂ ೧೦೧೮[ನೆ] ಭಾವ ಸಂ

೮. ವತ್ಸರದಲು ನೆಕ್ಕಬ್ಬೆ ಹಡೆವತ್ತಿ ಪ್ರತಿಷ್ಟೆಯಂ ಮಾಡಿ ಸಾಸನ[ಂ]

ಎಡಪಾರ್ಶ್ವದಲ್ಲಿ

೯ ಮ ನಿಜೆರಿಸಿದರು ಮಂಗಳ ಮಹಾಶ್ರೀ ಜಯವ[ಕ್ಕೆ]

ಎಡಭಾಗದ ಅಂಚಿನಲ್ಲಿ

೧೦. [೪] ಸ್ವಸ್ತಿ ಸಖವರ್ಶಂ ಬಿಸುಡಯ್ಯಂನು ಅಂಕಬ್ಬೆಯಿುಂ ಪಡೆದತ್ತ[ಿ]ವಂ ಹಡೆವಳ ಬಸವಯ್ಯಂಗಾಗಿ ತೆತ್ತರು

೧೧. ಕಲುಕುಟ್ಟಿಗರ ತೇವಣ್ಣಂ [ಮ]ನಿಳಿದ್ದ ಸಾಸನವಂ । ನಡೆಬಯುವ

ಶಿರೋಭಾಗದ ಎಡನೆತ್ತಿಯ ಮೇಲೆ

೧೨. ಸ್ವಸ್ತಿ ಶ್ರೀಮತು ಹಡೆವಳ ಬ . . .

೧೩. ಪ್ರತಿಪಾಳಿಸಿ ಧರ್ಮ್ಮ[ಿ]ವಂ ನಡೆ

೧೪. ಸಿದಂ (ಸೂರ್ಯ ಮತ್ತು ಅರ್ಧಚಂದ್ರರ ರೇಖಾಚಿತ್ರವಿದೆ)


ಶಾಸನದ ಸಾರಾಂಶ

ಕಲ್ಯಾಣ ಚಾಳುಕ್ಯರ ಮಹಾಮಂಡಲೇಶ್ವರ ಮತ್ತು ಗಂಗವಾಡಿ ತೊಂಬತ್ತಾರು ಸಾವಿರದ ಅರಸ ವಿನಯಾದಿತ್ಯನಿಗೂ ಮತ್ತು ಚಂಗಾಳ್ವರ ದೊರೆ ಮೊದಲನೆಯ ಚಂಗಾಳ್ವದೇವನಿಗೂ (೧೯೧–೧೯೭) ನಡುವೆ ನಡೆದ ಕೋಟೆಕಾಳಗದಲ್ಲಿ ಹೊಯ್ಸಳ ಸೇನಾಪತಿ ಹಡೆವಳ ಬಸವಯ್ಯ ಹಾಗೂ ಅವನ ವೇಳೆವಾಳಿ ವೀರಮರಣ ಹೊಂದಿದರು. ಹಡೆವಳ ಬಸವಯ್ಯನ ಪುತ್ರ ಕಳಸಣ್ಣ ಬಿಪ್ಪರದಲ್ಲಿ ತಂದೆಯ ಸ್ಮರಣಾರ್ಥವಾಗಿ ದೇಗುಲವೊಂದನ್ನು ಕಟ್ಟಿಸಿದ. ಒಂದು ಗದ್ಯಾಣ ಹೊನ್ನು ಗುರದೆರೆಯಾಗಿ ಸಂದಾಯವಾದ ಉಲ್ಲೇಖವಿದೆ. ಹೊಯ್ಸಳ–ಚೆಂಗಾಳ್ವರ ಯುದ್ಧದಲ್ಲಿ ತನ್ನ ಪ್ರಾಣಾರ್ಪಣೆ ಮಾಡಿ ಹೊಯ್ಸಳ ದೊರೆ, ಆತನ ಪಲ್ಲಕ್ಕಿ ಹಾಗೂ ಸೈನ್ಯವನ್ನು ವಿನಾಶದಿಂದ (ದೆಸೆಪಟ್ಟ) ಪಾರು ಮಾಡಿ ಹೊಯ್ಸಳರ ಮಾನ ಕಾಪಾಡಿದ ಹುತಾತ್ಮ ವೀರ ಹಡೆವಳ ಬಸವಯ್ಯನ ಬಲಿದಾನಕ್ಕೆ, ಶೌರ್ಯಕ್ಕೆ ಮೆಚ್ಚಿದ ಮಹಾಮಂಡಳೇಶ್ವರ, ತ್ರಿಭುವನಮಲ್ಲ ಎರೆಯಂಗರಸ ಬಸವಯ್ಯನ ಪುತ್ರ ಕಳಸಣ್ಣನಿಗೆ ಅವನ ತಂದೆಯ ಪದವಿಯನ್ನು ದಯಪಾಲಿಸಿದ ಉಲ್ಲೇಖವಿದೆ.



ಲಿಪಿರಹಿತ ವೀರಗಲ್ಲು

ಸ್ವಸ್ತಿ ಶಕವರ್ಷ ೧೧೧೮ನೆಯ (ಕ್ರಿ.ಶ. ೧೧೯೫-೧೧೯೬) ಭಾವ ಸಂವತ್ಸರದಲ್ಲಿ, ಹಡೆವಳ ಬಸವಯ್ಯನ ಪತ್ನಿ ನೆಕ್ಕಬ್ಬೆ ಹಡೆವಳ್ತಿ ಪತಿಯ ಬಲಿದಾನ, ಪರಾಕ್ರಮದ ಸಂಕೇತವಾಗಿ ಈ ಶಾಸನವನ್ನು ಪ್ರತಿಷ್ಠಾಪಿಸಿ ನಿಲ್ಲಿಸಿದಳು. ಹಡೆವಳ ಬಸವಯ್ಯನೊಂದಿಗೆ ಕೋಟೆಕಾಳದಲ್ಲಿ ವೀರಮರಣ ಹೊಂದಿದ ವೇಳೆವಾಳಿಯ ತಂದೆ ಬಿಸುಡಯ್ಯ, ತಾಯಿ ಅಂಕಬ್ಬೆ ಅರಸರಿಂದ ತಮಗೆ ದೊರೆತ ಅರ್ಥವನ್ನು (ಪರಿಹಾರ ಧನ) ಹಡೆವಳ ಬಸವಯ್ಯನ ಸ್ಮರಣಾರ್ಥ ಸಮರ್ಪಿಸಿದ ಉಲ್ಲೇಖವಿದೆ. ಕಲ್ಲುಕುಟಿಗ ತೇವಣ್ಣನು ಈ ಶಾಸನವನ್ನು ಸುಂದರವಾಗಿ ಕಂಡರಿಸಿದಂತೆ ಶಾಸನ ಹೇಳಿದೆ. ಶ್ರೀಮತು ಹಡೆವಳ ಬಸವಯ್ಯ ತನ್ನ ಯೋಧಧರ್ಮವನ್ನು ಪ್ರತಿಪಾಳಿಸಿ ನಡೆಸಿದ ಉಲ್ಲೇಖದೊಂದಿಗೆ ಶಾಸನ ಅಂತ್ಯವಾಗಿದೆ.



ತ್ರಿಪುರದ ವೀರಗಲ್ಲು ಶಾಸನ

ಲಿಪಿರಹಿತ ವೀರಗಲ್ಲು


ಮೇಲ್ಕಂಡ ಶಾಸನದ ಎದುರಿನಲ್ಲಿಯೇ ನಾಲ್ಕು ಅಡಿ ದೂರದಲ್ಲಿ ಇನ್ನೊಂದು ಶಾಸನರಹಿತ ವೀರಗಲ್ಲಿದೆ. ನಾಲ್ಕುವರೆ ಅಡಿ ಎತ್ತರ ಹಾಗೂ ಒಂದೂ ಮುಕ್ಕಾಲು ಅಡಿ ಅಗಲದ ಬಳಪದ ಕಲ್ಲಿನ ಈ ವೀರಗಲ್ಲು ಮೂರು ಪಟ್ಟಿಕೆ ಹೊಂದಿದೆ.

೧. ಕೆಳಪಟ್ಟಿಕೆಯಲ್ಲಿ ಅಶ್ವಾರೂಢ ಯೋಧ ಹಾಗೂ ಆನೆ ಮೇಲಿನ ಅಂಬಾರಿಯಲ್ಲಿ ಕುಳಿತ ಯೋಧನ ನಡುವಿನ ಹೋರಾಟದ ಚಿತ್ರಣವಿದೆ.

೨. ಮಧ್ಯದ ಪಟ್ಟಿಕೆಯಲ್ಲಿ ಯುದ್ಧದಲ್ಲಿ ವೀರಮರಣ ಹೊಂದಿದ ವೀರರಿಬ್ಬರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಚಿತ್ರಣವಿದೆ.

೩. ವೀರಗಲ್ಲಿನ ಮೇಲಿನ ಪಟ್ಟಿಕೆಯಲ್ಲಿ ಶಿವಲಿಂಗ ಹಾಗೂ ಅರ್ಚಕ ಮತ್ತು ದೇವಲೋಕದಲ್ಲಿ ಕುಳಿತ ವೀರದ್ವಯರ ಚಿತ್ರಣವಿದೆ. ಈ ವೀರಗಲ್ಲು ಯಾವುದೇ ಬರಹ ಹೊಂದಿರುವುದಿಲ್ಲ. ಸೈನಿಕರ ವೇಷಭೂಷಣದ ಹೋಲಿಕೆ ಇರುವ ಈ ವೀರಗಲ್ಲು ಹದಿಮೂರನೆಯ ಶತಮಾನದ ಹೊಯ್ಸಳರ ಕಾಲದ ವೀರಗಲ್ಲು ಎಂದು ಭಾವಿಸಬಹುದಾಗಿದೆ.

ಈ ವೀರಗಲ್ಲುಗಳು ದೊರೆತಿರುವ ತ್ರಿಪುರ ಸಾವಿರ ಅಂದಿನ ಹೊಯ್ಸಳ ನಾಡಿನ ಪ್ರಮುಖ ಐತಿಹಾಸಿಕ ಪ್ರದೇಶವಾಗಿದ್ದು ಇಲ್ಲಿ ಹೊಯ್ಸಳರ ಕಾಲದ ಬಹಳಷ್ಟು ವೀರಗಲ್ಲು, ಮಹಾಸತಿಕಲ್ಲು, ಬಸದಿಗಳ ಅವಶೇಷಗಳು ದೊರೆತಿವೆ. ಹತ್ತಿರದ ಕೊಟ್ರಕೆರೆಯಲ್ಲಿ ಹೊಯ್ಸಳರ ಇಮ್ಮಡಿ ವೀರಬಲ್ಲಾಳನ ಕ್ರಿ.ಶ.೧೧೯೭ನೆಯ ಇಸವಿಯ ಶಾಸನವೊಂದು ದೊರೆತಿದ್ದು,



ಹಡೆವಳ ಬಸವಯ್ಯನ ವೀರಮರಣ



ತ್ರಿಪುರದ ವೀರಗಲ್ಲು ಶಾಸನ

ಇಮ್ಮಡಿ ವೀರಬಲ್ಲಾಳ–ಕಲಚೂರಿ ಸಂಕಮರ ನಡುವೆ ನಡೆದ ಯುದ್ಧದಲ್ಲಿ 'ಬಿಪ್ಪರದ ಬಮ್ಮಣ' ಎಂಬ ವೀರನ ಉಲ್ಲೇಖದ ಶಾಸನ ದೊರೆತಿದ್ದು, ಇಲ್ಲಿ ನಾನು ಪ್ರಸ್ತಾಪಿಸುತ್ತಿರುವ ಹೊಯ್ಸಳ ವಿನಯಾದಿತ್ಯನ ಕ್ರಿ.ಶ.೧೦೯೩ರ ಈ ಶಾಸನದಲ್ಲಿಯೂ ಬಿಪ್ಪರ ಎಂಬ ಊರಿನ ಹೆಸರು ಉಲ್ಲೇಖಿಸಲ್ಪಟ್ಟಿದ್ದು ಬಹುಶಃ ಇಂದಿನ ಈ ತ್ರಿಪುರ ಪ್ರದೇಶಕ್ಕೆ ಅಂದು 'ಬಿಪ್ಪರ' ಎಂಬ ಹೆಸರಿತ್ತು ಎಂದು ಊಹಿಸಬಹುದಾಗಿದೆ. ಹಾಗೂ ಈ ವೀರಗಲ್ಲು ಶಾಸನ ಹೊಯ್ಸಳ–ಚಂಗಾಳ್ವರ ಯುದ್ಧದ ಉಲ್ಲೇಖವಿರುವ ಚಿಕ್ಕಮಗಳೂರು ಜಿಲ್ಲೆಯ ಪ್ರಥಮ ಶಾಸನ ಹಾಗೂ ವಿನಯಾದಿತ್ಯನ ಆಳ್ವಿಕೆಯ ಅಂತ್ಯಭಾಗದ ಹಾಗೂ ಚಾಲುಕ್ಯ ವಿಕ್ರಮಾದಿತ್ಯನ ಪರಮಾಪ್ತ, ತ್ರಿಭುವನಮಲ್ಲ ಎರೆಯಂಗದೇವನ ಆಳ್ವಿಕೆಯ ಆರಂಭಕಾಲದ ಶಾಸನವೆಂದು ಭಾವಿಸಲಾಗಿದೆ.

[ಡಾ. ಬಿ. ರಾಜಶೇಖರಪ್ಪ, ಇತಿಹಾಸತಜ್ಞರು, ಚಿತ್ರದುರ್ಗ ಹಾಗೂ ಹೆಚ್.ಎಂ. ನಾಗರಾಜರಾವ್, ಶಾಸನತಜ್ಞರು, ಮೈಸೂರು ಇವರುಗಳಿಗೆ, ಕ್ಷೇತ್ರಕಾರ್ಯದಲ್ಲಿ ಸಹಕಾರ ನೀಡಿದ ಮಂಜುನಾಥ್ ಹಾಗೂ ಸುಧಾಕರ್ ಹಳ್ಳಿಬೈಲು ಮತ್ತು ಲೋಕೇಶ್ ಜಿ. ಹೊಸಹಳ್ಳಿ ಅವರಿಗೆ ಧನ್ಯವಾದಗಳು.]

ಆಕರ ಗ್ರಂಥಗಳು

೧. ಚಂಗಾಳ್ವರು, ಹೆಚ್.ಎಸ್. ಗೋಪಾಲರಾವ್.

೨೫

ಅತ್ತಿಗೆರೆಯಲ್ಲಿ ದೊರೆತ ಅಪ್ರಕಟಿತ ತಾಮ್ರ ಶಾಸನ

ಮೇಕನಗದ್ದೆ ಲಕ್ಷ್ಮಣಗೌಡ*

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಅತ್ತಿಗೆರೆ ಗ್ರಾಮದಲ್ಲಿ, ಗ್ರಾಮದ ದೇವಸ್ಥಾನದ ಸಂಚಾಲಕರಾಗಿರುವ ಶ್ರೀ ನಾಗೇಶಗೌಡ ಇವರ ನೆರವಿನೊಂದಿಗೆ ಒಂದು ತಾಮ್ರ ಶಾಸನವನ್ನು ಸಂಶೋಧಿಸಲಾಗಿದೆ. ಒಂದು ಅಡಿ ಚಚ್ಚೌಕದ ಒಂದೇ ಹಲಗೆಯ ಎರಡೂ ಬದಿಯಲ್ಲಿ ಬರವಣಿಗೆ ಹಾಗೂ ಚಿತ್ರಗಳನ್ನು ಬರೆಯಲಾಗಿದೆ. ಮುಂಭಾಗದ ಮೇಲ್ಭಾಗದಲ್ಲಿ ಪೀಠದ ಮೇಲೆ ಇರುವ ಚಂದ್ರ, ಶಿವಪಾರ್ವತಿ, ವೃಷಭ, ಸೂರ್ಯ ಹಾಗೂ ನಿಂತ ಭಂಗಿಯಲ್ಲಿರುವ ಚಾಮರಧಾರಿಯ ರೇಖಾಚಿತ್ರಗಳಿವೆ. ಚಿತ್ರದ ಕೆಳಗೆ ಮೂವತ್ತೊಂದು ಸಾಲುಗಳಲ್ಲಿ ಬರವಣಿಗೆ ಇದೆ. ಹಿಂಭಾಗದಲ್ಲಿ ಪೀಠದ ಮೇಲಿರುವ ಚಕ್ರ ಮತ್ತು ಶಂಖಗಳ ಕೆಳಗೆ ಇಪ್ಪತ್ತೈದು ಸಾಲು ಮತ್ತು ಮೇಲಿನ ಐದು ಸಾಲುಗಳು ಸೇರಿ ಒಟ್ಟು ಮೂವತ್ತು ಸಾಲುಗಳಿವೆ. ಶಾಸನದ ಲಿಪಿ ಕನ್ನಡದಲ್ಲಿದ್ದು ತೆಲುಗುಭಾಷೆಯಲ್ಲಿ ಬರೆಯಲಾಗಿದೆ. ಭಾಷಾ ಶುದ್ಧತೆ ಇಲ್ಲ. ಶಾಪಾಶಯ ಭಾಗ ಸಂಸ್ಕೃತದಲ್ಲಿದೆ. ಶಾಸನದ ನಕಲನ್ನು ಪರಿಶೀಲಿಸಿ ಮೈಸೂರಿನ ಶಾಸನ ತಜ್ಞ ಶ್ರೀ ಹೆಚ್. ಎಂ. ನಾಗರಾಜರಾವ್ ಇವರು ಓದಿ ಶಾಸನಪಾಠವನ್ನು ತಿದ್ದಿ ಸಿದ್ದಪಡಿಸಿ ಕೊಟ್ಟಿದ್ದಾರೆ.

ಶಾಸನದ ಪ್ರಕಾರ ಇದರ ಕಾಲ ೧೪ನೇ ಶತಮಾನ ಎಂಬ ಉಲ್ಲೇಖವಿದ್ದು ಶಕವರುಷ ೧೩೧೦ ಜಯ ಮಾರ್ಗಶಿರ ಶುದ್ಧ (ಬಿದಿಗೆ) ಗುರುವಾರವಾಗಿದ್ದು ಇದು ಕ್ರಿಸ್ತಶಕ ೧೩೮೮ ನವೆಂಬರ್ ೨ ಸೋಮವಾರವಾಗುವುದು. ಆದರೆ ತೇದಿ ಹೊಂದುವುದಿಲ್ಲ.

ಇದೊಂದು ಧರ್ಮ ಶಾಸನವಾಗಿದ್ದು ಇದರಲ್ಲಿ ದೊರಕುವ ವಿವರಗಳನ್ನು ಪರಿಶೀಲಿಸಿದಾಗ ಎಲ್ಲಾ ದೇವತೆಗಳನ್ನು ನಮಿಸಿ, ಎಲ್ಲಾ ಪೌರಾಣಿಕ ಅರಸರ ಹೆಸರನ್ನು, ವಿವಿಧ ದೇಶಗಳ ಹಾಗೂ ನದಿಗಳನ್ನು ಉಲ್ಲೇಖಿಸಲಾಗಿದೆ. ಹದಿನಾಲ್ಕು ಲೋಕಗಳ ನಡುವೆ ಇರುವ ಈ ಭೂಲೋಕದಲ್ಲಿ ದೇಶವನ್ನೆಲ್ಲಾ ಸುತ್ತಿ ಸಂಗ್ರಹಿಸಿದ ಹಣದಿಂದ ಕಾಶಿ ವಿಶ್ವನಾಥನಿಗೆ ಮುಖಮಂಟಪವನ್ನು ಕಟ್ಟಿಸಿ ಶೋಡಶೋಪಚಾರ ಮಾಡಿಸಿರುವುದನ್ನು ತಿಳಿಸಲಾಗಿದೆ. ಇದರ ಕೊನೆಯಲ್ಲಿ ಶಾಪಾಶಯ ಶ್ಲೋಕಗಳಿದ್ದು ಶಾಸನವನ್ನು ಹಾಳುಮಾಡಿದವರಿಗೆ ಉಂಟಾಗುವ ದೋಷಗಳನ್ನು ತಿಳಿಸಲಾಗಿದೆ.

ಶಾಸನಪಾಠ

ಮುಂಭಾಗ

೧. ಶ್ರೀಗಣಾಧಿಪತಯೇ(ಂ)ನಮಃ ಶ್ರೀಶಾರದಾಂಭಯ ನಮಃ ಶ್ರೀ ಕಸಿವಿಶ್ವನಾತಯ ನ

೨. ಮಃ ಶ್ರೀಕಲಭೆಯಿರವಾಯ ನಮಃ ॥ ಶ್ರೀ ಕಾಸಿ ಅಂನ್ನಪೂರ್ನಭವನಿಯೇಂ ನಮಃ ॥ ಶು

೩. ಭಮಸ್ತು ಶೋಭನಮಸ್ತು । ಲವಣ ಯಿಕ್ಷುಶೂರಾ ಸರ್ಪಿದದಿ ಕ್ಷೀರ ಸಿದೋದಕಃ ಸ

೪. ಪ್ತಸಮುದ್ರಾಲುನು ಜೆಂಭುಪ್ಲಕ್ಷಕುಶಕ್ಲವಂಥ ಶಾಕಶಾಲ್ಮ ರಮ್ಯಕ್ಷಳ ನವದ್ವೀಪಂ

೫. (ತ)ರ ಮಧ್ಯ ವುಂಡೆ ಜೆಂಭುದ್ವೀಪಂ ಕುತಯುಗಮಂದು ಅರಿಚ್ಚಂದ್ರನಲೋರಾಜ

೬. ಪುರುಕುಚ್ಚ ಪುರುರವ ಸಗರ ಕರ್ತವೀರ್ಯಾಶ್ಚ ಷಡೇತೇ ಚಕ್ರವರ್ತಿನಾಂ ಅರಿ

೭. ಚ್ಚಂದ್ರುಡು ಮೊದಲುಕೊನಿ ಪದು ಚಕ್ರವರ್ತುಲು ಧರ್ಮಂ ನಡಿಪಿನಾರು ತ್ರೇ

೮. ತಯುಗಮಂದು ಶ್ರೀರಾಮುಡು ಮೊದಲುಕೊನಿ ಶೋಡಶ ಮಅರಾಜು

೯. ಲು ಧರ್ಮ(ಂ) ನಡಿಪಿನಾರು ದ್ವಾಪರಮಂಧು ಧರ್ಮರಾಜು ಮೊದಲುಕೊನಿ ಪು

* ಓಣಿಮನೆ, ಮೇಕನಗದ್ದೆ ಅಂಚೆ, ಮೂಡಿಗೆರೆ, ಚಿಕ್ಕಮಗಳೂರು, ಚಿಕ್ಕಮಗಳೂರು–೫೭೭೧೩೨. ಮೊ. ೯೪೮೨೧೭೨೦೦೧

೧೦. ಣ್ಯ ಪುರುಷಲು ಧರ್ಮಂ ಶೇಶಿನಾರು ಗನಕ ಕಲಿಯುಗಂ ಮೊದಲುಕೊನಿ
೧೧. ಅಂಗ ವಂಗ ಕಳಿಂಗ ಕಸ್ಮೀರ ಕಾಂಭೋಜ ಕುಂತಳ ಕೋಶಲ ಟೆಂಕಣ ಕೊಂಕ
೧೨. ಣಾ ಮಳಿಯಾಳ ನೇಪಾಳ ಗೌಳ ಗಾಂಧಾರ ವಿಧರ್ಭ ಚೋಳ ಗುಜ್ಜರಿ(ದ್ರಾ)
೧೩. ವಿಳ ಅರಬ್ಬಿ ಆಂದ್ರಾ ಮಅರಾಟ್ರ ಕರ್ನಟ ಸಾವುರಾಟ್ರ ಪಾಂಚಳ ಭ
೧೪. ರ್ಭರಬಾಲ್ಲೀಕ ಯಕ್ಷ ಕುಂತಳ ಕಾಶಭ ಕಭವರ ಪಾಂಡವ ಗೋ
೧೫. ರ್ಜ ಗೋಟಕ ಗುರ್ಜರ ಕಿರತ ಸಾಲ್ವ ಸಮೀರ ಕೇಕಯ (ಪೌಂಡ್ರ) ಕೊಡ
೧೬. ಗು ಮಳಿಯಾಳ ಕೊಂಗುಮಳಿಯಾಳ ದ್ರಾವಿಳಮಳಿಯಾಳ ಚೋ
೧೭. ಳಮಳಿಯಾಳ ಶ್ರೀಮಂಡಳ ಮೂಳಮಂಡಳ ರಕ್ಷಮಂಡಲ ದೇವಮಂ
೧೮. ಡಲ ನಾಗಮಂಡಲ ಮುಕ್ಯಪ್ರಾಣಮಂಡಲ ಧ್ರುವಮಂಡಲ ಮೊದಲ್ಯೆನ ಛ
೧೯. ಪನ್ನರು ದೇಶಲವಾರಿಕಿ ಪುಂಣ್ಯಗನುಗ್ರುವಂ (ದೇಶಾಲ) ತಿರಿಗಿ ಭಿಕ್ಷಂ ವೇಲು
೨೦. ಗ ೧೫ ವೆಯಿತೋನಿ ಕಾಸಿ ವಿಶ್ವನಾತುನಿ ಮುಖಮಂಟಪಮು ಕಟ್ಟಂಚಿನಡು
೨೧. ನಗಭರಣಂ ಶೆಯಿಂಚಿನಾಡು ಶೋಡಶವುಪಚಾರಂ ಶೆಯಿ(ಂ)ಚನಿನಾಡು ಮ
೨೨. ಂಚಿನಾಡು . . .ಭರಣಂ ಶೆಯಿಂಚಿನಾಡು ಶೋಡಶೋಪಚಾರಂಶೆಯಿ
೨೩. ಂಚಿನಾಡು . . . . . . ಜ ಚೆಯಿಂಚಿನಾಡು ಸಿದ್ದು
೨೪. (ಲ)ಕುಸಿದ್ಧ . . . . . ಚಿಂತುಟ . . . .ಂಚಿನಾಡು
೨೫. ಸೀಮಲಕು . . . . . ಂಚಿನಾಡು ದೇವಬ್ರಹ್ಮಂಣ(ಂ)ಜಶ
೨೬. ಯಿಂಚಿನಡು . . . .ರಾಜಯೋಗಿಯಿಟುವೊಂಟಿ ಮಹತ್ಮುಡು
೨೭. ಗನಕ (ಯಿ ಅಯ್ಯ) ಅಯೋಧ್ಯಾ(ಂ) ಮಥುರಾ ಮಾಯಾ ಕಂಚಿಯವಂ(ತಿ)
೨೮. ಕಾ ದ್ವಾರವತೀ ಮುಕ್ಯಪಟ್ಟಣ . . . . ಭೂಯೋಕರವಾಂಭಸೇ
೨೯. ಕೋಟಿ ಶುರ್ಯಪ್ರಭಸಮಾನ ನವ . . . ಚಿತನಾ ಪಿತಂಭೆಯಿನ ಸಿ(ಂ)ಹ್ಮಸ
೩೦. ನ . ನುಂ ಪರರಾಜ ಕಂಟರವುಂಡು ರಾಜತೇಜೋನಿಧಿಯ ಗೂಚಂಡ ಶೇ
೩೧. (ತಂ) ರಾಜುಶರುಶಾಭಶೇಸಿಲು ಮುಖ್ಯ(ವ)ತ್ರ ಶುರ್ಯಪ್ರಧಾನಿ ಛಂದ್ರಪ್ರಧಾನಿ

ಹಿಂಭಾಗ

೩೨. ಜಯಪ್ರಧಾನಿ ರಾಮಪ್ರಧಾನಿ ಮಂತಿಪ್ರಧಾನಿ ಮೊದಲುಕೊನಿ ಛಪ್ಪನ್ನಾ
೩೩. ರು ದೇಶಪದತುಲು ಮೊದಲುಕೊನಿ ಶ್ರೀಕಾಸಿ ವಿಶ್ವನಾತುನಿ ಮುಖಮಂ
೩೪. ಟಪಾನ ಗುರ್ಚುಂಡಿ ಕಾಸಿ ಪಟ್ಟಣಾನಿಕಿ(ಂ) ಶುರ್ಯವಿಧುಲು (ಚೋ)ರಣ ಗ
೩೫. ಂಡು ೧೫೮ ಯಿಂಧುಲ ನಡಿಚೆ ಅಟುವೊಂಟಿ ಪುಣ್ಯಪುರುಷು
೩೬. ಲು ಮೊದಲುಕೊನಿ ಸಾಲುಮೂಲ ಸಮಸ್ತಜನ ವಿದ್ವಜನ ಮಹಾ
೩೭. ಜನ ಸತ್ಯಜನ ಸಹ ಪಂಚ್ಚಶತಕೋಟಿ ವಿಸ್ತಾರಮು . .ಅ
೩೮. ತಲ ವಿತಲಸುತಲ ತಳತಳ ಮಹತಳ ರಸತಳ ಪಾತಳ ಭು
೩೯ ವರ್ಲೋಕ ಶುವರ್ಲೋಕ ಮಹರ್ಲೋಕ ತಪರ್ಲೋಕ ಸತ್ಯಲೋಕ
೪೦. ಜನ(ರ್)ಲೋಕ ನರಲೋಕ ಚತುರ್ದಶ ಭುವನಾಲಯ(ಮ)ಧ್ಯ
೪೧. ರಂ ವುಂಡೆ . . ಶ್ರೀವಿಜಯಾ(ಭ್ಯು)ಧಯಾ ಶಾಲಿವಾಅ

೪೨. ನ ಶಕವೊರಷಂಭುಲ ವೆಯಿನಿ ೧೩೧೦ ವೊರುಷ(ಂ)ಭು
೪೩. ಲು ಅಗುನೆಟುಗಾನು ಜಯಾ ನಾಮ ಸಹ್ವಶ್ಚರ ಮಾರ್ಗಶಿ
೪೪. ರ ಶುದ್ಧ (ಬಿದಿ)ಯಾ ಗುರುವಾರಂನಾಡು ವ್ರಾಶಿ ಯಿಚಿ(ನ*) ಧರ್ಮ
೪೫. ಶಾಸನಂ ಯಾಭೈಯಾರು ದೇಶಲವಾರಿಕಿ ದನಧಾನ್ಯವೊ
೪೬. ಸ್ತುವಾಹನ ಸಮಾಧಿಯೆಗುನಟ್ಟು . . ಅಚಂದ್ರರ್ಕ
೪೭. ಂಗ ವುಂಧುರ್ರು ಯಿ ಧರ್ಮಶಸನಂ ಕ್ರಮಮೆಟ್ಲೆಧನಿ ನಾಮ
೪೮. . ನಿಕಟೆ ೧ . ಸಭಕುಟ ೮ ವೆಟ ಗ್ರಾಮಾ ನಿಕಟ ೫ ಪಿಟ
೪೯. ಕುಟ ೫ ದತಿಕು . .ಯೀ ಧರ್ಮಂ ವಿಡಿಶಿ ಭಿನವಾರಿ
೫೦. ನಾಗರ ನರ್ಮಧ ಗೋದಾವರಿ ಸರಸ್ವತಿ ತುಂಗಭದ್ರ ಮಲಿಪಾ
೫೧. ಅರಿ ಯೆಮುನಾ ಕಾವೇರಿ (ಪು)ಫರ್ನಿಕ ಯೀ ಮಹನಧು(ಲ)ವಾ
೫೨. (ಧು) ಸ್ಥಾನಂ ಶೇಸಿನಪಲಂ ಕಧು ಸಹಕ ತಿರುಪತಿ ದರಿ(ಶ)ನಂಶೇಸಿ
೫೩. ನ ಪಲಂವೊಚ್ಚನು ಯಿದಿ ಯ . . ಲಕ್ಷರ್ಚ . ಶೇಸಾರೂವಾರಿ
೫೪. ಕಿ ಕಾಸಿಲೋ ಗೋಬ್ರಹ್ಮಣಾ ವೊಧಶೇಸಿನಂತ ದೋಷಂ ವೊಚ್ಚನು
೫೫. ಸ್ವದತ್ತಂ ದ್ವಿ(ಗು*)ಣಂ ಪುಣ್ಯಂ ಪಾರಧತಾನುಪಾಲನಂ ಪರದತಪ ಹಾ
೫೬. ರೇಣಾ ಸ್ವದತಂ ನಿಷ್ಫಲಂ ಭವೇತ್ತು ॥ ಅರಿಅರಬ್ರಹ್ಮಾದುಲು

ಮೇಲ್ಭಾಗದಲ್ಲಿ

೫೭. ಯೇಕೇಕೇ ಭಗಿನಿ ಲೋಕೇ ಸರ್ವೇಶಾಂತಭಹುಭುಜಾನಾ
೫೮. ನಭೋಜ್ಯೋ ನ ಕರಗ್ರನ್ಯೇ ವಿಪ್ರಧತ ವೊಶುಂಧರ ॥ ಮುಯಿ
೫೯. ಮುಶುಜಾ ಪರಮಹೀಪತಿವೊಂಶ ಯೀ ಭುಮಿಪ
೬೦. ತಿಪಾಲನೇ ಯೋ ಧರ್ಮ ಧರ್ಮಚಿತ್ತ ಪರಿಪಾಲನೇ ಪ್ರತಿ
೬೧. ಪಾಲನೇ ಮಹಶ್ಕಿರಂತಿ ಭೂಯಂ ಸಿರಸನ್ಯಾಂ ಶ್ರೀ

ಹೊದಕೆ-ಶಿರೂರಿನ ಮಲ್ಲಪ್ಪೊಡೆಯರ ಅಪ್ರಕಟಿತ ಶಾಸನ

ಗಣಪತಿಗೌಡ*

ಹೊದಕೆ-ಶಿರೂರು ಗ್ರಾಮ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ ೧೫ ಕಿ.ಮೀ. ದೂರದಲ್ಲಿದೆ. ಇಲ್ಲಿರುವ ಈಶ್ವರ ದೇವಾಲಯದಲ್ಲಿ ೬ ಅಡಿ ಉದ್ದ ಮತ್ತು ೩.೫ ಅಡೆ ಅಗಲದ ಶಿಲಾಶಾಸನವಿದೆ, ಈ ಶಾಸನದ ಕುರಿತಾಗಿ ೧೯೪೦-೪೧ ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆ ತನ್ನ ವರದಿಯಲ್ಲಿ ದಾಖಲಿಸಿದೆ.[೧] ಶಾಸನದ ಶಿರೋ ಭಾಗ ಕಮಾನಿನ ಆಕೃತಿಯಲ್ಲಿದ್ದು ಅದರ ಮಧ್ಯ ಭಾಗದಲ್ಲಿ ಪೂಜೆಗೊಳ್ಳುತ್ತಿರುವ ಲಿಂಗ ಮತ್ತು ಬಲ ಭಾಗದಲ್ಲಿ ಕರುವಿಗೆ ಹಾಲುಣಿಸುತ್ತಿರುವ ಹಸು ಮತ್ತು ಎಡ ಭಾಗದಲ್ಲಿ ನಂದಿ ಹಾಗೂ ವಾದ್ಯವನ್ನು ಊದುತ್ತಿರುವ ವ್ಯಕ್ತಿಯ ಚಿತ್ರವಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರವಿದ್ದು, ಚಂದ್ರನ ಪಕ್ಕದಲ್ಲಿ ಕತ್ತಿಯ ಚಿತ್ರವಿದೆ.

ಶಾಸನದಲ್ಲಿ ೧೪ನೇ ಶತಮಾನದ ಕನ್ನಡ ಅಕ್ಷರದ ಒಟ್ಟು ೩೪ ಸಾಲಿನ ಬರಹ ಬಹಳ ಸ್ಪುಟವಾಗಿದೆ. ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ಎಂಬ ಶಿವಸ್ತುತಿಯೊಂದಿಗೆ ಆರಂಭವಾಗುವ ಶ್ಲೋಕ ಮತ್ತು ಶಾಸನ ಶಿಲ್ಪವನ್ನು ಗಮನಿಸಿದಾಗ ಇದೊಂದು ಶೈವ ಪರ ಶಾಸನ ಎನ್ನುವುದು ಸ್ಪಷ್ಟವಾಗುತ್ತದೆ. ಶಾಸನದ ಕಾಲಮಾನ ಶಕವರುಷ ೧೩೧೨ನೇ ಶುಕ್ಲ ಸಂವತ್ಸರದ ಮಾರ್ಗಶಿರ ೧೫ ಗುರುವಾರಕ್ಕೆ ಸೇರಿದೆ. ಇದು ಕ್ರಿ.ಶ. ೧೩೮೯ ಡಿಸೆಂಬರ್ ೩ ಗುರುವಾರಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿ ವಿಜಯನಗರ ದೊರೆ ಎರಡನೇ ಹರಿಹರನು ಧರಿಸಿದ ಹಲವಾರು ಬಿರುದಾವಳಿಗಳ ಉಲ್ಲೇಖವಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಪ್ರತಾಪಚಕ್ರವರ್ತಿ, ಪೂರ್ವಪಶ್ಚಿಮ ಸಮುದ್ರಾಧೀಶ್ವರ, ಅರಿರಾಯ ವಿಭಾಡ, ಮಹಾರಾಜಾಧಿರಾಜಾ ಇತ್ಯಾದಿ.

ಮೂಲತಃ ಇದೊಂದು ದಾನ ಶಾಸನ. ವಿಜಯನಗರ ದೊರೆ ಎರಡನೇ ಹರಿಹರ ಮಹಾರಾಜರು ವಿಜಯನಗರದಿಂದ ಆಳ್ವಿಕೆ ಮಾಡುತ್ತಿದ್ದ ಸಂದರ್ಭ ಹೊನ್ನಾವರದ ರಾಜಧಾನಿಯಿಂದ ಮಹಾಪ್ರಧಾನ ಮಲ್ಲಪ್ಪೊಡೆಯರು ಹೈವೆ, ಕೊಂಕಣ ಮತ್ತು ಮಲೆ ರಾಜ್ಯಗಳನ್ನು ಆಳ್ವಿಕೆ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಹರಿಹರ ಮಹಾರಾಜರು ಹೈವೆ ರಾಜ್ಯದಲ್ಲಿನ ಹೊದಕೆ ಗ್ರಾಮವನ್ನು ತನ್ನ ಸಹೋದರ ಬುಕ್ಕರಾಯನ ಮಡದಿಯಾದ ಹೊನ್ನಾಯಿ ಅವ್ವೆಯ ತಂದೆಯಾದ ಹೊದಕೆಯ ಕೃಷ್ಣ ಹೆಬ್ಬಾರ ಅವರ ಮಕ್ಕಳಾದ ಹಿರಿಯಪ್ಪ, ಹಿರಿಯ ಮಲ್ಲಪ್ಪ ಮತ್ತು ಚಿಕ್ಕ ಮಲ್ಲಪ್ಪರಿಗೆ ಈ ಕೆಳಗಿನಂತೆ ದಾನ ನೀಡಿರುವುದು ತಿಳಿದುಬರುತ್ತದೆ.

ಉತ್ಪನ್ನದ ವಿವರ	ಗದ್ಯಾಣ/ಹೊನ್ನು	ಹಣ
ಈಶ್ವರನ ಮಕ್ಕಳ ಎರಡು ಮನೆಯ ಉತ್ತರದ ೭ ಹೊನ್ನು ಸಹಿತಾಗಿ	೨೭೫	೧
ಹರವರಿಯ ಪಯಕದಿಂದ	೧೦೪	-
ಅಡಿಕೆಯಿಂದ	೦೦೪	೮
ಬಡ್ಡಿ ಸಾಲದಿಂದ	೦೪೯	-
ಒಟ್ಟು	೪೩೨	೯

ಉತ್ಪನ್ನದ ವಿವರ	ಭತ್ತ ಮೂಡೆ
ಶೆಟ್ಟಿ ಗದ್ದೆಯಿಂದ ಬರುವ ಭತ್ತದ ಮೂಡೆ	೦೨೦
ಅಂದಳಿಯಿಂದ ಬರುವ ಭತ್ತ ಮೂಡೆ	೧೦೦
ನೀಲಗೋಣದಿಂದ ಬರುವ ಭತ್ತ ಮೂಡೆ	೧೩
ಒಟ್ಟು	೧೩೩

* ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆ, ಮಂಗಳೂರು (ದ.ಕ.)-೫೭೫೦೦೧. ಮೊ. ೯೪೮೦೪೪೮೭೨೧

೩೦. ನೆಯ್ದವರು ಸ್ವದತ್ತಾಂ ಪರದತ್ತಾಂ ವಾಯೋ ಹರತ್ತಿ ವಸುಂಧರಾಂ ಷಷ್ಠಿವರ್ಷ ಸಹಸ್ರಾ'
೩೧. ಣಿ ವಿಷ್ಠಾಯಾಂ ಜಾಯತೇ ಕ್ರಿಮಿ ದಾನ ಪಾಲನಿಯೋರ್ಮದ್ಯೆದಾನಚ್ಚೆಯೋನು ಪಾಲನಂ ದಾನತ್ಸ್ವರ್ಗ ಮಯಾ-
೩೨. ಪ್ನೋತಿ ಪಾಲದನದುಚ್ಚುತಂ ಪದಂ ಸಾಮಾರ್ಯ್ಯೋಯಂ ಧರ್ಮಸೇತುರ್ನ್ನಪಾಣಂ ಕಾಲೇ ಕಾಲೇ ಪಾಲನಿಯೋ
೩೩. ಭಾವಿನಃ ಪ್ರಾರ್ತ್ಥವೇಂದ್ರಾಂ ಭುಯೋ ಭುಯೋ ಯಾಚತ್ಯೇ ರಾಮಚಂದ್ರಃತಿಯ
ಶಾಸನಕ್ಕೆ ಮಂಗಳ ಮಹಾ ಶ್ರಿ ಶ್ರಿ ಶ್ರೀ ಶ್ರಿ ಶ್ರೀ

ಅಡಿಟಿಪ್ಪಣಿಗಳು

೧. Descriptive List of Stone and Copper Plate Inscriptions, 1941-42, No. 58.

೨. Ramesh K.V., A History of South Kanara (Karnatak University Dharwad) p.135.

೩. ಗಣಪತಿ ಗೌಡ, ಅಘನಾಶಿನಿ ಕಾಮೇಶ್ವರ ದೇವಾಲಯದಲ್ಲಿರುವ ಮಲ್ಲಪ್ಪೊಡೆಯನ ಶಾಸನ, ಶಾಸನ ಅಧ್ಯಯನ, ಸಂಪುಟ ೮, ಸಂಚಿಕೆ ೨, ಜುಲೈ-ಡಿಸೆಂಬರ್ ೨೦೧೧. ಪು. ೧೮-೨೫. ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭

ಅಣ್ಣಿಗೆರೆಯ ಅಪ್ರಕಟಿತ ಶಾಸನಗಳು

ಹನುಮಾಕ್ಷಿ ಗೋಗಿ*

ನವಲಗುಂದ ತಾಲೂಕಿನ ಅಣ್ಣಿಗೇರಿಯು ಗದಗದಿಂದ ಪಶ್ಚಿಮಕ್ಕೆ ರಾಜ್ಯ ಹೆದ್ದಾರಿಯಲ್ಲಿ ೨೦ ಕಿ.ಮೀ. ದೂರದಲ್ಲಿದೆ.

ಈ ಊರಿನಲ್ಲಿ ೫೦ಕ್ಕೂ ಮೇಲ್ಪಟ್ಟು ಶಿಲಾಶಾಸನಗಳು ದೊರೆತಿವೆ. ಅವುಗಳಲ್ಲಿ ಅತ್ಯಂತ ಮೊದಲಿನದು ಬಾದಾಮಿ ಚಾಲುಕ್ಯ ಅರಸ ಎರಡನೆಯ ಕೀರ್ತಿವರ್ಮನ ಆಳ್ವಿಕೆಯ ಕಾಲದ್ದು (ಕ್ರಿ.ಶ. ೭೫೦). ಇದರಲ್ಲಿ ಜೇಬುಳಗೇರಿಯ ಗಾವುಂಡ ಕಲಿಯಮ್ಮ ಬಸದಿ ಕಟ್ಟಿಸಿದ ಕೀರ್ತಿವರ್ಮನು ಅದರ ಮುಂದೆ ಗೋಸಾಸ ಕಲ್ಲನ್ನು ನಿಲ್ಲಿಸಿದ ವಿವರಗಳಿವೆ. ಅಣ್ಣಿಗೇರಿಯು ಮೊದಲಿನಿಂದಲೂ ವ್ಯಾಪಾರ ಹಾಗೂ ವಾಣಿಜ್ಯಗಳ ಕೇಂದ್ರವೂ ಆಗಿತ್ತು.

ಅಣ್ಣಿಗೆರೆ ಗ್ರಾಮನಾಮ ವಿವೇಚನೆ : ಅಣ್ಣಿಂಗನ +ಕೆಱೆ > ಅಣ್ಣಿಂಗೆಱೆ > ಅಣ್ಣಿಗೆಱೆ > ಅಣ್ಣಿಗೆರೆ > ಅಣ್ಣಿಗೆರೆ > ಅಣ್ಣಿಗೇರಿ ಎಂದು ಹೆಸರು ಬದಲಾಗುತ್ತ ಬಂದ ಶಾಸನೋಕ್ತ ಅಣ್ಣಿಗೆರೆ ಗ್ರಾಮನಾಮದ ಮೂಲ ಕೆರೆಯಾಗಿದೆ. ಆ ಕೆರೆಯನ್ನು ಅಣ್ಣಿಗ ಎನ್ನುವವನು ಕಟ್ಟಿಸಿರಬಹುದು ಇಲ್ಲವೇ ಅಣ್ಣಿಗನ ಹೆಸರಿನಲ್ಲಿ ಅವನ ವಂಶಜರು ಕಟ್ಟಿಸಿರಬಹುದು. ಆದರೆ ಈ ಅಣ್ಣಿಗ ಯಾರು? ಎನ್ನುವ ಪ್ರಶ್ನೆಗೆ ಉತ್ತರವನ್ನು ಆಧಾರಗಳೊಂದಿಗೆ ಹುಡುಕಬೇಕಿದೆ. ೧೦ನೆಯ ಶತಮಾನದ ಸುಪ್ರಸಿದ್ಧ ವ್ಯಕ್ತಿಯಾದ ಲಕ್ಕುಂಡಿಯ ದಾನ ಚಿಂತಾಮಣಿ ಅತ್ತಿಯಬ್ಬೆಯ ಮಗನ ಹೆಸರೂ ಅಣ್ಣಿಗದೇವನಾದುದರಿಂದ ಅವನ ಹೆಸರಿನ ಕೆರೆಯಿದು ಎಂದು ಹೇಳಲು ಮನಸ್ಸಾಗುತ್ತಿದ್ದರೂ ಅದಕ್ಕೆ ಆಧಾರಗಳಿಲ್ಲವಾದುದರಿಂದ, ಪೂರಕ ಆಧಾರಗಳನ್ನು ಶೋಧಿಸಬೇಕಿದೆ.

ಬೆಳ್ವೊಲ / ಬೆಳ್ವೊಲ ನಾಡು: ಅಣ್ಣಿಗೆರೆಯು ಪ್ರಾಚೀನ ಕಾಲದಲ್ಲಿ ಬೆಳ್ವೊಲ ೩೦೦ ಎಂಬ ಪ್ರಾಂತದಲ್ಲಿ ಸೇರಿತ್ತು. ಈ ವೆಳುವಲ, ಬೆಳುವಲ, ಬೆಳ್ವಲ, ಬೆಳ್ವಲ ತೀರ್ಥ, ಬೆಳ್ವೊಲ ದೇಶ, ಬೆಳ್ವೊಲ ಮೂನೂಱು, ಬೆಳ್ವಲ ತ್ರಿಶತ, ಬೆಳ್ವೊಲ ನಾಡು ಎಂದು ವಿವಿಧ ಹೆಸರಿನಡಿ ಕರೆಸಿಕೊಂಡ ಈ ನಾಡಿನ ಉಲ್ಲೇಖ ಕರ್ನಾಟಕದಾದ್ಯಂತದ ಅರವತ್ತಕ್ಕೂ ಹೆಚ್ಚು ಶಾಸನಗಳಲ್ಲಿ ದೊರೆಯುತ್ತದೆ.

ಈ ನಾಡು ಗದಗ ಜಿಲ್ಲೆ, ಧಾರವಾಡ ಜಿಲ್ಲೆ, ಕೊಪ್ಪಳ ಜಿಲ್ಲೆ, ಬಾಗಲಕೋಟೆ ಜಿಲ್ಲೆಗಳ ಭಾಗಗಳನ್ನು ಒಳಗೊಂಡಿತ್ತೆಂದು ಸೂಚಿಸಿದಂತಾಗುತ್ತದೆ. ಆದರೆ ವಂಕುಂದವೂ ಈ ನಾಡಿನಲ್ಲಿತ್ತೇ? ತಿರುಳ್ಗನ್ನಡ ನಾಡು ಎಂದು ಕರೆಸಿಕೊಳ್ಳುವ ಈ ನಾಡಿನ ಭಾಗವಾಗಿತ್ತೇ ಎನ್ನುವುದನ್ನು ದೊರೆಯುವ ಆಧಾರಗಳಿಂದ ಇನ್ನೂ ಪರಿಶೀಲಿಸಿ ಖಚಿತಪಡಿಸಬೇಕಿದೆ.

ಎರಡರುನೂರು ನಾಡು : ಪ್ರಾಚೀನ ಕಾಲದಲ್ಲಿ ಈ ಬೆಳ್ವೊಲ ೩೦೦ ಮತ್ತು ಪಕ್ಕದ ಪ್ರಾಂತ ಪುಲಿಗೆರೆ ೩೦೦ ಇವೆರಡನ್ನೂ ಸೇರಿಸಿ ಎರಡರುನೂರು ಎಂದೂ ಕರೆಯಲಾಗುತ್ತಿತ್ತು. ಈ ಎರಡರುನೂರು ಎಂದು ಏಕೆ ಕರೆಯಲಾಗುತ್ತಿತ್ತು ಎನ್ನುವುದರ ಕುರಿತೂ ವಿದ್ವಾಂಸರಲ್ಲಿ ಅನೇಕ ವಾದಗಳಿವೆ.

ಅಣ್ಣಿಗೆರೆ ಕುರಿತು ಇದುವರೆಗೆ ನಡೆದ ಅಧ್ಯಯನಗಳು

ಧಾರವಾಡ ಜಿಲ್ಲೆಯ ಹಳೆಯ ಗೆಜೆಟಿಯರ್‌ನಲ್ಲಿ ಅಣ್ಣಿಗೆರೆಯ ಕುರಿತು ವೆಂಕಟ ರಂಗೋ ಕಟ್ಟಿಯವರು ಉಲ್ಲೇಖಿಸಿದ್ದಾರೆ. ಇತ್ತೀಚೆಗಿನ ಗೆಜೆಟಿಯರ್‌ನಲ್ಲಿ ಚಾರಿತ್ರಿಕ ಮಹತ್ವದ ಊರುಗಳ ಕುರಿತು ತಿಳಿಸುವಾಗ ಒಂದೂವರೆ ಪುಟದಷ್ಟು ವಿವರಣೆ ನೀಡಲಾಗಿದೆ. ವಿದೇಶೀಯರು ಅಮೃತೇಶ್ವರ ದೇಗುಲದ ಕುರಿತು ತಮ್ಮ ಬರೆಹಗಳಲ್ಲಿ ಪ್ರಸ್ತಾಪಿಸಿದ್ದಾರೆ. ಫಾಕೆ ಇವರಲ್ಲಿ ಪ್ರಮುಖರು. ಭಾರತೀಯ ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಈ ಊರಿನ ಶಾಸನಗಳ ಕುರಿತು ಸಾರಾಂಶ ನೀಡಲಾಗಿದೆ. ಅದನ್ನೇ ಸಂಕಲಿಸಿ ಡಾ.ಕಲಬುರ್ಗಿಯವರು ಧಾರವಾಡ ಜಿಲ್ಲೆಯ ಶಾಸನಸೂಚಿಯಲ್ಲಿ ೨೩ ಶಾಸನಗಳ ವಿವರಗಳನ್ನು ಸಾರಾಂಶ ಸಹಿತ ಕೊಟ್ಟಿದ್ದಾರೆ. ಈ ಊರಿನ ಶಾಸನಗಳನ್ನು ಅಧ್ಯಯನ ಮಾಡಿದ ವಿದೇಶಿ ವಿದ್ವಾಂಸರು

---

* ಎಚ್.ಐ.ಜಿ. ೨೭, ನವನಗರ, ಹುಬ್ಬಳ್ಳಿ-೫೮೦೦೨೫. ಮೊ. ೭೭೯೫೮೧೫೯೭೫

ಪಠ್ಯವನ್ನು ನೀಡುತ್ತ, ಸುದೀರ್ಘವಾದ ಪ್ರಸ್ತಾವನೆ ಸಹಿತ ಅಧ್ಯಯನಶೀಲ ವಿವರಣೆಯನ್ನು Indian Antiquary, Epigraphia Indica ಮತ್ತು ದೇಶೀ ವಿದ್ವಾಂಸರು South Indian Inscriptions, Karnatak Inscription ಸಂಪುಟಗಳಲ್ಲಿ ಕೊಟ್ಟಿದ್ದಾರೆ. ತದನಂತರ ಶ್ರೀಮತಿ ಹನುಮಾಕ್ಷಿ ಗೋಗಿಯವರು ತಮ್ಮ ಅನುಶಾಸನ ಕೃತಿಯಲ್ಲಿ ಈ ಊರಿನಲ್ಲಿ ದೊರೆತ ೭ ಹೊಸ ಶಾಸನಗಳ ಪಠ್ಯವನ್ನು ವಿವರಣೆಗಳೊಂದಿಗೆ ನೀಡಿದ್ದಾರೆ. ಡಾ. ಅಪ್ಪಣ್ಣ ಹಂಜೆಯವರು ಪ್ರಾಚೀನ ಕಾಲದ ಒಂದು ಮತ್ತು ಅರ್ವಾಚೀನ ಕಾಲದ ಎರಡು ಶಾಸನಗಳ ಪಠ್ಯವನ್ನು ಲೇಖನಗಳಲ್ಲಿ ಪ್ರಕಟಿಸಿದ್ದಾರೆ. ಕುಮಾರಿ ಪೂಜಾರ ಅವರು ಅಣ್ಣಿಗೆರೆಯ ಪುರಾತತ್ವ ಕುರಿತು ಕೃತಿ ರಚಿಸಿ ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ. ಇದುವರೆಗೆ ಇದು ಪ್ರಕಟಗೊಂಡಿಲ್ಲ. ಡಾ. ರಮಾ ಗುಂಡೂರಾವ್ ಅವರು ಆದಿಲಶಾಹಿ ಕಾಲದ ನೀರಾವರಿ ವ್ಯವಸ್ಥೆಯ ಕುರಿತು ಮಹಾಪ್ರಬಂಧ ರಚಿಸುವಾಗ ಅಣ್ಣಿಗೆರೆಯಲ್ಲಿರುವ ಅವರ ಕಾಲದ ಬಾವಿಗಳ ಕುರಿತು ಗಮನಿಸಿದ್ದಾರೆ. ಅಣ್ಣಿಗೆರೆಯಲ್ಲಿದ್ದ ಮಣ್ಣಿನ ಕೋಟೆಯ ಕುರಿತು ಡಾ. ಎಸ್.ಕೆ. ಜೋಶಿಯವರು ತಮ್ಮ ಮಹಾಪ್ರಬಂಧದಲ್ಲಿ ಪ್ರಸ್ತಾಪಿಸಿದ್ದಾರೆ. ವೈ.ಎಫ್. ಸೈದಾಪುರ, ಸಂಗಮೇಶ ಹಂಡಗಿ, ಎಸ್.ಎಸ್. ಹರ್ಲಾಪುರ ಅವರು ಅಣ್ಣಿಗೆರೆಯ ಬಗ್ಗೆ ಲೇಖನಗಳನ್ನು ಪ್ರಕಟಿಸಿದ್ದಾರೆ. ಡಾ. ಎಂ.ಎಂ. ಕಲಬುರ್ಗಿಯವರು ಪಂಪನ ಪರಿಸರ ಮತ್ತು ಪೂರ್ವಜರ ಕುರಿತು ವಿಶ್ಲೇಷಣಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಪ್ರಬಂಧಗಳನ್ನು ಮತ್ತು ಈ ಊರಿನ ಶಾಸನವೊಂದರಲ್ಲಿ ಬರುವ ವೀರ ಮಾಹೇಶ್ವರ ಗೊಗ್ಗರಸನ ಕುರಿತು ಸಂಪ್ರಬಂಧವೊಂದನ್ನು ಬರೆದಿದ್ದಾರೆ. ಡಾ. ಹಂಪನಾ ಅವರು ಗಾವರವಾಡ ಶಾಸನದ ಕುರಿತು ಬರೆಯುವಾಗ ಅಣ್ಣಿಗೆರೆಯ ಕುರಿತು ಪ್ರಸ್ತಾಪಿಸಿದ್ದಾರೆ. ಅಣ್ಣಿಗೆರೆಯವರೇ ಆದ ಅಮೃತಪ್ಪ ಅಣ್ಣಿಗೇರಿಯವರು ತಮ್ಮ ಊರಿನ ಮತ್ತು ಊರಿನ ಅಧಿದೈವವಾದ ಅಮೃತೇಶ್ವರನ ಕುರಿತು ಕಿರು ಹೊತ್ತಿಗೆಯೊಂದನ್ನು ರಚಿಸಿದ್ದಾರೆ. ಪೂಜೆಯ ಸಂದರ್ಭದ ಹಾಡುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಇದಲ್ಲದೇ ಭವಿಷ್ಯೋತ್ತರ ಪುರಾಣದಲ್ಲಿದೆ ಎಂದು ಭಾವಿಸುವ ಆದರೆ ಇತ್ತೀಚಿನವರು ರಚಿಸಿದ ಕ್ರತುಪುರಾಣದ ಅಂತರ್ಗತ ಅಮೃತೇಶ್ವರ ಪುರಾಣದ ಪಠ್ಯವನ್ನು ಅದರ ಹೊಸಗನ್ನಡದ ಅನುವಾದದೊಂದಿಗೆ ಅಣ್ಣಿಗೇರಿ ಅವರು ಸಂಕಲಿಸಿ ಕೊಟ್ಟಿದ್ದಾರೆ. ಇತ್ತೀಚೆಗೆ ಅಣ್ಣಿಗೆರೆಯಲ್ಲಿ ದೊರೆತ ೬೦೦ ತಲೆಬುರುಡೆಗಳ ಕುರಿತು ಹಲವಾರು ಜನ ವಿದ್ವಾಂಸರು ಪತ್ರಿಕಾ ಹೇಳಿಕೆಗಳನ್ನು ನೀಡಿದ್ದಾರೆ. ಹಂಪಿ ವಿಶ್ವವಿದ್ಯಾಲಯದವರು ಹೊರತಂದ ಧಾರವಾಡ ಜಿಲ್ಲೆಯ ದೇವಾಲಯ ಕೋಶದಲ್ಲಿ ಅಣ್ಣಿಗೆರೆಯ ದೇವಾಲಯಗಳ ಕುರಿತು ವಿವರಣೆ ಇದೆ. ಇಂತಿರುವ ಅಣ್ಣಿಗೆರೆಯಲ್ಲಿ ಮತ್ತೆ ಮತ್ತೆ ಹೊಸ ಶಾಸನಗಳು ದೊರೆಯುತ್ತಿದ್ದು ಅವುಗಳಲ್ಲಿ ಕೆಲವು ಅಪ್ರಕಟಿತ ಶಾಸನಗಳನ್ನು ಪ್ರಸ್ತುತ ಪ್ರಕಟಿಸಿದೆ.

ಶಾಸನ ಪಾಠಗಳು

೧. ಹಳೆಯ ಅಮೃತೇಶ್ವರ ದೇವಾಲಯದ ಮುಂದೆ ನಿಲ್ಲಿಸಿದ ಶಾಸನ (ಕ್ರಿ.ಶ. ೧೦೫೯)

ಈ ತ್ರುಟಿತ ಮತ್ತು ಸವೆದು ಹೋದ ಶಾಸನವು ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲ ೧ನೆಯ ಸೋಮೇಶ್ವರನು ಆಳುವಾಗ, ಆತನ ರಾಣಿಯೊಬ್ಬಳ ಉಲ್ಲೇಖವಿದೆ. ತದನಂತರ ಚಲ್ಲಮನಾಯಕನ ಆದೇಶದಂತೆ ಮಾಳಯ್ಯ, ರೇವಣ ನಾಯಕ, ಮಾರಯ್ಯ, ಸೋಭನರಸ(?) ಮತ್ತು ಸಮಸ್ತ ಪ್ರಧಾನರು ಸೇರಿ ಯಾವುದೋ ಶೈವ ದೇವಾಲಯಕ್ಕೆ (ಹಳೆಯ ಅಮೃತೇಶ್ವರ ?) ಬಿಟ್ಟ ಭೂದತ್ತಿಯನ್ನು ತಿಳಿಸುವಂತೆ ತೋರುತ್ತದೆ.

೧ @ ಸ್ವಸ್ತಿ ಸಮಸ್ತ ಭು[ವನಾಶ್ರಯ ಶ್ರೀ ಪೃಥ್ವೀವಲ್ಲಭ*] ಮಹಾರಾಜಾಧಿರಾ-

೨ ಜ ಪರಮೇಶ್ವರ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳು-

೩ ಕ್ಯಾಭರಣಂ ಶ್ರೀಮತ್ತ್ರೈಲೋಕ್ಯಮಲ್ಲದೇವರ ವಿಜಯರಾಜ್ಯಮುತ್ತರೋತ್ತ-

೪ ರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ ಶ್ರೀಮ-

೫ ತ್ರೈಲೋಕ್ಯಮಲ್ಲದೇವರ . . . . ಯ

೬ ನಾದರ್ಧಾ. ಧೀರನಾಗ್ರಣಿ

೭ ತುಜ್ಗೆ ಕರ್ಪ್ಪೂರವರ್ಷೆ . . . .

೮ . . . . ಸಕವರ್ಷ ೯೮೧ನೆಯ ವಿಕಾರಿ ಸಂವ-

೯ ತ್ಸರದ ಮಹಾದಿನ . . . . ದೊಳೆ ಪಲವು ದಿ-

೧೦ ಬ್ಯ ಮಹಾದಾನ . . . . ಮ-

೧೧ ತ್ತರ್ಕ್ಕೆಯ್ಯಂ ಶ್ರೀ ಚಲ್ಲಮನಾಯಕ ಆದೇಸದೊಳಂ . . . . . ಯಜೆ ಸಾ
೧೨ ಮಾಳಯ್ಯನು . . ಯ . . . . ರೇವಣನಾಯಕಂ ಸಮಸ್ತ ಪ್ರಧಾ–
೧೩ . . . . ಬಿದಿಗೆ ವಡ್ಡವಾರದಂದು ಸನ್ದ ಕಾ
೧೪ . . . . ನಾಳೆ ಬು . . . . ಜೇದಿಯ ರಾಜ
೧೫ . . . . ಯ್ದುನಂ ದಾಯಾದ ಮಾರಯ್ಯ ನಾ–
೧೬ . . . . ತ್ರೈಳೋಕ್ಯಮಲ್ಲ
೧೭ . . . . ಕರುದಂ ಸೋಭನ
೧೮ . . . . ಕರುವಂ ಮೂಖಗಾ–
೧೯ . . . . ಪೊಲದೊಳೆ ಗಳೆಯು
೨೦ . . . . ಬಿಗಾರಿ
೨೧ . . . .
೨೨ . . . . ಸರ್ವ್ವ ನಮಸ್ಯಮಾ–
೨೩ . . . . ಶ್ರೀ ರಾಜಧಾನಿ ಅಣ್ನಿ–
೨೪ [ಗೆಱೆ*]. . . . . ನಡಿಯಿಸಿದ–
೨೫ ವರ್ಗ್ಗೆ ವಾರಣಾಸಿಯೊಳೆ . . . . ತೀರ್ತ್ಥದೊಳಂ ಕುರುಕ್ಷೇ–
೨೬ ತ್ರದೊಳಂ ಸಹಸ್ರ ಕವಿಲೆಯ . . . . ತಪೋಧನರುಮ
೨೭ ಮನದೆ . . . . ॥ ಸ್ವದತ್ತಾಂ ಪರದತ್ತಾಂ ವಾ
೨೮ ಯೋ ಹರೇತು [ವಸುಂಧರಾಂ ಷಷ್ಟಿರ್ವ್ವರ್ಷ*] ಸಹಸ್ರಾಣಿ ವಿಷ್ಠಾ–
೨೯ ಯಾಂ ಜಾಯತೇ ಕ್ರಿಮಿಃ ॥ . . . .
೩೦ ಗೆಯ್ದ ॥

೨. ದ್ಯಾಮವ್ವನ ಗುಡಿ ಎದುರಿಗೆ ಬಿದ್ದ ಶಾಸನ (ಕ್ರಿ.ಶ. ಸು. ೧೨ನೆಯ)

ಈ ತ್ರುಟಿತ ಶಾಸನವುಯಾವುದೋ ದೇವರಿಗೆ ಬಿಟ್ಟ ದತ್ತಿಯನ್ನು ಹೇಳುತ್ತಿದ್ದು, ಫಲಶ್ರುತಿ ಭಾಗದ ಕೆಲವು ಅಕ್ಷರಗಳು ಮಾತ್ರ ಕಾಣಿಸುತ್ತಿದ್ದು, ವಿವರಗಳು ಲಭ್ಯವಿಲ್ಲ. ಉಭಯಮುಖಿ, ಗೌಂಡ.ಸಮಯದೆರೆಗಳ ಪ್ರಸ್ತಾಪವಿದೆ.

೧ . . . . ಸು ೧ ಗುರುವಾರದೊಳು . . . .
೨ . . . .
೩ . . . . ಮದ್ಯದ ನಾಯಕರು ವುಭಯಮು
೪ . . . . ಸೇಬ್ಯವದಾ . . . ಗರದ ಮೂ
೫ . . . . ಗೌಂಡರಿಗೆ ಗರಿಮ ನೀತಿಯ
೬ . . . . ಸಮಯದೆಱೆ ಹ .
೭ . . . . ವ್ರಿತ್ತಿಯನು ಮಾರ
೮ ತುಗಾಯಿ ಬ್ಯಾಹರರಂ ನನ್ದಿಹರವತ್ತಿಗೆಯಲಿ ವಧಿಯ್ಸಿದವರು
೯ . . ಯ ನಾನಾ . ದಿವೇದಿ ತಾಗಿ . . . . ಸ . . *

---

* ಶಾಸನದ ನಾಲ್ಕೂ ಮುಖಗಳು ಒಡೆದು ಕಳೆದಿವೆ.

೩. ತೋಂಟದಾರ್ಯಮಠದ ನವರಂಗದ ಮೊದಲ ಎಡಕಂಬದ ಮೇಲಿನ ಶಾಸನ (ಕ್ರಿ.ಶ. ೧೧೯೦)

ಯಾದವ ನಾರಾಯಣನೆನಿಸಿದ ಹೊಯ್ಸಳ (ಹೋಸಣ) ಚಕ್ರವರ್ತಿ ಬಲ್ಲಾಳದೇವನ ಕಾಲದಲ್ಲಿ ರಾಜಧಾನಿಪಟ್ಟಣ ಅಣ್ಣಿಗೆಱೆಯ ಶ್ರೀ ವಿರೂಪಾಕ್ಷದೇವರ ಸ್ಥಾನಾಚಾರ್ಯರಾದ ಮಲ್ಲಿಕಾರ್ಜುನದೇವರ ಮಗನಾದ ದೇವಯ್ಯ ಸಾಹಣಿಯ ಹೆಂಡತಿ ವೊಮ್ಮವ್ವೆಯು ಗುರು ಪರ್ವಕ್ಕೆಂದು ಆಚಾರ್ಯರ ಕೈಯ್ಯಲ್ಲಿ ಎರಡು ಗದ್ಯಾಣಗಳನ್ನು ಕೊಟ್ಟು, ಒಂದು ಹೊನ್ನಿಗೆ ತಿಂಗಳಿಗೆ ಹಾಗವೊಂದರ ಬಡ್ಡಿಯಲ್ಲಿ ಹನ್ನೊಂದು ಜನ ತಪೋಧನರಿಗೆ ಆಹಾರ ದಾನ ನೀಡಬೇಕೆಂದು ನಿಯಮಿಸಿದುದನ್ನು ತಿಳಿಸುತ್ತದೆ. ಇದಲ್ಲದೆ ಆಕೆ ಒಂದು ಹೊನ್ನಿಗೆ ಹಾಗ ಹಾಗೂ ಬೇಳೆಯ ಬಡ್ಡಿಯ ಲೆಕ್ಕದಂತೆ ಒಂದು ಗದ್ಯಾಣವನ್ನು ಕೊಟ್ಟು, ಅದರ ಹಣದಲ್ಲಿ ನಿತ್ಯವೂ ದೇವರ ಮುಡಿಗೆ (ಶಿಖೆಗೆ) ನಾಲ್ವತ್ತು ಹೂವುಗಳನ್ನು ಏರಿಸಬೇಕೆಂದು ತಿಳಿಸುತ್ತದೆ.

೧ ಸ್ವಸ್ತಿ ಶ್ರೀಮತು ಯಾದವ ನಾರಾಯಣ ಭುಜಬಳ ಪ್ರತಾಪ
೨ ಹೋಸಣ ಚಕ್ರವರ್ತ್ತಿ ಬಲ್ಲಾಳದೇವ ವರ್ಷದ ೧೭ನೆಯ ಪ್ರಭವ ಸಂ-
೩ ವತ್ಸರದ ಮಾಘ ಬಹುಳದಮಾವಾಸೆ ಸೋಮವಾರ ಬ್ಯತಿ-
೪ ಪಾತದ [ಪುಣ್ಯ*]ತಿಥಿಯಂದು ಶ್ರೀಮದ್ರಾಜಧಾನಿಪಟ್ಟವಣ್ಣಿ-
೫ ಗೆಱೆಯ ಶ್ರೀ ವಿರೂಪಾಕ್ಷದೇವರಾಚಾರ್ಯ್ಯ ಮಲ್ಲಿ-
೬ ಕಾರ್ಜ್ಜುನದೇವರ ಮಕ್ಕಳು ದೇವಯ್ಯ ಸಾಹಣಿಯ ಮದವಳಿಗೆ
೭ ವೊಂಮ್ಮವ್ವೆ ಗುರು ಪರ್ವ್ವಕ್ಕೆಂದು ಆಚಾರ್ಯ್ಯರ ಕೈಯ್ಯಲು ಪೊಂಗೆ ಹಾ-
೮ ಗ ವ್ರಿದ್ಧಿಯಲು ಏಕಾದಶ ರುದ್ರರಾಗಿ ಸಂಕಲ್ಪಿಸಿ ಹಂನೊಂ-
೯ ದು ಮನುಶರಪ್ಪ ತಪೋಧನರಾಹಾರ ದಾನಕ್ಕೆಂದು ಕೊಟ್ಟ ಗದ್ಯಾಣವೆರಡು
೯ ಇಂತೀ ಧರ್ಮ್ಮಮನು ಆ ಸ್ಥಳದಾಚಾರ್ಯ್ಯರು ಚಂದ್ರಾರ್ಕ್ಕ
೧೦ ತಾರಂಬರಂ ನಡಸುವರು ಮಂಗಳ
೧೧ ಮಹಾಶ್ರೀ ॥ @ ಮತಂತೆ ಆ ದೇವೆಯ ಸಾಹಣಿಯ ಮದ-
೧೨ ವಳಿಗೆ ವೊಂಮ್ಮವ್ವೆ ಹೊಂಗೆ ಹಾಗಂ ಬೇಳೆ ವ್ರಿದ್ಧಿಯ ಲೆಕ್ಕದಿಂ ಕೊ-
೧೩ ಟ್ಟ ಗದ್ಯಾಣವೊಂದು ಆ ವ್ರಿದ್ಧಿಯ ಧನದಲ್ಲಿ ತಿಂಗಳಿಂಗೆ ಹಾಗದ ದೋಷ-
೧೪ [ನಿ*]ತ್ಯ ಸ್ತಿತಿ ದೇವರ ಶಿಖೆಗೆ ನಾಲ್ವತ್ತರಳ ನಡಸುವರು ಅಂತಾ ಧರ್ಮ್ಮ[ವ*]ನು ಆ ಸ್ತಾ-
೧೫ ನದಾಚಾರ್ಯ್ಯರು ಆ ಚಂದ್ರಾರ್ಕ್ಕ ತಾ[ರ*]ಂಬರಂ ಪ್ರತಿಪಾಳಿಸುವರು ॥ ಮಂ-
೧೬ ಗಳ ಮಹಾ ಶ್ರೀ ॥

೪. ತೋಂಟದಾರ್ಯಮಠದ ನವರಂಗದ ಮೊದಲ ಬಲಕಂಬದ ಮೇಲಿನ ಶಾಸನ (ಕ್ರಿ.ಶ. ೧೧೯೨)

ಯಾದವ ನಾರಾಯಣನೆನಿಸಿದ ಹೊಯ್ಸಳ (ಹೋಸಣ) ಚಕ್ರವರ್ತಿ ಬಲ್ಲಾಳದೇವನ ಕಾಲದಲ್ಲಿ ರಾಜಧಾನಿಪಟ್ಟಣ ಅಣ್ಣಿಗೆಱೆಯ ಶ್ರೀ ವಿರೂಪಾಕ್ಷದೇವರ ಸ್ಥಾನಾಚಾರ್ಯರಾದ ಮಲ್ಲಿಕಾರ್ಜುನದೇವರ ಮಗನೂ ರಾಯಸಾಹಣಿ ಗಂಡ ಪೆಂಡಾರ ಜಂಗುಳಿ ಸಾಹಣಿಯರ ಗಂಡನೂ ಶ್ರೀ ಬಳೇಶ್ವರದೇವರ ದಿವ್ಯ ಶ್ರೀಪಾದ ಪದ್ಮಾರಾಧಕನೂ ಆದ ಗಂಡ ಪೆಂಡಾರ ಕಾಳೆಯ ಸಾಹಣಿಯ ಮಗ ಸೋವೆಯ ಸಾಹಣಿಯು ತಮ್ಮ ಗುರುಗಳಾದ ಮಲ್ಲಿಕಾರ್ಜುನದೇವರ ಗುರು ಪರ್ವಕ್ಕೆಂದು ಆಚಾರ್ಯರ ಕೈಯ್ಯಲ್ಲಿ ಎರಡು ಗದ್ಯಾಣಗಳನ್ನು ಕೊಟ್ಟು, ಒಂದು ಹೊನ್ನಿಗೆ ತಿಂಗಳಿಗೆ ಹಾಗವೊಂದರ ಬಡ್ಡಿಯಲ್ಲಿ ಹನ್ನೊಂದು ಜನ ತಪೋಧನರಿಗೆ ಆಹಾರ ದಾನ ನೀಡಬೇಕೆಂದು ನಿಯಮಿಸಿದುದನ್ನು ತಿಳಿಸುತ್ತದೆ.

೧ @ ನಮಸ್ತುಂಗ ಸಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ
೨ ಮೂಲ ಸ್ತಂಭಾಯ ಸಂಭವೇ ॥ ಸ್ವಸ್ತಿ ಶ್ರೀಮತು ಯಾದವ ನಾರಾ
೩ ಯಣಂ ಭುಜಬಳ ಪ್ರತಾಪ ಹೋಸಣ ಚಕ್ರವರ್ತ್ತಿ ಬಲ್ಲಾಳದೇವ
೪ ವರ್ಶದ ೧೯ನೆಯ ಸುಕ್ಲ ಸಂವತ್ಸರದ ಜೇಷ್ಟ ಬಹುಳದಮಾವಾಸೆ ಸೋಮವಾರ

೫ ದಂದು ಶ್ರೀಮದ್ರಾಜಧಾನಪಟ್ಟಣವಣ್ಣಿಗೆಱೆಯ ಶ್ರೀ ವಿರೂಪಾಕ್ಷದೇ–
೬ ವರ ಸ್ಥಾನಾಚಾರ್ಯ್ಯ ಮಲ್ಲಿಕಾರ್ಜ್ಜುನದೇವರ ಮಗನು ಶ್ರೀಮತು ರಾಯಸಾ–
೭ ಹಣಿ ಗಂಡ ಪೆಂಡಾರ ಜಂಗುಳಿ ಸಾಹಣಿಯರ ಗಂಡ ಶ್ರೀ ಬಳೇಶ್ವ–
೮ ರದೇವರ ದಿಬ್ಯ ಶ್ರೀಪಾದ ಪದ್ಮಾರಾಧಕನಪ್ಪ ಗಂಡ ಪೆಂಡಾರ ಕಾಳೆಯ
೯ ಸಾಹಣಿಯ ಮಗ ಸೋವೆಯ ಸಾಹಣಿ ತಮ್ಮಾರಾಧ್ಯ–
೧೦ ರಪ್ಪ ಮಲ್ಲಿಕಾರ್ಜ್ಜುನದೇವರ ಗುರು ಪರ್ಬ್ಬಕ್ಕೆಂದು ಆಚಾರ್ಯ್ಯರ ಕೈ–
೧೧ ಯ್ಯಲು ಹೊಂಗೆ ತಿಂಗಳಿಂಗೆ ಹಾಗವೊಂದಱ ವ್ರಿತಿಯಲು ಏಕಾ–
೧೨ ದಶ ರುದ್ರರಾಗಿ ಸಂಕಲ್ಪಿಸಿ ಹಂನೊಂದು ಮನುಶರಪ್ಪ ತಪೋಧನರಿಗೆ ಆಹಾ–
೧೩ ರ ದಾನಕ್ಕೆಂದು ಕೊಟ್ಟ ಗದ್ಯಾಣವೆರಡು ॥ ಇ ಧರ್ಮ್ಮವನು ಆ ಸ್ತಳದಾ–
೧೪ ಚಾರ್ಯ್ಯರು ಚಂದ್ರಾರ್ಕ್ಕ ತಾರಂಬರಂ ನಡಸುವರು ॥ ಮಂ–
೧೫ ಗಳ ಮಹಾಶ್ರೀ @ @

೫. ಬಸದಿಯ ಪ್ರವೇಶದಲ್ಲಿರುವ ಕಂಬದಲ್ಲಿಯ ಶಾಸನ (ಕ್ರಿ.ಶ. ೧೨೧೪)

ಶಾಸನದ ಮೇಲ್ಭಾಗದಲ್ಲಿ ಯಾವುದೇ ಚಿತ್ರಗಳಿರುವುದಿಲ್ಲ. ಶಾಸನವಿರುವ ಕಂಬವು ನೆಲದಲ್ಲಿ ಹೂಳಿದ್ದು, ಕೆಳಭಾಗದ ಶಾಸನದ ಪಠ್ಯವನ್ನು ಓದಲು ಸಾಧ್ಯವಾಗಿರುವುದಿಲ್ಲ.

ಯಾದವ ನಾರಾಯಣ ವೀರ ಪ್ರತಾಪ ಚಕ್ರವರ್ತ್ತಿ ಎಂಬ ಬಿರುದುಗಳನ್ನು ಹೊಂದಿದ, ಯಾದವ ಚಕ್ರವರ್ತಿ ಸಿಂಘಣದೇವನ ಆಳ್ವಿಕೆಯ ೧೪ನೆಯ ವರ್ಷವಾದ ಭಾವ ಸಂವಚ್ಛರದ ಮಾರ್ಗಸಿರ ಏಕಾದಸಿ ಸೋಮವಾರ ಸೂರ್ಯ್ಯಗ್ರಹಣ ಸಂಕ್ರಮಣ ತಿಥಿಯಲ್ಲಿ ಬಹುಶಃ ಬಸದಿಗೆ ಬಿಟ್ಟ ದತ್ತಿಯನ್ನು ತಿಳಿಸುತ್ತದೆ.

೧ ಶ್ರೀಮತು ಯಾದವ ನಾರಾಯಣ ವೀರ ಪ್ರತಾಪ ಚಕ್ರ–
೨ ವರ್ತ್ತಿ ಸಿಂಘಣದೇವ ವರುಶದ ೧೪ನೆಯ ಭಾವ ಸಂವಚ್ಛರದ ಮಾ–
೩ ರ್ಗ್ಗಸಿರ ಏಕಾದಸಿ ಸೋಮವಾರ ಸೂರ್ಯ್ಯಗ್ರಹಣದ
೪ ಸಂಕ್ರಮಣ ತಿಥಿಯಲು . . . .

೬. ಯಳಂದೂರು ಮಠದ ಎದುರಿನ ಗೋಡೆಯಲ್ಲಿರುವ ವೀರಗಲ್ಲು (ಸು. ೧೩ನೆಯ)

ಈ ಅಸ್ಪಷ್ಟ ವೀರಗಲ್ಲಿನಲ್ಲಿ ರಾಮಯ್ಯ ಮತ್ತು ಮಲ್ಲಿಕಾರ್ಜುನ ದೇವರ ಉಲ್ಲೇಖಗಳಿವೆ. ಮೊದಲನೆಯ ಸ್ತರದಲ್ಲಿ ಎರಡು ಸಾಲುಗಳಿದ್ದು, ಅಕ್ಷರಗಳು ಅಸ್ಪಷ್ಟವಾಗಿವೆ.

ಮೊದಲನೆಯ ಸ್ತರ

೧ ಅಕ್ಷರಗಳು ಅಸ್ಪಷ್ಟವಾಗಿವೆ.
೨ ಅಕ್ಷರಗಳು ಅಸ್ಪಷ್ಟವಾಗಿವೆ.

ಎರಡನೆಯ ಸ್ತರ

೩ ದತ ಕೂಸ ನನ್ನಯೊಳಿನಾಸ್ಪದಂ ತವ . . . . . .
೪ . . ಬರೆವಹದೊಳೆ ರಾಮಯ್ಯ ಮಲ್ಲಿಕಾರ್ಜ್ಜುನ ದೇವರ
೫ ಅಕ್ಷರಗಳು ಅಸ್ಪಷ್ಟವಾಗಿವೆ.

೭. ಅಮೃತೇಶ್ವರ ದೇಗುಲದ ಪ್ರಾಂಗಣದಲ್ಲಿಯ ಬರೆಹ (ಕ್ರಿ.ಶ. ಸು. ೧೮–೧೯)

ಅಣ್ಣಿಗೇರಿಯ ಅಮೃತೇಶ್ವರದೇವರ ದರ್ಶನಕ್ಕೆ ಬಂದು ಸೇವೆ ಸಲ್ಲಿಸಿದುದರ ಸ್ಮರಣಾರ್ಥ ಪರಿಚಾರಕ ಅಪ್ಪಾಜಿಯು ತನ್ನ ಹೆಸರನ್ನು ಶಾಸನ ರೂಪದಲ್ಲಿ ಬರೆಸಿದುದನ್ನು ತಿಳಿಸುತ್ತದೆ.

೧ ಪರಿಚಾರಕ ಅಪ್ಪಾಜಿಯದ್ದು

೮. ಅಮೃತೇಶ್ವರ ದೇಗುಲದ ಪ್ರಾಂಗಣದಲ್ಲಿಯ ಬರೆಹ (ಕ್ರಿ.ಶ. ಸು. ೧೮-೧೯)

ಅಣ್ಣಿಗೇರಿಯ ಅಮೃತೇಶ್ವರದೇವರಿಗೆ ದರ್ಶನಾರ್ಥವಾಗಿ ಬಂದು ಸೇವೆ ಸಲ್ಲಿಸಿದುದರ ಸ್ಮರಣಾರ್ಥ ವೀರಪ್ಪ ಎನ್ನುವವನು ಶಾಸನ ಬರೆಸಿದುದನ್ನು ತಿಳಿಸುತ್ತದೆ.

೧ ವೀರಪ

೯. ಅಮೃತೇಶ್ವರ ಪ್ರಾಂಗಣದ ಹಾಸುಗಲ್ಲಿನ ಮೇಲೆ (ಕ್ರಿ.ಶ. ಸು. ೧೮-೧೯ನೆಯ)

ಅಣ್ಣಿಗೇರಿಯ ಅಮೃತೇಶ್ವರದೇವರಿಗೆ ಬಂದು ಸೇವೆ ಸಲ್ಲಿಸಿದುದರ ಸ್ಮರಣಾರ್ಥ ನನ್ನಮ ಎನ್ನುವವನು ತನ್ನ ಹೆಸರು ಬರೆಸಿದುದನ್ನು ತಿಳಿಸುತ್ತದೆ.

೧ . . . . ನಂನಮನಾ

೧೦. ಅಮೃತೇಶ್ವರ ಪ್ರಾಂಗಣದ ಹಾಸುಗಲ್ಲಿನ ಮೇಲೆ (ಕ್ರಿ.ಶ. ಸು. ೧೮-೧೯)

ಅಣ್ಣಿಗೇರಿಯ ಅಮೃತೇಶ್ವರ ದೇವರ ಗುಡಿಗೆ ಬಂದು ಸೇವೆ ಸಲ್ಲಿಸಿದುದರ ಸ್ಮರಣಾರ್ಥ ವೋಜನೊಬ್ಬ (ರೂವಾರಿ) ಶಾಸನ ಬರೆಸಿದುದನ್ನು ತಿಳಿಸುತ್ತದೆ. ಶಾಸನವು ಸವೆದಿರುವುದರಿಂದ ವಿವರಗಳು ಅಸ್ಪಷ್ಟವಾಗಿವೆ.

೧ . . . . . . ಸುಂ ವೋಜನ

೧೧. ಭಾವಿಯ ಗೋಡೆಯ ಮೇಲಿರುವ ಬರೆಹ (ಕ್ರಿ.ಶ. ೧೯೨೩)

ಶಾಸನವಿರುವ ಭಾವಿಯನ್ನು ಯೋಗಪ್ಪ ಪಿಳ್ಳಿ ಉರ್ಫ ಪಸಾರದ ಇವರ ಹೆಂಡತಿ ಗಂಗವ್ವ ಎನ್ನುವವರು ಕಟ್ಟಿಸಿದ್ದೆಂದು ತಿಳಿಸುತ್ತದೆ.

೧ ಶ್ರೀ

೨ ಶಕ ೧೮೪೫ ಅರಿ ಸಂ । ಮಾಘ ಶು ೧

೩ ಗಂಗವ್ವಾ ಕೋಂ ಯೋಗ-

೪ ಪ್ಪಾ ಪಿಳ್ಳಿ ವುರ್ಫ ಪಸಾರದ ಇ-

೫ ವರು ಕಟಿಸಿದ್ದು

೧೨. ವೀರಭದ್ರ ದೇವಾಲಯದ ಗೋಡೆಯ ಮೇಲಿರುವ ಬರೆಹ (ಕ್ರಿ.ಶ. ೧೯೨೪)

ಈ ಶಾಸನವಿರುವ ವೀರಭದ್ರ ದೇವಾಲಯವನ್ನು ಎನ್ನುವವರು ಕಟ್ಟಿಸಿದ್ದೆಂದು ತಿಳಿಸುತ್ತದೆ.

೧ ಶ್ರೀ

೨ ಫಕೀರಪ್ಪಾ ಮರಿತಮ್ಮ-

೩ ಪ್ಪಾ ಬಳ್ಳೊಳ್ಳಿ ಅಣ್ಣಿಗೇ-

೪ ರಿ ಇವರು ಕಟ್ಟಿಸಿದ್ದು

೫ ಶಕೆ ೧೮೪೬ ೧೯೨೪ ಇಸ್ವಿ

೧೩. ಬಸದಿಯ ಗರ್ಭಗೃಹದ ಮೂರ್ತಿಯ ಮೇಲೆ (ಕ್ರಿ.ಶ. ಸು. ೧೯-೨೦)

ಬಸದಿಯು ಜೀರ್ಣೋದ್ಧಾರಗೊಂಡಾಗ, ಅಣ್ಣಿಗೇರಿಯ ನಿವಾಸಿಯಾದ ಪುಷ್ಪಾಬಾಯಿ ಭರ್ತಾರ ಭೀಮಪ್ಪಯಾ ದೇಶಪಾಂಡೆ ಇವರು ಮೂರ್ತಿಯನ್ನು ಹೊಸದಾಗಿ ಪ್ರತಿಷ್ಠಾಪಿಸಿದುದನ್ನು ತಿಳಿಸುತ್ತದೆ.

೧ ಪುಷ್ಪಾಬಾಯಿ ಭರ್ತಾರ ಭೀಮಪ್ಪಯಾ ದೇಶಪಾಂಡೆ ಅಣ್ಣಿಗೇರಿ ಇವರ ಧರ್ಮ

೧೪. ಬಸದಿಯ ಕಾಂಪೌಂಡ್ ಗೋಡೆಯಲ್ಲಿ (ಕ್ರಿ.ಶ. ೧೯೪೧)

ದಿಗಂಬರ ಮುನಿ ಪಾಯಸಾಗರರು ಬಂದ ಸಂದರ್ಭದಲ್ಲಿ ಬಸದಿಯ ಕಾಂಪೌಂಡ್ ದಕ್ಷಿಣ ಭಾಗದ ಗೋಡೆಯನ್ನು ಚಂದ್ರಪ್ಪ ಬಸ್ತಿ ಉಪಾಧ್ಯಾಯ ಅವರು ೧೨-೫-೧೯೪೧ರಂದು ಕಟ್ಟಿಸಿದರೆಂದು ವಿವರಿಸುತ್ತದೆ.

೧ ಶ್ರೀ ಜಿನಮಂದಿರದ ದಕ್ಷಿಣ ಭಾಗದ ಗೋಡೆಯನ್ನು
೨ ರಾ॥ ರಾ॥ ಚಂದ್ರಪ್ಪಾ . . ರಪ್ಪ ಬಸ್ತಿ ಉಪಾಧ್ಯಾಯ
೩ ಅಂಣಿಗೇರಿ ಇವರು ಕಟ್ಟಿಸಿರುತ್ತಾರೆ ಮಹಾ–
೪ ವೀರ ಶಕೆ ೨೪೬೭ ಸನ್ ತಾ । ೧೨ । ೫ ।೧೯೪೧ ಇಸ್ವಿ
೫ ಶ್ರೀ ೧೦೮ ದಿಗಂಬರ ಮುನಿ ಪಾಯಸಾಗರರು
೬ ಬಂದ ಕಾಲಕೆ

೧೫. ಜೈನ ಬಸದಿಯ ಗರ್ಭಗೃಹದ ಭಿತ್ತಿಯಲ್ಲಿರುವ ಅಕ್ಷರಗಳು

ಗರ್ಭಗೃಹದ ಹೊರಭಿತ್ತಿಯಲ್ಲಿ ಕಮಿಗಪ ಎಂಬ ಅಕ್ಷರಗಳಿದ್ದು ಅರ್ಥ ಸ್ಪಷ್ಟವಾಗುವುದಿಲ್ಲ.

೧ ಕಮಿಗಪ ೪

೧೬. ತೋಂಟದಾರ್ಯಮಠದ ಮುಖಮಂಟಪದ ನೆಲದ ಮೇಲಿನ ಶಾಸನ (ಕ್ರಿ.ಶ. ೧೯೫೨?)

೫–೮–೧೯೫೨ ನೆಯ ತಾರೀಖಿನಂದು, ಅಣ್ಣೀಗೇರಿಯ ಅಂಬುತವ್ವಾ ಬ. ಹಕ್ಕರಕಿ ಎನ್ನುವವರು (ಮಠದ ನೆಲಹಾಸಿಗೆ)

ಪಾಟೀಕಲ್ಲು (ಶಹಬಾದ ಕಲ್ಲು) ಹಾಕಿಸಿದ್ದನ್ನು ತಿಳಿಸುತ್ತದೆ.

೧ ಓಂ ಶ್ರೀ
೨ ಅಂಬುತವ್ವಾ ಕೋಂ. ಬ ಹಕ್ಕರ
೩ ಕಿ ಸ ಪಾ.ಹಾ. ಅಣ್ಣೀಗೇರಿ
೪ ತಾ. ೫–೮–೫೨

೨೮

ಮಾನ್ವಿ ತಾಲ್ಲೂಕು ನಾಲ್ಕು ಗ್ರಾಮಗಳ ಅಪ್ರಕಟಿತ ಶಾಸನಗಳು

ಚನ್ನಬಸವ ಮಲ್ಕಂದಿನ್ನಿ*

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣವು ಒಂದು ತಾಲೂಕಿನ ಕೇಂದ್ರಸ್ಥಳ. ಈ ತಾಲೂಕಿನ ಜಿನ್ನಾಪುರ, ಹೀರಾ, ಮಾನ್ವಿ ಮತ್ತು ಚೀಕಲಪರ್ವಿ ಗ್ರಾಮಗಳಲ್ಲಿ ಒಟ್ಟು ಹತ್ತು ಶಾಸನಗಳು ಬೆಳಕಿಗೆ ಬಂದಿವೆ. ಈ ಶಾಸನಗಳು ಕ್ರಿ.ಶ. ೧೧ನೇ ಶತಮಾನದಿಂದ [ಕ್ರಿ.ಶ. ೧೦೪೪–೧೦೬೮ ಒಂದನೇ ಸೋಮೇಶ್ವರ] ಕ್ರಿ.ಶ. ೧೯೪೯ನೇ ವರ್ಷದವರೆಗೆ ಇರುವ ಶಾಸನಗಳಾಗಿವೆ.

ಈ ಶಾಸನಗಳು ದತ್ತಿ ನೀಡಿದ ಶಾಸನಗಳಾಗಿದ್ದು, ಇದರಲ್ಲಿ ಕೊನೆಯ ಶಾಸನವು ತನ್ನ ಗಂಡನ ಸ್ಮರಣಾರ್ತ ಯೀರಮ್ಮ ಎಂಬಾಕೆ ಶಾಸನ ಬರೆಸಿದ ಬಗ್ಗೆ ತಿಳಿಸುತ್ತದೆ. ಇವುಗಳಲ್ಲಿ ಶೈವ ಧರ್ಮದ ಆರು ಶಾಸನಗಳು, ಇಸ್ಲಾಂ ಧರ್ಮದ ಒಂದು ಶಾಸನ, ನಾಯಕ ಜನಾಂಗದ ಒಂದು ಶಾಸನ ಮತ್ತು ವೈಷ್ಣವ ಧರ್ಮದ ಎರಡು ಶಾಸನಗಳಾಗಿವೆ. ಹಾಗೆಯೇ ಈ ಶಾಸನಗಳಲ್ಲಿ ಚೀಕಲಪರವಿ ಗ್ರಾಮದ ನಾಲ್ಕು ಚಪ್ಪಡಿಕಲ್ಲುಗಳು ಕನ್ನಡ ಲಿಪಿ, ಸಂಸ್ಕೃತ ಭಾಷೆಯಲ್ಲಿರುವ ಶಾಸನಗಳಾಗಿದ್ದರೆ, ಉಳಿದವುಗಳು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿ ಬರೆಯಲಾಗಿವೆ. ಈ ಶಾಸನಗಳಲ್ಲಿ ಮಾನ್ವಿ ತಾಲೂಕು ಪ್ರದೇಶವು ಪ್ರಾಚೀನ ಮಧ್ಯಯುಗೀನ ಕಾಲದಲ್ಲಿ ಎಡೆದೊರೆ–೨೦೦೦ ನಾಡಿನ ಮೊರಟ–೩೦೦ರ ವಿಭಾಗಕ್ಕೆ ಸೇರ್ಪಡೆಯಾಗಿತ್ತು. ನಂತರ ಇದು ಕ್ರಿ.ಶ. ೧೮ನೇ ಶತಮಾನದಲ್ಲಿ ಮೊಸಗೆ ಸೀಮೆಗೆ (ಪ್ರಸ್ತುತ ಮಸ್ಕಿ ತಾಲೂಕು ಕೇಂದ್ರ) ಸೇರಿತ್ತೆಂದು ತಿಳಿದುಬರುತ್ತದೆ.

೧. ಮಾನ್ವಿ ದಿಡ್ಡಿಕೆರೆ ದಂಡೆಯ ಬೆಟ್ಟದ ಬಂಡೆಗಲ್ಲಿನಲ್ಲಿರುವ ಕಿರು ಶಾಸನ

ಈ ಶಾಸನವನ್ನು ಕಣ ಶಿಲೆಯ ಬಂಡೆಗಲ್ಲಿನಲ್ಲಿ ರಚಿಸಲಾಗಿದೆ. ಇದು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದೆ. ಇದರಲ್ಲಿ ಕಲ್ಯಾಣ ಚಾಳುಕ್ಯ ಚಕ್ರವರ್ತಿ ಒಂದನೆಯ ಸೋಮೇಶ್ವರನು (ಕ್ರಿ.ಶ. ೧೦೪೪–೧೦೬೮) ಕಲ್ಯಾಣದಿಂದ ರಾಜ್ಯಭಾರ ಮಾಡುವಾಗ ಈತನ ಕೈ ಕೆಳಗೆ ಮಹಾ ಮಂಡಳೇಶ್ವರನಾಗಿ ಮೊರಟ ಹೈಹಯ ವಂಶದ ಘಟ್ಟಿದೇವರಸನಿದ್ದನು. ಹಾಗೆಯೇ ಶಾಸನ ಮುಂದುವರಿದು ಗವರೇಶ್ವರ, ಬ್ರಾಹ್ಮಣರು, ಪಬ್ಬ, ಭತ್ತ, ಮಾದಿರಾಜರೆಂಬ ವ್ಯಕ್ತಿಯ ಉಲ್ಲೇಖವಿದೆ. ಆದುದರಿಂದ ಈ ಶಾಸನವು ಕ್ರಿ.ಶ. ೧೧ನೇ ಶತಮಾನಕ್ಕೆ ಸೇರುತ್ತದೆ. ಬಹುವಾಗಿ ಹಾಳಾಗಿದೆ.

೧. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪೃಥ್ವಿವಲ್ಲಭ ಮಹಾರಾಜಾಧಿರಾಜ ರಾಜಪರಮೇಶ್ವರ ಪರಮಭಟ್ಟಾರಕಂ
೨. ಚಾಳುಕ್ಯಾಭರಣಂ ಶ್ರೀಮತ್ರೈಲೋಕ್ಯ ಮಲ್ಲದೇವರ ವಿಜಯ ರಾಜ್ಯ ಮುತ್ತ ರೋತ್ತರಾಭಿವೃದ್ಧಿ ಪ್ರವರ್ಧಮಾನ ಮಾ
೩. ಕ . . ನು
೪. ಗವರೇಶ್ವರ ಮ . . . ಡಿಸ . . . ಶ್ರೀ . . . . ತಾದ . .
೫. ಮಹಾಮಂಡಳೇಶ್ವರ ಶ್ರೀಘಟ್ಟಿದೇವರಸ ಮಕ್ಕಳು . . ಯ . ರು
೬ . . . . ಯ್ಯ ಯ್ಯ ನಾ . . ಸಮಸ್ತ . . . ಮನ್ಮಹಾ
೭ ಗೆಯ್ಯ . . ಯ . .
೮. . . ದಪಬ್ಬವನಿಮಾ , ಗ ಸ ತಿತ್ಯ
೯. . . . ರಾ . . ತ . . ತನಬ ನ
೧೦. ಮಾದಿರಾಜ ವಗಳ . . ಪ . . ನ . . . .

* ಸಹಾಯಕ ಪ್ರಾಧ್ಯಾಪಕರು, ದೇವನಾಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಮಸ್ಕಿ, ರಾಯಚೂರು ಜಿಲ್ಲೆ–೫೮೪೧೨೪. ಮೊ. ೯೯೭೨೨೭೨೭೪೮

೧೧. . . . . . ಡಿಯಾ

೧೨. ಮಾನುಪಿ . ಬಡಗಣ . ಲದ ಬಿಟ್ಟ ನಿಗರು ಮತ್ತ ಪನ್ನೆರಡು . . . ತ . . ರ ಮತ್ತರಾರು . .

೧೩. ಮತ್ತ . . ನ . . . . . ದ . ಕಾಟಯ ನಿಪು . ಗೆ

೧೪. ಯಾ . . ಸಿ . ರು ಬ್ರಾಹ್ಮಣರುಮ ಸಾಸಿ . ರ . ದಿಲಮ

೧೫. . . . . ನೂಗೆನಂ . ತ್ತ . . . ಮ . . .

೧೬. . ಬ . . . ಶ್ರೀ ಶ್ರೀ ಶ್ರೀ

೨. ಮಾನ್ವಿ ಪುರಸಭೆ ಆವರಣದಲ್ಲಿರುವ ಶಾಸನ

ಈ ಶಾಸನವು ಕಪ್ಪು ಶಿಲೆಯಲ್ಲಿದ್ದು, ಕ್ರಿ.ಶ. ೧೧ನೇ ಶತಮಾನಕ್ಕೆ ಸೇರುತ್ತದೆ. ಇದು ೩೪ ಇಂಚು ಎತ್ತರ, ೧೦ ಇಂಚು ಅಗಲವಾಗಿದೆ. ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದೆ. ಶಾಸನದಲ್ಲಿ ಕಲ್ಯಾಣ ಚಾಳುಕ್ಯ ಅರಸ [ಕ್ರಿ.ಶ. ೧೦೬೮-೧೦೭೬] ಭವನೈಕ್ಯಮಲ್ಲದೇವನೆಂಬ ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದನು. ಈತನ ಕೈ ಕೆಳಗೆ ಮಹಾಮಂಡಳೇಶ್ವರನಾಗಿ ಹೈಹಯ ವಂಶದ ಮಾನುವೆಯ ಮಳೆಯಮರಸನಿದ್ದನು. ಶಾಸನ ಮುಂದುವರೆದು ದೇವಾಲಯದ ಅಂಗಭೋಗ, ಸೂರ್ಯಗ್ರಹಣ, ಮೊಸಳಿಕಲ್ಲು-೩೦೦, ಹರವೆ ಮೊದಲಾದ ವಿಷಯಗಳಿವೆ.

೧. ಶ್ರೀನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ

೨. ನಗರಾರಂಭ ಮೂಲ ಸ್ತಂಬಾಯ ಶಂಭವೇ

೩. ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪ್ರಥ್ವೀವಲ್ಲಭ

೪. ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ

೫. ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ

೬. ಶ್ರೀಮದ್ಭುವನೈಕಮಲ್ಲದೇವರ ವಿಜಯರಾಜ್ಯ ಮು

೭ ತ್ತರೋತ್ತಾರಾಭಿವೃಧ್ಧಿ ಪ್ರವರ್ಧಮಾನ ಚಂದ್ರಾರ್ಕ್ಕತಾರಂ

೮. ಬರಂ ಸಲ್ಲುತ್ತಮಿರೆ ಕೆರೆಯೂರ ನೆಲೆ

೯. ವೀಡಿನೊಳು ಸುಖ ಸಂಕಥಾ ವಿನೋದದಿಂದಂ ರಾಜ್ಯಂ ಗೈಯ್ಯುತ್ತಮಿ

೧೦. ರೆ . . ಜಾನಯನವಲ್ಲಭ ಸ್ವಸ್ತ್ಯನವರತ ಪರಮಕಲ್ಯಾ

೧೧. ಣ್ಯಾಬುದಯ ಸಹಸ್ರಫಳ ಭೋಗ ಭಾಗಿನಿ ದ್ವಿತೀಯಲ

೧೨. ಕ್ಷ್ಮೀ ಸಮಾನೆ ಗೋತ್ರ ನಿದಾನೆ

೧೩. . . . ಸದಾ . . ದೂಪ ದೀಪ ಪ

೧೪. ರಿವಾರ ಚಿನ್ತಾಮಣಿ ವಿವೇಕ ಚೂಡಾಮಣಿ ಕಸ್ತೂರಿಕಾಮೋ

೧೫. ದಿ ರನ . ಬನ್ದು ಜನ ಮ .

೧೬. . . ನಗ . . ಮಂಗಿಯ ಮರಳ

೧೭. . . ದೇಶಾಧಿಪತಿ ಸಹಸ್ರ ಬಾಹು

೧೮. ಮಳೆಯಮರಸದೇವಿಯರೂ ಸಕ

೧೯. . . . ಸಂವತ್ಸರದ ಭಾದ್ರಪದ

೨೦. . . . . ಸೂರ್ಯ್ಯ ಗ್ರಹಣ

೨೧. . . . ಳಗಣ ಮೊಸಳಿಕಲ್ಲೂನೂರರ

೨೨. . . . . .ತ್ತದ್ರಮ್ಮ ಹರವೆಯ

೨೩. . . . . . ಬಿಟ್ಟ ದೇವರಂಗ ಭೋಗಕ್ಕಂ

೨೪. ಆಹಾರ ದಾನಕ್ಕಂ ಬಿಟ್ಟಲ್ಲಿ . . . . .

೨೫. . . ಹಳಿಯ ಬಟ್ಟೆ

೨೬. . . . . ಸಚೆನಮ್ಮ ಶ

೨೭. . . . .

೨೮. . . . .

೩. ಮಾನ್ವಿ ದಿಡ್ಡಿಕೆರೆಯ ದಂಡೆಯ ಬೆಟ್ಟದ ದೊಡ್ಡ ಬಂಡೆಗಲ್ಲಿನಲ್ಲಿರುವ ಶಾಸನ

ಇದು ಕಣ ಶಿಲೆಯ ಬಂಡೆಗಲ್ಲಿನಲ್ಲಿ ರಚಿತವಾಗಿದೆ. ಈ ಶಾಸನವು ಲಿಪಿಯ ಲಕ್ಷಣದ ಆಧಾರದಿಂದ ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸೇರುತ್ತದೆ. ಇದು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದೆ. ಇದರಲ್ಲಿ ಕೇವಲ ಮಾರೆಸಾಬ ಎಂಬ ವ್ಯಕ್ತಿಯ ಕುರಿತು ತಿಳಿಸುತ್ತದೆ.

೧. ಸೂರ್ಯದೇವರು . ವದು

೨. . . ಮಾ ರೆ ಕೊಬ

೩. ಮಾನ್ವಿ ದಿಡ್ಡಿಕೆರೆ ಹನುಮಂತ ದೇವಾಲಯದ ಮುಂದೆ ದೊಡ್ಡ ಬಂಡೆಗಲ್ಲಿಗೆ ಇರುವ ಶಾಸನ

ಈ ಶಾಸನವು ಕಣ ಶಿಲೆಯ ಬಂಡೆಗಲ್ಲಿನಲ್ಲಿದ್ದು ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸೇರುತ್ತದೆ. ಇದು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದೆ. ಶಾಸನದಲ್ಲಿ ಮಹಾಮಂಡಳೇಶ್ವರ, ಪಬ್ಬ, ಮಣ, ಮತ್ತರು ಮಹಾಜನರುಗಳ ಬಗ್ಗೆ ಮಾತ್ರ ತಿಳಿಸುತ್ತದೆ. ಉಳಿದ ವಿವರಗಳ ತೃಟತಗೊಂಡಿರುತ್ತವೆ.

೧. ಸ್ವಸ್ತಿ ಶ್ರೀಮತು

೨. ಮನ್ಮಹಾ ಮಂಡಳೇಶ್ವರ ಶ್ರೀ

೩. ಸಂವತ್ಸರದ ಪಷ್ಠಿ ಪಬ್ಬ

೪. ಳ . . . . . ಬಿ. ಷ . ಮ ಶ್ರೀ . . . .

೫. ಜಗೆ . . ಮಣಬ . ಗಿ ರೆ ಬ ಜ . . . .

೬. . . . . ಕೊಂ . . . . ಸಿಮಾಂ

೭ ಎಂಟು ಮತ್ತರು ಕೊಟ್ಟ ಮತ್ತರಾರು

೮. . . . . . . ನ್ನ . . . . ರೆಬ್ಬ

೯. ಮಹಾಜನರು ಪ. ತಿಪಾಳಿಸಿದವರಿ. . ಗಳು

೫. ಹೀರಾ ಗ್ರಾಮದ ಅಮರೇಶ ತಂದೆ ಶಿವಣ್ಣರವರ ಸರ್ವೆ ನಂಬರ್ ೫೩ರ ಜಮೀನಿನಲ್ಲಿರುವ ಶಾಸನ

ಈ ಶಾಸನವು ಮರಳು ಗಲ್ಲು [ಕೆಂಪು ಬಿಳುಪು ಶಿಲೆ] ಶಿಲೆಯಲ್ಲಿನ ಮೂರು ಅಡಿ ಎತ್ತರ, ಒಂದೂವರೆ ಅಡಿ ಅಗಲವಿದೆ. ಇದು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದ್ದು, ಕ್ರಿ.ಶ. ೧೩ನೇ ಶತಮಾನಕ್ಕೆ ಸೇರುತ್ತದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪಗಳಿವೆ. ಕೆಳ ಬದಿಯಲ್ಲಿ ನಾರಾಯಣನು ಆದಿಶೇಷನ ಮೇಲೆ ಆಸೀನನಾಗಿದ್ದು, ಈತನ ಎಡತೊಡೆಯ ಮೇಲೆ ಲಕ್ಷ್ಮೀಯು ಕುಳಿತುಕೊಂಡಿದ್ದಾಳೆ. ಇವುಗಳ ಎಡಬದಿಯಲ್ಲಿ ಚಕ್ರ, ಶಂಖಗಳ ಶಿಲ್ಪಗಳಿವೆ.

ಶಾಸನದಲ್ಲಿ ಬಳಗಾರನೂರಿನ ಸಬ್ಬದೇವ ಸೆಟ್ಟಿ ಮತ್ತು ಆತನ ಮಕ್ಕಳು ಹಾಗೂ ಅಲ್ಲಹುಲಿದೇವನು ಸೇರಿ ಖಂಡಗುದ ಬೆಳೆಯನ್ನು ಬಳಗಾನೂರಿನ ಶ್ರೀ ಲಕ್ಷ್ಮೀನಾರಾಯಣ ದೇವರಿಗೆ ದತ್ತಿ ನೀಡಿದ ವಿಷಯವಿದೆ. ಇಲ್ಲಿಯ ಕುತೂಹಲಕಾರಿ ವಿಷಯವೆಂದರೆ ಹೀರಾ ಗ್ರಾಮದ ಹೊಲದಲ್ಲಿ ಬಳಗಾರನೂರಿನ ಶ್ರೀ ಲಕ್ಷ್ಮೀನಾರಾಯಣ ದೇವರು

ಉಲ್ಲೇಖಗೊಂಡಿರುವುದು ಗಮನಾರ್ಹವಾಗಿದೆ. ಹಾಗೆಯೇ ಶಾಸನೋಕ್ತ ಅಲ್ಲಹುಲಿದೇವನು ಮೊರಟ ಹೈಹಯ ವಂಶದ ಒಂದನೆಯ ಮಲ್ಲಿದೇವರಸನ [ಕ್ರಿ.ಶ. ೧೧೭೮-೧೧೯೧] ಹಿರಿಯ ಮಗನಾಗಿದ್ದಾನೆ.

೧. ಬಳಗಾರನೂರ ಸಬ್ಬ
೨. ದೇವ ಸೆಟ್ಟಿಯರ ಮಕ್ಕಳು
೩. ಶ್ರೀ ಲಕ್ಷ್ಮೀ ನಾರಾಯಣದೇವ
೪. ರಿಗೆ ಮಹಾಮಂಡಳೇಶ್ವರ ಕೊ
೫. ಮಾರ ಅಲ್ಲಹುಲಿದೇವ ಬಿ
೬. ಟ್ಟರು ಕಂಡುಗದ ಬೆಳೆ

೬. ಚೀಕಲಪರವಿ ಗ್ರಾಮದ ಮಾರುತಿ ದೇವಾಲಯದ ಹತ್ತಿರದಲ್ಲಿರುವ ನಾಲ್ಕು ಚಪ್ಪಡಿಕಲ್ಲುಗಳು

ಈ ನಾಲ್ಕು ಚಪ್ಪಡಿಕಲ್ಲುಗಳು ಕಣ ಶಿಲೆಯಲ್ಲಿವೆ. ಇವು ವೈಷ್ಣವಧರ್ಮಕ್ಕೆ ಸೇರಿದವುಗಳಾಗಿದ್ದು, ಇವುಗಳ ಮೇಲ್ಬದಿಯಲ್ಲಿ ಚಕ್ರ, ವಿಷ್ಣುನಾಮ ಶಂಖಗಳ ಚಿತ್ರಗಳಿವೆ. ಇವು ಕನ್ನಡ ಲಿಪಿ, ಸಂಸ್ಕೃತ ಭಾಷೆಯಲ್ಲಿ ರಚಿತಗೊಂಡಿವೆ. ಈ ಶಾಸನದಲ್ಲಿ ಸ್ವಸ್ತಿ ಜಯಾಬ್ಯುದಯ ಶಾಲಿವಾಹನ ಶಕವರ್ಷಂಗಳು ೧೪೪೩ ವೃಷ ಸಂವತ್ಸರದ ಶ್ರಾವಣ ಶುದ್ಧ ೧೨ ಎಂದಿದ್ದು. ಇದು ಕ್ರಿ.ಶ. ೧೫೨೧ ಜುಲೈ ೧೫ನೇ ತಾರೀಖಿಗೆ ಸರಿ ಹೊಂದುತ್ತದೆ.

ಮೊದಲಿನ ಚಪ್ಪಡಿಕಲ್ಲು ಶಾಸನವು ಕೃಷ್ಣದೇವರಾಯನ ತುಳುವ ವಂಶದ ಚರಿತ್ರೆಯನ್ನು ತಿಳಿಸುತ್ತದೆ. ಎರಡನೆಯ ಚಪ್ಪಡಿಕಲ್ಲು ಶಾಸನವು ಕೃಷ್ಣದೇವರಾಯನು ಶ್ರೀಶೈಲ, ತಿರುಪತಿ, ಅಮರಾವತಿ, ಮಹಾನಂದಿ, ಶ್ರೀರಂಗಂ, ಅಹೋಬಲ, ಕಂಚಿ, ಕುಂಭಕೋಣ, ಗೋಕರ್ಣ ಮೊದಲಾದ ಪುಣ್ಯ ಕ್ಷೇತ್ರಗಳಿಗೆ ಭೇಟಿಕೊಟ್ಟು ರತ್ನಧೇನು, ಹಿರಣ್ಯಾಶ್ವ, ತುಲಾಪುರುಷ, ಗೋಸಹಸ್ರ ಮೊದಲಾದ ದಾನಗಳನ್ನು ಮಾಡಿದ ಬಗ್ಗೆ ತಿಳಿಸುತ್ತದೆ. ಮೂರನೆಯ ಚಪ್ಪಡಿಕಲ್ಲು ಶಾಸನವು ಕೃಷ್ಣ ದೇವರಾಯನ ಬಿರುದುಗಳಾದ ರಾಯರಗಂಡ, ರಾಜಪರಮೇಶ್ವರ, ಮೂರು ರಾಯರಗಂಡ, ಪರರಾಯ ಭಯಂಕರ, ಹಿಂದೂರಾಯ ಸುರತ್ರಾಣ, ಶಾರ್ದೂಲಮರ್ಧನಃ, ವೀರ ಪ್ರತಾಪ ಮೊದಲಾದ ಬಿರುದುಗಳಿಂದ ಹೊಗಳಲಾಗಿದ್ದು, ಅಂಗ, ವಂಗ, ಕಳಿಂಗ ಮೊದಲಾದ ಅರಸರನ್ನು ಸಾಮಂತರನ್ನಾಗಿಸಿಕೊಂಡ ಬಗ್ಗೆ ತಿಳಿಸುತ್ತದೆ.

ನಾಲ್ಕನೆಯ ಚಪ್ಪಡಿಕಲ್ಲು ಶಾಸನವು ಕೃಷ್ಣದೇವರಾಯನು ರಾಚೂರು ಆಲಂಪೂರು ಮಾನವೆ ಹಾನುಗಲ್ ಮಾಗಡೆ ದುರ್ಗಗಳನ್ನು ಗೆದ್ದುಕೊಂಡು ಕೃಷ್ಣಾ ಮತ್ತು ಭೀಮಾ ನದಿಯ ಸಂಗಮ ಸ್ಥಳವಾದ ಕಾಡಲೂರಿಗೆ ಬಂದು ರತ್ನಧೇನು ಮಹಾದಾನ ಮಾಡಲು ಬಯಸಿ ತನ್ನ ಹೆಂಡತಿ ಚಿನ್ನಾದೇವಿಯ ಕೈಯ್ಯಲ್ಲಿ ಸಹಸ್ರ ಗೋದಾನವನ್ನು ತಿರುಮಲ ದೇವಿಯ ಕೈಯ್ಯಲ್ಲಿ ಕನಕಾಸ್ವ ಮಾಡಿಸಿ ಮಾನವೆ ಸೀಮೆಯಲ್ಲಿರುವ ಚೀಕನಬರವಿ (ಪ್ರಸ್ತುತ ಚೀಕಲಪರವಿ) ಗ್ರಾಮವನ್ನು ತಿರುವೆಂಗಳನಾಥ ದೇವರ ಸೇವೆಗಾಗಿ ಬಿಟ್ಟು ಅಚಂದ್ರಾರ್ಕ್ಕ ಸ್ಥಾಯಿಯಾಗಿ ನಡೆಯಬೇಕೆಂದು ಸಮರ್ಪಿಸಿದಂತೆ ಹೇಳಿಕೆ.

೧ ನೇ ಚಪ್ಪಡಿಕಲ್ಲು

೧. ಶುಭಮಸ್ತು। ಕಲ್ಯಾಣಾಯಾಸ್ತು ತದ್ಧಾಮ ಪ್ರತ್ಯೂ
೨. ತ್ಯಹತಿ ಮಿರಾಪಹಂ।ಯದ್ಗ ಜೋಪ್ಯಗಜೋದ್ಭೂತಂ
೩. ಹರಿಣಾಪಿಚ ಪೂಜ್ಯತೇ।ಅಸ್ತಿಕ್ಷೀರ ಮಯೋದ್ಧೆ್ವರ್ಮ
೪. ಧ್ಯ ಮಾನಾನ್ಮಹಾಂಬುಧೇಃ। ನವನೀತಮಿವೋದ್ಭೂತಮ
೫. ಪ ನೀತತ ಮೋಮಹಃ। ತಸ್ಯಾ ಸೋತ್ತ ನಯಃಸ್ತಪೋಭಿರ
೬. ತುಲ್ಯೈಃ ರನ್ವರ್ಥ ನಾಮಾಬುಧಃಪುಂಣ್ಯೈ ರಸ್ಯಪುರೂರವಾಭುಜಾ
೭. ಲೈ ರಾಯುರ್ದ್ವಿ ಷಾಂನ್ನಿಘ್ನುತಃ॥ ತಸ್ಯಾಯುರ್ನ್ನಹು
೮. ಷೋಸ್ಯತಸ್ಯ ಪುರುಷೋಯುಧೋಯಯಾತಿಃಕ್ಷಿತಾಖ್ಯಾತಸ್ತ
೯. ತುತೂರ್ವ್ವಸೂರ್ವನಿಭಃ॥ ಶ್ರೀದೇವಯಾನೀಪತೇಃ।

೧೦. ತದ್ವಂಶೇ ದೇವಕೀ ಜಾನಿರ್ದಿದೋಪೇ ತಿಮ್ಮಭೂಪತಿಃಯಶಸ್ವೋ
೧೧. ತುಳುವೇಂದ್ರೇಪುಯದೋಃಕೃಷ್ಣ ಇವಾ
೧೨. ನ್ವಯೇ ॥೪॥ ತತೋಭೂದ್ಬುಕ್ಕಮಾಜಾನಿರೀಶ್ವರಕ್ಷಿ
೧೩. ತ ಪಾಲಕಃ। ಅತ್ರಾಸಮಗುಣಭ್ರಂಶಂಮೌಲೀ
೧೪. ರತ್ನಂ ಮಹೀಭುಜಾಂ ಸರಸಾದುದ ಭೂತ್ತಸ್ನಾನ್ನರ ಸಾವನಿ
೧೫. ಪಾಲಕಃ ದೇವಕೀನಂದನಾತ್ಕಾಮೋದೇವಕಿ ನಂದನಾದಿವವಿವಿಧ
೧೬. ಸುಕೃತೋದ್ಧಾರಾಮೇಶ್ವರ ಪ್ರಮುಖೇ ಮುಹುರ್ಮುದಿತ ಹೃದಯ
೧೭. ಸ್ಥಾನೇ ಸ್ಥಾನೇವ್ಯದತ್ತಾಯಥಾವಿದಿ ಬುಧ ಪರಿವೃತೋನಾನಾ
೧೮. ದಾನಾನಿಯೋಭುವಿ ಷೋಡಶ ತ್ರಿಭುವನ ಜನೋದ್ಗೀ
೧೯. ತಂ ಸ್ವೀತಂ ಯಶಃ ಪುನಕ್ತಯನ್ ಕಾವೇರಿ ಮಾಶು
೨೦. ಭದ್ವಾ ಬಹಳ ಜಲರಯಾಂತಾಂ ವಿಲಂ ಘ್ಯೆವಶ
೨೧. ತೃಂ ಜೀವಗ್ರಾಹಂ ಗೃಹೀತ್ವಾ ಸಮಿತಿಭುಜ
೨೨. ಲಾತ್ತಂ ಚ ರಾಜ್ಯಂ ತದೀಯಾಂ।ಕೃತ್ವಾಶ್ರೀರಂಗಪೂರ್ವ್ವಕಂ
೨೩. ತದಿಪಿ ನಿಜವಶೇ ಪಟ್ಟಣಂ ಯೋ ಬಭಾಸೇಕೀರ್ತ್ತಿ
೨೪. ಮಾನೂಭೂಷಂವೀರ್ಯೋದಗ್ರಂತುರುಷ್ಕಂ ಗಜ
೨೫. ಪತಿ ನೃಪತಿಂಚಾಪಿ ಜೀತ್ವಾತದನ್ಯಾನ್।ಆಗಂಗಾತೀರಲಂ
೨೬. ಕಾ ಪ್ರಥಮ ಚರಮಭೂಭೃತಟಾಂ ತಂ ನಿ
೨೭. ತಾಂತಂಖ್ಯಾಃಕ್ಷೋಣೀಪತೀನಾಂ ಸ್ರಜಮಿವ
೨೮. ಶಿರಸಾಂ ಶಾಸನಂ ಯೋವ್ಯತಾನೀತ್।
೨೯. ತಿಪ್ಪಾಜೀ ನಾಗಲಾದ್ಯೇವ್ಯೌಃ ಕೌಸಲ್ಯ
೩೦. ಶ್ರೀಸುಮಿತ್ರಯೋಃದೇವ್ಯೋರಿವನೃಸಿಂ
೩೧. ಹೇಂದ್ರಾತ್ತಸ್ಮಾತ್ಪಂಕ್ತಿರಥಾದಿವ।ವೀರಶ್ರೀ
೩೨. ನಾರಶ್ರೋನಾರಸಿಂಹಃಸಃವಿಜಯ ನಗರೇರತ್ನ ಸಿಂಹಾಸನಸ್ಥಃ।

೨ನೇ ಚಪ್ಪಡಿಕಲ್ಲು

೧. ಕೀರ್ತ್ಯಾನೀತ್ಯಾನಿರಸ್ಯಂ ನೃಗನಳನಹು ಷಾನಪ್ಯವ ನ್ಯಾಮಥಾನ್ಯಾನ್।ಆಸೇತೋರಾ
೨. ಮೇರೋರ ವಲನಿಸುರನುತಃಸ್ವೈರ ಮಾಚೋದಯಾದ್ರೇರಾಪಶ್ಚಾತ್ಯಾ
೩. ಚಲಾಂತ್ತಾದ ಖಿಳಹೃದಯ ಮಾವರ್ಜ್ಯ ರಾಜ್ಯಂ
೪. ಶಶಾಸ ॥೦೨॥ ನಾನಾದಾನನ್ಯ ಕಾರ್ಷೀತ್ಕನಸದಸಿಯಃಶ್ರೀ
೫. ವಿರೂಪಾಕ್ಷದೇವಸ್ಥಾನೇ ಶ್ರೀ ಕಾಳಹಸ್ತೀ ಶಿತುರಪಿನಗರೇ ವೆಂ
೬ ಕಟೇದ್ರೌಚ ಕಾಂಚ್ಯಾಂ।ಶ್ರೀಶೈಲೆ ಶೋಣಶೈಲೇ ಮಹತಿಹರಿಹ
೭ ರೇ ಹೋ ಬಲೇ ಸಂಗಮೇಚ ಶ್ರೀರಂಗೇ ಕುಂಭ ಘೋಣೇಹತತಮ
೮. ಸಿ ಮಹಾನಂದಿ ತೀರ್ಥೇ ನಿವೃತೌ॥ ॥ ಗೋಕರ್ಣೇರಾಮ
೯. ಸೇತಾ ಜಗತಿತದಿರೇಷ್ವಶೇಷೇಷು ಪುಂಣ್ಯ ಸ್ಥಾನೇಷ್ವಾ

೧೦. ರಬ್ದನಾನಾವಿಧ ಬಹುಳ ಮಹಾದಾನ ವಾರಿ ಪ್ರವಾಹೈಃ ॥ಯ
೧೧. ಸ್ಯೋದಂಚ್ಚತುರಂಗಃಪ್ರಕರ ಖುರರಜಃಶುಷ್ಯದಂ ಭೋಧಿಮಗ್ನ
೧೨. ಕ್ಷ್ಮಾಭೃತ್ಪಕ್ಷಚ್ಛಿದ್ಯೋದ್ಯತ್ತರ ತ್ಕುಲಿಶಧರೋತ್ಕಂಠಿತಾಕುಂ
೧೩. ಠಿತಾ ಭೂತ್। ಬ್ರಹ್ಮಾಂಡಂ ವಿಶ್ವ ಚಕ್ರಂ ಘಟ ಮುದಿತ ಮಹಾ
೧೪. ಭೂತಕಂ ರತ್ನಧೇನುಂ ಸಪ್ತಾಂಬೋಧೋಂಶ್ಚಕಲ್ಪಕ್ಷಿ
೧೫. ತಿರುಹಲತಿಕೇ ಕಾಂಚನೀಂ ಕಾಮಧೇನು। ಸ್ವರ್ಣಕ್ಷ್ಮಾಂ
೧೬. ಯೋಹಿರಣ್ಯಾಶ್ವರಥಮಪಿ ತುಲಾಪೂರುಷಂಗೋಸಹಸ್ರಂ।ಹೇಮಾಶ್ವಂ
೧೭. ಹೇಮಗರ್ಭಂ ಕನಕರಿ ರಥಂ ಪಂಚಲಾಂಗಲ್ಯತಾನೀತ್।ಪ್ರಾಜ್ಯಂ ಪ್ರಶಾಸ್ಯ
೧೮. ನಿರ್ವಿಘ್ನಂ ರಾಜ್ಯಂದ್ಯಾಮಿಪ ಶಾಸಿತುಂ।ತಸ್ಮಿನ್ ಗುಣೇನ ವಿಖ್ಯಾತೇ
೧೯. ಕ್ಷಿತೇರಿಂದ್ರೇ ದಿವಂಗತೇ।ತತೋಪ್ಯವಾರ್ಯವೀರ್ಯ್ಯಃಶ್ರೀಕೃಷ್ಣರಾಯ
೨೦. ಮಹೀಪತಿಃ।ಬಿಭರ್ತಿಮಣಿಕೇಯೂರ ನಿರ್ವಿಶೇಷಂಮಹೀಂಭುಜೇ॥ಕೀರ್ತ್ಯಾ
೨೧. ಯಸ್ಯಸಮಂತತಃಪ್ರಸೃತಯಾವಿಶ್ವಂರುಚೈತ್ಯಂದ್ರಜೇದಿತ್ಯಾಶಂಕ್ಯಪುರಾಪುರಾ
೨೨. ರಿರಭವದ್ಭಾಲೇಕ್ಷಣಃಪ್ರಾಯಶಃ॥ಪದ್ಮಾಕ್ಷೋಪಿ ಚತುರ್ಭುಜೋಜನಿಚತುರ್ವ್ವಕ್ತ್ರೋದ್ಭ
೨೩. ವತ್ಪದ್ಮಭೂಃ॥ಕಾಳೀಖಡ್ಗಮಧಾದ್ರಮಾಚಕಮಲಂವೀಣಾಂಚವಣೀಕರೇ॥ಶತ್ರೂಗೌಂವಾಸ
೨೪. ಮೇತೇದದತ ಇತಿ ರುಷಾಕಿಂನು ಸಪ್ತಾಂಭುರಾಶೀನಾನಾಸೇನಾತುರಂಗತ್ರಟಿತವಸ
೨೫. ಮತೀಧೂಳಿಕಾ ಪಾಳಿಕಾಭಿಃ।ಸಂಶೋಷ್ಯಸ್ವೈರಮೇತತ್ಪ್ರತಿನಿಧಿಜಲಧಿಶ್ರೇಣಿಕಾಯೋದಿ
೨೬. ಧತ್ತೇ ಬ್ರಹ್ಮಾಂಡಂ ಸ್ವರ್ಣಮೇರುಪ್ರಮುಖ ನಿಜ ಮಹಾದಾನತೋಯೈರಮೇಯೈಃ।ಮದ್ಧತ್ತ
೨೭. ಮರ್ಥಿ ಸಾರ್ಥಾಃಶ್ರೀಯಮಿಹಸುಚಿರಂಭುಂಜತಾಮಿತ್ಯವೇತ್ಯಪ್ರಾಯಃಪ್ರತ್ಯೂಹಹ್
೨೮. ತೋಸ್ತಪನ ರಥಗತೇ ರಾಲಯಾಂದೇವತಾನಾಂ।ತತ್ತದ್ದಗ್ಜೈತ್ರವೃತ್ಯಾಪಿಚಬರುದ
೨೯. ಪದ್ಯೈರಂಕಿತಾಂಸ್ತತ್ರತತ್ರ ಸಂಭಾಂನ್ ಜಾತಪ್ರತಿಷ್ಠಾನ್ವ್ಯತನುತಭುವಿಯೋಭುಬೃದ
೩೦. ಗ್ರಂಕಪಾಗ್ರಾನ್॥ಕಾಂಚೀಶ್ರೀಶೈಲ ಶೋಣಾಚಲಕನಕಸಭಾ ವೆಂಕಟಾದ್ರಿಪ್ರಮುಖ್ಯೆಷ್ವಾವ್ಯ
೩೧. ರ್ತ್ಯಾವರ್ತ್ಯಸರ್ವೇಷ್ವತನುತ ವಿಧವದ್ಭೂಯಸೇಶ್ರೇಯಸೇಯಃ।ದೇವ ಸ್ಥಾನೇಷುತೀರ್ಥೈ
೩೨. ಷ್ವಪಿ ಕನಕ ತುಲಾ ಪುರುಷಾದೀನಿನಾನಾದಾನ್ಯೇವೋಪದಾನ್ಯೈರಪಿಸಮಯ
೩೩. ಖಿಳೈರಾಗಮೋಕ್ತಾನಿತಾನಿ॥ರೋಷಕೃತಪ್ರತಿಪಾರ್ಥಿವದಂಡಃ
೩೪. ಶೇಷಭುಜಃಕ್ಷಿತರಕ್ಷಣಶೌಂಡಃ!ಭಾಷೆಗೆತಪ್ಪುವರಾ

೩ನೇ ಚಪ್ಪಡಿಕಲ್ಲು

೧. ಯರಗಂಢಃ।ಸ್ತೋಪಕೃದರ್ಥಿಷುಯೋ
೨. ಹರ ರಣಚಂಡಃ॥೨೨॥
೩. ರಾಜಾಧಿರಾಜ ಇತ್ಯುಕ್ತ್ಯೋಯೋ ರಾಜ ಪ
೪. ರಮೇಶ್ವರಃ।ಮೂರು ರಾಯರಗಂಡ ಶ್ಚ
೫. ಪರ ರಾಯ ಭಯಂಕರಃ॥೨೩॥
೬ ಹಿಂದೂ ರಾಯಸುರತ್ರಾಣೋ ದುಷ್ಟ
೭ ಶಾರ್ದೂಲ ಮರ್ದನಃ।ವೀರಪ್ರತಾಪ ಇ

೮. ತ್ಯಾದಿ ಬಿರುದೈ ರುಚಿತೈರ್ಯುತಃ॥೨೪॥ ಆ
೯. ಲೋಕಯ ಮಹಾರಾಯ ಜಯ ಜೀವೇತಿವಾದಿ
೧೦. ಬಿಃ॥ಅಂಗ ವಂಗ ಕಳಿಂಗಾದ್ಯೈರಾಜಭಿಃಸೇವ್ಯತೇ
೧೧. ಚಯಃ॥೨೫॥ಸ್ತುತ್ಯೌದಾರ್ಯ ಸ್ಸುಧೀಭಿಃಸವಿ
೧೨. ಜಯನಗರೇ ರತ್ನಸಿಂಹಾಸನಸ್ಥಃಕ್ಷ್ಮಾಪಾಲನ್
೧೩. ಕೃಷ್ಣರಾಯ ಕ್ಷಿತಿಪತಿ ಧರೀಕೃತ್ಯನೀತ್ಯಾ ನೃಗಾದೀನ್।
೧೪. ಆಪೂರ್ವಾದ್ರೇರಥಾಸ್ತಕ್ಷಿತಿಧರ ಕಟಕಾದಾ
೧೫. ಚಹೇಮಾಚಲಾಂತಾದಾಸೇತೋರರ್ಥಿ ಸಾರ್ಥ
೧೬. ಶ್ರಿಯಮಿಹ ಬಹಳೀಕೃತ್ಯಕೀರ್ತ್ಯಾ್ಯಸಮಿಂಧೇ॥೨೬॥
೧೭. ಇಹಕಿಲ ಜಗತಿ ನಿಖಿಲ ಕವಿ ಕುಲಾಭಿನಂದ್ಯಾ
೧೮. ವಾನೌದಾರ್ಯ ಧೈರ್ಯ್ಯ ಶೌರ್ಯಾಧಿ ಜನಿತಯಶಃ
೧೯. ಪೂರಕರ್ಪೂರ ಪೂರಿತ ಬ್ರಹ್ಮಾಂಡಕರಂಡೇನ
೨೦. ಸಮರ ಚಂಡೇನ ವಿಹಸಿತ ನೃಗನಳನಹುಷ
೨೧. ನಭಾಗದುಂಧುಮಾರ ಮಾಂಧಾತೃಭರತ
೨೨. ಭಗೀರಥ ದಶರಥ ರಾಮಾದಿ ಚರಿತೇನಕೃತ
೨೩. ಭೂಸುರತ್ರಾಣೇನ ಪರಿಭೂತ ಸುರತ್ರಾಣೇ
೨೪. ನ ಗಜಪತಿ ಗಜಕೂಟ ಪಾಕಲೇನವಿದಿತನಾ
೨೫. ನಾಕಲೇನ ವದನ ವಿಜಿತಾಂಬೋಜೇನಬೋಚೇನಾ
೨೬. ಪರೇಣ ಕಾವ್ಯನಾಟ ಕಾಲಂಕಾರ ಮರ್ಮ್ಯಜ್ಞೇನ
೨೭. ಜ ಧರ್ಮ . . ಪ್ರತಿ ವರ್ಷ ಪ್ರವರ್ತಿತ ಕನಕವ
೨೮. ಸಂತ ಮಹೋತ್ಸವ ವೇನ ಸವೇನ ಕೃತಾರ್ಥಿತ ವಿಪ್ರಸಾ
೨೯. ರ್ಥೇನ ಸಾರ್ಥೇನ ನಿಖಿಲನೃಪತಿ ಮೂರ್ಧ್ದನ್ಯೇನ
೩೦. ನಾಗಾಂಬಿಕಾ ನರಸ ನೃಪನಂದನೇನ ನಿಖಿಲ
೩೧. ಹೃದಯಾನಂದನೇನ ಸಮರ ಮುಖ ವಿಜಯೇನ ವಿಜಯೇನ
೩೨. ದಿಶಾಮ ವಿಜಯ ನಗರೇಸಿಂಹಾಸನಾರೂಡ್ಯಾ ಶಾಸತಾ ಸಕಲ

೪ನೇ ಚಪ್ಪಡಿಕಲ್ಲು

೧. ತರುಕರ ದಾನಸ್ಯ ಸಾಪ ದಾನಸ್ಯ . ರಾಗ್ರಸರಾ ಕೃಷ್ಣರಾಯ ಭುವನಾಶ್ರ
೨. ಗ್ರಾಮರಂ ಗಾದ್ರಾನಸಕಾದ . . . ಪ್ಪಾಭೂಮಿಪತಿ ಹ.ಪೂ ಮಾ
೩. . . ಸರಾದ ಶಂ . ಲಾ ಕ್ರಂನು ಸಹಿತಾ . . ಸ . . ಯ . .
೪. . . . . ಸದ . ಭು . . ಮಗನಾದ ಕಾಸಪಯಹ . ೯ ಕು . . .
೫. . ದಂ॥ . . ತಾಯನಿಶಕ ನಾರನಾಹಃನ . . ಶ್ರೀಕೃಷ್ಣರಾಯ
೬. ಭೂರಶಾಃ ಸನಿಯ , . . ರಸ . . ವಿಕಾಸಿಹುವಾ . . .
೭ . . . . ಕಾ.ಡಿ.ನುರ ಅ . ಕ್ರ . ಬ . . . .

೮. . . . . ತ್ತ . . . ತಿ . . . ರಾ.ಸ್ಯ.ರಾ . . ಮ . . . .
೯. . . ಬಾದ್ರಯ ಪೂ. ರ್ಗ ಯ ಡು ಪಹಾತಿರ್ಯ . . . .
೧೦. . . ಯಾನು . ಕ . ಟಾಕ್ರನಾ . . . ನಾ . . . ಷಟಾರರ ತಾ .
೧೧. . . ವಾಸಿತಾ . . ಯಕ . . . . .ಸ . . .
೧೨. ಯ ಬಲಂ ಕಸ್ಯದು ಚಾರಮಾಗಾವಿ . ವಂಕ್ತಷರ
೧೩. ವರ್ಷ ಹರ್ತಿಣಾದ್ಯ . . ಬಾಷ . ದೂ . ಪಯ . ತಿ . .
೧೪. ಡು . ಶಶಾರಾದಾ . ಸಿ . . ಯತ ಶ್ರೀಕೃಷ್ಣರಾಯ
೧೫. . . ಸರ್ವಬಾಃದವ ಸಂದ ಸಿಂದು ರ ಘಟಾಪೂ . .
೧೬. ಯಾ . ರ್ಬ . . . . ಸ . ಯಮ . . ಪರಮ . ದ್ರ . .
೧೭. . . ದುಷ್ಟ ಶಾರ್ಧೂಲ ಮರ್ಧನಃ ನರ . . . ಯಂ . .
೧೮. ರಾಸ . . ಶ್ವರ ॥ ೪ ॥ . . . ರಾಜಾಧಿರಾಜ ರಾ .
೧೯. ಡು . . . ಮೂರು ರಾಯರ ಗಂಡಾಶ್ವರ ಪರರಾಯಭಯಂ
೨೦. ಕರಃ ಲಜ ಪೃಥ್ವಿರಾಯ ಮನೋಭಯಂಕರ। ಭಾಷೆಗೆತ
೨೧. ಪ್ಪುವರ ರಾಯರಗಂಡ ಪೂರ್ವ ಪಶ್ಚಿಮ . . ಕವಿನಾಶ್ರಯ
೨೨. ಪರಭಯಂಕರ ರಾಜಭುವನೈಕವೀರ . . . .
೨೩. ನಿಡು . ವಿಕ್ರ . . . . ಕೃಷ್ಣರಾಯ
೨೪. ಮಹಾರಾಯ . . . ಅಗಯಡು . . .
೨೫. ತ್ಯ . ರಾಮಿ . . ಬ . . . ಯ . ಡುಲ . ನ .
೨೬. ಮನ್ನೆಯ . . . ಅನೆಯ . . . . ದ . . . . ಸಾಸ
೨೭. ರ . ನೂ . ಗಡು . . . . ಬು . ಸ . . . . .
೨೮. ಅಂಬಟಿ ಜಲಾಜನ್ಯ ವಿಲಾದು ಜಬಾ . . .
೨೯. ದಲಾ . ಸರ ಪಾದರನು . . ಸಿಮಾಗೆಬಾ . . . ಣಂಡು
೩೦. ರಾಚೂರು। ಅಲಂಪೂರು ಮಾನವೆ ಹಾನುಂಗಲೂ ಮಾಂಗ
೩೧. ಡೆ ದುರ್ಗಗಳನೂ ತೆಗೆದುಕೊಂಡು । ಕಾಡಲೂರು ಸಂಗಮ
೩೨. ಕೆ ಚಿತ್ತೈಸಿ। ಸ್ವಸ್ತಿ ಜಯಾಭ್ಯುದಯ ಶಾಲಿ
೩೩. ವಾಹನ ಶಕ ವರ್ಷಂಗಳು ೧೪೪೩ ಸಂದ ಬಳಿ
೩೪. ತಾನದವ ವ.ಷ ಸಂವತ್ಸರದ ಶ್ರಾವಣ ಶುದ್ದ ೧೨
೩೫. ಸೋಮವಾರದಲೂ ಕೃಷ್ಣವೇಣಂ ಭೀಮರಥಿ
೩೬. ಸಂಗಮದಲ್ಲಿ ರತ್ನರ್ಧೇನು ಮಹಾದಾನವನೂ ಮಾ
೩೭. ಡ ಚಿತ್ತೈಸಿ ತಂಮ ದೇವಿಯರೂ ಚಿಂನದೇವಿಯ
೩೮. ಮ್ಮನವರ ಕೈಯ್ಯಲ್ಲಿ ಸಹಸ್ರ ಗೋದಾನವನೂ ತಿ
೩೯. ರುಮಲದೇವಿಯಮ್ಮನವರ ಕೈಯ್ಯಲ್ಲಿ ಕನಕಾಸ್ವ
೪೦. ಮಹಾದಾನವನೂ ಮಾಡಿಸ ಚಿತ್ತೈಸಿ

೪೧. ಮಾನುವೆಯ ಸೀಮೆಯ ವಾಗಿನ ಚೀಕನಬರವಿಯ

೪೨. ಗ್ರಾಮವನು ತಿರುವೆಂಗಳನಾಥಗೆ ಆರ್ಘ್ಯವೇರ್ಪ್ಪಡಿಸಿ

೪೩. ದ್ಯಕ್ಕೆ ಸಮರ್ಪ್ಪಿಸಿಯಿಧರ್ಮ್ಮ ಅಚಂಧ್ರಾರ್ಕ್ಕಾ

೪೪. ಸ್ಥಾಯಿ ಆಗಿ ನಡೆಯ ಬೇಕೆಂದು ಕೊಟ್ಟು ಸಮರ್ಪ್ಪಿಸಿದಾ

೭. ಮಾನ್ವಿ ಪಟ್ಟಣದ ಸಿಮೆಂಟ್ ರಸ್ತೆಯಲ್ಲಿರುವ ಬಸವಣ್ಣ ದೇವಾಲಯದ ಮುಂಬದಿಯಲ್ಲಿರುವ ಶಾಸನ

ಇದು ಕಪ್ಪು ಶಿಲೆಯಲ್ಲಿದ್ದು ಅಶುದ್ಧ ಭಾಷೆ, ಅಸ್ಪಷ್ಟವಾಗಿದೆ. ಶಾಸನವನ್ನು ಮೂರು ಬದಿಯಲ್ಲಿ ಬರೆಯಲಾಗಿದ್ದು, ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದೆ. ಈ ಶಾಸನದಲ್ಲಿ ಶರ್ವರಿನಾಮ ಸಂವತ್ಸರದ ಕಾರ್ತಿಕ ಬಹುಳ ಪಂಚಮಿ ಆದಿತ್ಯವಾರದಂದು ಸಲಾಬತ್ ಖಾನನೆಂಬ ಆಸಫ್ ಜಾಹಿವಂಶದ ಸುಲ್ತಾನನು ಹೈದ್ರಾಬಾದ್ ಪ್ರಾಂತ್ಯದ ಪ್ರದೇಶವನ್ನು ಆಳ್ವಿಕೆ [ಕ್ರಿ.ಶ. ೧೭೫೧-೧೭೬೧] ಮಾಡುತ್ತಿರುವಾಗ ಈ ಶಾಸನವನ್ನು ಖಂಡರಿಸಲಾಗಿದೆ. ಇದರಲ್ಲಿ ಮೊಸಗೆ ಸೀಮೆಯ ಸಾ॥ ಮಾನುವೆ ಸ್ಥಳದಲ್ಲಿ ಕೆರೆ ನಿರ್ಮಾಣದ ಸಂದರ್ಭದಲ್ಲಿ ಹಟಗಾರರು, ಅರಿಯಪುರದ ಗೌಡರು ದೇಸಾಯಿಗಳೊಂದಿಗೆ ನರಸಪ್ಪ, ದಾಸಪ್ಪ, ಲಕ್ಷ್ಮಣ, ನಾಸ ತಿಂಮೋಸಗಳ ಸಮ್ಮುಖದಲ್ಲಿ ಬರೆಸಿಕೊಟ್ಟ ಕಾಗದವಾಗಿದೆ. ಹಾಗೆಯೇ ಶಾಸನದ ಎರಡನೇ ಬದಿಯಲ್ಲಿ ಮಾನುವೆ ಸ್ಥಳದ ಬೀದಿ ಮೆರವಣಿಗೆ ಸಂದರ್ಭದಲ್ಲಿ ತೊಡಕು ಇದ್ದುದರಿಂದ ಮಸೀದಿ ಸ್ಥಳಕ್ಕೆ ಒಡಂಬಡಿಕೆಯ ಪ್ರಕಾರ ಸ್ಥಳ ಬಿಟ್ಟು ಬಂದಿದ್ದರಿಂದ ಸಾಲಗುಂದೆ ಮಹಾನಾಡಿನ ಹಟಗಾರ, ಗೌಡ, ಪ್ರಜೆಗಳಲ್ಲಿ ವಿನಂತಿಸಿಕೊಂಡು ಸ್ಥಳವನ್ನು ಮಾನ್ಯ ಮಾಡಿಸಿಕೊಂಡಿದ್ದ ಬಗ್ಗೆ ತಿಳಿಸುತ್ತದೆ. ಇದಕ್ಕೆ ಬಣಜಿಗರು ತೊಂದರೆ ಕೊಟ್ಟರೆ ಅವರಿಗೆ ಅರ್ಧ ಸ್ಥಳವನ್ನು ಬಿಟ್ಟು ಕೊಡಬೇಕೆಂದು ಬಸವಣ್ಣನ ಹೆಸರಿನ ಮೇಲೆ ಶಾಸನಕಲ್ಲು ಬರೆಸಲಾಗಿದೆ. ಇದು ಸೂರ್ಯ ಚಂದ್ರರಿರುವ ತನಕ ಚಾಲ್ತಿಯಲ್ಲಿರುತ್ತದೆ. ಇದಕ್ಕೆ ತಪ್ಪಿ ನಡೆದವರು ದಂಡವನ್ನು ತೆರಬೇಕಾಗುತ್ತದೆಂದು ತಿಳಿಸುತ್ತದೆ. ಶಾಸನದ ಮೂರನೇ ಬದಿಯಲ್ಲಿ ಈ ಶಾಸನವನ್ನು ಹಾಕಿಸುವ ಸಂದರ್ಭದಲ್ಲಿ ನಾಡಗೌಡ ದೇಸಾಯಿ ಗೌಡರು ಮಾನ್ಯ ಮಾಡುವುದರೊಂದಿಗೆ ಸಾಕ್ಷಿಯಾಗುತ್ತಾರೆ. ದೇಸಿ ಕುಲಕರ್ಣಿ, ನಾರಸುಲ ನಾಗಣಗೌಡ, ನರಸಣಗೌಡರ ಸಮ್ಮುಖದಲ್ಲಿ ಸೌದರಿ ಎಂಬುವವರು ಶಾಸನವನ್ನು ಬರೆಸಿದರೆಂದು ತಿಳಿದು ಬರುತ್ತದೆ.

೧. ಪದವಡಿಸಿದ

೨. ಸಲಬತಖಾನನ

೩. ಶಾರ್ವರೀ ನಾಮ ಸಂವತ್ಸರದ ಕಾ

೪. ರ್ತಿಕ ಬಹುಳ ಪಂಚಮಿ ಆದಿ

೫. ತ್ಯವಾರದಲು ಅರೆಯಪ್ಪ ಮೊಸ

೬ ಗಿ ಸ್ಥಳದೊಳಗೆ ಸಾ॥ ಮಾನುವೆಯ

೭ ಕಡೆಯ ಸ್ತಿತಮ ಹಟಗಾರ ಗವು

೮. ಡರು ಯಿ ಕೆರಿ ನಿರಣನಾ ಪಾಲಿ

೯. ಕಿನ ಸಿಡಸ್ತ ವಾನ್ಯಳಿ ಚೋಳ

೧೦. ಯ ನಮಗೆ ಹೊಂನ ಗುಡಿಸಿ.

೧೧. ಪುರದ ಸಿತಯ ಗಲುಡಯ.

೧೨. ಲ್ಲಿಯ ಚೋಳಯ ನಾಡುಸ್ತಳ

೧೩. ದ ನಾಗಿಸಿಂಟ ವಾಸ ತಿಪು

೧೪. ರದ ಗಲುಡರುತ್ತದುಃ

೧೫. ನಾಬಲಿ ತಯಣವಾಡಿ .


೧೬. ಅಯಿರಪುರದ ಗಲುಡ


೧೭. ರು ಮುಂತ್ತಾದ ಸಮಸ್ತ
೧೮. ಹಟಗಾರ ಗಉಡ ಪ್ರಜೆ
೧೯. ಗಳಿಗೆ ಸಾ॥ ಜಕುರ್ತ್ರ
೨೦. ನಾ ಗಿರುನಾಡ ಗಉಡ
೨೧. ಗ ಉಡರು ಐ ದೇಸಾಯಿ
೨೨. ನರಸಪ ದಸಪ ಲಕಣ
೨೩. ನಾರಸ ತಿಂಮೋಸಗಳು
೨೪. ಬರಸಿ ಕೊಟ್ಟ ಕಾಗದ
೨೫. ಉಸ ॥ ಯಿ ಹದ ಸಿತ್ಪ
೨೬. ನ ಅಲಪು ಅದರ

೨ ನೇ ಬದಿ


೨೭. ನಿಮಗೆ ಯಾರು ನಾಡಿಗೆ ಬೀದಿ ಮೆರವಣಿ
೨೮. ಗೆ ಯೊಳಗೆ ನಂಮ ಸ್ಥಳದಲ್ಲಿ ತೊಡಕಿಯಿರ
೨೯. ಲಾಗಿ ನೀವು ಮಸೀದಿ ಸ್ತಳಕೆ ಬಿಟ್ಟು ಬದಲು ಬಂ
೩೦. ದೀರಿ ನೀವು ವಡಂಬಡಿಕೆ ಯಾದುದಕೆ ನಾವು
೩೧. ನಂಮ ಯಿಸ್ತಳದಡೆ ಸಾಲುಗುಂದೆ ಮಹಾನಾಡಿ
೩೨. ನ ಹಟಗಾರ ಗವುಡ ಪ್ರಜೆಗಳ ಮುಖಂತ್ರ
೩೩. ಯಿ ತಂಡದವರು ನವೊಸಿಸಿ ಮಾಂನ್ಯ
೩೪. ಮಾಡಿಕೊಟ್ಟದು ಸಿರ ಬಾ ಜಾ . .
೩೫. . . . . ಆನರವೊಂಣ . ಬಿ .
೩೬. . . . . . ಗಾರರು . . . . .
೩೭. ಅಸಭ್ಯವಾಗಿ ಗೊಡ ನಡೆದು ಕೊಟ್ಟುಯಿ
೩೮. ಅದನು ಬಣಜಿಗರು ಮತ್ತೆ ತೊಡಕು
೩೯. ಮಾಡಿ ಆಗೊಡ ಹಾಕಿ ಕೊಂಡದ ಅದಕೆ
೪೦. ಯಿಸ್ತಳದ ಮೊಖಂತ್ರ . ನಿರ . ಯವ
೪೧. ಮಾಡಿ ಕೊಟದುಲು ಕಿಡಗೊಡ ಸಿಲಿಮೊ
೪೨. ಅರ್ಧ ಬಿಟ್ಟು ಅರ್ಧ ಕೆಡ . ಕೊ . .
೪೩. . . ನೀವು ಅ . . ಲಿನೀವು . ಹಾ
೪೪. ಕಿ ಬಸವಣನ . ಕಿ ಸಾಸನದ ಕಲ್ಲು
೪೫. ಬರೆಸಿಕೊಂಡು ಸುಖದಲಿ ಯಿರ ಕೊ .
೪೬. . . . ಡು ಮುಂದೆ ಹೊಸ ಪೀಠ ಅ
೪೭. ದಿತ್ಯವಾರದ ಪೀಠ ಮೊದಲು . .
೪೮. ಗೆಯರ . ಕೊಟ್ಟಿದರು ಯಿಂನಾ



ಮಾನವಿ ದಿಡ್ಡಿಕೆರೆ ದಂಡೆಯ ಕಿರು ಬಂಡೆಗಲ್ಲು ಶಾಸನ


ಮಾನವಿ ಪುರಸಭೆ
ಆವರಣದಲ್ಲಿನ ಶಾಸನ



ಹೀರಾ ಗ್ರಾಮದ ಶಿವಣ್ಣರವರ
ಹೊಲದಲ್ಲಿನ ಶಾಸನ


ಚೀಕಲಪರವಿ ಗ್ರಾಮದ ಕೃಷ್ಣದೇವರಾಯನ ನಾಲ್ಕು ಶಾಸನಗಳು


೧ನೇ ಚಪ್ಪಡಿ ಕಲ್ಲು



೨ನೇ ಚಪ್ಪಡಿ ಕಲ್ಲು


೩ನೇ ಚಪ್ಪಡಿ ಕಲ್ಲು



೪ನೇ ಚಪ್ಪಡಿ ಕಲ್ಲು


ಮಾನವಿ ದಿಡ್ಡಿಕೆರೆಯ ಹನುಮಂತ ದೇವಾಲಯದ ಮುಂದೆ ದೊಡ್ಡ
ಬಂಡೆಗಲ್ಲಿಗೆ ಇರುವ ಶಾಸನ.



ಮಾನವಿ ದಿಡ್ಡಿಕೆರೆ ದಂಡೆಯ ದೊಡ್ಡ ಬಂಡೆಗಲ್ಲಿಗೆ ಇರುವ ಶಾಸನ




ಮಾನವಿ ಸಿಮೆಂಟ್ ರಸ್ತೆಯ ಬಸವಣ್ಣ ದೇವಾಲಯದ ಮುಂದೆ ಇರುವ ಶಾಸನ



ಮಾನವಿ ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ನವರಂಗದ ಸ್ತಂಭಕ್ಕಿರುವ ಶಾಸನ



ಜಿನ್ನಾಪುರ ಗ್ರಾಮದ ಹನುನಗೌಡ ಪೋಲಿಸ್ ಪಾಟೀಲರ ಹೊಲದ ಬಾವಿಯ ದಂಡೆಯಲ್ಲಿರುವ ಶಾಸನ



ಮಾನವಿ ವೀರಭದ್ರದೇವಾಲಯದ ಮೆಟ್ಟಲಿನ ಚಪ್ಪಡಿ ಕಲ್ಲಿಗೆ ಇರುವ ಶಾಸನ

೪೯. ಹಾಗ ಮಾಡಯರ ಕೊಳಬೇಕು ನೀವು

೫೦. . . . . ಅಸನ್ಯತ ನಾರದರೆ

೫೧. ಯಾಗಿನಿ ಸೂರ್ಯ ಚಂದ್ರವುಳ ಪರಿ

೫೨. ಯಂತ್ರವು ಸುಖದಲಿಯಿರ ಕೊತಯಿ

೫೩. ದು ಉತ . . ದುಯಿದ . ತಪ್ಪಿದರೆ

೫೪. ರಾದುದಲಿ ಪ್ಪ ಬಾರದುದಾರು ತಪಿ

೫೫. ದರೆ ಕಡಿವಾಣಕೆ ತಪ್ಪು ಕೊಡ ಬೇಕು

೫೬. ಯೆಂದು ಬರ ಕೊಟ ಕಾಗದವು

೫೭. ಸಾಕ್ಷಿಗಳು

೩ನೇ ಬದಿ

೫೮. ಸಾಕ್ಷಿಗಳು

೫೯. ನಾಡ ಗಉಡ ದೇಸಾಯಿ . .

೬೦. ಗ ಉಡರು ಮಾಂನ್ಯ

೬೧. . ದೇಸಿ ಕುಲಕರ್ಣಿ ನಾರಸುಲ

೬೨. ನಾಗಣ ಗೌಡ ನಾರಾ ಕ!!

೬೩. . ಚಣ ಗಉಡ

೬೪. ಸವುದರಿ ಬರ್ಸಿದ

೮. ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ನವರಂಗದ ಸ್ತಂಭಕ್ಕಿರುವ ಶಾಸನ

ಈ ಶಾಸನವು ಕಣ ಶಿಲೆಯ ಸ್ತಂಭಕ್ಕೆ ಹಾಕಿಸಲಾಗಿದೆ. ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದೆ. ಲಿಪಿಶೈಲಿಯ ಆಧಾರದಿಂದ ಇದು ಕ್ರಿ.ಶ. ೧೮-೧೯ನೇ ಶತಮಾನದ ಲಕ್ಷಣದಲ್ಲಿದೆ. ಇದರಲ್ಲಿ ಪೂಜಾರಿ ಮತ್ತಿಶೈಯನ ಹೊಲದ ಉಲ್ಲೇಖವಿದೆ. ಹಾಗೆಯೇ ಶಾಸನ ಮುಂದುವರಿದು ಐದು ಜನ ಸ್ವಾಮಿ ನಿಷ್ಟ ಸೇವಕರಾದ ಲೆಂಕರ ಕುರಿತು ಪ್ರಸ್ತಾಪಿಸುತ್ತದೆ.

೧. ಪೂಜಾರಿ ಮ

೨. ತ್ರಿಶೈಯ

೩. ನ ಹೊಲ ಬೆ ೨

೪. . . ಐದುಲೆಂ

೯. ಜಿನ್ನಾಪುರ ಗ್ರಾಮದ ಹನುಮಗೌಡ ಪೋಲೀಸ್ ಪಾಟೀಲರವರ ಜಮೀನಿನ ಬಾವಿ ದಂಡೆಯ (ಪಶ್ಚಿಮ) ಮೇಲೆ ಇರುವ ಶಾಸನ

ಈ ಶಾಸನವು ಕಣ ಶಿಲೆಯ ಚಪ್ಪಡಿಕಲ್ಲಿನಲ್ಲಿದ್ದು ಕೊರೆಯಲಾಗಿದ್ದು, ೩೦ ಇಂಚು ಎತ್ತರ, ೨೮ ಇಂಚು ಅಗಲವಿದೆ. ಕನ್ನಡಲಿಪಿ, ಕನ್ನಡಭಾಷೆಯಲ್ಲಿದ್ದು ಕ್ರಿ.ಶ. ೧೯–೨೦ನೇ ಶತಮಾನಕ್ಕೆ ಸೇರುತ್ತದೆ.

ಶಾಸನದ ಪ್ರಾರಂಭದ ಫಕೀರಪ್ಪನ ಕುಲದೇವರಾದ ಸೋಮಪ್ಪನನ್ನು ಉಲ್ಲೇಖಿಸಲಾಗಿದೆ. ಫಕೀರಪ್ಪನು ಬಾವಿ ತೋಡಿಸಿ ಅದಕ್ಕೆ ಕಲ್ಲಿನ ಕಟ್ಟಡ ಕಟ್ಟಿಸಲು ೨೦೦೦ ರೂಪಾಯಿಗಳು ವ್ಯಯ ಮಾಡಿದರೆಂದು ತಿಳಿಸಲಾಗಿದೆ. ಈಗಲೂ ಶಾಸನ ಇರುವ ಸ್ಥಳದಲ್ಲಿ ಬಾವಿ ಸುಸ್ಥಿತಿಯಲ್ಲಿದ್ದು, ಇದಕ್ಕೆ ಸ್ಥಳೀಯರು ದೇವರ ಬಾವಿ (ಬಸವಣ್ಣ ಬಾವಿ) ಎಂದು ಕರೆಯುತ್ತಾರೆ.

೧. ಕುಲದೇವರು ಸೋಮಪ್ಪ

೨. ಧಾತ್ರನಾಮ ಸಂ ॥ಶ್ರಾವ

೩. ಣ ಶುದ್ಧ ॥ಸಂ ೧೧೨ನೆಯ

೪. ೧೭೭೯ನೆ ರಾ ಗೌ ॥ ಮಣಿಗಿ ಕುವರ

೫. ಮಗ ಫಕೀರಪ್ಪ ಕವ್ಸಪ್ಪ

೬. ಸೋಮಪ್ಪ ೨೦೦೦

೧೦. ಮಾನ್ವಿ ಪಟ್ಟಣದವೀರಭದ್ರೇಶ್ವರ ದೇವಾಲಯದ ಮೆಟ್ಟಿಲುಗಳಲ್ಲಿನ ಗೋಡೆಗೆ ಜೋಡಿಸಿದ ಶಾಸನ

ಈ ಶಾಸನದಲ್ಲಿ ಶಕವರ್ಷ ೧೮೭೧ ಎಂದಿದ್ದು, ಇದು ಕ್ರಿ.ಶ. ೧೯೪೯ನೇ ಕಾಲಕ್ಕೆ ಸೇರುತ್ತದೆ. ಇದರಲ್ಲಿ ಮಾನಿವಿ ಶಿರಗುಂಪಿ ಶಿವಯ್ಯನ ಪತ್ನಿಯಾದ ಯೀರಮ್ಮಳು ತನ್ನ ಗಂಡನ ಸ್ಮರಣಾರ್ತ ಬರೆಸಿದ ಶಾಸನವಾಗಿದೆ.

೧. ಶ್ರೀ ಓಂ

೨. ಶಖ ೧೮೭೧

೩. ಮಾನಿವಿ ಶಿರಗುಂಪಿ ಶಿವಯ್ಯ

೪. ನಪತ್ನಿ ಯೀರಮ್ಮಳು

೫. ವಿರೋಧಿ ಸಂ॥ ವೈಶಾಖ ಶು॥ ೩

೬. ೧೯೪೯ ಇಸ್ವಿ

[ಹನುಮನಗೌಡ ಪೋಲೀಸ್ ಪಾಟೀಲ, ಡಾ.ವಿರುಪನಗೌಡ, ಸೋಮನಾಥ, ಭೀಮನಗೌಡ, ಶಿವಯ್ಯ ಸ್ವಾಮಿ, ಪ್ರಾಣೇಶ ಮಹಾನಬಾವ್ (ಆಚಾರ್), ವೆಂಕಟೇಶ ಜಾಲಗಾರ್, ರಾಜಾ ಪ್ರಾಣೇಶ್ ನಾಯಕ ಲ್ಯಾಂಡ್ ಲಾರ್ಡ್, ಶಿವಲಿಂಗಪ್ಪ ನಾಯಕ, ವೆಂಕಟೇಶ ಮಾನ್ವಿ ಪುರಸಭೆ ಮುಖ್ಯಾಧಿಕಾರಿ, ಶ್ರೀಮತಿ ಲಕ್ಷ್ಮೀದೇವಿ ನಾಯಕ, ರವಿಚಂದ್ರ ಕಾಜಗಾರ, ನಾಗೇಶ ಕಬ್ಬೇರ್, ಬಸವಪಟಕನದೊಡ್ಡಿ, ಶ್ರೀಧರ ಹೀರಾ, ಅಯ್ಯಪ್ಪ ಮಾಸ್ತರ, ಅಮರೇಶ ಮಾಸ್ತರ ಶಾಸ್ತ್ರೀ, ಡಾ. ಬಸವರಾಜ ಸುಂಕೇಶ್ವರ, ಮೃತ್ಯುಂಜಯ ಹಿರೇಮಠ, ಮಲ್ಲಿಕಾರ್ಜುನ ಸ್ವಾಮಿ, ನಾಗಲಿಂಗಸ್ವಾಮಿ, ಸೂಗನಗೌಡ, ದಾನಕುಮಾರ ಮೊದಲಾದವರು ನೆರವಾಗಿದ್ದಾರೆ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ಆಕರ ಗ್ರಂಥಗಳು

೧. ಜಿನ್ನಾಪುರದಲ್ಲಿ ಅಪ್ರಕಟಿತ ಶಾಸನಶೋಧ, **ಸಂಯುಕ್ತ ಕರ್ನಾಟಕ**, ೧೬-೦೧-೨೦೧೫, ಪುಟ ೦೨.

೨. ಕನ್ನಡ ಶಾಸನ ಶೋಧ, **ವಿಜಯವಾಣಿ**, ೧೭-೦೧-೨೦೧೫, ಪುಟ ೦೪.

೩. ಜಿನ್ನಾಪುರ ಶಾಸನ ಪತ್ತೆ, **ವಿಜಯ ಕರ್ನಾಟಕ**, ೧೭-೦೧-೨೦೧೫, ಪುಟ ೦೪.

೪. ಜಿನ್ನಾಪುರದಲ್ಲಿ ಅಪ್ರಕಟಿತ ಶಾಸನ ಶೋಧ, **ರಾಯಚೂರು ಸುದ್ದಿ ಬಿಂಬ**, ೨೭-೦೧-೨೦೧೫, ಪುಟ ೦೩.

೫. ಜಿನ್ನಾಪುರದಲ್ಲಿ ಅಪ್ರಕಟಿತ ಶಾಸನ ಶೋಧ, **ಜಾಗೃತಿ ಕಿರಣ**, ೧೧-೦೨-೨೦೧೫, ಪುಟ ೦೯.

೬ ಮಾನ್ವಿ ಶಾಸನ ಪತ್ತೆ, **ರಾಯಚೂರ ವಾಣಿ**, ೦೧-೦೬-೨೦೧೬, ಪುಟ ೦೩ .

೭. ಮಾನ್ವಿಯಲ್ಲಿ ಹೊಸ ಶಾಸನ ಶೋಧ, **ವಿಶ್ವವಾಣಿ**, ೦೧-೦೬-೨೦೧೬, ಪುಟ ೧೦.

೮. ಮಾನವಿಯಲ್ಲಿ ಅಪ್ರಕಟಿತ ಶಾಸನ ಪತ್ತೆ, **ಕನ್ನಡ ಪ್ರಭ**, ೦೨-೦೬-೨೦೧೬, ಪುಟ ೦೪.

೯. ಮಾನ್ವಿಯಲ್ಲಿ ಶಾಸನ ಪತ್ತೆ, **ವಿಜಯ ಕರ್ನಾಟಕ**, ೦೨-೦೬-೨೦೧೬, ಪುಟ ೦೪.

೧೦. ಮಾನ್ವಿಯಲ್ಲಿ ಹೊಸ ಶಾಸನ ಶೋಧ, **ಸಂಯುಕ್ತ ಕರ್ನಾಟಕ**, ೦೨-೦೬-೨೦೧೬, ಪುಟ ೦೨.

೧೧. ಮಾನ್ವಿಯಲ್ಲಿ ೧೧ನೇ ಶತಮಾನದ ಶಾಶನ ಪತ್ತೆ, **ರಾಯಚೂರ ವಾಣಿ**, ೨೭-೧೧-೨೦೧೬, ಪುಟ ೦೫.

೧೨. ಕ್ರಿಶ ೧೧ನೇ ಶತಮಾನದ ಶಾಸನ ಪತ್ತೆ, **ವಿಜಯ ಕರ್ನಾಟಕ**, ೨೭-೧೧-೨೦೧೬, ಪುಟ ೦೨.

೧೩. ಕಾದು ಕುಳಿತ ಹೊಸ ಶಾಸನ ಶೋಧ, **ಸುದ್ದಿ ಮೂಲ**, ೨೭-೧೧-೨೦೧೬, ಪುಟ ೦೪.

೧೪. ಕ್ರಿ.ಶ. ೧೨ನೇ ಶತಮಾನದ ವೀರಗಲ್ಲು ಪತ್ತೆ, **ವಿಜಯವಾಣಿ**, ೨೨-೦೨-೨೦೧೭, ಪುಟ ೦೩.

೧೫. ಹೀರಾದಲ್ಲಿ ಪ್ರಾಚ್ಯಾವ ಶೇಷಗಳು ಪತ್ತೆ, **ಸುದ್ದಿ ಮೂಲ**, ೨೨-೦೨-೨೦೧೭, ಪುಟ ೦೬.

೧೬. ಮಾನ್ವ ಕೂಗುವ ಕಲ್ಲುಗಳು ಪತ್ತೆ, **ರಾಯಚೂರ ವಾಣಿ**, ೦೯-೧೦-೨೦೧೭, ಪುಟ ೦೨.

೧೭. ಕೂಗುವ ಬಂಡೆಗಲ್ಲುಗಳು ಪತ್ತೆ, **ವಿಜಯ ಕರ್ನಾಟಕ**, ೦೯-೧೦-೨೦೧೭, ಪುಟ ೦೩.

೧೮. ಮಾನ್ವಯಲ್ಲಿ ಕೂಗುವ ಕಲ್ಲುಗಳು ಪತ್ತೆ, **ಸುದ್ದಿ ಮೂಲ**, ೧೦-೧೦-೨೦೧೭, ಪುಟ ೦೬.

೧೯. ಚೀಕಲಪರ್ವಿಯಲ್ಲಿ ನಾಲ್ಕು ಶಾಸನಗಳು ಪತ್ತೆ, **ಸುದ್ದಿ ಮೂಲ**, ೧೭-೧೧-೨೦೧೭, ಪುಟ ೦೩.

೨೦. ಮಾನ್ವಿ ನಾಲ್ಕು ಶಿಲಾ ಶಾಸನ ಪತ್ತೆ, **ಪ್ರಜಾ ವಾಣಿ**, ೧೭-೧೧-೨೦೧೭, ಪುಟ ೦೨.

೨೧. ಪ್ರಾಚೀನ ಶಾಸನಗಳು ಪತ್ತೆ, **ವಿಜಯ ವಾಣಿ**, ೧೮-೧೧-೨೦೧೭, ಪುಟ ೦೪.

೨೨. ಚೀಕಲಪರ್ವಿಯಲ್ಲಿ ನಾಲ್ಕು ಶಾಸನಗಳು ಪತ್ತೆ, **ರಾಯಚೂರ ವಾಣಿ**, ೧೮-೧೧-೨೦೧೭, ಪುಟ೦೪.

೨೩. ಚೀಕಲಪರ್ವಿಯಲ್ಲಿ ಪುರಾತನ ಶಾಸನಗಳ ಪತ್ತೆ, **ವಿಜಯ ಕರ್ನಾಟಕ**, ೧೮-೧೧-೨೦೧೭, ಪುಟ ೦೩.

೨೪. ಚೀಕಲಪರ್ವಿಯಲ್ಲಿ ನಾಲ್ಕು ಶಾಸನಗಳು ಪತ್ತೆ, **ಉದಯ ವಾಣಿ**, ೧೮-೧೧-೨೦೧೭, ಪುಟ ೦೨.

೨೫. Stone Inscriptions of Vijaya Nagara Empire Era discovered in Raichur, **The New Indian Express**, 27-11-2017, P-02.

೨೯

ಯೆರಿಯೂರಿನ ಅಪ್ರಕಟಿತ ತಮಿಳು ಶಾಸನ

ಎಲ್. ಅನಿಲ್*

ಚಾಮರಾಜನಗರ ಜಿಲ್ಲೆಯು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲೊಂದಾಗಿದೆ. ಈ ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣದ ಗಡಿಯ ಜಿಲ್ಲೆಯಾಗಿ ೧೯೯೭ ಆಗಸ್ಟ್ ೧೫ರಂದು ಮೈಸೂರು ಜಿಲ್ಲೆಯಿಂದ ಬೇರ್ಪಟ್ಟಿತು. ೧೮೧೮ರವರೆವಿಗೂ ಈ ಊರಿನ ಹೆಸರು 'ಅರಿಕುಠಾರ' ಎಂದೇ ಹೆಸರಾಗಿದ್ದ ಇದು ನಂತರ ಮೈಸೂರು ಒಡೆಯರ ಅರಸ ಮುಮ್ಮಡಿ ಕೃಷ್ಣರಾಜಒಡೆಯರವರ ತಂದೆಯವರಾದ ಚಾಮರಾಜಒಡೆಯರವರು ಇಲ್ಲಿ ಜನಿಸಿದ್ದರಿಂದ ಅವರ ನೆನಪಿಗಾಗಿ ಚಾಮರಾಜನಗರವೆಂದು ನಾಮಕರಣ ಮಾಡಲಾಯಿತು. ಈ ಜಿಲ್ಲೆಯಲ್ಲಿ ಒಟ್ಟು ನಾಲ್ಕು ತಾಲೂಕುಗಳಿದ್ದು, ಪ್ರಸ್ತುತ ಶಾಸನವು ಯಳಂದೂರು ಈ ತಾಲೂಕಿನ ಯೆರಿಯೂರು ಎಂಬ ಗ್ರಾಮದಲ್ಲಿದೆ. ಯೆರಿಯೂರು ಗ್ರಾಮದಲ್ಲಿ ಒಟ್ಟು ೪ ಶಾಸನಗಳಿದ್ದು ಗ್ರಾಮದ ವೈಶಿಷ್ಟ್ಯವನ್ನು ತಿಳಿಸುವಲ್ಲಿ ಪ್ರಮುಖವಾಗಿವೆ. ಈ ಶಾಸನವು ಯೆರಿಯೂರು ಗ್ರಾಮದ ಪೂರ್ವಕ್ಕೆ ಸುಮಾರು ಒಂದಯ ಕಿ.ಮೀ. ದೂರದಲ್ಲಿರುವ ಗಂಜೂರು ಮಲ್ಲಿಕಾರ್ಜುನ ದೇವಾಲಯದ ಉತ್ತರ ಭಾಗದಲ್ಲಿದೆ.

ಶಾಸನದ ಪಾಠ

ಸ್ವಸ್ತಿ ಶ್ರೀ	..ನಯ...ತು ಪ
ಪ್ರತಾಪ ಸಕ	ತಿ ನ .. ನಾಟ್
ಕರವತ್ತಿ ಪೆ.ಕಲ್ ಶ್ರೀ	... ಮ್..ನ.. ಕೆ....
.ವೀರನರಸಿಂಗ	ಮ್ ಶ್ರೀ ಮ...ರ್ಕೈ
..ವನ್ ಪ್ರತಿವಿರಸಿ	ಯಕಕತ್ತು...
ಮ್ ಪನ್ನಿ ಅ	..ಪೆರುಮಳ್ ಕ್ಕು
...ರುಳ ರ್ನಿಕ....	...ರುಮ್ ಪ
...ವೀರಸಿಂಹಸ (ನ) ತ್ತು	... ಸ ....
	.....

ಶಿಲಾಶಾಸನದ ಸಾರಾಂಶ

ಈ ಶಾಸನವು ಕಣಶಿಲೆಯಿಂದ ಕೂಡಿದ್ದು ಸುಮಾರು ೪ ಅಡಿ ೧೦ ಇಂಚು ಉದ್ದ, ೨ ಅಡಿ ಅಗಲ, ೭ ಇಂಚು ದಪ್ಪವಿರುವ ಈ ಶಾಸನವು ತಮಿಳು ಗ್ರಂಥಲಿಪಿ ಮತ್ತು ತಮಿಳು ಭಾಷೆಯಲ್ಲಿದೆ. ಶಾಸನದ ಕಾಲ ಕ್ರಿ.ಶ. ಸುಮಾರು ೧೬ನೇ ಶತಮಾನ ಈ ಶಾಸನದಲ್ಲಿ ಒಟ್ಟು ೧೭ ಸಾಲುಗಳಿವೆ. ಶಾಸನದಲ್ಲಿ ಕೆಲವೊಂದು ಅಕ್ಷರಗಳು ತೃಟಿತಗೊಂಡಿವೆ.

ಈ ಶಾಸನವನ್ನು ಕಣಶಿಲೆಯಲ್ಲಿ ಬರೆಲಾಗಿದ್ದು ಶಿಲೆಯ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಶಂಖ, ಚಕ್ರ ನಂತರ ಇವುಗಳ ಕೆಳಗೆ ಎಡ ಭಾಗಕ್ಕೆ ಪೀಠ, ಬಲ ಭಾಗಕ್ಕೆ ಹಸುವಿನ ಉಬ್ಬು ಶಿಲ್ಪಗಳ ಕೆತ್ತನೆಗಳಿವೆ. ಶಾಸನದ ಪಾಠವು ೩ ಅಡಿ ೪ ಇಂಚು ಉದ್ದ ಮತು ೧.೯ ಇಂಚು ಅಗಲವಿರುವ ಶಿಲೆಯಲ್ಲಿ ಬರೆಯಲಾಗಿದೆ. ಈ ಶಾಸನವು ಪೆರುಮಾಳ್ ದೇವರಿಗೆ/ದೇವಾಯಲಕ್ಕೆ (ವಿಷ್ಣು ದೇವಾಲಯಕ್ಕೆ) ವೀರನರಸಿಂಗ ಎಂಬುವನು ದೇವಾಲಯಕ್ಕೆ ದಾನ ನೀಡಿರುವ ಬಗ್ಗೆ ಶಾಸನವು ಉಲ್ಲೇಖಿಸುತ್ತದೆ.

* ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.



ಶಾಸನದ ಕಲ್ಲು



ಶಾಸನದ ಪಡಿಯಚ್ಚು

[ಕುಮಾರಸ್ವಾಮಿ.ಎಸ್.ಡಿ. ರವರಿಗೆ ಹಾಗೂ ಸ್ಥಳೀಯ ಅರ್ಚಕರಾದ ಶಿವಕುಮಾರ್‌ರವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಮತ್ತು ಶಾಸನವನ್ನು ಓದಿಕೊಟ್ಟ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಶಾಸನಶಾಸ್ತ್ರ ತಜ್ಞರಾದ ಬಾಲಮುರುಗನ್‌ರವರಿಗೆ ಮತ್ತು ನಾಗರಾಜಪ್ಪ.ಎಸ್. ಶಾಸನಶಾಸ್ತ್ರಜ್ಞರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ಆಕರ ಗ್ರಂಥಗಳು

೧. ಕನ್ನಡ ವಿಷಯ ವಿಶ್ವಕೋಶ, ಪರಿಷ್ಕೃತ ಸಂ. ೧. ೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ಮೈಸೂರು–೨೦೦೨.

೨. ಸೂರ್ಯನಾಥ ಯು.ಕಾಮತ್., ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ–೩, ಬೆಂಗಳೂರು.

೩. ಎಪಿಗ್ರಾಫಿಯ ಕರ್ನಾಟಿಕ, ಸಂ. ೪, ೧೯೭೫, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು.

೩೦

ಹಳೇಪುರದ ಅಪ್ರಕಟಿತ ಶಾಸನ

ಟಿ.ಎಲ್. ಜಗದೀಶ* ಎಸ್.ಡಿ. ಕುಮಾರಸ್ವಾಮಿ**

ಹಳೇಪುರ ಗ್ರಾಮವು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನಲ್ಲಿದ್ದು, ಈ ಗ್ರಾಮವು ಹುಣಸೂರು ಹುಣಸೂರಿನಿಂದ ಸುಮಾರು ೧೮ ಕಿ ಮೀ ದೂರದಲ್ಲಿ ಪೂರ್ವ ಭಾಗಕ್ಕಿದೆ. ಈ ಗ್ರಾಮವು ಪ್ರಾಚೀನ ಕಾಲದಿಂದ ಐತಿಹಾಸಿಕವಾಗಿ ಹಾಗೂ ಆರ್ಥಿಕವಾಗಿ ಧಾರ್ಮಿಕವಾಗಿ ಮಹತ್ವದಿಂದ ಕೂಡಿದ್ದಾಗಿದೆ. ಈ ಗ್ರಾಮದಿಂದ ಸುಮಾರು ೫೦೦ ಮೀಟರ್ ದೂರದಲ್ಲಿ ಹನುಮಂತ ದೇವರ ದೇವಾಲಯದ ಜೀರ್ಣೋದ್ದಾರ ಕಾರ್ಯ ನಡೆಯುತಿತ್ತು. ಆ ಸಮಯದಲ್ಲಿ ಪ್ರಾಚೀನ ಶಾಸನ ಇರುವುದು ಬೆಳಕಿಗೆ ಬಂದಿದೆ.

ಗ್ರಾಮದ ಉತ್ತರ ದಿಕ್ಕಿಗಿರುವ ಕೆರೆಯ ಪಕ್ಕದಲ್ಲಿರುವ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿದೆ. ಇದನ್ನು ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿದ್ದು, ಇದು ಒಂದು ಮುಕ್ಕಾಲು ಅಡಿ ಅಗಲ, ಮೂರುವರೆ ಅಡಿ ಉದ್ದ, ಹಾಗೂ ಅರ್ಧ ಅಡಿ ದಪ್ಪವಾಗಿರುವ ಈ ಶಾಸನವನ್ನು ಗ್ರಾನೈಟ್ ಶಿಲೆಯಲ್ಲಿ ಕೊರೆಯಲಾಗಿದೆ. ಈ ಶಾಸನದ ಭಾಷೆ ಮತ್ತು ಲಿಪಿ ಕನ್ನಡದಲ್ಲಿದೆ. ಈ ಶಿಲೆ ಗ್ರಾನೈಟ್ ಶಿಲೆಯಾಗಿದ್ದರೂ ಕೂಡ ಅಕ್ಷರಗಳನ್ನು ಸಣ್ಣದಾಗಿ ಬರೆಯಲಾಗಿದ್ದು, ಕೆಲವೊಂದು ಅಕ್ಷರಗಳು ತೃಟಿತಗೊಂಡಿದ್ದು ಅಸ್ಪಷ್ಟವಾಗಿವೆ. ಶಾಸನದಲ್ಲಿ ಒಟ್ಟು ಇಪ್ಪತ್ತೊಂದು ಸಾಲುಗಳ ಪಾಠವಿದೆ.

ಶಾಸನ ಪಾಠದ ಮೇಲ್ಭಾಗದ ಹದಿನೆಂಟು (೧೮) ಸೆಂ.ಮೀ. ಉದ್ದ, ಒಂದೂವರೆ ಅಡಿ ಅಗಲದ ಜಾಗದಲ್ಲಿ ಶಾಸನದ ಬಲ ಮತ್ತು ಎಡ ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಕೆತ್ತನೆ ಹಾಗೂ ಇವುಗಳ ಮಧ್ಯ ಭಾಗದಲ್ಲಿ ಹದಿನೆಂಟು (೧೮) ಸೆಂ ಮೀ ಎತ್ತರ, ಹದಿನೇಳು (೧೭) ಸೆಂ.ಮೀ. ಅಗಲವಿರುವ ಹನುಮಂತನ ಉಬ್ಬು ಶಿಲ್ಪಗಳಿವೆ.

ಶಾಸನದ ಪಾಠ

೧. ಸ್ವಸ್ತಿ ಶ್ರೀ ಜಯಾಭ್ಯುದಯ ಕಲಿಯುಗ ಪ್ರಮಾಣು ೪೩೨೦೦೦ (ವರು

೨. ಷಂಗಳು) ಸಂದ ಕಲಿವರುಷ ೪೭೧೯ ಶಾಲಿವಾಹನ ಶಕವರುಷ ೧೫

೩. ೩೯ ಸಂದ ಪಿಂಗಳ ಸಂವತ್ಸರ ಕಾರ್ತಿಕ ಶು ೫ ಶುಕ್ರವಾರ

೪. ದಲ್ಲೂ ಶ್ರೀಮತು ಕೊತ್ತವಗಾಲದ ಲಿಂಗರಾಜೊ

೫. ಡೆಯರವರ ಕುಮಾರರು ಲಕ್ಷ್ಮೀಕಾಂತೊಡೆಯರವರು ನಂ

೬. ಮ ಕೊತ್ತವಗಾಲದ ಅಕ್ಕಸಾಲೆ ಸುಬ್ಬಂಣ್ಣನ ಮಗ ಕೋದಂ

೭. ಡಯ್ಯನಿಗೆ ಕೊಟ್ಟ ಗ್ರಾಮದಾನದ ಕ್ರಮವೆಂತೆಂದಡೆ ನಂಮ

೮. ಕೊತ್ತವಗಾಲಕ್ಕೆ ಸಲುವ ಹಳೆಯಪುರ ಗ್ರಾಮ ೧

೯. ನೂ ನಾವು ನಿನಗೆ ಉಂಬಳಿಯಾಗಿ ಕೊಟ್ಟೆವಾಗಿ ಆ ಗ್ರಾಮ

೧೦. ಕೆ ಸಲುವ ಚತುಃಸಿಮೆಯೊಳಗಾದ ಕೆರೆ ತೋಟ ಗದ್ದೆ

೧೧. ಬೆಜ್ಜಲು ಅಣೆ ಅಚ್ಚುಗಟ್ಟು ಕಾಡಾರಂಭ ಯೇತ

೧೨. ತೂಬು ತೋಟ ವೊಡ್ಡು ವುಟ್ಟುವಲಿ ಆ ಗ್ರಾಮದ ಕಂದಾಯ


೧೩. ಕಾಣಿಕೆ ಬೆಡಿಗೆ ವಾರ ಮಗ್ಗೆ ಸುಂಕ ಮನೆಪಣ ಬಿಟ್ಟಿ

* ಸಹಾಯಕ ಪ್ರಾಧ್ಯಾಪಕರು (ಕನ್ನಡ), ಮಹಾರಾಣಿ ಕಲಾ ಕಾಲೇಜು, ಮೈಸೂರು, ಮೊ. ೯೯೬೪೯೩೩೯೨೦

** ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-೦೬, ಮೊ. ೮೨೭೭೧೯೪೬೪೨



ಶಾಸನದ ಕಲ್ಲು



ಶಾಸನದ ಪಡಿಯಚ್ಚು

೧೪. ಕೆ ಬೆಸ ನೂಲಮಲ್ಲಿಗೆ ಯೆಂಣೆ ಬೆಂಣೆ ಸರದಿ ಕಡ್ಡಾ
೧೫. ಯ ಯಲ್ಲವು ನಿಮಗೆ ಸಲುವುದು ನಂಮ ಅರಮನೆಗೆ
೧೬. ಕಾರಣವಿಲ್ಲಯು ಗ್ರಾಮ ನಿಂನ ಅಂಣ ತಂಮಿಂದಿರು
೧೭. ನಿಂನ ಮಕ್ಕಳು ಮೊಮ್ಮಕಳು ನಿನ್ನ ವಂಸಪಾರಂಪ
೧೮. ರೆಗೆ ಸಲುವುದು ಎಂದು ಕೊಟ್ಟ ಗ್ರಾಮ ಸಾಧನ ಯಿ
೧೯. ದಕ್ಕೆ ತಪ್ಪುದ್ದು ನಮ್ಮ ಅರ್ಕೇಶ್ವರ ಸ್ವಾಮಿಯ ಪಾದದಾಣೆ
೨೦. ನಂಮ ಲಕ್ಷ್ಮೀಕಾಂತ ಸ್ವಾಮಿಯ ಪಾದದಾಣೆ ನಂಮ
೨೧. ನಂಜುಂಡೇಶ್ವರನ ಪಾದದಾಣೆ . . . .

ಶಾಸನದ ಸಂಕ್ಷಿಪ್ತ ವಿವರ

ಶಾಸನವು ಸ್ವಸ್ತಿ ಶ್ರೀ (ಒಳ್ಳೆಯಾದಗಲಿ) ಎಂಬ ಆರಂಭಿಕ ಮಂಗಲ ಪದದೊಂದಿಗೆ ಆರಂಭಗೊಂಡಿದೆ. ನಂತರ ಕಾಲದ ಉಲ್ಲೇಖವಿದೆ. ಶಾಸನದ ವಸ್ತು ವಿಷಯವು ಕೊತ್ತವಗಾಲದ ಲಿಂಗರಾಜೋ ಒಡೆಯರವರ ಕುಮಾರ ಲಕ್ಷ್ಮೀಕಾಂತೊಡೆಯರವರು ಕೊತ್ತವಗಾಲದ ಅಕ್ಕಸಾಲೆ ಸುಬ್ಬಂಣ್ಣನ ಮಗ ಕೋದಂಡಯ್ಯನಿಗೆ ಈ ಕೊತ್ತವಗಾಲಕ್ಕೆ ಸಲ್ಲುವ ಹಳೆಯಪುರ ಗ್ರಾಮವನ್ನು ಉಂಬಳಿಯಾಗಿ ದಾನ ನೀಡಿರುವ ಉಲ್ಲೇಖವಿದೆ. ಇದಕ್ಕೆ ಯಾರಾದರು ತಪ್ಪಿದರೆ ನಮ್ಮ ಆರ್ಕೇಶ್ವರ ಸ್ವಾಮಿ ಮತ್ತು ಲಕ್ಷ್ಮೀಕಾಂತ ಸ್ವಾಮಿ ನಂಜುಂಡೇಶ್ವರನ ಪಾದದಾಣೆ ಎಂದಿದೆ. ಇನ್ನುಳಿದ ಶಾಸನದ ಭಾಗವು ಗಾರೆಯ ಗಚ್ಚಿನಲ್ಲಿ ಸೇರಿದೆ.

ಈ ಶಿಲಾ ಶಾಸನದಲ್ಲಿ ಕಾಲವನ್ನು ಕಲಿಯುಗ ಪ್ರ ೪೩೨೦೦೦ ವರುಷಕೆ ಸಂದ ಕಲಿವರುಷ ೪೭೮೯ ಶಾಲಿವಾಹನ ಶಕವರುಷ ೧೫೩೪ ಸಂದ ಪಿಂಗಳ ಸಂವತ್ಸರ ಕಾರ್ತಿಕ ಶು ೫ ಶುಕ್ರವಾರ ಎಂದು ದಾಖಾಲಾಗಿದೆ. ಇದು ಕ್ರಿ.ಶ. ೧೬೧೭

ಅಕ್ಟೋಬರ್ ೨೬ ಶುಕ್ರವಾರ ಕ್ಕೆ ಸರಿ ಹೊಂದುತ್ತದೆ. ಈ ಶಾಸನದ ಲಿಪಿಗೆ ಸಂಬಂಧಿಸಿದಂತೆ ಹೇಳುವುದಾರೆ ಮೈಸೂರು ಒಡೆಯರ ಕಾಲದ ಲಿಪಿಯನ್ನು ಲಿಪಿಕಾರನು ಗ್ರಾನೈಟ್ ಶಿಲೆಯಲ್ಲಿ ಚಿಕ್ಕದಾಗಿ ಕೆತ್ತಿರುವುದು ವಿಶೇಷ.

ಒಟ್ಟಾರೆಯಾಗಿ ಈ ಶಾಸನ ಹೊರಡಿಸಿದ ಕಾಲದಲ್ಲಿ ಮೈಸೂರು ಒಡೆಯರ ಅರಸು ಮನೆತನದ ರಾಜನಾದ ಅಂದರೆ ಕ್ರಿ.ಶ. ೧೬೧೭ರಲ್ಲಿ ರಾಜ ಒಡೆಯರ ಆಳ್ವಿಕೆಯ ಅಂತ್ಯ ಮತ್ತು ಐದನೇ ಚಾಮರಾಜ ಒಡೆಯರ ಆಳ್ವಿಕೆಯ ಆರಂಭದ ವರ್ಷದಲ್ಲಿ ಈ ಶಾಸನ ಹೊರಡಿಸಿದೆ. ಅಂದರೆ ಕೊತ್ತೆಗಾಲ ಪ್ರದೇಶವು ಈ ಕಾಲ ಘಟ್ಟಕ್ಕೆ ಆ ಭಾಗದ ಪ್ರಮುಖ ಆಡಳಿತದ ಕೇಂದ್ರವಾಗಿತ್ತು ಮತ್ತು ಈ ಪ್ರಾಂತ್ಯಕ್ಕೆ ಲಿಂಗರಾಜ ಒಡೆಯ ಎಂಬ ವ್ಯಕ್ತಿಯು ಆಡಳಿತ ಅಧಿಕಾರಿಯಾಗಿದ್ದರು ಎಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ.

[ಈ ಶಾಸನವನ್ನು ಪಡಿಹಚ್ಚು ತೆಗೆಯಲು ಸಹಕಾರ ನೀಡಿದ ಅನಿಲ್.ಎಲ್. ಸಂಶೋಧಕರು, ಅವರಿಗೂ ಶಾಸನ ಓದಿ ತಿಳಿಸಿಕೊಟ್ಟ ನಮ್ಮ ಗುರುಗಳು ಪ್ರೊ. ಎಸ್.ವಿ. ಪಾಡಿಗಾರ, ಸರ್‌ರವರು ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರೊ. ಎಂ.ಜಿ. ಮಂಜುನಾಥ ಪ್ರಾಧ್ಯಾಪಕರು ಹಾಗೂ ನಿರ್ದೇಶಕರು, ಪ್ರಸಾರಾಂಗ. ಮೈ. ವಿವಿ ಇವರಿಗೆ ನಮ್ಮ ಕೃತಜ್ಞತೆಗಳು]

ಆಕರ ಗ್ರಂಥಗಳು

೧. ನಾಯಕ. ಹಾ.ಮಾ., ಕನ್ನಡ ವಿಷಯ ವಿಶ್ವಕೋಶ, ಸಂಪುಟ ಸಂಖ್ಯೆ-೫, ಮೈಸೂರು ವಿಶ್ವವಿದ್ಯಾನಿಲಯ, ೧೯೭೯.

೨. ನಾಯಕ. ಹಾ.ಮಾ., ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ಸಂಖ್ಯೆ-೪, ಮೈಸೂರು ವಿಶ್ವವಿದ್ಯಾನಿಲಯ-೧೯೭೫.

೩. ನರಸಿಂಹಮೂರ್ತಿ. ಎ.ವಿ., ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು-೨೦೦೬.

೪. Dewan Bahadur L D Swamikannu Pillai, An Indian Ephemeris A. D 700 to A.D.1799, Asian Educationl Services New Delhi -1987.

೩೧

ಮಲೆಮಾಚಿಕೆರೆಯ ಅಪ್ರಕಟಿತ ವೀರಗಲ್ಲು ಶಾಸನ

ಹೆಚ್. ಹೊನ್ನೂರುಸ್ವಾಮಿ*

ಜಗಳೂರು ತಾಲೂಕಿನ ಗ್ರಾಮ ಮಲೆಮಾಚಿಕೆರೆ. ತಾಲೂಕಿನ ವಾಯುವ್ಯ ದಿಕ್ಕಿನಲ್ಲಿರುವ ಈ ಗ್ರಾಮ ಜಗಳೂರಿನಿಂದ ೧೪ ಕಿ.ಮೀ. ದೂರದಲ್ಲಿದೆ. ಸುತ್ತಲೂ ಕುರುಚಲು ಗಿಡಮರಗಳನ್ನು ಹೊಂದಿರುವ ಕಾಡಿನ ನಡುವೆ ಇದೆ. ಗ್ರಾಮದ ರಸ್ತೆ ಬದಿಯಲ್ಲಿ ಒಂದು ಸಾಧಾರಣವಾದ ಚಿಕ್ಕ ಗುಡಿಯಿದೆ. ಈ ಗುಡಿಯನ್ನು ಸ್ಥಳೀಯವಾಗಿ ವೀರಪ್ಪ ಮತ್ತು ಮಾರಪ್ಪ ಎಂದು ಕರೆಯುತ್ತಾರೆ. ಎರಡು ಹೆಸರುಗಳಿಂದ ಕರೆಯಲು ಕಾರಣ ಈ ಗುಡಿಯಲ್ಲಿ ಎರಡು ವೀರಗಲ್ಲುಗಳಿವೆ. ಗುಡಿಯೊಳಗೆ ಎರಡು ವೀರಗಲ್ಲುಗಳನ್ನು ಪ್ರತ್ಯೇಕಿಸಿರುವಂತೆ ಮಧ್ಯದಲ್ಲಿ ಒಂದು ಗೋಡೆಯನ್ನು ಕಟ್ಟಲಾಗಿದೆ. ಗುಡಿ ಪ್ರವೇಶದ್ವಾರಕ್ಕೆ ನೇರವಾಗಿ ಕಾಣುವ ಶಾಸನವಿರುವ ವೀರನ ವೀರಗಲ್ಲಿಗೆ ವೀರಪ್ಪ ಎಂದು ಕರೆಯುತ್ತಾರೆ. ಗುಡಿಯನ್ನು ಚೌಕಾಕರವಾಗಿ, ಚಪ್ಪಡಿ ಕಲ್ಲನ್ನು ಬಳಸಿ ನಿರ್ಮಾಣ ಮಾಡಲಾಗಿದೆ. ಇಲ್ಲಿರುವ ವೀರಗಲ್ಲು ಶಾಸನ ಅಪ್ರಕಟಿತವಾಗಿದ್ದು, ಆ ಶಿಲ್ಪದ ಲಕ್ಷಣದೊಂದಿಗೆ ಶಾಸನದ ಪಾಠವನ್ನು ನೀಡಲಾಗಿದೆ.

ಶಿಲ್ಪದಲ್ಲಿ, ವೀರ, ಆತನ ಸೇವಕ ಮತ್ತು ಶತ್ರುವೊಬ್ಬನನ್ನುಒಂದೆ ಹಂತದಲ್ಲಿ ಕಂಡರಿಸಿದೆ. ಶಿಲ್ಪದಲ್ಲಿ ವೀರ, ಆತನು ಕುಳಿತಿರುವ ಕುದುರೆಯನ್ನು ಪ್ರಧಾನವಾಗಿ ಚಿತ್ರಿಸಲಾಗಿದೆ. ವೀರನು ಎಡಗೈಯಲ್ಲಿ ಕುದುರೆಯ ಲಗಾಮು, ಬಲಗೈಯಲ್ಲಿ ಉದ್ದನೆಯ ಕತ್ತಿಯನ್ನು ಹಿಡಿದು ಮೇಲಕ್ಕೆ ಎತ್ತಿಹಿಡಿದಿದ್ದಾನೆ. ಕೈ ಕಾಲುಗಳಲ್ಲಿ ಕಡಗ, ತೋಳಬಂಧಿಯನ್ನು ಧರಿಸಿದ್ದಾನೆ. ಸೊಂಟದಲ್ಲಿ ನಡು ಪಟ್ಟಿಯಿದ್ದು, ಆಯುಧವೊಂದನ್ನು ಸಿಕ್ಕಿಸಿಕೊಂಡಿದ್ದಾನೆ. ಕೇಶವನ್ನು ವೀರಮುಡಿ ಕಟ್ಟಿದ್ದು, ತಲೆಯ ಮೇಲೆ ತೆಳುವಾದ ವಸ್ತ್ರವನ್ನು ಕಟ್ಟಿದ್ದಾನೆ. ವೀರನು ಕುಳಿತಿರುವ ಕುದುರೆಯನ್ನು ಮುಂದಿನ ಎರಡು ಕಾಲುಗಳನ್ನು ಎತ್ತಿ ಹಾರುತ್ತಿರುವಂತೆ ಕಂಡರಿಸಲಾಗಿದೆ. ಅದರ ಬೆನ್ನಿನ ಮೇಲೆ ಅಲಂಕಾರದ ಜೀನು ಮತ್ತು ಕೊರಳಿಗೆ ಗಂಟೆ ಸರವನ್ನು ಹಾಕಿದೆ. ಕುದುರೆ ಹಿಂಬದಿಯಲ್ಲಿ ಸೇವಕನೊಬ್ಬ ಕೈಗಳಲ್ಲಿ ಚತ್ರಿಯೊಂದನ್ನು ವೀರನ ತಲೆಯ ಮೇಲೆ ಬರುವಂತೆ ಎತ್ತಿ ಹಿಡಿದಿದ್ದಾನೆ. ಇದರಿಂದ ವೀರನು ರಾಜ ಪ್ರಮುಖನೆಂಬುದು ತಿಳಿದುಬರುತ್ತದೆ. ಸೇವಕ ಸೈನಿಕ ಮಾದರಿಯ ಉಡುಪು, ಸೊಂಟದಲ್ಲಿ ಪಟ್ಟಿ ಮತ್ತು ಕೈ ಕಾಲುಗಳಲ್ಲಿ ಧರಸಿರುವನು. ತಲೆಯ ಮೇಲೆ ವಸ್ತುವೊಂದನ್ನು ಕಟ್ಟಿರುವುದು ಕಂಡುಬರುತ್ತದೆ. ಕುದುರೆ ಮುಂಭಾಗದಲ್ಲಿ ಶತ್ರುವೊಬ್ಬನನ್ನು ಕಂಡರಸಿದೆ. ಬಲಗೈಯಲ್ಲಿ ಉದ್ದನೆ ಕತ್ತಿಯನ್ನು ಮೇಲಕ್ಕೆ ಎತ್ತಿಹಿಡಿದಿರುವನು. ಕತ್ತಿಯ ಮೇಲುತುದಿ ಮಾತ್ರ ಕಂಡುಬರುವಂತೆ ಶಿಲ್ಪಿ ಕೆತ್ತಿದ್ದಾನೆ. ಆತನ ಕೈ ಕಾಲುಗಳಲ್ಲಿ ಕಡಗ, ತೋಳಬಂಧಿಗಳಿವೆ. ಈ ಶಿಲ್ಪದ ಸುತ್ತಲು ಹೂವಿನ ಅಲಂಕಾರದ ಮಕರತೋರಣವನ್ನು ಚಿತ್ರಿಸಿದ್ದು, ಮಧ್ಯದಲ್ಲಿ ತಾವರೆಯ ಹೂವಿನ ಮೊಗ್ಗು ಕೆಳಗೆ ಇಳಿಬಿದ್ದಿರುವಂತೆ ಕಂಡರಿಸಲಾಗಿದೆ. ಈ ಶಿಲ್ಪದ ಎಡಭಾಗದಲ್ಲಿ ೧೩ ಸಾಲುಗಳ ಚಿಕ್ಕ ಶಾಸನವಿದೆ.



* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ. ಹಂಪಿ. ಮೊ. ೮೮೬೧೯೬೨೯೪೮

ಶಾಸನದ ಪಾಠ



೧ ಶೀ ಗಣ .
೨ ವಿವಶವಚ
೩ ರದ ಪೂ
೪ ನೊರ್ವ ಸು
೫ ನಕ್ಷತ್ರದ
೬ ಆಸಾಡ । ಮಾ
೭ ಸ । ಸೋಮ
೮ ವಾರ । ಪಾಡ್ಯ
೯ ದಲಿ । ನಿತರ
೧೦ ಹಗೆ ಬಸ
೧೧ ಪನ ತಂಮ । ಕ
೧೨ ಲಪ । ಕಠೆವಿ
೧೩ ರದ । ಲೆಗ್ಗೆ

ಯುವ ಸಂವತ್ಸರದ ಪುನರ್ವಸು ನಕ್ಷತ್ರದ ಆಷಾಢ ಮಾಸದ ಸೋಮವಾರ ಪಾಡ್ಯದಂದು. ಬಸಪ್ಪನ ತಮ್ಮ ಕಲ್ಲಪ್ಪನು, ಕಠೆವೀರದ ಮೇಲೆ ಲಗ್ಗೆ ಇಟ್ಟು ಮಡಿದಿರುವುದು ತಿಳಿಯುತ್ತದೆ. ಪ್ರಾಯಶಃ ಕಲ್ಲಪ್ಪನು ಸ್ಥಳೀಯ ಅರಸ ಅಥವಾ ಅಧಿಕಾರಿಯಾಗಿರಬೇಕು. ಕಠೆವೀರ ಎಂಬುದು ಲಗ್ಗೆ ಇಟ್ಟ ಸ್ಥಳದ ಹೆಸರಿರಬಹುದು?. ಸ್ಮಾರಕದ ಶಿಲೆಯ ಆಧಾರದಿಂದ ಕ್ರಿ.ಶ. ಸು. ೧೭–೧೮ನೇ ಶತಮಾನದ ವೀರಗಲ್ಲೆಂದು ಖಚಿತಪಡಿಸಿಕೊಳ್ಳಬಹುದು. ಒಟ್ಟಿನಲ್ಲಿ ಈ ಪ್ರದೇಶದ ಸ್ಥಳೀಯ ಅರಸ ಅಥವಾ ಅಧಿಕಾರಿಯೊಬ್ಬ ಹೋರಾಟವೊಂದರಲ್ಲಿ ಮಡಿದಿರುವುದು ಇದರಿಂದ ತಿಳಿದುಬರುತ್ತದೆ.

[ಲೇಖನವನ್ನು ಸಿದ್ಧಪಡಿಸುವಲ್ಲಿ ಸಲಹೆಗಳನ್ನು ನೀಡಿರುವ ಡಾ. ಶೀನಿವಾಸ ಪಾಡಿಗಾರ, ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕೃತಜ್ಞತೆಗಳು.]

೩೨

ಚಾಮರಾಜ ಒಡೆಯರ ಒಂದು ಅಪ್ರಕಟಿತ ತಾಮ್ರ ಶಾಸನ

ಬಿ.ಎಸ್. ಗುರುಪ್ರಸಾದ್*

ಬೆಂಗಳೂರಿನ ಬಳೇಪೇಟೆಯ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ, ದೇವಸ್ಥಾನವನ್ನು ಶುಚಿಗೊಳ್ಳಿಸುವ ಸಮಯದಲ್ಲಿ ದೊರೆತ ತಾಮ್ರ ಶಾಸನವಿದು. ದೇವಸ್ಥಾನದ ಕಾರ್ಯದರ್ಶಿಗಳು ಕಳೆದ ವರ್ಷ ನನಗೆ ಓದಲು ಅವಕಾಶ ಮಾಡಿಕೊಟ್ಟರು. ಈ ಶಾಸನವು ಈವರೆಗೆ ಎಲ್ಲೂ ಪ್ರಕಟವಾಗಿರುವುದಿಲ್ಲ.

ಈ ತಾಮ್ರ ಶಾಸನದ ಪಾಠವು ಒಂದೇ ಹಲಗೆಯಲ್ಲಿದ್ದು, ಮುಂಭಾಗದಲ್ಲೂ ಮತ್ತು ಹಿಂಭಾಗದಲೂ ಬರೆಯಲ್ಪಟ್ಟಿದೆ. ತಾಮ್ರದ ಹಲಗೆಯ ಶಾಲಾ ರೀತಿಯಲ್ಲಿ ಕತ್ತಾರಿಸಿದೆ. ಇದರ ಪ್ರಮಾಣ: ಉದ್ದ ೪೦ಸೆಂ.ಮಿ., ಅಗಲ ೨೫ ಸೆಂ.ಮಿ. ಮತ್ತು ತೂಕ ೧.೨ ಕೆಜಿ. ಮುಂಭಾಗದ ಪುಟದಲ್ಲಿ ೨೮ ಸಾಲುಗಳಿದ್ದು, ಹಿಂಬದಿ ಪುಟದಲ್ಲಿ ೪೪ ಸಾಲುಗಳಿವೆ. ಅಕ್ಷರಗಳನ್ನು ಬಹಳ ವಿರಳವಾಗಿ ಕಂಡರಿಸಿದೆ. ಎರಡೂ ಪುಟಗಳಲ್ಲಿ ಅಂತ್ಯದ ಎರಡು ಸಾಲುಗಳು ಬಹಳ ಒತ್ತಾಗಿ ಕಂಡರಿಸಿದ ಕಾರಣ, ಅಕ್ಷರಗಳನ್ನು ಓದುವುದು ಸ್ವಲ್ಪ ಕಷ್ಟ ಸಾಧ್ಯ.

ಶಾಸನದ ಮೊದಲ ಪುಟದ ಮೇಲ್ಭಾಗದಲ್ಲಿ ಸುಂದರವಾದ ನಿಂತಭಂಗಿಯಲ್ಲಿರುವ ವೇಣುಗೋಪಾಲ ಕೃಷ್ಣನ ರೇಖಾಚಿತ್ರವನ್ನು ಕಂಡರಿಸಿಲಾಗಿದೆ. ಅವನ ಎರಡೂ ಬದಿಗಳಲ್ಲಿ ಶಂಖು, ಚಕ್ರವನ್ನು ಬಿಡಿಸಿದೆ. ಕೃಷ್ಣನ ಎರಡೂ ಕೈಗಳಲ್ಲೂ ಶಂಖು, ಚಕ್ರವಿದ್ದು, ಮತ್ತೆರಡು ಕೈಗಳು ಕೊಳಲನ್ನು ಹಿಡಿದಿದೆ. ಮೇಲೆ ಹೇಳಿದ ಇಡೀ ಚಿತ್ರದ ಎರಡೂ ಬದಿಗಳಲ್ಲಿ ಸೂರ್ಯ ಮತ್ತು ಚಂದ್ರರನ್ನು ಕಂಡರಿಸಿದೆ.

ಭಾಷೆ ಮತ್ತು ಲಿಪಿ

ಶಾಸನದ ಪಾಠವು ಕನ್ನಡ ಲಿಪಿಯಲ್ಲಿದ್ದು, ಭಾಷೆ ತೆಲಗು. ಇದೊಂದು ದಾಶ ಶಾಸನವಾಗಿದೆ.

ಶಾಸನೋಕ್ತ ಕಾಲ ಮತ್ತು ರಾಜವಂಶ : ಶಾಲಿವಾಹನ ಶಕವರ್ಷ ೧೬೫೫ರ ಪ್ರಮಾದೀಚ ನಾಮ ಸಾಂವತ್ಸರದ ಕಾರ್ತಿಕ ಶುದ್ಧ ೧೫ನೇ ತೇದಿ, ಚಂದ್ರೋಪರಾಗ ದಿನದಂದು ಅಂದರೆ ಕ್ರಿ.ಶ. ೧೭೩೩ನೇ ಇಸವಿ ನವೆಂಬರ್ ೧೦ನೇ ತೇದಿ ಶನಿವಾರಕ್ಕೆ ಸರಿಹೊಂದುತ್ತದೆ. ಈ ಸಮಯದಲ್ಲಿ ಮೈಸೂರು ಅರಸರಾದ ಚಾಮರಾಜ ಒಡೆಯರ ಆಳ್ವಿಕೆಯು, ಶ್ರೀರಂಗಪಟ್ಟಣದಿಂದ ನಡೆಯುತ್ತಿತ್ತು. ಶಾಸನದ ಇತರ ಅಂಶಗಳನ್ನು ಗಮನಿಸಿದಾಗ ಇದೊಂದು ಅಧಿಕೃತವಾದ ತಾಮ್ರ ಶಾಸನವೆನ್ನಬಹುದು. ಶ್ರೀ ರಂಗಪಟ್ಟಣ ಅಧಿಕೃತವಾದ ತಾಮ್ರಪಟವೆನ್ನಬಹುದು.

ಶಾಸನ ಪಾಠದ ಅರ್ಥ ಮತ್ತು ಸಾರಾಂಶ : ಶಾಸನವು ಶ್ರೀ ಕೃಷ್ಣನ ಲೀಲೆಗಳನ್ನು [ಕಂಸಾಸುರನ ವಧೆ, ನರಕಾಸುರನವಧೆ, ಕಾಳಿಂಗ ಮಂರ್ಧನ ಮುಂತಾದವನ್ನು] ಬಣ್ಣಿಸಿದೆ. ನಂತರ ಬೆಂಗಳೂರು ಮತ್ತು ಸುತ್ತಮುತ್ತ ಸ್ಥಳದಲ್ಲಿರುವ ಸಮಸ್ತ ಯಯಾತಿ ಸಂಪ್ರದಾಯದ ಯಾದವ ಕುಲಬಾಂದವರು, ತಮ್ಮ ಕುಲದೇವರಾದ ವೇಣುಗೋಪಾಲ ಕೃಷ್ಣ ಸ್ವಾಮಿಯ ದಿನ ನಿತ್ಯ ಪೂಜಾ ಮತ್ತು ದೀಪಾರಾಧನ ಕೈಂಕರ್ಯಗಳನ್ನು ತಪ್ಪದೆ ನಡೆಸಿಕೊಂಡು ಹೋಗಲು, ಸಮಸ್ತ ಯಾದವ ಕುಲಬಾಂದವರ ಶ್ರೇಯೋಭಿವೃದ್ಧಿಗಾಗಿ, ಈ ದಾನ ಶಾಸನವನ್ನು ದಾಖಲಿಸಿದೆ ಎಂದು ಹೇಳುತ್ತದೆ. ೮೩ ದಾನಿಗಳ ಹೆಸರುನ್ನು ದಾಖಲಿಸಿರುವ ಈ ಶಾಸನ ಮನೆಗೊಂದರಂತೆ ೮೧ ಪಾಲೆ ವರ್ತನೆಯಂತೆ ನಿಗಧಿ ಪಡಿಸಿಕೊಂಡು, ನೀಡಲು ಒಪ್ಪಿ ದಾಖಲಿಸಿರುವ ಶಾಸನವಾಗಿದೆ. ಪಾಲೆಯೆಂಬುದು ಒಂದು ಅಳತೆಯ ಮಾಪನವೆನಿಸುತ್ತದೆ. [ಕನ್ನಡ ಪಾವು > ಪಾಲೆ ತೆಲುಗಿನಲ್ಲಿ?].

ಬಂನ್ನೇರುಘಟ್ಟ, ತಲಘಟ್ಟಪುರ, ಮಾಮೂಲ್ ಪೇಟ್, ಕೆಂಗೇರಿ, ಬೊಮ್ಮಸಂದ್ರ, ಎಂಬ ಸ್ಥಳಗಳ ದಾನಿಗಳನ್ನು ಹೆಸರಿಸಿದೆ. ಈಗಲೂ ಈ ಹೆಸರಿನ ಸ್ಥಳಗಳು ಅಸ್ಥಿತ್ವದಲ್ಲಿದೆ.

ದಾನ ಪರಿಗ್ರಹಿ: ಭಾರದ್ವಾಜ ಗೋತ್ರ, ಬೋಧಾಯನ ಸೂತ್ರದ ಯಜುಶ್ಯಾಖಾಧ್ಯಾಯದ ತಿಮ್ಮಯ್ಯಂಗಾರಿ– ಈತ ಕಸ್ತೂರಿ ಅಯ್ಯಂಗಾರ‍್ಯರ ಮೊಮ್ಮಗ ಮತ್ತು ಯಂಕಟಪತಿಯವರ ಮಗನೆಂದು ದಾಖಲಿಸಿದೆ.

* # ೩೧, ೩೩ನೇ 'ಎ' ಅಡ್ಡರಸ್ತೆ, ೮ನೇ ಬ್ಲಾಕ್, ಜಯನಗರ, ಬೆಂಗಳೂರು–೫೬೦೦೮೧. ಮೊ. ೯೫೩೫೦೯೭೩೩೭


ಶ್ರೀ ಕೃಷ್ಣಾಯ ನಮಃ

೧. ಸ್ವಸ್ತಿ ಶ್ರೀ ವಿಜಯಾಭ್ಯುದಯಾ ಶಾಲಿವಾಹನ ಶಖ ವರ್ಷಾಲುಗ ೧೬೫೫ ಏನಷುವಂ
೨. ಟಿ. ಪ್ರಮಾದಿಚ ಸಂವತ್ಸರಂ ಕಾರ್ತಿಕ ಶುದ ೧೫ ಗ್ರಹಣ ಚಂದ್ರೋಪರಾಗ ಪುಣ್ಯಕಾ
೩. ಲಮಂದು ಶ್ರೀ ಮದ್ರಾಜಾಧಿರಾಜ ರಾಜ ಪರಮೇಶ್ವರ ಚಾಮರಾಜ ವಡೇರು ಭೂಪಾ
೪. ಲುಡು ಶ್ರೀರಂಗ ಪಟ್ಟಣ ಮಂದು ರತ್ನ ಸಿಂಹಾಸನಾರೂಡುಡೈ ಪೃಥಿವಿ ಸಾಂಬ್ರಾಂ
೫. ಜ್ಯಂ ಚೇಸ್ತುನುಂಡಂಗ್ಗಾನು ಬೆಂಗಳೂರಿಲೋ ವುಂಡೆ ಸಮಸ್ತ್ರ ಮೈನಷು ವಂಟಿ
೬. ಯಾದವಲು ತಮ ಕುಲಸ್ವಾಮಿ ಪೂಜ ನಿಮಿತ್ಯಂಗ್ಗಾನು ಯಯಾತಿ ಸಾಂಪ್ರ
೭. ದಾಯ ಕುಲುಂನು ಯದುವಂಶೋಧ್ಭವುಲುಂನ್ನು ಶ್ರೀ ಗೋಪಾಲದೇವರ ದಿವ್ಯ
೮. ಶ್ರೀ ಪಾಧ ಪದ್ಮರಾಧಕುಲುಂನ್ನು ಅತಲ ವಿತಲ ಸುತಲ ತಲಾತಲ ರಸಾತ
೯. ಲ ಭೂ ಲೋಕ ಭುವರ್ಲೋಕ ಸುರಲೋಕ ಜನಲೋಕ ಸತ್ಯಲೋಕ ತಪೋ
೧೦. ಲೋಕ ಪೂಜ್ಯರುಲುಂನ್ನು ಗಾರ್ಗೆಯ ಮಹಾಮುನಿ ಕೃಪಾಕಟಾಕ್ಷ
೧೧. ವಿಕ್ಷಣಾಲಂಕ್ಕಾರು ಲುಂನು ಸಪ್ತಕುಲ ಪರ್ವತ ಸುಧಾಕರುಲುಂನ್ನು
೧೨. ಸಪ್ತಾಂಗ ರಕ್ಷಣ ವಿಚಕ್ಷಣುಲುಂನು ಅಮರೇಂದ್ರ ಮಾನಭಂಗುಲುಂ
೧೩. ನ್ನು ಕ್ಷೀರಘೃತ [ಸ]ಯೋನಿದು ಲುಂನ್ನು ಮಧುರಾಪುರ ಕೋಲಾಹಲುಲುಂ [ಪ]
೧೪. ನ್ನು ಕಂಸಾಸುರ ನರಕಾಸುರ ಕಭವಾಸುರ ಭಕಾಸುರ ಧೇನುಕಾಸು
೧೫. ರ ಕುಕ್ಕುಟಾಸುರ ಖರಾಸುರಾದಿ ಅನೇಕ ದಾನವ ತಲ ಗುಂಡುಗಂ [ತ]
೧೬. ಡರುಲುಂನ್ನು ಕಾಳಿಂಗ ಮಾನವರ್ಧನು ಲುಂನು ಬೃಂದಾವನ ಸಂಚಾ
೧೭. ರು ಲುಂನು ಸಾಮಿದ್ರೋಹ ಗಂಡರುಲುಂನು ಸೌಜನ್ಯರೆಂದು ರೋಮ
೧೮. ಣು ಲುಂನ ರಾಣಿವಾಸ ಸ್ತ್ರಿ ಲ ತಮ ತಲ್ಲಿಗಾ ಭಾವಿಂಚು ವಿಶ್ವಾಸ ಪ
೧೯. ರು ಲುಂನ್ನು ವಸುದೇವ ಕುಲೋಧ್ಭವುಲುಂನ್ನು ನಂದ ಗೋಪವರ ಪ್ರಸಾ
೨೦. ಧಕುಲುಂನ್ನು ರೇಪಲ್ಯ ಪಟ ಭದ್ರ ಲುಂನ್ನು ಅದ್ವಾಂದ ಕಲ್ಪ ವೃಕ್ಷ ಸಾ
೨೧. ಯಕುಲುಂನು ಗೋವಿಂದ ರಾಜುಲಕು ದ್ವಾರ ಪಾಲಕುಲುಂನು ಯ
೨೨. ರ್ರಗೋಡು ಯೇಕ ಶಂಖಂ ವಿಭೂತಿ ರುದ್ರಾಕ್ಷ ವೀರಗಂಧಂ ಚೆಲ್ಲಿಂಚು
೨೩. ಕೊರಿನ ಶಲಗೋಲ ಶಾಸನಾಂಕುಲುಂನ್ನು ಸತ್ಯಭಾಷಾ ಹರಿಶ್ಚಂದ್ರ
೨೪. ಲುಂನ್ನು ಸ್ರಿಕ್ರಿಷ್ಣುನಿ ವರಪ್ರಸಾದ ಕುಲುಂನ್ನು ಪಂಚವಂ ನೆಲ ಬಿರುದು
೨೫. ಗಲಿನ ಪರಮ ಪಾವನುಲುಂನು ಮುಗುರು ಮೂರ್ತುಲಕು ಶ್ರೀಪಾದ
೨೬. ಶೇವಕುಲುಂನು ರೊ ನ ಕೊಂಡ ಸಿಂಹ್ಮಾಸನಾಧಿಶ್ವರು ಲುಂನು ರಘು
೨೭. ನಾಯಕುಲಕು ಶ್ರೀಪಾದ ಶೇವಕುಲುಂನು ಬಲಭದ್ರನಿಕಿ ಬಾಂಧ
೨೮. ವು ಲುಂನು ಯಾದವಕುಲಂವಾರು ಯೇನುಗಲ್ಲ ಪಾಪಿ ನಾಯನಿ ಯಜಮಾನ

ತಾಮ್ರ ಪಟದ ಹಿಂಭಾಗ – ಪುಟ – ೨

೨೯. ಯಂಕಟ ಪತಿ ಅಬಂನ
೩೦. ನಿಟೂರಿ ವಾಜಯ ಕೊಮಾರು

೩೧. ಡು ಅಪಂನ ದಾದಿ ಮಾನಿ ಅಪಂನ
೩೨. ಪಾಲ ತಿಂಮಯ ಕೊಮಾರುಡು ದಾಸಯ್ಯ
೩೩. ಬಿಲ ಸಾದಪ ಕೊಮಾರುಡು ತಿಂಮರಾಯಂನ್ನ
೩೪. ಪಂಗಲ ಚಂಚಯ ರೇಕಲ ಯಂಕಟಪತಿ ಕೋಮಾ
೩೫.ರುಡು ರಂಗಯ ಮಲ್ಯ ಬೋನಿ ಅಂಕಯನ ಥ ಯಂಗಟ
೩೬. ಯ ಲಿಂಗ ತಿಂಮಯ ಪಿಲ್ಲ ತಿರುಮಲಯ ಚಿಂತ್ತಲ ಚೇ
೩೭. ರುಪ ಪಾಯ ಕೊಮಾರುಡ ವರದಯ ಮೋಕ್ಕಾ ಪಾಪಯ
೩೮. ಸನ್ಯ ಬೋವಿ ಗುರುವಯ ಮಾಕನ ಬೋನಿ ಚಲುವಯ
೩೯. ಬಿಲ್ಲಗಟ ಯಂಗಟಪತಿ ಕಂಪಸಾನಿ ಜಂಗಮಯ
೪೦. ಬೊಕ್ಕಸಂ ಬಾಲಗುರುವಯ ಬಿಲದಾಸಯ ಮಲೆಗೇರಿ ಅಣ್ಣಯ
೪೧. ಮಸೂರಿ ಅನುಮಯ ಗೊನಿಬೊನಿ ಅಪಯ ಅಂಗಶಗಿರಿ ಜಂಗಮಯ ಮು
೪೨. ದಿ ಗುಬ ಯಂಕಟಪತಿ ಪರ್‍ವತ ರಾಚಯ ಗಜಲ ಪಾಟ ಯಂಗಯ ಪೊಪುಲೆ
೪೩. ಪಯ ಗಣಿಗಲ ಗುರವಯ ದಾಸಿನಾಯನಿ ಯಲಿಯ ಚಂದ್ರಗೇರಿ ಪಾಪಯ
೪೪. ಪೇದಿಕೊಂಡೆಯ ಯಿಂಡ್ಲಯಲಿಯ ಕಾವಲಿ ದಾಸಯ ರೆಡಿಮಾನಿಕೋನೇಟಿ ಧಾ
೪೫. ರಂ ತಿಂಮಯ ಕಾರ್ಕರ್ಲ ಗುರವಯ ಕಂಬಾಲ ವಾಬಯ ಚವುಡಗಾನಿ ತಿಂಮ
೪೬. ಬಕಯ ಬಿಲತಿಂಮಯ ಬಂಡಾರಿತಿಂಮಯ ಕಸನಮಾನಿ ಗುರುವಯ
೪೭. ಲೊವಾಕಿಲಿ ಕದುರಯ, ಮಾಮೂಲ ಪೇಟ ಚಂಟಯ ಕೆಂಗೇರಿ ಸನಿವಾರಯ
೪೮. ಪಚಯ ದಾಶಿರಿ ಪಲ್ಯ ಹನುಮಯ ಚೇಟಪಲ್ಯ ಹನುಮಯ ತಲಗಟ
೪೯. ಪುರಂ ಕಂಚಯ ಬೊಂದುಸಂದ್ರಂ ಚಿಂನಯ ಯಿೂರಬಿಂಣಯ ಗೆರೆ ತಿಂ
೫೦. ಮಯ ಸುಗಯ ಕೂಚುಗೂರಿ ಚಿಂನಯ ವಸಂತಯ ಮೊಬಳಿ ಗುರ್‍ರ
೫೧. ಪ ಸಾಲ ಗುರವಯ ವಂಶಂ ರಾಘವಯ ಸಿಂಗ್ರೇಗಲುನಿ ಕೋಮಾರು ದೊಡ್ಡಯ
೫೨. ಮುನ್ನೆಯ ಬಂಡಾರಿ ಬಾಲಗುರವಯ ದಾಸಯ ಬಂಡಾರಿ ಹನುಮಯ ಬಂ
೫೩. ಡಾರಿ ತಿಂಮಯ ರವಣಯ್ಯ ಬಾಲಯ ಸಿರಾಮ ನಂಜಯ ಗೊಲಯಂಕಟ
೫೪. ಯ ಗಂಗಯ ಕೊಮಾರುಡು ಚಿಂಣಯ ಬೋಡಾ ಯಂಗಟಯ ಪಂದಲ ಗಂಗ
೫೫. ಯ ತುರಾಯಿ ಚಿಂಣಯ ಪಿಲ್ಲಿಗಾನಿ ಪಲ್ಯ ಯಂಗಟೆಯ ಗೋಳಪಲ್ಲಿತೀಪಯ್ಯ
೫೬. ಚನಗಾನಿ ಯಂಗಟಪತಿ ಯನುಪೋತುಲ ತಿಂಮಮ ಪುಲ್ಲಸಂದ್ರಂಯ
೫೭. ರ್‍ರಯ ಸಿದಯ ಗುಂಜೂರಿ ಅಂಣಯ ಕೋಪುಲ ಬಾಲಯ ಬಂನೇರುಗಟದೇ
೫೮. ವಿರಯ ಕಸ್ತೂರ್‍ತೈಯ ಯಂಗ್ಗಾದಾಸಿರಿ ಸಮಸ್ತಮ್ಯೆನ ಯಾದವ ಕುಲಂವಾ
೫೯. ರು ಗೋಪಾಲ ಕ್ರಿಷ್ಣಸ್ವಾಮಿ ಪಡಿತರ ದೀಪಾರಾಧನ ನಿಮಿತ್ಯಂಗ್ಗಾನು ಯಿ
೬೦. ಟಿಕಿ. ೮೧ ಪಾಲೆಗೆ ಪ್ರಕಾರಂ ವರ್ತನನಿಗಧಿಪರಚಿ ಪೇದಲಕು ಧರ್‍ಮ್ಮಂ ರಾ
೬೧. ನಿ ಅನಿ ಯಿೂ ಭಾರದ್ವಾಜ ಗೋತ್ರುಲೈನ ಬೋಧಾಯನ ಸೂತ್ರುಲೈನ ಯಜು
೬೨. ಶಾಖಾದ್ಯಾಯು ಲೈನ ಸಾದು ಪಲ್ಯ ಕಸ್ತೂರ ಯಂಗಾರಿ ಪೌತ್ರ್ಯ ಲೈನ ಯಂ
೬೩. ಕ್ಕಟಪತಿ ಅಯಂಗಾರಿ ಪುತ್ರುಡೈನ ತಿಮಯಂಗಾರಿಕಿ ತ್ರಿಕರಣ ಶುದ್ಧಿ



ತಾಮ್ರಪಟದ ಮುಂಭಾಗ



ತಾಮ್ರಪಟದ ಹಿಂಭಾಗ

೬೪. ಗಾ ತ್ರಿವಾಚಕ ಮುಗಾ ದಾನ ಧಾರಾಪೂರ್‍ವಕಮುಗಾ ಯಿಚಿನ ದಾನ ಶಾಸನಂ

೬೫. .... ತ್ತಾ ಪುತ್ರಿ ಕಾ ಭಾರ್‍ಯ ಪರದತ್ತ ಸಹೋದರಿ ಪಿತೃದತ್ತ ಸ್ವಯಂ ಮಾತಾ ವಿ

೬೬. ... ದತ್ತಾ ವಸುಂಧರಾ . ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನುಪಾ

೬೭. ಲನಂ, ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್ . ದಾನಪಾಲನ

೬೮. ಯೋರ್ಮದ್ಯೇ ದಾನಾಶ್ಚೇ ಯೋನು ಪಾಲನಂ ದಾನಂ ಸ್ವರ್ಗ ಮವಾಪ್ನೋ

೬೯. ತಿ ಪಾಲ ನದಚ್ಯುತಂ ಪದಂ ಯಿ ಅಂನಂ ಮೀರು ಪುತ್ರ ಪವುತ್ರ ಪಾ

೭೦. ರಂ ಪರ್‍ಯಂತ್ರ ಮುಂನು ಪ್ರಸಾಪಡು ಕೋನಿ ಮಾಕು ಧರ್ಮಂ ಜೇರ್ಚುಕೊ

೭೧. ನಿ ಸುಕಂಗಾವುಂಡಮನಿ ಯಿಚಿನ ತಾಂಬ್ರ ವು ಶಾಸನಂ ಕಲ್ಲ ನಿಕಿಲೋ

೭೨. . . . . ಎಂಡಿಕಿ

೩೩

ಮಧ್ಯಕಾಲೀನ ಕರ್ನಾಟಕದಲ್ಲಿ ಕಾಪಾಲಿಕರು
(ಅಪ್ರಕಟಿತ ಶಾಸನದ ಹಿನ್ನೆಲೆಯಲ್ಲಿ)

ಕಲವೀರ ಮನ್ವಾಚಾರ*

ಕರ್ನಾಟಕದ ಧಾರ್ಮಿಕ ಪಂಥಗಳಲ್ಲಿ ಶೈವ ಅತ್ಯಂತ ಪ್ರಮುಖವಾಗಿ ಕಂಡುಬರುವುದು. ಮಧ್ಯಕಾಲೀನ ಕರ್ನಾಟಕ ಶೈವ ಪರಂಪರೆ ಸಮೃದ್ಧವಾದ ೮ರಿಂದ ೧೨ನೆಯ ಶತಮಾನದ ಕಾಲಾವಧಿಯು ಉಚ್ಛ್ರಾಯವಾದ ಕಾಲಘಟ್ಟವಾಗಿದೆ. ಶೈವ ಪರಂಪರೆಗಳಲ್ಲಿ ಕಾಳಾಮುಖರು ಪ್ರಮುಖವಾಗಿ ಶಾಸನಗಳಲ್ಲಿ ಕಂಡುಬಂದರೆ, ಸಾಹಿತ್ಯದಲ್ಲಿ ಅವರ ಸ್ಥಾನ ನಗಣ್ಯವಾದದ್ದು. ಆದರೂ ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಕಾಳಾಮುಖರು ಕೊಟ್ಟ ಕೊಡುಗೆ ಮತ್ತಾರಲ್ಲೂ ಕಾಣಲು ಸಾಧ್ಯವಿಲ್ಲ. ಅವರು ನಿರ್ಮಿಸಿದ ದೇವಾಲಯಗಳು ಅವರು ಕೊಟ್ಟ ಕೊಡುಗೆ ಅಪಾರವಾದದ್ದು.

ಕರ್ನಾಟಕದ ಶೈವರಲ್ಲಿ ಕಾಳಾಮುಖರನ್ನು ಹೊರತುಪಡಿಸಿ ಇತರ ಧಾರ್ಮಿಕ ಪಂಥಗಳಾದ ಕಾಪಾಲಿಕ ಮತ್ತು ಪಾಶುಪತ ಶೈವ ಪಂಥಗಳು ಕಂಡುಬರುವುದು ತುಂಬಾ ಅಪರೂಪ. ಅದರಲ್ಲೂ ಕಾಪಾಲಿಕರನ್ನು ಕುರಿತು ಹೇಳುವುದಾದರೆ ಅವರಿಗೆ ಸಂಬಂಧಿಸಿದ ಯಾವುದೇ ಅಧಿಕೃತವಾದ ದಾಖಲೆಗಳು ನಮಗೆ ಈವರೆಗೂ ಲಭ್ಯವಿಲ್ಲ. ಆನುಷಂಗಿಕವಾಗಿ ಉಲ್ಲೇಖವಾಗುವ ಮಾಹಿತಿಗಳನ್ನು ಹೊರತುಪಡಿಸಿದರೆ ನಿರ್ದಿಷ್ಟವಾಗಿ ಇದ್ದರೆಂದು ತಿಳಿಸುವ ಯಾವುದೇ ಶಾಸನೋಕ್ತ ದಾಖಲೆಗಳು ಈವರೆಗೆ ಲಭ್ಯವಾಗಿಲ್ಲ. ಸಾಹಿತ್ಯದಲ್ಲಿ ಅನೇಕ ಕಡೆ ಉಲ್ಲೇಖಗೊಳ್ಳುತ್ತಾರೆ. ಕರ್ನಾಟಕದಲ್ಲಿ ನಾಲ್ಕು ಶೈವ ಶಾಖೆಗಳು ಇದ್ದುದನ್ನು ಶಾಸನಗಳು ಸ್ಪಷ್ಟವಾಗಿ ಉಲ್ಲೇಖಿಸುತ್ತವೆ.

ಉದಾ : ನೆಗರ್ದ್ದ ಮಹಾಬ್ರತಿಗಳೊಳಂ
ನೆಗರ್ದ್ದ ಮಹಾಪಾಶುಪತದೊಳ್ ಶ್ರೋತ್ರಿಯದೊಳಂ
ನೆಗರ್ದ್ದದಗಣಿತ ಮೆನಲ್ಕೆ
ನೆಗರ್ದ್ದ ಕಾಳಾಮುಖಂ ಸುಧರ್ಮ್ಮಂ ಪ್ರಮುಖಂ.


ಇದೊಂದು ಕಾಳಾಮುಖರ ಶಾಸನವಾಗಿದ್ದು ತನ್ನ ಕಾಲಘಟ್ಟದ ಇತರ ಶೈವ ಶಾಖೆಗಳನ್ನು ಉಲ್ಲೇಖಿಸುತ್ತಲೇ ತನ್ನ ಮಹತಿಯನ್ನು ಹೇಳಿಕೊಳ್ಳುತ್ತದೆ. ಮಹಾವ್ರತ, ಮಹಾಪಾಶುಪತ ಮತ್ತು ಶ್ರೋತ್ರಿಯರಲ್ಲಿ ಕಾಳಾಮುಖವೇ ಅತ್ಯಂತ ಶ್ರೇಷ್ಠ, ಸುಧರ್ಮ ಎನ್ನುವ ಈ ಶಾಸನ ಶೈವದ ನಾಲ್ಕು ಪ್ರಮುಖವಾದ ಶೈವ ಶಾಖೆಗಳನ್ನು ಪರಿಚಯ ಮಾಡಿಕೊಡುತ್ತದೆ. ಇದು ಈ ವ್ಯಾಖ್ಯಾನವು ಬ್ರಹ್ಮಸೂತ್ರಕಾರನಾದ ಭಾಸ್ಕರಾಚಾರ್ಯ ಬ್ರಾಹ್ಮಿತಿ ರಚನಕಾರನಾದ ವಾಚಸ್ಪತಿ ಮಿಶ್ರ ರಾಮಾನುಜಾಚಾರ್ಯರ ಗುರುಗಳಾದ ಯಾಮುನಾಚಾರ್ಯರು, ರಾಮಾನುಜಾಚಾರ್ಯರು ಹೇಳುವ ಮತ್ತು ಶೈವಗಳ ಉದಾಹರಣೆಗೆ ಸಮನಾಗಿದೆ. ಮಲ್ಕಾಪುರಂ ಶಾಸನವು ಕೂಡ ಶಿವಶಾಸನ, ಪಾಶುಪತ, ಕಾಳಾನನ ಮತ್ತು ಶೈವ ಸಂಪ್ರದಾಯಗಳನ್ನು ಉಲ್ಲೇಖಿಸುತ್ತದೆ. ಅಲ್ಲದೆ ನಾರದೀಯ ಪುರಾಣ, ಶಿವಪುರಾಣ, ವಾಯುವೀಯ ಸಂಹಿತೆ, ಸ್ಕಂದ ಪುರಾಣ, ವಾಮನ ಪುರಾಣ, ವಶಿಷ್ಠ ಮತ್ತು ಲಿಂಗ ಪುರಾಣ ಇತ್ಯಾದಿ ಕೃತಿಗಳಲ್ಲೂ ನಾಲ್ಕು ಶೈವಗಳ ಪ್ರಭೇದಗಳನ್ನು ಗುರುತಿಸುತ್ತವೆ. ಹದಿನಾಲ್ಕನೆಯ ಶತಮಾನದಲ್ಲಿ ರಚಿತವಾದ ಸಾಯಣ ಮಾಧವರ ಕೃತಿಗಳಲ್ಲೂ ಕೂಡ ನಾಲ್ಕು ಶೈವ ಶಾಖೆಗಳನ್ನು ಹೇಳಲಾಗಿರುವುದು ವಿಶೇಷ. ಇದನ್ನು ಹೀಗೆ ವಿಸ್ತರಿಸಬಹುದು.

ಶಿವನ ಬೆಳವಣಿಗೆಯನ್ನು ಪುರಾಣೀಕರಣಗೊಳಿಸಿಕೊಳ್ಳುತ್ತಲೇ ಅಂತರ್‌ಮುಖಿಯಾಗಿ ಸಮುದಾಯ ಪರಂಪರೆಯೊಂದನ್ನು ಬೆಳೆಸಿಕೊಳ್ಳೂತ್ತಲೇ ಬಂದಿತು. ಅದು ವೇದಗಳಿಗೆ ವಿರುದ್ಧವಾದ, ಶಿವನನ್ನು ಅದರಲ್ಲಿ ಜನಸಮುದಾಯಾದ ಶಿವನನ್ನು ಕಾಣುವುದೇ ಆಗಿದೆ. ಇಲ್ಲಿ ಕಾಪಲಿಕರು ತಮ್ಮದೆ ಆದ ಆಚರಣೆಯನ್ನು ಶಿವನಲ್ಲಿ ಕಂಡುಕೊಂಡರು. ಭೈರವನ ರೂಪದಲ್ಲಿ ಅವನನ್ನು ತಮ್ಮವನನ್ನಾಗಿಸಿಕೊಂಡರೆ, ಲಿಂಗ ರೂಪದಲ್ಲಿ ಮತ್ತೊಬ್ಬರು ಕಲ್ಪಿಸಿಕೊಂಡರು. ಇಂತಹ ಭಿನ್ನ ರೂಪಗಳನ್ನು

* ಪ್ರಾಧ್ಯಾಪಕರು, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬. ಮೊ. ೯೪೪೯೦೨೧೯೪೯

ಬೌದ್ಧ ಸಾಹಿತ್ಯವು ಕಟ್ಟಿಕೊಡುತ್ತದೆ. ನಗ್ನವಾಗಿ ಮೈಯಿಗೆ ಬೂದಿ ಬಳಿದುಕೊಂಡು ಓಡಾಡುತ್ತಿದ್ದವರನ್ನು ಬುದ್ಧನ ಸಮಕಾಲೀನ ಸಾಹಿತ್ಯದಲ್ಲಿ ಕೂಡ ಕಾಣಬಹುದು.

ಶೈವ ಪರಂಪರೆಯನ್ನು ಮತ್ತೊಂದು ರೀತಿಯಲ್ಲಿ ಹೀಗೆ ಹೇಳಬಹುದು.



ಕಾಪಾಲಿಕರನ್ನು ಕುರಿತು ಮೊದಲ ಉಲ್ಲೇಖ ಸಿಗುವುದು ಯಜ್ಞವಲ್ಕ್ಯ ಸ್ಮೃತಿಯಲ್ಲಿ ಅದರಲ್ಲಿ ಬರುವ ಈ ಮಾಹಿತಿ ಹೀಗಿದೆ.'ಒಂದು ತಲೆ ಬುರುಡೆ ಹಾಗೂ ಕೈಯಲ್ಲಿ ಒಂದು ದೊಣ್ಣೆ ಹಿಡಿದುಕೊಂಡು ಭಿಕ್ಷೆಯನ್ನು ಬೇಡುತ್ತಾ, ತನ್ನ ದುಷ್ಕೃತ್ಯಗಳನ್ನು ಸಾರುತ್ತಾ ಹಾಗೂ ಅಲ್ಪ ಆಹಾರ ಸೇವನೆಯನ್ನು ಮಾಡುತ್ತಾ ಇದ್ದರೆ, ಒಬ್ಬ ಬ್ರಾಹ್ಮಣನ ಕೊಂದ ಮಹಾಪಾತಕ ಹನ್ನೆರಡು ವರ್ಷಗಳಲ್ಲಿ ಕೊನೆಗೊಳ್ಳುತ್ತದೆ' ಎಂದು ಹೇಳುತ್ತದೆ. ಇದು ಕಾಪಾಲಿಕರ ಬಗ್ಗೆ ಹೇಳುವುದೇ ಆಗಿದೆ. ಒಂದನೇ ಶತಮಾನದಲ್ಲಿ ರಚನೆಯಾಗಿರಬಹುದಾದ ಗಾಥಸಪ್ತಸತಿಯಲ್ಲಿ ಕಾಪಾಲಿಕ ಮಹಿಳೆಯೋರ್ವಳ ಉಲ್ಲೇಖ ಬರುತ್ತದೆ. ಅವಳು ಭಸ್ಮ ಸ್ನಾನ ಮಾಡುತ್ತಲೇ ಇರುವ ಸಂಗತಿಯನ್ನು ಅದು ಹೇಳುತ್ತದೆ. ವರಾಹಮಿಹೀರನ ಕೃತಿಗಳಲ್ಲಿ ಕಾಪಾಲಿಕರ ಉಲ್ಲೇಖಗಳು ದೊರಕುತ್ತವೆ. ಹಾಗೆಯೇ ಎರಡನೇ ಶತಮಾನದ ಲಲಿತ ವಿಸ್ತಾರ ಕೃತಿಯಲ್ಲಿಯೂ ಸಹ ಕಾಪಾಲಿಕರ ಕುರಿತು ವಿವರಣೆ ಇದೆ.

ಬದಾಮಿ ಚಾಲುಕ್ಯ ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಭಾರತಕ್ಕೆ ಭೇಟಿಕೊಟ್ಟ ಚೀನಾದ ಹುಯಾತ್ಸಂಗ್‌ನು ಕಾಪಾಲಿಕರನ್ನು ಕಂಡು ಅವರು ಇದ್ದ ಮಾಹಿತಿಯನ್ನು ಕೊಡುತ್ತಾನೆ. ಅವನ ಪ್ರಕಾರ ದಕ್ಷಿಣ ಭಾರತದ ಶ್ರೀಶೈಲವು ಕಾಪಾಲಿಕರ ಶ್ರದ್ಧಾಕೇಂದ್ರವಾಗಿತ್ತೆಂದು ದಾಖಲಿಸುತ್ತಾನೆ.

ಇದಲ್ಲದೆ ಪಲ್ಲವ ದೊರೆ ಮಹೇಂದ್ರವರ್ಮನು ಮತ್ತವಿಲಾಸ, ಶ್ರೀಹರ್ಷನ ನೈಷದ ಚರಿತೆ, ಮಾಲತಿ ಮಾಧವ, ವಿಕ್ರಮ ಭಟ್ಟನ ನಳಚಂಪು, ಸೋಮದೇವ ಸೂರಿಯ ಕಥಾ ಸರಿತ್ಸಾಗರ ಮುಂತಾದ ಕೃತಿಗಳಲ್ಲಿ ಕಾಪಾಲಿಕರ ಕುರಿತು ವಿವರಣೆ ಇದೆ.

ಕಾಪಾಲಿಕರನ್ನು ಮಹಾವ್ರತ, ಮಹಾವ್ರತಿನ್, ಸೋಮ ಸಿದ್ಧಾಂತಿಗಳೆಂದು ಕರೆಯಲಾಗಿದೆ. ಮಹಾವ್ರತ ಮತ್ತು ಸೋಮಸಿದ್ಧಾಂತಿ ಎನ್ನುವುದು ಕಾಪಾಲಿಕರಿಗೇ ಸಂಬಂಧಪಟ್ಟಿದ್ದೆಂದು ಮೇಲಿನ ಕೃತಿಗಳು ತಿಳಿಸುತ್ತವೆ. ಸೋಮದೇವನ ಕಥಾ ಸರಿತ್ಸಾಗರದಲ್ಲಿ ಶೈವ ಯತಿಗಳನ್ನು ಕಾಪಾಲಿಯನ್, ಮಹಾವ್ರತಿನ್ ಎಂದು ಕರೆದರೆ ವಿಕ್ರಮಭಟ್ಟನಾಯಕ ನಳಚಂಪುವಿನ ಭಾಷ್ಯಕಾರನಾದ ಚಂಡಪಾಲನು ಕಾಪಾಲಿಕ ಹಾಗೂ ಮಹಾವ್ರತಿಗಳನ್ನು ಒಂದೇ ಎಂದು ಕರೆಯುತ್ತಾನೆ. ಮಾಲತಿ ಮಾಧವದಲ್ಲಿ ಕಾಪಾಲಿಕ ವ್ರತವನ್ನು ಮಹಾವ್ರತಿಗಳೆಂದೇ ಕರೆಯುತ್ತಾನೆ. ಕ್ಷೀರ ಸ್ವಾಮಿಯ ಅಮರಕೋಶದ ಭಾಷ್ಯದಲ್ಲಿ ಕಾಪಾಲಿಕರನ್ನು ಮಹಾವ್ರತ ಹಾಗೂ ಕೋಮಸಿದ್ಧಾಂತಿಗಳೆಂದು ಉಲ್ಲೇಖಿಸುತ್ತಾರೆ. ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ ಕಾಪಾಲಿಕರ ಹಲವಾರು ಉದಾಹರಣೆಗಳು ದೊರಕುತ್ತವೆ. ಇವೆಲ್ಲವೂ ಕಾಪಾಲಿಕರ ಆನುಷಂಗಿಕವಾದ ಉಲ್ಲೇಖಗಳೇ ಆಗಿವೆ. ಕಾಪಾಲಿಕರನ್ನು ಕುರಿತು ಸ್ವತಂತ್ರವಾದ ಯಾವುದೇ ಕೃತಿಗಳು ನಮಗೆ ಉಪಲಬ್ಧವಿಲ್ಲ.

ಶಾಸನೋಕ್ತ ಆಕರಗಳು

ಚತ್ತಿಸಘಡ ರಾಜ್ಯದ ಮಲ್ಹರ ಕ್ರಿ.ಶ. ೫೬೦ರ ತಾಮ್ರಪಟದಲ್ಲಿ ಕಾಪಲಿಕರ ವಿವರ ಬರುತ್ತದೆ. ಅದು ಕೊಡುವ ವಿವರಗಳು ಹೀಗಿದೆ:

"ಆದಿಮ ಶಕ್ತಿಯು ಎಂಟು ರೂಪ(ಮೃತ್ಯುಚೌ)ಗಳಾಗಿ ಮೈದಳಿದು, ಆ ಎಂಟು ಸಾಕಾರ ರೂಪಗಳೆ ಮೂರ್ತರೂಪಗಳಾಗಿ ಹೊರಹೊಮ್ಮಿದೆ. ಅದೇ ಶಕ್ತಿ ಅರವತ್ತಾರು ರುದ್ರರಾಗಿ, ಕಾಲಾತೀತವಾಗಿ ಮೋಕ್ಷವನ್ನುಂಟುಮಾಡುವಂತದ್ದಾಗಿದೆ. ಅದೇ ಶಕ್ತಿ ಕಲಿಯುಗದಲ್ಲಿ ಲಕುಲೀಶನಾಗಿ ಭೂಮಿಯಲ್ಲಿ ಮೈದಾಳಿದೆ. ಸೋಮವರ್ಮನ್ (ಸೋಮ, ಚಂದ್ರನೆ ಅವನ ವಾಸಸ್ಥಾನವಾಗಿರುವ) ಎಂಬ ಬ್ರಾಹ್ಮಣನಲ್ಲಿ ಜನಿಸಿದ. ಇವನು ಮಹಾವ್ರತದ (ಕಾಪಾಲಿಕ) ಹರಿಕಾರನಾಗಿದ್ದಾನೆ. ಅಲ್ಲದೆ ಜಗದಿಂದು (ಜಗತ್ತಿಗೆ ಬೆಳಕಾಗಿರುವವನು)ವಾಗಿರುವವನು. ಲಕುಲೀಶ–ಸೋಮನಿಂದ ಆರಂಭಗೊಂಡ ಮಹಾವ್ರತ ಪರಂಪರೆಯಲ್ಲಿ ಭೀಮಸೋಮ ಗುರುವಾಗಿ ಬಂದನು. ಅವನ ಶಿಷ್ಯ ತೇಜಸೋಮ, ಅವನ ಶಿಷ್ಯ ರುದ್ರಸೋಮ ಬಂದರು" ಎನ್ನುತ್ತದೆ ಈ ಶಾಸನ.

ಆಂಧ್ರಪ್ರದೇಶದ ನಲ್ಗೊಂಡಾ ಜಿಲ್ಲೆಯ ಕೊಲನುಪಾಕ ಅಥವಾ ಇಂದಿನ ಕೊಲ್ಲಿಪಾಕದ ಶಾಸನ ಅತ್ಯಂತ ಪ್ರಮುಖವಾದುದು. ಇದು ಚಾಲುಕ್ಯ ಅರಸು ಮೊದಲನೆಯ ಸೋಮೇಶ್ವರನ ಆಳ್ವಿಕೆಯ ಕಾಲದ್ದಾಗಿದ್ದು, ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದೆ. ಕ್ರಿ.ಶ. ೧೦೫೦ರ ಶಾಸನದಲ್ಲಿ ಸೋಮ ಸಿದ್ಧಾಂತಿ ಅಥವಾ ಕಾಪಾಲಿಕ ಸೋಮಿಭಟ್ಟಾರಕನ ಉಲ್ಲೇಖ ಬರುತ್ತದೆ. "(ಶಿಳಾತ)ಮುಖಕಮಲ ವಿನಿರ್ಗಿತ ಸೋಮ ಸಿದ್ಧಾಂತಾಭಿಪ್ರಾಯ ಪರಾಯಣಮ್ಭಸ್ಮದ್ಧೂಳಿತ[ಷಣ್ಮುದ್ರಾ]ಲಂಕೃತ ಖಟ್ವಾಂಗ ಡಮರುಗ ಕಾಹಲಂ ಶ್ರೀ ಶ್ರೀನಾಥ ಪಾದಪಂಕಜಭ್ರಮರ ಮಹಾವ್ರತಿ ದಾನಾಂಬುರಾಶಿ ಸತ್ಯತಪೋನಿಧಿ" ಎಂದು ಸೋಮಭಟ್ಟಾರಕನನ್ನು ಹೋಗಳುತ್ತದೆ. ಸೋಮಭಟ್ಟಾರಕನು ಗಂಗಮರಾಜನ ಸೇವಕನಾದ ಚಂಡಮಯ್ಯನಿಗೆ ಭೂಮಿಯನ್ನು ದಾನವಾಗಿ ಕೊಟ್ಟನು. ಇಲ್ಲಿ ಶಿಳಾತಮುಖ ಎನ್ನುವುದನ್ನು ಓದಲಾಗಿಲ್ಲ. ಶಿಳಾತ ಎನ್ನುವುದನ್ನು ಮುಂದೆ ಚರ್ಚಿಸುತ್ತೇನೆ. (treasury of truth and ascetism) ಎಂದು ಕರೆದಿದ್ದು, ಷಣ್ಮುದ್ರೆಗಳಿಂದ ದೇಹವು ಅಲಂಕೃತಗೊಂಡಿತ್ತೆಂದು ಹೇಳುತ್ತದೆ. ಅಲ್ಲದೆ, ಖಟ್ವಾಂಗ, ಕಪಾಲ ಪಾತ್ರೆ, ಡಮರು, ಮೃದಂಗ, ಮತ್ತು ಕಹಳೆ ವಾದ್ಯಗಳನ್ನು ಹೊಂದಿರುವನೆಂದು ತಿಳಿಸುತ್ತದೆ. ಸೋಮಭಟ್ಟಾರಕನು ಉವಿಕರವರದ ಉರಿನಾಥ ದೇವಾಲಯದ ಸ್ಥಾನಾಧಿಪತಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತಾನೆ.

ಸಮಕಾಲೀನ ಮತ್ತೊಂದು ತಾಮ್ರ ಶಾಸನವೆಂದರೆ ಕ್ರಿ.ಶ. ೧೦೪೭ರ ಬರೋಡ ಜಿಲ್ಲೆಯ ತಿಲಕವಾಡ ಬಳಿಯ ನರ್ಮದಾ ನದಿಯ ತಟದಲ್ಲಿ ದೊರೆತ ತಾಮ್ರಪಟ. ವಿಲೂಹಜ ಎಂಬ ಹಳ್ಳಿಯಲ್ಲಿ ಶ್ರೀಕಂಠೇಶ್ವರ ದೇವಾಲಯಕ್ಕೆ ಭೂಮಿ ದಾನ ಕೊಟ್ಟ ಶಾಸನ ಇದಾಗಿದ್ದು, ಪರಮಾರ ದೊರೆ ಭೋಜನ ಅಧಿಕಾರಿಯೋರ್ವನಿಂದ ಶಿವ ಅಥವಾ ಕಪಾಲಿ ಸ್ವರೂಪನಾದ ದಿನಕರ ಎಂಬ ಮಹಾವ್ರತ ಮುನಿಯು ಈ ದಾನವನ್ನು ಸ್ವೀಕರಿಸಿದ ಉಲ್ಲೇಖವಿದೆ. ಹಿಮಾಚಲ ಪ್ರದೇಶದ ಕಾಡ್ಗಾಲ ಜಿಲ್ಲೆಯ ನಿರ್ಮಾಂಡಹಳ್ಳಿಯಲ್ಲಿ ದೊರೆತ ತಾಮ್ರ ಶಾಸನ ಸಮುದ್ರಸೇನನ ಕಾಲಕ್ಕೆ ಸೇರಿದ್ದು. ನಿಮಂಡ ಹಳ್ಳಿಯನ್ನು ಕಾಪಾಲೇಶ್ವರನ ಪೂಜಾ ಕಾರ್ಯಗಳಿಗೆ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದು ಫ್ಲೀಟ್‌ರವರ ಪ್ರಕಾರ ೭ನೆಯ ಶತಮಾನಕ್ಕೆ ಸೇರಿದ್ದು. ಈ ರೀತಿ ಕಾಪಾಲೇಶ್ವರ ಎನ್ನುವಂತಹ ಉಲ್ಲೇಖಗಳು ೧೩ನೆಯ ಶತಮಾನದ ತನಕ ದೊರೆಯುವ ಶಾಸನಗಳಲ್ಲಿ ಉಲ್ಲೇಖವಾಗಿದೆ. ಹಾಗೆಯೇ ತಮಿಳುನಾಡಿನ ಮೈಲಾಪುರವು ಕಾಪಾಲಿಕರ ಕೇಂದ್ರವಾಗಿದ್ದನ್ನು ಕಥೆಯೊಂದು ಸಾಬೀತುಪಡಿಸುತ್ತದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಕಾಪಾಲಿಕರನ್ನೇ ಕುರಿತು ದೊರಕುವ ಶಾಸನಗಳು ಇಲ್ಲವೇ ಇಲ್ಲ. ಆದರೆ ಆನುಷಂಗಿಕವಾಗಿ ಹಲವಾರು ಕಡೆ ಉಲ್ಲೇಖಗಳು ದೊರಕುತ್ತವೆ. ಇದನ್ನು ಡಾ. ಎಂ. ಚಿದಾನಂದ ಮೂರ್ತಿಯವರು ಹಾಗೂ ಡೇವಿಡ್ ಲಾರೆಂಜೆನ್‌ರವರು ಗಮನಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ಶ್ರವಣಬೆಳಗೊಳ ಹಾಗೂ ಟಿ. ನರಸೀಪುರದ ಶಾಸನಗಳು ಪ್ರಮುಖವಾಗಿದ್ದು ಅವುಗಳನ್ನು ಇಲ್ಲಿ ನೋಡಬಹುದಾಗಿವೆ. ಅಲ್ಲದೆ ಮೇವುಂಡಿಯ ಕ್ರಿ.ಶ. ೮೯೭ರ (ಎಸ್.ಐ.ಐ. ೯, ಭಾಗ–೧, ೨೨) ಶಾಸನದಲ್ಲಿ ಸೋಮ ಸಿದ್ಧಾಂತ ಎಂಬ ಉಲ್ಲೇಖ ಬರುತ್ತದೆ. ಅಲ್ಲದೆ ಹಾನಗಲ್ ತಾಲೂಕಿನ ಕ್ರಿ.ಶ.೮೫೯ರ ಶಾಸನದಲ್ಲಿ "ಪುರುಷೋತ್ತಮ ನೆರೆಯ ಬಳ್ಳೆಯಂ ಕಂಕಾಳ ಗೊರವರ ಕಾಲಂ ಕರ್ಚಿ" (ಐಎ ೧೯೪೬ ಪು.೨೦೭–೮) ಎಂಬ ಉಲ್ಲೇಖಗಳು ಹೆಚ್ಚುವರಿಯಾಗಿ ಗಮನಸಬಹುದು. ಮೇವುಂಡಿಯ ಶಾಸನ ಸೋಮ ಸಿದ್ಧಂತ ಎನ್ನುವುದು ಹಾಗೂ ಹಾನಗಲ್ಲಿನ ಶಾಸನವು ಕಂಕಾಳ ಗೊರವರನ್ನು ಉಲ್ಲೇಖಿಸುವುದು ತುಂಬಾ ಕುತೂಹಲವಾದ ವಿಷಯ. ಯಾಕೆಂದರೆ ಈಗ ದೊರಕಿರುವ ಉಪಲಬ್ಧ ಶಾಸನವು ಸೋಮಸಿದ್ಧಾಂತ ಹಾಗೂ ಕಂಕಾಳ ಗೊರವರನ್ನೇ

ಉಲ್ಲೇಖಿಸುತ್ತದೆ. ಸೋಮಸಿದ್ಧಾಂತ ಎಂದರೆ ಹಿಂದೆ ಸೂಚಿಸಿದಂತೆ ಕಾಪಾಲಿಕರಿಗೇ ಇರುವ ಹೆಸರಾಗಿದೆ. ಅಲ್ಲದೆ ಕಂಕಾಳ ಎನ್ನುವುದು ಎಲುಬುಗಳ ಮಾಲೆಯನ್ನು ಧರಿಸಿದವನಗೆ ಕಂಕಾಳ ಎನ್ನುವ ಹೆಸರು. ಆ ಕಾರಣಕ್ಕಾಗಿಯೇ ಕಂಕಾಳ ಗೊರವ ಎನ್ನುವ ವಿಶೇಷ ನಾಮ ರೂಢಿಯಾಗಿರುವ/ಪ್ರಾಪ್ತವಾಗಿರುವ ಹಾಗೆ ಕಂಡು ಬರುತ್ತದೆ. ಕರ್ನಾಟಕಲ್ಲಿ ದೊರಕುವ ಕಾಪಾಲಿಕರ ಕುರಿತ ಶಾಸನಗಳಲ್ಲಿ ಕಾಪಾಲಿಕರೆನ್ನವುದಕ್ಕಿಂತ ಸೋಮಸಿದ್ಧಾಂತಿಗಳೆನ್ನುವುದೇ ಹೆಚ್ಚು ರೂಢಿಯಲ್ಲಿರುವ ಹಾಗೆ ಕಾಣಬರುತ್ತದೆ. ಆದರೆ, ಶ್ರವಣಬೆಳಗೊಳದ ಕ್ರ.ಶ ೯೭೪ ಶಾಸನ ಹಾಗೂ ಕ್ರಿ.ಶ. ೧೧೨೯ರ ಶಾಸನ ಹಾಗೂ ಟಿ. ನರಸೀಪುರದ ಕ್ರಿ.ಶ. ೧೧೮೩ರ ಶಾಸನಗಳು (EC VIII ३८) ಇವುಗಳನ್ನು ಗಮನಿಸಲೇಬೇಕು. ಶ್ರವಣಬೆಳಗೊಳದ ಶಾಸನಗಳು ಕಾಪಾಲಿಕರನ್ನು ಕುರಿತು ಹೀಗೆ ಹೇಳುತ್ತದೆ.

ಓಳಿಯ ಕೋದು ಪಲ್ಲವರ ಪನ್ದಲೆಯನೆಲ್ಲಮನೊಯ್ದು ಒಟ್ಟಿ ಕಾ
ಪಾಲಿಕರೊರಿ ಸಾರಿ ಪರಮಣ್ಡಳಿಕರ್ಕಳೆಲ್ಲನಮ್ಮ ನೀವು ಈ ಯೋ
ಳಿಗೆ ನಮ್ಮ ಪನ್ದಲೆಗಳಂ ಬರಲೀಯದೆ ಕಣ್ಡು ಬಾಳ್ವುದೇಲೋಳಿಯ
ಳೆಂಬಿನಂ ನೆಗಳ್ದುದೊಟ್ಟಜಿ ಮಣ್ಡಳೀಕತ್ರಿಣೇತ್ರನಾ ॥

ಇದು ಮಾರಸಿಂಹನ ಸಾಹಸಗಳನ್ನು ಹೇಳುವ ಸಮಯದಲ್ಲಿ ಬರುವ ವೃತ್ತವಾಗಿದೆ. ಮಾಂಡಲಿಕರನ್ನು ತನ್ನ ಅಂಕಿಯಲ್ಲಿಟ್ಟುಕೊಳ್ಳುವುದು ಹೇಗೆ ಎಂಬ ಭೀಕರ ಸತ್ಯವನ್ನು ಕಾಪಾಲಿಕರಿಗೆ ಹೋಲಿಸಿ ಕವಿ ವರ್ಣಿಸುತ್ತಾನೆ. ಆಗ ತಾನೇ ಕಡಿದ ತಲೆಯಿಂದ ಹೊರಹೊಮ್ಮುವ ರಕ್ತಧಾರೆಯ ಶಿರಗಳನ್ನು ಪೋಣಿಸಿ ಮಾಲೆಯಾಗಿ ಧರಿಸಿರುವಂತೆ ಪಲ್ಲವರ ತಲೆಗಳನ್ನು ಒಂದು ಎಳೆಯಲ್ಲಿ ಪೋಣಿಸಿ ಧರಿಸುತ್ತಾನೆ ಎನ್ನುತ್ತದೆ. ಈ ವರ್ಣನೆ ಕಾಪಾಲಿಕರ ಆಚರಣೆಯನ್ನು ಅವರು ಮಾಡುತ್ತಿದ್ದ ಬಲಿದಾನಗಳನ್ನು ಸಂಸ್ಕೃತ ಸಾಹಿತ್ಯ ಹೇಳುವುದನ್ನು ಇದು ಪ್ರತಿಬಿಂಬಿಸುತ್ತದೆ.

ಆದರೆ ಶ್ರವಣಬೆಳಗೊಳದ ಶಾಸನ (ಇಸಿ ೨ ೭೭) ಇದಕ್ಕೆ ವಿರುದ್ಧವಾಗಿ ಒಬ್ಬ ಗುರುವಿನ ವಿದ್ವತ್ತನ್ನು ಹೇಳುವ ಸಂದರ್ಭದಲ್ಲಿ ಕಾಪಾಲಿಕರನ್ನು ಪರಿಚಯಿಸುತ್ತದೆ. ವಿಮಲಚಂದ್ರಸೂರಿಗಳು ತಮ್ಮ ಮನೆಯ ಮುಂದೆ ಒಂದು ನಾಮಫಲಕವನ್ನು ಹಾಕಿಕೊಂಡಿದ್ದರಂತೆ. ಪಾಶುಪತ, ಸುಗತ, ಕಾಪಾಲಿಕ, ಜಾಪಿಲ, ಮುಂತಾದವರು ವಾಗ್ವಾದಕ್ಕೆ ಬರುವ ಮುನ್ನ ಯೋಚಿಸಿ ಬರಬೇಕೆಂದು ಅದರಲ್ಲಿ ಬರೆಯಲಾಗಿತ್ತು. ಇದೇ ಪದ್ಯ ಟಿ. ನರಸೀಪುರದ ಕ್ರಿ.ಶ. ೧೧೮೩ರ ಶಾಸನವು ಇದನ್ನೆ ಹೇಳುತ್ತದೆ.

ಪತ್ರಂ ಶತ್ರು ಭಯಂ ಕರೋರುಭವನದ್ವಾರೇ ಸದಾ ಸಂಚರನ್ನಾನಾ
ರಾಜಕರೀಂದ್ರ ಬೃಂದತುರಗ ಬ್ರಾತಾಕುಳೇ ಸ್ಥಾಪಿತಂ
ಶೈವಾನ್ಪಾಶುಪತಾನ್‌ಸ್ತಥಾಗತ ಸುತಾನ್ಕಾಪಾಳಿಕಾನ್ನಾಪಿಳಾನುದ್ದಿ
ಶ್ಯೋದ್ಧ ತಚೇತಸಾನ್ಸವಮಳ ಚಂದ್ರಾರಾಂಬರೇಣಾದ(ದಣಾ)ರಾತ್ ॥

ಇವೆಲ್ಲ ಆಕರಗಳು ಕರ್ನಾಟಕದಲ್ಲಿ ಕಾಪಾಲಿಕರು ಇದ್ದ ಮಾಹಿತಿಯನ್ನು ತಿಳಿಸುತ್ತದೆ. ಆದರೆ ಸ್ವತಂತ್ರವಾದಂತಹ ಯಾವದೇ ಶಾಸನಗಳು ಈವರೆಗೂ ದೊರಕಿರಲಿಲ್ಲ. ಈ ನೆಲೆಯಲ್ಲಿ ಈಗ ದೊರಕಿರುವ ಶಾಸನ ಅತ್ಯಂತ ಪ್ರಮುಖವಾದದ್ದು. ರಾಯಚೂರು ಜಿಲ್ಲೆ ಸಮೀಪವಿರುವ ಮಲಿಯಾಬಾದ್ ಬೆಟ್ಟದ ತಪ್ಪಲಲ್ಲಿರುವ ಗುಹೆಯ ಮೇಲ್ಭಾಗದಲ್ಲಿ ಬರೆಯಲಾಗಿರುವ ಶಾಸನವು ಕಾಪಾಲಿಕರ ಬಗ್ಗೆ ಅಧಿಕೃತವಾದ ಮಾಹಿತಿಯನ್ನು ಕೊಡುವ ಶಾಸನವಾಗಿದೆ. ತೇದಿ ರಹಿತವಾಗಿರುವ ಈ ಶಾಸನ ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದಾಗಿದೆ.

ಅದರ ಪಠ್ಯ ಹೀಗಿದೆ.

೦೧ ಸ್ವಸ್ತಿ ಸಿಳಾತ ಪಾಣಿ ಮುಖಕಮಲ ವಿನಿರ್ಗಿತ ಸೋಮಸಿದ್ಧಾಂತಾಧ್ಯಾಯನ ಸಂಪನ್ನರಪ್ಪ ವರಮು

೦೨ ನಿವರ ನಿವಹ ಸಂಸೇವ್ಯಮಾಣರುಃ ಮೂರ್ತಿಗಳಪ್ಪ ಶ್ರೀಮದ್ ನಿರೂಮಯ ಕಂಕಾಳಗೊರವರಾ ಶ್ರೀ ರಟ್ಟವಂಶ ಮಹಾ

೦೩ ವನ ಶಮ್ಮನಾ ರಾಜ್ಯದೊಳಾ (ಕೆಲವು ಅಕ್ಷರಗಳನ್ನು ಅಳಿಸಿ ಹಾಕಲಾಗಿದೆ) ಗುಹೆಯಂ ಲಿಂಗಮುಮಂ ಮಾಡಿ ತಪಂ ಗೆಯ್ದು

೦೪ ದೇವ*ರ ಕಣ್ಡು ಮಿನ್ದು ದೇವರ ಕಣ್ಡು ಗುಹೆಯ ನೋಡಿದೊಡೆ ಪಾಪಂ ಕಿಡಿಗುಂ

(*ವ ಅಕ್ಷರವನ್ನು ಮಿ ಅಕ್ಷರದ ಕೆಳಗಡೆ ಬರೆಯಲಾಗಿದೆ.)


ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಬದಲಾಗಿ ರಟ್ಟವಂಶ ಅಂದರೆ ಈ ಶಾಸನ ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದಾಗಿದ್ದು 'ರಟ್ಟ' ಎಂದರೆ ರಾಷ್ಟ್ರಕೂಟರೇ ಆಗಿದ್ದಾರೆ ಇಲ್ಲಿ ಕಂಕಾಳ ಗೊರವನು ಗುಹೆಯನ್ನು ಮತ್ತು ಗುಹೆಯ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿರುವ ಹಾಗೆ ಕಂಡುಬರುತ್ತದೆ. ಕಂಕಾಳ ಗೊರವನು ಸೋಮಸಿದ್ಧಾಂತದಲ್ಲಿ ಅಥವಾ ಕಾಪಾಲಿಕ ಸಿದ್ಧಾಂತದಲ್ಲಿ ಅತ್ಯಂತ ಪ್ರಾವಿಣ್ಯ ಪಡೆದಿರುವ ಸನ್ಯಾಸಿಯಾಗಿ ಕಂಡುಬರುತ್ತಾನೆ. ಆದರೆ ಇಲ್ಲಿ ಸಂಸ್ಕೃತ ಸಾಹಿತ್ಯ ನೀಡುವ ಭೀಕರತೆ ಕಾಣದೇ ಇರುವುದು ಒಂದು ಪ್ರಮುಖ ವಿಷಯ. ಅಲ್ಲದೆ ಮುಂದಿರುವ ಕಲ್ಯಾಣಿಯಲ್ಲಿ ಮಿಂದು ಬಂದು ಲಿಂಗವನ್ನು ದರ್ಶಿಸಿದರೆ (ನೋಡಿದರೆ) ಪಾಪ ಹೋಗುತ್ತದೆ ಎಂಬುದು ಭೀಕರತೆಯನ್ನು ಪ್ರತಿನಿಧಿಸದೇ ಜನಸಾಮಾನ್ಯರನ್ನು ಒಳಗುಮಾಡಿಕೊಂಡಿರುವ ಹಾಗೆ ಕಾಣುತ್ತೇವೆ.

ಶಾಸನದ ಕಾಲ

ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಆದರೆ, ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದೆಂದು ಶಾಸನವೇ ಹೇಳುತ್ತದೆ. ಆಂತರಿಕ ಪ್ರಮಾಣಗಳನ್ನು ಹಾಗೂ ಶಾಸನದ ಲಿಪಿಯನ್ನು ಗಮನಿಸಿದರೆ ಕ್ರಿ.ಶ. ಸು. ೮೫೦ರ ಕಾಲಕ್ಕೆ ಸೇರಿಸಬಹುದಾಗಿದೆ. ಈ ಶಾಸನದ ಲಿಪಿಯು ಅಮೋಘವರ್ಷ ನೃಪತುಂಗನ ಕಾಲಕ್ಕೆ ಹೊಂದಿಕೆಯಾಗುತ್ತದೆ. ಅದರಲ್ಲೂ ಅಮೋಘವರ್ಷನ ಶಿಗ್ಗಾವಿಯ ಕ್ರಿ.ಶ. ೮೬೫, ಶಿರೂರಿನ ಕ್ರಿ.ಶ. ೮೬೬ ಹಾಗೂ ನಿಡುಗಂದೆಯ ಶಾಸನಗಳ ಲಿಪಿಗೆ ಈ ಶಾಸನದ ಲಿಪಿ ಹೊಂದಿಕೆಯಾಗುತ್ತದೆ. ಆ ಕಾರಣ ಮಲಿಯಾಬಾದ ಶಾಸನವನನ್ನು ಕ್ರಿ.ಶ. ಸುಮಾರು ೮೫೦ಕ್ಕೆ ತೆಗೆದುಕೊಳ್ಳಬಹುದು. ಅಲ್ಲದೆ, ರಟ್ಟವಂಶ ಮಹಾವನಶಮ್ಮನ ರಾಜ್ಯ ಎಂದಿದ್ದು ಮಹಾವನಶಮ್ಮ ಯಾರು ಎನ್ನುವುದು ತಿಳಿಯುವುದಿಲ್ಲ. ಆದರೆ, ಅಮೋಘವರ್ಷನಿಗೆ ಆ ಬಿರುದು ಇದ್ದಿರುವ ಸಾಧ್ಯತೆಗಳು ಹೆಚ್ಚು. ಈ ಎಲ್ಲ ಕಾರಣಗಳಿಂದ ಈ ಶಾಸನವನ್ನು ೯ನೆಯ ಶತಮಾನದ ಮಧ್ಯದಲ್ಲಿ ಇಡಬಹುದು.

ಕೊಲ್ಲಿಪಾಕಿಯ ಶಾಸನವು . . . ಮುಖಕಮಲ ವಿನಿರ್ಗಿತ ಸೋಮ ಸಿದ್ಧಾಂತಾಭಿಪ್ರಾಯ ಪರಾಯಣಂ ಎಂದು ಆರಂಭವಾಗುತ್ತದೆ. ಪರಬ್ರಹ್ಮಶಾಸ್ತ್ರಿ ಅವರಿಗೆ ಶಿಖಾತ ಎನ್ನುವುದನ್ನು ಓದಲಿಕ್ಕೆ ಆಗಿಲ್ಲ. ಹಾಗೆಯೆ ಬಳ್ಳಿಗಾವೆ ಶಾಸನವವು ಸಂಗೀತ ಮತ್ತು ನೃತ್ಯಗಳ ವಿಷಯ ಬಂದಾಗ ಭರತಮುನಿಯು ನಾಟ್ಯವು ಶಿವನಿಂದಲೇ ನೇರವಾಗಿ ಹೇಳಲ್ಪಟ್ಟಿತ್ತೆಂದು ಹೇಳುವ ಸಂದರ್ಭವನ್ನು ಶಾಸನ ವ್ಯಕ್ತಪಡಿಸುತ್ತದೆ. ವೇದವೇದಾಂಗಗಳೆಲ್ಲವು ಹುಟ್ಟಿದ್ದು ಎಂದು ಹೇಳುವ ಸಂದರ್ಭಲ್ಲಿ ಇಟಗಿಯ ಕ್ರಿ.ಶ. ೧೧೧೨ ಶಾಸನವು "ಹಿರಣ್ಯಗರ್ಭ ಬ್ರಹ್ಮಮುಖ ಕಮಲವಿನಿರ್ಗಿತವೇದ ವೇದಾಂಗ...."ಳೆಲ್ಲವು ಹಿರಣ್ಯಗರ್ಭನಲ್ಲಿ ಹುಟ್ಟಿದ ಬ್ರಹ್ಮನಿಂದ ರಚಿತವಾದವು ಎನ್ನುತ್ತದೆ. ಅದೇ ರೀತಿ ಈ ಶಾಸನವು ಸೋಮಸಿದ್ಧಾಂತವು ಶಿಖಾತಪಾಣಿ ಮುಖಕಮಲದಿಂದ ಬಂದದ್ದು ಎಂದು ಶಾಸನ ಆರಂಭವಾಗುತ್ತದೆ. ಅಂದರೆ, ಶಿವನಿಂದಲೇ ನೇರವಾಗಿ ಹೇಳಲ್ಪಟ್ಟಿತ್ತೆಂದು ತಿಳಿಸುತ್ತದೆ. ಶೈವದ ಎಲ್ಲ ಪ್ರಕಾರಗಳು ಇದನ್ನೇ ಹೇಳುತ್ತದೆ. ಉದಾಹರಣೆಗೆ ಗಮನಿಸುವುದಾದರೆ, ಕಾಶ್ಮೀರ ಶೈವದ ತ್ರಿಕ ಸಿದ್ಧಾಂತದ ಗ್ರಂಥವಾದ 'ವಿಜ್ಞಾನ ಭೈರವ' ಗ್ರಂಥವು ಶಿವನು ಗೌರಿಗೆ ಹೇಳ್ಪಟ್ಟಿದ್ದನ್ನು ತಿಳಿಸುತ್ತದೆ.

ಗೊರವ ಎನ್ನುವ ಶಬ್ದ ಇಲ್ಲಿ ಗಮನಿಸಲೇಬೇಕಾದ ಮತ್ತೊಂದು ಶಬ್ದ. ಗೊರವ ಎನ್ನುವುದು ಈಗ ಸೀಮಿತ ಅರ್ಥವನ್ನು ಪಡೆದುಕೊಂಡಿದೆ. ಮೈಲಾರಲಿಂಗ ಪರಂಪರೆಯ ಆರಾಧಕರೆಂದು ಕರೆಯಲಾಗುವುದನ್ನು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಆದರೆ ಅದು ಜೈನ, ಕಾಳಾಮುಖ, ಕಾಪಾಲಿಕರಿಗೂ ಈ ಶಬ್ದ ಬಳಕೆಯಾಗಿರುವುದು ಒಂದು ವಿಶೇಷ. ಇಲ್ಲಿ ಸನ್ಯಾಸಿ, ತಪಸ್ವಿ ಅಥವಾ ಭಿಕ್ಷಾರ್ಥಿ ಎನ್ನುವ ವ್ಯಾಪಕ ಅರ್ಥವನ್ನು ಈ ಕಾಲಘಟ್ಟದಲ್ಲಿ ಹೊಂದಿದ ಹಾಗೆ ಕಂಡುಬರುತ್ತದೆ. 'ಗೊರವರುಂ ಬೂದಿಯುಂ ಸುರರುಂ ಗುಣವೃದ್ಧರುಂ ವಿಪುಳ ರಾಘಪರರಾಗಿಸುಗೆ' (೧-೧೩೨) ಎಂದು ಕವಿರಾಜಮಾರ್ಗಕಾರ ಹೇಳಿದರೆ, ಪಂಪ 'ಗೊರವರೆ ಬೂದಿಯುಂ ಜಡೆಯುಮಕ್ಕೆ ತಪಕ್ಕೆ' (ಪಂಪಭಾ ೮-೧೭) ಎನ್ನುತ್ತಾನೆ. ಹಾಗೆಯೇ 'ಮುನ್ನಿನ ಭವದೊಳ್ ಗೊರವನಾಗಿ ಕಾಂಚಿಪುರದೊಳ್ ತಿರಿದು ಪಲವು ಕಾಲಂ' (ಪಂಚತಂತ್ರ ೩೦೦-೨೦) ಭಿಕ್ಷುಕ ಎಂಬರ್ಥದಲ್ಲಿ ದುರ್ಗಸಿಂಹ ಹೇಳುತ್ತಾನೆ. ನಯಸೇನನು 'ಮೈಲಾರದ ಗೊರವನಂತೆ ತಂತಮ್ಮನೆ ಬಡಿದುಕೊಳ್ವಚ್ಚುಳಾಯಿಲರುಮಂ' (ಧರ್ಮಾಮೃತ ೩-೨೦೬) ಎಂದು ಮೈಲಾರಲಿಂಗನ ಭಕ್ತರೆಂದು ಹೇಳುತ್ತಾನೆ. ಅಕ್ಕನ ಪ್ರಸಿದ್ಧ ವಚನ ಅಕ್ಕಾ ಕೇಳವ್ವ ವಚನದಲ್ಲಿ 'ಚಿಕ್ಕಚಿಕ್ಕ ಜಡೆಗಳ ಸುಳಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ' ಎನ್ನುತ್ತಾಳೆ. ಇಲ್ಲಿಯ ಉಲ್ಲೇಖಗಳು ಗೊರವ ಎನ್ನುವುದು ಸೀಮಿತ ಅರ್ಥದಲ್ಲಿ ಬಳಕೆಯಾಗದೆ ಹಲವಾರು ಅರ್ಥಗಳಲ್ಲಿ ಬಳಕೆಯಾಗಿರುವುದನ್ನು ಗಮನಿಸಬಹುದು. ಅಲ್ಲದೆ ಶಾಸನಗಳಲ್ಲಿ ಬಹು ಬಳಕೆಯಾಗಿದೆ ಈ ಶಬ್ದ. 'ಶ್ರೀಮತ್ಶಿವಶಕ್ತಿಪಣ್ಡಿತರ ಕಾಲಮಕರ್ಚಿ ತಮ್ಮ **ಗೊರವರೆಡೆವಣೆಯ** ಮೂವ್ವತ್ತು ಕಮ್ಮ ತೋಂಟಮಂ' ಬಿಟ್ಟಂತೆ ಹೇಳುತ್ತದೆ. (ಸೌಇಂಎ ೯-೧, ೨೧೧ ೧೧೨೮), ಹಾಗೂ 'ಬ್ರಾಹ್ಮಣರಿಗಲ್ಲದೆ ಗೋರವುಗಳಿಗು ಸಲ್ಲದು ಬ್ರಾಹ್ಮಣಪೂಜೆ' (ಕವಿಹಂಶಾಸಂ ೧ ಸಿರುಗುಪ್ಪ



೧ ೧೯೯೧), ೧೬ನೆಯ ಶತಮಾನದ ಹೊಸೂರಿನ ಮಹಮ್ಮಾಯಿ ಅಥವಾ ಹೊಸೂರಮ್ಮನ ಶಾಸನದಲ್ಲಿ ಗೊರವರ ಲಲ್ಲಜಿಯ ಎಂಬ ಪೂಜಾರಿಯ ಹೆಸರಿನ ಉಲ್ಲೇಖಗಳು ದೊರಕುತ್ತವೆ. ಇಲ್ಲಿ ಗೊರವ ಎನ್ನುವುದು ಭಕ್ತ, ಸನ್ಯಾಸಿ, ಭಿಕ್ಷುಕ ಎನ್ನುವ ಅರ್ಥಗಳನ್ನು ಹೊಂದಿದೆ. ಹಾಗೆಯೆ ಈ ಶಾಸನದಲ್ಲಿ ಬಳಕೆಯಾಗುವ ಕಂಕಾಳಗೊರವ ಎನ್ನುವುದು ತಪಸ್ವಿ, ಭಿಕ್ಷುಕ ಎನ್ನುವ ಅರ್ಥದಲ್ಲಿ ಬಳಕೆಯಾಗಿರುವ ಹಾಗೆ ಕಂಡುಬರುವುದನ್ನು ನಾವು ಗಮನಿಸಬಹುದು. ಆದರೆ ಅದು ಮುಂದೆ ತನ್ನ ವ್ಯಾಪ್ತಿಯನ್ನು ಕಿರಿದಾಗಿಸಿಕೊಂಡು ಒಂದು ಸಮುದಾಯಕ್ಕೆ ಸೇರಿದ ವ್ಯಕ್ತಿ ಎನ್ನುವ ಸೀಮಿತ ಅರ್ಥ ಪಡೆದುಕೊಂಡಿದೆ.

ಈ ಶಾಸನದಲ್ಲಿ ಬಳಕೆಯಾದ ಇನ್ನೊಂದು ಮುಖ್ಯ ವಿಷಯವೆಂದರೆ 'ಸೋಮಸಿದ್ಧಾಂತ'. ಶೈವದ ನಾಲ್ಕು ಶಾಖೆಗಳಲ್ಲಿ ಕಾಪಾಲಿಕರನ್ನು ಹಲವಾರು ಹೆಸರುಗಳಿಂದ ಕರೆದಿರುವುದನ್ನು ನಾನು ಹಿಂದೆ ಚರ್ಚಿಸಿರುವೆ. ಕಾಪಾಲಿಕ, ಮಹಾವ್ರತ, (ಮಹಾನ್, ಮಹಾವೃತಿನ್) ಸೋಮ, ಸೋಮಸಿದ್ಧಾಂತಿ ಎನ್ನುವ ಹೆಸರುಗಳಿಂದ ಕರೆದಿರುವುದನ್ನು ಗಮನಿಸಬಹುದು. ಸೋಮ, ಸೌಮ ಅಥವಾ ಸೌಮ್ಯ ಎಂಬುದಾಗಿಯು ಕರೆಯಲಾಗಿದೆ. ಸೋಮ ಎನ್ನುವುದು ಸೋಮನನ್ನು ಧರಿಸಿರುವನು ಎಂಬರ್ಥವನ್ನು ಕೊಟ್ಟರು, ತಾಂತ್ರಿಕದಲ್ಲಿ ಶಕ್ತಿಯನ್ನು ಹೊರತುಪಡಿಸಿ ನೋಡಲಿಕ್ಕಾಗುವುದಿಲ್ಲ. ಆ ಕಾರಣಕ್ಕಾಗಿಯೇ ಕೃಷ್ಣಮಿಶ್ರನ 'ಪ್ರಭೋದ ಚಂದ್ರೋದಯ'ಕ್ಕೆ ಭಾಷ್ಯ ಬರೆದವರು ಕೊಡುವ ನಿಷ್ಪತ್ತಿಯು 'ಸ ಉಮಾ ಅಥವಾ ಉಮಯಾ ಸಹಿತ:' ಎಂದರೆ ಶಕ್ತಿಯ ಜೊತೆಗಿರುವವನು ಎಂಬ ವ್ಯಾಖ್ಯನವನ್ನು ಕೊಡುತ್ತಾರೆ. ಶೈವಕ್ಕೂ ಶಾಕ್ತಕ್ಕೂ ಅವಿನಾಭಾವ ಸಂಬಂಧವನ್ನು ಹೊಂದಿರುವ ಹಾಗೆ ಕಂಡುಬರುತ್ತದೆ. ಕಾಪಾಲಿಕರಿಂದಿಲೇ ರೂಪಿತವಾದ ಕಾಶ್ಮೀರ ಶೈವವು ಇದನ್ನೆ ನಿರೂಪಿಸುತ್ತದೆ. ಇಲ್ಲಿರುವ ಪ್ರಶ್ನೆ ಎಂದರೆ, ಮಹಾವ್ರತ. ಈ ಒಂದು ಶಬ್ಧವೆ ಕಾಪಾಲಿಕರನ್ನು ಕಾಳಾಮುಖರನ್ನು ಏಕಾಕಾರದಲ್ಲಿ ನೋಡಲು ಕಾರಣವಾಗಿರುವುದು. ಕರ್ನಾಟಕದಲ್ಲಿ ಕಾಪಾಲಿಕರು ಹೆಚ್ಚಿನ ಪ್ರಮಾಣದಲ್ಲಿ ಇದ್ದಿರುವ ಸಾಧ್ಯತೆಗಳು ಹೆಚ್ಚು. ಕಾರಣ, ಶ್ರೀಶೈಲವೂ ಕಾಪಾಲಿಕರ, ಕಾಳಾಮುಖರ, ರಸಸಿದ್ಧಾಂತಿಗಳ ಹಾಗೂ ಇತರ ಧಾರ್ಮಿಕ ಪಂಥಗಳ ಕೇಂದ್ರವಾಗಿತ್ತು. ಅಲ್ಲದೆ ಕಾಪಾಲಿಕರ ಶಾಸನಗಳು ಈ ಪ್ರದೇಶದಲ್ಲಿ ಕಾಣುತ್ತವೆ. ಕಾಳಾಮುಖರ ಆಚರಣೆಗಳು, ದೇವಾಲಯಗಳ ಬಗೆಗೆ ಹೊಂದಿರುವ ಪೂಜ್ಯ ಭಾವನೆ ಕೊಲ್ಲಿಪಾಕ ಹಾಗೂ ಈ ಶಾಸನಗಳಲ್ಲಿಯೂ ಇದೇ ಭಾವನೆಯನ್ನು ಕಾಣುತ್ತೇವೆ. ಮಹಾವ್ರತ ಎನ್ನುವುದನ್ನು ಕಾಪಲಿಕರಿಗೆ ಬಳಸುವಂತೆ ಕಾಳಾಮುಖರಿಗೂ ಬಳಸುತ್ತಾರೆ. ಇಲ್ಲಿ ಮಹಾವ್ರತ ಎನ್ನುವುದು ಹಿರಿದಾದ ವೃತವೆಂದಾಗುತ್ತದೆ. ಕಾಪಾಲಿಕರ ಮಹಾವ್ರತಕ್ಕೂ ಕಾಳಾಮುಖರ ಮಹಾವ್ರತಕ್ಕು ಭಿನ್ನತೆಗಳಿವೆ. ಕಾಳಾಮುಖರದ್ದು

ಸೌಮ್ಯ ವ್ರತವಾಗಿ ಕಾಣುತ್ತದೆ. ಲಿಂಗಾರಾಧಕರಾಗಿದ್ದು ಲಾಗುಡ, ಭಸ್ಮದ್ಧೂಳಿತ ತನು, ಜಟಾಧಾರಿಗಳಾಗಿರುತ್ತಾರೆ. ಕಾಪಾಲಿಕರದ್ದು ಕಠೋರತವಾದ ಜೀವನ ವಿಧಾನವಾಗಿದ್ದು ಸ್ಮಶಾನದಲ್ಲಿ ಜೀವನ, ಕಪಾಲದಲ್ಲಿ ಊಟ, ಕಂಕಾಳಗಳೆ ಆಭರಣವಾಗಿರುವುದು ಸಾಮಾನ್ಯವಾಗಿ ಕಾಣುತ್ತೇವೆ. ಕಪಾಲಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಸಂಸ್ಕೃತ ನಾಟಕಗಳಲ್ಲಿ ಕಪಾಲ ಕಳೆದು ಕೊಳ್ಳುವುದೆಂದರೆ ಅವರನ್ನೇ ಕಳೆದುಕೊಂಡಂತೆ. ಭೈರವಾರಾಧನೆಗೆ ಕಾಪಾಲಿಕರು ಹೆಚ್ಚಿನ ಮಹತ್ವ ಕೊಡುತ್ತಾರೆ. ಆದರೆ, ಕಾಳಾಮುಖರಲ್ಲಿ ಅದು ಅಷ್ಟು ಮಹತ್ವ ಇರುವುದಿಲ್ಲ. ಲಿಂಗ ಸ್ವರೂಪಕ್ಕೆ ಹೆಚ್ಚಿನ ಮಹತ್ವ ಕೊಟ್ಟರು. ಕಾಪಾಲಿಕರು ಲಿಂಗಾರಾಧಕರಾಗಿ ಕಾಣುತ್ತರಾದರೂ ಆಚರಣೆಯಲ್ಲಿ ಭಿನ್ನವಾಗಿ ನಿಲ್ಲುತ್ತಾರೆ. ಆದರೆ, ರಾಮಾನುಜಾಚಾರ್ಯರಿಗೆ ಈ ಭಿನ್ನತೆಗಳು ಕಾಣದ ಪರಿಣಾಮವಾಗಿ ಕಾಪಾಲಿಕರನ್ನು ಕಾಳಾಮುಖರನ್ನು ಒಂದೆಯಾಗಿ ನೋಡುತ್ತಾರೆ. ಅದನ್ನೆ ಆರ್.ಜಿ. ಭಂಡಾರ್ಕರ್ ಅವರು ಅನುಮೋದಿಸುವುದಿಲ್ಲ. ಯಾವ ನೆಲೆಯಲ್ಲಿಯು ಕಾಳಾಮುಖರು ಕಾಪಲಿಕರಾಗಿ ಕಾಣುವುದಿಲ್ಲ ಎಂಬುದು ಸ್ಪಷ್ಟ. ಮಹಾವೃತ ಎಂಬುದು ಕಾಪಾಲಿಕರಲ್ಲಿ ಅತ್ಯಂತ ಕಠಿಣವಾದ ಆಚರಣೆಯಾಗಿದ್ದನ್ನು ಸಾಹಿತ್ಯ ವಿವರಿಸುತ್ತದೆ. ಆದರೆ, ಇಲ್ಲಿಯ ಶಾಸನಗಳು ಹಾಗೆ ಬಿಂಬಿಸುವುದಿಲ್ಲ ಎಂಬುದು ವಿಶೇಷ. ಸೌಮ್ಯವಾಗಿ ಕಾಣುತ್ತಾರೆ. ಜನರಿಂದ ದೂರವಾಗಿರುತ್ತಿರಲಿಲ್ಲ. ಜನರೊಡನೆ ಒಂದಾಗಿರುವುದನ್ನು ಈ ಶಾಸನ ತಿಳಿಸುವುದು ವಿಶೇಷವಾಗಿದೆ. ಯತಿಯನ್ನು ನೋಡಿದರೆ, ಅಥವಾ ಗುಹೆಯನ್ನು ದರ್ಶನ ಮಾಡಿದರೆ, ಲಿಂಗನ್ನು ನೋಡಿದರೆ ಪಾಪ ಕೆಡುಗೂ ಎನ್ನುವುದನ್ನು ಗಮನಿಸಬೇಕು. ಶಂಕರ ದಿಗ್ವಿಜಯ ಹಾಗೂ ಶಂಕರ ವಿಜಯ ಕೃತಿಗಳಲ್ಲಿ ಕಾಣುವ ಕಾಪಾಲಿಕರು ಕರ್ನಾಟಕದಲ್ಲಿ ವ್ಯಾಪಕವಾಗಿದ್ದರೆಂದು ತಿಳಿಸುವ ವಾದವು ಆ ವ್ಯಾಪಕತೆ ಅಷ್ಟು ಪ್ರಮಾಣದಲ್ಲಿರುವುದು ಕಂಡು ಬರುವುದಿಲ್ಲ. ಸು. ೧೪ನೆಯ ಶತಮಾನದ ನಂತರದಲ್ಲಿ ಕಾಪಾಲಿಕರು ಕಣ್ಮರೆಯಾಗುತ್ತಾರೆ. ಈ ಹಿನ್ನೆಲೆಯಲ್ಲಿ ಮಲಿಯಾಬಾದ್ ಶಾಸನವು ಅತ್ಯಂತ ಪ್ರಮುಖವಾಗಿದೆ.

[ನನ್ನ ಸಂಶೋಧನ ವಿದ್ಯಾರ್ಥಿಯಾದ ಡಾ. ಸಿದ್ದರಾಮ ನಾಯಕ್ ಅವರು ಛಾಯಾಚಿತ್ರಗಳನ್ನು ಕಳುಹಿಸಿದ್ದಾರೆ, ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ].

೩೪

ಹರಪನಹಳ್ಳಿ ಪಾಳೆಯಗಾರರ ನಿರೂಪಗಳು

ಜೆ.ಕೆ. ಮಲ್ಲಿಕಾರ್ಜುನಪ್ಪ*

ಹರಪನಹಳ್ಳಿ ದಾವಣಗೆರೆ ಜಿಲ್ಲೆಯ ಒಂದು ತಾಲೂಕು ಕೇಂದ್ರ ಈ ಹಿಂದೆ ಹರಪನಹಳ್ಳಿ ಪಾಳೆಯಗಾರರ ಆಡಳಿತ ಕೇಂದ್ರವಾಗಿತ್ತು. ಸಮೀಪದ ಬಾಗಳಿ ಕೇಂದ್ರದಿಂದ ಸ್ವತಂತ್ರ ಪಾಳೆಯಪಟ್ಟು ಅಸ್ತಿತ್ವಕ್ಕೆ ಬಂದಿತು. ಇದರ ಮೂಲ ಪುರಷನೇ ದಾದೇನಾಯಕ. ಬಾಗಳಿ, ಹರಪನಹಳ್ಳಿ, ಉಚ್ಚಂಗಿದುರ್ಗ, ನಾರಾಯಣದೇವರಕೆರೆ ಇವರ ರಾಜಧಾನಿಗಳಾಗಿದ್ದವು, ಚಿಗಟೇರಿ, ತಂಬ್ರಹಳ್ಳಿ, ಹೊಳಲು, ಉಚ್ಚಂಗಿಪುರ, ಹನಸಿ, ಹಂಪಾಪಟ್ಟಣ, ಬಸವನಕೋಟೆ, ಹಿರೇಮ್ಯಾಗಳಗೇರಿ, ಮುಂತಾದವು ಇವರ ಸಾಮಂತಾಧಿಕಾರಿಗಳ ಕೇಂದ್ರಗಳಾಗಿದ್ದವು.

ಹರಪನಹಳ್ಳಿ ಪಾಳೆಯಗಾರರ ಆಡಳಿತ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಶಾಸನಗಳು, ನಿರೂಪಗಳು, ಭೂಪಟ್ಟೇದಗಳು, ಕೋಟೆ ಕೊತ್ತಲಗಳು, ಆಯುಧಗಳು, ಕೆರೆ-ಕಟ್ಟೆ, ಕಾಲುವೆಗಳು, ದೇವಾಲಯಗಳು, ಮುಂತಾದವುಗಳನ್ನೊಳಗೊಂಡಂತೆ ಪ್ರಾಥಮಿಕ ಸಾಹಿತ್ಯ ಹಾಗೂ ಪುರಾತತ್ವ ಆಧಾರಗಳು ಲಭ್ಯವಾಗಿವೆ. ಇವರ ಶಾಸನಗಳು ಹರಪನಹಳ್ಳಿ ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಹೂವಿನ ಹಡಗಲಿ, ಕೊಪ್ಪಳ ತಾಲೂಕಿನ ಗ್ರಾಮಗಳಲ್ಲಿ ದೊರೆತಿದ್ದು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಅಪ್ರಕಟಿತ ಶಾಸನಗಳನ್ನು ಹುಡಿಕಿ ನಿಯತಕಾಲಿಕೆ/ಪತ್ರಿಕೆಗಳಲ್ಲಿ ವಿದ್ವಾಸರು ಪ್ರಕಟಿಸಿದ್ದಾರೆ.

ಹರಪನಹಳ್ಳಿ ಪಾಳೆಯಗಾರರ ಇತಿಹಾಸ ರಚನೆಗೆ ಶಿಲಾಶಾಸನಗಳಲ್ಲದೆ, ಗಂಟೆಶಾಸನ, ಭೂ ನಿರೂಪಗಳು, ಪಟ್ಟೆದಗಳು ದೊರೆತಿವೆ. ಭೂ ನಿರೂಪಗಳನ್ನು ಹರಪನಹಳ್ಳಿ ಪಾಳೆಯಗಾರರ ಭೂ ಆಡಳಿತದಲ್ಲಿ ಸೇವೆ ಸಲ್ಲಿಸಿದ್ದ ಆಡಳಿತಾಧಿಕಾರಿಗಳ ವಂಶಜರಾದ ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯರು ಮೂಲ ಪ್ರತಿಗಳನ್ನು ನಕಲು ಮಾಡಿಕೊಂಡು ದೃಢೀಕರಣದೊಂದಿಗೆ ತಮ್ಮ ಅಪ್ರಕಟಿತ ಹಸ್ತಪ್ರತಿಗ್ರಂಥ ಹರಪನಹಳ್ಳಿ ಪಾಳೆಯಗಾರರು ಎಂಬ ಕೃತಿಯಲ್ಲಿ ಸಂಗ್ರಹಿಸಿದ್ದಾರೆ.

ಭೂ ನಿರೂಪಗಳು

ಹರಪನಹಳ್ಳಿ ಪಾಳೆಯಗಾರರ ಇತಿಹಾಸಕ್ಕೆ ಸಂಬಂಧಿಸಿದಂತೆ ಒಟ್ಟು ೨೮ ನಿರೂಪಗಳು ದೊರೆತಿದ್ದು ಇವು ಕ್ರಿ.ಶ. ೧೭೦೧ ರಿಂದ ೧೭೭೨ರ ಮರೆಗಿನ ಕಾಲಾವಧಿಯನ್ನು ಉಲ್ಲೇಖಿಸುತ್ತವೆ. ಪಾಳೆಯಗಾರರಾದ, ಬಾಗಳಿ ಮುಮ್ಮಡಿ ಬಸಪ್ಪ ನಾಯಕ ಮುಂತಾದವರ ಹೆಸರುಗಳನ್ನು ಉಲ್ಲೇಖಿಸುತ್ತವೆ.

ನಿರೂಪಗಳ ಐತಿಹಾಸಿಕ ಮಹತ್ವ

ದೊರೆತಿರುವ ಈ ಭೂ ನಿರೂಪಗಳನ್ನು ಅವಲೋಕಿಸಿದಾಗ ಈ ಕೆಳಕಂಡ ಐತಿಹಾಸಿಕ ಮಹತ್ವ ನಿರೂಪಿಸಲ್ಪಡುತ್ತದೆ.

* ಈ ನಿರೂಪಗಳಲ್ಲೆವೂ ಭಾರತೀಯ ಪಂಚಾಂಗ ಮತ್ತು ಶಾಲಿವಾಹನ ಶಕ ಕಾಲಮಾನವನ್ನು ಉಲ್ಲೇಖಿಸುತ್ತವೆ.
* ಈ ಭೂ ನಿರೂಪಗಳು ಭೂದಾನವನ್ನೇ ಪ್ರಸ್ತಾಪಿಸಿರುವುದರಿಂದ ಇವುಗಳನ್ನು ದಾನ ಶಾಸನಗಳೆಂದು ಪರಿಗಣಿಸಬಹುದು.
* ಈ ಭೂ ನಿರೂಪಗಳು ಭೂ ಪಟ್ಟೇದಗಳೂ ಸಹ ಸಹಜವಾಗಿ ಶಿಲಾಶಾಸನಗಳಂತೆ ಶಾಸನ ಶ್ಲೋಕ ಶುಭ ಮಸ್ತು. ನಮಸ್ತುಂಗ ಶಿರಶ್ಚಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ಎಂಬ ಶ್ಲೋಕದೊಂದಿಗೆ ಆರಂಭಗೊಳ್ಳುತ್ತವೆ.
* ಹರಪನಹಳ್ಳಿ ಪಾಳೆಯಗಾರರ ವಂಶಾವಳಿ ತಿಳಿಯಲು ಸಹಾಯಕವಾಗುತ್ತವೆ.
* ಹರಪನಹಳ್ಳಿ ಪಾಳೆಯಗಾರರ ಬಿರುದು ಶ್ರೀ ಮನ್ ಮಹಾ ನಾಯಕಾಚಾರ್ಯ ಭಾಷೆಗೆ ತಪ್ಪುವ ನಾಯಕರ ಗಂಡ ಮರೆಹೊಕ್ಕವರ ಕಾಯ್ವ ಮಾರಂತಕರ ಗೆಲ್ವ ಬಾಗಳಿ ಮುಮ್ಮಡಿ ಬಸವಪ್ಪನಾಯಕ ಅಯ್ಯ ಎಂದು ಗೊತ್ತಾಗುತ್ತದೆ.

* ಸಹ ಪ್ರಾಧ್ಯಾಪಕರು & ಮುಖ್ಯಸ್ಥರು, ಇತಿಹಾಸ ವಿಭಾಗ, ಎ.ಆರ್.ಜಿ. ಕಲಾ & ವಾಣಿಜ್ಯ ಕಾಲೇಜು, ದಾವಣಗೆರೆ. ಮೊ. ೯೪೮೧೮೭೧೯೩೩

* ಹರಪನಹಳ್ಳಿ ಪಾಳೆಯಗಾರರು ಶೃಂಗೇರಿ ಪೀಠಕ್ಕೆ ನೀಡಿರುವ ದಾನ-ದತ್ತಿಗಳ ವಿವರ ಗೊತ್ತಾಗುತ್ತದೆ.
* ಹರಪನಹಳ್ಳಿಯ ಇನ್ನೊಂದು ಹೆಸರು ಹರಪುರ, ಈ ಪಾಳೆಯಗಾರರು ಹರಪುರಾಧೀಶ್ವರರೆಂದು ಕರೆದುಕೊಳ್ಳುತ್ತಿದ್ದರು.
* ಈ ಪಾಳೆಯಗಾರರು ಕೊಟ್ಟೂರಿನ ಶ್ರೀ ಗುರು ಕೊಟ್ಟೂರೇಶ್ವರ ಕುರಿತು ಹೊಂದಿರುವ ಭಕ್ತಿ, ಭಾವ, ನಂಬಿಕೆ ಅಪಾರವಾದುದೆಂದು ತಿಳಿದುಬರುತ್ತದೆ.
* ಗ್ರಾಮಗಳಾದ ಬೂದಿಹಾಳ, ಮಾದಿಹಳ್ಳಿ, ನಿಲುವಂಜಿ, ಮಲ್ಲಾಪುರ, ಸೋಮಲಾಪುರ, ಕಾಯಕದ ಹಳ್ಳಿ, ಬಸಾಪುರ, ಕೆಸರಳ್ಳಿ, ಆನ್ವೇರಿ, ಅಲಗಿಲವಾಡ, ಹೊಸೂರು, ಚಿತ್ತವಾಡಗಿ, ನೀರಕಲ್ಲು, ಡಣನಾಯಕನಕೆರೆ, ಮಗಿ ಮಾವಿನಹಳ್ಳಿ ಮುಂತಾದ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ. ಈ ಗ್ರಾಮಗಳಲ್ಲಿ ಪಾಳೆಯಗಾರರ ಕುರುಹುಗಳು ಕಂಡುಬರುತ್ತವೆ.
* ಹರಪನಹಳ್ಳಿಯ ಶ್ರೀ ಪ್ರಸನ್ನ ವೆಂಕಟರಮಣ ದೇವಾಲಯಕ್ಕೆ ಬಾಗಳಿ ಸಮೀಪ ಭೂದಾನ ನೀಡಿದ ವಿವರ ತಿಳಿದುಬರುತ್ತದೆ. ಈ ಪ್ರಾಂಗಣದಲ್ಲಿಯೆ ಡಾ.ಎಂ.ಕೊಟ್ರೇಶ್‌ರವರು ಶಾಸನವನ್ನು ಪತ್ತೆಹಚ್ಚಿದ್ದಾರೆ.
* ಹರಪನಹಳ್ಳಿ ಪಾಳೆಯಗಾರರು ವಿಜಯನಗರದ ಅರಸರಿಗೆ ಹೊಂದಿದ್ದ ನಿಷ್ಠೆಯನ್ನು ಈ ನಿರೂಪಗಳು ಸಮರ್ಥಿಸುತ್ತವೆ.
* ಮಾದಿಹಳ್ಳಿ, ಕೋಗುಳಿ, ಹೊಸೂರು, ಮೈದೂರು, ಕೊಟ್ಟೂರು, ಮುತ್ತಿಗಿ ಮುಂತಾದ ಆಡಳಿತ ವಿಭಾಗಗಳ ಉಲ್ಲೇಖ ಕಂಡುಬರುತ್ತದೆ.
* ಕೆರೆ, ಕಾಲುವೆಗಳ ನಿರ್ಮಾಣಕ್ಕೆ ಪಾಳೆಯಗಾರರು ನೀಡಿದ ಆದ್ಯತೆಯನ್ನು ತಿಳಿಸುತ್ತವೆ.
* ಪಾಳೆಯಗಾರರು ಹಂಪೆಯ ಶ್ರೀ ವಿರೂಪಾಕ್ಷ ದೇವರ ತೇರು ಬಝೂರದೊಳಗೆ ಧರ್ಮಾರ್ಥವಾಗಿ ಐದು ಅಂಕಣದ ಅನ್ನ ಛತ್ರ ನಿರ್ಮಿಸಿದ್ದರೆಂದು ತಿಳಿದುಬರುತ್ತದೆ.
* ಮೈದೂರು, ಚಿಗಟೇರಿ ಆಡಳಿತ ಕೇಂದ್ರಗಳಾಗಿದ್ದವೆಂದು ಕಂಡುಬರುತ್ತದೆ.
* ಶ್ರೀ ವಿರೂಪಾಕ್ಷ ದೇವರಿಗೆ ನೂತನ ರಥ ನಿರ್ಮಿಸಿ ಸಮರ್ಪಿಸಿದ ಮಾಹಿತಿ ದೊರೆಯುತ್ತದೆ. ಇದರ ಉದ್ಘಾಟನೆಗೆ ಶ್ರೀ ಶೃಂಗೇರಿ ಶ್ರೀ ಶಂಕರ ಭಾರತಿ ಸ್ವಾಮಿಗಳನ್ನು ಆಹ್ವಾನಿಸಿದ ಮಾಹಿತಿ ದೊರೆಯುತ್ತದೆ. ಕ್ರಿ.ಶ. ೧೭೭೭. ಬಾಗಳಿ ಸೋಮಶೇಖರ ನಾಯಕರ ಬಸಪ್ಪನಾಯಕ.
* ಬಾಗಳಿ ಹರಿಯಮ್ಮಾಜಿ ಆಳ್ವಿಕೆಯನ್ನು ಖಚಿತ ಪಡಿಸುತ್ತವೆ.
* ಹರಪನಹಳ್ಳಿಯಲ್ಲಿ ಶ್ರೀ ಶಂಕರಮಠ ಸ್ಥಾಪನೆ, ಶ್ರೀ ವಿರೂಪಾಕ್ಷ ದೇವಾಲಯ ನಿರ್ಮಾಣ, ಪ್ರತಿಷ್ಠಾಪನೆ ಮಾಡಿದ ಬ್ರಾಹ್ಮಣರಿಗೆ ಭೂದಾನ ನೀಡಿದ ವಿವರಗಳನ್ನು ನೀಡುತ್ತವೆ.
* ಪಾಳೆಯಗಾರರು ನಡೆಸಿದ ಯುದ್ಧ, ಆಕ್ರಮಣ, ಹುಲಿಗಿಕೋಟೆ, ಹೋಳಲು ಕೋಟೆ, ಬಿದರಳ್ಳಿ ಕೋಟೆ ಮುತ್ತಿಗೆ ಮಾಹಿತಿ ನೀಡುತ್ತದೆ. ಕ್ರಿ.ಶ. ೧೭೨೧ ಬಾಗಳಿ ಬಸಪ್ಪ ನಾಯಕ, ಕ್ರಿ.ಶ.೧೭೪೯ ಬಾಗಳಿ ಬಸಪ್ಪ ನಾಯಕ, ಕ್ರಿ.ಶ. ೧೭೪೧ ಬಾಗಳಿ ವೀರಬಸಪ್ಪ ನಾಯಕ.
* ದೇಶಾಯಿತಿ, ನಾಡದಳವಾಯಿತಿ, ಆಯಮಾನ್ಯಾವರ್ತನೆ, ಆಶೀರಪಟ್ಟಿ, ಮೊಗಲರ ಪಟ್ಟಿ, ಇಪ್ಪಣಪಟ್ಟಿ, ಧರಣಪಟ್ಟಿ, ಶಾಹುನಪಟ್ಟಿ, ಬೇಡಿಕೆಕಣಜ, ದವನ, ಮುಂತಾದ
* ಪಾಳೆಯಗಾರರ ಅರಮನೆ ವೈದ್ಯರ ಮಾಹಿತಿ ನೀಡುತ್ತದೆ. ರಾಜ್ಯವೈದ್ಯ ಕೃಷ್ಣಚಾರ್ಯರಿಗೆ ಕಾಯಕದಹಳ್ಳಿ ಎಂಬ ಗ್ರಾಮವನ್ನು ನೀಡಿದ ಮಾಹಿತಿ ದೊರೆಯುತ್ತದೆ. ಇದರಿಂದ ಹರಪನಹಳ್ಳಿ ಪಾಳೆಯಗಾರರ ಕಾಲದಲ್ಲಿ ವೈದ್ಯಶಾಸ್ತ್ರದ ಬೆಳವಣಿಗೆ ಮಹತ್ವ ತಿಳಿಯುತ್ತದೆ. ಈ ಭಾಗದಲ್ಲಿ ಹರಪನಹಳ್ಳಿ ಗುಳಿಗೆಗಳು ಪ್ರಸಿದ್ಧವಾಗಿದ್ದವು. "ಹರಪನಹಳ್ಳಿ ಗುಳಿಗೆ ರೋಗ ಅರೆಗಳಿಗಿ" ಎಂಬ ಮಾತು ಇಂದೂ ಪ್ರಚಲಿತದಲ್ಲಿದೆ.
* ಈ ನಿರೂಪಗಳು ನಕಲು ಪ್ರತಿಗಳಾಗಿದ್ದರೂ ಸಹ ಇವುಗಳನ್ನು ಸಂಗ್ರಹಿಸಿದವರು ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯರು ಹರಪನಹಳ್ಳಿ ಪಾಳೆಯಗಾರರಲ್ಲಿ ಸೇವೆಸಲ್ಲಿದ ಪುರೋಹಿತ ವರ್ಗದ ವಂಶಸ್ಥರಾಗಿರುವುದರಿಂದ ಇವುಗಳಿಗೆ ಐತಿಹಾಸಿಕ ಮಹತ್ವ ನೀಡಿ ಇವುಗಳನ್ನು ಆಧಾರಗಳನ್ನಾಗಿ ಪರಿಗಣಿಸಬಹುದಾಗಿದೆ.

೩೫

ಶಿವಮೊಗ್ಗ ಜಿಲ್ಲೆಯ ವರದಾಮೂಲ ಕುರಿತ ಅಪ್ರಕಟಿತ ದಾಖಲೆಗಳು

ಕೆಳದಿ ವೆಂಕಟೇಶ್ ಜೋಯಿಸ್*

ಕೆಳದಿ ಇತಿಹಾಸದ ಕೊನೆಯ ಕಾಲದಲ್ಲಿ ಇಕ್ಕೇರಿ ಮತ್ತು ವರದಾಮೂಲ ಮೊದಲಾದ ಸ್ಥಳಗಳ ಮೇಲೆ ಮರಾಠ ಪರಶುರಾಮ ಭಾವೂ ದಾಳಿ ನಡೆಸಿದ್ದ. ಇದರಿಂದ ಕೆಳದಿ ಎರಡನೆ ರಾಜಧಾನಿ ಇಕ್ಕೇರಿ ನಗರ ನಾಶವಾಯಿತು. ದಂಗೆಯಿಂದ ಜನ ಪರಿತಪಿಸಿದರು. ತುರಂಗಭಾರತಕಾರ ಕವಿ ಪರಮದೇವನು ತನ್ನ ಕೀರ್ತನೆಗಳಲ್ಲಿ ಅಂದಿನ ಸ್ಥಿತಿಯನ್ನು ದಾಖಲಿಸಿದ್ದಾನೆ. ಇದಕ್ಕೆ ಪೂರಕವೆಂಬಂತೆ ಇತ್ತೀಚೆಗೆ ಶ್ರೀ ಹುಲಿಮನೆ ಗಣಪತಿಯವರಲ್ಲಿ ಮತ್ತು ಕೆಳದಿ ವಸ್ತುಸಂಗ್ರಹಾಲಯದಲ್ಲಿ ದೊರೆತ ತಾಳೆಯೋಲೆ ಹಸ್ತಪ್ರತಿ ಇನ್ನಷ್ಟು ಮಾಹಿತಿ ನೀಡುತ್ತದೆ. ಇದರ ಜೊತೆಗೆ ವರದಾಮೂಲದ ವರದಾಂಬೆ ದೇವಾಲಯ, ಶಂಭುಲಿಂಗ ದೇವಾಲಯದ ಉಲ್ಲೇಖವಿರುವ ಐದು ಗರಿಗಳು ವರದಾಮೂಲದ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುತ್ತವೆ.

ತಾಳೆಯೋಲೆ ಗರಿ: ತಿಗಳಾರಿ ಲಿಪಿ:

ಹಸ್ತಪ್ರತಿ ಕಾಲ ಸುಮಾರು ೧೮ನೇ ಶತಮಾನ. ದೊರೆತ ಸ್ಥಳ: ಹುಲಿಮನೆ. ಒದಗಿಸಿದವರು: ಹುಲಿಮನೆ ಗಣಪತಿ. ಹಸ್ತಪ್ರತಿ ಅಳತೆ: ಉದ್ದ: ೨೨.೨ ಅಗಲ: ೫.೨. ಹಸ್ತಪ್ರತಿ ಲಿಪಿ: ತಿಗಳಾರಿ: ಭಾಷೆ: ಕನ್ನಡ. ಸಾಲು: ೭ ಅಕ್ಷರಗಳು: ಒಂದು ಸಾಲಿನಲ್ಲಿ ಅಂದಾಜು ೩೭.

೧. ರಾಜಮಾನ್ಯ ರಾಜಶ್ರಿಯವರಿಗೆ ಯಿಕ್ಕೆರಿ ನಗರದಲ್ಲಿರುವ ವರದಾಮೂಲವು ಪುರಾಣ ಪ್ರಸಿದ್ಧ ಕ್ಷೇತ್ರವಾಗಿ

೨. ದೆ ಯಿಲ್ಲಿ ಪಾಪನಾಶಿನಿಯಾದ ವರದೆಯು ಹುಟ್ಟಿದ ಸ್ಥಳ ಕೆಳದಿಯ ತದನಂತರ ಮರಾಠರು ಮತ್ತು

೩. ಪರಶುರಾಮ ಬಾಹು ಎಂಬ ಮರಾಠೀ ಸರದಾರನು ತನ್ನ ಲಂಬಾಣಿ ದಂಡಾಳಿನೊಡನೆ

೪. ಯಿಕ್ಕೆರಿಗೆ ಬಂದು ನಗ್ರವನ್ನು ಪೂರ ಸೂರೆ ಹೊಡೆಯುತ್ತಾನೆ ದೆವಸ್ಥಾನಗಳ

೫. ನ್ನು ಹಾಳು ಗೈಯುತ್ತಾನೆ ಹಾಗೂ ಯಿಲ್ಲಿಗೂ ಬಂದು ಹಿರಿಯ ವೆಂಕಟಪ್ಪನಾಯಕ

೬ ಕಟ್ಟಿಸಿದ್ದ ಚಂದ್ರಶಾಲೆ ಭೋಜನ ಶಾಲೆ ಯಾಗಾಶಾಲೆ ಅಲ್ಲದೆ ಜಪಶಾಲೆಯನ್ನು

೭ ಸುಟ್ಟುಹಾಕುತ್ತಾನೆ ಇವನ್ನು ಪುನರ್ ನಿರ್ಮಿಸಲು ಈ ಭಾಗದ ಮಂದಿಯಿಂದ ಕಾಸನ್ನು ಸಂಗ್ರಹಿಸಿ ಅದನ್ನು ಕೆಲವು ಮಂದಿ ಸ್ವಂತಕ್ಕೆ ಬಳಸಿರುತ್ತಾರೆ ಇದಕ್ಕೆ

೮. ನಿರ್ಣಯ ಕೊಡಬೇಕೆಂದು ಪ್ರಾರ್ಥನೆ


ಈ ದಾಖಲೆಯಲ್ಲಿ ಉಲ್ಲೇಖಿಸಿರುವ ಪತ್ರ ಯಾರಿಗೆ ಬರೆದಿರುವುದೆಂಬುದು ಅಸ್ಪಷ್ಟ. ಆದರೆ ಇದರಲ್ಲಿ ಪರಶುರಾಮ ಬಾಹು ಎಂಬ ಮರಾಠಿ ಸರದಾರನು ತನ್ನ ಲಂಬಾಣಿ ದಂಡಾಳಿನೊಡನೆ ಯಿಕ್ಕೇರಿ ನಗರದ ಮೇಲೆ ದಾಳಿ ಮಾಡುವುದರ ಮೂಲಕ ನಗರವನ್ನು ದೋಚಿಕೊಂಡು ಹೋದುದನ್ನು ತಿಳಿಸುತ್ತದೆ. ಇವನು ಇಕ್ಕೇರಿಯ ದೇವಸ್ಥಾನಗಳನ್ನು ಹಾಳು ಮಾಡಿದ್ದಲ್ಲದೆ ವರದಾಮೂಲದಲ್ಲಿ ಕೆಳದಿ ವೆಂಕಟಪ್ಪನಾಯಕನು ಕಟ್ಟಿಸಿದ್ದ ಚಂದ್ರಶಾಲೆ, ಭೋಜನಶಾಲೆ, ಯಾಗಶಾಲೆ, ಜಪಶಾಲೆಗಳನ್ನು ಸುಟ್ಟುಹಾಕಿದ್ದನ್ನು ಉಲ್ಲೇಖಿಸುತ್ತದೆ. ಈ ಮಾಹಿತಿಯು ಕವಿ ಪರಮದೇವನ ಕೀರ್ತನೆಯಲ್ಲಿಯೂ ದೊರೆಯುತ್ತದೆ.

---

* # ಎಂ.ಐ.ಜಿ. ೩೧೩, ಮೊದಲ ತಿರುವು, ಅಣಲೆ ಕೊಪ್ಪ ಬಡಾವಣೆ, ಸಾಗರ-೫೭೭೪೦೧. ಮೊ. ೯೪೪೮೮೩೯೭೩೯

ದಾಖಲೆಯಲ್ಲಿ ದೇವಾಲಯವನ್ನು ಜೀರ್ಣೋದ್ಧರಿಸಲು ನಡೆಸಿದ ಪ್ರಯತ್ನ, ಸಂಗ್ರಹಿಸಿದ ಹಣವನ್ನು ಕೆಲವರು ಸ್ವಂತಕ್ಕೆ ಹಣವನ್ನು ಬಳಸಿಕೊಂಡಿರುವುದು, ಈ ಕುರಿತು ವಿಚಾರಣೆ ನಡೆಸಲು ಕೇಳಿಕೊಳ್ಳಲಾಗಿದೆ. ಆದರೆ ಯಾರನ್ನು ಕೇಳಿಕೊಳ್ಳಲಾಗಿದೆ ಎಂಬುದು ಸ್ಪಷ್ಟವಾಗುವುದಿಲ್ಲ.

ತಾಳೆಯೋಲೆ ಗರಿ: ಕನ್ನಡ: ನಿರೂಪ: ೧ ಮುಂಭಾಗ



೧. ಸ್ವಸ್ತಿ ॥ ನಿರ್ವಿಘ್ನಮಸ್ತು । ನಮಸ್ತುಂಗ ಶಿರಚುಂಬಿ ಚಂದ್ರಚಾಮರ ಚಾರವೆ ತ್ರೈಲೊಕ್ಯ ನಗರಾರಂಭ ಮೂಲ ಸ್ತಂಬಾಯ ಶಂಬವೆ । ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ

೨. ವರುಷ ೧೬೬೬ನೆ ಪರಿವರ್ತಮಾನಕ್ಕೆ ಸಲ್ಲುವ ರುಧಿರೋದ್ಗಾರಿ ಸಂವತ್ಸರದ ಮಾಘ ಶು ೧೦ ಲು ಶ್ರೀಮತ್ತು ಯಿಕ್ಕೆರ್ಱಿ ಸಿಮೆ ತೀರ್ಥದ ನಾಣಭಟರ ಮಗ ಗಣೆಶಭಟನ್ನು ಚಿಕಪ ಶಂಕ್ರಭಟ್ಟ

೩. ರ್ಱಿಗೆ ಬರೆಸಿಕೊಟ್ಟ ಉತ್ರಿ ಮನ್ನೆ ಕ್ರಯ ಮುಲಸಾಧನದ ಕ್ರಮವೆಂತ್ಯೆಂದರೆ ನಂಮ ನಿರುತ್ತಿ ಯಿ ತಿರ್ಥದ ಗ್ರಾಮದಲ್ಲು ನಮ್ಮ ಹಿರ್ಱಿಯವರು ಅರ್ಚಿಸಿ ಅನುಭವಿಸಿ ಬರುತ್ತಿದ್ದ ಭು

೪. ಮಿಯನ್ನು ನಿನಗೆ ಕ್ರಯಮೂಲಕ್ಕೆ ಕೊಟ್ಟೆನಾಗಿ ಈ ಭೂಮಿ ಚತ್ತುರ್ಗಡಿ ವಿವರ । ಮೂಡಲ್ಲು ಪಡುವಲ್ಲು ನ್ನೆಲನಂಚು ನೀರ ಯರಕಲೆ ಗಡಿ ತೆಂಕಲ್ಲು ಕೆ--ರೆಯೆ ಬರೆಯೆ

೫. ರೆಗಡಿ । ಬಡಗಲ್ಲು ನಮ್ಮ ಕೆಶೊಭಟ್ಟರ ಗಡಿಯಲ್ಲು ಯತ್ತಿದ ಕಾದಿಗೆ ಗಡಿ । ಸ್ತ ೧ರ ಕಾನು ತುಂಡಿನಲ್ಲು ಬಾ । ೧ । ೯ ಚತುಗಡಿ ವಿವರ ಮೂಡಲ್ಲು ಕಂಬಿವಾರಕಾಲಾನ್ನು

೬. ಬಾಗಿಬಂದ ಹಾಗೆ ತೆಂಕಲ್ಲು ವರದೆಶ ಭಟ್ಟರ ಗಡಿಯಲ್ಲು । ನೆಟ್ಟ ಬೆಲಿ ಗಡಿ । ಪಡುವಲು ನಮ್ಮ ಕೆಶೊಭಟ್ಟರ ಗಡಿಯಲ್ಲು ಎತ್ತಿದ ಕಾದಿಗೆ ಗಡಿ । ಬಡಗಲ್ಲು ।

೭ ಕಂಟ್ಟಣವೆಗಡ್ಡಿ । ಯಿಂತ್ತಿ ಚತ್ತುಗಡಿಯಿಂದ ವಳಗಾದ ಸ್ಥಳ ೨ ರೆ ಕುಳ ೭ ೨ ॥ ೦ ಆ ಮನ್ನೆ ಅಂಕಣ ೧ ಅಮನವರ ಅಡ್ಡಿಗಳತ್ತಿನ ತ್ತಿಂನಳು ೩ ಅ

ಒಂದನೇ ಗರಿ ಹಿಂಭಾಗ

೧. ಮ್ರುತ ಪಡಿ ತಿಂ ೧ ॥ ಕಉಲಕೊಡ ಗ್ರಾಮದಲ್ಲು ಹೊಸಹರಿಭಟ್ಟರ ಪಾಲು। ಸ್ತ ೧ರ ಭರಣ ೬ಕ್ಕೆ ಚತುಗಡಿ ವಿವರ । ಮುಡಲ್ಲು ಪಡುವಲ್ಲು ನೆಲನಂಟು ನಿರ ಯರಕಲೆ

೨. ಗಡಿ । ತೆಂಕಲು ಸಂಬುದೆವಣ್ಣನ ಗಡಿಯಲ್ಲು ಯತ್ತಿದ ಕಾದಿಗೆ ಗಡಿ ಬಡಗಲ್ಲು ನಂಮಕೆಶೊಭಟ್ಟರ ಗಡಿಯಲ್ಲು ಯತ್ತಿದ ಕಾದಿಗೆ ಗಡಿ ಸ್ತಳ ೧ರ ಭ ೧ರ


೩. ಚತುರ್ಗಡಿ ವಿವರ । ಮುಡಲ್ಲು ಕಂ। ಟ್ಟೆಂಕಲ್ಲು ನಂಮ ಪುಟ್ಟಭಟ್ಟರ ಗಡಿಯಲ್ಲು ಯತ್ತಿದ ಕಾದಿಗೆ ಗಡಿ । ಪಡುವಲ್ಲು ದರೆ ಅವಳೆ ಗಡಿ ಬಡಗಲು ಕೆಶೊಭಟ್ಟ

೪. ರಗಡಿಯಲ್ಲು ಯತ್ತಿದ ಕಾದಿಗೆ ಗಡಿ ಯಿಂತ್ತಿ ಚತುರ್ಗಡಿ ಯಿದ ಒಳಗಾದ ಸ್ಥಳ ೨ರ ಕೊಳಗ ೪೫ ಉಭಯಂ ಗ್ರಾಮ ಯರಡಕ್ಕೆ ಕಳಗ ಗ ೧ ಹಾ೨೬

೫. ಹನ್ನೆರಡು ಹಣ ಬೆಳೆ ಕಾಳ ಪ್ರಾಕು ಮನೆದಳ ಸಹ ಮದ್ಯಸ್ತ ಪರಿಕಲ್ಲಿತ್ತಿ – ಹಾಗೆ ಬುಧಿವಂತರು ಕಂಡು ಕಟ್ಟಿದ ತತ್ಕಾಲೊಚಿತ ಕ್ರಯ

೬. ಗ ೧೨ ಹಾ ೨ ಹನ್ನೆರಡು ಎರಡು ಹಣವಂನ್ನು ಕೈಯರ್ತವಾಗಿ ತೆಗೆದುಕೊಡ್ಯನ್ನು ಅರ್ಥಸಂದನೆನ್ನುವಾಗಿಯಿದೆ ಸಾಧನ ಯಿ ವ್ರತ್ತಿಗೆ ಪ್ರತಿ

ತಾಳೆಗರಿ ೨



೧. ಸಲುವ ನಿರುನಿಕ್ಷೇಪ ಜಲಪಾಷಾಣ ಅಭಿವೃತ್ತಿಪೆ ಅಕ್ಷಿಣಿ ಆಗಾಮ್ಯ ಅಂಗೋಡು ಅಂಗಫಲ ತೆಂಗು ಹಿಂಗಾರ ಸರ್ವಂಗೊಡು ಸಹ ಆ ನಿಂನ ಹೆಣು

೨. ಗೆ ದಾನಗಡ್ಡಿಗೆ ಮೂಲ ಆದಿ ಕ್ರಯದಾನ ಪರಿವರ್ತಿತಮಾನಕ್ಕೆ ಸಲ್ಲಿಸಿ ನಿಂನ ಸಂತಾನ ಪಾರಂಪರ್ಯವಾಗಿ ಆಳಿ ಅನ್ನುಭವಿಸಿಕೊಂಡು ಬಹೆರಿ ಯ

೩. ಂದು ಬರಸಿಕೊಟ್ಟ ಕ್ರಯ ಮೂಲ ಸಾಧನ ಯಿತಪ್ಪುವದಕ್ಕೆ ಸಾಕ್ಷಿಗಳು ತಿರ್ಥದ ಸುರಣನ ಮಗಕೃಷ್ಣಪ್ಪ । ಸಂಬು ದೆವಪ ಮರಿತಿಂಮಂಣ ನಿಂ


೪. ಗದಹಳ್ಳಿ ಗೊಪಣ್ಣ ಕರ್ತೃವಪ್ಪಿತ ಗಣೆಶಭಟ್ಟ ಬರಹ ಸಾಕ್ಷಿ ವಪ್ತ । ಕೃಷ್ಣನ ಸಾಕ್ಷಿ ದೆವಣ್ಣನ ಸಾಕ್ಷಿ । ಮರಿತಿಂಮಂಣನ ಸಾಕ್ಷಿ ಗೌ । ಗೊಪಯ್ಯನ ಸಾಕ್ಷಿ

೫. ಇಂತಿವರ ಉಭಯಾನ್ಮಾತದಿಂದ ಬರದಾತ ಲಿಂಗಜಹಳ್ಳಿ ಪರಮಯ್ಯನ ದೆವಪ್ಪ। ಯಥಾಪ್ರತಿ

ಸಾರಾಂಶ:

ಶಾಲಿವಾಹನ ಶಕವರುಷ ೧೬೬೬ನೆ ಅಂದರೆ ಕ್ರಿ.ಶ. ೧೭೪೪ ರುಧಿರೋದ್ಗಾರಿ ಸಂವತ್ಸರದ ಮಾಘ ಶು ೧೦ರಲ್ಲಿ ಯಿಕ್ಕೆರ್ರಿ ಸಿಮೆ ತೀರ್ಥದ ನಾಣಭಟರ ಮಗ ಗಣೆಶಭಟನು ಚಿಕಪ್ಪ ಶಂಕ್ರಭಟ್ಟರ್ರಿಗೆ ಬರೆಸಿಕೊಟ್ಟ ಉತ್ರಿ ಮನೆ ಕ್ರಯ ಮುಲಸಾಧನದ ಪಟ್ಟೆ ಇದಾಗಿದೆ. ಇವರ ಹಿರಿಯರು ತಿರ್ಥದ ಗ್ರಾಮದಲ್ಲು ಅರ್ಚಿಸಿ ಬರುತ್ತಿದ್ದುದನ್ನು ದಾಖಲೆ ಹೇಳುತ್ತದೆ. ಈ ಗರಿಯ ಹಿಂಭಾಗದಲ್ಲಿ ತಿಗಳಾರಿಯಲ್ಲಿ ಜಾತಕ ಬರೆಯಲಾಗಿದೆ.

ತಾಳೆಯೋಲೆ ಗರಿ: ಕನ್ನಡ: ನಿರೂಪ: ೨ ಮುಂಭಾಗ



೧. ಸ್ವಸ್ತಿ॥ ನಿರ್ವಿಘ್ನಮಸ್ತು । ನಮಸ್ತುಂಗ ಶಿರಸ್ತುಂಬಿ ಚಂದ್ರಚಾಮರ ಚಾರವೆ । ತ್ರೈಲೊಕ್ಯ ನಗರರಂಭ ಮೂಲಸ್ತಂಬಾಯ ಶಂಭವೆ ।

೨. ಸ್ವಸ್ತಿ ಶ್ರೀಜಯಾಭ್ಯದಯ ಶಾಲಿವಾಹನ ಶಕವರ್ಶ ೧೭೭೯ ಪರ್ರಿವರ್ತಮಾನಕ್ಕೆ ಸಲ್ಲುವ ಪಿಂಗಳ ನಾಮ ಸಂವತ್ಸರದ ಪುಶ್ಯ ಬ ೧೦ಲ್ಲು ಶ್ರೀ

೩. ಮತ್ತುಯಿಕ್ಕೆರಿ ಹೋಬಳಿವಳಿತಾದ ಶ್ರೀವರದಾಂಮೂಲದ ಶ್ರೀವರದಾಂಬಿಕೆ ಅಂಮನವರು ವರದಾಮೂಲದ ಗಣೆಶಭಟ್ಟರ ಮ

೪. ಗಪುಟ್ಟಪ ಭಟ್ಟರು ತಂಬರಸಭಟ್ಟರ ಮಗ ಶಂಕ್ರಭಟ್ಟರು।ಗಣೆಶಭಟ್ಟರ ಮಗ ವರದ ಭಟ್ಟರು ಸುಬಾಭಟರ್‍ರಿಗೆ ಸಹ ಬರಶಿ

೫. ಕೊಟ್ಟ ಭೂಮಿ ಸಾಧನ ಪಟ್ಟೆ ಕ್ರಮವೆಂತ್ಯಂದರೆ। ಯಿಾ ಗ್ರಾಮದಲ್ಲು ನಮಗೆ ಪ್ರಾಕು ಉತಾರವದ ರೆಖೆ ಶಿಸ್ತು ಕೊಟ್ಟದ ಶಿಸ್ತು ಗ ೬ಹಾ ಆರುವ

೬. ರಹಾಂನ ಭೂಮಿಯಂನ್ನು ನಿಮಗೆ ಮೂಲಕ್ಕೆ ಕೊಟ್ಟೆವಾಗಿ ಯಿಾ ಭೂಮಿ ಚತುಃಶಿಮೆಗಡ್ಡಿ ವಿವರ। ಮೂಡಲ್ಲು ಕಂಬಿವರ ಕಾಲಾನ್ನು ಬಾಗಿ ಬಂ

೭ ರಹಾಗೆ ನೆತ್ತಿಕಟ್ಟುನಿರಹರಕಲೆಗಡಿ। ತೆಂಕಲು ಪುಟ್ಟಭಟ್ಟನಗಭಟ್ಟನ ತೊಟ್ಟದವತ್ತಿನಲ್ಲು ಯತ್ತಿದ ಕಾದಿಗೆಯೆಗಡಿಪಡು

ತಾಳೆಗರಿ ಹಿಂಭಾಗ:

೮. ವಲ್ಲು ಕಂಬಿವರ ಕಾಲನ್ನು ಬಾಗಿ ಬಂದಹಾಗೆ ನೆರೆಗಡ್ಡಿಯಲ್ಲು ಅನ್ನುಭವಿಶಿ ಬಂದ ಪ್ರಕಾರ ನೆತ್ತಿಕಟ್ಟು ನಿರಹರತಲೆ ಗಡಿ। ಬಡಗಲು ಅಗಸರ ಕೆರ್‍ರಿಯೆ

೯. ಗಡಿ।ಯಿಂತ್ತಿ ಚತುಃಶಿಮೆಗಡ್ಡಿಯಿಂದವಳಗಾದ ತೊಟ್ಟದ ಶಿಸ್ತು ಗ ಆರು ವರಹಂನ ಶಿಸ್ತಿನ ಭೂಮಿಯನ್ನು।ಹಿಂಡಲ್ಲು ಮುಂಡಿಗೆ ಕಡ್ಡಿರು

೧೦. ನಿಮ್ಮ ಕೈಯಿಂದ ರೊಖ ಮುಟಿಸಿದಯದ ಪದೆನಶಿಯಡದಪದೆ ಬಾಳೆ ಮರದ ಪದೆ ಬಳಿ ಮುಂತಾಗಿ ಹಾಕಿ ಚೌಮೂಲೆ ಶುಧವಾ

೧೧. ಗಿಸ್ಯೆಕೊಂಡುವ ವರುಶಾ ೧೨ರ ಪ್ರತಿ ವರುಷ ೩ರ ಮೆ ತಿಂಳಗೆ ನಮ್ಮ ಸಂನ್ನಿದಾನದಲ್ಲು ನಡವ ಅಮೃತಪಡಿ ನಂದಾದಿಪ್ತಿ ಕಟ್ಟಲೆ ಬಗ್ಗೆ

೧೨. ಗ ೬ ಹಾ ಆರು ವರಹಾಂನ ನಲವಾಗದ ರಿತ್ತಿ ತೆತ್ತುಕೊಂಡು ಬಹದೆಂದು ಬರಶಿಕೊಟ್ಟ ಭೂಮಿ ಮೂಲ ಸಾಧನದ ಪಟ್ಟೆ।

೧೩. ಶ್ರೀ ವರದಾಂಬ ಅಮ್ಮನವರು ಅಪಣೆ ಪ್ರಕಾರ ಸೀಮೆ ಸಮಸ್ತರ ಸಮ್ಮುಖದಿಂದ ಯಿಾ ಪಟ್ಟೆ ಬರೆದಾತ ಸ್ಥಳದ ಸೇನಭಾಗ ಗಿರಿಯಪ್ಪ

೧೪. ನ ಮಗ ಸುಬ್ಬಯ್ಯ । ಯಥಾಪ್ರತಿ

ಸಾರಾಂಶ:

ಇದು ಶಕವರ್ಶ ೧೭೭೯ ಕ್ರಿ.ಶ. ೧೮೫೭ರ ಪಿಂಗಳ ನಾಮ ಸಂವತ್ಸರದ ಪುಶ್ಯ ಬ ೧೦ಲ್ಲು ಯಿಕ್ಕೆರಿ ಹೋಬಳಿ ಶ್ರೀವರದಾ ಮೂಲದ ಶ್ರೀವರದಾಂಬಿಕೆ ಅಂಮನವರು ವರದಾಮೂಲದ ಗಣೆಶಭಟ್ಟರ ಮಗಪುಟ್ಟಪ ಭಟ್ಟರು ತಂಬರಸಭಟ್ಟರ ಮಗ ಶಂಕ್ರಭಟ್ಟರು।ಗಣೆಶಭಟ್ಟರ ಮಗ ವರದ ಭಟ್ಟರು ಸುಬಾಭಟರ್‍ರಿಗೆ ಸಹ ಬರಶಿಕೊಟ್ಟ ಭೂಮಿ ಸಾಧನ ಪಟ್ಟೆ. ಶ್ರೀ ವರದಾಂಬ ಅಮ್ಮನವರ ಅಪಣೆ ಪ್ರಕಾರ ಸೀಮೆ ಸಮಸ್ತರ ಸಮ್ಮುಖದಿಂದ ಯಿಾ ಪಟ್ಟೆಯನ್ನು ಬರೆದಾತ ಸ್ಥಳದ ಸೇನಭಾಗ ಗಿರಿಯಪ್ಪ ನ ಮಗ ಸುಬ್ಬಯ್ಯ ಎಂದು ಇದರಲ್ಲಿದೆ.

ತಾಳೆಯೋಲೆ ಗರಿ: ಕನ್ನಡ: ನಿರೂಪ: ೩ ಗರಿ ೩ ಮುಂಭಾಗ

೧. ಸ್ವಸ್ತಿ ನಿರ್ವಿಘ್ನಮಸ್ತುಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೭೧೧ನೆಯ ಪರಿವರ್ತಮಾನಕ್ಕೆ ಸಲ್ಲುವ ಪ್ಲವಂಗನಾಮ ಸಂವತ್ಸರದ ಮಾರ್ಗಿಶರ ಬ ೫ ಲ್ಲು ಶ್ರೀಮ

೨. ತು ವರದಾಮೂಲದ ಶೇಷಭಟರ ಮಗ ವರದೇಶಭಟನು ತಂಬರಸ ಭಟರ ಮಗ ಶಂಕರಭಟಗೆ ಬರಸಿಕೊಟ ಭೂಮಿ ಬೋಗ್ಯಾದಿ ಕ್ರಮವೆಂತೆಂದರೆ ನಾನು ನಂನ ಅಂಸರ ನಿಮಿತ್ಯ

೩. ವಾಗಿ ಕವಲಕೊಡ ಗ್ರಾಮದಲ್ಲು ನಂನ ಪಾಲು ಪ್ರಾಪ್ತೆ ಸ್ತಳ ೨ಕೆ ಭರಣ ೭ ವರದಾಮೂಲದಲ್ಲು ಸ್ತಳ ೨ಕ್ಕೆ ಭರಣ ೪ ಅಂತು ಸ್ತಳ ೪ಕ್ಕೆ ಭರಣ ೧೧। ಹಂನೊಂದುಕಾಲು ಭರಣ ಸ್ವಾಸ್ತೆಯಂನು

೪. ನಿನಗೆ ಭೊಗ್ಯಾದಿ ಮಾಡಿಕೊಟ್ಟು ನಿಂನ ಕೈಯಲು ತೆಗದುಕೊಂಡದು ಗಣೆಶಭಟರಿಗೆ ಭೋಗ್ಯಾದಿ ಸ್ವಾಸ್ತೆ ತೆಗದುಕೊಂಬುವ ಬಗ್ಗೆ ಗ ೫ ರಾಮೆಶ್ವರ ದೆವರ ಯಾತ್ರೆ ಬಗ್ಗೆ ತೆಗದುಕೊಂಡದು ಗ ೫

೫. ಉಭಯಂ ೯ಕೈಯಲ್ಲು ತೆಗದುಕೊಂಡದು ವಳಿತ್ತು ಗ ೧೦ ಅಕ್ಷಾರದಲ್ಲು ಹತ್ತು ವರಹಾಂನು ತೆಗದುಕೊಂಡು ಸ್ವಾಸ್ತಿ ನಂನ ಪಾಲಿಗೆ ಬಂದ ಅಂಮನವರ ಉಫಾದಿ ಶಂಭುಲಿಂಗದೇವರ ಉಪಾಧಿ

೬. ಸಹ ನಿನಗೆ ಭೋಗ್ಯಾದಿ ಕೊಟ್ಟೆನು ಈ ಸ್ವಸ್ತ ಚುತ್ತುರ್ಗಡ್ಡಿ ವಿವರ ಮೆಲಿನ ತೊಟದ ಸ್ತಳ ೧ರ ಭರಣ ೬ರ ಚತುರ್ಗಡಿ ಮೂಡಲು ಕಂಬಿವರ ಬಂದಹಾಗೆ ನೆತ್ತಿಕಟ್ಟು ನಿರಹರಕಲೆ ಗಡಿತೆಂಕಲು ನಂ

೭. ಮ ನಾರಣಭಟರ ಗಡಿಯಲ್ಲು ಯತ್ತಿದ ಕಾದಿಗೆ ಗಡಿ ಮೂರುವಲ್ಲು ಕಂಬಿವದ ಬಂದಹಾಗೆ ನೆತ್ತಿಗಟ್ಟು ನಿರಹರಕಲು ಗಡಿ ಬಡಗಲು ಶಂಭುದೆವಂಣನ

೮. ಗಡಿಯಲ್ಲು ಯತ್ತಿದ ಕಾದಿಗೆ ಗಡಿ ಯಿಂತಿ ಚತುರ್ಗಡಿಯಿಂದ ವಳಗಾದ ಸ್ತಳ ೧ ಕಳಗಣ ಕೊಟ್ಟ ಸ್ತಳ ೧ರ ಚತುರ್ಗಡಿ ವಿವರ ಮೂಡಲು ಕಂಬಿವಾರ ಬಂದಹಾಗೆ

೯. ನೆತ್ತಿಗಟ್ಟು ನಿರಹರಕಲೆ ಗಡಿ ತೆಂಕಲು ನಾರಣಭಟನ ಗಡಿಯಲ್ಲು ಯೆತ್ತಿದ ಕಾದಿಗೆ ಗಡಿ ಪಡುವಲು ಕಂಬಿವಾರ ಬಂದಹಾಗೆ ನೆತ್ತಿಗಟ್ಟು ನರಹರಕಲು ಗಡಿ ಬಡಗಲ್ಲು ಗೋವಿಂದನ

ಹಿಂಭಾಗ

೧. ಹರಿಯಂಣನ ಗಡಿಯಲ್ಲು ಯತ್ತಿದ ಕಾದಿಗೆ ಗಡಿ ಯಿಂತಿ ಚತುರ್ಗಡಿಯಿಂದ ಒಳಗಾಗ ಸ್ತಳ ೧ರ ವರದಾಮೂಲದಲ್ಲು ಸ್ತಳ ೧ರ ಭರಣ ೩ ಚತುರ್ಗಡಿ ವಿವರ ಮೂಡಲು ಕಂಬಿವರ ಬಂದಹಾಗೆ ನೆ

೨. ತ್ತಿಕಟ್ಟು ನಿರಹರಕಲೆ ಗಡಿ ತೆಂಕಲು ತೆ। ನಂಮ ನಾರಣಭಟನ ಗಡಿಯಲ್ಲು ಯತ್ತಿದ ಕಾದಿಗೆ ಗಡಿ ಮೂಡುವಲು ಕಂಬಿವಾರ ಬಂದಹಾಗೆ ನೆತ್ತಿಗಟ್ಟಲು ನಿರಹರಕಲೆ ಗಡಿ ಬಡಗಲ್ಲು

೩. ಅಣ್ಣ ಗಣೆಶಭಟ್ಟನ ಗಡಿಯಲ್ಲು ಭರಣದ ದಂಡೆ ಗಡಿ ಯಿಂತಿ ಚತುರ್ಗಡಿಯ ಒಳಗಾದ ಸ್ತಳವಂನು ಮನೆಬಾಗಿಲ ಯಿದೆ ಸ್ತಳ ೧ರ ಭರಣ ೧ ವಂದು ಕಾಲ್ಗಿಗೆಚತುರ್ಗಡಿವಿವರತೆಂಕಲು ವರ

೪. ದಭಟ್ಟರ ಗಣೆಶ ಭಟ್ಟರ ಗಡಿಯಲ್ಲು ಯತ್ತಿದ ಕಾದಿಗೆ ಗಡಿ ಬಡಗಲು ರಾಮಯ್ಯನ ಹಾಳೆ ಗಡಿ ಮುಡಲು ನಾರಣಭಬ್ಬನ ಗಡಿಯಲ್ಲು ಯತ್ತಿದ ಕಾದಿಗೆ ಗಡಿ ಪಡುವಲು ಅಂಣ ಗಣೆಶ ಭ

೫. ಟ್ಟನ ಗಡಿಯಲ್ಲು ಕಟ್ಟಿದ ಬೆಲಿ ಗಡಿ ಯಿಂತಿ ಚತುರ್ಗಡಿಯಿಂದ ಒಳಗಾದ ಸ್ತಳ ೧ ಯಿಂತಿ ಚತುರ್ಗಡಿಯಿಂದ ಒಳಗಾದ ದಳ ೪ರ ಭರಣ ೧೧।೦ ಹನ್ನೊಂದು ಕಾಲು ಭರ

೬. ಣಸಾಗು ಗ ೫॥೧॥ಕೆ ಸೆನಭಾಗರ ಲೆಕಪ್ರಕಾರ ನಿಲವಿಲದ ಹಾಗೆ ತೆತ್ತುಕೊಡುವದರಿವರಾದ ಸರಿತೆ ಸಾಮ್ಯ ಸಹ ನೆರೆವರಾಡಿಯರು ಕೊಟ್ಟುಕೊಂಡು ಅಂಮನವರ ಉಫಾದಿ ಶ

೭. ಭುಲಿಂಗದೆವರ ಉಫಾದಿ ಸಹ ಮಾಡಿಕೊಂಡು ಆ ಬಗ್ಗೆ ಬರುತಕ್ಕ ಹಣ ಬರಿಮಾಡಿ ತೆಗದುಕೊಂಡು ಮನೆಯಲಿಯಿದುಕೊಂಡು ಕವುಲಕೊಡ ಕೊಟ್ಟಿಗೆಮನೆಸಹ ಹೊದಸಿಕೊಂಡು ಬರಬೆ

೮. ಕು ಮೆಲಾಗಿ ನಿಂನ ಕೈಯಲು ತೆಗದುಕೊಂಡದು ಗ ೧೦ ಹತ್ತು ವರಹಾನ ಕೊಟ್ಟು ಭುಮಿ ಬಿಡಿಸಿಕೊಂಡೆನು ಯಂದು ಬರಸಿಕೊಟ್ಟ ಭುಮಿ ಭೋಗ್ಯಾದಿ ಸಾಧನ ಯಿದಕ್ಕೆ ಸಾಕ್ಷಿ ಗ

೯. ಳು ಶಂಕರಭಟ್ಟರ ಗಣೇಶಭಟ್ಟ ನಾರಣಭಟ್ಟರ ಸುಬಾಭಟ್ಟ ಕರ್ತು ವಪ್ತ ವರದೆಶ ಭಟ್ಟನ ಬರಹ ಸಾಕ್ಷಿಗಳ ಮೊಕ್ತಗಣೆಶಭಟ್ಟನ ಸಾಕ್ಷಿ ಸುಬಾಭಟ್ಟನ ಸಾಕ್ಷಿ ಯಿಂತಿ ಉಭಯಾನ್ಮತದಿಂದ ಬರದಾತ ಬಿಮನ ಕೊಣೆ ಶಂಕರಭಟ್ಟ ಯಥಾ ಪ್ರತಿ

ಸಾರಾಂಶ:

ಇದು ಶಕ ವರ್ಷ ೧೭೧೧ ಅಂದರೆ ಕ್ರಿ.ಶ ೧೭೮೯ನೆಯ ಪ್ಲವಂಗನಾಮ ಸಂವತ್ಸರದ ಮಾರ್ಗಿಶರ ಬ ೫ರಲ್ಲಿ ವರದಾಮೂಲದ ಶೇಷಭಟರ ಮಗ ವರದೇಶಭಟನು ತಂಬರಸ ಭಟರ ಮಗ ಶಂಕರಭಟಗೆ ಬರಸಿಕೊಟ ಭೂಮಿ ಬೋಗ್ಯಾದಿ ಕ್ರಮದ ಪಟ್ಟಿ. ಹಂನೊಂದುಕಾಲು ಭರಣ ಸ್ವಾಸ್ತೆಯಂನು ಭೋಗ್ಯಾದಿ ಮಾಡಿಕೊಟ್ಟಿರುವುದನ್ನು ಇದು ತಿಳಿಸುತ್ತದೆ. ಇದಕ್ಕೆ ಕಾರಣ ತಾನು ತೆಗೆದುಕೊಂಡ ಸಾಲ, ರಾಮೆಶ್ವರ ದೇವರ ಯಾತ್ರೆಗೆ ಹೋಗಲು ತೆಗೆದುಕೊಂಡ ಸಾಲವಾಗಿದೆ. ಇದಕ್ಕಾಗಿ ಅಂಮನವರ ಉಫಾದಿ, ಶಂಭುಲಿಂಗದೇವರ ಉಪಾಧಿಯನ್ನು ಭೋಗ್ಯಕ್ಕೆ ಕೊಟ್ಟಿರುವುದನ್ನು ದಾಖಲೆ ಹೇಳುತ್ತದೆ.

ತಾಳೆಯೋಲೆ ಗರಿ: ಕನ್ನಡ: ನಿರೂಪ: ೩ ಗರಿ ೩ ಮುಂಭಾಗ

೧. ಸ್ವಸ್ತಿನಿರ್ವಿಘ್ನಮಸ್ತು। ಪ್ರಮಾದೀಚ ಸಂವತ್ಸರದ ಆಶ್ವಿಜ ಬ ೫ಲ್ಲು ಶ್ರೀಮತು ಶಂಕರಭಟರಿಗೆ ಪುಟ್ಟಭಟ್ಟರು ನಾರಾಯಣ ಭಟ್ಟರು ಸಹ ಬರೆಸಿಕೊಟ್ಟ

೨. ಭೂಮಿ ಅಡವಿನ ಪತ್ರದ ಕ್ರಮವೆಂತೆಂದರೆ ನಾವು ಪ್ರಾಕು ಸಂವತ್ಸರದಲ್ಲು ಅರಮನೆಗೆ ನಿಲದ ಹಣವಿನ ಬಗ್ಗೆ ಅರಮನೆ ಹಣವಿಗೆ ಸಹ ನಿಂನ ಹೆಳಿಸಿದ

೩. ಲ್ಲಿ ಆ ಹಣವು ನಿಲವಾಗದ್ದರಿಂದ ಆ ಹಣವಿನ ಬಗ್ಗೆ ನಿನಗೆ ಅಡವು ಮಾಡಿ ಕೊಟ್ಟಿದ್ದು ಕವಲುಕೊಡ ಗ್ರಾಮದಲ್ಲು ನಂನ ತೋಟದ ಸಿಸ್ತು ಗ ೧೦ ಅಕ್ಷರದಲ್ಲು ಹತ್ತು ವರಹ

೪. ಸಿಸ್ತಿನ ಭೂಮಿಯನ್ನು ಅಡವು ಕೊಟ್ಯನು ಯಿಾ ಸಂವತ್ಸರದ ಪುಷ್ಯ ಶುದ್ದ ೫ ಗೆ ಲೆಕಾಚಾರದಲ್ಲಿ ಆದ ಪ್ರಕಾರ ಹಣ ಕೊಟ್ಟು ಯಿಾ ಅಡವಿನ ಪತ್ರ

೫. ತೆಗೆದುಕೊಂಡೆನ್ನು ಆ ಹಣ ಕೂಡಲಾರದೆ ಯಿದಲ್ಲಿ ಯಿ ಅಡವಿನ ಕೊಟ್ಟ ಒಪಿಸಿ ಕೊಟ್ಟ ಕ್ರಯ ಸಾಧನ ಬರ-ನು ಎಂದು ಬರಸಿಕೊಟ್ಟ ಅಡವಿನ ಪತ್ರ.

೬. ಯಿದಕೆ ಸಾಕ್ಷಿಗಳು ಚಿಪಳಿ ಸಂಕಪ್ಪಯ್ಯ ಕೊಲಕೌಡ ಮರಿಯಪ್ಪ ಕರ್ತೃ ಒಪ್ಪಿತ ನಾರಾಯಣ ಭಟ್ಟನ ಬರಹ।ಸಾಕ್ಷಗಳ ವಪ್ಪ ಸಂಕಪ್ಪೈ

೭ ಯನ ಸಾಕ್ಷಿ ಮರಿಯಪ್ಪನ ಸಾಕ್ಷಿ ಯಿಂತಿ ಉಭಯಾನುಮತದಿಂದ ಬರದಾತ ಕರ್ಕಿಕೊಪ್ಪದ ಕೃಷ್ಣಯ್ಯ ಯಥಾಪ್ರತಿ

ಹಿಂಭಾಗ

೧. ಪುಟ್ಟಭಟ್ಟರಿಂದ ಶಂಕರಭಟ್ಟರಿಗೆ ಸಲುವದು ಗ ೧೪ ಹಾ೨ =-ಯಿಾ ಪ್ರಕಾರ ಆನಂದ ಸಂವತ್ಸರದ ಆಷಾಡ ಬ ೧೦ಲ್ಲು ಓತಿಗೋಡ ಕೃಷ್ಣಯ್ಯ ಉದರೆ ತಿ

೨. ಂಮಪಯ್ಯ ಯಿಕ್ಕೆರಿ ಕೊಟೆ ರಂಗರಾಯರು ಹುಲಿಮನೆ ಶೆಶೆಯ್ಯ ಮಂಕಳಲೆ ಸಂಬಯ್ಯ ಅಜಿಭಟ್ಟರ ಸಂಕಪ್ಪಯ್ಯ ಯಿವರ ಮುಂತಿಟ್ಟು

೩. ಶಂಕರಭಟ್ಟರ ಪುಟ್ಟಭಟ್ಟರ ಮುಕ್ತ ಲೆಖ

ಸಾರಾಂಶ:

ಪ್ರಮಾದೀಚ ಸಂವತ್ಸರದ ಆಶ್ವಿಜ ಬ ೫ಲ್ಲು ಶ್ರೀಮತು ಶಂಕರಭಟರಿಗೆ ಪುಟ್ಟಭಟ್ಟರು ನಾರಾಯಣ ಭಟ್ಟರು ಬರೆಸಿಕೊಟ್ಟ ಭೂಮಿ ಅಡವಿನ ಪತ್ರ ಇದಾಗಿದೆ. ಅರಮನೆಗೆ ನಿಲದ ಹಣವಿನ ಬಗ್ಗೆ ಅರಮನೆ ಹಣವಿಗೆ ಸಹ ಹಣವು ನಿಲವಾಗದ್ದರಿಂದ ಆ ಹಣವಿನ ಬಗ್ಗೆ ಅಡವು ಮಾಡಿ ಕೊಟ್ಟಿದ್ದನ್ನು ದಾಖಲೆ ತಿಳಿಸುತ್ತದೆ. ಇದರಲ್ಲಿ ಯಿಕ್ಕೆರಿ ಕೊಟೆ ರಂಗರಾಯರು ಹುಲಿಮನೆ ಶೆಶೆಯ್ಯ ಮಂಕಳಲೆ ಸಂಬಯ್ಯ ಅಜಿಭಟ್ಟರ ಸಂಕಪ್ಪಯ್ಯ ಯಿವರ ಉಲ್ಲೇಖ ಬರುತ್ತದೆ.

ಕವಿ ಪರಮದೇವರ ಕೀರ್ತನೆಯಲ್ಲಿ ಉಲ್ಲೇಖಿತ ಪೂರಕ ಮಾಹಿತಿಗಳು

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಹೊಸನಗರ ಕೊಲ್ಲೂರು ಮಾರ್ಗದಲ್ಲಿ ಬರುವ ನಿಟ್ಟೂರಿನಿಂದ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿ ಇರುವ ಸುಳಿಗೋಡಿನವನು ಕವಿ ಪರಮದೇವ. ಪದ್ಯವೊಂದರಲ್ಲಿ **ತಪ್ಪಿ ಹೇಳುವೆನೆ ನಮ್ಮಪ್ಪ ದುರ್ಭಿಕ್ಷವು ಎಪ್ಪತ್ತು ವರುಷಕೊದಗಿ ಬಂತು। ಇಪ್ಪತ್ತು ವರುಷಕೀ ಕಾಲ ಬಂದಿದ್ದರೆ ಕನಿಷ್ಠಕ್ಕೆ ಗಣಿಸಿ ಸುಕ್ಷಾಮವ ಮರೆವೆನು ॥೪॥ ಧಾರಣೆ ಪಾರಣೆ ಶಿವರಾತ್ರಿ ಹರಿದಿನ ಓರಂತೆ ಬಡವಗೆ ನೆಲೆಯಾಯಿತು। ಕ್ಷೀರಾಬ್ಧಿಶಯನ ಲಕ್ಷ್ಮೀರಮಣನು ತನ್ನ ಸೇರಿದ ಜನರ ಕಣ್ಣಲಿ ನೋಡುತೊಲಿದ ॥೫॥**

ಪರಶುರಾಮ ಭಾವೂನ ದಾಳಿ ನಡೆದಾಗ ದುರ್ಭಿಕ್ಷ ಬಂದಾಗ, ಪರಮದೇವ ಕವಿ ತನಗೆ ಎಪ್ಪತ್ತು ವರ್ಷ ವಯಸ್ಸಾಗಿತ್ತು ಎಂದು ಹೇಳುತ್ತಾನೆ. ಅಂದ್ರೆ ಕ್ರಿ.ಶ. ೧೭೯೧ರಲ್ಲಿ ಪರಮದೇವನಿಗೆ ೭೦ ವರ್ಷ ವಯಸ್ಸು. ಅಲ್ಲಿಗೆ ಪರಮದೇವ ಹುಟ್ಟಿದ್ದು ಕ್ರಿ.ಶ. ೧೭೨೧ ಶಾಲಿವಾಹನ ಶಕ ೧೬೪೩ನೆಯ ಶಾರ್ವರಿ ಸಂವತ್ಸರವಾಗುತ್ತದೆ.

ಕ್ರಿ.ಶ. ೧೭೬೩ರಲ್ಲಿ ಇಕ್ಕೇರಿ ಪ್ರಾಂತವನ್ನೊಳಗೊಂಡ ಬಿದನೂರು ರಾಜ್ಯವನ್ನು ಹೈದರಾಲಿ ಗೆದ್ದು ತನ್ನ ವಶಕ್ಕೆ ಒಳಪಡಿಸಿಕೊಳ್ಳುತ್ತಾನೆ. ಅನಂತರ ಕ್ರಿ.ಶ. ೧೭೬೫ರ ವರೆಗೆ ಸೋಂದ ಮತ್ತು ಸವಣೂರು ರಾಜ್ಯಗಳನ್ನು ಹೈದರಾಲಿ ಗೆದ್ದು ಕೊಳ್ಳುತ್ತಾನೆ. ಇದಕ್ಕೆ ಪ್ರತಿಯಾಗಿ ಮರಾಠರು ಕ್ರಿ.ಶ. ೧೭೬೫ರಲ್ಲಿ ಒಮ್ಮೆ ಇಕ್ಕೇರಿ ಪ್ರಾಂತವನ್ನು ಆಕ್ರಮಿಸಿ ಲೂಟಿ ಮಾಡಿ ಹೋಗುತ್ತಾರೆ. ಅನಂತರವೂ ಈ ಪ್ರಾಂತವನ್ನು ಮತ್ತೆ ಮತ್ತೆ ಆಕ್ರಮಿಸಿ ಲೂಟಿ ಮಾಡಿದ್ದಾರೆ. ಕ್ರಿ.ಶ. ೧೭೯೧ರಲ್ಲಿ ಪರಶುರಾಮ ಭಾವೂ ಎನ್ನುವವನ ನಾಯಕತ್ವದಲ್ಲಿ ಮರಾಠರ ದೊಡ್ಡ ದಂಡು ಬಂದು ಈ ಪ್ರಾಂತವನ್ನು ಲೂಟಿ ಮಾಡುತ್ತದೆ. ಈ ವಿಚಾರವನ್ನು ಕವಿ ಸುಮಾರು ಹತ್ತು ಕೀರ್ತನೆಗಳಲ್ಲಿ ದಾಖಲಿಸಿದ್ದಾನೆ. ಪರಶುರಾಮ ಬಾಹುವಿನ ಕ್ರೂರತನದ ಇಕ್ಕೇರಿ, ವರದಾಮೂಲ ಮೇಲಿನ ದಾಳಿಯನ್ನು ಇದು ತಿಳಿಸುತ್ತದೆ.[೧]

ಪರಮದೇವನ ಕೀರ್ತನೆಯಲ್ಲಿ ಉಲ್ಲೇಖಗೊಂಡಿರುವಂತೆ ಪರಶುರಾಮ ಭಾವುವಿನ ಇಕ್ಕೇರಿ ಮೇಲಿನ ದಾಳಿ ಮತ್ತು ದೋಚುವಿಕೆ ಕುರಿತು ಉಲ್ಲೇಖವಿರುವ ಕೀರ್ತನೆ ಈ ರೀತಿ ಇದೆ.

ಹೋಯಿತು ಪರಶುರಾಮನ ದಂಡಿಲಿ। ನಷ್ಟವಾಯಿತು ಜನರೆಲ್ಲ ಹೊಡೆತ ಕಡಿತದಿ॥ಪ॥ ಮೇದಿನಿಯೊಳಗಣ ಜನರಿಂಗೆ ದಂಡಿಂದ ಹೋದುದು ಮನೆಮಾರು। ದನಕರು ಮಣಿ ಮುತ್ತು ತೀರ್ದುದು। ಕಂಚು ತಾಮ್ರಗಳು ಬಹುಗಾಲ ಸಾಧಿಸಿದೊಡವೆ ಸಾಧನ ಸಂಪತ್ತುಗಳೆಲ್ಲ॥೧॥ ಉಡುವ ತೊಡುವ ಜವಳಿ ಅಡಕೆ ಮೆಣಸು ಬತ್ತ । ಕಡತ ಕಂಠಗಳಾಬ್ರ ಮುಡಿ ಉಪ್ಪು ಗುಢ ಕಲ್ಲು। ಗಡಿಗೆ ಮಡಕೆ ಎಣ್ಣೆಕೊಡವು ಕಬ್ಬಿಣ ಕತ್ತಿ ಅಡಿಯಿಟ್ಟ ಚಿಟ್ಟು ಪಾಟ್ಟಿಗಳೊಂದುಳಿಯದಂತೆ ॥೨॥ ಕೊಟ್ಟದೊಳಗೆ ಇಟ್ಟ ವಸ್ತುವಡವೆಯೆಲ್ಲ। ನಷ್ಟವಾಯಿತು ಹಾರೆ ಕೊಡಲಿ ಗುದ್ದಲಿ ಕುಳ ಬಟ್ಟಲು ಹಂಡೆ ಕೊಪ್ಪರಿಗೆ ಇಕ್ಕುವ ಗುಂಡಿ। ಹುಟ್ಟು ಚಲುಕದ ಮಣೆ ಮರಿಗೆ ಸರ್ವಸ್ವವು॥೩॥ ಮುತ್ತಿನಸರ ಕೆಂಪುಗೆತ್ತಿಗೆ ನಗ ಮುದ್ರೆ। ಯೊತ್ತು ಉಂಗುರ ಜಪಮಣಿ ಮಾಲೆ ಹವಳ ಯಾ। ವತ್ತು ಪೂಜಿಪ ಪಂಚಮೂರ್ತಿಯಾರತಿ ಸೊಡರೆತ್ತುವ ನಗನಾಣ್ಯವೆಲ್ಲ ಸುಲಿಗೆಯಿಂದ ॥೪॥ ಅಂಧಕಾರಕೆ ನೆರವಾದಂತೆ ದುರ್ಭಿಕ್ಷ ಬಂತು । ಸಂಗಡ ತುಂಡಲ ಗದ್ಯಾಣವಂದಕ್ಕೈದಾಗಿ ಮುಗ್ಗಿತು ಹರಿನಂದನನ ಕೋಣೆ ಲಕ್ಷೀಶನೊಬ್ಬನೆ ಬಲ್ಲ॥೫॥

ಮತ್ತೊಂದು ಕೀರ್ತನೆಯಲ್ಲಿ:

ಮುನಿದ ಭಾವುನ ದಂಡು ಕಂಡು। ನಿನ್ನ ಮನೆಮಾರಿನಾಸೆಪಾಸೆಯನು ನೀಡಾಡು॥ಪ॥ ಲಂಬಾಣಿ ಜನ ಬಂತು ನೋಡು । ನೀನು ದಿಬ್ಬವ ಹತ್ತಿ ಕಾನಿಗೆ ಓಡು। ತಂಬಿಗೆಗಳ ಜೊತೆಮಾಡು।ತಲೆಚಂಬಿಗೆ ಬಂತು ಮಾನವರಿಗೆ ಕೇಡು॥೧॥ ಕಂಡ ಕಂಡವರನು ಹಿಡಿದು ಕರ।ಚಂಡಾಡಿ ಹೊಯ್ದು ಕೆಡಹಿ ಮೆಟ್ಟಿ ತಿರಿದು।ಖಂಡೆಯದೊಳು ಘಾಯಗರೆದು ಮೈ।ರೊಂಡಿಯ ಮುರಿದು ಗಂಟಿಗೆ ನೀರೆರೆದು॥೨॥ ಕತ್ತಿಯ ಕಿತ್ತು ಕೈಯೆತ್ತಿ ಗೋಣ। ಕುತ್ತಿ ಹಸ್ತಕ ಹಸ್ತವನು ತರಿದೊತ್ತಿ।ರಕ್ತಮಾಂಸದ ಕರುಳೊತ್ತಿ।ಮತ್ತೆ ಹಾರಿತು ಗೂಡಿಂದ ಜೀವ ಕಣ್ಣ ಹುತ್ತಿ॥೩॥ ಹಂತಕಾರಿಗಳಿಗೊಂದೆ ರೂಪು ಪಾಪ । ವಂತರಿಗೆ ಇನಜ ತೋರಿಸುವ ವಿರೂಪ ನರ।ಜಂತುಗಳಿಂಗೆ ಇವರೆ ಮೃತ್ಯುರೂಪ ಚಪ್ಪು।ಕಂತೆಯ ಬಿಡದೆ ಸುಲಯಲಿಕೆ ಸಾಕು॥೪॥ ಶೀಲವಂತರು ಶೀಲಗೆಟ್ಟು ದುಃಶೀಲರು ಶೀಲದಾಚಾರವ ತೊಟ್ಟು। ಕೀಳೂಮೇಲೊಂದಾಯಿತಷ್ಟು ಲಕ್ಷ್ಮೀ।ಲೋಲಮಾಡಿಸುವ ಕುಚೇಷ್ಟೆ ಇವಷ್ಟು ॥೫ ॥

ಈ ದಾಖಲೆಗಳು ಮತ್ತು ಕವಿ ಪರಮದೇವನ ಕೀರ್ತನೆ ಕೆಳದಿ, ವರದಾಮೂಲ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಲು ಸಹಕಾರಿಯಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಪರಶುರಾಮ ಬಾಹುವಿನ ಪಾತ್ರದ ಕುರಿತು ಹೆಚ್ಚಿನ ಸಂಶೋದನೆ ನಡೆಯಬೇಕಿದೆ.

[ಈ ಲೇಖನಕ್ಕೆ ಹಸ್ತಪ್ರತಿಯನ್ನು ಒದಗಿಸಿದ ಹುಲಿಮನೆ ಗಣಪತಿ, ಅಶೋಕ್ ಹೆದ್ಲಿ ಮತ್ತು ಹೆಚ್ಚಿನ ಮಾಹಿತಿ ನೀಡಿದ ತಂದೆಯವರಾದ ಡಾ. ಕೆಳದಿ ಗುಂಡಾಜೋಯಿಸ್, ಪ್ರಬಂಧ ಮಂಡನೆಗೆ ಅವಕಾಶವಿತ್ತ ಕ.ಇ.ಅ ಗೆ ನಾನು ಅಭಾರಿ.]

ಅಡಿಟಿಪ್ಪಣಿಗಳು

೧. ಪರಮದೇವ ಕವಿ ವಿರಚಿತ ತುರಂಗ ಭಾರತ, ಸಂ: ಕೆ. ಜಗನ್ನಾಥ ಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು–೧೮, ೧೯೮೬. His (Haidar's) successes in Sonda and Savanoor led to an invation by the Mahrattas in 1765, repeated on several accations afterwords. From devastation of Shimoga and the open country in 1791 by the army under Parasurama Bhao, a famine ensued (Mysore and Coorg – by Lewis Rice, V-II Shimoga District).

ಗೇರುಸೊಪ್ಪೆ ಮತ್ತು ಹಾಡುವಳ್ಳಿ ಸಾಳುವರ ಅಪ್ರಕಟಿತ ನಾಣ್ಯಗಳು

ಮಂದರ್ಕೆ ನಿತ್ಯಾನಂದ ಪೈ*

ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪೆ (ನಗರಿ, ಭಲ್ಲಾತಕೀಪುರ, ಕ್ಷೇಮಪುರ, ಪುರಂದರಪುರ) ಮತ್ತು ಹಾಡುವಳ್ಳಿ (ಸಂಗೀತಪುರ)ಯು ಸುಮಾರು ಕ್ರಿ.ಶ. ೧೩–೧೫ನೇ ಶತಮಾನದ ತನಕ ಸಾಳುವರ ರಾಜಧಾನಿಯಾಗಿ ಮೆರೆದಿತ್ತು. ವಿಜಯನಗರದ ಸಾಮಂತರಾಗಿದ್ದ ಇವರುಗಳು ಜೈನ ಮತೀಯರು. ತಮ್ಮನ್ನು ಸೋಮವಂಶದ ಕಾಶ್ಯಪ ಗೋತ್ರದವರೆಂದು ಕರೆಸಿಕೊಂಡ ಇವರು ಒಂದೇ ಕುಟುಂಬಕ್ಕೆ ಸೇರಿದವರಾದರೂ, ಗೇರುಸೊಪ್ಪೆಯ ಸಾಳುವರು ಅಳಿಯಕಟ್ಟನ್ನು, ಹಾಡುವಳ್ಳಿ ಸಾಳುವರು ಮಕ್ಕಳ ಕಟ್ಟನ್ನು ಪಾಲಿಸುತ್ತಿದ್ದರೂ ಹಾಡುವಳ್ಳಿ ಸಾಳುವರು ತಮ್ಮ ಆಳ್ವಿಕೆಯ ಕೊನೆಯ ಭಾಗದಲ್ಲಿ ಅಳಿಯ ಕಟ್ಟನ್ನು ಸ್ವೀಕರಿಸಿದ್ದರು.

ಇವರ ಶಾಸನಗಳಲ್ಲಿ ಗದ್ಯಾಣ, ವರಹ ಗದ್ಯಾಣ, ಚಿನ್ನದ ಗದ್ಯಾಣ, ಬೆಳ್ಳಿಯ ಗದ್ಯಾಣ, ಕಾಟಿ ಗದ್ಯಾಣ, ಪ್ರತಾಪ, ನಿಜವರಹ, ಬೆಳ್ಳಿಯ ವರಹಗಳ ಉಲ್ಲೇಖವಿದ್ದರೂ, ಇದುವರೆಗೆ ಇವರ ಯಾವುದೇ ಚಿನ್ನದ ನಾಣ್ಯಗಳು ದೊರೆಕಿಲ್ಲ. ಇವರ ಬೆಳ್ಳಿಯ ನಾಣ್ಯಗಳ ಮುಂಭಾಗದಲ್ಲಿ ಹುಲಿ ಅಥವಾ ಆನೆಯ ಚಿನ್ಹೆಯಿದ್ದು ಹಿಂಬದಿಯಲ್ಲಿ ಕನ್ನಡ ಲಿಪಿಯಲ್ಲಿ ಸಾಳುವ ಮಲ್ಲ ಅಥವಾ ನಾಗರಿ ಲಿಪಿಯ ರಾಜಾಧಿರಾಜ, ದೇವರಾಯ ಎಂಬ ಬರಹಗಳಿವೆ. ಬೆಳ್ಳಿಯ ತಾರಾದ ಮುಂಬದಿಯಲ್ಲಿ ಹುಲಿಯ ಚಿನ್ಹೆಯಿದ್ದು ಹಿಂಬದಿಯಲ್ಲಿ ಕನ್ನಡ ಅಥವಾ ನಾಗರಿ ಲಿಪಿಯ 'ರಾ' ಎಂಬ ಅಕ್ಷರವಿದೆ.

ಇವರ ತಾಮ್ರದ ನಾಣ್ಯಗಳ ಮುಂಭಾಗದಲ್ಲಿ ಗರುಡ, ಗಂಡಭೇರುಂಡ ಮೊದಲಾದ ಆಕೃತಿಗಳಿದ್ದು ಹಿಂಬದಿಯಲ್ಲಿ ಕನ್ನಡ ಲಿಪಿಯ ಸಾಳುವಮಲ್ಲ, ಚನ್ನಬಯಿರಾದೇವಿ, ಚನ್ನಭೈರಾಂಬೆ ಮೊದಲಾದ ಬರಹಗಳಿವೆ.

ಇತ್ತೀಚೆಗೆ ದೊರೆತ ಸಾಳುವರ ಅಪ್ರಕಟಿತ ನಾಣ್ಯಗಳ ವಿವರಗಳು ಈ ರೀತಿಯಾಗಿದೆ.

ಸಾಳುವೇಂದ್ರ ಹಯಿವರಸನ ತಾಮ್ರದ ನಾಣ್ಯ

ಈ ನಾಣ್ಯದ ತೂಕ ೮.೪೫ ಗ್ರಾಂ. ಇದರ ಮುಂಭಾಗದಲ್ಲಿ ಬಲಬದಿಗೆ ಮುಖಮಾಡಿ ನಿಂತಿರುವ ಹನುಮಂತನ ಆಕೃತಿಯಿದ್ದು ಹಿಂಬದಿಯಲ್ಲಿ ೨ ಸಾಲಿನ **ಶ್ರೀ ಹಯಿವರಸ** ಎಂಬ ಕನ್ನಡ ಬರಹ ಇದೆ.



ನಗರಿ ಮತ್ತು ಕೆಲಕಾಲ ಹಾಡುವಳ್ಳಿಯನ್ನು ಆಳುತ್ತಿದ್ದ ಹೈವರಸ, (ಹೈವ ಭೂಪ, ಹಯಿವರಸ) ಸಾಳುವರ ಪ್ರಸಿದ್ಧ ದೊರೆ. ಇವನ ರಾಣಿ ಭೈರಾದೇವಿ. ಇವನು ಹಾಡುವಳ್ಳಿಯನ್ನು ಸಹ ಆಳಿದ ಪ್ರಥಮ ದೊರೆಯೆಂದು ಉಲ್ಲೇಖಿತನಾಗಿದ್ದಾನೆ. ಕ್ರಿ.ಶ. ೧೪೩೦ರ ಮೂಡುಬಿದಿರೆಯ ಹೊಸಬಸದಿಯ ಶಾಸನದ ಪ್ರಕಾರ ಹಯಿವರಸನು ಮಂಗರಸನ ನಂತರ ಪಟ್ಟಕ್ಕೇರಿದ. ಮಂಗರಸನ ಅಳಿಯನಾದ ಇವನು ಬಹಳ ಪರಾಕ್ರಮಿ. ಸಮರ್ಥ ಆಡಳಿತಗಾರನೂ, ಧರ್ಮಬೀರುವೂ ಆದ ಇವನ ಕಾಲ ಸುಮಾರು ಕ್ರಿ.ಶ. ೧೩೭೫–೧೪೦೦. ಇವನ ಸಮಯದಲ್ಲಿ ಹೊನ್ನಾವರ, ಚಂದಾವರ, ಗೋಕರ್ಣ, ಬನವಾಸಿ ಪ್ರದೇಶಗಳು ಸಾಳುವರ ಆಳ್ವಿಕೆಗೆ ಒಳಪಟ್ಟಿದ್ದವು. ಇವನನ್ನು ಮಲೆವರರಾಯರ ಗಂಡ, ಸಿದ್ಧಸಿಂಹಾಸನಾಧೀಶ, ಸಮ್ಯಕ್ತ್ವ ಚೂಡಾಮಣಿ

* ಗಣೇಶ್ ಎಂಟರ್‌ಪ್ರೈಸಸ್, ಬಸ್ ನಿಲ್ದಾಣದ ಬಳಿ, ಮೂಡಬಿದರೆ, ದಕ್ಷಿಣ ಕನ್ನಡ–೫೭೪೨೨೭. ಮೊ. ೯೪೪೮೭೭೦೫೪೦

ಮುಂತಾಗಿ ಶಾಸನಗಳು ಸ್ತುತಿಸಿವೆ. ಕ್ರಿ.ಶ. ೧೩೯೮ರಲ್ಲಿ ವಿಜಯನಗರದ ವಿರುದ್ಧ ಚೌಟರಸನು ದಂಗೆ ಎಂದಾಗ ವಿಜಯನಗರದ ಮಹಾಪ್ರಧಾನ ಮಂಗಪ್ಪ ದಂಡನಾಯಕನಿಗೆ ಈ ಹಯಿವರಸು ತನ್ನ ಸೈನ್ಯದೊಂದಿಗೆ ಸಹಾಯ ಮಾಡಿದ್ದ.

ವಿಜಯನಗರದ ಒಂದನೇ ಬುಕ್ಕರಾಯ ಮತ್ತು ಎರಡನೇ ಹರಿಹರನ ಸಮಕಾಲೀನನಾಗಿದ್ದ ಇವನ ನಾಣ್ಯದ ಮುಂಭಾಗದಲ್ಲಿರುವ ಹನುಮಂತನ ಆಕೃತಿಯು ಸಮಕಾಲೀನ ವಿಜಯನಗರದ ತಾಮ್ರದ ನಾಣ್ಯಗಳ ಮೇಲಿರುವ ಹನುಮಂತನನ್ನೇ ಬಹಳಷ್ಟು ಹೋಲುತ್ತಿದ್ದರೂ, ಹಯಿವರಸನ ನಾಣ್ಯದ ತೂಕವು ಆ ಕಾಲದ ವಿಜಯನಗರದ ನಾಣ್ಯದ ತೂಕಕ್ಕಿಂತ ಸುಮಾರು ಮೂರುಪಟ್ಟು ಜಾಸ್ತಿ ಇರುವುದು ಗಮನಾರ್ಹವಾಗಿದೆ.

ಸಾಳ್ವ ದೇವ/ದೇವರಾಯನ ನಾಣ್ಯಗಳು

ಈ ತಾಮ್ರದ ನಾಣ್ಯದ ತೂಕ ೮.೫ ಗ್ರಾಂ ಆಗಿದ್ದು ಮುಂಭಾಗದಲ್ಲಿ ಹಾರುವ ಗಂಡಭೇರುಂಡನ ಅಸ್ಪಷ್ಟ ಚಿತ್ರವಿದ್ದು ಹಿಂಬದಿಯಲ್ಲಿ ನಾಗರಿ ಲಿಪಿಯ ೨ ಸಾಲಿನ **'ರಾಜಾಧಿರಾಜ'** ಎಂಬ ಬರಹವಿದೆ. ಇದರ ಮೇಲ್ಗಡೆ ಚಂದ್ರ ಸೂರ್ಯರ ನಡುವೆ ಮೂರು ದಳದ ಆಕಾರದ ವಿನ್ಯಾಸವಿದೆ.



ಸಾಳುವ ಮಲ್ಲನ ನಂತರ ಇವನ ತಂಗಿ ಮಗನಾದ ದೇವರಾಯನು ಪಟ್ಟಕ್ಕೆ ಬಂದ. ಸಾಳ್ವ ಭಾರತ ಮತ್ತು ಶಾಸನಗಳಲ್ಲಿ ಇವನು ಸಾಳ್ವ ದೇವನೆಂದೇ ಪ್ರಸಿದ್ಧನಾಗಿದ್ದಾನೆ. ಇವನ ಕಾಲ ಕ್ರಿ.ಶ. ೧೪೮೧–೧೫೧೦. ಇವನ ಬೆಳ್ಳಿಯ ನಾಣ್ಯಗಳ ಮುಂಭಾಗದಲ್ಲಿ ಹುಲಿಯ ಚಿತ್ರವಿದ್ದು ಮೇಲ್ಭಾಗದಲ್ಲಿ ಕಠಾರಿ ಇದೆ. ಹಿಂಬದಿಯಲ್ಲಿ ಇವನ ಬಿರುದಾದ 'ರಾಜಾಧಿರಾಜ' ಎಂಬ ಬರಹ ನಾಗರೀಲಿಪಿಯಲ್ಲಿದ್ದು ಮೇಲ್ಭಾಗದಲ್ಲಿ ಚಂದ್ರಸೂರ್ಯರಿದ್ದಾರೆ. ಪ್ರಸ್ತುತ ಈ ತಾಮ್ರದ ನಾಣ್ಯದ ಮೇಲೆ ಸಹಾ ರಾಜಾಧಿರಾಜ ಎಂಬ ಲಿಪಿ ಇರುವುದರಿಂದ ಈ ನಾಣ್ಯವು ಸಹಾ ದೇವರಾಯನದ್ದೆಂದು ಹೇಳಬಹುದು.

ಕ್ರಿ.ಶ. ೧೪೮೧ರಲ್ಲಿ ಇವನು ಆದಿಲಶಹನ ಸೇನಾಧಿಕಾರಿಯನ್ನು, ಇನ್ನೊಮ್ಮೆ ಗೋವೆಯ ನಿಜಾಮುದ್ದೀನ್ ಮುಲ್ಕ್‌ನನ್ನು ಸೋಲಿಸಿದ್ದ. ಈ ವಿಜಯದಿಂದ ಉನ್ಮತ್ತನಾದ ಸಾಳ್ವದೇವನು ವಿಜಯನಗರದ ವಿರುದ್ಧ ಸ್ವತಂತ್ರನಾಗಲು ಬಯಸಿ ರಾಜಾಧಿರಾಜ, ರಾಜಪರಮೇಶ್ವರ ಮುಂತಾದ ಚಕ್ರವರ್ತಿ ಬಿರುದುಗಳನ್ನು ಧರಿಸಿದ್ದನು. ಇದರಿಂದ ಕುಪಿತನಾದ ವಿಜಯನಗರದ ಚಕ್ರವರ್ತಿ ವಿರೂಪಾಕ್ಷನು ಸೇನಾಸಮೇತನಾಗಿ ಬಂದು ಇವನನ್ನು ನಿಯಂತ್ರಿಸಬೇಕಾಯಿತು. ಇವನ ಮೇಲಿನ ವಿಜಯನಗರದ ನಿಯಂತ್ರಣವನ್ನು ಈ ನಾಣ್ಯದಲ್ಲಿಯೂ ಸಹಾ ಕಾಣಬಹುದು. ಈ ಅಪ್ರಕಟಿತ ಬೆಳ್ಳಿಯ ನಾಣ್ಯದ ತೂಕ ೧.೮೫ ಗ್ರಾಂ. ಆಗಿದ್ದು ಮುಂಭಾಗದಲ್ಲಿ ಹುಲಿ ಮತ್ತು ಕಠಾರಿಯಿದ್ದು ಹಿಂಬದಿಯಲ್ಲಿ ನಾಗರಿ ಲಿಪಿಯ ರಾಜಾಧಿರಾಜ ಬರಹ ಮೇಲ್ಗಡೆ ನಾಗರಿ ಅಕ್ಷರ 'ವಿ' ಇದೆ. ಈ 'ವಿ' ಅಕ್ಷರವು ವಿಜಯನಗರದ ದೊರೆ ವಿರೂಪಾಕ್ಷನ ಹೆಸರಿನ ಮೊದಲಕ್ಷರವಾಗಿದೆ.



ಇವನ ನಂತರ ಪಟ್ಟಕ್ಕೆ ಬಂದ ಭೈರರಸನ ತರುವಾಯ ಕ್ರಿ.ಶ. ೧೫೧೧ರಲ್ಲಿ ಇಮ್ಮಡಿ ದೇವರಾಯನು ಅಧಿಕಾರಕ್ಕೆ ಬಂದ. ಇವನಿಗೆ 'ದೇವರಾಜಭೂಪತಿ' ಎಂಬ ಹೆಸರು ಸಹ ಇತ್ತು. ಇವನ ಬೆಳ್ಳಿಯ ನಾಣ್ಯಗಳ ತೂಕ ಸುಮಾರು ೧.೬ ಗ್ರಾಂ ಆಗಿದ್ದು ಈ ನಾಣ್ಯಗಳ ಮುಂಭಾಗದಲ್ಲಿ ಆನೆಯ ಚಿತ್ರವಿದ್ದು ಮೇಲ್ಭಾಗದಲ್ಲಿ ಚಂದ್ರಸೂರ್ಯರಿದ್ದು ಹಿಂಬದಿಯಲ್ಲಿ

ರಾಜಾಧಿರಾಜ ಎಂಬ ೨ ಸಾಲಿನ ನಾಗರಿ ಲಿಪಿ ಇದೆ. ಇದರ ಮೇಲ್ಭಾಗದಲ್ಲಿ ಚಂದ್ರ ಸೂರ್ಯರ ನಡುವೆ ನಾಗರಿ ಅಕ್ಷರ 'ಕೃ' ಇದೆ. ಈ ಇಮ್ಮಡಿ ದೇವರಾಯನು ವಿಜಯನಗರದ ದೊರೆ ಕೃಷ್ಣದೇವರಾಯನ ಆಜ್ಞೆಯಂತೆ ಗೋವೆಯ ಪೋರ್ಚುಗೀಸರ ಮೇಲೆ ದಂಡೆತ್ತಿ ಹೋಗಿದ್ದ. ಈ 'ಕೃ' ಅಕ್ಷರವು ವಿಜಯನಗರ ದೊರೆ ಕೃಷ್ಣದೇವರಾಯನ ಹೆಸರಿನ ಮೊದಲಕ್ಷರವಾಗಿದೆ.



ಸಾಮಾನ್ಯವಾಗಿ ಸಾಳುವರ ಇತರ ಬೆಳ್ಳಿಯ ನಾಣ್ಯಗಳಲ್ಲಿ ಹುಲಿಯ ಚಿನ್ಹೆಯಿದ್ದರೂ ಈ ಇಮ್ಮಡಿ ದೇವರಾಯನ ಬೆಳ್ಳಿಯ ನಾಣ್ಯದಲ್ಲಿ 'ಆನೆ'ಯ ಚಿತ್ರವಿರುವುದು ವಿಶೇಷವಾಗಿದೆ. ಬಹುಶಃ ಇವನು ವಿಜಯನಗರದ ಪ್ರಸಿದ್ಧ ದೊರೆ ಎರಡನೆಯ ದೇವರಾಯನ ನಾಣ್ಯಗಳ ಮೇಲಿರುವ ಆನೆಯ ಚಿನ್ಹೆಯನ್ನು ತನ್ನ ನಾಣ್ಯಗಳಲ್ಲಿ ಟಂಕಿಸಿರಬಹುದು.

ಇನ್ನೊಂದು ಬೆಳ್ಳಿಯ ನಾಣ್ಯದ ಮುಂಭಾಗದಲ್ಲಿ ಹುಲಿ ಮತ್ತು ಕಠಾರಿಯಿದ್ದು ಹಿಂಬದಿಯಲ್ಲಿ ರಾಜಾಧಿರಾಜ ಹೆಸರಿನ ಮೇಲ್ಭಾಗದಲ್ಲಿ 'ಚ' ಎಂಬ ನಾಗರಿ ಅಕ್ಷರವಿದೆ.



ಈ ಅಕ್ಷರವು ಸಾಳುವ ರಾಣಿ ಚನ್ನಾದೇವಿ ಅಥವಾ ಚನ್ನಭೈರಾದೇವಿಯ ಹೆಸರಿನ ಮೊದಲಕ್ಷರವಾಗಿದೆ.

ಇದೇ ರೀತಿ ಇನ್ನೊಂದು ಬೆಳ್ಳಿಯ ನಾಣ್ಯದ ಹಿಂಬದಿಯಲ್ಲಿ ರಾಜಾಧಿರಾಜ ನಾಗರಿ ಲಿಪಿಯ ಮೇಲ್ಭಾಗದಲ್ಲಿ 'ಮ' ಅಕ್ಷರವಿದೆ. ಆದರೆ ಈ ನಾಣ್ಯವು ಯಾರದೆಂದು ಹೇಳಲು ಸಾಧ್ಯವಾಗಿಲ್ಲ.



ಕೊನೆಯದಾಗಿ ೨ ಬೆಳ್ಳಿಯ ನಾಣ್ಯಗಳು ಕುತೂಹಲಕಾರಿಯಾಗಿವೆ. ಈ ಎರಡೂ ನಾಣ್ಯಗಳ ಮುಂಭಾಗದಲ್ಲಿ ಹುಲಿ ಮತ್ತು ಕಠಾರಿಯಿದ್ದು ಹಿಂಬದಿಯಲ್ಲಿ ರಾಜಾಧಿರಾಜ ಎಂಬ ನಾಗರಿ ಲಿಪಿ ಇದೆ. ಆದರೆ ಒಂದು ನಾಣ್ಯದಲ್ಲಿ ಈ ಲಿಪಿಯ ಮೇಲ್ಗಡೆ ಚಂದ್ರ ಸೂರ್ಯರ ನಡುವೆ 'ಕೈ' ಚಿನ್ಹೆಯಿದೆ.



ಇನ್ನೊಂದು ನಾಣ್ಯದಲ್ಲಿ 'ಕೈ' ಬಳಿ ತಲೆಗೂದಲನ್ನು ಕಟ್ಟಿಕೊಂಡ ವೀರನ ಮುಖದ ಆಕಾರವಿದೆ.



ಸಾಳುವರಿಗೆ ಅರಿಕಟಕ ಸೂರೆಕಾರ, ಸಿದ್ಧಸಿಂಹಾಸನಾಧೀಶ್ವರ, ಸಾಳುವ ದಟ್ಟವಿಭಾಡ, ಸಿಂಗನ ದಟ್ಟ ವಿಭಾಡ, ಮಲವರಗಂಡ ಹುಸಿವರಶೂಲ, ಕಡಿತಲೆಯಮಲ್ಲ, ವೈರಿ ಮಾಂಡಲೀಕರ ಗಂಡ, ಏಕಾಂಗವೀರ ಮುಂತಾದ ಬಿರುದುಗಳೊಂದಿಗೆ 'ಕಲಿಮುಖದ ಕೈ' ಅಥವಾ ಕಲಿಮುಖಾಂಬುಜ ಹಸ್ತ (Hand to the face of the heroes) ಎಂಬ ಬಿರುದಿರುವ ವಿಷಯಗಳನ್ನು ಶಾಸನಗಳು ಹೇಳುತ್ತದೆ. ಕಲಿಮುಖ (ವೀರನ ಮುಖ) ಮತ್ತು ಕೈ ಸಂಕೇತವು ಕಲಿಮುಖದ ಕೈ ಎಂಬ ಸಾಳುವರ ಬಿರುದನ್ನು ಸಾಂಕೇತಿಕವಾಗಿ ನಾಣ್ಯದಲ್ಲಿ ಚಿನ್ಹೆಯ ಮೂಲಕ ಬಿಂಬಿಸುವ ಪ್ರಯತ್ನ ಮಾಡಿರಬಹುದು.

ಸಾಳುವರ ತಾಮ್ರದ ನಾಣ್ಯದ ಮೇಲಿರುವ ಗಂಡಭೇರುಂಡ ಮತ್ತು ನಿಂತಿರುವ ಗರುಡನ ಚಿನ್ಹೆಗಳು ನಂತರದ ದಿನಗಳಲ್ಲಿ ವಿಜಯನಗರದ ದೊರೆಗಳಾದ ಅಚ್ಯುತರಾಯ ಮತ್ತು ಸದಾಶಿವರಾಯರುಗಳು ತಮ್ಮ ನಾಣ್ಯಗಳಲ್ಲಿ ಉಪಯೋಗಿಸಿಕೊಂಡದ್ದು ಗಮನಾರ್ಹವಾಗಿದೆ.

ಈ ರೀತಿಯಾಗಿ ವಿನೂತನ ವಿಧಾನದಿಂದ ತಮ್ಮ ಬಿರುದುಗಳನ್ನು ನಾಣ್ಯಗಳಲ್ಲಿ ಚಿನ್ಹೆಗಳ ಮುಖಾಂತರ ಬಿಂಬಿಸಿದ ಏಕೈಕ ರಾಜ ಮನೆತನ ತುಳುನಾಡಿನ ಸಾಳುವರದ್ದಾಗಿದೆ.

ಆಕರ ಗ್ರಂಥಗಳು

೧. SSIC Vol X and XIV.

೨. History of South Kanara, K.V. Ramesh.

೩. Epigraphica Carnatica, Vol. IV.

೩೭

ಕದಂಬರ ಕಾಲದ ನೆನಪಿನ ಶಾಸನ ಮತ್ತು ಶಿಲ್ಪ : ಮರುಪರಿಶೀಲನೆ

ನಳಿನಿ ವೆಂಕಟೇಶ್ *

ಕೊಲ್ಹಾಪುರ ಜಿಲ್ಲೆ ಗಗನ್ ಬಾವ್ಡಾ ತಾಲ್ಲೂಕು ಸಾಂಗಳಿ ಗ್ರಾಮದಲ್ಲಿ ಒಂದು 'ಸತಿಕಲ್ಲು' ದೊರೆತಿದ್ದು, ಅದರಲ್ಲಿ ಎರಡು ಸಾಲಿನ ಶಾಸನವೂ ಇದೆ. ೧೮೭೩ರಲ್ಲಿ ಫ್ಲೀಟರು ಈ ಶಾಸನವನ್ನು ಮೊದಲ ಬಾರಿಗೆ ಗುರುತಿಸಿದರು. ೧೯೪೮ರಲ್ಲಿ ಸಂಕಾಲಿಯಾ ಹಾಗೂ ದೀಕ್ಷಿತ್ ಅವರು ಈ ಶಾಸನವನ್ನು ಕುರಿತು ಲೇಖನವನ್ನು ಬರೆದಿದ್ದಾರೆ. (ಬುಲೆಟಿನ್ ಆಫ್ ಡೆಕನ್ ಕಾಲೇಜ್ ರಿಸರ್ಚ್ ಇನ್ಸಿಟ್ಯೂಟ್ -BODCRI Vol. IX, 1948-49.)

ಈ ವಿದ್ವಾಂಸರಿಬ್ಬರೂ ಓದಿರುವ ಶಾಸನದ ಪಾಠ ಈ ರೀತಿ ಇದೆ. Unique VI Century Incrifed Sati Stele From Sangsi, Kolhapur State By H.D. Sankalia & M.G. Dikshit.

Line 1. Om Sri - U[1], - U[2], - U[3], - U[4] Lanchhanaya[5] nrpater yyahalikh. .[6] . .[7] I* bharyya saccaritena bhartur[8] II

Line 2. Punya[9] . . . myari naksanartham madara ntasya gataya can I* pritya sailamidam svayam nnrpati (na) sansthaptam caitya (ke) (II*)

೧. ಓಂ ಶ್ರೀ –, –, . . . ಲಾಞ್ಛನಸ್ಯ ನೃಪತೇರ್ಯ್ಯಾ ಹಲಿಖ . . .
ಭಾರ್ಯ್ಯಾ ಸಚ್ಚರಿತೇನ ಭರ್ತೃ . . . . ॥


೨. ಪುಣ್ಯಾಮ್ಯರಿ ರಕ್ಷಣಾರ್ಥಮ್ ಮದರನ್ತಸ್ಯ ಗತಾಯಾ . ಚಂ ।
ಪ್ರೀತ್ಯಾ ಶೈಲ ಮಿದಂ ಸ್ವಯಂ ನೃಪತಿ [ನಾ] ಸನ್‌ಸ್ಥಾಪಿತಂ ಚೈತ್ಯ [ಕೇ]

*[ಸತೀಶ್ ಲಲಿತ್ ಎಂಬುವವರು ೨೯–೯–೨೦೧೪ರಂದು Internet ನಲ್ಲಿ ಇದರ ಫೋಟೋ ಹಾಕಿದ್ದರು. ಇಲ್ಲಿ ಇದರ ಪಾಠ ಸ್ವಲ್ಪ ಭಿನ್ನವಿದೆ.]

ಈ ಶಾಸನವು ೫ನೆಯ ಶತಮಾನಕ್ಕೆ ಸೇರಿದ ಅತಿ ಪ್ರಾಚೀನ ಶಾಸನ ಶಿಲ್ಪ. ಇದು ಕದಂಬರ ಕಾಲಕ್ಕೆ ಸೇರಿದ್ದು, ತಾಳಗುಂದ ಶಾಸನದ ಲಿಪಿಯನ್ನೇ ಹೋಲುತ್ತದೆ. ಇದರಲ್ಲಿ ರಾಜನ ಹೆಸರಾಗಲೀ ಕಾಲದ ಉಲ್ಲೇಖವಾಗಲೀ ಇಲ್ಲ. ಶಿಲ್ಪವು ಸುಂದರವಾಗಿದೆ. ಈಗ ಶಾಸನ ಒಡೆದುಹೋಗಿದ್ದು, ಮರುಜೋಡಿಸಲಾಗಿದೆ. ಆದರೆ ಜೋಡಣೆ ಸರಿಯಾಗಿಲ್ಲದೆ ಶಿಲ್ಪಕೃತಿ ಹಾಗೂ ಶಾಸನದ ಕೆಲವೊಂದು ಅಕ್ಷರಗಳು ಸರಿಯಾಗಿ ಕಾಣುವುದಿಲ್ಲ.

ಶಿಲ್ಪವನ್ನು ಸುಂದರವಾಗಿ ಕೆತ್ತಲಾಗಿದೆ. ಉರಿಯುತ್ತಿರುವ ಅಗ್ನಿ ಸ್ಪಷ್ಟವಾಗಿದೆ. ಅದರಲ್ಲಿ ತಲೆಯ ಕೆಳಗೆ ಕೈ ಮಡಿಚಿಕೊಂಡು ಮಲಗಿರುವ ರಾಣಿಯ ಶಿಲ್ಪವು ಅಲಂಕಾರಭರಿತವಾಗಿದೆ. ಆಕೆಯ ಕೂದಲನ್ನು ಅಲಂಕಾರಿಕ ಮುಡಿ ಕಟ್ಟಲಾಗಿದೆ. ಕತ್ತಿನಲ್ಲಿ ಸುಂದರವಾದ ಹಾರ ಕೈಗಳಲ್ಲಿ ಕಂಕಣ, ಕಾಲಿನ ಆಭರಣ ಸ್ಪಷ್ಟವಾಗಿ ಕಾಣುತ್ತದೆ. ಆಕೆಯ ಕಾಲ ಬಳಿ ಕುಳಿತಿರುವ ದಾಸಿಯ ಶಿಲ್ಪ ಸ್ಪಷ್ಟವಾಗಿ ಕಾಣುತ್ತದೆ. ಅವಳ ಮೇಲ್ಭಾಗದಲ್ಲಿ ಮತ್ತೊಬ್ಬ ಸ್ತ್ರೀ ಶಿಲ್ಪ, ಕೆಳಭಾಗದಲ್ಲಿ ಓಡುತ್ತಿರುವ ಭಂಗಿಯ ಸ್ತ್ರೀ ಶಿಲ್ಪದ ಕೆತ್ತನೆಯಿದೆ. ಶಿಲ್ಪ ಇರುವ ಮೇಲ್ಭಾಗದಲ್ಲಿ ಕೆಳಗಡೆ ಬೆಂಕಿಯು ಮೇಲೆ ಮಲಗಿರುವ ಸ್ತ್ರೀಯ ಮುಖದಂತೆಯೇ ಇರುವ, ಕೇಶಾಲಂಕಾರವೂ ಹಾಗೆಯೇ ಇರುವ ಸ್ತ್ರೀಯ ಮುಖಭಾಗ ಪಕ್ಕದಲ್ಲಿ ಕುಳಿತಿರುವ ಭಂಗಿಯ ಒಂದು ಕಾಲು ಮಾತ್ರ ಇದ್ದು, ಅದರ ಮೇಲ್ಭಾಗದಲ್ಲಿ ಅದೇ ರೀತಿಯ ಆಭರಣವುಳ್ಳ ಒಂದು ಕಾಲು ಕಾಣುತ್ತದೆ. ಹೀಗೆ ಒಟ್ಟು ಐದು ಸ್ತ್ರೀ ಶಿಲ್ಪಗಳಿದ್ದು, ಅದರ ಪಕ್ಕದಲ್ಲಿ ಸಣ್ಣದಾದ ಬೌದ್ಧ ಸ್ತೂಪದ ಮಾದರಿಯ ಕೆತ್ತನೆಯಿದೆ. ಶಾಸನದಲ್ಲಿ ಕ್ರಿಯೆ ಸ್ಪಷ್ಟವಾಗಿ ಕಾಣುತ್ತದೆ.

* # ೧೫, ಮನಸ್ವಿನಿ, ಸ್ನೇಹ ಕಾಲೋನಿ, ಚಿಕ್ಕಲ್ಲಸಂದ್ರ, ಬೆಂಗಳೂರು–೫೬೦೦೬೧. ಮೊ. ೯೯೪೫೫೫೬೦೧೯೪

ಈ ಶಿಲ್ಪವನ್ನು ಸಂಕಾಲಿಯಾ ಹಾಗೂ ದೀಕ್ಷಿತ್ ಅವರು 'ಸತಿಸ್ಟೋನ್' ಎಂದು ಕರೆದಿದ್ದಾರೆ. ಆದರೆ ಇದು ಮಾಸ್ತಿಕಲ್ಲು ಅಲ್ಲ. ಸ್ವಯಂ ರಾಜನೇ (ನೃಪತಿ) ತನ್ನ ಪತ್ನಿ ಹಾಲಿದೇವಿಯ ನೆನಪಿಗೋಸ್ಕರ–"ಪ್ರೀತ್ಯಾಶೈಲಮಿದಂ ಸ್ವಯಂ ಸನ್‌ಸ್ಥಾಪಿತಂ" ಅಂದರೆ ಪತಿಯು ಪ್ರೀತಿಯಿಂದ ಹಾಕಿಸಿರುವ ಸ್ಮಾರಕ ಶಿಲೆ.

ಇದು ಶಿಲ್ಪ ಮತ್ತು ಶಾಸನೋಕ್ತ ಸ್ಮಾರಕ ಶಿಲೆ. ಇದಕ್ಕಿಂತ ಹಿಂದಿನ ಇಂತಹ ಸ್ಮಾರಕ ಶಿಲೆಯು ದೊರಕದೇ ಇರುವುದರಿಂದ, ಇದನ್ನೇ ಮೊದಲ ಸ್ಮಾರಕ ಶಿಲೆ ಎನ್ನಬಹುದು. ರಾಜನೇ ತನ್ನ ಹೆಂಡತಿಗಾಗಿ ಪ್ರೀತಿಯಿಂದ ಈ ಕಲ್ಲನ್ನು ಹಾಕಿಸಿರುವುದರಿಂದ ಇದು ಸಹಗಮನ (ಮಾಸ್ತಿಕಲ್ಲು) ಎಂದು ಹೇಳಲು ಸಾಧ್ಯವಿಲ್ಲ.

ಕೀರ್ತಿಮುಖ ಬಂದರೆ ಶಾಸನದ ಮೇಲ್ಭಾಗದಲ್ಲಿ ಬರಬೇಕಾಗಿತ್ತು. ಆದರೆ ಮೇಲಿನ ಒಡೆದ ಭಾಗಗಳನ್ನು ಸರಿಯಾಗಿ ಜೋಡಿಸದೆ ಇರುವುದರಿಂದ ಸರಿಯಾದ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ.

ಈ ಶಾಸನದಲ್ಲಿ ಲಿಪಿ ಹಾಗೂ ಭಾಷೆಯನ್ನು ಕುರಿತು ಹೀಗೆ ಹೇಳಬಹುದು. ಇದರ ಲಿಪಿಯು ತಾಳಗುಂದ ಶಾಸನದ ಲಿಪಿಯನ್ನು ತದ್ವತ್ತಾಗಿ ಹೋಲುತ್ತದೆ. 'ಅ' ಕಾರದ ಬೆಳವಣಿಗೆ, 'ಇ' ಕಾರ 'ಲ' ಕಾರದ ಬೆಳವಣಿಗೆ, ಕಾಗುಣಿತದ ಬೆಳವಣಿಗೆ ಇತ್ಯಾದಿಗಳು ತಾಳಗುಂದ ಶಾಸನದ ಲಿಪಿಯನ್ನು ಹೋಲುತ್ತದೆ.

ಸಂಸ್ಕೃತ ಭಾಷೆಯು ದಾನ ಶಾಸನಗಳಲ್ಲದೆ, ರಾಜನ ಶಾಸನಗಳಲ್ಲದೆ ಇಂಥ ನೆನಪಿನ ಕಲ್ಲುಗಳಲ್ಲಿಯೂ ಬಳಕೆಯಾಗುವುದರ ಮೂಲಕ ಪ್ರಾಕೃತ ಭಾಷೆಯು ಕರ್ನಾಟಕದಲ್ಲಿ ಹಿನ್ನಡೆಯುತ್ತಿದ್ದುದರ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಈ ಭಾಷೆಯ ಬಳಕೆ ಬೌದ್ಧಧರ್ಮದ ಪ್ರಭಾವ ಕ್ಷೀಣಿಸುತ್ತಿದ್ದುದನ್ನು, ವೈದಿಕ ಧರ್ಮದ ಪ್ರಭಾವ ಏರುಮುಖವಾಗುತ್ತಿದ್ದುದನ್ನು ಸೂಚಿಸುವುದಾಗಿದೆ. ಇದು ಮಾಸ್ತಿಕಲ್ಲಾಗದಿದ್ದರೂ, ಶಿಲ್ಪದಲ್ಲಿ ಹೆಣ್ಣೊಬ್ಬಳು (ರಾಣಿ?) ಬೆಂಕಿಯಲ್ಲಿ ಆಹುತಿಯಾಗುವಾಗ ಆ ವ್ಯಕ್ತಿಯ ಜೊತೆಗೆ ಅನೇಕರು (ಅರಮನೆಯ ಸ್ತ್ರೀಯರು) ಅಗ್ನಿಯಲ್ಲಿ ಆಹುತಿಯಾಗುತ್ತಿದ್ದುದನ್ನು ಸೂಚಿಸುತ್ತದೆ. ಶಾಸನ ಪಾಠದಿಂದ ಮಾತ್ರ ಇದನ್ನು ನೆನಪಿನ ಕಲ್ಲೆಂದು ಗುರುತಿಸಬಹುದು. ಶಾಸನದ ಮೇಲಂತಸ್ತಿನ ಶಿಲ್ಪ ದೊರೆಯದೆ ಕೆಳ ಅಂತಸ್ತಿನ ಶಿಲ್ಪ ಮಾತ್ರ ದೊರೆತಿರುವುದರಿಂದ ಹೆಚ್ಚಿನ ಊಹೆಗಳಿಗೆ, ಅರ್ಥೈಸುವಿಕೆಗೆ ಆಧಾರಗಳು ಸಾಲವು. ಇದನ್ನು ಕುರಿತು ಲೇಖನವನ್ನು ಬರೆದಿರುವ ಮಹನೀಯರು, ಶಿಲ್ಪವನ್ನು ಗಮನಿಸದೆ ಆಗ ದೊರಕಿದ ಸಂಪನ್ಮೂಲಗಳ ಆಧಾರದ ಮೇಲೆ ಓದಿದ್ದುದನ್ನು ಮತ್ತೆ ನಾನು ಪುನರವಲೋಕಿಸಿ ತಿದ್ದುಪಡಿ ಮಾಡಿದ್ದೇನೆ.

ಇದನ್ನು (ಈ ಶಾಸನದಲ್ಲಿ) ಓದಿದ ವಿದ್ವಾಂಸರಾದ ಸಂಕಾಲಿಯ ಹಾಗೂ ದೀಕ್ಷಿತ್ ಅವರು ಕೆಲವು ಅಕ್ಷರಗಳನ್ನು ಸರಿಯಾಗಿ ಓದದೇ ಇರುವುದು ಕಂಡುಬರುತ್ತದೆ. ಇವನ್ನು ಗುರುತಿಸಿ ಸರಿಯಾಗಿ ಓದಲು ಪ್ರಯತ್ನಿಸಿದೆ. ಅಲ್ಲದೆ ಕೆಲವು ಓದದೇ ಇರುವ ಅಕ್ಷರಗಳನ್ನು ಗುರುತಿಸಿ ಓದಲು ಪ್ರಯತ್ನಿಸಲಾಗಿದೆ.

ತಿದ್ದುಪಡಿ ಮಾಡಲಾದ ಶಾಸನ ಪಾಠ ಹೀಗಿದೆ.

೧. ಓಮ ಶ್ರೀ . . .
ಲಾಞ್ಛನಸ್ಯ ನೃಪತೇರ್ಯ್ಯಾ ಹಾಲಿದೇವಿನ್ಯ ಭೂ . . ಭಾರ್ಯ್ಯಾ
ಸಚ್ಚರಿತೇನ ಭತೃ [ಽ

೨. ಪುಣ್ಯಾಮ್ಪುರಿ ರಕ್ಷಣಾರ್ತ್ಥಮದಾರನ್ತಸ್ಯಾ ಗತಾಯ . [ದಿ] ವಂ
ಪ್ರೀತ್ಯಾ ಶೈಲಮಿದಂ ಸ್ವಯಂ ನೃಪತೇ . ಸಂಸ್ಥಾಪಿತಂ
ಚೈ[ತ್ಯ].

[ಈ ಶಾಸನದ ಮರು ಓದಿನಲ್ಲಿ ನೆರವು ನೀಡಿದವರು ಡಾ. ದೇವರಕೊಂಡಾರೆಡ್ಡಿಯವರು.]

೩೮

ಮಹಿಳೆ ಮತ್ತು ಮತಾಂತರ ಸಂಬಂಧಿತ ದಾಖಲು ಪತ್ರಗಳು

ಎನ್.ಆರ್. ಲಲಿತಾಂಬ*

ಧರ್ಮವು ಒಂದು ಸಮುದಾಯದ ನೆಲೆಯಲ್ಲಿ ಎಷ್ಟು ಪ್ರಮುಖವೋ ಕೌಟುಂಬಿಕ ಹಾಗೂ ವೈಯಕ್ತಿಕ ಬದುಕಿನ ನೆಲೆಯಲ್ಲಿಯೂ ಅಷ್ಟೇ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಕನಾಟಕದ ಧರ್ಮದ ಏಳುಬೀಳಿನ, ಸಂಘರ್ಷ-ಸಮನ್ವಯ, ಒಡಂಬಡಿಕೆಯ ಕಥನವು ಸಮುದಾಯದ ಮೇಲೆ ಬೀರಿದ ಪ್ರಭಾವ ಪ್ರೇರಣೆಗಳನ್ನು, ಪರಿಣಾಮಗಳನ್ನು ನಾವು ಸಾಕಷ್ಟು ಅಧ್ಯಯನ ಮಾಡಿದ್ದೇವೆ. ಕರ್ನಾಟಕದ ಮಹಿಳೆಯರ ಧಾರ್ಮಿಕ ಪ್ರಜ್ಞೆ ಹಾಗೂ ಸೇವೆಗಳನ್ನು ಕೂಡ ಕುರಿತು ಸಾಕಷ್ಟು ಅಧ್ಯಯನಗಗಳು ನಡೆದಿವೆ. ಆದರೆ ಒಟ್ಟಂದದಲ್ಲಿ ಪ್ರಾಚೀನ ಕರ್ನಾಟಕ ಹಾಗೂ ಮಧ್ಯಕಾಲೀನ ಕರ್ನಾಟಕದಲ್ಲಿ ಮಹಿಳೆಯರಿಗಿದ್ದ ಧಾರ್ಮಿಕ ಸ್ವಾತಂತ್ರ್ಯದ ಮತ್ತು ಕೌಟುಂಬಿಕ ನೆಲೆಯಲ್ಲಿ ಧರ್ಮಾಂತರ, ಜಾತ್ಯಂತರಗಳನ್ನು, ಅನ್ಯದೈವ, ಧಾರ್ಮಿಕ ಪಂಥಗಳ ಒಕ್ಕಲಾಗುವ ತೀರ್ಮಾನಗಳನ್ನು ಮಾಡಲು ಅವಳಿಗೆ ಸ್ವತಂತ್ರವಾದ ಅವಕಾಶಗಳಿರುತ್ತಿತ್ತೇ? ಎಂಬುದು ಅಧ್ಯನಕ್ಕೆ ಒಳಪಡಿಸಬೇಕಾದ ವಿಚಾರ.

ಕರ್ನಾಟಕದ ಸಾಹಿತ್ಯ ಕೃತಿಗಳು, ಶಾಸನಗಳು, ಸ್ಮಾರಕಗಳು ಹಾಗೂ ದೇವಾಲಯಗಳನ್ನು ಗಮನಿಸಿದಾಗ ೧೨ನೆಯ ಶತಮಾನದವರೆಗೆ ಕರ್ನಾಟಕದಲ್ಲಿ ಮಹಿಳೆಯರಿಗೆ ತನಗೆ ಇಷ್ಟಬಂದ ದೈವವನ್ನೂ ಧರ್ಮವನ್ನೂ ವ್ರತಕಥೆಗಳನ್ನು ಅನುಸರಿಸಲು ಇದ್ದಂತೆ ತೋರುವ ಧಾರ್ಮಿಕಸ್ವಾತಂತ್ರ್ಯ ೧೨ನೆಯ ಶತಮಾನದ ನಂತರದ ಕರ್ನಾಟಕದಲ್ಲಿ ಮುಂಚೂಣಿಗೆ ಬಂದ ಏಕದೇವ, ಏಕತತ್ತ್ವೋಪಾಸನೆಯ ಅಲೆಯಲ್ಲಿ ಮರೆಯಾದಂತೆ ತೋರುತ್ತದೆ. ಪತಿಯಧರ್ಮ-ದೈವವೇ ತನ್ನ ಧರ್ಮ-ದೈವವಾಗುವ, ಅವನ ಆಚರಣೆಗಳೇ ತನ್ನ ಆಚರಣೆಯೂ ಆಗಬೇಕಾದ ಹಾಗಲ್ಲದಿದ್ದರೆ ಬದುಕು ದುಸ್ಸಹವೆನಿಸುವ ವಾತಾವರಣವೊಂದು ನಿರ್ಮಾಣವಾದಂತೆ ತೋರುತ್ತದೆ. ಜೈನ, ಶೈವ, ಶ್ರೀವೈಷ್ಣವಧರ್ಮಗಳ ಒಕ್ಕಲುಗಳ ನಡುವಿನ ಸಂಘರ್ಷಗಳನ್ನು ಭಿನ್ನ ಧರ್ಮದ ಇಂತಹ ವಿಷಮ ದಾಂಪತ್ಯದ ಸಂಘರ್ಷಗಳನ್ನು ಕೌಟುಂಬಿಕನೆಲೆಯಲ್ಲಿ ಶಿಷ್ಟ ಹಾಗೂ ಕೆಲವು ಜನಪದ ಕಥನಗಳಲ್ಲಿ ಕಾಣಬಹುದು. ೧೮-೧೯ನೆಯ ಶತಮಾನದಲ್ಲಿ ಕರ್ನಾಟಕದ ಸಮಾಜೋ ಧಾರ್ಮಿಕ ಬದುಕಿನಲ್ಲಾದ ಪಲ್ಲಟಗಳು, ಮತಾಂತರಗಳು ಸ್ತ್ರೀ ಸಮಾಜದ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಿತೆಂಬುದು ಅಧ್ಯಯನ ಯೋಗ್ಯವಾದ ವಿಚಾರವಾಗಿದೆ.

ಈ ಕಾಲಮಾನದ ಮಹಿಳೆಯರ ಚರಿತ್ರೆಯನ್ನು ಪುನಾರಚಿಸುವಲ್ಲಿ ಒಡೆಯರ ಕಾಲದ ಸಾಹಿತ್ಯದ ಜೊತೆಗೆ ಕನ್ನಡ ಕಡತಗಳು ಅಮೂಲ್ಯ ಆಕರಗಳಾಗಿವೆ. ಇದುವರೆಗಿನ ಸಾಹಿತ್ಯ ಶಾಸನ ದಾಖಲೆಗಳಲ್ಲಿ ಕಂಡುಬರದ ಸ್ತ್ರೀಸಮಾಜದ ಬದುಕಿನ ಅನೇಕ ಸೂಕ್ಷ್ಮ, ವಿಭಿನ್ನ ಆಯಾಮಗಳ ಕಡೆಗೆ ಕಡತಗಳಲ್ಲಿನ ದಾಖಲೆಗಳು ಗಮನಸೆಳೆಯುತ್ತವೆ. ಕೆಲವು ಕುತೂಹಲಕರವಾದ 'ಕೇಸ್‌ಸ್ಟಡಿಗಳ'ನ್ನು ನಾವಿಲ್ಲಿ ಕೈಗೊಳ್ಳಲು ಸಾಧ್ಯವಾಗುತ್ತದೆ.

ಮತಾಂತರ ಹಾಗೂ ಮಹಿಳಾ ಸಮಸ್ಯೆಗಳು

ಶೃಂಗೇರಿ ಶ್ರೀಮಠದ ಕೆಲವು ಜಯರೇಖೆ ಮತ್ತು ಪತ್ರಗಳು ಮಹಿಳೆ ಮತ್ತು ಮತಾಂತರವ್ಯಾಜ್ಯ ಸಂಬಂಧಿತವಾದ ಮಾಹಿತಿಯನ್ನು ಒದಗಿಸುತ್ತವೆ. 'ಚೇಲಾ' ಮಾಡಿ ಮುಸಲ್ಮಾನನಾಗಿ ಮತಾಂತರಗೊಳಿಸಲ್ಪಟ್ಟ ವೈಶ್ಯನೊಬ್ಬನ ಮಡದಿ ಮತ್ತು ಮಕ್ಕಳ ಸಮಸ್ಯೆಗಳು ಪರಿಹಾರಗಳು ಈ ದಾಖಲೆಗಳಲ್ಲಿ ನಮೂದಾಗಿವೆ.

ಟಿಪ್ಪು ಸುಲ್ತಾನನ ಅಂತಿಮ ಕಾಲಘಟ್ಟದಲ್ಲಿ ನಡೆದ ಒಂದು ಕುಟುಂಬದ ಮತಾಂತರದ ಘಟನೆಯು ಒಂದು ಹೆಣ್ಣು ಮಗಳ ಬದುಕಿನಮೇಲೆ ಬೀರಿದ ಪರಿಣಾಮವನ್ನೂ ಅವಳ ತಾಯಿಯ ಅತಂತ್ರ ಸ್ಥಿತಿಯನ್ನು ಅದು ಎರಡು ನಗರಗಳ, ಆ ಜಾತಿ ಸಮುದಾಯದವರಿಗೆ ತಂದೊಡ್ಡಿದ ಸಂಘರ್ಷವನ್ನೂ ಅಲ್ಲದೆ ಇಂಥ ಸಂದಿಗ್ಧ ಸಂದರ್ಭದಲ್ಲಿ ಅರಮನೆ ಗುರುಮನೆಗಳವರು

* ಸಹ ಪ್ರಾಧ್ಯಾಪಕರು, ಕನ್ನಡ ಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು-೫೬೦೦೧೪. ಮೊ: ೯೮೪೫೪೨೭೫೮೧.

ತೆಗೆದುಕೊಂಡ ನ್ಯಾಯ ತೀರ್ಮಾನವನ್ನು ಕುರಿತು ಬೆಳಕು ಚೆಲ್ಲುತ್ತವೆ.[೧] ಈ ದಾಖಲೆಗಳನ್ನು ಆಧರಿಸಿ ಈ ವಿಚಾರಗಳನ್ನು ಚರ್ಚಿಸುವುದು ಪ್ರಸುತ್ತ ಲೇಖನದ ಉದ್ದೇಶವಾಗಿದೆ.

"ಕೊವೆಮುತ್ತೂರ ಸ್ಥಳದಲ್ಲಿ ಯಿದ್ದ ಗುರ್‍ರಿಸೆಟ್ಟಿ ಯಂಬವನು ಬಲಾತ್ಕಾರದಿಂದ ಸುಲತಾನರ ದಿವಸದಲ್ಲಿ ಚ್ಚೆಲೆ ಮಾಡಿದ್ರಿಂದ ಸದರ್‍ರಿ ಗುರವಿಸೆಟ್ಟಿಯು ಕೆಲವು ದಿವಸದ ಮೇಲೆ ಮ್ರುತವಾದ ಅಂತರದಲ್ಲಿ ಯಿವನ ಹೆಂಡತಿ ಕೊವೆಮುತ್ತೂರಿಗೆ ಹೋಗಿ ಅಲ್ಲಿ ರಂಗಶಾಯಿ ಸೆಟ್ಟಿಗೆ ತನ್ನ ಗಂಡ ಚ್ಚೆಲೆ ಆಗುವದಕ್ಕಿಂದಾ ಮುಂಚಿತಾಗಿಯೆ ಹುಟ್ಟಿಯಿದ್ದ ಕಾವೇರ್‍ರಿ ಯಂಬ ಹೆಂಣಂನ್ನ ಮದುವೆಮಾಡಿಕೊಟ್ಟಿದ್ದಕ್ಕೆ ಸದರಿ ರಂಗಶಾಯಿ ಶೆಟ್ಟಿನ ಜಾತಿಗೆ ಹೊರಗೆ ಯಂದು ಕೆಲವರ್‍ರು, ಗುರುವಸೆಟ್ಟಿ ಚೆಲ್ಲೆ ಆಗೋದಕ್ಕೆ ಮುಂಚೆಯೆ ಹುಟ್ಟಿದಂಥಾ ಹೆಂಣಿನ ಮದುವೆ ಮಾಡಿದ್ದ ಬಗ್ಗೆ ಜಾತಿಗೆ ಹೊರಗುಯಂದು ಹೇಳುವುದಕೆ ಕಾರಣವೇನು ಯಂಬದಾಗಿ ಕೆಲವರು ಯೀ ಮೇರ್‍ರೆಗೆ ವಾದಿ ಕೊಮಟ್ಟಗರ್‍ರ ಸೆಟ್ಟಿ ವೆಂಗಟೆಶಯ್ಯ, ತಿಂಮಪ್ಪ ನಂದ್ಯಪ್ಪ ವೆಂಗಟರಮಣ್ಣೈಯ್ಯ ಮುಂತಾದ ಸೆಟ್ಟಿಗಳಿಗು ಪ್ರತಿವಾದಿ ಸೆಟ್ಟಿ ಅಪ್ಪಾಜಿ ವಗ್ಯೈರೆರ್‍ರಿಗೆ ಸಹಾ ವ್ಯವಹಾರಬಿದ್ದು ಬಂಗಲೆ ಮಾರ್‍ರಿಪತ್ತು ಹಜೂರ್‍ರು ಶ್ರುತವಾದ್ದರಿಂದಾ ಯಿ ವೆವಹಾರವಂನ್ನು ಸಂಮುಕದ ವಿದ್ವಾಂಸರ ಮುಖಾಂತ್ರ ದೂಯಂಬಾದ ಕಛೆರ್‍ರಿ ಮಾರ್‍ರಿಫತ್ತು ಸೆಟ್ಟಿವರ್ತ್ತಕ ಮುಂತ್ತಾದವರ ಮುಂದೆ ಧರ್ಮಶಾಸ್ತ್ರ ರ್‍ರೀತ್ಯಾ ಪಂಚಾಯತ್ತಿಯಲ್ಲಿ ವ್ಯವಹಾರವ ಪೈಸಲುಮಾಡಿ ಫೈಸಲುನಾಮೆ ಅಪ್ಪಣೆ ಕೊಡ್ಡಿಶಿ ಯಿರ್‍ರುವದರಿಂದಾ ಯಿ ಫೈಸಲು ನಾಮೆ ಪ್ರಾಕಾರಕೆ ನಿಂಮ್ಮ ನಿಂಮ್ಮ ತ್ತಾಲೂಕುಗಳಲ್ಲಿ ಯಿರುವ ಕೊಮಟ್ಟಿಗರ್‍ರು ನಡಕೊಳ್ಳುವಂತೆ ತಾಕೀತಿ ಮಾಡುವದು ಆ ಮೆರ್‍ರೆ ನಡಯದೆ ಹೆಚ್ಚು ಕಡಮೆ ಆಗಿ ನಡ್ಡದವರ ಕಡೆಯಿಂದಾ ಮುಸಬ್ಬರಿತ್ತು ಸರಕಾರಕ್ಕೆ ಗುಂನೆಗಾರ್‍ರಿ ತೆಗದುಕೊಂಡು ಆ ವಿವರಕೆ ಬರದು ಕಳುಹಿಸುವದು ತಾರಿಖು ೬ನೆ ಮಾಹೆಜನವರ್‍ರಿ ಸಂನ್ನು ೧೮೨೩ನೆಯಿಸವಿ ಖತ್ತು ಅಶ್ವಥ್ಥನಾರಾಣ್ಣೆಯ ಹಜೂರು ಪುರ್‍ರನೂರ್‍ರ"[೨]

ಇದಲ್ಲದೆ ಎರಡು ಜಯರೇಖೆಗಳು ಹಾಗೂ ಎರಡು ಪತ್ರಗಳು ಈ ಘಟನೆಗೆ ಸಂಬಂಧಿಸಿದವುಗಳಾಗಿದ್ದು, ಈ ಘಟನೆಯ ಸುತ್ತ ಕರ್ನಾಟಕದ ಶ್ರೀರಂಗಪಟ್ಟಣ ಮತ್ತು ತಮಿಳುನಾಡಿನ ಕೊಯಮತ್ತೂರಿನ ವೈಶ್ಯರು ಹಾಗೂ ಬ್ರಾಹ್ಮಣ ಸಮುದಾಯದ ಮೇಲೆ ಉಂಟುಮಾಡಿದ ಪರಿಣಾಮ, ಪ್ರತಿಕ್ರಿಯೆಗಳು, ಶಿಕ್ಷೆ-ರಕ್ಷಣೆ, ತೀರ್ಮಾನಗಳನ್ನು ಕುರಿತಂತೆ ಬೆಳಕು ಚೆಲ್ಲುತ್ತವೆ.[೩]

ಕೊವೆಮುತ್ತೂರು (ಕೊಯಮತ್ತೂರು) ಎಂಬ ಸ್ಥಳದಲ್ಲಿ ವಾಸವಿದ್ದಂತಹ ಗುರ್‍ರಿವಿಸೆಟ್ಟಿಯ ಕುಟುಂಬದಲ್ಲಿ ಟಿಪ್ಪುಸುಲ್ತಾನನ ಕಾಲದಲ್ಲಿ ಮತಾಂತರದಿಂದಾದ ಪಲ್ಲಟ ಸಂಕಷ್ಟಗಳ ವಾಸ್ತವಘಟನಾವಳಿಗಳ ದಾಖಲೆ ಇದಾಗಿದೆ. ಅವನ ಮಗಳ ವಿವಾಹ ಪ್ರಕರಣದ ಘಟನೆಯು ಕೇವಲ ಎರಡು ವ್ಯಕ್ತಿಗಳ, ಕೌಟುಂಬಿಕ ಖಾಸಗಿ ವಿಷಯವಾಗದೆ ಅದು ಅರಮನೆ ಗುರುಮಠಗಳನ್ನೆಲ್ಲಾ ಯಾವೆಲ್ಲಾ ರೀತಿಯಲ್ಲಿ ಒಳಗುಮಾಡಿಕೊಂಡಿತು ಹಾಗೂ ಆ ಸಮಾಜದಲ್ಲಿ ಒಂದು ಕದಡಿದ ವಾತಾವರಣವನ್ನು ಉಂಟುಮಾಡಿತ್ತು ಎಂಬುದು ತಿಳಿದು ಬರುತ್ತದೆ.

ಈ ಘಟನೆಯನ್ನು ಕುರಿತಂತೆ ವಿಚಾರ ಭೇದವನ್ನು ಹೊಂದಿದವರು ವಾದಿ ಪ್ರತಿವಾದಿಗಳಾಗಿ ಎರಡು ಪಂಗಡಗಳಾಗಿ ನಿಂತು ತಮ್ಮ ವೈಯಕ್ತಿಕ ಧರ್ಮ, ಸಂಪ್ರದಾಯ ನಂಬಿಕೆ ಪ್ರತಿಷ್ಠೆಗಳಿಗೆ ಮಾನ್ಯತೆ ನೀಡಿ, ಗಂಡು ದಿಕ್ಕಿಲ್ಲದ, ಯಾವ ತಪ್ಪನ್ನೂ ಮಾಡದ ಅಮಾಯಕ, ಮಹಿಳೆ ಮತ್ತು ಅವಳ ಎರಡು ಹೆಣ್ಣು ಮಕ್ಕಳ ಬದುಕನ್ನು ಪಣವಾಗಿ ಒಡ್ಡಿದ್ದರು ಎಂಬುದನ್ನು ಮನಗಾಣಬಹುದಾಗಿದೆ. ಆದರೆ ಗಮನಿಸಬೇಕಾದ್ದು ಇಲ್ಲಿ ಧರ್ಮ ಸಂಘರ್ಷವು ಹಿಂದೂಸಂಪ್ರದಾಯ ಮತ್ತು ಮುಸಲ್ಮಾನ್ ಧರ್ಮೀಯರ ನಡುವಿನದಲ್ಲ ಬದಲಿಗೆ ಇಸ್ಲಾಂ ಧರ್ಮಕ್ಕೆ 'ಚೇಲಾ' ಆದಂತಹ ವ್ಯಕ್ತಿಯ ಕುಟುಂಬದವರನ್ನು ಸ್ವಧರ್ಮ, ಸ್ವಜಾತಿಗೆ ಪರಿಗ್ರಹಿಸುವುದರ ಕುರಿತು ಹಿಂದೂ ಸಂಪ್ರದಾಯದ ಜನರಲ್ಲಿ ನಡೆದ ವ್ಯಾಜ್ಯವಾಗಿದೆ.

ಇಂತಹ ಸೂಕ್ಷ್ಮ ವಿಚಾರವನ್ನು ಕುರಿತಂತೆ ಅರಸೊತ್ತಿಗೆ ಕೇವಲ ಆಡಳಿತಾತ್ಮಕವಾಗಿ ಮಾತ್ರ ಯೋಚಿಸಿ ತೀರ್ಮಾನವನ್ನು ತೆಗೆದುಕೊಳ್ಳುವಂತದ್ದೂ ಅಲ್ಲ, ಅಥವಾ ಶ್ರೀಮಠಗಳು ಮಾತ್ರ ತೆಗೆದುಕೊಳ್ಳುವ ತೀರ್ಮಾನಗಳೂ ಅಲ್ಲ, ಧರ್ಮಸೂಕ್ಷ್ಮದ ವಿಚಾರವಾದ್ದರಿಂದ ಅದನ್ನು ಶೃಂಗೇರಿಯ ಶ್ರೀಮಠದ ಶ್ರೀಗಳ ಹಾಗೂ ವಿದ್ವಾಂಸರ ಮುಂದೆ ತಂದು ಅದನ್ನು ಧರ್ಮಶಾಸ್ತ್ರ ಗ್ರಂಥಗಳೂ ಹಾಗೂ ಆ ಪ್ರಸ್ತುತ ಕಾಲಮಾನದಲ್ಲಿ ಇಚ್ಚೆಗೆ ವಿರುದ್ಧವಾಗಿ ನಡೆಯುತ್ತಿದ್ದ ಮತಾಂತರಗಳು ಅವುಗಳಿಂದಾಗುತ್ತಿದ್ದ ಕೌಟುಂಬಿಕ, ವಯಕ್ತಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ ಆ ದೇಶಕಾಲದಲ್ಲಿ ಅನುಸರಿಸುತ್ತಿದ್ದ ಆಚರಣೆ ಪದ್ಧತಿಗಳೇನು ಎಂಬುದೆಲ್ಲವನ್ನೂ ಪರಾಂಬರಿಸಿ ಯಾವ ರೀತಿಯ ನಿರ್ಧಾರವನ್ನು ತೆಗೆದುಕೊಂಡಿತು ಎಂಬ ಕುತೂಹಲದ ವಿಚಾರ ಈ ದಾಖಲೆಗಳಲ್ಲಿದೆ.

ಆ ನಿರ್ಧಾರವನ್ನು ದಿಕ್ಕರಿಸಿ ಶ್ರೀಮಠದ ನ್ಯಾಯ ಹಾಗೂ ಪ್ರಾಯಶ್ಚಿತ್ತೋಪಾಯಗಳನ್ನು ತಿರಸ್ಕರಿಸಿ ಮುದ್ರಾತಿಕ್ರಮಕ್ಕೆ ಕಾರಣವಾಗುವ ಕೆಲವು ಸಾಂಪ್ರದಾಯಿಕ ಪ್ರತಿನಿಧಿಗಳನ್ನು ಕುರಿತಂತೆ ಅವರ ಪ್ರತಿರೋಧಕ್ಕೆ ಅರಸೊತ್ತಿಗೆ ಮತ್ತು ಶ್ರೀಮಠವು ವಿಧಿಸುವ ಕಟ್ಟು ಕಟ್ಟಳೆ ಬಹಿಷ್ಕಾರಗಳನ್ನು ಸೂಕ್ಷ್ಮವಾಗಿ ಇಲ್ಲಿ ವಿಶ್ಲೇಷಿಸಿಕೊಳ್ಳಬಹುದು.

ಕೊಯಮತ್ತೂರಿನಲ್ಲಿ ವಾಸವಾಗಿದ್ದ ಗುರುವ ಸೆಟ್ಟಿ ಎಂಬ ವ್ಯಕ್ತಿಯನ್ನು ಸುಲತಾನರ ದಿವಸದಲ್ಲಿ ಬಲಾತ್ಕಾರದಿಂದಾ 'ಚೆಲೆ' ಮಾಡಿ ಸೈನ್ಯಕ್ಕೆ ಸೇರಿಸಿಕೊಳ್ಳಲಾಗಿದೆ. [ಈ ಘಟನೆಯು ಸುಮಾರು ೧೭೮೯ರಲ್ಲಿ ಟಿಪ್ಪು ಸುಲ್ತಾನನು ಬ್ರಿಟೀಷರ ವಿರುದ್ಧ ಕೊಯಮತ್ತೂರಿನಲ್ಲಿ ೧೪ ಸಾವಿರ ಸೈನ್ಯ ಕೂಡಿಸಿಕೊಂಡು ದಾಳಿಮಾಡಿದ ವಿಚಾರ ತಿಳಿದುಬರುವುದರಿಂದ ಆ ಸಂದರ್ಭದಲ್ಲಿ ನಡೆದಿರುವ ಸಾಧ್ಯತೆಯಿದೆ. (ಮೂರನೇ ಮೈಸೂರು ಯುದ್ಧದಕಾಲ] 'ಚೆಲೆ'ಯಾದನಂತರ ಆತ ತನ್ನ ಮಡದಿಯನ್ನು ಕರೆಸಿಕೊಂಡು ಕುಟುಂಬ ಸಮೇತ ಶ್ರೀರಂಗಪಟ್ಟಣದಲ್ಲಿ ನೆಲಸುತ್ತಾನೆ (ಸೌಮ್ಯ ಸಂವತ್ಸರ). ಆದರೆ ಈತ ಆನಂದ ಸಂವತ್ಸರ ದಲ್ಲಿ 'ಪಾಗೆಂಡೆ ದಂಡಿ'ನಲ್ಲಿ ಮೃತನಾದನೆಂದು ತಿಳಿದುಬರುತ್ತದೆ. ಇದು ೧೭೯೪ರಲ್ಲಿ ನಡೆದಿದೆ.[೪]

ಈ ಐದು ವರ್ಷಗಳಲ್ಲಿ ಅವನಿಗೆ ಇಬ್ಬರು ಹೆಣ್ಣುಮಕ್ಕಳು ಜನಿಸಿದ್ದಾರೆ. ಗಂಡನ ಸಾವಿನ ನಂತರ ಸಿದ್ಧಾರ್ಥಿ ಸಂವತ್ಸರದಲ್ಲಿ ಅಂದರೆ ೧೭೯೯ರಲ್ಲಿ ಟಿಪ್ಪುವಿನ ಮರಣಾನಂತರದಲ್ಲಿ ಶ್ರೀರಂಗಪಟ್ಟಣವು ಕಂಪನಿಯವರ ಸ್ವಾದೀನವಾದ ಮೇಲೆ ಅವನ ಮಡದಿಯು ತನ್ನ ಮಕ್ಕಳನ್ನು ಕರೆದುಕೊಂಡು ಕೊಯಮತ್ತೂರಿಗೆ ಹೋಗುತ್ತಾಳೆ. ಆನಂತರ ಕಾವೇರಿ ಎಂಬ ತನ್ನ ಮೊದಲ ಮಗಳನ್ನು ತನ್ನ ಗಂಡ ಚೆಲೆ ಆಗುವುದಕ್ಕೆ ಮೊದಲೆ ತಾನು ಗರ್ಭಧರಿಸಿದ್ದೆನೆಂಬ ಕಾರಣವನ್ನು ತಿಳಿಸಿ ಕೊಯಮತ್ತೂರ ನಿವಾಸಿಯಾದ ರಂಗಶಾಮಿಶೆಟ್ಟಿಗೆ ಶ್ರೀ 'ತಿರುಮಂದೇಗೆ' ಕರೆದುಕೊಂಡು ಹೋಗಿ ಅಲ್ಲಿನ ಗಿರಿಯ ಮೇಲೆ ದೇವರ ಸನ್ನಿಧಿಯಲ್ಲಿ ವಿವಾಹವನ್ನು ಮಾಡಿಸುತ್ತಾಳೆ.

ವಿಧವೆಯಾದ ತಾಯಿ ಚಿಕ್ಕಮಕ್ಕಳೆರಡನ್ನೂ ಸಾಕಿ ಸಲಹುತ್ತಿದ್ದು ಬಹುಶಃ ಟಿಪ್ಪುಸುಲ್ತಾನನ ಅಧಿಕಾರಾವಧಿಯು ಕೊನೆಗೊಳ್ಳುವವರೆಗೂ ಆಕೆ ಕೊಯಮತ್ತೂರಿಗೆ ಹಿಂದಿರುಗುವ ಸಾಹಸವನ್ನು ಮಾಡಿರಲಿಲ್ಲ. ಶ್ರೀರಂಗಪಟ್ಟಣವು ಬಿಟೀಷರ ಆಧಿಪತ್ಯಕ್ಕೆ ಒಳಪಟ್ಟಮೇಲೆ ಕೊಯಮತ್ತೂರಿಗೆ ಆಕೆ ಹಿಂದಿರುಗುತ್ತಾಳೆ. ಮಗಳ ವಿವಾಹವನ್ನು ಯಾವ ಧರ್ಮದವರೊಂದಿಗೆ ಮಾಡಬೇಕೆಂಬ ಜಿಜ್ಞಾಸೆಯಲ್ಲಿ ಮಗಳಿಗೆ ೩೨ ವರ್ಷಗಳಾದರೂ ಮದುವೆ ಮಾಡಲಾರದೆ ಕಷ್ಟಪಟ್ಟಿದ್ದಾಳೆ, ಆನಂತರದಲ್ಲಿ ತಮ್ಮ ಮೂಲ ವೈಶ್ಯ ಜಾತಿಯಲ್ಲಿ ಮದುವೆಮಾಡುವಲ್ಲಿ ಯಶಸ್ವಿಯಾಗುತ್ತಾಳೆ. ಇದು ೧೮೨೨ರಲ್ಲಿ ನಡೆದಿದೆ. (ಚಿತ್ರಭಾನು ಸಂವತ್ಸರ ಕಾರ್ತೀಕಮಾಸ–ನವೆಂಬರ್/ಡಿಸೆಂಬರ್)

ಅಕೆ ವಿವಾಹದ ನಂತರ ಪುನಃ ಕೊಯಮತ್ತೂರಿಗೆ ಬಂದಮೇಲೆ ಅಲ್ಲಿನ ಸ್ವಜಾತಿಯ ಜನರೆಲ್ಲರೂ ಕೂಡಿ ಕಾವೇರಿಯ ತಂದೆಯು 'ಚೆಲಾ'ಆಗಿ ಮತಾಂತರವಾಗಿರುವ ಹಿನ್ನೆಲೆಯಲ್ಲಿ ಚೆಲಾ ಸಂಬಂಧದ ಹೆಣ್ಣನ್ನು ಈ ರಂಗಸ್ವಾಮಿಶೆಟ್ಟಿಯು ಮದುವೆ ಮಾಡಿಕೊಂಡದ್ದಕ್ಕೆ ವಿರೋಧಿಸಿ ಜಾತಿಯಲ್ಲಿ ಪರಿಗ್ರಹಿಸಬಹುದೋ ಬಾರದೋ ಎಂಬ ಅನುಮಾನಗಳು ಮೂಡಿ ಅದನ್ನು ವಿಚಾರಿಸಬೇಕೆಂಬುದಾಗಿ ಆಲೋಚನೆ ಮಾಡಿ ಮಠ ಮುದ್ರೆಯವರನ್ನು ಮತ್ತು ಕೊಯಮತ್ತೂರಿನಲ್ಲಿರುವ ಅಶೇಷಮಹಾಜನಗಳನ್ನೂ ಕೂಡಿಸಿ ಪಂಚಾಯಿತಿಯನ್ನು ಮಾಡುತ್ತಾರೆ. ಆ ಮಹಾಜನಗಳು ಧರ್ಮ ಶಾಸ್ತ್ರಗಳನ್ನು ಪರಿಶೀಲಿಸಿ ನೋಡಿ ಈ ಹೆಣ್ಣಿಗೆ ಚೆಲಾದವರ "ಸಂಸರ್ಗ ದೋಷವೇ ಹೊರತು ಪಾತಿತ್ಯವಿಲ್ಲಾ" ಎಂಬುದಾಗಿ ನಿಶ್ಚಯ ಮಾಡಿ ಶಾಸ್ತ್ರೋಕ್ತವಾಗಿ ಸಂಸರ್ಗದೋಷ ಪ್ರಾಯಶ್ಚಿತ್ತವನ್ನು ಮಾಡಿಸಿ ಅದನ್ನು ಪತ್ರಿಕೆಯಲ್ಲಿ ಬರೆದುಕೊಟ್ಟು ವೈಶ್ಯ ಜನಾಂಗದವರ ಸಂಮತಿ ಪತ್ರಿಕೆಯನ್ನು ಬರಸಿಕೊಟ್ಟು ಅಲ್ಲಿ ನಡೆದ ವಿದ್ಯಮಾನಕ್ಕೆ ಮಠಮುದ್ರೆಯವರು ಅಶೇಷ ವಿದ್ವಾಂಸ ಮಹಾಜನಗಳು, ವೈಶ್ಯರೂ ಒಟ್ಟಾಗಿ ಶ್ರೀ ಶೃಂಗೇರಿ ಮಠಕ್ಕೆ ವಿಜ್ಞಾಪನೆ ಪತ್ರವನ್ನು ಈ ಸಂಬಂಧ ಎಲ್ಲಾಮಾಹಿತಿಗಳೊಂದಿಗೆ ಕಳುಹಿಸಿಕೊಡುತ್ತಾರೆ.[೫] ಅದನ್ನು ಪರಾಂಬರಿಸಿ ಶ್ರೀಮಠದಲ್ಲಿ ಗುರುಗಳು ವಿದ್ವಾಂಸರೂ ತತ್‌ಸಂಬಂಧವಾಗಿ ಪರಾಶರಮಾಧವೀಯ, ವಿಜ್ಞಾನೇಶ್ವರೀಯ, ಆಪಸ್ತಂಭ ಮುಂತಾದ ಧರ್ಮಶಾಸ್ತ್ರ ಕೃತಿಗಳ ಪ್ರಕಾರ ವಿಚಾರ ಮಾಡಿದ್ದು, "ಆ ಹೆಣ್ಣುಮಗಳಿಗೆ ಪಾತಿತ್ಯ ದೋಷವಿಲ್ಲ ಸಂಸರ್ಗದೋಷ ಮಾತ್ರ ಉಂಟು ಹಾಗಾಗಿ ಇದಕ್ಕೆ ಪ್ರಾಯಶ್ಚಿತ್ತಗಳಿಂದ ಪರಿಶುದ್ಧತೆ ಮಾಡಿಕೊಳ್ಳುವ ಅವಕಾಶವಿದೆ ಎಂಬುದಾಗಿ ಆಕರವಿರುವುದರಿಂದ ನೀವು ಕೈಗೊಂಡಿರುವ ತೀರ್ಮಾನ ಸರಿ ಮತ್ತು ನೀವು ಯಥಾಶಾಸ್ತ್ರೀಯವಾಗಿ ಮಾಡಿಸಿರುವ ತೀರ್ಮಾನಕ್ಕೆ ಯಾರು ವ್ಯತಿರಿಕ್ತವಾಗಿ ನಡೆದಾಗ್ಯು ಅವರು ಮಠಮುದ್ರಾ ಆಜ್ಞಾಪ್ರಕಾರಕ್ಕೆ ಬಹಿಷ್ಕೃತರಾಗುತ್ತಾರೆ" ಎಂದು ಶ್ರೀಗಳು ಅಪ್ಪಣೆಕೊಡಿಸಿರುತ್ತಾರೆ. ಈ ತೀರ್ಮಾನದಿಂದ ವಿವಾಹಿತರು ಪ್ರಾಯಶ್ಚಿತ್ತಮಾಡಿಕೊಂಡು ಪರಿಶುದ್ಧರಾಗಿ ಜೀವನ ನಡೆಸುತ್ತಿರುತ್ತಾರೆ.

ನಂತರದಲ್ಲಿ ಒಮ್ಮೆ ಆ ಕಾವೇರಿಯು ತಾಯಿಯನ್ನು ನೋಡುವ ಸಲುವಾಗಿ ಶ್ರೀರಂಗಪಟ್ಟಣಕ್ಕೆ ಬಂದು ಕೆಲವು ದಿನಗಳು ಇದ್ದು ಪುನಃ ಸ್ವಸ್ಥಳಕ್ಕೆ ಹಿಂದಿರುಗುತ್ತಾಳೆ. ಆದರೆ ಈಗ ಶ್ರೀರಂಗಪಟ್ಟಣದವರು ಜೇಲಾ ಆಗಿದ್ದ ಗುರುವಶೆಟ್ಟಿಯ ಮಗಳನ್ನು ವೈಶ್ಯಕುಲದ ರಂಗಶಾಯಿಸೆಟ್ಟಿಯು ವಿವಾಹವಾಗಿರುವ ಕುರಿತು ತಕರಾರು ತೆಗೆಯುತ್ತಾರೆ. ಶ್ರೀರಂಗಪಟ್ಟಣದ ದಂಡಿನಪೇಟೆಯ ಮಾಯಸೆಟ್ಟಿ, ಅಪ್ಪಾಜಿಸೆಟ್ಟಿ, ಶಿವಪೂಜೆ ರಾಚಸೆಟ್ಟಿ, ರಂಗಸೆಟ್ಟಿ ಮುಂತಾದ ವೈಶ್ಯರು ಪ್ರತಿವಾದಿಗಳಾಗಿ ಕಾವೇರಿಯನ್ನು ಸ್ವಜಾತಿಗೆ ಪರಿಗ್ರಹಿಸಬಾರದೆಂದೂ ಮತ್ತೆ ಕೆಲವರು ಪರಿಗ್ರಹಿಸಬಹುದೆಂದು ಪರಸ್ಪರ ಕದನಾಮಾಡಿಕೊಂಡು ಅರಸರಿಗೆ ದೂರು ನೀಡುತ್ತಾರೆ.

ಧರ್ಮಶಾಸ್ತ್ರ ಪ್ರಕಾರ ಈ ಜಗಳವ್ಯವಹಾರವು ತೀರ್ಮಾನಗೊಂಡಿರುವುದು ತಿಳಿದುಬಂದದ್ದರಿಂದ ಪ್ರತಿವಾದಿಗಳಾದ ಅಪ್ಪಾಜಿಸೆಟ್ಟಿ ಮುಂತಾದವರನ್ನು ಕರಸಿ ಮಹಾರಾಜರು ವಿಚಾರಣೆ ಮಾಡಿಸುತ್ತಾರೆ. ಆ ಸಂದರ್ಭದಲ್ಲಿ ಪ್ರತಿವಾದಿಗಳು "ಶ್ರೀಮಠದಲ್ಲಿ ತೆಗೆದುಕೊಂಡಿರುವ ತೀರ್ಮಾನ ಅಶಾಸ್ತ್ರೀಯವಾಗಿದೆ ಎಂದೂ, ಅಸಂಗತವಾಗಿ ತೀರ್ಪನ್ನು ನೀಡಿರುವರೆಂದು, ಕಾವೇರಿ ಎಂಬ ಹೆಂಗಸಿಗೆ ಸಂಸರ್ಗ ದೋಷ ಪ್ರಾಯಶ್ಚಿತ್ತ ಮಾಡಿಸಿ ಜಾತಿಗೆ ಪರಿಗ್ರಹಿಸಿರುವುದು ಸರಿಯಲ್ಲವೆಂದೂ, ಆ ಹೆಣ್ಣುಮಗಳಿಗೆ ಮದ್ಯ ಮಾಂಸ ಭಕ್ಷಣೆ ಉಂಟು, ಆದ್ದರಿಂದ ಅವಳು ಪತಿತಳೆ ಹೊರತು ಸಂಸರ್ಗ ದೋಷವಲ್ಲವಾದ್ದರಿಂದ ಈ ಬಗೆಯ ಪತಿತಳಿಗೆ ಪ್ರಾಯಶ್ಚಿತ್ತ ಧರ್ಮಶಾಸ್ತ್ರಗಳಲ್ಲಿ ಇಲ್ಲವಾದ್ದರಿಂದ ಹಾಗೂ ಈ ಬಗೆ ಪಾತಿತ್ಯವನ್ನು ಈ ಹೆಣ್ಣು ಮಾಡಿದ್ದಕ್ಕೆ ನಾವು ಸಭಾಸಂಮ್ಮತವಾದ ಸಾಕ್ಷಿಗಳನ್ನು ತಂದುಕೊಡುತ್ತೇವೆ" ಎಂಬುದಾಗಿ ಹೇಳುತ್ತಾರೆ.

ಆದರೆ ಅವರು ಯಾವ ಸಾಕ್ಷಿಗಳನ್ನು ಕರೆತರದೆಯಿದ್ದುದರಿಂದ ಅರಸರು ಪುನಃ ಅವರನ್ನು ಕರೆಸಿ ವಿಚಾರಿಸುತ್ತಾರೆ. ಆ ಸಂದರ್ಭದಲ್ಲಿ ಪ್ರತಿವಾದಿಗಳಾಗಿದ್ದ ಅಪ್ಪಾಜಿ ಸೆಟ್ಟಿ ಮುಂತಾದವರು ವಾದಿಗಳಾಗಿದ್ದ ವೆಂಗಟೇಶಯ್ಯ ಮುಂತಾದವರು ಈ 'ಹೆಣ್ಣಮಗಳು ಪರಿಶುದ್ಧಳು' ಎಂಬುದಕ್ಕೆ ಸಾಕ್ಷಿತಂದರೆ ನಾವು ಅವಳು ಅಪರಿಶುದ್ಧಳು ಎಂಬುದಕ್ಕೆ ಸಾಕ್ಷಿ ತರುತ್ತೇವೆ ಎಂದು ವಿತಂಡವಾದ ಉತ್ತರವನ್ನೇ ಹೇಳುತ್ತಾರೆ.

ಪ್ರತಿವಾದಿಗಳಲ್ಲಿ ಸಾಕ್ಷಿಯ ಬಲವಿಲ್ಲವೆಂಬುದನ್ನು ಅರಿತ ಅರಸರು ಈ ಮೊದಲಿನ ಶ್ರೀಮಠದ ತೀರ್ಮಾನವನ್ನೇ ಎತ್ತಿಹಿಡಿಯುತ್ತಾರೆ. ಧರ್ಮಶಾಸ್ತ್ರಗಳಲ್ಲಿ "ಪತಿತಾವಸ್ಥೆಯಲ್ಲಿ ಹುಟ್ಟಿದ ಹೆಣ್ಣಿಗೂ ಕೂಡ ಪಾತಿತ್ಯವಿಲ್ಲ ಸಂಸರ್ಗದೋಷ ಪಾಪಮಾತ್ರ ಉಂಟು ಆ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿದ ಮೇಲೆ ಆಕೆ ಪರಿಶುದ್ಧಳೆ ಆಗುತ್ತಾಳೆ" ಎಂಬುದಾಗಿ ಧರ್ಮಶಾಸ್ತ್ರ ವಚನಗಳು ಇರುವುದರಿಂದಲೂ ಆಕೆಗೆ 'ಕೃತ' ಪ್ರಾಯಶ್ಚಿತ್ತವಾದ್ದರಿಂದಲೂ ಆ ಹೆಣ್ಣುಮಗಳು ಅವಳ ಗಂಡ ಮಕ್ಕಳು ಸಹಾ ಪರಿಶುದ್ಧರೆ ಸರಿ ಎಂದು ಜಯರೇಖೆಯನ್ನು ಬರೆಸಿಕೊಡುತ್ತಾರೆ.

ಅಲ್ಲದೆ ಈ ಜಯರೇಖೆಯಲ್ಲಿ ತತ್‌ಸಂಬಂಧವಾದ ಧರ್ಮಶಾಸ್ತ್ರಗಳ ೭೩ ಸಾಲುಗಳಷ್ಟು ವಚನಗಳ ಉಲ್ಲೇಖಗಳನ್ನು ದಾಖಲಿಸುತ್ತಾರೆ. ಇದರಲ್ಲಿ ಪರಾಶರ ಮಾಧವೀಯ, ಯಾಜ್ಞವಲ್ಕ್ಯ, ವಾಸಿಷ್ಠಾ, ವಿಜ್ಞಾನೇಶ್ವರೀಯ, ಆಪಸ್ಥಂಭೀಯ ಆದಿ ಗ್ರಂಥಗಳ ಆಯ್ದ ಭಾಗಗಳಿವೆ. ಇವುಗಳನ್ನೆಲ್ಲಾ ಪರಿಶೀಲಿಸುವುದರ ಜೊತೆಗೆ 'ಚೆಲಾ' ಆದ ಗುರುವಿಸೆಟ್ಟಿಯು ಐದುವರ್ಷಗಳಲ್ಲಿ 'ಪಾಗೆಂಡೆ ದಂಡಿ'ನಲ್ಲಿ ಮೃತವಾದನೆಂದು ಪ್ರತಿವಾದಿಗಳು ಮುಂತಾದವರ ಹಸ್ತಲೇಖನದಲ್ಲಿದ್ದ ಬರೆಹವಿಚಾರಗಳನ್ನು ಪರಿಶೀಲಿಸಿ, ಈ ಐದು ವರುಷಗಳಲ್ಲಿ ಎರಡು ಹೆಣ್ಣು ಮಕ್ಕಳ ಜನನವಾದ್ರಿಂದ ಈ ಹೆಣ್ಣುಮಕ್ಕಳಿಗೆ ಮದ್ಯಮಾಂಸ ಭಕ್ಷಣೆ ಮುಂತಾದ ಪಾತಿತ್ಯಕ್ಕೆ ಸಂಗತಿ (ಆಧಾರ) ಇಲ್ಲವಾದ್ದರಿಂದ ಈ ಹೆಣ್ಣುಮಕ್ಕಳಿಗೆ ವಿವಾಹವು ಆಗಬಹುದು ಎಂಬುದಾಗಿ ಇದಕ್ಕೆ "ಸಂಸರ್ಗವೂ ದೋಷಾಪಾದಕವಲ್ಲಾ ಎಂಬುದಾಗಿ ಶಾಸ್ತ್ರವಿರುವುದರಿಂದ ಈ ಕನ್ನಿಕೆಯರಿಗೆ ವಿವಾಹಾದಿ ಸರ್ವ ಸವ್ಯವಹಾರಗಳಿಗೆ ಯೋಗ್ಯತೆ ಉಂಟು" ಎಂದು ಸರ್ವ ವಿದ್ವತ್ ಸಂಸ್ಮತಿಯಿಂದಾ ಸರ್ಕಾರದ ದಸ್ತಕತ್ ಮೊಹರು ಹಾಕಿ ವಿದ್ವಾಂಸರುಗಳ ಸಮ್ಮುಖದಲ್ಲಿ ಸ್ವಹಸ್ತದ ಒಪ್ಪಗಳನ್ನು ಸಹ ಹಾಕಿ ಜಯರೇಖೆಯನ್ನು ಬರೆಸಿಕೊಟ್ಟಿದ್ದಾರೆ.

ಈ ಪ್ರಕರಣ ಇಷ್ಟಕ್ಕೇಮುಗಿಯುವುದಿಲ್ಲ. ಈ ದಾಖಲೆಯಲ್ಲಿ ಶ್ರೀಮದ್ಧಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳ ಪ್ರಿಯ ಶಿಷ್ಯ ಕೊಯಮತ್ತೂರಿನ ದೇಶಸ್ಥಿತ ಅಶೇಷ ವಿದ್ವಾನ್ ಮಹಾಜನ ಗೃಹಸ್ತರು ಹಾಗೂ ವೈಶ್ಯರು ಮಠದ ತೀರ್ಮಾನದಂತೆ ಶ್ರೀ ಮಠದ ಗುರುಪೀಠಕ್ಕೆ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದು, ಇದಾದ ಕೆಲವಾರು ವರ್ಷಗಳ ನಂತರದಲ್ಲಿ (ಈಶ್ವರ ಸಂವಸ್ಸರ ಅಂದರೆ ಸುಮಾರು ೭೫ ವರ್ಷ ?) ಕೊಯಮತ್ತೂರಿನಲ್ಲಿ ಭಾಸ್ಕರಪಂತ ನಂಜಪ್ಪನೆಂಬುವವನು ಕೆಲವಾರು ವೈಶ್ಯರನ್ನು ಕಟ್ಟಿಕೊಂಡು ಪೂರ್ವದಲ್ಲಿ ನಡೆದದ್ದು ಪ್ರಾಯಶ್ಚಿತ್ತವಲ್ಲವೆಂದು ದುರುಕ್ತಿಗಳನ್ನು ಹೇಳುತ್ತಿರುವ ವಿಚಾರವು ಶ್ರೀ ಮಠಕ್ಕೆ 'ಮುದ್ರಾತಿಕ್ರಮ'ವಾಗಿ ನಡದುಕೊಂಡ ವಿವರಗಳನ್ನು ಹೇಳುವ ಮತ್ತೊಂದು ದಾಕಲೆ ಕಂಡು ಬಂದಿದೆ.[೬] ಆ ವಿಷಯವನ್ನು ಶ್ರೀ ಮಠದ ಗಮನಕ್ಕೆ ತರಲಾಗಿ ಶ್ರೀ ಮಠವು ಭಾಸ್ಕರ ಪಂಡಿತನಗೆ ತಿದ್ದಿಕೊಳ್ಳುವುದಕ್ಕೆ ಒಂದು ಅವಕಾಶವನ್ನು

ಕೊಟ್ಟು ಹಾಗಲ್ಲದೆ ವಿರೋಧವಾಗಿ ಆತ ನಡೆದುಕೊಂಡರೆ ಅವನನ್ನು ಭಹಿಷ್ಕರಿಸುವಂತೆ ಎಚ್ಚರಿಕೆಯ ಪತ್ರವನ್ನು ಬರೆದು ಕಳುಹಿಸಿಕೊಟ್ಟಿದೆ. "ಬಲಾತ್ಕಾರದಿಂದ ಪ್ರಸಕ್ತವಾದ ಪತಿತಾವಸ್ಥೆಯಲ್ಲಿ ಉತ್ಪನ್ನವಾದ ಕನ್ಯಾ ವಿವಾಹವು ಪ್ರಾಯಶ್ಚಿತ್ತ ಪೂರ್ವಕವಾಗಿ ಸಾಧ್ಯವೆಂಬುದನ್ನು ಹೇಳಿರುವುದರಿಂದ ಹಾಗೂ ಸಕಲ ದೇಶಗಳಲ್ಲಿಯೂ ಪತಿತ ವಿಷಯದಲ್ಲಿ ಪ್ರಾಯಶ್ಚಿತ್ತ ಆಚಾರ ನಡೆದು ಬರುತ್ತಿರುವ ಹಿನ್ನೆಲೆಯಲ್ಲಿ ಈ ಪಾರಾಶರ್ರೀಯಾದಿ ಗ್ರಂಥಗಳಲ್ಲಿ 'ಚತ್ವಾದ್ರೇವ ಪರ್ತನೀಯಾನಿ" ಎಂದು ವ್ಯವಸ್ಥೆಯನ್ನು ಮಾಡಿರುವುದರಿಂದ ವಿಜ್ಞಾನೇಶ್ವರೀಯ, ಆಪಸ್ಥಂಭೀಯಾದಿ ನಿಬಂಧನೆಗಳಲ್ಲಿ ಪತಿತಾವಸ್ಥೆಯಲ್ಲಿ ಉತ್ಪನ್ನವಾದ ಕನ್ಯಾ ವಿವಾಹವು ಪ್ರಾಯಶ್ಚಿತ್ತಪೂರ್ವಕವಾಗಿ ಹೇಳಿರುವುದರಿಂದ ಈ ರಂಗಾಸೆಟ್ಟಿ ಕನ್ಯಾ ವಿವಾಹದಲ್ಲಿ ವಿವಾದಾಸ್ಪದ ಏನೂ ಇಲ್ಲದಿರುವುದರಿಂದ ಉಭಯತ್ರಾಪಿ ದೋಷವಿಲ್ಲ ಎಂಬುದಾಗಿ ತೀರ್ಮಾನಿಸಿ ಈ ಮೇರೆಗೆ ಎಲ್ಲರೂ ನಡೆಯತಕ್ಕದ್ದು ಇದನ್ನು ಅಲ್ಲ ಎಂಬುದಾಗಿ ಧರ್ಮ ಶಾಸ್ತ್ರೋಲ್ಲಂಘನೆ, ಶ್ರೀಮಠ ಮುದ್ರೋಲ್ಲಂಘನೆ ಸಭಾಧಿಕ್ಕಾರವನ್ನು ಮಾಡಿಯಿರುವ ಭಾಸ್ಕರ ಪಂತ ನಂಜಪ್ಪನು ಸಂನಿಧಾನಕ್ಕೆ ಬಂದು ತೀರ್ಥ ಪ್ರಸಾದ ಪರಿಗ್ರಹ ಮಾಡಿ ಅಪ್ಪಣೆ ತೆಗೆದುಕೊಂಡು ಬರುವ ಪರಿಯಂತರ ಅವನನ್ನು ಸವ್ಯವಹಾರದಲ್ಲಿ ಕೂಡಿ ನಡೆದುಕೊಳ್ಳಬಾರದೆಂದು ಭಹಿಷ್ಕಾರದ ಕಟ್ಟಪ್ಪಣೆಯನ್ನು ಹೊರಡಿಸಿದೆ. ಅಲ್ಲದೆ ಇತಃಪರ ಯಾರಾದರೂ ಆತನ ಸಂಗಡ ಕೂಡಿ ನಡೆದಲ್ಲಿ ಆ ಜನರನ್ನೂ ಸಹಾ ಸವ್ಯವಹಾರದಲ್ಲಿ ಕೂಡಿ ನಡೆದುಕೊಳ್ಳಬಾರದೆಂದು ಅಂತಹವರಿಗೂ ಭಹಿಷ್ಕಾರದ ಭಯವನ್ನಿಟ್ಟಿದೆ. ಈ ಅಪ್ಪಣೆಯ ವಿವರಗಳು ಎಲ್ಲರಿಗೂ ತಿಳಿಯುವಂತೆ ಮಾಡಬೇಕೆಂದು ಕೊಯಮತ್ತೂರಿನ ಅಶೇಷ ಜನರಿಗೂ, ಕಟ್ಟಪ್ಪಣೆಯನ್ನು ಮಾಡಿ ಎಚ್ಚರಿಕೆಯ ಪತ್ರವನ್ನು ಬರೆಯಲಾಗಿದೆ.

ನಂತರದಲ್ಲಿ ಕೊಯಮತ್ತೂರಿನ ವೈಶ್ಯರಿಗೂ ಒಂದು ಪತ್ರವನ್ನು ಬರೆಸಿದ್ದಾರೆ.[೭] ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ಕೊಯಮತ್ತೂರಿನ ತಮ್ಮ ಪ್ರಿಯ ಶಿಷ್ಯರಾದ ದೇಶಸ್ಥಿತ ಅಶೇಷ "ನೂಟಯಿಬಂಡ್ಯ (ನೂರಿಪ್ಪತ್ತು) ನಗರವೈಶ್ಯ ಶೆಟ್ಟಿ ವರ್ತಕರಿಗೆ ಇತ್ತೀಚಿನ ದಿನಗಳಲ್ಲಿ ಬಾಸ್ಕರಪಂತ ನಂಜಪ್ಪನು ಜನಕಟ್ಟಿಕೊಂಡು ಪೂರ್ವದಲ್ಲಿ ನಡೆದ ಪ್ರಾಯಶ್ಚಿತ್ತಸಲ್ಲಾ ಎಂದು ದುರುಕ್ತಿ ಹೇಳಿ ಶ್ರೀಮಠದ ಮುದ್ರಾತಿಕ್ರಮಾಗಿ ನಡೆದುಕೊಂಡ ವಿವರತಿಳಿದು ಬಂದಿದ್ದು ಅದಕ್ಕಾಗಿ ಅಪ್ಪಣೆ ಕೊಟ್ಟು ಬರೆಸಲಾಗಿದೆ. ಆತನು ಶ್ರೀಮಠಕ್ಕೆ ಬಂದು ಅಪ್ಪಣೆಯಂತೆ ನಡೆದುಕೊಳ್ಳುವ ಪರಿಯಂತರ ಆ ವೈಷ್ಯರು ತಮ್ಮಲ್ಲಿ ಆಗುವ ವಿವಾಹ ಉಪನಯನಾದಿ ಶುಭಪ್ರಸ್ತ ಮುಂತಾದರಲ್ಲಿ ನಂಜಪ್ಪನ ಬಿಟ್ಟು ಬೇರೆ ಪುರೋಹಿತನ ಸಮ್ಮುಖದಲ್ಲಿ ಮಾಡಿಸುವುದು. ಯಾರಾದರೂ ಭಾಸ್ಕರ ಪಂತ ನಂಜಪ್ಪನಗೆ ಸಾಅನುಕೂಲರಾಗಿ ಇದ್ದರೆ ಅಂತಹವರ ನಿಗ್ರಹ ಮಾಡಿ ನಡೆದುಕೊಳ್ಳುವ ಅವಶ್ಯಕತೆಯಿಲ್ಲ. ಈ ವಿವರಗಳು ಆತನು ತಿಳಿಯುವ ಹಾಗೆ ಮಾಡಬೇಕು ಎಂಬುದಾಗಿ ಅಪ್ಪಣೆಕೊಡಿಸಲಾಗಿದೆ. ಇದು ಈಶ್ವರ ಸಂವತ್ಸರ ಚೈತ್ರಮಾಸ ಶುಕ್ಲಪಕ್ಷ ಪಂಚಮಿಯಲ್ಲಿ ಬರೆಸಿರುವ ಪತ್ರ. ಈ ನಾಲ್ಕು ಪತ್ರಗಳನ್ನು ಚಾವಡಿಯಿಂದ ಪಾರುಪತ್ಯಗಾರರು ಶೃಂಗೇರಿಯ ಬೊಕ್ಕಸದ ಸುಬ್ಬಾಭಟ್ಟರ ಬಳಿಗೆ ಕಳುಹಿಸಿ ಕಡತದಲ್ಲಿ ನಕಲು ಮಾಡಿಸಲಾಗಿದೆ.

ಮತ್ತೊಂದು ಹೆಣ್ಣುಮಗಳ ಮತಾಂತರದ ಪ್ರಸಂಗ ಕುತೂಹಲಕಾರಿಯಾಗಿದೆ. ಕರ್ನಾಟಕದ ಹಟ್ಟಿ ಪಾಳೇಗಾರರ ವಂಶದ ಹಟ್ಟಿನಾಯಕನ ಮಗಳಾದ ಮಲ್ಲವನಾಗತಿಯು ಚಿತ್ರದುರ್ಗದ ಚಿಕ್ಕನಾಯಕನ ಮಡದಿಯಾಗಿದ್ದಳು ಅವಳ ಗಂಡನ ಕುಟುಂಬದವರು ಉಗ್ಗಚೆನ್ನವೀರಸ್ವಾಮಿಗಳವರ ಪ್ರಭಾವಕ್ಕೆ ಒಳಗಾಗಿ ವೀರಶೈವ ಧರ್ಮವನ್ನು ಸ್ವೀಕರಿಸುತ್ತಾರೆ ಮಲ್ಲವನಾಗತಿಯು ಆ ಧರ್ಮದ ಬಗೆಗೆ ಅಪಾರವಾದ ಶ್ರದ್ಧಾಭಕ್ತಿಗಳನ್ನು ಹೊಂದಿರುತ್ತಾಳೆ. ಕಾರಣಾಂತರಗಳಿಂದ ಈ ರಾಜಕುಟುಂಬವು ವೀರಶೈವಧರ್ಮವನ್ನು ತೊರೆದು ಪುನಃ ತಮ್ಮ ಮೂಲ ಜಾತಿಗೆ ಹಿಂದಿರುಗುತ್ತಾರೆ.ಆ ಸಂದರ್ಭದಲ್ಲಿ ಮಲ್ಲವ್ವ ನಾಗತಿ ಮಾತ್ರ ತನ್ನ ಮೂಲ ಬೇಡಜಾತಿ ಪದ್ದತಿಗೆ ಮರಳಲು ಇಚ್ಚಿಸದೇ ರಾಜಕುಟುಂಬದಿಂದಲೇ ದೂರಾಗಿ ಪ್ರತ್ಯೇಕವಾದ ಸಣ್ಣ ಮನೆಯಲ್ಲಿ ತನ್ನ ನಾಗತಿಯ ವೈಭವದ ಬದುಕನ್ನು ತೊರೆದು ಶಿವಭಕ್ತಳಾಗಿ ಸರಳಜೀವನ ನಡೆಸಿರುವುದು ದಾಖಲೆಗಳಿಂದ ತಿಳಿದುಬರುತ್ತದೆ. ಆಕೆಯ ತವರು ಮನೆಯವರು ಪರಮದೈವವೆಂದು ನಡೆದುಕೊಂಡು ಬಂದಿದ್ದ ಗುರು ತಿಪ್ಪೇರುದ್ರಸ್ವಾಮಿಗಳು ಮತ್ತು ಗೋಸಿಕೆರೆಯ ಸಾರ್ವಾಡೇಶ್ವರ ಸ್ವಾಮಿಗಳು ಹಾಗೂ ವೀರಶೈವ ಧರ್ಮದ ಪ್ರಭಾವಕ್ಕೆ ವಿಶೇಷವಾಗಿ ಮಲ್ಲವ್ವನಾಗತಿ ಒಳಗಾಗಿದ್ದಳೆಂದು ಭಾವಿಸಬಹುದು. ಅವಳ ಪತಿ ಚಿಕ್ಕನಾಯಕ ತನ್ನ ಆಳ್ವಿಕೆಯ ಕಾಲದಲ್ಲಿ ವೀರಶೈವ ಮಠ ಕಟಿಸಿದ್ದು ಜೀರ್ಣೋದ್ಧಾರ ಕಾರ್ಯಗಳನ್ನು ಕೈಗೊಂಡಿದ್ದು, ತಾನು ಮೂಲ ಜಾತಿಗೆ ವಾವಸ್ಸಾದ ಮೇಲೂ ವೀರಶೈವ ಧರ್ಮದ ಕುರಿತು ಗೌರವಭಾವವನ್ನೇ ಹೊಂದಿರುತ್ತಾನೆ. ಬಹುಶಃ ಈ ಕಾರಣದಿಂದ ಆತ ತನ್ನ ಪತ್ನಿಯ ನಿರ್ಧಾರವನ್ನು ವಿರೋಧಿಸಿಲ್ಲವೆಂದು ತೋರುತ್ತದೆ. ಮಲ್ಲವ ನಾಗತಿಯು ಅರಮನೆಯಿಂದ ದೂರಾಗಿ ಬದುಕು ಸಾಗಿಸುತ್ತಿದ್ದು ಈಕೆ ಭವಿಯಾದ ಗಂಡನೊಂದಿಗಿನ ದಾಂಪತ್ಯ ಜೀವನವನ್ನೂ ತೊರೆದಿರುವ ಸಾಧ್ಯತೆಯಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ.[೮]

ಕರ್ನಾಟಕದ ಸಮಾಜವು ಅನ್ಯ ಸಂಸ್ಕೃತಿ, ಭಾಷೆ, ಸಂಪ್ರದಾಯಗಳು ಹಾಗೂ ವಿಭಿನ್ನ ಆಡಳಿತಗಳಿಗೆ ಒಳಪಟ್ಟ ಹಿನ್ನೆಲೆಯಲ್ಲಿ ಇಲ್ಲಿನ ಸಮಾಜೋ ಆರ್ಥಿಕ ಬದುಕಿನಲ್ಲಿ ಹಲವು ಬಗೆಯ ಪಲ್ಲಟಗಳು ಕಾಣಿಸಿಕೊಳ್ಳತೊಡಗಿತು. ವಿಜಯನಗರೋತ್ತರ ಕಾಲದಲ್ಲಿ ಇಂತಹ ಸಂಚಲನ ತೀವ್ರವಾಗಿದ್ದು, ೧೮-೧೯ನೆಯ ಶತಮಾನದ ಕ್ರಾಂತಿಕಾರಕವಾದ ಆಧುನೀಕರಣವು ಇಡೀ ಭಾರತದ ಸಂಪ್ರದಾಯಶೀಲತೆಯ ಬುಡವನ್ನೇ ಅಲ್ಲಾಡಿಸಿ ಎಲ್ಲ ಸಮುದಾಯದ ಜನರ ಬದುಕನ್ನೂ ಪಲ್ಲಟಿಸಿದೆ. ಭಾರತದ ಸುಧಾರಣಾವಾದಿ ಚಳುವಳಿಯು ಸಾಮಾಜಿಕ ಕ್ಷೇತ್ರದಲ್ಲಿ ನಾನಾ ಬದಲಾವಣೆಗೆ ಪ್ರೇರಣೆಯನ್ನು ನೀಡಿತು. ಪ್ರಧಾನವಾಗಿ ಕುಟುಂಬದಂತಹ ಸಾಮಾಜಿಕ ಸಂಸ್ಥೆಯ ಮೇಲೆ ಇದರ ಪರಿಣಾಮ ದೊಡ್ಡದು ಪ್ರಸ್ತುತ ದಾಖಲೆಗಳಲ್ಲಿ ಅಂತಹ ನಾನಾ ಬಗೆಯ ಪಲ್ಲಟಗಳಿಗೆ ಸಾಕ್ಷಿಗಳು ಒದಗುತ್ತವೆ.

ಅಡಿಟಿಪ್ಪಣಿಗಳು

೧. ಶೃಂಗೇರಿ ಮಠದ ಕಡತ ಸಂಖ್ಯೆ ೧೩೨ರಲ್ಲಿರುವ [ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು-ಡಾ. ಎ.ಕೆ. ಶಾಸ್ತ್ರಿ, ಕ್ರಿ.ಶ. ೨೦೦೩].

೨. ಕಡತ ಸಂಖ್ಯೆ ೧೩೨, ಶೃಂಗೇರಿ ಪೂರ್ವೋಕ್ತ ದಾಖಲೆ ಸಂಖ್ಯೆ ೪.

೩. ಕಡತ ಸಂಖ್ಯೆ ೧೩೨, ದಾಖಲೆ ೪೫, ಶೃಂಗೇರಿ ಮ.ಕ.ಆ.ಚಾ.ದಾ ೨೦೦೩] ಹುಜೂರಲ್ಲು ಆದ **ಫೈಸಲುನಾಮೆ ಕಾಗದದ** ನಕಲಾಗಿದೆ.

೪. ಪೂರ್ವೋಕ್ತ, ಪುಟ ೬೦, ೨-೩ನೇ ಸಾಲುಗಳು, ಕ. ೧೩೨, ದಾಖಲೆ ೪೬.

೫. ಕಡತ ಸಂಖ್ಯೆ ೧೩೨, ಶೃಂಗೇರಿ ಪೂರ್ವೋಕ್ತ ದಾಖಲೆ ೪, ಸ್ವಭಾನು ಸಂವತ್ಸರ ಅದಿಕ ಚೈತ್ರ ಶುದ್ಧ ಪಂಚಮಿ.

೬. ಕಡತ ಸಂಖ್ಯೆ ೧೩೨, ಶೃಂಗೇರಿ ಪೂವೋಕ್ತ ದಾಖಲೆ ಸಂಖ್ಯೆ ೪೭.

೭. ಕಡತ ಸಂಖ್ಯೆ ೧೩೨, ಶೃಂಗೇರಿ ಪೂವೋಕ್ತ ದಾಖಲೆ ಸಮಖ್ಯೆ ೪೮

೮. ರಾಜಶೇಖರಪ್ಪ, ದುರ್ಗಶೋಧ, ಪುಟ ೧೪೦-೧೪೧.

೩೬

ರ್‍ಯಾವಣಿಕಿಯ ಮೊಲ್ಲೆಬೊಮ್ಮಯ್ಯ : ಚಾರಿತ್ರಿಕ ಸಂಗತಿಗಳು

ಕೆ. ರವೀಂದ್ರನಾಥ*

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ರ್‍ಯಾವಣಿಕಿ ಒಂದು ಚಿಕ್ಕಗ್ರಾಮ. ಈ ಗ್ರಾಮದ ಪಕ್ಕದಲ್ಲಿರುವ ಕಲ್ಲೂರಿನ ಧೂಪದ ರಾಜೇಶ ಕ್ರಿ.ಶ. ೧೭೦೦ರಲ್ಲಿ ಬರೆದ ಕಾವ್ಯ ; 'ಮೊಲ್ಲೆ ಬೊಮ್ಮಯ್ಯಗಳ ಕಾವ್ಯ'.

೧೨ನೇ ಶತಮಾನದ ಶಿವಶರಣರ ಜಾತಿನಿರಸನ ಸಮಾಜ ಪರಿಕಲ್ಪನೆಯ ಆಂದೋಲನದ ಭಾಗವಾಗಿ ಹರಳಯ್ಯ – ಮಧುವರಸರ ಮನೆತನಗಳ ವೈವಾಹಿಕ ಸಂಬಂಧದಿಂದ ಕಲ್ಯಾಣಕ್ರಾಂತಿ (ಮದುವೆ = ಕಲ್ಯಾಣ : ಅಂತರ್ಜಾತಿ ಮದುವೆಯಿಂದ ಆದ ಕ್ರಾಂತಿಯ ಅನ್ವರ್ಥಕ ಪದ ಕಲ್ಯಾಣ ಕ್ರಾಂತಿ)ಯಾಗಿ ಇವರೀರ್ವರನ್ನು ಎಳೆಹೂಟಿ ಶಿಕ್ಷೆಗೆ ಗುರಿಪಡಿಸುತ್ತಾರೆ. ಬಸವ ಸಂವಿಧಾನವನ್ನು ಒಪ್ಪಿಕೊಂಡ ಮೊಲ್ಲೆಬೊಮ್ಮಯ್ಯ ಕಲ್ಯಾಣದಲ್ಲಿದ್ದ ಜಗದೇವನನ್ನು ಕೂಡಿಕೊಂಡು ದೀವಟಿಗೆ ಕಾಯಕದ ನೆಪದಲ್ಲಿ ಬಿಜ್ಜಳನನ್ನು ಕೊಲೆ ಮಾಡುವುದು ಈ ಕಾವ್ಯದ ವಸ್ತು.

ಸಂಪ್ರದಾಯದಂತೆ ಬಸವಣ್ಣನವರ ಚರಿತ್ರೆಯನ್ನು ಹಾಗೂ ಹರಳಯ್ಯ–ಮಧುವಯ್ಯಗಳ ಚರಿತ್ರೆಯನ್ನು ಸಿಂಗರಾಜ ಪುರಾಣ, ಬಸವರಾಜದೇವರ ರಗಳೆ, ಬಸವಪುರಾಣಗಳಿಂದ ಕವಿ ರಾಜೇಶ ಎತ್ತಿಕೊಂಡಿದ್ದಾನೆ. ಯಲಬುರ್ಗಾ ತಾಲೂಕಿನ ರ್‍ಯಾವಣಿಕಿಯಂತಹ ಸಣ್ಣ ಗ್ರಾಮದಲ್ಲಿ ಜನಿಸಿದ ಮೊಲ್ಲೆಬೊಮ್ಮಯ್ಯನಿಂದಾದ ಬಿಜ್ಜಳನ ಹತ್ಯೆ ಪ್ರಸಂಗವನ್ನು ಜನವದಂತಿ ಹಾಗೂ ಕಾಲಜ್ಞಾನ ವಚನಗಳಿಂದಲೂ, ಹಾಗೂ "ಶರಣರ ಕೊಂದ ಪರವಾದಿ ಬಿಜ್ಜಳನ ಇರಿದು" ಎಂಬ ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಿಂದಲೂ, 'ಮಹಾ ದೂಷಕನಾದ ಬಿಜ್ಜಳನನ್ನು ಕೊಂದು' ಎಂಬ ಸಾನಂದ ಚರಿತೆಯ ಉಲ್ಲೇಖದಿಂದಲೂ, 'ಬಿಜ್ಜಳನ ಕೊಲೆ ಜಗದೇವನಿಂದ' ಎಂಬ ವೀರಶೈವ ಪುರಾಣದಿಂದಲೂ, 'ಶಿವಭಕ್ತನಿಂದೆಗೈದವವನಿರಿದು' ಎಂಬ ಭೈರವೇಶ್ವರ ಕಾವ್ಯದಿಂದಲೂ ಕವಿ ಆಕರಗಳನ್ನು ಪಡೆದಿದ್ದಾನೆ.

ಈ ಕಾವ್ಯವನ್ನುಎರಡುಕಾಗದ ಪ್ರತಿಗಳಿಂದ ಸಂಪಾದಿಸಿ ಕೊಟ್ಟಿರುವ ಡಾ. ಬಿ.ವ್ಹಿ. ಶಿರೂರ ಅವರ ಸುದೀರ್ಘ ಪ್ರಸ್ತಾವನೆ ಮತ್ತು ಎಂ.ಎಂ. ಕಲ್ಬುರ್ಗಿಯವರ 'ಮೊಲ್ಲೆಬೊಮ್ಮಯ್ಯಗಳ ಕಾವ್ಯ ಮತ್ತು ಶಾಸನಗಳು' ಎಂಬ ಲೇಖನದಲ್ಲಿ ಬಿಜ್ಜಳನ ಹತ್ಯೆಗೆಕಾರಣ, ಕೊಂದವರನ್ನು ಯಲ್ಬುರ್ಗಾ ಭಾಗದ ಹಿರಿಯರು ಕೋಡಿಕೊಪ್ಪದಲ್ಲಿ ಸೇರಿಸಿ ನಡೆಸಿದ ಪಂಚಾಯಿತಿ, ಮೊಲ್ಲೆಬೊಮ್ಮಯ್ಯನಿಗೆ ನೀಡಿದ ದಾನದತ್ತಿ ಕುರಿತು ಪ್ರಸ್ತಾಪಿಸಿದ್ದಾರೆ.

ಪ್ರಸ್ತುತ ಈ ಪ್ರಬಂಧದಲ್ಲಿ ಮತ್ತೆ ಆ ಸಂಗತಿಗಳನ್ನು ಪ್ರಸ್ತಾಪಿಸದೆ ಬಿಜ್ಜಳನನ್ನು ಕೊಂದ ಜಗದೇವ ಮತ್ತು ಮೊಲ್ಲೆ ಬೊಮ್ಮಯ್ಯರು ಮುಂದೆ ಓರಂಗಲ್ಲಿನ ಕಾಕತೀಯರ ಆಸ್ಥಾನದಲ್ಲಿ ಗುಂಡಬೊಮ್ಮಯ್ಯರಾಗಿ ಜನಿಸಿ 'ಮೊರೆಹೊಕ್ಕವರಕೊಡೆನೆಂಬ ವೀರವ್ರತವನ್ನಾಚರಿಸಿದ ಧೀರ ಶರಣರಾಗಿ ಹುಟ್ಟಿದ್ದಾರೆಂದು' ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣ ಮುಂತಾದ ಕೃತಿಗಳು ಹೇಳುತ್ತವೆ. ಪುನರ್ಜನ್ಮದ ಕಲ್ಪನೆಯನ್ನು ಒಪ್ಪದ ಶರಣರಿಗೆ ಈ ರೀತಿ ಆರೋಪ ಮಾಡುವುದು ಕವಿಯ ಕಲ್ಪನೆಗಳೆಂದು ಹೇಳಿ ಸುಮ್ಮನಾಗುವುದು ಸೂಕ್ತವಾದ ನಿಲುವು. ಆದರೆ, ಕರ್ನಾಟಕದ ಶರಣ ಸಿದ್ಧಾಂತಗಳು ಆಂಶಿಕವಾಗಿಯಾದರೂ ಆಂಧ್ರದ ನೆಲೆಯಲ್ಲಿ ಅದರಲ್ಲೂ ಶ್ರೀಶೈಲದ ಪರಿಸರದಲ್ಲಿ ರಚನೆಯಾಗಿರುವುದು, ಸಂರಕ್ಷಣೆಯಾಗಿರುವುದು ಮತ್ತು ಪ್ರಸಾರವಾಗಿರುವುದರ ಔಚಿತ್ಯವನ್ನು ತಿಳಿದುಕೊಳ್ಳುವ ಕುತೂಹಲದಿಂದ ಕೃತಿನಾಯಕರ ಪುನರ್ಜನ್ಮದ ಕಲ್ಪನೆಯನ್ನು ಪರಿಶೀಲಿಸುವುದು ಅಗತ್ಯವೆನಿಸುತ್ತದೆ.

ಮೊಲ್ಲೆಬೊಮ್ಮಯ್ಯಗಳ ಕಾಲ ೧೧೫೪. ಇದಕ್ಕೆ ಆಧಾರ ಶ್ರೀಮಹಾಮಂಡಳೇಶ್ವರ ಚಾವುಂಡರಸದೇವನ ಅರ್ಧಾಂಗಿ ಮಹಾದೇವಿಯರು ಕಲ್ಲೂರನ್ನಾಳುತ್ತಾ ಶ್ರೀಸ್ವಯಂಭೂ ಕಲಿದೇವಸ್ವಾಮಿಯ ಪಾದಾರಾಧಕಂ ಮೊಲ್ಲೆಬೊಮ್ಮಯ್ಯನಿಗೆ ದೇಹತಾ ವೃತ್ತಿಯಾಗಿ ಕೊಟ್ಟ ದಾನವನ್ನು ಕಲ್ಲೂರಿನ ಶಾಸನ ಉಲ್ಲೇಖಿಸುತ್ತದೆ. ಈ ಕಲ್ಲಿನಾಥ ದೇವಾಲಯದ ಆಚಾರ್ಯರು ಶಿವಶಕ್ತಿ ಪಂಡಿತರು, ರುದ್ರಶಕ್ತಿ ಪಂಡಿತರು, ಸೋಮೇಶ್ವರ ಪಂಡಿತರು ಆಗಿದ್ದರು. ಕಲ್ಲಿನಾಥನ ಭಕ್ತನಾದ ಮೊಲ್ಲೆಬೊಮ್ಮಯ್ಯ

* ಮುಖ್ಯಸ್ಥರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬. ಮೊ. ೯೪೪೮೨೬೧೯೪೬

ಕಾಳಮುಖ ಸಂಪ್ರದಾಯದ ಆಚಾರ್ಯನಾಗಿರದೇ ಭಕ್ತನಾಗಿದ್ದನು. ಇದಕ್ಕೆ ಪೂರಕವಾಗಿ ಮೊಲ್ಲೆಬೊಮ್ಮಯ್ಯಗಳ ಕಾವ್ಯ ಬರೆದ ಧೂಪದ ರಾಜೇಶ ಪಡಿವಿಡಿ ಬಗೆಯ ಸಿದ್ಧೇಶನ ಶಿಷ್ಯ ಅಂದರೆ ಎಂ.ಎಂ. ಕಲ್ಬುರ್ಗಿ ಅವರು ಹೇಳುವಂತೆ ಶ್ರೀಶೈಲದ 'ಪಶ್ಚಿಮ ದ್ವಾರವಾದ' ಅಲಂಪುರದವನು. ಇನ್ನು ಜಗದೇವ ಬೊಮ್ಮಯ್ಯರು ಓರಂಗಲ್ಲಿನ ಕಾಕತೀಯ ಅರಸನಾದ ಗಣಪತಿರಾಯನ ಕಾಲದಲ್ಲಿ ಇದ್ದವರೆಂದು ಗುಂಡಬ್ರಹ್ಮಯ್ಯಗಳ ಕಾವ್ಯಗಳು (ಗುಂಡಬ್ರಹ್ಮಯ್ಯರನ್ನು ಕುರಿತು ಆರು ಕಾವ್ಯಗಳು ರಚನೆಯಾಗಿವೆ) ಉಲ್ಲೇಖಿಸುತ್ತವೆ. ಈತನ ಕಾಲ ೧೨೫೦ ಗುಂಡಬ್ರಹ್ಮಯ್ಯರ ಕಾವ್ಯದ ಪ್ರಕಾರ ಮೊರೆಹೊಕ್ಕವರ ಕೊಡವೆಂಬ ವ್ರತವನ್ನು ಪರೀಕ್ಷಿಸಲು ಗಣಪತಿರಾಯನ ಅರಮನೆಗೆ ಕನ್ನ ಹಾಕಿ ಗುಂಡಬ್ರಹ್ಮಯ್ಯರಲ್ಲಿ ಆಶ್ರಯ ಪಡೆದ ಶಿವನ ವೃತ್ತಾಂತ, ಕಳ್ಳರಿಗೆ ಆಶ್ರಯ ನೀಡಿದ ತಪ್ಪಿಗಾಗಿ ಗುಂಡಬ್ರಹ್ಮಯ್ಯರು ಶೂಲವೇರುವುದು ಮುಂದೆ ೧೩ನೇ ಶತಮಾನದಲ್ಲಿ ಅಂದರೆ ಪ್ರತಾಪರುದ್ರನ ಕಾಲಕ್ಕೆ ಗುಂಡಬ್ರಹ್ಮಯ್ಯರ ಹೆಸರಿನಲ್ಲಿ ಗುಡಿ-ಗುಂಡಾರಗಳು ನಿರ್ಮಾಣಗೊಂಡು ಪೂಜ್ಯನೀಯ ವ್ಯಕ್ತಿಗಳಾಗಿದ್ದಾರೆಂಬುದಕ್ಕೆ "ಗುಂಡಬ್ರಹ್ಮಯ್ಯಗಾರಿಕಿ" ಎಂಬ ಭೀಮದೇವದಾನ ಬಿಟ್ಟದ್ದನ್ನು ಆಂಧ್ರಪ್ರದೇಶದ ನಲ್ಲೂರಿನ ಶಾಸನದ ಉಲ್ಲೇಖ, ಇದಕ್ಕೆ ಪೂರಕ ಎಂಬಂತೆ ಹೊಸ ಕುಮಾರರಾಮನ ಸಾಂಗತ್ಯದಲ್ಲಿ ಪ್ರತಾಪರುದ್ರನಲ್ಲಿದ್ದ ಬೊಲ್ಲಕುದುರೆಯನ್ನು ಗೆದ್ದು ತರಲು ಹೋದ ಕುಮಾರರಾಮ ಗುಂಡಬ್ರಹ್ಮಯ್ಯರ ದೇವಾಲಯದಲ್ಲಿ ತಂಗುವುದು, ಕನಸಿನಲ್ಲಿ ಬಂದ ಗುಂಡಬ್ರಹ್ಮಯ್ಯರು ಕುಮಾರರಾಮನಿಗೆ ಜಯ ತಂದುಕೊಡುವೆವೆಂಬ ಭಾಷೆ, ಇದಕ್ಕೆ ಪ್ರತಿಯಾಗಿ ನಮ್ಮ ಶೂಲದ ಹಬ್ಬವನ್ನು ನಿಮ್ಮ ಕಂಪ್ಲಿ ಭಾಗದಲ್ಲಿ ಆಚರಣೆಗೆ ತರಬೇಕೆಂಬ ಒಪ್ಪಂದ-ಈ ಎಲ್ಲವೂ ಹೊಸ ಕುಮಾರರಾಮ ಸಾಂಗತ್ಯದ 'ಶೂಲದಸಂಧಿ'ಯಲ್ಲಿ ಸುದೀರ್ಘವಾಗಿ ಚಿತ್ರಣಗೊಂಡಿದೆ.

ಇದಿಷ್ಟು ಕಾವ್ಯೋಕ್ತ – ಶಾಸನೋಕ್ತ ಆಕರಗಳನ್ನು ಎದುರಿಗೆ ಇಟ್ಟುಕೊಂಡು ಈ ಪ್ರಬಂಧದಲ್ಲಿ ಪ್ರತಿಪಾದನೆ ಮಾಡುವ ಚಾರಿತ್ರಿಕ ಸಂಗತಿಗಳೆಂದರೆ ಕಲ್ಯಾಣಕ್ರಾಂತಿಯ ನಂತರ ಶರಣರ ಸಾಹಿತ್ಯ-ಸಂಸ್ಕೃತಿ-ಸಂರಕ್ಷಣೆ-ಪ್ರಸಾರಗಳು ನೆಲದ ಮರೆಯ ನಿಧಾನದಂತೆ ಸುಪ್ತವಾಗಿ ಉಳಿದು ಬಂದಿದ್ದು ಓರಂಗಲ್ಲಿನ ಕಾಕತೀಯರ ಆಶ್ರಯದಲ್ಲಿ. ಅದೇ ರೀತಿ ಕರ್ನಾಟಕ ಸೇರಿದಂತೆ ಶರಣರ ಚರಿತ್ರೆಗಳು ಹುಟ್ಟಿಕೊಂಡಿದ್ದು-ಪ್ರಸಾರ ಪಡೆದಿದ್ದು ಆಂಧ್ರದ ನೆಲದಲ್ಲಿ ಮುಖ್ಯವಾಗಿ ಶ್ರೀಪರ್ವತಾವಳಿ ಎನಿಸಿದ ಶ್ರೀಶೈಲ ಪರಿಸರದಲ್ಲಿ ಈ ಹೇಳಿಕೆಯ ಸಮರ್ಥನೆಗಾಗಿ ಇತಿಹಾಸತಜ್ಞರ ಗಮನಕ್ಕೆ ಕೆಲವು ಸಂಗತಿಗಳನ್ನು ತರಬಯಸುತ್ತೇನೆ.

೧. ಬಸವಣ್ಣನವರನ್ನು ಕಾಣಲು ಬಂದ ಶ್ರೀಶೈಲದ ಪಂಡಿತಾರಾಧ್ಯರು ಬಸವಣ್ಣನ ಸಾವಿನ ಸುದ್ದಿಯನ್ನು ತಿಳಿದು ಶ್ರೀಶೈಲಕ್ಕೆ ನಡುಹಾದಿಯಲ್ಲಿಯೇ ತಿರುಗಿ ಹೋಗಿ ಆರಾಧ್ಯಚರಿತ್ರೆ ಬರೆದ ಪಾಲ್ಕುರಿಕೆ ಸೋಮನಾಥನಿಂದ ತೆಲುಗು ಬಸವಪುರಾಣ ಬರೆಸಿದ್ದನ್ನು ಲಕ್ಷಿಸಬೇಕು. ಈತನಿಂದಲೇ ಕನ್ನಡದಲ್ಲಿ ಶೀಲಸಂಪಾದನೆ, ದಶವಿಧಪಾದೋದಕ, ಗಣಸಹಸ್ರನಾಮ, ಹರಗಣಮಾಲೆ ಕಾವ್ಯಗಳು ರಚನೆಯಾಗಿರುವುದನ್ನು ಗಮನಿಸಬಹುದು.

೨. ಇನ್ನು ಸಿದ್ಧನಂಜೇಶ ಬರೆದ ಮಳೆಯ ರಾಜಚಾರಿತ್ರ್ಯದಲ್ಲಿ

ಗುರುಕುಲಾನ್ವಯರಾದ ಮಲೆಯಮಲ್ಲೇಶ್ವರನ
ಕರೆ ಸಂಜಾತ ಸಂತತಿಯೊಳು ಕರಮೆಸೆದ ಕರ್ನಾಟಕ
ದೇಶಸ್ಥ ವಿದ್ಯಾನಗರ ಹಿರಿಯಮಠದಲ್ಲಿನ ಸಿದ್ಧ
ವೀರೇಶನ ವರಶಿಷ್ಯ ಸಿದ್ಧನಂಜೇಶ

ಎಂಬ ಹೇಳಿಕೆಯಿಂದ ಸಿದ್ಧನಂಜೇಶನ ಗುರು ಸಿದ್ಧವೀರೇಶನು ಮಲೆಯ ಮಲ್ಲೇಶನ ಅಂದರೆ ಶ್ರೀಶೈಲ ಮಲ್ಲಿಕಾರ್ಜುನ ಸಂಪ್ರದಾಯದವನು ಎಂಬುವುದು ತಿಳಿದುಬರುತ್ತದೆ.

೩. ವೀರೇಶಚರಿತೆ ಬರೆದ ರಾಘವಾಂಕನು 'ಕೃತಿಗಧಿಪತಿ ಓರಂಗಲ್ಲಿನ ವೀರೇಶ' ಎಂದು ಹೇಳುತ್ತಾನೆ – ಹೀಗೆ ಪಾಲ್ಕುರಿಕೆ ಸೋಮನಾಥ, ಸಿದ್ಧನಂಜೇಶ, ಸಿದ್ಧವೀರೇಶ, ಪೌಢರಾಯನಕಾವ್ಯ ಬರೆದ ಅದ್ರೀಶ ಇವರೆಲ್ಲ ಶ್ರೀಪರ್ವತ ಮೂಲದವರು. ಈ ಎಲ್ಲಾ ಉಲ್ಲೇಖಗಳಿಂದ ಬಸವ ಸಮಕಾಲೀನರಾಗಿದ್ದ ಶ್ರೀಶೈಲದ ಪಂಡಿತಾರಾಧ್ಯರು ಶಿವಶರಣರ ವಚನ ಸಿದ್ಧಾಂತವನ್ನು ಪೋಷಿಸಿದವರು ಮತ್ತು ಬದುಕಿದವರು ಎಂದು ಹೇಳಬೇಕಾಗುತ್ತದೆ. ಈಗಾಗಲೇ ತಿಳಿದಂತೆ ಅಕ್ಕಮಹಾದೇವಿ ಕೊನೆಗಾಲದಲ್ಲಿ ಶ್ರೀಪರ್ವತದ ಕದಳಿಗೆ ನಡೆದಿದ್ದು, ಅಲ್ಲಮಪ್ರಭು ಶ್ರೀಪರ್ವತಕ್ಕೆ ನಡೆದಿದ್ದು, ಶಿವಯೋಗಿ ಸಿದ್ಧರಾಮ ಶ್ರೀಶೈಲ ಮಲ್ಲಿಕಾರ್ಜುನನ ಭಕ್ತನಾಗಿ ಸೊಲ್ಲಾಪುರಕ್ಕೆ ತೆರಳಿದ್ದು ಇವೆಲ್ಲವನ್ನು ವಿದ್ವಾಂಸರು ಸೂಕ್ಷ್ಮವಾಗಿ ಅವಲೋಕಿಸಬೇಕಾಗಿದೆ. ಇದರಿಂದ ಶ್ರೀಶೈಲ ಮತ್ತು ಓರಂಗಲ್ಲಿನ ಪ್ರದೇಶಗಳು ಕನ್ನಡ ಶರಣ ಸಿದ್ಧಾಂತಗಳ ಆವಾಸ ಸ್ಥಾನಗಳಾಗಿದ್ದವು.

೪. ೧೬-೧೭ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಕೆಳದಿ ಅರಸರು, ಕೆಳದಿ ಪರಿಸರದ ಪೀಠಾಧಿಪತಿಗಳು ಸಂಸ್ಕೃತ ವ್ಯಾಮೋಹಿಗಳಾಗಿದ್ದರೆಂಬುದಕ್ಕೆ ಅಲ್ಲಿ ರಚನೆಯಾದ ವೀರಮಾಹೇಶ್ವರ ತಂತ್ರಟೀಕೆ, ಶಬ್ದಕಲಾಪ ಟೀಕೆ, ಶಿವಗೀತೆ, ವೀರಶೈವಾಚಾರಕೌಸ್ತುಭ, ಶಿವತತ್ವ ರತ್ನಾಕರ, ಕಾಶೀಕಾಂಡದಂಥ ಕೃತಿಗಳು ನಿದರ್ಶನವಾಗಿವೆ.

ಅಪರೂಪಕ್ಕೆ ಪ್ರಜಾಧರ್ಮದ ಸಿದ್ಧಾಂತಗಳಾದ ವಚನಸಾಹಿತ್ಯದ ಪ್ರಸಾರಕ ಎಂಬಂತೆ ಕೆಳದಿಯ ಬೂದಿಬಸಪ್ಪನಾಯಕನು ಬಸವಣ್ಣನವರ ಷಟ್‌ಸ್ಥಲ ವಚನಗಳ ಸಂಖ್ಯಾನಿರ್ಣಯಕ್ಕೆ ಹಾಗೂ ಸಂಗ್ರಹಕ್ಕೆ ಮುಂದಾದ ಸಂಗತಿ ನೀತಿ ನಿರ್ಣಯ ಪುರಾಣಕಾವ್ಯದಿಂದ ತಿಳಿದು ಬರುತ್ತದೆ.

ಹೀಗಾಗಿ ಪಂಡಿತಾರಾಧ್ಯರಿಗಿದ್ದ ಶರಣ ಸಿದ್ಧಾಂತದ ಪ್ರೀತಿ, ಆ ಮೂಲಕ ಆ ಭಾಗದಲ್ಲಿ ರಚನೆಯಾದ ಶರಣ ಸಾಹಿತ್ಯದ ಓದು-ವ್ಯಾಖ್ಯಾನ ಮುಂತಾದವುಗಳನ್ನು ಈಗಿನ ವಿದ್ವಾಂಸರು, ಪೀಠಾಧಿತಿಗಳು ಸಾವಧಾನದಿಂದ ಅಧ್ಯಯನ ಮಾಡಿ ಪ್ರಸ್ತುತ ಸಂದರ್ಭದಲ್ಲಿ ನಾವು ತುಳಿಯಬೇಕಾದ ದಾರಿ ಯಾವುದೆಂಬುದನ್ನು ನಿರ್ಧರಿಸಲಿಕ್ಕೆ ಆಕರಗಳಾಗಿ ಮೊಲ್ಲೆಬೊಮ್ಮಯ್ಯ ಕಾವ್ಯ, ಗುಂಡಬ್ರಹ್ಮಯ್ಯ ಕಾವ್ಯ, ತೆಲುಗು ಬಸವಪುರಾಣಗಳಂತಹ ಚಾರಿತ್ರಿಕ ಕಾವ್ಯಗಳು ಸೂಚನೆ ನೀಡುತ್ತವೆ.

ಈ ಹಿನ್ನೆಲೆಯಲ್ಲಿ ಪ್ರಜಾಧರ್ಮವಾದ ವಚನ ಧರ್ಮವನ್ನು ಉಪೇಕ್ಷಿಸಿದ ಬಿಜ್ಜಳನನ್ನು ಕೊಂದ ಮಲ್ಲೆಬೊಮ್ಮಯ್ಯರು ಮುಂದೆ ಓರಂಗಲ್ಲಿನ ಪರಿಸರದಲ್ಲಿ ಗುಂಡಬ್ರಹ್ಮಯ್ಯರಾಗಿ ಹುಟ್ಟಿದರೆಂಬುದರ ಸೈದ್ಧಾಂತಿಕತೆಯನ್ನು ಸಂಶೋಧನ ದೃಷ್ಟಿಯಿಂದ ಪರಿಶೀಲಿಸಬೇಕೆಂಬುವುದು ಈ ಪ್ರಬಂಧದ ಆಶಯವಾಗಿದೆ.

೪೦

ಶ್ರವಣಬೆಳಗೊಳದ ನಿಸದಿ ಶಾಸನ ಹಲ್ಮಿಡಿ ಶಾಸನಕ್ಕಿಂತ ಹಳೆಯದೆ ?

ಬಿ. ರಾಜಶೇಖರಪ್ಪ*

ಬಿ.ಎಲ್. ರೈಸ್ ಅವರ ಓದಿಕೆ ಮತ್ತು ವಿವರಣೆ

ಶ್ರವಣಬೆಳಗೊಳ ದಕ್ಷಿಣ ಭಾರತದ ಸಮ್ಮೇದಗಿರಿಯೋ ಎಂಬಂತೆ ಜೈನರಿಗೆ ಪವಿತ್ರ ಸ್ಥಳವೆನಿಸಿದೆ. ಹಾಗಾಗಿ ಇಲ್ಲಿ ಅನೇಕ ಮುನಿಗಳು ಮತ್ತಿತರರು ಈ ಸ್ಥಳಕ್ಕೆ ಬಂದು ತಮ್ಮ ಕಡೆಯ ದಿನಗಳನ್ನು ಇಲ್ಲೇ ಕಳೆದು ದೇಹ ಬಿಡುತ್ತಿದ್ದರು ಅರ್ಥಾತ್ 'ಸಮಾಧಿಮರಣ'ವನ್ನು ಪಡೆಯುತ್ತಿದ್ದರು. ಇಲ್ಲಿ ದೇಹ ಬಿಡುವುದು ಪುಣ್ಯಕರ ಎನಿಸಿ, ಬಹುದೂರದ ಸ್ಥಳಗಳಿಂದ ಬಂದು 'ಸಮಾಧಿಮರಣ' ಪಡೆದವರ ಅನೇಕ ನಿಸದಿ–ಶಾಸನಗಳು ಇಲ್ಲಿ ಕಾಣಸಿಗುತ್ತವೆ. ಚಿಕ್ಕ ಬೆಟ್ಟದಲ್ಲಿ ಕ್ರಿ.ಶ. ಸು. ೬ನೇ ಶತಮಾನದಿಂದ ಅನೇಕ ಶತಮಾನಗಳ ಕಾಲಾವಧಿಯ ಬಹುಸಂಖ್ಯೆಯ ನಿಸದಿ–ಶಾಸನಗಳಿವೆ. ಅವುಗಳಲ್ಲೊಂದು, ಪಾರ್ಶ್ವನಾಥ ಬಸದಿಯ ದಕ್ಷಿಣದಲ್ಲಿ ನೆಲಬಂಡೆಯ ಮೇಲೆ ಕೊರೆಯಲಾಗಿರುವ, ಕ್ರಿ.ಶ. ಸು. ೨೦೦ರದ್ದೆನ್ನುವ, ಕನ್ನಡದ ನಿಸದಿ–ಶಾಸನ. ೧೮೮೯ರಲ್ಲಿ ಬಿ.ಎಲ್. ರೈಸ್ ಅವರು ಮೊತ್ತಮೊದಲಿಗೆ ಈ ಶಾಸನವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ (ಎ.ಕ. ೨, ನಂ. ೨೧). ಮಧ್ಯದಲ್ಲಿ ಕೆಲವು ಅಕ್ಷರಗಳು ನಷ್ಟವಾಗಿರುವ ಪಾಠವನ್ನು ಅವರು ಈ ಕೆಳಗಿನಂತೆ ಕೊಟ್ಟಿರುತ್ತಾರೆ :

೧. ಸ್ವಸ್ತಿಶ್ರೀಗುಣಭೂಷಿತಮಾದಿಉದ್ಗೆಡೆಗ್ದೇರಿಸಿದಾನ್‌ಸಿದಿಗೆ

೨. ಸದ್ಧಮ್ಮಗುರುಸಂತಾನನ್‌ಸಾದ್ವಿಗಗಣತಾನಯಾನ್

೩. ಗಿರಿತಲದಾಮೇಲ... ಸ್ಥಲಮಾನ್‌ತೀರದಾಣಮಾಕೆಳೆಗೆನೆಲದಿಮಾನದಿ

೪. ಸದ್ಧಮ್ಮದಗಿಟಿಸಸಾನದಿಪತನ್

ಇದರ ತಾತ್ಪರ್ಯವನ್ನು ಅವರು ಈ ಮುಂದಿನಂತೆ ನೀಡಿರುತ್ತಾರೆ: ಒಳ್ಳೆಯದಾಗಲಿ. ಸದ್ಗುಣಗಳಿಂದ ಭೂಷಿತನಾದವನು ಈ ಉನ್ನತ ಸ್ಥಳದಿಂದ ಸಿದ್ಧನಾಗಿ ಮೇಲೆದ್ದನು. ಅವನು ಸದ್ಗುರುವಿನ ಅನುಯಾಯಿ, ಸಾದ್ವಿಗಗಣನ ತನಯ?, ಈ ಬೆಟ್ಟದ ನೆತ್ತಿಯ ಮೇಲೆ ವಾಸಿಸುವವನು, ಬೆಟ್ಟದ ಇಳುಕಲಿನ ಕೆಳಗೆ ಹೋಗದವನು, ಗುಣಶಾಲಿಯಾದ......

ಈ ಶಾಸನದಲ್ಲಿ ಕಾಲವನ್ನು ಹೇಳಿಲ್ಲ. ಹಾಗೇ ಬಿ.ಎಲ್. ರೈಸ್ ಅವರೂ ಈ ಶಾಸನಕ್ಕೆ ಯಾವ ಕಾಲವನ್ನೂ ಸೂಚಿಸಿಲ್ಲ. ಈಮೇಲೆ ನಾವು ನೋಡಿರುವಂತೆ ರೈಸ್ ಅವರು ರೋಮನ್ ಲಿಪ್ಯಂತರದಲ್ಲಿ ಕೊಟ್ಟಿರುವ ಪಾಠದಲ್ಲಿ 'ಗುಣಭೂಷಿತಂ' ಎಂಬ ಪದಸಮುಚ್ಚಯದಲ್ಲಿ ಅದೊಂದು ಹೆಸರು ಎಂದು ಭಾವಿಸುವ ರೀತಿಯಲ್ಲಿ ದೊಡ್ಡಕ್ಷರದಿಂದ (Capital Letter) ಪ್ರಾರಂಭಗೊಂಡಂತೆ ತೋರಿಸಿಲ್ಲ. ಆ ಪದಸಮುಚ್ಚಯ ಅಥವಾ ಸಮಾಸವನ್ನು ಅವರು 'ಸದ್ಗುಣಗಳಿಂದ ಭೂಷಿತನಾದವನು' ಎಂಬ ಅರ್ಥದಲ್ಲಿ ಅನುವಾದಿಸಿದ್ದಾರೆ. ರೈಸ್ ಅವರು 'ಸಾದ್ವಿಗಗಣ' ಎನ್ನುವುದು ಒಂದು ವ್ಯಕ್ತಿಯ ಹೆಸರೆಂದೂ ಅವನು ಪರ್ವತದ ನೆತ್ತಿಯ ಮೇಲೆ ವಾಸಿಸುವವನು ಎಂದೂ ಭಾವಿಸಿದರು. ಆದರೂ ಅವರು ಈ 'ಸಾದ್ವಿಗಗಣ' ಎಂಬ ಉಕ್ತಿಯ ಮುಂದೆ ಅವರು ತಮ್ಮ ಇಂಗ್ಲಿಷ್ ಅನುವಾದದಲ್ಲಿ ಪ್ರಶ್ನೆ ಚಿಹ್ನೆಯನ್ನು ಹಾಕಿರುವುದರಿಂದ ಆ ವಿಷಯದಲ್ಲಿ ಅವರು ಇನ್ನೂ ಸಂದಿಗ್ಧ ಮನಃಸ್ಥಿತಿಯಲ್ಲಿದ್ದರು ಎಂದಾಗುತ್ತದೆ.

ರೈಸ್ ಕೊಟ್ಟಿರುವ ಪಾಠದಲ್ಲಿ ಅವರು ಈ ಮುಂದಿನಂತೆ ಹೇಳಿರುವುದಾಗಿ ತೆಗೆದುಕೊಳ್ಳಬಹುದು. ಶಾಸನದ ವ್ಯಕ್ತಿ (ಹೆಸರಿನ ಉಲ್ಲೇಖವಿಲ್ಲ) ಸದ್ಗುಣಗಳಿಂದ ಭೂಷಿತನಾದವನು, ಸಾದ್ವಿಗಗಣನ ತನಯನು, ಸಿದ್ಧ ಸ್ಥಾನವನ್ನು ಪಡೆದವನು– ಎಂದು. ಅವರ ಓದಿಕೆಯಲ್ಲಿ ಕಾಣುವ 'ಸಿದಿಗೆ' ಎಂಬ ಪದ 'ಸಿದ್ಧ' ಅಥವಾ 'ಸಿದ್ಧತ್ವ' ಎಂಬ ಅರ್ಥದ ಪದ ಎಂದು ಅವರು ಭಾವಿಸಿರುವರಾದರೂ ಅದು ಆ ಅರ್ಥದ ಪದವಲ್ಲ ಎಂಬುದನ್ನು ಗಮನಿಸಬೇಕು.

* ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು (ನಿ), ೨ನೇ ಕ್ರಾಸ್ (ಪಶ್ಚಿಮ), ಜಯಚಾಮರಾಜೇಂದ್ರ ಬಡಾವಣೆ, ಚಿತ್ರದುರ್ಗ–೫೭೭೫೦೧. ಮೊ. ೯೪೮೦೨೨೩೦೬೪

ಆರ್. ನರಸಿಂಹಾಚಾರ್ ಅವರ ಓದಿಕೆ ಮತ್ತು ವಿವರಣೆ

ತರುವಾಯ ೧೯೨೩ರಲ್ಲಿ ಆರ್. ನರಸಿಂಹಾಚಾರ್ ಅವರು ಇದೇ ಶಾಸನವನ್ನು 'ಕಾಲ ಕ್ರಿ.ಶ. ಸು. ೭೦೦' ಎಂಬ ಕಾಲಸೂಚನೆಯೊಂದಿಗೆ ಮತ್ತು ಬಿ.ಎಲ್. ರೈಸ್ ಅವರು ಕೊಟ್ಟಿದ್ದ ಪಾಠ ಮತ್ತು ವಿವರಣೆಯನ್ನು ಕೆಲವು ಬದಲಾವಣೆಯೊಂದಿಗೆ ಪ್ರಕಟಿಸಿದ್ದಾರೆ. ಇಷ್ಟಾದರೂ ಅವರು ಈ ಶಾಸನದ ಅರ್ಥ ಕೊಡುವಾಗ, ಕಂಸಗಳನ್ನು ಬಳಸಿರುವಲ್ಲಿ, ಇದರ ಅರ್ಥ ಪೂರ್ಣ ಸ್ಪಷ್ಟವಿಲ್ಲ ಎಂಬುದನ್ನು ಸೂಚಿಸಿರುತ್ತಾರೆ. ಆದರೆ, ಈ ಶಾಸನದ ಸುಧಾರಿತ ಪಾಠವನ್ನು ಅವರು ಕೊಟ್ಟಿರುವರೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಕೊಟ್ಟಿರುವ ಪಾಠ ಈ ಕೆಳಗಿನಂತಿದೆ:

೫. ಸ್ವಸ್ತಿಶ್ರೀ ಗುಣಭೂಷಿತಮಾದಿ ಉಳಾಡಗ್ದೇರಿಸಿದಾ ನಿಸಿದಿಗೆ

೬. ಸದ್ಧಮ್ಮ ಗುರು ಸಂತಾನಾನ್ ಸಂದ್ವಿಗ ಗಣತಾ ನಯನ್

೭. ಗಿರಿತಲದಾ ಮೇಲತಿ ... ಸ್ಥಲಮಾನ್ ತೀರದಾಣಮಾ ಕೆಳಗೆ ನೆಲದಿ ಮಾನದಾ

೮. ಸದ್ಧಮ್ಮದಾ ಗೇಟಿ ಸಸಾನದಿಪತಾನ್

ಅವರು ಕೊಟ್ಟಿರುವ ಪಾಠದ ತಾತ್ಪರ್ಯ ಈ ಮುಂದಿನಂತಿದೆ: ಒಳ್ಳೆಯದಾಗಲಿ. ನಿಸದಿಗೆ..... ಗುಣಭೂಷಿತ (ಅಥವಾ ಗುಣಗಳಿಂದ ಭೂಷಿತನಾದವನು) ಸದ್ಗುರುಗಳ ಸಂತಾನ (ಪರಂಪರೆಯವನು) ಎನಿಸಿರುವನು. ಸಂದ್ವಿಗ ಗಣದ ಅನುಯಾಯಿ ...... ಗಿರಿಯ ನೆತ್ತಿಯ ಮೇಲೆ...... ಸ್ಥಳ ಕಡಿಮೆಯಾದ್ದರಿಂದ.. .. ಕೆಳಗೆ ನೆಲದ ಮೇಲೆ ...ಸ್ವಗೌರವ ಮತ್ತು ಸದ್ಗುಣದ ಒಂದು? ನೆಲೆ....

ಆರ್. ನರಸಿಂಹಾಚಾರ್ ಅವರು ಶಾಸನದ ಪಾಠದ ಮೊದಲ ಸಾಲಿನ ಅಂತ್ಯದಲ್ಲಿ 'ನಿಸಿದಿಗೆ' ಎಂಬ ಶಬ್ದವನ್ನು ಮೊಟ್ಟ ಮೊದಲ ಬಾರಿಗೆ ಕೊಟ್ಟಿದ್ದಾರೆ. ಮತ್ತು ಅದನ್ನು 'ಸಮಾಧಿ ಬರಹ' ಎಂದು ಅನುವಾದಿಸಿದ್ದಾರೆ. ಅವರು ಕೊಟ್ಟಿರುವ ರೋಮನ್ ಲಿಪ್ಯಂತರದ ಪಾಠದಲ್ಲಿ ಮೇಲೆ ಹೇಳಿದ, 'ಗುಣಭೂಷಿತಂ' ಎಂಬ ಪದಸಮುಚ್ಚಯ ರೈಸ್ ಅವರು ಕೊಟ್ಟಿರುವ ರೀತಿಗೆ ಬದಲಾಗಿ ಅದರ ಆರಂಭದ ಅಕ್ಷರವನ್ನು ದೊಡ್ಡಕ್ಷರವಾಗಿ (Capital Letter) ತೋರಿಸಿ ಅದೊಂದು ಹೆಸರೆಂಬಂತೆ ಸೂಚಿಸಿರುತ್ತಾರೆ. ಇಷ್ಟಾದರೂ ಕೂಡಾ ಈ ವಿಷಯದಲ್ಲಿ ಇನ್ನು ಸಂದಿಗ್ಧತೆ ಅವರನ್ನು ಬಾಧಿಸಿದೆ. ಹಾಗಾಗಿಯೇ ಅವರು ಆ ಪದಸಮುಚ್ಚಯಕ್ಕೆ ಕಂಸಗಳಲ್ಲಿ 'ಗುಣಗಳಿಂದ ಭೂಷಿತನಾದವನು' ಎಂದೂ ಅರ್ಥ ಕೊಡುತ್ತಾರೆ. ಅಂತೂ 'ಗುಣಭೂಷಿತ' ಎಂಬುದು ಒಬ್ಬ ವ್ಯಕ್ತಿಯ ಹೆಸರು ಆಗಿರಬಹುದು ಎಂದು, ಇದೊಂದು ನಿಸದಿಗೆ-ಶಾಸನವೆಂದು ಮೊದಲು ಗುರ್ತಿಸಿದವರು ಆರ್. ನರಸಿಂಹಾಚಾರ್ ಅವರು. ಹೀಗೆಯೆ ಅವರು, ರೈಸ್ ಅವರ ಪಾಠದಲ್ಲಿಯ 'ಸಾದ್ವಿಗಗಣ' ಎಂಬುದರ ಬದಲಿಗೆ'ಸಂದ್ವಿಗ ಗಣ' ಎಂಬ ಪಾಠವನ್ನು ಕೊಟ್ಟಿದ್ದಾರೆ. ರೈಸ್ ಅವರು ಅದನ್ನು ಪುರುಷ ವ್ಯಕ್ತಿಯೊಬ್ಬನ ಹೆಸರೆಂಬಂತೆ ಭಾವಿಸಿದ್ದರೆ, ಇವರು ಅದು ಜೈನರಲ್ಲಿಯ ಒಂದು ಗಣ ಎಂದು ಗುರುತಿಸಲು ಯತ್ನಿಸಿದ್ದಾರೆ. ಇಲ್ಲಿಯೂ ಸಹ ಅನುವಾದದ ಕೊನೆಯ ಭಾಗ (ಅವರಿಗೆ) ಸ್ಪಷ್ಟತೆಯಿಲ್ಲದೆ ಸಂದೇಹಗಳಿಗೆ ಎಡೆಕೊಟ್ಟಿದೆ.

ಅಡಿ ಟಿಪ್ಪಣಿಯಲ್ಲಿ ಅವರು 'ಗೇಟಿ' ಎಂಬ ಶಬ್ದವನ್ನು ನೆಲೆ, ವಾಸಸ್ಥಾನ ಎಂಬಂತೆ ಅನುವಾದಿಸಿದ್ದಾರೆ. ಇದಲ್ಲದೆ ಅವರು 'ಗೇಟಿ' ಎಂಬುದು 'ಕೇಳಿ'ಯದೇ ಒಂದು ರೂಪ ಎಂದು ಅದರ ಅರ್ಥ ರಾಶಿ, ಗುಂಪು ಎಂದೂ ಕೊಟ್ಟಿರುತ್ತಾರೆ.

ಡಾ. ಬಾ.ರಾ. ಗೋಪಾಲ್ ಅವರ ಓದಿಕೆ ಮತ್ತು ವಿವರಣೆ


೧೯೭೩ರಲ್ಲಿ ಡಾ. ಬಾ.ರಾ. ಗೋಪಾಲ್ ಅವರು ಆರ್. ನರಸಿಂಹಾಚಾರ್ ಅವರು ಕೊಟ್ಟ ಪಾಠವನ್ನೇ ಪುನಃ ಪ್ರಕಟಿಸಿದ್ದಾರೆ [ಎ.ಕ.೨;ನಂ.೩೨(೨೯)]. ಅದರ ಜೊತೆಗೆ ಅವರು "ಈ ಶಾಸನದ ಅರ್ಥ ಸ್ಪಷ್ಟವಿಲ್ಲ. ಇದು ಗುಣಭೂಷಿತನು ಈ ನಿಸದಿಗೆಯನ್ನು ಎತ್ತಿಸಿದ್ದನ್ನು (ನಿರ್ಮಿಸಿದ್ದನ್ನು) ಹೇಳುವಂತೆ ತೋರುತ್ತದೆ" ಎಂದಿದ್ದಾರೆ. ನಿಸದಿಗೆ ಎನ್ನುವುದು ಜೈನ ಮುನಿಗಳು ಅಥವಾ ಜೈನ ಭಕ್ತರು (ಶ್ರಾವಕ/ಕೆ) ಅನ್ನ, ನೀರು ತೊರೆದು, ಒಂದು ತೀಕ್ಷ್ಣ ವ್ರತವನ್ನು ಆಚರಿಸಿ ಧ್ಯಾನದ ಮೂಲಕ ಸಮಾಧಿ ಮರಣವನ್ನು ಸಾಧಿಸಿದವರಿಗೆ ನಿರ್ಮಿಸುತ್ತಿದ್ದ ಒಂದು ಸ್ಮಾರಕ ಎಂಬುದು ತಿಳಿದ ಸಂಗತಿಯಷ್ಟೆ. ಡಾ. ಗೋಪಾಲ್ ಅವರು ಗುಣಭೂಷಿತ ಎಂಬ (ಸಮಾಸ) ಪದ ವ್ಯಕ್ತಿಯೊಬ್ಬರನ್ನು ಸೂಚಿಸುವುದಾಗಿ ನಿಶ್ಚಿತಪಡಿಸಿ, ಆ ಮೊದಲಿಗೆ ಆರ್. ನರಸಿಂಹಾಚಾರ್ ಅವರು ಕೊಟ್ಟಿದ್ದ ಅನುವಾದವನ್ನು ಸ್ವಲ್ಪ ಬದಲಾವಣೆಯೊಂದಿಗೆ ಈ ಮುಂದಿನಂತೆ ಕೊಟ್ಟಿರುತ್ತಾರೆ:

ಒಳ್ಳೆಯದಾಗಲಿ. ನಿಸದಿ ಬರಹ..... ಗುಣಭೂಷಿತ...... ಸದ್ಗುರುಗಳ ಪರಂಪರೆಯಲ್ಲಿ ಬಂದವನು; ಸಂದ್ವಿಗ ಗಣ (?) ವನ್ನು ಅನುಸರಿಸಿದವನು, ಬೆಟ್ಟದ ನೆತ್ತಿಯ ಮೇಲೆ..... ಕೆಳಗೆ ನೆಲದ ಮೇಲೆ ಜಾಗವು ಸಾಕಾಗದೆ..... ಸ್ವಗೌರವ ಮತ್ತು ಸದ್ಗುಣದ (?) ನೆಲೆ...

ಈ ಮೇಲಿನ ವಿವರದಿಂದ ಡಾ. ಬಾ.ರಾ. ಗೋಪಾಲ್ ಅವರು ಆರ್. ನರಸಿಂಹಾಚಾರ್ ಅವರ ಪಾಠ ಮತ್ತು ವ್ಯಾಖ್ಯಾನವನ್ನೇ ಅನುಸರಿಸಿರುವುದು ಸ್ಪಷ್ಟವಾಗಿದೆ. ಏಕೆಂದರೆ, ಆರ್. ನರಸಿಂಹಾಚಾರ್ ಅವರ ಅನುವಾದವನ್ನೇ ಇಲ್ಲಿ ಹೇಳಲಾಗಿದೆ. ಅಂದರೆ ಇಲ್ಲಿಯೂ ಸಹ ಅನುವಾದದ ಕೊನೆಯ ಭಾಗ, ಈ ಮೊದಲಿಗೆ ಹೇಳಿದಂತೆ, ಮತ್ತೂ ಅಸ್ಪಷ್ಟತೆಯಲ್ಲೇ ಇದ್ದು ಸಂದೇಹಾಸ್ಪದವಾಗಿದೆ. ಹಾಗಾಗಿ ಈ ಹಿಂದಿನ ಅಭಿಮತಗಳಿಗೆ ಮಾಡಲಾದ ಪ್ರತಿಕ್ರಿಯೆ-ವಿಮರ್ಶೆಯೇ ಇದಕ್ಕೂ ಅನ್ವಯಿಸುತ್ತದೆ. ಇಲ್ಲಿಯ ಒಂದೇ ಒಂದು ಮುಖ್ಯ ಅಂಶವೆಂದರೆ, ಡಾ. ಬಾ.ರಾ. ಗೋಪಾಲ್ ಅವರು ಮನಸ್ಸಿನ ಹೊಯ್ದಾಟವಿಲ್ಲದೆ ಗುಣಭೂಷಿತ ಎಂಬುದು ಒಬ್ಬ ವ್ಯಕ್ತಿಯ ಹೆಸರೆಂದು ನಿಶ್ಚಿತಪಡಿಸಿರುವುದು. ಆದರೆ 'ಸಂದ್ವಿಗ ಗಣ' ಎಂಬ ಹೆಸರಿನ ಬಗ್ಗೆ ಅವರು ಕಂಸಗಳಲ್ಲಿ ಪ್ರಶ್ನೆಚಿಹ್ನೆ ಹಾಕಿರುವುದರಿಂದ ಅವರು ಇನ್ನೂ ಸಂದೇಹಗ್ರಸ್ತರಾಗಿರುವುದು ಕಾಣಿಸುತ್ತದೆ.

ಡಾ. ಎಂ.ಜಿ. ಮಂಜುನಾಥ್ ಅವರ ಓದಿಕೆ ಮತ್ತು ವಿವರಣೆ

ಇತ್ತೀಚೆಗೆ, ೨೦೦೧ರಲ್ಲಿ, ಡಾ. ಎಂ.ಜಿ. ಮಂಜುನಾಥ್ ಎಂಬ ಯುವ ಶಾಸನತಜ್ಞರು ಈ ಶಾಸನವು ಹಲ್ಮಿಡಿಯದಕ್ಕಿಂತ ಸು. ೫೦ ವರ್ಷಗಳಷ್ಟು ಹಿಂದಿನದು. ಆದ್ದರಿಂದ ಇದರ ಕಾಲ ಕ್ರಿ.ಶ. ಸು. ೪೦೦ ಎಂದೂ ಅಭಿಪ್ರಾಯ ಪಟ್ಟಿರುತ್ತಾರೆ. ಇದನ್ನೇ ಅವರು 'ಪ್ರಜಾವಾಣಿ' (ದಿ. ೦೭-೧೦-೨೦೦೧), ಬೆಂಗಳೂರು ವಿಶ್ವವಿದ್ಯಾಲಯದ ಒಂದು ಚಿಕ್ಕ ಪುಸ್ತಕ 'ವೈಶಿಷ್ಟ್ಯಪೂರ್ಣ ಕನ್ನಡ ಶಾಸನಗಳು' (೨೦೦೪), 'ವಿಜಯ ಕರ್ನಾಟಕ' (ದಿ. ೧೯-೦೯-೨೦೦೮) ಮತ್ತು 'ದಿ ಹಿಂದು' (ದಿ. ೨೦೦೮), ಮತ್ತು ಮಂಡ್ಯದ ಕರ್ನಾಟಕ ಸಂಘದ ನಿಯತಕಾಲಿಕೆ 'ಅಭಿವ್ಯಕ್ತಿ' (ಸಂಪುಟ ೩- ಸಂಚಿಕೆ ೮, ಆಗಸ್ಟ್ ೨೦೧೦)-ಇವುಗಳಲ್ಲಿ ಮೇಲಿಂದ ಮೇಲೆ ಪ್ರಕಟಿಸಿದ್ದಾರೆ. ಈ ಶಾಸನದ ಅಕ್ಷರಗಳ ಕಣ್‌ಪ್ರತಿಯೊಂದಿಗೆ ಅದರ ಪಾಠವನ್ನು ಈ ಮುಂದಿನಂತೆ ಕೊಟ್ಟಿರುತ್ತಾರೆ:



ಡಾ. ಎಂ.ಜಿ. ಮಂಜುನಾಥ್ ಅವರು ಕೊಟ್ಟಿರುವ ಈ ಶಾಸನದ ಕಣ್‌ಪ್ರತಿ

೧. ಸ್ವಸ್ತಿಶ್ರೀ ಗುಣಭೂಷಿತಮಾದಿಉಳಾಡಗ್ದೇರಿಸಿದಾ ನಿಸಿದಿಗೆ

೨. ಸದ್ಧಮ್ಮ ಗುರುಸಂತಾನಾನ್ ಸಂದ್ವಿಗಗಣತಾನಯಾನ್

೩. ಗಿರಿತಲದಾ ಮೇಲತಿ..... ಸ್ಥಲಮಾನ್ ತೀರದಾಣಮಾ ಕೆಳಗೆ ನೆಲದಿ ಮಾನದಾನ್

೪. ಸದ್ಧಮ್ಮದಾ ಗೇಟಿ ಸಸಾನಧಿಪತಾನ್

ಮುಂದೆ ಅವರು ಈ ಶಾಸನವನ್ನು ಹೀಗೆ ಅರ್ಥೈಸಿದ್ದಾರೆ: "ಸ್ವಸ್ತಿಶ್ರೀ ಗುಣಭೂಷಿತರಿಗೆ ಉಳಾಡನು ಎತ್ತರಿಸಿ ಕಟ್ಟಿಸಿದ ನಿಸದಿಗೆ. ಅವನು (ಉಳಾಡನು) ಉತ್ತಮ ಧರ್ಮ ಮತ್ತು ಗುರುವಿನ ಶಿಷ್ಯನಾಗಿದ್ದವನು. ಅವನು ಸಂದ್ವಿಗ ಗಣಕ್ಕೆ

ಸೇರಿದವನು. ಅವನು ಉತ್ತಮ ಧರ್ಮದ ಬೋಧನೆಗೆ ಕಿವಿಕೊಟ್ಟದ್ದರಿಂದ ಬೆಟ್ಟದ ಮೇಲೆ ಈ ನಿಸದಿಗೆಯನ್ನು ನಿರ್ಮಿಸಿದನು. (ಈಗಿನ ಶ್ರವಣಬೆಳಗೊಳದ) ಬೆಟ್ಟದ ಬುಡದ ಪ್ರದೇಶಕ್ಕೆ ಅವನು ಪ್ರಭುವಾಗಿದ್ದನು."

ಹೀಗೆ ಅವರು ಈ ಶಾಸನವು ಗುಣಭೂಷಿತ ಎಂಬ ಜೈನ ಮುನಿಯ ನಿಸದಿಯ ಬಗ್ಗೆ ಹೇಳುವುದಾಗಿಯೂ ಅದನ್ನು ಉಳಾಡನೆಂಬುವನು ಎತ್ತಿಸಿ ಕಟ್ಟಿಸಿದನೆಂದೂ ಅವನು ಜೈನಧರ್ಮದ ನಿಷ್ಠ ಅನುಯಾಯಿಯೂ ಮಹಾಗುರುಗಳ ಶಿಷ್ಯನೂ ಆಗಿದ್ದನೆಂದೂ ವ್ಯಾಖ್ಯಾನಿಸಿದ್ದಾರೆ.

ನನ್ನ ಓದಿಕೆ ಮತ್ತು ವಿವರಣೆ


ಡಾ. ಎಂ.ಜಿ. ಮಂಜುನಾಥ್ ಅವರು ಮೇಲೆ ಹೇಳಿದ ಬೆಂ.ವಿ.ವಿ.ದ ಚಿಕ್ಕ ಪುಸ್ತಕದಲ್ಲಿ, ನಿಯತಕಾಲಿಕೆಯಲ್ಲಿ ಈ ಶಾಸನದ ಕಣ್‌ಪ್ರತಿಯನ್ನು ಕೊಟ್ಟಿರುತ್ತಾರೆ. ನನ್ನ ಪ್ರಥಮ ವೀಕ್ಷಣೆಯಲ್ಲಿ ಅವರು ಕಣ್‌ಪ್ರತಿಯಲ್ಲಿ ಕೊಟ್ಟಿರುವ ಕೆಲವು ಅಕ್ಷರಗಳಿಗೂ ಮತ್ತು ಅವರ ಓದಿಕೆಯ ಅಕ್ಷರಗಳಿಗೂ ತಾಳೆಯಾಗದಿರುವುದು ಕಂಡಿತು. ಆದ್ದರಿಂದ ಅವರು ಕೊಟ್ಟಿರುವ ಕಣ್‌ಪ್ರತಿಯ ಪ್ರತಿ ಅಕ್ಷರದೊಂದಿಗೆ ಅವರು ಓದಿಕೆಯ ಪ್ರತಿ ಅಕ್ಷರವನ್ನು ಹೋಲಿಕೆ ಮಾಡುತ್ತಾ ಪರೀಕ್ಷಿಸುವುದು ಆವಶ್ಯಕವೆನಿಸಿತು. ಆಗ ಅಕ್ಷರ ಓದಿಕೆಯ ವ್ಯತ್ಯಾಸದ ಜೊತೆಗೆ ಕಣ್‌ಪ್ರತಿಯ ಕೆಲವು ಅಕ್ಷರಗಳ ಸ್ವರೂಪ ಕೂಡ ಸಮರ್ಪಕ ಇಲ್ಲದಿರುವುದು ಕಂಡುಬಂದಿತು. ಉದಾಹರಣೆ: ಮೊದಲನೆಯ ಪಂಕ್ತಿಯಲ್ಲಿ ೪-೫ನೆಯ ಅಕ್ಷರ 'ಗು' ಮತ್ತು 'ಭೂ' ಎಂಬುವುಗಳಲ್ಲಿ ಅನುಕ್ರಮವಾಗಿ ಹ್ರಸ್ವ 'ಉ' ಮತ್ತು ದೀರ್ಘ 'ಊ' ಸೂಚಿಸುವ (ಅಕ್ಷರದ ಕಳಭಾಗದ) ರೇಖೆಗಳು ಅಂದಿನ ಕಾಲದ ಬರವಣಿಗೆಯಲ್ಲಿರಬೇಕಾದ ರೀತಿಗೆ ವ್ಯತಿರಿಕ್ತವಾಗಿವೆ. ಮೊದಲನೆಯ ಪಂಕ್ತಿಯ ೪ನೆಯ ಅಕ್ಷರ 'ಗು' ಎಂಬುದು ಅಸಮರ್ಪಕ ರೂಪದಲ್ಲಿರುವುದು ೨ನೆಯ ಪಂಕ್ತಿಯ ೪ನೆಯ ಅಕ್ಷರ 'ಗು' ಜೊತೆಗೆ ಹೋಲಿಸಿ ನೋಡಿದಾಗ ಸ್ಪಷ್ಟವಾಗುತ್ತದೆ.

ಅದೇ ರೀತಿ ೩ನೆಯ ಪಂಕ್ತಿಯಲ್ಲಿ ಕೆಲವು ಅಕ್ಷರಗಳು ಹಿಂದಿನ ಶಾಸನ ತಜ್ಞರು ಕೊಟ್ಟಿರುವ ಪಾಠದಲ್ಲಿ ನಷ್ಟಗೊಂಡಿರುವಂತೆ ತೋರಿಸಿರುವ ಭಾಗದಲ್ಲಿ ಡಾ. ಮಂಜುನಾಥ್ ಅಕ್ಷರಗಳನ್ನು ತೋರಿಸಿರುತ್ತಾರೆ. ೨ನೆಯ ಪಂಕ್ತಿಯಲ್ಲಿ ಅನುಸ್ವಾರಗಳನ್ನು ಅಕ್ಷರದ ಬದಿಯಲ್ಲಿ ಹಾಕಲಾಗಿದೆ. ಆದರೆ ಅವು ಶಾಸನದ ಕೆತ್ತನೆಯಲ್ಲಿ ಹಾಗಿಲ್ಲ. ಕಣ್‌ಪ್ರತಿಯ ೩ನೆಯ ಪಂಕ್ತಿಯಲ್ಲಿ ಎಲ್ಲ ಅಕ್ಷರಗಳನ್ನು ಚಿತ್ರದಲ್ಲಿ ಕೊಟ್ಟಿರುತ್ತಾರಾದರೂ ಅದರ ಪಾಠದಲ್ಲಿ ಕೆಲವು ಅಕ್ಷರಗಳು ನಷ್ಟಗೊಂಡಿರುವಂತೆ ತೋರಿಸಿರುತ್ತಾರೆ. ೪ನೆಯ ಪಂಕ್ತಿಯಲ್ಲಿ ಪಾಠದಲ್ಲಿ ಅವರು 'ಗೇಟಿ' ಎಂದು ಕೊಟ್ಟಿದ್ದಾರೆ. ಆದರೆ ಕಣ್‌ಪ್ರತಿಯಲ್ಲಿ ಅದು 'ಗಿಟಿ' ಎಂದಿದೆ. ಆದ್ದರಿಂದ ಶ್ರೀಯುತರು ಕೊಟ್ಟಿರುವ ಕಣ್‌ಪ್ರತಿಯ ಅಕ್ಷರಗಳಿಗೆ ಅವರು ಕೊಟ್ಟಿರುವ ಪಾಠಕ್ಕಿಂತ ಭಿನ್ನವಾದ ಪಾಠವಿರುವುದು ಕಾಣುತ್ತದೆ.

ನಾನು ಈ ಶಾಸನವನ್ನು ಖುದ್ದಾಗಿ ಪರಿಶೀಲಿಸಿ ಅಕ್ಷರಗಳ ಕೆತ್ತನೆ, ಶೈಲಿ, ಪಾಠ ಮತ್ತು ಭಾಷೆ ಇವುಗಳನ್ನು ಕುರಿತಂತೆ ನಾನು ಗಮನಿಸಿದ ಸಂಗತಿಗಳನ್ನು ಇಲ್ಲಿ ಸಾದರ ಪಡಿಸುತ್ತಿದ್ದೇನೆ.

ಶಾಸನವನ್ನು ಕೊರೆಯಲು ಬಂಡೆಯ ಮೇಲ್ಮೈಯನ್ನು ಸಮತಟ್ಟಾಗಿಸಿಕೊಂಡಿಲ್ಲ. ಶಾಸನದ ಮೇಲು ಭಾಗದಲ್ಲಿ ಕಲ್ಲಿನ ಚಕ್ಕಳ ಎದ್ದುಹೋಗಿ ಅಗಲವಾದ ಒಂದು ಗುಳಿ ಉಂಟಾಗಿದೆ. ಇದರಿಂದ ಬಹಳ ಕಾಲದ ಹಿಂದೆಯೆ ಆ ಚಕ್ಕಳ ಕಳಚಿ ಕಳೆದು ಹೋಗಿರುವುದು ಸ್ಪಷ್ಟ. ಮೊದಲ ಸಾಲಿನ ಆರಂಭದ 'ಸ್ವಸ್ತಿಶ್ರೀ' ಅನಂತರ ಕಲ್ಲಿನ ಚಕ್ಕಳ ಕಳಚಿ ಹೋದ ಕಾರಣ, ಒಂದು ಅಕ್ಷರವನ್ನು ಮಾತ್ರ ಕೊರೆದಿರುವುದು ಅಲ್ಪಸ್ವಲ್ಪ ಕಾಣಿಸುತ್ತಿದ್ದು ಇನ್ನೊಂದು ಅಕ್ಷರ ಸಂಪೂರ್ಣ ಕಾಣಿಸದಾಗಿದೆ. ಅಲ್ಪಸ್ವಲ್ಪ ಕಾಣಿಸುವ ಆ ಅಕ್ಷರ ಬಹುಶಃ ಗೋ ಇರುವ ಸಾಧ್ಯತೆ ಇದೆ. ಈ ಸಾಲಿನ ಗುಳಿಯ ಆಮೇಲಿನ ಅಕ್ಷರಗಳೆಲ್ಲವೂ ಕೂಡ ಸುಸ್ಥಿತಿಯಲ್ಲಿವೆ. ೨ನೆಯ ಮತ್ತು ೩ನೆಯ ಸಾಲುಗಳಲ್ಲಿ ಆರಂಭದ ಕೆಲವು ಅಕ್ಷರಗಳನ್ನು ಸ್ವಲ್ಪ ತಗ್ಗುಮೇಲ್ಮೈಯಲ್ಲಿ ಕೊರೆದಿದ್ದರೂ ಹಿಂದು ಮುಂದಿನ ಅಕ್ಷರಗಳ ಗುರುತಿಸುವಿಕೆಯಿಂದ ಆ ನಡುವಿನ ಅಕ್ಷರ ಏನೆಂಬುದನ್ನು ಗುರುತಿಸಬಹುದಾಗಿದೆ. ಇದೇ ರೀತಿ ಶಾಸನದ ಮಧ್ಯದಲ್ಲಿ ಚಿಕ್ಕ ಗುಳಿಯೊಂದಿದ್ದು ೨ನೆಯ ಮತ್ತು ೩ನೆಯ ಸಾಲಿನಲ್ಲಿ ಕೆಲವೇ ಕೆಲವು ಅಕ್ಷರಗಳಿಗೆ ಧಕ್ಕೆ ಆಗಿದೆ. ಇಲ್ಲಿ ಕೊಟ್ಟಿರುವ ಛಾಯಾಚಿತ್ರದಲ್ಲಿ ಆ ಎಲ್ಲ ಗುಳಿಗಳನ್ನು ನೋಡಬಹುದಾಗಿದೆ.

ಎಲ್ಲಾ ಸಾಲುಗಳು ಅಂಕುಡೊಂಕಾಗಿರುವುದಷ್ಟೇ ಅಲ್ಲ, ಅಕ್ಷರಗಳ ಗಾತ್ರ ಮತ್ತು ಸ್ವರೂಪ ಕೂಡಾ ಏಕರೂಪದಲ್ಲಿಲ್ಲ. ಕೆಲವು ಅಕ್ಷರಗಳಂತೂ ಒಂದಕ್ಕಿಂತ ಹೆಚ್ಚು ನಮೂನೆಯಲ್ಲಿವೆ. ಸ,ನ,ಗ,ತ,ಮ-ಈ ಅಕ್ಷರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಕೆಲವು ಅಕ್ಷರಗಳು ಆಳವಾಗಿ ಕೊರೆಯಲ್ಪಟ್ಟಿದ್ದರೆ, ಇನ್ನು ಕೆಲವು ಆಳವಾಗಿರದೆ ಹೆಚ್ಚು ಸವೆದ ರೀತಿಯಲ್ಲಿವೆ. ಇದಕ್ಕೆ ಕಂಡರಿಸುವಿಕೆಯ ಕುಶಲತೆಯ ಕೊರತೆ ಮತ್ತು ನೈಸರ್ಗಿಕ ಸವಕಳಿ ಕೂಡಾ ಕಾರಣವಾಗಿರಬಹುದು. ಒಟ್ಟಾರೆ ಈ ಶಾಸನದ ಕೊರೆಯುವಿಕೆ ಕುಶಲಗಾರಿಕೆಯದಲ್ಲ ಎಂಬುದು ಎದ್ದು ಕಾಣುತ್ತದೆ.



ನಾನು ತೆಗೆದಿರುವ ಈ ಶಾಸನದ ಛಾಯಾಚಿತ್ರ

ಎಲ್ಲಕ್ಕಿಂತ ಮೊದಲು ಶಾಸನ ಪಾಠದಲ್ಲಿ ದಂಗು ಬಡಿಸುವ ಸಂಗತಿ ಎಂದರೆ 'ಗುಣಭೂಷಿತ' ಎಂಬ ಹೆಸರೇ ಇಲ್ಲಿ ಕಾಣಿಸದಿರುವುದು; ಜೊತೆಗೆ ಇದು ಹಲ್ಮಿಡಿಶಾಸನಕ್ಕಿಂತ ಹಿಂದಿನದ್ದಲ್ಲ, ಅದಕ್ಕಿಂತ ಸುಮಾರು ೧೫೦ ವರ್ಷಗಳಷ್ಟು ಈಚಿನದು ಎನಿಸುವಂತಿರುವುದು. ಈ ಮೊದಲಿಗೆ ಇದರ ಕಾಲ ಎಂದು ರೈಸ್ ಅವರು ಸೂಚಿಸಿದ್ದ 'ಕ್ರಿ.ಶ. ೭೦೦' ಎಂಬ ಸೂಚನೆಗೆ ಬದಲಾಗಿ ಕ್ರಿ.ಶ. ಸು. ೬೦೦ ಎಂಬುದು ಇದಕ್ಕೆ ಸೂಕ್ತ ಎನಿಸುತ್ತದೆ. ಅಲ್ಲದೇ ರೈಸ್, ಆರ್. ನರಸಿಂಹಾಚಾರ್, ಬಾ.ರಾ. ಗೋಪಾಲ್ ಮತ್ತು ಎಂ.ಜಿ. ಮಂಜುನಾಥ್ ಇವರ ಪಾಠಕ್ಕೆ ಭಿನ್ನವಾದ ಪಾಠ ಇರುವುದು ಕಾಣಿಸಿತು. ಹಾಗೆಯೇ ಇದರ ಅರ್ಥ ಕೂಡ ಅವರೆಲ್ಲ ಹೇಳಿರುವ ಅರ್ಥಕ್ಕಿಂತ ಭಿನ್ನವಾಗಿರುವುದು ಕಾಣಿಸಿತು. ಈ ಶಾಸನದ ನನ್ನ ಓದಿಕೆ ಈ ಮುಂದಿನಂತಿದೆ:

೧. ಸ್ವಸ್ತಿಶ್ರೀ[ಗೋ?]ಪಗೋಪಿತಮ್ಮಾದಿಉಳಾಡನ್ಗೇರಿಸಿದಾ ನಿಸಿದಿಗೆ

೨. ಸದ್ಧರ್ಮ್ಮ ಗುರು[ಪ್ರೇರಿ]ತಾ[ನ್ತಾ]ನ್ ಸಂದ್ವಿಗ ಗಣತಾನಯಾನ್

೩. ಗಿರಿತಲದಾ ಮೇ[ಗೆ] ತಿರ[ನೆ] ಮೇಲಮ್ಮಾನ್ ತೀರದಾಣಮಾ ಕೋಳಿಯೂರ್ ನೆಲದ ಮಾನದಾನ್

೪. ಸದ್ಧರ್ಮ್ಮದಾ ಗಿಟಿ ಸಸಾನದಿಪ[ಂ*]ತಾನ್

ಈ ಪಾಠದ ಅರ್ಥವನ್ನು ಹೀಗೆ ಹೇಳಬಹುದು:

"ಒಳ್ಳೆಯದಾಗಲಿ. ಇದು ಆದಿ ಉಳಾಡನ್ (ಹಿರಿಯ ಗುರು) ಎನಿಸಿದ (ಗೋ?)ಪಗೋಪಿತನಿಗೆ ಎತ್ತಿಸಿದ ನಿಸಿದಿಗೆ. ಅವನು ಸದ್ಧರ್ಮದ ಮತ್ತು ಸದ್ಗುರುಗಳ ಪ್ರೇರಣೆಯಂತೆ ನಡೆದುಕೊಂಡವನು ಹಾಗೆಯೇ 'ಸಂದ್ವಿಗ ಗಣ' ಎಂಬ ಗಣದ ನಯವನ್ನು ಹೊಂದಿದ್ದವನು. ಈ ಮುನಿ ಇಲ್ಲೇ ಸ್ಥಿರವಾಗಿದ್ದಾನೆ. ಬೆಟ್ಟದ ಈ ನೆತ್ತಿಯ ಮೇಲೇ ಇದ್ದಾನೆ. ಆ ಸಮುದ್ರ ತೀರದ ತಾಣವಾದ ಕೋಳಿಯೂರ್ ಪ್ರದೇಶದ ಗೌರವವನ್ನು ಹೊಂದಿದ್ದವನು. ಇವನು ಸದ್ಧರ್ಮದ ಗಿಳಿ. ಅಷ್ಟೇ ಅಲ್ಲ, (ಜೈನ) ಧರ್ಮ ಶಾಸನದ ಪ್ರಭುವೂ ಆಗಿದ್ದಾನೆ".

ಶಾಸನದ ಲಿಪಿ

ಡಾ. ಮಂಜುನಾಥ್ ಅವರು ಈ ಶಾಸನದ ಕೆಲವು ಅಕ್ಷರಗಳಿಗೆ ಶಾತವಾಹನರ ಮತ್ತು ಆದಿಗಂಗರ ಕಾಲದ ಶಾಸನಗಳ ಅಕ್ಷರಗಳ ಕೆಲವು ಹೋಲಿಕೆಗಳಿವೆ ಎಂದಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಅವರು ಶಾತವಾಹನರ ಕಾಲದ ಲಿಪಿಯಲ್ಲಿಯ ಸ, ತ, ನ ಅಕ್ಷರಗಳ ತ್ರಿಕೋನಾಕಾರದ ತಲೆಕಟ್ಟಿನ ಆಕೃತಿಯನ್ನೂ, ಆದಿ ಗಂಗರ ಲಿಪಿಯ ಕೆಲವು ಅಕ್ಷರಗಳ ಚಿಕ್ಕ ಗೆರೆಯಾಕಾರದ ತಲೆಕಟ್ಟಿನ ಆಕೃತಿಯನ್ನು ಹೋಲಿಕೆಗೆ ತೆಗೆದುಕೊಳ್ಳುತ್ತಾರೆ. ಈ ಕಾರಣದಿಂದ ಈ ಶಾಸನವು ಹಲ್ಮಿಡಿ ಶಾಸನಕ್ಕಿಂತ ೫೦ ವರ್ಷಗಳಷ್ಟು ಹಿಂದಿನದು ಎಂಬ ನಿಲವನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಈ ಶಾಸನ ಕ್ರಿ.ಶ. ಸು. ೪೦೦ರ ಕಾಲದ್ದೆಂಬುದು ಅವರ ಅಭಿಪ್ರಾಯ.

ಅವರು ಹೇಳಿರುವ ಅಕ್ಷರಗಳ ತಲೆಕಟ್ಟುಗಳಿಂದ ತ್ರಿಕೋನಾಕೃತಿ ನಿಯತವಾಗಿಲ್ಲ, ಸ್ಥೂಲವಾಗಿದೆ. ಹೀಗೇ ಈ ಶಾಸನವಿರುವ ಬಂಡೆಯ ಮೇಲೆ ಇನ್ನೂ ಕೆಲವು ಶಾಸನಗಳನ್ನು ಸೂಕ್ಷವಾಗಿ ಪರಿಶೀಲಿಸಿದಾಗ ಉದಾಹರಣೆಗೆ : ನಂ. ೧ (ಕ್ರಿ.ಶ. ೬–೭ನೇ ಶತಮಾನ) [ಎ.ಕೆ. ೨ (ಪರಿಷ್ಕೃತ ಆವೃತ್ತಿ); ೩೪ (ಕಾಲ?), ೩೮(ಕಾಲ?)] ಈ ಶಾಸನಗಳಲ್ಲಿರುವ ಸ, ತ, ನ ಅಕ್ಷರಗಳ ತಲೆಕಟ್ಟುಗಳು ಕೂಡಾ ಸ್ಥೂಲವಾಗಿ ತ್ರಿಕೋನಾಕಾರದಲ್ಲಿರುವುದು ಕಾಣಿಸುತ್ತದೆ. ಇದಲ್ಲದೆ, ಇಲ್ಲಿಯೇ ಬೇರೆಡೆಯಲ್ಲಿರುವ ೮–೯ನೆಯ ಶತಮಾನಗಳ ಶಾಸನಗಳಲ್ಲಿ ಕೂಡಾ ಅದೇ ರೀತಿಯ ತಲೆಕಟ್ಟು ಇರುವುದನ್ನು ನೋಡಬಹುದು. ಇದು ಶಾಸನ ಕೆತ್ತನೆಯ ಕೌಶಲದ ಕೊರತೆಯಿಂದ ಇಲ್ಲವೆ ನೈಸರ್ಗಿಕ ಸವಕಳಿಯ ಕಾರಣದಿಂದ ಆಗಿರಬಹುದು ಅಥವಾ ತಲೆಕಟ್ಟಿನ ಅಡ್ಡ ರೇಖೆಯನ್ನು ಕೆಳಗಿನ ಉದ್ದ ರೇಖೆಗೆ ಕೂಡಿಸಲು ಕೆತ್ತುವಾಗ ಚಕ್ಕಳ ಹಾರಿ ಆ ಆಕಾರ ಬಂದಿರಲೂ ಸಾಧ್ಯ. ಹೀಗಾಗಿ ಈ ಶಾಸನದ ಕಾಲವನ್ನು ನಿರ್ಧರಿಸಲಿಕ್ಕೆ ಅಂಶಗಳನ್ನು ಮುಖ್ಯ ಪ್ರಮಾಣಗಳಾಗಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ.

೧) ಅತಿ ಪ್ರಾಚೀನ ಕನ್ನಡ ಶಾಸನಗಳಲ್ಲಿ 'ಕ' ಮತ್ತು 'ರ' ಅಕ್ಷರಗಳಲ್ಲಿ ಒಂದು ಕಾಣುವ ಮುಖ್ಯ ಅಂಶವೆಂದರೆ ತಲೆಕಟ್ಟಿನಿಂದ ಕೆಳಗೆ ಉದ್ದಕ್ಕೆ ಇಳಿದಗೆರೆ ತರುವಾಯದಲ್ಲಿ ಬಲಕ್ಕೆ ತಿರುಗಿ ಸಮಾನಂತರವಾಗಿ ಮೇಲಕ್ಕೇರುತ್ತದೆ. ಆದರೆ ಅದು ಅಕ್ಷರದ ಮೇಲುಭಾಗಕ್ಕೆ ಅಂದರೆ ತಲೆಕಟ್ಟಿಗೆ ಸ್ಪರ್ಶಿಸದೆ ಒಂದು ಅಂತರದಲ್ಲಿ ಕೊನೆಗೊಂಡಿರುತ್ತದೆ. ಇದು ಹಲ್ಮಿಡಿ, ಬಾದಾಮಿ ಮುಂತಾದ ಕಡೆಯ ಶಾಸನಗಳಲ್ಲಿ ಸ್ಪಷ್ಟವಾಗಿ ಕಾಣುವ ಅಂಶವಾಗಿದೆ. ಇಲ್ಲಿ ಕೊಟ್ಟಿರುವ ಛಾಯಾಚಿತ್ರಗಳಿಂದ ಈ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಆದರೆ ಈ ಅಕ್ಷರ ಲಕ್ಷಣದ ಅಂಶ ಪ್ರಸ್ತುತ ಶಾಸನದಲ್ಲಿ 'ಕ' ಮತ್ತು 'ರ' ಅಕ್ಷರಗಳು ಬರುವ ಯಾವೆಡೆಯಲ್ಲಿಯೂ ಕಾಣುವುದಿಲ್ಲ. ಈ ಅಂಶ ಶಾಸನಯಾವ ಕಾಲಾವಧಿಯದು ಎಂದು ನಿರ್ಧರಿಸಲು ಬಹುಮುಖ್ಯ(ವಾಗಿ ಪರಿಗಣಿಸಬೇಕಾದ) ಅಂಶವಾಗಿದೆ.

೨) ಅತಿ ಪ್ರಾಚೀನ ಶಾಸನಗಳಲ್ಲಲಿ 'ಕ' ಮತ್ತು 'ರ'ಗಳನ್ನು ಬಿಟ್ಟು ಉಳಿದ ಅಕ್ಷರಗಳು ಹೆಚ್ಚಾಗಿ ಲಂಬ ಆಕೃತಿಯಲ್ಲಿ ಕಾಣಸಿಗುತ್ತವೆ. ಆದರೆ ಇಲ್ಲಿ ಎಷ್ಟೋ ಅಕ್ಷರಗಳು ಪೂರ್ಣ ಲಂಬಾಕೃತಿಯಲ್ಲಿಲ್ಲ. ಅಂದರೆ ಲಂಬತ್ವ ಕಡಿಮೆಯಾಗಿ ದುಂಡುತನದತ್ತ ವಾಲುತ್ತಿವೆ. ಆದ್ದರಿಂದ ಇಲ್ಲಿಯ ಲಿಪಿ ಒಂದು ರೀತಿಯಲ್ಲಿ ಸಂಕ್ರಮಣ ಸ್ಥಿತಿಯಲ್ಲಿರುವ ಹಂತದ್ದು ಎನ್ನಬೇಕಾಗಿದೆ. ಒಟ್ಟಾರೆ ಈ ಶಾಸನದ ಲಿಪಿ ಕ್ರಿ.ಶ. ಸು. ೬ನೆಯ ಶತಮಾನದ್ದೆಂದು ಭಾವಿಸಲಾಗಿರುವ ತಮಟಕಲ್ಲು ಶಾಸನದ ಅಕ್ಷರಗಳನ್ನು ಹೋಲುತ್ತದೆ. ಬಹುಮಟ್ಟಿಗೆ ದುಂಡು ಆಕೃತಿಗೆ ಪರಿವರ್ತನೆಗೊಳ್ಳುವ ಹಂತದಲ್ಲಿರುವಂತೆ ಕಾಣುತ್ತದೆ. ಈ ಅಂಶವನ್ನು ಸಹ ಇಲ್ಲಿ ಕೊಟ್ಟಿರುವ ಛಾಯಾಚಿತ್ರಗಳಿಂದ ಸ್ಪಷ್ಟ ಮಾಡಿಕೊಳ್ಳಬಹುದು. ಈ ಅಂಶಕೂಡ ಪ್ರಸ್ತುತ ಶಾಸನದ ಕಾಲಾವಧಿಯನ್ನು ನಿರ್ಧರಿಸಲು ಪೂರಕವಾಗಿದೆ.

ಈ ಮೇಲಿನ ಅಂಶಗಳಿಂದ ಪ್ರಸ್ತುತ ಶಾಸನದ ಲಿಪಿಯ ಅಕ್ಷರಗಳ ಶೈಲಿ ಹಲ್ಮಿಡಿ ಶಾಸನಕ್ಕಿಂತ ಹಿಂದಿನದಲ್ಲ ಅದಕ್ಕಿಂತ ಸು. ೧೦೦–೧೫೦ ವರ್ಷಗಳಷ್ಟು ಈಚಿನದು ಎಂಬುದು ವ್ಯಕ್ತಪಡುತ್ತದೆ. ಜೊತೆಗೆ ಶಾತವಾಹನ ಮತ್ತು ಗಂಗರ ಕಾಲದ ಲಿಪಿಯ ವೈಲಕ್ಷಣ್ಯಗಳು ಇವೆ ಎಂದು ಹೇಳಿರುವುದು ಸಮರ್ಥನಿಯವಾಗಿ ಕಾಣಿಸುವುದಿಲ್ಲ.

ಶಾಸನ ಪಾಠದಲ್ಲಿ ಪ್ರಾಕೃತ ಶಬ್ದಗಳಿವೆಯೆ?

ಡಾ. ಎಂ.ಜಿ. ಮಂಜುನಾಥ್ ಅವರು ತಮ್ಮ ನಿಲವಿನ ಸಮರ್ಥನೆಗೆ ಶಾಸನದ ಭಾಷೆಯನ್ನು ಒಂದು ಮೂಲಾಧಾರಾವಾಗಿ ಪರಿಗಣಿಸುತ್ತಾರೆ. ಈ ಶಾಸನದೊಳಗಿನ ಭಾಷೆಯನ್ನು ಅವರು ಪೂರ್ವದ ಹಳಗನ್ನಡ, ಸಂಸ್ಕೃತ ಮತ್ತು ಪ್ರಾಕೃತ ಈ ಮೂರು ಭಾಷೆಗಳ ಮಿಶ್ರಣ ಎಂದು ಹೇಳುತ್ತಾರೆ. ಇದರೊಳಗೆ ಬರುವ 'ದಮ್ಮ', 'ಸಸಾನು', 'ನಿಸಿದಿಗೆ' ಮತ್ತು 'ದಾಣ' ಇವು ಪ್ರಾಕೃತ ಶಬ್ದಗಳೆಂದೂ ಅವುಗಳಲ್ಲಿ 'ದಮ್ಮ' ಎಂಬುದು ಎರಡು ಬಾರಿ ಉಳಿದವು ಒಂದೊಂದು ಬಾರಿ ಬಂದಿರುವುದಾಗಿ ಸಹ ಹೇಳಿದ್ದಾರೆ.

೧. ಈ ಮೇಲಿನಂತೆ ಅವರು ಹೇಳಿದ ನಾಲ್ಕು ಶಬ್ದಗಳಲ್ಲಿ ದಮ್ಮ ಎಂಬುದು ಇಲ್ಲಿದ್ದರೆ ಅದೊಂದು ಮಾತ್ರ ಪ್ರಾಕೃತ ಶಬ್ದ ಆಗಬಹುದಿತ್ತು. ಏಕೆಂದರೆ ಸಂಸ್ಕೃತದ 'ಧರ್ಮ' ಎಂಬುದಕ್ಕೆ 'ದಮ್ಮ' ಎಂಬುದು ಪ್ರಾಕೃತ ಶಬ್ದರೂಪ ಎಂಬುದು ಈಗ ಸುಪರಿಚಿತವಿರುವ ಸಂಗತಿ. ಇಲ್ಲದ್ದರೆ ಅದೊಂದು ಮಾತ್ರ ಪ್ರಾಕೃತ ಶಬ್ದ ಆದರೆ ಶಾಸನವನ್ನು ಪ್ರತ್ಯಕ್ಷ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರಲ್ಲಿರುವುದು 'ದಮ್ಮ' ಶಬ್ದವಲ್ಲ 'ಧರ್ಮ್ಮ' ಎಂಬುದು ಗೋಚರಿಸುತ್ತದೆ. ಏಕೆಂದರೆ ಧರ್ಮ ಶಬ್ದದ ಮೇಲೆ ಅರ್ಕಾವೊತ್ತನ್ನು ಸೂಚಿಸುವ ಗೆರೆ 'ಮ್ಮ' ಅಕ್ಷರದ ಮೇಲೆ ಇರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು.

೨. 'ದಾಣ' ಎಂಬುದು ಕೂಡ ಅವರು ಹೇಳಿರುವಂತೆ ಪ್ರಾಕೃತ ಭಾಷೆಯ ಶಬ್ದಅಲ್ಲ. ಸಂಸ್ಕೃತದ 'ಸ್ಥಾನ' ಎಂಬುದಕ್ಕೆ ಪ್ರಾಕೃತದಲ್ಲಿ 'ಠಾಣ' ಎಂಬುದು ಬಂದರೆ, ಕನ್ನಡದಲ್ಲಿ ಅದು 'ತಾಣ' ಆಗುತ್ತದೆ. (ತದ್ಭವವಾಗಿ) ಸಂಧಿ ಸಮಾಸ ಸಂದರ್ಭಗಳಲ್ಲಿ ಮಾತ್ರ ಕನ್ನಡದ 'ತಾಣ' ಎಂಬುದರ 'ತ' ಕಾರಕ್ಕೆ 'ದ'ಕಾರ ಆದೇಶವಾಗಿ 'ದಾಣ' ಎಂಬ ರೂಪ ಪಡೆಯುತ್ತದೆ. ಉದಾಹರಣೆಗೆ, ನಿಲ್+ತಾಣ=ನಿಲ್ದಾಣ; ಉಸಿರ್+ತಾಣ=ಉಸಿರ್ದಾಣ.

೩. ಕ್ರಿ.ಶ. ಎರಡನೇ ಶತಮಾನದ ಖಾರವೇಲನ ಹಾಥಿಗುಂಫ ಶಾಸನದಲ್ಲಿ ಬರುವ 'ನಿಸಿಹಿಯಾ' ಎಂಬ ಪ್ರಾಕೃತ ಶಬ್ದದಿಂದ ಕನ್ನಡದ 'ನಿಸಿದಿಗೆ' ಎಂಬ ಪದವು ನಿಷ್ಪನ್ನವಾಗಿದೆಯೆಂದು ಮುಂತಾಗಿ ಅವರು ಹೇಳಿದ್ದಾರೆ. ಪ್ರಸ್ತುತ ಶಾಸನದಲ್ಲಿ 'ನಿಸಿಹಿಯಾ' ಎಂಬ ಪ್ರಾಕೃತ ಶಬ್ದ ಇರದೆ ಅದರ ಕನ್ನಡ ರೂಪ 'ನಿಸಿದಿಗೆ' ಎಂಬುದು ಮಾತ್ರ ಇದೆ. ಇದರಿಂದ ಡಾ. ಮಂಜುನಾಥ್ ಹೇಳುವಂತೆ 'ನಿಸಿದಿಗೆ' ಎಂಬುದು ಪ್ರಾಕೃತ ಶಬ್ದವಾಗುವುದಿಲ್ಲ. ಬದಲಿಗೆ ಅದರಿಂದ ತದ್ಭವಗೊಂಡ ಕನ್ನಡ ಶಬ್ದವೇ ಆಗುತ್ತದೆ.

ಹಾಥಿಗುಂಫ ಶಾಸನವು ಕ್ರಿ.ಶ. ಎರಡನೇ ಶತಮಾನದ್ದಲ್ಲ, ಕ್ರಿ.ಶ. ೧ನೇ ಶತಮಾನದ್ದು. ಅಲ್ಲದೆ, ಕೆಲವು ವಿದ್ವಾಂಸರು 'ನಿಸಿಹಿಯಾ' ಎಂಬುದರ ಬದಲಿಗೆ 'ನಿಸಿದಿಯಾ' ಎಂದೂ ಓದಿದ್ದಾರೆ. ಆದ್ದರಿಂದ ಬಹುಮಟ್ಟಿಗೆ ಅದೇ ಸಮರ್ಪಕ ಪಾಠ ಎನಿಸುತ್ತದೆ.

೪. 'ಸಸಾನು' ಎಂಬುದು ಬೆಟ್ಟದ ತಲಭಾಗ ಎಂದು ಅವರು ವಿವರಿಸಿದ್ದಾರೆ. ಇದೂ ಸಮರ್ಪಕವಲ್ಲ. ಅಷ್ಟೇ ಅಲ್ಲ, 'ಸಸಾನು' ಎಂಬುದು ಕೂಡ ಪ್ರಾಕೃತ ಶಬ್ದವಲ್ಲ ಮತ್ತು ಅದರ ಅರ್ಥವಿವರಣೆಯೂ ಸಮರ್ಪಕವಲ್ಲ. ಏಕೆಂದರೆ 'ಸಾನು' ಎಂಬುದು ಸಂಸ್ಕೃತ ಪದವಾಗಿದ್ದು ಅದಕ್ಕೆ ಬೆಟ್ಟದ ತಲಭಾಗ ಎಂದು ಅರ್ಥವಿರುವುದು ನಿಜ. ಆದರೆ, 'ಸಸಾನು' ಎಂಬಲ್ಲಿ ಸಾನು ಸಹಿತವಾದದ್ದು ಎಂದು ಅರ್ಥವಾಗುತ್ತದೆ. ಹಾಗಾಗಿ 'ಸಸಾನು' ಎಂಬುದು ಯಾವ ಕಾರಣಕ್ಕೂ ಪ್ರಾಕೃತ ಶಬ್ದ ಆಗುವುದಿಲ್ಲ.

೫. ಡಾ. ಎಂ.ಜಿ. ಮಂಜುನಾಥ್ ಅವರು ಹೇಳುವಂತೆ ಈ ಶಾಸನದಲ್ಲಿ ಯಾವ ಪ್ರಾಕೃತ ಪದವೂ ಇಲ್ಲ. ಜೊತೆಗೆ ಇಲ್ಲಿಯ ಲಿಪಿ ಶಾತವಾಹನ ಕಾಲದ ಲಿಪಿಯ ರೀತಿಯಲ್ಲೂ ಇಲ್ಲ. ಇದರಿಂದ ಈ ಶಾಸನದ ಕಾಲವನ್ನು ಹಲ್ಮಿಡಿ ಶಾಸನಕ್ಕಿಂತ ಹಿಂದಕ್ಕೆ ತೆಗೆದುಕೊಂಡು ಹೋಗಲು ಈ ಮೇಲಿನ ಯಾವ ಅಂಶಗಳೂ ಪೂರಕವಾಗಿಲ್ಲ.

'ಗುಣಭೂಷಿತ' ಎಂಬ ಹೆಸರು ಇದೆಯೆ?

ಹಿಂದೆಯೇ ಹೇಳಿದಂತೆ ಶಾಸನ ಲಿಪಿಯನ್ನು ಸೂಕ್ಷ್ಮವಾಗಿ ನೋಡಿದಾಗ ಅದರಲ್ಲಿ ಗುಣಭೂಷಿತ ಎಂಬ ಹೆಸರಿನ ಪಾಠ ಕಾಣಿಸುವುದಿಲ್ಲ. ಏಕೆಂದರೆ ಆ ಹೆಸರಿನ ಅಕ್ಷರಗಳ ಯಾವ ರೇಖೆಯಾಗಲಿ, ರೇಖಾವಶೇಷವಾಗಲಿ ಕಾಣಿಸುವುದಿಲ್ಲ. ಅಲ್ಲಿ ಇರುವ ಪಾಠ ಎಂದರೆ 'ಪಗೋಪಿತ' ಎಂದು ಮಾತ್ರ. ಅಂದರೆ ಇದರ ಆರಂಭದ ಅಕ್ಷರ ಬಹುತೇಕ ನಷ್ಟವಾಗಿದೆ. ಇದಕ್ಕೆ ಕಾರಣ ಹಿಂದೆ ಹೇಳಿದಂತೆ ಇಲ್ಲಿಯ ಕಲ್ಲಿನ ಚಕ್ಕಳ ಉದುರಿ ಗುಳಿಯಾಗಿರುವುದು. 'ಸ್ವಸ್ತಿಶ್ರೀ' ಮತ್ತು 'ಪಗೋಪಿತ' ಇವುಗಳ ಮಧ್ಯೆ ಒಂದೇ ಒಂದು ಅಕ್ಷರ ತುಂಬುವಷ್ಟು ಮಾತ್ರ ಸ್ಥಳಾವಕಾಶವಿರುವುದನ್ನು ಗಮನಿಸಬಹುದು. ಹಿಂದಿನ ಕಾಲದಲ್ಲಿ 'ಗೋಪಯಿತ', ಗೋಪಿತ' 'ಗುಪಿತ' ಮತ್ತು 'ಗುಪ್ತ' ಎಂದು ಕೊನೆಯಾಗುವ ಪುರುಷನಾಮಗಳು ಬಳಕೆಯಲ್ಲಿದ್ದವು. ಅವುಗಳ ಅರ್ಥ 'ರಕ್ಷಿತ' ಎಂದಿದ್ದು ಇಲ್ಲಿ ಹೆಸರಿನ ಕಡೆಯ ಭಾಗ 'ಗೋಪಿತ' ಎಂದಿರುವುದು, ಹೆಸರಿನ ಆರಂಭದ ಭಾಗ ಎರಡು ಅಕ್ಷರಗಳನ್ನು ಹೊಂದಿದ್ದು ಮೊದಲನೆಯದು ನಷ್ಟಾಕ್ಷರವಾಗಿದ್ದರೆ ಎರಡನೆಯದ್ದು 'ಪ' ಅಕ್ಷರವಾಗಿದೆ. 'ಪ'ದಿಂದ ಕೊನೆಯಾಗುವ ಎರಡು ಅಕ್ಷರಗಳ ಪದಗಳಿಗಾಗಿ ಹುಡುಕಿದಾಗ ಅದು ದೀಪ, ಗೋಪ, ನೀಪ, ರೂಪ, ಉಪ– ಮುಂತಾಗಿ ಯಾವುದಾದರೊಂದು ಪದ ಆಗಿರಬಹುದೆನಿಸುತ್ತದೆ. ಹೀಗಾಗಿ ಇಲ್ಲಿರುವ ಒಟ್ಟು ಹೆಸರು ಗೋಪಗೋಪಿತ ಅಥವ ಉಪಗೋಪಿತ ಇದ್ದಿರಬಹುದೆನಿಸುತ್ತದೆ. ಸದ್ಯಕ್ಕೆ ಇಲ್ಲಿಯ ಹೆಸರನ್ನು ಗೋಪಗೋಪಿತ ಎಂದು ಇಟ್ಟುಕೊಳ್ಳಲಾಗಿದೆ.

ಆದ್ದರಿಂದ ಇಲ್ಲಿರುವ ನಿಸಿದಿಗೆ ಸ್ಮಾರಕವನ್ನು ಎತ್ತಿಸಿದವನು ಈಗಾಗಲೆ ವಿದ್ವಾಂಸರು ಭಾವಿಸಿರುವಂತೆ ಗುಣಭೂಷಿತನೂ ಅಲ್ಲ ಅಥವಾ ಆದಿಉಳಾಡನೂ ಅಲ್ಲ. ಅಲ್ಲಿಯ ನಿಸದಿ ಸ್ಮಾರಕ ಎತ್ತಿಸಿದ್ದು ಗೋಪಗೋಪಿತನಿಗಾಗಿ. ಇಲ್ಲಿಯ ನಿಸಿದಿಗೆ ಎತ್ತರಿಸಲ್ಪಟ್ಟದ್ದು ಎಂಬ ಹೇಳಿಕೆಯಿಂದ ಅದು ಎದ್ದು ಕಾಣುವಂತೆ ನಿರ್ಮಿಸಲಾದ ಒಂದು ಸ್ಮಾರಕವಾಗಿದ್ದು, ಅನಂತರ ಕಾಲದಲ್ಲಿ ಅದು ಹಾಳಾಗಿಹೋಗಿತ್ತೆಂದು ತಿಳಿಯಬೇಕಾಗುತ್ತದೆ.

'ಸಾದ್ವಿಗ ಗಣತನಯನ್' ಸರಿಯೆ? 'ಸಂದ್ವಿಗಗಣತಾನಯಾನ್' ಸರಿಯೆ?

ನಿಸದಿಗೆಯನ್ನು ರಚಿಸಲಾದ ವ್ಯಕ್ತಿ ಸದ್ಧರ್ಮ್ಮದ ಅನುಯಾಯಿ ಮತ್ತು ಆ ಗುರುಗಳ ಉಪದೇಶದಂತೆ ನಡೆದುಕೊಂಡವನು ಎಂದು ಹೇಳುತ್ತಾ ಅವನು ಸಂದ್ವಿಗ ಗಣದ ನಯದವನು ಎಂದು ಶಾಸನ ಹೇಳುತ್ತದೆ. ಗಣ ಎಂಬ ಮಾತು ಇಲ್ಲಿರುವುದರಿಂದ ಇದು ಸ್ಪಷ್ಟವಾಗಿ ವ್ಯಕ್ತಿಯ ಹೆಸರಾಗಿಲ್ಲ. ಅಂದರೆ ರೈಸ್ ಅವರು ತಿಳಿದಂತೆ 'ಸಾದ್ವಿಗ ಗಣ' ಎಂಬುದು ಒಬ್ಬ ವ್ಯಕ್ತಿಯ ಹೆಸರಲ್ಲ. ನಿಸದಿಯನ್ನು ಮಾಡಲಾದ ವ್ಯಕ್ತಿ 'ಸಾದ್ವಿಗ ಗಣನ ತನಯ' ಎಂದು ಅವರು ಅರ್ಥೈಸಿರುವುದು ಕೂಡಾ ಸಮಂಜಸವಲ್ಲ.'ಸಂದ್ವಿಗ' ಎಂಬ ಹೆಸರಿನ ಒಂದು ಗಣ ಬಹು ಹಿಂದೆ ಪ್ರಚಲಿತದಲ್ಲಿದ್ದು ಆಮೇಲೆ ಅದು ಕಣ್ಮರೆಯಾಗಿರುವಂತೆ ಕಾಣುತ್ತದೆ. ಈ ಗಣದ ಉಲ್ಲೇಖ ಈ ಶಾಸನ ಬಿಟ್ಟರೆ ಬೇರೆಲ್ಲೂ ಕಾಣಸಿಗುವುದಿಲ್ಲ. ರೈಸ್ ಅವರು ಓದಿದ್ದ'ಸಾದ್ವಿಗ ಗಣ' ಎಂಬುದರ ಬದಲಿಗೆ ಆರ್. ನರಸಿಂಹಾಚಾರ್ ಅವರು 'ಸಂದ್ವಿಗ ಗಣ' ಎಂದು ಓದಿದ್ದು ಸಮಂಜಸವಾಗಿದೆ. ಶಾಸನದಲ್ಲಿ 'ಸ' ಅಕ್ಷರದ ತಲೆಕಟ್ಟಿನ ಮೇಲೆ ಅನುಸ್ವಾರ ಸೂಚಕವಾಗಿ ಒಂದು ಚುಕ್ಕಿ ಸ್ಪಷ್ಟವಾಗಿ ಇರುವುದು ಅಲ್ಲಿಯ ಅಕ್ಷರ 'ಸಂ' ಎಂಬುದನ್ನು ನಿಶ್ಚಿತಪಡಿಸುತ್ತದೆ. ಆದ್ದರಿಂದ ಇಲ್ಲಿರುವುದು 'ಸಂದ್ವಿಗ ಗಣ' ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಸದ್ಧಮ್ಮ ಗುರು ಸಂತಾನಾನ್..... ಪಾಠ ಇದೆಯೇ?

ಈ ಶಾಸನದ ೨ನೇ ಸಾಲಿನ ಆರಂಭದಲ್ಲಿ ಬರುವ ಪದಪುಂಜವನ್ನು 'ಸದ್ಧಮ್ಮ ಗುರು ಸಂತಾನಾನ್' ಮತ್ತು 'ಸದ್ಧಮ್ಮ ಗುರು ಸೇವಿತಾನ್' ಎಂದು ಶಾಸನ ತಜ್ಞರು ಓದಿರುತ್ತಾರೆ. ಆದರೆ ಅವರೇ ಇಲ್ಲಿ 'ಮ್ಮ' ಎಂಬ ಅಕ್ಷರದ ಮೇಲೆ ಅರ್ಕಾವೊತ್ತಿನ ಓರೆ ಗೆರೆ ಇರುವುದನ್ನು ಸರಿಯಾಗಿ ಗಮನಿಸದೆ ಮಾಡಿದ ಓದಿಕೆಯಾಗಿವೆ. ಆದ್ದರಿಂದ ಇಲ್ಲಿರುವ ಪದ 'ಸದ್ಧಮ್ಮ ಅಲ್ಲ, 'ಸದ್ಧರ್ಮ' ಎಂದು. ಇದಲ್ಲದೆ 'ಸದ್ಧರ್ಮ ಗುರು' ಎಂಬುದರ ಮುಂದೆ ಇರುವ ೨ ಅಕ್ಷರಗಳು ಪೂರ್ಣ ಪ್ರಮಾಣದಲ್ಲಿ ಉಳಿದಿಲ್ಲ. ಆದರೆ ಆ ಅಕ್ಷರಗಳ ರೇಖಾಭಾಗಗಳಂತೂ ಉಳಿದಿವೆ. ಅವನ್ನು ಗಮನಿಸಿದರೆ, ಮೊದಲ ಅಕ್ಷರ ಎತ್ವ ಚಿಹ್ನೆ ಇರುವ, ಕೆಳಗೆ ರ ಕಾರದ ಒತ್ತು ಇರುವ, ಪ ಅಕ್ಷರದಂತೆ ಅಂದರೆ 'ಪ್ರೇ' ಇರುವಂತೆ ಕಾಣುತ್ತದೆ. ಮುಂದಿನ ಅಕ್ಷರ ಇತ್ವ ಚಿಹ್ನೆ ಇರುವ, ರ ಕಾರ ಅಂದರೆ 'ರಿ' ಇರುವಂತೆ ಕಾಣುತ್ತದೆ. ಹೀಗಾಗಿ ಇಲ್ಲಿರುವ ಪಾಠ 'ಪ್ರೇರಿತಾ[ನ್ತಾ]ನ್' ಎಂದಿದೆಯೇ ಹೊರತು 'ಸಂತಾನಾನ್' ಎಂದಾಗಲಿ 'ಸೇವಿತಾನ್' ಎಂದಾಗಲಿ ಅಲ್ಲ. ಏಕೆಂದರೆ ಆ ಶಬ್ದಗಳಾಗಲಿಕ್ಕೆ ಬೇಕಾದ ಅಕ್ಷರಗಳಾಗಲಿ, ಅಕ್ಷರದ ಕುರುಹುಗಳಾಗಲಿ ಇಲ್ಲಿ ಇಲ್ಲವೇ ಇಲ್ಲ. ಆದ್ದರಿಂದ ಇಲ್ಲಿಯ ಪದಸಮುಚ್ಚಯದ ಒಟ್ಟು ಅರ್ಥ: 'ಉತ್ತಮ ಧರ್ಮ ಹಾಗೂ ಉತ್ತಮ ಗುರುಗಳಿಂದ ಪ್ರೇರಣೆ ಪಡೆದವನು' ಎಂದಾಗುತ್ತದೆ.

ಇಲ್ಲಿ ಇನ್ನೊಂದು ವಿವರಣೆ ಅವಶ್ಯಕವೆನಿಸುತ್ತದೆ. ಈ ಶಾಸನದಲ್ಲಿ ನಿಸದಿಯ ಮುನಿಯನ್ನು ವಿಶೇಷಿಸುವ ಎಲ್ಲಾ ಪದಗಳೂ ಪ್ರಥಮಾ ವಿಭಕ್ತಿಯಲ್ಲಿವೆ. ಹಾಗಾಗಿ ಇಲ್ಲಿ ಕೂಡಾ ಪ್ರಥಮಾ ವಿಭಕ್ತಿಯೇ ಇರಬೇಕಿದ್ದರೆ ಇಲ್ಲಿಯ ಪದಸಮುಚ್ಚಯದ ಪಾಠ 'ಸದ್ಧರ್ಮ್ಮ ಗುರು ಪ್ರೇರಿತಾ[ನ್ತಾ]ನ್' ಎಂದಿರಬೇಕಾಗಿತ್ತು. ಶಾಸನ ಪಾಠವನ್ನು ಲಿಪಿಕಾರ ಬರೆದುಕೊಡುವಲ್ಲಿ ಇಲ್ಲವೆ ಕಂಡರಣೆಕಾರ ಇದನ್ನು ಕೊರೆಯುವಲ್ಲಿ ಕೆಳಗೆ ಇರಬೇಕಿದ್ದ 'ತ'ದ ಒತ್ತು ಬಿಟ್ಟು ಹೋಗಿ 'ಸದ್ಧರ್ಮ್ಮ ಗುರು ಪ್ರೇರಿತಾನಾನ್' ಎಂದು ಆಗಿರುವಂತೆ ಕಾಣುತ್ತದೆ. ಹಾಗಿದ್ದರೆ ಅದು 'ದ್ವಿತೀಯಾ ವಿಭಕ್ತಿಯ ಪದವಾಗಿ ಅರ್ಥಸಾಮಂಜಸ್ಯಕ್ಕೆ ವ್ಯತ್ಯಯ ಉಂಟಾಗುತ್ತದೆ. ಹಾಗಾಗಿ ಇಲ್ಲಿಯ ಪದಸಮುಚ್ಚಯವನ್ನು 'ಸದ್ಧರ್ಮ್ಮ ಗುರು ಪ್ರೇರಿತಾ[ನ್ತಾ]ನ್' ಎಂದಿಟ್ಟುಕೊಳ್ಳಬಹುದೆನಿಸುತ್ತದೆ.

ಗಿರಿತಲದಾ ಮೇಗೆ ತಿರನೀಮೇಲಮ್ಮಾನ್ = ?

ಶಾಸನದ ಮೂರನೆಯ ಪಂಕ್ತಿಯನ್ನು ನೋಡಿದಾಗ, ಅದರಲ್ಲಿ ಎರಡು ಕಡೆ ಅಕ್ಷರಗಳು ಸವೆದ ಸ್ಥಿತಿಯಲ್ಲಿರುವುದು ಕಾಣುತ್ತದೆ. ಆದರೆ ಅವು ಏನಿರಬಹುದೆಂದು ಅಲ್ಲಿ ಉಳಿದಿರುವ ಅಕ್ಷರದ ಗೆರೆಗಳ ಸುಳಿವಿನಿಂದ ನಿಶ್ಚಯಿಸಬಹುದಾಗಿದೆ. ಇಲ್ಲಿಯ ಕೆಲವು ಅಕ್ಷರಗಳನ್ನು ಈ ಹಿಂದೆ ಈ ಶಾಸನದ ಪಾಠ ಕೊಟ್ಟಿರುವವರು–ಅಕ್ಷರದ ಗೆರೆಗಳನ್ನು ಸೂಕ್ಷ್ಮವಾಗಿ ಗಮನಿಸದೆ– ಒಂದೊಂದು ರೀತಿಯಲ್ಲಿ ಓದಿರುತ್ತಾರೆ. ಆದರೆ ಅಲ್ಲೆಲ್ಲೂ ಅಕ್ಷರಗಳು ಪೂರ್ಣ ನಷ್ಟವಾಗಿರುವ ಹಾಗೆ ಕಾಣುವುದಿಲ್ಲ. ಈ ಎಲ್ಲಾ ಅಂಶಗಳನ್ನು ಮನಸಿನಲ್ಲಿಟ್ಟುಕೊಂಡು. ಈ ಶಾಸನದ ಮೂರನೆಯ ಪಂಕ್ತಿಯನ್ನು ಓದಿದಾಗ ಅದು ಈ ರೀತಿಯಲ್ಲಿರುವುದು ಕಾಣಿಸುತ್ತದೆ. ಈ ನಿಸದಿ ಶಾಸನ ಹಾಕಿಸಲಾದ ಮುನಿಯ ಬಗ್ಗೆ ಇನ್ನಷ್ಟು ಹೆಚ್ಚಿನ ವಿವರವನ್ನು ಈ ಸಾಲು ಕೊಡುತ್ತದೆ. ಆ ಮುನಿ ಗಿರಿತಲದ ಮೇಗೆ ಸ್ಥಿರವಾಗಿದ್ದಾನೆ ಎನ್ನುವುದನ್ನು 'ಗಿರಿತಲದಾ ಮೇಗೆ ತಿರನ್' ಎಂಬ ಉಕ್ತಿಯಿಂದ ಸೂಚಿಸಿರುವುದು ವ್ಯಕ್ತವಾಗುತ್ತದೆ. ಅದಷ್ಟೆ ಅಲ್ಲ,'ಈಮೇಲಮ್ಮಾನ್' (ಈಮೇಲೆ+ಅಮ್ಮಾನ್) ಎಂದರೆ 'ಗಿರಿಯ ಈ ನೆತ್ತಿಯ ಮೇಲೆಯೇ ಸ್ವಾಮಿ ಇದ್ದಾನೆ' ಎಂದು. ಹೀಗೆ ಹೆಚ್ಚಿನ ಮತ್ತೊಂದು ವಾಕ್ಯದಿಂದ ಹಿಂದಿನ ವಾಕ್ಯಾರ್ಥವನ್ನು ಪುಷ್ಟೀಕರಿಸಲಾಗಿದೆ. ಈ ಸಾಲಿನ ಮುಂದಿನ ಭಾಗದಲ್ಲಿ 'ತೀರದ ತಾಣವಾದ ಆ ಕೋಳಿಯೂರ

ಪ್ರದೇಶದ ಗೌರವವನ್ನು ಹೊಂದಿದ್ದವನು' ಎಂಬುದನ್ನು 'ಆ ತೀರದಾಣಂ ಆ ಕೋಳಿಯೂರ್ ನೆಲದ ಮಾನದಾನ್' ಎಂಬ ಒಕ್ಕಣೆಯಿಂದ ಸೂಚಿಸಲಾಗಿದೆ. ಸಾಲಿನ ಈ ಭಾಗದ ಮರುಓದಿಕೆಯಿಂದ ಕೋಳಿಯೂರ್ ಎಂಬ ಊರೊಂದರ ಹೆಸರು ಹೊಸದಾಗಿ ತಿಳಿದುಬರುವುದಲ್ಲದೆ ನಿಸದಿ ನಿರ್ಮಿಸಲ್ಪಟ್ಟ ಈ ಮುನಿಆ ಊರಿನ ಪ್ರದೇಶದವನು ಮತ್ತು ಅಲ್ಲಿ ಜನರ ಮನ್ನಣೆಗೆ ಪಾತ್ರನಾಗಿದ್ದವನು ಎಂಬ ಸಂಗತಿ ಹೊಸದಾಗಿ ತಿಳಿದುಬರುತ್ತದೆ. ಈ ಬಗ್ಗೆ ಹೆಚ್ಚಿನ ವಿವರ ಮುಂದೆ ಬರುತ್ತದೆ.

ಶ್ರ.ಬೆ.ದ ಚಿಕ್ಕ ಬೆಟ್ಟದ ಮೇಲಿನ ಅನೇಕ ನಿಸದಿ ಶಾಸನಗಳಲ್ಲಿ ಮುನಿಗಳನ್ನು ಅವರು ಬಂದ ಊರುಗಳ ಹೆಸರಿನಿಂದ ಕರೆಯಲಾಗಿದೆ. ಪುಣ್ಯಕ್ಷೇತ್ರಗಳೆಂದು ಹೆಸರಾಗಿರುವ ಸ್ಥಳಗಳಲ್ಲಿ ಮರಣಹೊಂದುವುದು ಅತ್ಯಂತ ಪುಣ್ಯದ ಸಂಗತಿ ಎನ್ನುವುದು ಭಾರತೀಯರ ಸಾಮಾನ್ಯ ನಂಬಿಕೆ. ಶ್ರ.ಬೆ. ಒಂದು ಪವಿತ್ರ ಸ್ಥಳ ಎಂದು ಜೈನರು ಅನೇಕರು ನಂಬಿದ್ದರಿಂದ ಅಲ್ಲಿಗೆ ಬಂದು ತಮ್ಮ ಕಡೆಯ ದಿನಗಳನ್ನು ಕಳೆಯಬೇಕೆಂದು ಆಶಿಸುತ್ತಿದ್ದರು. ಈ ಬೆಟ್ಟ ಪವಿತ್ರ ತಾಣ ಎನಿಸಿದರೆ ಅದರ ಮೇಲುಭಾಗ ಅದಕ್ಕೂ ಹೆಚ್ಚಿನ ಪವಿತ್ರ ತಾಣವೆನಿಸಿತ್ತು. ಇದು ಇಲ್ಲಿಯ ಕ್ರಿ.ಶ. ೬–೮ನೇ ಶತಮಾನದವರೆಗಿನ ಅನೇಕ ಶಾಸನಗಳಲ್ಲಿ ಸ್ಪಷ್ಟವಾಗಿ ಸೂಚಿತವಾಗಿದೆ. ಮುನಿಗಳು ಈ ಬೆಟ್ಟವನ್ನು ಏರಿದರು; ಅದರ ನೆತ್ತಿಯ ಭಾಗಕ್ಕೆ ಹೋದರು; ಅಲ್ಲಿ ಕಠೋರ ವ್ರತಗಳನ್ನೂ ಧ್ಯಾನ ತಪಸ್ಸುಗಳನ್ನೂ ಮಾಡಿದರು–ಎಂದು ಅನೇಕ ಶಾಸನಗಳು ಹೇಳುತ್ತವೆ (ಕ್ರ.ಸಂ. ೧, ೧೪, ೨೫, ೩೧, ೩೪, ೮೫, ೮೬, ೮೭, ೮೯, ೯೦, ೯೪, ೧೦೮, ೧೧೦, ೧೧೨, ೧೧೩, ೧೨೨, ೧೨೩, ೧೩೨ ಇತ್ಯಾದಿ). ಇದೇ ರೀತಿ ಈ ಶಾಸನದ ಮುನಿ ಕಠೋರ ವ್ರತವನ್ನು ಪಾಲಿಸುವುದಕ್ಕೆ ಈ ಬೆಟ್ಟದ ನೆತ್ತಿಯ ಮೇಲೆ ಬಂದು ಸಮಾಧಿ ಮರಣ ಹೊಂದಿರುವುದರಿಂದ ಶಾಸನ 'ಅವನು ಇಲ್ಲೇ ಸ್ಥಿರವಾಗಿದ್ದಾನೆ, ಈ ಬೆಟ್ಟದ ನೆತ್ತಿಯ ಮೇಲೆಯೆ' ಎಂದು ಉಗ್ಗಡಿಸುತ್ತದೆ.

ಸದ್ಧರ್ಮ್ಮದಾಗಿಟಿ = ?

'ಸದ್ಧರ್ಮ್ಮದಾ ಗಿಟಿ' ಎಂಬುದು ಒಂದು ರೂಪಕವಾಗಿದ್ದು ಅದು ಈ ನಿಸದಿ ಶಾಸನದ ಮುನಿಯನ್ನು ಸದ್ಧರ್ಮ್ಮದ ಗಿಳಿ ಎಂದು ವಿಶೇಷಿಸಿದೆ. ಗಿಳಿಯು ಕಲಿಸಿಕೊಟ್ಟ ಶಬ್ದಗಳನ್ನು ಪುನರುಚ್ಚರಿಸುವ ಕೆಲಸವನ್ನು ಮಾಡುತ್ತದೆ. ಆದರೆ ಅದುತನಗೆ ಕಲಿಸಿದ ಶಬ್ದಗಳನ್ನು ಬಿಟ್ಟು ಬೇರೆಯ ಶಬ್ದಗಳನ್ನು ಹೇಳುವುದಿಲ್ಲ; ಹಾಗೇ ಬೇರೆಯ ಶಬ್ದಗಳನ್ನು ಸೇರಿಸುವುದೂ ಇಲ್ಲ. ಹಾಗೆಂದೇ ಈ ನಿಸದಿಯ ಮುನಿಯಾದ –. ಗೋಪಿತನು ಸದ್ಧರ್ಮ್ಮದ ಉಪದೇಶದಂತೆ ನಡೆದವನಷ್ಟೇ ಅಲ್ಲ, ಅದನ್ನೇ ಬೋಧಿಸಿದವನು ಕೂಡಾ ಎಂದು ಸೂಚಿಸುವಂತೆ ಅವನನ್ನು ಶಾಸನಕಾರ 'ಸದ್ಧರ್ಮ್ಮದಾ ಗಿಟಿ' ಎಂದು ವಿಶೇಷಿಸಿದ್ದಾನೆ.

ಸಸಾನದಿಪತಾನ್ = ?

ಈ ಮೇಲಿನ ಸಂದರ್ಭದಲ್ಲಿ 'ಸಸಾನು' ಎಂಬುದು 'ಶಾಸನ' ಎಂಬುದಕ್ಕೆ ಒಂದು ಅಪಲಿಖಿತ ಅಥವಾ ಅಪಕೆತ್ತನೆ ಇರಬೇಕೆನಿಸುತ್ತದೆ. ಕೆಲವು ಶಾಸನಗಳಲ್ಲಿ ಶಾಸನ ಎಂಬುದನ್ನು ಸಾಸನ, ಸಸಾನ ಎಂಬುದಾಗಿ ಕೆತ್ತಿರುವುದುಂಟು. ಉದಾ: ಶ್ರ.ಬೆ.ದ ಒಂದು ಶಾಸನದಲ್ಲಿ (೧೭೭ ನಂ. ೧೨ನೇ ಶತಮಾನ) 'ಶಾಸನಂ ಜಿನಶಾಸನಂ' ಎಂಬುದಕ್ಕೆ 'ಸಾಸನಂ ಜಿನ ಸಸಾನಂ' ಎಂದು ಬರೆಯಲಾಗಿದೆ. ಅನೇಕ ಶಾಸನಗಳಲ್ಲಿ ಕೆಲವು ಶಬ್ದಗಳನ್ನು ದೀರ್ಘ, ಹ್ರಸ್ವ ಪರಿಗಣನೆ ಇಲ್ಲದೆ ಬರೆದಿರುವುದುಂಟು. ಉದಾಹರಣೆಗೆ, ಮಾವಳಿ ಶಾಸನದಲ್ಲಿ (ಕ್ರಿ.ಶ.ಸು. ೮೦೦) 'ರಾಜಾದಿತ್ಯರಸರ್' ಎಂಬುದನ್ನು 'ರಾಜಾದಿತ್ಯರಾಸರ್' ಎಂದು, 'ಕಾಕರಸರ್' ಎಂಬುದನ್ನು 'ಕಾಕರಾಸರ್' ಎಂದುಬರೆಯಲಾಗಿದೆ (ಎ.ಕ. ೮, ಸೊರಬ ೧೦). ಇದೇ ರೀತಿ ದಂಡಾಪುರದ ಕ್ರಿ.ಶ. ೯೧೮ರ ಶಾಸನದಲ್ಲಿ 'ಶ್ರೀವಿಜಯಂ' ಎಂಬುದನ್ನು 'ಶ್ರೀವಿಜಾಯಂ' ಎಂದು ಬರೆಯಲಾಗಿದೆ (ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಸಂಪುಟ ೨, ಪು. ೧೧–೧೪).

ಈ ಸಂದರ್ಭದಲ್ಲಿ ಶಾಸನ ಎಂಬುದು ಜೈನಧರ್ಮದ ತತ್ತ್ವ/ನಿಬಂಧನೆ/ಕಟ್ಟುಪಾಡು ಎಂಬುದನ್ನು ಸೂಚಿಸುತ್ತದೆ. ಇದು ಅನೇಕ ಶಾಸನಗಳಿಂದ ಸುವ್ಯಕ್ತವಾಗಿದೆ. ಉದಾಹರಣೆಗೆಂದು ಮೇಲೆ ಹೇಳಿದ ೧೭೭ ಸಂಖ್ಯೆಯ ಶಾಸನದಲ್ಲಿ 'ಶಾಸನಂ ಜಿನಶಾಸನಂ' ಎಂಬ ಉಕ್ತಿ ಬಂದಿರುವುದು ಸ್ಪಷ್ಟವಾಗಿದೆ. ಶ್ರವಣಬೆಳಗೊಳದ ೧೨ನೇ ಶತಮಾನದ ಇನ್ನೊಂದು ಶಾಸನದಲ್ಲಿ 'ಜಿನಧರ್ಮ್ಮ ಶಾಸನಂ' ಎಂದು ಹೇಳಿದೆ. ಹಾಗಾಗಿ ಈ ಉಲ್ಲೇಖಗಳು ಶಾಸನ ಎಂಬುದು ಇಲ್ಲಿ ಜಿನ ಧರ್ಮದ ಕಟ್ಟುಪಾಡುಗಳನ್ನು ಹೇಳುವ ಶಬ್ದ ಎಂಬುದು ಸ್ಪಷ್ಟವಾಗುತ್ತದೆ. ಪ್ರಸ್ತುತದಲ್ಲಿ 'ಶಾಸನಾಧಿಪತಾನ್' ಎಂಬುದನ್ನೇ

'ಸಸಾನದಿಪತಾನ್' ಎಂದು ತಪ್ಪಾಗಿ ಬರೆದಿರುವುದು ವ್ಯಕ್ತಪಡುತ್ತದೆ. 'ಅಧಿಪ' ಎಂಬ ಶಬ್ದವು ಅನೇಕ ಶಾಸನಗಳಲ್ಲಿ ಪ್ರಮುಖ, ಪ್ರಭು, ಮಾರ್ಗದರ್ಶಕ, ಸ್ವಾಮಿ, ಆಚಾರ್ಯ ಮುಂತಾದ ಅರ್ಥಛಾಯೆಗಳನ್ನು ಹೊಂದಿರುವುದು ಕಾಣುತ್ತದೆ. ಶ್ರವಣಬೆಳಗೊಳದ ಕ್ರಿ.ಶ. ೧೧೭೬ರ ೫೬೫ನೆಯ ಸಂಖ್ಯೆಯ ಒಂದು ಶಾಸನದಲ್ಲಿ 'ಭಾನುಕೀರ್ತಿ ಸಿದ್ಧಾಂತ ದೇವರನಧಿಪತಿಗಳಾಗಿ ಮಾಡಿ' ಅಂದರೆ 'ಭಾನುಕೀರ್ತಿ ಸಿದ್ಧಾಂತ ದೇವರನ್ನು ಜೈನಧರ್ಮದ ಅಧಿಪತಿ ಮಾಡಿ' ಎಂಬರ್ಥವಾಗುತ್ತದೆ. ಇದರಿಂದ 'ಸಸಾನದಿಪತಾನ್' ಎಂಬ ಮಾತು ಈ ಶಾಸನದ ಮುನಿ ಜೈನ ಶಾಸನದ ಅಧಿಪತಿಯಾಗಿದ್ದ ಎಂಬ ಅರ್ಥ ಕೊಡುವ ಮಾತು ಎಂದು ಹೇಳಬಹುದು. ಡಾ. ಮಂಜುನಾಥ್ ಅವರು ಹೇಳಿರುವಂತೆ 'ಸಸಾನು' ಎಂಬುದು ಪ್ರಾಕೃತ ಶಬ್ದವಲ್ಲ ಎಂಬುದನ್ನು ಹಿಂದೆಯೇ ವಿವರಿಸಲಾಗಿದೆ.

ಕೋಳಿಯೂರ್ ನೆಲದ ಮಾನದಾನ್

ಶಾಸನದಲ್ಲಿ ಬರುವ 'ತೀರದಾಣಂ' ಎಂಬ ಮಾತು ಕರಾವಳಿ ಪ್ರದೇಶವನ್ನು ಸೂಚಿಸುತ್ತದೆ. ಅದು ಶ್ರ.ಬೆ.ಕ್ಕೆ ಹತ್ತಿರವಾದ ತಾಣ ಆಗಿದ್ದರೆ ಅದು ಪಶ್ಚಿಮ ಕರಾವಳಿಯಿದ್ದಿರಬೇಕು. ಪಶ್ಚಿಮ ಕರಾವಳಿ ಪ್ರದೇಶದಲ್ಲಿ, ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಮಂಜೇಶ್ವರದ ಹತ್ತಿರದಲ್ಲಿ ಒಂದು ಮತ್ತು ರಾಜಧಾನಿ ತಿರುವನಂತಪುರದ ಹತ್ತಿರದಲ್ಲಿ ಇನ್ನೊಂದು, ಹೀಗೆ ಎರಡು ಕೋಳಿಯೂರುಗಳು ಸಿಕ್ಕುತ್ತವೆ. ಕಾಸರಗೋಡು ಜಿಲ್ಲೆಯಲ್ಲಿ ಸು. ೧೫–೨೦ ಕಿ.ಮೀ. ಸಮುದ್ರ ತೀರದಿಂದ ದೂರ ಇರುವ ಮಂಜೇಶ್ವರದ ಬಳಿಯ ಕೋಳಿಯೂರು ಅದಾಗಿರಬೇಕೆಂದು ಕಾಣುತ್ತದೆ. ಕ್ಷೇತ್ರಕಾರ್ಯ ಕೈಕೊಂಡು ಕೋಳಿಯೂರಿಗೆ ಹೋದಾಗ, ಅಲ್ಲಿ ಸದ್ಯ ಜೈನಧರ್ಮಕ್ಕೆ ಸಂಬಂಧಿಸಿದ ಯಾವ ಅವಶೇಷಗಳೂ ಉಳಿದುಬಂದಿರುವುದು ಕಂಡುಬರಲಿಲ್ಲ. ಆದರೆ ಪಕ್ಕದ ಮಂಜೇಶ್ವರದಲ್ಲಿ ಪ್ರಾಚೀನ ಕಾಲದ ಒಂದು ಬಸದಿ (ಚತುರ್ಮುಖ ಬಸದಿ) ಇದೆ. ಈ ಮಂಜೇಶ್ವರ ದಕ್ಷಿಣ ಕನ್ನಡದ ಮಂಗಳೂರು ನಗರಕ್ಕೆ ತುಂಬ ಹತ್ತಿರದಲ್ಲಿದೆ. ಜೈನಧರ್ಮಕ್ಕೆ ಸಬಂಧಿಸಿದ ಪ್ರಾಚ್ಯಾವಶೇಷಗಳು, ಜೈನಧರ್ಮದ ಬಸದಿಗಳು, ಬಾಹುಬಲಿ ಮುಂತಾದ ಬೃಹದ್ ಶಿಲಾಮೂರ್ತಿಗಳು ಮುಂತಾದವು ದಕ್ಷಿಣ ಕನ್ನಡದ ಪ್ರದೇಶದಲ್ಲಿ–ಮೂಡುಬಿದಿರೆ. ಕಾರ್ಕಳ, ವೇಣೂರು ಮುಂತಾದ ಅನೇಕ ಸ್ಥಳಗಳಲ್ಲಿ–ಈಗಲೂ ಇರುವುದನ್ನು ನೋಡಬಹುದು. ಹೀಗಾಗಿ ಜೈನಧರ್ಮ ಈ ಕರಾವಳಿ ಪ್ರದೇಶದಲ್ಲಿ ಒಂದು ಕಾಲಕ್ಕೆ ವ್ಯಾಪಕವಾಗಿತ್ತು ಎನ್ನುವುದು ವ್ಯಕ್ತವಾಗುತ್ತದೆ. ಹೀಗೆ ಅದರ ಪ್ರಭಾವ ದಕ್ಷಿಣ ಕನ್ನಡ ಜಿಲ್ಲೆಯ ಬದಿಯಲ್ಲೆ ಇರುವ, ಈಗಲೂ ಕನ್ನಡದ ಪ್ರದೇಶ ಎಂಬಂತಿರುವ, ಕೋಳಿಯೂರು ಈ ಶಾಸನದ ಮುನಿಯ ಮೂಲಸ್ಥಳವಾಗಿದ್ದು ಅವನು ಅಲ್ಲಿಂದ ಶ್ರ.ಬೆ.ಕ್ಕೆ ಬಂದು ಅಲ್ಲಿ ಸಮಾಧಿ ಮರಣ ಪಡೆದಿರುವ ಸಾಧ್ಯತೆ ಇದೆ.

ಆದಿಉಳಾಡನ್ ನಿಸದಿ ನಿರ್ಮಿಸಿದವನೇ?

ಶ್ರ.ಬೆ.ದಲ್ಲಿ ಎಷ್ಟೋ ನಿಸದಿ ಶಾಸನಗಳು ಕಂಡುಬರುತ್ತವೆಯಷ್ಟೆ. ಅಲ್ಲೆಲ್ಲೂ ನಿಸದಿ ನಿರ್ಮಿಸಿದ ಅಥವಾ ನಿಸದಿ ಶಾಸನ ಹಾಕಿಸಿದ ವ್ಯಕ್ತಿಯನ್ನು ಎತ್ತಿ ಹೇಳುವುದಾಗಲಿ. ಪ್ರಶಂಸಿಸುವುದಾಗಲಿ ಮಾಡಿರುವ ಉದಾಹರಣೆ ಇಲ್ಲ. ಆದರೆ ಡಾ. ಮಂಜುನಾಥ್ ಅವರು ಈ ನಿಸದಿಯನ್ನು 'ಉಳಾಡನು' ನಿರ್ಮಿಸಿದನೆಂದೂ ಅವನನ್ನೇ ಪೂರ್ಣವಾಗಿ ಪ್ರಶಂಸಿಸುವ ಶಾಸನ ಇದಾಗಿದೆಯೆಬಂತೆಯೂ ತಿಳಿಸುತ್ತಾರೆ. ಆದರೆ, ಅದು ಸರಿಯಲ್ಲ. ನಿಸದಿ ಶಾಸನಗಳಲ್ಲಿ ಸಮಾಧಿ ಮರಣ ಪಡೆದ ಮುನಿಗಳ ಪ್ರಶಂಸೆ ಮಾತ್ರ ಇರುತ್ತದೆಯೇ ಹೊರತು ಅದನ್ನು ನಿರ್ಮಿಸಿದ ವ್ಯಕ್ತಿಯ ಹೆಸರನ್ನು ಕಾಣಿಸಿರುವುದಿಲ್ಲ.

ಆದಿ ಉಳಾಡನ್ ಬಾಣವಂಶದ ರಾಜನೆ?

ಡಾ. ಮಂಜುನಾಥ್ ಅವರು ಉಳಾಡನು ಬೆಟ್ಟದ ಕೆಳಗಿನ ಪ್ರದೇಶವನ್ನು ಆಳುತ್ತಿದ್ದ ಬಾಣವಂಶದ ಒಬ್ಬ ಪ್ರಭು ಎಂದು ಹೇಳಿರುತ್ತಾರೆ. ಕ್ರಿಸ್ತ ಶಕೆಯ ಆರಂಭದಿಂದ ೭ ಶತಮಾನದವರೆಗೆ ಬಾಣರ ಆಳ್ವಿಕೆಗೆ ಸಾಕ್ಷ್ಯಾಧಾರಗಳು ಇವೆಯೆಂದು ಸಹ ಹೇಳಿದ್ದಾರೆ. ಆದರೆ ಅವರು ಹೇಳುವಂತೆ ಅದಕ್ಕೆ ಯಾವ ನಿದರ್ಶನಗಳನ್ನು ಕೊಟ್ಟಿರುವುದಿಲ್ಲ ಶ್ರ.ಬೆ.ದ ೭ನೇ ಶತಮಾನದ ಒಂದು ಶಾಸನದಲ್ಲಿ (ನಂ. ೧೧೪) 'ಪೆರ್ವ್ವಾಣ ವಂಶದೊನ್' ಎಂಬ ಉಕ್ತಿಯೊಂದು ಬರುತ್ತದೆ. ಇದು ಬಹುಶಃ 'ಪೆರ್ವ್ವಾಣ ವಂಶದೊನ್' ಎಂಬುದಕ್ಕೆ ಆದ ಅಪಲಿಖಿತ ಇರಬೇಕು. 'ಪೆರ್ವ್ವಾಣ' ಎಂಬುದು 'ಬೃಹದ್ಬಾಣ' ಎಂಬ ವಂಶನಾಮವನ್ನು ನೆನಪಿಗೆ ತರುತ್ತದೆ. ಅಷ್ಟೆ ಅಲ್ಲ, ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಯ ಪೆರುಂಬಾನಪ್ಪಾಡಿ ಎಂಬ ಸ್ಥಳ ಈ ಬೃಹದ್ಬಾಣರ ಹೆಸರಿನಿಂದ ಕರೆದದ್ದು ಎಂದು ಹೇಳಲಾಗಿದೆ. ಶ್ರ.ಬೆ.ದಲ್ಲಿ ಬಾಣವಂಶವನ್ನು ನೆನಪಿಸುವ ಮೇಲೆ ಹೇಳಿದ ಶಾಸನದಲ್ಲಿ ಆ ವಂಶದ ವ್ಯಕ್ತಿಯೊಬ್ಬ ಸಮಾಧಿ ಮರಣ ಪಡೆದಿರುವ ಸೂಚನೆ ಇದೆ. ತುಂಬ ಹಾಳಾಗಿರುವ

ಇನ್ನೊಂದು ಶಾಸನ ಕೂಡ ಇದೇ ರೀತಿ ಸಮಾಧಿ ಮರಣವನ್ನು ಪಡೆದ ಬಾಣ ವಂಶದವನೊಬ್ಬನನ್ನು ಸೂಚಿಸುವಂತಿದೆ. ಈ ಶಾಸನಗಳು ಬಾಣರ ಆಳ್ವಿಕೆಯನ್ನು ಸೂಚಿಸದೆ ಅವರ ಸಮಾಧಿ ಮರಣವನ್ನು ಮಾತ್ರ ಸೂಚಿಸುತ್ತವೆ.

ಈವರೆಗೆ ತಿಳಿದು ಬಂದಿರುವಂತೆ ಬಾಣರ ರಾಜ್ಯವು ಆಂಧ್ರ ಪ್ರದೇಶದ ಅನಂತಪುರ, ಚಿತ್ತೂರು, ಕಡಪ, ಕರ್ನೂಲು, ವೆಲ್ಲೂರು ಮುಂತಾದ ಜಿಲ್ಲೆಗಳ ಭಾಗಗಳನ್ನು ಮತ್ತು ಕರ್ನಾಟಕದ ಕೋಲಾರ ಜಿಲ್ಲೆಯ ಭಾಗವನ್ನು ಒಳಗೊಂಡ ವಿಶಾಲ ಪ್ರದೇಶವಾಗಿತ್ತು. ಆದರೆ, ಕೋಲಾರ ಮತ್ತು ಇತರ ಭಾಗಗಳಿಂದ ತುಂಬ ದೂರ ಇದ್ದ ಶ್ರ.ಬೆ.ದ ಪ್ರದೇಶವನ್ನು ಅವರ ರಾಜ್ಯವು ಒಳಗೊಂಡಿರಲಿಲ್ಲ. ಆದ್ದರಿಂದ ಡಾ. ಮಂಜುನಾಥ್ ಅವರ ಹೇಳಿಕೆಯನ್ನು ಒಪ್ಪುವುದು ಕಷ್ಟವಾಗುತ್ತದೆ.

ಈ ಶಾಸನ ಹಲ್ಮಿಡಿ ಶಾಸನಕ್ಕಿಂತ ಹಳೆಯದೆ?

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಹೋಗುವ ಮುಂಚೆ ಇದರ ಕನ್ನಡ ಲಿಪಿಯ ಮತ್ತು ಭಾಷೆ ಇವುಗಳ ಕೆಲವು ಅಂಶಗಳನ್ನು ಸ್ಪಷ್ಟಮಾಡಿಕೊಳ್ಳಬೇಕಾಗಿದೆ. ಆಕುರಿತು ಈಗಾಗಲೇ ಒಂದಷ್ಟು ಚರ್ಚಿಸಲಾಗಿದೆ. ಇದರ ಭಾಷೆಯಂತೂ ನಿಸ್ಸಂದೇಹವಾಗಿ ಪೂರ್ವದ ಹಳಗನ್ನಡವೇ ಆಗಿದೆ. ಇದರಲ್ಲಿ ದ್ವಿತೀಯ ವಿಭಕ್ತಿ 'ಆನ್' ಎಂಬ ಮತ್ತು ಷಷ್ಠೀ ವಿಭಕ್ತಿ 'ಆ' ಎಂಬ ದೀರ್ಘಗಳನ್ನು ಹೊಂದಿರುವುದು ಸ್ಪಷ್ಟವಾಗಿ ಇದು ಪೂರ್ವದ ಹಳಗನ್ನಡದ ಕಾಲದ್ದೆಂದು ಶ್ರುತಪಡಿಸುತ್ತದೆ. ಆದರೆ ಲಿಪಿಯ ಬಗೆಗಿನ ಅಂಶಗಳು ತುಂಬ ಪರಿಶೀಲನೀಯ ಎನ್ನಿಸುತ್ತದೆ. ಮೊದಲನೆಯದಾಗಿ ಇಲ್ಲಿಯ ಅಕ್ಷರಗಳ ಸ್ವರೂಪ ನಾಜೂಕಿನದಲ್ಲ, ಒರಟು ರೀತಿಯದು ಎಂಬುದು ಮನಸ್ಸಿಗೆ ಬರುತ್ತದೆ. ಏಕೆಂದರೆ ಇಲ್ಲಿ ಬಂಡೆಯ ಮೇಲ್ಮೈಯನ್ನು ನಯಮಾಡಿಕೊಂಡಿಲ್ಲ. ಇದರ ಸಾಲುಗಳು ನೇರವಾಗಿಲ್ಲ. ಇದರ ಅಕ್ಷರಗಳು ಕೂಡ ಸಮಗಾತ್ರದಲ್ಲಿಲ್ಲ. ಕೆಲವು ಅಕ್ಷರಗಳಂತೂ ಏಕರೂಪದಲ್ಲಿಲ್ಲ. ಒಂದು ಅಕ್ಷರ ಒಂದೆಡೆ ದೊಡ್ಡಗಾತ್ರದಲ್ಲಿದ್ದರೆ ಇನ್ನೊಂದೆಡೆ ಚಿಕ್ಕ ಗಾತ್ರದಲ್ಲಿದೆ. ಹಾಗೆಯೇ ಒಂದು ಅಕ್ಷರ ಒಂದೆಡೆ ಒಂದು ರೀತಿಯಲ್ಲಿದ್ದರೆ ಮತ್ತೊಂದೆಡೆ ಬೇರೊಂದು ರೀತಿಯಲ್ಲಿರುತ್ತದೆ. ಕೆಲವು ಅಕ್ಷರಗಳು, ಉದಾಹರಣೆಗೆ, 'ರ'ಕಾರ 'ಕ'ಕಾರಗಳು ಕೆಲವೆಡೆ ನೀಳವಾಗಿದ್ದರೆ ಮತ್ತೆ ಕೆಲವೆಡೆ ಹಾಗೆ ನೀಳವಾಗಿಲ್ಲ. ಇದಲ್ಲದೆ ಬಹು ಹಿಂದೆ ರಕಾರ ಕಕಾರಗಳ ತಲೆಕಟ್ಟಿನಿಂದ ಇಳಿಯುವ ರೇಖೆ ನೀಳವಾಗಿದ್ದು ಕೆಳಗಿನಿಂದ ಮೇಲಕ್ಕೆ ಮುಂದುವರಿದು ತಲೆಕಟ್ಟಿನ ರೇಖೆಗೆ ಕೂಡದೆ ಸಂದು ಬಿಟ್ಟಿರುತ್ತದೆ. ಇದನ್ನು ಹಲ್ಮಿಡಿ (ಕ್ರಿ.ಶ. ಸು. ೪೫೦) ಮತ್ತು ಬಾದಾಮಿ (ಕ್ರಿ.ಶ. ೫೪೩) ಶಾಸನಗಳಲ್ಲಿ ಕಾಣಬಹುದು. ಆದರೆ ಪ್ರಸ್ತುತ ಶಾಸನದಲ್ಲಿ ತಲೆಕಟ್ಟಿನಿಂದ ಕೆಳಗೆ ಇಳಿಯುವ ರೇಖೆ ಅಷ್ಟೊಂದು ನೀಳವಾಗಿಲ್ಲ ಮತ್ತು ಕೆಳಗಿನಿಂದ ಮೇಲಕ್ಕೆ ಏರಿ ತಲೆಕಟ್ಟನ್ನು ಮುಟ್ಟುವಲ್ಲಿ ಸಂದನ್ನು ಸಹ ಬಿಟ್ಟಿರುವುದಿಲ್ಲ. ಇದೊಂದೇ ಅಂಶ ಸ್ಪಷ್ಟವಾಗಿ ಇದು ಹಲ್ಮಿಡಿ ಶಾಸನಕ್ಕಿಂತ ಈಚಿನದೆಂಬುದನ್ನು ದೃಢಪಡಿಸುತ್ತದೆ. ಇದಲ್ಲದೆ, ಬಹು ಹಿಂದಿನ ಶಾಸನಗಳಲ್ಲಿ ನೀಳಾಕೃತಿಯಲ್ಲಿರುವ ಅಕ್ಷರಗಳು ಇದರಲ್ಲಿ ಗುಂಡು ಆಕೃತಿಗೆ ಬರುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಇದು ಕೂಡ ಈ ಶಾಸನ ಹಲ್ಮಿಡಿಯದಕ್ಕಿಂತ ಸುಮಾರು ೧೦೦–೧೫೦ ವರ್ಷಗಳಷ್ಟು ಈಚಿನದಾಗಿರಬೇಕೆಂದನ್ನು ತೋರಿಸುತ್ತದೆ. ಇದರೊಳಗೆ ಪ್ರಾಕೃತ ಶಬ್ದಗಳಿರುವುದಾಗಿ ಹೇಳಿರುವುದು ವಾಸ್ತವಿಕ ಸಂಗತಿಯಲ್ಲ. ಇದನ್ನು ಹಿಂದೆಯೇ ವಿವರಿಸಲಾಗಿದೆ. ಇದರಿಂದ ಈ ಶಾಸನ ಹಲ್ಮಿಡಿಯದಕ್ಕಿಂತ ಪೂರ್ವದ್ದು ಎಂದು ಹೇಳಲು ಯಾವ ಅಂಶಗಳೂ ಕಾಣಸಿಗುವುದಿಲ್ಲ.

[ನಾನು ಈ ಶಾಸನದ ಅಧ್ಯಯನ ನಡೆಸಲು ನಾನಾ ರೀತಿ ನೆರವಾದವರು ಡಾ. ಉದಯರಾಜ್, ಡಾ. ಜೀವೇಂದ್ರಕುಮಾರ್, ಶ್ರೀ ಮುರಳೀಧರ್, ಶ್ರೀ ರಮೇಶ್, ಶ್ರೀ ಹಜಾರಿ ಪಾರ್ಶ್ವನಾಥ್, ಶ್ರೀ ದೇವೇಂದ್ರ ಪಾಟೀಲ, ಶ್ರೀ ಗುಡಿಹಳ್ಳಿ ನಾಗರಾಜ, ಡಾ.ಎಸ್. ಸ್ವಾಮಿನಾಥನ್, ಶ್ರೀ ಬಿ.ಆರ್. ಅಕ್ಷಯ ಮತ್ತು ಶ್ರವಣಬೆಳಗೊಳದಲ್ಲಿ ೨೦೧೨ರ ಜುಲೈ ತಿಂಗಳಲ್ಲಿ ನಡೆದ ಹಸ್ತಪ್ರತಿ ಶಾಸ್ತ್ರ ಮತ್ತು ಪ್ರಾಚೀನಲಿಪಿಶಾಸ್ತ್ರ ಕಾರ್ಯಾಗಾರಕ್ಕೆ ಬಂದಿದ್ದ ಕೆಲವರು ಪ್ರತಿನಿಧಿಗಳು ಹಾಗೂ ಈ ಲೇಖನದ ಪ್ರತಿ ಮಾಡಿಕೊಟ್ಟ ಚಿತ್ರದುರ್ಗದ ಶ್ರೀ ಎಚ್.ವಿ. ಇಂದುಶೇಖರ್– ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.]

೪೧

ಶಾತವಾಹನರ ಕಾಲದ ಕರ್ನಾಟಕದ ಮಹಿಳೆಯರು

ವಿ. ಸಂಧ್ಯಾ*

ಕನ್ನಡದ ಮೊದಲ ಅರಸು ಮನೆತನವೆಂದು ಗುರುತಿಸುವ ಬನವಾಸಿಯ ಕದಂಬ ವಂಶದಲ್ಲಿ ಮಹಿಳೆಯರ ಉಲ್ಲೇಖ ದೊರಕುವುದು ಅಪರೂಪ. ಕಾಕುತ್ಸ್ಥವರ್ಮನು ಪ್ರತಿಷ್ಠಿತ ಅರಸು ಮನೆತನಗಳೊಂದಿಗೆ ಹೊಂದಿದ್ದ ಸಂಬಂಧವನ್ನು ಕುರಿತು ತಿಳಿಸುವ ಶಾಸನಗಳಲ್ಲಿ ಆತನ ಹೆಣ್ಣುಮಕ್ಕಳನ್ನು ಗುರುತಿಸಬಹುದಾಗಿದೆ. ಮೃಗೇಶವರ್ಮನ ಮಗ ರವಿವರ್ಮನ ಸೊರಬದ ಶಾಸನವೊಂದು 'ರಾಜ್ಞಿಯು ಅರಸು ರವಿವರ್ಮನೊಂದಿಗೆ ಮುಕ್ತಳಾದಳು (ಸಾಮುಕ್ತ)' ಎಂದು ಅರಸಿಯೋರ್ವಳನ್ನು ಕುರಿತು ಹೇಳುತ್ತದಾದರೂ, ಅವಳ ಹೆಸರು, ವಿವರಗಳನ್ನು ತಿಳಿಸುವುದಿಲ್ಲ. ಮೃಗೇಶವರ್ಮನ ಅರಸಿ ಪ್ರಭಾವತಿ ಹಾಕಿಸಿರುವ ಅಪೂರ್ಣ ಶಾಸನವನ್ನುಳಿದು ಈ ಕಾಲದ ಮಿಕ್ಕಾವ ಅರಸಿಯರು ಶಾಸನ ಹಾಕಿಸಿರುವುದು ಕಂಡುಬರುವುದಿಲ್ಲ.

ಕರ್ನಾಟಕದಲ್ಲಿ ಸುಮಾರು ಏಳನೆಯ ಶತಮಾನದ ನಂತರದ ಕಾಲಘಟ್ಟದಲ್ಲಿ ವಿಭಿನ್ನ ಕ್ಷೇತ್ರಗಳಲ್ಲಿ ಮಹಿಳೆಯರ ಉಲ್ಲೇಖ, ಸಾಧನೆಗಳು ದೊರಕುವುದಾದರೂ, ಬನವಾಸಿ ಕದಂಬರ ಶಾಸನಗಳು ಪ್ರಾಚೀನ ಕರ್ನಾಟಕದಲ್ಲಿನ ಮಹಿಳೆಯರ ವಿಚಾರವನ್ನು ತಿಳಿಸುವಲ್ಲಿ ಸಹಾಯಕವಾಗುವುದಿಲ್ಲ. ಆದರೆ ಅವರಿಗೂ ಪೂರ್ವದಲ್ಲಿದ್ದ ಶಾತವಾಹನರ ಕಾಲದ ಮಹಿಳೆಯರನ್ನು ಸಾಹಿತ್ಯ, ಶಾಸನ ಹಾಗೂ ಶಿಲ್ಪಗಳಲ್ಲಿ ಗುರುತಿಸಬಹುದು.

ಕರ್ನಾಟಕದ ಕೆಲವು ಭಾಗಗಳಲ್ಲಿ ಆಳ್ವಿಕೆ ನಡೆಸಿದ ಶಾತವಾಹನ ಹಾಗೂ ಅವರ ಕೈಕೆಳಗಿನ ಸಾಮಂತರು, ರಾಜಪ್ರತಿನಿಧಿಗಳು, ಅಮಾತ್ಯ ಮೊದಲಾದ ಅಧಿಕಾರಿ ವರ್ಗದ ಮನೆತನಗಳ ಹಲವಾರು ಮಹಿಳೆಯರು ಶಾಸನಗಳಲ್ಲಿ ಉಕ್ತರಾಗಿದ್ದಾರೆ. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿದ ಮಹಿಳೆಯರು ತಮ್ಮ ಹೆಸರುಗಳನ್ನು ದಾಖಲಿಸಿದ್ದಾರೆ.

ಬೃಹತ್ಕಾಥಾಕೋಶ ತಿಳಿಸುವಂತೆ, ಶಾತವಾಹನರ ಪ್ರಸಿದ್ಧ ದೊರೆಯ ಅರಸಿಯು ಸಂಸ್ಕೃತದಲ್ಲಿ ಪಾಂಡಿತ್ಯ ಹೊಂದಿದವಳಾಗಿದ್ದಳು. ಜಲಕ್ರೀಡೆಯ ಸಂದರ್ಭದಲ್ಲಿ ಅವಳು ನುಡಿದ "ಮೋದಕೈಃತಾಡಯ" ಎಂಬ ಮಾತನ್ನು ಅರ್ಥ ಮಾಡಿಕೊಳ್ಳಲಾರದೆ ಅಪಹಾಸ್ಯಕ್ಕೀಡಾದ ಅರಸ ಹಾಲನು ಮುಂದೆ ಸಂಸ್ಕೃತ ಕಲಿಯಲು ಸಂಕಲ್ಪಿಸಿದ ವಿಚಾರ ತಿಳಿದುಬರುತ್ತದೆ. ಈ ಶಾತವಾಹನ ಅರಸ ಕ್ರಿ.ಶ. ೨೧–೮೧ ಕಾಲದಲ್ಲಿ ಗೋದಾವರಿ ತೀರದ ಪ್ರತಿಷ್ಠಾನ(ಪೈಠಣ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದಕ್ಷಿಣಾಪಥವನ್ನು (ಕುಂತಲ) ಆಳುತ್ತಿದ್ದನೆಂದು 'ವಜ್ಜಾಲಗ್ಗ' ಎಂಬ ಗ್ರಂಥವು ತಿಳಿಸುತ್ತದೆ. ಜೊತೆಗೆ ಹಾಲ ರಚಿಸಿರುವ ಪ್ರಾಕೃತಗ್ರಂಥ 'ಗಾಥಾಸಪ್ತಶತಿ'ಯ ಪದ್ಯವೂ (೨೬೭) ಕೆಲವು ಮಾಹಿತಿ ನೀಡುತ್ತದೆ[೧].

ಶಾಸನಗಳು ಉಲ್ಲೇಖಿಸುವ ಮಹಿಳೆಯರು

ಕಾವ್ಯಗಳು ಮಹಿಳೆಯರನ್ನು ಕುರಿತು ಆನುಷಂಗಿಕವಾಗಿ ಕೆಲವೊಂದು ಮಾಹಿತಿ ನೀಡಿದರೆ, ಶಾಸನಗಳು ಹಾಗೂ ಶಿಲ್ಪಗಳು ಕೆಲವು ಅಧ್ಯಯನ ಯೋಗ್ಯ ಮಾಹಿತಿಗಳನ್ನು ಒದಗಿಸಿವೆ. ಬನವಾಸಿಯ ರಾಜನ ಅರಸಿ 'ಸಿರಿಚಾಂತ ಮೂಲ' ಎನ್ನುವವಳು ಹಾಕಿಸಿದ ಶಾಸನ ನಾಗಾರ್ಜುನ ಕೊಂಡದಲ್ಲಿ ದೊರಕಿದೆ[೨] ಶಾಸನವು ಇವಳನ್ನು ಇಕ್ಷ್ವಾಕು ಕುಲದ ಮಹಾರಾಜ ವಾಸೆಟ್ಟಿಪುತ್ತ ಎಹುವಲ ಚಾಂತ ಮೂಲನ ಭಗಿನಿ ಹಾಗೂ ವನವಾಸಕದ ರಾಜನ ಮಹಾದೇವಿ ಎಂದು ಪರಿಚಯಿಸುತ್ತದೆ. ಇವಳು ಮಹೀಶಾಸಕ ಆಚಾರ್ಯರುಗಳಿಗಾಗಿ ನಾಗಾರ್ಜುನಕೊಂಡದಲ್ಲಿ ಸ್ತಂಭ ಹಾಗೂ ವಿಹಾರಗಳನ್ನು ಕಟ್ಟಿಸಿದಳೆನ್ನುವ ವಿಚಾರ ಈ ಶಾಸನದಲ್ಲಿ ದೊರಕುತ್ತದೆ. ಬನವಾಸಿಯಿಂದ ಬಹುದೂರದಲ್ಲಿರುವ ನಾಗಾರ್ಜುನಕೊಂಡ ಈಕೆಯ ತವರುಮನೆಯಾಗಿದ್ದು, ಮದುವೆ ಆದ ನಂತರ ತನ್ನ ತವರೂರಲ್ಲಿ ಈಕೆ ಈ ಕೆಲವು ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದಾಳೆ ಎನ್ನುವುದನ್ನು ಶಾಸನವು ತಿಳಿಸುತ್ತದೆ. ಮಹಿಷಕ ವಿಷಯ ಕುರಿತು ನಡೆದಿರುವ ಹಲವು ಚರ್ಚೆಗಳಲ್ಲಿ, ಈ ಪ್ರದೇಶ ಕರ್ನಾಟಕದ ಭಾಗವೇ ಆಗಿತ್ತು ಎಂಬ ನಿರ್ಣಯಕ್ಕೆ ವಿದ್ವಾಂಸರು ಒಪ್ಪಿದ್ದಾರೆ.ಇದರ ಮುಖ್ಯ ನೆಲೆ ಪೋತನ (ಬೋದನ) ಅಶ್ಮಕ (ಅಸ್ಸಕ) ಇದರ ನೆರೆಯ ನಾಡು, ಪ್ರತಿಷ್ಠಾನ (ಪೈಠಣ) ಅದರ ಮುಖ್ಯ ಪಟ್ಟಣ. ಇವು ಗೋದಾವರಿಯ

* # ೧೫೩, ಮೊದಲನೆಯ ಹಂತ, ೫ನೆಯ ಅಡ್ಡರಸ್ತೆ, ಆರ್.ಕೆ. ಬಡಾವಣೆ, ಪದ್ಮನಾಭನಗರ, ಬೆಂಗಳೂರು-೭೦. ಮೊ. ೯೯೮೬೧೬೪೮೯೦

ದಡದಲ್ಲಿದ್ದವು. "ಮಹಿಷಕ ವಿಷಯವು ದಕ್ಷಿಣದಲ್ಲಿ ಮಸ್ಕಿಯನ್ನು ಒಳಗೊಂಡು ಇಂದಿನ ತುಮಕೂರಿನ ತನಕವೂ ವ್ಯಾಪಿಸಿತ್ತು. ಕದಂಬ ವಿಷ್ಣುವರ್ಮನ ಶಾಸನವು ಇದನ್ನು ಪುಷ್ಟೀಕರಿಸುತ್ತದೆ"[೩].

ಶಾತವಾಹನರ ಸಾಮಂತರಲ್ಲಿ ಮುಖ್ಯರಾದ ಮಹಾಭೋಜರು ಬನವಾಸಿಯನ್ನು ತಮ್ಮ ಆಡಳಿತ ಕೇಂದ್ರವಾಗಿಸಿ ಕೊಂಡಿದ್ದವರು. ಬನವಾಸಿಯ ಮಹಾರಾಜ ಮಹಾಭೋಜಿಯ ಮಗಳೂ, ಮಹಾರಠಿಯ ಹೆಂಡತಿಯೂ, ಖಂಡ ನಾಗಸತಕ (ಸ್ಕಂದನಾಗಶತಕ)ನ ತಾಯಿಯೂ ಮಹಾಭೋಜ ಅಹಿಜಧೇನಸೇನನ ತಂಗಿಯೂ ಆದ ನಾಗಮೂಲಿನಿಕೆಯು ಕಾನ್ಹೇರಿಯಲ್ಲಿ ಬೌದ್ಧಭಿಕ್ಷುಗಳಿಗಾಗಿ ಒಂದು ಗುಹಾಲಯವನ್ನು ನಿರ್ಮಿಸಿದ ವಿಚಾರ ಎ.ಇ. ಸಂಪುಟದಲ್ಲಿ ದಾಖಲಾಗಿದೆ[೪].

ಬನವಾಸಿಯ ಕ್ರಿ.ಶ. ಸುಮಾರು ಮೂರನೆಯ ಶತಮಾನದ ಮತ್ತೊಂದು ಪ್ರಾಕೃತ ಶಾಸನವು ಹಾರಿತಿಪುತ್ರ ವಿಣ್ಹಕಡ ಚುಟುಕುಲಾನಂದ ಸಾತಕರ್ಣಿಯ ಆಳಿಕೆಯ ಹನ್ನೆರಡನೆಯ ವರ್ಷದಲ್ಲಿ, ಆತನ ಮಗಳೂ ಹಾಗೂ ಮಹಾಭೋಜನ ಹೆಂಡತಿಯೂ ಆದ ಶಿವಸ್ಕಂದ ನಾಗಶ್ರೀ ಎಂಬುವಳು ರಾಜಕುಮಾರನೊಂದಿಗೆ ತಟಾಕ, ವಿಹಾರಗಳನ್ನು ನಿರ್ಮಿಸಿ, ದಾನಮಾಡಿದ ವಿಷಯವನ್ನು ತಾನು ನಿರ್ಮಿಸಿದ ನಾಗ ಶಿಲ್ಪದೊಂದಿಗೆ ದಾಖಲಿಸಿದ್ದಾಳೆ.[೫]

ಶಾತವಾಹನ ಕಾಲದ ಮಹಿಳೆಯರು ಅರಸರ ಸಾಮಾಜಿಕ-ಧಾರ್ಮಿಕ ಕಾರ್ಯಗಳಿಗೆ ಸರಿತೂಗುವಂತಹ ಸ್ತಂಭ, ವಿಹಾರ, ಗುಹಾಲಯ, ಶಿಲ್ಪ, ತಟಾಕ ಮೊದಲಾದ ನಿರ್ಮಾಣ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಅಲ್ಲದೆ, ಅಂತಹ ವಿಷಯಗಳನ್ನು ನಿರೂಪಿಸುವ ಶಾಸನಗಳನ್ನು ಹಾಕಿಸುವಷ್ಟು ಸ್ವಾತಂತ್ರ ವಹಿಸುತ್ತಿದ್ದರು.

ಛಾಯಾ ಶಿಲೆ

ಶಾತವಾಹನರ ಕಾಲದಲ್ಲಿ ದಾನಶಾಸನಗಳು ದೊರಕಿರುವಂತೆ ಚಿತ್ರಸಹಿತವಾದ ಸ್ಮಾರಕ ಶಿಲೆಗಳೂ ದೊರೆತಿವೆ. ಇವುಗಳನ್ನು ಛಾಯಾಶಿಲೆ ಅಥವಾ ಕೆಲವೊಂದು ಶಾಸನಗಳ ಉಲ್ಲೇಖದಂತೆ ಛಾಯಾಪತ್ತರೋ ಎಂದು ಕರೆಯಲಾಗುತ್ತಿತ್ತು. "ಬರಹವುಳ್ಳ ಸ್ಮಾರಕಶಿಲೆಗಳನ್ನು ಸ್ಥಾಪಿಸುವ ಪದ್ಧತಿ ಪ್ರಾಚೀನಕಾಲದಿಂದಲೂ ಪ್ರಚಲಿತವಿದ್ದಿರಬಹುದು.ಇಲ್ಲಿಯ ಛಾಯಾ ಎಂಬುದನ್ನು ಪ್ರತಿಮೆಯೆಂದು ಅರ್ಥೈಸಬಹುದು"[೬]. ಬನವಾಸಿಯಲ್ಲಿ ಇದುವರೆಗೆ ದೊರೆತ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದುದು ವಾಸಿಷ್ಠೀಪುತ್ರ ಸಿವಸಿರಿ ಪುಳುಮಾವಿ ರಾಜನ ಮಹಾದೇವಿಯ ಸ್ಮಾರಕ ಶಿಲಾಶಾಸನ[೭]. ಇದರ ಕಾಲವನ್ನು ವಿದ್ವಾಂಸರು ಸುಮಾರು ಕ್ರಿ.ಶ. ಎರಡನೆಯ ಶತಮಾನದ ಉತ್ತರಾರ್ಧಕ್ಕೆ (೧೧೪-೧೨೧) ನಿಗದಿಗೊಳಿಸಿದ್ದಾರೆ. ನಾಗಾರ್ಜುನಕೊಂಡದ ಶಾಸನವೊಂದರಲ್ಲಿ ಮೃತಳಾದ ರಾಣಿ ವಮ್ಮಾಭಟಾ ಎಂಬುವವಳ ಸ್ಮಾರಕವಾಗಿ ಛಾಯಾಸ್ತಂಬವನ್ನು ಸ್ಥಾಪಿಸಲಾಗಿದೆ[೮] ಈ ಕಂಬದ ಮೇಲೆ ರಾಣಿಯ ರೇಖಾಚಿತ್ರವನ್ನು ಕೆತ್ತಲಾಗಿದೆ. ಇದೇ ಅರ್ಥದಲ್ಲಿ 'ಛಾಯಾದೀಪ' ಎನ್ನುವ ಪದವನ್ನೂ ಬಳಸಲಾಗಿದೆ. ಪುರುಷರಿಗಾಗಿ ಹಾಕಿಸಲಾದ ಇಂತಹ ಹಲವಾರು ಸ್ಮಾರಕಗಳು ದೊರೆತಿವೆ. ಮಹಿಳೆಯರ ಕುರಿತಾಗಿ ದೊರಕಿರುವ ಇಂತಹ ಶಿಲೆಗಳ ಹಿನ್ನೆಲೆಯಲ್ಲಿ, ಅವರಿಗೆ ಕೊಡುತ್ತಿದ್ದ ಪ್ರಾಮುಖ್ಯತೆ, ಗೌರವ, ಪ್ರೀತಿಯ ಸಂಕೇತಗಳನ್ನು ಅರಿಯಬಹುದು.

ಸನ್ನತಿಯಲ್ಲಿ ನಡೆದ ಉತ್ಖನನದಲ್ಲಿ ಇಂತಹ ಹಲವಾರು ಶಾಸನಗಳನ್ನು ಪತ್ತೆ ಮಾಡಲಾಗಿದೆ. ಇವುಗಳಲ್ಲಿ ಕೆಲವನ್ನು ರಾಜ್ಯ ಸರಕಾರದ ಗುಲ್ಬರ್ಗಾ ವಸ್ತುಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಭಾರತೀಯ ಶಾಸನಗಳ ವಾರ್ಷಿಕ ವರದಿಗಳಲ್ಲಿ (೧೯೬೬-೬೭, ೧೯೬೮-೬೯) ಇವನ್ನು ದಾಖಲಿಸಲಾಗಿದೆ. ಇದರ ಕುರಿತಾಗಿ ಕೆಲವು ಅಧ್ಯಯನಗಳು ನಡೆದಿದ್ದು, ಲಿಪಿಶಾಸ್ತ್ರದ ದೃಷ್ಟಿಯಿಂದ ಅವುಗಳ ಕಾಲವನ್ನು ಸುಮಾರು ಕ್ರಿ.ಶ. ೨ನೆಯ ಶತಮಾನದ್ದೆಂದು ನಿರ್ಣೈಸಿದೆ. ಪ್ರಾಕೃತ ಭಾಷೆಯ ಬ್ರಾಹ್ಮೀಲಿಪಿಯ ಒಂದು ಅಥವಾ ಎರಡು ಸಾಲುಗಳುಳ್ಳ ಈ ಶಾಸನಗಳಲ್ಲಿ ಇಲ್ಲಿಯ ಸಂಘಾರಾಮಗಳಿಗೆ, ಸ್ತೂಪ, ವಿಹಾರಗಳಿಗೆ ದಾನವಿತ್ತವರ ವಿವರಗಳಿವೆ. ಇವುಗಳಲ್ಲಿ ಮಹಿಳೆಯರ ಪಾತ್ರ ಇರುವುದನ್ನೂ ಗಮನಿಸಬಹುದು. ಈ ಶಾಸನಗಳಲ್ಲಿ, ಶಿಲ್ಪಗಳಲ್ಲಿ ಅಂದಿನ ಮಹಿಳಾ ಸಮಾಜದ ಕೆಲವು ವಿಚಾರ ತಿಳಿದುಬರುತ್ತದೆ.

ಸನ್ನತಿಯ ಸ್ತೂಪ-೧ರಲ್ಲಿ ದೊರಕಿರುವ, ಕ್ರಿ.ಶ. ೨ನೆಯ ಶತಮಾನದ ಮಧ್ಯಭಾಗದ್ದಿರಬಹುದಾದ ಸ್ಮಾರಕ ಶಿಲೆಯಲ್ಲಿ ಮಹಿಳೆಯೊಬ್ಬಳು ನಾಲ್ವರಿಂದ ಸುತ್ತುವರಿದಿದ್ದಾಳೆ. ಹಿಂಭಾಗ ಹಾಗೂ ಮುಂಭಾಗಗಳಲ್ಲಿ ಚಾಮರ ಹಿಡಿದವರು ಹಾಗು ಎಡಭಾಗದಲ್ಲಿ ಭುಜದ ಬಳಿ ಪಾತ್ರೆ ಹಿಡಿದವಳಿಂದ ಸುತ್ತುವರಿದಿದ್ದಾಳೆ. ಇಲ್ಲಿನ ಬರಹವು **"ಗಾಮಿಕುಮಾರಿಯ ಪದಮಸಿರಿಕಾಯ"**- (ಗಾಮಿಯ ಮಗಳಾದ **ಪದ್ಮಶ್ರೀ**ಯದು) ಎಂಬ ವಿಚಾರ ತಿಳಿಸುತ್ತದೆ. ಮಹಾಗಾಮಿ ಎಂಬ ಹೆಸರು ಇನ್ನೂ ಎರಡು ಶಾಸನಗಳಲ್ಲಿ ದೊರಕಿರುವುದರಿಂದ ಇಲ್ಲಿ ಗಾಮಿಯ ಮುಂದೆ ತ್ರುಟಿತವಾಗಿರುವ ಎರಡು ಅಕ್ಷರಗಳು 'ಮಹಾ' ಆಗಿರುವ ಸಾಧ್ಯತೆಗಳಿವೆ. ಇದು ಮಹಾಗಾಮಿಯ ಮಗಳಾದ ಪದ್ಮಶ್ರೀಯ ಸ್ಮಾರಕಶಿಲೆಯಾಗಿದೆ.

ಗುಲ್ಬರ್ಗಾ ಮ್ಯೂಸಿಯಂನಲ್ಲಿನ ಶಾಸನದೊಂದಿಗಿನ ಶಿಲ್ಪವೊಂದರಲ್ಲಿ[೧೦] ಎಡಬಲದ ಚಾಮರಧಾರಿಗಳ ನಡುವೆ ವಿರಾಜಮಾನನಾದ ಪುರುಷನೊಂದಿಗೆ ಆತನ ಮಡದಿಯಂತೆ ತೋರುವ ಮಹಿಳೆಯೊಬ್ಬಳಿದ್ದಾಳೆ. ಆ ಪುರುಷನ ಭುಜದಬಳಿ ಪಾತ್ರೆಯನ್ನು ಹಿಡಿದ ಸೇವಕಿಯಂತೆ ತೋರುವ ಮಹಿಳೆಯ ಶಿಲ್ಪವಿದೆ. **"ರಾಜಮಚಸ ಗಗನಕಸ ಭಾರಿಯಾಯೆ ರಾಜಮಾಚಿಯಾ ರಾಮಸಿರಿಯ"**ಎಂಬ ಈ ಪ್ರಾಕೃತ ಶಾಸನವು 'ರಾಜಅಮಾತ್ಯ ಗಗನಕಸನ ಭಾರ್ಯೆ ರಾಜಾಮಾಚಿಯ ರಾಮಸಿರಿ' ಎಂಬ ಅರ್ಥ ನೀಡುತ್ತದೆ. ಈ ಶಾಸನವು ಅಮಾತ್ಯನ ಮಡದಿಯನ್ನು 'ಅಮಾಚಿ' ಎಂದು ಸಂಭೋದಿಸುತ್ತಿದ್ದ ವಿಚಾರವನ್ನು ತಿಳಿಸುತ್ತದೆ. ಈ ಸ್ಮಾರಕ ಶಿಲೆಯು ರಾಮಸಿರಿ ಎಂಬುವವಳ ಸ್ಮರಣೆಯಲ್ಲಿ ಹಾಕಿಸಿದ್ದೆನ್ನುವುದು ಸ್ಪಷ್ಟವಾಗಿದೆ. ಶಿಲ್ಪದ ಮಧ್ಯಭಾಗದಲ್ಲಿ ಪುರುಷನ ಚಿತ್ರವಿದೆಯಾದರೂ, ಶಾಸನವು ರಾಮಶ್ರೀಯನ್ನು ಉಲ್ಲೇಖಿಸುತ್ತಿರುವುದು ವಿಶೇಷವೆನಿಸುತ್ತದೆ.

ಗುಲ್ಬರ್ಗಾದ ಚಿತ್ತಾಪುರ ತಾಲೂಕಿನ ಬೆಳವಾಡಿಗಿಯಲ್ಲಿ ದೊರೆತ ಸ್ಮಾರಕವೊಂದರ ಮೇಲೆ ಒಂದು ಸಾಲಿನ ಪುಟ್ಟ ಶಾಸನವಿದೆ[೧೧]. ಕಡೆಯ ಎರಡು ಅಕ್ಷರ ತ್ರುಟಿತಗೊಂಡಿದೆ. ತ್ರುಟಿತವಾಗಿರುವ ಈ ಸ್ಮಾರಕದ ಮೇಲಿನ ಪಟ್ಟಿಕೆ ಭಾಗದಲ್ಲಿ ದುಂಡಾದ ಕುರ್ಚಿಯ ಮೇಲೆ ಎಡಗಾಲನ್ನು ಮಡಚಿ, ಬಲಗಾಲನ್ನು ಇಳಿಬಿಟ್ಟು ಕುಳಿತಿರುವ ಒಬ್ಬ ಮನುಷ್ಯನ ಚಿತ್ರವಿದೆ. ಆತನ ಎದುರು ಒಬ್ಬ ಮಹಿಳೆ ಬಲಗೈಯನ್ನು ಆ ಪೀಠದ ಮೇಲಿರಿಸಿಕೊಂಡು ನಿಂತಿದ್ದಾಳೆ. ಚಾಮರ ಬೀಸುವ ಮಹಿಳೆಯೊಬ್ಬಳು ಆ ವ್ಯಕ್ತಿಯ ಎಡ ಭಾಗದಲ್ಲಿ ನಿಂತಿದ್ದಾಳೆ. ಕೆಳ ಹಂತದಲ್ಲಿ ಎತ್ತಿನ ಬಂಡಿಯ ಚಿತ್ರವಿದೆ. ಇದರೊಂದಿಗೆ 'ಕಲಕಸ ಛಯಪ[ಟಿಮ]' (ಕಲಕಸ್ಯ ಛಾಯಾಪ್ರತಿಮಾ) ಎಂಬ ಬರಹ ಇದ್ದು, ಇದು ಕಲಕನ ಸ್ಮಾರಕ ಎಂದು ತಿಳಿಸುತ್ತಿದೆ. ಇದು ಯುದ್ಧದಲ್ಲಿ ಮರಣಿಸಿದ ವೀರನದಿರಬಹುದು. ಕಲಕನ ಬಲಭಾಗದಲ್ಲಿ ಕುಳಿತಿರುವ ಮಹಿಳೆ ಬಹುಶಃ ಆತನ ಮಡದಿ ಇದ್ದಿರಬಹುದು, ಆದರೆ, ಅವಳು ಸಹಗಮನ ಮಾಡಿದವಳೆ? ಎನ್ನುವುದು ನಿಖರವಾಗಿ ತಿಳಿದು ಬರುವುದಿಲ್ಲ. ಇದೇನಾದರೋ ಸತಿ ಶಿಲ್ಪವಾಗಿದ್ದಲ್ಲಿ, ಕರ್ನಾಟಕದಲ್ಲಿ ದೊರೆತಿರುವ ಸತಿಕಲ್ಲುಗಳಲ್ಲಿ ಇದೇ ಪ್ರಾಚೀನವಾದುದೆಂದು ಹೇಳ ಬಹುದು.

ಗುಲ್ಬರ್ಗಾ ವಸ್ತು ಸಂಗ್ರಹಾಲಯದಲ್ಲಿರಿಸಲಾದಜೇವರ್ಗಿಯಲ್ಲಿದೊರೆತಿರುವ ಸ್ಮಾರಕ ಶಿಲೆಯೊಂದರಲ್ಲಿ ಪುರುಷ ಹಾಗೂ ಸ್ತ್ರೀಯರ ಚಿತ್ರವಿದ್ದು ಇಲ್ಲಿ ಪುರುಷಾಕೃತಿಯ ಮೇಲೆ **'ನಾಸಮಸ'**ಎಂದೂ ಸ್ತ್ರೀಯ ಶಿಲ್ಪದ ಮೇಲೆ **'ಸಂಘನಿಯ'** ಎಂಬ ಬರಹವಿರುವುದನ್ನು ಕಾಣಬಹುದು[೧೨].

ಆದರೆ ಇಂತಹ ಸ್ತ್ರೀ ಪುರುಷರಿರುವ ಸ್ಮಾರಕ ಶಿಲೆಯ ವಿಶೇಷತೆ ಏನೆಂಬುದು ತಿಳಿದು ಬರುವುದಿಲ್ಲ. ನಂತರದ ಕಾಲಘಟ್ಟದಲ್ಲಿ ದೊರಕಿರುವ ಸತಿಕಲ್ಲಿನ ಪ್ರಕಾರವೆಂದೂ ಗುರುತಿಸಲಾಗುವುದಿಲ್ಲ. ಇದು ತನ್ನದೇ ಆದ ವಿಶೇಷ ಸಂಸ್ಕೃತಿಯ ಹಿನ್ನೆಲೆಯಲ್ಲಿ ರಚಿತವಾಗಿದೆ, ಇದನ್ನು ಸತಿಕಲ್ಲು ಎಂದು ಹೇಳಲು ಆಧಾರ ಸಾಲದು.

ಕ್ರಿ.ಶ. ೧-೨ನೆಯ ಶತಮಾನದ್ದೆಂದು ಗುರುತಿಸುವ, ಸನ್ನತಿ ದಿಬ್ಬದ ಬಳಿಯ**"[ಘ]ರಿನಿಯ ಸಿರಿಕಿತಾಯ ಕಪತನಸ"** ಎಂಬ ಶಾಸನದಲ್ಲಿನ[೧೩] 'ಕಪತನ' ಎನ್ನುವುದು ವಂಶದ ಉಲ್ಲೇಖ ಇರಬಹುದು ಎಂದು ವಿದ್ವಾಂಸರು ತರ್ಕಿಸುತ್ತಾರೆ. ಇದು ಆ ಮನೆತನದ ಗೃಹಿಣಿ ಸಿರಿಕಿತಳ ಸ್ಮಾರಕ ಫಲಕ. ಕಪತಾನ ಮನೆತನದ ಗೃಹಿಣಿ 'ಸಿರಿಕಿತಾ' ಹಿರಿಯ, ಪ್ರಭಾವಿ ಮಹಿಳೆ ಆಗಿದ್ದಳೆನ್ನುವುದನ್ನು ಇಲ್ಲಿ ಗಮನಿಸಬಹುದು.

ದಾನಶಾಸನ

ಕೇವಲ ಸ್ಮಾರಕ ಶಿಲೆಗಳಲ್ಲಷ್ಟೇ ಅಲ್ಲದೆ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿದ ಶಾತವಾಹನರ ಕಾಲದ ಮಹಿಳೆಯರ ಉದಾಹರಣೆಗಳೂ ದೊರಕುತ್ತವೆ. ಬನವಾಸಿ ಮತ್ತಿತರ ಶಾಸನಗಳಲ್ಲಿ ದಾನ ನೀಡಿದ ಅರಸು ಮನೆತನದ ಮಹಿಳೆಯರ ವಿವರಗಳನ್ನು ಈ ಲೇಖನದ ಆರಂಭದಲ್ಲಿಯೇ ಗಮನಿಸಿದೆ. ಸನ್ನತಿಯ ಸುತ್ತಮುತ್ತಲು ದೊರೆತಿರುವ ಶಾಸನ ಹಾಗೂ ಶಿಲ್ಪಗಳಲ್ಲಿ ಉಪಾಸಿನಿ, ಶ್ರಾವಕಿ, ಗೃಹಿಣಿ, ಭಿಕ್ಷುಣಿ, ಅಂತೇವಾಸಿನಿ (ಶಿಷ್ಯೆ) ಮೊದಲಾದ ಸಾಮಾನ್ಯ ಮಹಿಳೆಯರ ಉಲ್ಲೇಖಗಳು ಲಭಿಸಿವೆ. ಧಾರ್ಮಿಕ ಕಾರ್ಯಗಳ ಹಿನ್ನೆಲೆಯಲ್ಲಿ ಮಹಿಳೆಯರ ವಿಭಿನ್ನ ವಿಚಾರಗಳು ದಾಖಲಾಗಿರುವುದನ್ನು ಇಲ್ಲಿ ಕಾಣಬಹುದು. **'...ಧುಜಿತಕಸ ಕಿತಭೂತಿನೊ ಭಗಿನಿಯಾ ಸಮಾ ಉಪಾಸಿಕಾಯ'** ಎಂಬ ಬರಹದಲ್ಲಿ "ಧುಜಿತಕ ಎನ್ನುವುದು ಸ್ಥಳನಾಮ ಇರಬಹುದು ಆದರೆ, ಮಿಕ್ಕ ವಿವರಗಳಲ್ಲಿ ಅರ್ಥಸ್ಪಷ್ಟವಿಲ್ಲ"ವೆಂದು ಐ.ಕೆ. ಶರ್ಮ ಅವರು ಹೇಳಿದ್ದಾರೆ[೧೪]. ಇಲ್ಲಿ ಕಿತಭೂತಿ, ಭಗಿನಿ, ಸಮಾ ಉಪಾಸಿಕಾ ಎಂಬ ಪದಗಳನ್ನು ಗುರುತಿಸಬಹುದು. ಧುಜಿತಕ ಎಂಬ ಊರಿನ 'ಕಿತಭೂತಿನಿಯ ಭಗಿನಿ ಸರ್ವಉಪಾಸಿನಿ'ಯಾಗಿದ್ದಳೆನ್ನುವ ವಿಚಾರವನ್ನು ಇದು ತಿಳಿಸುತ್ತಿದೆ. **(ಸಮಾಉಪಾಸಿಕಾ = ಸರ್ವೋಪಾಸಿನಿ)**

ಚಂದ್ರಲಾಂಬ ದೇವಾಲಯದಲ್ಲಿನ ಬಿಡಿ ಕಲ್ಲಿನ ಮೇಲಿನ ಶಾಸನ ಬರಹ (ಇ–೨೯)[೧೫] **"...ವಲಿಯತಯಾನಂ ಅಂತೆವಾಸಿನೀಯ...ತಿಕಾಯ ಪಿಯಕೊದೆಯ"** ಎಂದು ತಿಳಿಸುತ್ತದೆ. ಇದು ವಲಿಯತ ಎಂಬುವವನ ಅಂತೆವಾಸಿನಿ (ಶಿಷ್ಯೆ)ಯ ಕುರಿತಾಗಿ ತಿಳಿಸುತ್ತಿದೆ. ಆದರೆ ಆಕೆಯ ಹೆಸರು ತ್ರುಟಿತವಾಗಿದೆ.ಇವಳು ವಲಿಯತನ ಪ್ರೀತಿಯ ಶಿಷ್ಯೆಯಾಗಿದ್ದಳು. (ಪಿಯಕೊದೆಯ = ಪ್ರೀತಿಪಾತ್ರಳಾದವಳು)

ಈ ಮೇಲಿನ ಎರಡು ತ್ರುಟಿತ ಶಾಸನಗಳಲ್ಲಿ ಕಿತಭೂತಿನಿಯ ಸಹೋದರಿ ಹಾಗೂ ವಲಿಯತನ ಶಿಷ್ಯೆಯರ ಹೆಸರು ತಿಳಿದು ಬರುವುದಿಲ್ಲವಾದರೂ ಸರ್ವಉಪಾಸಿನಿ, ಪ್ರೀತಿಯ ಶಿಷ್ಯೆ ಎಂದು ಇವರ ಕಿರುಪರಿಚಯವನ್ನು ಒಂದೆರಡು ಪದಗಳಲ್ಲಿ ತಿಳಿಸಿದೆ.

ವಾಸಿಷ್ಠಿಪುತ್ರ ಸಿರಿ ಸಾತಕರ್ಣಿಯ ರಾಜ್ಯದಲ್ಲಿ ಬೌದ್ಧಭಿಕ್ಷುಣಿಯೊಬ್ಬಳು ಮಾಡಿಸಿದ ಯಕ್ಷನ ಶಿಲ್ಪದ ಮಾಹಿತಿಯನ್ನು ನೀಡುವ ಶಾಸನವೊಂದು ಸನ್ನತಿಯ ಸ್ತೂಪವಿದ್ದ ಜಾಗದಲ್ಲಿ ದೊರೆತಿದ್ದು, ಇದನ್ನು ಈಗ ಚಂದಲಾಂಬಾ ದೇವಾಲಯದಲ್ಲಿ ಇರಿಸಲಾಗಿದೆ. ಈ ಶಾಸನವು ತಿಳಿಸುವಂತೆ, ಪವಜಿತೆನ ಶಿಷ್ಯೆ (ಅಂತೇವಾಸಿನಿ) ನಾಗಬುದ್ಧಿ (ನಾಗಬುಧಿ) ಎಂಬ ಭಿಕ್ಷುಣಿಯು ಯಕ್ಷನ ಶಿಲ್ಪವನ್ನು ನಿರ್ಮಿಸಿದ್ದಾಳೆ[೧೬]. ಮೂರು ಸಾಲಿನ ಈ ಶಾಸನದ ಕಡೆಯ ಭಾಗ ತೃಟಿತವಾಗಿ ಹೆಚ್ಚಿನ ಮಾಹಿತಿ ತಿಳಿದು ಬಂದಿಲ್ಲವಾದರೂ, ಇದು ಯಕ್ಷನ ಶಿಲ್ಪವನ್ನು ನಿರ್ಮಿಸಿರುವ ನಾಗಬುದ್ಧಿ ಎಂಬ ಭಿಕ್ಷುಣಿಯ ಕುರಿತಾದ ಶಾಸನ ಎನ್ನುವುದು ತಿಳಿದುಬರುತ್ತದೆ.

ಚಂದ್ರಲಾಂಬಾ ದೇವಾಲಯದ ಪರಿಸರದ, ಕ್ರಿ.ಶ. ೨ ಶತಮಾನಕ್ಕೆ ಸೇರಿರುವ ಬರಹ **"....ಸಮಲೋಕಿಕಾಯ .... ಬಮ್ಹಿಯ"** ಎಂಬುದನ್ನು ಐ.ಕೆ. ಶರ್ಮ ಅವರು, ಭಂಬಿ ಎಂಬ ಊರಿನ ಶ್ಯಾಮಲೋಕಿಕ ಮಾಡಿಸಿದ ದಾನ ಎಂದು ಅರ್ಥೈಸಿದ್ದಾರೆ[೧೭].

ಈ ಜಾಗದಲ್ಲಿ ದೊರಕಿರುವ ಹಲವು ಹೆಸರುಗಳ ಪಟ್ಟಿಕೆಗಳು ದಾನ ಮಾಡಿದವರದಿರಬಹುದು ಎಂದು ವಿದ್ವಾಂಸರು ತರ್ಕಿಸುತ್ತಾರೆ. ಇವುಗಳಲ್ಲಿ ಕೆಲವು ಪಟ್ಟಿಕೆಗಳ ಬರಹಗಳಲ್ಲಿ ಕೇವಲ ವ್ಯಕ್ತಿಗಳ ಹೆಸರು ಮಾತ್ರ ತಿಳಿದು ಬಂದು ಅವರು ನಿರ್ಮಿಸಿರುವ ಸ್ಮಾರಕ, ವಿಗ್ರಹ ಯಾವುದೇ ವಿವರ ದೊರಕುವುದಿಲ್ಲ.

ಕ್ರಿ.ಶ. ೧ನೆಯ ಶತಮಾನಕೆ ಸೇರಿದ್ದೆಂದು ಗುರುತಿಸಲಾಗುವ, ಸನ್ನತಿ ಚಂದ್ರಲಾಂಬಾ ದೇವಾಲಯದ ಪರಿಸರದ, (ಸನ್ನತಿ–೬) ಶಾಸನವೊಂದರಲ್ಲಿ[೧೮] **"ಸಮನಿಕಾಯ"** (ಶ್ರಮಣಿಕೆಯದು) ಎಂಬ ಉಲ್ಲೇಖವಷ್ಟೇ ದೊರಕುತ್ತದೆ. ಇದೇ ರೀತಿಯ ಮತ್ತೆರಡು ಕೇವಲ ಹೆಸರುಳ್ಳ ಪಟ್ಟಿಕೆಗಳಲ್ಲಿ **'[ಘ][ರಿ*]ಣಿಯ ಅಹಿಮರಿಕಾ[ಯ*]**[೧೮ಅ]**; ಸೋಮಘ[ಘೋಸನಿಕಾಯ]'** ಎಂಬ ಎರಡು ಹೆಸರು ಕಂಡುಬರುತ್ತದೆ. ಇವುಗಳಲ್ಲಿ ಮೊದಲನೆಯದು 'ಗೃಹಿಣಿ ಅಹಿಮರಿಕಾಯ ದಾನ' ಎಂದೂ, ಬಹಳವಾಗಿ ತ್ರುಟಿತವಾಗಿರುವ ಎರಡನೆಯ ಪಟ್ಟಿಕೆಯ ಬರಹವನ್ನು 'ಸೋಮಘೋಷಣಿಯಳ ದಾನ' ಎಂದು ಅರ್ಥೈಸಬಹುದಾಗಿದೆ.

ಕ್ರಿ.ಶ. ಸು. ೨ನೆಯ ಶತಮಾನಕ್ಕೆ ಸೇರಿದೆಯೆಂದು ಗುರುತಿಸಲಾಗುವ ಚಂದ್ರಲಾಂಬ ದೇವಾಲಯದಲ್ಲಿದ್ದ ೫ನೆಯ ಬಿಡಿ ಕಲ್ಲು[೧೯] 'ಘರಿಣಿಯ ಸಮಾ[ಯ*]' ಸಮಾರ್ಯೆ ಹೆಸರಿನ ಗೃಹಿಣಿಯದೆನ್ನುವುದನ್ನು ತಿಳಿಸುತ್ತದೆ.

ಚಂದ್ರಲಾಂಬಾ ದೇವಾಲಯದ ಗೋಡೆಗೆ ಬಳಸಿರುವ ಕಲ್ಲಿನ ಮೇಲಿನಬರಹವೊಂದು **'ನಾಗಬೋಧಿನಿಕಾಯ'** ನಾಗಬೋಧಿನಿಯದು ಎಂದು ತಿಳಿಸುತ್ತಿದೆ[೨೦].

ಕ್ರಿ.ಶ. ೨ನೆಯ ಶತಮಾನಕ್ಕೆ ಸೇರಿರುವ, ಪ್ರಸ್ತುತ ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿರಿಸಿರುವ ಸನ್ನತಿಯ ಒಂದು ಶಾಸನದಲ್ಲಿ[೨೧] ಅಹಿಮರಿಕಾಯನಾಗನಿಕಾಯ (ಅಹಮರಿಕಾ, ನಾಗನಿಕಾ) ಎಂಬ ಇಬ್ಬರ ಹೆಸರು ಕಂಡುಬರುತ್ತದೆ.

ಹೀಗೆ ಕೇವಲ ಹೆಸರುಗಳನ್ನು ಮಾತ್ರ ಉಲ್ಲೇಖಿಸುವ ತ್ರುಟಿತ ಶಾಸನಗಳು ಹೆಚ್ಚಿನ ವಿಚಾರಗಳೇನನ್ನು ತಿಳಿಸದಿದ್ದರೂ, ಅಂದಿನ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಿಕೊಂಡಿದ್ದರು ಎನ್ನುವುದರ ಮೇಲೆ ಬೆಳಕು ಚೆಲ್ಲುತ್ತದೆ. ಕೆಲವೆಡೆ ಶಾಸನ ಬರಹಗಳೊಂದಿಗಿರುವ ಶಿಲ್ಪಗಳು ವಿಚಾರಗಳ ಸ್ಪಷ್ಟತೆಗೆ ಸಹಕಾರಿಯಾಗಿವೆ. ಕೆಲವೊಂದು ಪದಗಳು ಮಹಿಳೆಯರ ಹೆಸರನ್ನು ನೇರವಾಗಿ ಉಲ್ಲೇಖಿಸಿದರೆ ಮತ್ತೆ ಕೆಲವು ಅವರನ್ನು ವಿಶೇಷಣಗಳೊಂದಿಗೆ ತಿಳಿಸುತ್ತದೆ ಉದಾಹರಣೆಗೆ ಅಮಚಿಯ (= ಅಮಾತ್ಯನ ಮಡದಿ), ರಾಮಸಿರಿಯ ಶಾಸನದಲ್ಲಿ **ಗಗನಕಸನನ್ನು ರಾಜಮಚ (ರಾಜಅಮಾತ್ಯ) ಎಂದು ಕರೆದಿರುವ ಕಾರಣ ಪತ್ನಿ** ರಾಜಮಚಿ ಆಗಿದ್ದಾಳೆ. ಘರಿಣಿಯ (= ಗೃಹಿಣಿ), ದಾಸಿ ಮೊದಲಾದ ವೃತ್ತಿಗಳೊಂದಿಗೆ ಅಥವಾ ವಿಶೇಷಣಗಳೊಂದಿಗೆ ಅಂದಿನ ಸಮಾಜವು ಮಹಿಳೆಯರನ್ನು ಗುರುತಿಸುತ್ತಿದ್ದ ವಿಚಾರ ಇಲ್ಲಿ

ಗಮನಿಸಬಹುದು. [ಅ]**ಮಚಿ ಯವಣಿಕಾ ಅಮಚಿ ಸಂಗನಿಕಾ** ಎಂಬ ಬರಹವುಳ್ಳ ಕ್ರಿ.ಶ. ಸು. ೨ನೆಯ ಶತಮಾನದ[೨೨] ಇಂತಹ ಶಾಸನಗಳಿಗೆ ಮತ್ತೊಂದು ಉದಾಹರಣೆಯಾಗಿದೆ. ಅಣಬಿ ಮಠದ ಮುಂದಿನ ಕಟ್ಟೆಗೆ ಒರಗಿಸಿಟ್ಟಿರುವ ಯಶೋಪಾಲಾ ಎಂಬುವ ವ್ಯಕ್ತಿಗೆ ಸಂಬಂಧಿಸಿದ ಶಾಸನದಲ್ಲಿ[೨೩] **ಘರತ** (ಗೃಹಸ), **ಘರಿನಿ** (**ಗೃಹಿಣಿ**) ಎಂಬ ಪದಗಳನ್ನು ಗುರುತಿಸಬಹುದು.

'ದಾಸಿ' ಎಂದಷ್ಟೇ ಉಲ್ಲೇಖವಿರುವ ಈ ಶಾಸನವು, ದಾಸಿಯೋರ್ವಳು ಮಾಡಿರುವ ಯಾವುದೋ ದಾನದ ವಿಚಾರವನ್ನು ತಿಳಿಸುವಂತಿದೆ[೨೪]. ಇಂತಹ ಒಂದೊಂದೇ ಪದಗಳಿರುವ ಇನ್ನೂ ಹಲವು ಶಾಸನಗಳು ದೊರಕಿವೆ. ಪುಟ ೧೦೨ ಉಲ್ಲೇಖಿಸುವಂತೆ, ಚಂದ್ರಲಾಂಬ ದೇವಾಲಯದಲ್ಲಿದ್ದ ೨ನೆಯ ಬಿಡಿ ಕಲ್ಲಿನ ಮೇಲೆ **'ಕೊಮಾರೀಯ'** ಎಂಬ ಬರಹವಿದ್ದು ಈ ಕುಮಾರಿ ಎಂಬುದು ಯಾವುದೋ ಹೆಸರಿನ ಒಂದು ಭಾಗವೇ ಅಥವಾ ಇಂಥವಳ ಮಗಳು ಎಂದು ಸೂಚಿಸುವ ಪದವೇ ಎಂಬುದೂ ಸ್ಪಷ್ಟವಿಲ್ಲ. ಇದರ ಕಾಲ ಸು. ಕ್ರಿ.ಶ. ೨ನೆಯ ಶತಮಾನ ಎಂದು ಗುರುತಿಸಲಾಗಿದೆ.

ಒಂದೆರಡು ಪದಗಳ ಶಾಸನಗಳೇ ಹೆಚ್ಚಾಗಿ ದೊರೆತಿವೆಯಾದರೂ, ಒಂದೆರಡು ವಾಕ್ಯಗಳ ಬರಹವುಳ್ಳ ಕೆಲವು ಶಾಸನಗಳನ್ನೂ ಇಲ್ಲಿ ಗುರುತಿಸಬಹುದು. ಚಂದ್ರಲಾಂಬಾ ದೇವಾಲಯದ ಎರಡು ಸಾಲುಗಳ ಶಾಸನವೊಂದು ತುಸು ದೀರ್ಘ ವಿವರಣೆ ನೀಡುವ ಶಾಸನವಾಗಿದೆ[೨೫]:

೧ [ಸಿರಿ **ಗೌತಮೀ**] **ಪುತಸ ಹಥಿಲಸ ನಾಟಿಕಾಯ ಬುಧ ಸೇನಿಯಾನಂ ಮುಣಾಥೀಯ ನಾಟಿಕಾಯ ಪಕಾರ ಯತೀಯಾಯ ಗೊವೀದಾಸೀಯ**

೨ [**ನಾಟಿ**]**ಕಾಯ ನಡಿಯ ಗುಡ ಪುತೀಯಾ ಅ ಅಯದಾಸೀಯಾ ನಡಿಯ ವಾಳುಕಿಯಾಯ ಮುಗುಡೀಕಾಯ**

ಈ ಶಾಸನದಲ್ಲಿ 'ಸಿರಿ ಗೌತಮೀ ಪುತ್ರ ಹಥಿಲ' ಎಂಬ ಕೆಲವೊಂದು ಪದಗಳನ್ನು ಗುರುತಿಸಬಹುದು. ಇಲ್ಲಿನ 'ನಾಟಿಕಾಯ' ಎಂಬ ಪದ ನಟುವರ್ಗದವರನ್ನು ಹೆಸರಿಸಿಸುತ್ತಿರಬಹುದು.ಈ ಎರಡು ಸಾಲಿನ ಶಾಸನದಲ್ಲಿ ನಾಟಿಕಾಯ ಎಂಬುದು ಮೂರು ಬಾರಿ ಪುನರಾವರ್ತನೆ ಆಗಿದೆ. ಅದರಲ್ಲಿ ಗೋವೀದಾಸೀಯ, ನಾಟಿಕಾಯ ನಡಿಯ ಗುಡ ಪುತೀಯಾ ಅಯದಾಸೀ ಎಂಬ ಹೆಸರು ಸ್ತ್ರೀ ವಾಚಿಯಾಗಿದ್ದು, ದಾಸೀ ಎಂಬ ಪದ ಅವರ ಹೆಸರಿನೊಂದಿಗೆ ಸೇರಿಕೊಂಡಿದೆ. ಅಂದಿನ ಸಮಾಜದಲ್ಲಿ ಕಲಾವಿದೆಯರಾಗಿ ಗುರುತಿಸಿಕೊಂಡಿದ್ದ ಮಹಿಳೆಯರು ತಮ್ಮನ್ನು ಪರಿವಾರಸಮೇತ ಹೆಸರಿಸಿಕೊಂಡು ತಾವು ನಡೆಸಿರುವ ಕಾರ್ಯವನ್ನು ತಿಳಿಯಪಡಿಸಲು ಶಾಸನ ಹಾಕಿಸುತ್ತಿದ್ದ ವಿಚಾರದ ಮೇಲೆ ಇದು ಬೆಳಕು ಚೆಲ್ಲುತ್ತದೆ.

ಸನ್ನತಿ ಗ್ರಾಮದ ಬೀರಪ್ಪನ ಗುಡಿಯ ಮುಂದೆ ನೆಟ್ಟಿರುವ ಕ್ರಿ.ಶ. ಸು. ೨ನೆಯ ಶತಮಾನಕ್ಕೆ ಸೇರಿದೆ ಎಂದು ಗುರುತಿಸಲಾದ ಶಾಸನವೊಂದು ಭೋಜಕಸ ಮುಗುರ ಕೊಣ್ಣಸ ಭೋಜಿಕಿನಿಯ ಕಾಮಾಯ ಲೇಖಕ ಪುತಸ ನನ್ನ ಕೊಟವಸ ಎಂಬ ಉಲ್ಲೇಖವನ್ನು ಒಳಗೊಂಡಿದೆ[೨೬].

ಅಮಚಿ, ಘರಿನಿ (ಗೃಹಿಣಿ) ಪದಗಳಂತೆಯೇ ಭೋಜಕ–ಭೋಜಿಕಿನಿಯ ಎಂಬ ಪದಗಳನ್ನು ಗುರುತಿಸಬಹುದು. ಇದು ಸ್ಪಷ್ಟವಾಗಿ ಏನನ್ನು ಸೂಚಿಸುತ್ತದೆ ಎಂದು ತಿಳಿಸದಿದ್ದರೂ ಅಧಿಕಾರಿ ಇರಬಹುದೆಂದು ತಿಳಿಯಬಹುದು. ಪತಿಗೆ ಸರಿಸಮಾನವಾದ ಸ್ಥಾನವನ್ನು ಪತ್ನಿಯರು ಹೊಂದಿರುತ್ತಿದ್ದ ಉಲ್ಲೇಖಗಳಿವೆ. ಅಂತೇವಾಸಿನಿ (ಶಿಷ್ಯ) ಎಂದು ಪುರುಷರನ್ನು ಹೆಸರಿಸಿರುವಂತೆ ಅಂತೇವಾಸಿನಿ ಎಂದು ಮಹಿಳೆಯರನ್ನೂ ಹೆಸರಿಸಿದ ಶಾಸನಗಳು ಲಭಿಸಿರುವುದರಿಂದ ಮಹಿಳಾ ಶಿಷ್ಯರೂ (ಶಿಷ್ಯೆಯರೂ) ಇರುತ್ತಿದ್ದರು. ಇವರು ತಮ್ಮ ಗುರುಗಳ ಪಿಯಕೊದೆಯ (ಪ್ರೀತಿಪಾತ್ರಳಾದವಳು), ಪ್ರಿಯ ಶಿಷ್ಯೆ ಎಂದು ಹೇಳಿಕೊಂಡಿರುವ ಉದಾಹರಣೆಗಳು ಪುರುಷ ಶಿಷ್ಯರಿಗೆ ಸರಿಸಮಾನವಾಗಿ ಮಹಿಳೆಯರಿಗೂ ವಿದ್ಯೆ, ಧಾರ್ಮಿಕ ಕಲಿಕೆ ಕಲಿಸುತ್ತಿದ್ದರು ಎಂದು ತಿಳಿಯಬಹುದಾಗಿದೆ.

ಭಗಿನಿ, ಪುತ್ರಿ ಎಂಬ ಉಲ್ಲೇಖಗಳೊಂದಿಗೆ ಮಹಿಳೆಯರಿಗೆ ಪ್ರತ್ಯೇಕ ಗುರುತು, ವ್ಯಕ್ತಿತ್ವ ತಂದುಕೊಡುವ ಪದಗಳಾದ ಉಪಾಸಿಕಾಯ, ಸಮಾಉಪಾಸಿಕಾ (ಸರ್ವೋಪಾಸಿನಿ), ಭಿಕ್ಷುಣಿ, ದಾಸಿ, ಅಂತೆವಾಸಿನಿ (ಶಿಷ್ಯೆ) ಮೊದಲಾದ ವಿಶೇಷಣಗಳೊಂದಿಗೆ ಗುರುತಿಸಿಕೊಳ್ಳುವ ಅವಕಾಶ ಅಂದಿನ ಸಮಾಜದಲ್ಲಿತ್ತು.

ಮಾತೃಪ್ರಧಾನ ಸಂಸ್ಕೃತಿ

ಶಾತವಾಹನರ ಕಾಲದಲ್ಲಿ ಮಾತೃಪ್ರಧಾನ ಸಮಾಜ ಇದ್ದುದನ್ನು ಗುರುತಿಸಬಹುದಾಗಿದೆ.ಇಲ್ಲಿನ ಕೆಲವು ಶಾಸನಗಳು ಇದಕ್ಕೆ ಪುಷ್ಟಿ ಒದಗಿಸುತ್ತದೆ. ಈ ಮೇಲೆ ಉಲ್ಲೇಖಿಸಿರುವ "ಗಾಮಿಕುಮಾರಿಯ ಪದಮಸಿರಿಕಾಯ" (ಗಾಮಿಯ ಮಗಳಾದ ಪದ್ಮಶ್ರೀಯದು) ಎಂದು ಪದ್ಮಶ್ರೀ ಮಾಡಿಸಿರುವ ಶಿಲ್ಪವೊಂದನ್ನು ಹೆಸರಿಸುವ ಶಾಸನವು ಪದ್ಮಶ್ರೀಯನ್ನು ಅವಳ ತಾಯಿ ಗಾಮಿಕುಮಾರಿಯ ಹೆಸರಿನೊಂದಿಗೆ ಉಲ್ಲೇಖಿಸಿದೆ.

ಮೂಲತಃ ಸನ್ನತಿ–೪, ಸ್ತೂಪ–೧ಕ್ಕೆ ಸೇರಿದ್ದು, ಈಗ ಅಲ್ಲಿನ ದುರ್ಗಾ ದೇವಾಲಯದ ಗೋಡೆಯ ಕಲ್ಲಾಗಿರುವ ಕ್ರಿ.ಶ. ೨ನೆಯ ಶತಮಾನಕ್ಕೆ ಸೇರಿರುವ ಶಾಸನವೊಂದು "ಮುಡಾಣ ಮಹಾಗಾಮಿ ಕುಮಾರಸ ದೆತಿಕಸ ಭಟಿ ಬಾಲಕಾಯ ಅಹಿಮರಿಕಾಯ ಪುರಿಸದತಾಯ"–ಎನ್ನುವುದನ್ನು ಐದು ಸಾಲುಗಳಲ್ಲಿ ಕೆತ್ತಿದೆ[೨೭]. ಇಲ್ಲಿ ಒಂದೇ ಕುಟುಂಬದ ಸದಸ್ಯರ ನಾಲ್ವರ ಹೆಸರನ್ನು ಕಾಣುತ್ತೇವೆ. ಮುಡಾಣ ಎನ್ನುವುದು ಊರಿನ ಹೆಸರಾಗಿದೆ.ಈಗಲೂ ಇದೇ ಹೆಸರಿನಲ್ಲಿಯೇ ಈ ಗ್ರಾಮವನ್ನು ಕರೆಯಲಾಗುತ್ತಿದೆ. ಈ ಮುಡಾಣದ ಮಹಾಗಾಮಿಯ ಕುಮಾರ ದೆತಿಕಸ ಭಟಿ (ಭಟ್ಟ?) ಮಗಳು ಅಹಿಮರಿಕಾ, ಪುರಿಸದತಾಯ (ಪುರುಷದತ್ತ) ಬಹುಶಃ ಈತ ಅವಳ ಪತಿ. ಇವರೆಲ್ಲಾ ದಾನ ಅಥವಾ ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸಿದ್ದಿರಬೇಕು. ಇಲ್ಲಿ ಮನೆಯ ಮುಖ್ಯಸ್ಥೆಯಾಗಿ ಮಹಿಳೆಯ ಹೆಸರನ್ನು ಮೊದಲು ದಾಖಲಿಸಿರುವುದನ್ನು ಗಮನಿಸಬಹುದು. ಶಾತವಾಹನರ ಕಾಲದಲದಲ್ಲಿ ತಾಯಿಯ ಹೆಸರನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳುವ ಪದ್ಧತಿ ಇತ್ತೆನ್ನುವುದನ್ನು ಗಮನಾರ್ಹ. ಅರಸು ಮನೆತನಗಳಲ್ಲಿ ಹಾರತೀ ಪುತ್ರ, ಗೌತಮೀ ಪುತ್ರ ಎಂಬ ಹೆಸರುಗಳು ಪ್ರಮುಖ ಉದಾಹರಣೆಗಳಾಗಿವೆ.

ಮಾತೃಪ್ರಧಾನ ಸಮಾಜದೊಂದಿಗೆ ಇಲ್ಲಿ ಮಹಿಳೆಯರನ್ನು ಅವರ ಊರಿನೊಂದಿಗೆ ಗುರುತಿಸುತ್ತಿದ್ದ ಪದ್ಧತಿ ಇದ್ದುದನ್ನೂ ಗುರುತಿಸಬಹುದು.'ಮುಡಾಣದ ಮಹಾಗಾಮಿಯ ಕುಮಾರ' ಎಂಬ ಶಾಸನದ ಈ ಸಾಲಿನಲ್ಲಿ ಮಗನನ್ನು ತಾಯಿ ಮಹಾಗಾಮಿಯ ಹೆಸರಿನೊಂದಿಗೆ ಗುರುತಿಸಿರುವುದಲ್ಲದೆ ಮುಡಾಣದ ಮಹಾಗಾಮಿ ಎಂದು ಅವಳ ಊರನ್ನೂ ಹೆಸರಿಸಿದೆ. ಗುಲ್ಬರ್ಗ ವಸ್ತುಸಂಗ್ರಹಾಲಯದಲ್ಲಿರುವ ಕ್ರಿ.ಶ. ಸು. ೨ನೆಯ ಶತಮಾನ ೧ನೆಯ ಬಿಡಿ ಕಲ್ಲಿನ ಮೇಲೆ[೨೮] **'[ಘ]ರಿಣಿಯ ಸಿಹಳಿಯ ಹಮನದಾಯ'**–ಎಂಬ ಉಲ್ಲೇಖವಿದೆ. ಹಮನದಾಯ ಎಂಬ ಊರಿಗೆ ಸೇರಿದ ಗೃಹಿಣಿ ಸಿಂಹಳಿಯಾ ಎಂಬುದನ್ನು ಇದು ಸೂಚಿಸುತ್ತಿದೆ. ಇಂತಹ ಹಲವಾರು ಉದಾಹರಣೆಗಳು ದೊರಕುತ್ತವೆ.

ಧಾರ್ಮಿಕ ಪ್ರಭಾವ

ಬೌದ್ಧಧರ್ಮದ ಪ್ರಭಾವ ಶಾತವಾಹನರ ಕಾಲದಲ್ಲಿ ದಟ್ಟವಾಗಿದ್ದುದನ್ನು ಗುರುತಿಸುತ್ತೇವೆ. ಬೌದ್ಧಧರ್ಮದಲ್ಲಿ ಬುದ್ಧನ ಕಾಲದಿಂದಲೇ ಮಹಿಳೆಯರಿಗೂ ಧಾರ್ಮಿಕ ಸ್ವಾತಂತ್ರ ದೊರಕಿತ್ತು. ಬುದ್ಧನು ಮೊದಲು ಸ್ತ್ರೀಯರಿಗೆ ಬೌದ್ಧಧರ್ಮದ ದೀಕ್ಷೆಯನ್ನು ನೀಡಲು ನಿರಾಕರಿಸಿದ್ದರೂ, ತನ್ನ ಶಿಷ್ಯ ಹಾಗೂ ಬಂಧುವಾಗಿದ್ದ ಆನಂದನ ಹಾಗೂ ತನ್ನ ಸಾಕುತಾಯಿ ಮಹಾ ಪ್ರಜಾಪತಿ ಗೌತಮಿಯ ಒತ್ತಾಯಕ್ಕೆ ಮಣಿದು ಬೌದ್ಧ ಸಂಘದಲ್ಲಿ ಭಿಕ್ಷುಣಿಯರಿಗೂ ಅವಕಾಶ ನೀಡಲು ಒಪ್ಪಿಗೆ ನೀಡಿದ್ದ. ಸ್ತ್ರೀಯರು ಭಿಕ್ಷುಣೀ ಸಂಘವನ್ನು ಸೇರಿದ ನಂತರದಲ್ಲಿ ಒಬ್ಬ ಸ್ವತಂತ್ರ ವ್ಯಕ್ತಿಯಾಗುತ್ತಿದ್ದರು. ಇವರು ಭಿಕ್ಷುಗಳಂತೆ ಕೇಶಮುಂಡನ ಮಾಡಿಕೊಂಡು ಕಾಷಾಯ ವಸ್ತ್ರ ಧರಿಸಿ ಕಾಡು–ಬೆಟ್ಟಗಳಲ್ಲಿ ರಾತ್ರಿ–ಹಗಲು ಎನ್ನದೆ ನಿರ್ಭೀತಿಯಿಂದ ಏಕಾಂಗಿಯಾಗಿ ಓಡಾಡಿಕೊಂಡಿರುವ ಸ್ವಾತಂತ್ರ ಪಡೆದಿದ್ದರು. ಗೌತಮ ಬುದ್ಧನು 'ವಿನಯ ಪಿಟಕ'ದಲ್ಲಿ ಭಿಕ್ಷು–ಭಿಕ್ಷುಣಿಯರು ಅನುಸರಿಸಬೇಕಾದ ಜೀವನ ನಿಯಮಗಳನ್ನು ಸಮಾನವಾಗಿಯೇ ಉಪದೇಶಿಸಿದ್ದಾನೆ. 'ಸದ್ಧರ್ಮ ಪುಂಡರೀಕ ಸೂತ್ರ' ತಿಳಿಸುವಂತೆ ಭಗವಾನ್ ಬುದ್ಧನು ಪವಿತ್ರ ಶಿಖರದ (ರಾಜಗೃಹದ) ಮೇಲೆ ಧರ್ಮಸಭೆ ನಡೆಸಿದಾಗ ಆರು ಸಾವಿರ ಭಿಕ್ಷುಣಿಯರು ಅಲ್ಲಿ ಉಪಸ್ಥಿತರಿದ್ದರು ಎಂದು ತಿಳಿದುಬರುತ್ತದೆ.

ಭಿಕ್ಷುಣಿಯರಿಂದಲೇ ರಚಿಸಲ್ಪಟ್ಟ 'ಥೇರಗಾಥಾ' ಗ್ರಂಥದಲ್ಲಿ ತಿಳಿದು ಬಂದಿರುವಂತೆ ಭಿಕ್ಷುಣಿಯರು ಉನ್ನತ ಅಧ್ಯಾತ್ಮಿಕ ಸಾಧನೆ, ನೈತಿಕ ಜೀವನ ಮತ್ತು ಧರ್ಮ ತತ್ವಾರ್ಥಗೋಷ್ಠಿಗಳಲ್ಲಿ ಜಿಜ್ಞಾಸುಗಳ ಪ್ರಶ್ನೆ ಸಂದೇಹಗಳಿಗೆ ಸೂಕ್ತ ಉತ್ತರ ನೀಡುವ, ಧರ್ಮವಾದ ನಡೆಸುವ ನೈಪುಣ್ಯತೆ ಪಡೆದವರಾಗಿರುತ್ತಿದ್ದರು. ಉಪ್ಪಾಲಿ, ಅಲವಿತೇ, ಸೋಮಾ, ವಿಜಯಾ, ಶೀಲಾ, ವಜ್ರಾ, ಉಪಾಚಲಾ, ಗೌತಮೀ, ಸಿಸುಪಚಲಾ ಮುಂತಾದವರು ಸರ್ವಸಂಗಪರಿತ್ಯಾಗ ಮತ್ತು ಆತ್ಮಸಂಯಮದ ಪರಾಕಾಷ್ಠೆಯನ್ನು ತಲುಪಿದ್ದ ಭಿಕ್ಷುಣಿಯರು ಎಂದು ಥೇರಿಗಾಥಾ ತಿಳಿಸುತ್ತದೆ. 'ಪರಮಾರ್ಥ ದೀಪಾಣಿ' ಎಂಬ ವ್ಯಾಖ್ಯಾನ ಗ್ರಂಥವು ಜ್ಯೇಷ್ಠರಾದ ಥೇರಿಗಳ ಜೀವನದ ಬಗ್ಗೆ, ಬೌದ್ಧಧರ್ಮದ ಸಪ್ತಸ್ತ್ರೀಯರೆಂದು ಪ್ರಸಿದ್ಧರಾದ ಖೇಮ, ಉಪ್ಪಾಲಿ, ಪಟಚಾರ, ಆಮ್ರಪಾಲಿ, ಕಿಸಾಗೋತಮಿ, ಧಮ್ಮಾದಿನ್ನ ಮತ್ತು ಬುದ್ಧಕುಂಡಲ ಕೇಶಿ ಎಂಬ ಭಿಕ್ಷುಣಿಯರಾಗಿದ್ದ ಏಳುಮಂದಿ ಸ್ತ್ರೀಯರ ಬಗ್ಗೆ ಮಾಹಿತಿ ನೀಡುತ್ತದೆ. ಇವರಲ್ಲಿ ಸಾಮಾನ್ಯ ಗೃಹಿಣಿಯರಿಂದ ಅರಸು ಮನೆತನದ ಮಹಿಳೆಯರವರೆಗೂ ಸಮಾಜದಲ್ಲಿ ವಿಭಿನ್ನ ಸ್ಥಾನದಲ್ಲಿ ಗುರುತಿಸಲಾಗುತ್ತಿದ್ದ ಮಹಿಳೆಯರಿದ್ದರು.

ಈ ಲೇಖನದಲ್ಲಿ ಉಲ್ಲೇಖಿಸಿರುವ ಶಾತವಾಹನರ ಕಾಲದ ಉಲ್ಲೇಖಿತ ಮಹಿಳೆಯರು ಬೌದ್ಧಧರ್ಮೀಯರೇ ಆಗಿದ್ದಾರೆ, ಅವರು ನಿರ್ಮಿಸಿದ ಆರಾಮ, ಬೌದ್ಧಭಿಕ್ಷುಗಳಿಗೆ ನೀಡಿದ ದಾನ ಮೊದಲಾದವುಗಳ ಹಿನ್ನೆಲೆಯಲ್ಲಿ ಅವರ

ಮೇಲೆ ಈ ಧರ್ಮದ ಪ್ರಭಾವ ಇದ್ದುದನ್ನೂ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಬನವಾಸಿಯಲ್ಲಿ ದೊರೆತಿರುವ ವಾಸಿಷ್ಠೀಪುತ್ರ ಸಿವಸಿರಿ ಪುಳುಮಾವಿ ರಾಜನ ಮಹಾದೇವಿಯ ಪ್ರಾಚೀನ ಸ್ಮಾರಕಶಾಸನದಲ್ಲಿಯೂ ಬೌದ್ಧಧರ್ಮದ ಕುರುಹನ್ನು ಗಮನಿಸಬಹುದು. ಪ್ರಾಕೃತ ಭಾಷೆಯ ಈ ಶಾಸನ 'ಸಿದ್ಧಂ' ಎಂಬ ಸ್ವಸ್ತಿ ಪದದಿಂದ ಪ್ರಾರಂಭವಾಗಿದೆ. ಈ ಶಾಸನ ಶಿಲೆಯ ಒಂದು ಬದಿಯಲ್ಲಿ ಉಬ್ಬುಶಿಲ್ಪದ ಚೈತ್ಯವಿನ್ಯಾಸವು ಬೌದ್ಧರ ಲಕ್ಷಣ ತಿಳಿಸುತ್ತದೆ.

ಬುದ್ಧನ ಕಾಲದಿಂದಲೇ ಧಾರ್ಮಿಕ ಸ್ವಾತಂತ್ರಗಳಿಸಿದ್ದ ಮಹಿಳೆಯರು ಕ್ರಿಸ್ತಶಕದ ಆರಂಭದ ಕಾಲದಲ್ಲಿ ಹೆಚ್ಚು ಚಟುವಟಿಕೆಯಿಂದ ಕೂಡಿರಲು ಕಾರಣವಾಗಿದೆ. ಉತ್ತರ ಭಾರತದಲ್ಲಿ ವ್ಯಾಪಕವಾಗಿದ್ದ ಈ ಧರ್ಮವು ದಕ್ಷಿಣಕ್ಕೂ ವ್ಯಾಪಿಸಿರುವುದನ್ನು ಇಲ್ಲಿ ಗುರುತಿಸಬಹುದು. ಅಲ್ಲದೆ ವಿದ್ವಾಂಸರು ಗುರುತಿಸುವಂತೆ ಆಂಧ್ರದ ನಾಗಾರ್ಜುನ ಕೊಂಡದವು ಪ್ರಮುಖ ಬೌದ್ಧ ಕೇಂದ್ರವಾಗಿದ್ದು, ಉತ್ತರ ಭಾರತದಿಂದ ಆ ಪ್ರದೇಶಕ್ಕೆ ಪ್ರಯಾಣ ಮಾಡುವ ಬೌದ್ಧ ಧರ್ಮೀಯರು ಗುಲ್ಬರ್ಗಾದ ಮೂಲಕವೇ ಸಾಗುತ್ತಿದ್ದುದೇ ಈ ಭಾಗದಲ್ಲಿ ಹೆಚ್ಚಿನ ಜನ ಬೌದ್ಧ ಧರ್ಮದ ಪ್ರಭಾವಕ್ಕೆ ಒಳಗಾಗಲು ಕಾರಣ ಹಾಗೂ ಈ ಪ್ರದೇಶದಲ್ಲಿಯೇ ಹೆಚ್ಚಿನ ಶಾಸನಗಳು ದೊರೆತಿರುವುದಕ್ಕೂ ಕಾರಣವಾಗಿದೆ.

ಈ ಶಾಸನಗಳು ತುಂಬಾ ಸಂಕ್ಷಿಪ್ತವಾಗಿದ್ದರೂ ಅಂದಿನ ಸಾಮಾಜಿಕ, ರಾಜಕೀಯ ವಿಚಾರಗಳೊಂದಿಗೆ ಮಹಿಳೆಯರಿಗೆ ಸಂಬಂಧಿಸಿದಂತೆ ಕೆಲವೊಂದು ಮುಖ್ಯ ವಿಚಾರಗಳನ್ನು ಸೂಚಿಸಿವೆ.

ಇಲ್ಲಿನ ಕೆಲವು ಶಾಸನಗಳ ಅರ್ಥಸ್ಪಷ್ಟತೆಗಾಗಿ ಅಧ್ಯಯನಗಳು ನಡೆಯುತ್ತಲೇ ಇದ್ದು, ವಿಭಿನ್ನ ಹಂತಗಳಲ್ಲಿ ಹೆಚ್ಚು ಸ್ಪಷ್ಟತೆ ಗೋಚರಿಸಿರುವ ಉದಾಹರಣೆಗಳೂ ಇವೆ.

ಸು. ಕ್ರಿ.ಶ. ೧ನೆಯ ಶತಮಾನಕ್ಕೆ ಸೇರಿದ್ದೆಂದು ಗುರುತಿಸಲಾಗುವ, ಸನ್ನತಿ ಚಂದ್ರಲಾಂಬಾ ದೇವಾಲಯದ ಪರಿಸರದ (ಸನ್ನತಿ-೬) ಶಾಸನವೊಂದರಲ್ಲಿ[೨೯] ಶ್ರಮಣಿಕೆಯದು ಎಂಬ ಅರ್ಥ ಕೊಡುವ ಸಮನಿಕಾಯ (**MASI-93**ನಲ್ಲಿ) ಎಂಬ ಪದವನ್ನು'ಅಮಣಿಕಾಯ' ಎಂದು ಓದಲಾಗಿತ್ತು.ಇಲ್ಲಿನ ಶಾಸನಗಳಲ್ಲಿ ಅಹಮರಿಕ ಹೆಸರು ಹಲವು ಕಡೆ ಕಾಣಸಿಗುವುದರಿಂದ ಇಂತಹ ಗೊಂದಲಗಳು ಉಂಟಾಗುತ್ತವೆ. ಸುಮಾರು ಇದೇ ಕಾಲದ್ದಿರಬಹುದಾದ ಮತ್ತೊಂದು ಶಾಸನ **ನಾಗಬೋಧಿನಿಕಾಯ** (ನಾಗಬೋಧಿನಿಯದು)[೩೦] ಎಂಬ ಬರಹವನ್ನು ಆರಂಭದಲ್ಲಿ [MASI-93ನಲ್ಲಿ] ಒಮ್ಮೆ 'ತಗಬೊದಿನಿಕಾಯ' ಎಂದೂ ಮತ್ತೊಮ್ಮೆ 'ತಗಬೊಗಿನಿಕಾಯ' ಎಂದು ಓದಲಾಗಿತ್ತು. ಎರಡು ಸಾವಿರಾರು ವರ್ಷಗಳಷ್ಟು ಹಳೆಯದಾದ ಈ ಶಾಸನಗಳಲ್ಲಿ ಅಕ್ಷರಗಳು ಸವೆದುಹೋಗಿ, ಕೆಲವು ಭಾಗ ತ್ರುಟಿತಗೊಂಡಿರುವುದರಿಂದ ಇಂತಹ ಪ್ರಮಾದಗಳು ಸಹಜ. ಅರ್ಥಸ್ಪಷ್ಟತೆಗಾಗಿ ವಿದ್ವಾಂಸರು ಅಧ್ಯಯನ ನಡೆಸುತ್ತಲೇ ಇರುವುದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಾಹಿತಿ ಲಭಿಸಿ ಹೆಚ್ಚಿನ ವಿಚಾರ ಹೊರಬರುವ ಸಾಧ್ಯತೆಗಳಿವೆ. ಪ್ರಸ್ತುತ ಲೇಖನವು ಕ್ರಿಸ್ತಶಕ ಆರಂಭಕಾಲದ ಮಹಿಳೆಯರ ಸ್ಥೂಲ ಚಿತ್ರಣವಾಗಿದೆ.

[ಈ ಲೇಖನದಲ್ಲಿ ದಿ. ಎಂ.ವಿ. ವಿಶ್ವೇಶ್ವರ ಮತ್ತು ಎಸ್. ಕಾರ್ತಿಕ್ ಅವರು ಪರಿಷ್ಕರಿಸಿದ ಪಾಠಗಳನ್ನು ಅವರ ಅಪ್ರಕಟಿತ ಗ್ರಂಥದಿಂದ ಬಳಸಿಕೊಳ್ಳಲಾಗಿದೆ. ಈ ಶಾಸನ ಪಾಠಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಎಸ್. ಕಾರ್ತಿಕ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ಅಡಿಟಿಪ್ಪಣಿಗಳು

೧. ವರದರಾಜ ಆರ್. ಉಮರ್ಜಿ, ಕರ್ನಾಟಕ ಪ್ರಾಕೃತ ಕವಿ ಚರಿತೆ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮.

೨. EL ಸಂಪುಟ ೨೦, ಭಾಗ ೧, ಪು. ೨೪-೨೫.

೩. ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ತಾಳ್ತಜೆ ವಸಂತಕುಮಾರ್, ಪು. ೭೪.

೪. ಲೂಡ್ಸ್ ಲಿಸ್ಟ್ ಸಂಖ್ಯೆ 1021 (luder's list No.1021).

೫. [ಬನವಆ ಸಿಕ ಶಾ ಕ, ಪುಟ ೯-೧೭.

೬ ಡಾ. ಎ.ವಿ. ನರಸಿಂಹಮೂರ್ತಿ, ಕರ್ನಾಟಕ ಪುರಾತತ್ವ, ಕೆ.ಎಸ್.ಒ.ಯು, ಮೈಸೂರು.

೭. ಕ ಶಾ ಕ, ಪುಟ ೧-೯.

೮. ಎ.ಇ. ೩೪, ಸಂ. ೪ ಪು. ೨೦.

೯. Early Brahmi Inscriptions From Sannati, ಸಿ–೩, **ಪುಟ–೮೮, ಪ್ಲೇಟ್–೧೯;** Memorial Stones from Sannati-J.Varaprasada Rao, **ಸಂಖ್ಯೆ ೨.೮, ಪುಟ ೧೦೧, ಪ್ಲೇಟ್–೪.**

೧೦. Early Brahmi Inscriptions From Sannati, ಬಿ–೨, ಪುಟ ೮೨, ಪ್ಲೇಟ್–೧೬; ಜರ್ನಲ್ ಆಫ್ ಕರ್ನಾಟಕ್ ಯೂನಿವರ್ಸಿಟಿ, ಸಂಪುಟ ೪, ಪುಟ ೮; Memorial Stones from Sannati-J.Varaprasada Rao, ಸಂಖ್ಯೆ ೨.೨, ಪುಟ ೧೦೦, ಪ್ಲೇಟ್–೧೦ ಎ.

೧೧. ಎ.ಇ ಸಂ. ೩೭, ಸಂಖ್ಯೆ ೨೨, ಪು. ೧೩೧.

೧೨. Early Brahmi Inscriptions From Sannati**8, ಐ.ಕೆ. ಶರ್ಮ & ಜೆ. ವರಪ್ರಸಾದ್ ರಾವ್.**

೧೩. M A S I-93, ಸಂಖ್ಯೆ ೩೯೫, ಪ್ಲೇಟ್ ೨೩ ಬಿ.

೧೪. Early Brahmi Inscriptions From Sannati, ಸಿ–೧೦, ಪುಟ ೯೦, ಪ್ಲೇಟ್ ೨೧ ಎ.

೧೫. ಐ.ಕೆ. ಶರ್ಮ, ಶಾತವಾಹನ ಅರಸರ ಶಾಸನಗಳು, ಪುಟ ೧೦೨, ಇ–೨೯; ARIE ಬಿ ೯೩, ೯೬೮–೬೯, ಪುಟ ೩೨.

೧೬. Early Brahmi Inscriptions From Sannati, ಎ–೨, ಪುಟ ೭೫, ಪ್ಲೇಟ್ ೧೪ ಎ.

೧೭. EarlyBrahmi Inscriptions From Sannati, ಇ–೧೦, ಪುಟ ೧೦೦, ಪ್ಲೇಟ್ ೨೬.

೧೮. Early Brahmi Inscriptions From Sannati, ಇ–೭, ಪುಟ ೯೯, ಪ್ಲೇಟ್ ೨೬.

೧೮ಅ. Early Brahmi Inscriptions From Sannati, ಡಿ–೩, ಪುಟ ೯೩–೯೪, ಪ್ಲೇಟ್ ೨೨ಎ.

೧೯. Memorial Stones from Sannati-J.Varaprasada Rao, ಸಂಖ್ಯೆ–೫.೩, ಪುಟ ೧೦೫.

೨೦. Early Brahmi Inscriptions From Sannati, **ಸಿ–೨, ಪುಟ ೮೭, ಪ್ಲೇಟ್ ೧೮.**

೨೧. Early Brahmi Inscriptions From Sannati, ಡಿ–೧, ಪುಟ ೯೩, ಪ್ಲೇಟ್ ೨೨ಎ; Memorial Stones from Sannati-J. Varaprasada Rao, ಸಂಖ್ಯೆ ೪.೨, ಪುಟ ೧೦೩.

೨೨. Early Brahmi Inscriptions From Sannati, ಬಿ–೬, ಪುಟ ೮೫, ಪ್ಲೇಟ್ ೧೭ ಎ ; Memorial Stones from Sannati-J. Varaprasada Rao, ಸಂಖ್ಯೆ ೨.೩, ಪುಟ ೧೦೦.

೨೩. ಇ.ದ–೧೨, ೧೯೯೭, ಪುಟ ೩೦–೩೧.

೨೪. ಪುಟ ೧೦೧, ಲಿಂಗ ಸೇನಪ್ಪನ ಮನೆಯ ಬಳಿಯಿರುವ ಕಲ್ಲಿನ ಮೇಲೆ ೩೮; Early Brahmi Inscriptions From Sannati, ಇ–೧೭**, ಪುಟ** ೧೦೧.

೨೫. Early Brahmi Inscriptions From Sannati, **ಡಿ–೬, ಪುಟ ೯೪–೯೫, ಪ್ಲೇಟ್ ೨೨ಬಿ.**

೨೬ Memorial Stones from Sannati-J.Varaprasada Rao, ಸಂಖ್ಯೆ ೨.೭, ಪುಟ ೧೦೧.

೨೭. Early Brahmi Inscriptions From Sannati, ಬಿ–೫, ಪುಟ ೮೪, ಪ್ಲೇಟ್ ೧೭ ಎ ; Memorial Stones from Sannati-J. Varaprasada Rao, ಸಂಖ್ಯೆ ೨.೯, ಪುಟ ೧೦೧, ಪ್ಲೇಟ್ ೧೪.

೨೮. Early Brahmi Inscriptions From Sannati, ಡಿ ೨, ಪುಟ ೯೩, ಪ್ಲೇಟ್ ೨೨ಎ; Memorial Stones from Sannati-J.Varaprasada Rao, ಸಂಖ್ಯೆ ೫.೪, ಪುಟ ೧೦೬.

೨೯. Early Brahmi Inscriptions From Sannati, ಇ–೭, ಪುಟ ೯೯, ಪ್ಲೇಟ್ ೨೬.

೩೦. Early Brahmi Inscriptions From Sannati, ಸಿ–೨, ಪುಟ ೮೭, ಪ್ಲೇಟ್ ೧೮.

ಚಿತ್ರದುರ್ಗದ ಗೊಲ್ಲ ಜನಾಂಗದ ತಾಮ್ರಶಾಸನ ಮತ್ತು ಕುಲದೇವರ ವಲಸೆ

ಡಿ. ಸ್ಮಿತಾರೆಡ್ಡಿ*

ಮನುಕುಲದ ವಲಸೆ ಯಾವಾಗ ಆರಂಭವಾಯಿತು? ಎಂಬ ಪ್ರಶ್ನೆಗೆ ಬಹುಶಃ ನಿಖರ ಉತ್ತರ ಕಷ್ಟವೆನಿಸುತ್ತದೆ. ಅದೇ ಸಂದರ್ಭದಲ್ಲಿ ಮನುಷ್ಯನ ಅಸ್ತಿತ್ವದೊಂದಿಗೆ ವಲಸೆಯೂ ಪ್ರಾರಂಭವಾಯಿತೆಂಬ ಸರಳ ಉತ್ತರವೂ ಸಾಧ್ಯವಾದೀತು. ಮೂಲತಃ ವಲಸಿಗನಾದ ಮನುಷ್ಯ ಹೊಟ್ಟೆಪಾಡಿಗಾಗಿ, ತನ್ನ ಬೇಟೆಗಾಗಿ ಒಂದು ಸ್ಥಳದಿಂದ, ಮತ್ತೊಂದು ಸ್ಥಳಕ್ಕೆ ಅಲೆಯುತ್ತಿದ್ದಾಗ 'ವಲಸೆ'ಯ ಪದಕ್ಕೆ ಅಸ್ತಿತ್ವವೇ ಇರಲಿಲ್ಲ. ಆದರೆ, ಒಂದು ನೆಲದಲ್ಲಿ, ಒಂದು ನೆಲೆಯಲ್ಲಿ ಸ್ಥಿರವಾಗಿ ನೆಲೆನಿಂತು ಜೀವಿಸಲಾರಂಭಿಸಿದ ನಂತರ, 'ವಲಸೆ' ಪದಕ್ಕೆ ಒಂದು ನಿರ್ದಿಷ್ಟ ಅರ್ಥವ್ಯಾಪ್ತಿ ಪ್ರಾಪ್ತಿಯಾಯಿತೆಂದು ಹೇಳಬಹುದು.

ಭೌತಿಕ ಅರ್ಥದಲ್ಲಿ ವಲಸೆ ಎಂದರೆ, ಒಂದು ಕುಟುಂಬ ಅಥವಾ ಒಂದು ಸಮುದಾಯ, ಒಂದು ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವುದು. ಆದರೆ, ಭೌತಿಕ ಅರ್ಥಕ್ಕಿಂತ ಭಾವನಾತ್ಮಕವಾಗಿ ಹಾಗೂ ಧಾರ್ಮಿಕವಾಗಿ ವಲಸೆ ಹೋಗುವುದೆಂದರೆ, ತನ್ನತನದ ಅಸ್ಮಿತೆಯನ್ನು ಕಳಚಿಟ್ಟು ಹೋಗುವುದು ಅಥವಾ ಅಂಥ ಅನನ್ಯತೆಯನ್ನು ತನ್ನೊಂದಿಗೆ ಒಯ್ದು ಮತ್ತೊಂದೆಡೆ ಸುಸ್ಥಾಪಿಸುವುದು. ಇಲ್ಲಿ ತನ್ನತನ ಎಂದರೇನು? ಎಂದು ಪ್ರಶ್ನಿಸಿಕೊಂಡರೆ, ಅದನ್ನು ಮೂರ್ತ ನೆಲೆ ಹಾಗೂ ಅಮೂರ್ತ ನೆಲೆಗಳೆಂಬ ಎರಡು ಭಿನ್ನ ನೆಲೆಗಳಲ್ಲಿ ವ್ಯಾಖ್ಯಾನಿಸಬಹುದು. ತಾನು ಅನುಸರಿಸಿಕೊಂಡು ಬಂದ ಆಚಾರ-ವಿಚಾರಗಳು, ಸಂಪ್ರದಾಯ-ಸಂಸ್ಕೃತಿಗಳು, ಕಟ್ಟುಕಟ್ಟಳೆಗಳು, ಇತ್ಯಾದಿಗಳನ್ನು ನಾವು ಅಮೂರ್ತ ನೆಲೆಯಲ್ಲಿ ಪರಿಗ್ರಹಿಸಬಹುದು. ತಾನು ನಂಬಿಕೊಂಡು, ಆರಾಧಿಸಿಕೊಂಡು ಬಂದ ದೇವರನ್ನು ಮೂರ್ತ ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ಅಮೂರ್ತ ನೆಲೆಯ ಆಚಾರ ವಿಚಾರಗಳು ಅಪ್ರಜ್ಞಾಪೂರ್ವಕವಾಗಿ ಸಮುದಾಯಗಳ ವಲಸೆಯೊಂದಿಗೆ ಸಹಜವಾಗಿಯೇ ಪ್ರವಹಿಸುತ್ತವೆ. ಆದರೆ, ಮೂರ್ತವಾದ ದೇವರನ್ನು ಪ್ರಜ್ಞಾಪೂರ್ವಕವಾಗಿ ತಮ್ಮೊಂದಿಗೆ ಹೊತ್ತು ತರಬೇಕಾಗುತ್ತದೆ. ಇಲ್ಲಿ ದೈವದ ಅಸ್ತಿತ್ವ ಮತ್ತು ಆರಾಧಿಸುವ ಜನಾಂಗದ ಅಸ್ಮಿತೆ ಎರಡೂ ಏಕೀಭವಿಸಿಕೊಂಡಿರುತ್ತವೆ. ಕುಲದೇವರು ತಳಸಮುದಾಯದ ಪ್ರಜ್ಞೆಯ ಭಾಗವಾಗಿರುತ್ತದೆ.

ಶಿಷ್ಟ ಸಂಸ್ಕೃತಿಯ ವಲಸೆಯಲ್ಲಿ ದೇವರುಗಳು ಮತ್ತೊಂದು ಸಂಸ್ಕೃತಿಯ ಜೊತೆ ಲೀನವಾಗಿ 'ಸಮನ್ವಯತೆ'ಯನ್ನು ಸಾಧಿಸಿಕೊಳ್ಳುತ್ತವೆ. ಆರ್ಯ ದೇವರುಗಳು ದ್ರಾವಿಡ ದೇವರುಗಳನ್ನು ತಮ್ಮ ಆರಾಧನೆಯಲ್ಲಿ ಸಮನ್ವಯಿಸಿಕೊಂಡ ಬಗೆ ಈ ತೆರನದು. ಆದರೆ 'ಪರಿಶಿಷ್ಟ' ದೇವರುಗಳು ನಿರ್ದಿಷ್ಟವಾಗಿ ಒಂದು ಸಮುದಾಯ ಅಥವಾ ಕುಲಗಳಿಗೆ ಪರಿಮಿತವಾಗಿ ಕುಲದೇವರಾಗಿ ಮಾತ್ರ ಅಸ್ತಿತ್ವ ಪಡೆದಿರುತ್ತವೆ. ಕುಲದಾಚೆ ಆ ದೇವರಿಗೆ ಮಾನ್ಯತೆ ಇರುವುದಿಲ್ಲ. ಇಂಥ ಕುಲ ವಿಶಿಷ್ಟವಾದ ದೇವರುಗಳು ಕುಲಚಲನೆಯೊಂದಿಗೆ ತಾವೂ ಚಲನಶೀಲತೆಯನ್ನು ಪಡೆದುಕೊಳ್ಳುತ್ತವೆ. ಕುಲದ ವಲಸೆ ದೇವರ ವಲಸೆಯೂ ಆಗುತ್ತದೆ ಅಥವಾ ಅಂಥ ದೇವರುಗಳ ವಲಸೆ ಸಾಂಕೇತಿಕವಾಗಿ ಆಯಾ ಸಂಬಂಧಪಟ್ಟ ಕುಲಗಳ ವಲಸೆಯೂ ಆಗುತ್ತದೆ. ಇಂಥ ಕುಲವಲಸೆ ಮತ್ತು ಆಮೂಲಕ ದೇವರ ವಲಸೆಯನ್ನು ದಾಖಲಿಸುವ ವಿಶಿಷ್ಟ ದಾಖಲೆ ಚಿತ್ರದುರ್ಗದ ಆಯಿತೋಳು ಗ್ರಾಮದ ಗೊಲ್ಲ ಜನಾಂಗದ ಶ್ರೀ ಪಟೇಲ್ ನಾಗಪ್ಪನವರ ಬಳಿ ಇತ್ತು. ಮೂಲತಃ ತಾಮ್ರಶಾಸನದಲ್ಲಿದ್ದ ಇದನ್ನು ಕಾಗದದಲ್ಲಿ ಪ್ರತಿ ಮಾಡಿಕೊಳ್ಳಲಾಗಿದೆ. ಇದನ್ನು ಬಿ. ರಾಜಶೇಖರಪ್ಪನವರು ಮೊಟ್ಟಮೊದಲ ಬಾರಿಗೆ ಪ್ರಕಟಿಸಿದ್ದಾರೆ[೧].

ಕೂಟ ಶಾಸನಗಳ ದಾಖಲೆಗೆ ಸೇರುವ ಈ ಶಾಸನದಲ್ಲಿ ನಿರ್ದಿಷ್ಟವಾದ ಕಾಲಾವಧಿಯನ್ನು ಉಲ್ಲೇಖಿಸಿಲ್ಲ. ಬದಲಾಗಿ, ಆನೆಗೊಂದಿ ಅರಸರು, ಚಿತ್ರದುರ್ಗದ ಅರಸರು, ಜರಿಮಲೆ ಪಾಳೆಯಗಾರರೆಲ್ಲರ ಉಲ್ಲೇಖ ಬರುತ್ತದೆ. ಇದರಲ್ಲಿ ಬರುವ ಕೆಲವು ಸಂಗತಿಗಳು ಐತಿಹಾಸಿಕವಾಗಿ ನಂಬಲು ಅನರ್ಹವಾಗಿವೆಯಲ್ಲದೆ, ಅಸಂಗತ ಅಂಶಗಳಿಂದ ಕೂಡಿವೆ. ಆದರೆ, ಅದರಲ್ಲಿ ದಾಖಲಾದ ಗೊಲ್ಲಜನಾಂಗದ ವಲಸೆಯ ಕಥನ, ಗೊಲ್ಲಜನಾಂಗದ ಒಂದು ಕುಟುಂಬಕ್ಕೆ ಪ್ರಾಪ್ತವಾದ ಪೂಜಾರಿಕೆ, ಗೌಡಿಕೆ ಹಕ್ಕು ಹಲವಾರು ಕುತೂಹಲಕಾರಿ ಅಂಶಗಳನ್ನು ಒಳಗೊಂಡಿದ್ದು ಸಾಂಸ್ಕೃತಿಕ ಇತಿಹಾಸಕ್ಕೆ ಹೆಚ್ಚು ಉಪಯುಕ್ತವಾಗುತ್ತದೆ.

---

* ಅಧೀನ ಕಾರ್ಯದರ್ಶಿ, # ೨೧೩ಬಿ, ಭಾಷಾಂತರ ಶಾಖೆ, ವಿಧಾನಸೌಧ, ಬೆಂಗಳೂರು-೦೧. ಮೊ. ೯೯೪೫೪೨೧೩೦೫

ಈ ದಾಖಲೆಯ ವಿಷಯವನ್ನು ಹೀಗೆ ಸಂಕ್ಷಿಪ್ತೀಕರಣಗೊಳಿಸಬಹುದು. ಗೊಂದಿಹಳ್ಳಿ ಗೊಲ್ಲ ಜನಾಂಗದ ಕಾಟಂದೇವರು ಎಂಬ ಹೀರೇದೇವರ ಪೂಜಾರಿಯಾದ ಕಾಟ್ಟಯ್ಯ ತುಂಬಾ ಸತ್ಯಸಂಧ. ಅವನು ಉಂಡ ಊಟ, ಕಂಡ ಕನಸು, ಹೊಟ್ಟೆಯಲ್ಲಿರುವ ಪಿಂಡದ ಆಕಾರ ಸಮೇತ ಹಿಂದಿನ ಆರು ತಿಂಗಳ ಹಾಗೂ ಮುಂದಿನ ಆರು ತಿಂಗಳ ಭೂತ, ಭವಿಷ್ಯ, ವರ್ತಮಾನವನ್ನು ಹೇಳತಕ್ಕವನಾಗಿದ್ದ. ಈ ವಿಷಯ ಆನೆಗೊಂದಿ ದೊರೆಗಳ ಸಂಸ್ಥಾನಕ್ಕೆ ತಿಳಿದು ಅವನನ್ನು ಪರೀಕ್ಷಿಸಲು ಸ್ವತಃ ದೊರೆಯೇ ಬಾಲೇನಹಳ್ಳಿ ಸಂಸ್ಥಾನದ ಕಟ್ಟೆ ಮನೆಗೆ ಖುದ್ದು ಆಗಮಿಸುತ್ತಾನೆ. ಕಾಟಯ್ಯನನ್ನು ಭೇಟಿ ಮಾಡಿ ಅವನನ್ನು ಪರೀಕ್ಷಿಸಲು 'ನನ್ನ ಕುದುರೆ ಹೊಟ್ಟೆಯಲ್ಲಿ ಏನಿದೆ ಹೇಳು' ಎಂದಾಗ, ದೇವರಮನೆ ಕಾಟಯ್ಯ 'ನಿನ್ನ ಕುದುರೆ ಹೊಟ್ಟೆಯಲ್ಲಿ ಪಂಚಕಲ್ಯಾಣಿ ಕುದುರೆಮರಿ ಇದ್ದು ಅದರ ನಾಲ್ಕು ಕಾಲು, ಬಾಲ ಹಾಗೂ ಹಣೆ ಮೇಲೆ ಬಿಳಿ ಪಟ್ಟೆಯಿದೆ' ಎನ್ನುತ್ತಾನೆ. ದೊರೆ ಕೂಡಲೇ ಕುದುರೆಯ ಹೊಟ್ಟೆಯನ್ನು ಸೀಳಿದಾಗ ಹೊಟ್ಟೆಯಿಂದ ಹೊರಬಂದ ಕುದುರೆ ಮರಿ ಕಾಟಯ್ಯ ಹೇಳಿದ ಲಕ್ಷಣಗಳನ್ನೇ ಹೊಂದಿತ್ತು. ಮತ್ತೆ ಮರಿಯನ್ನು ಹೊಟ್ಟೆಯಲ್ಲಿ ತುಂಬಿಸಿ, ಕಾಟಯ್ಯ ಕುದುರೆಯ ಹೊಟ್ಟೆಯನ್ನು ಇಳೀ ತೆಗೆದು ಅದನ್ನು ಮೊದಲಿನಂತೆ ಕೂಡಿಸಿದ. ದೊರೆಗಳು ಅಲ್ಲಿದ್ದ ಅವಲ್‌ದಾರ ಕಾಟಪ್ಪನನ್ನು, ಜನಗಳನ್ನೆಲ್ಲ ಕುರಿತು 'ಕಾಟಯ್ಯನಿಗೆ ಮೊದಲಿನಿಂದಲೂ ಪೂಜಾರಿಕೆ ಇರುವುದು ನಿಜವೂ ಸುಳ್ಳೋ' ಎಂದು ಕೇಳಿದರೆ ಎಲ್ಲರೂ, 'ಈ ಸತ್ಯಾತ್ಮ ದೇವರ ಕಾಟಯ್ಯನು ಇವರ ತಂದೆ ತಾತಂದಿರ ಕಾಲದಿಂದಲೂ ಕಾರ್ನಕದ ಮನೆತನ. ನೀವು ಈಗ ಬಂದಿರುವುದರಿಂದ ದೇವರ ಕಾಟಯ್ಯನಗೆ ಪಟ್ಟವನ್ನು ಮಾಡಿಸಿ ಮುಂದೆ ಈತನ ವಂಶಸ್ಥರೇ ಈ ಪೂಜಾರಿಕೆಯನ್ನು ಮಾಡುವಂತೆ ವ್ಯವಸ್ಥೆ ಮಾಡಿಕೊಡಿ' ಎಂದು ವಿನಂತಿಸಿಕೊಂಡಾಗ, ದೊರೆ ದೇವರ ಕಾಟಯ್ಯನ ಕುಲಗುರು ಗೋಸಿಕೆರೆ ಈಶ್ವರಪ್ಪನನ್ನು ಕರೆಸಿ ಮೂರುಕಟ್ಟೆ ಮುನ್ನೂರು ಸಾವಿರ ದೈವಸ್ಥರು, ಸುತ್ತಮುತ್ತಲಿನ ೨೮೮ ದೇವರುಗಳ ಸಮಕ್ಷಮದಲ್ಲಿ ದೇವರ ಮನೆ ಕಾಟಯ್ಯನಿಗೆ ಪಟ್ಟ ಕಟ್ಟಿಸಿ, ೫೦ ಜೋಡಿ ಮೇಳದೊಂದಿಗೆ ವಿಜೃಂಭಣೆಯಿಂದಾ ಬಾಲೇನಹಳ್ಳಿ ಕಟ್ಟೆ ಮನೆಯಲ್ಲಿ ದೇವರನ್ನು ನಿರ್ಣಯ ಮಾಡಿ, ಒಂದು ತಾಮ್ರಶಾಸನದಲ್ಲಿ ಈ ಎಲ್ಲ ವಿಷಯವನ್ನು ಮತ್ತು ದೇವರ ಕಾಟಯ್ಯನೇ ಪೂಜಾರಿಯೆಂದೂ ಮತ್ತು ಮುಂದೆ ಇವರ ವಂಶಸ್ಥರೇ ಈ ಪಟ್ಟಕ್ಕೆ ಇರಬೇಕೆಂದು ಬರೆಸಿ, ಡಂಗುರ ಹೊಡೆಸಿ ಆನೆಗೊಂದಿಗೆ ಹೊರಟುಹೋಗುತ್ತಾರೆ.

ಇದಾದ ಎರಡು ತಿಂಗಳ ತರುವಾಯ ಆನೆಗೊಂದಿ ದೊರೆಯ ಬೆಳಗೇರಿ ಎಂಬ ಕುದುರೆಯು ದೇವರ ಕಾಟಯ್ಯ ಹೇಳಿದ್ದಂತಹ ಲಕ್ಷಣಗಳಿರುವ ಮರಿಗೆ ಜನ್ಮ ನೀಡುತ್ತದೆ. ದೊರೆ ಬಾಲೇನಹಳ್ಳಿ ಹಿರೇದೇವರಾದ ಕಾಟಲಿಂಗ ದೇವರಿಗೆ ಹಗಲು ದೀವಟಿಗೆ, ದೇವರ ಉತ್ಸವದಲ್ಲಿ ಹಿಡಿಯುವುದಕ್ಕಾಗಿ ಮುತ್ತಿನ ಕೊಡೆ ಬಿಗಿಸಿದ ಭೂಚಕ್ರದ ಕೊಡೆಯನ್ನು ಕಳುಹಿಸಿಕೊಡುತ್ತಾರೆ. ಅಲ್ಲದೆ ದೇವರ ಮನೆಯವರಿಗೆ ಪೂಜಾರಿಕೆ ಹಕ್ಕನ್ನು, ಅವಲ್ದಾರ ಕಾಟಯ್ಯನಿಗೆ ಹಿರೇದೇವರ ಗೌಡಿಕೆಯನ್ನು, ಕುಂಚೂರ ಮಲ್ಲನಿಗೆ ಕೊಲುಕಾರಿಕೆಯನ್ನು ಮತ್ತೊಮ್ಮೆ ನಿಗದಿ ಮಾಡಿ ಶಾಸನದಲ್ಲಿ ದಾಖಲಿಸುತ್ತಾರೆ. ಇಲ್ಲಿಗೆ ತಾಮ್ರಪತ್ರದ ಒಂದು ಹಂತ ಮುಕ್ತಾಯವಾಗುತ್ತದೆ.

ನಂತರ ದೇವರ ಕಾಟಯ್ಯನ ವಂಶದವರು ಪಟ್ಟವನ್ನು ಪಡೆದುಕೊಂಡಿದ್ದನ್ನು ತಿಳಿಸುತ್ತಾ, ಒಟ್ಟು ಇಪ್ಪತ್ತೊಂದು ತಲೆಮಾರುಗಳು ಆ ಪಟ್ಟವನ್ನು ಅನುಭವಿಸಿದ್ದನ್ನು ದಾಖಲಿಸುತ್ತದೆ. ಈ ಇಪ್ಪತ್ತೊಂದು ತಲೆಮಾರುಗಳಲ್ಲಿ ಐದನೆಯ ತಲೆಮಾರಿನ ದೇವರ ಕಾಟಯ್ಯನ ಕಾಲದಲ್ಲಿ ಕ್ಷಾಮ ಬರುತ್ತದೆ. ಆಗ ದೇವರು ಅನ್ಯಾಯವಾಗಿ ಕೆಟ್ಟು ಹೋಗುತ್ತದೆಂದು ದೇವರನ್ನು ಹಾಸದ ಮರದ ಪೊಟರೆಯಲ್ಲಿಟ್ಟು ಹೋಗುತ್ತಾನೆ. ಕ್ಷಾಮದ ನಿವಾರಣೆಯಾದ ನಂತರ ಮರಳಿ ಬಂದು ದೇವರನ್ನು ಹುಡುಕಿದರೂ ಸಿಗಲಿಲ್ಲ. ಹೀರೇದೇವರು ಒಂದು ತೋರಿಸಿದಾಗ, ಆ ಮರದ ಹರೆಯ ಮೇಲೆ ಒಬ್ಬ ಏಳು ವರ್ಷದ ಹುಡುಗ ಜೇನನ್ನು ತಿಂದುಕೊಂಡು ಆ ಮರದ ಪೊಟರೆಯಲ್ಲಿ ದೇವರನ್ನು ಕಾದುಕೊಂಡಿರುತ್ತಾನೆ. ಅವನನ್ನು ಕರೆತಂದು ಗಾಳಿಗೌಡನೆಂದು ಹೆಸರಿಟ್ಟು, ಅವನಿಗೆ ನೀನೂ ಗೌಡಿಕೆ ಮಾಡಬಹುದೆಂದು ಒಪ್ಪಿಕೊಳ್ಳುತ್ತಾರೆ.

ಇದಾದ ನಂತರ ಒಂಭತ್ತನೆಯ ತಲೆಮಾರಿನ ದೊಗ್ಗೊಜಿಯ ಕಾಲದಲ್ಲಿ ದೇವರು ಮತ್ತು ಈತನಿಬ್ಬರೂ ನಾಯಕನಟ್ಟಿಗೆ ಹೋಗುತ್ತಾರೆ. ನಾಯಕನಟ್ಟಿ ಹಿರೇಕೆರೆಯಲ್ಲಿ ದೊಗ್ಗೊಜಿಯ ಮಗ ದೇವರ ಕಾಟಪ್ಪನಿಗೆ ಪಟ್ಟವಾಗುತ್ತದೆ. ಹನ್ನೆರಡನೆಯ ತಲೆಮಾರಿನ ಗೆಜ್ಜೆ ಕಾಟಪ್ಪನ ಕಾಲದಲ್ಲಿ ನಾಯಕನಟ್ಟಿಯಲ್ಲಿ ಮ್ಯಾಸನಾಯ್ಕರಿಗೂ ಅವಲ್‌ದಾರನ ವಂಶಸ್ಥ ಚನ್ನಮಲ್ಲಪ್ಪನಿಗೂ ವ್ಯಾಜ್ಯವಾಗಿ ದೇವರು ಗೊಂದಿಹಳ್ಳಿ ಗ್ರಾಮಕ್ಕೆ ಹೋಗುತ್ತದೆ. ಹದಿನೇಳನೆಯ ತಲೆಮಾರಿನ ಸಂಣಗೊಂದ್ಯಪ್ಪನ ಕಾಲದಲ್ಲಿ ಚಿತ್ರದುರ್ಗದ ಮದಕ್ಕೇರಿನಾಯ್ಕನು ಸುತ್ತಮುತ್ತಲ ಎಲ್ಲ ದೇವರುಗಳನ್ನು ಪೂಜಾರಿ ಸಮೇತ ದುರ್ಗಕ್ಕೆ ಕರೆಸಿಕೊಳ್ಳುತ್ತಾನೆ. ಇಪ್ಪತ್ತೊಂದನೆಯ ತಲೆಮಾರಿನ ದೊಡ್ಡ ಗೊಂಡ್ಯಪ್ಪನ ಕಾಲದಲ್ಲಿ ದುರ್ಗದಿಂದ ಅಯಿನಹಳ್ಳಿಗೆ ಹೋಗಿ 'ದೇವರ ಹಟ್ಟಿ' ಎಂಬ ಹೆಸರಿನ ಗ್ರಾಮವನ್ನು ಕಟ್ಟಿಕೊಂಡು ಅಲ್ಲಿ ನೆಲೆಗೊಳ್ಳುತ್ತಾರೆ. ಆದರೆ, ಅಲ್ಲಿ ಸರಿಬೀಳದೆ ಮತ್ತೆ ನಾಯಕನಹಟ್ಟಿಗೆ

ಹೋಗಬೇಕೆಂದು ಅಣ್ಣತಮ್ಮಂದಿರು ಇಚ್ಛಿಸುತ್ತಾರೆ. ಹಿರೇದೇವರ ಪೂಜಾರಿ ದೊಡ್ಡಗೊಂಡ್ಯಪ್ಪ 'ಈಗ ಹೋದರೆ ಒಳ್ಳೆಯದಾಗುವುದಿಲ್ಲವೆಂದು' ಹೇಳಿದರೂ ಕೇಳದೆ ನಾಯಕನಟ್ಟಿಗೆ ಹೋಗುತ್ತಾರೆ. ಅಲ್ಲಿ ಮತ್ತೆ ಮ್ಯಾಸನಾಯ್ಕರು, ಕೆಲವು ದಾಯಾದಿಗಳ ಬೆಂಬಲದೊಂದಿಗೆ ಜರಿಮಲೆ ಪಾಳೆಯಗಾರನಿಗೆ ವಿಷಯ ತಿಳಿಸಿ ದೇವರನ್ನು ಮುತ್ತಿಗೆ ಹಾಕಿ ದೇವರನ್ನು ಸೂರೆ ಮಾಡುತ್ತಾರೆ. ಹಿರೇದೇವರ ಪೂಜಾರಿ ಹಿರಿಯರು ಮಾಡಿದ ದೇವರನ್ನು ಉಳಿಸಿಕೊಳ್ಳಲು ಪೆಟ್ಟಿಗೆಯಲ್ಲಿದ್ದ ಲಿಂಗವನ್ನು ಉಡುದಟ್ಟಿಯಲ್ಲಿ ಕಟ್ಟಿಕೊಂಡು ಹೋಗುತ್ತಾನೆ. ದುರ್ಗ ತಲುಪುವ ವೇಳೆಗೆ ಕೋಟೆಯ ಬಾಗಿಲು ಹಾಕಿರುತ್ತದೆ. ಲಿಂಗ, ದೀಪ-ಧೂಪಾರತಿಗಳನ್ನು ಕೋಟೆಯೊಳಗೆ ಬಿಸಾಡುತ್ತಾನೆ. ಶತೃಗಳು ಇವನನ್ನು ಇವರ ಅಣ್ಣತಮ್ಮಂದಿರನ್ನು ಕಡಿದು ಹಾಕುತ್ತಾರೆ.

ಲಿಂಗ, ಧೂಪಾರತಿ ಗೊಲ್ಲಗೌಡನಾದ ಅವಲ್‌ದಾರನ ವಂಶದವನಿಗೆ ಸಿಕ್ಕಿ ಅವನು ಇದು ತಮ್ಮ ದೇವರೆಂದು ಗುರುತಿಸಿ ಬಚ್ಚಿಟ್ಟುಕೊಳ್ಳುತ್ತಾನೆ. ೩೦ ವರ್ಷಗಳ ತರುವಾಯ ಜೋಗಿಹಟ್ಟಿಗೆ ಹೋಗಿ ಕಾಟಪ್ಪ ಎಂಬುವವನನ್ನು ಕರೆತಂದು ಪಟ್ಟ ಕಟ್ಟಬೇಕೆಂದು ದುರ್ಗಕ್ಕೆ ಕರೆತರುತ್ತಾರೆ. ಅಯತೋಳಲ್ಲಿ ಅವಲ್‌ದಾರನ ವಂಶಸ್ಥ ಕರಿಯಪ್ಪನೆಂಬುವವನನ್ನು ಕರೆಸಿ 'ಕಾಟಪ್ಪನಿಗೆ ಪಟ್ಟ ಆಗಬಹುದೇ, ಬಾರದೆ' ಎಂದು ಪಂಚಾಯತಿ ನಡೆಸಿದಾಗ, 'ಈ ಜೋಗಿಹಟ್ಟೆ ಕಾಟಪ್ಪನಿಗೆ ಸದ್ಯ ಪಟ್ಟ ಕಟ್ಟಿರುತ್ತೆ. ಮುಂದೆ ಹಿರೇದೇವರ ಪೂಜಾರಿ ವಂಶಸ್ಥರು ಯಾರಾದರೂ ಬಂದರೆ ಅವರಿಗೆ ಪಟ್ಟವಾಗಬೇಕೇ ಹೊರತು ಈ ಕಾಟಪ್ಪಗಾಗಲೀ, ಅವನ ವಂಶಸ್ಥರಿಗಾಗಲೀ ಅಲ್ಲ' ಎಂದು ತೀರ್ಪು ನೀಡುತ್ತಾರೆ. ಈ ತೀರ್ಪಿನೊಂದಿಗೆ ದಾಖಲೆ ಮುಕ್ತಾಯವಾಗುತ್ತದೆ.

೧೬೫ ಸಾಲುಗಳ ಸುದೀರ್ಘಮಯವಾದ ತಾಮ್ರಶಾಸನದ ನಕಲಾದ ಈ ದಾಖಲೆಯನ್ನು ಅಧ್ಯಯನ ಮಾಡಿದಾಗ ಈ ಶಾಸನ ಹಾಕಿಸಿದುದರ ಉದ್ದೇಶವನ್ನು ಮೊದಲ ೪೫ ಮತ್ತು ೪೬ನೆಯ ಸಾಲುಗಳುಹಾಗೂ ಕೊನೆಯ ಸಾಲುಗಳು ಸ್ಪಷ್ಟಪಡಿಸುತ್ತವೆ. ಬಹುಶಃ ನಾಯಕನಟ್ಟಿಯಲ್ಲಿ ನಡೆದ ಗಲಭೆ ಹತ್ಯೆಗಳಿಂದ ಹಿರೇದೇವರ ಪೂಜಾರಿ ವಂಶಸ್ಥರು ಭೀತರಾಗಿ ದೇವರಪಟ್ಟ ಪಡೆಯಲು ಹಿಂಜರಿದಾಗ ಪೂಜೆ ನಿಂತುಹೋಗಿದ್ದ ದೇವರಿಗೆ ಒಂದು ನೆಲೆ ಕಲ್ಪಿಸಲು ಕಾಟಪ್ಪನನ್ನು ದತ್ತು ತೆಗೆದುಕೊಂಡು ಪಟ್ಟಕಟ್ಟಲು ಪ್ರಯತ್ನಿಸಿದಾಗ ಉದ್ಭವಿಸಿರಬಹುದಾದ ಎಲ್ಲ ವಾದ-ವಿವಾದ ಪ್ರಶ್ನೆ, ಸವಾಲುಗಳಿಗೆ ಮೊದಲಿನಿಂದ ಕೊನೆಯತನಕ ಇಡೀ ಶಾಸನ ಉತ್ತರ ನೀಡುವಂತಿದೆ. ಅಲ್ಲದೆ, ಬಹುಶಃ ಹಿರೇದೇವರ ಮನೆ ಕಾಟಯ್ಯನಿಗೆ ಮೊದಲಿನಿಂದ ಪೂಜಾರಿಕೆ ಇರುವ ಬಗ್ಗೆ ವಿವಾದ ತಲೆದೋರಿದ್ದಂತೆ ಕಾಣುತ್ತವೆ. ಸ್ವತಃ ದೊರೆಯೇ ಮಧ್ಯಪ್ರವೇಶಿಸಿ ಸ್ಥಳೀಯರ ಸಮ್ಮತಿ ಮೇರೆಗೆ ಪೂಜಾರಿಕೆ ಹಕ್ಕನ್ನು ನೀಡಿದಂತೆ ತೋರುತ್ತದೆ.

ಈ ವಂಶದ ಶ್ರೇಷ್ಠತೆಯನ್ನು ಪ್ರತಿಪಾದಿಸಲು, ಅತಿಮಾನುಷವಾದ ಪವಾಡಗಳನ್ನು ತರಲು ಪ್ರಯತ್ನಿಸಲಾಗಿದೆ. ಅವು ಅಸಂಗತತೆ, ಅವಾಸ್ತವಿಕತೆ ಎನಿಸುತ್ತವೆ. ಪೂಜಾರಿಕೆ ಹಕ್ಕು, ದೇವರ ಪಟ್ಟದ ಹಕ್ಕುಗಳು ತಮಗೆ ರಾಜರಿಂದಲೇ ಪ್ರದತ್ತವಾಗಿದೆಯೆಂಬುದನ್ನು, ಅದನ್ನು ಸುಮ್ಮನೆ ದಕ್ಕಲಿಲ್ಲ, ತಮ್ಮ ಅಸಾಧಾರಣ ಶಕ್ತಿ-ಸಾಮರ್ಥ್ಯಗಳಿಂದ ರಾಜನನ್ನು ಮೆಚ್ಚಿಸಿ ಪಾರಿತೋಷಕವಾಗಿ ಪಡೆಯಲಾಯಿತೆಂಬುದನ್ನು ಸಾಬೀತುಪಡಿಸಲು ಇಂತಹ ತಂತ್ರಗಳ ಮೊರೆ ಹೋಗಿರುವುದು ಕಂಡುಬರುತ್ತದೆ.

ಆದರೆ ಇಡೀ ಶಾಸನದುದ್ದಕ್ಕೂ ಬರುವ ಹಿರೇದೇವರ ಪೂಜಾರಿ ವಂಶಸ್ಥರ ವಲಸೆ, ಆ ಮೂಲಕ ಅವರ ಕುಲ ದೈವದ ವಲಸೆಯನ್ನು ಯಾವುದೇ ಅತಿರಂಜನೆಗೆ ಅವಕಾಶ ನೀಡದೆ, ವಲಸೆಯ ವಾಸ್ತವ ಸ್ಥಿತಿಯನ್ನೇ ತಿಳಿಸುತ್ತದೆ. ಇದೊಂದು ಧಾರ್ಮಿಕ ವ್ಯಾಜ್ಯದ ಸಂಗತಿಯಂತೆ ತೋರಿದರೂ, ಸಮುದಾಯದದೈವ, ಆಚಾರ-ವಿಚಾರ, ನಂಬಿಕೆಗಳೊಂದಿಗೆ ಅವರ ಸಾಮಾಜಿಕ ಬದುಕೂಬೆರೆತುಹೋಗಿದೆ.

'ದೇವರ ವಲಸೆ' ಎಂಬ ಪರಿಕಲ್ಪನೆ ಇಲ್ಲಿ ಸಾಂಕೇತಿಕ ಅರ್ಥಗ್ರಹಿಕೆ ಹೊಂದಿದೆ. ಕರ್ನಾಟಕದಲ್ಲಿ ಧಾರ್ಮಿಕ, ರಾಜಕೀಯ, ಪ್ರಾಕೃತಿಕ, ಸಾಮಾಜಿಕ ಕಾರಣಗಳಿಗಾಗಿ ವಲಸೆಗಳು ನಡೆಯುವುದು ಸರ್ವೇಸಾಮಾನ್ಯವಾಗಿದ್ದವು. ವೈದಿಕರ ವಲಸೆಗೆ ಪ್ರಾಚೀನ ಇತಿಹಾಸವಿದೆ. ಕರ್ನಾಟಕದಲ್ಲಿ ಕದಂಬರ ಕಾಲದಲ್ಲಿ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಮಯೂರವರ್ಮ ಕರೆಸಿಕೊಳ್ಳುವ ಮೂಲಕ ಪ್ರಥಮ ವಲಸೆ ಪ್ರಕರಣಕ್ಕೆ ನಾಂದಿ ಹಾಡಿದ. ಅಲ್ಲಿಂದ ನಿರಂತರವಾಗಿ ಬ್ರಾಹ್ಮಣರ ಅಥವಾ ವೈದಿಕರ ವಲಸೆ ನಡೆದುದು ಶಾಸನಗಳಲ್ಲಿ ಕಂಡುಬರುತ್ತದೆ. ಇವರಲ್ಲದೆ, ವರ್ತಕ ಸಮುದಾಯಗಳೂ ಸಹ ವೃತ್ತಿ ಸಂಬಂಧಿ ವಲಸೆ ಕೈಗೊಂಡಿದ್ದನ್ನು ಶಾಸನಗಳು ದಾಖಲಿಸುತ್ತವೆ.

ವೈದಿಕ, ವಣಿಕರಂತೆಯೇ ಇತರ ಅತ್ಯಂತ ಕೆಳ-ತಳ ಸಮುದಾಯಗಳ ವಲಸೆಯೂ ನಡೆಯುತ್ತಿತ್ತು. ಆದರೆ, ಅಂಥ ವಲಸೆಯಲ್ಲಿ ಸ್ವಹಿತಾಸಕ್ತಿ ಇರುತ್ತಿರಲಿಲ್ಲ. ಅದು ಒತ್ತಾಯಪೂರ್ವಕ ಅಥವಾ ನಿರ್ಬಂಧಿತ ವಲಸೆಯಾಗಿರುತ್ತಿತ್ತು. ಮೇಲ್ವರ್ಗದ

ಜನರಿಗೆ ಸಹಾಯಕರಾಗಿ, ಬಿಟ್ಟಿ ದುಡಿಮೆದಾರರಾಗಿ ಅವರು ಅನಿವಾರ್ಯವಾಗಿಯೇ, ಒತ್ತಾಯಕ್ಕೆ ಮಣಿದೋ ಅಥವಾ ಒಡೆಯರ ಅಣತಿಯಂತೆಯೂ ಬರಬೇಕಾಗಿತ್ತು. ಇಂಥ ವಲಸೆಗಳಿಗೆ ಸ್ವಯಂ ಅಸ್ತಿತ್ವವೆಂಬುದು ಇರುತ್ತಿರಲಿಲ್ಲ. ಹಾಗಾಗಿ ಇವು ಎಲ್ಲೂ ದಾಖಲಾಗಲಿಲ್ಲ.

ಇವುಗಳಲ್ಲಿ, ಕೃಷಿಯಾಧಾರಿತ ವಕ್ಕಲು ಸಮುದಾಯಗಳ ವಲಸೆಯ ಕಥನಗಳ ಆಶಯವೇ ಬೇರೆ. ಪಶುಪಾಲನಾ ಸಮುದಾಯಗಳ ವಲಸೆಗಳ ಕಥನಗಳ ಆಶಯವೇ ಬೇರೆಯಾಗಿರುತ್ತದೆ. ಕೃಷಿಯಾಧಾರಿತ ವಕ್ಕಲು ಸಮುದಾಯಗಳ ವಲಸೆಯ ಕಥನಗಳಲ್ಲಿ ಕಂಡುಬರುವ ಒಂದು ಪ್ರಧಾನ ಆಶಯ 'ಕುಲಗೌರವದ ರಕ್ಷಣೆ'. ಎಂದರೆ, ಆ ಮನೆತನದ ಹೆಣ್ಣುಮಗಳನ್ನು ಕೆಳಸಮುದಾಯದ ಅಥವಾ ಅನ್ಯಧರ್ಮದ ಗಣ್ಯವ್ಯಕ್ತಿಯೊಬ್ಬ ಮೋಹಿಸಿ ಮದುವೆಗೆ ಆಗ್ರಹಿಸುವುದು. ಅಂಥವರನ್ನು ಎದಿರು ಹಾಕಿಕೊಳ್ಳಲು ಸಾಧ್ಯವಾಗದೆ, ಅಸಹಾಯಕರಾಗಿ ತಮ್ಮ ಕುಲಗೌರವ ಕಾಪಾಡಿಕೊಳ್ಳಲು ಅಣ್ಣತಮ್ಮಂದಿರೆಲ್ಲಾ ಸೇರಿ ರಾತ್ರೋ ರಾತ್ರಿ ಊರು ಬಿಟ್ಟು ತಮ್ಮ ದೇವರೊಂದಿಗೆ ವಲಸೆ ಬರುವುದು. ಬಹುತೇಕ ಎಲ್ಲ ವಕ್ಕಲು ಸಮುದಾಯಗಳೂ ತಮ್ಮ ವಲಸೆಗೆ ಮೂಲ ಕಾರಣವನ್ನು ನೀಡುವುದೇ ತಮ್ಮ ಕುಲಗೌರವದ ರಕ್ಷಣೆ. ಇಂಥ ಸಂದರ್ಭಗಳಲ್ಲಿ ತಾವು ಪೂಜಿಸುವ ಕುಲದೇವರನ್ನು ಹೊತ್ತುಕೊಂಡು ಬರುವುದು ಸಾಮಾನ್ಯ ಸಂಗತಿಯಾಗಿತ್ತು. ಮರಸುವಕ್ಕಲಿಗರು ಕಂಚಿಯಿಂದ ಅದೇ ಕಾರಣಕ್ಕೆ ವಲಸೆ ಬರುವಾಗ ಬಂಡಿಯಲ್ಲಿ ತಮ್ಮ ಕುಲದೇವತೆಯನ್ನು ಹೊತ್ತುಕೊಂಡು ಬರುತ್ತಾರೆ. ಆದ್ದರಿಂದಲೇ ಆ ವಂಶಸ್ಥರಿಗೆ ಬಂಡಿ ದೇವರ ವಕ್ಕಲಿಗರೆಂದು ಹೆಸರು ಬಂದಿತೆಂಬ ಐತಿಹ್ಯವಿದೆ.

ಗೊಲ್ಲ, ಕುರುಬ ಮತ್ತಿತ್ತರ ಪಶುಪಾಲನಾ ಸಮುದಾಯಗಳ ವಲಸೆಗೆ ಬೇರೆ ಆಯಾಮಗಳಿವೆ. ಪಶು ಸಂಪತ್ತನ್ನೇ ತಮ್ಮ ಭೌತಿಕ ಸಂಪತ್ತನ್ನಾಗಿ ಹೊಂದಿರುವ ಈ ವರ್ಗಗಳಿಗೆ ಕಳ್ಳಕಾಕರಿಂದ, ಶತ್ರುಗಳಿಂದ ತಮ್ಮ ಪಶುಗಳಿಗೆ ರಕ್ಷಣೆ ನೀಡುವಂತಹ ವಾತಾವರಣ, ಪಶುಗಳಿಗೆ ಅಗತ್ಯವಾದ ಮೇವಿನ ಹುಲ್ಲುಗಾವಲುಗಳಿರುವ ಪ್ರದೇಶದ ಲಭ್ಯತೆಯು ಇವರ ವಲಸೆಯನ್ನು ಆಧರಿಸಿರುತ್ತದೆ. ಕ್ಷಾಮ, ಹುಲ್ಲುಗಾವಲುಗಳ ಸ್ವಾಧೀನತೆ, ಪಶುಗಳನ್ನು ರಕ್ಷಿಸಿಕೊಳ್ಳುವ ಸಂದರ್ಭದಲ್ಲಿ ಸ್ಥಳೀಯವಾಗಿ ಹಲವಾರು ಸಮುದಾಯಗಳೊಂದಿಗೆ ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ. ಕ್ಷಾಮ-ಡಾಮರಗಳಂತಹ ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ವಲಸೆ ಹೋಗುವುದು ಅನಿವಾರ್ಯವಾಗುತ್ತದೆ.

ಈ ದಾಖಲೆಯಲ್ಲಿ ಕಂಡುಬರುವ ಮೊದಲನೆ ವಲಸೆಗೆ ಕಾರಣ ಕ್ಷಾಮ. ಕ್ಷಾಮದಿಂದ ಊರನ್ನು ಬಿಟ್ಟು ವಲಸೆ ಹೋದಾಗ ಅದು ತಾತ್ಕಾಲಿಕ ವಲಸೆಯಾಗಿರುತ್ತದೆ. ಗೊತ್ತುಗುರಿಯಿಲ್ಲದ ಪಯಣ. ಹಾಗೆ ವಲಸೆ ಹೋದಾಗ ತಮ್ಮ ಕುಲದ ರಕ್ಷಣೆಯ ಹೊಣೆಯನ್ನು ಹೊತ್ತ ಕುಲದೇವರನ್ನು ಕಾಪಾಡುವ ಜವಾಬ್ದಾರಿ ಕುಲಗಳ ಮೇಲಿರುತ್ತದೆ. ಕುಲ ಹಾಗೂ ಕುಲದೈವಗಳ ಸಂಬಂಧ ಪರಸ್ಪರ ಏಕೀಕೃತವಾಗಿರುತ್ತದೆ. ದೈವದ ಅಸ್ತಿತ್ವದ ವಿನಾ ಕುಲಗಳ ಅಸ್ಮಿತೆ ಇರುವುದಿಲ್ಲ. ದೈವವನ್ನು ಒಳಗೊಳ್ಳುವುದೆಂದರೆ, ಆ ದೈವವನ್ನು ನಂಬಿರುವ ಸಮುದಾಯವನ್ನು ಒಳಗೊಳ್ಳುವುದು ಎಂದರ್ಥ. ಹಾಗಾಗಿ ಇವರು ತಮ್ಮ ದೇವರನ್ನು ಒಂದು ಮರದ ಪೊಠರೆಯಲ್ಲಿ ಇಟ್ಟು ವಲಸೆ ಹೋಗುತ್ತಾರೆ. ಹನ್ನೆರಡು ವರ್ಷಗಳ ತರುವಾಯ ಕ್ಷಾಮವೆಲ್ಲ ಮುಗಿದ ಮೇಲೆ ಮರಳಿ ಬಂದು ದೇವರನ್ನು ಹುಡುಕಿದಾಗ ದೇವರು ಸಿಗುವುದಿಲ್ಲ. ಊರಿನ ಗೌಡ ಮೊದಲಾದವರು ದೇವರನ್ನು ತಂದುಕೊಡುವಂತೆ ಪೂಜಾರಿಯನ್ನು ಹಿಂಸಿಸುತ್ತಾರೆ. ದೇವರ ಉಳಿವು ಅವರ ಉಳಿವೂ ಆಗಿರುತ್ತದೆ. ಕೊನೆಗೆ ಹಿರೇದೇವರು ಬಂದು ದೇವರನ್ನು ತೋರಿಸುತ್ತದೆ. ಜೇನನ್ನೇ ತಿಂದು ಬದುಕುತ್ತಾ ದೇವರನ್ನು ಕಾದುಕೊಂಡು ಬಂದಿದ್ದ ೭ ವರ್ಷದ ಹುಡುಗನನ್ನೂ ಜೊತೆಯಲ್ಲಿ ಕರೆದುಕೊಂಡು ಬರುತ್ತಾರೆ. ಅಷ್ಟು ಕಾಲ ತಮ್ಮ ದೇವರನ್ನು ಕಾಪಾಡಿದ ಆ ಮಗುವಿಗೆ ಗೌಡಿಕೆಯ ಹಕ್ಕನ್ನು ನೀಡಿ ಗೌರವಿಸಲಾಗುತ್ತದೆ.

ಎರಡನೆಯ ವಲಸೆಗೆ ಕಾರಣ ಸ್ಪಷ್ಟವಾಗಿಲ್ಲ. ಆದರೆ, ಎರಡನೆಯ ವಲಸೆಯ ಗುರಿ ನಾಯಕನಹಟ್ಟಿ ಎಂಬುದು ಸ್ಪಷ್ಟವಾಗಿತ್ತು ಮತ್ತು ಅದು ಈಗಿರುವ ಸ್ಥಳವನ್ನು ಸಂಪೂರ್ಣವಾಗಿ ತ್ಯಜಿಸಿ ಶಾಶ್ವತವಾಗಿ ಹೋಗುವುದಾದ್ದರಿಂದ ತಮ್ಮ ದೈವವನ್ನು ತಮ್ಮೊಂದಿಗೆ ಕರೆದೊಯ್ದು ನಾಯಕನಹಟ್ಟಿಯಲ್ಲಿಯೇ ಪ್ರತಿಷ್ಠಾಪಿಸುತ್ತಾರೆ.

ಮೂರನೆಯ ವಲಸೆಗೆ ಕಾರಣ ಸ್ಥಳೀಯ ಸಮುದಾಯಗಳ ನಡುವಿನ ಘರ್ಷಣೆ. ಗೊಂದಿಹಳ್ಳಿ ಕಾಟಂದೇವರ ವಿಷಯದಲ್ಲಿ ನಾಯಕನಹಟ್ಟಿ ಮ್ಯಾಸನಾಯ್ಕರಿಗೂ, ಹವಲ್‌ದಾರ ವಂಶದ ಗೌಡ ಚನ್ನಮಲ್ಲಪ್ಪನಿಗೂ ವ್ಯಾಜ್ಯವಾಗಿ ದೇವರು ಗೊಂದಿಹಳ್ಳಿಗೆ ಹೋಗುತ್ತದೆ. ಇಲ್ಲಿ ಗೊಂದಿಹಳ್ಳಿ ಕಾಟಂ ದೇವರ ವಿಷಯದಲ್ಲಿ ನಾಯಕನ ಹಟ್ಟಿಯಲ್ಲಿ ಇವರಿಬ್ಬರಿಗೂ ಏಕೆ ಘರ್ಷಣೆಗಳಾದವು? ಎಂಬ ಬಗ್ಗೆ ಶಾಸನದಲ್ಲಿ ಮಾಹಿತಿ ಇಲ್ಲ. ಘರ್ಷಣೆಗೆ ದೇವರ ವಿಷಯವೊಂದೇ ಕಾರಣವೇ? ಅಥವಾ ಬೇರೇನಾದರೂ ಅಂಶಗಳು ಈ ಘರ್ಷಣೆಯ ಹಿಂದೆ ಕಾರ್ಯಪ್ರವೃತ್ತವಾಗಿವೆಯೇ? ಎಂಬ ಬಗ್ಗೆ ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ, ಮೇಲ್ನೋಟಕ್ಕೆ ಇದು ದೇವರ ವಿಷಯದ ಘರ್ಷಣೆಯಂತೆ ಕಂಡುಬಂದರೂ, ಅದರ ಹಿನ್ನೆಲೆಯಲ್ಲಿ

ಪ್ರವೃತ್ತವಾಗಿರುವ ವ್ಯಾಜ್ಯಕಾರಣ ಹುಲ್ಲುಗಾವಲುಗಳು. ಮ್ಯಾಸನಾಯ್ಕರೆಂದರೆ, ಮ್ಯಾಸಬೇಡರು. ಇವರು ಚಿತ್ರದುರ್ಗ, ಬಳ್ಳಾರಿ, ಹಂಪಿ ಪರಿಸರದಲ್ಲಿ ಹೆಚ್ಚಾಗಿ ನೆಲೆಗೊಂಡಿದ್ದಾರೆ. ಇವರ ಮೂಲ ಕಸುಬು ಬೇಟೆ. ನಂತರ ಇವರು ಪಶುಪಾಲನೆಯಲ್ಲೂ ತಮ್ಮನ್ನು ಹೆಚ್ಚಿಗೆ ತೊಡಗಿಸಿಕೊಂಡಿದ್ದಾರೆ. ಬೇಟೆಗಾರಿಕೆ, ಪಶುಪಾಲನೆ, ಕೃಷಿ ಇವು ಮಾನವ ಜನಾಮಗ ಹಂತಹಂತವಾಗಿ ಅನುಸರಿಸಿದ ವೃತ್ತಿಗಳು. ಈ ಹಂತದಲ್ಲಿ ಮ್ಯಾಸನಾಯ್ಕರು ಬೇಟೆಗಾರಿಕೆಯಿಂದ ಪಶುಪಾಲನಾ ಹಂತಕ್ಕೆ ತಮ್ಮ ಕ್ಷೇತ್ರವನ್ನು ವಿಸ್ತರಿಸಿಕೊಂಡರೆಂದು ತೋರುತ್ತದೆ. ಹೀಗಾಗಿ ಬೇಡ ಸಮುದಾಯ ಬೇಟೆಗಾರಿಕೆಯಿಂದ ಪಶುಪಾಲನಾ ವೃತ್ತಿಯನ್ನು ಅನುಸರಿಸಿದ ಕಾಲಘಟ್ಟದ ಸಂಘರ್ಷದ ಚಿತ್ರಣವನ್ನು ಈ ದಾಖಲೆ ನೀಡುತ್ತದೆ. 'ಮ್ಯಾಸನಾಯ್ಕರ ಮೂಲ ಪುರುಷ ಕಾಟೇಮಲ್ಲನಾಯಕ ಆಂಧ್ರದ ಕರಿಮೆಲ, ಕೊಮ್ಮುಮಲೆಗಳಿಂದ ಶ್ರೀಶೈಲ ಪರ್ವತದ ಪೂರ್ವಕ್ಕೆ ದಕ್ಷಿಣಾಭಿಮುಖವಾಗಿ ಕರ್ನಾಟಕಕ್ಕೆ ಬರುತ್ತಾನೆ. ಚಿತ್ರದುರ್ಗದ ನಾಯಕನಟ್ಟಿಗೆ ಸಮೀಪ ವಾಸ್ತವ್ಯ ಹೂಡಿದಾಗ ವಿಜಯನಗರದ ಅರಸರು ೧೨೦೦ ಜನಿಗೆ ಆಕಳುಗಳನ್ನು ಅರಣ್ಯದಲ್ಲಿ ಮೇಯಿಸಿಕೊಳ್ಳಲು ಅವಕಾಶ ಕೊಟ್ಟ ಸಂಗತಿ ನಾಯಕನಹಟ್ಟಿ ಬಖೈರುವಿನಿಂದ ತಿಳಿದುಬರುತ್ತದೆ'[೨]. ಅಷ್ಟು ಆಕಳುಗಳನ್ನು ಮೇಯಿಸಲು ಜಾಗ ಕೊಟ್ಟಿದ್ದಾನೆಂದರೆ, ಇವರ ಮೂಲವೃತ್ತಿಯೂ ಪಶುಪಾಲನೆಯೆಂಬುದು ಸ್ಪಷ್ಟವಾಗುತ್ತದೆ. ಹಾಗಾಗಿ ಇಬ್ಬರೂ ಪಶುಪಾಲನಾ ವೃತ್ತಿಯನ್ನು ಅವಲಂಬಿಸಿದ್ದರಿಂದ ಹುಲ್ಲುಗಾವಲುಗಳ ಸ್ವಾಧೀನಾನುಭೋಗಕ್ಕಾಗಿ ವೃತ್ತಿ ಸಹಜವಾಗಿ ಘರ್ಷಣೆ ನಡೆದಂತೆ ತೋರುತ್ತದೆ.

ಹಾಗೆಯೇ ಗೊಂದಿಹಳ್ಳಿ ಕಾಟಂ ದೇವರು ಮ್ಯಾಸನಾಯ್ಕರಿಗೂ ಕುಲದೇವರಾಗಿರುವ ಸಾಧ್ಯತೆಯಿದೆ. ನಾಯಕನಟ್ಟಿಯ ಸ್ಥಾಪಕನಾದ ಕಾಟೇಮಲ್ಲನಾಯಕನ ಹೆಸರಿಗೂ, ಈ ದಾಖಲೆಯಲ್ಲಿ ಬರುವ ಗೊಲ್ಲ ಸಮುದಾಯದ ಹಿರೇದೇವರ ಕಾಟಯ್ಯ ಕುಟುಂಬದಲ್ಲಿ ಬರುವ ದೇವರ ಕಾಟಯ್ಯ, ದೊಡ್ಡ ಕಾಟಯ್ಯ, ಕಾಟಪ್ಪ, ಗೆಜ್ಜೆ ಕಾಟಪ್ಪ, ಮುಂತಾದ ಹೆಸರುಗಳ ಉತ್ತರ ಪದವೂ ಒಂದೇ ಹೆಸರಿನ ಮೂಲವನ್ನು ಹೊಂದಿದೆ. ತಳ ಸಮುದಾಯಗಳಿಗೆ ತಮ್ಮ ನಂಬಿಕೆಯ ದೇವರು ತಮ್ಮ ಬದುಕಿನ ಅಸ್ಮಿತೆಯೂ ಆಗಿರುವುದರಿಂದ, ದೇವರನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಳ್ಳಲು ಎರಡೂ ಸಮುದಾಯಗಳು ಹೋರಾಟಕ್ಕೆ ಇಳಿದಂತೆ ತೋರುತ್ತದೆ. ಅದಕ್ಕೆ ಪಟ್ಟವನ್ನು ದೊರೆಗಳೇ ನಿಗದಿಪಡಿಸಿದರೆಂಬುದನ್ನು ಸಾರಬೇಕಾಯಿತು.

ನಾಲ್ಕನೆಯ ವಲಸೆ ಪ್ರಭುತ್ವ ಪ್ರೇರಿತ. ಸ್ವತಃ ಚಿತ್ರದುರ್ಗದ ದೊರೆ ಮದಕ್ಕೇರಿನಾಯಕ ಸುತ್ತಮುತ್ತಲ ದೇವರುಗಳನ್ನೆಲ್ಲ ಪೂಜಾರಿ ಸಮೇತ ಚಿತ್ರದುರ್ಗಕ್ಕೆ ಕರೆಸಿಕೊಂಡಾಗ ದೇವರು ಗೊಂದಿಹಳ್ಳಿಯಿಂದ ಚಿತ್ರದುರ್ಗಕ್ಕೆ ಹೋಗುತ್ತದೆ. ದೊರೆ ಏಕೆ ಕರೆಸಿಕೊಂಡ ಎಂಬುದರ ಬಗ್ಗೆ ತಾಮ್ರಪತ್ರದಲ್ಲಿ ಸ್ಪಷ್ಟವಿಲ್ಲ. ಎಲ್ಲ ದೇವರುಗಳನ್ನು ಚಿತ್ರದುರ್ಗಕ್ಕೆ ಕರೆಸಿಕೊಳ್ಳುವ ಮೂಲಕ ಎಲ್ಲ ಸಮುದಾಯಗಳಿಗೆ ಮಾನ್ಯತೆ ದೊರೆತು ಒಂದು ಸಹಬಾಳ್ವೆಯ ಜೀವನಕ್ಕೆ ಅವಕಾಶ ನೀಡಿದನೆಂದು ಹೇಳಬಹುದು. ಚಿತ್ರದುರ್ಗದಲ್ಲಿ ಇವರಿಗೆ ಸೂಕ್ತ ಮಾನ್ಯತೆ ಸಿಕ್ಕಿತ್ತೆಂದು ತೋರುತ್ತದೆ. ಬೊಮ್ಮಣ್ಣ ಪಟ್ಟವಾದ ನಂತರ ವಿಜೃಂಭಣೆಯಿಂದ ದೇವರ ಸಹಿತ ದುರ್ಗದ ಪೇಟೆಯಲ್ಲಿ ಹೋಗುತ್ತಿದ್ದಾಗ ಬಾಜಾರದಲ್ಲಿ ದೊರೆ ಕಸೂರಿನಾಯ್ಕ ತನ್ನ ಕೈಯಲ್ಲಿ ನಿಂಬೆಹಣ್ಣು ಮುಚ್ಚಿಟ್ಟುಕೊಂಡು 'ನನ್ನ ಕೈಯಲ್ಲಿ ಏನಿದೆ ಹೇಳು' ಎಂದು ಪೂಜಾರಿ ಬೊಮ್ಮಣ್ಣನನ್ನು ಕೇಳಿದಾಗ ಅವನು 'ನಿಂಬೆಹಣ್ಣು' ಎನ್ನುತ್ತಾನೆ. 'ಅದರಲ್ಲಿ ಎಷ್ಟು ಬೀಜವಿದೆ ಎಂದು' ಕೇಳಿದಾಗ 'ಒಂದು ಬೀಜ' ಎಂದು ಉತ್ತರ ಕೊಡುತ್ತಾನೆ. ದೊರೆ ತನ್ನ ಬಾಕಿನಿಂದ ಕೊಯ್ದು ನೋಡಿದಾಗ ಅದರಲ್ಲಿ ಒಂದೇ ಬೀಜವಿತ್ತು. ಇದರಿಂದ ಸುಪ್ರೀತನಾದ ಕಸೂರಿನಾಯ್ಕ ತನ್ನ ರಾಣೀವಾಸದವರಿಂದ ಮುತ್ತಿನ ಆರತಿ ತರಿಸಿ ಬೆಳಗಿಸುತ್ತಾನೆ.

ಐದನೆಯ ವಲಸೆ ಸ್ವಯಂ ಪ್ರೇರಿತವಾಗಿದೆ. ಬೊಮ್ಮಣ್ಣನ ನಂತರ ಅವರ ವಂಶಸ್ಥರು ಮೊದಲಿನ ಮಾನ್ಯತೆಯನ್ನು ಹಾಗೂ ದೊರೆಗಳ ವಿಶ್ವಾಸ-ಆಶ್ರಯವನ್ನು ಕಳೆದುಕೊಂಡಂತೆ ತೋರುತ್ತದೆ. ಒಂದು ಸಮುದಾಯ ನೆಲೆ ಕಂಡುಕೊಳ್ಳಬೇಕಾರೆ ಸುರಕ್ಷಿತ ವಾತಾವರಣ, ಇತರ ದೈವಗಳ ಆರಾಧಕರ ಸಹಕಾರ, ಆಡಳಿತ ವರ್ಗಗಳ ಸಹಮತ ಅಗತ್ಯ. ಇಲ್ಲದಿದ್ದರೆ, ಸಣ್ಣಪುಟ್ಟ ಮನಸ್ತಾಪಗಳೂ, ಸಮುದಾಯಗಳನ್ನು ಅಸ್ಥಿರಗೊಳಿಸುತ್ತವೆ. ಬಹುಶಃ ಪಟ್ಟಣದಲ್ಲಿ ಅವರಿಗೆ ಅಂಥ ಅವಕಾಶಗಳಿಲ್ಲದೆ, ಅಸ್ಥಿರಭಾವ ಕಾಡಿದಂತೆ ತೋರುತ್ತದೆ. ಅಣ್ಣತಮ್ಮಗಳೆಲ್ಲ ಸೇರಿ ತಮ್ಮ 'ಹವಿಕವಿ' ಪಟ್ಟಣದಲ್ಲಿ ನಡೆಯುವುದಿಲ್ಲವೆಂದು ಅಯ್ಯನಹಳ್ಳಿ ಗ್ರಾಮಕ್ಕೆ ವಲಸೆ ಹೋಗಿ ಅಲ್ಲಿ ಒಂದು ವಸತಿ ನೆಲೆಯನ್ನು ಸ್ಥಾಪಿಸಿ ಅದಕ್ಕೆ 'ದೇವರಹಟ್ಟಿ' ಎಂದು ಹೆಸರಿಟ್ಟುಕೊಂಡು ಅಲ್ಲಿಯೇ ನೆಲೆ ನಿಲ್ಲುತ್ತಾರೆ.

ಆರನೆಯ ವಲಸೆಗೆ ಕಾರಣ ಮೂಲನೆಲದ ಸೆಳೆತ. ಒಂದು ವಸತಿ ನೆಲೆಯನ್ನು ಕಟ್ಟಿಕೊಂಡು ನೆಲೆಗೊಂಡಾಕ್ಷಣ ದೇವರ ವಲಸೆ ಪ್ರಕ್ರಿಯೆ ಮುಕ್ತಾಯಗೊಳ್ಳಲಿಲ್ಲ. ಮೂಲಕ ಸೆಳೆತ ಅವರನ್ನು ಬಿಡಲಿಲ್ಲ. ಅವರಿಗೆ ದೇವರಹಟ್ಟಿಯಲ್ಲಿ ನೆಲೆಸುವುದು ಅನುಕೂಲಕರವಾಗಲಿಲ್ಲವೆಂದು ಕಾಣುತ್ತದೆ. ಹಿಂದೆ ನಾಯಕನಹಟ್ಟಿಯಿಂದ ಮ್ಯಾಸನಾಯ್ಕರೊಂದಿಗೆ ಜಗಳವಾಡಿಕೊಂಡು ಬಂದರೂ, ಅಣ್ಣ ತಮ್ಮಂದಿರೆಲ್ಲ ಸೇರಿ ಮತ್ತೆ ಅಲ್ಲಿಗೇ ದೇವರು ಹೋಗಬೇಕೆಂದು ಬಯಸುತ್ತಾರೆ.

ಆದರೆ ದೇವರ ಪೂಜಾರಿ ದೊಡ್ಡಗೊಂಡ್ಯಪ್ಪ ‘ಈಗ ಹೋದರೆ ಒಳ್ಳೆಯದಾಗುವುದಿಲ್ಲವೆಂದು’ ಹೇಳುತ್ತಾ ಮೂರು ವರ್ಷ ಮುಂದೂಡಿದ. ಆದರೆ ಅಣ್ಣತಮ್ಮಂದಿರು ಕೇಳದೆ ಮುಷ್ಕರ ಹೂಡಲು ದೇವರು ಮತ್ತು ಪೂಜಾರಿ ನಾಯಕಟ್ಟೆಗೆ ಮತ್ತೆ ಮರುವಲಸೆ ಹೋಗುತ್ತಾರೆ. ಈಗಾಗಲೇ ನಾಯಕನಟ್ಟೆಯಲ್ಲಿ ದೇವರ ವಿಷಯಕ್ಕೆ ಮ್ಯಾಸನಾಯ್ಕ ಮತ್ತು ಅವಾಲ್ದಾರ ವಂಶದ ಚನ್ನಮಲ್ಲಪ್ಪ ವ್ಯಾಜ್ಯ ಮಾಡಿಕೊಂಡೇ ಬಂದಿದ್ದರೂ, ಮತ್ತೆ ಅಲ್ಲಿಗೆ ಹೋಗುವ ಅನಿವಾರ್ಯತೆ ಏನತ್ತೋ ತಿಳಿದುಬರುವುದಿಲ್ಲ. ಅಲ್ಲಿ ಮತ್ತೆ ಮ್ಯಾಸನಾಯ್ಕರು ತೊಂದರೆ ಕೊಡಲು ಪ್ರಾರಂಭಿಸಿದಂತೆ ತೋರುತ್ತದೆ. ಇದಕ್ಕೆ ಇವರ ದಾಯಾದಿಗಳೂ ಬೆಂಬಲ ನೀಡಿದರು. ಇವರೆಲ್ಲರೂ ಜರಿಮಲೆ ಪಾಳೆಯಗಾರರಿಗೆ ಸುದ್ದಿ ನೀಡಿದರು. ಅಲ್ಲಿಂದ ಕುದುರೆ, ಜನ ಬಂದು ದೇವರನ್ನು ಮುತ್ತಿ, ಸೂರೆ ಮಾಡುತ್ತಾರೆ. ಪೂಜಾರಿ, ಹಿರಿಯರು ಮಾಡಿದ ದೇವರು ಅನ್ಯಾಯವಾಗಿ ಹೋಗುತ್ತದಲ್ಲಾ ಎಂದು ಪೆಟ್ಟಿಗೆಯಲ್ಲಿದ್ದ ಲಿಂಗವನ್ನು ತನ್ನ ಉಡುದಟ್ಟಿಯಲ್ಲಿ ಕಟ್ಟಿಕೊಂಡು ಬಾಯಿ, ಮೂಗಿನಲ್ಲಿ ರಕ್ತವನ್ನು ಕಾರುತ್ತಾ ದುರ್ಗದ ಕಡೆ ಓಡಿಹೋಗುತ್ತಾನೆ. ಆದರೆ ದುರ್ಗದ ಬಾಗಿಲು ಮುಚ್ಚಿರುತ್ತದೆ. ಸೂರೆಕಾರರು ಹತ್ತಿರ ಬರುತ್ತಿದ್ದುದನ್ನು ನೋಡಿ ದೇವರನ್ನು ಗಂಟೆಧೂಪಾರತಿಗಳನ್ನು ದುರ್ಗದೊಳಗೆ ಎಸೆದ. ಸೊರೆಕಾರರು ಅವನನ್ನು, ಅವನ ಮೂರು ಜನ ಅಣ್ಣತಮ್ಮಂದಿರನ್ನು ಇನ್ನೂ ಹಲವಾರು ಜನರನ್ನು ಕಡಿದುಹಾಕುತ್ತಾರೆ.

ದುರ್ಗದೊಳಕ್ಕೆ ಎಸೆಯಲ್ಪಟ್ಟ ಲಿಂಗ, ಧೂಪಾರತಿಗಳು ಹವಲ್‌ದಾರನ ವಂಶಸ್ಥನೊಬ್ಬನಿಗೆ ಸಿಕ್ಕು ಅವನು ಅದು ತಮ್ಮದೇವರೆಂದು ಗುರುತಿಸಿ ಅದನ್ನು ಬಚ್ಚಿಟ್ಟುಕೊಳ್ಳುತ್ತಾನೆ. ನಾಯಕನಟ್ಟಿಯ ಘಟನೆಯಿಂದ ಹಿರೇದೇವರ ಪೂಜಾರಿ ವಂಶಸ್ಥರು ಹೆದರಿಕೊಂಡು ಯಾರೂ ದೇವರಪಟ್ಟ ಪಡೆಯಲು ಮುಂದಾಗಲಿಲ್ಲ. ಆಗ ೩೦ ವರ್ಷಗಳ ತರುವಾಯ ಪೂಜಾರಿ ಅಣ್ಣತಮ್ಮಂದಿರು ಪಟ್ಟ ಮಾಡಬೇಕೆಂದು ಜೋಗಿಹಟ್ಟಿಗೆ ಹೋಗಿ ಕಾಟಪ್ಪ ಎಂಬುವವನು ದುರ್ಗಕ್ಕೆ ಕರೆದುಕೊಂಡು ಬಂದು, ಅವನನ್ನು ಹಿರೇದೇವರ ಪೂಜಾರಿಯ ಮನೆಯ ದತ್ತುಮಗನಾಗಿ ಸ್ವೀಕರಿಸಿ ಪಟ್ಟಕಟ್ಟುತ್ತಾರೆ. ಆದರೆ, ಅದಕ್ಕೆ ಷರತ್ತು ವಿಧಿಸಿ ಮುಂದೆ ಯಾರಾದರೂ ಹಿರೇದೇವರ ಪೂಜಾರಿ ವಂಶಸ್ಥರು ಬಂದರೆ ಅವರಿಗೆ ಪಟ್ಟ ಮುಂದುವರೆಯುತ್ತದೆಯೇ ಹೊರತು, ಈ ಕಾಟಪ್ಪನಿಗಾಗಲೀ ಅವನ ವಂಶದವರಿಗಾಗಲೀ ಅಲ್ಲ ಎಂದು ತೀರ್ಪು ನೀಡುತ್ತಾರೆ. ಇಲ್ಲಿಗೆ ಕಾಟಪ್ಪನಿಗೆ ಪಟ್ಟವಾಗಿ ದೇವರು ವಲಸೆ ಒಂದೆಡೆ ನಿಲ್ಲುವಂತಾಗುತ್ತದೆ.

ಗೊಲ್ಲತಿಲಕ, ಗೋಕುಲಕ್ಕೆ ಸಂಬಂಧಪಟ್ಟ ಹಿರೇದೇವರ ಪೂಜಾರಿ ಕಾಟಯ್ಯನ ವಂಶದ ಇಪ್ಪತ್ತೊಂದು ತಲೆಮಾರುಗಳಲ್ಲಿ ಆರು ಸಾರಿ ನಡೆದ ದೇವರ ವಲಸೆ ಅಂತಿಮವಾಗಿ ಆ ಕುಲಕ್ಕೆ ಹೊರಗಿನವನಾದ ಜೋಗಿಹಟ್ಟಿಯ ಕಾಟಪ್ಪನಿಗೆ ದೇವರಪಟ್ಟವಾಗುವ ಮೂಲಕ ಸ್ಥಿರಗೊಳ್ಳುತ್ತದೆ. ಇಷ್ಟೆಲ್ಲ ವಲಸೆಗಳ ಕಾಲದಲ್ಲಿ ಅವರು ಅನುಭವಿಸಿದ ಆತಂಕಗಳು, ತಲ್ಲಣಗಳೇನು ಎಂಬುದನ್ನು ಈ ದಾಖಲೆ ವಿಷದಪಡಿಸುವುದಿಲ್ಲ. ಅಲ್ಲದೆ ಶಾಸನದ ಕೊನೆಯ ಭಾಗ ವಲಸೆ ಪ್ರಕ್ರಿಯೆ ಮತ್ತೆ ಮರುಕಳಿಸುವ ಸಂಭಾವ್ಯತೆಯನ್ನು ಸೂಚಿಸುತ್ತದೆ. ಜೋಗಿಹಟ್ಟಿ ಕಾಟಪ್ಪನಿಗೆ ದೇವರ ಪಟ್ಟ ಕಟ್ಟುವಾಗ, ಕಟ್ಟಬಹುದೇ? ಬೇಡವೇ? ಎಂಬ ಬಗ್ಗೆ ಅವಲ್‌ದಾರ ವಂಶದ ಕರಿಯಪ್ಪನನ್ನು ಕರೆತಂದು ಪಂಚಾಯ್ತಿ ಮಾಡಿಸುತ್ತಾರೆ. ಅವಲ್‌ದಾರ ಕರಿಯಪ್ಪ ‘ಜೋಗಿಹಟ್ಟಿ ಕಾಟಪ್ಪನಿಗೆ ಸದ್ಯಕ್ಕೆ ಪಟ್ಟ ಮಾಡಿರುತ್ತದೆ. ಮುಂದೆ ಹಿರೇದೇವರ ಪೂಜಾರಿ ವಂಶಸ್ಥರು ಯಾರಾದರೂ ಬಂದರೆ ಅವರಿಗೆ ಪಟ್ಟವಾಗಬೇಕೇ ಹೊರತು ಕಾಟಪ್ಪನಿಗಾಗಲೀ ಅವನ ವಂಶಸ್ಥರಿಗಾಗಲೀ ಸಲ್ಲತಕ್ಕದ್ದಲ್ಲವೆಂದು’ ತೀರ್ಪು ನೀಡುವ ಮೂಲಕ ದೈವ ಮತ್ತು ಅಧಿಕಾರವನ್ನು ಅದೇ ಜನಾಂಗಕ್ಕೆ ನೀಡುವ ಮೂಲಕ ಸಹಬಾಳ್ವೆಗೆ ಅವಕಾಶ ಕಲ್ಪಿಸುತ್ತಾರೆ.

ಇಡೀ ಶಾಸನ ಮಧ್ಯಕಾಲೀನೋತ್ತರ ಕರ್ನಾಟಕದ ಸಮಾಜದಲ್ಲಿ ಕೆಳಸಮುದಾಯಗಳು ಒಂದು ಸ್ಥಿರನೆಲೆ ಕಂಡುಕೊಳ್ಳಲು ನಡೆಸುವ ಹೋರಾಟ, ಅಂಥ ಸಂದರ್ಭಗಳಲ್ಲಿ ಅನುಭವಿಸುವ ಅಸ್ಥಿರ ಭಾವ, ಆತಂಕಗಳನ್ನು ಅನಾವರಣಗೊಳಿಸುತ್ತದೆ.

ಅಡಿಟಿಪ್ಪಣಿಗಳು

೧. ರಾಜಶೇಖರಪ್ಪ ಬಿ., ವಿಜಯನಗರ ದೊರೆಗಳ ಪ್ರಸ್ತಾಪ ಬರುವ ಗೊಲ್ಲ ಜನಾಂಗದವರ ಒಂದು ದಾಖಲೆ, ವಿಜಯನಗರ ಅಧ್ಯಯನ-೧೨, ೨೦೦೭, ಪುಟ ೧೬೬-೧೮೧.

೨. ವಿರೂಪಾಕ್ಷಿ ಪೂಜಾರಹಳ್ಳಿ, ಮ್ಯಾಸಬ್ಯಾಡ್ಕಿ ನಾಯಕತನಕ್ಕೆ ಸಂಬಂಧಿಸಿದ ತಾಮ್ರಶಾಸನ ಶೋಧನೆ, ವಿಜಯನಗರ ಅಧ್ಯಯನ-೫, ೨೦೦೦, ಪುಟ ೯೩-೯೭.

೪೩

ಮುಳಬಾಗಿಲಿನ ವಿರುಪಾಕ್ಷಿ ಹೊಯ್ಸಳರ ರಾಜಧಾನಿ

ಆದಪ್ಪ ಪಾಸೋಡಿ*

ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು ಕೇಂದ್ರದಿಂದ ನೈಋತ್ಯಕ್ಕೆ ರಾಷ್ಟ್ರೀಯ ಹೆದ್ದಾರಿ–೭೫ ದಾಟಿ, ಆವನಿ ರಸ್ತೆಯಲ್ಲಿ ಐದು ಕಿ.ಮೀ. ದೂರ ಕ್ರಮಿಸಿದರೆ ವಿರುಪಾಕ್ಷಿ ಅಥವಾ ವಿರುಪಾಕ್ಷಿಪುರ ಗ್ರಾಮವನ್ನು ತಲುಪುತ್ತೇವೆ.

ವಿರುಪಾಕ್ಷಿ: ಕ್ರಿ.ಶ. ೧೯೩೦ರಲ್ಲಿ ಸಿ. ಹಯವದನರಾವ್ ಅವರಿಂದ ಪ್ರಕಟವಾದ ಮೈಸೂರು ಗ್ಯಾಸೆಟಿಯರ್‌ನ ಆಂಗ್ಲಬಾಷಾ ಆವೃತ್ತಿ–೨೦೧೧ರ ಪುಟ ೩೭೮ರಲ್ಲಿ ವಿರುಪಾಕ್ಷಪುರ ಕೋಲಾರ ತಾಲ್ಲೂಕಿನಲ್ಲಿದೆಯೆಂಬ ತಪ್ಪು ಮಾಹಿತಿಯಿದೆ. ವಿಜಯನಗರ ದೊರೆ ಎರಡನೆಯ ದೇವರಾಯನ ಕಾಲಕ್ಕೆ ನಿರ್ಮಿಸಲ್ಪಟ್ಟ ವಿರುಪಾಕ್ಷ ದೇವಾಲಯದ ಸಂಗತಿ ಇದೆಯಾದರೂ, ಕೋಟೆಯ ಉಲ್ಲೇಖವಿರುವುದಿಲ್ಲ. ಕ್ರಿ.ಶ. ೧೯೬೮ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್‌ನಲ್ಲೂ ವಿರುಪಾಕ್ಷಪುರವು ಮಾಲೂರು ತಾಲ್ಲೂಕಿನಲ್ಲಿದೆಯೆಂಬ ಮಾಹಿತಿ ತಪ್ಪಾಗಿದೆ. ಇಲ್ಲಿಯೂ ಕೂಡ ಬೃಹತ್ ಕೋಟೆ–ಪ್ರವೇಶದ್ವಾರಗಳ ಪ್ರಸ್ತಾಪವಿಲ್ಲ. ಕ್ರಿ.ಶ. ೧೯೭೯ರಲ್ಲಿ ಸರಕಾರಿ ಮುದ್ರಣಾಲಯದಿಂದ ಹೊರತಂದ ಮೈಸೂರು ರಾಜ್ಯದ ಗ್ರಾಮಗಳು ಹಾಗೂ ೧೯೮೫ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಕಟಣೆ 'ಕರ್ನಾಟಕ ಗ್ರಾಮಸೂಚಿ' ಯಲ್ಲಿ ಚಿಂತಾಮಣಿ ತಾಲ್ಲೂಕಿನ ವಿರುಪಾಕ್ಷಿಪುರ ಇದೆಯೇ ಹೊರತು ಮುಳಬಾಗಿಲು ತಾಲ್ಲೂಕಿನ 'ವಿರುಪಾಕ್ಷಿ'ಯ ಉಲ್ಲೇಖ ಇರುವುದಿಲ್ಲ. ೨೦೦೫ರ ಕೋಲಾರ ಜಿಲ್ಲಾ ಗ್ಯಾಸೆಟಿಯರ್‌ನ ಕನ್ನಡ ಆವೃತ್ತಿಯಲ್ಲಿ ಮಾತ್ರ ನಮ್ಮ ಮುಳಬಾಗಿಲ ತಾಲ್ಲೂಕಿನ ವಿರುಪಾಕ್ಷಿಯಲ್ಲಿ ಮುಳವಾಯಿ ಪ್ರಾಂತ್ಯದ ರಾಜ್ಯಪಾಲನಾಗಿದ್ದ ಲಕ್ಕಣ್ಣದಂಡೇಶನು ನಿರ್ಮಿಸಿರುವ ವಿರುಪಾಕ್ಷ ದೇವಾಲಯವಿದೆಯೆಂಬ ವಿಷಯವಿದೆ. ಇದಕ್ಕೂ ಶಾಸನಾಧಾರಗಳಿಲ್ಲ.

ಮುಮ್ಮಡಿ ಬಲ್ಲಾಳನ ರಾಜಧಾನಿಗಳು: ಕ್ರಿ.ಶ. ಸುಮಾರು ೧೦೦೦ಕ್ಕೂ ಮೊದಲ್ಗೊಂಡು ೧೪ನೆಯ ಶತಮಾನದವರೆಗೆ ಕರ್ನಾಟಕ ರಾಜ್ಯದ ದಕ್ಷಿಣ ಮತ್ತು ಸುತ್ತಲಿನ ಭಾಗಗಳನ್ನು ಆಳಿದವರು ಹೊಯ್ಸಳರು. ಸಳನಿಂದ ಪ್ರಾರಂಭವಾಗಿ ನಾಲ್ಕನೆಯ ಬಲ್ಲಾಳನವರೆಗೆ ೧೪ ಜನರು ಆಗಿ ಹೋಗಿದ್ದಾರೆ. ಮುಮ್ಮಡಿ ನರಸಿಂಹನ ಮಗನಾದ ಮುಮ್ಮಡಿ ಬಲ್ಲಾಳನು ತನ್ನ ೨೮ನೆಯ ವಯಸ್ಸಿನಲ್ಲಿ ೧೨೯೧–೯೨ರಲ್ಲಿ ಪಟ್ಟಾಭಿಷಕ್ತನಾಗಿ, ಕ್ರಿ.ಶ. ೧೩೪೩ರವರೆಗೆ ಅತಿ ಹೆಚ್ಚು ಅಂದರೆ ೫೧ ವರ್ಷಗಳ ಸುದೀರ್ಘ ಕಾಲ ರಾಜ್ಯಭಾರ ಮಾಡಿದ ದೊರೆಯೆನಿಸಿದ್ದಾನೆ. ಇದಕ್ಕೂ ಮೊದಲು ಕ್ರಿ.ಶ. ೧೨೭೮ರಲ್ಲೇ ಇವನು ಕುಮಾರವೃತ್ತಿಯಿಂದ ಬಟಕಳನಾಡನ್ನು ಆಳಿರುವ ಬಗ್ಗೆ ಶಿರಾಳಿ ಶಾಸನ ಹೇಳಿದೆ.[೧] ಕಮ್ಮಟದುರ್ಗದ ಕಂಪಿಲರಾಯನೊಂದಿಗಿನ ಯುದ್ಧಗಳು, ಇನ್ನೊಂದೆಡೆ ಮಹಮ್ಮದೀಯರ ಆಕ್ರಮಣಗಳು, ಮತ್ತೊಂದೆಡೆ ಪ್ರಬಲರಾಗುತ್ತಿದ್ದ ಮಾಂಡಲಿಕರು–ಈ ಎಲ್ಲ ಕಾರಣಗಳಿಂದಾಗಿ ತನ್ನ ನೆಲೆಗಳನ್ನು ಆಗಾಗ್ಗೆ ಬದಲಿಸಿಕೊಳ್ಳುತ್ತಿದ್ದ ಮುಮ್ಮಡಿ ಬಲ್ಲಾಳನಿಗೆ ಸುಮಾರು ೧೫ಕ್ಕಿಂತಲೂ ಹೆಚ್ಚಿನ ನೆಲೆವೀಡುಗಳಿದ್ದುದನ್ನು ನಾವು ನೋಡುತ್ತೇವೆ. ಅವುಗಳಲ್ಲಿ ಹೊಸಪಟ್ಟಣ (ಕ್ರಿ.ಶ. ೧೩೦೦), ಹೆಸರ್ ಕುಂದಾಣ (ಕ್ರಿ.ಶ. ೧೩೦೧), ಅರುಣಸಮುದ್ರ ಬಲ್ಲಾಳಪಟ್ಟಣ (ಕ್ರಿ.ಶ. ೧೩೧೩–೧೪), ಅರುಣಸಮುದ್ರ (ಕ್ರಿ.ಶ. ೧೩೧೮), ದೋರಸಮುದ್ರ (ಕ್ರಿ.ಶ. ೧೩೧೯), ತೊಣ್ಣೂರು, ಹೊಸವೀಡು (ಕ್ರಿ.ಶ. ೧೩೨೧), ಉಣ್ಣಾಮಲೆಪಟ್ಟಣ (ತಿರುವಣ್ಣಾಮಲೈ) (ಕ್ರಿ.ಶ. ೧೩೨೮), ವಿರುಪಾಕ್ಷಪಟ್ಟಣ (ಕ್ರಿ.ಶ. ೧೩೩೦), ವಿರುಪಾಕ್ಷ ಹೊಸದುರ್ಗ (ಕ್ರಿ.ಶ. ೧೩೩೧), ಬಾರಕೂರು (ಕ್ರಿ.ಶ. ೧೩೩೩), ಹೊಸಬೆಟ್ಟ (ಕ್ರಿ.ಶ. ೧೩೩೩), ಕಂಚಿ (ಕ್ರಿ.ಶ. ೧೩೩೪), ವೀರವಿಜಯ ವಿರುಪಾಕ್ಷಪುರ (ಕ್ರಿ.ಶ. ೧೩೩೯), ಹೊಸನಾಡು (ಕ್ರಿ.ಶ. ೧೩೪೦), ವಿರುಪಾಕ್ಷಪಾದ (ಕ್ರಿ.ಶ. ೧೩೪೨) ಗಳು ಪ್ರಮುಖವಾಗಿರುತ್ತವೆ. ರಾಜನು ಈ ಊರುಗಳಲ್ಲಿ ಸ್ಥಿರವಾಗಿ ನಿಂತು ಆಡಳಿತ ನಡೆಸಿದ್ದರಿಂದ ಇವುಗಳನ್ನು ರಾಜಧಾನಿಗಳೆಂದೂ ಕರೆಯಬಹುದಾಗಿದೆ.[೨]

ಶಾಸನಗಳಲ್ಲಿ ವಿರುಪಾಕ್ಷ ಪಟ್ಟಣ, ಶ್ರೀ ವಿರುಪಾಕ್ಷ ಹೊಸದುರ್ಗ, ಶ್ರೀ ವೀರವಿಜಯ ವಿರೂಪಾಕ್ಷಪುರ, ವಿರುಪಾಕ್ಷಪಾದ: ಕ್ರಿ.ಶ. ೧೩೩೦ರ ಅರಸೀಕೆರೆ–೧೦೩ನೆಯ ವೀರಗಲ್ಲು ಶಾಸನವು ಜಯಚಾಮರಾಜಪುರ(ಹಲಕೂರು)ದಲ್ಲಿದೆ. ಈ ಶಾಸನವು 'ಶ್ರೀ ಮತ್ಪ್ರತಾಪ ಚಕ್ರವರ್ತಿ ಹೊಯಿಸಣ ಶ್ರೀ ವೀರಬಲ್ಲಾಳದೇವರು ವಿರುಪಾಕ್ಷ ಪಟ್ಟಣದ ನೆಲೆವೀಡಿನಲಿ

* ೨ನೆಯ ರಸ್ತೆ, ಸರ್ಕಾರಿ ಪದವಿಪೂರ್ವ ಕಾಲೇಜು ಹಿಂಭಾಗ, ವರ್ತೂರು, ಬೆಂಗಳೂರು–೫೬೦೦೮೭. ಮೊ. ೯೮೮೦೮೬೦೧೩೫

ಸುಖಸಂಕಥಾವಿನೋದದಿಂ ರಾಜ್ಯಂಗೆಯಿಉತ್ತಿರೆ ಎಂದು ತಿಳಿಸುತ್ತದೆ.[೩] ಇದೇ ಕ್ರಿ.ಶ. ೧೩೩೦ರ ಮಾಗಡಿ ತಾಲ್ಲೂಕು, ಕಲ್ಲೂರು ವರದರಾಜೇಶ್ವರ ದೇವಸ್ಥಾನದ ಅಧಿಷ್ಠಾನದ ಮೇಲಿರುವ ಅಪ್ರಕಟಿತ ಶಾಸನವೊಂದು 'ಶ್ರೀಮತ್ ಪ್ರತಾಪ ಚಕ್ರವರ್ತಿ ಹೊಯಿಸಣ ಭುಜಬಲ ಶ್ರೀ ವೀರಬಲ್ಲಾಳದೇವರಸರು ವಿರುಪಾಕ್ಷಪಟ್ಟಣದಲು ಸುಖಸಂಕಥಾವಿನೋದದಿಂ ಸುಖರಾಜ್ಯಂಗೈಯ್ಯುತ್ತಲಮಿರ್ದಲಿ' ಎಂದು ಉಲ್ಲೇಖಿಸುತ್ತದೆ.[೪] ಕ್ರಿ.ಶ. ೧೩೩೧ರ ಗುಬ್ಬಿ-೩೦ ಶಾಸನವು ಸಂಪಿಗೆ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಮುಂದಿದ್ದು, ಇದು 'ಶ್ರೀ ವೀರನಾರಸಿಂಹ್ವದೇವರ ಕುಮಾರ ಶ್ರೀ ವೀರಬಲ್ಲಾಳ ದೇವರ್ಸರೂ ಶ್ರೀ ಮನ್ಮಹಾಪ್ರಧಾನಂ ಪೊಂನಣ್ಣನವರ ಮಕ್ಕಳು ರಾಮೆಯ ದಂಣ್ಣಾಯ್ಕರೂ ಶ್ರೀ ವಿರುಪಾಕ್ಷ ಹೊಸದುರ್ಗದಲ್ಲಿ ಸುಖಸಂಕಥಾ ವಿನೋದದಿಂ ಪ್ರಿಥ್ವೀರಾಜ್ಯಂಗೆಯ್ಯುತ್ತಿದ್ದಲ್ಲಿ' ಎಂಬ ಮಾಹಿತಿ ನೀಡುತ್ತದೆ.[೫] ಚನ್ನಪಟ್ಟಣ ತಾಲ್ಲೂಕು ತೆಂಕನಹಳ್ಳಿದೊಡ್ಡಿ ಶಾಸನವು ಕ್ರಿ.ಶ. ೧೩೩೪ರ ಅವಧಿಯದಾಗಿದ್ದು, ಇದು 'ಶ್ರೀಮತು ಪ್ರತಾಪ ಚಕ್ರವರ್ತಿ ಹೊಇಸಣ ಶ್ರೀ ವೀರಬಲ್ಲಾಳ ದೇವರಸರು ವಿರುಪಾಕ್ಷ ಪಟ್ಟಣದೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಿರೆ' ಎಂದು ಪ್ರಾರಂಭವಾಗುತ್ತದೆ.[೬] ಕ್ರಿ.ಶ ೧೩೩೯ರ ಹೊಸಕೋಟೆ-೪೩ನೆಯ ಶಾಸನವು ಕೊರಟ ಗ್ರಾಮದ ಈಶಾನ್ಯ ನೀರಗಂಟಿ ಯಿನಾಮತಿ ಗದ್ದೆಯಲ್ಲಿದ್ದು, ಇದರಲ್ಲಿ 'ಪ್ರತಾಪ ಚಕ್ರವರ್ತ್ತಿ ಪೊಯಿಸಳ ಭುಜಬಲ ಶ್ರೀ ವೀರಬಲ್ಲಾಳ ದೇವರಸರು ನಿಜದ ವೀರದ ಏಕರಾಯರಾಜವಾಗಿ ಶ್ರೀ ವೀರವಿಜಯ ವಿರೂಪಾಕ್ಷಪುರದಲ್ಲಿ ನೆಲೆವೀಡಾಗಿ ಸುಖ ರಾಜ್ಯಂಗೆಯುತ್ತಿರಲು' ಎಂಬ ಮಾಹಿತಿಯಿದೆ.[೭] ಅದಂತೆ ಕ್ರಿ.ಶ. ೧೩೪೨ರ ದೇವನಹಳ್ಳಿ-೨೧ನೆಯ ಶಾಸನವು ಮುದಗುರಕಿ ಪಶ್ಚಿಮಕ್ಕೆ ಸರಕಾರದ ಬಂಜರುಭೂಮಿಯಲ್ಲಿದೆ. ಇದರಲ್ಲಿಯೂ 'ಶ್ರೀ ವೀರಬಲ್ಲಾಳದೇವರು ವಿರುಪಾಕ್ಷಪಾದ. .ದಲು ಸುಕ ರಾಜ್ಯಗಯವಲುತ' ಎನ್ನಲಾಗಿದೆ.[೮] ಈ ಎಲ್ಲ ಶಾಸನಗಳಲ್ಲಿ ಬಂದಿರುವ ಸ್ಥಳನಾಮಗಳನ್ನು ಬಹುತೇಕ ಇತಿಹಾಸಕಾರರು ಹಂಪೆಗೆ ಸಮೀಕರಿಸಿದ್ದಾರೆ.

ವಿರುಪಾಕ್ಷ ಪಟ್ಟಣ ಗುರುತಿಸುವಲ್ಲಿ ತಜ್ಞರ ಪೂರ್ವ ಪ್ರಯತ್ನಗಳು: ಕ್ರಿ.ಶ. ೧೩೧೧ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನೂ, ಕ್ರಿ.ಶ. ೧೩೨೬ರಲ್ಲಿ ಮಹಮ್ಮದ್ ಬಿನ್ ತುಘಲಕನು ದೋರಸಮುದ್ರದ ಮೇಲೆ ಆಕ್ರಮಣ ಎಸಗುತ್ತಾರೆ. ಎರಡನೆಯ ದಾಳಿಯಲ್ಲಿ ನಗರವು ಸಂಪೂರ್ಣವಾಗಿ ನಾಶವಾದಾಗ, ಮುಮ್ಮಡಿ ಬಲ್ಲಾಳನು ತಿರುವಣ್ಣಾಮಲೈ, ವಿರುಪಾಕ್ಷಪಟ್ಟಣದತ್ತ ಸಾಗಿ, ಅಲ್ಲಿ ಸೇನೆಯನ್ನಿಟ್ಟುಕೊಂಡು ನೆಲೆಯೂರುತ್ತಾನೆ. ಹಾಗೆ ನೆಲೆವೀಡಾದ 'ವಿರುಪಾಕ್ಷಪಟ್ಟಣವೇ ಹಂಪೆ' ಎಂದು ಫಾದರ್ ಏರಾಸ್ ಆದಿಯಾಗಿ ಪಿ.ಬಿ. ದೇಸಾಯಿ, ಸೂರ್ಯನಾಥ ಕಾಮತ್, ವಸುಂಧರಾ ಫಿಲಿಯೋಜಾ ಅವರ ಅಭಿಪ್ರಾಯವಾಗಿದೆ. ವಿಲಿಯಂ ಕೊಯೆಲ್ಹೊ ಅವರು 'ಮುಮ್ಮಡಿ ಬಲ್ಲಾಳನ ಎರಡು ಮುಖ್ಯ ರಾಜಧಾನಿಗಳಲ್ಲೊಂದಾದ ವಿರುಪಾಕ್ಷಪುರವು, ಹೊಸವೀಡು, ಹೊಸದುರ್ಗ, ಹೊಸನಾಡು, ಹೊಸಬೆಟ್ಟ, ವಿರುಪಾಕ್ಷ-ಹೊಸದುರ್ಗ ಮತ್ತು ಪುದು ಪದೈವೀಡು ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟಿದೆ' ಎಂದಿದ್ದಾರೆ. ಆದರೆ ಅದು ಎಲ್ಲಿದೆಯೆಂಬುದನ್ನು ತಿಳಿಸಿರುವುದಿಲ್ಲ.[೯]ಇದಕ್ಕಿಂತ ಸ್ವಲ್ಪ ಭಿನ್ನವಾಗಿ ಎನ್. ವೆಂಕಟರಮಣಯ್ಯ ಅವರು ಮಾಗಡಿ ತಾಲ್ಲೂಕಿನ ವಿರುಪಾಪುರವನ್ನು ವಿರೂಪಾಕ್ಷಪಟ್ಟಣವೆಂದಿದ್ದಾರೆ. ಕೂ.ಸ. ಅಪರ್ಣ ಅವರು ಚಿಕ್ಕಮಗಳೂರು ತಾಲ್ಲೂಕಿನ ಹಂಪಾಪುರವನ್ನು ವಿರುಪಾಕ್ಷಪಟ್ಟಣವೆಂದು ಗುರುತಿಸಲು ಪ್ರಯತ್ನಿಸಿದ್ದಾರೆ.[೧೦] ವಿಜಯನಗರ ಮತ್ತು ಹಂಪೆಗಳಿರುವಂತೆ ಇಲ್ಲಿಯೂ ಹೊಸಪಟ್ಟಣ-ವಿರೂಪಾಕ್ಷಪಟ್ಟಣಗಳು ಜೋಡಿಗ್ರಾಮಗಳಾಗಿವೆಯೆಂಬ ಕಾರಣವನ್ನು ಕೊಟ್ಟಿದ್ದಾರೆ. ಶಾಸನತಜ್ಞ ಬಿ.ಎಲ್.ರೈಸ್ ಅವರು – 'ಮುಮ್ಮಡಿ ಬಲ್ಲಾಳನು ತನ್ನ ಪುತ್ರನಿಗೆ ವೀರವಿಜಯ ವಿರುಪಾಕ್ಷಪುರದಲ್ಲಿ ಪಟ್ಟಕಟ್ಟಿ, ಅವನನ್ನು ವೀರ ವಿರುಪಾಕ್ಷ ಬಲ್ಲಾಳದೇವ ಎಂದು ಕರೆದನು; ಈ ವಿರುಪಾಕ್ಷಪುರವು ಮೈಸೂರು ಭಾಗದಲ್ಲಿ ಇದ್ದಿರಬಹುದೆಂಬ ಸುಳುಹು ಕೊಡುತ್ತಾರೆ.[೧೧] ಮತ್ತೆ ಮುಂದುವರೆದು ಹಳೆಯ ರಾಜಧಾನಿ ದೋರಸಮುದ್ರಕ್ಕೆ ಪ್ರತಿಯಾಗಿ ಹೊಸ ರಾಜಧಾನಿಯನ್ನು ಒಮ್ಮೆ ಗೌರಿಬಿದನೂರು ತಾಲ್ಲೂಕಿನ ಹೊಸೂರು (ಈಗಿನ ಹೋಬಳಿ ಕೇಂದ್ರ) ಅಥವಾ ವಿರುಪಾಕ್ಷಪಟ್ಟಣ-ಹೊಸದುರ್ಗವೆಂದೂ, ಮತ್ತೊಮ್ಮೆ ಚಿತ್ರದುರ್ಗದ ಹೊಸದುರ್ಗ (ಈಗಿನ ತಾಲ್ಲೂಕು ಕೇಂದ್ರ) ಎಂದೂ ಊಹಿಸಿದ್ದಾರೆ.[೧೨] ಜೆ.ಡಂಕನ್ ಎಂ.ಡೆರೆಟ್ ಅವರು 'ವಿರುಪಾಕ್ಷಪಟ್ಟಣವನ್ನು ಗುರುತಿಸುವುದು ಅಸಾಧ್ಯವೆಂದೂ ವಿರುಪಾಕ್ಷ-ಹೊಸದುರ್ಗವನ್ನು ಹಂಪೆ-ವಿಜಯನಗರದೊಂದಿಗೆ ತಳುಕು ಹಾಕುವುದು ಸಾಧುವಲ್ಲದ ಪ್ರೇರೇಪಣೆ' ಎಂದೂ ಹೇಳಿದ್ದಾರೆ.[೧೩] ಹಂ.ಗು. ರಾಜೇಶ್ ಅವರು 'ವಿರೂಪಾಕ್ಷಪುರ ಮತ್ತು ಹೊಸನಾಡುಗಳು ದೋರಸಮುದ್ರದ ಉತ್ತರಕ್ಕಿರದೆ, ದೋರಸಮುದ್ರ-ಅಣ್ಣಾಮಲೈ ನಡುವೆಯೇ ಇರುವ ಸಾಧ್ಯತೆಯಿದೆ' ಎಂಬ ಸ್ಪಷ್ಟೀಕರಣ ಕೊಟ್ಟಿದ್ದಾರೆ.[೧೪]

ಹಂಪೆ ಮತ್ತು ವಿರುಪಾಕ್ಷನ ಸಮಕಾಲೀನ ಪರ್ಯಾಯ ನಾಮಗಳು: ಶಾಸನೋಕ್ತ ವಿರುಪಾಕ್ಷ ಪಟ್ಟಣ, ವಿರುಪಾಕ್ಷ ಹೊಸದುರ್ಗ, ವೀರವಿಜಯ ವಿರುಪಾಕ್ಷಪುರ, ವಿರುಪಾಕ್ಷಪಾದ ಎಂಬ ಸ್ಥಳನಾಮಗಳು 'ಹಂಪೆ'ಯನ್ನೇ ಸಂಬೋಧಿಸುತ್ತವೆಂಬ ಅಭಿಪ್ರಾಯಗಳನ್ನು ಒಪ್ಪುವುದಕ್ಕೂ ಪೂರ್ವದಲ್ಲಿ, ಅಂದಿನ ಸಮಕಾಲೀನ ಶಾಸನ ಹಾಗೂ ಸಾಹಿತ್ಯಕ ಕೃತಿಗಳಲ್ಲಿ ಹಂಪೆಗಿರುವ

ಪರ್ಯಾಯನಾಮಗಳ ಬಗ್ಗೆ ಅವಲೋಕಿಸುವ ಅಗತ್ಯವಿದೆ. ಭಾರತ ಮತ್ತು ವಿದೇಶೀ ಇತಿಹಾಸ ಗ್ರಂಥಗಳಲ್ಲಿ ವಿಜಯನಗರವೆಂದು ಪ್ರಸಿದ್ಧವಾಗಿರುವ ಹಂಪೆಯು ಐತಿಹ್ಯದ ಪ್ರಕಾರ ವಿಜಯನಗರ ಸಾಮ್ರಾಜ್ಯದ ಉದಯಕ್ಕೂ ಮೊದಲು 'ಪಂಪಾ' ಎಂದು ಕರೆಯಲ್ಪಡುತ್ತಿತ್ತು.[೧೫] ಈ 'ಪಂಪಾ' ಪದವು ಮೂಲತಃ ನದಿಯ ಹೆಸರಾಗಿದ್ದು, ಆ ನದಿ (ತುಂಗಭದ್ರೆ) ದಡದ ಮೇಲೆ ಜನವಸತಿ ಬೆಳೆದು, ಊರಿಗೆ ಪಂಪೆ ಎಂಬ ಹೆಸರು ಬಂದಿರಬೇಕೆಂದು ಡಾ॥ ಎಂ. ಚಿದಾನಂದಮೂರ್ತಿಯವರು ಬರೆದಿದ್ದಾರೆ.[೧೬]

ಕ್ರಿ.ಶ. ೧೧೯೯ರ ಹಂಪೆಯ ಶಾಸನದಲ್ಲಿ 'ಲೋಕಂ ಭುವನತ್ರಯೈಕಹಿತವಂ ಪಂಪಾವರ ಕ್ಷೇತ್ರಮಂ'[೧೭] ಎಂದು ಉಲ್ಲೇಖಿಸಲ್ಪಟ್ಟಿರುವುದರಿಂದ ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲಕ್ಕೂ ಮೊದಲೇ ಹಂಪೆಗೆ 'ಪಂಪಾವರ ಕ್ಷೇತ್ರ' ಎಂದು ಕರೆಯುತ್ತಿದ್ದುದು ತಿಳಿದು ಬರುತ್ತದೆ. ಕ್ರಿ.ಶ. ೧೨೦೬ರ ಸೊಂಡೂರಿನ ಕುಮಾರಸ್ವಾಮಿ ಬೆಟ್ಟದ ಶಾಸನವೊಂದರಲ್ಲಿ ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳನ ಕಾಲದಲ್ಲಿ ಹಂಪೆಯನ್ನು 'ತುಂಗಭದ್ರಾ ನದಿತೀರದ ಮಧುವನ'[೧೮] ಹಾಗೂ ಚನ್ನರಾಯಪಟ್ಟಣ-೧೭೨ನೆಯ ಶಾಸನದಲ್ಲಿ 'ತುಂಗಭದ್ರಾತಟೇ ವಿಜಯಸಮುದ್ರಾಭಿಧಾನಾಯಾಂ ರಾಜಧಾನ್ಯಾಂ'[೧೯] ಎಂಬ ಸಾಲುಗಳಿರುವುದನ್ನು ನೋಡುತ್ತೇವೆ. ಅದರಂತೆ ಹಂಪೆಯ ಕವಿ ಹರಿಹರನ (ಕ್ರಿ.ಶ. ೧೨೨೦) ಎಲ್ಲ ಕೃತಿಗಳಲ್ಲಿಯೂ 'ಪಂಪಾಪುರ' ಉಲ್ಲೇಖಗೊಂಡಿದೆ. ಕ್ರಿ.ಶ. ಸು. ೧೪೦೦-೬೩ರ ಅವಧಿಯಲ್ಲಿ ಆಗಿ ಹೋದ ಇಮ್ಮಡಿ ಪ್ರೌಢದೇವರಾಯನ ಪ್ರಧಾನಮಂತ್ರಿ ಮತ್ತು ದಂಡನಾಯಕನಾಗಿದ್ದ ಲಕ್ಕಣ್ಣ ದಂಡೇಶನು ತನ್ನ ಗ್ರಂಥವಾದ 'ಶಿವತತ್ವ ಚಿಂತಾಮಣಿ'ಯಲ್ಲಿ ನೂತನ ಗಣಂಗಳ ಬಗ್ಗೆ ಹೇಳುವಾಗ ಹಂಪೆ, ಪಂಪಾಕ್ಷೇತ್ರ, ಹಂಪಾಪತಿಯ ರಥವೀದಿ, ವಿಜಯನಗರ, ಪಂಪಾಪುರ ಎಂದಿದ್ದಾನೆಯೇ ಹೊರತು ವಿರುಪಾಕ್ಷಪುರ, ವಿರುಪಾಕ್ಷಪಟ್ಟಣವೆಂದು ಎಲ್ಲಿಯೂ ಹೇಳಿರುವುದಿಲ್ಲ.

ಡಾ. ಎಂ.ಎಂ. ಕಲಬುರ್ಗಿ ಅವರು 'ವಿರೂಪಾಕ್ಷ' ಎಂಬ ಹೆಸರನ್ನು ವಿರೂಪ+ಅಕ್ಷ ಎಂದು ಬಿಡಿಸಿ, ಹಂಪೆಯ ಅಧಿದೈವವಾದ ವಿರೂಪಾಕ್ಷ ಲಿಂಗದ ಹೆಸರು 'ವೀರಪಚ್ಚ' ಆಗಿದ್ದು, ಕ್ರಮೇಣ 'ವಿರೂಪಾಕ್ಷ' ಎಂದು ಸಂಸ್ಕೃತಿಕರಣಗೊಂಡಿರುವ ಬಗ್ಗೆ ಮಾತನಾಡಿದ್ದಾರೆ. ವೀರಭದ್ರನೇ ವಿರೂಪಾಕ್ಷನೆಂಬ ಹೆಸರು ಪಡೆದಿದ್ದು, ಸಾಮಾನ್ಯರಿಗೆ ವೀರಭದ್ರನಾದರೆ, ವೈದಿಕರಿಗೆ ವಿರೂಪಾಕ್ಷನೆನಿಸಿದ್ದಾನೆಂದು ವಿಶ್ಲೇಷಿಸಿದ್ದಾರೆ.[೨೦] ಹಾಗಾದರೆ ವಿರುಪಾಕ್ಷಿ, ವಿರುಪಾಕ್ಷಪುರಗಳು ಸ್ಥಳನಾಮಗಳಾದರೆ 'ವಿರುಪಾಕ್ಷ'ನು ಮಾತ್ರ ಹಂಪಿಯ ಅಧಿದೈವ, ಮುಕ್ಕಣ್ಣ ಶಿವನೆನಿಸಿದ್ದಾನೆ.

ಮುಳಬಾಗಿಲು ತಾಲ್ಲೂಕಿನ 'ವಿರುಪಾಕ್ಷಿ'ಯೇ ಹೊಯ್ಸಳರ ರಾಜಧಾನಿ 'ವಿರುಪಾಕ್ಷ ಪಟ್ಟಣ'ವೆನ್ನಲು ಕಾರಣಗಳು: ಹೊಯ್ಸಳ ದೊರೆ ಮುಮ್ಮಡಿ ಬಲ್ಲಾಳನ ಆರು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ವಿರುಪಾಕ್ಷಪಟ್ಟಣವು ವಿರೂಪಾಕ್ಷನ ಉಪಾಸನೆಯ ಕೇಂದ್ರಭೂಮಿಯೆನಿಸಿದ ಹಂಪೆಯಾಗಿರದೆ, ಅದು ಶಾಸನತಜ್ಞ ಬಿ.ಎಲ್. ರೈಸ್ ಅವರು ವ್ಯಕ್ತಪಡಿಸಿದ ಜೆ.ಡಿ.ಎಂ. ಡೆರೆಟ್ ಅವರ-ವಿರುಪಾಕ್ಷ ಹೊಸದುರ್ಗವನ್ನು ಹಂಪೆ-ವಿಜಯನಗರದೊಂದಿಗೆ ಸಮೀಕರಿಸುವುದು ಸಾಧುವಲ್ಲ; ಹಾಗೂ ಹಂ.ಗು. ರಾಜೇಶ್ ಅವರ 'ವಿರುಪಾಕ್ಷ ಪಟ್ಟಣವು ದೋರಸಮುದ್ರ-ಅಣ್ಣಾಮಲೈ ನಡುವೆಯೇ ಇರುವ ಸಾಧ್ಯತೆ ಇದೆ' ಎಂಬ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು, ಹಳೆ ಮೈಸೂರು ಭಾಗದಲ್ಲಿ ಅಂದರೆ ಕರ್ನಾಟಕ ರಾಜ್ಯದ ಗುಬ್ಬಿ ತಾಲ್ಲೂಕಿನ ವಿರುಪಾಕ್ಷಪುರ, ಚನ್ನಪಟ್ಟಣ ತಾಲ್ಲೂಕಿನ ವಿರುಪಾಕ್ಷಪುರ, ಚನ್ನರಾಯಪಟ್ಟಣ ತಾಲ್ಲೂಕಿನ ವಿರುಪಾಕ್ಷಪುರ, ಚಿಂತಾಮಣಿ ತಾಲ್ಲೂಕಿನ ವಿರುಪಾಕ್ಷಪುರ, ತಿಪಟೂರು ತಾಲ್ಲೂಕು ಹೊನ್ನವಳ್ಳಿ ಹೋಬಳಿಯ ವಿರುಪಾಕ್ಷಿಪುರ; ಇದೇ ತಿಪಟೂರು ತಾಲ್ಲೂಕಿನ ನೊಣವಿನಕೆರೆ ಹೋಬಳಿಯ ವಿರುಪಾಕ್ಷಿಪುರ ಹಾಗೂ ಮುಳಬಾಗಿಲು ತಾಲ್ಲೂಕಿನ ವಿರುಪಾಕ್ಷಿ ಎಂಬ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು, ಇತಿಹಾಸದ ಮೂಲಾಧಾರಗಳಾದ ಸ್ಮಾರಕ, ಶಿಲ್ಪ, ನೆಲೆಗಳ ಮಾಹಿತಿ ಸಂಗ್ರಹಿಸಲಾಯಿತು. ಮುಳುಬಾಗಿಲು ತಾಲ್ಲೂಕಿನಿಂದ ಐದು ಕಿ.ಮೀ. ದೂರದ 'ವಿರುಪಾಕ್ಷಿ'ಯಲ್ಲಿ ಮಾತ್ರ ೧೯೩೬ ಮೀಟರ್ ಸುತ್ತಳತೆಯ ಸುಸ್ಥಿತಿಯಲ್ಲಿರುವ ಹೊಯ್ಸಳರ ಕಾಲದ ಕೋಟೆ, ಹೊಯ್ಸಳ ಲಾಂಛನವಾದ ಹುಲಿ-ಸಳನ ಶಿಲ್ಪ, ಪರಿವಾರ ದೇವತೆ ಚಾಮುಂಡೇಶ್ವರಿ ಶಿಲ್ಪ ಹಾಗೂ ಮುಮ್ಮಡಿ ಬಲ್ಲಾಳನ ಅರಮನೆಯಾದ ಪ್ರಸ್ತುತ ವಿರುಪಾಕ್ಷ ದೇವಾಲಯಗಳು ನಮ್ಮ ಗಮನ ಸೆಳೆಯುತ್ತವೆ.

ಹೊಯ್ಸಳರ ವಿರುಪಾಕ್ಷಿ ಕೋಟೆ ಮತ್ತು ಕೋಟೆ ಪರಿಸರ: ಮುಳಬಾಗಿಲು ತಾಲ್ಲೂಕು ಕೇಂದ್ರದಿಂದ ನೈಋತ್ಯಕ್ಕೆ ಮುಳಬಾಗಿಲು-ಆವನಿ ರಸ್ತೆಯಲ್ಲಿ ಐದು ಕಿ.ಮೀ. ದೂರ ಕ್ರಮಿಸಿದರೆ ವಿರುಪಾಕ್ಷಿ ಗ್ರಾಮವನ್ನು ತನ್ನೊಳಗು ಮಾಡಿಕೊಂಡಿರುವ ಬೃಹತ್ ಸ್ಥಳ (ನೆಲ) ದುರ್ಗವಿದೆ. ಕೋಟೆಯ ಈಶಾನ್ಯ ದಿಕ್ಕಿನಿಂದ ಎರಡು ಪ್ರವೇಶ ಮಂಟಪಗಳು ಇಂದೂ ಸುಸ್ಥಿತಿಯಲ್ಲಿರುತ್ತವೆ. ಇನ್ನೆರೆಡು ಪ್ರವೇಶ ಮಂಟಪಗಳು ರಸ್ತೆ ಅಗಲೀಕರಣದ ಕಾರಣಕ್ಕಾಗಿ ಒಡೆದು ಹಾಕಲಾಗಿದೆ.

ಪೂರ್ವದಿಕ್ಕಿನ ಕೋಟೆಗೋಡೆಯು ೭೯೨ ಮೀ. ಉದ್ದ, ದಕ್ಷಿಣದಲ್ಲಿ ೨೫೨ ಮೀ. ಪಶ್ಚಿಮಕ್ಕೆ ೨೬೪ ಮೀ. ಹಾಗೂ ಉತ್ತರ ದಿಕ್ಕಿನಲ್ಲಿ ೬೨೮ ಮೀಟರ್ ಉದ್ದವಿದೆ. ಹೀಗಾಗಿ ಕೋಟೆಯ ಒಟ್ಟು ಸುತ್ತಳತೆ ೧೯೩೬ ಮೀ. ಅಂದರೆ ಹೆಚ್ಚು ಕಡಿಮೆ ಎರಡು ಕಿ.ಮೀ. ಆಗಿರುತ್ತದೆ. ಅಗಲ ೫.೫ ಮೀ. ಇದ್ದು, ನಡುವೆ ಕಲ್ಲು–ಮಣ್ಣುಗಳನ್ನು ತುಂಬಿ ಭರ್ತಿ ಮಾಡಲಾಗಿದೆ. ಕೋಟೆಯ ಹೊರ–ಒಳಭಾಗಗಳಿಗೆ ಬೇರೆಡೆಯಿಂದ ತಂದ ಗಟ್ಟಿ–ಕೆಂಪುಶಿಲೆಗಳನ್ನು ಬಳಸಿದ್ದು, ಗಣಿಯಿಂದ ತಂದಂತೆಯೇ ಅವುಗಳ ಚೌಕ, ಅಲ್ಲಲ್ಲಿ ಆಯತಾಕಾರದ ಆಕಾರಕ್ಕನುಗುಣವಾಗಿ ಜೋಡಿಸಲಾಗಿದೆ. ಗಣಿಯಿಂದ ಕಲ್ಲು ತೆಗೆಯುವಾಗ ಕಲ್ಲಿನ ಹೊರಮುಖದಲ್ಲಿ ಆಗಿರುವ ಗುರುತುಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಕೋಟೆಗೋಡೆಗೆ ಕೊತ್ತಲು (ಬುರುಜು) ಗಳಿರುವುದು ಸರ್ವೇಸಾಮಾನ್ಯ. ಕೊತ್ತಲುಗಳಿಂದ ಕೋಟೆಗೋಡೆಯ ಗಟ್ಟಿತನಕ್ಕೆ ಇನ್ನಷ್ಟು ಆಧಾರ ದೊರಕುತ್ತದೇನೋ ನಿಜ, ಆದರೆ ಈ ವಿರುಪಾಕ್ಷಿ ಕೋಟೆಗೋಡೆಯ ಯಾವ ದಿಕ್ಕಿನಲ್ಲೂ ಕೊತ್ತಲುಗಳಿರುವುದಿಲ್ಲ. ಈ ವಿಶಾಲಕೋಟೆಯು ನೆಲದ ಉಬ್ಬು–ತಗ್ಗುಗಳನ್ನನುಸರಿಸಿದ ಹಳೇಬೀಡಿನ ವಿಸ್ತಾರವಾದ ಕೋಟೆಯಂತೆ ಭೂಮಿಯ ಮೇಲ್ಮೈ ಲಕ್ಷಣಗಳಿಗನುಗುಣವಾಗಿ ಸಾಗಿರುತ್ತದೆ. ದೆಹಲಿಯ ಸುಲ್ತಾನರ ರಣತಂತ್ರಕ್ಕೆ ಪ್ರತಿಸ್ಪರ್ದೆ ಒಡ್ಡುವ ಅಭೇದ್ಯ, ಬಲಾಢ್ಯ ಕೋಟೆಯಿದಾಗಿದೆ.

ಕ್ರಿ.ಶ. ೧೩೩೩(?)ನೆಲಮಂಗಲ–೯ನೆಯ ಶಾಸನದಲ್ಲಿ 'ಪ್ರತಾಪ ಚಕ್ರವರ್ತಿ ಹೊಯಸಳ ಶ್ರೀ ವೀರಬಲಳ ದೇವರಸರು ಹೊಸಬೆಟದಲಿ ಸುಖದಿಂ ಪ್ರಿತ್ವೀ ರಾಜ್ಯಂಗೇವಲ್ಲಿ'[೨೧] ಎಂದು ಉಕ್ತವಾಗಿರುವಂತೆ, ಬೆಂಗಳೂರಿಗೆ ೪೦ ಕಿ.ಮೀ. ದೂರದಲ್ಲಿರುವ ಇಂದಿನ ಕೃಷ್ಣಗಿರಿ ಜಿಲ್ಲೆ, ಹೊಸೂರು (ಶಾಸನೋಕ್ತ ಹೊಸಬೆಟ್ಟ) ತಾಲ್ಲೂಕು ಕೇಂದ್ರದ ಬೆಟ್ಟದ ಮೇಲಿರುವ ಚಂದ್ರಚೂಡೇಶ್ವರ ದೇವಾಲಯ ಹಾಗೂ ಮುಮ್ಮಡಿ ಬಲ್ಲಾಳನ ಕೋಟೆಯ ಅವಶೇಷಗಳಿದ್ದಲ್ಲಿಗೆ ದಿನಾಂಕ:೧೫.೦೮.೨೦೧೭ರಂದು ಕ್ಷೇತ್ರಕಾರ್ಯ ಮಾಡಿ ಬರಲಾಯಿತು. ಬೆಟ್ಟದ ಮೇಲಿರುವ ಚಂದ್ರಚೂಡೇಶ್ವರ ದೇವಾಲಯವೂ ಕೂಡ ಬೃಹತ್ ಕೋಟೆಯ ಆವರಣದ ಈಶಾನ್ಯ ಭಾಗದಲ್ಲಿದೆ. ಹೊಸಬೆಟ್ಟದ ಕೋಟೆಗೆ ಬಳಸಿರುವ ಕಲ್ಲುಗಳ ಆಕಾರ, ಗಾತ್ರಗಳು ವಿರುಪಾಕ್ಷಿ ಕೋಟೆಯ ಕಲ್ಲುಗಳಂತೆಯೇ ಇರುತ್ತವೆ. ವಿರುಪಾಕ್ಷಿ ಕೋಟೆಯ ಎತ್ತರ ಈಗಲೂ ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳಲ್ಲಿ ನೆಲಮಟ್ಟದಿಂದ ಎರಡೂವರೆಯಿಂದ ಮೂರು ಮೀಟರ್‌ನಷ್ಟು ಎತ್ತರ ಕಂಡುಬರುತ್ತದೆ. ಪೂರ್ವ ದಿಕ್ಕಿನ ಕೋಟೆಯು ಮಾತ್ರ ಪಪ್ಪುಶೆಟ್ಟಿ ಕೆರೆ ನೀರಿನಿಂದಾಗಿ ಶಿಥಿಲವಾಗಿ ನೆಲಮಟ್ಟಕ್ಕೆ ಇಳಿದಿದೆ. ವಿರುಪಾಕ್ಷಿ ಕೋಟೆಯನ್ನು ಎರಡು ಸ್ಥಳಗಳಲ್ಲಿ ಒಡೆದು ಹಾಕಲಾಗಿದ್ದು, ಮುಳಬಾಗಿಲು–ಆವನಿ ರಸ್ತೆ ಹಾಗೂ ವಿರುಪಾಕ್ಷಿ–ಮಾದೇನಹಳ್ಳಿ ರಸ್ತೆಗಳು ಈ ವಿಘಟನೆಗೆ ಕಾರಣಗಳಾಗಿರುತ್ತವೆ.

ಕ್ರಿ.ಶ. ೧೩೨೮ರಲ್ಲಿ ಮುಮ್ಮಡಿ ಬಲ್ಲಾಳನ ರಾಜಧಾನಿಯಾಗಿದ್ದ ಉಣ್ಣಾಮಲೆಪಟ್ಟಣ (ತಿರುವಣ್ಣಾಮಲೈ)ವು ಪ್ರಸ್ತುತ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರವಾಗಿದೆ. ಇಲ್ಲಿಯ ಅರುಣಾಚಲೇಶ್ವರ ದೇವಾಲಯವೊಳಗೊಂಡು ಸುಮಾರು ೨೫ ಎಕರೆ ಪ್ರದೇಶಕ್ಕೂ ವಿಶಾಲವಾದ ಕೋಟೆಯಿದ್ದಿರುವ ಅವಶೇಷಗಳಿವೆ. ಇವೂ ಕೂಡ ಹೊಸಬೆಟ್ಟ ಹಾಗೂ ವಿರುಪಾಕ್ಷಿ ಕೋಟೆಗಳ ಗುಣಲಕ್ಷಣಗಳನ್ನು ಹೋಲುತ್ತವೆ. ಅಷ್ಟೇ ಏಕೆ, ಅರುಣಾಚಲೇಶ್ವರ ದೇವಾಲಯದ ಪೂರ್ವಕ್ಕೆ ನಡುಪ್ರಾಕಾರದಲ್ಲಿರುವ, ಮೊದಲನೆಯದಕ್ಕಿಂತ ಪ್ರಾಚೀನವಾದ ವಲ್ಲಾಳ ನಾಮಾಂಕಿತ ಗೋಪುರವನ್ನು ಹೊಯ್ಸಳ ದೊರೆ ಬಲ್ಲಾಳನು ಕಟ್ಟಿಸಿದನೆಂದು ಹೇಳಲಾಗುತ್ತದೆ.[೨೨]ಇಂತಹ ಗೋಪುರಗಳು ಹೊಸಬೆಟ್ಟದ ಚಂದ್ರಚೂಡೇಶ್ವರ ಹಾಗೂ ವಿರುಪಾಕ್ಷಿಯಲ್ಲೂ ಇದ್ದವು. ಈಗ ಗೋಪುರ ಭಾಗಗಳು ಶಿಥಿಲವಾಗಿ ಬಿದ್ದು ಹೋಗಿವೆ.

ವಿರುಪಾಕ್ಷಿ ಕೋಟೆಯ ಈಶಾನ್ಯ ಒಳಾವರಣದಲ್ಲಿ ಇಂದು ವಿರುಪಾಕ್ಷ ದೇವಾಲಯವೆಂದು ಕರೆಯಲಾಗುವ, ದೊರೆ ಮುಮ್ಮಡಿ ಬಲ್ಲಾಳನ ಅಂದಿನ ಅರಮನೆಯಿದೆ. ದಕ್ಷಿಣ–ಪಶ್ಚಿಮದಲ್ಲಿ ಅಂದಿನ ಜನಸಾಮಾನ್ಯರು ವಾಸಿಸುವ ನೆಲೆಯಿತ್ತು. ಈ ಪ್ರದೇಶವೀಗ ಸುಮಾರು ಎರಡು–ಎರಡೂವರೆ ಮೀಟರ್ ಎತ್ತರದಷ್ಟು ಮಣ್ಣು ತುಂಬಿಕೊಂಡಿದೆ. ಸಮತಟ್ಟಾಗಿರುವ ಆಗ್ನೇಯ ದಿಕ್ಕಿನಲ್ಲಿ ಆಟದ ಮೈದಾನ; ನೈಋತ್ಯಕ್ಕೆ ವ್ಯವಸಾಯ ಮಾಡಿ ರಾಗಿ ಬೆಳೆಯಲಾಗುತ್ತಿದೆ. ಒಳಾವರಣದ ಮಣ್ಣು ತುಂಬಿದೆ ಭಾಗವನ್ನು ಉತ್ಖನನ ಮಾಡಿದರೆ, ದಕ್ಷಿಣಕ್ಕೆ ಮಾವಿನತೋಪು, ನೈಋತ್ಯಕ್ಕೆ ನಸುಗೆಂಪು ಗಟ್ಟಿ ಕರ್ಚುಗಲ್ಲು ಪ್ರದೇಶ, ಪಶ್ಚಿಮಕ್ಕೆ ಜೇಡಿ ತರಹದ ಮಣ್ಣಿದೆ. ಉತ್ತರಕ್ಕೆ ನೀಲಗಿರಿತೋಪು ಮತ್ತು ರಾಗಿ ಹೊಲಗಳು ಇರುತ್ತವೆ. ಕೋಟೆಯ ಉತ್ತರ, ಪೂರ್ವಕ್ಕೆ ಮಾತ್ರ ಆಳವಾದ ಕಂದಕಗಳು ಕಂಡು ಬಂದಿವೆ. ಆಗ್ನೇಯಕ್ಕೆ ಪ್ರಾಚೀನ ಕಾಲದ ಕಲ್ಲುಕಟ್ಟಿದ ಕೆರೆ ಇದ್ದು, ಇದನ್ನು ಈಗ ಪಪ್ಪುಶೆಟ್ಟಿಕೆರೆ ಎಂದು ಹೇಳಲಾಗುತ್ತದೆ. ವಿರುಪಾಕ್ಷಿ ಗ್ರಾಮದ ಹೊರವಲಯದಲ್ಲಿ ಬಾಗಲಗುಂಟೆ ಕೆರೆ, ಬಜಂತ್ರಿ ಕೆರೆಗಳು ಹಾಗೂ ಉಜನಪ್ಪನ ಹೊಲ, ಮಾಳಿಗೆಪ್ಪನ ಹೊಲ, ದಾಸಪ್ಪನ ಹೊಲಗಳಲ್ಲಿರುವ ಕಲ್ಯಾಣಿಗಳು ಪ್ರಾಚೀನ ವೀರ ವಿಜಯ ವಿರುಪಾಕ್ಷಪುರದ ಜನರಿಗೆ ನೀರೊದಗಿಸುತ್ತಿದ್ದ ಮೂಲಗಳಾಗಿದ್ದವು. ವಿರುಪಾಕ್ಷಿ ಕೋಟೆಯೊಳಗೆ ಒಳಕೋಟೆ ಇದೆ. ಇಂದು ವಿರುಪಾಕ್ಷ ದೇವಾಲಯವಾಗಿರುವ ಮುಮ್ಮಡಿ ಬಲ್ಲಾಳನ ಅರಮನೆಯ ರಕ್ಷಣೆಗಾಗಿ ಈ ಒಳಕೋಟೆಯು

ಕಟ್ಟಲ್ಪಟ್ಟಿದೆ. ಇದರ ಪೂರ್ವ–ಪಶ್ಚಿಮದ ಎರಡು ಗೋಡೆಗಳು ೧೨೮ ಮೀ.ಉದ್ದ, ದಕ್ಷಿಣೋತ್ತರದ ಎರಡು ಗೋಡೆಗಳು ೮೮.೯ ಮೀ ಉದ್ದವಾಗಿವೆ. ೧.೪ ಮೀ.ದಪ್ಪವಿರುವ ಈ ಒಳಗೋಡೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮೀ. ಎತ್ತರವಿದೆ. ಪೂರ್ವ ದಿಕ್ಕಿನಲ್ಲಿ ಪ್ರವೇಶದ್ವಾರ, ನೈಋತ್ಯದಲ್ಲಿ ೧.೯ ಮೀ. ಎತ್ತರ, ೮೫ ಸೆಂ.ಮೀ. ಅಗಲವಿರುವ ದಿಡ್ಡಿಬಾಗಿಲು, ಉತ್ತರಕ್ಕೆ ೨.೧೬ ಮೀ. ಎತ್ತರ, ೧.೦೧ ಮೀ. ಅಗಲವಿರುವ ಮತ್ತೊಂದು ದ್ವಾರವಿದೆ. ಒಳಕೋಟೆಯ ಒಳಾವರಣದ ಆಗ್ನೇಯ ಮೂಲೆಯಲ್ಲಿ ಲಕ್ಕಣ್ಣದಂಡೇಶನು ಮಾಡಿಸಿದ ಮನ್ಮುಖತೀರ್ಥ, ವಾಯವ್ಯ ಮೂಲೆಯಲ್ಲಿ ಬಾವಿ ಹಾಗೂ ಈಶಾನ್ಯ ಮೂಲೆಯಲ್ಲಿ ೪೦ ಕಂಬಗಳ ಮಂಟಪವಿದೆ. ಭಗುಳಮುಖಿ ಗುಡಿಯ ಉತ್ತರಕ್ಕೆ ಇರುವ ಒಳಕೋಟೆಯ ಗೋಡೆಯಲ್ಲಿ ಹೊಯ್ಸಳ ಲಾಂಛನದ ಉಬ್ಬುಶಿಲ್ಪವಿದೆ.

ವಿರುಪಾಕ್ಷಿ ಕೋಟೆಗೆ ಪೂರ್ವ ದಿಕ್ಕಿನಿಂದ ಒಂದು ಮಹಾದ್ವಾರ ಇದೆ. ಎರಡನೆಯ ಮಹಾದ್ವಾರ ಬಿದ್ದುಹೋಗಿರುವ ಸಾಧ್ಯತೆ ಇದೆ.ಶತ್ರುಗಳ ಪ್ರವೇಶಕ್ಕೆ ದುರ್ಗಮವೆನಿಸುವ ಶಿಲಾಸ್ತಂಭಗಳನ್ನು ನೋಡಿದರೆ ಬಿಗಿಯಾದ ಬಾಗಿಲು, ರಕ್ಷಣಾ ಪೌಳಿ ಸಹಿತ ಕಾವಲು ವ್ಯವಸ್ಥೆ ಇದ್ದಿರುವುದು ಕಂಡು ಬರುತ್ತದೆ. ಈ ಮಹಾದ್ವಾರದ ಹೊರಭಾಗದಲ್ಲಿ ಕಟ್ಟೆಯಾಕಾರದ ಮಂಟಪಗಳಿದ್ದು, ಇವುಗಳಲ್ಲಿ ಯಾತ್ರಿಕರು ಉಳಿದುಕೊಳ್ಳುತ್ತಿದ್ದರೆಂದು ತೋರುತ್ತದೆ.


ಒಳಕೋಟೆಯಲ್ಲಿ ಹೊಯ್ಸಳ ಲಾಂಛನ: 'ಲಾಂಛನ' ಪದಕ್ಕೆ ಗುರುತು, ಚಿಹ್ನೆ ಎಂಬ ಅರ್ಥಗಳಿವೆ. ಸಳನು ಕೋಲಿನಿಂದ ಧೈರ್ಯವಾಗಿ ಹುಲಿಯೊಂದಿಗೆ ಸೆಣಸುವುದನ್ನು ಹೊಯ್ಸಳ ವಂಶದ ಲಾಂಛನವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಕಥೆ ಕ್ರಿ.ಶ.೧೧೧೬ರ ನಂತರದಲ್ಲಿ ಹೊಯ್ಸಳರು ರಾಜ್ಯ ಸಾಧಿಸಿದ ಮೇಲೆ ವಂಶದ ಹೆಸರು ವಿವರಿಸಲು ಹುಟ್ಟಿಕೊಂಡ ಕಟ್ಟುಕಥೆಗಳೆಂಬ ಅಭಿಪ್ರಾಯಗಳೂ ಇಲ್ಲದಿಲ್ಲ.[೨೩] ಸಳನ ಶಿಲ್ಪವೆಂದು ಹೇಳಲಾಗುತ್ತಿರುವ ಶಿಲ್ಪವು ಸಳನದ್ದೆಂದು ಹೇಳಲು ಆಧಾರಗಳಿಲ್ಲ. ಪ್ರಾಣಿಯ ಶಿಲ್ಪ ಹುಲಿಯೂ ಅಲ್ಲ ಎಂಬ ವಿಮರ್ಶೆಗಳು ಅಸ್ತಿತ್ವದಲ್ಲಿವೆ.[೨೪] ಆದಾಗ್ಯೂ ಸಳನು ಹುಲಿಯನ್ನು ಕೊಲ್ಲುತ್ತಿರುವ ದೃಶ್ಯವನ್ನು ಶಿಲ್ಪಕ್ಕೆ ಅಳವಡಿಸಿ ಹೊಯ್ಸಳರ ಕಾಲದಲ್ಲಿ ಕಟ್ಟಿದ ದೇವಾಲಯಗಳಲ್ಲೆಲ್ಲ ಸ್ಥಾಪಿಸಲಾಗಿದೆ. ಏಕೆಂದರೆ ಹುಲಿ ಹೊಯ್ಸಳರ ರಾಜ ಚಿಹ್ನೆಯಾಗಿತ್ತು.[೨೫] ಅಂತೆಯೇ ವಿರುಪಾಕ್ಷಿಯ ಒಳಕೋಟೆಯ ಉತ್ತರದ ಗೋಡೆಯ ಆಯತಾಕಾರದ ಕಲ್ಲಿನ ಮೇಲೆ ದ್ವಾರದ ಪಕ್ಕ ಸಳನು ಎಡಗಾಲು ಮುಂದಡಿ ಇಟ್ಟು, ಬಲಗೈಯಲ್ಲಿ ಕೋಲು ಹಿಡಿದು, ತನ್ನೆದುರಿಗೆ ಬರುತ್ತಿದ್ದ ಹುಲಿಯನ್ನು ಸೆಣಸುತ್ತಿದ್ದಾನೆ. ಈ ಉಬ್ಬುಶಿಲ್ಪದ ಮೇಲ್ಭಾಗದ ಇನ್ನೊಂದು ಕಲ್ಲಿನ ಮೇಲೆ ತ್ರಿಕಾಲಸೂರ್ಯನನ್ನು ತೋರಿಸಲಾಗಿದೆ.

ಹೊಯ್ಸಳ ದೊರೆ ಮುಮ್ಮಡಿ ವೀರಬಲ್ಲಾಳನ ಕಾಲದ ಶಾಸನಕಲ್ಲುಗಳ ಮೇಲೆ ಹುಲಿಯೊಡನೆ ಸೆಣಸುತ್ತಿರುವ ಸಳನ ರೇಖಾಚಿತ್ರಗಳು ಕ್ರಿ.ಶ. ೧೩೦೭ರ ಬೆಂಗಳೂರು–೧೩೩ ವಿಭೂತಿಪುರ ಮಠದ ಶಾಸನ, ಕ್ರಿ.ಶ. ೧೩೩೬ರ ಬೆಂಗಳೂರು–೧೧೦ ಬ್ಯಾಡರಹಳ್ಳಿ ಶಾಸನ ಹಾಗೂ ಕ್ರಿ.ಶ. ೧೩೪೨ರ ಗಾಣಿಗರಹಳ್ಳಿ ಕೆರೆಯ ಉತ್ತರ ಕೋಡಿ ಬಳಿಯ ಶಾಸನಗಳು. ಹೀಗಾಗಿ ಹೊಯ್ಸಳ ದೇವಾಲಯಗಳ ಮುಂದೆ ಹುಲಿ–ಸಳನ ಮೂರ್ತಿಶಿಲ್ಪ, ಕೋಟೆಗೋಡೆಗಳಲ್ಲಿ ಉಬ್ಬುಶಿಲ್ಪ ಹಾಗೂ ಶಿಲಾಶಾಸನಗಳಲ್ಲಿ ಈ ಲಾಂಛನದ ರೇಖಾಚಿತ್ರಗಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪರಿವಾರ ದೇವತೆ ಚಾಮುಂಡೇಶ್ವರಿ : ಹೊಯ್ಸಳರು ಚಾಮುಂಡೇಶ್ವರಿಯ ಆರಾಧಕರಾಗಿದ್ದರೆಂದು ಹೇಳಲು ಕಾರಣಗಳಿವೆ.[೨೬] ಹೊಯ್ಸಳರ ಅರಮನೆಗಳು ಹಾಗೂ ದೇವಾಲಯಗಳಲ್ಲಿ ಚಾಮುಂಡೇಶ್ವರಿ ಶಿಲ್ಪವನ್ನು ಪ್ರತಿಷ್ಠಾಪಿಸಿರುವುದು ಕಂಡು ಬರುತ್ತದೆ.[೨೭] ಅಷ್ಟೇ ಏಕೆ, ಹೊಯ್ಸಳರ ನಾಣ್ಯಗಳ ಮೇಲೆ ಸಿಂಹವಾಹನೆಯಾದ ದುರ್ಗೆ ಅಥವಾ ಚಾಮುಂಡೇಶ್ವರಿಯ ಚಿತ್ರ ಮುದ್ರಿಸಿರುವುದನ್ನು ಕಾಣುತ್ತೇವೆ. ಅದರಂತೆ ವಿರುಪಾಕ್ಷಿಯ ಒಳಕೋಟೆ ಆವರಣದಲ್ಲಿ ಉತ್ತರಕ್ಕೆ ಭಗಳಮುಖಿ ಎಂದು ಹೇಳಲಾಗುವ ಪರಿವಾರ ದೇವತೆಯಾದ ದುರ್ಗೆಯು ಸಿಂಹದ ಮೇಲೆ ಕುಳಿತಿದ್ದು, ನಾಲ್ಕು ಕೈಗಳಲ್ಲಿ ಕ್ರಮವಾಗಿ ಖಡ್ಗ, ಚಕ್ರ, ಶಂಖ ಮತ್ತು ತ್ರಿಶೂಲಗಳನ್ನು ಹಿಡಿದಿರುತ್ತಾಳೆ. ಭಗಳಮುಖಿ ದೇವತೆಯ ಮುಂದೆ ಗಟ್ಟಿ ಕಪ್ಪು ಶಿಲೆಯಲ್ಲಿ ಕೆತ್ತಿದ ಸಿಂಹಶಿಲ್ಪವಿದೆ.

ಏಕಕೂಟ ಗರ್ಭಗೃಹದಲ್ಲಿ ಸಾಮಾನ್ಯವಾಗಿ ಒಂದು ಶಿವಲಿಂಗದ ಪ್ರತಿಷ್ಠಾಪನೆಯಾಗಿರುತ್ತದೆ. ಆದರೆ ವಿರೂಪಾಕ್ಷಿ ಗ್ರಾಮದ ವಿರೂಪಾಕ್ಷ ದೇವಾಲಯದ ಗರ್ಭಗೃಹದಲ್ಲಿ ಎರಡು ಶಿವಲಿಂಗಗಳಿವೆ. ಇವು ನಂತರ ಪ್ರತಿಷ್ಠಾಪಿಸಲ್ಪಟ್ಟ ಶಿವಲಿಂಗಗಳಾಗಿವೆ.

ಅಂತರಾಳದ ಎಡ–ಬಲ ಗೋಡೆಯಲ್ಲಿ ೯೦ ಸೆಂ.ಮೀ. ಎತ್ತರ ೪೫ ಸೆಂ.ಮೀ. ಅಗಲವಿರುವ ಎರಡು ಕಿಂಡಿಗಳಿವೆ. ಈ ಕಿಂಡಿಗಳಿಗೆ ಕಬ್ಬಿಣದ ಬಾಗಿಲು ಹಚ್ಚಿ ಕೀಲಿ ಹಾಕಲಾಗಿದೆ. ಇವುಗಳನ್ನು ಸುರಂಗ ಮಾರ್ಗಗಳೆಂದೂ ಹೇಳಲಾಗುತ್ತದೆ.





ಹೊಯ್ಸಳ ದೊರೆ ಮುಮ್ಮಡಿ ಬಲ್ಲಾಳನ ಹೊರಕೋಟೆಯ ನಕ್ಷೆ – ವಿರೂಪಾಕ್ಷಿ

ವಿರೂಪಾಕ್ಷಿ ಕೋಟೆಗೆ ಪ್ರವೇಶದ್ವಾರದ ಕಟ್ಟೆ



ಬೆಲ್ಲದ ಅಚ್ಚುಗಳಂತೆ ಜೋಡಿಸಿರುವ ಹೊರಕೋಟೆ ಕಲ್ಲುಗಳು



ಹೊರಕೋಟೆಯ ಪ್ರವೇಶದ್ವಾರ (ಒಳಭಾಗದಿಂದ)



ಹೊರಕೋಟೆಯ ಪ್ರವೇಶದ್ವಾರ (ಹೊರಭಾಗದಿಂದ)



ಒಳಕೋಟೆ – ವಿರುಪಾಕ್ಷಿ



ದೇವಕೋಷ್ಠ, ಉಬ್ಬುಶಿಲ್ಪಗಳಿಲ್ಲದ ಮುಮ್ಮಡಿ ಬಲ್ಲಾಳನ ಅರಮನೆ



ಹೊಯ್ಸಳ ಲಾಂಛನ–ವಿರುಪಾಕ್ಷಿ ಒಳಕೋಟೆ



ಹೊರಕೋಟೆಯ ಹೊರಭಾಗದಲ್ಲಿರುವ ಯಾತ್ರಿಕರ ಮಂಟಪ



ಒಳಕೋಟೆಯಲ್ಲಿ ಪರಿವಾರ ದೇವತೆ ಚಾಮುಂಡೇಶ್ವರಿ (ಭಗಳಮುಖಿ)

ತ್ರಿಕೂಟ ಮಾದರಿ ದೇವಾಲಯಗಳ ಭ್ರಮೆಯಿಂದ ನಿರ್ಮಿತಿಯ ಹಿಂಭಾಗದಲ್ಲಿ ಮೂರು ಪ್ರತ್ಯೇಕ ಗರ್ಭಗೃಹಗಳನ್ನು ನಂತರದ ಅವಧಿಯಲ್ಲಿ ಸೇರಿಸಲಾಗಿದೆ.

ಒಳಕೋಟೆಯ ಪ್ರವೇಶದ್ವಾರಗಳ ಇಕ್ಕೆಲಗಳಲ್ಲಿ ನೆಲಮಟ್ಟದಿಂದ ೧.೩೮ ಮೀ. ಎತ್ತರದಲ್ಲಿ ೮೬ ಸೆಂ.ಮೀ. ಅಗಲ ಹಾಗೂ ಇಬ್ಬರು ವ್ಯಕ್ತಿಗಳು ಎದ್ದುನಿಂತು ಕಾವಲು ಕಾಯುವ ಸ್ಥಳಾವಕಾಶವಿದೆ. ಇದು ಅರಮನೆಯ ಒಳಕೋಟೆಗಳ ಪ್ರವೇಶದ್ವಾರಗಳಲ್ಲಿ ಇರಬೇಕಾದ ಕಾವಲು ವ್ಯವಸ್ಥೆಯ ಲಕ್ಷಣವಾಗಿದೆಯೇ ಹೊರತು ದೇವಾಲಯದ್ದಲ್ಲ.

ವಿರೂಪಾಕ್ಷ ದೇವಾಲಯದ ಎರಡನೆಯ ಗೋಪುರದ ತಳಪಾದಿ ಕಲ್ಲಿನ ಮೇಲಿರುವ ಕ್ರಿ.ಶ. ೧೪೩೧ರ ಲಕ್ಕಣ್ಣ ದಂಡೇಶನ ಶಾಸನವು–'ಪ್ರಸಂನ ವಿರೂಪಾಕ್ಷದೇವರಿಗೆ ದೇವಾಲಯ ಪ್ರಾಕಾರಗೋಪುರಗಳು ಶಿಖರದ ಚಿಂನದ ಹೊದಕೆ ಮನ್ಮಥ ಪುಷ್ಕರಣಿ ಅಂಗರಂಗಭೋಗ ವೈಭವ ಅಗ್ರಹಾರಗಳು ಮಂಟಪಗಳು ಭಿಕ್ಷಾಮಠ ಮುಂತಾದ ಸಕಲ ಧರ್ಮ್ಮಂಗಳೂ ವಿಜೆಯರಾಯ ಮಹಾರಾಯರ ಕುಮಾರರು ಗಜಬೇಂಟೆಕಾರ ದೇವರಾಯ ಮಹಾರಾಯರ ಧರ್ಮ್ಮದಿಂದ ವಿಷ್ಣುವರ್ಧನಗೋತ್ರದ ಹೆಗ್ಗಡೆದೇವಗಳು ಪೊಂಮಾಯಂಮಂಗಳ ಮಕ್ಕಳು ಲಖಂಣ ದಂಣಾಯಕ್ಕರು ಮಾದಂಣಗಳು ಯೀ ಪ್ರಸಂನ ವಿರೂಪಾಕ್ಷದೇವರಿಗೆ ಮಾಡಿದ ಸೇವೆ' ಎಂದು ಹೇಳುತ್ತದೆ. ಇದರರ್ಥ ಈಗಾಗಲೇ ಅಸ್ತಿತ್ವದಲ್ಲಿದ್ದ ಪ್ರಸನ್ನ ವಿರೂಪಾಕ್ಷದೇವರ ದೇವಾಲಯಕ್ಕೆ ಪ್ರಾಕಾರಗೋಪುರ, ಶಿಖರದ ಚಿನ್ನದ ಹೊದಕೆ ಮನ್ಮುಖ ಪುಷ್ಕರಣಿ, ಅಗ್ರಹಾರ ಮಂಟಪ, ಭಿಕ್ಷಮಠಗಳನ್ನು ಮಾಡಿಸಿದನೇ ಹೊರತು, ದೇವಾಲಯವೆನ್ನಲಾಗುವ ನಿರ್ಮಿತಿಯಾದ ಅರಮನೆಯಾಗಲಿ, ಎರಡು ಕಿ.ಮೀ. ಸುತ್ತಳತೆಯ ಬೃಹತ್ ಕೋಟೆಯಾಗಲಿ ಅಲ್ಲವೆಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೪೩೧ರ ಪೂರ್ವದಲ್ಲಿ ಅಂದರೆ ಮುಮ್ಮಡಿ ಬಲ್ಲಾಳನ ರಾಜ್ಯಾಡಳಿತದ ಕ್ರಿ.ಶ. ೧೩೩೦–೧೩೪೨ರ ಅವಧಿಯಲ್ಲಿ ಇಲ್ಲಿ ಅರಮನೆ, ಒಳಕೋಟೆ ಹಾಗೂ ಬೃಹತ್ ಪೌರ ಕೋಟೆಗಳು ನಿರ್ಮಾಣಗೊಂಡಿವೆ. ಮುಂದೆ ಕ್ರಿ.ಶ. ೧೩೪೩ರಲ್ಲಿ ಇದೇ ಅರಮನೆಯಲ್ಲಿ ಮುಮ್ಮಡಿ ಬಲ್ಲಾಳನು ತನ್ನ ಮಗ ವಿರೂಪಾಕ್ಷ ಬಲ್ಲಾಳನಿಗೆ ಪಟ್ಟಕಟ್ಟಿ ಸಂಭ್ರಮಿಸಿದ್ದಾನೆ. ಅದೇ ಕ್ರಿ.ಶ. ೧೩೪೩ರಲ್ಲಿ ದೆಹಲಿ ಸುಲ್ತಾನನು ೮೦ ವರ್ಷದ ಮುಮ್ಮಡಿ ಬಲ್ಲಾಳನೊಂದಿಗೆ ಕಣ್ಣಾನೂರಿನಲ್ಲಿ ಕದನ ಮಾಡಿ, ಅವನನ್ನು ಮೋಸದಿಂದ ನಿರ್ನಾಮ ಮಾಡಿ, ಚರ್ಮ ಸುಲಿಸಿ ಮಟ್ರಾ (ಮಧುರೆ) ಕೋಟೆಗೋಡೆಗೆ ನೇತುಹಾಕಿ ತೂಗಾಡುವಂತೆ ಮಾಡುತ್ತಾನೆ.[೨೮] ಹೀಗೆ ತನ್ನ ತಂದೆಯ ಕೊಲೆಯಾದ ನಂತರ ವಿಜಯವಿರೂಪಾಕ್ಷ ಬಲ್ಲಾಳನು ಹೊಸರಾಜಧಾನಿಯಾಗಿದ್ದ ಮುಳಬಾಗಿಲಿನ ವಿರೂಪಾಕ್ಷಪುರವನ್ನು ಬಿಟ್ಟು ಮತ್ತೆ ತನ್ನ ಪೂರ್ವಿಕರ ರಾಜಧಾನಿಯಾಗಿದ್ದ ದೋರಸಮುದ್ರಕ್ಕೆ ಹೋಗುತ್ತಾನೆ. ಅಲ್ಲಿಂದೀಚೆಗೆ ಮುಮ್ಮಡಿ ಬಲ್ಲಾಳನ ಹೊಸ ರಾಜಧಾನಿ ವೀರವಿಜಯ ವಿರೂಪಾಕ್ಷಪುರ ಕತ್ತಲೆಗೆ ಸರಿದುಕೊಳ್ಳುತ್ತದೆ. ವಿಜಯನಗರದ ಸಾಮ್ರಾಜ್ಯ ಸ್ಥಾಪನೆಗೆ ಮೊದಲೇ ೧೩ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೆ ಮುಳಬಾಗಿಲು ಪ್ರಾಂತವನ್ನಾಳಿದ ಇಳವಂಜಿರಾಯ, ಮತ್ತಿರರರು[೨೯] ಮುಳಬಾಗಿಲಿನಿಂದ ಕೇವಲ ಐದು ಕಿ.ಮೀ. ದೂರದಲ್ಲಿದ್ದ ವಿರೂಪಾಕ್ಷಿಯತ್ತ ಗಮನಹರಿಸುವುದಿಲ್ಲ. ಪ್ರವರ್ಧಮಾನಕ್ಕೆ ಬಂದ ವಿಜಯನಗರ ಸಾಮ್ರಾಜ್ಯದ ಯುವರಾಜರಾದ ಮೂರನೆಯ ಹರಿಹರ, ಎರಡನೆಯ ಬುಕ್ಕ, ಎರಡನೆಯ ದೇವರಾಯರೆಲ್ಲರೂ ರಾಜರಾಗುವ ಮೊದಲು ಮುಳಬಾಗಿಲಿನಲ್ಲಿ ರಾಜಾಡಳಿತದ ತರಬೇತಿ ಪಡೆದು, ಅಲ್ಲಿಂದಲೇ ಅಡಳಿತ ನಡೆಸುತ್ತಾರೆ.[೩೦] ಇವರೂ ಕೂಡ ಅಂತ್ಯಗೊಂಡು ಹಾಳುಬಿದ್ದ ರಾಜಮನೆತನವೊಂದರ ರಾಜಧಾನಿಯಾಗಿದ್ದ ವಿರೂಪಾಕ್ಷಪುರದ ಕೋಟೆ ಮತ್ತು ಅರಮನೆಗಳನ್ನು ಬಳಸಿರುವುದಿಲ್ಲ. ಆದರೆ ಕ್ರಿ.ಶ. ೧೩೪೪ರಿಂದ ಕ್ರಿ.ಶ. ೧೪೩೦ರವರೆಗಿನ ೮೬ ವರ್ಷಗಳ ಅವಧಿಯಲ್ಲಿ ಪೂರ್ಣ ಹಾಳುಬಿದ್ದ ಮುಳಬಾಗಿಲಿನ ವಿರೂಪಾಕ್ಷಪುರದ ಅರಮನೆಯು ದೇವಾಲಯವಾಗಿ ಮಾರ್ಪಡಲು ಜನರ ಪ್ರಯತ್ನಗಳು ನಡೆದಿವೆ. ಸ್ಥಳನಾಮದ ಪರಿಣಾಮದಿಂದಾಗಿ ದೇವಾಲಯದಲ್ಲಿ ತಾವು ಪ್ರತಿಷ್ಠಾಪಿಸಿದ ಶಿವಲಿಂಗಕ್ಕೆ 'ವಿರೂಪಾಕ್ಷ' ಎಂದು ಕರೆದಿದ್ದಾರೆ.

ಹೊಯ್ಸಳ ರಾಜಮನೆತನದ ಕೊನೆಯ ಅರಸರು ಹಂಪೆಯ ವಿರೂಪಾಕ್ಷನ ಭಕ್ತರಾಗಿದ್ದರು. ಹೊಯ್ಸಳರಿಗೂ–ಹಂಪೆಗೂ ಭಕ್ತಿಯ ನಂಟು ಇತ್ತು.[೩೧] ಈ ಕಾರಣಕ್ಕಾಗಿಯೇ ಮುಮ್ಮಡಿ ಬಲ್ಲಾಳನು ತನ್ನ ಮಗನಿಗೆ ವೀರ ವಿರೂಪಾಕ್ಷ ಬಲ್ಲಾಳದೇವ ಎಂಬ ಹೆಸರಿಟ್ಟಿದ್ದನು. ಹೊಸ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಮುಳಬಾಗಿಲು ತಾಲ್ಲೂಕಿನ ಈ ಗ್ರಾಮಕ್ಕೂ ಶ್ರೀ ವೀರವಿಜಯ ವಿರೂಪಾಕ್ಷಪುರ ಎಂದು ಕರೆದಿದ್ದನು. ಹಾಗಾಗಿ ವಿರೂಪಾಕ್ಷಪುರ, ವಿರೂಪಾಕ್ಷಿ ಎಂದ ತಕ್ಷಣ ನಾವು ಹಂಪೆಯನ್ನೇ ತೋರಿಸಬೇಕಾಗಿಲ್ಲ. ಬದಲಾಗಿ ಪೂರಕ ಇತಿಹಾಸ ಮೂಲಾಧಾರಗಳಾದ ಕೋಟೆ, ಲಾಂಛನ, ಶಿಲ್ಪ, ಅರಮನೆಯ ವಾಸ್ತುವಿನ್ಯಾಸ, ಶಾಸನಗಳ ಸೂಕ್ಷ್ಮ ಅಧ್ಯಯನ ಹಾಗೂ ಅಂದಿನ ರಾಜಕೀಯ ಸ್ಥಿತಿಗತಿಗಳ ಆಧಾರದಲ್ಲಿ ನಿರ್ಣಯಕ್ಕೆ ಬರಬೇಕಾಗುತ್ತದೆ. ಇಂತಹ ಒಂದು ಪ್ರಯತ್ನ ಮಾಡಿ, ಹೊಯ್ಸಳ ಮುಮ್ಮಡಿ ಬಲ್ಲಾಳನ ರಾಜಧಾನಗಳಲ್ಲೊಂದಾದ ವಿರೂಪಾಕ್ಷಪಟ್ಟಣ>ಶ್ರೀ ವಿರೂಪಾಕ್ಷ ಹೊಸದುರ್ಗ> ಶ್ರೀ ವೀರವಿಜಯ ವಿರೂಪಾಕ್ಷಪುರ>ವಿರುಪಾಕ್ಷಪಾದ ಎಂಬ ಎಡೆಯನ್ನು ಇಂದಿನ ಮುಳಬಾಗಲು ತಾಲ್ಲೂಕಿನ 'ವಿರೂಪಾಕ್ಷಿ' ಎಂದು ಗುರುತಿಸಲಾಗಿದೆ. ಆದರೆ ಮಣ್ಣು ತುಂಬಿಕೊಂಡ ಈ ಬೃಹತ್ ಕೋಟೆಯ ಒಳಾವರಣದ ಉತ್ಖನನ ನಡೆಸಿ, ಈ ನೆಲೆಯನ್ನು ಅಧ್ಯಯನಕ್ಕೊಳಪಡಿಸಿದರೆ ಹೊಯ್ಸಳರ ಕಾಲದ ಜನವಸತಿ ಪ್ರದೇಶ, ಮೂರ್ತಿಶಿಲ್ಪ, ಶಾಸನಗಳೂ ದೊರೆತು, ಇತಿಹಾಸದ ಮೇಲೆ ಇನ್ನಷ್ಟು ಬೆಳಕು ಚೆಲ್ಲುವ ಕೆಲಸವಾದಂತಾಗುತ್ತದೆ.

ಅಡಿಟಿಪ್ಪಣಿಗಳು

೧. ಡಾ. ಚನ್ನಬಸವಯ್ಯ ಹಿರೇಮಠ, 'ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು' ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೧೪, ಪುಟ ೧೮೯.

೨. ಸೀತಾರಾಮ ಜಾಗೀರ್‌ದಾರ್, ಹೊಯ್ಸಳರ ರಾಜಧಾನಗಳು, 'ಹರತಿಸಿರಿ', ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ–೧೯೮೬, ಪು. ೩೬೦.

೩. ಎಪಿಗ್ರಾಫಿಯಾ ಕರ್ನಾಟಕ–೧೦, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ೧೯೯೬, ಅರಸೀಕೆರೆ–೧೦೩.

೪. ಡಾ. ಪಿ.ವಿ. ಕೃಷ್ಣಮೂರ್ತಿ, ಮಾಗಡಿ ತಾಲ್ಲೂಕು ಕಲ್ಲೂರು ವರದರಾಜೇಶ್ವರ ದೇವಾಲಯದ ಅಪ್ರಕಟಿತ ಶಾಸನ; ಕಾಲ ಕ್ರಿ.ಶ. ೧೩೩೦.

೫. ಎಪಿಗ್ರಾಫಿಯಾ ಕರ್ಣಾಟಿಕಾ–೧೨, ತುಮಕೂರು, ಬಿ.ಎಲ್. ರೈಸ್ ೧೯೦೪, ಗುಬ್ಬಿ–೩೦.

೬ ಜೆ.ಟಿ. ಜಯರಾಮಯ್ಯ ಮತ್ತು ಕೆ. ಕುಮಾರ್‌ಯಾದವ್, 'ಮುಮ್ಮಡಿ ಬಲ್ಲಾಳನ ತೆಂಕನಹಳ್ಳಿ ದೊಡ್ಡಿಯ ಶಿಲಾಶಾಸನ', ಇತಿಹಾಸ ದರ್ಶನ–೯, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ೧೯೯೪, ಪುಟ ೩೦–೩೨.

೭. ಎಪಿಗ್ರಾಫಿಯಾ ಕರ್ನಾಟಿಕಾ ೯, ಬೆಂಗಳೂರು, ಬಿ.ಎಲ್. ರೈಸ್ ೧೯೦೫, ಹೊಸಕೋಟೆ ೪೩.

೮. – ಅದೇ– ದೇವನಹಳ್ಳಿ ೨೧.

೯. ವಿಲಿಯಂ ಕೊಯೆಲ್ಹೊ, 'ದ ಹೊಯ್ಸಳವಂಶ', ಇಂಡಿಯನ್ ಹಿಸ್ಟಾರಿಕಲ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಬಾಂಬೆ, ೧೯೫೦, ಪುಟ ೨೩೯.

೧೦. ಕೂ.ಸ. ಅಪರ್ಣ, 'ಹೊಸಪಟ್ಟಣ ಮತ್ತು ವಿರುಪಾಕ್ಷಪಟ್ಟಣ; ಸ್ಥಳಶೋಧನೆ', ವಿಜಯನಗರ ಅಧ್ಯಯನ ೧೪, ೨೦೧೦, ಪುಟ ೨೦೮.

೧೧. ಎಪಿಗ್ರಾಫಿಯಾ ಕರ್ನಾಟಿಕಾ–೯, ಬೆಂಗಳೂರು. ಬಿ.ಎಲ್. ರೈಸ್, ೧೯೦೫, ಪೀಠಿಕೆ ಪುಟ ೨೨–೨೩.

೧೨. –ಅದೇ– ೧೦, ಕೋಲಾರ, ಬಿ.ಎಲ್. ರೈಸ್ ೧೯೦೫, ಪೀಠಿಕೆ ಪುಟ ೩೨.

೧೩. ಜೆ. ಡಂಕನ್ ಎಂ. ಡೆರೆಟ್ 'ದ ಹೊಯ್ಸಳಾಸ್' ಎ ಮಿಡೀವಲ್ ಇಂಡಿಯನ್ ರಾಯಲ್ ಫ್ಯಾಮಿಲಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೫೭, ಪುಟ ೧೬೪.

೧೪. ಹಂ.ಗು. ರಾಜೇಶ್, ಮಧ್ಯಕಾಲೀನ ಬೆಂಗಳೂರು ಪರಿಸರ (೯೫೦–೧೩೫೦), ಇತಿಹಾಸ ದರ್ಪಣ, ಜುಲೈ–ಸೆಪ್ಟೆಂಬರ್ ೨೦೧೩, ಪುಟ ೨೪.

೧೫. ಕನ್ನಡ ವಿಷಯ ವಿಶ್ವಕೋಶ–ಕರ್ನಾಟಕ (ಪರಿಷ್ಕೃತ) ಸಂ. ೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ೨೦೦೭, ಪುಟ ೧೨೭೨.

೧೬. ಡಾ. ಎಂ. ಚಿದಾನಂದಮೂರ್ತಿ, 'ಹೊಸತು ಹೊಸತು', ಕನ್ನಡ ಪುಸ್ತಕ ಪ್ರಾಧಿಕಾರ ಚಾಮರಾಜಪೇಟೆ, ಪುಟ ೪೪೬.

೧೭. ಸೌಥ್ ಇಂಡಿಯನ್ ಇನ್ಸ್‌ಸ್ಕ್ರಿಪ್ಷನ್ಸ್–೪, ಸೆಂಟ್ರಲ್ ಆರ್ಖಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ, ೧೯೮೬, ೨೬೦.

೧೮. ಸೌಥ್ ಇಂಡಿಯನ್ ಇನ್ಸ್‌ಸ್ಕ್ರಿಪ್ಷನ್ಸ್–೯ ಭಾಗ–೧, ಕುಮಾರಸ್ವಾಮಿ ಬೆಟ್ಟ, ಸೊಂಡೂರು ತಾಲ್ಲೂಕು, ೩೨೬.

೧೯. ಎಪಿಗ್ರಾಫಿಯಾ ಕರ್ನಾಟಿಕಾ–೫, ಹಾಸನ, ಬಿ.ಎಲ್. ರೈಸ್, ಚನ್ನರಾಯಪಟ್ಟಣ ೧೭೨.

೨೦. ಡಾ. ಎಂ.ಎಂ. ಕಲಬುರ್ಗಿ, ವಿರೂಪಾಕ್ಷ, ಮಾರ್ಗ–೩, ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು ೧೯೯೮, ಪುಟ ೨೨೦–೨೨೨.

೨೧. ಎಪಿಗ್ರಾಫಿಯಾ ಕರ್ನಾಟಿಕಾ ೯, ಬೆಂಗಳೂರು, ಬಿ.ಎಲ್. ರೈಸ್, ೧೯೦೫, ನೆಲಮಂಗಲ ೯.

೨೨. ಕನ್ನಡ ವಿಶ್ವಕೋಶ ೦೯, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ೧೯೭೭, ಪುಟ ೨೮೯.

೨೩. ಕನ್ನಡ ವಿಷಯ ವಿಶ್ವಕೋಶ ೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ೨೦೦೭, ಪುಟ ೧೩೮೬.

೨೪. ಡಾ. ಎಂ.ಜಿ. ಮಂಜುನಾಥ, 'ಹೊಯ್ಸಳರ ರಾಜಲಾಂಛನ ಯಾವುದು? ಪುನರ್ ಪರಿಶೀಲನೆ', ಇತಿಹಾಸ ದರ್ಶನ ೨೧, ೨೦೦೬ ಪುಟ ೧೮೯.

೨೫. ಕನ್ನಡ ವಿಷಯ ವಿಶ್ವಕೋಶ ೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ೨೦೦೭, ಪುಟ ೧೧೬೭.

೨೬. ಎಪಿಗ್ರಾಫಿಯಾ ಕರ್ನಾಟಕ ೮, ಹಾಸನ ೯೫, ಹೊನ್ನಾವರ, ಪುಟ ೩೦೬.

೨೭. –ಅದೇ–ಹಾಸನ ೧೪೪, ಹೆರಗು, ಕ್ರಿ.ಶ. ೧೨೧೭, ಪುಟ ೩೬೭.

೨೮. ಡಾ. ಎಚ್.ಎಲ್. ನಾಗೇಗೌಡ, ಪ್ರವಾಸಿ ಕಂಡ ಇಂಡಿಯಾ–೨, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೨೦೦೬, ಪುಟ ೧೦೭.

೨೯. ದೇ.ಸ್ಮಿತಾರೆಡ್ಡಿ, 'ಮುಳುಬಾಗಿಲು ಅರಸರು', ದಕ್ಷಿಣ ಕರ್ನಾಟಕದ ಅರಸು ಮನೆತನಗಳು ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ೨೦೦೧ ಪುಟ ೩೫೬ ರಿಂದ ೩೫೯.

೩೦. ಸಿ.ಎಸ್. ಅಪರ್ಣ, ಸಂಗಮ ಅರಸರ ಚಾರಿತ್ರಿಕ ಹಿನ್ನೆಲೆ, ಸಂಗಮರ ದೇವಾಲಯಗಳು ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ ೨೦೦೮ ಪುಟ ೩೦.

೩೧. ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷೀಯ ಭಾಷಣ, ವಿಜಯನಗರ ಅಧ್ಯಯನ ೧೪, ೨೦೧೦, ಪುಟ ೧೩.

೪೪

ಸುಗುಟೂರು ಪ್ರಭುಗಳ 'ಹೊಸಕೋಟೆ'

ಪಿ.ವಿ. ಕೃಷ್ಣಮೂರ್ತಿ*

ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ವಿಶೇಷವಾಗಿ ತಲೆಯೆತ್ತಿದ ಬೆಂಗಳೂರು ಜಿಲ್ಲೆಯ ಪೂರ್ವಭಾಗಗಳನ್ನೊಳಗೊಂಡಂತೆ ಪೂರ್ವಕ್ಕೆ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ಜಿಲ್ಲೆ ಅವುಗಳಿಗೆ ಹೊಂದಿಕೊಂಡಂತಿರುವ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ಮತ್ತು ಡೆಂಕಣಿಕೋಟೆ ತಾಲೂಕುಗಳ ಹಲವು ಪ್ರದೇಶಗಳನ್ನೊಳಗೊಂಡಂತೆ ಸಾಕಷ್ಟು ವಿಸ್ತೀರ್ಣವಾದ ಭೂಪ್ರದೇಶದ ಮೇಲೆ ತಮ್ಮ ಆಡಳಿತವನ್ನು ಸ್ಥಾಪಿಸಿದ್ದ ವಿಜಯನಗರ ಕಾಲದ ಸ್ಥಳೀಯ ಪ್ರಭುಗಳಲ್ಲಿ 'ಸುಗುಟೂರು ಪ್ರಭುಗಳು' ಗಮನಾರ್ಹರಾಗಿದ್ದರು. ಇವರು ಸುಮಾರು ಕ್ರಿ.ಶ. ೧೪೦೦ರಲ್ಲಿ ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಸಮೀಪದ ಸುಗಟೂರು ಗ್ರಾಮಕ್ಕೆ ಬಂದು ನೆಲಸಿ, ಸುತ್ತಮುತ್ತಲ ಪ್ರದೇಶಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸಿತೊಡಗಿದರು. ಈ ವಂಶೀಯರ ಮೊದಲ ಉಲ್ಲೇಖ ಸಿಗುವ ಶಾಸನವು ಇಂದಿನ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಜೋಡಿಪುರ ಗ್ರಾಮದಲ್ಲಿನ ವೀರಭದ್ರಸ್ವಾಮಿ ದೇವಾಲಯದ ಮುಂದೆ ನಿಲ್ಲಿಸಲಾಗಿದೆ.

ಆ ಶಾಸನದಲ್ಲಿ ಸುಗುಟೂರು ವಂಶದ ದೇವಪ್ಪಗೌಡರ ಮಗ ಸುಗುಟೂರು ತಮ್ಮಪ್ಪಗೌಡ ಅಯ್ಯನವರು ತಮ್ಮ ತಂದೆ ದೇವಪ್ಪ ಗವುಡರಿಗೆ ಪ್ರಾಯಃ ಪುಣ್ಯವಾಗಲಿಯೆಂದು ವೀರಶೈವ ಒಡೆಯನೋರ್ವನಿಗೆ ದತ್ತಿ ಬಿಟ್ಟ ವಿವರವಿದ್ದಂತಿದೆ. ಈ ಶಾಸನದ ಕಾಲ ಕ್ರಿ.ಶ. ೧೪೨೨. ಅದು ವಿಜಯನಗರದ ಪ್ರೌಢದೇವರಾಯನ ಕಾಲ. ಅಂದರೆ ಆ ಕಾಲಕ್ಕಾಗಲೇ ಈ ಸುಗುಟೂರು ಪ್ರಭುಗಳು ನೆಲೆಯೂರಿ ಪ್ರಬಲರಾಗತೊಡಗಿದ್ದರು. ಮುಂದೆ ಈ ಪ್ರಭುಗಳ ಶಾಸನಗಳು ಮುಳಬಾಗಿಲು ತಾಲೂಕಿನ ನಲ್ಲೂರು (೧೪೬೦), ಡೆಂಕಣಿಕೋಟೆ ತಾಲೂಕಿನ ಗುಮ್ಮಳಾಪುರ (೧೪೭೪), ಮುಂತಾದಡೆಗಳಲ್ಲಿ ದೊರೆತಿವೆ. ಹೊಸಕೋಟೆ ತಾಲ್ಲೂಕಿನ ಖಾಜಿಹೊಸಹಳ್ಳಿ ಗ್ರಾಮದಲ್ಲಿ ದೊರೆತ ಕ್ರಿ.ಶ. ೧೪೯೪ರ ತಾಮ್ರಶಾಸನವು ಗಮನ ಸೆಳೆಯುತ್ತದೆ. ಆ ಶಾಸನದಲ್ಲಿ ಹೊಸೂರಿನ ಸುಜ್ಞಾನಮೂರ್ತಿ ಸ್ವಾಮಿಗಳಿಗೆ ಅಯ್ಯನ ಹೊಸಹಳ್ಳಿ ಎಂಬ ಗ್ರಾಮವನ್ನು ದತ್ತಿ ಬಿಟ್ಟು ವಿವರ ಬಂದಿದೆ, ಅಲ್ಲದೆ ದಾನಿ ತ್ಮಮಪ್ಪಗೌಡನು ಹೊಸದಾಗಿ 'ಹೊಸಕೋಟೆ'ಯನ್ನು ಕಟ್ಟಿಸಿದನೆಂದೂ ಉಲ್ಲೇಖಿಸುತ್ತದೆ. ಅಂದರೆ ಕ್ರಿ.ಶ. ೧೪೯೪ಕ್ಕೂ ಮೊದಲೇ ಈತನಿಂದ 'ಹೊಸಕೋಟೆ' ನಿರ್ಮಿಸಲ್ಪಟ್ಟಿತೆಂದು ಹೇಳಬಹುದು. ಅವರ ಆರಂಭಿಕ ನೆಲೆಯಾದ ಶಿಡ್ಲಘಟ್ಟ ತಾಲ್ಲೂಕಿನ ಸುಗುಟೂರಿನಿಂದ ದಕ್ಷಿಣಕ್ಕೆ ಸುಮಾರು ೧೫ ಕಿ.ಮೀ. ಅಂತರದಲ್ಲಿ ಈ 'ಹೊಸಕೋಟೆ' ಇದೆ. ಇಂದು ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕು ಕೇಂದ್ರ ಸ್ಥಳವಾಗಿದೆ. ಸುಗುಟೂರು ಪ್ರಭುಗಳು ಈ ಕೋಟೆಯನ್ನು ಕಟ್ಟಿಕೊಂಡ ನಂತರ ತಮ್ಮ ರಾಜ್ಯವನ್ನು ಸಾಕಷ್ಟು ವಿಸ್ತರಿಸಿಕೊಂಡು ಪ್ರಬಲರಾಗಿರುವುದನ್ನು ಗಮನಿಸಬಹುದಾಗಿದೆ. ಮುಂದೆ ಇವರ ಆಳ್ವಿಕೆಯ ಕುರುಹುಗಳಾದ ಶಾಸನಗಳು ಮುಳಬಾಗಿಲು ತಾಲ್ಲೂಕಿನ ನಲ್ಲೂರು, ಆವನಿ, ಉತ್ತನೂರು, ಶೇಷಾಪುರ, ವಾಣಿಗನಹಳ್ಳಿ, ಕೀಳುಹೊಳಲಿ, ಇರಗಸಮುದ್ರ, ಕೊತ್ತಮಂಗಲ, ಮಾದೇನಹಳ್ಳಿ, ಕೋಡಿಹಳ್ಳಿ, ವಾಣಿಗನಹಳ್ಳಿ, ಇರುಗಮುತ್ತಪ್ಪಲಿ ; ಹೊಸಕೋಟೆ ತಾಲ್ಲೂಕಿನ ಖಾಜಿಹೊಸಹಳ್ಳಿ, ಹೊಸಹಳ್ಳಿ, ನಂದಗುಡಿ, ಅನುಪುಹಳ್ಳಿ, ಮುಗಬಾಳ, ನೆಲವಾಗಿಲು ಎತ್ತಿನವೊಡೇರಹಳ್ಳಿ, ಸೂಲಿಬೆಲೆ, ಹೊಸಕೋಟೆ, ದೊಡ್ಡಬನಹಳ್ಳಿ, ಗೋಣಕನಹಳ್ಳಿ, ದೊಡ್ಡನಲ್ಲೂರು, ಕಟ್ಟಿಗೇನಹಳ್ಳಿ ಬಿಸನಹಳ್ಳಿ ; ಆನೇಕಲ್ ತಾಲ್ಲೂಕಿನ ಕಾಡು ಜಕ್ಕನಹಳ್ಳಿ, ಆನೇಕಲ್, ಕಾಮನಾಯಕನಹಳ್ಳಿ, ಸರ್ಜಾಪುರ, ಅತ್ತಿಬೆಲೆ, ಬಿದುರುಗುಪ್ಪೆ ; ಕೋಲಾರ ತಾಲ್ಲೂಕಿನ ಹುತ್ತೂರು, ಬಿಟ್ಟೇನಹಳ್ಳಿ, ಕಲ್ಲಂದೂರು, ಕಾಮದೇವಹಳ್ಳಿ, ಕೆಂದಟ್ಟಿ, ತೊರದೇವಂಡಹಳ್ಳಿ, ಗೊಲ್ಲಹಳ್ಳಿ, ವೇಲ್ಗಲ್‌ಬುರೆ, ಹರಳಕುಂಟೆ, ಕೊಟ್ಟೂರು, ಬಸವಾಪುರ, ಚಿಕ್ಕಹಸಾಳ, ಬುಸ್ತೇನಹಳ್ಳಿ, ಗರುಣನಹಳ್ಳಿ, ಕಲ್ಲಂದೂರು, ಗುಮ್ಮಂಡಪುರ, ಹೋಳೂರು, ಸುಗುಟೂರು, ಶಹಪುರ, ಆಲಹಳ್ಳಿ ; ಶಿಡ್ಲಘಟ್ಟ ತಾಲ್ಲೂಕಿನ ಸುಗುಟೂರು, ಮಳೂರು, ಜಂಗಮಕೋಟೆ, ರಂಗನಾಥಪುರ, ಬುಸನಹಳ್ಳಿ ; ಚಿಂತಾಮಣಿ ತಾಲ್ಲೂಕಿನ ಬೇಚಿರಾಕ್ ವಡಗೇನಹಳ್ಳಿ, ತಡಗೊಡ್ಲು ; ಬಂಗಾರುಪೇಟೆ ತಾಲ್ಲೂಕಿನ ಐತಂಡಹಳ್ಳಿ, ಜಯಮಂಗಲ ; ಮಾಲೂರು ತಾಲ್ಲೂಕಿನ ಜೋಡಿಪುರ, ತೊರದಹಳ್ಳಿ, ಗೇರುಪುರ ; ಪುಂಗನೂರು ತಾಲ್ಲೂಕಿನ ಪುಂಗನೂರು (೧೬೩೭), ಅಗಸ್ತೇಶ್ವರ ಬೆಟ್ಟ, ನೆಲ್ಲಿಮಂದ ಗ್ರಾಮ, ಸದಮು,

* # ೩೭, ೩ನೇ ಅಡ್ಡರಸ್ತೆ, ಮುನೇಶ್ವರ ಬ್ಲಾಕ್, ಹರಿನಗರ ಕ್ರಾಸ್, ಅಂಜನಾಪುರ ಅಂಚೆ, ಬೆಂಗಳೂರು–೫೬೦೧೦೮. ಮೊ. ೯೦೩೬೮೦೮೩೯೫

ಕಾಟಿಪೇರಿ, ಚಾದಲ, ನಕ್ಕಬಂಡ, ಚೌಡೇಪಲ್ಲಿ, ಚಿಂತಪಂತಿವಾಳ್ಳಪಲ್ಲಿ, ಪೆದ್ದನೆಲಗುಂಡ್ಲು, ಆವುಲಪಲ್ಲಿ, ರಾಮಸಮುದ್ರ, ಮೊದಗಲಪಲ್ಲಿ, ಭೀಮಗನಿಪಲ್ಲಿ, ಕೂಡೂರುಪಲ್ಲಿ, ಚೆರುಕುವಾರಿಪಲ್ಲಿ, ಮುತ್ತಕೂರು, ಗುಂಡಗಲ್ಲು ; ಡೆಂಕಣಿಕೋಟೆ ತಾಲ್ಲೂಕಿನ ಗುಮ್ಮಳಾಪುರ ಮೊದಲಾದ ಸ್ಥಳಗಳಲ್ಲಿ ಕಂಡುಬರುತ್ತವೆ.

ಈ ಸ್ಥಳಗಳನ್ನು ನಕ್ಷೆಯಲ್ಲಿ ಗುರುತಿಸಿದರೆ ಅವರ ಆಡಳಿತ ಪ್ರದೇಶ ಈಶಾನ್ಯಕ್ಕೆ ಇಂದಿನ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪುಂಗನೂರು ತಾಲ್ಲೂಕಿನ ಆವಲಪಲ್ಲಿ ದುರ್ಗ, ನೈರುತ್ಯಕ್ಕೆ ತಮಿಳುನಾಡಿನ ಡೆಂಕಣಿಕೋಟೆ ತಾಲ್ಲೂಕಿನ ಗುಮ್ಮಳಾಪುರ, ಉತ್ತರ ವಾಯುವ್ಯಕ್ಕೆ ದೇವನಹಳ್ಳಿ ತಾಲ್ಲೂಕು ವಡಗೇನಹಳ್ಳಿ, ದಕ್ಷಿಣ ಆಗ್ನೇಯಕ್ಕೆ ಐತಂಡಹಳ್ಳಿ, ಆವನಿ ಪ್ರದೇಶಗಳನ್ನು ಒಳಗೊಂಡಿದ್ದಿತೆಂದು ತಿಳಿಯುತ್ತದೆ. ಇಷ್ಟು ವಿಸ್ತಾರವಾದ ಪ್ರದೇಶವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಳ್ಳಲು ಸಾಕಷ್ಟು ಕ್ರಿಯಾಶೀಲ ಸಾಮರ್ಥ್ಯ ಹೊಂದಿದ್ದರೆನ್ನಬಹುದು. ಹಾಗಾಗಿಯೇ ಅವರು ತಮ್ಮ ಕೋಟೆಯನ್ನು ನಿರ್ಮಿಸಲು ಆಯಕಟ್ಟಿನ ಸ್ಥಳಕ್ಕಾಗಿ ಶೋಧ ನಡೆಸಿದರೆಂದು ತೋರುತ್ತದೆ.

ಮೊದಲನೆಯ ಮಹಾಯುದ್ಧದಲ್ಲಿ ಕೋಟೆಗಳು ಮಹತ್ವದ ಪಾತ್ರವನ್ನು ವಹಿಸಿದ್ದ ಕಾರಣ ೨೦ನೆಯ ಶತಮಾನ ಆರಂಭದಲ್ಲೂ ಅನೇಕ ಕೋಟೆಗಳು ಯುರೋಪಿನಾದ್ಯಂತ ರಚನೆಗೊಂಡವು. ಆದರೆ ಎರಡನೆಯ ಮಹಾಯುದ್ಧದಲ್ಲಿ ಅವುಗಳ ಪಾತ್ರ ಗೌಣವಾಗತೊಡಗಿ ಇಂದು ಬಹುಮಟ್ಟಿಗೆ ಅಪ್ರಸ್ತುತವೆನ್ನಬಹುದಾಗಿದೆ. ಇದಕ್ಕೆ ಕಾರಣ ಕಾಲದಿಂದ ಕಾಲಕ್ಕೆ ಬದಲಾದ ಯುದ್ಧ ತಂತ್ರ ಎಂದರೆ ತಪ್ಪಾಗಲಾರದು. ಇಂದು ವೈಮಾನಿಕ ಮತ್ತು ವೈಮಾಂತರಿಕ್ಷ ಯುದ್ಧ ಕ್ರಿಯೆಗಳೇ ಅಂತಿಮ ಆಯುಧಗಳಾಗಿವೆ. ಆದರೂ ಗಡಿಪ್ರದೇಶಗಳಲ್ಲಿ ಭೂಸೇನೆಯ ಪಾತ್ರ ಅಲ್ಲಗಳೆಯುವಂತಿಲ್ಲ. ಅಲ್ಲೂ ಕೋಟೆಯಲ್ಲದ್ದಿದ್ದರೂ ಅಂತಹುದೇ ಅಡುಗುತಾಣಗಳ ನಿರ್ಮಾಣಗಳು ಇದ್ದೇ ಇರುತ್ತವೆ. ಆ ಕಾಲದಲ್ಲಿ ಒಂದೊಂದೇ ಪ್ರದೇಶವನ್ನು ಆಕ್ರಮಿಸುವುದು ಎಂದರೆ ಆ ಪ್ರದೇಶದಲ್ಲಿನ ದುರ್ಗಮವಾದ ದುರ್ಗಗಳನ್ನು ಆಕ್ರಮಿಸಿ ವಶಪಡಿಸಿಕೊಳ್ಳುವುದೇ ಆಗಿತ್ತು. ಈ ಹಿನ್ನೆಲೆಯಲ್ಲಿ ಆಯಕಟ್ಟಿನ ಸ್ಥಳದಲ್ಲಿ ಸಮಕಾಲೀನ ಯುದ್ಧ ತಂತ್ರಗಳಿಗೆ ಸಮರ್ಥವಾಗಿ ಪ್ರತಿರೋಧ ಒಡ್ಡುವ ರೀತಿಯ ಕೋಟೆಗಳನ್ನು ರಚಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಸುಗುಟೂರು ಪ್ರಭುಗಳು ತಮ್ಮ ಮೂಲ ಆಳ್ವಿಕೆ ಸ್ಥಳಕ್ಕಿಂತಲೂ ಹೆಚ್ಚು ಸುರಕ್ಷಿತ ಮತ್ತು ಆಯಕಟ್ಟಿನ ಸ್ಥಳವೆಂದು ಗುರುತಿಸಿಕೊಂಡ ಪ್ರದೇಶ ದಕ್ಷಿಣ ಪಿನಾಕಿನಿ ನದಿಯ ಎಡದಂಡೆಯ ಕಡೆಗೆ ಬರುವ ಆಗಿನ ಕಾಲದ ಬೆಂಗಳೂರು ಕೋಲಾರ ಮಾರ್ಗದ ವಾಣಿಜ್ಯ ಪಥ, ಅಂದರೆ ಬೆಂಗಳೂರಿನಿಂದ ಸುಮಾರು ೨೬ ಕಿ.ಮೀ. ದೂರದಲ್ಲಿನ ದಕ್ಷಿಣ ಪಿನಾಕಿನಿ ನದಿಯ ಎಡಬದಿಯ ಮಟ್ಟಸವಾದ ಪ್ರದೇಶ ಸೂಕ್ತವೆಂದು ನಿರ್ಧರಿಸಿದರು. ಇದಕ್ಕೆ ಕಾರಣ ಕೋಟೆಗೆ ಬೇಕಾದ ಕಂದಕಗಳನ್ನು ರಚಿಸಿ ಅದಕ್ಕೆ ಅಗತ್ಯವಾದ ನೀರಿನ ಪೂರೈಕೆಗೆ ಬಹಳ ಅನುಕೂಲವಾದ ಸ್ಥಳವೆಂದು ಕಂಡುಕೊಂಡರು. ಈ ಪ್ರದೇಶದಲ್ಲಿ ಉತ್ತಮವಾಗಿ ಪಶ್ಚಿಮದ ಕಡೆಗಳಲ್ಲಿ ಹರಿಯುವ ನದಿಗೆ ಅಲ್ಲೊಂದು ಕೆರೆಯನ್ನು ಕಟ್ಟುವ ಮೂಲಕ ಸಾಕಷ್ಟು ನೀರನ್ನು ಸಂಗ್ರಹಿಸಿಕೊಳ್ಳಬಹುದು ಅದನ್ನು ಸೂಕ್ತವಾದ ರೀತಿಯಲ್ಲಿ ಕೋಟೆಯ ಕಂದಕಕ್ಕೆ ನೀರನ್ನು ಒದಗಿಸಿಕೊಳ್ಳಬಹುದೆಂಬ ಚಿಂತನೆ ಈ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಲು ಕಾರಣವಾಯಿತೆನ್ನಬಹುದು. ಇದು ಬೆಂಗಳೂರು ಜಿಲ್ಲೆಯಲ್ಲಿಯೇ ಬಹು ದೊಡ್ಡ ಕೆರೆ. ನೀರು ತುಂಬಿದಾಗ ಸುಮಾರು ೧೫ ಕಿ.ಮೀ. ಸುತ್ತಳತೆಯುಳ್ಳದ್ದಾಗಿದೆ.

ಹೀಗೆ ಆಯ್ದುಕೊಂಡ ಸ್ಥಳದಲ್ಲಿ ಕೋಟೆಯು ಪೂರ್ವ ಪಶ್ಚಿಮವಾಗಿ ಸುಮಾರು ೧೦೦೦ ಮೀ. ಉತ್ತರ ದಕ್ಷಿಣವಾಗಿ ಸುಮಾರು ೫೫೦ ಮೀ. ಪ್ರದೇಶವನ್ನು ಆಯ್ದುಕೊಂಡು ಆಯುತಾಕಾರದ ಕೋಟೆಗೆ ರಚಿಸಲು ಯೋಜಿಸಿರುವಂತೆ ತೋರುತ್ತದೆ. ಕೋಟೆಯ ಹೊರಭಾಗದಲ್ಲಿ ಸುಮಾರು ೨೦ ಮೀ.ನಿಂದ ೩೦–೩೫ ಮೀ. ಅಗಲ ಮತ್ತು ಸರಾಸರಿ ೧೦–೧೫ ಮೀ. ಆಳದ ಕಂದಕಗಳಿರುವುದು ಕಂಡುಬರುತ್ತದೆ. ಕಂದಕಗಳಿಂದ ತೆಗೆದ ಮಣ್ಣನ್ನೇ ಕೋಟೆಯ ಗೋಡೆಗಳ ರಚನೆಗೆ ಬಳಸಲಾಗಿದೆ. ಹೀಗೆ ರಚನೆಗೊಂಡ ಕೋಟೆಯ ಹೊರಮೈಯನ್ನು ಸ್ಥಳೀಯವಾಗಿ ಲಭ್ಯವಿರುವ ಸೈಜುಗಲ್ಲುಗಳಿಂದ ಭದ್ರಪಡಿಸಿ ಕಂದಕದ ನೀರಿನಿಂದ ಗೋಡೆಗೆ ಇರುವಂತೆ ರಕ್ಷಣೆ ಹಾಗೇ ಅದನ್ನು ಇನ್ನು ಉತ್ತರಕ್ಕೆ ೭–೧೧ ಮೀ. ಎತ್ತರದ ಭಿತ್ತಿಗಳನ್ನು ಕಲ್ಲುಗಳಿಂದ ಭದ್ರಪಡಿಸಿದಂತೆ ಕಂಡುಬರುತ್ತದೆ. ಈಗ ಅಳಿದುಳಿದಿರುವ ಸ್ಥಿತಿಯಲ್ಲಿ ಕೋಟೆಯ ಒಳಭಾಗದ ಕಂದಕಗಳಿರುವುದು ಕಂಡುಬರುತ್ತದೆ. ಪ್ರಾಯಃ ಅದು ಪಾಳೆಯಗಾರರು ಮತ್ತು ಅವರ ಅಧಿಕಾರಿಗಳ ವಾಸಸ್ಥಾನ ಪ್ರದೇಶವಾಗಿತ್ತೆಂದು ತೋರುತ್ತದೆ. ಆದರೆ ಅಲ್ಲಿ ಕಂದಕಗಳ ಅಗಲ ಸು. ೫–೬ ಮೀ.ಗಳಷ್ಟೆ ಇದ್ದಿತೆಂದು ತೋರುತ್ತದೆ. ಆಳ ಮಾತ್ರ ಬಹು ಮಟ್ಟಿಗೆ ಹೊರಗಿನ ಕಂದಕದಷ್ಟೆ ಆಳವಿದ್ದಿತೆಂದು ತೋರುತ್ತದೆ. ಹಾಗಾಗಿ ನಾವು ಇದನ್ನು ಎರಡು ಸುತ್ತಿನ ಕೋಟೆ ಇದ್ದಿರಬೇಕೆಂದು ಭಾವಿಸಬಹುದಾಗಿದೆ. ಈ ಒಳಕೋಟೆಯ ಆವರಣಕ್ಕೆ ಹೊಂದಿಕೊಂಡಂತೆ ಅವಿಮುಕ್ತೇಶ್ವರ ಮೊದಲಾದ ದೇವಾಲಯಗಳು ಇದ್ದವೆಂದು ತೋರುತ್ತದೆ. ಪ್ರಸ್ತುತ ಈ ಕೋಟೆ ಪ್ರದೇಶದಲ್ಲಿ ಅವಿಮುಕ್ತೇಶ್ವರ ದೇವಾಲಯದ

ಮೂರು ಗರ್ಭಗೃಹಗಳುಳ್ಳ ದ್ರಾವಿಡ ಶೈಲಿಯ ದೇವಾಲಯವಾಗಿದೆ. ಮಧ್ಯದ ಗರ್ಭಗುಡಿಯಲ್ಲಿ ವೀರಭದ್ರ, ಬಲಕ್ಕೆ ಲಿಂಗ, ಎಡಕ್ಕೆ ಪಾರ್ವತಿ ಶಿಲ್ಪಗಳಿವೆ. ನವರಂಗದಲ್ಲಿ ಎರಡು ಕೈಗಳುಳ್ಳ ಗಣಪತಿ, ಎರಡು ಕೈಗಳ ಸುಬ್ರಮಣ್ಯ ಶಿಲ್ಪಗಳಿವೆ. ದೇವಾಲಯದ ಮುಂದೆ ದೀಪಮಾಲೆ ಕಂಭವಿದೆ ಅದು ಹರಿಹರದಲ್ಲಿರುವ ಅಂತಹದ್ದೇ ಕಂಬಗಳಿಗೆ ಹೋಲಿಕೆ ಇದೆ. ೨೫ ಅಡಿ ಎತ್ತರವಿರುವ ಈ ಕಂಬದಲ್ಲಿ ೨೨ ವೃತ್ತಾಕಾರದ ತಟ್ಟೆಗಳಿಂದ ಕೂಡಿದೆ. ೪೪ ದೀಪಗಳಿಗೆ ಅವಕಾಶವಿದೆ. ಪೂರ್ವಕ್ಕೆ ತ್ರಿಶೂಲ, ದಕ್ಷಿಣಕ್ಕೆ ಲಿಂಗ, ಪಶ್ಚಿಮಕ್ಕೆ ಡಮರು, ಉತ್ತರಕ್ಕೆ ಪದ್ಮಶಿಲ್ಪಿಗಳನ್ನು ಒಳಗೊಂಡಿದೆ.

ಮುಖಮಂಡಪದ ಬಲಕ್ಕೆ ವಿಠಲೇಶ್ವರ ದೇವಾಲಯ ಮೂರು ಗರ್ಭಗುಹೆ ಮಧ್ಯದಲ್ಲಿ ೩ ಅಡಿ ಎತ್ತರದ ಸುಂದರ ವಿಠಲ ಮೂರ್ತಿ ಇದೆ. ಬಲ ಗರ್ಭಗೃಹದಲ್ಲಿ ಗರುಡ, ಗಣಪತಿ ಚಿತ್ರಗಳಿವೆ. ಎಡದಲ್ಲಿ ಹನುಮಾನ್‌ನ ಒಳ್ಳೇ ಶಿಲ್ಪವಿದೆ. ಇದನ್ನು ೧೭ನೇ ಶತಮಾನದಲ್ಲಿ ಪೇಶ್ವೆಯರ ಆಧಿಕಾರಿ ಹೊಸಕೋಟೆ ಪರಗಣದ ಸುಬೇದಾರ್ ರಘುನಾಥ ಬಾವಾಜಿ ನಿರ್ಮಿಸಿದನೆಂದು ತಿಳಿಯುತ್ತದೆ ಇಲ್ಲಿನ ಶಿಲ್ಪಗಳು ಪುಣೆಯಿಂದ ಬಂದವೆಂದು ದಾಖಲೆಗಳಿಂದ ತಿಳಿಯುತ್ತದೆ. ಈ ದೇವಾಲಯಕ್ಕೆ ಮೂರು ತಾಲ್ಲೂಕು ಮರುಗ ಊರನ್ನು ದತ್ತಿ ಬಿಟ್ಟಂತೆ ಉಲ್ಲೇಖವಿದೆ.

ಎರಡು ಆಂಜನೇಯ ದೇವಾಲಯಗಳಿವೆ. ಕೋಟೆ ಆಂಜನೇಯ ಮತ್ತು ಅಗ್ರಹಾರ ಆಂಜನೇಯ, ಕೋಟೆ ಆಂಜನೇಯ ದೇವಾಲಯದ ಅಡಿಪಾಯ ಅಲಂಕಾರಿಕವಾಗಿದ್ದು ಅದರ ವರಾಂಡದಲ್ಲಿ ೪ ಅಲಂಕೃತ ಕಂಬಗಳಿವೆ. ಮಧ್ಯದ ಕಂಬಗಳಲ್ಲಿ ಹುಲಿ ಮತ್ತು ಕುದುರೆ ಸವಾರರುಗಳಿಂದ ಅಲಂಕೃತವಾಗಿದೆ. ಅಗ್ರಹಾರದ ಆಂಜನೇಯ ದೇವಾಲಯ ಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಅದರಲ್ಲಿ ಕಂಬಗಳು ಸುಂದರವಾಗಿದ್ದು ವಿಜಯನಗರ ಶೈಲಿಯಲ್ಲಿ ಅನೇಕ ಕಂಬಗಳಿದ್ದು ಗಮನಾರ್ಹವಾಗಿದೆ.

ವರದರಾಜ ದೇವಾಲಯವು ೧೮೩೦ರಲ್ಲಿ ಬಿಳಿಗಿರಿರಾವ್ ಎಂಬುವರಿಂದ ಜೀರ್ಣೋದ್ಧಾರಗೊಂಡಿದೆ. ಅವರು ಹೊಸಕೋಟೆ ತಹಶೀಲ್ದಾರ್‌ನಾಗಿದ್ದು, ಈಗ ಕೋಟೆ ಇರುವ ಸ್ಥಳವು ಕೋಟೆ ಭಾಗಕ್ಕೆ ಪೂರ್ವದಲ್ಲಿ ಜನವಸತಿ ಸ್ಥಳವಾಗಿದ್ದಿತೆಂದು ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ.

೫ ಅಡಿ ವ್ಯಾಸ ಮತ್ತು ೧ ೧/೨ ಅಡಿ ಮಂದದ ಬೀಸುವ ಕಲ್ಲೊಂದು ಇದ್ದು ಇದು ಚಿತ್ರದುರ್ಗದ ಅಂತಹುದೇ ಕಲ್ಲುಗಳೇ ಹೋಲಿಕೆ ಇದೆ (ಎಂಎಆರ್ ೧೯೦೯).

ಊರಿನ ಉತ್ತರಕ್ಕೆ ಇದ್ಗಾ ಇದ್ದು ಬಹಳವಾಗಿ ಹಾಳಾಗಿದೆ. ಅಲ್ಲೇ ಇರುವ ಶಾಸನ ದೊರೆತಿದೆ. ಖಾಜಿ ತೋಪಿನಲ್ಲಿ ನಗರದ ಪೂರ್ವಕ್ಕೆ ಶಿಲಾ ತಳಹದಿಯ ತೊರೆ. ಗಾರೆಯಿಂದ ಅಲಂಕೃತವಾದ ಖಾಜಿ ದರ್ಗ (plate VI) (ಸಾಬಲ್ಲಿ ಸಾಬ್), ಇನ್ನೊಂದು ಲತಿಪ್ ಶಾಸನದರ್ಗ, ಇದನ್ನು (ಸಾಬಲ್ಲಿ ಸಾಬ್), ಇನ್ನೊಂದು ಲತಿಪ್ ಶಾಸನ ದರ್ಗ, ಇದನ್ನು ಖಾಸಿಂಸಾಬ್ ಮಕಾನ್ ಎಂದು ಕರೆಯುತ್ತಾರೆ. ಪೂರ್ವಕ್ಕೆ ಹಳೆಯ ಮಸೀದಿಯ ಪಕ್ಕದಲ್ಲಿದೆ. ವರದರಾಜಸ್ವಾಮಿ ದೇವಾಲಯದ ಉತ್ತರಕ್ಕೆ ಒಂದು ಗುಂಬಜ್ ಇದ್ದು ಅದು ಮತ್ತೆ ಬಖಾಜಿಯ ಸಮಾಧಿ ಎಂದು ಹೇಳಲಾಗಿದೆ.

ಸುಗುಟೂರು ಪ್ರಭುಗಳಿಂದ ರಚನೆಗೊಂಡ ಈ ಕೋಟೆಯ ಸ್ಥಳವನ್ನು 'ಹೋಸಕೋಟೆ' ಎಂದು ಗುರುತಿಸಲಾಯಿತು. ಮುಂದೆ ಅದೇ ಹೆಸರಿನಿಂದ ಒಂದು ತಾಲ್ಲೂಕು ಕೇಂದ್ರ ಸ್ಥಳವಾಗಿ ಮುಂದುವರೆದಿರುವುದನ್ನು ಕಾಣಬಹುದಾದರೂ ಜನರ ಭೂದಾರರ ಪರಿಣಾಮವಾಗಿ ಕೋಟೆಯ ಕುರುಹುಗಳು ನಾಶವಾಗುತ್ತಿದ್ದು ಮುಂದೆ ಅದು ಎಲ್ಲಿದ್ದಿತೆಂದು ಹುಡುಕಾಡಬೇಕಾದ ಸ್ಥಿತಿ ಖಂಡಿತವೆಂದು ಭಾವಿಸಿ ಸದ್ಯಕ್ಕೆ ಏನು ಉಳಿದಿದೆಯೋ ಅದನ್ನು ಸಚಿತ್ರವಾಗಿ ದಾಖಲಿಸಿ ಮುಂದಿನ ಪೀಳಿಗೆಗೆ ನೆನಪನ್ನು ಉಳಿಸುವ ಪ್ರಯತ್ನವಾಗಿದೆ.

೨೫

ಕರ್ನಾಟಕ ಸಾಮ್ರಾಜ್ಯಾಧಿಪತ್ಯದ ಸಿಂದ ಮಾಂಡಲೀಕರು

ದೀಪಕ ಆಲೂರ*

ಕರ್ನಾಟಕದ ಇತಿಹಾಸದಲ್ಲಿ ೬ರಿಂದ ೧೪ನೇ ಶತಮಾನದಲ್ಲಿ ಸಾಮ್ರಾಜ್ಯಾಧಿಪತ್ಯಗಳ ಆಳ್ವಿಕೆಯ ಕಾಲವೆಂದೇ ಹೇಳಬಹುದು. ಈ ಅವಧಿಯಲ್ಲಿಯೇ ಕರ್ನಾಟಕದ ಪ್ರಮುಖ ಮನೆತನಗಳಾದ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಕಳಚೂರಿಗಳು, ಸೇವಣರು ಮತ್ತು ಹೊಯ್ಸಳ ಆಳ್ವಿಕೆಗಳು ಆಗಿ ಹೋದವು. ಈ ಅವಧಿಯಲ್ಲಿಯೇ ಸಾಮಂತ ಮನೆತನಗಳೂ ಹುಟ್ಟಿಕೊಂಡವು.

ಕರ್ನಾಟಕದಲ್ಲಿ ಆಳರಸರ ಅಧೀನದಲ್ಲಿದ್ದುಕೊಂಡೇ ಚಿಕ್ಕ ದೊಡ್ಡ ಪರಿಧಿಗಳಲ್ಲಿ ಮಾಂಡಲೀಕ ಅಧಿಕಾರಿಗಳು ನಡೆದಿವೆ. ಇವರು ತಮ್ಮ ಪ್ರದೇಶಗಳಲ್ಲಿ ಸಂಪೂರ್ಣ ಸ್ವತಂತ್ರ್ಯವನ್ನು ಅನುಭವಿಸಿದವರಾಗಿದ್ದರು. ಇವರಲ್ಲಿ ಸಾಮಂತ, ಮಹಾಸಾಮಂತ, ಮಂಡಲೇಶ್ವರ, ಮಹಾಮಂಡಲೇಶ್ವರ ಎಂಬ ಸಾಮರ್ಥ್ಯಾನುಸಾರದ ಉಪಾಧಿಗಳನ್ನೂ ಇವರು ಹೊಂದಿದವರಾಗಿದ್ದರು. ಆದರೆ ಇವುಗಳನ್ನು ದರ್ಜೆಗಳೆಂದು ನಿರ್ಧರಿಸುವುದು ಕಠಿಣ. ಈ ರೀತಿ ಆಳರಸರಿಂದ ನೇಮಿಸಲಾದ ಇವರುಗಳಿಗೆ ತಮ್ಮ ಪ್ರದೇಶಗಳ ಮೇಲೆ ಸಂಪೂರ್ಣ ಪ್ರಭುತ್ವ ಹೊಂದಿದವರಾಗಿದ್ದರು. ಆಡಳಿತ ಕಾನೂನು ವ್ಯವಸ್ಥೆ ತೆರಿಗೆ ಸಂಗ್ರಹಣೆ, ಶಾಂತಿ ಪಾಲನೆಯ ಜವಾಬ್ದಾರಿ ಸಾಮಂತರದ್ದೇ ಇತ್ತು. ಇವರಲ್ಲಿಯೂ ಅನುವಂಶಿಕ ಆಡಳಿತ ಪದ್ಧತಿಯೇ ಇದ್ದಿತ್ತು. ಇವರು ಸ್ವತಂತ್ರ ಪ್ರದೇಶದ ಭಾರ ಹೊಂದಿದವಾಗಿದ್ದರು. ಇವರಿಗೂ ತಮ್ಮದೇ ಆದ ಪ್ರತ್ಯೇಕ ಅಧಿಕಾರವರ್ಗವಿದ್ದಿತು. ತಮ್ಮ ರಕ್ಷಣೆಗಾಗಿ ಪ್ರತ್ಯೇಕ ಸೈನ್ಯ ಸಂಘಟನೆ ಹೊಂದಿದ್ದರು. ಆರ್ಥಿಕ ವ್ಯವಸ್ಥೆ, ದಾನ ದತ್ತಿ ಕಾರ್ಯ, ಧರ್ಮ, ಸಾಹಿತ್ಯ ಸಂಸ್ಕೃತಿಯ ವೃದ್ಧಿಯಲ್ಲಿ ಕೂಡ ಜವಾಬ್ದಾರರಾಗಿದ್ದರು. ಕೆರೆ, ಕಾಲುವೆ, ನಿರ್ಮಾಣ, ದೇವಾಲಯ ನಿರ್ಮಾಣ ಧರ್ಮಯತಿಗಳ ಸಂರಕ್ಷಣೆಗಳಲ್ಲಿ ಪ್ರಮುಖ ಪಾತ್ರ ವಹಿಸಿದವರಾಗಿದ್ದು ಸಾಮ್ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಇವರದ್ದೇ ಆದ ಪ್ರಮುಖ ಪಾತ್ರವಿದ್ದಿತ್ತು.

ಮಾಂಡಲೀಕ ಇತಿಹಾಸಗಳಲ್ಲಿನ ವಿಶಿಷ್ಟತೆ ಎಂದರೆ ಎಷ್ಟೋ ಬಾರಿ ಆಳರಸರಗಿಂತ ಬಲಿಷ್ಠ ಅವಕಾಶವಾದಿ ಮಾಂಡಲೀಕರು ಬಂಡೆದ್ದ ಉದಾಹರಣೆಗಳನ್ನೂ ಕೂಡ ಕಾಣಬುದಾಗಿದೆ. ಕರ್ನಾಟಕದಲ್ಲಿನ ಚಾಲುಕ್ಯ ರಾಷ್ಟ್ರಕೂಟ ಮನೆತನಗಳು ಈ ಅವಕಾಶಗಳನ್ನು ಬಳಸಿಕೊಂಡೆ ಬಲಿಷ್ಠಗೊಂಡಿರುವುದು ಉದಾಹರಣೆಗೆ ಚಾಲುಕ್ಯ ಸೋಮೇಶ್ವರ ಸೇವುಣ ೩ನೇ ಬಿಲ್ಲಮನನ್ನು ರಾಜ್ಯ ರಕ್ಷಣೆಗೆ ಸೂಕ್ತ ಸಾಮಂತ ಎಂದು ಅರಿತು ತನ್ನ ತಂಗಿ ಅವ್ವಲದೇವಿಯನ್ನು ೩ನೇ ಬಿಲ್ಲವನಿಗೆ ನೀಡಿ ಮದುವೆ ಮಾಡಿ ಸಾಮಂತನನ್ನಾಗಿ ಮಾಡಿಕೊಂಡ.[೧]

ಕರ್ನಾಟಕದ ಸಾಮಂತ ಆಳ್ವಿಕೆಗಳ ಇತಿಹಾಸದ ಅಧ್ಯಯನವನ್ನೂ ಕೈಗೊಂಡ ಮಹಾನ್ ವ್ಯಕ್ತಿ ಜೆ.ಎಂ. ಫ್ಲೀಟ್ ಅವರು ಬ್ರಿಟೀಷ ರೆವಿನ್ಯೂ ಅಧಿಕಾರಿ. ಇವರು ಸಂಸ್ಕೃತ ಕನ್ನಡ ಭಾಷಾ ಪರಿಣತರು. ಕರ್ನಾಟಕ ಇತಿಹಾಸವನ್ನು ಅಭ್ಯಾಸಪೂರ್ಣವಾಗಿ ಅರಿತುಕೊಂಡ ವ್ಯಕ್ತಿ. ಡಯಾನಾಸ್ಟಿಸ್ ಆಫ್ ಕೆನರಿಸ್ ಡಿಸ್ಟಿಕ್ಟ್ ಇವರ ಶ್ರೇಷ್ಠ ಗ್ರಂಥ[೨] ಇದರಲ್ಲಿ ಕರ್ನಾಟಕದ ಮಾಂಡಲಿಕರಾದ ಗೋವಾ, ಹಾನಗಲ್ಲ ಕದಂಬರು, ಯಲಬುರ್ಗ ಸಿಂದರು, ರಟ್ಟರು, ಗುತ್ತರು, ಮುಂತಾದವರ ಸ್ಥೂಲ ಪರಿಚಯ ಲಭ್ಯವಾಗುತ್ತದೆ. ಮುಂದೆ ದಿನಕರ ದೇಸಾಯಿಯವರು ಗ್ರಂಥ[೩] ಗೋಪಾಲ[೪] ಹಾಗೂ[೫] ಹಾಗೂ[೬] ಹಾಗೂ[೭], ಕರ್ನಾಟಕ ಭಾರತಿ, ಪ್ರಬುದ್ಧ ಕರ್ನಾಟಕ, ಕರ್ನಾಟಕ ಇತಿಹಾಸ ದರ್ಶನ ನಿಯತ ಕಾಲಿಕೆಗಳಲ್ಲಿ ಉಲ್ಲೇಖಿಸಲ್ಪಟ್ಟ ಆಧಾರಗಳಿಂದ ಕೂಡ ಮಾಂಡಲಿಕರ ಇತಿಹಾಸದ ಅಧ್ಯಯನ ಸಾಧ್ಯವಾಗಿದೆ.

ಇನ್ನು ಸಿಂಧ ಮನೆತನಗಳ ಇತಿಹಾಸಕ್ಕೆ ಸಂಬಂಧಿಸಿದಂತೆ ಕೆಲವು ದೇವಾಲಯಗಳು, ಶಾಸನಗಳು ಅಧ್ಯಯನಕ್ಕೆ ಲಭ್ಯವಾಗಿವೆ. ಇವುಗಳಿಂದ ಅಂದಿನ ಧಾರ್ಮಿಕ ಪರಿಸ್ಥಿತಿಗಳನ್ನು ಹಾಗೂ ದಾನ ದತ್ತಿ ನೀಡಿದ ಬಗ್ಗೆ ಅಧ್ಯಯನ ಮಾಡಲು ಸಹಾಯಕವಾಗಿವೆ. ಈ ಮನೆತನಕ್ಕೆ ಸಂಬಂಧಿಸಿದ ನಾಣ್ಯಗಳು ಮಾತ್ರ ಲಭ್ಯವಾಗಿಲ್ಲ.

---

* ಗೀತಾ ಭವನ, ೩ನೇ ಅಡ್ಡರಸ್ತೆ, ಸಾಧನಕೇರಿ, ಧಾರವಾಡ-೫೮೦೦೦೮. ಮೊ. ೯೪೪೯೫೨೦೮೦೫

ಸಿಂದ ಮನೆತನಗಳ ಉಲ್ಲೇಖ ಪ್ರಾಚೀನವಾಗಿ ಕದಂಬ, ಚಾಲುಕ್ಯರ ಕಾಲದಿಂದಲೂ ಕಂಡು ಬರುವದು. 'ಸೇಂದ್ರಕ' ಸಿಂದ ವಂಶದ ಪ್ರಾಚೀನ ವಂಶವಾಗಿರಬಹುದಾದ ಊಹೆ ಇದೆ. ಪಲ್ಲವ ಸಿಂಹವರ್ಮನ ಸಕ್ಕರೆ ಪಟ್ಟಣ ಶಾಸನದಲ್ಲಿ ಸೇಂದ್ರಕ ರಾಜ್ಯ ಎಂಬ ಉಲ್ಲೇಖವಿದೆ. ಪ್ರಾಚೀನ ಸೇಂದ್ರಕ ಮನೆತನದ ಉಲ್ಲೇಖ. ಅದೇ ರೀತಿ ಚಲುಕ್ಯರ ೧ನೇ ವಿಕ್ರಮಾದಿತ್ಯನ ಒಂದು ಶಾಸನದಲ್ಲಿ 'ಕಲಿಸಿಂಹ' ಎಂಬವನ ಹೆಸರಿದೆ[೮] ಶಾಸನದ ಬಹುಭಾಗ ಒಡೆದಿದೆ. ಈ ರೀತಿ ಇನ್ನು ಕೆಲ ಶಾಸನಗಳಲ್ಲಿ ಕಮ್ಣ ಶಕ್ತಿ, ರವಿಶಕ್ತಿ, ವಿಜಯ ಶಕ್ತಿ, ಕುಂದಶಕ್ತಿ ಎಂಬ ಸೇಂದ್ರಕ ಹೆಸರುಗಳು ಕಂಡು ಬರುತ್ತವೆ. ಈ ಸಿಂದರು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದು, ಕಳಚೂರಿ, ಸೇವುಣ ರಾಜ್ಯದಲ್ಲಿ ಪ್ರಬಲರಾಗಿದ್ದರು.

ಸಿಂದ ಮನೆತನ ಮೂಲವಾಗಿ ಒಂದಾಗಿ ಕಂಡರೂ ನಂತರ ವಿಭಜಿಸಲ್ಪಟ್ಟು ಬೆಳಗುತ್ತಿ, ಯಲಬುರ್ಗಿ, ಬಾಗಡಗೆ ಕುರುಗೋಡು, ಪ್ರತ್ಯಂಡಕ ಮನೆತನಗಳೆಂದು ಆಳಲ್ಪಟ್ಟರು. ಇವರನ್ನು "ಕರ್ಹಾಟಪುರಾಧೀಶ್ವರ" ಎಂದು ಕರೆಯಲಾಗಿದೆ. ಕರ್ಹಾಟ ಇಂದಿನ ಮಹಾರಾಷ್ಟ್ರದ ಕರ್ಹಾಡವಾಗಿದೆ. ಆದರೆ ಕರ್ನಾಟಕಕ್ಕೆ ಇವರ ವಲಸೆಯ ಬಗ್ಗೆ ಸ್ಪಷ್ಟ ಆಧಾರಗಳು ಇಲ್ಲ.

ಶಿವಮೊಗ್ಗದ ಹೊನ್ನಾಳಿಯ ಬೆಳಗುತ್ತಿ ಇವರ ಆಡಳಿತ ಕ್ಷೇತ್ರ ಬೆಳಗುತ್ತಿಯ ಶಾಸನ[೯] ಇವರ ಮೂಲ ಕುರಿತ ಉಲ್ಲೇಖದಲ್ಲಿ ಕಥಾವಿವರಣೆ ಹೀಗಿದೆ; ಶಿವ ಮತ್ತು ಸಿಂಧು ಸಂಗದಿಂದ ಕುಮಾರನೋರ್ವ ಜನಿಸಿದ. ಆತನೇ ನಿಡುದೋಳ ಸಿಂದ ಎಂದು ಹೆಸರಿಸಲ್ಪಟ್ಟ ಎಂದಿದೆ. ರಾಷ್ಟ್ರಕೂಟರ ೩ನೇ ಇಂದ್ರನ ಕ್ರಿ.ಶ. ೯೨೪ರ ಶಾಸನದಲ್ಲಿ[೧೦] ಸಿಂದರಸ ಬೆಳಗುತ್ತಿ ಸಿಂದರ ಮೊದಲ ಐತಿಹಾಸಿಕ ವ್ಯಕ್ತಿಯ ಹೆಸರು ಸಿಗುತ್ತದೆ. ಈ ರೀತಿ ಹೊನ್ನಾಳಿ ತಾಲೂಕಿನ ಅನೇಕ ಶಾಸನಗಳಲ್ಲಿ ಈ ಸಾಮಂತರ ಆಡಳಿತ ಹಾಗೂ ಅಂದಿನ ಸ್ಥಿತಿಗತಿಗಳ ಕುರಿತ ಉಲ್ಲೇಖ ಸಿಗುತ್ತವೆ.

ಈ ರೀತಿ ಸಿಂದರ ಮತ್ತೊಂದು ಶಾಖೆ ಯಲಬುರ್ಗಿ ಸಿಂದರೂ. ಇವರು ಕೊಪ್ಪಳದ ಯರಂಬರಿಗೆ ಅಂದರೆ ಯಲಬುರ್ಗಿ ಸ್ಥಳದಿಂದ ಆಳ್ವಿಕೆ ನಡೆಸುತ್ತಿದ್ದರು. ಅವರ ಶಾಸನಗಳು ಧಾರವಾಡ ಜಿಲ್ಲೆಯ ನರೆಗಲ್ಲ, ಕೊಂಡಿಕೊಪ್ಪ, ಬೆಂಚಮಟ್ಟಿಯಲ್ಲಿ ದೊರೆತಿವೆ. ೬ನೇ ವಿಕ್ರಮಾದಿತ್ಯನ ಶಾಸನವೊಂದರಲ್ಲಿ ಸಿಂದ ಅಚುಗಿಯ ಹೆಸರಿದೆ. ಈ ಅಚುಗಿ ಮೂಲ ವ್ಯಕ್ತಿ ಹಾಗೂ ನಂತರದ ಅನೇಕರ ಹೆಸರುಗಳೂ ಕಾಣಬರುತ್ತವೆ. ಇವರು ಚಾಲುಕ್ಯರ ಅತ್ಯಂತ ನಂಬಿಗಸ್ಥ ಸಾಮಂತರಾಗಿದ್ದರು. ಹೊಯ್ಸಳ ಸಾಮಂತ, ಪಾಂಡ್ಯ ಇವರೊಡನೆ ಹೋರಾಡಿದ ವಿಷಯ ಶಾಸನದಲ್ಲಿ ಪ್ರಸ್ತಾಪವಿದೆ. ಅದೇ ರೀತಿ ಯಲಬುರ್ಗಿ ಸಿಂದರರ ಪೆರ್ಮಾಡಿದೇವ ಈ ರಾಜಧಾನಿಯಿಂದ ಕಿಸುಕಾಡು-೭೦, ಬಾಗಡಗೆ-೭೦, ನರೆಗಲ್ಲ-೭೦ ಪ್ರಾಂತಗಳನ್ನಾಡಿದ ಉಲ್ಲೇಖವಿದೆ.[೧೧] ಪಟ್ಟದಕಲ್ಲಿನ ಶಾಸನವೊಂದು ಸುದೀರ್ಘ ಗದ್ಯ, ಪದ್ಯ ಸಾಲುಗಳಿಂದ ಕೂಡಿದ್ದು ಇದರಲ್ಲಿ ಸಿಂದ ಚಾವುಂಡ ಹಾಗೂ ಮಡದಿ ಸಿರಿಯಾದೇವಿ ಉಲ್ಲೇಖವಿದೆ.[೧೨] ಶಾಸನ ಒಡೆದಿದೆ. ಅದೇ ರೀತಿ ರೋಣ ತಾಲೂಕಿನ ೨ ಶಾಸನಗಳೂ ಮಹತ್ವದಾಗಿವೆ. ಗಮನಾರ್ಹವೆಂದರೆ ಶಾಸನಗಳಲ್ಲಿ ಆಳರಸರ ಉಲ್ಲೇಖವಿರದಿರುವದು ಹೀಗಾಗಿ ಬಹುತೇಕ ಇವರು ಸ್ವತಂತ್ರ್ಯ ಆಳ್ವಿಕೆ ನಡೆಸಿರಬಹುದು.

ಬಳ್ಳಾರಿಯ ಕುರುಗೋಡು ಪ್ರದೇಶವನ್ನು ರಾಜಧಾನಿಯನ್ನಾಗಿಸಿ ಸಾಮಂತಿಕ ನಡೆಸಿದವರು ಕುರುಗೋಡು ಸಿಂದರು. ಕುರುಗೋಡು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಕಾಲದ ಮಹತ್ವದ ಆಳ್ವಿಕೆ ಪ್ರದೇಶ, ರಾಷ್ಟ್ರಕೂಟರ ೨ನೇ ಕೃಷ್ಣನ ಕ್ರಿ.ಶ. ೯೪೭ರ[೧೩] ಕುಡುತಿನಿಯ ಶಾಸನ ಸಿಂದರ ಪ್ರಾಚೀನ ಶಾಸನವೆಂದೆನ್ನಬಹುದು. ಇದರಲ್ಲಿನ ಸಾಮಂತರ ಹೆಸರು ಸಿಂದರ ಸಾಮಂತನೆನ್ನಬಹುದಾಗಿದೆ. ಶಾಸನ ಹಾಳಾಗಿದೆ. ಕುರುಗೋಡಿನಲ್ಲಿ ದೊರೆತ ೬ನೇ ವಿಕ್ರಮಾದಿತ್ಯ, ಶಾಸನ[೧೪] ಶಾಸನದ ಕಲ್ಲು ಕಲ್ಕತ್ತಾದ ಇಂಡಿಯನ್ ಮ್ಯೂಜಿಯಮನಲ್ಲಿದೆ. ಶಾಸನದಲ್ಲಿ ೫೧ ಸಾಲುಗಳ ಪದ್ಯವಿದೆ. ಇದು ನಿಡೆದೋಳ ಸಿಂದರ ವಿವರಣೆ ನೀಡುತ್ತದೆ. ಕುರಗೋಡಿನ ದೊಡ್ಡ ಬಸವಣ್ಣ ದೇವಾಲಯದಲ್ಲಿ ಸಿಂದ ರಾಚಮಲ್ಲನ ಸುದೀರ್ಘ ಪ್ರಶಸ್ತಿ ಶಾಸನವಿದೆ. ಈ ಸಿಂದರು ಕಾರ್ತಿಕೇಯನ ಭಕ್ತರಾಗಿದ್ದರು. "ಕಾರ್ತಿಕೇಯ ದೇವಲಬ್ದ ವರಪ್ರಸಾದ" ಎಂದು ಕರೆಯಲ್ಪಟ್ಟಿದ್ದರು. ಕೊಂಚಗೇರೆ ಶಾಸನದಲ್ಲಿ ಸಿಂದ ಮಾರ್ತಾಂಡ ಬಿರುದು ಹಾಗೂ ಸೋವಿದೇವನ ಹೆಸರ ಜೊತೆಗೆ ವಿಶೇಷವಾಗಿ ತೈಲಪ ದೇವನಂಕಕಾರ ಎಂಬ ಬಿರುದು ಗಮನಾರ್ಹವಾಗಿದೆ. ಈ ತೈಲಪನ ಕುರಿತು ಹೆಚ್ಚಿನ ವಿವಿರ ಸಂಗ್ರಹದ ಅಗತ್ಯವಿದೆ. ಸುತ್ತಲಿನ ಪ್ರದೇಶದಲ್ಲಿ ಅನೇಕ ಶಾಶನಗಳು ಹೆಚ್ಚಿನ ಮಾಹಿತಿ ಒದಗಿಸುತ್ತವೆ.

ಬಾಗಡಗೆಯ ಸಿಂದರು ಬಾಗಲಕೋಟೆ ಜಿಲ್ಲೆಗೆ ಸೇರಿದ ಪ್ರದೇಶದ ಸಾಮಂತರು. ಇಲ್ಲಿಯ ೫೮ ಸಾಲುಗಳ ಬೈರನ ಮಟ್ಟಿ ಶಾಸನದಲ್ಲಿ[೧೫] ಈ ಮನೆತನ ಕುರಿತ ಸಾಕಷ್ಟು ವಿವರಣೆ ಸಿಗುತ್ತದೆ. ಈ ಶಾಸನ ಚಾಲುಕ್ಯ ೨ನೇ ತೈಲನ ಆಳ್ವಿಕೆಗೆ ಸೇರಿದ್ದು, ಕ್ರಿ.ಶ. ೮೯೧ ತೇದಿಯನ್ನು ಹೊಂದಿದೆ. ಸಿಂದ ಮನೆತನದ ಭೋಗಾವತಿಯ ಪುರಾಧೀಶ್ವರ, ವಾಸುಗೀತಕ್ಷಕ,

ಫಣೀಪತಾಕೇಶ್ವರ ವ್ಯಾಘ್ರ ಲಾಂಛನ ಎಂಬ ಬಿರುದುಗಳು ಶಾಸನಗಳಲ್ಲಿವೆ. ರಂಜೋಲದ ಶಾಸನಗಳಲ್ಲಿವೆ. ರಂಜೋಲದ ಶಾಸನದಲ್ಲಿ ಮಯೂರ ವರ್ಮನ ಮಗಳು ಲಕ್ಷ್ಮೀಮತಿಯ ೪ ಮಕ್ಕಳಲ್ಲಿ ಹಿರಿಯ ಪ್ರಭುಸೇವ್ಯ 'ಬಾಗಡಗೆದೇಶಾಧೀಶ' ಎಂಬ ಹೊಸ ವಿಷಯವಿದೆ.

ಬೀದರ ಜಿಲ್ಲೆಯ ಕೆಲಭಾಗದಲ್ಲಿ ಆಳ್ವಿಕೆ ಮಾಡಿದ ಪ್ರದೇಶವನ್ನು ಅಟ್ಟಳೆನಾಡುವೆಂದು ಕರೆಯಲಾಗಿದ್ದು ಇದು ಸಿಂದರ ಪ್ರಾಂತವಾಗಿದ್ದಿತು ಬೀದರ ರಂಜೋಳ ಪ್ರಮುಖ ಸ್ಥಳ. ಕಲ್ಯಾಣದ ೬ನೇ ವಿಕ್ರಮಾಧಿತ್ಯನ ಶಾಸನ ರಂಜೋಳದಲ್ಲಿ ಸಿಕ್ಕಿದೆ.[೧೬]

ಈ ಶಾಸನದಿಂದ ಸಿಂದರೇ ಹೊಸ ಶಾಖೆ ಪತ್ತೆಯಾಗಿದೆ. ಸಿಂದರ ನಿಡದೋಳ ಸಿಂದನ ಕಥೆ ಇದೆ. ಶಾಸನ ಸಾಹಿತಿಮಯವಾಗಿದೆ. ದುರ್ದೈವ ಶಾಸನದ ಐತಿಹಾಸಿಕ ಭಾಗ ಒಡೆದು ಹೋಗಿದೆ. ಕೆಲವು ಈ ಭಾಗದ ಶಾಸನಗಳ ಬೀದರ ಮ್ಯೂಜಿಯಂನಲ್ಲಿವೆ. ಬಿ.ಆರ್. ಗೋಪಾಲ ಈ ಸಿಂದ ಮನೆತನವನ್ನು ಬೆಳಕಿಗೆ ತಂದಿದ್ದಾರೆ.[೧೭]

ಸಿಂದರ ಮತ್ತೊಂದು ಶಾಖೆ ಪ್ರತ್ಯಂಡಕ ಸಿಂದರು. ಬಿಜಾಪುರ ಜಿಲ್ಲೆ ತಿರಗುಂಡಿ ಭಾಗದ ದೊರೆತ ತಾಮ್ರ ಶಾಸನದಿಂದ ಈ ಮನೆತನ ಕಂಡುಬರುತ್ತದೆ.[೧೮] ಪ್ರತ್ಯಂಡಕ ಪಳಿಯಂಡ ಎಂದು ಕನ್ನಡದಲ್ಲಿ ಹೆಸರಿಸಲಾಗಿದೆ. ಪಳಿಯಂಡ ನಾಲ್ಸಾಸಿರ ಎಂದು ಉಲ್ಲೇಖಿತವಾಗಿದೆ. ಇದು ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆಯ ಪರೆಂಡಾ ಗ್ರಾಮ ಎಂದು ಗುರುತಿಸಲ್ಪಟ್ಟಿದೆ.[೧೯] ಈ ಪ್ರದೇಶ ಅಟ್ಟಳೆನಾಡು ಎಂದು ಹೆಸರಿದ್ದಿತು. ಈ ರೀತಿಯ ವಿವಿಧ ಸಿಂದ ಮನೆತನಗಳ ಕುರಿತ ಶಾಸನಗಳನ್ನು ಆಧರಿಸಿ ಮೂಲ ಪ್ರಾಚೀನ ಸಿಂದ ಮನೆತನ ರಾಷ್ಟ್ರಕೂಟ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಬೇರೆ ಬೇರೆ ಶಾಖೆಯಾಗಿ ಒಡೆದು, ೧೩ನೇ ಶತಮಾನದ ಅಂತ್ಯದವರೆಗೆ ಆಳಿದ ಬಗ್ಗೆ ಮಾಹಿತಿ ಸಂಗ್ರಹಿಸಬಹುದು. ಮಹಾರಾಷ್ಟ್ರ ಉಸ್ಮಾನಾಬಾದದಿಂದ ಕರ್ನಾಟಕ ಶಿವಮೊಗ್ಗ, ಯಲಬುರ್ಗಿ ಬಾಗಲಕೋಟೆ ಭಾಗದಲ್ಲಿ ಆಳರಸರ ಅಧೀನದಲ್ಲಿ ಅಧಿಕಾರದಲ್ಲಿದ್ದದ್ದು ಕಂಡುಬರುತ್ತದೆ.

ಸಿಂದರ ಈ ವಿವಿಧ ಮನೆತನಗಳ ಆಳ್ವಿಕೆಗಳೂ ಬಹುತೇಕ ಕರ್ನಾಟಕ ಚಾಲುಕ್ಯರ ವಿಶಾಲ ಕರ್ನಾಟಕದ ಭಾಗವೇ ಆಗಿದ್ದವು. ಈ ಮನೆತನಗಳು ಆಳಿದ ಬೆಳಗವರ್ತಿ ರಾಜ್ಯದ ಕಿಸುಕಾಡು ೩೦, ಎಡವಟ್ಟೆ–೩೦ ಕೆಳವಡಿ–೩೦೦ ಸಿಂದವಾಡಿ–೧೦೦೦ ಬಲಕುಂದೆ–೫೦೦ ಪಳಿಯಂಡ ೪೦೦೦ ಪ್ರಸಿದ್ಧ ಭೌಗೋಲಿಕ ಪ್ರದೇಶದಲ್ಲಿ ಆಡಳಿತ ನಡೆದಿತ್ತು. ಬೆಳಗುತ್ತಿ ಸಿಂದರ ಈಶ್ವರ ದೇವನ ಕುರಿತಾಗಿ ಶಾಸನವೊಂದರಲ್ಲಿ "ಬೆಳಗವರ್ತಿ ನೆಲವೀಡಿನೋಳ್ ಸುಖದಿಂ ಅರಸುಗೆಯ್ಯುತ್ತಿವಿರಲು"[೨೦] ಎಂದಿದೆ ಈ ಸಾಮಂತರು ಅರಸರಿಗೆ ಪಾದಪದ್ಮೋಪಜೀವಿಗಳೆಂದೂ ಹೇಳಿಕೊಂಡಿದ್ದಾರೆ. ಇದರಿಂದ ಸಾಮಂತರು ಮಾಂಡಲಿಕರು ಸ್ವತಂತ್ರವಾಗಿ ಅನಿವಾರ್ಯ ಪ್ರಸಂಗದಲ್ಲಿ ಅರಸನಿಗೆ ಸಹಾಯ ಮಾಡುತ್ತಾ ನಿಷ್ಠಾವಂತಿಕೆಯಲ್ಲಿಯೇ ಇರುತ್ತಿದ್ದರು. ಕುರುಗೋಡಿನ ಸಿಂದರ ಶಾಸನವೊಂದರಲ್ಲಿ ಸಿಂದ ರಾಚಮಲ್ಲನ ಮಂತ್ರಿಯಾದ ರೇಚಿರಾಜನು ಮಹಾಪ್ರಧಾನವೆಂತಲ್ಲದೆ ಶ್ರೀಕರಣಿಕ ಎಂದು ಕರೆಯಲ್ಪಟ್ಟಿದ್ದಾನೆ.[೨೧] ಸಾಮಂತಿಕೆಯೂ ಕೂಡ ಅನುವಂಶಿಕ ಪದವಿಯೇ ಆಗಿದ್ದಿತು. ಅರಸರಲ್ಲಿ ಯುವರಾಜನಿಗೆ ಅಧಿಕಾರ ನೀಡುವ ಪದ್ಧತಿಯ ರೀತಿಯಲ್ಲಿಯೇ ಸಾಮಾಂತರದಲ್ಲಿಯೂ ಈ ಅಧಿಕಾರ ನೀಡುವ ರೂಢಿ ಇದ್ದಿದಿತು. ಯಲಬುರ್ಗಿ ಸಿಂದರ ಚಾವುಂಡರಸ ಆಳುತ್ತಿರುವಾಗ ತನ್ನ ಮಡದಿ ದೇಮಲದೇವಿ ಮತ್ತು ಮಗ ಕುಮಾರ ಆಚಿದೇವನು ಕಿಸುವುಳಲ್ ಪಟ್ಟಣವನ್ನು ಕುಮಾರ ವೃತ್ತಿಯಾಗಿ ಆಳುತ್ತಿದ್ದನೆಂದು ಹೇಳಿದೆ. ಇದು ಯುವರಾಜ ಪದವಿ ಎಂದು ಹೇಳಬಹುದು.[೨೨]

ಸಾಮಂತರೂ ಕೂಡ ತಮ್ಮದೇ ಆದ ಮಂತ್ರಿಗಳನ್ನು ಹೊಂದಿದ್ದರು. ಬೆಳಗುತ್ತಿ ಸಿಂದರ ೨ನೇ ಈಶ್ವರ ದೇವರ ಮಂತ್ರಿಯಾದ ಮಹಾದೇವನ ಉಲ್ಲೇಖ ಹಳೆಬೀಡುನೇಗಿಲು ಶಾಸನದಲ್ಲಿ ಬರುತ್ತದೆ.[೨೩] ಇಲ್ಲಿ ಅವನು ದಂಡನಾಯಕ ಎಂದು ಕರೆಯಲ್ಪಟ್ಟಿದ್ದನು ಗಮನಿಸಬೇಕು. ಆಡಳಿತದಲ್ಲಿ ಸರ್ವಾಧಿಕಾರಿ ಎಂಬುದು ಮತ್ತೊಂದು ಉನ್ನತ ಹುದ್ದೆ ಕುರುಗೋಡು ಸಿಂದರ ೨ನೇ ರಾಚಮಲ್ಲನ ಮಂತ್ರಿಯಾದ ರೇಚಿರಾಜನು ಸರ್ವಾಧಿಕಾರಿ ಎಂದು ಕರೆಸಿಕೊಂಡಿದ್ದನಲ್ಲದೆ "ಅಭಿನವ ಯೌಗಂಧರಾಯಣೆಂದು ಕರೆಯಲ್ಪಟ್ಟಿದ್ದಾನೆ.[೨೪] ಯಲಬುರ್ಗಿ ಸಿಂದರಲ್ಲಿಯ ದಂಡಾಧಿಕಾರಿಯ ಉದಾಹರಣೆ ಕಾಣಬಹುದು. ಸಿಂದರ ಶಾಸನದಲ್ಲಿಯ ಹೆಸರುಗಳನ್ನು ಗುರುತಿಸುವುದು ಕಷ್ಟದಾಯಕವಾಗಿದೆ. ಉದಾ: ಮೇಲಾಳಿಕೆಯ ದಂಡನಾಯಕ ಮಹದೇವ[೨೫] ಬಹುಶಃ ಆಡಳಿತದ ಒಟ್ಟು ಮೇಲ್ವಿಚಾರಕ ಶ್ರೀ ಕರಣಿಕ ಜಿನಸಾಲೆ, ಅಧಿಷ್ಠಾಯಕ ಪೆರ್ಗಡೆ ಎಂಬ ಅಧಿಕಾರಿಗಳ ಉಕ್ತಿ ಕಂಡು ಬರುತ್ತವೆ.

ಎಲ್ಲ ರಾಜಮನೆತನಗಳ ಮೂಲ ಆದಾಯ ಕೃಷಿಯೇ ಆಗಿರುವದು ಸಾಮಾನ್ಯ ಸಾಮಂತರಿಗೂ ಇದೇ ಮೂಲ ಆದಾಯ. ರಾಜ್ಯದ ಬೊಕ್ಕಸಕ್ಕೆ ವ್ಯಾಪಾರ, ವತ್ತಿ ಇತರ ಮೂಲಗಳ ಆದಾಯ ಇದ್ದಿರುತ್ತಿದ್ದಿತ್ತು. ಅರಸ ಸಾಮ್ರಾಜ್ಯದ ಭೂ ಒಡೆಯನಾಗಿದ್ದು, ಖಾಸಗಿಯವರಿಗೆ ಭೂ ಹಕ್ಕುಗಳು ಇದ್ದವು. ಇದರಿಂದ ಶಾಸನಗಳ ಮೂಲಕ ಕಂಡು ಬರುವಂತೆ

ದೇವಾಲಯಗಳಿಗೆ ಅರಸ ಭೂದಾನ ನೀಡುವಾಗ ಇಂಥ ಖಾಸಗಿ ವ್ಯಕ್ತಿಗಳಿಂದ ಹಣ ನೀಡಿದ ಭೂಮಿ ಪಡೆದು, ದಾನ ನೀಡಿರುವ ಉದಾಹರಣೆ ಸಿಗುತ್ತವೆ. ಭೂಕಂದಾಯವನ್ನು ಆಯಾ ಭೂಮಿಯ ಸ್ವರೂಪ, ಫಲವತ್ತತೆ ಆಧರಿಸಿ ಭೂಕಂದಾಯ ಆಕರಿಸಲಾಗುತ್ತಿತ್ತು. ಸಿಂದರ ಶಾಸನಗಳಲ್ಲಿ ಇಂಥ ಭೂ ಪ್ರಬೇಧಗಳ ಉದಾಹರಣೆ ಕಾಣಬಹುದು. ಸಿಂದರ ಶಾಸನವೊಂದರಲ್ಲಿ ತೆಕ್ಕಲು ಮತ್ತರು, ಕಿಸು ಮತ್ತರು ಉಲ್ಲೇಖವಿದೆ. ವ್ಯಾಪಾರದಲ್ಲಿ ಚಾಲುಕ್ಯ ಸಾಮ್ರಾಜ್ಯದ ನಾಣ್ಯಗಳೇ ಸಿಂದ ಸಾಮಂತರಲ್ಲಿಯೂ ಚಲಾವಣೆಯಲ್ಲಿದ್ದವು. ಸಾಮಂತರಿಗೆ ಸ್ವಾತಂತ್ರ್ಯ ನಾಣ್ಯ ಚಲಾವಣೆಯಲ್ಲಿದ್ದುದು ಕಂಡು ಬಂದಿರುವುದಿಲ್ಲ. ಹೊನ್ನ, ಗದ್ಯಾಣ, ಹೊಂಗದ್ಯಾಣ, ಕಾಣ ವಿಸ, ನಾಣ್ಯಗಳು ಚಲಾವಣೆಯಲ್ಲಿ ಇದ್ದವು.[೨೬] ಸಿಂದರ ಶಾಸನದಲ್ಲಿ ಅವರ ಆರಾಧ್ಯ ಸೊಂಡೂರಿನ ತಪೋವನದ ಕಾರ್ತಿಕೇಯನ ಸೂಚಿತ 'ನವಿಲಚ್ಛಿನ ಪೊನ್ನ'[೨೭] ಇದು ಬಂಗಾರ ನಾಣ್ಯವಾಗಿರಬಹುದು. ಸುಂಕಗಳನ್ನು ಸಂಗ್ರಹಿಸಲು ಅಧಿಕಾರಿಗಳು ಇರುತ್ತಿದ್ದರು. ಸುಂಕದ ವಗರ್ಡೆ, ಆಯುಕ್ತ ದೇವರಸ ಎಂಬ ಉಲ್ಲೇಖ ಸೂಳೆಬಾವಿ ಶಾಸನದಲ್ಲಿ[೨೮] ಇದೆ. ಈ ರೀತಿಯ ಹಿನ್ನಲೆಗಳ ಮೇಲೆ ಸಿಂದ ಮನೆತನಗಳ ಅರ್ಥ ವ್ಯವಸ್ಥೆಯೂ ಚಾಲುಕ್ಯ ಸಾಮ್ರಾಜ್ಯದಷ್ಟೆ ಉತ್ತಮವಾಗಿತ್ತು ಎಂದು ಹೇಳಬಹುದು.

ಕಲ್ಯಾಣ ಚಾಲುಕ್ಯ ಕಾಲದಲ್ಲಿ ಧರ್ಮ, ಸಾಹಿತ್ಯ ಪ್ರೋತ್ಸಾಹಿಸಲ್ಪಟ್ಟಿದ್ದವು. ದೇವಾಲಯಗಳು, ಅಗ್ರಹಾರಗಳು, ಘಟಿಕಾ ಸ್ಥಾನಗಳು ಅರಸರಿಂದ ನಿರ್ಮಿತಗೊಂಡಿದ್ದವು. ವಿದ್ವಾಂಸರು, ಕವಿಗಳು, ಕಲಾಕಾರರು, ರಾಜನ ಆಸ್ಥಾನದಲ್ಲಿ ಮನ್ನಣೆ ಹೊಂದಿವರಾಗಿದ್ದರು. ಅದೇ ರೀತಿ ಸಾಮಂತರ ಆಳಿಕೆಗಳಲ್ಲಿ ಕೂಡ ದೇವಾಲಯ ನಿರ್ಮಾಣಗಳು ಮತ್ತು ದಾನ ದತ್ತಿಗಳ ಮೂಲಕ ಧರ್ಮವನ್ನು ಪ್ರೋತ್ಸಾಹಿಸಲ್ಪಟ್ಟಿದ್ದು ಕಾಣಬಹುದು. ಇಲ್ಲಿಯೂ ವಿದ್ವಾಂಸರು ಪ್ರೋತ್ಸಾಹಿಸಲ್ಪಟ್ಟಿದ್ದರು. ಚಾಲುಕ್ಯ ಸಮಯಕ್ಕಾಗಲೇ ಬೌದ್ಧ ಧರ್ಮ ಅಸ್ತಿತ್ವವಿಲ್ಲದ್ದರಿಂದ ಸಿಂದ ಆಳಿಕೆಯ ಪ್ರದೇಶದಲ್ಲಿಯ ಬೌದ್ಧ ಧರ್ಮದ ಅಸ್ತಿತ್ವ ಕಾಣಬರುವುದಿಲ್ಲ. ಜೈನ, ಶೈವ ಧರ್ಮಗಳು ಪ್ರಚಲಿತ ಧರ್ಮವಾಗಿದ್ದವು. ಜೈನ ಧರ್ಮದ ಕುರಿತು ಸಿಂದ ಕಾಲದಲ್ಲಿ ಉಲ್ಲೇಖಗಳು ಹೆಚ್ಚಾಗಿ ಕಾಣಬರುವುದಿಲ್ಲ. ಸಿಂದರ ಮಾದನಭಾವಿ ಶಾಸನದಲ್ಲಿ ಜೈನ ಬಸದಿ ಉಲ್ಲೇಖವಿದ್ದರೂ ಶಾಸನ ಒಡೆದು ಹೋಗಿದ್ದು ಬಸದಿ ಶಬ್ದ ಹೊರತಾಗಿ ಏನನ್ನೂ ಓದಲಾಗುವುದಿಲ್ಲ.

ಪಾಶುಪತ ಅಥವಾ ಕಾಳಾಮುಖ ಶೈವ ಪಂಥಗಳು ಚಾಲುಕ್ಯ ಕಾಲದಲ್ಲಿ ಪ್ರಚಲಿತ ಧರ್ಮವಾಗಿದ್ದಿತು. ಇದನ್ನೇ ಸಿಂದ ಕಾಲಕ್ಕೂ ಅನ್ವಯಿಸಬಹುದಾಗಿದೆ. ಆದರೆ ಹೆಚ್ಚಿನ ಶಾಸನಗಳ ಆಧಾರಗಳ ಇರುವದಿಲ್ಲ. ಹೊನ್ನಾಳಿ ತಾಲೂಕಿನ ಕುರುವರಗದ್ದೆ ಶಾಸನದಲ್ಲಿ, ರಾಮನಾಥ ಸ್ತುತಿಯಿಂದ ಪ್ರಾರಂಭಿಕ ಶಾಸನವಿದೆ[೨೯] ಅದೇ ರೀತಿ ಇನ್ನೂ ಕೆಲವು ಶಾಸನಗಳಲ್ಲಿ ದೇವರ ನೈವೇದ್ಯಕ್ಕೆ ಭೂದಾನ ನೀಡಿದ ಹಾಗೂ ದೇವಾಲಯದ ಜೀರ್ಣೋದ್ಧಾರಕ್ಕೆ ದಾನ ನೀಡಿದ ಮಾಹಿತಿಗಳು ಸಿಗುತ್ತವೆ. ಕುರುವರಗದ್ದೆಯಲ್ಲಿಯ ರಾಯೇಶ್ವರ, ಸಂಗಮೇಶ್ವರ, ಮಲ್ಲಿಕಾರ್ಜುನ ದೇವಾಲಯಗಳ ಉಲ್ಲೇಖವಿದೆ. ರೋಚಕ ಸಂಗತಿ ಎಂದರೆ ಸುತ್ತಲಿನ ಸಮಸ್ತ ನಾಡಗೌಡಗಳು ಯಥೇಚ್ಛವಾಗಿ ಭೂದಾನವನ್ನು ಮಲ್ಲಿಕಾರ್ಜುನ ದೇವಾಲಯಕ್ಕೆ ಮಾಡಿದ ಉಲ್ಲೇಖವಿದೆ. ಬೆಳಗುತ್ತಿಯ ಸಿದ್ಧೇಶ್ವರ ದೇವರ ಪೂಜೆಗೆ ತನ್ನ ಅಧಿಕಾರಿ ಹೆಜ್ಜುಂಕನು ತನ್ನ ಪ್ರದೇಶದ ಸುಂಕದ ಉತ್ಪನ್ನವನ್ನು ದಾನವನ್ನು ಕೊಟ್ಟ ಉಲ್ಲೇಖ ಇದೆ.[೩೦] ಈ ರೀತಿಯ ಸಿಂದ ಕಾಲದ ಹಲವು ಉದಾಹರಣೆಗಳನ್ನು ಕಾಣಬಹುದು. ಯಲಬುರ್ಗ ಸಿಂದರ ಶಾಸನದಲ್ಲಿ ಜೈನ ಧರ್ಮದ ಉಲ್ಲೇಖವಿದೆ. ಅರಸೀಬಿಡಿ ಶಾಸನದಲ್ಲಿ ೨ನೇ ಚಾವುಂಡೇಶ್ವರನ ಪಟ್ಟ ಮಹಾದೇವಿ ದೇಮಲದೇವಿ, ಕುಂದು ಕುಂದಾನ್ವಯ ದೇಶಿಯ ಗಣದ ಪುಸ್ತಕದ ಗಚ್ಛದ ನೇಮಿಚಂದ್ರರಿಗೆ ದತ್ತಿ ನೀಡಿದ ವಿಷಯ ಹಾಗೂ ನೇಮಿಚಂದ್ರ ಗುರು ಪರಂಪರೆ ನೀಡಲಾಗಿದೆ.[೩೧] ಅದೇ ರೀತಿ ಕೋಡಿಕೊಪ್ಪದ ಜಗದೇಕಮಲ್ಲ ಪೆರ್ಮಾಡಿದೇವನ ಶಾಸನದಲ್ಲಿ ಬ್ರಹ್ಮೇಶ ದೇವಾಲಯದ ಉಲ್ಲೇಖವಿದೆ.[೩೨] ಕ್ರಿ.ಶ. ೧೧೭೮ರಲ್ಲಿ ಬಾದಾಮಿ ತಾಲೂಕಿನ ಕಟಗೇರಿ ಶಾಸನದಲ್ಲಿ ಬ್ರಹ್ಮೇಶ ದೇವಾಲಯದ ಉಲ್ಲೇಖವಿದೆ.[೩೩] ವಿಶೇಷವೆಂದರೆ ತ್ರೈಪುರುಷ ದೇವಾಲಯ ಸಾಮಾನ್ಯವಾಗಿ ಬ್ರಹ್ಮ, ವಿಷ್ಣು, ಮಹೇಶ್ವರವಾಗಿರುತ್ತಿದ್ದು, ಇಲ್ಲಿ ಒಂದರ ಬದಲಾಗಿ ಸರಸ್ವತಿ ಸ್ಥಾಪಿಸಿದ ಉಲ್ಲೇಖವಿದೆ ಮತ್ತು ಇವು ಸಾಮಾನ್ಯವಾಗಿ ವಿದ್ಯಾಕೇಂದ್ರವಾಗಿದ್ದಿತು. ದೇವಾಲಯಗಳಿಗೆ ವ್ಯಾಪಾರಿಗಳು ದಾನ ನೀಡುತ್ತಿದ್ದ ಉಲ್ಲೇಖ ಸಾಮಾನ್ಯ, ಬೆಂಚಮಟ್ಟಿ ಶಾಸನ[೩೪] ಸಿಂದ ಚಾವುಂಡರಸನ ಕಾಲದಲ್ಲಿ, ಎಣ್ಣೆ ವ್ಯಾಪಾರಿ ಸಮುದಾಯದ ತೆಲ್ಲಗೆ ಸಮುದಾಯ ಯಲಬುರ್ಗಿ ಈಶ್ವರ ದೇವಸ್ಥಾನ ಕಟ್ಟಿಸಿದ, ತೆಲಗೇಶ್ವರ ದೇವಾಲಯ ಎಂದು ಹೆಸರಿಸಿದರು. ಈ ದೇವಾಲಯಕ್ಕೆ ತಿಂಗಳಿಗೆ ನಿರ್ದಿಷ್ಟ ಪ್ರಮಾಣದ ಎಣ್ಣೆ ದಾನ ನೀಡುತ್ತಿದ್ದರು. ಕುರುಗೋಡಿನ ಪ್ರದೇಶದಲ್ಲಿ ಶೈವಧರ್ಮ ಪ್ರಮುಖವಾಗಿದ್ದಿತು. ಈ ಮನೆತನದ ೧ನೇ ರಾಚಮಲ್ಲನ ಮಡದಿ ಮಾಕಲದೇವಿ ಅಪ್ಪಟ ಶಿವಭಕ್ತಳಾಗಿದ್ದಳು.[೩೫] ಅಲ್ಲದೆ ಶಿವೈಕ್ಯ 'ಚೂಡಾಮಣಿ' ಅರ್ಚಿತ ಶಿವಪಾದ ಎಂದು ಶಾಸನದಲ್ಲಿದೆ. ಇವುಗಳಿಂದ ಇವರು ಅಪ್ಪಟ ಶಿವಭಕ್ತರೆಂದು ತಿಳಿದು ಬರುತ್ತದೆ.

ಅಡಿಟಿಪ್ಪಣಿಗಳು

೧. ಎಸ್.ಎಚ್. ರಿತ್ತಿ ಸೇವುಣಸ್, ಪು. ೫೪, ೫೫.
೨. ಡೆಯಾನಾಸ್ಟಿಸ್ ಆಫ್ ಕೆನರಿಸ್ ಡಿಸ್ಟ್ರಿಕ್ಟ್, ೧೮೯೬ ಪರಿಷ್ಕೃತ ಬಾಂಬೆ ಗೆಝೆಟಿಯರ ಆವೃತ್ತಿ ಸಂಪುಟ ಭಾಗ–೨.
೩. ಮಹಾಮಂಡಲೇಶ್ವರ ಅಂಡ್ ದಿ ಚಾಲುಕ್ಯಾಸ್ ಆಫ್ ಕಲ್ಯಾಣ.
೪. ಮೈನರ ಡೈನಾಸ್ಟಿಜ ಆಫ್ ಸೌತ್ ಇಂಡಿಯಾ, ಕರ್ನಾಟಕ ಸಂ. ೧.
೫. ಎಫಿಗ್ರಾಫಿಯಾ ಇಂಡಿಕಾ ಸಂಪುಟಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ.
೬ ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳು ಮೈಸೂರು ವಿ.ವಿ. (ಕೆಲವು ಪರಿಷ್ಕೃತಗೊಂಡಿವೆ)
೭. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳು ೯, ೧೧, ೧೫, ೧೮ ಹಾಗೂ ೨೦.
೮. ಎಪಿಗ್ರಾಫಿಯಾ ಇಂಡಿಕಾ ಸಂಪುಟಗಳು.
೯. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳು.
೧೦. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ ಸಂ. ೧೮, ಶಾ.ಸಂ. ೩.
೧೧. ಎಪಿಗ್ರಾಫಿಯಾ ಕರ್ನಾಟಿಕಾ (ಹಳೆಯ ಸಂಪುಟ ೭).
೧೨. ಚೆನ್ನಬಸವಯ್ಯ ಹಿರೇಮಠ ಕುರುಗೋಡಿನ ಸಿಂದರು ಒಂದು ಅಧ್ಯಯನ, ಪು. ೪.
೧೩. ಜೆ.ಬಿ.ಬಿ.ಎ.ಆರ್.ಎಸ್. ಸಂ. ೧೧, ನಂ. ೧, ಪು.ಸಂ. ೨೨೪.
೧೪. ಜೆ.ಬಿ.ಬಿ.ಎ.ಆರ್.ಎಸ್. ಸಂ. ೧೧, ನಂ. ೧, ಪು.ಸಂ. ೨೧೪.
೧೫. ಕನ್ನಡ ವಿ.ವಿ. ಹಂಪಿ, ಶಾ.ಸಂ. ೧, ಶಾ.ಸಂ. ೨೦, ಪು. ೨೯.
೧೬. ಎಪಿಗ್ರಾಫಿಯಾ ಇಂಡಿಕಾ ಸಂ. ೧೪, ನಂ. ೧೮, ಪು. ೨೩೦.
೧೭. ಎಪಿಗ್ರಾಫಿಯಾ ಇಂಡಿಕಾ ಸಂ. ೩, ನಂ. ೩೩.
೧೮. ಎಪಿಗ್ರಾಫಿಯಾ ಕರ್ನಾಟಿಕಾ ಸಂ. ಪು. ೧೧, ಡಿ.ಜೆ. ೪೩.
೧೯. ಮಾನವೀಕ ಕರ್ನಾಟಕ ಸಂ. ೪, ಸಂ. ೨, ಪು. ೩೩–೩೪.
೨೦. ಬಿ.ಆರ್. ಗೋಪಾಲ ಮೈನರ ಡೈಯನಾಸ್ಟಿಸ್ ಆಫ್ ಸೌತ್ ಇಂಡಿಯಾ ಕರ್ನಾಟಕ.
೨೧. ಎಚ್.ಎಚ್. ರಿತ್ತಿ ಸೇವುಣಸ್ (ಯಾದವ ಆಫ್ ದೇವಗಿರಿ) ಪು. ಸಂ–೬.
೨೨. ಎಪಿಗ್ರಾಫಿಯಾ ಇಂಡಿಕಾ ಸಂ. ೧೪, ಪು. ಪಂ. ೨೮೧.
೨೩. ಜೆ.ಬಿ.ಬಿ.ಎ.ಆರ್.ಎಸ್. ಸ. ೧೧, ಶಾ.ಸಂ. ೪.
೨೪. ಕರ್ನಾಟಕ ಇತಿಹಾಸ ದರ್ಶನ, ಸಂ. ೪, ಶಾ.ಸಂ. ೧೩.
೨೫. ಎಪಿಗ್ರಾಫಿಯಾ ಇಂಡಿಕಾ, ಸಂ. ೧೪, ಶಾ.ಸಂ. ೧೩.
೨೬. ಜೆ.ಬಿ.ಬಿಎ.ಆರ್.ಎಸ್. ಸಂ. ೧೧, ಶಾ.ಸಂ. ೨.
೨೭. ಎಸ್.ಐ.ಐ. ಸಂ. ೧೫, ಶಾ.ಸಂ. ೨೮.
೨೮. ಎಪಿಗ್ರಾಫಿಯಾ ಕರ್ನಾಟಿಕಾ ಸಂ. ೭, ಎಚ್.ಎಲ್. ೭.
೨೯. ಎಸ್.ಐ.ಐ. ಸಂ. ೧೫, ಶಾ.ಸಂ. ೨೪೭.
೩೦. ಎಸ್.ಐ.ಐ. ಸಂ. ೧೫, ಶಾ.ಸಂ. ೧೩೪.
೩೧. ಎಪಿಗ್ರಾಫಿಯಾ ಕರ್ನಾಟಿಕಾ ಸಂ. ೪, ಎಚ್.ಎಲ್. ೪೬.
೩೨. ಎಸ್.ಐ.ಐ. ೧೫, ಸಂ. ೪೭.
೩೩. ಎಸ್.ಐ.ಐ. ಸಂ. ೯, ಭಾಗ ೨, ಶಾ.ಸಂ. ೧೧೫.
೩೪. ಎಸ್.ಐ.ಐ. ೧೫, ಸಂ. ೧೩೪.
೩೫. ಎಸ್.ಐ.ಐ. ಸಂ. ೯, ಭಾಗ ೧, ಶಾ.ಸಂ. ೩೨೨.

೩೬

ಉಚ್ಚಂಗಿ ಪಾಂಡ್ಯರ ಆಡಳಿತಾರಂಭ ಕಾಲದ ಅರಸರು

ಸಿ.ಎಂ. ತಿಪ್ಪೇಸ್ವಾಮಿ*

ಉಚ್ಚಂಗಿ ಪಾಂಡ್ಯರ ಮೂಲ ಹಾಗೂ ಅವರ ಆಡಳಿತದ ಪ್ರಾರಂಭದ ಕಾಲದ ಅರಸರ ಬಗ್ಗೆ ಸಾಕಷ್ಟು ಗೊಂದಲ ಹಾಗೂ ಅಸ್ಪಷ್ಟತೆ ಇದೆ. ಇವರ ಆಳ್ವಿಕೆಯನ್ನು ಉಲ್ಲೇಖಿಸುವ ಇವರೇ ಹಾಕಿಸಿದ ಶಾಸನಗಳು ಹಾಗೂ ಬೇರೆ ರಾಜವಂಶದವರ ಶಾಸನಗಳು ಪಾಂಡ್ಯ ಅರಸರ ಹೆಸರುಗಳನ್ನು ಹಾಗೂ ಕಾಲಾನುಕ್ರಮಣಿಕೆಯನ್ನು ಒಂದೇ ರೀತಿಯಲ್ಲಿ ಹೇಳಿಲ್ಲ. ವಾಸ್ತವವಾಗಿ ಆಳಿದ ಅರಸರು ಎಷ್ಟು? ಏಕಕಾಲದಲ್ಲಿ ಅಧಿಕಾರವನ್ನು ನಡೆಸಿದ ಅರಸರು ಯಾರು? ಈ ಅರಸರ ನಿಜನಾಮ ಹಾಗೂ ಬಿರುದುಗಳೇನು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಶಾಸನಗಳಲ್ಲಿ ಸಿಕ್ಕದೆ ಸಾಹಿತ್ಯಿಕ ಕೃತಿಗಳಲ್ಲೂ ಲಭ್ಯವಾಗದೆ ಪಾಂಡ್ಯರ ವಂಶಾವಳಿಯು ಗೊಂದಲದ ಗೂಡಾಗಿದೆ. ಇವರ ಬಗ್ಗೆ ಅಧ್ಯಯನ ಮಾಡಿದ ಇತಿಹಾಸಕಾರರು ಹಾಗು ಸಂಶೋಧಕರು ವಿವಿಧ ಆವೃತ್ತಿಗಳಲ್ಲಿ ವಂಶಾವಳಿಯನ್ನು ನೀಡಿದ್ದಾರೆ. ಅಲ್ಲಲ್ಲಿ ದೋಷಪೂರಿತವಾಗಿ ಹೇಳಲಾದ ವಂಶಾವಳಿ ಹಾಗೂ ಹೆಸರುಗಳನ್ನು ಇತರೆ ಶಾಸನಗಳೊಂದಿಗೆ ಹಾಗೂ ಕಾಲದೊಂದಿಗೆ ತಾಳೆ ನೋಡಿ ನಿಖರವಾದ ಮಾಹಿತಿಯನ್ನು ಹೊರತರಬೇಕಾಗಿದೆ. ಈ ಗೊಂದಲವನ್ನು ಪರಿಹರಿಸಿಕೊಳ್ಳಲು ಶಾಸನಾಧಾರ ಮರುಪರಿಶೀಲಿಸಿ ಪಾಂಡ್ಯರ ಆಡಳಿತಾರಂಭ ಕಾಲದ ಅರಸರನ್ನು ಸ್ಪಷ್ಟವಾಗಿ ಕಾಲಾನುಕ್ರಮಣಿಕೆಯಂತೆ ಗುರ್ತಿಸಿ ಸಾದರ ಪಡಿಸುವುದಾಗಿದೆ.

ನೊಳಂಬವಾಡಿಯನ್ನಾಳಿದ ಪಾಂಡ್ಯರಸರ ಬಗ್ಗೆ ಹಲವಾರು ಸಂಶೋಧಕರು ಅಧ್ಯಯನ ಮಾಡಿದ್ದರೂ ಅವರ ಮೂಲ ಹಾಗೂ ಆಡಳಿತಾರಂಭ ಕಾಲದ ಅರಸರ ಬಗ್ಗೆ ವಿಶೇಷ ಗಮನ ಹರಿಸಿರುವವರು ಕೆಲವರು ಮಾತ್ರ. ಅವರಲ್ಲಿ ಪ್ರಮುಖರಾದವರೆಂದರೆ ಶ್ರೀಯುತರಾದ ಬಿ.ಎಲ್. ರೈಸ್, ದಿನಕರ ದೇಸಾಯಿ, ಜಡ್.ಕೆ. ಅನ್ಸಾರಿ, ಕುಂ.ಬಾ. ಸದಾಶಿವಪ್ಪ ಮುಂತಾದವರು. ಆದರೆ ಇವರುಗಳ ಅಧ್ಯಯನದಿಂದ ಹೊಮ್ಮುವ ಮಾಹಿತಿಯೂ ಪರಸ್ಪರ ಒಂದೇ ರೀತಿಯಲ್ಲಿಲ್ಲ. ಕೆಲವರು ಒಬ್ಬನೇ ಅರಸನನ್ನು ಬೇರೆ ಬೇರೆ ಹೆಸರುಗಳ ಆಧಾರದ ಮೇಲೆ ತಂದೆ ಮತ್ತು ಮಗ ಎಂದೂ ಗುರ್ತಿಸಿದ್ದಿದೆ.

ಪ್ರಾರಂಭದ ಮೂರು ತಲೆಮಾರುಗಳಲ್ಲಿ ಬರುವ ಪಾಂಡ್ಯರಸರ ಹೆಸರುಗಳು ಹಾಗೂ ಪರ್ಯಾಯವಾಗಿ ಅವರ ಬಿರುದುಗಳು ಒಂದು ಶಾಸನದಲ್ಲಿದ್ದಂತೆ ಇನ್ನೊಂದು ಶಾಸನದಲ್ಲಿ ಇರುವುದು ಅಪರೂಪ. ಆದರೆ ತದನಂತರದ ತಲೆಮಾರಿನಿಂದ ಹೆಚ್ಚು ನಿಖರವಾಗಿ ಗುರ್ತಿಸಬಹುದು. ಮೊದಮೊದಲ ಅರಸರ ಹೆಸರುಗಳನ್ನು ಶಾಸನಗಳಲ್ಲಿ ಹೀಗೆ ಕಾಣಬಹುದು.

೧. ಮಂಗಯ, ೨. ಆದಿತ್ಯದೇವ, ೩.ತೇಜರಾಯ, ೪. ಪ್ರಚಂಡ ಪಾಂಡ್ಯ, ೫. ಪಾಂಡ್ಯ, ೬. ಚೇದಿರಾಜ, ೭. ಇರುಕ್ಕಪಾಳ, ೮. ಇರುತವೇಳ, ೯. ಇರುಕ್ಕವೇಳ, ೧೦. ಪಳಮಾಂಡದೇವ, ೧೧. ಪಳಂತ, ೧೨. ಪಲತ್ತ, ೧೩. ತ್ರಿಭುವನ ಮಲ್ಲ ಪಾಂಡ್ಯ.

ಈ ಪಾಂಡ್ಯರನ್ನು ಮೊದಲು ಉಚ್ಚಂಗಿ ಪಾಂಡ್ಯರೆಂದು ಗುರ್ತಿಸಿದವರು ಬಿ.ಎಲ್. ರೈಸ್‌ರವರು[೧]. ಶಿಕಾರಿಪುರ ತಾಲ್ಲೂಕಿನ ಬೆಳಗಾಮಿಯ ಶಾಸನವೊಂದನ್ನು[೨] ಆಧರಿಸಿ ಇವರು ಚಂದ್ರವಂಶದವರು, ಸಪ್ತಕೊಂಕಣಗಳಲ್ಲೊಂದಾದ ಹೈವೆ ನಾಡಿನ ದೊರೆಗಳು, ಇವರ ರಾಜಧಾನಿ ಶಿಶುಗಲಿ ಎಂದು ಹೇಳಿದ್ದಾರೆ. ಈ ಶಾಸನವು ಅರಸ ಕಾಮದೇವನ ಕಾಲವಾದ ಕ್ರಿ.ಶ. ೧೧೧೩ರ ಅವಧಿಯದು. ಈ ಶಾಸನದ ಅವಧಿಯಲ್ಲಾಗಲೇ ತ್ರಿಭುವನಮಲ್ಲ ಪಾಂಡ್ಯನು ಬೆಳ್ತೂರಿನಿಂದ ನೊಳಂಬವಾಡಿಯನ್ನು ಆಳುತ್ತಿದ್ದ. ಕಾಮದೇವನನ್ನು ಗೋಕರ್ಣಪುರವರಾಧೀಶ್ವರ, ಕೊಂಕಣರಾಷ್ಟ್ರಪಾಲ ಇತ್ಯಾದಿಯಾಗಿ ಹೇಳಲಾಗಿರುವ ಈ ಶಾಸನದಲ್ಲಿ ಎಲ್ಲಿಯೂ ನೊಳಂಬವಾಡಿಯನ್ನಾಗಲೀ, ಅದನ್ನಾಳುತ್ತಿದ್ದ ಪಾಂಡ್ಯರನ್ನಾಗಲೀ ಹೆಸರಿಸಿಲ್ಲ. ಹಾಗೆಯೇ ಅದೇ ಕಾಲದ ಅಥವಾ ನಂತರದ ಉಚ್ಚಂಗಿ ಪಾಂಡ್ಯರ ಶಾಸನಗಳಲ್ಲೂ ಹೈವೆ ಪಾಂಡ್ಯ ಅರಸರನ್ನು ಹೆಸರಿಸದೆ, ಅವರ ಬಿರುದುಗಳನ್ನು ಉಲ್ಲೇಖಿಸದೆ, ಕೇವಲ ಸಪ್ತಕೊಂಕಣಗಳನ್ನು ಸಾಧಿಸಿದುದನ್ನು ಮಾತ್ರ ಹೇಳಲಾಗಿದೆ. ಆದರೂ

* ಶಿಕ್ಷಣಾಧಿಕಾರಿಗಳು, # ೮ಎ, 'ಇಸಿಲ', ಮಾಸ್ತಮ್ಮ ಬಡಾವಣೆ-೧ನೇ ತಿರುವು (ಪಶ್ಚಿಮ), ಸ್ಟೇಡಿಯಂ ಡಬಲ್ ರಸ್ತೆ, ಚಿತ್ರದುರ್ಗ. ಮೊ. ೭೭೬೦೬೦೪೦೫೪.

ಹೈವೆ ಆಳುತ್ತಿದ್ದ ಪಾಂಡ್ಯರಿಗೂ, ಉಚ್ಚಂಗಿ ಪಾಂಡ್ಯರೆಂದು ಗುರ್ತಿಸಲಾಗುವ ನೊಳಂಬವಾಡಿಯನ್ನಾಳುತ್ತಿದ್ದ ಪಾಂಡ್ಯರಿಗೂ ಅಸ್ಪಷ್ಟವಾಗಿ ಸಂಬಂಧ ಬೆಸೆಯಲಾಗಿದೆ. ರೈಸ್ ರವರು ಜಟಿಂಗರಾಮೇಶ್ವರದ ಒಂದು ಶಾಸನವನ್ನು ಉಲ್ಲೇಖಿಸಿ[೩], ಇದೇ ಉಚ್ಚಂಗಿ ಪಾಂಡ್ಯರ ಪ್ರಥಮ (ಲಭ್ಯ) ಶಾಸನವೆಂದು ಅಭಿಪ್ರಾಯಪಟ್ಟು ಇದರಲ್ಲಿ ಹೆಸರು ಅಳಿಸಿಹೋಗಿರುವುದರಿಂದ ಅರಸನ ಹೆಸರು ಸಿಕ್ಕುವುದಿಲ್ಲವೆಂದು ಹೇಳುತ್ತಾರೆ. ಕ್ರಿ.ಶ. ೧೦೩೨ರ ಆ ಶಾಸನದಲ್ಲಿ 'ಕಾಂಚಿಪುರವರೇಶ್ವರ ಬೆಸದೆಯಳಿ...' ಎಂದು ಇರುವುದರಿಂದಷ್ಟೇ ಇದನ್ನು ಪಾಂಡ್ಯರ ಶಾಸನವೆಂದು ಹೇಳಬಹುದೇ? ಇದು ಸಂದೇಹಾಸ್ಪದವೆಂದು ಹೇಳಲೇಬೇಕಾಗಿದೆ.

ವಿವಿಧ ಅಧ್ಯಯನಗಳಲ್ಲಿ ಪಾಂಡ್ಯರ ವಂಶಾವಳಿಯನ್ನು ಹೇಗೆ ವೈವಿಧ್ಯಮಯವಾಗಿ ತಿಳಿಸಲಾಗಿದೆ ಎಂಬುದನ್ನು ಕುಂ.ಬಾ. ಸದಾಶಿವಪ್ಪನವರು ಪಟ್ಟಿಮಾಡಿದ್ದಾರೆ[೪]. ಆದರೆ ಉಜ್ಜಿನಿ ಮತ್ತು ಅಂಬಳಿಯ ಶಾಸನಗಳು, ಶ್ರವಣಬೆಳಗೊಳದ ಶಾಸನಗಳು, ಹುಲ್ಲೂರು ಶ್ರೀನಿವಾಸ ಜೋಯಿಸರು ಮಾಡಿರುವ ಪಟ್ಟಿ, ಡಾ. ಜೆ.ಎಂ. ನಾಗಯ್ಯನವರ ಪಟ್ಟಿ ಇವೇ ಮೊದಲಾದವುಗಳಲ್ಲಿ ಆಡಳಿತಾರಂಭಕಾಲದ ಅರಸರ ಪ್ರಸ್ತಾಪವಿಲ್ಲ. ಕರ್ನಾಟಕ ಪರಂಪರೆಯ ಆವೃತ್ತಿಯಲ್ಲಿ ತೇಜರಾಯನ ಹೆಸರಿಲ್ಲ, ಆದರೆ ಮೂರನೆ ತಲೆಮಾರಿನವನಾಗಿ 'ಪಾಂಡ್ಯ' ಎಂದು ಇದ್ದು, ಇದು ಯಾರು ಎಂಬ ಬಗ್ಗೆ ಸ್ಪಷ್ಟವಾಗುವುದಿಲ್ಲ. ನಾಗಯ್ಯನವರ ಆವೃತ್ತಿಯಲ್ಲಿ ರಾಯಪಾಂಡ್ಯ ಹಾಗೂ ತ್ರಿಭುವನಮಲ್ಲ ಪಾಂಡ್ಯರ ಕಾಲಾನುಕ್ರಮಣಿಕೆ ತಿರುವುಮುರುವಾಗಿದೆ. ಇದ್ದುದರಲ್ಲಿ ಅನ್ಸಾರಿಯವರು ನೀಡಿರುವ ವಂಶಾವಳಿಯು ಗೊಂದಲದಿಂದ ದೂರವಿದ್ದು, ಶಾಸನಗಳು ನೀಡುವ ಕ್ರಮಕ್ಕೆ ಎಲ್ಲೂ ವ್ಯತಿರಿಕ್ತವಾಗುವುದಿಲ್ಲ. ಸದಾಶಿವಪ್ಪನವರು ನೀಡಿರುವ ವಂಶವೃಕ್ಷದಲ್ಲಿ ಆದಿತ್ಯದೇವ, ಮಂಗಯ ಹಾಗೂ ಪಾಂಡ್ಯ ಎಂದು ಮೂರೂ ಹೆಸರನ್ನು ಮೊದಲನೆಯ ಅರಸನಾಗಿ ಗುರ್ತಿಸಿದ್ದಾರೆ. ಆದರೆ 'ಪಾಂಡ್ಯ' ಎಂಬುದು ಬಿರುದಾಗಿ ಪ್ರಥಮ ಬಾರಿಗೆ ಪ್ರಾಪ್ತವಾದ್ದು ಇವರ ಎರಡನೇ ತಲೆಮಾರಿನವನಾದ ಚೇದಿರಾಜನಿಗಾದ್ದರಿಂದ ಈ ಪಟ್ಟಿಯೂ ಅಷ್ಟರ ಮಟ್ಟಿಗೆ ತಪ್ಪಾಗಿದೆ. ಪಲಮಾಂಡ ಪಾಂಡ್ಯನ ಮಗ ಇರುತವೇಳ ಅಥವಾ ಪಲಿತ ಎಂದು ಸದಾಶಿವಪ್ಪನವರು ಹೇಳಿದ್ದರೂ ಇರುತವೇಳನನ್ನು ಅವನ ಶಾಸನಗಳು ಯಾವ ಹೆಸರಿನಿಂದ ಕರೆದಿವೆ ಎಂದು ಹೇಳಿಲ್ಲ. ಇದು ಅತ್ಯಂತ ಪ್ರಮುಖ ಅಂಶವಾಗಿದೆ. ಅಲ್ಲದೆ ಇರುತವೇಳ ಅಥವಾ ಇರುಕ್ಕವೇಳನು ಆರನೇ ವಿಕ್ರಮಾದಿತ್ಯನಲ್ಲಿ ಸರ್ವಾಧ್ಯಕ್ಷನಾಗಿದ್ದ ಎಂಬುದು ಸರಿಯಾದರೂ ಅವನು ತನ್ನ ಪರವಾಗಿ ನೊಳಂಬವಾಡಿಯನ್ನು ಆಳಲು ತನ್ನ ಮಗ ರಾಯಪಾಂಡ್ಯನಿಗೆ ವಹಿಸಿ ತಾನು ಉಸ್ತುವಾರಿ ನೋಡಿಕೊಂಡಿರಬೇಕೆಂದು ಅಭಿಪ್ರಾಯಿಸಿದ್ದು ಅದಕ್ಕೆ ಅವರು ಯಾವುದೇ ಆಧಾರಗಳನ್ನು ತಿಳಿಸಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ರಾಯಪಾಂಡ್ಯನ ತಂದೆ ಇರುಕ್ಕವೇಳನನ್ನು ಶಾಸನಗಳು ತ್ರಿಭುವನಮಲ್ಲ ಪಾಂಡ್ಯ ಎಂಬ ಬಿರುದಿನಿಂದಲೇ ಗುರ್ತಿಸಿವೆ. ಇವನು ನೊಳಂಬವಾಡಿಯಲ್ಲೇ ಇದ್ದು ಸುದೀರ್ಘಕಾಲ ತನ್ನ ರಾಜಧಾನಿಯಲ್ಲಿ ಆಳ್ವಿಕೆ ಮಾಡಿರುವುದನ್ನು ಅವನ ಸಾಕಷ್ಟು ಶಾಸನಗಳು ಸಮರ್ಥಿಸುತ್ತವೆ. ಆದ್ದರಿಂದ ತ್ರಿಭುವನಮಲ್ಲ ಪಾಂಡ್ಯನು ತನ್ನ ಆಳ್ವಿಕೆಯ ಕೊನೆಯ ಕಾಲವನ್ನು ಹೊರತುಪಡಿಸಿ ಉಳಿದಂತೆ ತಾನೇ ನೇರವಾಗಿ ಆಳ್ವಿಕೆ ನಡೆಸಿದ್ದಾನೆ. ಇದನ್ನು ಮುಂದೆ ಸಾಧಾರ ನಿರೂಪಿಸಲಾಗುವುದು.

ಎಸ್. ಪರಶಿವಮೂರ್ತಿಯವರು ಹೊಯ್ಸಳ, ಪಾಂಡ್ಯ ಹಾಗೂ ಚೋಳರ ವೈವಾಹಿಕ ಸಂಬಂಧಗಳನ್ನು ಗುರ್ತಿಸುವಾಗ ಪಾಂಡ್ಯರ ವಂಶಾವಳಿಯನ್ನು ಕಾಟೀಕೆರೆ ಶಾಸನಾಧಾರ ತಕ್ಕಮಟ್ಟಿಗೆ ಸೂಕ್ತವಾಗಿ ನಿರೂಪಿಸಿದ್ದಾರೆ[೫].

ಮೇಲ್ಕಂಡ ಎಲ್ಲಾ ಪೂರ್ವಾಧ್ಯಯನಗಳನ್ನು ಪರಿಶೀಲಿಸಿ, ಶಾಸನಾಧಾರ ತಾಳೆನೋಡಿದ ನಂತರ ಈಗ ಈ ಅರಸರನ್ನು ಸರಿಯಾದ ಕಾಲಾನುಕ್ರಮಣಿಕೆಯಂತೆ ಪರಿಶೀಲಿಸಲಾಗಿದೆ.

ಮಂಗಯ

ಉಚ್ಚಂಗಿ ಪಾಂಡ್ಯರ ವಂಶಾವಳಿಯನ್ನು ಸುದೀರ್ಘವಾಗಿ ವಿವರಿಸುವ ಹರಿಹರದಲ್ಲಿರುವ ಹರಿಹರೇಶ್ವರ ದೇವಾಲಯದ ಶಾಸನಗಳು[೬] ಪೌರಾಣಿಕ ವ್ಯಕ್ತಿಗಳಿಂದ ಆರಂಭಿಸಿ ಬಲ(ರಾಮ), ಕೃಷ್ಣರ ನಂತರ ಅವರ ವಂಶದಲ್ಲಿ ಬರುವ ಮಂಗಯ ಎಂಬುವವನನ್ನು ಹೆಸರಿಸುತ್ತದೆ. ಇವನನ್ನೇ ಆದಿತ್ಯದೇವನೆಂದೂ ಕರೆಯಲಾಗಿದೆ.

> **'ಶ್ರೀ ವೈಷ್ಣವಾಂಶಬಲ ಕೃಷ್ಣಾವತರಣದಿಂದೆ ಮಂಗಳಾಯತನವೆನಿಪ್ಪಾ ವಂಶದೊಳಾವಂಶದೊಳಾವ ಮಹೀಪಾಳವಂಶ ಮಂಗಯನೆಂಬ ॥**
>
> **ಆದಿತ್ಯದೇವನೆಂಬಂ ಯಾದವಕುಳತಿಳಕನಾತನಿಂದಾದುದು ಪಾಂಡ್ಯೋದಯ'**

ಆದರೆ ಕೆಲವು ಶಾಸನಗಳು ವಂಶಾವಳಿಯನ್ನು ಹೇಳುವಾಗ ಮಂಗಯನನ್ನು (ಅಥವಾ ಆದಿತ್ಯದೇವನನ್ನು) ಹೆಸರಿಸಿಲ್ಲ[೭].ಇವನ್ನು ಯಾದವಕುಳತಿಳಕನೆಂದು ಹೇಳಲಾಗಿದೆ.ಇವನ ಬಗ್ಗೆ ಯಾವುದೇ ಹೆಚ್ಚಿನ ವಿವರಗಳು ಶಾಸನಗಳಲ್ಲಿ ಲಭ್ಯವಾಗಿಲ್ಲ. ಇವನ ಕಾಲ ಸುಮಾರು ೧೧ನೇ ಶತಮಾನದ ಉತ್ತರಾರ್ಧವಾಗಿರಬಹುದು.

ಆದಿತ್ಯದೇವನ ನಂತರದ ಅರಸರು ಯಾರು ಎಂಬುದು ಸ್ವಲ್ಪ ಗೊಂದಲ ಮೂಡಿಸುವಂತಿದೆ. ರೈಸ್ ರವರು ಹರಿಹರದ[೮] ಶಾಸನವನ್ನಾಧರಿಸಿ ಆದಿತ್ಯದೇವನ ಮಗ ಚೇದಿರಾಜನು ಪಾಂಡ್ಯನೆಂದು ಖ್ಯಾತನಾದನೆಂದು ಹೇಳಿ ನಂತರ ನೀಡಿರುವ ಪಾಂಡ್ಯರ ವಂಶಾವಳಿಯಲ್ಲಿ[೭] ಮಂಗಯ/ಆದಿತ್ಯದೇವನ ಮಗ ತೇಜರಾಯ ಪಾಂಡ್ಯ, ಇವನ ಮಗ ಚೇದಿರಾಜ ಎಂದು ವಂಶವೃಕ್ಷದಲ್ಲಿ ತೋರಿಸಿ ವಿರೊಧಾಭಾಸ ಉಂಟು ಮಾಡಿದ್ದಾರೆ. ದಿನಕರ ದೇಸಾಯಿಯವರು ಬಹುಶಃ ಈ ವಂಶವೃಕ್ಷವನ್ನಾಧರಿಸಿ ಆದಿತ್ಯದೇವನ ಮಗ ಪಾಂಡ್ಯ, ಇವನು ತೇಜರಾಜ ಎಂಬ ಬಿರುದನ್ನು ಧರಿಸಿದವನು ಎಂದು ಹೇಳಿದ್ದಾರೆ[೮]. ಆದರೆ ಇದನ್ನು ಯಾವ ಶಾಸನವೂ ಸಮರ್ಥಿಸುವುದಿಲ್ಲ. ಈ ವಿಷಯವನ್ನು ಮೂರು **ಪ್ರಾತಿನಿಧಿಕ** ಶಾಸನಳಾದ

೧. ಅರಸೀಕೆರೆ[೯] ತಾ.ನ ಕಾಟಿಕೆರೆ ಬಳಿಯ ಶಾಸನ, ಕ್ರಿ.ಶ. ಸುಮಾರು ೧೧೦೦

೨. ಹರಿಹರದ[೧೦] ಶಾಸನ, ಕ್ರಿ.ಶ. ೧೧೪೮

೩. ಹರಿಹರದ[೧೧] ಶಾಸನ, ಕ್ರಿ.ಶ. ೧೧೬೮ ಇವುಗಳನ್ನು ಗಮನಿಸಬಹುದಾಗಿದೆ.

ಸುಮಾರು ಕ್ರಿ.ಶ. ೧೧೦೦ರ ಕಾಲದ ಅರಸೀಕೆರೆ ತಾಲ್ಲೂಕಿನ ಕಾಟಿಕೆರೆ ಬಳಿಯ ಶಾಸನ. ಪಾಂಡ್ಯರ ವಂಶಾವಳಿಯನ್ನು ನೀಡಿದೆ. ಇದರಲ್ಲಿ ಹೊಯ್ಸಳ ಎರೆಯಂಗನ ವಧು ಮಹಾದೇವಿಯು ಪಾಂಡ್ಯ ವಂಶದವಳೆಂದು ಹೇಳಲಾಗಿದೆ. ಇದರಲ್ಲಿ ನೀಡಿರುವ ವಂಶಾವಳಿಯಲ್ಲಿ ಮಂಗಯ ಅಥವಾ ಆದಿತ್ಯದೇವನ ಪ್ರಸ್ತಾಪವಿಲ್ಲ. ಸೂರ್ಯವಂಶದ ಇಕ್ಷ್ವಾಕು ಚಕ್ರವರ್ತಿಯಿಂದ ಅವಿಚ್ಛಿನ್ನವಾಗಿ ಬಂದ ಚೋಳ ಚಕ್ರವರ್ತಿಗಳ ಕಟಕವಜ್ರವೆನಿಸಿದಂತಹ ಏಳು ಸಿಂಹಾಸನಗಳನ್ನು (ಸಪ್ತ ಕೊಂಕಣ/ಏಳು ರಾಜ್ಯಗಳನ್ನು ಎಂದು ತೆಗೆದುಕೊಳ್ಳಬಹುದು) ತೇಜರಾಯನು ತನ್ನ ಬಾಹುಬಲದಿಂದ ಪ್ರತಿಪಾಲಿಸಿದವನು ತೇಜರಾಯ. ಇವನ ಮಗ ಪ್ರಚಣ್ಡ ಪಾಂಡ್ಯ ಎಂದು ಹೇಳಲಾಗಿದೆ. ಆದರೆ ತೇಜರಾಯನ ಹೆಸರನ್ನು ಕ್ರಿ.ಶ. ೧೧೪೮ ಹಾಗೂ ೧೧೬೮ರ ಹರಿಹರದ ಎರಡು ಶಾಸನಗಳಲ್ಲೂ ಪ್ರಸ್ತಾಪಿಸಿಲ್ಲ. ಆದರೆ ಪಾಂಡ್ಯನನ್ನು ಕ್ರಿ.ಶ. ೧೧೪೮ರ ಹರಿಹರ ಶಾಸನವು ಆದಿತ್ಯನ ಮಗನೆಂದು ಹೇಳಿದೆ. ಆದ್ದರಿಂದ ಕಾಟೀಕೆರೆ ಶಾಸನೋಕ್ತ ತೇಜರಾಯನು ಬೇರೆ ಯಾರು ಅಲ್ಲದೆ ಪಾಂಡ್ಯನ ತಂದೆ ಆದಿತ್ಯದೇವ ಅಥವಾ ಮಂಗಯ. ಕವಿಗಳು ಸಾಮಾನ್ಯವಾಗಿ ಶಬ್ಧಗಳ ಅರ್ಥಗಳ ಹೊಂದಾಣಿಕೆಯನ್ನು ಹೆಸರನ್ನು ಹೇಳುವಲ್ಲಿ ಅಥವಾ ರೂಪಿಸಿಕೊಳ್ಳುವಲ್ಲಿ ಬಳಸುವುದುಂಟು. ಹಾಗೆ 'ತೇಜ' 'ಆದಿತ್ಯ' ಎಂಬ ಶಬ್ಧಗಳ ಅರ್ಥದ ಹೊಂದಾಣಿಕೆಯಿಂದ ಅವೆರಡೂ ಒಬ್ಬನವೇ ಹೆಸರುಗಳು ಎಂಬುದನ್ನು ಸಮರ್ಥಿಸುವಂತಿದೆ.

ಈ ತೇಜರಾಯನು ಧರಣಿಯನ್ನು ದಕ್ಷತೆಯಿಂದ ರಕ್ಷಿಸುವವನೂ, ವೈರಿಗಳಿಗೆ ಸಿಂಹಸ್ವರೂಪನೂ, ಶರಣಾಗತ ವಜ್ರಪದನೂ, ವೀರಾಂಗನೆಯರ ವಲ್ಲಭನೂ, ಹರನ ಪಾದಾಬ್ಜಭೃಂಗನೂ, ಸಮಸ್ತ ಅರಿಸಂಹರಣ ಮಾಡಿದವನೆಂದು ಭೂಮಿಯಲ್ಲಿ ತೇಜೋಮಯನಾಗಿದ್ದಾನೆ ಎಂದು ಹೊಗಳಲಾಗಿದೆ. ಇವನ ಸಾಹಸಗಳನ್ನು ಬಣ್ಣಿಸುವ ಒಂದು ಪಂಕ್ತಿ ಹೀಗಿದೆ,

> **'ಓಡದವರಿಲ್ಲ ಭೂಪರು ಬೇಡದ ಜನವಿಲ್ಲ ಪೋಗದವರಿಲ್ಲ ತೆರಳ್ದಟ್ಟಿಡದ ಪರಧರೆಯಿಲ್ಲೆನಲಾಡಂಬರವಾಯ್ತು ತೇಜರಾಯನ ತೇಜಂ ॥'**

ಒಟ್ಟಾರೆ ಆದಿತ್ಯದೇವ ಹಾಗೂ ತೇಜರಾಯನೆಂದು ಖ್ಯಾತನಾಗಿದ್ದ ಮಂಗಯನು ಅಸಾಮಾನ್ಯ ಪರಾಕ್ರಮಿಯಾಗಿ ಸಪ್ತಕೊಂಕಣ ಆಳಿದ್ದಾನೆ.

ಚೇದಿರಾಜ

ದಿನಕರ ದೇಸಾಯಿಯವರು ತೇಜರಾಯನ (ತೇಜರಾಯ ಪಾಂಡ್ಯ ಎಂದು ಹೇಳಿದ್ದಾರೆ!) ಮಗ ಚೇದಿರಾಜ ಎಂದು ಹೇಳಿ, ಚೇದಿರಾಜನೇ ಈ ವಂಶದ ನಿಜವಾದ ಸ್ಥಾಪಕ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದನ್ನವರು ಹರಿಹರದ, ಈ ಮೊದಲೇ ಹೇಳಿದ ಕ್ರಿ.ಶ. ೧೧೪೮ರ ಶಾಸನವನ್ನು ಉಲ್ಲೇಖಿಸಿ ಹೇಳುತ್ತಾರೆ. ಆದರೆ ಈ ಶಾಸನ ಹಾಗೂ ಅಲ್ಲಿಯದೇ ಕ್ರಿ.ಶ. ೧೧೬೮ರ ಶಾಸನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಬೇರೆಯದೇ ಮಾಹಿತಿ ಸಿಕ್ಕುತ್ತದೆ. ಕಾಟಿಕೆರೆ ಶಾಸನದಲ್ಲಿ ಉಲ್ಲೇಖಿಸಲಾದಂತೆ ತೇಜರಾಯನ ಮಗ (ಪ್ರಚಣ್ಡ) ಪಾಂಡ್ಯ.

'...ಧರೆಯಿಲ್ಲೆನಲಾಡಂಬರವಾಯ್ತು ತೇಜರಾಯನ ತೇಜಂ ॥

ತತ್ಪುತ್ರನಖಿಳಗುಣ ಸಂಪತ್ಪದನರಿರಾಜವಿಜೆಯಹರಣಂ ನಿಜಯವಂಸೋತ್ಪಳ ಚಂದ್ರ ರಿಪುಕುಳ ಪ್ರಿತ್ಪುಟವಿಘಟನ ಪಟು ಪ್ರಚಣ್ಡಪಾಂಡ್ಯಾ ॥'

ಇನ್ನು ಹರಿಹರದ ಕ್ರಿ.ಶ. ೧೧೬೮ರ ಶಾಸನ ಹಾಗೂ ಇತರೆ ಶಾಸನಗಳು ಚೇದಿರಾಜನನ್ನೇ ಈ ವಂಶದ ಮೂಲಪುರುಷನನ್ನಾಗಿ ಉಲ್ಲೇಖಿಸಿ ಹೀಗೆ ಹೇಳಿದೆ–

'ಚೇದಿರಾಜೋ ರಾಜಾಪಿ ವಿಶ್ವವಸುಧಾವಳೆಯಸ್ಯಯೋಸೌ ಪಾಂಡ್ಯಾವನೀವಿರಚಿತ ಸ್ಥಿರಪಕ್ಷಪಾತಃ ಪಾಂಡ್ಯಾಖ್ಯಯೈವ ಸುದೃಢಾಂಭುವಿರೂಢಿಮಾಪ ॥

ಇವನು ಭೂಮಂಡಲಕ್ಕೆಲ್ಲಾ ರಾಜನಾಗಿದ್ದರೂ ಪಾಂಡ್ಯನಾಡಿನ ಪಕ್ಷಪಾತಿಯಾಗಿದ್ದರಿಂದ (ಬಹುಶಃ ಒಳ್ಳೆಯ ಆಡಳಿತ ನೀಡಿದ್ದರಿಂದ) ಇವನು ಪಾಂಡ್ಯನೆಂದೇ ಹೆಸರಾದ ಎಂದಿವೆ. ಅಂದರೆ ಚೇದಿರಾಜ ಮತ್ತು ಪಾಂಡ್ಯ ಇವರಿಬ್ಬರೂ ಬೇರೆ ಬೇರೆ ಅಲ್ಲ– ಒಬ್ಬರೇ ಎಂದು ನಿರೂಪಿತವಾಗುವುದು. ಆದರೆ ಹರಿಹರದ ಕ್ರಿ.ಶ. ೧೧೪೮ರ ಶಾಸನವೊಂದು ಮಾತ್ರ 'ಪಾಂಡ್ಯನೃಪಂಗಾದಂ ಶ್ರೀ ಚೇದಿರಾಜನೆಂಬ ತನೂಜ' ಎಂದು ಹೇಳುವ ಮೂಲಕ ಚೇದಿರಾಜನು ಪಾಂಡ್ಯನ ಮಗ ಎಂದು ಇತರೆ ಶಾಸನಗಳಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಬಹುಶಃ ಇದೊಂದು ದೋಷಪೂರಿತ ವಿಷಯವನ್ನೊಳಗೊಂಡ ಶಾಸನದ ಭಾಗವೆನ್ನಬಹುದು. ಮುಂದೆ ಇದೇ ಶಾಸನವು 'ಚೇದಿಮಹೀಶರನದಟಲೆದಾದಂ ಶ್ರೀ ಚೇದಿರಾಜನ್' ಎಂದು ಹೇಳಿ ಚೇದಿರಾಜನೆಂಬುದು ಒಂದು ಬಿರುದು ಎಂಬ ಸೂಚನೆ ನೀಡುತ್ತದೆ. ಅಲ್ಲದೆ, ಇನ್ನೂ ಮುಂದೆ, 'ಚೇದಿರಾಜನಾನೃಪಸುತಂ ಯಾದವಭೂಷಣನೆನಿಸಿದಾದಂ ಪಳಮಾಂಡದೇವ ಪಾಂಡ್ಯಾವನಿಪ ॥' ಎಂದಿದೆ. ಈ ವಾಕ್ಯದ ಪ್ರಾಮುಖ್ಯತೆ ಏನೆಂದರೆ ಈ ವಂಶಾವಳಿಯಲ್ಲಿ ಮುಂದೆ ಬರುವ ಪಲಂತ ಅಥವಾ ಪಳಮಾಂಡನು ಯಾರಮಗ ಎಂಬುದಕ್ಕೆ ಸ್ಪಷ್ಟೀಕರಣ ಸಿಕ್ಕುತ್ತದೆ. ಇದನ್ನು ಸಮರ್ಥಿಸುವ ದಾವಣಗೆರೆಯ ಒಂದು ಶಾಸನ ಪಳಂತನು ಚೇದಿರಾಜನೆಂದು ಖ್ಯಾತನಾದ ಪಾಂಡ್ಯನ ಮಗ ಎಂದರೆ, ಇನ್ನೊಂದು ಶಾಸನವು ಪಳಮಾಂಡದೇವ ಪಾಂಡ್ಯನು ಚೇದಿರಾಜನ ಮಗ ಎಂದಿದೆ. ಅಂದರೆ ಚೇದಿರಾಜ ಹಾಗೂ ಪಾಂಡ್ಯ ಅಭಿನ್ನರು. ಶಾಸನದಲ್ಲಿ ಈ ಮೊದಲು ಹೇಳಿದ ಸಂಬಂಧ, ಅಂದರೆ ಚೇದಿರಾಜನು ಪಾಂಡ್ಯನ ಮಗ ಎಂಬುದು ಯಾವುದೋ ಕಾರಣಕ್ಕಾದ ದೋಷವಿರಬಹುದು.

ಈ ಚೇದಿರಾಜನೆಂದು ಪ್ರಖ್ಯಾತನಾದ (ಪ್ರಚಂಡ)ಪಾಂಡ್ಯನು ಅರಿರಾಯ ವಿಜಯಹರಣ ಮಾಡಿ ವೈರಿರಾಜರನ್ನು ಸೋಲಿಸಿ ಏಕಾಂಗವೀರನೆನಿಸಿದವ ಹಾಗೂ ಪರಿಚ್ಛೇದಗಣ್ಡನೆನಿಸಿದವನು. ಈ ವಂಶದರಸರಿಗೆ 'ಪರಿಚ್ಛೇದಿ ಗಂಡ / ಪರಿಚ್ಛೇದ ಗಂಡ' ಎಂಬ ಬಿರುದು ಇದ್ದು, ಪ್ರಥಮ ಬಾರಿಗೆ ಕಾಟಿಕೆರೆಯ ಕ್ರಿ.ಶ. ೧೧೦೦ರ ಸುಮಾರಿನ ಶಾಸನದಲ್ಲಿ ಪ್ರಯೋಗವಾಗಿದೆ. ಇದನ್ನು ವರ್ಣಿಸುವ ಸಾಲು ಹೀಗಿದೆ,

'ಮದವದರಿರಾಜ ಸಮಿತಿಯನದಟಲೆದೇಕಾಂಗವೀರನೆನಿಸಿದ ಪೆಂಪಂ ಪದುಳಮೆನೆ ತಾಳ್ದ ಸಲೆ ಚೆಲ್ವೊದವೆ ಪರಿಚ್ಛೇದ ಗಣ್ಡನೆನಿಕುಂ ಪಾಣ್ಡ್ಯ ॥'

ಇವನ ರಣಾಂಗಣ ಸಾಹಸದ ಭೀಭತ್ಸತೆಯನ್ನು ವರ್ಣಿಸುವ ಭಾಗ ಹೀಗಿದೆ,

'ನೆಣದ ಬಳಂಬೆಕೊಳ್ಮಿದುಳ ತಿಂತಿಣಿಮೂಳೆಯ ತೋರವೆಟ್ಟು ಬಲ್ಪೆಣಗಳ ಗುಂಪ್ತಿ ನೆತ್ತರ ಕಡಲ್ಪರಿವೆಟ್ಟೆ ಕರೋಟಿಕಗಳ ಸಂದಣಿಸುವ ಭೂತಕೋಟಿಗಳಿನೊಪ್ಪಿರೆ ಪೆಚ್ಚಿದರೇಂದ್ರ ಸಂಗರಾಂಗಣಮದು ತಾನೆ ಪೇಳದೆ ವಿರಾಜಿಪ ಪಾಣ್ಡ್ಯನ ಗಣ್ಡಗರ್ಬ್ಬಮಂ ॥'

ಅಂದರೆ, ಹೆಣದ ಬಣವೆಗಳ, ಮೆದುಳ ರಾಶಿಗಳ, ಮೂಳೆಗಳ ದೊಡ್ಡಬೆಟ್ಟಗಳ, ಬೃಹತ್ ಹೆಣಸಮೂಹದಿಂದ ಕಡಲಿನಂತಿರುವ ನೆತ್ತರು, ಬರೀ ಮುಂಡಗಳೇ ಓಡುತ್ತಿರುವೆಡೆ ರುಂಡಮಾಲೆಗಳನ್ನು ಧರಿಸಿರುವ ಭೂತಗಳು ಸಂದಣಿಸಿರುವ ಸಮರಾಂಗಣವು ತಾನೇ ಹೇಳದೇ ವಿರಾಜಿಸುತ್ತಿರುವ ಪಾಣ್ಡ್ಯನ ಗಂಡ ಗರ್ವವನ್ನು (ಪರಾಕ್ರಮವನ್ನು).

ಈ ಶಾಸನವು ಮುಂದೆ ತಿಳಿಸುವ ಪಾಣ್ಡ್ಯನ ಸಾಹಸವನ್ನು ಅರ್ಥಮಾಡಿಕೊಳ್ಳಲು ಆಗಿನ ಸಂದರ್ಭದ ರಾಜಕೀಯ ಪರಿಸ್ಥಿತಿಯನ್ನು ತಿಳಿಯುವುದು ಅಗತ್ಯ. ಕ್ರಿ.ಶ. ೧೦೪೩ರಿಂದ ೧೦೬೮ರ ವರೆಗೆ ಆಳಿದ ಒಂದನೇ ಸೋಮೇಶ್ವರನಿಗೆ ನಾಲ್ವರು ಮಕ್ಕಳು–೨ನೇ ಸೋಮೇಶ್ವರ, ೬ನೇ ವಿಕ್ರಮಾದಿತ್ಯ, ವಿಷ್ಣುವರ್ಧನ ವಿಜಯಾದಿತ್ಯ ಹಾಗೂ ಜಯಸಿಂಹ. ಇವರೆಲ್ಲರೂ ತಂದೆಯ ಕಾಲದಲ್ಲಿ ವಿವಿಧ ಮಂಡಲಾಧಿಪತಿಗಳಾಗಿದ್ದರು. ಉದಾಹರಣೆಗೆ ಸುಮಾರು ಕ್ರಿ.ಶ. ೧೦೪೧ರಲ್ಲಿ ಹೂವಿನ ಹಡಗಲಿ ಭಾಗದಲ್ಲಿ ಜಗದೇಕಮಲ್ಲ ೨ನೇ ಜಯಸಿಂಹನೂ, ಕ್ರಿ.ಶ. ೧೦೬೪ರಲ್ಲಿ ನೊಳಂಬವಾಡಿಯನ್ನು ವಿಷ್ಣುವರ್ಧನ ಮಹಾರಾಜ ವಿಜಯಾದಿತ್ಯದೇವರೂ, ಕ್ರಿ.ಶ. ೧೦೭೦ರಲ್ಲಿ ಜಯಸಿಂಘದೇವರು ಉಚ್ಚಂಗಿದುರ್ಗದಲ್ಲಿಯೂ

ಆಳುತ್ತಿದ್ದ ದಾಖಲೆಗಳಿವೆ. ಒಂದನೇ ಸೋಮೇಶ್ವರನ ನಂತರ ಪಟ್ಟಕ್ಕೆ ಬಂದ ಇಮ್ಮಡಿ ಸೋಮೇಶ್ವರನೊಂದಿಗೆ ಕಾಲಾಂತರದಲ್ಲಿ ಸಹೋದರರ ನಡುವೆ ವಿರಸವೇರ್ಪಟ್ಟು ಸಿಂಹಾಸನಕ್ಕಾಗಿ ಸಂಘರ್ಷ ಪ್ರಾರಂಭವಾಯಿತು. ಅವರಲ್ಲಿ ಪ್ರಧಾನವಾಗಿ ಆರನೇ ವಿಕ್ರಮಾದಿತ್ಯ ಹಾಗೂ ಅವನ ಅಣ್ಣನಾದ ಚಕ್ರವರ್ತಿ ಎರಡನೇ ಸೋಮೇಶ್ವರನೊಂದಿಗೆ ಹೋರಾಟವಿದ್ದು, ವಿಕ್ರಮಾದಿತ್ಯನ ಕಡೆ ಚಾಲುಕ್ಯರ ಪ್ರಮುಖ ಸಾಮಂತರಾದ ಬನವಾಸಿ ೧೨೦೦೦ದ ಮಹಾಮಂಡಲೇಶ್ವರ ಚಟ್ಟಯ್ಯದೇವ, ಸೇವುಣ ಎರಡನೇ ಚಂದ್ರ, ಹೊಯ್ಸಳ ಎರೆಯಂಗ, ಪಾಂಡ್ಯ, ವಿಕ್ರಮಾದಿತ್ಯನ ತಮ್ಮ ಜಯಸಿಂಹ ಮುಂತಾದವರು ಧ್ರುವೀಕರಣಗೊಂಡರು. ಈ ಸಂದರ್ಭದಲ್ಲಿ ಅಂದರೆ ಸುಮಾರು ಕ್ರಿ.ಶ.೧೦೭೬ಕ್ಕೆ ಸ್ವಲ್ಪ ಮೊದಲು ಈ ಯುದ್ಧಗಳು ನಡೆದು ಆಗ ಪಾಂಡ್ಯ ಮಾಡಿದ ಸಾಧನೆಗಳನ್ನು ಬಣ್ಣಿಸಲಾಗಿದೆ.

ಪಾಂಡ್ಯನು ಚಾಲುಕ್ಯ ತ್ರಿಭುವನಮಲ್ಲನನ್ನು ಚಕ್ರವರ್ತಿಯನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದುದನ್ನು ಕಾಟಿಕೆರೆಯ ಶಾಸನ ಹೀಗೆ ಹೇಳಿದೆ–

> **'ಭುವನೈಕಮಲ್ಲನಂ ಬೂಭವನವಸುಂಗೊಳೆ ಮರಳ್ಚಿ ರಾಜ್ಯಮನಧಿಕೋತ್ಸವದಿಂ ತ್ರಿಭುವನಮಲ್ಲಂಗವಯವದಿಂ ಕೊಣ್ಡುಕೊಟ್ಟಗಣ್ಡಂ ಪಾಣ್ಡ್ಯ ॥'**

ಇದು ಪಾಣ್ಡ್ಯನು ಭುವನೈಕಮಲ್ಲ, ಅಂದರೆ ಚಾಲುಕ್ಯ ಎರಡನೇ ಸೋಮೇಶ್ವರನನ್ನು ಭೀಕರವಾದ ಯುದ್ಧದಲ್ಲಿ ಹಿಮ್ಮೆಟ್ಟಿಸಿದುದನ್ನು ಹೇಳಿದೆ. ಭುವನವೇ ಭೀತರಾಗುವಂತೆ ಎಂಬುದು ಯುದ್ಧದ ತೀವ್ರತೆಯನ್ನು ತಿಳಿಸುತ್ತದೆ. ಚಾಲುಕ್ಯ ರಾಜ್ಯವನ್ನು ಪಾಣ್ಡ್ಯನು ಗೆದ್ದು(ಕೊಣ್ಡು) ತ್ರಿಭುವನಮಲ್ಲನಿಗೆ ಕೊಟ್ಟ. ಈ ಸಾಲುಗಳಲ್ಲಿ ವ್ಯಕ್ತವಾಗುವ ಅಂಶವೆಂದರೆ ಸೇನೆಯ ನೇತೃತ್ವ ವಹಿಸಿದ್ದ ಪಾಣ್ಡ್ಯನು ಸೋಮೇಶ್ವರ(ಭುವನೈಕಮಲ್ಲ)ನೊಂದಿಗೆ ಹೋರಾಡಿ ರಾಜ್ಯವನ್ನು ಗೆದ್ದು ಅದನ್ನು ತ್ರಿಭುವನಮಲ್ಲ– ಅಂದರೆ ಆರನೇ ವಿಕ್ರಮಾದಿತ್ಯನಿಗೆ ಅರ್ಪಿಸಿದ. ಹೀಗೆ ಚಾಲುಕ್ಯ ಆರನೇ ವಿಕ್ರಮಾದಿತ್ಯನಿಗೆ ಆಪ್ತನೂ, ಅವನ ಬಲವೂ ಆಗಿದ್ದ ಪಾಣ್ಡ್ಯ.

ಇರುಕ್ಕಪಾಳ

ಕಾಟಿಕೆರೆ ಶಾಸನವು ಇರುಕ್ಕಪಾಲ ಎಂಬ ಪಾಂಡ್ಯಭೂಭುಜನ ಅನುಜನನ್ನು ಪರಿಚಯಿಸುತ್ತದೆ. ಇವನ ವಂಶಾವಳಿಯನ್ನು ಉದಾತ್ತವಾಗಿ ವರ್ಣಿಸಿ, ಇವನು ಸಂಗ್ರಾಮ ಭೀಮ, ಕನಕಗಿರಿಯಂತೆ ಧೈರ್ಯಶಾಲಿ, ಅನುಪಮಶೀಲ, (ವೈರಿ) ಮಹೀಪಾಲರಿಗೆ ಕಾಳಕೂಟ, ಘೋರಕುಠಾರನಾಗಿದ್ದ ಎಂದಿದೆ. ಇವನ ಮಗಳು ಮಹಾದೇವಿಯು ಹೊಯ್ಸಳ ಎರೆಯಂಗನ ಮಡದಿ. ಇರುಕ್ಕಪಾಳನು ಪಾಂಡ್ಯನ ತಮ್ಮನಾದರೂ ಇಬ್ಬರ ಕಾರ್ಯಕ್ಷೇತ್ರಗಳು ಬೇರೆಬೇರೆಯಗಿರುವುದು ಕಂಡಬರುತ್ತದೆ. ಅಣ್ಣ ಪಾಂಡ್ಯ ಚಕ್ರವರ್ತಿಗಳಾದ ಕಲ್ಯಾಣ ಚಾಲುಕ್ಯರ ಸಾಮಂತನಾಗಿದ್ದರೆ, ಇರುಕ್ಕಪಾಳ ಅದೇ ಚಾಲುಕ್ಯರ ಸಾಮಂತರಾದ ಹೊಯ್ಸಳರೊಂದಿಗೆ ಇರುವುದು ಕಂಡುಬರುತ್ತದೆ.

ಪಲಮಾಂಡದೇವ ಪಾಂಡ್ಯ

ಪಲಮಾಂಡದೇವ ಪಾಂಡ್ಯನನ್ನು ಪಳಂತ, ಪಲತ ಪಾಂಡ್ಯ ಎಂದೂ ಕರೆಯಲಾಗಿದ್ದು ಇವನು ಚೇದಿರಾಜನ ಮಗ. ಇವನನ್ನು ಶಾಸನಗಳು 'ಯಾದವ ವಂಶೋತ್ತಮ ಎಂದಿವೆ. ಇವನ ಬಗ್ಗೆ ಹೇಳುವ ಶಾಸನಗಳು **'ಚಾಳುಕ್ಯ ಚೋಳ ನರಪಾಳಕಯೋಸ್ವರಾಜ್ಯ ಸ್ವಾರಾಜ್ಯದಂ ವಿಜಯತೇ ಯುಧಿಯಸ್ಯ ಶೌರ್ಯ್ಯಂ ॥'** ಎಂದಿವೆ. ಅಂದರೆ ಇವನ ಯುದ್ಧದ ಸಾಹಸ/ತಂತ್ರಗಾರಿಕೆಯಿಂದ ಚಾಲುಕ್ಯ ಹಾಗೂ ಚೋಳರಿಗೆ ತಂತಮ್ಮ ರಾಜ್ಯದ ಭಾಗಗಳನ್ನು ಪಡೆಯಲು ಸಾಧ್ಯವಾಯಿತು. ಇದು ಸೂಚಿಸುವ ಅಂಶವೇನೆಂದರೆ ಇವನು ಕೇವಲ ಸಮರವೀರನಷ್ಟೇ ಅಲ್ಲದೆ ರಾಜತಾಂತ್ರಿಕ ನಿಪುಣನಾಗಿದ್ದನೆಂಬುದು.

ಪಲಮಾಂಡಪಾಂಡ್ಯನ ಯಾವುದೇ ಶಾಸನ ಈವರೆಗೆ ಸಿಕ್ಕಿಲ್ಲ. ದಿನಕರ ದೇಸಾಯಿಯವರು ಇವನೇ ನೊಳಂಬ ವಾಡಿಯನ್ನಾಳುತ್ತಿದ್ದ ಎಂದು ಬಾಗಳಿ ಕ್ರಿ.ಶ. ೧೦೭೯ರ ಶಾಸನವೊಂದನ್ನು[೨೮] ಉಲ್ಲೇಖಿಸಿ ಹೇಳಿದ್ದಾರೆ[೨೯]. ಆದರೆ ಇದು 'ನಿಗಳಂಕಮಲ್ಲ' ಪಾಂಡ್ಯದೇವನು ನೊಳಂಬವಾಡಿಯನ್ನಾಳುತ್ತಿದ್ದುದನ್ನು ಹೇಳುತ್ತದೆ. ನಿಗಳಂಕಮಲ್ಲ ಎಂಬುದು ಒಂದು ಬಿರುದಾಗಿದ್ದು ಇದು ಪಲಮಾಂಡನದೇ ಎಂಬುದನ್ನು ಖಚಿತಪಡಿಸುವ ಆಧಾರವಿಲ್ಲ. 'ನಿಗಳಂಕಮಲ್ಲ' ಎಂಬ ಬಿರುದು ತ್ರಿಭುವನಮಲ್ಲನನ್ನು ಸೂಚಿಸುತ್ತಿದೆಯೇ ಹೊರತು ಪಲಮಾಂಡನದಲ್ಲ. ಪಲಮಾಂಡನ ಅಧಿಕಾರಾವಧಿ ಚಿಕ್ಕದಾದರೂ ಈ ಅವಧಿ ಚಾಲುಕ್ಯ–ಚೋಳರ ಸಂಘರ್ಷಕ್ಕೆ ಒಂದು ನಿಲುಗಡೆಯನ್ನು ತಂದು ಕೊಟ್ಟ ಮಹತ್ವದ ಕಾಲವಾಗಿದ್ದು ಅದರಲ್ಲಿ ಪಲಮಾಂಡನ ಪಾತ್ರವೂ ಪ್ರಮುಖವಾಗಿತ್ತೆಂದು ತಿಳಿಯಬಹುದು.

ಇನ್ನೊಂದು ಮಹತ್ವದ ವಿಷಯವೊಂದನ್ನು ಕ್ರಿ.ಶ. ೧೧೨೫ರ ಚನ್ನಗಿರಿಯ ಶಾಸನವೊಂದು ತ್ರಿಭುವನಮಲ್ಲ ರಾಯಪಾಂಡ್ಯನ ಕಾಲದ್ದಾಗಿದ್ದು (ಪಲಮಾಂಡದೇವನ ಮೊಮ್ಮಗ), ಹೀಗೆ ಹೇಳಿದೆ–

'ತ್ರಿಭುವನಮಲ್ಲ ರಾಯಪಾಣ್ಡ್ಯದೇವರು ನೊಳಂಬವಾಡಿ[ಮುವತ್ತಿ]ರ್ಚ್ಚಾಸಿರಮುಂ ಸಾಂತಳಿಗೆ ಸಾಸಿರಮುಮಂ ತ್ರಿಭೋಗಾಭ್ಯಂತರಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನದಿಂ ಪಾಳಿಸುತ್ತಂ..'

ಇದರಿಂದ ತಿಳಿಯುವ ಅಂಶವೇನೆಂದರೆ ರಾಯಪಾಂಡ್ಯನು ನೊಳಂಬವಾಡಿ ಹಾಗೂ ಸಾಂತಳಿಗೆಯನ್ನಾಳಿದ ಪಾಂಡ್ಯರ ವಂಶದ ಮೂರನೇ ತಲೆಮಾರಿನವನು. ಆದ್ದರಿಂದ ಈ ನೊಳಂಬವಾಡಿ ಅಥವಾ ಉಚ್ಚಂಗಿ ಪಾಂಡ್ಯರೆಂದು ಹೆಸರಾದವರ ಮೊದಲ ಅರಸ ಪಲಮಾಂಡ ಪಾಂಡ್ಯ ಎಂದು ನಿರ್ಧರಿಸಬಹುದು. ಇದನ್ನು ಸಮರ್ಥಿಸುವಂತೆ ಕ್ರಿ.ಶ. ೧೧೨೩ರ ನೀಲಗುಂದ ತಾಮ್ರಪಟದಲ್ಲಿ 'ಪಲತಪಾಂಡ್ಯನ ಮೊಮ್ಮಗ ರಾಯಪಾಂಡ್ಯನ ಬಿನ್ನಪದಂತೆ..' ಎಂದು ಹೇಳಿದ್ದು, ಪಲತಪಾಂಡ್ಯನು (ಅಥವ ಪಲಮಾಂಡ) ನೊಳಂಬವಾಡಿಯನ್ನಾಳಿದ ಪಾಂಡ್ಯ ವಂಶದ ಪ್ರಮುಖ ಅಥವ ಮೊದಲಿಗ ಎಂದು ಒತ್ತಿ ಹೇಳಿದೆ.

ತ್ರಿಭುವನಮಲ್ಲ ಪಾಂಡ್ಯ

ತ್ರಿಭುವನಮಲ್ಲ ಪಾಂಡ್ಯದೇವನ ಶಾಸನಗಳು ಸಾಕಷ್ಟಿವೆ. ಇವುಗಳಲ್ಲಿ ತ್ರಿಭುವನಮಲ್ಲ ಪಾಂಡ್ಯನು ಇಂಥವರ ಮಗ ಎಂದು ಎಲ್ಲೂ ಹೇಳಿಲ್ಲ. ಆದರೆ ಇವನಿಗೆ ಮೊದಲು ಆಳ್ವಿಕೆ ಮಾಡಿದೆ ದೊರೆ ಪಲಮಾಂಡ ಅಥವಾ ಪಲಂತನ ಮಗ ಇರುತವೇಳನೃಪಾಲನೆಂದು ಹೇಳಿದೆ. ಕ್ರಿ.ಶ. ೧೧೪೮ರ ಹರಿಹರದ ಶಾಸನವು, **'ಪಳಮಾಂಡನೃಪತಿಗೆ ತನಯಂ ಶ್ರೀದಯಿತನುದ್ಧ ತತರಮೇದಿನ್ಯಧಿಪಾಳನಿರುತವೇಳನೃಪಾಳ ॥'** ಎಂದೂ, ಕ್ರಿ.ಶ. ೧೧೬೮ರ ಶಾಸನವು ಎಕ ೧೧ ದಾವಣಗೆರೆ ೩೯,೪೦

'ಭ್ರೂಭಂಗಮಾತ್ರವಿಧುರೀಕೃತ ವೈರಿವರ್ಗಚಿತ್ತಃ ಪಳಂತ ಇತಿತತ್ತನಯೋ...ಜಾತಂಸ್ತತಶ್ಚಿರಮ ರಾಜದಿರುಕ್ಕವೇಳೋ ವೇಳಾಚಳಶ್ಚಳಿತ ನಿರ್ಮ್ಮಳಕೀರ್ತ್ತಿಬಂಧುಃ ॥' ಎಂದೂ ಹೇಳಿದೆ.

ಇದರಿಂದ ಪಳಮಾಂಡ ಅಥವಾ ಪಳಂತನ ಮಗ ಇರುತವೇಳ ಅಥವಾ ಇರುಕ್ಕವೇಳ ಎಂದು ತಿಳಿಯುತ್ತದೆ. ಆದರೆ ಈ ಹೆಸರಿನಲ್ಲಿ ಶಾಸನಗಳಾವುವೂ ಇಲ್ಲದೆ ತ್ರಿಭುವನಮಲ್ಲ ಪಾಂಡ್ಯನ ಶಾಸನಗಳೇ ಈ ಅವಧಿಯಲ್ಲಿ ಕಂಡುಬಂದಿದ್ದು, ಇರುತವೇಳ ಅಥವಾ ಇರುಕ್ಕವೇಳನು ತ್ರಿಭುವನಮಲ್ಲ ಪಾಂಡ್ಯ ಎಂಬ ಬಿರುದಿನಂದಲೇ ಲೋಕಪ್ರಸಿದ್ಧನಾಗಿದ್ದ ಎಂದು ತಿಳಿಯುತ್ತದೆ. ಇದನ್ನೇ ದೇಸಾಯಿಯವರು ತ್ರಿಭುವನಮಲ್ಲ ಪಾಂಡ್ಯನ ನಿಜನಾಮವು ಇರುಕವೇಳ ಇರುಬಹುದು ಎಂದು ಹೇಳಿದ್ದಾರೆ[೬೧]. ಇವನು ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲದೇವ, ಅಂದರೆ ಆರನೇ ವಿಕ್ರಮಾದಿತ್ಯನ ಸಾಮಂತನಾಗಿದ್ದನೆಂಬುದು ಅವನು ತನ್ನ ಶಾಸನಗಳಲ್ಲಿ ಬರೆಸಿರುವು ಹೆಸರೇ ದೃಢಪಡಿಸುತ್ತದೆ.

ತ್ರಿಭುವನಮಲ್ಲ ಪಾಂಡ್ಯನ ಆಳ್ವಿಕೆಯನ್ನು ಉಲ್ಲೇಖಿಸುವ ಒಟ್ಟು ೪೪ ಶಾಸನಗಳು ಈವರೆಗೆ ಶೋಧಿಸಲ್ಪಟ್ಟಿವೆ. ಇವುಗಳಲ್ಲಿ 'ತ್ರಿಭುವನಮಲ್ಲ ಪಾಂಡ್ಯ' ಎಂದು ೪೦ ಶಾಸನಗಳಲ್ಲೂ, ಕೇವಲ 'ಪಾಂಡ್ಯ' ಎಂದು ೪ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇವಲ್ಲದೆ ಕ್ರಿ.ಶ. ೧೧೬೧ ಹಾಗೂ ೧೧೮೦ ರ ತಲಾ ಒಂದೊಂದು ಶಾಸನಗಳು 'ಪಾಂಡ್ಯದೇವ' ಎಂದು ಉಲ್ಲೇಖಿಸಲಾಗಿದ್ದರೂ ಅವು ತ್ರಿಭುವನಮಲ್ಲನನ್ನು ಕುರಿತಾದವಲ್ಲ. ಇವನ ೪೪ ಶಾಸನಗಳಲ್ಲಿ ಬಹುತೇಕ ಶಾಸನಗಳು ದಾವಣಗೆರೆ ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲ ದೊರೆತವು ಆಗಿವೆ (ಇವು ಒಟ್ಟು ೨೯ ಇವೆ). ಉಳಿದಂತೆ ಹೂವಿನ ಹಡಗಲಿ ತಾಲ್ಲೂಕಿನಲ್ಲಿ ೬, ಕೂಡ್ಲಿಗಿ ತಾಲ್ಲೂಕಿನಲ್ಲಿ ೩, ಹಾಗೂ ಜಗಳೂರು, ಹೊಳಲ್ಕೆರೆ, ಚಿತ್ರದುರ್ಗ, ಚನ್ನಗಿರಿ, ಶಿರಗುಪ್ಪ ತಾಲ್ಲೂಕುಗಳಲ್ಲಿ ಶೋಧಿಸಲ್ಪಟ್ಟಿವೆ.

ಇವನ ಆಳ್ವಿಕೆಯ ಆರಂಭದ ರಾಜಧಾನಿ ಯಾವುದೆಂದು ನಿರ್ದಿಷ್ಟವಾಗಿ ಗುರ್ತಿಸಲಾಗದಿದ್ದರೂ, ಕೇಸಪುರ, ನಂತರ ಬೆಳ್ತೂರು(ಇಂದಿನ ಬೇತೂರು) ನೆಲೆವೀಡಾಗಿದ್ದು ಕೆಲವು ಶಾಸನಗಳಲ್ಲಿ ತನ್ನನ್ನು ಕುಳುಬಪುರವರಾಧೀಶ್ವರ, ಕುಡುಂಬಪುರವರೇಶ್ವರ, ಕುಳುಂಬಪುರವರೇಶ್ವರ, ಕುವಲಾಳಪುರವರಾಧೀಶ್ವರ ಎಂದು ಹೇಳಿಕೊಂಡಿದ್ದಾನೆ. ಬೆಳ್ತೂರನ್ನು ತನ್ನ ರಾಜಧಾನಿ ಮಾಡಿಕೊಳ್ಳುವವರೆಗೆ ಇವರಿಗೆ ಸ್ಥಿರವಾಗಿ ರಾಜಧಾನಿ ಇದ್ದಂತೆ ತೋರುವುದಿಲ್ಲ. ಮುಂದೆ ಕಾಲಾಂತರದಲ್ಲಿ ರಾಜಧಾನಿಯನ್ನು ಉಚ್ಚಂಗಿಗೆ ಸ್ಥಳಾಂತರಿಸಿಕೊಳ್ಳುವವರೆಗೆ ಬೆಳ್ತೂರೇ ರಾಜಧಾನಿಯಾಗಿತ್ತು.

ತ್ರಿಭುವನಮಲ್ಲನ ಆಳ್ವಿಕೆಯ ಕಾಲದಿಂದ ಮುಂದೆ ಇವರ ವಂಶಾವಳಿ ಹಾಗೂ ರಾಜಕೀಯ ಇತಿಹಾಸ ಸ್ಪಷ್ಟವಾಗಿ ಗುರ್ತಿಸಬಹುದಾಗಿದೆ.

[ಈ ಲೇಖನ ಸಿದ್ಧಪಡಿಸುವಲ್ಲಿ ಹಲವು ಸಲಹೆಗಳನ್ನು ನೀಡಿದ ಶಾಸನ ತಜ್ಞರಾದ ಡಾ. ಬಿ. ರಾಜಶೇಖರಪ್ಪನವರಿಗೂ ಹಾಗೂ ಕೆಲವು ಆಕರಗಳನ್ನು ಪಡೆಯುವಲ್ಲಿ ಸಹಾಯ ಮಾಡಿದ ಸ್ನೇಹಿತ ಹೆಚ್.ವಿ. ಇಂದುಶೇಖರ್ ರವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ].

ನೊಳಂಬವಾಡಿಯ ಪಾಂಡ್ಯರ ಆಡಳಿತಾರಂಭ ಕಾಲದ ಅರಸರ ವಂಶಾವಳಿ

(ಆವರಣದಲ್ಲಿ ತೋರಿಸಲಾದ ಆಕರಮೂಲಗಳು ಆಯಾ ಅರಸನನ್ನು ವಂಶಾವಳಿಯಲ್ಲಿ ತೋರಿಸಲಾದ ಸ್ಥಾನವನ್ನು ಸಮರ್ಥಿಸುತ್ತವೆ)

ಮಂಗಯ (ಎಕ ೧೧, ದಾ-೪೧)/ ಆದಿತ್ಯದೇವ(ಎಕ ೧೧, ದಾ-೪೧)/ ತೇಜರಾಯ (ಎಕ ೫, ಅರ-೧೦೨ಎ)

ಪ್ರಚಂಡಪಾಣ್ಡ್ಯ (ಎಕ೫, ಅರ-೧೦೨ಎ) / ಪಾಂಡ್ಯ (ಎಕ೫, ಅರ-೧೦೨ಎ) / ಚೇದಿರಾಜ (ಎಕ ೧೧, ದಾ-೩೯, ೪೦, ೪೧)

ಇರುಕ್ಕಪಾಳ (ಎಕ೫, ಅರ-೧೦೨ಎ)

ಪಲಮಾಂಡ ಪಾಂಡ್ಯ (ಎಕ ೧೧, ದಾ-೪೧) / ಪಳಂತ (ಎಕ ೧೧, ದಾ-೩೯, ೪೦) / ಪಲತ (ಇಐ೧೨-ಸಂಖ್ಯೆ:೧೯)

ಇರುತವೇಳ (ಎಕ೧೧, ದಾ-೪೧) / ತ್ರಿಭುವನಮಲ್ಲಪಾಂಡ್ಯ (ದಿ.ದೇ, ಮ.ಮಂ.ಅಂ.ಚಾ. ಪುಟ ೨೩೦) / ಇರುಕ್ಕವೇಳ (ಎಕ ೧೧, ದಾ-೩೯, ೪೦)

ಅಡಿಟಿಪ್ಪಣಿಗಳು

೧. ಎ.ಕ ೧೧, ಪೀಠಿಕೆ ಪು. ೨೬.
೨. ಎಕ ೭, ಶಿಕಾರಿಪುರ-೯೯.
೩. ಎ.ಕ ೧೧, ಮೊಳಕಾಲ್ಮುರು-೨೬.
೪. ಇ.ದ ೨೦೦೩, ಪುಟ ೨೭೧,೨೭೨.
೫. ಇ.ದ ೨೦೧೦, ಪುಟ ೭೩.
೬. ಎಕ ೧೧, ದಾವಣಗೆರೆ ೩೯ ಮತ್ತು ೪೧.
೭. ಉದಾಹರಣೆಗೆ ಎಕ ೧೧ರಲ್ಲಿ ದಾವಣಗೆರೆ ೩೯ರ ಶಾಸನ.
೮. ಎಕ ೧೧, ದಾವಣಗೆರೆ, ೩೯ರ.
೯. ಎಕ ೧೧-ಪು. ೧೮.
೧೦. ದಿ.ಅದೇ ಪು. ೨೨೩.
೧೧. ಎಕ೫, ಅರಸೀಕೆರೆ, ೧೦೨ಎ.
೧೨. ಎಕ ೧೧, ದಾವಣಗೆರೆ, ೪೧.
೧೩. ಎಕ ೧೧, ದಾವಣಗೆರೆ, ೩೯, ೪೦.
೧೪. ಎ.ಕ. ೧೧, ದಾವಣಗೆರೆ, ೩೯.
೧೫. ಎ.ಕ೧೧ ದಾವಣಗೆರೆ ೪೧.
೧೬. ವಿ.ಆರ್-೧, ನಂ.೨೨೯(ಬಳ್ಳಾರಿ).
೧೭. ಎಸ್.ಐ.ಐ-೯/೧, ನಂ.೫೭೫.
೧೮. ಎಸ್.ಐ.ಐ.-೯/೧, ನಂ.೫೭೧.
೧೯. ಎಕ ೫, ಅರಸೀಕೆರೆ ೧೦೨ಎ.
೨೦. ಎಕ ೧೧, ದಾವಣಗೆರೆ ೩೯,೪೦,೪೧., ಇದ-೨೬ರ ಪುಟ ೨೦೫., ಎಸ್ ಐ ಐ ೯/೧ ನಂ. ೨೯೨].
೨೧. ವಿಆರ್ ೧,ಸಂಖ್ಯೆ.೨೭೮(ಬಳ್ಳಾರಿ).
೨೨. ದಿನಕರ ದೇಸಾಯಿ,ಮಹಾಮಂಡಲೇಶ್ವರಾಸ್ ಅಂಡರ್ ದ ಚಾಲುಕ್ಯಾಸ್, ಪುಟ ೨೨೭.
೨೩. ಎಕ ೫, ಚನ್ನಗಿರಿ ೬೧.
೨೪. ತ್ರಿಭೋಗಾಭ್ಯಂತರಸಿದ್ಧಿ ಎಂಬ ಪದದ ಹೆಚ್ಚಿನ ಅರ್ಥ ವಿವೇಚನೆಗೆ ಡಾ. ಎಸ್.ಎಂ.ಹಿರೇಮಠರ ಶಾಸನ ಪರಿಭಾಷೆ, ಪುಟ ೧೨೭ ನೋಡಬಹುದು.
೨೫. ಎಪಿಗ್ರಾಫಿಯಾ ಇಂಡಿಕಾ-೧೨, ಸಂಖ್ಯೆ: ೧೯.
೨೬ ಎಕ ೧೧, ದಾವಣಗೆರೆ ೪೧.
೨೭. ಎಕ ೧೧ ದಾವಣಗೆರೆ ೩೯, ೪೦.
೨೮. ದಿನಕರ ದೇಸಾಯಿ, ಮಹಾಮಂಡಲೇಶ್ವರಾಸ್ ಅಂಡರ್ ದ ಚಾಲುಕ್ಯಾಸ್, ಪುಟ ೨೩೦.
೨೯. ಎಸ್.ಐ.ಐ೯/೧, ಸಂ.೧೫೫.
೩೦. ಎಕ ೧೧, ದಾವಣಗೆರೆ ೧೬೬,೧೬೭.
೩೧. ಎಕ ೧೧, ದಾವಣಗೆರೆ ೧೨೮,೧೪೯.
೩೨. ಎಕ ೧೧, ದಾವಣಗೆರೆ ೧೩೯.

೪೭

ನಂದ್ಯಾಲದ ಮಹಾಅರಸರು

ಹೆಚ್.ಎಸ್. ಉಷಾರಾಣಿ*

ಶಾಸನಗಳಲ್ಲಿ ಉಕ್ತವಾಗಿರುವ ನಂದ್ಯಾಲ, ನಂದ್ಯಾಲೆ ಹಾಗೂ ನಂದಿಯಾಲ ಸೀಮೆ ಇತ್ಯಾದಿ ಪದಗಳು ಸಂಶೋಧಕರಲ್ಲಿ ಕುತೂಹಲ ಮೂಡಿಸುತ್ತದೆ. ಗಂಗದೊರೆ ತಡಂಗಾಲ ಮಾಧವನ ಕಾಲದಿಂದ ನಂದ್ಯಾಲದ ಉಲ್ಲೇಖ, ನಂದ್ಯಾಲದ ಜನತೆಯ ಪ್ರವೃತ್ತಿ ಅಧ್ಯಯನಕ್ಕೆ ಯೋಗ್ಯವಾಗಿದೆ. ಕಲ್ಯಾಣ ಚಾಲುಕ್ಯರ ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ನಂದ್ಯಾಲದ ಮಹಾಮಂಡಲೇಶ್ವರನ ಕೈಂಕರ್ಯ ಮತ್ತಷ್ಟು ಆಸಕ್ತಿಯನ್ನುಂಟುಮಾಡುತ್ತದೆ. ಈ ದಿಸೆಯಲ್ಲಿ ವಿಜಯನಗರದ ಅರಸರ ಆಳ್ವಿಕೆಯಲ್ಲಿ ಗುರುತಿಸಲ್ಪಟ್ಟ ಕೆಲವು ಪ್ರಮುಖ ನಂದ್ಯಾಲದ ಸಾಮಂತ ಕುಟುಂಬಗಳು ಹಾಗೂ ಅವರ ಕಾರ್ಯವ್ಯಾಪ್ತಿ ವಿಶ್ಲೇಷಿಸುವುದಾಗಿದೆ. ನಂದ್ಯಾಲದ ಅಧ್ಯಯನಕ್ಕೆ ಲಭ್ಯವಿರುವ ಸುಮಾರು ೧೫ ಶಾಸನಗಳು ಈ ಕೆಳಗಿನ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ.

ಚಾರಿತ್ರಿಕವಾಗಿ ಗಂಗರ ತಡಂಗಾಲ ಮಾಧವನ ೪ನೇ ಶತಮಾನದ ತಾಮ್ರ ಶಾಸನ[1] ವಿವಿಧ ಶಾಸ್ತ್ರಗಳಲ್ಲಿ ಪರಿಣಿತರಾಗಿದ್ದು, ಅರಮನೆಗೆ ನೇಮಕಗೊಂಡಿದ್ದ ೨೨ ಬ್ರಾಹ್ಮಣರಿಗೆ ನೀಡಿದ ಅಧಿಕಾರಗಳಲ್ಲಿ ತೆಗುರೆ, ಅಮಣಿಯ ನಂದ್ಯಾಲ ಮತ್ತು ಸಿಂಬಾಲ ದೇಶಗಳ ಸಾಮಂತರ ಮೇಲ್ವಿಚಾರಣೆಯೂ ಒಂದು ಎಂದು ದಾಖಲಿಸಿದೆ. ಆದರೆ ಸಾಮಂತರನ್ನು ಹೆಸರಿಸಿಲ್ಲ. ಇನ್ನು ೫-೬ನೇ ಶತಮಾನದ ಅವನೀತನ ಕೊಡುಂಜೆರನ್ ಶಾಸನ[2] ಆತನ ೨೫ನೇ ವರ್ಷದ ಆಳ್ವಿಕೆಯಲ್ಲಿ ಪುದೋಳಿ ವಿಷಯದಲ್ಲಿದ್ದ ಕೊಡುಂಜೆರು ಗ್ರಾಮವನ್ನು ಸುಗಟೂರಿನ ವಿದ್ವತ್‌ಪೂರ್ಣ ನಿವಾಸಿಗಳಾದ ೭೪ ಬ್ರಾಹ್ಮಣರಿಗೆ ದತ್ತಿ ನೀಡಿದಾಗ, ಇದಕ್ಕೆ ಸಾಕ್ಷಿಯಾದವರಲ್ಲಿ ೯೬೦೦೦ ದೇಶದ ಪ್ರತಿಷ್ಠಿತ ಪ್ರಜೆಗಳ ಸಾಲಿನಲ್ಲಿ ನಂದ್ಯಾಲದ ಉಲ್ಲೇಖ ಗಮನಾರ್ಹ ಹಾಗೆಯೇ ನಿರ್ವಿನೀತನ ಸಿರಗುಂದ ಶಾಸನ[3] ಆತನ ಕಿರಿಯ ಮಗ ಕಾಡುವೆಟ್ಟಿ ಮತ್ತು ಪಲ್ಲವರ ಪ್ರಭಾವದಿಂದ ಕೊಂಗುಣಿ ಪಟ್ಟ ಪಡೆದಾಗ ಆತನ ಸಹೋದರ ಸಿಟ್ಟಿಗೆದ್ದುದ್ದನ್ನು ಕಂಡು ಇಂದೂರ, ನಲಗೊಳಿ ಮತ್ತು ನಂದ್ಯಾಲದ ಜನತೆ ಪಡೆವಾಯಿಲ್‌ಮು ಮತ್ತು ಅಮಸಪಾಲುವನ್ನು ನೀಡಿದರೆಂದು ತಿಳಿಸುತ್ತದೆ.

ನಂದ್ಯಾಲದ ಮಹಾಮಂಡಲೇಶ್ವರರ ಮೊದಲ ಉಲ್ಲೇಖ ಕಲ್ಯಾಣ ಚಾಲುಕ್ಯರ ಶಾಸನದಲ್ಲಿ ಕಂಡುಬರುತ್ತದೆ. ಅದರಂತೆ ಕಲ್ಯಾಣ ಚಾಲುಕ್ಯರ ಎರಡನೇ ಸೋಮೇಶ್ವರನ ಕ್ರಿ.ಶ. ೧೧೩೪ರ ಕೊಲಿಮಿಗುಂಡ್ಲ ಶಾಸನ[4] ಆತನ ಮಹಾಮಂಡಲೇಶ್ವರ ನಂದ್ಯಾಲೆಯ ವಂಕಣಚೋಳ ಮಹಾರಾಜನನ್ನು ಹೆಸರಿಸುತ್ತದೆ. ಈತ ಕೊಲ್ಮಗುಡಿ ಪ್ರಭು ಮುಪ್ಪಿರಟಿ ಎಂಬಾತ ಮಾಡಿಸಿದ ಕೇಶವದೇವರ ಪೂಜೆ ಪುನಸ್ಕಾರಕ್ಕೆ ಎರಡು ಮತ್ತರು ಭೂಮಿ ಪೂದೋಟ ಹಾಗೂ ಒಂದು ದೇವರ ಗಾಣವನ್ನು ಪೂಜಾರಿ ವ್ಯಾಸಣ್ಣ ಭಟ್ಟನಿಗೆ ಎಕ್ಕಟಿಗರ್ನಾಲ್ವತ್ತು ಮಾನಸರುಮಿರ್ದು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಇದರಿಂದ ನಂದ್ಯಾಲದ ಸಾಮಂತರು ವೀರರ ಪಡೆ, ನಿಷ್ಠಾವಂತ ಪಡೆ ಹೊಂದಿದ್ದರೆಂಬುದು ವೇದ್ಯವಾಗುತ್ತದೆ.

ಇನ್ನು ವಿಜಯನಗರ ಸಾಮ್ರಾಜ್ಯದಲ್ಲಿ ಭಾಗಶಃ ಸ್ವಾತಂತ್ರ್ಯ ಹೊಂದಿದ ಸಾಮಂತರಿದ್ದರು. ಅವರಿಗೆ ಸಾಮಂತ, ನಾಯಕ, ದಂಡನಾಯಕ, ಮಂಡಲೇಶ್ವರ, ರಾಜ, ಮಹಾರಾಜ ಒಡೆಯರ್ ಮುಂತಾದ ವಿವಿಧ ಹೆಸರುಗಳಿದ್ದವು. ಕೃಷ್ಣದೇವರಾಯ ಕ್ರಿ.ಶ. ೧೫೧೩-೧೪ ರಲ್ಲಿ ಉದಯಗಿರಿ ಕೋಟೆಯ ಮೇಲೆ ದಾಳಿ ಮಾಡಿದಾಗ ಆತನ ಪರವಾಗಿ ಹೋರಾಡಿದ ಸಾಮಂತರಲ್ಲಿ ನಂದ್ಯಾಲ, ಅರವೀಟಿತೊರಗಂಟಿ, ಗೊಬ್ಬೂರು, ವೆಲುಗೋಡಿ ಮೊದಲಾದವರು, ಪ್ರರಾಕ್ರಮಶಾಲಿಗಳಾಗಿದ್ದರೂ ೮-೯ ತಿಂಗಳುಗಳ ಕಾಲ ಹೋರಾಡಿ ಕೋಟೆ ಗೆಲ್ಲುವುದು ಕಷ್ಟವಾಗಿತ್ತೆಂದು ದಾಖಲಿಸಲಾಗಿದೆ.[5]

ಕ್ರಿ.ಶ. ೧೫೩೭ರ ಅಚ್ಯುತದೇವರಾಯನ ಲೇಪಾಕ್ಷಿ ವೀರಭದ್ರ ದೇವಾಲಯದ ಆವರಣದಲ್ಲಿರುವ ಶಾಸನ[6] ಲೇಪಾಕ್ಷಿ ವೀರೇಶ ದೇವರಿಗೆ ಅತ್ರೇಯಗೋತ್ರದ ಆಪಸ್ತಂಭಸೂತ್ರದ ಯಜುಶಾಖೆಯ ನಂದ್ಯೈಲ ತಿರುಮಲಭಟ್ಟಲುಪಾಧ್ಯಾಯ

* # ೨೭೪, ೬ನೇ ಮುಖ್ಯರಸ್ತೆ, ಬ್ಯಾಂಕ್ ನೌಕರರ ಬಡಾವಣೆ, ಬೋಗಾದಿ, ಮೈಸೂರು-೨೩. ಮೊ. ೯೮೮೦೪೪೭೪೯೩

ಸೋಮಯಾಜಿಗಳ ಪುತ್ರರು ಅವುಭಳ ಭಟ್ಟವುಪಾಧ್ಯಾಯ ಸೋಮಯಾಜಿಗಳು ಕೊಟ್ಟ ಕ್ರಯ ಸಾಧನ ವೃತ್ತಿಗಳ ಕ್ರಮದ ವಿವರವಿದೆ. ಅದು ಅವರಿಗೆ ದೇವರಾಯ ಒಡೆಯರ್ ನಾಗಪ್ಪನಿಂದ ಬಂದ ವೃತ್ತಿಯಿಂದ ಮೊದಲ್ಗೊಂಡು ಅವರು ವಾಸಿಸುತ್ತಿದ್ದ ನಾರಾಯಣಪುರವೆಂಬ ಸರ್ವಮಾನ್ಯ ಅಗ್ರಹಾರಕ್ಕೆ ಸಂಬಂಧಿಸಿದುದಾಗಿದೆ.

ಹತ್ತಕ್ಕೂ ಹೆಚ್ಚಿನ ಶಾಸನಗಳು ಸದಾಶಿವರಾಯನ ಕಾಲಕ್ಕೆ ಸೇರಿದ್ದು, ಸುಮಾರು ೬ ಮಂದಿ ಮಹಾ ಅರಸರ ಕೈಂಕರ್ಯಗಳನ್ನು ತಿಳಿಸುತ್ತವೆ. ಅವು ಹೀಗಿವೆ.

ಕ್ರಿ.ಶ. ೧೫೪೪ರ ಕುಂತೂರು ಶಾಸನ[೭] ನಂದ್ಯಾಲದ ಮಹಾಮಂಡಲೇಶ್ವರ ನಾರಪರಾಜಯ್ಯಗಳು ಹದಿನಾಡಸೀಮೆಯನ್ನಾಳುತ್ತಿದ್ದುದ್ದನ್ನು ಹೇಳುತ್ತದೆ. ಈ ಸೀಮೆಯ ಕುಂತೂರು ಸಿಂಹಾಸನದಲ್ಲಿ ಅರಮನೆಗೆ ಸಂಬಳಸರತಿ ಆಗಿ ಮೂವತ್ತು ವರಹವನ್ನು ತೆಕೊಂಡು ಬರುತ್ತಿರಲಾಗಿ ಆ ಕುಂತೂರು ಸಿಂಹಾಸನದ ಮಹಾ ನಂದೀಶ್ವರ ಸಿಂಹಾಸನ ಪುಣ್ಯಕ್ಷೇತ್ರದಲ್ಲಿ ಮಾಡಿಸಿದ ಧರ್ಮವೇನೆಂದರೆ, ಆ ಮಹಾನಂದೀಶ್ವರ ಮಠದ ಮಹಾಮತ್ತಿನೊಳಗಾದ ಪಟ್ಟದ ಕೆಂಪನಂಜೇದೇವರಿಗೆ ತಿಂಮರಾಜಯ್ಯ, ನಾರಿಯಪರಾಜಯ್ಯ ಮತ್ತು ಅವುಭಳರಾಜಯ್ಯನವರಿಗೆ ಪುಣ್ಯವಾಗಬೇಕೆಂದು ಅವರ ಕಾರ್ಯಕ್ಕೆ ಕರ್ತರಾದ ಕಂಪಾರಾಂಣ್ಣಗಳು ಸರ್ವಮಾನ್ಯವಾಗಿ ಕೊಟ್ಟ ಧರ್ಮ ಎಂದು ಹೇಳಿದೆ. ಇದರಿಂದ ೩೦ ವರಹ ಸರ್ವ ಮಾನ್ಯ ಮಾಡಿದ್ದು ತಿಳಿಯುತ್ತದೆ.

ಕ್ರಿ.ಶ. ೧೫೪೪ರ ಮತ್ತೊಂದು ಕೊಳ್ಳೇಗಾಲ ಶಾಸನ[೮] ಶ್ರೀಮನ್ ಮಹಾಮಂಡಲೇಶ್ವರ ನಾರಪರಾಜಯ್ಯನವರ ಕಾರ್ಯಕ್ಕೆ ಕರ್ತರಾದ ವೋಬರಸಯ್ಯನವರು ಸಜ್ಜನ ಶುದ್ಧ ಶಿವಾಚಾರ ಸಂಪನ್ನರಾದ ವಂಜಿನಾಥಭ್ರುಂಗನಿಗೆ ನಾಥ ವೀರಭದ್ರದೇವರು ಮುಖ್ಯವಾದ ದೇವಾಪೃಥ್ವಿ ಮಹಾಮನೆವೊಳಗಾದ ಎರಗಂಬಳ್ಳಿ ಸಿಂಹಾಸನದ ವಿರಾಸಿಮಠದ ಮಹತ್ತಿಗೆ ನಾವು ಮುಡಿಗುಂಡ ಸ್ಥಳದಲ್ಲಿ ಚಿಕ್ಕಹಳ್ಳಿ ಹಾಗೂ ಇತರ ಸ್ಥಳವನ್ನು ಬಿಟ್ಟುಕೊಟ್ಟೆವೆಂದು ತಿಳಿಸುತ್ತದೆ.

ಅದೇ ರೀತಿ, ಕ್ರಿ.ಶ. ೧೫೪೯ರ ಕೊಳ್ಳೇಗಾಲ ಶಾಸನವು ಶ್ರೀಮಾನ್ ಮಹಾಮಂಡಲೇಶ್ವರ ರಾಜರಾಜ ನಂದ್ಯಾಲದ ನಾರಪರಾಜಮಹಾಅರಸುಗಳ ಕಾರ್ಯಕ್ಕೆ ಕರ್ತರಾದ ಹದಿನಾಡ ಚಾಮರಸಗವುಡರು ಸಜ್ಜನ ಶುದ್ಧ ಶಿವಾಚಾರ ಸಂಪನ್ನರಾದ ದೇವಾ ಪೃಥ್ವಿ ಮಹಾಮತ್ತಿನೊಳಗಾದ ಮಳವಳ್ಳಿಯ ಸಿಂಹಾಸನಕ್ಕೆ ಕರ್ತರಾದ ನಿಲವೆಂದ ದೇವರಿಗೆ ಹದಿನಾಡ ಸೀಮೆಯೊಳಗುಳ್ಳ ಕೊಳ್ಳೇಗಾಲ ಸ್ಥಳದ ಹೊಂಡರಬಾಳು ಗ್ರಾಮವನ್ನು ದಾನ ಶಾಸನವಾಗಿ ಕೊಡಲಾಗಿ ಆ ಗ್ರಾಮ ಸೀಮೆಯೊಳಗಾದ ಗದ್ದೆಬೆದ್ದಲಿನ ವಿವರ ನೀಡುತ್ತದೆ. ಉಲ್ಲೇಖಿತ ಚಾಮರಸಗೌಡ ಮುಂದೆ ಹದಿನಾಡ ಪ್ರಭುವಾದುದನ್ನು ಯಳಂದೂರು ಶಾಸನಗಳು ದಾಖಲಿಸಿವೆ.

ಕ್ರಿ.ಶ. ೧೫೪೫ರ ಹುಣಸೂರು ತಾಲ್ಲೂಕಿನ ದೊಡ್ಡಬೆಲಹಾಳ ಶಾಸನ[೧೦] ನಂದಿವಾಲದ ಅವುಭಳೇಶ್ವರ ಅರಸುಗಳು ವೀರನಂಜರಾಯಪಟ್ಟಣದ ಚಂಗಾಳ್ವರಲ್ಲಿ ಖ್ಯಾತಿವೆತ್ತ ಶ್ರೀಕಂಠವೊಡೆಯರಿಗೆ ಪಲ್ಲಕ್ಕಿ ಉಂಬಳಿಯಾಗಿ ಕೊಟ್ಟ ಬೆಲಹಾಳ ಗ್ರಾಮ ಎಂದು ದಾಖಲಿಸುತ್ತದೆ.

ಕ್ರಿ.ಶ. ೧೫೪೬ರ ಬಸವಟ್ಟಿಗೆ ಶಾಸನ[೧೧] ಸದಾಶಿವರಾಯನ ಮಹಾಮಂಡಲೇಶ್ವರ ನಂದ್ಯಾಲದ ಅವುಭಳೇಶ್ವರ ದೇವಮಹಾರಾಜ ಬ್ರಾಹ್ಮಣ ಪ್ರತಿಪಾಲಕನೆಂದು ಹೇಳಿದೆ.

ಕ್ರಿ.ಶ. ೧೫೫೪ರ ಹರದನಹಳ್ಳಿ ಶಾಸನ[೧೨] ನಂದಿಯಾಲದ ಅವುಭಳೇಶ್ವರದೇವ ಮಹಾಅರಸುಗಳು ಕೊಟ್ಟ ಶಾಸನ ಕ್ರಮವೇನೆಂದರೆ, ನಮ್ಮ ನಾಯಕತನಕ್ಕೆ ಸಲ್ಲುವ ಹದಿನಾಡಸೇಮೆಯೊಳಗಣ ಹರದನಹಳ್ಳಿ ಮತ್ತು ಅಣಿಲೇಶ್ವರ ದೇವರಿಗೆ ನೈವೇದ್ಯಕ್ಕೆ ಸಲ್ಲುವ ಮರ್ಯಾದೆ ನಡೆವ ಕ್ರಮದಂತೆ ಧಾರೆಯರೆದು ಕೊಟ್ಟ ಗ್ರಾಮ ಎಂದಿದೆ.

ಕ್ರಿ.ಶ. ೧೫೫೧ರ ಉಡಿಗಾಲ ಶಾಸನ[೧೩] ಸದಾಶಿವರಾಯ ಮತ್ತು ರಾಮರಾಯರ ಕಾರ್ಯಕ್ಕೆ ಕರ್ತರಾದ ನಂದ್ಯಾಲದ ತಿಂಮರಾಜ ಮಹಾಅರಸುಗಳು ಅರೆಕೊತಾರದ ಶಿ...ನಾಯಕನಿಗೆ ತಮ್ಮ ನಾಯಕತನಕ್ಕೆ ಸಲ್ಲುವ ಹದಿನಾಡಸೀಮೆ ಉಡಿಗಾಲ ಗ್ರಾಮವನ್ನು ಕೊಡಗೆಯಾಗಿ ಕೊಟ್ಟರೆಂದು ತಿಳಿಸುತ್ತದೆ.

ನಂದ್ಯಾಲದ ಮಹಾಅರಸರ ಪ್ರಭಾವ ಹದಿನಾಡಸೀಮೆಯಲ್ಲಿ ಮುಂದುವರೆದಿತ್ತು. ಇದಕ್ಕೆ ಉದಾಹರಣೆ ೧೬ನೇ ಶತಮಾನದ ಗಣಿಗನೂರು ಶಾಸನ[೧೪]. ಈ ಶಾಸನ ಪ್ರಕಾರ, ಹದಿನಾಡಸೀಮೆ ಪ್ರಭು ದೇವಪ್ಪಗೌಡರ ಮಕ್ಕಳು ರಾಜನಾಯಕರು ಈ ಕಟ್ಟೆಯಲ್ಲಿ ನಂದ್ಯಾಲದ ಸೀಮೆ ಭಂಡಿಕಾರರ ಕೈಲಿ ಕಟ್ಟಿಸಿದ ವಡವು ೨ ಎಂದಿದೆ. ಇದರಿಂದ ಎರಡು ಸೀಮೆಯ ಕೆರೆಕಟ್ಟೆಗಳ ರಚನೆಯಲ್ಲಿ ಕಾರ್ಮಿಕರ ಸಹಕಾರವಿತ್ತೆಂಬುದನ್ನು ಮನಗಾಣಬಹುದು.

ಕ್ರಿ.ಶ. ೧೬ನೇ ಶತಮಾನದ ಭಂಡಿಗೆರೆ ಶಾಸನವು[೧೫] ಶ್ರೀಮನ್ ಮಹಾಮಂಡಲೇಶ್ವರ ನಂದ್ಯಾಲದ ತಿಂಮಯ್ಯದೇವ ಮಹಾಅರಸುಗಳ ಕಾರ್ಯಕ್ಕೆ ಕರ್ತರಾದ ವೆಂಗಳಾಜಿಅಯ್ಯನವರು ಶ್ರೀದಿವ್ಯಲಿಂಗ ಶ್ರೀ ಅಣಿಲೇಶ್ವರ ದೇವರ ಅಂಗ ಭೋಗಕ್ಕೆ ಧಾರಾಪೂರ್ವಕವಾಗಿ ತೋಟದ ಅಡಕೆಯ ಮರ ಸ್ಥಳ ಸಾ. ೨/೨೦೦ ಇತ್ಯಾದಿ ಕೊಟ್ಟರು ಎಂದು ಹೇಳಿದೆ.

೧೬ನೇ ಶತಮಾನದ ಆಗತ್ತೂರು ಶಾಸನ[೧೬] ಶ್ರೀಮಾನ್ ಮಹಾಮಂಡಲೇಶ್ವರ ನಂದ್ಯಾಲದ ತಿಮ್ಮರೆಯ ಮಹಾಅರಸು ಕೋಟೆಯ ಸೀಮೆಯೊಳಗಾದ ಕಣಿಯನಾಡಿನೊಳಗೆ ಸಲ್ಲುವ ಅಗತ್ತೂರು ಗ್ರಾಮವನ್ನು ಬೊಳನಂಜ ಒಡೆಯನಿಗೆ ಯಾಳಕೊಡಗೆಯಾಗಿ ಕೊಟ್ಟರು. ಯಾಳಕೊಡಗೆ ಎಂಬುದು ತಂತಿವಾದ್ಯ ನುಡಿಸುವ ವಾದಕನಿಗೆ ಕೊಡುತ್ತಿದ್ದ ಕೊಡುಗೆ. ಬೋಳನಂಜವಡೆಯ ತಂತಿವಾದ್ಯ ನುಡಿಸುವ ವಾದಕನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಶಾಸನವು ಬೋಳುನಂಜೇದೇವರು ಶ್ರೀ ನಂಜುಂಡೇಶ್ವರ ದೇವರಿಗೆ ಅಮೃತಪಡಿಗೆಂದು ಆಗತ್ತೂರಿನ ಗದ್ಯಾಣ ೩೬ನ್ನು ನೀಡಿದರೆಂದು ತಿಳಿಸುತ್ತದೆ. ಅಲ್ಲದೆ ತಿಮ್ಮದೇವ ನಂಜನಗೂಡಿನಲ್ಲಿ ಬೋಳನಂಜದೇವರ ಹೆಸರಿನಲ್ಲಿ ಮಠ ಕಟ್ಟಿಸಿ ಅಲ್ಲಿರುವ ಚೆನ್ನವೀರಣ್ಣ ಒಡೆಯನಿಗೆ ಮುರಿಗೆ ಆಗತ್ತೂರಿನಲ್ಲಿ ೧೪ ಗದ್ಯಾಣ ದತ್ತಿ ನೀಡಿ, ಒಟ್ಟು ೫೦ ವರಹ ಪ್ರತಿವರ್ಷ ಅನುಭವಿಸಿಕೊಂಡು ಬರತಕ್ಕದೆಂದು ಹೇಳಲಾಗಿದೆ. ಒಟ್ಟಿನಲ್ಲಿ ನಂದ್ಯಾಲದ ಮಹಾಅರಸರು ತಂತಿವಾದ್ಯ ನುಡಿಸುವ ವಾದಕನಿಗೆ ನೀಡಿದ ಕೊಡುಗೆ ಹಾಗೂ ಆತನ ಹೆಸರಿನಲ್ಲಿ ಕಟ್ಟಿಸಿದ ಮಠ ನಿಜಕ್ಕೂ ಆ ಕಾಲದ ಜನರ ಕಲಾಭಿಮಾನವನ್ನು ಸೂಚಿಸುತ್ತದೆ.

ಇದುವರೆಗಿನ ಅಧ್ಯಯನದಿಂದ ಹದಿನಾಡ ಸೀಮೆ ಹಾಗೂ ಕೋಟೆಯ ಸೀಮೆಯಲ್ಲಿ ನಂದ್ಯಾಲ ಅರಸರ ಪ್ರಭಾವ ಇದ್ದುದು ಖಚಿತ. ಇನ್ನು ಶ್ರೀರಂಗಪಟ್ಟಣ ಸೀಮೆಯೊಳಗೆ ಅರವೀಡು ಮನೆತನಕ್ಕೆ ಸೇರಿದ ನಂದ್ಯಾಲದ ನರಸಿಂಗದೇವನ ಕುಟುಂಬದ ಕೈಂಕರ್ಯ ಪರಿಶೀಲಿಸೋಣ. ಅದರಂತೆ ಕ್ರಿ.ಶ. ೧೫೪೪ರ ಮೇಲುಕೋಟೆ ಶಾಸನ[೧೭] ಪ್ರಕಾರ, 'ಶ್ರೀಮನ್‌ಮಹಾಮಂಡಲೇಶ್ವರ ನಂದ್ಯಾಲದ ನರಸಿಂಗದೇವ ಮಹಾಅರಸುಗಳ ಕೊಮಾರರು ನಾರಾಯದೇವ ಮಹಾಅರಸುಗಳು ಶ್ರೀಮತು ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಉಭಯ ವೇದಾಂತಚಾರ್ಯರಾದ ವೇದಾಂತಿ ರಾಮನುಜಜೀಯರಿಗೆ ನಮಸ್ಕರಿಸಿ

ಕೊಟ್ಟ ಧರ್ಮಸಾಧನ ಕ್ರಮವೆಂತೆಂದೆಡೆ......... ಸದಾಶಿವದೇವಮಹಾರಾಯರು ನಮಗೆ ನಾಯಕತನಕೆ ಪಾಲಿಸಿದ ಶ್ರೀರಂಗಪಟ್ಟಣ ಸೀಮೆಯೊಳಗಣ ಮೇಲುಕೋಟೆಗೆ ಪ್ರತಿನಾಮವಾದ ತಿರುನಾರಾಯಣಪುರದ ಶ್ರೀ ಚೆಲುಪಿಳೆರಾಯರ ದೇವಸ್ಥಾನಕ್ಕೆ ದೇವಗಿರಿ ಅಚ್ಯುತರಾಯ, ಮಹಾರಾಯರು, ಕಟ್ಟು ಮಾಡಿಕೊಟ್ಟ ದೇಶಾಂತ್ರಿ ಮುದ್ರೆಗೆ ಸಲ್ಲುವ ಶ್ರೀ ಭಾಷ್ಯಕಾರರು ಬಿಜಯ ಮಾಡಿದ್ದ ಯತಿರಾಜ ಮಠವನು ಶ್ರೀ ಚಲಪಿಳೆರಾಯರ ಕೋವಿಲಿಗೆ ದೇಶಾಂತ್ರಿ ಮುದ್ರೆಯನು ಕೊಟ್ಟರು ಎಂದು ಹೇಳಲಾಗಿದೆ. ಅಲ್ಲದೆ "ಶ್ರೀ ಭಂಡಾರಕ್ಕೆ ಸಲ್ಲುವ ರೊಕ್ಕಾಂದಾಯ ತಿರುವಾಭರಣ, ವಸ್ತ್ರಭಂಡಾರ ಮೊದಲಾದವಕ್ಕೆ ಹನುಂತನ ಮುದ್ರೆ ನಡವುದಕ್ಕೆ ಕಟ್ಟುಮಾಡಿಬಿಟ್ಟ ನಾಟಿಕೆ ನಿಂಮ ಒಪ್ಪವನು ಯಿಕ್ಕಿ ಶ್ರೀ ಭಂಡಾರ ಮೊದಲಾದ ಸೀಮೆ ಗ್ರಾಮಗಳಿಗೆ ನಿಂಮ ಸಂಮತಿಯನುಯಿಕ್ಕಿ ಸಕಲ ಕಾಣಿಕೆಯ ಆದಾಯವೆಲ್ಲಕ್ಕಂ ನಿಂಮ ಮನುಷ್ಯರನ್ನು ಯಿಕ್ಕಿಕೊಂಡು ಶ್ರೀ ಭಾಷ್ಯಕಾರರ ಸಂನಿಧಿಯಲ್ಲಿ ಇಹ ರಾಮಾನುಜ ಮುದ್ರೆಗೆ ರಾಜ ಮುದ್ರೆ ಸಂಗಡ ನಿಮ್ಮ ಮುದ್ರೆಯನು ಯಕ್ಕಿ ಅಯಿವತ್ತಿಬ್ಬರು ಸಕಲರ ಸ್ವಾಮ್ಯಕ್ಕೆ ಮರಿಯಾದೆಯಲಿ" ಎಂದು, "ಶ್ರೀರಂಗದ ಕಂದಾಡಿ ಅಣ್ಣನವರ ಶಿಷ್ಯರಾದ ವೇದಾಂತಿ ರಾಮಾನುಜಜೀಯರಿಗೆ ನಮಸ್ಕರಿಸಿ ಸದಾಶಿವದೇವ ಮಹಾರಾಯರಿಗೆ ಪುಣ್ಯವಾಗಬೇಕೆಂದು ಕೊಟ್ಟ ಧರ್ಮ ಸಾಧನ" ಎಂದು ದಾಖಲಿಸಲಾಗಿದೆ. ಇದನ್ನು ಬರೆದವ ಶ್ರೀಭಂಡಾರದ ಸೇನಬೋವ ರಾಮಾನುಜ, ಅಲ್ಲದೆ ಈತ ಕ್ರಿ.ಶ. ೧೫೧೯ ರಿಂದ ೧೫೮೨ ರವರೆಗೆ ಮೇಲುಕೋಟೆಯ ಚೆಲಪಿಳೆರಾಯನ ಶ್ರೀಭಂಡಾರದ ಸೇನಬೋವನಾಗಿ ಸೇವೆ ಸಲ್ಲಿಸಿದ್ದನ್ನು ಶಾಸನಗಳಲ್ಲಿ ಗುರುತಿಸಬಹುದು.

ಹಾಗೆಯೇ ಕ್ರಿ.ಶ. ೧೫೪೫ರ ಮೇಲುಕೋಟೆ ಶಾಸನ[೧೮]ವು ನಂದ್ಯಾಲದ ಮಹಾಮಂಡಲೇಶ್ವರ ನರಸಿಂಗದೇವ ಮಹಾ ಅರಸುಗಳ ಕುಮಾರರು ನಾರಾಯದೇವ ಮಹಾಅರಸುಗಳು ದಂಡಂ ಸಮರ್ಪಿಸಿಕೊಟ್ಟ ಭೂದಾನಧರ್ಮ ಸಾಧನದ ಕ್ರಮವೆಂತೆಂದೆಡೆ ಎಂದು ಹೇಳಿರುವುದು ಹೀಗಿದೆ: ಸ್ವಾಮಿ ಸದಾಶಿವದೇವಮಹಾರಾಯರು ನಮಗೆ ನಾಯಕತನಕೆ ಪಾಲಿಸಿದ ಶ್ರೀರಂಗಪಟ್ಟಣದ ಸೀಮೆಯೊಳಗಣ ಬಲ್ಲಾಳಪುರದ ಸ್ಥಳ ಮತ್ತು ಕನ್ನಂಬಾಡಿಯ ಹೋಬಳಿಯ ವರಾಹನಕಲಹಳ್ಳಿ ಸ್ಥಳದ ಆದಾಯವನ್ನು ಪಿನಾಕಿಯ ತೀರದಲ್ಲಿ ಸಮರ್ಪಿಸಿದ ವಿವರವಿದೆ. ಅದರಂತೆ ೨೦೦೦ ವರಹ ಆದಾಯದಲ್ಲಿ ಕ್ಷಾಮಕ್ಷೋಭೆ ಕಳೆದು ೧೨೦೦ ವರಹಕ್ಕೆ ನಿಲ್ಲಿಸಿ ನಮ್ಮ ಧರ್ಮವಾಗಿ ಶ್ರೀ ಚೆಲಪಿಳೆರಾಯ ಸ್ವಾಮಿಗೆ ಸಮರ್ಪಿಸಿ ಆತನ ಸನ್ನಿಧಿಯಲ್ಲಿ ನಡೆಯುವ ನೈವೇದ್ಯ ಅಥವಾ ಪುಲಿಯೂಟ ಕಟ್ಟಳೆಯ ವಿವರವನ್ನು ನೀಡಲಾಗಿದೆ.

ಮತ್ತೊಂದು ಕ್ರಿ.ಶ. ೧೫೫೧ರ ಮೇಲುಕೋಟೆ ಶಾಸನ೯೯ದ ಮಹತ್ವ ಇಂತಿದೆ. ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಶತಭಾಷಾ ಶತಪತ್ರಸಹಸ್ರಕಿರಣ ಚತುಶಾಲ ಚತುರ್ಮುಖ, ಪದವಾಕ್ಯ ಪ್ರಮಾಣಜ್ಞರಾದ ಎಂಬಾರಯ್ಯನವರ ಮಕ್ಕಳು ಅಪ್ಪಯಂಗಾರಯ್ಯನವರು ಹಾಗೂ ಮಹಾಮಂಡಲೇಶ್ವರ ನಂದ್ಯಾಲದ ನರಸಿಂಗದೇವ ಮಹಾಅರಸರ ಕುಮಾರರಾದ ತಿಮ್ಮೆಯದೇವ ಮಹಾಅರಸುಗಳು ಜೊತೆಗೂಡಿ ತಿರುನಾರಾಯಣಪುರದ ಶ್ರೀ ಸಂಪತ್ಕರನಾರಾಯಣ ಮತ್ತು ಶ್ರೀ ಚೆಲಪಿಳೆರಾಯರಿಗೆ ನಗುಲಹಳ್ಳಿ ಗ್ರಾಮವನ್ನು ಧರ್ಮಸಾಧನವಾಗಿ ಕೊಟ್ಟರು. ಹಿಂದೆ ವೀರಣನಾಯಕರು ಎಂಬಾರೈಯನವರಿಗೆ ಧಾರಾಪೂರ್ವಕವಾಗಿ ನೀಡಿದ್ದರು. ಆದರೆ ಕೃಷ್ಣರಾಯರ ಅವಾಂತರದಲ್ಲಿ ಹಿಂದಕ್ಕೆ ಪಡೆದಿದ್ದರು. ಹಾಗಾಗಿ ಅಪ್ಪಯ್ಯಂಗಾರರು ಸುವರ್ಣದ ಗರುಡನ ಕೈಂಕರ್ಯ ಮಾಡಿ ದೇವಾಲಯಕ್ಕೆ ಸಮರ್ಪಿಸಲಾಗಿ ಅರ್ಧ ಭಾಗ ಗ್ರಾಮ ನೀಡಲಾಗಿತ್ತು. ಆ ಗ್ರಾಮದ ಆದಾಯ ೫೦ ವರಹ, ಕ್ಷಾಮಡಾಮರಕ್ಕೆ ೫ ವರಹ ಕಳೆದು ೪೫ ವರಹ ಚೆಲ್ಲಪಿಳ್ಳೆರಾಯರ ಗುಡಿಯಲ್ಲಿ ನಡೆವ ಪುಲಿಯೂಟದ ಕಟ್ಟಳೆಗೆ ನೀಡಿದ ವಿವರವನ್ನೊಳಗೊಂಡಿದೆ. ಈ ಶಾಸನ ಬರೆದಾತನು ಸೇನಬೋವ ರಾಮಾನುಜ. ಉಲ್ಲೇಖಿತ ಶಾಸನಗಳಿಂದ ನಂದ್ಯಾಲಯದ ಮಹಾಅರಸರು ವಿವಿಧ ಗ್ರಾಮಗಳ ಆದಾಯವನನ್ನು ಮೇಲುಕೋಟೆಯ ಯತಿರಾಜಮಠ ಹಾಗೂ ಇತರ ದೇವಾಲಯಗಳಿಗೆ ನೀಡಿದ ಧರ್ಮದತ್ತಿಗಳು ದೃಢಪಡುತ್ತವೆ.

ನಂದ್ಯಾಲದ ಮಹಾಅರಸುಗಳಿಗೆ ಸಂಬಂಧಿಸಿದ ಶಾಸನಗಳ ಅಧ್ಯಯನದಿಂದ ಗಮನಿಸಿದ ಅಂಶಗಳನ್ನು ಈ ಕೆಳಗಿನಂತೆ ತೀಮಾನಿಸಬಹುದು.

೧. ನಂದ್ಯಾಲ ಬಹು ಪ್ರಾಚೀನನಗರ. ಗಂಗರ ಕಾಲದಿಂದ ಪ್ರಸ್ತಾಪಗೊಂಡಿದೆ. ಅಲ್ಲಿಯ ಜನತೆ ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತಿವಹಿಸುತ್ತಿದ್ದರೆಂಬುದಕ್ಕೆ ನಿರ್ವಿನೀತ ಅಥವಾ ದುರ್ವಿನೀತನ ಮಕ್ಕಳಿಗೆ ನೀಡಿದ ಬೆಂಬಲ ಉತ್ತಮ ನಿದರ್ಶನ.

೨. ನಂದ್ಯಾಲದ ಮಹಾಮಂಡಲೇಶ್ವರನ ಉಲ್ಲೇಖ ಕಲ್ಯಾಣ ಚಾಲುಕ್ಯರ ಶಾಸನದಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ.

೩. ನಂದ್ಯಾಲದ ಅರಸರು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ತಮ್ಮ ಸಮಕಾಲೀನರಂತೆ ಎಕ್ಕಟಿಗ ವೀರಪಡೆ ಅಥವಾ ಅಂಗರಕ್ಷಕ ಪಡೆಯನ್ನು ಹೊಂದಿದ್ದರೆಂಬುದಕ್ಕೆ ವಂಕಣಚೋಳ ಮಹಾರಾಜನ ವೀರಪಡೆ, 'ಎಕ್ಕಟಿಗರ್ನಾಲ್ವತ್ತು ಮಾನಸರ್' ಪದವೇ ಸಾಕ್ಷಿ.

೪. ವಿಜಯನಗರದ ಅರಸರ ಸಾಮಂತರ ಪೈಕಿ ನಂದ್ಯಾಲದ ಅರಸರು ಪ್ರತಿಷ್ಠಿತರೂ ಹೌದು, ಹಾಗಾಗಿ ಮಂಡ್ಯ ಮೈಸೂರು, ಚಾಮರಾಜನಗರ ಸೀಮೆಗಳಲ್ಲಿ ಇವರ ಪ್ರಭಾವ ವಿಶೇಷವಾಗಿತ್ತು.

೫. ನಂದ್ಯಾಲಯದ ಅರಸರು ವೀರಶೈವ ಹಾಗೂ ವೈಷ್ಣವ ದೇವಾಲಯಗಳಿಗೆ ನೀಡಿದ ಕೊಡುಗೆಗಳು ಗಮನಾರ್ಹ.

೬. ನಂದ್ಯಾಲದ ಮಹಾಮಂಡಲೇಶ್ವರ ನಾರಪ್ಪರಾಜಯ್ಯನ ಕಾರ್ಯಕ್ಕೆ ಕರ್ತರಾಗಿದ್ದವರು ಕಂಪಾರಾಂಣಗಳು, ವೋಬರಸಯ್ಯ ಮತ್ತು ಚಾಮರಸಗೌಡ. ಇವರು ಹದಿನಾಡ ಸೀಮೆಯ ಆಡಳಿತ ನಿರ್ವಹಿಸುವಲ್ಲಿ ಸಹಕರಿಸಿದ್ದರು. ಕುಂತೂರು, ಎರಗಂಬಳ್ಳಿ ಹಾಗೂ ಮಳವಳ್ಳಿಯ ವೀರಶೈವ ಮಠಗಳಿಗೆ ದಾನ ದತ್ತಿ ನೀಡಿದ್ದರು.

೭. ನಂದ್ಯಾಲಯದ ಅವುಭಳೇಶ್ವರ ಮಹಾಅರಸು ೧೫೪೫ ರಿಂದ ೧೫೫೪ರವರೆಗೆ ಆಳ್ವಿಕೆ ನಡೆಸಿದ್ದು ಹದಿನಾಡಸೀಮೆಯಲ್ಲಿ ಆತನ ಪ್ರಭಾವ ಮನವರಿಕೆಯಾಗುತ್ತದೆ. ಈತ ಬ್ರಾಹ್ಮಣ ಪ್ರತಿಪಾಲಕನಾಗಿದ್ದ, ಸ್ಥಳೀಯ ಪ್ರಭು ಚಂಗಾಳ್ವರ ಶ್ರೀಕಂಠವೊಡಯನಿಗೆ ಪಲ್ಲಕ್ಕಿ ಉಂಬಳಿ ನೀಡಿದ್ದು, ನೆರೆಹೊರೆಯ ದೊರೆಗಳ ಸಂಪರ್ಕ ಹೊಂದಿದ್ದರ ಮೇಲೆ ಬೆಳಕು ಚೆಲ್ಲುತ್ತದೆ. ಅಲ್ಲದೆ ಎಂದಿನಂತೆ ಹರದನಹಳ್ಳಿಯ ಪ್ರತಿಷ್ಠಿತ ದಿವ್ಯಲಿಂಗೇಶ್ವರ ದೇವರಿಗೆ ಮರ್ಯಾದೆ ಗೌರವ ಸಲ್ಲಿಸಿದ್ದ.

೮. ಮತ್ತೊಬ್ಬ ಮಹಾಅರಸು ನಂದ್ಯಾಲದ ತಿಂಮಯದೇವ. ಈತನ ಕಾರ್ಯಕ್ಕೆ ಕರ್ತರಾಗಿದ್ದವ ವೆಂಗಳಾಜಿ ಅಯ್ಯ. ಈತನೂ ಹರದನಹಳ್ಳಿಯ ದಿವ್ಯಲಿಂಗೇಶ್ವರನಿಗೆ ದಾನ ನೀಡಿ ಜನತೆಯ ವಿಶ್ವಾಸಗಳಿಸಿದ್ದು ವೇದ್ಯವಾಗುತ್ತದೆ.

೯. ನಂದ್ಯಾಲದ ಮತ್ತೊಂದು ಶಾಖೆ ಅರವೀಡು ಮನೆತನಕ್ಕೆ ಸೇರಿದ ನರಸಿಂಗದೇವ ಮಹಾಅರಸು ಹಾಗೂ ಆತನ ಪುತ್ರರಾದ ನಾರಾಯದೇವ ಮತ್ತು ತಿಂಮಯದೇವ ಮಹಾಅರಸು. ಇವರು ಶ್ರೀರಂಗಪಟ್ಟಣದ ನಾಯಕತನ ಪಡೆದಿದ್ದು, ವೈಷ್ಣವ ದೇವಾಲಯಗಳಿಗೆ ಗ್ರಾಮ ದಾನ ನೀಡಿದ್ದರು. ಅಲ್ಲದೆ ಸ್ಥಳೀಯ ಪ್ರತಿಷ್ಠಿತ ವ್ಯಕ್ತಿ ಯತಿರಾಜ ಮಠದ ಯತಿಗಳಿಗೆ ದೇಶಾಂತ್ರಿ ಮುದ್ರೆ ಹಾಗೂ ಇತರ ಮುದ್ರೆಗಳನ್ನು ಉಪಯೋಗಿಸುವ ಹಕ್ಕನ್ನು ನೀಡಿದುದು ಗಮನ ಸೆಳೆಯುತ್ತದೆ.

೧೦. ಕೊನೆಯದಾಗಿ ನಂದ್ಯಾಲದ ಮಹಾಅರಸರ ಸಮಕಾಲೀನರಲ್ಲಿ ರಾಮರಾಜ ತಿರುಮಲರಾಜ ಮಹಾಅರಸು, ಕೊನೇಟಿ ಮಹಾಅರಸು, ಮನುಬ್ರೊಲು ಚೆನ್ನದೇವಚೋಡ ಮಹಾರಸುಗಳು ಹಾಗೂ ಅವುಭಳದೇವರಾಜಯ ದೇವಚೋಳ ಮಹಾಅರಸರನ್ನು ಹೆಸರಿಸಬಹುದು.

ಅಡಿಟಿಪ್ಪಣಿಗಳು

೧. ಎ.ಕ. ಸಂ. ೮, ಹಾಸನ ೧೦.

೨. K.V. Ramesh, Inscription of the Western Gangas, No. 15.

೩. ಎ.ಕ. ಸಂ. ೧೧ ಚಿ.ಮ. ೧೮; K.V. Ramesh, Inscription of the Western Gangas, No. 26.

೪. ಕ.ವಿ.ಶಾ.ಸಂ. ೫, ಆಂಧ್ರ ಪ್ರದೇಶದ ಕನ್ನಡ ಶಾಸನಗಳು, ಭಾಗ–೧, ಶಾ.ಸಂ. ೩೬೨, ನೋಡಿ ಡಾ. ಎನ್.ಆರ್. ಲಲಿತಾಂಬ 'ಏಕ್ಕಟಿಗ ವೀರಪಡೆ', ಇತಿಹಾಸ ದರ್ಶನ, ಸಂ. ೨೫, ಪುಟ ೨೬೩.

೫. ಜಿ. ದೀಕ್ಷಿತ್, ಬಿ. ರಾಮಸ್ವಾಮಿ ಮತ್ತು ಭಾರ್ಗವಿ ಶಿವಯ್ಯ, ಶ್ರೀ ಕೃಷ್ಣದೇವರಾಯನ ಜೀವನ ಮತ್ತು ಸಾಧನೆಗಳು, ಪುಟ ೩೬.

೬ ಕ.ವಿ.ಶಾ.ಸಂ. ೫, ಆಂಧ್ರ ಪ್ರದೇಶದ ಕನ್ನಡ ಶಾಸನಗಳು, ಭಾಗ–೧, ಶಾ.ಸಂ. ೩೯.

೭. ಎ.ಕ. ಸಂ. ೪, ಕೊ. ೯.

೮. ಎ.ಕ. ಸಂ. ೪, ಕೊ. ೮೮.

೯. ಎ.ಕ. ಸಂ. ೪, ಕೊ. ೯೦.

೧೦. ಎ.ಕ. ಸಂ. ೪, ಹುಣಸೂರು, ೧೨೧.

೧೧. ಎ.ಕ. ಸಂ. ೩, ನಂಜನಗುಡು, ೩೩೭.

೧೨. ಎ.ಕ. ಸಂ. ೪, ಚಾ. ೨೬೮.

೧೩. ಎ.ಕ. ಸಂ. ೪, ಚಾ. ೩೧೫.

೧೪. ಎ.ಕ. ಸಂ. ೪, ಯಳಂದೂರು ೧೭೬.

೧೫. ಎ.ಕ. ಸಂ. ೪, ಚಾ. ೨೩೪.

೧೬. ಎ.ಕ. ಸಂ. ೩, ಹೆ.ಕೊ. ೧೪೮, ಯಾಳ ಕೊಡುಗೆ ಬಗ್ಗೆ ಸ್ಪಷ್ಟ ಮಾಹಿತಿ ನೀಡಿದ ಡಾ. ಕಲವೀರ್ ಮನ್ವಾಚಾರ್ ಅವರಿಗೆ ಕೃತಜ್ಞತೆಗಳು.

೧೭. ಎ.ಕ. ಸಂ. ೬, ಪಾ.ಪು. ೧೩೦.

೧೮. ಎ.ಕ. ಸಂ. ೬, ಪಾ.ಪು. ೧೨೯.

೧೯. ಎ.ಕ. ಸಂ. ೬, ಪಾ.ಪು. ೧೩೧.

೪೮

ಶಾಸನಗಳ ಹಿನ್ನೆಲೆಯಲ್ಲಿ ತಗಡೂರಿನ ಇತಿಹಾಸ

ಎಸ್. ಸುದರ್ಶನ[*] ಬಿ. ಅರುಣಕುಮಾರಿ[**]

ಮೈಸೂರು ಜಿಲ್ಲೆ, ನಂಜನಗೂಡು ತಾಲೂಕಿನಲ್ಲಿರುವ ತಗಡೂರು ಗ್ರಾಮವು ಪ್ರಾಚೀನ ಕಾಲದಲ್ಲಿ ಐತಿಹಾಸಿಕವಾಗಿ ಅತ್ಯಂತ ಪ್ರಾಮುಖ್ಯತೆ ಪಡಿದಿದ್ದ ಸ್ಥಳವಾಗಿತ್ತು. ಈ ಸ್ಥಳನಾಮದ ಬಗ್ಗೆ ಹೇಳುವುದಾದರೆ ಇದು ಒಬ್ಬ ವ್ಯಕಿಯ ಹೆಸರಿನಿಂದ ಬಂದಿದ್ದು, ಅಂಕನಾಥೇಶ್ವರ ದೇವಾಲಯದ ಗರ್ಭಗೃಹದ ಎಡಭಾಗದಲ್ಲಿಯೇ 'ತಗಡೂರಯ್ಯ' ಎಂಬ ವ್ಯಕ್ತಿಯ ವಿಗ್ರಹವಿದೆ. ಆ ವ್ಯಕ್ತಿಯು ಅಲ್ಲಿನ ಲೋಹಸಂಬಂಧಿ ವಸ್ತುಗಳನ್ನು ಸಂಗ್ರಹಿಸಿ ಅದರಿಂದ ನೇಯ್ಗೆ ಕೆಲಸ ಆರಂಭಿಸಿದ. ಆ ವ್ಯಕ್ತಿಯ ವೃತ್ತಿಯ ಹೆಸರಿನಿಂದ ಆ ಸ್ಥಳಕ್ಕೆ ತಗಡೂರು ಎಂದು ಹೆಸರು ಬಂದಿರಬಹುದೆಂದು ಸ್ಥಳೀಯರಿಂದ ತಿಳಿದುಬರುತ್ತದೆ.

ಐತಿಹಾಸಿಕ ಹಿನ್ನೆಲೆಯಲ್ಲಿ ಹೇಳುವುದಾದರೆ ಇದು ಗಂಗರ ಕಾಲದಿಂದಲೂ ಪ್ರಸಿದ್ದಿ ಪಡೆದಿದ್ದ ಸ್ಥಳವಾಗಿತ್ತೆಂದು ಶಾಸನಗಳಿಂದ ತಿಳಿಯಬಹುದು ತಳವನಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ಕೊಂಗುಣಿವರ್ಮನ ಮೊಮ್ಮಗನಾದ (ಮಾಧವನ ಮಗ) ಗಂಗರ ರಾಜ ಹರಿವರ್ಮನ ಕಾಲದಲ್ಲಿ ಕೊರಾತ್ಯ ಗಾವುಂಡನ ಮಗನಾದ ಕೊಚ್ಚಾಟ ಕೊಟ್ಟ ಗಾವುಂಡನಿಗೆ ಅಪ್ಪೊಗಾಲ್ ತೊರಬಡಗೆರೆನಾಡು ಗ್ರಾಮಗಳ ಆದಾಯವನ್ನು ಬಹುಮಾನವಾಗಿ ನೀಡಿರುವ ಬಗ್ಗೆ ಮಾಹಿತಿ ಇದೆ. ಏಕೆಂದರೆ ಕೊಟ್ಟ ಗಾವುಂಡನು ಹೆಂಜಾರ ಯುದ್ಧದಲ್ಲಿ ಶತ್ರುವನ್ನು ಸೋಲಿಸಿ ರಾಣಿವಾಸದ ಖಜಾನೆಯನ್ನು ಲೂಟಿ ಮಾಡಿದನು. ಇದಕ್ಕೆ ಕೊಟ್ಟಮಂಗಲದ ನಂದಿ ಮತ್ತು ಇತರರು ಸಾಕ್ಷಿ ಎಂದು ಹೇಳಿದೆ. ಇದು ಒಬ್ಬ ವೀರನಿಗೆ ಹೇಗೆ ಪ್ರೋತ್ಸಾಹ ನೀಡುತ್ತಿದ್ದರೆಂದು ಮಾಹಿತಿ ತಿಳಿಯುತ್ತದೆ. ಇದರ ಕಾಲ ಶಕ ೮೮೦, (ಕ್ರಿ.ಶ. ೯೬೯) ಎಂದು ಶಾಸನದಲ್ಲಿ[೧] ಉಲ್ಲೇಖವಾಗಿದ್ದು, ಈ ಕಾಲ ತಪ್ಪಾಗಿರಬಹುದೆಂದು ಹೇಳಬಹುದು. ಏಕೆಂದರೆ ಗಂಗರ ಕಾಲದಲ್ಲಿ ಹರಿವರ್ಮನು ಆಳ್ವಿಕೆಗೆ ಬರುವುದು ಕ್ರಿ.ಶ. ೩೯೦ರಿಂದ ೪೧೦ರವರೆಗೆ ಆಗಿರುತ್ತದೆ. ಆದಕಾರಣ ತಾಮ್ರ ಶಾಸನದಲ್ಲಿ ಉಲ್ಲೇಖವಾಗಿರುವ ಕಾಲಕ್ಕೂ ಮತ್ತು ರಾಜ ಹರಿವರ್ಮನ ಕಾಲಕ್ಕೂ ವ್ಯತ್ಯಾಸವಿರುವುದರಿಂದ ಬರೆದಿರುವವನಿಗೆ ಕಾಲದ ಅರಿವಿಲ್ಲವೆಂದು ಅಥವಾ ಅದೊಂದು ಕೂಟ ಶಾಸನವೆಂದು ಕೂಡ ಹೇಳಬಹುದು.

ಇದೇ ಸ್ಥಳದಲ್ಲಿರುವ ಇನ್ನೊಂದು ಅಂಕನಾಥೇಶ್ವರ ದೇವಾಲಯ ಹಾಗೂ ದೇವಾಲಯದ ಶಿಲ್ಪಗಳು ಜೈನ ಬಸದಿಯಂತಿದ್ದು ಅಲ್ಲಿನ ಗರ್ಭಗೃಹದ ಸಿದ್ದೇಶ್ವರ ಲಿಂಗ ಮತ್ತು ವೀರಭದ್ರನ ಶಿಲ್ಪವನ್ನು ಸ್ಥಳೀಯರು ಅಂಕನಾಥ ಎಂದು ಕರೆಯುತ್ತಾರೆ. ಯಕ್ಷ-ಯಕ್ಷಿಯರ ಶಿಲ್ಪಗಳು ಇರುವುದರಿಂದ ಇದು ಗಂಗರ ಕಾಲದ ಜೈನರ ಬಸದಿ ನಂತರ ಅಂಕನಾಥೇಶ್ವರ ಎಂದು ಬದಲಾಗಿದೆ ಎಂದು ಹೇಳಬಹುದು. ಹಾಗೂ ಇಲ್ಲಿರುವ ಕಲ್ಲಿನ ಶಾಸನವು ಶಕ.೧೧೧೦ (ಕ್ರಿ.ಶ ೧೧೮೮)[೨] ರದ್ದಾಗಿದ್ದು ಇದರ ಪ್ರಮುಖ ಅಂಶವೆಂದರೆ, ಒಬ್ಬ ವೀರನಿಗೆ ನೆತ್ತರು ಕೊಡುಗೆ ನೀಡಿದ ಉಲ್ಲೇಖವಿದೆ. ತಗಡೂರಿನ ಕೊಂವೆಯರ ಮಾದಗಾವುಂಡನ ಮಗ ಕುಂಬಗಾವುಂಡನಿಗೆ ಈ ನೆತ್ತರು ಕೊಡುಗೆಯನ್ನು ನೀಡಲಾಗಿದೆ. ಹಿಂದೆ ಬಾಳ್ಗಳ್ಚು ನೀಡುವ ಹಾಗೆ ಅವನ ರಕ್ತಕ್ಕೆ ಸಲ್ಲಿಸುವ ಗೌರವ ಇದಾಗಿದ್ದು ಇಲ್ಲಿ ೫೦೦ ಮಣ್ಣು ಎಂದು ಹೇಳಲಾಗಿದೆ. ಇದು ಆ ಕಾಲದ ಭೂಮಿಯ ಅಳತೆ ಅಥವಾ ಮಣ್ಣಿನ ಅಳತೆಯ ಪ್ರಕಾರ ಎಂದು ಹೇಳಬಹುದು. ಇದು ಸಹ ಒಬ್ಬ ವೀರನಿಗೆ ಸಲ್ಲಿಸಿರುವ ಕೊಡುಗೆ ಅಥವಾ ಗೌರವವಾಗಿದೆ.

ಮತ್ತೊಂದು ಶಾಸನ[೩] ಶಕ ೧೨೨೪ (ಕ್ರಿ.ಶ ೧೨೮೬) ಕಾಲವಾಗಿದ್ದು ಇದರಂತೆ ಹೊಯ್ಸಳರ ವೀರನರಸಿಂಹನ ಕಾಲದಲ್ಲಿ ನೀಡಿರುವ ದಾನಶಾಸನವಾಗಿದ್ದು ಇದರ ಪೂರ್ಣಪಾಠ ಲಭ್ಯವಾಗಿಲ್ಲ. ಈ ಸ್ಥಳದಲ್ಲಿರುವ ಮೂಲನಾಥೇಶ್ವರ ದೇವಾಲಯ ಶಿಥಿಲಾವಸ್ಥೆಯಲ್ಲಿದು ವಾಸ್ತುಶಿಲ್ಪ ಶೈಲಿಯಿಂದ ಇದನ್ನು ಚೋಳರ ಕಾಲದ ದೇವಾಲಯದ ಲಕ್ಷಣ[೪] ಎಂದು ಹೇಳಲಾಗಿದೆ. ಆದರೆ ಇದು ವಿಜಯನಗರದ ಕಾಲದಲ್ಲಿ ಜೀರ್ಣೋದ್ದಾರವಾಗಿದೆ. ಅದರ ಲಕ್ಷಣಗಳಿಂದ ತಿಳಿಯ ಬಹುದು.

* ಪೋಸ್ಟ್ ಡಾಕ್ಟರಲ್ ಫೆಲೋ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿವಿ ಮೈಸೂರು, ಮೊ. ೭೮೯೯೨೮೩೯೧೮

** ಉಪನ್ಯಾಸಕಿ, ಸ.ಪ.ಪೂ. ಕಾಲೇಜು, ತಳಗವಾರ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.



ಅಂಕನಾಥೇಶ್ವರ ದೇವಾಲಯದ ಹೊರಾಂಗಣ ನೋಟ



ಅಂಕನಾಥೇಶ್ವರ ದೇವಾಲಯದ ಮಧ್ಯಭಾಗ



ಗರ್ಭಗೃಹದ ವೀರಭದ್ರೇಶ್ವರ



ಮೇಲ್ಚಾವಣಿಯಲ್ಲಿರುವ ಶಿಲ್ಪ




ಮೂಲನಾಥೇಶ್ವರ ದೇವಾಲಯದ ನೋಟ



ಲಕ್ಷ್ಮಿನಾರಾಯಣ ದೇವಾಲಯ ಹೊರ ನೋಟ




ಮೂಲನಾಥೇಶ್ವರ ದೇವಾಲಯದ ಬಳಿಯಿರುವ ವೀರಗಲ್ಲಿನ ಶಾಸನ



ಹೊಯ್ಸಳರ ಕಾಲದಲ್ಲಿನ ಶಾಸನ



ನವರಂಗದ ತಮಿಳು ಶಾಸನ



ನಶಿಸಿ ಹೋಗುತ್ತಿರುವ ಶಿಲ್ಪಗಳು

ಇದೇ ದೇವಾಲಯದಲ್ಲಿರುವ ಮತ್ತೊಂದು ಕಲ್ಲಿನ ಶಾಸನ ಕ್ರಿ.ಶ. ೧೩೬೮[೫] ಇದರಂತೆ ವಿಜಯನಗರ ಕಾಲದ ವೀರಬುಕ್ಕಣ ಒಡೆಯರ ಮಗ ಚಿಕ್ಕ ಕಂಪಣ್ಣನ ಆಳ್ವಿಕೆಯಲ್ಲಿ ತಗಡೂರಿನ ನಾಯಕ ರಾಮರಸನ ಅದಿಪತ್ಯದಲ್ಲಿ (ಆಳ್ವಿಕೆಯಲ್ಲಿ) ಅಲ್ಲಿನ ಅಧಿಕಾರಿಗಳು, ಮಹಾಪ್ರಭುಗಳು, ಮುಖ್ಯವಾಗಿ ಆ ನಾಡಿನ ಸಮಸ್ತ ಪ್ರಜೆಗಳು ಎಲ್ಲರೂ ಸೇರಿ ಮೂಲನಾಥ ದೇವರ ನಂದಾದೀವಿಗೆ ಹಾಗೂ ಪೂಜೆಗಳಿಗೆ ೨೦ ಹೊನ್ನನ್ನು ದಾನ ನೀಡಲಾಗಿದೆ.

ಇದೇ ಮೂಲನಾಥೇಶ್ವರ ದೇವಾಲಯದ ಮತ್ತೊಂದು ಶಾಸನ[೬] ೧೪ನೇ ಶತಮಾನದಾಗಿದ್ದು ಇದರಂತೆ ಒಬ್ಬ ಜೈನ ಮಹಿಳಾ ಸನ್ಯಾಸಿಯ ಶಿಷ್ಯ(ತಪಸ್ವಿ) ನಾಗನಂದಿ ಅನಂತ ಭಟ್ಟಾರಕ ಕೊಂಡ ಕುಂಡ ಸಂತತಿ ಮತ್ತು ಅವರ ಸಂಘದವರಿಗೆ ಸ್ವರ್ಗಲೋಕ ಪ್ರಾಪ್ತಿಯಾಗಲೆಂದು ಉಲ್ಲೇಖಿಸಿದೆ.

ಇದೇ ಮೂಲನಾಥೇಶ್ವರ ದೇವಾಲಯದ ಹಿಂಭಾಗದ ಮತ್ತೊಂದು ಶಾಸನ[೭] ವಿಜಯನಗರದ ಅರಸ, ನಂಜರಾಜ ಒಡೆಯರ ಆಳ್ವಕೆ ಕಾಲದಲ್ಲಿದ್ದ ೧೪ ನಾಡುಗಳಲ್ಲಿ ತಗಡೂರು ಒಂದು ಪ್ರಮುಖ ನಾಡಾಗಿದ್ದು ಇದಕ್ಕೆ ನಾಗರಸ

ಎಂಬುವವನು ನಾಯಕನಾಗಿದ್ದ. ಮೂಲಸ್ಥಾನದೇವ ಮತ್ತು ಲಕ್ಷ್ಮಿಕಂಠ ದೇವಾಲಯ ಆಗಿನ ಪ್ರಮುಖ ದೇವಾಲಯಗಳಾಗಿದ್ದು ಇವುಗಳಿಗೆ ಅನೇಕ ರೀತಿಯ ಸುಂಕಗಳನ್ನು ದಾನ ನೀಡಿರುವ ಉಲ್ಲೇಖವಿದೆ. ಮೂಲನಾಥೇಶ್ವರ ದೇವಾಲಯದ ಶಾಸನ[೮] ೧೫ನೇ ಶತಮಾನದಾಗಿದ್ದು ದೇವರ ಅಭಿಷೇಕಕ್ಕೆ ಕಣ್ಣಪ್ಪ ನಾಯಕರು ತೆಂಗಿನ ತೋಟವನ್ನು ದಾನ ನೀಡಿರವುದನ್ನು ಉಲ್ಲೇಖಿಸಿದೆ.

ತಗಡೂರಿನ ಮತ್ತೊಂದು ಪ್ರಮುಖ ದೇವಾಲಯವಾದ ಗಣಪತಿ ದೇವಾಲಯದಲ್ಲಿ ಇರುವ ಕಲ್ಲಿನ ಶಾಸನವು ಕ್ರಿ.ಶ. ೧೫೪೩ರ ದಾಗಿದ್ದು[೯] ಇದರಂತೆ ಶ್ರೀ ವೀರದೇವರಾಜ ಒಡೆಯರು ತಗಡೂರು ಗ್ರಾಮದ ಕರೆಯ ನಂಜಯ್ಯ ದೇವರಿಗೆ ಕಿಮಿಹಳ್ಳಿ ಎಂಬ ಗ್ರಾಮವನ್ನು ಉಂಬಳಿಯಾಗಿ, ಆ ಗ್ರಾಮದ ಅನುದಾನವನ್ನು ಅನುಭವಿಸಬಹುದೆಂದು ಹೇಳಲಾಗಿದೆ.

ತಗಡೂರಿನ ಮತ್ತೊಂದು ಪ್ರಮುಖ ದೇವಾಲಯವಾದ ಲಕ್ಷ್ಮಿಕಾಂತ/ಲಕ್ಷ್ಮಿನಾರಾಯಣ ದೇವಾಲಯದ ನವರಂಗದ ೪ ಕಂಬಗಳಲ್ಲಿ ಶಾಸನಗಳಿದ್ದು[೧೦] ಇವು ತಮಿಳು ಭಾಷೆಯಲ್ಲಿವೆ. ಆ ನಾಲ್ಕು ಕಂಬಗಳನ್ನು ದೊಡ್ಡ ಕವಲಂದ್ಯೆ ಗ್ರಾಮದ ಮಾರಗಾವುಂಡರ ಮಕ್ಕಳು ಹಾಗೂ ಅವರ ಕುಟುಂಬದವರು ಕಂಬಗಳನ್ನು ಹಾಕಿಸಿ ರಕ್ಷಣೆ ಮಾಡಿದ್ದರು.

ಹೀಗೆ ತಗಡೂರಿನಲ್ಲಿ ಅಂಕನಾಥೇಶ್ವರ, ಮೂಲನಾಥೇಶ್ವರ, ಗಣಪತಿ ಮತ್ತು ಲಕ್ಷ್ಮಿನಾರಾಯಣ ದೇವಾಲಯಗಳು ಗಂಗರ ಕಾಲದಿಂದಲೂ ಪ್ರಾಮುಖ್ಯತೆಯನ್ನು ಪಡೆದಿದ್ದು, ಆಗಿನ ಕಾಲದಿಂದಲೂ ರಾಜ ಮತ್ತು ಅಧಿಕಾರಿಗಳು ಇತರರ ಸೇವೆ ನಿರಂತರವಾಗಿ ನಡೆದುಕೊಂಡು ಬಂದಿದೆ. ಮತ್ತೊಂದು ಪ್ರಮುಖ ಅಂಶವೆಂದರೆ ಒಬ್ಬ ರಾಜನಿಗೆ ದಾನ ನೀಡಿರುವುದಿಲ್ಲ– ಒಬ್ಬ ವೀರನಿಗೆ ಕೊಟ್ಟ ದಾನದ ಉಲ್ಲೇಖವಿದ್ದು, ವೀರನಿಗೆ ಯಾವ ರೀತಿಯ ಗೌರವ ನೀಡುತ್ತಿದ್ದರೆಂದು ತಿಳಿಯುತ್ತದೆ.

ಅಡಿಟಿಪ್ಪಣಿಗಳು

೧. ಎ.ಕ. ಸಂ. ೩, ಶಾ.ಸಂ. ೨೬೨, ಪು.ಸಂ. ೩೪೦.

೨. ಶಾ.ಸಂ. ೨೬೫, ಎ.ಕ. ಸಂ. ೩, ಪು.ಸಂ. ೩೪೩.

೩. ಶಾ.ಸಂ. ೨೫೭.

೪. History of Western Gangas, B.Sheikali, p. 49.

೫. ಶಾ.ಸಂ. ೨೫೮.

೬ ಶಾ.ಸಂ. ೨೬೩.

೭. ಶಾ.ಸಂ. ೨೫೯.

೮. ಶಾ.ಸಂ. ೨೬೪.

೯. ಶಾ.ಸಂ. ೨೬೬.

೧೦. ಶಾ.ಸಂ. ೨೬೮–೨೭೧.

೪೯

ಹೂವಿನಹಡಗಲಿ ತಾಲೂಕಿನ ಶಾಸನೋಕ್ತ ಮನೆ ದಾನಗಳು

ಎ. ನಾಗವೇಣಿ*

ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕು ಜಿಲ್ಲೆಯ ನೈರುತ್ಯ ಭಾಗದಲ್ಲಿದೆ. ಹೂವಿನಹಡಗಲಿ ಎಂದು ಕರೆಯಲ್ಪಡುತ್ತಿದ್ದ ಈ ಪ್ರದೇಶದ ಹೆಸರಿನಲ್ಲಿ ಕಾಲಕ್ರಮೇಣ ಹೂವಿನ ಎಂಬ ಪದವು ಮಾಯವಾಗಿ ಹಡಗಲಿ ಎಂಬುದು ಮಾತ್ರ ಉಳಿದುಕೊಂಡಿತು. ಆದರೆ ಸರಕಾರಿ ದಾಖಲೆಗಳಲ್ಲಿ ಹೂವಿನಹಡಗಲಿ ಎಂದೇ ದಾಖಲಾಗಿದೆ. ಇಂದು ಹಡಗಲಿ, ಹಡಗ್ಲಿ ಹಾಗೂ ಹೂವಿನಹಡಗಲಿ ಎಂದು ಸಹ ಜನರ ಭಾಷೆಯಲ್ಲಿ ಬಳಕೆಯಲ್ಲಿ ಇದೆ.

ಇಲ್ಲಿಯ ಉತ್ತಮ ಭೌಗೋಳಿಕ ಪರಿಸರವು ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ತನ್ನದೇ ಆದ ಪಾತ್ರ ನಿರ್ವಹಿಸಿದೆ. ಈ ಪರಿಸರದಲ್ಲಿ ಪ್ರಾಗೈತಿಹಾಸಿಕ ಮಾನವರಿಗೆ ಸೇರಿದ ಸುಮಾರು ೨೮ಕ್ಕೂ ಹೆಚ್ಚು ನೆಲೆಗಳಿವೆ.

ಈ ಪ್ರದೇಶವನ್ನು ಕರ್ನಾಟಕದ ವಿವಿಧ ಅರಸು ಮನೆತನಗಳು ಆಳ್ವಿಕೆ ಮಾಡಿದವು. ಆಳ್ವಿಕೆ ಮಾಡಿದ ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ದ್ವಾರಸಮುದ್ರದ ಹೊಯ್ಸಳರು, ಕುಮ್ಮಟದುರ್ಗದ ಅರಸರು, ಕುರುಗೋಡಿನ ಸಿಂಧರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ನೊಳಂಬ ಪಲ್ಲವರು, ಸೇವುಣರು, ವಿಜಯನಗರದ ಅರಸರು, ಪಾಳೆಯಗಾರರು, ಮೈಸೂರು ಒಡೆಯರು, ಸುಲ್ತಾನರು ಮತ್ತು ಬ್ರಿಟಿಷರು ಇಲ್ಲಿ ಆಳ್ವಿಕೆ ಮಾಡಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ರಾಜರು ಇಲ್ಲವೇ ಅವರ ಸಾಮಂತರು ತಮ್ಮ ಅಧಿಕಾರಾವಧಿಯಲ್ಲಿ ಹಲವಾರು ಶಾಸನಗಳನ್ನು ಹೊರಡಿಸಿದ್ದಾರೆ ಹಾಗೂ ದೇವಾಲಯಗಳನ್ನು ನಿರ್ಮಿಸಿದ್ದಾರೆ.

ಶಾಸನೋಕ್ತ ಮನೆ ದಾನಗಳನ್ನು ಹಡಗಲಿ ತಾಲೂಕಿನಲ್ಲಿರುವ ೧೩೦ ಶಾಸನಗಳು ಚಾಲುಕ್ಯರ ಆಳ್ವಿಕೆಯ ಕಾಲದಿಂದ ಹಿಡಿದು ಪಾಳೆಯಗಾರರ ಆಳ್ವಿಕೆಯವರೆಗೆ ಕಂಡುಬರುತ್ತವೆ. ಶಾಸನಗಳಲ್ಲಿ ದಾನ ಶಾಸನಗಳೇ ಅಧಿಕ ಪ್ರಮಾಣದಲ್ಲಿವೆ. ಚಾಲುಕ್ಯ, ಹೊಯ್ಸಳರ ಕಾಲದಲ್ಲಿ ಹೆಚ್ಚು ದಾನಶಾಸನಗಳು ಕಂಡುಬರುತ್ತವೆ. ರಾಜರು ನೇರವಾಗಿ ದಾನ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ದಂಡನಾಯಕರು, ಸಾಮಂತರು, ಪ್ರಜೆಗಳು ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿಯೂ ದಾನ-ಧರ್ಮದ ಕಾರ್ಯಗಳಲ್ಲಿ ಭಾಗಿಯಾಗಿರುವರು.

ದಾನ ಎಂಬುದು ಎಲ್ಲ ಧರ್ಮಗಳ ಮೂಲ ಅಡಿಪಾಯವಾಗಿದೆ. ದಾನವು ಮಾನವನ ಜೀವನದ ಮೌಲ್ಯಗಳಲ್ಲಿ ಒಂದಾಗಿದೆ. ದಾನಕ್ಕೆ ನಾನಾ ಅರ್ಥಗಳಿವೆ. ಸಾಮ, ದಾನ, ಭೇದ, ದಂಡಗಳೆಂಬ ಚತುರೋಪಾಯಗಳಲ್ಲಿ ದಾನವು ಒಂದು. ಶಬ್ದಕೋಶಗಳ ಪ್ರಕಾರ ದಾನ ಎಂದರೆ ಕೊಡುಗೆ, ಕಾಣಿಕೆ, ಉಪಾಯನ, ಉಡುಗೊರೆ ಎಂದರ್ಥ. (ಕನ್ನಡ ನಿಘಂಟು, ಕ.ಸಾ.ಪ. ಸಂ. ೪, ಪು. ೩೮೬೨) ಯಾವುದೇ ಒಂದು ವಸ್ತುವನ್ನು ಸ್ವಯಂ ಪ್ರೇರಿತವಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ಇತರರಿಗೆ ನೀಡುವುದು ದಾನವಾಗಿದೆ. ಭಾರತೀಯ ಪರಂಪರೆಯಲ್ಲಿ ದಾನ ಮೋಕ್ಷ ಸಂಪಾದನೆಯ ಮಾರ್ಗವಾಗಿದೆ.

ಮೈಲಾರ, ಹಿರೇಹಡಗಲಿ, ಹೂವಿನಹಡಗಲಿ, ಕುರುವತ್ತಿ, ಹೊಳಲು, ಮಾಗಳ, ರಂಗಾಪುರ ಮತ್ತು ಕೊಟ್ನೆಕಲ್‌ಗಳಲ್ಲಿ ದೊರೆತ ಶಾಸನಗಳಲ್ಲಿ ಮನೆ ದಾನದ ಉಲ್ಲೇಖವಿರುವುದು ಕಂಡುಬರುತ್ತದೆ.

ಮೈಲಾರ: ಸೋಮಲಿಂಗೇಶ್ವರ ದೇವಾಲಯದ ದ್ವಾರದ ಬಳಿಯಿರುವ ಶಾಸನ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲನ ಕ್ರಿ.ಶ. ೦೧.೦೨.೧೦೪೬ರ ಕಾಲದ್ದಾಗಿದೆ. ಮಹಾಮಂಡಳೇಶ್ವರ ಗಂಡರಾದಿತ್ಯರಸನು ಸಿಂಧವಾಡಿ ೧೦೦೦, ಕೋಗಳಿ ೫೦೦, ನರಗುಂದ ಅಗ್ರಹಾರ ಮತ್ತು ಬೆಣ್ಣೆವೂರುಗಳನ್ನು ಆಳುತ್ತಿರುವಾಗ ಹೆಗ್ಗಡೆ (ಪೆರ್ಗಡೆ) ಕಾಳಿದಾಸಯ್ಯನು ಮೆಳಿಮಡುವಿನ ತೇಜೋರಾಸಿಪಂಡಿತರ ಶಿಷ್ಯರಾದ ಚೆಲ್ಲುಕಾಚಾರ್ಯರಿಗೆ ಪಾದ ತೊಳೆದು ಸ್ವಯಂಭುದೇವರ ಮತ್ತು ಮೂಲಸ್ಥಾನದೇವರ ಸೇವಾಕಾರ್ಯಗಳಿಗಾಗಿ ಸರ್ವಬಾಧಾ ಪರಿಹಾರವೆಂದು ೨ ಮನೆ, ೧ ಅಂಗಡಿ ಧಾರೆಯೆರೆದು ಕೊಟ್ಟರು.

* ೧೮ನೇ ವಾರ್ಡ್, ಕಮಲಾಪುರ, ಮೊ: ೯೪೪೯೧೩೬೨೨೨

ಶಾಸನವು ಒಟ್ಟು ೫೬ ಸಾಲುಗಳಿಂದ ಕೂಡಿದೆ. ೨೭ನೇ ಸಾಲಿನಲ್ಲಿ "ಸರ್ವಬಾಧಾ ಪರಿಹಾರಮೆಂದು ಕೊಟ್ಟ ಮನೆ ಎರಡು ಅಂಗಡಿ ಒನ್ದು" ೨ ಮನೆದಾನ ಮತ್ತು ೧ ಅಂಗಡಿ ದಾನದ ಉಲ್ಲೇಖ ಕಂಡುಬರುತ್ತದೆ.[೨] (ಶಾ.ಸಂ. ೨೩, ಪು. ೩೨೯).

ಹಿರೇಹಡಗಲಿ: ಭೀಮೇಶ್ವರ-ದೇಮೇಶ್ವರ ದೇವಾಲಯದ ಮುಂದೆ ಇರುವ ಕ್ರಿ.ಶ. ೨೪.೦೪.೧೦೫೭ರ ಶಾಸನವು ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲದೇವನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಮಹಾಮಾತ್ಯನಾದ ದೇಮರಸನು ಪೊಸವಡಂಗಿಲೆಯಲ್ಲಿ ದೇಮೇಶ್ವರ ದೇವಾಲಯವನ್ನು ಕಟ್ಟಿಸಿ, ದೇವರ ಸೇವಾಕಾರ್ಯಗಳಿಗಾಗಿ ಮಹಾಅಗ್ರಹಾರ ಹೊಸ ಹಡಗಲಿಯ ೧೨೦ ಮಹಾಜನಗಳ ಕೈಯಿಂದ ಸರ್ವಮಾನ್ಯವಾಗಿ ದೇಮರಸರು ಊರಿನ ಮಾಳಪಶತದ ತಳವಾಗಿಲ ಒಂದು ಮನೆದಾನ, ತೋಟ, ಗದ್ದೆ ಮುಂತಾದವನ್ನು ದಾನ ಮಾಡುತ್ತಾನೆ.

ಶಾಸನದ ೮೯ ಸಾಲುಗಳು ಸ್ಪಷ್ಟವಾಗಿವೆ. ಮುಂದಿನ ಕೆಲವು ಸಾಲುಗಳು ಅಳಿಸಿ ಹೋಗಿವೆ. ಶಾಸನದ ೫೦ನೇ ಸಾಲಿನಲ್ಲಿ "ಮಾಳಪಶತದ ತಳವಾಗಿಲ ಮನೆ ೧" ತಳವಾಗಿಲ ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೩] (ಶಾ.ಸಂ. ೫೨, ಪು. ೩೬೦).

ಹೂವಿನಹಡಗಲಿ: ಕೇಶವಸ್ವಾಮಿ ದೇವಾಲಯದ ಪಶ್ಚಿಮ ದಿಕ್ಕಿನ ಪ್ರವೇಶ ದ್ವಾರದ ಬಳಿಯ ಶಾಸನವು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ದಾನ ಮಾಡಿದ ಉಲ್ಲೇಖಗಳನ್ನೊಳಗೊಂಡಿದೆ. ಬಹುವಿಧದ ದಾನಗಳು ಇಲ್ಲಿ ಕಂಡುಬರುತ್ತವೆ. ಕ್ರಿ.ಶ. ೨೪.೧೧.೧೯೦ರ ಚಾಲುಕ್ಯ ದೊರೆ ತ್ರಿಭುವನಮಲ್ಲದೇವನ ಆಳ್ವಿಕೆಯಲ್ಲಿ ಅವನ ಮಾಂಡಲಿಕ ಮಹಾಮಂಡಲೇಶ್ವರ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದಾಗ ಶೂರಬ್ರಾಹ್ಮಣ ಸೇನಾಪತಿ ರವಿಗ ಅಥವಾ ರವಿದೇವನ ಪತ್ನಿಯಾದ ರೆಬ್ಬಲದೇವಿಯು ತನ್ನ ಹುಟ್ಟೂರಾದ ಪೂವಿನಪೊಸವಡಂಗಿಲೆಯಲ್ಲಿ ಕೇಶವ ದೇವಾಲಯವನ್ನು ಕಟ್ಟಿಸಿ, ದೇವರನ್ನು ಪ್ರತಿಷ್ಠಾಪಿಸಿ, ದೇವರ ಸೇವಾಕಾರ್ಯಗಳಿಗಾಗಿ ಮತ್ತು ಬ್ರಾಹ್ಮಣರ ಆಹಾರ ಸತ್ರಕ್ಕಾಗಿ, ಹೂತೋಟಕ್ಕಾಗಿ ಭೂದಾನ, ಮನೆದಾನ ಮುಂತಾದವನ್ನು ಅಲ್ಲಿನ ಬ್ರಾಹ್ಮಣ ಮಹಾಜನಗಳ ಸಮ್ಮುಖದಲ್ಲಿ ದಾನ ಮಾಡಿದಳು.

ಶಾಸನವು ಒಟ್ಟು ೭೩ ಸಾಲುಗಳಿಂದ ಕೂಡಿದೆ. ೫೪ನೇ ಸಾಲಿನಲ್ಲಿ "ಮೂಡಲೂರೊಡೆಯರ ಮಾನ್ಯದೊಳಗೆ ಸತ್ರಕ್ಕೆ ಬಿಟ್ಟ ಎರೆಯ ಕೆಯಿ ಮತ್ತರ್ ೨ ಆ ಸತ್ರಕ್ಕೆ ಮನೆ ೧" ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೪] (ಶಾ.ಸಂ. ೮೩, ಪು. ೪೧೫).

ಕೊಟ್ನೆಕಲ್ಲು: ಕೋಟೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕಲ್ಲಿನಲ್ಲಿರುವ ಕ್ರಿ.ಶ. ೨೭.೦೭.೧೧೭೮ರ ಶಾಸನವು ವಿಜಯಪಾಂಡ್ಯದೇವನು ಕೋಟಿಶಂಕರ ದೇವರ ಸೇವಾಕಾರ್ಯಗಳಿಗೆ ಒಂದು ಮನೆ ಮತ್ತು ೩೮೦ ಕಂಬ ತೋಟವನ್ನು ಸರ್ವ ಬಾಧಾಪರಿಹಾರವಾಗಿ ದಾನ ಮಾಡಿರುವುದನ್ನು ಉಲ್ಲೇಖಿಸುತ್ತದೆ.

ಶಾಸನವು ಒಟ್ಟು ೬೮ ಸಾಲುಗಳಿಂದ ಕೂಡಿದೆ. ೬೭ನೇ ಸಾಲಿನಲ್ಲಿ "ಹೂವಿನಹಡಂಗಿಲೆಯ ಚಲ್ಲಿಯಕೇರಿಯಲ್ಲಿವರ ಮಾಳಿಗೆ ಮನೆ ಸರ್ವ್ವವಂ ದೇಸುಕ್ಕೈ ಏಳು" ಮಾಳಿಗೆ ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೫] (ಶಾ.ಸಂ. ೮೧, ಪು. ೪೦೮).

ಹೊಳಲು: ವೀರಭದ್ರ ದೇವಾಲಯದ ಪೂರ್ವ ಗೋಡೆಯ ಬಳಿ ನಿಲ್ಲಿಸಿರುವ ಶಾಸನದ ಕಾಲ ಕ್ರಿ.ಶ. ೦೩.೦೭.೧೯೪. ಇದು ಹೊಯ್ಸಳ ದೊರೆ (ಇಮ್ಮಡಿ) ವೀರಬಲ್ಲಾಳನ ಕಾಲದ್ದಾಗಿದ್ದು, ಬಸವೆಯನಾಯಕನೆಂಬುವವನು ಚೋರರೊಡನೆ ಹೋರಾಡಿ ಸಾವನ್ನಪ್ಪಿದನು. ಈ ಸೇವಾಕಾರ್ಯಕ್ಕಾಗಿ ಊರಿನ ಮಹಾಜನರು ರಣರಂಗಭೈರವ ಬಸವೆಯನಾಯಕನ ಮಗ ಚೌಡೆಯನಾಯಕನಗೆ ಭೂದಾನ, ಮನೆದಾನ ನೀಡಿದರು.

ಶಾಸನವು ಒಟ್ಟು ೧೮ ಸಾಲುಗಳಿಂದ ಕೂಡಿದೆ. ೧೭ನೇ ಸಾಲಿನಲ್ಲಿ "ಗವುಂಡಗೇರಿಯ ಮನೆಯಂ ಸರ್ವ್ವಬಾಧಾಪರಿಹಾರವಾಗಿ ಮಾ(ಂ)ನ್ಯಮಂ ಬಿಟ್ಟರು" ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೬] (ಶಾ.ಸಂ. ೩೫, ಪು. ೩೪೦).

ಹೊಳಲು: ಅನಂತಶಯನ ದೇವಾಲಯದ ಎದುರಿಗೆ ಇರುವ ಶಾಸನವು ಶ್ರೀಮುಖ ಸಂವತ್ಸರದ ಉತ್ತರಾಯಣ ಸಂಕ್ರಾನ್ತಿಯಂದು ಪಾಂಡ್ಯದೇವನು ನೊಳಂಬವಾಡಿ-೩೨೦೦೦ವನ್ನು ಆಳುತ್ತಿರುವ ವಿಷಯ ತಿಳಿಸುತ್ತದೆ. ಅಣ್ಣಯ್ಯಭಟ್ಟರ ಮಕ್ಕಳು ೩೦ ಕಂಬದ ಗದ್ದೆ ಬಿಟ್ಟರು. ದೇವರ ಮನೆ ಸಹಿತ ಬಿಟ್ಟರು. ದೇವರ ತುಡಿಕೆ ಪಡುವಣ ದೆಸೆಯಲೊಂದು.

ಶಾಸನವು ಒಟ್ಟು ೩೭ ಸಾಲುಗಳಿಂದ ಕೂಡಿದೆ. ೨೩ನೇ ಸಾಲಿನಲ್ಲಿ "ಅಣ್ಣಯಭಟ್ಟರ ಮಕ್ಕಳು ಬಿಟ್ಟಗದ್ದೆ ಕಂಬ ೩೦॥ ದೇವರ ಮನೆ ಸಹಿತ [ಮನೆ॥] ದೇವರ ತುಡಿಕೆ ಪಡುವಣ ದೆಸೆಯಲೊಂದು" ದೇವರ ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೭] (ಶಾ.ಸಂ. ೪೦, ಪು. ೩೪೯).

'ತುಡಿಕೆ' ಇದು ಅಚ್ಚಗನ್ನಡ ಶಬ್ಧವಾಗಿದೆ. ತುಡಿ–ಕ್ರಿಯಾಪದ, ತುಡಿಕೆ–ನಾಮಪದ. ತುಡಿಕೆ ಎಂದರೆ 'ದೇವರಿಗೆ ಸಂಬಂಧಿಸಿದ ಪೂಜಾ ಸಾಮಾನುಗಳನ್ನು ಶೇಖರಿಸಿಡುವ ಮನೆ.'[೮]

ಇಲ್ಲಿ ಮಾತ್ರ ಪಡುವಣ–ಪಶ್ಚಿಮ ದಿಕ್ಕಿನ ಮನೆಯ ಉಲ್ಲೇಖವಿದೆ.

ಹಿರೇಹಡಗಲಿ: ವೀರಭದ್ರ ದೇವಾಲಯದ ಮುಂದೆ ಬಿದ್ದಿರುವ ಶಾಸನದ ಕಾಲ ಕ್ರಿ.ಶ. ೦೧.೦೩.೮೫೧. ಲಿಪಿ ದೃಷ್ಟಿಯಿಂದ ಕ್ರಿ.ಶ. ೧೧–೧೨ನೇ ಶತಮಾನಕ್ಕೆ ಸರಿಹೋಗುತ್ತದೆ. ಶಾಸನದಲ್ಲಿ ಆ ಊರಿನ ನಾಯಕರಾದ ಮಾದಿಮಯ್ಯನಾಯಕ, ಅವರ ಮಗ ಬಾಚಿಮಯ್ಯ ನಾಯಕ ಹಾಗೂ ಅವರ ಮಗ ಮಲ್ಲಿಯಣ್ಣನು ಪರಸ್ಪರ ಹೊಂದಾಣಿಕೆಯಿಂದ ಮಲ್ಲಿಕಾರ್ಜುನ ದೇವರ ಸೇವಾಕಾರ್ಯಗಳಿಗೆ ಭೂದಾನ, ಮನೆದಾನ ಮಾಡಿದ ಉಲ್ಲೇಖವಿದೆ.

ಶಾಸನವು ಒಟ್ಟು ೪೧ ಸಾಲುಗಳಿಂದ ಕೂಡಿದೆ. ೩೧–೩೨ನೇ ಸಾಲಿನಲ್ಲಿ "ಮೂಲಸ್ತಾನಗೇರಿ ಒಳಗೆ ರುದ್ರಭಟ್ಟನ ಮನೆಇಂ ಪಡುವಲು ಎಕ್ಕೈಇ ಎಕ್ಕೈಇ ೨ ಮನೆ ಬಡಗವಾಗಿಲು ಮುಸ್ತನ್ನದೇವರ್ಗ್ಗೆ" ಬಡಗ ಬಾಗಿಲ (ಉತ್ತರ ಬಾಗಿಲ) ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೯] (ಶಾ. ಸಂ. ೫೬, ಪು. ೩೭೨).

ಹಿರೇಹಡಗಲಿ: ಭೀಮೇಶ್ವರ–ದೇಮೇಶ್ವರ ದೇವಾಲಯದ ಮುಂದೆ ಇರುವ ಇನ್ನೊಂದು ಕ್ರಿ.ಶ. ೦೮.೦೧.೧೨೧೨ರ ಶಾಸನವು ಹೊಯ್ಸಳ ದೊರೆ ವಿಷ್ಣುವರ್ಧನ ಇಮ್ಮಡಿ ವೀರಬಲ್ಲಾಳನು ಹಳ್ಳವುರ (ವಿಜಯಸಮುದ್ರ) ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಹಿರಿಯ ರಾಣಿ ಪದುಮಲದೇವಿ ಹೊಸ ಹಡಗಲಿಯನ್ನು ಆಳುತ್ತಿದ್ದಳು ಎನ್ನುವ ವಿಷಯವನ್ನು ತಿಳಿಸುತ್ತದೆ. ಅವರ ಮಾವನ ಪರಸರಧಿಕಾರವಾಗಲು ಅವರು ೧೨೦ ಜನ ಮಹಾಜನಗಳ ದಿವ್ಯಪಾದ ಪದ್ಮಗಳಿಗೆ ಮಹಾಪ್ರಧಾನ ಗಂಗಿಮಯ್ಯ ನಾಯಕ ಮತ್ತು ದಾವಣಂಗಳು ನಮಸ್ಕಾರ ಮಾಡಿ ಧರ್ಮ ಪ್ರಸಂಗವೊಂದನ್ನು ಬಿನ್ನವಿಸಿಕೊಂಡರು. ಆಗ ಅವರು ಹಿರಿಯ ಕೆರೆಗೆ ಮತ್ತು ತುಂಬಿನ ಕೆರೆಗೆ ಪಡಿ ಸಲಿಸುವಂತಾಗಿ ಮಹಾಜನಗಳ ಸಮ್ಮುಖದಲ್ಲಿ ದಾನ ಮಾಡಿದರು.

ಶಾಸನವು ಒಟ್ಟು ೭೦ ಸಾಲುಗಳಿಂದ ಕೂಡಿದೆ. ೬೯ನೇ ಸಾಲಿನಲ್ಲಿ "ಊರಡಗೇರಿಯ ಬಡಗವಾಗಿಲ ಮನೆಯೊಂದು" ಬಡಗ ಬಾಗಿಲ (ಉತ್ತರ ಬಾಗಿಲ) ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೧೦] (ಶಾ. ಸಂ. ೫೩, ಪು. ೩೬೬).

ಮಾಗಳ : ವೇಣುಗೋಪಾಲಸ್ವಾಮಿ ದೇವಾಲಯದಲ್ಲಿರುವ ಶಾಸನವು ಹೊಯ್ಸಳ ದೊರೆ ವಿಷ್ಣುವರ್ಧನ ವೀರಬಲ್ಲಾಳನ ಆಳ್ವಿಕೆಯ ಕ್ರಿ.ಶ. ೦೨.೦೩.೧೨೧೫ರ ಕಾಲದ್ದಾಗಿದೆ. ಇವರ ಆಳ್ವಿಕೆಯಲ್ಲಿ ಹರಿಹರ ಊರಡೆಯರು ಮತ್ತು ಗೋವಿಂದ, ಮಾಂಗೊಳದ ಮಹಾಜನರೊಡಗೂಡಿ ದೇವರ ಪೂಜೆಗಾಗಿ ಭೂಮಿ ಮತ್ತು ತೆಂಕವಾಗಿಲ ಮನೆಯೊಂದು ದಾನ ಮಾಡಿದರು.

ಶಾಸನವು ಒಟ್ಟು ೫೬ ಸಾಲುಗಳಿಂದ ಕೂಡಿದೆ. ೫೧ನೇ ಸಾಲಿನಲ್ಲಿ "ಊರಡೆಗೇರಿಯೊಳಗೆ ಬಾವಿಯಿಂ ಪಡುವ ಬ್ರಹ್ಮದೇವಪಟ್ಟವರ್ಧನರು ಕೊಟ್ಟ ತೆಂಕವಾಗಿಲ ಮನೆಯೊಂದು" ದಕ್ಷಿಣ ಬಾಗಿಲ ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೧೧] (ಶಾ. ಸಂ. ೬೫, ಪು. ೩೮೭).

ಮಾಗಳ : ಸೂರ್ಯನಾರಾಯಣಸ್ವಾಮಿ ದೇವಾಲಯದ ಕಂಬದ ಮೇಲಿನ ಶಾಸನವು ವಿಕೃತನಾಮ ಸಂವತ್ಸರದ ಶ್ರಾವಣ ಮಾಸದ ಶುದ್ಧಹುಣ್ಣಿಮೆ ಸೋಮವಾರದಂದು ಶ್ರೀಮತ್ ಸಮಯದ ಗರುಡ ಮಮ್ಮರಸರು ಶ್ರೀ ಸೋಮನಾಥ ದೇವರ ಆಚಾರಿ ಬಂವೋಜನಗೆ ದೇವರ ಮಾನ್ಯದ ಭೂಮಿಯನ್ನು ಹಾಗೂ ಸಾದಗೇರಿಯ ಉತ್ತರ ಬಾಗಿಲ ಮನೆಯನ್ನು, ಮೊರಡೆಯ ದಡದ ಉತ್ತರ ಬಾಗಿಲ ಮನೆಯನ್ನು ಇಷ್ಟೆಲ್ಲವನ್ನು ವೃತಿಯಾಗಿ ಮಾಡಿ ಭೂಮಿಯನ್ನು ದೇವರಿಗೆ ಕೊಟ್ಟರು.

ಶಾಸನವು ಒಟ್ಟು ೧೧ ಸಾಲುಗಳಿಂದ ಕೂಡಿದ ಚಿಕ್ಕ ಶಾಸನವಾಗಿದೆ. ೮–೯ನೇ ಸಾಲಿನಲ್ಲಿ "ಸಾದಗೇರಿಯ ಬಡಗವಾಗಿಲ ಮನೆ ಮೊರಡೆಯ ದಡದ ಬಡಗವಾಗಿಲ . ." ಉತ್ತರ ಬಾಗಿಲ ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೧೨] (ಶಾ. ಸಂ. ೬೯, ಪು. ೩೯೪).

ಕುರುವತ್ತಿ: ಮಲ್ಲಿಕಾರ್ಜುನ ದೇವಾಲಯದ ಗರ್ಭಗುಡಿಯ ಪ್ರವೇಶ ದ್ವಾರದ ಬಳಿ ಇರುವ ಎಡಕಂಬದ ತಳಭಾಗದಲ್ಲಿರುವ ಕ್ರಿ.ಶ. ೧೫.೦೧.೧೨೫೫ರ ಯಾದವ ವೀರನಾರಾಯಣ ಸಿಂಹದೇವ ತಾರಣ ಸಂವತ್ಸರದ ಮಾಘ ಮಾಸದ ಪಂಚಮಿಯಂದು ರಾಜಗುರು ಸೂರ್ಯಭರಣ ದೇವರ ಸಮ್ಮುಖದಲ್ಲಿ ೩೬ ಮತ್ತರು ಭೂಮಿಯನ್ನು ೧೨ ಮಹೇಶ್ವರರಿಗೆ ೧೨ ಮನೆಗಳನ್ನು ಅಹವಮಲ್ಲೇಶ್ವರ ದೇವರ ಕಾಲ್ಲಾಪಿಂಗೆ ಧಾರಾಪೂರ್ವಕ ಮಾಡಿಬಿಟ್ಟರು.

ಈ ಶಾಸನವು ಒಟ್ಟು ೧೩ ಸಾಲುಗಳಿಂದ ಕೂಡಿದ್ದು, ೭ನೇ ಸಾಲಿನಲ್ಲಿ "ಮಾಹೇಸ್ವರಿಗೆ ದೇವರ ಪುರದೊಳಗೆ ಹಂನೆರಡು ಮನೆ ಸಹಿತವಾಗಿ ಆಹುಮಲ್ಲೇಶ್ವರ ದೇವರ ಕಾಲ್ಗಾಪಿಂಗೆ ಧಾರಾಪೂರ್ಬ್ಬಕಂ ಮಾಡಿಕೊಟ್ಟರು" ಎಂಬ ಉಲ್ಲೇಖವಿದೆ.[೧೩] (ಶಾ. ಸಂ. ೯, ಪು. ೩೧೭).

ರಂಗಾಪುರ : ನರಸಿಂಹ ದೇವಾಲಯದ ಕೈಸಾಲೆಯಲ್ಲಿನ ಕಂಬದಲ್ಲಿನ ಶಾಸನವು ಹೊಯ್ಸಳ ವೀರನರಸಿಂಹನ ಆಳ್ವಿಕೆಯ ಕ್ರಿ.ಶ. ೧೪.೧೦.೧೨೫೫ರ ಕಾಲದ್ದಾಗಿದೆ. ಮಹಾಪ್ರಧಾನಿ ಪೋಲಾಳ್ವ ದಂಡನಾಯಕರು ಮಾಂಗೊಳದ ಶ್ರೀನರಸಿಂಹ ದೇವರ ನಂದಾದೀವಿಗೆಗೆ ಅಲ್ಲಿನ ಊರೊಡೆಯ ಪ್ರಮುಖರು ೨೦೦ ಮಹಾಜನರ ಸಮ್ಮುಖದಲ್ಲಿ ಫೈಸ್ಸಗೇರಿಯ ಮೊದಲು ದಕ್ಷಿಣ (ತೆಂಕವಾಗಿಲ) ಬಾಗಿಲ ಮನೆ ಗಾಣಸಹಿತ ಸರ್ವಭಾದಾ ಪರಿಹಾರವಾಗಿ ಕೊಟ್ಟರು.

ಶಾಸನವು ಒಟ್ಟು ೨೧ ಸಾಲುಗಳಿಂದ ಕೂಡಿದೆ. ೧೯–೨೦ನೇ ಸಾಲಿನಲ್ಲಿ "ಫೈಸ್ಸಗೇರಿಯ ಮೊದಲು ತೆಂಕವಾಗಿಲ ಮನೆ ಗಾಣಂ ಸಹಿತ ಸರ್ಬ್ಬಾಬಾಧೆ ಪರಿಹಾರವಾಗಿ ಕೊಟ್ಟರು" ದಕ್ಷಿಣ ಬಾಗಿಲ ಮನೆ ದಾನದ ಉಲ್ಲೇಖ ಕಂಡುಬರುತ್ತದೆ.[೧೪] (ಶಾ. ಸಂ. ೭೫, ಪು. ೪೦೦).

ಒಟ್ಟಾರೆಯಾಗಿ ಮೇಲಿನ ಶಾಸನಗಳಿಂದ ತಿಳಿಯುವುದೇನೆಂದರೆ, ಮನೆದಾನಗಳಲ್ಲಿ ಉತ್ತರ, ದಕ್ಷಿಣ ಮತ್ತು ಪಶ್ಚಿಮ ಬಾಗಿಲ ಮನೆಗಳನ್ನು ದಾನವಾಗಿ ನೀಡಲಾಗಿದೆ. ಎಲ್ಲಿಯೂ ಪೂರ್ವ ಬಾಗಿಲ ಮನೆಯ ಉಲ್ಲೇಖ ಕಂಡುಬರುವುದಿಲ್ಲ.

ಪ್ರಸ್ತುತ ಸಮಾಜದಲ್ಲಿ ವಾಸ್ತುವಿಗೆ ಸಂಬಂಧಿಸಿದಂತೆ ಅನೇಕ ವಿಚಾರಗಳು ಕಂಡುಬರುತ್ತವೆ. ಪೂರ್ವ ದಿಕ್ಕಿನ ಬಾಗಿಲು ತುಂಬಾ ಶ್ರೇಷ್ಠವಾದುದು, ಶುಭಕರ ಎನ್ನುವ ಭಾವನೆ ಜನಸಾಮಾನ್ಯರಲ್ಲಿದೆ. ಅದೇ ರೀತಿ ದಕ್ಷಿಣ ದಿಕ್ಕಿನ ಬಾಗಿಲ ಮನೆ ಅಶುಭವಾದುದು, ವಾಸಕ್ಕೆ ಯೋಗ್ಯವಲ್ಲದ್ದು ಎಂಬ ನಂಬಿಕೆ ಜನರಲ್ಲಿ ಬೇರೂರಿದೆ.

ಕರಣಂ ವಿರೂಪಾಕ್ಷಗೌಡ ಅವರು ತಮ್ಮ ಹೂವಿನಹಡಗಲಿ ತಾಲೂಕು–ಸಮಗ್ರ ಶಾಸನಗಳ ಅಧ್ಯಯನದ ಪುಟ ಸಂಖ್ಯೆ ೨೭೭ರಲ್ಲಿ "ದಾನ ಮಾಡಿದ ಬಹುತೇಕ ಮನೆಗಳು ದಕ್ಷಿಣ ಬಾಗಿಲಿನ ಮನೆಗಳು.ತೆಂಕಬಾಗಿಲ ಮನೆ ವಾಸ್ತುದೋಷವೆಂದು ಭಾವಿಸಿ ವಾಸಕ್ಕೆ ಯೋಗ್ಯವಿಲ್ಲವೆಂದು ಭಾವಿಸಿ ದಾನ ಮಾಡಿದಂತಿದೆ. ಈ ಮೂಢನಂಬಿಕೆ ಈಗಲೂ ಜೀವಂತವಾಗಿದೆ" ಎಂದಿದ್ದಾರೆ. ಇವರ ಪ್ರಕಾರ ಅನುಪಯುಕ್ತ, ಯೋಗ್ಯವಲ್ಲದ ವಸ್ತುಗಳನ್ನು ದಾನ ನೀಡಲಾಗುತ್ತಿತ್ತೇ? ಹಾಗಾದರೆ ದಾನಕ್ಕೆ ಪ್ರಾಮುಖ್ಯತೆಯಿಲ್ಲವೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

ದಾನಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ನೋಡಿದಾಗ ಮೇಲಿನ ಅಭಿಪ್ರಾಯಗಳು, ನಂಬಿಕೆಗಳು ಸರಿಯಲ್ಲ. ಏಕೆಂದರೆ ದಾನ ನೀಡುವಾಗ ಒಳ್ಳೆಯ ವಸ್ತುವನ್ನು/ಶ್ರೇಷ್ಠವಾದುದನ್ನು ಉಪಯೋಗಕ್ಕೆ ಬರುವಂತಹ ವಸ್ತುವನ್ನು ದಾನ ನೀಡುವರು. ಅಂದರೆ ಇಲ್ಲಿ ದಕ್ಷಿಣ ಮತ್ತು ಪಶ್ಚಿಮ ಬಾಗಿಲ ಮನೆಗಳು ಶುಭಕರ ಎನ್ನುವ ವಿಷಯ ತಿಳಿದುಬರುತ್ತದೆ.

ದಕ್ಷಿಣ ದಿಕ್ಕಿನ ಬಾಗಿಲ ಮನೆಯಲ್ಲಿ ಬಾಡಿಗೆ ಇರಲು ಭಯಪಡುವರು. ತಮ್ಮ ಸ್ವಂತ ಮನೆಯನ್ನು ಉತ್ತರ ಅಥವಾ ಪೂರ್ವ ದಿಕ್ಕಿಗೆ ಎದುರಾಗಿ ಕಟ್ಟಿಸುವರು. ಅಷ್ಟೇ ಏಕೆ ಶುಭಕಾರ್ಯಗಳಿಗೆ ಅಂದರೆ ಮದುವೆ, ಸಮಾರಂಭ, ಕಾರ್ಯಕ್ರಮಗಳಿಗೆ ಪ್ರಯಾಣಿಸುವಾಗ ವಾಹನವನ್ನು ಮೊದಲಿಗೆ ಪೂರ್ವ ಅಥವಾ ಉತ್ತರ ದಿಕ್ಕಿಗೆ ತಿರುಗಿಸಿಕೊಂಡು ಮುಂದೆ ಸಾಗುವರು. ಒಟ್ಟಾರೆಯಾಗಿ ಇಂದಿನ ಜನರು ಸತ್ಯವನ್ನು ಒಪ್ಪಿಕೊಳ್ಳುವಲ್ಲಿ ಹಿಂಜರಿಯುತ್ತಾರೆ.

ಕ್ರ.ಸಂ.	ಗ್ರಾಮ/ಊರು	ಆಳ್ವಿಕೆಯ ಕಾಲ	ದಾನ ಕೊಟ್ಟ ವ್ಯಕ್ತಿ	ಉದ್ದೇಶ/ಪಡೆದವರು	ಸಂಖ್ಯೆ/ಯಾವ ದಿಕ್ಕು
೧	ಮೈಲಾರ	ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ಕ್ರಿ.ಶ.೧.೨.೧೦೪೬	ಕಾಳಿದಾಸಯ್ಯ ಹೆಗ್ಗಡೆ	ಚಿಲ್ಲುಕಾಚಾರ್ಯರ ಪಾದ ತೊಳೆದು ಸ್ವಯಂಭುದೇವರ ಮತ್ತು ಮೂಲಸ್ಥಾನ ದೇವರ ಸೇವಾಕಾರ್ಯಗಳಿಗಾಗಿ	ಮನೆ ೨

೨	ಹಿರೇಹಡಗಲಿ	ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ಕ್ರಿ.ಶ. ೨೪.೪.೧೦೫೭	ದೇಮರಸ ದೇವರ ಸೇವಾ ಕಾರ್ಯಗಳಿಗಾಗಿ	೧೨೦ ಮಹಾಜನಗಳ ಕೈಯಿಂದ ದೇಮೇಶ್ವರ ಕೇಶವ ದೇವರ ಸೇವಾ ಕಾರ್ಯಗಳಿಗಾಗಿ,	ತಳವಾಗಿಲ ಮನೆ ೧
೩	ಹೂವಿನಹಡಗಲಿ	ಚಾಲುಕ್ಯ ದೊರೆ ತ್ರಿಭುವನಮಲ್ಲದೇವ ಕ್ರಿ.ಶ.೨೪.೧೧.೧೦೯೦	ಬ್ರಾಹ್ಮಣ ಸೇನಾಪತಿ ರವಿಗನ ಪತ್ನಿ ರೆಬ್ಬಲದೇವಿ	ಬ್ರಾಹ್ಮಣರ ಆಹಾರ ಸತ್ರಕ್ಕಾಗಿ, ಹೂತೋಟಕ್ಕಾಗಿ	ಮನೆ ೧
೪	ಕೊಟ್ಟೆಕಲ್ಲು	ವಿಜಯಪಾಂಡ್ಯದೇವ ಕ್ರಿ.ಶ.೨೭.೭.೧೧೭೮	ವಿಜಯಪಾಂಡ್ಯದೇವ	ಕೋಟಿಶಂಕರ ದೇವರ ಸೇವಾ ಕಾರ್ಯಗಳಿಗಾಗಿ,	ಮಾಳಿಗೆ ಮನೆ
೫	ಹೊಳಲು	ಹೊಯ್ಸಳ ದೊರೆ ಇಮ್ಮಡಿ ವೀರಬಲ್ಲಾಳ ಕ್ರಿ.ಶ.೩.೭.೧೧೯೪	ಹೊಳಲಿನ ಮಹಾಜನರು	ರಣರಂಗಭೈರವ ಬಸವೆಯ ನಾಯಕ ವೀರಮರಣ ವನ್ನಪ್ಪಿದಕ್ಕಾಗಿ ಅವನ ಮಗ ಚೌಡೆಯನಾಯಕನಿಗೆ	ಮನೆ ೧
೬	ಹೊಳಲು	ಪಾಂಡ್ಯದೇವ	ಅಣ್ಣಯ್ಯಭಟ್ಟರ ಮಕ್ಕಳು	ದೇವರ ಸೇವಾ ಕಾರ್ಯಗಳಿಗಾಗಿ	ದೇವರ ಮನೆ ದೇವರಕೋಣೆ
೭	ಹಿರೇಹಡಗಲಿ	ಕ್ರಿ.ಶ.೧೧-೧೨ನೇ ಶತಮಾನ	ಊರಿನ ನಾಯಕರು ಮಾದಿಮಯ್ಯನಾಯಕ ಅವರ ಮಗ ಬಾಚಿಮಯ್ಯ ನಾಯಕ ಹಾಗೂ ಅವರ ಮಗ ಮಲ್ಲಿಯಣ್ಣ	ಮಲ್ಲಿಕಾರ್ಜುನ ದೇವರ ಸೇವಾ ಕಾರ್ಯಗಳಿಗಾಗಿ	ಮನೆ ೨
೮	ಹಿರೇಹಡಗಲಿ	ಹೊಯ್ಸಳ ದೊರೆ ವಿಷ್ಣುವರ್ಧನ ಇಮ್ಮಡಿ ವೀರಬಲ್ಲಾಳ ಕ್ರಿ.ಶ.೩.೭.೧೧೯೪	ಮಹಾಪ್ರಧಾನ ಗಂಗಿಮಯ್ಯ ನಾಯಕ ಮತ್ತು ದಾವಣಂ	ಹಿರಿಯ ಕೆರೆ ಮತ್ತು ತುಂಬಿನ ಕೆರೆಗೆ ಪಡಿ ಸಲಿಸಲು	ಬಡಗ ಬಾಗಿಲ ಮನೆ ೧
೯	ಮಾಗಳ	ಹೊಯ್ಸಳ ದೊರೆ ವಿಷ್ಣುವರ್ಧನ ವೀರಬಲ್ಲಾಳ ಕ್ರಿ.ಶ. ೨.೩.೧೨೧೫	ಹರಿಹರ ಊರಡೆಯರು ಮತ್ತು ಗೋವಿಂದ, ಮಾಂಗೊಳದ ಮಹಾಜನರು	ದೇವರ ಪೂಜೆಗಾಗಿ	ತೆಂಕವಾಗಿಲ ಮನೆ ೧
೧೦	ಮಾಗಳ		ಸಮಯದ ಗರುಡ ಮಮ್ಮರಸರು	ಸೋಮನಾಥ ದೇವರ ಆಚಾರಿ ಬಂವೋಜ	ಬಡಗವಾಗಿಲ ಮನೆ ೧ ಮೊರಡೆಯ ದಡದ ಬಡಗವಾಗಿಲ
೧೧	ಕುರುವತ್ತಿ	ಯಾದವ ವೀರನಾರಾಯಣ ಸಿಂಹದೇವ ಕ್ರಿ.ಶ.೧೫.೧.೧೨೨೫	ಯಾದವ ವೀರನಾರಾಯಣ ಸಿಂಹದೇವ	ಅಹವಮಲ್ಲೇಶ್ವರ ದೇವರ ಕಾಲ್ಲಾಪಿಂಗೆ	೧೨ ಮನೆಗಳು
೧೨	ರಂಗಾಪುರ	ಹೊಯ್ಸಳ ದೊರೆ ವೀರನರಸಿಂಹ ಕ್ರಿ.ಶ. ೧೪.೧೦.೧೨೨೫	ಮಹಾಪ್ರಧಾನಿ ಪೋಲಾಳ್ವ ದಂಡನಾಯಕ	ಶ್ರೀನರಸಿಂಹ ದೇವರ ನಂದಾದೀವಿಗೆಗೆ ದಕ್ಷಿಣ ಬಾಗಿಲ	ಮನೆ ೧

ಅಡಿ ಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ, ಹಡಗ ೨೩, ಪು. ೩೨೯.
೨. ಕ.ವಿ.ವಿ. ಶಾ.ಸಂ. ೧, ಹಡಗ ೫೨, ಪು. ೩೬೦.
೩. ಕ.ವಿ.ವಿ. ಶಾ.ಸಂ. ೧, ಹಡಗ ೮೩, ಪು. ೪೧೫.
೪. ಕ.ವಿ.ವಿ. ಶಾ.ಸಂ. ೧, ಹಡಗ ೮೧, ಪು. ೪೦೮.
೫. ಕ.ವಿ.ವಿ. ಶಾ.ಸಂ. ೧, ಹಡಗ ೩೫, ಪು. ೩೪೦.
೬ ಕ.ವಿ.ವಿ. ಶಾ.ಸಂ. ೧, ಹಡಗ ೪೦, ಪು. ೩೪೯.
೭. ಕನ್ನಡ ನಿಘಂಟು, ಕಸಾಪ ಸಂ. ೪, ಪು. ೩೮೬೨.
೮. ಕ.ವಿ.ವಿ. ಶಾ.ಸಂ. ೧, ಹಡಗ ೫೬, ಪು. ೩೭೨.
೯. ಕ.ವಿ.ವಿ. ಶಾ.ಸಂ. ೧, ಹಡಗ ೫೩, ಪು. ೩೬೬.
೧೦. ಕ.ವಿ.ವಿ. ಶಾ.ಸಂ. ೧, ಹಡಗ ೬೫, ಪು. ೩೮೭.
೧೧. ಕ.ವಿ.ವಿ. ಶಾ.ಸಂ. ೧, ಹಡಗ ೬೯, ಪು. ೩೯೪.
೧೨. ಕ.ವಿ.ವಿ. ಶಾ.ಸಂ. ೧, ಹಡಗ ೯, ಪು. ೩೧೭.
೧೩. ಕ.ವಿ.ವಿ. ಶಾ.ಸಂ. ೧, ಹಡಗ ೭೫, ಪು. ೪೦೦.

೫೦

ಪ್ರಾಚೀನ ಅಗ್ರಹಾರ ಹಾವೇರಿ: ಒಂದು ವಿಶ್ಲೇಷಣೆ

ಶಿವಯೋಗಿ ಆರ್. ಕೋರಿಶೆಟ್ಟರ*

ಹಾವೇರಿ ಪ್ರಸ್ತುತದಲ್ಲಿ ಜಿಲ್ಲಾಕೇಂದ್ರ. ಪ್ರಾಚೀನ ಹಾಗೂ ಮಧ್ಯಕಾಲೀನ ಅವಧಿಯಲ್ಲಿ ಇದೊಂದು ಪ್ರಖ್ಯಾತ ಅಗ್ರಹಾರವಾಗಿತ್ತು. ಕರ್ನಾಟಕದ ಶಿಕ್ಷಣ ಇತಿಹಾಸದಲ್ಲಿ ಅಗ್ರಹಾರಗಳು ಮಹತ್ವ ಪಡೆದಿವೆ. ಕರ್ನಾಟಕದಲ್ಲಿ ಅಗ್ರಹಾರಗಳ ಅಸ್ತಿತ್ವವನ್ನು ಬನವಾಸಿ ಕದಂಬರ ಕಾಲದಿಂದಲೂ ಕಾಣಬಹುದು. ಅಗ್ರಹಾರ ಇದರ ಮೂಲ ರೂಪ ಅಗ್ರ ಆಹಾರ. 'ಅಗ್ರ' ಎಂದರೆ ಶ್ರೇಷ್ಠ. 'ಆಹಾರ' ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದರ್ಥ. (ಶಬ್ದಾರ್ಥ ವಿಹಾರ ಪು. ೫೬-೬೧, ಉಲ್ಲೇಖ, ಚಿದಾನಂದಮೂರ್ತಿ. ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೧೯) ಅಂದಿನ ವರ್ಣವ್ಯವಸ್ಥೆಯಲ್ಲಿ ಶ್ರೇಷ್ಠರೆಂದರೆ ಬ್ರಾಹ್ಮಣರು. ಅವರಿಗೆ ಅರಸರು ದಾನವಾಗಿ ಬಿಟ್ಟುಕೊಟ್ಟ ಊರುಗಳೇ ಅಗ್ರಹಾರಗಳು. ಒಂದು ಊರನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನ ಮಾಡುವಲ್ಲಿ ಪುಣ್ಯ ಲಭಿಸುತ್ತದೆ. ವಿದ್ವಾಂಸ ಬ್ರಾಹ್ಮಣರನ್ನು ಒಂದೆಡೆ ನೆಲೆಗೊಳಿಸುವುದರಿಂದ ವಿದ್ಯಾರ್ಜನೆಗೆ ವ್ಯವಸ್ಥೆ ಮಾಡಿದಂತಾಗುತ್ತದೆ. ಆಡಳಿತ ಯಂತ್ರಕ್ಕೆ ಅವಶ್ಯವಿರುವ ಮಂತ್ರಿಮಾನ್ಯರು, ನ್ಯಾಯಾಧೀಶರು ಮುಂತಾದವನ್ನು ತರಬೇತಿಗೊಳಿಸಲು ಒಂದು ಕೇಂದ್ರವಾಗುತ್ತದೆ ಎಂಬಂತ ಹಲವು ಉದ್ದೇಶಗಳು ಅರಸನಿಗಿದ್ದವು. (ಪಾಟೀಲ ಭೋಜರಾಜ. ನಾಗರಖಂಡ-೭೦ ಒಂದು ಅಧ್ಯಯನ, ಪು. ೧೬೫.) ಈ ಅಗ್ರಹಾರಗಳ ವ್ಯಾಪ್ತಿಗೆ ಒಳಪಟ್ಟ ಪ್ರದೇಶದ ಉತ್ಪತ್ತಿಯು ಅಲ್ಲಿನ ಬ್ರಾಹ್ಮಣರಿಗೆ ಸಲ್ಲುತ್ತಿತ್ತು. ಅಂದರೆ ಆ ಊರಿನಿಂದ ರಾಜಾದಾಯಕ್ಕೆ ಸಲ್ಲಬೇಕಿದ್ದ ಐಶ್ವರ್ಯವನ್ನು ಅಲ್ಲಿನ ಬ್ರಾಹ್ಮಣರು ಅನುಭವಿಸುತ್ತಿದ್ದರು.

ಅಗ್ರಹಾರದ ಬ್ರಾಹ್ಮಣ ವಿದ್ವಾಂಸರನ್ನು 'ಮಹಾಜನರು' ಎಂಬುದಾಗಿ ಕರೆಯಲಾಗುತ್ತಿತ್ತು. ಮಹಾಜನರೇ ಅಗ್ರಹಾರಗಳ ಒಡೆರಾಗಿದ್ದರು. ಹೀಗಾಗಿ ಅಲ್ಲಿನ ಆಡಳಿತ ಜವಾಬ್ದಾರಿಯೂ ಇವರದೇ ಆಗಿತ್ತು. ಅಗ್ರಹಾರಗಳು ವಿದ್ವಾಂಸರ ನೆಲೆಗಳಾಗಿದ್ದರಿಂದ ಅಂದು ಪ್ರಚಲಿತವಿದ್ದ ವಿವಿಧ ವಿದ್ಯೆಗಳಲ್ಲಿ ಪಾಂಡಿತ್ಯ ಹೊಂದಿರುತ್ತಿದ್ದರು. ತಪೋನಿಷ್ಠರಾಗಿದ್ದ ಮಹಾಜನರು ಊರಿನ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ಅಗ್ರಹಾರಗಳಲ್ಲಿ ಬ್ರಾಹ್ಮಣರಲ್ಲದೇ ಇತರೆ ಜಾತಿಯ ಜನರೂ ಇರುತ್ತಿದ್ದರು.

ಕಂಪಣ ಬಾಸವೂರು-೧೪೦ರ ಅಗ್ರಹಾರ ಹಾವೇರಿ

ಪ್ರಾಚೀನ ಕುಂತಳದೇಶದ ಬನವಾಸಿ-೧೨೦೦೦ದ ಆಧೀನಕ್ಕೆ ಒಳಪಟ್ಟಿದ್ದ ಹಲವಾರು ಆಡಳಿತ ಕಂಪಣಗಳಲ್ಲಿ ಬಾಸವೂರು-೧೪೦ ಒಂದಾಗಿದೆ. ಈ ಕಂಪಣವು ಹಾನಗಲ್ ತಾಲೂಕಿನ ಹಿರೇಬಾಸೂರನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಹೊಂದಿದ್ದು, ಸುತ್ತಲಿನ ೧೪೦ ಗ್ರಾಮಗಳಿಗೆ ಪ್ರಮುಖ ಕೇಂದ್ರವಾಗಿತ್ತು. ಕ್ರಿ.ಶ. ೮ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಬಾಸವೂರು ಕಂಪಣವು ಕ್ರಿ.ಶ. ೧೩ನೇ ಶತಮಾನದ ಅಂತ್ಯದವರೆಗೂ ಪ್ರಬಲವಾಗಿರುವುದು ಶಾಸನಗಳ ಆಧಾರದಿಂದ ತಿಳಿದು ಬರುತ್ತದೆ. ಇಂದಿನ ಹಾವೇರಿ, ಹಾನಗಲ್ ಹಾಗೂ ಬ್ಯಾಡಗಿ ತಾಲೂಕುಗಳ ಪ್ರದೇಶಗಳನ್ನು ಈ ಕಂಪಣವು ಒಳಗೊಂಡಿತ್ತು. ಆರಂಭದಲ್ಲಿ ಸೇನವಾರ ನಂತರದಲ್ಲಿ ಖಚರ ಮನೆತನದ ಅರಸರುಗಳಿಂದ ಈ ಕಂಪಣ ಆಳಲ್ಪಟ್ಟಿದೆ. ಇಲ್ಲಿನ ಅರಸರು ಬಾಸವೂರು ಕಂಪಣದ ನಾಳ್ಗಾವುಂಡರಾಗಿ, ಮನ್ನೇಯರಾಗಿ, ಮಹಾಸಾಮಂತರಾಗಿಯೂ ಅಧಿಕಾರವನ್ನು ನಿರ್ವಹಿಸಿದರು.

ಬಾಸವೂರು-೧೪೦ರ ಪ್ರಮುಖ ಅಗ್ರಹಾರವೆಂದರೆ ಹಾವೇರಿ ಈ ಊರನ್ನು ಇಲ್ಲಿನ ಶಾಸನಗಳೂ ಹಾವರಿಯೂರು, (ಸೌ.ಇಂ.ಇನ್ಸ ಸಂ. ೧೮, ಶಾ.ಸಂ.೩೦) ಪಾವರಿ, (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೧೩೬) ಹಾವರಿ, (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೧೩೬) ಹಾಹರಿ, (ಪಾಟೀಲ ಭೋಜರಾಜ., ಹಾವೇರಿ ಗ್ರಾಮನಾಮ, ಇ.ದ, ಸಂ.೧೭, ಪು.೨೦೧)

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆ, ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ, ಹಾವೇರಿ.

ಹವರಿ, (ಸೌ.ಇಂ.ಇನ್ಸ. ಸಂ. ೧೮, ಶಾ.ಸಂ. ೧೩೬) ಹಾವೇರಿ (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೧೪೫) ಹಾಗೂ ನಳಪುರಿ (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೨೪೩) ಎಂಬುದಾಗಿ ಉಲ್ಲೇಖಿಸಿವೆ.

"ಹರಿವ ಹರಿನೀರ್ಗ್ಗೆಯಡ್ಡಂ
ಬರಲುರಗಂ ಕಂಡು ನಳನದಂ ಕಟ್ಟಿ[ಸೆ]
ನಿರ್ಬ್ಬರದಿಂ ಹಾವೇರಿಯೆನಲು
ಪರಮಾರ್ತ್ಥಂ ನಾಮಮಾದುದಾ ಕ್ರಿತಯು[ಗ]ದೊಳು"

ಹರಿಯುವ ನೀರಿಗೆ ಹಾವು ಅಡ್ಡಬರಲು ನಳನು ಅದನ್ನು ನೋಡಿ ಅತಿಶಯವಾಗಿ ಕೆರೆ ಕಟ್ಟಿಸಿದನು ಮತ್ತು ಕಟ್ಟಿಸಿದ್ದ ಆ ಕೆರೆಯನ್ನು ಹಾವೇರಿ ಎಂದು ಕರೆದನು ಎಂಬುದಾಗಿ ಶಾಸನವು ಉಲ್ಲೇಖಿಸುತ್ತದೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೧೪೫, ಕ್ರಿ.ಶ. ೧೧೫೭) ಹಾವೇರಿ ಅಗ್ರಹಾರದ ಮೊದಲ ಉಲ್ಲೇಖ ಕಂಡುಬರುವುದು ಕ್ರಿ.ಶ. ೧೧೧೯ರ ಶಾಸನದಲ್ಲಿ. "ಶ್ರೀಮತ್ಸಿದ್ಧೇಶ್ವರ ದೇವಲಬ್ಧವರ ಪ್ರಸಾದರಪ್ಪ ಶ್ರೀಮದಗ್ರಹಾರಂ ಹಾವರಿಯ ಮಹಾಜನಂ ನಾಲ್ನೂರ್ವ್ವರುಮಂ" ಎಂದು ತಿಳಿಸುತ್ತದೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ.೧೧೮, ಕ್ರಿ.ಶ. ೧೧೧೯) ಕಲ್ಯಾಣ ಚಾಳುಕ್ಯ ಚಕ್ರವರ್ತಿ ಅಹವಮಲ್ಲ ಹಾವೇರಿಯ ಅಗ್ರಹಾರವನ್ನು ನಿರ್ಮಿಸಿದನು. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೧೩೬, ಕ್ರಿ.ಶ. ೧೧೩೪) ಇಲ್ಲಿನ ನಾಲ್ಕನೂರು ಮಹಾಜನರು ಹಾವೇರಿಯ ಚುಕ್ಕಾಣಿ ಹಿಡಿದು ಆಳಿದ್ದನ್ನು ಕಾಣಬಹುದು.

ಮಹಾಜನರು ವಿವಿಧ ಕರ್ತವ್ಯಗಳಲ್ಲಿ ತೊಡಗಿದ್ದರು. ದ್ವಿಜಗುರು ದೇವತಾ ಪೂಜಾತತ್ಪರರಾಗಿರುವುದು ಅಧ್ಯಯನ, ಅಧ್ಯಾಪನದಂತಹ ಷಟ್ಕರ್ಮಗಳಲ್ಲಿ ನಿರತರಾಗಿರುವುದು. ಔಷಧಚಿಕಿತ್ಸೆ ಮಾಡುವುದು ಪ್ರಮುಖವಾಗಿದ್ದವು. ಧರ್ಮರಕ್ಷಣೆ, ಶರಣಾಗತರ ರಕ್ಷಣೆ, ನ್ಯಾಯದಾನ ತಮ್ಮ ಪ್ರದೇಶದಲ್ಲಿನ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವುದು, ದೇವಾಲಯಗಳಲ್ಲಿ ದತ್ತಿ ಬಿಡುವ ಸಂದರ್ಭದಲ್ಲಿ ಇವರ ಉಪಸ್ಥಿತಿ ಅಗತ್ಯವಿದ್ದಿತು. ಅಗ್ರಹಾರದ ಪರವಾಗಿ ದೇವಾಲಯಗಳಗೆ ದಾನ ಬಿಡುತ್ತಿದ್ದರು ಮತ್ತು ಅಗ್ರಹಾರಕ್ಕೆ ಅನೇಕ ದತ್ತಿಗಳನ್ನು ಸ್ವೀಕರಿಸುತ್ತಿದ್ದರು. ಹಾವೇರಿಯ ಮಹಾಜನರು ದಾನಗಳಾದ ನದಿಮುಖ, ಅನ್ನ, ಕನ್ಯಾ, ವಸ್ತ್ರ, ಹಿರಣ್ಯಗರ್ಭ ಮುಂತಾದ ದಾನ ಕೈಕೊಳ್ಳುತ್ತಿದ್ದ ಬಗ್ಗೆ ವ್ಯಾಕರಣ, ಮಿಮಾಂಸೆ, ವೇದಾಂತ, ವೇದಾರ್ಥ, ಅಲಂಕಾರ, ನಾಟಕ, ಯಂತ್ರ, ಮಂತ್ರ ಮುಂತಾದ ೬೪ ಕಲೆಗಳಲ್ಲಿ ಪಾರಂಗತರಾಗಿದ್ದನ್ನು ಇಲ್ಲಿನ ಶಾಸನವು ತಿಳಿಸುತ್ತದೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ.೧೪೫, ಕ್ರಿ.ಶ. ೧೧೫೭)

ಹಾವೇರಿಯ ಮಹಾಜನರು ಹಲವಾರು ದಾನ ಕಾರ್ಯದಲ್ಲಿ ಉಪಸ್ಥಿತರಿದ್ದುದನ್ನು ಕಾಣಬಹುದು. ಮಹಾಸಾಮಂತಾಧಿಪತಿ ಮಾಧವಭಟ್ಟ ಮತ್ತು ಕಾಳಬ್ಬೆಯರ ಪುತ್ರ ನಿಂಬರಸರು ಇಲ್ಲಿನ ಸಿದ್ಧೇಶ್ವರ ದೇವರ ಗೀತವಾದ್ಯ ನೃತ್ಯಕ್ಕೆ ನಾನೂರ್ವರ ಸಮ್ಮುಖದಲ್ಲಿ ದಾನಬಿಟ್ಟಿದ್ದಾರೆ. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೧೦೮, ಕ್ರಿ.ಶ. ೧೧೧೯) ಮಹಾಪ್ರಧಾನ ಕುಮಾರಪದ್ಮರಸರು ಹೆಗ್ಗೆರೆಯ ನಿರ್ವಹಣೆಯ ತಳಭೋಗದ ಅವಧಿಯನ್ನು ನವೀಕರಿಸಲು ಮಾಡಿದ ಮನವಿಗೆ ಕದಂಬ ಮಲ್ಲಿಕಾರ್ಜುನ ದೇವರು ಹಾವೇರಿಯ ನಾನೂರ್ವರ ಕಾಲನ್ನು ತೊಳೆದು ದತ್ತಿಯನ್ನು ನವೀಕರಿಸಿದ್ದನ್ನು ಕಾಣಬಹುದು. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೩೬, ಕ್ರಿ.ಶ. ೧೧೩೪) ಹೆಜ್ಜುಂಕ ಮತ್ತು ವಡ್ಡರಾವುಳ ಮಹಾಸಾಮಂತಾಧಿಪತಿ ಮಾಯಿದೇವರಸರು ಬಣಂಜಿಗರೈನೂರ್ವರ ಜೊತೆಗೂಡಿ ಮಹಾಜನರನ್ನು ಆಮಂತ್ರಿಸಿ ಅವರ ಸಮ್ಮುಖದಲ್ಲಿ ಇಲ್ಲಿನ ಸಿದ್ಧೇಶ್ವರ ದೇವರಿಗೆ ದಾನ ಬಿಟ್ಟಿರುವರು. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೧೫೭, ಕ್ರಿ.ಶ. ೧೧೫೨) ಹೆಗ್ಗಡೆ ರುದ್ರದೇವನು ಸಂಕ್ರಾಂತಿಯಂದು ಹೆಗ್ಗೆರೆಯಲ್ಲಿ ಸ್ನಾನಮಾಡಿದ ನಿಮಿತ್ಯ ಕೆರೆಯ ದುರಸ್ತಿ ಹಾಗೂ ಪುನರ್‌ನಿರ್ಮಾಣಕ್ಕೆ ಮಹಾಜನರ ಸಮ್ಮುಖದಲ್ಲಿ ದಾನ ನೀಡಿದ್ದಾನೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೧೪೫, ಕ್ರಿ.ಶ. ೧೧೫೭) ಮಹಾಪ್ರಧಾನ ಸರ್ವಾಧಿಕಾರಿ ಸುರಗಿಯ ಪಿರುಮಾಳಿ ಒಡೆಯಣ್ಣನ ಮೊಮ್ಮಗ ಪೆರುಮಾಳಿಯಣ್ಣನು ಸಿದ್ಧನಾಥದೇವರ ಅಖಂಡ ದೀಪಕ್ಕೆ ದಾನ ಬಿಟ್ಟ ಸಂದರ್ಭದಲ್ಲಿ ಗಳತಗೆಯ ಮಲ್ಲಿಸೆಟ್ಟಿ, ನಾನೂರು ಮಹಾಜನರು ಉಪಸ್ಥಿತರಿದ್ದರು. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೧೯೬, ಕ್ರಿ.ಶ.೧೨೦೭) ಮಹಾಮಂಡಳೇಶ್ವರ ಕದಂಬ ಕುಲದ ತೈಲಹದೇವನ ಸೂಚನೆಯಂತೆ ಮಹಾಮಾತ್ಯ ಪೆರ್ಗಡೆ ನಾಗದೇವ ಮತ್ತು ಸುಂಕಾಧಿಕಾರಿ ದುಗ್ಗರಾಜರು ಸಿದ್ಧೇಶ್ವರ ದೇವರಿಗೆ ಹಾವೇರಿಯ ಮಹಾಜನರ ಸಮ್ಮುಖದಲ್ಲಿ ದಾನ ನೀಡಿದ್ದಾರೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೧೪೨)

ಹಾವೇರಿಯ ಮಹಾಜನರು ಹಲವರ ಜೊತೆಗೂಡಿ ದಾನ ಕಾರ್ಯದಲ್ಲಿಯೂ ಪಾಲ್ಗೊಂಡಿದ್ದಾರೆ. ಕಳಚೂರಿ ಚಕ್ರವರ್ತಿ ರಾಯಮುರಾರಿ ಸೋವಿದೇವರ ಆಧೀನನಾಗಿದ್ದ ಸಿದ್ಧಪಯ್ಯ ದಂಡನಾಯಕನ ಪುತ್ರ ಮಾಯಿಚಮೂಪ ಮತ್ತು ಹಾವೇರಿಯ ನಾನೂರ್ವರು ಸೇರಿ ಸಿದ್ಧೇಶ್ವರ ದೇವರ ಪೂಜೆಗಾಗಿ ಹಲವು ಸುಂಕಗಳನ್ನು ಮತ್ತು ೫೦ ಎತ್ತಿನ ಕರಿವಡವನ್ನು

ದಾನ ನೀಡಿದರು. (ಸೌ.ಇಂ.ಇನ್ಸ ಸಂ.೧೮, ಶಾ.ಸಂ.೧೮೬) ಮಹಾಪ್ರಧಾನ ಸರ್ವಾಧಿಕಾರಿ ವಿಠದೇವ ಪಂಡಿತ, ಮಹಾಜನರು, ನಗರ ಮುಮ್ಮರಿದಂಡ, ನಾನಾದೇಸಿ ಮುಂತಾದವರು ಸೇರಿ ಇಲ್ಲಿನ ವಿಷಪ್ರಹಾರಿ ಶ್ರೀಸಿದ್ಧನಾಥ ದೇವರ ಅಮೃತಪಡಿಗೆ ದಾನ ನೀಡಿರುವರು. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೩೮೮)

ದಾನ ದತ್ತಿ ಕಾರ್ಯಗಳಲ್ಲಿ ಉಪಸ್ಥಿತರಿರುವಂತೆ ದತ್ತಿಗಳ ಉದ್ದೇಶದಂತೆ ಸರಿಯಾಗಿ ವಿನಿಯೋಗಿಸುವುದೂ ಇಲ್ಲಿನ ಮಹಾಜನರ ಕರ್ತವ್ಯವಾಗಿತ್ತು. ಸಿದ್ಧನಾಥ ದೇವರ ಹಾಗೂ ವಿನಾಯಕ ದೇವರ ಉಪಹಾರಕ್ಕೆ ಕೊಟ್ಟ ದಾನವನ್ನು ಜ್ಞಾನರಾಸಿ ದೇವರು ಮಹಾಜನರು ಪಾಲಿಸಿಕೊಂಡು ಹೋಗುವರು ಎಂಬುದನ್ನು ಕ್ರಿ.ಶ. ೧೨೨೮ರ ಶಾಸನವು ಉಲ್ಲೇಖಿಸಿದೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೨೦೯, ಕ್ರಿ.ಶ. ೧೨೨೮) ವಿಜಯಾಪುರದ ಕರಿಯನಾಗಿಸೆಟ್ಟಿಯ ಮಗ ಮಲ್ಲಸೆಟ್ಟಿಯು ಇಲ್ಲಿನ ಗೋಪಾಲ ದೇವರಿಗೆ ನೀಡಿದ ದಾನವನ್ನು ಮಹಾಜನರು ವರ್ಷಾನುಗಟ್ಟಲೆ ತಪ್ಪದೇ ನಡೆಸುವರು ಎಂದಿದೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೨೩೫, ಕ್ರಿ.ಶ. ೧೨೫೪) ಸಾಳುವೆಯ ಅಚರಸ ಪಂಡಿತನ ಆದೇಶದನ್ವಯ ಸುಂಕಾಧಿಕಾರಿ ಮಾದಯ್ಯನು ಸಿದ್ಧನಾಥದೇವರ ಅಂಗಭೋಗ ಅಮ್ರಿತಪಡಿಗೆ ಬಿಟ್ಟ ಸುಂಕದಾನವನ್ನು ಮಹಾಜನರು ಪಾಲಿಸುವರು ಎಂದಿದೆ. (ಸೌ.ಇಂ.ಇನ್ಸ ಸಂ.೧೮, ೨೭೦. ಕ್ರಿ.ಶ. ೧೪೯೮) ಇಂತಹ ಇನ್ನು ಹಲವು ಉಲ್ಲೇಖಗಳು ಹಾವೇರಿಯ ಶಾಸನಗಳಲ್ಲಿ ದೊರೆಯುತ್ತವೆ.

ಅಗ್ರಹಾರ ಹಾವೇರಿಯ ಮಹಾಜನರ ಅಧೀನಕ್ಕೆ ಕಬ್ಬೂರು ಹಾಗೂ ಆಲೂರು ಪ್ರದೇಶಗಳು ಒಳಪಟ್ಟಂತೆ ಕಾಣುತ್ತದೆ. ಸೇನಭೋವ ಲಕ್ಕಿಸೆಟ್ಟಿ ಹಾವೇರಿಯ ನಾಲ್ಕನೂರು ಮಹಾಜನರು ಹಾಗೂ ಮಹಾಮಂಡಳೇಶ್ವರ ಹರಿಪಾಳದೇವನಿಂದ ಕಬ್ಬೂರಿನ ಹೆಗ್ಗಡೆತವನ್ನು ಏಕಭೋಗವಾಗಿ ಪಡೆದಿದ್ದನ್ನು ಕಬ್ಬೂರ ಶಾಸನವು ಉಲ್ಲೇಖಿಸಿದೆ. ಇದೇ ಶಾಸನವು ಲಕ್ಕಿಸೆಟ್ಟಿಯ ಪುತ್ರಿ ಲಚ್ಚಂಬಾಯಿಗೆ ಅಲ್ಲಿನ ಹಲವು ಭೂಮಿಗಳನ್ನು ಹರಿಪಾಳದೇವರು, ನಾನೂರ್ವರು ನೀಡಿದ್ದನ್ನು ದಾಖಲಿಸುತ್ತದೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೨೩೩, ಕಬ್ಬೂರು ಕ್ರಿ.ಶ. ೧೨೫೧) ಅಗ್ರಹಾರ ಹಾವೇರಿಯ ಮಹಾಜನಗಳು ಚೆಂದಿಸೆಟ್ಟಿ ಎಂಬವನಗೆ ಆಲೂರಿನ ಹೆಗ್ಗಡೆತನವನ್ನು ನೀಡಿದ್ದನ್ನು ಹಿರೇಲಿಂಗದಹಳ್ಳಿ ಶಾಸನವು ಉಲ್ಲೇಖಿಸುತ್ತದೆ. (ಸೌ.ಇಂ.ಇನ್ಸ ಸಂ.೧೮, ಶಾ.ಸಂ. ೨೪೦, ಹಿರೇಲಿಂಗದಹಳ್ಳಿ. ಕ್ರಿ.ಶ.೧೨೫೯) ಅಗ್ರಹಾರ ಮತ್ತು ಅದಕ್ಕೊಳಪಟ್ಟ ಪ್ರದೇಶಗಳ ರಕ್ಷಣೆಯ ಜವಾಬ್ದಾರಿಯೂ ಮಹಾಜನರ ಮೇಲಿತ್ತು. ಹೀಗಾಗಿ ಅವರು ಒಂದು ಶೂರರ ಪಡೆಯನ್ನು ಹೊಂದಿರುತ್ತಿದ್ದರು. ಈ ಪಡೆ ಬಂಟರೆಂಬ ಯೋಧರನ್ನು ಹೊಂದಿರುತ್ತಿತ್ತು. ಇವರು 'ನಾನೂರ್ವರ ಮಕ್ಕಳು' ಎಂದು ಕರೆಯಿಸಿಕೊಳ್ಳುತ್ತಿದ್ದರು. ಯುದ್ಧವೊಂದರಲ್ಲಿ ಹಾವೇರಿಯ ನಾನೂರ್ವರ ಮಗ ಬಾವಿಯ ಬೊಮ್ಮನಾಯಕನ ಮಗ ಮರಣ ಹೊಂದಿದ್ದಾನೆ. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೨೬೧, ಕ್ರಿ.ಶ. ೧೨೮೪)

ಹಾವೇರಿ ಅಗ್ರಹಾರ ರಕ್ಷಣೆಯ ಸಂದರ್ಭದಲ್ಲಿ ಮಡಿದ ಯೋಧರ ಕುಟುಂಬದವರಿಗೆ ಸಾಂತ್ವನ ಹೇಳುವುದು ಮತ್ತು ಅವರ ಜೀವನ ನಿರ್ವಹಣೆಗೆ ದಾನ ನೀಡುವುದು ಮಹಾಜನರ ಕರ್ತವ್ಯವಾಗಿದ್ದಿತ್ತು. ಮೇಲಿನ ಅಗಸರ ಸೋಮೇಯ ನಾಯ್ಕನ ಕುಟುಂಬದವರಿಗೆ ನೆತ್ತರುಗೆಯಾಗಿ ಹಲವು ದಾನ ನೀಡಿದ್ದನ್ನು ಶಾಸನವು ಉಲ್ಲೇಖಿಸಿದೆ. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೩೯೧. ಕಬ್ಬೂರು) ಕಬ್ಬೂರಿನಲ್ಲಿ ನಡೆದ ಯುದ್ಧವೊಂದರಲ್ಲಿ ಚೌಂಡಯ್ಯ ನಾಯಕನ ಮಗ ಸೋವೆಯ ನಾಯಕ ತಲೆಕೊಟ್ಟಿದ್ದಕ್ಕೆ ಹಾವೇರಿಯ ಮಹಾಜನರು ನೆತ್ತರುಗೆಯಾಗಿ ೨೦ ಕಮ್ಮ ಕರಿಯ ಭೂಮಿಯನ್ನು ದಾನವಾಗಿ ನೀಡಿದ್ದಾರೆ. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೨೧೧, ಕಬ್ಬೂರು)

ಹಾವೇರಿಯ ಮಹಾಜನರು ವೈಧಿಕ ಧರ್ಮದ ಅನುಯಾಯಿಗಳು. ಆದಾಗ್ಯೂ ಜೈನರ ಬೆಳವಣಿಗೆಯನ್ನು ಪ್ರೋತ್ಸಾಹಿಸಿದಂತೆ ತೋರುತ್ತದೆ. ಮಾದರಸ ಎಂಬವನು ಇಲ್ಲಿನ ಜಿನಮಂದಿರಕ್ಕೆ ಮೆಟ್ಟಿಲುಗಳನ್ನು ನಿರ್ಮಿಸಿದ ಉಲ್ಲೇಖವಿದೆ. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೩೯೦) ಈ ಕಾಲದಲ್ಲಿ ನಾಥಪಂತದ ಸಿದ್ಧೇಶ್ವರ ದೇವಾಲಯ ಹೆಚ್ಚು ಜನಪ್ರೀಯತೆ ಹೊಂದಿದ ದೇವಾಲಯವಾಗಿದ್ದಂತೆ ತೋರುತ್ತದೆ. ಹಾವೇರಿಯ ಮಹಾಜನ ನಾನೂರ್ವರು ತಮ್ಮನ್ನು ಶ್ರೀಮತ್ಸಿದ್ಧೇಶ್ವರ ದೇವಲಬ್ಧವರಪ್ರಸಾದ ರೆಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಹಾವೇರಿಯಲ್ಲಿ ದೊರೆತಿರುವ ಬಹುಪಾಲು ಶಾಸನಗಳಲ್ಲಿ ಮಾಂಡಳೀಕರು, ಅಧಿಕಾರಿಗಳು, ವ್ಯಾಪಾರಿಗಳು ಮತ್ತಿತರರು ಈ ದೇವಾಲಯಕ್ಕೆ ನೀಡಿದ ವಿವಿಧ ಬಗೆಯ ದಾನಗಳ ಉಲ್ಲೇಖಗಳನ್ನು ಗಮನಿಸಿದರೆ, ಸಿದ್ಧೇಶ್ವರ ದೇವಾಲಯ ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ಗ್ರಹಿಸಬಹುದು. ಕಾಲ್ಪನಿಕ ನಳ ಚಕ್ರವರ್ತಿ ನಿರ್ಮಿಸಿದನೆಂದು ಹೇಳಲಾದ ಹೆಗ್ಗೆರೆ ಮತ್ತು ಸಿದ್ಧೇಶ್ವರ ದೇವಾಲಯ ಹಾವೇರಿಯ ವೈಶಿಷ್ಟ್ಯಗಳಾಗಿವೆ. ಇವುಗಳು ಮಹಾಜನರ ನೇತೃತ್ವದಲ್ಲಿ ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದವು. ಶ್ರೀ ಸಿದ್ಧನಾಥ ದೇವರ

ಶ್ರೀಪಾದಪರುಮಾರಾದಕರುಮಪ್ಪ ಜ್ಞಾನರಾಸಿ ದೇವರನ್ನು ಇಲ್ಲಿನ ಶಾಸನ ಉಲ್ಲೇಖಿಸಿದೆ. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೨೦೬, ಕ್ರಿ.ಶ. ೧೨೨೭) ಇವರು ಶೈವಗುರುವಾಗಿದ್ದಂತೆ ತೋರುತ್ತದೆ. ಗುಡಿಯ ಬೀಡಿನ ಮೈಲಿಸೆಟ್ಟಿಯ ಪುತ್ರರಾದ ದೆಚ್ಚಿಸೆಟ್ಟಿ ಮತ್ತು ಮಾಯಿಸೆಟ್ಟಿಯರು ಸ್ವಯಂಭೂ ಸಿದ್ಧನಾಥ ದೇವರ ನಂದಾದೀವಿಗೆ ಮತ್ತು ಪುಷ್ಪಕ್ಕೆ ನೀಡಿದ ದಾನವನ್ನು ಶ್ರೀಮದ್ ರಾಜಗುರು ಜ್ಞಾನರಾಸಿದೇವರು ಪಡೆದಿದ್ದನ್ನು ಕಾಣಬಹುದು. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೨೦೭, ಕ್ರಿ.ಶ. ೧೨೨೮) ಮತ್ತೊಂದು ಶಾಸನವು ವಿವಿಧ ವ್ಯಕ್ತಿಗಳು ಕೊಡಮಾಡಿದ ದಾನವನ್ನು ಜ್ಞಾನರಾಸಿದೇವರು, ಮಹಾಜನರು ಪಾಲಿಸಿಕೊಂಡು ಹೋಗುವರೆಂದು ಹೇಳಿದೆ. (ಸೌ.ಇಂ.ಇನ್ಸ ಸಂ. ೧೮, ಶಾ.ಸಂ. ೨೦೯, ಕ್ರಿ.ಶ. ೧೨೨೮) ಇದರಿಂದ ಜ್ಞಾನರಾಸಿದೇವರು ಸಿದ್ಧೇಶ್ವರ ದೇವಾಲಯದ ಶೈವಯತಿಗಳಾಗಿದ್ದಿರಬೇಕು.

ಬಾಸವೂರು-೧೪೦ ಕಂಪಣದಲ್ಲಿ ಪ್ರಮುಖ ಅಗ್ರಹಾರವೆನಿಸಿದ ಹಾವೇರಿ ಅಗ್ರಹಾರವು, ಈ ಪ್ರದೇಶದ ಶಿಕ್ಷಣದ ಪ್ರಗತಿಯಲ್ಲಿ ಮಹತ್ತರ ಪಾತ್ರ ವಹಿಸಿದೆ. ಈ ಅಗ್ರಹಾರದ ನೇತೃತ್ವ ವಹಿಸಿದ್ದ ಇಲ್ಲಿನ ಮಹಾಜನ ನಾನೂರ್ವರು ಶ್ರೀಸಿದ್ಧೇಶ್ವರ ದೇವಲಬ್ಧವರಪ್ರಸಾದರೂ, ತಪೋನಿಷ್ಠರೂ, ೬೪ ಕಲೆಗಳಲ್ಲಿ ಪಾರಾಂಗತರೂ, ಧರ್ಮಸಹಿಷ್ಣುತೆ ಹೊಂದಿದವರಾಗಿದ್ದರು. ತಮ್ಮ ಷಟ್ಕರ್ಮಗಳ ಜೊತೆಗೆ ಅಗ್ರಹಾರದ ನೇತೃತ್ವ ವಹಿಸಿ, ಧರ್ಮ ರಕ್ಷಣೆ, ಶರಣಾಗತರ ರಕ್ಷಣೆ, ನ್ಯಾಯದಾನ, ಔಷಧ ಚಿಕಿತ್ಸೆ, ದಾನ ದತ್ತಿಗಳ ಸ್ವೀಕಾರ ಹಾಗೂ ಅವುಗಳ ರಕ್ಷಣೆಯ ಜವಾಬ್ದಾರಿಗಳಂತಹ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಮಹಾಜನ ನಾನೂರ್ವರು ಇಲ್ಲಿನ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರ ಮೂಲಕ ಈ ಪ್ರದೇಶದ ಸಾಂಸ್ಕೃತಿಕ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

ಆಕರ ಗ್ರಂಥಗಳು

೧. ಸೌಥ್ ಇಂಡಿಯನ್ ಇಸ್ಕ್ರಿಪ್ಷನ್ಸ್ ಸಂ. ೧೮.

೨. ಇತಿಹಾಸ ದರ್ಶನ, ಸಂ. ೧೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೩. ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಮೈಸೂರು, ೧೯೬೬.

೪. ಸೂರ್ಯನಾಥ ಕಾಮತ್, (ಸಂ) *ಧಾರವಾಡ ಜಿಲ್ಲಾ ಗ್ಯಾಸೆಟಿಯರ್*, ಬೆಂಗಳೂರು, ೧೯೯೫.

೫. ಭೋಜರಾಜ ಪಾಟೀಲ, *ನಾಗರಖಂಡ-೭೦ ಒಂದು ಅಧ್ಯಯನ*, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರಂ, ೧೯೯೫.

೬ Shantakumari S.L., *History of the Agraharas : Karnataka*, Madras,1986.

೫೧

ಕಲ್ಯಾಣ ಚಾಲುಕ್ಯ ಇಮ್ಮಡಿ ಸೋಮೇಶ್ವರನ ಧಾರ್ಮಿಕ ಶಾಸನಗಳು

ಡಿ.ಎಂ. ನಾಗರಾಜು*

ಕ್ರಿ.ಶ. ೯೭೩-೭೪ರಲ್ಲಿ ರಾಷ್ಟ್ರಕೂಟ ಅರಸ ಎರಡನೆಯ ಕರ್ಕನನ್ನು ಪದಚ್ಯುತಗೊಳಿಸಿ, ದಕ್ಷಿಣದಲ್ಲಿ ಚಾಲುಕ್ಯರ ಸಾರ್ವಭೌಮತ್ವವನ್ನು ಮತ್ತೆ ಸ್ಥಾಪಿಸಿದ ಇಮ್ಮಡಿ ತೈಲಪನು ತಾನು ಬಾದಾಮಿಯ ಚಾಲುಕ್ಯರ ವಂಶಜನೆಂದು ಹೇಳಿಕೊಂಡಿದ್ದಾನೆ. ಕ್ರಿ.ಶ. ೧೦೦೯ ಕೌಥೆಮ್ ಮುಂತಾದ ಕಡೆಯ ಶಾಸನಗಳು ಬಾದಾಮಿಯ ಚಾಲುಕ್ಯರಿಗೂ ಕಲ್ಯಾಣದ ಚಾಲುಕ್ಯರಿಗೂ ಇದ್ದ ಬಾಂಧವ್ಯವನ್ನು ಪ್ರಸ್ತಾಪಿಸಿವೆ.

ಒಂದನೆಯ ಸೋಮೇಶ್ವರನು ಕುರುವತ್ತಿಯಲ್ಲಿ ಶರೀರವನ್ನು ತ್ಯಾಗ ಮಾಡಿದ ಹದಿನಾಲ್ಕು ದಿವಸಗಳ ನಂತರ, ಅವನ ಜೇಷ್ಠಪುತ್ರನಾದ ಇಮ್ಮಡಿ ಸೋಮೇಶ್ವರನು ಪಟ್ಟಕ್ಕೆ ಬಂದನು. ಅವನು 'ಭುವನೈಕಮಲ್ಲ' ಎಂಬ ಬಿರುದನ್ನು ಧರಿಸಿದನು. ಪಟ್ಟಾಭಿಷೇಕವಾದೊಡನೆ ಸೋಮೇಶ್ವರನಿಗೂ ಅವನ ತಮ್ಮನಾದ ವಿಕ್ರಮಾದಿತ್ಯನಿಗೂ ರಾಜ್ಯಕ್ಕಾಗಿ ಕಲಹ ನಡೆಯಿತು. ವಿಕ್ರಮಾದಿತ್ಯನು ತನ್ನ ಮಾವನಾದ ವೀರರಾಜೇಂದ್ರ ಚೋಳನ ನೆರವನ್ನು ಕೋರಿದನು.

ಶೈವಧರ್ಮದ ಆಚಾರ್ಯರು ತಮ್ಮ ಪಾಂಡಿತ್ಯಕ್ಕೂ ಆಧ್ಯಾತ್ಮಿಕ ವರ್ಚಸ್ಸಿಗೂ ಹೆಸರಾಗಿದ್ದರು. ವಾದಿರುದ್ರಗುಣನೆಂಬ ಬಿರುದನ್ನು ಹೊಂದಿದ್ದ ಲಕುಳೇಶ್ವರ ಪಂಡಿತನನ್ನೂ, ಶಿಕಾರಿಪುರದ ಶಾಸನದಲ್ಲಿ ತುಂಬಾ ಪ್ರಶಂಸಿಸಲಾಗಿದೆ. ಬಳ್ಳಿಗಾಮೆಯು ಕಾಳಾಮುಖಿ ಬ್ರಹ್ಮಚಾರಿ ಸ್ಥಾನವೆಂದು ಹೆಸರು ಪಡೆದಿದ್ದು ಪೊಟ್ಟಲಕೆರೆಯಲ್ಲಿ ಇಮ್ಮಡಿಜಯಸಿಂಹ ತಂಗಿದ್ದಾಗ, ಪಾಂಡವರಿಂದ ಪ್ರತಿಷ್ಠಾಪಿಸಲ್ಪಟ್ಟಿದ್ದ ಪಂಚಲಿಂಗ ದೇವಾಲಯದ ಜೀರ್ಣೋದ್ಧಾರಕ್ಕಾಗಿ ದತ್ತಿಯನ್ನು ನೀಡಿದನೆಂದು ಅದೇ ಶಾಸನದಲ್ಲಿ ಹೇಳಲಾಗಿದೆ. ಆದರೆ ಈ ಶಾಸನದಲ್ಲಿರುವ ಮತ್ತೊಂದು ಸ್ವಾರಸ್ಯ ಸಂಗತಿಯೆಂದರೆ, ಅಧರ್ಮೀಯರು ಆ ಪಟ್ಟಣವನ್ನು ಬಿಟ್ಟುಹೋಗಬೇಕೆಂದು ಹೇಳಿರುವುದು. "ಇನ್ತೀಧರ್ಮಮಂ ನಗರಂ ಪ್ರತಿಪಾಳಿಸುವುದು ನೈಷ್ಟಿಕರಲ್ಲದರಪೊಱಮಡಿಶಿಕಳೆವುದು" ಎಂಬುದಾಗಿ ಆ ಶಾಸನವೊಂದರಲ್ಲಿ ಕಾಳಾಮುಖಪಂಥದ ಆಗಸ್ತ್ಯ ಗುರುವರನು ವ್ರತನಿಷ್ಠನೆಂದು ಬಣ್ಣಿಸಲಾಗಿದೆ. ಅದೇ ಸ್ಥಳದ ಮತ್ತೊಂದು ಶಾಸನದಲ್ಲಿ ಮೀನಾಂಬರಮಠದ ಮುನಿಯಾದ ಚೂಡಾಮಣಿಯಲ್ಲಿ ಧ್ಯಾನದ ಮೂಲಕ ಗಳಿಸಿದ್ದ ಆಧ್ಯಾತ್ಮಿಕ ಜ್ಞಾನವನ್ನು ಕೊಂಡಾಡಲಾಗಿದೆ.

ಕ್ರಿ.ಶ. ೧೦೬೮ ಕುಂಟೋಜಿ ಶಾಸನದಲ್ಲಿ ರಾಜನ ಉಪಸಭಾಪತಿ ಮಹಾಸಾಹಣಿ ಬಲ್ಲರಸ ನೊಳಂಬಪಲ್ಲವ ಆಗಿರಬಹುದು. ಇವನ ಕೊಂಟಜಿಯ ಹತ್ತಿರ ನಾಗಿರ[ಭಾವಿ]ಯ ಬಲ್ಲೇಶ್ವರದೇವರಿಗೆ ಭೂಮಿ ದಾನ ನೀಡಿದ ಉಲ್ಲೇಖವಿದೆ. ಇದೇ ಕಾಲದ ಚಿನ್ನತುಂಬಲ ಶಾಸನದಲ್ಲಿ ತುಂಬಳ ಶ್ರೀಸ್ವಯಂಭು-ದಕ್ಷಿಣ ಸೋಮೇಶ್ವರದೇವರ್ಗ್ಗೆ ೨೫೦ ಮತ್ತರು ಭೂಮಿಯನ್ನು ಅನಂತಶಕ್ತಿಪಂಡಿತರ ಶಿಷ್ಯ ಚಂದ್ರಭೂಷಣಪಂಡಿತ ದಾನ ನೀಡಿದ ವಿವರ ಹಾಗೂ ಕಾಳಾಮುಖ ಪಂಥದ ಒಬ್ಬ ಉಪಾಧ್ಯಾಯ ನಿರಂಜನ ಪಂಡಿತನಿಗೆ ೩೦ ಮತ್ತರುಗಳು ಮತ್ತು ಎಣ್ಣೆಗಾಣ, ದೇವರ ಸೇವೆಗೋಸ್ಕರ ಮತ್ತು ನಾರಾಯಣ ದೇವರ ಸೇವೆಗೋಸ್ಕರ ೧೦ ಮತ್ತರು ಪೂಜೆ, ನೈವೇದ್ಯಕ್ಕೆ ೪ ಎಣ್ಣೆಗಾಣ, ಸೇವಕರಿಗೆ ೪೦ ಮತ್ತರು, ಸಂಗೀತಗಾರರಿಗೆ ೧೫ ಮತ್ತರು ಹೂವು ಮಾರುವವರಿಗೆ ೩ ಮತ್ತರು ದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೬೯ರ ಸೂಡಿಶಾಸನದಲ್ಲಿ ಭುವನೈಕಮಲ್ಲ ನೊಳಂಬಾಧಿರಾಜ ಪೆರ್ಮಾನಡಿ ಸಿಂಗಣದೇವನು ಕಿಸುಕಾಡು-ಎಪ್ಪತ್ತರಲ್ಲಿರುವ ನೊಳಂಬವಾಡಿ-೩೨೦೦೦ರಲ್ಲಿರುವ ಸೂಡಿ ರಾಜಧಾನಿ ಅಚಲೇಶ್ವರ ದೇವಾಲಯಕ್ಕೆ ಸೋಮೇಶ್ವರ ಪಂಡಿತನಿಗೆ ಭೂಮಿ ದಾನ ನೀಡಿದ ವಿವರ ಹಾಗೂ ಎರಡನೇ ಭಾಗದಲ್ಲಿರುವ ಶಾಸನವು ದಂಡನಾಯಕ ಕಿಸುಕಾಡು ಎಪ್ಪತ್ತರಲ್ಲಿ ಆಳುತ್ತಿರುವಾಗ ಇದೇ ಅಚಲೇಶ್ವರ ದೇವಾಲಯಕ್ಕೆ ಒಡವೆಯನ್ನು (ಮಣಿಗಾರ) ಮಡ್ಡಿಶೆಟ್ಟಿ ದಾನ ನೀಡಿದ್ದಾನೆ. ಇದೇ ಕಾಲದ ಶಾಸನದಲ್ಲಿ ಶ್ರೀಮತ್ಕನ್ನಡಿಸನ್ಧಿವಿಗ್ರಹಿ ದಂಡನಾಯಕ ಮಧುವರಸ ಎಂಬುವವನು ಚಾಲುಕ್ಯ ರಾಜ್ಯಾಭ್ಯುದಯ

* **ಅಧೀಕ್ಷಕ ಶಾಸನತಜ್ಞ, (ನಿ)., # ೯೩೭, 'ರಾಜಗೃಹ' ೨೫ನೇ ಮುಖ್ಯರಸ್ತೆ, ಜೆ.ಪಿ. ನಗರ, ಮೈಸೂರು-೫೭೦೦೩೧. ಮೊ. ೮೨೧೨೩೦೩೭೪**

ಕಾರಣನನೂ ಆಗಿದ್ದು, ಉತ್ತಮಗ್ರಹಾರ ಕಾಕಣ್ಡಿಗೆಯ ಸಿದ್ದೇಶ್ವರದೇವರಂಗಭೋಗಕ್ಕೆ ಸ್ನಾನನಿವೇದ್ಯಕ್ಕೆ ಭೂಮಿ, ತೋಂಟ ಮತ್ತು ಎಣ್ಣೆ ದಾನ ನೀಡಿದ ವಿವರವಿದೆ. ಮತ್ತೊಂದು ಇದೇ ಕಾಲದ ಶಿವಪುರಂ ಶಾಸನದಲ್ಲಿ ರಾಜನ ಮುಖ್ಯ ರಾಣಿ ಕಾಂಚಲದೇಮಹಾದೇವಿಯ (ಬಿನ್ನಪದಿಂ) ಕೋರಿಕೆಯ ಮೇರೆಗೆ ರಾಜನು ಅಯಿಜೆ-೩೦೦ರಲ್ಲಿ ಬರುವ ಗ್ರಾಮ (ಹೆಸರು ಇಲ್ಲ) ವನ್ನು ಕಾಳಾಮುಖ ಪಂಥದ ಗಂಗರಾಸಿಭಟ್ಟಾರಕನ ಶಿಷ್ಯ ಸುರೇಶ್ವರಪಂಡಿತನಿಗೆ ದಾನನೀಡಿ, ಹಾಗೂ ಶಿವಪುರದ ಮಲ್ಲಿಕಾರ್ಜುನ ದೇವಾಲಯದ ಛತ್ರದಲ್ಲಿರುವ ವಿದ್ಯಾರ್ಥಿಗಳ ವಿದ್ಯಾದಾನ ಮಾಡಿದ ದಾಖಲೆಯಿದೆ. ಇದೇ ಊರಿನ ಇದೇ ಕಾಲದ ಚಿಂಚಲಿ ಶಾಸನದಲ್ಲಿ ಸಮುದ್ರದ ದೇವಣ್ಣ ಸಕ್ಕರ್ಯರು ನಾಗೇಶ್ವರದೇವರ್ಗ್ಗೆ ಒಂದು ಹೂವಿನ ತೋಟ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೦೭೦ರ ಪಟ್ಟದಕಲ್ಲು ಶಾಸನದಲ್ಲಿ ರಾಜನ ಉಪಸಭಾಧಿಪತಿ ನೊಳಂಬಪಲ್ಲವ ಪೆರ್ಮ್ಮಾನಡಿ ಸಿಂಗಣದೇವ ಕಿಸುಕಾಡುನಾಡು-ಎಪ್ಪತ್ತು ಮತ್ತು ಕಿಸುವಳಲ್ ೬-ಉಪನಗರ ಪಟ್ಟಣಗಳನ್ನು ಆಳುತ್ತಿರುವಾಗ ಕಿಸುವೊಳಲಿನ ಮೂಲಸ್ಥಾನ ದೇವಾಲಯದ ಭೂಮಿ ದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೭೧ರ ಹೂವಿನಹಡಗಲಿ ಶಾಸನದಲ್ಲಿ ಕಲಿದೇವರ ಮಠದಲ್ಲಿರುವ ಮುನಿಗಳ ಅನ್ನದಾನಕ್ಕೆ ವಿದ್ಯಾರ್ಥಿಗಳಿಗೆ ಬಟ್ಟೆ, ಸಂಗೀತಗಾರರಿಗೆ, ಸೇವಕರಿಗೆ, ಪೂವಿನಡಂಗಿಲೆ ಮಹಾಜನರು ರಾಜನ ಹತ್ತಿರ ಬಂದು ಆಶೀರ್ವದಿಸಿ ಅವರ ಕೋರಿಕೆಯ ಮೇರೆಗೆ ರಾಜನು ಹಾಲವೊಳದಲ್ಲಿರುವ ಕೊಟಗನೂರು ಗ್ರಾಮ ದಾನ ನೀಡಿ, ಕುಮಾರಸ್ವಾಮಿದ್ವಿವೇದಿಭಟ್ಟರಿಗೆ ಒಪ್ಪಿಸಿದ ವಿವರ, ಹಾಗೂ ಮಹಾಸಾಮಂತ ಘಟ್ಟಿಯರಸನು ಇದೇ ದೇವರಿಗೆ ದಾನ ನೀಡಿದ ಉಲ್ಲೇಖಯಿದೆ. ಇದೇ ಕಾಲದ ರೂಗಿ ಶಾಸನದಲ್ಲಿ ಮನ್ಮಹಾಮಣ್ಡಳೇಸ್ವರ ಪಾಯಿಯರಸರು ತರ್ದವಾಡಿ-೧೦೦೦ ಆಳುತ್ತಿರುವಾಗ ಅವರ ಪೆರ್ಗ್ಗಡೆ ಕನ್ನಪಯ್ಯ ಸೇನಬೋವ ಮಾಳಪಯ್ಯನಾಯಕ ಪ್ರಮುಖ ಕರಣಂಗಳು ಬಿನ್ನಪಂಗೆಯ್ದು ಆನೆಯರೂವಿಗೆಯ ಶ್ರೀಮನ್ನಗರೇಶ್ವರ ದೇವರ ನೈವೇದ್ಯಕ್ಕೆ ನನ್ದಾದೀವಿಗೆಗೆ ತೆರಿಗೆಗಳಿಂದ ನಿಗದಿಪಡಿಸಿ ದಾನ ನೀಡಿದ ವಿಷಯವಿದೆ. ಇದೇ ಕಾಲದ ಹೀರೆಕಾಂಗಿ ಶಾಸನದಲ್ಲಿ ಕದಂಬವಂಶದ ಮಹಾಮಂಡಳೇಶ್ವರ ಮಾವಕೇತರಸ ಪಾನುಂಗಲ-೫೦೦ ಮತ್ತು ಬನವಾಸಿ-೧೨೦೦೦ ಆಳುತ್ತಿರುವಾಗ ಚಟ್ಟಿಕಬ್ಬೆಗಾವುಣ್ಡಿ (ಸೋಮೇಶ್ವರನದಾಸಿ) ಮೂಲಸ್ಥಾನ ಸಂಕರಕಲಿದೇವಸ್ವಾಮಿಯ ದೇವಾಲಯವನ್ನು ಕಟ್ಟಿಸಿದ ದಾಖಲೆಯಿದೆ. ಇದೇ ಕಾಲದ ಸೊರಟೂರು ಶಾಸನದಲ್ಲಿ ಮಹಾಪ್ರದಾನ ಹೇರಿಸಂಧಿವಿಗ್ರಹಿ ಸೇನಾಧಿಪತಿ, ಕಡಿತವೆರ್ಗ್ಗಡೆ, ದಂಡನಾಯಕ ಬಲದೇವಯ್ಯನು ಸರಟವೂರ ಅಗ್ರಹಾರ ಬಲದೇವ ಜಿನಾಲಯಕ್ಕೆ ಭೂಮಿ ದಾನ ನೀಡಿ, ಈ ದಾನವನ್ನು ಹುಳಿಯಬ್ಬಜ್ಜಿಕೆಗೆ ಒಪ್ಪಿಸಿದ ವಿವರ, ಇವಳು ಒಬ್ಬ ಶ್ರೀನಂದಿಪಂಡಿತನ ಶಿಷ್ಯೆ ಇವರು ಸುರಾಸ್ಥಗಣ ಮತ್ತು ಚಿತ್ರಕೂಟಾನ್ವಯ, ಸುರಟೂರಿನ ೨೦೦ ಮಹಾಜನರು ಎಣ್ಣೆಗಾಣ, ಮನೆ ನಿವೇಶನ, ಈ ದೇವರಿಗೆ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೦೭೨ರ ಕುಂಟೋಜಿ ಶಾಸನದಲ್ಲಿ ಕೊಂಟಿಗೆ ನಖರೇಶ್ವರದೇವರ ನನ್ದಾದೇವಿಗೆಗೆ, ಮೂಜುಗಾಣ, ಮನೆ-ನಿವೇಶನ, ಹೂವಿನ ತೋಟವನ್ನು ವ್ಯಾಪಾರಸ್ಥರು ದಾನ ನೀಡಿದ ವಿಷಯವಿದೆ. ಇದೇ ದೇವರಿಗೆ ನನ್ದಾದೀವಿಗೆಗೋಸ್ಕರ [ವೆಂ]ಕಪಯ್ಯನು ದಾನ ನೀಡಿದ ದಾಖಲೆಯಿದೆ. ಇದೇ ತೇದಿಯ ಕಾಗಿನೆಲೆ ಶಾಸನದಲ್ಲಿ ಪೆರ್ಗ್ಗಡೆನಂಕ ಕಾಗಿನೆಲೆಯ ಜಕ್ಕಗಾವುಂಡ ಮತ್ತು ಬೇರೆಯವರು ಗ್ರಾಮೇಶ್ವರದೇವರ ದೀಪದೂಪ, ನಿವೆದ್ಯ, ಜೀರ್ಣೋದ್ಧಾರಕ್ಕೆ, ತಪೋಧನರ್ಗ್ಗಂ, ವಿದ್ಯಾರ್ಥಿಗಳಿಗೆ ದಾನ ನೀಡಿದ ವಿಷಯ ಹಾಗೂ ಈ ದಾನವನ್ನು ಸದ್ಯೋಜಾತಪಂಡಿತರದೇವನ ಕಾಲಂಕರ್ಚ್ಚಿ ಧಾರಾಪೂರ್ವಕವಾಗಿ ದಾನ ಕೊಟ್ಟಂತೆ ಹೇಳಿದೆ.

ಕ್ರಿ.ಶ. ೧೦೭೩ ಮತ್ತಿಹಳ್ಳಿ ಶಾಸನದಲ್ಲಿ ಮೂಕಿಮಯ್ಯಂಗಳ ಮಗ ಸೋಮೇಶ್ವರಭಟ್ಟರ ಬಿನ್ನಪದಿಂದ ಶ್ರೀಮನ್ಮಹಪ್ರದಾನ ಹೇರಿಸನ್ದಿವಿಗ್ರಹಿ, ಮನೆವೆರ್ಗ್ಗಡೆ, ದಂಡನಾಯಕ ಉದಯಾದಿತ್ಯ ಬನವಾಸಿ ಪನ್ನಿರ್ಚ್ಛಾಸಿರದ ಕಂಪಣ, ನಾಗರಖಣ್ಡವೆಪ್ಪತ್ತಱ ಬಳ್ಳಿಗಾವೆಯಿಂದ ಆಳುತ್ತಿರುವಾಗ ಮೂಡಿಯನಪಳ್ಳಿ ಸ್ವಯಂಭುದೇವರಿಗೆ ಕೆಲವು ಕಮ್ಮ ಭೂಮಿಯನ್ನು ಕಚವಿಯ ಕೋಲಿನಿಂದ ಅಳತೆ ಮಾಡಿ ದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೭೪ರ ಬಿಜಾಪುರ ಶಾಸನದಲ್ಲಿ ದಂಡನಾಯಕ ನಾಕಿಮಯ್ಯನ ವಿನಂತಿ ಮೇರೆಗೆ, ಬಲ್ಲವರಸ ವೆಂಕಪುರದಲ್ಲಿ ಇರುವಾಗ ದೇವಸ್ಥಾನ ಕಟ್ಟಿಸಿ ವಿದ್ಯಾರ್ಥಿಗಳ ಆಹಾರಕ್ಕೆ, ಬಟ್ಟೆಗಳಿಗೆ ದಾನ ನೀಡಿ ಯೋಗೇಶ ಪಂಡಿತ ಮತ್ತು ಶಿಕ್ಷಕರಿಗೆ ವಹಿಸಿದ ಉಲ್ಲೇಖವಿದೆ. ಅಸುಂಡಿ ಶಾಸನದಲ್ಲಿ ಮಹಾಮಂಡಳೇಶ್ವರ ಉದಯಾದಿತ್ಯ ಗಂಗಪೆರ್ಮಾಡಿ ಸಾಂತಳಿಗೆ-೧೦೦೦, ಬನವಾಸಿ-೧೨೦೦೦ ಆಳುತ್ತಿರುವಾಗ ಊರಗಾವುಂಡ ಬೀರಗಾವುಂಡ ಕಲಿದೇವರಿಗೆ ಪೂಜೆ, ನೈವೇದ್ಯಕ್ಕೋಸ್ಕರ

ಭೂಮಿದಾನ ನೀಡಿದ ವಿವರ ಹಾಗೂ ಈ ದಾನವನ್ನು ಸೊವರಾಸಿಪಂಡಿತನಿಗೆ ದಾನ ಒಪ್ಪಿಸಿದ ದಾಖಲೆಯಿದೆ. ಹುನಗುಂದ ಶಾಸನದಲ್ಲಿ [ಆ]ರ್ಯ್ಯಪಂಡಿತನ ಶಿಷ್ಯನಾದ ಹಣಂದಿಭಟ್ಟಾರಕ ಮೂಲಸಂಘದ ಸೊರಸ್ತಗಣದ ಮತ್ತು ಚಿತ್ರಕೂಟಾನ್ವಯದ ಪೊನ್ನುಗುಂದದ ವೂರನಡುವಣ ಅರಸರ ಬಸದಿಗೆ ಶ್ರೀಕರಣದ ದೇವಣಯ್ಯನಾಯಕ, ಪೆರ್ಗ್ಗಡೆನಾಕಿಮಯ್ಯನು ಇವರ ರಾಜಧಾನಿ ಮುಖ್ಯಸ್ತರು ಸಮಸ್ತರು ಭೂಮಿ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ನಿಡಗುಂದಿ ಶಾಸನದಲ್ಲಿ ಕನ್ನಡ ಸಂಧಿವಿಗ್ರಹಾಧಿಪತಿ, ಮಹಾಪ್ರದಾನ ದಂಡನಾಯಕ ಜನ್ನಮಯ್ಯನು ರಾಜನ ಆದೇಶ ಪಡೆದು ಕಿಸುಕಾಡು-ಎಪ್ಪತ್ತರಲ್ಲಿ ನೀಡಗುಂದಿಯಲ್ಲಿರುವ ಕಳಮಾನಪಳ್ಳಿ ಗ್ರಾಮವನ್ನು ತ್ರೈಪುರುಷ ದೇವರಿಗೆ ದಾನ ನೀಡಿದ ವಿಷಯವಿದೆ. ಸೋಮಾಪುರ ಶಾಸನದಲ್ಲಿ ಮಹಾಮಂಡಳೇಶ್ವರ ಮಾರಸಿಂಹ ಸಿಲಾಹಾರ ಮುಖ್ಯಸ್ಥ ಜೀಮೂತವಾಹನ ವಂಶಸ್ಥ ಕುಂಡಿ-೨೦೦೦, ಮಿರಿಂಜೆ-೩೦೦೦ ಮತ್ತು ಬೇರೆ ಭಾಗಗಳ ಜೈನಬಸದಿಗೋಸ್ಕರ ಭೂಮಿ ದಾನ ನೀಡಿ, ನರಗುಂದ ವೆಕ್ಕಗೇರಿಯಲ್ಲಿ ಮಹಾಜನರ ಸಮ್ಮುಖದಲ್ಲಿ ಸೆಟ್ಟಿಗರು ದಾನ ನೀಡಿದ್ದನು ತಿಳಿಸುತ್ತದೆ.

ಕ್ರಿ.ಶ. ೧೦೭೫ ಕೂಪ್ ಶಾಸನದಲ್ಲಿ ವಿಕ್ರಮಪುರದ ಸ್ವಯಂಭು-ನಗರೇಶ್ವರ ದೇವಾಲಯದ ಅಭಿವೃದ್ದಿಗೋಸ್ಕರ ತೋಂಟಕ್ಕೆ ೧ ಮತ್ತರು, ನನ್ದನವನದಿಂ, ದೇವರ ನಿವೇದ್ಯಕ್ಕೆ ಗದ್ದೆ ಮತ್ತರು ೧, ವಿದ್ಯಾರ್ತಿತಪೋಧನರ, ಉಪಧ್ಯಾಯರ್ಗ್ಗೆ ಮತ್ತರು ೧, ದೇವಸ್ಥಾನಕ್ಕೆ ಹೊಂದಿಕೊಂಡಿರುವ ಮಠಕ್ಕೆ ದಂಡನಾಯಕನಿಂಬಯ್ಯನ ವಿನಂತಿಯ ಮೇರೆಗೆ ಬಲ್ಲಯ್ಯ ದಾನ ನೀಡಿದ ವಿವರ. ವಿಕ್ರಮಪುರದ ಕಲಿದೇವಾಲಯಕ್ಕೆ ಹೂವಿನ ತೋಂಟ, ಕೆಱೆ, ಸಿಂದಗೆಱೆ-ಮನ್ನೆಯಸಾಮ್ಯ ಬಾಡುಬ್ಬೆಯಪಾಳುವಿನಲ್ಲಿರುವ ಗ್ರಾಮವನ್ನು ಕೂಡ ದಾನ ನೀಡಿದ ವಿವರ ಹಾಗೂ ಶಿವಪುರದ ಗೋವರ್ಧನೇಶ್ವರದೇವರಿಗೆ ಒರಕುಂದಚಂದರಸನು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಇದೇ ಕಾಲದ ಸೂಡಿ ಶಾಸನದಲ್ಲಿ ರಾಜಧಾನಿ ವಿಕ್ರಮಪುರದ ಪಂಚಲಿಂಗೇಶ್ವರ ದೇವರ ಅಭಿವೃದ್ದಿಗೋಸ್ಕರ ವಿದ್ಯಾರ್ಥಿಗಳ ಜ್ಞಾನಾರ್ಜನೆಯುಳ್ಳ, ವಿದ್ವತ್ ಮಣಿಗಳ, ಋಷಿಗಳಿಗೆ ರಾಜನು ವಿಕ್ರಮಪುರದ ನೆಲವಿಡಿನಲ್ಲಿರುವ ಸ್ಥಳದಲ್ಲಿ ರಾಜನು ಮುಸಿಗೆಱೆಯ ಪಟ್ಟಣವನ್ನು ಸೋಮೇಶ್ವರಪಂಡಿತನಿಗೆ ದಾನ ನೀಡಿದ ದಾಖಲೆಯಿದೆ. ಹಾಗೂ ಇದಕ್ಕೆ ಸೇರಿದ ಚೌಕೇಶ್ವರ ದೇವಾಲಯದ ಅಭಿವೃದ್ಧಿ ಕಿಸುಕಾಡು ಕರಣ ಅಥವಾ ವಿಭಾಗಾಧಿಕಾರಿ ಚಾಕಯ್ಯ ಎಂಬುವನು ಭೂಮಿದಾನ ನೀಡಿದ ವಿವರವಿದೆ. ಕಾಡರೊಳ್ಳಿ ಶಾಸನದಲ್ಲಿ ಕಾರವಳ್ಳಿ ಶಂಕರದೇವರ ಅಂಗಭೋಗಕ್ಕೋಸ್ಕರ ೫ ಗಂಗಪೊನ್ನಗದ್ಯಾಣ ವಾರ್ಷಿಕವಾಗಿ ವಡ್ಡರಾವುಳಸುಂಕದ ಆದಾಯದಿಂದ ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ ಕೇಶವಾದಿತ್ಯ ಮತ್ತು ಇತರ ದಂಡನಾಯಕರು ದಾನ ನೀಡಿದ ದಾಖಲೆಯಿದೆ. ದೇವಗೇರಿ ಶಾಸನದಲ್ಲಿ ದಂಡನಾಯಕ ವೆಣ್ಣಮಯ್ಯ ಪೆರ್ಜುಂಕದ ಅಧಿಕಾರಿ ಮತ್ತು ನಾಗವರ್ಮ ಮತ್ತು ಚಿಕ್ಕಕೇತಯ್ಯ ಬಿಲ್ಕೊಡೆ ತೆರಿಗೆಗಳ ಅಧಿಕಾರಿ ದೇವಗೇರಿಯ ಕಂಮಕಾಳೇಶ್ವರದೇವರಿಗೆ ತೆರಿಗೆಗಳಿಂದ ದಾನ ನೀಡಿದ ವಿವರವಿದೆ. ಲಕ್ಕುಂಡಿ ಶಾಸನದಲ್ಲಿ ಮರುಳೇಶ್ವರದೇವರ್ಗ್ಗೆ ಲೊಕ್ಕಿಗುಣ್ಣಿ ಯಾರೊಡೆಯ ಮಹಾಜನಗಳು, ಸಾಸಿರ್ವ್ವರು, ಎಣ್ಣೆಗಾಣ, ತೋಂಟ ದಾನ ಮಾಡಿದ ವಿವರ ಹಾಗೂ ಪೆರ್ಗ್ಗಡೆಮರುಳಮಯ್ಯ ದೇವರಪ್ರತಿಷ್ಠೆ ಮಾಡಿ ಹಾಗೂ ಶಿವನಾಗಯ್ಯಗೇರಿಯರು ೩ ಮತ್ತರು ಕಿಸುಕಾಡುತೋಂಟ ಮತ್ತರು೧ ಅಯನ ಮಗ ರುದಿಮಯ್ಯ ಇದೇ ದೇವರಿಗೆ ಗದ್ಯಾಣ ೧, ದಂಡನಾಯಕ ಮಲ್ಲದೇವರ ನಂದಾದೀವಿಗೆಗೆ ಕೊಟ್ಟ ಗದ್ಯಾಣದ ೬, ದಾವಣ್ಣಂದೇವರ ಅಂಗಭೋಗಕ್ಕೆ ಕೊಟ್ಟ ಗದ್ಯಾಣ ೩೦, ಚಿನ್ನ ಗೇಟಿಕದ ಮಹದೇವ ಬಿಲ್ಲಮಯ್ಯನ ಸಹ ಕಿಸುಕಾಡಿನಲ್ಲಿ ಮತ್ತರು೨, ಬಿಜ್ಜರಮಹದೇವಯ್ಯನು, ರುದ್ರಯ್ಯನು ಊರೊಡೆಯ ಮಾಬಲಯ್ಯನ ಬಳದ ಮರೆಯಸೋಂಕಿನ ಬಾಗಿನಬಟ್ಟೆಯಂ, ಇನ್ನೂ ಮುಂತಾದವರು ಗಂಧ, ಧೊಪ ನಿವೆದ್ಯ, ನಂದಾದೀವಿಗೆಗೆ ದೇವರಿಗೋಸ್ಕರ ದಾನ ನೀಡಿದ್ದಾರೆ. ಆಂಧ್ರ ಪ್ರದೇಶದ ಕರನೂಲ್ ಶಾಸನದಲ್ಲಿ ರಾಜನದಂಡನಾಯಕ ಮಹಿಪಾಳಯ್ಯನು ಮಸಳಮಡುವಿನ ಇರುಗೇಶ್ವರ ದೇವಸ್ಥಾನಕ್ಕೆ ತೆರಿಗೆಗಳ ಆದಾಯದಿಂದ ಬ್ರಹ್ಮದೇಯ ಭೂಮಿಯನ್ನು ದಾನ ನೀಡಿದ ದಾಖಲೆಯಿದೆ. ಎಜಿಮಟಮ್ ಶಾಸನದಲ್ಲಿ (ನಂದಿಕೊಟಕುರ್ ತಾಲ್ಲೂಕು) ರಾಜನು ಬಂಕಾಪುರ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯ ಆಳುತ್ತಿರುವಾಗ ಮನ್ಮಹಾಮಣ್ಡ ಸತ್ಯರಸನು ತನ್ನ ತಂದೆ ತಮ್ಮಯ್ಯನ ಹೆಸರಿನಲ್ಲಿ ಬಿಕ್ಕೇಶ್ವರ ದೇವಸ್ಥಾನ ಕಟ್ಟಿಸಿ ದೇವಾಲಯಕ್ಕೋಸ್ಕರ ತೆರಿಗೆ ಆದಾಯಗಳಿಂದ ಪೂಜೆ, ನೈವೇದ್ಯ ನಂದಾದೀವಿಗೆಗೆ ಮತ್ತು ಋಷಿಗಳ ಆಹಾರಕ್ಕೆ ದಾನ ನೀಡಿದ ವಿವರವಿದೆ.

ಕ್ರಿ.ಶ. ೧೦೭೬ರ ಕಲಕೇರಿ ಶಾಸನದಲ್ಲಿ ಕಲಕೆಱೆ ಸ್ವಯಂಭು-ಸೋಮೇಶ್ವರದೇವರ ಪೂಜೆ, ನೈವೇದ್ಯ, ಋಷಿಗಳ ಆಹಾರಕ್ಕೋಸ್ಕರ, ಭುವನೈಕಮಲ್ಲ ವೀರನೊಳಂಬ ಬನವಾಸಿ ದೇಶದ ಪಾನುಂಗಲ್ಲುನಾಡಿನ ನೊಳಂಬವಾಡಿ ಆಳುತ್ತಿರುವಾಗ ದಾನ ನೀಡಿದ ಉಲ್ಲೇಖವಿದೆ. ನಿಡಗುಂದಿ ಶಾಸನದಲ್ಲಿ ಅಗ್ರಹಾರನಿಡಗುಂದಿಯ ೪೦೦ ಮಹಾಜನರು, ಮನರಂಜನೆ, ಪೂಜೆ ಮಹಾಜನರು ಸ್ಥಳಗಳಿಂದ ಬಂದು ಒಟ್ಟು ೫೦೦ ಗದ್ಯಾಣಗಳು, ೧೦ ಗದ್ಯಾಣ ಪೂಜೆಗೆ, ಮಹಾಮಂಡಳೇಶ್ವರ

ಸಿಂಗಣದೇವ ಕಿಸುಕಾಡು ಎಪ್ಪತ್ತು ವಿಭಾಗ ಆಳುತ್ತಿರುವಾಗ ಸ್ವಯಂಭು-ಕಲಿದೇವಸ್ವಾಮಿ ಪವಿತ್ರರೋಹಣಕ್ಕೋಸ್ಕರ ಮೂಲಸ್ಥಾನ-ಸ್ವಯಂಭು-ಕಲಿದೇವಸ್ವಾಮಿ ಮತ್ತು ಭಗವತಿ ನೀಡಗುಂದಿ ಗ್ರಾಮದ ದೇವತೆಗಳ ದೇವಾಲಯದ ಅಭಿವೃದ್ಧಿಗೋಸ್ಕರ ಎಣ್ಣೆಗಾಣಗಳು, ಹಣ ಮೊದಲಾದವನ್ನು ಅಹವಮಲ್ಲನ ಮಗಳು ಸುಗ್ಗಲದೇವಿಯ ಕಿರಿಯ ತಂಗಿ ಅವಗೆವಾಡಿನೆಲವೀಡಿನಲ್ಲಿ ನಿಡಗುಂದಿ-ಎಪ್ಪತ್ತು, ಆಳುತ್ತಿರುವಾಗ ಪರಮೇಶ್ವರ ದತ್ತಿಯನ್ನು ದಾನ ನೀಡಿದ ದಾಖಲೆಯಿದೆ.

ಕಲ್ಯಾಣವನ್ನಾಳಿದ ಚಾಲುಕ್ಯ ಅರಸರನೇಕರು ಶೈವಧರ್ಮವನ್ನು ಅವಲಂಬಿಸಿದ್ದರೂ, ಜೈನಧರ್ಮಕ್ಕೆ ಹೃತ್ಪೂರ್ವಕವಾಗಿ ಪೋಷಕರಾಗಿದ್ದರು.

ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ಕಾಲದಲ್ಲಿ ಮಂತ್ರಿಯಾಗಿದ್ದ ಸೋಮನಾಥನು ಸ್ವತಃ ಜೈನನಾಗಿದ್ದನು. ಬನವಾಸಿಯ ಮಾಂಡಲಿಕನಾಗಿದ್ದ ಲಕ್ಷ್ಮಣನು ಬಲಿಗ್ರಾಮದಲ್ಲಿ ಮಲ್ಲಕಾಮೋದ ಶಾಂತಿನಾಥ ಬಸದಿಯನ್ನು ಕಟ್ಟಿಸುವಂತೆ, ಸೋಮನಾಥನು ಅವನ ಮನಸ್ಸನ್ನೊಲಿಸಿಕೊಂಡನು.

ಚಾಲುಕ್ಯರ ಕಾಲದ ಧಾರ್ಮಿಕ ವೈಶಿಷ್ಟ್ಯವೆಂದರೆ, ಅನ್ಯಧರ್ಮ ಸಹಿಷ್ಣುತೆ ಹಾಗೂ ಒಬ್ಬನೇ ವ್ಯಕ್ತಿಯಲ್ಲಿ ವಿವಿಧ ಧರ್ಮಗಳ ಬಗ್ಗೆ ಶ್ರದ್ಧಾಭಕ್ತಿಯುಳ್ಳವರಾಗಿದ್ದರು.

ಚಾಲುಕ್ಯರ ಕಾಲದ ಅರಸರೂ, ಶ್ರೀಮಂತರೂ ದೇವಾಲಯಗಳಿಗೆ ಪುದುವಟ್ಟುಗಳನ್ನು ನೀಡುವುದು ಪುಣ್ಯಕಾರ್ಯವೆಂದು ಭಾವಿಸಿದ್ದರು. ಒಟ್ಟಿನಲ್ಲಿ ಹೇಳುವುದಾದರೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ವೈಷ್ಣವಧರ್ಮವೂ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಾಳಾಮುಖ ಪಾಶುಪತ ಶೈವಧರ್ಮವೂ ಜನಪ್ರಿಯವಾದಂತೆ ತೋರಿದರೂ ಪರಮಧರ್ಮ ಸಹಿಷ್ಣುತೆ ಇದ್ದಿತೆನ್ನುವುದರಲ್ಲಿ ಸಂದೇಹವಿಲ್ಲವೆನ್ನಬಹುದು.

ಆಕರ ಗ್ರಂಥಗಳು

೧. ಎಸ್.ಎಸ್.ಐ. ಸಂಖ್ಯೆ ೯, ಭಾಗ ೧, ೧೧, ೧೮, ೨೦, ೨೭, ೩೫.

೨. ಎ.ಆರ್.ಐ.ಇ, ೧೯೨೮-೨೯, ೧೯೭೩-೭೪, ೨೦೦೧-೦೨.

೫೨

ವೀರಬಲ್ಲಾಳ ಶಕ ವರ್ಷಗಣನೆ: 'ವೀರಬಲ್ಲಾಳದೇವ ವರ್ಷ'ದ ಕೆಲವು ಹೊಸ ವಿಚಾರಗಳು

ಮುರಳಿ ಕೂಡ್ಲೂರು*

ಭಾರತದ ಬಹುಪಾಲು ಶಾಸನಗಳಲ್ಲಿ ಆಯಾ ರಾಜನ ಆಳ್ವಿಕೆಯ ವರ್ಷಗಣನೆಯ ಪ್ರಕಾರ ಕಾಲ ನಿರ್ದೇಶನ ಬರುವುದು. ರಾಜರು ತಮ್ಮ ಸ್ವಂತ ಆಳ್ವಿಕೆಯಿಂದ ಅಂದರೆ ಪಟ್ಟಾಭಿಷೇಕಗೊಂಡ ದಿನದಿಂದ ವರ್ಷಗಣನೆ ಪ್ರಾರಂಭವಾಗತ್ತಿತ್ತು. ಇದು ಅಶೋಕನ ಶಾಸನಗಳಲ್ಲೂ ಕಂಡು ಬರುವುದು. (ಮೂರನೆಯ ಶಾಸನ {ಕ್ರಿ.ಪೂ. ೨೭೨-೩೨}ದಲ್ಲಿ "ನನ್ನ ಪಟ್ಟಾಭೀಷೇಕವಾಗಿ ೧೨ ವರ್ಷ ಕಳೆದಾಗ ಈ ಆಜ್ಞೆಯನ್ನು ಹೊರಡಿಸಿದ್ದೇನೆ ಎಂದು ಉಲ್ಲೇಖಿಸಿದೆ.) ಅದೇ ರೀತಿ ಇತರ ರಾಜರುಗಳ ಶಾಲಿವಾನ ಶಕೆ (+೭೮, ಕಾನಿಷ್ಕರಿಂದ ಪ್ರಾರಂಭ, ಶಾತವಾಹನರ ಗೌತಮಿಪುತ್ರ ಶಾತಕರಣಿಯಿಂದ ಮುಂದುವರೆಯಿತು. ಕರ್ನಾಟಕದ ಬಹುಪಾಲು ಶಾಸನಗಳು ಶಾಲಿವಾಹನ ಶಕೆಯನ್ನು ಹೊಂದಿದೆ.), ವಿಕ್ರಮಶಕ (+೫೮ ಮಾಳವರಲ್ಲಿ ಪ್ರಚಲಿತವಿತ್ತು), ಶ್ರೀಹರ್ಷಶಕೆ, ಗುಪ್ತಶಕೆ ಮುಂತಾದವುಗಳು ಇದ್ದವು. ಕರ್ನಾಟಕದಲ್ಲಿ ಚಾಲುಕ್ಯ ವಿಕ್ರಮಶಕ (೧೦೭೬) ಕಲಚೂರಿ ಶಕೆಗಳು ಕಂಡುಬರುವುದು. ನಂತರ ಹೊಯ್ಸಳರದೊರೆಗಳಲ್ಲಿ ಪ್ರಸಿದ್ಧನಾದ ವಿಷ್ಣುವರ್ಧನನು ಹೊಸ ಶಕೆಯನ್ನು ಪ್ರಾರಂಭಿಸಿದಂತೆ ಕಂಡುಬರುವುದಿಲ್ಲ. ಆತನ ಮೊಮ್ಮಗನಾದ ವೀರಬಲ್ಲಾಳನು ತನ್ನ ಶಕ್ತಿ ಸಾಮರ್ಥ್ಯದಿಂದ ಸ್ವತಂತ್ರ ರಾಜನಾಗಿ, ದಕ್ಷಿಣದ ಚಕ್ರವರ್ತಿಯಾಗಿ 'ವೀರಬಲ್ಲಾಳದೇವ ವರ್ಷ' ಎಂಬ ತನ್ನದೇ ಹೆಸರಿನ ಹೊಸ ಶಕವನ್ನು ಪ್ರಾರಂಭಿಸಿದ ಶಕಪುರುಷನಾಗಿದ್ದಾನೆ. ಆತನ ೪೭ ವರ್ಷಗಳ ಆಳ್ವಿಕೆಯ ಕಾಲದಲ್ಲಿ ಒಟ್ಟು ೫೮೩ ಶಾಸನಗಳು ದೊರೆತಿದ್ದು, ಅವುಗಳಲ್ಲಿ ೪೪ ಶಾಸನಗಳಲ್ಲಿ ಮಾತ್ರ ವೀರಬಲ್ಲಾಳದೇವ ವರ್ಷದ ಉಲ್ಲೇಖವಿದೆ.

ಮೊಟ್ಟಮೊದಲಿಗೆ ಕ್ರಿ.ಶ. ೧೧೭೯ರ ಮೂಡಗೆರೆ ತಾಲ್ಲೂಕು ಕೊಟ್ಟೆಗೆರೆ ಶಾಸನದಲ್ಲಿ 'ವೀರಬಲ್ಲಾಳದೇವವರ್ಶದ ವಿಕಾರಿಶಂವತ್ಸರದ' (ಮೂಡಗೆರೆ-೩೯) ನಂತರ ಕ್ರಿ.ಶ. ೧೧೮೨ರ ಶಿಕಾರಿಪುರದ ಬಳ್ಳಿಗಾಮೆಯ ಶಾಸನದಲ್ಲಿ 'ಚಕ್ರವರ್ತಿವೀರಬಲ್ಲಾಳ ದೇವವರ್ಷದ ೧೧ನೆಯ...' ಎಂದು ಉಲ್ಲೇಖಗೊಂಡಿದೆ., ಎ.ಕ.-೧೧) ಶಾಸನದಲ್ಲಿ ವರ್ಷ ಗಣನೆಯು ಏಕರೂಪತೆ ಇಲ್ಲದೆ ಬೇರೆ ಬೇರೆ ರೀತಿಯಾಗಿ ಗಣನೆ ಮಾಡಿದೆ.

೧. ವೀರಬಲ್ಲಾಳನಿಗೆ ಕ್ರಿ.ಶ. ೧೧೭೩ರಲ್ಲಿ ಜುಲೈ ೨೨ ಭಾನುವಾರದಂದು ಪಟ್ಟಾಭಿಷೇಕವಾಯಿತು. ಶಿಕಾರಿಪುರದ ಬಳ್ಳಿಗಾಮೆಯ ವೀರಗಲ್ಲಿನಲ್ಲಿ ಪಟ್ಟಾಭಿಷೇಕವಾದ ದಿನದಿಂದ ವರ್ಷಗಣಗೆ ತೆಗೆದುಕೊಂಡು 'ಶ್ರೀಮತು ಯಾದವಚಕ್ರವರ್ತ್ತಿ ವೀರಬಲ್ಲಾಳದೇವ ೧೪ನೆಯ ವರಿಸದುಂದುಬಿ ಸಂವತ್ಸ '(ಶಿಕಾರಿಪುರ-೧೫೬) ಎಂದು ಉಲ್ಲೇಖಿಸಿದೆ.

೨. ವೀರಬಲ್ಲಾಳನು ಸೊರಟೂರಿನ ಕದನದಲ್ಲಿ ಕ್ರಿ.ಶ. ೧೧೯೨ರಲ್ಲಿ ಸೇವುಣರ ಐದನೇ ಬಿಲ್ಲಮನನ್ನು ಸೋಲಿಸಿದನು. ಸೇವುಣರ ಮೇಲಿನ ವಿಜಯ ವೀರಬಲ್ಲಾಳನಿಗೆ ಹೆಚ್ಚು ಮಹತ್ವವನ್ನು ತಂದುಕೊಟ್ಟಿತ್ತು. ಆತ ಕರ್ನಾಟಕದ ಚಕ್ರವರ್ತಿಯಾದನು. ಈ ವಿಜಯದ ಸಂಕೇತವಾಗಿ ಹೊಸ ಶಕವನ್ನು ಪ್ರಾರಂಭಿಸಿದನು ಎಂದು ವಿದ್ವಾಂಸರ ಆಭಿಪ್ರಾಯ. ಗದಗದ ರೋಣ ತಾಲ್ಲೂಕಿನ ನರೇಗಲ್‌ನ ಶಾಸನದಲ್ಲಿ 'ಶ್ರೀಮತು ಯಾದವನಾರಾಯಣ ಪ್ರತಾಪ ಚಕ್ರವರ್ತಿ ಹೊಯಿಸಳ ವೀರಬಲ್ಲಾಳದೇವ ವರ್ಷದ ೭ನೇ ತಿಂಗಳ (ನಂ. ೨೧೨ ಎಸ್.ಐ.ಐ.-೧೫) ಎಂದು ಉಲ್ಲೇಖವಿದೆ. ಅಂದರೆ ಸೊರಟೂರಿನ ದಿಗ್ವಿಜಯದ ನಂತರದಲ್ಲಿ ವೀರಬಲ್ಲಾಳದೇವವರ್ಷ ವರ್ಷಗಣನೆಯನ್ನು ತೆಗೆದುಕೊಂಡಿದೆ.

೩. ಕ್ರಿ.ಶ. ೧೧೮೬ ಶಿಕಾರಿಪುರದ ಕಣಸೋಗೆ ಗ್ರಾಮದ ಶಾಸನದಲ್ಲಿ 'ಯಾದವನಾರಾಯಣ ದ್ವಾರಾವತೀಪುರಾಧೀಶ್ವರಂ ಪ್ರತಾಪಚಕ್ರವರ್ತ್ತಿ ಹೊಯ್ಸಣ ವೀರಬಲ್ಲಾಳದೇವವರ್ಷದ ೨೦ನೆಯ ಪ್ರಭವಸಂವತ್ಸರ" ಎಂದು ಉಲ್ಲೇಖವಿದೆ. ಅಂದರೆ

* # ೧, ತೇರಿನ ಬೀದಿ, ಕೂಡ್ಲೂರು, ಚನ್ನಪಟ್ಟಣ ಅಂಚೆ, ರಾಮನಗರ ಜಿಲ್ಲೆ-೫೬೨೧೬೦. ಮೊ. ೯೭೪೩೧೧೬೮೬೬

ಕ್ರಿ.ಶ. ೧೧೬೬ನೆಯ ಇಸವಿಯಿಂದ ವರ್ಷಗಣನೆ ತೆಗೆದುಕೊಂಡಿದೆ. ಆ ಸಮಯದಲ್ಲಿ ವೀರಬಲ್ಲಾಳನು ಯುವರಾಜನಾಗಿ ಆಳುತ್ತಿದ್ದನು. ಅಲ್ಲದೆ ಕ್ರಿ.ಶ. ೧೧೭೧ಕ್ಕೆ, ೧೧೯೦ಕ್ಕೆ, ೧೧೯೮ಕ್ಕೆ ಗಣಗೆ ತೆಗೆದುಕೊಂಡು ವರ್ಷಗಣನೆ ಮಾಡಿದ್ದಾರೆ.

ಹೀಗೆ ವೀರಬಲ್ಲಾಳದೇವವರ್ಷದ ವರ್ಷಗಣನೆಯಲ್ಲಿ ಏಕರೂಪತೆ ಇಲ್ಲದೆ ವಿವಿಧ ಘಟನೆಗಳನ್ನು ಅನುಸರಿಸಿ ಗಣನೆಗೆ ತೆಗೆದುಕೊಂಡಿರುವುದು ಕಂಡುಬರುತ್ತದೆ.

ಪ್ರಾದೇಶಿಕವಾಗಿ ನೋಡಿದಾಗ ವೀರಬಲ್ಲಾಳದೇವವರ್ಷದ ಬಳಕೆ ವೀರಬಲ್ಲಾಳನ ರಾಜಧಾನಿಯಾದ ದೋರಸಮುದ್ರ, ಅದರ ಸುತ್ತ ಮುತ್ತಲಿನ ಬೇಲೂರು, ಅರಸೀಕೆರೆ, ಹಾಸನ, ಕುಣಿಗಲ್, ಮೈಸೂರು ಭಾಗಗಳಲ್ಲಿ ಮತ್ತು ಅದರ ಸಮೀಪದ ಪ್ರದೇಶಗಳಲ್ಲಿ ಕಂಡುಬಂದಿಲ್ಲ. ಬದಲಿಗೆ ಅಲ್ಲಿ ಶಾಲಿವಾಹನ ಶಕವರ್ಷವನ್ನು ಬಳಸಲಾಗಿದೆ. ರಾಜಧಾನಿಯ ಉತ್ತರ ಭಾಗಕ್ಕೆ ಅಂದರೆ ಚಿಕ್ಕಮಗಳೂರು, ಶಿವಮೊಗ್ಗ, ಹಾವೇರಿ, ಧಾರವಾಡ, ಗದಗ ಮತ್ತು ಬಳ್ಳಾರಿ ಭಾಗಗಳ ಶಾಸನಗಳಲ್ಲಿ ಕಂಡುಬರುತ್ತದೆ. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ವೀರಬಲ್ಲಾಳನು ಉತ್ತರದ ದಿಗ್ವಿಜಯದಲ್ಲಿ ಗೆದ್ದ ಉದ್ದೇಶದಿಂದ ಬಹುಶಃ ಈ ಭಾಗಗಳಲ್ಲಿ ಶಾಲಿವಾಹನ ಶಕ ಬಳಸದೆ ವೀರಬಲ್ಲಾಳದೇವವರ್ಷವನ್ನು ಬಳಸಿರುವುದು ಕಂಡುಬರುತ್ತದೆ. ಸೊರಬ, ಶಿಕಾರಿಪುರಗಳ ಭಾಗದ ಒಡೆತನಕ್ಕಾಗಿ ಹಲವು ಕಿತ್ತಾಟಗಳು ನಡೆದಿದೆ. ಆ ಪ್ರದೇಶವನ್ನು ಗೆದ್ದ ರಾಜನು ತನ್ನ ಹೆಸರಿನ ಶಕವರ್ಷ ಬಳಸಿ ತಮ್ಮ ಆದಿಪತ್ಯವನ್ನು ಸೂಚಿಸಿದ್ದಾನೆ. ಹಾಗಾಗಿ ರಾಜಧಾನಿಯಿಂದ ದೂರದ ಪ್ರದೇಶಗಳ ಮೇಲಿನ ಹಿಡಿತವನ್ನು ಸಹ ಈ ಶಕ ವರ್ಷವು ತೋರಿಸುವುದು. ಹೀಗೆ ವೀರಬಲ್ಲಾಳನು ಹೊಯ್ಸಳವಂಶವನ್ನು ಸ್ವತಂತ್ರಗೊಳಿಸಿ, ದಕ್ಷಿಣಚಕ್ರವರ್ತಿಯಾಗಿ ತನ್ನದೇ ಒಂದು ಶಕವರ್ಷವನ್ನು ಪ್ರಾರಂಭಿಸಿದ ಶಕಪುರಷನಾಗಿದ್ದಾನೆ. ಆದರೆ ಈ ಶಕವರ್ಷವೂ ಹೆಚ್ಚು ದಿನಗಳು ಬಳಕೆಯಲ್ಲಿ ಉಳಿಯಲಿಲ್ಲ. ಪ್ರಸ್ತುತ ದೊರೆತಿರುವ ಶಾಸನಗಳಲ್ಲಿ ಕ್ರಿ.ಶ. ೧೨೧೫ರ ಶಿಕಾರಿಪುರದ ಬಂದಳಿಕೆಯ ಶಾಸನವೇ ವೀರಬಲ್ಲಾಳದೇವ ವರ್ಷವನ್ನು ಉಲ್ಲೇಖಿಸುವ ಕೊನೆಯ ಶಾಸನವಾಗಿದೆ. ಅಂದರೆ ವೀರಬಲ್ಲಾಳನು ಬದುಕಿರುವಾಗಲೇ ಆ ವರ್ಷಗಣನೆಯು ಬಳಕೆಯಿಂದ ತಪ್ಪಿ ರೂಢಿಗತವಾದ ಶಾಲಿವಾಹನ ಶಕ ಬಳಕೆಗೆ ಬಂದಿದೆ. ಒಟ್ಟಾರೆಯಾಗಿ ವೀರಬಲ್ಲಾಳದೇವವರ್ಷವು ೩೬ ವರ್ಷಗಳ ಕಾಲ ರೂಢಿಯಲ್ಲಿತ್ತು. ಹೀಗೆ ಹೊಯ್ಸಳರಲ್ಲಿ ಹೊಸ ಶಕವರ್ಷವನ್ನು ಪ್ರಾರಂಭಿಸಿದ ಕೀರ್ತಿ ವೀರಬಲ್ಲಾಳನಿಗೆ ಸಲ್ಲುತ್ತದೆ.

ವೀರಬಲ್ಲಾಳದೇವ ವರ್ಷವಿರುವ ಕೆಲವು ಶಾಸನಗಳು

ಕ್ರಮ ಸಂಖ್ಯೆ	ಶಾಸನ ಸಂಖ್ಯೆ	ವರ್ಷ ಗಣನೆ	ಊರು	ಜಿಲ್ಲೆ	ಶಾಸನ ಸಂಪುಟ
೧.	ಮೂಡಗೆರೆ–೩೯	೧೧೭೯	ಕೊಟ್ರೆಗೆರೆ	ಚಿಕ್ಕಮಗಳುರು	ಎ.ಕ.–೧೧
೨.	ಶಿಕಾರಿಪುರ–೧೬೮	೧೧೮೨	ಬಳ್ಳಿಗಾಮೆ	ಶಿವಮೊಗ್ಗ	EC-VII
೩.	ಶಿಕಾರಿಪುರ–೨೧೪	೧೧೮೬	ಕಣಸೋಗೆ	ಶಿವಮೊಗ್ಗ	EC-VII
೪.	ಶಿಕಾರಿಪುರ–೧೪೩	೧೧೮೬	ಬಳ್ಳಿಗಾಮೆ	ಶಿವಮೊಗ್ಗ	EC-VII
೫.	ನಂ. ೨೦೭	೧೧೯೨	ಹಸೂರು	ಗದಗ	SII-XV
೬.	ನಂ.೨೦೯	೧೧೯೫ ೧೧೯೨	ಲೊಕ್ಕಿಗುಂಡಿ	ಗದಗ	SII-XV
೭	ಸೊರಬ–೧೩	೧೧೯೬	ಅಂದಿಗೆ	ಶಿವಮೊಗ್ಗ	EC-VIII
೮.	ನಂ. ೨೧೧	೧೧೯೬ ೧೧೯೨	ಮೇವುಂಡಿ	ಗದಗ	SII-XV
೯.	ಹಡಗಲಿ–೪	೧೧೯೭	ಕುರುವತ್ತಿ	ಬಳ್ಳಾರಿ	ಕವಿಶಾಸಂ೧
೧೦.	ಸೊರಬ–೫೧೪	೧೧೯೭	ಚಿಟ್ಟೂರು	ಶಿವಮೊಗ್ಗ	EC-VIII
೧೧.	ಸೊರಬ–೫೧೫	೧೧೯೭	ಚಿಟ್ಟೂರು	ಶಿವಮೊಗ್ಗ	EC-VIII
೧೨.	ನಂ. ೨೧೨	೧೧೯೭ ೧೧೯೨	ನರೇಗಲ್	ಗದಗ	SII-XV
೧೩.	ನಂ. ೨೧೩	೧೧೯೭ ೧೧೯೦	ಅಣ್ಣಿಗೇರಿ	ಗದಗ	SII-XV
೧೪.	ಬೌದ್ಧಶಾಸನ	೧೧೯೭	ಕವಲೂರು	ಗದಗ	ಅಪ್ರಕಟಿತ
೧೫.	ನಂ. ೨೧೫	೧೧೯೯	ಬೆಂತೂರು	ಗದಗ	SII-XV
೧೬.	ಸೊರಬ–೪೦೨	೧೧೯೯	ತೊತ್ತುರು	ಶಿವಮೊಗ್ಗ	EC-VIII
೧೭.	ನಂ. ೧೯೫	೧೨೦೨	ರಾಣೇಬೆನ್ನೂರು	ಹಾವೇರಿ	SII-XVIII

೧೮.	ಶಿಕಾರಿಪುರ–೧೫೬	೧೨೦೨ ೧೧೭೩	ಬಳ್ಳಿಗಾಮೆ	ಶಿವಮೊಗ್ಗ	EC-VIII
೧೯.	ಶಿಕಾರಿಪುರ–೨೪೪	೧೨೦೩	ಬಂದಳಿಕೆ	ಶಿವಮೊಗ್ಗ	EC-VIII
೨೦.	ಶಿಕಾರಿಪುರ–೧೧೩	೧೨೦೩	ಬಳ್ಳಿಗಾಮೆ	ಶಿವಮೊಗ್ಗ	EC-VIII
೨೧.	ನಂ. ೪	೧೨೦೩	ಹಿರೇಕೆರೂರು, ಸಾತೇನಹಳ್ಳಿ	ಧಾರವಾಡ	KI-IV
೨೨.	ಸೊರಬ–೧೪೮	೧೨೦೪	ಉದ್ರಿ	ಶಿವಮೊಗ್ಗ	EC-VIII
೨೩.	ಹಡಗಲಿ–೧೧	೧೨೦೪ ೧೧೮೯+೧೫	ಹಡಗಲಿ	ಬಳ್ಳಾರಿ	ಕವಿಶಾಸಂ ೧
೨೪.	ಸೊರಬ–೩೩೨	೧೨೦೫	ಕುಣಿತೆಪ್ಪ	ಶಿವಮೊಗ್ಗ	EC-VIII
೨೫.	ನಂ. ೨೧೭	೧೨೦೫	ಅಣ್ಣೀಗೆರೆ	ಗದಗ	SII-XV
೨೬.	ನಂ. ೪೭	೧೨೦೫	ಹಾನುಗಲ್, ಬಾಳೂರು	ಹಾವೇರಿ	KI-V
೨೭.	ನಂ. ೨೧೮	೧೨೦೬	ಬೆಂತೂರು	ಗದಗ	SII-XV
೨೮.	MAR	೧೨೦೬	ಶಿಕಾರಿಪುರ	ಶಿವಮೊಗ್ಗ	MAR
೨೯.	ನಂ. ೨೨೮	೧೨೦೬	ಹಾನುಗಲ್, ಕಲ್ಲೇರಿ	ಹಾವೇರಿ	SII-XV
೩೦.	ಸೊರಬ–೧೭೧	೧೨೦೭	ಮೂಡಿ	ಶಿವಮೊಗ್ಗ	EC-VIII
೩೧.	ನಂ. ೧೯೬	೧೨೦೭	ಹಾವೇರಿ	ಹಾವೇರಿ	SII-XVIII
೩೨.	ಬಳ್ಳಾರಿ–೩೭	೧೨೦೭	ಕುಡಿತಿನಿ	ಬಳ್ಳಾರಿ	ಕವಿಶಾಸಂ ೧
೩೩.	ಸೊರಬ–೩೭೭	೧೨೦೯	ಹುರುಳಿ	ಶಿವಮೊಗ್ಗ	EC-VIII
೩೪.	ಸೊರಬ–೪೦೪	೧೨೧೧	ತತ್ತೂರು	ಶಿವಮೊಗ್ಗ	EC-VIII
೩೫.	ಶಿಕಾರಿಪುರ–೨೦೨	೧೨೧೧	ಶಿಕಾರಿಪುರ	ಶಿವಮೊಗ್ಗ	EC-VIII
೩೬.	ನಂ. ೨೨೧	೧೨೧೧	ನಾಗಾವಿ	ಗದಗ	SII-XV
೩೭.	ನಂ. ೨೨೨	೧೨೧೨	ಲೊಕ್ಕಿಗುಂಡಿ	ಗದಗ	SII-XV
೩೮.	ಸೊರಬ–೩೭೬	೧೨೧೨	ಹುರುಳಿ	ಶಿವಮೊಗ್ಗ	EC-VIII
೩೯.	ಸೊರಬ–೫೧೬	೧೨೧೨	ಚಿಟ್ಟೂರು	ಶಿವಮೊಗ್ಗ	EC-VIII
೪೦.	ಶಿಕಾರಿಪುರ–೧೯೬	೧೨೧೨	ಚಿಕ್ಕಮಾಗಡಿ	ಶಿವಮೊಗ್ಗ	EC-VIII
೪೧.	ಭದ್ರಾವತಿ–೫	೧೨೧೪	ಆನೆವೇರಿ	ಶಿವಮೊಗ್ಗ	ಎ.ಕ. ೧೩
೪೨.	ಶಿಕಾರಿಪುರ–೨೪೭	೧೨೧೫	ಬಂದಳಿಕೆ	ಶಿವಮೊಗ್ಗ	EC-VIII
೪೩.	ನಂ. ೧೯೩	೧೧೮೭–೮೮	ರಾಣೇಬೆನ್ನೂರು	ಹಾವೇರಿ	SII-XVIII
೪೪.	ಹಡಗಲಿ–೬	೧೨೦೬–೦೭	ಹಡಗಲಿ	ಬಳ್ಳಾರಿ	ಕವಿಶಾಸಂ ೧

೩೩

ಹೊಯ್ಸಳ ಒಂದನೇ ನರಸಿಂಹನ ಪಟ್ಟಾಭಿಷೇಕ: ಹೊಸ ವಿಚಾರಗಳು

ಎಂ. ಮುನಿಕೆಂಪೇಗೌಡ* ಆರ್. ಲೋಕೇಶ್**

ಕರ್ನಾಟಕವನ್ನಾಳಿದ ಸುಪ್ರಸಿದ್ಧ ರಾಜಮನೆತನಗಳಲ್ಲಿ ಹೊಯ್ಸಳ ಮನೆತನವೂ ಒಂದು ಕ್ರಿ.ಶ. ೧೧ನೇ ಶತಮಾನದ ಆರಂಭದಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತ ಮನೆತನವಾಗಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ಅಸ್ಥಿತ್ವಕ್ಕೆ ಬಂದ ಹೊಯ್ಸಳ ಮನೆತನ ಸುಮಾರು ೩ ಶತಮಾನಗಳ ಕಾಲ ಕರ್ನಾಟಕದ ಭವ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದರು. ಈ ಮನೆತನದಲ್ಲಿ ಹಲವಾರು ರಾಜರು ತಮ್ಮ ಆಡಳಿತಾವಧಿಯಲ್ಲಿ ಹೊಯ್ಸಳ ಸಾಮ್ರಾಜ್ಯದ ವಿಸ್ತರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರಲ್ಲಿ ಕ್ರಿ.ಶ. ೧೨ನೇ ಶತಮಾನದ ಆರಂಭದಲ್ಲಿ ಹೊಯ್ಸಳ ಮನೆತನದ ಸುಪ್ರಸಿದ್ಧ ಚಕ್ರವರ್ತಿ ವಿಷ್ಣುವರ್ಧನನು ಹೊಯ್ಸಳ ಸಾಮ್ರಾಜ್ಯಕ್ಕೆ ಒಂದು ಭದ್ರವಾದ ಅಸ್ತಿತ್ವವನ್ನು ದೊರಕಿಸಿಕೊಟ್ಟನು. ಇವನ ನಂತರ ಇವನ ರಾಣಿ ಲಕ್ಷ್ಮೀದೇವಿಗೆ ಜನಿಸಿದ ಒಂದನೇ ನರಸಿಂಹನು ಕ್ರಿ.ಶ. ೧೧೪೯–೧೧೭೩ರವರೆಗೆ ಆಳ್ವಿಕೆ ನಡೆಸಿದ ಹೊಯ್ಸಳ ಸಾಮ್ರಾಜ್ಯದ ಪ್ರಮುಖ ದೊರೆಯಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಒಂದನೇ ನರಸಿಂಹನ ಪಟ್ಟಾಭಿಷೇಕವನ್ನು ಕುರಿತು ಕೆಲವು ಹೊಸ ವಿಚಾರಗಳನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿದೆ.

ಹೊಯ್ಸಳರ ಬಗೆಗೆ ಸಂಶೋಧನೆ ನಡೆಸಿರುವ ಹಲವು ಇತಿಹಾಸಕಾರರು ಒಂದನೇ ನರಸಿಂಹನ ಪಟ್ಟಾಭಿಷೇಕವನ್ನು ಕುರಿತಂತೆ, ಚಿಕ್ಕಮಗಳೂರು ಜಿಲ್ಲೆಯ ಹವಳ್ಳಿ ಶಾಸನವನ್ನು ಆಧರಿಸಿ "ಬಂಕಾಪುರದಲ್ಲಿ ಹಿರಿಯಸ ಬಿಟ್ಟಿದೇವ ಕಾಲಂಗ್ಯೆಯೆ ಬೊಪ್ಪದೇವ ದಣ್ಣಾಯಕರು ಕಂಠವಂಕೊಂಡು ಬೆಂನನೆ ಬಂದಲ್ಲಿ ಮುದುಗೆರೆಯ ಕಾಳಗದಲ್ಲಿ ತಳಿಗೆನಾಡ ಮಿರಿಯ ವಾಳ್ಪಳ್ಳಿಯ ಬಿನ್ನಗೌಡ ಆನೆ ಭಂಡಾರವ ಹಿಡಿದಡವಲ್ಲಿ ಕಾದಿಬಿದ್ದಲ್ಲಿಗೆ ತಳಿಗೆನಾಡ ಸಾವಿರಭೂಮಿಯ ಒಂಬತ್ತು ಮಂದೆಯ ಪ್ರಭುಗಾವುಂಡುಗಳು ನಾರಸಿಂಹನಿಗೆ ಬಿನ್ನಹ ಮಾಡಿ ಭಿನ್ನಗೌಡನ ಮಗ ಭೂವಗೌಡನಿಗೆ ಒಂದು ಹಣವಿನ ಮಣ್ಣನ್ನು ಕೊಟ್ಟು ನಿಲ್ಲಿಸಿದ ಕಲ್ಲು"[೧] ಎಂದು ಉಲ್ಲೇಖವಾಗಿದೆ. ಈ ಶಾಸನದ ಕಾಲದ ಆಧಾರದ ಮೇಲೆ ವಿಲಿಯಂ ಕೊಯ್ಲೋರವರು ತಮ್ಮ 'ಹೊಯ್ಸಳ ವಂಶ' ಎಂಬ ಕೃತಿಯಲ್ಲಿ 'Vishnuvardhana died in AD 1141 at Bankapura' ಎಂದು ಹೇಳಿದ್ದು, ಈ ವೇಳೆಗೆ ಕೇವಲ ೮ ವರ್ಷದ ಬಾಲಕ ನರಸಿಂಹನ ಮೇಲೆ ಸಾಮ್ರಾಜ್ಯದ ಜವಾಬ್ದಾರಿ ಉಂಟಾಯಿತು ಎಂದು ಆ ವರ್ಷದಲ್ಲೇ ನರಸಿಂಹನ ಸಿಂಹಾಸನಾರೋಹಣವಾಯಿತು ಎಂದು ಅಭಿಪ್ರಾಯಪಟ್ಟಿದ್ದಾರೆ.[೨]

ಢೆರೆಟ್‌ರವರು ಸಹ ತಮ್ಮ 'The Hoysalas a medievel Indian Royal Family' ಎಂಬ ಕೃತಿಯಲ್ಲಿ "In March 1142, the aged Vishnuvardhana died at Bankapura' ಎಂದು ಅಭಿಪ್ರಾಯಪಟ್ಟಿದ್ದಾರೆ[೩].

ಡಾ. ಪಿ.ಬಿ. ದೇಸಾಯಿಯವರು 'A History of Karnataka' ಎಂಬ ಕೃತಿಯಲ್ಲಿ "ವಿಷ್ಣುವರ್ಧನ ಸುಮಾರು ನಲವತ್ತು ವರ್ಷಗಳ ಕಾಲ ಕ್ರಿ.ಶ. ೧೧೫೨ ರವರೆಗೆ ಆಳ್ವಿಕೆ ಮಾಡಿದನು. ಕ್ರಿ.ಶ. ೧೧೪೨ರ ಒಂದು ವೀರಗಲ್ಲು ಹಿರಿಯರಸ ಬಿಟ್ಟಿದೇವನ ಮರಣವನ್ನು ತಿಳಿಸುತ್ತದೆ. ಈ ಬಿಟ್ಟಿದೇವನನ್ನೇ ವಿಷ್ಣುವರ್ಧನ ಎಂದು ಗುರುತಿಸಲಾಗಿದೆ. ಆದರೆ ಈ ಹೋಲಿಕೆ ಅನುಮಾನಾಸ್ಪದವಾಗಿದ್ದು, ಕ್ರಿ.ಶ. ೧೧೫೨ರವರೆಗೂ ವಿಷ್ಣುವರ್ಧನ ಬದುಕಿದ್ದನೆಂಬುದಕ್ಕೆ ಹಲವಾರು ದಾಖಲೆಗಳಿವೆ" ಎಂದು ಹೇಳಿದ್ದಾರೆ.[೪]

ಡಾ. ಎಂ.ಜಿ. ಮಂಜುನಾಥರವರು ತಮ್ಮ 'ಹೊಯ್ಸಳ ವಿಷ್ಣುವರ್ಧನ ಅಂತ್ಯದ ಕಾಲ ಪುನರ್ ಪರಿಶೀಲನೆ' ಎಂಬ ಲೇಖನದಲ್ಲಿ ನಂಬಲರ್ಹ ಶಾಸನಗಳ ಆಧಾರದಿಂದ ವಿಷ್ಣುವರ್ಧನನ ಅಂತ್ಯದ ಕಾಲವನ್ನು ಖಚಿತವಾಗಿ ಗುರುತಿಸಿದ್ದಾರೆ. ಚಿಕ್ಕಮಗಳೂರಿನ ಹವಳ್ಳಿ ಶಾಸನದಲ್ಲಿ ಉಲ್ಲೇಖಿಸಿರುವ ಹಿರಯರಸ ಬಿಟ್ಟಿದೇವ ಕಾಲಂಗೆಯ್ಯೆ ಎನ್ನುವ ಸಾಲಿನ ಆಧಾರದ

* ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ. ಕಾಲೇಜು, ತಲಕಾಡು, ಟಿ. ನರಸೀಪುರ ತಾ., ಮೈಸೂರು ಜಿಲ್ಲೆ.
** ಸಹಾಯಕ ಪ್ರಾಧ್ಯಾಪಕ, ಸ.ಪ್ರ.ದ. ಕಾಲೇಜು, ಬೆಳ್ಳಾರೆ, ದಕ್ಷಿಣ ಕನ್ನಡ ಜಿಲ್ಲೆ.

ಮೇಲೆ ಇದು ವಿಷ್ಣುವರ್ಧನನ ಮರಣದ ವಿಷಯವನ್ನು ದಾಖಲಿಸಿದೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ವಿಷ್ಣುವರ್ಧನನಿಗೆ ಬಿಟ್ಟಿದೇವ ಎಂಬ ಹೆಸರಿದ್ದುದು ನಿಜವಾದರೂ ಪ್ರಸ್ತುತ ಶಾಸನೋಕ್ತ ಬಿಟ್ಟಿದೇವ ವಿಷ್ಣುವರ್ಧನನಲ್ಲ. ಇದು ಬೇರೊಬ್ಬ ವ್ಯಕ್ತಿ ಎನ್ನುವುದು ಖಚಿತ ಎಂದಿದ್ದಾರೆ. ಇದಕ್ಕೆ ಈ ಶಾಸನದಲ್ಲಿಯೇ ಉಕ್ತವಾಗಿರುವ "ಭುಜಬಳ ವೀರಗಂಗ ವಿಷ್ಣುವರ್ಧನ ಹೊಯ್ಸಳದೇವರು ಗಂಗವಾಡಿ ತೊಂಬತ್ತಾರು ಸಾವಿರವನ್ನು ದುಷ್ಟನಿಗ್ರಹ ಶಿಷ್ಟಪ್ರತಿಪಾಳನ ಗೆಯ್ದು ಸುಖ ಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರೆ" ಎಂಬ ಒಕ್ಕಣೆಯ ಆಧಾರದಿಂದ ಈ ಶಾಸನವನ್ನು ಹಾಕಿಸುವಾಗ ವಿಷ್ಣುವರ್ಧನನು ಬದುಕಿದ್ದು, ಸುಖವಾಗಿ ರಾಜ್ಯಭಾರ ಮಾಡುತ್ತಿದ್ದನು ಎಂಬ ಅಂಶ ಅತ್ಯಂತ ಸ್ಪಷ್ಟವಾಗಿ ತಿಳಿದುಬರುತ್ತದೆ ಎಂದು ಹೇಳಿದ್ದಾರೆ. ಹಾಗೂ ಕ್ರಿ.ಶ. ೧೧೪೧–೧೧೪೮ ರವರೆಗಿನ ಹಲವಾರು ಶಾಸನಗಳಲ್ಲಿ ವಿಷ್ಣುವರ್ಧನ ಬದುಕಿದ್ದು ರಾಜ್ಯಭಾರ ಮಾಡುತ್ತಿದ್ದ ಮಾಹಿತಿಯನ್ನು ಒಳಗೊಂಡಿರುವ ಶಾಸನಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ವಿಷ್ಣುವರ್ಧನ ಕ್ರಿ.ಶ. ೧೧೪೮ರ ಅಕ್ಟೋಬರ್ ೨೫ರವರೆಗೆ ಬುದಕಿದ್ದ ಎಂಬುದಕ್ಕೆ ಸಾಕ್ಷಿಯಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಮಾರೇಹಳ್ಳಿಯ ತಮಿಳು ಶಾಸನದಲ್ಲಿ "ಶ್ರೀ ವಿಷ್ಣುವರ್ಧನ ಪ್ರತಾಪ ಚಕ್ರವರ್ತಿ ಶ್ರೀ ವಿಷ್ಣುದೇವನ್ ಪೃಥ್ವಿರಾಜ್ಯಮ್ಪಣ್ಣಿ" ಎಂದು ಉಲ್ಲೇಖವಾಗಿರುವುದರಿಂದ ವಿಷ್ಣುವರ್ಧನ ಕ್ರಿ.ಶ. ೧೧೪೮ರವರೆಗೂ ಬದುಕಿದ್ದ ಹೊಯ್ಸಳ ವಂಶದ ಚಕ್ರವರ್ತಿಯಾಗಿ ಆಳ್ವಿಕೆ ನಡೆಸುತ್ತಿದ್ದ ಬಹುಶಃ ಇದಾದ ಕೆಲವು ದಿನಗಳ ನಂತರ ಆತನು ಮರಣ ಹೊಂದಿದ ಎಂದು ಹೇಳಿದ್ದಾರೆ"[೫]

ಮೇಲಿನ ಈ ಎಲ್ಲಾ ವಿದ್ವಾಂಸರ ಹೇಳಿಕೆಗಳನ್ನು ಆಧರಿಸಿ ಶಾಸನಗಳಲ್ಲಿ ಒಂದನೇ ನರಸಿಂಹನ ಪಟ್ಟಾಭಿಷೇಕವನ್ನು ಕುರಿತಂತೆ ಲಭ್ಯವಿರುವ ಖಚಿತವಾದ ಮಾಹಿತಿಯನ್ನು ಗುರುತಿಸಲಾಗಿದೆ. ಹಳೇಬೀಡಿನ ಕ್ರಿ.ಶ. ೧೧೩೩ರ ಶಾಸನದಲ್ಲಿ ನರಸಿಂಹನ ಪಟ್ಟಾಭಿಷೇಕವನ್ನು ಕುರಿತು.

"ಜನನಿಯ ಗರ್ಭದಿಂದೊಗೆದ ಲಗ್ನದ ಮೇಲೆ ಬಳಿಕ್ಕೆ ಯಾಮದೊಳು
ಜನಕನರಾತಿಯಂ ಕವಿಯೆ ಕಾಳೆಗದೊಳು ನೆರೆಕೊಂದು ಗೆಲ್ದು ಬಂ
ಧನುನಯದಿಂ ಪ್ರತಾಪನಾರಸಿಂಹನೆನಲು ಹೆಸರಿಟ್ಟು ಪಟ್ಟಮಂ
ಜನಿಯಿಸಿದಂದು ಕಟ್ಟಿದನೆನಲು ದೊರೆವೆತ್ತುದು ರಾಜ್ಯಸಂಪದಂ"[೬]

ಎಂದು ತಾನು ಜನ್ಮವೆತ್ತದಿನವೇ ತನ್ನ ತಂದೆಯಿಂದ ಸಾಮ್ರಾಜ್ಯಪಟ್ಟವನ್ನು ಕಟ್ಟಿಸಿಕೊಂಡವನು ಎಂದು ಉಲ್ಲೇಖಿಸಿದ್ದು, ಜೊತೆಗೆ ಇದೇ ಶಾಸನದಲ್ಲಿ "ಅಂತು ಪುಟ್ಟಿದಾ ದೆವಸದಿಂ ತಗುಳ್ದು ತನ್ನ ಲಲಾಟಪಟ್ಟದೊಳ್ಪಟ್ಟಮನ್ತು ರಂಜಿಸುವ ಮಹಾಮಹಿಮನಪ್ಪ ಪ್ರತಾಪನಾರಸಿಂಹ ಹೊಯ್ಸಳ ಮಹೀಭುಜಂ" ಎಂದು ಉಲ್ಲೇಖಿಸಲಾಗಿದೆ. ಹೀಗೆ ಜನ್ಮವೆತ್ತ ದಿನವೇ ನರಸಿಂಹನಿಗೆ ಸಾಮ್ರಾಜ್ಯ ಪಟ್ಟಾಭಿಷೇಕವಾದ ವಿಷಯವನ್ನು ತಿಳಿಸುತ್ತದೆ. ಹೀಗೆ ನರಸಿಂಹನ ಪಟ್ಟಾಭಿಷೇಕವಾದ ವಿಷಯವನ್ನು ನೇರವಾಗಿ ತಿಳಿಸುವ ಏಕೈಕ ಶಾಸನೋಕ್ತ ದಾಖಲೆ ಇದಾಗಿದೆ.

ಕ್ರಿ.ಶ. ೧೧೪೫ರ ನಾಗಮಂಗಲ ತಾಲ್ಲೂಕಿನ ಯಲ್ಲಾದಹಳ್ಳಿಯ ಶಾಸನದಲ್ಲಿ ನಾರಸಿಂಹನ ಆಳ್ವಿಕೆಯ ಬಗ್ಗೆ "ಶ್ರೀಮತ್ ಕಂಚಿಗೊಂಡ ವೀರ ವಿಷ್ಣುವರ್ಧನ ದೇವರು ಗಂಗವಾಡಿ ತೊಂಬತ್ತಾರು ಸಾವಿರಮಂ ನೊಂಬವಾಡಿ ಮುವತ್ತಿರ್ಚ್ಚಾಸಿರಮುಂ ಬನವಸೆ ಪನ್ನಿರ್ಚ್ಚಾಸಿರಮುಂ ಹಲಸಿಗೆ ಪನ್ನಿರ್ಚ್ಚಾಸಿರಮುವೆರಡರು ನೂರವಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನ ಪೂರ್ವಕ ವೇಕಚ್ಚತ್ರ ಛಾಯೆಯಿಂದಾಳ್ದನ್ ಆ ಮಹಾನುಭಾವನಿಂ ಬಳಿಯ ತಂದೆಯೆಲಚ್ಚೊತ್ತಿದ ತೆರದಿಂದವೆ ನೆಗಳ್ದದಿರಾಜ ಪದವಿಗೆ ಸಮನೆಂಬೊಂದು ವಿಭವ ಪ್ರಭಾವತೆಯಿಂದು ನರಸಿಂಹನರಸುತನಂಗೆಯುತ್ತಿರ್ದ್ದಂ" ಎಂದು ಉಲ್ಲೇಖವಾಗಿದೆ. ಜೊತೆಗೆ ಇದೇ ಶಾಸನದಲ್ಲಿ "ಅಂತು ಸಮಸ್ತ ಮಂಡಳಿಕ, ಸಾಮಂತ ಸೇನಾನಾಥ ಪರಿಜನ ಪರಿವೃತನಾಗಿ ದೋರಸಮುದ್ರದ ನೆಲೆವೀಡಿನೊಳು ಸಮುತ್ತುಂಗ ಸಿಂಹಾಸನಾಸೀನನಾಗಿ ಸುಖಸಂಕಥಾ ವಿನೋದದಿಂದ ರಾಜ್ಯಂಗೆಯ್ಯುತ್ತಿರೆ" ಎಂದು ಉಲ್ಲೇಖವಾಗಿದ್ದು, ಈ ಶಾಸನದ ಆಧಾರದಿಂದ ಕ್ರಿ.ಶ. ೧೧೪೫ರಲ್ಲಿಲ ವಿಷ್ಣುವರ್ಧನನ ನಂತರ ನರಸಿಂಹನು ತನ್ನ ತಂದೆಯ ಪ್ರತಿರೂಪದಂತೆ ಅಧಿರಾಜಪದವಿಯನ್ನು ಪಡೆದುಕೊಂಡು ಸಮಸ್ತ ಅಧಿಕಾರವನ್ನು, ಹೊಯ್ಸಳ ಮನೆತನದ ಉತ್ತುಂಗ ಸಿಂಹಾಸನದ ಒಡೆಯನಾಗಿ ಸಮಸ್ತ, ಮಂಡಳಿಕ, ಸಾಮಂತರು, ಸೇನಾನಾಯಕರು ಮತ್ತು ಪರಿಜನ ಸಮೇತವಾಗಿ ದೋರಸಮುದ್ರದಲ್ಲಿ ಸುಖಸಂಕಥಾವಿನೋದದಿಂದ ರಾಜ್ಯಭಾರ ಮಾಡುತ್ತಿದ್ದ ಎಂಬ ಮಾಹಿತಿ ಉಲ್ಲೇಖವಾಗಿದೆ."[೭]

ಹೊಯ್ಸಳರ ಕಾಲದಲ್ಲಿ ಯುವರಾಜರಿಗೆ ಆಡಳಿತದ ಹೊಣೆಯನ್ನು ಯಾವ ವರ್ಷದಂದು ನೀಡಲಾಗುತ್ತಿತ್ತು ಎಂಬ ವಿಷಯದ ಬಗ್ಗೆ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ಕ್ರಿ.ಶ. ೧೧೩೬ರ ವಿಷ್ಣುವರ್ಧನನ ಬೇಲೂರಿನ ಶಾಸನದಲ್ಲಿ ವಿಷ್ಣುವರ್ಧನನ ಅಧಿಕಾರಿ ಚಿನ್ನರಾಜ ಮತ್ತು ಚಂದಲೆಯರ ಮಗನಾದ ಮಹಾಪ್ರಧಾನ ಇಮ್ಮಡಿ ದಂಡನಾಯಕ ಬಿಟ್ಟಿಯಣ್ಣನನ್ನು ವಿಷ್ಣುವರ್ಧನನು ತನ್ನ ಸ್ವಂತ ಮಗನೆಂದು ಸಾಕಿ ಉಪನಯನೋತ್ಸವವನ್ನು ಮಾಡಿ ಎಂಟನೇ ವರ್ಷದಲ್ಲಿ ಸಮಸ್ತ

ಶಸ್ತ್ರಪ್ರವೀಣನನ್ನಾಗಿ ಮಾಡಿ, ತನ್ನ ದಂಡನಾಯಕನ ಮಗಳನ್ನು ತಂದು ಚಿನ್ನದ ಕಳಶದಿಂದ ಕೈನೀರೆರೆದು ಕನ್ಯಾದಾನ ಮಾಡಿ ವಿವಾಹ ಕಲ್ಯಾಣವನ್ನು ಮಾಡಿದನು. ಜೊತೆಗೆ ಇವನ ೧೧ನೇ ವರ್ಷದಲ್ಲಿ ಇವನ ಕುಶಾಗ್ರಬುದ್ಧಿಯನ್ನು ಕಂಡು ಮಹಾಪ್ರಚಂಡ ದಂಡನಾಥ ಪದವಿಯನ್ನು ಕೊಟ್ಟು ಸಮಸ್ತ ಅಧಿಕಾರವನ್ನು ವಹಿಸಿಕೊಟ್ಟ ವಿವರವನ್ನು ಒಳಗೊಂಡಿದೆ.[೮] ಇದರ ಆಧಾರದ ಮೇಲೆ ವಿಷ್ಣುವರ್ಧನನು ಕ್ರಿ.ಶ. ೧೧೪೫ರ ನಾಗಮಂಗಲ ತಾಲ್ಲೂಕಿನ ಯಲ್ಲಾದಹಳ್ಳಿ ಶಾಸನದಲ್ಲಿ ಉಲ್ಲೇಖಿಸಿರುವಂತೆ, ಒಂದನೇ ನರಸಿಂಹನಿಗೆ ಕ್ರಿ.ಶ. ೧೧೪೫ರಷ್ಟೊತ್ತಿಗೆ ತನ್ನ ೧೨ನೇ ವರ್ಷದಲ್ಲಿ ಹೊಯ್ಸಳ ವಂಸದ ಸಿಂಹಾಸನವನ್ನು ಅಲಂಕರಿಸಿ ದೋರಸಮುದ್ರದಲ್ಲಿ ಅರಸುತನ ಮಾಡುತ್ತಿದ್ದ ಎಂಬುದು ಸ್ಪಷ್ಟವಾಗುತ್ತದೆ.

ತರೀಕೆರೆ ತಾಲ್ಲೂಕಿನ ಎಲೂಗೆರೆ ಶಾಸನದಲ್ಲಿ 'ಶ್ರೀ ವೀರಗಂಗ ವಿಷ್ಣುವರ್ಧನ ಹೊಯ್ಸಳದೇವರು ಹಾನಂಗಲ್ಲು ಹಲಸಿಗೆ ಬೆಳ್ವೊಲ ನೊಳಂಬವಾಡಿ ಮೇರೆಯಾಗಿ ದೋರಸಮುದ್ರದ ನೆಲೆವೀಡಿನೊಳು ಸುಖಸಂಕಥಾವಿನೋದದಿಂದ ರಾಜ್ಯವಾಳುತ್ತಿರುವಾಗ" ಎಂಬ ಮಾಹಿತಿ ಇದೆ. ಈ ಶಾಸನದ ಕಾಲ ಶಕವರ್ಷ ೧೦೭೦ನೆಯ ವಿಭವ ಸಂವತ್ಸರದ ಸೋಮವಾರದಂದು ಎಂದು ಉಲ್ಲೇಖವಾಗಿದ್ದು, ಇದೇ ಶಾಶನದಲ್ಲಿ "ವಿಷ್ಣುಪುತ್ರಕಯೆಂದೊಡೆ ಬಣ್ಣಿಸಲ್ಕೆ ಭೂವಳಯದೊಳಾರ್ಪ್ಪರಾರು ನರಸಿಂಹ ನ್ರಿಪಾಳಕನಂ ನಿರಂತರಂ" ಎಂದು ಉಲ್ಲೇಖವಾಗಿದೆ.[೯] ಇದರ ಆಧಾರದ ಮೇಲೆ ಕ್ರಿ.ಶ. ೧೧೪೮ರಲ್ಲಿ ವಿಷ್ಣುವರ್ಧನ ಮತ್ತು ನರಸಿಂಹ ಇವರಿಬ್ಬರೂ ಒಂದೇ ಕಾಲಘಟ್ಟದಲ್ಲಿ ಆಳ್ವಿಕೆ ಮಾಡುತ್ತಿದ್ದ ಮಾಹಿತಿ ದೊರೆಯುತ್ತದೆ. ಇದರಿಂದಾಗಿ ವಿಷ್ಣುವರ್ಧನನು ಹುಟ್ಟಿದ ಮಗುವಿಗೆ ಪಟ್ಟಕಟ್ಟಿ, ಹೊಯ್ಸಳ ವಂಶದ ಮುಂದಿನ ಸಮರ್ಥ ದೊರೆಯನ್ನಾಗಿ ಮಾಡಲು ನರಸಿಂಹನನ್ನು ಬಾಲ್ಯದಿಂದಲೇ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿರುವಂತೆ ಕಂಡುಬರುತ್ತದೆ.

ಕ್ರಿ.ಶ. ೧೧೪೮ರ ಹಾಸನ ತಾಲ್ಲೂಕಿನ ಹೊನ್ನಾವರದ ಶಾಸನದಲ್ಲಿ "ಮಹಾಪ್ರಧಾನ ಹೆಗ್ಗಡೆ ಲಕುಮಯ್ಯನು ಅರಸ ನರಸಿಂಹನಿಗೆ ರಾಜ್ಯವನ್ನು ನಿಷ್ಕಂಟಕ ಮಾಡಿಕೊಟ್ಟ ಎಂಬ ಮಾಹಿತಿ ದೊರೆಯುತ್ತದೆ."[೧೦] ಈ ಸಂದರ್ಭದಲ್ಲಿ ಹೊಯ್ಸಳ ರಾಜ್ಯಸೂತ್ರಗಳನ್ನು ವಹಿಸಿಕೊಳ್ಳಲು ಉಂಟಾದ ಗಲಭೆಗಳಿಂದ ನರಸಿಂಹನ ಸಿಂಹಾಸನಾರೋಹಣಕ್ಕೆ ತೊಡಕುಂಟಾಗಿದ್ದು, ಇದನ್ನು ವಿಷ್ಣುವರ್ಧನನ ಅಮಾತ್ಯ ದಳಪತಿಯಾದ ಮಹಾಪ್ರಧಾನ ಹೆಗ್ಗಡೆ ಲಕುಮಯ್ಯ ನಿವಾರಿಸಿದ ಮಾಹಿತಿ ದೊರೆಯುತ್ತದೆ.

ಈ ಮೇಲಿನ ಎಲ್ಲಾ ಶಾಸನೋಕ್ತ ಮಾಹಿತಿಗಳ ಆಧಾರದಿಂದ ಹೊಯ್ಸಳ ಒಂದನೇ ನರಸಿಂಹನಿಗೆ ಕ್ರಿ.ಶ. ೧೧೩೩ರಲ್ಲಿ ಜನಿಸಿದ ದಿನವೇ ಪಟ್ಟಾಭಿಷೇಕವಾದರೂ, ಕ್ರಿ.ಶ. ೧೧೪೫ರಲ್ಲಿ ಅಧಿಕೃತವಾಗಿ ತನ್ನ ೧೨ನೇ ವಯಸ್ಸಿನಲ್ಲಿ ಹೊಯ್ಸಳ ಸಾಮ್ರಾಜ್ಯದ ಪಟ್ಟಾಭಿಷೇಕ ದೊರೆಯಿತು. ನಂತರ ಕ್ರಿ.ಶ. ೧೧೪೯ ವಿಷ್ಣುವರ್ಧನನ ಮರಣಾನಂತರ ಸಾಮ್ರಾಜ್ಯ ಪಟ್ಟಾಭಿಷೇಕದಲ್ಲಿ ಉಂಟಾದ ಆಂತರಿಕ ಗಲಭೆಗಳನ್ನು ವಿಷ್ಣುವರ್ಧನನ ಅಮಾತ್ಯ ದಳಪತಿಗಳು ನಿವಾರಿಸಿಕೊಟ್ಟಿರುವುದರ ಬಗೆಗಿನ ಮಾಹಿತಿಯ ಆಧಾರದಿಂದಾಗಿ ಒಂದನೇ ನರಸಿಂಹನಿಗೆ ಕ್ರಿ.ಶ. ೧೧೩೩, ೧೧೪೫ ಮತ್ತು ೧೧೪೯ರ ವಿಭಿನ್ನ ದಿನಾಂಕಗಳಲ್ಲಿ ಮೂರು ಬಾರಿ ಪಟ್ಟಾಭಿಷೇಕವಾಗಿರುವ ಮಾಹಿತಿಗಳು ಲಭ್ಯವಾಗುತ್ತವೆ. ಹೀಗೆ ವಿಷ್ಣುವರ್ಧನನ ಮರಣಾನಂತರ ಕ್ರಿ.ಶ. ೧೧೪೯ರಲ್ಲಿ ಒಂದನೇ ನರಸಿಂಹನಿಗೆ ಹೊಯ್ಸಳ ಮನೆತನದ ಅಧಿರಾಜಪದವಿ ದೊರೆತು ಕ್ರಿ.ಶ. ೧೧೭೩ರವರೆಗೆ ಆಳ್ವಿಕೆ ನಡೆಸಿದ ಮಾಹಿತಿಯು ಶಾಸನಗಳ ಆಧಾರದಿಂದ ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು

೧. ಎ.ಕ. ಸಂ. ೧೧, ಚಿಕ್ಕಮಗಳೂರು ೧೬೨, ಹವಳ್ಳಿ ಪು. ೧೦೧.
೨. William Coelho, The Hoysala vamsha, p. 17.
೩. Derret.JDM. The Hoysalas, p. 68.
೪. Dessai P.B. A History of Karnataka, p. 150.
೫. ಮಂಜುನಾಥ ಎಂ.ಜಿ. ಶಾಸನ ಪರಿಶೋಧನೆ: ಹೊಯ್ಸಳ ದೊರೆ ವಿಷ್ಣುವರ್ಧನನ ಅಂತ್ಯದ ಕಾಲ ಪುನರ್ ಪರಿಶೀಲನೆ, ಪು. ೧೯.
೬ ಎ.ಕ. ೯, ಬೇಲೂರು ೨೬೮, ಹಳೇಬೀಡು, ಪು. ೨೫೮.
೭. ಎ.ಕ. ೭, ನಾಗಮಂತಲ ೬೪, ಯಲ್ಲಾದಹಳ್ಳಿ, ಪು. ೪೭.
೮. ಎ.ಕ. ೯, ಬೇಲೂರು ೧೦೬, ಪು. ೪೭.
೯. ಎ.ಕ. ೧೨, ತರೀಕೆರೆ ೨೦, ಎಲೂಗೆರೆ, ಪು. ೩೬೦.
೧೦. ಎ.ಕ. ೯, ಹಾಸನ ೯೩, ಹೊನ್ನಾವರ, ಪು. ೩೦೬.

೫೪

ವೀರಬಲ್ಲಾಳನ ಸೇನೆಯಲ್ಲಿ ಒಂಟೆದಳ ಕೆಲವು ಹೊಸ ವಿಚಾರಗಳು

ಬಿ.ವಿ. ಸತೀಶ್ ಕುಮಾರ್* **ಬಿ.ಕೆ. ಶ್ರೀನಿವಾಸ್****

ರಾಜನ ಬಲವನ್ನು ಆತನು ಹೊಂದಿದ್ದ ಸೇನಾಬಲದಿಂದ ನಿರ್ಧರಿಸಲಾಗುತ್ತಿತ್ತು. ಸೇನಾಬಲದಲ್ಲಿ ಚತುರಂಗದಳವಿದ್ದು, ಅದರಲ್ಲಿ ರಥದಳ ಗಜದಳ, ಅಶ್ವದಳ ಮತ್ತು ಕಾಲ್ದಳಗಳು ಇರುತ್ತಿದ್ದವು. ಹೊಯ್ಸಳರ ಪ್ರಖ್ಯಾತ ದೊರೆ ವೀರಬಲ್ಲಾಳನ ಸೇನೆಯಲ್ಲಿ ಚತುರಂಗದಳದ ಜೊತಗೆ ಒಂಟೆದಳವು ಇದ್ದಿತು. ಆ ಒಂಟೆದಳದ ಬಗ್ಗೆ ಕೆಲವು ಹೊಸ ವಿಚಾರಗಳನ್ನು ಲೇಖನವು ಒಳಗೊಂಡಿದೆ.

ಒಂಟೆ ಮರುಭೂಮಿಯಲ್ಲಿ ವಾಸಿಸುವ ಉದ್ದನೆಯ ಕತ್ತುಳ್ಳ ಚತುಷ್ಪಾದ ಪ್ರಾಣಿ. ಇದನ್ನು ಸಂಸ್ಕೃತದಲ್ಲಿ 'ಉಷ್ಟ್ರ'ಎಂದು ಕರೆಯುವರು. ಇದು ಉಷ್ಣ ವಾತಾವರಣದಲ್ಲಿಯು ನೀರಿಲ್ಲದೆ ಬಹುದಿನಗಳವರೆಗೆ ಇರಬಲ್ಲಂತಹ ಪ್ರಾಣಿ, ಹಾಗೂ ಮರುಭೂಮಿಯಲ್ಲಿ ಸರಾಗವಾಗಿ ಓಡಾಡಬಲ್ಲದು, ಜೊತೆಗೆ ಮರುಭೂಮಿಯಲ್ಲದೆ ಇತರ ಪ್ರದೇಶಕ್ಕೂ ಒಗ್ಗಿಕೊಳ್ಳುವಂತಹ ವಿಶೇಷ ಗುಣವನ್ನು ಹೊಂದಿದೆ. ಒಂಟೆಯನ್ನು ಸೇನಾಪಡೆಯಲ್ಲಿ ಬಳಕೆಗೆ ಬಂದುದರ ಇತಿಹಾಸವನ್ನು ಅವಲೋಕಿಸಿದಾಗ ಅದು ಕ್ರಿಸ್ತ ಪೂರ್ವದಿಂದಲೂ ಬಳಕೆಗೊಂಡಿರುವುದನ್ನು ನೋಡಬಹುದು.

ಪ್ರಪಂಚದ ಇತಿಹಾಸದಲ್ಲಿ ಕ್ರಿ.ಪೂ. ೮೫೩ರಲ್ಲಿ ಅರಬ್‌ನ ದೊರೆ ಗಿಂದಿಬು(Gindibu)ವಿನ ಸೇನೆಯಲ್ಲಿ ಒಂದು ಸಾವಿರ ಒಂಟೆಗಳು ಇದ್ದವು. ಹಾಗೆಯೇ ಕ್ರಿ.ಪೂ. ೫೪೭ರ ಪರ್ಷಿಯಾದ ತೈಂಬ್ರಾ ಕದನದಲ್ಲಿ ಒಂಟೆಗಳನ್ನು ಸೇನೆಯಲ್ಲಿ ಬಳಸಿರುವುದನ್ನು ಹೆರೋಡೆಟೋಸ್ ದಾಖಲಿಸಿದ್ದಾನೆ. ಇನ್ನು ಭಾರತದಲ್ಲಿ ಉತ್ತರ ಭಾರತದ ರಾಜಮನೆತನದಲ್ಲಿ ಬಳಕೆಗೊಂಡಿರುವುದು ಕಂಡುಬರುವುದು, ಕ್ರಿ.ಶ. ೮ನೇ ಶತಮಾನದಲ್ಲಿ ಕಂಡುಬರುವ ರಜಪೂತ ರಾಜಮನೆತನವಾದ ಮೇವಾರ್ ಅಥವಾ ಮಾರ್ವಾರ್ ರಾಜರುಗಳ ಸೇನೆಯಲ್ಲಿ ಒಂಟೆಗಳು ಇದ್ದವು. ಕ್ರಿ.ಶ. ೯–೧೦ನೇ ಶತಮಾನದಲ್ಲಿ ಕಂಡುಬರುವ ಗೂರ್ಜರ ಪ್ರತೀಹಾರರ ಸೇನೆಯಲ್ಲಿಯೂ ಒಂಟೆ ದಳವಿದ್ದುದು ಕಂಡುಬರುವುದು. ಕರ್ನಾಟಕದಲ್ಲಿ ಹೊಯ್ಸಳ ಮತ್ತು ಸೇವುಣರವರೆಗೆ ಒಂಟೆದಳದ ಬಳಕೆಯಾಗಿರುವುದು ಕಂಡು ಬರುವುದಿಲ್ಲ. ಕಲ್ಯಾಣ ಚಾಲುಕ್ಯರ ಪ್ರಸಿದ್ಧ ದೊರೆ, ಚಕ್ರವರ್ತಿಯಾದ ಆರನೇ ವಿಕ್ರಮಾದಿತ್ಯನಲ್ಲಿ ಒಂಟೆದಳದ ಬಳಕೆ ಇರಲಿಲ್ಲ. ಏಕೆಂದರೆ ಜೆ.ಎಂ. ನಾಗಯ್ಯನವರು ತಮ್ಮ **'ಆರನೇ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ'** ಎಂಬ ಕೃತಿಯಲ್ಲಿ ವಿಕ್ರಮಾದಿತ್ಯನ ರಕ್ಷಣಾ ಇಲಾಖೆಯ ಬಗ್ಗೆ ತಿಳಿಸುವಾಗ **"ಕಲ್ಯಾಣದ ಚಾಲುಕ್ಯರ ಹತ್ತಿರ 'ಒಂಟೆಗಳ ಬಲ' ಇತ್ತೋ ಇಲ್ಲವೋ ತಿಳಿದು ಬರುವುದಿಲ್ಲ."**[1] ಎಂದು ತಿಳಿಸಿದ್ದಾರೆ. ಹಾಗಾಗಿ ಕಲ್ಯಾಣ ಚಾಲುಕ್ಯರ ಸೇನೆಯಲ್ಲಿ ಒಂಟೆದಳ ಇರಲಿಲ್ಲ ಎಂದು ತಿಳಿಯುತ್ತದೆ. ಇನ್ನು ಆತನ ಮಾಂಡಳಿಕರಾಗಿದ್ದ ಹೊಯ್ಸಳರು, ಸೇವುಣರು, ಕಳಚೂರಿಗಳು ಮುಂತಾದವರಲ್ಲಿಯೂ ಇರಲಿಲ್ಲವೆಂದಾಗುವುದು. ಆರನೇ ವಿಕ್ರಮಾದಿತ್ಯನ ಮರಣದ ನಂತರ ಆತನ ಮಾಂಡಳಿಕರು ಬಹುತೇಕ ಸ್ವತಂತ್ರರಾದರು. ಮುಂದೆ ದೇವಗಿರಿಯ ಸೇವುಣರಲ್ಲಿ ಉತ್ತರ ಭಾರತದ ಸಂಪರ್ಕದಿಂದ ಒಂಟೆದಳ ಇದ್ದುದರ ಬಗ್ಗೆ ಮಾಹಿತಿ ದೊರೆಯುವುದು.

ಹೊಯ್ಸಳರಲ್ಲಿ ಒಂಟೆದಳ ಇದ್ದದರ ಬಗ್ಗೆ ಅವಲೋಕನ ನಡೆಸಿದಾಗ ಆ ವಂಶದ ಪ್ರಸಿದ್ಧ ದೊರೆ ವಿಷ್ಣುವರ್ಧನ ಮತ್ತು ಆತನ ಮಗ ಮೊದಲನೆ ನರಸಿಂಹನ ಆಳ್ವಿಕೆಯ ವರೆಗೆ ಹೊಯ್ಸಳ ಸೇನೆಯಲ್ಲಿ ಒಂಟೆದಳ ಬಳಕೆಯಾಗಿರುವುದು ಕಂಡುಬರುವುದಿಲ್ಲ. ಹೊಯ್ಸಳರಿಗೆ ಒಂಟೆದಳದ ಪರಿಚಯವು ದೇವಗಿರಿಯ ಯಾದವರು ಅಂದರೆ ಸೇವುಣರಿಂದ ಆಗಿರಬೇಕು ಎಂದು ವಿಲಿಯಂ ಕೊಯಿಲ್ಹೊರವರು ತಿಳಿಸಿದ್ದಾರೆ.[2] ಹಾಗೆಯೇ ಅವರು ಹೊಯ್ಸಳರಲ್ಲಿ ಇಮ್ಮಡಿ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಒಂಟೆಯ ದಳದ ಬಗ್ಗೆ ಇದ್ದುದರ ಬಗ್ಗೆ ತಿಳಿಸಿದ್ದಾರೆ. ಆರ್. ಶೇಷಶಾಸ್ತ್ರಿಯವರು ಸಹ ಮುಮ್ಮಡಿ

* ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿವಿ, ಮೈಸೂರು. ಮೊ. ೯೫೩೮೨೭೪೩೨೭

** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ.ಪ.ದ. ಕಾಲೇಜು, ಬಾರ್ಕೂರು, ಕುಂದಾಪುರ ತಾ. ಉಡುಪಿ, ಮೊ. ೯೭೪೩೯೭೩೯೪೭

ಬಲ್ಲಾಳನ ಆಳ್ವಿಕೆಯಲ್ಲಿ ಒಂಟೆದಳ ಬಳಕೆಯಾಗಿರುವುದನ್ನು ಉಲ್ಲೇಖಿಸಿದ್ದಾರೆ.[೩] ಆದರೆ ಅದಕ್ಕೂ ಮೊದಲು ಸುಮಾರು ೬೦ ವರ್ಷಗಳ ಮುಂಚೆಯೇ ಎರಡನೇ ಬಲ್ಲಾಳನ ಸೇನೆಯಲ್ಲಿ ಒಂಟೆದಳವು ಇದ್ದಿತು ಎಂಬುದನ್ನು ಶಾಸನ ಮತ್ತು ಶಾಸನ ಶಿಲ್ಪಗಳ ಆಧಾರದಿಂದ ತಿಳಿದು ಬರುತ್ತದೆ. ಹೊಯ್ಸಳರಲ್ಲಿ ವಿಷ್ಣುವರ್ಧನನ ನಂತರ ಪ್ರಬಲ ರಾಜನಾಗಿ ಅಧಿಕಾರಕ್ಕೆ ಬಂದವನು ಆತನ ಮೊಮ್ಮಗ ಎರಡನೇ ಬಲ್ಲಾಳ. ಈತ ಮಹತ್ವಕಾಂಕ್ಷಿ ದೊರೆಯಾಗಿದ್ದು, ಹೊಯ್ಸಳ ವಂಶದ ಕೀರ್ತಿಯನ್ನು ಶಿಖರಕ್ಕೆ ಕೊಂಡೊಯ್ದನು. ಈತ ಸಮಕಾಲೀನ ಪರಿಸ್ಥಿತಿಗೆ ತಕ್ಕಂತೆ ತನ್ನ ಸೇನಾಬಲವನ್ನು ವೃದ್ಧಿಸಿಕೊಂಡಂತೆ ಕಂಡುಬರುವುದು. ಆತನ ಆಳ್ವಿಕೆಯಲ್ಲಿ ತನ್ನ ಸೇನಾಬಲದಲ್ಲಿ ಗಜ, ಅಶ್ವ, ಕಾಲ್ದಳಗಳ ಜೊತೆಗೆ ಒಂಟೆದಳವು ಇದ್ದುದು ಕಂಡುಬರುವುದು. ಪ್ರಸ್ತುತ ಲೇಖನವು ಹೊಯ್ಸಳರ ದೊರೆಗಳಲ್ಲಿ ಒಂಟೆದಳವು ಇಮ್ಮಡಿ ನರಸಿಂಹ ಹಾಗೂ ಮುಮ್ಮಡಿ ಬಲ್ಲಾಳರಿಗೂ ಮೊದಲೇ ಕ್ರಿ.ಶ. ೧೧೭೯ರಲ್ಲೇ ಎರಡನೇ ಬಲ್ಲಾಳನು ಒಂಟೆದಳವನ್ನು ತನ್ನ ಸೇನೆಯಲ್ಲಿ ಬಳಸಿದ್ದನು ಎಂದು ತಿಳಿಸುವುದಾಗಿದೆ.

ಪ್ರಸ್ತುತ ಹಳೇಬೀಡಿನ ವಸ್ತುಸಂಗ್ರಹಾಲಯದಲ್ಲಿರುವ ಶಾಸನೋಕ್ತ ವೀರಗಲ್ಲಿನಲ್ಲಿ ವೀರಬಲ್ಲಾಳನ ಅಧಿಕಾರಿ ಒಂಟೆಯ ಸಾಹಣಿಯಾದ ಅಚಯಸಾಹಣಿಯು ವೀರಮರಣ ಹೊಂದಿದನು. ಆ ಶಾಸನದಲ್ಲಿ **"ನಿಸ್ಸಂಕ ಪ್ರತಾಪ ಹೊಯ್ಸಳ ವೀರಬಲ್ಲಾಳದೇವರ ಬೆಸಸಿ ವೀಳೆಯವಂ ಕೊಟ್ಟೊಡೆ। ಸಂಕಮದೇವನೊಡ್ಡಂ ಮ[ಗು]ಳ್ಚಿ ಆನೆಯನಾನೆಯ ಮೇಲಿಕ್ಕಿ ಕುದುರೆಯ ಕುದುರೆಯ ಮೇಲಿಕ್ಕಿ ಆಲನಾಳಮೇಲಿಕ್ಕಿ ಹೆಣಮಯವಾಗಿ ಕೊಂ[ಡ]ಟ್ಟೆಗಳನಾಡಿ ತನ್ನ ಕೈಯ್ಯ ಹಸವೊಪಿನಂ ತಜೆದು ನತ್ತರಕಡಲು ಹರಿಸಿ ಬಲ್ಲಾಳದೇ[ವ][ನು] ಬೆಂನಮೆಟ್ಟಿ ನೋಡಿ ಮೆಚ್ಚಿ ಮುಯ್ಪಂ ಕೊಂಡಾಡೆ ಮಡೆವಳ್ಳಿಯ ಕಾಳಗದ ರಣರಂಗದಲಿ ಬಿಳ್ಪಾಗಳು ಅಚ್ಚರಗಣಿಕೆಯರು ವಿಮಾನವ ಕೊಂಡುಬಂದು ಸುರಲೋಕಕ್ಕೆ ಒಟ್ಟೆಯ ಪಟ್ಟಸಾಹಣಿ ಅಚಯಸಾಹಣಿ ಸುರಲೋಕ ಪ್ರಾಪ್ತನಾದನು."[೪]**

ಎಂದು ಉಲ್ಲೇಖವಿದೆ. ಅಂದರೆ ವೀರಬಲ್ಲಾಳನು ತನ್ನ ಒಂಟೆಯ ಪಟ್ಟಸಾಹಣಿ 'ಅಚಯಸಾಹಣಿ'ಯನ್ನು ಕರೆದು ಕಳಚೂರಿಯ ಸಂಕಮನ ವಿರುದ್ಧ ಹೋರಾಡಲು ಮಡವಳ್ಳಿಯ ಕಾಳಗಕ್ಕೆ ರಣವೀಳ್ಯವನ್ನು ಕೊಟ್ಟನು. ಆ ಅಚಯಸಾಹಣಿಯು ರಣವೀಳ್ಯವನ್ನು ಸ್ವೀಕರಿಸಿ ಸಂಕಮನ ಸೇನೆಯ ಆನೆ, ಕುದರೆ, ಕಾಲ್ದಳವನ್ನು ಕೊಂದು ನೆತ್ತರ ಕಡಲನ್ನು ಹರಿಸಿ ಯುದ್ಧದಲ್ಲಿ ವೀರಮರಣ ಹೊಂದಿದನು. ವೀರಬಲ್ಲಾಳನು ವೀರನ ಬೆನ್ನ ಮುಟ್ಟಿ ಗೌರವಿಸಿ ಆತನ ಭುಜಬಲ ಪರಾಕ್ರಮವನ್ನು ಕೊಂಡಾಡಿದನು. ನಂತರ ಆ ವೀರನ ಮಡದಿ ಹಾಗೂ ಆತನ ಮಗ ಸೇರಿ ವೀರಶಾಸನವನ್ನು ಹಾಕಿಸುವರು. ಪ್ರಸ್ತುತ ಶಾಸನದಲ್ಲಿ ತೇದಿ ಇಲ್ಲದ ಕಾರಣ ಶಾಸನ ಸಂಪುಟಕಾರರು ಇದು ೧೨–೧೩ನೇ ಶತಮಾನ ಎಂದು ನಿರ್ಧರಿಸಿದ್ದಾರೆ. ಅದರ ಜೊತೆಗೆ ಶಾಸನದಲ್ಲಿ ಉಲ್ಲೇಖವಾಗಿರುವ ವೀರಬಲ್ಲಾಳನು ಎರಡನೇ ಬಲ್ಲಾಳ ಮತ್ತು ಸಂಕಮನು ಕಲಚೂರಿ ದೊರೆ ಎಂದು ತಿಳಿಸಿದ್ದಾರೆ.[೫] ಇನ್ನು ಎರಡನೇ ಬಲ್ಲಾಳನು ಕಲಚೂರಿ ಸಂಕಮನೊಡನೆ ಎರಡು ಬಾರಿ ಯುದ್ಧ ಮಾಡುವನು. ಮೊದಲು ಕ್ರಿ.ಶ. ೧೧೭೯ರಲ್ಲಿ ಮಡವಳ್ಳಿ ಕಾಳಗ ಎಂದೇ ಶಾಸನದಲ್ಲಿ ಉಲ್ಲೇಖಿತವಾಗಿದೆ. ಎರಡನೇ ಭಾರಿ ಕ್ರಿ.ಶ. ೧೧೮೯ರಲ್ಲಿ ಹದಡೆಯ ಕೊಪ್ಪದಲ್ಲಿ ಯುದ್ಧ ಮಾಡುವನು. ಮಡವಳ್ಳಿಯ ಕಾಳಗದ ಬಗ್ಗೆ ಮೇಲೆ ಉಲ್ಲೇಖಿಸಿದ ಬೇಲೂರ ಶಾಸನದಲ್ಲಿ ಮಾತ್ರವಲ್ಲದೆ ಚಿಕ್ಕಮಗಳೂರು ಜಿಲ್ಲೆ ಮೂಡಗೆರೆ ತಾಲ್ಲೂಕಿನ ಕೊಟ್ರೆಗೆರೆಯ ಶಾಸನದಲ್ಲಿಯೂ ಉಲ್ಲೇಖಿತವಾಗಿದೆ. ಶಾಸನದಲ್ಲಿ


"ಭುಜಬಳಪ್ರತಾಪ ಹೊಯ್ಸಳ ಭುಜಬಳ ವೀರಬಲ್ಲಾಳದೇವವರ್ಶದ ವಿಕಾರಿಸಂವತ್ಸರದ ಕಾ . . ಮಾಸ ಸನಿವಾರದಂದು ಸಂಕಮದೇವನೊಡನೆ ಮಡವಳ್ಳಿಯ ಕಾಳಗದಂದು ಬಿಪ್ಪರದ ಬಿಮ್ಮಣ ಆನೆಯಮಸ್ತಕವಿಜೆದು ಸುರಲೋಕ ಪ್ರಾಪ್ತನಾದ"[೬]

ಎಂದು ಉಲ್ಲೇಖವಿದೆ. ಅಂದರೆ ಮಡವಳ್ಳಿಯ ಕಾಳಗದಲ್ಲಿ ವೀರಬಲ್ಲಾಳನ ಸೇನೆಯ ಬಿಪ್ಪರದ ಬಮ್ಮಣನು ಸಂಕಮನ ಆನೆಯ ಮಸ್ತಕವನ್ನು ಇರಿದು ವೀರಮರಣವನ್ನು ಹೊಂದುವನು. ಮುಂದೆ ವೀರಬಲ್ಲಾಳನು ಸೊಸೆವೂರಿಗೆ ಬಂದಿದ್ದಾಗ ಸ್ವತಃ ರಾಜನೇ ವೀರನ ಮನೆಯವರಿಗೆ ವೀರಗೊಡುಗೆಯನ್ನು ಕೊಟ್ಟನು. ಇನ್ನು ಈ ಕಾಳಗದಲ್ಲಿ ಮಡಿದ ಮತ್ತೊಬ್ಬ ವೀರ ಅಚೆಯಸಾಹಣಿ. ಈತ ವೀರಬಲ್ಲಾಳನ ಒಂಟೆಯ ಪಟ್ಟಸಾಹಣಿ. ಅಂದರೆ ಕೊಟ್ರೆಗೆರೆಯ ಶಾಸನದಿಂದ ಮಡವಳ್ಳಿಯ ಕಾಳಗವು ಕ್ರಿ.ಶ. ೧೧೭೯ರಲ್ಲಿ ನಡೆದಿದೆ ಆ ಮಡವಳ್ಳಿಯ ಕಾಳಗದಲ್ಲಿ ವೀರಬಲ್ಲಾಳನ ಸೇನೆಯಲ್ಲಿ ಅಚಯಸಾಹಣಿ ಹಾಗೂ ಬಿಪ್ಪರದ ಬಮ್ಮಣ ಎಂಬ ವೀರರು ಮಡಿದರು ಎಂದು ತಿಳಿಯುತ್ತದೆ.

ಪೂರ್ವೋಕ್ತ ಬೇಲೂರಿನ ಶಾಸನದಲ್ಲಿ ಉಲ್ಲೇಖಿತನಾಗಿರುವ ಅಚಯಸಾಹಣಿಯು ಒಂಟೆಯ ಪಟ್ಟಸಾಹಣಿಯಾಗಿದ್ದು, ಒಂಟೆಗಳಿಗೆ ಯುದ್ಧಕ್ಕೆ ಬೇಕಾದಂತಹ ತರಬೇತಿಯನ್ನು ಕೊಡುತ್ತಿದ್ದನು. ಎರಡನೇ ಬಲ್ಲಾಳನ ಆಳ್ವಿಕೆಯಲ್ಲಿ ಕ್ರಿ.ಶ.೧೧೭೯ರ ವೇಳೆಗೆ ತನ್ನ ಸೇನೆಯಲ್ಲಿ ಒಂಟೆದಳವು ಇದ್ದು, ಅವುಗಳಿಗೆ ತರಬೇತುದಾರರು ಇದ್ದುದು ತಿಳಿಯುವುದು. ಅಂದರೆ







ಸಮಕಾಲೀನ ಪರಿಸ್ಥಿತಿಗೆ ಅನುಗುಣವಾಗಿ ತನ್ನ ಸೇನಾಬಲವನ್ನು ಬಲಪಡಿಸಿ, ಬಲಿಷ್ಠನಾಗಿದ್ದನು. ಹೊಯ್ಸಳರಲ್ಲಿ ಒಂಟೆದಳವು ಇಮ್ಮಡಿ ನಾರಸಿಂಹ ಮತ್ತು ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಒಂಟೆದಳವಿತ್ತು ಎಂದು ವಿಲಿಯಂ ಕೊಯಿಲ್ಹೊರವರು ತಿಳಿಸಿದ್ದಾರೆ. ಆದರೆ ಅದಕ್ಕಿಂತ ಮುಂಚಿತವಾಗಿ ಎರಡನೇ ಬಲ್ಲಾಳನ ಆಳ್ವಿಕೆಯಲ್ಲಿಯೇ ಇದ್ದಿತು ಎಂದು ಮೇಲಿನ ಶಾಸನಗಳ ಆಧಾರದಿಂದ ಸ್ಪಷ್ಟವಾಗುವುದು.

ಇನ್ನು ವೀರಗಲ್ಲಿನ ಮೇಲೆ ಕೆತ್ತಿರುವ ಉಬ್ಬುಶಿಲ್ಪದ ಆಧಾರದಿಂದ ಹೇಳುವುದಾದರೆ, ಪೂರ್ವೋಕ್ತ ಹಳೇಬೀಡಿನ ವಸ್ತುಸಂಗ್ರಹಾಲಯದಲ್ಲಿರುವ ಶಾಸನೋಕ್ತ ವೀರಗಲ್ಲಿನ ಮೊದಲ ಪಟ್ಟಿಕೆಯಲ್ಲಿನ ಉಬ್ಬುಶಿಲ್ಪದಲ್ಲಿ ಮಡುವಳ್ಳಿಯ ಕಾಳಗದ ದೃಶ್ಯವಿದೆ. ಅದರಲ್ಲಿ ಅಚಯಸಾಹಣಿಯು ಒಂಟೆಯ ಮೇಲೆ ಕುಳಿತು ಬಿಲ್ಲನ್ನು ಹಿಡಿದು ಶತ್ರು ಸೇನೆಯ ಅಶ್ವಧಾರಿಯೊಂದಿಗೆ ಯುದ್ಧ ಮಾಡುತ್ತಿರುವ ದೃಶ್ಯವು ಕಂಡು ಬರುವುದು.(ಚಿತ್ರ–೧) ಅಚೆಯಸಾಹಣಿಯು ಒಂಟೆಯ ಸವಾರನಾಗಿ ಹೋರಾಟ ಮಾಡುತ್ತಿದ್ದರೆ, ಶತ್ರು ಪಾಳಯದಲ್ಲಿ ಗಜ, ಅಶ್ವದಳಗಳು ಕಂಡುಬರುವುದು. ಅಚೆಯ ಸಾಹಣಿಯು ಕುಳಿತಿರುವ ಚತುಷ್ಪಾದ ಪ್ರಾಣಿಯ ಉದ್ದ ಕತ್ತು ಇದ್ದು ಇದು ಒಂಟೆ ಎಂದು ಸ್ಪಷ್ಟವಾಗುತ್ತದೆ. ಇದರಿಂದ ವೀರಬಲ್ಲಾಳನ ಸೇನೆಯಲ್ಲಿ ಒಂಟೆದಳವಿದ್ದು, ಶತ್ರು ಸೇನೆಯಾದ ಕಲಚೂರಿ ಸಂಕಮನಲ್ಲಿ ಒಂಟೆದಳ ಇರಲಿಲ್ಲ ಎಂದು ಸಹ ತಿಳಿಯುತ್ತದೆ.

ವೀರಬಲ್ಲಾಳನ ಕಾಲದ ಮತ್ತೊಂದು ಶಾಸನೋಕ್ತ ವೀರಗಲ್ಲಿನ ಉಬ್ಬುಶಿಲ್ಪದಲ್ಲಿ ಒಂಟೆಯದಳ ಇದೆ. ಅದು ಚನ್ನರಾಯಪಟ್ಟಣ ತಾಲ್ಲೂಕಿನ ಕೆಂಬಾಳು ಗ್ರಾಮದ ಪಾಳು ಮಲ್ಲೇಶ್ವರ ದೇವಾಲಯದಲ್ಲಿರುವ ಮೊದಲನೆ ಶಾಸನೋಕ್ತ ವೀರಗಲ್ಲು ವೀರಬಲ್ಲಾಳನ ಕಾಲದ್ದಾಗಿದೆ. ತೇದಿ ಇಲ್ಲದ ಈ ಶಾಸನವನ್ನು ಶಾಸನ ಸಂಪುಟಕಾರರು ೧೨ನೇ ಶತಮಾನ

ಎಂದು ಶಾಸನ ತಿಳಿಸಿದ್ದಾರೆ. ಶಾಸನದ ಸಾರಂಶ ಇಂತಿದೆ ವೀರಬಲ್ಲಾಳನ ರಾಣಿ 'ಚೋಳಮಹಾದೇವಿ'ಯು ಕೆಂಬಾಳು ಪ್ರದೇಶವನ್ನು ಆಳ್ವಿಕೆ ನಡೆಸುತ್ತಿದ್ದಳು. ಆ ಸಂದರ್ಭದಲ್ಲಿ ಕೆಂಬಾಳಿನ ಸಮೀಪದ ಬೇವೂರಿನ ಜನ ರಾಣಿಯ ಬಗ್ಗೆ ದುಷ್ಟ ಮಾತುಗಳನ್ನು ಆಡಿಕೊಂಡರು. ಅದನ್ನು ಕೇಳಿದ ಚೋಳಮಹಾದೇವಿಯು ಕ್ರೋದಗೊಂಡು ಬೇವೂರಿನ ಮೇಲೆ ದಾಳಿ ನಡೆಸಿ ಗೋವುಗಳನ್ನು ಸೆರೆ ಹಿಡಿಸಿದಳು. ಆ ವೇಳೆ ಕೇತಮಲ್ಲನೆಂಬ ವೀರನೊಬ್ಬ ರಾಣಿಯ ಸೇನೆಯ ವಿರುದ್ಧ ಹೋರಾಡಿ ತುರುಗಳನ್ನು ರಕ್ಷಿಸಿ, ಮಾನಪ್ರಾಣವನ್ನು ಉಳಿಸಿ ವೀರಮರಣ ಹೊಂದಿದನು. ನಂತರ ಚೋಳಮಹಾದೇವಿಗೆ ತನ್ನ ತಪ್ಪಿನ ಅರಿವಾಗಿ ತಮ್ಮ ಮಕ್ಕಳ ನೋಯಿಸಿದೆವೆಂದು ವೀರನ ಮನೆಯವರಿಗೆ ತಮ್ಮ ಭಂಡಾರದ ಅಧಿಕಾರಿಗಳಿಂದ ಸಾಂತ್ವನ ಹೇಳಿ, ವೀರಗೊಡುಗೆಯನ್ನು ಕಳುಹಿಸಿದಳು.[೨] ಈ ಶಾಸನೋಕ್ತ ವೀರಗಲ್ಲು ತುಂಬಾ ಅಗಲ ಮತ್ತು ಉದ್ದವಾಗಿದ್ದು, ಶಿಲ್ಪಿಯು ತುಂಬಾ ಸೊಗಸಾಗಿ ಮಾಡಿದ್ದಾನೆ. ವೀರಗಲ್ಲಿನ ಮೊದಲ ಪಟ್ಟಿಕೆಯಲ್ಲಿ ಚೋಳಮಹಾದೇವಿಯು ನಡೆಸಿದ ಆಕ್ರಮಣದ ದೃಶ್ಯವನ್ನೇ ಶಿಲ್ಪಿಯು ಶಿಲೆಯಲ್ಲಿ ಸೆರೆಹಿಡಿದಿದ್ದಾನೆ. ವೀರನಾದ ಕೇತಮಲ್ಲನು ಹೋರಾಡುತ್ತಿರುವ ದೃಶ್ಯವಿದೆ. ವೀರನ ಎದುರಿನಲ್ಲಿ ವೀರಬಲ್ಲಾಳನ ಸೇನೆಯು ಆಕ್ರಮಣ ಮಾಡುತ್ತಿದ್ದು ಅದರಲ್ಲಿ ಗಜ, ಅಶ್ವ, ಕಾಲ್ದಳ ಮತ್ತು ಒಂಟೆದಳಗಳವೆ. ನಾಲ್ಕು ಪಡೆಯು ಬೇವೂರಿನ ಮೇಲೆ ಆಕ್ರಮಣ ಮಾಡುತ್ತಿರುವ ದೃಶ್ಯ ಇದಾಗಿದೆ. (ಚಿತ್ರ–೨) ಮೇಲಿನ ಶಾಸನ ಮತ್ತು ಶಾಸನ ಶಿಲ್ಪಗಳ ಆಧಾರದಿಂದ ಹೊಯ್ಸಳರ ಯುದ್ಧಸೇನೆಯಲ್ಲಿ ಎರಡನೇಬಲ್ಲಾಳನಂದ ಒಂಟೆದಳವು ಬಳಕೆಗೆ ಬಂದಿರುವುದು ಸ್ಪಷ್ಟವಾಗುವುದು.

ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಅಂಶಗಳಾದ ರಾಜನ ಸೇನಾಬಲ, ಯುದ್ಧ ಚಿತ್ರಣ, ಬೇಟೆ, ಮನರಂಜನೆ ಮುಂತಾದ ಅಂಶಗಳು ದೇವಾಲಯದ ಹೊರಾಂಗಣದ ತಳಪಟ್ಟಿಕೆಗಳಲ್ಲಿ ಕಂಡು ಬರುವುದು. ವೀರಬಲ್ಲಾಳನ ಕಾಲದ ವರೆಗಿನ ನಿರ್ಮಿತವಾದ ದೇವಾಲಯಗಳಲ್ಲಿ ಹೊಯ್ಸಳರಲ್ಲಿ ಗಜ, ಅಶ್ವ, ಮತ್ತು ಕಾಲ್ದಳಗಳ ಕೆತ್ತನೆ ಮಾತ್ರ ದೊರೆಯುವುದು. ವೀರಬಲ್ಲಾಳನ ಆಳ್ವಿಕೆ ಮತ್ತು ಆತನ ನಂತರದಲ್ಲಿ ಒಂಟೆದಳಗಳ ಬಳಕೆಗೆ ಬಂದಿದ್ದು, ಕ್ರಿ.ಶ. ೧೨೬೮ರಲ್ಲಿ ಮುಮ್ಮಡಿ ನಾರಸಿಂಹನ ಅಧಿಕಾರಿ ಸೋಮ ಅಥವಾ ಸೋಮನಾಥನೆಂಬುವನು ನಿರ್ಮಿಸಿದ ಸೋಮನಾಥಪುರದ ಕೇಶವನ ದೇವಾಲಯದ ತಳಪಟ್ಟಿಕೆಗಳಲ್ಲಿ ಒಂಟೆಗಳ ಸಾಲಿನ ಚಿತ್ರವಿರುವುದು ಕಂಡುಬರುವುದು. (ಚಿತ್ರ–೩) ಆ ಸಮಯಕ್ಕೆ ಹೊಯ್ಸಳರ ದೊರೆಗಳು ತಮ್ಮ ಸೇನೆಯಲ್ಲಿ ಒಂಟೆಗಳನ್ನು ಸೇರ್ಪಡೆ ಮಾಡಿಕೊಂಡಿರುವುದು ಕಂಡುಬರುವುದು.

ಹೀಗೆ ಹೊಯ್ಸಳ ದೊರೆಗಳಲ್ಲಿ ವೀರಬಲ್ಲಾಳನಿಂದ ಪ್ರಾರಂಭವಾದ ಒಂಟೆದಳದ ಸೇರ್ಪಡೆ ಮುಮ್ಮಡಿ ಬಲ್ಲಾಳನವರೆಗೆ ಮುಂದುವರೆದಿದೆ. ಉತ್ತರ ಭಾರತದ ಮರುಭೂಮಿ ಪ್ರದೇಶದ ಈ ಚತುಷ್ಪಾದ ಪ್ರಾಣಿಯಾದ ಒಂಟೆಯು ಕರ್ನಾಟಕಲ್ಲಿ ಮಡವಳ್ಳಿ ಕಾಳಗದಲ್ಲಿ ಮತ್ತು ಚನ್ನರಾಯಪಟ್ಟಣದ ಒಂದು ಪುಟ್ಟ ಗ್ರಾಮ ಬೇವೂರು, ಆ ಗ್ರಾಮದ ಊರಳಿವಿನಲ್ಲಿ ಬಳಕೆಯಾಗಿರುವುದು ಆಶ್ಚರ್ಯವೇ ಸರಿ. ಎರಡನೇ ಬಲ್ಲಾಳ ಯಶಸ್ವಿ ರಾಜ ಮಾತ್ರವಲ್ಲ, ಯುದ್ಧವೀರ, ರಣರಂಗ ಪ್ರೇಮಿಯು ಆಗಿದ್ದು, ಯುದ್ಧದ ಗೆಲುವಿಗಾಗಿ ಸೇನಾಬಲಕ್ಕೆ ಅವಶ್ಯವಿದ್ದ ನೂತನ ಕಾರ್ಯಕಲ್ಪಗಳನ್ನು ಮಾಡಿದ್ದಾನೆ. ಸಮಕಾಲೀನ ರಾಜರನ್ನು ಸೋಲಿಸಿ ಚಕ್ರವರ್ತಿಯಾಗಿ ಹೊಯ್ಸಳ ವಂಶದ ಕೀರ್ತಿಯನ್ನು ಉನ್ನತ ಮಟ್ಟಕ್ಕೆ ತರುವ ಪ್ರಯತ್ನಗಳಲ್ಲಿ ಇದು ಒಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ನಾಗಯ್ಯ ಜೆ.ಎಂ. 'ಆರನೆಯ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ', ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ಪ್ರಥಮ ಮುದ್ರಣ, ಪುಟ ಸಂಖ್ಯೆ ೨೯೧.

೨. William Coelho, 'The Hoysala Vamsha'. "Inscriptions also inform us that Camels were used during war. Thus Narasimha II is said to have destroyed the camels and elephants of his foes. These were probably introduced into the south by the Yadavas of Devagiri with whom Narasimha II came into contact. Page no.- 254.

೩. ಶೇಷಶಾಸ್ತ್ರಿ ಆರ್. 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಸಾಹಿತ್ಯ ಪರಿಷತ್ತು, ಪುಟ ಸಂ. ೨೪೦.

೪. ಎ.ಕ. ೯, ಬೇಲೂರು–೩೩೯, ೧೨–೧೩ನೇ ಶತಮಾನ, ಪರಿಷ್ಕೃತ ಸಂಪುಟ, ೧೯೯೦, ಪುಟ ಸಂ. ೩೧೮.

೫. ಎ.ಕ. ೯, ಬೇಲೂರು-೩೩೯, ೧೨-೧೩ನೇ ಶತಮಾನ, ಪರಿಷ್ಕೃತ ಸಂಪುಟ, ೧೯೯೦, "The record is undated. If Sankamadeva could be Identified with the Kalachuri king of that name, Ballala may be Viraballala II who is known to have fought against Kalachuri Sankama. ಪುಟ ಸಂ. ೩೧೮.

೬. ಎ.ಕ.-೧೧, ಮೂಡಗೆರೆ-೩೯, ಕ್ರಿ.ಶ. ೧೧೭೯, ಪರಿಷ್ಕೃತ ಸಂಪುಟ, ಪುಟ ಸಂ. ೧೭೪.

೭. ಎ.ಕ.-೧೦, ಚ.ರಾ.ಪಟ್ಟಣ-೭೨, ೧೨ನೇ ಶತಮಾನ, ಪರಿಷ್ಕೃತ ಸಂಪುಟ, ಪುಟ ಸಂ. ೫೦೦.

ಆಕರ ಗ್ರಂಥಗಳು

ಕನ್ನಡ ಕೃತಿಗಳು

೧. ಕೇಶವಭಟ್ಟ ಎಂ.ವಿ. & ಕೃಷ್ಣರಾವ್ ಎಂ.(ಸಂ) : **ಕರ್ನಾಟಕದ ಇತಿಹಾಸ ದರ್ಶನ,** ಬೆಂಗಳೂರು. ೧೯೭೯.

೨. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನ ಬುಕ್ ಹೌಸ್, ಬೆಂಗಳೂರು, ಐದನೇ ಮುದ್ರಣ, ೨೦೧೧.

೩. ದಿವಾಕರ್ ಆರ್.ಆರ್(ಸಂ), **ಕರ್ನಾಟಕದ ಪರಂಪರೆ ಸಂಪುಟ ೧,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೪.

೪. ನರಸಿಂಹಮೂರ್ತಿ ಎ.ವಿ., **ಕರ್ನಾಟಕದ ಸೇವುಣರ ಇತಿಹಾಸ,** ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ಎರಡನೇ ಮುದ್ರಣ, ೨೦೧೦.

೫. ನಾಯಕ ಹಾ.ಮ. (ಪ್ರ.ಸಂ.), **ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫.

೬. ಮುಗಳಿ ರಂ.ಶ್ರೀ., **ಕನ್ನಡ ಸಾಹಿತ್ಯ ಚರಿತ್ರೆ,** ಸಮಾಜ ಪುಸ್ತಕಾಲಯ, ಧಾರವಾಡ, ೨೦೦೦.

೭. ಶಿವರುದ್ರಪ್ಪ ಜಿ.ಎಸ್. (ಪ್ರ.ಸಂ.), **ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ,** ಸಂಪುಟ-೩, ಪ್ರಸಾರಾಂಗ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದಾಲಯ, ಬೆಂಗಳೂರು, ೧೯೭೬.

೮. ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೯. ಸುಂದರ್ ಅ. (ಪ್ರ.ಸಂ), **ಕರ್ನಾಟಕ ಚರಿತ್ರೆ ಸಂಪುಟ-೩,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೭.

ಆಂಗ್ಲ ಕೃತಿಗಳು

೧. Derret J.D.M., **The Hoysalas**, A Medival Indian Royal Family, Oxford University Press, London, 1957.

೨. Desai P.B., A History of Karnataka, Kannda Research Institute, Karnataka University, Dhawar, 1970.

೩. William Coehlo : **THE HOYSALA VAMSHA,** Indian Historical Institute, St. Xavier's College, Bombay. 1950.

ಶಾಸನ ಸಂಪುಟಗಳು ಮತ್ತು ವಿಶ್ವಕೋಶ

೧. **ಎಪಿಗ್ರಾಫಿಯ ಕರ್ನಾಟಿಕ** ಬಿ. ಎಲ್. ರೈಸ್ ಸಂಪಾದಿತ ಸಂಪುಟಗಳು.

೨. **ಎಪಿಗ್ರಾಫಿಯ ಕರ್ನಾಟಿಕ,** ಸಂಪುಟಗಳು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. **ಕನ್ನಡ ವಿಷಯ ವಿಶ್ವಕೋಶ- ಇತಿಹಾಸ ಮತ್ತು ಪುರಾತತ್ವ,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೯.

ನಿಘಂಟು

೧. **ಕನ್ನಡ ನಿಘಂಟು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಎರಡನೇ ಮುದ್ರಣ, ೨೦೧೦.

೫೫

ಕೊಪಣಪುರವರಾಧೀಶ್ವರರು ಯಾರು?

ಬಿ.ವ್ಹಿ. ಶಿರೂರ*

ಅರಸರು, ಅವರ ಮಾಂಡಲೀಕರು ತಮ್ಮ ಬಿರುದು ಬಾವಲಿಗಳಲ್ಲಿ ಅಥವಾ ತಮ್ಮ ವಂಶಾವಳಿಯ ವಿಶೇಷತೆಯನ್ನು ಹೇಳಿಕೊಳ್ಳುವಲ್ಲಿ ತಮ್ಮ ತಮ್ಮ ಮೂಲನೆಲೆಯನ್ನು ಹೇಳಿಕೊಂಡಿರುವುದುಂಟು. ಉದಾಹರಣೆಗೆ ಕದಂಬರು ಬನವಾಸಿ ಪುರವರಾಧೀಶ್ವರ, ಪಲ್ಲವರು ಕಾಂಚಿಪುರವರಾಧೀಶ್ವರ, ಗಂಗರು ಕೋಳಾಳಪುರವರಾಧೀಶ್ವರ, ಕಳಚೂರಿಗಳು ಕಾಳಂಜರಪುರವರಾಧೀಶ್ವರ, ಹೊಯ್ಸಳರು ದ್ವಾರಾವತೀಪುರಾಧೀಶ್ವರ, ಸಿಂದರು ಭೋಗಾವತೀಪುರವರಾಧೀಶ್ವರ, ಶಾಂತರು ಪೊಂಬುರ್ಚಪುರವರಾಧೀಶ್ವರ ಇತ್ಯಾದಿ. ಇದರಿಂದ ಆಯಾ ರಾಜಮನೆತನದ ಮೂಲ ಯಾವುದು ಎಂಬುದು ಸ್ಪಷ್ಟವಾಗುತ್ತಿದೆ. (ಒಂದು ಶಾಸನದಲ್ಲಿ ಇಮ್ಮಡಿ ಸೋಮೇಶ್ವರನನ್ನು ಕಾಂಚೀಪುರವರಾಧೀಶ್ವರನೆಂದು ಕರೆದಿದೆ. ಆದರೆ ಈತ ಎಂದೂ ಕಾಂಚಿಪುರವರಾಧೀಶ್ವರನಾಗಿರಲಿಲ್ಲ. ಆದರೆ ಈತನು ಆ ಬಿರುದಿದ್ದ ನೊಳಂಬರ ರಾಜ್ಯ ನೊಳಂಬವಾಡಿಯ ಅರಸನಾದ್ದರಿಂದ ಇದು ಆತನಿಗೆ ತಪ್ಪಾಗಿ ಬಂದಿರಬೇಕು. (ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಪು. ೨೧).

ಕೊಪಣಪುರವರಾಧೀಶರಾಗಿದ್ದ ಶಿಲಾಹಾರರನ್ನು 'ಸಳರನೃಪಾನ್ವಯದರಸರ್ಪ್ಪಲಕಾಲಂ ಸಕಲ ಚಕ್ರವರ್ತಿಗಳಾದಬ್ಬಳಿಕವೆ ಮನ್ನೆಯರಾದರ್ಸಲೆ ತದ್ದವಾಡಿಸಾಯಿರಕೆಲ್ಲಂ' ಎಂದು ವಿಜಯಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಮುತ್ತಗಿ ಶಾಸನ (ಎಸ್.ಐ.ಐ. ೧೫, ನಂ. ೩೫,೧೧೪೭) ಬಣ್ಣಿಸುತ್ತದೆ. ಇವರು ಪ್ರಮುಖವಾಗಿ ಚಾಲುಕ್ಯ ವಂಶದ ಮಾಂಡಲೀಕರಾಗಿದ್ದು ಅಂಕುಲಿಗ (ಅಕ್ಕಲಕೋಟ), ತರ್ದವಾಡಿ (ಖೇಡ–ಎಳಮೇಲಭಾಗ), ಎಳಮೇಲ ಮತ್ತು ಕೊಲ್ಲಾಪುರಗಳಲ್ಲಿ ಅಲ್ಲದೆ ಗುಲಬರ್ಗಾ, ಆಂಧ್ರದ ಕರ್ನೂಲ್ ಜಿಲ್ಲೆಗಳಲ್ಲಿ ಆಡಳಿತ ಮಾಡಿದುದಾಗಿ ತಿಳಿಯುತ್ತದೆ. ಇವರಲ್ಲಿ ಅಂಕುಲಿಗೆ ನಾಡ ಶಿಲಾಹಾರರನ್ನು ಅಕ್ಕಲಕೋಟದ ಶಾಸನವು (ಕೆ.ಆರ್. ೧೧, ೧೦೯೨, ಕೆಆಯ್ ೧೨, ೧೧೧೪) ತಗರಪುರವರಾಧೀಶ್ವರರು ಎಂದು ಕರೆದಿದ್ದರೆ, ತರ್ದವಾಡಿ ಶಿಲಾಹಾರರನ್ನು ವಿಜಯಪುರ ಜಿಲ್ಲಾ ಇಂಡಿ ತಾಲೂಕಿನ ಅಗರಖೇಡ ಶಾಸನವು (ಎಸ್.ಐ.ಐ. ೨೦, ನಂ. ೭೦) ಕೊಪಣಪುರವರೇಶ್ವರ, ತಗರಪುರವರಾಧೀಶ್ವರ, ಜೀಮೂತವಾಹನಾನ್ವಯರು ಎಂದಿದೆ. ಇವರಲ್ಲಿ ಕೆಲವರನ್ನು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಿರೇಬೇವನೂರ ಶಾಸನ ಕೊಪಣಪುರವರಾಧೀಶ್ವರರು ಎಂದು ಕರೆದಿರುವುದರೊಂದಿಗೆ ಕರ್ಬೆಟ್ಟ ಕಾಳಾಂಜರಪುರವರೇಶ್ವರರು ಎಂದೂ ಕರೆದಿವೆ. ಕೆಲವು ಶಾಸನಗಳು ಇವರನ್ನು ಕೇವಲ ಕೊಪಣಪುರವರಾಧೀಶರು ಎಂದು ಕರೆದಿವೆ (ಕಲಬುರ್ಗಿ ಜಿಲ್ಲೆಯ ಅಫಜಲ್ ಪುರ ಶಾಸನ, ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ರಾಮತೀರ್ಥ ಶಾಸನ ಮೊದಲಾದವು). ಇವರಲ್ಲಿ ಹೆಚ್ಚಾಗಿ ತರ್ದ್ದವಾಡಿನಾಡ ಶಿಲಾಹಾರರು ಕೊಪಣಪುರವರಾಧೀಶರಾಗಿದ್ದುದು ವಿಶೇಷ.

ಕ್ರಿ.ಶ. ೧೧೦೯ರ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಅಗರಖೇಡ ಶಾಸನ (ಎಸ್.ಐ.ಐ. ೨೦, ನಂ. ೭೧)ವು ಶಿಲಾಹಾರ ವಂಶದ ಮೂಲಪುರುಷನನ್ನು 'ಶ್ರೀ ಕೊಪಣಪುರವರೇಶ್ವರ ಲೋಕಶಿಖಾಮಣಿ ವಿಯಚ್ಚರಾನ್ವಯತಿಳಕಂ ಪ್ರಕಟಯಶ ಶಿಳರದಿವಾಕರನುದಿಯಿಸಿದನಿಳೆಗೆ ಪಿಟ್ಟಮನೆಂಬ ॥ ಎಂದಿದೆ. ಆದರೆ ಕ್ರಿ.ಶ. ೧೧೧೪ರ ಅಕ್ಕಲಕೋಟ ಶಾಸನವು (ಮ.ಶಾ.ನಂ. ೧೧೮) ಪಿಟ್ಟನನ್ನು ಕಾಳಾಂಜರಪುರವರಾಧೀಶ್ವರ ಎಂದು ಕರೆದು ಅವನು ಅಸಿತಾದ್ರಿಯೆಂಬ ಕಾಳಾಂಜರಮೆಂಬಿವೆ ಮೇರೆಯಾದ ವಸುಧೆಯನಾಡನಾಳುತ್ತಿದ್ದ ಎಂದಿದೆ.

ಕ್ರಿ.ಶ. ೯೪೫ರ ವಿಜಾಪುರದ ಶಾಸನ (ಹಂಪಿ, ನಂ. ೧೮) ಮಹಾಮಂಡಳೇಶ್ವರಂ ಕೊಪಣಪುರವರಾಧೀಶ್ವರಂ ಸುವರ್ಣಗರುಡಧ್ವಜಂ ಎಂದು ಮುಂತಾಗಿ ಗೋವಣರಸನನ್ನು ಬಣ್ಣಿಸಿ ಅವನು ೩೬ರುಂ ಬಾಡದ ಬಳಿಯ ಅಗ್ರಹಾರವನ್ನಾಳುತ್ತಿದ್ದ ಎಂದಿದೆ.

ಕ್ರಿ.ಶ. ೧೦೧೯ರ ಬಿಜಾಪುರ ಜಿಲ್ಲೆಯ ರೂಗಿ ಶಾಸನ (ಎಸ್.ಐ.ಐ. ೨೦, ನಂ. ೨೧) ಕಲ್ಯಾಣ ಚಾಲುಕ್ಯ ಜಯಸಿಂಹನ ಮಹಾಸಾಮಂತ ಕೊಪಣಪುರವರಾಧೀಶ್ವರ ಧನಸಂಗ್ರಹನೊಡನೆ ಕಾಳೆಗಮನೊಡರಿದವರ ಸ್ಥಿತಿಯನ್ನು

* ವಿಶ್ರಾಂತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಅನ್ನಪೂರ್ಣ, # ೧೩, ಮಂಜುನಾಥ ನಗರ, ಹುಬ್ಬಳ್ಳಿ–೩೦.

ವಿವರಿಸುವಲ್ಲಿ ಆತನ ಶೌರ್ಯವನ್ನು ಬಣ್ಣಿಸಿದೆ. ಕ್ರಿ.ಶ. ೧೨೮೮–೯ರ ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಚಿನಮಳ್ಳಿ ಶಾಸನ (ಗೋಗಿ, ೫೧೫) ವೊಂದು ಶ್ರೀಮನ್ಮಹಾಮಂಡಳೇಶ್ವರಂ ತರ್ದವಾಡಿಯ ಧನಸಂಗ್ರಹನನ್ನು ಕೊಪಣಪುರವರಾಧೀಶ್ವರಂ ಜೀಮೂತವಾಹನಾನ್ವಯಂ' ಎಂದಿದೆ. ಆದರೆ ಅಕ್ಕಲಕೋಟೆ ಶಾಸನವು ಆತನ ಶೌರ್ಯಾದಿಗಳನ್ನು ಬಣ್ಣಿಸುತ್ತ 'ಪರಿಧಿ ನಿಜಧರೆಗೆ ಕಾಳಾಂಜರಮುಂ ಕ್ರಿಷ್ಣಾದ್ರಿತಟಮುಮನುಳಿದು ವಸುಂಧರೆಯನ್ನು ಜಯಿಸಿದೆ' ಎಂದಿದೆ.

ಅಗರಖೇಡದ ಶಾಸನವು ಮುಂದುವರೆದು ಪಿಟ್ಟನ ವಂಶಜರಲ್ಲಿ ಮಹಾಮಂಡಳೇಶ್ವರ ಡಾಕರಸನಾತನ ಮಗಂ ಸಮಧಿಗತಪಂಚಮಹಾಶಬ್ದ ಮಹಾಮಂಡಳೇಶ್ವರಂ ತಗರನಗರಾಧೀಶ್ವರಂ ಜೀಮೂತವಾಹನಾನ್ವಯಪ್ರಸೂತಂ . . . ಶಿಳಾರಕುಳಕಮಳಮಾರ್ತಂಡ . . . ಶನಿವಾರಸಿದ್ಧಿ . . . ಶ್ರೀಮದ್ಯುವರಾಜ ಮಲ್ಲಿಕಾರ್ಜುನದೇವಪಾದಾಬ್ಜಭ್ರಮರಂ . . . ಶ್ರೀಮನ್ಮಹಾಮಂಡಳೇಶ್ವರಂ ಗೋವಣರಸರು' ಎಂದಿದೆ. ಅದೇ ರೀತಿ ವಿಜಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಟ್ಟರಕಿ ಶಾಸನ (ಎಸ್‌ಐಯ ೨೦. ನಂ. ೯೧) ಕೊಪಣಪುರವರಾಧೀಶ್ವರಂ ಈ ಮಜ್ಜಗದೇಕಮಲ್ಲದೇವರಪಾದಾರಾಧಕಂ ಶ್ರೀಮನ್ಮಹಾಮಂಡಳೇಶ್ವರಂ ಗೋವಣರಸನು ಪನ್ನಿರ್ವನ್ನಾಯಕರುವೆರಸು ರಾಜಧಾನಿ ಕನ್ನವಳ್ಳಿಯಲ್ ಸುಖದಿಂದ ರಾಜ್ಯಗೆಯ್ಯುತ್ತಿರಲ್ ಎಂದಿದೆ. ಹಾಗೆಯೇ ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಹಿರೇಮಗಳೂರು ಶಾಸನ (ಎಸ್‌ಐಐ ೨೦, ನಂ. ೮೫,೧೧೨೪) ಪೆರ್ಮಾಡಿಭೂವಲ್ಲಭನ ಕಾಲದಲ್ಲಿ ಮಹಾಮಂಡಳೇಶ್ವರ ಕೊಪಣಪುರವರಾಧೀಶ್ವರ ಜೀಮೂತವಾಹನಾನ್ವಯ . . . ಕರ್ಬೆಟ್ಟ ಕಾಳಾಂಜರಪುರಪರಮೇಶ್ವರ ಶ್ರೀಮನ್ಮಹಮಂಡಳೇಶ್ವರ . . . ತರ್ದ್ದವಾಡಿಯ ಪಿರಿಯ ಗೋವಣರಸಮೊದಲಾವರು ಭೂಮಿದಾನವನ್ನಿತ್ತುದಾಗಿ ಹೇಳಿದೆ. ಹಾಗೆಯೇ ವಿಜಯಪುರ ಜಿಲ್ಲೆಯ ಸಾಲೋಟಗಿ ಗ್ರಾಮದ ಶಾಸನವೂ ಮಹಾಮಂಡಳೇಶ್ವರ ಗೋವಣರಸನನ್ನು ಕೊಪಣಪುರವರಾಧೀಶ್ವರ ಎಂದಿದೆ.

ಕ್ರಿ.ಶ. ೧೧೧೭ರ ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಪೇಠಶಿರೂರ ಶಾಸನವು (ಗೋಗಿ, ಪು. ೨೧೫) ಚಾಲುಕ್ಯ ತ್ರಿಭುವನಮಲ್ಲದೇವನ ಕಾಲದಲ್ಲಿ ಶ್ರೀಮನುಮಹಾಪ್ರಧಾನಂ ಕನ್ನಡ ಸಂಧಿವಿಗ್ರಹಿ ಪಿರಿಯ ದಂಡನಾಯಕಂ ಕಾಳಿದಾಸಯ್ಯಂಗಳುಂ ಶ್ರೀಮನುಮಹಾಮಂಡಳೇಶ್ವರಂ ಕೊಪಣಪುರವರಾಧೀಶ್ವರಂ ಎಂದಿದೆ.

ಕ್ರಿ.ಶ. ೧೧೭೨ರ ಗುಲಬರ್ಗಾ ಜಿಲ್ಲೆಯ ಹಸರೂರ ಶಾಸನವು ಕೊಪಣಪುರವರಾಧೀಶ್ವರ ಮಹಾಮಂಡಲೇಶ್ವರ ವೀರರಾಮದೇವರಸನನ್ನು ಉಲ್ಲೇಖಿಸುತ್ತಿದೆ ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲದೇವರ ಕಾಲದ (೧೦೬೯–೯೭) ಹರಸೂರು ತೃಟಿತ ಶಾಸನ ಮಹಾಮಂಡಳೇಶ್ವರ ಕೊಪಣಪುರವರಾಧೀಶ್ವರಂ ಎಂದಿದೆ.

ಕ್ರಿ.ಶ. ೧೧೪೨ ಮತ್ತು ೧೧೭೩ರ ಸಾಗ್ಲಿ ಜಿಲ್ಲೆಯ ಜತ್ತ ತಾಲೂಕಿನ ಉಮ್ರಾಣಿ ಶಾಸನಗಳು (ಮ.ರಾ. ಶಾಸನ ನಂ. ೧೧೦,೧೧೧) ಚಾಲುಕ್ಯ ವಿಕ್ರಮನ ಮಹಾಮಂಡಳೇಶ್ವರ ಹೆಮ್ಮಾಡಿದೇವನನ್ನು ಕೊಪಣಪುರವರಾಧೀಶ್ವರ ನಿಜಕುಳಕಮಳಾಕರ ಮುಂತಾಗಿ ಕರೆದಿವೆ. ಇವನನ್ನು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ರಾಮತೀರ್ಥದ ಶಾಸನ ಯುವರಾಜ ಮಲ್ಲಿಕಾರ್ಜುನನ ಮಹಾಮಂಡಲೇಶ್ವರ ಕೊಪಣಪುರವರಾಧೀಶ್ವರ ಎಂದಿವೆ. ಹಾಗೆಯೇ ಸಾಂಗ್ಲಿ ಜಿಲ್ಲೆಯ ಜತ್ತ ತಾಲೂಕಿನ ಉಮ್ರಾಣಿ ಶಾಸನ (ಮ.ಶಾ. ನಂ. ೧೦೯) ಶ್ರೀಮತು ಕಳಚುರಿಯ ಭುಜಬಳಚಕ್ರವರ್ತಿ ಬಿಜ್ಜಲದೇವರು ಸಮಧಿಗತ ಪಂಚಮಹಾಶಬ್ದ ಮಹಮಂಡಲೇಶ್ವರಂ ಕೊಪಣಪುರವರಾಧೀಶ್ವರಂ . . . ಬಪ್ಪನಂಕಕಾರಂ ಶ್ರೀಮನ್ಮಹಾಮಂಡಳೇಶ್ವರಂ ಪಾವಿನ ಮೆಮ್ಮಾಡಿಯರಸರು ಎಂದಿದೆ.

ಕ್ರಿ.ಶ. ೧೧೪೭ರ ವಿಜಯಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಮುತ್ತಗಿ ಶಾಸನ (ಎಸ್.ಐ.ಐ. ೧೫, ನಂ. ೩೫) 'ಸ್ವಸ್ತಿ ಸಮಧಿಗತ ಪಂಚಮಹಾಶಬ್ದಂ ವಂದಿಜನ ಕನಕಾಬ್ದಂ ಮಹಾಮಂಡಳೇಶ್ವರಂ ಸೆಳರಕುಳಕಲಮಾರ್ತಂಡಂ ನಾಮಾದಿ ಪ್ರಶಸ್ತಿಸಹಿತಂ ಶ್ರೀಮತ್ ಡಾಕರಸನುಂ ಗೋಣರಸನು ಅಮ್ಮರಸನುಂ ಅಹುಮಲ್ಲರಸನುಮಿಂತಿವರು ಮುಖ್ಯವಾಗಿ ಸಮಸ್ತ ಸನ್ತಾನರು ಶ್ರೀಮತ್ ಜಗದೇಕಮಲ್ಲನ ಸನ್ನಿದಾನದಲು ಮುತ್ತಗೆಯ ಚೆನ್ನಕೇಶವಗೆ ದಾನವಿತ್ತುದಾಗಿ ಹೇಳಿದೆ.

ಕ್ರಿ.ಶ. ೧೧೫೭ರ ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಮುಗುಟ ಶಾಸನವು (ಗೋಗಿ, ಪು. ೨೨೨) ಮನ್ನೆಯ ವನದಾವಪಾವಕಂ ಗೊಂಕನೃಪಂ ॥ ಆ ವೀರನಾಯಕ ಪಾ . . . ಕಂದಗಕ್ಕದ ಮುರಾರಿ ಕೊಪಣಪುರವರದಕ ವಸುಧಾಮಂಡಳಮಂ ಮುಳಿಸಿಂದಂ ನಿಜಕೀರ್ತಿಯಿಂದೆ ಗೊಂಕನೃಪಾಳ ಪರಬಳಮಾರಿ ಮುಂತಾಗಿ ಬಣ್ಣಿಸಿದೆ. ಆದರೆ ಕ್ರಿ.ಶ. ೧೧೧೮ರ ಅಫಜಲಪುರ ತಾಲೂಕಿನ ಬಂದರವಾಡಶಾಸನವು ಇದೇ ಗೊಂಕರಸನನ್ನು ಹೊಗಳುವಾಗ ತಗರಪುರವರಾಧೀಶ್ವರಂ ಎಂದಿದೆ.

ಕ್ರಿ.ಶ. ೧೨೯೨ರ ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಚಿನಮಳ್ಳಿ ಶಾಸನ (ಗೋಗಿ, ಪು. ೫೧೮) ಮುಮ್ಮರಿದಂಡಗಳು ಮಹಾಮಂಡಲೇಶ್ವರ ಕೊಪಣಪುವರಾಧೀಶ್ವರ ನೂರ್ಮಡಿಗಂಡ ಬೆಟ್ಟದ ಮನ್ನೆಯ ಬೊಪ್ಪದೇವ ಲಿಂಗರ್ಸನ ಡಾಕರಸ ಮುಖ್ಯ ಹದಿನೆಂಟು ಸಂತತಿಗಳು ಎಂದಿದೆ.

ಕ್ರಿ.ಶ. ೧೦೯೯ರ ಕಲಬುರ್ಗಿ ಜಿಲ್ಲೆಯ ಚಿತಾಪುರ ತಾಲೂಕಿನ ಹುಣಸಿಹಡಗಲಿ ಶಾಸನ (ಗೋಗಿ, ಪು. ೨೩೦)ದಲ್ಲಿ ಚಂದಲದೇವಿಯಾಳುತ್ತಿರೆ ತತ್ಪಾದಪದ್ಮೋಪಜೀವಿ ಮಹಾಮಂಡಳೇಶ್ವರ ಕೊಪಣಪುರವರಾಧೀಶ್ವರಂ ಆಲಂದೆವೆಡಂಗ ಮನ್ನೆಯಸಿಂಗ . . . ಪದ್ಮಾವತೀದೇವಿಲಬ್ಧಪ್ರಸಾಧಂ ಶ್ರೀಮನ್ಮಹಾಮಂಡಳೇಶ್ವರಂ ಬಿಬ್ಬರಸಂ ಆಲಂದೆನಾಡ ಗೊಂಕನ ನೂರೆಪ್ಪತ್ತರುವತ್ತು ಬಾಡವಪ್ಪಾತ್ಮೀಯಮಂಡಳಮನಖಣ್ಡ ಪ್ರತಾಪದಿಂ ನಿದ್ಯಾಯಾದ್ಯಮ್ಮಾಡಿ ಅರಸುಗೆಯ್ಯುತ್ತಿರೆ' ಎಂದಿದೆ.

ಬಿಜಾಪುರ ಜಿಲ್ಲೆಯ ಸಾಲೊಟಗಿ ಶಾಸನ (ನಂ. ೭೨) ಯಾದವದೊರೆ ಭಿಲ್ಲಮನ ಮಂತ್ರಿ ಮಾಯಿದೇವ. ಇವನ ಕೈಕೆಳಗಿನ ಅಧಿಕಾರಿ ಬಂದರಸ ಮಹಾಮಂಡಲೇಶ್ವರ. ಅವನನ್ನು ಶಾಸನ 'ನೆರೆಯೊಡೆ ಗಂಡನದಟಂ ಧುರದೊಳ್ ಶನಿವಾರಸಿದ್ಧಿ ಕೊಪಣಪುರೇಶಂ ವರ ಶಿಳಹಾರನರೇಂದ್ರಂ ಧರೆಯೊಳು ಜೀಮೂತವಾಹನ್ವಯಜಾತಂ ಬಂದನ್ರಿಪತಿ ಎಂದು ಬಣ್ಣಿಸಿದೆ ಮುಂದೆ ಅವನ ವಂಶಾವಳಿ ಇದ್ದು ಅವರ್‍ಯಾರೂ ಕೊಪಣಪುರವರಾಧೀಶರಾಗಿಲ್ಲ. ಅದೇ ಜಿಲ್ಲೆಯ ಹಿರೇಬೇವನೂರಿನ ಶಾಸನ (ನಂ. ೭೭, ಪು. ೨೨೫) ಮಾಯಿದೇವನ ಪಾದಪದ್ಮೋಪಜೀವಿ 'ಸುರಪತಿಯಿರ್ದ ದೇವಸಭೆ ಪಂಕಜವಿರ್ದ ಸರೋಜ . . ಯೊಪ್ಪುವಂತಿರೆ ನೃಪಮೇರು ಭಿಲ್ಲಮನಮಾತ್ಯಶಿಖಾಮಣಿ ಮಾಯಿದೇವನಾದರಿಸುವ ಮಂತ್ರಿ ಬೊಪ್ಪಣಚಮೂಪತಿ ಧುರಧೀರಂ ನೆರೆಯೊಡೆ ಗಂಡನದಟಂ ಕೆಬ್ಬಟ್ಟ ಕಾಳಾಂಜರೋರ್ಬ್ಬರೆಪರ್ಯಂತವಧೀಶ್ವರಂ ಕೊಪಣಪುರವರಾಧೀಶ್ವರಂ ಶ್ರೀ ಬಂದಭೂಪಾಳನೊಳ್ದೊರೆಯಾರ್ ಎಂದಿದೆ.

ಯಾದವ ಚಕ್ರವರ್ತಿ ಜೈತುಂಗಿಯ ಕಾಲದಲ್ಲಿ ಅವನ ಸಾಮಂತ (ಹೆಸರು ಹಾಳಾಗಿದೆ) ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಲೇಶ್ವರಂ ಕೊಪಣಪುರವರಾಧೀಶ್ವರರುಂ ಬಿಜ್ಜಣ . . . ಪುರಪರೀತ . . ದೇಶಾಧೀಶ್ವರನುಂ ಸುವರ್ಣ ಗರುಡಧ್ವಜ ಜೀಮೂತವಾಹನಾನ್ವಯಪ್ರಸೂತಂ ಎಂದಿದೆ.

ಬೆಳಗಾವಿ ಜಿಲ್ಲೆಯ ಕಲ್ಲೋಳಿ ಶಾಸನವು ಯದುವಂಶಮಹಾಮಂಡಳೇಶ್ವರ ೨ನೆಯ ರಾಜನನ್ನು ಕುಣಪುರವರಾಧೀಶ್ವರ ಎಂದಿದೆ.

ಕ್ರಿ.ಶ. ೧೨೧೮ರ ಮಂಗರೂಲ್ ಶಾಸನ (ಮ.ಶಾ.ನಂ. ೧೨೬) ಸ್ವಸ್ತಿಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಕೊಪಣಪುರವರಾಧೀಶ್ವ . . . ವಾಮರೇಂದ್ರ ಸಮಸ್ತಾಶ್ರಿತ ಜನಾಧಾರ ಕ್ರಿ . . . ಜಮಾಧಾತಿ ಸ್ರೀಮಚ್ಚಾಮಂಡಿಕಾದೇವಿಯಲಬ್ಧವರ ಪ್ರಸಾದ ದಾನವಿನೋದ ಮಾನ್ನೆಯ . . . ಮುನ್ನಿರಿವ ಸೌರ್ಯಮಂ ಮೆರೆವಂ ಚಲದಂಕರಾಮ ಸಂಗ್ರಾಮಭೀಮ ಮನ್ನೆಯವೇತಾಳ ಡಾಕರಸ ಕಪ್ಪದೇರಸರು' ಎಂದಿದೆ. ಇದು ಸೇವುಣ ವಂಶದ ದೊರೆಗಳಿಗೆ ಸಂಬಂಧಿಸಿದುದಾಗಿದೆ ಎಂದಿದ್ದಾರೆ ಸಂಪಾದಕರು. ಕ್ರಿ.ಶ. ೧೧೮೦ರ ಹೊಡಲ ಶಾಸನವು ನಾಭಿರಾಜನ ಕುಲದಲ್ಲಿ ಜನಿಸಿದ ಕೊಪಣಪುರವರಾಧೀಶರು ಎಂದಿದೆ.

ಈ ಎಲ್ಲ ಅಂಶಗಳಿಂದ ಶಿಲಾಹಾರರು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಮಾತ್ರವಲ್ಲ, ಕಲಚೂರಿಗಳು, ಯಾದವರು, ಸೇವಣರು ಕಾಲದಲ್ಲಿಯೂ ಮಹಾಮಂಡಲೇಶ್ವರರಾಗಿ ಸುಮಾರು ೫೦೦ ವರ್ಷಗಳ ಕಾಲ ಕರ್ನಾಟಕದ ಚರಿತ್ರೆಯಲ್ಲಿ ಬೆಳಗಿರುವುದನ್ನು ಕಾಣುತ್ತೇವೆ. ಆ ವಂಶದವರು ಮೇಲಿಂದ ಮೇಲೆ ಕೊಪಣಪುರವರಾಧೀಶರು ಎಂದು ಕರೆದುಕೊಳ್ಳುವುದರಿಂದ ಕೊಪ್ಪಳವು ಶಿಲಾಹಾರ ವಂಶದವರ ರಾಜಧಾನಿಯಾಗಿತ್ತೆಂದಾಗಲಿ ಅಥವಾ ಆ ವಂಶದ ಅರಸರು ಕೊಪ್ಪಳದ ಮೂಲದವರಾಗಿದ್ದರೆಂದಾಗಲಿ ಊಹಿಸಬಹುದಾದರೂ ಇದನ್ನು ಸಮರ್ಥಿಸುವ ಆಧಾರಗಳು ಈವರೆಗೆ ದೊರೆತಿಲ್ಲ.

೫೬

ಕೊಪಣ ತೀರ್ಥ ಮತ್ತು ಸಮಾಧಿ ಮರಣ

ಮಲ್ಲಿಕಾರ್ಜುನ ಕುಂಬಾರ*

'ತೀರ್ಥ' ಎಂಬ ಸಂಸ್ಕೃತ ಶಬ್ದಕ್ಕೆ ಅನೇಕ ಅರ್ಥಗಳಿವೆ. ಪುಣ್ಯ ಕ್ಷೇತ್ರ, ಯಾತ್ರಾ ಸ್ಥಳ, ಪವಿತ್ರ ಜಲ, ಕೆರೆ, ತೊರೆ ಎಂಬ ೨೦ಕ್ಕೂ ಹೆಚ್ಚು ಹೆಸರುಗಳಿವೆ. ಆದರೆ ಈ ಶಬ್ದದ ಅರ್ಥವ್ಯಾಪ್ತಿಯನ್ನು ಕುರಿತು ಆಲೋಚಿಸಿದರೆ ಪುಣ್ಯ ಸ್ಥಳ, ಪವಿತ್ರವಾದ ಕ್ಷೇತ್ರ ಎಂಬುದು ಹೆಚ್ಚು ಅರ್ಥವನ್ನು ಕೊಡುತ್ತದೆ. ಭಾರತೀಯರಲ್ಲಿ ಸಾವಿರಾರು ವರ್ಷಗಳಿಂದ ತೀರ್ಥ ಯಾತ್ರೆಯು ಒಂದು ಧಾರ್ಮಿಕ ಸಂಪ್ರದಾಯವಾಗಿ ಬೆಳೆದು ಬಂದಿದೆ. ಈ ದೇಶದ ಎಲ್ಲಾ ಧರ್ಮಗಳಲ್ಲಿ ತೀರ್ಥ ಕ್ಷೇತ್ರ, ತೀರ್ಥ ಯಾತ್ರೆ, ತೀರ್ಥ ದರ್ಶನ ಎಂಬ ಮಾತು ಬಹಳಷ್ಟು ಬಳಕೆಯಲ್ಲಿ ಬರುತ್ತದೆ. ಜೈನ ಪರಂಪರೆಯಲ್ಲಿ ಸುಮಾರು ಎರಡು ಸಾವಿರ ವರ್ಷಗಳಿಂದ ಈ ಕಲ್ಪನೆ ವಾಡಿಕೆಯಲ್ಲಿದೆ. ಜೈನ ಪರಿಭಾಷೆಯಲ್ಲಿ ತೀರ್ಥಕರ ಶಬ್ದವು ಬಹಳ ಮಹತ್ವದ್ದಾಗಿದೆ. ಇಲ್ಲಿ ತೀರ್ಥವೆಂದರೆ ಮಾರ್ಗ, ಜೈನಪಥ, ಮುನಿಗಳ ಮಾರ್ಗ, ಸಂಸಾರವನ್ನು ದಾಟುವ ಮಾರ್ಗವನ್ನು ತೋರುವ ತೀರ್ಥಂಕರರು. ಜೈನರಲ್ಲಿ ತೀರ್ಥವಂದನೆ, ತೀರ್ಥಪೂಜೆ, ತೀರ್ಥಯಾತ್ರೆ ಇವು ಬಾಹ್ಯಾಚರಣೆಗಳಾಗಿವೆ. ತೀರ್ಥಗಳಿಗೆ ಹೋಗಿ ಬರಲು ಆಪೇಕ್ಷೆ ಇದ್ದರೂ ಆರ್ಥಿಕವಾಗಿ ಅನಾನುಕೂಲ ಇರುವವರಿಗೆ ಸಹಾಯವನ್ನು ಒದಗಿಸುವ ಒಂದು ಪರ್ಯಾಯ ವ್ಯವಸ್ಥೆಯು ಇದೆ. ಶ್ರೀಮಂತರಾದ ಜೈನರು ತೀರ್ಥಯಾತ್ರೆ ಮಾಡುವವರಿಗೆ, ಶ್ರಾವಕರಿಗೆ, ಗುರುಗಳಿಗೆ ಅದಕ್ಕಾಗಿ ತಗಲುವ ವೆಚ್ಚವನ್ನು ತಾವೇ ವಹಿಸಿಕೊಂಡು ಉಚಿತ ತೀರ್ಥಯಾತ್ರೆಯನ್ನು ಮಾಡಿಸುತ್ತಾರೆ. ತೀರ್ಥಂಕರರಲ್ಲದ ಇತರರಿಗೆ ಮೋಕ್ಷವನ್ನು ಕೊಡುವ, ತೀರ್ಥಂಕರರು ಮೋಕ್ಷ ಪಡೆದ ನೆಲವನ್ನು ತೀರ್ಥಕ್ಷೇತ್ರವೆಂದು ಪರಿಗಣಿಸಲಾಗುತ್ತದೆ.

ಜಿನಪ್ರಭ ಸೂರಿಯು(೧೩೩೦)ತನ್ನ 'ತೀರ್ಥಕಲ್ಪ ಅಥವಾ ಕಲ್ಪಪ್ರದೀಪ' ಎನ್ನುವ ಸಂಸ್ಕೃತ ಮತ್ತು ಪ್ರಾಕೃತ ಮಿಶ್ರಣವುಳ್ಳ ಕೃತಿಯಲ್ಲಿ ತೀರ್ಥಗಳ ನಿರ್ಮಾಣ, ತೀರ್ಥಗಳನ್ನು ಮಾಡಿಸಿದವರು, ತೀರ್ಥಗಳಿಗೆ ದೊರೆತ ದಾನಗಳು, ದತ್ತಿಗಳು, ಅವುಗಳನ್ನು ನೀಡಿದವರ ಬಗ್ಗೆ ವಿವರಣೆ ಇದೆ. ಚಾವುಂಡರಾಯ ಪುರಾಣವು 'ತೀರ್ಥಮೆಂಬುದು ಜಿನಪತಿಯ ಚರಿತಂ" ಎಂದು ಹೇಳುತ್ತದೆ. ಇಂತಹ ಜೈನ ತೀರ್ಥಗಳು ಈ ನಾಡಿನಲ್ಲಿ ಅಸಂಖ್ಯಾತವಾಗಿದ್ದರೂ ಕೆಲವು ಕಣ್ಣು ತೆರೆದುನೋಡುಂತಹ ತೀರ್ಥಕ್ಷೇತ್ರಗಳಿವೆ. ರಾಜಸ್ಥಾನದ ಅಬು ಬೆಟ್ಟ, ಗುಜರಾತಿನ ಶತ್ರುಂಜಯ ಪರ್ವತ, ಮೊದಲಾದವುಗಳು ಭಾರತದ ತುಂಬೆಲ್ಲಾ ಹರಡಿಕೊಂಡಿವೆ. ಆದರೆ ಕೊಂಡಕುಂದೆ, ಕೊಪ್ಪಳ, ಬಂದಳಿಕೆ, ಮುಕ್ಕುಂದ, ಕೋಗಳಿ, ಶ್ರವಣಬೆಳಗೊಳ, ಶ್ರೀಪರ್ವತ ಹೊಂಬಜ ಮೊದಲಾದವುಗಳನ್ನು ಮಹಾಮುನಿಗಳ ಬದುಕಿನಲ್ಲಿ ಅತಿಶಯವಾದ ಘಟನೆ ಮತ್ತು ಪವಾಡಗಳು ನಡೆದ ಅತಿಶಯ ಜೈನಕ್ಷೇತ್ರಗಳೆಂದು ಪರಿಗಣಿಸಲಾಗಿದೆ. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಳೆಬೀಡ ಬಸ್ತಿಹಳ್ಳಿಯ ಪರಿಸರವನ್ನು ಕಲ್ಲಂಗೆರೆಯ ಆದಿತೀರ್ಥವೆಂದು ಕರೆದಿರುವದು ಅದರ ಪುರಾತನಕ್ಕೆ ಸಾಕ್ಷಿಯಾಗಿದೆ. ಆದರೆ ವಿದ್ವಾಂಸರಾದ ಹಂಪನಾ ಅವರು ಆದಿನಾಥ ತೀರ್ಥಂಕರ ಬಸದಿ ಇದ್ದ ಸ್ಥಳವೆಂಬ ಕಾರಣದಿಂದ ಇದಕ್ಕೆ ಆದಿ ತೀರ್ಥವೆಂದು ಹೆಸರು ಬಂದಿರಬಹುದೇ?, ಎಂಬುದು ಚಿಂತನೀಯವಾಗಿದೆ[೧] ಎಂದು ಅಭಿಪ್ರಾಯ ಪಡುತ್ತಾರೆ.

ತಿರುಳ್ಗನ್ನಡ ಪ್ರದೇಶವೆಂದು, ಶ್ರವಣಬೆಳಗೊಳ ಪೂರ್ವದಲ್ಲಿ ಕೊಪಣ ತೀರ್ಥವು ಜೈನ ಕಾಶಿಯಾಗಿತ್ತು. ಇದನ್ನು ಕುಪಣ, ಕೊಪಣ, ಕೊಪಣಪುರ, ಕೊಳಪ್ಪ, ಕೊಪಣಪುರವರ, ಕುಪ್ಪಲ್ ಇತ್ಯಾದಿ ಹೆಸರುಗಳಿಂದ ಅನೇಕ ಶಾಸನ ಮತ್ತು ಕಾವ್ಯಗಳು ಉಲ್ಲೇಖಿಸುತ್ತವೆ. ಸುಮಾರು ೪ನೆಯ ಶತಮಾನದ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಶಾಸನದಲ್ಲಿ ಕದಂಬ ಅರಸ ಮಯೂರವರ್ಮನು ಕೆರೆಯನ್ನು ಬಲಪಡಿಸಿದನೆಂಬ ಈ ಶಾಸನವನ್ನು ಕುಪಣದ ಲಿಪಿಕಾರ ಚಮ(ಚಮೋ)ಎಂಬವನ ಬಗ್ಗೆ "ಕದಂಬಾಣಂ ಮಯೂರ ವರ್ಮ್ಮಣಾ, ತಟಾಕಂ ದೃಢಂ ಕೃತಂ ಅಭಿರುಪಂ ರ(ಚ)ಯಿತ್ವಾ, ವಾನ(ವಾ)ಸಕಂ ಸ್ಥಾಪಯಿತ್ವಾ ಕುಪಣಚ(ಮೋ)...." ಉಲ್ಲೇಖವಿದೆ.[೨] ಕವಿರಾಜಮಾರ್ಗ ಅಲ್ಲದೇ ಚಾವುಂಡರಾಯ, ಹರಿಹರ, ನಂಜುಂಡ ಹಾಗೂ ಕವಿ ರನ್ನ ಮೊದಲಾದವರು ತಮ್ಮ ಕಾವ್ಯಗಳಲ್ಲಿ ಈ ಬೆಟ್ಟದ ಬಗ್ಗೆ ಮನದುಂಬಿ ವರ್ಣಿಸುತ್ತಾರೆ. ಶ್ರವಣಬೆಳಗೊಳದಷ್ಟೇ ಪ್ರಾಚೀನ ಜೈನಕ್ಷೇತ್ರ ಕೊಪಣ ಬೆಟ್ಟ, ಶ್ರವಣಬೆಳಗೊಳ ಚಿಕ್ಕಬೆಟ್ಟವನ್ನು ಕಳ್ವಪ್ಪು ತೀರ್ಥವೆಂದು, ಕೊಪಣಗಿರಿಯಲ್ಲಿ ಗಣದ,

* 'ವಚನ', ರಾಜೂರ-೫೮೨೨೩೦, ತಾಲ್ಲೂಕು ರೋಣ (ಗದಗ ಜಿಲ್ಲೆ), ಮೊ. ೯೪೪೯೨೨೦೭೨೩

ಗಚ್ಛದ, ಮುನಿಗಳು, ಸಿದ್ದರು, ಜೈನ ಸಾಧಕರು ದೀಕ್ಷೆ ಹೊಂದಿ ಮುಡುಪಿದ ಕಾರಣ ಇದನ್ನು ಕೊಪಣ ಮಹಾತೀರ್ಥವೆಂದು ಕರೆಯಲಾಗಿದೆ. ಹಾಸನ ಜಿಲ್ಲೆಯ ಕಲ್ಲಗೆರೆ ತೀರ್ಥವನ್ನು 'ಆದಿ ತೀರ್ಥ'ವೆಂದು, ಕೊಪಣ ತೀರ್ಥವನ್ನು 'ಮಹಾತೀರ್ಥ'ವೆಂದು ಶಾಸನಗಳು ಬಣ್ಣಿಸುತ್ತವೆ. ಕೊಪಣ ತೀರ್ಥದಲ್ಲಿ ಅನೇಕ ಬಸದಿಗಳಿದ್ದವು. ಇದು ಪ್ರಾರಂಭದಿಂದಲೂ ಯಾಪನೀಯ ಸಂಘದ ಪ್ರಭಾವಿ ಕೇಂದ್ರವಾಗಿತ್ತು. ಇಲ್ಲಿನ ಬಸದಿಗಳಿಗೆ 'ಲೋಕವೆಲ್ಲಂ ಪೊಗಳೆ' ಎನ್ನುವಂತೆ ಹೊಯ್ಸಳ ಅರಸ ವಿಷ್ಣುವರ್ಧನನ ಕುಮಾರ ನರಸಿಂಹ ಅರಸನ ಪ್ರಧಾನಿ ಹುಳ್ಳ ಸೇನಾಪತಿಯು ಅನೇಕ ದಾನಗಳನ್ನು ನೀಡಿದನು.[೩] ಏಚಿರಾಜ ದಂಡನಾಯಕನು ಇಲ್ಲಿ ಹಲವು ಬಸದಿಗಳನ್ನು ನಿರ್ಮಿಸಿದನು.[೪] ಕ್ರಿ.ಶ ೯ನೆಯ ಶತಮಾನದ ಅಂತ್ಯದಿಂದ ೧೧ನೆಯ ಶತಮಾನದ ಉತ್ತರಾರ್ಧದವರೆಗೆ ಅನೇಕ ರಾಜರು, ಜೈನ ಸಿದ್ದ, ಸಾಧಕರು ಸಲ್ಲೇಖನ ವ್ರತವನ್ನು ಸ್ವೀಕರಿಸಿ ಮಡಿಯುತ್ತಾರೆ. ಅದರಲ್ಲಿಯೂ ಗಂಗ ವಂಶದ ಅರಸರು ತಮ್ಮ ರಾಜ್ಯವನ್ನು ಕಳೆದುಕೊಂಡಾಗ, ಈ ರಾಜರು, ಅವರ ರಾಣಿವಾಸದವರು ಜೀವನದಲ್ಲಿ ಜಿಗುಪ್ಸೆ ಹೊಂದಿ, ತಮ್ಮ ಬದುಕನ್ನು ತಲಕಾಡಿನಲ್ಲಿ ಕಳೆಯುವ ಬದಲು ಕೊಪ್ಪಳಕ್ಕೆ ಬಂದು ಸಲ್ಲೇಖನವನ್ನು ಸ್ವೀಕರಿಸಿ ಮಡಿಯುತ್ತಾರೆ. ಅವರ ಬಗ್ಗೆ ಅನೇಕ ಗ್ರಂಥಗಳಲ್ಲಿ ಮತ್ತು ಶಾಸನಗಳಲ್ಲಿ ಉಲ್ಲೇಖ ಬರುತ್ತದೆ.

ದೇಹವನ್ನು ಕೃಶವಾಗಿಸುವ ಪ್ರಶಂಸಾರ್ಹವಾದ ಆತ್ಮವನ್ನು ರಕ್ಷಿಸಲು ದೇಹವನ್ನು ಶಿಕ್ಷಿಸುವ ವಿಧಾನವೆಂದು, ಸಲ್ಲೇಖನಾವನ್ನು ಆಚರಿಸುವವರನ್ನು ಸಾಧಕರೆಂದು ಅರ್ಥೈಸಲಾಗುತ್ತದೆ. ಇದರಲ್ಲಿ ಬಾಹ್ಯ ಮತ್ತು ಅಭ್ಯಂತರ ಶುದ್ದಿಕರಣ ಎಂದು ವಿಂಗಡಿಸಲಾಗಿದೆ. ಸಲ್ಲೇಖನದಿಂದ ಸಮಾಧಿಮರಣ ಹೊಂದಿದವರ ಸ್ಮರಣೆಗಾಗಿ ನೆಡುವ ಕಲ್ಲುಗಳೇ ನಿಷಧಿಕಲ್ಲುಗಳಾಗಿವೆ. ಇವುಗಳಲ್ಲಿ ಕೆಲವು ಶಾಸನ ಹೊಂದಿದ್ದರೆ, ಇನ್ನೂ ಕೆಲವು ಶಾಸನಗಳನ್ನು ಹೊಂದಿರುವುದಿಲ್ಲ. ಅಂತಹ ಅನೇಕ ನಿಷಧಿಗಳು ಕೊಪ್ಪಳದಲ್ಲಿ ಇವೆ. ಇಲ್ಲಿಗೆ ಅನೇಕರು ಬಂದು ಸಮಾಧಿ ಮರಣವನ್ನು ಹೊಂದಿದರು. ಅದರಲ್ಲಿ ಕೆಲವರನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಇಲ್ಲಿರುವ ಅನೇಕ ಶಾಸನಗಳು ಗಂಗಮನೆತನದವರಿಗೆ ಇದು ಪುಣ್ಯಕ್ಷೇತ್ರವಾಗಿತ್ತೆಂಬ ವಿಚಾರವನ್ನು ಹಂಪನಾ ಪ್ರತಿಪಾದಿಸುತ್ತಾರೆ. ಗಂಗ ದೊರೆ ಇಮ್ಮಡಿ ಬೂತುಗನಿಗೆ ನನ್ನಿಯ ಗಂಗ, ಜಯದತ್ತರಂಗ, ಕೋಣೆಯರಂಗ, ಗಂಗಪೆರ್ಮ್ಮಾಡಿ, ಗಂಗನಾರಾಯಣ, ಗಂಗಗಾಂಗೇಯ, ಸತ್ಯವಾಕ್ಯ ಎಂಬ ಪ್ರಶಸ್ತಿಗಳನ್ನು ರನ್ನ ಉಲ್ಲೇಖಿಸುತ್ತಾನೆ. ಇಲ್ಲಿನ ಶಾಸನವೊಂದರಲ್ಲಿ ಗಂಗರ ಗುರುಗಳಾದ ರವಿಚಂದ್ರದೇವ ಮತ್ತು ಆತನ ಶಿಷ್ಯಪರಂಪರೆಯನ್ನು ವರ್ಣಿಸುತ್ತದೆ.

ಕೊಪ್ಪಳ ಸಮೀಪದ ನರೇಗಲ್ಲ ಶಾಸನದಲ್ಲಿ ಉಲ್ಲೇಖಿತವಾದ ಬೂತಗನ ಹೆಂಡತಿಯರಲ್ಲಿ ಒಬ್ಬಳಾದ ಪದ್ಮಬ್ಬರಸಿಯು ನರೇಗಲ್ಲದಲ್ಲಿ ಕೆರೆಯೊಂದನ್ನು ಕಟ್ಟಿಸುವ ಉಲ್ಲೇಖವಿದೆ. ಪರಮಶ್ರಾವಕಿಯಾದ ಪದ್ಮಬ್ಬರಸಿಯು ಕ್ರಿ.ಶ. ೯೭೭ರಲ್ಲಿ ಕೊಪ್ಪಳಕ್ಕೆ ಬಂದು ಮಳಲಧಾರಿದೇವ ಮುನಿಯ ಬಳಿ ದೀಕ್ಷೆಯನ್ನು ಕೈಗೊಂಡು ಸುಗತಿಯನ್ನು ಪಡೆದಳು. ಇವಳು ಮಗಳು ಜಕ್ಕಿಯಬ್ಬೆ ಪದ್ದಬ್ಬರಸಿಯ ನಿಸಿದಿಗೆಯನ್ನು ನಿಲ್ಲಿಸುತ್ತಾಳೆ.[೫] ಇನ್ನೊಬ್ಬ ಎರಡನೆಯ ಹೆಂಡತಿ, ರಾಷ್ಟ್ರಕೂಟ ಮೂರನೇಯ ಕೃಷ್ಣನ ಸಹೋದರಿ ರೇವಕನಿಮ್ಮಡಿ ಶಂಕರಗಂಡ, ಬೂತುಗ, ಮಾರಸಿಂಹ, ಮರುಳ, ಚಾವುಂಡರಾಯ ಮತ್ತು ಅತ್ತಿಮಬ್ಬೆ ಇವರೆಲ್ಲಾ ಸಮಾಧಿಮರಣದ ನಂತರ ಜೈನಧರ್ಮವನ್ನು ಪೋಷಿಸಿ ಬೆಳೆಸಿದಳು. ಇವಳನ್ನು ಚಾಲುಕ್ಯ ಚಕ್ರವರ್ತಿ ಜಯಸಿಂಹನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಇವರ ಮಗಳು ಬೋಂಥಾದೇವಿ, ಗುರು ಶ್ರೀಧರದೇವರಾಗಿದ್ದರು. ಈಕೆ ಕೂಡಾ ಕುಪಣ ತೀರ್ಥದಲ್ಲಿ ಮುಡುಪಿದಳು.[೬]

ಗಂಗ ಮಂಡಲೇಶ್ವರನ ಮಹಾದೇವಿ ಕಂಚಿಯಬ್ಬರಸಿಯು ಅಜಿತಸೇನ ಮುನಿಗಳಿಂದ ದೀಕ್ಷೆಯನ್ನು ಕೈಗೊಂಡು ಹಲವು ದಿನಗಳ ಕಾಲ ತಪ್ಪಸ್ಸನ್ನಾಚರಿಸಿ ಕುಪಣ ತೀರ್ಥದಲ್ಲಿ ಸಮಾಧಿ ಮರಣ ಹೊಂದುತ್ತಾಳೆ[೭] ಈ ವಿಷಯದಲ್ಲಿ ವಿದ್ವಾಂಸರಾದ ಹಂಪನಾ ಅವರು ಕಂಚಿಯಬ್ಬರಸಿಯರು ಇರ್ವರು ಇದ್ದಾರೆ. ಕೊಪ್ಪಳದಲ್ಲಿ ಮುಡುಪಿದ ಕಂಚಿಯಬ್ಬರಸಿಯು ಗಂಗ ಮಂಡಳೇಶ್ವರ ರಾಚಮಲ್ಲನ ಮಡದಿಯಾಗಿದ್ದಾಳೆ ಎನ್ನುತ್ತಾರೆ.[೮]

ಗಂಗದೊರೆ ಬೂತಗ ಪೆರ್ಮ್ಮಾಡಿ ಮತ್ತು ಪದ್ಮಾವತಿಯ ಮಗಳಾದ ಬಿಜ್ಜರಸಿಯ ಪತಿ ಮಲ್ಲಪ, ಈಕೆಯ ಸಹೋದರ ಎರೆಗಂಗ, ಗುರುಗಳು ಕೊಣ್ಡಕುನ್ದಾನ್ವಯದ ಪುಸ್ತಕಗಚ್ಛದ ಶ್ರೀಧರದೇವ. ಈಕೆ ಆರಾಧನಾ ವಿಧಾನದಿಂದ ಕೊಪಳದಲ್ಲಿ ಮುಡುಪಿದಳು. "ಬೂತುಗ ಪೆರ್ಮ್ಮಾಡಿಯ ಮಗಳ್ ಬಿಜ್ಜಬ್ಬರಸಿ ಆರಾಧನಾ ವಿಧಾನದಿಂ ರತ್ನತ್ರಯಮಂ ಸಾಧಿಸಿಕೊಂಡು ದೇವಲೋಕಕ್ಕೆ ಪೋದಳ್... ಚಲದಂಕಕಾರ್ತಿ' ಎಂದು ಶಾಸನವು ಬಣ್ಣಿಸುತ್ತದೆ.[೯]

ಬೂತಗನ ಪುತ್ರಿ (ಕ್ರಿ.ಶ. ೯೩೮-೬೧) ಸುಗ್ಗಿಯಬ್ಬರಸಿ ತನ್ನ ವ್ರತವನ್ನು ಪಾಲಿಸುತ್ತಾ ಆರಾಧನಾ ವಿಧಾನದಿಂದ ಸಮಾಧಿ ಮರಣವನ್ನು ಹೊಂದುತ್ತಾಳೆ. ಈಕೆಯನ್ನು ಶಾಸನವು 'ಚಲದಂಕಗಾರ್ತಿ' ಎಂದು ಕರೆದಿದೆ. "ಬೂತಗ ಪೆರ್ಮ್ಮಾಡಿಯ ಮಗಳ (ಸುಗ್ಗಿಯಬ್ಬ) ರಸಿಯಾರಾಧನಾ ವಿಧಾನದಿಂ ರತ್ನತ್ರಯಮಂ ಸಾಧಿಸಿಕೊಂಡು ದೇವಲೋಕಕ್ಕೆ ಪೋದಳ್"[೧೦] ಎಂದು ಉಲ್ಲೇಖಿಸುತ್ತದೆ. ಇನ್ನೊಬ್ಬ ಮಗಳು ಕುಂದಣಸಾಮಿ ಅರಸಿಯೂ ಕೂಡಾ ಆರಾಧನಾ ವಿಧಾನದಿಂದ ರತ್ನತ್ರಯವನ್ನು

ಸಾಧಿಸಿ ಕೊಪ್ಪಳದಲ್ಲಿ ಮುಡುಪಿದಳು. ಸೀತೆಯಂತೆ ಸುರಲೋಕಕ್ಕೇರಿದ ಎರೆಯಬ್ಬೆಯು ಪೊಲೆಯಬ್ಬೆಯ ಮಗಳು. ಕೊಪ್ಪಳದ ಮಡಿದ ಈಕೆಯ ಬಗ್ಗೆ ಶಾಸನವು 'ನೋನ್ತೆರೆಯಬ್ಬೆ ಸಮಾಧಿ ಯೋಗದಿಂ ಜನಕ ತನುಜೆ ಯನ್ತೆಸುರಲೋಕಪತಿತ್ವ ಮನೆಯ್ದು ತಾಳಿದಳ್' ಎಂದು ಹೇಳುತ್ತದೆ.[೧೧]

ಚಲದಂಕ ಗಂಗನ ಮಗ ಬಾಸ ಮತ್ತು ಕಾವಣಬ್ಬರಸಿಯ ಮಗಳು ರಂಬಲದೇವಿ, ಇಕೆಯ ಪತಿ ಚಾಲುಕ್ಯ ವಂಶದ ಬಿಕ್ಕಲದೇವ, ಗುರು ಶ್ರೀಚಂದ್ರಭಟ್ಟಾರಕರು. ಅಪ್ಸರೆಯಂತೆ ಅಪೂರ್ವ ಸುಂದರಿಯಾದ ರಂಬಲದೇವಿಯು ವ್ರತಧಾರಿಯಾಗಿ ಕುಪಣದಲ್ಲಿ ಸಮಾಧಿಮರಣ ಹೊಂದಿ ಸುರೋತ್ತಮೆಯಾಗಿ ಜನಿಸಿದಳೆಂದು ಶಾಸನವು ಹೇಳುತ್ತದೆ.[೧೨] ಗಂಗ ಬೂತುಗನ ಹೆಂಡತಿಯರಾದ ಪದ್ಮಬ್ಬರಸಿ, ರೇವಕನಿಮ್ಮಡಿ, ಪದ್ಮಾವತಿ (ಹಿರಿಯ ಹೆಂಡತಿ), ಪದ್ಮಾವತಿಯ ಮಗಳು ಬಿಜ್ಜಾಂಬೆ, ಬೂತುಗನ ಮಗ ಬಾಸ, ಮೊಮ್ಮಗಳು ರಂಬಲದೇವಿ, ಹಿರಿಯ ಮಗಳು ಕುಂದಣಸ್ವಾಮಿ ಇವರೆಲ್ಲರೂ ಕೊಪ್ಪಳದಲ್ಲಿ ಮಡಿದರೆಂಬ ವಿಷಯವನ್ನು ಗಮನಿಸಿದಾಗ ಬೂತುಗನ ಕುಟುಂಬಕ್ಕೆ ಕುಪಣತೀರ್ಥದೊಂದಿಗೆ ಇದ್ದ ವಿಶೇಷತೆ ಮತ್ತು ಆದರವನ್ನು ತಿಳಿಸುತ್ತದೆ.[೧೩]

ಮಂಡಳಿಕ ಮಹಾಚೂಡಾಮಣಿ ೨ನೇಯ ಮಾರಸಿಂಹನ ಕಿರಿಯ ಸಹೋದರಿ ಚಂದಿಬ್ಬರಸಿಯು ಸಂಸಾರದಲ್ಲಿ ವಿರಕ್ತಿಯುಂಟಾಗಿ 'ಎನೆ ನೆಗಳ್ದ ಚಂದಿಬ್ಬರಸಿಯ ಮನಕ್ಕದೇನಾನುಮೊಂದು ನಿರ್ವೇಗಂ ತೊಟ್ಟನೆಕೊಳೆ ಸಂಸಾರ ನಿರಾಕರಣೆ..." ಕೊಪ್ಪಳದಲ್ಲಿರುವ ಮುನಿಗಳ ಅನುಮತಿಯ ಮೇರೆಗೆ ವ್ರತಧಾರಿಯಾಗಿ ದಾನಗಳನ್ನು ನೀಡಿ ಮಡಿದಳು.[೧೪]

'ಯಶಸ್ತಿಲಕ ಚಂಪೂ' ರಚಿಸಿದ ಕವಿರಾಜ, ತಾರ್ಕಿಕ ಚಕ್ರವರ್ತಿ, ವಾಧಿಭಸಿಂಹ ಪಂಚಾನನ ಬಿರುದುಗಳನ್ನು ಹೊಂದಿದ ಸೋಮದೇವಪಂಡಿತನು ಕೂಡಾ ಇಲ್ಲಿಯೇ ಮುಡುಪಿದನು. ಈತನು ಮುಡುಪಿದಾಗ ಚಂದ್ರಪ್ರಭದೇವನು ಪರೋಕ್ಷವಿನಯವನ್ನು ಮಾಡಿಸಿದನು.[೧೫]

ಪಲ್ಲವ ರಾಜ ರಾಮನ ಅರಸಿ ಪರಿಯಬ್ಬರಸಿಯು ಕೊಪಣ ತೀರ್ಥಕ್ಕೆ ಆಗಮಿಸಿ ಜಿನಾಲಯ, ಜಿನಪೂಜೆ, ಜಿನಾಭಿಷೇಕಗಳನ್ನು ಮಾಡುತ್ತಾ ಸನ್ಯಾಸವನ್ನು ಸ್ವಿಕರಿಸಿ ಮಡಿಯುತ್ತಾಳೆ. ಆಗ ದೇವೇಂದ್ರನು ನಾಟ್ಯವಾಡಿದರೆ, ಧರಣೇಂದ್ರ ಮತ್ತು ಇತರ ದೇವತೆಗಳು ಗುಡಿ ತೋರಣ ಕಟ್ಟಿ ಹಾಡಿಹೊಗಳುತ್ತಾರೆ.[೧೬] ಮತ್ತೊಂದು ಶಾಸನದಲ್ಲಿ ಪಲ್ಲವ ವಂಶದ ರಾಮನ ಪತ್ನಿಯಾದ ರೇವಕಯ್ಯೆ ಕಂತಿಯೂ ಕೂಡಾ ಇಲ್ಲಿಯೇ (ಕ್ರಿ.ಶ. ೯೮೬) ಮರಣವಪ್ಪುತ್ತಾಳೆ.

ರೇವಸೆಟ್ಟಿ ಎಂಬವನ ಮಗ ನೊಳಂಬಸೆಟ್ಟಿ ಅಳಿಯ ಮಧುರಾಂತಕಸೆಟ್ಟಿ ರತ್ನತ್ರಯಗಳನ್ನು ಸಾಧಿಸಿ ಸಮಾಧಿಮರಣವನ್ನು ಹೊಂದುತ್ತಾರೆ. ರೇವಸೆಟ್ಟಿಯ ಗುರುಗಳು ಅಭಯನಂದಿಪಂಡಿತ ದೇವರು. ರೇವಸೆಟ್ಟಿಯು ಕೊಪಣದಲ್ಲಿ ೬೦ ದಿನಗಳ ಕಾಲ ಆರಾಧನೆಯನ್ನು ಕೇಳಿ ಸಮಾಧಿಮರಣ ಹೊಂದುತ್ತಾರೆ.' ಆರಾಧನೆಯಂ ಸಲೆ ಕೇಳ್ದು ಕುಪಣದೊಳೆ ಜಿನಪದಮಂ ಮನದೊಳ್ನಿಲಿಸಿ .... ಸಮಾಧಿ ಮರಣ ಸಾಧಿಸಿದಂ" ಎಂದು ಕೊಪ್ಪಳದಲ್ಲಿನ ಶಾಸನ ಬಣ್ಣಿಸುತ್ತದೆ.[೧೭] ತಂದೆ, ಮಗ ಮತ್ತು ಅಳಿಯ ಮೂವ್ವರೂ ರತ್ನತ್ರಯವನ್ನು ಸಾಧಿಸಿ ಸಮಾಧಿಮರಣವನ್ನು ಕೊಪಣದಲ್ಲಿ ಏಕಕಾಲಕ್ಕೆ ಹೊಂದಿದ್ದು ವಿಶೇಷವಾಗಿದೆ.

ಮಾನ್ಯಖೇಟದಲ್ಲಿ ಸಾಧುಸೇನ ಪಂಡಿತರು ಸಮಾಧಿ ಮರಣವನ್ನು ಹೊಂದಿದರೂ, ಅವರ ನಿಸಿದಿಯನ್ನು ನಿಲ್ಲಿಸಿದ್ದು ಕೊಪ್ಪಳದಲ್ಲಿ, ಬುದ್ದಸೇನ ಪಂಡಿತರ ಶಿಷ್ಯ ಸಾಧುಸೇನ ಪಂಡಿತ, ಇವರ ಶಿಷ್ಯ ಸಿದ್ದಸೇನ ಪಂಡಿತರು. ಸಾಧುಸೇನ ಪಂಡಿತರು ರಾಜಪೂಜಿತರಾಗಿ ಕೊಪ್ಪಳದಲ್ಲಿದ್ದರೂ ತಮ್ಮ ಅವಸಾನವನ್ನು ಮಾನ್ಯಖೇಟದ ಏಕಚಟ್ಟುಗ ಬಸದಿಯಲ್ಲಿ ಸಮಾಧಿ ಮರಣಹೊಂದಿ ಮೋಕ್ಷವನ್ನು ಸಾಧಿಸುತ್ತಾರೆ. ಇವರ ಶಿಷ್ಯ ಸಿದ್ದಸೇನ ಪಂಡಿತರು ಕೊಪ್ಪಳದಲ್ಲಿ ಇವರ ನಿಸಿಧಿಯನ್ನು ನಿಲ್ಲಿಸುತ್ತಾರೆ.[೧೮]

ಕೊಪ್ಪಳದ ಚಂದ್ರಬಂಡೆಯಲ್ಲಿರುವ ನಿಸಿಧಿ ಶಾಸನೋಕ್ತರಾದ ಸರ್ವನಂದಿ ಭಟಾರರು ಕುಂದಕುದಾನ್ವಯ ಏಕಚಟ್ಟುಗದ ಭಟಾರರ ಶಿಷ್ಯರು. ಸರ್ವನಂದಿ ಭಟಾರರು ಕೊಪ್ಪಳದಲ್ಲಿ ಕೆಲವು ದಿನ ಜಿನಸೇವೆ, ಜೀನ ಪೂಜೆಯೊಂದಿಗೆ ತಪಸ್ಸನ್ನಾಚರಿಸುತ್ತಾ ಸಮಾಧಿಮರಣ ಹೊಂದುತ್ತಾರೆ.[೧೯]

ಸೋಮದೇವ ಎಂಬವನಿಗೆ ಕವಿರಾಜ, ವಾದೀಂದ್ರ, ತಾರ್ಕಿಕ ಚಕ್ರವರ್ತಿ ಎಂದು ಕರೆಯಿಸಿಕೊಂಡು, ಸರ್ವಶಾಸ್ತ್ರಗಳಲ್ಲಿ ಪರಿಣಿತನಾದ ಈತನು ಕೊಪಣದಲ್ಲಿ ಸಮಾಧಿಮರಣ ಹೊಂದಿದಾಗ ಚಂದ್ರಪ್ರಭದೇವರು ಇವರಿಗೆ ನಿಸಿಧಿಯನ್ನು ಮಾಡಿಸಿದರು.[೨೦]

ಕೊಪ್ಪಳದಲ್ಲಿ ಇಂಗಿತಮರಣವನ್ನು ಹೊಂದಿದ ಸಿಂಹನಂದಿಮುನಿಗಳ ಬಗ್ಗೆ ಶಾಸನದಲ್ಲಿ "ಶ್ರೀ ವಿಕ್ರಮಾದಿತ್ಯನ ಪ್ರಥಮ ರಾಜ್ಯದೊಳ್ ಶ್ರೀ ಸಿಂಹನಂದಿ ತಮ್ಮಡಗಳಿಂಗಿಯೀ ಮರಣದೊಳಾ ಒನ್ದು ತಿಂಗಳಿಂ ಸಾಧಿಸಿದೊರ್' ಎಂದು ಉಲ್ಲೇಖವಿದ್ದು. ಇವರಿಗೆ ಮತಿಸಾಗರಅಣ್ಣ, ನಾರಲೋಕಮಿತ್ರ, ಬ್ರಹ್ಮಚಾರಿಅಣ್ಣ ಎಂಬ ಸಹೋದರಿದ್ದರೆಂದು ತಿಳಿದುಬರುತ್ತದೆ.[೨೧]

ಮೋನಿದೇವ ಬಟ್ಟಾರಕರ ಗುಡ್ಡ ಜಕ್ಕಿಶೆಟ್ಟಿ, ಮೋನಿದೇವನು “ಆರಾಧನಾ ವಿಧಾನದಿಂ ರತ್ನತ್ರಯಂಗಳಂ ಸಾಧಿಸಿದರ್”, ಇವರು ಆರಾಧನಾ ವಿಧಾನದಿಂದ ಕೊಪಣ ತೀರ್ಥದಲ್ಲಿ ಮರಣವನ್ನು ಹೊಂದಿದರು. ಇವರಿಗೆ ಚಟ್ಟಾಂಬಿಕೆ ನಿಸಿದಿಗೆಯನ್ನು ಮಾಡಿಸುತ್ತಾಳೆ.[೨೨]

ಇವರಲ್ಲದೇ ಕ್ರಿ.ಶ.೯೭೫ರಲ್ಲಿ ಬಾಬಯ್ಯೆ, ಕ್ರಿ.ಶ. ೯೯೭ರಲ್ಲಿ ಅಣುಗಬ್ಬೆ, ಬಳಗಾರ ಗಣದ ಗಣ್ಡವಿಮುಕ್ತಿದೇವ, ಕ್ರಿ.ಶ. ೯೯೧ರಲ್ಲಿ ನೇಮಿಚಂದ್ರಭಟಾರರ ಶಿಷ್ಯೆಯರಾದ ಜಕ್ಕಿಯಬ್ಬೆ, ನಿಜಬ್ಬೆ, ಕ್ರಿ.ಶ. ೯೯೨ರಲ್ಲಿ ಗಂಗರಾಜ ಎರೆಗಂಗನ ಮಗಳು ಗೋನಬ್ಬೆ ಮತ್ತು ಅವಳ ಗಂಡ ಅಜವರ್ಮ, ಕ್ರಿ.ಶ. ೯೯೭ರಲ್ಲಿ ಮಳಲಧಾರಿ ದೇವನ ಶಿಷ್ಯ ಶ್ರೀಧರಭಟಾರ, ತ್ರಿಕಾಳಯೋಗಿ ಹೀಗೆ ಹಲವರು ಕುಪಣದಲ್ಲಿ ಸಮಾಧಿಮರಣವನ್ನು ಹೊಂದುತ್ತಾರೆ.

ಶಾಸನಗಳಲ್ಲಿ ಸಿದ್ದಕುಪಣವೆಂದು ಕರೆಯಲಾದ ಇಲ್ಲಿ ರಾಜ ಪೂಜಿತ ಗುರುಗಳು, ರಾಜಪರಿವಾರದವರು, ರಾಣಿವಾಸದವರು ಸಲ್ಲೇಖನವನ್ನು ಸ್ವೀಕರಿಸಿದ ಕಾರಣ ಕೊಪಣ ತೀರ್ಥವು ಪ್ರಖ್ಯಾತಿಗೆ ಬಂದು ಅನೇಕರನ್ನು ತನ್ನೆಡೆಗೆ ಸೂಜಿಗಲ್ಲಿನಂತೆ ಸೆಳೆದುಕೊಂಡಿತು.

ಅಡಿಟಿಪ್ಪಣಿಗಳು

೧. ‘ಚಂದ್ರಕೊಡೆ’, ಶಾಸನಗಳಲ್ಲಿ ಜೈನತೀರ್ಥಗಳು, ಹಂಪನಾ (ಪುಟ ೧೦೦), (ಕವಿವಿ ಹಂಪಿ), ಮತ್ತು ‘ಶಾಸನಗಳಲ್ಲಿ ಜೈನ ತೀರ್ಥಗಳು’, ಹಂಪನಾ.

೨. ಚಂದ್ರವಳ್ಳಿ ಶಾಸನದ ಮೇಲೆ ಹೊಸ ಬೆಳಕು, ಡಾ. ಬಿ. ರಾಜಶೇಖರಪ್ಪ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಬೆಂಗಳೂರು (ಸಂ. ೬೯, ಸಂಚಿಕೆ ೨).

೩. EC. II, 476, 345, ಕ್ರಿ.ಶ. ೧೧೫೯, (ಪು. ೨೮೯).

೪. EC. II, 532, 384, ಕ್ರಿ.ಶ. ೧೨೦೦, (ಪು. ೩೨೮).

೫. ಕವಿವಿ, ಹಂಪಿ ಶಾಸನ, ಸಂ. ೨, ನಂ. ೧೧೫, ಕ್ರಿ.ಶ. ೧೦೦೧ (ಕೊಪ್ಪಳ) ಮತ್ತು S. II, ೧೧, ೩೮, (ಪು. ೨೩–೨೪).

೬. ಕವಿವಿ, ಹಂಪಿ ಶಾಸನ, ಸಂ. ೨, ನಂ. ೧೨೫, ಕ್ರಿ.ಶ. ೧೦೨೦ (ಕೊಪ್ಪಳ).

೭. ಅದೇ, ನಂ. ೯೪, ಕ್ರಿ.ಶ. ೧೦೨೩.

೮. ಚಂದ್ರಕೊಡೆ, ಗಂಗರ ರಾಚಮಲ್ಲನ ಹೆಂಡತಿ, ಹೊಸ ಮಾಹಿತಿ, ಹಂಪನಾ (ಪುಟ ೬೩೫), (ಕವಿವಿ ಹಂಪಿ).

೯. ಕವಿವಿ, ಹಂಪಿ ಶಾಸನ, ಸಂ. ೨, ನಂ. ೭೯, ಕ್ರಿ.ಶ. ೧೦೦೨, (ಕೊಪ್ಪಳ).

೧೦. ಕೊಪ್ಪಳದ ಹೊಸ ಶಾಸನಗಳು, ಹಂಪನಾ, ಜಿ.ಎಂ. ಮಂಜುನಾಥ, ೧೯೯೫ (ಪು. ೧೨).

೧೧. ಕವಿವಿ, ಹಂಪಿ ಶಾಸನ ಸಂ. ೨, ನಂ. ೯೮, ಕ್ರಿ.ಶ. ೯೭೬ (ಕೊಪ್ಪಳ).

೧೨. ಅದೇ, ನಂ. ೮೪. ಕ್ರಿ..ಶ. ೯೮೭.

೧೩. ಚಂದ್ರಕೊಡೆ, ಬೂತುಗ, ಹೊಸ ಶಾಸನಗಳು, ಹಂಪನಾ (ಪುಟ ೬೩೩), (ಕವಿವಿ, ಹಂಪಿ).

೧೪. ಕವಿವಿ, ಹಂಪಿ ಶಾಸನ ಸಂ. ೨, ನಂ. ೧೦೧, ಕ್ರಿ.ಶ. ೯೯೫ (ಕೊಪ್ಪಳ).

೧೫. ಅದೇ, ನಂ. ೯೫, ಕ್ರಿ.ಶ. ೯೮೩.

೧೬. ಅದೇ, ನಂ. ೮೨, ಕ್ರಿ.ಶ. ೯೯೦.

೧೭. ಅದೇ, ನಂ. ೮೦, ಕ್ರಿ.ಶ. ೧೦೨೪.

೧೮. ಅದೇ, ನಂ. ೮೬೫, ಕ್ರಿ.ಶ. ೯೭೫.

೧೯. ಅದೇ, ನಂ. ೪೫, ಕ್ರಿ.ಶ. ೮೮೧.

೨೦. ಅದೇ, ನಂ. ೧೨೨, ಕ್ರಿ.ಶ. ೧೦೧೧.

೨೧. Jainism in south Indian Jaina Epigraphs, No. 20, Koppal.

೨೨. ಕವಿವಿ, ಹಂಪಿ ಶಾಸನ ಸಂ. ೨, ನಂ. ೯೬. ಕ್ರಿ.ಶ. ೧೧೦೯ (ಕೊಪ್ಪಳ).

೫೭

ಮಂಡ್ಯ ಜಿಲ್ಲೆಯ ಶಾಸನೋಕ್ತ ನಾಡುಗಳು

ಎಸ್. ಶಿವರಾಮು*

ಚರಿತ್ರೆಯ ವಿವಿಧ ಕಾಲಘಟ್ಟಗಳನ್ನು ಅವಲೋಕಿಸಿದಾಗ ವಿವಿಧ ಅರಸು ಮನೆತನಗಳು ಆಡಳಿತವನ್ನು ಸರಳವಾಗಿ, ಸುಲಭವಾಗಿ, ಪ್ರಾಮಾಣಿಕವಾಗಿ ಹಾಗೂ ತೃಪ್ತಿಕರವಾಗಿ ನಿರ್ವಹಿಸಲು ಒಂದು ಸಾಮ್ರಾಜ್ಯವನ್ನು ಶ್ರೇಣಿಕೃತವಾಗಿ ವಿಭಜಿಸಿಕೊಂಡು ನಿರ್ವಹಿಸುತ್ತಿದ್ದರು. ಸಮರ್ಪಕವಾಗಿ ಸಾಮ್ರಾಜ್ಯವನ್ನು ವಿಭಜಿಸಿ ಆಡಳಿತ ನಿರ್ವಹಣೆಯಲ್ಲಿ ಒಂದು ಹೊಸ ಆಯಾಮವನ್ನು ಅಂದಿನ ಆಡಳಿತಗಾರರು ಸೃಷ್ಟಿಸಿದರೆಂದರೆ ತಪ್ಪಾಗಲಾರದು, ವಿವಿಧ ಕಾಲಘಟ್ಟದ ಆಡಳಿತ ನಿರ್ವಹಣೆಯನ್ನು ಗಮನಿಸಿದಾಗ ರಾಜ್ಯವನ್ನು ನಾಡು, ಮಂಡಲ, ವಿಷಯ, ಸೀಮೆ, ಗ್ರಾಮ ಮುಂತಾದ ಘಟಕಗಳಾಗಿ ವಿಂಗಡಿಸಿ ಆಡಳಿತವನ್ನು ನಡೆಸುತ್ತಿದ್ದರು.

ರಾಜಧಾನಿಯ ಸುತ್ತಮುತ್ತಣ ಭಾಗವನ್ನು ರಾಜನೇ ನೇರವಾಗಿ ಆಳುತ್ತಿದ್ದು, ಉಳಿದ ರಾಜ್ಯವನ್ನು ಮಂಡಲಗಳಾಗಿ ವಿಂಗಡಿಸಿ ಒಂದೊಂದು ಮಂಡಲಕ್ಕೂ ಮಂಡಲೇಶ್ವರರನ್ನು ನೇಮಿಸುತ್ತಿದ್ದನು. ಒಂದೊಂದು ಮಂಡಲವನ್ನೂ ಮತ್ತೆ ಮತ್ತೆ ಬೇರೆ ಬೇರೆ ನಾಡುಗಳಾಗಿ ವಿಂಗಡಿಸಿ ಆಯಾ ನಾಡಿಗೆ 'ನಾಡಪ್ರಭು' ಅಥವಾ 'ನಾಡಗಾವುಂಡ' ಗಳನ್ನು ನೇಮಿಸುತ್ತಿದ್ದರು.[೧] ಆ ಕಾಲದ ಶಾಸನಗಳನ್ನು ಅವಲೋಕಿಸಿದಾಗ ರಾಜ ಅವನ ಮಂಡಳೇಶ್ವರ, ಅವನ ಅಧೀನನ್ನಾಗಿ ನಾಡಪ್ರಭು ಅವನ ಅಧೀನನ್ನಾಗಿ ಊರಗಾವುಂಡ ಈ ಕ್ರಮದಲ್ಲಿ ಅಧಿಕಾರಿಗಳಿರುತ್ತಿದ್ದರು. ಈ ರೀತಿಯ ಆಡಳಿತ ವ್ಯವಸ್ಥೆಯು ಎಲ್ಲಾ ಅರಸು ಮನೆತನಗಳು ಅನುಸರಿಸುತ್ತಿದ್ದು ಕಾಲಕಾಲಕ್ಕೆ ಮತ್ತು ಒಂದು ಅರಸು ಮನೆತನದಿಂದ ಮತ್ತೊಂದಕ್ಕೆ ಅದು ಸಾಕಷ್ಟು ರೂಪಾಂತರಗೊಳ್ಳುತ್ತಲೆ ಬಂದಿರುವುದು ಗಮನಾರ್ಹ. ಕಾಲಕ್ರಮೇಣ ಅದರ ವ್ಯಾಪ್ತಿ ಭಾಷಿಕವಾಗಿ ಮತ್ತು ಹೆಸರುಗಳಲ್ಲಿ ಕೆಲವೊಂದು ಮಾರ್ಪಾಟುಗಳು ಆಗುತ್ತಿದ್ದವು. ಈ ಹಿನ್ನಲೆಯಲ್ಲಿ ಈ ಪ್ರಬಂಧದಲ್ಲಿ ನಾಡು ಎಂಬ ಆಡಳಿತ ಘಟದಕ ಬಗ್ಗೆ ಚರ್ಚಿಸಲಾಗಿದ್ದು, ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ನಾಡುಗಳ ರಚನೆ, ವಿಕಾಸ ಮತ್ತು ಬೆಳವಣಿಗೆಯ ಹಂತಗಳನ್ನು ಶಾಸನಗಳ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ.

ನಾಡು ಎಂಬ ಆಡಳಿತ ಘಟಕದ ಬಗ್ಗೆ ಹಲವು ಅಭಿಪ್ರಾಯಗಳನ್ನು ವಿದ್ವಾಂಸರು ನೀಡಿದ್ದಾರೆ. 'ನಾಡು' ಎಂಬುದಕ್ಕೆ ಕಾಡಲ್ಲದೆ ಜನವಸತಿಯುಳ್ಳ ಪ್ರದೇಶ ಭೂಭಾಗ ಎಂಬ ಅರ್ಥವಿದೆ. ಈ ಪದ ದೇಶ, ರಾಜ್ಯ, ರಾಷ್ಟ್ರ ಎಂಬ ಅರ್ಥದಲ್ಲೂ ಬಳಕೆಯಾಗಿದೆ. ಕನ್ನಡದಲ್ಲಿ ಲಭ್ಯವಿರುವ ಅತ್ಯಂತ ಪ್ರಾಚೀನ ಕಾವ್ಯವಾದ ಕವಿರಾಜಮಾರ್ಗದಲ್ಲಿ 'ನಾಡು' ಪದ ಬಳಕೆಯಾಗಿದೆ. ಈ ಕೃತಿಯಲ್ಲಿ ಕಾವೇರಿ ಮತ್ತು ಗೋದಾವರಿ ನದಿಗಳ ನಾಡು ಕನ್ನಡ ನಾಡಾಗಿತ್ತು ಎಂದು ಹೇಳಲಾಗಿದೆ. ಕಾವೇರಿಯಿಂದ ಗೋದಾವರಿ ವರ ಮಿರ್ಪನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ಎಂಬಲ್ಲಿ ಕನ್ನಡ ನಾಡಿನ ವಿಸ್ತಾರವಾದ ಭೂ ಪ್ರದೇಶವನ್ನು ಹೇಳುವ ದೇಶ ಎಂಬ ಅರ್ಥದಲ್ಲಿ 'ನಾಡು' ಪದ ಬಳಕೆಯಾಗಿದೆ.

ಮಂಡ್ಯ ಪ್ರದೇಶದಲ್ಲಿ ದೊರೆತಿರುವ ಶಾಸನಗಳಲ್ಲಿ ಹಲವು ನಾಡುಗಳ ಪ್ರಸ್ತಾಪವಿದೆ. ಅವುಗಳಲ್ಲಿ ಮುಖ್ಯವಾದವು. ಕೆರಗೋಡುನಾಡು. ಬಡಗೆರೆನಾಡು, ಕಳಲೆನಾಡು, ಕಳ್ಬಪ್ಪುನಾಡು, ಕತ್ತರಿಘಟ್ಟದನಾಡು, ಕಬ್ಬಾಹುನಾಡು (ಕಬ್ಬಾಹುಸಾಸಿರ) ಕುರುವಂಕನಾಡು, ಮೊದೂರುನಾಡು, ಸಣಬಿಮುಗುಳಿನಾಡು, ಪುಗಿರಿನಾಡು, ಕುರಕ್ಕಿನಾಡು, ಚಿಕ್ಕಗಂಗವಾಡಿ ನಾಡು ಮತ್ತು ಕಿವಿಲೆನಾಡು ಪ್ರಮುಖವಾದವು.

ಗಂಗರಸರ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಮಂಡ್ಯ ಪ್ರದೇಶಕ್ಕೆ ಸಂಬಂಧಿಸಿದ ಪ್ರಾಚೀನ ಆಡಳಿತ ಘಟಕವೆಂದರೆ ಕೆರಗೋಡು ವಿಷಯ ಅಥವಾ ಕೆರಗೋಡುನಾಡು ಈ ನಾಡಿನಲ್ಲಿ ಬೆಳ್ಕರೆ, ಹಾದಿಮಂಗಲ, ಗುತ್ತಲು ಮೊದಲಾದ ಗ್ರಾಮಗಳು ಸಮಾವೇಶಗೊಂಡಿದ್ದ ಬಗ್ಗೆ ತಿಳಿಯುತ್ತದೆ. ಅಂದರೆ ಇಂದಿನ ಕೆರಗೋಡು ಗ್ರಾಮವನ್ನು

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ, ಮೊ. ೯೮೪೫೯೯೮೮೧೯

ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಮುತ್ತಲ ಪ್ರದೇಶವು ಆ ನಾಡಿನಲ್ಲಿ ಅಂದರೆ ಇಂದಿನ ಮಂಡ್ಯ ತಾಲ್ಲೂಕಿನ ಪೂರ್ವಭಾಗವು ಸೇರ್ಪಡೆಯಾಗಿದ್ದಿತೆಂದೂ ಹೇಳಬಹುದಾಗಿದೆ.

ಮಂಡ್ಯ ತಾಲ್ಲೂಕಿನ ಕ್ರಿ.ಶ. ೭೧೩ರ ಹಳ್ಳೆಗೆರೆ ಶಾಸನ "ಕೆರಗೋಡುವಿಷಯೇ ಕೆರಗೋಡುತ್ತರ ಪಾರ್ಶ್ವಕಿನೀ ನದೀಸೇತುಂ" ಎಂದು ಹೇಳಿದೆ.[೨] ಕಿಳಿನಿ ನದಿಯ ಉತ್ತರ ದಂಡೆಯ ಮೇಲೆ ಕೆರಗೋಡು ಗ್ರಾಮವಿತ್ತು. ಅದು ಈಗಿನ ಮಂಡ್ಯ ತಾಲ್ಲೂಕಿನ ಕೆರಗೋಡು ಗ್ರಾಮವಾಗಿದೆ. ಈ ಊರಿನ ದಕ್ಷಿಣಕ್ಕೆ ಕೊಳುಗೊಳ, ಬೆಳ್ಳರೆ, ಉತ್ತರದಲ್ಲಿ, ಬೆಮ್ಬಪ್ಪಾಳು, ಪಣಸುಪಟ್ಟಿ ಹಾಗೂ ಕಿಳಿನಿ ನದಿಗಳಿದ್ದವು. ಇವುಗಳ ಜೋಡಣೆಗೆ ಸೇತುವೆಯನ್ನು ನಿರ್ಮಿಸಿದ್ದರು. ಕೆಲಲೆನಾಡು ಸಾವಿರ ಹಳ್ಳಿಗಳ ವಿಭಾಗವಾಗಿ ರೂಪುಗೊಂಡಾಗ ಇದು ಅದರ ಉಪವಿಭಾಗವಾಗಿ ರಬೇಕು. ಇದರ ಉಲ್ಲೇಖ ಕ್ರಿ.ಶ. ೧೧೮೫ರ ರಾಯಶೆಟ್ಟಿಪುರ ಮತ್ತು ೧೩೦೫ರ ಮರಡಿಪುರ ಶಾಸನದಲ್ಲಿಯೂ ಬಂದಿದೆ. ಆಗ ಹಾಡಿಮಂಗಲ ಗ್ರಾಮವು ಇದರಲ್ಲಿ ಸೇರಿತ್ತು.[೩] ಮುಂದೆ ಹೊಯ್ಸಳರ ಕಾಲದಲ್ಲೂ ಈ ನಾಡು ತನ್ನ ಪ್ರಾಮುಖ್ಯತೆಯನ್ನು ಪಡೆದಿತ್ತು. ಕ್ರಿ.ಶ. ೧೨೦೬ರ ದಿಡಿಗ ಶಾಸನ ವೀರಬಲ್ಲಾಳನ ಗಂಧವಾರಣ ಕೆರಗೋಡು ನಾಡಾಳ್ವ ಮಹಾಪಸಾಯ್ತ ಸಾಮನ್ತ ಕಾಡಯನಾಯಕ ಕಲ್ಕುಣಿ ನಾಡೊಳಗಣ ದಿಡುಗನ ವಿರ್ತಿ (ವೃತ್ತಿ) ಆಳುತ್ತಿದ್ದನೆಂದು ಹೇಳಿದೆ. ಇಲ್ಲಿಯ ಕಲ್ಕುಣಿನಾಡು ಕೆಳಲೆ ನಾಡು ೧೦೦೦ದಲ್ಲಿ ಸೇರಿರದೆ ಕಳ್ಬಪ್ಪು ೧೦೦೦ದಲ್ಲಿತ್ತು. ಪಾಂಡವಪುರ ತಾಲ್ಲೂಕಿನ ಹಳೇಬೀಡು ಶಾಸನ ಕೆರಗೋಡು ನಾಡ ಮಲೆಯನಹಳ್ಳಿಯನ್ನು ಬನದ ತೊಂಡನೂರು ಕಂಬೇಶ್ವರ ದೇವರಿಗೆ ನೀಡಿದರೆಂದು ಹೇಳಿದೆ.[೪] ಆದರೆ ಕೆರಗೋಡು ವಿಷಯದಲ್ಲಿದ್ದ ಹಳ್ಳಿಗಳ ನಿರ್ದಿಷ್ಟ ಸಂಖ್ಯೆ ಶಾಸನಗಳಿಂದ ತಿಳಿಯುವುದಿಲ್ಲ. ಈ ನಾಡು ಮುಂದೆ ಮೈಸೂರು ಅರಸ ರಣಧೀರ ಕಂಠೀರವ ನರಸರಾಜ ಒಡೆಯರ್ ಕಾಲಕ್ಕೆ 'ಕೆರಗೋಡು ತಾಲ್ಲೂಕು' ರೂಪುಗೊಂಡಿದ್ದು ಅದರಲ್ಲಿ ಅರ್ಕಗುಪ್ತಿಪುರ ಅಂದರೆ ಇಂದಿನ ಗುತ್ತಲು ಗ್ರಾಮವು ಸಮಾವೇಶಗೊಂಡಿದ್ದ ಸಂಗತಿ ಗುತ್ತಲು ಗ್ರಾಮದ ಶಾಸನದಿಂದ ಖಚಿತವಾಗುತ್ತದೆ.[೫]

ಮದ್ದೂರು ತಾಲ್ಲೂಕಿನ ಶಾಸನಗಳು ಚಿಕ್ಕಗಂಗವಾಡಿನಾಡು ಬಗ್ಗೆ ಬೆಳಕು ಚೆಲ್ಲುತ್ತವೆ. ಒಂದು ಊರಿನ ಹೆಸರಿನಲ್ಲಿ ಮತ್ತೊಂದು ಊರು ಹುಟ್ಟಿಕೊಂಡಾಗ ಅದನ್ನು ಕಿರಿಯ, ಚಿಕ್ಕ, ಹೊಸ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಉದಾ: ಚಿಕ್ಕೋಡಿ, ಚಿಕ್ಕಮಗಳೂರು, ಹೊಸಂಗಡಿ, ಹೊಸಪೇಟೆ ಇತ್ಯಾದಿ ಅದರಂತೆ ಗಂಗವಾಡಿ ಹೆಸರಿನಲ್ಲಿ ಮತ್ತೊಂದು ಊರು ಹುಟ್ಟಿಕೊಂಡಾಗ ಅದನ್ನು "ಚಿಕ್ಕಗಂಗವಾಡಿ' ಎಂದು ಕರೆದಿರಬೇಕು. ಇದರ ಆಡಳಿತ ವ್ಯಾಪ್ತಿ ತುಂಬಾ ಚಿಕ್ಕದಾಗಿರಬೇಕು. ವೈದ್ಯನಾಥಪುರಶಾಸನ 'ಚಿಕ್ಕಗಂಗವಾಡಿನಾಡೊಳುಗು ದತ್ತೋನಾರಸಿಂಹ ಚತುರ್ವೇದಿ ಮಂಗಲದ ಸಿವಪುರವನ್ನು ಹೇಳಿದೆ.[೬] ಇಲ್ಲಿಯ ಮತ್ತೊಂದು ಶಾಸನ ಗಂಗನಾಡು ಮತ್ತು ಅದರ ಉಪವಿಭಾಗ ಗಹಲನಾಡುಗಳನ್ನು ಉಲ್ಲೇಖಿಸುತ್ತದೆ.[೭] ಕಾವೇರಿ ಬಯಲು ಪ್ರದೇಶದ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಕಳಲೆನಾಡನ್ನು ಪ್ರಸ್ತಾಪಿಸುವ ಹೆಚ್ಚಿನ ಶಾಸನಗಳು ದೊರಕಿವೆ.[೮] ಕ್ರಿ.ಶ. ೧೧೯೭ರಲ್ಲಿ ಮದ್ದೂರಿನ ಒಂದು ಶಾಸನದಲ್ಲಿ ಕಳಲೆನಾಡಿನ ಬೊಪ್ಪಸಮುದ್ರದ ಮೇಲೆ ಆಕ್ರಮಣ ನಡೆದು ಗೋವುಗಳನ್ನು ಕದ್ದೊಯ್ಯುವ ಸಂದರ್ಭದಲ್ಲಿ ಬೀರಗವುಡನು ಸಾವನ್ನಪ್ಪಿದ ವಿವರವಿದೆ.[೯] ಮದ್ದೂರು ತಾಲ್ಲೂಕು ಪ್ರದೇಶ ಪೂರ್ವಗಡಿ ಅಂದರೆ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿಗೆ ಹೊಂದಿಕೊಂಡಂತಿರುವ ಅರ್ಕಾವತಿ ಹಾಗೂ ಶಿಂಷಾ ಕಣಿವೆಗಳ ತಗ್ಗಾದ ಪ್ರದೇಶವನ್ನು ಅನೇಕ ಶಾಸನಗಳು 'ಕಿವಿಲೆನಾಡು' ಎಂದು ಉಲ್ಲೇಖಿಸಿದೆ. ಇದು ನಿಜಕ್ಕೂ ವಿಶಿಷ್ಠ ಅಂಶವಾಗಿದೆ. ಕಿವಿಲೆನಾಡು ಒಂದು ಸಾವಿರ ಗ್ರಾಮಗಳ ವ್ಯಾಪ್ತಿಯನ್ನು ಪಡೆದಿದ್ದಿತ್ತೆಂದು ಮದ್ದೂರು ತಾಲ್ಲೂಕಿನ ಶಾಸನವೊಂದರಿಂದ ಮನಗಾಣ ಬಹುದಾಗಿದೆ. ಭೌಗೋಳಿಕವಾಗಿ ಈ ಪ್ರದೇಶ ನೆರೆಯ ರಾಮನಗರ ಮತ್ತು ಮಂಡ್ಯ ತಾಲ್ಲೂಕು ಪ್ರದೇಶಗಳಿಗೆ ಹೋಲಿಸಿದರೆ ಗಣನೀಯವಾಗಿ ತಗ್ಗಾಗಿದ್ದು; ಅದನ್ನು ತಗ್ಗು ಅಥವಾ ಕೆಳಗಿನ ಸೀಮೆ ಅಂದರೆ ಕಿಳಲೆನಾಡು ಎಂದು ಗುರುತಿಸಿರುವುದು ಅನ್ವರ್ಥವಾಗಿಯೇ ಇದೆ. ಒಟ್ಟಾರೆ ಮದ್ದೂರು ತಾಲ್ಲೂಕಿನ ಪೂರ್ವಗಡಿಯಲ್ಲಿರುವ ಆತಕೂರು-೧೨ ವಿಭಾಗವೂ ಸೇರಿದಂತೆ ಶಿಂಷಾ ಕಣಿವೆಯ ಪ್ರದೇಶವು ಈ ಕಿಳಲೆ ಸಹಸ್ರ ವಿಷಯದಲ್ಲಿ ಅಂತರ್ಗತವಾಗಿದ್ದಿತು.[೧೦]

ಮಳವಳ್ಳಿ ತಾಲ್ಲೂಕಿನ ಕ್ರಿ.ಶ. ೧೧೭೧ರ ಒಂದು ಶಾಸನದಲ್ಲಿ ಕಳಲೆನಾಡಿನ ಅಂತರವಳ್ಳಿ ಗ್ರಾಮದ ಸಳಗವುಡನು ತುರುಗಾಳಗದ ಸಂದರ್ಭದಲ್ಲಿ ಪ್ರಾಣ ಅರ್ಪಣೆಯನ್ನು ಮಾಡಿದ ಮತ್ತು ಸಳಗವುಡನ ಮಗ ಕೆತಗವುಡನು ತನ್ನ ತಂದೆಯ ತ್ಯಾಗದ ನೆನಪಿನಲ್ಲಿ ಒಂದು ಸ್ಮಾರಕವನ್ನು ಕಟ್ಟಿಸಿದ ವಿವರಗಳಿವೆ.[೧೧] ಮದ್ದೂರು ತಾಲ್ಲೂಕಿನ ತಿಪ್ಪೂರು ಶಾಸನವು ಗಾಜಲೂರುನಾಡು ಬಗ್ಗೆ ಉಲ್ಲೇಖಿಸುತ್ತದೆ. ಏಚಿರಾಜನ ಮಗ ಗಂಗರಾಜನು ವಿಷ್ಣುವರ್ಧನನಂದ 'ಗಾಜನೂರುನಾಡುಂಗೆರೆ ಯೊಳಗಾದ ತಿಪ್ಪೂರ ವೃತ್ತಿಯನ್ನು ಪಡೆದನು.[೧೨] ಈ ತಿಪ್ಪೂರು ಕಳಲೆನಾಡಿನಲ್ಲಿದ್ದುದು ಕಳವೆನಾ(ಡ) ತಿಪ್ಪೂರ ತೀರ್ದದ

(ಹ) ತಿಪ್ಪೂರಬ...ಬೊಪ್ಪಸಮುದ್ರ..........ಎಂಬ ಉಲ್ಲೇಖಗಳಿಂದ ತಿಳಿಯುತ್ತದೆ.[೧೩] ಆದ್ದರಿಂದ ಇದು ಕಳಲೆನಾಡಿನ ಉಪವಿಭಾಗವಾಗಿದೆ.

ಮಂಡ್ಯ ಹಾಗೂ ಮಳವಳ್ಳಿ ತಾಲ್ಲೂಕಿನ ಹಲವು ಶಾಸನಗಳು ಕಲ್ನಾಡಿನ ಬಗ್ಗೆ ಉಲ್ಲೇಖಿಸುತ್ತವೆ. ಮಂಡ್ಯ ತಾಲ್ಲೂಕಿನ ಕ್ರಿ.ಶ. ೯೭೭ರ ಒಂದು ಶಾಸನದಲ್ಲಿ ಗಂಗ ಹಾಗೂ ಪಲ್ಲವರ ನಡುವೆ ನಡೆದ ಕಾಳಗದ ವಿವರವಿದೆ. ಗಂಗ ಅರಸನು ಪಲ್ಲವರ ಮೇಲೆ ಪೆರೂರಿನ ಸಮೀಪ ಆಕ್ರಮಣ ಮಾಡುವ ಸಂದರ್ಭದಲ್ಲಿ ಇಸರಗೌಡನು ಶತ್ರುಗಳ ಸೈನ್ಯವನ್ನು ಭೇದಿಸಿ ವೀರಮರಣ ಹೊಂದಿದನು. ಇದಕ್ಕಾಗಿ ಗಂಗ ಅರಸನು ವೀರನ ವಂಶಸ್ಥರಿಗೆ ಕೊತ್ತತ್ತಿ ಗ್ರಾಮವನ್ನು ಕಲ್ನಾಡಾಗಿ ಕೊಟ್ಟು ಅವನ ನೆನಪಿನಲ್ಲಿ ಒಂದು ದೇವಾಲಯವನ್ನು ನಿರ್ಮಿಸಿದನು.[೧೪] ಗಂಗ ಅರಸನ ಅಣತಿಯಂತೆ ಮಾಚಯ್ಯ ಹಾಗೂ ಇತರ ಶರಣರು ಬಡಗೆರೆನಾಡಿನ ಧನಗೂರನ್ನು ಕಲ್ನಾಡಾಗಿ ಆಚಮನಗೆ ದಾನ ಕೊಡುತ್ತಾರೆ.[೧೫]

ಮದ್ದೂರು ತಾಲ್ಲೂಕಿನ ಕ್ರಿ.ಶ. ೧೧೯೨ರ ಒಂದು ಶಾಸನದಲ್ಲಿ ಸೊಸಲಿನಾಡಿನ ಕಾಮಯ್ಯನಾಯಕ ಹಾಗೂ ಬಡಗುಂದನಾಡಿನ ಕಡಿಲವಾಗಿಲಿನ ಭೂಮಿಕಾರರು ತುರುಗಾಳಗದಲ್ಲಿ ಗೋವುಗಳನ್ನು ರಕ್ಷಿಸಿ ಪ್ರಾಣ ಅರ್ಪಣೆ ಮಾಡಿದ ವಿವರವಿದೆ. ಕಾಮಯ್ಯ ನಾಯಕನ ಮಗ ತಲಗಾಲುಗವುಡನು ಈ ಘಟನೆಯ ಸ್ಮಾರಕವಾಗಿ ಒಂದು ಶಾಸನ ಹಾಕಿಸಿದನು.[೧೬] ಮದ್ದೂರು ತಾಲ್ಲೂಕಿನ ಕ್ರಿ.ಶ. ೧೨೦೦ರ ಒಂದು ಶಾಸನದಲ್ಲಿ ಭೂಮಿಕಾರ ಚಿಕ್ಕಗವುಡನ ಮಗ ಕಾಬಯ್ಯನು ಪ್ರಾಣತ್ಯಾಗ ಮಾಡಿದ ವಿವರವಿದೆ. ಕುಂಪೆನಾಡಿನ ಬಗ್ಗೆಯೂ ಉಲ್ಲೇಖವಿದೆ.[೧೭]

ಮಂಡ್ಯ ತಾಲ್ಲೂಕಿನ ಹುಳ್ಳೇನಹಳ್ಳಿ ತಾಮ್ರಶಾಸನದಲ್ಲಿ ಶ್ರೀಪುರುಷನು ಗಂಗಸಾಮಂತರಾದ ಬಾಣವಂಶದ ಕಳ್ಬಪ್ಪುನಾಡಿನ ಒಡೆಯ ದಿಂಡಗರ ಬೇಡಿಕೆಯ ಮೇರೆಗೆ ಕೊಲೆವೆತು ಗ್ರಾಮವನ್ನು ೩ ಬ್ರಾಹ್ಮಣರಿಗೆ ದಾನ ಮಾಡಿದ ವಿವರವಿದೆ.[೧೮]

ನಾಗಮಂಗಲ ತಾಲ್ಲೂಕಿನ ವಾಯುವ್ಯ ಭಾಗವು ಕಪ್ಪುಸಾಸಿರ ಪ್ರದೇಶದಲ್ಲಿ ಅಂತರ್ಗತವಾಗಿದ್ದಿತು. ಕಳ್ಬಪ್ಪು ಎಂಬುದು ಶ್ರವಣ ಬೆಳಗೊಳದ ಚಿಕ್ಕಬೆಟ್ಟಕ್ಕಿರುವ ವಿಶಿಷ್ಟ ಹೆಸರು. ಅದನ್ನು ಒಳಗೊಂಡಂತೆ ಅದರ ಸುತ್ತಮುತ್ತಲ ಸುಮಾರು ಗ್ರಾಮಗಳ ವ್ಯಾಪ್ತಿಯುಳ್ಳ ನಾಡೇ ಕಳ್ಬಪುನಾಡುಸಾಸಿರ ಪ್ರದೇಶವಾಗಿದ್ದಿತು. ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತೊಣಚಿ ಗ್ರಾಮದ ಶಾಸನ ಹಾಗೂ ಮಂಡ್ಯ ತಾಲ್ಲೂಕಿನ ಹುಳ್ಳೇನಹಳ್ಳಿ ಗ್ರಾಮದ ಗಂಗರಸ ಶ್ರೀಪುರುಷನ ಶಾಸನಗಳಲ್ಲಿ ಈ ನಾಡಿನ ಉಲ್ಲೇಖವಿದೆ. ನಿರ್ಗುಂದ ಮತ್ತು ಅಸಂದಿನಾಡುಗಳು ಪ್ರಾಯಶಃ ಕಳ್ಬಪ್ಪುಸಾಸಿರಕ್ಕೆ ಸೇರಿದವಾಗಿದ್ದು, ನಾಗಮಂಗಲ ತಾಲ್ಲೂಕಿನ ಪಶ್ಚಿಮ ಮತ್ತು ವಾಯುವ್ಯ ಗಡಿಯ ಗ್ರಾಮಗಳು ಆ ನಾಡಿನಲ್ಲಿ ಸೇರ್ಪಡೆಯಾಗಿದ್ದವೆಂದು ಹೇಳಬಹುದಾಗಿದೆ.

ಕತ್ತರಿಘಟ್ಟದನಾಡು ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿತ್ತು. ಮಡುವಿನಕೋಡಿಯ ಕ್ರಿ.ಶ. ೧೩೪೬ರ ಶಾಸನದಲ್ಲಿ ಈ ನಾಡಿನ ಉಲ್ಲೇಖವಿದೆ.[೧೯] ಈ ನಾಡಿನಲ್ಲಿ ಮೊಡವಿನಕೋಡಿಯ ಮೂಚೆಗವುಡನು ಆಳ್ವಿಕೆ ನಡೆಸಿದ್ದಾನೆ. ಇಂದಿನ ಕತ್ತರಿಘಟ್ಟ ಗ್ರಾಮವೇ ಈ ನಾಡಿನ ಮುಖ್ಯಪಟ್ಟಣ ಮತ್ತು ರಾಜಧಾನಿಯಾಗಿತ್ತು. ಈ ನಾಡಿನಲ್ಲಿದ್ದ ಗ್ರಾಮಗಳ ಸಂಖ್ಯೆ ಮತ್ತು ಇದರ ವಿಸ್ತಾರದ ಕುರಿತು ಸ್ಪಷ್ಟವಿಲ್ಲ. ಕಬ್ಬಾಹುನಾಡು ಪ್ರಾಂತ್ಯವು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿತ್ತು. ಇದು ಕಬಾಹುನಾಡು, ಕಬ್ಬಹುನಾಡು, ಕಭಹುನಾಡು, ಕಬ್ಬಾಹುಸಾಸಿರ ಎಂದೆಲ್ಲ ಕರೆಯಲ್ಪಟ್ಟಿದೆ. ಹೊಯ್ಸಳ ಮನೆತನದ ಇಮ್ಮಡಿ ಬಲ್ಲಾಳದೇವನ ಅಗ್ರಹಾರಬಾಚಹಳ್ಳಿಯ ಕ್ರಿ.ಶ. ೧೧೭೯ ಮತ್ತು ಮಡುವಿನ ಕೋಟೆಯ ಕ್ರಿ.ಶ. ೧೨೦೦ರ ಇಮ್ಮಡಿ ವೀರನಾರಸಿಂಹದೇವನ ಅಗ್ರಹಾರ ಚಾಚಹಳ್ಳಿಯ ಶಾಸನಗಳಲ್ಲಿ ಈ ಪ್ರಾಂತ್ಯದ ಉಲ್ಲೇಖಗಳಿವೆ. ಅಗ್ರಹಾರ ಬಾಚಹಳ್ಳಿ ಗ್ರಾಮವೇ ಈ ಪ್ರಾಂತ್ಯದ ಮುಖ್ಯ ಪಟ್ಟಣ ಮತ್ತು ರಾಜಧಾನಿಯಾಗಿತ್ತು.[೨೦]

ಲಕುಕೆ ನಾಡನ್ನು ಉಲ್ಲೇಖಿಸುವ ಶಾಸನವೊಂದು ಮಂಡ್ಯ ತಾಲ್ಲೂಕಿನ ಉತ್ತರಗಡಿ ಅಂದರೆ ನಾಗಮಂಗಲ ತಾಲ್ಲೂಕಿನ ಬೇಚಿರಾಕ್ ಮುತ್ಸಂದ್ರ ಗ್ರಾಮದಲ್ಲಿದೆ. ಹಾಗಾಗಿ ಕಲುಕೆರೆ ನಾಡು ಇಂದಿನ ಮಂಡ್ಯ ತಾಲ್ಲೂಕಿನ ಉತ್ತರದ ಗಡಿ ಹಾಗೂ ನಾಗಮಂಗಲ ತಾಲ್ಲೂಕಿನ ದಕ್ಷಿಣದ ಹಲವು ಗ್ರಾಮಗಳನ್ನೊಳಗೊಂಡಂತೆ ಇದ್ದ ಒಂದು ಪ್ರಾಚೀನ ಆಡಳಿತ ಘಟಕವಾಗಿದ್ದಿತು.[೨೧]

ಕ್ರಿ.ಶ. ೧೧೦೨ರ ಶ್ರೀರಂಗಪಟ್ಟಣದ ಒಂದು ಶಾಸನ ಎಡತೊರ್ರೆನಾಡಿನ ಚತುರ್ವೇದಿ ಮಂಗಳಂನ ಕೆರೆಯು ೨೦೦ ವರ್ಷಗಳಿಂದಲೇ ಶಿಥಿಲಗೊಂಡು ದುರಸ್ತಿಯಾಗದೆ ಇದ್ದ ಕೆರೆ ಮತ್ತು ಆ ಗ್ರಾಮದ ವಿರುದರಾಯ ಭಯಂಕರ ಮಾರಯ್ಯನ್ ಎಂಬ ಅಧಿಕಾರಿ ಹಾಗೂ ಕೆರೆಯನ್ನು ದುರಸ್ಥಿ ಮಾಡಿದ ವಿಷಯಗಳನ್ನು ಪ್ರಸ್ತಾಪಿಸುತ್ತದೆ.[೨೨] ಕ್ರಿ.ಶ. ೧೧೦೮ರ ಶ್ರೀರಂಗಪಟ್ಟಣದ ಮತ್ತೊಂದು ಶಾಸನದಲ್ಲಿ ಬರಂದರ ಮಂಚೇಗೌಡ ಮತ್ತು ಬೀರಗವುಡ ಎಂಬ ಹೊಲಯದ ನಾಡಿನ ಗವುಡರು ಉದಯಾದಿತ್ಯ ಪಲ್ಲವರಾಯನು ಕಟ್ಟಿಸಿದ ಕೆರೆಸಂರಕ್ಷಣೆ ಮಾಡಲು ದಾನಕೊಟ್ಟ ವಿವರವಿದೆ.[೨೩] ಮಂಡ್ಯ ತಾಲ್ಲೂಕಿನ ಕ್ರಿ.ಶ.

೧೧-೧೨ನೇ ಶತಮಾನದ ಒಂದು ಶಾಸನದಲ್ಲಿ ಬಲ್ಮಡುನಾಡಿನ ಬೆಳತೂರನ್ನು ಶತ್ರುಗಳು ಆಕ್ರಮಿಸಿ ಗೋವುಗಳನ್ನು ಕದ್ದೊಯ್ಯುವ ಸಂದರ್ಭದಲ್ಲಿ ಹೊಲಮನಾಯಕನು ವೀರಾವೇಶದಿಂದ ಹೋರಾಟ ಮಾಡಿದ ಅವನಿಗೆ ಒಂದು ಸ್ಮಾರಕವನ್ನು ನಲ್ಲಿಸಿದ ಪ್ರಸ್ತಾಪವಿದೆ.[೨೪] ಕನ್ನಯ್ಯನ ಮಗ ರಾಜೇಂದ್ರ ಚೋಳನು ಕುನ್ದುನ್ನಾಡಳ ತನ್ನ ಗ್ರಾಮದ ತುರುಗಳನ್ನು ಆಕ್ರಮಣಕಾರರು ಅಪಹರಿಸಿಕೊಂಡು ಹೋದಾಗ ವೀರಾವೇಶದಿಂದ ಹೋರಾಡಿ ಗೋವುಗಳನ್ನು ರಕ್ಷಿಸಿ ಪ್ರಾಣತ್ಯಾಗ ಮಾಡಿದನು.[೨೫]

ಪಾಂಡವಪುರ ತಾಲ್ಲೂಕಿನ ಶಾಸನಗಳಲ್ಲಿ ಕುರುವಂಕನಾಡು ಕುರ್ವ್ವಂಕನಾಡವೇಂಟೆ ಪದದ ಬಳಕೆಯಿಂದ ಈ ಪ್ರದೇಶದ ಸುತ್ತಲಿನ ಭಾಗವನ್ನು ಕುರುವಂಕ ನಾಡೆಂದು ಕರೆಯುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಪ್ರಾಚೀನ ಕುರುವಂಕನಾಡಿನ ವ್ಯಾಪ್ತಿಯನ್ನು ಗುರುತಿಸುವುದಾದರೆ ಈ ಕುರುವಂಕನಾಡಿನೊಳಗೆ ಲೋಕಪಾವನಿ ನದಿ, ಪಟ್ಟಣಸ್ವಾಮಿಹಳ್ಳಿ, ಮಡಕೆಪಟ್ಟಣ, ಚಿಕ್ಕಮರಳಿ, ಮಠಕೇರಿ, ಆಲೂರು, ನಗುವನಹಳ್ಳಿ, ನುಗ್ಗಹಳ್ಳಿ, ಹಿರೇಮರಳಿ, ಆನೆವಾಳು, ಲಕ್ಷ್ಮೀಸಾಗರ, ತೊಂಡನೂರು, ಅರಳಗುಪ್ಪೆ, ಸೀತಾಪುರ, ಮೊದಲಾದ ಗ್ರಾಮಗಳು ಸೇರಿದ್ದವು. ಇವುಗಳಲ್ಲದೆ ಶ್ರೀರಂಗಪಟ್ಟಣ ತಾಲ್ಲೂಕಿನ ನೆಲಮನೆ, ದರಸಿಗುಪ್ಪೆ, ಬಲ್ಲೇನಹಳ್ಳಿ ಸೇರಿದಂತೆ ಶ್ರೀರಂಗಪಟ್ಟಣದವರೆಗೆ ಕುರುವಂಕನಾಡಿನ ವ್ಯಾಪ್ತಿ ಇದ್ದಿತ್ತೆಂದು ತಿಳಿದು ಬರುತ್ತದೆ. ಈ ಹಿನ್ನೆಲಯಲ್ಲಿ ಕುರುವಂಕನಾಡಿನ ಎಲ್ಲೆಯನ್ನು ಕುರುವಂಕನಾಡಿನ ಕೇಂದ್ರ ಪ್ರದೇಶ ತೊಂಡನೂರಿನ ಪೂರ್ವಕ್ಕೆ ಲೋಕಪಾವನಿ ನದಿ, ಪಶ್ಚಿಮಕ್ಕೆ ಕಟ್ಟೇರಿ, ಹರವು, ಸೀತಾಪುರ, ಉತ್ತರಕ್ಕೆ ಮೇಲುಕೋಟೆ, ದಕ್ಷಿಣಕ್ಕೆ ಶ್ರೀರಂಗಪಟ್ಟಣದವರೆಗೆ ವ್ಯಾಪಿಸಿತ್ತೆಂದು ತಿಳಿಯಬಹುದು. ಇವುಗಳ ಆಧಾರದ ಮೇಲೆ ಕುರುವೆಂಕನಾಡಿನ ಕೇಂದ್ರ ಪ್ರದೇಶ ತೊಂಡನೂರಿನ ಪ್ರದೇಶವಾಗಿದೆ. ಪೂರ್ವಕ್ಕೆ ಲೋಕಪಾವನಿನದಿ, ಉತ್ತರಕ್ಕೆ ಮೇಲುಕೋಟೆ ದಕ್ಷಿಣಕ್ಕೆ ಶ್ರೀರಂಗಪಟ್ಟಣದವರೆಗೆ ಕುರುವಂಕನಾಡು ಇತ್ತು. ಹೊಯ್ಸಳರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ ೬೦೦ ವರ್ಷಗಳ ಕಾಲ ಕುರುವಂಕನಾಡು ಆಡಳಿತ ಘಟಕವಾಗಿದ್ದುದಾಗಿ ತಿಳಿದುಬರುತ್ತದೆ.[೨೬]

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಬೂಕನಕೆರೆಯ ಬಳಿಯ 'ಮೊದೂರು' ಇತಿಹಾಸ ಕಾಲದಲ್ಲಿ 'ಮೊದೂರುನಾಡು' ಎಂದು ಕರೆಯಲಾಗುತ್ತಿತ್ತು. ಈ ಉಲ್ಲೇಖವನ್ನು ಪುಷ್ಠೀಕರಿಸಲು ಹಲವು ಶಾಸನಗಳು ನೆರವಾಗಿವೆ. ಕ್ರಿ.ಶ. ೧೧೦೮-೧೧೧೮ ರ ಹೊಯ್ಸಳ ವಿಷ್ಣುವರ್ಧನನ ಕಾಲದ 'ಬಸ್ತಿ' ಗ್ರಾಮದ ಶಾಸನದಲ್ಲಿ 'ಮೊದೂರುನಾಡು' ಪದದ ಮೊದಲ ಪ್ರಯೋಗವಾಗಿದೆ.[೨೭] ಈ ಪದ ಶಾಸನಗಳಲ್ಲಿ ಮೊದೂರುನಾಡು, ಮೋದುನಾಡು, ಮೊದುನಾಡು ಎಂದು ಬೇರೆ ಬೇರೆ ರೂಪಗಳಲ್ಲಿವೆ. ಮೊದೂರುನಾಡಿನ ಭೌಗೋಳಿಕ ವಿಸ್ತಾರ ಹಾಗೂ ಆ ನಾಡಿನೊಳಗಿದ್ದ ಹಳ್ಳಿಗಳನ್ನು ಶಾಸನಾಧಾರದಿಂದ ಹೀಗೆ ಗುರುತಿಸಲಾಗಿದೆ. ಈಗಿನ ಪಾಂಡವಪುರ ತಾಲ್ಲೂಕಿನಲ್ಲಿರುವ ಕನ್ನಂಬಾಡಿ, ಹಾಗಲಹಳ್ಳಿ, ಅರಳಗುಪ್ಪೆ, ಕಟ್ಟೇರಿ, ಬಸ್ತೀಹಳ್ಳಿ, ಮಲ್ಲೇನಹಳ್ಳಿ ಗ್ರಾಮಗಳು ಮೊದೂರುನಾಡಿನಲ್ಲಿದ್ದವು. ಕೆ.ಆರ್.ಪೇಟೆ ತಾಲ್ಲೂಕಿನ ಬಸ್ತಿ ಮಾಣಿಕದೊಡಲೂರು, ಮಾಲಿನಕೆರೆ ಗ್ರಾಮಗಳು ಮೊದೂರುನಾಡಿನ ವ್ಯಾಪ್ತಿಗೆ ಸೇರಿದ್ದವು. ಈ ಹೆಸರಿನ ಸ್ಥಳಗಳ ಆಧಾರದಿಂದ ಮೊದೂರುನಾಡಿನ ಎಲ್ಲೆ ಪಾಂಡವಪುರ ತಾಲ್ಲೂಕಿನಲ್ಲಿರುವ ಕನ್ನಂಬಾಡಿ ಗ್ರಾಮದಿಂದ ಕೃಷ್ಣರಾಜಪೇಟೆ ತಾಲ್ಲೂಕಿನ ಮೊದೂರು ಗ್ರಾಮದವರೆಗಿನ ಪ್ರದೇಶವಾಗಿತ್ತು.

ಪಾಂಡವಪುರ ತಾಲ್ಲೂಕಿನ ಚಿನಕುರಳಿ ಹೋಬಳಿಯಲ್ಲಿ 'ಸಣಬಿಮುಗುಳಿನಾಡು' ಎಂಬ ಆಡಳಿತ ಘಟಕವಾಗಿದ್ದುದಾಗಿ ಮೇಲುಕೋಟೆ ಶಾಸನ ತಿಳಿಸುತ್ತದೆ.[೨೮] ತೊಣ್ಣೂರುಕೆರೆಯ ಹಿನ್ನೀರಿನ ಪಕ್ಕದಲ್ಲಿ ಸಣಬ ಗ್ರಾಮವಿದ್ದು ಸಣಬಿ ಮುಗುಳಿಯ ನಾಡನ್ನು ವಿಜಯನಗರದ ಅರಸನಾದ ವಿರೂಪಾಕ್ಷನು ಆಳುತ್ತಿದ್ದನು. ಈತನು ತಿರುನಾರಾಯಣಪುರ (ಮೇಲುಕೋಟೆ) ನಾಚಿರಮ್ಮನಿಗೆ ಈ ನಾಡನ್ನು ದಾನ ನೀಡಿದ್ದ ವಿಷಯ ಮೇಲುಕೋಟೆಯ ಶಾಸನದಿಂದ ತಿಳಿಯುತ್ತದೆ.[೨೯] ಈ ನಾಡಿಗೆ ಕುಳಿಯಕೆರೆ ಗ್ರಾಮದ ಕಾಲುವಳಿಯಾದ ನಳಿನಹಳ್ಳಿ ಹಾಗೂ ಕುರುಕುಳವಂಪಾಡಿ ಗ್ರಾಮಗಳು ಸೇರಿದ್ದವು.

ಪುಗಿರಿನಾಟ್ಟು, ಪುಗಿರಿನಾಡು ಪದ ಪ್ರಯೋಗವು ಕ್ರಿ.ಶ. ೧೨೯೨ರ ಪಾಂಡವಪುರ ತಾಲ್ಲೂಕಿನ ಹೊಸಕೋಟೆಯ ಹೊಯ್ಸಳ ವೀರನಾರಸಿಂಹನ ಕಾಲದ ಶಾಸನದಲ್ಲಿ ಬಳಕೆಯಾಗಿದೆ. ಹೊಸಕೋಟೆ ಗ್ರಾಮಕ್ಕೆ ಯಾದವಪುರ ಎಂದು ಹೆಸರಿದ್ದುದಾಗಿಯೂ ಅದು ಪುಗಿರಿನಾಟ್ಟುವಿಗೆ ಸೇರಿದ್ದುದಾಗಿ ಹೊಸಕೋಟೆ ಶಾಸನದಿಂದ ತಿಳಿದುಬರುತ್ತದೆ. ಬೇರೆ ಎಲ್ಲಿಯೂ ಈ ನಾಡಿನ ಉಲ್ಲೇಖ ಇಲ್ಲದಿರುವುದರಿಂದ 'ಹೊಸಕೋಟೆ' ಗ್ರಾಮದ ಪ್ರದೇಶ 'ಪುಗಿರನಾಟ್ಟು' ಆಗಿತ್ತೆಂದು ಹೇಳಬಹುದು.[೩೦] ಪಾಂಡವಪುರ ತಾಲ್ಲೂಕಿನ ಮಾಳಾನಹಳ್ಳಿಯು ಕುರುಕ್ಕಿನಾಡಿನಲ್ಲಿತ್ತು. ಶಾಸನವು ಅದನ್ನು "ಕುರುಕ್ಕಿನಾಡ ಮಾಳೇನಹಳ್ಳಿ ಎಂದು ಸ್ಪಷ್ಟವಾಗಿ ಕರೆದಿದೆ.[೩೧]

ಮಳವಳ್ಳಿ ತಾಲ್ಲೂಕಿನ ಹಲವು ಶಾಸನಗಳು ಬಡಗೆರೆನಾಡು, ವಡಗೆರೆನಾಡು ಬಗ್ಗೆ ಬೆಳಕು ಚೆಲ್ಲುತ್ತವೆ. ವಡಕೆರೆನಾಡು ಅಥವಾ ಬಡಗುನಾಡು, ಬಡಗೆರೆನಾಡು ಅಂದರೆ ಉತ್ತರ ದಿಕ್ಕಿನ ನಾಡು[೩೨] ಮಳವಳ್ಳಿ ತಾಲ್ಲೂಕಿನ ಧನಗೂರಿನ ವೀರಭದ್ರ ದೇವಾಲಯದ ಹಿಂದೆ ಗಂಗದೊರೆ ಇಮ್ಮಡಿಬೂತುಗನ ಕಾಲದ ವೀರಗಲ್ಲು ಶಾಸನವು ಕ್ರಿ.ಶ. ೯೬೦ರ ಕಾಲಾವಧಿಯಾಗಿದ್ದು, ಈ ಶಾಸನದಲ್ಲಿ 'ಬಡಗೆರೆನಾಡೊಳಗಣ ಧನಗೂರು ಗ್ರಾಮವನ್ನು ಬಿಯಳಮ್ಮ ವ್ಯಕ್ತಿಗೆ ಕಲ್ನಾಡಾಗಿ ಕಿರುದೆರೆ ಇತ್ಯಾದಿಗಳ ಜೊತೆಗೆ ದತ್ತಯಾಗಿ ಕೊಟ್ಟನೆಂದು ಉಲ್ಲೇಖಿಸುತ್ತದೆ. ಬಡಗೆರೆನಾಡು ಪದದ ಉಲ್ಲೇಖ ಮೊದಲಿಗೆ ಈ ಶಾಸನದಲ್ಲಿ ಕಂಡುಬರುತ್ತದೆ.[೩೩] ಬಡಗೆರೆನಾಡನ್ನು ವಡಗೆರೆನಾಡು ಎಂದೂ ಕರೆಯಲಾಗುತ್ತಿದ್ದೆಂದು ಗಂಗಶ್ರೀಪುರುಷನ ಕ್ರಿ.ಶ. ೭೨೫–೮೮ರ ಶಾಸನದಿಂದ ಗೊತ್ತಾಗುತ್ತದೆ. ಪುರಗಾಲಿಯ ಹೊಲವೊಂದರಲ್ಲಿರುವ ಶ್ರೀಪುರುಷನ ಕಾಲದ ಶಾಸನವು ಉರಳಿವಿನ ಸಂದರ್ಭದಲ್ಲಿ ನಡೆದ ದಾಳಿಯಲ್ಲಿ ಅತ್ತಿಗಾಲದ ಚವುತ್ತರ್ ಎಂಬಾತ ಹೋರಾಡಿದುದನ್ನು ಉಲ್ಲೇಖಿಸುತ್ತದೆ. ವಡಗೆರೆನಾಡು ಮುನೂರು (೩೦೦) ಪ್ರದೇಶವನ್ನು ಕುನಸತ್ತಿ ಅರಸ ಆಳುತ್ತಿದ್ದನೆಂದು ತಿಳಿಯುತ್ತದೆ.[೩೪] ಕ್ರಿ.ಶ. ೮ನೇ ಶತಮಾನದ ಮಳವಳ್ಳಿಯ ಒಂದು ಶಾಸನವು ವಡಕೆರೆನಾಡಿನ ಪರ್ನಿವ ಗ್ರಾಮದ ೧೨ ಮಂದಿ ಒಂದು ದೇವಾಲಯವನ್ನು ನಿರ್ಮಿಸಿ ಕೊಂಕಣಿ ಕೆರೆಯನ್ನು ತೋಡಿದ ಮಾಹಿತಿ ನೀಡುತ್ತದೆ. ಇದರಿಂದ ಬಡಗೆರೆ ಅಥವಾ ವಡಗೆರೆನಾಡಿನ ಪ್ರಾಚೀನತೆಯನ್ನು ಕ್ರಿ.ಶ. ೮ನೇ ಶತಮಾನದಿಂದ ಗುರುತಿಸಬಹುದಾಗಿದೆ. ವಡಗೆರೆನಾಡು ಪದದ ಜೊತೆಯಿರುವ ೩೦೦ ಸಂಖ್ಯೆ ವಡಗೆರೆನಾಡಿನ ವ್ಯಾಪ್ತಿಯೊಳಗಿದ್ದ ಗ್ರಾಮಗಳ ಸಂಖ್ಯೆಯನ್ನು ತಿಳಿಸುತ್ತದೆ.

ಮಳವಳ್ಳಿ ತಾಲ್ಲೂಕಿನ ಆಲದಹಳ್ಳಿ, ಕಲ್ಕುಣಿ, ಕುಂದೂರು, ಗಣಿಗನೂರು, ಗಾಜನೂರು, ಚಿಕ್ಕಹೆಬ್ಬಾಗಿಲು, ಬಂಡೂರು, ಮಳವಳ್ಳಿ, ಮಾಗನೂರು ಮೊದಲಾದ ಗ್ರಾಮಗಳ ಸುತ್ತಮುತ್ತಲ ಪ್ರದೇಶ ಹಾಗೂ ಟಿ. ನರಸೀಪುರ ತಾಲ್ಲೂಕಿನ ಕಾರಗಹಳ್ಳಿ, ಕೊಳತೂರು, ತಲಕಾಡು, ಸೋಸಲೆ ಗ್ರಾಮಗಳು, ಮಂಡ್ಯ, ಮದ್ದೂರು ತಾಲ್ಲೂಕಿನ ಕೆಲವು ಗ್ರಾಮಗಳ ಸುತ್ತುವರಿದಂತಹ ಭೂ ಭಾಗವನ್ನು ಬಡಗೆರೆನಾಡು ಎಂದು ಕರೆಯಲಾಗುತ್ತಿದ್ದುದಾಗಿ ಶಾಸನಗಳಿಂದ ತಿಳಿದು ಬರುತ್ತದೆ.

ಕ್ರಿ.ಶ. ೧೧೮೩ ರ ಮಳವಳ್ಳಿ ತಾಲ್ಲೂಕಿನ ಕದವಳ್ಳಿಯ ಶಾಸನದಲ್ಲಿ ಬಡಗೆರೆನಾಡಿನ ಲಕ್ಕಿವೂರಿನ ಬಮ್ಮಗವುಂಡನ ಮಗ ಮಾದೆಗವುಂಡ ಸಾವನ್ನಪ್ಪಿದ ವಿವರವಿದೆ.[೩೫] ಮಳವಳ್ಳಿ ತಾಲ್ಲೂಕಿನ ಕ್ರಿ.ಶ. ೧೨೧೪–೧೫ರ ಒಂದು ಶಾಸನದಲ್ಲಿ ಬಡಗೆರೆನಾಡಿನ ಬಂಡೂರ ಗ್ರಾಮದ ಮೇಲೆ ಶತ್ರುಗಳು ಆಕ್ರಮಣ ಮಾಡಿ ಗೋವುಗಳನ್ನು ಅಪಹರಿಸುವ ಸಂದರ್ಭದಲ್ಲಿ ಬಂಡೂರಿನ ಶಿವರಾಚಯ್ಯನು ಶತ್ರುಗಳ ವಿರುದ್ಧ ಹೋರಾಡಿ ಸತ್ತ ವಿಷಯವಿದೆ.[೩೬] ಗಂಗರ ಶ್ರೀಪುರುಷನ ಕಾಲದಿಂದ ಹೊಯ್ಸಳ ಮೂರನೇ ಬಲ್ಲಾಳನ ಕಾಲದವರೆಗೆ ೭ ಶತಮಾನಗಳವರೆಗೆ ಬಡಗೆರೆ ನಾಡಿನ ಅಸ್ತಿತ್ವ ಕಂಡುಬರುತ್ತದೆ. ಇವರ ನಂತರದಲ್ಲಿ ಬಂದ ವಿಜಯನಗರದ ಅರಸರೂ ಇತರೆ ರಾಜರುಗಳು ಈ ನಾಡಿನ ಭಾಗವನ್ನು ಆಳಿದ್ದರೂ ಅವರ ಶಾಸನಗಳಲ್ಲೇಲ್ಲೂ ಈ ನಾಡಿನ ಹೆಸರಿನ ಉಲ್ಲೇಖವಿಲ್ಲ. ಮಳವಳ್ಳಿ ಆಗಿನ ಬಡಗೆರೆನಾಡಿನ ಒಂದು ಊರಾಗಿತ್ತು ಎಂಬುದು ತಿಳಿದು ಬರುತ್ತದೆ.

೧೮ನೇ ಶತಮಾನದ ನಂತರ ಆದ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳು ನಾಡುಗಳ ಮಹತ್ವವನ್ನು ತಗ್ಗಿಸಿದವು. ೭–೮ನೇ ಶತಮಾನದ ನಂತರ ಕೃಷಿ ಗುಂಪುಗಳು ಒಂದೆಡೆ ನೆಲೆ ನಿಂತು ವ್ಯವಸಾಯದಲ್ಲಿ ತೊಡಗಿದುದನ್ನು ಸೂಚಿಸಲು ನಾಡುಪದ ಬಳಕೆಯಾಗುತ್ತಿತ್ತು. ಸಣ್ಣ ರೈತ ಗುಂಪುಗಳ ಸಹಕಾರ ಮತ್ತು ಸಂಬಂಧಗಳ ತಳಪಾಯದ ಮೇಲೆ ರಚಿತವಾಗಿದ್ದ ನಾಡುಗಳ ಸಾಮಾಜಿಕ ವ್ಯವಸ್ಥೆ ಕ್ರಮೇಣ ಇವರ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳ ಹಿನ್ನಲೆಯಲ್ಲಿ ತನ್ನ ವಿಶಿಷ್ಠತೆಯನ್ನು ಕಳೆದುಕೊಂಡಿತು. ಕೃಷಿಯ ಪ್ರಗತಿಯಿಂದಾಗಿ ವ್ಯಾಪಾರ ಹಾಗೂ ಇತರೆ ಕಸುಬುಗಳು ವೃದ್ದಿಹೊಂದಿ ಕೃಷಿಯೇತರ ಆರ್ಥಿಕ ಚಟುವಟಿಕೆ ಪ್ರಾಬಲ್ಯ ಸಾಧಿಸಿತು. ಆರಂಭದಲ್ಲಿ ಕೃಷಿ ಗುಂಪುಗಳು ನೆಲೆನಿಂತ ಪ್ರದೇಶಗಳನ್ನು ಸೂಚಿಸಲು ನಾಡುಪದ ಬಳಕೆಯಾಗುತ್ತಿತ್ತು. ಆದರೆ ಕ್ರಮೇಣ ಗ್ರಾಮಗಳು ತಮ್ಮದೇ ಆದ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನವನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾದವು. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ನಾಡಿಗೆ ಬದಲಾಗಿ ಗ್ರಾಮಗಳು ಹೆಚ್ಚು ನಿರ್ದಿಷ್ಟ ಹಾಗೂ ಸ್ಪಷ್ಟ ಘಟಕಗಳಾಗಿ ಹೊರಹೊಮ್ಮಿದವು. ೧೩ನೇ ಶತಮಾನದ ವೇಳೆಗೆ ಹೊಯ್ಸಳ ಅರಸರ ರಾಜಕೀಯ ಸೈನಿಕ ಸೇನೆಯಲ್ಲಿದ್ದ ಅಧಿಕಾರಿಗಳು ನಾಡುಗಳ ಮೇಲೆ ಹತೋಟಿ ಸಾಧಿಸಿ ಕಂದಾಯ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸಿ, ಈ ಕಾರ್ಯಕ್ಕಾಗಿ ಅಧಿಕಾರಿಗಳನ್ನು ನೇಮಿಸಿದರು. ಇದರಿಂದಾಗಿ ಸ್ಥಳೀಯ ಕಂದಾಯ ಹಾಗು ತೆರಿಗೆ ವ್ಯವಸ್ಥೆಯ ಮೇಲೆ ಸ್ಥಳೀಯ ನಾಡಿನ ಮುಖಂಡರಿಗಿದ್ದ ಹತೋಟಿ ತಪ್ಪಿಹೋಯಿತು. ಕ್ರಮೇಣ ನಾಡುಪದವು ತನ್ನ ವಿಶಿಷ್ಟ ಅರ್ಥವನ್ನು ಕಳೆದುಕೊಂಡಿತು.

ಅಡಿಟಿಪ್ಪಣಿಗಳು

೧. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೩೪೨.
೨. E.C.VII.Md.35.P.219.226
೩. E.C.VII.Md.34.P.217.218
೪. E.C.VI.PP.231.P.
೫. E.C.VII.Md.63.P.241
೬ E.C.VII.Mu.66.P.291.292
೭. ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಹಂಪಿ, ಪುಟ ೩೦೨, ೩೦೩.
೮. E.C. VII, Ml. 28, P. 362, 363.
೯. E.C.VII.Mu.115, P. 325.
೧೦. ಗೋಪಾಲ್ ಆರ್ (ಸಂ.) ೨೦೦೮, ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು, ಪುಡ ೨೭೮.
೧೧. E.C.VII.Ml. 28, P. 362, 363.
೧೨. E.C.VII.Mu.54, P. 282, 284.
೧೩. E.C.VII.Mu.103, P. 317, 318.
೧೪. E.C.VII.Md. 81, P. 250.
೧೫. E.C.VII.Ml. 50, P. 377.
೧೬. E.C.VII.Mu.120, P. 327.
೧೭. E.C.VII.Mu. 98, P. 312.
೧೮. E.C.VII.Md. 14, P. 199.
೧೯. E.C.VI.Kr.110, P. 98.
೨೦. E.C.VI.Kr.77, 78, 79, 39 & 112.
೨೧. E.C.VII.Ng.167, P. 164.
೨೨. E.C.VI.Sr. 67, P. 399.
೨೩. E.C.VI.Sr.113, P. 427.
೨೪. E.C.VII.Md. 68, P. 244, 245.
೨೫. E.C.VII.Md. 51, P. 233.
೨೬ ಧನರಾಜ್ ಎಸ್.ಎಂ., ೨೦೧೧, ಪಾಂಡವಪುರ ತಾಲ್ಲೂಕಿನ ನಾಡುಗಳು–ಶೋಧಭಾರತಿ, ಸಂ. ೧, ಸಂಚಿಕೆ ೧, ಭಾರತಿ ಕಾಲೇಜು, ಭಾರತೀನಗರ, ಮಂಡ್ಯ ಜಿಲ್ಲೆ, ಪು. ೨೪.
೨೭. E.C.VI.Kr.107, P. 96.
೨೮. E.C.VI.PP. 163, P. 247.
೨೯. E.C.VI.PP. 163, P. 248.
೩೦. E.C.VI.PP. 225, P. 306.
೩೧. E.C.VI.PP. 20, P. 120.
೩೨. E.C.VII.Ml. 50, P. 379.
೩೩. E.C.VII.Ml. 50, P. 352.
೩೪. E.C.VII.Ml.122, P. 419.
೩೫. E.C.VII.Ml. 127, P. 423.
೩೬ E.C.VII.Ml. 8, P. 352.

೫೮

ಕುಮ್ಮಟ ದುರ್ಗದ ಅರಸ ಕಂಪಿಲದೇವನ ಕಾಲದ ಮೂರು ವೀರಗಲ್ಲು ಶಾಸನಗಳ ಓದುವಿಕೆ-ಒಂದು ಜಿಜ್ಞಾಸೆ

ವಿ.ಪಿ. ಗುರುಶಾಂತ್*

ಆನೆಗೊಂದಿಯ ಪರಿಸರದ ಹಳೆ ಕುಮ್ಮಟದ ಕುಮಾರ ರಾಮನ ಕಣಿವೆಯ ದಕ್ಷಿಣ ಭಾಗದ ಎಮ್ಮೆಗುಡ್ಡದ ಬಳಿ ಕುಮ್ಮಟದುರ್ಗದ ಪ್ರಸಿದ್ಧ ಅರಸ ಕಂಪಿಲದೇವನಗೆ ಸಂಬಂಧಪಟ್ಟ ಕ್ರಿ.ಶ. ೧೩೧೫ರ ವೀರಗಲ್ಲು ಶಾಸನವನ್ನು ಪತ್ತೆ ಮಾಡಿದ ವಿದ್ವಾಂಸರು ಕಮ್ಮಟದುರ್ಗದ ಅರಸು ಮನೆತನಕ್ಕೆ ಸಂಬಂಧಿಸಿದ ಇತಿಹಾಸದ ಹೊಸ ವಿಚಾರವನ್ನು ಈ ಮೂಲಕ ಹೊರತಂದಿದ್ದರು. (ಜಿ. ವರದರಾಜರಾವ್, ಬಿ.ಆರ್. ತುಬಾಕಿ ಮತ್ತು ಸೀತಾರಾಮ ಜಾಗಿರ್ದಾರ್‌ರವರ "ಕುಮ್ಮಟದುರ್ಗದ ಒಂದು ಹೊಸ ಶಾಸನ-ಕರ್ನಾಟಕ ಚರಿತ್ರೆಯ ಮೇಲೆ ಹೊಸ ಬೆಳಕು" 'ಮಾನವಿಕ ಕರ್ನಾಟಕ' ೧೬ನೇ ಸಂಪುಟದ ಸಂಚಿಕೆ ೨, ಮೈಸೂರು ವಿಶ್ವವಿದ್ಯಾಲಯ, ಪುಟ ೧೨೫-೧೩೦)

ಕುಮ್ಮಟದ ಈ ಶಾಸನದ ಪಾಠವನ್ನು ಓದಿ, ಅರ್ಥೈಸಿ ಕುಮ್ಮಟದ ಎರಡನೇ ಅರಸ ಕಂಪಿಲದೇವನು ಹೊಯ್ಸಳರ ಒಂದು ಶಾಖೆಗೆ ಸೇರಿದವನೆಂದು ತಿರ್ಮಾನಿಸಿದ್ದ, ಆ ಶಾಸನದ ಅವರ ಓದು ಈ ಪ್ರಕಾರವಾಗಿದೆ:

೧ "ಸ್ವತ್ತಿ ಶ್ರೀ ಯಾಧವ ನಾರಾಯಣ ಭುಜಭಳ ಪ(ರಾ)

೨ ಕ್ರಮ ಪ್ರತಾಪ ಚಕ್ರವರ್ತಿ ಶ್ರೀಮನು ಮಹಾಮಂಡಲಿಕ ಹೊ

೩ ಯ್ಯಸ (ಣ) ವೀರ ಕಂಪಿಲದೇವನು ಕುಮ್ಮಟದಲ್ಲಿ ರಾಜ್ಯಂಗೆಯು

೪ ..... ೧೨೨೮ನೇ ರಾಕ್ಷಸ ಸಂವ್ವಚರದ ಜೇಷ್ಟ . . . . .

೫ . . . . . ಸುರತಾಣ . . . . . ನೇಮಿಸಹಿತ ಬಂದಲ್ಲಿ ತುಳುವಯೆ

೬ . . . . . . ಗದೆ ಸಿಂಗನಾಯ್ಕರ ತಂಮ ರಾಮನಾಯ್ಕನು ರಣದಲಿ ಹೊ

೭ ಯ್ದಾಡಿ ಬಿದ್ದನು ಹತನ ಅಕ್ಕ ಅಳಿಯಂದಿರು ಯಿಕ್ಕಿಸಿದ ವೀರಗ-

೮ ಲ್ಲು ಬರದಾತ ಮೈದುನ ಮಾದೆಯಹೆಗ್ಗಡೆ ಮಂಗಳ ಮಹಾ* ಶ್ರೀ ಶ್ರೀ"

ಪ್ರಾಚ್ಯ ಇಲಾಖೆಯ ಅಧಿಕಾರಿಗಳಾಗಿದ್ದ ಚನ್ನಬಸಪ್ಪ ಎಸ್. ಪಾಟೀಲರು ಕುಮ್ಮಟದಲ್ಲಿ ಆ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿದಾಗ ಮೇಲೆ ಉಲ್ಲೇಖಿಸಿದ ಮೊದಲನೇ ಶಾಸನದ ಸಮೀಪದಲ್ಲಿ ಅದೇ ಕಂಪಿಲದೇವನಿಗೆ ಸಂಬಂಧಿಸಿದ ಅದೇ ಕ್ರಿ.ಶ. ೧೩೧೫ರ ಕಾಲದ ಇನ್ನೊಂದು ವೀರಗಲ್ಲು ಶಾಸನ ಪತ್ತೆ ಮಾಡಿದ್ದು, ಅದರ ಪಾಠ ಓದಿದಾಗ ಈ ಎರಡು ಶಾಸನಗಳಿಗೆ ಪರಸ್ಪರ ಸಂಬಂಧವಿರುವುದು ಕಂಡುಬಂದಿತು. ಮೊದಲು ಪತ್ತೆಯಾದ ಶಾಸನದ ಪಾಠ ಓದಿದ್ದ ಸೀತಾರಾಮ ಜಾಗಿರ್ದಾರ್ ತಂಡದವರ ಓದಿನಲ್ಲಿ ಮತ್ತು ಅರ್ಥೈಸುವಿಕೆಯಲ್ಲಿ ವ್ಯತ್ಯಾಸಗಳು ಕಂಡುಬಂದಿತ್ತು. ಪಾಟೀಲರುಆನೆಗೊಂದಿ ಕ್ಷೇತ್ರದ ಸಂಶೋಧನಾ ಕಾರ್ಯದಲ್ಲಿ ಆ ಶಾಸನದ ಪಾಠವನ್ನು ಮರು ಓದಿಗೆ ಒಳಪಡಿಸಿ; ಆ ಶಾಸನದ ಪಾಠವನ್ನುಪರಿಷ್ಕರಿಸಿತಮ್ಮ ವರದಿಯನ್ನು ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್: (ವಿಪಿಆರ್) ೧೯೮೭-೧೯೮೮ರಲ್ಲಿ 'ಕುಮ್ಮಟ'ಎಂಬ ಲೇಖನವನ್ನು ಬರೆದು ಆ ಗ್ರಂಥದ ಪು ೨೧೧-೨೧೨ರಲ್ಲಿ ಪ್ರಕಟಿಸಿದ್ದಾರೆ.ಅವರು **ಪರಿಷ್ಕರಿಸಿದ ಶಾಸನದ ಪಾಠ** ಹಂಪಿಯ ಕನ್ನಡ ವಿವಿ ಪ್ರಕಟಿಸಿರುವ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಎಪಿಗ್ರಾಫಿಕಲ್ ಸೀರಿಸ್ IIರ ಪುಟ ೧೫೭ ಕ್ರಮಸಂಖ್ಯೆ ೧೬೪ ರಲ್ಲಿ ಪ್ರಕಟಗೊಂಡಿದೆ. ಅದು ರೀತಿ ಇದೆ.

೧ "ಸ್ವಸ್ತಿ ಶ್ರೀಯಾದವ ನಾರಾಯಣ ಭುಜಬಳ ಮ

* # ೩೦೭, ಜಿ೨ ಗೆಲಾಕ್ಸಿ ಅಪಾರ್ಟ್‌ಮೆಂಟ್, ಶ್ರೀನಿವಾಸಪುರ ಮುಖ್ಯರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು-೯೮. ಮೊ. ೯೯೦೧೧೨೩೯೧೧

೨ . . . . . ಳ ಪ್ರತಾಪ ಚಕ್ರವರ್ತಿ ಶ್ರೀಮನು ಮಹಾನಾಯಕಾ
ಚಾ. . . . .

೩) ರ್ಯ ಶ್ರೀ ವೀರ ಕಂಪಿಲದೇವನು ಕುಮ್ಮಟದಲಿ
ರಾಜ್ಯಂಗೆಯು

೪) . . . . . ೧೨೨೮ನೇ ರಾಕ್ಷಸ ಸವ್ವಂಚರದ ಜೇಷ್ಟ
ಶು . . . . .

೫) . . . . . ಸುರತಾಣ . . . . ನೇಮಿ ಸಹಿತ ಬಂದಲ್ಲಿ
ತುಳವಯೆ

೬) . . . . ಗದೆ ಸಿಂಗನಾಯ್ಕರ ತಂಮ ರಾಮನಾಯ್ಕನು
ರಣದಲಿ ಹೊ

೭) ಯ್ದಾಡಿ ಬಿದ್ದನು ಹತನ ಅಕ್ಕ ಅಳಿಯಂದಿರು ಯಿಕ್ಕಿಸಿದ
ವೀರಗ

೮) ಲ್ಲು ಬರದಾತ ಮೈದುನ ಮಾದೆಯಹೆಗ್ಗಡೆ ಮಂಗಳ
ಮ (ಹಾ*) ಶ್ರೀ ಶ್ರೀ ಎಂದಿದೆ.

ಜಿ. ವರದರಾಜಾರಾವ್ ಮತ್ತು ತಂಡದವರ ಓದಿನಂತೆ ಆ ಶಾಸನದ ಮೊದಲ ಸಾಲಿನ ಕೊನೆಯ ಎರಡು ಅಕ್ಷರಗಳಾದ 'ಪ (ರಾ)' ಎರಡನೇ ಸಾಲಿನ ಮೊದಲ ಪದ "ಕ್ರಮ" ಮತ್ತು ಕೊನೆಯ ಅಕ್ಷರ 'ಹೊ' ಅಕ್ಷರಹಾಗೂ ಮೂರನೇ ಸಾಲಿನ ಮೊದಲ ಅಕ್ಷರಗಳಾದ 'ಯ್ಯಸ(ಣ) ಪಾಟೀಲರ ಓದಿನಲ್ಲಿ ಕ್ರಮವಾಗಿ 'ಮ' ಮತ್ತು 'ಳ'ಗಳು ಹೊಸಪದವಾಗಿ'ಮಹಾನಾಯಕಾಚಾರ್ಯ' ಎಂದಾಗಿದೆ.

ಪಾಟೀಲರ ಪರಿಷ್ಕೃತ ಓದಿನ ಪರಿಣಾಮವೆಂದರೆ ಆ ಶಾಸನದ ಪಾಠದ ಮೊದಲ ಓದಿನಲ್ಲಿದ್ದ 'ಮಹಾಮಂಡಲಿಕ' ಮತ್ತು ಹೊಯ್ಯಸ(ಣ) ಎಂಬ ಎರಡು ಪದಗಳು ಇಲ್ಲದಂತಾಗಿವೆ. ಅವನ ಇತರ ಬಿರುದುಗಳ ಜೊತೆಗೆ ಪಾಟೀಲರ ಓದಿನಿಂದ ಕಂಪಿಲದೇವನು 'ಮಹಾನಾಯಕಚಾರ್ಯ'ನೆಂದಾಗಿದ್ದು ಅವನು 'ಹೊಯ್ಯಸ(ಣ)' ಅಂದರೆ 'ಹೊಯ್ಸಳ' ಎಂದಾಗುವುದಿಲ್ಲ. ಅಂತಿಮವಾಗಿ ಮೊದಲ ಓದಿನಂತೆ ಕಂಪಿಲದೇವನು 'ಮಹಾಮಂಡಲಿಕ' ನಾಗಿರಲಿಲ್ಲ ಮತ್ತು ಹೊಯ್ಸಸ(ಣ) ಅಂದರೆ 'ಹೊಯ್ಸಳ'ನಾಗಿರಲಿಲ್ಲವೆಂದು ಕಂಡುಬರುತ್ತದೆ.

ಸೀತಾರಾಮ ಜಾಗಿರ್‌ದಾರ ತಂಡದವರು ಓದಿದ್ದ ಶಾಸನದ ಭಾಗವಾದ 'ಮಂಡಲಿಕ' ಮತ್ತು 'ಹೊಯ್ಸಸ(ಣ)'ಎಂಬ ಎಂಟು ಅಕ್ಷರಗಳ ಎರಡು ಪದಗಳು; ಪಾಟೀಲರು ಪರಿಷ್ಕರಿಸಿ ಓದಿದಾಗ ಆ ಶಾಸನದ ಆ ಭಾಗದಲ್ಲಿ ಆ ಎಂಟು ಅಕ್ಷರಗಳನ್ನು ಕಂಡರಿಸಲು (ಬರೆಯಲು) ಸ್ಥಳದ ಅವಕಾಶ ಇರಲಿಲ್ಲವೆಂದು ಕಂಡುಬಂದಿದೆ. ಈ ವಿಷಯ ಡಾ. ಸಿ. ಮಹಾದೇವರವರು 'ಕುಮ್ಮಟದುರ್ಗದ ಅರಸರು' ಎಂಬ ತಮ್ಮ ಸಂಶೋಧನಾ ಕೃತಿಯ ಪುಟ ೩ರಲ್ಲಿಯೂ ತಿಳಿಸಿದ್ದು, ಅಲ್ಲಿ ಐದು ಅಕ್ಷರಗಳನ್ನು ಮಾತ್ರ ಕೊರೆಯಲು ಸಾದ್ಯವೆಂದು ತಿಳಿಸಿದ್ದಾರೆ. ಅಂತಿಮವಾಗಿ ಮೇಲೆ ತಿಳಿಸಿರುವ ಪರಿಷ್ಕೃತ ಓದಿನ ವಿವರಗಳು ಮತ್ತು ವಾಸ್ತವತೆಯ ಆಧಾರದಿಂದ,ಕುಮ್ಮಟದ ಅರಸ ಕಂಪಿಲದೇವನು ಆ ಶಾಸನಕ್ಕೆ ಸಂಬಂಧಪಟ್ಟ ಕಾಲದಲ್ಲಿ ಮಹಾಮಂಡಲಿಕನಾಗಿರದೇ **'ಪ್ರತಾಪಚಕ್ರವರ್ತಿ'** ಮತ್ತು **ಮಹಾನಾಯಕಚಾರ್ಯನಾಗಿದ್ದು,** ಅವನು 'ಹೊಯ್ಸಸ(ಣ) ಅಂದರೆ ಹೊಯ್ಸಳನೂ ಆಗಿರಲಿಲ್ಲವೆಂದು ಕಂಡುಬರುತ್ತದೆ.

ಇವುಗಳ ಜೊತೆಗೆ ಪಾಟೀಲರಿಗೆ ಮೊದಲನೇ ಶಾಸನ ಪತ್ತೆಯಾದ ಸ್ಥಳದ ಸಮೀಪದದಲ್ಲೇ ಅದೇ ಕ್ರಿ.ಶ. ೧೩೧೫ರ ಇನ್ನೊಂದು ವೀರಗಲ್ಲು ಶಾಸನ ದೊರಕಿದ್ದು, ಅದರಲ್ಲಿ ಕಂಪಿಲದೇವನನ್ನು 'ನಾಯಕಾಚಾರ್ಯ'ನೆಂದೇ ಕರೆದಿದ್ದು, 'ಹೊಯ್ಯಸಣ'ಪದ ಇಲ್ಲದಿರುವುದನ್ನು ಗಮನಿಸಬಹುದು. ಆದ್ದರಿಂದ ಜಿ. ವರದರಾಜಾರಾವ್ ತಂಡದವರು ಹೇಳಿರುವಂತೆ ಕಂಪಿಲದೇವನು ಹೊಯ್ಸಳವಂಶದ ಒಂದು ಶಾಖೆಗೆ ಸೇರಿದವನೆಂದಾಗುವುದಿಲ್ಲ.

ಕಂಪಿಲನಿಗೂ ಹೊಯ್ಸಳರಿಗೂ ನಡೆದ ಯುದ್ದಗಳು ರಾಜ್ಯದಾಹದಿಂದ ನಡೆದವು ಎಂದುಮೊದಲಿಗೆ ಹೇಳಿದ್ದ ಸೀತಾರಾಮ ಜಾಗಿರ್ದಾರ್ ತಂಡದವರ ನಂತರದ ಹೇಳಿಕೆಯಂತೆ ಆ ಯುದ್ದಗಳು ನಡೆದದ್ದು, ಅವರುಗಳು ಬಂದುಗಳಾಗಿದ್ದರೆಂಬ ಕಾರಣಕ್ಕೆ ಎಂದಿರುವುದು ವೈರುದ್ಯದ ಹೇಳಿಕೆಯಾಗಿದೆ. ಜೊತೆಗೆ ಕುಮ್ಮಟ ರಾಜ್ಯಕ್ಕೆ ಇಬ್ಬರೇ ಅರಸರಿದ್ದು, ಅವರು ತಾವು ಹೊಯ್ಸಳ ವಂಶಕ್ಕೆ ಸೇರಿದವರೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ದಕ್ಷಿಣ ಭಾರತದ ಕೆಲವು ರಾಜವಂಶಗಳು ೧೦-೧೧-೧೨ನೇ ಶತಮಾನಗಳಲ್ಲಿ ಈ ರೀತಿಯ ಪ್ರಸಿದ್ಧ ಮತ್ತು ಪ್ರಬಲ ರಾಜ ವಂಶಗಳ ಸಂಬಂಧ ಕಲ್ಪಿಸಿಕೊಂಡದ್ದು, ಕೇವಲ ಭವ್ಯತೆ ಮೆರೆಯುವ ಸಂಕೇತವೆಂದು ಪ್ರಸಿದ್ಧ ಚರಿತ್ರಾಕಾರರಾದ ಪ್ರೊ. ವಿಲಿಯಂ ಕೊಯೆಲ್ಹೋ ಹೇಳಿದ್ದು, ಅದು ಚಾರಿತ್ರಿಕವಲ್ಲವೆಂದು ತಿಳಿಸಿದ್ದಾರೆ. ಹೊಯ್ಸಳರೂ ಸಹ ಕುಮ್ಮಟದ ಅರಸರು ತಮ್ಮ ಸಂಬಂಧಿಗಳೆಂದೂ ಎಲ್ಲಿಯೂ ಹೇಳಿಕೊಂಡಿಲ್ಲ.

ಹೊಯ್ಸಳರು ಮತ್ತು ಕಂಪಿಲ ಇವರ ಮಧ್ಯೆ ನಡೆದ ಕೆಲವು ಯುದ್ದಗಳಸಂಕ್ಷಿಪ್ತ ವಿವರಗಳು

ಕ್ರಿ.ಶ. ೧೩೨೦ರಲ್ಲಿ ಹೊಯ್ಸಳ ಮೂರನೇ ಬಲ್ಲಾಳನು ಕಂಪಿಲದೇವನ ದೊರೆವಾಡಿಯ ಮೇಲೆ ದಾಳಿ ಮಾಡುತ್ತಾನೆ. ಅಗ ಬಲ್ಲಾಳನ ಸೇನಾಧಿಪತಿ ಕುರುಕನಾಯಕ ಯುದ್ದದಲ್ಲಿ ಮಡಿದು ಹೊಯ್ಸಳರನ್ನು ಹಿಮ್ಮೆಟ್ಟಿಸಲಾಗಿದೆಯೆಂದು ಕಂಡುಬರುತ್ತದೆ. (ಎಕ ೭ ನಗರ ೧೯ (ಹೊಸ) ನಗರ).

ಕ್ರಿ.ಶ. ೧೩೨೩ರಲ್ಲಿ ಮೂರನೇ ಬಲ್ಲಾಳನು ಕಂಪಿಲದೇವನ ಮೇಲೆ ಮತ್ತೆ ದಾಳಿ ಮಾಡುತ್ತಾನೆ. ಈ ಯುದ್ದದಲ್ಲಿ ಮೂರನೇ ಬಲ್ಲಾಳನ ಅಧಿಕಾರಿ ಬಯಿಚಬೋವನು ಮಡಿಯುತ್ತಾನೆ. ಈ ವಿಷಯಗಳ ಉಲ್ಲೇಖ (ARSIE 1943-44 NO. 75) ರಲ್ಲಿದೆ.

ಕ್ರಿ.ಶ. ೧೩೨೫ರಲ್ಲಿ ಕಂಪಿಲದೇವನು, ಹೊಯ್ಸಳ ರಾಜ್ಯ ಪ್ರವೇಶಿಸಿ ಹೊಯ್ಸಳರ ಮೇಲೆ ಯುದ್ದ ಮಾಡಿಹುಳಿಯಾರಿನ ಹೊಯ್ಸಳರ ಸಾಮಂತನನ್ನು ಸೋಲಿಸಿದ್ದು ಅವನು ತನ್ನ ರಾಜ್ಯಕ್ಕೆ ಹಿಂದಿರುಗಿ ಬರುವ ದಾರಿಯಲ್ಲಿ ಮೊಲಲೂರಿನ ಬಳಿ ಹೊಯ್ಸಳರ ವಿರುದ್ಧ ಯುದ್ದ ಮಾಡುತ್ತಾನೆ. ಆಗ ಹೊಯ್ಸಳರ ದಂಡನಾಯಕನ ಕಿರಿಯ ಸಹೋದರ ಜಕ್ಕಿನಾಯಕ ಮಡಿಯುತ್ತಾನೆ ಎಂಬ ವಿಷಯ ಎಕ ೧೧ ಹಿರಿಯೂರು ೧೬ನೇ ಶಾಸನದಲ್ಲಿ ದಾಖಲಾಗಿದೆ. ಈ ಶಾಸನದಲ್ಲಿ ಕಂಪಿಲದೇವನನ್ನು ಕಂಬಲನೆಂದು ಕರೆಯಲಾಗಿದೆ. ಅದೇ ಕ್ರಿ.ಶ. ೧೩೨೫ರಲ್ಲಿ ಹೊಯ್ಸಳರಿಗೂ ಕುಮ್ಮಟ ಅರಸರಿಗೂ ನಡೆದ ಯುದ್ದದಲ್ಲಿ ಹೊಯ್ಸಳರ ಇನ್ನೊಬ್ಬ ಪ್ರಮುಖ ವ್ಯಕ್ತಿ ಮಡಿಯುತ್ತಾನೆ (ಉಲ್ಲೇಖ-ಎಕ ೧೨ ತಿಪಟೂರು ೨೪). ಇದರಿಂದ ಹೊಯ್ಸಳ ಮೇಲೆ ಕಂಪಿಲದೇವನು ಮೇಲ್ಗೈ ಸಾಧಿಸಿದ್ದನ್ನು ತಿಳಿಸುತ್ತವೆ.

ಮೇಲೆ ತಿಳಿಸಿರುವ ಶಾಸನೋಕ್ತ ಮತ್ತು ಇತರ ವಿವರಗಳು ಪರೋಕ್ಷವಾಗಿಯೂ, ಕಂಪಿಲದೇವ ಮತ್ತು ಹೊಯ್ಸಳರು ಸಂಬಂದಿಕರೆಂದು ತಿಳಿಸುವುದಿಲ್ಲ.

ಸೀತಾರಾಮ ಜಾಗಿರ್ದಾರ್ ತಂಡದವರು ಕುಮ್ಮಟದ ಅರಸರು ಮತ್ತು ಮೂರನೇ ಬಲ್ಲಾಳ ದಾಯಾದಿಗಳೆಂಬ ತಮ್ಮ ಅಭಿಪ್ರಾಯದ ಸಮರ್ಥನೆಗೆ ಹೆಚ್ಚು ಒತ್ತುಕೊಟ್ಟಿರುವುದು ಕ್ರಿ.ಶ. ೧೩೨೩ರ ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲ್ಲೂಕಿನ ರಾಮಘಡದ ರಾಮಸ್ವಾಮಿ ದೇವಾಲಯದ ವೀರಗಲ್ಲು ಶಾಸನ. ಆ ಶಾಸನದ ಪಾಠ ಈ ರೀತಿ ಇದೆ.

೧ "ಶ್ರೀಮನು (ದುನ್ದುಭಿ) ಸಂವತ್ಸರದ ಫಾಲ್ಗುಣ ಸುದ್ದ ೧೫ (ಸೋಮ) ವಾರದಲು ಶ್ರೀ ವೀರಕಂದಿ

೨ ಲಿದೇವನ ಮೇಲೆ ಬಲ್ಲಾಳ ರಾಯನು (ದಂಡೆತ್ತಿ) ಬಂದಲು ಯಿಬ್ಬರು ದಾಯದ ದಂಡಿನೊ

೩ ಳಗೆ ದಂಡಿನ ಬಯಿಚಯ್ಯನು ಆ ಸಮರಂಗದ ಕಟ್ಟಿನಲ್ಲಿ ಹೊಕ್ಕು ಆ ಕಂಪಿಲದೇವನು

೪ ಬಯಿ (ಚ) ಬೋವನ ಕುದಿರೆ(ಯ)ನು **ಯೇರಿದೆಂಡೆ** ಆ ಬಯಿಚಬೋವನು ಸಮರಂಗದ ಕಟ್ಟಿ

೫ (ನಲ್ಲಿ) ತಿರುಗಿ ಹಾರಿ ಹೊಯಿದಾಡಿ ಬಿದ್ದನು"

ಈ ಶಾಸನದಲ್ಲಿ ಒಂದು ಎರಡು ಮತ್ತು ಮೂರನೇ ಸಾಲುಗಳಲ್ಲಿರುವ ಪದಗಳಾದ 'ಬಲ್ಲಾಳರಾಯನು (ದಂಡೆತ್ತಿ) ಬಂದಲಿ**'ಯಿಬ್ಬರು ದಾಯದ ದಂಡಿನೊಳಗೆ'** ದಂಡಿನ ಬಯಿಚಯ್ಯನು ಆ ಸಮರಂಗದ ಕಟ್ಟಿನಲ್ಲಿ ಹೊಕ್ಕು ಆ ಕಂಪಿಲದೇವನು ಬಯಿಜಭೋವನ ಕುದುರೆಯನ್ನು ಯೇರಿದಂಡೆ ಆ ಬಯಿಚಭೋವನ ಸಮರಂಗದ ಕಟ್ಟಿನಲಿ ಎಂಬ ಪದಗಳಿಂದ ಈ ರೀತಿ ತೀರ್ಮಾನಿಸಿದ್ದಾರೆ. ಈ ಕಂಪಿಲದೇವ ಮತ್ತು ಬಲ್ಲಾಳರಾಯ 'ದಾಯಾದಿ'ಗಳು ಎಂದು ತೀರ್ಮಾನಿಸಿದ್ದಾರೆ. **ಈ ಪದಗಳನ್ನು ಸಾಂಧರ್ಬಿಕವಾಗಿ ಯುದ್ದದ ಘಟನೆಗಳ ತೀವ್ರತೆಯನ್ನು ತಿಳಿಸುವ ಪದಗಳು ಹೌದು ಮತ್ತು ಅದೊಂದು ಸಾಧ್ಯತೆ.**

ಆದರೆ ಇಲ್ಲಿ 'ದಾಯದ' ಎಂಬ ಪದ ಮಹಾಭಾರತದಲ್ಲಿ ನಿಜವಾದ ಪಿತೃ ಮತ್ತು ರಕ್ತ ಸಂಬಂಧದ ದಾಯಾದಿಗಳಾದ **ಕೌರವರ ದುರ್ಯೋಧನ ಮತ್ತು ಪಾಂಡವರ ಧರ್ಮರಾಯನಿಗೂ ನಡೆದ ಪಗಡೆ ಆಟದ ತೀವ್ರತೆಯ ಬಣ್ಣನೆಗೆ ಹೋಲಿಸಿದಂತೆ** ಇದೆ. ಈ ವಿಷಯ ಕಿಟ್ಟೆಲ್ ಮತ್ತು ಕನ್ನಡ ಸಾಹಿತ್ಯ ಪರಿಷತ್‌ನ ೧೯೭೫ ಮತ್ತು ಸಮಗ್ರ ಕನ್ನಡ ನಿಘಂಟಿನ 'ದಾಯದ' ಪದದ ವಿವರಗಳಿಂದ ತಿಳಿದುಬರುತ್ತದೆ.ಜಿ.ವರದರಾಜ್ ತಂಡದವರು 'ದಾಯದ' ಎಂಬ ಈ ಒಂದು ಪದವನ್ನು ಯಾವ ಆಧಾರವೂ ಇಲ್ಲದೆ 'ದಾಯಾದಿ' ಎಂದು ಅರ್ಥೈಸಿರುವುದಕ್ಕೆ ಸೂಕ್ತ ಕಾರಣ ನೀಡಿಲ್ಲ ಮತ್ತು ವಿವರಣೆಯನ್ನೂ ನೀಡಿಲ್ಲ. ಅವರುಗಳು ಸಾಂಧರ್ಬಿಕವಾಗಿ ಆ ಶಾಸನದಲ್ಲಿ **"ದಾಯದ"** ಪದವನ್ನು 'ದಾಯಾದಿ' ಎಂದು ಅರ್ಥೈಸಿರುವುದಕ್ಕೆ ಸೂಕ್ತ ವಿವರಣೆ ನೀಡಬೇಕಾಗಿತ್ತು. ಜೊತೆಗೆ ಆ ಶಾಸನದಲ್ಲಿ ಇಲ್ಲದಿರುವ 'ದಂಡೆತ್ತಿ' ಬಂದಲುಎಂಬ ಪದವನ್ನು ಸೇರಿಸಿದ್ದಾರೆ. ಅದೇ ರೀತಿ ಕೆಲವು ಅಕ್ಷರಗಳನ್ನು ಸೇರಿಸಿದ್ದಾರೆ. ಈ ರೀತಿ ಅಕ್ಷರಗಳನ್ನು ಮತ್ತು ಪದಗಳನ್ನು ಸೇರಿಸಿರುವುದಕ್ಕೆ ಈ ವಿದ್ವಾಂಸರುಗಳು ಸೂಕ್ತ ವಿವರಣೆಗಳನ್ನು ನೀಡಿಲ್ಲ. ಕ್ರಿ.ಶ. ೧೩೨೩ರ ರಾಮಘಡದ ಶಾಸನದಲ್ಲಿ **'ದಾಯಾದಿ'** ಎಂಬ ಪದವೇ ಇಲ್ಲ. ಆದ್ದರಿಂದ 'ದಾಯದ' ಎಂಬ ಶಾಸನದಲ್ಲಿರುವ ಪದ 'ದಾಯಾದಿ' ಆಗಿರುವ ಸಾದ್ಯತೆಗಳೂ ಕಂಡುಬರುವುದಿಲ್ಲ. ಅವರ ವಾದದ ಸಮರ್ಥನೆಗೆ ಬೇಕಾಗಿರುವ ಸೂಕ್ತ ನಂಬಲಾರ್ಹವಾದ ಮತ್ತು ತರ್ಕಬದ್ಧವಾದ **ಪೂರಕ ದಾಖಲೆಗಳು** ಇಲ್ಲದೇ ಇರುವುದರಿಂದ ಇವರ ವಾದದಂತೆ ಕಂಪಿಲದೇವ ಮತ್ತು ಮೂರನೇ ಬಲ್ಲಾಳ **'ದಾಯಾದಿ'** ಸಂಬಂಧಿಕರೆಂಬ ಅವರ ವಾದ ಸಮರ್ಥನೀಯವಲ್ಲವೆಂದು ಕಂಡುಬರುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು ೧೯೭೫ರಲ್ಲಿ ಪ್ರಕಟಿಸಿರುವ ನಿಘಂಟು, ಪುಟ ೪೩೯ರಂತೆ ದಾಯಾದಿ-ಎಂದರೆ ಆಸ್ತಿಯಲ್ಲಿ ಭಾಗ ಪಡೆಯುವವನು ಜ್ಞಾತಿ, ರಕ್ತ ಸಂಬಂಧಿ ಎಂಬ ವಿವರಣೆ ಇದ್ದು, ಹಿಂದೆ ಉಲ್ಲೇಖಿಸಿದ ಮತ್ತು ಈ ನಿಘಂಟಿನಲ್ಲಿ "ದಾಯದ" ಪದವೇ ಇಲ್ಲ ಎಂಬುದು ಗಮನಾರ್ಹ.

ಈ ರೀತಿ ನಿಘಂಟಿನ ವಿವರಣೆಗಳಿಂದಲೂ ಸಹ ಕುಮ್ಮಟದ ಅರಸನಾದ **ಕಂಪಿಲದೇವ, ಮೂರನೇ ಬಲ್ಲಾಳ, ಬಯಚಯ್ಯ** ಅಥವಾ **'ಬಯಚಬೋವ'ರುಗಳು ಒಂದೇ ಕುಟುಂಬಕ್ಕೆ** ಸೇರಿದ ಪೀಳಿಗೆ ಅಂದರೆ ಪಿತೃ ವಂಶದ ರಕ್ತ ಸಂಬಂಧಿಗಳಾಗಿದ್ದು ಮತ್ತು ಒಂದೇ ವಂಶದವರೆಂದು ತಿಳಿಸುವ ಯಾವುದೇ ರೀತಿಯ ಸೂಚನೆ ಪ್ರಸ್ತುತ ರಾಮಘಡದ ವೀರಗಲ್ಲು ಶಾಸನ ಸೂಚಿಸುವುದಿಲ್ಲ.

ಕಂಪಿಲದೇವನಗೆ ಮತ್ತು ಮೂರನೇ ಬಲ್ಲಾಳನ ಹೊಯ್ಸಳ ಸೇನೆಗಳೊಡನೆ ಹಲವು ಯುದ್ಧಗಳು ನಡೆದಿದ್ದು, ಅವುಗಳಲ್ಲಿ ಕೆಲವು ಶಾಸನೋಕ್ತವಾಗಿದ್ದು, ಆ ಶಾಸನಗಳಲ್ಲಿ ಮತ್ತು ಸಂಬಂದ ಪಟ್ಟ ಚಾರಿತ್ರಿಕ ವಿವರಣೆಗಳೂ ಅವರುಗಳು 'ದಾಯಾದಿ'ಗಳಾಗಿದ್ದರೆಂದು ತಿಳಿಸುವುದಿಲ್ಲ.

ಮುಮ್ಮಡಿಸಿಂಗೆಯಯನಾಯಕನ ಮೇಲೆ ಕುಮ್ಮಟದುರ್ಗದಲ್ಲಿ, ದೇವಗಿರಿಯ ಯಾದವ ರಾಮಚಂದ್ರನ ಸೈನ್ಯ ಯುದ್ದ ಮಾಡಿದ್ದನ್ನುಲಕ್ಷ್ಮೇಶ್ವರದಲ್ಲಿ ದೊರೆತ ಒಂದು ವೀರಗಲ್ಲು ಶಾಸನ ತಿಳಿಸುತ್ತದೆ ಈ ವಿಷಯವು 'ಲಕ್ಷ್ಮೇಶ್ವರ ಶಾಸನಗಳು" ಕೃತಿಯ ಪುಟ XXVI ರಲ್ಲಿ ಉಲ್ಲೇಖಗೊಂಡಿದೆ. ಅದೇ ಕೃತಿಯಲ್ಲಿ ಕ್ರಿ.ಶ. ೧೩೨೦ರ ಇನ್ನೊಂದು ವೀರಗಲ್ಲು ಶಾಸನ ಕುಮ್ಮಟದ ಅರಸ ಕಂಪಿಲದೇವನು ಸೇವುಣರ ಜೊತೆ ನಡೆದ ಯುದ್ದದಲ್ಲಿ ಮಡಿದನೆಂದು ತಿಳಿಸಲಾಗಿದ್ದು, ಶಾಸನದ ಕಾಲಮಾನ ಇಲ್ಲ. ಕ್ರಿ.ಶ. ೧೩೨೦, ೧೩೨೩ ಮತ್ತು ೧೩೨೫ರಲ್ಲಿ ಕಂಪಿಲದೇವನ ಮತ್ತು ಹೊಯ್ಸಳರ ವಿರುದ್ಧ ನಡೆದ ಯುದ್ಧಗಳು ಶಾಸನೋಕ್ತವಾಗಿದ್ದು, ಪ್ರಸ್ತುತ ಲಕ್ಷ್ಮೇಶ್ವರದ ಕ್ರಿ.ಶ. ೧೩೨೦ ಶಾಸನದ ಕಾಲ ಮತ್ತು ಪಾಠವನ್ನು ಮರು ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ. ಚರಿತ್ರಾಕಾರರು ಈ ಶಾಸನದ ಲಿಪಿಯ ಆಧಾರದಲ್ಲಿ ಈ ಶಾಸನ ಕ್ರಿ.ಶ. ೧೩೨೦ರಿದ್ದರೆಂದು ಹೇಳಿದ್ದಾರೆ. ಆದರೆ ಚಾರಿತ್ರಿಕ ದಾಖಲೆಗಳು ಕಂಪಿಲದೇವನು ಕ್ರಿ.ಶ. ೧೩೨೭ರಲ್ಲಿ ಬದುಕಿದ್ದು, ಆಗ ಡೆಲ್ಲಿ ಸುಲ್ತಾನನ ಬೃಹತ್ ಸೇನೆ ಕುಮ್ಮಟದುರ್ಗದ ಮೇಲೆ ದಾಳಿ ಮಾಡಿದಾಗ ನಡೆದ ಯುದ್ದದಲ್ಲಿ ಮರಣ ಹೊಂದಿದನೆಂದು ತಿಳಿಸುತ್ತವೆ. ವಿದೇಶಿ ಬರಹಗಾರರೂ ಸಹ ಮೊಗಲರು ಕುಮ್ಮಟದ ಮೇಲೆ ದಾಳಿ ಮಾಡಿದ್ದುದು ಕ್ರಿ.ಶ. ೧೩೨೭ರಲ್ಲಿ ಎಂದು ತಿಳಿಸಿದ್ದಾರೆ. ಸಾಂದರ್ಭಿಕವಾಗಿ ಈ ಶಾಸನ, ಕಂಪಿಲದೇವನು ಮಡಿದ ನಂತರದ ಲಕ್ಷ್ಮೇಶ್ವರದಲ್ಲಿ ಸ್ಥಾಪಿಸಿದ ಶಾಸನವಾಗಿದ್ದು, ಕಂಪಿಲದೇವನ ಮರಣಾನಂತರ ಸ್ಥಾಪಿಸಲಾದ ಹಲವು ವೀರಗಲ್ಲು ಶಾಸನಗಳಲ್ಲಿ ಇದೂ ಒಂದು ಎಂದು ಹೇಳಬಹುದು. ಈ ಶಾಸನದಲ್ಲಿ ಕಂಪಿಲದೇವನಿಗೆ 'ದವಳಂಕ ಭೀಮಾ' ಎಂಬ ವಿಶೇಷಣವಿದ್ದುದನ್ನು ಮತ್ತು 'ಸಿಡಿಲ ಬೊಮ್ಮ' ಎಂಬ ಒಬ್ಬ ಪ್ರಮುಖ ವೀರನು ಮರಣಿಸಿದ್ದುದನ್ನು ತಿಳಿಸುತ್ತದೆ. ಆದ್ದರಿಂದ ಉಲ್ಲೇಖ BK no. 49, of 1935-36, S11XX No.394. 'ಲಕ್ಷ್ಮೇಶ್ವರದ ಶಾಸನಗಳು' ಕೃತಿಯಲ್ಲಿನ ಕ್ರಿ.ಶ. ೧೩೨೦ರ ಈ ಶಾಸನದಲ್ಲಿರುವ **'ಸಿಡಿಲಬೊಮ್ಮ'** ಎಂಬ ವೀರನ ಮರಣಕ್ಕೆ ಸಂಬಂಧಿಸಿರಬಹುದು.

ಕಂಪಿಲದೇವನ ಎರಡು ದಾನ ಶಾಸನಗಳು

ಕಂಪಿಲದೇವನು ಕ್ರಿ.ಶ. ೧೩೦೦ರ ಹರಿಹರದ ದಾನ ಶಾಸನ, ಸೇವುಣರ ಕನ್ನರದೇವನ ದಾನ ನವೀಕರಿಸಿದ್ದನು. ಇನ್ನೊಂದು, ಇತಿಹಾಸದರ್ಶನ ಸಂಪುಟ ೩೨-೨೦೧೭ರ ಪುಟ ೯೯ರಲ್ಲಿ ಡಾ. ಗಿರಿಜಾರವರು ಕ್ರಿ.ಶ. ೧೩೦೧ರ ಕಾಲದ ಕಂಪಿಲದೇವನ ಒಂದು ದಾನ ಶಿಲಾಶಾಸನ ಬಳ್ಳಾರಿ ಜಿಲ್ಲೆ, ಸೊಂಡೂರು ತಾಲ್ಲೂಕಿನ ಸುಶಿಲಾನಗರದ ಈಶ್ವರಪ್ಪ ಎಂಬುವವರ ಹೊಲದಲ್ಲಿ ದೊರೆತ ಒಂದು ಬಂಡೆಗಲ್ಲು ಶಾಸನ ಪತ್ತೆ ಮಾಡಿದ್ದಾರೆ. ಆ ಶಾಸನದಂತೆ ಕಂಪಿಲದೇವನು ಮಾಲ್ಯಸ್ವರ ದೇವರ ಸೇವೆಗಾಗಿ, ಗೊರವರಿಗೆ ಲೆಂಕಣಿಯರಿಗೆ ಪೂಜೆಯಪಡಿಗೆಗೆ ದುರ‍್ಮತಿ ಸಂವತ್ಸರದಲ್ಲಿ ದಾನ ಕೊಟ್ಟದ್ದನ್ನು ತಿಳಿಸುತ್ತದೆ.

ಕುಮ್ಮಟದ ಅರಸರು ಶೈವ ಧರ್ಮಾವಲಂಭಿಗಳಾಗಿದ್ದರು ಎಂಬುದನ್ನು ಅವರಿಗೆ ಸಂಬಂಧಿಸಿದ ಸಮಕಾಲೀನ ಶಾಸನಗಳು ಸ್ಪಷ್ಟವಾಗಿ ತಿಳಿಸುತ್ತದೆ ಎಂಬ ವಿಷಯ 'ಲಕ್ಷ್ಮೇಶ್ವರದ ಶಾಸನಗಳು' ಕೃತಿಯ ಪುಟ ೧೫-೧೬ರಲ್ಲಿ ಪರೋಕ್ಷವಾಗಿ ತಿಳಿಸಲಾಗಿದೆ. ಇನ್ನೊಂದು ಗಮನಿಸಬಹುದಾದ ವಿಷಯವೆಂದರೆ ಕ್ರಿ.ಶ. ೧೪ನೇ ಶತಮಾನದ ಪ್ರಥಮಾರ್ಧದ ಕಾಲಘಟ್ಟದಲ್ಲಿ ಬಳ್ಳಾರಿ, ಚಿತ್ರದುರ್ಗ, ಕೊಪ್ಪಳ, ಗದಗ ಮತ್ತು ಹಾವೇರಿ ಪ್ರದೇಶಗಳಲ್ಲಿ ಹೊಯ್ಸಳರ ರಾಜ್ಯಾಡಳಿತ ಇರಲಿಲ್ಲವೆಂದೇ ಹೇಳಬಹುದು. ಹೊಯ್ಸಳರ ಸೈನಿಕ ಮತ್ತು ರಾಜಕೀಯ ಶಕ್ತಿವಿಹೀನತೆ ಮುಂತಾದ ಕಾರಣಗಳಿಂದಲೇ ಕುಮ್ಮಟದುರ್ಗದ ಅರಸರು ೧೩ನೇ ಶತಮಾನದ ಪ್ರಥಮಾರ್ದದ ನಂತರ ಅಸ್ತಿತ್ವಕ್ಕೆ ಬಂದು ಅವರು ಸ್ವತಂತ್ರವಾಗಿ ಆಡಳಿತ ನಡೆಸುತ್ತಿದ್ದರು. ಮುಂದೆ ಹೊಯ್ಸಳರ ಕೆಲವು ಪ್ರದೇಶಗಳಲ್ಲಿ ಅದೇ ಪರಿಸ್ಥಿತಿ ಮುಂದಿವರಿದು ೧೪ನೇ ಶತಮಾನದಲ್ಲಿ ವಿಜಯನಗರ ರಾಜ್ಯ ಅಸ್ಥಿತ್ವಕ್ಕೆ ಬಂದಿತು ಎಂದು ಹೇಳಬಹುದು. ಇದೇ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನ ಅಳುಪರ ರಾಜ್ಯದಲ್ಲಿಯೂ ಹೊಯ್ಸಳರು ಮತ್ತು ವಿಜಯನಗರ ನಗರ ರಾಜ್ಯದ ಅರಸರು ಆ ಪ್ರದೇಶದಲ್ಲಿ ತಮ್ಮ ಆಡಳಿತವನ್ನು ಏಕ ಕಾಲದಲ್ಲಿ ಆದರೆ ಪ್ರತ್ಯೇಕವಾಗಿ ಆಡಳಿತ ನಡೆಸುತ್ತಿದ್ದರು ಎಂದು ಚರಿತ್ರೆಯಿಂದ ತಿಳಿದುಬರುವ ವಿಷಯ.

ಕುಮ್ಮಟದ ರಾಜ ಕಂಪಿಲದೇವನಿಗೆ ಸಂಬಂಧಿಸಿದ ಕ್ರಿ.ಶ. ೧೩೧೫ರ ಮೊದಲನೇ ಕುಮ್ಮಟದ ವೀರಗಲ್ಲು ಶಾಸನದ ಪ್ರಾರಂಭಿಕ ದೈವಸ್ತುತಿ ಭಾಗ ಆ ಕಾಲದ ಸಂಪ್ರದಾಯಿಕ ಪದ್ದತಿಯಂತೆ ಇತ್ತು.ಆ ಶಾಸನದ ಪ್ರಾರಂಭಿಕ ದೈವ ಸ್ತುತಿ ಭಾಗ ಈ ರೀತಿ ಇದೆ.

> **"ಸ್ವಸ್ತಿ ಶ್ರೀ ಯಾದವ ನಾರಾಯಣ ಬಜಭಳ ಪ(ರಾ)**
> **ಕ್ರಮ ಪ್ರತಾಪ ಚಕ್ರವರ್ತಿ ಶ್ರೀಮನು ಮಹಾಮಾಂಡಲಿಕ** . . ..

ಈ ಸ್ತುತಿ ಭಾಗದ ಉಲ್ಲೇಖದಂತೆ ಕಂಪಿಲಿದೇವನು 'ಯಾದವ ನಾರಾಯಣ' ಅಂದರೆ ಅವನು ವೈಷ್ಣವ ಧರ್ಮ ಪಾಲಿಸುತ್ತಿದ್ದವನೆಂದಾಗುತ್ತದೆ.ಆದರೆ ಆ ಶಾಸನದ ದೈವಸ್ತುತಿ ಭಾಗ ಸಾಂದರ್ಭಿಕವಾಗಿ ಕೇವಲ ಸಾಂಪ್ರದಾಯಿಕ ಉಲ್ಲೇಖವಾಗಿದ್ದು, ಕಂಪಿಲದೇವನು ಶೈವ ಧರ್ಮ ಪಾಲಿಸುತ್ತಿದ್ದನು ಎಂದು ಚರಿತ್ರೆ ತಿಳಿಸುತ್ತದೆ. ಕಂಪಿಲದೇವ ಮತ್ತು ಅವನ ಕುಮಾರ ರಾಮನಾಥ, ಕ್ರಮವಾಗಿ ಕಂಪ್ಲಿಯ ಸೋಮೇಶ್ವರ ಮತ್ತು ಮೊಳಕಾಲ್ಮೂರು ಬಳಿ ಜಟ್ಟಿಂಗ ರಾಮೇಶ್ವರ ಶೈವ ದೇವರ ಆಶೀರ್ವಾದದಿಂದ ಹುಟ್ಟಿದರೆಂದು ಹೇಳಲಾಗಿದೆ. ಕಂಪಿಲದೇವನು ಹಂಪಿ ಪ್ರದೇಶದ ಹೇಮಕೂಟದಲ್ಲಿ ತನ್ನ ಹಿರಿಯರಾದ ಪೆರುಮೆಯ ನಾಯಕ, ತಂದೆ ಮುಮ್ಮಡಿ ಸಿಂಗೆಯ ನಾಯಕ ಮತ್ತು ತಾಯಿ ಮಾದನಾಯಿಕಿತಿ ಇವರ ಹೆಸರಿನಲ್ಲಿ ಮೂರು ಶಿವಲಿಂಗಗಳನ್ನು ಸ್ಥಾಪಿಸಿ ತ್ರಿಕೂಟ ಶಿವನ ದೇವಾಲಯ ನಿರ್ಮಿಸಿರುವುದು ಶಾಸನೋಕ್ತವಾಗಿದ್ದು, ಇದರ ಉಲ್ಲೇಖ ARIE- 1934-35 ಸಂಖ್ಯೆ ೧೧೯ರಲ್ಲಿದೆ. ಈ ರೀತಿ ಶಿವನಿಗೆ ದೇವಸ್ಥಾನ ಕಟ್ಟಿಸಿರುವುದು ಕಂಪಿಲ ದೇವನು ಶೈವ ಸಂಪ್ರದಾಯ ಪಾಲಿಸುತ್ತಿದ್ದನೆಂದು ತಿಳಿದುಬರುತ್ತದೆ ಎಂದು ಹಿಂದೆಯೇ ತಿಳಿಸಲಾಗಿದೆ.

ಶಾಸನಗಳ ದೈವಸ್ತುತಿ ಭಾಗಕ್ಕೂ ಆ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಸಂಬಂಧಿಸಿದ ರಾಜನ ಧರ್ಮಕ್ಕೂ ಸಂಬಂಧವಿಲ್ಲದಿರುವ ಅನೇಕ ಉದಾಹರಣೆಗಳು 'ಲಕ್ಷ್ಮೇಶ್ವರದ ಶಾಸನಗಳು' ಎಂಬ ಕೃತಿಯಲ್ಲಿ ಉಲ್ಲೇಖಿಸಿರುವ ಹಲವು ಶಾಸನಗಳಿಂದ ತಿಳಿದುಬರುತ್ತದೆ. ಕೃತಿಯಲ್ಲಿರುವ ಶಾಸನ ಕ್ರಮ ಸಂಖ್ಯೆ ೧ ಮತ್ತು ೨ ಉಲ್ಲೇಖ BK No.5, 1935-36 ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಷನ್ಸ್-ಎಸ್೧೧, XX No. 117, ಎಫಿಗ್ರಾಫಿಯಾ ಇಂಡಿಕಾ-.EIXVI P-44-52: "ಲಕ್ಷ್ಮೇಶ್ವರ ಶಾಸನಗಳು ಕೃತಿಯ ಪುಟ ೨-೩ರಲ್ಲಿದೆ.

ಈ ಶಾಸನದ ಕಾಲದಲ್ಲಿ ಸೇವುಣ ರಾಜ ಕನ್ನರದೇವ ಅಂದರೆ ಕೃಷ್ಣನು ದೇವಗಿರಿಯಿಂದ ಆಳುತ್ತಿದ್ದ ಕಾಲದ ಸೇವುಣರ ಶಾಸನಗಳಲ್ಲಿ ಪ್ರಮುಖ ಅಧಿಕಾರಿ ಚಾಮುಂಡನನ್ನು ಅತಿಶಯವಾಗಿ ಹೊಗಳಲಾಗಿದ್ದು, ಅವನು ನೀಡಿದ ದಾನ

ಶಾಸನದ ಪ್ರಾರಂಭ ಸ್ತುತಿ ಭಾಗ ಸಾಂಪ್ರದಾಯಿಕ ರೀತಿ ಇದೆ. "ಶ್ರೀ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಬಾಯ ಶಂಭವೇ " ಎಂದಿದೆ.ಈ ಶಾಸನದ ಪಾಠದಂತೆ ಸೇವುಣ ಯಾದವನಾದ ಕನ್ನರದೇವ (ಕೃಷ್ಣ)ನು ಶೈವ ಸಂಪ್ರದಾಯ ಅಥವಾ ಶೈವ ಧರ್ಮ ಪಾಲಕನಾಗುತ್ತಾನೆ. ಆದರೆ ಅದೇ ಶಾಸನದ ಪಾಠದಲ್ಲಿ ಅವನನ್ನು ಯಾದವನೆಂದು ತಿಳಿಸಿದ್ದರೂ ಅವನು ವಾಸ್ತವದಲ್ಲಿಯೂ ವೈಷ್ಣವ ಧರ್ಮದವನಾಗಿದ್ದನು. ಆದ್ದರಿಂದ ಪ್ರಸ್ತುತ ಶಾಸನದ ಪ್ರಾರಂಭಿಕ ಧಾರ್ಮಿಕ ದೈವಸ್ತುತಿ ಭಾಗ ಕೇವಲ ಸಾಂಪ್ರದಾಯಿಕ ಉಲ್ಲೇಖವಾಗಿದೆ. ಅದೇ ರೀತಿ ಕ್ರಿ.ಶ. ೧೩೧೫ರ ಕುಮ್ಮಟದುರ್ಗದಲ್ಲಿ ಮೊದಲು ಪತ್ತೆಯಾದ ವೀರಗಲ್ಲು ಶಾಸನದ ಪ್ರಾರಂಭಿಕ ದೈವಸ್ತುತಿ ಭಾಗವೂ ಸಹ ಸಾಂಪ್ರದಾಯಿಕ ಉಲ್ಲೇಖವೆಂದು ಸಮರ್ಥಿಸುತ್ತದೆ.

ಕುಮ್ಮಟದುರ್ಗದ ಅರಸ ಕಂಪಿಲದೇವನ ಮರಣದ ನಂತರದ ಕೆಲವು ಚಾರಿತ್ರಿಕ ಉಲ್ಲೇಖಗಳು ಅವನ ಹೊಯ್ಸಳ ಸಂಬಂಧವನ್ನು ತಳ್ಳಿ ಹಾಕುತ್ತವೆ.

೧೯೪೩ರ ARIE-B–೭೬ರಲ್ಲಿ ದಾಖಲಾಗಿರುವ ಸೊಂಡೂರು ಶಾಸನ ಕಂಪಿಲದೇವನ ಗತಿಸಿದ ೨೦೫ ವರ್ಷಗಳ ನಂತರ ಸ್ಥಾಪಿತಲಾದ ಅವನ ಸ್ಮರಣೆಯ ಈ ವೀರಗಲ್ಲು ಶಾಸನವನ್ನು ಗೋಪಾಯಿ ಎಂಬುವವಳು ಅವಳ ತಮ್ಮ ರಾಮ ಮತ್ತು ಇತರರು ಸೊಂಡೂರು ತಾಲ್ಲೂಕಿನ ರಾಮಘಡ ಅಂದರೆ ಹೊಸಮಲೆಯಲ್ಲಿ ಸ್ಥಾಪಿಸಿದ ಈ ಸ್ಮಾರಕ ವೀರಗಲ್ಲು ಶಿಲಾಶಾಸನ ಕಂಪಿಲದೇವ ಮತ್ತು ರಾಮನಾಥರು ಹೊಯ್ಸಳ ಮೂರನೇ ಬಲ್ಲಾಳರು ಬಂದುಗಳು ಅಂದರೆ ದಾಯಾದಿಗಳು ಎಂದು ತಿಳಿಸಿವುದಿಲ್ಲ. ವಿಜಯನಗರದ ಅರಸರೂ ಸಹ ಕುಮ್ಮಟದ ಈ ಅರಸರನ್ನು ಯಾವ ರೀತಿಯಲ್ಲೂ ಪ್ರಸ್ತಾಪಿಸಿಲ್ಲಎಂಬುದನ್ನೂ ಸಹ ಗಮನಿಸಬಹುದು ಮತ್ತು ಇದು ಹಲವು ರಾಜವಂಶಗಳ ಚರಿತ್ರೆಗೂ ಅನ್ವಯಿಸುತ್ತದೆ.

ಕ್ರಿ.ಶ. ೧೪೦೭ ಹಾವೇರಿ ತಾಲ್ಲೂಕಿನ ಸಂಗೂರಿನ ಶಾಸನದ ಪ್ರಕಾರ ಮಾದರಸನೆಂಬುವವನು ಕುಮಾರ ರಾಮನಾಥನಗೆ ದೇವಸ್ಥಾನ ಕಟ್ಟಿಸಿದ್ದಾನೆ. ಇವನು ಕುರುಗೋಡಿನ ಸಂಗಮನ ಮಗ ಹಾಗೂ ಕಂಪಿಲದೇವನ ಬಾಹತ್ತರ ನಿಯೋಗಾಧಿಪತಿ ಬೈಚವೆಗ್ಗಡೆಯ ಮೊಮ್ಮಗ. ಈ ಬೈಚವೆಗ್ಗಡೆ ಕುಮ್ಮಟ ರಾಜ್ಯದ ಸೇವೆಯಲ್ಲಿದ್ದವನು. ಈ ಮಾದರಸ ಮತ್ತು ಸಂಗಮರು ಮುಂದೆ ವಿಜಯನಗರ ರಾಜ್ಯದ ಸೇವೆಯಲ್ಲಿ ನಿಂತರೆಂದು ತಿಳಿದುಬರುತ್ತದೆ. ಇವರೆಲ್ಲರೂ ಶಿವನಾರಾಧಕರೆಂದು ಕಂಡುಬಂದು ಕಂಪಿಲದೇವನೂ ಶೈವನಾಗಿದ್ದನ್ನು ತಿಳಿಸುತ್ತದೆ. ಇದರಿಂದ ಕಂಪಿಲಿದೇವನು ಹೊಯ್ಸಳರ ದಾಯಾದಿ ಸಂಬಂಧಿಕನೆಂದು ಕಂಡುಬರುವುದಿಲ್ಲ.

ಹೊಸ ವೀರಗಲ್ಲು ಶಾಸನ ಮತ್ತು ಕ್ರಿ.ಶ. ೧೪೩೨ರ ತೀರ್ಥಹಳ್ಳಿ ತಾಲ್ಲೂಕಿನ ಕೊಕ್ಕಡದಲ್ಲಿ ಪತ್ತೆಯಾದ ವೀರಗಲ್ಲು ಶಾಸನ ಇವುಗಳೆಲ್ಲವೂ ಸಹ ಹೊಯ್ಸಳ ಮೂರನೇ ಬಲ್ಲಾಳ ಮತ್ತು ಕಂಪಿಲದೇವ ಬಂದುಗಳೆಂದು ಸೂಚಿಸುವುದಿಲ್ಲ. ಶಿವಮೊಗ್ಗ ಜಿಲ್ಲೆಯ ಕೂಡಿಲಿಯ ಕಲ್ಲು ಮಠದ ಮುಂದೆ ಇರುವ ವೀರಗಲ್ಲು ಶಾಸನ ಮೂರನೇ ಬಲ್ಲಾಳನಗೂ ಕಂಪಿಲದೇವನಿಗೂ ಯುದ್ದ ನಡೆದ ಬಗ್ಗೆ ತಿಳಿಸುತ್ತದೆ. (ಎಂಎಆರ್ ೧೯೨೩–೧೧೯).

ಮುಮ್ಮಡಿ ಸಿಂಗೆಯ ನಾಯಕ ಮತ್ತು ಅವನ ಮಗ ಕಂಪಿಲದೇವನಿಗೂ ಮತ್ತು ಹೊಯ್ಸಳರಿಗೂ ೨–೩ ದಶಕಗಳ ಕಾಲ ಯುದ್ದಗಳು ನಡೆದುದ್ದನ್ನು ಶಾಸನಗಳು ತಿಳಿಸುತ್ತವೆ. ಆಗ ಹೆಚ್ಚಾಗಿ ಕುಮ್ಮಟದ ಅರಸರು ಹೊಯ್ಸಳರ ಮೇಲೆ ಮೇಲ್ಗೈ ಸಾಧಿಸಿದಂತೆ ಕಂಡುಬರುತ್ತದೆ. ಜೊತೆಗೆ ಕಂಪಿಲದೇವನು ಹೊಯ್ಸಳರ ಕೆಲವು ಸ್ಥಳಗಳ್ನು ವಶಪಡಿಸಿಕೊಂಡಿರುವುದೂ ಕಂಡುಬರುತ್ತದೆ. ಇಲ್ಲಿ ಒಂದು ಸಾದ್ಯತೆಯೆಂದರೆ, ಮೂರನೇ ಬಲ್ಲಾಳನು ಡೆಲ್ಲಿ ಸುಲ್ತಾನರಿಗೆ ಸೋತು ಅವರಿಗೆ ಅಧೀನನಾಗಿ ಕಪ್ಪ ನೀಡುತ್ತಿದ್ದನು. ಆಗ ಮೂರನೇ ಬಲ್ಲಾಳನು ಹೆಚ್ಚಾಗಿ ತನ್ನ ರಾಜ್ಯದ ತಮಿಳು ಪ್ರದೇಶದಲ್ಲಿದ್ದು ಅವನು ತನ್ನ ರಾಜ್ಯದ ಉತ್ತರ ಭಾಗಗಳ ಕಡೆ ಹೆಚ್ಚು ಗಮನಕೊಡಲು ಸಾಧ್ಯವಾಗಿರಲಿಲ್ಲವೆಂದು ಕಂಡುಬರುತ್ತದೆ. ಅದೇ ಕಾಲದಲ್ಲಿ ಹೊಯ್ಸಳರ ಉತ್ತರ ಭಾಗಗಳನ್ನು ಕುಮ್ಮಟದ ಅರಸರು ವಶಪಡಿಸಿಕೊಂಡು ಬಹಳ ಪ್ರಭಾವ ಶಾಲಿ ರಾಜ್ಯಾಡಳಿತ ನಡೆಸುತ್ತಿದ್ದು, ಪ್ರಾಬಲ್ಯ ಮೆರೆದಿದ್ದಾರೆ. ಅವರು ಬಲಿಷ್ಟ ಸೈನ್ಯ ಪಡೆಯನ್ನೂ ಹೊಂದಿದ್ದರು ಎಂದು ಕಂಡುಬರುತ್ತದೆ.

ಮೇಲಿನ ವಿಷಯಗಳನ್ನು ಪರಿಶೀಲಿಸಿದಾಗ ಕಂಪಿಲದೇವನು ತಾನೊಬ್ಬ ಸಮರ್ಥ ರಾಜನಾಗಿದ್ದು, ಶಕ್ತಿಶಾಲಿ ಸೈನ್ಯವನ್ನು ಹೊಂದಿದ್ದು, ಅವನ ಸ್ನೇಹ ಸಹಕಾರದಿಂದ ಮೂರನೇ ಬಲ್ಲಾಳನು ಮುಸಲ್ಮಾನರ ದಾಳಿಯಿಂದ ತಪ್ಪಿಸಿಕೊಳ್ಳಲು ಅಥವಾ ಎದುರಿಸಲು ಅತ್ಯಾವಶ್ಯಕವಾಗಿದ್ದು, ಸಾದ್ಯವೂ ಆಗುತ್ತಿತ್ತು. ಆಗ ಮೂನೇ ಬಲ್ಲಾಳನು ರಾಜಕೀಯ ಮುತ್ಸದ್ದಿತನ ತೋರಿಸಿ ಕಂಪಿಲದೇವನನ್ನು ಜೊತೆಗೂಡಿಸಿಕೊಂಡಿದ್ದರೆ ಅವನು ಡೆಲ್ಲಿಯವರ ನಂತರದ ದಾಳಿಗಳಿಂದ ತಪ್ಪಿಸಿಕೊಳ್ಳಬಹುದಾಗಿತ್ತು. ಆದರೆ ಮೂರನೇ ಬಲ್ಲಾಳನ ರಾಜಕೀಯ ನಡೆ ಮುತ್ಸದ್ದಿತನದಾಗಿರದೆ, ಸ್ವಯಂ–ಕೃತ ಅಪರಾದದತನ್ನ ನಡೆಯಿಂದ

ನಂತರವೂ ಸಹ ಕಂಪಿಲದೇವನ ಜೊತೆ ಕ್ರಿ.ಶ. ೧೩೨೫ರವರೆಗೂ ಹಲವು ಯುದ್ದಗಳಲ್ಲಿ ತೊಡಗಿಸಿಕೊಂಡುನು. ಅವನ ರಾಜ್ಯದ ಉತ್ತರ ಭಾಗಗಳೂ ಸಹ ಕುಮ್ಮಟದ ಅರಸರ ವಶಕ್ಕೆ ಹೋಗಲು ಮೂರನೇ ಬಲ್ಲಾಳನೇ ಕಾರಣನಾದನೆಂದು ಕಂಡುಬರುತ್ತದೆ.

ಹೊಯ್ಸಳ ಬಲ್ಲಾಳನು ಕ್ರಿ.ಶ. ೧೨೮೭ರಿಂದಲೂ ಕುಮ್ಮಟ ಅರಸರ ಜೊತೆಯೂ ಕ್ರಿ.ಶ. ೧೩೨೫ರವರೆಗೆ ಸರಿಸುಮಾರು ೪ ದಶಕಗಳ ಕಾಲ ತನ್ನ ನೆರೆಯ ಹೆಚ್ಚು ಕಡಿಮೆ ಅವನದೇ ರಾಜ್ಯದ ಭಾಗದಂತೆ ಮತ್ತು ಅವನಿಂದ ಕೈಬಿಟ್ಟು ಹೋಗಿದ್ದ ಅವನ ರಾಜ್ಯದ ಹಲವು ಭಾಗಗಳನ್ನು ಒಳಗೊಂಡಿದ್ದ ಕುಮ್ಮಟ ರಾಜ್ಯದ ಅರಸರ ಜೊತೆ ಹೊಂದಾಣಿಕೆ ಮಾಡಿಕೊಳ್ಳದೆ ಹೆಚ್ಚು ನಷ್ಟವನ್ನು ಅನುಭವಿಸಿದ ಮೂರನೇ ಬಲ್ಲಾಲಳ ನಡೆ ರಾಜಕೀಯವಾಗಿ ವಿಫಲ ನಡೆಯ ರಾಜಕಾರಣವಾಗಿದ್ದು, ಅವನು ರಾಜಕೀಯ ಮತ್ಸದ್ದಿತನ ತೋರಿಸಿಲ್ಲವೆಂದು ಚರಿತ್ರೆಯ ಪುಟಗಳಿಂದ ತಿಳಿದುಬರುತ್ತದೆ.

ಶಾಸನಗಳ ವಿವರಗಳನ್ನು ಪರಿಶೀಲಿಸಿದಾಗ ಕುಮ್ಮಟದ ಅರಸರು ಮತ್ತು ಹೊಯ್ಸಳರು ಮೂರನೇ ಬಲ್ಲಾಳನ ಜೊತೆ ಹೆಚ್ಚು ಯುದ್ದಗಳಲ್ಲಿ ತೊಡಗಿದ್ದುದನ್ನು ತಿಳಿಸುತ್ತವೆಯೇ ಹೊರತು; ಅವರ ದಾಯಾದಿ ಸಂಬಂಧದ ಬಗ್ಗೆ ಚಕಾರವನ್ನೂ ಸೂಚಿಸಿಲ್ಲ.

ಹೆಚ್ಚಿನ ಸಾಹಿತ್ಯಗಳು ಕುಮ್ಮಟದ ರಾಜ್ಯದ ಅರಸನಾಗಿದ್ದ ಕಂಪಿಲಿದೇವ ಮತ್ತು ಅವನ ಮಗ ಕುಮಾರರಾಮ ಅಥವಾ ರಾಮನಾಥರನ್ನು ಬೇಡರೆಂದೇ ತಿಳಿಸಿದ್ದು, ಯಾದವನಾದ ಮೂರನೇ ಬಲ್ಲಾಳನಿಗೆ ದಾಯಾದಿಗಳಾಗಿದ್ದರೆಂದು ಕ್ರಿ.ಶ. ೧೩೨೩ರ ರಾಮಘಡದ ಶಾಸನದ ಪಾಠವನ್ನು ಉಲ್ಲೇಖಿಸಿ ಈ ರೀತಿ ತಿಳಿಸಿರುವ ಸೀತಾರಾಮ ಜಾಗಿರ್ದಾರ ತಂಡದವರ ವಾದ ಸಮರ್ಥನೀಯವಲ್ಲವೆಂದು ಕಂಡುಬರುತ್ತದೆ.

ಮೇಲಿನ ವಿವರಗಳನ್ನು ಪರಿಗಣಿಸಿ ಸೀತಾರಾಮ ಜಾಗಿರ್ದಾರ್ ತಂಡದವರ ಅಭಿಪ್ರಾಯಗಳ ಬಗ್ಗೆ ಸಂಕ್ಷಿಪ್ತವಾಗಿ ಈ ರೀತಿ ಹೇಳಬಹುದು.

೧) ಸೀತಾರಾಮ ಜಾಗಿರ್‌ದಾರ್, ಜಿ. ವರದರಾಜಾರಾವ್ ಮತ್ತು ಬಿ.ಆರ್. ತುಬಾಕಿ ಯವರು ಮೊದಲು ಪತ್ತೆ ಮಾಡಿದ್ದ ಕಂಪಿಲದೇವನಿಗೆ ಸಂಬಂಧಿಸಿದ ಕ್ರಿ.ಶ. ೧೩೧೫ರ ವೀರಗಲ್ಲು ಶಾಸನದ ಅವರ ಓದುವಿಕೆ ಮತ್ತು ಅರ್ಥೈಸುವಿಕೆಯಲ್ಲಿ ವ್ಯತ್ಯಾಸಗಳು ಕಂಡುಬಂದವು.

೨) ಅವರು ಆ ಶಾಸನದಲ್ಲಿ ಇಲ್ಲದ ಕೆಲವು ಪದಗಳು ಮತ್ತು ಅಕ್ಷರಗಳನ್ನು ಉಲ್ಲೇಖಿತ ಕ್ರಿ.ಶ. ೧೩೧೫ರ ವೀರಗಲ್ಲು ಶಾಸನದ ಪಾಠದಲ್ಲಿ ಸೇರಿಸಿರುವುದಕ್ಕೆ ಸೂಕ್ತ ಕಾರಣಗಳು ಮತ್ತು ವಿವರಣೆಗಳನ್ನು ನೀಡಿಲ್ಲ. ಆದ್ದರಿಂದ ಆ ಶಾಸನಗಳ ಪಾಠವನ್ನು ತಪ್ಪಾಗಿ ಓದಿದ್ದರಿಂದ ಅವರ ಅರ್ಥೈಸುವಿಕೆಯೂ ಸಮಂಜಸವಾಗಿಲ್ಲ.

೩) ಅವರ ಓದುವಿಕೆಯಂತೆ ಆ ಶಾಸನದಲ್ಲಿ ಎಂಟು ಅಕ್ಷರಗಳಾದ 'ಮಂಡಲಿಕ' ಮತ್ತು 'ಹೊಯ್ಯಸಣ' ಪದಗಳು ಆ ರೀತಿಯ ಪದಗಳಾಗಿರಲಿಲ್ಲ. ಆದರೆ ಅವು ನಾಯಕಾಚಾರ್ಯ ಎಂಬ ಐದು ಅಕ್ಷರಗಳ ಪದವಾಗಿದ್ದು, ಹಿಂದಿನ ಎರಡು ಅಕ್ಷರಗಳು ಸೇರಿ 'ಮಹಾನಾಯಕಚಾರ್ಯ' ಎಂದಾಗಿತ್ತು.

೪) 'ಮಂಡಲಿಕ' ಮತ್ತು 'ಹೊಯ್ಯಸಣ' ಎಂಟು ಅಕ್ಷರಗಳನ್ನು ಆ ಶಾಸನದ ಆ ಭಾಗದಲ್ಲಿ ಕೊರೆಯಲು ಜಾಗವಿರಲಿಲ್ಲ. ಕೇವಲ ಐದು ಅಕ್ಷರಗಳಿಗೆ ಮಾತ್ರ ಅವಕಾಶವಿತ್ತು.

೫) ಸಿ.ಎಸ್. ಪಾಟೀಲರ ಓದುವಿಕೆಯಂತೆ ಆ ಶಾಸನದ ಕಾಲದಲ್ಲಿ ಕಂಪಿಲದೇವನು ಮಹಾಮಂಡಲಿಕನಾಗಿರಲಿಲ್ಲ ಮತ್ತು ಹೊಯ್ಸಣ (ಹೊಯ್ಸಳ)ನಾಗಿರಲಿಲ್ಲ.

೬) ಈ ಮೇಲಿನ ವಿಷಯಗಳು ಸಿ.ಎಸ್. ಪಾಟೀಲರ ಆ ಶಾಸನದ ಮರು ಓದಿನಂತೆ ಇದ್ದು ಅದನ್ನು ಒಪ್ಪಲಾಗಿದೆ. ಅದನ್ನು ಇದುವರೆಗೂ ಯಾರೂ ಪ್ರಶ್ನಿಸಿಲ್ಲ.

೭) ಪಾಟೀಲರ ಮರು ಓದುವಿಕೆಯನ್ನು ಮೊದಲಿನ ಶಾಸನದ ಪತ್ತೆಯಾದ ಸಮೀಪವೇ ಅವರೇ ಪತ್ತೆ ಮಾಡಿದ ಕಂಪಿಲದೇವನಿಗೆ ಸಂಬಂಧಿಸಿದ ಇನ್ನೊಂದು ಕ್ರಿ.ಶ. ೧೩೧೫ರ ವೀರಗಲ್ಲು ಶಾಸನ ಪಾಟೀಲರ ಪರಿಷ್ಕೃತ ಆ ಮೊದಲಿನ ಶಾಸನದ ಓದನ್ನು ಸಮರ್ಥಿಸುತ್ತದೆ. (ಪುಟ ೧೫೭ ಶಾಸನ ಸಂಖ್ಯೆ-೧೫೬).

೮) ಪಾಟೀಲರ ಓದಿದ ಪರಿಷ್ಕೃತ ಶಾಸನದ ಪಾಠವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಶಾಸನ ಸಂಪುಟ ಸಹ ಸಮರ್ಥಿಸುತ್ತದೆ.

೯) ಕ್ರಿ.ಶ. ೧೩೨೩ರ ರಾಮಘಡದ ವೀರಗಲ್ಲು ಶಾಸನದ ಪಾಠದಲ್ಲಿ ಬರುವ ಮೂರು ಅಕ್ಷರಗಳ 'ದಾಯದ' ಪದ ಕಂಪಿಲದೇವ ಮತ್ತು ಹೊಯ್ಸಳರು ರಕ್ತಸಂಬಂಧಿಗಳು ಎಂದು ಅರ್ಥೈಸಿರುವುದು ಸಮಂಜಸವಾಗಿರದೆ, ಆ ಪದ ಪಗಡೆ ಆಟದ ತೀವ್ರತೆಗೆ ಹೋಲಿಸಿದಂತೆ ಕಂಡುಬರುತ್ತದೆ. ಹಂಪಿ ಕ್ಷೇತ್ರದ ಸಂಶೋಧನೆಯ ಕಾಲದಲ್ಲಿ ಮಣ್ಣಿನ ಪಗಡೆ ಕಾಯಿಗಳೂ ಸಹ ದೊರಕಿವೆ. ವಿ.ಪಿ.ಆರ್. ೧೯೮೭–೮೮ ಪುಟ–೧೫: ವಿಜಯನಗರ ಕ್ಷೇತ್ರದ ಉತ್ಖನನದ ಕಾಲದಲ್ಲಿ ಸಿ.ಎಸ್. ಪಾಟೀಲರಿಗೆ ಅವರ ಇಲ್ಲಿ ಕ್ಷೇತ್ರ ಕಾರ್ಯ ನಡೆಸಿದಾಗ ಬಹುಮುಖ್ಯವಾದ ಹಾಗೂ ಪುರಾತನವೂ ಆದ ಮಣ್ಣಿನಿಂದ ಮಾಡಿದ ಮಣ್ಣಿನ ವಸ್ತುಗಳು ದೊರಕಿವೆ. ಅವುಗಳಲ್ಲಿ ಸರಳವಾದ ಶಿರಸ್ತ್ರಾಣ, ವಿಶಿಷ್ಟ ರಚನೆಯ ಹಣೆಪಟ್ಟಿಗಳು ದೊರಕಿವೆ. **ಇವುಗಳ ಜೊತೆಗೆ ಜೇಡಿ ಮಣ್ಣಿನಿಂದ ಮಾಡಿದ ಪಗಡೆ ಆಟದ ಕಾಯಿ (ಪಾನ್)ಗಳೂ ಇದರಿಂದ ವಿಜಯನಗರ ರಾಜ್ಯದ ಕಾಲದಲ್ಲಿ ಪಗಡೆ ಆಟ ಪ್ರಚಲಿತವಿತ್ತೆಂದು ಡಾ. ಎಂ.ಎಸ್. ನಾಗರಾಜಾರಾವ್ ವಿ.ಪಿ.ಆರ್. ೧೯೮೫ರ ಪುಟ ೧೩ರಲ್ಲಿ ದಾಖಲಿಸಿದ್ದಾರೆ.**

೧೦) ಕುಮ್ಮಟದುರ್ಗ ಅರಸರ ಹಾಗೂ ಹೊಯ್ಸಳರ ಶಾಸನಗಳು ಅಥವಾ ಸಾಹಿತ್ಯಗಳು ಅವರನ್ನು ಯಾದವರೆಂದು ಮತ್ತು ರಕ್ತ ಸಂಬಂಧವಿದ್ದ ಬಂದುಗಳೆಂದು ತಿಳಿಸಿಲ್ಲ.

ಮೇಲೆ ತಿಳಿಸಿರುವ ಎಲ್ಲಾ ವಿವರಗಳಿಂದ ಅಂತಿಮವಾಗಿ ಕುಮ್ಮಟದ ಅರಸರು ಹೊಯ್ಸಳರಾಗಿರಲಿಲ್ಲ. ಅವರು ಹೊಯ್ಸಳರ ಒಂದು ಶಾಖೆಗೆ ಸೇರಿದವರೆಂದು ಹೇಳಿರುವುದಕ್ಕೆ ಸೂಕ್ತ ಆಧಾರಗಳಿಲ್ಲ. ಆದ್ದರಿಂದ ಕಂಪಿಲದೇವನು ಹೊಯ್ಸಳ ಮೂರನೇ ಬಲ್ಲಾಳನ 'ದಾಯಾದಿ' ಅಥವಾ ಇನ್ನಾವುದೇ ರೀತಿಯಲ್ಲಿ ರಕ್ತ ಸಂಬಂಧಿಯಾಗಿರಲಿಲ್ಲವೆಂದು ಕಂಡುಬರುತ್ತದೆ. ಆದ್ದರಿಂದ ಸೀತಾರಾಮ ಜಾಗಿರ್ದಾರ, ಬಿ.ಆರ್. ತುಬಾಕಿ ಮತ್ತು ಜಿ. ವರದರಾಜುರವರುಗಳು ತಿಳಿಸಿರುವಂತೆ ಕಂಪಿಲದೇವ ಹೊಯ್ಸಳನಾಗಿರಲಿಲ್ಲ.

ಶಾಸನೋಕ್ತ ಅಣ್ಣಿಗೇರಿಯ ಜೈನ ಬಸದಿಗಳು

ಸಂಜಯ ಎನ್. ಹಂಜೆ*

ಜೈನ ಧರ್ಮವು ಅಣ್ಣಿಗೇರಿ ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ವಿಶಿಷ್ಟವಾಗಿ ಹಾಸುಹೊಕ್ಕಾಗಿದೆ. ಈ ಪ್ರದೇಶವನ್ನಾಳಿದ ಆಳರಸರಾದಿ ಅಧಿಕಾರಿಗಳು ಮತ್ತು ಸಮಕಾಲೀನ ವರ್ತಕರು, ಪ್ರಜೆಗಳು ಇಲ್ಲಿಯ ಜೈನಾಚಾರ್ಯರ ಪ್ರೇರಣೆಗಳು ಹಾಗೂ ಈ ಧರ್ಮದ ಜೀವದಯೆ, ಅಹಿಂಸೆ, ಅಪರಿಗ್ರಹ, ಅನೇಕಾಂತವಾದ, ದಾನಗುಣ, ಬ್ರಹ್ಮಚರ್ಯ, ಶಾಖಾಹಾರ ಮೊದಲಾದ ಸರ್ವಜನ ಹಿತಕಾರಿಯಾದ ತತ್ವ-ಸಿದ್ಧಾಂತಗಳು ಮತ್ತು ಸಮಕಾಲೀನ ಮುನಿ-ಕವಿಗಳ ಕಠಿಣ ತಪಸ್ಸು, ಪಾಂಡಿತ್ಯ, ಆಕರ್ಷಕ ಧರ್ಮೋಪದೇಶಗಳಿಂದ ಪ್ರೇರಿತರಾಗಿ ಜೈನ ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿಶೇಷವಾಗಿ ರಾಜಾಶ್ರಯವನ್ನಿತ್ತು ಪೋಷಿಸಿದ್ದಾರೆ. ಈ ಪ್ರದೇಶದಲ್ಲಿ ಕ್ರಿ.ಶ. ಸುಮಾರು ೬ನೆಯ ಶತಮಾನದಿಂದಲೂ ಬಸದಿಗಳ ನಿರ್ಮಾಣ ಪರಂಪರೆ ಅವಿರತವಾಗಿ ಸಾಗಿಬಂದಿದೆ. ಇಲ್ಲಿಯ ಶಾಸನಗಳಲ್ಲಿ ಉಲ್ಲಿಖಿತವಾಗಿರುವ ಮತ್ತು ಇತರೆಡೆಯ ಶಾಸನಗಳಲ್ಲಿ ನಿರೂಪಿತವಾಗಿರುವ ಇಲ್ಲಿಯ ಬಸದಿಗಳ ನಿರ್ಮಾತೃರು, ಕಾಲಮಾನ, ದಾನ-ದತ್ತಿಗಳು, ವಾಸ್ತು ಲಕ್ಷಣಗಳು ಇತ್ಯಾದಿ ವಿವರಗಳು ಈ ಕೆಳಗಿನಂತಿವೆ.

ಚೇದಿ (ಬಸದಿ)

ಕ್ರಿ.ಶ. ೭೫೧–೫೨ರ ಶಾಸನದಲ್ಲಿ, ಬಾದಾಮಿ ಚಲುಕ್ಯರ ಇಮ್ಮಡಿ ಕೀರ್ತಿವರ್ಮನ ಕಾಲಾವಧಿಯಲ್ಲಿ ಜೇಬುಳಗೇರಿಯಲ್ಲಿ ಗಾವುಂಡಗೈಯುತ್ತಿದ್ದ ಕಲಿಯಮ್ಮನು ಚೇದಿಯನ್ನು ಮಾಡಿಸಿದ ನಿರೂಪಣೆಯಿದೆ.[೧] ಚೇದಿ > ಚೈತ್ಯ > ಚೈತ್ಯಾಲಯ ಎಂದರೆ ಬಸದಿ ಎಂದರ್ಥ. ಪ್ರಾಯಶಃ ಅಣ್ಣಿಗೇರಿ ಪಟ್ಟಣದ ಇಂದಿನ ಜಾಡಗೇರಿ ಓಣಿಯ ಪರಿಸರದಲ್ಲಿ ನಿರ್ಮಾಣವಾಗಿದ್ದ ಆ ಬಸದಿ ಇಂದು ಉಳಿದು ಬಂದಿಲ್ಲ.

ಪಾರ್ಶ್ವನಾಗಾರ್ಜುನ ಜಿನಾಲಯ

ಲಕ್ಷ್ಮೇಶ್ವರದ ಕ್ರಿ.ಶ. ೯೬೮ರ ಶಾಸನದಲ್ಲಿ, ಕದಂಬರ ರವಿವರ್ಮನ (ರವಿರಾಜ?) ಪ್ರಿಯಮೈದುನನಾದ ಸೇಂದ್ರಕರ ಅರಸನೊಬ್ಬನು (ಹೆಸರು ತ್ರುಟಿತವಾಗಿದೆ) ರಾಜಗುರು ಭೂವನನಂದ್ಯಾಚಾರ್ಯನ ಸದ್ಧರ್ಮೋಪದೇಶದಿಂದ ಪ್ರೇರಿತನಾಗಿ ಅಣ್ಣಿಗೇರಿಯ ಪಾರ್ಶ್ವನಾಗಾರ್ಜುನ ಜಿನಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದೇವಗಣ ಪರಂಪರೆಯ ಮಹೇಂದ್ರದೇವ ಭಟ್ಟಾರಕನ ಪಾದಗಳನ್ನು ತೊಳೆದು ಸರ್ವಬಾಧಾ ಪರಿಹಾರವಾಗಿ ಭೂದಾನ ಮಾಡಿದ ವಿವರವಿದೆ.[೨] ಇದರಿಂದ ಅಣ್ಣಿಗೇರಿ ಪಟ್ಟಣದಲ್ಲಿ ಕ್ರಿ.ಶ. ಸುಮಾರು ೯–೧೦ನೆಯ ಶತಮಾನದಲ್ಲಿ ಪಾರ್ಶ್ವನಾಥನ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಆ ಬಸದಿಯ ನಿರ್ಮಾತೃಗಳನ್ನು ಕುರಿತು ಸ್ಪಷ್ಟವಿಲ್ಲ. ಕನ್ನಡನಾಡಿನಲ್ಲಿ ನಿರ್ಮಾತೃರ ಹೆಸರಿನಿಂದಲೇ ಪ್ರಸಿದ್ಧವಾದ ಅನೇಕ ಬಸದಿಗಳು ಪ್ರಾಚೀನ ಕಾಲದಿಂದಲೂ ಗೋಚರಿಸುತ್ತವೆ.[೩] ಈ ಹಿನ್ನೆಲೆಯಲ್ಲಿ ಪ್ರಸ್ತುತ ಬಸದಿಯನ್ನು ನಾಗಾರ್ಜುನ ಎಂಬುವವನು ನಿರ್ಮಿಸಿದಂತೆ ತೋರುತ್ತದೆ. ಆತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

ಗಂಗಪೆರ್ಮಾಡಿ ಬಸದಿ

ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ ಗಂಗಪೆರ್ಮಾಡಿ ಬಸದಿಯ ನಿರೂಪಣೆಯಿದೆ.[೪] ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿಯೂ ಈ ಬಸಧಿಯ ಪ್ರಸ್ತಾಪವಿದೆ.[೫] ಕ್ರಿ.ಶ. ೧೧೮೪ರ ಶಾಸನದಲ್ಲಿ, ವೀರಬ್ರಹ್ಮೇಶ್ವರ ದೇವಾಲಯಕ್ಕೆ ದಾನ ಮಾಡಿದ ಭೂಮಿಯ ಸೀಮಾ ವಿವರಗಳಲ್ಲಿ ಪೆರ್ಮಾಡಿ ಬಸದಿಯ (ಗಂಗಪೆರ್ಮಾಡಿ ಬಸದಿ) ಉಲ್ಲೇಖವಿದೆ.[೬] ಕ್ರಿ.ಶ. ೧೨೦೨ರ ಶಾಸನದಲ್ಲಿ, ಅಮೃತೇಶ್ವರ ದೇವಾಲಯಕ್ಕೆ ದಾನ ಮಾಡಿದ ಭೂಮಿಯ ಸೀಮಾ ವಿವರಗಳಲ್ಲಿ ಹೆಮ್ಮಾಡಿ ಬಸದಿಯ (ಗಂಗಪೆರ್ಮಾಡಿ) ಹೊಲದ ವಿವರವಿದೆ.[೭] ಹುನಗುಂದ ತಾಲ್ಲೂಕಿನ ನಂದವಾಡಿಗೆಯ

* ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿವಿ, ಧಾರವಾಡ. ಮೊ. ೦೯೫೩೫೧೭೨೮೩೩

ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನದಲ್ಲಿ, ಭಾವನಗಂಧವಾರಣ ಬಿರುದಾಂಕಿತ ಮಹಾಮಂಡಳೇಶ್ವರ ಪೆರ್ಮಾಳ ಮಾದರಸನು ಅಣ್ಣಿಗೇರಿಯಲ್ಲಿ ಪೆರ್ಮಾಡಿ ಬಸದಿಯನ್ನು (ಗಂಗಪೆರ್ಮಾಡಿ ಬಸದಿ) ಜೀರ್ಣೋದ್ಧಾರ ಮಾಡಿಸಿದ ನಿರೂಪಣೆಯಿದೆ.[೮] ಈ ಬಸದಿಯನ್ನು ಗಂಗಪೆರ್ಮಾಡಿ ಎಂಬ ಬಿರುದಾಂಕಿತನಾದ ತಲಕಾಡಿನ ಗಂಗರ ಇಮ್ಮಡಿ ಬೂತುಗನು ಕ್ರಿ.ಶ. ೯೬೧ರಲ್ಲಿ–

ರೂಡಿಗೆ ರೂಡಿವೆತ್ತೆಸೆದ ಬೆಳ್ವಲದೇಶಮನಾಳ್ದ ಗಂಗಪೆ
ರ್ಮ್ಮಾಡಿಗಳಿಂದ ಮಣ್ಣಿಗೆಱೆ ನಾಳ್ಕೆಱೆ ವಟ್ಟೆನಿಸಿತ್ತು ನಾಡನಾ
ಡಾಡಿಗಳುಂಬಮೆಂಬಿನೆಗಮಾ ಪುರದೊಳು ಜಯದುತ್ತರಂಗ ಪೆ
ರ್ಮ್ಮಾಡಿಯಿನಾಯ್ತು ಬೂತುಗನರೇನ್ದ್ರನಿನಲ್ಲಿ ಜಿನೇಂದ್ರ ಮಂದಿರಂ ॥

ನಿರ್ಮಿಸಿದ್ದಾನೆ. ಕಲ್ಯಾಣದ ಚಾಳುಕ್ಯರ ಕಡುವೈರಿಗಳಾಗಿದ್ದ ತಂಜಾವೂರಿನ ಚೋಳರ ಪೊಲೆಚೋಳನು (ಕೋ–ಪರಕೇಸರಿ ರಾಜೇಂದ್ರಚೋಳ) ಬೆಳ್ವೊಲನಾಡಿನ ಪ್ರದೇಶದಲ್ಲಿ ಆಕ್ರಮಣ ಕೈಗೊಂಡು ಈ ಬಸದಿಯನ್ನು–

ಪೊಲೆಚೋಳಂ ನೆಲೆಗೆತ್ತು ತನ್ನ ಕುಳಧರ್ಮ್ಮಾಚಾರಮಂ ಬಿಟ್ಟು ಬೆ
ಳ್ವಲ ದೇಶಕ್ಕಡಿಯಿಟ್ಟು ದೇವಗೃಹಸಂದೋಹಂಗಳಂ ಸುಟ್ಟು ಕ
ಯ್ಯಲೆ ಪಾಪಂ ಬೆಳೆದತ್ತೆನಲ್ಕೆ ಧುರದೊಳು ತ್ರೈಲೋಕ್ಯಮಲ್ಲಂಗೆ ಪಂ
ದಲೆಯಂ ಕೊಟ್ಟಸುವಂ ಬಿಸುಟ್ಟು ನಿಜವಂಶೋಚ್ಛಿತ್ತಿಯಂ ಮಾಡಿದಂ ॥

ಶ್ರೀ ಪೆರ್ಮ್ಮಾನಡಿ ಮಾಡಿಸಿ
ದೀ ಪರಮ ಜಿನಾಲಯಂಗಳಂ ಪೊಲೆವಟ್ಟ
ರ್ದ್ಧಾಪಾಣ್ಡ್ಯಚೋಳನೆಂಬ ಮ
ಹಾಪಾತಕ ತಿವುಳನಳಿದಧೋಗತಿಗಿಳಿದಂ ॥

ನಾಶಪಡಿಸಿದನು. ಚಾಳುಕ್ಯರ ಇಮ್ಮಡಿ ಸೋಮೇಶ್ವರನು ತನ್ನ ದಂಡನಾಯಕನಾದ ಲಕ್ಷ್ಮರಸನನ್ನು ಕ್ರಿ.ಶ. ೯೯೩ರಲ್ಲಿ ಅಣ್ಣಿಗೇರಿ ಪಟ್ಟಣಕ್ಕೆ ಕಳುಹಿಸಿ ನಾಶವಾಗಿದ್ದ ಈ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿ–

ಬಳಿಕೀ ಬೆಳ್ವಲದೇಶಮಂ ಪಡೆದ ದಂಡಾಧೀಶ ಸಾಮನ್ತ ಮಂ
ಡಳಿಕರ್ದ್ಧರ್ಮ್ಮದ ಬಟ್ಟೆಗೆಟ್ಟು ನಡೆಯುತ್ತಿರ್ದ್ದಲ್ಲಿ ತಜ್ಞಾನಮನಂ
ಗೊಳೆ ಕಾಳೀಯಗುಣೇತರಂ ಕೃತಯುಗಾಚಾರಾನ್ವಿತಂ ಲಕ್ಷ್ಮಮಂ
ಡಳಿಕಂ ನಿರ್ಮ್ಮಳಧರ್ಮ್ಮವತ್ತಳೆಯ ನಷ್ಟೋದ್ಧಾರಮಂ ಮಾಡಿದಂ ॥

ಈ ನೆಲದೊಳ್ ನೆಗಳ್ತೆಯ ಪೊಗಳ್ತೆಯ ಬಾಳ್ತೆಯ ಪುಣ್ಯತೀರ್ತ್ಥಸ
ನ್ತಾನದೊಳಿನ್ನವಿಲ್ಲೆನೆಸಿ ಸಂದುದು ದಕ್ಷಿಣಗಂಗೆ ತುಂಗಭ
ದ್ರಾನದಿ ತನ್ನದೀತಟದೊಳೊಪ್ಪುವ ಕಕ್ಕರಗೊಣ್ಡಮೆಂಬಧಿ
ಷ್ಠಾನದೊಳುರ್ವ್ವರಾಧಿಪತಿ ಚಕ್ರಧರಂ ನೆಲೆಸಿರ್ದ್ದ ಬೀಡಿನೊಳು ॥

ತ್ರಿಭುವನಚನ್ದ್ರಮುನೀನ್ದ್ರರ
ನಭಿವಂದಿಸಿ ಭಕ್ತಿಯಿಂದೆ ಕಾಲ್ಗರ್ಚ್ಚಿ ಜಗ
ತ್ಪ್ರಭುವಿನ ಬೆಸದಿಂ ಲಕ್ಷ್ಮಣ
ವಿಭು ಕೊಟ್ಟಂ ಹಸ್ತಧಾರೆಯಿಂ ಶಾಸನಮಂ ॥

ಎರಡಱುನೂಱ ಬಾಡದೊಳಗೀ ಜಿನಗೇಹವೆ ಪೂಜ್ಯಮೆಂದದ
ಕ್ಕರಸರ ಕಾಣ್ಕೆ ಬಿಟ್ಟುಬಿಯಮುಂಬಳಂ ಉಣ್ಬಳಿದಾಯಮಾದಿಯಾ
ಗೆರಡಱುವತ್ತು ಪೊನ್ನಱುವಣಂ ಸಮಕಟ್ಟೆನೆ ಮಾಡಿ ಶಾಸನಂ
ಬರೆಯಿಸಿಕೊಟ್ಟ ಧರ್ಮ್ಮಗುಣಮಂ ಮೆಱೆದಂ ನೃಪಮೇರು ಲಕ್ಷ್ಮಣಂ ॥

ಜಿನನಾಥಾವಾಸಮಂ ವಿಶ್ವಕೃತನಿಭಮಂ ಕಷ್ಟಕಾಲೇಯದುರ್ಬ್ಭಾ
ವನೆಯಿಂ ಚಂಡಾಳಚೋಳಂ ಸುಡಿಸಿ ಕಿಡಿಸೆ ವಿಚ್ಛಿತ್ತಿಯಾಗಿರ್ದ್ದುದೇಂನೆ
ಟ್ಟನೆ ನಷ್ಟೋದ್ಧಾರಮಂ ಶಾಶ್ವತಯತಿಶಯಮಾಯ್ತೆಂಬಿನಂ ಮಾಡಿ ತಚ್ಛಾ
ಸನಮಾಚಂದ್ರಾರ್ಕ್ಕತಾರಂ ನಿಲೆ ನಿಲಿಸಿದನೇಂ ಧನ್ಯನೋ ಲಕ್ಷ್ಮಭೂಪಂ ॥

ಇದರ ಪೂಜೆ-ಪುನಸ್ಕಾರಗಳು, ಜೀರ್ಣೋದ್ಧಾರ ಇತ್ಯಾದಿ ಕಾರ್ಯಗಳಿಗೆ ಮೂಡಗೇರಿ, ಗುಮ್ಮಗೋಳ, ಇಟ್ಟಗೆ, ಗಾವರವಾಡ ಗ್ರಾಮಗಳಲ್ಲಿ ಭೂದಾನ ಮಾಡಿದನು. ನಂತರದ ಕಾಲಾವಧಿಯಲ್ಲಿ ಬೆಳ್ವೊಲನಾಡಿನ ಮಹಾಸಾಮಂತನಾದ ಕತ್ತಲೆಕುಲದ ಕಾಟರಸ, ವಾಜಿಕುಲದ ರೇಚಣ ದಂಡನಾಯಕ, ಅಣ್ಣಿಗೇರಿ ಧರ್ಮಾಡಳಿತ ಪ್ರದೇಶಕ್ಕೊಳಪಟ್ಟ ಗ್ರಾಮಗಳ ಪ್ರಜೆಗಳು, ಅಣ್ಣಿಗೇರಿ ಜೈನ ದೇಶಪಾಂಡೆ ದೇಸಗತಿ ಮನೆತನದವರ ಉದಾರವಾದ ದಾನ-ದತ್ತಿಗಳು, ಪೂಜೆ-ಪುನಸ್ಕಾರಗಳು, ಜೀರ್ಣೋದ್ಧಾರದಿಂದಾಗಿ ಇಂದಿಗೂ ಉಳಿದು ಬಂದಿದೆ. ಹಂಪ ನಾಗರಾಜಯ್ಯ ಅವರು "ಏಳು-ಬೀಳುಗಳಿರುವ ನಿರಂತರ ಚರಿತ್ರೆಯನ್ನು ಗರ್ಭೀಕರಿಸಿರುವ ಈ ಬಸದಿಯ ವಾಸ್ತು-ಶಿಲ್ಪ ಇಂದಿಗೂ ಮನನೀಯವಾಗಿದೆ. ಬಸದಿಗಳ ವಿನಾಶದ ಸಂದರ್ಭಗಳ ಜತೆಗೇ ಅವುಗಳ ಪುನರ್ ಭರಣ ಪ್ರಕ್ರಿಯೆಯೂ ನಡೆಯುತ್ತಿದ್ದ ಎರಡೂ ರೀತಿಗೆ ಈ ಬಸದಿಯ ರೋಚಕ ಇತಿಹಾಸವೇ ಒಂದು ಜ್ವಲಂತ-ಜೀವಂತ ನಿದರ್ಶನವಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.[೯]

ಗಂಗಪೆರ್ಮಾಡಿ ಬಸದಿ ಮೂಲತಃ ಶಾಂತಿನಾಥ ತೀರ್ಥಂಕರನಿಗೆ ಅರ್ಪಿತವಾಗಿತ್ತು. ಈ ಬಸದಿಯನ್ನು ಅಣ್ಣಿಗೇರಿ ಪಟ್ಟಣದ ದೇಶಪಾಂಡೆ ಮನೆತನದ ನಾಡಕರ್ಣಿ ಶೂಗಪ್ಪ (ನಾಗಪ್ಪಯ್ಯ) ಅವರು-

> **ಸ್ವಸ್ತಿಶ್ರೀ ನ್ರಪ ಶಾಲಿವಾಹನ ಶಕೆ ೧೭೬೭ ॥ ೨ ಶ್ರಾ**
> **....ನಂ ॥ ದಲ್ಲಿ ಅಂನಗಿರಿಪುರದ ಶ್ರೀ ಶಾಂತಿನಾಥಸ್ವಾಮಿ**
> **ಚೈತ್ಯಾಲಯದ ದೇಶಕುಲಕರ್ಣಿಗಳಾದ ನಾಡಕರ್ಣಿ**
> **ಶೂಗಪ್ಪನವರು ಜೀರ್ಣೋದ್ಧಾರ ಮಾಡಿಶಿದರು ॥**

ಕ್ರಿ.ಶ. ೧೮೪೫ರಲ್ಲಿ ಜೀರ್ಣೋದ್ಧಾರ ಮಾಡಿಸಿದ್ದಾರೆ.[೧೦] ಕ್ರಿ.ಶ. ೧೯೪೧ರಲ್ಲಿ ಈ ಬಸದಿಯ ಎಡಬದಿಯಲ್ಲಿ ಯಾವುದೋ ಕಾರ್ಯಕ್ಕಾಗಿ ಅಗೆಯುತ್ತಿದ್ದ ಸಂದರ್ಭದಲ್ಲಿ, ಮುಂಜಾಗ್ರತಾ ಕ್ರಮದಿಂದ ಹೂಳಿಟ್ಟಿದ್ದ ಪಾರ್ಶ್ವನಾಥ ಮತ್ತು ಆದಿನಾಥ ತೀರ್ಥಂಕರರ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಿಲ್ಪಗಳು ದೊರೆತಿದ್ದವು. ಈ ಬಸದಿಯ ಗರ್ಭಗೃಹದಲ್ಲಿದ್ದ ಮೂಲನಾಯಕ ಶಾಂತಿನಾಥನ ಶಿಲ್ಪವು ತ್ರುಟಿತವಾಗಿತ್ತು. ದೇಶಪಾಂಡೆ ಮನೆತನದ ಭೀಮಪ್ಪಯ್ಯ ಅವರ ೩ನೆಯ ಧರ್ಮಪತ್ನಿ ಪುಷ್ಪಾವತಿಬಾಯಿ ಅವರು ಈ ಬಸದಿಯನ್ನು ಕ್ರಿ.ಶ. ೧೯೪೫ರಲ್ಲಿ ಜೀರ್ಣೋದ್ಧಾರ ಮಾಡಿಸುತ್ತಿದ್ದ ಸಂದರ್ಭದಲ್ಲಿ-

> **ಅಂಣೀಗೇರಿ ಶ್ರೀ ೧೦೦೮ ಶಾಂತಿನಾಥ ತೀರ್ಥಂಕರ**
> **ಚೈತ್ಯಾಲಯದಲ್ಲಿ ಶ್ರೀ ೧೦೦೮ ಶ್ರೀ ಪಾರ್ಶ್ವನಾಥ**
> **ತೀರ್ಥಂಕರ ಪ್ರಾಚೀನ ಜಿನಬಿಂಬವನ್ನು ಜೀರ್ಣೋದ್ಧಾರ**
> **ಮಾಡಿ ಕೊಲ್ಲಾಪೂರ ಶ್ರೀ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯ**
> **ಸ್ವಾಮಿಯವರ ಹಸ್ತದಿಂದ ಶ್ರೀಮಂತ ಭೀಮಪ್ಪಯ್ಯ**
> **ದೇಶಪಾಂಡೆಯವರ ತ್ರತಿಯಾ ಧರ್ಮ್ಮಪತ್ನಿಯಾದ ಶ್ರೀ**
> **ಪುಷ್ಪಾವತೀಬಾಯಿ ದೇಶಪಾಂಡೆ ಅಂಣೀಗೇರಿ ಇವರು ಶಕೆ**
> **೧೮೬೭ನೇ ಪಾರ್ಥಿವನಾಮ ಸಂವತ್ಸರದ ಮಾರ್ಗಶಿರ ॥**
> **ಶುದ್ಧ ॥ ದಶಮಿ ॥ ಶುಕ್ರವಾರ ದಿವಸ ಪಂಚಕಲ್ಯಾಣಪೂರ್ವಕ**
> **ಪ್ರತಿಷ್ಠಾ ಮಾಡಿಸಿದರು ॥**

ಕೊಲ್ಲಾಪುರದ ಭಟ್ಟಾರಕ ಪೀಠದ ೨೭ನೆಯ ಪೀಠಾಧಿಪತಿಗಳಾದ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯರ (ಕ್ರಿ.ಶ. ೧೮೯೬-೧೯೬೫) ಸಲಹೆ-ಸೂಚನೆಯ ಮೇರೆಗೆ ತ್ರುಟಿತವಾಗಿದ್ದ ಶಾಂತಿನಾಥನ ಶಿಲ್ಪವನ್ನು ಸ್ಥಳಾಂತರಿಸಿ, ಪಾರ್ಶ್ವನಾಥನ ಶಿಲ್ಪವನ್ನು ವಜ್ರಲೇಪನ ಮಾಡಿಸಿ ಪಂಚಕಲ್ಯಾಣಪೂರ್ವಕವಾಗಿ ಪ್ರತಿಷ್ಠಾಪಿಸಿದರು.[೧೧] ಅಂದಿನಿಂದ ಈ ಬಸದಿ ಪಾರ್ಶ್ವನಾಥ ಬಸದಿಯೆಂದು ಮರುನಾಮಕರಣ ಪಡೆದಿದೆ.

ಅಣ್ಣಿಗೇರಿ ಪಟ್ಟಣದ ಬಸ್ತಿ ಓಣಿಯಲ್ಲಿರುವ ಈ ಬಸದಿ ಕ್ರಿ.ಶ. ಸುಮಾರು ೧೧ನೆಯ ಶತಮಾನದಿಂದ ೨೦ನೆಯ ಶತಮಾನದವರೆಗೂ ಜೀರ್ಣೋದ್ಧಾರವಾಗುತ್ತ, ಹೊಸ ಹೊಸ ಸೇರ್ಪಡೆಗಳನ್ನು ಹೊಂದುತ್ತ ಬಂದಿದೆ. ಪೂರ್ವಾಭಿಮುಖವಾಗಿರುವ ಈ ಬಸದಿಯ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಎರಡು ನವರಂಗಗಳು, ಸಭಾಮಂಟಪ, ಮುಖಮಂಟಪಗಳಿವೆ. ಚೌಕಾಕಾರವಾದ ಗರ್ಭಗೃಹದ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಭಿತ್ತಿಗಂಬಗಳಿವೆ. ವಿತಾನವು ಜೀರ್ಣೋದ್ಧಾರವಾಗಿದ್ದು, ಸಮತಲವಾಗಿದೆ. ಸುತ್ತಲಿನ ಭಿತ್ತಿಗಳನ್ನು ಗ್ರಾನೈಟ್ ಶಿಲೆಗಳಿಂದ ಜೀರ್ಣೋದ್ಧಾರ ಮಾಡಲಾಗಿದೆ. ದ್ವಾರಬಂಧವು ಸರಳವಾಗಿದೆ. ತೆರೆದ ಅಂತರಾಳವು ಚೌಕಾಕಾರವಾಗಿದೆ.

೧ನೆಯ ನವರಂಗವು ಚೌಕಾಕಾರವಾಗಿದ್ದು, ಇದರ ಮಧ್ಯದಲ್ಲಿ ಬ್ರಹ್ಮಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಇವುಗಳು ಪೀಠ, ಪಾದ, ದಂಡ, ದಂಡಾಗ್ರ, ಗ್ರೀವ, ಶಿರ, ಬೋದಿಗೆಯನ್ನು ಹೊಂದಿವೆ. ವಿತಾನ ಮತ್ತು ಸುತ್ತಲಿನ ಭಿತ್ತಿಗಳನ್ನು ಸುನಂದಾಬಾಯಿ ದೇಶಪಾಂಡೆ ಅವರು ಜೀರ್ಣೋದ್ಧಾರ ಮಾಡಿಸಿದ್ದಾರೆ. ದ್ವಾರಬಂಧವು ಚತುಃಶಾಖಾ ರೀತಿಯಲ್ಲಿದ್ದು, ಎಲ್ಲವೂ ನಿರಲಂಕೃತವಾಗಿವೆ. ೨ನೆಯ ನವರಂಗವು ಚೌಕಾಕಾರವಾಗಿದ್ದು, ಇದರ ಮಧ್ಯದಲ್ಲಿ ವಿಷ್ಣುಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಇವುಗಳು ಪೀಠ, ಪಾದ, ದಂಡ, ದಂಡಾಗ್ರ, ಗ್ರೀವ, ಶಿರ, ಬೋದಿಗೆಯನ್ನು ಹೊಂದಿವೆ. ಈ ನಾಲ್ಕೂ ಸ್ತಂಭಗಳ ಪೀಠಗಳಿಗೆ ಹೊಂದಿಕೊಂಡಂತೆ ಮಧ್ಯದಲ್ಲಿ ಚೌಕಾಕಾರದ ಶಿಲಾವೇದಿಕೆಯಿದೆ. ಈ ನವರಂಗದ ಬಲಬದಿಯ ಭಿತ್ತಿಯಲ್ಲಿ ಜೈನಾಚಾರ್ಯರು ಏಕಾಂತ ತಪಸ್ಸು ಮಾಡಲು ಗುಂಹೆ ಇದೆ. ವಿತಾನ ಮತ್ತು ಸುತ್ತಲಿನ ಭಿತ್ತಿಗಳು ಜೀರ್ಣೋದ್ಧಾರವಾಗಿವೆ. ದ್ವಾರಬಂಧವು ತ್ರಿಶಾಖಾ ರೀತಿಯಲ್ಲಿದ್ದು, ಎಲ್ಲವೂ ನಿರಲಂಕೃತವಾಗಿವೆ. ಸಭಾಮಂಟಪವು ಚೌಕಾಕಾರವಾಗಿದ್ದು, ಇದರ ಮಧ್ಯದಲ್ಲಿ ಶ್ರೀಕಾರ ಪ್ರಕಾರದ ನಾಲ್ಕು ಸ್ತಂಭಗಳಿವೆ. ಇವುಗಳು ಪೀಠ, ಪಾದ, ದಂಡ, ದಂಡಾಗ್ರ, ಗ್ರೀವ, ಶಿರ, ಬೋದಿಗೆಯನ್ನು ಹೊಂದಿವೆ. ಈ ಸ್ತಂಭಗಳ ಸಮಾನಾಂತರದಲ್ಲಿ ಸುತ್ತಲೂ ವಿಷ್ಣುಕಾಂತ ಮತ್ತು ಬ್ರಹ್ಮಕಾಂತ ಪ್ರಕಾರದ ಹನ್ನೆರಡು ಸ್ತಂಭಗಳಿವೆ. ಸುತ್ತಲಿನ ಭಿತ್ತಿಗಳಲ್ಲಿ ಹದಿನಾರು ಭಿತ್ತಿಗಂಬಗಳಿವೆ. ವಿತಾನದ ಮಧ್ಯದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಈ ಮಂಟಪಕ್ಕೆ ಉತ್ತರ ಮತ್ತು ದಕ್ಷಿಣಾಭಿಮುಖವಾಗಿಯೂ ಎರಡು ಪ್ರವೇಶ ದ್ವಾರಬಂಧಗಳಿವೆ. ಮುಖ್ಯ ದ್ವಾರಬಂಧವು ಜೀರ್ಣೋದ್ಧಾರವಾಗಿದ್ದು, ಇದರ ಲಲಾಟ ಪಟ್ಟಿಯಲ್ಲಿ ಪರ್ಯಂಕಾಸನದಲ್ಲಿರುವ ತೀರ್ಥಂಕರನ ಉಬ್ಬುಶಿಲ್ಪವಿದೆ.

ಸಭಾಮಂಟಪದ ಪೂರ್ವ, ಉತ್ತರ, ದಕ್ಷಿಣದೆಡೆಯ ದ್ವಾರಬಂಧಗಳ ಮುಂಭಾಗದಲ್ಲಿ ಚಿಕ್ಕ ಚಿಕ್ಕ ಮುಖಮಂಟಪಗಳಿವೆ. ಪೂರ್ವದ ಮುಖಮಂಟಪದ ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ಸರಳವಾಗಿದೆ. ಕಕ್ಷಾಸನದ ಮೇಲೆ ರುದ್ರಕಾಂತ ಪ್ರಕಾರದ ಎರಡು ಸ್ತಂಭಗಳಿವೆ. ಮುಂಭಾಗದಲ್ಲಿ ಸೋಪಾನಗಳಿದ್ದು, ಇವುಗಳ ಪಾರ್ಶ್ವದಲ್ಲಿ ಮಕರಗಳಿಂದ ಅಲಂಕೃತವಾದ ಹಸ್ತಿಹಸ್ತವಿದೆ. ಇವುಗಳ ಪಕ್ಷಶಿಲಾಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ದಕ್ಷಿಣದ ಮುಖಮಂಟಪದ ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಕಕ್ಷಾಸನದ ಮೇಲೆ ವಿಷ್ಣುಕಾಂತ ಪ್ರಕಾರದ ಎರಡು ಸ್ತಂಭಗಳಿವೆ. ದ್ವಾರಬಂಧದಲ್ಲಿ ಐದು ಶಾಖೆಗಳಿದ್ದು, ಸ್ತಂಭಶಾಖೆ ಪ್ರಧಾನವಾಗಿದೆ. ಲಲಾಟ ಪಟ್ಟಿಯಲ್ಲಿ ಪರ್ಯಂಕಾಸನದಲ್ಲಿರುವ ತೀರ್ಥಂಕರನ ಉಬ್ಬುಶಿಲ್ಪವಿದೆ. ಮುಂಭಾಗದಲ್ಲಿ ಸೋಪಾನಗಳಿದ್ದು, ಇವುಗಳ ಪಾರ್ಶ್ವದಲ್ಲಿ ಮಕರಗಳಿಂದ ಅಲಂಕೃತವಾದ (ಗಜಾಕ್ರಾಂತ-ಸಿಂಹ) ಹಸ್ತಿಹಸ್ತವಿದೆ. ಇವುಗಳ ಪಕ್ಷಶಿಲಾಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ಉತ್ತರದ ಮುಖಮಂಟಪದ ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ಪಂಚಶಾಖಾ ರೀತಿಯಲ್ಲಿದ್ದು, ಎಲ್ಲವೂ ನಿರಲಂಕೃತವಾಗಿವೆ. ಲಲಾಟ ಪಟ್ಟಿಯಲ್ಲಿ ಶಿಲ್ಪಗಳಿಲ್ಲ. ಕಕ್ಷಾಸನದ ಮೇಲೆ ರುದ್ರಕಾಂತ ಪ್ರಕಾರದ ಎರಡು ಸ್ತಂಭಗಳಿವೆ. ಮುಂಭಾಗದಲ್ಲಿ ಸೋಪಾನಗಳಿದ್ದು, ಇವುಗಳ ಪಾರ್ಶ್ವದಲ್ಲಿ ಹಸ್ತಿಹಸ್ತವಿದೆ. ಇವುಗಳ ಪಕ್ಷಶಿಲಾಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ.

ಗರ್ಭಗೃಹದ ಹೊರಭಾಗದ ವಿನ್ಯಾಸವು ತ್ರಿರಥ ಮಾದರಿಯಲ್ಲಿದೆ. ಇದರ ಅಧಿಷ್ಠಾನವು ಕಪೋತಬಂಧ ಪ್ರಕಾರದಾಗಿದ್ದು, ಇದರಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟ ಕುಮುದ, ಕಪೋತ ಭಾಗಗಳಿವೆ. ಪದ್ಮಪಟ್ಟಿಕೆಯ ಮೇಲೆ ಕ್ರಿ.ಶ. ಸುಮಾರು ೧೮ನೆಯ ಶತಮಾನದ ಎರಡು ಶಾಸನಗಳಿದ್ದು, ೧ನೆಯ ಶಾಸನದಲ್ಲಿ "ಕ ೩ ಗ ಪ ಳ" ಎಂದು ನಿರೂಪಣೆಯಿದೆ.[೨] ಈ ಬಸದಿಯ ಜೀರ್ಣೋದ್ಧಾರದ ಸಂದರ್ಭದಲ್ಲಿ ಶಿಲ್ಪಿಗಳು ಶಿಲೆಗಳ ಗುರುತಿಗಾಗಿ ಈ ಅಕ್ಷರಗಳು ಮತ್ತು ಸಂಖ್ಯೆಗಳನ್ನು ಬರೆದುಕೊಂಡಿರುವಂತೆ ತೋರುತ್ತದೆ. ೨ನೆಯ ಶಾಸನದಲ್ಲಿ-

ಮಾಚಿನ ವಸಂತ....ಸಂದಿ ಹಡುವರ ಹಗ ಬೆಡುತ್ತಾ ಗದಿಗಿನ
ವಿರಾಜನ ತಯ ತಮನ ಚಉಳಿ ೭ .... ನಿಂಗೆ ಉ ೧೫ ....

ಬಸದಿಯ ಅಧಿಷ್ಠಾನದ ಭಾಗವನ್ನು ಕಟ್ಟಿದ ಗದುಗಿನ ವೀರಾಜ ಎಂಬ ಶಿಲ್ಪಿ ಮತ್ತು ವಿವಿಧ ಅಳತೆ ಪ್ರಮಾಣಗಳ ಪ್ರಸ್ತಾಪವಿದೆ.[೩] ಭಿತ್ತಿ ಸಮತಲವಾಗಿದ್ದು, ಇದರ ರಚನೆಯಲ್ಲಿ ದೊಡ್ಡ ದೊಡ್ಡ ಶಿಲೆಗಳನ್ನು ಬಳಸಲಾಗಿದೆ. ನವರಂಗದ ಬಲಬದಿಯ ಭಿತ್ತಿಯಲ್ಲಿ ಸರಳವಾದ ಎರಡು ಜಾಲಂಧ್ರಗಳಿವೆ. ಭಿತ್ತಿಯ ಮೇಲ್ಭಾಗದಲ್ಲಿ ಸುತ್ತಲೂ ಹದಿನಾಲ್ಕು ಜಲಪ್ರಣಾಳಿಗಳಿವೆ. ಬಸದಿಯ ಮೇಲ್ಭಾಗದಲ್ಲಿ ಸುತ್ತಲಿರುವ ಕೈಪಿಡಿ ಗೋಡೆ ಮತ್ತು ಶಿಖರಗಳನ್ನು ೧೯೪೧ರಲ್ಲಿ ಗಾರೆಯಿಂದ ಜೀರ್ಣೋದ್ಧಾರ ಮಾಡಲಾಗಿದೆ. ಶಿಖರವು ಮೆಟ್ಟಿಲಾಕಾರದಲ್ಲಿದೆ.

ಬಸದಿಯ ಮುಂಭಾಗದಲ್ಲಿರುವ ಪ್ರವೇಶಮಂಟಪವು (ನಗಾರಿಖಾನೆ) ಕ್ರಿ.ಶ. ಸುಮಾರು ೧೬ನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಇದರ ಮಧ್ಯದಲ್ಲಿ ವಿಷ್ಣುಕಾಂತ ಪ್ರಕಾರದ ಎರಡು ಮತ್ತು ಬ್ರಹ್ಮಕಾಂತ ಪ್ರಕಾರದ ಎರಡು ಸ್ತಂಭಗಳಿವೆ.

ಇವುಗಳಿಗೆ ಸಮಾನಾಂತರದಲ್ಲಿ ಭಿತ್ತಿಗಳಲ್ಲಿ ಹನ್ನೊಂದು ಸ್ತಂಭಗಳಿವೆ. ವಿತಾನದಲ್ಲಿ ಒಂಭತ್ತು ಅಂಕಣಗಳಿದ್ದು, ಎಲ್ಲವೂ ನಿರಲಂಕೃತವಾಗಿವೆ. ದ್ವಾರಬಂಧದಲ್ಲಿ ಮೂರು ಶಾಖೆಗಳಿದ್ದು, ಎಲ್ಲವೂ ನಿರಲಂಕೃತವಾಗಿವೆ. ಲಲಾಟ ಪಟ್ಟಿಯಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಈ ಮಂಟಪದ ಮೇಲಕ್ಕೆ ಹೋಗಲು ಈಶಾನ್ಯ ಮೂಲೆಯಲ್ಲಿ ಮೆಟ್ಟಿಲುಗಳಿದ್ದವು. ಈಗ ಇವುಗಳನ್ನು ಮುಚ್ಚಲಾಗಿದೆ. ಮೇಲ್ಭಾಗದ ಕೊಠಡಿಯಲ್ಲಿ ಮುಂಚೆ ಬೆಳಿಗ್ಗೆ ಐದು ಗಂಟೆಯ ಸಮಯದಲ್ಲಿ ನಗಾರಿಯನ್ನು ಬಾರಿಸಲಾಗುತ್ತಿತ್ತು. ಆ ನಗಾರಿ ತಾಮ್ರದಾಗಿದ್ದು, ಅದು ಇಂದಿಗೂ ಉಳಿದು ಬಂದಿದೆ. ದ್ವಾರಬಂಧದ ಮುಂಭಾಗದಲ್ಲಿ ಸೋಪಾನಗಳಿವೆ. ಈ ಮಂಟಪದ ಬಲಬದಿಯ ಗೂಡಿನಲ್ಲಿ ಬ್ರಹ್ಮದೇವರನ್ನು ಪ್ರತಿಷ್ಠಾಪಿಸಲಾಗಿದೆ. ಈ ನಗಾರಿಖಾನೆಯ ಮೇಲ್ಭಾಗದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಶಿಲೆಯನ್ನು ಭಿತ್ತಿಯ ರಚನೆಯಲ್ಲಿ ಬಳಸಲಾಗಿದೆ. ಇದರಲ್ಲಿ ಅರವತ್ತೈದು ಸಾಲುಗಳಿವೆ. ನಗಾರಿಖಾನೆಯ ದ್ವಾರಬಂಧದ ಬಲಬದಿಯಲ್ಲಿರುವ ಸ್ತಂಭದ ಪೀಠದಲ್ಲಿನ ಕ್ರಿ.ಶ. ಸುಮಾರು ೧೩ನೆಯ ಶತಮಾನದ ತ್ರುಟಿತ ಶಾಸನದಲ್ಲಿ ಸೇವುಣರ ಪ್ರತಾಪಚಕ್ರವರ್ತಿ ಮಹಾದೇವನ ಆಳ್ವಿಕೆಯ ಪರಿಚಯವಿದ್ದು–

ಶ್ರೀಮತು ಯಾದವನಾರಾಯಣ ....ಪ್ರತಾಪ ಚಕ್ರವರ್ತಿ
ಮಹಾದೇವ ವರುಷದ ......ಉಭ ಸಂವತ್ಸರದ ವೈಶಾಖ
....ಏಕಾದಶಿ ಸೋಮವಾರ ಸೂರ್ಯಗ್ರಹಣ ....
ಪುಣ್ಯತಿಥಿಯ ....ಲೂಗಂ ....

ಯಾವುದೋ ಕಾರ್ಯಕ್ಕೆ ದಾನ ಮಾಡಿದ ವಿವರಗಳಿರುವಂತೆ ತೋರುತ್ತದೆ.[೧೪] ಇದೇ ದ್ವಾರಬಂಧದ ಎಡಬದಿಯಲ್ಲಿರುವ ಸ್ತಂಭದ ಪೀಠದಲ್ಲಿಯೂ ಶಾಸನವಿದ್ದು, 'ಶ್ರೀ' ಎಂಬ ಅಕ್ಷರ ಮಾತ್ರ ಗೋಚರಿಸುತ್ತದೆ. ಕೆಳಗಿನ ಭಾಗವನ್ನು ಸಿಮೆಂಟಿನಿಂದ ಕಟ್ಟಲಾಗಿದೆ.

ಬಸದಿಯ ಸುತ್ತಲೂ ಪ್ರಾಕಾರವನ್ನು (ಗೋಡೆ) ನಿರ್ಮಿಸಲಾಗಿದೆ. ಇದರ ಬಲಬದಿಯ (ದಕ್ಷಿಣಭಾಗ) ಪ್ರಾಕಾರ ಗೋಡೆಯನ್ನು ಚಂದ್ರಪ್ಪ ದೇವಪ್ಪ ಬಸ್ತಿ ಅವರು ಆಚಾರ್ಯಶ್ರೀ ಪಾಯಸಾಗರ ಮುನಿಗಳ ಧರ್ಮೋಪದೇಶದಿಂದ ಪ್ರೇರಿತರಾಗಿ–

ಶ್ರೀ ಜಿನಮಂದಿರದ ದಕ್ಷಿಣ ಭಾಗದ ಗೋಡೆಯನ್ನು
ರಾ। ರಾ। ಚಂದ್ರಪ್ಪಾ ದೇವಪ್ಪ ಬಸ್ತಿ ಉಪಾಧ್ಯೆಯ
ಅಂಣಿಗೇರಿ ಇವರು ಕಟ್ಟಿಸಿರುತ್ತಾರೆ ಮಹಾವೀರ ಶಕೆ
೨೪೬೭ ಸನ್ ತಾ। ೧೨/೫/೧೯೪೧ ಇಸ್ವಿ ಶ್ರೀ ೧೦೮
ದಿಗಂಬರ ಮುನಿ ಪಾಯಸಾಗರರು ಬಂದ ಕಾಲಕೆ

ಕ್ರಿ.ಶ. ೧೯೪೧ರ ಮೇ ೧೨ರಂದು ಕಟ್ಟಿಸಿದ್ದಾರೆ.[೧೫] ಹಿಂಭಾಗದ (ಪಶ್ಚಿಮಭಾಗ) ಪ್ರಾಕಾರ ಗೋಡೆಯನ್ನು ಪುಷ್ಪಾವತಿಬಾಯಿ ದೇಶಪಾಂಡೆ ಅವರು–

ಶ್ರೀ ಶಕೆ ೧೮೭೦ರಲ್ಲಿ ಕಟ್ಟಿಸಿಧು ಶ್ರೀ
ಪುಷ್ಪಾವತಿಬಾಯಿ ॥ ದೇಶಪಾಂಡೆಯವರು

ಕ್ರಿ.ಶ. ೧೯೪೮ರಲ್ಲಿ ಕಟ್ಟಿಸಿದ್ದಾರೆ.[೧೬]

ಆದಿನಾಥ ಬಸದಿ

ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ "ಚಂದವ್ವೆಯ ಮಗನಾದ ಹೆಗ್ಗಡೆ ಮಲ್ಲಯ್ಯನು ಆದಿನಾಥ ಬಸದಿಯ ಆಚಾರ್ಯರ ಸೇವೆಯನ್ನು ಮಾಡುತ್ತ, ಹನ್ನೆರಡು ಮತ್ತರು ಭೂಮಿ ಮತ್ತು ಒಂದು ಮನೆಯನ್ನು ದಾನ ಮಾಡಿದನು" ಎಂದು ವಿವರವಿದೆ.[೧೭] ಈ ವಿವರವು ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿಯೂ ದಾಖಲಾಗಿದೆ.[೧೮] ಇದರಿಂದ ಅಣ್ಣಿಗೇರಿ ಪಟ್ಟಣದಲ್ಲಿ ಆದಿನಾಥ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಆ ಬಸದಿಯ ನಿರ್ಮಾತೃರು ಮತ್ತು ನಿರ್ಮಾಣವಾದ ಕಾಲಮಾನದ ಕುರಿತು ಸ್ಪಷ್ಟವಿಲ್ಲ. ಆ ಬಸದಿ ಇಂದು ಉಳಿದು ಬಂದಿಲ್ಲ.

ಸೇನಗಣದ ಬಸದಿ

ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ "ಕೇತಗಾವುಂಡನು ತನ್ನ ಮನೆದೇವರಾದ ಸೇನಗಣದ ಬಸದಿಯ ಆಚಾರ್ಯರ ಪಾದಗಳನ್ನು ತೊಳೆದು ಹೂಲಿಗೊಳದ ಸೀಮೆಯಿಂದ ಕುಳುಪಳ್ಳದ ಪಶ್ಚಿಮ ಭಾಗದಲ್ಲಿ ಎಂಟು ಮತ್ತರು ಭೂಮಿ ಮತ್ತು

ನಾಲ್ಕು ಅರುವಣ ಗದ್ಯಾಣಗಳನ್ನು ದಾನ ಮಾಡಿದನು" ಎಂದು ದಾಖಲಾಗಿದೆ.[೧೯] ಈ ವಿವರವು ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿಯೂ ನಿರೂಪಿತವಾಗಿದೆ.[೨೦] ಇದರಿಂದ ಅಣ್ಣಿಗೇರಿ ಪಟ್ಟಣದಲ್ಲಿ ಸೇನಗಣ ಪರಂಪರೆಯ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಆ ಬಸದಿ ಯಾವ ತೀರ್ಥಂಕರನಿಗೆ ಅರ್ಪಿತವಾಗಿತ್ತು ಮತ್ತು ಅದರ ನಿರ್ಮಾತೃರು, ನಿರ್ಮಾಣವಾದ ಕಾಲಮಾನದ ಕುರಿತು ಸ್ಪಷ್ಟವಿಲ್ಲ. ಆ ಬಸದಿ ಇಂದು ಉಳಿದು ಬಂದಿಲ್ಲ.

ಬಟ್ಟಕೆರೆಯ ಕಲಿದೇವಸ್ವಾಮಿ ಬಸದಿ

ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ "ಮಹಾಪ್ರಧಾನ ವಸುಧೈಕ್ಯಬಾಂಧವ ರೇಚಿದೇವ ದಂಡನಾಯಕನು ಬಟ್ಟಕೆರೆಯ ಕಲಿದೇವಸ್ವಾಮಿ ಜಿನನ (ಆದಿನಾಥ ತೀರ್ಥಂಕರ) ಪಾದಾರ್ಚನೆಗೆ ಮತ್ತು ಕರ್ಪೂರ, ಕುಂಕುಮ, ಶ್ರೀಗಂಧ ಸಹಿತವಾಗಿ ಅಷ್ಟವಿಧಾರ್ಚನೆಗೆ ಹನ್ನೆರಡು ಮತ್ತರು ಭೂಮಿಯನ್ನು ದಾನ ಮಾಡಿದನು" ಎಂದು ಪ್ರಸ್ತಾಪವಿದೆ.[೨೧] ಈ ವಿವರವು ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿಯೂ ದಾಖಲಾಗಿದೆ.[೨೨] 'ವಸುಧೈಕಬಾಂಧವ' ಎಂಬ ಬಿರುದಾಂಕಿತನಾದ ರೇಚಿದೇವ ದಂಡನಾಯಕನು (ಕ್ರಿ.ಶ. ೧೧೩೫–೧೨೨೫) ಕಲಚೂರಿಗಳು ಮತ್ತು ಹೊಯ್ಸಳರ ಕಾಲಾವಧಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತ, ಅವರ ನಿಷ್ಠಾವಂತ ಅಧಿಕಾರಿಯಾಗಿ, ವಿವಿಧೆಡೆಗಳಲ್ಲಿ ಜೈನ ಚಟುವಟಿಕೆಗಳನ್ನು ಕೈಗೊಂಡಿದ್ದಾನೆ.[೨೩] ಬಟ್ಟಕೆರೆ ಇಂದಿನ ಗದಗ ನಗರದ ಒಂದು ಭಾಗವಾಗಿರುವ ಬೆಟಗೇರಿಯಾಗಿದೆ. ಇದು ರಾಷ್ಟ್ರಕೂಟರು, ಚಾಳುಕ್ಯರು, ಕಲಚೂರಿಗಳ ಕಾಲಾವಧಿಯಲ್ಲಿ ಪ್ರಸಿದ್ಧ ಅಗ್ರಹಾರವಾಗಿತ್ತು. ಇಲ್ಲಿ ಇನ್ನೂರು ಮಹಾಜನರು ನೆಲೆಸಿದ್ದರು. ಕೆಲವು ಶಾಸನಗಳಲ್ಲಿ ಇದನ್ನು ಬಟ್ಟೆಕೆಱೆ, ಬಟ್ಟಕೆಱೆ ಎಂದೆಲ್ಲ ಕರೆಯಲಾಗಿದೆ.[೨೪] ಈ ಅಗ್ರಹಾರದಲ್ಲಿ ಕ್ರಿ.ಶ. ಸುಮಾರು ೧೦–೧೧ನೆಯ ಶತಮಾನದಲ್ಲಿ ಆದಿನಾಥ ಬಸದಿ ನಿರ್ಮಾಣವಾಗಿತ್ತು. ಅದರ ನಿರ್ಮಾತೃರು ಮತ್ತು ನಿರ್ಮಾಣದ ಕಾಲಮಾನದ ಕುರಿತು ದಾಖಲೆಗಳು ಲಭ್ಯವಿಲ್ಲ. ಆ ಬಸದಿ ಇಂದು ಉಳಿದು ಬಂದಿಲ್ಲ. ಆದರೆ ಆ ಬಸದಿಯಲ್ಲಿ ಪ್ರತಿಷ್ಠಾಪಿತವಾಗಿದ್ದ ಆದಿನಾಥ ತೀರ್ಥಂಕರನ ಶಿಲ್ಪವು ಇಂದಿಗೂ ಉಳಿದು ಬಂದಿದೆ. ಇದು ಈಗ ತೆಂಗಿನಕಾಯಿ ಬಜಾರದಲ್ಲಿರುವ ವೀರಭದ್ರೇಶ್ವರ ದೇವಾಲಯದ ಮುಂಭಾಗದಲ್ಲಿನ ಗಡಗಡೆ ಬಾವಿಯ ಹತ್ತಿರವಿದೆ.

ಪಂಚವಸದಿ (ಪಂಚಬಸದಿ)

ಕ್ರಿ.ಶ. ೧೧೮೪ರ ಶಾಸನದಲ್ಲಿ, ವೀರಬ್ರಹ್ಮೇಶ್ವರ ದೇವಾಲಯಕ್ಕೆ ದಾನ ಮಾಡಿದ ಭೂಮಿಯ ಸೀಮಾ ವಿವರಗಳಲ್ಲಿ ಪಂಚವಸದಿಯ (ಪಂಚವಸದಿ > ಪಂಚಬಸದಿ > ಪಂಚಕೂಟ ಬಸದಿ) ಉಲ್ಲೇಖವಿದೆ.[೨೫] ಇದರಿಂದ ಅಣ್ಣಿಗೇರಿ ಪಟ್ಟಣದಲ್ಲಿ ಪಂಚಕೂಟ ತಲವಿನ್ಯಾಸದ ಬಸದಿ ಇತ್ತೆಂಬುದು ಮನದಟ್ಟಾಗುತ್ತದೆ. ಆದರೆ ಆ ಬಸದಿಯ ನಿರ್ಮಾತೃರು ಮತ್ತು ನಿರ್ಮಾಣವಾದ ಕಾಲಮಾನದ ಕುರಿತು ಸ್ಪಷ್ಟವಿಲ್ಲ. ಆ ಬಸದಿ ಇಂದು ಉಳಿದು ಬಂದಿಲ್ಲ.

ಬ್ರಹ್ಮಯ್ಯನ ಬಸದಿ

ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ, ಅಮೃತೇಶ್ವರ ದೇವಾಲಯಕ್ಕೆ ದಾನ ಮಾಡಿದ ಭೂಮಿಯ ಸೀಮಾ ವಿವರಗಳಲ್ಲಿ ಬ್ರಹ್ಮಯ್ಯನ ಬಸದಿಯವರು ಅರವತ್ತು ಮತ್ತರು ಭೂಮಿಯಲ್ಲಿ ಒಂಭತ್ತು ಮತ್ತರು ಭೂಮಿಯನ್ನು ದಾನ ಮಾಡಿದ ನಿರೂಪಣೆಯಿದೆ.[೨೬] ಇದರಿಂದ ಅಣ್ಣಿಗೇರಿ ಪಟ್ಟಣದಲ್ಲಿ ಬ್ರಹ್ಮಯ್ಯ ಎಂಬುವವನು ನಿರ್ಮಿಸಿದ ಬಸದಿ ಇತ್ತೆಂಬುದು ವೇದ್ಯವಾಗುತ್ತದೆ. ಆದರೆ ಆ ಬಸದಿಯ ನಿರ್ಮಾಣವಾದ ಕಾಲಮಾನದ ಕುರಿತು ಸ್ಪಷ್ಟವಿಲ್ಲ. ಆ ಬಸದಿ ಇಂದು ಉಳಿದು ಬಂದಿಲ್ಲ.

ಬಸದಿ

ಪೇಟೆ ಓಣಿಯಲ್ಲಿರುವ ತೋಂಟದಾರ್ಯ ಮಠದ ಆವರಣದಲ್ಲಿನ ವೀರಭದ್ರ ದೇವಾಲಯದ ಕುಂಬಿಯಲ್ಲಿರುವ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ, ಜಿನಿಸೆಟ್ಟಿಯ ಸೊಸೆ ಚಾಮವ್ವೆ, ಬಿಯಗ (ಭಾವ) ಕಲ್ಲಿಸೆಟ್ಟಿ, ಮಗ ಚಂದಿಸೆಟ್ಟಿ, ಮದವಳಿಗೆ (ಧರ್ಮಪತ್ನಿ) ಆಚವ್ವೆ ಕೂಡಿಕೊಂಡು ಅಶೇಷನಗರದ ದೇವರ ಸನ್ನಿಧಿಯಲ್ಲಿ ಈ ಬಸದಿಯೊಳಗೆ ದೇವರ ನಿತ್ಯಪೂಜೆಗೆ ಅಂಗಡಿ ಮತ್ತು ಎರಡು ಮನೆಗಳನ್ನು ದಾನ ಮಾಡಿದ ವಿವರವಿದೆ.[೨೭] ಅಣ್ಣಿಗೇರಿ ಪಟ್ಟಣದ ಜೈನ ದೇಶಪಾಂಡೆ ಮನೆತನದವರು ತೋಂಟದಾರ್ಯ ಮಠದ ೧೦ನೆಯ ಪೀಠಾಧಿಪತಿಗಳಾದ ಉರಿತೋಂಟದಾರ್ಯ ಸ್ವಾಮಿಗಳ (ಕ್ರಿ.ಶ. ೧೭೬೭–೧೭೭೩) ಪ್ರಭಾವಕ್ಕೊಳಗಾಗಿ ತಮ್ಮ ಬಸದಿಯನ್ನೇ ದಾನವಾಗಿ ಕೊಟ್ಟರು ಎಂದು ಹೇಳಲಾಗುತ್ತದೆ.[೨೮]

ಈ ಹಿನ್ನೆಲೆಯಲ್ಲಿ ಪ್ರಸ್ತುತ ವೀರಭದ್ರ ದೇವಾಲಯದ ಸ್ಥಳದಲ್ಲಿಯೇ ಈ ಶಾಸನೋಕ್ತ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಆ ಬಸದಿಯ ನಿರ್ಮಾತೃರು ಮತ್ತು ನಿರ್ಮಾಣವಾದ ಕಾಲಮಾನದ ಕುರಿತು ಸ್ಪಷ್ಟವಿಲ್ಲ.

ಚಂದ್ರನಾಥ ಬಸದಿ

ಕ್ರಿ.ಶ. ಸುಮಾರು ೧೪ನೆಯ ಶತಮಾನದ ಶಾಸನದಲ್ಲಿ, ಅಣ್ಣಿಗೇರಿಯ ಚಂದ್ರನಾಥ (ಚಂದ್ರಪ್ರಭನಾಥ) ಬಸದಿಯ ಉಲ್ಲೇಖವಿದೆ.[೨೯] ಇದರಿಂದ ಅಣ್ಣಿಗೇರಿ ಪಟ್ಟಣದಲ್ಲಿ ಚಂದ್ರಪ್ರಭನಾಥ ಬಸದಿ ಇತ್ತೆಂಬುದು ಮನದಟ್ಟಾಗುತ್ತದೆ. ಅದು ಇಂದಿನ ಸಂಗಾಪುರ ಬಡಾವಣೆಯಲ್ಲಿರುವ ಶಿಕ್ಕೆದೇಸಾಯಿ ಅವರ ರುದ್ರಭೂಮಿ ಪರಿಸರದಲ್ಲಿ ನಿರ್ಮಾಣವಾಗಿದ್ದಂತೆ ತೋರುತ್ತದೆ. ಆದರೆ ಆ ಬಸದಿಯ ನಿರ್ಮಾತೃರು ಮತ್ತು ನಿರ್ಮಾಣವಾದ ಕಾಲಮಾನದ ಕುರಿತು ಸ್ಪಷ್ಟವಿಲ್ಲ. ಆ ಬಸದಿ ಇಂದು ಉಳಿದು ಬಂದಿಲ್ಲ.

ಹೀಗೆ ಕ್ರಿ.ಶ. ಸುಮಾರು ೬ನೆಯ ಶತಮಾನದಿಂದಲೂ ಅಣ್ಣಿಗೇರಿಯು ಜೈನ ಧರ್ಮದ ಪ್ರಾದೇಶಿಕ ಚರಿತ್ರೆ ಮತ್ತು ಸಂಸ್ಕೃತಿಯ ವಿವಿಧ ಆಯಾಮಗಳ ಪುನಾರಚನೆಯಲ್ಲಿ ಗ್ರಾಮದ ಜೈನ ಶಾಸನಗಳಾದಿ ಬಸದಿಗಳು ಮತ್ತು ಶಿಲ್ಪಗಳ ಕೊಡುಗೆ ಅಪಾರವಾಗಿದೆ ಎಂದು ಹೇಳಬಹುದಾಗಿದೆ.

ಅಡಿಟಿಪ್ಪಣಿಗಳು

೧. ಎಸ್.ಆಯ್.ಆಯ್. ಸಂ. XI-i, ಶಾ.ಸಂ. ೫.
೨. ಗೋಗಿ ಹನುಮಾಕ್ಷಿ (ಸಂ.), ಲಕ್ಷ್ಮೇಶ್ವರ : ಸಾಂಸ್ಕೃತಿಕ ಅಧ್ಯಯನ (೨೦೧೫), ಶಾ.ಸಂ. ೧೭, ಪು. ೨೮–೩೦.
೩. ಹಂಪ ನಾಗರಾಜಯ್ಯ, ಶಾಸನಗಳಲ್ಲಿ ಬಸದಿಗಳು (೧೯೯೮), ಪು. ೨೬–೨೭.
೪. ಇ.ಆಯ್. ಸಂ. XV, ಶಾ.ಸ. ೨೩/ಬಿ.
೫. ಅದೇ, ಶಾ.ಸ. ೨೩/ಎ.
೬ ಎಸ್.ಆಯ್.ಆಯ್. ಸಂ. XV, ಶಾ.ಸಂ. ೫೯.
೭. ಅದೇ, ಶಾ.ಸಂ. ೨೧೬.
೮. ಅದೇ, ಸಂ. XI-i, ಶಾ.ಸಂ. ೧೦೩.
೯. ಹಂಪ ನಾಗರಾಜಯ್ಯ, "ಗಾವರವಾಡ ಶಾಸನದ ಆಯಾಮಗಳು", ಚಂದ್ರಕೊಡೆ (ಸಂಶೋಧನ ಲೇಖನಗಳ ಸಂಗ್ರಹ–೧೯೯೭), ಪು. ೪೪೮–೪೯೬.
೧೦. ಹಂಜೆ ಅಪ್ಪಣ್ಣ ಎನ್. "ಅಣ್ಣಿಗೇರಿಯ ಎರಡು ಜೈನ ಶಿಲಾಫಲಕ ಶಾಸನಗಳು", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೨/೩ (ಜುಲೈ/ಸೆಪ್ಟಂಬರ–೨೦೦೮), ಪು. ೫೭–೬೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೧೧. ಅದೇ.
೧೨. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
೧೩. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
೧೪. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
೧೫. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
೧೬. ಕ್ಷೇತ್ರಕಾರ್ಯದಲ್ಲಿ ದೊರೆತ ಅಪ್ರಕಟಿತ ಶಾಸನ.
೧೭. ಇ.ಆಯ್. ಸಂ. xv, ಶಾ.ಸ. ೨೩/ಬಿ.
೧೮. ಅದೇ, ಶಾ.ಸ. ೨೩/ಎ.
೧೯. ಅದೇ, ಶಾ.ಸ. ೨೩/ಬಿ.
೨೦. ಅದೇ, ಶಾ.ಸ. ೨೩/ಎ.
೨೧. ಅದೇ, ಶಾ.ಸ. ೨೩/ಬಿ.
೨೨. ಅದೇ, ಶಾ.ಸ. ೨೩/ಎ.
೨೩. ಹಂಪ ನಾಗರಾಜಯ್ಯ, "ವಸುಧೈಕ ಬಾಂಧವ ರೇಚಣದಂಡನಾಥ", ಚಂದ್ರಕೊಡೆ (ಸಂಶೋಧನ ಲೇಖನಗಳ ಸಂಗ್ರಹ–೧೯೯೭), ಪು. ೪೯–೬೧.
೨೪. ಭಾರತೀ ಬಿ.ಆರ್. (ಸಂ.), ಪೂರ್ವೋಕ್ತ, ಸಂಪುಟ–೧, ಶಾ.ಸಂ. ೧೪೮, ೨೧೯. ಎಸ್.ಆಯ್.ಆಯ್. ಸಂ. XVIII, ಶಾ.ಸಂ. ೧೦೪, ೧೧೪, ೨೮೦.
೨೫. ಎಸ್.ಆಯ್.ಆಯ್. ಸಂ. XV, ಶಾ.ಸಂ. ೫೯.
೨೬ ಅದೇ, ಶಾ.ಸಂ. ೧೯೪.
೨೭. ಗೋಗಿ ಹನುಮಾಕ್ಷಿ, "ಅಣ್ಣಿಗೇರಿಯಲ್ಲಿ ದೊರೆತ ಹೊಸ ಶಾಸನಗಳು", ಅನುಶಾಸನ (೨೦೦೨), ಪು. ೧೮೦.
೨೮. ರಾಠೋಡ ಪಂಡಿತ ಕೆ. (ಸಂ.), ಪಂ. ಸಿದ್ಧಲಿಂಗಶಾಸ್ತ್ರಿಗಳ ಸಮಗ್ರ ಸಾಹಿತ್ಯ (೨೦೧೧), ಪು. ೬೦.
೨೯. ಹಂಜೆ ಅಪ್ಪಣ್ಣ ಎನ್., "ನವಲಗುಂದ ತಾಲ್ಲೂಕಿನ ಜೈನಾವಶೇಷಗಳು", ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೦೮), ಪು. ೧೬–೧೮, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೬೦

ಚಿಕ್ಕೋಡಿ ತಾಲ್ಲೂಕಿನ ಶಾಸನೋಕ್ತ ಶೈವ ದೇವಾಲಯಗಳು

ಶ್ರೀಧರ ಕಾಂಬಳೆ*

ಬೆಳಗಾವಿ ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಒಂದಾದ ಚಿಕ್ಕೋಡಿ ಬೆಳಗಾವಿ ಉತ್ತರ ದಿಕ್ಕಿಗಿರುವ ತಾಲೂಕು ಕೇಂದ್ರವಾಗಿದೆ. ಇಲ್ಲಿಯ ಜನರ ನಿರ್ಲಕ್ಷ್ಯದಿಂದ ಅನೇಕ ಶಾಸನಗಳು, ಶಿಲ್ಪಿಗಳು, ನದಿ, ಬಾವಿಯಲ್ಲಿ ಎಸೆದಿರುವ ಕುರಿತು ಮಾಹಿತಿಯು ಲಭ್ಯವಾಗುತ್ತದೆ. ಆದರೂ ಇಲ್ಲಿ ದೊರೆತ ಮತ್ತು ಉಲ್ಲೇಖಗೊಂಡ ಶಾಸನಗಳನ್ನು ಮತ್ತು ಅಳಿದುಳಿದ ಇತರ ಸ್ಮಾರಕಗಳನ್ನು ಗಮನಿಸಲಾಗಿ ಈ ತಾಲ್ಲೂಕು ಮಹತ್ವದ ಚರಿತ್ರೆ ಹೊಂದಿರುವುದು ತಿಳಿದುಬರುತ್ತದೆ.

ಈ ತಾಲ್ಲೂಕಿನಲ್ಲಿ ಒಟ್ಟು ೧೦೨ ಹಳ್ಳಿಗಳಿದ್ದು ೧೦೦ ಹಳ್ಳಿಗಳಲ್ಲಿ ಜನವಸತಿ ಕಂಡುಬರುತ್ತದೆ. ನಿಪ್ಪಾಣಿ ಮತ್ತು ನಾಗರಮುನ್ನೋಳ್ಳಿ ಹೋಬಳಿಗಳಾಗಿವೆ. ವೇದಗಂಗಾ ಮತ್ತು ಕೃಷ್ಣಾ ನದಿಗಳು ಈ ತಾಲೂಕಿನಲ್ಲಿ ಹರಿದಿದ್ದರಿಂದ ಬಹಳಷ್ಟು ನೀರಾವರಿ ಕೃಷಿಯನ್ನು ಹೊಂದಿರುತ್ತದೆ.[೧]

ಶಿಲಾ ಸಂಸ್ಕೃತಿಯಿಂದ ಪ್ರಾರಂಭಗೊಂಡ ಚಿಕ್ಕೋಡಿ ತಾಲ್ಲೂಕಿನ ಇತಿಹಾಸ, ಮೌರ್ಯರು, ಶಾತವಾಹನರು, ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಮತ್ತು ಸಾಮಂತ ಮನೆತನಗಳಾಗಿ ಅಧಿಕಾರಕ್ಕೆ ಬಂದ ಶಿಲಾಹಾರರು, ಸವದತ್ತಿಯ ರಟ್ಟರು, ಗೋವೆಯ ಕದಂಬರು, ನಂತರ ಯಾದವರು, ಬಹಮನಿ ಸುಲ್ತಾನರು, ಮರಾಠರು, ಪೇಶ್ವೆಗಳು ಇನ್ನಿತರ ಸಣ್ಣಪುಟ್ಟ ಅಧಿಕಾರಿಗಳು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಕುರುಹುಗಳು ನಮಗೆ ಕಂಡುಬರುತ್ತವೆ.

ಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಾಗಿರುವಂತೆ ಪ್ರಾದೇಶಿಕ ಭಿನ್ನತೆ, ಪ್ರಾಕೃತಿಕ ಪರಿಸರ, ಕಟ್ಟಡ ಸಾಮಗ್ರಿಗಳ ಅನುಕೂಲ, ಕಾಲದಿಂದ ಕಾಲಕ್ಕೆ ಬದಲಾಗುತ್ತಿದ್ದ ಜನರ ಮನೋಧರ್ಮ, ಅಭಿರುಚಿ, ಆಳರಸರ ಪ್ರೋತ್ಸಾಹ ಶಿಲ್ಪಿಗಳ ಮನೋಭಾವನೆ ಮತ್ತು ಕೈಚಳಕ ಇತ್ಯಾದಿ ಅಂಶಗಳ ಹಿನ್ನೆಲೆಯಲ್ಲಿ ದೇವಾಲಯಗಳು ಸ್ಥಾನಿಕ ಪ್ರಭೇದಗಳನ್ನು ಬೆಳೆಸಿಕೊಂಡವು. ಈ ಎಲ್ಲಾ ಕಾರಣಗಳಿಂದ ಆಯಾ ಪ್ರದೇಶದಲ್ಲಿ ಉಗಮಗೊಂಡ ವಿಕಾಸ ಹೊಂದಿದ ಹಲವಾರು ಶೈಲಿಯ ದೇವಾಲಯಗಳನ್ನು ಭಾರತದಲ್ಲಿ ಕಾಣಬಹುದು.[೨]

ಉಮರಾಣಿಯ ಹೇಮೇಶ್ವರ ದೇವಾಲಯ

ಉಮರಾಣಿಯ ಕ್ರಿ.ಶ. ೧೧೨೩ರ ಶಾಸನದಲ್ಲಿ ಹೇಮೇಶ್ವರ ದೇವಾಲಯದ ಉಲ್ಲೇಖವಿದೆ.[೩] ಮಹಾಮಂಡಲೇಶ್ವರ ಹೆಮ್ಮಡಿದೇವನ ಪಟ್ಟಮಹಾದೇವಿ ಚಂದುದೇವಿ ಮತ್ತು ಪುತ್ರರಾದ ಕುಮಾರ ದೋಲರಸದೇವ, ವನಸಿಂಹ ಕೂಡಿಕೊಂಡು ಈ ದೇವಾಲಯದ ಜೀರ್ಣೋದ್ಧಾರ ಮತ್ತು ತಪೋವನರ ಆಹಾರಕ್ಕಾಗಿ ಹದಿನೈದು ಮತ್ತರು ಭೂಮಿಯನ್ನು ದಾನ ಮಾಡಿದ್ದಾರೆ. ಈ ದೇವಾಲಯವು ವಾಸ್ತು ಲಕ್ಷಣಗಳ ಹಿನ್ನೆಲೆಯಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗುವಂತೆ ತೋರುತ್ತದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿವೆ.

ಕಬ್ಬೂರಿನ ಕರಿದೇವಸ್ವಾಮಿ ದೇವಾಲಯ

ಕಬ್ಬೂರಿನ ಕ್ರಿ.ಶ. ೧೨೦೪ರ ಶಾಸನದಲ್ಲಿ ಕಲಿದೇವಸ್ವಾಮಿ ದೇವಾಲಯದ ಪ್ರಸ್ತಾಪವಿದೆ.[೪] ಈ ದೇವಾಲಯವನ್ನು ಸ್ವಯಂಚಕ್ರವರ್ತಿ ಕರಿದೇವಸ್ವಾಮಿ ದೇವಾಲಯ ಎಂತಲೂ ಕರೆಯಲಾಗಿದೆ. ಈ ದೇವಾಲಯವು ಕಾಲಮಾನ ಹಿನ್ನೆಲೆಯಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ. ಅಗ್ರಹಾರ ಕಬ್ಬೂರಿನ ಹಳದಿದಾಸನು ಹೊಳ್ಳಯ್ಯ ನಾಯಕನ ಮುಂದಾಳತ್ವದಲ್ಲಿ ಕುದುರೆಗಳ ಮಾರಾಟಕ್ಕೆ ವಿಧಿಸಲಾಗುತ್ತಿದ್ದ ತೆರಿಗೆಯಿಂದ ಸಂಗ್ರಹವಾದ ಹಣವನ್ನು ಈ ದೇವಾಲಯಕ್ಕೆ ದಾನ ಮಾಡಿದ್ದಾನೆ. ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಇದರ ಮೂಲ ವಾಸ್ತು ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ.

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೆರೂರಿನ ದೇವಾಲಯ

ಕ್ರಿ.ಶ. ೧೧೪೯ರ ಶಾಸನದಲ್ಲಿ ದೇವಾಲಯದ ನಿರೂಪಣೆಯಿದೆ.[೫] ಕಲಚೂರಿಯರ ಮಹಾಮಂಡಳೇಶ್ವರ ಇಮ್ಮಡಿ ಬಿಜ್ಜಳದೇವನು ಕಲ್ಯಾಣದ ಚಾಲುಕ್ಯರ ಅಧೀನದಲ್ಲಿ ಕೊಹುಂಡಿ ನಾಡಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಈತನ ಮಹಾಪ್ರಧಾನ ಸೇನಾದಂಡನಾಯಕನಾದ ಜಯದೇವಯ್ಯನು ಈ ದೇವಾಲಯಕ್ಕೆ ದಾನ ಮಾಡಿದ್ದಾನೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

ಖಡಕಲಾಟದ ಹಂಚಿಕೇಶ್ವರ ದೇವಾಲಯ

ಖಡಕಲಾಟದ ಕ್ರಿ,ಶ, ೧೧೪೭ರ ಶಾಸನದಲ್ಲಿ ಅಗ್ರಹಾರ ಲಟ್ಟಿಯ ಹಂಚಿಕೇಶ್ವರ ದೇವಾಲಯದ ಉಲ್ಲೇಖವಿದೆ. ಅಯ್ಯಾವೊಳೆಯ ಸ್ವಾಮಿಗಳು, ಗವರೆಯರು, ಮುಮ್ಮರಿದಂಡರು, ಉಭಯ ನಾನಾದೇಸಿಯರು ಸಭೆ ಸೇರಿ ಈ ದೇವಾಲಯಕ್ಕೆ ಇಪ್ಪತ್ತು ಕೋಣಗಳನ್ನು ದಾನ ಮಾಡಿದ್ದಾರೆ. ಈ ದೇವಾಲಯವು ಯಾವುದೋ ಕಾಲಾವಧಿಯಲ್ಲಿ ಸಂಪೂರ್ಣ ನಾಶವಾಗಿದ್ದು ಅವಶೇಷಗಳು ಅಲ್ಲಲ್ಲಿ ಹರಡಿಕೊಂಡಿವೆ.

ಜಗನೂರಿನ ಸಿದ್ಧೇಶ್ವರ ದೇವಾಲಯ

ಜಗನೂರದ ಕ್ರಿ.ಶ. ೧೧೬೭ ರ ಶಾಸನಸಲ್ಲಿ ಸ್ವಯಂಭೂ ಸಿದ್ಧೇಶ್ವರ ದೇವಾಲಯದ ಪ್ರಸ್ತಾಪವಿದೆ.[೬] ಕಲ್ಯಾಣದ ಕಲಚೂರಿ ಮನೆತನದ ಮಹಾಮಂಡಲೇಶ್ವರ ಇಮ್ಮಡಿ ಬಿಜ್ಜಳದೇವನು ಕೂಹುಂಡಿನಾಡಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ವೈಜರಾಸಯ್ಯ, ವಿಟ್ಟರಾಸಯ್ಯ, ಗುಡ್ಡಗಾವುಂಡ ಮೊದಲಾದವರು ಕಾಳಾಮುಖ ಪಂಥದ ಆಚಾರ್ಯ ಪದ್ಮರಾಶಿಪಂಡಿತನ ಸನ್ನಿಧಿಯಲ್ಲಿ ಈ ದೇವಾಲಯಕ್ಕೆ ಭೂದಾನ ಮಾಡಿದಂತೆ ಹೇಳಿದೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

ದೊನವಾಡದ ಕರಿದೇವ ದೇವಾಲಯ

ಕ್ರಿ.ಶ. ಸುಮಾರು ೧೨ನೇಯ ಶತಮಾನದ ಶಾಸನದಲ್ಲಿ ಕರಿದೇವ ದೇವಾಲಯದ ನಿರೂಪಣೆಯಿದೆ.[೭] ಕೊಲ್ಲಾಪುರದ ಶಿಲಾಹಾರ ಮನೆತನದ ಆಳ್ವಿಕೆಯ ಸಂದರ್ಭದಲ್ಲಿ ಗಾವುಂಡನೊಬ್ಬನು ಈ ದೇವಾಲಯಕ್ಕೆ ದಾನ ಮಾಡಿದ್ದಾನೆ. ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಮೂಲ ತನ್ನ ಸ್ವರೂಪವನ್ನು ಕಳೆದುಕೊಂಡಿದೆ.

ಅಡಿಟಿಪ್ಪಣಿಗಳು

೧. ಮದನ ಎಸ್. ದೊಡ್ಡಮನಿ, 'ಚಿಕ್ಕೋಡಿ ತಾಲ್ಲೂಕು ದರ್ಶನ', ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೬.

೨. ಆರ್. ಗೋಪಾಲ, 'ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ', ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

೩. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ. ಚಿಕ್ಕೋಡಿ ತಾಲೂಕಿನ ಶಾಸನಗಳು, ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨.

೪. ಅದೇ. ಪು. ೧೫೭.

೫. ಅದೇ. ಪು. ೧೫೨.

೬ ಅದೇ. ಪು. ೧೫೨.

೭. ಅದೇ. ಪು. ೧೫೨.

ಶಾಸನಗಳಲ್ಲಿ ವೇದೋಕ್ತ ಅಂಡೀರನೃಪ

(ಚಾಲುಕ್ಯರ ಮೂಲ ಮತ್ತು ಹೆಸರು)

ಎಂ.ಎಸ್. ಚೌಧರಿ*

ಕೌಥಮ್ ಶಾಸನದ ಪ್ರಕಾರ[1] ಅಯೋಧ್ಯೆಯಲ್ಲಿ (ಉತ್ತರದಲ್ಲಿ) ಅಂದರೆ ಉತ್ತರ ಭಾರತದಲ್ಲಿ ಚಾಲುಕ್ಯ ಕುಲದ ಐವತ್ತೊಂಭತ್ತು ಅರಸರು ಆಳಿದರೆಂದೂ ನಂತರ ೧೬ ಅರಸರು ದಕ್ಷಿಣದಲ್ಲಿ ಕೆಲವು ವರ್ಷಗಳ ಕಾಲ ಆಳಿ ಇಳಿಮುಖವಾಗಿದ್ದ ಚಾಲುಕ್ಯ ವಂಶದ ಘನತೆಯನ್ನು ಜಯಸಿಂಹನು ಮತ್ತೆ ಹೆಚ್ಚಿಸಿದನೆಂದೂ ಬಣ್ಣಿಸಲಾಗಿದೆ. ಕ್ರಿ.ಶ. ೬೩೪–೩೫ರಲ್ಲಿಯ ಶಾಸನ ಐಹೊಳೆ ಇಮ್ಮಡಿ ಪೊಲಿಕೇಶಿ ಸಮಯದಲ್ಲಿಯದು ಹೀಗೆ ಹೇಳುತ್ತದೆ. ಕ್ರಿ.ಶ. ಪೂರ್ವ ೩೭೩೫ಕ್ಕಿಂತಲೂ ಪೂರ್ವದಲ್ಲಿ ಸಂಭವಿಸಿದ ಭಾರತಯುದ್ಧ ಮತ್ತು ೫೫೬ ಶಕವರ್ಷಗಳು ಕಳೆದನಂತರ ಸತ್ಯಾಶ್ರಯ ಚಾಲುಕ್ಯ ಸಾಮ್ರಾಜ್ಯ ಸ್ಥಾಪನೆಗೆ ಸ್ವತಃ ಕಾರಣನಾಗಿದ್ದಾನೆ.

ಈ ಮೇಲಿನ ಎರಡೂ ಶಾಸನಗಳ ಅಂದರೆ ಕೌಥಮ್ ಶಾಸನ ಮತ್ತು ಇಮ್ಮಡಿ ಪೊಲಿಕೇಶಿಯ ಐಹೊಳೆ ಶಾಸನಗಳನ್ನು ನೋಡಿದಾಗ ೬ನೇ ಶತಮಾನಕ್ಕಿಂತಲೂ ಮೊದಲೇ ಹಲವಾರು ಶತಮಾನಗಳ ಹಿಂದೆಯೇ ಬಾದಾಮಿ ಚಾಲುಕ್ಯರ ಸಾಮ್ರಾಜ್ಯ ದಕ್ಷಿಣ ಭಾರತದಲ್ಲಿ ಸ್ಥಾಪಿತವಾಗಿತ್ತೆಂಬುದು ತಿಳಿದು ಬರುತ್ತದೆ.

ಕಲ್ಯಾಣ ಚಾಲುಕ್ಯರ ಕೆಲವು ಶಾಸನಗಳಲ್ಲಿ ಬರುವ ಅಂಡೀರ ಚಂದ್ರನೆಂಬವನಗ್ರಸುತಂ ಕಲಿಲೋಕನಾಥ ಗಂಡರಗಂಡನೈಭವನಿಂ ಎಂಬ ಉಲ್ಲೇಖ ಬರುತ್ತವೆ. ಅಲ್ಲದೆ ಸ್ವಸ್ತಿ ಸಮಧಿಗತ ಪಂಚಮಹಾಶಬ್ಧ ಮಹಾಸಾಮಂತ ವೀರ ಶ್ರೀಕಾಂತ ತಗರ ನಗರಾಧೀಶ್ವರ ಸುಭದ ಮಹೇಶ್ವರ ಸೀಯಾಳ ವಂಶೋದ್ಭವ ವಿಭವಾಧರೀಕೃತ ಪುರೂರವ ಡಂಗರಾಭೇರಿ ನಿರ್ಘೋಷಣ ಸಮರಯಿಕ ಭೀಷಣ ಎಂದು ಹೇಳುವ ಶಾಸನಗಳ ಅಧ್ಯಯನ ಮಾಡಿದಾಗ ಅಲ್ಲಲ್ಲಿ ಪುರೂರವನ ಪುತ್ರ ನಹುಷನ ಹೆಸರೂ ಬರುತ್ತಿದ್ದು ಚಂದ್ರವಂಶದ ಉಲ್ಲೇಖಗಳೂ ಕಾಣುತ್ತವೆ.

ಕಲ್ಯಾಣ ಚಾಲುಕ್ಯರ ಕೆಲವು ಶಾಸನಗಳಲ್ಲಿ ಅಂಡೀನೃಪನ ಉಲ್ಲೇಖಗಳು ಬಂದಿದ್ದು ಅವನ್ನು ಪರಿಶೀಲಿಸೋಣ.

ಕಲಬುರ್ಗಿ ಹಾಗೂ ವಿಜಯಪುರ ಜಿಲ್ಲೆಯ ಕೆಲ ಶಿಲಾಶಾಸನಗಳು

೧. ದಿಗ್ಗಾಂವ ಕ್ರಿ.ಶ. ೧೦೫೪

೧೩. ತಂ ವಿಭುವಿಕ್ರಮಂ ತದನುಜಂ ಸನ್ದಯ್ಯಣಂ ತನ್ಮಹೀಶನ ತಮ್ಮಂ
ಜಯಸಿಂಹನಾತನ ಮಗಂ ತ್ರೈಲೋಕ್ಯಮಲ್ಲಂ ಜಗಜ್ಜನ ಚಿಂತಾಮಣಿ
ಭೂಭುಜೇಂ

೧೪. ದ್ರ ತಿಳಕಂ ಚಾಳುಕ್ಯ ಚಕ್ರೇಶ್ವರಂ ॥ ಎಸೆದ ಹಿಮಷ್ಮತಿ (ಮಾಹಿಷ್ಮತಿ) ಷಟ್ಟಣಪತಿ ಕ್ರಿತವೀರ್ಯಾನ್ವಯ ವಾಯೋದ್ಭವಂ
ಲೋಕಸಮರ್ಥಂ ತತ್ತನೂ

೧೫. ಜಂನೆಗಟ್ಟಿದೞಿಗನವಂಗಾತ್ಮಜಂ ಸೈವಲೋಕಂ ಪೆಸರಿತ ತತ್ಸೂನು ಮನೋನ್ನತನತಿ ಚತುರಂ ಕೋರಲಾದಿತ್ಯನಾತಂಗೆ
ಸುತಂ ವಿಖ್ಯಾತನಿರ್ಪಾನೆೞ ಗನಮಗಂ

೧೬. ದಾನಕಾನೀನ ಕಳ್ಪಂ ॥ ಅಣ್ಡುರ ಚಂದ್ರನೆಂಬನವನಗ್ರಸುತಂ ಕಲಿಲೋಕನಾತನಿಂ ಗಣ್ಡರಗಣ್ಡನೈಚವನಿಂ ಕಿಱಿಯಂ
ವಿಭು ಬಿಜ್ಜನುರ್ವ್ವರಾಮಣ್ಡ

---

* ನಿವೃತ್ತ ಶಿಕ್ಷಕರು, ಶ್ರೀ ಕುಮಾರಸ್ವಾಮಿಜಿ ಕಾಲೋನಿ, ಹಳಿಯಾಳ ರೋಡ್, ಶ್ರೀನಗರ, ಧಾರವಾಡ, ಮೊ. ೯೦೦೮೫೮೩೧೬೯

೧೭. ಭೂಪತಿಗೆ ಪುಟ್ಟಿದಬ್ಧಿ ಗಭೀರರಾತ್ಮಜರು ॥

೨. ನಾಗಾಯಿ ಕ್ರಿ. ಶ ೧೦೫೮

೬. ....[೨] ಅಂಭೋಜಾಸನ

೭. ನ ಮನಸ್ಸಂಭವನಾದಂ ಸಮಸ್ತ ಮುನಿಜನನುತ ಪಾನಾಂಭೋಜನನಪಂ ಸ್ವಾ-

೮. ಯಂಭುವ ಮನುವೆಂಬನಖಿಳ ಭುವನಖ್ಯಾತಂ ॥ [೩] ಮಾನವ್ಯ [ನೆಂಬ]ನಾ ಮನುಸೂ

೯. ನು ಜಗತ್ರಯ ಪವಿತ್ರನೊಗೆದಂ ಮುನಿಸಂತಾನನುತಂ ತನ್ಮುನಿಯಿಂ ಮಾನವ್ಯ

೧೦. ಸಗೋತ್ತರಾಧಾರಾ ವಂಶದವರ್ ॥ [೪] ಆತನ ತನೂಜನುಪಮಾತೀತಂ ನೆಗಳ್ದಿಂ ಹಾರಿ

೧೧. ತನಾತಂಗೆ ಜಗನ್ನುತ ಪಾದಾಬ್ಜಂ ತ್ರಿಜಗಖ್ಯಾತಂ ಹಾರೀತಿ ಪುಟ್ಟಿದಂ ಪಂಚ ಶಿಖಂ ॥ [೫]

೧೨. ಅವನ ತನಯಂ ಚಳುಕ್ಯಂ ಭುವನಸ್ತುತ ಕೀರ್ತಿ ನೆಗಳ್ದಿನವನಿಂದವನಿಸ್ತವ

೧೩. ನೀಯ ಮಾಯ್ತು ಚಾಳುಕ್ಯ ವಂಶಮಾ ವಂಶಮಖಿಳ ಭುವನೋತ್ತಂ ಸಂ ॥

೧೪. ನಾಗಾಯಿ ಕ್ರಿ.ಶ. ೧೦೮೬

೧೫. ಶಾ

೧೬. ಪಾಖಾಸಹಸ್ರ ವೇದ ವೇದಾಂಗ ಪಠನ ಮಠ ವಿರಾಜಿತ ಮುಮುತ್ತುಂಗ ತೋರಣ ಪ್ರಸಾದ ಪ್ರಾಕಾ

೧೭. ರ ಸಮನ್ವಿತಮುಮಪ್ಪಾತ್ಮೀಯ ನವೋದ್ಧಾಮಸೋಮಮಣ್ಡಳಾಖಂಡಳ ಷುಣ್ಡಾಳಡಿಣ್ಡೀರ

೧೮. ಖಂಡ ಪಾಂಡುರ ಪ್ರತಿಮಮಪ್ಪೀ ಮ[ಹಾ] ಸು

೧೯. ತಂ ವಿಖ್ಯಾತನಪ್ಪಾನೆಗನವನ ಮಗಂ ದಾನಕಾನೀನ ಕಳ್ಪಂ॥ [೫೧] ಅಣ್ಡಿಐ ಚಂದ್ರನೆಂಬನವನಗ್ರಸು

೨೦. ತಂ ಕಲಿಲೋಕ ನಾತನಿಂ ಗಣ್ಡರ ಗಣ್ಡನೈಚನವನಿಂ ಕಿರಿ(ಜೆ)ಯಂ ವಿಭು ಬಿಜ್ಜನುರ್ವ್ವರಾ ಮಣ್ಡಳ ಸಂಸ್ತುತ ತ್ರಿಪು.

ಇದರಲ್ಲಿಯೂ ಅಣ್ಡೀರ ನೃಪನನ್ನು ಕಾಣುತ್ತಿದ್ದು ಮತ್ತೆ ೧೯ನೇ ಸಾಲಿನಲ್ಲಿಯೂ ಅಣ್ಡೀರ (ಹಂಡೀರ) ಚಂದ್ರನೆಂಬವನು ಅಗ್ರ ಸುತಂ ಎಂದರೆ ಇವನೇ ದಕ್ಷಿಣ ಭಾರತದಲ್ಲಿಯ ಚಾಲುಕ್ಯ ಮನೆತನಕ್ಕೆ ಮೊದಲಿಗನೆಂಬುದು ತಿಳಿಯುತ್ತದೆ. ಅಲ್ಲದೇ ಇದೇ ಶಾಸನದ ೨೦ನೇ ಸಾಲಿನಲ್ಲಿ ಬಿಜ್ಜನನ್ನು ಹೆಸರಿಸಿ ಚಾಲುಕ್ಯ ಸಂತತಿಯ ಮುಂದುವರಿಕೆ ಕಾಣುತ್ತದೆ.

ಹೀಗೆ ಕನ್ನಡದ ಕೆಲವು ಶಾಸನಗಳಲ್ಲಿ ಮಾಹಿಷ್ಮತಿ ಪಟ್ಟಣದ ಕಾರ್ತವೀರ್ಯಾ ವಂಶಕ್ಕೆ ಸೇರಿದ ಅಂಡುರ ಅಥವಾ ಅಂಡೀರ ಚಂದ್ರ ಎಂಬುವವನನ್ನು ಶಾಸನಗಳು ಹೆಸರಿಸುತ್ತವೆ. ಅವನಿಗಿಂತ ಚಿಕ್ಕವನು ಐಚ (ವಚ), ಅವನ ತಮ್ಮ ಬಿಜ್ಜನನ್ನು ಹೆಸರಿಸುತ್ತವೆ. ಈ ವಂಶದವರು ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ಕರ್ನಾಟಕದ ಇಂದಿನ ಬಿಜಾಪುರ ಮತ್ತು ಕಲ್ಬುರ್ಗಿ ಜಿಲ್ಲೆಗಳ ಕೆಲವು ಭಾಗಗಳನ್ನು ಆಳುತ್ತಿದ್ದರು.

ಹಂದರಕಿ ಕ್ರಿ.ಶ. ೧೧೧೮

೧೯ನೇ ಸಾಲಿನಲ್ಲಿ ಅಂಡುರ ಚಂದ್ರನೆಂಬವಗ್ರ ಸುತಂ ಎಂದು ಅಂಡುರ (ಅ(ಹ)ಂಡುರ) ನ ಹೆಸರಿದ್ದು ಮುಂದೆ ಬಿಜ್ಜನ ಹೆಸರೂ ಬಂದಿದೆ. ಅಲ್ಲದೇ ಕುಂತಳದ ಪ್ರ ಪ್ರಥಮ ಅರಸ ಅ(ಹ)ಂಡೀರ ನೃಪ. ಹಂಡೀರ ಅರಸನ ಹೆಸರಿನಿಂದ ಪಂದರ್ಕಿಯ ಲೋಕೀಶ್ವರ ಮಂದಿರ ರಚನೆಯಾಗಿದ್ದು, (ಅ(ಹ)ಂಡೇರರಸು (ಚಾಲುಕ್ಯ ವಂಶಸ್ಥರು) ಕಟ್ಟಿಸಿದ್ದು ಎಂದು ತಿಳಿದು ಬರುತ್ತದೆ. ಈ ಕುಂತಳವು ದಕ್ಷಿಣ ಭಾರತಕ್ಕೆ ಮುಖದಂತಿತ್ತೆಂದು ಚಿತ್ರಿತವಾಗಿದೆ.

ಕ್ರಿ.ಶ. ೪೬೫ ಬಾದಾಮಿ ಶಾಸನ ಸಂ. ೩೩೭ ಇದರಲ್ಲಿಯೂ ಅಗಸ್ತ್ಯ ಹಾಗೂ ಅವರ ಪತ್ನಿ ಲೋಪಾಮುದ್ರೆ ಸಮೇತ ದಕ್ಷಿಣಕ್ಕೆ ಬಂದು ಕುಂತಳದಲ್ಲಿ ಚಂದ್ರವಂಶದ ಪುರೂರವನ ಮುಂದಿನ ಪೀಳಿಗೆಯ ತುರ್ವಸು, ಅಂಡೀರನೃಪನ ಸಪ್ತಸಿಂಧು ಪ್ರದೇಶದಲ್ಲಿ ನಡೆದ ಆರ್ಯದಸ್ಸು ಯುದ್ಧದಲ್ಲಿ ಸೋತು ಸ್ವತಂತ್ರ ಬದುಕಿಗಾಗಿ ದಕ್ಷಿಣಕ್ಕೆ ಬಂದಾಗ ಅಗಸ್ತರ ಪೌರೋಹಿತ್ಯದಲ್ಲಿ ಸಾರ್ವಭೌಮನಾದನು.

ಕ್ರಿ.ಶ. ೫೯೫ರ ಬಾದಾಮಿ ಸಂ. ೪೧೦ ಈ ಶಾಸನದಲ್ಲಿಯೂ ಚಾಲುಕ್ಯರ ಪೂರ್ವದ ಅರಸು ಪುರೂರವನ ಹೆಸರೂ ಕಾಣುತ್ತದೆ. ಅಲ್ಲದೆ ಹಿರಣ್ಯಗರ್ಭ ಸಂಭೂತರು ಶ್ರೇಷ್ಠರ ಬ್ರಹ್ಮಜ್ಞಾನಿಗಳು ಎಲ್ಲಕ್ಕೂ ಹಿರಿಯರು ಆಗಿದ್ದು, ಸಮೂಹದಿಂದ ನಿಯಮಿಸಿದ ಪುರೂರವ ರಣಪರಾಕ್ರಮಿಯಾಗಿದ್ದನು, ಹೀಗೆ ಇರುವ ವಿವರಣೆ ಈ ಚಂದ್ರವಂಶದ ಬೆಳವಣಿಗೆ ಹೇಳುತ್ತ ಬಂದ ಅಂಡೀರನೃಪನ ಬೆಳವಣಿಗೆಗೆ ಆಧಾರ ಕಾಣುವವು.

ಕ್ರಿ.ಶ. ೮ನೇ ಶತಮಾನದ ಐಹೊಳೆ ಶಾಸನ

ಕ್ರಿ.ಶ. ೧೧೨೦ರ ವಿಜಯಪುರ ಮ್ಯೂಜಿಯಂನಲ್ಲಿಯ ಶಾಸನ

ಕ್ರಿ.ಶ. ೧೧೨೫ರ ಕಡ್ಲೆವಾಡ ಶಾಸನ

ಕ್ರಿ.ಶ. ೧೧೨೮ರ ಇಂಗಳೇಶ್ವರ ಶಾಸನ

ಕ್ರಿ.ಶ. ೧೧೪೨ರ ಮುತ್ತಗಿ ಶಾಸನ

ಕ್ರಿ.ಶ. ೧೧೫೪ರ ಶಿರೋಳ ಶಾಸನ

ಕ್ರಿ.ಶ. ೧೧೬೫ರ ಮುತ್ತಗಿ ಶಾಸನ

ಕ್ರಿ.ಶ. ೧೧೬೯–೭೦ರ ಹುನಗುಂದ ಶಾಸನ

ಕ್ರಿ.ಶ. ೧೧೭೨ರ ವಿಜಯಪುರ ಮ್ಯೂಜಿಯಂನಲ್ಲಿನ ಶಾಸನ

ಹೀಗೆ ಹಲವಾರು ಶಾಸನಗಳು ಚಂದ್ರವಂಶದ ಬುಧ ಪುರೂರವನಿಂದ ಹಿಡಿದು ದಕ್ಷಿಣದ ಕುಂತಳದಲ್ಲಿ ಸಾರ್ವಭೌಮನಾದ ಅಂಡೀರಚಂದ್ರ ಚಾಲುಕ್ಯರ ಮೂಲ ಪುರುಷ ಎಂಬುದಕ್ಕೆ ಹಲವಾರು ಪುರಾವೆಗಳು ವೇದಗ್ರಂಥಗಳಿಂದಲೂ, ಶಾಸನಗಳಿಂದಲೂ ತಿಳಿದುಬರುತ್ತದೆ. ಅಲ್ಲದೆ ವಿಜಯನಗರ ಅರಸ ಶ್ರೀಕೃಷ್ಣದೇವರಾಯನ ಹಲವಾರು ಶಾಸನಗಳು ಬುಧನಿಂದ ಹಿಡಿದು ಯಯಾತಿ ತುರ್ವಶೇಷುವಿನಿಂದ ಮುದುವರಿದ ತಿಮ್ಮರಸ, ಬುಕ್ಕರಸನವರೆಗೂ ರಾಜ್ಯಭಾರ ಮಾಡಿದ ಚಿತ್ರ ಸ್ಪಷ್ಟವಿದೆ. ಅಲ್ಲದೆ ಬಾದಾಮಿ ಚಾಲುಕ್ಯರಿಂದ ಹಿಡಿದು ಹಂಡೇ ಅರಸರವರಿಗೂ ಸಂಬಂಧ ಚಿತ್ರಿಸುತ್ತಿದ್ದು, ಶೈವ, ವೈಷ್ಣವ, ಜೈನ ಧರ್ಮಗಳಿಗೆ ಪುರಸ್ಕಾರಕೊಟ್ಟದ್ದು, ಮುಂದೆ ಶೈವಧರ್ಮವನ್ನು ಗಟ್ಟಿಯಾಗಿ ಅಳವಡಿಸಿಕೊಂಡಿದ್ದಾರೆ. ಅಲ್ಲದೆ ೧೨ನೇ ಶತಮಾನದಿಂದ ಲಿಂಗಾಯತ ಧರ್ಮಾನುಯಾಯಿಗಳಾಗಿದ್ದಾರೆ ಎಂಬುದಕ್ಕೆ ಅವರ ಶೈವರಾಜ ಗುರುಗಳ ಹೆಸರುಗಳ ಆ ಅರಸು ಮನೆತನದವರು ಗುರುಗಳಿಗೂ, ಶೈವ ದೇವಾಲಯಗಳಿಗೂ ದತ್ತಿಕೊಟ್ಟ ಉದಾಹರಣೆಗಳು ಸಾಕಷ್ಟಿವೆ.

ಅಲ್ಲದೆ ಇನ್ನೂ ಶಾಸನಗಳನ್ನು ಮತ್ತು ವೇದಸಾಹಿತ್ಯ ಗ್ರಂಥಗಳನ್ನು ಸರಿಯಾಗಿ ಸಮಗ್ರ ಅಧ್ಯಯನ ಮಾಡಿದ್ದಲ್ಲಿ ಇನ್ನೂ ಸ್ಪಷ್ಟ ಚಿತ್ರ ಒದಗಿಸಲು ಸಾಧ್ಯವಿದೆ. ಹಿಂದಿನ ಇತಿಹಾಸಕಾರರು ಎಷ್ಟು ಅವಶ್ಯಕವೊ ಅಷ್ಟನ್ನೂ ಮಾತ್ರ ಮಾಡಿದ್ದಾರೆಂದು ಅಭಿಪ್ರಾಯವಿದೆ. ಅದೇನೆ ಇರಲಿ ಹೆಚ್ಚು ಕೂಲಂಕಷವಾಗಿ ಅಧ್ಯಯನ ಮಾಡಿದಷ್ಟು ಹೆಚ್ಚು ಸತ್ಯ ಇತಿಹಾಸ ಕಾಣಲು ಸಾಧ್ಯವಾಗಬಹುದೆಂದು ನನ್ನ ಅನಿಸಿಕೆ.

ಬಾದಾಮಿಯ ಮೂರನೇ ಗುಹೆಯಲ್ಲಿ ಕೀರ್ತಿವರ್ಮ–ನ ಶಾಸನ ಕ್ರಿ.ಶ. ೫೭೮,

೩ ಶಕ್ತಿತ್ರಯಸಂ

೪ ಪನ್ನಃ ಚಲ್ಕ್ಯವಂಶಾಂಬರಪೂರ್ಣಚಂದ್ರಹ

ಈ ಶಾಸನವು ಚಲುಕ್ಯ ವಂಶದ ಮೂಲವನ್ನು ಚಲ್ಕ್ಯ ಎಂದು ಹೇಳಿದ್ದು, 'ಚಲ್ಕ್ಯ' ವಂಶಾಂಬರಪೂರ್ಣನಾದ ಚಂದ್ರ ಎಂದು ಹೇಳುತ್ತ, ಈ ವಂಶದ ಹೆಸರು ಚಲ್ಕ ಎಂಬುದು ಸ್ಪಷ್ಟವಾಗುತ್ತದೆ. ಇದು 'ಅಂಡೀರಚಂದ್ರನಗ್ರಸುತಂ' ಎಂಬುದನ್ನು ಸ್ಪಷ್ಟೀಕರಿಸುತ್ತದೆ.

ಅಡಿಟಿಪ್ಪಣಿಗಳು

೧. ಕರ್ನಾಟಕ ಇತಿಹಾಸ ಮಾಲಿಕೆ, ಚಾಲುಕ್ಯ ಇತಿಹಾಸ, ಎ.ಎಸ್. ನಂಜುಂಡ ಸ್ವಾಮಿ, ಪುಟ ೧೦.

೨. ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್ ಸದರ್ನ ರೀಜನಲ್ ಸೆಂಟರ್, ಬೆಂಗಳೂರು. ಇನ್ಸ್ಕ್ರಿಪ್‌ಷನ್ ಆಫ್ ಚಾಲುಕ್ಯಾಸ್ ಆಫ್ ಬಾದಾಮಿ ೨೦೧೦, ಎಡಿಟರ್ ಶ್ರೀನಿವಾಸ.ವಿ.ಪಾಡಿಗಾರ.

ಆಕರ ಗ್ರಂಥಗಳು

೧. ಋಗ್ವೇದ ಭಾವಾನುವಾದ, ಅಗ್ಗಿತ್ತಲ ವಾಸುದೇವರಾವ್.

೨. ಬಿಜಾಪೂರ ಜಿಲ್ಲೆ ಶಾಸನಗಳು, ಕ.ವಿ.ಹ ಶಾಸನ ಸಂಪುಟ ೧೦.

೩. ಬಾದಾಮಿ ಚಾಲ್ಯುಕರ ಶಾಸನಗಳು, ಐ.ಸಿ.ಎಚ್.ಆರ್. (ಎಸ್.ವಿ. ಪಡಿಗಾರ).

೪. ಕಲಬುರ್ಗಿ ಶಾಸನಗಳು, ಸಂಪಾದಕರು ಹನುಮಾಕ್ಷಿ ಗೋಗಿ.

೫. ವೈದಿಕ ಸಾಹಿತ್ಯ ಚರಿತ್ರೆ, ಎನ್.ಎಸ್. ಅನಂತರಂಗಾಚಾರ್.

೬೨

ಕೃಷ್ಣರಾಜಪೇಟೆ ತಾಲ್ಲೂಕಿನ ಜೈನ ಸಂಸ್ಕೃತಿ

ಹೆಚ್.ಎಲ್. ರೂಪೇಶ್‌ಕುಮಾರ್*

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ಇದರ ಮೂಲ ಹೆಸರು ಅತ್ತಿಗುಪ್ಪೆ. ೧೮೯೧ರಲ್ಲಿ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಾರ್ಥ ಕೃಷ್ಣರಾಜಪೇಟೆ ಎಂದಾಯಿತು. ಕೃಷ್ಣರಾಜಪೇಟೆ ತಾಲ್ಲೂಕು ಸಾಂಸ್ಕೃತಿಕವಾಗಿ ದೊಡ್ಡ ಇತಿಹಾಸವನ್ನು ಹೊಂದಿದೆ. ತಲಕಾಡಿನ ಗಂಗರು, ದ್ವಾರಸಮುದ್ರದ ಹೊಯ್ಸಳರು, ರಾಷ್ಟ್ರಕೂಟರು, ನೊಳಂಬರು, ಮೈಸೂರಿನ ಒಡೆಯರು ಮೊದಲಾದ ರಾಜವಂಶಜರ ಆಳ್ವಿಕೆಗೆ ಒಳಪಟ್ಟಿದ್ದ ಈ ಭೂಪ್ರದೇಶದಲ್ಲಿ ಅವರೆಲ್ಲರ ಕೊಡುಗೆಯಾಗಿ ಕೃಷ್ಣರಾಜಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದಲ್ಲಿ ತನ್ನದೆ ಆದ ಮಹತ್ವ ಪಡೆದಿದೆ. ಶೈವ, ವೀರಶೈವ, ವೈಷ್ಣವ, ವೈದಿಕ ಧರ್ಮಗಳ ಪ್ರಭಾವವಾದ ಹಿನ್ನೆಲೆ ಹೊಂದಿದ್ದು ಪ್ರಾಚೀನ ಕಾಲದಲ್ಲಿ ಜೈನಧರ್ಮದ ಪ್ರಭಾವಕ್ಕೆ ಒಳಪಟ್ಟಿತು.

ಗಂಗ ಹೊಯ್ಸಳರ ಪ್ರಭುತ್ವಕ್ಕೆ ಒಳಪಟ್ಟಿದಂತ ಕೃಷ್ಣರಾಜಪೇಟೆ ತಾಲ್ಲೂಕಿನ ಜೈನ ಸಂಸ್ಕೃತಿಯ ಪ್ರಭಾವಾದ ಕುರುಹುಗಳಾಗಿ, ನೆನಪುಗಳಾಗಿ ಅವರ ಕಾಲದ ಜೈನ ಶಾಸನಳು, ಬಸದಿಗಳು, ಗೊಮ್ಮಟ ಮೂರ್ತಿ ಕಂಡುಬರುವ ಈ ತಾಲ್ಲೂಕಿನ ಜೈನ ಸಂಸ್ಕೃತಿಯನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ.

ಮಂಡ್ಯ ಜಿಲ್ಲೆಯ ಹೊಯ್ಸಳರ ಕಾಲದ ಜೈನಶಾಸನಗಳಲ್ಲಿ ಕೃಷ್ಣರಾಜಪೇಟೆ ತಾಲ್ಲೊಕಿನ ಹೊಸಹೊಳಲು ಗ್ರಾಮದ ಪಾರ್ಶ್ವನಾಥಸ್ವಾಮಿ ಬಸದಿಯ ದಕ್ಷಿಣದಿಕ್ಕಿನಲ್ಲಿರುವ ಶಾಸನವು ಅತಿ ಪ್ರಮುಖ ಶಾಸನವೆಂದರೆ ತಪ್ಪಾಗಲಾರದು. ಈ ಶಾಸನವು ಹೊಯ್ಸಳದೇವ ಭುಜಬಲಿ ವೀರಗಂಗನು ಗಂಗವಾಡಿ ೯೬೦೦೦ ಭೂಪ್ರದೇಶವನ್ನು ಆಳುತ್ತಿದ್ದ ಕಾಲದಲ್ಲಿ ದೊರಸಮುದ್ರದ ಪಟ್ಟಣಸ್ವಾಮಿ ಪೊಯ್ಸಳಸೆಟ್ಟಿಯಾದ ನೊಳಂಬಸೆಟ್ಟಿಯ ಪತ್ನಿ ಆಹಾರಾಭಯಭೈಷಜ್ಯ, ಶಾಸ್ತ್ರದಾನ ವಿನೋದೆ, ಜಿನಧರ್ಮಪರಾಯಣೆ ಹಾಗೂ ಚಾವುಂಡಾಡಿಯಂದು ಹೆಸರಾದ ದೇಮಿಕಬ್ಬೆಯು ಕತ್ತರಿಘಟ್ಟದಲ್ಲಿ ತ್ರಿಕೂಟ ಜಿನಾಲಯವನ್ನು ನಿರ್ಮಿಸಿ ಅದಕ್ಕೆ ಅರುಹನಹಳ್ಳಿಯ ಭೂಮಿಯನ್ನು, ಎರಡು ಎಣ್ಣೆಯ ಗಾಣಗಳನ್ನು ಎರೆಡು ಕೈದೊಟಗಳನ್ನು ಹಾಗೂ ಬೆಟ್ಟನಾಯಕನ ಮಗ ಕತ್ತರಿಘಟ್ಟದ ನಾಡಳ್ವ ಗಂಡನಾರಾಯಣಸೆಟ್ಟಿಯೂ ತನಗೆ ನೀಡಿದ್ದ ಎರೆಡು ಕೆರೆಗಳನ್ನು ಅವುಗಳ ಕೆಳಗಿನ ಗದ್ದೆಯನ್ನು ಹಾಗೂ ತರಿಭೂಮಿಯನ್ನು ಮೂಲಸಂಘ ದೇಶಿಯಗಣ ಪುಸ್ತಕಗಚ್ಚ ಕುಂದಕುದಾನ್ವಯದ ಶುಭಚಂದ್ರ ಸಿದ್ದಾಂತದೇವರಿಗೆ ಧಾರಾಪೂರ್ವಕವಾಗಿ ದಾನಕೊಟ್ಟ ವಿಚಾರವನ್ನು ದಾಖಲಿಸುತ್ತದೆ. ಶುಭಚಂದ್ರ ಸಿದ್ದಾಂತ ದೇವರನ್ನು ದೇಮಿಕಬ್ಬೆ ಮತ್ತು ನೊಳಂಬಿಸೆಟ್ಟಿಯ ಸಂರಕ್ಷಕರೆಂದು ದಾಖಲಿಸುತ್ತದೆ. ಈ ಶಾಸನದಲ್ಲಿ ಶ್ರೀ ಶುಭಚಂದ್ರಸಿದ್ದಾಂತದೇವರ ಗುರುಪರಂಪರೆಯೂ ಉಕ್ತವಾಗಿದೆ. ಶ್ರೀ ಶುಭಚಂದ್ರ ಸಿದ್ದಾಂತದೇವರ ಗುರುಗಳು ಶ್ರೀ ಕುಕ್ಕುಟಾಸನ ಮಲಾದಾರಿ ದೇವರು ಹಾಗೂ ಅವರ ಗುರುಗಳು ದಿವಾಕರನಂದಿ ಮುನಿಗಳು ಎಂಬ ಅಂಶ ತಿಳಿದುಬರುತ್ತದೆ.

ಪ್ರಸ್ತುತ ಹೊಸಹೊಳಲುವಿನಲ್ಲಿರುವ ಶ್ರೀ ಪಾರ್ಶ್ವನಾಥ ಬಸದಿಗೂ ಮೇಲ್ಕಂಡ ಶಾಸನಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ಶಾಸನವು ಕತ್ತರಿಘಟ್ಟದ ತ್ರಿಕೂಟಜಿನಾಲಯವನ್ನು ಉಲ್ಲೇಖಿಸಿರುವುದರಿಂದ ಕತ್ತರಿಘಟ್ಟವು ಪ್ರಮುಖ ಜೈನನೆಲೆಯಾಗಿದ್ದು, ಪ್ರಾಯಶಃ ವಿಜಯನಗರೋತ್ತರ ಕಾಲದಲ್ಲಿ ಇದು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿರಬೇಕು. ಕತ್ತರಿಘಟ್ಟದ ಬಸದಿಗಳು ಜೀರ್ಣವಾದ ಸಂದರ್ಭದಲ್ಲಿ ಮೂರ್ತಿಗಳನ್ನು ಹೊಸಹೊಳಲುವಿಗೆ ತಂದು ಸ್ಥಾಪಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಹೊಸಹೊಳಲುವಿನ ಬಸದಿಯ ಕಟ್ಟವು ವಿಜಯನಗರೋತ್ತರ ಶೈಲಿಯ ಸಾಮಾನ್ಯ ಬಸದಿ. ಯಾವುದೇ ವಿಶೇಷ ಅಲಂಕರಣ ದೇವಾಲಯ ನಿರ್ಮಾಣದಲ್ಲಿ ಕಂಡುಬರುವುದಿಲ್ಲ. ಕ್ರಿ.ಶ. ೧೭–೧೮ನೇ ಶತಮಾನದಲ್ಲಿ ಅಂದರೆ ಮುಮ್ಮಡಿ ಕೃಷ್ಣರಾಜಒಡೆಯರ ಕಾಲದಲ್ಲಿ ನಿರ್ಮಾಣವಾದ ಸಣ್ಣದೇವಾಲಯಗಳ ಮಾದರಿಯಲ್ಲಿ ನಿರ್ಮಿಸಲಾಗಿದೆ. ಬಸದಿಯು ಗರ್ಭಗೃಹ ತೆರೆದ ಅಂತರಾಳ ನವರಂಗ ಹಾಗೂ ತೆರೆದ ಮುಖಮಂಟಪಗಳನ್ನು ಹೊಂದಿದ್ದು, ಜೀರ್ಣೋದ್ಧಾರಗೊಂಡಿದೆ. ಪೂರ್ವಾಭಿಮುಖವಾಗಿರುವ ಇದರ ಗರ್ಭಗೃಹದಲ್ಲಿ ಪಾಶ್ವನಾಥ, ಅನಂತನಾಥ,

* ತ್ರೈಲೋಖ್ಯ ನಿಲಯ, ಕೆಆರ್‌ಎಸ್ ರಸ್ತೆ, ವಿ.ಸಿ. ಕಾಲೋನಿ, ಪಾಂಡವಪುರ, ಮಂಡ್ಯ ಜಿಲ್ಲೆ–೫೭೧೪೩೪, ಮೊ. ೯೯೩೪೮೯೩೨೫೮

ಹಾಗೂ ಆದಿನಾಥರ ಶಿಲ್ಪಗಳಿದ್ದು, ಬೆಳ್ಳಿ ಬೆಟ್ಟದಿಂದ ತಂದಿಟ್ಟಿರುವುದಾಗಿ ಹೇಳುವ ಹೊಯ್ಸಳ ಶೈಲಿಯ ಧರಣೇಂದ್ರ ಯಕ್ಷ ಹಾಗೂ ಪದ್ಮಾವತಿ ಯಕ್ಷಿಯ ಶಿಲ್ಪಗಳನ್ನು ನವರಂಗದಲ್ಲಿ ಸ್ಥಾಪಿಸಲಾಗಿದೆ. ಬಸದಿಯ ಆವರಣದಲ್ಲಿ ಬಾಹುಬಲಿಯ ಆಳೆತ್ತರದ ಸುಂದರ ಮೂರ್ತಿಇದ್ದು, ಅದು ಮುಕ್ಕಾಗಿದೆ. ಮೂರ್ತಿಗಳ ಕಾಲವನ್ನು ಗಂಗರ ಕೊನೆಯ ಕಾಲಘಟ್ಟದೆಂದು ಅಂದರೆ ಸುಮಾರು ೧೦-೧೧ ನೇ ಶತಮಾನವೆಂದು ಭಾವಿಸಲಾಗಿದೆ.

ತಾಲ್ಲೂಕಿನ ಮತ್ತೊಂದು ಪ್ರಮುಖ ಜೈನ ನೆಲೆ ಕತ್ತರಿಘಟ್ಟ. ಹೊಸಹೊಳಲುವಿನಲ್ಲಿ ದೊರೆತಿರುವ ಶಾಸನಗಳ ಪ್ರಕಾರ ಕತ್ತರಿಘಟ್ಟವು ಜೈನ ನೆಲೆಯಾಗಿದ್ದು ತ್ರಿಕೂಟಜಿನಾಲಯವು ಇದ್ದು, ಸಂತೆಬಾಚಳ್ಳಿಯಲ್ಲಿ ಎಣ್ಣೆಗಾಣ ನಡೆಸುತ್ತಿದ್ದ ಚೆಕ್ಲಾಂಬಿಕೆ ಎಂಬ ಒರ್ವ ಪಾಳೇಗಾರನ ಮಗಳು ಜಿನಭಕ್ತೆಯಾಗಿದ್ದು, ಕತ್ತರಿಘಟ್ಟದ ಸುತ್ತಮುತ್ತಲಿನ ಗ್ರಾಮಗಳನ್ನು ಜಿನಾಲಯದ ನಿರ್ವಹಣೆಗಾಗಿ ದತ್ತಿಬಿಟ್ಟಿದ್ದಳು ಎನ್ನುವ ಅಂಶ ತಿಳಿದು ಬರುತ್ತದೆ.

ಕತ್ತರಿಘಟ್ಟವು ಕೃಷ್ಣರಾಜಪೇಟೆಯಿಂದ ವಾಯುವ್ಯಕ್ಕೆ ೪ ಕಿ.ಮೀ. ದೂರದಲ್ಲಿದ್ದು, ಎಪಿಗ್ರಫಿಯ ಕರ್ನಾಟಕದಲ್ಲಿ ಇದನ್ನು ಸಂತರಘಟ್ಟ ಎಂದು ಕರೆಯಲಾಗಿದೆ. ಕ್ರಿ.ಶ. ೨೦೦೪ನೇ ಇಸವಿಯಲ್ಲಿ ಚರಂಡಿ ಕಾಮಗಾರಿ ನಡೆಸುತ್ತಿದ್ದ ವೇಳೆಯಲ್ಲಿ ಕಾರ್ಮಿಕನೋರ್ವನ ಹಾರೆಯ ಹಿಡಿತದಿಂದ ಕೆಲವು ಜೈನ ಮೂರ್ತಿಗಳು ಗೋಚರವಾದವು. ತದನಂತರ ಅವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಗಂಗರಕಾಲಕ್ಕೆ ಸಂಬಂಧಪಟ್ಟ ಐದಕ್ಕೂ ಹೆಚ್ಚು ಜೈನವಾಸ್ತುಶಿಲ್ಪ ವಿಗ್ರಹಗಳು ಕಂಡುಬಂದವು. ಗ್ರಾಮದ ರಂಗಸ್ಥಳದಲ್ಲಿ ಕಂಡುಬಂದಂತಹ ಮೂರ್ತಿ ಶಿಲೆಗಳು ಗಂಗರ ಕಾಲದ್ದಾಗಿವೆ. ಸಿಕ್ಕಂತಹ ಮೂರ್ತಿಗಳಲ್ಲಿ ಒಂದು ೪ ಅಡಿ ಎತ್ತರದ ಬಾಹುಬಲಿ ವಿಗ್ರಹ, ೫ ಅಡಿ ಎತ್ತರದ ಪಾರ್ಶ್ವನಾಥ, ನೇಮಿನಾಥ, ಮತ್ತು ಶಾಂತಿನಾಥರ ವಿಗ್ರಹಗಳೆಂದು ಧೃಡಪಡಿಸಲಾಯಿತು. ನಂತರ ಗ್ರಾಮದಲ್ಲಿ ಸಿಕ್ಕ ವಿಗ್ರಹಗಳನ್ನು ಮೈಸೂರಿನ ಮ್ಯೂಸಿಯಂನಲ್ಲಿ ಇಡಲು ಅಧಿಕಾರಿಗಳ ಮಟ್ಟದಲ್ಲಿ ಚರ್ಚಿಸಿದರಾದರೂ ಗ್ರಾಮಸ್ಥರು ಅದನ್ನು ನಿರಾಕರಿಸಿದ್ದರಿಂದ ಅದನ್ನು ಅಲ್ಲಿಯೇ ಇಡಲಾಗಿತ್ತು. ಈ ಮೂರ್ತಿಗಳನ್ನು ಜನರ ಧೈವಭಕ್ತಿಯಿಂದ ಪೂಜಿಸಲು ಆರಂಭಿಸಿದರು. ಆದರೆ ಇಲ್ಲಿಯ ಜನರು ಸಂಪ್ರದಾಯಸ್ಥರಾಗಿದ್ದರಿಂದ ಭವಿಷ್ಯ ಹೇಳುವವನೋರ್ವನ ಬಳಿಗೆ ಹೋಗಿ ಇದರ ಬಗ್ಗೆ ಶಾಸ್ತ್ರ ಕೇಳಲಾಗಿ ಆತ ನಿಮ್ಮ ಗ್ರಾಮದಲ್ಲಿ ಈ ವಿಗ್ರಹಗಳಿದ್ದರೆ ಮಳೆ-ಬೆಳೆ ಬರುವುದಿಲ್ಲ, ಆದ್ದರಿಂದ ಅವುಗಳನ್ನು ದೊರೆತಿರುವ ಸ್ಥಳದಲ್ಲಿಯೇ ಹೂತು ಹಾಕಿ ಎಂದು ತಿಳಿಸಿದಾಗ ಕಾಕತಾಳೀಯವಾಗಿ ಆವನ ಮಾತುಗಳನ್ನು ಹೇಳಿದ ಸಂದರ್ಭದಲ್ಲಿ ಪ್ರಕೃತಿ ವಿಕೋಪದಿಂದ ಮಳೆ ಬರಲಿಲ್ಲ. ಆಗ ಆ ವ್ಯಕ್ತಿಯ ಮಾತುಗಳನ್ನು ಮನದಲ್ಲಿಟ್ಟುಕೊಂಡು ಆ ವಿಗ್ರಹಗಳನ್ನು ಅಲ್ಲಿಯೇ ಹೂತುಹಾಕಲಾಯಿತು. ಉತ್ಖನನ ನಡೆಸಿದರೆ ತಮ್ಮ ಮನೆ ಆಸ್ತಿ-ಪಾಸ್ತಿಗೆ ಧಕ್ಕೆಯಾಗಬಹುದೆಂಬ ಭಯದಿಂದ ಜನರು ಅವನ್ನು ಹೂತುಹಾಕಿದ್ದಾರೆಂದು ಗ್ರಾಮಸ್ಥರು ಹೇಳುತ್ತಾರೆ.

ಕತ್ತರಿಘಟ್ಟ ಗ್ರಾಮಕ್ಕೆ ಹೇಗೆ ಹೆಸರುಬಂದಿತೆಂದು ಪರಿಶೀಲಿಸಿದಾಗ ಎಪಿಗ್ರಫಿಯ ಕರ್ನಾಟಕದಲ್ಲಿ ತಿಳಿದು ಬರುವಂತೆ ಈ ಗ್ರಾಮದಲ್ಲಿ ಮೊದಲು ಅಂದರೆ ಕ್ರಿ.ಶ. ೮ ಮತ್ತು ೯ನೇ ಶತಮಾನದ ಕಾಲವಧಿಯಲ್ಲಿ ಜೈನಯತಿಗಳು (ಸಾಧು ಸಂತರು) ವಾಸವಾಗಿದ್ದರೆಂದು, ಈ ಗ್ರಾಮಕ್ಕೆ ಸಂತರಘಟ್ಟವೆಂದು ಕರೆಯಲಾಗಿದ್ದು, ತದನಂತರ ಅಪಭ್ರಂಶವಾಗಿ ಜನರ ಬಾಯಲ್ಲಿ ಕತ್ತರಿಘಟ್ಟವಾಯಿತೆಂದು ತಿಳಿದುಬರುತ್ತದೆ. ಊರಿನ ಸುತ್ತಮುತ್ತ ಭಗ್ನಗೊಂಡ ಜಿನಮೂರ್ತಿಗಳು ಸಿಕ್ಕಿದ್ದು, ಅವುಗಳನ್ನು ಮಣ್ಣಿನಲ್ಲಿ ಹೂತುಹಾಕಲಾಗಿದೆ. ಈಗ ಇರುವ ಊರಿನಲ್ಲಿ ೪೦೦ ವರ್ಷಗಳ ಹಿಂದೆ ಜನವಸತಿ ಇರಲಿಲ್ಲ. ಆಗ ಅದು ಪ್ರಶಾಂತವಾಗಿದ್ದು, ಸುತ್ತಮುತ್ತಲು ಬೆಟ್ಟಗುಡ್ಡಗಳಿಂದ ಕೂಡಿತ್ತು, ಹಾಗಾಗಿ ಜೈನ ಯತಿಗಳು ತಪ್ಪಸು ಮಾಡಲು ಯೋಗ್ಯವಾದ ಸ್ಥಳವಾಗಿತ್ತು. ಈಗಲೂ ಊರಿನ ಸುತ್ತಮುತ್ತ ಬೆಟ್ಟಗುಡ್ಡಗಳಿವೆ ಉದಾ: ಬೆಳ್ಳಿ ಬೆಟ್ಟ, ಹುಂಜನಗುಡ್ಡ, ಸಾಲುಬೆಟ್ಟ, ತಲಕಾಡುಗುಡ್ಡ, ಕರಿಗಲ್ಲುಮಂಟಿ, ಕಬ್ಬೆತಟ್ಟಕಲ್ಲು ಸೀಗಳ ಮುಂತಾದವು ೪೦೦ ವರ್ಷಗಳ ಹಿಂದೆ ಜನರು ಇಂದಿನ ಈ ಸ್ಥಳದಿಂದ ೧ ಕಿ.ಮೀ. ದೂರದಲ್ಲಿ ನೆಲಸಿದ್ದರೆನ್ನಲಾಗಿದೆ. ಅಲ್ಲಿ ಜ್ವಾಲಾಮರದಮ್ಮ ಗುಡಿಯು ಸಹ ಇತ್ತೆಂಬ ಅಭಿಪ್ರಾಯ ವ್ಯಕ್ತವಾಗಿದೆ.

ಕೃಷ್ಣರಾಜಪೇಟೆಯಿಂದ ದಕ್ಷಿಣಕ್ಕೆ ೪ ಕಿ.ಮೀ. ದೂರದಲ್ಲಿರುವ ಮುರುಕನಹಳ್ಳಿಯು ಶ್ರೀ ಪಾರ್ಶ್ವನಾಥ ತೀರ್ಥಂಕರ ಬಸದಿಯಿಂದ ಪ್ರಸಿದ್ಧವಾಗಿದೆ. ಇಲ್ಲಿ ಪಾರ್ಶ್ವನಾಥಸ್ವಾಮಿಯ ಬಸದಿಯಿದ್ದು, ಯಾವ ಶಾಸನಗಳು ಕಂಡುಬರುವುದಿಲ್ಲ, ಜೈನ ವಿದ್ವಾಂಸರು ಈ ಮುರುಕನಹಳ್ಳಿಯ ಬಸದಿಯು ಹೊಸಹೊಳಲುವಿನ ಬಸದಿಗಿಂತ ಪ್ರಾಚೀನವಾದದ್ದು, ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೂರ್ತಿಶಿಲ್ಪದ ಆಧಾರದ ಮೇಲೆ ಜಿನಾಲಯದಲ್ಲಿರುವ ಶ್ರೀ ಪಾರ್ಶ್ವನಾಥ ತೀರ್ಥಂಕರ ಮೂರ್ತಿಯು ೧೬೦೦ ವರ್ಷಗಳಷ್ಟೆ ಹಳೆಯದು ಅಂದರೆ ಕ್ರಿ.ಶ. ೬ನೇ ಶತಮಾನಕ್ಕೆ ಸೇರಿರಬಹುದು ಎಂದು ಊಹಿಸಲಾಗಿದೆ. ೨೩ ನೇ ತೀರ್ಥಂಕರರಾದ ಶ್ರೀ ಪಾರ್ಶ್ವನಾಥರ ಮೂರ್ತಿ ಕಾಯೋತ್ಸರ್ಗ (ನಿಂತಿರುವ ಭಂಗಿ ಪಲ್ಯಂಕಾಸನ) ಭಂಗಿಯಲ್ಲಿದೆ.

ನಾಗದೇವರು ದೇವರ ಪಾದದಿಂದ ಶಿರಭಾಗದವರೆಗೂ ಸುತ್ತಿಕೊಂಡು, ಶಿರಭಾಗದಲ್ಲಿ ಏಳುಎಡೆ ಚಾಚಿಕೊಂಡಿದೆ. ಅದರ ಮೇಲೆ ಮುಕ್ಕೊಡೆ ಇದೆ. ದೇವರ ಎಡ ಮತ್ತು ಬಲ ಭಾಗದಲ್ಲಿ ತರುಲತೆಗಳು ಹಬ್ಬಿವೆ. ಸ್ವಾಮಿಯ ಬಲಭಾಗದಲ್ಲಿ ಧರಣೇಂದ್ರಯಕ್ಷ ಹಾಗೂ ಎಡಭಾಗದಲ್ಲಿ ಯಕ್ಷಿಪದ್ಮಾವತಿ ಅಮ್ಮನವರಿದ್ದಾರೆ. ಊರಿನವರ ಬಾಯಿಯಲ್ಲಿ ಇದು 'ಬಸ್ತಿಸವಣಪ್ಪ ದೇವರು' ಆಗಿದೆ. ಮುಂಚೆ ಬಸದಿಯು ಬರಿ ಎರಡಂಕಣದಲ್ಲಿದ್ದು, ಗರ್ಭಗುಡಿ ಮತ್ತು ಸುಖನಾಸದಿಂದ ಕೂಡಿತ್ತು. ನಂತರ ಅನಂತ ನೋಂಪಿಯನ್ನು ಮಾಡುವಾಗ ಜಾಗ ಸಾಲದಾಗಿ ನವರಂಗವನ್ನು ಕಟ್ಟಿಸಲಾಯಿತು. ಮುಂಚೆ ಬಸದಿಯು ಚಿಕ್ಕದ್ದಾಗಿದ್ದರಿಂದ ಶ್ರಾವಕರು ಹೊಸಹೊಳಲುವಿಗೆ ಹೋಗಿ ಅನಂತನೋಂಪಿಯನ್ನು ಮಾಡಿಕೊಂಡು ಬರುತ್ತಿದ್ದರು. ಒಂದು ಬಾರಿ ನೋಂಪಿ ವ್ರತಾಚರಣೆಗೆ ಹೊಸಹೊಳಲುವಿಗೆ ಹೋಗಿ ವ್ರತ ಮುಗಿಸಿ ಬರುವಾಗ ತೊರೆಯಲ್ಲಿ ಪ್ರವಾಹದ ನೀರು ಹೆಚ್ಚಾಗಿದ್ದರಿಂದ ಅಲ್ಲಂದ ಬರಲು ಕಷ್ಟವಾಯಿತು. ನೋಂಪಿ ಮಾಡುತ್ತಿದ್ದ ಶ್ರಾವಕರು ಒಕ್ಕಲುತನ ಮಾಡಿಕೊಂಡಿದ್ದರಿಂದ ಅವರಿಗೆ ಇದರಿಂದ ತ್ರಾಪತ್ರಯ ಉಂಟಾಯಿತು. ತೊರೆಯಲ್ಲಿ ಮೂರುದಿನ ಪ್ರವಾಹ ಇಳಿಯಲೇ ಇಲ್ಲ ಆದ್ದರಿಂದ ಅಂದೇ ನವರಂಗ ಮತ್ತು ಮುಖಮಂಟಪ ಕಟ್ಟಿಸಬೇಕೆಂದು ನಿರ್ಧರಿಸಿ ಬಸದಿಯನ್ನು ವಿಸ್ತರಿಸಲಾಯಿತು ಎನ್ನುವ ಅಂಶವನ್ನು ಸ್ಥಳಿಯ ಜೈನ ಪರಂಪರೆ ತಿಳಿಸುತ್ತದೆ. ಊರಿನವರು ಹಿಂದೆ ಹೊರಕಾಣಿಕೆಯನ್ನು ಕೊಡುತ್ತಿದ್ದರು ಎನ್ನಲಾಗಿದ್ದು, ಸದ್ಯ ಜಿನಾಲಯವು ಮುಜುರಾಯಿ ವ್ಯಾಪ್ತಿಗೆ ಸೇರಿದೆ.

ಹೊಸಹೊಳಲುವಿನ ಪಾರ್ಶ್ವನಾಥ ಬಸದಿಯ ಪದ್ಮಾವತಿ ವಿಗ್ರಹದ ಪೀಠದ ಮೇಲೆ ಕ್ರಿ.ಶ. ೧೩ನೆಯ ಶತಮಾನದೆಂದು ಲಿಪಿಯು ಶಾಸ್ತ್ರದ ಮೇಲೆ ಗುರುತಿಸಿರುವ ಜಿನಶಾಸನ ಶ್ರೀ ವಿಜಯಕೀರ್ತಿದೇವರ ಶಿಷ್ಯರು ಎಂದು ಉಲ್ಲೇಖಿಸಿದ್ದು, ಇದನ್ನು ವಿಗ್ರಹ ನಿರ್ಮಿಸಿದಾತನ ಹೆಸರಿರಬಹುದೆಂದು ಅಭಿಪ್ರಾಯ ಪಡುತ್ತರಾದರೂ ಈ ಜೈನ ಬಸದಿಯಲ್ಲಿದ್ದ ಮುನಿ ಶ್ರೀ ವಿಜಯಕೀರ್ತಿ ಎಂಬುದು ಪರೋಕ್ಷವಾಗಿ ಖಚಿತವಾಗುತ್ತದೆ.

ಇದೇ ಗ್ರಾಮದ ಭೈರವೇಶ್ವರ ದೇವಾಲಯದ ಆವರಣದಲ್ಲಿರುವ ಜೈನಶಿಲ್ಪದ ಪೀಠ ಒಂದರ ಮೇಲೆ ಎರಡು ಸಾಲಿನ ಕ್ರಿ.ಶ. ೧೨ನೆಯ ಶತಮಾನದ ಶಾಸನವಿದ್ದು, ಅದು ಮೂಲಸಂಘ ದೇಶಿಯಗಣ ಪುಸ್ತಕ ಗಚ್ಚ ಕುಂದಕುಂದಾನ್ವಯದ ಶುಭಚಂದ್ರಸಿದ್ಧಾಂತದೇವರು ಶ್ರೀ ಕುಕ್ಕುಟಾಸನ ಮಲಾರಿದೇವರ ಶಿಷ್ಯರಾಗಿದ್ದು, ಶುಭಚಂದ್ರ ಸಿದ್ಧಾಂತದೇವ ಮುನಿಯ ಗುಡ್ಡ ಅಂದರೆ ಶಿಷ್ಯ ನೊಳೆಂಬಿಸೆಟ್ಟಿಯು ಶಿಲ್ಪವನ್ನು ಪ್ರತಿಷ್ಠಾಪಿಸಿದಂತೆ ದಾಖಲಿಸುತ್ತದೆ.

ಇದೇ ಬಸದಿಯ ಹಾರದ ಮೇಲಿನ ದೇವಕೋಷ್ಠದಲ್ಲಿರುವ ಪಾರ್ಶ್ವನಾಥ ವಿಗ್ರಹದ ಪೀಠದ ಮೇಲಿರುವ ಶಾಸನವು ನಯಭದ್ರವನ್ನು ನೇಯಭದ್ರ ಎಂದು ದಾಖಲಿಸುತ್ತದೆ. ಇದು ಲಿಪಿಶಾಸ್ತ್ರದ ಆಧಾರದ ಮೇಲೆ ಕ್ರಿ.ಶ.೧೫-೧೬ ನೇ ಶತಮಾನದೆಂದು ಗುರುತಿಸಲಾಗಿದೆ.

ಅಕ್ಕಿಹೆಬ್ಬಾಳು ಹೋಬಳಿ ಶ್ರವಣಹಳ್ಳಿ ಜೈನ ಸನ್ಯಾಸಿಗಳು ಇದ್ದಂತಹ ಗ್ರಾಮ. ಶ್ರವಣ ಅಥವಾ ಶ್ರಮಣ ಅಂದರೆ ಜೈನ ಸನ್ಯಾಸಿ ಎಂದರ್ಥ. ಶ್ರಮಣ ಸಂಸ್ಕೃತಿ ಎಂದರೆ ಜೈನ ಸಂಸ್ಕೃತಿಯೆಂದು ಪರಿಭಾವಿಸಲಾಗಿದೆ. ಶ್ರವಣಹಳ್ಳಿಯ ಏಕೈಕ ಶಾಸನವು ಜೈನಧರ್ಮದಾಗಿದ್ದು, ಇದು ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲವನ್ನು ಉಲ್ಲೇಖಿಸುತ್ತದಲ್ಲದೆ ಅಲ್ಲದೆ ಮಂದಗೆರೆಯ ವೃತ್ತಿಯೊಳಗೆ ಕಾವನಹಳ್ಳಿಯಲ್ಲಿ ಕೊಂಗಾಳ್ವ ವಂಶಕ್ಕೆ ಸೇರಿದ ಪೃಥ್ವಿಕೊಂಗಾಳ್ವನ ಮಗ ದುದ್ದಮಲ್ಲನು ಮತ್ತು ಆತನ ಅಕ್ಕ ವಿಷ್ಣುವರ್ಧನನ ಹಿರಿಯ ರಾಣಿಯಾದ ಚಂದಲಾದೇವಿಯು ತಮಗೆ ತಮ್ಮ ತಂದೆ ಬಳುವಳಿಯಾಗಿ ಕೊಟ್ಟಿದ್ದ ಕಾವನಹಳ್ಳಿಯ ತ್ರಿಭುವನತಿಲಕ ತೀರ್ಥದಲ್ಲಿ ವೀರಕೊಂಗಾಳ್ವ ಜಿನಾಲಯವನ್ನು ನಿರ್ಮಿಸಿ, ಬಸದಿಯ ಅಂಗಭೋಗಕ್ಕೆ, ಋಷಿಗಳ ಆಹಾರಧಾನಕ್ಕೆ ಕಾವನಹಳ್ಳಿಯನ್ನು ತಮ್ಮ ಗುರುಗಳಾದ ಮೂಲಸಂಘ ದೇಶಿಯಗಣ ಪುಸ್ತಕಗಚ್ಛ ಕುಂದಕುಂದಾನ್ವಯದ ಶ್ರೀ ಮೇಘಚಂದ್ರ ತ್ರೈವಿಧ್ಯಾದೇವರ ಶಿಷ್ಯರಾದ ಶ್ರೀ ಪ್ರಭಾಚಂದ್ರದೇವರ ಪಾದವನ್ನು ತೊಳೆದು ಧಾರಾಪೂರ್ವಕವಾಗಿ ದಾನ ಮಾಡಿದುದನ್ನು ತಿಳಿಸುತ್ತದೆ.

ಕೃಷ್ಣರಾಜಪೇಟೆಯಿಂದ ೨೫ ಕಿ.ಮಿ. ಉತ್ತರಕ್ಕಿರುವ ಅಘಲಯ ಭಕ್ತರ ಪಾಪನಾಶ ಮಾಡುವ (ಅಘ್-ಪಾಪ, ಲಯ-ನಾಶ) ಪವಿತ್ರ ಸ್ಥಳವಾಗಿದೆ. ಇಲ್ಲಿಯ ಏಕೈಕ ಶಾಸನವು ಸೇರಿದಂತೆ ನೆರೆಯ ಶ್ರವಣಬೆಳಗೊಳದ ಸುಮಾರು ಲನೇ ಶತಮಾನದ ಒಂದು ಹಾಗೂ ಕ್ರಿ.ಶ. ೧೧೨೦ ಇನ್ನೊಂದು ಶಾಸನದಲ್ಲೂ ಊರ ಹೆಸರು 'ಅಗಳೆ' ಎಂದು ಉಲ್ಲೇಖಿತಗೊಂಡಿದೆ.

ತಾಲ್ಲೂಕಿನ ಮತ್ತೊಂದು ಪ್ರಮುಖ ಜೈನ ನೆಲೆ ಬಸ್ತಿಹೊಸಕೋಟೆಯು ತಾಲ್ಲೂಕು ಕೇಂದ್ರ ಕೃಷ್ಣರಾಜಪೇಟೆಯಿಂದ ೨೮ ಕಿ.ಮೀ. ದಕ್ಷಿಣಕ್ಕೆ ಹಾಗೂ ಮೂವಿನಕೆರೆಗೆ ಎರಡು ಕಿ.ಮೀ. ಅಂತರದಲ್ಲಿದ್ದು, ಕನ್ನಂಬಾಡಿ ನಿರ್ಮಾಣದಿಂದಾಗಿ ಮುಳುಗಡೆಯಾಗಿದ್ದು, ಬೇಸಿಗೆಯಲ್ಲಿ ಮಾತ್ರ ವಿಕ್ಷೀಸಬಹುದಾದ ಗೊಮ್ಮಟ ಮೂರ್ತಿಯಿಂದಾಗಿ ಉಲ್ಲೇಖಾರ್ಹವಾಗಿದೆ.

ಇಲ್ಲಿಂದ ವರದಿಯಾಗಿರುವ ಎರಡು ಶಾಸನಗಳಲ್ಲಿ ಒಂದು ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನವಾಗಿದ್ದು, ಮಹಾಪ್ರಧಾನ ದಂಡನಾಯಕ ಪುಣಿಸೋಮಯ್ಯನು ಬಸದಿಯನ್ನು ನಿರ್ಮಿಸಿ ಮಾಣಿಕ್ಯದೋಡಲೂರು ಹಾಗೂ ಮಾವಿನಕೆರೆಗಳನ್ನು ದಾನಬಿಟ್ಟ ವಿಷಯನ್ನು ತಿಳಿಸಿದರೆ, ಮಾನಸ್ತಂಭದ ಮೇಲಿರುವ ಹೊಯ್ಸಳ ಒಂದನೆಯ ನರಸಿಂಹನ ಕ್ರಿ.ಶ. ೧೧೬೫ರ ಶಾಸನದಿಂದ ಮಹಾಪ್ರಧಾನ ಹೆಗ್ಗಡೆ ಶಿವರಾಜನ ಅಧಿಕಾರಿ ಪುಣಿಸೋಮಯ್ಯನು ಮಾಣಿಕ್ಯದೋಡಲೂರಿನ ಹೊಯ್ಸಳ ಜಿನಾಲಯಕ್ಕೆ ಮಾಣಿಕ್ಯದೋಡಲೂರಿನ ಗದ್ದೆ, ಮಗ್ಗದರೆ ಹಾಗೂ ಅಲ್ಲಿನ ಅಶ್ರಮವಾಸಿಗಳ ಆಹಾರಕ್ಕೆ ಆ ಸೀಮೆಯ ನಾಲ್ಕು ಕಡೆಯ ಗ್ರಾಮಗಳ ಕೆಲವು ತೆರಿಗಳನ್ನು ದತ್ತಿಯಾಗಿ ಕೊಟ್ಟ ವಿಚಾರವು ತಿಳಿದು ಬರುತ್ತದೆ. ಬಯಲು ಸಂಗ್ರಹಾಲಯದಂತಿರುವ ಬಸ್ತಿ ಹೊಸಕೋಟೆಯಲ್ಲಿ ನಾಲ್ಕು ಬಸದಿಗಳ ಅವಶೇಷಗಳು, ನಾಲ್ಕು ತೀರ್ಥಂಕರ ಭಗ್ನವಾದ ವಿಗ್ರಹಗಳು, ಪಾಳು ಮಂಟಪಗಳು, ಸ್ತಂಭಗಳು, ಬೊದಿಗೆ, ಪೀಠ, ಪಟ್ಟಿಕೆಗಳು ಬಿತ್ತಿಚಿತ್ರಗಳು ಕಂಡು ಬರುತ್ತವೆ. ಕ್ರಿ.ಶ. ೧೧೪೭ರಲ್ಲಿ. ಹೊಯ್ಸಳ ದೊರೆ ವಿಷ್ಣುವರ್ಧನನ ಮಹಾ ಪ್ರಧಾನ ದಂಡ ನಾಯಕ ಪುಣಿಸೋಮಯ್ಯನು ಜೈನ ತೀರ್ಥಂಕರರಾದ ಆದಿನಾಥ ಶಾಂತಿನಾಥ, ನೇಮಿನಾಥ ಹಾಗೂ ಮಹಾವೀರರ ಸುಂದರವಾದ ಶಿಲ್ಪ ಕಲಾಕೃತಿಗಳನ್ನು ಬಳಪದ ಕಲ್ಲಿನಿಂದ ನಿರ್ಮಿಸಿರುವನೆಂದು ಶಾಸನಗಳ ಮೂಲದಿಂದ ತಿಳಿದು ಬಂದರೂ ಮೂರ್ತಿಶಿಲ್ಪದ ಆಧಾರದ ಮೇಲೆ ತೀರ್ಥಂಕರರ ವಿಗ್ರಹಗಳು ಗಂಗರ ಕಾಲಕ್ಕೆ ಸೇರಿದ್ದವೆಂದು ತಿಳಿಯಬಹುದಾಗಿದೆ. ಬಸ್ತಿ ಹೋಸಕೋಟೆಯಲ್ಲಿ ಸಿಕ್ಕಿರುವ ಜಿನಾಲಯಗಳ ನಿರ್ಮಾಣದಲ್ಲಿ ಬಳಸಿರುವ ಸ್ತಂಭಗಳ ಅಧ್ಯಯನದಿಂದ ಇವನ್ನು ಗಂಗ–ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣ ಮಾಡಿರಬಹುದೆಂದು ಭಾವಿಸಬಹುದಾಗಿದೆ. ತೀರ್ಥಂಕರ ಮೂರ್ತಿಗಳು ಗಂಗರ ಕಾಲದ್ದಾಗಿದ್ದು ಬಸದಿಯ ನಿರ್ಮಾಣವು ಸಹ ಗಂಗರ ಕಾಲದಲ್ಲಿ ನಡೆದಿದ್ದು ಹೊಯ್ಸಳರ ಕಾಲದಲ್ಲಿ ಜೀರ್ಣೋದ್ದಾರಗೊಂಡಿರ ಬಹುದೆಂಬ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಬಸದಿ ಹೊಸಕೋಟೆಯ ಬಸದಿಗಳು ಗಂಗರ ಕಾಲದಲ್ಲಿ ನಿರ್ಮಾಣಗೊಂಡು ರಾಷ್ಟ್ರಕೂಟರ ಕಾಲದಲ್ಲಿ ವಿಸ್ತ್ರುತಗೊಂಡು ಹೊಯ್ಸಳರ ಕಾಲದಲ್ಲಿ ಪುನರ್ ನಿರ್ಮಾಣಗೊಂಡಿದೆ ಎಂದು ಅಭಿಪ್ರಾಯ ಪಡಬಹುದಾಗಿದೆ.

ಬಸದಿ ಹೊಸಕೋಟೆಯ ಪ್ರಮುಖ ಆಕರ್ಷಣೆ ೧೮ ಅಡಿ ಎತ್ತರದ ಗೊಮ್ಮಟೇಶ್ವರ ಮೂರ್ತಿ, ಇದನ್ನು ಜೈನ ಸಂಪ್ರದಾಯದಂತೆ ಕಾಯೋತ್ಸರ್ಗ ಶೈಲಿಯಲ್ಲಿ ಒಳಪದ ಕಲ್ಲಿನಂದ ನರ್ಮಿಸಲಾಗಿದೆ. ಈ ವಿಗ್ರಹವು ಹಳೇಬೀಡುವಿನ ಬಾಹುಬಲಿ ಮೂರ್ತಿಯನ್ನು ಹೊಲುತ್ತದೆ. ಹೊಯ್ಸಳ ಶಿಲ್ಪಿವಾಗಿರುವ ಬಾಹುಬಳಿ ಮೂರ್ತಿಯ ವಿಶೇಷವೆಂದರೆ ಈ ಮೂರ್ತಿಯ ಎತ್ತರಕ್ಕೆ ಕಮಾನಿನಾಕಾರಾದ ಗೂಡಿನಂತಹ ಗುಡಿಯನ್ನು ರಕ್ಷಣೆಗೆ ಕಟ್ಟಲಾಗಿದೆ. ಇದನ್ನು ಇತ್ತೀಚಿಗೆ ೧೦೦ ವರ್ಷಗಳಷ್ಟೆ ಹಿಂದೆ ಒಬ್ಬ ಹರಿಜನ ಮಹಿಳೆ ಕಟ್ಟಿಸಿದಳೆಂದು ತಿಳಿದು ಬರುತ್ತದೆ. ಈ ವಿಗ್ರಹ ಇಂದಿಗೂ ಸುಸ್ಥಿತಿಯಲ್ಲಿದ್ದು ಪ್ರತಿವರ್ಷ ಜೈನ ಸಮಾಜದವರು ಮಸ್ತಕಾಭಿಷೇಕ ನೆರವೇರಿಸುತ್ತಿರುವುದು ವಿಶೇಷ ಸಂಗತಿಯಾಗಿದೆ.

ಹೋಬಳಿ ಕೇಂದ್ರ ಸಂತೆಬಾಚನಹಳ್ಳಿಯಲ್ಲಿ ಒಂದು ಬಸದಿ, ಜೈನ ಮಠ ಹಾಗೂ ಜೈನ ವಿದ್ಯಾಕೇಂದ್ರವಿದ್ದ ಬಗ್ಗೆ ವಿವರಗಳು ತಿಳಿದು ಬರುತ್ತದೆ. ಸಂತೇಬಾಚಹಳ್ಳಿ ಹೋಬಳಿ, ಜೈನ ಧರ್ಮದ ಪವಿತ್ರ ಯಾತ್ರಸ್ಥಳ ಶ್ರವಣಬೆಳಗೊಳದ ಸನಹದಲ್ಲಿದ್ದು. ಧರ್ಮದ ಪ್ರಭಾವ ಹೆಚ್ಚಿದ್ದು ಹೆಚ್ಚಿನ ಸಂಶೋಧನೆ ಈ ಭಾಗದಲಿ ಅವಶ್ಯಕ

ಕರ್ನಾಟಕದ ಅತಿಪ್ರಸಿದ್ಧ ಜೈನ ಯಾತ್ರಾಸ್ಥಳ ಗೊಮ್ಮಟನ ಆವಾಸಸ್ಥಾನ ಶ್ರವಣಬೆಳಗೊಳಕ್ಕೆ ಹೊಂದಿಕೊಂಡತೆಯ ಇರುವ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಸಾಕಷ್ಟು ಜೈನ ಶಾಸನಗಳು ಬಸದಿಗಳು ಹಾಗೂ ಸ್ಮಾರಕಗಳು ಕಂಡು ಬಂದಿದ್ದು ನಿಸ್ಸಂದೇಹವಾಗಿ ಈ ಪ್ರದೇಶವು ಗಂಗರ ಕಾಲಘಟ್ಟದಿಂದ ೧೨ನೇ ಶತಮಾನದವರೆಗೂ ಪ್ರಮುಖ ಜೈನ ಕೇಂದ್ರವಾಗಿತ್ತೆಂದು ಹೇಳಬಹುದಾಗಿದೆ.

ಆಕರ ಗ್ರಂಥಗಳು

೧. ಎಫಿಗ್ರಾಫಿಯ ಕರ್ನಾಟಿಕಾ ವಾಲ್ಯುಮ್ VI.
೨. ಶುಭಚಂದ್ರ : ಜೈನ ಸಾಹಿತ್ಯ ಮತ್ತು ಸಂಸ್ಕೃತಿ–ಕೆಲವು ಅಧ್ಯಯನಗಳು, ಮೈಸೂರು, ೧೯೭೬.
೩. ಡಾ. ಆರ್. ರಂಗಸ್ವಾಮಿ : ಕೃಷ್ಣರಾಜಪೇಟೆ ತಾಲ್ಲೂಕಿನ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಮೈಸೂರು, ೨೦೧೧.
೪. ಡಾ. ಎನ್. ಸರಸ್ವತಿ ಮತ್ತು ಡಾ. ಸಿ.ಎನ್. ಶಿಲ್ಪಶ್ರೀ : ಹೊಯ್ಸಳರ ಕಾಲದಲ್ಲಿ ದಾನಿಗಳ ಪಾತ್ರ, ಮೈಸೂರು, ೨೦೧೧.
೫. ಡಾ. ಸಿ.ಎಸ್. ವಾಸುದೇವನ್ (ಸಂ): ಮುಕ್ಕೊಡೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.
೬ ಡಾ. ಹಂಪಾ ನಾಗರಾಜಯ್ಯ : ಚಂದ್ರಕೊಡೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೬೩

ರಾಮನಗರ ಪ್ರಾಂತ್ಯದಲ್ಲಿ ಜೈನಧರ್ಮದ ನೆಲೆಗಳು

ಪಿ. ಕನ್ಯಾಕುಮಾರ್*

ಜಿಲ್ಲಾ ಕೇಂದ್ರ ರಾಮನಗರವು, ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ ಎಂಬ ನಾಲ್ಕು ತಾಲ್ಲೂಕು ಘಟಕಗಳನ್ನು ಹೊಂದಿದ್ದು, ಪ್ರಾಗೈತಿಹಾಸಿಕ ನೆಲೆಗಳನ್ನು ತನ್ನಒಡಲಲ್ಲಿರಿಸಿಕೊಂಡಿದೆ. ಶಾತವಾಹನರಿಂದ ಹಿಡಿದು ಪಾಳೆಯಗಾರರು ಹಾಗೂ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟು ಸಾಕಷ್ಟು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ರಾಜಮನೆತನಗಳು ತಮ್ಮ ಆಡಳಿತದ ಅವಧಿಯಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಹಿತಿಕ, ಧಾರ್ಮಿಕ ಕ್ಷೇತ್ರಗಳಿಗೆ ವಿಪುಲವಾದ ಕೊಡುಗೆಗಳನ್ನು ನೀಡಿರುವುದು ಗಮನಾರ್ಹ.

ರಾಮನಗರ ಪ್ರಾಂತ್ಯದ ಪ್ರಾಚೀನ ಇತಿಹಾಸವನ್ನು ಅವಲೋಕಿಸಿದಾಗ ಸಾಮ್ರಾಜ್ಯಗಳು ಧರ್ಮಕ್ಕೆ ನೀಡಿರುವ ಕೊಡುಗೆಗಳನ್ನು ಕಲೆ ಹಾಕಬಹುದಾಗಿದೆ. ಸಾಮಾನ್ಯವಾಗಿ ಈ ಪ್ರಾಂತ್ಯದಲ್ಲಿ ಶೈವ ಧರ್ಮ ಮತ್ತು ವೈಷ್ಣವ ಧರ್ಮಗಳ ಪ್ರಭಾವ ಎದ್ದು ತೋರುತ್ತದೆ. ಪ್ರಾಚೀನ ಧರ್ಮಗಳಾದ ಜೈನ & ಬೌದ್ಧ ಧರ್ಮಗಳು ಮರೀಚಿಕೆಯಂತೆ ಇರುವುದು ಕಾಣಸಿಗುತ್ತವೆ. ಪ್ರಾಂತ್ಯದಲ್ಲಿ ಕಂಡುಬರುವ ಐತಿಹಾಸಿಕ ಮಹತ್ವವನ್ನು ಹೊಂದಿರುವ, ಚನ್ನಪಟ್ಟಣ ತಾಲ್ಲೂಕಿನ ಕುಡಿಕೆ ಬೇವೂರು, ಮಾಗಡಿ ತಾಲ್ಲೂಕಿನ ಬಿಸ್ಕೂರು ಗ್ರಾಮದ ಸುತ್ತಲಿನ ಗ್ರಾಮಗಳಾದ ಕಲ್ಯ, ಕುಪ್ಪೆಪಾಳ್ಯ, ಸಂಕೀಘಟ್ಟ, ಪಾಳ್ಯದಹಳ್ಳಿ ಪ್ರದೇಶಗಳಲ್ಲಿ ಇಂದಿಗೂ ಸಹ ಜೈನಧರ್ಮದ ಪಳೆಯುಳಿಕೆಗಳು, ಕುರುಹುಗಳು ದೊರೆಯುತ್ತಲಿವೆ. ದಿಗಂಬರ ಪಂಥದ ಜೈನಧರ್ಮ ಇಲ್ಲಿ ಗಟ್ಟಿಯಾಗಿ ನೆಲೆ ಊರಿತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳು ಲಭ್ಯವಿದೆ.

ರಾಮನಗರದ ಐಜೂರಿನಲ್ಲಿರುವ ಕ್ರಿ.ಶ. ೮೬೯ರ ಗಂಗರ ನೀತಿಮಾರ್ಗನು ವೀರ ಸ್ವರ್ಗವೇರಿದ ಶಾಸನವು ಅವನು ಸಲ್ಲೇಖನ ವ್ರತದಿಂದ ಮರಣವಾದಾಗ ಹಾಕಿಸಿದ ಶಾಸನ ಇದಾಗಿದ್ದು, ಆಗ ಅಂದರೆ ೯ನೇ ಶತಮಾನದಲ್ಲಿ ರಾಮನಗರ ಪ್ರಾಂತ್ಯದಲ್ಲಿ ಜೈನ ಧರ್ಮವಿತ್ತೆಂಬುದನ್ನು ತಿಳಿಯಬಹುದು.

ಚನ್ನಪಟ್ಟಣದ ಬೇವೂರು ಗ್ರಾಮ ಇಂದು ಕುಡಿಕೆ ಬೇವೂರು ಎಂದು ಕರೆಯುತ್ತಿದ್ದು, ಇದು ಜೈನ ಕೇಂದ್ರವಾಗಿತ್ತು. ಕ್ರಿ.ಶ. ೯೦೦ರ ಬೇವೂರಿನ ಶಾಸನ ಚಂದ್ರಸೇನ ಮುನಿಯ ಶಿಷ್ಯನಾಗಿದ್ದ ನಾಗಸೇನನು ಕೈಗೊಂಡ ಸನ್ಯಾಸನ ವ್ರತದ ವಿವರಣೆ ಈ ಪ್ರದೇಶ ಜಿನ ಸಮಯದ ನೆಲೆಯಾಗಿತ್ತುಎಂಬುದು ಹಾಗೂ ಬೇವೂರಿನಲ್ಲೇ ಇನ್ನೊಂದು ಭುವನಶಕ್ತಿ ಭಟ್ಟಾರರ್ ಇಲ್ಲಿ ಗುರುವಾಗಿದ್ದ ವಿವರಗಳು ಜಿನಧರ್ಮದ ಮಾಹಿತಿಯನ್ನು ತಿಳಿಸುತ್ತವೆ.

ಆದರೆ ಮಾಗಡಿ ಪ್ರಾಂತ್ಯದಲ್ಲಿ ಜೈನಧರ್ಮದ ಆಚರಣೆ ತುಸು ಅಧಿಕವಾಗಿಯೇ ಇತ್ತು. ಮಾಗಡಿ ಸೀಮೆ ಜೈನ ಧರ್ಮದ ನೆಲೆಯಾಗಿತ್ತು ಎಂಬುದಕ್ಕೆ ಸಾಕಷ್ಟು ಪುರಾತತ್ವ, ಸಾಹಿತ್ಯ ಆಧಾರಗಳಿವೆ. ಸಂಕೀಘಟ್ಟದ ಪುರಾತನ ವರ್ಧಮಾನ ಬಸದಿಯಲ್ಲಿರುವ ವರ್ಧಮಾನ ವಿಗ್ರಹ ಹಾಗೂ ವಿಗ್ರಹದ ಹಿಂಭಾಗದಲ್ಲಿರುವ ಶಾಸನ-ಹೊಯ್ಸಳ ದೊರೆಗಳಾದ ವಿನಯಾದಿತ್ಯನಿಂದ ಒಂದನೇ ನರಸಿಂಹನವರೆಗೆ ವಂಶಾವಳಿ ಹೇಳುತ್ತದೆ. ೫ ಅಡಿ ಎತ್ತರವಿರುವ ಇದು ಹೊಯ್ಸಳರ ಒಂದನೇ ನರಸಿಂಹವರ್ಮನ ಕಾಲದಲ್ಲಿ ಆಗಿರಬಹುದಾದ ಪ್ರಮೇಯಗಳೇ ಹೆಚ್ಚು.

ಇದೇ ಬಸದಿಯಲ್ಲಿ ಕುಪ್ಪೆ ಪಾಳ್ಯದ ಹೊಲದಲ್ಲಿ ದೊರೆತಂತಹ ವರ್ಧಮಾನ ಮಹಾವೀರನ ಮತ್ತೊಂದು ವಿಗ್ರಹವನ್ನು ತಂದು ಸಂರಕ್ಷಿಸಲಿಡಲಾಗಿದೆ. ಅದರ ಮುಖವನ್ನು ತುಸು ಕೆತ್ತನೆಗೆ ಒಳಪಡಿಸಿರುವುದು ಕಾಣಸಿಗುತ್ತದೆ.

ಜೈನ ಪೂರ್ವಾಚಾರ್ಯರಲ್ಲೊಬ್ಬರಾದ ಕಲ್ಯದ ಸುಮಂತ ಭದ್ರಸ್ವಾಮಿಗಳು ಬೌದ್ಧಧರ್ಮದ ಶೂನ್ಯವಾದ ತತ್ವವನ್ನು ನಿರಶನಗೊಳಿಸಿ ಪ್ರಚಾರ ಮಾಡಿದರು. ಇವರು ಶಿವಕೋಟ್ಯಾಚಾರ್ಯರರ ಗುರುಗಳೆಂದು ವರ್ಧಮಾನ ಪುರಾಣದಿಂದ ತಿಳಿದಿದೆ. ಗಂಗ ಸಾಮ್ರಾಜ್ಯದ ಸ್ಥಾಪನೆಗೆ ಸ್ಫೂರ್ತಿಯಾಗಿದ್ದ ಜೈನಯತಿ ಸಿಂಹನಂದಿಯ ಪೂರ್ವಾಧಿಕಾರಿಯಾದ ಏಳಾಚಾರ್ಯ ಮುನಿಗಳನ್ನು ಸ್ತುತಿಸುತ್ತಿರುವ. ಜಿನಸೇನ ಅಥವಾ ಜಿನಸೇನ ವೃತ್ತಿಯೆಂಬ ಜೈನ ಮುನಿ ಸಂಕೀಘಟ್ಟದಲ್ಲಿ ವರ್ಧಮಾನ

* ಉಪನ್ಯಾಸಕರು, ಬಸವೇಶ್ವರನಗರ, ಇಟ್ಟಮಡು ಅಂಚೆ, ಬಿಡದಿ ಹೋಬಳಿ, ರಾಮನಗರ ಜಿಲ್ಲೆ-೫೬೨೧೦೯.

ಪುರಾಣವನ್ನು ರಚಿಸಿದ ಬಗ್ಗೆ ವಿವರವಿದೆ. ಏಳಾಚಾರ್ಯ ಮತ್ತು ಕುಂದಾಚಾರ್ಯರು ಇಬ್ಬರು ಒಂದೇ ಎನ್ನುವ ಸನಿಹವೂ ಕೂಡ ಇದೆ.

ಬಿಸ್ಕೂರು ಈ ಹಿಂದೆ ಬಸ್ತೂರು ಆಗಿದ್ದು, ೭೫ಕ್ಕೂ ಹೆಚ್ಚು ಬಸದಿಗಳು (ಜಿನಾಲಯಗಳು ಇದ್ದವೆಂಬುದಕ್ಕೆ ಇಂದು ಅಲ್ಲಿರುವಂತಹ ಪ್ರಾಕ್ಚಾರಿತ್ರಿಕ ಕುರುಹುಗಳು ಮಾತ್ರ ಆಧಾರಗಳಾಗಿವೆ. ಆದರೆ ಇಂದು ಅಲ್ಲಿ ಶಿವಾಲಯಗಳನ್ನು ಮಾತ್ರ ನೋಡಬಹುದಾಗಿದೆ. ಆದರೆಇದಕ್ಕೆ ಸಮೀಪವೇ ಇರುವಂತಹ ಒಂದು ಕಾಲದಲ್ಲಿ ಕುಬೇರನ ಪಟ್ಟಣ (ಕುಪೇಂದ್ರ ಪಟ್ನ) ಮಿಷ್ಕರಿ ಪಟ್ಟಣ ಇಂದು ಕುಪ್ಪೆ ಪಾಳ್ಯವಾಗಿ ಉಳಿದಿದ್ದು, ಜೈನಧರ್ಮದ ನೆಲೆಯಾಗಿತ್ತು ಎಂಬುದಕ್ಕೆ ಅತ್ಯುತ್ತಮ ನಿದರ್ಶನವಾಗಿದೆ. ಇಲ್ಲಿ ಹತ್ತಾರಕ್ಕೂ ಅಧಿಕ ಸಂಖ್ಯೆಯ ಜಿನಾಲಯಗಳು ಗಂಗರ ಕಾಲದಲ್ಲಿ ಸ್ಥಾಪನೆಗೊಂಡಿರಬಹುದಾಗಿದ್ದು, ಚೋಳರ ಕಾಲದಲ್ಲಿ ಯುದ್ದಕ್ಕೆ ಸಿಲುಕಿ ನಾಶವಾಗಿದೆ. ಇಂದಿನ ನೀಲಗಿರಿ ತೋಪು ಒಂದು ಕಾಲದಲ್ಲಿ ಜಿನ ಬಸದಿಗಳ ಕೇಂದ್ರವಾಗಿತ್ತು. ಇಲ್ಲಿಗೆ ಸಮೀಪದ ಹೊಲದಲ್ಲಿ ಇಟ್ಟಿಗೆಗೂಡಿನ ಮಣ್ಣಿಗಾಗಿ ಗುಂಡಿ ತೆಗೆಯುವಾಗ ೪ ಅಡಿ ಎತ್ತರದ ವೃಷಭನಾಥನ ಮೂರ್ತಿ ದೊರೆತಿದ್ದು ಅದನ್ನೆ ಸಂಕೀಘಟ್ಟದ ಬಸದಿಯಲ್ಲಿಟ್ಟಿರುವುದು, ಸಮೀಪದಲ್ಲಿ ವೀರಭದ್ರನ ವಿಗ್ರಹ ದೊರೆತ್ತಿದ್ದು ಅದು ಪಾಳ್ಯದ ಹಳ್ಳಿಯ ದೇವಾಲಯದ ಆವರಣದಲ್ಲಿ ಸಂರಕ್ಷಿಸಡಲಾಗಿದೆ.

ಕಲ್ಯದಲ್ಲಿ ಪಂಚಬಸದಿಗಳು ಇದ್ದವು ಆದರೆ ಅವು ನಾಶಗೊಂಡಿವೆ. ಕೇವಲ ೩೨ ಅಡಿ ಎತ್ತರದ ಮಾನಸ್ತಂಭ, ಜಿನಶಿಲ್ಪಗಳು ಮಾತ್ರ ಉಳಿದಿವೆ. ಇಲ್ಲಿದ್ದಂತಹ ಪಾರ್ಶ್ವನಾಥನ ವಿಗಹವನ್ನು ರಾಮನಗರದ ಜನಪದ ಲೋಕದಲ್ಲಿರಿಸಲಾಗಿದೆ.

ಇನ್ನು ಮಾಗಡಿ ಪ್ರಾಂತ್ಯದಲ್ಲಿಜೈನ-ಯತಿ-ಮುನಿ ಕಂತಿಯರುಗಳು ಸಲ್ಲೇಖನ ವ್ರತವನ್ನು ಆಚರಿಸಿ ಮರಣ ಅವುದಂತಹ ಸ್ಮಾರಕ ನಿಷೇಧ ಶಿಲೆಗಳಿವೆ. ಕಲ್ಯದಾ ಸಮೀಪ ಹೂಜಿಗಲ್ಲಿನ ಬಸವನ ಬೆಟ್ಟದ ಬುಡದಲ್ಲಿರುವ ನಿಷಧಿ ಶಿಲಾ ಸಮೂಹಕ್ಕೆ ಚಂದ್ರಸೇನ ಸೂರಿಗಳ ಗುಡ್ಡವೆಂಬ ಹೆಸರು ಇಂದಿಗೂ ಇದೆ. ಇಲ್ಲಿ ಮಾಯಪ್ಪನ ನಿಷಧಿ ಶಿಲೆಯ ಬರಹವಿದೆ. ಹೀಗೆ ಹರ್ತಿಯಲ್ಲಿಯೂ ಕೂಡ ಹಾಳು ಬಸ್ತಿ ಇರುವುದು ಉಲ್ಲೇಖವಿದೆ. ಸಾತನೂರು, ಕೊತ್ತಿಗೆರೆ, ಶೆಟ್ಟಿಗೆರೆಗಳು ಕುಣಿಗಲ್ ತಾಲ್ಲೂಕಿಗೆ ಸೇರಿದವುಗಳಾಗಿದ್ದು ಜೈನಧರ್ಮಕ್ಕೆ ಸೇರಿದ ಬಸದಿಗಳು ಮತ್ತು ಚೈತ್ಯಾಲಯಗಳು ಇವೆ.

ಗಂಗರ ಕಾಲದಲ್ಲಿ ರಾಮನಗರ ಪ್ರಾಂತ್ಯವು ಜೈನಧರ್ಮ ರಾಜಾಶ್ರಯವನ್ನು ಪಡೆದು ಹೊಯ್ಸಳರ ಆಳ್ವಿಕೆಯ ಅವಧಿಯಲ್ಲಿ ವೈಷ್ಣವ ಮತದ ಪ್ರಭಾವದಿಂದ ನಲುಗಿತು. ಜೈನಧರ್ಮದ ಕಠೋರ ಸನ್ಯಾಸ & ಆಚರಣೆಗಳು ಶೈವ & ವೈಷ್ಣವ ಧರ್ಮಗಳು ಮೇಲೆಳಲು ಸಾಧ್ಯವಾದವು. ಜಿನದೇವಾಲಯ ಬಸದಿ/ಚೈತ್ಯಾಲಯಗಳ ಮೇಲೆ ವೈಷ್ಣವ-ಶಿವ ದೇವಾಲಯಗಳ ರಚನೆಯಾದವು. ಮಾಗಡಿ ಸೀಮೆಯ ಬಿಸ್ಕೂರುನಲ್ಲಿ ಜೈನ-ಶೈವ ಸಂಘರ್ಷ ನಡೆದು ಇಂದು ಶೈವ ದೇವಾಲಯಗಳು ರಚನೆಗೊಂಡಿವೆ. ಕಲ್ಯದಲ್ಲಿ ಜೈನ-ವೈಷ್ಣವ ಸಂಘರ್ಷಗಳು ನಡೆಯುತ್ತಿದ್ದಾಗ ೧ನೇ ಬುಕ್ಕರಾಯ ಧರ್ಮಗಳ ನಡುವಿನ ಜಗಳವನ್ನು ತಡೆದು ಶಾಸನವನ್ನು ಹಾಕಿಸಿರುವುದು ಗಮನಾರ್ಹ.

ಒಟ್ಟಾರೆಯಾಗಿ ಈ ಸಂಶೋಧನೆಯಿಂದ ಈ ಅಂಶಗಳನ್ನು ಗುರುತಿಸಬಹುದು

೧. ರಾಮನಗರ ಪ್ರಾಂತ್ಯದಲ್ಲಿ ಗಂಗ ಸಾಮ್ರಾಜ್ಯದಲ್ಲಿ ಜೈನಧರ್ಮ ಉನ್ನತ ಹಂತದಲ್ಲಿತ್ತು.

೨. ಪ್ರಮುಖವಾಗಿ ಮಾಗಡಿ ಸೀಮೆಯಲ್ಲಿ ಜೈನಧರ್ಮ ಪ್ರಮುಖವಾಗಿ ಗುರುತಿಸಿಕೊಂಡಿದ್ದು ಬಿಸ್ಕೂರು, ಕುಪ್ಪೆಪಾಳ್ಯ, ಸಂಕೀಘಟ್ಟ, ಹರ್ತಿ, ಕಲ್ಯ, ಸಾತನೂರು ಹೂಜಿಗಲ್ಲುಗಳು ಜೈನ ಕ್ಷೇತ್ರಗಳಾಗಿದ್ದವು.

೩. ಧರ್ಮದ ಅಸ್ತಿತ್ವ ಸಮಯದಲ್ಲಿ ನಿರ್ಮಿಸಲಾದ ಬಸದಿ, ಕೇಂದ್ರಗಳು ಇಂದಿಗೂ ಕೂಡ ಸುಸ್ಥಿತಿಯಲ್ಲಿವೆ. ಉದಾ: ಕುಪ್ಪೆಪಾಳ್ಯ, ಸಂಕಿಘಟ್ಟ, ಹರ್ತಿ, ಮಾಯಸಂದ್ರಗಳು.


೪. ಕುಪ್ಪೆಪಾಳ್ಯ-ಬಿಸ್ಕೂರು ಗ್ರಾಮದಲ್ಲಿ ಇನ್ನು ಸಹ ಜೈನ ಸ್ಮಾರಕಗಳು ದೊರೆಯುತ್ತಲಿದ್ದು ಉತ್ಖನನದ ಅವಶ್ಯವಿದೆ.

೫. ಬಸದಿಗಳು, ಜೈನ ಸ್ಮಾರಕಗಳು ಎಲ್ಲಿ ನಾಶಗೊಂಡಿವಿಯೋ ಅಲ್ಲೆಲ್ಲಾ ಶಿವ ದೇವಾಲಯಗಳು ಮೂಡಿವೆ. ಬಿಸ್ಕೂರಿನಲ್ಲಿ ಅರ್ಕೇಶ್ವರ ದೇವಾಲಯ, ಸಂಕೀಘಟ್ಟದಲ್ಲಿ ಕಲ್ಲೇಶ್ವರ, ಬೇವೂರಿನ ಅರ್ಕೇಶ್ವರ ದೇವಾಲಯಗಳು, ಇದಕ್ಕೆ ನಿದರ್ಶನಗಳಾಗಿವೆ. ಇದರಿಂದ ಶೈವ & ಜೈನ ಧರ್ಮಗಳ ನಡುವಿನ ಸಂಘರ್ಷದ ಬಗ್ಗೆ ತಿಳಿಯಬಹುದು.

೬. ಅಹಿಂಸಾ ಧರ್ಮಗಳಾದ ಜೈನ & ಬೌದ್ಧ ಧರ್ಮಗಳ ನಂತರ ಅಸ್ತಿತ್ವಕ್ಕೆ ಬಂದಂತಹ ಶೈವ & ವೈಷ್ಣವ ಧರ್ಮಗಳು ಈ ಪ್ರಾಂತ್ಯದಲ್ಲಿ ಉನ್ನತ ಹಂತ ತಲುಪಿದ್ದಂತಹ ಧರ್ಮಗಳ ಅಳಿವಿಗೆ ಕಾರಣವಾದವು.


[ಲೇಖನವನ್ನು ಸಿದ್ಧಪಡಿಸಲು ನೆರವಾದ ಡಾ. ಎಂ.ಜಿ. ನಾಗಾರಾಜುರವರಿಗೆ ಧನ್ಯವಾದಗಳು]















ಆಕರ ಗ್ರಂಥಗಳು

೧. ಎ.ಕ. ಸಂ. ೯, ಮಾಗಡಿ.

೨. ಕ್ಷೇತ್ರಕಾರ್ಯ: ದಿನಾಂಕ: ೦೧.೦೯.೨೦೧೭, ೩.೦೯.೨೦೧೭, ೧೭.೦೯.೨೦೧೭.
(ಬಿಸ್ಕೂರು, ಕುಪ್ಪೆಪಾಳ್ಯ, ಸಂಕೀಘಟ್ಟ, ಹರ್ತಿ, ಕಲ್ಯ,)

೩. ಸಣ್ಣಯ್ಯ.ಬಿ.ಎಸ್. (ಸಂ) ಜಿನಸೇನ, ವಿರಚಿತ ವರ್ಧಮಾನ ಪುರಾಣ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್, ೧೯೭೮.

೪. ಡಾ. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ–ಸಂಸ್ಕೃತಿ, ಸ್ಫೂರ್ತಿ ಪ್ರಕಾಶನ,

೫. ಡಾ. ಎಂ.ಜಿ. ನಾಗರಾಜ್, ರಾಮಗಿರಿ, ಶಿವಗಂಗೆ, ಕಲ್ಯ, ಐತಿಹಾಸಿಕ ಸ್ಥಳಗಳು, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್, ೧೯೯೯.

೬ ಎಂ.ಜಿ. ನಾಗರಾಜು, ಶಿವ ಶ್ರೀರಾಮಗಿರಿ ಕ್ಷೇತ್ರ ಅಧ್ಯಯನ, ರಾಮನಗರ, ೧೯೭೯.

೩೪

ವಿಜಯನಗರ ಕಾಲದ ಶಾಸನೋಕ್ತ ಮಲ್ಲಿಕಾರ್ಜುನ ದೇವಾಲಯ

ಡಿ.ಎನ್. ಯೋಗೀಶ್ವರಪ್ಪ*

ಕರ್ನಾಟಕ ದೇವಾಲಯ ಸಂಸ್ಕೃತಿಯ ನಾಡು. ಆರಂಭದಲ್ಲಿ ಧರ್ಮಾಚರಣೆಗೆ ದೇವಾಲಯಗಳು ನಿರ್ಮಾಣವಾದರೂ ಕ್ರಮೇಣ ಗ್ರಾಮದ ಎಲ್ಲಾ ಚಟುವಟಿಕೆಗಳೂ ದೇವಾಲಯದಲ್ಲಿಯೇ ನಡೆಯಲಾರಂಭಿಸಿದವು. ಆದ್ದರಿಂದ ದೇವಾಲಯಗಳನ್ನು ವಿಸ್ತರಿಸಲಾಯಿತು. ಕರ್ನಾಟಕವನ್ನಾಳಿದ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಗಳು ಹೊಸ ದೇವಾಲಯಗಳನ್ನು ನಿರ್ಮಿಸುವುದರ ಜೊತೆಗೆ ಹಳೆಯ ದೇವಾಲಯಗಳ ಜೀರ್ಣೋದ್ಧಾರ ಮತ್ತು ಅಸ್ತಿತ್ವದಲ್ಲಿದ್ದ ದೇವಾಲಯಗಳನ್ನು ವಿಸ್ತರಿಸುವ ಪದ್ಧತಿಯನ್ನು ಅನುಸರಿಸಿದರು. ಅಂದರೆ ಮೊದಲೇ ಕಟ್ಟಿದ್ದ ದೇವಸ್ಥಾನಕ್ಕೆ ಕಲ್ಯಾಣಮಂಟಪ, ಮಹಾರಂಗಮಂಟಪ, ಉತ್ಸವಮಂಟಪಗಳಂತಹ ಕಟ್ಟಡಗಳನ್ನು ನಿರ್ಮಿಸಿ ದೇವಾಲಯದ ಭವ್ಯತೆಯನ್ನು ಹೆಚ್ಚಿಸುವುದು. ಇದು ಆ ಕಾಲದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗೆ ಅನಿವಾರ್ಯವಾಗಿತ್ತು. ಇವರು ದೇವಾಲಯ ನಿರ್ಮಾಣವನ್ನು ಕೇವಲ ರಾಜಧಾನಿಗೆ ಸೀಮಿತಗೊಳಿಸದೆ ಇಡೀ ಸಾಮ್ರಾಜ್ಯಕ್ಕೆ ವಿಸ್ತರಿಸಿದ್ದರ ಪರಿಣಾಮವಾಗಿ ಅನೇಕ ದೇವಾಲಯಗಳು ನಿರ್ಮಾಣವಾದವು. ದೇವಾಲಯ ಸಂಸ್ಕೃತಿಯನ್ನು ಪೋಷಿಸಿದ ವಿಜಯನಗರವನ್ನಾಳಿದ ಸಂಗಮ ಅರಸರು ಶೈವದೇವಾಲಯಗಳ ನಿರ್ಮಾಣಕ್ಕೆ ಆದ್ಯತೆ ನೀಡಿದರು. ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಶೆಟ್ಟಿಕೆರೆ ಹೋಬಳಿಯಲ್ಲಿರುವ ಪಂಕಜನಹಳ್ಳಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಸ್ಥಾಪನೆ ಮತ್ತು ವಿಶೇಷ ಆಚರಣೆಗಳನ್ನು ಚರ್ಚಿಸಲಾಗಿದೆ.

ಪಂಕಜನಹಳ್ಳಿಯ ಬೆಂಗಳೂರು ಹೊನ್ನಾವರ ರಸ್ತೆಯಲ್ಲಿ ಬರುವ ಕಿಬ್ಬನಹಳ್ಳಿಯಿಂದ ವಾಯುವ್ಯಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದ್ದು ಸಮುದ್ರಮಟ್ಟದಿಂದ ೨೫೦೦ ಅಡಿ ಎತ್ತರದಲ್ಲಿರುವ ಸಮತಟ್ಟಾದ ಪ್ರದೇಶವಾಗಿದೆ. ಈ ಪ್ರದೇಶವು ಆದಿಮಾನವನ ನೆಲೆಯಾಗಿದ್ದು ಕಿಬ್ಬನಹಳ್ಳಿ, ಬಿಳಿಗೆರೆ ಗ್ರಾಮಗಳ ದಕ್ಷಿಣಕ್ಕಿರುವ ಬೆಟ್ಟಗಳ ಸಾಲು ಹಳೇ ಶಿಲಾಯುಗ ಸಂಸ್ಕೃತಿಯ ಕೇಂದ್ರವಾಗಿದೆ. ಈ ಪರಿಸರದ ಪ್ರದೇಶಗಳಾದ ಹಟ್ಣ, ಬಿಳಿಗೆರೆ, ಕಿಬ್ಬನಹಳ್ಳಿ, ಶೆಟ್ಟಿಕೆರೆ, ಕರಡಿ ಪಟ್ಟಣಗಳು ಹೊಯ್ಸಳರ ಕಾಲದ ಪ್ರಮುಖ ಕೇಂದ್ರಗಳಾಗಿದ್ದವು. ಮುಂದೆ ಈ ಪ್ರದೇಶಗಳೆಲ್ಲವೂ ವಿಜಯನಗರದ ಆಳ್ವಿಕೆಗೆ ಒಳಪಟ್ಟವು.

ಪಂಕಜನಹಳ್ಳಿ ನಾಮ ನಿಷ್ಪತ್ತಿ

ಪಂಕಜನಹಳ್ಳಿ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿರುವ ಪಾರ್ವತಿದೇವಿ ಅಮ್ಮನವರ ಪ್ರಾಂಗಣದ ಬಲಭಾಗದಲ್ಲಿರುವ ಕ್ರಿ.ಶ. ೧೫೨೯ರ ಶಾಸನದಲ್ಲಿ ಈ ಊರಿನ ಹೆಸರನ್ನು ಪಂಕಜನಹಳ್ಳಿ ಎಂದು ಕರೆಯಲಾಗಿದೆ. ಶಾಸನವು ಮೂರುಕಡೆ ಪಂಕಜನಹಳ್ಳಿ, ಐದುಕಡೆ ಪುರ ಎಂದೂ, ಒಮ್ಮೆ ಪಂಕಜಾಪುರ ಎಂದು ದಾಖಲಿಸಿದೆ. ಸರ್ಕಾರಿ ದಾಖಲೆಗಳೂ ಈ ಊರನ್ನು ಪಂಕಜನಹಳ್ಳಿ ಎಂದೇ ದಾಖಲಿಸಿವೆ.[೧] ಆದರೆ ಊರಿನ ಸುತ್ತಮುತ್ತ ನೆಲೆಸಿರುವ ಜನರು ಮತ್ತು ಅಕ್ಕಪಕ್ಕದ ಹಳ್ಳಿಗರು ಇದನ್ನು ಕಂಗಸನಹಳ್ಳಿ ಎಂದು ಕರೆಯುವರು. ಇದಕ್ಕೆ ಅವರು ತಮ್ಮದೇ ಆದ ಕಾರಣ ನೀಡುವರು. ಈ ಸ್ಥಳದಲ್ಲಿ ಗಂಗರಸರು ಆಳ್ವಿಕೆ ನಡೆಸಿ ಈ ಊರನ್ನು ಕಟ್ಟಿದ್ದರಿಂದ ಇದಕ್ಕೆ ಕಂಗಸನಹಳ್ಳಿ ಎಂದು ಕರೆದರೆಂದು ಹೇಳುವರು.[೨] ಆದರೆ ಇದಕ್ಕೆ ಸ್ಪಷ್ಟವಾದ ಉಲ್ಲೇಖಗಳು ಇಲ್ಲದೆ ಇದ್ದರೂ, ಇಲ್ಲಿಗೆ ಸಮೀಪದ ಕಿಬ್ಬನಹಳ್ಳಿ ಕೆರೆಯ ಬಳಿ ಗಂಗರ ಕಾಲದ ಶಾಸನವು ದೊರೆತಿದ್ದು ಅದರಲ್ಲಿ ಕ್ರಿ.ಶ. ೯೭೩ರಲ್ಲಿಗಂಗರ ದೊರೆ ಮೂರನೇ ಮಾರಸಿಂಹನ ಅಧಿಕಾರಿ ಗಾವಗ ಅರಸ ಬಿಳಿಗೆರೆಗೆ ಭೇಟಿ ನೀಡಿ ಬಿತ್ತುವಟ್ಟ ದತ್ತಿಯನ್ನು ನೀಡಿದ್ದರ ಉಲ್ಲೇಖವಿದೆ.[೩] ಇದರ ಆಧಾರದ ಮೇಲೆ ಬಿಳಿಗೆರೆಯಲ್ಲಿ ಗಂಗರ ಆಳ್ವಿಕೆ ಇತ್ತು ಎಂದು ಹೇಳಬಹುದು. ಬಿಳಿಗೆರೆಯ ಸಮೀಪದಲ್ಲೇ (ಮೂರು ಕಿ.ಮೀ. ದೂರದಲ್ಲಿ) ಈ ಸ್ಥಳವು ಇರುವುದರಿಂದ ಇದೂ ಕೂಡಾ ಗಂಗರಸರ ಆಳ್ವಿಕೆಗೆ ಏಕೆ ಸೇರಿರಬಾರದು ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ ಈ ಸ್ಥಳವು ಗಂಗರಸರಿಗೆ ಸೇರಿದ್ದರಿಂದ ಅದನ್ನು ಗಂಗರಸರಹಳ್ಳಿ ಎಂದು ಕರೆದಿರಬಹುದು.

* ಪ್ರಾಂಶುಪಾಲರು, ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು-೫೭೨೨೦೧. ಮೊ. ೯೪೪೮೬೮೦೯೨೦

ಆದರೆ ಇದಕ್ಕೆ ನೇರವಾದ ದಾಖಲೆಗಳು ಇಲ್ಲದಿರುವುದರಿಂದ ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಇದು ಗ್ರಾಮೀಣ ಜನರ ಉಚ್ಚಾರದಲ್ಲಿ ಕಂಗಸನಹಳ್ಳಿ ಆಗಿದೆ.

ಪಂಕಜನಹಳ್ಳಿ ಎಂಬ ಹೆಸರನ್ನು ನಾಮವಿಜ್ಞಾನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ, ಇದು ಪಂಕ+ಜ+ಹಳ್ಳಿ ಎಂಬ ಪದಗಳ ಜೋಡಣೆಯಿಂದ ಹುಟ್ಟಿರಬಹುದು ಪಂಕ ಎಂದರೆ ಶಬ್ದಕೋಶದಲ್ಲಿ ಕೆಸರು, ರಾಡಿ ಎಂದೂ, ಜ ಎಂದರೆ ಜನಿಸಿದುದೂ, ಹಳ್ಳಿ ಎಂದರೆ ಜನವಸತಿ ಸ್ಥಳ ಎಂದೂ ವರ್ಣಿಸಲಾಗಿದೆ. ಕೆಸರಿನಲ್ಲಿ ಜನಿಸುವುದು ತಾವರೆ ಕಮಲವಾಗಿದೆ. ಇಂಥಹ ತಾವರೆ ಗಿಡಗಳು ಸಾಮಾನ್ಯವಾಗಿ ಹೆಚ್ಚಾಗಿ ಕೆರೆ ಕಟ್ಟೆಗಳಲ್ಲಿ ಬೆಳೆಯುತ್ತದೆ. ಈ ಗಿಡಗಳು ಈ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದಿರಬೇಕು. ಈಗ ಆ ಗಿಡಗಳು ಈ ಸ್ಥಳಗಳಲ್ಲಿ ಇಲ್ಲದಿರಬಹುದು, ಆದರೆ ಆದ್ದರಿಂದ ಈ ಹಳ್ಳಿಗೆ ಪಂಕಜನಹಳ್ಳಿ ಎಂದು ಹೆಸರಾಗಿದೆ.

ಇನ್ನೊಂದು ರೀತಿಯಿಂದ ನೋಡಿದರೆ, ಪಂಕಜ ಎನ್ನುವುದು ಸಂಸ್ಕೃತ ಶಬ್ದ, ಇದರ ಕನ್ನಡೀಕರಣ ತಾವರೆ. ತಾವರೆಯ ಹೆಸರನ್ನು ಹೊತ್ತ ಅನೇಕ ಹಳ್ಳಿಗಳನ್ನು ಕೆರೆಗಳನ್ನು ಕರ್ನಾಟಕದಲ್ಲಿ ನೋಡಬಹುದು. ಇದರಿಂದ ಈ ಹಳ್ಳಿಗೆ ಆರಂಭದಲ್ಲಿ ತಾವರೆಹಳ್ಳಿ ಎಂಬ ಹೆಸರಿದ್ದಿರಬಹುದೇ ? ಈ ಹಳ್ಳಿಯಲ್ಲಿ ಮಲ್ಲಿಕಾರ್ಜುನ ದೇವಾಲಯ ಸ್ಥಾಪಿತವಾಗಿ ಅದರ ನಿರ್ವಹಣೆಗೆ ಪುರೋಹಿತವರ್ಗ ಆಗಮಿಸಿದ ಮೇಲೆ ಅಲ್ಲಿನ ವಾತಾವರಣವೇ ಬದಲಾಯಿತು. ಸಂಸ್ಕೃತ ಪಂಡಿತರಾಗಿದ್ದ ಪುರೋಹಿತ ವರ್ಗ ಈ ಹಳ್ಳಿಗೆ ಪಂಕಜನಹಳ್ಳಿ, ಪಂಕಜಾಪುರ ಎಂದು ಸಂಸ್ಕೃತೀಕರಣ ಮಾಡಿರಬಹುದು. ಅದನ್ನು ಅವರು ಶಾಸನದಲ್ಲಿ ಬರೆಸಿರಬಹುದು.

ಸ್ಥಾಪನೆಯ ಕಾಲ

ಪಂಕಜನಹಳ್ಳಿಯಲ್ಲಿ ನಿರ್ಮಾಣವಾಗಿರುವ ಮಲ್ಲಿಕಾರ್ಜುನ ದೇವಾಲಯವು ಕಿಬ್ಬನಹಳ್ಳಿ-ಹಟ್ಣ-ಬಿಳಿಗೆರೆ ಕೆರೆಯ ಹಿನ್ನೀರಿನ ತೀರದಲ್ಲಿ ಇದೆ. ಈ ದೇವಾಲಯದ ವಾಸ್ತುಶೈಲಿಯನ್ನು ಗಮನಿಸಿದರೆ ಇದು ವಿಜಯನಗರ ಕಾಲದಲ್ಲಿ ನಿರ್ಮಿಲಾಗಿದೆಯೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಾದರೂ, ಯಾರು, ಯಾವಾಗ ನಿರ್ಮಿಸಿರಬಹುದು ಎಂದು ಹೇಳಲು ಆಧಾರಗಳು ಸಾಲದು. ಆದರೂ ಕೆಲವು ಸೂಕ್ಷ್ಮತೆಗಳಿಂದ ಇದನ್ನು ಊಹಿಸಲು ಸಾಧ್ಯವಿದೆ. ಹೊಯ್ಸಳ-ವಿಜಯನಗರ ಕಾಲದಲ್ಲಿ ಮತ್ತು ಅದಕ್ಕಿಂತ ಪೂರ್ವದಲ್ಲಿ ಅನೇಕ ಶ್ರೀಮಂತ ವ್ಯಕ್ತಿಗಳು, ರಾಜಮಹಾರಾಜರು ದೇವಾಲಯಗಳನ್ನು ನಿರ್ಮಿಸಿ ತಮ್ಮ ಅಥವಾ ತಮ್ಮ ಮಕ್ಕಳ ಹೆಸರಿನ ಜೊತೆ ಶಾಶ್ವತಗೊಳಿಸುತ್ತಿದ್ದುದು ಚರಿತ್ರೆಯಲ್ಲಿ ದಾಖಲಾದ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ ನೋಡುವುದಾದರೆ ವಿಜಯನಗರವನ್ನಾಳಿದ ಮೊದಲ ವಂಶವಾದ ಸಂಗಮ ವಂಶದ ಮಲ್ಲಿಕಾರ್ಜುನ ಎಂಬ ದೊರೆಯು (ಕ್ರಿ.ಶ. ೧೪೬೫) ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿದ್ದನು. ಇವನು ಎರಡನೇ ದೇವರಾಯನ ಮಗ (ಕ್ರಿ.ಶ. ೧೪೨೩-೧೪೪೬) ಇವನಿಗೆ ಹೊನ್ನಲಾದೇವಿ ಎಂಬ ರಾಣಿ ಇದ್ದಳು. ಇವರಿಗೆ ಶ್ರೀ ಶೈಲದ ಮಲ್ಲಿಕಾರ್ಜುನನ ವರಪ್ರಸಾದದಿಂದ ಗಂಡುಮಗು ಜನಿಸಿತೆಂದು ಬೇಲೂರು ತಾಲ್ಲೂಕಿನ ಗೋವಿನಹಳ್ಳಿ ಶಾಸನವು ತಿಳಿಸುತ್ತದೆ.[೪] ಇದರಿಂದ ಸಂತಸಗೊಂಡ ದೇವರಾಯನು ತನ್ನ ಮಗನಿಗೆ ಮಲ್ಲಿಕಾರ್ಜುನನೆಂದು ನಾಮಕರಣ ಮಾಡಿದನೆಂದು ಹೇಳಬಹುದು. ಆದ್ದರಿಂದ ಮೇಲಿನ ದಾಖಲೆಯನ್ನು ಆಧರಿಸಿ ಊಹಿಸುವುದಾದರೆ ದೇವರಾಯ ತನ್ನ ಮಗನಾದ ಮಲ್ಲಿಕಾರ್ಜುನನ ಹೆಸರಿನಲ್ಲಿ ಪಂಕಜನಹಳ್ಳಿಯಲ್ಲಿ ಲಿಂಗುವನ್ನು ಪ್ರತಿಷ್ಠಾಪಿಸಿ ಅದಕ್ಕೆ ದೇವಾಲಯವೊಂದನ್ನು ನಿರ್ಮಿಸಿರಬಹುದು. ಹೀಗೆ ಮಲ್ಲಿಕಾರ್ಜುನನ ದೇವಾಲಯವು (೧೪೩೫ ರಿಂದ ೧೪೪೫ ರೊಳಗೆ) ಎರಡನೇ ದೇವರಾಯನ ಕಾಲದಲ್ಲಿ ನಿರ್ಮಾಣವಾಗಿರಬಹುದು.

ಆಯತಾಕಾರವಾಗಿರುವ ಈ ದೇವಾಲಯದ ಆವರಣದಲ್ಲಿ ಮಲ್ಲಿಕಾರ್ಜುನ ಲಿಂಗು, ಪಾರ್ವತಿದೇವಿ, ವೀರಭದ್ರ, ನಂದಿಮಂಟಪ, ಉಯ್ಯಾಲೆಕಂಬ. ೧೫೨೯ರ ಶಾಸನ ಮತ್ತು ಕಲ್ಯಾಣಿಯನ್ನು ಹೊಂದಿದೆ. ಈ ಗುಡಿಯು ಪೂರ್ವಾಭಿಮುಖವಾಗಿದ್ದು, ೫೦ ಅಡಿ ಅಗಲ ಮತ್ತು ೬೨ ಅಡಿ ಉದ್ದವಾಗಿದ್ದು, ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ನವರಂಗ, ಸುತ್ತಲೂ ಮೂರು ಅಡಿ ಎತ್ತರದ ಜಗತಿ, ಕೆಳಹಂತದಲ್ಲಿ ೧೫ ಅಂಕಣದ ತೆರೆದ ಸಭಾಮಂಟಪವನ್ನು ಹೊಂದಿದ್ದು, ಉತ್ತರ, ಪೂರ್ವ ಮತ್ತು ದಕ್ಷಿಣದಿಂದ ಪ್ರವೇಶದ್ವಾರವನ್ನು ಹೊಂದಿದೆ.

ನಿರ್ವಹಣೆ

ಪಂಕಜನಹಳ್ಳಿಯ ಮಲ್ಲಿಕಾರ್ಜುನ ದೇವಾಲಯವೂ ತನ್ನ ನಿರ್ವಹಣೆಗೆ ಇಂತಹ ದಾನಿಗಳಿಂದ ದಾನ ಸ್ವೀಕರಿಸಿತ್ತು. ಈ ದೇವಾಲಯವು ಹತ್ತಾರು ಜನರ ಗಮನ ಸೆಳೆದು ಅವರೆಲ್ಲ ದೇವಾಲಯ ನಿರ್ಮಿಸದೆ ಹೋದರೂ ಕೂಡಾ ಇಂಥ

ದೇವಾಲಯಗಳಿಗೆ ತನ್ನ ಕೈಲಾದಷ್ಟು ಧನಸಹಾಯವನ್ನು ನೀಡುವ ಮೂಲಕ ಭಕ್ತಿ ಪ್ರದರ್ಶಿಸಿ ತೃಪ್ತರಾಗಿದ್ದಾರೆ. ಉದಾ : ೧೫೨೯ರಲ್ಲಿ ಬಾನವಾಡಿಯ ಚೆಂನಿಸೆಟ್ಟಿ, ಭೂದಾನ ನೀಡಿದರೆ,[೫] ಊಳಿಗದ ಚಿಕ್ಕಣ್ಣ ತೆಪ್ಪೋತ್ಸವಕ್ಕೆ ಕಲ್ಯಾಣಿಯನ್ನು ಮಾಡಿಸಿದನು.[೬] ಅಲ್ಲದೆ ಪುರವರದ ನಿಂಗಣ್ಣ, ವಡೇರಹಳ್ಳಿ ಚನ್ನವೀರಯ್ಯನವರೂ ತಮ್ಮ ಭಕ್ತಕಾಣಿಕೆಯನ್ನು ನೀಡಿರುವುದು ಪಂಕಜನಹಳ್ಳಿಯಲ್ಲಿ ದೊರೆತಿರುವ ಶಾನಗಳಿಂದ ತಿಳಿಯುತ್ತದೆ.

ಇವರಲ್ಲಿ ಬಾನವಾಡಿಯ ಚೆಂನಿಸೆಟ್ಟಿ ಅಪಾರ ಪ್ರಮಾಣದ ದಾನ ನೀಡುವುದರ ಮೂಲಕ ದೇವಾಲಯಕ್ಕೆ ಆರ್ಥಿಕ ಸ್ಥಿರತೆಯನ್ನು ಒದಗಿಸಿಕೊಟ್ಟನು. ಇವನು ವಿಜಯನಗರ ಸಾಮ್ರಾಜ್ಯದ ಅತ್ಯಂತ ಹೆಚ್ಚು ಶ್ರೀಮಂತ ವರ್ತಕನಾಗಿದ್ದು, ಅವನನ್ನು ಅರಸರು ಶೆಟ್ಟಿಕೆರೆ ಸೀಮೆಗೆ ಅಧಿಕಾರಿಯನ್ನಾಗಿ ಮಾಡಿದ್ದಿರಬಹುದು. ಇವನು ಬಾನವಾಡಿ ಊರಿನವನಾಗಿದ್ದು ಅದು ಈಗ ಮಾಗಡಿ ತಾಲ್ಲೂಕಿನಲ್ಲಿದೆ. ಈ ವ್ಯಕ್ತಿಯು ಕ್ರಿ.ಶ. ೧೫೨೯ರಲ್ಲಿ ಪಂಕಜನಹಳ್ಳಿ ಗ್ರಾಮವನ್ನು ಮಲ್ಲಿಕಾರ್ಜುನ ದೇವರಿಗೆ ದಾನ ಮಾಡಿದನು. ಅಂದರೆ ಪಂಕಜನಹಳ್ಳಿ ಗ್ರಾಮದಿಂದ ಉತ್ಪತ್ತಿಯಾಗುತ್ತಿದ್ದ ಸಂಪೂರ್ಣ ತೆರಿಗೆಯು ರಾಜಬೊಕ್ಕಸಕ್ಕೆ ಹೋಗದೆ ಮಲ್ಲಿಕಾರ್ಜುನ ದೇವಾಲಯಕ್ಕೆ ಸೇರುತ್ತಿತ್ತು. ಈ ದಾನವನ್ನು ಅವನು ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದ ಕೃಷ್ಣದೇವರಾಯನಿಗೆ ಒಳ್ಳೆಯದಾಗಲಿ, ಅವನ ರಾಜ್ಯ ಇನ್ನೂ ಹೆಚ್ಚು ಅಭಿವೃದ್ಧಿ ಹೊಂದಲಿ ಎಂಬ ಉದ್ದೇಶದಿಂದ ಕೃಷ್ಣದೇವರಾಯನ ಹೆಸರಿನಲ್ಲಿ ಹಂಪೆಯ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಧಾರೆಯೆರೆದು ಕೊಟ್ಟನೆಂದು ಶಾಸನದಲ್ಲಿ ತಿಳಿಸಲಾಗಿದೆ.[೭]

ಈ ಹಣವನ್ನು ಯಾವ್ಯಾವ ಬಾಬ್ತುಗಳಿಗೆ ಖರ್ಚು ಮಾಡಬೇಕೆಂದು ಬಾನವಾಡಿಯ ಚೆಂನಿಸೆಟ್ಟಿಯು ಶಾಸನದಲ್ಲಿ ಹೇಳಿದ್ದಾನೆ.

"ಆ ಪುರದಲ್ಲಿ ಹುಟ್ಟಿದ ದ್ರವ್ಯದಲ್ಲಿ ರುದ್ರಾಭಿಷೇಕ, ಅಮೃತಪಡಿ, ನಂದಾದೀಪ್ತಿ, ಅಂಗರಂಗ ವೈಭೋಗ ನಿತ್ಯೋತ್ಸವ, ರಥೋತ್ಸವಗಳಿಗೆ" ಉಪಯೋಗಿಸಬೇಕು.[೮]

ಯಾ ಮಲ್ಲಿಕಾರ್ಜುನ ಪುರದ ಮೇಲೆ ಪುನಃ ತೆರಿಗೆ ವಿಧಿಸಿದರೆ ಅಂಥಹ ರಾಜರು ಕೃಷ್ಣದೇವರಾಯನಿಗೆ ದ್ರೋಹ ಬಗೆದಂತೆ ಎಂದು ಚೆಂನ್ನಿಸೆಟ್ಟಿಯು ಶಾಪಾಷಯದಲ್ಲಿ ಹೇಳುತ್ತಾನೆ.

ಸಾಂಸ್ಕೃತಿಕ ಚಟುವಟಿಕೆಗಳು

ದೇವಾಲಯದಲ್ಲಿ ಜರುಗುವ ತ್ರಿಕಾಲಪೂಜೆ ಪುರಸ್ಕಾರಕ್ಕೆ ನೈವೇದ್ಯಕ್ಕೆ ಗಂಧವನ್ನು ನೀಡುವುದಕ್ಕೆ ಪುಷ್ಪ, ದೀಪ, ಧೂಪ ಹಾಕುವುದಕ್ಕೆ ಮೊದಲಾದ ದೇವರ ಅಂಗಭೋಗಕ್ಕೆ ಸೇವೆ ಸಲ್ಲಿಸುವ ಪರಿಚಾರಕರನ್ನು ಇದು ಹೊಂದಿತ್ತು. ಇದೇ ರೀತಿ ನೃತ್ಯ ಮಾಡಲು ಸಂಗೀತ ಹಾಡಲು, ವಾದ್ಯ ಕಹಳೆ ಮೊದಲಾದ ರಂಗಭೋಗ ಕಾರ್ಯಗಳನ್ನು ನಿರ್ವಹಿಸಲು ನಿತ್ಯೋತ್ಸವ, ರಥೋತ್ಸವ ನಡೆಸಲು ಅಪಾರ ನೌಕರ ವರ್ಗವನ್ನು ಈ ದೇವಾಲಯ ಹೊಂದಿತ್ತು.

ಅಂಗಭೋಗದ ಪರಿಚಾರಕರು

ಈ ದೇವಾಲಯದ ಆವರಣದಲ್ಲಿನ ಶಾಸನವು "ಅಂಗಭೋಗ" ಎಂಬ ಆಚರಣೆಯನ್ನು ಹೇಳುತ್ತದೆ. ಅಂಗಭೋಗ ಎಂದರೆ ಗರ್ಭಗುಡಿಯಲ್ಲಿನ ಆಚರಣೆಗಳು. ದೇವರ ಮೂರ್ತಿಗೆ ನಡೆಯುವ ಅಲಂಕಾರ, ದೇವರಿಗೆ ಸಲ್ಲುವ ಪೂಜೆ, ದೀಪ, ಧೂಪ, ಶ್ರೀಗಂಧ, ಅಭಿಷೇಕ, ಅಲಂಕಾರ, ಮಂತ್ರೋಚ್ಚಾರಣೆ ಮೊದಲಾದ ಸೇವೆಗಳನ್ನು ಅಂಗಭೋಗ ಎನ್ನುತ್ತೇವೆ. ಈ ಕಾರ್ಯಗಳನ್ನು ನಡೆಸಲು ಹಲವಾರು ಪರಿಚಾರಕರು ಬೇಕಾಗುತ್ತಿದ್ದರು. ಅವರಲ್ಲಿ ಪೂಜಾರಿ ಪ್ರಮುಖನು. ಆಗಮಶಾಸ್ತ್ರಗಳನ್ನು ತಿಳಿಸಿದಂತಹ ಒಬ್ಬ ಬ್ರಾಹ್ಮಣನು ದೇವಾಲಯದ ಪೂಜಾರಿಯಾಗುತ್ತಿದ್ದನು. ಈತ ದೇವರಿಗೆ ತ್ರಿಕಾಲ ಪೂಜೆ ಪುನಸ್ಕಾರಗಳನ್ನು ನಡೆಸುತ್ತಿದ್ದನು. ದೇವಾಲಯ ಆಡಳಿತದಲ್ಲಿ ಉನ್ನತ ಗೌರವ ಇವನಿಗೆ ಇತ್ತು. ಇಂದು ಈ ದೇವಾಲಯದಲ್ಲಿ ಶಿವಾಗಮ ಬಲ್ಲಂತೆ ವೀರಶೈವ ಧರ್ಮದ ವ್ಯಕ್ತಿಯೊಬ್ಬನು ಪೂಜಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾನೆ.

ಈ ದೇವಾಲಯದಲ್ಲಿ ದೇವರ ಪೂಜೆಗೆ ಹೂವನ್ನು ತರಲು ಹೂಗಾರರನ್ನು ನೇಮಿಸಿಕೊಂಡಿದ್ದರು. ದೇವಾಲಯ ಧಾರ್ಮಿಕ ಮತ್ತು ವಿದ್ಯಾಕೇಂದ್ರವಾಗಿದ್ದರಿಂದ ವೇದವನ್ನು ಪಾರಾಯಣ ಮಾಡಲು ವೇದಿಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಶಾಸನದಲ್ಲಿ "ನಂದಾದೀಪ್ತಿ" ಎಂಬ ಶಬ್ದದ ಉಲ್ಲೇಖವಿದೆ. ಅಂದರೆ ದೇವಾಲಯದಲ್ಲಿ ಪ್ರತಿನಿತ್ಯ ದೇವರ ಸಮ್ಮುಖದಲ್ಲಿ ನಂದಾದೀಪ ಸದಾಕಾಲ ಉರಿಯುತ್ತಿರಬೇಕು. ಆದ್ದರಿಂದ ಈ ಕೆಲಸಕ್ಕೆ ನಂದಾದೀಪದ ಪರಿಚಾರಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಇದೇ ಶಾಸನವು "ಅಮೃತ ಪಡಿ"ಯನ್ನು ಉಲ್ಲೇಖಿಸಿದೆ. ಇದರ ಅರ್ಥ ನೈವೇದ್ಯ. ದೇವರ

ಪೂಜೆಯ ಮತ್ತು ಉತ್ಸವದ ಸಮಯದಲ್ಲಿ ದೇವರಿಗೆ ನೈವೇದ್ಯ ಸಲ್ಲಿಸಬೇಕಾಗಿತ್ತು. ಇದನ್ನು ತಯಾರಿಸಲು ಅಡುಗೆಯವರು ಬೇಕಾಗುತ್ತಿತ್ತು. ಆದ್ದರಿಂದ ಈ ದೇವಾಲಯ ದೇವರಿಗೆ ನೈವೇದ್ಯ ತಯಾರಿಸಲು ಅಡಿಗೆಯವರನ್ನು ಕೂಡಾ ನೇಮಿಸಿಕೊಂಡಿತ್ತು.

ರಂಗಭೋಗದ ಪರಿಚಾರಕರು

ಬಾನವಾಡಿ ಚೆಂನ್ನಿಸೆಟ್ಟಿಯು ದೇವಾಲಯದಲ್ಲಿ ರಂಗಭೋಗ ಚಟುವಟಿಕೆಗಳಿಗೂ ದಾನ ಮಾಡಿರುವುದು ಶಾಸನದಲ್ಲಿ ಕಂಡುಬರುತ್ತದೆ. ಗರ್ಭಗೃಹದಲ್ಲಿ ಮೂರ್ತಿಗೆ ನಡೆಯುವ ಅಲಂಕಾರವನ್ನು ಅಂಗಭೋಗ ಎಂದು ಕರೆದರೆ ಗರ್ಭಗುಡಿಯ ಹೊರಗೆ ಅಂದರೆ ರಂಗಮಂಟಪದಲ್ಲಿ ಸಾರ್ವಜನಿಕರಿಗಾಗಿ ನಡೆಯುವ ಚಟುವಟಿಕೆಗಳನ್ನು ರಂಗಭೋಗ ಎನ್ನುವರು. ದೇವಾಲಯದ ರಂಗಮಂಟಪದಲ್ಲಿ ನಡೆಯುವ ನಾಟ್ಯ, ನೃತ್ಯ, ನಾಟಕ, ಸಂಗೀತ ಹಾಡುವಿಕೆ, ನಂದಿಕೋಲು ಕುಣಿವುದು ಮೊದಲಾದ ಭೋಗಗಳು ರಂಗಭೋಗಗಳೆನಿಸುತ್ತವೆ. ಈ ಗುಡಿಯಲ್ಲಿ ರಂಗಭೋಗಕ್ಕೆ ಪ್ರತ್ಯೇಕವಾದ ಮಂಟಪವನ್ನು ನಿರ್ಮಿಸದೆ ಇದ್ದರೂ ರಂಗಮಂಟಪದೊಳಗೆ ಚಿಕ್ಕ ಪ್ರಮಾಣದಲ್ಲಿ ಈ ಸೇವೆ ನಡೆಯುತ್ತಿತ್ತು.

ಸೇವಾವರ್ಗದ ಪರಿಚಾರಕರು

ಮಲ್ಲಿಕಾರ್ಜುನ ದೇವರಿಗೆ ನಿತ್ಯೋತ್ಸವ, ರಥೋತ್ಸವ ನಡೆಸಬೇಕೆಂದು ಶಾಸನದಲ್ಲಿ ಹೇಳಲಾಗಿದೆ. ಇವುಗಳನ್ನು ನಡೆಸಲು ಪ್ರತ್ಯೇಕವಾದ ಒಂದು ವರ್ಗವನ್ನೇ ನೇಮಕ ಮಾಡಿಕೊಳ್ಳಲಾಗಿತ್ತು. ಉತ್ಸವ ಸಂದರ್ಭದಲ್ಲಿ ದೇವರ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮಾಡುತ್ತಿದ್ದರು. ಅಂದು ಪಲ್ಲಕ್ಕಿ ಸೇವೆಯನ್ನು (ಹೊರುವವರು) ಮಾಡಲು ಜನರನ್ನು ದೇವಾಲಯದ ಆಡಳಿತ ಮಂಡಳಿ ನೇಮಕ ಮಾಡಿಕೊಂಡಿತ್ತು. ದೇವರಿಗೆ ನೈವೇದ್ಯ ತಯಾರಿಸಲು ಸೌದೆ ಬೇಕಾಗುತ್ತಿತ್ತು. ಅದನ್ನು ತರಲು ಕಟ್ಟಿಗೆಯವರನ್ನು ನೇಮಿಸಿಕೊಂಡಿತ್ತು. ಇದರ ಎಲ್ಲ ಖರ್ಚು ವೆಚ್ಚಗಳ ಲೆಖ್ಖಗಳನ್ನು ಇಡಲು ಲೆಖ್ಖಾಧಿಕಾರಿ ಇರುತ್ತಿದ್ದನು.

ದೇವಾಲಯದ ವಿಶೇಷ ಆಚರಣೆಗಳು

ರಥೋತ್ಸವ

ಶಾಸನದಲ್ಲಿ ಮಲ್ಲಿಕಾರ್ಜುನನಿಗೆ ರಥೋತ್ಸವ ನಡೆಸಬೇಕೆಂಬ ಸೂಚನೆ ಇದೆ. ಇದನ್ನು ವರ್ಷಕ್ಕೊಮ್ಮೆ ಸಾರ್ವಜನಕರ ಸಮ್ಮುಖದಲ್ಲಿ ನಡೆಸುತ್ತಿದ್ದರು. ಈ ರಥೋತ್ಸವ ಅಂದು ಅವರ ಧಾರ್ಮಿಕ ಜೀವನದ ಪ್ರತೀಕವಾಗುವುದರ ಜೊತೆಗೆ ಅವರ ಬದುಕಿನ ಮನೋರಂಜನೆಯ ಕೇಂದ್ರವೂ ಆಗಿತ್ತು. ಇದನ್ನು ಹತ್ತಾರು ಊರಿನ ಜನತೆ, ದೇವರ ಭಕ್ತಾದಿಗಳು ನಡೆಸುತ್ತಿದ್ದರು. ಇದರಲ್ಲಿ ಭಾಗವಹಿಸುವುದರಿಂದ ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ ಜನರಲ್ಲಿತ್ತು. ರಥೋತ್ಸವದ ಸಂದರ್ಭದಲ್ಲಿ ಜಾತ್ರೆಯೂ ಜರುಗುತ್ತಿತ್ತು. ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವಕ್ಕೆ ಬಾನವಾಡಿ ಚೆಂನ್ನಿಸೆಟ್ಟಿ ಕ್ರಿ.ಶ. ೧೫೭೯ರಲ್ಲಿ ನಿರ್ಧಿಷ್ಟವಾದ ಹಣವನ್ನು ಮೀಸಲಿಟ್ಟಿದ್ದಕ್ಕೆ ಶಾಸನದಲ್ಲಿ ಉಲ್ಲೇಖವಿದೆ. ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವದ ಸಂದರ್ಭದ ಜಾತ್ರೆಯು ಏಳುದಿನ ನಡೆಯುತ್ತಿತ್ತು. ಇದರ ಜಾತ್ರೆಯು ಫಾಲ್ಗುಣ ಮಾಸದಲ್ಲಿ ಅಂದರೆ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ಜರುಗುತ್ತಿತ್ತು. ಜಾತ್ರಾ ಸಂದರ್ಭದಲ್ಲಿ ಮೊದಲನೆಯ ದಿನ ಧ್ವಜಾರೋಹಣ ಕಾರ್ಯಕ್ರಮವಿರುತ್ತಿತ್ತು. ಮಾರನೆಯ ದಿನ ಮಂಗಳವಾದ್ಯ ಸಮೇತ ತೆರಳಿ ಶುದ್ಧವಾದ ಜಲವನ್ನು ತಂದು ನಂತರ ಮಲ್ಲಿಕಾರ್ಜುನನ ಲಿಂಗಕ್ಕೆ ಮಹಾರುದ್ರಾಭಿಷೇಕ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ದೇವರಿಗೆ ಸಹಸ್ರ ಬಿಲ್ವಾರ್ಚನೆಯನ್ನು ನೆರವೇರಿಸಲಾಗುತ್ತಿತ್ತು. ಮಾರನೆಯ ದಿನ ಮಹಾರಥೋತ್ಸವವು ಜರುಗುತ್ತಿತ್ತು. ಎತ್ತರವಾದ ರಥವನ್ನು ನಿರ್ಮಾಣ ಮಾಡಿ ಮಲ್ಲಿಕಾರ್ಜುನನ ಉತ್ಸವದ ಮೂರ್ತಿಗಳನ್ನು ಮೆರವಣಿಗೆ ಸಮೇತ ಕರೆತಂದು ರಥದಲ್ಲಿ ಕುಳ್ಳಿರಿಸಲಾಗುತ್ತಿತ್ತು. ಆನಂತರ ಭಕ್ತಾದಿಗಳೆಲ್ಲಾ ಸೇರಿ ಹರಹರ ಮಹಾದೇವ ಎಂದು ಜಯಘೋಷ ಮಾಡುವುದರ ಮೂಲಕ ಕಬ್ಬಿಣದ ಸರಪಣಿಯ ಸಹಾಯದಿಂದ ದೇವರ ರಥವನ್ನು ಎಳೆಯುತ್ತಿದ್ದರು. ನಾಲ್ಕನೆಯ ದಿವಸ ಬಿಲ್ವವೃಕ್ಷವಾಹನ ಮತ್ತು ಬೆಳ್ಳಿಪಲ್ಲಕ್ಕಿ ಉತ್ಸವಗಳನ್ನು ಮಾಡುತ್ತಿದ್ದರು. ಇದನ್ನು ಕಿಬ್ಬನಹಳ್ಳಿಯ ಭಕ್ತಾದಿಯಾದ ಶಿವಲಿಂಗಶೆಟ್ಟರು ನಡೆಸುತ್ತಿದ್ದರೆಂದು ೧೯೫೦ ಮತ್ತು ೫೭ರ ಜಾತ್ರಾಮಹೋತ್ಸವದ ಆಹ್ವಾನ ಪತ್ರಿಕೆಯು ತಿಳಿಸುತ್ತದೆ. ಐದನೆಯ ದಿನ ಮಹಾತೆಪ್ಪೋತ್ಸವವನ್ನು ನಡೆಸುತ್ತಿದ್ದರು. ಅಲಂಕೃತವಾದ ಉತ್ಸವ ಮೂರ್ತಿಗಳನ್ನು ಮೆರವಣಿಗೆ ಸಮೇತ ಗಣಪತಿ ದೇವಾಲಯದ ಎದುರಿಗೆ ನಿರ್ಮಿಸಲಾಗಿದ್ದ ಒಂದು ಎಕರೆ ವಿಸ್ತೀರ್ಣದ ಸುಂದರವಾದ ಕಲ್ಯಾಣಿಯ ಬಳಿಗೆ ತರುತ್ತಿದ್ದರು. ಅಲ್ಲಿ ಸ್ವಾಮಿಗೆ ಪೂಜಾದಿಗಳನ್ನು ನೆರವೇರಿಸಿ ಭರ್ತಿಯಾಗಿದ್ದ ಕಲ್ಯಾಣಿಯಲ್ಲಿ ದೇವರಿಗಾಗಿಯೇ ನಿರ್ಮಿಸಿದ್ದ ತೆಪ್ಪದ ಮೇಲೆ ಪಾಲಿಕೆ ಸಹಿತ ಉತ್ಸವ ಮೂರ್ತಿಯನ್ನಿಟ್ಟು, ಮಧ್ಯದಲ್ಲಿ ನಿರ್ಮಿತವಾಗಿದ್ದ ಮಂಟಪದ ಸುತ್ತ ಮೂರು ಬಾರಿ

ಪ್ರದಕ್ಷಿಣೆ ಮಾಡಿಸುತ್ತಿದ್ದರು. ಇದು ಅಂದು ಜನರಿಗೆ ಆಕರ್ಷಕವಾದ ಉತ್ಸವವಾಗಿತ್ತು. ಆರನೆಯ ದಿನ ಮಲ್ಲಿಕಾರ್ಜುನನಗೆ ವಿಧವಿಧವಾದ ಪುಷ್ಪಗಳಿಂದ ಅಲಂಕರಿಸಲಾಗುತ್ತಿತ್ತು. ಅದಕ್ಕಾಗಿಯೇ ದೇವಾಲಯದ ಪಕ್ಕದಲ್ಲಿ ಹೂವಿನ ಉದ್ಯಾನವನವನ್ನೇ ನಿರ್ಮಿಸಿಕೊಂಡಿದ್ದರು. ಗರ್ಭಗುಡಿಯಲ್ಲಿನ ಮಲ್ಲಿಕಾರ್ಜುನನಗೆ ಅಂದು ವಿಶೇಷ ಅಲಂಕಾರ ಮಾಡುತ್ತಿದ್ದರು. ಉತ್ಸವ ಮೂರ್ತಿಗಳನ್ನು ಹೂವುಗಳಿಂದ ಅಲಂಕರಿಸಿ ಉತ್ಸವ ಮಾಡುತ್ತಿದ್ದರು. ಕೊನೆಯ ದಿನ ವಸಂತೋತ್ಸವವನ್ನು ಆಚರಿಸುತ್ತಿದ್ದರು.

ವಸಂತೋತ್ಸವ

ಈ ದೇವಾಲಯದಲ್ಲಿ ಅನೇಕ ಶತಮಾನಗಳ ಕಾಲ ವಸಂತೋತ್ಸವವನ್ನು ಪ್ರತ್ಯೇಕವಾಗಿಯೇ ಆಚರಿಸುತ್ತಿದ್ದರು. ಆದರೆ ಇಂದು ಅದನ್ನು ಜಾತ್ರೆಯ ಸಂದರ್ಭದಲ್ಲಿ ಕೊನೆಯ ದಿನ ಮಾತ್ರ ಆಚರಿಸಲಾಗುತ್ತಿದೆ. ಇದೊಂದು ಓಕುಳಿಯಾಟದ ಅನುಕರಣಾರ್ಥವಾಗಿ ವೈನೋಧಿಕವಾಗಿ ನಡೆಯುವ ಉತ್ಸವವಾಗಿದೆ. ಕೇಸರಿ ಪಚ್ಚೆ ಕರ್ಪೂರಗಳಿಂದ ವಸಂತ ಮಂಟಪವನ್ನು ಸಿದ್ಧಪಡಿಸಿ ಸುಂದರವಾಗಿ ಅಲಂಕಾರ ಮಾಡಿದ ಮಲ್ಲಿಕಾರ್ಜುನನ ಉತ್ಸವಮೂರ್ತಿಯನ್ನು ಅದರಲ್ಲಿ ಕೂರಿಸಿ ಅದನ್ನು ರಾಜಬೀದಿಗಳಲ್ಲಿ ಕರೆತರಲಾಗುತ್ತಿತ್ತು. ಮುಸುಕು ಹಾಕಿದ ಪಾರ್ವತಿದೇವಿ ಅಮ್ಮನವರ ಉತ್ಸವವು ಆ ಉತ್ಸವದ ಹಿಂದೆ ಹೋಗುತ್ತದೆ. ಆನಂತರ ಓಕುಳಿಯಾಟ, ತೀರ್ಥಸ್ನಾನ ನಡೆಯುತ್ತದೆ. ಇದನ್ನು ದೇವಾಲಯದ ಪ್ರಾಂಗಣದಲ್ಲಿಯೇ ನಿರ್ಮಿಸಲಾಗಿರುವ ಕಲ್ಯಾಣಿಯಲ್ಲಿ ನಡೆಸಲಾಗುತ್ತಿತ್ತು. ಈಗ ಕಲ್ಯಾಣಿಯಲ್ಲಿ ನೀರಿಲ್ಲದೆ ಇರುವುದರಿಂದ ಕಡಾಯಿಗಳಲ್ಲಿ ಓಕುಳಿ ನೀರು ತುಂಬಿ ಅಷ್ಟರಿಂದಲೇ ತೃಪ್ತಿಪಟ್ಟುಕೊಳ್ಳಬೇಕಾಗಿದೆ.

ಈ ಉತ್ಸವಗಳೇ ಅಲ್ಲದೆ ಮಲ್ಲಿಕಾರ್ಜುನಸ್ವಾಮಿಗೆ ನಿತ್ಯೋತ್ಸವ, ಮಾಸೋತ್ಸವ, ಪಕ್ಷೋತ್ಸವ, ಪುರೋತ್ಸವ, ಪ್ರಾಸಾದೋತ್ಸವಗಳು ನಡೆಯುತ್ತಿದ್ದವು. ನಿತ್ಯೋತ್ಸವವು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ದೀಪಾರಾಧನೆ, ಬಲಿಪ್ರದಾನಗಳಾದ ಮೇಲೆ ನಿತ್ಯಕಲ್ಯಾಣಮೂರ್ತಿಯ ಉತ್ಸವ ದೇವಾಲಯದ ಒಳಪ್ರಾಕಾರದಲ್ಲಿ ನಡೆದರೆ, ಪ್ರತಿ ಸೋಮವಾರ ವಾರೋತ್ಸವ ನಡೆಯುತ್ತಿತ್ತು. ಅಂದು ರಾತ್ರಿ ಏಕಾಂತ ಕಾಲದ ಪೂಜೆಗೆ ಮೊದಲು ಮಲ್ಲಿಕಾರ್ಜುನ-ಪಾರ್ವತಿ ವಿಗ್ರಹಗಳ ಉತ್ಸವ ರಥದ ಬೀದಿಯಲ್ಲಿ ನಡೆಯುತ್ತಿತ್ತು. ಮಾಸೋತ್ಸವ ತಿಂಗಳಿಗೆ ಒಂದು ಬಾರಿ ಪೌರ್ಣಮಿಯಂದು ನಡೆಯುತ್ತಿತ್ತು. ಆದರೆ ಇಂದು ಈ ದೇವಾಲಯದಲ್ಲಿ ಈ ಪದ್ಧತಿಗೆ ಬದಲಾಗಿ ಅಮಾವಾಸ್ಯೆಯಂದು 'ಅಮಾವಾಸ್ಯೆ ಕಟ್ಟಳೆ' ಎಂಬ ಆಚರಣೆ ನಡೆಸುತ್ತಿದ್ದಾರೆ.

ಶಿವರಾತ್ರಿ ಆಚರಣೆ

ಈ ದೇವಾಲಯದಲ್ಲಿ ವಿಶೇಷವಾಗಿ ಆಚರಿಸುತ್ತಿದ್ದ ಹಬ್ಬವೆಂದರೆ ಶಿವರಾತ್ರಿ. ಈ ಹಬ್ಬವು ಶಿವನನ್ನು ಕುರಿತು ಪೂಜೆ ಮಾಡಿ ಆತನನ್ನು ಒಲಿಸಿಕೊಳ್ಳುವ ಹಬ್ಬವೆಂದೇ ಪ್ರಚಲಿತದಲ್ಲಿದೆ. ಪುರಾಣಗಳು ಶಿವನನ್ನು ಒಲಿಸಿಕೊಂಡ ಹಲವರನ್ನು ಹೆಸರಿಸುತ್ತವೆ. ಅವರಲ್ಲಿ ಬೇಡರಕಣ್ಣಪ್ಪ ಎಂಬ ಶಿವಭಕ್ತ ಕೂಡಾ ಒಬ್ಬನಾಗಿದ್ದಾನೆ. ಈತನ ಬಗೆಗಿನ ಶಿಲ್ಪ ದೃಶ್ಯವನ್ನು ಈ ದೇವಾಲಯದ ಮಹಾದ್ವಾರದ ಕಂಭವೊಂದರಲ್ಲಿ ಕಾಣುತ್ತೇವೆ.

ಈ ದೇವಾಲಯದ ವ್ಯವಸ್ಥೆಗಾಗಿ ಬಾನವಾಡಿ ಚೆಂನ್ನಿಸೆಟ್ಟಿಯು ಶಿವರಾತ್ರಿ ದಿನದಂದು ಹಂಪೆಯ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ದಾನ ನೀಡಿರುವುದನ್ನು ನೋಡಿದರೆ ಶಿವರಾತ್ರಿಯ ಮಹತ್ವ ಗೊತ್ತಾಗುತ್ತದೆ. ಶಿವರಾತ್ರಿಯ ದಿನದಂದು ದಾನ ಮಾಡಿದರೆ ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ ಅಂದಿನವರಲ್ಲಿತ್ತು.

ಮಲ್ಲಿಕಾರ್ಜುನಸ್ವಾಮಿಗೆ ಚಿಕ್ಕನಾಯಕನಹಳ್ಳಿ-ಹಾಗಲವಾಡಿ ರಾಜಧಾನಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದ ಪಾಳೆಯಗಾರರು ಪರಮಭಕ್ತರಾಗಿದ್ದರು. ವಿಜಯನಗರದರಸರ ಪರಂಪರೆಯ ವಾರಸುದಾರರಾಗಿದ್ದ ಅವರು ದೇವಾಲಯದಲ್ಲಿ ನಡೆಯುತ್ತಿದ್ದ ಎಲ್ಲಾ ಆಚರಣೆಗಳನ್ನು ಮುಂದುವರಿಸಿಕೊಂಡು ಹೋದರೆಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಎಫಿಗ್ರಾಫಿಯಾ ಕರ್ನಾಟಕ ಸಂ. ೧೬ ಚಿಕ್ಕನಾಯಕನಹಳ್ಳಿ ೮೩, ಕ್ರಿ.ಶ. ೧೫೨೯.

೨. ಕ್ಷೇತ್ರ ಕಾರ್ಯದಿಂದ ತಿಳಿದು ಬಂದ ಮಾಹಿತಿ.

೩. ಎ.ಕ. ೧೨, ತಿಪಟೂರು–೧೦೩, ಕಿಬ್ಬನಹಳ್ಳಿ, ಕ್ರಿ.ಶ. ೯೭೩.

೪. ಎ.ಕ. ೧೦, ಬೇಲೂರು–೫೭೬, ಗೋವಿದೇವನಹಳ್ಳಿ, ೧೪೪೫ ಎ.ಡಿ.
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು ೧೯೯೦.

೫. ಎ.ಕ. ೧೬, ಚಿಕ್ಕನಾಯಕನಹಳ್ಳಿ–೮೩.

೬ ಅದೇ.

೭. ಅದೇ.

೮. ಅದೇ.

೬೫

ಕಲಬುರ್ಗಿ ಜಿಲ್ಲೆಯ ಸುರಪುರ ಶಾಸನಗಳಲ್ಲಿ ಸಾಹಿತ್ಯಿಕ ವರ್ಣನೆ

ಅರುಣಾ ಕಟ್ಟಿಮನಿ*

ಪ್ರಸ್ತುತ ಲೇಖನವನ್ನು **ಸುರಪುರ ತಾಲೂಕಿನ ಶಾಸನಗಳು,** (ಸಂ) ಹನುಮಾಕ್ಷಿಗೋಗಿ. ಶಾಸನ ಸಂಪುಟದ ಆಧಾರದಿಂದ ರಚಿಸಲಾಗಿದೆ. ಈ ಪ್ರದೇಶದಲ್ಲಿ ಹಳೆಶಿಲಾಯುಗದ ನೆಲೆಗಳು, ಮೌರ್ಯ, ಶಾತವಾಹನರ ಕಾಲದ ನೆಲೆಗಳು ಗೋಚರವಾಗಿದ್ದು, ಈ ಪ್ರದೇಶವು ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಕಲಚೂರಿಗಳು, ಬಹಮನಿ ಸುಲ್ತಾನರು, ಆದಿಲ್‌ಶಾಹಿಗಳು, ಸುರಪುರ ನಾಯಕರು, ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟಿದ್ದವು. ಅರಸು ಮನೆತನದ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದಂತೆ ಅನೇಕ ಶಾಸನಗಳು ಬೆಳಕಿಗೆ ಬಂದಿದ್ದು, ಅವುಗಳನ್ನಾಧರಿಸಿ ಶಾಸನಗಳ ಸಾಹಿತ್ಯಿಕ ವರ್ಣನೆಗಳ ಕುರಿತು ವಿವೇಚಿಸಲು ಪ್ರಯತ್ನಿಸಿದ್ದೇನೆ.

ಕ್ರಿ.ಶ. ೧೧೬೭ರ ಬಿಜ್ಜಳನ ಶಾಸನದಲ್ಲಿ ಇಮ್ಮಡಿ ಬಿಜ್ಜಳನು ತನ್ನನ್ನು ಕುರಿತು **"ಸ್ವಸ್ತಿ ಶ್ರೀಮತು ಕಳಚೂರ್ಯ, ಬಿಜ್ಜಳ ಚಕ್ರವರ್ತಿ ತ್ರಿಭುವನಮಲ್ಲದೇವ"** ಎಂದು ಹೇಳಿ ಮುಂದುವರೆದು **ಕಾಳಾಂಜುರ ಪುರವರಾಧೀಶ್ವರ ಡಮರುಗ ತೂರ್ಯ ನಿರ್ಘೋಷಣಂ ಕಳಚೂರ್ಯ ಕುಳಕಳಮಳ ಮಾರ್ತಂಡ, ಸುಭಟರಾದಿತ್ಯ, ಕಲಿಗಳಪ್ರತಾಪಲಂಕೇಶ್ವರ, ಪರನಾರಿಸಹೋದರ, ಶನಿವಾರಸಿದ್ಧಿ, ಶ್ರೀರವ, ನಿಸ್ಸಂಕಮಲ್ಲ ನಾಮಾದಿ ಸಮಸ್ತ ತ್ರಿಭುವನಮಲ್ಲದೇವ** ಎಂದು ತನ್ನನ್ನು ತಾನು ಸಾಹಿತ್ಯಿಕವಾಗಿವೃತತ್ತ ಗಳಲ್ಲಿ ಹೊಗಳಿಕೊಂಡಿದ್ದನ್ನು ಶಾಸನಗಳಲ್ಲಿ ಬರೆಸಲಾಗಿದೆ. **(ಸು.ತಾ.ಶಾ; ಲೇ ಹ. ಗೋ–ಪು.ಸಂ.ಘು),**

ಸೇವುಣರ ಕಾಲದ ಕ್ರಿ.ಶ. ೧೨೬೫ರ ಶಾಸನವೊಂದರಲ್ಲಿ "ಮಹಾದೇವರಾಯ ಯಾದವಕುಳಮಲ ಕವಿತಾಭಾಸ್ಕರಂ, ಯರಿರಾಯ, ಜಗಜ್ಜಂಪ ಲಾಳ ಮಾಳವರಾಯ, ಮದನ ತ್ರೀಣೇತ್ರ ಗುಜ್ಜರಿರಾಯಭಯಂಕರಂ ತೆಲುಂಗರಾಯ ಸ್ಥಾಪನಾಚಾರ್ಯ ಇತ್ಯಾದಿ ನಾಮಾದಿ ಪ್ರಶಸ್ತಿ ಸಹಿತಂ ಶ್ರೀಮತು ಯಾದವನಾರಾಯಣ ಭುಜಬಳ ಪ್ರವುಡ ಪ್ರತಾಪ ಚಕ್ರವರ್ತಿ ಶ್ರೀಮಹಾದೇವರಾಯ ರಾಜ್ಯೋದಯದಲು ದೇವಗಿರಿ ನೆಲೆವೀಡಿನೊಳು"(ಸು.ತಾ.ಶಾ;ಲೇಹ.ಗೋ–ಪು.ಸಂ.xxi),ಎಂದು ಸಿಂಘಣನು ಕಲ್ಯಾಣ ಚಾಳುಕ್ಯ ಚಕ್ರವರ್ತಿಗಳನ್ನು ಸೋಲಿಸಿದ ಕುರುಹಾಗಿ ಈ ರೀತಿ ಹೇಳಿಕೊಳ್ಳುತ್ತಾನೆ. ಈ ಮೇಲಿನವರನ್ನೆಲ್ಲ ಸೋಲಿಸಿ ಭಯಂಕರ ಶೌರ್ಯದಿಂದ ಆಳಿರುವುದನ್ನು ಹಾಗೂ ತನ್ನ ವರ್ಣನೆಯನ್ನು ಶಾಸನಗಳಲ್ಲಿ ಬರೆಸಿಕೊಂಡಿದ್ದಾನೆ. ಇಲ್ಲಿ ಬಳಸಲಾದ ಕನ್ನಡ ಪದಗಳ ಪ್ರಭುತ್ವ ಮತ್ತು ಸಾಹಿತ್ಯದ ವರ್ಣನೆ ಶ್ರೀಮಂತಿಕೆಯಿಂದ ಕೂಡಿರುವುದು ಕಂಡುಬರುತ್ತದೆ.

ಹಾಗೆಯೇ ೬ನೇ ವಿಕ್ರಮಾದಿತ್ಯನ ಮೂವರು ರಾಣಿಯರಲ್ಲಿ ಎರಡನೆಯವಳಾದ **ಮಲಯಾವತಿದೇವಿ** ಎಂಬ ರಾಣಿಯನ್ನು **ಕ್ರಿ ಶ. ೧೧೨೦ರ ಹುಣಸಗಿ ಶಾಸನದಲ್ಲಿ** ಈಕೆಯ ಸೌಂದರ್ಯ, ಸಂಪತ್ತು, ದಾನಗುಣ ವಾಕ್‌ಚಾತುರ್ಯಗಳ ಉಲ್ಲೇಖ ಈ ರೀತಿ ಇದೆ. **"ಸ್ವಸ್ತ್ಯ ಅನವರತ ಪರಮಕಲ್ಯಾಣ ಸಹಸ್ರ ಫಳ ಭೋಗ ಭಾಗಿನ ದ್ವಿತೀಯಲಕ್ಷ್ಮೀಸಮಾನೆ ಕಳಹಂಸಯಾನೆ ವಿತರಣ ವಿಶಿಷ್ಟ ದೀನಾನಾಥ ವಂದಿ ಬ್ರಾಹ್ಮಣ ಸಂತರ್ಪಣ ಪಾತ್ರಮುಖದರ್ಪಣೆ ಅಬ್ಯುದಯ ಸುಭಗಂ ಅನೇಕ ಶುಭಲಕ್ಷಣ.......ಶ್ರೀಮತ್ವದಿಯರಸಿ ತ್ರೀಭುವನಮಲ್ಲದೇವ ಪಟ್ಟಮಹಾದೇವಿ ಶ್ರೀಮತು ಮಲೆಯವತಿದೇವಿಯರ ನಿತ್ಯಭೂಮಿದಾನ ಸರ್ವ್ವನಮಶ್ಯದ್ ಅಗ್ರಹಾರ ವಿಕ್ರಮ ತೀರ್ಥ ಎಂದು ವರ್ಣಿಸಲಾಗಿದೆ. (ಸು.ತಾ.ಶಾ; ಲೇಹ.ಗೋ–ಪು.ಸಂ. xxii)**ಈ ಶಾಸನವು ಅಲಂಕಾರ ವೃತ್ತಗಳಿಂದ ಕೂಡಿದ್ದು ಸಾಹಿತ್ಯಿಕವಾಗಿ ಗಮನಾರ್ಹವಾಗಿದೆ.

ಕ್ರಿ.ಶ. ೧೧೦೬ರ ಬೊಮ್ಮನಹಳ್ಳಿ ಶಾಸನದಲ್ಲಿ– ೬ನೇ ವಿಕ್ರಮಾದಿತ್ಯನ ಇನ್ನೊಬ್ಬ ಪತ್ನಿ **ಧಾರಲದೇವಿಯ** ಸೌಂದರ್ಯ, ದತ್ತಿ, ದಾನಗಳ ಕುರಿತ ವರ್ಣನೆ ಇದೆ. **"ರೂಪ ವಿದ್ಯಾಧರಿ ಶೃಂಗಾರಸಾರಸರ್ಬ್ವಸ್ವ ಜಿನಪೂಜಾ ಲತೆ ನಿಜಸಾಮ್ರಾಜ್ಯಲಕ್ಷ್ಮೀ ಅತಿಲೋಕಕಲ್ಪಿತೆ ಸಕಳಭುವನವಿಖ್ಯಾತೆ ಶ್ರೀಲಧರ್ಮ್ಮದೇವ ಪ್ರೀಯಾತ್ಮಜೆ ಪ್ರತ್ಯೇಕ್ಷಗಿರಿಜೆ ಲಲನಾಜಗ್ರಣಿ ತ್ರಿಭೂವನಮಲ್ಲದೇವ ವಿಶಾಲ ವೃಕ್ಷಸ್ಥಳನಿವಾಸಿನಿಯರಪ್ಪ ಶ್ರೀಮದ್ಧಾರಲದೇವಿಯರು"**. ಈಕೆ ಕೈಕೊಂಡ ಜೈನಧರ್ಮದ ವೃತಗಳ ನಿಮಿತ್ಯ ಹಾಗೂ

* ಸಹಾಯಕ ಪ್ರಾಧ್ಯಾಪಕರು, ಕೆ.ಸಿ.ಡಿ. ಧಾರವಾಡ–೫೮೦೦೦೭. ಮೊ. ೮೦೮೮೨೨೮೬೩೮

ಭೂದತ್ತಿ-ದಾನಗಳ ಕುರಿತಲ್ಲದೆ **'ಮಹಾಸತಿ ತಿಳಕ ಮತ್ತು ಗುಣದಂಕಕಾರ್ತ್ತಿ'** ಬಿರುದುಗಳಿದ್ದವು ಎಂಬುದು ಗಮನಾರ್ಹ. ಮುಂದುವರೆದು **ವೃತದ ನೋಂಪಿ ನಿಮಿತ್ಯವಾಗಿ ಶ್ರೀಮದ್ಧಾರಲ ದೇವಿಯರು ರೇವರಸರು ಶ್ರೀಮಚ್ಚಾಳುಕ್ಯ ವಿಕ್ರಮಕಾಲದ ೩೧ನೆಯ ವ್ಯಯ ಸಂವತ್ಸರದ ಮಾರ್ಗಸಿರ ಶುದ್ಧ ಏಕಾದಸಿ ಬ್ರೀಹಸ್ಪತಿವಾರದಂದು ಶ್ರೀ ಮನ್ಮಹಾಮಂಡಲೇಶ್ವರರಂಶ್ರೀಕರಣ ದಂಡನಾಯಕ ಧುರಿಮಯ್ಯಂಗಳ್ಗೆ ದಂಡನಾಯಕ ಭೋಗಿಮಯ್ಯಗಳ್ಗೆ ಧಾರಾಪೂರ್ವ್ವಕಂಮಾಡಿ (ಸು.ತಾ.ಶಾಸನ;ಲೇ:ಹ.ಗೋಗೀ-ಪು.ಸಂ.xxiii),** ಈ ರೀತಿ ಧಾರಲದೇವಿಯ ದಾನದಕುರಿತ ವೃತ್ತಗಳಲ್ಲಿ ಸಾಹಿತ್ಯಿಕವಾಗಿ ಕಂಡುಬರುತ್ತದೆ.

ಐವೂರಿನ ಮತ್ತೊಂದು ಶಾಸನ **ಜಾಕಬ್ಬೆಯದು**. ಇವಳು ಇಮ್ಮಡಿ ತೈಲಪನ ಮಡದಿ ಹಾಗು ಸತ್ಯಾಶ್ರಯನ ತಾಯಿಯು ಹೌದು. ಜಾಕಬ್ಬೆಯನ್ನು ಕುರಿತು ಚಂಪೂಸಾಹಿತ್ಯದಿಂದ ಕೂಡಿದ್ದು ವೃತ್ತಗಳಲ್ಲಿ ಬರೆಯಲಾಗಿದೆ.

> **"ಭಮ್ಮಹರಟ್ಟಾದಭವದ್ ಭೂಪಾಲ ರಾಷ್ಟ್ರಕೂಟ ಕುಳತಿಳಕಾತ್**
> **ಲಕ್ಷ್ಮೀರವ ಸಲಿಲನಿಧೆ ಶ್ರೀಜಾಕಬ್ಬಾಹ್ವಯಕನ್ಯಾ**
> **ಚಳುಕ್ಯವಂಶಾಬರಭಾರಮಿ ಶ್ರೀತೈಲಭೂಪಾಳ ಉಪಾಯ ತೈನಾಂ**
> **ತಯೋಶ್ಚಲೋಕಾಶುದಯಾಯಯೋಗಸಚಂದ್ರಿಕಾಚಂದ್ರಮ, ಸೋರಿವಾಸಿತ್**

ಎಂದು ವರ್ಣಿಸಲಾಗಿದೆ. **(ಸು.ತಾ.ಶಾಸನ;ಲೇ:ಹ.ಗೋಗಿಪು.ಸಂ. xxiii),**

ಕ್ರಿ.ಶ. ೧೧೧೦೬ರ ಬೊಮ್ಮನಹಳ್ಳಿ ಶಾಸನದಲ್ಲಿ ಹೈಹಯ ವಂಶದವರಾದ ರೇವರಸನ ಆಂತರಿಕ ಹಾಗೂ ಬಾಹ್ಯ ವರ್ಣನೆ ಬರುತ್ತದೆ. ಭೋಗದೇವನ ಸುಭಗ-ಸುಂದರ ರೂಪ ವರ್ಣನೆಯಿಂದ ಕೂಡಿದ್ದಾಗಿದ್ದು,

"ಕರುಳ ತೆಗುಳ್ದು ಕೆಣ್ಮ(ನವೆ)ನಿಪ್ಪು ಕದಪಿನತೆಳ್ಪ, ಸತ್ರ ಸರರುಹದ ಕಾಯ್ದು ಬಾಯ್ತೆರೆಯೆ ಕಂಪು ಲತಾಂಗದ ಸೊಂಪುಪುರ್ಬ್ಬಿನ ವೈರಿಸುವ ಜರ್ಬ್ಬು ಸೋರ್ಮುಡಿಯಪರ್ಬ್ಬಿ ಭುಜಂಗಳ ಕೊರ್ಬ್ಬು ನಿಲೆವೆತ್ತಿರೆನಡೆ, ನೋಡಿದಡೆ ಸುಭಗರೂಪ ಮನೋಜಂ ಭೋಗದೇವನ" ಇದು ಬಾಹ್ಯವರ್ಣನೆಯಾದರೆ, **ನುಡಿಪುಸಿಯಲ್ತು, ಮಿದುವಿನದಲ್ತು ಗುಣ ಕಿರಿದಲ್ತು ವಿಕ್ರಮಂ. ನಡುಗುಮುದಲ್ತು ಶೌಚಂ ಅರಿದಲ್ತು ಮಾಡಿದುದು ಶಾಶ್ವತ ಸತ್ಯಮಿದಲ್ತು ದಾನಂ ಇಂತೆಡೆಯೊಳೆ ಪುಟ್ಟಿತಲ್ತು ನಿಜಮಿಂದು ವೈವಾವಿಸೆಭೋಗದೇವನಂ.** ಎಂದು ಆಂತರಿಕ ವರ್ಣನೆ ಹಾಗೂ ಸದ್ಗುಣಗಳನ್ನು ವರ್ಣಿಸಲಾಗಿದೆ. **(ಸು.ತಾ.ಶಾಸನ; ಲೇ:ಹ.ಗೋಗಿ-ಪು.ಸಂ. xxi),**

ಶಾಸನಗಳಲ್ಲಿ ಕವಿಗಳು, ರೂವಾರಿಗಳು, ರಚನೆಕಾರರು ಸಾಹಿತ್ಯಿಕವಾಗಿ ಗಮನ ಸೆಳೆದಿರುವುದನ್ನು ನೋಡಬಹುದು. **ಕೆಂಬಾವಿಯ ಶಾಸನದಲ್ಲಿ** ಕಂದಪದ್ಯದಲ್ಲಿ ಮುಕ್ಕುಂದ ಗ್ರಾಮದ ಒಂದು ವರ್ಣನೆ ಬರುತ್ತದೆ.

"ಪೊಡವಿಗದೆತಾನೆ, ಮುಖಮಂ, ಎನಿಪೆಡೆದೊರೆ ನಾಡಿಂಗೆ ತಿಳಕದಂದಿಂಒಪ್ಪಂ ಬಡೆದಿರ್ಕ್ಕುಂ ಎಸೆವಕಿರುದೊರೆದ ಅಡಿಯೊಳ್ ಮುಕ್ಕುಂದೆಂಬವಿಪ್ರಗ್ರಾಮಂ." (ಸು.ತಾ.ಶಾಸನ;ಲೇ:ಹ.ಗೋಗಿ-ಪು.ಸಂ. lxi)

ಈ ನುಡಿಯಲ್ಲಿ ತಿಳಿಸಿರುವಂತೆ ಈ ನಾಡಿಗೆ ತಿಲಕದಂತೆ ಒಪ್ಪುವ ಈಭೂಮಿಗೆ ಒಡೆಯನಾದಂತಹವರು, ಶ್ರೇಷ್ಟರಾದಂತಹವರು ಈ ಸಣ್ಣಗ್ರಾಮದಲ್ಲಿಯ ಜನರು ಬುದ್ದಿಜೀವಿಗಳು ಜ್ಞಾನಿಗಳಾಗಿದ್ದರೆಂದು ವರ್ಣಿಸಲಾಗಿದೆ. ಇನ್ನು ಕೆಲವು ಶಾಸನಗಳಲ್ಲಿ ಕವಿಗಳು ತಮ್ಮ ವೈಯಕ್ತಿಕ ಬದುಕಿನ ಬಗ್ಗೆ ಹೇಳಿಕೊಂಡಿರುವ ಒಂದು ಶಾಸನ ಹೀಗಿದೆ. **"ಶ್ರೀ ಬರೆವರ ರುದ್ರಂ ಚಂಗದೇವಯ್ಯಂ ಬರೆದಂ"** ಎಂದು ತನ್ನ ಹೆಸರನ್ನು ಮತ್ತು ತಂದೆಯ ಹೆಸರು ತಾನು ಹುಟ್ಟಿದ ಸ್ಥಳ ತನ್ನ ಪರಾಕ್ರಮವನ್ನೆಲ್ಲ ವರ್ಣನಾತ್ಮಕವಾಗಿ ಹೇಳಿಕೊಂಡಿದ್ದಾನೆ.

> **"ಶ್ರೀರಾಜಾಗ್ರಣಿಚಂದನ ಆತನಮಗಂನಿಂಬಂದ್ವಿಷತ್‌ಸೈನ್ಯಸಂಹಾರಂ**
> **ತತ್ಪ್ರೀಯಪುತ್ರನಲ್ಲಪುಲಿವಿಖ್ಯಾತಂಗುಣಾಣ್ವಿತನಂ**
> **ಅಂತಾರಾಜಾಅಗ್ರಜನಯ್ಯಂಆನ್ವಯವಿಯತ್ತಿಗಾಂಶುತಾಂ ಪುಟ್ಟಿದಂ**
> **ಪಾರಾವಾರಪರೀತಭೂತಳಯಶಂಶ್ರೀಚಂದ್ರಭೂಪಾಳಕಂ"**

ಹೀಗೆ ಕವಿ ತನ್ನ ಪರಾಕ್ರಮದ ಬಗ್ಗೆ ವೃತ್ತ ಪದ್ಯಗಳಲ್ಲಿ ಪರಿಚಯ ಮಾಡಿಕೊಳ್ಳುತ್ತಾನೆ.

ಶಾಸನ ಬರೆಸಿದವರ ವರ್ಣನೆ ಈ ರೀತಿ ಇದೆ. ಕ್ರಿ.ಶ. ೧೧೦೭ರ ಹಾವಿನಾಳ ಶಾಸನದಲ್ಲಿ **"ಶ್ರೀಮಲೆಯ ಮಲ್ಲಿಕಾರ್ಜುನ ವರದಾಸಿ ಉಭಯಲಿಪಿ ಲಿಖಿತ.. ದಕ್ಷಪಾಳಕ ಪುರ ಅಗ್ರಹಾರ ಗಣಕಂ ಪಂಡಿತ ಮಲ್ಲಯ್ಯನಂ ಬರೆಪಂ"** ಎಂದು ದತ್ತಿಭಾಗಕ್ಕೆ **ಸಂಭಂದಿಸಿ ಕೊನೆಯಲ್ಲಿ ತನ್ನ ಬಗ್ಗೆ 'ಉಭಯಲಿಪಿಲಿಖಿತ'** ಹಾಗೂ ಪಂಡಿತನೆಂಬ ವಿಶೇಷಣಗಳನ್ನು ಹೇಳಿಕೊಂಡಿದ್ದಾನೆ. ಮೇಲಿನ ಎರಡು ಪದ್ಯಗಳಲ್ಲಿ ಬರೆದಂ-ಬರೆಪಂ ಎಂಬ ಶಬ್ದಗಳನ್ನು ಬಳಿಸಿರುವುದರಿಂದ ಕವಿ, ಲಿಪಿಕಾರ ಇವರಿಬ್ಬರ

ಪ್ರಯತ್ನಗಳು ಇಲ್ಲಿ ಕಂಡುಬರುತ್ತವೆ. ಇನ್ನೊಂದು **ಹುಣಸಗಿ ಶಾಸನದಲ್ಲಿ "ಅತಿಚಪಳ ವೀರವೈರಿ ದಿನಾಪಟ್ಟತಂದೆ ಏನತ್ತ ವೈರಿ ಘರಟ್ಟ ಚತುರ ಕವೀಶ್ವರ ಲಲಾಟಪಟ್ಟಂ ಎಂದು ಕವಿಯು ವಾದಿ–ವಾಗ್ಮಿ** ಎಂದು, ಮುಂದುವರೆದು ಈತನು ಆದಿತ್ಯಭಟ್ಟನೆಂಬುದು ಮತ್ತೊಂದು ಶಾಸನದಿಂದ ತಿಳಿದು ಬರುತ್ತದೆ. **(ಸು.ತಾ.ಶಾಸನ;ಲೇ:ಹ.ಗೋಗಿ–ಪು.ಸಂ. lxiv).**

ರೂವಾರಿಗಳ ಕುರಿತು **ಹೆಬ್ಬಾಳದ ಒಂದು ಶಾಸನದಲ್ಲಿ** ಹೀಗಿದೆ. **"ಕಲುಕುಟಿಗ ಮರೋಜಗೆ ಸುಸ್ರುಪಗೆಯ್ದು ಉಂಬಕೆಯಿ ಮತ್ತರೊಂದು ಮನೆಯ ನಿವೇಸನ೧೧೧" ಎಂದಿದೆ. ಮರೋಜ** ಈತ ಶಾಸನ ಕೆತ್ತಿದ ರೂವಾರಿಯಾಗಿದ್ದು, ಈತನಿಗೆ ಬಿಟ್ಟ ದತ್ತಿ ಮತ್ತು ನಿವೇಶನಗಳ ವಿವರವಿದೆ. ಏವೂರಿನ ಇನ್ನೊಂದು ಶಾಸನದಲ್ಲಿ **"ದೇವರ ಧ್ವಜಾರೋಹಣದ ತೀರ್ಥದ ಉದ್ಯಾಪನದಂದು ವಡ್ಡರ ಕೋಟೆಬೋವಂಗೆ ದೇವರ ತಳವ್ರಿತ್ತಿಯಂ ಪಡುವಲು ಮತ್ತರಾರು ಅಂಕದೊಳಂ ಮತ್ತ ೬ ಮನೆಗೆ ಎಂದಿದ್ದು, ಕೊನೆಯಲ್ಲಿ ಕಲ್‌ಕುಟಿಗಗೆಯಿ ಮತ್ತರ್ ಪನ್ನೆರಡು"** ಎಂದಿದೆ. **(ಸು.ತಾ.ಶಾಸನ;ಲೇ:ಹ.ಗೋಗಿ–ಪು.ಸಂ. lxv).**

ಆಕರ ಗ್ರಂಥಗಳು

೧. ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು.

೬೬

ಹಾವೇರಿ ಜಿಲ್ಲೆಯ ಶಾಸನ ಸಾಹಿತ್ಯ

ಸಿದ್ಧಲಿಂಗಮ್ಮ ಕೊಂಡಜ್ಜಿ*

ಪ್ರಾಚೀನ ಕನ್ನಡ ಶಾಸನ ಮತ್ತು ಕಾವ್ಯಗಳನ್ನು ಅವಲೋಕಿಸಿದಾಗ ನಮಗೆ ಹಲವಾರು ಜನ ಕವಿಗಳು ಗಮನಕ್ಕೆ ಬರುತ್ತಾರೆ. ಕಾವ್ಯಗಳ ಮೂಲಕ ಪರಿಚಯವಾದಂತೆ ಶಾಸನಗಳಲ್ಲಿ ಕೆಲವು ಕವಿಗಳು ಕಂಡು ಬರುತ್ತಾರೆ. ಶಾಸನ ಮತ್ತು ಕಾವ್ಯಗಳೆರಡನ್ನು ರಚಿಸಿ ಪ್ರಸಿದ್ದಿ ಪಡೆದಿರುವವರ ಸಂಖ್ಯೆ ಬಹಳ ವಿರಳವಾಗಿದೆ ಎನ್ನಬಹುದು. ಕೆಲವು ಶಾಸನಗಳು ಸಮರ್ಥ ಕವಿಗಳಿಂದಲೇ ರಚಿಸಲ್ಪಟ್ಟಿದ್ದು, ಅವು ಪ್ರೌಢವಾದ ಕಾವ್ಯಗಳಾಗಿ ಹೊರಹೊಮ್ಮಿವೆ. ಉದಾ: ಹಾವೇರಿ ಜಿಲ್ಲೆಯ ಕ್ರಿ.ಶ. ೧೧೩೪ರ ಶಾಸನವೊಂದರಲ್ಲಿ ಕವಿ ಮೂಕಣ ಪಣ್ಡಿತರನು ಇತಿಹಾಸ ಪ್ರಸಿದ್ಧ ಕುಂತಳನಾಡನ್ನು ಹಾಗೂ ಅದರ ಭಾಗವಾದ ಬನವಾಸಿಯನ್ನು ಹೀಗೆ ವರ್ಣಿಸುತ್ತಾನೆ. **“ಅಮಿತದ್ವೀಪಾಬ್ದಿವೇಳಾವಳಯಿತ ವಸುಧಾಭಾಗದೊಳ್ ಕುನ್ತಳಂ ವಿಶ್ವ ಮಹೀಸಂಸೇವ್ಯಮಾ ಕುನ್ತಳಧರಣಿಗಳಂಕಾರಮೀ ತೆಂಕನಾಡಲ್ಲಿ ಮನೋಜ್ಞಂ ಖ್ಯಾತಮವ್ಯಾಹತಮೆನಸಿ ಸರಸ್ಸೇವ್ಯನೀರೇಜನಾನಾಕಮನೀಯೊದ್ಯನದಿಂದಂ ಬನವಸೆ ವಸುಧಾಭಾಮಿನೀರಮ್ಯಹರ್ಮ್ಯಂ”**[೧]ಇಂಥ ಖ್ಯಾತಿಯನ್ನು ಪಡೆದ ರಮಣೀಯ ನಾಡಿನಲ್ಲಿ ಹಾವೇರಿ ಪಟ್ಟಣ ಕೇಂದ್ರವಾಗಿತ್ತು ಎಂದು ಉಲ್ಲೇಖಿಸುತ್ತಾ, ಮುಂದೆ ವರ್ಣಿಸುತ್ತಾ ಶಾಸನ ಮುಂದುವರಿಯುತ್ತದೆ. ಇಂಥಹ ಹಲವಾರು ವಿಷಯಗಳನ್ನು ಹಾವೇರಿ ಹಾಗೂ ರಾಣೇಬೆನ್ನೂರು ತಾಲ್ಲೂಕಿನ ಶಾಸನಗಳನ್ನು ಮಾತ್ರ ಗಮನಿಸಿದ್ದು ಸಾಹಿತ್ಯಿಕ ಮತ್ತು ಚಾರಿತ್ರಿಕ ದೃಷ್ಟಿಯಿಂದ ಅವುಗಳನ್ನು ನೋಡಲಾಗಿದೆ.

“ಪುರಹೂತನ ಪುರದೊಳ್‌ಮ
ಚ್ಚರಿಸುವುದಿದು ಭೋಗವತಿಯ ಭೋಗಮನುರೆ ಮಾಂ
ಕರಿಪುದು ಕುಬೇರನಳಕಾ
ಪುರದಳಕಮನಡ(ಸಿ) ಪಿಡಿದುಕೊಯ್ದುದು ಚೆಲ್ವಿಂ”[೨]

ಸೌಂದರ್ಯದಲ್ಲಿ ಹಾವೇರಿ ಇಂದ್ರನ ರಾಜಧಾನಿಯನ್ನು ಅಂದರೆ ಸ್ವರ್ಗವನ್ನು ಮೀರಿಸುವಂತಹದು ಎಂದು ಹೇಳಿದ್ದಾನೆ. ಮುಂದೆ ಈ ಪ್ರದೇಶದ ಬೆಳೆಗಳ ವರ್ಣನೆ ಕಾಣಬಹುದಾಗಿದೆ. ಇಲ್ಲಿಯ ಉದ್ಯಾನವನವನ್ನು ಕವಿ ಹೀಗೆ ವರ್ಣಿಸುತ್ತಾನೆ.

“ಎಳೆ ಮಾವಿಂದಬ್ಜ ಷಣ್ಡಂಗಳಿನಳಿಕುಳಝುಂಕಾರದಿಂ ಸಾರಪುಂಸ್ಕೋ
ಕಿಳ ಮಂದ್ರಾರವದಿಂ ಪೂಂಬಳೆಯ ಸೊವಳಿನಿಂ ಸುತ್ತಿ ಸರ್ವ್ವರ್ತ್ತುಕೋದ್ಯ
ತ್ಫಳಮಂ ತಾಳ್ದಿ(ರ್ದ್ದ) ಪೂಗಿವನದಿನೆಲೆಯ ತೋಂಟಂಗಳಿಂ ಕಾಯ್ತ
ತೆಂಗಿಂ ಫಳಮಂ ಪೇರುರ್ದ್ದ ರಂಬಾವನದಿನೆಸೆವ ವುದ್ಯಾನ ಲಕ್ಷೀ(ನಿವಾ)ಸ//[೩]

ಎಳೆ ಮಾವಿನಿಂದ, ತಾವರೆಗಳಿಂದ, ದುಂಬಿಗಳ ಝೇಂಕಾರದಿಂದ, ಕೋಗಿಲೆಗಳ ಇಳಿದನಿಯಿಂದ, ತೋಟಗಳಿಂದ, ತೆಂಗಿನ ವೃಕ್ಷಗಳಿಂದ, ಫಲಪುಷ್ಪಗಳಿಂದ ಈ ಉದ್ಯಾನವನ ಲಕ್ಷೀಯಆವಾಸಸ್ಥಾನವಾಗಿತ್ತೆಂದು ಕವಿ ವರ್ಣಿಸುತ್ತಾನೆ.

ಸೇವಣ ದೊರೆ ಕನ್ನರನ ಶಾಸನದಲ್ಲಿ ಹಾವೇರಿಯನ್ನು ಹೀಗೆ ವರ್ಣಿಸಿದ್ದು ಕಂಡುಬರುತ್ತದೆ.

“ ಮೂಗು ಮೊಗಕ್ಕೆ ಚಂದನಸುಗನ್ದಚಯಂ ನಿಟಿಳಕ್ಕೆ ರತ್ನ
ಭೂಷಾಗಮಕಂ ಕೊರಲುಗೆ ಕಿವಿಗೊಪ್ಪುವ ಮುತ್ತಿನ
ಕರ್ಣ್ಯ ಪೂರದಂತಾಗಳು ಮೊಪ್ಪುಗಂ ನೆಗೆರ್ದ್ದ ಪಾವರಿ ತಾಂ ಬನವಾಸೆ ನಾ(ಳ್ಗೆ)[೪]

ಎಂದು ಈ ಗದ್ಯದಲ್ಲಿ ವರ್ಣಿಸಿರುವರು. ಅಂದರೆ ಮುಖಕ್ಕೆ ಮೂಗು ಚಂದ, ಹಣೆಗೆ ಶ್ರೀಗಂಧ ಚಂದ, ರತ್ನಖಚಿತ ಹಾರ ಕೊರಳಿಗೆ ಚಂದ, ಮುತ್ತಿನ ಕಿವಿ ಓಲೆ ಕಿವಿಗೆ ಚಂದ, ಹಾಗೆ ಬನವಾಸಿ ನಾಡಿಗೆ ಹಾವೇರಿ ಚಂದವಾಗಿ ಕಂಗೊಳಿಸುತ್ತಿತ್ತು ಎಂದಿದೆ.

* ಉಪನ್ಯಾಸಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಣೆಬೆನ್ನೂರು.

ಚೌಡಯ್ಯದಾನಪುರ ಶಾಸನಗಳು (ಕ್ರಿ.ಶ. ೧೨೪೬) ಚಂಪೂ ಕಾವ್ಯಗಳೇ ಆಗಿದ್ದು ಶಿವದೇವಮುನಿಯ ಕಾರ್ಯಗಳನ್ನು ವಿವರಿಸುತ್ತವೆ. ಶಿವನಗೆ ವಿವಿಧ ಭಾಷೆಕೊಟ್ಟನೆಂದು ಹೇಳುತ್ತವೆ.

"ತಲೆದಂಡ ಸ್ವರ್ಗ ಮುಕ್ತಿಯ
ಫಲವನಪೇಕ್ಷಿಸಿದೆ ನಾದಡೆಲೆ ಶಂಕರಾ ಕೇಳ್
ಸಲೆ ಪುಂಣ್ಯ ಪಾಪವೆರಡರ ಫಲವಲ್ಲದ ನಿತ್ಯಪೂಜೆಯ ಮಾಡಿದಪೆಂ"[೫]

ಸ್ವರ್ಗ, ಮುಕ್ತಿ ಫಲವನ್ನು ಅಪೇಕ್ಷಿಸಲಾರದೆ ಪುಣ್ಯಪಾಪ ಫಲವಲ್ಲದ ನಿತ್ಯ ನಿನ್ನ ಪೂಜೆಯನ್ನು ಮಾಡುವೆನೆಂದು ಭಾಷೆಇತ್ತುದನ್ನು ಶಾಸನ ಹೇಳುತ್ತದೆ. ಇದರಿಂದ ಶಿವದೇವನದು ಯಾವ ಫಲಾಪೇಕ್ಷೆಯಿಲ್ಲದ ನಿಷ್ಕಾಮ ಭಕ್ತಿಯಾಗಿತ್ತೆಂಬುದು ತಿಳಿದುಬರುತ್ತದೆ.

ಗುತ್ತಪೊಳಲಿನ ಅರಸರಾದ ಗುತ್ತರ ಶಾಸನಗಳಲ್ಲಿ ಕೆಲವು ಸೊಗಸಾದ ಸಾಹಿತ್ಯದಿಂದ ಕೂಡಿವೆ. ಅರಸರ ವಂಶಾವಳಿ, ಅವರ ಸಾಧನೆಗಳನ್ನು ಶಾಸನಗಳು ವರ್ಣನಾತ್ಮಕವಾಗಿ ವಿವರಿಸುತ್ತವೆ.

"ಎನುತುಮ್ಮಳಿಪ್ಪ ಮನುಜರ
ಮನಸ್ತಮಂ ಪಿಂಗೆ ನಲಿಯೆ ಕವಿಚಕ್ರಂ ಮೇ
ದಿನಿ ಕಣ್ಬಡದವೋಲಾಗಿರೆ
ಜನಿಯಿಸಿದಂ ವೀರ ವಿಕ್ರಮಾದಿತ್ಯ ನ್ರಿಪಂ"[೬]

ದುಃಖದಲ್ಲಿರುವ ಜನರ ಮನಸ್ಸಿನ ಕತ್ತಲು ಹಿಂಗುವಂತೆ, ಕವಿಗಳು ನಲಿಯುವಂತೆ, ಭೂಮಿಕಣ್ಣು ಪಡೆದಂತೆ ಗುತ್ತರ ವಿಕ್ರಮಾದಿತ್ಯ ನೃಪ ಜನಿಸಿದನೆಂದು ಶಾಸನ ವರ್ಣಿಸುತ್ತದೆ.

ಮಹಾಮಂಡಳೇಶ್ವರ ಚನ್ನರಸನದಾನ, ಧರ್ಮ ಕಾರ್ಯಗಳ ವಿವರಗಳನ್ನು ಗಳಗನಾಥ ಶಾಸನವು ಒದಗಿಸುತ್ತದೆ.

"ಹರನ ವಿ(ನಿ) ಕೇತನಕ್ಕೆ ಮದನಂ ಕಡೆದಲ್ಲಿಯೆ ಕೆಯ್ಗಳಾದವೀ
ಸ್ವರಸದ್ಮಕ್ಕೆ ಕಲ್ಗಡಿದೊಡಲ್ಲಿಯೆ ಪೂಗೊಳನಾದವಿನ್ದು ಸೇ
ಕರಗ್ರಿಹಭಿತ್ತಿಗಿಟ್ಟಗೆಗಂ ಮಣ್ಣಗಲ್ದಿಲ್ಲಿ ತಟಾಕಮಾದುವೇಂ
ಪಿರಿಯನೋ ಧರ್ಮ್ಮವಿರ್ಮ್ಮಡಿಗೆವನ್ದುದು ಚನ್ನುಗ ಭೂಮಿಪಾಳನೆ/"[೭]

ಎಂದು ಬಣ್ಣಿಸುತ್ತವೆ. ಹರನ ದೇವಾಲಯಕ್ಕಾಗಿ ಮರಗಳ ಕಡೆದಾಗ ಅಲ್ಲಿ ಹೊಲಗಳಾದವು. ಈಶ್ವರನ ದೇವಾಲಯಕ್ಕಾಗಿ ಕಲ್ಲುಕಡಿದಾಗ ಅಲ್ಲಿ ಹೂಗಳಿಂದ ಕಂಗೊಳಿಸುವ ಕೊಳಗಳಾದವು. ಶಿವನ ದೇವಾಲಯದ ಗೋಡೆಗಳಿಗೆಂದು ಇಟ್ಟಿಗೆಗಾಗಿ ಮಣ್ಣು ಅಗೆದಲ್ಲಿ ಕೆರೆಗಳು ನಿರ್ಮಾಣವಾದವು. ಹೀಗೆ ಚನ್ನರಸನ ಧರ್ಮ ಕಾರ್ಯಗಳು ಎರಡು ಪಟ್ಟಾದುವೆಂದು ಶಾಸನ ವರ್ಣಿಸುತ್ತದೆ.

ಅರಸರ, ಮುನಿಗಳ, ಜನರ, ಮಂಡಲ, ನಾಡುಗಳ, ಗ್ರಾಮಗಳ ವರ್ಣನೆಇಲ್ಲಿಯ ಶಾಸನಗಳಲ್ಲಿ ಮಡುಗಟ್ಟಿ ನಿಂತಿದೆ. ಉದಾಹರಣೆಗಾಗಿ ಕೆಲವು ಪದ್ಯಗಳನ್ನು ಮಾತ್ರ ವಿವರಿಸಲಾಗಿದೆ. ಇಂಥ ಶಾಸನ ಕವಿಗಳ ವಿವರವು ಶಾಸನಗಳಲ್ಲಿ ಬಂದಿದ್ದುಅವರ ವಿವರ ಇಂತಿದೆ.

ಶಾಸನಗಳನ್ನು ರಚಿಸಿದ ಕವಿಗಳಲ್ಲಿ ಕೆಲವರ ಹೆಸರುಗಳು ಮಾತ್ರಕಂಡುಬರುತ್ತವೆ. ಅನಾಮಧೇಯರಿಂದರಚಿಸಲ್ಪಟ್ಟ ಅನೇಕ ಶಾಸನಗಳಿವೆ. ಶಾಸನ ಕವಿಗಳು ಶ್ರೇಷ್ಟ ಕವಿಗಳಲ್ಲದಿದ್ದರೂ, ಕೆಲವರು ಒಳ್ಳೆಯ ಕಾವ್ಯಾತ್ಮಕ ಗುಣಗಳಿಂದ ಕೂಡಿದ ಶಾಸನಗಳನ್ನು ರಚಿಸಿದ್ದಾರೆ. ಇಂಥ ಹಾವೇರಿಜಿಲ್ಲೆಯ ಉಪಲಬ್ಧ ಶಾಸನ ಕವಿಗಳ ಸಂಕ್ಷಿಪ್ತ ಪರಿಚಯವನ್ನುಇಲ್ಲಿ ಮಾಡಿಕೊಡಲಾಗಿದೆ.

ಹಾವೇರಿ ತಾಲೂಕಿನ ದೇವಿಹೊಸೂರ ಗ್ರಾಮದ ಬನಶಂಕರಿದೇವಾಲಯದ ಹತ್ತಿರವಿರುವ ವೀರಗಲ್ಲು ಕ್ರಿ.ಶ. ೯೦೭–೯೦೮ನೆಯ ಶತಮಾನಕ್ಕೆ ಸಂಬಂಧಿಸಿದ್ದು, ಅದು ರಾಷ್ಟ್ರಕೂಟ ಅರಸ ೨ನೆಯ ಕೃಷ್ಣನ ಕಾಲದ್ದಾಗಿದೆ. ಈ ಶಾಸನ ಯುದ್ಧದಲ್ಲಿ ಮಡಿದ ವೀರನೊಬ್ಬನನ್ನು ಉಲ್ಲೇಖಿಸುತ್ತದೆ. 'ಪೆರ್ಮಾಡಿ ನಾಯಕನ ಮಗ ಸರುವಯ್ಯ ಸೆಟ್ಟಿ ಕುಳರೆ ಕಾಳಗದೊಳು' ಹೋರಾಡಿ ಸತ್ತು ಸ್ವರ್ಗಕ್ಕೇರುತ್ತಾನೆ. ಅವನ ನೆನಪಿಗೆ ತಮ್ಮ ಚಿಕಸೆಟ್ಟಿ ಕಲ್ಲನರಿಸುತ್ತಾನೆಂದು ಶಾಸನ ಹೇಳುತ್ತದೆ. ಇದರಲ್ಲಿ ಶಾಸನ ಕವಿಯು ತನ್ನ ಹೆಸರನ್ನು ಹೀಗೆ ಪ್ರಸ್ತಾಪಿಸಿಕೊಂಡಿದ್ದಾನೆ.

"ಸಾಸಿರ್ಬರು ಊರಾ(ನು) ಸಾಧಕ(ನು)ಪಕ್ಕಲೆ
ಇರೆ ಘಯ್ಯಸಾಸ ಬರೆದೊ
ಘನಸಿಗನು ಬೆಸನು"[೮]

ಶಾಸನದ ಕೊನೆಯಲ್ಲಿ 'ಘಯ್ಯಸಾಸ ಬರೆದೊ' ಎಂದು ಬರುತ್ತಿರುವುದರಿಂದ ಈ ಶಾಸನವನ್ನು ರಚಿಸಿದ ಕವಿ ಘಯ್ಯಸಾಸನಾಗಿದ್ದು, ಅವನು ಲಿಪಿಕಾರನೂ ಆಗಿದ್ದಾನೆ. ಇವನ ಹೆಸರನ್ನು ಗಮನಿಸಿದಾಗ ಘಟಿಕಾ ಸಾಹಸಿ ಎಂಬ ಬಿರುದಿನಿಂದಲೇ ಕವಿಯನ್ನು ಕರೆಯಲಾಗಿದೆ. ಘಟಿಕಾಸ್ಥಾನದಲ್ಲಿ ಚರ್ಚೆ ಅಥವಾ ವಾದದಲ್ಲಿ ಯಶಸ್ವಿಯಾದವನಿಗೆ ಘಟಿಕಾ ಸಾಹಸಿ ಎಂಬ ಪದವಿ ಕೊಡಲಾಗುತ್ತಿತ್ತು. ಇಂಥ ಪದವಿ ಪಡೆದುಕೊಂಡ ಪಂಡಿತನೇ ಪ್ರಸ್ತುತ ಶಾಸನದ ಕರ್ತೃವಾಗಿದ್ದಾನೆ. ಶಾಸನ ಚಿಕ್ಕದಾಗಿರುವುದರಿಂದ ಇವನ ಪ್ರತಿಭೆಯ ಪರಿಚಯ ನಮಗಾಗುವುದಿಲ್ಲ.

ಹಾವೇರಿ ತಾಲೂಕಿನ ಕಳ್ಳಿಹಾಳ ಗ್ರಾಮದ ಕ್ರಿ.ಶ. ೧೦೯೯ ರ ಶಾಸನವನ್ನು ಶ್ರೀ ಕಂದರ್ಪನೆಂಬ ಕವಿಯು ರಚಿಸಿದ್ದು ಇದೊಂದು ಸುದೀರ್ಘ ಶಾಸನವಾಗಿದೆ. ಈ ಶಾಸನದಲ್ಲಿ ಸಹದೇವರಾಚಮಲ್ಲ ಇವರ ಉದಾರ ಗುಣಗಳ ವರ್ಣನೆಯ ಉಲ್ಲೇಖವು ಹೀಗೆ ಬರುತ್ತದೆ.

" ಆತನನುಜಂ(!) ಗುಣ ಪ್ರ
(ಖ್ಯಾ)ತಿಯಿನೆಸೆದಿವ್ದ ರಾಚಮಲ್ಲಂ(!)ವಿಜಯ
ಖ್ಯಾತಿಗೆ ನಲ್ಲಂ(!)ಮೀರುವ
ರಾತಿಗೆ ಮಲ್ಲಂ ಕುಮಾರ್ಗ್ಗ ಚರಿತಮನೊಲ್ಲಂ"[೯]

ಮೀರಿಬಂದ ಶತೃವನ್ನು ಸದೆ ಬಡಿಯುವಂತವನು, ಕೆಟ್ಟ ಮಾರ್ಗದಚರಿತೆವಲ್ಲದವನು, ವಿಜಯಖ್ಯಾತಿಗೆ ನಲ್ಲನಾಗಿರುವಂತವನು, ಶ್ರೇಷ್ಠ ಗುಣಗಳಿಂದಾಗಿ ಪ್ರಖ್ಯಾತಿಯನ್ನು ಪಡೆದಿರುವಂತವನು ಎಂದು ರಾಚಮಲ್ಲನನ್ನು ಈ ಪದ್ಯ ವರ್ಣಿಸುತ್ತದೆ.

ಹಾವೇರಿ ತಾಲೂಕಿನ ದೇವಿಹೊಸೂರ ಗ್ರಾಮದ ಬನಶಂಕರಿಗುಡಿಕಂಬದ ಮೇಲಿರುವ ಶಾಸನದಲ್ಲಿ "ದೇವನಾಗಯ್ಯ ಲಿಖಿತ ವಿದ್ಯಾಧರಂ ಬರೆದಕಲ್ಕುಟಿಗಂ ಬಮ್ಮೋಜ ಬೆಸಗಯ್ದ ಮಂಗಳ ಮಹಾಶ್ರೀ" ಎಂದು ಬರುತ್ತದೆ. ಇದು ಕಲ್ಯಾಣದ ಚಾಲುಕ್ಯ ೧ ನೆಯ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ಕ್ರಿ.ಶ. ೧೦೬೩ಕ್ಕೆ ಸಂಬಂಧಿಸಿದೆ. ಇದರಲ್ಲಿ ಇನ್ದಪಯ್ಯ ನಾಯಕ ಮಾಳದೇವಿಗೆ ಮಕರತೋರಣ ಮಾಡಿಸಿದ ವಿವರಗಳಿವೆ. ಈ ಶಾಸನ ಒಂದುಚಿಕ್ಕ ಚಂಪೂ ಕಾವ್ಯವಾಗಿದ್ದು, ಗದ್ಯ ಮತ್ತು ವೃತ್ತಗಳನ್ನು ಕವಿ ಬಳಸಿದ್ದಾನೆ.

"ಕಾಳಿಗೆ ಕಾಳರಾಕ್ಷಸಿಗೆ ರೌದ್ರೆಗೆ ಬೈರವಿಗುಗ್ರೊಮಹಾ
ಕಾಳಿಗೆ ಕಾಳಯೋಗಿನಿಗೆ ಮಾರಜದೇವತೆಗಿನ್ದರಂ ಸುರ
ತ್ನಾಳಿ ವಿರಾಜಿಸಲ್ನೆರೆಯೆ ಮಾಡಿಸಿದಂ ಧರೆ ಬಣ್ಣಸಲ್ಕೆಸ
ಲ್ಲಿಳೆಯ ನಾಂತಿರಲ್ಮಕರತೋರಣಮಂ ಪೊಸವೂರೊಳರ್ಕ್ಕರಂ"[೧೦]

ಎಂದು ಕಾಳಿಯ ವರ್ಣನೆಯನ್ನು ಮಾಡುತ್ತ, ಆಕೆಗೆ ಮಕರತೋರಣ ಮಾಡಿಸಿದುದನ್ನು ಕವಿ ಸೊಗಸಾಗಿ ಹೇಳಿದ್ದಾನೆ. ಶಾಸನದ ಗದ್ಯವೂ ಸೊಗಸಾಗಿ ಮೂಡಿಬಂದಿದೆ.

ಹಾವೇರಿ ತಾಲ್ಲೂಕಿನ ಗಳಗನಾಥದ ಕ್ರಿ.ಶ. ೧೦೮೦ರ ಕಲ್ಯಾಣಿ ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಈ ಶಾಸನವು ಕಂದ ಪದ್ಯದಿಂದ ಆರಂಭವಾಗಿ ಪುಲ್ಲಣಿಯ ಗ್ರಾಮದ ಪ್ರಾಚೀನತೆ, ಕ್ಷೇತ್ರದ ಮಹತ್ವವನ್ನು ಹೀಗೆ ವರ್ಣಿಸುತ್ತದೆ.

"ಸುರ ನದಿಯ ಸಸಿಯ ಜಲಧಿಯ
ಧರಣಿಯ ಭಾಸ್ಕರನ ಪುಟ್ಟಿದಂದಿನ ತೀರ್ತ್ಥಂ
ಸಿರಿಸೈಳದ ಕೈಳಾಸದ
ದೊರೆಯನೆ ಪು(ಲ್ಲು)ಣಿಯ ಜನ್ಮಮರುವವರೊಳರೇ"[೧೧]

ಪುಲ್ಲಣಿಯು ಭೂಮಿ, ಸೂರ್ಯ ಹುಟ್ಟಿದಂದೆ ಹುಟ್ಟಿದ ಪವಿತ್ರಕ್ಷೇತ್ರವಾಗಿದ್ದು ಇದು ಶ್ರೀಶೈಲ, ಕೈಲಾಸದಷ್ಟು ಶ್ರೇಷ್ಠ ಮತ್ತು ಪವಿತ್ರವಾಗಿದೆಯೆಂದು ವರ್ಣಿಸುತ್ತದೆ. ಈ ಪುಲ್ಲಣಿ ಗ್ರಾಮವನ್ನು ಪುನರ್ದತ್ತಿ ಕೊಟ್ಟಿರುವುದು ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ. ಶಾಸನದಲ್ಲಿ ವೃತ್ತಗಳು ಅಷ್ಟೇ ಸೊಗಸಾಗಿ ಮೂಡಿಬಂದಿವೆ.

"ಹರನ ವಿ(ನಿ)ಕೇತನಕ್ಕೆ ಮರನಂಕಡೆದಲ್ಲಿಯೆ ಕೆಯ್ಗಳಾದವೀ
ಸ್ವರ ಸದ್ಮಕ್ಕೆಕಲ್ಲಡಿದೊಡಲ್ಲಿಯೆ ಪೊಗೊಳನಾದ ವಿನ್ದುಸೇ
ಕರಗ್ರಿಹವಿತ್ತಿಗಿಜಗೆಗಂ ಮಣ್ಣಗವ್ದಿಲ್ಲಿತಟಾಕ ಮಾದುವೇಂ
ಪಿರಿಯನೋಧರ್ಮವಿರ್ಮ್ಮವಿಮ್ಮಡಿಗೆ ವನ್ದದುಚಿನ್ನುಗ ಭೂಮಿಪಾಳನ"[೧೨]

ಶಿವನ ದೇವಾಲಯವನ್ನುಕಟ್ಟಲು ಮರಗಳನ್ನು ಕಡಿದಲ್ಲಿ ಹೊಲಗಳಾದವು.ದೇವಾಲಯಕಟ್ಟಲುಕಲ್ಲನ್ನುಕಟೆದಾಗ ಹೂವಿನ ಕೊಳಗಳಾದವು, ಗೋಡೆಯನ್ನು ನಿರ್ಮಿಸಲು ಇಟ್ಟಿಗೆಗಳಿಗಾಗಿ ಮಣ್ಣನ್ನು ತೆಗೆದಾಗ ಅಲ್ಲಿ ಕೆರೆಗಳಾದವು ಈಗೇ ಈ ಶಾಸನದಲ್ಲಿ ಶಿವ ದೇವಾಲಯವನ್ನು ನಿರ್ಮಿಸುವ ವಿವರಗಳು, ಕೆರೆ ಕೊಳಗಳ ನಿರ್ಮಾಣದಂತಹ ಧರ್ಮಕಾರ್ಯಗಳನ್ನು ಉಲ್ಲೇಖಿಸುತ್ತದೆ. ಗದ್ಯ ಪದ್ಯ ವೃತ್ತಗಳಿಂದ ಕೂಡಿದ್ದು, ಒಂದು ಚಿಕ್ಕ ಕಾವ್ಯವಾಗಿದೆ.

ಹಾವೇರಿ ಪಟ್ಟಣದ ಪುರದ ಸಿದ್ಧೇಶ್ವರ ದೇವಸ್ಥಾನದ ಶಾಸನದ ಕೊನೆಗೆ ಮಹಾಸ್ರಗ್ದರಾ ವೃತ್ತದಲ್ಲಿ ಕವಿಯ ಉಲ್ಲೇಖವಾಗಿದೆ.

"ಪುಣುತಾರ್ತ್ಥಂ ಹೃದ್ಯಮೀ ಪದ್ಯನಿಚಯಮೆನೆ ಪೇಳ್ದಂ ಮನಂಗೊಂಡು ವಿದ್ವ
ದ್ಗಣಮತ್ಯಾನಂದದಿಂ ಬಣ್ಣಿಸೆ ಬರೆದನದಂ ಸತ್ಕವೀಂದ್ರಸ್ತುತಂ ನಾ
ರಣದೇವಂ ಪಾರ್ವ್ವತೀವಲ್ಲಭಪದಯುಗಳಾರಾಧಕಂ ವಿಪ್ರವಂಶಾ
ಗ್ರಣಿ ವಿಶ್ವಾಮಿತ್ರಗೋತ್ರಾಂಬುರುಹವನಪತಂಗಂ ವಿಶುದ್ಧಾನ್ತರಂಗ"[೧೩]

ಹೃದಯಕ್ಕೆ ಹಿಡಿಸುವ ಹಾಗೆ ಪದ್ಯ ರಚಿಸುವ ಖ್ಯಾತಿ ಹೊಂದಿದ್ದ ನಾರಣದೇವನು, ತನ್ನನ್ನು ಸತ್ಕವೀಂದ್ರನೆಂದು ಕರೆದು ಕೊಂಡಿದ್ದಾನೆ.

ಹಾವೇರಿ ತಾಲೂಕಿನ ಹತ್ತಿಮತ್ತೂರಗ್ರಾಮದ ಹೊಂಡದ ಮೇಲಿರುವ ಶಾಸನವನ್ನು ಚಾವಣಕವಿಯು ಬರೆದಿದ್ದಾನೆ. ಇವನು ಲಿಪಿಕಾರನಾಗಿಯೂ ಕೆಲಸ ಮಾಡಿದ್ದಾನೆ. ಶಾಸನದಲ್ಲಿ" ಪೆರ್ಗಡೆಯದ ಚಾವಣಂ ಬರದಂ ಮಂಗಳ"[೧೪]ಎಂದು ಬರುತ್ತದೆ. ದೇವಿಂಗೇರಿಯ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕೊಟ್ಟಿರುವ ಸುಂಕ ದಾನದ ವಿವರವನ್ನು ಕವಿಯು ಇಲ್ಲಿ ಕೊಟ್ಟಿದ್ದಾನೆ. ಇದೊಂದು ಚಿಕ್ಕ ಚಂಪೂ ಕಾವ್ಯವಾಗಿದೆ.

ಕವಿಯ ಹಾರೈಕೆಯು ಶಾಸನದ ಕೊನೆಯಲ್ಲಿ ಹೀಗೆ ಬರುತ್ತದೆ.
"ಅಭಿವೃದ್ಧೀಶ್ವರರಾಗಿ ಜೀವಿಸುಗೆ ನಮ್ಮೀ ಗ್ರಾಮದಿನ್ನೂರ್ವ್ವರುಂ
ಪ್ರಭುವುಂ ಕ್ಷೀರಸಮುದ್ರದನ್ತೆ ಕೆರೆಯುಂ ತೀವಿಕ್ಕೆ ಚಾಳುಕ್ಯವ
ಲ್ಲಭನುಂ ಚೋಳನನಿಕ್ಕಿ ಚೋಳ್‌ನೆಲನ್ಮಂ ಪಾಳಿಕ್ಕೆ ದೀರ್ಗ್ವಾಯುವ
ಕ್ಕಭಿವಾಂಛಾಫಳಮಕ್ಕೆ ಬಾಹುಬಲಿಗಾಚಂದ್ರಾರ್ಕತಾರಂಬರ"[೧೫]

ನಮ್ಮ ಗ್ರಾಮದಲ್ಲಿ ಜೀವಿಸುವಂತ ಎಲ್ಲಾ ೨೦೦ ಜನರು ಮತ್ತು ಅರಸ ಆಯುಷ್ಯ, ಐಶ್ವರ್ಯದಿಂದ ಅಭಿವೃದ್ಧಿ ಹೊಂದುತ್ತ ಸುಖವಾಗಿ ಬಾಳಲಿ, ಹಾಲಿನ ಸಮುದ್ರದಂತೆ ನಮ್ಮ ಕೆರೆಗಳು ತುಂಬಿ ತುಳುಕಲಿ, 'ಚಾಳುಕ್ಯ ವಲ್ಲಭನುಂ ಚೋಳನನಿಕ್ಕಿ ಚೋಳನೆನ್ಮಂ ಪಾಳಿಕ್ಕಿ' ಎಂಬ ಮಾತು ಚಾಳುಕ್ಯ ಚಕ್ರವರ್ತಿ ಮತ್ತು ಚೋಳರಿಗೆ ನಡೆಯುತ್ತಿದ್ದ ಯುದ್ದಗಳು ಮತ್ತು ಚೋಳರ ಕಿರುಕುಳವನ್ನು ಸ್ಪಷ್ಟಪಡಿಸುತ್ತದೆ. ಚಾಲುಕ್ಯ ಚಕ್ರವರ್ತಿ ಚೋಳನನ್ನು ಕೊಂದು ಚೋಳನ ರಾಜ್ಯವನ್ನು ನಾಶಮಾಡಲೆಂದು ಹಾರೈಸುತ್ತಾನೆ.

ರಾಣೇಬೆನ್ನೂರು ತಾಲ್ಲೂಕಿನ ಅಸುಂಡಿ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಎದುರಿನಲ್ಲಿರುವ ಶಾಸನವು ೩ನೇ ಸೋಮೇಶ್ವರನನ ಕಾಲಕ್ಕೆ ಸೇರಿದ್ದು, ಪ್ರಸ್ತುತ ಶಾಸನದ ಕರ್ತೃ ಸುಬ್ಬನಾಗಿದ್ದು, ಇವನ ಪ್ರತಿಭೆಯನ್ನು ಮಾಚಣ್ಣನನ್ನು ವರ್ಣಿಸುವ ಈ ಚಂಪಕ ಮಾಲಾವೃತ್ತವನ್ನು ನೋಡಬಹುದು.

"ರತಿಪತಿಕೋಮಳಾಂಗಂ ವರರೂಪದೊಳುಂನತಿವೆತ್ತ ಗೋಮಿನೀ
ಪತಿ ನಿಪುಣೋತ್ತ್ರವೀಣ ಬಹುಕೌಷಳಭಾವದ ಕಾವ್ಯಶಬ್ದವಾ
ಕ್ಪತಿ ಚತುರೋಕ್ತಮ . . . ತ ಸಚೀಪತಿ ವೈಭವದೇಳ್ಗೆಯೊಳ್ ಬೃಹ
ಸ್ಪತಿ ದೃಢಮಂತ್ರದೊಳ್ನೆಗರ್ದ ಪೆರ್ಗ್ಗಡೆ ಮಾಚಣನೀ ಧರಿತ್ರಿಯೊಳ್"[೧೬]

ಮಾಚಣ್ಣನು ಪಾಂಡಿತ್ಯವನ್ನು ಪಡೆದವನಾಗಿದ್ದನು. ವಾಕ್ ಚಾತುರ್ಯವಂತನಾಗಿದ್ದ, ಕಾವ್ಯವನ್ನು ಬಲ್ಲವನಾಗಿದ್ದನು ಎನ್ನುವುದು ಈ ಶಾಸನದಲ್ಲಿ ಪದ್ಯದಿಂದ ಖಚಿತವಾಗುತ್ತದೆ.

ಕಲಚೂರಿ ಅಹವಮಲ್ಲನ ಕ್ರಿ.ಶ. ೧೧೮೩ರ ಗುಡ್ಡದಾನ್ವೇರಿ ಗ್ರಾಮದ ಶಾಸನವು 'ಹಡಗಿಲೆಯ ದಾಸೋಜನ ಮಗ ಕಲ್ಲೋಜನ ಬರಪಮಿದಾಚಂದ್ರಾರ್ಕತಾರಂಬರಂ ಸಲುಗೆ'[೧೭] ಎಂದಿರುವುದರಿಂದ ಇದನ್ನು ಕಲ್ಲೋಜನೆ ಕವಿ ಮತ್ತು ಲಿಪಿಕಾರನಾಗಿರಬೇಕು. ಶಾಸನದಲ್ಲಿ ಕಂದ ಮತ್ತು ಮಹಾಸ್ರಗ್ಧರಾ ವೃತ್ತಗಳು ಬಳಕೆಯಾಗಿವೆ. ಜಂಬೂದ್ವೀಪದ ಕುಂತಳ ನಾಡಿನ ವರ್ಣನೆ ಈ ಕೆಳಗಿನಂತೆ ಕಾಣಬಹುದಾಗಿದೆ.

"ಪಿರಿದುಂ ಮಧ್ಯಸ್ಥವಾದ್ವೀಪದೊಳಮರನಗಂ ತಂನಗೇಂದ್ರಕ್ಕೆ ತೆಂಕಲು
ಭರತಕ್ಷೇತ್ರಂ ಜನಾನಂದ ಮ (ನೊ)ದವಿಪುದಾ ಕ್ಷೇತ್ರದೊಳು ನಾಡೆಯುಂ ಸೌಂ
ದರ ಲಕ್ಷ್ಮೀ ಜನುಮಗೇಹಂ ನು ತಭುವನಧೂಕುಂತಳ(ಂ) ತಾನೆನಲು
ಸ್ತರಿಸಿಕ್ಕುಂ ಕುಂತಳೋರ್ವೀತಳವಖಿಳಸುಧಾಳಂಕ್ರಿತೋದ್ಯದುವಿಳಾಸಂ"[೧೮]

ಈ ರೀತಿ ವರ್ಣಿಸಲಾಗಿದೆ.

ಹೀಗೆ ಹಾವೇರಿ ಹಾಗೂ ರಾಣೇಬೆನ್ನೂರು ತಾಲ್ಲೂಕಿನ ಕೆಲವು ಶಾಸನಗಳು ಸಾಹಿತ್ಯಿಕ ಮಹತ್ವವನ್ನು ಪಡೆದುಕೊಂಡಿವೆ. ಕೆಲವು ಕವಿಗಳು ಒಳ್ಳೆಯ ಶಾಸನ ಸಾಹಿತ್ಯವನ್ನು ರಚಿಸಿದ್ದಾರೆ. ಗದ್ಯಪದ್ಯ ಮಿಶ್ರಿತ ಚಂಪೂ ಕಾವ್ಯಗಳನ್ನು, ಕಂದ ವೃತ್ತಗಳನ್ನು, ಸುಂದರವಾಗಿ ರಚಿಸಿದ್ದು ಮೇಲಿನ ವಿವರಗಳಿಂದ ಗೊತ್ತಾಗುತ್ತದೆ.

ಅಡಿ ಟಿಪ್ಪಣಿಗಳು

೧. SII-18, ಶಾ.ಸಂ. ೧೩೬, ಕ್ರಿ.ಶ. ೧೧೩೪, ಹಾವೇರಿ, ಹಾವೇರಿ (ತಾ).
೨. SII-18, ಶಾ.ಸಂ. ೧೩೬, ಕ್ರಿ.ಶ. ೧೧೩೪, ಹಾವೇರಿ, ಹಾವೇರಿ (ತಾ).
೩. SII-18, ಶಾ.ಸಂ. ೧೩೬, ಕ್ರಿ.ಶ. ೧೧೩೪, ಹಾವೇರಿ, ಹಾವೇರಿ (ತಾ).
೪. SII-18. ಶಾ.ಸಂ. ೧೩೬, ಕ್ರಿ.ಶ. ೧೧೩೪, ಹಾವೇರಿ. ಹಾವೇರಿ (ತಾ).
೫. SII-18. ಶಾ.ಸಂ. ೨೪೬, ಕ್ರಿ.ಶ. ೧೨೬೩, ಚೌಡಯ್ಯದಾನಪುರ, ರಾಣೇಬೆನ್ನೂರು (ತಾ).
೬. SII-18. ಶಾ.ಸಂ. ೩೦೧, ಕ್ರಿ.ಶ. ೧೨೩೩, ಕನವಳ್ಳಿ, ಹಾವೇರಿ (ತಾ).
೭. SII-18. ಶಾ.ಸಂ. ೮೮, ಕ್ರಿ.ಶ. ೧೦೮೦, ಗಳಗನಾಥ, ಹಾವೇರಿ (ತಾ).
೮. SII-18. ಶಾ.ಸಂ. ೧೬, ಕ್ರಿ.ಶ. ೯೦೭-೦೮, ದೇವಿಹೊಸೂರು, ಹಾವೇರಿ (ತಾ).
೯. SII-18. ಶಾ.ಸಂ. ೪೪, ಕ್ರಿ.ಶ. ೧೦೧೯, ಕಳ್ಳಿಹಾಳ, ಹಾವೇರಿ (ತಾ).
೧೦. SII-18. ಶಾ.ಸಂ. ೬೯, ಕ್ರಿ.ಶ. ೧೦೬೩, ದೇವಿಹೊಸೂರ, ಹಾವೇರಿ (ತಾ).
೧೧. SII-18. ಶಾ.ಸಂ. ೮೮, ಕ್ರಿ.ಶ. ೧೦೮೦, ಗಳಗನಾಥ, ಹಾವೇರಿ (ತಾ).
೧೨. SII-18. ಶಾ.ಸಂ. ೮೮, ಕ್ರಿ.ಶ. ೧೦೮೦, ಗಳಗನಾಥ, ಹಾವೇರಿ (ತಾ).
೧೩. SII-18. ಶಾ.ಸಂ. ೧೦೮, ಕ್ರಿ.ಶ. ೧೧೧೯, ಹಾವೇರಿ, ಹಾವೇರಿ (ತಾ).
೧೪. SII-18. ಶಾ.ಸಂ. ೧೧೧, ಕ್ರಿ.ಶ. ೧೧೧೫, ಹತ್ತಿಮತ್ತೂರು, ಹಾವೇರಿ (ತಾ).
೧೫. SII-18. ಶಾ.ಸಂ. ೧೧೧, ಕ್ರಿ.ಶ. ೧೧೧೫, ಹತ್ತಿಮತ್ತೂರು, ಹಾವೇರಿ (ತಾ).
೧೬. SII-18. ಶಾ.ಸಂ. ೧೩೩, ಕ್ರಿ.ಶ. ೧೧೨೭, ಅಸುಂಡಿ, ರಾಣೇಬೆನ್ನೂರು (ತಾ).
೧೭. SII-18. ಶಾ.ಸಂ. ೧೯೨, ಕ್ರಿ.ಶ. ೧೧೮೩, ಗುಡ್ಡದಾನ್ವೇರಿ, ರಾಣೇಬೆನ್ನೂರು (ತಾ).
೧೮. SII-18. ಶಾ.ಸಂ. ೧೯೨, ಕ್ರಿ.ಶ. ೧೧೮೩, ಗುಡ್ಡದಾನ್ವೇರಿ, ರಾಣೇಬೆನ್ನೂರು (ತಾ).

೬೭

ಹರಿಹರದ ಶಾಸನದಲ್ಲಿ ಕಂಡರಿಸಿರುವ ಬನವಾಸಿ ನಾಡು

ಹರಿಹರ ಶ್ರೀನಿವಾಸರಾವ್*

ಕನ್ನಡ ನಾಡಿನ ಮಲೆನಾಡ ಹೃದಯ ಭಾಗದಂತಿರುವ "ಬನವಾಸಿ ನಾಡು"[೧] (ದಾ. ೬೬ ಸು. ಕ್ರಿ.ಶ. ೧೧೬೦) ಬಣ್ಣನೆ ಇಂದಿನ ಬಯಲು ಸೀಮೆ, ಹಿಂದೆ ರಕ್ಷಣೆಯ ಆಯ ಕಟ್ಟಿನ ಸ್ಥಾನವೂ ಆಗಿದ್ದ ಹರಿಹರದ ಶಾಸನಾಕ್ಷರಗಳಲ್ಲಿಯೂ ಮೂಡಿ ಬಂದಿರುವುದು ಒಂದು ವಿಶೇಷವೇ ಸರಿ. ಇಲ್ಲಿಯ ವಿವರಗಳನ್ನು ಈ ಕೆಳಗೆ ಕಾಣಿಸಿರುವ ಅಂಶಗಳನ್ನು ಪ್ರಮುಖವಾಗಿರಿಸಿಕೊಂಡು ಈ ಸಂಪ್ರಬಂಧದಲ್ಲಿ ವಿವರಿಸಲಾಗಿದೆ.

೧) ಭೌಗೋಳಿಕ ೨) ಪರಿಸರ ೩) ಐತಿಹಾಸಿಕ ೪) ಶಾಸನ ಪದ್ಯಗಳ ಛಂದೋರೂಪ. ಇತ್ಯಾದಿ.

೧) ಭೌಗೋಳಿಕ

ಬನವಾಸಿ ನಾಡು / ಹನ್ನೆರಡು ಸಾವಿರದ ವ್ಯಾಪ್ತಿ



ಉತ್ತರ ಕನ್ನಡ ಜಿಲ್ಲೆಯ ವರದಾನದಿ ಹಾಗೂ ತುಂಗಭದ್ರಾ ನದಿಗಳ ನಡುವಣ ಪ್ರದೇಶವೇ ಬನವಾಸಿ ನಾಡು. ವಿಕ್ರಮಾರ್ಜುನನ ಪಟ್ಟಾಭಿಷೇಕಕ್ಕೆ "ವರದಾಂಬು" ಅಂದರೆ ವರದಾ ನದಿಯ ನೀರು ಬಂದಿತ್ತೆಂದು ಪಂಪ ಭಾರತದ ಭಾಗ ೧೪-೩೧ರಲ್ಲಿ ಉಲ್ಲೇಖವಾಗಿದೆ. ಈಗಿನ ಹಾವೇರಿ, ಬ್ಯಾಡಗಿ, ಹಿರೇಕೇರೂರು, ಶಿಗ್ಗಾಂವಿ, ರಾಣಿ ಬೆನ್ನೂರು ತಾಲ್ಲೂಕಿನ ಕೆಲವು ಭಾಗಗಳೂ, ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಸಿದ್ದಾಪುರ, ತುಂಗಭದ್ರೆಯ ಕೆಳಭಾಗವನ್ನು ಹೊರತುಪಡಿಸಿದಂತೆ ಶಿವಮೊಗ್ಗಾ ಜಿಲ್ಲೆಯ ಭಾಗಗಳನ್ನು ಒಳಗೊಂಡಿತ್ತೆಂದು ಹೇಳಬಹುದು. ಈ ಶಾಸನದ ಕಾಲ ಬಿ.ಎಲ್. ರೈಸರ ಪ್ರಕಾರ ಕ್ರಿ.ಶ. ಸು. ೧೧೬೦.

ನಾಗರ ಖಂಡ ಎಪ್ಪತ್ತು ಪ್ರದೇಶ ಬನವಾಸಿ ಹನ್ನೆರಡು ಸಾವಿರದ ಒಳಗಣ ಒಂದು ಕಂಪಣ ಎಂದರೆ ಒಂದು ಸಣ್ಣ ಆಡಳಿತ ವಿಭಾಗ. ಹಿರೇಕೇರೂರು ತಾಲ್ಲೂಕಿನ ಸೂಡಂಬಿ, ಹಿರೇಕೇರೂರು, ಚಿಕ್ಕ ಕೆರೂರುಗ್ರಾಮಗಳು, ಸೊರಬ, ಶಿಕಾರಿಪುರ ತಾಲ್ಲೂಕಿನ ಕುಪ್ಪಟೂರು, ಶಿಕಾರಿಪುರ ತಾಲ್ಲೂಕಿನ ಬಂದಳಿಕೆ ಗ್ರಾಮಗಳು ಈ ವಿಭಾಗದಲ್ಲಿದ್ದುವೆಂದು ಕೆಲವು ಶಾಸನಗಳಿಂದಲೂ ತಿಳಿದು ಬರುತ್ತದೆ. ಈಗಿನ ತಿಳುವಳ್ಳಿ ಗ್ರಾಮವು ಈ ವಿಭಾಗದ ಮುಖ್ಯ ಪಟ್ಟಣವಾಗಿದ್ದಿತು. "ಕಂಪಣ" ಎನ್ನುವುದು ಈಗಿನ ಹೋಬಳಿ ಮಟ್ಟದ, ನಾಡಿಗೆ ಸೇರಿದ ಒಂದು ಘಟಕ.

ಒಂದು ನಾಡು ಅಥವಾ ಪ್ರದೇಶ ಸುಖದ ನೆಲೆಯಾಗಿರಬೇಕಾದರೆ ಅಲ್ಲಿ ಏನೇನು ಇರಬೇಕು? ಎಂದರೆ ಮೊದಲು ಅಲ್ಲಿ ಸಿರಿ ಸಂಪತ್ತು ಸಂವೃದ್ಧಿಯಾಗಿ ಇರಬೇಕು. ಎರಡನೆಯದಾಗಿ ಇಂದಿನ "ಆಧುನಿಕ ಸಾಮಾಜಿಕ ಚಿಂತನೆಯಂತೆ" ಸರ್ವರಿಗೂ ಸಮಬಾಳು ಮಾಡುವ ಅವಕಾಶ ಮತ್ತು ಪರಿಸ್ಥಿತಿಯನ್ನು ದೇಶವನ್ನು ಆಳುವವರು ನಿರ್ಮಾಣ ಮಾಡಬೇಕು. ಈ ಬಗ್ಗೆ ಕೇವಲ ಎರಡು ಪದಗಳಲ್ಲಿಯೇ ಅತ್ಯಂತ ಕಡಿಮೆ ಶಬ್ದಗಳಲ್ಲಿ ಸೂಚ್ಯವಾಗಿ ತಾನು ಏನು ಹೇಳಬೇಕೆನ್ನುವ ಆಶಯವನ್ನು ಶಾಸನಕವಿ ಸುಸ್ಪಷ್ಟಗೊಳಿಸುತ್ತ, ಬನವಾಸಿ ದೇಶ ಹೇಗೆ ಸುಖದ ಆಗರವಾಗಿ ಕಾಣುತ್ತಿದೆ ಎನ್ನುವುದನ್ನು ಮುಂದಿನ ಪದಗಳಲ್ಲಿ ಪೋಣಿಸಿದ್ದಾನೆ.

"ಇದು ಸುಖದಾಗರಂ, ಸಿರಿಯಪುಟ್ಟಿದ ಸಾಗರಮಾರಯಲ್ "ಸಮ ಅಭ್ಯುದಯದ ಗೊತ್ತು"; ಸತ್ಯದ ತವರ್ಮನೆ, ಚಿತ್ತಜನಿರ್ಕೆದಾಣ ಮುನ್ಮದ ಯುವತೀಜನಂಗಳಿಗೆ ಅರೆವಟ್ಟು, ಬುಧಾಳಿಯ ಜನ್ಮಭೂಮಿಯೆಂಬುದೆನೆನೆ ಶೋಭೆಯಂ ತಳೆದುದಿಂತನಿಶಂ ಬನವಾಸಿ ಮಂಡಲಂ"

* #೭೫/೧೭. ಸಮರ್ಥ. ವಿಕಾಸ್ ಹೈಸ್ಕೂಲ್ ಎದುರು. ೩ನೇ ಫೇಸ್, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦೦೮೫. ಮೊ. ೯೯೦೦೬೮೨೧೯೭

ಪರಿಸರ: ದೆಸೆಯಂ ಪೊಂಬಣ್ಣದಿಂ ತೀಂಬುವ "ಕಳಮವನಂ" ದಿವ್ಯ ಸೌರಭ್ಯದಿಂದಾಗಸಮಂ" ನಿರ್ವ್ಯಾಕುಳಂ ಪೂರಿಪ "ಕುಸುಮವನ" "ಧಾತ್ರಿಯಂ" ನಿರ್ಯದಂಭಃ(?) ಪ್ರಸರಸ್ರೋತಂಗಳಿಂದಂ "ಜಳಮಯವೆನಿಪಾ" ನಾರೀಕೇಳೀವನಂ ಸದ್ವಿಸದಿಂಹಂಸಾಳಿಯಂ ರಕ್ಷಿಪ ಜಳಜವನಂ ರಯ್ಯ[ಮ್ಯ] ಮಾ ನಾಡೊಳೆಲ್ಲಂ (೧೯ನೇ ವೃತ್ತ).

ಭಾವಾನುವಾದ: ದಿಕ್ಕು ದಿಕ್ಕುಗಳಲ್ಲಿ ಪಸರಿಸಿರುವ ಬಂಗಾರದ ಬಣ್ಣದಿಂದ ತುಂಬಿದ ಭತ್ತದ ಗದ್ದೆಗಳಿಂದ ತುಂಬಿರುವ **ಕಳವೆವನಗಳು,** ತಮ್ಮ ದಿವ್ಯವಾದ ಸುಗಂಧ ಪೂರಿತ **"ಗಾಳಿ"**ಯಿಂದ ಆಕಾಶವನ್ನು ನಿರಂತರವಾಗಿ ಆವರಿಸಿರುವ, ವಿವಿಧ ಜಾತಿಯ ಹೂವಿನ ವನಗಳು, **ನಿರ್ವ್ಯಾಕುಳಂ,** ಎಂದರೆ ಯಾವ ಒಂದು ಅಡೆತಡೆಯೂ ಇಲ್ಲದಂತೆ ಸಂವೃದ್ಧವಾಗಿ ತಮಗೆ ಎಲ್ಲಿ ಬೆಳೆಯ ಬೇಕೆನಿಸುತ್ತದೆಯೋ ಅಲ್ಲಿ ಬೆಳೆದಿವೆ. ಇದು ಆನಾಡಿನ ಮಣ್ಣಿನ, ಸುಜಲ, ಸುಜನ ಮನೋವೃತ್ತಿಯನ್ನು ಬಿಂಬಿಸುತ್ತದೆ.

"ಇಲ್ಲಿಯ ಶಾಸನೋಕ್ತ "ಕಳವೆ" ಎನ್ನುವ ವಿಶೇಷ ಜಾತಿಯ ಭತ್ತ". ದೇಹಕ್ಕೆ ಬೇಕಾಗುವ ಹೆಚ್ಚಿನ ಪೌಷ್ಟಿಕ ಅಂಶಗಳನ್ನು ಒಳಗೊಂಡಿರುವ ಅತ್ಯಂತ ಅಪರೂಪದ **ಕರ್ನಾಟಕದ ಪ್ರಾದೇಶಿಕ ಬೆಳೆ** ಎಂದು ಆಹಾರ ವಿಜ್ಞಾನಿಗಳು (Nutrient Specialists) ಗುರುತಿಸಿದ್ದಾರೆ. ಈ ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ, ಮನುಷ್ಯನ ದೇಹದ ತೂಕ ಸಮತೋಲನದಿಂದ ಪ್ರಾರಂಭವಾಗಿ **ಸಕ್ಕರೆ, ಶ್ವಾಸಕೋಶ ಸಂಬಂಧಿಸಿದ ಕಾಯಿಲೆ ಇತ್ಯಾದಿಗಳನ್ನೂ ಒಳಗೊಂಡಂತೆ** (stress management).

ಮಲೆನಾಡಿನ ಈ ಭಾಗದಲ್ಲಿ ಎತ್ತರದ ಮರಗಳ ಮೇಲೆ ಬೆಳೆದಿರುವ ವಿವಿಧ ರೀತಿಯ ವಿಶೇಷ ರೀತಿಯ ಆಕರ್ಷ ಬಣ್ಣಗಳಿಂದ ಕೂಡಿರುವ ಆರ್ಕೀಡ್ ಗಳನ್ನು ಡಾ. ಆನಂದರಾವ್ ಎನ್ನುವ ಸಸ್ಯ ವಿಜ್ಞಾನಿಗಳು ಗುರುತಿಸಿ ಪ್ರಚುರ ಪಡಿಸಿರುತ್ತಾರೆ.



ಬಂಗಾರ ಬಣ್ಣದ ಕಳವೆ ಭತ್ತದ ಬೆಳೆ



ಒಣಗಿದ ಕಪ್ಪು ಭತ್ತ




ಕಳವೆಯ ಇನ್ನೊಂದು ಜಾತಿ

ಭೂಮಿಯಲ್ಲಿ ನೀರು ನಿರಂತರವಾಗಿ ಹರಿಯಲು ತೆಂಗಿನ ಮರಗಳು ಮೋಡ ಹಾಗೂ ಗಾಳಿಯಲ್ಲಿಯ ತೇವಾಂಶವನ್ನು ಹೀರುತ್ತವೆ. ತಮ್ಮ ಬೇರುಗಳ ಜಾಲದ ಮೂಲಕ ಸ್ವಚ್ಛವಾಗಿಸಿ ನಿರಂತರವಾಗಿ ಹರಿಯುವಂತೆ ಉಕ್ಕಿಸುತ್ತವೆ (ಪ್ರಸರ ಸ್ರೋತ) ಎನ್ನುವ ಇಂದಿನ ವೈಜ್ಞಾನಿಕ ಸತ್ಯವನ್ನು ೧೨ನೇ ಶತಮಾನ ಈ ಹರಿಹರದ ಶಾಸನ ಕವಿ ಸ್ಪಷ್ಟವಾಗಿ ದಾಖಲಿಸಿರುವುದು ಒಂದು ಅಪರೂಪದ ಸಂಗತಿ. ಈ ಮಾತಿಗೆ ಪೂರಕವಾಗಿಲ್ಲೂ ಮುಂದಿನ ಉಪಮೆಯಲ್ಲಿ ತಿಳಿ ನೀರಿನ ಕೊಳಗಳಲ್ಲಿ ಮಾತ್ರ ಬೆಳೆಯುವ ತಾವರೆಯ ಬಳ್ಳಿಯ ದಂಟುಗಳು ಹಂಸಗಳ ಗುಂಪನ್ನೇ ಸಾಕುತ್ತಿರುವ ಜಳವನಗಳೇ ಈ ಬನವಾಸಿ ನಾಡಿನಲ್ಲಿವೆ ಎಂದು ಹೇಳಿರುವುನ್ನು ಇಂದಿಗೂ ಈ ಪರಿಸರದಲ್ಲಿ ಕಂಡು ಬರುವ ಅನೇಕ ಕೆರೆ, ಕಟ್ಟೆ, ಕುಂಟೆಗಳಿಂದ ಅರಿಯ ಬಹುದಾಗಿದೆ.

ನಿರಿದಳಿರ್ದೊಂಗಲಂ ತಳೆದ ಅಶೋಕೆ ತಗುಳ್ದೆ ಎಳೆನೀರ ತಂದಲಂ ಕರೆವೆಳೆದೆಂಗು ಬಿಣ್ಪೊಗೆಗಳಿಂ ತೊನೆದಾಡುವ ಕೌಂಗು ಬೇರ್ಗಳಿಂ ತುರುಗಿರೆ ಕಾಯ್ತ ಬಕ್ಕೆ ಸಲೆ ಕಳ್ತೆಲೆ ತಾಂ ನೆಲೆಗೊಳ್ವಿನಂ ದ. ಡಿದೆಲೆವಳ್ಳಿ ಕಣ್ಗೆಸವುವೆಲ್ಲಿಯು ಮಲ್ಲಿಯ ನಂದನಂಗಳೊಳ್ (೨೦ನೇ ವೃತ್ತ)

ಉದ್ದವಾದ ಚಿಗುರಿನ ಗೊಂಚಲನ್ನು ಹೊಂದಿರುವ ಅಶೋಕ ವೃಕ್ಷ, ಎಳೆ ನೀರನ್ನೇ ತುಂತುರು ಹನಿಗಳಂತೆ ಸೂಸುವ (ಕರೆಯುವ) ತೆಂಗಿನ ಮರಗಳು, ಬಲವಾದ ಗೊನೆಗಳಿಂದ ತೂಗಾಡುವ ಅಡಕೆ ಮರಗಳು, ಅಡಿಯಿಂದ ಮುಡಿಯ ವರೆಗೆ ವ್ಯಾಪಿಸಿ ಕಾಯಿಬಿಟ್ಟ ಹಲಸು, ಕತ್ತಲೆ ಶಾಶ್ವತವಾಗಿ ನೆಲೆಗೊಂಡು ವ್ಯಾಪಿಸಿರುವಂತೆ ಹಬ್ಬಿರುವ ವೀಳೆಯ ಬಳ್ಳಿಗಳಿಂದಾಗಿ ಎಲ್ಲಿ ನೋಡಿದರೆ ಅಲ್ಲಿ ಕಣ್ಣಿಗೆ ತಂಪನ್ನು ಉಂಟು ಮಾಡುತ್ತಿವೆ.



ಕದಂಬ ಮರದ ಹೂ ಹಣ್ಣು



ಕದಂಬ ವನದಲ್ಲಿ ಕೃಷ್ಣ, ಮಧುಬನಿ ಚಿತ್ರ ಕಲೆ



ಪ್ರಧಾನಿ ನರೇಂದ್ರ ಮೋದಿ ಕದಂಬ ಸಸಿ ನೆಡುತ್ತಿರುವುದು

ಈ ನಂದನ ವನದಲ್ಲಿ. ಹೀಗೆ ಅಶೋಕ, ಅಡಿಕೆ, ಹಲಸಿನ ಮರಗಳ ವಿಶೇಷತೆಯನ್ನು ಹೊಂದಿರುವುದರಿಂದಾಗಿ ಈ **"ಬನವಾಸಿ ಜನಪದ"** ಸುಂದರಿಯರ ವಿಳಾಸವನ್ನು ಹೇಳುತ್ತಿದೆ.

ಮುಂದಿನ ಪದ್ಯದಲ್ಲಿ ಗಂಧಶಾಳಿ ಎನ್ನುವ ಸುಗಂಧ ಭರಿತ ಭತ್ತದ, ಕಬ್ಬಿನ ತೋಟ, ನಾಗ ಸಂಪಿಗೆ ಇತ್ಯಾದಿ ಹೂವುಗಳು, ಕನ್ನಡ ನೆಲದಲ್ಲೇ ವಿಶೇಷವಾಗಿ ಬೆಳೆಯುವ, ಪರೀಕ್ಷೆ ಮಾಡಲಾಗಿ ಅತಿಶಯವಾದ ಸುವಾಸನೆಯಿಂದ ಕೂಡಿದ ಶ್ರೀ ಗಂಧದ ಬಗೆಗೆ ತಿಳಿಸುತ್ತದೆ. ಇಷ್ಟೆಲ್ಲಾ ಪ್ರಕೃತಿ ಸಂಪತ್ತನ್ನು ಹೊಂದಿರುವ ಬನವಾಸಿ ಅಥವಾ ನಾಗರಖಂಡ ಆ ಮನ್ಮಥನನ್ನು ಏಕೆ ಸೋಲಿಸುವುದಿಲ್ಲ? ಎಂದು ಶಾಸನಕವಿ ನಮ್ಮನ್ನೇ ಪ್ರಶ್ನಿಸುತ್ತಾನೆ.

ಪರಿಕಿಪೊಡೆನೂ ಸೌರಭ ಭರಿತ ಶ್ರೀ ಖಂಡಮುಂ ದಿಟಂ ಪ್ರತಿ ಪದ್ವಿಸ್ಫುರಿತ ಶಶಿಖಂಡಮುಂ ನಾಗರ ಖಂಡಮುಮಾರ ಮನಮುಂ ಸೋಲಿಸುವೆ?

ಬನವಾಸಿ ನಾಡಿನ ಆಡಳಿತದ ಭಾಗದಲ್ಲಿಯ ಅತ್ಯಂತ ಮುಖ್ಯವೆನಿಸುವ ಪರಿಸರದ ಕೆಲವು ***"ಭೂಮಿ/ಬೆಟ್ಟ, ಜಲ ವಿಜ್ಞಾನ ವೈಶಿಷ್ಟ್ಯಗಳ"*** *ವಿವರಣೆಯನ್ನು ಮಾತ್ರ ಇಲ್ಲಿ ನೀಡಲಾಗಿದೆ.*

ಶಿರಸಿ, ಬನವಾಸಿ, ಯಾಣ, ಸಿದ್ದಾಪುರ ಪರಿಸರದ ಐತಿಹಾಸಿಕ ಜಲ-ವಿಜ್ಞಾನ ತಂತ್ರಜ್ಞಾನ

ಶಿರಸಿ ಉತ್ತರ ಕನ್ನಡ ಜಿಲ್ಲೆಯ ಒಂದು ತಾಲ್ಲೂಕು ಮತ್ತು ಆಡಳಿತ ಕೇಂದ್ರ. ಒಟ್ಟು ವಿಸ್ತೀರ್ಣ ೨,೦೧೭ ಚ.ಕಿ.ಮೀ. ಬನವಾಸಿ, ಸಂಪ ಖಂಡ, ಹುಲೇಕಲ್ಲು, ಶಿರಸಿ ಇವು ಈ ತಾಲ್ಲೂಕಿನ ಹೋಬಳಿಗಳು. ತಾಲ್ಲೂಕಿನ ಪೂರ್ವ ಭಾಗ ಹೆಚ್ಚು ಸಮತಟ್ಟಾಗಿದ್ದು ಅಪರೂಪದ ಕೆಲವು ಗುಡ್ಡಗಳಿವೆ.

ಸಹ್ಯಾದ್ರಿ ಬೆಟ್ಟಗಳ ಪರಿಸರವಾಗಿರುವುದರಿಂದ "ನಿತ್ಯ ಹರಿದ್ವರ್ಣ" ಕಾಡುಗಳನ್ನು ಹೊಂದಿರುವ ಸ್ಥಳವಾಗಿದೆ. ವಾರ್ಷಿಕ ಸರಾಸರಿ ಮಳೆ ೨,೧೨೯ ಮಿ.ಮೀ. ಬೇಸಿಗೆ ಮತ್ತು ಮಳೆಗಾಲದಲ್ಲಿ ಹವೆ ಉತ್ತಮವಾಗಿದ್ದು, ಚಳಿಗಾಲದಲ್ಲಿ ಸಹ್ಯವೆನಿಸುವುದು.

ನದಿಗಳು: ಶಿರಸಿ ತಾಲ್ಲೂಕಿನ ಆಗ್ನೇಯದ ಗಡಿಯಲ್ಲಿ **ವರದಾನದಿ** ಹರಿಯುತ್ತದೆ. ಶಿರಸಿ ಹತ್ತಿರ ಅಘನಾಶಿನಿ ನದಿಯು ಹುಟ್ಟಿ, ಸ್ವಲ್ಪ ದೂರ ದಕ್ಷಿಣಾಭಿಮುಖವಾಗಿ ಹರಿದು ಸಿದ್ದಾಪುರ ತಾಲ್ಲೂಕು ಪ್ರವೇಶಿಸಿ, ಪಶ್ಚಿಮಾಭಿಮುಖವಾಗಿ, ಕುಮುಟಾ ತಾಲ್ಲೂಕಿನ ಮುಖಾಂತರ ಅರಬ್ಬೀ ಸಮುದ್ರ ಸೇರುತ್ತದೆ. ಶಾಲ್ಮಲಿ ನದಿ ಹಾಗೂ ಅನೇಕ ಐತಿಹಾಸಿಕ ಕೆರೆ ಕಟ್ಟೆಗಳು, ಬಾವಿ, ಪುಷ್ಕರಣಿ ಇನ್ನಿತರ ಜಾಲತಾಣಗಳಿಂದಾಗಿ ಜಲ ಸಂವೃದ್ಧಿಯ ಪ್ರದೇಶವೆನಿಸಿದೆ. ಹೀಗಾಗಿಯೇ ಶ್ರೀಗಂಧ, ತೇಗ, ಬೀಟೆ ಮುಂತಾದ ಅಮೂಲ್ಯ ಮರಗಳು ಇಲ್ಲಿ ಬೆಳೆಯುತ್ತವೆ.

ಬನವಾಸಿಯ ನೀರ್ದಾಣಗಳು : ಶಿರಸಿ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಕದಂಬರ ರಾಜಧಾನಿ. ಕಸಬೆಯಿಂದ ಆಗ್ನೇಯಕ್ಕೆ ಸುಮಾರು ೨೨ ಕಿ.ಮೀ. ದೂರದಲ್ಲಿ ವರದಾ ನದಿಯ ಎಡದಂಡೆಯ ಮೇಲೆ ಇದೆ. ಕನ್ನಡನಾಡಿನ ರಾಜಕೀಯ, ಇತಿಹಾಸ, ಸಂಸ್ಕೃತಿಗಳ ದೃಷ್ಟಿಯಿಂದ ಬನವಾಸಿಯು "ಕರ್ನಾಟಕದ ಮೊದಲ ದೊರೆಗಳ ರಾಜಧಾನಿ". ಪೌರಾಣಿಕ ಯುಗದಲ್ಲಿ ಇದನ್ನು ವೈಜಯಂತಿ ಎಂದು ಕರೆಯಲಾಗಿದೆ. ಶಾತವಾಹನರ ಕಾಲ ಕ್ರಿ.ಶ. ೧-೨ನೇ ಶತಮಾನದಲ್ಲಿ

ನಿರ್ಮಿಸಲಾಗಿದ್ದ ಕೋಟೆಯ ಸುತ್ತ ಆಳವಾದ ಕಂದಕವಿದೆ. ಪಕ್ಕದಲ್ಲಿಯೇ ಹರಿಯುವ ವರದಾ ನದಿಯಿಂದ ಅಗೆದ ಕಾಲುವೆಗಳಿಂದ ಕಂದಕಕ್ಕೆ ನೈಸರ್ಗಿಕವಾಗಿ ಹರಿಯುವ ನೀರನ್ನು ಹಾಯಿಸಿ, ಕೋಟೆ ಸಂರಕ್ಷಣೆಗೆಂದು ಬಳಸಿದ್ದ ಜಲ ತಂತ್ರಜ್ಞಾನದ ಕುರುಹುಗಳು ಈಗಲೂ ಕಂಡು ಬರುತ್ತವೆ. ಈಗಿನ ಮಧುಕೇಶ್ವರ ದೇವಸ್ಥಾನದಿಂದ ೧ ಕಿ.ಮೀ. ದೂರದಲ್ಲಿ ಆದಿ ಮಧುಕೇಶ್ವರ ದೇವಸ್ಥಾನದ ಬಳಿ ಇರುವ ವಿಶಿಷ್ಟ ತೀರ್ಥವು ವಿಜಯನಗರ ಕಾಲದ ನಿರ್ಮಾಣವಾಗಿದೆ.

ಐತಿಹಾಸಿಕ ವಿವರಗಳು: ಸಾಮಾನ್ಯವಾಗಿ ಹೆಚ್ಚಿನ ಎಲ್ಲ ಶಾಸನಗಳಂತೆ ಈ ಶಾಸನದಲ್ಲಿಯೂ ಇಲ್ಲಿಯ ಸ್ಥಳೀಯ ದೇವತೆಯಾದ ಶ್ರೀ ಹರಿಹರೇಶ್ವರನ ಸ್ತುತಿಯಿಂದ ಪ್ರಾರಂಭವಾಗುತ್ತದೆ. ನಂತರ ಭಾರತವನ್ನು ಜಂಬೂ ದ್ವೀಪವೆಂತಲೂಕರೆದು ಸಂಪ್ರದಾಯದಂತೆ ಈ ಭಾಗವನ್ನು "ಕುಂತಳ ದೇಶ" ಎಂದೂ ಕರೆಯಲಾಗಿದೆ. ಕುಂತಲ ದೇಶವನ್ನು ಈ ಮೊದಲು ಆಳಿದ ಅನೇಕ **ಚಾಳುಕ್ಯ ಚಕ್ರವರ್ತಿಗಳು** ಗತಿಸಿದ ಮೇಲೆ **ರಾಷ್ಟ್ರಕೂಟರು** ಆಳುತ್ತಿದ್ದ ಭೂಮಿಯನ್ನು ಸೆಳೆದುಕೊಂಡ ರಣಭಯಂಕರನೂ ಶೂರನೂ ಆದ **ತೈಲಪನು** ತನ್ನ ***ಚಾಳುಕ್ಯವಂಶ***ವನ್ನು ಉದ್ಧರಿಸಿದನು. ಅವನ ***ಮಗ*** ವರ್ಧಿಷ್ಣುವಾದ **ಸತ್ಯಾಶ್ರಯ**ನು ಪಟ್ಟವೇರಿದನು. ನಂತರ ಅವನ ***ತಮ್ಮನ ಮಗ ವಿಕ್ರಮಾಂಕನು*** ಸಿಂಹಾಸನವೇರಿದ. ಇವನ ನಂತರ, ಇವನ ***ತಮ್ಮ*** **ಅಯ್ಯಪ**ನು ರಾಜ್ಯವಾಳಿದ. ಕುಂತಳ ದೇಶವನ್ನು ಆಳಿದವನು ಅಯ್ಯಪನ **ತಮ್ಮನಾದ ಜಯಸಿಂಹ**. ಈ ಭೂಮಂಡಲವೆಲ್ಲಾ "ಏಕ ಭಾಗ್ಯವೋ" ಎನ್ನುವಂತೆ ಜಯಸಿಂಹನ ***ಮಗ* ಆಹವಮಲ್ಲನು** ನಿಶ್ಚಿಂತೆಯಿಂದ ರಾಜ್ಯವನ್ನು ಆಳಿದ. ನಂತರ ಬಂದ **ಸೋಯಿದೇವ** ಆಹವ ಮಲ್ಲನ ***ಮಗ***. ತನ್ನ ಭುಜ ಬಲ ಪರಾಕ್ರಮದಿಂದ ಮಗಧ, ಚೋಳ, ನೇಪಾಳ, ರಾಜ್ಯಗಳನ್ನು ಗೆದ್ದ **ವಿಕ್ರಮಾಂಕ** ಆಹವ ಮಲ್ಲನ ***ತಮ್ಮ***. ಸಕಲ ಕಲೆಗಳನ್ನೂ ತಿಳಿದವನೂ ಯುದ್ಧದಲ್ಲಿ ವಿಜಯಶಾಲಿಯೂ ಆಗಿ ಭೂ ಚಕ್ರದ ಭಾರವನ್ನು ಹೊತ್ತುಕೊಂಡವನು. ***ಚಕ್ರವರ್ತಿ ಭೂಲೋಕಮಲ್ಲನು*** *ವಿಕ್ರಮಾಂಕ ರಾಜನ* ***ಮಗ***. ಇವನ ***ಮಗ*** ಮಾಳವ, ಪಲ್ಲವ, ಲಾಟ, ಕಳಿಂಗ ದೇಶದ ರಾಜರುಗಳನ್ನು ಗೆದ್ದಿದ್ದ ವಿಶೇಷ ಪರಾಕ್ರಮಿಯಾದ **ಜಗದೇಕಮಲ್ಲ**. ಈ ಚಕ್ರವರ್ತಿಯ ***ತಮ್ಮ*** ನಿತ್ಯಶೂರನೆಂದು ಕೀರ್ತಿತನಾದ **ನೂರ್ಮಡಿ ತೈಲ**. ನೂರ್ಮಡಿ ತೈಲಪನ ಕಾಲದಲ್ಲಿ ಚಾಳುಕ್ಯ ರಾಜಧಾನಿಯ ದಕ್ಷಿಣ ಸಮುದ್ರ ಹಾಗೂ ಉತ್ತರಕ್ಕೆ ಇದ್ದ ಭೂಮಿಯನ್ನು ಬಿಜ್ಜಳನು ಸ್ವಾಧೀನಪಡಿಸಿಕೊಂಡನು. ಈ ರಾಜನ ಪಾದ ಸೇವಕನೂ ಶತ್ರುಗಳ ಬಾಧೆಯನ್ನು ತೊಡೆದು ಹಾಕಿದವನೂ ಆದ "ಕಸಪಯ್ಯ ನಾಯಕ". ಈ ***ಕಸಪಯ್ಯ ನಾಯಕನು ಬನವಾಸಿ ಹನ್ನೆರಡು ಸಾವಿರವನ್ನು ಆಳುತ್ತಿದ್ದಾಗ*** ಈ ಲೇಖನದಲ್ಲಿ ವಿವರಿಸಲಾಗಿರುವ ದಾವಣಗೆರೆ ಶಾಸನ ಸಂಖ್ಯೆ ೬೬ ಸು. ಕ್ರಿ.ಶ. ೧೧೬೦ರ ಆಧಾರದ ಮೇಲೆ ಬನವಾಸಿ ನಾಡಿನ ವರ್ಣನೆಯ ತಕ್ಕ ಮಟ್ಟಿನ ವಿವರಣಾತ್ಮಕ ಮಾಹಿತಿಯನ್ನು ಇಂದಿನ ಆಲೋಚನೆಗಳಿಗೆ ಹೋಲಿಸಿ ಬರೆಯಲಾಗಿದೆ.

ಇಲ್ಲಿಂದ ಮುಂದೆ ಬನವಾಸಿಯನ್ನು ನಾಗರಖಂಡ ಮಂಡಲ ಎಂದು ಹೇಳಿ ಅದನ್ನು ಆಳುತ್ತಿದ್ದ ಕದಂಬ ವಂಶದ ಸೋಮರಾಜನ ಮೂಲ ಚೂಲಗಳನ್ನು ಶಾಸನವು ವಿವರಿಸುತ್ತದೆ. ಭೂಮಿ ಆಕಾಶ ಒಂದಾಗುವಂತೆ ಹಬ್ಬಿ ಬೆಳೆದ ಕದಂಬ ವೃಕ್ಷಗಳ ನೆರಳಿನಲ್ಲಿಯೇ ಹುಟ್ಟಿ ಬೆಳೆದವನು "ಮುಕ್ಕಣ್ಣ ಕದಂಬ **ಮಯೂರ ವರ್ಮ**". ಮಯೂರ ವರ್ಮನಶೌರ್ಯವನ್ನು ಈ ಶಾಸನಕವಿ ಕೊಂಚ ಭಿನ್ನವಾಗಿಯೇ ಚಿತ್ರಸಿದ್ದಾನೆಂದೆನಿಸುತ್ತದೆ. ಶಿವನಗೆ ಹಣೆಯಲ್ಲಿ ಉರಿಗಣ್ಣು ಇದ್ದರೆ, ಈ ರಾಜನಗೆ ರಾಜಪಟ್ಟವು ಅದನ್ನು ಮರೆಮಾಡುವುದೆಂದು ಹಣೆಗೆ ಪಟ್ಟ ಕಟ್ಟದೇ, ಸದುದ್ದೇಶದಿಂದ ಅದನ್ನು ಜಾನು(ಮಂಡಿಗೆ)ವಿಗೆ ಶೋಭಿಸುವಂತೆ ಕಟ್ಟಿದ್ದಾರೆ ಹೀಗಾಗಿ ಶತ್ರುಗಳು ಅವನ ಪಾದಗಳಿಗೆ ಎರಗುತ್ತಿದ್ದಾರೆ.

ಶಾಸನ ಸಾಲು: *ನೊಸಲೊಲುರಿಗಣ್ ಆವಂಗುದಿಯಿಸೆ "ಮರೆಯೆಂದ್ದಲ್ಲಿ ಪಟ್ಟಮಂ ಕಟ್ಟದೆ ಜಾನ ಸಮುದ್ದೇಶದೊಳಂತದ ನೆಸೆದಿರೆ" ಕಟ್ಟಿದರೆನಲ್ಕೆ ಅದಿನ್ನೇವೊಗಳ್ವೆಂ (೨೬ನೇ ಸಾಲು)*

ಮಯೂರ ವರ್ಮನ ಅನಂತರ ಆ ವಂಶದಲ್ಲಿ ಅನೇಕ ರಾಜರು ಕಳೆದು ಹೋದರು. ಈ ಮೊದಲು ಆಗಿಹೋದ ರಾಜರನ್ನು ಧಿಕ್ಕರಿಸಿ ಮತ್ತೆ ಪ್ರಸಿದ್ಧಿಗೆ ಬಂದವನು **ಬರ್ಮದೇವ**. ಇವನ ***ಹೆಂಡತಿ*** ಕಲೆಗಳ ನಿಧಿಯಾದ **ಕಾಲಳದೇವಿ**. ಇವರಿಬ್ಬರಿಗೆ ಹುಟ್ಟಿದ ***ಮಗ* ಬೊಪ್ಪದೇವ**. ಈತನ ***ಹೆಂಡತಿ* ಸಿರಿದೇವಿ**. ಇವರ ***ಮಗ* ಸೋಯಿದೇವ**. ಈತನು ಉದಾರಿಯೂ ಸಂಗೀತ ಪ್ರಿಯನೂ ಆಗಿದ್ದನೆಂದು ಶಾಸನವು ಹೇಳುತ್ತದೆ.

ಶಾಸನದ ಛಂದೋರೂಪ: ನಮ್ಮ ನಾಡಿನ ಹಿರಿಯ ವಿದ್ವಾಂಸರಲ್ಲಿ ಒಬ್ಬರಾಗಿದ್ದು, ಒಂದು ದೇವಾಲಯವನ್ನು ಕುರಿತಾಗಿ ಶಾಸನೋಕ್ತ ಇತಿಹಾಸವನ್ನು ಮೊದಲು ರಚಿಸಿ ಉಪಕರಿಸಿದವರು ನಮ್ಮೂರಿನ ಹಾಗೂ ನಮ್ಮ ಅಜ್ಜಿಯ ಹಿರಿಯ ಸೋದರರ ಪುತ್ರ ಪ್ರೊ. ಹೆಚ್.ಎಂ. ಶಂಕರ ನಾರಾಯಣ ರಾಯರು. ಅವರು ರಚಿಸಿರುವ ಶ್ರೀ ಹರಿಹರದೇವಾಲಯ ಪುಸ್ತಕದಿಂದ (ಪು. ೨೦೬) ಆಯ್ದ ಈ ಭಾಗವನ್ನು ಓದುಗರ ಗಮನಕ್ಕಾಗಿ ನೀಡುತ್ತಿದ್ದೇನೆ.

ಶಾಸನದ ಕೊನೆಯ ಭಾಗ ತ್ರುಟಿತವಾಗಿದ್ದು, ಇಲ್ಲಿರುವ ಪದ್ಯಗಳ ಛಂದಸ್ಸಿನ ರೂಪ ಹೀಗಿದೆ. ಗುರುತಿಸಿರುವ ಪದ್ಯಗಳು ಒಟ್ಟು ೩೯. ಈ ಪದ್ಯಗಳಲ್ಲಿ ಸ್ತೋತ್ರರೂಪವಾದ ಒಂದೇ ಒಂದು ಸಂಸ್ಕೃತ ಶ್ಲೋಕವಿದೆ. ಉಳಿದ ಪದ್ಯಗಳ ಹಂಚಿಕೆ ಹೀಗಿದೆ. ಕಂದ ೧೬, ಉತ್ಪಲ ೫, ಮತ್ತೇಭ ೨, ಮಹಾಸ್ರಗ್ಧರೆ ೭, ಚಂಪಕ ೮. ಶಾರ್ದೂಲ, ಸ್ರಗ್ಧರೆಗೆ ಇಲ್ಲಿ ಎಡೆ ಸಿಕ್ಕಿಲ್ಲ. ಕಂದವಂತೂ ಸರಿಯೆ, ಮಹಾಸ್ರಗ್ಧರೆಯ ಬೀಸು ಕವಿಯ ಮನಸ್ಸನ್ನು ಸೆರೆ ಹಿಡಿದಿರುವಂತೆ ತೋರುತ್ತದೆ. ೩೫ನೆಯ ಪದ್ಯವಾದ ಮೇಲೆ ಬರುವ ಗದ್ಯಭಾಗದಲ್ಲಿ ಪದ್ಯಗಳಿರುವಂತೆ ತೋರುತ್ತದೆ.

ಸಾರಾಂಶ: ಮಲೆನಾಡಿನ "ಬನವಾಸಿ ನಾಡ" ಬಣ್ಣನೆ ಇಂದಿನ ಬಯಲು ಸೀಮೆ, ಹಿಂದೆ ರಕ್ಷಣೆಯ ಆಯ ಕಟ್ಟಿನ ಸ್ಥಾನವೂ ಆಗಿದ್ದ ಹರಿಹರದ ಶಾಸನಾಕ್ಷರಗಳಲ್ಲಿಯೂ ಮೂಡಿ ಬಂದಿರುವುದು ಒಂದು ವಿಶೇಷವೇ ಸರಿ. ಬನವಾಸಿ ನಾಡು, ಬನವಾಸಿ ಹನ್ನೆರಡು ಸಾವಿರ, ನಾಗರ ಖಂಡ ಮಂಡಲಗಳೆಂದು ಕರೆದಿರುವುದಷ್ಟೇ ಅಲ್ಲದೇ ಸು.ಕ್ರಿ.ಶ. ೧೧೬೦ ಹರಿಹರದ ಈ ಭಾಗವು ಕಲ್ಯಾಣದ ಚಾಲುಕ್ಯರ ಅರಸನಾದ ಬಿಜ್ಜಳನ ಸಾಮಂತನಾಗಿದ್ದ **"ಕಸಪಯ್ಯ ನಾಯಕನು"** ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ. ಅದೇ ಕಾಲದಲ್ಲಿ ಬನವಾಸಿಯ ಅಥವಾ ನಾಗರ ಖಂಡ ಮಂಡಲವನ್ನು ಸೋಮರಾಜನು ಆಳುತ್ತಿದ್ದನೆಂದು ಹೇಳುತ್ತದೆ.

ಕಳವೆ ಹಾಗೂ ಗಂಧಶಾಲಿ ಎನ್ನುವ ಎರಡು ರೀತಿಯ ಸೌಗಂಧವನ್ನು ಭೂಮಿ ಆಕಾಶದವರೆಗೂ ಬೀರುವ ಭತ್ತದ ಗದ್ದೆಗಳು, ಕದಂಬ, ಅಶೋಕ, ತೆಂಗು, ವಿಶೇಷ ಜಾತಿಯ ಹಲಸು, ಅಡಿಕೆ ವಿವಿಧ ಜಾತಿಯ ಹೂವುಗಳನ್ನೊಳಗೊಂಡಿದ್ದು, ಸೂರ್ಯನ ಕಿರಣಗಳು ಭೂಮಿಯನ್ನು ಮುಟ್ಟದಿರುವಂತೆ ಹಬ್ಬಿರುವ ನಿತ್ಯಹರಿದ್ವರಣ ಕಾಡುಗಳಿಂದಾಗಿ ಇಲ್ಲಿಯ ಪರಿಸರ ಅತ್ಯಂತ ಸ್ವಚ್ಛವಾಗಿದ್ದು ಮನಸ್ಸಿಗೆ ಮುದವನ್ನು ಕೊಡುತ್ತವೆ. ಹೀಗಾಗಿಯೇ ಮಲೆನಾಡಿನ ಈ ಭಾಗಗಳನ್ನು *"world's* buttor *spong"* ಎಂದು ಪ್ರಪಂಚದ ಪರಿಸರ ವಿಜ್ಞಾನಿಗಳು ಕರೆದಿರುತ್ತಾರೆ.

ಈ ಮೇಲಿನ ಕಾರಣಗಳಿಂದಾಗಿ ಹರಿಹರದ ಶಾಸನಗಳು ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ, ವಿಜ್ಞಾನ ವಿಶೇಷಗಳಷ್ಟೇ ಆಕರವಾಗಿರದೇ ಶತ ಶತಮಾನಗಳಿಂದಲೂ ಕಾರ್ಯಸಿದ್ಧಿಯ ಕ್ಷೇತ್ರವೂ ಆಗಿದೆ ಎನ್ನುವುದನ್ನು ಈ ಶಾಸನವು ಎತ್ತಿ ತೋರಿಸುತ್ತಿದೆ.

ಆಕರ ಗ್ರಂಥಗಳು

೧. ಚಿತ್ರದುರ್ಗ ಜಿಲ್ಲೆ ಶಾಸನ ಸಂಪುಟ ಸಂ. ೧೧, ಬಿ.ಎಲ್. ರೈಸ್, ದಾವಣಗೆರೆ ತಾಲ್ಲೂಕು, ಪು. ೧೬೩ ದಾ. ೬೬ ಸು. ಕ್ರಿಶ. ೧೧೬೦.

೨. ಡಾ. ಬಿ.ಪಿ. ರಾಧಾಕೃಷ್ಣ ಅವರ "ಅಂತರ್ಜಲ" ಪು. ೫೫ ರಿಂದ ೬೨.

೩. ಪ್ರೊ. ಹೆಚ್.ಎಂ. ಶಂಕರ ನಾರಾಯಣರಾಯರು ಅವರು ರಚಿಸಿರುವ ಶ್ರೀ ಹರಿಹರ ದೇವಾಲಯ, ಪು. ೨೦೬.

೪. ಚಿತ್ರಗಳು ಅನೇಕ ಅಂತರ್ ಜಾಲತಾಣಗಳು

೬೮

ಕುರುಬರಿಗೆ ಸಂಬಂಧಿಸಿದ ಶಾಸನೋಕ್ತ ವ್ಯಕ್ತಿನಾಮಗಳು

ಎಫ್.ಟಿ. ಹಳ್ಳಿಕೇರಿ*

ಒಬ್ಬ ವ್ಯಕ್ತಿಯ ಅಸ್ತಿತ್ವನ್ನು ಪ್ರತ್ಯೇಕವಾಗಿ ಗುರುತಿಸುವಲ್ಲಿ "ಹೆಸರು"ಗಳು ಬಹುಮುಖ್ಯ ಸಾಧನಗಳಾಗಿವೆ. ಆ ಹೆಸರುಗಳಿಂದ ಆಯಾ ವ್ಯಕ್ತಿಯ ವ್ಯಕ್ತಿತ್ವ (Personolity) ಮತ್ತು ಅಸ್ಮಿತೆ (Identity)ಯನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ಹೀಗಾಗಿ ವ್ಯಕ್ತಿನಾಮಗಳೂ ಸಹ ಸಮಾಜ-ಸಂಸ್ಕೃತಿ ಅಧ್ಯಯನ(Culture Study)ಕ್ಕೆ ಸಾಕಷ್ಟು ವಿಷಯಗಳನ್ನು ಒದಗಿಸಿಕೊಡುತ್ತವೆ. ಆಧುನಿಕಪೂರ್ವದ ವ್ಯಕ್ತಿನಾಮಗಳ ಅಧ್ಯಯನಕ್ಕೆ ಕಾವ್ಯ-ಪುರಾಣಗಳು, ಶಾಸನ-ಕೈಫಿಯತ್ತುಗಳಂಥ ಸಾಮಗ್ರಿಗಳು ಬಹುಮುಖ್ಯ ಆಕರಗಳಾಗಿವೆ.

ವ್ಯಕ್ತಿನಾಮಗಳ ಅಧ್ಯಯನಕ್ಕೆ ಸುದೀರ್ಘವಾದ ಇತಿಹಾಸವೇನೂ ಇಲ್ಲ. ರಾಚಣ್ಣ ರುದ್ರಪ್ಪ ಕುಪ್ಪಸದ (ನಮ್ಮ ನಿಮ್ಮ ಹೆಸರುಗಳು-೧೯೫೯), ಎಂ. ಚಿದಾನಂದಮೂರ್ತಿ (ವ್ಯಕ್ತಿನಾಮಗಳು-೧೯೮೧), ಎಂ.ಎಂ. ಕಲಬುರ್ಗಿ (ಕನ್ನಡ ನಾಮವಿಜ್ಞಾನ-೧೯೮೯), ಕೆ.ವಿ. ನಾರಾಯಣ (ವ್ಯಕ್ತಿನಾಮಗಳು-೨೦೦೦), ಎಸ್.ಎಸ್. ಅಂಗಡಿ (ಕುರುಬ ಸಮುದಾಯದ ಭಾಷೆ-೨೦೦೯)-ಹೀಗೆ ಕೆಲವು ವಿದ್ವಾಂಸರು ವ್ಯಕ್ತಿನಾಮಗಳ ಕುರಿತು ಅಧ್ಯಯನ ಮಾಡಿದ್ದಾರೆ. ವ್ಯಕ್ತಿನಾಮಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದವರಲ್ಲಿ ಚಿದಾನಂದಮೂರ್ತಿ ಅವರು ಮೊದಲಿಗರು. ಅವರ 'ಕರ್ನಾಟಕದ ವ್ಯಕ್ತಿನಾಮಗಳು' ಎಂಬ ಲೇಖನ ಈ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರಿಗೊಂದು ದಿಕ್ಸೂಚಿಯಾಗಿದೆ. ಹಾಗೆಯೇ ಎಂ.ಎಂ. ಕಲಬುರ್ಗಿ ಅವರು ವ್ಯಕ್ತಿನಾಮಗಳನ್ನು ವಿವಿಧ ಆಯಾಮಗಳಿಂದ ಗುರುತಿಸುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಭಾಷಾಭಿವೃದ್ಧಿ ಅಧ್ಯಯನ ವಿಭಾಗವು ವ್ಯಕ್ತಿನಾಮಗಳ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಿ, ಅಲ್ಲಿ ಮಂಡಿತವಾದ ಸಂಪ್ರಬಂಧಗಳನ್ನು "ವ್ಯಕ್ತಿನಾಮಗಳು: ಸ್ವರೂಪ-ವಿಶ್ಲೇಷಣೆ" ಹೆಸರಿನಲ್ಲಿ ಪುಸ್ತಕ ಪ್ರಕಟಿಸಿರುವುದು ಗಮನಿಸತಕ್ಕ ಸಂಗತಿಯಾಗಿದೆ.

ವ್ಯಕ್ತಿನಾಮದಲ್ಲಿ ಪುರುಷನಾಮ ಮತ್ತು ಸ್ತ್ರೀನಾಮ ಎಂದು ಎರಡು ಪ್ರಕಾರಗಳು. ಸ್ಥಳನಾಮಗಳಂತೆ ವ್ಯಕ್ತಿನಾಮಗಳಲ್ಲಿಯೂ ಎರಡು (ಪೂರ್ವ-ಉತ್ತರ) ಭಾಗಗಳನ್ನು ಗುರುತಿಸಬಹುದು. ಒಂದು ನಿರ್ದಿಷ್ಟ (Generic), ಮತ್ತೊಂದು ವಾರ್ಗಿಕ (Generic). ಉದಾಹರಣೆಗಾಗಿ ಸೋಮ + ಅಪ್ಪ = ಸೋಮಪ್ಪ, ಸರೋಜ + ಅಮ್ಮ + ಸರೋಜಮ್ಮ ಇತ್ಯಾದಿ. ಇಂಥ ವ್ಯಕ್ತಿನಾಮಗಳನ್ನು ದೈವವಾಚಿ, ಜನಾಂಗವಾಚಿ, ವೃತ್ತಿವಾಚಿ, ಪೂರ್ವಜರವಾಚಿ ಎಂದು ನಾನಾ ರೀತಿಯಲ್ಲಿ ವಿಂಗಡಿಸಬಹುದು. ಒಟ್ಟಿನಲ್ಲಿ "ಹೆಸರು ಕೇವಲ ಹೆಸರಲ್ಲ. ಅವು ನಮ್ಮ ಸಂಸ್ಕೃತಿಯ ಪ್ರತೀಕಗಳು. ಅಖಂಡ ಮಾನವಸಂಸ್ಕೃತಿಯ ಘಟಕಗಳು" (ಕನ್ನಡ ನಾಮವಿಜ್ಞಾನ-ಪು. ೩೬).

ಕುರುಬ(ಹಾಲುಮತ)ರು ಈ ದೇಶದ ಮೂಲನಿವಾಸಿಗಳು ಎಂದು ಹೆಸರಾದವರು. ಇದಕ್ಕೆ ಈಗಲೂ ಆ ಸಮುದಾಯದ ಪಾರಂಪರಿಕ ಕಲೆಗಳು ನಂಬಿಕೆಗಳು ಐತಿಹ್ಯಗಳು, ಕಥನಗಳು, ಲಿಖಿತ ಆಕರಗಳು ಸಾಕ್ಷಿ. ಕುರುಬ ಜನಸಮುದಾಯದ ವ್ಯಕ್ತಿನಾಮಗಳು ವೈವಿಧ್ಯಪೂರ್ಣ ಮತ್ತು ವಿಶಿಷ್ಟತೆಯನ್ನು ಒಳಗೊಂಡಿವೆ. ಆಧುನಿಕ ಕಾಲದಲ್ಲಿಯೂ ಬೀರಪ್ಪ, ಮಾಳಪ್ಪ, ರೇವಣ್ಣ, ಇಟ್ಟಪ್ಪ, ಸಿದ್ಧಪ್ಪವೊಡೆಯರು ಇಂಥ ಹೆಸರುಗಳನ್ನು ಕೇಳಿದ ಕೂಡಲೇ ಆ ವ್ಯಕ್ತಿಗಳು ಕುರುಬರು ಎಂಬುದು ತಟ್ಟನೆ ಗೊತ್ತಾಗುತ್ತದೆ. ಕುರುಬರ ವ್ಯಕ್ತಿನಾಮಗಳನ್ನು ಕುರಿತಂತೆ ಸ್ವತಂತ್ರವಾಗಿ ಸಂಶೋಧನೆ ಮಾಡುವಷ್ಟು ಆಕರಗಳು ನಮ್ಮ ಮುಂದಿವೆ. ಎಸ್.ಎಸ್. ಅಂಗಡಿ ಅವರು ಕುರುಬರ ಹೆಸರುಗಳು (ಕುರುಬರ ಸಮುದಾಯದ ಭಾಷೆ) ಎಂಬ ಲೇಖನವನ್ನು ಪ್ರಕಟಿಸಿದ್ದಾರೆ.

ಅಧ್ಯಯನದ ಅನುಕೂಲಕ್ಕಾಗಿ ಶಾಸನೋಕ್ತ ಕುರುಬರ ವ್ಯಕ್ತಿನಾಮಗಳನ್ನು ೧. ದೈವವಾಚಿ, ೨. ವೃತ್ತಿವಾಚಿ, ೩. ಜನಾಂಗ(ಜಾತಿ)ವಾಚಿ, ೪. ಪೂರ್ವಜರವಾಚಿ ಎಂದು ವಿಂಗಡಿಸಬಹುದು.

* ಪ್ರಾಧ್ಯಾಪಕರು, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬. ಮೊ. ೯೪೪೮೧೮೪೦೨೨

೧. ದೈವವಾಚಿ

ಮೂಲತಃ ಕುರುಬರು ದೈವಾರಾಧಕರು, ಹಾಗಾಗಿಯೇ ಕುರುಬರ ಓಣಿ–ಮಠ–ಮನೆಗಳಲ್ಲಿ ಬೀರದೇವರು, ರೇವಣಸಿದ್ಧೇಶ್ವರ, ಮಾಳಿಂಗರಾಯ, ಇಟ್ಟಪ್ಪ, ಸಿದ್ಧರಾಮೇಶ್ವರ, ಮಾಯಮ್ಮ ಇತ್ಯಾದಿ ದೈವಗಳ ಹೆಸರಿನಲ್ಲಿ ದೇವಾಲಯ–ಗದ್ದುಗೆ–ಮಂದಿರಗಳಿರುವುದನ್ನು ಈಗಲೂ ನಾವು ನೋಡಬಹುದು.

೧. ರೇವಣ್ಣವೊಡೆಯ : ರೇವಣಸಿದ್ಧೇಶ್ವರ ಕುರುಬರ ಪರಮ ಗುರು. ಈತನ ಪರಂಪರೆಯನ್ನು ಮುಂದುವರೆಸಿಕೊಂಡು ಬಂದವರು ಕುರುಬ ಕುಲದ ಒಡೆಯರು. ಇವರು ರೇವಣಸಿದ್ಧೇಶ್ವರ ಮಠದ ಗುರುಗಳಾಗಿ–ಅಧಿಪತಿ–ಸ್ವಾಮೀಜಿಯವರಾಗಿ ನೇಮಕಗೊಂಡಿರುತ್ತಾರೆ. ಇತರೆ ಕುರುಬರು ಭಕ್ತರಾಗಿರುತ್ತಾರೆ. ಹೀಗಾಗಿ ಈತನ ಹೆಸರನ್ನು ಒಡೆಯರಿಗೆ, ಕುರುಬ ವ್ಯಕ್ತಿಗಳಿಗೆ ಇಟ್ಟಿರುವುದನ್ನು ಈಗಲೂ ಆ ಜನಸಮುದಾಯದಲ್ಲಿ ಗುರುತಿಸಬಹುದು. ಶಾಸನಗಳಲ್ಲಿ ರೇವಣ್ಣ, ಸಿದ್ಧಯ್ಯ, ರೇವಣ್ಣವೊಡೆಯ, ಸಿದ್ಧಪ್ಪವೊಡೆಯ ಮುಂತಾದ ಹೆಸರುಗಳು ಉಕ್ತವಾಗಿವೆ.

ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲೂಕಿನ ಕೊಟ್ಟೂರು (ಈಗ ತಾಲೂಕು ಕೇಂದ್ರ ಎಂದು ಘೋಷಣೆಯಾಗಿದೆ) ಗ್ರಾಮದ ಕರಣಿಕರ ಮನೆಯ ಮುಂದಿರುವ ಶಿಲಾಶಾಸನ(SII-ix, part-ii, No:685)ವು ಬಾಗುಳಿಯ ಮಾಚಿನಾಯಕನ ಮಗನಾದ ಮಾದಿನಾಯಕನು–

"ಕೊಟ್ಟೂರು ಸೀಮೆಯ ಕುರುಬಕುಲದ ಸಿದ್ಧಪ್ಪವೊಡೆಯರ ಮಕ್ಕಳು ಸಿದ್ಧಪ್ಪವೊಡೆಯರಿಗೂ ಅಳಿಯ ರೇವಂಣವೊಡೆಯರಿಗೂ ಅಚ್ಯುತಪ್ಪ ವೊಡೆಯರಿಗೆ ಉ.......ವೆಯ ಲಿಂಗಂಣವೊಡೆಯರಿಗೂ ಬಾಗುಳಿಯ ಗೋಪಣಗಲುಡನ ಮಗ ಚಿಕ್ಕಣಗೌಡ ಗುರುವಗೌಂಡ ಯಿವರು ಮುಂತಾದ ಕೊಟ್ಟೂರು ಸೀಮೆಯ ಸಮಸ್ತ ಕುರುಬ ಪ್ರಜೆಗಳಿಗೆ ಕೊಟ್ಟ ಧರ್ಮಶಾಸನ....ಅರಮನೆಗೆ ತೆರುವಂಥಾ ಕುರಿದೆರಿಗೆಯನು ....ಶ್ರೀ ಬಾಗಳಿಯ ಕಲ್ಲಿನಾಥದೇವರ ಸನ್ನಿಧಿಯಲ್ಲಿ ಮಾಂನ್ಯವ ಮಾಡಿ ಬಿಟ್ಟಂ..."

ಎಂದು ವಿವರಿಸುತ್ತದೆ. ಇಲ್ಲಿ ಉಕ್ತವಾದ ಹೆಸರುಗಳು ಕುರುಬ ಜನಾಂಗದ ಗುರುಗಳು ಹಾಗೂ ಮುಖಂಡರು. ಇವರಲ್ಲಿ ಕುರುಬ ಕುಲದ ಸಿದ್ಧಪ್ಪವೊಡೆಯ, ರೇವಣ್ಣವೊಡೆಯ ಎಂಬ ಎರಡು ಹೆಸರುಗಳು ರೇವಣಸಿದ್ಧೇಶ್ವರನನ್ನು ನೆನಪಿಸುತ್ತವೆ. ರೇವಣ್ಣ–ಸಿದ್ಧ ಎಂಬುವು ನಿರ್ಧಿಷ್ಟ, ಒಡೆಯ ಎಂಬುದು ವಾರ್ಗಿಕ. ನರ್ಧಿಷ್ಟವೆಂಬುದೇ ನಿಜವಾದ ವ್ಯಕ್ತಿನಾಮ. ಇದು ಏಕಘಟಕವಾಗಿರುತ್ತದೆ. ರೇವಣಸಿದ್ಧೇಶ್ವರ ಕುರುಬರ ಆರಾಧ್ಯ ದೈವ. ಈ ಹೆಸರಿನ ಸಂಕ್ಷಿಪ್ತರೂಪ ರೇವಣ್ಣ, ಸಿದ್ಧಪ್ಪ. ಕುರುಬರ ಮನೆತನಗಳಲ್ಲಿ ಒಬ್ಬರಿಗಾದರೂ ಈ ಹೆಸರುಗಳನ್ನಿಡುವ ಪದ್ಧತಿ ಈಗಲೂ ಕಾಣಬಹುದು. ಇನ್ನು ವಾರ್ಗಿಕಗಳು ಸಂಬಂಧವಾಚಿ–ವೃತ್ತಿವಾಚಿ–ಗೌರವವಾಚಿಗಳಾಗಿರುತ್ತವೆ. ಹೀಗಾಗಿ ಮೇಲೆ ಉಕ್ತವಾದ ಎರಡು ವಾರ್ಗಿಕ(ಒಡೆಯ)ಗಳು ವೃತ್ತಿವಾಚಿಗಳಾಗಿವೆ.

೨. ಶಾಂತಮುತ್ತಯ್ಯ : ಕುರುಬರ ಗುರುಪರಂಪರೆಯಲ್ಲಿ ರೇವಣಸಿದ್ಧೇಶ್ವರನ ನಂತರದ ಸ್ಥಾನ ಶಾಂತಮುತ್ತಯ್ಯನಿಗೆ ಸಲ್ಲುತ್ತದೆ. ತುರುವೆಕೆರೆಯ ತಾಮ್ರಶಾಸನ–೧(ತಗರ ಪವಾಡ ಪುಟ:೯)ವು ಶಾಂತಮುತ್ತಯ್ಯನೇ ಕುರುಬರ ಗುರು ಎಂದು ನಿರೂಪಿಸುತ್ತದೆ. ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರು ಕುರುಬರ ಪ್ರಾಚೀನವಾದ ಕ್ಷೇತ್ರ. ಇಲ್ಲಿ ಶಾಂತಮುತ್ತಯ್ಯನ ಸಮಾಧಿಯಿದೆ. ಆತನ ಹೆಸರಿನಲ್ಲಿ ಪ್ರತಿವರ್ಷ ಶ್ರಾವಣ ಹಾಗೂ ಶಿವರಾತ್ರಿಗಳಲ್ಲಿ ಪಲ್ಲಕ್ಕಿ ಉತ್ಸವ–ಜಾತ್ರೆ ಜರುಗುತ್ತವೆ. ಸಾವಿರಾರು ಕುರುಬರು ಸೇರಿದ ಈ ಸಂದರ್ಭದಲ್ಲಿ ಒಡೆಯರಿಂದ ಹೇಳಿಕೆಗಳಾಗುತ್ತವೆ. ರೇವಣಸಿದ್ಧ ಪರಂಪರೆಯ ಒಡೆಯರನ್ನು "ಶಾಂತೊಡೆಯರ ಸಂಪ್ರದಾಯ" ದವರು ಎಂದು ಕರೆಯುತ್ತಾರೆ. ಶಾಂತಮುತ್ತ ಎಂಬುದು ನಿರ್ಧಿಷ್ಟ ಪದ. ಅಯ್ಯ ಎಂಬುದು ವಾರ್ಗಿಕ ಪದ. ಅಯ್ಯ ಅಂದರೆ ಗುರು. ಈತ ಕುರುಬರಿಗೆ ಗುರುಗಳಾಗಿದ್ದರಿಂದ ಶಾಂತಮುತ್ತ + ಅಯ್ಯ ಎಂಬೆರಡು ಸೇರಿ ಶಾಂತಮುತ್ತಯ್ಯ ಎಂದಾಗಿದೆ. ಈಗಲೂ ಸಹ ಶಾಂತಮುತ್ತಯ್ಯ, ಶಾಂತೊಡೆಯರು, ಶಾಂತಪ್ಪ, ಶಾಂತೇಶ, ಶಾಂತಯ್ಯ, ಶಾಂತಕುಮಾರ ಎಂಬ ಹೆಸರಿನ ಕುರುಬ ವ್ಯಕ್ತಿಗಳನ್ನು ನೋಡಬಹುದು.

೩. ಸಿದ್ಧರಾಮೇಶ್ವರ – ಸಿದ್ಧಮಂಕಯ್ಯ : ಕುರುಬರ ಗುರುಪರಂಪರೆಯಲ್ಲಿ ಸೊಲ್ಲಾಪುರ ಸಿದ್ಧರಾಮೇಶ್ವರ ಸಂಪ್ರದಾಯವೂ ಒಂದು. ಈ ಸಂಪ್ರದಾಯದ ಮುಂದುವರಿಕೆಯಾಗಿ ಮಂಕೊಡೆಯರು ಸಿದ್ಧರಾಮೇಶ್ವರ ಮಠದ ಅಧಿಪತಿಯಾಗಿ, ಕುರುಬರಿಗೆ ಗುರುಗಳಾಗಿದ್ದಾರೆ. ಮಂಕ, ಮಂಕಯ್ಯ, ಮಂಕಸಿದ್ಧ, ಮಂಕಯ್ಯ ಎಂದು ಕರೆಯಲಾಗುತ್ತದೆ. ಶಾಂತೊಡೆಯರನ್ನು ಹೋಲಿಸಿದರೆ ಇವರ ಸಂಖ್ಯೆ ತುಂಬ ಕಡಿಮೆ. ಸರೂರ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿ ನೆಟ್ಟಿರುವ ಎರಡು ಶಿಲಾಶಾಸನ(SII-xv, No:158)ದಲ್ಲಿ ಮಂಕಯ್ಯನ ಬಗ್ಗೆ ಹೀಗೆ ಉಕ್ತವಾಗಿದೆ.

"ಮಂಕಯಂಗಳಿಗೆ ಮಲ್ಲಿನಾಥರಾಮವಂಬನು ಸಂನಿಧಾನದಲು...."

"ಅರಸನಹಳ್ಳಿಯ ವೀರನಗೌಡರ ಕೈಯಲು ಮಂಕಯ್ಯನು ಹೊಂನ ಕೊಟ್ಟು ಆ ಹೊಲದಲು.."

"ಹೊನಗುಂದದ ಬೀಚಗುರು ಮಂಕಯ್ಯನ ಕಾಲದಾ ಗುರುವಿಗೆ ಮಂಕಯನು ಮಲ್ಲಿನಾಥದೇವರ ಸ್ತಾನವ ಧಾರಾಪೂರ್ವಕ ಮಾಡಿಕೊಟ್ಟರು"

ಇನ್ನು ತುರುವೆಕೆರೆಯ ತಾಮ್ರಪತ್ರ(ತಗರ ಪವಾಡ ಪುಟ:೯)ದಲ್ಲಿ

"ಬೆಳಮಂಕ ಪುರಾಣದಮಂಕ ಕಣ್ಣೂರಮಂಕ ಬಿಳಿಚೇಡಮಂಕ ಹೆಗ್ಗೆರೆಮಂಕ ಅಸುಂಡಿಮಂಕ ಅಂತು ೧೧ ಸೆರೆಗೆ ಬಿದ್ದವರು..."

ಸರೂರ ಶಾಸನದಲ್ಲಿರುವ ಮಂಕಯ, ಮಂಕಯ್ಯ ಎಂಬ ಹೆಸರುಗಳು ಮಂಕೊಡೆಯರ ಸಂಪ್ರದಾಯದ ಒಡೆಯರನ್ನು ನೆನಪಿಸುತ್ತವೆ. ಹಾಗೆಯೇ ತುರುವೆಕೆರೆಯ ಶಾಸನದಲ್ಲಿ ಮಂಕೊಡೆಯರನ್ನು ಅವರವರ ಗ್ರಾಮದ ಹೆಸರಿನೊಂದಿಗೆ ಗುರುತಿಸಲಾಗಿದೆ. ವಿಜಯಪುರ ಜಿಲ್ಲೆಯ ಸರೂರ ಹಾಗೂ ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿಯಲ್ಲಿ ಸಿದ್ಧರಾಮೇಶ್ವರ ಸಂಪ್ರದಾಯದ ಮಠಗಳಿವೆ. ಆ ಮಠದ ಗುರುಗಳನ್ನು ಮಂಕೊಡೆಯರು ಎಂದು ಕರೆಯುತ್ತಾರೆ. ಈ ಸಂಪ್ರದಾಯದ ವ್ಯಕ್ತಿಗಳಿಗೆ ಮಂಕಯ್ಯ, ಮಂಕಸಿದ್ಧ, ಸಿದ್ಧಮಂಕ ಎಂಬ ಹೆಸರನ್ನಿಡುತ್ತಾರೆ.

೪. ಒಡೆಯರು : ಈಗಾಗಲೇ ಹೇಳಿದಂತೆ ಒಡೆಯರು ಕುರುಬರ ಗುರುಗಳಾಗಿ, ರೇವಣಸಿದ್ಧೇಶ್ವರ ಮಠದ ಅಧಿಪತಿಗಳಾಗಿ ಧಾರ್ಮಿಕ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಹೀಗಾಗಿ ಒಡೆಯ ಅಥವಾ ಒಡೆಯರು ಎಂಬ ವಾರ್ಗಿಕಗಳಿರುವ ಹೆಸರುಗಳು ಶಾಸನಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸಿಗುತ್ತವೆ.

ತುಮಕೂರು ಜಿಲ್ಲೆಯ ತಾಲೂಕು ಕೇಂದ್ರ ತುರುವೆಕೆರೆಯ ರೇವಣಸಿದ್ಧೇಶ್ವರ ಮಠದಲ್ಲಿರುವ ತಾಮ್ರಶಾಸನ(ತಗರ ಪವಾಡ ಪುಟ:೯)ವು ರೇವಣಸಿದ್ಧ ಪರಂಪರೆಯ ಅನುಯಾಯಿಯಾದ ಶಾಂತಮುತ್ತಯ್ಯನವರೇ ಕುರುಬರಿಗೆ ಗುರುಗಳು ಎಂದು ತಿರುಮಲರಾಜಯ್ಯನವರು ಘೋಷಿಸಿದ ಸಂದರ್ಭದಲ್ಲಿ ಹಾಜರಿದ್ದ ವಿವಿಧ ಗ್ರಾಮದ ಒಡೆಯರನ್ನು ಹೀಗೆ ಹೆಸರಿಸುತ್ತದೆ.

"ಸಿರ್ಪೆಯ ದೊಡತಮಿದೆ[ೀವ]ವಡೆರು ಕೊಳಲದ ತಮಿದೆ[ೀವ]ವಡೆರು ಹಿರೆಉರಸಿಯಪ್ರವಡೆರು ಕಂದಿಕೆರೆ ಮಾಯಾದೊಸಿಧ ವಡೆರು ರೆವಣವಡೇರು ಅಗಳಿಗುರುವಪವಡೆರು ಬಸಪವಡೆರು ನಂದಿಪವಡೆರು ಬುಧವಡೆರು ಕೊಟೂರ ನಗಿದೆ[ೀವ]ವಡೆರು ಕಂಚವಡೆರು ಯಿವರು ಶಾಂತಮುತ್ತಯ್ಯನವರು ಹಾಲುಮತದ ಕುರುಬರೆಂಬ ಜಾತಿಗೆ ...ಗುರುಗಳು ಯಂದು ರಾಯರು ಸಿಂಹಾಸನಪತಿಗಳು ಹೊಯಿಸಿಕೊಟ್ಟ ಸ್ಥಿರಶಾಸನ...."

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಗಾದಿಗನೂರು ರೇವಣಸಿದ್ಧೇಶ್ವರ ಮಠದ ಗುರುಗಳಾದ ದೇವಲಾಪುರದ ಸಿದ್ಧಯ್ಯಸ್ವಾಮಿ ಒಡೆಯರ ವಶದಲ್ಲಿದ್ದ ಮೂರು ತಾಮ್ರಶಾಸನ(ಹಾಲುಮತ ಸಂಸ್ಕೃತಿ-೧ ಪುಟ:೧೬}ಗಳು ಗಾದಿಗನೂರು ರೇವಣಸಿದ್ಧೇಶ್ವರ ಮಠದ ಗುರುಗಳಾದ ದೇವಲಾಪುರದ ವಡೇರ ಸಣ್ಣಸಿದ್ಧಯ್ಯರಿಗೆ ಸಂಬಂಧಿಸಿವೆ.

"ರೇವಣಸಿದ್ಧೇಶ್ವರ ಸಂಪ್ರದಾಯಕರಾದಂತ ಸರೂರು ಮಠದ ಗಾದಿಗನೂರು ಮಠಕ್ಕೆ ಕಾರಣಕರ್ತರಾದಂತ ವಡೇರ ಸಣ್ಣ ಸಿದ್ಧಯ್ಯನವರ ಪಾದಪದ್ಮಂಗಳ ಸನ್ನಿಧಾನಕ್ಕೆ....." (ತಾಮ್ರಪತ್ರ-೧)

"...ಕುರುಬರ ಗುರುವು ವಡೇರ ಬಸಪ್ಪನ ಮಕ್ಕಳಾದ ತಿಮ್ಮಪ್ಪ ಹಿರೇಸಿದ್ಧಪ್ಪ ಸಂಣಸಿದ್ಧಪ್ಪ..."

ಇಲ್ಲಿ ಉಕ್ತವಾದ ದೊಡ್ಡತಮ್ಮಿದೇವ, ತಮ್ಮಿದೇವ, ಮಾಯದಸಿದ್ಧ, ರೇವಣ್ಣ, ಗುರುವಪ್ಪ, ಬಸಪ್ಪ, ನಂದಿಪ, ಬುಧ, ನಗಿದೇವ ಕಂಚವಡೇರು ಇವರೆಲ್ಲರೂ ಕುರುಬಕುಲದ ಗುರುಗಳಾಗಿದ್ದವರು. ಕುರುಬರು ಒಡೆಯರನ್ನು ರೇವಣಸಿದ್ದೇಶ್ವರನ ಅವತಾರವೆಂದು ಭಕ್ತಿಭಾವದಿಂದ ಗೌರವಿಸಿ ಪೂಜಿಸುತ್ತಾರೆ. ಹೀಗಾಗಿ ಒಡೆಯ, ಒಡೆಯರು, ಗುರುವಿನವರು ಎಂಬ ಹೆಸರುಗಳು ದೈವವಾಚಿಯಾಗಿ ಈಗಲೂ ಬಳಕೆಯಲ್ಲಿದೆ. ಹೆಸರಿನ ಮೊದಲು ಉಕ್ತವಾದ ಸಿರ್ಪೆ, ಕೊಳಲ, ಹಿರೆಉರಸಿ, ಕಂದಿಕೆರೆ ಅಗಳಿ ಕೊಟೂರ -ಇವು ಗ್ರಾಮನಾಮಗಳು. ಹೀಗಾಗಿ ಆಯಾ ಊರುಗಳೊಂದಿಗೆ ಒಡೆಯರ ಹೆಸರುಗಳು ಇಲ್ಲಿ ತಳುಕುಹಾಕಿಕೊಂಡಿವೆ.

ವಡೇರ ಸಣ್ಣಸಿದ್ಧಯ್ಯ ಎಂಬ ಹೆಸರಿನಲ್ಲಿ ಮೂರು ಘಟಕಗಳಿವೆ. ವಡೇರ + ಸಣ್ಣ + ಸಿದ್ಧಯ್ಯ. ವಡೇರ ಎಂಬುದು ಕುಟುಂಬನಾಮವಾಗಿದ್ದು ವೃತ್ತಿವಾಚಿಯನ್ನೂ ಸೂಚಿಸುತ್ತದೆ. ಸಣ್ಣ ಎಂಬುದು ಉಳಿದ ವ್ಯಕ್ತಿಗಳಿಂದ ಪ್ರತ್ಯೇಕಿಸಿ ಹೇಳುವುದಕ್ಕಾಗಿ

ಈ ಪದ ಬಂದಿರುತ್ತದೆ. ಒಂದೇ ಊರಿನಲ್ಲಿ ಅಥವಾ ಬೇರೆ ಬೇರೆ ಕುಟುಂಬಗಳಲ್ಲಿ ಒಂದೇ ಹೆಸರಿನ ವ್ಯಕ್ತಿಗಳು ಇಬ್ಬರು-ಮೂವರು ಇದ್ದರೆ ಈ ರೀತಿಯಾಗಿ ಸಣ್ಣ ದೊಡ್ಡ ಹಿರಿಯ ಎಂಬ ವಿಶೇಷಣಗಳಿಂದ ಕರೆಯುವುದು ರೂಢಿ. ತಾಮ್ರಪತ್ರ-೨ರಲ್ಲಿ ಬಸಪ್ಪನಿಗೆ ತಿಮ್ಮಪ್ಪ-ಹಿರೇಸಿದ್ಧಪ್ಪ-ಸಣ್ಣಸಿದ್ಧಪ್ಪ ಎಂಬ ಮೂವರು ಮಕ್ಕಳು. ಹೀಗಾಗಿ ಒಂದೇ ಕುಟುಂಬದಲ್ಲಿ ಸಿದ್ಧಪ್ಪ ಹೆಸರಿನ ಇಬ್ಬರು ವ್ಯಕ್ತಿಗಳು ಇದ್ದ ಕಾರಣ ಅವರನ್ನು ಪ್ರತ್ಯೇಕವಾಗಿ ಗುರುತಿಸುವುದಕ್ಕೆ ಹಿರೇಸಿದ್ಧಪ್ಪ-ಸಣ್ಣಸಿದ್ಧಪ್ಪ ಎಂಬ ಹೆಸರನ್ನಿಡಲಾಗಿದೆ.

೫. **ಬೀರಪ್ಪ** : ಕುರುಬರ ಆರಾಧ್ಯ ದೈವ ಬೀರಪ್ಪ. ಬೀರೇದೇವರು, ಬೀರಲಿಂಗೇಶ್ವರ, ಸಿದ್ಧಬೀರ ಹೀಗೆ ನಾನಾ ರೀತಿಯಿಂದ ಕರೆಯಲಾಗುತ್ತಿದೆ. ಕುರುಬರ ಓಣಿ-ಊರುಗಳಲ್ಲಿ ಬೀರಪ್ಪನ ಹೆಸರಿನಲ್ಲಿ ದೇವಾಲಯ ಗದ್ದುಗೆಗಳು ಇವೆ. ಕೆಲವು ಊರುಗಳಲ್ಲಿಯಂತೂ ಕುರುಬರ ಓಣಿಯಲ್ಲಿ ಒಂದು, ಊರ ಹೊರಗೆ ಇನ್ನೊಂದು-ಹೀಗೆ ಎರಡು ಬೀರಪ್ಪನ ದೇವಾಲಯಗಳಿವೆ. ಅಷ್ಟೊಂದು ಜನಪ್ರಿಯ ದೈವವಾಗಿ ಬೀರಪ್ಪ ಪ್ರಸಿದ್ಧನಾಗಿದ್ದಾನೆ. ಹೀಗಾಗಿ ಈತನ ಬಗ್ಗೆ ಮೌಖಿಕ ಕಥನಗಳು, ಹೇಳಿಕೆಗಳು, ನಂಬಿಕೆಗಳು, ಸಂಪ್ರದಾಯಗಳು, ಡೊಳ್ಳಿನ ಹಾಡುಗಳು, ಪುರಾಣ-ಕಾವ್ಯ-ಶಾಸನಗಳು ಸೃಷ್ಟಿಗೊಂಡಿವೆ. ಆದರೆ ಶಾಸನಗಳು ರಚನೆಗೊಂಡಿರುವುದು ತುಂಬ ಕಡಿಮೆ. ಕೆಲವು ಶಾಸನಗಳಲ್ಲಿ ಬೀರದೇವರ ದೇವಸ್ಥಾನಕ್ಕೆ ದತ್ತಿಬಿಟ್ಟದ್ದು, ಜೀರ್ಣೋದ್ಧಾರ ಮಾಡಿಸಿದ್ದು, ದಾನ ಮಾಡಿದ ಸಂಗತಿಗಳನ್ನು ಮಾತ್ರ ದಾಖಲಿಸಲಾಗಿದೆ. ಉದಾಹರಣೆಗಾಗಿ ಕೆಲವು ಶಾಸನೋಲ್ಲೇಖಗಳನ್ನು ಗಮನಿಸಬಹುದು.

೧. ಶಿವಮೊಗ್ಗ ಜಿಲ್ಲೆಯ ಶಿಕಾಪರಿಪುರ ಶಾಸನ(೧೦೬೧)ದಲ್ಲಿ

"ಯೀ ಬೀರಲಿಂಗಕ್ಕೆ ಹೊಲಬಾವಿ ಕಳೆಕೊಟ್ಟರು...."

೨. ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಕೋಣಗನೂರಿನಲ್ಲಿ ಬೃಹತ್ತಾದ ಬೀರಪ್ಪನ ದೇವಸ್ಥಾನವಿದೆ. ಇಲ್ಲಿರುವ ಒಂದು ಶಾಸನದಲ್ಲಿ

"ಜಂಬುಖಂಡಿಯ ಬೀರನದೇವರ ಅರವಂಟಿಗೆಗೆ ಧರ್ಮೆತದ.....ಗಿಯ ಮನೆಯಿಂ ತೆಂಕಲು ಮೂಡವಾಗಿಲಾಗಿ ...."

೩. ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಕುರುವಂಕ ಗ್ರಾಮದಲ್ಲಿ ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಈ ಶಾಸನವನ್ನು ಹಾಕಿಸಲಾಗಿದೆ

"ಪಿರಿದೆನಿಪ ಭಕ್ತಿಯಿಂದೆ ವರಗುಣಿ ಮಲ್ಲವೆಯ ವಲ್ಲಭಂ ಬಿಟ್ಟಯ್ಯಂ ಪರಮಾರಾಧ್ಯಂ ಬೀರೇಶ್ವರಮಂ ಪ್ರಿಯದಿಂ ಪ್ರತಿಷ್ಠೆಯ ಮಾಡಿಸಿದಂ.......ಜನವಿನುತೆ ದಾಸಿಯಕ್ಕನೆ ತನಗೆ ಸಹೋದರಿಯೆ ಬೀರಿಸೆಟ್ಟಿಯೆ ಭಾವಂ ವಿನುತನೆನೆ ಬೆಟ್ಟೆಯಂ ಸಜ್ಜನನೀ ಬೀರೇಶ್ವರಾಲಯಮನೆತ್ತಿಸಿದಂ"

೪. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಹೆಮ್ಮರಗಾಲ ಗ್ರಾಮದ ಶಾಸನ(೧೬೫೩)ದಲ್ಲಿ-

"ಹೆಂಮರಗಾಲದ ಭೀರೇದೇವರ ಗುಡಿಯ ಜಿರ್ನಉದರ ಮಾಡಿದ ವಿವರ....ಕಪಮರೇಗಉಡನ ಪುತ್ರರಾದ ಭೀರೇಗಉಡ ಮಾಡಿದ ಸೇವೆ ಮಾಡಲಾಗಿ ಮುಂದೆ ದಾಯಾದಿಗಳು ಭೋಳಬೀರೇಗಉಡನ ಪಾಲು ೧ ಪರಿಸೆಗಉಡನ ಪಾಲು ೧.......

ಹೀಗೆಯೇ ಬೀರವಡೆಯ(ಬಂಕುವಾಡಿ-೧೪೨೫), ತೆಲಗಿಯ ಬೀರದೇವ(ದುಗ್ಗತ್ತಿ) ಮುಂತಾದ ಹೆಸರಿನ ವ್ಯಕ್ತಿಗಳು ಕಂಡುಬರುತ್ತಾರೆ.

೨. ವೃತ್ತಿವಾಚಿ

ಕುರುಬರ ಬಹುಮುಖ್ಯ ವೃತ್ತಿ ಕುರಿಸಾಕಾಣಿಕೆ. ಕುರಿಗಳಿಗೆ ತೆರಿಗೆಯನ್ನು ಮನ್ನಾಮಾಡಿದ ಸಂಗತಿಯನ್ನು ಬಾಗಳಿಯ ಕಲ್ಲೇಶ್ವರ ದೇವಸ್ಥಾನದ ಆವರಣದಲ್ಲಿರುವ ಶಿಲಾಶಾಸನ(SII-ix, part-ii, No:641)ವು ನಿರೂಪಿಸುತ್ತದೆ. ಬಾಗುಳಿಯ ಚಾಮಿನಾಯಕನ ಮಗ ಹೆಳವಿನಾಯಕನು-

"ಕೊಟೂರು ಸೀಮೆಗೆ ಸಲುವ ಬಾಗುಳಿಯ ಚಾಮಿನಾಯಕರ ಮಗ ಹೆಳವಿನಾಯಕರೂ ಬಾಗುಳಿಯ ಕುಮಕರ[ಕುರುಬರ] ಬಸವಿಗೌಂಡನ ಮಗ ಲಿಂಗಗೊಂಡ ಮುಂತಾದ ಕುರುಬಗೌಡಗಳಿಗೆ ಕುರಿದೆರಿಗೆ ಯಿಲ್ಲಾ ಎಂದು ಬಿಟ್ಟುಕೊಟ್ಟ ಶಾಸನ.."

ಇಲ್ಲಿ ಉಕ್ತವಾದ ಬಾಗುಳಿಯ ಕುರುಬರ ಬಸವಗೌಡ, ಲಿಂಗಗೌಡರು ಕುರಿ ಸಾಕಾಣಿಕೆ ವೃತ್ತಿಯನ್ನು ಮಾಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

೩. ಜನಾಂಗ(ಜಾತಿ)ವಾಚಿ

ಜನಾಂಗ ಅಥವಾ ಜಾತಿಯ ಮೂಲಕ ವ್ಯಕ್ತಿಯನ್ನು ಗುರುತಿಸುವ ರೂಢಿ ಬಹು ಹಿಂದಿನಿಂದಲೂ ಇದೆ. ಒಂದೇ ಹೆಸರಿನ ವ್ಯಕ್ತಿಗಳು ಬೇರೆ ಬೇರೆ ಜನಾಂಗಗಳಲ್ಲಿರುತ್ತಾರೆ. ಹೀಗಾಗಿ ಅಂಥವರನ್ನು ಗುರುತಿಸುವುದಕ್ಕಾಗಿ ಜನಾಂಗದ ಹೆಸರಿನೊಂದಿಗೆ ಕರೆಯಲಾಗುತ್ತದೆ. ಇದಕ್ಕೆ ಪೂರಕವಾಗಿ ಕುರುಬ(ಧನಗರ) ಜನಾಂಗಕ್ಕೆ ಸಂಬಂಧಿಸಿದ ವ್ಯಕ್ತಿನಾಮಗಳು ಕೆಲವು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಉದಾ: ಕುರುಬರ ಚಿಕ್ಕ (E.C-5), ಕುರುಬರ ಸೊತ್ತ (E.C-5), ಕುರುಬರ ಹಲಗ (E.C-5), ಕುರುಬರ ಸಿದ್ಧೇಶ್ವರ (E.C-6), ಕುರುಬರ ಕಾಳಯ್ಯ (E.C-11), ಕುರುಬರ ಮುದ್ದುಗಾವುಂಡ (SII-18), ಧನಗರ ಕಂಚಿಕಬ್ಬೆ (E.I-16) ಇತ್ಯಾದಿ. ಈ ಹೆಸರುಗಳನ್ನು ನೋಡಿದಾಗ ಈ ವ್ಯಕ್ತಿಗಳು ಕುರುಬ ಜನಾಂಗದವರು ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈಗಲೂ ಜನಾಂಗವಾಚಿಯಗಿ ವ್ಯಕ್ತಿಗಳನ್ನು ಕರೆಯಲಾಗುತ್ತದೆ. ಉದಾ: ಕುರುಬರ ಬಸಪ್ಪ, ಕುರುಬರ ಮಲ್ಲಪ್ಪ, ಕುರುಬರ ಈರಪ್ಪ ಮುಂತಾಗಿ.

೪. ಪೂರ್ವಜರವಾಚಿ

ಯಾವುದೇ ಕುಟುಂಬದಲ್ಲಿ ತಮ್ಮ ಪೂರ್ವಜರ ವ್ಯಕ್ತಿಗಳ ಹೆಸರನ್ನು ಮಕ್ಕಳಿಗೆ ಮೊಮ್ಮಕ್ಕಳಿಗೆ ಇಡುವ ರೂಢಿ ಈಗಲೂ ಇದೆ. ಕುರುಬರ ಮೂಲಪುರುಷ ಮುದ್ದಪ್ಪ. ಈತನನ್ನು ಮುದ್ದಗೊಂಡ, ಮುದ್ದಗೌಡ, ಮುದ್ದರಾಯ ಎಂದು ನಾನಾ ರೀತಿಯಿಂದ ಕರೆಯಲಾಗುತ್ತಿದೆ. ಕುರುಬ ಜನಾಂಗದಲ್ಲಿ ಈ ಹೆಸರಿನ ವ್ಯಕ್ತಿಗಳು ಈಗಲೂ ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತಾರೆ. ಉಕ್ಕುಂದ ಶಾಸನ(SII-18)ವು ಮುದ್ದಗಾವುಂಡನ ಮಗ ದಾಸಗಾವುಂಡನು ಗ್ರಾಮವನ್ನಾಳುತ್ತಿದ್ದುದನ್ನು ತಿಳಿಸುತ್ತದೆ. ಕುರುಬರ ಕುಲದೈವ ಬೀರಪ್ಪ. ಈ ಸಮಾಜದ ಪ್ರತಿಯೊಂದು ಕುಟುಂಬದಲ್ಲಿ ಒಬ್ಬರಿಗಾದರೂ ಈತನ ಹೆಸರನ್ನಿಡುವ ಪದ್ಧತಿ ಈಗಲೂ ಚಾಲ್ತಿಯಲ್ಲಿದೆ. ಬೀರಲಿಂಗ, ಬೀರಪ್ಪಗೌಡ, ಬೀರಯ್ಯ, ಮಲ್ಲಬೀರೇಗೌಡ, ದೊಡ್ಡಬೀರೇಗೌಡ, ಪೂಜಾರಿ ಬೀರಣ್ಣ (E.C.-11) ಎಂಬ ಹೆಸರಿನ ವ್ಯಕ್ತಿಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.

ಈಗಲೂ ಅಜ್ಜ-ಮುತ್ತಜ್ಜ ಅಥವಾ ಪ್ರಸಿದ್ಧ ವ್ಯಕ್ತಿ ಆಗಿದ್ದಲ್ಲಿ ಅವರ ಹೆಸರನ್ನು ಮಕ್ಕಳಿಗೆ ಮೊಮ್ಮಕ್ಕಳಿಗೆ ಇಡುವ ರೂಢಿಯಿದೆ. ಉದಾಹರಣೆಗೆ ನನ್ನ ಹೆಸರು ಫಕೀರಪ್ಪ. ಇದು ನನ್ನ ಅಜ್ಜನ ಹೆಸರೂ ಆಗಿತ್ತು. ಅಜ್ಜನ ಸ್ಮರಣೆಗಾಗಿ ನನಗೆ ಫಕೀರಪ್ಪ ಎಂದು ನಾಮಕರಣ ಮಾಡಿದ್ದನ್ನು ಇಲ್ಲಿ ನೆನಪಿಸಬಯಸುತ್ತೇನೆ.

ಹೀಗೆ ಶಾಸನಗಳನ್ನು ಅವಲೋಕಿಸುತ್ತ ಹೋದರೆ ಕುರುಬರ ವ್ಯಕ್ತಿನಾಮಗಳ ಬಗ್ಗೆ ಇನ್ನೂ ಅನೇಕ ವಿವರಗಳು ದೊರೆಯಬಹುದು. ಆ ನಿಟ್ಟಿನಲ್ಲಿ ಇದೊಂದು ಕಿರುಪ್ರಯತ್ನ. ಇನ್ನೂ ವ್ಯಾಪಕವಾದ ಅಧ್ಯಯನ ಮಾಡಲು ಈ ಸಂಪ್ರಬಂಧ ಒಂದು ದಿಕ್ಸೂಚಿ.

ಆಕರ ಗ್ರಂಥಗಳು

೧. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳು, ಆರ್ಕ್ಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ನವದೆಹಲಿ.

೩. ಎಪಿಗ್ರಾಫಿಯಾ ಇಂಡಿಕಾ ಸಂಪುಟಗಳು, ಆರ್ಕ್ಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ, ನವದೆಹಲಿ.

೪. ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೫. ಎಂ.ಎಂ. ಕಲಬುರ್ಗಿ, ಕನ್ನಡ ನಾಮವಿಜ್ಞಾನ, ಸಪ್ನ ಬುಕ್ ಹೌಸ್, ಬೆಂಗಳೂರು.

೬. ಎಂ. ಚಿದಾನಂದಮೂರ್ತಿ, ಭಾಷಾವಿಜ್ಞಾನ ಮತ್ತು ಛಂದಸ್ಸು, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೭. ಎಸ್.ಎಸ್. ಅಂಗಡಿ, ಕುರುಬ ಸಮುದಾಯದ ಭಾಷೆ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.

೮. ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ (ಸಂ), ತಗರ ಪವಾಡ, ವಿದ್ಯಾನಿಧಿ ಪ್ರಕಾಶನ, ಗದಗ.

೯. ಎಫ್.ಟಿ. ಹಳ್ಳಿಕೇರಿ, ಹಾಲುಮತ ಸಂಸ್ಕೃತಿ ೧, ವಿಕಾಸ ಪ್ರಕಾಶನ, ಹೊಸಪೇಟೆ.

೬೯

ಕೊಪ್ಪಳ ಜಿಲ್ಲೆಯ ಶಾಸನೋಕ್ತ ಕೆರೆಗಳು

ಶಾರದಾ ಪಾಟೀಲ*

ನೀರಿನ ಲಭ್ಯತೆ ಮತ್ತು ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಜಲ ಸಂಗ್ರಹದಲ್ಲಿ ಕೃತಕ ಜಲಸಂಗ್ರಹಾಗಾರಗಳ ವಿವಿಧ ವಿಧಾನಗಳು ರೂಢಿಗೊಂಡವು. ಮಾನವನ ಅತ್ಯವಶ್ಯಕಗಳಲ್ಲಿ ಒಂದಾದ ನೀರಿನ ಸಮಸ್ಯೆಯನ್ನು ನೀಗಿಸಲು ಕೆರೆ, ಕೊಳ, ತಟಾಕಗಳನ್ನು ನಿರ್ಮಿಸುತ್ತಿದ್ದರು. ದೇವಾಲಯ ನಿರ್ಮಾಣದೊಂದಿಗೆ ತಲೆ ಎತ್ತುತಲಿದ್ದ ಕೆರೆ ನಿರ್ಮಾಣ ಒಂದು ದೃಷ್ಟಿಯಿಂದ ಧರ್ಮಕಾರ್ಯವೆನಿಸಿದರೂ, ಇನ್ನೊಂದು ದೃಷ್ಟಿಯಿಂದ ಸಾರ್ವಜನಿಕ ಕಾರ್ಯವೆನಿಸುತ್ತಿದ್ದಿತು.

ಕೆರೆ ನಿರ್ಮಾಣದ ಸಂಗತಿಯ ಬಗೆಗೆ ಕನ್ನಡ ನಾಡಿನ ನೂರಾರು ಶಾಸನಗಳು ಅಪೂರ್ವ ಮಾಹಿತಿಯನ್ನು ಒದಗಿಸುತ್ತವೆ. ಜೊತೆಗೆ ನಿರ್ಮಾಣದ ಕಾರಣ, ದುರಸ್ತಿ, ಆಚರಣೆ, ನಂಬಿಕೆ ಸಂಪ್ರದಾಯಗಳ ಬಗೆಗೆ ವಿಸ್ತೃತ ಮಾಹಿತಿಯನ್ನು ಒದಗಿಸುತ್ತವೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಶಾಸನೋಕ್ತ ಕೆರೆಗಳ ಕುರಿತ ವಿಶ್ಲೇಷಣಾತ್ಮಕ ಅಧ್ಯಯನ ಮಾಡಲಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ನೂರಾರು ಕೆರೆಗಳಿದ್ದರೂ, ಶಾಸನೋಕ್ತ ಕೆರೆಗಳು ಕೇವಲ ೩೩.[೧] ಅವುಗಳಲ್ಲಿ ಪ್ರಮುಖವಾಗಿ ಗುರುತಿಸುವುದಾದರೆ ಕ್ರಿ.ಶ. ೯೮೭ರ ಗುಡ್ಡಾನೂರು ಶಾಸನ ಅಹವಮಲ್ಲ ಎರಡನೇ ತೈಲನ ಕಾಲದಲ್ಲಿ ಅಪಯಬ್ಬೆಯ ಮಗ ಅಣ್ಣಿಗದೇವನು ತನ್ನ ತಂದೆ ನಾಗದೇವನ ಜನ್ಮಸ್ಥಳ ಸಿಂದವುಗೆ ಇಂದಿನ ಹಿರೇಸಿಂದೋಗಿಯಲ್ಲಿ ನೀರಾವರಿಗೆ ವಿಶಾಲವಾದ ಕೆರೆಯನ್ನು ಕಟ್ಟಿಸಿ ಅಣ್ಣಿಗನ ಕೊಳವೆಂದು ಹೆಸರಿಸಿದುದನ್ನು ತಿಳಿಸುತ್ತದೆ. ಈ ಮೂಲಕ ಜಿಲ್ಲೆಯ ನೀರಾವರಿ ಕಾಮಗಾರಿ ಸಂಬಂಧಪಟ್ಟ ಪ್ರಥಮ ಉಲ್ಲೇಖವಿದಾಗಿದೆ.[೨]

ಕ್ರಿ.ಶ. ೧೦೨೪ರ ಹಳೇನೆಲ್ಲುಡಿ ಶಾಸನದ ಉಲ್ಲೇಖದಂತೆ ಉದಯಾದಿತ್ಯನು ವಿಪ್ರನಾರಾಯಣದ ಕೆರೆಯೊಳಗೆ ಗುರು ಸಿದ್ದೇಶ್ವರ ದೇವಾಲಯವನ್ನು ನಿರ್ಮಿಸಿ, ಅದಕ್ಕೆ ನೆರುಣ್ಡಿಗಲ್ಲು (ಇಂದಿನ ನೆಲ್ಲುಡಿ) ಗ್ರಾಮದಲ್ಲಿ ೪೦ ಮತ್ತರು ಭೂಮಿಯನ್ನು ದಾನವಾಗಿ ಕೊಡುತ್ತಾನೆ.[೩] ಯಲಬುರ್ಗಾ ತಾಲೂಕಿನ ಯಡಿಯಾಪುರ ಗ್ರಾಮದ ಕ್ರಿ.ಶ. ೧೦೫೪ರ ಕನ್ನಡ ಶಾಸನವು ತಿಳಿಸುವಂತೆ ಈ ಶಾಸನವು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದು, ಒಂದನೇ ಸೋಮೇಶ್ವರನ ಕಾಲದಲ್ಲಿ ಆತನ ಸಾಮಂತ ನರಸಿಂಗನು ಬೆಳ್ಳಮಗೆರೆಯ ತೂಬನ್ನು ನಿರ್ಮಿಸಿದ ಉಲ್ಲೇಖವಿದೆ.[೪] ಕ್ರಿ.ಶ. ೧೦೮೮ರ ಹುಲಗಿಯ ಶಾಸನದಲ್ಲಿ ಚಾಲುಕ್ಯರ ೬ನೆಯ ವಿಕ್ರಮಾದಿತ್ಯ ಕಲ್ಯಾಣದ ನೆಲೆವೀಡಿನಿಂದ ಆಳುತ್ತಿದ್ದಾಗ ಕಾಮಕಾಯನ ಗೋತ್ರದ ನಾರಾಯಣ ಚಟ್ಟೋಪಾಧ್ಯಾಯನ ಮಗ ಚೌವೇದಿಭಟ್ಟ "ಹುಲಿಗೆಯೆಂಬ ಪುರ"ವನ್ನು ತ್ರೈಲೋಕ್ಯಮಲ್ಲನಿಂದ ಪಡೆದ. ಇವನು ತುಂಗಭದ್ರ ನದಿಯಿಂದ ಸೀಳುನಾಲೆಯೊಂದನ್ನು ತಂದಂತೆ ಹೇಳಿದೆ.[೫] ಕವಲೂರಿನ ಕ್ರಿ.ಶ. ೧೦೯೨ರ ಶಾಸನದಲ್ಲಿ ಅಗಸ್ತ್ಯಗೋತ್ರದ ಚೌಡಭಟ್ಟರ ಮಗ ಮುದ್ದೆಭಟ್ಟ, ಸೋಮಯಾಜಿ ಯಾಗವನ್ನು ಅಪೂರ್ವವೆನ್ನುವಂತೆ ಮಾಡಿ, 'ವಿಷ್ಣುಸದನಮಂ ಸತ್ರಮಂ' ಕೆರೆಯನ್ನು ಮಾಡಿಸಿದ ವಿವರವಿದೆ.[೬] ಕುಷ್ಟಗಿ ತಾಲೂಕಿನ ಅಂಟೂರತಾಣ ಶಾಸನದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ೧೦೯೪ರ ತ್ರಿಭುವನಮಲ್ಲನದೇವ (೬ನೇ ವಿಕ್ರಮಾದಿತ್ಯ) ಆಳ್ವಿಕೆಯಲ್ಲಿ ಮಹಾಪ್ರಧಾನ ಧರ್ಮಾಧ್ಯಕ್ಷ ಸೋಮೇಶ್ವರ ಚಟ್ಟೋಪಾಧ್ಯಾಯರು ಮತ್ತು ಅಚ್ಚುಪನ್ನಾಯದ ಅಧಿಷ್ಠಾಯಕ ದಣ್ಣನಾಯಕ ಮಹಾವಿಷ್ಣು ಅರಸರು ಇನ್ನೂ ಕೆಲವರು ಜೊತೆಗುಡಿ ಪತ್ತರತಾಣದ ಅಧಿಕಾರ ವರ್ಗದವರೂ ಸೇರಿ ಪೆಂದೆಯ ಕೆರೆಯಲ್ಲಿ ಸತ್ರಶಾಲೆಯನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ.[೭]

ಕ್ರಿ.ಶ. ೧೫೫೨ರ ವಿಜಯನಗರ ಸದಾಶಿವರಾಯನ ಕಾಲದ ಅಚಲಾಪುರ ಶಾಸನದಲ್ಲಿ ಊರಿನಲ್ಲಿ ಒಡೆದ ಕೆರೆಯನ್ನು ಜೀರ್ಣೋದ್ಧಾರ ಮಾಡಿದವರಿಗೆ ಗದ್ದೆ ನೀಡಿದ ವಿವರವಿದೆ.[೮] ವಿಜಯನಗರ ವಿರುಪಾಕ್ಷ ಮಹಾರಾಯನು ಆಗೋಲೆಯ ರಾಮನಾಯಕನ ಹರಿವಾಣದ ಪ್ರಸಾದಕ್ಕೆ ಹಂಪಾದೇವಿಹಳ್ಳಿಯ ಕೆರೆಯನ್ನು ಪಾಲಿಸಿದಂತೆ ಕ್ರಿ.ಶ. ೧೫ನೆಯ ಶತಮಾನದ ಶಾಸನವು ತಿಳಿಸುತ್ತದೆ.[೯] ಪರಗ್ರಾಮದ ದೇವಾಲಯದಲ್ಲಿರುವ ೧೨ನೇ ಶತಮಾನದ ಶಾಸನದಲ್ಲಿ ಕೆರೆಯ ನಿರ್ಮಾಣದ ಉಲ್ಲೇಖ ಬರುತ್ತದೆ.[೧೦] ಇದೇ ಗ್ರಾಮದಲ್ಲಿರುವ ಕ್ರಿ.ಶ. ೧೫೫೬ರ ಕಾಲದ ವಿಜಯನಗರ ಶ್ರೀ ವೀರಪ್ರತಾಪ ದೇವರಾಯನ

* ಇತಿಹಾಸ ಉಪನ್ಯಾಸಕರು, ಕೆ.ಎಸ್.ಸಿ. ಮಹಿಳಾ ಮಹಾವಿದ್ಯಾಲಯ, ಗಂಗಾವತಿ.

ಶಾಸನದಲ್ಲಿ ಕೆರೆ ನಿರ್ಮಾಣದ ಉಲ್ಲೇಖವಿದೆ.[೧೧] ಕೊಪ್ಪಳ ತಾಲೂಕಿನ ಶಿವಪುರ ಸೋಮೇಶ್ವರ ದೇವಾಲಯದ ಸನಿಹದಲ್ಲಿ ೧೫–೧೬ನೇ ಶತಮಾನದ ಶಾಸನದ ಉಲ್ಲೇಖದಂತೆ ನಗರೂರ ಕುಲಕರ್ಣಿ ಅಮಾಜಿಪಂಡಿತರು ಸೋಮೇಶ್ವರ ದೇವರ ದುರ್ಗದಲ್ಲಿ ಒಂದು ಕೊಳವನ್ನು ಮಾಡಿಸಿದನೆಂದು ತಿಳಿಸುತ್ತದೆ.[೧೨]

ಕ್ರಿ.ಶ. ೧೬೬೦ರ ಶಾಸನ ಕನಕಗಿರಿಯ ಗುಜ್ಜಲ ಇಮ್ಮಡಿವುಡಿಸಿ ನಾಯಕನ ಪತ್ನಿ ಚೆನ್ನದೇವಿ ಕನಕರಾಯನ ಕೆರೆಯನ್ನು ಕಟ್ಟಿಸಿದಂತೆ ತಿಳಿಸುತ್ತದೆ.[೧೩] ಕ್ರಿ.ಶ. ೧೫೦೬ರ ಕನ್ನೇರಮಡು ಶಾಸನದಲ್ಲಿ ಗುಜ್ಜಲ ಬೊಮ್ಮನಾಯಕನ ಮಗ ಲಖುಮಣ ನಾಯಕ ಮತ್ತು ಬೊಮ್ಮನಾಗತಿ ಕಲ್ಲುಕೆರೆಯನ್ನು ಕಟ್ಟಿಸಿದ ಉಲ್ಲೇಖವಿದೆ.[೧೪] ಕೊಪ್ಪಳ ತಾಲೂಕಿನ ಗಂಗನಹಾಳು ಗ್ರಾಮದ ಶಾಸನದಲ್ಲಿ ಗುಜ್ಜಲ ಮುಂಮಡಿ ರಾಯಣನಾಯಕನು ಸಂಣದಡೆಯರಿಗೆ ಗಂಗನಹಾಳಿನ ಕೆರೆಯ ಕೆಳಗೆ ಗದ್ದೆಯನ್ನು ಬಿಟ್ಟ ಉಲ್ಲೇಖವಿದೆ.[೧೫]

ಜಿಲ್ಲೆಯ ಶಾಸನೋಕ್ತ ಅಂಶಗಳನ್ನು ಅವಲೋಕಿಸಲಾಗಿ ಭೂಮಿಯನ್ನು ವ್ಯವಸಾಯ ಯೋಗ್ಯ ಭೂಮಿ, ವ್ಯವಸಾಯಕ್ಕೆ ಯೋಗ್ಯವಲ್ಲದ (ಬೀಳು) ಭೂಮಿ ಎಂದು ಎರಡು ಬಗೆಯಾಗಿ ವಿಂಗಡಿಸಲಾಗಿರುವುದು. ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಸಾಮಾನ್ಯವಾಗಿ ಶಾಸನಗಳು 'ಕೈಯ್' ಎಂದು ಮಳೆಯನ್ನು ಅವಲಂಬಿಸಿ ಸಾಗುವಳಿ ಮಾಡುವ ಭೂಮಿಯನ್ನು ದೇವಮಾತೃಕವೆಂದು, ಕೆರೆ–ಬಾವಿಗಳನ್ನು ಅವಲಂಬಿಸಿರುವುದನ್ನು ನದಿ ಮಾತೃಕವೆಂದು ವಿಂಗಡಿಸಲಾಗಿದೆ.[೧೬] ದೇವಮಾತೃಕದಲ್ಲಿ ಗದ್ದೆ ಹೊಲಗಳನ್ನು ಹೆಸರಿಸಬಹುದು. ಬಳಗೇರಿ ಶಾಸನ ಅಲ್ಲಿಯ ಸೊಬನೇಶ್ವರ ದೇವರಿಗೆ ತೋಟವನ್ನು ಭೂದಾನವಾಗಿ ನೀಡಿದ ಬಗ್ಗೆ ತಿಳಿಸುವುದು.[೧೭] ಕುಕನೂರಿನ ಶಾಸನ ಹೊಲ ಮತ್ತು ಅದರ ಮೇರೆಗಳನ್ನು ಉಲ್ಲೇಖಿಸುತ್ತದೆ.[೧೮] ವಿಪ್ರಶಾಸನ ತುಂಗಭದ್ರಾ ನದಿಯ ದಡದ ಗಳ್ದೆ ಮತ್ತರು ತೋಟಗಳನ್ನು ಚಳೇಶ್ವರ ದೇವರಿಗೆ ಬಿಟ್ಟ ಕುರಿತು ತಿಳಿಸುತ್ತದೆ.[೧೯] ಅಳವಂಡಿಯ ಊರ ಪಶ್ಚಿಮಕ್ಕೆ ಇರುವ ತೋಟ, ಪೂರ್ವಕ್ಕೆ ಬಾವಿ, ಕಲ್ಲದೇಗುಲ, ವಸತಿ ಸತ್ರಕ್ಕೆ ೧೮ ಮತ್ತರು ದೇವರಿಗೆ ೫ ಮತ್ತರು, ಮಠಕ್ಕೆ ಎರೆಯ ಮತ್ತರು, ತೀರ್ಥರ ಕೆರೆ, ಬಾವಿಗಳು, ಊರ ಹೊರವಲಯದ ಭೂಮಿ ತೋಟಗಳನ್ನು ದಾನ ಮಾಡಿದ ವಿಷಯದೊಂದಿಗೆ ನದಿ ಮಾತೃಕೆಯ ಉಲ್ಲೇಖ ಕಾಣುತ್ತೇವೆ.[೨೦] ಕಲ್ಲೂರ ಕಲಿದೇವ ಸ್ವಾಮಿಯ ಗಣಮಠಕ್ಕೆ ೨೦೦ ಮತ್ತರು ಭೂಮಿದಾನ ನೀಡಿದರೆ,[೨೧] ಕವಲೂರಿನಲ್ಲಿ ವಿಷ್ಣುದೇವಾಲಯ ಸತ್ರ, ಕೆರೆಯನ್ನು ಕಟ್ಟಿಸಿರುವುದಾಗಿ ತಿಳಿಯುವುದು,[೨೨] ಹೆಸರೂರ ಶಾಸನದಲ್ಲಿ ೪ ಮತ್ತರು ಗದ್ದೆ, ಎಲೆಯ ತೋಟದ ಉಲ್ಲೇಖವಿದೆ.[೨೩] ಕುಕನೂರಿನ ಮತ್ತೊಂದು ಶಾಸನದಲ್ಲಿ ರುದ್ರಾದಿತ್ಯ ಫೈಸಾಸರು ಕೆರೆ ಕಟ್ಟಿಸಿ ಆ ಕೆರೆಯ ಗದ್ದೆ ಮತ್ತರು–೩, ಮನೆಯ ದೇವರ ಸತ್ರಕ್ಕೆ ಗದ್ದೆ ಕಮ್ಮ–೫೦೦, ಕೆರೆ ಗದ್ದೆ ಮತ್ತರ–೧ ಇತ್ಯಾದಿಯಾಗಿ ಉಲ್ಲೇಖಗಳು ನೀಡುವುದು.[೨೪] ಚಳಗೇರಿ ಶಾಸನ ಕೆರೆ ಹೊಲ ಭೂಮಿಯನ್ನು ಕಲ್ಲಂಗೇರಿಯ ಲಕ್ಷ್ಮೀನಾರಾಯಣ ದೇವರಿಗೆ ಬಿಟ್ಟ ವಿಷಯ ತಿಳಿಸುವುದು.[೨೫]

ಕುಕನೂರಿನ ೧೧೭೮ರ ಮತ್ತೊಂದು ಶಾಸನ ಭೂಮಿ, ತೋಟ, ಹೊಲ, ಹಳ್ಳ, ಕೆರೆಗಳ ಬಗ್ಗೆ ನೀರಾವರಿಗಾಗಿ ಮೊಗಣಗೆರೆಯ ಗರ್ದೆ, ಏರಣಗೆರೆಯ ಗರ್ದೆಯಲ್ಲಿ ಸಬ್ಬಯ್ಯನ ಕೆರೆ, ಕಡಲಗೆರೆ, ಫೈಶಾಸರ ಕೆರೆ, ದೇವರಯ್ಯನ ಕೆರೆಗಳ ಕುರಿತು ಉಲ್ಲೇಖಿಸುತ್ತಿದ್ದು, ಅಲ್ಲಿ ಅನೇಕ ಕೆರೆಗಳಿದ್ದುದಾಗಿ ತಿಳಿಸುತ್ತದೆ.[೨೬]

ಅಂತೆಯೇ ಗಂಗಾವತಿ ತಾಲೂಕಿನ ಚಿಕ್ಕಬೆಣಕಲ್ ಗ್ರಾಮದ ದಕ್ಷಿಣ ದಿಕ್ಕಿನಲ್ಲಿ ಬೆಟ್ಟಗಳ ಅಂಚಿಗೆ ಹೊಂದಿಕೊಂಡಂತೆ ಕೆರೆಯಿದ್ದು, ಕೆರೆಯ ಬದಿಯ ಗುಂಡಿನಲ್ಲಿ ೪ ಸಾಲಿನ ಅಪೂರ್ಣ ಶಾಸನವಿದ್ದು,[೨೭] ವಿಜಯನಗರ ದೊರೆ ಎರಡನೆಯ ದೇವರಾಯನನ್ನು ಉಲ್ಲೇಖಿಸುತ್ತದೆ. ಈ ಶಾಸನದ ಆಧಾರದ ಮೇಲೆ ಪ್ರಸ್ತುತ ಕೆರೆಯನ್ನು ಕ್ರಿ.ಶ. ೧೧೪೦ರಲ್ಲಿ ಎರಡನೆಯ ದೇವರಾಯನು ನಿರ್ಮಿಸಿದನೆಂದು ಹೇಳಬಹುದು. ಗಂಗಾವತಿ ತಾಲೂಕಿನ ಕನಕಗಿರಿ ವ್ಯಾಪ್ತಿಯಲ್ಲಿ ಕಂಡು ಬರುವ ರಾಮದುರ್ಗ ಕೆರೆಯ ಪಕ್ಕದ ಶಿಲಾ ಪಡಿಯಲ್ಲಿ ಶಾಸನವಿದ್ದು,[೨೮] ಇದನ್ನು ಹತ್ತು ಸಾಲಿನಲ್ಲಿ ಬರೆಯಲಾಗಿದೆ. ಮಹಾ ಸಾಮಂತಾಚಾರ್ಯ ತಿಂತಣಿ ಗುಜ್ಜಲ ಬೊಮ್ಮಚಾರ್ಯರ ಆಣತಿ ಮೇರೆಗೆ ಪಡಿಯ ಮೂಡಲು ಭಾಗದ ಕೆರೆಯನ್ನು ಯಕ್ಕರಸನೆಂಬುವನು ಕಟ್ಟಿಸಿದನು, ಇಲ್ಲಿ ಹೆಸರಿಸಿರುವ ಅಧಿಕಾರಿಗಳು ನಾಯಕ ಮನೆತನಕ್ಕೆ ಸೇರಿದವರು. ಗಂಗಾವತಿ ತಾಲೂಕಿನ ಸಂಗಾಪುರ ಗ್ರಾಮದ ಹತ್ತಿರ ಲಕ್ಷ್ಮೀನಾರಾಯಣ ಕೆರೆಯನ್ನು ನಿರ್ಮಿಸಲಾಗಿದ್ದು, ಕೆರೆಯ ಹತ್ತಿರ ಚಿಕ್ಕ ಲಕ್ಷ್ಮೀನಾರಾಯಣ ದೇವಾಲಯವಿದೆ. ಕೆರೆ ಸನಿಹದಲ್ಲಿರುವ ಶಾಸನದ ಪ್ರಕಾರ[೨೯] ದೇವಾಲಯ ಸಹಿತ ಕೆರೆಯನ್ನು ಆನೆಗುಂದಿ ಅರಸರಾದ ಶ್ರೀರಂಗದೇವರಾಯರ ಅಪ್ಪಣೆ ಪ್ರಕಾರ ನಾರಾಯಣರಾಜರು ಕಟ್ಟಿಸಿರುವುದು ತಿಳಿಯುತ್ತದೆ. ಹೀಗೆ ಹಲವಾರು ನಿದರ್ಶನಗಳನ್ನು ಶಾಸನಾಧಾರಗಳಿಂದ ಅರಿಯಬಹುದು.

ಒಟ್ಟಿನಲ್ಲಿ ಚಾರಿತ್ರಿಕ ಕಾಲದಲ್ಲಿ ವಿವಿಧ ರಾಜಮನೆತನಗಳಿಗೆ ಸೇರಿದ ದೊರೆಗಳು ಕೆರೆಗಳ ನಿರ್ಮಾಣಕ್ಕೆ ಉತ್ತೇಜನ ನೀಡಿ ಕೃಷಿಯನ್ನು ವಿಸ್ತರಿಸಿದರು. ಈ ಹಿನ್ನೆಲೆಯಲ್ಲಿ ಕೊಪ್ಪಳ ಪ್ರದೇಶ ಮೊದಲಿನಿಂದ ಸರಾಸರಿ ಮಳೆ ಕಡಿಮೆ ಬೀಳುವ

ಪ್ರದೇಶವಾಗಿದ್ದು ಹೀಗಾಗಿ ಈ ಭಾಗದಲ್ಲಿ ಆಳಿದ ರಾಜ ಮನೆತನಗಳು ಕಾಲಕಾಲಕ್ಕೆ ನೀರಾವರಿ ಮೂಲಗಳನ್ನು ನಿರ್ಮಿಸಿರುವುದು ಹಾಗೂ ಜೀರ್ಣೋದ್ಧಾರ ಮಾಡಿಸಿರುವುದು ಕಂಡು ಬರುತ್ತದೆ. ಸಾಮಾನ್ಯವಾಗಿ ದೇವಾಲಯಗಳಿದ್ದ ಸ್ಥಳಗಳಲ್ಲಿ ಮತ್ತು ಅಗ್ರಹಾರ ಕೇಂದ್ರಗಳಲ್ಲಿ ಕೆರೆಗಳ ನಿರ್ಮಾಣ ಹೆಚ್ಚಿನ ರೀತಿಯಲ್ಲಿ ಆಗಿದ್ದನ್ನು ಕಾಣುತ್ತೇವೆ.

ವಿಶೇಷವಾಗಿ ವಿಜಯನಗರ ಮತ್ತು ಕನಕಗಿರಿ ನಾಯಕರ ಕಾಲದ ನೀರಾವರಿ ನಿರ್ಮಿತಿಗಳು ಹೆಚ್ಚಾಗಿ ಕಂಡುಬರುತ್ತಿದ್ದು ಅವರು ಕಲ್ಪಿಸಿದ ನೀರಾವರಿ ವ್ಯವಸ್ಥೆ ಇಂದಿಗೂ ಸಹ ಎಷ್ಟೋ ಕಡೆ ಉಳಿದು ಬಂದಿದ್ದು ಈಗಲೂ ಪ್ರಯೋಜನಕಾರಿಯಾಗಿವೆ. ಜಿಲ್ಲೆಯ ಕೆಲವು ಪ್ರಮುಖ ಶಾಸನೋಕ್ತ ಕೆರೆ ನೀರಾವರಿ ಕಾಮಗಾರಿ ವಿಷಯದ ಜೊತೆಗೆ ಇನ್ನು ಹಲವಾರು ಶಾಸನಗಳು ಗದ್ದೆಯನ್ನು ಧಾರ್ಮಿಕ ಕಾರ್ಯಗಳಿಗಾಗಿ ದಾನ ಬಿಟ್ಟಿರುವುದನ್ನು ದಾಖಲಿಸಿರುವುದನ್ನು ಸಹ ಗಮನಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಗೋಪಾಲ್ ಆರ್ (ಸಂ) ೨೦೧೦, ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
೨. ಪಾಟೀಲ್ ಹೆಚ್.ಎಸ್. (ಸಂ), ೨೦೧೨, ಕೊಪಣಸಿರಿ, 'ಅಖಿಲ ಭಾರತ ೭೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂಚಿಕೆ' ಗಂಗಾವತಿ, ಕಸಾಪ, ಬೆಂಗಳೂರು, ಪು೧ ೧೬೩-೧೬೫.
೩. ದೇವರಕೊಂಡಾರೆಡ್ಡಿ (ಪ್ರ.ಸಂ.), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. ೧, ಬಳ್ಳಾರಿ ಜಿಲ್ಲೆ ಶಾ.ಸಂ. ೫೧, ಹಳೇ ನೆಲ್ಲುಡಿ (ಬಳ್ಳಾರಿ ಜಿಲ್ಲೆ).
೪. ಚನ್ನಬಸಪ್ಪ ಪಾಟೀಲ್ ಮತ್ತು ವಿನೋದಾ ಸಿ. ಪಾಟೀಲ್ (ಸಂ) ೧೯೮೮, ಇನ್ಸ್‌ಕ್ರಿಪ್ಷನ್ಸ್ ಆಫ್ ಕೊಪ್ಪಳ ಡಿಸ್ಟ್ರಿಕ್ಟ್ ಶಾ.ಸಂ. ३೯೬, ಯಡಿಯಾಪುರ (ಯಲಬುರ್ಗಾ ತಾ.).
೫. ದೇವರಕೊಂಡಾರೆಡ್ಡಿ (ಪ್ರ.ಸಂ. ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. ೨, ಕೊಪ್ಪಳ ಜಿಲ್ಲೆ, ಶಾಸನ ಸಂಖ. ೧೪೮ ಹುಲಗಿ (ಕೊಪ್ಪಳ ತಾ.).
೬ ಅದೇ ಶಾ.ಸಂ. ೧, ಕವಲೂರು (ಕೊಪ್ಪಳ ತಾ.).
೭. ಅದೇ ಶಾ.ಸಂ. ೨೮, ಅಂಟೂರ ರಾಣ (ಕುಷ್ಟಗಿ ತಾ.)
೮. ಅದೇ ಶಾ.ಸಂ. ೧೬೨, ಅಚಲಾಪುರ (ಕೊಪ್ಪಳ ತಾ.).
೯. ಅದೇ ಶಾ.ಸಂ. ೧೬೩, ಅಚಲಾಪುರ (ಕೊಪ್ಪಳ ತಾ.).
೧೦. ಅದೇ ಶಾ.ಸಂ. ೧೨, ಪುರ (ಕುಷ್ಟಗಿ ತಾ.).
೧೧. ಅದೇ ಶಾ.ಸಂ. ೧೪, ಪುರ.
೧೨. ಚನ್ನಬಸಪ್ಪ ಪಾಟೀಲ್, ಪೂರ್ವೋಕ್ತ ಶಾ.ಸಂ. ೨೫೨, ಶಿವಪುರ (ಕೊಪ್ಪಳ ತಾ.)
೧೩. ದೇವರ ಕೊಂಡಾರೆಡ್ಡಿ, ಪೂರ್ವೋಕ್ತ ಶಾ.ಸಂ. ೭೫, ಕನಕಗಿರಿ (ಗಂಗಾವತಿ ತಾ.).
೧೪. ಅದೇ ಶಾ.ಸಂ. ೯೦ಎ ಕನ್ನೇರದುಡು (ಗಂಗಾವತಿ ತಾ.).
೧೫. ಅದೇ ಶಾ.ಸಂ. ೧೪೩, ಗಂಗನಹಾಳು (ಗಂಗಾವತಿ ತಾ.).
೧೬. ಚಿದಾನಂದಮೂರ್ತಿ ಎಂ. ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು, ಪುಟ ೪೦೪-೪೦೫.
೧೭. ದೇವರಕೊಂಡಾರೆಡ್ಡಿ, ಪೂರ್ವೋಕ್ತ ಶಾ.ಸಂ. ೫೭, ಬಳಗೇರಿ (ಯಲಬುರ್ಗಾ ತಾ.).
೧೮. ಅದೇ ಶಾ.ಸಂ. ೫೩, ಕುಕನೂರು (ಯಲಬುರ್ಗಾ ತಾ.).
೧೯. ಅದೇ ಶಾ.ಸಂ. ೨, ವಿಪ್ರ (ಗಂಗಾವತಿ ತಾ.).
೨೦. ಅದೇಶ ಶಾ.ಸಂ. ೬, ಅಳವಂಡಿ (ಕೊಪ್ಪಳ ತಾ.).
೨೧. ಅದೇ ಶಾ.ಸಂ. ೧೨, ಕಲ್ಲೂರು (ಯಲಬುರ್ಗಾ ತಾ.).
೨೨. ಅದೇ ಶಾ.ಸಂ. ೧, ಕವಲೂರು (ಕೊಪ್ಪಳ ತಾ.)
೨೩. ಅದೇ ಶಾ.ಸಂ. ೨, ಹೆಸರೂರು (ಕುಷ್ಟಗಿ ತಾ.).
೨೪. ಅದೇ ಶಾ.ಸಂ. ೫೩, ಕುಕನೂರು (ಯಲಬುರ್ಗಾ ತಾ.).
೨೫. ಅದೇ ಶಾ.ಸಂ. ೨೯, ಚಳಗೇರಿ (ಕುಷ್ಟಗಿ ತಾ.).
೨೬ ಅದೇ ಶಾ.ಸಂ. ೫೩, ಕುಕನೂರು (ಯಲಬುರ್ಗಾ ತಾ).
೨೭. ಶರಣಬಸಪ್ಪ ಕೊಲ್ಕಾರ, ೨೦೧೩, ವಿಜಯನಗರದ ಮಾತೃಸ್ಥಾನ ಆನೆಗುಂದಿ, ಬಸವ ಪ್ರಕಾಶನ ಗುಲಬರ್ಗಾ ಪು. ೮೪.
೨೮. ವಿಜಯವಾಣಿ ದಿನಪತ್ರಿಕೆ ದಿನಾಂಕ ೨೯-೦೧-೨೦೧೫ರಂದು ಪ್ರಕಟವಾದ 'ಕೆರೆ ಪಕ್ಕದ ಪಡಿಯಲ್ಲಿ ಶಾಸನ ಪತ್ತೆ' ವರದಿಯಾದ ಸಂಗ್ರಹಿಸಿದ ಮಾಹಿತಿ.
೨೯. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪು. ೮೩.

೨೦

ಶಾಸನಗಳಲ್ಲಿ ದಾವಣಗೆರೆ ಜಿಲ್ಲೆಯ ವೀರಪರಂಪರೆ

ವೈ. ಮದ್ದಾನಸ್ವಾಮಿ*

ಪ್ರಾಚೀನ ಕರ್ನಾಟಕದ ವಿವಿಧ ಅರಸರು ದೇಶ, ರಾಜ್ಯಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ಸೆಣಸಾಡಬೇಕಿತ್ತು. ಅಂತೆಯೇ ಅವುಗಳನ್ನು ರಕ್ಷಿಸಿಕೊಳ್ಳುವುದು ಅನಿವಾರ್ಯವೂ ಆಗಿತ್ತು. ಇಂತಹ ಸಮಯದಲ್ಲಿ ತಮ್ಮ ಅರಸರ ಸಲುವಾಗಿ ಎದುರಾಳಿಗಳನ್ನು ಹಿಮ್ಮೆಟ್ಟಿಸಲು ಪ್ರತಿಯೊಬ್ಬರು ಕಂಕಣಬದ್ಧರಾಗಿ ನಿಲ್ಲುತ್ತಿದ್ದರು. ಇಂತವರು ರಣರಂಗದಲ್ಲಿ ಹೋರಾಡಿ ಜಯಗಳಿಸುತ್ತಿದ್ದರು, ಇಲ್ಲವೆ ಪರಾಭವಗೊಳ್ಳುತ್ತಿದ್ದರು. ಹೀಗೆ ಎರಡು ಅರಸು ಮನೆತನಗಳ ಮಧ್ಯ ಕದನವೇರ್ಪಟ್ಟಾಗ ರಣರಂಗದಲ್ಲಿ ವೈರಿಗಳಿಂದ ಹತರಾಗಿ ವೀರಮರಣವನ್ನು ಪಡೆದು ವೀರತನಕ್ಕೆ ಆದರ್ಶರಾಗುತ್ತಿದ್ದರು. ಇಂತಹ ವೀರತನದ ಹೆಸರಿನ ಸ್ಮಾರಕಗಳಾಗಿ 'ವೀರಗಲ್ಲುಗಳು' ತಲೆಎತ್ತಿ ನಿಂತವು. ಅಷ್ಟೇ ಅಲ್ಲ ಅಂದಿನ ಯೋಧರು ಆಳರಸರ ಸಲುವಾಗಿ ರಣರಂಗದಲ್ಲಿಯೇ ಹೋರಾಡಿ ಮಡಿಯುವುದರಲ್ಲಿಯೇ ಜೀವನದ ಸಾರ್ಥಕತೆಯನ್ನು ಪಡೆಯುತ್ತಿದ್ದರು. ಇದಕ್ಕೆ ಸಾಕ್ಷಿಯಂಬಂತೆ ದಾವಣಗೆರೆ ಪ್ರದೇಶದ ಶಾಸನಗಳಲ್ಲಿ ಯೋಧರು ಅರಸರ ಸಲುವಾಗಿ ಬಲಿದಾನ ಮಾಡಿಕೊಳ್ಳುತ್ತಿದ್ದ ವೇಳವಾಳಿ, ಕೀಳ್ಗೋಗು, ಮುಂತಾದವುಗಳ ಜೊತೆಗೆ ಸಮರದಲ್ಲಿ ಹೋರಾಡಿದ ಬಿಲ್ಲ ಮೂನ್ನೂರ್ವರು (ಬಿಲ್ಲು ಸೈನಿಕರ ಸಂಘ) ಮುಂತಾದ ತ್ಯಾಗ ಮನೋಧರ್ಮದ ವೀರತನಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿ ಗಡಿಕಾಳಗ, ಊರಳಿವು, ಗೋಗ್ರಹಣ ಮುಂತಾದವುಗಳಲ್ಲಿ ದಾವಣಗೆರೆ ಜಿಲ್ಲೆಯ ಶಾಸನಗಳಲ್ಲಿ ಹೋರಾಡಿ ಮಡಿದ ವೀರರ ವಿವರವಾದ ಒಂದು ಪಟ್ಟಿಯನ್ನು ತಯಾರಿಸಲಾಗಿದ್ದು ಅದನ್ನು ಅಧ್ಯಯನದ ಕೊನೆಯಲ್ಲಿ ನೀಡಲಾಗಿದೆ.

ಬಿಲ್ಲ ಮುನ್ನೂರ್ವರು

ಬಿಲ್ಲು ಬಾಣಗಳಿಂದ ಯುದ್ಧ ಮಾಡುವುದು ಪ್ರಾಚೀನಕಾಲದ ಸಮರಕಲೆ, ಹೊಸ ಆಯುಧಗಳು ಬಂದಮೇಲೂ ಬಿಲ್ಲಾಳುಗಳ ಒಂದು ಪಡೆ ಸೈನ್ಯದಲ್ಲಿ ಇದ್ದೇ ಇತ್ತು. ವೈರಿಗಳ ಮೇಲೆ ದೂರದಿಂದ ಆಕ್ರಮಣ ಮಾಡುವ ಸಾಧನ ಆ ಕಾಲದಲ್ಲಿ ಇದೊಂದೇ ಆಗಿತ್ತು. ಬಿಲ್ಲುಗಾರರು ಕಟ್ಟಿಕೊಂಡ ಸಂಘವೇ ಬಿಲ್ಲಮನೂರ್ವರು ಎಂಬುದು ಪ್ರಾರಂಭದಲ್ಲಿ ಈ ಸಂಘಕ್ಕೆ ಮೂನ್ನೂರ್ವರು ಸದಸ್ಯರಾಗಿದ್ದಂತೆ ತೋರುತ್ತದೆ. ಮುಂದೆ ಈ ಸಂಖ್ಯೆ ಅವರ ಸಂಘಕ್ಕೆ ಶಾಶ್ವತ ಸಂಕೇತವಾಗಿ ಉಳಿದಂತಿದೆ.

ದಾವಣಗೆರೆ ಪ್ರದೇಶದ ಕುರುವದಗಡ್ಡೆ ಮತ್ತು ಬಿಳಿಚೋಡು ಶಾಸನಗಳಲ್ಲಿ ಇವರ ವರ್ಣನೆ ಬಂದಿದೆ. ಈ ಪ್ರದೇಶದ ಬಿಲ್ಲ ಮುನ್ನೂರ್ವರು ಬಿಲ್ಲು ಬಾಣಗಳಿಂದ ಹೋರಾಡಿ ಮಡಿದದ್ದು ಹಾಗೂ ಬಿಳಿಚೋಡು ಶಾಸನದಲ್ಲಿ 'ಬಿಲ್ಲಮೂನ್ನೂರ್ವರ ಪತಿ ಮಡಿವಾಳ ಕೇತಹೆಮ್ಮನು ಬೆಲ್ತುರುವಿನ ಕೇತಗಾವುಂಡನೊಡನೆ ಕಾದಿ ಜಯಗೆಯ್ದು ಸತ್ತ' ಎಂಬ ಉಲ್ಲೇಖ ನೋಡಲಾಗಿ ಬಿಲ್ಲಪಡೆಯ (ಪತಿ) ಮುಖ್ಯಯೋಧನು ಹೋರಾಡಿ ಮಡದಿದ್ದು ತಿಳಿದು ಬರುತ್ತದೆ. ಬಿಲ್ಲಮುನ್ನೂರ್ವರ ಮುಖ್ಯಸ್ಥನಾದ ಸೋಮನಾಯಕ ಮತ್ತು ಅವನ ಸಾಮಂತ ರುರಾಮನಾಥದೇವರಿಗೆ ದತ್ತಿ ಬಿಟ್ಟಿದ್ದು ಕಂಡುಬರುತ್ತದೆ. ಇದರಿಂದ ದಾವಣಗೆರೆ ಜಿಲ್ಲೆಯ ಹಲವಾರು ಕಡೆಗಳಲ್ಲಿ ಬಿಲ್ಲುಗಾರರು ಹಾಗೂ ಅವರ ಸಂಘಗಳು ಇದ್ದುದು ಕಂಡುಬರುವುದು.

ವೇಳೆವಾಳಿ

ಇದು ಆತ್ಮಬಲಿಯ ಒಂದು ಪ್ರಕಾರ ಅನ್ನವನಿಟ್ಟ ಒಡೆಯ ಇಲ್ಲವೆ ಒಡತಿ ಮಡಿದರೆ ತಾವೂ ಮಡಿಯುವುದಾಗಿ ಹಲವರು ಪ್ರತಿಜ್ಞೆ ಮಾಡುತ್ತಿದ್ದರು. ಹೀಗೆ ಪ್ರತಿಜ್ಞೆ ಸ್ವೀಕರಿಸುವವನಗೆ 'ವೇಳೆವಡಿಚ', ಪ್ರತಿಜ್ಞೆ ಕೈಗೊಳ್ಳುವುದನ್ನು 'ವೇಳೆಗೋಳ್' ಎಂದು, ಒಡೆಯ ಮಡಿದಾಗ ಅವನೊಂದಿಗೆ ಮಡಿಯುವುದನ್ನು 'ವೇಳೆವಾಳಿ' ಎಂದು ಕರೆಯಲಾಗುತ್ತದೆ. ವೇಳೆವಾಳಿತನ ಕೃತಜ್ಞತೆಯ ಪರಾಕಾಷ್ಠತೆಯಾಗಿದೆ.

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ. ಮೊ. ೯೬೨೦೧೭೯೯೮೭.

ದಾವಣಗೆರೆ ಪ್ರದೇಶದ ಬೆಳಗುತ್ತಿ ಶಾಸನ ವೇಳೆವಾಳಿಯ ಒಂದು ಪ್ರಸಂಗ ಉಲ್ಲೇಖಿಸುತ್ತದೆ. ಮಹಾಮಂಡಳೇಶ್ವರ ತೈಲಪನು ಸ್ವರ್ಗಸ್ಥನಾಗಲು ಬೊಪ್ಪಣನು 'ವೇಳೆವಾಳೆಯಂಗೈದು ಆತನ ಜೊತೆಯಲ್ಲಿಯೇ ಸ್ವರ್ಗಸ್ಥನಾದನು. ಇಲ್ಲಿ ತನ್ನನ್ನು ಪೋಷಿಸಿದ (ಮಹಾರಾಜನಿಗೆ) ಮಹಾಮಂಡಳೇಶ್ವರನಿಗೆ ನಿಷ್ಠೆಯಿಂದ ತಾನು ಅವನೊಂದಿಗೆ ಸ್ವರ್ಗಸ್ಥಾನಾಗಿದ್ದುದು ತಿಳಿದುಬರುತ್ತದೆ.

ಕೀಳ್ಗೋಗು

'ಕೀಳ್ಗೋಗ ಅಥವಾ ಕೀಳ್ಗುಂಟೆ ಹೋಗುವುದೆಂದರೆ ತನ್ನ ಒಡೆಯನ ಚಿತೆಯ ಕೆಳಗೆ ಅಥವಾ ಸಮಾಧಿಯ ಕೆಳಗೆ ಹೂಳಲ್ಪಡುವುದು' ಎಂದು ಬಿ.ಎಲ್. ರೈಸರು ಅರ್ಥೈಸಿದ್ದಾರೆ. (ಇದಕ್ಕೆ ಚಿದಾನಂದ ಮೂರ್ತಿಯವರ ಒಪ್ಪಿಗೆಯು ಇದೆ) ಇಂತಹ ಆತ್ಮ ಬಲಿಯ ಪ್ರಸಂಗಗಳು ತೀರ ಕ್ವಚಿತ್ತಾಗಿ ಶಾಸನಗಳಲ್ಲಿ ಕಂಡುಬರುತ್ತವೆ. ಅಂಥದರಲ್ಲಿ ದಾವಣಗೆರೆ ಜಿಲ್ಲೆಯಲ್ಲಿಯ ಕ್ರಿ.ಶ. ೯೩೦ರ ನಂದಿಗುಡಿ ಶಾಸನದಲ್ಲಿ 'ಕಿಳ್ಗುಣಿ' ಎಂಬ ಪದ ಕಂಡು ಬರುತ್ತದೆ ಇಲ್ಲಿ 'ಕಿಳ್' ಎಂದರೆ ಕೆಳಗೆ 'ಕುಣಿ' ಎಂದರೆ ತಗ್ಗು. ಇಲ್ಲಿ ಒಡೆಯನ ಸಮಾಧಿಯ ಇಲ್ಲವೆ ಚಿತಾಕುಂಡದ ಕೆಳಭಾಗದಲ್ಲಿ ಅವನಿಗೆ ಪ್ರಿಯವಾದ ವ್ಯಕ್ತಿಯನ್ನು ಮಲಗಿಸಬಹುದೆ? ಎನಿಸುತ್ತದೆ ಎಂದು ಚೆನ್ನಕ್ಕ ಪಾವಟೆಯವರು ಬಿ.ಎಲ್. ರೈಸರ ಹೇಳಿಕೆಯನ್ನು ಇಲ್ಲಿ ಸಮರ್ಥಿಸಿಕೊಂಡಿದ್ದಾರೆ.

ದಾವಣಗೆರೆ ಜಿಲ್ಲೆಯ ವೀರಗಲ್ಲುಗಳು

'ವೀರ' ಎಂಬ ಶೀರ್ಷಿಕೆಯಡಿಯಲ್ಲಿ ದಾವಣಗೆರೆ ಪ್ರದೇಶದ ಶಾಸನಗಳಲ್ಲಿ ಯೋಧರ ಕೆಲವು ಪ್ರಬೇದಗಳು ಹಾಗೂ ಆತ್ಮ ಬಲಿಯ ಕೆಲವು ಪ್ರಕಾರಗಳು ತಿಳಿದುಬಂದಿವೆ. ಇವುಗಳಲ್ಲದೆ ಊರಳಿವು, ಗಡಿಕಾಳಗ, ತುರುಕಾಳಗಳಿಗೆ ಸಂಬಂಧಿಸಿದಂತೆ ಅನೇಕ ವೀರಗಲ್ಲುಗಳು ಬಹುತೇಕ ಗ್ರಾಮಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಹೆಸರಿಸಲಾದ ಮಡಿದ ವೀರರ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ದೊರತ ವೀರಗಲ್ಲುಗಳ ವಿವರ

ಗ್ರಾಮ	ತಾಲ್ಲೂಕು	ಕಾಲ	ಮನೆತನದ	ಅರಸ/ವೀರರು	ಉದ್ದೇಶ	ಆಕರ/ಉಲ್ಲೇಖ
ಬೇತೂರು	ದಾವಣಗೆರೆ	೧೧೮೪	ರಾಷ್ಟ್ರಕೂಟ	–	ಯುದ್ಧ	EC-XI
ಬೇತೂರು	ದಾವಣಗೆರೆ	೧೧೮೪	ರಾಷ್ಟ್ರಕೂಟ	–	ಯುದ್ಧ	EC-XI
ಮಾಯಕೊಂಡ	ದಾವಣಗೆರೆ	–	ಹೊಯ್ಸಳ	ನರಸಿಂಹ	ಹಗೆತನ	EC-XI
ಆಲೂರು	ದಾವಣಗೆರೆ	೧೨೦೦	ಹೊಯ್ಸಳ	–	–	EC-XI
ಹರಿಹರ	ಹರಿಹರ	೧೩೦೦	ಹೊಯ್ಸಳ	ಹರಿಹರ	ಹಗೆತನ	EC-XI
ಕಡ್ಲೇಬಾಳು	ಹರಿಹರ	೧೨೮೮	ಹೊಯ್ಸಳ	ರಾಮಚಂದ್ರ	ಹಗೆತನ	EC-XI
ಚಿಕ್ಕಬಿದರಿ	ಹರಿಹರ	೧೨೬೫	ಹೊಯ್ಸಳ	ಮಹಾದೇವರಾಯ	ಹಗೆತನ	EC-XI
ಚಿಕ್ಕಬಿದರಿ	ಹರಿಹರ	೧೨೬೮	ಹೊಯ್ಸಳ	–	ಕೆರೆರಕ್ಷಣೆ	EC-XI
ಹಿರೆ ಹಾಲಿವಾಣ	ಹರಿಹರ	೧೧೪೮	ಅಳೂಪ	ವೀರ ಪಾಂಡ್ಯದೇವ	ಸ್ಮರಣೆಗಾಗಿ	EC-XI
ನಂದಿಗುಡಿ	ಹರಿಹರ	೯೩೦	ಗಂಗ	ಚುಂದಿ	–	EC-XI
ಚಿರಸ್ತೆಹಳ್ಳಿ	ಹರಪನಹಳ್ಳಿ	೯೩೧	ರಾಷ್ಟ್ರಕೂಟ	ಗೋವಿಂದ–೪	–	SII-IX-I
ಬಾಗಳಿ	ಹರಪನಹಳ್ಳಿ	೯೮೬	ರಾಷ್ಟ್ರಕೂಟ	–	–	SII-IX-I
ಚಿರಸ್ತಹಳ್ಳಿ	ಹರಪನಹಳ್ಳಿ	೮೫೩	–	ಪಡಿಗನೊಂಬ	–	SII-IX-I
ಕಡಬಗೆರೆ	ಹರಪನಹಳ್ಳಿ	೯೩೩	–	ಅಣ್ಣಿಗನು	–	SII-IX-I
ಚಿಗಟೇರಿ	ಹರಪನಹಳ್ಳಿ	೧೧೩೨	–	ಪೊಂಮಯ್ಯ	–	SII-IX-I
ಕಡತಿ	ಹರಪನಹಳ್ಳಿ	೧೨೮೨	–	ಬಸವದೇವ	–	SII-IX-I
ಹಲುವಾಗಲು	ಹರಪನಹಳ್ಳಿ	೧೨೮೭	–	ಸೆಜಿಯಮಲ್ಲಯ್ಯ	–	SII-IX-I
ಹಲಗಿಲವಾಡ	ಹರಪನಹಳ್ಳಿ	೧೨೮೭	–	ಹಂಪಸೆಟ್ಟಿ	–	ಬ.ಜಿ.ಶಾ.ಸಂ–೧
ನಿಟ್ಟೂರು	ಹರಪನಹಳ್ಳಿ	೧೨ ಶತ	–	ಪೊಣೋಜಣ	–	ಬ.ಜಿ.ಶಾ.ಸಂ–೧
ಕಡತಿ	ಹರಪನಹಳ್ಳಿ	೧೨೯೨		ಚಟ್ಟರಸ		SII-IX-I

ಗ್ರಾಮ	ತಾಲ್ಲೂಕು	ಕಾಲ	ಮನೆತನದ	ಅರಸ/ವೀರರು	ಉದ್ದೇಶ	ಆಕರ/ಉಲ್ಲೇಖ
ಬಸವನಕೋಟೆ	ಜಗಳೂರು	೯೦೭	ರಾಷ್ಟ್ರಕೂಟ	ಅಕಾಲವರ್ಷ	ಯುದ್ಧ	EC-XI
ಬಿಳಿಚೋಡು	ಜಗಳೂರು	–	ಹೊಯ್ಸಳ	–	–	EC-XI
ದೊಡ್ಡುಲವರ್ತಿ	ಜಗಳೂರು	೮೧೦	ನೊಳಂಬ	ಸಿಂಗಪೋತ	ಹಗೆತನ	EC-XI
ದೊಡ್ಡುಲವರ್ತಿ	ಜಗಳೂರು	೯೨೫	ನೊಳಂಬ	ಅಣ್ಣಯ್ಯಬೀರ	ತುರುಗಾಳಗ	EC-XI
ದೊಡ್ಡುಲವರ್ತಿ	ಜಗಳೂರು	೮೧೦	ನೊಳಂಬ	ಕಲಿನೊಳಂಬ	ಹಗೆತನ	EC-XI
ದೊಡ್ಡುಲವರ್ತಿ	ಜಗಳೂರು	೮೧೦	ಗಂಗ	ಪೆರ್ಮಾಡಿ	ಯುದ್ಧ	EC-XI
ಕೊಟಗೆರೆ	ಜಗಳೂರು	೧೫೫೨	–	–	ಹಗೆತನ	EC-XI
ಮತ್ಸ್ಯಸಮುದ್ರ	ಜಗಳೂರು	–	–	–	ಹಗೆತನ	EC-XI
ಅಸಗೋಡು	ಜಗಳೂರು	೧೦೧೦	–	ಕಡಹೊಸ	–	EC-XI
ಹೊನ್ನಾಳಿ	ಹೊನ್ನಾಳಿ	೧೦೬೪	–	ಪಿರಿಯಪ್ಪ	ತುರುಗಾಳಗ	EC-VII
ಕುರುವದಗಡ್ಡೆ	ಹೊನ್ನಾಳಿ	೧೨೮೮	–	–	–	EC-VII
ಸೊರಟೂರು	ಹೊನ್ನಾಳಿ	೧೨೮೮	–	–	–	EC-VII
ಸೊರಟೂರು	ಹೊನ್ನಾಳಿ	೯೩೪	–	–	ಯುದ್ಧ	EC-VII
ಸೊರಟೂರು	ಹೊನ್ನಾಳಿ	೯೩೪	–	–	–	EC-VII
ಚಿಕ್ಕಯೆರೆಹಳ್ಳಿ	ಹೊನ್ನಾಳಿ	೧೧೭೩	–	–	ತುರುಗಾಳಗ	EC-VII
ಚಿಕ್ಕಯೆರೆಹಳ್ಳಿ	ಹೊನ್ನಾಳಿ	೧೧೭೨	–	ಚೀಲಯ್ಯಕೇತಯ್ಯ	ತುರುಗಾಳಗ	EC-VII
ಚಿಕ್ಕಯೆರೆಹಳ್ಳಿ	ಹೊನ್ನಾಳಿ	೧೧೯೭	–	–	ತುರುಗಾಳಗ	EC-VII
ಬೆಳಗುತ್ತಿ	ಹೊನ್ನಾಳಿ	–	–	ಚಟ್ಟನಾಯಕ	ತುರುಗಾಳಗ	EC-VII
ಬೆಳಗುತ್ತಿ	ಹೊನ್ನಾಳಿ	–	–	ಗಟ್ಟನಾಯಕ	ತುರುಗಾಳಗ	EC-VII
ಬೆಳಗುತ್ತಿ	ಹೊನ್ನಾಳಿ	–	–	ಕೇಶವನಾಯಕ	ತುರುಗಾಳಗ	EC-VII
ಬೆಳಗುತ್ತಿ	ಹೊನ್ನಾಳಿ	೧೨೫೧	–	–	ಯುದ್ಧ	EC-VII
ಬೆಳಗುತ್ತಿ	ಹೊನ್ನಾಳಿ	೧೨೫೧	–	–	–	EC-VII
ಬೆಳಗುತ್ತಿ	ಹೊನ್ನಾಳಿ	೧೨೩೨	–	–	–	EC-VII
ಬೆಳಗುತ್ತಿ	ಹೊನ್ನಾಳಿ	೧೨೧೫	–	–	ಯುದ್ಧ	EC-VII
ಬೆಳಗುತ್ತಿ	ಹೊನ್ನಾಳಿ	೧೨೧೬	–	ಚಿಣ್ಣಯ್ಯ	ತುರುಗಾಳಗ	EC-VII
ಬೆಳಗುತ್ತಿ	ಹೊನ್ನಾಳಿ	೧೨೪೪	–	–	ಯುದ್ಧ	EC-VII
ಕೂಲಹಳ್ಳಿ	ಹೊನ್ನಾಳಿ	೧೨೪೭	–	–	ಯುದ್ಧ	EC-VII
ನ್ಯಾಮತಿ	ಹೊನ್ನಾಳಿ	೧೧೨೫	–	–	ತುರುಗಾಳಗ	EC-VII
ಅರಕೆರೆ	ಹೊನ್ನಾಳಿ	೧೧೮೫	–	–	ತುರುಗಾಳಗ	EC-VII
ಬೇಲಿಮಲ್ಲೂರು	ಹೊನ್ನಾಳಿ	೧೧೬೬	–	ಕಾಮೋಜ	–	EC-VII
ಬೆಳಗುತ್ತಿ	ಹೊನ್ನಾಳಿ	೧೧೯೬	–	ಮೈಲಯ್ಯನಾಯಕ	–	EC-VII
ಸಾಸುವೆಹಳ್ಳಿ	ಹೊನ್ನಾಳಿ	೧೧೮೯	–	ದುಗ್ಗಣ್ಣ	–	EC-VII
ಬೆಳಗುತ್ತಿ	ಹೊನ್ನಾಳಿ	೧೧೯೫	–	ಕಲ್ಲೇಯನಾಯಕ	–	EC-VII
ಮರಡಿ	ಹೊನ್ನಾಳಿ	೧೨೪೫	–	ಬಪ್ಪರಬಾಹು	–	EC-VII
ಬೆಳಗುತ್ತಿ	ಹೊನ್ನಾಳಿ	೧೨೪೪	–	ಐಚುಗ	–	EC-VII
ಕುಳ್ಳಹಳ್ಳಿ	ಹೊನ್ನಾಳಿ	೧೨೪೭	–	ಐಚಣ	–	EC-VII
ಕುಳ್ಳಹಳ್ಳಿ	ಹೊನ್ನಾಳಿ	–	–	ಗೂಳಿಗೊಡದುಗ್ಗ	–	EC-VII
ಕುಳ್ಳಹಳ್ಳಿ	ಹೊನ್ನಾಳಿ	–	–	ಬಪ್ಪರಬಾಹು	–	EC-VII
ಹೊನ್ನಾಳಿ	ಹೊನ್ನಾಳಿ	೧೦೬೪	–	ಈರಮಾಚಗಾವುಂಡ	–	EC-VII
ತ್ಯಾವಣಗಿ	ಚನ್ನಗಿರಿ	೯೯೨	–	–	–	EC-VII
ಹಿರೆಕೋಗಿಲೂರು	ಚನ್ನಗಿರಿ	–	–	–	ಹೋರಾಟ	EC-VII
ಹಿರೆಕೋಗಿಲೂರು	ಚನ್ನಗಿರಿ	೧೨೮೦	–	–	–	EC-VII
ಬಿಲ್ಲಹಳ್ಳಿ	ಚನ್ನಗಿರಿ	೧೧೭೦	–	–	–	EC-VII
ಬಿಲ್ಲಹಳ್ಳಿ	ಚನ್ನಗಿರಿ	೧೨೦೦	–	–	–	EC-VII
ದೊಂಡ್ರಗಟ್ಟ	ಚನ್ನಗಿರಿ	೧೨೨೯	–	–	ತುರುಗಾಳಗ	EC-VII
ನಲ್ಕುದುರೆ	ಚನ್ನಗಿರಿ	೧೨೪೨	–	–	–	EC-VII

ಗ್ರಾಮ	ತಾಲ್ಲೂಕು	ಕಾಲ	ಮನೆತನದ	ಅರಸ/ವೀರರು	ಉದ್ದೇಶ	ಆಕರ/ಉಲ್ಲೇಖ
ನಲ್ಲುದುರೆ	ಚನ್ನಗಿರಿ	೧೨೭೭	–	–	ತುರುಗಾಳಗ	EC-VII
ನಲ್ಲುದುರೆ	ಚನ್ನಗಿರಿ	೧೨೭೯	–	–	ತುರುಗಾಳಗ	EC-VII
ನಲ್ಲುದುರೆ	ಚನ್ನಗಿರಿ	೧೨೪೨	–	ಬೊಮ್ಮೆಯನಾಯಕ	–	EC-VII
ಅಸ್ತಾಪನಹಳ್ಳಿ	ಚನ್ನಗಿರಿ	೧೨೨೯	–	ಮಲ್ಲಗಾವುಂಡ	–	EC-VII

ಆಧಾರ ಗ್ರಂಥಗಳು

೧. ಚೆನ್ನಕ್ಕ ಎಲಿಗಾರ, 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ', ೧೯೯೦.

೨. ಚಿದಾನಂದಮೂರ್ತಿ ಎಂ., 'ಕನ್ನಡ ಶಾಸನಗಳ ಸಾಂಸ್ಕೃತಿಕಅಧ್ಯಯನ', ೨೦೧೧ .

೩. ಪರಮಶಿವಮೂರ್ತಿ, 'ಕನ್ನಡ ಶಾಸನ ಶಿಲ್ಪ', ೧೯೯೯.

೪. ಗಿರಿಜ.ಟಿ., 'ದಾವಣಗೆರೆ ಇದು ನಮ್ಮ ಜಿಲ್ಲೆ', ೨೦೦೧.

೫. ಶೇಷಶಾಸ್ತ್ರಿ ಆರ್., 'ಕರ್ನಾಟಕದ ವೀರಗಲ್ಲುಗಳು', ೧೯೮೨.

೬ ಕಲಬುರ್ಗಿ ಎಂ.ಎಂ., 'ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು', ೧೯೮೦.

೭. ತಿಪ್ಪೇರುದ್ರಸ್ವಾಮಿ ಹೆಚ್., 'ಕರ್ನಾಟಕದ ಸಂಸ್ಕೃತಿ ಸಮೀಕ್ಷೆ', ೨೦೧೫.

೮. ರಾಜನ್.ಕೆ., 'ಸೌತ್ ಇಂಡಿಯನ್ ಮೆಮೋರಿಯಲ್ ಸ್ಟೋನ್ಸ್', ೨೦೦೦.

೯. ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಶನ್ಸ್, Vol –IX, ಭಾಗ–I.

೧೦. ಎಫಿಗ್ರಾಫಿಯ ಕರ್ನಾಟಕ, Vol –VII & IX.

೧೧. ಬಳ್ಳಾರಿ ಜಿಲ್ಲಾ ಶಾಸನ, ಸಂಪುಟ Vol-I.

೭೧

ಪ್ರಾಚೀನ ಕರ್ನಾಟಕದ ಕನ್ನಡ ಶಾಸನಗಳಲ್ಲಿ ಮಹಿಳಾ ಕೃಷಿಕರ ಪಾತ್ರ ನಿರ್ವಹಣೆ

ಆರ್. ರಂಜಿತಾ*

ಕೃಷಿಯು ಮಾನವನ ಜೀವನ ನಿರ್ವಹಣೆಯಲ್ಲಿ ಬಹುಮುಖ್ಯ ಭಾಗಗಳಲ್ಲಿ ಒಂದಾಗಿ ಕಂಡುಬರುತ್ತದೆ. ಇಂತಹ ಕೃಷಿಯ ಇತಿಹಾಸದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವರು ಮಹಿಳೆಯರು. ಇವರು ಕೃಷಿಯನ್ನು ತಮ್ಮ ಜೀವನದ ಒಂದು ಭಾಗವಾಗಿ ನೋಡದೆ ಜೀವನ ವಿಧಾನವನ್ನಾಗಿ ರೂಪಿಸಿಕೊಂಡವರು. ಮಾನವನು ಕೃಷಿಯನ್ನು ಕಂಡುಕೊಳ್ಳುವ ಪೂರ್ವದಲ್ಲಿ ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದನು. ತನ್ನ ಹಸಿವಿನ ಇಂಗಿತವನ್ನು ಪೂರೈಸಿಕೊಳ್ಳಲು ಬೇಟೆಯಾಡುತ್ತಿದ್ದನು. ಈ ಬೇಟೆ ಸಂಸ್ಕೃತಿಯ ಮುಂದುವರಿದ ಹಂತ ಪಶುಪಾಲನೆ ಮತ್ತು ಕೃಷಿ. ಕೃಷಿಯ ಹುಟ್ಟಿನ ಇತಿಹಾಸವನ್ನು ಗುರುತಿಸುವ ಸಂದರ್ಭದಲ್ಲಿ ಅಲ್ಲಿ ಮೊದಲಾಗುವವರು ಮಹಿಳೆಯರು. ಇದಕ್ಕೆ ನಿದರ್ಶನವೆಂಬಂತೆ 'ಕ್ರಿ.ಪೂ. ೫೦,೦೦೦ ವರ್ಷಗಳ ಹಿಂದಿನ ಗುಹಾ ಚಿತ್ರವೊಂದು ಉತ್ತರ ಆಫ್ರಿಕಾದಲ್ಲಿ ದೊರೆತಿದೆ. ಆ ಗುಹಾ ರೇಖಾಚಿತ್ರದಲ್ಲಿ ಮೂರು ಚಿತ್ರಗಳನ್ನು ಬಿಡಿಸಲಾಗಿದೆ. ಅದರ ಒಂದು ಚಿತ್ರದಲ್ಲಿ ಗಂಡಸು ಮೀನಿನ ಬೇಟೆಯಾಡುತ್ತಿದ್ದರೆ, ಇನ್ನೊಂದು ನಾಯಿಗಳ ಜೊತೆಯಲ್ಲಿರುವ ಚಿತ್ರದಲ್ಲಿ, ಗಂಡಸರು ಬೇಟೆಯಾಡಿದ ಪ್ರಾಣಿಯನ್ನು ಹೊತ್ತು ತರುತ್ತಿರುವ ಚಿತ್ರವಿದೆ. ಮತ್ತೊಂದು ಚಿತ್ರದಲ್ಲಿ ಹೆಂಗಸೊಬ್ಬಳು ಚೂಪಾದ ಕಟ್ಟಿಗೆಯ ಸಹಾಯದಿಂದ ಗೆಡ್ಡೆಯೊಂದನ್ನು ಅಥವಾ ಬುಲ್‌ಬೌಸ್ ಪ್ಲಾಂಟನ್ನು ಅಗೆಯುತ್ತಿರುವಂತೆ ಚಿತ್ರಿಸಲಾಗಿದೆ.[೧] ಇದಕ್ಕೆ ಪೂರಕವೆಂಬಂತೆ 'ಆಸ್ಟ್ರೇಲಿಯಾದಲ್ಲಿಯೂ ಗಂಡಸರು ಬೇಟೆಗೆ ಹೋದಾಗ ಹೆಂಗಸರು ಬೇರುಗಳಿಗಾಗಿ ತನ್ನ ಗುಡಾರದ ಸುತ್ತ ನೆಲ ಅಗೆಯುವುದು, ಮರಗಳಿಂದ ಹಣ್ಣು ಕಾಯಿಗಳನ್ನು ಕೀಳುವುದು, ಜೇನು, ಅಣಬೆ, ಬೀಜ, ಕಾಳುಗಳನ್ನು ಸಂಗ್ರಹಿಸುತ್ತಿದ್ದಳು.[೨] ಎಂದು ತಿಳಿದುಬಂದಿದೆ. ಇದನ್ನು ಗಮನಿಸಿದರೆ ಮಹಿಳೆಯರು ತಮ್ಮ ಗಂಡಸರು ಬೇಟೆಗೆ ಹೋದ ಬಿಡುವಿನ ವೇಳೆಯಲ್ಲಿ ತಮ್ಮ ಹಸಿವು ಮತ್ತು ತಮ್ಮ ಮಕ್ಕಳ ಲಾಲನೆ, ಪಾಲನೆ ಪೋಷಣೆಯ ಜವಾಬ್ದಾರಿ, ಹೊಣೆಗಾರಿಕೆ ಅವರ ಮೇಲಿರುತ್ತಿತ್ತು. ಆ ಜವಾಬ್ದಾರಿಯನ್ನು ಹೊತ್ತ ಮಹಿಳೆಯರು ತಮ್ಮ ಮಕ್ಕಳ ಹಸಿವಿನ ನಿವಾರಣೆಯ ಸಲುವಾಗಿಯೋ ಅಥವಾ ಬಿಡುವಿನ ಅವಧಿಯ ಬೇಸರದ ನಿವಾರಣೆಗಾಗಿಯೋ ಆಹಾರದ ಅನ್ವೇಷಣೆಯ ಕಾರ್ಯದಲ್ಲಿ ತೊಡಗಿರುವ ಸಾಧ್ಯತೆಗಳಿವೆ. ತನ್ನ ಗುಡಿಸಲ ಸುತ್ತ ನೆಲ ಅಗೆಯುತ್ತಿದ್ದರೆಂಬ ಸಂಗತಿಯು ಇಂದಿಗೂ ಹಲವಾರು ಬುಡಕಟ್ಟುಗಳಲ್ಲಿ ತಮ್ಮ ಜೋಪಡಿಯ ಸುತ್ತ ಗೆಡ್ಡೆಗೆಣಸು, ಸೊಪ್ಪು, ಬಳ್ಳಿಗಳ ಕುಮ್ರಿ ಬೇಸಾಯ ಅಥವಾ ಸ್ಥಾನಿಕ ಬೇಸಾಯದಂತಹ ಉದಾಹರಣೆಗಳು ಇಂದಿಗೂ ನಮ್ಮ ಮುಂದೆ ಜೀವಂತವಾಗಿವೆ. ಈ ಸಂಗತಿಗಳ ಆಧಾರದ ಮೇಲೆ ಕೃಷಿಯು ಮೊದಲು ಮಹಿಳೆಯರಿಂದ ಆರಂಭವಾಯಿತು ಎನ್ನಲಾಗಿದೆ.

ಕೃಷಿ ಹುಟ್ಟಿ ಬೆಳೆಯುವ ಹಂತದಲ್ಲಿ ಮಹಿಳೆಯರು ಶ್ರಮವಹಿಸಿ ದುಡಿಯುತ್ತ ಬಂದಿರುವರು. ಕ್ರಿ.ಪೂ. ೧೦೦೦ದ ಕಬ್ಬಿಣ ಆವಿಷ್ಕಾರದಿಂದಾಗಿ ಅಲ್ಪ ಪ್ರಮಾಣದಲ್ಲಿ ಅವರ ದುಡಿಮೆಯ ನಿರ್ವಹಣೆಯಲ್ಲಿ ಬದಲಾವಣೆಗಳಾಗಿರುವ ಸಾಧ್ಯತೆಗಳಿವೆ. ಕೃಷಿ ಆರ್ಥಿಕತೆಯ ಕಡೆಗೆ ಮುಖ ಮಾಡುವವರೆಗೆ ಕೃಷಿಯ ನಿರ್ವಹಣೆ ಮಹಿಳೆಯರಲ್ಲೆ ಕೇಂದ್ರೀಕೃತವಾಗಿದ್ದು, ಆರ್ಥಿಕತೆ ಮತ್ತು ಕೌಟುಂಬಿಕ ಜವಾಬ್ದಾರಿಯ ಕಾರಣಕ್ಕಾಗಿ ಪುರುಷರಿಗೆ ಹಸ್ತಾಂತರ ಆಗಿರುವ ಸಾಧ್ಯತೆಗಳು ಅಧಿಕ. ಕೃಷಿ ಎಂದರೆ ಮಹಿಳೆ ಎಂಬಷ್ಟರ ಮಟ್ಟಿಗೆ ಕೃಷಿಯೊಂದಿಗಿನ ಮಹಿಳೆಯರ ಬದುಕು ಅನ್ಯೋನ್ಯ ಎಂಬುದಕ್ಕಿಂತ ಅನಿವಾರ್ಯವಾದುದು. ಮಹಿಳೆಯರನ್ನು ಭೂಮಿತಾಯಿಗೆ ಹೋಲಿಸಿರುವುದಲ್ಲದೆ ಕ್ಷಿತಿಜೆ ಎಂದೆಲ್ಲ ಕರೆಯುತ್ತಾರೆ. ರಾಮಾಯಣದ ಜನಕರಾಜನ ಮಗಳು ಸೀತಾ ಎಂಬುದು 'ನೇಗಿಲಗೆರೆ' ಎಂಬ ಅರ್ಥವನ್ನು ಹೊಂದಿದೆ. ಇದು ಕೃಷಿಯೊಂದಿಗಿನ ಮಹಿಳೆಯರ ಬದುಕು ಮತ್ತು ಸಂಬಂಧದ ಇತಿಹಾಸವನ್ನು ತಿಳಿಸುತ್ತದೆ.

* ಸಂಶೋಧನಾ ವಿದ್ಯಾರ್ಥಿನಿ, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬.

ಶಾಸನಗಳಲ್ಲಿ ಕೃಷಿಗೆ ಕೊಡುಗೆ ನೀಡಿದ ಅಥವಾ ಕೃಷಿಯಲ್ಲಿ ನಿರತರಾದ ಮಹಿಳೆಯರ ಉಲ್ಲೇಖಗಳ ಸಂಖ್ಯೆ ತೀರ ಗೌಣವಾಗಿರುವುದು ಕಂಡುಬರುತ್ತದೆ. ಸಾಮಾನ್ಯ ಜನತೆಯ, ಕೃಷಿಕರ ಉಲ್ಲೇಖಗಳೇ ವಿರಳವಾಗಿರುವಾಗ ಕೃಷಿ ಭೂಮಿಯಲ್ಲಿ ದುಡಿದು ಜೀವನ ಸವೆಸಿದ ಕೃಷಿನಿರತ ಮಹಿಳೆಯರನ್ನು ದಾಖಲಿಸಿರುವುದು ದೂರದ ಮಾತು. ಶಾಸನಗಳಲ್ಲಿ ಕೃಷಿನಿರತ ಮಹಿಳೆಯರ ದಾಖಲೆಗಳು ದೊರೆಯುವುದಿಲ್ಲ. ಆದರೆ ಕೃಷಿಗೆ ಪೂರಕವಾಗಿ ಕೆರೆ, ಬಾವಿಗಳಂತಹ ನಿರ್ಮಾಣ ಕಾರ್ಯಗಳಲ್ಲಿ ತೊಡಗಿದ, ಕೃಷಿ ಕಾರ್ಯಗಳಲ್ಲಿ ಆಸಕ್ತಿ ತೋರಿಸಿದ, ಪರೋಕ್ಷವಾಗಿ ಕೃಷಿಗೆ ಸಹಕರಿಸಿದ ಮಹಿಳೆಯರನ್ನು ಗುರುತಿಸಬಹುದು. ಅವರಲ್ಲಿ ಅರಸ, ಪೆರ್ಗಡೆ, ಗಾವುಂಡ, ಮೊದಲಾದ ಅಧಿಕಾರಿ ಮನೆತನದ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿರುವುದು ಕಂಡುಬರುತ್ತದೆ. ಇಲ್ಲಿಯೂ ಸಾಮಾನ್ಯ ವರ್ಗದ ಮಹಿಳೆಯರ ಸಂಖ್ಯೆ ವಿರಳ. ಶಾಸನಗಳು ಎಲ್ಲೋ ಒಂದಷ್ಟು ಆಡಳಿತ ಕಾರ್ಯದಲ್ಲಿ ನಿರತರಾದ ಅಕ್ಕಾದೇವಿ, ಸೋಮಲದೇವಿ, ಶಾಂತಲೆ, ಅತ್ತಿಮಬ್ಬೆ, ಬಿಜ್ಜಲದೇವಿ, ತ್ರೈಲೋಕ್ಯ ಮಹಾದೇವಿ, ಚಂದಲದೇವಿ ಅಬ್ಬಲದೇವಿಯರನ್ನು ದಾಖಲಿಸಿ ಹೊಗಳಿದರೆ, ಸಾಮಾನ್ಯ ಕೃಷಿವರ್ಗದ ಮಹಿಳೆಯರ ಪಾತ್ರ ನಿರ್ವಹಣೆ ಇತಿಹಾಸದ ತೆರೆಮರೆಯಲ್ಲಿ ಹುದುಗಿಹೋಗಿದೆ. ಶಾಸನಗಳನ್ನು ಮೇಲ್ನೋಟಕ್ಕೆ ನೋಡದೆ ಅದರ ಹಿಂದಿರುವ ಸಾಮಾಜಿಕ, ಧಾರ್ಮಿಕ, ಆರ್ಥಿಕ ಒತ್ತಡಗಳ ಒಳನೋಟಗಳನ್ನು ಗಮನಿಸಿದರೆ ಅದರ ಎಳೆಗಳು ಬಿಚ್ಚಿಕೊಳ್ಳುತ್ತವೆ. ಕಾರಣವಿಷ್ಟೆ ಕೃಷಿಯನ್ನು ಬದುಕಿನ ಒಂದು ಭಾಗವಾಗಿ ಮಾಡಿಕೊಂಡಿರುವ ತಳಹದಿಯ ಮೇಲೆ ರೂಪಗೊಂಡ ಸಮಾಜ ಇಲ್ಲಿಯದು.

ಕ್ರಿ.ಶ. ೧೧ನೆಯ ಶತಮಾನದ ಜಯಸಿಂಹನ ತಳಂಗೆರೆ ಶಾಸನದಲ್ಲಿ ಮೋಚಬ್ಬರಸಿಯು ಮಾಡಿದ ಕೃಷಿ ಕಾರ್ಯಗಳ ಬಗೆಗೆ ಹೀಗೆ ಹೇಳುತ್ತದೆ.

ಪುತ್ತೂರ ಪೊಲೆರಿಪ್ಪಕೇರಿಯೊವಟಿ ನೀರ ಭೂಮಿಯಂ
ಸಾರಭೂರುಹಂಗಳೋಳಿಯೊಳಗೆ ನೆಱೆ
ದ ಕೆಱೆಯನಂಭೋರುಹಾಕ್ಷಿ ತನ್ನಧನದಿನೊಪ್ಪೆ ಮಾಡಿಸಿದ
ಬಿಲ್ದದಂ
ನಿನ್ತಾರುಮೊಲ್ಲದಕಲ್ಕಾಡ ಬೆಟ್ಟಂಸವತಳಂ ಮಾಡಿಯೋಡಿಲ
ಮನೆಯ ನನ್ದನ ವನವುಮಂ ಮಾಡಿಸಿ ಕೆಱೆಯಂ ಕಟ್ಟಿಸಿ
ತೊಱೆಯ ಸೆಱೆಯಿಟ್ಟೊವಟಿ ನೆಲನಂ ಪಿದುಮಾಯಸದಿಂ
ಸುಕ್ಷೇತ್ರಂ ಮಾಡಿಸಿದುದು[೬]

ಮೊಚಬ್ಬರಸಿ ಮಾಡಿದ ಸಾಧನೆಯ ಜೊತೆಗೆ ಮಹಿಳೆಯೊಬ್ಬಳು ತನ್ನ ಹಣದಿಂದ ಕಲ್ಲು, ಕಾಡು, ಬೆಟ್ಟಗಳಿಂದ ಆವೃತ್ತವಾದ, ಬರುಡಾದ ಭೂಮಿಯನ್ನು ಫಲವತ್ತಾಗಿ, ಕೃಷಿಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿದಳೆಂದು ಶಾಸನವು ಹೇಳುತ್ತದೆ. ಕೃಷಿ ಕಾರ್ಯಗಳು ಜರುಗಲು ಭೂಮಿಯಷ್ಟೇ ಇದ್ದರೆ ಸಾಲದೆಂದು ಮನಗಂಡ ಮೋಚಬ್ಬರಸಿಯು ಕೆರೆಯನ್ನು ನಿರ್ಮಿಸಿ ಕೃಷಿಗೆ ಅನುಕೂಲ ಮಾಡಿರುವ ಸಾಧ್ಯತೆಗಳಿವೆ.

ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಹಿರೇಬೇವಿನೂರು ಸಿದ್ಧರಾಮೇಶ್ವರ ಗುಡಿ ಬಳಿಯಿರುವ ಕಲ್ಲಿನ ಮೇಲೆ ಶಾಸನವಿದೆ. ಇದು ಕ್ರಿ.ಶ. ೧೧೯೦ರದ್ದಾಗಿದೆ. ಇದರಲ್ಲಿ ಭಿಲ್ಲಮನು ರಾಜ್ಯವಾಳುತ್ತಿದ್ದಾಗ ಅವನ ಅಧಿಕಾರಿ ಮಾಯಿದೇವ ಎಂಬುವವನಿದ್ದ. ಇವನ ಕೈಕೆಳಗೆ ಬೊಪ್ಪಣನಾಯಕ ಎಂಬ ಅಧಿಕಾರಿಯಿದ್ದ. ಈತ ೩೬ ಹಳ್ಳಿಗಳ ಒಡೆಯ. ಇವನ ಪತ್ನಿ ಸಿರಿದೇವಿ. ಇವಳ ಗಂಡ ಬೊಪ್ಪಣನಾಯಕಧರ್ಮ ಸಂಥೆಯನ್ನು ಮಾಡಿದರೆ, ಈಕೆ ಮರಗಳನ್ನು ಬೆಳೆಸಿ 'ಕ್ಷಿತಿರುಹನೋಂಪಿ' ಎಂಬ ವ್ರತವನ್ನು ಸ್ವೀಕರಿಸಿದಳು. ಅವಳ ಮಾತುಗಳನ್ನೆ ಈ ಕೆಳಗೆ ಗಮನಿಸಬಹುದು.

ವೃತಸಾರಸಮುಚ್ಚಯದೊ
ಳ್ಸ್ತುತಿಯೊಳ್ಕೇಳೆನಿತು ನೋಂಪಿಯೊಳವೆನಿತನತಂ
ಸತತಂ ನೋನ್ತೊಲವಿಂದಂ
ಕ್ಷಿತಿರುಹ ವಿದುವೊನ್ದು ನೋಂಪಿಯುಂಟೆನೆ ಕೇಳ್ದಳು
ಪರಮಾನನ್ದದೆ ಕೇಳ್ದು ಭೂತಳದ ಕಟಿಪ್ರೊಬ್ಬಿಜವೆನ್ದೆನ್ದುಮಾ
ಮರನಂ ನೇಜಿಲೆ ನೀಳೆಯಂ ಪಲಸುಮಂ ಖರ್ಜೂರಮಂತೆಂಗುಮಂ
ವರಪೂಗೀತರುಮಂ ವನಸ್ಪತಿಯನತ್ಯಾನಂದದಿಂದಿಟ್ಟುಂತಾಂ
ಧರೆ ಮೆಚ್ಚುತ್ತಿರೆ ಮಾಯಿದೇವನೆ ಸೇವಿ ಧರ್ಮ್ಮಂದಿದಿಕ್ಕಂದದಂ[೭]

ಸಿರಿದೇವಿಯು ಮಾವು, ನೇರಳೆ, ಈಳೆ, ಹಲಸು, ಖರ್ಜೂರ, ತೆಂಗು, ಪೂಗೀತರು, ವನಸ್ಪತಿಗಳನ್ನು ಸಂತೋಷದಿಂದ ಬೆಳೆಸಿದಳೆಂದು ಶಾಸನವು ಹೇಳುತ್ತದೆ. ಇವಳು ಬೆಳೆಸಿದ ತೋಟ ಮತ್ತು ತನ್ನ ಪತಿ ಬೊಪ್ಪಣನಾಯಕನು ಸಂಥೆಯನ್ನು ತಮ್ಮ ನಾಯಕ ಮಾಯಿದೇವನಿಗೆ ಅರ್ಪಿಸಿದರೆಂದು ಶಾಸನವು ಮುಂದಿನ ಭಾಗದಲ್ಲಿ ಹೇಳುತ್ತದೆ. ತೋಟದ ಬೆಳೆಗಳನ್ನು ಪ್ರತ್ಯೇಕವಾಗಿ ಬೆಳೆಸಿರುವುದು ಇಲ್ಲಿ ಕಂಡುಬರುತ್ತದೆ. ಈ ಮರಗಳನ್ನು ಇವಳು ಬೆಳೆಸಿರುವುದನ್ನು ಗಮನಿಸಿದರೆ ಅವಳಿದ್ದ ಪರಿಸರದಲ್ಲಿ ಈ ಬೆಳೆಗಳನ್ನು ಹೇರಳವಾಗಿ ಬೆಳೆದಿರುವ ಸಾಧ್ಯತೆಗಳಿವೆ. ವೀಳೆ, ತೆಂಗು, ಖರ್ಜೂರ, ವನಸ್ಪತಿ ಬೆಳೆಗಳು ಇಂದಿಗೂ ಆಹಾರದ ಬೆಳೆಯೊಂದಿಗೆ ವಾಣಿಜ್ಯ ಬೆಳೆಗಳಾಗಿ ಕಂಡುಬರುತ್ತವೆ. ಮಹಿಳೆಯರಿಗಿದ್ದ ಕೃಷಿ ಬಗೆಗಿನ ಕಾಳಜಿ, ಆಸಕ್ತಿಗಳು ಈ ಶಾಸನದಲ್ಲಿ ಅಭಿವ್ಯಕ್ತಗೊಂಡಿವೆ. ಇಂದು ಆಧುನಿಕತೆಯ ಪ್ರಭಾವ, ಪ್ರೇರಣೆಯಿಂದಾಗಿ ಪ್ರಕೃತಿ ಅಳಿವಿನಂಚಿನಲ್ಲಿದೆ. ಪ್ರಕೃತಿಯ ನಾಶವೆಂಬುದು ಕೇವಲ ಇಂದು ನಿನ್ನೆಯದಲ್ಲ. ಅದು ಆಯಾ ಕಾಲಘಟ್ಟದ ಜನಸಂಖ್ಯೆಗೆ ಅನುಗುಣವಾಗಿ ನಿರಂತರವಾಗಿ ಜರುಗುತ್ತಲೇ ಬಂದಿದೆ ಆದರೆ ಪ್ರಮಾಣದಲ್ಲಿ ಹಿಂದಿಗಿಂತ ಇಂದು ಅಧಿಕವಿದೆ. ಸಿರಿದೇವಿ ಮಹಿಳೆಯಾದ ಕಾರಣಕ್ಕೆ ಪ್ರಕೃತಿ ನಾಶದಿಂದ ಉಂಟಾಗುವ ಪರಿಣಾಮವನ್ನು ಮನಗಂಡಿರುವ ಸಾಧ್ಯತೆಗಳಿವೆ. ಕರ್ನಾಟಕದಂತಹ ಪ್ರದೇಶದಲ್ಲಿ ಕೃಷಿಯೊಂದಿಗೆ ಮಳೆ ಜೂಜಾಟವಾಡುತ್ತಿರುತ್ತದೆ. ಮಳೆ ಮತ್ತು ಕೃಷಿಯ ಸಂಬಂಧದ ಅರಿವು ಸಿರಿದೇವಿಯಲ್ಲಿ ಇದ್ದಿರುವ ಸಾಧ್ಯತೆಗಳಿವೆ. ತನ್ನ ವೈಯಕ್ತಿಕ ಬದುಕಿನ ಕಾಳಜಿಗಷ್ಟೇ ಸೀಮಿತವಾಗದೆ ತಾನಿರುವ ಪರಿಸರದ ಬಗೆಗೂ ಮಿಡಿಯುವ ಮನಸ್ಥಿತಿ ಮಹಿಳೆಯರಿಗಿರುವ ಕಾರಣಕ್ಕೆ ಮತ್ತೆ–ಮತ್ತೆ ಇತಿಹಾಸ ಪುಟಗಳಲ್ಲಿ ಕಾಣಿಸಿಕೊಳ್ಳುವುದು ಗಮನಾರ್ಹ ಸಂಗತಿಯಾಗಿದೆ.

ಸಿರಿದೇವಿಯು ಒಟ್ಟು ೪೧ ಮಾವಿನಮರ, ೬ ನೇರಿಲೆಮರ, ೬ ಹುಣಸೆಮರಗಳನ್ನು ಮತ್ತು ಉಳಿದ ಜಾತಿಯ ಮರಗಳನ್ನು ಬೆಳೆಸಿದಳೆಂದು ಶಾಸನವು ಸ್ಪಷ್ಟಪಡಿಸುತ್ತದೆ. ಈ ಮರಗಳನ್ನು ಮಾಯಿದೇವನು ಬೇವಿನೂರಿನ ಬೇರೆ ಬೇರೆ ದೇವರುಗಳಿಗೆ ದಾನ ನೀಡಿದ. ಹಾಗೆಯೇ ಸಿರಿದೇವಿಯ ಕಾರ್ಯದಿಂದ ಪ್ರೇರಿತಗೊಂಡು ಬೇವಿನೂರಿನ ತನ್ನ ಅಧಿಕಾರಿಗಳಿಗೆ ಮರಗಳನ್ನು ಬೆಳೆಸಲು ಸ್ಥಳವನ್ನು ಒದಗಿಸಿದನು. ಮರಗಳನ್ನು ಕಾಯಲು ಬನಕಾರನೆಂಬ ಅಧಿಕಾರಿ ಚವುಂಡಯ್ಯನಿಗೆ ಮನೆಗಳನ್ನು ನಿರ್ಮಿಸಿದುದರ ಜೊತೆಗೆ ಭೂದಾನ ನೀಡಿದನು. ಶಿಕಾರಿಪುರದ ಶಾಸನವೊಂದು ‘ನಾಗರಖಂಡದ ಮೇಲಿನ ಸಾಲಬಾಧೆಯ ಬಗೆಗೆ ಹೇಳುತ್ತದೆ. ಇದರಿಂದ ಹೊರಬರಲು ಜಕ್ಕಿಯಬ್ಬೆ ಎಂಬುವವಳು ದೇವಾಲಯಕ್ಕೆ ದಾನ ನೀಡಿದಳೆಂದು ಹೇಳುತ್ತದೆ.’[೫] ಇದು ಕೃಷಿಯನ್ನು ನಂಬಿದ ಜನರಿಗೆ ಬರಗಾಲ ಅಥವಾ ಕ್ಷಾಮ ತಲೆದೋರಿ ಆ ಪ್ರದೇಶ ಸಾಲಭಾದೆಗೆ ಒಳಗಾಗಿರುವ ಸಾಧ್ಯತೆಗಳಿವೆ.

ಕೆರೆ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ: ಕೆರೆ ನಿರ್ಮಾಣ ಕಾರ್ಯದಲ್ಲಿ ಪುರುಷರಷ್ಟೇ ಅಲ್ಲದೆ ಮಹಿಳೆಯರ ಸಹ ಭಾಗಿತ್ವವೂ ಕಂಡುಬರುತ್ತದೆ. ಆದರೆ ಮಹಿಳೆಯರು ತಾವೇ ಸ್ವಂತ ನಿರ್ಧಾರದಿಂದ ಕೆರೆ ನಿರ್ಮಿಸಿರುವ ಸಂಖ್ಯೆಯ ಪ್ರಮಾಣ ಕಡಿಮೆ. ಅವರು ರಾಜ, ಮಾಂಡಳೀಕ, ಪೆರ್ಗಡೆ, ಗಾವುಂಡ ಮೊದಲಾದ ಅಧಿಕಾರಿಗಳ ಅನುಮತಿ ಪಡೆದು ನಿರ್ಮಿಸಿದ ಕೆರೆಗಳ ಪ್ರಮಾಣ ಅಧಿಕ. ಮಹಿಳೆಯರು ಕೆರೆಗಳನ್ನು ನಿರ್ಮಿಸಿ ದಾನ ನೀಡಿದ ವಿವರಗಳು ವಿರಳ ಸಂಖ್ಯೆಯಲ್ಲಾದರು ದಾಖಲಾಗಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಹುಂಚದ ಶಾಸನವೊಂದರಲ್ಲಿ ಸಾಂತರ ರಾಣಿ ಚಟ್ಟಲಾದೇವಿ ಮಾಡಿದ ಕಾರ್ಯದ ಬಗೆಗೆ ಶಾಸನವು ಹೀಗೆ ಹೇಳುತ್ತದೆ.

> **ಕೆರೆಬಾವಿ ಬಸದಿ ದೇಗುಲ**
> **ಮರವಂಟಗೆತೀರ್ಥಶತ್ರಮಾರವೆ ಮೊದಲಾ**
> **ಗರಿಕೆಯ ಧರ್ಮದಿಗಳಂ**
> **ನೆರೆಮಾಡಿಸಿ ನೋಂತಳ್ ಚಟ್ಟಲದೇವಿ**[೬]

ಕೆರೆ ಬಾವಿಗಳನ್ನು ನಿರ್ಮಿಸುವುದು ಧಾರ್ಮಿಕ ಕಾರ್ಯ. ಅದರಿಂದ ಒಳಿತಾಗುತ್ತದೆ ಎಂದು ಶಾಸನವನ್ನು ಮೇಲ್ನೋಟಕ್ಕೆ ಗಮನಿಸಿದರೆ ತಿಳಿಯುವ ಸಂಗತಿ. ಆದರೆ ರಾಜ್ಯದ ಪ್ರಜೆಗಳು ಸುಭಿಕ್ಷೆಯಿಂದ ಇದ್ದರೆ ಮಾತ್ರ ಧರ್ಮ ಉಳಿಯಲು ಸಾಧ್ಯವಾಗುತ್ತದೆ. ಜನರು ಸಮೃದ್ಧಿಯಿಂದ ಜೀವಿಸಲು ಬೆಳೆ ಸಮೃದ್ಧವಾಗಿರಬೇಕು. ಬೆಳೆ ಬೆಳೆಯಲು ಮಳೆ ಆಶ್ರಿತ ಕೃತಕ ನೀರಿನ ಸಂಗ್ರಹಣೆಯನ್ನು ಮಾಡಲು ಕೆರೆಗಳನ್ನು ನಿರ್ಮಿಸಿರುವ ಸಾಧ್ಯತೆಗಳಿವೆ. ‘ಶ್ರವಣಬೆಳಗೊಳದ ಶಾಸನವೊಂದು ಜಕ್ಕಿಮವ್ವೆ ಶಿವಚ್ಚಂದ್ರ ದೇವರಗುಡಿ ಮತ್ತು ಕೆರೆ ನಿರ್ಮಿಸಿದಳೆಂದಿದೆ.[೭] ಕರೀಂನಗರದ ಶಾಸನವೊಂದು ಗಂಗಮನೆತನದ ರಾಜಕುಮಾರಿ ‘ಅಚ್ಚಬ್ಬೆಯುಚಪ್ಪಣ್ದಂಣ್ದಿ (ಚೊಪ್ಪದಂಡಿ) ಆಚಬ್ಬ ಸಮುದ್ರವೆಂಬ ಕೆರೆ ನಿರ್ಮಿಸಿದಳೆಂದಿದೆ.’[೮] ಜನಗಾಂ ಶಾಸನವು ಸತ್ಯಾಶ್ರಯನ ಅರಸಿ ಅಯ್ವಬ್ಬದೇವಿ ಚರಿಯಕೊಮ್ಮಯ ಗಾವುಂಡನಿಗೆ ಕೆರೆ ಅಗಿಸುವಾಗಲೇ ದಶವಂದದಮಾನ್ಯ ಬಿಟ್ಟಳೆಂದಿದೆ.[೯] ಪೆರ್ಗಡೆ ಪುಳಿಯಮ್ಮ ತಾಳಗುಂದದ ದೊಡ್ಡಕೆರೆ ನಿರ್ಮಿಸಿದಳೆನ್ನಲಾಗಿದೆ.[೧೦] ಕ್ರಿ.ಶ. ೧೦೭೬ರ ಕಲಕೇರಿಯ

ಶಾಸನವು ವೀರನೊಳಂಬನ ಮಡದಿ ಮಾಳಲಾದೇವಿ ಕೆರೆ ನಿರ್ಮಿಸಿದಳೆಂದು ಹೇಳುತ್ತದೆ.[೧೧] ಸಂಗಮದ ಮೊಮ್ಮಗಳ್ ಮಲಕೆರಿ ದುಗ್ಗಬ್ಬೆ ಕೆರೆಗೆ ತುಮ್ಬು(ತೂಬು) ಮಾಡಿಸಿದಳೆಂದಿದೆ.[೧೨]

ಹೀಗೆ ಹಲವಾರು ಅಧಿಕಾರಿ ವರ್ಗದ ಮಹಿಳೆಯರು ಕೆರೆ ನಿರ್ಮಾಣ ಕಾರ್ಯದಲ್ಲಿ ನಿರತರಾಗಿರುವುದು ಕಂಡುಬರುತ್ತದೆ. ಕೆರೆ ನಿರ್ಮಿಸುವುದರ ಹಿಂದಿನ ಉದ್ದೇಶಗಳಲ್ಲಿ ಮೊದಮೊದಲು ಕುಡಿಯುವ ನೀರಿನ ಸಂಗ್ರಹಣೆಯ ಉದ್ದೇಶವಿದ್ದರೆ, ಅದರ ಮುಂದಿನ ಹಂತದಲ್ಲಿ ಕೃಷಿಗೆ ಅನುಕೂಲವಾಗಲೆಂದು ನಿರ್ಮಿಸಲಾಗಿದೆ. ಕೃಷಿಯನ್ನು ಕುರಿತ ಅದರ ಅಭಿವೃದ್ಧಿ, ನಿರ್ವಹಣೆಯ ಅರಿವು ಮಹಿಳೆಯರಿಗೆ ಇದ್ದುದರಿಂದಲೇ ಪುರುಷ ಕೇಂದ್ರಿತ ವ್ಯವಸ್ಥೆಯಲ್ಲಿ ಅವರ ಸಹಾಯ ಪಡೆದು, ಇಂತಹ ಅಭಿವೃದ್ಧಿ ಮತ್ತು ಆಸಕ್ತಿಯ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಶ್ಲಾಗನೀಯ.

ಭೂದಾನದಲ್ಲಿ ಮಹಿಳೆಯರ ಪಾತ್ರ: ಅಧಿಕಾರಿ ವರ್ಗದ ಮಹಿಳೆಯರು, ವಿರಳ ಸಂಖ್ಯೆಯ ಸಾಮಾನ್ಯ ವರ್ಗದ ಮಹಿಳೆಯರು ಭೂದಾನ ನೀಡಿರುವುದು ಶಾಸನಗಳಲ್ಲಿ ಉಲ್ಲೇಖಿತವಾಗಿರುವುದನ್ನು ಗಮನಿಸಬಹುದು. 'ಬಿಜಾಪುರದ ಮ್ಯೂಸಿಯಂನ ಕ್ರಿ.ಶ. ೧೦೪೧ರ'[೧೩] ಶಾಸನದಲ್ಲಿ ಗೊಮ್ಮರಸನು ತನ್ನ ಮಗಳು ಬೊಳ್ಳಬ್ಬೆಗೆ ಧರ್ಮಕಾರ್ಯ ಮಾಡಲು ಭೂಮಿ ನೀಡಿದಾಗ, ಬೊಳ್ಳಬ್ಬೆಯು ತಾನು ಮಾಡಿಸಿದ ದೇವಾಲಯಕ್ಕೆ ೫೦ ಮತ್ತರು ಭೂಮಿ ಮತ್ತು ತೋಟವನ್ನು ದಾನ ನೀಡಿದಳೆಂದು ಹೇಳಿದೆ. ಬಿಜಾಪುರ ತಾಲೂಕಿನ 'ಕ್ರಿ.ಶ. ೧೦೯೮ರ ದೇವರಗೆಣ್ಣೂರು ಶಾಸನದಲ್ಲಿ'[೧೪] ಅಂಗಬ್ಬರಸಿಯು ಬಲ್ಲವರಸನ ಅನುಮತಿ ಪಡೆದು ೬೦ ಮತ್ತರು ಭೂಮಿಯನ್ನು ಕೇಶವ ದೇವರಿಗೆದಾನ ನೀಡಿದಳೆಂದು ಹೇಳುತ್ತದೆ. 'ಇಂಡಿ ತಾಲೂಕಿನ ಕ್ರಿ.ಶ. ೧೨೪೦ರ ತದ್ದೆವಾಡಿಯ ಶಾಸನವು'[೧೫] ತದ್ದೆವಾಡಿ ನಾಡಿನ ಮಂನೆಯಚಂದರಸ ಮತ್ತು ಮಯಿಳಬ್ಬರಸಿಯರು ಪೂರ್ಣ ಸೂರ್ಯಗ್ರಹಣದಂದು ಚಂದೇಶ್ವರ ದೇವರಿಗೆ ತೋಟ ಮತ್ತು ಭೂಮಿಯನ್ನು ದಾನ ನೀಡಿದರೆಂದಿದೆ. 'ಸಿಂದಗಿ ತಾಲೂಕಿನ ಕ್ರಿ.ಶ. ೧೦೯೪ರ ಕನ್ನೊಳ್ಳಿ ಶಾಸನವು'[೧೬] ಚಾಲುಕ್ಯ ತ್ರಿಭುವನ ಮಲ್ಲನ ರಾಣಿ ಕೇತಲ ದೇವಿಯು ಚಂಡೇಶ್ವರ ದೇವರಿಗೆ ಒರಟನ ಕೋಲಲ್ಲಿ ೧೪ ಮತ್ತರು ಭೂಮಿ ಮತ್ತು ತೋಟವನ್ನು ದಾನ ನೀಡಿದ ಬಗೆಗೆ ಹೇಳುತ್ತದೆ. 'ಬಾಗೇವಾಡಿ ತಾಲೂಕಿನ ಕ್ರಿ.ಶ. ೧೦೭೯ರ ಮತ್ತಗಿಯ ಶಾಸನದಲ್ಲಿ,'[೧೭] ಗೋವಿಂದದೇವನ ತಂಗಿ ಪೊನ್ನಕಬ್ಬೆಯು ತನಗೆ ಸೇರಿದ ಭೂಮಿಯನ್ನು ಯೋಗೇಶ್ವರ ದೇವರಿಗೆ ದಾನ ನೀಡಿದಳೆಂದು ಹೇಳುತ್ತದೆ. 'ಬಾಗೇವಾಡಿ ತಾಲೂಕಿನ ಕ್ರಿ.ಶ. ೧೦೭೯ರ ಮಸೂತಿಯ ಶಾಸನದಲ್ಲಿ,'[೧೮] ರೇವದಾಸಿಮಯ್ಯನ ಮಗಳು ಕಾಳಿಯವ್ವೆ ದೇವರಿಗೆ ೧೨ ಮತ್ತರು ಭೂಮಿ ನೀಡಿದ ಉಲ್ಲೇಖವಿದೆ. ಹೀಗೆ ವಿರಳ ಸಂಖ್ಯೆಯಲ್ಲಾದರೂ ಇನ್ನೂ ಕೆಲವು ಮಹಿಳೆಯರು ನೀಡಿದ ಭೂದಾನದ ಶಾಸನಗಳೂ ದೊರೆಯುತ್ತವೆ. ಆದರೆ ಮಹಿಳೆಯರು ಸ್ವತಂತ್ರವಾಗಿ ದಾನ ನೀಡಿದ ವಿವರಗಳು ವಿರಳ. ಇವರು ಇತರರೊಂದಿಗೆ ಸೇರಿ ಅಥವಾ ಅನುಮತಿ ಪಡೆದು ದಾನ ನೀಡಿರುವುದು ಹೆಚ್ಚಾಗಿ ಕಂಡುಬರುತ್ತದೆ. ದಾನಕ್ಕೂ ಕೃಷಿಗೂ ಏನು ಸಂಬಂಧ ಎಂಬುದನ್ನು ಗಮನಿಸಿದರೆ, ದಾನದ ಹಿಂದೆ ಸಮಾಜದ ಸಂಪೂರ್ಣ ಸ್ವಾಸ್ಥ್ಯ ಅಡಗಿರುವುದು ಅದನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಅದರ ಬಾಹುಳ್ಯ ತೆರೆದುಕೊಳ್ಳುತ್ತದೆ. ಶಾಸನಗಳನ್ನು ಅವಲೋಕಿಸಿದಾಗ ದೊರೆಯುವ ಶಾಸನಗಳಲ್ಲಿ ಶೇ. ೯೦ರಷ್ಟು ದಾನ ಶಾಸನಗಳೇ ದೊರೆಯುತ್ತವೆ. ದಾನ ನೀಡುವಾಗ ಅಧಿಕ ಪ್ರಮಾಣದಲ್ಲಿ ಭೂದಾನವೇ ಹೆಚ್ಚಾಗಿ ಕಂಡುಬರುತ್ತದೆ. ಭೂಮಿಯನ್ನು ದಾನ ನೀಡಿದಾಗ ಅದು ಕೃಷಿಗೆ ಒಳಪಡುತ್ತಿತ್ತು. ದಾನ ನೀಡಿದ ಭೂಮಿಯು ದಾನ ನೀಡಿದವರಿಂದ ದಾನ ಪಡೆದವರ ಮೂಲಕ ಗೇಣಿರೂಪದಲ್ಲಿ ಉಳುವವನ ಕೈ ಸೇರುತ್ತಿತ್ತು. ಕೃಷಿಕರು ಶ್ರಮವಹಿಸಿ ಭೂಮಿಯಲ್ಲಿ ದುಡಿದು ಬಂದ ಬೆಳೆಯನ್ನು ಭೂ ಮಾಲೀಕನಿಗೆ ನೀಡಿ ಉಳಿದದ್ದನ್ನು ತನ್ನ ಬಳಿ ಇಟ್ಟುಕೊಳ್ಳುತ್ತಿದ್ದರು. ಈ ರೀತಿ ಸಮಾಜದಲ್ಲಿ ಕೃಷಿ ಉತ್ಪನ್ನದ ಸರಪಳಿ ಚಕ್ರದೋಪಾದಿಯಲ್ಲಿ ಸುತ್ತುತ್ತದೆ. ಭೂದಾನದ ಹಿಂದೆ ಕೃಷಿ, ಧಾರ್ಮಿಕತೆ, ಆರ್ಥಿಕತೆಯ ಅಂಶಗಳು ಉದುಗಿರುವುದು ಕಂಡುಬರುತ್ತದೆ.

ಇತಿಹಾಸದುದ್ದಕ್ಕೂ ತ್ಯಾಗ ಭೋಗಗಳಿಗೆ ಪುರುಷ ನಿರ್ಮಿತ ಸಮಾಜದಲ್ಲಿ ಸೀಮಿತವಾದವರು ಮಹಿಳೆಯರು. ವ್ಯವಸ್ಥೆಯೊಂದರ ಒಳಗಡೆಯೇ ಬದುಕಿ ತಮ್ಮ ಸೀಮಿತ ವ್ಯಾಪ್ತಿಯ ಪರಿಧಿಯಲ್ಲಿ ಕಾರ್ಯ ನಿರ್ವಹಿಸಿದವರಿವರು. ಇಂತಹ ಕಾರ್ಯಗಳ ಕಡೆಗೆ ಬೆಳಕು ಹರಿಸುವುದು ಈ ಲೇಖನದ ಉದ್ದೇಶವಾಗಿದೆ. ಇಂದಿಗೂ ಕೃಷಿ ಜೀವಂತ ಉಳಿದಿರುವುದಕ್ಕೆ ಕಾರಣ ಮಹಿಳೆಯರು. ಇಂದು ಕೃಷಿಯಿಂದ ಸರ್ಕಾರಕ್ಕೆ ಬರುವ ಆದಾಯದ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಿದೆ. ಬರುವಷ್ಟು ಆದಾಯದ ಪಾಲಿನಲ್ಲಿ ಮಹಿಳೆಯರ ಪಾಲಿನ ಪ್ರಮಾಣವೆ ಅಧಿಕವಾಗಿರುವುದು ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ಕಲವೀರ ಮನ್ವಾಚಾರ., ಮಾತೃದೇವತಾ ಆರಾಧನೆ ಅಪ್ರಕಟಿತ ಪಿಎಚ್.ಡಿ ನಿಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨.

೨. ವಿಲ್ ಡ್ಯುರಾಂಟ್., ನಮ್ಮ ಪ್ರಾಚ್ಯ ಪರಂಪರೆ, ನಾಗರಿಕತೆಯ ಕಥೆ, (ಸಂ) ಶೇಷಗಿರಿರಾವ್.ಎಲ್.ಎಸ್., ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೭, ಪು. ೮.

೩. ಅಣ್ಣಿಗೇರಿ ಎ.ಎಂ. ಶೇಷಶಾಸ್ತ್ರಿ ಆರ್., ಶಾಸನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೭, ಪು. ೧೭, ೧೮.

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧೦, ಶಾ.ಸಂ. ಇಂಡಿ ೭೭.

೫. E C, VII, ಶಿಕಾರಿಪುರ, ೨೧೯.

೬ ರಾಷ್ಟ್ರಕೂಟರ ಶಾಸನಗಳು, ಸಂಪುಟ ೧, ಹೊಸನಗರ, ಹುಂಚ, ೮೦.

೭. E C, II, ಶ್ರವಣಬೆಳಗೊಳ, ೫೦೪.

೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೦೫ ಭಾಗ ೨, ಕರೀಂನಗರ, ೪೦೫.

೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೦೫ ಭಾಗ ೨, ಜನಗಾಂ, ೪೨೦.

೧೦. E C., VII, ಶಿಕಾರಿಪುರ, ೩೨೨.

೧೧. SII, XX, ೪೯.

೧೨. ಜಯಮ್ಮ ಕರಿಯಣ್ಣ ಎಚ್., ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ ಪು. ೮೫.

೧೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೧೦ ಬಿಜಾಪುರ, ೧೨.

೧೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೧೦ ಬಿಜಾಪುರ, ೭೭.

೧೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೧೦ ಇಂಡಿ, ೩೦.

೧೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೧೦ ಸಿಂದಗಿ, ೧೭.

೧೭. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೧೦ ಬಾಗೇವಾಡಿ, ೪೮.

೧೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ., ೧೦ ಬಾಗೇವಾಡಿ, ೬೫.

೭೨

ಶಾಸನ ಶಾಸನೇತರ ಆಕರಗಳಲ್ಲಿ ಕೊಡಗಿನ ಜಾನಪದ ಸಂಗತಿಗಳು

ಎಂ.ಜಿ. ನಾಗರಾಜ್*

ಕೊಡಗಿನ ಪರಿಸರವೇ ನೈಸರ್ಗಿಕ ಜಾನಪದ ಆಡುಂಬೊಲವಾಗಿದೆ. ಅದು ನೆಲದ ಸೊಗಡಿನಿಂದ ಸಂಚಲಿತವಾಗಿದೆ. ಮಣ್ಣಿನ ಮುದ ಅಲ್ಲಿಯ ಬದುಕಿನ ನಿತ್ಯ ಸಹಯೋಗಿಯಾಗಿ ಬಂದಿದೆ. ಅಂತೇ ಗದ್ದೆ ಇರಲಿ, ತೋಟವಿರಲಿ, ಬಾಣೆ (ಹುಲ್ಲು ಹರಡಿದ ಮೈದಾನ) ಹಸಿರಿನ ಹುಲುಸು ಇರುತ್ತದೆ. ಜಾನಪದ ಸೊಲ್ಲುಗಳಿಗೆ ಎಡೆಯಾಗಿರುತ್ತದೆ. ಶಾಸನಗಳಲ್ಲಿಯ ಈ ಬಗೆಗೆ ಅವಕಾಶ ಕಾಣುತ್ತದೆ. ಅಭಿವ್ಯಕ್ತಿಗಳಲ್ಲಿ ಸಂಕೇತಗೊಂಡಿವೆ. ಹಬ್ಬ, ಕ್ರೀಡೆ, ಆರಾಧನೆ, ಹಾಡು, ಹೇರು, ಕಲೆ, ದೈವ, ವೇಷ, ಪುರಾಣ, ಐತಿಹ್ಯ, ವೀರಶಿಲ್ಪ ಇತ್ಯಾದಿಗಳಲ್ಲಿ ವಿಪುಲ ವಿಸ್ತಾರ ಪಡೆದಿವೆ.

ಶಾಸನವಲಯದಲ್ಲಿ ಕ್ರಿ.ಶ. ೯ನೆಯ ಶತಮಾನದಲ್ಲಿ ಪ್ರತಿ ಮಾಡಿದ ಕ್ರಿ.ಶ. ೪೬೬ರ[೧] ಗಂಗರ ಶಾಸನ ವಲಸೆ ಬಂದ ಕೂಟಶಾಸನವೆಂದು ಹೇಳಲಾಗಿದ್ದರೂ ಅಲ್ಲಿ ಬಳಕೆಯಾಗಿರುವ ಪೂನಾಡು, ಎಡೆನಾಡು, ಅಮ್ಬಲಿಮಣ್ಣು, ಕೊಟ್ಟಗರ ಬದಣಗೊಪ್ಪೆ, ಕಾಯ್ಗ ಮೊರಡಿ ಕೆಂಬರೆ, ಮುಱುಗೆರೆ, ದಾಸನೂರು ಇತ್ಯಾದಿ ಸ್ಥಳನಾಮಗಳು, ದೇಸಸಾಕ್ಷಿ, ತಗಡೂರ ಕುಟಿಗೋವರು, ಗಣಿಗನೂರ ತಗಡರು, ಆಲ್ಗೋಡ ತೇನನ್ದಕರು, ಉಮ್ಮತೂರ ಅಳಗೆಯರುಂ (ಹಲಗೆಯರುಂ!) ಇತ್ಯಾದಿ ತಳಸಮುದಾಯದ ಕಸುಬುಸೂಚಕ ಜನಸಮುದಾಯವನ್ನು ಲಕ್ಷಿಸಿ ಹೇಳಿರುವ ಜನಪದೀಯ ಶಬ್ದಗಳಿವೆ.

'ಕೊಟ್ಟಗರ' – ಈ ಶಬ್ದ ಕಮ್ಮಾರಿಕೆಯನ್ನು ಸೂಚಿಸುವುದೇ? ಅಥವಾ 'ಗೊಟಗ' ಎಂಬ ಜಾನುವಾರು (ದನಗಳು)ಗಳು ಮೇಯುತ್ತ ಇರುವ ಸ್ಥಳವನ್ನು, ಶಬ್ದಸೂಚನೆಯಿಂದ ತಿಳಿಸುವ ಸಾಧನವೆಂದರೆ ಕೃಷಿಕ ಮೂಲದವರನ್ನು ಕುರಿತು ಹೇಳುವ ಶಬ್ಧವೆನ್ನಬೇಕಾಗುತ್ತದೆ. ಇದಲ್ಲದೆ ಕೊಡವ ಭಾಷಿಕ ನಿಘಂಟು (ಕೊಡವ ಅರಿವೋಲೆ)ವಿನಲ್ಲಿ ಕೆಂಬಟ್ಟಿಗಳ ಪುರುಷನನ್ನು ಮರ್ಯಾದೆಯಿಂದ ಕರೆಯುವ ಶಬ್ದ 'ಕೊಟ್ಟ' ಎಂದಿದೆ; ಕಾರಂತರ ಕನ್ನಡ ನಿಘಂಟುವಿನಲ್ಲಿ ಕೊಟ್ಟಗ–ಕೋಟೆಗಾರ ಎಂಬ ಅರ್ಥವಿದೆ (ಸಿರಿಗನ್ನಡ ಅರ್ಥಕೋಶ, ೧೯೬೨); ಕ.ಕ. ನಿಘಂಟು 'ಕೊಟ್ಟ'–ದನಗಳ ಕೊಡುವ ನೆಲೆ ಎಂದು ಹೇಳಿದೆ. ಇದರಿಂದ, ಕೊಡಗಿನ ಮೂಲದಲಿತ ನಿವಾಸಿಗಳಾದ ಕೆಂಬಟ್ಟಿಗಳಿಗೆ, ಕೋಟೆ ರಕ್ಷಕರಾದ ಸೈನಿಕ ಸಮುದಾಯಕ್ಕೆ, ಕೃಷಿ ಮೂಲದ ಜನಾಂಗಕ್ಕೆ ಅನ್ವಯ ಶಬ್ದವಾಗಿ 'ಕೊಟ್ಟಗರ' ಅನ್ವಯವನ್ನುವಂತಿದೆ. ಧ್ವನಿಮಾ ಸನಿಹಸೂಚಕ ಶಬ್ದವಾಗಿ 'ಟ'ಕಾರ 'ಡ'ಕಾರವಾಗಿ ಪರಿಗಣಿಸಿದೆ. 'ಕೊಡಗರ' ಎಂಬ ಶಬ್ದರೂಪವನ್ನು ಪರ್ಯಾಯ ಮಾಡಿಕೊಂಡರೆ ಕೊಡಗಿನ ಎಲ್ಲ ವೀರಯೋಧ ಸಮುದಾಯವನ್ನು ಲಕ್ಷಿಸಿ ಹೇಳಿರುವ ಸಾಧ್ಯತೆಯನ್ನು ಗಮನಿಸಬೇಕಾಗುತ್ತದೆ. ಮತ್ತು ಕನಿಷ್ಠ ೯ನೆಯ ಶತಮಾನಕ್ಕೆ ಮುಂಚೆಯೇ ತೆರಕಣಾಂಬಿ ಬಯಲ್ನಾಡು ಒಳಗೊಂಡಂತೆ ಕೊಡಗೂರ್ವಿಷಯ ಕುಡುಗುನಾಡೆನಿಸಿದ್ದ ಸಂಗತಿಯಿಂದ ಕೊಡಗಿಗೆ ಸೇರಿದ್ದ ಬಗ್ಗೆ, ಕುಲಗಾಣ, ಗುಂಡ್ಲುಪೇಟೆಯ ೭–೮ನೆಯ ಶತಮಾನ ಶಾಸನಗಳಿಂದ ಸೂಚಿತವಾಗುತ್ತದೆ[೨]. ಅಲ್ಲದೆ 'ಕುಡ' ಎಂದರೆ ಪಶ್ಚಿಮ ಎಂಬ ಅರ್ಥವೂ ಇರುವಲ್ಲಿ ಪಶ್ಚಿಮ ಘಟ್ಟದ ಕಡೆಯ 'ಕೊಡಗರು' ಎಂದೂ ಹೇಳಬಹುದಾದ ಸಾಧ್ಯತೆಯನ್ನು ಗಮನಿಸಬೇಕು; ಕೊಡಗಿನಲ್ಲಿ ಪ್ರಾಚೀನದಿಂದ ಇದ್ದ ಎಲ್ಲ ನಿವಾಸಿಗಳೇ ಕೊಡಗರು ಎನ್ನಬೇಕು. 'ತೇನನ್ದಕರು' – 'ಜೇನುಸಾಕಣೆಯವರು' ಅಂದರೆ ಜೇನುಕುರುಬರ ಪ್ರದೇಶದ ಅಂದಿನ ನೆಲೆವಾಸ್ತವವನ್ನು ಹೇಳಿದಂತಿದೆ. ಅಂದರೆ ಬುಡಕಟ್ಟುಗಳ ಕೊಡಗಿನಲ್ಲಿಯ ಅಸ್ತಿತ್ವವನ್ನು ಸೂಚಿಸುವಂತಿದೆ. ಹೀಗೆಯೇ ಕ್ರಿ.ಶ. ೮–೧೦ನೆಯ ಶತಮಾನಗಳ, ಕೋತೂರು, ಬಿಳಿಯೂರು, ಪೆಗ್ಗೂರು ಶಾಸನಗಳಲ್ಲಿ, ಮಲೆಸಾಸಿರ್ವರು, ಮೈಯ್ಯಾದ್ದಮರಿಗರು ಇತ್ಯಾದಿ ಬುಡಕಟ್ಟು ಸಮುದಾಯಗಳನ್ನೂ ದಾಖಲಿಸಿರುವುದು ಕಾಣಬರುತ್ತದೆ. ಹೀಗೆ ಸಾಮಾನ್ಯ ಬದುಕಿನ ಶ್ರೀಸಾಮಾನ್ಯರನ್ನು ಜಾನಪದ ವೃತ್ತಿನಾಮಕ ಸಮುದಾಯನಾಮ ಹಾಗೂ ವ್ಯಕ್ತಿನಾಮಗಳ ಮೂಲಕ ಗುರುತಿಸಿರುವ ಬಗೆಯ ಐತಿಹಾಸಿಕತೆಯನ್ನು ಗಮನಿಸುವಂತಾಗುತ್ತದೆ. ಅಶೋಕನ ಶಾಸನದಲ್ಲಿ ಕೇರಳಪುತ (ಅವನ ಕಾಲದ ಭಾರತದ ಭೂಪಟದಲ್ಲಿದ್ದ ಕೊಡಗಿನ

* 'ಅನರ್ಘ್ಯ', ಶ್ರೀ ಜಚನಿ ಕೃಪ, # ೨೨೧, ೬೮ನೇ ಅಡ್ಡರಸ್ತೆ, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–೧೦. ದೂ. ೦೮೦–೨೩೧೦೬೦೦೪

ಪಶ್ಚಿಮ ಭಾಗ) ಸತಿಯಪುತವನ್ನು ಹೆಸರಿಸಿರುವಲ್ಲಿ, 'ಅಟವಿಜನರನ್ನು' ಉದ್ದೇಶಿಸಿ ಹೇಳುವ ನುಡಿಗಳನ್ನು ಈ ಪ್ರದೇಶದ ಬುಡಕಟ್ಟು–ಜಾನಪದದ ಆಯಾಮದಿಂದ ಗುರುತಿಸಬಹುದು.

ಕೊಡಗಿನ ಕ್ರಿ.ಶ. ೧೦೦೧ರ ಮಡಿಕೇರಿ ಶಾಸನದಲ್ಲಿ (ಕೊಡಗು ೨)[೩] 'ಬಿಹಗಾಮುಣ್ಡನ ಮಗ ಹಞ್ಚಮಶೆಟ್ಟಿ ಭುಜಬಲದಿನ್ದ ಕೂಡಲೂರುಮಂ' ಪಡೆದು ಕುಣಿನ್ದೋರೊಳ್ಗಿಕ್ಕಿ, ಕಾಲಂತಿಟ್ದೆಲೂ ಕಾಲೂರಂ ಮಾಡಿ 'ಮೊದಲ್ಕಾವೇರಿಯಂ ಮಿನ್ದು ರಾಮೇಶ್ವರಂ ಅರ್ಚಿ ... ಧರ್ಮಕ್ಕೆ ಬಿಟ್ಟ ಮಣ್ಣು' ಎಂದಿರುವಲ್ಲಿ ಶುದ್ಧ ಜಾನಪದ ಶೈಲಿಯ ಪದಪುಂಜಗಳಲ್ಲಿ ಹಾಗೂ ಅವನ ದೈವಾರಾಧನೆಯ ಸ್ವರೂಪವನ್ನು ತಿಳಿಸುವಂತಿದೆ. ಕಾವೇರಿಯ ಉದ್ಭವ ನೆಲೆಯನ್ನು 'ಮೊದಲ್ಕಾವೇರಿ' ಎಂಬ ಜನಪದರೂಢಿಯ ಶಬ್ದವನ್ನು ತೀರ್ಥಕುಂಡಿಕೆಯಲ್ಲಿ ಚಿಮ್ಮುವ ನೀರ್ಬಿಂದುಗಳ ನೆಲೆ ತಲಕಾವೇರಿಗೆ ನಂಟುಗೊಳಿಸಲಾಗಿದೆ. ಹಞ್ಚಮಸೆಟ್ಟಿಯು 'ಕುಣಿನ್ದೋರು'ವಿನಲ್ಲಿಯ ವೀರಕಾಳಗದಲ್ಲಿ ಶೌರ್ಯ ತೋರಿದ ಕಾರಣ, ಕಂದಕ ತೋಡಿ (ನಿರ್ಮಿಸಿ) ಕಾಲೂರಿದ ಸ್ಥಳ ಅಂದರೆ ಊರು ಕಟ್ಟಿ ನಿಂತ ನೆಲೆ, ಅರ್ಥಾತ್ ಗ್ರಾಮ ನಿರ್ಮಿಸಿದ; ಕೂಡಲೂರು ಪ್ರದೇಶವನ್ನು ವಶಪಡಿಸಿಕೊಂಡ; ರಾಮೇಶ್ವರದೇವರಿಗೆ ಖಂಡುಗ ಭೂಮಿಯನ್ನು ದಾನ ಮಾಡಿದ. ಈ ಶಾಸನದಲ್ಲಿಯ ಶಬ್ದಪ್ರಯೋಗ, ಗ್ರಾಮಸ್ಥಾಪನೆ ವಿಷಯ, ಇವೆಲ್ಲ ಜನಪದ ಪರಿಸರವನ್ನೇ ನಿರ್ಮಿಸಿದಂತಿದೆ. ಇದಲ್ಲದೆ ಗಮನಾರ್ಹವಾಗಿ ಗುಡ್ಡೋಣಿ ಕಂದಕವೆನಿಸಿದ 'ಕಡಂಗ'ದ ನಿರ್ಮಾಣ (ಅಸ್ತಿತ್ವ) ಕ್ರಿ.ಶ. ೧ನೆಯ ಶತಮಾನಾರಂಭದಲ್ಲಿಯೇ ಚಾಲ್ತಿಗಿತ್ತು ಎಂಬ ಸೂಚನೆ ದೊರಕಲು ಪೋಷಕವಾಗಿದೆ. ಪವಿತ್ರ ಕಾವೇರಿಯ ಉಗಮಸ್ಥಾನ ತಲಕಾವೇರಿಗೆ ಹೋಗಿ ಮಿನ್ದು ರಾಮೇಶ್ವರನನ್ನು ಅರ್ಚಿಸುವ ಸಾಂಸ್ಕೃತಿಕ ನಡಾವಳಿಯ ಚಿತ್ರವಿಲ್ಲಿದೆ. ಕೊಡಗಿನ ಯಾವ ಭಾಗದ ಜನಕ್ಕೂ ತಲಕಾವೇರಿ–ಮೊದಲ್ಕಾವೇರಿಯು ಪವಿತ್ರ ಜಲದಾಕರವಾಗಿರುವುದು ಗಮನಾರ್ಹ.

ಕ್ರಿ.ಶ. ೮೮೮ರ ಬಿಳಿಯೂರು ಶಾಸನದಲ್ಲಿ[೪] ಪೆಣ್ಣೆಗಡಜ್ಜ, ಪೆದ್ದೂಡೆಗೆರೆ ಎಣ್ಪೊಕ್ಕಲು, ಮಲೆ ಸಾಸಿರ್ವರು, ಮಯ್ದಾಮರಿಗರು, ಎಣ್ಬುನೂರುಭತ್ತ ಇತ್ಯಾದಿ ಪ್ರಾದೇಶಿಕ ಜನಬಳಕೆಯ ಶಬ್ದಪ್ರಯೋಗಗಳು ಕಂಡುಬರುತ್ತವೆ. ಜನಪದ ತಾಂತ್ರಿಕ ಶಬ್ದಗಳಾಗಿ ಪನ್ಯ (ಕೊಡಗು ರಾಜರ ಬಳಿಯೂ ಇದ್ದ ಖಾಸಗಿ ಫಲವತ್ತಿನ ವಿಸ್ತಾರದ ಜಮೀನು), ಕಡಂಗ (ಗುಡ್ಡೋಣಿಕಂದಕ) ಎಣ್ಬುನೂರು ಭತ್ತ, ಇತ್ಯಾದಿ ಶಬ್ದಗಳಿಲ್ಲಿವೆ; ೯ನೆಯ ಶತಮಾನದ ಕೊತೂರು ಶಾಸನದಲ್ಲಿ[೫] ಹೀಗೆಯೇ ಪೆರ್ಮಡಿವಟ್ಟ, ಬೆಟ್ಟಿಯ ಭತ್ತ (ಬಿಳಿಯ ಭತ್ತ), ನೂರುಭತ್ತಮುಮಂ ಜಡಲ ಎಱೆಯಂಗ ಕಲ್ನಾಡು, ಇತ್ಯಾದಿ ತಾಂತ್ರಿಕ ಜನಪದ ಶಬ್ದಗಳು ಕಾಣಬರುತ್ತವೆ. ಹೀಗೆಯೇ ೧೮೩೪ರ ಕುಂದಬೆಟ್ಟದ ಶಾಸನದಲ್ಲಿ[೬] ಮನೆತನದ ಹೆಸರುಗಳಾಗಿ, ಮನೆಪ್ಪಂಡ ಪುಚ್ಚೈಯ, ಕೊಡಂದೇರ ಮುದ್ದೈಯ, ಸಣ್ವಂಡ್ರ ಬೋಳಯ್ಯ, ಮಣಿಂಡೆ ತಿಂಮೈಯ್ಯ, ಚಂನೆಗಉಡನ ಚಂಣಪ್ಪ ಮತ್ತು ೧೮೮೧ರ ಭಾಗಮಂಡಲ ಶಾಸನ[೭]ದಲ್ಲಿ ಮಣಪಟ್ಟಿ ತಿಂಮೈಯ, ೧೮೩೪–೩೫ರ ಪಾಡಿಶಾಸನದಲ್ಲಿ[೮], ಅಪ್ಪಾರಂಡಬೋಪು, ೧೩೯೫ರ ಹುಲುಕೋಡು ಶಾಸನದಲ್ಲಿ[೯] ತ್ರಿನಮೇರದೇವಣ್ಣ, ಕ್ರಿ.ಶ. ೧೯೬೮ರ ಮುಳ್ಳೂರು ಶಾಸನದಲ್ಲಿಯ[೧೦] ಬೊಪ್ಪಗೌಡಿಯ ಮಲ್ಲೆಯ ಇತ್ಯಾದಿ ಮನೆಪೆದ (ಮನೆತನಗಳ ಸಹಿತ) ಸಹಿತವಾದ ಕೊಡವ ಹಾಗೂ ಗೌಡಜನಾಂಗೀಯ ಜಾನಪದ ಶೈಲಿಯ ಹೆಸರುಗಳು ನಿರಂತರವಾಗಿ ಶಾಸನೋಕ್ತವಾಗಿ ನಮೂದುಗೊಂಡು ಬಂದಿರುವುದು ಕಾಣುತ್ತದೆ.

೧೦ನೆಯ ಶತಮಾನದ ಹಾರೋಹಳ್ಳಿ ಶಾಸನದಲ್ಲಿ[೧೧] 'ತೆಯಲಯ್ಯ ಜೂಬು' ಕಾಲಂ ಕಟ್ಟಿ ... 'ಎಱೆಯ[ರ] ಸಂಗೆ ಬಿಟ್ಟಗ್ರಹಾರ' ಎಂಬ ಪದ ಬಂದಿದೆ. 'ಜೂಬು' ಎಂಬ ಹೆಸರು ದಲಿತ ಕೆಂಬಟ್ಟಿಗಳಲ್ಲಿ ಚಾಲ್ತಿಗಿರುವ ಹೆಸರು. ಕೆಸರು ಗದ್ದೆಯಲ್ಲಿ ಸಮತಟ್ಟಿಗೆ ಹದ ಮಾಡುವ ಕ್ರಿಯೆಗೆ 'ತೆಯ–ತಯ' ಎಂಬ ಪಾರಿಭಾಷಿಕ ಶಬ್ದಾರೋಪವಿದೆ. 'ತೆಯಲಯ್ಯ' ಎನ್ನುವಾಗ ಅಂಥ ಕಸುಬು ಮಾಡುವವನನ್ನು ಗುರುತಿಸುವ ಹೆಸರು – ವಿಶೇಷವಾಗಿ 'ಜೂಬು'ವಿಗೆ ಅಂಟಿದೆ. ದಲಿತ ಜನಾಂಗದ ಇಂಥ ವ್ಯಕ್ತಿ ನಾಯಕನಾಗಿ ದಾನ ಕೊಟ್ಟ ರೀತಿಯನ್ನು ಶಾಸನ ತಿಳಿಸಿದೆ.

ಕ್ರಿ.ಶ. ೧೯೫೩ರ ದೊಡ್ಡಮಳತೆಯ ಹೊನ್ನಮ್ಮನ ಕೆರೆದಂಡೆಯಲ್ಲಿ ದೊರೆತ ಅಪ್ರಕಟಿತ **ಗೋವರಸನ ಶಾಸನ**[೧೨]ದಲ್ಲಿ ಹೆದ್ದೇವರನ್ನು 'ಪೆದ್ದೇವರು' (>ಹೆದ್ದೇವರು) ಎಂಬ ಪದ ಉಕ್ತವಾಗಿದೆ. ಸುಗ್ಗಿಕಟ್ಟೆ ಹಬ್ಬದ ಸಮಯದಲ್ಲಿ ಅದನ್ನು ಪೂಜಿಸುವ ಪದ್ಧತಿ ಇದೆ. 'ಹೆದ್ದೇವರು' ನಾಗಾರಾಧನೆಯ ಜನಪದ ಸ್ವರೂಪ. ಸುಗ್ಗಿಕಟ್ಟೆ ಸಂಬಂಧ ನಂಟುಗೊಂಡಿರುವ ಈ ನಾಗಾರಾಧನೆಯ ಶಾಸನೋಕ್ತ ಇತಿಹಾಸ ೧೧ನೆಯ ಶತಮಾನದ ಪೂರ್ವಕ್ಕೂ ಸರಿಯುತ್ತದೆ.

೧೩ನೆಯ ಶತಮಾನದ ಗಣಗೂರು ಶಾಸನದಲ್ಲಿ[೧೩] 'ತೆಂಕಗುಂದ ನಾಡೆಪ್ಪತ್ತಕ್ಕಂ ಕಾರುಣ್ಯಂಗೆಯ್ದು ... ಗಂಡಿಲ್ಲದಿರ್ದ್ದಡೆ ಹೆಣ್ಣಿಂಗೆ ಹೆಣ್ಣುಮಕ್ಕಳಿಂಗೆ' ಎನ್ನುವ ಸಾಲಿದೆ. ಅದರ ರೀತ್ಯಾ ಆಸ್ತಿಯ ಹಕ್ಕು ಸಾಂದರ್ಭಿಕವಾಗಿ ಗಂಡ ತೀರಿದ ಹೆಂಡತಿಗೆ, ಹೆಣ್ಣುಮಕ್ಕಳಿಗೆ ಒದಗುವ ಬಗ್ಗೆ ಜನಪದ ಪಾರಂಪರಿಕ ರೂಢಿಯು ಅಧಿಕೃತವಾಗಿದ್ದ ಸೂಚನೆ ಇಲ್ಲಿ ದೊರಕುತ್ತದೆ.

ಇದಕ್ಕಿಂತಲೂ ಹೆಚ್ಚು ಗಮನಾರ್ಹವಾದ ಆಸ್ತಿಯ ಹಂಚಿಕೆಯ ಬಗ್ಗೆ ೧೩ನೆಯ ಶತಮಾನದ ಚೌಡ್ಲುಗ್ರಾಮದ ಶಾಸನದಲ್ಲಿದೆ[೧೪]. ಚೆಂಗಾಳ್ವ ಹರಿಹರದೇವನ ಕಾಲದಲ್ಲಿ ಹೆಂಗಳೆಯರಿಗೆ ಪೂರ್ವದಿಂದಲೂ ನಡೆದು ಬಂದ ಸ್ವಾಸ್ಥಮರಿಯಾದೆಯ ಕ್ರಮದಲ್ಲಿ ಅನುವಂಶಿಕವಾಗಿ ಆಸ್ತಿಯ ಹಕ್ಕು 'ಹೆಣ್ಣಿಂಗೆ ಹೆಣ್ಣುಮಕ್ಕಳಿಗೆ (ಹೆಣ್ಣು) ತೊತ್ತಿನ ಮಕ್ಕಳಿಂಗೆ' ಸಲ್ಲುವ ಬಗ್ಗೆ ಹೇಳಿದೆ. ಕ್ರಿ.ಶ. ೧೨೯೬ರ ಚಂಗಾಳ್ವ ಹರಿಹರದೇವನ ಮುಳ್ಳೂರು ಶಾಸನದಲ್ಲಿ[೧೫] 'ಬೊಪ್ಪಗೌಡಿಯ ಮಲ್ಲೆಯ ಮುಳ್ಳೂರು ಕೋಟೆಯ ಕಾದು ಆಡಿ ಹೊಯಿದು ವಂಕಧಾರದೊಳಗೆ ಬಿದ್ದನು ಬಿದ್ದಲ್ಲಿಗೆಯಾತಂಗೆ **ವೀರಸೇಸೆಯಾಗಿ**' ಸರ್ವಬಾಧ ಪರಿಹಾರವಾಗಿ ಹೊಸ ಮಾನಿಕೆಜ಼ಿ ಸಹಿತ ಗದ್ದೆಗಳನ್ನು ದಾನ ಕೊಟ್ಟ ಬಗ್ಗೆ ಹೇಳಿದೆ. ಅಂದರೆ ಮಡಿದ ವೀರನನ್ನು ಮದುವಣಿಗನಂತೆ ಕುಪ್ಪಸ ದಟ್ಟಿ ಹಾಕಿ ಸಿಂಗರಿಸಿ ಲಗ್ನಕಾಲದಲ್ಲಿ ಮಾಡುವಂತೆ ತೊಡೆ, ಭುಜ ಹಾಗೂ ತಲೆಯ ಮೇಲೆ ಅಕ್ಕಿ ಸೇಸೆ ಹಾಕುವ ಪದ್ಧತಿಯ ವೀರಸೇಸೆಯಾಗಿದ್ದು ಅದಕ್ಕೆ ಭಾಜನನಾಗಿದ್ದವನು ಬೊಪ್ಪಗೌಡಿಯ ಮಲ್ಲೆಯ.

ಕ್ರಿ.ಶ. ೧೩೯೦ರ ಮುಳ್ಳೂರು ಚಂದ್ರನಾಥ ಬಸದಿಯ ಶಾಸನದಲ್ಲಿ[೧೬] ೧೧ನೆಯ ಶತಮಾನದಲ್ಲಿ **ರಾಜಾಧಿರಾಜ ಕೊಂಗಾಳ್ವ**ನು ಕಟ್ಟಿಸಿದ್ದ ಬಸದಿಯು ವಿಜಯನಗರದ ಇಮ್ಮಡಿ ಹರಿಹರನ ಕಾಲದಲ್ಲಿ ಜೀರ್ಣೋದ್ಧಾರವಾದ ಸಂಗತಿಯನ್ನು ಹೇಳಿದೆ. ಅದರಲ್ಲಿ ಬಸದಿಗೆ ಭೂದಾನದ ವಿಷಯವನ್ನು ಮಂಡಿಸುವಲ್ಲಿ ಗದ್ದೆಯ ವೈವಿಧ್ಯಮಯ ಹೆಸರುಗಳ ಮೂಲಕ ಕೃಷಿಯ ಬಹುಮುಖಿ ಅನ್ವಯದ ಚಿತ್ರಣವನ್ನು ನೀಡಲಾಗಿದೆ. ಆ ಗದ್ದೆಗಳ ಹೆಸರುಗಳ ನಮೂದು ಹೀಗಿದೆ: ಕೊಡಗೊಡಲು ಅಚೆಗದ್ದೆ, ಲೋಕಗದ್ದೆ, ಬೋಳಗದ್ದೆ, ಹೊನ್ನದೇವಿಯ ಸರಣಗೋಡಲು ಇತ್ಯಾದಿಯಾಗಿ ಹೇಳುವಲ್ಲಿ ಜನಪದೀಯವಾಗಿ ಆರೋಪಗೊಂಡ ಗದ್ದೆಯ ಹೆಸರುಗಳಾಗಿವೆ.

ಕ್ರಿ.ಶ. ೧೨೬೪ರ ಉಲುಗುಲಿ ಶಾಸನದಲ್ಲಿ[೧೭] ವೀರಮುನಿವರಾದಿತ್ಯ ಗೋಕುಲದೇವರಸನ ಆಳ್ವಿಕೆಯ ಕಾಲದಲ್ಲಿ ನಡೆದ ತುರುಗೋಳದ ಸಂಗತಿ ಜಾನಪದೀಯವಾಗಿ ವೀರದಂಪತಿ ಮಾಸ್ತಿಗಲ್ಲು ಆಗಿ, ಗರುಡ ದಂಪತಿಗಳ ಕುರಿತು ಹೇಳಿದಂತಿದೆ. 'ಯಟಿಫಳೆಯ ತುಱು ಇಡಿಸಿದಲ್ಲಿ ಮಾ(ಮೀ)ಸಲು ಬಣ್ಣ ಮೇಲಾಳಿಯ ಮರುಳಕಾರ ಯೋಶಿಯಾಳು ಬಿದಡೆ ಗರುಡುವಳಿತಲ್ಲಿ ಬಿಟ್ಟು ದಾಣಿಗೆ ಕಾಲೆಗೆ ಸಂದುದು ಮುಕ್ಕೊಡವೆ' ಎಂದಿರುವ ಇಲ್ಲಿ ಉಕ್ತವಾಗಿರುವ 'ಯಟಿಫಳೆ' ಎಂಬ ಸ್ಥಳನಾಮ ಇಂದಿನ 'ಉಲುಗಲಿ' ಸ್ಥಳನಾಮಕ್ಕೆ ೧೦ನೆಯ ಶತಮಾನದ ಗಂಗರ ಕಾಲದಲ್ಲಿ ಬಳಕೆಗಿದ್ದ (ಯಟಿಫಳೆ) ಪ್ರಾಚೀನ ರೂಪ. ಮೇಲಾಳಿಯ ಎಂದರೆ ಅಶ್ವಾರೋಹಿವೀರ, 'ಯೋಷಿತೆ' ಎಂದರೆ 'ಹೆಂಡತಿ' ಎಂಬ ನಿಘಂಟಿನ ಅರ್ಥವನ್ನು ಅನುಸರಿಸಿದರೆ, 'ಮೀಸಲು ಬಣ್ಣ ಮೇಲಾಳಿಯ ಸತಿ' ಎಂಬ ಪೂರಕವಾದ ಅರ್ಥವೊದಗಿ, ಗರುಡರಾಗಿರುವುದೂ ಇರುವಲ್ಲಿ ಗರುಡ ಭಾಷೆಯಂತೆ ತುರುಗಾಳಗದಲ್ಲಿ ಮಡಿದ ಸೂಚನೆ ಕಾಣುತ್ತದೆ. ಶಾಸನಶಿಲ್ಪದ ಚಹರೆಯೂ ಇದಕ್ಕೆ ಪೋಷಕವಾಗಿದೆ. ದಾಣಿಗೆ (ಆಯುಧ) ಎಂದರೆ ವೀರನ ಕತ್ತಿಗೆ 'ಕಾಲೆಗೆ' ಎಂದರೆ ಸತಿ-ಪತಿಯ ಕಾಲ್ವೆಣ್ಣೆಗೆ ಎಂದರೆ ಮೂರು ವಡವೆಗಳ ಮೌಲ್ಯದ ದಾನವನ್ನು ಈ ಗರುಡದಂಪತಿಗಳ ಹೆಸರಿನಲ್ಲಿ ನೀಡಲಾಯಿತು' ಎಂದ ಅರ್ಥೈಸಿಕೊಳ್ಳಲು ಅನುವಾಗುತ್ತದೆ.

ಕ್ರಿ.ಶ. ೧೮೨೨ರ ಮಡಿಕೇರಿಯ ಶಾಸನದಲ್ಲಿ[೧೯], ಹೇರೂರು, ನೂರೊಕ್ಕಲುನಾಡು, ಉಲುಗುಲಿ ಮೂಡಗೇರಿ, ಕೊಡಗು ಶ್ರೀರಂಗಪಟ್ಟಣ, ಬೆಟ್ಟಿಯತ್ತ್‌ನಾಡು, ಚೆಂನನಕೋಟೆ ಇತ್ಯಾದಿ ಕನ್ನಡ-ಕೊಡವ ಭಾಷಿಕ ಸ್ಥಳನಾಮಗಳು ಜನಪದ ಶೈಲಿಯಲ್ಲಿವೆ. ಅಲ್ಲದೆ (ಆನೆಗಳು) ಪೈರುಗಳನ್ನು **ಕರಡು** ಮಾಡಿ (ತುಳಿದು ಹಾಳುಗೆಡವಿ) ಎಂಬ ಭಾಷಾಪ್ರಯೋಗಗಳು ಈ ಶಾಸನದಲ್ಲಿವೆ. ಹೀಗೆಯೇ ಕಿಗ್ಗಟ್ಟುನಾಡು (ಕಾವೇರಿ ಹರಿವಿನ ದಕ್ಷಿಣದ ಕೆಳಗಣನಾಡು) ಬಲ್ಯಾಟರ್ರೆ ಕಾಡು (ಕೊಡಗು ೨೬; ದುರ್ಗಮ ದೊಡ್ಡಕಾಡು) ಎಂದು ಕೊಡವ ಭಾಷಿಕ ಪ್ರದೇಶಗಳು ಕಂಡುಬರುತ್ತವೆ.

ಐತಿಹಾಸಿಕವಾಗಿ (ಕ್ರಿ.ಶ. ೧೮೨೦-೩೪)ರ ಚಿಕ್ಕವೀರರಾಜೇಂದ್ರ ಒಡೆಯನು ಸ್ತ್ರೀಪಡೆಯನ್ನು ರೂಪುಗೊಳಿಸಿದ್ದ. ಇದಕ್ಕೆ ಪೂರಕವಾಗಿ ದಲಿತ ಕೆಂಬಟ್ಟಿಗಳ ಹುತ್ತರಿ ಹಾಡಿನಲ್ಲಿ (ಹುತ್ತರಿ ಕಳಿಪಾಟ್) ಹೇಳುವ ಸಾಲು (ಕೊಡವ ಭಾಷಿಕ) ಹೀಗಿದೆ[೨೦]:

'ಆಣ್ ಪಡೆ ಪೋಪು ಮಹಾಲೋಕತ್ ಉಳ್ಳ್ । ಪೊಂಗ ಪಡೆ ಪೋಪ ಕಣ್ಣಾರೆ ಕಂಡ' – ಗಂಡಾಳ್ವಡೆಯು ಕಾಳಗಕ್ಕೆ ಹೋಗುವುದು ಲೋಕದಲ್ಲಿದೆ. ಹೆಣ್ಣಾಳ್ವಡೆ ಕಾಳಗಕ್ಕೆ ಹೋಗುವ ಸೋಜಿಗ ಕಂಡೆ ಎಂಬ ಅರ್ಥವು ಜನಪದ ಇತಿಹಾಸದ ಒಂದು ಉದಾಹರಣೆ ಆಗಿ ಇಲ್ಲಿ ಕಾಣುತ್ತದೆ. ಇದೊಂದು ರೀತಿ ಇತಿಹಾಸ ಸ್ಪರ್ಶದ ಜಾನಪದ ಹಾಡು ಎನ್ನಬಹುದು.

ಇದಲ್ಲದೆ ಇಲ್ಲಿಯ ಶಾಸನಗಳಲ್ಲಿ ಪ್ರಭಾಳೆ (ಪ್ರಭಾವಳಿ) 'ತಳಿಪರಂಬು, ತೆಂಕನಾಡು ಮಂದೆ, ಬಿಜವರಿ ಭಟ್ಟಿ, ಗವುಡುಂಬಲಿ ನಾಯಿಮಣ್ಣು, ಚವು (ಚೌಡ್ಲು) ಗ್ರಾಮ, **ಗವುಡಬೋವ**, ಕಟಿನಿಯ ಕೆಜೆ, ದಂಡಿನ ಕಾಣಿಕೆ, ಅಯ್ಯನಂಕಕಾರ, ಸಂಹಥನಾಡು (ಸಂಪಾಜೆ!), ಬಿಳಿಊರ್ಪನ್ನಿರ್ಪಳ್ಳಿ ಇತ್ಯಾದಿ ಶಬ್ದಗಳು ಕಂಡುಬರುತ್ತವೆ.

ಪ್ರಾಗೈತಿಹಾಸಿಕ ಜಾನಪದ: ಕೊಡಗಿನ ಪ್ರಾದೇಶಿಕ ದೃಷ್ಟಿಯಿಂದ ಪ್ರಾಗೈತಿಹಾಸಿಕ ಜಾನಪದದ ಕುರುಹಾಗಿ ಗೋಣಿಕೊಪ್ಪ–ಕೈಕೇರಿ ಸನಿಹದ ಕೊಳತ್ತೋಡು (ಕೊಡತ್ತೋಡು<ಕುಡತ್ತೋಡು–ಪಶ್ಚಿಮದ ಕಡೆಗೆ ಹರಿಯುವ ತೋಡು!)–ಬೈಗೋಡು ಗ್ರಾಮದಲ್ಲಿರುವ ಬೃಹತ್ ಶಿಲಾಯುಗದ ದ್ವಯನಿಲುವುಗಲ್ಲುಗಳನ್ನು 'ಅಯ್ಯಪ್ಪ', 'ಸುಬ್ರಮಣ್ಯ' ಎಂದು ದೈವಾರೋಪ ಮಾಡಿ, ಜನಪದ ಆಚರಣೆಗಳನ್ನು [ಹುತ್ತರಿ ಕದಿರು ಕಟ್ಟುವುದು, ತುಲಾಸಂಕ್ರಮಣದ (ಬಿದುರುಕೋಲಿಗೆ ಕೈಬಳಬಳ್ಳಿ) ಬೊತ್ತುಗಳನ್ನು ಅವುಗಳ ಬಳಿ ನಿಲ್ಲಿಸುವುದು] ನಡೆಸುವುದಿದೆ. ಹೀಗೆಯೇ ಪುಷ್ಪಗಿರಿಯ ಬುಡದಲ್ಲಿ ಲಿಂಗದ ಹೊಳೆಗೆ ಹೋಗುವ ದಾರಿಯಲ್ಲಿ ಸುಮಾರು ಸಮತಟ್ಟಿನ ಬಂಡೆಯ ಮೇಲೆ ಕಲ್ಲಿನ ರಾಶಿಗಳನ್ನು ಹೊಂದಿಸಿ ಕೆಳಗೆ ಕೋಣೆ ಮೇಲೆ ಗೋಪುರದಂತೆ ರಚಿಸಿ 'ಪಟ್ಟೆಪಾರಿ ಕಲ್ಲು' (ಪಟ್ಟೆಪಾರ್ವತಿಯನ್ನು ನೆನೆಸಿ) ಎಂದು ಕರೆದು, ಅನುಗುಣ ರಚನೆಗಳನ್ನು ರೂಪಿಸುವುದು (ಕೊಡಗಿನ ಕೆಲವೆಡೆ ಈ ರೀತಿಯ ರಚನೆಗಳನ್ನು ಮಾಡಿ 'ಮಕ್ಕಳ ಮಂಟಪ' ಎಂದೂ ಕರೆಯುವುದು ಸಂತಾನದ ಹರಕೆಯ ಪ್ರಾಗೈತಿಹಾಸಿಕ ವರ್ತಮಾನ ಸ್ಮರಣೆಯ ರೂಪವೆನಿಸುವಂತಿದೆ.), ಮತ್ತೊಂದು ಉದಾಹರಣೆ ಎನ್ನಬೇಕು. ಈ ಸಾಲಿಗೆ, ಕಳತ್‌ಮಾಡು ಗ್ರಾಮದಲ್ಲಿ ಕಲ್ಲುಬೋಟಿಗೆ (ಕಣದಲ್ಲಿರುವ ಕಲ್ಲುಸ್ತಂಭಕ್ಕೆ) ಹುಲ್ಲಿನ ಕೋಡುಗಳನ್ನು ಕಟ್ಟಿ ಕಣದ ಕಾಲದಲ್ಲಿ ಎತ್ತುಗಳನ್ನು ಪೂಜಿಸುವುದು; ಗಾಳಿಬೀಡು ಭದ್ರಕಾಳಿಹಬ್ಬದಲ್ಲಿ ಭಕ್ತರು ತಲೆಗೆ ಹುಲ್ಲಿನ ಕೋಡುಗಳನ್ನು ಕಟ್ಟಿಕೊಂಡು ಕುಣಿತ ಇತ್ಯಾದಿ ಆಚರಣೆಗಳನ್ನು ಪಾಲಿಸುವುದು. ಇವೆಲ್ಲ ಇತಿಹಾಸ ಪೂರ್ವಕಾಲದ ರಿಚುವಲ್ ಪೋಲ್ (ಧಾರ್ಮಿಕಬಲಿ–ಆಚಾರಸ್ತಂಭ) ಸಂಬಂಧವನ್ನು ಸ್ಮರಣೆಗೆ ತರುವ ಮುಂದುವರಿದ ವರ್ತಮಾನದ ರೂಪವಾಗಿದೆ. ಹೀಗೆಯೇ ಶ್ರೀಮಂಗಲ ಬಳಿಯ ಕುಮಟೂರಿನಲ್ಲಿ, ಕೈಕೇರಿ ಬಳಿಯ ಕುಂದಬೆಟ್ಟದಲ್ಲಿ ತುಲಾಸಂಕ್ರಮಣದ ಸಮಯದಲ್ಲಿ ಮೈಗೆ ಸೊಪ್ಪು ಸುತ್ತಿಕೊಂಡು 'ಬೆತ್ತಲೆ ಕಳಿ' ಆಡುವುದು; ಬಿಟ್ಟಂಗಾಲ–ಕಡಂಗಾಲದ **ಪಾರಣಮಾನಿ ಹ**ಬ್ಬದಲ್ಲಿ, ಮೈತಂಬ ಹುಲ್ಲು ಬಳಸಿ ಬೆತ್ತಲೆ ಸ್ವರೂಪದ ಅಂಗಾಂಗಗಳೆನ್ನೆಲ್ಲ ಪ್ರದರ್ಶಿಸಿ ಕಳಿ ಆಡುವ ಪಿಲ್ಲುಭೂತ, ಇತ್ಯಾದಿಗಳ ಪ್ರಾಚೀನ ಯುಗದ ಜಾನಪದದ ವರ್ತಮಾನ ರೂಪವೆನ್ನಬೇಕು. ಹೀಗೆಯೇ ಬುಡಕಟ್ಟುಗಳಲ್ಲಿ ಪ್ರಚಲಿತವಿದ್ದ ಹಿರಿಯರ ಪೂಜೆ, ಕಾಲಾಂತರದಲ್ಲಿ, ವೇದಿಕೆ, ಕಲ್ಲಂದೆರೆ(ಕಲ್ಲುಗುಡ್ಡೆ), ಕೈಮಡ (ಸ್ಮಾರಕ ಕಿರುಕಟ್ಟಡ) ರೂಪದಲ್ಲಿ ಆಕಾರಗೊಂಡು ಇಂದೂ ಚಾಲ್ತಿಗಿದೆ; ಈ ಸ್ಮಾರಕಗಳು ಕೊಡವ, ಗೌಡ, ಗೊಲ್ಲ, ಕಣಿಯ, ಕೆಂಬಟ್ಟಿ (ದಲಿತ), ಐರಿರ(ಬಡಗಿ), ಕಾಪಳ, ಕೊಯವ, ಹೆಗ್ಗಡೆ ಇತ್ಯಾದಿ ಜನಾಂಗೀಯರಲ್ಲಿ ಪಾರಂಪರಿಕವಾಗಿ ಭಕ್ತಿಗೌರವದ ಸ್ಮಾರಕ ನೆಲೆಗಳಾಗಿವೆ.

ಪೌರಾಣಿಕ ಜಾನಪದ: ಜಾನಪದ ಗೀತೆಯ ಮೂಲಕ, ಪೌರಾಣಿಕ ಕತೆಯನ್ನು ನಿರೂಪಿಸಿರುವ ಬಗೆ ಕೊಡುವ ಭಾಷೆಯ 'ಮೂಲ ಕಾವೇರಿ ಪಾಟ್'ನಲ್ಲಿ ಕಾಣುತ್ತದೆ. ಇದು ಸಂಸ್ಕೃತಾನುಕರಣದ ಕತೆಯಾಗಿ ಅಗಸ್ತ್ಯ ಕಾವೇರಿಯರ ವಿವಾಹದ ಕತೆಯಾಗಿದೆ. ಅದೇ ದಲಿತ ಕೆಂಬಟ್ಟಿಗಳಲ್ಲಿ, ಅಗಸ್ತ್ಯ, ಕಶ್ಯಪರ ನಡುವೆ ಸ್ಪರ್ಧೆ ಬಿದ್ದು, ಅಗಸ್ತ್ಯ ಗೆದ್ದ ಕಾರಣ 'ಹೂಮದುವೆ'ಯಂಥ ಸರಳೀಕರಣದ ಕಥೆ – ಜಾನಪದ ಗೀತೆ, ರೂಪುಗೊಂಡಿವೆ. ಪಂಜರಿ ಎರವರು ತಮ್ಮ ಮೂಲವನ್ನು ಜಾನಪದ ಐತಿಹ್ಯವಾಗಿ, 'ಕಿಯೋರಿತ್ತಿ, 'ಮೇಲರಚ್ಚ' ಎಂಬ ಪೌರಾಣಿಕ ದಂಪತಿಗಳ ಸಂತಾನವೆಂದು ಬಿಂಬಿಸಿಕೊಳ್ಳುತ್ತಾರೆ. ಕುಡಿಯರು ತಾವು ಶಿವನ ಮಕ್ಕಳು, ಪಾಂಡವರ ಕಾಲದಲ್ಲಿಯೂ ಇದ್ದ, ವಂಶ, ಎಂಬ ಪೌರಾಣಿಕ ಲೇಪನದ ಐತಿಹ್ಯದಲ್ಲಿ ಬಿಂಬಿಸಿಕೊಂಡಿದ್ದಾರೆ. ಕೊಡಗಿನ ವ್ಯವಸಾಯದ ಅಧಿದೇವತೆ ಶ್ರೀ ಇಗ್ಗುತಪ್ಪನ ಕತೆ ಕೊಡವ ಭಾಷೆಯ ಜನಪದ ಗೀತೆ ಎವ್ವಮಕ್ಕಡ ದೇವಡ ಪಾಟ್‌ನಲ್ಲಿ ಪೌರಾಣಿಕವಾಗಿ ರೂಪಗೊಂಡಿದೆ. ಇಗ್ಗುತಪ್ಪನ ಸೋದರಿ ಪನ್ನಂಗಾಲತಮ್ಮೆ ಕುರಿತು ಕೆಂಬಟ್ಟಿಗಳ ಹಾಡು ದಲಿತರ ಸರಳಗೀತೆಯಂತೆ ಕಾಣುತ್ತದೆ. ಈ ಸಂದರ್ಭಗಳನ್ನು ಗಮನಿಸಿ ಪೌರಾಣಿಕ ಜಾನಪದವೆಂದು ವಿಭಾಗಿಸಿಕೊಳ್ಳಬೇಕಾಗುತ್ತದೆ.

ಪಾರಂಪರಿಕ ಜಾನಪದ: ಜನಪದೀಯವಾಗಿ ಆಚರಣೆಯಲ್ಲಿರುವ ಹುತ್ತರಿಹಬ್ಬ (ಹೊಸ ಕದಿರು ತೆಗೆದು ಪೂಜಿಸುವಲ್ಲಿ), ಕೈಲ್‌ಪೊಳ್ದು (ಆಯುಧಪೂಜಾಹಬ್ಬ), ಹುತ್ತರಿ ಕೋಲಾಟ, ತುಲಾಸಂಕ್ರಮಣ ಸಮಯದಲ್ಲಿ ಇಡುವ ಬೊತ್ತು, ಬೋಡುಹಬ್ಬ, ವೇಷಪಲ್ಲಟಗಳಾದ ವಡ್ಡಕಳಿ, ಕಾಪಳಕಳಿ, ಪಟ್ಟಕಳಿ, ಇಗ್ಗುತಪ್ಪ, ಪನ್ನಂಗಾಲತಮ್ಮೆ, ಭದ್ರಕಾಳಿ, ತಿರುನೆಲ್ಲಿ ಪೆಮ್ಮಯ್ಯ, ಬೈತೂರಪ್ಪ ಇತ್ಯಾದಿ ದೇವತೆಗಳಿಗೆ ಎತ್ತುಪೊರಟ (ಹರಕೆಯ ಎತ್ತಿನ ಹೇರು) ಒಯ್ಯುವುದು, ತೊಟ್ಟಿಲು ಕುಂಞೆ (ಮಗುವಿನ ಸೌಖ್ಯಕ್ಕೆ ತೊಟ್ಟಿಲ ಹರಕೆ), ಪಾರಕುಂಞೆ (ಕೋಳಿ ಮರಿ ಹಾರಿಸುವುದು), ಭದ್ರಕಾಳಿ, ಭಗವತಿಗೆ ತೊಡುನಮ್ಮೆ (ಬೆಂಕಿಕೊಳ್ಳಿ ಹಾರುವ ಆಚರಣೆ) ತೆಂಗಿನಪೋರು (ತೆಂಗಿನಕಾಯಿ ಕಸಿವ ಸ್ಪರ್ಧೆ) ಓಟ್‌ನಾಟಿ (ನಾಟಿಗದ್ದೆಯಲ್ಲಿ ಓಟದ ಸ್ಪರ್ಧೆ)

ಯರವರ ಕೂಟಮಂದಡೆ (ಸಮೂಹ ಕ್ರೀಡೆ), ವೀರಶೈವ ಮಠದಿಂದ ಹುಲುಕೋಡಯ್ಯ ಗೊದ್ದುವಿನ ದೊಡ್ಡಯ್ಯನ (ಕುಮಾರ ಲಿಂಗೇಶ್ವರ) ಜಾತ್ರೆ, ಹೆಬ್ಬಾಲೆ-ತಿತಿಮತಿಯ ಅಯ್ಯಪ್ಪ ಸಂಬಂಧದ ಜೇನುಕುರುಬರ ಬುಂಡೆಹಬ್ಬ, ಜಮ್ಮ ಮಾಪಿಳ್ಳೆಗಳ ದಪ್ಪು ಆಟ್, ಗೌಡ ಜನಾಂಗದ ಹರಿಸೇವೆ, ಗೊರವನಿಗೆ ಕೊಡುವುದು, ಭತ್ತದ ಪೂಜೆಯಾದ ಕಿಡ್ಡಾಸಹಬ್ಬ, ವೀರಶೈವ ಮಠಗಳಲ್ಲಿಯ ಚೌಡಿಪೂಜೆ ಇತ್ಯಾದಿಗಳು ಪಾರಂಪರಿಕೆ ಜಾನಪದ ವಲಯಕ್ಕೆ ಸೇರುತ್ತದೆ.

ಇನ್ನು **ಆಧುನಿಕ ಜಾನಪದ**ವೆನ್ನುವಾಗ ಪರಂಪರೆಯಲ್ಲಿ ಬಂದ ನಂಬಿಕೆಗಳಿರಲಿ, ಹಾಡುಗಳರಲಿ, ಅವುಗಳಿಗೆ ಹೊಂದಿಸಿಕೊಳ್ಳುವ ವರ್ತಮಾನದ ಅಗತ್ಯ ಹಾಗೂ ಪ್ರಭಾವಗಳಿಗನುಗುಣವಾಗಿ ಜಾನಪದ ಹಾಡು, ಆಚರಣೆಗಳಲ್ಲಿ ಆಗಿರುವ ಮಾರ್ಪಾಡು, ಸೇರ್ಪಡೆ ಇತ್ಯಾದಿಗಳನ್ನು ಗಮನಿಸಬೇಕಾಗುತ್ತದೆ.

ಪೇರಿಯಂಡ ಚಂಗಪ್ಪ ಅವರ ಕೊಡವ ಭಾಷಾ ಕೃತಿ 'ಕೊಡವಡ ಅಂದೋಳತ್ ಪಾಟ್' ಹಾಗು ಪುಗ್ಗೆರ ಬಿದ್ದಪ್ಪ ಅವರ 'ನೆಲ್ಲಕ್ಕಿ ನಡುಬಾಡೆ' ಇತ್ಯಾದಿ ಜಾನಪದ ಹಾಡುಗಳ ಸಂಕಲನದಲ್ಲಿ ಮತ್ತು ದೇಶಕಟ್ಟ್ (ಬಾಳೊಪಾಟ್)ನಲ್ಲಿ ಕೊಡಗಿನಲ್ಲಿ ಆಂಗ್ಲರ ಆಳ್ವಿಕೆಯ ವಿಷಯ ಹಾಗೂ ವರ್ತಮಾನದ ಜಿಲ್ಲಾ ಪರಿಷತ್‌ನ ವಿಷಯವನ್ನು ಸೇರಿಸಲಾಗಿದೆ. ಗೌಡಜನಾಂಗದ ಗಾದೆಗಳಲ್ಲಿ ಆಧುನಿಕ ಸಂಗತಿಗಳನ್ನು ಅಳವಡಿಸಿಕೊಂಡು ಹೊಸ ಗಾದೆಗಳನ್ನು ರೂಪಿಸಲಾಗಿದೆ. ಹೆಣ್ಣು ವಹಿಸಿ ಕೊಡುವ ಹಾಡಿನಲ್ಲಿ ಆಧುನಿಕ ಕವಿತೆಯ ಸಾಲು ತೂರಿಕೊಂಡಿದೆ. ನಾಟಿ ಬಿತ್ತನೆಯ ಸಮಯದ ಹಾಡಿನಲ್ಲಿ ಮಾಣಿಕ್ಯ ಮಲೆನಾಡು ಕೇರಳದ ಬದಲು ಮೈಸೂರಿಗೆ ಹೋಗಿ ಎತ್ತನ್ನು ಖರೀದಿಸಿ ತಂದ ವಿಷಯವಿದೆ. ಜಾನಪದ ಹಬ್ಬಗಳ ಆಚರಣೆಗಳಲ್ಲಿ ಆಧುನಿಕ ಪರಿಕರಗಳ ಬಳಕೆಗಳು ಕಾಣಬರುತ್ತವೆ.

ಇವಲ್ಲದೆ ೧೫೮೭ರ ಹಾಲೇರಿವಂಶದ ಮೊದಲ ದೊರೆ ವೀರರಾಜನಿಂದ ಹಿಡಿದು ಕೊನೆಯ ದೊರೆ ೧೮೩೪ರ ಚಿಕ್ಕವೀರರಾಜೇಂದ್ರ ಒಡೆಯ ಹಾಗೂ ಅವರ ರಾಣಿಯರ ಬಗ್ಗೆ ಸೋಮವಾರಪೇಟೆ ತಾಲೂಕಿನ ಕಡೆಯ ಜಾನಪದ ಹಾಡುಗಳಲ್ಲಿ ಸ್ಮರಿಸಿ ಹೇಳಿರುವುದಿದೆ[೨೧].

ಒಟ್ಟಿನಲ್ಲಿ ಕೊಡಗು ಜಾನಪದ ಸಂಭ್ರಮದ ತವರು. ಹಾಗೆಯೇ ಬುಡಕಟ್ಟು ಸಂಸ್ಕೃತಿಯ ಆಗರವೂ ಆಗಿದೆ. ಇವೆರಡಕ್ಕೂ ಇತಿಹಾಸದ ಸ್ಪರ್ಶದ ಸೇತುವೆ ಕಾಣಬರುತ್ತದೆ. ಬುಡಕಟ್ಟು ನೆಲೆಗಳಾಗಿ ಹೆಗ್ಗಡಹಳ್ಳಿ, ರಾಮಸ್ವಾಮಿ ಕಣಿವೆ, ಜೇನುಕಲ್‌ಬೆಟ್ಟದ ಪರಿಸರ, ಗೋಣಿಕೊಪ್ಪ-ಕೈಕೇರಿ ನಡುವಣ ಕೊಳತ್ತೋಡು-ಬೈಗೋಡುವಿನ ನಿಲುವುಗಲ್ಲುಗಳ (ಮೆನ್‌ಹಿರ್), ಬೃಹತ್ ಶಿಲಾಯುಗದ ಸಮಾಧಿಪ್ರದೇಶ ಕಾಣಬರುತ್ತವೆ. ಇದಲ್ಲದೆ ನಾಗರಹೊಳೆ ಅಭಯಾರಣ್ಯದ (ಇಂದು ರಾಜೀವಗಾಂಧಿ ಅಭಯಾರಣ್ಯ) ಅಮ್ಮಾಳೆಗುಡಿಯ ಹೊರಭಿತ್ತಿಯಲ್ಲಿ ಜೇನುಕುರುಬರು ವಾರ್ಷಿಕವಾಗಿ ಚೆಂಗಾಳ್ವ ದೊರೆ ನಾಗರಾಜನ ಲೋಹವಿಗ್ರಹಕ್ಕೆ ಆರಾಧನೆ ಮಾಡುವಲ್ಲಿ ಪ್ರಾಗೈತಿಹಾಸಿಕ ಬುಡಕಟ್ಟುಪದ್ಧತಿಯ ಸೂರ್ಯ, ಜರಿಗಿಡ ರೂಪಗಳ ಚಿತ್ರ ಬಿಡಿಸುತ್ತಾರೆ. ಈ ಹಿಂದೆಯೇ ಹೇಳಿರುವಂತೆ ಗಾಳಿಬೀಡು ಭದ್ರಕಾಳಿ ಹಬ್ಬದಲ್ಲಿ ತಲೆಗೆ ಇಬ್ಬದಿ ಹುಲ್ಲಿನ ಕೋಡು ಅಲಂಕಾರ ಮಾಡಿಕೊಂಡು ನಡೆಸುವ ಆಚರಣೆ, ಕಳತ್ ಮಾಡುವಿನಲ್ಲಿ ಕಣದ ಕಲ್ಲುಬೋಟಿಗೆ ಭತ್ತದ ಕಣ ಮಾಡುವ ಸಮಯದಲ್ಲಿ ಹುಲ್ಲಿನ ಕೊಂಬುಗಳನ್ನು ಧರಿಸುವುದು - ಇವೆಲ್ಲ ಬುಡಕಟ್ಟು ಪದ್ಧತಿಗಳ ಸಾಂಕೇತಿಕ ರೂಪವೇ ಆಗಿದೆ. ಕೊಡಗಿನ ಹುತ್ತರಿಹಬ್ಬದಲ್ಲಿ ಮನೆಯ ಹೊರಭಿತ್ತಿಯಲ್ಲಿ ಮಸಿ ಮೆತ್ತಿದ ಹಸ್ತದಿಂದ, ಹಸ್ತದ ಗುರುತು ಹಾಕುವುದು, ಬುಡಕಟ್ಟು ಪದ್ಧತಿಯ ಆಧುನಿಕ ರೂಪವಾಗಿದೆ. ಇಂಥ ಹಬ್ಬದಲ್ಲಿ, ಮೆನ್‌ಹಿರ್(ನಿಲುವುಗಲ್ಲು)ಗಳ ಆರಾಧನೆಯ ಸಂದರ್ಭಗಳಲ್ಲಿ ಜನಪದ ಆಚರಣೆಗಳು, ಕುಣಿತಗಳೂ ನಡೆಯುತ್ತವೆ.

ಬುಡಕಟ್ಟು ಪದ್ಧತಿಗಳಾದ ಪಂಜು ಹಿಡಿದು ಸಾಗುವುದು. ಬೇಟೆ ಆಡುವುದು, ಪಂಜುಕೊಳ್ಳಿ ಹಾರುವುದು, ಪಾರಕುಂಞ ಹಾರಿಸುವುದು ಇತ್ಯಾದಿಗಳು ಜಾನಪದ ಮುಖ ತೊಟ್ಟು ಇಂದೂ ಚಾಲ್ತಿಗಿವೆ. ಈ ಹಿನ್ನೆಲೆಯನ್ನು ಗಮನಿಸುವಲ್ಲಿ ನಾತ, ಗುಳಿಗ, ವಿಷ್ಣುಮೂರ್ತಿ, ಪುಲಿಚಾವುಂಡಿ ಇತ್ಯಾದಿ ಜಾನಪದ ದೈವಗಳ ಆರಾಧನೆಯಲ್ಲಿ ತೆರೆ ಆಚರಣೆ ಇಲ್ಲಿ ಯಥೇಚ್ಛವಾಗಿ ನಡೆಯುತ್ತದೆ. ಪರಿಸರ ಸಂರಕ್ಷಕ ದೇವರಕಾಡುಗಳಲ್ಲಿ ಅವುಗಳಿಗೆ ನೆಲೆ ಇವೆ. ಸೊಪ್ಪು ಕಟ್ಟಿಕೊಂಡು ಬೆತ್ತಲೆಕಳಿಯಂಥ ಬುಡಕಟ್ಟು ಆಟಗಳ ಪದ್ಧತಿಯ ಜೊತೆಗೆ ಪನ್ನಂಗಾಲತಮ್ಮೆ ಹಬ್ಬದ ಕೊಡೆಹಬ್ಬ, ಕುರುಂದ ಆಚರಣೆ, ಹುತ್ತರಿಯಲ್ಲಿ ಬಿದಿರುಪಟ್ಟಿ ವಿರಚಿತ ಕುದುರೆ ಬೋಡುಕಳಿಯಂಥ ಜನಪದ ಕುಣಿತಗಳೂ ಚಾಲ್ತಿಯಲ್ಲಿವೆ. ಇವುಗಳ ಆಚರಣೆಗಳೇ ನಮಗೆ ಇತಿಹಾಸದ ಸ್ಪರ್ಶ ಸೇತುವಾಗಿ ಕಾಣಬರುತ್ತವೆ. ಇದಕ್ಕೆ ಮತ್ತಷ್ಟು ಪೋಷಕವಾಗಿ ಈ ಹಿಂದೆ ಸೂಚಿಸಿರುವಂತೆ ಕೊಡಗಿನ ಕೊಡವ, ಗೌಡ, ಕಣಿಯ ಗೊಲ್ಲ ಜನಾಂಗಗಳಲ್ಲಿ ಹಿರಿಯ ಸ್ಮಾರಕ ಕಟ್ಟಡವಾಗಿ ಕೈಮಡಗಳೂ ಕಂಡುಬರುತ್ತವೆ. ಅವುಗಳಲ್ಲಿ ಮನೆತನದ ಮೊಧಲ ಹಿರಿಯನ ಸಾಂಕೇತಿಕ ವಿಗ್ರಹವೂ ಇದ್ದು ಆರಾಧನೆಗೊಳ್ಳುತ್ತದೆ. ಇತಿಹಾಸ, ಜನಪದದಲ್ಲಿ ನೆಟ್ಟುಗಲ್ಲುಗಳನ್ನು ತೋರಿರುವ ಸಂಕೇತ ಅವಾಗಿವೆ.

ಅಡಿಟಿಪ್ಪಣಿಗಳು

೧. ಎ.ಕ. ಸಂ. ೧ (ಹೊಸತು), ೧೯೭೨, ಕೊಡಗು ಜಿಲ್ಲೆ: ಮೈ.ವಿ.ವಿ. (ಮಡಿಕೇರಿ, ಕ್ರಿ.ಶ.೪೬೬, ಕೊಡಗು ೧).

೨. ಎ.ಕ. ಸಂ. ೪ (ಹೊಸತು), ೧೯೭೪, ಮೈಸೂರು ಜಿಲ್ಲೆ: ಮೈ.ವಿ.ವಿ. (ಚಾಮರಾಜನಗರ ೩೪೭, ಕುಲಗಾಣ, ೭-೮ ಶತಮಾನ).

೩. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೨ (ಮಡಿಕೇರಿ, ಕ್ರಿ.ಶ. ೧೦೦೧).

೪. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೯೬ (ಬಿಳಿಯೂರು, ಕ್ರಿ.ಶ. ೮೮೮).

೫. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೯೭ (ಕೋತೂರು, ೯ನೆಯ ಶತಮಾನ).

೬. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೯೯ (ಕುಂದ, ಕ್ರಿ.ಶ. ೧೮೫೪).

೭. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೨೩ (ಭಾಗಮಂಡಲ, ಕ್ರಿ.ಶ. ೧೮೮೧).

೮. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೨೭ (ಪಾಡಿ, ಕ್ರಿ.ಶ. ೧೮೩೪-೩೫).

೯. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೩೯ (ಹುಲುಕೋಡು, ಕ್ರಿ.ಶ. ೧೩೫೯).

೧೦. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೮೦ (ಮುಳ್ಳೂರು, ಕ್ರಿ.ಶ. ೧೨೯೬).

೧೧. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೯೦ (ಹಾರೋಹಳ್ಳಿ, ಕ್ರಿ.ಶ. ೧೦ ಶತಮಾನ).

೧೨. ಎಂ.ಜಿ. ನಾಗರಾಜ್ 'ಕೊಡಗು, ಬೆಂಗಳೂರು, ತುಮಕೂರು ಜಿಲ್ಲೆಯ ಕೆಲವು ಅಪ್ರಕಟಿತ ಶಾಸನಗಳು', **ಇತಿಹಾಸ ದರ್ಶನ**, ೨೦/೨೦೦೫, ಪು. ೧೧೦, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

೧೩. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೫೨ (ಗಣಗೂರು, ಕ್ರಿ.ಶ. ೧೩ನೆಯ ಶತಮಾನ).

೧೪. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೬೦ (ಚೌಡ್ಲು, ಕ್ರಿ.ಶ. ೧೩ನೆಯ ಶತಮಾನ).

೧೫. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೮೦ (ಮುಳ್ಳೂರು, ಕ್ರಿ.ಶ. ೧೨೯೬).

೧೬. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೭೫ (ಮುಳ್ಳೂರು, ಕ್ರಿ.ಶ. ೧೩೩೦).

೧೭. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೯೫ (ಉಲುಗುಲಿ, ಕ್ರಿ.ಶ. ೧೨೬೪).

೧೮. ಎಂ.ಜಿ. ನಾಗರಾಜ್, 'ಕೊಡಗಿನ ಕೊಲೆಕಲ್ಲುಗಳು', **ಹರತಿಸಿರಿ**, ೧೯೮೭, (ಸಂ.) ಲಕ್ಷ್ಮಣ ತೆಲಗಾವಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಪು .೭೩೧-೩೨.

೧೯. ಎ.ಕ. ಸಂ. ೧ (ಹೊಸತು), ಅದೇ, ಕೊಡಗು ೩ (ಮಡಿಕೇರಿ, ಕ್ರಿ.ಶ. ೧೮೨೨).

೨೦. (೧) ಎಂ.ಜಿ. ನಾಗರಾಜ್, **ಕೊಡಗಿನ ಹಾಲೇರಿ ರಾಜವಂಶವು, ಭಾಗ-೧**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೪, ಪು. ೨೨೬.

(೨) ಡಾ. ಎಂ.ಜಿ. ನಾಗರಾಜ್, ಕೊಡಗಿನ ಕೆಂಬಟ್ಟಿಗಳ ಸಂಸ್ಕೃತಿ (ಪರಿಷ್ಕೃತ ಆವೃತ್ತಿ) ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, ೨೦೧೭, ಪು.೨೯.

೨೧. ಪ್ರೊ. ಬೆಸೂರು ಮೋಹನ್ ಪಾಳೇಗಾರ್, "ಕೊಡಗಿನ ಜನಪದ ಹಾಡುಗಳು" **ಕೊಡಗು ಜನಪದ ಸಂಸ್ಕೃತಿ**, (ಪ್ರಸಂ.) ಡಾ. ಆರ್.ಕೆ. ನಲ್ಲೂರು ಪ್ರಸಾದ್ (ಸಂ.) ಟಿ.ಪಿ. ರಮೇಶ್, ಬಿ.ವಿ. ಷಂಶುದ್ದೀನ್, ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ೨೦೧೧, ಪು. ೨೨, ೨೩.

ಡಿಂಕ ಸ್ಥಳನಾಮ: ಐತಿಹಾಸಿಕ ವಿಚಾರಗಳು

ಎಸ್.ಎಂ. ಧನರಾಜ್*

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕಿನ, ಚಿನಕುರಳಿ ಹೋಬಳಿಗೆ ಸೇರಿದ 'ಡಿಂಕ' ಸ್ಥಳನಾಮವು ಇತಿಹಾಸ ಕಾಲದಲ್ಲಿ ನಿಷ್ಠಾವಂತ ಸೇವಕನ ನೆನಪಿಗೆ ಹೆಸರಿಸಿರುವ ಸ್ಥಳನಾಮ ಎಂಬುದು ಅಧ್ಯಯನದ ಸಂದರ್ಭದಲ್ಲಿ ತಿಳಿದು ಬಂದಿದೆ. ಇದಕ್ಕೆ ಕ್ರಿ.ಶ. ೧೧೫೨ರ ಕಾಲದ ತೊಣ್ಣೂರಿನ ಶಾಸನ ಆಧಾರವಾಗಿದೆ.

'ಡಿಂಕ' ಸ್ಥಳನಾಮ ನಿಷ್ಪತ್ತಿಯನ್ನು ಕುರಿತಂತೆ ಅನೇಕ ವಿದ್ವಾಂಸರು ಬೇರೆ ಬೇರೆ ಕಡೆ ಚರ್ಚಿಸಿದ್ದಾರೆ. ಮಂಡ್ಯ ಜಿಲ್ಲಾ ಗೆಜೆಟಿಯರ್, ಕಟ್ಟೇರಿ ನಾರಾಯಣಗೌಡರು (ಸಿರಿಯೊಡಲು), ತೈಲೂರು ವೆಂಕಟಕೃಷ್ಣ (ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ), ಹರವುದೇವೇಗೌಡ (ಪಾಂಡವಪುರ ತಾಲ್ಲೂಕಿನ ದರ್ಶನ) ಡಿಂಕಾ ಗ್ರಾಮದವರೇ ಆದ ಡಿ.ಆರ್. ಮುರಳೀಧರ (ಭತ್ತದ ಸಿರಿ) ಮೊದಲಾದ ಸ್ಥಳೀಯ ವಿದ್ವಾಂಸರ ಅಭಿಪ್ರಾಯವೆಲ್ಲವೂ ಒಂದೇ ಆಗಿದೆ. ಜನಪದೀಯ ಐತಿಹ್ಯದ ಹಿನ್ನೆಲೆಯಲ್ಲಿ ನಿಷ್ಪತ್ತಿಯನ್ನು ಹೇಳಿದ್ದಾರೆ. ಇವರ ಪ್ರಕಾರ

'ಇಂದು 'ಡಿಂಕ' ಗ್ರಾಮ ಒಂದು ಧಾರ್ಮಿಕ ಸ್ಥಳವಾಗಿ ಪ್ರಸಿದ್ಧಿಯಾಗಿದೆ. ಗ್ರಾಮದಲ್ಲಿ ಶ್ರೀ ಆದಿಶಕ್ತಿ ಡಿಂಕದಮ್ಮನ ದೇವಸ್ಥಾನವಿದೆ. ಈ ಡಿಂಕದಮ್ಮ ಶ್ರೀಮನ್ನಾರಾಯಣನ ಪತ್ನಿ ಶ್ರೀ ಮಹಾಲಕ್ಷ್ಮೀಯ ಅವತಾರ ಎಂಬುದು ಇಲ್ಲಿಯವರ ನಂಬಿಕೆ. ಈ ಗ್ರಾಮದ ಪಕ್ಕದಲ್ಲಿ 'ಬೇಬಿ' ಸ್ಥಳನಾಮವಿದೆ. ಬೇಬಿಯ ಪಕ್ಕದಲ್ಲಿ ಒಂದು ಬೆಟ್ಟವಿದ್ದು, ಅದನ್ನು 'ಬೇಬಿಬೆಟ್ಟ' ಎಂದು ಕರೆಯಲಾಗುತ್ತದೆ. ಒಂದು ಕಾಲಕ್ಕೆ ಈ ಬೆಟ್ಟದ ಸುತ್ತ ವಿಸ್ತಾರವಾದ ದಟ್ಟವಾದ ಕಾಡಿತ್ತು. ಜನಸಂಚಾರ ಕಷ್ಟವಾಗಿತ್ತು. ಈ ಬೆಟ್ಟದಲ್ಲಿ 'ಡಿಂಬಕ' ಹೆಸರಿನ ರಾಕ್ಷಸನದ್ದು, ಸುತ್ತಲ ಜನರಿಗೆ ಹಿಂಸೆ ಕೊಡುತ್ತಿದ್ದ. ಜನರನ್ನು ವಂಚಿಸಲು ಸುಂದರವಾದ ಮಗುವಿನ ರೂಪ ತಾಳಿ, ಅವರ ಮನಸ್ಸನ್ನು ಸೆಳೆಯುತ್ತಿದ್ದ. ಅವರು ಹತ್ತಿರ ಬಂದು ಎತ್ತುಕೊಳ್ಳಲು ಹೋದಾಗ ಅದ್ಭುತಾಕಾರವಾಗಿ ಬೆಳೆದು ಜನರನ್ನು ನುಂಗುತ್ತಿದ್ದ. ಇವನ ಈ ಉಪಟಳವನ್ನು ತಾಳಲಾರದೆ ಜನರು ತಮ್ಮನ್ನು ರಕ್ಷಿಸುವಂತೆ ಮಹಾವಿಷ್ಣುವಿನಲ್ಲಿ ಪ್ರಾರ್ಥನೆ ಸಲ್ಲಿಸಲಾಗಿ, ಭಕ್ತರನ್ನು ರಕ್ಷಿಸಲು ಮಹಾಲಕ್ಷ್ಮಿಯನ್ನು ಕಳುಹಿಸಿಕೊಟ್ಟನಂತೆ. ತನ್ನ ಪತಿಯ ಅಪ್ಪಣೆ ಮೇರೆಗೆ ಬಂದ ಮಹಾಲಕ್ಷ್ಮಿ, ಆದಿಶಕ್ತಿಯ ರೂಪತಾಳಿ ಇಲ್ಲಿ ಅವತರಿಸಿ ಡಿಂಬಕಾಸುರನನ್ನು ಸಂಹರಿಸಿದಳು. 'ಡಿಂಬಕಾಸುರಮರ್ದಿನಿ' ಎಂಬ ನಾಮಾಂಕಿತದಿಂದ ಡಿಂಕ ಸ್ಥಳದಲ್ಲಿ ನೆಲೆನಿಂತಳು. ಡಿಂಬಕನ ಸಂಹಾರವಾದ ಈ ಸ್ಥಳಕ್ಕೆ ಡಿಂಬಕನ ಹೆಸರನ್ನೇ ನೀಡಿದರು. ಡಿಂಕ–(ಡಿಂಬಕ>ಡಿಂಕ) ಎಂದು ಸ್ಥಳನಾಮ ರೂಢಿಗೆ ಬಂದಿದೆ. ಇನ್ನು ಇಲ್ಲಿ ನೆಲೆನಿಂತ ದೇವಿಯನ್ನು 'ಡಿಂಕದಮ್ಮ' ಎಂದು ಕರೆದು ಆರಾಧಿಸುತ್ತಿದ್ದಾರೆ' ಎಂಬುದಾಗಿದೆ. ಈ ನಿರುಕ್ತಿ 'ಮಹಿಷಾಸುರಮರ್ದಿನಿ'ಯ ಕತೆಯನ್ನು ಹೋಲುವ ಐತಿಹ್ಯ ಕೇಳಿಬರುತ್ತದೆ.

ಈ ಐತಿಹ್ಯದ ಹಿನ್ನೆಲೆಯಲ್ಲಿ ಆಲೋಚಿಸುವುದಾದರೆ ಇಲ್ಲಿಯ ಜನರಿಗೆ ದೇವತೆಯಿಂದ ಉಪಕಾರವಾದುದರಿಂದ ಉಪಕಾರಸ್ಮರಣೆಯ ಹಿನ್ನೆಲೆಯಲ್ಲಿ ರಕ್ಷಿಸಿದ ದೇವತೆಯ ಹೆಸರನ್ನು ಊರಿಗೆ ಹೆಸರಿಸುತ್ತಿದ್ದರು. ಉಪಟಳ ನೀಡುತ್ತಿದ್ದ ರಾಕ್ಷಸನ ಹೆಸರನ್ನಲ್ಲ. ಹಾಗಾಗಿ ಇದು ಶುದ್ಧ ಐತಿಹ್ಯವಾಗಿದ್ದು, ಈ ಸ್ಥಳನಾಮಕ್ಕೆ ಪುರಾಣದ ಲೇಪನ ಮಾಡಿ ಶ್ರೇಷ್ಠತೆಯ ಸ್ಥಾನ ನೀಡುವ ಉದ್ದೇಶವಾಗಿದೆ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 'ಡಿಂಕನಹಳ್ಳಿ' ಎಂಬ ಊರ ಹೆಸರಿದೆ. ಅಲ್ಲಿ ಕ್ಷೇತ್ರ ಕಾರ್ಯದಲ್ಲಿ ಸ್ಥಳೀಯರ ಅಭಿಪ್ರಾಯ ಕೇಳಿದಾಗ 'ಡಿಂಕ' ಎಂಬ ವ್ಯಕ್ತಿಯ ಹೆಸರಿನಲ್ಲಿ ಬಂದಿರಬಹುದು ಎಂದು ಅಭಿಪ್ರಾಯ ಪಡುತ್ತಾರೆ.

ಸ್ಥಳನಾಮಗಳು ಭಾಷಿಕ ಘಟಕಗಳು, ಸಾಮಾನ್ಯವಾಗಿ ಎರಡು ಮೂರು ಪದಗಳ ಕೂಡುನುಡಿಗಳಾಗಿರುತ್ತವೆ. 'ಡಿಂಕ' ಸ್ಥಳನಾಮ ಊರು, ಹಳ್ಳಿ, ಕೊಪ್ಪ, ದೊಡ್ಡಿ ಮೊದಲಾದ ವಾರ್ಗಿಕವಿಲ್ಲದ ಏಕ ಘಟಕವಾಗಿ ಈಗ ರೂಢಿಯಲ್ಲಿದೆ.

* ಸಹಾಯಕ ಪ್ರಾಧ್ಯಾಪಕ, ಭಾರತಿ ಕಾಲೇಜು, ಭಾರತೀನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. ಮೊ. ೯೩೩೪೯೮೨೮೫೦

ಕ್ರಿ.ಶ. ೧೧೫೭ರ ಶಾಸನ (ತೊಣ್ಣೂರು) ಹೊಯ್ಸಳರ ದೊರೆ ಜಗದೇಕಮಲ್ಲ ನಾರಸಿಂಹದೇವನ ಕಾಲದ್ದಾಗಿದೆ. ಈತನ ದಂಡನಾಯಕನಾದ ಕೊತ್ತಾಣಿ ಎಂಬುವವನು ಯಾದವನಾರಾಯಣ ಚತುರ್ವೇದಿಮಂಗಲವೆನಿಸಿದ ತೊಣ್ಣೂರಿನಲ್ಲಿ ವಿಷ್ಣುದೇವಾಲಯವನ್ನು ಕಟ್ಟಿಸಿ, ಆ ದೇವರಿಗೆ ಭೂಮಿ ಮತ್ತು ಗ್ರಾಮಗಳನ್ನು ದಾನವಾಗಿ ನೀಡಿದ ವಿಚಾರವಿದೆ. ಮೂವತ್ತು ಊರುಗಳ ಪ್ರಮುಖ ಗೌಡರುಗಳಿಗೆ ಒಂದು ನೂರು ಹೊನ್ನನ್ನು ಕೊಟ್ಟು ಊರುಗಳನ್ನು ಕೊಂಡುಕೊಂಡು ಆ ಊರುಗಳಿಂದ ಬರುವ ಆದಾಯವನ್ನು ವಿಷ್ಣುದೇವಾಲಯಕ್ಕೆ ಉಂಬಳಿ ಬಿಟ್ಟ ವಿವರಗಳಿವೆ. ಈ ಉಂಬಳಿ ಬಿಟ್ಟ ಊರುಗಳಲ್ಲಿ– ಪಡುವಣಬೆಟ್ಟಹಳ್ಳಿ, ಬಾಚಿಹಳ್ಳಿ, ನಗರೂರು, ಗಿರಿಮನಹಳ್ಳಿ, ಗುಮ್ಮನಹಳ್ಳಿ, ಸಿಂಧಗಟ್ಟ, ಮೂಡಣಬೆಟ್ಟಹಳ್ಳಿ, ಎರೆಯಕೆಜಿ, ಹುಲಿಯಕೆಜಿ, ದರಸಿಕುಪ್ಪೆ, ನೀತಿಮಂಗಲ, ಬೆಲೆಕೆಜಿ, ಬಂಡಿಹೊಳ್ಳೆ, ಕೆರಟಿಯಕೆಜಿ, **ಎರಡಿಂಗನಸಾರು,** ಬೆಬೆವೂರ, ಸರಹಳ್ಳಿ, ಮಾಕಬ್ಬೆಹಳ್ಳಿ, ಮಾಣಿಕನಹಳ್ಳಿ ಹದಿನೆಂಟು (೧೮) ಊರುಗಳನ್ನು ಹೆಸರಿಸಲಾಗಿದೆ. ಇವುಗಳಲ್ಲಿ ಒಂದೆರಡು ಬೇಚರಾಕ್ ಆಗಿದ್ದು, ಉಳಿದವೆಲ್ಲ ಈಗಲೂ ಇವೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿಯಲಾಗಿದೆ. ಇಲ್ಲಿಯ ಪ್ರಕಾರ 'ಡಿಂಕ' ಸ್ಥಳನಾಮದ ಮೂಲರೂಪ 'ಎರಡಿಂಗುನಸಾರು' ಎಂಬುದು ತಿಳಿಯುತ್ತದೆ. ಸ್ಥಳನಾಮಗಳು, ಶಿಲಾಶಾಸನಗಳಿಗಿಂತಲೂ ಸಾವಿರಾರು ವರ್ಷ ಪ್ರಾಚೀನವಾಗಿದ್ದು, ಜನರ ಆಡುನುಡಿಯಲ್ಲಿ ಉಳಿದು ಬಳಕೆಯಾಗುತ್ತಾ ಬಂದಿರುತ್ತವೆ. ನರಂತರ ಪರಿವರ್ತನಶೀಲವಾದ ಜೀವಂತ ಭಾಷೆಗಳಲ್ಲಿ ಉಂಟಾಗುವ ಧ್ವನಿವ್ಯತ್ಯಾಸ, ವರ್ಣವ್ಯತ್ಯಾಸ, ಅರ್ಥವ್ಯತ್ಯಾಸ ಮುಂತಾದ ರೀತಿಯ ವ್ಯತ್ಯಾಸಗಳಿಗೆ ಒಳಗಾಗಿರುತ್ತವೆ. ಅದರಲ್ಲೂ ಮೂರು ನಾಲ್ಕು ಪದಗಳಿಂದ ಕೂಡಿದ ಸ್ಥಳನಾಮಗಳು ಅನಕ್ಷರಸ್ಥರ ಬಾಯಿಗೆ ಸಿಕ್ಕಷ್ಟು ಮಾತ್ರ ಉಳಿದುಕೊಂಡಿರುತ್ತವೆ. "ಶಬ್ಧದ ಅಥವಾ ಧ್ವನಿಯ ಅಳಿವು–ಉಳಿವುಗಳು ಕೇವಲ ನಮ್ಮ ಕೈಯಲ್ಲಿ ಇಲ್ಲ ನಿತ್ಯಪರಿವರ್ತನಶೀಲ ಆಡುನುಡಿಯಲ್ಲಿ ಈ ಪರಿವರ್ತನೆಗಳು ಅಗತ್ಯವಿಲ್ಲದಿದ್ದರೂ ಅನಿವಾರ್ಯ" (ಹಂಪನಾಗರಾಜಯ್ಯ, ದ್ರಾವಿಡ ಭಾಷಾ ವಿಜ್ಞಾನ)

'ಡಿಂಕ' ಸ್ಥಳನಾಮದ ಮೂಲರೂಪವಾದ 'ಎರಡಿಂಗನಸಾರು' ಪದವನ್ನು ಬಿಡಿಸಿದಾಗ

ಎರ+ಡಿಂಗನ+ಸಾರು > ಎರಡಿಂಗನಸಾರು ಎಂದಾಗುತ್ತದೆ.

ಮೊದಲ ಘಟಕ 'ಎರ' ಪದ 'ಎರೆಯ' ಪದದ ಸಂಕ್ಷಿಪ್ತ ರೂಪವಾಗಿದೆ. ಎರೆಯ (<ಎಜೆಯ) ಗಂಗರ ದೊರೆ ನೀತಿ ಮಾರ್ಗ ಎಜೆಗಂಗನಾಗಿದ್ದಾನೆ. (ಕ್ರಿ.ಶ. ೮೫೦–೭೦) ಗಂಗರದೊರೆ ಎರೆಗಂಗರ ಹೆಸರನ್ನು ಎಜೆಯ, ಎಜಿಗ, ಎಜಿ ಎಂದೆಲ್ಲ ಸೇರಿಸಿ ವ್ಯಕ್ತಿಗಳಿಗೆ, ಅಧಿಕಾರ, ವೃತ್ತಿಯಲ್ಲಿರುವವರಿಗೆ ಆ ಕಾಲದಲ್ಲಿ ಹೆಸರಿಸಿರುವುದಕ್ಕೆ ಶಾಸನಾಧಾರಗಳಿವೆ.

ಎಜೆಯಮವೆರ್ಗಡೆ (ಅಧಿಕಾರಿ, EC:08)

ಎಜಿಗಂಗಗಾಮುಣ್ಡ (ಸಾಕ್ಷಿ, EC:06)

ಎಜೆಗಾಂಗ (ದಾನಿ, EC:07)

ಎಜೆಕೃಷ್ಣಪ್ಪನಾಯಕ (ಬೇಹುಗಾರಿಕೆ ಅಧಿಕಾರಿ : EC:09)

ಎಜೆಯಚಾರಿ (ವೃತ್ತಿ: EC:06)

ಎಜಿಗಾಂಕ (ದಾನಿ: EC:05)

ಎಜಿಗದೇವರಸ (EC:05) ಇವೇ ಮೊದಲಾದವಾಗಿವೆ.

ಎರಡನೆಯ ಘಟಕ ಡಿಂಗನ ಪದದ ಮೂಲ ರೂಪ 'ಡಿಂಗರ' ಆಗಿದೆ. 'ಡಿಂಗರ' ಪದಕ್ಕೆ A Servant, (ಕಿಟೆಲ್ ಡಿಕ್ಷನರಿ), ಸೇವಕ, ಡಂಗುರ ಒಡೆದು ಸಾರುವವ, ಸುದ್ದಿಪ್ರಸಾರಕ, ಡಿಂಗರಿಗ, ಡಿಂಗರ ಪದಗಳನ್ನು ನಿಘಂಟುಗಳಲ್ಲಿ ನೀಡಲಾಗಿದೆ. (ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು).

ಮೂರನೆಯ ಘಟಕವಾದ ಸಾರು ಪದಕ್ಕೆ ಡಂಗುರಹೊಡೆ, ಘೋಷಿಸಿ, ಪ್ರಕಟಪಡಿಸು, ಎಂಬ ಅರ್ಥಗಳಿವೆ. (ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು).

ಈ ವಿಶ್ಲೇಷಣೆಯಿಂದ ತಿಳಿದುಬರುವ ಸತ್ಯಾಂಶಗಳೆಂದರೆ, 'ಡಿಂಕ' ಸ್ಥಳನಾಮದ ಮೂಲರೂಪ 'ಎರಡಿಂಗನಸಾರು' ಎಂಬುದಾಗಿದ್ದು, ಇದೊಂದು ವೃತ್ತಿವಾಚಕ ಹಾಗೂ ವ್ಯಕ್ತಿವಾಚಕವಾಗಿದೆ. ಎರೆಯಂಗನ ಕಾಲದ (ಕ್ರಿ.ಶ. ೮೫೩–೭೦) ನಿಷ್ಠಾವಂತ ಸೇವಕನ (ಡಂಗುರ ಸಾರುವವನು) ಹೆಸರಿನಲ್ಲಿ 'ಎರಡಿಂಗನಸಾರು' ಎಂದು ಹೆಸರಿಸಲಾಗಿದೆ. ಈ ಸ್ಥಳದಲ್ಲಿ

ಜನವಸತಿ ಪ್ರಾರಂಭವಾದ ಇತಿಹಾಸವೂ ಇದರಿಂದ ತಿಳಿದುಬರುತ್ತದೆ. ಇದು ಪ್ರಾಚೀನವಾದ ಊರಾಗಿದೆ. ಹಾಗಾಗಿ 'ಡಿಂಕ' ಸ್ಥಳನಾಮ ಗಂಗರ ಕಾಲದ್ದಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಭಾಷಿಕವಾಗಿ ನೋಡಿದಾಗ, ಸ್ಥಳನಾಮಗಳು ನೂರಾರು ವರ್ಷಗಳ ಕಾಲ ಜನರ ಆಡುನುಡಿಯಲ್ಲಿ ಬಳಕೆಯಾಗುವಾಗ, ಕ್ಲಿಷ್ಟತೆಯಿಂದ ಸರಳತೆಯ ಕಡೆಗೆ ನಡೆಯುವ ಭಾಷೆಯ ನಯಮದಂತೆ ತೊಣ್ಣೂರಿನ ಶಾಸನದ (ಕ್ರಿ.ಶ. ೧೧೫೭) ಕಾಲಕ್ಕೆ 'ಎರಡಿಂಗನಸಾರು' ರೂಪದಲ್ಲಿ ಇದ್ದ ಸ್ಥಳನಾಮವು ಕಾಲಾನಂತರದಲ್ಲಿ ಮೊದಲ 'ಎರ' ಮತ್ತು ಕೊನೆಯ 'ಸಾರು' ಪದಗಳು ಲೋಪವಾಗಿ 'ಡಿಂಗ' ರೂಪಕ್ಕೆ ಬಂದಿದೆ. ದೀರ್ಘವಾದ ಸ್ಥಳನಾಮಗಳನ್ನು ಅನಕ್ಷರಸ್ಥರು ಬಳಸುವಾಗ ಅವರ ನುಡಿಗೆ ಎಷ್ಟು ಧ್ವನಿಗಳು ಸಿಕ್ಕುತ್ತವೋ ಅಷ್ಟನ್ನು ಮಾತ್ರ ಉಚ್ಚರಿಸಿ ಸಂಕೀರ್ಣ ಮಾಡಿ ನುಡಿಯುತ್ತಾರೆ. ಸುಲಭಕಂಡಾಗ ರೂಢಿಯಲ್ಲೂ ಉಳಿಯುತ್ತದೆ. ಸಂಕೀರ್ಣವಾದಾಗ ಆ ಸ್ಥಳನಾಮದ ಪೂರ್ವ, ಮಧ್ಯ, ಉತ್ತರ ಘಟಕಗಳಲ್ಲಿ ಉಚ್ಚಾರಣೆಗೆ ಸಿಗದೆ ಹೋದಾಗ ಕಳೆದುಹೋಗುತ್ತವೆ. ಉದಾ: 'ಡಿಂಕ' ಸ್ಥಳನಾಮದ ಸಮೀಪವಿರುವ 'ಸೀತಾಪುರ'ದ ಮೂಲ ಹೆಸರು 'ಶ್ರೀರಾಮಸೀತಾಪುರ' ಎಂಬುದಾಗಿದೆ. ನಾಗಮಂಗಲದ ಪಾಳೇಗಾರ ಸಿಂಗಣ್ಣವೊಡೆಯರ ಮಗ ದೇವರಾಜನು ಕಾವೇರಿ ನದಿಗೆ ಅಣೆಕಟ್ಟೆಯನ್ನು ಕಟ್ಟಿ ಕಾಲುವೆ ತೋಡಿಸಿ ಸಮೀಪದ ಹೊಸಹಳ್ಳಿ ಗ್ರಾಮಕ್ಕೆ ತನ್ನ ತಾಯಿಯ ನೆನಪಿಗೆ 'ಶ್ರೀರಾಮಸೀತಾಪುರ' ಎಂದು ಪುನರ್‌ನಾಮಕರಣ ಮಾಡಿದ ವಿಷಯವನ್ನು ಸೀತಾಪುರದ ಶಾಸನ (ಕ್ರಿ.ಶ. ೧೪೬೭) ರಿಂದ ತಿಳಿಯುತ್ತದೆ. ಆದರೆ ಈಗ ಜನ ರೂಢಿಯಲ್ಲಿ 'ಸೀತಾಪುರ' ಎಂದು ಬಳಕೆಯಾಗುತ್ತಿದೆ.

'ಡಿಂಕ' ಗ್ರಾಮದ ಪಕ್ಕದಲ್ಲಿರುವ ಬೇಬಿ ಸ್ಥಳನಾಮದ ಮೂಲರೂಪ ಬೆಬೆವೂರು (ಕ್ರಿ.ಶ. ೧೧೫೭) (<ಬೆಬೆ+ಊರು) ಆಗಿದೆ. ಆದರೆ ಈಗ ವಾರ್ಗಿಕ 'ಊರು' ಲೋಪ ಆಗಿ 'ಬೆಬೆ>ಬೇಬಿ' ಆಗಿ ಬಳಕೆಯಾಗುತ್ತಲಿದೆ. ಇದೇ ರೀತಿಯಲ್ಲಿ ಡಿಂಕ ಸ್ಥಳನಾಮ ಕೂಡ ತನ್ನ ಪೂರ್ವ, ಉತ್ತರ ಪದಗಳನ್ನು ಕಳೆದುಕೊಂಡು ಬಳಕೆಯಾಗುತ್ತಿದೆ.

ಉಚ್ಚಾರಣೆಯ ಗತಿಯಲ್ಲಿ 'ಡಿಂಗ' ಪದದ 'ಗ' ಕಾರ ಕೇಳುಗರಿಗೆ 'ಕ' ಕಾರದಂತೆ ಕೇಳಿಸಿ 'ಡಿಂಕ' ಸ್ಥಳನಾಮ ರೂಪಕ್ಕ ಬಂದಿದೆ. ಜನರ ಬಾಯಲ್ಲಿ ಕರೆಯುವಾಗ ಕೊನೆಯ ಸ್ವರ ದೀರ್ಘವಾಗುವುದು ಸಹಜವಾದುದರಿಂದ 'ಡಿಂಕಾ' ರೂಪದಲ್ಲಿ ಉಚ್ಚರಿಸುವುದು, ಬರೆಯುವುದು ರೂಢಿಯಲ್ಲಿದೆ.

'ಡಿಂಕ'ದಂತಹ ಗ್ರಾಮನಾಮಗಳನ್ನು ಅಧ್ಯಯನ ಮಾಡುವುದರಿಂದ ಇತಿಹಾಸದ ಹೊಸ ಪುಟಗಳು ತೆರೆದುಕೊಳ್ಳುತ್ತವೆ. ಆ ಪ್ರದೇಶದ ಇತಿಹಾಸದ ಜೊತೆಗೆ ಸಾಂಸ್ಕೃತಿಕ ಬದುಕನ್ನು ತಿಳಿಸುವುದಲ್ಲದೆ ಇತಿಹಾಸ ಮತ್ತು ಸ್ಥಳನಾಮಕ್ಕಿರುವ ಅವಿನಾಭಾವ ನಂಟು ತಿಳಿದುಬರುತ್ತದೆ.

ಆಧಾರಸೂಚಿ

೧. ಆರ್. ಗೋಪಾಲ್ (ಸಂ): ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

೨. ಎಫ್. ಕಿಟೆಲ್: ಕನ್ನಡ–ಇಂಗ್ಲಿಷ್ ಡಿಕ್ಷನರಿ.

೩. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ೮ ಸಂಪುಟಗಳು.

೪. ತೈಲೂರು ವೆಂಕಟಕೃಷ್ಣ: ಮಂಡ್ಯ ಜಿಲ್ಲೆಯ ಸ್ಥಳನಾಮಗಳು ಅವಲೋಕನ.

೫. ಬಾ.ರಾ. ಗೋಪಾಲ (ಸಂ) ಇ.ಅ. ೪, ೫, ೬, ೭, ೮, ೯ (ಸಂಪುಟಗಳು).

೬ ಬೋರೇಗೌಡ ಚಿಕ್ಕಮರಳಿ (ಸಂ): ಬತ್ತದ ಸಿರಿ.

೭. ಹ.ಕ. ರಾಜೇಗೌಡ : ಸಿರಿಯೊಡಲು.

೮. ಹರವು ದೇವೇಗೌಡ : ಪಾಂಡವಪುರ ತಾಲ್ಲೂಕು ದರ್ಶನ

೯. B.Shaik Ali : History of the Western Gangas.

೧೦. ಕ್ಷೇತ್ರಕಾರ್ಯದ ಮಾಹಿತಿ.

೧೧. ತಾಲ್ಲೂಕು ಕಛೇರಿಯ ದಾಖಲೆಗಳ ಮಾಹಿತಿ.

೭೪

ಶಾಲಾ ಮತ್ತು ಅಲಿಂದ ರಚನೆಗಳು ಶಾಸ್ತ್ರ ಮತ್ತು ಪ್ರಯೋಗ

ಎಂ.ಎನ್. ಪ್ರಭಾಕರ್*

ಆಂಧ್ರ ಪ್ರದೇಶದ ಅಲಂಪುರ ತಾಲ್ಲೂಕು ಪುದೂರಿನ ಕ್ರಿ.ಶ. ೧೦೮೭ರ ಶಿಲಾ ಶಾಸನವು ಶಾಲಾ ರಚನೆಯನ್ನು ಬಣ್ಣಿಸಿದೆ.

ಲೀಲೆಯಿನೆಸೆವೇಕ ಶಾಲದ್ವಿಶಾಲತ್ರಿ
ಶಾಲಚತುಶ್ಶಾಲ ಪಂಚಶಾಲಂ
ಮೇಲೆನೆಸಿತ್ತಲ್ಲಿ ಮೇಲೆ ಪಲ್ಲವನ ಜಿ
ನಾಲಯಂ ಸರ್ವ್ವತೋ ಭದ್ರದಿಂದಂ

ಕನ್ನಡದ ಷಟ್ಪದಿಗಳಲ್ಲಿ ಇದೊಂದು ಪ್ರಾಚೀನ ರೂಪ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಶಾಸನ ರಚನೆಯ ಕಾಲಕ್ಕೆ ಏಕಶಾಲಾ, ದ್ವಿಶಾಲಾ, ತ್ರಿಶಾಲಾ, ಚತುಶ್ಶಾಲಾ ಪಂಚಶಾಲಾದಿ ರಚನೆಗಳೂ ಖಚಿತ ರೂಪ ಪಡೆದಿದ್ದವು ಎಂದು ಊಹಿಸಬಹುದು. 'ಶಾಲಾ' ರಚನೆ ಔತ್ತರೇಯ ಸಂಪ್ರದಾಯದಲ್ಲಿ ಅತಿ ಸರಳ ರೂಪವೆನ್ನಲಾಗಿದೆ. ಶಾಲಾ ಪದವು ಗೃಹಕ್ಕೆ, ರಾಜಗೃಹಕ್ಕೆ, ದೇವತಾ ಗೃಹಕ್ಕೆ, ಪ್ರಧಾನ ಗೃಹಕ್ಕೆ ಪರ್ಯಾಯವಾಗಿ ಹಲವೆಡೆ ಬಳಕೆಯಾಗಿದೆ.

ಗೃಹಮೇಕಂ ತು ಯಚ್ಛನ್ನಂ ಸರ್ವಂ ಶಾಲೇತಿ ಸಾಸ್ಮೃತಾ – ಇದು ಸಮರಾಂಗಣ ಸೂತ್ರಧಾರ ಗ್ರಂಥದಲ್ಲಿರುವ ವ್ಯಾಖ್ಯೆ. ಯಾವ ರಚನೆಯು (ಗೃಹ) ಹೊದಿಕೆ ಅಥವಾ ಛಾವಣಿಯಿಂದ ಕೂಡಿದೆಯೋ ಅದು ಶಾಲಾ ಎನಿಸುತ್ತದೆ. ಹೊದಿಕೆ ಎಂದಲ್ಲಿ ರಕ್ಷಣೆ, ನೆರಳು, ವಸತಿಗೆ ಅವಕಾಶ ನೀಡುವಂಥದ್ದು. ಇದು ಔತ್ತರೇಯ ಸಂಪ್ರದಾಯದಲ್ಲಿ ವಸತಿ ಮೂಲವನ್ನು ಪರಿಚಯಿಸುತ್ತದೆ. ಶಾಲಾ ಪದದ ಪ್ರಾಚೀನ ಬಳಕೆಯನ್ನು ಅಥರ್ವವೇದದಲ್ಲಿ ಗುರುತಿಸಬಹುದು.

ತೃಣೈರಾವೃತಾಪಲದಾನ್ ವಸಾನಾ ರಾತ್ರೀವ ಶಾಲಾ ಜಗತೋ ವಿವೇಶನೀ – ಶಾಲಾ ರಚನೆಯು ಹುಲ್ಲಿನಿಂದ ಹೊದಿಸಲಾಗಿದ್ದು ರಾತ್ರಿಯಂತೆ ತಂಪಾಗಿರುವ ವಾತಾವರಣವನ್ನು ಶಾಲಾ ರಚನೆಯು ಪಡೆದಿದೆ. ಇದರೊಂದಿಗೆ ಈ ಅಧ್ಯಾಯದಲ್ಲಿ ಶಾಲಾ ರಚನೆಯನ್ನು ಕುರಿತ ಹಲವಾರು ಹೇಳಿಕೆಗಳಿವೆ.

ರಾಮಾಯಣದಲ್ಲಿ ಹನುಮಂತ ಲಂಕೆಯನ್ನು ಸಂದರ್ಶಿಸಿದಾಗ ಕಂಡ ವಿವಿಧ ಗೃಹಗಳನ್ನು ಶಾಲಾ ಮೂಲಕ ವರ್ಣಿಸಲಾಗಿದೆ.

ನಿವೇಶನಾನಾಂ ವಿವಿಧಾಶ್ಚ ಶಾಲಾಃ ಪ್ರಧಾನ ಶಂಕಾಯುಧ ಜಾತಶಾಲಾಃ
ಮನೋಹರಶ್ಚಾಪಿ ಪುನರ್ವಿಶಾಲಾಃ ದದರ್ಶ ವೇಶ್ಮಾದ್ರಿಷು ಚಂದ್ರಶಾಲಾಃ ॥

ಶಾಲಾ ರಚನೆಯ ಲಕ್ಷಣ ಹಾಗೂ ಪ್ರಬೇಧವನ್ನು ಔತ್ತರೇಯ ಗ್ರಂಥಗಳು ವಿವರಿಸಿವೆ. ಮೂಲ ಸ್ವರೂಪದ ವಿವರಗಳು ಇಂತಿವೆ.

ಶುದ್ಧಾತು ಕೇವಲಾ ಶಾಲಾ ಸಂಬದ್ಧಾಲಿಂದ ತಸ್ತಥಾ
ಶಾಲ ಶ್ರೇಣ್ಯಾ ಸಂಯುತಾ ಸ್ಯಾತ್ ಮಧ್ಯಾಲಿಂದಾ ಪರಿಭ್ರಮಾ

ಶುದ್ಧ ಎಂದಲ್ಲಿ ಸರಳ ರೂಪ ; ನಾಲ್ಕು ಕಂಭಗಳ ಸ್ವತಂತ್ರ ರಚನೆ. ಇದನ್ನು ಚತುಷ್ಕ ಎನ್ನಲಾಗಿದೆ. ಯಾವ ಜೋಡಣೆಯೂ ಇಲ್ಲದ ಚತುಷ್ಕ. ಸರ್ವಾಶ್ಚಾಲಿಂದ ರಹಿತಾ ಶುದ್ಧಾ ನಾಮ್ನಾ ಸಮೀರಿತಾ.

ಸಂಬದ್ದ ಎಂದಲ್ಲಿ ಚತುಷ್ಕಕ್ಕೆ ಹೊಂದಿಕೊಂಡಂತೆ (ಮುಂಭಾಗದಲ್ಲಿ) ಅಲಿಂದ ಮೊದಲಾದ ವ್ಯವಸ್ಥಿತ ಜೋಡಣೆ ; ಏಕಶಾಲಾದಿಂದ ದಶಶಾಲಾದಿಗಳೂ ಸೇರುತ್ತವೆ.

ಸಾಗ್ರಾಲಿಂದ ದಶಶಾಲಾ ಏಕಶಾಲಾದಿತಃ ಕ್ರಮಾತ್

* ಪದ್ಮಪ್ರಭಾ, # ೪೨, ಬ್ಲಾಕ್ ೧೭, ಬ್ಯಾಂಕ್ ಕಾಲೋನಿ, ಶ್ರೀರಾಂಪುರ, ೨ನೇ ಹಂತ, ಮೈಸೂರು–೫೭೦೦೨೩. ಮೊ. ೯೮೪೫೪೯೧೫೪೫

ಸಂಯುತ ಎಂದಲ್ಲಿ ಶಾಲಾ ಜೋಡಣೆಗಳಿದ್ದು ಹೊರಭಾಗದಲ್ಲಿ ಅಲಿಂದದಿಂದ ಸುತ್ತುವರೆಯುತ್ತದೆ. ಉದಾಹರಣೆಗಳಿಲ್ಲದೆ ಇದನ್ನು ಅರ್ಥೈಸುವುದು ಕಷ್ಟ. ಬಹುಶಃ ವಿವಿಧ ಅಂಕಣಗಳುಳ್ಳ ಮನೆಯ ಸುತ್ತ ಜಗುಲಿಯಿಂದ ಕೂಡಿದ್ದು ಸಂಯುತ.

ಸಾಲಾ ಸಂಘಟ್ಟ ಮಧ್ಯೇತು ಬಾಹ್ಯಾಲಿಂದೈಸ್ತು ವೇಷ್ಟಿತಾ

ಏಕಶಾಲಾ ಮೊದಲಾದ ಗೃಹಗಳಲ್ಲಿ ಮಧ್ಯದ ಚತುಷ್ಕ ಅಥವಾ ಪ್ರಧಾನ ಗೃಹ ಅಲಿಂದದಿಂದ ಸುತ್ತುವರೆದಿದ್ದು, ಸುತ್ತುವರೆದ ಭಾಗವನ್ನು ಪರಿಭ್ರಮ ಎನ್ನಲಾಗುತ್ತದೆ.

ಪೃಥಕ್ ಏಕೈಕ ಶಾಲಾಸು ಮಧ್ಯೇಽಲಿಂದಾ ವೇಷ್ಟಿತಾ
ಪರಿಭ್ರಮೇತಿ ವಿಜ್ಞೇಯಾ ಸರ್ವಶಾಂತಿಕರೀನ್ನೃಣಾಂ

ಅಲಿಂದ ಮತ್ತು ಶಾಲಾಗಳ ನಡುವಣ ವ್ಯತ್ಯಾಸವನ್ನು ತಿಳಿಯಬೇಕು. ಇದನ್ನು ವಾಸ್ತು ಗ್ರಂಥಗಳು ಖಚಿತವಾಗಿ ವಿವರಿಸಿದೆ. ಇದನ್ನು ತಿಳಿಯದೆ ಮುಂದೆ ಸಾಗುವುದು ಅಸಾಧ್ಯ. ಅಲಿಂದ ಎಂದಲ್ಲಿ ಕೇವಲ ಓಣಿ ; ಇಂಗ್ಲೀಷಿನ Passege ಅಥವಾ Corridoz ಮಾತ್ರ. ಅಲಿಂದವನ್ನು ಸ್ತಂಭದೊಂದಿಗೆ ಗುರುತಿಸಿದಾಗ ಶಾಲಾ ಎನ್ನಿಸಿಕೊಳ್ಳುತ್ತದೆ.

ಮಧ್ಯದ ಚತುಷ್ಕ ಅಥವಾ ಪ್ರಧಾನ ಗೃಹ, ಸುತ್ತ ಅಲಿಂದ ಎಂದಲ್ಲಿ ಓಣಿ ; ಕಂಭವೂ ಸೇರಿದಂತೆ ಶಾಲಾ.

ಹೀನಸ್ತಂಭಂ ಅಲಿಂದಂ ಶಾಲಾ ಸ್ತಂಭೈಃ ಸಮಾವೃತಾ
ಪ್ರಧಾನಗೇಹಂ ಸ್ತಂಭೈಶ್ಚ ಶಾಲಾ ಸ್ತಂಭೈಃ ಸಮಾಭವೇತ್

ರಾಜಗೃಹಗಳು ಹಾಗೂ ಸಾರ್ವಜನಿಕ ರಚನೆಗಳು (ಉದಾ: ಸಭಾ) ಮಧ್ಯೆ ಚತುಷ್ಕ, ಸುತ್ತ ಅಲಿಂದ, ಶಾಲಾ, ಹೀಗೆ ಮುಂದುವರೆಯುತ್ತವೆ. ಅಥವಾ ಚತುಷ್ಕ, ಸುತ್ತ ಒಂದನೇ ಅಲಿಂದ, ಎರಡನೇ ಅಲಿಂದ, ಮೂರನೇ ಅಲಿಂದ, ನಾಲ್ಕನೆ ಅಲಿಂದ ಎಂದೂ ಗುರುತಿಸಲಾಗುತ್ತದೆ. ಇವು ಕ್ರಮವಾಗಿ ಮಧ್ಯೆ ೪ ಕಂಭಗಳು, ಮೊದಲ ಸುತ್ತು ೧೨ ಕಂಭಗಳು, ಎರಡನೆ ಸುತ್ತು ೨೦ ಕಂಭಗಳು, ಮೂರನೆ ಸುತ್ತು ೨೮ ಕಂಭಗಳು, ನಾಲ್ಕನೆ ಸುತ್ತು ೩೬ ಕಂಭಗಳನ್ನು ಹೊಂದಿರುತ್ತದೆ. ೪-೧೨-೨೦-೨೮-೩೬ ಹೀಗೆ ಕಂಭಗಳು ಒಂದರ ನಂತರ ಒಂದು ಹಂತಗಳಲ್ಲಿ ಆವರಿಸಿದ್ದು, ಗೃಹ ನಿರ್ಮಾಣದಲ್ಲಿ ೪, ೪ x೪, ೬ x೬, ೮ x೮, ೧೦ x೧೦ ಕಂಭಗಳ ರಚನೆ ಎನ್ನಲಾಗಿದೆ. ಇವು ಕ್ರಮವಾಗಿ ೧, ೯, ೨೫, ೪೯, ೮೧ ಅಂಕಣಗಳನ್ನು ಒಳಗೊಳ್ಳುತ್ತದೆ.

ಶಾಲಾ ಅಲಿಂದ ಪ್ರಮಾಣವನ್ನು ಕುರಿತಂತೆ ಅಪರಾಜಿತ ಪೃಚ್ಛಾ ಗ್ರಂಥದಲ್ಲಿ ವಿವರಗಳಿವೆ.

ಪಂಚಭಾಗ ದ್ವಿಭಾಗಂ ಚಾಸಪ್ತಭಾಗ ತ್ರಿಭಾಗಂ
ನವಭಾಗ ಚತುರ್ಭಾಗಂ ಶಾಲಾಲಿಂದ ಪ್ರಮಾಣಕಂ

ಶಾಲಾಭಿ-ಅಲಿಂದ ೨, ಶಾಲಾ ೨-ಅಲಿಂದ ೨, ಶಾಲಾ ೯-ಅಲಿಂದ ೮ ಎಂದು ಮೂರು ಪ್ರಮಾಣಗಳನ್ನು ಹೇಳಿದೆ. ಸಮರಾಂಗಣ ಸೂತ್ರಧಾರ ಗ್ರಂಥವು-

"ಶಾಲಾವ್ಯಾಸಾರ್ಧತೋ ಅಲಿಂದ ಸರ್ವೇಷಾಮಪಿ ವೇಶ್ಮನಂ" ಎಂದು ಗುರುತಿಸಿದೆ. ಗ್ರಂಥದಿಂಧ ಗ್ರಂಥಕ್ಕೆ ಅಳತೆ ಹಾಗೂ ಪ್ರಮಾಣಗಳಲ್ಲಿ ಕೊಂಚ ವ್ಯತ್ಯಾಸವುಂಟು. ಶಾಲಾ ಪ್ರಭೇದಗಳನ್ನು ಕುರಿತು ಮತ್ತಷ್ಟು ವಿವರಗಳಿವೆ, ಆದರೆ ಅರ್ಥವಾಗದು. ಗೃಹಮಾಲಾ, ಗೃಹನಾಭಿ, ಸಂಘಟ್ಟ ಗೃಹಾಣಕ ಇತ್ಯಾದಿ ಪ್ರಭೇದಗಳು. ಇವುಗಳ ಕಲ್ಪನೆ ತಕ್ಷಣದಲ್ಲಿ ಸಾಧ್ಯವಾಗದು.

ಐಹೊಳೆಯ ಲಾಡ್‌ಖಾನ್ ದೇವಾಲಯ ಔತ್ತರೇಯ ಗ್ರಂಥಗಳು ಗುರುತಿಸುವಂಥ ಸಾರ್ವಜನಿಕ ವಾಸ್ತುಗೃಹ ಸಭಾ. ಇದು ಮೂಲ ರೂಪದಲ್ಲಿ ಉಳಿದು ಬಂದಿರುವುದು ಅದೃಷ್ಟ. ಮತ್ತೊಂದು ಉಣಕಲ್ಲಿನ ಚಂದ್ರಮೌಳೀಶ್ವರ ದೇವಾಲಯವು, ಇದು ಚತುಶ್ಶಾಲ ರಚನೆಯ ಪ್ರತಿರೂಪ. ಇದರಿಂದ ತ್ರಿಶಾಲ, ದ್ವಿಶಾಲ, ಏಕಶಾಲ ರಚನೆಗಳ ಸ್ವರೂಪವನ್ನು ಪಡೆಯಬಹುದು. ಇಲ್ಲಿಯೂ ಕೊಂಚ ಸಂದೇಹಗಳಿವೆ. ಪ್ರಧಾನ ಗೃಹ, ಅಲಿಂದ, ಶಾಲಾ ರಚನೆಗಳನ್ನು ಗುರುತಿಸಲು ಸಾಧ್ಯವಾಗಿದೆ. ರಾಜಗೃಹ, ಸಾರ್ವಜನಿಕ ವಾಸ್ತುಗೃಹ, ಪ್ರಾಚೀನ ದೇವಾಲಯಗಳ ಗರ್ಭಗೃಹಗಳ ಬಗ್ಗೆ ಅರಿವು ಮೂಡಿಸಲು ಇವು ಸಹಾಯವಾಗಿವೆ. ಇವುಗಳ ಹಿನ್ನೆಲೆಯಲ್ಲಿ ಇತರ ರಚನೆಗಳ ಉದಾಹರಣೆಗಳನ್ನೂ ಹೆಕ್ಕಿ ತೆಗೆಯಬಹುದು.

ಐಹೊಳೆಯ ಲಾಡ್‌ಖಾನ್ ದೇವಾಲಯ ೬ x೬ ಕಂಭಗಳ ಚತುರಶ್ರ ರಚನೆ ಛಾವಣಿಯ ಭಾರವನ್ನು ಹೊರುವ ಸಲುವಾಗಿ ಹೊರ ಮೂಲೆಗಳಲ್ಲಿ ಕಂಭಗಳು ಭಿತ್ತಿಯೊಡನೆ ಸೇರಿವೆ. ಮಧ್ಯದಲ್ಲಿ ಭಾರವಾದ ನಾಲ್ಕು ಕಂಭಗಳ ಚತುಷ್ಕವಿದೆ. ಚತುಷ್ಕವನ್ನು ಆವರಿಸಿದಂತೆ ಸುತ್ತ ೧೨ ಕಂಭಗಳು. ಇವೆರಡರ ಮಧ್ಯಭಾಗ ಅಲಿಂದವೆನಿಸುತ್ತದೆ. ನಂತರ ೨೦ ಕಂಭಗಳ

ಶಾಲಾ. ಈ ಕಂಭಗಳೊಂದಿಗೆ ಭಿತ್ತಿ ಜಾಲಂಧ್ರಗಳು ಸುತ್ತಲೂ ಇವೆ. ಮಧ್ಯದ ಚತುಷ್ಕವೇ ಪ್ರಧಾನ ದೇಹ. ಇದರ ಮೇಲೆ ಕಿರಿದಾದ ಗೃಹವಿದ್ದು ಭಿತ್ತಿಯಿಂದ ಆವರಿಸಿದೆ. ಭಿತ್ತಿ ಭಾಗದಲ್ಲಿ ದೇವತೆಗಳ ಉಬ್ಬು ಶಿಲ್ಪಗಳು. ಇದನ್ನು ಗೃಹಾಣಕ ಎನ್ನಲು ಸಾಧ್ಯ. ಇದು ಒಂದು ಅಂತಸಿನದು. ಗೃಹಾಣಕದ ವಿವರವನ್ನು ನೋಡಬಹುದು.

ಅಧೋ ಭೂಮೌ ಸುವಿಸ್ತೀರ್ಣ ಉಪರ್ಯುಪರಿವೈ ಪುನಃ
ಗೃಹಾಣಕ ಇತಿ ಪ್ರೋಕ್ತಾ [ಗೃಹಾವೈ ವೇದ ಸಂಖ್ಯಯಾ]

ಮುಂಭಾಗದಲ್ಲಿ ೧೨ ಕಂಭಗಳ ಮುಖಮಂಟಪವಿದೆ. ಇದು ಕಕ್ಷಾಸನವುಳ್ಳದ್ದು. ಮುಖಮಂಟಪದ ಕೆಲವು ಕಂಭಗಳಲ್ಲಿ ಸಾಲಭಂಜಿಕಾ ವಿಗ್ರಹಗಳಿವೆ. ಲಾಡ್‌ಖಾನ್ ದೇವಾಲಯದ ಛಾವಣಿ ಗಮನಾರ್ಹವಾದುದು. ಗೃಹಾಣಕದ ಮೇಲೆ ದಂಡಛಾದ್ಯ, ಸಮತಳವುಳ್ಳದ್ದು. ಅಲಿಂದ ಶಾಲಾಗಳ ಮೇಲೆ ಮಲ್ಲ ಛಾದ್ಯ, ಇಳಿಜಾರನ್ನು ಹೊಂದಿದೆ.

ಲಾಡ್‌ಖಾನ್ ದೇವಾಲಯವು ಅಂದು ಮಹಾಜನರು ಸೇರುತ್ತಿದ್ದ ಸ್ಥಳ ; ಇದು ಸಾರ್ವಜನಿಕ ವಾಸ್ತು ಎಂದು ಗುರುತಿಸಲ್ಪಟ್ಟ "ಸಭೆ" ಗೃಹ.

ಛನ್ನಂಭವೇತ್ ಮಹಾಜನಸ್ಯ ಸ್ಥಾನಂ ಸಭಾ ಯಾ ಕಥಿತಾ ಶಾಲಾ – ಇದೂ ಸಮರಾಂಗಣ ಸೂತ್ರಧಾರ ಗ್ರಂಥದ ಒಕ್ಕಣೆಯೇ ಆಗಿದೆ. ಲಾಡ್‌ಖಾನ್ ದೇವಾಲಯದ ಭಿತ್ತಿಯಲ್ಲಿ ಎಂಟನೇ ಶತಮಾನಕ್ಕೆ ಸೇರಿದ ಎರಡು ಶಾಸನಗಳಿಗೆ.

"ಆರ್ಯಜನ ಸಮುದಯೋದಿತ ವರಾರ್ಯಪುರಾಧಿಷ್ಠಾನದಾ ಶ್ರೀ ಮಹಾಚಾತುರ್ವಿದ್ಯಾ
ಸಮುದಯ ಮೈನೂರ್ವ"ರನ್ನು–

ಐಹೊಳೆಯ ೫೦೦ ಮಹಾಜನರನ್ನು ಹೆಸರಿಸಲಾಗಿದೆ. ಸಮರಾಂಗಣ ಸೂತ್ರಧಾರ ಗ್ರಂಥದ ಸಭಾಷ್ಟಕ ಅಧ್ಯಾಯದಲ್ಲಿ ಲಾಡ್‌ಖಾನ್ ದೇವಾಲಯಕ್ಕೆ ಸಮೀಪವೆನಿಸುವ ಕೆಲವು ವಿವರಗಳಿವೆ.

ಷಡ್ಭಾಗ ಭಾಜಿತೇಕ್ಷೇತ್ರೇ ಕರ್ಣಭಿತ್ತಿಂ ವಿವೇಶಯೇತ್
ಸಭಾಸ್ಯಾದ್ ಭಾವಿತಾನಾಮ ಸಪ್ರಗ್ರೀವಾತ್ರ ಪಂಚಮೀ
ಸ್ತಂಭಾನ್ ಷಟ್‌ತ್ರಿಂಶ ದೇತಾಸು ಪಂಚಸ್ವಪಿ ನಿವೇಶಯೇತ್
ಸ್ತಂಭಾನ್ ಪ್ರಾಗ್ರೀವ ಸಂಬಂದ್ಧಾನ್ ಪೃಥಗೇಭ್ಯೋ ವಿನಿರ್ದಿಶೇತ್

ಇಲ್ಲಿ ಮುಂಭಾಗದಲ್ಲಿ ಪ್ರಾಗ್ರೀವ ರಚನೆ ಇದೆ. ಪ್ರಾಗ್ರೀವ ಎನ್ನುವುದು ಎರಡು ಕಂಭಗಳ ರಚನೆ ಮಾತ್ರ. ಆದರೆ ಇಲ್ಲಿ ೧೨ ಕಂಭಗಳ ಮುಖಮಂಟಪವಿದೆ.

ಈ ಸಭಾಗೃಹವನ್ನು ತದನಂತರ ಕಾಲದಲ್ಲಿ ದೇವಾಲಯವಾಗಿ ಪರಿವರ್ತಿಸಿದ್ದಾರೆ. ಮಧ್ಯದ ಚತುಷ್ಕದಲ್ಲಿ ನಂದಿಯನ್ನು ಇರಿಸಿದ್ದು ಪಶ್ಚಿಮದ ಭಿತ್ತಿಯಲ್ಲಿ ತಾಗಿದಂತೆ ಗರ್ಭಗೃಹವನ್ನು ರಚಿಸಿದ್ದಾರೆ. ದೇವಾಲಯವಾಗಿ ಪರಿವರ್ತಿಸುವಾಗ ಮಧ್ಯದ ಚತುಷ್ಕವನ್ನೇ ಗರ್ಭಗೃಹವನ್ನಾಗಿ ಮಾಡಲು ಸಾಧ್ಯವಿತ್ತು. ಕ್ರಿ.ಶ. ಎರಡು–ಮೂರನೆಯ ಶತಮಾನದಲ್ಲಿ ದೇವಾಲಯಗಳ ಗರ್ಭಗೃಹವು ಮಧ್ಯದಲ್ಲಿತ್ತು ಎನ್ನಲು ಕ್ರಿ.ಶ. ೨೦೦೦ದಲ್ಲಿ ನಡೆದ ತಲಕಾಡು ಉತ್ಖನನ ವಾಸ್ತುಚಕ್ರದೊಡನೆ ಪುರಾವೆ ಒದಗಿಸುತ್ತದೆ.

ಲಾಡ್‌ಖಾನ್ ದೇವಾಲಯದ ಕಾಲಮಾನದ ಬಗ್ಗೆ ಖಚಿತ ಅಭಿಪ್ರಾಯವಿಲ್ಲ. ವಿದ್ವಾಂಸರು ಇದರ ಕಾಲವನ್ನು ಕ್ರಿ.ಶ. ೪೫೦ರಿಂದ ೮೦೦ರವರೆಗೆ ಎಳೆದೊಯ್ದಿದ್ದಾರೆ ! ಈ ಬಗ್ಗೆ ಎಷ್ಟೋ ವಾದ ವಿವಾದಗಳಿದ್ದರೂ ಮಧ್ಯದ ಗರ್ಭಗೃಹವು ನಿಧಾನವಾಗಿ ಹಿಂಸರಿದು ಪ್ರತ್ಯೇಕಗೊಂಡಿದ್ದು, ಈ ವಿವಿಧ ಹಂತಗಳನ್ನು ಗುರುತಿಸಬಹುದಾಗಿದೆ. ಈ ಸರಣಿಯಲ್ಲಿ, ವಿಕಾಸದ ಹಾದಿಯಲ್ಲಿ ಲಾಡ್‌ಖಾನ್ ದೇವಾಲಯದ ಸ್ವರೂಪವು ಮೊದಲ ಹಂತದ್ದೆನಿಸಿ ಪೂರ್ಣ ಪಾತ್ರವಹಿಸುತ್ತದೆ.

ಗ್ರಂಥಗಳು ವಿವರಿಸುವ ಚತುಶ್ಶಾಲ, ತ್ರಿಶಾಲ, ದ್ವಿಶಾಲ ಏಕಶಾಲಾದಿಗಳನ್ನು ಗಮನಿಸಬೇಕು. ಈ ಶಾಲಾ ರಚನೆಗಳಲ್ಲಿಯೂ ಪ್ರಧಾನ ಗೃಹವು ಮಧ್ಯದಲ್ಲಿದ್ದು ವಿವರಣೆಗಳಲ್ಲಿ ಅದೇ ಕೇಂದ್ರಬಿಂದು ಎನಿಸಿದೆ.

ಗರ್ಭಗೃಹವು ಹಿಂಸರಿದಾಗ, ಮುಂಭಾಗದಲ್ಲಿ ನವರಂಗ ರಚನೆ ಸ್ಥಿರವಾಗಿ ನಿಂತು, ಮಧ್ಯದ ಚತುಷ್ಕ ಮತ್ತು ಸುತ್ತ ಅಲಿಂದವನ್ನು ಒಳಗೊಳ್ಳುತ್ತದೆ. ಕಲ್ಯಾಣದ ಚಾಲುಕ್ಯ ಹಾಗೂ ಹೊಯ್ಸಳರ ಕಾಲದಲ್ಲಿ ನವರಂಗವನ್ನು ಆವರಿಸಿದಂತೆ ಗರ್ಭಗೃಹಗಳನ್ನು ನಾಲ್ಕು ದಿಕ್ಕುಗಳಲ್ಲಿಯೂ ರಚಿಸಲು ಅವಕಾಶವಿದೆ. ಇದನ್ನು ವಿದ್ವಾಂಸರು ಚತುಷ್ಕೂಟ, ತ್ರಿಕೂಟ, ಏಕಕೂಟಗಳೆಂದು ವಿಶ್ಲೇಷಿಸಿದ್ದಾರೆ. ಇದು ಚತುಶ್ಶಾಲ, ತ್ರಿಶಾಲಾದಿಗಳ ಅಪಭ್ರಂಶ ರೂಪ ; ಆದರೆ ಅರ್ಥ ಮಾಡಿಕೊಳ್ಳಲು ಸುಲಭದ ಹಾದಿ.

ಚತುಶ್ಶಾಲಾದಿಗಳ ಶಾಸ್ತ್ರೀಯ ವಿವರಣೆಯನ್ನು ಅರ್ಥ ಮಾಡಿಕೊಳ್ಳುವ ಮುನ್ನ ಚತುಷ್ಕೂಟ ಮೊದಲಾದವನ್ನು ಅರ್ಥ ಮಾಡಿಕೊಳ್ಳಬೇಕು. ಚತುಷ್ಕೂಟವೆಂದರೆ ನಾಲ್ಕರಿಂದ ಕೂಡಿದ್ದು, ನಾಲ್ಕು ಗರ್ಭಗೃಹಗಳುಳ್ಳದ್ದು. ಮಧ್ಯೆ ನವರಂಗ, ಸುತ್ತ ನಾಲ್ಕು ದಿಕ್ಕಿನಲ್ಲಿಯೂ ಗರ್ಭಗೃಹಗಳು. ಒಂದು ದಿಕ್ಕಿನ ಗರ್ಭಗೃಹ ಕೊಂಚ ದೂರದಲ್ಲಿದ್ದು ಗರ್ಭಗೃಹ ಮತ್ತು ನವರಂಗದ ನಡುವೆ ಎರಡೂ ಕಡೆ ಪ್ರವೇಶಕ್ಕೆ ದ್ವಾರವಿರುತ್ತದೆ. ಉದಾಹರಣೆಗೆ ಹೊಯ್ಸಳರ ಕಾಲದ ದೊಡ್ಡ ಗದ್ದವಳ್ಳಿಯ ಲಕ್ಷ್ಮೀ ದೇವಾಲಯವಿದೆ. ನವರಂಗಕ್ಕೆ ಹೊಂದಿಕೊಂಡಂತೆ ನಾಲ್ಕು ದಿಕ್ಕುಗಳಲ್ಲಿಯೂ ಗರ್ಭಗೃಹಗಳು. ಭೂತನಾಥನ ಗರ್ಭಗೃಹ ಕೊಂಚ ದೂರದಲ್ಲಿದ್ದು, ಗರ್ಭಗೃಹದ ಮುಂದೆ ಎಡಬಲಗಳಲ್ಲಿ ಪ್ರವೇಶದ್ವಾರವನ್ನು ಅಳಡಿಸಲಾಗಿದೆ.

ಬಸ್ರಾಳುವಿನ ಮಲ್ಲಿಕಾರ್ಜುನ ದೇವಾಲಯವೂ ಒಂದು ರೀತಿಯ ಚತುಷ್ಕೂಟವೇ ಪೂರ್ವ ದಿಕ್ಕಿನಲ್ಲಿ ಗರ್ಭಗೃಹಕ್ಕೆ ಬದಲಾಗಿ ಜಾಲಂದ್ರದೊಡನೆ ಆವರಿಸಿದ ನಂದಿ ಮಂಟಪವಿದೆ. ನಂದಿ ಮಂಟಪದ ಮುಂಭಾಗದಲ್ಲಿ ದಕ್ಷಿಣ ಹಾಗೂ ಉತ್ತರ ದಿಕ್ಕುಗಳಲ್ಲಿ ಪ್ರವೇಶಕ್ಕೆ ದ್ವಾರವಿದೆ. ಹಸ್ತಿ ಹಸ್ತಕ್ಕೆ ಪರ್ಯಾಯವಾಗಿ ಜಗತಿಯೊಂದಿಗೆ ಜೋಡಿಸಿದ ಆನೆಗಳಿವೆ.

ಚತುಶ್ಶಾಲದ ಅತಿ ಪ್ರಾಚೀನ ವಿವರಣೆ ಬೃಹತ್ ಸಂಹಿತಾ ಗ್ರಂಥದಲ್ಲಿದೆ. ಇದು ಕೊಂಚ ಅಸ್ಪಷ್ಟ. ಆದ್ದರಿಂದ ಇತರ ಗ್ರಾಂಥಿಕ ವಿವರಗಳನ್ನು ಅವಲಂಬಿಸಬೇಕು.

ಅಪ್ರತಿಷಿದ್ಧಾಲಿಂದಂ ಸಮಂತತೋ ವಾಸ್ತು ಸರ್ವತೋ ಭದ್ರಂ
ನೃಪ ವಿಬುಧ ಸಮೂಹಾನಾಂ ಕಾರ್ಯ ದ್ವಾರೈಶ್ಚತುರ್ಭಿರಪಿ

ಇದು ಶಾಲಾ ರಚನೆಯ ಬಗ್ಗೆ ಏನನ್ನೂ ಹೇಳದೆ ಸುತ್ತ ಇರುವ ಅಲಿಂದ ಹಾಗೂ ರಾಜರು ಹಾಗೂ ದೇವತೆಗಳಿಗೆ ರಚಿಸಲಾದ ನಾಲ್ಕು ದ್ವಾರಗಳುಳ್ಳ ಪ್ರಭೇದವನ್ನು ಸರ್ವತೋಭದ್ರ ಎಂದು ಗುರುತಿಸುತ್ತದೆ. ಇದಕ್ಕೆ ಪೂರಕವಾಗಿ ಶುಕ್ರ ನೀತಿ ಗ್ರಂಥದ ವಿವರಣೆಯನ್ನು ಕಾಣಬಹುದು.

ಚತುರ್ದಿಕ್ ಮಂಡಪಂ ವಾಪಿ ಚತುಶ್ಶಾಲಂ ಸಮಂತತಃ

ಸುತ್ತಲೂ ನಾಲ್ಕು ದಿಕ್ಕುಗಳಲ್ಲಿಯೂ ಮಂಟಪವಿದ್ದು ಚತುಶ್ಶಾಲ ಎಂದು ಗುರುತಿಸಲಾಗಿದೆ.

ಪ್ರಾಸಾದ ಮಧ್ಯ ವಿಸ್ತಾರಃ ಪ್ರತಿಮಾಯಾಃ ಸಮಂತತಃ

ಪ್ರಾಸಾದದ ನಡುವೆ ಹೆಚ್ಚು ವಿಸ್ತಾರವುಳ್ಳದ್ದು ; ಅಲ್ಲಿ ಸುತ್ತ ಪ್ರತಿಮೆಗಳಿವೆ. ಪ್ರಾಸಾದ ರಚನೆಯಲ್ಲಿ ಮಧ್ಯೆ ಪ್ರಧಾನ ಗೃಹ ಅಥವಾ ಗರ್ಭಗೃಹ, ಗರ್ಭಗೃಹದಲ್ಲಿ ಪ್ರತಿಮೆ. ಸುತ್ತ ಅಲಿಂದ ರಚನೆ ಇದೆ. ನಂತರ ನಾಲ್ಕು ದಿಕ್ಕಿನಲ್ಲಿ ಮಂಡಪ ಅಥವಾ ಶಾಲಾ ರಚನೆಯೊಂದಿಗೆ ದ್ವಾರಗಳು. ಇದು ಸರ್ವತೋ ಭದ್ರ ಪ್ರಬೇಧವು. ಚತುಶ್ಶಾಲದ ವಿಸ್ತೃತ ವರ್ಣನೆಯು ಮಾನಸೋಲ್ಲಾಸ ಗ್ರಂಥದಲ್ಲಿದೆ.

ಅಲಿಂದೈಶ್ಚ ಚತುರ್ದ್ವಾರೈಃ ಚತುಶ್ಶಾಲ ಮುದಾಹೃತಂ
ಸರ್ವತೋಭದ್ರ ನಾಮೇದಂ ನೃಪಾನಾಂ ಶಸ್ಯತೇ ಗೃಹಂ

ಅಲಿಂದದಿಂದ ಆವರಿಸಿದ ನಾಲ್ಕು ದ್ವಾರಗಳುಳ್ಳ ಚತುಶ್ಶಾಲ ರಚನೆಗೆ ಸರ್ವತೋಭದ್ರ ಎಂಬ ಹೆಸರು. ಇದನ್ನು ರಾಜರಿಗಾಗಿ ನಿರ್ಮಿಸಬಹುದು. ಚತುಶ್ಶಾಲದ ಉದಾಹರಣೆಯೇ ಉಣಕಲ್ಲಿನ ಚಂದ್ರ ಮೌಳೀಶ್ವರ ದೇವಾಲಯ. ಇದರಿಂದ ಖಚಿತ ಸ್ವರೂಪ ಲಭ್ಯ. ಇದು ಬಹುಶಃ ಕ್ರಿ.ಶ. ೧೨ನೇ ಶತಮಾನದ ನಂತರ ರಚನೆ. ಇದರೊಂದಿಗೆ ಇತರ ಶಾಲಾ ರಚನೆಗಳನ್ನು ರೂಪಿಸಿಕೊಳ್ಳಲು ಸಾಧ್ಯ.

ಚಂದ್ರಮೌಳೀಶ್ವರ ದೇವಾಲಯದ ಸ್ವರೂಪ ಇಂತಿದೆ. ಮಧ್ಯೆ ನಾಲ್ಕು ಕಂಭಗಳ ಚತುಷ್ಕ, ಇದು ಪ್ರಧಾನ ಗೃಹ. ಕಂಭಗಳನ್ನು ಆವರಿಸಿದಂತೆ ಭಿತ್ತಿ ಇದೆ. ನಾಲ್ಕು ದಿಕ್ಕುಗಳಲ್ಲಿ ಪ್ರವೇಶ ದ್ವಾರವಿದೆ. ಸುತ್ತ ಅಲಿಂದ ರಚನೆ ಇದೆ. ಅಲಿಂದವೆಂದರೆ ಇಲ್ಲಿ ಪ್ರದಕ್ಷಿಣಾ ಪಥವೇ ಆಗಿದೆ. ಪುನಃ ಸುತ್ತ ಭಿತ್ತಿ ಇದ್ದು ನಾಲ್ಕು ದಿಕ್ಕುಗಳಲ್ಲಿ ಪ್ರವೇಶಕ್ಕೆ ಅವಕಾಶವಿದ್ದು, ನಾಲ್ಕು ದಿಕ್ಕುಗಳಲ್ಲಿ ಶಾಲಾ ರಚನೆ ಅಥವಾ ಮಂಡಪ ರಚನೆ ಇದೆ. ನಾಲ್ಕು ದಿಕ್ಕಿನಿಂದಲೂ ಪ್ರವೇಶ ಸಾಧ್ಯ. ಪೂರ್ವ ದಿಕ್ಕಿನಲ್ಲಿ ಶಾಲಾ ರಚನೆಯೊಡನೆ ತುಸು ವಿಶಾಲವಾದ ಕಕ್ಷಾಸನವುಳ್ಳ ಮುಖಮಂಟಪವಿತ್ತು ಎಂದು ಗುರುತಿಸಬಹುದು. ಈ ದೇವಾಲಯ ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯಗಳಂತೆ ಇದೆ. ಮಧ್ಯದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಪಶ್ಚಿಮ ದಿಕ್ಕಿನ ಶಾಲಾ ಮಧ್ಯದಲ್ಲಿ ಚತುರ್ಮುಖೀ ಲಿಂಗವಿದ್ದು ಬಹುಶಃ ಈ ಲಿಂಗವು ಒಂದು ಕಾಲಕ್ಕೆ ಮಧ್ಯದಲ್ಲಿತ್ತೆಂದು ಊಹಿಸಬಹುದು. ಚತುಶ್ಶಾಲಗಳ ಪ್ರಯೋಗ ಜೈನಬಸದಿಗಳಲ್ಲಿ ಕಾಣಲು ಸಾಧ್ಯ. ಗೇರುಸೊಪ್ಪೆಯ ಬಸದಿ, ಕಾರ್ಕಳದ ಚತುರ್ಮುಖ ಬಸದಿ

ಚತುಶ್ಶಾಲ ರಚನೆಯ ಪ್ರಯೋಗಗಳೇ ಆಗಿವೆ. ಇವು ತದನಂತರ ಕಾಲದ್ದು. ಉತ್ತರ ಭಾರತದಲ್ಲಿ ವಿಶೇಷವಾಗಿ ಗುಜರಾತ್, ರಾಜಾಸ್ಥಾನಗಳಲ್ಲಿಯೂ ಈ ರೀತಿಯ ರಚನೆಗಳಿರಬಹುದು. ಇವುಗಳ ಪ್ರತ್ಯೇಕ ಅಧ್ಯಯನ ನಡೆಯಬೇಕಾಗಿದೆ.

ಶಾಲಾ ರಚನೆಯ ಇತರ ಪ್ರಬೇಧಗಳನ್ನು ತಿಳಿಯುವ ಮುನ್ನ ವಿಶ್ವಕರ್ಮ ಪ್ರಕಾಶ ಗ್ರಂಥದ ಕೆಳಕಂಡ ಹೇಳಿಕೆಗಳನ್ನು ಪರೀಕ್ಷಿಸಬೇಕು.

ಕೇಚಿದಲಿಂದಕಂ ದ್ವಾರಂ ಪ್ರವದಂತಿ ಮನೀಷಿಣಃ
ಕೇಚಿದಲಿಂದಂ ಶಾಲಾಂ ಚ ಕೇಚಿದಲಿಂದಕಂ ಹಿ ತತ್
....
ಯತ್ರಾಲಿಂದಶ್ಚ ತತ್ರೈವ ದ್ವಾರಮಾರ್ಗಂ ಪ್ರಶಸ್ಯತೇ
ಅಲಿಂದಂ ದ್ವಾರ ಹೀನಂ ಚ ಗೃಹಕೋಟಿ ಸಮಂ ಸ್ಮೃತಂ (?)
ಯತ್ರಾಲಿಂದ ತತ್ರಶಾಲಾ ದ್ವಾರಶ್ಚ ಶೋಭನಂ
ಶಾಲಾಲಿಂದಂ ದ್ವಾರಹೀನಂ ನಗೃಹಂ ಕಾರಯೇತ್ ಬುಧಃ

ಅಲಿಂದಕವನ್ನು ದ್ವಾರವೆಂದೇ ಹೆಸರಿಸಲಾಗುತ್ತದೆ. ಅಲಿಂದವನ್ನು ಶಾಲಾ ಎಂದೂ ಅಲಿಂದಕವೆಂದೂ ಗುರುತಿಸಲಾಗುತ್ತದೆ. ಎಲ್ಲಿ ಅಲಿಂದವಿದೆಯೇ ಅಲ್ಲಿ ದ್ವಾರವಿರುವುದು ಅವಶ್ಯಕ. ಅಲಿಂದವಿರುವೆಡೆಯಲ್ಲಿ ಶಾಲೆವೂ ಇದ್ದು ಅಲ್ಲಿ ದ್ವಾರವು ಶೋಭಾಯಮಾನವು. ದ್ವಾರವಿಲ್ಲದ ಶಾಲಾ, ಅಲಿಂದವನ್ನು ಗೃಹದಲ್ಲಿ ರಚಿಸಲಾಗದು. ಇದು ಗ್ರಂಥೋಕ್ತಿ. ವಿಶ್ವಕರ್ಮ ಪ್ರಕಾಶನದ ಗ್ರಂಥಕರ್ತೃವು ಪದಗಳ ಅರ್ಥವನ್ನು ಸರಳೀಕರಿಸಿರುವ ನಿಟ್ಟಿನಲ್ಲಿ ಕೊಂಚ ಎಡವಿದ್ದಾನೆಯೇ ? ಅವನ ಪ್ರಕಾರ ಅಲಿಂದ = ಶಾಲಾ = ದ್ವಾರ. ಈ ರೀತಿಯ ಸರಳೀಕರಣ ಶಾಲಾ ಅರ್ಥವನ್ನು ಬುಡಮೇಲು ಮಾಡುತ್ತದೆ. ಕಾಲದಿಂದ ಕಾಲಕ್ಕೆ ಕೆಲವು ತಾಂತ್ರಿಕ ಪದಗಳು ತಮ್ಮ ಅರ್ಥವ್ಯಾಪ್ತಿಯನ್ನು ಕಳೆದುಕೊಳ್ಳಬಹುದು. ಪ್ರಧಾನ ಗೃಹ ಅಥವಾ ಗರ್ಭಗೃಹದ ಸ್ಥಾನಪಲ್ಲಟದಿಂದ ಈ ಬದಲಾವಣೆ ಸಾಧ್ಯ. ಶಾಲಾ ಭಾಗದಲ್ಲಿ ಗರ್ಭಗೃಹವಿರಲೂ ಸಾಧ್ಯ, ಅದಕ್ಕೆ ಒಳಭಾಗದಲ್ಲಿ ದ್ವಾರವಿರಲು ಸಾಧ್ಯ. ಚತುಷ್ಕೂಟಗಳಲ್ಲಿ ಸುತ್ತ ಗರ್ಭಗೃಹಗಳಿವೆ. ಚತುಶ್ಶಾಲ ರಚನೆಯಲ್ಲಿ (ಸರ್ವತೋಭದ್ರ) ಸುತ್ತ ದ್ವಾರಗಳಿವೆ !

ಚತುಶ್ಶಾಲ ರಚನೆಯಲ್ಲಿ ಅಲಿಂದದ ನಂತರ ನಾಲ್ಕು ದಿಕ್ಕಿನಲ್ಲಿ ರಚನೆಯನ್ನು ಶಾಲಾ, ಅಂಕಣ, ಶಾಲಾಂಕಣ ಎಂದೂ ಗುರುತಿಸಬಹುದು. ಇಲ್ಲಿ ದ್ವಾರ ಅಥವಾ ಗರ್ಭಗೃಹ ಇರಲು ಸಾಧ್ಯ. ಈ ಬದಲಾವಣೆ ಪ್ರಧಾನ ದೇಹದ ಪಲ್ಲಟದಿಂದ ಆದದ್ದು. ಅಪರಾಜಿತ ಪೃಚ್ಛಾ ಗ್ರಂಥದ ಚತುಶ್ಶಾಲಾ ಅಧ್ಯಾಯದಲ್ಲಿ ಕೆಳಕಂಡ ಸಾಲುಗಳಿವೆ.

ಅಷ್ಟಮೂಷಾಯತೇ ಛಂದೇ ತ್ರಿಪುಟೀ ಸ್ಯಾದ ಛಂದಕಂ
ದ್ವೇದ್ವೇ ಮೂಷೇ ಪ್ರತಿದಿಶಂ ಮೂಷಾಣಾಂ ಸ್ಯಾದಯಂ ಕ್ರಮಃ
.....
ದ್ವೇದ್ವೇ ಮೂಷೇ ಪ್ರತಿದಿನಂ ವಿಧೇಯೇ ಸುಪ್ರದಕ್ಷಿಣಂ
ಕಥಯಾಮಿ ಸಮಾಸೇನ ಷಟ್‌ಪಂಚಾಶಚ್ಛತದ್ವಯಂ

ಇವು ಚತುಶ್ಶಾಲವನ್ನು ಕುರಿತ ಪ್ರಸ್ತರ ರಚನೆಯ ವಿವರಗಳು, ಇಲ್ಲಿ ಮೂಷಾ, ಕ್ಷಣ, ಷಡಾರುಕ ಇತ್ಯಾದಿ ತಾಂತ್ರಿಕ/ ಪಾರಿಭಾಷಿಕ ಪದಗಳು ಬಳಕೆಯಾಗಿದೆ. ಇವನ್ನು ಅರ್ಥೈಸಲು ಸಾಧ್ಯವಾಗಿಲ್ಲ. ಇವುಗಳ ಜೋಡಣೆಯೊಂದಿಗೆ ೨೫೬ ಪ್ರಭೇಧಗಳು ! ಈತ ತಿಳಿದಿರುವುದು ಕೊಂಚ ಮಾತ್ರ.

ಈ ಪ್ರಭೇದಗಳ ಸಂಖ್ಯೆ ಏಕಶಾಲಾ, ದ್ವಿಶಾಲಾ, ತ್ರಿಶಾಲಾ, ಚತುಶ್ಶಾಲಾ ಗೃಹಗಳಿಗೆ ಇಂತಿದೆ :

ಗೃಹಾಣಾಮೇಕಶಾಲಾನಾಂ ಶತಂ ಸ್ಯಾಚ್ಚತುರುತ್ತರಂ
ದ್ವಿಶಾಲಾನಾಂ ದ್ವಿಪಂಚಾಶತ್ ತ್ರಿಶಾಲಾನಾಂ ದ್ವಿಪಪ್ತತಿಃ
ಚತುಶ್ಶಾಲ ಗೃಹಾಣಾಂಚ ಷಟ್‌ಪಂಚಾಶಚ್ಛತದ್ವಯಂ

ಏಕಶಾಲ ಗೃಹಗಳು–೧೦೪, ದ್ವಿಶಾಲಾ ಗೃಹಗಳು–೫೨, ತ್ರಿಶಾಲಾ ಗೃಹಗಳು–೭೨, ಚತುಶ್ಶಾಲಾ ಗೃಹಗಳು–೨೫೬, ಇವಲ್ಲದೆ ಪುನರ್ ಪ್ರಬೇಧಗಳ ಸಂಖ್ಯೆ ಸಾವಿರಗಳನ್ನು ದಾಟುತ್ತದೆ. ಇದನ್ನು ಕೇವಲ ತಿಳುವಳಿಕೆಗಾಗಿ ಗಮನಿಸುವುದು ಸೂಕ್ತ.

ಬೃಹತ್ ಸಂಹಿತೆಯಲ್ಲಿ ಸರ್ವತೋ ಭದ್ರ ಪ್ರಭೇಧದ ನಂತರ, ನಂದ್ಯಾವರ್ತ, ವರ್ಧಮಾನ, ಸ್ವಸ್ತಿಕ, ರುಚಕ ಎಂಬ ಪ್ರಭೇದಗಳ ವಿವರಣೆ ಇದೆ. ಇವನ್ನು ಚತುಶ್ಶಾಲ ರಚನೆಯ ಪ್ರಬೇಧಗಳೆಂದೇ ತಿಳಿಯಬೇಕು.

ನಂದ್ಯಾವರ್ತಮಲಿಂದೈ ಶಾಲಾ ಕುಡ್ಯಾತ್ ಪ್ರದಕ್ಷಿಣಾಂತಹೈ:
ದ್ವಾರಂ ಪಶ್ಚಿಮಮಸ್ಮಿನ್ ವಿದಾಯ ಶೇಷಾಣಿ ಕಾರ್ಯಾಣಿ

ನಂದ್ಯಾವರ್ತ ಪ್ರಬೇಧದಲ್ಲಿ ಅಲಿಂದ, ಶಾಲಾ ಭಿತ್ತಿಗಳು ಪ್ರದಕ್ಷಿಣಾಕಾರದಲ್ಲಿದ್ದು ಪಶ್ಚಿಮ ದಿಕ್ಕಿನಲ್ಲಿ ದ್ವಾರವಿಲ್ಲದೆ ರಚನೆಗೊಂಡಿದೆ. ಈ ವಿವರಗಳಲ್ಲಿ ಪಶ್ಚಿಮದಲ್ಲಿ ಶಾಲಾ ರಚನೆಯ ಬಗ್ಗೆ ಏನನ್ನೂ ಹೇಳಿಲ್ಲ. ಇಲ್ಲಿ ಶಾಲಾಂಕಣವಿದೆ. ಇದು ಅಲಿಂದದೆಡೆಗೆ ದ್ವಾರ ಹೊಂದಿರಲು ಸಾಧ್ಯ. ಇದನ್ನು ಗರ್ಭಗೃಹವಾಗಿ ಪರಿವರ್ತಿಸಲೂ ಸಾಧ್ಯ. ಪ್ರಾಚೀನ ಗೃಹಗಳಲ್ಲಿ ಪ್ರಧಾನ ಗೃಹವು ಮಧ್ಯದಲ್ಲಿರುವುದರಿಂದ ಪಶ್ಚಿಮ ಶಾಲಾ ರಚನೆಯ ಈ ವಿವರಗಳು ಅನಗತ್ಯ ಎನ್ನಿಸಿರಬಹುದು.

ವರ್ಧಮಾನ, ಸ್ವಸ್ತಿಕ, ರುಚಕ ಪ್ರಬೇಧಗಳಲ್ಲಿ ಕ್ರಮವಾಗಿ ದಕ್ಷಿಣ, ಪೂರ್ವ ಹಾಗೂ ಉತ್ತರ ದಿಕ್ಕುಗಳಲ್ಲಿ ದ್ವಾರವಿಲ್ಲ. ಉಳಿದಂತೆ ಶಾಲಾ ದ್ವಾರ ರಚನೆಗಳಿವೆ. ಇಲ್ಲಿ ಅಲಿಂದಕ್ಕಿರುವ ದ್ವಾರದ ಬಗ್ಗೆಯೂ ಹೇಳಲಾಗಿದೆ. ಇದು ಗೌಣ.

ನಂದ್ಯಾವರ್ತ ಪ್ರಬೇಧವು ಶ್ರೇಷ್ಠವೆನಿಸಿದ್ದು ಎರಡನೆಯ ಸ್ಥಾನ ವರ್ಧಮಾನಕ್ಕಿದೆ.

ಶ್ರೇಷ್ಠಂ ನಂದ್ಯಾವರ್ತಂ ಸರ್ವೇಷಾಂ ವರ್ಧಮಾನ ಸಂಜ್ಞಂ ಚ

ಈಗ ತ್ರಿಶಾಲ ರಚನೆಯನ್ನು ಗಮನಿಸಬಹುದು.

ಉತ್ತರ ಶಾಲಾ ಹೀನಂ ಹಿರಣ್ಯನಾಭಂ ತ್ರಿಶಾಲ ಕಂ ಧನ್ಯಂ
ಪ್ರಾಕ್ ಶಾಲಾಯಾ ವಿಮುಕ್ತಾಂ ಸುಕ್ಷೇತ್ರಂ ವೃದ್ಧಿದಂ ವಾಸ್ತು ॥
ಯಾ ಮ್ಯಾಹೀನಂ ಚುಲ್ಲೀತ್ರಿಶಾಲಕಂ ವಿತ್ತನಾಶಕರ ಮೇತತ್
ಪಕ್ಷಘ್ನಮಪರಯಾ ವರ್ಜಿತಂ ಸುತಧ್ವಂಸ ವೈರಕರಂ ॥

ಈ ವಿವರಗಳಲ್ಲಿ ಸ್ಪಷ್ಟತೆ ಇದೆ. ಉತ್ತರ ದಕ್ಕಿನಲ್ಲಿ ಶಾಲಾ ಇಲ್ಲದ್ದು ಹಿರಣ್ಯನಾಭ, ಪೂರ್ವದಲ್ಲಿ ಶಾಲಾ ಇಲ್ಲದ್ದು ಸುಕ್ಷೇತ್ರ, ದಕ್ಷಿಣದಲ್ಲಿ ಶಾಲಾರಹಿತವು ಚುಲ್ಲೀ ಪಶ್ಚಿಮದಲ್ಲಿ ಶಾಲಾ ಇಲ್ಲದ್ದು ಪಕ್ಷಘ್ನ. ಉಳಿದ ಮೂರು ದಿಕ್ಕುಗಳಲ್ಲಿ ಶಾಲಾ ರಚನೆ ; ಬೃಹತ್ ಸಂಹಿತೆ, ವಿಶ್ವಕರ್ಮ ಪ್ರಕಾಶ ಗ್ರಂಥ ಕರ್ತೃಗಳ ಪ್ರಕಾರ ಮೂರು ಕಡೆ ಶಾಲಾ ರಚನೆಯೊಂದಿಗೆ ಪ್ರವೇಶದ್ವಾರ. ಇದು ತ್ರಿಶಾಲ ರಚನೆಯ ಆಶಯ. ವಸ್ತುಸ್ಥಿತಿಯಲ್ಲಿ ಈ ರೀತಿ ರಚನೆಗಳು ಲಭ್ಯವಿಲ್ಲ.

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಮೂರು ಗರ್ಭಗೃಹಗಳ ಹಲವು ರಚನೆಗಳಿವೆ. ಇವನ್ನು ತ್ರಿಕೂಟ ರಚನೆ ಸ್ವರೂಪವೇ. ಶಾಲಾಂಕಣದಲ್ಲಿ ದ್ವಾರವಿಲ್ಲದೆ ಗರ್ಭಗೃಹವನ್ನು ರಚಿಸಲಾಗಿದೆ.

ಮೂರು ಗರ್ಭಾಗೃಹಗಳಲ್ಲಿ ಮೂರು ದಿಕ್ಕಿನಲ್ಲಿ ಲಿಂಗ ಸ್ಥಾಪನೆ, ಇವು ತ್ರಿಮೂರ್ತಿಗಳ ಪ್ರತಿನಿಧಿಗಳು. ಇವು ಪಶ್ಚಿಮದಲ್ಲಿ ಶಿವ, ಉತ್ತರದಲ್ಲಿ ವಿಷ್ಣು ಹಾಗೂ ದಕ್ಷಿಣದಲ್ಲಿ ಬ್ರಹ್ಮನ ಪ್ರತಿನಿಧಿಗಳಾಗಿವೆ. ಪೂರ್ವದಲ್ಲಿ ಪ್ರವೇಶ ದ್ವಾರವನ್ನು ಕಾಣಬಹುದು. ಕೆಲವೊಮ್ಮೆ ವಿಷ್ಣುವನ್ನು ವಿಗ್ರಹ ರೂಪದಲ್ಲಿ ಕಡೆದಿರುವುದುಂಟು.

ಶಿವ, ವಿಷ್ಣು ಹಾಗೂ ಸೂರ್ಯರಿಗೆ ನಿರ್ಮಿಸಿದ ತ್ರಿಕೂಟ ದೇವಾಲಯದಲ್ಲಿ ಪೂರ್ವದಲ್ಲಿ ಸೂರ್ಯ ವಿಗ್ರಹವಿದ್ದು, ದಕ್ಷಿಣದಲ್ಲಿ ಪ್ರವೇಶ ದ್ವಾರವಿದೆ.

ಹೊಯ್ಸಳರ ಕಾಲದ ವೈಷ್ಣವ ದೇವಾಲಯಗಳಲ್ಲಿ ಪಶ್ಚಿಮದಲ್ಲಿ ಕೇಶವ, ಉತ್ತರದಲ್ಲಿ ಜನಾರ್ದನ ಅಥವಾ ನರಸಿಂಹ (ಲಕ್ಷ್ಮೀನರಸಿಂಹ/ಯೋಗಾ ನರಸಿಂಹ) ದಕ್ಷಿಣದಲ್ಲಿ ವೇಣುಗೋಪಾಲ ವಿಗ್ರಹಗಳ ಸ್ಥಾಪನೆ ಸಂಪ್ರದಾಯವೆನಿಸಿದೆ.

ಹೊಯ್ಸಳರ ಕಾಲದ ಹಲವು ದೇವಾಲಯಗಳ ತ್ರಿಕೂಟ ರಚನೆಯಲ್ಲಿ ಮೂರು ದಿಕ್ಕಿನಲ್ಲಿ ಗಭೃಗೃಹಗಳಿದ್ದು, ಮತ್ತೊಂದೆಡೆ ಪ್ರವೇಶದ್ವಾರವು ಕಕ್ಷಾಸನವುಳ್ಳ ಮುಖಮಂಟಪವನ್ನು ಪಡೆದಿರುತ್ತದೆ. ಈ ಮುಖಮಂಟಪವು ಶಾಲಾಂಕಣವೇ ಆಗಿದೆ. ಈ ದೇವಾಲಯವನ್ನು ಚತುಶ್ಶಾಲದ ಪ್ರಭೇದವೆಂದೇ ಪರಿಗಣಿಸಬೇಕು. ಈ ರೀತಿಯ ಹಲವು ರೀತಿಯ ಪ್ರಯೋಗಗಳನ್ನು ಹೊಯ್ಸಳರ ಕಾಲದಲ್ಲಿ ಕಾಣಬಹುದು.

ಅಪರಾಜಿತ ಪೃಚ್ಛಾ ಗ್ರಂಥದಲ್ಲಿ ತ್ರಿಶಾಲ ರಚನೆಯ ನಾಲ್ಕು ಪ್ರಬೇಧಗಳನ್ನು ಕಾಲದಂಡ, ಸುನಾಭ, ಜಯಂತ ಮತ್ತು ರಿಪುದರ್ಶನ ಎಂದು ಹೆಸರಿಸಲಾಗಿದೆ.

ದ್ವಾರ ಅಥವಾ ದ್ವಾರಮುಖವನ್ನು ಅನುಸರಿಸಿ ಈ ಪ್ರಬೇಧಗಳು.

ಕಾಲದಂಡಂ ಸುನಾಭಂ ಚ ಜಯಂ ತಂ ರಿಪುದರ್ಶನಂ
ತ್ರಿಶಾಲಾನಿ ತು ಚತ್ವಾರಿ ದಿಶಾ ವಹನ ಭೇದತಃ
ಪ್ರಾಗ್ದಿಕ್‌ಮುಖಂ ಭವೇದ್ ವೇಶ್ಮ ಕಾಲದಂಡನಾಮತಃ
ಯಾದ್ಯೂ ಮುಖಂ ಸುನಾಭಂ ಸ್ಯಾದ್ ವೇಶ್ಮಾೄವಂ ಶೋಭನಂ
ಜಯಂತಾಂ ನಾಮಕಂ ವೇಶ್ಮ ತಥಾ ಸ್ಯಾದರುಣೋನ್ಮುಖಂ
ಉತ್ತರಾಸ್ಯಂ ತುಕರ್ತವ್ಯಂ ಕಾಮದಂ ರಿಪುದರ್ಶನಂ

ಪೂರ್ವ ದಿಕ್ಕಿನಲ್ಲಿ ಮುಖ ಅಥವಾ ಪ್ರವೇಶ ದ್ವಾರವಿದ್ದಲ್ಲಿ ಕಾಲದಂಡ ಎಂದು ಹೆಸರು ದಕ್ಷಿಣದಲ್ಲಿ ಮುಖವು ಸುನಾಭ, ಉತ್ತರ ಮುಖವು ಜಯಂತ, ಪಶ್ಚಿಮದಲ್ಲಿ ಮುಖದ್ವಾರವಿದ್ದಲ್ಲಿ ರಿಪ್ರದರ್ಶನ. ಉಳಿದ ಮೂರು ದಿಕ್ಕುಗಳಲ್ಲಿ ಶಾಲಾ ರಚನೆ ನಿಶ್ಚಿತ. ಇದರ ಸ್ವರೂಪ ಖಚಿತವಿಲ್ಲ. ಪುನಃ ಪುನರ್ ಪ್ರಭೇದಗಳನ್ನು ಮೂಷಾರಚನೆಯೊಡನೆ ಗುರುತಿಸುತ್ತದೆ; ಸಧ್ಯಕ್ಕೆ ಇದು ಅರ್ಥವಾಗದ ಪಠ್ಯ.

ದ್ವಿಶಾಲಾ, ಏಕಶಾಲಾ ರಚನೆಗಳನ್ನು ವಿಶ್ಲೇಷಿಸುವಾಗ ನಾಲ್ಕು ದಿಕ್ಕುಗಳ ಶಾಲಾ ಅಥವಾ ಪದ ಸ್ಥಾನಕ್ಕೆ ಪ್ರತ್ಯೇಕ ಹೆಸರುಗಳನ್ನು ನೀಡಲಾಗಿದೆ. ಅಪರಾಜಿತ ಪೃಚ್ಛಾ ಗ್ರಂಥದ ಒಕ್ಕಣೆ ಈ ರೀತಿಯಲ್ಲಿದೆ.

ಹಸ್ತಿನೀ ಮಹಿಷೀ ಚೈವಗಾವೀಚ ಭಾಗಲೀ ತಥಾ
ಪದಾನಾಂ ತು ದಿಶಾಭೇದೈಃ ಪ್ರಾಚ್ಯಾದಿಷು ಪ್ರದಕ್ಷಿಣಂ
ಹಸ್ತಿನೀ ಚೈಂದ್ರ ಸ್ಥಾನೇ ಮಹಿಷೀ ಚಯಮಸ್ಥಲೇ
ಗಾವೀಚ ವರುಣಸ್ಥಾನೇ ಸೌಮ್ಯಸ್ಥಾನೇತು ಭಾಗಲೀ
......
ದ್ವಾರಂತು ಸಮಸ್ತ ಗೃಹಾಣಾಂ ಪದಸ್ಥಾನೇಷು ದಾಪಯೇತ್

ದ್ವಿಶಾಲ ರಚನೆಯಯಲ್ಲಿ ಪ್ರಮುಖವಾಗಿ ಆರು ಪ್ರಭೇದಗಳು. ಈ ಪ್ರಬೋಧಗಳನ್ನು ಎಲ್ಲಾ ಗ್ರಂಥಗಳೂ ಗುರುತಿಸಿವೆ.

ಸಿದ್ಧಾಥಂ ಯಮಸೂರ್ಯಂ ಚ ದಮಡಾಖ್ಯಂ ವಾತ ಸಂಜ್ಞಿತಂ
ಚುಲ್ಲಿಕಾಚಂ ಚ ಮುಖ್ಯಾನಿ ದ್ವಿಶಾಲಾನಿ ಪ್ರಚಕ್ಷತೇ

ಸಿದ್ಧಾರ್ಥ, ಯಮ ಸೂರ್ಯ, ದಂಡ, ವಾತ, ಚುಲ್ಲಿ (ಗೃಹ ಚುಲ್ಲಿ) ಕಾಚ ಇವೇ ದ್ವಿಶಾಲಾ ರಚನೆಯ ಆರು ಸಂಭಾವ್ಯತೆಗಳು. ಈ ರಚನೆಗಳನ್ನು ಬೃಹತ್ ಸಂಹಿತೆಯು ಸರಳವಾಗಿ ವಿವರಿಸಿದೆ.

ಸಿದ್ಧಾರ್ಥ ಮ ಪರಯಾಮ್ಯೇ ಯಮ ಸೂರ್ಯಂ ಪಶ್ಚಿಮೋತ್ತರೇ
ದಂಡಾಖ್ಯಂ ಉದಕಪೂರ್ವೇ ವಾತಾಖ್ಯಂಪ್ರದ್‌ಯುತಾ ಮ್ಯಃ
ಪೂರ್ವಾ ಪರೇತು ಶಾಲೇ ಗೃಹಚುಲ್ಲಿ ದಕ್ಷಿಣೋತ್ತರೇ ಕಾಚಂ

೧. ಸಿದ್ಧಾರ್ತ ಪ್ರಬೇಧದಲ್ಲಿ ಪಶ್ಚಿಮ–ದಕ್ಷಿಣದಲ್ಲಿ ಶಾಲಾ ರಚನೆ.

೨. ಯಮ ಸೂರ್ಯ ಪ್ರಬೇಧದಲ್ಲಿ ಪಶ್ಚಿಮ–ಉತ್ತರದಲ್ಲಿ ಶಾಲಾ ರಚನೆ.

೩. ದಂಡ ಪ್ರಬೇಧದಲ್ಲಿ ಪೂರ್ವ–ಉತ್ತರದಲ್ಲಿ ಶಾಲಾ ರಚನೆ.

೪. ವಾತ ಪ್ರಬೇಧದಲ್ಲಿ ಪೂರ್ವ–ದಕ್ಷಿಣದಲ್ಲಿ ಶಾಲಾ ರಚನೆ.

೫. ಗೃಹಚುಲ್ಲಿ ಪ್ರಬೇಧದಲ್ಲಿ ಪೂರ್ವ–ಪಶ್ಚಿಮದಲ್ಲಿ ಶಾಲಾ ರಚನೆ.

೬. ಕಾಚ ಪ್ರಬೇಧದಲ್ಲಿ ಉತ್ತರ–ದಕ್ಷಿಣದಲ್ಲಿ ಶಾಲಾ ರಚನೆಗಳು.

ಇನ್ನೆರಡು ದಿಕ್ಕುಗಳಲ್ಲಿ ಪ್ರವೇಶ ದ್ವಾರವನ್ನು ಜೋಡಿಸಲಾಗಿದೆ. ದ್ವಾರವು ಪ್ರಾಗ್ರೀವ ರಚನೆ, ಎರಡು ಕಂಭಗಳುಳ್ಳದ್ದು.

ಪ್ರಾಗ್ರೀವಾದಿ ವಿಧಾನೇನ ದ್ವಿಶಾಲಾನಿ ವಿಪರ್ಯಯಾತ್–ಇದು ಅಪರಾಜಿತಾ ಪೃಚ್ಛಾ ಗ್ರಂಥದ ಒಕ್ಕಣೆ.

ದ್ವಿಶಾಲಾ ಮೇಕಂ ಸಿದ್ಧಾರ್ಥಂ ಪ್ರಶಸ್ತಂ ಪೃತಿವೀಭುಜಜಾಂ – ಇವುಗಳಲ್ಲಿ ಸಿದ್ಧಾರ್ಥ ಪ್ರಬೇಧವು ಪ್ರಶಸ್ತವೆಂದು ಪರಿಗಣಿಸಲಾಗಿದೆ. ಇಂತಹ ರಚನೆಗಳು ಲಭ್ಯವೇ ಎಂದಲ್ಲ ಅಪುರೂಪಕ್ಕೆ ಒಂದು ರಚನೆ ಇದೆ. ಬೇಲೂರಿನ ಕಪ್ಪೆ ಚನ್ನಿಗರಾಯಸ್ವಾಮಿ ದೇವಾಲಯ ದ್ವಿಶಾಲ ರಚನೆ. ದಕ್ಷಿಣ ಹಾಗೂ ಪಶ್ಚಿಮದಲ್ಲಿ ಶಾಲಾ ರಚನೆ ಇದೆ ; ಇವನ್ನು

ಗರ್ಭಗೃಹವಾಗಿ ಮಾರ್ಪಡಿಸಿದ್ದಾರೆ. ಪೂರ್ವ ಹಾಗೂ ಉತ್ತರದಲ್ಲಿ ಪ್ರವೇಶ ದ್ವಾರವಿದೆ. ತಾಂತ್ರಿಕವಾಗಿ ದ್ವಿಶಾಲಾ ರಚನೆ–ಸಿದ್ಧಾರ್ಥವೆಂಬ ಪ್ರಬೇಧವೇ ಆಗಿದೆ.

ಅಮರಗೋಳದ ಬನಶಂಕರಿ ದೇವಾಲಯದಲ್ಲಿ ಪಶ್ಚಿಮ ಹಾಗೂ ಉತ್ತರದಲ್ಲಿ ಶಾಲಾ ರಚನೆ, ಗರ್ಭಗೃಹಗಳಿವೆ. ಪೂರ್ವ ಹಾಗೂ ದಕ್ಷಿಣದಲ್ಲಿ ಪ್ರವೇಶಾವಕಾಶ. ಆದರೆ ಮುಖಮಂಟಪಗಳನ್ನು ಜೋಡಿಸಿದ್ದಾರೆ ! ಇದನ್ನು ಚತುಶ್ಶಾಲದ ಪ್ರಬೇಧವೆಂದೇ ಪರಿಗಣಿಸಬೇಕು. ದ್ವಿಕೂಟ ಎನ್ನಲು ಅಡ್ಡಿ ಇಲ್ಲ. ಮುಖಮಂಟಪವು ಎರಡು ಕಂಭಗಳ ಪ್ರಾಗ್ರೀವ ರಚನೆಯಾದಲ್ಲಿ ದ್ವಿಶಾಲ ರಚನೆಯೆಂದೇ ಪರಿಗಣಿಸಬಹುದು.

ಏಕಶಾಲಾದ ಉಲ್ಲೇಖ ಎಲ್ಲಾ ಗ್ರಂಥಗಳಲ್ಲಿದ್ದರೂ, ವಿವರಗಳನ್ನು ಶಿವತತ್ತ್ವ ರತ್ನಾಕರ ಗ್ರಂಥದಲ್ಲಿ ಕಾಣಬಹುದು. ಈ ಗ್ರಂಥವೂ ಸಂಕಲಿಸಿದ ಗ್ರಂಥವಾದ್ದರಿಂದ ಮೂಲ ಯಾವುದು ಎಂದು ತಿಳಿದಿಲ್ಲ. ಏಕಶಾಲಾ ರಚನೆಯಲ್ಲಿಯೂ ನಾಲ್ಕು ಪ್ರಬೇಧಗಳು.

ಪ್ರಧಾನ ದೇಹಸ್ತಂಭೈಶ್ಚ ಶಾಲಾ ಸ್ತಂಭೈಃ ಸಮೋ ಭವೇತ್
ತಸ್ಯಲಕ್ಷ್ಯ ಪ್ರವಕ್ಷ್ಯಾಮಿ ಶುಭಾಶುಭ ಫಾಲೋದಯಂ
ಉತ್ತರೇ ಶಸ್ಯತೇ ಶಾಲಾ ಶಾಲಾ ಪೂರ್ವ ಪ್ರಶಸ್ಯತೇ
ದಕ್ಷಿಣಾ ಪಶ್ಚಿಮಾ ಶಾಲಾ ದೇವೇ ಶಾಲಾ ಪರಿನಿಂದಿತೇ

ಪ್ರಧಾನ ದೇಹ ಎಂದಲ್ಲಿ ನವರಂಗದ ಮಧ್ಯದ ಚತುಷ್ಕ, ಚತುಷ್ಕದ ಸ್ತಂಭಗಳಂತೆ ಶಾಲಾಸ್ತಂಭಗಳನ್ನು ರಚಿಸಬೇಕು. ಮಧ್ಯೆ ಚತುಷ್ಕ, ಸುತ್ತ ಅಲಿಂದ ಉತ್ತರ ಅಥವಾ ಪೂರ್ವದಲ್ಲಿ ಶಾಲಾ ಅಥವಾ ದ್ವಾರದೊಡನೆ ಶಾಲ. ಇವು ಏಕಶಾಲಾ ರಚನೆಯಲ್ಲಿ ಪ್ರಶಸ್ತವೆನಿಸಿದೆ. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಪಶ್ಚಿಮದಲ್ಲಿ ಶಾಲಾ ರಚನೆಯಿದ್ದು ಇದನ್ನು ಗರ್ಭಗೃಹವಾಗಿ ಮಾರ್ಪಡಿಸಿದ್ದು ಸುಕನಾಸಿ, ನವರಂಗ ; ನವರಂಗದ ಪೂರ್ವದಲ್ಲಿ ಪ್ರವೇಶಾವಕಾಶ. ಇದು ಸಾಮಾನ್ಯವಾಗಿ ಏಕಶಾಲಾ ರಚನೆ ಎಂದೇ ಗುರುತಿಸಲಾಗುತ್ತದೆ. ನವರಂಗವು ಭಿತ್ತಿಯಿಂದ ಆವರಿಸಿದ್ದು ಮೂರು ದಿಕ್ಕಿನಲ್ಲಿಯೂ ಕೆಲವೆಡೆ ಪ್ರವೇಶಾವಕಾಶವುಂಟು. ಒಂದು ರೀತಿಯಲ್ಲಿ ಏಕಕೂಟ ರಚನೆ. ಹರಿಹರದ ಹರಿಹರೇಶ್ವರ ದೇವಾಲಯದ ಆವರಣದಲ್ಲಿ ಅನ್ನಪೂರ್ಣೇಶ್ವರಿ ದೇವಿಯ ಆಲಯವಿದೆ. ಉತ್ತರದಲ್ಲಿ ಗರ್ಭಗೃಹ, ಮುಂಭಾಗದಲ್ಲಿ ನವರಂಗ, ಮೂರೂ ದಿಕ್ಕಿನಿಂದ ಪ್ರವೇಶಾವಕಾಶ. ಇದನ್ನು ಏಕಶಾಲಾ ಅಥವಾ ಏಕಕೂಟ ಎನ್ನಲು ಸಾಧ್ಯ. ಚಾಲುಕ್ಯ ಮತ್ತು ಹೊಯ್ಸಳರ ಕಾಲದ ರಚನೆಗಳು ಶಾಲಾ ರಚನೆಗಳಿಂದ ಆವಿರ್ಭವಿಸಿದ ಪ್ರಯೋಗಗಳೆಂದೇ ತಿಳಿಯಬೇಕು. ಶಾಲಾ ರಚನೆಗಳಿಗೆ ಮುಂಚೆ ಅಲಿಂದದ ಪ್ರಬೇಧಗಳನ್ನು ಗುರುತಿಸಬೇಕಾಗಿತ್ತು. ಆದರೆ ಹಲವು ಗ್ರಂಥಗಳು ಇವನ್ನು ಕಡೆಗಣಿಸಿವೆ. ಈ ಪ್ರಬೇಧಗಳನ್ನು ಅಪರಾಜಿತ ಪೃಚ್ಛಾ, ಮಾನಸೋಲ್ಲಾಸ, ಶಿವತತ್ತ್ವ ರತ್ನಾಕರ, ಸಮರಾಂಗಣ ಸೂತ್ರಧಾರ ಗ್ರಂಥಗಳು ಕೊನೆಯಲ್ಲಿ ಹೇಳಿವೆ.

ಪ್ರದಕ್ಷಿಣೇ ಸದ್ಮಮುಖಾನಲಿಂದಾನ್ ವಿದ್ಯಾಲ್ಲಘುಸ್ಥಾನಸಮಾಶ್ರಿತಾಂಶ್ಚ
ಗೃಹೇತು ಪೂರ್ವಾದಿ ಗತೈರಲಿಂದೈರ್ಭವಂತಿ ಚೈವಂ ದಶಷಬ್ ಚಭೇದಾಃ

ಈ ಹದಿನಾರು ಪ್ರಬೇಧಗಳಿಗೆ ಪ್ರತ್ಯೇಕ ಹೆಸರುಗಳು ; ಶುಭಾಶುಭ ಫಲಗಳನ್ನು ಹೇಳಲಾಗಿದೆ.

ಧ್ರುವಂ ಧಾನ್ಯಂ ಜಯಂ ನಂದಂ ಖರಂ ಕಾಂತಂ ಮನೋರಮಂ
ಸುಮುಖಂ ದುರ್ಮುಖಂ ಕ್ರೂರಂ ಸುಪಕ್ಷಂ ಧನದಂ ಕ್ಷಯಂ
ಆಕ್ರಂದಂವಿಪುಲಂ ಚೈವ ವಿಜಯಂ ಗೃಹ ಮುತ್ತಮಂ
ಅಲಿಂದಭೇದಾಃ ಕಾಥಿತಾ ಧ್ರುವಾದೀನಾಂ ತು ಷೋಡಶ

ಇವು ಹೆಸರಿಗೆ ತಕ್ಕಂತೆ ಶುಭಾಶುಭ ಫಲಗಳು. ಇವು ಕ್ರಮವಾಗಿ, ಅಲಿಂದ ರಹಿತ ಪ್ರಬೇಧ–೧, ಏಕಾಲಿಂದಗಳು–೪, ದ್ವಯಾಲಿಂದ–೬, ತ್ರಯಾಲಿಂದ–೮, ಚತರಾಲಿಂದ–೪, ಒಟ್ಟು–೧೬ ಪ್ರಬೇಧಗಳು.

ಶಾಲಾ ರಚನೆಯಲ್ಲಿ ಮಧ್ಯೆ ಚತುಷ್ಕ/ಪ್ರಧಾನಗೃಹ, ಸುತ್ತ ಅಲಿಂದ, ಪ್ರದಕ್ಷಿಣಾಕಾರದಲ್ಲಿ ಶಾಲಾ ಪ್ರಬೇಧಗಳನ್ನು ವಿವರಿಸಿದಂತೆ ಅಲಿಂದ ರಚನೆಯೂ ಪ್ರದಕ್ಷಿಣಾಕಾರದಲ್ಲಿ ಅಲಿಂದ ರಹಿತ, ಪೂರ್ವಾಲಿಂದ, ದಕ್ಷಿಣಾಲಿಂದ, ಪಶ್ಚಿಮಾಲಿಂದ ಹೀಗೆ ವಿವರಿಸಲಾಗಿದೆ.

ಧ್ರುವಂ ಹೀನಮಾಲಿಂದೇನ ಪೂರ್ವಾಲಿಂದಂ ತು ಧಾ (ಧಾ) ನುಕಂ
ಜಯಂ ಸ್ಯಾದಕ್ಷಿಣಾಲಿಂದಂ ಪಶ್ಚಿಮಾಲಿಂದಂ ವ (ಖ) ರಂ
ದುರ್ಮುಖಂ ಚೋತ್ತರಾಲಿಂದ ಕಾಲಿಂದಂ ಚತುರ್ಗೃಹಂ

ಇದೇ ರೀತಿ ದ್ವಯಾಲಿಂದ, ತ್ರಯಾಲಿಂದಗಳೂ ಹೇಳಲ್ಪಟ್ಟಿವೆ. ಈ ಪ್ರಬೇಧಗಳ ಹೆಸರುಗಳು ಕೆಲವು ಗ್ರಂಥಗಳಲ್ಲಿ ಕೊಂಚ ಭಿನ್ನವಾಗಿವೆ. ಧ್ರುವ ಎಂದಲ್ಲಿ ಕೇವಲ ಚತುಷ್ಕ ಮಾತ್ರ ; ನಾಲ್ಕು ಕಂಭಗಳುಳ್ಳದ್ದು. ಮಹಾಕೂಟದ ಪುಷ್ಕರಿಣಿಯಲ್ಲಿರುವ ಚತುರ್ಮುಖೀ ಲಿಂಗದೊಡನಿರುವ ಮಂಟಪ–ಧ್ರುವ ಪ್ರಬೇಧವೇ ; ಇದು ತಾಂತ್ರಿಕವಾಗಿ ಬಳಸಿದ ಪದ.

ಈ ಮಂಟಪಕ್ಕೆ ಪೂರ್ವ ದಿಕ್ಕಿನಲ್ಲಿ ಮುಖಮಂಟಪ ಜೋಡಿಸಿದಲ್ಲಿ ಪೂರ್ವಾಲಿಂದ–ಧನ್ಯಕ. ಅತಿ ಸರಳ ದೇವಾಲಯಗಳಲ್ಲಿ ಚತುಷ್ಕವೇ ಪ್ರಧಾನ ದೇಹ–ಗರ್ಭಗೃಹ, ಚಿತ್ತರೇಯ ಶಿಖರವುಳ್ಳ ದೇವಾಲಯವೊಂದು ಐಹೊಳೆಯಲ್ಲಿದೆ. ಚತುಷ್ಕವೇ ಗರ್ಭಗೃಹವಾಗಿ ಪೂರ್ವದಲ್ಲಿ ಮುಖಮಂಟಪವಿರುವ ಪೂರ್ವಾಲಿಂದ ರಚನೆಗಳು ಪಟ್ಟದಕಲ್ಲಿನ ಕಾಡಸಿದ್ದೇಶ್ವರ ಜಂಬುಲಿಂಗ, ಮಹಾಕೂಟ ಸಂಗಮೇಶ್ವರ ಇತ್ಯಾದಿಗಳು. ಕೆಳದಿ ಅರಸರ ಕಾಲದಲ್ಲಿ ತೀರ್ಥಹಳ್ಳಿಯ ಸುತ್ತ ಹಲವು ದೇವಾಲಯಗಳು. ಅವುಗಳನ್ನು ಗುರುತಿಸಬೇಕು. ದ್ವಯಾಲಿಂದ, ತ್ರಯಾಲಿಂದ ರಚನೆಗಳಲ್ಲಿ, ಪ್ರಧಾನ ಗೃಹದ ಎರಡು ಬದಿಯಲ್ಲಿ, ಮೂರು ಬದಿಯಲ್ಲಿ ಮುಖಮಂಟಪಗಳು/ಅಲಿಂದಗಳು. ಇವುಗಳನ್ನು ಗುರುತಿಸಬೇಕು ; ಬಗದಿರುವ ಸಾರ್ಥಯತೆಯೂ ಉಂಟು.

ಬೃಹತ್ ಸಂಹಿತೆ, ಮತ್ಸ್ಯಪುರಾಣಗಳ ವಿವರಗಳು ಒಂದೇ ರೀತಿಯವು. ಆ ಕಾಲದಲ್ಲಿ ಗರ್ಭಗೃಹ ಮಧ್ಯದಲ್ಲಿತ್ತು ಎಂದು ಒಪ್ಪಿಕೊಳ್ಳಬೇಕು. ಅದಕ್ಕೆ ತಕ್ಕಂತೆ ವಿವರಗಳಿವೆ. ಅಪರಾಜಿತ ಪೃಚ್ಛಾ ಗ್ರಂಥದಲ್ಲಿ ಹಲವು ಹತ್ತು ಪ್ರಬೇಧಗಳು, ಅರ್ಥೈಸುವುದೇ ಕಷ್ಟ. ಉಣಕಲ್ಲಿನ ಚಂದ್ರಮೌಳೀಶ್ವರ ದೇವಾಲಯ ಶಾಸ್ತ್ರಕ್ಕೊಂದು ಉದಾಹರಣೆಯಾಗಿ ನಿಂತಿದೆ. ಆ ಕಾಲದಲ್ಲಿ ಶಾಲಾ=ದ್ವಾರ ಎನ್ನುವುದು ಒಪ್ಪುವಂಥದ್ದು.

ದೇವಾಲಯ ರಚನೆಯಲ್ಲಿ ಗರ್ಭಗೃಹ ಅಥವಾ ಪ್ರಧಾನ ಗೃಹ ಮಧ್ಯದಿಂದ ಶಾಲಾ ಭಾಗಕ್ಕೆ ಸರಿದಿದ್ದು, ಇದನ್ನು ಗುರುತಿಸುವ ಸಲುವಾಗಿ ಕಳೆದ ಶತಮಾನದಲ್ಲಿ ವಿದ್ವಾಂಸರು ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ, ಪದಗಳನ್ನು ಬಳಸಿದರು. ವಿಕಾಸದ ಹಂತಗಳನ್ನು ಅರ್ಥ ಮಾಡಿಕೊಂಡಲ್ಲಿ ಶಾಸ್ತ್ರ ಗ್ರಂಥಗಳ ಹೇಳಿಕೆಗಳನ್ನು ಅರ್ಥೈಸುವುದು ಸುಲಭ. ಶಾಸ್ತ್ರ ಗ್ರಂಥಗಳಲ್ಲಿ ಗುರುತಿಸಿದ ಎಲ್ಲಾ ಪ್ರಬೇಧಗಳನ್ನು ಕಾಣಲಾಗದು. ಉದಾಹರಣೆಗಳು ದೊರೆತಲ್ಲಿ ಅಧ್ಯಯನ ಮುಂದುವರೆಯಲು ಅವಕಾಶವಾಗುತ್ತದೆ.

ತಲಚ್ಛಂದ ಅನುಸರಿಸಿ ಕೆಲವು ವೃತ್ತ ಪ್ರಭೇದ ದೇವಾಲಯಗಳು

ಜಗದೀಶ*

ದೇವಾಲಯ ತಲಚ್ಛಂದದಲ್ಲಿ ಐದು ಮೂಲ ಪ್ರಭೇದಗಳಿವೆ. ಅವು ಚೌಕ, ಧೀರ್ಘಚೌಕ, ಅಷ್ಟಕೋನಾಕಾರ, ವೃತ್ತ, ಧೀರ್ಘವೃತ್ತ. ದೇವಾಲಯ ವಾಸ್ತು ಗ್ರಂಥಗಳಲ್ಲಿ ಇವುಗಳನ್ನು ಚತುರಸ, ಧೀರ್ಘಚತುರಸ (ಆಯತ), ತ್ರಿವಿಷ್ಟಪ, ವೃತ್ತ, ಧೀರ್ಘವೃತ್ತ (ವ್ರತ್ತಾಯತ) ಎಂದು ಮತ್ತು ಕೆಲವೆಡೆ ಇವುಗಳನ್ನು ಕ್ರಮವಾಗಿ ವೈರಾಜ, ಪುಷ್ಪಕ, ತ್ರಿವಿಷ್ಟಪ, ಕೈಲಾಸ ಮತ್ತು ಮಣಿಕ ಎಂದು ಕರೆಯಲಾಗಿದೆ (ಅಪರಾಜಿತ ಪೃಚ್ಛ ಮತ್ತು ಸಮರಾಂಗಣ ಸೂತ್ರಧಾರ).

ತಲಚ್ಛಂದ ಮತ್ತು ಭೂಮಿಗಳನ್ನು ಅನುಸರಿಸಿ ವೃತ್ತಕ ಪ್ರಭೇದದಲ್ಲಿ ಪದ್ಮ, ಮಹಾಪದ್ಮ, ಕೈಲಾಸ ಮತ್ತು ಮೇರುನಾಯಕ ರಚನೆಗಳಿವೆ. ಕರ್ನಾಟಕದ ಕೆಲವು ದೇವಾಲಯಗಳನ್ನು ವೃತ್ತಕ ಪ್ರಭೇದದಲ್ಲಿ ಗುರ್ತಿಸುವುದು ಈ ಪ್ರಬಂಧದ ಉದ್ದೇಶ

ದ್ರಾವಿಡ ಪ್ರಾಸಾದ ಮಾದರಿಯಲ್ಲಿ ೫ ಭೇದಗಳು ಮತ್ತು ೨೫ ಉಪ ಭೇದಗಳನ್ನು ಹೀಗೆ ಹೇಳಲಾಗಿದೆ.

ಇದಾನಿಂದ್ರಾ ವಿದಾನ್ ವಕ್ಷ್ಯೆ ಪ್ರಾಸಾದಾನ್ ಸರ್ವಕಾಮದಾನ್
ಪೀಠ ಪಂಚಕ ಮಿತ್ಯುಕ್ತಂ ತಲಛ್ಛಂದಾಸ್ತು ಪಂಚಧಾ ॥ ೧ ॥

ಐಂದ್ರೋದ್ಭವೋ ರಾಜಹಂಸೋ ನಂದನಃ ಸಿಂಹಪಂಜರಃ
ತ್ರ್ಯಂಗಾಶ್ಛತ್ವಾರ ಏವೋಕ್ತಾ ದ್ರಾವಿಡಾ ಏಕ ಭೂಮಿಕಾಃ ॥ ೨ ॥

ಗರುಡೋವರ್ಧಮಾನಶ್ಛ ಶ್ರೀತರುಃ ಪ್ರಮದಾ ಪ್ರಿಯಃ
ನಂದಿಘೋಷಃ ಸಮಾಖ್ಯಾತಃ ಪಂಛಾಂಗಾಶ್ಛತ್ರಿ ಭೂಮಿಕಾಃ ॥ ೩ ॥

ಸ್ವಸ್ತಿಕಃ ಶಂಕುಕರ್ಣಾಭ್ಯೋ ಗೋವಿಂದೋ ನಿಂದಿವರ್ಧನಃ
ಪೃಥ್ವೀಜಯಃ ಪತಾಕಶ್ಛ ಸಪ್ತಾಂಗಾಃ ಪಂಛ ಭೂಮಿಕಾಃ ॥ ೪ ॥

ಸರ್ವಾಂಗಃ ಸರ್ವತೋಭದ್ರಃ ಸರ್ವಸುಂದರ ಸಂಭ್ರಮೌ
ಜನಾನಂದಃ ಕ್ಷಿತಿಧರೌ ನವಾಂಗಾಃ ಸಪ್ತ ಭೂಮಿಕಾ ॥ ೫ ॥

ಪದ್ಮಸೂತ್ರೋ ಮಹಾಪದ್ಮಃ ಕೈಲಾಸೋ ಮೇರುನಾಯಕಃ
ಛತ್ವಾರೋ ವೃತ್ತಕಾ ಉಕ್ತಾ ದ್ರಾವಿಡಾಃ ಪಂಛಚಿಂಶತಿಃ ॥ ೬ ॥

ಭದ್ರ ಭಾಗದಲ್ಲಿನ ಭದ್ರ ಮತ್ತು ಉಪಭದ್ರಗಳ ಅನ್ವಯ ತ್ರಯಾಂಗ, ಪಂಚಾಂಗ, ಸಪ್ತಾಂಗ ಹಾಗೂ ನವಾಂಗ ಇವು ನಾಲ್ಕು ಪ್ರಭೇದಗಳು ಮತ್ತು ಐದನೆಯದು ವೃತ್ತ ಪ್ರಭೇದ.

ತ್ರಯಾಂಗ ಒಂದು ಅಂತಸ್ತು ಹೊಂದಿದೆ, ಇದರಲ್ಲಿ ನಾಲ್ಕು ಉಪ ಬೇದಗಳು (೧) ಐಂಧ್ರೋದ್ಭವ, (೨) ರಾಜಹಂಸ, (೩) ನಂದಮು, (೪) ಸಿಂಹಪಂಜರ.

ಪಂಚಾಂಗ ಮೂರು ಅಂತಸ್ತು ಹೊಂದಿದೆ, ಇದರಲ್ಲಿ ಐದು ಉಪ ಬೇದಗಳು (೧) ಗರುಡ, (೨) ವರ್ಧಮಾನ, (೩) ಶ್ರೀತರುವು, (೪) ಪ್ರಮದಾಪ್ರಿಯ, (೫) ನಂದಿಘೋಷ

ಸಪ್ತಾಂಗ ಐದು ಅಂತಸ್ತು ಹೊಂದಿದ, ಇದರಲ್ಲಿ ಆರು ಉಪ ಬೇದಗಳು (೧) ಸ್ವಸ್ತಿಕ, (೨) ಶಂಕುಕರ್ಣ, (೩) ಗೋವಿಂದ, (೪) ನಂದಿವರ್ಧನ, (೫) ಪೃಥ್ವೀಜಯ, (೬) ಪತಾಕ

ನವಾಂಗ ಏಳು ಅಂತಸ್ತು ಹೊಂದಿದೆ. ಇದರಲ್ಲಿ ಆರು ಉಪ ಬೇದಗಳು (೧) ಸರ್ವಾಂಗ, (೨) ಸರ್ವತೋಭದ್ರ, (೩) ಸರ್ವಸುಂದರ, (೪) ಸಂಭ್ರಮು, (೫) ಜನಾನಂದ, (೬) ಕ್ಷಿತಿಧರ

* # ೬೬, ಮೊದಲ ಅಡ್ಡರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ-೫೭೭೨೦೧.

ಪ್ರಾತಿನಿಧಿಕ ಅಳತೆಯ ಅಗಲ, ಉದ್ದ ಮತ್ತು ಎತ್ತರ ಹೀಗಿದೆ ತ್ರಯಾಂಗ ೪ x ೪ x ೫, ಪಂಚಾಂಗ ೬ x ೬ x ೩೦, ಸಪ್ತಾಂಗ ೮ x ೮ x ೧೨೦ ಹಾಗೂ ನವಾಂಗ ೧೦ x ೧೦ x ೧೫೦



ತ್ರಯಾಂಗ **ಪಂಚಾಂಗ** **ಸಪ್ತಾಂಗ** **ನವಾಂಗ**


ದ್ರಾವಿಡ ಪ್ರಾಸಾದ ಮಾದರಿಯಲ್ಲಿ ವೃತ್ತ ಪ್ರಭೇದ ವಿವರಣೆಯಲ್ಲಿ ನಾಲ್ಕು ಉಪ ಭೇದಗಳಿವೆ.

ಅಷ್ಟಕೋಣಾಃ ಪಂಥಭೂಮಾ ಪದ್ಮನಾಮಾಚ ಕಾಮದಃ
ಪಂಥಭೂಮಾ ದ್ವ್ಯಷ್ಟದಲಾ ಮಹಾಪದ್ಮ ಇತಿ ಸ್ಮೃತಃ ॥ ೩೧ ॥

ಎಂಟು ಕೋಣಗಳನ್ನು (ಮೂಲೆಗಳನ್ನು) ಹೊಂದಿ ಗುಂಡಾಗಿ ತೋರುವ ಐದು ಅಂತಸ್ತು (ಭೂಮಿ/ತಲ) ಇರುವುದು ಪದ್ಮ ಪ್ರಾಸಾದ. ೧೬ ಕೋಣಗಳನ್ನು ಹೊಂದಿ ಐದು ಅಂತಸ್ತು ಇರುವುದು ಮಹಾಪದ್ಮ ಪ್ರಾಸಾದ.

ಚತುರ್ವಿಂಶತಿ ಭಿರ್‌ರ್ವೃತ್ತಃ ಕೈಲಾಸ ಸಪ್ತಭೂಮಿಕಃ
ದ್ವಾತ್ರಂಶದ್ಭಿದಲೈರ್ವೃತ್ತಃ ಸಭವೇನ್ಮೇರು ನಾಯಕಃ ॥ ೩೨ ॥ (ಅ.ಪೃ ೧೭೪ ಸೂತ್ರ)

೨೪ ಕೋಣಗಳನ್ನು ಹೊಂದಿ ೭ ಅಂತಸ್ತು ಇರುವುದು ಕೈಲಾಸ ಪ್ರಾಸಾದ. ೩೨ ಕೋಣಗಳನ್ನು ಹೊಂದಿ ಏಳು ಅಂತಸ್ತು ಇರುವುದು ಮೇರುನಾಯಕ ಪ್ರಾಸಾದ.



ಪದ್ಮ **ಮಹಾಪದ್ಮ** **ಕೈಲಾಸ** **ಮೇರುನಾಯಕ**

ಕರ್ನಾಟಕದಲ್ಲಿನ ಕೆಲವು ದೇವಾಲಯಗಳನ್ನು ಗಮನಿಸೋಣ. ಡಂಬಳದ ದೊಡ್ಡಬಸಪ್ಪ ದೇವಾಲಯದ ಗರ್ಭಗೃದ ತಲಚ್ಛಂದವು ೨೪ ಮೂಲೆಗಳನ್ನು ಹೊಂದಿ ಏಳು ತಲಗಳನ್ನು (ಅಂತಸ್ತು/ಭೂಮಿಗಳನ್ನು) ಹೊಂದಿದೆ. ಮೇಲಿನ ವರ್ಗೀಕರಣದಂತೆ ಇದು ದ್ರಾವಿಡ ಮಾದರಿಯ ವೃತ್ತ ಪ್ರಭೇದದಲ್ಲಿ ಕೈಲಾಸ ಉಪ ಪ್ರಭೇದ.


ದೇವಾಲಯಗಳ ಅಂತಸ್ತುಗಳು ೧, ೩, ೫, ೭, ೯ ಹೀಗೆ ಇರುವುದು ವಾಡಿಕೆ. ಆದರೆ ಕೆಲವು ಹೊಯ್ಸಳ ಕಾಲದ ದೇವಾಲಯಗಳಲ್ಲಿ ಅಂತಸ್ತುಗಳು ೨, ೪, ೬, ೮ ಇರುವುದನ್ನು ಢಾಕೆಯವರು ಗಮನಿಸಿರುತ್ತಾರೆ. ಸೋಮನಾಥಪುರದ ಕೇಶವ ದೇವಾಲಯ, ನಾಗಲಾಪುರದ ಕೇದಾರೇಶ್ವರ ದೇವಾಲಯ, ಚನ್ನಕೇಶವ ದೇವಾಲಯ, ಅರಳಗುಪ್ಪೆ ಕಲ್ಲೇಶ್ವರ ದೇವಾಲಯ, ಆನೆ ಕನ್ನಂಬಾಡಿಯ ಕೇಶವ ದೇವಾಲಯ, ಹಳೇಬೀಡಿನ ಕೇದಾರೇಶ್ವರ ದೇವಾಲಯ ಇವುಗಳೆಲ್ಲದರ ಗರ್ಭಗೃದ ತಲಚ್ಛಂದವು ೧೬ ಮೂಲೆಗಳನ್ನು ಹೊಂದಿ ನಾಲ್ಕು ತಲಗಳನ್ನು (ಅಂತಸ್ತು/ಭೂಮಿಗಳನ್ನು) ಹೊಂದಿದೆ. ಮೇಲಿನ ವರ್ಗೀಕರಣದಂತೆ ಇದು ದ್ರಾವಿಡ ಮಾದರಿಯ ವೃತ್ತ ಪ್ರಭೇದದಲ್ಲಿ ಮಹಾಪದ್ಮ ಉಪ ಪ್ರಭೇದ.



ಸೋಮನಾಥಪುರದ ಕೇಶವ ದೇವಾಲಯ ಭಿತ್ತಿ ವೃತ್ತ ಪ್ರಭೇದ
ಪದ್ಮ ಉಪಪ್ರಭೇದ



ಸೋಮನಾಥಪುರದ ಕೇಶವ ದೇವಾಲಯ ಗರ್ಭಗೃಹ ವೃತ್ತ ಪ್ರಭೇದ
ಮಹಾಪದ್ಮ ಉಪಪ್ರಭೇದ



ಆನೆಕನ್ನಂಬಾಡಿ ಕೇಶವ ದೇವಾಲಯ ಗರ್ಭಗೃಹ ವೃತ್ತ ಪ್ರಭೇದ
ಮಹಾಪದ್ಮ ಉಪಪ್ರಭೇದ



ಡಂಬಳದ ದೊಡ್ಡಬಸಪ್ಪ ದೇವಾಲಯ ಗರ್ಭಗೃಹ ವೃತ್ತ ಪ್ರಭೇದ
ಕೈಲಾಸ ಉಪಪ್ರಭೇದ

ಸೋಮನಾಥಪುರದ ಕೇಶವ ದೇವಾಲಯ ಭಿತ್ತಿಯ ಮೇಲೆ ಎಂಟು ಮೂಲೆಗಳನ್ನು ಮತ್ತು ಮೂರು ತಲಗಳನ್ನು (ಅಂತಸ್ತು/ಭೂಮಿಗಳನ್ನು) ಹೊಂದಿರುವ ದೇವಾಲಯ ಮಾದರಿ ಇದೆ. ಮೇಲಿನ ವರ್ಗೀಕರಣದಂತೆ ಇದು ದ್ರಾವಿಡ ಮಾದರಿಯ ವೃತ್ತ ಪ್ರಭೇದದಲ್ಲಿ ಪದ್ಮ ಉಪ ಪ್ರಭೇದ.

ಔತ್ತರೇಯ ದ್ರಾವಿಡ ವರ್ಗೀಕರಣ ವಿವರಣೆ ಅನುಸರಿಸಿ ಕರ್ನಾಟಕದಲ್ಲಿನ ಕೆಲವು ದೇವಾಲಯಗಳ ತಲಚ್ಛಂದ ಮತ್ತು ತಲಗಳನ್ನು (ಅಂತಸ್ತು/ ಭೂಮಿ) ಪದ್ಮ, ಮಹಾಪದ್ಮ ಮತ್ತು ಕೈಲಾಸ ಎಂದು ಗುರ್ತಿಸಬಹುದು ಮತ್ತು ಮೇರುನಾಯಕ ಮಾದರಿ ಇನ್ನೂ ಕಂಡಿಲ್ಲ ಎನ್ನಬಹುದು.

೭೩

ಹೊಯ್ಸಳ ವಾಸ್ತುಶೈಲಿ: ಸ್ಥಳೀಕರಣಗೊಂಡ ಭೂಮಿಜ ಮಾದರಿ

ಎಸ್.ಎನ್. ಶಿವರುದ್ರಸ್ವಾಮಿ*

ಪೀಠಿಕೆ

ಹೊಯ್ಸಳ ದೇವಾಲಯಗಳ ವಾಸ್ತು ಶೈಲಿಯನ್ನು ವೇಸರ ಮಾದರಿ ಎಂದು ಕರೆಯಲಾಗಿದೆ. ವೇಸರ ಮಾದರಿಯನ್ನು ಸಾಮಾನ್ಯವಾಗಿ ನಾಗರ ಮತ್ತು ದ್ರಾವಿಡ ವಾಸ್ತು ಮಾದರಿಗಳ ಸಂಮಿಶ್ರಣವೆಂದು ವ್ಯಾಖ್ಯಾನಿಸಲಾಗಿದೆ. ಔತ್ತರೇಯ ವಾಸ್ತು ಕೃತಿಗಳಾದ 'ಲಕ್ಷಣ ಸಮುಚ್ಚಯ' ಮತ್ತು 'ಅಪರಾಜಿತ ಪೃಚ್ಛ' ವೇಸರ ಮಾದರಿಯ ಬಗ್ಗೆ ಏನನ್ನು ತಿಳಿಸುವುದಿಲ್ಲ[೧]. ಆದರೆ ದಾಕ್ಷಿಣಾತ್ಯ ವಾಸ್ತು ಗ್ರಂಥಗಳು ಮಾತ್ರ ವೇಸರ ಮಾದರಿಯ ಬಗ್ಗೆ ತಿಳಿಸುತ್ತವೆ. ಬಹಳಷ್ಟು ಹೊಯ್ಸಳ ದೇವಾಲಯಗಳಲ್ಲಿ ನಾಗರ ಅಥವಾ ದ್ರಾವಿಡ ವಾಸ್ತು ಮಾದರಿಗಳ ಲಕ್ಷಣಗಳನ್ನು ಕಾಣಲಾಗುವುದಿಲ್ಲ. ಅವುಗಳು 'ಭೂಮಿಜ' ವಾಸ್ತು ಮಾದರಿಗಳ ಲಕ್ಷಣಗಳಿಗೆ ಹತ್ತಿರವಾಗಿದೆ. ಅಥವಾ ಹೋಲುತ್ತದೆ. ಭೂಮಿಜ ಮಾದರಿಯು ಮಾಳವ ಪ್ರಾಂತದಲ್ಲಿ ವಿಕಾಸವಾಗಿ ಸುತ್ತಮುತ್ತಲಿನ ಪ್ರದೇಶಗಳಿಗೆ ಪ್ರಸಾರವಾಯಿತು.

ಭೂಮಿಜ ಮಾದರಿಯ ವೈಲಕ್ಷಣ್ಯಗಳು

ನಾಗರ ಮತ್ತು ದ್ರಾವಿಡ ಮಾದರಿಗಳಂತ 'ಭೂಮಿ' ಸಹ ಹಿಂದೂ ದೇವಾಲಯಗಳ ವಾಸ್ತು ಮದರಿಯಾಗಿದೆ. ಇದರ ವೈಲಕ್ಷಣಗಳನ್ನು ವಾಸ್ತು ಗ್ರಂಥಗಳಾದ 'ಅಪರಾಜಿತ ಪೃಚ್ಛ' ಮತ್ತು 'ಸಮರಾಂಗಣ ಸೂತ್ರ' ಮುಂತಾದವು ವಿವರಿಸುತ್ತವೆ. ಭೂಮಿಜ ಶಿಖರವು ಹಲವು ಅಂತಸ್ತುಗಳನ್ನು ಹೊಂದಿದ್ದು, ಪ್ರತಿಯೊಂದು ಅಂತಸ್ತುವಿನಲ್ಲಿ ಕೂಟ ಅಥವಾ ಶೃಂಗಗಳನ್ನು ಓರಣವಾಗಿ ಜೋಡಿಸಲಾಗಿರುತ್ತದೆ. ಪ್ರತಿಯೊಂದು ಅಂತಸ್ತನ್ನು 'ಭೂಮಿ' ಎಂದು ಕರೆಯುತ್ತಾರೆ. ಶಿಖರದ ಮೂರು ಪ್ರಮುಖ ದಿಕ್ಕುಗಳ ಮಧ್ಯಭಾಗದಲ್ಲಿ ಸಪೂರವಾದ ಅಥವಾ ಮೇಲೇರಿದಂತೆ ಕಿರಿದಾದ ಪಟ್ಟಿ ಇರುತ್ತದೆ. ಇದನ್ನು 'ಮಾಲಾ' ಅಥವಾ 'ಮಂಜರೀ' ಎಂದು ಹೆಸರಿಸಿದ್ದಾರೆ. ಮಾಲಾದ ಹೊರಮೈಮೇಲೆ ಕೆಳಭಾಗದಲ್ಲಿ ಚೈತ್ಯಕಿಟಕಿಯ ಅಲಂಕರಣೆ ಇರುತ್ತದೆ. ಇದನ್ನು 'ಶೂರಸೇನಕಾ' ಎಂದು ಕರೆಯಲಾಗಿದೆ. ಶಿಖರದ ಮೇಲ್ಭಾಗದಲ್ಲಿ ದೊಡ್ಡದಾದ ವೃತ್ತಾಕಾರದ ಆಮಲಕವನ್ನು ಇಟ್ಟಿರುತ್ತಾರೆ.

ಎರಡು ಮಾಲಾಗಳ ನಡುವಿನ ಚತುರ್ಥ (Quadrant) ಭಾಗದಲ್ಲಿ ಉರುಶೃಂಗ ಅಥವಾ ಶೃಂಗಗಳನ್ನು ೩ ರಿಂದ ೫ ಸಾಲುಗಳಲ್ಲಿ ಊರ್ಧ್ವರೇಖೆಯಲ್ಲಿ (Vertically) ಮತ್ತು ೫ ರಿಂದ ೯ ಸಾಲುಗಳಲ್ಲಿ ಸಮನಾಂತರವಾಗಿ (Horizontally) ಜೋಡಿಸಿರುತ್ತಾರೆ. ಪ್ರತಿ ಅಂತಸ್ತನ್ನು ಅಥವಾ ಭೂಮಿಯನ್ನು ಕೂಟಸ್ತಂಭಗಳಿಂದ ಅಲಂಕರಿಸಿರುತ್ತಾರೆ. ಇವುಗಳು ಲತಿನ ಅಥವಾ ಕೂಟಶಿಖರಗಳಾಗಿ ಅರೆಗಂಬಗಳ ಮೇಲೆ ಇರುತ್ತವೆ. ಶಿಖರದ ಕುಡಿಯಲ್ಲಿ (ಆಮಲಕದ ಮೇಲೆ) ಘಂಟಾ, ಗ್ರೀವ, ಆಮಲಸಾರಕ ಮತ್ತು ಕಲಶ ಇರುತ್ತವೆ. ಶಿಖರದ ಮೇಲೆ ಊರ್ಧ್ವ ರೇಖೆಯಲ್ಲಿರುವ ಕೂಟಸ್ತಂಭ/ಊರುಶೃಂಗಗಳನ್ನು 'ಅಂಗ'ಗಳೆಂದು ಹೆಸರಿಸಿದೆ. ಇವುಗಳು ಬೆಸಸಂಖ್ಯೆಯಲ್ಲಿದ್ದು ತ್ರಯಾಂಗ, ಪಂಚಾಂಗ, ಸಪ್ತಾಂಗ, ಅಥವಾ ಅಂತಸ್ತುಗಳು ತ್ರಿಭೂಮಿ, ಚತುರ್ಭೂಮಿ ಇತ್ಯಾದಿ ಎಂದೆನಿಸಿವೆ[೨].

ಶಿಖರದ ಮುಂಭಾಗದಲ್ಲಿ ಶೂರಸೇನರಕ್ಕೆ ಸಂವಾದಿಯಾಗಿ, 'ಸುಕನಾಸ' ವಿರುತ್ತದೆ. ಇದು ನಿಯಮದಂತೆ ದೊಡ್ಡದಾಗಿ ವಿಸ್ತೃತವಾಗಿ ಅಲಂಕೃತವಾಗಿರುತ್ತದೆ. ಭೂಮಿಜ ಆಲಯಗಳು ಸಾಮಾನ್ಯವಾಗಿ ಸಿರಂಧಾರ ವಾಸ್ತು ಕಟ್ಟಡಗಳಾಗಿರುತ್ತದೆ. ಇದು ಒಂದು ರೀತಿಯಲ್ಲಿ ನಿಯಮವೂ ಆಗಿರುವುದುಂಟು. ಈ ದೇವಾಲಯವು ಗರ್ಭಗೃಹ ಕಪಿಲೀ (ಅಂತರಾಳ ಅಥವಾ ಸುಕನಾಸಿ) ಮತ್ತು ಮಂಟಪವನ್ನು ಒಳಗೊಂಡಿರುತ್ತದೆ. ತಲವಿನ್ಯಾಸದ ಆಧಾರದ ಮೇಲೆ ಭೂಮಿಜ ಆಲಯಗಳನ್ನು ಚತುರ್ಶ್ರ (ಚಾತಾಕಾರ), ವೃತ್ತ ಅಷ್ಟಾಶ್ರ ಎಂದು ವಿಭಜಿಸಲಾಗುತ್ತದೆ[೩].

* # ೮೩, ಆನಂದನಗರ ಲೇಔಟ್, ಆರ್.ಕೆ. ನಗರ, ಮೈಸೂರು–೫೭೦೦೨೨. ಮೊ. ೯೯೮೦೫೩೦೮೧೪

ಭೂಮಿಜ ವಾಸ್ತು ಮಾದರಿಯ ಪ್ರಸಾರ

ಭೂಮಿಜ ಆಲಯಗಳನ್ನು ಮೊದಲು ಅವಲೋಕಿಸಿದವರು ಸುಪ್ರಸಿದ್ಧ ಕಲಾ ಇತಿಹಾಸಕಾರರಾದ ಶ್ರೀಮತಿ ಸ್ಟೆಲ್ಲ ಕ್ರಾಮ್ರಿಷ್[೪]. ಇದರ ಬಗ್ಗೆ ಮಹತ್ವಪೂರ್ಣವಾದ ಸಂಪ್ರಂಥವನ್ನು ರಚಿಸಿ, ಪರಿಚಯಿಸಿದವರು ಕೃಷ್ಣದೇವರು[೫]. ಮೇಲೆ ತಿಳಿಸಿದಂತೆ ಭೂಮಿಜ ವಾಸ್ತುಮಾದರಿ ಮಾಳವದಲ್ಲಿ ಉದಯವಾಯಿತು. ಅತ್ಯಂತ ಆರಂಭದ ಭೂಮಿಜ ಆಲಯವನ್ನು ಓಂಕಾರ ಮಂಧಾತದಲ್ಲಿ ಕಾಣಬಹುದು. ಇದರ ಕಾಲ ಸುಮಾರು ಕ್ರಿ.ಶ. ೯೫೦. ಇದರ ಪ್ರಸಾರ ಕ್ಷಿಪ್ರವಾಗಿ ಮತ್ತು ವ್ಯಾಪಕವಾಗಿ ನಡೆಯಿತು[೬]. ಇದು ಕೇವಲ ಒಂದು ನೂರು ವರ್ಷದ ಒಳಗೆ ಪಶ್ಚಿಮದಲ್ಲಿ ಗುಜರಾತ್‌ನವರೆಗೆ, ದಕ್ಷಿಣದಲ್ಲಿ ಮಹಾರಾಷ್ಟ್ರ ಪೂರ್ವದಲ್ಲಿ ಮಹಾಕೋಸಲ ಮತ್ತು ಉತ್ತರದಲ್ಲಿ ರಾಜಸ್ಥಾನದವರೆಗೆ ಹೆಚ್ಚಿತು. ಈ ದೇವಾಲಯಗಳು ಅತ್ಯಧಿಕ ಸಂಖ್ಯೆಯಲ್ಲಿ ಮಾಳವದಲ್ಲಿ ದಟ್ಟಣಿಸಿವೆ. ಇಲ್ಲಿನ ಆರಂಭದ ಕಾಲದ ಮತ್ತೊಂದು ಪ್ರಮುಖ ದೇವಾಲಯ ಉದಯಪುರದ ಉದಯೇಶ್ವರ ದೇಗುಲ (ಛಾಯಾಚಿತ್ರ ೧) ಮಹಾರಾಷ್ಟ್ರದಲ್ಲೂ ಈ ಮಾದರಿಯ ಆಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡಿವೆ. ಇಲ್ಲಿನ ಪ್ರಾಚೀನವಾದ ಭೂಮಿಜ ದೇವಾಲಯ ಅಂಬರನಾಥದ್ದು. ಈ ಮಾದರಿಯು ನಿರ್ಮಾಣ ಹನ್ನೊಂದನೇ ಶತಮಾನದ ಮಧ್ಯದಿಂದ ಹದಿನಾರನೇ ಶತಮಾನದವರೆಗೂ ಮುಂದುವರೆಯಿತು.

ಮಹಾರಾಷ್ಟ್ರದ ಅತ್ಯಂತ ಸುಂದರವಾದ ಭೂಮಿಜ ಆಲಯವನ್ನು ಸಿನ್ನಾರನಲ್ಲಿ ಕಾಣಬಹುದು. ಇದೇ ಅಲ್ಲಿನ ಗಂಡೇಶ್ವರ ದೇವಾಲಯ (ಛಾಯಾಚಿತ್ರ ೨, ೩) ಈ ದೃಷ್ಟಿಯಿಂದ ಮಹಾರಾಷ್ಟ್ರವನ್ನು ಭೂಮಿಜ ಮಾದರಿಯ ಎರಡನೆಯ ಕೇಂದ್ರ ಅಥವಾ ಪ್ರದೇಶವೆಂದು ಕರೆಯಬಹುದು. ಅನಂತರ ಅತ್ಯಂತ ಕಡಿಮೆ ಅವಧಿಯಲ್ಲಿ ಭೂಮಿಜ ಆಲಯಗಳು ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ನಿರ್ಮಾಣವಾದವು. ಅಂದಿನಿಂದ ಈ ಮಾದರಿಯು ಆಲಯದ ಜನಪ್ರಿಯ ಆರಾಧನಾ ಕಟ್ಟಡವಾಗಿ ಪರಿಣಮಿಸಿತು.

ಸಾಹಿತ್ಯದ ಮತ್ತು ಶಾಸನ ಆಕರಗಳು ಭೂಮಿಜ ಮಾದರಿಯ ಬಗ್ಗೆ ಮಾಹಿತಿಯನ್ನು ನೀಡುತ್ತವೆ ವಿಶ್ವಕರ್ಮನ ಆಪರಾಜಿತ ಪೃಚ್ಛ ಮತ್ತು ಭೋಜನ ಸಮರಾಂಗಣ ಸೂತ್ರಧಾರದ ೬೫ನೇ ಸಂಧಿ ಭೂಮಿಜ ಮಾದರಿಯ ವೈಲಕ್ಷಣ್ಯಗಳನ್ನು ವಿವರಿಸುತ್ತವೆ. ಶಾಸನಗಳು ವಾಸ್ತು ಮಾದರಿಗಳ ಬಗ್ಗೆ ಮಾಹಿತಿಯನ್ನು ವಿವರಿಸುತ್ತವೆ. ಶಾಸನಗಳು ವಾಸ್ತು ಮಾದರಿಗಳ ಮಾಹಿತಿಯನ್ನು ಒದಗಿಸುತ್ತವೆ. ಈ ತೆರನಾದ ಶಾಸನಗಳು ದೊರೆಯುವುದು ಕರ್ನಾಟಕ ಒಂದರಲ್ಲೇ. ಭೂಮಿಜ ಮಾದರಿ ಹುಟ್ಟಿಕೊಂಡ ಮಾಳವದಲ್ಲಾಗಲಿ, ಅದರ ಎರಡನೆಯ ಕೇಂದ್ರ ಎನಿಸಿದ ಮಹಾರಾಷ್ಟ್ರದಲ್ಲಾಗಲಿ ಅಥವಾ ಭಾರತದ ಇನ್ನು ಯಾವುದೇ ಭಾಗದಲ್ಲಿ ಆಗಲಿ ಶಾಸನಗಳು ವಾಸ್ತು ಮಾದರಿಗಳನ್ನು ಉಲ್ಲೇಖಿಸುವುದಿಲ್ಲ. ಆ ತೆರನಾದ ಉಲ್ಲೇಖಗಳನ್ನು ಕಾಣುವುದು ಕನ್ನಡ ಶಾಸನಗಳಲ್ಲಿ ಮಾತ್ರ. ದೇವಾಲಯಗಳ ವಿವಿಧ ಮಾದರಿಗಳನ್ನು ಹೆಸರಿಸುವ ಪ್ರಾಚೀನ ಶಾಸನ ದೊರೆಯುವುದು ಹಾಸನ ಜಿಲ್ಲೆಯ ದೊಡ್ಡಗದ್ದವಳ್ಳಿಯ ಲಕ್ಷ್ಮೀ ದೇವಿ ದೇವಾಲಯದಲ್ಲಿ[೭] ಈ ಶಾಸನದ ಕರ್ತೃ ವಾಸ್ತು ಮಾದರಿ ಮತ್ತು ಶೈಲಿಗಳನ್ನು ಮಿಶ್ರಮಾಡಿದ್ದಾನೆ. ಅಗ್ನಿಪುರಾಣವು[೮] ದೇವಾಲಯಗಳ ಆಕಾರ ಅಥವಾ ತಲವಿನ್ಯಾಸದ ಆಧಾರದ ಮೇಲೆ ಅವುಗಳನ್ನು ಈ ಕೆಳಕಂಡಂತೆ ವರ್ಗೀಕರಿಸುತ್ತದೆ;

೧. ವೈರಾಜ (ಚತುರ್ಸ್ರ)

೨. ಪುಷ್ಪಕ (ಆಯತಾಕಾರ)

೩. ಕೈಲಾಸ (ವೃತ್ತ)

ಸಮರಾಂಗಣ ಸೂತ್ರಧಾರವು ನಾಗರ ಮಾದರಿಯನ್ನು ಐದು ಬಗೆಗಳಾಗಿ ವಿಭಾಗಿಸುತ್ತದೆ. ವೈರಾಜ, ಕೈಲಾಸ, ಪುಷ್ಪಕ, ಮಣಿತ ಮತ್ತು ತ್ರಿವಿಷ್ಟಪ. ಮೇಲೆ ತಿಳಿಸಿರುವ ಶಾಸನವು ಕೇವಲ ಎರಡುಬಗೆಗಳನ್ನು ಹೆಸರಿಸುತ್ತದೆ. ವೈರಾಜ ಮತ್ತು ಪುಷ್ಪಕ ದೊಡ್ಡಗದ್ದವಳ್ಳಿ ಲಕ್ಷ್ಮೀ ದೇವಾಲಯದ ವಾಸ್ತುಕಾರನಿಗೆ ಉತ್ತರ ಭಾರತದ ವಾಸ್ತುಕಾರನಿಗೆ ಉತ್ತರ ಭಾರತದ ವಾಸ್ತು ಪರಂಪರೆ ಮತ್ತು ವಾಸ್ತು ಗ್ರಂಥಗಳ ಪರಿಚಯ ಸಾಕಷ್ಟಿತ್ತು. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಹೊಳಲು ಗ್ರಾಮದ ಶಾಸನ ಹನ್ನೆರಡನೆಯ ಶತಮಾನದ್ದು[೯]. ಇದು ವಾಸ್ತು ಕಾರನ ಬಗ್ಗೆ ಕುತೂಹಲಕರವಾದ ಮಾಹಿತಿಯನ್ನು ಕೊಡುತ್ತದೆ. ಇದು ಪದೋಜನ ಶಿಷ್ಯನಾದ ಬಮ್ಮೋಜ ಎಂಬ ಸೂತ್ರಧಾರಿಯು (ವಾಸ್ತುಕಾರನು) ಕಟ್ಟಡಗಳ ನಿರ್ಮಾಣದಲ್ಲಿ ನಿಷ್ಣಾತನಾಗಿದ್ದ ಹಾಗೂ ನಾಗರ, ಕಲಿಂಗ, ದ್ರಾವಿಡ ಮತ್ತು ವೇಸರ ಎಂಬ ನಾಲ್ಕು ಜಾತಿಯ ಕಟ್ಟಡಗಳನ್ನು ನಿರ್ಮಿಸಬಲ್ಲವನಾಗಿದ್ದ ಎಂದು ತಿಳಿಸುತ್ತದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಕುಪಟೂರಿನ ಕೋಟೀಶ್ವರ

ದೇವಾಲಯವನ್ನು ದ್ರಾವಿಡ, ಭೂಮಿಜ ಮತ್ತು ನಗರ ಮಾದರಿಗಳಿಂದ ಅಲಂಕರಿಸಿದ್ದಾನೆ. ಎಂದು ತಿಳಿಸುತ್ತದೆ. ಇದರಿಂದ ಮೇಲೆ ತಿಳಿಸಿರುವ ಎಲ್ಲ ವಾಸ್ತುಗಳ ಮಾದರಿಗಳ ನಿರ್ಮಾಣ ಕರ್ನಾಟಕದಲ್ಲಿ ನಡೆಯುತ್ತಿತ್ತು ಎಂದು ಸ್ಪಷ್ಟವಾಗುತ್ತದೆ.

ಕರ್ನಾಟಕ ಮತ್ತು ಆಂಧ್ರಗಳಲ್ಲಿ ಭೂಮಿಜದ ಪ್ರಸಾರ

ಮಾಳವ ಪ್ರದೇಶದ ಓಂಕಾರ ಮಂಧಾತ ದೇವಾಲಯದಲ್ಲಿ (ಕ್ರಿ.ಶ.೯೫೦) ಭೂಮಿಜ ಮಾದರಿ ಪಡಿಮೂಡಿದ್ದನ್ನು ಗಮನಿಸಿದ್ದೇವೆ. ಮುಂದೆ ೫೦ ವರ್ಷಗಳಲ್ಲಿ ರಾಜಸ್ಥಾನದದ ಸೇವಾರಿ ಮಹಾವೀರ ದೇವಾಲಯವು ಇದೇ ಮಾದರಿಯಲ್ಲಿ ನಿರ್ಮಾಣವಾಯಿತು (ಕ್ರಿ.ಶ.೧೦೧೦–೨೦) ಪೂರ್ಣವಾಗಿ ವಿಕಸಿತವಾದ ಹಾಗೂ ಪಲ್ಲವಿಸಿದ ಭೂಮಿಜ ದೇವಾಲಯವನ್ನು ಮಧ್ಯಪ್ರದೇಶದ ಉದಯಪುರದ ಉದಯೇಶ್ವರ ದೇವಾಲಯದಲ್ಲಿ (ಕ್ರಿ.ಶ.೧೦೬೦) ಹಾಗೂ ಮಹಾರಾಷ್ಟ್ರದ ಅಂಬರನಾಥ ಆಲಯ ಮತ್ತು ಸಿನ್ನಾರ್‌ನ ಗಂಡೇಶ್ವರ ದೇಗುಲಗಳಲ್ಲಿ (ಕ್ರಿ.ಶ.೧೦೬೦) ಕಾಣಬಹುದು[೧೧].

ಆಂಧ್ರ ಪ್ರದೇಶದಲ್ಲಿ ರಾಜೇಂದ್ರ ಪ್ರಸಾದರು ಮೊದಲಿಗೆ ಭೂಮಿಜ ದೇವಾಲಯಗಳ ಬಗ್ಗೆ ಅಧ್ಯಯನವನ್ನು ಕೈಗೊಂಡರು. ಇವರು ಪೆದ್ದತುಂಬುಲಂ[೧೨] ಮತ್ತು ನಂದಿತಂಡಿಯ ಭೂಮಿಜ ದೇಗುಲಗಳ ಬಗ್ಗೆ ಅಧ್ಯಯನ ನಡೆಸಿದರು[೧೩]. ಫಿಲಿಪ್ ವ್ಯಾಗ್ನರ್ ಅಂಧ್ರಪ್ರದೇಶದ ತೆಲಂಗಾಣ ವಲಯದ ಭೂಮಿಜ ದೇವಾಲಯಗಳ ಬಗ್ಗೆ ಸಂಶೋಧನೆಯನ್ನು ಕೈಗೊಂಡರು[೧೪]. ಇವರು ಅಲ್ಲಿನ ಭೂಮಿಜ ದೇವಾಲಯಗಳಲ್ಲಿ ಎರಡು ಬಗೆಗಳನ್ನು ಗಮನಿಸಿದರು. ಒಂದು ನಕ್ಷತ್ರಕಾರದ್ದು, ಮತ್ತೊಂದು ಚೌಕಾಕಾರದ್ದು. ತೆಲಂಗಾಣದ ಭೂಮಿಜ ಆಲಯಗಳ ಪ್ರಮುಖ ಸಂಗತಿ ಎಂದರೆ, ಅವುಗಳ ಶಿಖರಗಳಿಂದ ಮಂಜರಿ ಭಾಗವನ್ನು ತೆಗೆದುಹಾಕಿದ್ದು. ಅದರ ಬದಲು ಶೃಂಗಗಳ ಲಂಬ ಪಟ್ಟಿಯನ್ನು ಸೇರ್ಪಡೆ ಮಾಡಲಾಯಿತು. ಇದು ನಕ್ಷತ್ರಾಕಾರದ ತಲವಿನ್ಯಾಸದಲ್ಲಿ ಲಂಬಪಟ್ಟಿಯ 'ಭದ್ರ' ವಲಯವಾಗುತ್ತದೆ. ಈ ಅಂಶ ಕರ್ನಾಟಕದ ದೇವಾಲಯಗಳಲ್ಲಿ ಮೂಡಿದೆ. ಭೂಮಿಜ ಮಾದರಿಯು ಮಹಾರಾಷ್ಟ್ರವನ್ನು ಪ್ರವೇಶಿಸಿದ ಕಾಲದಲ್ಲೇ ಕರ್ನಾಟಕದಲ್ಲೂ ಕಾಣಿಸಿಕೊಂಡಿತು.

ಹೊಯ್ಸಳ ದೇವಾಲಯಗಳಲ್ಲಿ ಭೂಮಿಜ ಮಾದರಿ


ಹತ್ತನೇ ಶತಮಾನದ ಆರಂಭದಲ್ಲೇ ಭೂಮಿಜ ಮಾದರಿಯ ಅಂಕಗಳು ಕರ್ನಾಟಕದ ದೇವಾಲಯಗಳಲ್ಲಿ ಸೇರ್ಪಡೆ ಆಗಿವೆ. ಈ ಮಾದರಿಯನ್ನು ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯದ ಗೋಡೆಯ ಮೇಲೆ ಕಾಣಬಹುದು (ಕ್ರಿ.ಶ. ೧೦೧೦) ಇದು 'ಶೂರಸೇನಕ'ವನ್ನು ಒಳಗೊಂಡ ಮಾಲ 'ಮಂಜರಿ' ಅಂಶವನ್ನು ಹೊಂದಿದೆ. ಇದು ನಾಲ್ಕು ಅಂಗಳು (೪ ಶೃಂಗಗಳ ವರಸೆ) ಮತ್ತು ಮೂರು ಅಂತಸ್ತುಗಳು ಅಥವಾ ಭೂಮಿಯನ್ನು ಹೊಂದಿದೆ. ಇದರಿಂದ ಈ ಮೇಳೆಗಾಗಲೇ ಭೂಮಿಜ ಮಾದರಿ ಕರ್ನಾಟಕದಲ್ಲಿ ಭಿತ್ತಿಯನ್ನು ಅಲಂಕರಿಸಿದ ಭೂಮಿಜ ಪ್ರತಿಕೃತಿ (Shrine models) ಯಲ್ಲಿ ಮಾಲ ಇಲ್ಲದಿರುವುದನ್ನು ಕಾಣಬಹುದು. ಮಾಲ ಇರುವಂತಹ ಉದಾಹರಣೆಗಳನ್ನು ಹೊಯ್ಸಳ ದೇವಾಲಯಗಳ ಭಿತ್ತಿಗಳ ಮೇಲೆ ಕಾಣುತ್ತೇವೆ.

ಸಾಮಾನ್ಯವಾಗಿ ಬಹುತೇಕ ಹೊಯ್ಸಳ ದೇವಾಲಯಗಳ ಭಿತ್ತಿಗಳನ್ನು ಭೂಮಿಜ ಮಾದರಿಯ ಕಿರಿದಾದ ಪ್ರತಿಕೃತಿ (Miniature shrines models) ಗಳಿಂದ ಅಲಂಕರಿಸಿರುತ್ತಾರೆ. ಉದಾಹರಣೆಗೆ ಹರಿಹರದ ಹರಿಹರೇಶ್ವರ ದೇವಾಲಯವನ್ನೇ ತೆಗೆದುಕೊಳ್ಳೋಣ ಈ ದೇವಾಲಯದ ಕಕ್ಷಾಸನದ ಹೊರಭಿತ್ತಿಯ ದೀರ್ಘ ಪಟ್ಟಿಕೆಯಲ್ಲಿ ಆ ತೆರನಾದ ಅಲಂಕರಣೆಯನ್ನು ಕಾಣಬಹುದು (ಛಾಯಾಚಿತ್ರ ೪) ಭೂಮಿಜ ಮಾದರಿಯ ಕಿರಿಪ್ರತಿಕೃತಿಯ ಪಟ್ಟಿಕೆಯು (ಗರ್ಭಗೃಹ ಮತ್ತು ಸುಕನಾಸಗಳ ಗೋಡೆಗಳನ್ನು ಹೊರತುಪಡಿಸಿ) ಈ ದೇವಾಲಯದ ಸುತ್ತಲೂ ಮುಂದುವರೆಯುತ್ತದೆ. ಸಾಗರ ತಾಲೋಕಿನ ನಾಡಕಲಸಿಯಲ್ಲಿರುವ ಮಲ್ಲಿಕಾರ್ಜುನ ಮತ್ತು ರಾಮೇಶ್ವರ (ಕ್ರಿ.ಶ. ೧೧೨೮)ದೇವಾಲಯಗಳ ಕಕ್ಷಾಸನ. ಭಾಗಗಳಲ್ಲಿ ಇದೇ ತೆರನಾದ ಚಿತ್ರಣವನ್ನು ನೋಡಬಹುದು. ಇವೆಲ್ಲವೂ ಹೊಯ್ಸಳ ದೇವಾಲಯಗಳೇ. ಸೋಮನಾಥಪುರದ ಸೌಮ್ಯಕೇಶವ ದೇವಾಲಯದ ಮೇಲೂ ಭೂಮಿಜ ಪ್ರತಿಕೃತಿಗಳನ್ನು ದೊರೆಯುತ್ತವೆ.

ಭೂಮಿಜ ಮಾದರಿಯ ಎರಡು ಮಹತ್ವದ ಉದಾಹರಣೆಯನ್ನು ತುರುವೆಕೆರೆಯ ಮೂಲೆ ಶಂಕರ ದೇಗುಲ ಮತ್ತು ನುಗ್ಗೆಹಳ್ಳಿಯ ಸದಾಶಿವಾದೇವಾಲಯಗಳಲ್ಲಿ ಕಾಣಬಹುದು. ತುರುವೆಕೆರೆಯ ಮೂಲೆಶಂಕರ ದೇವಾಲಯವು ಗರ್ಭಗೃಹ, ಸುಕನಾಸ (ಅಥವಾ ಅಂತರಾಳ), ನವರಂಗ ಮತ್ತು ದಕ್ಷಿಣದಲ್ಲಿ ಪ್ರವೇಶ ದ್ವಾರವಿದ್ದು, ಅದರ ಮುಂದೆ ಎರಡು ಸ್ತಂಭಗಳ ಮುಖ ಮಂಟಪವಿದೆ. ಇದರ ಗರ್ಭಗೃಹದ ಮೇಲಿರುವ ಶಿಖರ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಭೂಮಿಜ ಮಾದರಿಯಲ್ಲಿದೆ. ಇದರ ಮೂಲ ಸರಳವಾಗಿದು ಸಾದ ಆಗಿದೆ. ಮೂಲಗಳ ನಡುವಿನ ಚತುರ್ಥದಲ್ಲಿ ನಾಲ್ಕು ಭೂಮಿ (ಅಥವಾ ಅಂತಸ್ತು)




ಉದಯೇಶ್ವರ ದೇವಾಲಯ, ಉದಯಪುರ



ಶಿಖರ, ಸದಾಶಿವ ದೇವಾಲಯ, ನುಗ್ಗೆಹಳ್ಳಿ

ಮತ್ತು ಮೂರು ಅಂಗಗಳಿವೆ. ಶಿಖರದ ತುದಿಯಲ್ಲಿ ಆಮಲಕದ ಬದಲು ಘಂಟೆ ಮತ್ತು ಅದರ ಮೇಲೆ ಕಲಶವಿದೆ (ಛಾಯಾಚಿತ್ರ ೬, ೭) (ತಲ ವಿನ್ಯಾಸ-೧).

ನುಗ್ಗೇಹಳ್ಳಿಯ ಸದಾಶಿವ ದೇವಾಲಯವು ಗರ್ಭಗೃಹ ಸುಕನಾಸ, ನವರಂಗ ಪೂರ್ವದಲ್ಲಿ ಮುಖಮಂಟ ಅದರ ಮುಂದೆ ನಂದಿಮಂಟಪ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರ




ಹರಿಹರೇಶ್ವರ ದೇವಾಲಯ, ಹರಿಹರ

ಮತ್ತು ಅದರ ಮುಂದೆ ಎರಡು ಸ್ತಂಭಗಳ ಮುಖಮಂಟಪವನ್ನು ಹೊಂದಿದೆ. ದಕ್ಷಿಣದಲ್ಲಿ ದೇವಾಲಯವನ್ನು ವಿಜಯನಗರ ಅಥವಾ ವಿಜಯನಗರೋತ್ತರ ಕಾಲದಲ್ಲಿ ವಿಸ್ತರಿಸಲಾಗಿದೆ. ದೇವಾಲಯ ಗರ್ಭಗೃಹದ ತಲವಿನ್ಯಾಸ



ಮಾಲ ಜೋಡಿಸಿರುವ ಸೌಮ್ಯಕೇಶವ ದೇವಾಲಯ, ಸೋಮನಾಥಪುರ



ಸೌಮ್ಯಕೇಶವ ದೇವಾಲಯದ ಭಿತ್ತಿ, ಸೋಮನಾಥಪುರ

ನಕ್ಷತ್ರಾಕಾರದಲ್ಲಿದೆ. ಇದರ ಶಿಖರ ಭೂಮಿಜದಂತ ಇದ್ದರೂ 'ಮಾಲ' ಅಥವಾ 'ಮಂಜರಿ'ಯನ್ನು ರಚಿಸಿಲ್ಲ. ಇದರ ಸ್ಥಾನದಲ್ಲಿ ಊರುಶೃಂಗಗಳ ಲಂಬಾಕಾರದಲ್ಲಿ ಶ್ರೇಣಿ ಇದೆ. ಇಲ್ಲಿನ ಕುತೂಹಲದ ಸಂಗತಿಯೆಂದರೆ ಊರುಶೃಂಗಗಳೆಲ್ಲವೂ ಕಿರು ಭೂಮಿಜಾಕೃತಿಯಲ್ಲಿವೆ. ಇದರಿಂದ ತಿಳಿಯುವ ಸಂಗತಿ ಇದು. ಭೂಮಿಜ ಮಾದರಿ ಕರ್ನಾಟಕದಲ್ಲಿ ರೂಪಾಂತರ ಹೊಂದುತ್ತ ಪ್ರಸಾರವಾಗಿದೆ. ಇದೇ ಹೊಯ್ಸಳ ವಾಸ್ತು ಶೈಲಿ ಎನಿಸಿರುವುದು ಸ್ಪಷ್ಟವಾಗುತ್ತದೆ. (ಛಾಯಾಚಿತ್ರ ೮, ೯) (ತಲವಿನ್ಯಾಸ-೨).

ಭೂಮಿಜ ಮಾದರಿಯ ಆಲಯಗಳಲ್ಲಿ ಶೂರಸೇನಕದಿಂದ ಅಲಂಕೃತವಾದ ಮಾಲ ಅಥವಾ ಮಂಜರಿ ಭಾಗವು ಪ್ರಭಾವವಾದ ಭಾಗವಾಗಿದೆ. ಇದನ್ನು ಹೊಯ್ಸಳ ದೇವಾಲಯಗಳಲ್ಲಿ ತೋರಿಸದೆ ಮಾರ್ಪಡಿಸಲಾಗಿದೆ. ಮಾಲದ ಬದಲು ಅಂಗಗಳನ್ನು ಲಂಬವಾಗಿ ಒಂದರ ಮೇಲೆ ಮತ್ತೊಂದರಂತೆ ಪ್ರತಿ ಭೂಮಿಗೆ ಅನುಸಾರವಾಗಿ ಸಂಯೋಜಿಸಲಾಗಿದೆ. ಈ ಸಿದ್ಧಾಂತವನ್ನು ಸ್ಪಷ್ಟ ಪಡಿಸುವುದಕ್ಕೆ



ಗರ್ಭಗೃಹ, ಮೂಲೆ ಶಂಕರ ದೇವಾಲಯ, ತುರುವೇಕೆರೆ

ಕೆಲವೊಂದು ಊಹಾತ್ಮಕ ಪ್ರಯೋಗಗಳನ್ನು ಮಾಡೋಣ. ಮಾಲವನ್ನು ತೆಗೆದು ಊರುಶೃಂಗಗಳನ್ನು ಜೋಡಿಸಿದರೆ ಹೊಯ್ಸಳ ದೇವಾಲಯವಾಗುತ್ತದೆ. ಹೊಯ್ಸಳ ದೇವಾಲಯಗಳಿಗೆ ಮಾಲವನ್ನು ಜೋಡಿಸಿದರೆ ಭೂಮಿಜ ದೇವಾಲಯವಾಗುತ್ತದೆ. ಅಂತಹ ಊಹಾತ್ಮಕ ಪ್ರಯೋಗಗಳನ್ನು ಸೋಮನಾಥಪುರದ ಸೌಮ್ಯಾಕೇಶವ ದೇವಾಲಯದ ಶಿಖರವೊಂದಕ್ಕೆ ಹಾಗೂ ನುಗ್ಗೆ ಹಳ್ಳಿಯ ಸದಾಶಿವ ದೇಗುಲಕ್ಕೆ 'ಮಾಲ'ವನ್ನು ಜೋಡಿಸಲಾಗಿದೆ. ಅದೇ ರೀತಿ ಸಿನ್ನಾರ್ ದೇಗುಲದ ಶಿಖರದ ಮಾಲವನ್ನು ತೆಗೆದುಹಾಕಿ ಅಂಗವನ್ನು ಜೋಡಿಸಲಾಗಿದೆ. ಇದರಿಂದ ಹೊಯ್ಸಳ ವಾಸ್ತು ಶೈಲಿ ಸ್ಥಳೀಕರಣಗೊಂಡ ಭೂಮಿಜ ವಾಸ್ತು ಮಾದರಿ ಆಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. (ಛಾಯಾಚಿತ್ರ ೧೦, ೧೧)



ಗುಂಡೇಶ್ವರ ದೇವಾಲಯ, ಸಿನ್ನಾರ್

ಸಾಮಾನ್ಯವಾಗಿ ಭೂಮಿಜ ಮಾದರಿ ನಕ್ಷತ್ರಾಕಾರಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತದೆ. ಮಾಳವದ ಎಲ್ಲ ಭೂಮಿಜ ಆಲಯಗಳು ನಕ್ಷತ್ರಾಕಾರದ ವಿನ್ಯಾಸದಲ್ಲಿದೆ. ಮಹಾರಾಷ್ಟ್ರದ

ಭೂಮಿಜ ಆಲಯಗಳು ಚೌಕಾಕಾರದಲ್ಲೂ ಇವೆ. ಎಲ್ಲ ಹೊಯ್ಸಳ ದೇಗುಲಗಳು ಸ್ಥಳೀಕರಣಗೊಂಡ ಭೂಮಿಜ ಆಲಯಗಳಾಗಿಲ್ಲ. ಅವುಗಳ ಕೆಲ ಗರ್ಭಗೃಹಗಳ ವಿಮಾನಗಳು ದ್ರಾವಿಡ ಮಾದರಿಯಲ್ಲಿರುವುದುಂಟು. ಇದರಲ್ಲಿ ಮಾಲದ ಬದಲು ಶಾಲ, ಕರ್ಣಕೂಟಗಳನ್ನು ಪ್ರತಿಯೊಂದು ಭೂಮಿ ಅಥವಾ ಅಂತಸ್ತಿನಲ್ಲಿ ರೂಪಿಸಲಾಗಿದೆ. ಶಾಲ, ಕರ್ಣಕೂಟಗಳನ್ನು ದೇವಾಲಯದ ಅಭಿಮುಖವಾಗಿರುವ ದಿಕ್ಕನ್ನು ಬಿಟ್ಟು ಉಳಿದ ದಿಕ್ಕುಗಳಲ್ಲಿ ಸಮನಾಂತರವಾಗಿ ರಚಿಸಲಾಗಿದೆ ಹಾಗೂ ಅವುಗಳ ಮಧ್ಯೆ, ಚತರ್ಥಭಾಗದಲ್ಲಿ ಊರುಶೃಂಗಗಳನ್ನು ಜೋಡಿಸಲಾಗಿರುತ್ತದೆ. ಆದರೆ ಬಹುತೇಕ ಹೊಯ್ಸಳ ಅಲಯಗಳು ಸ್ಥಳೀಕರಣಗೊಂಡ ಭೂಮಿಜ ಮಾದರಿಯೇ ಆಗಿದೆ.



ಚನ್ನಕೇಶವ ದೇವಾಲಯ, ಬೇಲೂರು

ಭೂಮಿಜ ಆಲಯ ಮಾದರಿ ಕರ್ನಾಟಕದಲ್ಲಿ ಪ್ರಸಾರವಾದ ಬಗ್ಗೆ ಸ್ಪಷ್ಟವಾಗಿ ಹಾಗೂ ನಿರ್ಣಾಯಕವಾಗಿ ಪುರಾವೆ ದೊರೆಯುವುದು ಬೇಲೂರಿನ ಚನ್ನಕೇಶವ ದೇವಾಲಯದಲ್ಲಿ. ಈ ದೇವಾಲಯದ ಸಂಕೀರ್ಣದಲ್ಲಿ ಭೂಮಿಜ ಮಾದರಿಯ ಆಲಯಗಳ ಕಿರುಪ್ರತಿರೂಪಗಳು (Miniature shrines models) ಯಥೇಚ್ಛವಾಗಿ ದೊರೆಯುತ್ತವೆ. ಈ ದೇವಾಲಯದ ಪ್ರವೇಶದಲ್ಲೇ ಭೂಮಿಜ ಆಲಯಗಳ ಕಿರು ಆಕೃತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಚನ್ನಕೇಶವ ದೇವಾಲಯದ ಗರ್ಭಗುಡಿಯ ಮೇಲೆ ಈಗ ಶಿಖರವಿಲ್ಲ, ಹಾಳಾಗಿದೆ. ಕಳೆದ ಶತಮಾದ ಮೊದಲ ದಶಕಗಳಲ್ಲಿ ಶಿಖರವಿತ್ತು. ಈಗ ಅದರ ಫೋಟೊ ನೋಡಲು ಸಿಗುತ್ತದೆ. ಅದರ ಶಿಖರ ಪರಿಪೂರ್ಣವಾಗಿ ಭೂಮಿಜ ಮಾದರಿಯಲ್ಲಿರುವುದು ಈ ಫೋಟೊದಿಂದ ತಿಳಿಯುತ್ತದೆ. ಈ ದೇವಾಲಯ ನಿರ್ಮಾಣವಾದುದ್ದು ಕ್ರಿ.ಶ. ೧೧೧೭ರಲ್ಲಿ[೧೫] ಈ ವೇಳೆಗೆ ಈ ಮಾದರಿ ಹುಟ್ಟುಕೊಂಡ ನಾಡಿನಲ್ಲಿ (ಮಾಳವದಲ್ಲಿ) ಪೂರ್ಣವಾಗಿ ಬೆಳವಣಿಗೆಯನ್ನು ಸಾಧಿಸಿತ್ತು. ಭೌಗೋಳಿಕವಾಗಿ ಬಹುದೂರದಲ್ಲಿದ್ದ ಬೇಲೂರಿನಲ್ಲೂ ಭೂಮಿಜ ಮಾದರಿ ಪರಿಪೂರ್ಣವಾಗಿ ವಿಕಸನವನ್ನು ಪಡೆದಿರುವುದನ್ನು ಗಮನಿಸಬಹುದು. ಇದರ ಶಿಖರ ಮಂಜರಿಗಳ ನಡುವಿನ ಚತುರ್ಥಗಳಲ್ಲಿ ಮೂರು ಅಂಗಳ ಊರ್ಧ್ವಸಾಲು ಮತ್ತು ಐದು ಭೂಮಿಗಳನ್ನು ನಿರ್ಮಿಸಲಾಗಿದೆ. ಮೂರು ಮುಖ್ಯ ದಿಕ್ಕುಗಳಲ್ಲಿರುವ ಮಂಜರಿ ಅಥವಾ ಮೂಲವು ಕೆಳಭಾಗದಲ್ಲಿ ಶೂರಸೇನಕಗಳಿಂದ ಅಲಂಕೃತವಾಗಿದೆ. ಶಿಖರದ ಕುಡಿಯಲ್ಲಿ ಘಂಟ ಮತ್ತು ಕಲಶಗಳಿವೆ. ಚನ್ನಕೇಶವ ದೇವಾಲಯದ ಶಿಖರದ ಶೃಂಗವು ಕಿರು ಭೂಮಿಜ ಪ್ರತಿರೂಪಗಳಿಂದ (Miniature shrines models) ಸಂಯೋಜಿತವಾಗಿದೆ. ಇದರಿಂದ ಹೊಯ್ಸಳ ದೇವಾಲಯಗಳು ಭೂಮಿಜ ಮಾದರಿಯ ಲಕ್ಷಣಗಳನ್ನು ಒಳಗೊಂಡಿರುವುದು ರುಜುವಾತು ಆಗುತ್ತದೆ.

ಹೊಯ್ಸಳ ವಾಸ್ತು ಶೈಲಿಯನ್ನು ಹಿಂದಿನಿಂದಲೂ ವೇಸರ ಮಾದರಿ ಎಂದು ಹೆಸರಿಸಿಕೊಂಡು ಬದಲಾಗಿದೆ. ಇದು ವಾಸ್ತವವಾಗಿ ವೇಸರ ಮಾದರಿಯಲ್ಲ ಎಂಬದು ಮೇಲಿನ ಚರ್ಚೆ ಮತ್ತು ಪುರಾವೆಗಳಿಂದ ಸಿದ್ಧವಾಗುತ್ತದೆ. ಹೊಯ್ಸಳ ದೇವಾಲಯಗಳ ಬಗ್ಗೆ ಮಹತ್ವದ ಗ್ರಂಥವನ್ನು ಎಸ್. ಶೆಟ್ಟರ್‌ರವರು ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಅವರು ವೇಸರ ಮಾದರಿಯ ಬಗ್ಗೆ ಏನನ್ನೂ ಹೇಳದೆ, ಯಾವುದೇ ನಿರ್ಣಯಕ್ಕೆ ಬಾರದೆ ತೇಲಿಸಿಕೊಂಡು ಹೋಗಿದ್ದಾರೆ[೧೬]. ಹೊಯ್ಸಳ ದೇವಾಲಯಗಳ ಶಿಖರಗಳು ಮಾಳವದಲ್ಲಿ ಹುಟ್ಟಿಕೊಂಡ ಭೂಮಿಜ ಮಾದರಿಯ ಅನುಕರಣೆಯಾಗಿದೆ ಹಾಗೂ ಅವುಗಳಲ್ಲಿ ಸ್ಥಳೀಯವಾಗಿ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಮಾಳವದಿಂದ ದಕ್ಷಿಣಕ್ಕೆ ಭೂಮಿಜ ಮಾದರಿಯು ಪ್ರಸಾರವಾದಾಗ ಇಂದಿನ ಮಹಾರಾಷ್ಟ್ರದಲ್ಲಿ ಯಾವ ಬದಲಾವಣೆಯನ್ನು ಕಾಣದೆ ಯಾಥಾಸ್ಥಿತಿಯನ್ನು ಅಳವಡಿಸಿಕೊಳ್ಳಲಾಗಿದೆ. ಆದರೆ ಆಂಧ್ರ ಪ್ರದೇಶದಲ್ಲೂ ಸಾಕಷ್ಟು ಸಂಖೆಯಲ್ಲಿ ಭೂಮಿಜ ಮಾದರಿಯ ಆಲಯಗಳನ್ನು

ಕಾಣಬಹುದು. ಅವುಗಳಲ್ಲಿ ಸ್ಥಳೀಯವಾಗಿ ಬದಲಾವಣೆಯನ್ನು ಮಾಡಿಕೊಳ್ಳಲಾಗಿದೆ. ಅದೇ ರೀತಿ ಕರ್ನಾಟಕದಲ್ಲೂ ಭೂಮಿಜ ಮಾದರಿಯಲ್ಲಿ ಅನೇಕ ಬದಲಾವಣೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಮೂಲ ಭೂಮಿಜ ಆಲಯಗಳಲ್ಲಿ ಶಿಖರಗಳು ಅರೆ ತೆರೆದ ಛತ್ರಿಯಂತೆ (Low Parasol) ಸಪೂರವಾಗಿ ಮೇಲೇರಿ, ತುದಿಯಲ್ಲಿ ಆಮಲಕ ಮತ್ತು ಕಲಶವನ್ನು ಒಳಗೊಂಡಿರುತ್ತವೆ. ಆದರೆ ಹೊಯ್ಸಳ ಶೈಲಿಯ ಆಲಯಗಳು ಶಿಖರಗಳು ಮಂಜರಿ ಅಥವಾ ಮೂಲ ಭಾಗವನ್ನು ಕಳೆದುಕೊಂಡಿವೆ. ಮಾಲದ ಬದಲು ಶೃಂಗಗಳನ್ನು ಒಂದರ ಮೇಲೆ ಇನ್ನೊಂದನ್ನು ಲಂಬಾಕಾರವಾಗಿ ಜೋಡಿಸಲಾಗಿದೆ. ಶಿಖರವು ಗಿಡ್ಡವಾಗಿ (Squat) ತೆರೆದ ಛತ್ರಿಯ ಆಕಾರವನ್ನು ಪಡೆದುಕೊಂಡಿವೆ. ಭೂಮಿಜ ಮಾದರಿಯು ನಕ್ಷತ್ರಕಾರದ ತಲವಿನ್ಯಾಸಕ್ಕೆ ಹೇಳಿಮಾಡಿಸಿದಂತಹ ವಾಸ್ತು ವಿನ್ಯಾಸವಾಗಿದೆ. ಆದ್ದರಿಂದ ನಕ್ಷತ್ರಾಕಾರ ಹೊಯ್ಸಳ ದೇವಾಲಯಗಳಲ್ಲಿ ಸಾಮಾನ್ಯ ಸಂಗತಿಯಾಗಿದೆ. ಬೇಲೂರಿನ ಚನ್ನಕೇಶ ದೇವಾಲಯದ ಶಿಖರ ಮತ್ತು ಈ ದೇವಾಲಯದ ಸಂಕೀರ್ಣದಲ್ಲಿರುವ ಭೂಮಿಜ ಮಾದರಿಯ ಕಿರು ಆಲಯ ಆಕೃತಿಗಳು ಹೊಯ್ಸಳ ವಾಸ್ತು ಶೈಲಿಯಲ್ಲಿ ಭೂಮಿಜ ಮಾದರಿಯನ್ನು ಅಳವಡಿಸಿಕೊಂಡು ನಿರ್ಮಾಣವಾಗಿವೆ ಎಂಬುದು ಸ್ಪಷ್ಟವಾಗುತ್ತದೆ.

ಅಡಿಟಿಪ್ಪಣಿಗಳು

೧. ಡಾ. ಕೆ.ಎಂ.ಎ., The Indian Temple Forms, ನವದೆಹಲಿ, ೧೯೭೭, ಪು .೨೧.
೨. ಕೃಷ್ಣದೇವ, Studies in Indian Temple Architecture, ನವದೆಹಲಿ, ೧೯೭೫, ಪು. ೯೦–೯೧.
೩. ಕಾಂತಿಲಾಲ್ ಎಫ್. ಸೋಮಪುರ, The Structural Temples of Gujarat, ಅಹಮದಾಬಾದ್, ೧೯೬೮, ಪು. ೩೧೫.
೪. ಸ್ಟೆಲ್ಲ ಕ್ರಾಮ್ರಿಷ್, The Hindu Temple, ದೆಹಲಿ, ಪು. ೨೧೮–೨೧೯.
೫. ಕೃಷ್ಣದೇವ, ಅದೇ, ಪು. ೯೦–೧೧೩.
೬. ಕೃಷ್ಣದೇವ, ಅದೇ, ಪು. ೯೮.
೭. EC., VIII (1984), Hr. 36.
೮. ಕಾಂತಿಲಾಲ್ ಎಫ್. ಸೋಮಪುರ, ಅದೇ, ಪು. ೩೧೧.
೯. ARIE, 1914, B-433; KUES.,Vol. I, HDG., 41.
೧೦. EC., Vol. VIII, Sorab, No. 275.
೧೧. ಕೃಷ್ಣದೇವ, ಅದೇ, ಪು. ೧೦೦.
೧೨. ರಾಜೇಂದ್ರ ಪ್ರಸಾದ್, Ramachandrika (Ed.A.V.N. Murthy K. I.K. Sharma).
೧೩. ರಾಜೇಂದ್ರ ಪ್ರಸಾದ್, JAHRS., XXXIV, ಪು. ೮–೧೪.
೧೪. ವಾಗ್ನರ್, ಫಿಲಿಫ್, MODE and meaning in Architecture of Early Medieval Telangana (C.1000-1300), Madison, 1986, ಪು. ೯೬–೯೭.
೧೫. ಶೆಟ್ಟರ್ ಎಸ್., The Hoysala Temples, ಧಾರವಾಡ, ೧೯೯೨, ಪು. ೧೮೦.

೭೭

ಬೆಳಗಾವಿ ಪ್ರದೇಶದ ದೇವಾಲಯ ವಾಸ್ತುಶಿಲ್ಪ: ವಿಶ್ಲೇಷಣೆ

ಸ್ಮಿತಾ ಸುರೇಬಾನಕರ*

ಬೆಳಗಾವಿ ಪ್ರದೇಶದ ದೇವಾಲಯ ವಾಸ್ತುಶಿಲ್ಪದಲ್ಲಿ ಪ್ರತಿಬಿಂಬಿತವಾದ ವಾಸ್ತುಶಿಲ್ಪದ ವಿವಿಧ ಪ್ರಕಾರಗಳನ್ನು ಗುರುತಿಸಿ ವಿಶ್ಲೇಷಿಸುವುದು ಪ್ರಸ್ತುತ ಪ್ರಬಂಧದ ಉದ್ದೇಶ. ಮೂಲ ದೇವಾಲಯದ ವಾಸ್ತುಶಿಲ್ಪ ಶೈಲಿಯನ್ನು ಹೊರತುಪಡಿಸಿ ದೇವಾಲಯದ ವಿವಿಧ ಭಾಗಗಳಲ್ಲಿ ವಿಭಿನ್ನ ಪ್ರದೇಶದಲ್ಲಿ ಬೇರೆ ಬೇರೆ ಕಾಲದಲ್ಲಿ ಪ್ರಚಲಿತವಿದ್ದ ವಾಸ್ತುಶೈಲಿಯನ್ನು ಕ್ರಿಯಾತ್ಮಕವಾಗಿ ಅಳವಡಿಸಿಕೊಂಡು ಬಿಂಬಿಸುವ ಸ್ಥಪತಿಗಳ ಕಲಾನೈಪುಣ್ಯ, ಕೌಶಲ್ಯ ಮತ್ತು ಎಲ್ಲಕ್ಕೂ ಹೆಚ್ಚಾಗಿ ದೇಶದ ವಿವಿಧ ಭಾಗಗಳಲ್ಲಿ ಪ್ರಚಲಿತವಿದ್ದ ಕಲಾಪ್ರಕಾರಗಳು ಮತ್ತು ಶೈಲಿಯ ಸಂಪೂರ್ಣ ಅರಿವು ಮತ್ತು ಜ್ಞಾನ ಇವುಗಳ ವಿವರಣೆಯನ್ನು ಪ್ರಸ್ತುತ ಪ್ರಬಂಧ ಒಳಗೊಂಡಿದೆ. ಬಹುವಿಧದ ವಿನ್ಯಾಸ ಮತ್ತು ಶೈಲಿ-ಕೆಲವು ಸ್ಥಳೀಯವಾಗಿ ಲಭ್ಯವಿದ್ದ ಮತ್ತು ಇನ್ನು ಕೆಲವು ಬೇರೆ ಪ್ರದೇಶಗಳಿಂದ ಅಳವಡಿಸಿ ಬಳಸಿಕೊಂಡ ಪ್ರಕಾರಗಳನ್ನು ಈ ಪ್ರದೇಶದ ದೇವಾಲಯಗಳಲ್ಲಿ ಕಾಣಬಹುದು.

ಆಯಾ ಸಂಸ್ಕೃತಿಯ ಪ್ರಾದೇಶಿಕ ಚೌಕಟ್ಟಿನಲ್ಲಿ ಬಿಂಬಿತವಾದ ವಾಸ್ತುಶಿಲ್ಪ, ನಿರ್ಮಾಣ ಪರಿಸರ ಇತಿಹಾಸದ ಒಳನೋಟವನ್ನು ಒದಗಿಸುತ್ತದೆ. ವಾಸ್ತುಶಿಲ್ಪ ಮೂಲತಃ ಕಲಾ ಪ್ರಕಾರವಾಗಿದ್ದು ಸೌಂದರ್ಯ ಮತ್ತು ಮೌಲ್ಯಯುತವಾಗಿರುತ್ತದೆ. ಇದು ಕಾಲಕಾಲಕ್ಕೆ ಪ್ರಾದೇಶಿಕ ಭಿನ್ನತೆಯನ್ನು ಪ್ರಸ್ತುತಪಡಿಸುತ್ತದೆ. ಪ್ರಾದೇಶಿಕ ವಾಸ್ತುಶೈಲಿಯ ಅಧ್ಯಯನ ಸಾಮಾನ್ಯೀಕರಣದ ಭಾಸವನ್ನು ಹೋಗಲಾಡಿಸುವುದಲ್ಲದೆ ವಿಭಿನ್ನ ಪ್ರಾದೇಶಿಕ ಶೈಲಿಗಳ ಪ್ರಭಾವ ಮತ್ತು ಪರಿಣಾಮಗಳನ್ನು ತೋರಿಸುತ್ತದೆ. ಸ್ಥಳೀಯ ಶೈಲಿಗಳು ಶಾಸ್ತ್ರೀಯ ವಾಸ್ತುಶಿಲ್ಪದ ಮುಖವಾಡ ಹೊಂದಿರುತ್ತವೆ. ವಾಸ್ತುಶಿಲ್ಪ ವೈಯಕ್ತಿಕ ಅಭಿವ್ಯಕ್ತಿಕರಣವಾಗಿರದೇ ತಲೆತಲಾಂತರಗಳಿಂದ ಪರಂಪರಾಯುಕ್ತವಾದ ಜನಸಮುದಾಯದ ಅನುಭವ ಮತ್ತು ಜಾಣ್ಮೆಯ ಪ್ರತೀಕವಾಗಿದೆ. ಇವು ದೃಶ್ಯಮಾಧ್ಯಮದ ಮೂಲಕ ಅಭಿವ್ಯಕ್ತವಾದ ಜ್ಞಾನದ ಆಕರಗಳಾಗಿವೆ. ವಾಸ್ತುಶಿಲ್ಪ ಪವಿತ್ರ ಅಭಿವ್ಯಕ್ತಿಯಾಗಿದ್ದು ಪ್ರಾದೇಶಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಾಂದರ್ಭಿಕ ಮಾಧ್ಯಮವಾಗಿದೆ.

ಐತಿಹಾಸಿಕ ಹಿನ್ನೆಲೆ

ಕರ್ನಾಟಕದ ವಾಯುವ್ಯ ಭಾಗದಲ್ಲಿರುವ ಬೆಳಗಾವಿ ಸಹ್ಯಾದ್ರಿಯ ಪರ್ವತ ಶ್ರೇಣಿಯ ಅಡಿಯಲ್ಲಿದ್ದು, ಗೋವೆ ಮತ್ತು ಮಹಾರಾಷ್ಟ್ರದ ಗಡಿ ಭಾಗದಲ್ಲಿದೆ. ಇತಿಹಾಸದ ಪುಟಗಳಲ್ಲಿ ವೇಣುಗ್ರಾಮ, ಇಕ್ಷುಗ್ರಾಮ, ಮಝಾಫರನಗರ ಮತ್ತು ಅಝುಂನಗರ ಎಂಬ ಹೆಸರಿನಿಂದ ಗುರುತಿಸಲ್ಪಟ್ಟು, ಅನೇಕ ರಾಜಮನೆತನಗಳ ಏಳು-ಬೀಳುಗಳನ್ನು ಕಂಡುಂಡ ಪ್ರದೇಶ. ಈ ರಾಜಮನೆತನಗಳು ಬೆಳಗಾವಿ ಪ್ರದೇಶದಲ್ಲಿ ನಿರ್ಮಿಸಿದ ದೇವಾಲಯಗಳು ಅವರ ಧಾರ್ಮಿಕ ಸೌಹಾರ್ದತೆ ಮತ್ತು ಕಲೋಪಾಸನೆಯ ಪ್ರತೀಕವೆನಿಸಿದೆ.

ಬೆಳಗಾವಿ ಪ್ರದೇಶದಲ್ಲಿ ದೇವಾಲಯ ವಾಸ್ತುಶಿಲ್ಪ

ಇತಿಹಾಸದ ಹೆಜ್ಜೆಗುರುತುಗಳು, ಸಂಸ್ಕೃತಿಯ ಪಡಿಯಚ್ಚುಗಳು, ನಾಗರೀಕತೆಯ ಕುರುಹುಗಳು ಎಂದೆನಿಸಿದ ಸ್ಮಾರಕಗಳು ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿ ಗಾತ್ರ, ಸಂಖ್ಯೆ, ಗುಣವೈಶಿಷ್ಟ್ಯ, ವಾಸ್ತುಶಿಲ್ಪ ಶೈಲಿ, ವೈವಿಧ್ಯತೆ, ಸಾಂಸ್ಕೃತಿಕ ಮೌಲ್ಯ-ಈ ಎಲ್ಲ ದೃಷ್ಟಿಯಿಂದ ಕುತೂಹಲ ಮೂಡಿಸಿವೆ. ವಾಸ್ತುಶಿಲ್ಪ ಪರಂಪರೆಯ ಅಧ್ಯಯನಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಕೈಗೊಳ್ಳುವುದರಿಂದ ಪ್ರಾದೇಶಿಕ ಭಿನ್ನತೆ, ವೈವಿಧ್ಯತೆಯ ಜೊತೆಗೆ ಪ್ರಾದೇಶಿಕ ಸೊಗಡು ಬಿಂಬಿತವಾಗುತ್ತದೆ.

ಕ್ರಿ.ಶ. ೪-೧೩ನೆಯ ಶತಮಾನಗಳಲ್ಲಿ ಈ ಪ್ರದೇಶದ ದೇವಾಲಯಗಳು ರಚನೆ ಹೊಂದಿದರೂ, ಕಲ್ಯಾಣದ ಚಾಲುಕ್ಯರು ಮತ್ತು ಅವರ ಮಾಂಡಲೀಕರ ಆಳ್ವಿಕಾವಧಿಯನ್ನು ಬೆಳಗಾವಿಯಲ್ಲಿ ದೇವಾಲಯ ನಿರ್ಮಾಣ ಕಾಲವೆಂದು ಗುರುತಿಸಬಹುದು.

* # ೩೯೦, 'ಶ್ರೀನಿವಾಸ', ೫ನೇ ಅಡ್ಡರಸ್ತೆ, ಭಾಗ್ಯನಗರ, ಬೆಳಗಾವಿ-೫೯೦೦೦೬.

ಈ ಹಂತದಲ್ಲಿ ನಿರ್ಮಾಣ ತಂತ್ರಜ್ಞಾನ, ಕೌಶಲ್ಯ ಮತ್ತು ಗಾತ್ರದಲ್ಲಿ ಬದಲಾವಣೆಯನ್ನು ಅಳವಡಿಸಲಾಯಿತು. (Rhetoric to reality) ಈ ಹಂತದಲ್ಲಿ ಇಟ್ಟಿಗೆಯ ನಿರ್ಮಿತಿಗಳು ಶಿಲಾ ನಿರ್ಮಿತಿಗಳಾಗಿ, ದೇವಾಲಯದ ಪುನರಜ್ಜೀವನ, ವಿಸ್ತರಣೆ, ಹಒಸ ಹೊಸ ಶೈಲಿಗಳ, ವಿನ್ಯಾಸಗಳ ರಚನೆ-ಇವೆಲ್ಲ ಸ್ಥಿತ್ಯಂತರಗಳು ಪ್ರಾದೇಶಿಕ ಮತ್ತು ಅಂತರ ಪ್ರಾದೇಶಿಕ ಪ್ರಭಾವ ಮತ್ತು ಪರಿಣಾಮದೊಂದಿಗೆ (ಶಾಸ್ತ್ರೀಯ ಚೌಕಟ್ಟಿನಲ್ಲಿ) ಮೂಡಿ ಬಂದವು. ಇದು ಬಹುಶಃ ಕುಶಲಕರ್ಮಿಗಳ, ಸ್ಥಪತಿಗಳ ವಲಸೆ ಹೋಗುವಿಕೆ, ತಾಂತ್ರಿಕ ತರಬೇತಿ ಮತ್ತು ಕೌಶಲ್ಯ ಅಥವಾ ಶೈಕ್ಷಣಿಕ ಅಂತರಜಾಲದ ಪರಿಣಾಮ ಇರಬಹುದು.

ವಾಸ್ತುಶಿಲ್ಪದಲ್ಲಿ ವಾಸ್ತುಶಿಲ್ಪ

ಭಾರತ ಉಪಖಂಡದಲ್ಲಿ ಪ್ರಚಲಿತವಿದ್ದ ದೇಶೀಯ ವಾಸ್ತುಶಿಲ್ಪ ಧಾರ್ಮಿಕ ಮತ್ತು ಪ್ರಾದೇಶಿಕ ವಾಸ್ತುಶಿಲ್ಪದ ಮೇಲೆ ಸದಾ ಪರಿಣಾಮ ಬೀರಿದೆ. ಬೆಳಗಾವಿ ಪ್ರದೇಶ ಇದಕ್ಕೆ ಹೊರತಾಗಿಲ್ಲ. ಶಾಸ್ತ್ರೀಯ ವಾಸ್ತುಶೈಲಿ ಸ್ಥಳೀಯ ಜಾನಪದ ಶೈಲಿಯಿಂದ ಪ್ರಭಾವ ಹೊಂದಿ ಶಾಸ್ತ್ರೀಯ ಚೌಕಟ್ಟಿನಲ್ಲಿ ವಿಭಿನ್ನ ಶೈಲಿಯ ನಿರ್ಮಾಣಕ್ಕೆ ನಾಂದಿಯಾಯಿತು. ಅಪ್ಪಟ್ಟ ಹಿಂದೂ/ದೇಶೀಯ ಶೈಲಿ ಹೊರನೋಟಕ್ಕೆ ವಿಭಿನ್ನ ಎನಿಸದೇ ಹೋದರೂ ಕುಶಲಕರ್ಮಿಗಳು ತಮ್ಮದೇ ಆದ ಹೊಸತನ ಮತ್ತು ನೈಪುಣ್ಯತೆಯಿಂದ ಈ ನಿರ್ಮಿತಿಗಳಿಗೆ ಸ್ಥಳೀಯ ಮೆರಗು ಮತ್ತು ಸೊಗಡನ್ನು ನೀಡಿದರು. ತಮ್ಮ ಕೈಚಳಕ ಮತ್ತು ವೈಯಕ್ತಿಕ ಅನುಭವಗಳನ್ನು ಈ ಪ್ರದೇಶದ ಸಾಂಸ್ಕೃತಿಕ ಹರವಿನೊಂದಿಗೆ ಬೆರೆಸಿದರು. ಹೀಗಾಗಿ ಪಾರಂಪರಿಕತೆ ಮತ್ತು ಆಧುನಿಕ ಕೌಶಲ್ಯ ಮತ್ತು ತಾಂತ್ರಿಕತೆಗಳ ಸಂವಾದವಾಗಿ ವಾಸ್ತುಶಿಲ್ಪ ಬೆಳೆಯಲಾರಂಭಿಸಿತು.

ದೇವಾಲಯ ಬರೀ ಗೋಚರಿ ನಿರ್ಮಿತಿಯಲ್ಲದೇ ಅದು ಅಂತಃಶಕ್ತಿ ಮತ್ತು ಅಂತಃಸ್ಸತ್ವದ ಪ್ರತೀಕ. ಈ ತಿಳುವಳಿಕೆ ಉತ್ತರ-ದಕ್ಷಿಣ ಎಂಬ ಭಿನ್ನತೆ ಮತ್ತು ಅಂತರವನ್ನು ಕಡಿಮೆಗೊಳಿಸಲು ಸಾಧ್ಯವಾಯಿತು. ಎರಡು ಸಹಸ್ರ ವರ್ಷಗಳ ದೇವಾಲಯಗಳ ಬೆಳವಣಿಗೆ ಮತ್ತು ವಾಸ್ತುಶಿಲ್ಪ ವಿಕಸನ ಆಗಮಶಾಸ್ತ್ರಗಳ ಕಟ್ಟಾ ಮಾದರಿ ವಿನ್ಯಾಸಗಳ ಚೌಕಟ್ಟಿನಲ್ಲಿಯೇ ನಡೆಯಿತು.

ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಸ್ಥಳೀಯ ದೇಶೀಯ ವಾಸ್ತು ಪುನರ್ ನಿರ್ಮಿತಿಗೊಂಡವು. ಉದಾಹರಣೆಗೆ ಮಹಾಕೂಟ ದೇವಾಲಯದ ಆವರಣ ಶಿಲಾ ನಿರ್ಮಿತಿಯಾಗಿ ಸ್ಥಳೀಯ ವಾಸ್ತುಶಿಲ್ಪದಲ್ಲಿ ಅಳವಡಿಸಲಾಯಿತು. ಚಾಲುಕ್ಯರು ತಮ್ಮ ಸೈನಿಕ ದಿಗ್ವಿಜಯಗಳಿಂದಾಗಿ ಲತೀನ ನಾಗರ ಶೈಲಿಯನ್ನು ಪರಿಚಯಿಸಿಕೊಂಡರು. ಪರಿಣಾಮವಾಗಿ ದಾಕ್ಷಿಣಾತ್ಯ ದ್ರಾವಿಡ ಮತ್ತು ಔತ್ತರೆಯ ನಾಗರ ಶೈಲಿಯ ನಿರ್ಮಿತಿಗಳು ಅಕ್ಕ-ಪಕ್ಕದಲ್ಲಿಯೇ ನಿರ್ಮಾಣಗೊಂಡವು.

ವೇಸರ ಶೈಲಿಯ ದೇವಾಲಯಗಳು ಕರ್ನಾಟಕದ ಮೂಲಶೈಲಿಯೆನಿಸಿದರೂ ವಾಸ್ತವವಾಗಿ ಅವು ದ್ರಾವಿಡ ನಾಗರಶೈಲಿಗಳ ಸಮ್ಮಿಶ್ರಣವೇ ಆಗಿವೆ. (Dravida form and Nagara logic of symbolism) ಹೀಗಾಗಿ ಬಹುರೂಪಿ ಶೈಲಿಗಳು ಬೆಳೆದು ಬಂದವು. ಅಪ್ಪಟ ದೇಶೀ ಮತ್ತು ಹೊರಪ್ರದೇಶಗಳ ಪ್ರಭಾವದಿಂದ.

ದೇವಾಲಯ ವಾಸ್ತುಶಿಲ್ಪ ಬಹುವಿಧ ದೇಶೀಯ ನಿರ್ಮಾಣ ಪರಂಪರೆಯನ್ನು ಎರವಲು ಪಡೆದು ಅನುಕರಿಸಿತು. ಈ ಅನುಕರಣೆ ಮತ್ತು ಅಳವಡಿಸುವಿಕೆ ಬಹುಶಃ ಕುಶಲರ್ಮಿಗಳು ಹೊಂದಿದ ಸ್ವಾಯತ್ತತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಪರಿಣಾಮವಾಗಿ ಸಾಧ್ಯವಾಯಿತು. ಅನಾದಿಕಾಲದಿಂದ ಪ್ರಚಲಿತವಿದ್ದ ವಾಸ್ತು ನಿರ್ಮಾಣದ ಗುಣಲಕ್ಷಣಗಳು ಮತ್ತು ಸೌಂದರ್ಯೀಕರಣದ ವಿವರಗಳು ಒಂದಿಲ್ಲೊಂದು ವಿಧದಲ್ಲಿ ಶತ ಶತಮಾನಗಳಿಂದ ಶಿಲಾ ನಿರ್ಮಿತಿಯಲ್ಲಿ ಪ್ರತಿಬಿಂಬಿತವಾದವು. ಸ್ಥಪತಿಗಳು ಮತ್ತು ಶಿಲ್ಪಿಗಳಿಗೆ ನೀಡಲಾದ ಸ್ವಾತಂತ್ರ್ಯ, ದೇವಾಲಯಗಳ ವಿಭಿನ್ನ ಸೌಂದರ್ಯೀಕರಣ ಮತ್ತು ಅಲಂಕರಣದಲ್ಲಿ ಅಭಿವ್ಯಕ್ತಗೊಂಡವು. ಇದರ ಪರಿಣಾಮವಾಗಿ ವಿಭಿನ್ನ ಶೈಲಿಯ ವಾಸ್ತುಶಿಲ್ಪ ಸಂಪತ್ತು ಮತ್ತು ಶಿಲ್ಪಶೈಲಿ ವೈಭವೋಪೇತವಾದ ಅಲಂಕಾರಿಕ ಮಾದರಿಗಳು ಪ್ರವಾಹೋಪಾದಿಯಲ್ಲಿ ಹರಿದುಬಂದವು. ಇವೆಲ್ಲ ಅಪ್ಪಟ ಪ್ರಾದೇಶಿಕ ಶೈಲಿಯ ದೇಶೀ ಪರಂಪರೆಯ ನಿರ್ಮಿತಿಗಳೆನಿಸದವು.

ಕುಶಲರ್ಮಿಗಳು, ಶಿಲ್ಪಿಗಳು, ಸ್ಥಪತಿಗಳು ಮತ್ತು ಕಾರ್ಮಿಕರಿಗೆ ವಿಭಿನ್ನ ಮತ್ತು ವೈವಿಧ್ಯಮಯವಾದ ನಿರ್ಮಿತಿ ಅವಕಾಸಗಳು ದೊರೆತವು. ಇದರೆಲ್ಲ ಉತ್ತರದ ವಾಸ್ತುಶೈಲಿಯಿಂದ ಪ್ರಭಾವ ಹೊಂದಿದರು. ಈ ಪ್ರಭಾವವನ್ನು ದೇವಾಲಯದ ಹೊರಗೋಡೆಯ ಮೇಲೆ ನಿರ್ಮಿಸಿದ ಗೂಡುಗಳು ಮತ್ತು ಒಳಗಡೆಯ ಗೂಢ ಮಂಟಪದ/ದೇವಕೋಷ್ಠದ ಮೇಲ್ಭಾಗದಲ್ಲಿ ಕಾಣಸಿಗುವ ಶೇಖರಿ ಮತ್ತು ಭೂಮಿಜ ಶೈಲಿಯ ಕಿರುಗೋಪುರಗಳಲ್ಲಿ, ಅರ್ಧಗಂಬಗಳಲ್ಲಿ ಕಾಣಬಹುದು.

ಈ ಕಿರುಮಾದರಿಗಳು (miniature) ಮೂಲ ದೇವಾಲಯದ ಹರವಿನ ಮುಖ್ಯ ಭಾಗಗಳೆನಿಸಿದವು. ಔತ್ತರೆಯ ಶೈಲಿಯ ಇನ್ನೊಂದು ಪ್ರಮುಖ ಪ್ರಭಾವ ಮತ್ತು ಅನುಕರಣೆ ದೇವಾಲಯಗಳ ಸ್ಥಂಭ ಭಾಗಗಳಲ್ಲಿ ಮತ್ತು ಗೋಡೆಯ

ಮುಂಚಾಚುಗಳಲ್ಲೂ ಕಾಣಸಿಗುತ್ತವೆ. ಕೀರ್ತಿಮುಖದ ಅಲಂಕರಣ ಕಮಾನು ಮತ್ತು ಕಿರುಗೋಪುರ ಅಲಂಕರಣವು ಇದಕ್ಕೆ ಇನ್ನೊಂದು ಉದಾಹರಣೆ.

೧೧ನೆಯ ಶತಮಾನದಿಂದೀಚೆಗೆ ಹೊರಗೋಡೆಯ ಅರ್ಧಗಂಬಗಳು, ಕಿರುಗೋಪುರಗಳು, ದೇವಕೋಷ್ಠಗಳು, ಗೂಢಮಂಟಪಗಳು ವಾಸ್ತುಶಿಲ್ಪದ ಅಭಿವ್ಯಕ್ತಿಗಳಾಗಿ ಹೊರಹೊಮ್ಮಿದವು. ಇವೆಲ್ಲ ವಿವಿಧ ವಾಸ್ತುಶಿಲ್ಪಶೈಲಿಯ ಮೊಸೈಕ್ ಅಥವಾ ಸಮ್ಮಿಶ್ರಣದ ಹೂರಣವಾದವು.

ಹೊರಗೋಡೆಯ ಅಲಂಕರಣಕ್ಕಾಗಿ ಬಳಸಿದ ಗೂಢಮಂಟಪಗಳು, ಕಪೋತಗಳು ಸಾಮಾನ್ಯವಾಗಿ ನಾಗರಶೈಲಿಯ ಕಿರುಗೋಪುರವನ್ನು ಹೊಂದಿದ್ದನ್ನೂ ಗಮನಿಸಬಹುದು. ಅತ್ಯಂತ ಅಲಂಕೃತ ಕೌಶಲ್ಯಮಯವಾದ ಈ ಕಿರುಗೋಪುರಗಳು ಉತ್ತರದಿಂದ ದಕ್ಷಿಣಕ್ಕೆ ವಾಸ್ತುಶಿಲ್ಪ ಕ್ರಮಿಸಿದ ದೂರದ ಪ್ರಯಾಣವನ್ನು ಸಾರಿ ಹೇಳುತ್ತವೆ.

ಕೌಶಲ್ಯ ಮತ್ತು ವಾಸ್ತುಶೈಲಿಯ ವಿನಿಮಯ/ಕೊಡುಕೊಳ್ಳುವಿಕೆ ಮತ್ತು ಎರಡು ಶೈಲಿಗಳ ಸಮಾನಾಂತರ ಬೆಳವಣಿಗೆ ಏನೇ ಇದ್ದರೂ ವಾಸ್ತುನಿರ್ಮಿತಿಯಲ್ಲಿ ಈ ವಿಭಿನ್ನ ಶೈಲಿಗಳನ್ನು ಕಾಯ್ದುಕೊಳ್ಳಲಾಯಿತು.

ಗಮನಾರ್ಹವಾದ ಶಿಖರ ಶೈಲಿಯಿಂದಾಗಿ ಶಿಖರೇಶ್ವರ ಎಂದು ಹೆಸರು ಪಡೆದ ಹತ್ತರಗಿಯ ಶಿಖರೇಶ್ವರ ದೇವಾಲಯ ಲತೀನ ಶೈಲಿಗೆ ಉತ್ತಮ ಉದಾಹರಣೆ. ಇದು ಸಮಕಾಲೀನ ದೇವಾಲಯಗಳಲ್ಲಿ ಗೋಕಾಕ, ದೇಗಾಂವ್, ಹೂಲಿ ಮುಂತಾದೆಡೆ ಹೊರಗೋಡೆಯ ಮೇಲೆ ಅಲಂಕರಣಕ್ಕಾಗಿ ಮಾಡಿರುವ ಮಾದರಿಯನ್ನು ನೆನಪಿಸುತ್ತದೆ. ರೇಖಾನಾಗರಶೈಲಿಯ ಈ ಶಿಖರದಲ್ಲಿ ಚೈತ್ಯಗೂಡುಗಳಿಂದ ಕೆತ್ತಿದ ಉದ್ದ ಪಟ್ಟಿಕೆಗಳಿವೆ. ನವರಂಗ ಮತ್ತು ಗರ್ಭಗೃಹದ ದ್ವಾರಗಳ ಮೇಲೆ ಅಲಂಕರಣಕ್ಕಾಗಿ ದ್ರಾವಿಡ ಮತ್ತು ಫಾಂಸನ ಮಾದರಿಯ ಸಾಲು ಶಿಖರಗಳಿದ್ದದ್ದನ್ನು ಗಮನಿಸಬಹುದು.

ಇದೇ ರೀತಿ ನಂದಗಾಂವೆಯ ಶಿವದೇವಾಲಯ ಮೂಲತಃ ದ್ರಾವಿಡ ಶೈಲಿಯಲ್ಲಿದ್ದರೂ ಅರ್ಧಗಂಭ ಮತ್ತು ದ್ವಾರಗಳ ಮೇಲೆ ಅಲಂಕರಣಕ್ಕಾಗಿ ರೇಖಾನಗಾರ ಶೈಲಿಯ ಶಿಖರದ ವಿನ್ಯಾಸವನ್ನು ಕಾಣಬಹುದು.


ಗೋವೆ ಕದಂಬರಿಂದ ರಚಿತವಾದ ದೇಗಾಂವೆಯ ಕಮಲನಾರಾಯಣ ದೇವಾಲಯದಲ್ಲಿ ಅಲಂಕರಣಕ್ಕಾಗಿ ಅಲ್ಲಲ್ಲಿ ಶಿಖರಗಳನ್ನು ಬಿಂಬಿಸಲಾಗಿದ್ದು, ಇವು ಶೇಖರಿ ಮತ್ತು ಲತೀನ ಶೈಲಿಯಲ್ಲಿವೆ. ಕಕ್ಷಾಸನದ ಹೊರಗೋಡೆಯ ಮೇಲೆ ಅಲಂಕೃತ ನಾಗರ ಶಿಖರಗಳ ಸಾಲು ಅಲಂಕರಣ ಮತ್ತು ಶೈಲಿಯ ದೃಷ್ಟಿಯಿಂದ ಗಮನಾರ್ಹವಾಗಿದೆ. ಇದೇ ರೀತಿ ಹೂಲಿಯ ತಾರಕೇಶ್ವರ ದೇವಾಲಯದ ಮುಖಮಂಪಟದ ಮೇಲ್ಭಾಗದಲ್ಲಿ ಅಲಂಕರಣಕ್ಕಾಗಿ ನಿರ್ಮಿಸಿದ ರೇಖಾನಾಗರ ಶೈಲಿಯ ಕಿರುಗೋಪುರಗಳ ಸಾಲನ್ನು ಕಾಣಬಹುದು. ನಂದಗಾವೆಯ ಶಿವಾಲಯದ ಕೀರ್ತಿಮುಖದ ಮೇಲ್ಭಾಗದಲ್ಲಿ ನಾಗರ ಶಿಖರವನ್ನು ಮತ್ತು ಬಿತ್ತಿಯ ಹೊರಭಾಗದಲ್ಲಿ ದ್ರಾವಿಡ ಶಿಖರವನ್ನು ಗಮನಿಸಬಹುದು. ವಣ್ಣೂರಿನ ಪ್ರಭದೇವರ ಗುಡಿ ದ್ರಾವಿಡ ಶೈಲಿಯಲ್ಲಿದ್ದು, ಹೊರಗೋಡೆಯ ಮೇಲೆ ಅಲಂಕಾರಿಕವಾಗಿ ಶೇಖರಿ, ದ್ರಾವಿಡ, ಲತೀನ ಮುಂತಾದ ಶೈಲಿಯ ಶಿಖರಗಳಿದ್ದದ್ದು ಗಮನಿಸಬೇಕಾದ ಅಂಶ. ಕೊಣ್ಣೂರಿನ ಜೈನ ಬಸದಿಯ ಹೊರಗೋಡೆಯ ಅರ್ಧ ಕಂಬಗಳ ಮೇಲೆಯೂ ವಿವಿಧ ಶಿಖರ ಮಾದರಿಗಳನ್ನು ಕಾಣಬಹುದು.

ಸಮಕಾಲೀನ ವಾಸ್ತುಶೈಲಿಯ ಅನುಕರಣೆ ಮತ್ತು ಅಳವಡಿಸುವಿಕೆಯಲ್ಲಿ ಸ್ಥಪತಿಗಳು ತಮ್ಮ ಪ್ರಾವೀಣ್ಯ ಮತ್ತು ಕೌಶಲ್ಯವನ್ನು ಬಳಸಿದ್ದಾರೆ. ಈ ಮೇಲಿನ ವಿವರಗಳಿಂದ ಶಿಲ್ಪಿಗಳು ದೇಶದ ವಿವಿಧ ಭಾಗಗಳಲ್ಲಿ ಪ್ರಚಲಿತವಿದ್ದ ಶೈಲಿ, ಮಾದರಿ, ವಿನ್ಯಾಸಗಳನ್ನು ಅರಿತು ಬಳಸಿಕೊಂಡು ಅದಕ್ಕೆ ಪ್ರಾದೇಶಿಕ, ಜಾನಪದ ಲಕ್ಷಣಗಳನ್ನು ಬೆರೆಸಿ ಸಮ್ಮಿಶ್ರಣ ಶೈಲಿಯ ಕಲಾ ಪರಂಪರೆಯನ್ನು ಪರಿಚಯಿಸಿದ್ದಾರೆ. ಇವೆಲ್ಲದರ ಪರಿಣಾಮವಾಗಿ ಈ ಪ್ರದೇಶದ ಕುಶಲಮಿರ್ಗಳನ್ನು ಉಪಪ್ರಾದೇಶಿಕ ವಾಸ್ತುಶೈಲಿಯ ನಿರ್ಮಾಪಕರೆಂದು ಹೇಳಬಹುದು. ಇದಕ್ಕೆ ಬಹುಶಃ ಕೇಂದ್ರ ಪಶ್ಚಿಮ ಮತ್ತು ಕೆಳ ದಖ್ಖನ್ ಶೈಲಿಯ ಬೆರೆತುಹೋದ ಸಾಂಸ್ಕೃತಿಕ ವಲಯದಲ್ಲಿ ಬೆಳಗಾವಿ ಪ್ರದೇಶ ಇದ್ದದ್ದು ಕಾರಣವಾಗಿರಬಹುದು.


ಉಪಸಂಹಾರ : ಈ ಮೇಲಿನ ವಿವರಣೆಯಿಂದ ದೇವಾಲಯ ನಿರ್ಮಾಣದಲ್ಲಿ ವಿವಿಧ ಶೈಲಿಗಳ ಪ್ರಭಾವವನ್ನು ಹೊಂದಿದ ಸ್ಥಪತಿಗಳು ಆಗಮಬದ್ಧವಾದ ಶಾಸ್ತ್ರೀಯ ಶೈಲಿಯ ಚೌಕಟ್ಟಿನಲ್ಲಿಯೇ ಅನೇಕ ಹೊಸತನವನ್ನು ಪ್ರಾಯೋಗಿಕವಾಗಿ ಬಳಸಿದ್ದು ವೇದ್ಯವಾಗುತ್ತವೆ. ಸ್ಥಪತಿಗಳು, ಕುಶಲಮಿರ್ಗಳು ಮತ್ತು ಶಿಲ್ಪಿಗಳು ವಾಸ್ತುಶಿಲ್ಪ ಪ್ರಯೋಗಗಳನ್ನು ಪರ್ಯಾಯವಾಗಿ ಬಳಸಿ ಅವಶ್ಯಕತೆ ಅಗತ್ಯತೆಗನುಗುಣವಾಗಿ ಬಲದಾವಣೆಗೈದದ್ದು ವಿಶೇಷ.



ಕಮಲನಾರಾಯಣ ದೇವಾಲಯದ ಕಕ್ಷಾಸನದಲ್ಲಿ ರೇಖಾ ನಾಗರ ಹಾಗೂ ನಾಗರ ಶಿಖರಗಳ ಮಾದರಿ ಉಬ್ಬು ಕೆತ್ತನೆ



ರೇಖಾ ನಾಗರ ಶಿಖರ ಹಾಗೂ ಮುಕ್ತಮಂಟಪ, ಹೂಲಿ



ಗೋಡೆಯಲ್ಲಿ ದ್ರಾವಿಡ ಶಿಖರ ಉಬ್ಬುಶಿಲ್ಪ ಹಾಗೂ ರೇಖಾ ನಾಗರ ಶೈಲಿ ಕೀರ್ತಿಮುಖ, ಶಿವದೇವಾಲಯ ನಡಗಾಂವ್

ಆಕರ ಗ್ರಂಥಗಳು

೧. ಕಾಮತ್ ಎಸ್.ಯು. (ಸಂ) ಬೆಳಗಾವಿ ಜಿಲ್ಲಾ ಗೆಝೆಟಿಯರ್, ಬೆಂಗಳೂರು, ೧೯೭೬.

೨. ಬೆಳಗಾವಿ ಜಿಲ್ಲೆಯಾದ್ಯಂತ ಕೈಗೊಂಡ ಕ್ಷೇತ್ರ ಕಾರ್ಯ.

೩. Michele Meister "Vernacular Architecutre and Rhetoric of Re-making" in Thiagarajan Debuzah (ed.) Traditional and vernacular architecture (Proceedings of a seminar), Madras, 2001, P-13.

೪. Ajay Sinha "Architectural Intervention in Saxred Structures" Journal of Society of Architecutral Historians, 1996, pp 382.

೫. Rajasekhara S., Architecture of Karnataka, Dharawad, 1991, p 72.

೬ A. Rossi, The architecutre of a City, Cambridge, 1982, p 35.

೭೮

ಕದಂಬರ ಅರತಲಗದ್ದೆಯ ಕಂಚಿನ ಸಿಂಹ

ಎಸ್.ಜಿ. ಸಾಮಕ್* ಎಸ್. ಮುರುಗನ್**

ಆದಿ ಕಾಲದಿಂದಲೂ ಸಿಂಹ ಮನುಷ್ಯನ ಆಲೋಚನಾ ಕ್ರಮಗಳ ಮೇಲೆ ಮಹತ್ತರ ಪ್ರಭಾವ ಬೀರುತ್ತ ಬಂದಿದೆ. ಅಂದಿನಿಂದ ಇಂದಿನವರೆಗೂ ಸಂಸ್ಕೃತಿ, ಜನಾಂಗ ಮತ್ತು ರಾಷ್ಟ್ರೀಯತೆಗಳ ಮೇಲೆ ಸಿಂಹ ಬೀರಿರುವ ಪ್ರಭಾವಶಾಲಿತ್ವವನ್ನು ವಿಶೇಷವಾಗಿ ನಾವು ಗುರುತಿಸಬಹುದು.

ಸಿಂಧೂ ನಾಗರೀಕತೆ ಮತ್ತು ಮೆಸಪೊಟೋಮಿಯಾ ನಾಗರೀಕತೆಗಳ ಮಧ್ಯ ಒಂದು ಸಮಕಾಲೀನತ್ವ ಇದ್ದಾಗ್ಯೂ ಕೂಡ ಸಿಂಧೂ ಜನಕ್ಕೆ ಸಿಂಹದ ಕುರಿತು ತಿಳುವಳಿಕೆ ಇರಲಿಲ್ಲ ಎಂಬಂತೆ ಕಾಣುತ್ತದೆ. ಸಿಂಧೂ ಜನರ ಮುದ್ರೆಗಳಲ್ಲಿ ಹುಲಿ ಮತ್ತು ಎರಡು ಹುಲಿಗಳೊಡನೆ ಹೋರಾಡುತ್ತಿರುವ ಮಾನವ ಚಿತ್ರಗಳು ಕಂಡು ಬರುತ್ತವೆಯೇ ಹೊರತು ಸಿಂಹದ ಚಿತ್ರಗಳು ಸಂಪೂರ್ಣ ಗೈರು ಹಾಜರಾಗಿವೆ. ಆದರೆ ಇದೇ ಮಾದರಿಯಲ್ಲಿ ಮೆಸಪೊಟೋಮಿನ ಗಿಲ್ಗಮಿಷ್ *(Gilgamesh)* ಅರಸ ಸಿಂಹದ ಜೊತೆ ಕಾದಾಡುವ ಮುದ್ರಾಚಿತ್ರಗಳು ಕಂಡುಬರುತ್ತವೆ. ಋಗ್ವೇದ [RV 10.28.10] ದಲ್ಲಿ[೧] ಸಿಂಹದ ಕುರಿತು ಉಲ್ಲೇಖವಿದ್ದರೂ ಸಿಂಧೂ ನಾಗರೀಕತೆಯಲ್ಲಿ ಅದರ ಚಿತ್ರಗಳು ಬಳಕೆಯಾಗಿಲ್ಲ ಎಂಬುದು ಗಮನಿಸಬೇಕಾದ ಸಂಗತಿ[೨].

ಕ್ರಿ.ಪೂ. ೩ನೇ ಶತಮಾನದಲ್ಲಿ ಮೌರ್ಯ ಅರಸ ಸಾಮ್ರಾಟ ಅಶೋಕನ ಆಳ್ವಿಕೆಯಲ್ಲಿ ಸಿಂಹ ಲಾಂಛನವನ್ನು ನಾವು ಮೊದಲ ಬಾರಿ ಕಾಣುತ್ತೇವೆ. ಸಾರನಾಥದಲ್ಲಿ ಸ್ಥಾಪಿಸಿರುವ ನಾಲ್ಕು ಮುಖದ ಸಿಂಹಗಳು ಆ ಕಾಲದಲ್ಲಿ ಧರ್ಮ ಚಕ್ರವನ್ನು ತಮ್ಮ ಮೇಲೆ ಹೊತ್ತು ನಿಂತಿದ್ದು, ಇದೇ ಬಗೆಯ ನಾಲ್ಕು ಮುಖದ ಸಿಂಹ ಲಾಂಛನ ಸಾಂಚಿ ಸ್ತೂಪದಲ್ಲಿ ಪುನರಾವರ್ತನೆಗೊಂಡಿದೆ. ನಂತರದ ಕಾಲದಲ್ಲಿ ಈ ಶಿಲ್ಪಕಲೆಯನ್ನು ಶಾತವಾಹನ ಅರಸರು ಕೂಡ ಸ್ತೂಪದ ಮಹಾದ್ವಾರಗಳ ಮೇಲೆ ಬಳಕೆ ಮಾಡಿದರು.

ಗುಪ್ತರು ಸಿಂಹ ಲಾಂಛನವನ್ನು ತಮ್ಮ ಸಾಮ್ರಾಜ್ಯದಲ್ಲಿ ಹೆಚ್ಚಾಗಿ ಬಳಕೆ ಮಾಡಿದರು.

ಕರ್ನಾಟಕದಲ್ಲಿ ಮೌರ್ಯರ ಕಾಲದ ನಯಗೊಳಿಸಿದ ಮರಳುಗಲ್ಲಿನ ಭಂಗಗೊಂಡ ಸಿಂಹದ ಶಿಲ್ಪ ಕಲಬುರ್ಗಿ ಜಿಲ್ಲೆಯ, ಸನ್ನತಿಯ ಕನಗನಹಳ್ಳಿ ಸ್ತೂಪ ಸ್ಥಳದಲ್ಲಿ (ಅಧೋಲೋಕ ಮಹಾಚೈತ್ಯ) ದೊರೆತ ಅತಿ ಪುರಾತನ ಶಿಲ್ಪ[೩]. ಸಿಂಹದ ಸೂಕ್ಷ್ಮ ವಿವರಣದ, ಸಿಂಹದಂತೆ ಅಥವಾ ಸಿಂಹ ಸಮಾನವಾದ ಅದ್ಭುತ ಚಿತ್ರಗಳನ್ನು ಸಹ ನಾವು ಶಾತವಾಹನರ ಕಾಲದ ಶಿಲ್ಪಗಳಲ್ಲಿ ಅದೇ ಚೈತ್ಯದಲ್ಲಿ ಕಾಣಬಹುದು.

ಮುಂದೆ ಭಾರತ ಉಪ ಖಂಡದಲ್ಲಿ ಕುಶಾನರು, ಶಾತವಾಹನರು ಮತ್ತು ಗುಪ್ತರು ಸಿಂಹ ಪ್ರತಿಮೆಗಳನ್ನು ಹೆಚ್ಚೆಚ್ಚಾಗಿ ಸ್ಥಾಪಿಸುತ್ತ ನಡೆದರು. ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ಇವರಿಂದಾಗಿ ಸಿಂಹವು ಸೊಗಸಾದ ಪ್ರತಿಮಾ ರೂಪವಾಗುತ್ತಾ ಹೋಯಿತು. ನಂತರ ಈ ಚಿನ್ಹೆಗಳು ಅರ್ಥವತ್ತಾದ ಅಸಂಖ್ಯಾತ ಉಬ್ಬು ಶಿಲ್ಪಗಳಾಗಿ ಪರಿವರ್ತನೆಗೊಂಡು ಬೆಳೆಯಹತ್ತಿದವು. ವಿಶೇಷವಾಗಿ ಈ ಪ್ರಕ್ರಿಯೆ ಸಾಂಸ್ಥಿಕ ರಾಜಕಾರಣ, ನಾಗರೀಕತೆ, ಸ್ಥಳ ಪುರಾಣಗಳ ಮೂಲಕ ಪ್ರವರ್ಧಮಾನಕ್ಕೆ ಬಂತು.

ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಕೂಡ ಸಿಂಹ ಲಾಂಛನದ ಬಳಕೆ ಕಡಿಮೆಯಾಗಲಿಲ್ಲ. ವಿಜಯನಗರದ ಅರಸರು ಸಿಂಹದ ಪ್ರಾಮುಖ್ಯತೆ ಮತ್ತು ಪ್ರಸ್ತುತತೆಯನ್ನು ಸಾಂಕೇತಿಕ ರೂಪದಲ್ಲಿ ಬಳಸುತ್ತ ಸಾಗಿದ್ದು ಕಂಡು ಬರುತ್ತದೆ. ವಿರುಪಾಕ್ಷೇಶ್ವರ ದೇವಸ್ಥಾನವೊಂದರಲ್ಲೇ ಸ್ಥಾಪಿಸಿರುವ ಸುಮಾರು ೨೦೫ ಸಿಂಹ ಪ್ರತಿಮೆಗಳು ನಾನಾ ಭಂಗಿಯಲ್ಲಿ, ನಾನಾ ವಿನ್ಯಾಸದಲ್ಲಿ, ನಾನಾರ್ಥಗಳನ್ನು ಸ್ಫುರಿಸುವ ರೀತಿಯಲ್ಲಿರುವುದು ಈ ಸಂಗತಿಯನ್ನು ಸ್ಪಷ್ಟೀಕರಿಸುತ್ತದೆ. ವಿಜಯನಗರದ ಅರಸರು, ೨೦೫ ಸಿಂಹ ಪ್ರತಿಮೆಗಳನ್ನು ನಿರ್ಮಿಸಿರುವ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಕೇವಲ ೬೩ ಇತರೆ ಪ್ರಾಣಿಗಳ ಪ್ರತಿಮೆಗಳನ್ನು ನಿರ್ಮಿಸಿರುವುದು ಅವರು ಸಿಂಹಲಾಂಛನಕ್ಕೆ ಕೊಟ್ಟ ಮಹತ್ವವೇನೆಂಬುದನ್ನು ಸ್ಪಷ್ಟಪಡಿಸುತ್ತದೆ[೪].

* ನಿವೃತ್ತ ಉಪನ್ಯಾಸಕರು, ಶಿವಮೊಗ್ಗ.
** ಉಪ ಪೊಲೀಸ್ ಮಹಾ ನಿರೀಕ್ಷಕರು, ಬಳ್ಳಾರಿ.

ಶಿವಮೊಗ್ಗ ಜಿಲ್ಲೆ, ಸೊರಬ ತಾಲೂಕಿನ ಜಡೆ ಸಮೀಪದ ಅರತಲಗದ್ದೆಯಲ್ಲಿ ದೊರೆತ ಕದಂಬರ ಕಾಲದ ತಾಮ್ರಪತ್ರ ಶಾಸನಭಂಡಾರದ ಜೊತೆ ಈ ಕಂಚಿನ ಸಿಂಹವು ಕೂಡ ಬೆಳಕಿಗೆ ಬಂದಿದೆ. ಈ ಕಾರ್ಯವನ್ನು ಡಾ. ಎಸ್.ಜಿ. ಸಮಕ್, ಡಾ. ಜಗದೀಶ್ ಅಗಸೆ ಬಾಗಿಲವರ್ ಹಾಗೂ ಶ್ರೀ ರಮೇಶ್ ಜೋಯಿಸ್ ಅವರು ಪತ್ತೆಮಾಡಿದ್ದಾರೆ. ಈ ಶಾಸನಭಂಡಾರದಲ್ಲಿ ಒಟ್ಟು ಆರು ತಾಮ್ರ ಶಾಸನಗಳು ಸೇರಿವೆ. ಅರತಲೆಗದ್ದೆ ಅಪೂರ್ವ ತಾಮ್ರ ಶಾಸನಗಳ ಭಂಡಾರವೆನ್ನುವ ಕಿರುಹೊತ್ತಿಗೆಯನ್ನು ಈಗಾಗಲೇ ಪ್ರಕಟಿಸಿದ್ದಾರೆ. ಜೊತೆಗೆ ಪ್ರಿಯವೃತ ವರ್ಮ ಮತ್ತು ಪುಳಿಂದವರ್ಮರೆಂಬ ಇಬ್ಬರು ಹೊಸ ಕದಂಬ ರಾಜರನ್ನು ಪರಿಚಯಿಸಿದ್ದಾರೆ. ಇದು ಕದಂಬರ ಇಲ್ಲಿಯವರೆಗೆ ಗೊತ್ತಿರದ ವಂಶಾವಳಿ ಮಾಹಿತಿಯನ್ನೂ ನೀಡುತ್ತದೆ. ಈ ಶಾಸನದಿಂದ ದೊರೆಯುವ ಅತಿ ಮುಖ್ಯ ಮಾಹಿತಿ ಏನೆಂದರೆ, ಕದಂಬರ ಪುಲಿಂದವರ್ಮನು ಸಮಾನಾಂತರ ಅಧಿಕಾರವನ್ನು ಉಚ್ಚಂಗಿಯಿಂದ ನಡೆಸುತ್ತಿದ್ದನೆಂಬುದು[೫].

ಅರತಲಗದ್ದೆಯು ವರದಾ ನದಿಯ ದಂಡೆಯ ಮೇಲೆ ಇರುವ ಒಂದು ಹಳ್ಳಿ. ಇದು ಬನವಾಸಿಯಿಂದ ಸುಮಾರು ೧೭ ಕಿ.ಮೀ. ಹಾಗೂ ತಾಳಗುಂದದಿಂದ ೪೬ ಕಿ.ಮೀ. ಅಂತರದಲ್ಲಿದೆ. ಆ ಊರಿನ ಹಿರಿಯರಾದ ದಿ.ವೀರಣ್ಣ ಗೌಡರು ತಮ್ಮ ಹೊಲದಲ್ಲಿದ್ದ ಕಲ್ಲಾಳೆ ಎಂಬ ಸ್ಥಳವನ್ನು ಸಮತಟ್ಟು ಮಾಡುತ್ತಿದ್ದಾಗ ಅವರಿಗೆ ಈ ಶಾಸನ ಭಂಡಾರ ದೊರೆತಿತ್ತು. ಸ್ಥಳಿಯರ ಮಾಹಿತಿಯಂತೆ ಆ ಸ್ಥಳದಲ್ಲಿ ಹಿಂದೊಂದು ದೇವಾಲಯವಿತ್ತೆಂದು ತಿಳಿದು ಬರುತ್ತದೆ. ತಾಮ್ರ ಶಾಸನ ಮತ್ತು ಕಂಚಿನ ಶಿಲ್ಪ ಪುರಾತನ ಒಂದು ದೇವಾಲಯದ ಭಾಗವಾಗಿರುವುದು ಸ್ಪಷ್ಟವಾದ ವಿಚಾರವಾದರೂ ಈಗ ಆ ದೇವಾಲಯ ಅಸ್ಥಿತ್ವದಲ್ಲಿರುವುದಿಲ್ಲ.

ಇಲ್ಲಿನ ಕಂಚಿನ ಪ್ರತಿಮೆಯ ಅಂದಾಜು ಆಯಾಮಗಳೆಂದರೆ, ಎತ್ತರ ೬.೩೭೨ ಇಂಚು, ಉದ್ದ ೪.೭೫ ಇಂಚು ಮತ್ತು ಅಗಲ ೨ ಇಂಚು. ಈ ಕಂಚಿನ ಪ್ರತಿಮೆಯನ್ನು ಕಳೆದು ಹೋದ ಮೇಣದ ಎರಕ ವಿಧಾನದಲ್ಲಿ (Lost wax method) ತಯಾರಿಸಲಾಗಿದೆ. ಇದರ ಭಾರ ಸುಮಾರು ೫೭೩ ಗ್ರಾಂಗಳಷ್ಟಿದೆ.

ಇವು ಮಣ್ಣಿನಲ್ಲಿ ದೊರೆತ ನಿಕ್ಷೇಪಗಳಾದ್ದರಿಂದ ಕೆಂಧೂಳು, ಕೆಂಪು ಬಣ್ಣಗಳ ಗಾಢ ಬೂದು ಹಸಿರಿನಲ್ಲಿ ಮಿಶ್ರಿತಗೊಂಡು ಪುರಾತನತೆಯ ಸಿರಿವಂತಿಕೆಯನ್ನು ಎತ್ತಿ ತೋರುತ್ತವೆ. ಇದರ ಬಲಪಾದವನ್ನು ಗಟ್ಟಿಯಾಗಿ ಜೋಡಿಸಲು ಸಿಲಂಡಿನಾಕಾರದ ಪಾದವನ್ನು ಕೆತ್ತಿ, ಪಾದದ ಗಂಟನ್ನು ತಳಕ್ಕೆ ಜೋಡಿಸಲಾಗಿದೆ. ಎಡಗಾಲಿನ ಮೊಣಕಾಲ ಕೆಳಪಾದ ಮುರಿದು ಹೋಗಿದ್ದು, ಜೊತೆಯಲ್ಲಿ ಪ್ರತಿಮೆಯ ಮೂಗಿನ ತುದಿ ಭಂಗಗೊಂಡಿದೆ. ಇದರ ಮುಖ ಭಾವ ಬೆದರಿಸುವ ರೀತಿಯಲ್ಲಿರುವುದು ವಿಶೇಷ.

ಇದರ ಕೆಲವು ವಿಶೇಷಗಳು

* ಸ್ಪಷ್ಟವಾಗಿ ರೇಖಾಕೃತಿಗೊಂಡಿರುವ ತುಟಿ, ಮೇಲ್ದವಡೆಯಲ್ಲಿ ಎರಡು ದೊಡ್ಡದಾದ ಮತ್ತು ಬಾಗಿದ ಕೋರೆ ಹಲ್ಲುಗಳು, ಕೆಳ ದವಡೆಯಲ್ಲಿ ಎರಡು ಚಿಕ್ಕ ಹಲ್ಲುಗಳು.
* ಗುಂಪು ಗುಂಪಾಗಿ ಇರುವ ಎರಡೆಳೆಯ ಕೇಸರ.
* ಭವ್ಯವಾದ ಮುಂಭಾಗ, ಸ್ವಲ್ಪ ಮಟ್ಟಿಗೆ ಕುಗ್ಗಿ ನಿಂತಿರುವ ಬಲವಾದ ಕಾಲುಗಳು, ಪಂಜುಗಳ ಪಾದಗಳು.
* ಬೃಹತ್ತಾಗಿ, ಅರೆ ನಿಮಿರಿದ ಶಿಶ್ನ ಚಿನ್ಹೆಗಳು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಸಿಂಹವು ಸಾಧಾರಣ ಗಾತ್ರದಲ್ಲಿದ್ದರೂ ಇದು ಮಂದ ಬೆಳಕಿನ ಚಿಕ್ಕ ದೇವಾಲಯದಲ್ಲೂ ತನ್ನ ಉಪಸ್ಥಿತಿಯ ಪ್ರಭಾವ ಬೀರುತ್ತದೆ.

ತಲೆಯ ನೆತ್ತಿಯ ಮೇಲೆ ಅರೆ ವೃತ್ತದ ಚಿಕ್ಕ ರಂದ್ರವನ್ನು ಕೊರೆಯಲಾಗಿದೆ. ಈ ರಂದ್ರವನ್ನು ಎಷ್ಟು ಕರಾರುವಕ್ಕಾಗಿ ಹಾಕಲಾಗಿದೆ ಎಂದರೆ, ಸಿಂಹವನ್ನು ಇದರಿಂದ ನೇತಾಡಿಸಿದಾಗ ಅದು ಸಮಾನಾಂತರವಾಗಿ ನಿಲ್ಲುತ್ತದೆ. ಬೆನ್ನ ಭಾಗದಲ್ಲಿ ಒಂದು ಸಪಾಟಾದ ಮೊನೆ [ಮುಳ್ಳು] ಇದ್ದು, ಇದು ಭಾಲದ ಹತ್ತಿರ ಚಾಚಿಕೊಂಡಿರುತ್ತದೆ. ಸಣ್ಣ ವೃತ್ತಾಕಾರದ ರಂದ್ರವೊಂದನ್ನು ಬೆನ್ನಿನ ಹಿಂಭಾಗದಲ್ಲಿ ಹಾಕಲಾಗಿದೆ. ಹಿಂಬದಿಯಲ್ಲಿ ಹಾಕಿದ ರಂದ್ರದ ಹೊಂದಾಣಿಕೆಯು ಪೂರ್ವ ಪಲ್ಲವರ ಕಾಲದ ಯಕ್ಷಿಕಂಚು ಪ್ರತಿಮೆಗಳಲ್ಲಿ ಕಂಡು ಬರುತ್ತದೆ[೬].

ಇಲ್ಲಿ ನಾವು ಅಭಿವ್ಯಕ್ತಿಗೊಳಿಸುತ್ತಿರುವ ವಿಚಾರವೇನೆಂದರೆ, ಪುರಾತನ ಕಾಲದಲ್ಲಿ ಸಿಕ್ಕಿರುವಂತಹ ಇತರೆ ಕಂಚಿನ ನಂದಾ ದೀಪಗಳಂತೆ ಸಿಂಹವು ಪ್ರಮುಖವಾದ ಹರಕೆಯ ದೀಪವಾಗಿದೆ[೭] ಎಂಬುದು. ಹಿಂಬದಿಯಲ್ಲಿ ಚುಚ್ಚಿರುವ ಮುಳ್ಳು

ಪ್ರತ್ಯೇಕಿಸಬಹುದಾದ ಬಾಲವು ತಲೆ ಕೆಳಗಾಗಿ ಬರೆಯುವ ಕನ್ನಡದ 'ಳ' ಅಕ್ಷರದಂತಿದೆ.[೮] ಇಲ್ಲಿ ಬಾಲವನ್ನು ಪ್ರತ್ಯೇಕವಾಗಿ ವಿನ್ಯಾಸಗೊಳಿಸಿ ನಂತರ ಜೋಡಿಸಿರುವುದು, ಆ ರೀತಿಯ ಆಕೃತಿಯಲ್ಲಿರುವ ಬಾಲವು ನಿರ್ಧಿಷ್ಠ ಧರ್ಮಾಚರಣೆ ಅಥವಾ ರಾಜಕೀಯ ಮಹತ್ವನ್ನು ಹೊಂದಿರಬಹುದೆಂಬುದನ್ನು ಸೂಚಿಸುತ್ತದೆ.

ನಮ್ಮ ಊಹೆ, ಮೌರ್ಯರ ಕಾಲದ ಸಿಂಹಗಳು ಸಾಂಕೇತಿಕವಾಗಿ ಧರ್ಮ ಚಕ್ರವನ್ನು ಹೊತ್ತಿರುವುದನ್ನು ಸೂಚಿಸುವ ಸಲುವಾಗಿ ವಿಶಿಷ್ಟ ರೀತಿಯ ಸುತ್ತುವರಿದ [ವೃತ್ತಾಕಾರದ] ಬಾಲಾಕೃತಿಯನ್ನು ನಂತರದ ಸಿಂಹ ಶಿಲ್ಪಗಳಲ್ಲಿ ವಿನ್ಯಾಸಗೊಳಿಸಲಾಗಿದೆ ಎಂಬುದು. ಈ ವಿಶೇಷ ಗುಣ ಲಕ್ಷಣಗಳನ್ನು ನಾವು ಸಾಂಚಿಯಲ್ಲಿ ಗುಪ್ತರ ಕಾಲದ ದೇವಾಲಯ ೧೭ರಲ್ಲಿ ಕಾಣಬಹುದಾಗಿದೆ [425 CE][೯].

ಇದುವರೆಗೂ ಚರ್ಚಿಸಿದ ಈ ಎಲ್ಲಾ ಸಂಗತಿಗಳು ಹೊಯ್ಸಳರ ಶಿಲ್ಪ ಕಲೆಯಲ್ಲಿ ಭವ್ಯವಾಗಿ ಮೂಡಿ ಬಂದಿವೆ. ಈ ಶಿಲ್ಪ ಕಲೆಗಳಲ್ಲಿ ನಾಯಕ [ರಾಜ] ನು ಸಿಂಹದ ಜೊತೆಗೆ ಕಾದಾಡುತ್ತಿರುವ ಮೂರ್ತಿಗಳು ಸ್ಪಷ್ಟವಾಗಿ ಮೂಡಿ ಬಂದಿವೆ ಹಾಗೂ ಕದಂಬರ ಬಂಗಾರದ ನಾಣ್ಯಗಳಲ್ಲಿಯೂ (ಚಿತ್ರ ೩) ಸಹ ಸಿಂಹದ ಪ್ರಾತಿನಿಧ್ಯವಿದೆ[೧೦].

ಗುಪ್ತರ ಕಾಲದ ಸಿಂಹ ಲಾಂಛನಗಳ ವೈಶಿಷ್ಟ್ಯತೆಗಳಿಗಿಂತ ತುಂಬಾ ಭಿನ್ನವಾಗಿದ್ದು, ಸಾಂಚಿಯಲ್ಲಿನ ೧೭ನೇ ದೇವಸ್ಥಾನದಲ್ಲಿರುವ ಸಿಂಹಕ್ಕೆ ಹೋಲಿಕಯಿರದ ಅಥವಾ ಮಣ್ಣಿನಿಂದ ಮಾಡಿದ ಕಂಬದ ಮೇಲೆ ನಿಂತಿರುವ ಮೆಟ್ರೋಪಾಲಿಟಿಯನ್ ವಸ್ತು ಸಂಗ್ರಹಾಲಯದಲ್ಲಿರುವ ಸಿಂಹದ ಕಲಾಕೃತಿಗೆ[೧೧] ಹೋಲಿಕೆಯಿರದಷ್ಟು ವೈಶಿಷ್ಟ್ಯತೆಗಳಿಂದ ಕೂಡಿವೆ.

ಈ ಕಂಚಿನ ಪ್ರತಿಮೆಗಳು ಅನನ್ಯ ವಿಶೇಷತೆಗಳಿಂದ ಕೂಡಿದ್ದು, ಈ ಸಿಂಹದ ಪ್ರತಿಮೆಯ ಹೊರ ಕಿವಿಗಳು ಅಂಡಾಕಾರದಿಂದ ಕೂಡಿರುವುದಲ್ಲದೆ ವಿಶೇಷ ಆಕೃತಿಯಲ್ಲಿದ್ದು, ಸುತ್ತಲೂ ಉಬ್ಬಿಕೊಂಡಿರುವ ರೀತಿಯಲ್ಲಿ ಗೋಚರಿಸುತ್ತದೆ. ಇದರ ಕಣ್ಣಿನ ಹುಬ್ಬುಗಳು "W" ಆಕೃತಿಯಲ್ಲಿದ್ದು, ಇದನ್ನು ಗಾಢವಾದ ಹಾಗೂ ಅಪರೂಪದ ಸಂರಚನೆಯಿಂದ ನಿರ್ಮಿಸಲಾಗಿದೆ. ಇದರ ತೆರೆದ ಬಾಯಿಯ ಮೆಲ್ದವಡೆಯಲ್ಲಿ ಎರಡು ಕೋರೆ ಹಲ್ಲುಗಳು, ಕೆಳ ದವಡೆಯಲ್ಲಿ ಎರಡು ಚಿಕ್ಕ ಕೋರೆ ಹಲ್ಲುಗಳು ಗೋಚರಿಸುತ್ತವೆ. ಕೆನ್ನೆಯ ಮೇಲೆ ದಟ್ಟವಾಗಿ ಒಂದಕ್ಕೊಂಡು ಅಂಟಿಕೊಂಡಿರುವಂತೆ ಕಂಡು ಬರುವ ಕೇಶಗಳು ಕೊರಳ ಕಡೆಗೆ ಹೋದಂತೆ ಉದ್ದಾವಾಗಿ, ದಟ್ಟವಾಗಿ ಕಾಣುವ ಹಾಗೆ ಸ್ಪಷ್ಟವಾಗಿ ಕೆತ್ತಲಾಗಿದೆ.

ಪ್ರತಿಮಾ ವಿಜ್ಞಾನದಲ್ಲಿ ನಿಧಾನವಾಗಿ ಈ ಎಲ್ಲ ಗುಣ ಲಕ್ಷಣಗಳನ್ನು ಸಂಕೀರ್ಣಗೊಳಿಸುವ ಅಥವಾ ಸರಳಗೊಳಿಸುವಿಕೆಗಳೆರಡನ್ನೂ ಇದರ ನಂತರದ ಅವಧಿಯಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ; ೧೦ನೇ ಶತಮಾನದ ನಂತರದ ಶಿಲ್ಪಾ ಕಲಾಕೃತಿಗಳಲ್ಲಿ ಕೋರೆ ಹಲ್ಲು ದಪ್ಪನಾದ ವಸಡುಗಳಲ್ಲಿ ಸೇರಿದಂತೆ ಕೆತ್ತಲಾಗಿದ್ದು, ಅವುಗಳ ಗಾತ್ರ ಮತ್ತು ಸಂಖ್ಯೆಗಳನ್ನು ಹೆಚ್ಚಿಸಿರುವುದಲ್ಲದೇ, ಕಿವಿಗಳನ್ನು ಮಾವಿನ ಎಲೆಗಳಿಗೆ ಹೋಲುವಂತೆ ಕೆತ್ತಿ ಸಂಕೀರ್ಣಗೊಳಿಸಲಾಗಿದೆ. ಜೊತೆಗೆ ಸಿಂಹ ಕೇಸರಿಗಳನ್ನು ಸರಳಗೊಳಿಸಲಾಗಿದೆ.

ತಾಳಗುಂದದ ಪ್ರಣವೇಶ್ವರ ದೇವಸ್ಥಾನದಲ್ಲಿ ಭಾರತೀಯ ಪುರಾತತ್ವ ಇಲಾಖೆ ನಡೆಸಿದ ಉತ್ಖನನದ ಸಂದರ್ಭದಲ್ಲಿ ದೊರೆತ ದೇವಸ್ಥಾನದ ತುಂಡುಗಳಲ್ಲಿನ ಮೇಲೆ ಎರಡುತಲೆಗಳಿರುವ ಸಿಂಹದ ಚಿತ್ರಗಳು (ಚಿತ್ರ–೪) ದೊರೆತಿವೆ. ಇದರ ಕಾಲ ಸುಮಾರು ಕ್ರಿ.ಶ. ೪ನೇ ಶತಮಾನ ಎಂದು ಅಂದಾಜಿಸಲಾಗಿದೆ. ಈ ಚಿತ್ರಗಳು ೪ನೇ ಶತಮಾನದ ಉತ್ತರಾರ್ಧದಿಂದ ೫ನೇ ಶತಮಾನದ ಪೂರ್ವಾರ್ಧದ ಕಾಲಾವಧಿಯಲ್ಲಿ ನಿರ್ಮಾಣಗೊಂಡ ಶಿಲಾಶಾಸನದ ಕೆಳಭಾಗದಲ್ಲಿ ಕಂಡು ಬಂದಿವೆ[೧೨].

ಶಾತವಾಹನರ ಕಾಲದ ಸಿಂಹಾಕೃತಿಗಳ ಪ್ರಭಾವ ತಾಳಗುಂದದಲ್ಲಿ ದೊರೆತ ಸಿಂಹಗಳ ಮೇಲೆ ಸ್ಪಷ್ಟವಾಗಿ ಆಗಿದೆಯೆಂಬುದನ್ನು ಗ್ರಹಿಸಬಹುದು. ಆದಾಗ್ಯೂ ಇಲ್ಲಿ ಅಂದರೆ ದಕ್ಷಿಣ ಭಾಗದಲ್ಲಿ ಕಟುವಾದ, ತೀಕ್ಷ್ಣವಾದ ಕೋರೆ ಹಲ್ಲುಗಳಿರುವ ಮತ್ತು ರೆಕ್ಕೆಗಳ ಮಾದರಿಯ ಕಿವಿಗಳಿರುವ ಸಿಂಹಗಳನ್ನು ಕೆತ್ತಲಾಗಿದೆ. ಹಾಗೇ ಸಿಂಹ ಕೇಸರಿಗಳು ಒಂದಕ್ಕೊಂದು ಅಂಟಿಕೊಳ್ಳದಂತೆ ಬಿಡಿ ಬಿಡಿಯಾಗಿ ಗೋಚರಿಸುವ ರೀತಿಯಲ್ಲಿ ನಿರ್ಮಿಸಲಾಗಿದೆ. ಈ ಚಿತ್ರಗಳಲ್ಲಿ ಕಂಡು ಬರುವ ಸಿಂಹದ ತುಟಿಗಳು ತುಂಬಾ ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಿದೆ. ದಕ್ಷಿಣ ಭಾರತದ ಅರತಲಗದ್ದೆಯ ಕಂಚಿನ ಸಿಂಹ ಪ್ರತಿಮೆಗಳು ಆನುವಂಶಿಕವಾಗಿ ಇದೇ ಮಾದರಿಯಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣಬಹುದು.

ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ನಡೆದ ಉತ್ಖನನದ ಸಂದರ್ಭದಲ್ಲಿ ಸಿಕ್ಕಿರುವ ಕ್ರಿ.ಶ. ೩ ಮತ್ತು ೫ನೇ ಶತಮಾನಗಳ ಕದಂಬರ ಕಾಲದ ಮಣ್ಣಿನ ಮತ್ತು ಮರಳುಗಲ್ಲಿನ ಸಿಂಹದ ತಲೆಗಳು (ಚಿತ್ರ ೫ & ೬) ಆಟಿಕೆ ವಸ್ತುಗಳಾಗಿ



1 The Aratalagadde Lion - Profile view



2. Aratalagadde Lion - front view



ಬಳಕೆಯಾಗಿರಬಹುದೆಂದು ಊಹಿಸಲಾಗಿದೆ. ಈ ಸಿಂಹಗಳ ಲಕ್ಷಣಗಳು ಶಾತವಾಹನರ ಕಾಲದ ಸಿಂಹದ ತಲೆಗಳ ಕಲಾಕೃತಿಗಳಿಗಿಂತ ತೀರಾ ಭಿನ್ನವಾಗಿವೆ ಮತ್ತು ಕದಂಬರ ಸಿಂಹಗಳಿಗೆ ಒಂದಷ್ಟು ಸಾಮ್ಯತೆಯಿರುವುದನ್ನು ಗುರುತಿಸಬಹುದು.

ಚಾಲುಕ್ಯ ಮತ್ತು ಪಲ್ಲವರ ಕಲಾತ್ಮಕ ಸಂಬಂಧಗಳು

ಚಾಲುಕ್ಯ ಮತ್ತು ಪಲ್ಲವರ ಕಲಾತ್ಮಕ ಸಂಬಂಧಗಳ ಅಧ್ಯಯನಕ್ಕಾಗಿ ಲೇಖಕರು, ಐಹೊಳೆ, ಬಾದಾಮಿ, ಪಟ್ಟದಕಲ್ಲಿಗೆ ಭೇಟಿ ನೀಡಿದಾಗ ಈಗಾಗಲೇ ಹೆಸರಿಸಿರುವ ಸಿಂಹದ ಕುರಿತ ಪುರಾತನ ಪ್ರತಿಮಾ ಶಾಸ್ತ್ರದ ಲಕ್ಷಣಗಳು ಈ ಮೂರೂ ಪ್ರದೇಶಗಳಲ್ಲಿ ದೊರೆತ ಶಿಲ್ಪಕಲೆಗಳಲ್ಲಿ ಕಂಡು ಬಂದಿದೆ.

ಐಹೊಳೆಯ ದುರ್ಗಾ ದೇವಸ್ಥಾನದ ಮತ್ತು ೭ ಮತ್ತು ೮ನೇ ಶತಮಾನದ ಪಟ್ಟದಕಲ್ಲಿನ ಮುಖ್ಯ ದೇವಾಲಯಗಳ[೧೩] ಸಮುಚ್ಚಯದ ಸಿಂಹದ ಆಕೃತಿಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಲು ಇಲ್ಲಿ ಚಿತ್ರಗಳನ್ನು ನೀಡಿದ್ದಾರೆ (ಚಿತ್ರ – ೭, ೮). ಈ ಎರಡೂ ಸಿಂಹಗಳಲ್ಲಿ ಅರತಲಗದ್ದೆಯಲ್ಲಿನ ಕಂಚಿನ ಸಿಂಹಕ್ಕೆ ಸಾಮಾನ್ಯ ಹೋಲಿಕೆಗಳಿರುವುದು ಕಂಡು ಬರುತ್ತದೆ.

3.



Photo courtesy: www.indianetzone.com



4. Fragments from the Southern Balustrade which have been reset



14. Lion seal on the Aretalagadde plates

ಕ್ರಿ.ಶ. ೫೭೮ ರಲ್ಲಿ ನಿರ್ಮಾಣಗೊಂಡಿದೆ ಎನ್ನಲಾದ ಬಾದಾಮಿಯ ೩ನೇ ಗುಹಾಂತರ ದೇವಾಲಯದಲ್ಲಿ ವಿಷ್ಣುವನ್ನು ನರಸಿಂಹ ಅವತಾರದಲ್ಲಿ ಕೆತ್ತಿರುವುದನ್ನು ಕಾಣಬಹುದು[೧೪] (ಚಿತ್ರ - ೯). ಈ ಶಿಲ್ಪ ಅರತಲಗದ್ದೆಯ ಕಂಚಿನ ಸಿಂಹದ ಮುಖವನ್ನು ಹೋಲುತ್ತದೆ. ಪಲ್ಲವರ ದೇವಸ್ಥಾನಗಳಲ್ಲಿ ಸಿಂಹಕ್ಕೆ ನೀಡಿರುವ ಪ್ರಾಮುಖ್ಯತೆ ಚಾಲುಕ್ಯರ ಈ ದೇವಸ್ಥಾನಗಳಲ್ಲಿ ಕಂಡು ಬರುವುದಿಲ್ಲ. ಇದೇ ಹೋಲಿಕೆಯ ಸಿಂಹದ ಶಿಲ್ಪಗಳನ್ನು ಪಲ್ಲವರ ಮಾಮಲ್ಲಪುರಂ ಶಿಲ್ಪಗಳಲ್ಲಿ ಕಾಣಬಹುದು. ಅಲ್ಲದೆ ಮೇಲೆ ತಿಳಿಸಿರುವ ಲಕ್ಷಣಗಳು ಪಲ್ಲವ ಸಿಂಹ ಕಲಾಕೃತಿಗಳಲ್ಲಿರುವುದನ್ನೂ ಗಮನಿಸಬಹುದು.

ಇತರೆ ಕಂಚಿನ ಸಿಂಹಗಳು

ಇಲ್ಲಿ ಸಿಂಹ ಎಂಬುದು ಒಂದು ವಸ್ತು ವಿಷಯವಾಗಿದ್ದು, ಕೇವಲ ಲಾಂಛನಗಳಲ್ಲದೇ ಇತರೆ ಬೇರೆ ಬೇರೆ ಉದ್ದೇಶಗಳಿಗಾಗಿಯೂ ಪೂರ್ವ ಕದಂಬರು ಮತ್ತು ಪೂರ್ವ ಪಲ್ಲವರು ಬಳಸುತ್ತಿದ್ದುದು ಕಂಡು ಬರುತ್ತದೆ. ಅಮೇರಿಕಾದ ನ್ಯೂಯಾರ್ಕಿನ ಮೆಟ್ರೋಪಾಲಿಟನ್ ವಸ್ತು ಸಂಗ್ರಹಾಲಯಕ್ಕೆ ಒಂದು ಕಂಚಿನ ಸಿಂಹದ ಪ್ರತಿಮೆಯನ್ನು ಪ್ರಸಿದ್ಧ ಗಣಿತ ಶಾಸ್ತ್ರಜ್ಞ ಹಾಗೂ ಕಲಾತ್ಮಕ ವಸ್ತುಗಳ ಸಂಗ್ರಹಕಾರನಾದ, ಸ್ಯಾಮುಯಲ್ ಎಲೆನ್‌ಬರ್ಗ್ [*ಅಳತೆ : ಎತ್ತರ ೩.೭೫ ಇಂಚು, ಅಗಲ ೨ ಇಂಚು, ಉದ್ದ ೨.೫ ಇಂಚು*] ಕಾಣಿಕೆಯಾಗಿ ನೀಡಿದ್ದು, ಇದು ಪಲ್ಲವ ಶೈಲಿಯದಾಗಿದ್ದು, ೮ನೇ ಶತಮಾನಕ್ಕೆ ಸಂಬಂಧಪಟ್ಟಿದೆ[೧೫]. ಈ ಮೆಟ್ರೋಪಾಲಿಟನ್ ವಸ್ತು ಸಂಗ್ರಹಾಲಯದ ಸಿಂಹ (ಚಿತ್ರ ೧೦) ಕೊಂಬುಗಳಿಂದ ಕೂಡಿದ್ದು, ಇದು ಸಿಂಹವಲ್ಲ "ವ್ಯಾಲ" ಎಂದೇ ನಾವು ತಿಳಿಯಬೇಕು. ನಮ್ಮ ಕಂಚಿನ ಸಿಂಹ ಪ್ರತಿಮೆಗೆ ಇದನ್ನು ಹೋಲಿಸಿ ಹೇಳುವುದಾದರೆ;

* ಮೊದಲು ಸಿಂಹದ ಕೇಸರಿಗಳನ್ನು ಮೇಣದಿಂದ ಬಿಡಿಸಿ, ನಂತರ ಕಳೆದು ಹೋದ ಮೇಣದ ಎಣ್ಣೆ ವಿಧಾನದಲ್ಲಿ ರೂಪಿಸಲಾಗಿದೆ, ಇದು ಅರತಲಗದ್ದೆಯ ಸಿಂಹದ ಕೇಸರಿಗೆ ಹೋಲುತ್ತದೆ.
* ಈ ಹಿಂದಿನ ಸಿಂಹದ ಕಂಚಿನ ಪ್ರತಿಮೆಗಳಲ್ಲಿ ಇರುವಂತೆ ಬಲ್ಬಿನಾಕೃತಿಯ ಕಣ್ಣುಗಳು, ದಪ್ಪನೆಯ ವಸಡು, ಚೂಪಾದ ಕೋರೆ ಹಲ್ಲುಗಳು ಇಲ್ಲಿ ಕಂಡು ಬರುವುದಿಲ್ಲ.
* ಕುಳಿತಿರುವ ಭಂಗಿಯನ್ನು ಶಕ್ತಿಯುತವಾಗಿ ಪ್ರದರ್ಶಿತಗೊಳಿಸಲಾಗಿದ್ದು, ನೋಡುಗರು ಇದನ್ನು ತಕ್ಷಣವೇ ನಮ್ಮ ಸಿಂಹದ ಜೊತೆ ಹೋಲಿಸಿ ಗುರುತಿಸಬಹುದು.

ಸ್ಪಷ್ಟವಾಗಿ ಗುರುತಿಸಬಹುದಾದ ಸಂಗತಿ ಏನೆಂದರೆ, ಪಲ್ಲವ ಮತ್ತು ಚಾಲುಕ್ಯರ ಪ್ರಪ್ರಥಮ ಕಾಲಘಟ್ಟದಲ್ಲಿದ್ದ ಸಿಂಹದ ದಾರ್ಷ್ಟ್ಯ ಇಲ್ಲಿ ಕಾಣಲು ಸಾಧ್ಯವಿಲ್ಲ. ಹಾಗೆಯೇ ಅರತಲಗದ್ದೆಯ ಕಂಚಿನ ಪ್ರತಿಮೆಗಳಲ್ಲಿರುವ ಶಕ್ತಿ ಮತ್ತು ಹುರುಪು ಇದರಲ್ಲಿ ಕಾಣಸಿಗುವುದಿಲ್ಲ.

ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ೧೧ನೇ ಶತಮಾನದ ಕಂಚಿನ ಸಿಂಹ ಪ್ರತಿಮೆಯು ಬ್ರಿಟೀಷ್ ವಸ್ತು ಸಂಗ್ರಹಾಲಯದಲ್ಲಿದೆ[೧೬]. ಇದು ಚಾಲುಕ್ಯರ ಕಾಲದಲ್ಲಿ ಧೂಪ ದ್ರವ್ಯವನ್ನು ಹಾಕುವ ಸಾಧನವಾಗಿ ಬಳಕೆಯಾಗುತ್ತಿತ್ತು (ಚಿತ್ರ–೧೧). ಈ ಸಿಂಹದ ಕೇಶರಾಶಿ ಎದೆಯ ಭಾಗದವರೆಗೂ ಇಳಿದಿದ್ದರೂ ಅವು ಎಲ್ಲಿಯೂ ಹರಡಿದಂತೆ ಕಾಣವುದಿಲ್ಲ. ಇದರ ಹಿಂದಿನ ಕಾಲುಗಳ ಮೇಲೆ ಹೂವಿನಾಕೃತಿಯ ಚಿತ್ರಣವನ್ನು ಕಾಣಬಹುದು. ಜೊತೆಗೆ ಕೋರೆಹಲ್ಲುಗಳು ತೀರಾ ಚಿಕ್ಕವಾಗಿರುವುದರಿಂದ, ಅವು ನಮ್ಮ ಕಣ್ಣನ್ನು ತಕ್ಷಣ ಸೆಳೆಯುವುದಿಲ್ಲ. ಇಲ್ಲಿನ ಆಸಕ್ತಿದಾಯದ ವಿಚಾರವೇನೆಂದರೆ, ಈ ಕಂಚಿನ ಪ್ರತಿಮೆಯ ಹಿಂಭಾಗ ಜೋಡಿ ಹೆಣೆಯಲ್ಪಟ್ಟ ಗೆಣ್ಣುಗಳ ರೀತಿ ಕಾಣುತ್ತವೆ. ಅದಕ್ಕೆ ಜೋಡಿಸಿದಂತಿರುವ ಹಿಂಬದಿಯ ಬಾಲ, ಧೂಪ ದ್ರವ್ಯವನ್ನು ಹಾಕಿ ಮುಚ್ಚಿದಾಗ ಆ ಭಾಗವು ಎದ್ದು ನಿಲ್ಲುವ ಹಾಗೆ ನಿರ್ಮಿಸಲಾಗಿದ್ದು, ಅದೊಂದು ಮುಚ್ಚಳದ ಹಿಡಿಕೆಯಾಗಿಯೂ ಬಳಕೆಯಾಗಿರಬಹುದೆಂದು ತೋರುತ್ತದೆ. ಇದು ಮುಕ್ತವಾಗಿ ಧೂಪ ದ್ರವ್ಯವನ್ನು ಉರಿಸಲು ಕಂಡುಕೊಂಡ ತೀರಾ ಸಹಜವಾದ ತಂತ್ರಜ್ಞಾನ. ಈ ತಂತ್ರಜ್ಞಾನವನ್ನು ರೂಪಿಸಿದವರು ಮುಂದಿನ ಪೀಳಿಗೆಯ ಶಿಲ್ಪಿಗಳು.

ಕದಂಬರ ೨ನೇ ಶಾಸ್ತದೇವ ಮತ್ತು ಜಯಕೇಶಿ, ನಂತರದ ಗೋವಾ ಕದಂಬರು ಬಳಸಿದ ಸಿಂಹ ಮುದ್ರೆ ನಮ್ಮ ಕಂಚಿನ ಸಿಂಹ ಮುದ್ರೆಗೆ ಸಾಕಷ್ಟು ಹೊಲಿಕೆ ಇರುವುದನ್ನು ಗುರುತಿಸಬಹುದು[೧೭]. ಇಲ್ಲಿನ ಕುತೂಹಲಕಾರಿ ಸಂಗತಿ ಏನೆಂದರೆ, ನಂತರ ಕದಂಬರ ಸಿಂಹದ ಮುದ್ರಿಕೆಯಲ್ಲಿ ಕಾಣಸಿಗುವ ಬಾಲದ ವಿಚಿತ್ರ ತಿರುಚು ಅರತಲಗದ್ದೆಯ ಕಂಚಿನ ಸಿಂಹದ ಬಾಲದ ತಿರುಚಿಗೆ ಹೋಲುತ್ತದೆ. ಇದು ಹೊಯ್ಸಳರು ಮತ್ತು ನಂತರದ ಚಾಲುಕ್ಯರು ಮಾಡಿದ ಸಿಂಹದ ಚಿತ್ರಣಕ್ಕಿಂತಲೂ ಈ ಸಿಂಹಕ್ಕೆ ತುಂಬಾ ಹತ್ತಿರದಲ್ಲಿದೆ.

ಕಲೆಯಲ್ಲಿನ ಸಿಂಹದ ಪ್ರತಿನಿಧೀಕರಣವು ಮಾನವ ವಿಕಾಸದ ಉಗಮ ಕಾಲದಿಂದಲೂ ಇದೆ. ಇತಿಹಾಸ ಪೂರ್ವ ಮತ್ತು ಇತಿಹಾಸಗಳೆರಡರ ಕಾಲಘಟ್ಟದಿಂದಲೂ ಸಿಂಹ ಲಾಂಛನವು ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಪರಿಭಾಷೆಗಳ ಸಾಂಕೇತಿಕ ರೂಪಕವಾಗಿ ಬಳಕೆಗೊಳ್ಳುತ್ತಾ ಬಂದಿದೆ. ಸಿಂಹವು ಪ್ರತಿಮಾ ಶಾಸ್ತ್ರದ ವಿಕಸನದಲ್ಲಿ ಶಾತವಾಹನ ಶೈಲಿಯಿಂದ ಕದಂಬರ ಶೈಲಿಯವರೆಗೆ ವಿಕಾಸಗೊಳ್ಳುತ್ತಾ ಬಂದಿತು. ಕದಂಬರ ಕಾಲದ ಮಡಿಕೆಯ ಮೇಲೆ ದೊರೆತ ಕೀರ್ತಿಮುಖ ಸಿಂಹವು ಇದೇ ಸ್ಥಳದಲ್ಲಿ ಸಿಕ್ಕಿದ್ದು, ಇದು ೪-೫ನೇ ಶತಮಾನಕ್ಕೆ ಸಂಬಂಧಪಟ್ಟಿದ್ದಾಗಿದೆ. ಇದು ಸ್ವಾಭಾವಿಕವಾಗಿ ಚಿತ್ರಿಸಿದ ಚಿತ್ರಣದಂತಿದ್ದರೂ ಪೂರ್ವಸೂರಿಗಳ ಅರತಲಗದ್ದೆಯ ಪ್ರತಿಮೆಯ ಸಿಂಹದಿಂದ ನೇರವಾಗಿ ಬಂದುದಾಗಿದೆ.

ಈ ಕದಂಬ ಮಂಡಲದ ಸುತ್ತಲೂ ದೊರೆತಿರುವ ಸಿಂಹಾಕೃತಿಗಳ ಜೊತೆಯಲ್ಲಿಯೇ ಸಿಕ್ಕ ತಾಮ್ರ ಪತ್ರದ ಶಾಸನಗಳು ಪರಸ್ಪರ ಪೂರಕವಾಗಿದ್ದು, ದೊರೆತ ಸಿಂಹದ ಕಂಚಿನ ಪ್ರತಿಮೆಯು ಕದಂಬರೇ ನಿಯೋಜಿಸಿ ನಿರ್ಮಿಸಿದ್ದಾರೆನ್ನುವುದು ಸ್ಪಷ್ಟಗೊಳ್ಳುತ್ತದೆ. ಇದು ಅವರ ಕಂಚಿನ ಕಲೆಗಾರಿಕೆಗೆ ಪುರಾವೆಯೂ ಆಗಿದೆ. ಬಾದಾಮಿ ಚಾಲುಕ್ಯರಿಗೆ ಪಲ್ಲವರು ಮತ್ತು ಕದಂಬರು ರಾಜಕೀಯ ವೈರಿಗಳಾಗಿದ್ದರಿಂದ, ಅವರ ರಾಜ ಲಾಂಛನವಾಗಿದ್ದ ಸಿಂಹದ ಸಂಕೇತವನ್ನು ಎಂದೂ ಪ್ರೀತಿಭರಿತ ದೃಷ್ಟಿಕೋನದಿಂದಾಗಲಿ, ಶ್ರದ್ಧೆಯ ದೀಪವೆಂದಾಗಲಿ ಪರಿಗಣಿಸಿ ಬಳಸಲಿಲ್ಲವೆಂದು ನಾವು ಸಮರ್ಥಿಸಿಕೊಳ್ಳಬಹುದು.

ಪಲ್ಲವ ಮತ್ತು ಕದಂಬರ ಮಧ್ಯೆ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳು ತುಂಬಾ ಬಲಿಷ್ಠವಾಗಿದ್ದುದರಿಂದ, ಇದು ಇವರಿಬ್ಬರ ಸಂಸ್ಕೃತಿ ಮತ್ತು ಕಲಾ ಪ್ರಕಾರಗಳ ವಿಕಾಸಕ್ಕೆ ನಾಂದಿ ಹಾಡಿತು. ಈ ಕಾರಣ ಪ್ರಧಾನವಾಗಿ ಅರತಲಗದ್ದಯ ಕಂಚಿನ ಸಿಂಹ ಮತ್ತು ಸೀಯಮಂಗಲಂನ ಶಿಲ್ಪಕಲೆಗಳ ಮಧ್ಯೆ ಸಾಮೀಪ್ಯವೊಂದು ಜನ್ಮತಾಳಿತು. ನಾವಿಲ್ಲಿ ಸಹಜವಾಗಿ ಅರ್ಥೈಸಿಕೊಳ್ಳಬಹುದಾದ ಸಂಗತಿ ಏನೆಂದರೆ, ಕಂಚಿನ ಸಿಂಹದ ಈ ಕಲೆಯು ಪ್ರತಿಮಾ ಶಾಸ್ತ್ರದ ವಿಕಸನದ ಹೆಜ್ಜೆ ಗುರುತುಗಳಲ್ಲಿಯೇ ಒಂದು ಮೈಲಿಗಲ್ಲಾಯಿತೆಂಬುದು. ಚಾಲುಕ್ಯರ, ಪಲ್ಲವರ ಮತ್ತು ಕದಂಬರ ಕಲಾತ್ಮಕ ಅಂಶಗಳು ಈ ಪ್ರತಿಮಾ ಶಾಸ್ತ್ರದಲ್ಲಿ ಅಡಕಗೊಂಡಿವೆ. ಕಂಚಿನ ಸಿಂಹದ ಪ್ರತಿಮೆಯಲ್ಲಿ ಬಳಕೆಗೊಂಡಿರುವ ನಾನಾ ಬಗೆಯ ಲಕ್ಷಣಗಳು ಏಕಾಏಕಿ ರೂಪುಗೊಂಡವುಗಳೆಂದು ನಾವು ಪರಿಭಾವಿಸಬಾರದು. ಬದಲಿಗೆ ಈ ಲಕ್ಷಣಗಳು ಪಾರಂಪರಿಕವಾಗಿ ಬಂದ ಶಿಲ್ಪ ಜ್ಞಾನದ ಮುಂದುವರಿಕೆಯ ರೂಪಗಳಾಗಿವೆ. ಹಾಗೆಯೇ ಇದರ ಬಹಳಷ್ಟು ಲಕ್ಷಣಗಳು ತಾಳಗುಂದ ಪ್ರಾಂತ್ಯದ ಪ್ರಣವೇಶ್ವರ ದೇವಸ್ಥಾನದ ಉತ್ಖನನದ ವೇಳೆ ಸಿಕ್ಕಿರುವ ಮರಳುಗಲ್ಲಿನ ಸಿಂಹದ ತಲೆ ಮತ್ತು ಬನವಾಸಿಯ ಒಡೆಯರಹಿಕ್ಕಲು ಪ್ರಾಂತದಲ್ಲಿ ಸಿಕ್ಕಿರುವ 'ಕೀರ್ತಿಮುಖ' ಮಡಿಕೆಯ ಚೂರುಗಳು ಕಂಚಿನ ಸಿಂಹದ ಪ್ರತಿಮೆಯನ್ನು ಹೋಲುತ್ತವೆ. ಜೊತೆಗೆ, ಇವುಗಳೆಲ್ಲವೂ ಪುರಾತನ ಶಿಲ್ಪ ಜ್ಞಾನಕ್ಕೆ ಸಂಬಂಧಿಸಿದ್ದವುಗಳಾಗಿವೆ.

ಕದಂಬರ ಕಂಚಿನ ಬಳಕೆಯ ಕುರಿತು ನಮಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಆದಾಗ್ಯೂ ನಮ್ಮ ಈ ಚರ್ಚೆಯ ಪ್ರಕಾರ ಅರತಲಗದ್ದೆಯ ಕಂಚಿನ ಸಿಂಹ, ಕದಂಬರ ಪ್ರತಿಮಾ ಶಾಸ್ತ್ರವು ೬ನೇ ಶತಮಾನದ ಉತ್ತರಾರ್ಧದಿಂದ ೭ನೇ ಶತಮಾನದ ಪೂರ್ವಾರ್ಧದಲ್ಲಿ ಜನ್ಮತಾಳಿರಬಹುದೆಂದು ಊಹಿಸುವುದರ ಜೊತೆಗೆ ಕನ್ನಡ ಬಳಕೆ ಮಾಡುವ ಪ್ರದೇಶಗಳ ಅತಿ ಪುರಾತನವಾದ ಕಂಚಿನ ವಿಗ್ರಹ ಎಂದು ಅರ್ಥೈಸಿಕೊಳ್ಳಬಹುದಾಗಿದೆ.

ಅಡಿಟಿಪ್ಪಣಿಗಳು

೧. Ralph T.H. Griffith ರವರ ಋಗ್ವೇದದ ಅನುವಾದ, 1896 at http://sacred-texts.com.

೨. Divyabhanusinh ರವರು ಏಶಿಯಾಟಿಕ್ ಸಿಂಹದ ಇತಿಹಾಸದ ಬಗ್ಗೆ ವಿವರವಾದ ಚರ್ಚೆ ಮತ್ತು ಭಾರತೀಯ ಸನ್ನಿವೇಶದಲ್ಲಿ ಸಿಂಹದ ಸಂಕೇತಗಳ ವಿಕಸನದ ಬಗ್ಗೆ ಪರಿಚಯಿಸಿರುವ ಬಗ್ಗೆ ನೋಡಿ – The Lions of India, Permanent Black, 2008, ಪಕ್ಕ ೫-೧೦.

೩. K.P. Poonacha, *Excavations at Kanaganahalli,* Memoirs of the Archaeological Survey of India no 106, ಭಾರತದ ಪುರಾತತ್ವ ಸಮೀಕ್ಷೆ, ೨೦೧೧, ಪುಟ ೧೬೩, ೩೪೦-೩೪೧.

೪. Anna L. Dallapiccola & Anila Varghese, *Sculpture at Vijayanagara - Iconography and Style*, ಮನೋಹರ್ ಪ್ರಕಾಶಕರು ಮತ್ತು ವಿತರಕರು, ಅಮೆರಿಕನ್ ಸಂಸ್ಥೆಯ ಭಾರತೀಯ ಅಧ್ಯಯನಗಳು ೧೯೯೮, ಅನುಬಂಧ ೭, ಪುಟ ೧೩೮-೧೩೯.

೫. Dr. S.G. Samak et al, ಕದಂಬರ ಅರತಲಗದ್ದಯ ಅಪೂರ್ವ ತಾಮ್ರ ಶಾಸನಗಳ ಭಂಡಾರ, ಕರ್ನಾಟಕ ಇತಿಹಾಸ ಸಂಶೋದಕ ಮಂಡಲ ಪ್ರಕಾಶನ.

೬. Dr. R. Kannan & K. Laxminarayanan, *Iconography of the Jain Images in the Government museum*, ಚೆನ್ನೈ (ಮದ್ರಾಸ್), ಸಾಮಾನ್ಯ ವಿಭಾಗ, Vol XVI, No 1, 2001, ವಸ್ತು ಸಂಗ್ರಹಾಲಯ ಕಮೀಷನರ್ ಪ್ರಕಟಿಸಿದ, ಸರ್ಕಾರಿ ವಸ್ತು ಸಂಗ್ರಹಾಲಯ, ಚೆನ್ನೈ, ಪುಟ ೧೦೦–೧೦೧, Sl. No. 71.

೭. Ashmolean - Eastern Art Online, Yousef Jameel Centre for Islamic art, ಆನೆಯ ಮತ್ತು ಸವಾರನ ನೇತಾಡುವ ದೀಪದ ಚಿತ್ರ (EA2013.97), ಡೆಕ್ಕನ್, ೧೩ನೇ ಶತಮಾನ CE.

೮. ಸಿ. ಶಿವರಾಮಮೂರ್ತಿ, *South Indian Bronzes*, ಲಲಿತಕಲಾ ಅಕಾಡೆಮಿ, ಭಾರತ, ೨೦೦೬, ಆನೆಯ ಮೇಲೆ ಒಂದು ನೃತ್ಯ ಮಹಿಳೆ ಮತ್ತು ಸವಾರರೊಂದಿಗೆ ಅಲಂಕಾರಿಕ ದೀಪ ಸರಪಳಿಯನ್ನು ಫಲಕ ೫ಎ ವಿವರಿಸುತ್ತದೆ. ಬಾದಾಮಿ ಚಾಲುಕ್ಯ, ೮ನೇ ಶತಮಾನ ಅಇ, ಜೋಗೇಶ್ವರಿ ಗುಹೆಗಳು, ಮುಂಬಯಿ.

೯. Louis Frederic, *Indian Temples and Sculpture*, 1959, Thames and Hudson ಪ್ರಕಾಶಕರು.

೧೦. Arthur L. Friedberg, Ira S. Friedberg, Robert Friedberg, *Gold Coins of the World - 9th edition: From Ancient Times to the Present. An illustrated standard catalogue with valuations,* ಪುಟ ೪೮೫.

೧೧. Metropolitan ವಸ್ತು ಸಂಗ್ರಹಾಲಯ ಅನ್‌ಲೈನ್ ಸಂಗ್ರಹಣೆ - https://www.metmuseum.org/art/collection/search/38393?sortBy=Relevance&ft=gupta+lion&offset=0&rpp=20&pos=1.

೧೨. ಮಾಹಿತಿ ಹಾಗೂ ಚಿತ್ರಗಳನ್ನು ಶ್ರೀ ಟಿ.ಎಂ. ಕೇಶವ, ನಿವೃತ್ತ ಅಧೀಕ್ಷಕ ಪ್ರಾಚ್ಯ ತಜ್ಞರು, ASI.

೧೩. George Michell, *Temple Architecture and Art of the Early Chalukyas – Badami, Mahakuta, Aihole, Pattadakal*, 2014, Niyogi Books, ಪುಟ ೧೨೭, ೧೭೩.

೧೪. George Michell, *Temple Architecture and Art of the Early Chalukyas – Badami, Mahakuta, Aihole, Pattadakal*, 2014, Niyogi Books, ಪುಟ ೩೭–೫೯.

೧೫. Metropolitan ವಸ್ತು ಸಂಗ್ರಹಾಲಯ ಅನ್‌ಲೈನ್ ಸಂಗ್ರಹಣೆ, *https://www.metmuseum.org/art/collection/search/38946? sort By=Relevance&ft=pallava+lion&offset=0&rpp=20&pos=1.*

೧೬. British ವಸ್ತು ಸಂಗ್ರಹಾಲಯ ಅನ್‌ಲೈನ್ ಸಂಗ್ರಹಣೆ, *http://www.britishmuseum.org/research/collection_online/collection_object_details.aspx?assetId=57551001&objectId=224040&partId=1.*

೧೭. George M. Moraes, *The Kadamba Kula: A History of Ancient and Mediaeval Karnataka,* Asian Educational Society, ಪುಟ ೩೭೬.

ಆಕರ ಗ್ರಂಥಗಳು

೧. ಕದಂಬರ ಅರೆತಲಗದ್ದೆಯ ಅಪೂರ್ವ ತಾಂಬ್ರಶಾಸನಗಳ ಭಂಡಾರ – Dr. S.G. Samak et al, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಪ್ರಕಾಶಿತ.

೨. The Lions of India edited by Divyabhanusinh, published by Permanent Black.

೩. The Lion: From Pride to Metaphor an essay by Romila Thapar in Exotic Aliens: The Lion & The Cheetah in India compiled by Valmik Thapar, Aleph Book Company.

೪. The Metropolitan museum online collection.

೫. The Victoria & Albert museum online collection.

೬ The British museum online collection.

೭. The Ashmolean museum Eastern Art collection.

೮. South Indian Bronzes by C. Sivaramamurty, Lalit Kala Akademi Publications.

೯. The Kadamba Kula: A History of Ancient and Mediaeval Karnataka by George M. Moraes published by Asian Educational Society.

೭೬

ಹೆಬಸೂರಿನ ನವಶೋಧಿತ ತೀರ್ಥಂಕರ ಶಿಲ್ಪ

ಎಸ್.ಕೆ. ಮೇಲಕಾರ* ಎಸ್.ಜಿ. ಚಲವಾದಿ**

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಹೆಬಸೂರ ಗ್ರಾಮವು ಬಹು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ ಗ್ರಾಮವಾಗಿದ್ದು, ಇದು ಹುಬ್ಬಳ್ಳಿ-ವಿಜಾಪುರಕ್ಕೆ ಹೋಗುವ ಹೆದ್ದಾರಿಯ ಮೇಲಿದೆ. ಇಲ್ಲಿ ೧೦ನೇ ಶತಮಾನದಿಂದ ೧೯ನೇ ಶತಮಾನದವರೆಗಿನ ಪುರಾತನ ಕುರುಹುಗಳು ಅಧ್ಯಯನಕ್ಕೆ ಲಭ್ಯವಾಗಿದ್ದು ಆ ಕಾಲದ ವೀರಗಲ್ಲುಗಳು, ಜಿನಶಿಲ್ಪಗಳು ಶಿವಲಿಂಗಗಳು, ದೇವಿ ವಿಗ್ರಹ, ಕೆರೆ-ಬಾವಿ ಇತ್ಯಾದಿ ಪ್ರಾಚ್ಯವಸ್ತುಗಳು ಕಂಡುಬರುತ್ತವೆ. ಅವುಗಳಲ್ಲಿ ಇತ್ತೀಚೆಗೆ ೧೨-೭-೨೦೧೮ರಂದು ತೀರ್ಥಂಕರನ ವಿಗ್ರಹವೊಂದು ಪತ್ತೆಯಾಗಿದ್ದು ಅದರ ವಿವರಣೆ ನೀಡಲಾಗಿದೆ.

ನೇಮಿನಾಥ ತೀರ್ಥಂಕರ ಶಿಲ್ಪದ ವಿವರಣೆ

ಇತ್ತೀಚೆಗೆ ಧಾರವಾಡ ಜಿಲ್ಲೆಯ ಹೆಬಸೂರು ಗ್ರಾಮದಲ್ಲಿ ಪೇಟೆಯ ಮಧ್ಯದಲ್ಲಿರುವ ಪುರಾತನ ಕಾಲದ ವೀರಭದ್ರ ದೇವಸ್ಥಾನ ಕಟ್ಟಡ ಕೆಡವಿ ಅದರ ಸ್ಥಳದಲ್ಲಿ ಹೊಸ ದೇವಸ್ಥಾನ ನಿರ್ಮಾಣ ಮಾಡುವುದಕ್ಕಾಗಿ ಸ್ಥಳೀಯರು ಜೆ.ಸಿ.ಬಿ. ಯಂತ್ರದಿಂದ ನೆಲ ಅಗೆಯುವಾಗ ೧೧ನೇ ಶತಮಾನದ ನೇಮಿನಾಥ ತೀರ್ಥಂಕರನ ಶಿಲ್ಪ ಹಾಗೂ ಶೈವಧರ್ಮದ ಒಂದು ದೇವಿಶಿಲ್ಪ ಪತ್ತೆಯಾಗಿರುತ್ತದೆ. ಅದರಲ್ಲಿ ತೀರ್ಥಂಕರನ ಮೂರ್ತಿಯಿರುವ ಈ ವಿಗ್ರಹವು ಅಖಂಡವಾದ ಕಪ್ಪು ಶಿಲೆಯಿಂದ ಮಾಡಲಾಗಿರುತ್ತದೆ. ಇದರ ಎತ್ತರ ೪ ೧/೨ ಅಡಿ, ಅಗಲ ೩ ಅಡಿ ಇರುತ್ತದೆ.

ಈ ತೀರ್ಥಂಕರನ ಶಿಲ್ಪವನ್ನು ಸಿಂಹಪೀಠದ ಮೇಲೆ ಪರ್ಯಾಂಕಾಸನದಲ್ಲಿ ಕುಳಿತಿರುವಂತೆ ಬಿಡಿಸಿದೆ. ಇದರ ಕಣ್ಣುಗಳು ಧ್ಯಾನಮುದ್ರೆಯಲ್ಲಿವೆ. ಕೈಗಳು ಯೋಗಮುದ್ರೆಯಲ್ಲಿವೆ. ತಲೆಯ ಕೂದಲು ಗುಂಗುರರೂಪದಲ್ಲಿ ಭುಜದವರೆಗೂ ಇಳಿಬಿದ್ದಿವೆ. ಈ ಕೇಶ ಭುಜದವರೆಗೂ ಹಬ್ಬಿರುವುದರಿಂದ ವಿಗ್ರಹದ ತಲೆಯ ಹಿಂಭಾಗದಲ್ಲಿ ನಿರಾಲಂಕೃತವಾದ ಪ್ರಭಾಮಂಡಲವಿದೆ; ಕಿವಿಗಳು ಉದ್ದವಾಗಿವೆ. ಮುಖದಲ್ಲಿ ಸೌಮ್ಯತೆ ಮತ್ತು ಶಾಂತತೆ ಎದ್ದು ಕಾಣುತ್ತದೆ. ಇದರ ಮೇಲ್ಭಾಗದಲ್ಲಿ ಮುಕ್ಕೊಡೆ ಇದೆ. ತೀರ್ಥಂಕರ ಮೂರ್ತಿಯ ಬೆನ್ನ ಹಿಂದಿನ ಆಸನ ಮಕರಗಳ ಮುಖಗಳ ಮೂಲಕ ಹೊರಹೊಮ್ಮಿವೆ. ಅರೆಗಂಭಗಳನ್ನು ಬಿಡಿಸಿದ್ದು ಕೆಳಗಡೆ ಅಂಚಿನಲ್ಲಿ ನಿಂತ ಸಿಂಹ ವ್ಯಾಳಗಳಿವೆ. ತೀರ್ಥಂಕರನ ಭುಜಗಳು ಮತ್ತು ಮುಕ್ಕೊಡೆಯ ಬದಿಗಳಲ್ಲಿ ಮಕರಗಳ ಮೇಲೆ ಚೌರಿಧಾರಿಗಳು ದ್ವಿಭಂಗಿಯಲ್ಲಿ ನಿಂತಿದ್ದಾರೆ. ಇವರು ಕರ್ಣಕುಂಡಲ, ಕಂಠಹಾರ, ಮಣಿಸರ, ತೋಳಬಂದಿ ಮತ್ತು ಕಟಿವಸ್ತ್ರ ಇತ್ಯಾದಿ ವಸ್ತ್ರಾಭರಣ ಭೂಷಿತರಾಗಿದ್ದಾರೆ. ಪೀಠದಲ್ಲಿ ಮೂರು ಸಿಂಹಗಳನ್ನು ತೋರಿಸಲಾಗಿದೆ. ಮಧ್ಯದಲ್ಲಿಯ ಸಿಂಹ ತನ್ನ ಮುಂಗಾಲುಗಳನ್ನು ನೆಲಕ್ಕೆ ಒತ್ತಿ ಹಿಡಿದು ಕುಳಿತುಕೊಂಡು ಪೀಠ ಭಾರವನ್ನು ಹೊತ್ತು ನಿಂತಂತೆ ಬಿಡಿಸಿದೆ. ಬದಿಗಳಲ್ಲಿಯ ಸಿಂಹಗಳು ಮೂಲೆಗಳ ಕಡೆ ಮುಖ ಮಾಡಿವೆ. ಸಿಂಹಗಳ ಕೇಸರಿ ಗುಚ್ಚ ಗುಚ್ಚಾಗಿ ಇಳಿಬಿದ್ದಂತೆ ಪೀಠದ ಮುಖಭಾಗದಲ್ಲಿ ಮಾತ್ರ ಸಿಂಹಗಳನ್ನು ತೋರಿಸಲಾಗಿದೆ. ಈ ಸಿಂಹಗಳು ಮತ್ತು ಪಾರ್ಶ್ವದಲ್ಲಿರುವ ಆನೆಗಳು ತೀರ್ಥಂಕರನ ಅಂಗೋಪಾನಗಳು ಅರಳುತ್ತಿರುವ ಚೈತ್ಯ ವೃಕ್ಷವನ್ನು ನೈಜವಾಗಿ ತೋರಿಸುವ ಶಿಲ್ಪಿಯ ಪ್ರಯತ್ನ ಯಶಸ್ವಿಯಾದಂತಿದೆ. ಈ ತೀರ್ಥಂಕರನ ದೇಹಾಂಗ ಮತ್ತು ಪೀಠವನ್ನು ಏಕಶಿಲೆಯಲ್ಲಿಯೇ ಕಂಡರಿಸಲಾಗಿದೆ.

ಪೀಠದ ಮೇಲ್ಭಾಗದಲ್ಲಿ ಅರಳುತ್ತಿರುವ ಹೂವಿನ ಮೊಗ್ಗುಗಳು ಇಳಿಬಿಟ್ಟ ಚೈತ್ಯ ವೃಕ್ಷವನ್ನು ತೋರಿಸಲಾಗಿದೆ. ಈ ಶಿಲ್ಪದ ಮುಕ್ಕೊಡೆಗಳು ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ, ಸಮ್ಯಕ್‌ಚಾರಿತ್ರ್ಯ, 'ತ್ರಿರತ್ನತ್ರಯ'ದ ಸಂಕೇತವಾಗಿವೆ. ಇವು ಮೋಕ್ಷ ಸಂಪಾದನೆಗಾಗಿ ಜ್ಞಾನೋದಯ ಕಡೆದ ಕಾಲಸೂಚಕವಾಗಿವೆ. ಜ್ಞಾನಕಲ್ಯಾಣವಾದ ಬಳಿಕ ಅವರು ತ್ರಿಲೋಕಾಧಿಪತಿಗಳಾಗುತ್ತಾರೆ ಎಂಬ ನಂಬಿಕೆ ಜೈನಧರ್ಮದಲ್ಲಿದೆ. ಇಂತಹ ಶಿಲ್ಪಗಳು ಜಿಲ್ಲೆಯ ಲಕ್ಷ್ಮೇಶ್ವರ, ಲಕ್ಕುಂಡಿ, ಗುಡಗೇರಿ, ಅಮ್ಮಿನಭಾವಿ ಅಣ್ಣಿಗೇರಿ, ಮಳಲಿ, ಶಿರೂರ, ಯರಗುಪ್ಪಿ ಅದರಗುಂಚಿ, ಮುತ್ತಿಗಿ ಮುಂತಾದ ಕಡೆಗಳಲ್ಲಿ ಕಂಡುಬರುತ್ತವೆ.

---

* ಮ್ಯೂಸಿಯಂ ಕ್ಯೂರೇಟರ್, ಕನ್ನಡ ಸಂಶೋಧನ ಸಂಸ್ಥೆ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕ.ವಿ.ವಿ., ಧಾರವಾಡ. ಮೊ. ೯೪೪೯೪೩೫೨೮೦
** ಸಹ ಪ್ರಾಧ್ಯಾಪಕರು, ಪ್ರಾಚೀನ ಭಾರತೀಯ ಇತಿಹಾಸ ವಿಭಾಗ, ಕ.ವಿ.ವಿ., ಧಾರವಾಡ-೫೮೦೦೦೩.



ಶಾಸನ : ಈ ವಿಗ್ರಹದ ಸಿಂಹಪೀಠದ ಕೆಳಗೆ "ಶ್ರೀಮೂಲಸಂಘ ದೇವಗಣ ಶ್ರೀ ಸಂಖದೇವರ ಪ್ರತಿಬದ್ದ" ಎಂಬ ಎರಡು ಸಾಲಿನ ಶಾಸನವಿದ್ದುದರಿಂದ ಈ ಮೂರ್ತಿಶಿಲ್ಪ ನೇಮಿನಾಥನದ್ದೆಂದು ಅಭಿಪ್ರಾಯಕ್ಕೆ ಬರಲಾಗಿದೆ.

ಕಾಲಮಾನ : ಈ ಶಿಲ್ಪದ ವಿವಿಧ ಲಕ್ಷಣವನ್ನು ಮತ್ತು ಬಳಸಿದ ಕಲ್ಲು ಹಾಗೂ ಶಾಸನದ ಆಧಾರದ ಮೇಲೆ ಹಾಗೂ ಆ ಗ್ರಾಮದಲ್ಲಿನ ಇತರ ಪುರಾವೆಗಳ ಆಧಾರದಿಂದ ಈ ಶಿಲ್ಪದ ಕಾಲಮಾನ ಕ್ರಿ.ಶ. ೧೧ನೆಯ ಶತಮಾನವೆಂದು ತಿಳಿಯಲಾಗಿದೆ.

[ಈ ಶಿಲ್ಪದ ಅಧ್ಯಯನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಿಶ್ರಾಂತ ನಿರ್ದೇಶಕರಾದ ಡಾ. ಆರ್.ಎಂ. ಷಡಕ್ಷರಯ್ಯ ಹಾಗೂ ಶ್ರೀಮತಿ ಹನುಮಾಕ್ಷಿ ಗೋಗಿ ಅವರು ಸಹಾಯ ಮಾಡಿರುತ್ತಾರೆ. ಇದರ ಅಧ್ಯಯನಕ್ಕಾಗಿ ಪ್ರೊ. ಪ್ರಮೋದ ಹಳೆಮನಿ, ಶ್ರೀ ಸುರೇಶ ಬಾರಕೇರ, ಡಾ. ರಮಾ ಜಿ. ಗುಂಡುರಾವ ಅವರ ಸಹಕಾರ ಇಲ್ಲಿ ಸ್ಮರಣೀಯ.]

ಆಕರ ಗ್ರಂಥಗಳು

೧. ಡಾ. ರು.ಮ. ಷಡಕ್ಷರಯ್ಯ, ೨೦೦೭, ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು, ಧಾರವಾಡ ಜಿಲ್ಲಾಡಳಿತ.

೨. ಡಾ. ಆರ್. ಗೋಪಾಲ, ೨೦೦೮, ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು

೩. ಧಾರವಾಡ ಜಿಲ್ಲಾ ಗೆಜೆಟಿಯರ್, ೧೯೫೫.

೪. ಡಾ. ಎಂ.ಎಂ. ಕಲಬುರ್ಗಿ, ೧೯೭೫, ಧಾರವಾಡ ಜಿಲ್ಲಾ ಶಾಸನ ಸೂಚಿ, ಕ.ವಿ.ವಿ. ಧಾರವಾಡ.

೫. ಅಣ್ಣಿಗೇರಿ ಎಂ.ಎಂ. ೧೯೫೮, ಎ ಗೈಡ್ ಟು ಕೆ.ಆರ್.ಐ. ಮ್ಯೂಜಿಯಂ. ಕ.ವಿ.ವಿ., ಧಾರವಾಡ.

೮೦

ಬಾಳೆಹಳ್ಳಿಯ ನವಶೋಧಿತ ಶಿವಲಿಂಗ

ರಮಾ ಜಿ. ಗುಂಡುರಾವ್* ಎಸ್.ಕೆ. ಮೇಲಕಾರ**

ಹಾವೇರಿ ಜಿಲ್ಲೆಯ ಹಾನಗಲ್ಲತಾಲೂಕಿನ ಬಾಳೆಹಳ್ಳಿಯು ಹಾನಗಲ್ಲಿನಿಂದ ನೈರುತ್ಯಕ್ಕೆ ೧೮ ಕಿ.ಮೀ. ದೂರದಲ್ಲಿ ಶಿರ್ಸಿಗೆ ಹೋಗುವ ರಸ್ತೆಯಲ್ಲಿ ಎಡಬದಿಯಲ್ಲಿದೆ. ಈ ಊರಿನಲ್ಲಿ ೧೬ ಶಿಲಾಶಾಸನಗಳು ಇದ್ದ ಬಗ್ಗೆ ಧಾರವಾಡ ಜಿಲ್ಲಾ ಶಾಸನಸೂಚಿಯಲ್ಲಿ ಉಲ್ಲೇಖವಿದೆ. ಈ ಶಾಸನಗಳಲ್ಲಿ ಬಾಳಿಹಳ್ಳಿ, ಬಾಳೆಹಳ್ಳಿ, ಕದಳಿಪೂರ ಎಂದೇ ಪ್ರಸಿದ್ಧಿಯಾಗಿದೆ.

ಗ್ರಾಮದ ದಕ್ಷಿಣ ಭಾಗದಲ್ಲಿ ಅತೀ ಪುರಾತನವಾದ ಕದಂಬರ ಕಾಲದ ಕೆರೆಯೊಂದು ಇದ್ದು, ಅದು ವಿವಿಧ ಕಾಲಘಟ್ಟದಲ್ಲಿ ಜೀರ್ಣೋದ್ಧಾರಗೊಂಡಿರುತ್ತದೆ. ಅದರ ಮಧ್ಯಭಾಗದಲ್ಲಿ ನೀರು ಬಿಡುವ ತೂಬು ಇದ್ದು, ಅದು ೧೧ನೇ ಶತಮಾನದಲ್ಲಿ ರಚನೆಯಾದಂತಿದೆ. ಕೆರೆಯ ಬಲಬದಿಯಿಂದ ಹೆಚ್ಚಾದ ನೀರು ಹೊರಹೋಗಲು ಕೋಡಿ ಬಿಟ್ಟಿದ್ದು, ಅದರ ಕೆಳಭಾಗದಲ್ಲಿ ಇತ್ತೀಚೆಗೆ ಜಾಗೆಯನ್ನು ಸ್ವಚ್ಛಗೊಳಿಸುವ ಕಾರ್ಯ ನಡೆಸಿದ ಸಂದರ್ಭದಲ್ಲಿ ಬೃಹತ್ ಶಿವಲಿಂಗ ಮತ್ತು ಇತರ ಶಾಸನ ಮತ್ತು ಶಿಲ್ಪಗಳು ಅಗಸ್ಟ ೨೦೧೭ರಲ್ಲಿ ಪತ್ತೆಯಾಗಿರುತ್ತವೆ.

ಶಿವಲಿಂಗದ ವಿವರಣೆ

ಪ್ರಸ್ತುತ ಶಿವಲಿಂಗವು ನಾಲ್ಕು ಅಡಿ ಎತ್ತರದ್ದಾಗಿದೆ. ಶಿವಲಿಂಗಕ್ಕೆ ಉತ್ತರಾಭಿಮುಖವಾದ ಜಲಧಾರೆಯುಳ್ಳ ಪಾಣಿಪೀಠವಿದೆ. ಪಾಣಿಪೀಠದ ಮಧ್ಯ ರಂಧ್ರವನ್ನು ಕೊರೆದು ಶಿವಲಿಂಗವನ್ನು ಅದರೊಳಗೆ ಕೂಡಿಸಲಾಗಿದೆ. ಶಿವಲಿಂಗದ ಮೇಲಿನ ಭಾಗ ನುಣುಪಾದ ಕರಿಕಲ್ಲಿನಲ್ಲಿ ಮಾಡಿದ್ದು ಅದು ಮೂರು ಭಾಗಗಳನ್ನು ಒಳಗೊಂಡಿದೆ. ಕೆಳಭಾಗ ಬ್ರಹ್ಮಭಾಗ, ಮಧ್ಯದಲ್ಲಿ ವಿಷ್ಣುಭಾಗ, ಮೇಲೆ ರುದ್ರಭಾಗವಾಗಿ ಕಂಡರಿಸಿದೆ. ಅಷ್ಟಕೋನಾಕಾರದಲ್ಲಿರುವ ಈ ಶಿವಲಿಂಗ ೪ ಅಡಿ ಎತ್ತರವಿದೆ. ಮೇಲಿನ ಭಾಗ ಒಡೆದು ಮುಕ್ಕಾಗಿದೆ. ಇದರ ಲಕ್ಷಣವನ್ನು ಗಮನಿಸಿದರೆ ಇದರ ಕಾಲಮಾನ ೧೦ನೇ ಶತಮಾನಕ್ಕೆ ಸೇರುತ್ತದೆ.

ಈ ಶಿವಲಿಂಗವಿರುವ ಸ್ಥಳವನ್ನು ಗಮನಿಸಲಾಗಿ ಪೂರ್ವಾಭಿಮುಖವಾಗಿ ಕಟ್ಟಿಸಿದ ಶೈವದೇವಾಲಯವಿದ್ದಿರುವಂತೆ ತೋರುತ್ತದೆ. ಏಕೆಂದರೆ ಈ ಗ್ರಾಮದಲ್ಲಿ ದೊರೆತ ಕ್ರಿ.ಶ. ೧೧೪೫ರ ಕಲ್ಯಾಣ ಚಾಲುಕ್ಯರ ಕಾಲದ ಜಗದೇಕಮಲ್ಲನ ಶಾಸನದಲ್ಲಿ ನಖರೇಶ್ವರ ದೇವಾಲಯವಿದ್ದ ಉಲ್ಲೇಖವಿದ್ದು ಅದು ಇದೇ ಆಗಿರಬೇಕೆನಿಸುತ್ತದೆ. ಇದೇ ಸ್ಥಳದಲ್ಲಿ ಸುಂದರವಾದ ಗಣೇಶನ ವಿಗ್ರಹ, ಮುಕ್ಕಾದ ವೀರಭದ್ರ ಶಿಲ್ಪ, ಕಾಳಿ ಶಿಲ್ಪ, ವೀರಗಲ್ಲು ಮತ್ತು ಅಕ್ಷರಗಳು ಸವೆದು ಹೋದ ಶಾಸನಕಲ್ಲು, ಬಿದ್ದುಹೋದ ದೇವಾಲಯದ ಕಂಬಗಳು ಕಟ್ಟಡದ ಇನ್ನಿತರ ಪ್ರಾಚ್ಯಾವಶೇಷಗಳು ಶೋಧಗೊಂಡಿವೆ. ಆ ಸ್ಥಳದಲ್ಲಿ ಉತ್ಖನನ ಮಾಡಿದರೆ ಇನ್ನೂ ಹೆಚ್ಚಿನ ಪುರಾವೆಗಳು ಸಿಗಬಹುದು. ಅದರ ಅಧ್ಯಯನ ಮುಂದುವರೆಸಲಾಗಿದೆ.

ಪ್ರಸ್ತುತ ಗ್ರಾಮದಲ್ಲಿ ೧೯ ಶಾಸನಗಳನ್ನು ಸಂಶೋಧಕರು ಗುರುತಿಸಿದ್ದು, ಅವುಗಳಲ್ಲಿ ಒಂದುಜೈನ ಶಾಸನವಿದ್ದು ಉಳಿದವುಗಳು ಶೈವಧರ್ಮದ ಕುರಿತಾಗಿ ತಿಳಿಸುವ ದಾನಶಾಸನಗಳು, ವೀರಗಲ್ಲುಗಳು, ಜೈನ ನಿಶಿಧಿಗಳು, ನಾಗಶಿಲ್ಪಗಳು ಕಂಡುಬರುತ್ತವೆ. ಜೈನಶಾಸನದಲ್ಲಿ ಜೈನಬಸದಿಯೊಂದು ಈ ಗ್ರಾಮದಲ್ಲಿರುವುದಾಗಿ ಉಲ್ಲೇಖಿಸಿದ್ದು ಆ ಬಸದಿ ನೋಡಲು ಈಗ ಲಭ್ಯವಿರುವುದಿಲ್ಲ. ಮತ್ತೊಂದು ಶಾಸನೋಕ್ತ ಗೌರವೇಶ್ವರ ದೇವಾಲಯವನ್ನು ಇಂದು ಸಿದ್ದೇಶ್ವರ ಗುಡಿಯೆಂದು ಕರೆಯುತ್ತಿದ್ದು ಇತ್ತೀಚೆಗೆ ಜೀರ್ಣೋದ್ಧಾರಗೊಳಿಸಿದ್ದಾರೆ. ಆ ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು ಅದರ ಸರಳವಾದ ಭಾಗಿಲವಾಡದ ಮೇಲೆ ಗಜಲಕ್ಷ್ಮೀ ಶಿಲ್ಪವಿದೆ. ಒಳಗಡೆ ಮಹಿಷಮರ್ದಿನಿ ಶಿಲ್ಪವಿದ್ದು, ಅದನ್ನು ಮಾಡಿದವನು 'ಕಣ್ಣಿಯ ಭೀಮಯ್ಯ' ಎಂದು ಅದರ ಪೀಠಭಾಗದ ಮೇಲಿದೆ. ಈ ದೇವಾಲಯ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ದೇವಾಲಯದ ಸುತ್ತಲೂ ಭೈರವ, ಕಾರ್ತಿಕೇಯ, ವಿಷ್ಣು, ಸಪ್ತಮಾತೃಕೆ ಶಿಲ್ಪಗಳು ಕಂಡುಬರುತ್ತವೆ.

* ಅತಿಥಿ ಉಪನ್ಯಾಸಕರು, ಪ್ರಾಚೀನ ಭಾರತೀಯ ಇತಿಹಾಸ ವಿಭಾಗ, ಕವಿವಿ, ಧಾರವಾಡ-೫೮೦೦೦೩.
** ಮ್ಯೂಸಿಯಂ ಕ್ಯೂರೇಟರ್, ಕನ್ನಡ ಸಂಶೋಧನ ಸಂಸ್ಥೆ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕವಿವಿ, ಧಾರವಾಡ-೫೮೦೦೦೩.









ಗ್ರಾಮದ ಕೆರೆಯ ದಂಡೆಯ ಮೇಲೆ ಹಾಳುಬಿದ್ದ ದೇವಾಲಯವಿದ್ದು, ಅದು ಈಗ ತುಂಬಾ ಶೀಥಿಲಾವಸ್ಥೆಯಲ್ಲಿದೆ. ಅಲ್ಲಿ ಕೂಡಾ ಹತ್ತಾರು ವೀರಗಲ್ಲುಗಳು ಕಂಡುಬಂದಿವೆ. ಇವೆಲ್ಲವುಗಳ ಅಧ್ಯಯನ ಮಾಡಲಾಗಿ ಅಲ್ಲಿ ಬನವಾಸಿ ಕದಂಬರ ಕಾಲದಿಂದಲೂ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹಾನಗಲ್ಲ ಕದಂಬರ ಕಾಲದಲ್ಲಿ ಶ್ರೀಮಂತ ಇತಿಹಾಸ ಹೊಂದಿರುವುದಾಗಿ ತಿಳಿಯುತ್ತದೆ.

[ಈ ಶಿವಲಿಂಗ ಅಧ್ಯಯನದಲ್ಲಿ ಮಾಹಿತಿ ಒದಗಿಸಿದ ಸಂಶೋಧನ ವಿದ್ಯಾರ್ಥಿ ಶ್ರೀ ಮಹೇಶ ಗೊಲ್ಲರ ಈತನಿಗೆ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. ಡಾ. ಸೂರ್ಯನಾಥ ಕಾಮತ್, ೧೯೫೫, ಧಾರವಾಡ ಜಿಲ್ಲೆಯ ಗ್ಯಾಜಿಟೀಯರ್, ಕ.ವಿ.ವಿ., ಧಾರವಾಡ.

೨. ಡಾ. ಎಂ.ಎಂ. ಕಲಬುರ್ಗಿ, ೧೯೭೫, ಧಾರವಾಡ ಜಿಲ್ಲೆಯ ಶಾಸನ ಸೂಚಿ, ಕ.ವಿ.ವಿ., ಧಾರವಾಡ.

೩. ಶ್ರೀಮತಿ ಹನುಮಾಕ್ಷಿ ಗೋಗಿಯವರು ಕ.ವಿ.ವಿ. ಹಂಪಿ ಶಾಸನ ಸಂಪುಟದಲ್ಲಿ ಪ್ರಕಟಿಸಿದ ಶಾಸನಗಳ ನೆರವು.

೪. ಕರ್ನಾಟಕ ರಾಜ್ಯ ಇತಿಹಾಸ ಅಕಾಡೆಮಿಯ ಇತಿಹಾಸ ದರ್ಶನದಲ್ಲಿ ಪ್ರಕಟವಾದ ಲೇಖನಗಳ ನೆರವು.

೮೧

ಹಾನಗಲ್‌ನ ತಾರಕೇಶ್ವರ ದೇವಾಲಯದ ಕಥಾನಿರೂಪಕ ಶಿಲ್ಪಗಳು

ದತ್ತಪ್ರಸನ್ನ ಪಾಟೀಲ*

ಹಾವೇರಿ ಜಿಲ್ಲೆಯು ಪ್ರಾಚೀನ ಕಾಲದಿಂದಲೂ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾಗಿದ್ದು, ಈ ಭಾಗದಲ್ಲಿ ನೂರಾರು ದೇವಾಲಯಗಳು ನಿರ್ಮಾಣಗೊಂಡಿವೆ. ಈ ಜಿಲ್ಲೆಯ ಅಬ್ಬಲೂರು, ಹರಳಹಳ್ಳಿ, ರಾಣೇಬೆನ್ನೂರು ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳಲ್ಲಿ ಕಥಾನಿರೂಪಕ ಶಿಲ್ಪಗಳು ಕಂಡು ಬರುತ್ತವೆ. ಪ್ರಸ್ತುತ ಸಂಪ್ರಬಂಧದಲ್ಲಿ ಹಾವೇರಿ ಜಿಲ್ಲೆಯ ಪ್ರಮುಖ ನಗರವಾದ ಹಾನಗಲ್ಲಿನ ಪ್ರಮುಖ ದೇವಾಲಯವಾದ ತಾರಕೇಶ್ವರ ದೇವಾಲಯದಲ್ಲಿ ಕಂಡು ಬರುವ ಕಥಾನಿರೂಪಕ ಶಿಲ್ಪಗಳನ್ನು ಅವಲೋಕಿಸಲಾಗಿದೆ.

"ಸ್ಥಳ ಪುರಾಣಗಳಲ್ಲಿ ವಿರಾಟನಗರ ಎಂದು ವರ್ಣಿಸಲ್ಪಟ್ಟ ಹಾಗೂ ನಂಬಲಾಗಿರುವ ಹಾನಗಲ್ಲಿನ ಅತಿ ದೊಡ್ಡ ದೇವಾಲಯವಾಗಿರುವ ತಾರಕೇಶ್ವರ ದೇವಾಲಯವು ಈ ಭಾಗದ ಪ್ರಮುಖ ದೇವಾಲಯವಾಗಿದೆ[೧]". "ಈ ಬೃಹತ್ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ಮೂರು ದಿಕ್ಕುಗಳಿಂದ ಪ್ರವೇಶವಿರುವ ಗೂಢಮಂಟಪ ಅದರ ಮೂರು ಪ್ರವೇಶಗಳಿಗೆ ವಿಶಾಲ ಮುಖಮಂಟಪಗಳು ಪೂರ್ವ ಮುಖಮಂಟಪಕ್ಕೆ ಹೊಂದಿಕೊಂಡು ಇಬ್ಬದಿಗಳಿಂದಾ ಪ್ರವೇಶವಿರುವ ಬಹು ವಿಶಾಲವಾದ ತೆರೆದ ರಂಗಮಂಟಪ ಮತ್ತು ರಂಗಮಂಟಪಕ್ಕೆ ಮುಂದುಗಡೆ (ಪೂರ್ವ ದಿಕ್ಕಿನಲ್ಲಿ) ಹೊಂದಿ ಕೊಂಡಿರುವ ಅರ್ಧ ತೆರೆದಿರುವ ನಂದಿಮಂಟಪ ಇವೆ. ಬೃಹತ್ ಮೂಲ ಪ್ರಾಸಾದಕ್ಕೆ (ವಿಮಾನಕ್ಕೆ) ನಾಲ್ಕು ಭೂಮಿಗಳಿವೆ. ಆದುದರಿಂದ ಇದು ಕರ್ನಾಟಕದಲ್ಲಿ ಚಾಲುಕ್ಯ ಶೈಲಿಯ ಚತುರ್ಭೂಮಿ ದ್ರಾವಿಡ ಪ್ರಾಸಾದವಾಗಿದೆ[೨]".

ತಾರಕೇಶ್ವರ ದೇವಾಲಯದಲ್ಲಿ ಕುಸುರಿನ ಶಿಲ್ಪಾಲಂಕಾರಕ್ಕೆ ಪ್ರಾಧಾನ್ಯ ನೀಡಲಾಗಿದೆಯಾದರೂ ಹಲವಾರು ಕಥಾನಿರೂಪಕ ಶಿಲ್ಪಗಳು ಕಂಡು ಬರುತ್ತವೆ. ಇವುಗಳನ್ನು ಗೂಢಮಂಟಪದ ಮೂರು ಪ್ರವೇಶಗಳಲ್ಲಿರುವ ಮುಖ ಮಂಟಪಗಳ ಕಕ್ಷಾಸನ ಹೊರಮೈಯಲ್ಲಿ ಕಾಣಬಹುದು. ಪೂರ್ವ ಮುಖ ಮಂಟಪದ ಪೂರ್ವಭಾಗದ ಕಕ್ಷಾಸನದಿಂದ ಪ್ರಾರಂಭವಾಗುವ ಕೃಷ್ಣಚರಿತ ಘಟನೆಗಳ ನಿರೂಪಣೆ ಪ್ರದಕ್ಷಿಣಾ ರೀತಿಯಲ್ಲಿ ದಕ್ಷಿಣ ಭಾಗದಲ್ಲಿ ಮುಂದುವರೆದಿದೆ. ತದನಂತರ ದಕ್ಷಿಣ ಮುಖಮಂಪಟದಲ್ಲಿ ರಾಮಾಯಣದ ಕೆಲವು ಘಟನೆಗಳ ನಿರೂಪಣೆ ಕಂಡುಬರುತ್ತದೆ. ಉತ್ತರ ಮುಖಮಂಟಪದಲ್ಲಿ ಮಹಾಭಾರತದ ಘಟನೆಗಳು ಕಾಣಸಿಗುತ್ತವೆ. ಅಧ್ಯಯನದ ದೃಷ್ಟಿಯಿಂದ ಈ ಕಥಾ ನಿರೂಪಕ ಶಿಲ್ಪಗಳನ್ನು ವಿಷಯಾಧಾರಿತವಾಗಿ ಈ ರೀತಿಯಾಗಿ ವಿಂಗಡಿಸಬಹುದಾಗಿದೆ.

ಭಾಗವತಕ್ಕೆ ಸಂಬಂಧಿಸಿದ ಕಥಾ ನಿರೂಪಕ ಶಿಲ್ಪಗಳು

ಪೂರ್ವ ಗೂಢಮಂಟಪದ ಪೂರ್ವಭಾಗದ ಕಕ್ಷಾಸನದ ಬಲಬದಿಯ ಹೊರಮೈಯಲ್ಲಿ ಕಾಳಿಂಗಮರ್ದನದ ಕಥಾ ನಿರೂಪಕ ಶಿಲ್ಪಗಳು ಕಂಡು ಬರುತ್ತವೆ. ಈ ಪ್ರಸಂಗವು ಶ್ರೀಮದ್ ಭಾಗವತದ ದಶಮಸ್ಕಂದದ ಪೂರ್ವಾರ್ಧದ ೧೬ನೇ ಅಧ್ಯಾಯದಲ್ಲಿದೆ.

ಕಾಳಿಂಗಮರ್ದನ ಕಥೆಯನ್ನು ನಿರೂಪಿಸುವ ಶಿಲ್ಪವು ಬಹುದೃಶ್ಯ ನಿರೂಪಣಾ ಕಥಾನಕ ಶಿಲ್ಪವಾಗಿದ್ದು, ಕಾಳಿಂಗಮರ್ದನ ಕಥಾ ನಿರೂಪಕ ಶಿಲ್ಪವು ಪಟ್ಟಿಕೆಯ ಆರು ದೃಶ್ಯಗಳಲ್ಲಿ ನಿರೂಪಿತಗೊಂಡಿದ್ದು, ಇವುಗಳಲ್ಲಿ ಸಮಸೂತ್ರತೆಯಿಲ್ಲದಾಗಿದೆ. ಎಡದಿಂದ ಬಲಕ್ಕೆ ನೋಡುತ್ತಾ ಸಾಗಿದಾಗ ಪ್ರಥಮ ದೃಶ್ಯದಲ್ಲಿ ಶ್ರೀಕೃಷ್ಣನನ್ನು ಕಾಳಿಂಗರಾಜನು ಸುತ್ತುವರೆದಿದ್ದಾನೆ. ದ್ವಿತೀಯ ಪಟ್ಟಿಕೆಯಲ್ಲಿ ಸರ್ಪರಾಜನ ಕುತ್ತಿಗೆಯನ್ನು ಎಡಗೈಯಿಂದ ಹಿಡಿದಿರುವ ಶ್ರೀ ಕೃಷ್ಣನು ಸ್ಥಾನಕ ಭಂಗಿಯಲ್ಲಿದ್ದು ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಮೂರನೇ ದೃಶ್ಯದಲ್ಲಿ ಶ್ರೀ ಕೃಷ್ಣನು ಬಲಗೈಯಿಂದ ಕರುವನ್ನು ಅಪಾಯ್ಯಮಾನತೆಯಿಂದ

* ಉಪನ್ಯಾಸಕರು, ವಿ.ದಾ.ಸ. ಬಾಲಕಿಯರ ಪ.ಪೂ. ಕಾಲೇಜು, ಗದಗ, ಮೊ. ೯೪೪೮೭೪೦೮೩೩

ಸವರುತ್ತಿದ್ದು ಅವನ ಎಡಗೈ ಅಭಯ ಮುದ್ರೆಯಲ್ಲಿದೆ. ನಾಲ್ಕನೆ ಪಟ್ಟಿಕೆಯಲ್ಲಿ ಕಾಳಿರಾಜನ ಪತ್ನಿಯ ಶ್ರೀಕೃಷ್ಣನಲ್ಲಿ ಅವನ ಪ್ರಾಣಭಿಕ್ಷೆ ಬೇಡುತ್ತಿದ್ದಾಳೆ ಐದನೆಯ ಪಟ್ಟಿಕೆಯಲ್ಲಿ ಶ್ರೀ ಕೃಷ್ಣನು ಕಾಳಿಂಗ ಸರ್ಪರಾಜನ ಮೇಲೆ ನಿಂತು ನೃತ್ಯ ಮಾಡುತ್ತಿದ್ದಾನೆ. ಆರನೆಯ ಪಟ್ಟಿಕೆಯಲ್ಲಿ ಗೋಪಾಲಕರನ್ನು ಹಾಗೂ ಗೋವುಗಳನ್ನು ಸಂರಕ್ಷಿಸಿದ ಶ್ರೀ ಕೃಷ್ಣನನ್ನು ಬೃಹತ್ ರೂಪದಲ್ಲಿ, ಆತನ ಇಬ್ಬರು ಗೋಪಾಲಕರನ್ನು ಚಿಕ್ಕದಾಗಿ ಶಿಲ್ಪದ ಕೆಳಗಿನ ಭಾಗದಲ್ಲಿ ಕಂಡರಿಸಲಾಗಿದೆ.[೩]

ಆರು ಪಟ್ಟಿಕೆಗಳಲ್ಲಿ ವಿವರವಾಗಿ ಕಂಡರಿಸಲ್ಪಟ್ಟ ಈ ಕಥಾನಿರೂಪಕ ಶಿಲ್ಪ ವಿಷಯವಸ್ತುವಿನ ದೃಷ್ಟಿಯಿಂದ ವಿವರಣಾತ್ಮಕ ಕೆತ್ತನೆಯಾಗಿದ್ದರೂ ಶಿಲ್ಪ ಸೌಂದರ್ಯದ ದೃಷ್ಟಿಯಿಂದ ಅಷ್ಟು ಶ್ರೀಮಂತವಾಗಿಲ್ಲ. ಸಾಮಾನ್ಯವಾಗಿ ಶ್ರೀ ಕೃಷ್ಣನ ಕಾಳಿಂಗಮರ್ದನ ಅತಿ ಜನಪ್ರಿಯ ಕಥಾನಿರೂಪಕ ಶಿಲ್ಪವಾಗಿದ್ದು, ಶ್ರೀಕೃಷ್ಣನು ಕಾಳಿನಾಗರ ಮೇಲೆ ನಿಂತಿದ್ದು ಎಡಗೈಯಲ್ಲಿ ಸರ್ಪದ ಬಾಲವನ್ನು ಬಲಗೈಯಲ್ಲಿ ಕಂಠಭಾಗವನ್ನು ಹಿಡಿದಿರುವ ಶಿಲ್ಪ ಬಲು ಜನಪ್ರಿಯವಾಗಿದೆ. ಹಲವು ದೇವಾಲಯಗಳಲ್ಲಿ ಕಂಡು ಬರುತ್ತದೆ. ಆದರೆ "ಹೊಯ್ಸಳರ ಕಾಲದ ಅಮೃತೇಶ್ವರ ದೇವಾಲಯದಲ್ಲಿ ಕಂಡು ಬರುವ ಕಾಳಿಂಗಮರ್ಧನ ಶಿಲ್ಪವು ಏಕದೃಶ್ಯ ನಿರೂಪಣೆಯಾಗಿದ್ದು, ಅತ್ಯಂತ ಸುಂದರವಾಗಿ ಕಂಡರಿಸಲಾಗಿದೆ. ಸರ್ಪದ ಮೇಲೆ ಕೃಷ್ಣನು ನರ್ತಿಸುತ್ತಿದ್ದು, ನದಿಯ ಕೆಳಗೆ ಜಲಚರಗಳನ್ನು, ನಾಗಕನ್ನಿಕೆಯರು ಅಂಜಲಿ ಮುದ್ರೆಯಲ್ಲಿ ಕಾಳಿನಾಗನ ಪ್ರಾಣಭಿಕ್ಷೆಯನ್ನು ಯಾಚಿಸುತ್ತಿರುವ ದೃಶ್ಯವನ್ನು ಸುಂದರವಾಗಿ ಕಂಡರಿಸಲಾಗಿದೆ[೪]".

ಶ್ರೀ ಕೃಷ್ಣನ ಬಾಲಲೀಲೆಯ ದೃಶ್ಯಗಳು

ಪೂರ್ವಭಾಗದ ಗೂಢಮಂಟಪದ ಕಕ್ಷಾಸನದ ದಕ್ಷಿಣಭಾಗದ ಹೊರಮೈಯಲ್ಲಿ ಮುಂದುವರೆದ ಭಾಗದಲ್ಲಿ ಶ್ರೀ ಕೃಷ್ಣನ ಬಾಲಲೀಲೆಯ ಪ್ರಸಂಗಗಳು ಕಂಡುಬರುತ್ತವೆ. ಈ ಬಾಲಲೀಲೆಗಳ ಹನ್ನೊಂದು ದೃಶ್ಯಗಳನ್ನು ವಿಶಾಲವಾದ ಕಥಾನಕ ಪಟ್ಟಿಕೆಯಲ್ಲಿ ಕಂಡರಿಸಲಾಗಿದೆ. ಈ ಕಥಾನಕ ಪಟ್ಟಿಕೆಯಲ್ಲಿ ಕಂಡಬರುವ ಕಥಾಭಾಗವು ಶ್ರೀಮದ್ಭಾಗವತದ ದಶಮಸ್ಕಂದದ ಎರಡನೆ ಅಧ್ಯಾಯದಿಂದ ಹತ್ತನೆಯ ಅಧ್ಯಾಯದವರೆಗೆ ಹರಡಿಕೊಂಡಿದ್ದು, ಅದರ ಕಥಾ ನಿರೂಪಣೆ ಹೀಗಿದೆ.

ಈ ಕಥಾನಕ ಪಟ್ಟಿಕೆಯಲ್ಲಿ ಹನ್ನೆರಡು ದೃಶ್ಯಗಳಿದ್ದು, ಮೇಲಿನ ಕಥೆಯನ್ನು ವಿವರಿಸುವ ದೃಶ್ಯಗಳು ಬಹು ದೃಶ್ಯ ನಿರೂಪಣಾ ತಂತ್ರದಲ್ಲಿ ವಿವರಿಸಲ್ಪಟ್ಟಿವೆ. ಪ್ರಥಮ ಪಟ್ಟಿಕೆಯಲ್ಲಿ ದೇವಕಿ ಗರ್ಭವತಿಯಾದಾಗ ಚಿಂತಾಕ್ರಾಂತನಾಗಿ ಕುಳಿತಿರುವ ವಾಸುದೇವನನ್ನು ಕಂಡರಿಸಲಾಗಿದೆ. ಅವರ ಬಲಗೈಯಲ್ಲಿ ಬಿಲ್ಲು ಹಾಗೂ ಎಡಗೈಯಲ್ಲಿ ಬಾಣವನ್ನು ಹಿಡಿದು ಸುಖಾಸನದಲ್ಲಿ ಕುಳಿತಿದ್ದಾನೆ.

ಎರಡನೆಯ ದೃಶ್ಯದಲ್ಲಿ ಗರ್ಭವತಿಯಾದ ದೇವಕಿಯನ್ನು ಆಸೀನ ಭಂಗಿಯಲ್ಲಿ ತೋರಿಸಲಾಗಿದೆ. ದೇವಕಿ ಬಲಗಾಲನ್ನು ಮಡಚಿ ಕುಳಿತಿದ್ದಾಳೆ. ಅವಳ ಗರ್ಭವತಿ ಎಂದು ತೋರಿಸಲು ಶಿಲ್ಪಿ ಹೊಟ್ಟೆಯನ್ನು ಪ್ರಧಾನವಾಗಿ ತೋರಿಸಿದ್ದಾನೆ.

ಮೂರನೆಯ ಪಟ್ಟಿಕೆಯಲ್ಲಿ ಶ್ರೀ ಕೃಷ್ಣನ ಜನನದ ದೃಶ್ಯವನ್ನು ಅತ್ಯಂತ ಚಾಕಚಕ್ಯತೆಯಿಂದ ಶಿಲ್ಪಿ ಕಂಡರಿಸಿದ್ದಾನೆ. ದೇವಕಿಯ ಗರ್ಭದಿಂದ ಶ್ರೀಕೃಷ್ಣನು ಜನಿಸುತ್ತಿದ್ದು, ಮೇಲ್ಭಾಗದಲ್ಲಿ ಸೂಲಗಿತ್ತಿಯು ದೇವಕಿಯ ಕೈಯನ್ನು ಹಿಡಿದು ಅವಳಿಗೆ ಸಹಾಯ ಮಾಡುತ್ತಿದ್ದಾಳೆ. ಕೆಳಭಾಗದಲ್ಲಿ ಮತ್ತೊಬ್ಬ ದಾಸಿಯನ್ನು ಸಹಾಯಕಳಾಗಿ ತೋರಿಸಲಾಗಿದೆ.

ನಾಲ್ಕನೆಯ ಪಟ್ಟಿಕೆಯಲ್ಲಿ ಪೂತನಿಯ ಸ್ತನ್ಯಪಾನ ಮಾಡುತ್ತಿರುವ ಶ್ರೀಕೃಷ್ಣನನ್ನು ತೋರಿಸಲಾಗಿದೆ ಈ ಕಥಾ ನಿರೂಪಕ ಶಿಲ್ಪದಲ್ಲಿ ಪೂತನಿಯು ಶ್ರೀಕೃಷ್ಣನನ್ನು ಎತ್ತಿಕೊಂಡು ಮೊಲೆಯುಣಿಸುತ್ತಿದ್ದಾಳೆ. ಶ್ರೀಕೃಷ್ಣ ಅವಳ ಪ್ರಾಣವನ್ನು ಹೀರಿ ಬಿಡುತ್ತಾನೆ. ಕಥೆಯಿಂದ ವಿಭಿನ್ನವಾಗಿ ಇಲ್ಲಿ ಪೂತನಿ ಕುಳಿತಿರುವ ಬದಲಾಗಿ ನಿಂತಿರುವ ಭಂಗಿಯಲ್ಲಿ ತೋರಿಸಲಾಗಿದ್ದು ಶ್ರೀಕೃಷ್ಣನು ಹಾಲು ಕುಡಿಯುತ್ತಿದ್ದಾನೆ.

ಐದನೆಯ ದೃಶ್ಯದಲ್ಲಿ ಶ್ರೀಕೃಷ್ಣನು ನದಿಯಾಚೆ ಗೋಕುಲದಲ್ಲಿ ಬೆಳೆಯುತ್ತಿದ್ದಾನೆಂದು ತೋರಿಸಲು ನದಿಯನ್ನು ಸಾಂಕೇತಿಕವಾಗಿ ತೋರಿಸಲಾಗಿದೆ. ಅದರಲ್ಲಿ ಆಮೆ, ಮೊಸಳೆ ವಿವಿಧ ಪ್ರಾಣಿಗಳನ್ನು ಯಮುನಾ ನದಿಯಲ್ಲಿ ತೋರಿಸಲಾಗಿದೆ.

ಆರನೆಯ ದೃಶ್ಯದಲ್ಲಿ ಕಂಸನು ದೇವಕಿಯ ಮಗುವನ್ನು ಸಂಹರಿಸಲು ಎತ್ತಿಕೊಂಡಾಗ ಯೋಗಮಾಯೆಯು ಪ್ರತ್ಯಕ್ಷಳಾಗಿ, ಕಂಸನೊಂದಿಗೆ ಸಂವಾದವನ್ನು ಕಂಡರಿಸಲಾಗಿದೆ. ಇಲ್ಲಿ ಅವಳನ್ನು ಕೈಯಲ್ಲಿ ಹಿಡಿದ ಕಂಸನನ್ನು ದೊಡ್ಡ ಪ್ರಮಾಣದ ಶಿಲ್ಪವಾಗಿ ಕಂಡರಿಸಿ ದೇವಿಯನ್ನು ಪೂರ್ಣ ಪ್ರಮಾಣದ ಮಹಿಳೆಯ ಚಿಕ್ಕರೂಪದಲ್ಲಿ ತೋರಿಸಿದ್ದು, ಶಿಲ್ಪಿಯ ಕೈಚಳಕಕ್ಕೆ ಸಾಕ್ಷಿಯಾಗಿದೆ.

ಏಳನೆಯ ದೃಶ್ಯದಲ್ಲಿ ಕಂಸನು ದೇವಕಿಯ ಕೂಸನ್ನು ಕಲ್ಲು ಬಂಡೆಗೆ ಎತ್ತಿ ಅಪ್ಪಳಿಸುತ್ತಿದ್ದಾನೆ. ಆತನು ಕುಳಿತಿದ್ದು ಅವನ ಮುಖದಲ್ಲಿ ಕ್ರೂರಭಾವವಿದೆ. ಬಲಗೈಯಲ್ಲಿ ಶಿಶುವಿನ ಕಾಲುಗಳನ್ನು ಹಿಡಿದಿದ್ದು ಕೆಳಭಾಗದಲ್ಲಿ ಕಲ್ಲುಬಂಡೆಯನ್ನು ಕಂಡರಿಸಲಾಗಿದೆ. ಶಿಲ್ಪದ ಮೇಲ್ಭಾಗದಲ್ಲಿ ದೇವಿಯ ಚಿಕ್ಕ ಶಿಲ್ಪವನ್ನು ಕಂಡರಿಸಿ ಅವಳು ಆಕಾಶಕ್ಕೆ ಹಾರಿ ಕಂಸನಿಗೆ ಶತ್ರುವಿನ ಜನನದ ವೃತ್ತಾಂತವನ್ನು ತಿಳಿಸುವ ವೃತ್ತಾಂತವನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

ಎಂಟನೆಯ ದೃಶ್ಯದಲ್ಲಿ ಯಶೋದೆಯು ಮಜ್ಜಿಗೆಯನ್ನು ಕಡೆಯುತ್ತಿರುವಂತೆ ಕಂಡರಿಸಲಾಗಿದ್ದು, ಮೇಲ್ಭಾಗದಲ್ಲಿ ಶ್ರೀಕೃಷ್ಣನನ್ನು ಮಲಗಿರುವ ಹಾಗೆ ತೋರಿಸಲಾಗಿದೆ. ಇಲ್ಲಿ ಕೃಷ್ಣನ ಬೆಣ್ಣೆಯನ್ನು ಕದಿಯಲು ಹೊಂಚು ಹಾಕುತ್ತಿದ್ದಾನೆ.

ಒಂಭತ್ತನೆಯ ಪಟ್ಟಿಕೆಯಲ್ಲಿ ಶ್ರೀಕೃಷ್ಣನು ಗೋವುಗಳನ್ನು ಮೇಯಿಸುತ್ತಿದ್ದು, ದೂರಹೋದ ಗೋವುಗಳನ್ನು ಕಾಳ್ಗಿಚ್ಚಿನಿಂದ ರಕ್ಷಿಸಿದ್ದಾನೆ. ಬೆದರಿದ ಗೋವುಗಳನ್ನು ಧೈರ್ಯದಿಂದ ಶ್ರೀಕೃಷ್ಣನು ಹೊಡೆದುಕೊಂಡು ಹೊರಟಿದ್ದಾನೆ. ಹಿಂಬದಿಯಲ್ಲಿ ಬೆಂಕಿಯನ್ನು ಸಾಂಕೇತಿಕವಾಗಿ ತೋರಿಸಲಾಗಿದೆ.

ಹತ್ತನೆಯ ಪಟ್ಟಿಕೆಯಲ್ಲಿ ತೊಟ್ಟಿಲಲ್ಲಿ ಮಲಗಿರುವ ಕೃಷ್ಣನು ಬಂಡಿಯ ರೂಪದಲ್ಲಿ ಶಕಟಾಸುರನೆಂಬ ರಾಕ್ಷಸನನ್ನು ಪಾದದಿಂದ ಒದೆಯುತ್ತಿದ್ದಾನೆ. ಕೆಳಭಾಗದಲ್ಲಿ ತೊಟ್ಟಿಲು ಮಧ್ಯಭಾಗದಲ್ಲಿ ಕೃಷ್ಣ ಮತ್ತು ಮುಂಭಾಗದಲ್ಲಿ ಚಕ್ಕಡಿಯನ್ನು ಕಂಡರಿಸಲಾಗಿದೆ.

ಹನ್ನೊಂದನೆಯ ದೃಶ್ಯದಲ್ಲಿ ಯಶೋದೆಯು ಕೃಷ್ಣನನ್ನು ಒರಳು ಕಲ್ಲಿನಿಂದ ಕಟ್ಟಿದಾಗ ಅವನು ಅದನ್ನು ಎಳೆದುಕೊಂಡು ಬಂದು ಅವಳಿ ಅರ್ಜುನ ಮರಗಳ ಕೆಳಗೆ ನಿಂತ ದೃಶ್ಯವಿದೆ. ಈ ಕಥಾ ನಿರೂಪಕ ಶಿಲ್ಪದಲ್ಲಿ ಶಾಪರೂಪದಂತಿದ್ದ ನಲಕೂಬ, ಮಣಿಗ್ರೀವರನ್ನು ಮರಗಳ ರೂಪದಲ್ಲಿ ತೋರಿಸಲಾಗಿದೆ. ನಡುವೆ ಶ್ರೀಕೃಷ್ಣ ನಿಂತಂತೆ ತೋರಿಸಲಾಗಿದೆ.

ಹನ್ನೆರಡನೆಯ ದೃಶ್ಯದಲ್ಲಿ ಮೇಲ್ಭಾಗದಲ್ಲಿ ಯಶೋದೆಯು ನಿಂತಿದ್ದು ಕೃಷ್ಣನು ಮಣ್ಣು ತಿಂದನೆಂದು ಬಾಯಿ ತೆರೆಯಿಸಿದಾಗ ಅವನ ಬಾಯಲ್ಲಿ ಬ್ರಹ್ಮಾಂಡ ತೋರಿಸುತ್ತಿದ್ದಾನೆ. ಶ್ರೀಕೃಷ್ಣನನ್ನು ಶಿಲ್ಪದ ಕೆಳಭಾಗದಲ್ಲಿ ತೋರಿಸಲಾಗಿದ್ದು, ಕೈಯಲ್ಲಿ ಮಣ್ಣಿನ ಉಂಡೆಯನ್ನು ಹಿಡಿದಿದ್ದಾನೆ. ಮೇಲ್ಭಾಗದಲ್ಲಿ ಯಶೋದೆ ತನ್ನ ಕೈಯಿಂದ ಅವನ ಬಾಯಿ ತೆರೆಸುವಂತೆ ಶಿಲ್ಪವನ್ನು ನಿರೂಪಿಸಲಾಗಿದೆ.[೫]

ಬಹುದೃಶ್ಯಗಳಲ್ಲಿ ಮೂಡಿಬಂದ ಈ ಕಥಾ ನಿರೂಪಕ ಶಿಲ್ಪಗಳು ವಸ್ತುವಿನ ದೃಷ್ಟಿಯಿಂದ ಉತ್ತಮವಾಗಿ ಮೂಡಿ ಬಂದಿದೆಯಾದರೂ ಘಟನೆಗಳನ್ನು ಹೇಳುವ ಕ್ರಮದಲ್ಲಿ ನಿರಂತರತೆ ಮತ್ತು ಸಮಸೂತ್ರತೆಯನ್ನು ಪಾಲಿಸಲಾಗಿಲ್ಲ ಕೃಷ್ಣನ ಬಾಲ ಲೀಲೆಯ ವಿವಿಧ ಅಂಶಗಳನ್ನು ಒಂದೇ ಪಟ್ಟಿಕೆಯಲ್ಲಿ ವಿವರಿಸುವಲ್ಲಿ ಶಿಲ್ಪಿ ಸಫಲನಾಗಿದ್ದಾನೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ಕೃಷ್ಣ ಬಾಲಲೀಲೆಯ ಕಥಾನಿರೂಪ ಶಿಲ್ಪಗಳಿಗಿಂತ ಹೊಯ್ಸಳರ ಕಾಲದ ಅಮೃತಾಪುರದ ದೇವಾಲಯದಲ್ಲಿ ಕೃಷ್ಣನ ಬಾಲಲೀಲೆಯ ಶಿಲ್ಪಗಳು ನಿರಂತರವಾಗಿ ಮತ್ತು ಅತ್ಯಂತ ಸುಂದರವಾಗಿ ಕಂಡರಿಸಲ್ಪಟ್ಟಿವೆ.

ರಾಮಾಯಣಕ್ಕೆ ಸಂಬಂಧಿಸಿದ ಕಥಾನಕ ಶಿಲ್ಪಗಳು

ಬಂಗಾರದ ಜಿಂಕೆ ಬೆನ್ನಟ್ಟಿರುವ ರಾಮ

ಬಂಗಾರದ ಜಿಂಕೆಯ ಪ್ರಸಂಗವು ತಾರಕೇಶ್ವರ ದೇವಾಲಯದ ದಕ್ಷಿಣ ಗೂಢಮಂಟಪದ ಮುಖ ಮಂಟಪದ ದಕ್ಷಿಣಭಾಗದ ಕಕ್ಷಾಸನದ ಹೊರಮೈಯಲ್ಲಿ ಕಂಡುಬರುತ್ತದೆ. ಈ ಪ್ರಸಂಗವು ಶ್ರೀಮದ್ ವಾಲ್ಮೀಕಿರಾಮಾಯಣದ ಅರಣ್ಯಕಾಂಡದ ೪೪ನೇ ಸ್ವರ್ಗದಲ್ಲಿದೆ.

ಮೇಲಿನ ಕಥೆಯನ್ನು ವಿವರಿಸುವ ಕಥಾನಕ ಪಟ್ಟಿಯು ಐದು ದೃಶ್ಯಗಳಲ್ಲಿ ವಿಸ್ತರಿತಗೊಂಡಿದ್ದು, ಬಹು ದೃಶ್ಯ ಕಥಾನಿರೂಪಣೆಯನ್ನು ಹೊಂದಿದೆ. ಪ್ರಥಮ ದೃಶ್ಯ ಅಥವಾ ಪಟ್ಟಿಕೆಯಲ್ಲಿ ನಾಲ್ಕು ಅಂಶಗಳನ್ನು ಕಂಡರಿಸಲಾಗಿದೆ. ಶಿಲ್ಪದ ಮೂಲೆಯಲ್ಲಿ ಕುಟೀರದಿಂದ ಜಿಂಕೆಯನ್ನು ಅರಸಲು ಹೊರಟಿರುವ ರಾಮನ ಚಿಕ್ಕ ಶಿಲ್ಪವನ್ನು ತೋರಿಸಲಾಗಿದೆ. ಮುಖ್ಯ ಪಟ್ಟಿಕೆಯ ಮೇಲ್ಭಾಗದಲ್ಲಿ ಸೀತೆ ಕುಳಿತಿದ್ದಾಳೆ. ಅವಳ ಮುಂದೆ ಲಕ್ಷ್ಮಣ ನಿಂತಿದ್ದು ಸೀತೆಗೆ ಲಕ್ಷ್ಮಣರೇಖೆ ದಾಟಬಾರದೆಂದು ಹೇಳುತ್ತಿದ್ದಾನೆ. ಕೆಳಭಾಗದಲ್ಲಿ ಸಾಧುವಿನ ವೇಷದ ರಾವಣನು ಕುಟೀರದತ್ತ ಬರುತ್ತಿದ್ದಾನೆ. ದ್ವಿತೀಯ ದೃಶ್ಯದಲ್ಲಿ ಮಾಯಾ ಜಿಂಕೆಯನ್ನು ಬೆನ್ನಟ್ಟಿಬಂದ ರಾಮನು ಬಿಲ್ಲನ್ನು ಬೇಧಿಸಿ ಬಾಣವನ್ನು ಬಿಡುತ್ತಿದ್ದಾನೆ. ಅವನ ಹಿಂದೆ ವೃಕ್ಷವನ್ನು ಕಂಡರಿಸಲಾಗಿದೆ. ಮೂರನೆಯ ದೃಶ್ಯದಲ್ಲಿ ರಾಮನು ಬಿಟ್ಟ ಬಾಣವು ಜಿಂಕೆಯ ಗಂಟಲನ್ನು ಸೀಳಿದೆ ಅದರ ಮೇಲ್ಭಾಗದಲ್ಲಿ ಜಿಂಕೆಯು ಮಾನವ ರೂಪಿ ಮಾರೀಚನಾಗಿ ಬೀಳುತ್ತಿರುವುದನ್ನು ತೋರಿಸಲಾಗಿದೆ. ನಾಲ್ಕನೆಯ ದೃಶ್ಯದಲ್ಲಿ ಜಿಂಕೆಯ ಹತ್ತಿರಕ್ಕೆ ಬಂದ

ರಾಮ ಲಕ್ಷ್ಮಣರು ಮಾರೀಚನ ಧ್ವನಿಯನ್ನು ಕೇಳಿ ಆಶ್ಚರ್ಯಚಕಿತರಾಗಿ ಧ್ವನಿಯತ್ತ ನೋಡುತ್ತಿದ್ದಾರೆ ಅವರ ಪಕ್ಕದಲ್ಲಿ ಸಾಮಾನ್ಯ ಜಿಂಕೆಯೊಂದನ್ನು ಕಂಡರಿಸಲಾಗಿದೆ. ಐದನೆಯ ದೃಶ್ಯದಲ್ಲಿ ಮರಣದ ಹಂತದಲ್ಲಿರುವ ಜಿಂಕೆ ರೂಪದ ಮಾರೀಚನನ್ನು ರಾಮನು ಖಡ್ಗದಿಂದ ಸಂಹರಿಸುತ್ತಿದ್ದಾನೆ. ಮಾನುಷ ರೂಪದಲ್ಲಿ ಮಾರೀಚನನ್ನು ತೋರಿಸಿ ತಲೆಯಲ್ಲಿ ಜಿಂಕೆಯ ಕೊಂಬಗಳನ್ನು ಕಂಡರಿಸಲಾಗಿದೆ.[೬]

ಮಾಯಾಜಿಂಕೆಯ ಪ್ರಸಂಗದ ಕಥಾ ನಿರೂಪಕ ಶಿಲ್ಪವು ಕಲ್ಯಾಣ ಚಾಲುಕ್ಯರ ದೇವಾಲಯಗಳಲ್ಲಿ ಕಂಡು ಬರುವ ಜನಪ್ರಿಯ ಕಥಾನಕ ಶಿಲ್ಪವಾಗಿದೆ. ಕುಕನೂರಿನ ಬ್ರಹ್ಮಲಿಂಗೇಶ್ವರ ದೇವಾಲಯದಲ್ಲಿಯೂ ಮಾಯಾ ಜಿಂಕೆಯ ಪ್ರಸಂಗ ಏಕದೃಶ್ಯ ನಿರೂಪಣೆಯಾಗಿ ಮೂಡಿಬಂದಿದ್ದು, ಗದುಗಿನ ತ್ರಿಕೂಟೇಶ್ವರ ದೇವಾಲಯದ ಶಿಲ್ಪವು ಅದೇ ರೀತಿಯಲ್ಲಿಯೇ ಮೂಡಿ ಬಂದಿದೆ. ಆದರೆ ಹಾನಗಲ್ಲಿನ ತಾರಕೇಶ್ವರ ದೇವಾಲಯದಲ್ಲಿ ಕಕ್ಷಾಸನದಲ್ಲಿ ಈ ಪ್ರಸಂಗವು ಬಹುದೃಶ್ಯ ನಿರೂಪಣೆಯಲ್ಲಿ ಮೂಡಿ ಬಂದಿದ್ದು, ಮಾರೀಚ ಹತನಾಗುವ ಸಂದರ್ಭದಲ್ಲಿ ಅವನನ್ನು ಕೊಂಬುಳ್ಳ ವ್ಯಕ್ತಿಯಾಗಿ ಶ್ರೀರಾಮನ ಖಡ್ಗದಿಂದ ಹತನಾಗುವ ಹಾಗೆ ಸುಂದರವಾಗಿ ಕಂಡರಿಸಲಾಗಿದೆ.

ಸೇತುಬಂಧ ನಿರ್ಮಾಣ

ತಾರಕೇಶ್ವರ ದೇವಾಲಯದ ಉತ್ತರಭಾಗದಲ್ಲಿ ಗೂಢಮಂಟಪಕ್ಕೆ ಹೊಂದಿಕೊಂಡಿರುವ ಕಕ್ಷಾಸನದ ಹೊರಮೈಯಲ್ಲಿರುವ ಕಥಾನಕ ಪಟ್ಟಿಕೆಗಳಲ್ಲಿ ಹನ್ನೊಂದು ದೃಶ್ಯಗಳಲ್ಲಿ ಸೇತುಬಂಧ ನಿರ್ಮಾಣಕ್ಕೆ ರಾಮನಿಗೆ ವಾನರ ಸೈನ್ಯ ಸಹಾಯ ಮಾಡುವ ದೃಶ್ಯಗಳನ್ನು ಕಂಡರಿಸಲಾಗಿದೆ. ಈ ಕಥೆಯು ಶ್ರೀಮದ್‌ವಾಲ್ಮೀಕಿ ರಾಮಾಯಣದ ಯುದ್ಧಕಾಂಡದ ೨೨ನೇ ಸರ್ಗದಲ್ಲಿ ಬರುತ್ತದೆ.

ಈ ಕಥೆಗೆ ಸಂಬಂಧಿಸಿದ ಶಿಲ್ಪಗಳು ಬಹುದೃಶ್ಯ ನಿರೂಪಣೆಯಲ್ಲಿ ಕಂಡು ಬಂದಿದ್ದು ಈ ಕಥಾ ನಿರೂಪಕ ಶಿಲ್ಪದಲ್ಲಿ ಒಟ್ಟು ೧೨ ದೃಶ್ಯಗಳನ್ನು ಕಂಡರಿಸಲಾಗಿದೆ. ಅಧ್ಯಯನದ ದೃಷ್ಟಿಯಿಂದ ಬಲಭಾಗದ ಆರು ದೃಶ್ಯಗಳನ್ನು ಸೇತುಬಂಧ ಕುರಿತು ಸಮಾಲೋಚನೆ ನಂತರದ ಆರು ದೃಶ್ಯಗಳನ್ನು ಸೇತುಬಂಧ ನಿರ್ಮಾಣ ಎಂದು ವಿಂಗಡಿಸಬಹುದಾಗಿದೆ.

ಈ ಕಥಾನಕ ಪಟ್ಟಿಕೆಯ ಮೊದಲು ಭಾಗವಾದ ಬಲಭಾಗದಲ್ಲಿ ಆರು ದೃಶ್ಯಗಳನ್ನು ಕಂಡರಿಸಲಾಗಿದೆ. ಈ ಭಾಗದ ಪಟ್ಟಿಕೆಯ ಆರಂಭದ ದೃಶ್ಯದಲ್ಲಿ ಲಕ್ಷ್ಮಣನು ಕುಳಿತಿದ್ದಾನೆ. ಅವನ ಪಕ್ಕದ ಪಟ್ಟಿಕೆಯಲ್ಲಿ ರಾಮನು ಕುಳಿತಿದ್ದಾನೆ. ಅವರಿಬ್ಬರೂ ಕಲ್ಲು ಬಂಡೆಯ ಮೇಲೆ ಕುಳಿತು ವಾನರ ನಾಯಕರೊಂದಿಗೆ ಸೇತುಬಂಧ ನಿರ್ಮಾಣ ಕುರಿತು ಸಮಾಲೋಚಿಸುತ್ತಿದ್ದಾರೆ. ಬಲಭಾಗದ ಪಕ್ಕದ ಪಟ್ಟಿಕೆಯಲ್ಲಿ ವಾನರ ನಾಯಕನಾದ ನಲನು ಸಮುದ್ರರಾಜನ ಪ್ರೋತ್ಸಾಹದ ಮಾತುಗಳಿಂದ ಉತ್ತೇಜಿತನಾಗಿ ತಾನು ವಿಶ್ವಕರ್ಮನ ಪುತ್ರನಾಗಿದ್ದು ಸಮುದ್ರ ಮಧ್ಯ ನೂರು ಯೋಜನೆಗಳ ಸೇತುವೆ ನಿರ್ಮಾಣದ ನಾಯಕತ್ವ ವಹಿಸಿಕೊಳ್ಳುವುದಾಗಿ ಹೇಳುತ್ತಿದ್ದಾನೆ. ಅವನನ್ನು ಅಂಜಲಿ ಮುದ್ರೆಯಲ್ಲಿ ಕಂಡರಿಸಲಾಗಿದೆ. ಪಕ್ಕ ಬಲಬದಿಯಲ್ಲಿ ಹನಮಂತನ ವಿಗ್ರಹವನ್ನು ತೋರಿಸಲಾಗಿದ್ದು, ಸಾಮಾನ್ಯವಾಗಿ ಎಲ್ಲ ದೇವಾಲಯಗಳಲ್ಲಿರುವ ಶಿಲ್ಪದಂತೆ ಇಲ್ಲಿಯೂ ಹನುಮಂತನು ಟೊಂಕದ ಮೇಲೆ ಕೈಯಿಟ್ಟುಕೊಂಡು ನಿಂತಿದ್ದಾನೆ. ಅವನ ಬಾಲವು ಅವನನ್ನು ಸುತ್ತುವರೆದಂತೆ ತೋರಿಸಲಾಗಿದೆ. ನಂತರದ ಕಥಾನಕ ಪಟ್ಟಿಕೆಯಲ್ಲಿ ಇಬ್ಬರು ಕಪಿಗಳ ಹೆಗಲ ಮೇಲೆ ವಾನರನಾಯಕ ನಲನು ಕುಳಿತು ಸಮುದ್ರವನ್ನು ವೀಕ್ಷಿಸುತ್ತಿದ್ದಾನೆ. ದೂರದಲ್ಲಿ ನೋಡುವಂತೆ ಕೈಯನ್ನು ಎತ್ತಿ ಹಿಡಿದಿದ್ದಾನೆ. ಬಲಭಾಗದ ಕೊನೆಯ ದೃಶ್ಯದಲ್ಲಿ ಸುಗ್ರೀವನು ಕೈ ಮುಗಿದು ನಿಂತುಕೊಂಡು ರಾಮ, ಲಕ್ಷ್ಮಣ ನಲರ ಸಂವಾದವನ್ನು ಆಲಿಸುತ್ತಿದ್ದಾನೆ.[೭]

ಕಥಾನಕ ಪಟ್ಟಿಕೆ ಎಡಭಾಗದ ಆರು ದೃಶ್ಯಗಳಲ್ಲಿ ಸೇತುಬಂಧ ನಿರ್ಮಾಣದ ದೃಶ್ಯಗಳನ್ನು ಕಂಡರಿಸಲಾಗಿದೆ. ಲಕ್ಷ್ಮಣನ ಪಟ್ಟಿಕೆ ಎಡಭಾಗದ ಪಟ್ಟಿಕೆಗಳನ್ನು ಗಮನಿಸುತ್ತಾ ಹೋದರೆ ವಾನರ ನಾಯಕರು ಯಾವ ಯಾವ ರೀತಿಯಲ್ಲಿ ಕಲ್ಲು ಬಂಡೆಗಳನ್ನು ಹೊತ್ತುಕೊಂಡು ಸಮುದ್ರ ಮಧ್ಯದಲ್ಲಿ ಸೇತುವೆ ನಿರ್ಮಾಣ ಮಾಡಿದರು ಎಂಬುದನ್ನು ಇಲ್ಲಿ ಶಿಲ್ಪಿ ಹೇಳಬಯಸಿದ್ದಾನೆ. ಎಡಭಾಗದ ಮೊದಲ ಪಟ್ಟಿಕೆಯಲ್ಲಿ ವಾನರ ನಾಯಕನೊಬ್ಬ ಕೈಯಲ್ಲಿ ಒಂದು ಕಲ್ಲನ್ನು ಹಿಡಿದು ತಲೆಯ ಮೇಲೆ ಬೃಹತ್ತಾದ ಬಂಡೆಕಲ್ಲನ್ನು ಹೊತ್ತುಕೊಂಡಿದ್ದಾನೆ. ಅವನನ್ನು ಕುಳಿತಿರುವ ಭಂಗಿಯಲ್ಲಿ ಕಂಡರಿಸಲಾಗಿದೆ. ನಂತರದ ಎರಡನೆ ಪಟ್ಟಿಕೆಯಲ್ಲಿ ವಾನರನೊಬ್ಬ ನಿಂತಿರುವ ಭಂಗಿಯಲ್ಲಿದ್ದು ಚಿಕ್ಕ ಕಲ್ಲನ್ನು ಬಾಲಕ್ಕೆ ಸುತ್ತಿಕೊಂಡಿದ್ದಾನೆ. ಬೃಹತ್ ಬಂಡೆ ಕಲ್ಲನ್ನು ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಹೊತ್ತು ಕೊಂಡು ಹೊರಟಿದ್ದಾನೆ. ಮೂರನೆಯ ದೃಶ್ಯದಲ್ಲಿ ಕಪಿಯೊಬ್ಬನು ಕೈಯನ್ನು ಕೆಳಗೆ ಮಾಡಿ ಎದೆಗೆ ಅವುಚಿಕೊಂಡು ಬಂಡೆಗಲ್ಲನ್ನು ಹಿಡಿದುಕೊಂಡು ದೊಡ್ಡ ಬಂಡೆಕಲ್ಲನ್ನು ಬಾಲದಿಂದ ಮೇಲಕ್ಕೆತ್ತಿದ್ದಾನೆ. ನಾಲ್ಕನೆಯ ದೃಶ್ಯದಲ್ಲಿಯೂ ಕಪಿ ಬಾಲದಲ್ಲಿ ಬಂಡೆಗಲ್ಲನ್ನು ಸುತ್ತಿಕೊಂಡು ಮತ್ತು ಕೈಗಳ

ಮೇಲೆ ಬಂಡೆಕಲ್ಲುಗಳನ್ನು ಹಿಡಿದುಕೊಂಡಿದ್ದಾನೆ. ಕೊನೆಯ ಎರಡು ಶಿಲ್ಪ ಪಟ್ಟಿಕೆಗಳಲ್ಲಿ ರಾಮ ಲಕ್ಷ್ಮಣರು ಸೇತುವೆ ನಿರ್ಮಾಣಕ್ಕೆ ಈ ಎಲ್ಲ ಕಪಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

ತಂತ್ರದ ದೃಷ್ಟಿಯಿಂದ ಈ ಕಥಾನಕ ಶಿಲ್ಪ ವಿಶೇಷ ಅಧ್ಯಯನ ಯೋಗ್ಯವಾಗಿದೆ ಇಲ್ಲಿ ಕ್ರಿಯೆಗೆ ಹೆಚ್ಚು ಮಹತ್ವ ನೀಡಿದ ಶಿಲ್ಪಿ ಮಧ್ಯದಲ್ಲಿ ರಾಮ ಲಕ್ಷ್ಮಣರನ್ನು ಕಂಡರಿಸಿ ಬಲಭಾಗದಲ್ಲಿ ಸಮುದ್ರ ಸೇತುವೆ ಯೋಜನೆ ಮತ್ತು ಎಡಭಾಗದಲ್ಲಿ ಕಪಿಗಳಿಂದ ಸೇತುವೆ ನಿರ್ಮಾಣವನ್ನು ತೋರಿಸಿ ನೋಡುಗರ ಗಮನ ಸೆಳೆಯುತ್ತಾನೆ.

ಇಂತಹ ಸೇತುಬಂಧಕ್ಕೆ ಸಂಬಂಧಿಸಿದ ಎರಡು ಕಥಾನಕ ಶಿಲ್ಪಗಳು ಸಮೀಪದ ಅಬಲೂರಿನ ಬ್ರಹ್ಮಲಿಂಗೇಶ್ವರ ದೇವಸ್ಥಾನದಲ್ಲಿ ಕಂಡು ಬರುತ್ತವೆ. ಇಲ್ಲಿ ರಾಮನು ಪ್ರಾಯೋಪ್ರವೇಶಮಾಡಿ ಸಮುದ್ರವನ್ನು ದಾಟಬೇಕೆಂದು ದೃಢ ಸಂಕಲ್ಪ ಮಾಡಿ ಸಮುದ್ರರಾಜನ ಸಹಾಯ ಕೇಳುವ ದೃಶ್ಯವು ಸುಂದರವಾಗಿ ಏಕದೃಶ್ಯ ನಿರೂಪಣೆಯಲ್ಲಿ ಮೂಡಿಬಂದಿದೆ. ಮುಂದುವರೆದ ಭಾಗದಲ್ಲಿ ವಾನರ ನಾಯಕನಾದ ನಲನು ಸೇತುವೆ ನರ್ಮಾಣದ ನೇತೃತ್ವ ವಹಿಸಿಕೊಳ್ಳಲು ಸಿದ್ಧನಾಗಿ ರಾಮನೊಂದಿಗೆ ಸಂವಾದ ನಡೆಸುವ ಘಟನೆಯನ್ನು ಪಟ್ಟಿಕೆ ರಹಿತವಾಗಿ ಏಕದೃಶ್ಯದಲ್ಲಿ ಸುಂದರವಾಗಿ ಕಂಡರಿಸಲಾಗಿದೆ. "ಹೊಯ್ಸಳರ ಕಾಲದ ಅಮೃತೇಶ್ವರ ದೇವಾಲಯದಲ್ಲಿ ಕಂಡು ಬರುವ ಸೇತುಬಂಧ ಶಿಲ್ಪ ಅತ್ಯಂತ ಸುಂದರವಾಗಿದೆ. ಇಲ್ಲಿ ಸಮುದ್ರವನ್ನು ನದಿಯಂತೆ ಉದ್ದಲಾಗಿ ತೋರಿಸಿ ಅದರಲ್ಲಿ ವಿವಿಧ ಜಲಚರಗಳನ್ನು ಕಂಡರಿಸಲಾಗಿದೆ. ಸುಗ್ರೀವ, ಹನುಮಂತ ಮುಂತಾದ ವಾನರ ನಾಯಕರು ಬೃಹತ್ ಕಲ್ಲು ಬಂಡೆಗಳನ್ನು ಸಮುದ್ರದಲ್ಲಿ ಎಸೆಯುವ ಹಾಗೆ ಕಥಾ ನಿರೂಪಕ ಶಿಲ್ಪವನ್ನು ಅತ್ಯಂತ ಶ್ರೀಮಂತವಾಗಿ ನಿರೂಪಿಸಲಾಗಿದೆ[೮]".

ಮಹಾಭಾರತಕ್ಕೆ ಸಂಬಂಧಿಸಿದ ಕಥಾನಕ ಶಿಲ್ಪಗಳು

ಅಮೃತಕ್ಕೆ ಹಾರಿದ ಗರುಡ

ಅಮೃತಕ್ಕೆ ಹಾರಿದ ಗರುಡ ಕಥೆ ಮಹಾಭಾರತದ ಆದಿಪರ್ವದ ಆಸ್ತಿಕ ಉಪಪರ್ವದ ೨೦ ರಿಂದ ೩೪ರ ಉಪಅಧ್ಯಾಯಗಳಲ್ಲಿ ಕಂಡುಬರುತ್ತದೆ. ಹಾಗೂ ಗರುಡಪುರಾಣ ಹಾಗೂ ಶ್ರೀಮದ್‌ಭಾಗವತದಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ. ತಾರಕೇಶ್ವರ ದೇವಾಲಯದ ದಕ್ಷಿಣ ಗೂಢಮಂಟಪದ ಪಶ್ಚಿಮಭಾಗದ ಕಕ್ಷಾಸನದ ಹಿಂಬದಿಯಲ್ಲಿ (ಹೊರಭಾಗದಲ್ಲಿ) ಈ ಕಥಾನಕ ಶಿಲ್ಪಪಟ್ಟಿಕೆ ಕಂಡುಬರುತ್ತದೆ. ಮಹಾಭಾರತದಲ್ಲಿ ಬರುವ ಈ ಕಥೆಯ ಸಾರಾಂಶ ಈ ರೀತಿಯಾಗಿದೆ.

"ನಾಗಗಳು ಮತ್ತು ಗರುಡ ದಾಯಾದಿ ಸಹೋದರರು. ಇಬ್ಬರು ತಾಯಂದಿರಿಗೆ ಜನಿಸಿದವರು. ಬ್ರಹ್ಮನನ್ನೇ ತಂದೆಯಾಗಿ ಹೊಂದಿದವರು. ಬ್ರಹ್ಮನು ಕಶ್ಯಪನೆಂಬ ಋಷಿಯ ರೂಪ ಧರಿಸುತ್ತಾನೆ. ಕದ್ರು ಮತ್ತು ವಿನಿತ ಎಂಬ ಇಬ್ಬರು ಪತ್ನಿಯರನ್ನು ಸ್ವೀಕರಿಸುತ್ತಾನೆ. ಕದ್ರು ಅಸಂಖ್ಯ ಮಕ್ಕಳ ತಾಯಿಯಾಗಲು ಬಯಸುತ್ತಾಳೆ. ಆದ್ದರಿಂದ ಒಂದು ಸಾವಿರ ಸರ್ಪಗಳ ತಾಯಿಯಾಗುತ್ತಾಳೆ ಆದರೆ ವಿನೀತೆ ಕಡಿಮೆ ಸಂಖ್ಯೆಯಲ್ಲಿರುವ ಆದರೆ ಬಲಶಾಲಿಗಳಾಗಿರುವ ಮಕ್ಕಳನ್ನು ಬಯಸುತ್ತಾಳೆ. ಹೀಗಾಗಿ ಇಬ್ಬರು ಮಕ್ಕಳ ತಾಯಿಯಾಗುತ್ತಾಳೆ. ಅವರಲ್ಲಿ ಬ್ರಹದಾಕಾರದ ಪಕ್ಷಿಯಾದ ಗರುಡನು ಪ್ರಮುಖನಾಗಿದ್ದಾನೆ.

ವಿನಿತೆ ಹಾಗೂ ಕದ್ರು ಒಂದು ಪಂದ್ಯಕಟ್ಟಿ ವಿನೀತೆ ಪಂಥದಲ್ಲಿ ಸೋತು ಬಲವಂತವಾಗಿ ಕದ್ರುವಿನ ಸೇವಕಿಯಾಗುತ್ತಾಳೆ. ವಿಷಯ ತಿಳಿದ ಗರುಡ ಗುಲಾಮಗಿರಿಯಿಂದ ತಪ್ಪಿಸಿ ಕೊಳ್ಳಲು ಪ್ರಯತ್ನಿಸುತ್ತಾನೆ. ಅದಕ್ಕೊಂದು ದಾರಿ ಕಂಡುಕೊಳ್ಳುತ್ತಾನೆ. "ದೇವತೆಗಳು ಕಾಪಾಡಿಕೊಂಡಿರುವ ಅಮೃತ ಕುಂಭವನ್ನು ನಮಗೆ ತಂದು ಕೊಟ್ಟರೆ ಗರುಡ ಮತ್ತು ಅವನ ತಾಯಿ ವಿನೀತೆಯನ್ನು ಸ್ವತಂತ್ರರನ್ನಾಗಿ ಮಾಡುವುದಾಗಿ ಕದ್ರುವಿನ ಮಕ್ಕಳಾದ ನಾಗಗಳು ಹೇಳುತ್ತವೆ.

ಬಾಂದಳಕ್ಕೆ ಹಾರಿದ ಗರುಡ ದೇವತೆಗಳನ್ನು ಸೋಲಿಸಿ, ಅಮೃತಕುಂಭವನ್ನು ಹಿಡಿದುಕೊಂಡು ಕೆಳಗೆ ಇಳಿಯುವಾಗ ಕೈಯಲ್ಲಿ ಅಮೃತ ಇದ್ದರೂ ಒಂದು ಹನಿಯನ್ನು ಸೇವಿಸುವುದಿಲ್ಲ. ಗರುಡನ ಈ ವೈರಾಗ್ಯ ನೋಡಿ ವಿಷ್ಣುವು ಅವನು ತನ್ನ ವಾಹನವಾಗಲು ಒಪ್ಪಿದರೆ ನಾಗಗಳು ಅಮರರಾಗದೇ ಗರುಡನ ತಾಯಿ ವಿನೀತೆಯ ಬಿಡುಗಡೆಯ ಮಾರ್ಗ ತೋರಿಸುತ್ತೇನೆ ಎಂದು ಮಾರ್ಗಮಧ್ಯದಲ್ಲಿ ಗರುಡನಿಗೆ ಹೇಳುತ್ತಾನೆ.

ವಿಷ್ಣು ಹೇಳಿಕೊಟ್ಟಂತೆ ಗರುಡ ನಾಗಗಳಿಗೆ ಅಮೃತ ಕುಂಭ ಕೊಡುವ ಮೊದಲೇ ತಮ್ಮನ್ನು ಗುಲಾಮಗಿರಿಯಿಂದ ಮುಕ್ತರನ್ನಾಗಿ ಮಾಡಬೇಕೆಂಬ ಬೇಡಿಕೆಯನ್ನಿಡುತ್ತಾನೆ. ಒಪ್ಪಿದ ನಾಗಗಳು "ನೀವೀನ್ನು ಸ್ವತಂತ್ರರು" ಎಂದು ಹೇಳುತ್ತವೆ. ಕೊಟ್ಟ ಭಾಷೆಯಂತೆ ಗರುಡ ಅಮೃತಕುಂಭವನ್ನು ಹುಲ್ಲಿನ ಮೇಲೆ ಇಡುತ್ತಾನೆ. ಅಮೃತವನ್ನು ಸೇವಿಸುವ ಮೊದಲು

ಸ್ನಾನ ಮಾಡಿ ಶುದ್ಧರಾಗಬೇಕು ಎಂದು ನಾಗಗಳಿಗೆ ಸಲಹೆ ನೀಡುತ್ತಾನೆ. ನಾಗಗಳು ಸ್ನಾನಕ್ಕೆ ಧಾವಿಸಿದ ತಕ್ಷಣ ಇಂದ್ರನನ್ನು ಆಹ್ವಾನಿಸುತ್ತಾನೆ. ಇಂದ್ರ ಅಮೃತಕುಂಭವನ್ನು ಮರಳಿ ಪಡೆದು ಗರುಡನಿಗೆ ನಾಗಗಳು ನಿನಗೆ ಆಹಾರವಾಗಲಿ ಎಂಬ ವರ ನೀಡುತ್ತಾನೆ. ಮರಳಿಬಂದ ನಾಗಗಳು ಅಮೃತಕುಂಭವಿಲ್ಲದಿರುವುದನ್ನು ನೋಡಿ ರೋಷಗೊಳ್ಳುತ್ತವೆ. ಆದರೆ ಗರುಡ "ನಾನು ನಿಮ್ಮ ಗುಲಾಮನಲ್ಲ" ಎಂದು ಹೇಳುತ್ತಾನೆ.

ಅಮೃತಕುಂಭ ಇರಿಸಿದ್ದ ಹುಲ್ಲಿನ ಭಾಗವನ್ನು ನಾಗಗಳು ನೆಕ್ಕುತ್ತವೆ ಅದರ ಮೇಲೆ ಹೊರಳಾಡುತ್ತವೆ. ಇದರಿಂದ ಕಾಲಕಾಲಕ್ಕೆ ಪೊರೆಕಳಚಿ ಹೊಸ ಚರ್ಮ ಧರಿಸಿ ನಾವಿನ್ಯತೆ ಮತ್ತು ಚಿರಯೌವನ ಪಡೆಯುತ್ತವೆ".

ಮೇಲಿನ ಕಥೆಯನ್ನು ನಿರೂಪಿಸುವ ಶಿಲ್ಪಪಟ್ಟಿಕೆಯು ಬಹುದೃಶ್ಯ ನಿರೂಪಣಾ ಶಿಲ್ಪ ಪಟ್ಟಿಕೆಯಾಗಿದೆ. ಇದರಲ್ಲಿ ಐದು ದೃಶ್ಯಗಳು ಕಂಡುಬರುತ್ತವೆ. ಅವು ಈ ರೀತಿಯಾಗಿವೆ.

ಪ್ರಥಮ ದೃಶ್ಯದಲ್ಲಿ ಗರುಡನು ಅಮೃತವನ್ನು ತಲೆಯ ಮೇಲೆ ಹೊತ್ತು ತರುತ್ತಿದ್ದಾನೆ. ದ್ವಿತೀಯ ಪಟ್ಟಿಕೆಯಲ್ಲಿ ಆಕಾಶದಲ್ಲಿ ಐರಾವತದ ಮೇಲೆ ಕುಳಿತಿರುವ ಇಂದ್ರನೊಂದಿಗೆ ಯುದ್ಧದಲ್ಲಿ ತೊಡಗಿದ್ದಾನೆ. ಕೆಳಗೆ ವಾದ್ಯಗಣದವರಿದ್ದಾರೆ. ಮೂರನೇ ದೃಶ್ಯದಲ್ಲಿ ಇಂದ್ರನ ಸೈನಿಕರು ಗರುಡನನ್ನು ತಡೆಯಲು ಯುದ್ಧಮಾಡುತ್ತಿದ್ದಾರೆ. ಕೈಯಲ್ಲಿ ಕತ್ತಿ ಮತ್ತು ಗುರಾಣಿಗಳಿವೆ. ಗುರಾಣಿಯನ್ನು ಹಿಡಿದ ನಾಲ್ವರು ಸೈನಿಕರನ್ನು ಎರಡು ಹಂತಗಳಲ್ಲಿ ತೋರಿಸಲಾಗಿದೆ. ನಾಲ್ಕನೇ ದೃಶ್ಯದಲ್ಲಿ ಗರುಡನು ಬಲಗೈಯಲ್ಲಿ ಅಮೃತದ ಕುಂಭವನ್ನು ಹಿಡಿದು ಎಡಗೈಯಲ್ಲಿ ಖಡ್ಗ ಹಿಡಿದು ಭೂಲೋಕದತ್ತ ಬರುತ್ತಿದ್ದಾನೆ. ಐದನೇ ದೃಶ್ಯದಲ್ಲಿ ಇಂದ್ರನು ಅಮೃತ ಕುಂಭವನ್ನು ಮತ್ತೆ ಇಂದ್ರಲೋಕಕ್ಕೆ ತಿರುಗಿಕೊಂಡೊಯ್ಯಲು ವೃಕ್ಷವನ್ನು ಬಳಸಿ ನಿಂತಿದ್ದಾನೆ.

ಅತ್ಯಂತ ವಿಶಿಷ್ಟವಾದ ಈ ಕಥಾ ಪಟ್ಟಿಕೆಯಲ್ಲಿ ಶಿಲ್ಪಿಯು ಗರುಡನ ಕಥೆಯನ್ನು ಸಾಂಕೇತಿಕವಾಗಿ, ಕೆಲವು ಪ್ರಮುಖ ಘಟನೆಗಳನ್ನು ಮಾತ್ರ ಆಯ್ದುಕೊಂಡು ನಿರೂಪಿಸಲು ಪ್ರಯತ್ನಿಸಿದ್ದಾನೆ. ಇಲ್ಲಿ ಪಾತ್ರಗಳಿಗಿಂತ ಘಟನೆಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ. ಯಾವುದೇ ಪಟ್ಟಿಕೆಯಲ್ಲಿಯೂ ನಾಗಗಳನ್ನು ತೋರಿಸಿದೇ ಇರುವುದು ಆಶ್ಚರ್ಯಕರವಾಗಿದೆ.

ತಂತ್ರ ಮತ್ತು ಶೈಲಿ

ಹಾನಗಲ್ಲಿನ ತಾರಕೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು ಕಲಾ ದೃಷ್ಟಿಯಿಂದ ಗಮನೀಯವಾಗಿವೆ. ಶಿಲ್ಪಿಗೆ ರಾಮಾಯಣ, ಮಹಾಭಾರತ, ಮತ್ತು ಭಾಗವತ ಕಥೆಗಳ ಪರಿಚಯ ಚೆನ್ನಾಗಿತ್ತೆಂದು ತೋರುತ್ತದೆ. ಕಕ್ಷಾಸನದ ಕೆಲವು ಶಿಲ್ಪಗಳನ್ನು ಪರಿಶೀಲಿಸಿದಾಗ ಶಿಲ್ಪಿಯು ಸೀಮಿತ ಸ್ಥಳಾವಕಾಶದಲ್ಲಿ ಕಥೆಯ ಘಟನಾವಳಿಗಳನ್ನು ಪರಿಣಾಮಕಾರಿಯಾಗಿ ನಿರೂಪಿಸಿದ್ದಾನೆ. (ಅಮೃತಕ್ಕೆ ಹಾರಿದ ಗರುಡ ಕಥಾ ನಿರೂಪಕ ಶಿಲ್ಪ)

ಈ ದೇವಾಲಯದ ಎಲ್ಲ ಕಥಾನಿರೂಪಕ ಶಿಲ್ಪಗಳನ್ನು ಬಹು ದೃಶ್ಯ ನಿರೂಪಣಾ ತಂತ್ರ (Multi scene mode) ಮೂಲಕ ತೋರಿಸಲಾಗಿದೆ. ಸಾಮಾನ್ಯವಾಗಿ ರಾಷ್ಟ್ರಕೂಟರ ಕಾಲದ ದೇವಾಲಯಗಳಲ್ಲಿ ಕಂಡು ಬರುವ ಬಹುದೃಶ್ಯ ನಿರೂಪಣಾ ತಂತ್ರ ಇಲ್ಲಿಯೂ ಬಳಸಲ್ಪಟ್ಟಿದೆ. ಕಲ್ಯಾಣ ಚಾಲುಕ್ಯರ ಕಾಲದ ಮತ್ತೊಂದು ಸಮೀಪದ ದೇವಾಲಯ ಅಬಲೂರಿನ ಬ್ರಹ್ಮಲಿಂಗೇಶ್ವರದಲ್ಲಿ ಕಥಾ ನಿರೂಪಕ ಶಿಲ್ಪಗಳು ಏಕದೃಶ್ಯ ನಿರೂಪಣಾ ತಂತ್ರದಲ್ಲಿ ಕಂಡರಿಸಲ್ಪಟ್ಟಿದ್ದು ತಾರಕೇಶ್ವರ ದೇವಾಲಯದ ಕಥಾನರೂಪಕ ಶಿಲ್ಪಗಳಿಗಿಂತ ಉತ್ತಮವಾಗಿ ಮೂಡಿಬಂದಿವೆ. ತಾರಕೇಶ್ವರ ದೇವಾಲಯದ ಶಿಲ್ಪಗಳು ವಿಷಯ ಪ್ರತಿಪಾದನೆಯಲ್ಲಿ ಶ್ರೀಮಂತವಾಗಿದ್ದರೂ ಪಾತ್ರಗಳ ನಿರೂಪಣೆ ಮತ್ತು ಶಿಲ್ಪದ ಸೌಂದರ್ಯದಲ್ಲಿ ಸೊರಗಿವೆ.

ಸಮಕಾಲೀನ ಎಲ್ಲ ದೇವಾಲಯಗಳಿಗಿಂತ ತಾರಕೇಶ್ವರ ದೇವಾಲಯದ ಕಥಾನಿರೂಪಕ ಶಿಲ್ಪಗಳಲ್ಲಿ ಅಳವಡಿಸಿಕೊಂಡಿರುವ ತಂತ್ರ ಅಧ್ಯಯನ ಯೋಗ್ಯವಾಗಿದೆ. ಇಲ್ಲಿ ಶಿಲ್ಪಿಯು ಎಡ ಅಥವಾ ಬಲ ಭಾಗದಿಂದ ಕಥೆಯನ್ನು ಪ್ರಾರಂಭಿಸಿದರೂ ಕಥೆಯ ಮುಂದುವರಿಕೆಯಲ್ಲಿ ಸಮಸೂತ್ರತೆ ಅಥವಾ ಏಕಸೂತ್ರತೆಯನ್ನು ಕಾಪಾಡಿಕೊಂಡಿಲ್ಲ. ಕಥೆಯಲ್ಲಿ ಬರುವ ನಿರಂತರ ಘಟನೆಗಳು ಶಿಲ್ಪದಲ್ಲಿ ಹಿಂದು ಮುಂದಾಗಿ ಗೋಚರಿಸುತ್ತವೆ. (ಉದಾ: ಕಾಳಿಂಗಮರ್ಧನ ಕಥಾನಿರೂಪಕ ಶಿಲ್ಪ). ಕೆಲವೊಮ್ಮೆ ಶಿಲ್ಪಿಯು ಇಡೀ ಕಥಾನಕ ಶಿಲ್ಪವನ್ನು ಕೇಂದ್ರ ಪಾತ್ರ ಅಥವಾ ಮಧ್ಯದಿಂದ ಆರಂಭಿಸಿ ಎಡ ಬಲಗಳಲ್ಲಿ ಅದನ್ನು ಮುಂದು ವರೆಸುತ್ತಾನೆ. (ಉದಾ: ಸೇತು ಬಂಧನದ ಕಥಾ ನಿರೂಪಕ ಶಿಲ್ಪ). ಕೆಲವೊಮ್ಮೆ ಅವಿರತ ಕಥಾನಿರೂಪಣ ತಂತ್ರವನ್ನು ಶಿಲ್ಪಿಯು ಬಳಸಿದ್ದಾನೆ. (ಸೀತಾಪಹರಣ ಶಿಲ್ಪ) ಇದು ಸಾಮಾನ್ಯ ವೀಕ್ಷಕರನ್ನು ಗೊಂದಲಕ್ಕೀಡು ಮಾಡುತ್ತದೆ. ಶಿಲ್ಪಿಯು




ಹಾನಗಲ್ಲ ತಾರಕೇಶ್ವರ ದೇವಸ್ಥಾನ



ಕಾಳಿಂಗಮರ್ದನ–ಪೂರ್ಣ ಕಥಾನಕ ಪಟ್ಟಿಕೆ



ಕಾಳಿಂಗ ಸರ್ಪದ ಮೇಲೆ ಕೃಷ್ಣನ ನೃತ್ಯ.



ಶ್ರೀಕೃಷ್ಣನ ಬಾಲಲೀಲೆಗಳು ಪೂರ್ಣ ಕಥಾನಕ ಪಟ್ಟಿಕೆ



ಮಾಯಾಜಿಂಕೆ ಪ್ರಸಂಗ–ಪೂರ್ಣ ಕಥಾನಕ ಪಟ್ಟಿಕೆ.



ಪೂತನಿ ಸಂಹಾರ




ಕಂಸನಿಂದ ಶಿಶು ಹತ್ಯೆ ಪ್ರಯತ್ನ



ಸೀತಾಪಹರಣ ಪ್ರಸಂಗ



ಅಮೃತ ಕುಂಭವನ್ನು ಭೂಲೋಕಕ್ಕೆ ತರುತ್ತಿರುವ ಗರುಡ




ರಾಮನಿಂದ ಮಾರೀಚ ಸಂಹಾರ

ಘಟನೆಯನ್ನು ಕೇಂದ್ರೀಕರಿಸಿಕೊಂಡು ಪಾತ್ರಗಳನ್ನು ಅಲಕ್ಷಿಸಿದಾಗ ನಿರೂಪಣೆಯಲ್ಲಿ ಇಂತಹ ಮಿತಿಯನ್ನು ಕಾಣಬಹುದಾಗಿದೆ.

ಶೈಲಿಯ ದೃಷ್ಟಿಯಿಂದ ಗಮನಸಿದರೆ ಪ್ರಸ್ತುತ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದು ಹೊಯ್ಸಳರ ಮತ್ತು ಬಾದಾಮಿ ಚಲುಕ್ಯರ ಕಥಾ ನಿರೂಪಕ ಶಿಲ್ಪಗಳಲ್ಲಿ ಕಂಡು ಬರುವ ಜೀವಕಳೆ ಇಲ್ಲಿ ಕಡಿಮೆಯಾಗಿದೆ. ಒಂದು ರೀತಿಯ ಏಕತಾನತೆ ಈ ಶಿಲ್ಪಗಳ ಮಿತಿಯಾಗಿದೆ. ಈ ದೇವಾಲಯದ ಕಥಾನಿರೂಪಕ ಶಿಲ್ಪಗಳ ವಿಶೇಷತೆ ಎಂದರೆ ಕಥೆಯ ವಿಸ್ತಾರತೆ. ಪ್ರತಿಯೊಂದು ಕಥೆಯನ್ನು ಇಲ್ಲಿ ಶಿಲ್ಪಿ ವಿವರವಾಗಿ ಹೇಳ ಹೊರಟಿದ್ದಾನೆ. ಮತ್ತು ಘಟನೆಗಳ ಸೂಕ್ಷ್ಮ ಅಂಶಗಳಿಗೆ ಗಮನಕೊಟ್ಟಿರುವುದು ಶೈಲಿಯ ದೃಷ್ಟಿಯಿಂದ ಪ್ರಮುಖ ಅಂಶವಾಗಿದೆ. (ಉದಾ: ಕೃಷ್ಣನ ಬಾಲಲೀಲೆ, ಪೂತನೀ ಸಂಹಾರ, ಶಕಟಾಸುರ ಕಥಾ ನಿರೂಪಕ ಶಿಲ್ಪಗಳು).

ಧಾರ್ಮಿಕ ದೃಷ್ಟಿಯಿಂದ ಗಮನಿಸಿದರೆ ಈ ದೇವಾಲಯವು ಮುಖ್ಯವಾಗಿ ಶೈವ ಪಂಥಕ್ಕೆ ಸೇರಿದ ದೇವಾಲಯವಾಗಿದ್ದರೂ ಇಲ್ಲಿ ಭಾಗವತ, ರಾಮಾಯಣ, ಮಹಾಭಾರತಕ್ಕೆ ಸಂಬಂಧಿಸಿದಂತೆ ವೈಷ್ಣವ ಪಂಥೀಯ ಕಥಾನಿರೂಪಕ ಶಿಲ್ಪಗಳು ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಈ ದೇವಾಲಯವು ತಾರಕನನ್ನು ಸಂಹರಿಸಿದ ಶಿವನ ಆರಾಧನೆಯ ದೇವಾಲಯವಾಗಿದ್ದರೂ, ಇಲ್ಲಿ ಶಿವ ಪುರಾಣ ಅಥವಾ ತಾರಕಾಸುರವಧೆಯ ಯಾವ ಪ್ರಸಂಗಗಳು ಕಂಡು ಬರುವುದಿಲ್ಲ. ಈ ದೇವಾಲಯಕ್ಕೆ ಸಂಬಂಧಿಸಿದ ೧೧-೧೨ ಶತಮಾನದ ಶಾಸನದಲ್ಲಿ ತಾರಕೇಶ್ವರ ದೇವಾಲಯಕ್ಕೆ ದತ್ತಿ ನೀಡಿದ ಉಲ್ಲೇಖವಿದೆ[೧೦]. ಈ ದೇವಾಲಯಕ್ಕೆ ಸಂಬಂಧಿಸಿದ ಮತ್ತೊಂದು ಶಾಸನ (೧೧೨೧) ತೈಲೇಶ್ವರ ದೇವಾಲಯ ನಿರ್ಮಿಸಿ ಭೂದಾನ ನೀಡಿದ ಮಹಾಪ್ರಧಾನ ಮೆಣಸನನ್ನು ಉಲ್ಲೇಖಿಸುತ್ತದೆ[೧೧].

ಐತಿಹಾಸಿಕ ಪ್ರವಾಸೋದ್ಯಮವು ಪ್ರಾಮುಖ್ಯತೆ ಪಡೆಯುತ್ತಿರುವ ಇಂದಿನ ದಿನಮಾನಗಳಲ್ಲಿ ಕಥಾ ನಿರೂಪಕ ಶಿಲ್ಪಗಳು ಪ್ರವಾಸಿಗರನ್ನು, ಕಥೆಗಳ ಮೂಲಕ ಹೆಚ್ಚು ಆಕರ್ಷಿಸುವುದರಿಂದ ಅವುಗಳ ಅಧ್ಯಯನ ಹೆಚ್ಚು ಮಹತ್ವ ಪಡೆದುಕೊಳ್ಳುತ್ತವೆ. ಒಟ್ಟಿನಲ್ಲಿ ತಾರಕೇಶ್ವರ ದೇವಾಲಯದ ಕಥಾ ನಿರೂಪಕ ಶಿಲ್ಪಗಳು ವಿಷಯ ವಸ್ತುವಿನಲ್ಲಿ ವೈವಿಧ್ಯತೆ ಮತ್ತು ವಿಸ್ತ್ರತತೆ, ಶೈಲಿಯಲ್ಲಿ ಸರಳತೆ ಮತ್ತು ತಂತ್ರದಲ್ಲಿ ವಿಭಿನ್ನತೆಯನ್ನು ಹೊಂದಿದ್ದು ಕಲಾ ಪರಂಪರೆಗೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತವೆ.



ಕಲ್ಲನ್ನು ಬಾಲಕ್ಕೆ ಸುತ್ತಿಕೊಂಡಿರುವ ವಾನರ

[ಈ ಸಂಪ್ರಬಂಧವನ್ನು ಸಿದ್ಧಪಡಿಸಲು ಕ್ಷೇತ್ರ ಕಾರ್ಯದಲ್ಲಿ ನೆರವಾದ ಶ್ರೀ ಸುಹಾಸ ನಾಯಕ ಮತ್ತು ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ. ಸಿ.ಎಸ್. ವಾಸುದೇವನ್ ಇವರಿಗೆ ವಿಶೇಷ ಧನ್ಯವಾದಗಳು]



ಅಮೃತಕ್ಕೆ ಹಾರಿದ ಗರುಡ-ಪೂರ್ಣ ಕಥಾನಕ ಪಟ್ಟಿಕೆ

ಅಡಿಟಿಪ್ಪಣಿಗಳು

೧. ಶಾಂತಾಪೂರಮಠ ವಿ.ಜಿ., ೨೦೧೫, 'ವಿರಾಟನಗರಿ (ಹಾನಗಲ್ಲ) ಇತಿಹಾಸ', ಪು. ೧೧, ಕುಮಾರೇಶ್ವರ ಪ್ರಕಾಶನ, ಹಾನಗಲ್ಲ.

೨. ಶ್ರೀನಿವಾಸ ಪಾಡಿಗಾರ, "ದೇವಾಲಯ ವಾಸ್ತುಶಿಲ್ಪ", ವಾಸುದೇವ ಬಡಿಗೇರ (ಸಂ), "ಹಾನಗಲ್ಲು", (ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೫), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೯೦.

೩. ವಿಶ್ವಾಮಿತ್ರ ಮತ್ತು ಇತರರು, ೧೯೯೫, 'ಶ್ರೀಮದ್ ಭಾಗವತ' ಸಂಪುಟ ೬, ಪುಟ ೨೨೦೫-೨೨೨೩, ಭಾರತ ದರ್ಶನ ಪ್ರಕಾಶನ ಸಮಿತಿ, ಬೆಂಗಳೂರು.

೪. Kristi Evans, 1997, 'Epic Narratives in Hoysala Temples', P-186, Brill Leiden, Newyork.

೫. ವಿಶ್ವಾಮಿತ್ರ ಮತ್ತು ಇತರರು, ೧೯೯೫, ಪೂರ್ವೋಕ್ತ, ಪು. ೨೦೦೮-೨೧೧೩.

೬ ಶ್ರೀಹರಿ ಮತ್ತು ಶ್ರೀನಿವಾಸರಾಯರು ನ.ವೆಂ., ೧೯೮೭, 'ಶ್ರೀಮದ್ವಾಲ್ಮೀಕಿ ರಾಮಾಯಣ' ಸಂ. ೪, ಪು. ೧೪೭೪-೧೪೭೮, ಭಾರತ ದರ್ಶನ ಪ್ರಕಾಶನ ಸಮಿತಿ, ಬೆಂಗಳೂರು.

೭. ಅದೇ, ಸಂಪುಟ ೮, ಪು. ೨೫೮೨-೨೫೯೪.

೮. Kristi Evans, 1997, 'Epic Narratives in Hoysala Temples', P-69, Brill Leiden, Newyork.

೯. ದೇವದತ್ತ ಪಟ್ನಾಯಕ್, ೨೦೧೫, 'ವಿಷ್ಣುವಿನ ಏಳು ರಹಸ್ಯಗಳು' ಪು. ೮೫-೮೯, ವಸಂತ ಪ್ರಕಾಶ, ಬೆಂಗಳೂರು.

೧೦. ಧಾರವಾಡ ಜಿಲ್ಲಾ ಶಾಸನಸೂಚಿ, ಹಾನಗಲ್ಲ ತಾಲೂಕು ಶಾಸನ ನಂ. ೨೯೮.

೧೧. ಮಹದೇವ ಸಿ, ವಾಸುದೇವನ್ ಸಿ.ಎಸ್., ರಮೇಶ ನಾಯಕ, ೧೯೯೯, 'ಕರ್ನಾಟಕ ದೇವಾಲಯ ಕೋಶ-ಹಾವೇರಿ ಜಿಲ್ಲೆ' ಪು. ೧೯೮, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೨

ಕುರುಗೋಡು ಪರಿಸರದ ಅಪೂರ್ವವಾದ ಶಿಲಾ ವಿಗ್ರಹಗಳು

ವೈ. ಹನುಮಂತರೆಡ್ಡಿ*

ಬಳ್ಳಾರಿ ಜಿಲ್ಲೆಯಲ್ಲಿ ಹೊಸ ತಾಲೂಕು ಕೇಂದ್ರವಾಗಿರುವ 'ಕುರುಗೋಡು' ಒಂದು ಐತಿಹಾಸಿಕ ಮಹತ್ವದ ಕ್ಷೇತ್ರ. ಇದು ಕ್ರಿ.ಶ.೯೫೦ ರಿಂದ ೧೨೦೦ ವರೆಗೆ 'ಬಲ್ಲಕುಂದೆ ಮುನ್ನೂರು ನಾಡಿನ ರಾಜಧಾನಿ'ಯಾಗಿದ್ದು, ಕುರುಗೋಡು ಸಿಂದ ವಂಶದ ೧೧ ಜನ ರಾಜರು ಆಳಿದ್ದಾರೆ. ತದನಂತರ ಮುಮ್ಮಡಿ ಅರಸರು, ವಿಜಯನಗರದ ಸಾಮ್ರಾಟರು ಮತ್ತು ಹಂಡೆ ವಂಶದ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟಿತ್ತು. ಆ ಕಾಲದಲ್ಲಿ ಆಳಿದ ಅರಸರು, ಮಾಂಡಲೀಕರು ಮತ್ತು ಮಹಾ ಜನರು ಈ ಪ್ರದೇಶದಲ್ಲಿ ಹಲವಾರು ಸುಂದರ ದೇವಾಲಯಗಳನ್ನು, ಜೈನಬಸದಿಗಳನ್ನು ಮತ್ತು ಮೂರ್ತಿಶಿಲ್ಪಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಅಪೂರ್ವವಾದ ಕೆಲವು ಶಿಲಾ ವಿಗ್ರಹಗಳ ಬಗ್ಗೆ ಮಾತ್ರ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಪಂಚಮುಖಿ ವೀರಭದ್ರೇಶ್ವರ

ಕುರುಗೋಡು ಪಕ್ಕದ ಬಾಳೆಕೊಳ್ಳದ ಗುಡ್ಡದಲ್ಲಿ ಸುಮಾರು ೧೫೦ ಅಡಿ ಎತ್ತರದಲ್ಲಿ ಇರುವ ಗುಡಿಯಲ್ಲಿ, ಅತ್ಯಪೂರ್ವವಾದ ಪಂಚಮುಖಿ ವೀರಭದ್ರನ ವಿಗ್ರಹವಿದೆ. ಇದು ೩' ೯" ಎತ್ತರವಿದ್ದು ನಿಂತ ಭಂಗಿಯಲ್ಲಿದ್ದು, ಇದಕ್ಕೆ ಐದು ಮುಖಗಳೂ ಹನ್ನೆರಡು ಹಸ್ತಗಳಿರುವುದು ವಿಶೇಷ. ಪ್ರತಿ ಹಣೆಯ ಮಧ್ಯದಲ್ಲಿ ಹಣೆಗಣ್ಣನ್ನು ತೋರಿಸಿದೆ ಎಲ್ಲಾ ೫ ತಲೆಗಳ ಮೇಲೆ ಅಲಂಕಾರಯುಕ್ತ ಕಿರೀಟಗಳಿದ್ದು, ಮಧ್ಯದ ಕಿರೀಟದ ಮುಂಭಾಗದಲ್ಲಿ 'ಶಿವಲಿಂಗ'ದ ಮುದ್ರೆ ಇದೆ. ಕಿವಿಯಲ್ಲಿ 'ಕರ್ಣಕುಂಡಲ', ಭುಜಗಳಲ್ಲಿ 'ಭುಜಕೀರ್ತಿ'ಗಳು ನಡುವಿಗೆ ' ವೀರಗಾಸೆ' ಮತ್ತು ತೊಡೆಗಳ ಮೇಲೆ ೫ ರುಂಡಗಳ ಮಾಲೆಯನ್ನು ಧರಿಸಲಾಗಿದೆ. ಎರಡು ಪಾದಗಳಲ್ಲಿ ಹಾವುಗೆಗಳನ್ನು ಮೆಟ್ಟಲಾಗಿದೆ. ಇದರ ಬಲಗಾಲ ಬದಿಯಲ್ಲಿ ೧ ಅಡಿ ಎತ್ತರದ ಟಗರಿನ ತಲೆಯ ದಕ್ಷನ ಮೂರ್ತಿ ಇದೆ. ಈ ವಿಗ್ರಹಕ್ಕೆ ಬಲಕ್ಕೆ ೬, ಎಡಕ್ಕೆ ೬ ಒಟ್ಟು ೧೨ ಹಸ್ತಗಳಿರುವುದು ವಿಶೇಷ. ದಕ್ಷ ಸಂಹಾರಕ್ಕಾಗಿ ಹೊರಟಿರುವಂತೆ, ೧೦ ಹಸ್ತಗಳಲ್ಲಿ ವಿವಿಧ ಬಗೆಯ ಆಯುಧಗಳನ್ನು ಧರಿಸಿದ್ದು, ಎಡಗಡೆಯ ೫ನೇ ಹಸ್ತವನ್ನು ಎಡ ತೊಡೆಯ ಮೇಲೆ ಇಟ್ಟಿದ್ದು, ೬ನೇ ಹಸ್ತ ಅಭಯ ಹಸ್ತದ ಮುದ್ರೆಯಲ್ಲಿದೆ.

ಇದೆಲ್ಲಕ್ಕಿಂತ ಇನ್ನೊಂದು ವಿಶೇಷವೆಂದರೆ, ಈ ವೀರಭದ್ರನ ವಿಗ್ರಹವನ್ನು ಮೊದಲು ಒಂದು ಶಿಲಾ ಶಾಸನವನ್ನು ಖಂಡರಿಸಲಾಗಿರುವ ಕರೀಕಲ್ಲಿನ ಫಲಕದ ಮುಂಭಾಗದಲ್ಲಿ ಕೆತ್ತಲಾಗಿದೆ. ಹಿಂಭಾಗದಲ್ಲಿರುವ ಶಾಸನದ ಸಾಲುಗಳನ್ನು ಓದಲು ಬಾರದಂತೆ ಅಳಿಸಲಾಗಿದೆ.

ಉಮಾಮಹೇಶ್ವರ ವಿಗ್ರಹ

ಕುರುಗೋಡು-ಕಂಪ್ಲಿ ರಸ್ತೆಯ ಪಕ್ಕದಲ್ಲಿ ನಾಯಕನ ಕೆರೆ ಇದೆ. ಆ ಕೆರೆಯ ಕಟ್ಟೆಯ ಪಕ್ಕದಲ್ಲಿ ವಿಜಯನಗರ ವಾಸ್ತುಶೈಲಿಯ ಒಂದು ಶಿವಾಲಯವಿದ್ದು, ಗರ್ಭ ಗೃಹ ಮಾತ್ರ ಉಳಿದಿದ್ದು, ಮಿಕ್ಕ ಭಾಗ ಪೂರಾ ನಾಶವಾಗಿದೆ. ಯಾವ ವಿಗ್ರಹವೂ ಇಲ್ಲ. ಆದರೆ ಅದರಿಂದ ೧೫೦ ಮೀ. ದೂರದಲ್ಲಿ ಕೆರೆಯ ಮೋರಿಯಲ್ಲಿ 'ಉಮಾ ಮಹೇಶ್ವರ' ವಿಗ್ರಹ ಅನಾಥವಾಗಿ ಅಲ್ಲಿ ಇತ್ತು. ವಿಗ್ರಹವು ಸುಮಾರು ೩' ಎತ್ತರವಿದ್ದು, ಮಾಹೇಶ್ವರನು ಕಾಲು ಮಡಚಿ ಕುಳಿತಿದ್ದು, ಆತನ ಎಡ ತೊಡೆಯ ಮೇಲೆ ಉಮೆಯು ಕುಳಿತಿದ್ದಾಳೆ. ಮಾಹೇಶ್ವರನು ನಾಲ್ಕು ಹಸ್ತಗಳಲ್ಲಿ ಬಿಲ್ಲು, ಬಾಣ ಜಿಂಕೆ ಆಯುಧಗಳನ್ನು ಧರಿಸಿದ್ದು, ಇನ್ನೊಂದು ಅಭಯಾಸ್ತವಾಗಿದೆ. ಈತನು ತಲೆಯ ಮೇಲೆ ಕಿರೀಟ, ಕೊರಳಲ್ಲಿ ಹಾರಗಳು ಮತ್ತು ಕಟಿಬಂಧವನ್ನು ಧರಿಸಿ ಅಲಂಕೃತನಾಗಿದ್ದಾನೆ. ಉಮೆಯು ಸುಂದರವಾದ ಜಟಾಮುಕುಟ, ವಿವಿಧ ನಮೂನೆಯ ಹಾರಗಳು, ಕಟಿಬಂಧ ಮತ್ತು ಕಾಲೊಂದಿಗೆಗಳಿಂದ ಅಲಂಕೃತಳಾಗಿದ್ದು, ಆಕೆಯ ಎಡ ಹಸ್ತ ವರದ ಮುದ್ರೆಯಲ್ಲಿದ್ದು, ಬಲ ಹಸ್ತವು ಪತಿಯ ಸೊಂಟವನ್ನು ಬಳಸಿ ಹಿಡಿದಿದೆ.ಪ್ರಯತ್ನದ ಫಲವಾಗಿ ಇದಕ್ಕೆ ಇತ್ತೀಚೆಗೆ ಒಂದು ಚಿಕ್ಕದಾದ ಗುಡಿ ನಿರ್ಮಿಸಿ, ಅದರಲ್ಲಿ ಈ

* ನಿವೃತ್ತ ಪ್ರಾಚಾರ್ಯರು, ಶ್ರೀ ಜಂಬುನಾಥ ನಿಲಯ, ೬ನೇ ಅಡ್ಡರಸ್ತೆ, ರೇಣುಕಾ ನಗರ, ತಾಲೂರು ರಸ್ತೆ, ಬಳ್ಳಾರಿ-೦೩. ಮೊ. ೮೧೦೫೮೨೮೯೫೧

ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜಾ ವ್ಯವಸ್ಥೆಯನ್ನೂ ಮಾಡಿದ್ದು, ಸಂಸ್ಕೃತಿಯ ಉಳಿಯುವಿಕೆಗೆ ಮಾಡಿದ ಒಂದು ಚಿಕ್ಕ ಪ್ರಯತ್ನವಾಗಿದೆ.

ಮಹಿಷ ಮರ್ದಿನಿ ವಿಗ್ರಹ

ಕುರುಗೋಡಿನ ಕೋಳಿಗುಡ್ಡದ ಮುಂದಿನ ಹೊಲದಲ್ಲಿ, 'ಮಹಿಷ ಮರ್ದಿನಿ ವಿಗ್ರಹ'ವು ಬಹಳ ವರ್ಷಗಳಿಂದ ಬಯಲಿನಲ್ಲಿ ಬಿದ್ದಿತ್ತು. ನನ್ನ ಕ್ಷೇತ್ರ ಕಾರ್ಯದಲ್ಲಿ ಅದನ್ನು ಪರಿಶೀಲನೆ ಮಾಡಿ, ಅದರ ಮಹತ್ವದ ಬಗ್ಗೆ 'ಕುರುಗೋಡು ಸಾಂಸ್ಕೃತಿಕ ಇತಿಹಾಸ' ಗ್ರಂಥದಲ್ಲಿ ಬರೆದಿದ್ದೆ. ಆ ಮೂಲಕ ಅದರ ಮಹತ್ವವನ್ನು ತಿಳಿದ ಅದೇ ಗ್ರಾಮದ ಚಾನಾಳು ಕುಟುಂಬದವರು, ಒಂದು ಚಿಕ್ಕ ಗುಡಿಯನ್ನು ಈಗ್ಗೆ ೨೦ ವರ್ಷಗಳ ಹಿಂದೆ ನಿರ್ಮಿಸಿ, ಬಯಲಿನಲ್ಲಿ ಅನಾಥವಾಗಿ ಬಿದ್ದದ್ದ ವಿಗ್ರಹವನ್ನು ಅದರಲ್ಲಿ ಸ್ಥಾಪಿಸಿ, ಪೂಜಾ ವ್ಯವಸ್ಥೆಯನ್ನೂ ಮಾಡಿದ್ದಾರೆ.

ಈ ವಿಗ್ರಹವು ೨' ೯" ಎತ್ತರವಿದ್ದು ನಿಂತ ಭಂಗಿಯಲ್ಲಿದೆ. ಒಟ್ಟು ೮ ಹಸ್ತಗಳಿದ್ದು , ಬಲದ ಹಸ್ತಗಳಲ್ಲಿ ಬಾಣ, ಚಕ್ರ ಮತ್ತು ಕತ್ತಿಯನ್ನು ಎಡದ ಹಸ್ತಗಳಲ್ಲಿ ಶಂಖ, ಬಿಲ್ಲು ಮತ್ತು ಗುರಾಣೆಯನ್ನು ಹಿಡಿದಿದ್ದಾಳೆ. ಉಳಿದ ಎರಡು ಕೈಗಳಲ್ಲಿ ಹಿಡಿದಿರುವ ತ್ರಿಶೂಲದಿಂದ ಮಹಿಷನನ್ನು ಬಲವಾಗಿ ತಿವಿಯುತ್ತ, ಎಡಗಾಲಿನಿಂದ ತುಳಿದಿದ್ದಾಳೆ. ತಲೆಯ ಮೇಲೆ ಕಿರೀಟ, ಕಿವಿಗಳಲ್ಲಿ ಕರ್ಣಕುಂಡಲ ಮತ್ತು ಕೊರಳಲ್ಲಿ ಆಭರಣಗಳನ್ನು ಧರಿಸಿದ್ದಾಳೆ. ಬಿಳಿ ಗ್ರಾನೈಟ್ ಕಲ್ಲಿನಲ್ಲಿ ನಿರ್ಮಿಸಿರುವ ವಿಗ್ರಹ.

ಕಟ್ವಾಂಗಧಾರಿ ವಿಚಿತ್ರ ವಿಗ್ರಹ

ಸಂಗಮೇಶ್ವರ ದೇವಾಲಯದ ಮುಂಭಾಗದಲ್ಲಿ ಬಿಳಿ ಗ್ರಾನೈಟ್ ಶಿಲೆಯಲ್ಲಿ ನಿರ್ಮಿಸಿರುವ ಒಂದು ವಿಚಿತ್ರವಾದ ವಿಗ್ರಹವಿದೆ. ನಾನು ಪತ್ರಿಕೆಯಲ್ಲಿ ಫೋಟೋದೊಂದಿಗೆ ಪ್ರಕಟಿಸಿದಾಗ, ಅದು ಆ ಪ್ರದೇಶದ ಜನರಿಗೆ ತಿಳಿದು; ಹೂತು ಹೋಗಿದ್ದ ವಿಗ್ರಹವನ್ನು ಪುರಾ ಹೊರಗೆ ತೆಗೆದಿದ್ದರು.

ಬಿಳಿಯ ಗ್ರಾನೈಟ್ ಶಿಲೆಯಲ್ಲಿ ರಚಿಸಿರುವ ಈ ವಿಗ್ರಹ ೪' ೫" ಎತ್ತರವಿದ್ದು, ನಿಂತ ಭಂಗಿಯಲ್ಲಿರುವ ಇದರ ಕಾಲುಗಳ ಕೆಳಭಾಗ ಮತ್ತು ೪ ಕೈಗಳಲ್ಲಿ ಕೆಳಗಿನ ೨ ಕೈಗಳು ತ್ರುಟಿತಗೊಂಡಿವೆ. ತಲೆಯ ಮೇಲೆ ಅಲಂಕೃತ ಕಿರೀಟ, ಕೊರಳಲ್ಲಿ ೫ ನಮೂನೆಯ ಹಾರಗಳನ್ನು ಕಿವಿಗಳಲ್ಲಿ ಕರ್ಣಕುಂಡಲ ಮತ್ತು ಕಟಿಬಂಧವನ್ನು ಧರಿಸಲಾಗಿದೆ. ಮೇಲಿನ ಬಲಗಡೆ ಹಸ್ತದಲ್ಲಿ ಚಕ್ರ ಕೆಳಗಿನ ಹಸ್ತದಲ್ಲಿ ಗಧೆಯನ್ನು ಹಿಡಿದಿದ್ದು, ಎಡಗಡೆ ಮೇಲಿನ ಹಸ್ತದಲ್ಲಿ ಕಟ್ವಾಂಗ ಆಯುಧವನ್ನು ಧರಿಸಲಾಗಿದೆ. ಎಡದ ಕೆಳಗಿನ ಹಸ್ತ ತೃಟಿತವಾಗಿದೆ ಆದರೆ ಈ ವಿಗ್ರಹದ ಬಲದ ಮೇಲಿನ ಹಸ್ತದಲ್ಲಿ ದುಂಡಾದ ಚಕ್ರದಂತಿರುವ ಆಯುಧ ಹಿಡಿದಿದ್ದು, ಇದು ವಿಷ್ಣು ಚಕ್ರದಂತೆ ಗೋಚರಿಸುತ್ತಿರುವುದು ಇನ್ನೊಂದು ವಿಶೇಷ.

ಮಾನವಾಕಾರದ ನಂದಿ ಉಬ್ಬು ಶಿಲ್ಪ

ಕುರುಗೋಡಿನ ಸುಪ್ರಸಿದ್ಧ ದೊಡ್ಡ ಬಸವೇಶ್ವರ ದೇವಸ್ಥಾನದ ಪಶ್ಚಿಮ ದಿಕ್ಕಿನ ಮಹಾದ್ವಾರದ ಮುಂದಿನ ಬೈಲಿನಲ್ಲಿ ಸುಮಾರು ೩೦' ಎತ್ತರದ ಶಿಲಾ 'ದೀಪ' ಸ್ತಂಭ ಇದೆ. ಈ ದೀಪ ಸ್ತಂಭದ ಸುತ್ತ ೩' ಎತ್ತರದ ಕಟ್ಟೆಯನ್ನು ನಿರ್ಮಿಸಲಾಗಿದೆ. ಈ ದೀಪ ಸ್ತಂಭದ ಕೆಳಭಾಗದಲ್ಲಿ ಅಂದರೆ ಪೂರ್ವಕ್ಕೆ (ದೊಡ್ಡ ಬಸವೇಶ್ವರನಿಗೆ ಎದುರುಗಡೆ) ಮುಖವಾಗಿರುವ ಪಟ್ಟಿಯ ಭಾಗದಲ್ಲಿ ೨" ತಗ್ಗು ಮಾಡಿ ಅದರ ಮಧ್ಯದಲ್ಲಿ 'ಮಾನವಾಕಾರದಲ್ಲಿರುವ ನಂದಿ' ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಸುಮಾರು ೨' ಎತ್ತರದ ಈ ಉಬ್ಬು ಶಿಲ್ಪವು ಸಮಭಂಗಿಯಲ್ಲಿ ನಿಂತ ಭಂಗಿಯಲ್ಲಿದ್ದು, ೨ ಕೈಗಳನ್ನು ಜೋಡಿಸಿ ನಮಸ್ಕರಿಸುತ್ತಿದ್ದು, ಇದರ ಮುಖ ಮಾತ್ರ ನಂದಿಯ (ಎತ್ತಿನ) ಆಕಾರದಲ್ಲಿದ್ದು ಬಾಯಿ, ಕಣ್ಣು, ಕಿವಿ ಮತ್ತು ತಲೆಯ ಮೇಲೆ ಎರಡು ಮೊಂಡಾದ ಕೋಡುಗಳನ್ನು ಹೊಂದಿದೆ. ಕೋಡುಗಳ ಮುಂದೆ, ಹಣೆಯ ಮೇಲೆ ಹಣೆಪಟ್ಟಿ (ಚಿಕ್ಕ ಗೆಜ್ಜೆಗಳ) ಧರಿಸಿದ್ದು, ಭುಜ ಮತ್ತು ತೋಳುಗಳಲ್ಲಿ (ರುದ್ರಾಕ್ಷಿಯ) ಸರಗಳನ್ನು ಧರಿಸಿದ್ದು, ನಡುವಿಗೆ ನಡುಪಟ್ಟಿ ಅದರ ಕೆಳಗೆ ಪಾದದವರೆಗೆ ಉಡುಗೆ ಇದ್ದು, (ಪಂಚೆಯಂತೆ) ಕಾಲುಗಳಲ್ಲಿ ಕಡಗಗಳನ್ನು ಧರಿಸಲಾಗಿದೆ.

ವಿಶೇಷವಾದ ವೀರಗಲ್ಲು

ಕುರುಗೋಡಿನ ಸಂಗಮೇಶ್ವರ ಗುಡೆಯ ಮುಂದಿನ ರಸ್ತೆಯ ಪಕ್ಕದಲ್ಲಿ ಒಂದು 'ವಿಶೇಷವಾದ ವೀರಗಲ್ಲು' ಇದೆ. ಈ ವೀರಗಲ್ಲು ೨ ಭಾಗಗಳನ್ನು ಎತ್ತುಗಳನ್ನು ಹೂಡಿರುವ ಎತ್ತಿನಗಾಡಿಯಿದ್ದು, ಅದರಲ್ಲಿ ಇಬ್ಬರು ಮನುಷ್ಯರು ಇದ್ದು, ಅವರು ಕೈಯಲ್ಲಿ ಬರ್ಚಿಯಂಥ ಉದ್ದನೆಯ ಆಯುಧ ಹಿಡಿದು ಬೇರೊಬ್ಬನೊಂದಿಗೆ ಹೋರಾಡುತ್ತಿದ್ದಾರೆ. ಗಾಡಿಯ ಮುಂದೆ

ಒಬ್ಬನು ಕತ್ತಿ ಮತ್ತು ಗುರಾಣಿ ಹಿಡಿದು ಹೋರಾಡುತ್ತಿದ್ದಾನೆ. ಗಾಡಿಯನ್ನು ಹೊಡೆಯುತ್ತಿರುವ ಆಳು ಆಕ್ರಮಣಕಾರನಿಂದ ತಿವಿತಕ್ಕೆ ಒಳಗಾಗಿ ಗಾಡಿಯಿಂದ ಕೆಳಕ್ಕೆ ಬೀಳುತ್ತಿರುವಂತೆ ಕಾಣುತ್ತದೆ.

ಕುರುಗೋಡು ಕ್ರಿ.ಶ. ೯೫೦ ರಿಂದ ೧೨೦೦ರವರೆಗೆ ಬಲ್ಲಕುಂದೆ ೩೦೦ ನಾಡಿನ ರಾಜಧಾನಿಯಾಗಿದ್ದಾಗ ಅಲ್ಲಿ ವಾಣಿಜ್ಯಾಧಿಪತಿಗಳು ಇದ್ದರು. ಅವರು ಆ ಕಾಲದಲ್ಲಿ ಎತ್ತಿನ ಗಾಡಿಗಳಲ್ಲಿ ವ್ಯಾಪಾರದ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಿದ್ದಾಗ, ಕಳ್ಳರು, ದರೋಡೆಕೋರರು ಅವುಗಳನ್ನು ದೋಚಲು ಬಂದ ಸಂದರ್ಭದಲ್ಲಿ ಗಾಡಿಯ ಆಳು ತನ್ನ ಮಾಲೀಕನ ಸ್ವತ್ತನ್ನು ಸಂರಕ್ಷಿಸುವುದಕ್ಕಾಗಿ ದರೋಡೆಕೋರರೊಡನೆ ಹೋರಾಡಿ ಪ್ರಾಣಾರ್ಪಣೆ ಮಾಡಿದ ಸ್ಮಾರಕವಾಗಿ ಈ ವೀರಗಲ್ಲನ್ನು ನಿರ್ಮಿಸಿದಂತೆ ತೋರುತ್ತದೆ. ಅದರ ವಿವರವನ್ನು ತಿಳಿಸುವ ಯಾವುದೇ ಶಾಸನ ಅದರಲ್ಲಿ ಇಲ್ಲ. ೨ನೇ ಭಾಗದಲ್ಲಿ ಇಬ್ಬರು ಸುರಾಂಗನೆಯರು ಮರಣಿಸಿದವನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಚಿತ್ರಿಸಲಾಗಿದೆ. ಅದರ ಮೇಲ್ಭಾಗದಲ್ಲಿ ಒಂದು ಚಿಕ್ಕ ಪಾಣಿ ಪೀಠದ ಮೇಲೆ ಲಿಂಗವನ್ನು ಕೆತ್ತಲಾಗಿದೆ.

ಕುರುಗೋಡು ಪರಿಸರ ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿಶೇಷತೆಗಳನ್ನೊಳಗೊಂಡಿದೆ. ಅಲ್ಲಿ ಬೃಹದಾಕಾರದ ಮೂರ್ತಿ ಶಿಲ್ಪಗಳು, ಅಪರೂಪವಾದ ಶಿಲಾ ವಿಗ್ರಹಗಳು ಮತ್ತು ವೈವಿಧ್ಯಮಯವಾದ ವೀರಗಲ್ಲುಗಳು, ನಿಶಧಿಗಲ್ಲುಗಳು ಮತ್ತು ಮಾಸ್ತಿ ಕಲ್ಲುಗಳು ಮೊದಲಾದ ಕಲಾಕೃತಿಗಳ ಆಗರವಾಗಿದೆ. ಆದ್ದರಿಂದ ಅಲ್ಲಿ ಸಂಶೋಧನೆಗೆ ಸಾಕಷ್ಟು ಅವಕಾಶವಿದೆ. ಪ್ರಬಂಧದಲ್ಲಿ ವಿವರಿಸಿದ ಪಂಚಮುಖಿ ವೀರಭದ್ರೇಶ್ವರ ಮತ್ತು ಮಾನವಾಕಾರದ ನಂದಿ ಉಬ್ಬು ಶಿಲ್ಪ ಇವು ಮಾತ್ರ ವಿಜಯನಗರದ ಸಾಮ್ರಾಜ್ಯದ ಕಾಲದ ಶಿಲ್ಪ ಸಂಪ್ರದಾಯವಾಗಿದ್ದು, ಉಳಿದವುಗಳು, ಕುರುಗೋಡು ರಾಜಧಾನಿಯಲ್ಲಿ ಆಳುತ್ತಿದ್ದ "ಕುರುಗೋಡು ಸಿಂದ ಅರಸ ಕಾಲದವು ಎಂದು ಕಾಣುತ್ತದೆ. ಕುರುಗೋಡು ಸಿಂದರು ಕ್ರಿ.ಶ. ೯೫೦ರಿಂದ ೧೨೦೦ರವರೆಗೆ ಕುರುಗೋಡು ರಾಜಧಾನಿಯಾಗಿದ್ದ ಬಲ್ಲಕುಂದೆ ಮುನ್ನೂರು ನಾಡಿನಲ್ಲಿ ಆಳ್ವಿಕೆ ಮಾಡಿಸಿದ್ದು ಹೆಸರುವಾಸಿಯಾಗಿದ್ದಾರೆ.

೮೩

ಚಿತ್ರದುರ್ಗ ಪಾಳೆಯಗಾರರ ಕಾಲದ ಗಾರೆಶಿಲ್ಪ

ಶಕುಂತಲ ಎನ್.*

ಭಾರತವನ್ನು ಆಳಿದ, ಅದರಲ್ಲೂ ದಕ್ಷಿಣ ಭಾರತವನ್ನು ಆಳಿದ ಅನೇಕ ರಾಜಮನೆತನಗಳು ಬೇರೆ ಕ್ಷೇತ್ರಗಳಿಗಿಂತ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಮೋಘವಾದುದು.

'ವಾಸ್ತು' ಎಂದರೆ ಭೂಮಿ, ಕಟ್ಟಡ, ವಾಹನ ಹಾಗೂ ಪರ್ಯಂಕಗಳು ಎಂದು ಅರ್ಥೈಸಲಾಗಿದೆ. ಗರುಡ ಪುರಾಣವು ಗ್ರಾಮಗಳು, ನಗರಗಳು, ಪಟ್ಟಣಗಳು, ಕೋಟೆಗಳು, ಮಠಗಳು ಸಹ ವಾಸ್ತುಗಳೆಂದು ಉಲ್ಲೇಖಿಸಿದೆ.[೧] ಹಾಗೆಯೇ ವಿಶ್ವಕರ್ಮ ವಾಸ್ತುಶಾಸ್ತ್ರ 'ಆಲಯಗಳನ್ನು ಕಟ್ಟಲುಬಳಸಿದ ಇಟ್ಟಿಗೆ, ಶಿಲೆ, ಮರ ಹಾಗೂ ಕಬ್ಬಿಣಗಳನ್ನೂ ವಾಸ್ತುಗಳೆಂದು ತಿಳಿಸಿದೆ.[೨] ಶುಕ್ರನೀತಿ ಗ್ರಂಥವು ದೇವಾಲಯ, ಅರಮನೆ, ದೇವತಾಮೂರ್ತಿಗಳ ರಚನೆ, ಸಾರ್ವಜನಿಕ ಉಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮುಂತಾದವುಗಳನ್ನು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೩]

ಶಿಲ್ಪ

ವಾಸ್ತುವಿನ ಜತೆಜತೆಗೆ ಶಿಲ್ಪವು ಶಿಲ್ಪಿಯ ಅಭಿರುಚಿಗೆ, ಕಲಾನೈಪುಣ್ಯತೆಗೆ ಅನುಗುಣವಾಗಿ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ಸಾಮಾನ್ಯವಾಗಿ ಶಿಲ್ಪವೆನ್ನುವ ಪದವು 'ಮೂರ್ತಿಶಿಲ್ಪ' ಎಂಬ ಅರ್ಥದಲ್ಲಿ ರೂಢಿಗತವಾಗಿದ್ದರೂ, ಅದಕ್ಕೆ ತನ್ನದೇ ಆದ ಖಚಿತಾರ್ಥವಿದೆ. 'ಶಿಲ್ಪಕರ್ಮ ಕಲಾಧಿಕಂ'ವೆನ್ನುವ ಅಮರಕೋಶದಲ್ಲಿನ ಉಕ್ತಿ ಕರ್ತೃವಿನ ಅಧಿಕ ಕೌಶಲ್ಯಗಳನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ ಶಿಲ್ಪವೆಂದು ಅರ್ಥೈಸುತ್ತದೆ.[೪] ಆದರೆ ಹಲವಾರು ವಿದ್ವಾಂಸರು 'ಶಿಲ್ಪ'ವೆನ್ನುವ ಪದ ವಾಸ್ತು ಹಾಗೂ ಮೂರ್ತಿಶಿಲ್ಪಗಳೆರಡನ್ನೂ ಒಳಗೊಂಡದ್ದು ಎಂದು ವಿವರಿಸಿದ್ದಾರೆ. ಪ್ರೊ. ಫಣೀಂದ್ರನಾಥಬೋಸ್‌ರವರು ಭಾರತೀಯ ಶಿಲ್ಪಶಾಸ್ತ್ರದ ಮೂಲತತ್ವಗಳನ್ನು ಗುರುತಿಸುವಾಗ ಶಿಲ್ಪಶಾಸ್ತ್ರವೆಂಬ ಪದವನ್ನು ವಾಸ್ತು ಹಾಗೂ ಪ್ರತಿಮಾಶಾಸ್ತ್ರ ಎರಡನ್ನೂ ಒಳಗೊಂಡಂತೆ ವಿವರಿಸಿದ್ದಾರೆ.[೫]

ಕರ್ನಾಟಕದಲ್ಲಿ ಮೌರ್ಯರ ಕಾಲದಿಂದಲೇ ವಾಸ್ತು ಚಟುವಟಿಕೆಗಳು ನಡೆದರೂ, ಆ ಕಾಲದ ಅವಶೇಷಗಳು ಇಂದು ಉಳಿದುಕೊಂಡು ಬಂದಿಲ್ಲ. ಕಾರಣ ಮರದ ಬಳಕೆ ಮಾಡಿದ್ದರಿಂದ ಹಾಳಾಗಿವೆ. ಹಾಗಾಗಿ ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣ ಕಾರ್ಯ ಅತ್ಯಂತ ಹೆಚ್ಚು ಭರದಿಂದ ಸಾಗಿದ್ದು ಬಾದಾಮಿ ಚಾಲುಕ್ಯರ ಕಾಲದಿಂದ ಎನ್ನಬಹುದು ಹಾಗೂ ಇವರ ಕಾಲದ ದೇವಾಲಯಗಳು ಹೆಚ್ಚಾಗಿ ಶಿಲೆಯಿಂದ ನಿರ್ಮಿಸಲ್ಪಟ್ಟವು. ಪರಿಣಾಮವಾಗಿ ಇಂದಿಗೂ ಅವುಗಳು ನಮಗೆ ಲಭ್ಯವಿವೆ. ಹಾಗೆಯೇಗಾರೆಯ ಬಳಕೆಯನ್ನು ನಾವು ಸಿಂಧೂ ನಾಗರೀಕತೆಯ ಕಾಲದಿಂದಲೂ ಕಾಣುತ್ತೇವೆ. ಇವರು ಮನೆಯ ನೆಲದ ತಳಭಾಗವನ್ನು ಹಾಗೂ ಮೇಲ್ಭಾವಣಿಯನ್ನು ಗಾರೆಯಿಂದ ನಿರ್ಮಾಣ ಮಾಡಿರುವುದು ಉತ್ಖನನಗಳಿಂದ ಸಿಕ್ಕಂತಹ ಅವಶೇಷಗಳಿಂದ ತಿಳಿದುಬಂದಿದೆ. ಆದರೆ ವಾಸ್ತು ನಿರ್ಮಾಣದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಗಾರೆಯ ಬಳಕೆಯನ್ನು ಶಾತವಾಹನರ ಕಾಲದಿಂದ ಗುರುತಿಸಲಾಗಿದೆ. ಆದರೆ ಗಾರೆಶಿಲ್ಪಗಳು ಅರ್ಥಪೂರ್ಣವಾಗಿ ಮೂಡಿಬಂದದ್ದು ವಿಜಯನಗರ ಕಾಲದಲ್ಲಿ. ಏಕೆಂದರೆ ಕಲ್ಯಾಣ ಚಾಲುಕ್ಯರು ಮತ್ತು ಹೊಯ್ಸಳರ ಕಾಲದ ದೇವಾಲಯಗಳಂತೆ ಭಿತ್ತಿ ಮತ್ತು ನವರಂಗಗಳಲ್ಲಿ ಒಳಸರಿದ ದೇವಕೋಷ್ಠಗಳನ್ನು ನಿರ್ಮಿಸಿ ಬಿಡಿ ಶಿಲ್ಪಗಳನ್ನು ಇಡಲು ವಿಜಯನಗರ ಕಾಲದಲ್ಲಿ ಸಾಧ್ಯವಾಗಲಿಲ್ಲ. ಹಾಗಾಗಿ ವಿಜಯನಗರದ ಅರಸರು ಇದಕ್ಕೆ ಪ್ರತಿಯಾಗಿ ತೆಳು ಉಬ್ಬುಶಿಲ್ಪಗಳನ್ನು ಭಿತ್ತಿ ಹಾಗೂ ಕಂಬಗಳ ಮೇಲೆ ಯಥೇಚ್ಛವಾಗಿ ರಚಿಸಿದರು. ಸಾಮಾನ್ಯವಾಗಿ ಈ ಕೊರತೆಯನ್ನು ನೀಗಿಸಲೆಂದೇ ಮಂಟಪಗಳ ಮೇಲೆ ಗೂಡುಗಳನ್ನು ರಚಿಸಿ ಅಲ್ಲಿ ಗಾರೆ ಶಿಲ್ಪಗಳನ್ನು ಅಳವಡಿಸಿರಬಹುದೆಂದು ತಿಳಿದುಬರುತ್ತದೆ.[೬]

ಪ್ರಾಚೀನ ಕಾಲದಿಂದಲೂ ಗಾರೆಯನ್ನು ವಾಸ್ತು ರಚನೆಗಳಲ್ಲಿ ನಿರಂತರವಾಗಿ ಬಳಸಲ್ಪಟ್ಟಿರುವುದನ್ನು ಗುರುತಿಸಲಾಗಿದೆ. ಅಂದರೆ ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ ಇಟ್ಟಿಗೆ ಜತೆಗೆ ಗಾರೆಯನ್ನು ಬಳಸಲಾಗಿದೆ. ವಡಗಾಂವ್,

* ಸಹಾಯಕ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ. ಮೊ. ೯೦೩೬೨೦೧೮೯೬

ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ ಮುಂತಾದೆಡೆಗಳಲ್ಲಿ ನಡೆದ ಉತ್ಖನನಗಳಿಂದ ನಾವು ಇಟ್ಟಿಗೆಯ ಕಟ್ಟಡಗಳ ಅವಶೇಷಗಳು ಬೆಳಕಿಗೆ ಬಂದಿರುವುದನ್ನು ಕಾಣುತ್ತೇವೆ.[೭] ನಂತರದಲ್ಲಿ ಗಂಗರ ಮತ್ತು ಕಲ್ಯಾಣ ಚಾಲುಕ್ಯರ ದೇವಾಲಯಗಳ ಭಿತ್ತಿ, ಛಾವಣಿ ಮತ್ತು ಶಿಖರಗಳ ರಚನೆಯಲ್ಲಿ ಇಟ್ಟಿಗೆ ಮತ್ತು ಗಾರೆ ಎರಡನ್ನು ಬಳಸಿ ನಿರ್ಮಿಸಿರುವುದನ್ನು ಗುರುತಿಸಬಹುದಾಗಿದೆ. ಅಂದರೆ ಇಟ್ಟಿಗೆ ಗೋಡೆಯ ಮೇಲೆ ಗಾರೆಯ ಲೇಪನ ಮಾಡಲಾಗಿದೆ.[೮] ಬಹುಶಃ ಇದನ್ನು ಭಿತ್ತಿಯ ಸಂದುಗಳನ್ನು ಮುಚ್ಚಲು ಇಲ್ಲವೇ ಭಿತ್ತಿಯನ್ನು ನಯ ಹಾಗೂ ಗಟ್ಟಿಗೊಳಿಸಲು ಬಳಸಲಾಗಿದೆ. ವಾಸ್ತುವಿನಂತೆ ಗಾರೆಯ ಶಿಲ್ಪಗಳೂ ಕಂಡುಬಂದಿವೆ. ಇಂತಹ ಗಾರೆ ಶಿಲ್ಪಗಳು ಮಥುರಾದ ಕಾಲದಿಂದಲೂ ದೊರೆತಿರುವುದು ಕಂಡುಬಂದಿದೆ.[೯] ಆದರೆ ಕೆ.ಎಂ. ವರ್ಮರವರು ಗಾರೆಯ ಶಿಲ್ಪ 'ಗಾಂಧಾರಶಿಲ್ಪ' ಕಾಲಕ್ಕೂ ಹಳೆಯದೆಂದು ಅಭಿಪ್ರಾಯಪಟ್ಟಿದ್ದಾರೆ.[೧೦] ಪ್ರಾಚೀನ ಕಾಲದಂತೆ ಮಧ್ಯಕಾಲೀನದ ನಿರ್ಮಿತಿಗಳಲ್ಲೂ ಗಾರೆಯ ಬಳಕೆ ಯಥೇಚ್ಛವಾಗಿರುವುದು ಕಾಣಬಹುದಾಗಿದೆ. ಈ ಅವಧಿಯಲ್ಲಿ ಸಾಮಾನ್ಯವಾಗಿ ಕಲ್ಲುಗಳ ನಡುವಿನ ಸಂದುಗಳನ್ನು ಮುಚ್ಚಲು ಹಾಗೂ ಮೇಲ್ಮೈಯನ್ನು ನಯಗೊಳಿಸಲು ಗಾರೆಯನ್ನು ಬಳಸಲಾಗಿದೆ.

ಸಾಮಾನ್ಯವಾಗಿ ಗಾರೆಯನ್ನು ಮರಳು ಮತ್ತು ಇತರೇ ಅಂಟು ಪದಾರ್ಥಗಳನ್ನು ಮಿಶ್ರಣ ಮಾಡಿ ಸಿದ್ಧಪಡಿಸಲಾಗುತ್ತದೆ. ಇದರ ಬಗ್ಗೆ ಕಾಶ್ಯಪ ಶಿಲ್ಪ, ಸಮರಾಂಗಣ ಸೂತ್ರಧಾರ ಮತ್ತು ವಿಷ್ಣುಧರ್ಮೋತ್ತರ ಪುರಾಣಗಳಲ್ಲಿ ವಿವರಣೆಯಿದೆ.[೧೧] ಶಿಲ್ಪಗಳಂತೆ ಆಗಮಗಳು, ಶಿಲ್ಪಶಾಸ್ತ್ರ ಗ್ರಂಥಗಳು ಹಾಗೂ ಪ್ರಾಚೀನ ಕನ್ನಡ ಕೃತಿಗಳೂ ಸಹ ಗಾರೆ ಶಿಲ್ಪದ ಬಗ್ಗೆ ಉಲ್ಲೇಖಿಸುತ್ತವೆ. ಪ್ರಮುಖವಾಗಿ ಕಾಮಿಕಾಗಮ, ಹರಿಭಕ್ತಿ ವಿಲಾಸ ಮುಂತಾದ ಆಗಮಗಳು ಮತ್ತು ಶಿಲ್ಪಶಾಸ್ತ್ರ ಗ್ರಂಥಗಳು ಗಾರೆಯ ಮಿಶ್ರಣಗಳ ಅಳತೆ ಮತ್ತು ಪ್ರಮಾಣಗಳ ಬಗ್ಗೆ, ಪ್ರಾಚೀನ ಕನ್ನಡ ಕೃತಿಯಾದ ವಡ್ಡಾರಾಧನೆ ಹಾಗೂ ಜಗನ್ನಾಥ ವಿಜಯದಲ್ಲಿ ಗಾರೆ ಪ್ರತಿಮೆಗಳನ್ನು "ಲೆಪ್ಪದಬೊಂಬೆ" (ಅಂದರೆ ಮಣ್ಣು ಮತ್ತು ಶಿಲೆಯಿಂದ ತಯಾರಿಸಿದ ಮೂರ್ತಿಗಳ ಒರಟು ರಚನೆಗಳ ಮೇಲ್ಮೈಯನ್ನು ನಯಗೊಳಿಸಲು ಗಾರೆಯ ಲೇಪನ ಮಾಡಿರುವುದು) ಎಂದು ಉಲ್ಲೇಖಿಸಲಾಗಿದೆ. ಇಂತಹ ಪ್ರತಿಮೆಗಳನ್ನು ಚೋಳರ ಕಾಲದ ಗಂಗೈಕೊಂಡ ಚೋಳಪುರದ ದೇವಾಲಯದಲ್ಲಿ ಈಗಲೂ ಕಾಣಬಹುದು.[೧೨] ಜತೆಗೆ ಗಾರೆಶಿಲ್ಪಗಳಿಗೆ ಬಣ್ಣವನ್ನು ಹಚ್ಚಿ ಸುಂದರಗೊಳಿಸಲಾಗಿರುವುದನ್ನು ಕಾಣಬಹುದಾಗಿದೆ. ಪಲ್ಲವರ ಕಾಂಚಿಪುರಂನ ಕೈಲಾಸನಾಥ ದೇವಾಲಯ ಮತ್ತು ಚೋಳರ ತಂಜಾವೂರಿನ ಬೃಹದೀಶ್ವರ ದೇವಾಲಯಗಳಲ್ಲಿ ಇಂತಹ ಬಣ್ಣ ಹಾಕಿರುವ ಗಾರೆಶಿಲ್ಪಗಳನ್ನು ಕಾಣಬಹುದಾಗಿದೆ.[೧೩] ಉತ್ಸವ ಮೂರ್ತಿಗಳಿಗೂ (ಮಣ್ಣು, ಶಿಲೆ ಹಾಗೂ ಮರದಿಂದ ತಯಾರಿಸಿದ) ಕೆಲವೊಮ್ಮೆ ತೆಳುವಾಗಿ ಗಾರೆಯನ್ನು ಲೇಪಿಸಿ ಬಣ್ಣ ಹಾಕಿರುವುದನ್ನು ಕಾಣಬಹುದಾಗಿದೆ.[೧೪] ಬಹುಶಃ ಆಕೃತಿಯ ಬಟ್ಟೆ ಮತ್ತು ಅಂಗಾಂಗಗಳ ಉಬ್ಬುತಗ್ಗುಗಳನ್ನು ಸೂಚಿಸಲು ಮಾತ್ರ ಬಣ್ಣಗಳನ್ನು ಬಳಸಲಾಗಿದೆಯೆಂದು ಕೆ.ಎಂ. ವರ್ಮರವರು ತಿಳಿಸಿದ್ದಾರೆ.[೧೫]

ಶಿಲೆಯಲ್ಲಿ ರಚನೆಗೊಂಡಿರುವ ಶಿಲ್ಪಗಳ ಮಾನ, ಪ್ರಮಾಣ, ಪರಿಮಾಣ, ಉಪಮಾನ, ಲಂಬಮಾನ ಮುಂತಾದ ಲಕ್ಷಣಗಳು ಈ ಗಾರೆಶಿಲ್ಪಗಳಲ್ಲೂ ಕಾಣಬಹುದು.[೧೬] ಜತೆಗೆ ವಿಜಯನಗರ ಕಾಲದಲ್ಲಿ ಕಂಬಗಳಿಗೆ ಗಾರೆ ಲೇಪನ ಮಾಡಿ ನಯಗೊಳಿಸುವ ಪದ್ಧತಿಯಿತ್ತು.[೧೭] ಹಾಗೆಯೇ ಮೈಸೂರು ಅರಸರು ಕಬ್ಬಿಣದ ಕಂಬಗಳಿಂದ ಸ್ಥೂಲರಚನೆಯನ್ನು ತಯರಿಸಿಕೊಂಡು ನಂತರ ಗಾರೆ ತುಂಬಿದ ಶಿಲ್ಪಗಳನ್ನು ರಚಿಸಿರುವುದು ಕಂಡುಬರುತ್ತದೆ.[೧೮] ಬಹುಶಃ ವಿಜಯನಗರ ಕಾಲದ ಗಾರೆಶಿಲ್ಪಗಳಲ್ಲಿ ಮರದ ಗೂಟ ಮತ್ತು ಅವಶ್ಯವಿದ್ದಲ್ಲಿ ಮಾತ್ರ ಅಭಯ ಮತ್ತು ವರದ ಹಸ್ತಗಳ ರಚನೆಯಲ್ಲಿ ತಾಮ್ರದ ಕಬ್ಬಿಣದ ಕಡ್ಡಿಗಳನ್ನು ಬಳಸಿರುವುದನ್ನು ಮೈಸೂರು ಅರಸರು ಅಳವಡಿಸಿಕೊಂಡು ಮುಂದುವರೆಸಿರಬಹುದೆಂದು ತಿಳಿಯಲಾಗಿದೆ.[೧೯] ಆದರೆ ಕ್ರಿ.ಶ. ಸುಮಾರು ೧೦-೧೨ನೆಯ ಶತಮಾನದಲ್ಲಿನ ದೇವಾಲಯಗಳಲ್ಲಿ ಗರ್ಭಗೃಹದ ಶಿಲ್ಪವೂ ಗಾರೆ ಶಿಲ್ಪಗಳಾಗಿರುವುದು ಕೂಡಲೂರಿ ಕೆಲಸೂರಿನ ಬಸ್ತಿ, ಕೋಲಾರದ ಕೋಲಾರಮ್ಮ ಮುಂತಾದ ದೇವಾಲಯಗಳಲ್ಲಿ ಕಂಡುಬರುತ್ತವೆ.[೨೦]

ವಿಶೇಷವಾಗಿ ಗಾರೆಶಿಲ್ಪಗಳನ್ನು ದೇವಾಲಯದ ಗೋಪುರ ಶಿಖರ ಮತ್ತು ಮಂಟಪಗಳ ಕೈಪಿಡಿ ಗೋಡೆಯ ಗೂಡುಗಳಲ್ಲಿ ರಚಿಸಲ್ಪಟ್ಟಿರುತ್ತವೆ. ಅದರಲ್ಲೂ ದ್ರಾವಿಡ ಶೈಲಿಯ ದೇವಾಲಯಗಳ ಶಿಖರ ಮತ್ತು ಗೋಪುರಗಳಲ್ಲಿ ಗಾರೆಶಿಲ್ಪಗಳು ವಿಶೇಷವಾಗಿ ಕಂಡುಬರುತ್ತವೆ. ಇದಕ್ಕೆ ದ್ರಾವಿಡ ಶೈಲಿಯ ಸ್ವರೂಪವೇ ಕಾರಣ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೨೧] ಆದರೆ ಗೂಡುಗಳಲ್ಲಿರುವ ಶಿಲ್ಪಗಳಿಗೆ ಮಳೆ, ಗಾಳಿ, ಬಿಸಿಲುಗಳಿಂದ ಸ್ವಲ್ಪಮಟ್ಟಿನ ರಕ್ಷಣೆ ದೊರೆತರೆ, ಗೋಪುರ ಮತ್ತು ಶಿಖರಗಳಲ್ಲಿರುವ ಶಿಲ್ಪಗಳಂತೂ ರಕ್ಷಣೆಯಿಲ್ಲದೇ ಹಾಳಾಗುವ ಸಾಧ್ಯತೆಗಳೇ ಹೆಚ್ಚು. ಹಾಗಾಗಿ ಇಲ್ಲಿನ ಗಾರೆಶಿಲ್ಪಗಳು ಹಾಳಾಗಿ ಆಗಾಗ ಜೀರ್ಣೋದ್ಧಾರಗೊಂಡು ರೂಪಾಂತರ ಹೊಂದುತ್ತಲೇ ಇರುತ್ತವೆ.

ಪರಿಣಾಮವಾಗಿ ಅವುಗಳ ಕಾಲಮಾನವನ್ನು ನಿರ್ದಿಷ್ಟವಾಗಿ ಗುರುತಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಗಾರೆ ಶಿಲ್ಪಗಳ ರಚನೆಯ ಮುಖ್ಯ ಉದ್ದೇಶವೇ ವಾಸ್ತುಭಾಗದ ಅಲಂಕರಣೆ ಮತ್ತು ಸೌಂದರ್ಯವನ್ನು ಹೆಚ್ಚಿಸುವುದು ಹಾಗೂ ಖಾಲಿ ಜಾಗವನ್ನು ಕಲಾಕೃತಿಗಳಿಂದ ತುಂಬುವುದು. ಗಾರೆಶಿಲ್ಪಗಳು ಸದಾ ತೆರೆದ ಸ್ಥಿತಿಯಲ್ಲಿರುವುದರಿಂದ ಗಾಳಿ, ಮಳೆ, ಬಿಸಿಲುಗಳಿಂದ ಹಾಳಾಗುತ್ತವೆ. ಇಂತಹ ಹಾಳಾದ ಶಿಲ್ಪಗಳನ್ನು ದುರಸ್ತಿಗೊಳಿಸಿ ಅವುಗಳ ಮೇಲೆ ಸುಣ್ಣಬಣ್ಣ ಹಚ್ಚಿರುವುದರಿಂದ ಕಾಲಕ್ರಮೇಣ ಅವುಗಳ ನೈಜ ಸೌಂದರ್ಯ ಕಣ್ಮರೆಯಾಗಿ ಕೇವಲ ಒರಟು ಶಿಲ್ಪಗಳಂತೆ ಕಾಣುತ್ತವೆ. ಗಾರೆ ಹಸಿ ಹಿಟ್ಟಿನಂತೆ ಮೃದುವಾಗಿರುವುದರಿಂದ ಶಿಲ್ಪಿಯು ತನ್ನೆಲ್ಲಾ ಕೌಶಲ್ಯವನ್ನು ಪ್ರಯೋಗಿಸಿ ಬೆಡಗು ಭಿನ್ನಾಣಗಳಿಂದ ಕೂಡಿದ ಶಿಲ್ಪಗಳನ್ನು ರಚಿಸಿದ್ದಾನೆ. ಹಾಗಾಗಿ ಶಿಲಾ ಶಿಲ್ಪಗಳಿಗಿಂತ ಗಾರೆಶಿಲ್ಪಗಳು ಹೆಚ್ಚು ಅಲಂಕರಣೆಗಳಿಂದ ಕೂಡಿದ್ದು ತುಂಬಾ ಸುಂದರವಾಗಿ ಕಾಣಿಸುತ್ತವೆ.

ಚಿತ್ರದುರ್ಗ ಪಾಳೆಯಗಾರರ ಕಾಲದ ಗಾರೆಶಿಲ್ಪ

ವಿಜಯನಗರದ ಕಲಾಪರಂಪರೆ ಮತ್ತು ಸಂಸ್ಕೃತಿಯನ್ನು ಬಳುವಳಿಯಾಗಿ ಪಡೆದುಕೊಂಡ ಅವರ ಅಧೀನ ಪಾಳೆಯಗಾರಿಕೆ ರಾಜ್ಯಗಳು ವಿಜಯನಗರದ ನೆರಳಿನಲ್ಲಿ ಸಾಗಿದರೂ ಅಥವಾ ಅವರ ಕಲಾಪರಂರೆಯನ್ನು ಮುಂದುವರೆಸಿದರೂ, ರಾಜಕೀಯ ಮತ್ತು ಆರ್ಥಿಕ ಇತಿಮಿತಿಗಳಿಂದಾಗಿ ವಿಜಯನಗರದ ವೈಭವವನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ. ಹಾಗಾಗಿ ಪ್ರಾದೇಶಿಕ ಸಂಪನ್ಮೂಲ ಹಾಗೂ ಸಂಗತಿಗಳಿಗೆ ಆದ್ಯತೆ ನೀಡುವುದು ಅನಿವಾರ್ಯವಾಯಿತು. ಅದರ ಪರಿಣಾಮವಾಗಿ ವಾಸ್ತು ಮತ್ತು ಮೂರ್ತಿಶಿಲ್ಪ ಕ್ಷೇತ್ರದಲ್ಲಿ ಅವರ ಕೆಲವೊಂದು ಅಂಶಗಳ ಜೊತೆಗೆ ತಮ್ಮದೇ ಅದ ಪ್ರಾದೇಶಿಕ ಸಂಸ್ಕೃತಿಯನ್ನು ಬಿಂಬಿಸುವ ಶಿಲ್ಪಕಲಾ ಪರಂಪರೆಯನ್ನು ಮತ್ತು ಶೈಲಿಯನ್ನು ಸೃಷ್ಟಿಸಿದರು. ಸಂಪ್ರದಾಯಬದ್ಧವಾಗಿರುವ ಈ ಶೈಲಿ ಅನೇಕ ಹೊಸ ಅಂಶಗಳನ್ನು ಅಳವಡಿಸಿಕೊಂಡು ಕರ್ನಾಟಕ ಮೂರ್ತಿಶಿಲ್ಪ ಪರಂಪರೆಯನ್ನು ಮುಂದುವರೆಸಿತು. ಈ ಪ್ರಕ್ರಿಯೆಯಲ್ಲಿ ಚಿತ್ರದುರ್ಗ ಪಾಳೆಯಗಾರರ ಪಾತ್ರವೂ ಮಹತ್ವದ್ದಾಗಿದೆ. ಆ ಮಹತ್ವವನ್ನು ಅವರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪಗಳ ಅಧ್ಯಯನದಿಂದ ತಿಳಿಯಬಹುದು.

ವಿಜಯನಗರದಂತೆ ಚಿತ್ರದುರ್ಗ ಪಾಳೆಯಗಾರರ ಕಾಲದ ದೇವಾಲಯಗಳ ಮುಖಮಂಟಪ, ಸಭಾಮಂಟಪಗಳ ಮಾಡಿನ ಅಂಚಿನಲ್ಲಿರುವ ದೇವಕೋಷ್ಠಗಳಲ್ಲಿ ಗಾರೆಯ ಪ್ರತಿಮೆಗಳನ್ನು, ಭಿತ್ತಿ ಮತ್ತು ಕಂಬಗಳಲ್ಲಿ ತೆಳುವಾದ ಉಬ್ಬುಶಿಲ್ಪಗಳನ್ನು ಹಾಗೂ ಗಾರೆಯ ಶಿಖರಗಳನ್ನು, ಶಿಖರ, ಗೋಪುರ, ಗರುಡ ಮಂಟಪಗಳಲ್ಲಿ ಗಾರೆಯ ವಿವಿಧ ಶಿಲ್ಪಗಳನ್ನು ಕಾಣಬಹುದಾಗಿದೆ. ಆದರೆ ವಿಜಯನಗರ ಕಾಲದ ಗಾರೆಶಿಲ್ಪಗಳು ನೀಳವಾಗಿ, ತೆಳುವಾಗಿ ವಿವಿಧ ಆಭರಣಭೂಷಿತವಾಗಿ ಗೋಡೆಗೆ ಒರಗಿ ನಿಂತ ಬಿಡಿಶಿಲ್ಪಗಳಾಗಿ ರಚನೆಗೊಂಡಿದ್ದರೆ ಇವರ ಕಾಲದ ಗಾರೆಶಿಲ್ಪಗಳು ಉಬ್ಬುಶಿಲ್ಪಗಳಾಗಿದ್ದು ಒರಟು ರಚನೆಯಲ್ಲಿದ್ದು ಅಲಂಕರಣೆ, ವೇಷಭೂಷಣಗಳಲ್ಲಿ ವಿಜಯನಗರ ಕಾಲದ ಶಿಲ್ಪಗಳನ್ನೇ ಹೋಲುತ್ತಿದ್ದರೂ, ಅಂಗಾಂಗಳ ರಚನೆ ಮತ್ತು ಪ್ರಮಾಣಬದ್ಧತೆಯಲ್ಲಿ ಜನಪದ ಶೈಲಿಯನ್ನು ಹೋಲುತ್ತವೆ. ಹಂಪೆಯ ವಿರೂಪಾಕ್ಷ ದೇವಾಲಯದ ಮಹಾದ್ವಾರ ಗೋಪುರದ ಮೊದಲ ಹಂತದಲ್ಲಿ ಇಂತಹ ಶಿಲ್ಪಗಳು ಕಂಡುಬರುತ್ತವೆ.[೨೨] ಹಾಗೆಯೇ ವಿಜಯನಗರ ಕಾಲದ ಗಾರೆಶಿಲ್ಪಗಳು ಪ್ರತಿಮಾಶಾಸ್ತ್ರದ ಲಕ್ಷಣಗಳಿಗನುಗುಣವಾಗಿ ಪ್ರಮಾಣಬದ್ಧವಾಗಿ ಅಂಗಾಂಗಗಳನ್ನು ರಚಿಸಲಾಗಿದ್ದು ತುಂಬಾ ಅನುಭವಿ/ನುರಿತ ಶಿಲ್ಪಿಗಳಿಂದ ರಚನೆಗೊಂಡಿರುವುದು ಕಂಡುಬರುತ್ತದೆ. ಜತೆಗೆ ಇತರ ಮಾಧ್ಯಮಗಳಾದ ಶಿಲೆ, ಮರ ಹಾಗೂ ಲೋಹಗಳ ಶಿಲ್ಪಗಳಿಗೆ ಸರಿಸಮಾನವಾಗಿ ಕಾಣುವ ಸಾಮರ್ಥ್ಯವನ್ನು ಹೊಂದಿವೆ. ಇವುಗಳ ರಚನೆಗೆ ಕಬ್ಬಿಣದ ಕಡ್ಡಿ, ಮರದ ಗೂಟ ಹಾಗೂ ಸಾಂಪ್ರದಾಯಿಕ ನುಣ್ಣನೆಯ ಗಾರೆಯನ್ನು ಹಾಗೂ ಬಣ್ಣವನ್ನು ಬಳಸಲಾಗಿದೆ.[೨೩] ವಿಜಯವಿಠ್ಠಲ ದೇವಾಲಯ, ಅಚ್ಯುತರಾಯ ದೇವಾಲಯ ಮಾಲ್ಯವಂತ ರಘುನಾಥ ದೇವಾಲಯ ಮುಂತಾದ ದೇವಾಲಯಗಳ ಶಿಖರ ಮತ್ತು ಗೋಪುರಗಳಲ್ಲಿ ಇಂತಹ ಗಾರೆಶಿಲ್ಪಗಳನ್ನು ಕಾಣುಬಹುದು.[೨೪] ವಿಜಯನಗರ ಕಾಲದಂತೆ ಚಿತ್ರದುರ್ಗ ಪಾಳೆಯಗಾರರ ಕಾಲದ ಗಾರೆಯ ವಾಸ್ತುಶಿಲ್ಪವನ್ನು ಈ ಕೆಳಕಂಡಂತೆ ಅಧ್ಯಯನ ಮಾಡಬಹುದು.

ಹೊರಕೆರೆದೇವರ

ಇಲ್ಲಿನ ರಂಗನಾಥಸ್ವಾಮಿ ದೇವಾಲಯದ ಮುಖಮಂಟಪದ ಎದುರಿಗೆ ಚಿಕ್ಕ ಪ್ರವೇಶ ಮಂಟಪವಿದೆ. ಎರಡು ಹಂತದಲ್ಲಿರುವ ಈ ಮಂಟಪ ಪ್ರತಿಸಾಲಿನಲ್ಲಿ ಮೂರರಂತೆ ಎರಡು ಸಾಲಿನಲ್ಲಿ ಒಟ್ಟು ಆರು ಅಂಕರಣಗಳನ್ನು ಹೊಂದಿದ್ದು, ಮಧ್ಯದ ಪ್ರವೇಶದ ಹಾದಿಯನ್ನು ಹೊರತುಪಡಿಸಿ ಎರಡು ಬದಿಗೆ ಕಟ್ಟೆಗಳಿವೆ. ಈ ಪ್ರವೇಶಮಂಟಪದ ಮೇಲೆ ಗಾರೆ ಮತ್ತು

ಇಟ್ಟಿಗೆಗಳಿಂದ ನಿರ್ಮಿಸಿದ ಶಿಖರದ ಮಾದರಿಯ ದೇವಕೋಷ್ಠಗಳಿದ್ದು ಅವುಗಳಲ್ಲಿ ಯಾವುದೇ ದೇವತಾಶಿಲ್ಪಗಳಿಲ್ಲ ಹಾಗೆಯೇ ಮುಖಮಂಟಪದ ಮೇಲ್ಛಾವಣಿಯಲ್ಲಿ ಸುತ್ತಲೂ ಕಮಾನಿನ ಆಕಾರದ ಗಾರೆಯ ರಚನೆಗಳನ್ನು ಕಾಣಬಹುದಾಗಿದೆ.

ಜಾನಕಲ್ಲು

ಜಾನಕಲ್ಲಿನ ಶಂಕರಲಿಂಗೇಶ್ವರ ದೇವಾಲಯದ ಶಿಖರವು ಸಂಪೂರ್ಣವಾಗಿ ಗಾರೆಯಿಂದ ನಿರ್ಮಾಣಗೊಂಡಿದ್ದು, ಸಾಧಾರಣ ಅಲಂಕರಣೆಯಿದ ಕೂಡಿದೆ. ಅಲ್ಲಲ್ಲಿ ಪ್ರಮಾಣಬದ್ಧವಲ್ಲದ ಶಿಲ್ಪಗಳು, ಶಿಖರದ ಮೊದಲ ಸ್ತರದ ನಾಲ್ಕು ಮೂಲೆಗಳಲ್ಲಿ ಸಿಂಹಶಿಲ್ಪಗಳನ್ನು ಹಾಗೂ ಸುಖನಾಸಿಯನ್ನು ಕಾಣಬಹುದಾಗಿದೆ. ಆದರೆ ದೇವಕೋಷ್ಠಗಳಲ್ಲಿ ಯಾವುದೇ ದೇವತಾ ಶಿಲ್ಪಗಳಿಲ್ಲ.

ಭೀಮಸಮುದ್ರ

ಇಲ್ಲಿನ ಭೀಮೇಶ್ವರ ದೇವಾಲಯದ ಮಾಡಿನ ಸುತ್ತಲೂ ತುಂಬಾ ಆಕರ್ಷಕ ರೀತಿಯ ಗಾರೆಯ ರಚನೆಯನ್ನು ಕಾಣಬಹುದಾಗಿದೆ. ನೋಡಿದ ತಕ್ಷಣ ಹಂಪೆಯ ವಿರೂಪಾಕ್ಷ ದೇವಾಲಯದ ಮಹಾದ್ವಾರ ಗೋಪುರ ಹಾಗೂ ಶಿಖರವನ್ನು ನೆನಪಿಸುತ್ತದೆ. ದೇವಕೋಷ್ಠಗಳು, ಅದರೊಳಗಿನ ಶಿಲ್ಪಗಳು ಹಾಗೂ ಮೇಲಿನ ಆಕರ್ಷಕ ಸ್ತೂಪಿಯ ರಚನೆ, ವಿವಿಧ ಪ್ರಾಣಿಗಳು, ಮೂರು ಹಂತಸ್ತಿನ ಮಹಾದ್ವಾರ ಗೋಪುರ, ಮುಂದಿನ ಶಿವನ ಬೃಹತ್ ಪ್ರತಿಮೆ, ಅದರ ಹಿಂದಿನ ದ್ರಾವಿಡ ಶೈಲಿಯ ಶಿಖರಗಳು ಸಂಪೂರ್ಣ ಗಾರೆಯಿಂದ ನಿರ್ಮಿಸಲ್ಪಟ್ಟಿದ್ದು ಚಿತ್ರದುರ್ಗ ಪಾಳೆಯಗಾರರ ಕಾಲದ ಗಾರೆಶಿಲ್ಪದ ಕಲಾ ಉತ್ಕೃಷ್ಟತೆಯ ದೃಷ್ಟಿಯಿಂದ ಅತ್ಯಂತ ಉತ್ತಮವಾದ ರಚನೆಯಾಗಿದೆ.

ಚಿತ್ರದುರ್ಗ

ನಗರದ ಚನ್ನಕೇಶವ ದೇವಾಲಯದ ಅಂತರಾಳದ ಮೇಲ್ಭಾಗದಲ್ಲಿ ಮಾಡಿನಲ್ಲಿ ಅಂಚಿನುದ್ದಕ್ಕೂ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವ ಕಂಗೂರಾಕೃತಿಗಳ ಸಾಲುಗಳಿವೆ. ನಗರದ ಹೊರವಲಯದ ಉತ್ತರ ದಿಕ್ಕಿನಲ್ಲಿ ತುರುವನೂರು ರಸ್ತೆಯಲ್ಲಿರುವ ಶ್ರೀವೆಂಕಟರಮಣ ದೇವಾಲಯದ ಮಹಾರಂಗಮಂಟಪದ ಕಂಬಗಳ ಪ್ರಧಾನ ಕಾಂಡದ ಮೇಲ್ಭಾಗದಲ್ಲಿ ಕಂಬಗಳು ಮತ್ತು ಛತ್ತಿನ ನಡುವೆ ಅಂತರವಿದ್ದು, ಪ್ರಾಯಶಃ ಗಾರೆಯ ಬಿಂಬಗಳನ್ನು ಮಾಡುವ ಉದ್ದೇಶದಿಂದ ನಿರ್ಮಿಸಿದ ಮಂಟಪಗಳಿವೆ. ಆದರೆ ಮಂಟಪಗಳಲ್ಲಿ ಯಾವುದೇ ಬಿಂಬಗಳಿಲ್ಲ. ಹಾಗೆಯೇ ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಶಿಖರವಿದ್ದು, ಸ್ತೂಪಿ ವೃತ್ತಾಕಾರಾವಾಗಿದೆ. ಶಿಖರದ ಕೆಳಮೂಲೆಗಳಲ್ಲಿ ನಾಲ್ಕು ದಿಕ್ಕುಗಳಿಗೆ ಸಿಂಹಗಳು, ಸ್ತೂಪಿಯಲ್ಲಿ ನಾಲ್ಕು ಬದಿಗೆ ಪ್ರಭಾವಳಿ ಮತ್ತು ಕೀರ್ತಿಮುಖಗಳಿವೆ. ಮಹಾರಂಗಮಂಟಪದ ಮುಂದಿನ ಪ್ರಾಂಗಾಣದಲ್ಲಿ ಗಾರೆಯಿಂದ ಮಾಡಿದ ತುಂಬಾ ಸಾಧಾರಣವಾದ ಗರುಡನ ಚಿಕ್ಕಗುಡಿಯಿದೆ. ಕೋಟೆಯ ಒಳಗಿನ ಏಕನಾಥೇಶ್ವರಿ ದೇವಾಲಯದ ಮುಖಮಂಟಪದ ಮಾಡಿನಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾದ ಕಂಗೂರಾಕೃತಿಗಳ ಸಾಲುಗಳಿದ್ದು, ಅವುಗಳ ಮೇಲೆ ಶಾಲ, ಕೂಟ, ಹಾರಗಳಿದ್ದು, ಶಾಲದಲ್ಲಿ ಪ್ರಧಾನ ದೇವತೆಯ ಪ್ರತಿಕೃತಿಯಿದೆ. ಉಳಿದಂತೆ ಶಿಲ್ಪಗಳು ಭಿನ್ನವಾಗಿದ್ದು ಸ್ಪಷ್ಟವಾಗಿಲ್ಲ.

ಹಿರಿಯೂರು

ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ತೆರೆದ ಮುಖಮಂಟಪದ ಮುಂಭಾಗದಲ್ಲಿರುವ ನವಗ್ರಹ ಮಂಟಪದ ಮೇಲಿನ ಗೋಪುರವನ್ನು ಇಟ್ಟಿಗೆ ಮತ್ತು ಗಾರೆಯಿಂದ ಇತ್ತೀಚೆಗೆ ಹಳೆಯ ಮಾದರಿಗನುಗುಣವಾಗಿ ದುರಸ್ತಿಗೊಳಿಸಲಾಗಿದೆ. ಇದರ ನಾಲ್ಕು ದಿಕ್ಕುಗಳಿಗೆ ದಿಕ್ಪಾಲರ ಶಿಲ್ಪಗಳು ಮತ್ತು ನಾಲ್ಕು ಮೂಲೆಗಳಿಗೆ ನಂದಿಯ ವಿಗ್ರಹಗಳು ಹಾಗೂ ವಿವಿಧ ದೇವತೆಗಳ ಶಿಲ್ಪಗಳಿವೆ. ಶಾಲ ಮತ್ತು ಕೂಟಗಳ ರಚನೆಯಿದೆ.ಹಾಗೆಯೇ ಸಭಾಮಂಟಪದ ಭಿರತ್ತಿಯ ಮೇಲೆ ಕಪೋತವಿದ್ದು, ಅದರ ಮೇಲೆ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಿದ ದೇವಕೋಷ್ಠಗಳಿಚವೆ, ಈ ದೇವಕೋಷ್ಠಗಳಲ್ಲಿ ಶಿಖರಗಳು ಶಾಲಾಕಾರದಲ್ಲಿದ್ದು ನೋಡಲು ದೇವಾಲಯದ ಮಹಾದ್ವಾರದ ಮಾದರಿಗಳಂತಿವೆ. ದ್ವಾರಮಂಟಪದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವ ಮೂಲ ಮಾದರಿಯ ಐದು ತಲದ ಮಹಾದ್ವಾರ ಗೋಪುರವನ್ನು ಇತ್ತೀಚೆಗೆ ಪುನರ್‌ನಿರ್ಮಿಸಲಾಗಿದೆ. ಈ ಗೋಪುರವು ದ್ರಾವಿಡ ಶೈಲಿಯಲ್ಲಿದ್ದು, ಶಾಲ, ಕೂಟ, ಹಾರಗಳನ್ನು ಹೊಂದಿದೆ.

ಹೊಳಲ್ಕೆರೆ

ನಗರದಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯದ ಸಭಾಮಂಟಪ ಮತ್ತು ಮಹಾರಂಗಮಂಟಪಗಳ ಮಾಡಿನ ಅಂಚಿನಲ್ಲಿ ಗಾರೆಯಿಂದ ನಿರ್ಮಿಸಿರುವ ಕಂಗೂರಾಕೃತಿಗಳಿವೆ. ಗರ್ಭಗೃಹದ ಮೇಲೆ ದ್ರಾವಿಡ ವಿಮಾನ ಮಾದರಿಯ ನಾಲ್ಕು ತಲದ ಗಾರೆಯ ಶಿಖರವಿದೆ. ಇದರ ಮುಂದೆ ಅಂತರಾಳದ ಮೇಲೆ ಗಾರೆಯ ಸುಖನಾಸವಿದೆ. ಶಿಖರ ಮತ್ತು ಸುಖನಾಸಗಳು ಯಾವುದೇ ವಿಶೇಷ ಅಲಂಕರಣೆಯನ್ನು ಹೊಂದಿಲ್ಲ. ಹಾಗೆಯೇ ಇಲ್ಲಿನ ವೀರಭದ್ರಸ್ವಾಮಿ ದೇವಾಲಯದ ಮೇಲೆ ಎರಡು ತಲದ ದ್ರಾವಿಡ ಶೈಲಿಯ ಮೂರು ಗರ್ಭಗೃಹಗಳು ಹಾಗೂ ದ್ವಾರಮಂಟಪದ ಮೇಲಿನ ಕಂಗೂರಾಕೃತಿಗಳು ಹಾಗೂ ಗೂಡು ಇಟ್ಟಿಗೆ ಮತ್ತು ಗಾರೆಗಳಿಂದ ರಚಿಸಲ್ಪಟ್ಟಿವೆ.

ತಾಳ್ಯ

ಹೊಳಲ್ಕೆರೆ ತಾಲ್ಲೂಕಿನ ತಾಳ್ಯದ ಆಂಜನೇಯಸ್ವಾಮಿ ದೇವಾಲಯದ ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವ ಏಕತಲದ ದ್ರಾವಿಡ ವಿಮಾನ ಮಾದರಿಯ ಶಿಖರವಿದೆ. ಶಿಖರದ ಕೆಳಹಂತದಲ್ಲಿ ದೇವಕೋಷ್ಠ ಮತ್ತು ಕಂಬಗಳು, ಮೇಲ್ಭಾಗದಲ್ಲಿ ನಾಲ್ಕು ಮೂಲೆಗಳಲ್ಲಿ ಸಿಂಹಶಿಲ್ಪಗಳಿವೆ. ಅದರ ಮೇಲಿನ ಸ್ತೂಪಿಯು ವೃತ್ತಾಕಾರದಲ್ಲಿದ್ದು, ಅದರ ನಾಲ್ಕು ಬದಿಗೆ ಕೀರ್ತಿಮುಖಗಳಿವೆ. ಶಿಖರದ ಮುಂದೆ ಅಂತರಾಳದ ಮೇಲೆ ಗಾರೆಯಿಂದ ರಚಿಸಿರುವ ಸುಖನಾಸವಿದೆ.

ಕೊಣಚ್‌ಗಲ್

ಕೊಣಚ್‌ಗಲ್‌ನ ಶ್ರೀರಂಗನಾಥಸ್ವಾಮಿ ದೇವಾಲಯದ ಮಾಡಿನಲ್ಲಿ ಅಲ್ಲಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ರಚಿಸಲ್ಪಟ್ಟ ಕಂಗೂರಾಕೃತಿಗಳು ಮತ್ತು ಮೂಲೆಗಳಲ್ಲಿ ಸಿಂಹಶಿಲ್ಪಗಳಿವೆ. ಗರ್ಭಗೃಹದ ಮೇಲೆ ಇತ್ತೀಚಿಗೆ ನಿರ್ಮಿಸಿರುವ ಗಾರೆಯ ಶಿಖರವಿದೆ.

ಮಾರಿಕಣಿವೆ

ಹಿರಿಯೂರು ತಾಲೂಕಿನ ಮಾರಿಕಣಿವೆಯ ಮಾರಿಕಾಂಭ ದೇವಾಲಯದ ಅಂತರಾಳದ ದ್ವಾರಬಂಧವನ್ನು, ಮುಖಮಂಟಪದ ಮೇಲಿನ ಶಾಲ, ಕೂಟ, ಹಾರಗಳನ್ನು, ಸಭಾಮಂಟಪದ ಮಾಡಿನ ಕಂಗೂರಾಕೃತಿಗಳನ್ನು ಹಾಗೂ ಗರ್ಭಗೃಹದ ಮೇಲಿನ ಶಿಖರ ಮತ್ತು ಅದರಲ್ಲಿನ ಶಾಲ, ಕೂಟ ಹಾರಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ರಚಿಸಲಾಗಿದೆ. ಈ ಎಲ್ಲಾ ರಚನೆಗಳಲ್ಲಿ ತೀರಾ ಸ್ಥಳೀಯ ಲಕ್ಷಣಗಳನ್ನು ಅಳವಡಿಸಿಕೊಳ್ಳಲಾಗಿದೆ. ಮುಖಮಂಟಪದ ಮೇಲಿನ ದೇವಕೋಷ್ಠಗಳಲ್ಲಿ ಯಾವುದೇ ದೇವತಾಶಿಲ್ಪಗಳಿಲ್ಲ.

ಅಂಬಲಗೆರೆ

ಹಿರಿಯೂರು ತಾಲ್ಲೂಕಿನ ಅಂಬಲಗೆರೆಯ ಶ್ರೀರಂಗನಾಥಸ್ವಾಮಿ ದೇವಾಲಯದ ಗರ್ಭಗೃಹದ ಮೇಲೆ ಎರಡು ತಲದ ದ್ರಾವಿಡ ಮಾದರಿಯ ಗಾರೆಯ ಶಿಖರವಿದ್ದು, ತುಂಬಾಜೀರ್ಣಾವಸ್ಥೆಯಲ್ಲಿದೆ. ಶಾಲ, ಕೂಟ ಹಾರಗಳ ರಚನೆಯಿದ್ದು, ಅದರಲ್ಲಿನ ಶಿಲ್ಪಗಳು ಸರಿಯಗಿ ಗೋಚರಿಸುತ್ತಿಲ್ಲ. ಅಲ್ಲದೇ ಕಲಾದೃಷ್ಟಿಯಿಂದ ತುಂಬಾ ಸರಳವಾಗಿದೆ.

ಒಟ್ಟಾರೆ ಗಾರೆಯನ್ನು ಪ್ರಸ್ತುತ ದಿನಗಳಲ್ಲಿ ರೂಢಿಯಲ್ಲಿರುವಂತೆ ಒಂದುಭಾಗ ಸುಣ್ಣ, ಎರಡು ಭಾಗ ಮರಳು, ಒಂದುಭಾಗ ಬೆಲ್ಲ, ಅರ್ಧಭಾಗ ಅಂಟುವಾಳ ಕಾಯಿಗಳನ್ನು ಮಿಶ್ರಣ ಮಾಡಿ ಚೆನ್ನಾಗಿ ಅರೆದು ತಯಾರಿಸಿಕೊಂಡು ಶಿಲ್ಪಗಳ ಭಂಗಿಗನುಗುಣವಾಗಿ ಮರದ ಗೂಟ ಮತ್ತು ಕಬ್ಬಿಣದ ಕಡ್ಡಿಗಳನ್ನು ಬಳಸುತ್ತ, ಗೂಟ ಮತ್ತು ಕಡ್ಡಿಗಳ ಮೇಲ್ಮೈಗೆ ಗಾರೆಯನ್ನು ಲೇಪಿಸಿ ಒರಟು ಆಕೃತಿಯನ್ನು ರಚಿಸಿ ನಂತರ ಓರೆಕೋರೆಗಳನ್ನು ಸರಿಪಡಿಸಿ ಅಂತಿಮ ರೂಪವನ್ನು ಕೊಟ್ಟು ಶಿಲ್ಪಗಳನ್ನು ರಚಿಸಲಾಗುತ್ತಿತ್ತು. ದೇವಾಲಯದ ಒಳಗಿನ ಲೋಹ ಮತ್ತು ಶಿಲಾ ಶಿಲ್ಪಗಳು ಪೂಜೆಗೆ ಅರ್ಹಗೊಂಡರೆ ಹೊರಗಿನ ಗಾರೆಶಿಲ್ಪಗಳು, ದೇವತೆಗಳು ಕಥೆ ಮತ್ತು ಮಹಿಮೆಗಳನ್ನು ಪ್ರತಿಬಿಂಬಿಸುತ್ತವೆ. ಇವುಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿ ಭಕ್ತರ ಮನಸ್ಸಿಗೆ ಮುದವನ್ನು ನೀಡುತ್ತವೆ.

ಅಡಿಟಿಪ್ಪಣಿಗಳು

೧. ಗೋಪಾಲ್ ಬಾ,.ರಾ. ೧೯೯೩; "ಕಲೆಮತ್ತುವಾಸ್ತು" ಪು. ೧.

೨. ಪೂರ್ವೋಕ್ತ, ಪು. ೧.

೩. ಪ್ರಭಾಕರ್ ಎಂ.ಎನ್., ೧೯೯೯; 'ದೇವಾಲಯಗಳವಾಸ್ತುಚಂದ್ರಿಕೆ' ಪು. ೩.

೪. ಪ್ರಭಾಕರ್ ಎಂ.ಎನ್., ಪೂರ್ವೋಕ್ತ; ೧೯೯೯; ಪು. ೪.

೫. ಫಣೀಂದ್ರನಾಥಬೋಸ್., ೧೯೭೮; 'ಪ್ರಿನ್ಸಿಪಾಲ್ ಆಫ್ ಇಂಡಿಯನ್ ಶಿಲ್ಪಶಾಸ್ತ್ರ', ಪು. ೮.

೬ ಡಾ. ಸಿ. ಮಹದೇವ. ೨೦೧೫; "ವಿಜಯನಗರದ ಗಾರೆಶಿಲ್ಪ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨.

೭. ಸುಂದರ ಅ., ೧೯೮೫; "ಗಂಗ–ಕದಂಬಪೂರ್ವ ಇತಿಹಾಸ" ಅವಲೋಕನ, ಪು. ೫೩–೫೪.

೮. ಡಾ. ಸಿ. ಮಹದೇವ. ೨೦೧೫; ಪೂರ್ವೋಕ್ತ, ಪು. ೫.

೯. ನರಸಿಂಹನ್ ಅ.ಲ., ೧೯೯೪; "ಮೃತ್ತಿಕೆಮತ್ತು ಟೆರಾಕೋಟ ಶಿಲ್ಪಗಳು", ಶಿಲ್ಪಕಲಾ ಪ್ರಪಂಚ, ಪು. ೪೪೨.

೧೦. ವರ್ಮ ಕೆ.ಎಂ., "ಟೆಕ್ನಿಕ್ ಆಫ್ ಗಾಂಧಾರನ್ ಅಂಡ್ ಇಂಡೋ ಆಫ್ಘಾನ್ ಸ್ಟಕೊ ಇಮೇಜಸ್", ವಾರಣಾಸಿ.

೧೧. ಡಾ. ಸಿ. ಮಹದೇವ. ೨೦೧೫; ಪೂರ್ವೋಕ್ತ, ಪು. ೬.

೧೨. ನರಸಿಂಹನ್ ಅ.ಲ., ೧೯೯೪; ಪೂರ್ವೋಕ್ತ, ಪು. ೪೪೩.

೧೩. ಅದೇ ಪು .೪೪೨.

೧೪. ಡಾ. ಸಿ. ಮಹದೇವ. ೨೦೧೫; ಪೂರ್ವೋಕ್ತ, ಪು. ೬.

೧೫. ವರ್ಮ ಕೆ.ಎಂ., ಪೂರ್ವೋಕ್ತ.

೧೬. ಡಾ. ಸಿ. ಮಹದೇವ. ೨೦೧೫; ಪೂರ್ವೋಕ್ತ, ಪು. ೭.

೧೭. ಅದೇ, ಪು. ೭.

೧೮. ನರಸಿಂಹನ್ ಅ.ಲ., ೧೯೯೪; ಪೂರ್ವೋಕ್ತ, ಪು. ೪೪೩ .

೧೯. ಡಾ. ಸಿ. ಮಹದೇವ. ೨೦೧೫; ಪೂರ್ವೋಕ್ತ, ಪು. ೭.

೨೦. ಅದೇ. ಪು. ೭.

೨೧. ಗೋವಿಂದರಾಜು ಸಿ.ಆರ್., ೧೯೯೪; "ಗಾರೆಗಚ್ಚು ಶಿಲ್ಪಗಳು", ಶಿಲ್ಪಕಲಾ ಪ್ರಪ್ರಂಚ, ಪು. ೪೪೭.

೨೨. ಡಾ. ಸಿ. ಮಹದೇವ. ೨೦೧೫; ಪೂರ್ವೋಕ್ತ, ಪು. ೧೧.

೨೩. ಅದೇ. ಪು. ೧೧.

೨೪. ಅದೇ. ಪು. ೧೧.

೮೪

ಹಂಪಿ ಪರಿಸರದ ಗಂಗಾಧರ ಮತ್ತು ಗಂಗಾವಿಸರ್ಜನ ಮೂರ್ತಿ ಶಿಲ್ಪಗಳು

ಹೇಮಾವತಿ ಮೆಣಸಿಗಿ*

ಪುರಾಣ ಉಲ್ಲೇಖಿತ ಹಂಪಿಯು ವಿಜಯನಗರ ಕಾಲದ ಪ್ರಸಿದ್ಧ ರಾಜಧಾನಿಯೆನಿಸಿದ್ದು, ಕಲೆ ಮತ್ತು ವಾಸ್ತುಶಿಲ್ಪದ ಬೀಡಾಗಿದೆ. ಪ್ರಸ್ತುತ ಹಂಪಿ ಪರಿಸರದಲ್ಲಿನ ಗಂಗಾಧರ ಮತ್ತು ಗಂಗಾವಿಸರ್ಜನ ಮೂರ್ತಿಶಿಲ್ಪಗಳನ್ನು ಪುರಾಣ, ಆಗಮ ಹಾಗೂ ಇತರ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿನ ಪ್ರತಿಮಾಲಕ್ಷಣಗಳ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

ಶಿವನು ಗಂಗೆಯನ್ನು ತನ್ನ ಜಟೆಯಲ್ಲಿರಿಸಿಕೊಂಡ ಹಾಗೂ ವಿಸರ್ಜಿಸಿದ ಮೂರ್ತಿಗಳನ್ನೇ ಗಂಗಾಧರ ಮತ್ತು ಗಂಗಾವಿಸರ್ಜನಮೂರ್ತಿ ಎನ್ನುವರು. ಈ ಶಿಲ್ಪ ಸ್ವರೂಪದ ಹಿನ್ನೆಲೆಯನ್ನು ವಿಷ್ಣುಪುರಾಣ, ಭಾಗವತ ಪುರಾಣ, ರಾಮಾಯಣಗಳಲ್ಲಿ ಹೇಳಲಾಗಿದೆ.

ಭಗೀರಥನು ರುದ್ರನು ಗಂಗೆಯನ್ನು ತಡೆಯುವಂತಹ ಮಹಾಬಲ ಎಂದು ನಂಬಿ ಆತನನ್ನು ಕುರಿತು ತಪಸ್ಸು ಮಾಡತೊಡಗಿದನು. ರುದ್ರನು ಈ ತಪಸ್ಸಿಗೆ ಸಂಪ್ರೀತನಾಗಿ ಭಗೀರಥನ ಪ್ರಾರ್ಥನೆಯಂತೆ ಗಂಗೆಯನ್ನು ತನ್ನ ನೆತ್ತಿಯ ಮೇಲೆ ಸ್ವೀಕರಿಸಲು ಹಿಮಾಲಯಗಳಿಗೆ ಹೊರಟ. ಮೊದಲಿಗೆ ಗಂಗೆ ಶಿವನು ತನ್ನ ವೇಗವನ್ನು ತಡೆಯಲಾರ ಎಂದು ಬಹುವೇಗದಿಂದ ಧುಮುಕಿದಳು. ಗಂಗೆಯ ಈ ಅಹಂಕಾರಕ್ಕೆ ಕೃದ್ಧನಾಗಿ ಗಂಗೆಗೆ ಬುದ್ಧಿ ಕಲಿಸಲೆಂದು ತನ್ನ ವ್ಯೋಮಕೇಶದಲ್ಲಿ ಗಂಗೆಯನ್ನು ಬಂಧಿಯನ್ನಾಗಿಸಿ ಶಿವನು ಗಂಗಾಧರನೆನಿಸಿದನು. ಹೀಗೆ ಗಂಗೆಯು ಸ್ವರ್ಗದಿಂದಿಳಿದು ಶಿವನ ಜಟೆಗಳಲ್ಲಿ ಸೆರೆಯಾದಳು. ಇದರಿಂದ ಭಗೀರಥನ ಗುರಿ ಸಾಧಿತವಾದಂತಾಗಲಿಲ್ಲ. ಮತ್ತೆ ಶಿವನನ್ನು ಕುರಿತು ತಪಸ್ಸು ಮಾಡತೊಡಗಿದೆ. ಇದರಿಂದ ಶಿವನು ತನ್ನ ಜಟೆಯನ್ನು ತೆಗೆದು ನಿಧಾನವಾಗಿ ಗಂಗೆಯು ಭೂಮಿಯ ಮೇಲೆ ಹರಿಯಲು ಬಿಟ್ಟುಕೊಟ್ಟು ಭಗೀರಥನನ್ನು ಅನುಸರಿಸಲು ಹೇಳಿದ. ಭಗೀರಥನು ಗಂಗೆಯನ್ನು ತನ್ನ ಪಿತೃಗಳು ಬೂದಿಯಾದ ರಾಶಿಯ ಬಳಿಗೆ ಕರೆದೊಯ್ದು, ಪವಿತ್ರ ಗಂಗಾಜಲದ ಸಂಪರ್ಕ ಪಡೆದು ಅವರೆಲ್ಲರೂ ಸದ್ಗತಿಯನ್ನು ಪಡೆದರು. ಶಿವನು ಗಂಗೆಯನ್ನು ಭೂಮಿಗೆ ವಿಸರ್ಜಿಸಿದ ಸಂದರ್ಭದಲ್ಲಿ ಗಂಗಾ ವಿಸರ್ಜನಮೂರ್ತಿ ಎನಿಸಿಕೊಂಡನು.[೧]

ಗಂಗಾಧರ ಮೂರ್ತಿಯ ಲಕ್ಷಣಗಳನ್ನು ಅಂಶುಮದ್ಭೇದಾಗಮ, ಕಾಮಿಕ ಮತ್ತು ಕಾರಣಾಗಮಗಳಲ್ಲಿ ಹೇಳಲಾಗಿದೆ. ಇವುಗಳ ಪ್ರಕಾರ ಶಿವನ ಬಲಗಾಲು ಬಲವಾಗಿ ಭೂಮಿಯ ಮೇಲೆ ಊರಿದ್ದು, ಎಡಗಾಲು ಕುಂಚಿತ ಪಾದದಲ್ಲಿರುತ್ತದೆ. ಚತುರ್ಭುಜಗಳಲ್ಲಿ ಬಲಭಾಗದ ಮುಂದಿನ ಹಸ್ತ ಉಮೆಯ ಗದ್ದದ ಬಳಿ ಇರುತ್ತದೆ. ಮುಂದಿನ ಎಡಗೈಯ ಉಮೆಯನ್ನು ಆಲಂಗಿಸಿರುತ್ತದೆ. ಬಲ ಹಿಂದಿನ ಹಸ್ತವು ತನ್ನ ಉಷ್ಣೀಷದವರೆಗೂ ಅಥವಾ ಮುಕುಟದವರೆಗೂ ಎತ್ತಿದ್ದು ಗಂಗೆಯೊಡಗೂಡಿದ ಜಟೆಯನ್ನು ಹಿಡಿದಿರುತ್ತದೆ. ಹಿಂದಿನ ಎಡಹಸ್ತವು ಮೃಗವನ್ನು ಹಿಡಿದಿರುತ್ತದೆ. ಎಡಭಾಗದಲ್ಲಿ ಉಮೆಯು ಶಿವನು ಇನ್ನೊಬ್ಬ ಸ್ತ್ರೀಗೆ ಅವಕಾಶ ಕಲ್ಪಿಸುತ್ತಿರುವುದರಿಂದ ಸಹಜ ಅಸೂಯೆ ಭಾವವನ್ನು ಹೊಂದಿರುವಂತೆ ನಿಂತಿರಬೇಕು. ಉಮೆಯ ಬಲಪಾದವು ಕುಂಚಿತವಾಗಿದ್ದಿರಬಹುದು. ಎಡಪಾದವು ಸ್ಥಿರವಾಗಿರಬೇಕು. ಆಕೆಯ ಬಲಬಾಹುವು ಮುಕ್ತವಾಗಿ ಕೆಳಗೆ ಇಳಿಬಿಟ್ಟಿರಬೇಕು. ಎಡಹಸ್ತದಲ್ಲಿ ಪುಷ್ಪವನ್ನು ಹಿಡಿದಿರಬೇಕು ಅಥವಾ ಬಲಹಸ್ತವು ತಾನು ಧರಿಸಿದ ವಸ್ತ್ರದ ನೆರಿಗೆಗಳನ್ನು ಹಿಡಿದಿರಬೇಕು.

ಎಡಭಾಗದಲ್ಲಿ ಭಗೀರಥನು ಅನೇಕ ಋಷಿಗಳೊಂದಿಗೆ ಶಿವನನ್ನು ಪ್ರಾರ್ಥಿಸುವಂತಿರಬೇಕು. ಈ ಎಲ್ಲ ಮೂರ್ತಿಗಳ ಗುಂಪುರ ಸೇರಿದರೆ ಗಂಗಾಧರ ಮೂರ್ತಿ ಎನ್ನಿಸಿಕೊಳ್ಳುತ್ತದೆ.[೨]

* ಉಪನ್ಯಾಸಕರು, ಸ್ನಾತಕೋತ್ತರ ಕೇಂದ್ರ, ಕೊಪ್ಪಳ–೫೮೩೨೩೧.

ಗಂಗಾಧರಮೂರ್ತಿ ಶಿಲ್ಪವನ್ನು ಒಂದು ಪಟ್ಟಿಕೆಯಲ್ಲಿ ಕೆತ್ತಲಾಗಿದ್ದರೆ, ಭಗೀರಥನೊಂದಿಗೆ ಇನ್ನೂ ಹಲವು ಮುನಿಗಳನ್ನು ತೋರಿಸಬೇಕು ಹಾಗೂ ಬ್ರಹ್ಮ ಮತ್ತು ವಿಷ್ಣು ದೇವತೆಗಳನ್ನು ತೋರಿಸಬೇಕು. ಈ ಪ್ರಕಾರದ ಮೂರ್ತಿಶಿಲ್ಪದಲ್ಲಿ ಶಿವನು ತನ್ನ ಜಟೆಯಿಂದ ಗಂಗೆಯನ್ನು ವಿಸರ್ಜಿಸುತ್ತಿರುವಂತಿದ್ದು, ಹಾಗೂ ಪಾರ್ವತಿಯನ್ನು ನಂಬಿಸುತ್ತಿರುವಂತಿರಬೇಕು. ಅಂಶುಮದ್ಭೇದಾಗಮ (೬೬ನೇ ಪಟಲ) ದೇವಿಯು ಶಿವನ ಎಡಭಾಗದಲ್ಲಿ ಸ್ಥಾನಿಕಳಾಗಿರಬೇಕು. ಹಾಗೂ ವಿರಹ ಭಾವವನ್ನು ವ್ಯಕ್ತಪಡಿಸುತ್ತಿರಬೇಕು (ಕಾಶ್ಯಪಶಿಲ್ಪ ೧೦, ೭ ಮತ್ತು ಶಿಲ್ಪರತ್ನ ೨೨ನೇ ಪಟಲ) ಎಂದು ಹೇಳುತ್ತದೆ. ಮುಖದಲ್ಲಿ ಸಿಟ್ಟು ಹಾಗೂ ಅಸೂಯೆ ಭಾವವನ್ನು ವ್ಯಕ್ತಪಡಿಸುತ್ತಿರಬೇಕು. ಶಿವನು ಅವಳನ್ನು ಸಂತೈಸುವ ಹಾಗೂ ತನ್ನ ಮುಂದಿನ ಎಡಗೈಯಿಂದ ಆಲಂಗಿಸಿದಂತಿರಬೇಕು. ಶಿವನ ಹಿಂದಿನ ಹಸ್ತವು ಕರ್ತರಿಹಸ್ತದಲ್ಲಿದ್ದು, ಮುಕುಟದವರೆಗೂ ಚಾಚಿದ್ದು, ಜಟಾಮುಕುಟದಲ್ಲಿನ ಒಂದು ಜಟೆಯನ್ನು ಹೊರತೆಗೆಯುತ್ತಿರುವಂತಿರಬೇಕು. ಇದರ ಜೊತೆಗೆ ಗಂಗೆಯ ಶಿಲ್ಪವನ್ನು ತೋರಿಸಬೇಕು.[೩] ಇವಿಷ್ಟು ಗಂಗಾವಿಸರ್ಜನ ಮೂರ್ತಿಯ ಲಕ್ಷಣಗಳು.

ಹಂಪಿ ಪರಿಸರದಲ್ಲಿ ಒಟ್ಟು ನಾಲ್ಕು ಶಿಲ್ಪಗಳು ಗಂಗಾಧರ ಮತ್ತು ಗಂಗಾವಿಸರ್ಜನ ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದಂತೆ ದೊರೆಯುತ್ತವೆ.

೧. ವಿರೂಪಾಕ್ಷ ದೇವಾಲಯದ ಎಡಬದಿಯ ಪ್ರಾಕಾರ ಮಂಟಪದ ೧೯ನೇ ಕಂಬದಲ್ಲಿ ಗಂಗಾಧರಮೂರ್ತಿ ಶಿಲ್ಪವಿದೆ. ಇಲ್ಲಿ ಶಿವ ಮತ್ತು ಪಾರ್ವತಿಯನ್ನು ಮಾತ್ರ ತೋರಿಸಲಾಗಿದೆ. ಶಿವನ ಶಿಲ್ಪವು ದ್ವಿಭಂಗಿಯಲ್ಲಿ ಸ್ಥಾನಿಕವಾಗಿದ್ದು, ಚತುರ್ಭುಜಗಳನ್ನು ಹೊಂದಿರುವನು. ಬಲಭಾಗದ ಎರಡು ಕೈಗಳಲ್ಲಿ ಮುಂದಿನದು ಜಟಾಮುಕುಟದವರೆಗೆ ಎತ್ತಿದ್ದು, ಕಟಕಮುದ್ರೆಯಲ್ಲಿದೆ. ಅದೇ ಭಾಗದಲ್ಲಿ ಗಂಗೆಯ ಶಿಲ್ಪವನ್ನು ಕೆತ್ತಿದ್ದು, ಅಸ್ಪಷ್ಟವಾಗಿದೆ. ಹಿಂದಿನ ಕೈಯಲ್ಲಿ ಅಂಕುಶವನ್ನು ಹಿಡಿದಿರುವನು. ಎಡಭಾಗದ ಕೈಗಳಲ್ಲಿ ಮುಂದಿನದು ದೇವಿಯ ಭುಜದ ಮೇಲಿದ್ದು, ಆಕೆಯ ಬಲಭಾಗದ ಸ್ತನದವರೆಗೂ ಚಾಚಿಕೊಂಡಿದೆ. ಹಿಂದಿನ ಹಸ್ತವು ಕಟಕಮುದ್ರೆಯಲ್ಲಿ, ಮೃಗವನ್ನು ಹಿಡಿದಿರುವುದು. ಜಟಾಮುಕುಟ, ಕರ್ಣಕುಂಡಲ, ಕೊರಳಹಾರಗಳು, ಯಜ್ಞೋಪವೀತ, ವಕ್ಷಬಂಧ, ಕಟಿ ಆಭರಣಗಳು, ಕಟಿಯಿಂದ ಪಾದದವರೆಗಿನ ವಸ್ತ್ರವನ್ನು ಧರಿಸಿದ್ದು, ಕೈಗಳಲ್ಲಿ ಕೆಯೂರ ಕಂಕಣಗಳಿವೆ. ಒಟ್ಟಾರೆ ಸಕಲ ವಸ್ತ್ರಾಭರಣಗಳಿಂದ ಅಲಂಕೃತನಾಗಿರುವನು. ಪಕ್ಕದಲ್ಲಿರುವ ಉಮೆಯ ಶಿಲ್ಪವು ತ್ರಿಭಂಗಿಯಲ್ಲಿ ದ್ವಿಭುಜಳಾಗಿರುವಳು. ಎಡಗೈಯು ಡೋಲಹಸ್ತದಲ್ಲಿದ್ದು, ಬಲಗೈಯು ಸ್ಪಷ್ಟತೆಯಿಲ್ಲ. ದೇವಿಯು ಕರಂಡ ಮುಕುಟ ಧರಿಸಿದ್ದು, ಶಿವನಂತೆಯೇ ಸಕಲ ವಸ್ತ್ರಾಭರಣಗಳಿಂದ ಭೂಷಿತಳಾಗಿರುವಳು.

೨. ಮತ್ತೊಂದು ಶಿಲ್ಪವು ಹರಿಹರ ದೇವಾಲಯದ ಮಂಟಪದ ಮೊದಲನೇ ಕಂಬದಲ್ಲಿದೆ. ಇಲ್ಲಿ ಶಿವ–ಪಾರ್ವತಿಯರನ್ನು ತೋರಿಸಿದ್ದು, ಶಿವನು ಚತುರ್ಭುಜಗಳನ್ನು ಹೊಂದಿರುವನು. ಶಿಲ್ಪಕ್ಕೆ ಸುಣ್ಣ ಬಳಿದಿರುವುದರಿಂದ ಕೆಲವು ಲಕ್ಷಣಗಳು ಗೋಚರಿಸುವುದಿಲ್ಲ. ಆದರೂ ಗುರುತಿಸಬಹುದಾದ ಲಕ್ಷಣಗಳೆಂದರೆ ಶಿವನ ಬಲಭಾಗದ ಮುಂದಿನ ಹಸ್ತವು ಪಕ್ಕದಲ್ಲಿರುವ ದೇವಿಯ ಎದೆಯ ಭಾಗದವರೆಗೆ ಚಾಚಿಕೊಂಡಿದೆ. ಹಿಂದಿನ ಹಸ್ತದಲ್ಲಿ ಪರಶು (ಅಸ್ಪಷ್ಟ) ಹಾಗೂ ಎಡ ಮುಂದಿನ ಹಸ್ತವು ಅಸ್ಪಷ್ಟವಾಗಿದ್ದು ಹಿಂದಿನ ಕೈಯಲ್ಲಿ ಮೃಗವನ್ನು ಹಿಡಿದಿರುವನು. ದೇವಿಯು ದ್ವಿಭುಜಳಾಗಿದ್ದು, ಬಲಬಾಹುವು ಅಸ್ಪಷ್ಟವಾಗಿದೆ. ಎಡಬಾಹು ಡೋಲಹಸ್ತದಲ್ಲಿದೆ. ಎರಡೂ ಶಿಲ್ಪಗಳು ಮುಕುಟ ಹಾಗೂ ವಸ್ತ್ರಾಭರಣಗಳಿಂದ ಭೂಷಿತರಾಗಿರುವುವೆನ್ನಬಹುದು.

೩. ಇನ್ನೊಂದು ಶಿಲ್ಪವು ಬುಕ್ಕಸಾಗರ ವೀರಭದ್ರಸ್ವಾಮಿ ದೇವಾಲಯದ ರಂಗಮಂಟಪದಲ್ಲಿನ ೬ನೇ ಕಂಬದಲ್ಲಿದೆ. ಈ ಶಿಲ್ಪಕ್ಕೂ ಸಂಪೂರ್ಣ ಬಣ್ಣ ಬಳಿದಿರುವುದರಿಂದ ಆಭರಣಗಳಂತಹ ಲಕ್ಷಣಗಳು ಗೋಚರಿಸುವುದಿಲ್ಲ. ಇಲ್ಲಿಯೂ ಶಿವನು ಚತುರ್ಭುಜನಾಗಿದ್ದು, ಬಲಭಾಗದ ಎರಡು ಕೈಗಳಲ್ಲಿ ಮುಂದಿನದು ಪಕ್ಕದಲ್ಲಿರುವ ದೇವಿಯ ಗದ್ದವನ್ನು ಸ್ಪರ್ಶಿಸಿದೆ. ಹಿಂದಿನ ಹಸ್ತವು ಮೇಲೆತ್ತಿದ್ದು, ಜಟೆಯನ್ನು ಹಿಡಿದಿರುವುದು, ಇಲ್ಲಿ ಗಂಗೆಯ ಶಿಲ್ಪವನ್ನೂ ಚಿಕ್ಕದಾಗಿ ಕೆತ್ತಿದ್ದು, ಶಿವನು ಅವಳನ್ನು ಜಟೆಯೊಳಗಿಂದ ವಿಸರ್ಜಿಸಿ, ಅವಳು ಮೇಲಿಂದ ಕೆಳಕ್ಕೆ ಧುಮುಕುತ್ತಿರುವಂತೆ ಕೆತ್ತಲಾಗಿದೆ. ಎಡಭಾಗದ ಮುಂದಿನ ಹಸ್ತವು ಅಸ್ಪಷ್ಟವಾಗಿದ್ದು, ಹಿಂದಿನ ಕೈಯಲ್ಲಿ ಡಮರುವನ್ನು ಹಿಡಿದಿರುವನು. ದೇವಿಯು ದ್ವಿಭುಜಳಾಗಿದ್ದು, ಆಕೆಯ ಎಡಗೈಯು ಡೋಲಹಸ್ತದಲ್ಲಿದೆ. ಜಲಬಾಹುವು ಅಸ್ಪಷ್ಟವಾಗಿದೆ. ದೇವಿಯು ಕಿರೀಟಮುಕುಟ ಧರಿಸಿದ್ದು, ಶಿವ ಮತ್ತು ಪಾರ್ವತಿಯರ ಎಡರೂ ಶಿಲ್ಪಗಳೂ ವಸ್ತ್ರಾಭರಣ ಭೂಷಿತವಾಗಿವೆ.

೪. ಮತ್ತೊಂದು ಶಿಲ್ಪವು ತಿಮ್ಮಲಾಪುರದ ತ್ರಿಕೂಟ ದೇವಾಲಯದ ನವರಂಗದಲ್ಲಿನ ೪ನೇ ಕಂಬದಲ್ಲಿದೆ. ಈ ಶಿಲ್ಪದಲ್ಲಿ ಶಿವನು ಸಮಪಾದದಲ್ಲಿ ಸ್ಥಾನಿಕನಾಗಿದ್ದು, ಎಡಭಾಗಕ್ಕೆ ದೇವಿ ಇರುವೆಡೆಗೆ ಮುಖ ಮಾಡಿರುವಂತೆ ಕೆತ್ತಲಾಗಿದೆ. ಇಲ್ಲಿ ಶಿವನು ಷಡ್ಭುಜಗಳನ್ನು ಹೊಂದಿರುವನು. ಬಲಭಾಗದ ಮೂರು ಬಾಹುಗಳಲ್ಲಿ ಮುಂದಿನದು ಪಕ್ಕದಲ್ಲಿರುವ ದೇವಿಯ




ಗಂಗಾಧರಮೂರ್ತಿ, ವಿರುಪಾಕ್ಷ ದೇವಾಲಯ, ಹಂಪಿ




ಗಂಗಾಧರಮೂರ್ತಿ, ಹರಿಹರ ದೇವಾಲಯ, ಹಂಪಿ

ಗದ್ದವನ್ನು ಸ್ಪರ್ಶಿಸಿದೆ. ಮಧ್ಯದಲ್ಲಿರುವ ಹಸ್ತದಲ್ಲಿ ಪರಶುವನ್ನು ಹಾಗೂ ಹಿಂದಿನ ಹಸ್ತವು ಮುಕುಟದವರೆಗೂ ಚಾಚಿದ್ದು, ಕಟಕ ಮುದ್ರೆಯಲ್ಲಿರುವುದು. ಇದು ಜಟೆಯಿಂದ ಗಂಗೆಯನ್ನು ವಿಸರ್ಜಿಸಿರುವುದು ಹಾಗೂ ಶಿವನ ಬಲಕ್ಕೆ ಗಂಗೆಯು ನಿಧಾನವಾಗಿ ಭೂಮಿಗಿಳಿಯುತ್ತಿರುವುದನ್ನು ತೋರಿಸಲಾಗಿದೆ. ಎಡಭಾಗದ ಬಾಹುಗಳಲ್ಲಿ ಮುಂದಿನದು ದೇವಿಯನ್ನು



ಗಂಗಾವಿಸರ್ಜನ ಮೂರ್ತಿ ತ್ರಿಕೂಟ ದೇವಾಲಯ, ತಿಮ್ಮಲಾಪುರ



ಗಂಗಾವಿಸರ್ಜನಮೂರ್ತಿ, ವೀರಭದ್ರ ದೇವಾಲಯ, ಬುಕ್ಕಸಾಗರ

ಆಲಂಗಿಸಿದ್ದು, ಅವಳ ಎಡಸ್ತನದವರೆಗೂ ಚಾಚಿಕೊಂಡಿದೆ. ಮಧ್ಯದಲ್ಲಿನ ಹಸ್ತವು ದೇವಿಯ ಕಟಿಭಾಗವನ್ನು ಬಳಸಿದೆ. ಹಿಂದಿನ ಕಸ್ತದಲ್ಲಿ ಕೃಷ್ಣಮೃಗವಿರುವುದು. ಶಿವನು ಜಟಾಮುಕುಟಧಾರಿಯಾಗಿದ್ದು, ಕರ್ಣಕುಂಡಲಗಳು, ಕೊರಳಹಾರ, ಕಂಕಣಗಳು ಹಾಗೂ ಕಟಿಯಿಂದ ಪಾದದವರೆಗಿನ ವಸ್ತ್ರವನ್ನು ಧರಿಸಿರುವನು. ಶಿವನ ಎಡಕ್ಕೆ ದೇವಿಯು ತ್ರಿಭಂಗಿಯಲ್ಲಿ ಸ್ಥಾನಿಕಳಾಗಿದ್ದು, ದ್ವಿಭುಜಗಳನ್ನು ಹೊಂದಿರುವಳು. ಅವುಗಳಲ್ಲಿ ಬಲಹಸ್ತವು ಅಸ್ಪಷ್ಟವಾಗಿದ್ದು, ಎಡಹಸ್ತದಲ್ಲಿ ಪುಷ್ಪವನ್ನು ಹಿಡಿದಿರುವಳು. ದೇವಿಯು ಕರಂಡಮುಕುಟ ಹಾಗೂ ಕಟಿಯಿಂದ ಪಾದದವರೆಗಿನ ವಸ್ತ್ರವನ್ನು ಧರಿಸಿರುವಳು. ಈ ವಸ್ತ್ರದ ಒಂದು ಭಾಗವು ಅವಳ ಎಡಭಾಗಕ್ಕೆ ಹರಡಿಕೊಂಡಂತೆ ಕೆತ್ತಲಾಗಿದೆ. ಹಾಗೂ ಕಟಿಭಾಗದಲ್ಲಿ ವಿವಿಧ ಆಭರಣಗಳನ್ನು ಧರಿಸಿರುವಳು.

ಈ ಮೇಲಿನ ಎಲ್ಲ ಶಿಲ್ಪಗಳಲ್ಲಿ ಅಂದರೆ ವಿರೂಪಾಕ್ಷ ದೇವಾಲಯದಲ್ಲಿ ಹಾಗೂ ಹರಿಹರ ದೇವಾಲಯದಲ್ಲಿ ದೊರೆತ ಶಿಲ್ಪಗಳೆರಡೂ ಗಂಗಾಧರ ಮೂರ್ತಿಶಿಲ್ಪಗಳಾಗಿದ್ದು, ಬುಕ್ಕಸಾಗರದಲ್ಲಿ ಮತ್ತು ತಿಮ್ಮಲಾಪುರದಲ್ಲಿ ದೊರೆತ ಶಿಲ್ಪಗಳು ಗಂಗಾವಿಸರ್ಜನ ಮೂರ್ತಿಗಳಾಗಿವೆ. ಈ ನಾಲ್ಕು ಶಿಲ್ಪಗಳಲ್ಲಿ ತಿಮ್ಮಲಾಪುರದ ಗಂಗಾ ವಿಸರ್ಜನಮೂರ್ತಿಯನ್ನು ಹೊರತುಪಡಿಸಿ ಉಳಿದ ಮೂರು ಶಿಲ್ಪಗಳೂ ಗಂಗಾಧರ ಹಾಗೂ ಗಂಗವಿಸರ್ಜನ ಮೂರ್ತಿಯ ಲಕ್ಷಣಗಳನ್ನು ಹೊಂದಿದ್ದರೂ ಅವು ಆಗಮಗಳು ಹಾಗೂ ಇತರ ಶಿಲ್ಪಶಾಸ್ತ್ರಗಳು ಉಲ್ಲೇಖಿಸುವ ಮೂರ್ತಿ ಲಕ್ಷಣಗಳ ಅನುಸಾರವಾಗಿ ಕೆತ್ತನೆಗೊಂಡಿಲ್ಲ. ಆದರೆ ತಿಮ್ಮಲಾಪುರದ ತ್ರಿಕೂಟ ದೇವಾಲಯದಲ್ಲಿರುವ ಗಂಗಾವಿಸರ್ಜನಮೂರ್ತಿ ಅಂಶುಮದ್ಭೇದಾಗಮ, ಪೂರ್ವ ಕಾರಣಾಗಮ ಹಾಗೂ ಶಿಲ್ಪರತ್ನ ಈ ಮೂರು ಶಿಲ್ಪಶಾಸ್ತ್ರಗಳು ಹೇಳುವ ಲಕ್ಷಣಗಳನ್ನು ಒಳಗೊಂಡು ಕೆತ್ತಲ್ಪಟ್ಟಿದೆ. ಒಟ್ಟಾರೆಯಾಗಿ ಈ ಶಿಲ್ಪದ ಕುರಿತು ಹೇಳುವುದರಿಂದ ಇದು ಅಂಶುಮದ್ಭೇದ, ಪೂರ್ವಕಾರಣ ಹಾಗೂ ಶಿಲ್ಪರತ್ನ ಇವುಗಳು ಹೇಳುವ ಲಕ್ಷಣಗಳನ್ನು ಸಂಯುಕ್ತಗೊಳಿಸಿ ಈ ಶಿಲ್ಪವನ್ನು ಕೆತ್ತಲಾಗಿದೆ. ಶಿಲ್ಪಿಯ ಚಾಣಾಕ್ಷತೆಯಿಂದ ನಿರ್ಮಿತಗೊಂಡ ಈ ಶಿಲ್ಪವು ಹಂಪಿ ಪರಿಸರದಲ್ಲಿಲ ದೊರೆಯುವ ಗಂಗಾವಿಸರ್ಜನ ಮೂರ್ತಿಶಿಲ್ಪಗಳಲ್ಲಿ ವಿಶಿಷ್ಟವಾದುದು.

ಮೇಲಿನ ನಾಲ್ಕು ಶಿಲ್ಪಗಳ ಕುರಿತು ಕೆ.ಎಂ. ಸುರೇಶರವರು ತಮ್ಮ ಗ್ರಂಥದಲ್ಲಿ[೪] ಗಂಗಾಧರ ಮತ್ತು ಗಂಗಾವಿಸರ್ಜನ ಮೂರ್ತಿಶಿಲ್ಪಗಳ ವ್ಯತ್ಯಾಸಗಳನ್ನು ಗುರುತಿಸದೆ ಗಂಗಾಧರ ಮೂರ್ತಿಶಿಲ್ಪಗಳೆಂದು ಉಲ್ಲೇಖಿಸಿ, ವಿವರಣೆ ನೀಡಿರುವರು.

ಹೀಗೆ ಮೇಲೆ ವಿವರಿಸಿದ ಎಲ್ಲಾ ಶಿಲ್ಪಗಳು ಈ ಮೊದಲೇ ಅಧ್ಯಯನಕ್ಕೊಳಪಟ್ಟಿದ್ದರೂ ಅವು ಕೇವಲ ಪ್ರತಿಮಾಲಕ್ಷಣಗಳಷ್ಟೆ ತಿಳಿಸುತ್ತದೆ. ಆದ್ದರಿಂದ ಪ್ರಸ್ತುತ ಲೇಖನದ ಮೂಲಕ ಈ ಎಲ್ಲಾ ಶಿಲ್ಪಗಳ ಸೂಕ್ಷ್ಮ ಅಧ್ಯಯನ ಕೈಗೊಂಡು ಅವುಗಳಲ್ಲಿನ ವ್ಯತ್ಯಾಸ ಹಾಗೂ ಮುಖ್ಯವಾಗಿ ಹಂಪಿಯಲ್ಲಿ ಆಗಮ ಮತ್ತು ಇತರ ಶಿಲ್ಪಶಾಸ್ತ್ರಗ್ರಂಥಗಳಲ್ಲಿರುವ ಪ್ರತಿಮಾ ಲಕ್ಷಣಗಳ ಅನ್ವಯ ಶಿಲ್ಪಗಳು ರಚಿತಗೊಂಡಿರುವುದನ್ನು ತಿಳಿಸಲು ಪ್ರಯತ್ನಿಸಲಾಗಿದೆ.

ಅಡಿಟಿಪ್ಪಣಿಗಳು

೧. ರಾಮಚಂದ್ರರಾವ್ ಎಸ್.ಕೆ.; ಶಿವ ಕೋಶ, ಸಂ. ೧, ಪುಟ ೨೪೩–೨೪೫ ಮತ್ತು ಗೋಪಿನಾಥ ರಾವ್ ಟಿ.ಎ. ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಫಿ, ಸಂ. ೧, ಪುಟ ೩೧೩–೩೧೫.

೨. ಗೋಪಿನಾಥ ರಾವ್ ಟಿ.ಎ. ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಫಿ, ಪುಟ ೩೧೫–೩೧೬.

೩. ರಾಮಚಂದ್ರ ರಾವ್ ಎಸ್.ಕೆ. ಪೂರ್ವೋಕ್ತ, ೨೪೯–೨೫೦.

೪. ಸುರೇಶ ಕೆ.ಎಂ., ವಿಜಯನಗರ ಸ್ಕಲ್ಪ್ಚರ್ಸ್ ಅಟ್ ಹಂಪಿ, ಪುಟ ೬೫–೬೭.

೮೫

ಕಮಲಾಪುರದ ವಿಶಿಷ್ಟ ಗಜಾಸುರ ಸಂಹಾರ ಶಿಲ್ಪ

ಪದ್ಮಜಾ ದೇಸಾಯಿ*

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಕೇಂದ್ರದಿಂದ ಸು. ೧೨ ಕಿ.ಮೀ. ದೂರದಲ್ಲಿ ಕಮಲಾಪುರವಿದೆ.[1] ವಿಶ್ವವಿಖ್ಯಾತ ಹಂಪಿಯ ಸಮೀಪದಲ್ಲಿರುವ ಕಮಲಾಪುರ ಪ್ರಾಗೈತಿಹಾಸಿಕ ಹಾಗೂ ಚಾರಿತ್ರಿಕ ಕಾಲಘಟ್ಟಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಕಾಲವಧಿಯಲ್ಲಿ ಆಡಳಿತ ಕೇಂದ್ರವಾಗಿ, ಅಲ್ಲದೆ ಸಾಂಸ್ಕೃತಿಕ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ಇಲ್ಲಿನ ಪ್ರಾಚ್ಯಾವಶೇಷಗಳು ದೃಢಪಡಿಸಿವೆ.[2]

"ಕಮಲಾಪುರದ ವಿಶಿಷ್ಟ ಗಜಾಸುರ ಸಂಹಾರ ಶಿಲ್ಪ" ಈ ಶಿಲ್ಪವು ಆಗಮಗಳ ಹಿನ್ನೆಲೆಯಲ್ಲಿ ರಚನೆಯಾಗಿದೆಯೋ ಅಥವಾ ಆಗಮಗಳನ್ನು ಹೊರತುಪಡಿಸಿ ರಚನೆಯಾಗಿದೆಯೋ ಎಂಬುದನ್ನು ಚರ್ಚಿಸುವುದರ ಜೊತೆಗೆ ರಚನಾ ತಾಂತ್ರಿಕತೆಯನ್ನು ಗಮನಿಸಲಾಗಿದೆ. ಇದು ಈ ಲೇಖನದ ಮೂಲ ಉದ್ದೇಶವಾಗಿದೆ.

ಶೈವ ಶಿಲ್ಪಗಳು ಹೆಚ್ಚಾಗಿ ಶಿವಪುರಾಣಗಳು, ಶೈವ ಆಗಮಗಳು, ಸ್ಥಳಪುರಾಣ, ದಂತಕಥೆಗಳು ಮತ್ತು ಐತಿಹ್ಯಗಳಿಂದ ಹೆಣೆಯಲ್ಪಟ್ಟಿರುತ್ತವೆ, ಎಂಬುದು ಈ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ. ಶಿವನ ಇಪ್ಪತ್ತೈದು ಲೀಲಾಮೂರ್ತಿಗಳಲ್ಲಿ ಎರಡು ವರ್ಗಗಳಿವೆ. ಮೊದಲನೆಯದು ಅನುಗ್ರಹ ಮೂರ್ತಿಗಳು ಎರಡನೆಯದು ಸಂಹಾರ ಮೂರ್ತಿಗಳೆಂದು ವಿಂಗಡಿಸಲಾಗಿದೆ. ಪ್ರಸ್ತುತ ಶಿವನ ಶಿಲ್ಪವು ಹೆಸರೇ ಸೂಚಿಸುವಂತೆ ಗಜಾಸುರ ಸಂಹಾರ ಶಿಲ್ಪ ಎಂದಿದ್ದು ಈ ಶಿಲ್ಪವು ಸಂಹಾರ ಶಿಲ್ಪಗಳ ವರ್ಗಕ್ಕೆ ಸೇರುತ್ತದೆ.[3]

ರಚನಾ ತಾಂತ್ರಿಕತೆ: ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಶಿಲೆಯಲ್ಲಿ ಈ ಶಿಲ್ಪವನ್ನು ಕೆತ್ತಲಾಗಿದೆ. ವಿಜಯನಗರದ ಶಿಲ್ಪಗಳಲ್ಲಿ ಉಬ್ಬು ಶಿಲ್ಪಗಳ ಸಂಖ್ಯೆ ಹೆಚ್ಚಾಗಿದೆ. ಉಬ್ಬು ಶಿಲ್ಪಗಳನ್ನು ಕೆತ್ತುವ ತಾಂತ್ರಿಕತೆಯಲ್ಲಿ ವಿಜಯನಗರದ ಶಿಲ್ಪಿಯು ಪರಿಣಿತಿಯನ್ನು ಪಡೆದಿದ್ದನ್ನು ಎಂಬುದು ಈ ಶಿಲ್ಪದ ರಚನಾ ತಾಂತ್ರಿಕತೆಯಿಂದ ಅರಿಯಬಹುದು.

ಗಜಾಸುರನನ್ನು ಸಂಹರಿಸಿದ ಶಿವನ ರೂಪವೇ ಗಜಾಸುರ ಸಂಹಾರ ಶಿಲ್ಪವಾಗಿದೆ. 'ಕೂರ್ಮಪುರಾಣವು', ವಿವರಿಸುವಂತೆ ಕಾಶಿಯಲ್ಲಿರುವ ಲಿಂಗವನ್ನು ಕೃತ್ತಿವಾಸೇಶ್ವರ ಎಂದು ಕರೆಯಲಾಗುವುದು. ಕೃತ್ತಿವಾಸೇಶ್ವರ ಎಂಬ ಶಬ್ದದ ಅರ್ಥವು ಹೀಗಿದೆ. ಕೃತ್ತಿ ಎಂದರೆ ಚರ್ಮ, ವಾಸೇಶ್ವರ ಎಂದರೆ ಚರ್ಮವನ್ನು ಉಡುಗೆಯಾಗಿ ಧರಿಸಿದವನು ಎಂದು ಅರ್ಥ. ಗಜಾಸುರ ಸಂಹಾರದ ಸನ್ನಿವೇಶದಲ್ಲಿ ಈ ಲಿಂಗವನ್ನು ಪೂಜಿಸುತ್ತಿದ್ದ ಹಲವು ಬ್ರಾಹ್ಮಣರನ್ನು ರಾಕ್ಷಸನೊಬ್ಬನು ಆನೆಯ ರೂಪವನ್ನು ಧರಿಸಿ ಬಂದು ಹಿಂಸಿಸಲು ಆಗ ಶಿವನು ಲಿಂಗದಿಂದ ಮೂಡಿಬಂದು ಆನೆಯನ್ನು ಸಂಹರಿಸಿ ಅದರ ಚರ್ಮವನ್ನು ಉಡುಗೆಯಾಗಿ ಧರಿಸಿದನೆಂದು ತಿಳಿಸಿದೆ.

ಇದೇ ಪುರಾಣದ ಪ್ರಕಾರ ಮತ್ತೊಂದು ವಿವರಣೆಯು ಈ ರಿತಿಯಾಗಿದೆ ಒಮ್ಮೆ ಶಿವನು ದಿಗಂಬರನಾಗಿ ಸುಮೇರು ಪರ್ವತದ ಪರಿಸರದಲ್ಲಿ ತಿರುಗಾಡುತ್ತಿದ್ದಾಗ ಅವನ ಶರೀರ ಸೌಂದರ್ಯವನ್ನು ಕಂಡು ಅಲ್ಲಿನ ಆಶ್ರಮಗಳಲ್ಲಿದ್ದ ಮುನಿಪತ್ನಿಯರು ಬೆರಗಾದರು. ಸಪ್ತಋಷಿಗಳು ಇದನ್ನು ತಿಳಿದು ಶಿವನ ಮೇಲೆ ಕೋಪಗೊಂಡು ಮಂತ್ರದ ಸಹಾಯದಿಂದ ಕೆಲವು ಕ್ರೂರಪ್ರಾಣಿಗಳನ್ನು ಸೃಷ್ಟಿಸಿ ಶಿವನ ಮೇಲೆ ದಾಳಿಮಾಡಲು ಕಳುಹಿಸಿದರು. ಶಿವನು ಆ ಎಲ್ಲಾ ಪ್ರಾಣಿಗಳ ಮೇಲೆ ಜಯವನ್ನು ಗಳಿಸಿದನು. ಹೀಗೆ ಬಂದ ಪ್ರಾಣಿಗಳಲ್ಲಿ ಗಜಾಸುರನು ಒಬ್ಬನಾಗಿದ್ದನು. ಶಿವನು ಈ ಗಜವನ್ನು ಕೊಂದು ಅದರ ಚರ್ಮವನ್ನು ಉಡುಗೆಯಾಗಿ ಧರಿಸಿದ ಶಿವನ ರೂಪವೇ ಗಜಾಸುರ ಸಂಹಾರ ಮೂರ್ತಿಯೆನಿಸಿದೆ.[4]

ಈ ಸ್ವರೂಪದಲ್ಲಿ ಶಿವನು ಗಜಾಸುರನ ಶಿರವನ್ನು ಎಡಗಾಲಿನಿಂದ ಮೆಟ್ಟಿದ್ದು, ಎರಡು ಕೈಗಳಿಂದ ಅದರ ಚರ್ಮವನ್ನು ಸುಲಿಯುತ್ತಾನೆ. ಆನೆಯ ಚರ್ಮವೇ ಶಿವನ ಸುತ್ತ ಪ್ರಭಾಮಂಡಲದಂತೆ ಹರಡಿರುತ್ತದೆ. ಶಿವನ ಶಿರದ ಎಡ ಮಕುಟದ

* ಗುಮಗೇರಾ ಅಂಚೆ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ-೫೮೩೧೨೧, ಮೊ. ೯೪೩೨೬೨೧೧೧೭





ಗಜಾಸುರ ಸಂಹಾರ ಶಿಲ್ಪ

ಮೇಲ್ಭಾಗದಲ್ಲಿ ಆನೆಯ ಬಾಲವು ಕಾಣುವಂತಿರಬೇಕೆಂದು ಅಂಶುಮದ್ಭೇದಾಗಮ ತಿಳಿಸುತ್ತದೆ.[೫] [ನೋಡಿ: ಅಂಶುಬೇಧಾಗಮ, ಪಟಲ, ೭೦; ಪುಟ ೭೬-೭೭]

ಅಂಶುಮದ್ಭೇದಾಗಮ, ಶಿಲ್ಪರತ್ನ ಮತ್ತು ಕೆಲವು ಶೈವಾಗಮಗಳಲ್ಲಿ ಈ ಶಿಲ್ಪದ ಅಂದರೆ ಗಜಾಸುರ ಸಂಹಾರ ಮೂರ್ತಿಯ ವಿವರಗಳಿವೆ. ಅಂಶುಮದ್ಭೇದಾಗಮದ ಪ್ರಕಾರ ಶಿಲ್ಪವು ಚತುರ್ಭುಜ ಅಥವಾ ಅಷ್ಟಭುಜಗಳನ್ನು ಹೊಂದಿರಬೇಕು, ಶಿವನ ಶಿಲ್ಪಕ್ಕೆ ನಾಲ್ಕು ಕೈಗಳಿದ್ದರೆ, ಬಲಕೈಗಳಲ್ಲಿ ಒಂದು ಕೈ ಪಾಶವನ್ನು ಮತ್ತೊಂದು ಕೈಯಿಂದ ಗಜಚರ್ಮವನ್ನು ಹಿಡಿದಿರುತ್ತದೆ. ಎಡಗೈಯೊಂದರಲ್ಲಿ ಆನೆಯ ದಂತವಿದ್ದು, ಮತ್ತೊಂದು ಕೈ ಗಜಚರ್ಮವನ್ನು ಹಿಡಿದಿರುತ್ತದೆ.

ಶಿವನ ಶಿಲ್ಪಕ್ಕೆ ಎಂಟು ಕೈಗಳನ್ನು ಬಿಡಿಸಿದ್ದರೆ ನಾಲ್ಕು ಬಲಗೈಗಳಲ್ಲಿ ಕ್ರಮವಾಗಿ ತ್ರಿಶೂಲ, ಡಮರು, ಪಾಶ ಮತ್ತು ಗಜಚರ್ಮವಿರುತ್ತದೆ. ಎಡಗೈಗಳಲ್ಲಿ ಒಂದು ವಿಸ್ಮಯ ಹಸ್ತವಾಗಿದ್ದು, ಉಳಿದ ಕೈಗಳಲ್ಲಿ ಕ್ರಮವಾಗಿ ಗಜಚರ್ಮ, ಕಪಾಲ ಮತ್ತು ಆನೆ ದಂತವಿರುತ್ತದೆ. ಶಿವನು ಎಡಗಾಲಿನಿಂದ ಆನೆಯ ಶಿರವನ್ನು ಮೆಟ್ಟಿನಿಂತಿರುತ್ತಾನೆ. ಬಲಗಾಲು ಎಡ ತೊಡೆಯವರೆಗೆ ಮೇಲೆತ್ತಿ ನೃತ್ಯಭಂಗಿಯಲ್ಲಿರುತ್ತದೆ. ಶಿವನ ಮಕುಟದ ಮೇಲ್ಭಾಗದಲ್ಲಿ ಆನೆಯ ಬಾಲವು ಕಾಣುತ್ತಿರುತ್ತದೆ. ಆನೆಯ ನಾಲ್ಕು ಕಾಲುಗಳನ್ನು ಶಿಲ್ಪಿಯು ಚಾತುರ್ಯದಿಂದ ಬಿಡಿಸಬೇಕು. ಗಜಾಸುರನ ಚರ್ಮವು ಶಿವನ ಶಿಲ್ಪದ ಸುತ್ತ ಪ್ರಭಾಮಂಡಲದಂತೆ ಹರಡಿರುತ್ತದೆ. ಶಿವನು ಸರ್ವಾಭರಣಗಳನ್ನು ಹುಲಿ ಚರ್ಮವನ್ನು ಧರಿಸಿರುತ್ತಾನೆ. ಗಜಾಸುರ ಸಂಹಾರ ಮೂರ್ತಿಯೂ ರಕ್ತವರ್ಣದ್ದಾಗಿರುತ್ತದೆ.

ಇದೇ ಆಗಮವು ಇನ್ನೊಂದು ಪ್ರಕಾರದ ಗಜಾಸುರ ಸಂಹಾರ ಮೂರ್ತಿಯ ಲಕ್ಷಣವನ್ನು ಈ ರೀತಿಯಾಗಿ ವಿವರಿಸಿದೆ. ಶಿವನು ಎಂಟು ಕೈಗಳನ್ನು ಹೊಂದಿದ್ದು, ಕ್ರಮವಾಗಿ ಬಲಕೈಗಳಲ್ಲಿ ತ್ರಿಶೂಲ, ಖಡ್ಗ, ಆನೆದಂತ ಮತ್ತು ಗಜ ಚರ್ಮವನ್ನು ಹಿಡಿದಿರುತ್ತದೆ. ಶಿವನ ಎಡಭಾಗದ ನಾಲ್ಕು ಕೈಗಳಲ್ಲಿ ಕಪಾಲ, ಗುರಾಣಿ, ಘಂಟಾ ಮತ್ತು ಗಜಚರ್ಮವಿರುತ್ತದೆ. ಶಿವನ ಎಡಗಾಲು ಗಜಾಸುರನ ಶಿರವನ್ನು ಮೆಟ್ಟಿದ್ದು ಬಲಗಾಲು ಉತ್ಕುಟಿಕಾಸನದಲ್ಲಿ ಇರುತ್ತದೆ. ಈ ಶಿಲ್ಪದ ಎಡ ಭಾಗದಲ್ಲಿ ಕುಮಾರನನ್ನು ಎತ್ತಿಕೊಂಡು ಹೆದರಿನಿಂತ ದೇವಿಯನ್ನು ಬಿಡಿಸಿರಬೇಕು ಎಂಬ ನಿಯಮವಿದೆ.[೬]

ಪ್ರಸ್ತುತ ಈ ಗಜಾಸುರ ಸಂಹಾರದ ಸನ್ನಿವೇಶದ ಉಬ್ಬು ಶಿಲ್ಪವು ಕಮಲಾಪುರದ ರಾಘವೇಂದ್ರಸ್ವಾಮಿ ಮಠದ ಮುಂಭಾಗದಲ್ಲಿರುವ ವೇಣುಗೋಪಾಲ ಸ್ವಾಮಿ ದೇವಾಲಯ ಅಥವಾ ಕೃಷ್ಣ ದೇವಾಲಯದಲ್ಲಿದೆ. ಸ್ಥಳೀಯರು ಈ ದೇವಾಲಯವನ್ನು ಚಪ್ಪರ ದೇವರ ದೇವಾಲಯವೆಂದು ಕರೆಯುತ್ತಾರೆ.

ದೇವಾಲಯದಲ್ಲಿರುವ ನವರಂಗದ ನಾಲ್ಕು ಕಂಬಗಳಲ್ಲಿ ಎರಡನೇ ಕಂಬದ ಮಧ್ಯಭಾಗದಲ್ಲಿ ಉತ್ತರಾಭಿಮುಖವಾಗಿರುವ ಈ ಶಿಲ್ಪವು ವಿಶಿಷ್ಟತೆಯಿಂದ ಕೂಡಿದೆ. ಉಬ್ಬು ಶಿಲ್ಪಗಳಲ್ಲಿ ಎರಡು ವಿಧ ಒಂದು Low Relief ಮತ್ತೊಂದು High Relief ಎಂದು ವಿಂಗಡಿಸಲಾಗಿದೆ. ಆದರೆ ಈ ಉಬ್ಬು ಶಿಲ್ಪವನ್ನು ಕಂಬದಲ್ಲಿ ಆಳವಾಗಿ ಅಂದರೆ Low Relief ಆಗಿ ಕೆತ್ತಲಾಗಿದೆ. ಸಾಮನ್ಯವಾಗಿ ಉಬ್ಬು ಶಿಲ್ಪಗಳು ಕಂಬದ ಮೇಲ್ಭಾಗದಲ್ಲಿರುವಂತೆ ಕೆತ್ತಲಾಗಿರುತ್ತದೆ. ಆದರೆ ಈ ಶಿಲ್ಪವನ್ನು ತಗ್ಗಾದ ರೀತಿಯಲ್ಲಿ ಕೆತ್ತಿರುವುದು ವಿಶೇಷ.

ಶಿವನ ಈ ಗಜಾಸುರ ಸನ್ನಿವೇಶದ ಶಿಲ್ಪವು ಉಗ್ರರೂಪದಲ್ಲಿದ್ದು ಎರಡೇ ಕೈಗಳನ್ನು ಹೊಂದಿದ್ದು ಯಾವುದೇ ಆಯುಧಗಳನ್ನು ಹೊಂದಿಲ್ಲ. ಎರಡು ಕೈಗಳಿಂದ ಗಜ ಚರ್ಮವನ್ನು ಹಿಡಿದಿದ್ದಾನೆ. ಶಿವನ ಶಿರದಿಂದ ಎರಡು ಭುಜಗಳ ಮೇಲೆ ಜಟಾ ಭಾರವು ಹರಡಿಕೊಂಡಿವೆ. ಶಿವನು ತನ್ನ ಬಲಗಾಲಿನಿಂದ ಆನೆಯ ಶಿರವನ್ನು ಮೆಟ್ಟಿನಿಂತಿದ್ದಾನೆ. ಎಡಗಾಲನ್ನು ಎಡತೊಡೆಯವರೆಗೆ ಮೇಲೆತ್ತಿ ನಾಟ್ಯಭಂಗಿಯಲ್ಲಿದ್ದಾನೆ. ಶಿವನ ಮಕುಟದ ಮೇಲ್ಭಾಗದಲ್ಲಿ ಆನೆಯ ಬಾಲವು ಕಾಣಿಸುತ್ತದೆ. ಗಜಾಸುರನ ಚರ್ಮವನ್ನು ಸುಲಿದು ಶಿವನ ಶಿಲ್ಪದ ಸುತ್ತಲು ಪ್ರಭಾಮಂಡಲದಂತೆ ಹರಡಿಕೊಂಡಿದೆ ಆನೆಯ ಶಿರಭಾಗ, ಕೋರೆ ಹಲ್ಲುಗಳು ಮತ್ತು ನಾಲ್ಕುಕಾಲುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಶಿಲ್ಪವನ್ನು ಶಿಲ್ಪಿಯು ಆಗಮದ ನಿಯಮವನ್ನು ಅನುಸರಿಸದೆ ಶಿಲ್ಪವನ್ನು ಕೆತ್ತಿದ್ದಾನೆ ಎಂಬುದು ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ತಿಳಿದು ಬರುತ್ತದೆ. ಅಂಶುಮದ್ಭೇದಾಗಮ ಮತ್ತು ಶಿಲ್ಪರತ್ನದಲ್ಲಿ ಶಿವನ ಗಜಾಸುರ ಸಂಹಾರ ಸನ್ನಿವೇಶದ ಚತುರ್ಭುಜ ಮತ್ತು ಅಷ್ಟಭುಜ ಶಿಲ್ಪಗಳ ವಿವರಣೆ ಇದೆ. ಆಗಮದಲ್ಲಿ ಎರಡು ಕೈಗಳಿರುವ ಗಜಾಸುರ ಸಂಹಾರ ಶಿಲ್ಪದ ಬಗ್ಗೆ ವಿವರಣೆ ಇಲ್ಲ ಆದರೆ ಇಲ್ಲಿ ಶಿವನಿಗೆ ಎರಡೇ ಕೈಗಳಿದ್ದು ಆಯುಧಗಳಿಲ್ಲದಿರುವುದು ವಿಶೇಷವಾಗಿದೆ. ಆಗಮದಲ್ಲಿ ನಿರ್ದಿಷ್ಟವಾದ ಸ್ವರೂಪ, ಆಯುಧ, ಭಂಗಿ ಮತ್ತು ಮುದ್ರೆಗಳು ಇರಬೇಕೆಂದು ನಿಯಮವಿದೆ.

ಶಿವನು ಕರಂಡಮುಕುಟವನ್ನು ಹೊಂದಿದ್ದು, ಕಿವಿಗಳಲ್ಲಿ ಕುಂಡಲಗಳಿವೆ. ಜಟಾಭಾರವು ಹರಡಿಕೊಂಡಿದೆ, ಕೊರಳಲ್ಲಿ ಹಾರಗಳಿವೆ, ಕಂಠಹಾರವು ಕತ್ತಿನ ಸುತ್ತ ಸುತ್ತಿರುವಂತೆ ಇದೆ. ಕೈಗಳಲ್ಲಿ ಕಡಗಗಳು, ಕಂಕಣಗಳಿವೆ, ವ್ಯಾಘ್ರಜಿನವು ಸೊಂಟದ ಭಾಗದಿಂದ ತೊಡೆಯಭಾಗದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಸೊಂಟದಲ್ಲಿ ಉರುದಾಮವಿದೆ. ಅದು ಗೆಜ್ಜೆಗಳಿಂದ ಕೂಡಿದೆ. ಈ ಶಿಲ್ಪವು ಒರಟಾಗಿರುವ ಕಣಶಿಲೆಯಲ್ಲಿ ಕೆತ್ತಿರುವುದರಿಂದ ನಯಗಾರಿಕೆ ಎದ್ದು ಕಾಣುವುದಿಲ್ಲ.

ಹಂಪಿ ಪರಿಸರದಲ್ಲಿ ದೊರೆತಿರುವ ಇನ್ನೊಂದು ಗಜಾಸುರ ಸಂಹಾರ ಶಿಲ್ಪವನ್ನು ಡಾ.ಕೆ. ಎಮ್.ಸುರೇಶ ರವರು "ಸ್ಕಲ್ಪಚರಲ್ ಆರ್ಟ ಆಫ್ ಹಂಪಿ" ಎನ್ನುವ ಗ್ರಂಥದಲ್ಲಿ ಈ ಶಿಲ್ಪದ ವಿವರಣೆ ನೀಡಿದ್ದಾರೆ. ಈ ಶಿಲ್ಪವು ತಿಮ್ಮಲಾಪುರ ಗ್ರಾಮದ ಶಿವನ ತ್ರಿಕೂಟ ದೇವಾಲಯದ ಮುಖಮಂಟಪದ ಕಂಬದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು ಬಲಕ್ಕೆ ಉದ್ದನೆಯ ತ್ರಿಶೂಲವಿದೆ ಅದು ಆನೆಯನ್ನು ಸಂಹರಿಸುವಂತಿದೆ. ಎಡಗೈಯಲ್ಲಿ ಅಂಕುಶವಿದೆ. ಕೆಳಗಿನ ಎಡ ಮತ್ತು ಬಲಕೈಗಳು ಆನೆಯ ಚರ್ಮವನ್ನು ಹಿಡಿದಿವೆ. ಆನೆಯ ಚರ್ಮವು ಪ್ರಭಾಮಂಡಲದಂತೆ ಹರಡಿದೆ. ಕೇಯೂರ, ಕರಂಡಮಕುಟ, ಕಂಠಹಾರ ಧೋತಿಯನ್ನು ಧರಿಸಿದೆ. ಇವರ ಲೇಖನ ವಿಜಯನಗರ ಅಧ್ಯಯನ ಸಂ. ೯ರಲ್ಲಿ ಪ್ರಕಟವಾಗಿದೆ. "ತಿಮ್ಮಾಲಾಪುರದ ಗಜಸಂಹಾರ ಉಬ್ಬು ಶಿಲ್ಪ"ದಲ್ಲಿ ಈ ಶಿಲ್ಪದ ವಿವರಣೆ ನೀಡಿದ್ದಾರೆ. ಆದರೆ ಅವರು ಈ ಆಗಮಕ್ಕೆ ಸರಿ ಹೊಂದುವ ಪ್ರತಿಮಾಲಕ್ಷಣಗಳನ್ನು ಹೊಂದಿದೆ ಅಥವಾ ಇಲ್ಲವೊ ಎಂಬುದನ್ನು ವಿವರಿಸಿಲ್ಲಾ. ಆದರೆ ಅವರು ವಿವರಿಸಿದ ಶಿಲ್ಪ ಆಗಮದ ಹಿನ್ನೆಲೆಯಲ್ಲಿ ರಚನೆಯಾಗಿಲ್ಲ, ಅಂಶುಮದ್ಭೇದಾಗಮ ವಿವರಣೆಗೆ ಭಿನ್ನವಾದ ಪ್ರತಿಮಾಲಕ್ಷಣಗಳನ್ನು ಹೊಂದಿದೆ. [೭]

ಡಾ. ಶ್ರೀಮತಿ ಕೆ. ವಸಂತಲಕ್ಷ್ಮೀ ಅವರ "ಕರ್ನಾಟಕದಲ್ಲಿ ಶೈವ ಶಿಲ್ಪಗಳು" ಎಂಬ ಗ್ರಂಥದಲ್ಲಿ " ಶಿವನ ಸಂಹಾರ ಮೂರ್ತಿಗಳು" ಎಂಬ ನಾಲ್ಕನೇಯ ಅಧ್ಯಾಯದಲ್ಲಿ ಸಂಹಾರ ಮೂರ್ತಿಗಳ ಲಕ್ಷಣಗಳನ್ನು ವಿವರಿಸಿದ್ದಾರೆ. ಅವರು ವಿಜಯನಗರ ಕಾಲದ ಆಂಧ್ರ ಪ್ರದೇಶದಲ್ಲಿರುವ ಲೇಪಾಕ್ಷಿಯ ದೇವಾಲಯದ ಶಿಲ್ಪದ ಬಗ್ಗೆ ಮತ್ತು ಹೊಯ್ಸಳರ ಕಾಲದ ಹಳೇಬೀಡು, ಅಮೃತಾಪುರದ ಶಿಲ್ಪಗಳ ಬಗ್ಗೆ ವಿವರಣೆ ನೀಡಿದ್ದಾರೆ. ಆದರೆ ಹಂಪಿಯ (ವಿಜಯನಗರ) ಶಿಲ್ಪದ ಸಂಹಾರ ಮೂರ್ತಿಯ ಶಿಲ್ಪಗಳ ಬಗ್ಗೆ ವಿವರಣೆ ನೀಡಿಲ್ಲ.[೮]

ಡಾ. ನಾಗರಾಜ ಶರ್ಮ ಅವರ "ಹೊಯ್ಸಳರ ಶಿಲ್ಪದಲ್ಲಿ ಶಿವ" ಎಂಬ ಗ್ರಂಥದಲ್ಲಿ ಸಂಹಾರ ಶಿಲ್ಪಗಳ ಬಗ್ಗೆ ವಿವರಿಸಿದ್ದಾರೆ. ಈ ಕೃತಿ ಹೊಯ್ಸಳ ಯುಗಕ್ಕೆ ಮಾತ್ರ ಸೀಮಿತಗೊಂಡಿದೆ.

ಎಸ್.ಕೆ. ರಾಮಚಂದ್ರರಾವ್‌ರವರ "ಮೂರ್ತಿಶಿಲ್ಪದ ನೆಲೆ-ಹಿನ್ನೆಲೆ", ಈ ಗ್ರಂಥದಲ್ಲಿ ಶಿವನ ಸ್ವಾರಸ್ಯ ಎಂಬ ೫ನೇ ಅಧ್ಯಾಯದಲ್ಲಿ ಶಿವಲಿಂಗ ಮತ್ತು ಶಿವನಲೀಲಾ ಮೂರ್ತಿಗಳಲ್ಲಿ, ಈ ಗಜಾಸುರ ಸಂಹಾರ ಶಿಲ್ಪದ ವಿವರಣೆಯನ್ನು ನೀಡಿಲ್ಲ ಬೇರೆ ಲೀಲಾ ಮೂರ್ತಿಗಳ ವಿವರಣೆ ಇದೆ.[೯]

ಅನ್ನಾಡೆಲ್ಲಾ ಪಿಕ್ಕೊಲ್ಲಾ ಮತ್ತು ಅನಿಲಾ ವರ್ಗೀಸ್‌ರವರ "ಸ್ಕಲ್ಪಚರ್ ಆರ್ಟ್ ವಿಜಯನಗರ, ಐಕೊನೋಗ್ರಫಿ ಆ್ಯಂಡ ಸ್ಟೈಲ್" ಎಂಬ ಗ್ರಂಥದಲ್ಲಿ ಸಂಹಾರ ಶಿಲ್ಪಗಳ ಬಗ್ಗೆ ಅಲ್ಪ ವಿವರಣೆ ನೀಡಿದ್ದಾರೆ. ಆದರೆ ಆಗಮಗಳ ಹಿನ್ನೆಲೆಯಲ್ಲಿ ಶಿಲ್ಪಗಳ ವಿವರಣೆಯನ್ನು ನೀಡಿಲ್ಲ ಹಾಗೂ ಈ ವಿದ್ವಾಂಸರು ಈ ಶಿಲ್ಪವನ್ನು ಗಮನಿಸಿಲ್ಲ.[೧೦]

ಪ್ರಸ್ತುತ ಈ ಗಜಾಸುರ ಸಂಹಾರ ಶಿಲ್ಪವು ಆಗಮದ ನಿಯಮಗಳನ್ನು ಅನುಸರಿಸದೆ ಶಿಲ್ಪಿಯು ಈ ಸನ್ನಿವೇಶವನ್ನು ತನ್ನ ಕಲಾಚಾತುರ್ಯದಿಂದ ರಚಿಸಿದ್ದಾನೆ. ಇದು ಆ ಶಿಲ್ಪಿಗೆ ಇದ್ದ ಕೆತ್ತನೆಯ ಸ್ವತಂತ್ರತೆ ಮತ್ತು ಅಭಿರುಚಿ ಕಾರಣವಾಗಿದೆ ಎಂದು ತಿಳಿದುಬರುತ್ತದೆ. ಉಗ್ರ ಶಿಲ್ಪಗಳನ್ನು ಕೆತ್ತುವಾಗ ಹೆಚ್ಚಿನ ಕೈಗಳು ಅವುಗಳಿಗೆ ತಕ್ಕ ಆಯುಧಗಳು, ಉಡುಗೆ, ತೊಡುಗೆಯಲ್ಲಿ ಭಿನ್ನತೆಯನ್ನು ತೋರಿಸಲಾಗುತ್ತದೆ. ಆದರೆ ಈ ಶಿಲ್ಪವು ಆಯುಧಗಳಿಲ್ಲದ ಸಂಹಾರ ವರ್ಗಕ್ಕೆ ಸೇರುವ ಉಬ್ಬು ಶಿಲ್ಪವನ್ನು ಶಿಲ್ಪಿಯು ಆಗಮಗಳನ್ನು ಹೊರತುಪಡಿಸಿ ಕೆತ್ತಿರುವುದು ಗಮನಾರ್ಹವಾಗಿದೆ.

ವಿಜಯನಗರದಲ್ಲಿ ಗಜಾಸುರ ಸಂಹಾರ ಶಿಲ್ಪಗಳು ದೊರೆತಿರುವುದು ವಿರಳ. ಒಟ್ಟು ನಾಲ್ಕು ಶಿಲ್ಪಗಳು ದೊರೆತಿವೆ. ಒಂದು ಶಿಲ್ಪ ವಿಜಯನಗರ ಪೂರ್ವಕಾಲಕ್ಕೆ ಸೇರಿದ್ದು, ಹೇಮಕೂಟದ ಬೆಟ್ಟದ ಮೇಲಿನ ತ್ರಿಕೂಟ ದೇವಾಲಯದಲ್ಲಿದೆ. ಎರಡನೆಯದು ವಿರೂಪಾಕ್ಷ ದೇವಾಲಯದ ಒಳ ಪ್ರಾಕಾರದ ಕಂಬದಲ್ಲಿದೆ. ಮೂರನೆಯದು ಕಮಲಾಪುರದ ಕೃಷ್ಣದೇವಾಲಯದ ನವರಂಗದ ಕಂಬದಲ್ಲಿದೆ. ನಾಲ್ಕನೆಯದು ತಿಮ್ಮಲಾಪುರದ ತ್ರಿಕೂಟ ಶಿವ ದೇವಾಲಯದ ಅರ್ಧಮಂಟಪದ ಕಂಬದಲ್ಲಿದೆ. ಆದರೆ ವಿಜಯನಗರದಲ್ಲಿ ಅಷ್ಟಭುಜ ಶಿಲ್ಪಗಳು ದೊರೆತಿಲ್ಲ.

ಅಡಿಟಿಪ್ಪಣಿಗಳು

೧. ಸಿ. ಮಹದೇವ ಮತ್ತು ಇತರರು, ಹೊಸಪೇಟೆ ತಾಲ್ಲೂಕು ದರ್ಶನ, ಪುಟ ೫-೬.

೨. ವಾಸುದೇವನ್ ಸಿ.ಎಸ್., ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು, ವಿಜಯನಗರ ಅಧ್ಯಯನ, ಸಂ. ೨, ಪು. ೧೦೧.

೩. ಗೋಪಿನಾಥರಾವ್ ಟಿ.ಎ., "ಎಲಿಮೆಂಟ್ಸ ಆಫ್ ಹಿಂದೂ ಐಕೊನೋಗ್ರಫಿ", ಸಂ. ೨, ಭಾಗ ೧, ಪುಟ ೧೫೦.

೪. ಅದೇ., ಪುಟ ೧೫೧.

೫. ಅದೇ., ಪುಟ ೧೫೨.

೬ ಅದೇ., ಪುಟ ೧೫೪.

೭. ಸುರೇಶ ಕೆ.ಎಂ., 'ಸ್ಕಲ್ಪಚರಲ್ ಆರ್ಟ್ ಆಫ್ ಹಂಪಿ', ಪುಟ ೪೮-೪೯ ಮತ್ತು ವಿಜಯನಗರ ಅಧ್ಯಯನ, ಸಂ. ೯, ಪು. ೫೨-೫೩.

೮. ಕೆ. ವಸಂತಲಕ್ಷ್ಮೀ, 'ಕರ್ನಾಟಕದ ಶೈವ ಶಿಲ್ಪಗಳು' ಪುಟ ೧೨೫-೧೨೬.

೯. ಎಸ್.ಕೆ. ರಾಮಚಂದ್ರರಾವ್, "ಮೂರ್ತಿಶಿಲ್ಪದ ನೆಲೆ-ಹಿನ್ನೆಲೆ", ಪುಟ ೧೨೩.

೧೦. ಅನ್ನಾಡೆಲ್ಲಾ ಪಿಕ್ಕೊಲ್ಲಾ ಮತ್ತು ಅನಿಲಾ ವರ್ಗೀಸ್‌ರವರ "ಸ್ಕಲ್ಪಚರ್ ಆ್ಯಟ್ ವಿಜಯನಗರ, ಐಕೊನೋಗ್ರಫಿ" ಪುಟ ೩೪-೩೫.

ಗದ್ದುಗೆಯ ಮೇಲೆ ಕುಸ್ತಿ ಪಟುಗಳ ಉಬ್ಬು ಶಿಲ್ಪ

ಎಂ.ಎಂ. ಜಗತಾಪ*

ಕರ್ನಾಟಕ ರಾಜ್ಯದ ಉತ್ತರಭಾಗದಲ್ಲಿರುವ ಬಾದಾಮಿ ತಾಲೂಕಿನ ಗುಳೇದಗುಡ್ಡ ಹರದೊಳ್ಳಿ ಪ್ರದೇಶ ತನ್ನ ವಿಶೇಷತೆಯನ್ನು ಕಾಯ್ದುಕೊಂಡಿದೆ. ಈ ಹರದೊಳ್ಳಿ ಗ್ರಾಮದಲ್ಲಿ ಜೆಟ್ಟಿಗಳ ಉಬ್ಬುಶಿಲ್ಪವಿರುವ ಗದ್ದಿಗೆ ಕಾಣಲು ಸಿಗುತ್ತದೆ. ಪ್ರಸ್ತುತ ದಕ್ಷಿಣ ಭಾಗದ ಹಳ್ಳದ ಸಮೀಪದ ಭೀಮನಗೌಡ ಗೌಡರ ಹೊಲದಲ್ಲಿ ಇದೆ.

ಅಂದಾಜು ಮೂರು ಘೂಟು ಘನಾಕಾರದ ಕಲ್ಲಿನಲ್ಲಿ ನಿರ್ಮಿಸಿದ ಈ ಗದ್ದುಗೆಯ ಮುಖಭಾಗ ಅಂದರೆ ಇದು ಪೂರ್ವಕ್ಕೆ ಮುಖಮಾಡಿರುವ ಭಾಗದ ಮಧ್ಯದಲ್ಲಿ ಒಂದು ಅಲಂಕಾರಮಯ ಕಮಾನು, ಅದರ ಗಾತ್ರ ೮" ರಿಂದ ೧೦" ಇದೆ. ಆ ಮಾಡಿನ ಆಳ ಎರಡು ಅಥವಾ ಮೂರು ಇಂಚಿನಷ್ಟಿದೆ. ಆ ಮಾಡಿನ ಅಕ್ಕ ಪಕ್ಕದಲ್ಲಿ ಎರಡು ಜೆಟ್ಟಿಗಳ ಉಬ್ಬು ಶಿಲ್ಪ ನೋಡಬಹುದು. ಆ ಶಿಲ್ಪಗಳು ಹತ್ತರಿಂದ ಹನ್ನೊಂದು ಇಂಚು ಹಾಗೂ ಐದಾರು ಇಂಚು ಅಗಲವಾಗಿದೆ. ಆ ಜೆಟ್ಟಿಗಳು ಕುಳಿತ ಭಂಗಿ ನೋಡಿದರೆ ಮುಂಗಾಲು ಮೊಳಕಾಲುಗಳ ಮೇಲೆ ನಿಂತಿದ್ದನ್ನು ನಾವು ನೋಡುತ್ತೇವೆ. ಗದ್ದಿಗೆಯ ಮೇಲ್ಭಾಗ ಹಾಗೂ ಕೆಳಭಾಗದಲ್ಲಿ ಮೂರು ಇಂಚಿನ ದಪ್ಪ ಹಣಿಪಟ್ಟಿ ಕೆಳ ಪಟ್ಟಿಗಳು ನೋಡಲು ಸಿಗುತ್ತದೆ. ಈ ಗದುಗೆಯ ಮೇಲೆ ಈ ಜೆಟ್ಟಿಗಳು ಯಾರು? ಹಾಗೂ ಗದ್ದುಗೆಯ ಮೇಲೆ ಹೂವುಗಳ ಸಂಕೇತವೇನು ? ಆ ಜೆಟ್ಟಿಗಳು ಹಾಗೆ ಮೊಳಕಾಲಿನ ಮೇಲೆ ಕುಳಿತಿದ್ದು ಏಕೆ? ಎಂಬ ಪ್ರಶ್ನೆಗಳು ಉದ್ಭವಿಸುತ್ತದೆ.

ಏಕ ಶಿಲೆಯಲ್ಲಿ ಅಂದಾಜು ೪೧/೨ ನಿಂದ ೪' ಗಾತ್ರದ ಗಟ್ಟಿ ಬಿಳಿಕಲ್ಲಿನಲ್ಲಿ ನಿರ್ಮಾಣವಾದ ಈ ಐತಿಹಾಸಿಕ ಗದ್ದಿಗೆ ಭಾರತೀಯ ಸಂಪ್ರದಾಯಿಕ ಕಲೆಯಾದ ಕುಸ್ತಿಯನ್ನು ದಾಖಲಿಸುತ್ತದೆ.

ದುಂಡು ದುಂಡಾದ ಮೈಕಟ್ಟಿನ ಪುರುಷ ದೇಹಗಳು ಒಂದನ್ನೊಂದು ಶಕ್ತಿಯಿಂದ ಕಾದಾಡಿ ಬೆನ್ನು ನೆಲಕ್ಕೆ ಹತ್ತಿಸಿ ಅವನ ದೇಹದ ಮೇಲೆ ಗೆದ್ದವನು ದೇಹಕೂಡ್ರುವವರೆಗೆ ಕಾದಾಡುವದು ಒಂದು ಭಾರತೀಯ ಸಾಂಪ್ರದಾಯಿಕ ಕುಸ್ತಿಕಲೆಯಾಗಿದೆ. ಇದರ ಕಾಳಗ ಹಿಡಿತಗಳನ್ನು ನೋಡಿ ಆನಂದಿಸುವದೆ ಒಂದು ಭಾಗ್ಯ. ಮೈಮೇಲೆ ಸ್ವಲ್ಪ ಬಟ್ಟೆ "ಹನುಮಾನ ಚೆಡ್ಡಿ" ಎಂಬ ಹೆಸರಿನಿಂದ ಬಟ್ಟೆ ತೊಟ್ಟು ಇಡಿ ಜೀವನ ಗರಡಿ ಮನೆಯಲ್ಲಿ ವ್ಯಾಯಾಮ ಮಾಡುವುದು ಹಾಗೂ ಆಕಳು, ಎಮ್ಮೆಯ ಹಾಲು ಕುಡಿಯುವುದು ಶಕ್ತಿ ಕೊಡುವ ಆಹಾರ ಪದಾರ್ಥಗಳನ್ನು ತಿಂದು ಜಾತ್ರೆ ಹಬ್ಬ ಹರಿದಿನಗಳಲ್ಲಿ ಕುಸ್ತಿಕಲೆ ಪ್ರದರ್ಶಿಸುವುದು. ಇದರ ಸಂಕೇತವೇ ಈ ಗದ್ದುಗೆ ಆಗಿದೆ. ಇಬ್ಬರೂ ಜಟ್ಟಿಗಳು ಏಕಕಾಲಕ್ಕೆ ಮೃತರಾಗಿರಲೂಬಹುದು ಇಂದಿಗೂ ಊರಿನ ಹಾದಿಬಸವಣ್ಣನ ಗುಡ್ಡಿಯ ಹಿಂದಿನ ಹಳ್ಳದ ನಾಡಿನ ಇತಿಹಾಸದಲ್ಲಿ ದಾಖಲೆ ಯೋಗ್ಯವಾಗಿದೆ.

* ಚಿತ್ರ ಚೇತನ, ಶಿಕ್ಷಕರ ನಗರ, ಗುಳೇದಗುಡ್ಡ, ಬಾಗಲಕೋಟೆ ಜಿಲ್ಲೆ-೫೮೭೨೦೩. ಮೊ. ೯೩೪೧೧೭೨೯೧೮

೮೭

ಖೇಣಿಯವರ ಗೋದಾಮು ಕಟ್ಟಡದಲ್ಲಿನ ಭಿತ್ತಿ ಪತ್ರಗಳು

ಮಲ್ಲಿಕಾರ್ಜುನ ಸಿ. ಬಾಗೋಡಿ*

ಬೀದರ ಜಿಲ್ಲೆಯ ಹುಮನಾಬಾದ್ ತಾಲೂಕಿನ ಒಂದು ಸಣ್ಣ ಹಳ್ಳಿ ರಂಜೋಳ (ಖೇಣಿ). ಖೇಣಿಯವರದು ಗ್ರಾಮದಲ್ಲಿನ ಅತ್ಯಂತ ಶ್ರೀಮಂತ ಮನೆತನ. ಒಂದೊಮ್ಮೆ ರಂಜೋಳ ಹೆಸರಿನೊಟ್ಟಿಗೆ ಖೇಣಿ ಹೆಸರನ್ನು ಸೇರಿಸಿ ಕರೆಯುವಷ್ಟು ಈ ಮನೆತನ ಪ್ರಸಿದ್ಧಿಗೆ ಬರುತ್ತದೆ (ರಂಜೋಳ ಖೇಣಿಗೆ ರಂಚೇರಿ ಎಂತಲೂ ಕರೆಯುವ ವಾಡಿಕೆಯಿದೆ). ಶ್ರೀ ಮಡೆಪ್ಪ (ಮಡಿವಾಳಪ್ಪ ಎಂತಲೂ ಕರೆಯಲಾಗುವ ಈ ಹೆಸರು ಖೇಣಿ ಮನೆತನದಲ್ಲಿ ಪುನರಪಿಸಿವೆ) ಎನ್ನುವವರು ಈ ಮನೆತನದ ಹಿರಿಕರು, ಆದರೆ, ಇವರ ಪುತ್ರ ಮಹಾರುದ್ರಪ್ಪನವರಿಂದ ಈ ಮನೆತನ ತನ್ನ ಚರಿತ್ರೆಯನ್ನು ಕಟ್ಟಿಕೊಳ್ಳುತ್ತದೆ. ತಂದೆ ಮಡೆಪ್ಪನವರು ಮಗನಿಗೆ ಮನೆಯಲ್ಲೇ ಶಿಕ್ಷಣದ ವ್ಯವಸ್ಥೆಯನ್ನು ಮಾಡಿದ್ದು, ವೇದಮೂರ್ತಿ ಶಿವಯ್ಯ ಸ್ವಾಮಿಗಳವರು ವಿದ್ಯೆಯ ಜೊತೆಗೆ ವ್ಯಾಪಾರಿ ಶಿಕ್ಷಣದ ತಿಳುವಳಿಕೆ ನೀಡಿದರೆಂದು ಹೇಳಲಾಗುತ್ತದೆ.

ಮಹಾರುದ್ರಪ್ಪನವರು ವ್ಯಾಪಾರ ವಹಿವಾಟಿನಲ್ಲಿ ಸಾಕಷ್ಟು ಹೆಸರು ಮಾಡುತ್ತಾರೆ. ರಂಜೋಳ ಹೊರತಾಗಿ ಹಳ್ಳಿಖೇಡ (ಬಿ), ಸಿತಾಳಗೇರಿ, ಚಳಕಾಪುರ, ಜಹಿರಾಬಾದ, ಹೈದರಾಬಾದ್; ಹೀಗೆ ಅನೇಕ ಕಡೆ ಆಸ್ತಿ-ಪಾಸ್ತಿ ಸಂಪಾದಿಸುತ್ತಾರೆ. ತಮ್ಮ ವ್ಯಾಪಾರ-ವಹಿವಾಟುಗಳಿಂದಾಗಿಯೇ ನಿಜಾಮ ರಾಜ್ಯದಲ್ಲಿ ಹೆಸರು ಮಾಡುತ್ತಾರೆ. ತನ್ಮೂಲಕ ನಿಜಾಮ ರಾಜ್ಯದೊಂದಿಗೆ ವಿಶೇಷ ನಂಟನ್ನೂ ಇವರು ಹೊಂದುತ್ತಾರೆ (ಕ್ರಿ.ಶ. ೧೯೦೧ರಲ್ಲಿ ಆಗಿನ ಹೈದರಾಬಾದಿನ ನಿಜಾಮನು ಕಲಬುರಗಿಯ ಶ್ರೀ ಶರಣಬಸವೇಶ್ವರ ದೇವಸ್ಥಾನಕ್ಕೆ ಭೇಟಿಯಿತ್ತಾಗ ಕ್ಲಿಕ್ಕಿಸಿಕೊಂಡ ಛಾಯಾಚಿತ್ರದಲ್ಲಿ ಮಹಾರುದ್ರಪ್ಪನವರನ್ನು ಕಾಣಬಹುದು).

ಹೈದರಾಬಾದ ನಿಜಾಮ್ ರಾಜ್ಯದೊಂದಿಗಿನ ಒಡನಾಟದಿಂದಾಗಿ ಮಹಾರುದ್ರಪ್ಪನವರು ನಿಜಾಮ್ ರಾಜ್ಯದಲ್ಲಿನ ಕಟ್ಟಡ ವಿನ್ಯಾಸವುಳ್ಳ ಹಾಗೆ ರಂಜೋಳದಲ್ಲಿ ಭವ್ಯವಾದ ಮನೆಯನ್ನು ಕಟ್ಟಿಸಿಕೊಳ್ಳುತ್ತಾರೆ. ವಾಸ್ತವದಲ್ಲಿ ಈ ಮನೆಯನ್ನು ಮಡೆಪ್ಪನವರ ಕಾಲದಲ್ಲಿ ಕಟ್ಟಲಾಗಿದೆ ಎನ್ನಲಾಗುತ್ತಿದ್ದರೂ, ಮಹಾರುದ್ರಪ್ಪನವರ ಕಾಲದಲ್ಲಿ ಈ ಮನೆ ಹೆಚ್ಚಿನ ಅಲಂಕರಣೆ ಪಡೆದುಕೊಂಡಿತು ಎನ್ನಲಾಗಿದೆ. ಮನೆಯ ಹಜಾರಕ್ಕೆ ಬಳಸಲ್ಪಟ್ಟ ಕಂಬಗಳನ್ನು ಬರ್ಮಾದಿಂದ ತರಲಾಗಿರುವ ಕಟ್ಟಿಗೆಯಲ್ಲಿ ನಿರ್ಮಿಸಲಾಗಿದ್ದು, ಇದರಲ್ಲಿ ಅಪೂರ್ವ ಕೆತ್ತನೆ ಕಾಣಿಸಿಕೊಂಡಿವೆ.

ಬೀದರ ಜಿಲ್ಲೆಯ ದುಬಲಗುಂಡಿ ಗ್ರಾಮದ ಫತ್ತೇಪುರೆ ಶರಣಪ್ಪನವರು, ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದ ರೇಷ್ಮೆ ಕಲ್ಲಪ್ಪನವರು, ಝಳಕಿ ಸಾತಪ್ಪನವರು, ಯಾದಗಿರಿ ಸಮೀಪದ ಲಿಂಗೇರಿ ಕೋನಪ್ಪನವರು, ರಾಯಚೂರಿನ ಖಾಜನಗೌಡರು; ಇವರೆಲ್ಲರು ಸಮಕಾಲೀನ ಶ್ರೀಮಂತರೆನಿಸಿಕೊಂಡಿದ್ದರು, ಪರಸ್ಪರ ಸ್ನೇಹ ಸಂಬಂಧ ಹೊಂದಿದವರಾಗಿದ್ದರು ಈ ಕಾರಣಕ್ಕಾಗಿಯೇ ಏನೋ ಈ ಎಲ್ಲರ ಮನೆಗಳ ಕಟ್ಟಡ ವಿನ್ಯಾಸಗಳಲ್ಲಿ ಸಾಮ್ಯತೆ ಕಂಡುಬರುತ್ತದೆ.

ದೀನ ದಲಿತರಿಗೆಂದು ಸಾಕಷ್ಟು ಜನಪರ ಕೆಲಸಗಳನ್ನು ಮಾಡಿದ್ದಾರೆ. ಉಚಿತವಾಗಿ ಸಾಮೂಹಿಕ ಮದುವೆಗಳನ್ನು ಏರ್ಪಡಿಸಿಕೊಂಡು ಬಂದಿರುವುದು ಮಹಾರುದ್ರಪ್ಪನವರು ಮಾಡಿರುವ ಜನಪರ ಕೆಲಸಗಳಲ್ಲಿ ಅತ್ಯಂತ ಮಹತ್ವದ್ದು. ಮದುವೆ ಸಂದರ್ಭದಲ್ಲಿ ವಧುವಿನ ಕಾಲುಂಗುರ ಮಾಡಿಕೊಡುವ ಸಲುವಾಗಿ ಆ ಕುಟುಂಬಕ್ಕೆ ಸುಮಾರು ಇಪ್ಪತ್ತು ಎಕರೆಯಷ್ಟು ಭೂಮಿಯನ್ನು ದೇಣಿಗೆಯನ್ನಾಗಿ ನೀಡಿರುವ ಸಂಗತಿ ಇಲ್ಲಿನ ಹಿರಿ ತಲೆಗಳಲ್ಲಿನ್ನೂ ಮಾಸಿಲ್ಲ. ಹಾಗಾಗಿಯೇ ಮಹಾರುದ್ರಪ್ಪನವರನ್ನು ದಾನಶೂರ, ಕೊಡುಗೈ ದೊರೆ ಎಂತೆಲ್ಲ ಜನ ಕರೆಯುತ್ತಿದ್ದರು. ಮಹಾರುದ್ರಪ್ಪನವರ ವಂಶಸ್ಥರು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಕಟ್ಟಿಗೆಯಲ್ಲಿ ಮಾಡಲಾಗಿರುವ ದಾನದ ಕೈಯನ್ನು ಖೇಣಿಯವರ ಮನೆಯಲ್ಲಿ ಇಂದಿಗೂ ನೋಡಬಹುದಾಗಿದೆ.

ಮಹಾರುದ್ರಪ್ಪನವರಿಗೆ ಮಡಿವಾಳಪ್ಪ ಎನ್ನುವ ಪುತ್ರನಿದ್ದು, ಇವರಿಗೆ ಶಂಕರ, ನೂರೊಂದಪ್ಪ, ಗುರುಬಸಪ್ಪ, ನರೇಂದ್ರ ಎನ್ನುವ ನಾಲ್ಕು ಜನ ಗಂಡುಮಕ್ಕಳು, ಪ್ರಸ್ತುತ ಗೋದಾಮು ಕಟ್ಟಡ ಗುರುಬಸಪ್ಪನವರ ಒಡೆತನಕ್ಕೆ ಸೇರಿದೆ. ಗುರುಬಸಪ್ಪನವರ

---

* ಅಧ್ಯಾಪಕರು, ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿವಿ, ಕಲಬುರಗಿ. ಮೊ. ೯೪೪೮೬೫೨೧೫೭

ಪರಿವಾರ ಹಳ್ಳಿಖೇಡ (ಬಿ) ಸಮೀಪದ ಸಿತಾಳಗೇರಿಯಲ್ಲಿ ನೆಲೆಗೊಂಡಿದ್ದು, ಇವರಿಗೆ ಸಂಜಯ ಮತ್ತು ಶೈಲೇಶ ಎಂಬಿಬ್ಬರು ಗಂಡು ಮಕ್ಕಳಿದ್ದಾರೆ.

ಮೂರಂತಸ್ತಿನ ಗೋದಾಮು ಕಟ್ಟಡ (ಅಡತ್ ಅಂಗಡಿ ಎಂತಲೂ ಕರೆಯಲಾಗುತ್ತದೆ) ಉತ್ತರಾಭಿಮುಖವಾಗಿ ಕಟ್ಟಲ್ಪಟ್ಟಿದ್ದು, ಎದುರಿಗೆ ಕಮಾನು ಮಾದರಿಯ ಐದು ಅಂಕಣಗಳನ್ನು ಹೊಂದಿದೆ. ಹಿಂಬದಿಯಲ್ಲಿ ಮೂರು ಅಂಕಣಗಳಿಂದ ವಿಸ್ತರಣೆಗೊಳ್ಳುವ ಈ ಕಟ್ಟಡ ಒಟ್ಟು ೨೪ ಕಂಬಗಳನ್ನು ಹೊತ್ತು ನಿಂತಿದೆ. ತೀರ ಹಿಂಬದಿಯಲ್ಲಿ ಐದೂ ಅಂಕಣಕ್ಕೆ ಹೊಂದಿಕೊಂಡಂತೆ ವಿಶಾಲವಾದ ಧಾನ್ಯಸಂಗ್ರಹ ಕೋಣೆಯೊಂದನ್ನು ಮಾಡಲಾಗಿದೆ. ಕಟ್ಟಡದ ಮೂರು ಅಂತಸ್ತಿಗೆ ಇದು ವಿಸ್ತರಣೆಗೊಂಡಿದೆ.

೧೮೭೦-೮೦ರ ದಶಕದಲ್ಲಿ ಮಹಾರುದ್ರಪ್ಪನವರ ಕಾಲದಲ್ಲೇ ಈ ಕಟ್ಟಡ ನಿರ್ಮಾಣಗೊಳ್ಳುತ್ತದೆ. ಕಾಳುಕಡಿ ಸಂಗ್ರಹ ಮತ್ತು (ಗೋದಾಮು) ಕಛೇರಿಗೆಂದು ನಿರ್ಮಿಸಿರುವ ಕಾರಣಕ್ಕೆ ಕಟ್ಟಡದ ಒಳಾವರಣ ಗೋಡೆಗಳನ್ನು ಮಣ್ಣಿನ ಭಿತ್ತಿಯಿಂದ ನುಣುಪಾಗಿಸಿದೆ. ನೆಲಮಹಡಿ ಮತ್ತು ಮೇಲಂತಸ್ತು ಕಂಬ-ಬೋದಿಗೆ ಜೋಡಣೆಯ ಅಂಕಣವುಳ್ಳ ಪಡಸಾಲೆ ಮಾದರಿಯಲ್ಲಿದೆ (ಕಟ್ಟಿಗೆಯ ಈ ಕಂಬಗಳಲ್ಲಿ ವಿಶೇಷ ಕೆತ್ತನೆ ಕಂಡುಬರುವುದಿಲ್ಲ). ಪೂರ್ವ ದಿಕ್ಕಿನ ಮೂರು, ಪಶ್ಚಿಮ ದಿಕ್ಕಿನ ಮೂರು ಹಾಗೂ ಉತ್ತರ ದಿಕ್ಕಿನ ಐದು ಅಂಕಣಗಳ ಮಧ್ಯೆ ಇರುವ ಗೋಡೆಗಳ ತುಂಬೆಲ್ಲ ಚಿತ್ರಗಳನ್ನು ಬರೆಯಲಾಗಿದೆ. ಗೋಡೆ ಸೇರಿದಂತೆ ಕಿಟಕಿ-ಮಾಡುಗಳ ಸುತ್ತಲೂ ಬರೆಯಲಾದ ಹೂ-ಬಳ್ಳಿ, ಅಲಂಕಾರಿಕ ವಿನ್ಯಾಸಗಳು ವಿಶೇಷ ಗಮನ ಸೆಳೆಯುತ್ತವೆ. ಈ ಎಲ್ಲ ರಚನೆಗಳ ಹಿನ್ನೆಲೆಯಾಗಿ ಎರಡೂ ಅಂತಸ್ತಿಗೆ ಹಳದಿ ವರ್ಣ ಪ್ರಮುಖ ಪಾತ್ರವಹಿಸಿದೆ. ತೀರ ಮೇಲಂತಸ್ತಿನ ಗೋಡೆಗಳ ಮೇಲೆ ಭಿತ್ತಿ ಲೇಪನವೂ ಇಲ್ಲ, ಚಿತ್ತ ರಚನೆಯೂ ಮಾಡಲಾಗಿಲ್ಲ.

ಕಟ್ಟಡ ಪೂರ್ಣಗೊಂಡ ಒಂದೆರಡು ದಶಕಗಳಲ್ಲೇ ಈ ಚಿತ್ರಗಳನ್ನು ಬರೆಯಲಾಗಿದೆ ಎಂದು ಹೇಳಲಾಗುತ್ತದೆ. ಕೆಂಪು, ನೀಲಿ, ಹಸಿರು ವರ್ಣಗಳಲ್ಲಿ ಪ್ರಧಾನವಾಗಿ ಬಳಸಿದೆ. ಅಗತ್ಯ ಎನಿಸಿದಲ್ಲಿ ಬಂಗಾರ ವರ್ಣ ಮತ್ತು ಬಿಳಿ ವರ್ಣಗಳನ್ನು ಮಿಶ್ರವರ್ಣಗಳಾಗಿ ಬಳಸಿದೆ. ಇಲ್ಲಿನ ಹೂಬಳ್ಳಿ ವಿನ್ಯಾಸಗಳು ಚಿತ್ತಾಪುರ ಪಟ್ಟಣದ ಜಗನ್ನಾಥ ಅವರ ಮನೆಯಲ್ಲಿನ ಚಿತ್ರ ವಿನ್ಯಾಸಗಳನ್ನು ಹೋಲುತ್ತವೆ. ಜಗನ್ನಾಥ ಅವರ ಮನೆಯಲ್ಲಿನ ಚಿತ್ರಗಳು ಕಟ್ಟಿಗೆಯ ಫಲಕಗಳ ಮೇಲೆ ಬರೆಯಲಾಗಿದ್ದರೆ, ಖೇಣಿಯವರ ಗೋದಾಮಿನಲ್ಲಿನ ಚಿತ್ರಗಳು ಮಣ್ಣಿನ ಭಿತ್ತಿ ಲೇಪಿತ ಗೋಡೆಗಳ ಮೇಲೆ ಬರೆಯಲಾಗಿದೆ. ಉಳಿದಂತೆ ವಿನ್ಯಾಸ ರೂಪಿಸುವಲ್ಲಾಗಲಿ, ವರ್ಣ ಬಳಕೆಯಲ್ಲಾಗಲಿ ಹೆಚ್ಚಿನ ಬದಲಾವಣೆ ಕಂಡುಬರುವುದಿಲ್ಲ. ಹೂಕುಂಡ, ಹೂ-ಬಳ್ಳಿ ಸೇರಿದಂತೆ ಮಾಡು, ಕಿಟಕಿಗಳ ಸುತ್ತಲೂ ಇರುವ ವಿನ್ಯಾಸಗಳ ಕೆಳಭಾಗದಲ್ಲಿ (ನೆಲಭಾಗದಿಂದ ಪ್ರಾರಂಭಿಸಲಾಗಿರುವ) ಮಾಡಿಕೊಳ್ಳಲಾಗಿರುವ ಆಯತಾಕಾರದ ಪಟ್ಟಿಕೆಗಳು ಮಿಶ್ರಿತ ನೀಲ ವರ್ಣದಲ್ಲಿದ್ದು, ಒಳಗೆ ಯಾವುದೇ ತೆರನಾದ ಆಕಾರಗಳನ್ನು ಸೃಜಿಸಿಲ್ಲ.

ಮೂರೂ ಬದಿಯ ಗೋಡೆಗಳಲ್ಲಿ ಅಂಕಣಗಳಾಗಿ ರೂಪಿಸಿಕೊಳ್ಳಲು ಮಾಡಲಾಗಿರುವ ಉಬ್ಬು ಮಾದರಿಯ ಗಾರೆನಿರ್ಮಿತಿ ಕಂಬಗಳು ಮತ್ತು ಚಿತ್ರ ರಚನೆಗೆಂದು ಮಾಡಿಕೊಳ್ಳಲಾಗಿರುವ ಅವಕಾಶ ಪಟ್ಟಿಕೆಗಳು ಸೇಡಮ್ ಶಿವಶಂಕರ ಮಠದಲ್ಲಿನ ಗಾರೆ ನಿರ್ಮಿತಿ ಕಂಬ-ಪಟ್ಟಿಕೆಗಳನ್ನು ಹೋಲುತ್ತವೆ. ಖೇಣಿ ಮನೆಯವರು ಸೇಡಮ್ ಶಿವಶಂಕರ ಮಠದ ಶಿಷ್ಯ ಪರಂಪರೆಗೆ ಸೇರಿದವರಾಗಿದ್ದನ್ನು ಗಮನಿಸಿದರೆ, ಸೇಡಮ್ ಮಠದಲ್ಲಿನ ಚಿತ್ರಗಳು ಮತ್ತು ಗೋದಾಮು ಕಟ್ಟಡದಲ್ಲಿನ ಚಿತ್ರಗಳನ್ನು ಒಂದೇ ಕುಟುಂಬದವರು ಬರೆದಿರಬಹುದಾದ ಸಾಧ್ಯತೆಗಳಿವೆ. ಸೇಡಮ್ ಮಠದಲ್ಲಿ ನೆಲದಿಂದ ಮೂರಡಿ ಎತ್ತರದ ಪಟ್ಟಿಕೆಗಳಲ್ಲಿ ಮತ್ತು ಮಾಡು-ಕಿಟಕಿಗಳ ಸುತ್ತಲೂ ಚಿತ್ರಗಳನ್ನು ಬರೆಯಲಾಗಿದ್ದರೆ, ಖೇಣಿಯವರ ಗೋದಾಮು ಕಟ್ಟಡದಲ್ಲಿ ನೆಲ ಹಂತದಿಂದ ಪ್ರಾರಂಭಿಸಿ ಗೋಡೆಯ ಮೇಲ್ತುದಿವರೆಗೂ ಚಿತ್ತಾರಗಳನ್ನು ಬರೆಯಲಾಗಿದೆ.

ಚಿತ್ರ ರಚನೆಯ ಹಿನ್ನೆಲೆ: ೧೮-೧೯ನೇ ಶತಮಾನದ ಹೊತ್ತಿಗೆ, ಪ್ರೋತ್ಸಾಹ-ಪೋಷಕತ್ವದ ಕೊರತೆಯಿಂದಾಗಿಯೋ ಏನೋ ? ಇಲ್ಲಿನ ಕಲಾ ಚಟುವಟಿಕೆಗಳಲ್ಲಿ ಮೌನ ಆವರಿಸಿಕೊಳ್ಳುತ್ತದೆ. ಅಷ್ಟೊತ್ತಿಗೆ ಅರಸೊತ್ತಿಗೆಯ ನೆರವೂ ಸಹ ಆಶ್ರಿತ ಕಲಾವಿದ ಕುಟುಂಬಗಳಿಗೆ ದೂರವಾಗುತ್ತ ಹೋಗುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಭಾಗದ ಅದೆಷ್ಟೋ ಕಲಾವಿದ ಕುಟುಂಬಗಳು ಮರಾಠಾ ವಲಯದತ್ತ ಮುಖ ಮಾಡಿ ಅಲ್ಲಿಗೆ ವಲಸೆ ಹೋಗುತ್ತವೆ.

ಉದರ ಪೋಷಣೆ, ಕುಟುಂಬ ನಿರ್ವಹಣೆ, ಬದುಕಿನ ಅನಿವಾರ್ಯತೆಗಾಗಿ ಬೇರೊಂದು ಪ್ರದೇಶದಲ್ಲಿ ನೆಲೆ ಕಂಡುಕೊಳ್ಳಲು ಹೊರಟ ಈ ಕಲಾವಿದ ಕುಟುಂಬಗಳು ಬೆಳಗ್ಗೆಯಿಂದ ಸಂಜೆವರೆಗೆ ಸಂಚಾರಗೈಯುತ್ತ ರಾತ್ರಿಯ ಹೊತ್ತು ಊರ ಹೊರಗೆ ಇಲ್ಲವೆ ಮಠ-ಮಂದಿರಗಳಲ್ಲಿ ವಾಸ್ತವ್ಯ ಹೂಡಿ ಮರುದಿನ ಎಂದಿನಂತೆ ತಮ್ಮ ಪಯಣ ಮುಂದುವರಿಸುವುದು














ಸಾಮಾನ್ಯವಾಗುತ್ತದೆ. ಹೀಗೆ ಬೇರೊಂದು ಕಡೆ ಸಂಚಾರ ಹೊರಟ ಕಲಾವಿದ ಕುಟುಂಬಗಳ ದುಸ್ಥಿತಿಯನ್ನು ಮನಗಂಡ ಹೈ-ಕ ನಾಡಿನ ಕೆಲ ಸಿರಿವಂತರು, ಅಧಿಕಾರಿ ವರ್ಗದವರು (ದೇಸಾಯಿ, ದೇಶಮುಖ, ಗೌಡ-ಕುಲಕರ್ಣಿ ಮತ್ತಿತರ ಅಧಿಕಾರಿ ವಲಯ), ಮಠಾಧೀಶರು ಈ ಕಲಾವಿದ ಕುಟುಂಬಗಳಿಗೆ ವಾಸ್ತವ್ಯಕ್ಕೆ ಅನುಕೂಲ ಒದಗಿಸಿದ್ದಲ್ಲದೇ ಅವರ ಹಸಿವನ್ನು ನೀಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ತಮ್ಮ ಹಸಿವನ್ನು ನೀಗಿಸಿದ ಸಿರಿವಂತ ಪೋಷಕರು ಮತ್ತು ಮಠಾಧೀಶರಿಗೆ ಸಂಚಾರಿ ಕಲಾವಿದ ಕುಟುಂಬಗಳು ಋಣಭಾರ ತೀರಿಸುವ ನೆಪದಲ್ಲಿ ಸಿರಿವಂತರ ಮನೆ-ಮಹಲು ಸೇರಿದಂತೆ ಮಠ-ಮಂದಿರಗಳಲ್ಲಿ ತಮ್ಮ ಕಲಾ ಕಾಯಕವನ್ನು ಮಾಡಿಕೊಂಡು ಬಂದಿದ್ದಾರೆ. ಹೈದರಾಬಾದ್-ಕರ್ನಾಟಕ ಮತ್ತು ಮುಂಬೈ-ಕರ್ನಾಟಕ ವಲಯದಲ್ಲಿ ಸುಮಾರು ಆರೇಳು ದಶಕಗಳ ಕಾಲ ಈ ವ್ಯವಸ್ಥೆ ಮುಂದುವರಿದಂತೆ ತೋರುತ್ತದೆ.

ಈಗಿನ ತೆಲಂಗಾಣ ಸೀಮೆಯಿಂದ ಪ್ರಾರಂಭಗೊಂಡು ಹೈದರಾಬಾದ್-ಕರ್ನಾಟಕ ಮತ್ತು ಮುಂಬೈ-ಕರ್ನಾಟಕ ಭಾಗದ ಅದೆಷ್ಟೋ ಸಿರಿವಂತರ ಮನೆ-ಮಹಲುಗಳಲ್ಲಿ, ಮಠ-ಮಂದಿರಗಳಲ್ಲಿ ಭಿತ್ತಿ ಚಿತ್ರಗಳು ಕಾಣಿಸಿಕೊಂಡಿದ್ದು, ಮೇಲಿನ ವ್ಯವಸ್ಥೆಗೆ ನಿದರ್ಶನವೆನ್ನಬಹುದು.

ಪ್ರಸ್ತುತ ಶ್ರೇಣಿಯವರ ಗೋದಾಮು ಕಟ್ಟದಲ್ಲಿನ ಚಿತ್ರಗಳೂ ಇಂಥದೇ ವ್ಯವಸ್ಥೆಯಡಿ ಚಿತ್ರಣಗೊಂಡಿವೆ. ದಿನವಿಡೀ ರಸ್ತೆ ಮಾರ್ಗ ಸಾಗಿ ರಾತ್ರಿ ತಂಗಲು ಸ್ಥಳ ಹುಡುಕುತ್ತಿರಬೇಕಾದರೆ ಮುನೀಮನೋರ್ವ (ಈಗಿನ ಮುನೀಮ ಸಂಗಪ್ಪನವರು ಹೇಳುವ ಹಾಗೆ) ಕಲಾವಿದ ಕುಟುಂಬಕ್ಕೆ ಗೋದಾಮು ಕಟ್ಟಡದಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿಕೊಡುತ್ತಾನೆ. ಇದೊಂದು ರೀತಿಯಲ್ಲಿ ಆ ಕುಟುಂಬಕ್ಕೆ ಋಣಭಾರವೆಂದು ಕಾಡಿರುವ ಕಾರಣಕ್ಕೆ ಮಾಲೀಕರನ್ನು ಸಂಪರ್ಕಿಸಿ ಗೋದಾಮು ಕಟ್ಟಡದ ನೆಲಮಹಡಿ ಮತ್ತು ಮೇಲಂತಸ್ತಿನ ಗೋಡೆಗಳು, ಮಾಡು-ಕಿಟಕಿಗಳ ಸುತ್ತಲೂ ಉಬ್ಬು ಮಾದರಿಯ ವಿನ್ಯಾಸಗಳನ್ನು ರೂಪಿಸಿ ಬಹು ವರ್ಣಗಳ ಚಿತ್ತಾರಗಳನ್ನು ಬರೆಯುತ್ತಾರೆ.

ಕೇವಲ ಒಂದು ರಾತ್ರಿ ತಂಗಲು ಬಂದಿದ್ದ ವಲಸೆ ಕುಟುಂಬವೊಂದು ಹದಿನೈದು ದಿನಗಳಿಗೂ ಹೆಚ್ಚು ಕಾಲ ಇಲ್ಲಿದ್ದುಕೊಂಡು ಗೋದಾಮು ಕಟ್ಟಡವನ್ನು ಅಲಂಕರಿಸಿದರು ಎಂದು ತಿಳಿದುಬರುತ್ತದೆ.





ಗೋದಾಮು ಕಟ್ಟಡ ನಿರ್ಮಾಣಗೊಂಡು ಶತಮಾನವೇ ಗತಿಸಿದೆ. ಎರಡನೇ ಅಂತಸ್ತಿನ ಹೊರಭಾಗದಲ್ಲಿ ಮುಚ್ಚಿಗೆಗಳನ್ನು ಮಾಡಲಾಗಿತ್ತಾದರೂ ತುಕ್ಕು ಹಿಡಿದಿದ್ದರಿಂದ ಅವುಗಳನ್ನು ತೆಗೆಯಲಾಗಿದೆ. ಇಷ್ಟನ್ನು ಹೊರತುಪಡಿಸಿದರೆ ಗೋದಾಮು ಕಟ್ಟಡಕ್ಕೆ ಹೆಚ್ಚಿನ ಹಾನಿಯೇನೂ ಆಗಿರಲಿಲ್ಲ.

ಚಿತ್ರಗಳ ಅವನತಿ : ಕರ್ನಾಟಕ ಇತಿಹಾಸ ಅಕಾದೆಮಿಯ ೩೧ನೇ ವಾರ್ಷಿಕ ಸಮ್ಮೇಳನದಲ್ಲಿ ಈ ಚಿತ್ರಗಳ ಬಗೆಗೆ ಪ್ರಬಂಧ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದೆ. ಈ ವೇಳೆ ಗೋದಾಮು ಕಟ್ಟಡ ಸೇರಿದಂತೆ ಒಳಗಿನ ಭಿತ್ತಿ ಚಿತ್ರಗಳು ಚೆನ್ನಾಗಿಯೇ ಇದ್ದವು. ಆದರೆ, ಕಟ್ಟಡದ ತೀರ ಮೇಲಂತಸ್ತಿನ ಮಾಳಿಗೆಯಲ್ಲಿ ನೀರು ಜಿನುಗುತ್ತಿರುವುದರಿಂದ ಎರಡನೇ ಅಂತಸ್ತು ಭಾರವೆನಿಸಿತ್ತು. ಹಾಗಾಗಿ ಕಟ್ಟಡವನ್ನು ಕೆಡವಿ–ಅಲ್ಲೊಂದು ಕಛೇರಿಯನ್ನು ನಿರ್ಮಿಸಲಾಗುತ್ತದೆ ಎನ್ನುವ ವಿಷಯ ಶ್ರೀಯುತ ಜಯಚಂದ್ರ (ಗೋದಾಮು ಕಟ್ಟಡದ ಎದುರಿಗೆ ಫೋಟೊ ಸ್ಟುಡಿಯೋವೊಂದನ್ನು ನಡೆಸುತ್ತಾರೆ) ಅವರಿಂದ ಕೇಳಿ ತಿಳಿದೆ.

ಈ ಹಿಂದೆ (೨೦೧೦ ಜನವರಿ ೧೭ರಂದು) ನಾನು ಹಳ್ಳಿಖೇಡ (ಬಿ) ಗ್ರಾಮಕ್ಕೆ ಕ್ಷೇತ್ರಕಾರ್ಯ ಕೈಗೊಂಡು ಗೋದಾಮು ಕಟ್ಟಡ ಮತ್ತು ಅಲ್ಲಿನ ಭಿತ್ತಿ ಚಿತ್ರಗಳನ್ನು ಛಾಯಾಚಿತ್ರ ಮಾಡಿಕೊಂಡಿದ್ದೆ. ವಿಡಿಯೋ ಮಾಡಿಕೊಳ್ಳಲೆಂದು ೨೦೧೮ ಜೂನ್ ೨೩ರಂದು ಪುನಃ ಹಳ್ಳಿಖೇಡ (ಬಿ) ಗ್ರಾಮಕ್ಕೆ ಭೇಟಿಯಿತ್ತೆ. ಈ ವೇಳೆ ನನಗೆ ಅಚ್ಚರಿಯೊಂದು ಕಾದಿತ್ತು. ಗೋದಾಮು ಕಟ್ಟಡವನ್ನು ಕೆಡವಲಾಗಿದ್ದು, ಮೂರಂತಸ್ತಿನ ಎತ್ತರವಾದ ಹೊರಗೋಡೆ ಮಾತ್ರ ಉಳಿದುಕೊಂಡಿತ್ತು. ಈ ಗೋಡೆಗಳ ಮೇಲೆಯೇ ಚಿತ್ರಗಳನ್ನು ಬರೆಯಲಾಗಿದೆ. ಕಟ್ಟಡ ಕೆಡವಿ ಆರೇಳು ತಿಂಗಳು ಗತಿಸಿದ್ದರಿಂದ ಮಳೆ, ಗಾಳಿ, ಬಿಸಿಲಿನಿಂದಾಗಿ ಗೋಡೆಗಳ ಮೇಲಿನ ಭಿತ್ತಿ ಲೇಪನ ಕಳಚಿ ಬಿದ್ದಿದ್ದು, ಬಣ್ಣಗಳು ಉದುರುತ್ತಲಿದ್ದವು. ಗೋದಾಮು ಕಟ್ಟಡ ಮತ್ತು ಚಿತ್ರಗಳ ಈಗಿನ ಸ್ಥಿತಿಯ ವಿವಿಧ ಕೋನಗಳನ್ನು ಕ್ಯಾಮೆರಾದಲ್ಲಿ ಕ್ಲಿಕ್ಕಿಸಿಕೊಂಡೆ.

೮೮

ಹುಕ್ಕೇರಿಯ ಗುಮ್ಮಟಗಳ ಒಳಭಿತ್ತಿ ಅಲಂಕಾರ

ಶ್ರೀಶೈಲ ಮನಗುತ್ತಿ*

ಕರ್ನಾಟಕದ ಬೆಳಗಾವಿ ಜಿಲ್ಲೆಯ ಹುಕ್ಕೇರಿಯು ವಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಹೂವಿನಕೇರಿಯಾಗಿತ್ತು. ಹೂವಿನಕೇರಿಯಿಂದ ವಿಜಾಪುರದ ಸುಲ್ತಾನರಿಗೆ ಉತ್ಕೃಷ್ಟ ದರ್ಜೆಯ ಗುಲಾಬಿ ಹೂಗಳು ರವಾನೆಯಾಗುತ್ತಿದ್ದವು. ಹುಕ್ಕೇರಿಯು ಪ್ರಮುಖವಾಗಿ ವಿಜಾಪುರದ ಆದಿಲ್‌ಶಾಹಿಗಳು, ಮರಾಠರು, ಸೌಂದತ್ತಿಯ ರಟ್ಟರು, ಮುಧೋಳದ ಘೋರ್ಪಡೆ, ವಂಟಮುರಿಯ ದೇಸಾಯಿಯವರ ಆಳ್ವಿಕೆಗೆ ವಿಭಿನ್ನ ಕಾಲಘಟ್ಟದಲ್ಲಿ ಒಳಪಟ್ಟಿತ್ತು.

ಹುಕ್ಕೇರಿಯು ತಾಲೂಕಾ ಕೇಂದ್ರವಾಗಿದ್ದು, ಬೆಳಗಾವಿಯಿಂದ ಈಶಾನ್ಯ ದಿಕ್ಕಿನಲ್ಲಿ ೫೦ ಕಿ.ಮೀ. ಅಂತರದಲ್ಲಿದೆ. ಇಲ್ಲಿಯ ಗಾಂಧಿನಗರದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಾಣವಾದ ಮೂರು ಭವ್ಯ ಗುಮ್ಮಟಗಳಿವೆ. ಈ ಮೂರೂ ಗುಮ್ಮಟಗಳು ಒಂದೇ ಸಾಲಿನಲ್ಲಿದ್ದರೂ ಒಂದರ ನೆರಳು ಇನ್ನೊಂದರ ಮೇಲೆ ಬೀಳದಂತೆ ನಿರ್ಮಿಸಿರುವುದು ಅಂದಿನ ಇಂಡೋ-ಸಾರ್ಸೆನಿಕ್ ವಾಸ್ತುಶೈಲಿಯ ಅದ್ಭುತಕ್ಕೆ ನಿದರ್ಶನವಾಗಿದೆ. ಈ ಮೂರು ಗುಮ್ಮಟಗಳ ವಾಯುವ್ಯ ದಿಕ್ಕಿಗೆ ಒಂದು ಪುಟ್ಟ ಕೆರೆ ಇದೆ. ಇತ್ತೀಚಿಗೆ ಲೋಕೋಪಯೋಗಿ ಇಲಾಖೆಯಿಂದ ಜೀರ್ಣೋದ್ಧಾರಗೊಳ್ಳುತ್ತಿರುವ ಪಶ್ಚಿಮಭಾಗದ ಗುಮ್ಮಟದ ಮುಂಭಾಗದಲ್ಲಿ ಕರೀಮ ಬಾಷಾನ ದರ್ಗಾ ಇದೆ. ಪಶ್ಚಿಮ ಮತ್ತು ಮಧ್ಯಭಾಗದಲ್ಲಿರುವ ಗುಮ್ಮಟಗಳು ಮಾತ್ರ ಮೂರೂವರೆ ಅಡಿ ಎತ್ತರದ ವೇದಿಕೆಯ ಮೇಲೆ ನಿರ್ಮಾಣಗೊಂಡಿವೆ.

ಗುಮ್ಮಟಗಳ ರಚನೆ ಮತ್ತು ವಿನ್ಯಾಸ

೧. ಪಶ್ಚಿಮದ ಗುಮ್ಮಟ: (ಅಗಲ ೩೫ ಅಡಿ, ಉದ್ದ ೩೫ ಅಡಿ, ಎತ್ತರ ೫೦ ಅಡಿ)



ಪಶ್ಚಿಮದ ಗುಮ್ಮಟವನ್ನು ೧೭ನೇ ಶತಮಾನದ ಪೂರ್ವಾರ್ಧದಲ್ಲಿ ರುಸ್ತುಮ್ ಝಮಾ, ರಣದುಲ್ಲಾಖಾನ್ ಎಂಬುವವರು ನಿರ್ಮಿಸಿದ್ದಾರೆ. ಇದಕ್ಕೆ ಚೀನಿ ಗುಮ್ಮಟ ಎಂದೂ ಕರೆಯುತ್ತಾರೆ. ಈ ಗುಮ್ಮಟವನ್ನು ಸಮಾಧಿಗಾಗಿಯೇ ನಿರ್ಮಾಣ ಮಾಡಿದ್ದರೂ ಅಲ್ಲಿ ಯಾವುದೇ ಸುಲ್ತಾನರ, ಪ್ರಾಂತಾಧಿಕಾರಿಗಳ ಅಥವಾ ಸೂಫೀ-ಸಂತರ ಶವಗಳನ್ನು ಹೂಳಿಲ್ಲದಿರುವುದು ವಿಶೇಷವಾಗಿದೆ.

ಈ ಗುಮ್ಮಟವನ್ನು ಸ್ಥಳೀಯವಾಗಿ ಸಿಗುವ ಕಪ್ಪುಶಿಲೆಯನ್ನು ಬಳಸಿ ನಿರ್ಮಾಣ ಮಾಡಿದ್ದಾರಲ್ಲದೇ ಅಲ್ಲಿ ಗಚ್ಚು ಗಾರೆಯ ಬಳಕೆ ವಿಫುಲವಾಗಿರುವುದು ಎದ್ದು ಕಾಣುತ್ತದೆ. ಈ ಗುಮ್ಮಟಕ್ಕೆ ನಾಲ್ಕು ದಿಕ್ಕಿಗೆ ದ್ವಾರಗಳಿವೆ ಭಿತ್ತಿಯ ಕೆಳಗಿನ ಸಾಲಿನಲ್ಲಿಯ ದ್ವಾರಶಾಖೆಗಳನ್ನು (ಕಮಾನು-೪) ಬಿಟ್ಟು ಇನ್ನುಳಿದಂತೆ ೮ ಕಮಾನುಗಳಿವೆ. ಅವುಗಳ ಒಳಗೆ ಗೂಡು ರೀತಿಯ ರಚನೆಗಳಿವೆ. ಈ ಎಂಟೂ ಕಮಾನುಗಳು ಗಾತ್ರದಲ್ಲಿ ಒಂದೇ ಆಗಿದ್ದು, ವಿನ್ಯಾಸದಲ್ಲಿಯೂ ವ್ಯತ್ಯಾಸವಿಲ್ಲ. ಕಮಾನುಗಳ ಮೇಲ್ಭಾಗದಲ್ಲಿ ಸರಳ ಕುಸುರಿನ ಕೆಲಸ ಕಾಣಬಹುದು.

ಈ ಗುಮ್ಮಟದ ಒಳಭಿತ್ತಿಯ ಮೇಲಿನ ಸಾಲಿನಲ್ಲಿ ನಾಲ್ಕು ಮೂಲೆ ಕಮಾನುಗಳು ಹಾಗೂ ನಾಲ್ಕು ದ್ವಾರಶಾಖೆಗಳ ಮೇಲೆ ಒಂದೊಂದು ಕಮಾನುಗಳಿವೆ. ಈ ಕಮಾನುಗಳ ಮೇಲ್ಭಾಗದಲ್ಲಿಯೂ ಕುಸುರಿನ ಕೆಲಸ ಕಾಣಬಹುದು.

* ಸಹ ಶಿಕ್ಷಕರು, ಅಂಕಲಗುಡಿ ಕ್ಷೇತ್ರ ಗ್ರಾಮ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ, ಮೊ. ೯೯೮೭೩೩೭೨೨೫

ಈ ಗುಮ್ಮಟದ ಭುವನೇಶ್ವರಿ (ಸಿಲೀಂಗ್) ಭಾಗದಲ್ಲಿ ಕಲಾತ್ಮಕವಾದ ಕುಸುರಿನ ಕೆಲಸ ಮಾಡಿದ್ದಾರೆ. ಇದರಲ್ಲಿ ಪದ್ಮ, ಅರ್ಧಪದ್ಮ, ವರ್ತುಳ, ಸರಳ ರೇಖಾ ಚಿತ್ರ ಹಾಗೂ ಲತಾಸುರುಳಿಗಳನ್ನು ಕಾಣಬಹುದು.

೨. ಮಧ್ಯದ ಗುಮ್ಮಟ: (ಅಗಲ ೪೨ ಅಡಿ, ಉದ್ದ ೪೨ ಅಡಿ, ಎತ್ತರ ೫೫ ಅಡಿ)



ಮಧ್ಯದ ಗುಮ್ಮಟವು ಬಿಜಾಪುರದ ಗೋಲಗುಮ್ಮಟದ ಮಾದರಿಯನ್ನು ಹೋಲುವಂತಿದೆ. ಇದು ಇನ್ನಿತರ ಗುಮ್ಮಟಗಳಿಗಿಂತ ವಿಶಾಲವೂ ಹಾಗೂ ಎತ್ತರವಾಗಿದೆ. ಇದನ್ನು ಐನ್-ಉಲ್-ಮುಲ್ಕ್ ಗಿಲಾನಿಯು (ಕ್ರಿ.ಶ. ೧೫೦೨-೧೫೪೬) ಕಟ್ಟಿಸಿದ್ದಾನೆ. ಈ ಗುಮ್ಮಟಕ್ಕೆ ೪ ದಿಕ್ಕಿಗೆ ದ್ವಾರಗಳಿವೆ. ಒಳಭಿತ್ತಿಯ ಕೆಳಗಿನ ಸಾಲಿನಲ್ಲಿಯ ದ್ವಾರಶಾಖೆಗಳನ್ನು (ಕಮಾನು-೪) ಬಿಟ್ಟು ಇನ್ನುಳಿದಂತೆ ಎಂಟು ಕಮಾನುಗಳಿವೆ. ಅವುಗಳ ಒಳಗೆ ಗೂಡು ರೀತಿಯ ರಚನೆಗಳಿವೆ. ಈ ಎಂಟೂ ಕಮಾನುಗಳು ಗಾತ್ರದಲ್ಲಿ ಒಂದೇ ತೆರನಾಗಿದ್ದು, ಅವುಗಳ ವಿನ್ಯಾಸದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಕಮಾನುಗಳ ಮೇಲ್ಭಾಗದಲ್ಲಿ ಸರಳ ಕುಸುರಿನ ಕೆಲಸ ಕಾಣಬಹುದು.

ಈ ಗುಮ್ಮಟದ ಭುವನೇಶ್ವರಿ (ಸಿಲೀಂಗ್) ಭಾಗದಲ್ಲಿ ದೊಡ್ಡದಾದ ಅಷ್ಟಭುಜಾಕೃತಿಯ ರಚನೆಯಿದೆ. ಅದರ ಒಳಗಡೆ ವರ್ತುಳ ಹಾಗೂ ಲತಾಸುರುಳಿಯ ರಚನೆಗಳಿವೆ. ಇನ್ನುಳಿದಂತೆ ಮಧ್ಯಭಾಗದಲ್ಲಿ ಜ್ಯಾಮಿತಿಯ ರಚನೆಗಳನ್ನು ಕಾಣಬಹುದು.

೩. ಪೂರ್ವದ ಗುಮ್ಮಟ:

ಪೂರ್ವದ ಗುಮ್ಮಟವು ಇನ್ನುಳಿದ ಎರಡು ಗುಮ್ಮಟಗಳಿಗಿಂತ ಚಿಕ್ಕದಾಗಿದೆ. ಈ ಗುಮ್ಮಟವನ್ನು ಹುಕ್ಕೇರಿಯ ಆಡಳಿತಾಧಿಕಾರಿಯಾಗಿದ್ದ ಫತೇಹ-ಉಲ್-ಮುಲ್ಕನು (ಕ್ರಿ.ಶ. ೧೫೪೭-೧೫೬೮) ನಿರ್ಮಿಸಿದ್ದಾನೆ.

ಈ ಗುಮ್ಮಟದ ಒಳಭಿತ್ತಿಯ ಮೇಲಿನ ಸಾಲಿನಲ್ಲಿ ಎಂಟು ಚಿಕ್ಕ ಕಮಾನುಗಳಿದ್ದು, ಅವು ಸರಳ ಅಲಂಕಾರ ಹೊಂದಿವೆ. ಕೆಳಗಿನ ಸಾಲಿನಲ್ಲಿ ದ್ವಾರ ಶಾಖೆ ಕಮಾನನ್ನು ಒಳಗೊಂಡಂತೆ ಎಂಟು ಕಮಾನುಗಳಿವೆ. ಇನ್ನುಳಿದ ಗುಮ್ಮಟಗಳ ಹಾಗೇ ೪ ದಿಕ್ಕಿಗೆ ದ್ವಾರವಿರದೇ, ಕೇವಲ ದಕ್ಷಿಣ ದಿಕ್ಕಿಗೆ ದ್ವಾರವಿರುವುದು ವಿಶೇಷವಾಗಿದೆ.

ಪಶ್ಚಿಮ ಗುಮ್ಮಟದ ಜೀರ್ಣೋದ್ಧಾರವಾದಂತೆ ಮಧ್ಯದ ಗುಮ್ಮಟ ಮತ್ತು ಪೂರ್ವದ ಗುಮ್ಮಟಗಳನ್ನು ಸಹ ಜೀರ್ಣೋದ್ಧಾರಗೊಳಿಸಲೆಂದು ನಾನು ಆಶಿಸುತ್ತೇನೆ.



ಆಕರಸೂಚಿ

೧. ಬೆಳಗಾವಿ ಜಿಲ್ಲೆಯ ಭವ್ಯ ಪರಂಪರೆ (೨೦೦೨) ಸಂಪಾದಕರು, ವ್ಹಿ.ಸಿ. ಮಾಲಗತ್ತಿ.

೨. ಘಟಪ್ರಭೆ ಸಿರಿ, ಸ್ಮರಣ ಸಂಚಿಕೆ, ಹುಕ್ಕೇರಿ ತಾಲೂಕು, ೨ನೇ ಕನ್ನಡ ಸಾಹಿತ್ಯ ಸಮ್ಮೇಳನ.

ಕೊಟ್ಟೂರ ಬಸವ ಮತ್ತು ಐತಿಹ್ಯಗಳು: ಒಂದು ಅವಲೋಕನ

ಐರಣಿ ಹನುಮಂತಪ್ಪ*

ಭರತ ಖಂಡ ಸುತ್ತಿ ಕರ್ನಾಟಕ ರಾಜ್ಯದಾದ್ಯಂತ ಸಂಚರಿಸಿ ಕೊನೆಗೆ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕ್ ಕೊಟ್ಟೂರಿನಲ್ಲಿ ಸಮಾಧಿ ಗದ್ದುಗೆಯಾದ ಈ ಕೊಟ್ಟೂರು ಬಸವ ಎನ್ನುವ ಹೆಸರು ಕೊಟ್ಟೂರಿನಲ್ಲಿ ಐಕ್ಯವಾದ ಕಾರಣದಿಂದ ಬಂದದ್ದಲ್ಲ. ಅದು ಬಾಲ್ಯದಿಂದ ಕರೆಯಲ್ಪಟ್ಟಿರಬಹುದಾದ ಇಲ್ಲವೇ ಆತನ ಹುಟ್ಟೂರು ಕೊಟ್ಟೂರು, ಆತನ ಹೆಸರು, ಜನ್ಮನಾಮ ಬಸವ ಎರಡನ್ನೂ ಸೇರಿಸಿ ಕೊಟ್ಟೂರು ಬಸವನೆಂಬ ಹೆಸರು ಬಂದಿರಬಹುದಾಗಿದೆ.

ಕೊಟ್ಟೂರು ಬಸವರ ಕಾಲ : ಕೊಟ್ಟೂರು ಬಸವರ ಜೀವಿತ ಕಾಲ ತಿಳಿದಿಲ್ಲ. ಆದರೂ ಅದನ್ನು ನಿರ್ಧರಿಸಲು ಕೊಟ್ಟೂರು ಬಸವೇಶ್ವರ ಚಾರಿತ್ರ್ಯದಲ್ಲಿಯ ಕೆಲ ಸಂಗತಿಗಳಿಗೆ ಸಂಬಂಧಿಸಿದಂತೆ ಹಲಕೆಲ ಸಮಕಾಲೀನ ವ್ಯಕ್ತಿಗಳು, ಕವಿ ಗೌರವಾಂಕ, ಚನ್ನನಂಜೇಶಾಚಾರ್ಯ, ಮೊಘಲ ಸಾಮ್ರಾಟ, ಅಕ್ಬರ್ ಚಕ್ರವರ್ತಿ ಹಾಗೂ ಹರಪನಹಳ್ಳಿ ಪುಡವಟ್ಟು ಸ್ಥಾಪಿಸಿದ ಬಾಗುಳಿ ದಾದೇನಾಯ್ಕ ಹಾಗೂ ಅವರ ಸಂತತಿಯವರು ಮೊದಲಾದವರ ಮೊದಲಾದವರು ಕೊಟ್ಟೂರು ಬಸವರೊಂದಿಗೆ ಸಂಪರ್ಕ ಹೊಂದಿರುವುದು ತಿಳಿದುಬರುತ್ತದೆ ಕೊಟ್ಟೂರು ಬಸವೇಶ್ವರ ಚಾರಿತ್ರ್ಯಕತೃ ಬಸವಲಿಂಗ ಕವಿ ಚಾರಿತ್ರ್ಯ ಗ್ರಂಥ ಸಂಧಿ-೧೯, ಪದ್ಯ೨೮ರ ಉಲ್ಲೇಖದಂತೆ ಶಾಲಿವಾಹನ ಶಕೆ ೧೬೦೦ ಅಂದರೆ ಕ್ರಿ.ಶ. ೧೬೭೮ ಎಂದು ಉಲ್ಲೇಖವಿದೆ. ಈ ಎಲ್ಲಾ ಸಂಗತಿಗಳನ್ನು ಪರಿಶೀಲಿಸಿ ಡಾ. ಆರ್.ಸಿ. ಹಿರೇಮಠ್‌ರವರು ಕೊಟ್ಟೂರು ಬಸವರವರ ಕಾಲವನ್ನು ಕ್ರಿ.ಶ. ಸುಮಾರು ೧೬೦೦ ಎಂದು ಚಾರಿತ್ರ್ಯದ ಪ್ರಸ್ತಾವನೆ ಪುಟ-೨೭ರಲ್ಲಿ ಉಲ್ಲೇಖಿಸಿದ್ದಾರೆ.

ಹಾವೇರಿ ಜಿಲ್ಲಾ, ರಾಣೇಬೆನ್ನೂರು ತಾಲ್ಲೂಕ್, ಐರಾವತ ಕ್ಷೇತ್ರ ಐರಣಿ ಹೊಳೆಮಠ ಈ ಕ್ಷೇತ್ರದಲ್ಲಿ ಕೊಟ್ಟೂರು ಬಸವರು ಸಂಚಾರ ಸಮಯದಲ್ಲಿ ಅನೇಕ ದಿನ ನಿಂತು ಅನುಷ್ಠಾನ ಗೈಯ್ಯುವಾಗ ಅವರನ್ನು ಕಂಡು ಆಕರ್ಷಿತನಾದ ಮುಪ್ಪಿನಪ್ಪ ಎಂಬ ಮಹನಿಯರು ಕೊಟ್ಟೂರು ಬಸವರನ್ನು ಕಂಡವರು ಮತ್ತು (ಕ್ರಿ.ಶ. ೧೫೬೪ ರಿಂದ ೧೬೭೯, ಮುಪ್ಪಿನಪ್ಪನವರು) ತಪ್ಪಸ್ವಿಯ ಸೇವೆ ಮಾಡಲಿಚ್ಛಿಸಿದವರು, ಆ ತಪಸ್ಸಿಯು ಅಲ್ಲಿಂದ ಮತ್ತೆಲ್ಲೋ ಮಾಯವಾದಾಗ ತಪಸ್ವಿಯು ಕುಳಿತ ಸ್ಥಳದಲ್ಲಿ ಕ್ರಿ.ಶ. ಕಟ್ಟಿಸಿ ಹೊಳೆಮಠ ಸ್ಥಾಪಿಸಿ ಸೇವೆಗೆ ನಿಂತವರು. (ಆಧಾರ: ಹೊಳೆಮಠಾಧೀಶ್ವರ ಮುಪ್ಪಿನಾರ್ಯ ಕೃತ ಶಿವಲೀಲಾವತಾರಿಗಳ ನಾಮಾವಳಿ ಸ್ತೋತ್ರ ಗ್ರಂಥ ಉಲ್ಲೇಖ).

ಚಾಮರಾಜನಗರ ತಾಲ್ಲೂಕಿನ ಉಮ್ಮತ್ತೂರಿನಲ್ಲಿಯೂ ಕೊಟ್ಟೂರು ಬಸವನಗರ ದೇವಾಲಯವಿದೆ. ಅರ್ಚಕ ಮನೆತನ ದವರಾದ ೭೫ ವರ್ಷ ವಯಸ್ಸಿನ ಕೊಟ್ಟೂರಪ್ಪ ಮತ್ತು ಗ್ರಾಮದವರು ನೀಡಿದ ಮಾಹಿತಿಯಂತೆ ಅವರಿಂದ ಸುಮಾರು ಐದು ತಲೆಮಾರಿನ ಹಿಂದೆ ನಮ್ಮ ಹಿರಿಯರು ಅಂದರೆ ಅವರ ಹೆಸರು ಚನ್ನವೀರೇಗೌಡರು ಕೊಟ್ಟೂರು ಬಸವನ ವ್ಯಕ್ತಿತ್ವಕ್ಕೆ ಮಾರುಹೋಗಿ ಅವರ ಸೇವೆಯನ್ನು ಮಾಡಿದವರು. ಆಗ ಕೊಟ್ಟೂರು ಬಸವನವರು ಈ ಗ್ರಾಮದ ದೊಡ್ಡ ಅರಣ್ಯದಲ್ಲಿ ಒಬ್ಬ ಹುಚ್ಚನಂತೆ ಬಂದು ಯಾರ ಸಂಪರ್ಕವೂ ಇಲ್ಲದೇ ಜಪತಪ ಅನುಷ್ಠಾನ ಮಾಡುವುದನ್ನು ದನಗಾಯಿಯವರಿಂದ ತಿಳಿದು ಅವರನ್ನು ಕಂಡಕೂಡಲೇ ಗೌಡರಲ್ಲಿ ದೈವತ್ವದ ಜಾಗ್ರತೆಯುಂಟಾಗಿ ಸೇವೆಯನ್ನು ಮಾಡುವ ಆಸೆ ಹೊಂದಿದವರಾಗಿ ಆತನನ್ನು ಊರ ಪಕ್ಕದ ಹಾಳು ಅರಮನೆಗೆ ಕರೆತಂದು ಸೇವೆಗೆ ನಿಂತರು. ಕೊಟ್ಟೂರು ಬಸವನವರು ಒಂದು ದಿನ ಯಾರಿಗೂ ತಿಳಿಯದಂತೆ ಅಲ್ಲಿಂದ ಮತ್ತೆತ್ತಲೋ ಹೊರಟುಹೋದರು ಉಮ್ಮತ್ತೂರು ಗ್ರಾಮ ಸಮುದಾಯದವರು ಅವರ ಮಠ ಕಟ್ಟಿಸಿ ಪೂಜಾರಾಧನೆಗಾಗಿ ಚನ್ನವೀರೇಗೌಡರು ನಿಂತರು. ನಿಯುಕ್ತರಾಗಿ ಇಂದಿಗೂ ಗೌಡರ ೬ನೇ ತಲೆಮಾರಿನ ಅವರ ವಂಶಜರು, ಪೂಜಾರಾಧನೆ ಕಾರ್ಯಗಳನ್ನು ಊರವರೊಟ್ಟಿಗೆ ನಡೆಸುತ್ತ ಬಂದಿರುತ್ತಾರೆ. ಈ ಸಂಗತಿಗಳಿಂದ ತಿಳಿದುಬರುವುದೇನೆಂದರೆ, ಇಂದಿನಿಂದ ಸುಮಾರು ೪೦೦ ವರ್ಷಗಳ ಅವಧಿಯಲ್ಲಿ ಕೊಟ್ಟೂರು ಬಸವನವರು ಉಮ್ಮತ್ತೂರಿನಲ್ಲಿ ಉಳಿದಿದ್ದರು ಎನ್ನುವ ನಂಬಬಹುದಾಗಿದೆ.

---

* # ೩೦೦, ಡಿ. ದೇವರಾಜ ಬಡಾವಣೆ, 'ಬಿ' ವಿಭಾಗ, ದಾವಣಗೆರೆ-೫೭೭೦೦೬. ಮೊ. ೯೪೪೮೭೦೫೪೩೦೫

ಕೊಟ್ಟೂರ ಬಸವರವರು ದೇಶ ಸಂಚಾರ ಮಾಡುತ್ತಾ ಕರ್ನಾಟಕದಾದ್ಯಂತ ಸುತ್ತಿದ್ದಾರೆ. ಆತನ ಭಕ್ತರ ಪಾಲಿಗೆ ಜಾಗೃತ ಗದ್ದಿಗೆಗಳಾಗಿ ಅತಿವೈಭವವುಳ್ಳ ಸಾಂಸ್ಕೃತಿಕ ಪುಣ್ಯಸ್ಥಳಗಳಾಗಿವೆ. ಜಾತ್ಯಾತೀತವಾಗಿ ಎಲ್ಲಾ ಸಮುದಾಯಗಳಿಂದ ಹುಚ್ಚಕೊಟ್ರಪ್ಪ, ಕೊಟ್ಟೂರೇಶ್ವರ, ಕೋಟ್ಟೂರೇಶ, ಕೊಟ್ಟೂರು ಬಸವೇಶ, ಕೊಟ್ಟೂರ ಬಸವ, ಹುಚ್ಚಬಸವ, ಕೊಟ್ರಪ್ಪ, ಗುರುಬಸವರಾಜೇಂದ್ರ, ಗುರುಬಸವಲಿಂಗ, ಬಸವಪ್ರಭು, ವೃಷಭೇಂದ್ರ, ನಂದಿಲಿಂಗ, ಕೊಟ್ರಯ್ಯ, ಕೋಟ್ಟೂರಯ್ಯ ಮುಂತಾದ ಹೆಸರುಗಳಿಂದ ಜನಮನದಲ್ಲಿ ಉಳಿದಿದ್ದಾನೆ.

ಕೊಟ್ಟೂರು ಬಸವರ ಚಾರಿತ್ರ್ಯದಲ್ಲಿ ಸಂದಿ-೭, ಪದ್ಯ-೨೦ರಿಂದ ೨೮ರಲ್ಲಿ ಆತನ ಸಂಚಾರ ವರ್ಣನೆಯಿದೆ. ಅದರಂತೆ ತಮಿಳುನಾಡು ಧರ್ಮಪುರಿ ಜಿಲ್ಲೆಯ ಹೊಸೂರುನಿಂದ ಹೊರಟು ದೇಶಸಂಚಾರ ಮುಗಿಸಿ ನೇರವಾಗಿ ಹಂಪೆಗೆ ಬಂದು ಅಲ್ಲಿಂದ ಕೂಡ್ಲಿಗಿ ತಾಲ್ಲೂಕ್ ಕೊಟ್ಟೂರಿಗೆ ಬಂದ ಉಲ್ಲೇಖವಿದೆ. ಆದರೆ, ಆತ ವ್ಯಾಪಕವಾಗಿ ಇಡೀ (ಕರ್ನಾಟಕ) ರಾಜ್ಯ ಕುಂತಳ ಪ್ರದೇಶಗಳಲ್ಲಿ ಸಂಚರಿಸಿರಬಹುದಾದ ಕುರುಹುಗಳು ಕಂಡುಬಂದಿವೆ. ಕೋಲಾರ ತಾಲ್ಲೂಕ್ ಜಂಗಮಬಸವಾಪುರ, ಚಾಮರಾಜನಗರ ತಾಲ್ಲೂಕ್ ಉಮ್ಮತ್ತೂರು, ಹಾಸನ ಜಿಲ್ಲೆ ನುಗ್ಗಿಹಳ್ಳಿ, ತಿಪಟೂರು ತಾಲ್ಲೂಕಿನ ಕೆಂಕೆರೆ, ಅರಸೀಕೆರೆ ತಾಲ್ಲೂಕಿನ ಹಿರೇಕಲ್ಲುಬೆಟ್ಟ, ಬಳ್ಳಾರಿ ಜಿಲ್ಲೆಯ ಹಂಪಿ ಕೊಟ್ಟೂರು, ಹಡಗಲಿ, ಹಿರೇಹಡಗಲಿ, ಮಾಗಳ, ಬುದನೂರು, ನಿರಾಕೋರನಹಳ್ಳಿ, ಶಿವಲಿಂಗನಹಳ್ಳಿ, ಹಗರಿಬೊಮ್ಮನಹಳ್ಳಿ ತಾಲ್ಲೂಕ್ ಬೊಪ್ಪಲಾಪುರ, ಗದಗ ತಾಲ್ಲೂಕಿನ ಹರ್ತಿ, ಎಲೆಸೀಗೂರು, ಹಾವೇರಿ ಜಿಲ್ಲಾ, ಶಿಗ್ಗಾಂವಿ ತಾಲ್ಲೂಕ್ ಬಂಕಾಪುರ ಹತ್ತಿರದ ಗುಡ್ಡದ ಚನ್ನಾಪುರ, ರಾಣೇಬೆನ್ನೂರು ತಾಲ್ಲೂಕ್ ಐರಾವತ ಕ್ಷೇತ್ರ ಐರಣಿ, ಶಿಕಾರಿಪುರ ತಾಲ್ಲೂಕಿನ ನಿಂಬಿಗೊಂದಿ, ಹರಪನಹಳ್ಳಿ ತಾಲ್ಲೂಕಿನ ಹರಪನಹಳ್ಳಿ, ನಿಟ್ಟೂರು, ಕೂಲಹಳ್ಳಿ, ಅರಸೀಕೆರೆ, ಮುಂತಾದೆಡೆ ಆತನ ತಪೋಭೂಮಿಗಳು ಕಂಡು ಬಂದಿರುವುದಲ್ಲದೇ ಭಕ್ತರು ತಮ್ಮ ನೆಲೆಗಳಲ್ಲಿ ಸ್ಥಾಪಿಸಿಕೊಂಡು ಅರ್ಚಿಸುತ್ತಿರುವ ಮಠಗಳು ದಾವಣಗೆರೆ ರಾಣೇಬೆನ್ನೂರು, ಗೋಕಾಕದ ಹತ್ತಿರ ಅರಬಾವಿ, ಹಡಗಲಿ ತಾಲ್ಲೂಕ್ ಉತ್ತಂಗಿ, ಕಾಲುವೆ ತಾಂಡ ಮುಂತಾದೆಡೆ ಸುಮಾರು ೪೦ ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಕೊಟ್ಟೂರ ಬಸವರ ಮಠಗಳಿವೆ. ಹೀಗೆ ಕರ್ನಾಟಕ ರಾಜ್ಯ ಸುತ್ತಾಡಿ, ಕೊನೆಗೆ ಕೂಡ್ಲಿಗಿ ತಾಲ್ಲೂಕ್ ಕೊಟ್ಟೂರಿಗೆ ಬಂದು ಕಲ್ಯಾಣಿ ಚಾಲುಕ್ಯರ ಕಾಲದ ತ್ರಿಕೂಟಾಚಲ ಹಾಳು ಜೈನ ದೇವಾಲಯ ಬಸದಿಯಲ್ಲಿ ಕೊನೆಯ ದಿನ ಕಳೆದಿದ್ದಾನೆ. ಅತನ ಸಮಾಧಿ ಇದೆ.

ಪೂಜೆಗೊಳ್ಳುವ ಮೂರ್ತಿಗಳು

ಕೊಟ್ಟೂರ ಬಸವ ವೀರಶೈವ ಲಿಂಗರೂಪದಲ್ಲಿ ಪೂಜೆಗೊಳ್ಳದೇ ಅವೈದಿಕ ದ್ರಾವಿಡ ಶೈಲಿಯಲ್ಲಿ ಪೀಠವಿಲ್ಲದ ಜಗಲಿಕಟ್ಟೆ ಮಧ್ಯದಲ್ಲಿ ಅಳತೆ ಸೇರಿನಾಕಾರದ ಕಪ್ಪು ಶಿಲೆ ಅದರ ಮೇಲೆ ಒಂದು ಇಲ್ಲವೆ ಏಳು ಹೆಡೆಯ ಬೆಳ್ಳಿ ಅಥವಾ ತಾಮ್ರದ ಧಾತುವಿನಿಂದ ಮಾಡಿದ ನಾಗರಹೆಡೆ ಸೇರಿನಾಕಾರದ ಮೂರ್ತಿಗೆ ಸೇರಿಗೆ ಧಾತುಗಳಿಂದ ಮಾಡಿದ ಮೂಗು, ಬಾಯಿ, ಮೀಸೆ, ಕಿವಿ, ಕಣ್ಣುಗಳನ್ನು ಅಂಟಿಸಿದ ಮೂರ್ತಿ ಇಲ್ಲವೇ ಕೊಟ್ಟೂರ ಬಸವೇಶ್ವರ ಚಾರಿತ್ರ್ಯ ಸಂದಿ-೩, ಪದ್ಯ ೩೩ ರಲ್ಲಿ ವರ್ಣಿಸಿದಂತೆ ತನುತ್ರಯ ಪರಬ್ರಹ್ಮ ಲಕ್ಷಣದಂತೆ ಎಡದಲ್ಲಿ ಶ್ಯಾಮಲನಾಗಿಯೂ, ಬಲದಲ್ಲಿ ಪಿಂಗಳನಾಕಾರದಲ್ಲಿಯೂ, ಮಧ್ಯದಲ್ಲಿ ಊರ್ಧ್ವರೇತಸ್ಕನಾಗಿ, ಶಿವನಂತೆ ತೋರುವ ಮೂರು ಶಿರವುಳ್ಳ ಉದ್ಭವಶಿಲೆ ಇಲ್ಲವೇ ಜಗಲಿಯ ಮೇಲೆ ಶಿಲೆಯ ಪಾದುಕೆಗಳು ಪೂಜಿಸಲ್ಪಡುತ್ತವೆ. ಕೆಲವೆಡೆ ಮರದ ಹಲಿಗೆಗಳಲ್ಲಿ ಮಾಡಿದ ಪೂಜಾ ವಿಗ್ರಹಗಳು ಹಾಗೂ ಪಾದುಕೆಗಳು ಜಗಲಿಯ ಮೇಲೆ ನಂದಿಯ ಮೂರ್ತಿ ಇರುವುದು ಕಂಡುಬರುತ್ತದೆ. ಮೂರ್ತಿಗಳಲ್ಲಿ ಇತರೆ ಕಡೆಗಳಲ್ಲಿಯೂ ನಾಗರಚಿತ್ರವಿರುವುದು ಒಂದು ವಿಶೇಷ. ಈ ವಿಷಯವನ್ನು ಕೊಟ್ಟೂರ ಬಸವೇಶ್ವರ ಚಾರಿತ್ರ್ಯ, ಸಂದಿ-೮ ಪದ್ಯ ೨೧ರಲ್ಲಿ ಉಲ್ಲೇಖವಿದೆ. ಈ ನಾಗಪೂಜೆ ದ್ರಾವಿಡ ಸಂಸ್ಕೃತಿಯ ಸಂಕೇತವೂ ಆಗಿದೆ.

ಅಂದು ಕಲ್ಲುಕಟ್ಟಿಗೆಗಳಿಂದ ಹೊಡೆದು, ಹಿಂಸಿಸಿ, ಊರ ಹೊರಗಿನ ಪಾಳುದೇವಾಲಯಕ್ಕೆ ದಬ್ಬಿದ್ದ ಜನರಿಂದಲೇ ಇಂದು ಆರಾಧಿಸಲ್ಪಡುತ್ತಲಿದ್ದಾನೆ. ಆತ ಜಾತಿ, ಭೇದ, ಮಡಿ, ಮೈಲಿಗೆ, ಮೇಲು, ಕೀಳು, ಭೇದ ಭಾವದ ಗೆರೆ ಅಳಿಸಿ ಹಾಕಿದ್ದಾನೆ. ಆತನಿಂದ ತನ್ನದೇ ಆದ ವಿಶಿಷ್ಠ ಪಂಥ ತನಗರಿವಿಲ್ಲದೇ ನಿರ್ಮಿತವಾಗಿದೆ. ಅದುವೇ ಮುಂದೆ ಕರ್ನಾಟಕದಲ್ಲಿ ಪಂಚಗಣಾಧೀಶ್ವರರು ಪಂಥ ಜನಪದರ ಪರಿಕಲ್ಪನೆಯಾಗಿ ಬೆಳೆದುಬಂದಿದೆ. ಪಂಚಗಣಾಧೀಶ್ವರರೆಂಬುದು ಶುದ್ಧಾಂಗವಾಗಿ ಜನಪದರ ಕಲ್ಪನೆಯಲ್ಲಿ ಮಧ್ಯಕರ್ನಾಟಕದಲ್ಲಿ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಗದಗ, ಕೊಪ್ಪಳ ಜಿಲ್ಲೆಗಳಲ್ಲಿ ಹಾಗೂ ಪರಿಸರದ ಜಿಲ್ಲೆಗಳಲ್ಲಿ ಹೆಚ್ಚಾಗಿ ಪ್ರಚಾರವಿದೆ. ಜನಪದರ ಮೌಖಿಕ ಧಾರೆಗಳು ಅವಲಂಬಿಸಿದ್ದು, ಬಹುದೊಡ್ಡ ಸಾಂಸ್ಕೃತಿಕ ಪರಂಪರೆ, ಪಂಚಗಣಾಧೀಶ್ವರರು ಎಂಬ ಪಂಥಗಣ ಬೆಳೆದುಬಂದಿದೆ.



ಮುಕ್ತಿ ಮಂದಿರ



ಅರಸಿಕೆರೆ ಗುಡ್ಡ

ಕೂಲಹಳ್ಳಿ ಗೋಣಿಬಸಪ್ಪನ ಸಾಂಸ್ಕೃತಿಕ ಪರಂಪರೆ

ದಾವಣಗೆರೆ ಜಿಲ್ಲಾ, ಹರಪನಹಳ್ಳಿ ತಾಲ್ಲೂಕಿನ ಕೂಲಹಳ್ಳಿ ಗ್ರಾಮ ಇದು ಕೊಟ್ಟೂರ ಬಸವರ ಸಮಕಾಲೀನ ಮತ್ತು ಸಹವರ್ತಿ ಮದ್ದಾನಸ್ವಾಮಿ, ಆತನ ಪುತ್ರ ಗೋಣಿಬಸವ ಇವರ ಕಾರ್ಯಕ್ಷೇತ್ರ. ಇಲ್ಲಿ ಕೊಟ್ಟೂರ ಬಸವ, ಮದ್ದಾನಸ್ವಾಮಿ, ಗೋಣಿಬಸವರನ್ನು ಸಮೀಕರಿಸಿಕೊಂಡ ಸಾಂಸ್ಕೃತಿಕ ಪರಂಪರೆ ಮಧ್ಯಕರ್ನಾಟಕದಲ್ಲಿ ಕೆಲ ಜಿಲ್ಲೆಗಳಲ್ಲಿ ಪ್ರಚಾರದಲ್ಲಿದೆ.

ಗೋಣಿಬಸಪ್ಪನ ಪಂಥದಲ್ಲಿ ಮದ್ದಾನಸ್ವಾಮಿ, ಕೊಟ್ಟೂರ ಬಸವರನ್ನು ಸಮೀಕರಿಸಿದ ವಿಸಿಷ್ಠ ಸಂಪ್ರದಾಯ, ಸಂಸ್ಕೃತಿ ಹಾಗೂ ಆಚರಣೆಯಿದೆ. ಮದ್ದಾನಸ್ವಾಮಿ ಶಿಷ್ಠರಲ್ಲಿ ಒಬ್ಬನೆಂದು ಪರಿಗಣಿಸಿದ್ದಾನೆ. ಆತ ತಳ ಸಮುದಾಯ ಬೇಡ ಯುವತಿಯನ್ನು ವರಿಸಿದ್ದಾನೆ. ಆದ್ದರಿಂದ ಆತ ಶಿಷ್ಠರಿಂದ ತಿರಸ್ಕಾರ, ಬೇಡ ಜನಾಂಗದವಳಾದ ಕನಕವ್ವ ಅವರ ಗಾಂಧರ್ವ ವಿವಾಹ ಬಂಧನದಲ್ಲಿ ಜನಿಸಿದ ಗೋಣಿಬಸಪ್ಪನೂ ತಿರಸ್ಕೃತ. ಅನೇಕ ಸಂಕಷ್ಠಗಳನ್ನು ಅನುಭವಿಸಿ ಪ್ರತಿರೋಧಿಸಿ ಸಮರ್ಥನಾದ ಗೋಣಿಬಸಪ್ಪ ತಳವರ್ಗದವರಿಗೆ ಅಧಿದೈವನಾಗಿ ದೈವೀಪುರುಷನಾಗಿ ತಲೆದೋರಿದ. ಆತ ಹಾಲುಮತದ ಕುರುಬ ಜನಾಂಗದ ವಡ್ಡಟ್ಟೆವ್ವಳನ್ನು ಮದುವೆಯಾದ. ಮೊದಲಿನಿಂದಲೂ ಅಮಾಯಕ ಮಾದಿಗ ಜನಾಂಗ ಗೋಣಿಬಸಪ್ಪನಿಗೆ ಸಹಾಯಕರಾಗಿದ್ದವರು. ಹೀಗಾಗಿ ಬೇಡ, ಕುರುಬ ಹಾಗೂ ಮಾದಿಗ ಜನಾಂಗದವರು ನಿಷ್ಠಾ ವಂತರು ಮತ್ತು ಕಷ್ಟಕೋಟಲೆಗಳಿಗೆ ಸಹಾಯಕರಾಗಿ ಪಶ್ಚಾತ್ತಾಪಪಟ್ಟು ಗೋಣಿಬಸಪ್ಪನಿಗೆ ಮೊರೆಬಿದ್ದ ಅಂಬಿಗ, ಉಪ್ಪಾರ, ಮುಂತಾದ ತಳವರ್ಗದವರು ಗೋಣಿಬಸಪ್ಪನ ಸಾಂಸ್ಕೃತಿಯಲ್ಲಿ ಒಳಗೊಳ್ಳುತ್ತಾರೆ.

ಗೋಣಿಬಸಪ್ಪನ ಸಾಂಸ್ಕೃತಿಕ ಕಾಯಕ್ರಮಗಳಲ್ಲಿ ಕೊಟ್ಟೂರು ಬಸವನೇ ಆದ್ಯ. ರಥೋತ್ಸವದಲ್ಲಿ ಗೋಣಿಬಸಪ್ಪನ ಮೂರ್ತಿಯನ್ನು ಕೂಡ್ರಿಸದೆ ಕೊಟ್ಟೂರು ಬಸವನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಗೋಣಿಬಸಪ್ಪ ಹಾಗೂ ಮದ್ದಾನಸ್ವಾಮಿ ಸಂಕೇತಗಳಾದ ಕೊಡಲಿ, ಕುಡುಗೋಲು, ಅಯುಧಗಳನ್ನು ರಥದಲ್ಲಿ ಇಟ್ಟು ರಥವೆಳೆಯುತ್ತಾರೆ.

ಆಕರ ಗ್ರಂಥಗಳು

೧. ಕೊಟ್ಟೂರು ಬಸವೇಶ್ವರ ಚಾರಿತ್ರ್ಯ, ಗ್ರಂಥಕರ್ತ, ಬಸವಲಿಂಗ ಕವಿ.

೨. ಗೋಣಿಬಸಪ್ಪನ ಕಾವ್ಯ.

೩. ಶಿವಲೀಲಾವತಾರಿಗಳ ನಾಮಾವಳಿ, ಹೊಳೆಮಠ ಶ್ರೀ. ಪರಮಹಂಸ ಪರಿವ್ರಾಜಕ ಶ್ರೀ ಮುಪ್ಪಿನಾರ್ಯ ಸ್ವಾಮಿಗಳ ವಿರಚಿತ.

೪. ಐಹಿತ್ಯಗಳು, ಅಲ್ಲಲ್ಲಿ ಸಂಚರಿಸಿ ಸ್ಥಳಗಳಲ್ಲಿಯ ಆರಾಧಕರು ಹಾಗೂ ಜನಸಮುದಾಯದಿಂದ ಪಡೆದ ಮಾಹಿತಿಗಳು.

೬೦

ಶ್ರೀಮದ್ ಜಗದ್ಗುರು ಶಿವಾನಂದ ಮಹಾಸ್ವಾಮಿಗಳ ಮಠ ಗದಗ: ಇತಿಹಾಸ ಮತ್ತು ಪರಂಪರೆ

ಕೆ.ಎಂ. ಗರಗ*

ಗದಗದಲ್ಲಿರುವ ಶ್ರೀಮದ್ ಜಗದ್ಗುರು ಶಿವಾನಂದ ಮಹಾಸ್ವಾಮಿಗಳ ಮಠವು ೧೯೨೪ರಲ್ಲಿ ಸ್ಥಾಪನೆಯಾಗಿದ್ದು ಇದರ ಮೂಲ ಅಧಿಪತಿಗಳಾದ ಶ್ರೀಮದ್ ಜಗದ್ಗುರು ಶಿವಾನಂದ ಮಹಾಸ್ವಾಮಿಗಳು ೧೮೪೫ನೇ ಇಸ್ವಿಯಲ್ಲಿ ನಾಗಲಿಂಗ ಯತಿಗಳ ಅನುಗ್ರಹದಿಂದ ವೀರಶೈವ ಕುಲಸ್ತರಾದ ಶ್ರೀ ಲಿಂಗನಗೌಡ ಮತ್ತು ಶ್ರೀಮತಿ ಸದ್ಗುಣಿಯರಾದ ಬಸಮ್ಮರೆಂಬ ದಂಪತಿಗಳಿಗೆ ರೋಣದಲ್ಲಿ ಜನ್ಮ ತಾಳಿದರು. ಬಾಲ್ಯದಲ್ಲಿ ಮಗುವಿಗೆ ವೀರೇಶ ಎಂದು ನಾಮಕರಣ ಮಾಡಲಾಯಿತು. ತಂದೆ–ತಾಯಿಗಳು ಅವರನ್ನು ೧೧ನೇ ವರುಷಕ್ಕೆ ಶಾಲೆಗೆ ಕಳುಹಿಸಿದರು. ನಂತರ ಶಿಕ್ಷಕರಾಗಿ ಕಾರ್ಯ ಮಾಡಿದರು. ಮುಂದೆ ಬನಹಟ್ಟಿ ಗ್ರಾಮದ ಬೃಹನ್ಮಠದ ಅಧ್ಯಕ್ಷರಾದ ಷಟ್‌ಸ್ಥಳ ಬ್ರಹ್ಮನಿಷ್ಠ ಶ್ರೀ ರುದ್ರಮುನಿ ಸ್ವಾಮಿಗಳಿಂದ ವಿಧಿವತ್ತಾದ. ಅನುಗ್ರಹ ಪಡೆದರು. ಗುರುವುತೊರಿದ ಶಿವಯೋಗ ಮಾರ್ಗದಲ್ಲಿ ಅಷ್ಠಾವರಣ ನಿಷ್ಠರಾಗಿ ಶ್ರದ್ಧಾ ಹಾಗೂ ಉತ್ಸಾಹದಿಂದ ನಡೆದರು.

ಸುರೇಬಾನ–ಮನಿಹಾಳ (ರಾಮದುರ್ಗ ತಾಲೂಕದಲ್ಲಿ ಪಾಟೀಲರಾಗಿ ಕಾರ್ಯ ಪ್ರಾರಂಭಿಸಿದಾಗ ಅವರ ಅಧ್ಯಾತ್ಮಿಕ ಗರಡಿ ಪ್ರಾರಂಭವಾಯಿತು ಮತ್ತು ಗೃಹಸ್ಥರಾಗಿ ೧೮ ವರ್ಷ ಅಲ್ಲಿ ನೆಲಿಸಿದರು. ಊರಿನ ನ್ಯಾಯನಿಷ್ಠ ಹಾಗೂ ಕಾರ್ಯತತ್ಪರ ಗೌಡರಾಗಿದ್ದಂತೆ ಅಂತರಂಗದ ಅನಂತ ಅರಿಗಳನ್ನಲ್ಲ ಮೆಟ್ಟಿದ ಮಹಾಧೀರರಾಗಿದ್ದರು ಆ ಊರಿನ ಸನಿಹದಲ್ಲಿಯೇ ಒಂದು ಗುಡ್ಡವಿದೆ ಆಗ ಅದು ದಟ್ಟ ಕಾಡುಗಳಿಂದ ಆವೃತವಾಗತ್ತು. ವೀರೇಶರು ಪ್ರತಿನಿತ್ಯ ರಾತ್ರಿ ೩ ಗಂಟೆಗೆ ಆ ಭಯಾನಕವಾದ ಮಲಿಯಮ್ಮನ ಗಿರಿಯೇರಿ ಮಧ್ಯಾಹ್ನ ೨ ಘಂಟೆಯವರೆಗೂ ಘೋರವಾದ ತಪಸ್ಸನ್ನು ಮಾಡಿದರು.


ಮುಂದೆ ನೀಲಮ್ಮ ಎಂಬುವವರನ್ನು ವಿವಾಹವಾದರು. ಒಂದು ದಿನ ಅವರ ಅಂತರ್‌ವಾಣಿ ಮಿಡಿಯಿತು. ಒಮ್ಮೆ ಶಬರಿಯ ದರ್ಶನವು ಆಯಿತು. ಆ ಬಳಿಕ ಅವರು ಮನೆ ತೊರೆದರು. ಆಗ ಅವರಿಗಿದ್ದುದು ಒಂದೇ ಆಸೆ. ಜಗದಲ್ಲೆಲ್ಲಾ ಸಂಚರಿಸಬೇಕು. ಸಮುದ್ರಗಳನ್ನು ದಾಟಿ ಪರದೇಶದಲ್ಲಿ ಕಾಲಿಡಬೇಕು. ಅಲ್ಲಿಯ ಜನರ ಭೌತಿಕ ಮೋಹ ಕಳೆದು ಆತ್ಮನ ಅಮರ ಆನಂದವನ್ನು ನೀಡಬೇಕು ಎಂಬುದಾಗಿತ್ತು. ಆದರೆ ದೈವೇಚ್ಛೆ ಬೇರೆಯಾಗಿತ್ತು. ಮಧ್ಯದಲ್ಲಿಯೇ ಭಕ್ತರು ತಡೆದರು. ಅವರ ಅನುಭಾವಕ್ಕೆ ಮಾರುಹೋದ ಭಕ್ತರು ಅವರಿಗಾಗಿ ಗದಗನಲ್ಲಿ ಆಶ್ರಮ ಕಟ್ಟಸಿದರು.

ಶ್ರೀ ಗುರುಗಳು ಜೀವನದ ಕೊನೆಯ ಉಸಿರಿನವರೆಗೂ ಬೋಧಿಸಿದರು. ೨೧–೦೨–೧೯೩೬ ಶುಕ್ರವಾರದಂದು ಬ್ರಾಹ್ಮಿ ಮುಹೂರ್ತದಲ್ಲಿ ಪ್ರಪಂಚದಿಂದ ಮುಕ್ತರಾದರು. ಅವರ ಶಿಷ್ಯ ಬಳಗ ತಮ್ಮ ಜೀವನ ಪಾವನ ಮಾಡಿಕೊಂಡು. ಶಿವಾನಂದರ ತತ್ವವನ್ನು ನೆತ್ತಿಯ ಮೇಲೆ ಹೊತ್ತು ಜಗತ್ತಿನಲ್ಲಿ ನಡೆದು ಜನರ ಹೃದಯ ಭೂಮಿಯಲ್ಲಿ ಬಿತ್ತಿದರು. ಕಳೆದ ೮೦ ವರ್ಷದಿಂದ ಹಲವಾರು ಭಕ್ತರು ಕೂಡಿ ಶಿವಾನಂದ ಸಂಪ್ರದಾಯಕ್ಕೆ ಶರಣಾಗಿ ಮಠಗಳನ್ನು ಕಟ್ಟಿ ತೇರು ಪಲ್ಲಕ್ಕಿ, ಉತ್ಸವ ಜಾತ್ರೆಯ ಸಂಭ್ರಮ ನಡೆಯುತ್ತ ಬಂದಿದೆ.

ಶಿವಾನಂದರ ತರುವಾಯ ೧೯೩೬ರಲ್ಲಿ ಈ ಪೀಠ ಪರಂಪರೆಯ ದ್ವಿತೀಯ ಜಗದ್ಗುರುಗಳಾದವರು ಶ್ರೀಸದಾಶಿವಾನಂದರು. ಈ ಸದಾಶಿವಾನಂದರು ೩೩ ವರ್ಷ ಪೀಠವನ್ನಾಳಿ ಶಿವಾನಂದ ಸಂಪ್ರದಾಯದ ಭದ್ರ ಬುನಾದಿಗೆ ರಕ್ಷಣೆಯ ಬೇಲಿಯಾಗಿ ಸಂರಕ್ಷಿಸಿದರು. ಇವರು ೧೪/೦೨/೧೯೭೦ರಂದು ಲಿಂಗೈಕ್ಯರಾದರು.

ಶ್ರೀ ಸದಾಶಿವನಂದರ ತರುವಾಯ ೧೯೮೨ರಲ್ಲಿ ತೃತೀಯ ಜಗದ್ಗುರುಗಳಾಗಿ ಪೀಠವೇರಿದವರು ನಂದೀಶ್ವರ ಸ್ವಾಮಿಗಳು. ಪೂಜ್ಯರು ಅಪಾರ ಶಿಷ್ಯ ಸಂಪತ್ತು ಹಾಗೂ ಭೌತಿಕ ಸಂಪತ್ತು ಗಳಿಸಿದರು. ತಮ್ಮ ಗಳಿಕೆಯನ್ನೆಲ್ಲ ಶಿವಾನಂದ

* ಹಿರಿಯ ಶ್ರೇಣಿ ಉಪನ್ಯಾಸಕರು, ಜಿಸಿಟಿಎಂಪಿಯು ಕಾಲೇಜು, ಹುಲಕೋಟಿ–೫೮೨೨೦೫. ಮೊ. ೮೭೬೨೧೯೭೮೦೩



ಪೀಠದ ಸಂಸ್ಥಾಪಕರು ಶ್ರೀ ಜಗದ್ಗುರು
ಶಿವಾನಂದ ಮಹಾಸ್ವಾಮಿಗಳು



ಶ್ರೀಮದ್ ದಕ್ಷಿಣ ಕಾಶಿ ವೀರಜ್ಞಾನ ಸದ್ ಧರ್ಮ ಸಿಂಹಾಸನಾಧೀಶ್ವರ
ಶ್ರೀ ಜಗದ್ಗುರು ಶಿವಾನಂದ ಮಹಾಸ್ವಾಮಿಗಳ ಮಠದ ದ್ವಾರಬಾಗಿಲು ಗದಗ

ಕಲ್ಯಾಣ ಮಂಟಪಕ್ಕೆ ವೆಚ್ಚ ಮಾಡಿದರು. ಜನರ ದೈಹಿಕ ರೋಗ ನಿವಾರಿಸಲು ಆಯುರ್ವೇದ ಕಾಲೇಜು ಹಾಗೂ ಸಂಸ್ಕೃತ ಪಾಠಶಾಲೆ ಕಟ್ಟಿಸಿದರು. ಇವರು ೨೦-೦೩-೨೦೦೦ರಂದು ಲಿಂಗೈಕ್ಯರಾದರು.

೧೯-೩-೨೦೦೦ರಂದು ಪೀಠವೇರಿದ ಚತುರ್ಥ ಜಗದ್ಗುರು ಅಭಿನವ ಶ್ರೀ ಶಿವಾನಂದ ಅಪ್ಪಗಳಿಗೆ ಮೂವರೂ ಜಗದ್ಗುರುಗಳ ಕೃಪಾಶೀರ್ವಾದವಿದೆ. ಶಿಕ್ಷಕ ವೃತ್ತಿಗೆ ಸ್ವಯಂ ನಿವೃತ್ತಿ ಘೋಷಿಸಿ ಮಠದ ಜವಾಬ್ದಾರಿ ವಹಿಸಲು ಗದುಗಿಗೆ ಬಂದರು.

ಧರ್ಮಬೋಧನೆ ಜೊತಗೆ ಶ್ರೀ ಪೂಜ್ಯರು ಕಟ್ಟಿದ ಶಿಕ್ಷಣ ಸಂಸ್ಥೆಗಳು ಅಲ್ಪವಾದರೂ ಪ್ರಾರಂಭಿಸಿದ ಎಲ್ಲಾ ಸಂಸ್ಥೆಗಳು ನಿರಂತರವಾಗಿ ನಡೆಯುವಲ್ಲಿ ಹಾಕಿದ ಭದ್ರ ಬುನಾದಿ ದೊಡ್ಡದು. ಸಂಸ್ಥೆಗಳನ್ನು ಮಾದರಿಯ ಶಿಕ್ಷಣ ಕೇಂದ್ರಗಳನ್ನಾಗಿ ನಿರ್ಮಿಸುವಲ್ಲಿ ಪೂಜ್ಯರ ಸಂಕಲ್ಪ ಅವಿಸ್ಮರಣೀಯ.

೧೯೬೩ರಲ್ಲಿ ಪೂಜ್ಯ ಜಗದ್ಗುರು ಸದಾಶಿವಾನಂದ ನಮ್ಮ ಸ್ವಾಮಿಗಳು ಸಂಸ್ಥಾಪಿಸಲ್ಪಟ್ಟ ಶ್ರೀ ಶಿವಾನಂದ ಪ್ರೌಢಶಾಲೆ ಭೈರಿದೇವರಕೊಪ್ಪ-ಹುಬ್ಬಳ್ಳಿ-ಪ್ರಮುಖವಾಗಿದೆ.

೧೯೭೬ರಲ್ಲಿ ಶ್ರೀ ಜಗದ್ಗುರು ಶಿವಾನಂದ ವಿದ್ಯಾವರ್ಧಕ ಸಂಸ್ಥಯ ಆಶ್ರಯದಲ್ಲಿ ಶ್ರೀ ದಾನಪ್ಪ ಗುರುಸಿದ್ದಪ್ಪ ಮೇಲ್ಮಾಳಗಿ ಸಂಸ್ಕೃತ ಪಾಠ ಶಾಲೆ ಸ್ಥಾಪಿಸಿದರು. ೧೯೭೬ರಲ್ಲಿ ಜಗದ್ಗುರು ಶ್ರೀ ನಂದಿಶ್ವರ ಮಾಹಾಸ್ವಾಮಿಗಳು ಸ್ಥಾಪಿಸಿದ ಶಿಕ್ಷಣ ಸಂಸ್ಥಗಳಲ್ಲಿ ದಾನಪ್ಪ ಗುರುಸಿದ್ದಪ್ಪ ಮೇಲ್ಮಾಳಗಿ ಆಯರ್ವೇದಿಕ್ ಮೆಡಿಕಲ್ ಕಾಲೇಜು ೧-೧೨-೨೦೦೦ ಬೆಳ್ಳಿ ಹಬ್ಬ ಆಚರಿಸಿದೆ.

೧೯೮೦ರಲ್ಲಿ ಶ್ರೀಮಠದಲ್ಲಿ ಶ್ರೀ ಜಗದ್ಗುರು ಸದಾಶಿವಾನಂದ ಉಚಿತ ಪ್ರಸಾದ ನಿಲಯ ಸ್ಥಾಪಿಸಿ ಬಡಮಕ್ಕಳ ಶಿಕ್ಷಣಕ್ಕೆ ಮತ್ತು ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಿದರು.

ಪೂಜ್ಯ ಶ್ರೀ ಶಿವಾನಂದರ ಧರ್ಮ ಅಧ್ಯಾತ್ಮ ತತ್ವಜ್ಞಾನ ಬೋಧನೆಗಳನ್ನು ಪ್ರಚಾರಪಡಿಸುವಂತೆ ಮಠ-ಮಾನ್ಯಗಳು ನಾಡಿನಾದ್ಯಂತ ಹರಡಿವೆ.

ಧಾರವಾಡ-೨೫, ಗದಗ-೧೧, ಬಾಗಲಕೋಟೆ-೧೫, ಬೆಳಗಾಂವ-೨೩, ಹಾವೇರಿ-೩, ಬಿಜಾಪುರ-೩, ಶಿವಮೊಗ್ಗ-೧.

ನೆರೆಯ ರಾಜ್ಯವಾದ ಮಹಾರಾಷ್ಟ್ರದಲ್ಲಿ ೨ ಶಾಖಾ ಮಠಗಳಿವೆ, ಗೋವಾದಲ್ಲಿ-ಒಂದು ಮಠವಿದೆ. ಆಂಧ್ರ ಪ್ರದೇಶದಲ್ಲಿ ಒಂದು ಮಠವಿದೆ.

[ಈ ಪ್ರಬಂಧ ಮಂಡಿಸುವಲ್ಲಿ ಸಹಕಾರ ನೀಡಿದ ಪರಮ ಪೂಜ್ಯ ಶ್ರೀ ದಯಾನಂದ ಸ್ವಾಮಿಗಳು ಶ್ರೀ ಶಿವಾನಂದ ಮಠ ಗದಗ, ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಶ್ರೀ ಅಶೋಕ ಸತರಡ್ಡಿಯವರಿಗೆ ಹಾಗೂ ಅವರ ಚಿರಂಜೀವಿಯಾದ ಶ್ರೀ ಸಚಿನ ಸತರಡ್ಡಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.]

ಅಡಿಟಿಪ್ಪಣಿಗಳು

೧. ಶ್ರೀ ಸದ್ಗುರು ಶಿವಾನಂದ ಚರಿತಾಮೃತ- ಪೂಜ್ಯ ಶ್ರೀ ಸಹಜಾನಂದ ಮಹಾಸ್ವಾಮಿಗಳು, ಸಿದ್ಧಾರೂಡಮಠ, ಮಹಾಲಿಂಗಪುರ.
೨. ಶ್ರೀ ಶಿವಾನಂದ ಚರಿತಾಮೃತ, ಪೂಜ್ಯ ಶ್ರೀ ಬಾಳೇಶ ಶರಣರು, ಮಮದಾಪುರ.
೩. ಶ್ರೀ ಮಜ್ಜಗದ್ಗುರು ಅಭಿನವ ಶಿವಾನಂದ ಮಹಾಸ್ವಾಮಿಗಳವರ ೬೦ನೇ ಹುಟ್ಟುಹಬ್ಬದ ಸವಿನೆನಪಿನ ಸ್ಮರಣ ಸಂಚಿಕೆ, ೨೦೦೭.

೬೧

ಕರ್ನಾಟಕದ ವಿದುಷಿಯರು

ಎಸ್.ಕೆ. ಜೋಶಿ*

‘ವಿದುಷಿ’ ಅಂದರೆ ‘ಪಂಡಿತೆ’ ಎಂದು ಅರ್ಥ, ಜ್ಞಾತಳೂ ಪರಸತಿಯೂ ಎಂಬ ಅರ್ಥ ಯಾವ ದೇಶದಲ್ಲಿ ಸ್ತ್ರೀ ವರ್ಗವು ಸುಶಿಕ್ಷಿತರಾಗಿ ಪಂಡಿತೆಯರಾಗಿ ಇರುವರೋ ಆ ದೇಶವು ಪೂರ್ಣವಾದ ‘ನಾಗರಿಕ ರಾಷ್ಟ್ರ’ವೆಂದು ಹೇಳಿಸಿಕೊಳ್ಳುತ್ತದೆ. ಸ್ತ್ರೀ ಶಿಕ್ಷಣವಿದ್ದ ಆ ರಾಷ್ಟ್ರವು ನಾಗರಿಕವಾಗಿ ತನ್ನ ರಾಷ್ಟ್ರದ ಇತಿಹಾಸದ ಬದುಕಿನಲ್ಲಿ ಜೀವಂತಿಕೆಯನ್ನು ಪಡೆಯುತ್ತದೆ.

‘ಮನುಮಹರ್ಷಿಯ ಕಾಲದಿಂದೀಚೆಯ ಕಾಲದಲ್ಲಿ ಭರತಖಂಡದ ಸ್ತ್ರೀಯರು ಆದರ್ಶರಾಗಿದ್ದರೆಂದು ಹಲವು ಪ್ರಮಾಣಗಳು ದೊರೆಯುವವು. ಆ ಕಾಲದ ಈ ದೇಶದ ಆರ್ಯರು ಸ್ತ್ರೀಯರಿಗೆ ಯೋಗ್ಯವಾದ ಗೌರವವನ್ನು ಕೊಟ್ಟಿದ್ದರು. ಹಲವು ಸ್ತ್ರೀಯರು ಪುರುಷರಿಗೆ ಸಮಾನರಾಗಿ ಜಗತ್ತಿನ ಗೂಢ ತತ್ವಗಳ ವಿಷಯವಾಗಿಯೂ ಕೂಡ ವಿಚಾರ ಮಾಡುತ್ತಿದ್ದರು.’ (ಮ.ಪ್ರ. ಪೂಜಾರ: ಭಾರತೀಯ ವಿದುಷಿಯರು, ಪುಟ ೭, ೮).

ಈ ತರಹದ ಮೇಲೆ ವಿವರಿಸಿದಂತೆ, ದೃಷ್ಟಾಂತಗಳ ಬಗ್ಗೆ ವಿಶೇಷ ಚಿಂತನೆಗೊಂಡು ಭಾರತೀಯ ವಿದುಷಿಯರು ಹಾಗೂ ಅದರಲ್ಲೂ ‘ಕರ್ನಾಟಕದ ವಿದುಷಿ’ಯರ ಬಗ್ಗೆ ವಿಶೇಷ ಗಮನವನ್ನಿರಿಸಿ ಈ ಪ್ರಬಂಧದಲ್ಲಿ ವಿಚಾರಗಳನ್ನು ಮೂಡಿಸಲಾಗಿದೆ. ಇಲ್ಲಿ ವಿವರಿಸಿದ ಇಲ್ಲಿಯ ವಿದುಷಿಯರೆಲ್ಲ ಎಲೆಯ ಮರೆಯ ಕಾಯಿಯಂತೆ, ಯಾವುದೇ ಫಲಾಪೇಕ್ಷೆ ಇಲ್ಲದೆ, ಸಮರ್ಪಣ ಭಾವದಿಂದ ಈ ಸಮಾಜಕ್ಕೆ ಜ್ಞಾನ ಫಲಿಸಿದ್ದಾರೆ, ರಾಷ್ಟ್ರ ಕಟ್ಟಿದ್ದಾರೆ.

ಹಾಗೆ ನೋಡಿದಲ್ಲಿ, ಭಾರತೀಯ ವಿದುಷಿಯರ ಜೀವನ-ಸಾಧನೆಗೆ ಸಮಾಂತರವಾಗಿ, ಕರ್ನಾಟಕದ ವಿದುಷಿಯರೂ ಭಾವಪ್ರಿಯರು ದೇವೀಪ್ರಿಯರು. ಇವರಲ್ಲಿ ನಾನು ಅಭ್ಯಸಿಸಿದಂತೆ ತಮ್ಮ ತಮ್ಮ ದೈವದ ಹುಡುಕಾಟಕ್ಕೆ ಯಾವ ಮರ್ತ್ಯದ, ದೈವದ ಬಾಗಿಲಿಗೂ ಹೋಗಲಿಲ್ಲ. ತಮ್ಮ ತಮ್ಮ ಮನದೊಳಗೇನೆ ದೈವವನ್ನು ಕಂಡರು, ಆರಾಧಿಸಿದರು, ಸಾಹಿತ್ಯ ರಚಿಸಿದರು, ಹಾಡು ಕಟ್ಟಿದರು, ನೃತ್ಯಗೆಜ್ಜೆ ಉಲಿಸಿದರು.

ಭಾರತೀಯ ಬೇರೆ ಬೇರೆ ಪ್ರಾಂತೀಯ ವಿದುಷಿಯರನ್ನು ಸಂಕ್ಷಿಪ್ತವಾಗಿ ವಿವರಿಸಬೇಕಾಗಿ ಅವಶ್ಯವಾಗಿದೆ. ಅವರ ಸಂಕ್ಷಿಪ್ತ ಜೀವನ ಹಾಗೂ ಸಾಧನೆ ಹೇಳುವುದು ಪಾರ್ಶ್ವದಲ್ಲಿ ಕೊಡಲೇಬೇಕು. ಇವರ ಬಗ್ಗೆ ಸಧ್ಯ ಲಭ್ಯವಿದ್ದ ಮಾಹಿತಿ ಇಲ್ಲಿ ಕೆಳಗಿನಂತೆ ಕೊಡಲಾಗಿದೆ.

ವಿಶ್ವನಾದಾ : ಅತ್ರಿಗೋತ್ರ ಜನನ, ಋಗ್ವೇದದಲ್ಲಿ ಇವಳು ಬರೆದ ಸೂತ್ರವಿದೆ, ಋಕ್‌ಗಳಿವೆ. ಅಗ್ನಿಗೆ ಆರ್ಚಸಿ ಇದೆ. ಅಗ್ನಿ ಹವನದ ವೈಷೇಶಿಕ ಆಚರಣೆ ಬಗ್ಗೆ ಹೇಳಲಾಗಿದೆ.

ವಾಗ್ದೇವಿ : ‘ಅಪ್ಪೃಣ’ ಋಷಿಯ ಮಗಳು. ಋಗ್ವೇದದ ಹತ್ತನೇ ಮಂಡಲದ ೧೨೫ನೇ ಸೂಕ್ತದ ೮ ಮಂತ್ರಗಳನ್ನು ರಚಿಸಿದಳು. ದೇವೀಸೂತ್ರದಲ್ಲಿ ಹಾಗೂ ಮಾರ್ಕಂಡೇಯ ಪುರಾಣದಲ್ಲಿ ದೇವಿಯ ಬಗ್ಗೆ ತಾತ್ಪರ್ಯ ಹೇಳಲಾಗಿದೆ.

ಲೋಪಮುದ್ರಾ : ವಿದರ್ಭ ದೇಶದ ಅರಸನ ಮಗಳು. ಅಗತ್ಸ್ಯ ಋಷಿಯ ಹೆಂಡತಿ. ವಿಂಧ್ಯ ಪರ್ವತ ದಾಟಿ ದಕ್ಷಿಣಕ್ಕೆ ಹೊರಟ. ಇವಳು ವಿದ್ಯಾವತಿ, ಪಾತಿವ್ರತ್ಯದ ದೃಷ್ಟಾಂತ. ಋಗ್ವೇದದಲ್ಲಿ ಋಕ್ಕುಗಳಿವೆ. ಪತಿಸೇವೆಯ ಸ್ತೋತ್ರ ಬರೆದಿದ್ದಾಳೆ.

ಊರ್ವಶಿ : ಅಪ್ಸರಾ ಸ್ತ್ರೀ ಋಗ್ವೇದದಲ್ಲಿ ಕೆಲ ಋಕ್ಕುಗಳನ್ನು ರಚಿಸಿದಳು. ಪುರೂರವ ರಾಜನ ಸಂಪರ್ಕ ಆ ಸಂಪರ್ಕ ಕೊನೆಗೆ ಕೊನೆಯಾಯ್ತು. ಆದರೂ ಪ್ರಯಾಗದಲ್ಲಿ ಮಿಲನ ಹೊಂದಿ ೬ ಮಕ್ಕಳನ್ನು ಹೆತ್ತು, ದೇವಲೋಕವನ್ನು ಸೇರುತ್ತಾಳೆ.

ಸೂರ್ಯ : ಋಗ್ವೇದದ ೧೦ನೇ ಮಂಡಲದ ೮೫ನೇ ಸೂಕ್ತದ ಕೆಲವು ಋಕ್ಕುಗಳನ್ನು ಈ ವಿದೂಷಿಯು ರಚಿಸಿದಳು. ನವವಧು ವರರಿಗೆ ಆಶೀರ್ವಾದ ಹೇಳಲಾಗಿದೆ.

---

* # ೩೦, ಶ್ರೀಕೃಪ, ಸಿಲ್ವರ್ ಆರ್ಚರ್ಡ್, ಕೆಲಗೇರಿ ರಸ್ತೆ, ಧಾರವಾಡ-೫೮೦೦೦೧. ಮೊ. ೯೩೮೩೫೧೨೮೧೯

ಮೈತ್ರೇಯಿ : ಪ್ರಸಿದ್ಧ ವಿದುಷಿ. ಬ್ರಹದಾರಣ್ಯಕ ಉಪನಿಷತ್ತಿನಲ್ಲಿ ಇವಳ ವಿದ್ವತ್ತಿಯ ವಿಕಾಸ ಕಾಣಬಹುದು. ಇವಳ ತಂದೆ ಮಿತ್ರನೆಂಬ ಋಷಿ ಯಾಜ್ಞವಲ್ಕನ ಜೊತೆ ಮದುವೆ. 'ತಮಸೋಮಾ ಜ್ಯೋತಿರ್ಗಮಯ' ಎಂಬ ಮಂತ್ರ ರಚನೆ ಇವಳದ್ದೇ. ಇದು ಯುಗಯುಗಂಗಳಲ್ಲಿ ಪಠಿಸಲ್ಪಡುತ್ತಿದೆ.

ಗಾರ್ಗಿ : ಪ್ರಬುದ್ಧ ಮಹತಿಯ ವಿದುಷಿ ಇವಳು. ಯಾಜ್ಞವಲ್ಕ್ಯ ಎರಡನೆಯ ಪತ್ನಿ. ವಚಕ್ನು ಮುನಿಯ ಮಗಳು. ಜನಕರಾಜನ ಆಸ್ಥಾನದಲ್ಲಿ ಪುರುಷ ಪಂಡಿತರೊಡನೆ ಚರ್ಚಿಸಿ, ಜಿಂತ್ಯಳಾದಳು, ಯಾಜ್ಞವಲ್ಕ್ಯನನ್ನು ಸೋಲಿಸಿದಳು.

ದೇವಹೂತಿ : ಪ್ರಸಿದ್ಧ ವಿದುಷಿ 'ಸ್ವಾಯಂಭೂಮನು' ಎಂಬ ಅರಸನ ಮಗಳು. ತರ್ದಮನೆಂಬ ಋಷಿಯನ್ನು ಮದುವೆ ಆದಳು. ಇವಳ ೯ ಹೆಣ್ಣು ಮಕ್ಕಳಲ್ಲಿ ಆರುಂಧತಿ ಹಾಗೂ ಅನುಸೂಯ ಪ್ರಸಿದ್ಧರು. ಆರುಂಧತಿ ವಶಿಷ್ಠನನೂ, ಅನುಸೂಯೆಯನ್ನು 'ಅತ್ರಿ'ಯೂ ಮದುವೆ ಆಗುವರು. 'ಕಪಿಲ' ಮುನಿ ದರ್ಶನ ಶಾಸ್ತ್ರಪ್ರಥಮ ಪ್ರವರ್ತಕ. ತಾಯಿಯಾದ ದೇವಹೂತಿಯಿಂದ ಈ ದರ್ಶನ ಶಾಸ್ತ್ರ ಕಲಿತನು.

ಮದಾಲಸೆ : ಗಂಧರ್ವ ಕುಲ. ಋತಧ್ವಜ ಮಹಾರಾಜನೊಂದಿಗೆ ಮದುವೆ. ೪ ಗಂಡು ವಿಶ್ರಾಂತ, ಸುಭಾಹು, ಶತ್ರುಮರ್ದನ, ಅಲರ್ಕ ಮಕ್ಕಳು, ಮಕ್ಕಳಿಗೆ ಅಭ್ಯಾಸ ಮಾಡಿಸುತ್ತಿದ್ದಳು. ಮೂವರು ಸಂಸಾರ ವಿರಕ್ತಿ ಮರಣ ಹೊಂದಿದ ಮದಾಲಸಿ ಪುನರಪಿ ಸರಸ್ವತಿ ಮಹಾದೇವರ ವರದಿಂದ ಜನ್ಮ ತಾಳಿ, ಋತಧ್ವಜನೊಂದಿಗೆ ಮರು ಮದುವೆ ಆಗಿ, ಸುಖದಿಂದ ಬಾಳಿದರು.

ಭಾರತಿ : ಮಂಡನ ಮಿಶ್ರಾರ ಪತ್ನಿ ಪಾಟನಾ ಊರು. ಶ್ರೀ ಆದಿಶಂಕರರು ಮಂಡನಮಿಶ್ರಾ ಜೊತೆಗೆ ನಡೆದ ಆಧ್ಯಾತ್ಮ ಚರ್ಚೆಯಲ್ಲಿ ಭಾರತಿ ನಿರ್ಣಾಯಕರ ಭಾರತಿಯಾಗಿ "ಆದಿಶಂಕರರು ಗೆದ್ದರು" ಎಂದು ನಿರ್ಣಯ ಕೊಡುತ್ತಾಳೆ. ಶಂಕರರೊಡನೆಯೂ ಚರ್ಚೆ. ಭಾರತಿಗೆ ಸೋಲು, ಗಂಡ ಹೆಂಡತಿಯರು ಶಂಕರರ ಶಿಷ್ಯರಾದರು.

ಮೀರಾ ಬಾಯಿ : ಅಪರಿಮಿತ ಕುಂಲಡಿ, ಗಾಯಕಿ ಚಿತ್ತೂರಿನ ಯುವರಾಜ ರಾಣಾಕುಂಭನು ಇವಳನ್ನು ಮೋಹಿಸಿ ಮದುವೆ ಆದನು. ಆದರೆ ಮೀರಾಬಾಯಿಯು ಕೃಷ್ಣನ ಭಕ್ತಳು. ಅವಳ ಸಂಗೀತ ಎಲ್ಲರಿಗೂ ಸೇರಿತ್ತು. ರಾಣಾ ಕುಂಭನಿಂದ ದೂರವಾಗಿ, ಶ್ರೀಕೃಷ್ಣನ ಭಕ್ತೆಯಾಗಿ, ಸಾವಿರಾರು ಕೀರ್ತನೆ ರಚಿಸಿ, ಅಮರಗಾಯಕಿ ಆದಳು.

ಗುಲ್‌ಬದನ್ ಬೇಗಮ್ : ಮುಸ್ಲಿಂ ಧರ್ಮದಲ್ಲಿ ಕೆಲ ಮಹಿಳೆಯರು ವಿದ್ಯಾವಂತರಿದ್ದರು. ಅವರಲ್ಲಿ ಗುಲ್‌ಬದನ್ ಬೇಗಂಳು ಬಾಬರನ ಮಗಳು. ಅಣ್ಣನಾದ ಹುಮಾಯೂನನ ಜೊತೆಗೆ ಇದ್ದುಕೊಂಡು ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ತಿರುಗಿದಳು. ರಾಜಕೀಯ ನಿಷ್ಣಾತ, 'ಹುಮಾಯೂನ ನಾಮಾ' ಗ್ರಂಥ ರಚೇತೆ, ಇದು ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿ ಭಾಷಾಂತರಗೊಂಡಿದೆ.

ಜೆಬ್ಬುನ್ನೀಸಾ : ಔರಂಗಜೇಬನ ಮಗಳು, ಇವಳ ತಾಯಿಯು ಮುಸಲ್ಮಾನ ಅರಸನ ಮಗಳಾಗಿದ್ದಳು. ಔರಂಗಜೇಬನಿಗೆ ಮಗಳ ಮೇಲೆ ವಾತ್ಸಲ್ಯ ಹೆಚ್ಚು. ಇವಳ ಬುದ್ಧಿಮತ್ತೆ ಬೆರಗುಗೊಳಿಸುವಂಥದು. ತಂದೆಯು ಇವಳಿಗೆ, ಧಾರ್ಮಿಕ, ರಾಜಕೀಯ, ಸಾಹಿತ್ಯಿಕ ಪಾಠ ಕುರಾನ್ ಹೇಳಿ, ಜಾಣಳನ್ನಾಗಿ ಮಾಡಿದ. ರಾಜೈಶ್ವರ್ಯದಲ್ಲಿ ಬೆಳೆದ ಈಕೆ ಬುದ್ಧೈಶ್ವರಿಯೂ ಆಗಿದ್ದಳು.

ಪ್ರವೀಣಾಬಾಯಿ : ಬುಂದೇಲಖಂಡದ ಅರಸು 'ಇಂದ್ರಜಿತ್ ಸಿಂಹ'ನ ಆಸ್ಥಾನದ ಕವಿಯತ್ರಿ, ಚಿಕ್ಕ ಕಥೆಗಾರ್ತಿಯೂ ಆಗಿದ್ದಳು. ಕೇಶವದಾಸನೆಂಬ ಪಂಡಿತನು ತನ್ನ ಒಂದು ಗ್ರಂಥಕ್ಕೆ 'ಕವಿತ್ರಿಯಾ' ಎಂದು ನಾಮಕರಣ ಮಾಡಿದ್ದನು. ಅಕಬರನು ಇವಳನ್ನು ತನ್ನ ಆಸ್ಥಾನಕ್ಕೆ ಆಮಂತ್ರಿಸಿದ್ದನು. ಬೀರಬಲ್ಲನ ಸಹಾಯದಿಂದ ಅಲ್ಲಿಗೆ ಹೋಗಿ, ಅವಳ ಪಾಂಡಿತ್ಯಕ್ಕೆ ಆಶ್ಚರ್ಯಪಟ್ಟನು. ಬುಂದೇಲಖಂಡಕ್ಕೆ ಮರಳಿ ಬಂದಳು.

ಅತ್ರೇಯಿ : ಅತ್ರೇಯಿ ಭರತಖಂಡದ ಪ್ರಸಿದ್ಧ ಯುವ ವಿದುಷಿಯರಲ್ಲಿ ಒಬ್ಬಳು. ಕುಲಪತಿಯಾದ ವಾಲ್ಮೀಕಿಯ ಆಶ್ರಮಕ್ಕೆ ಹೋಗಿ ವೇದ ವೇದಾಂಗ ಉಪನಿಷತ್ತು ಅಭ್ಯಸಿಸಿದಳು. ಸೀತಾಮಾತೆಯ ಪುತ್ರರಾದ ಲವಕುಶರಿಗೆ ವಾಲ್ಮೀಕಿ ಹೆಚ್ಚು ಮಹತ್ವ ಕೊಟ್ಟನು. ಆತ್ರೇಯಿಯು ಆಶ್ರಮ ಬಿಟ್ಟು ದೇಶಪರ್ಯಟನ ಮಾಡಿ ಅಗತ್ಸ್ಯ ಆಶ್ರಮಕ್ಕೆ ಬಂದು ಆ ಮುನಿಯಿಂದ ಅದ್ಭುತ ವಿದ್ಯಾವತಿಯಾದಳು.

ವೈಜಯಂತಿ : ವೈಜಯಂತಿಯು ಫರಿದಪುರ್–ಧಗುಣ ಗ್ರಾಮದಲ್ಲಿಯ ಮಯೂರಭಟ ಎಂಬ ವಿದ್ವಾಂಸನ ಮಗಳು. ತಂದೆಯಿಂದ ಕಾವ್ಯ, ವ್ಯಾಕರಣ, ದರ್ಶನ ಶಾಸ್ತ್ರ ಕಲಿತಳು. ದುರ್ಗದಾಸನ ಮಗ ಕೃಷ್ಣನಾಥನೊಡನೆ ಮದುವೆ. ಆತನೂ

ಪಂಡಿತನೇ. 'ಆನಂದ ತಿಲಕ' ಗ್ರಂಥ ರಚನೆ. ಅದರಲ್ಲಿ ವೈಜಯಂತಿಯ ಪಾಲು ಬಹಳ. ಸಂಸ್ಕೃತ ಪಂಡಿತೆ ಎಂದು ಹೆಸರಾಗಿದ್ದಳು.

ಲಕ್ಷ್ಮೀದೇವಿ : ಮಿಥಿಲೆಯ ಅರಸನಾದ ಚಂದ್ರಸಿಂಹನ ಪಟ್ಟದರಸಿ 'ಲಭೀಮಾ' ಎಂಬ ಹೆಸರಿನಿಂದ ಇವಳನ್ನು ಕರೆಯುತ್ತಿಳು. ವಿದ್ಯೆಯಲ್ಲಿ ಪ್ರೀತಿ ಬಹಳ. ಅರಮನೆಯಲ್ಲಿ ಮೈಥಿಲಾ ಪಂಡಿತರಿಗೆ ಆಶ್ರಯ ನೀಡಿದ್ದಳು. 'ಮಿತಾಕ್ಷರ' ಎಂಬ ಗ್ರಂಥ ಬರೆದಳು. ಮಿತಾಕ್ಷರ ಬಾಲಂಭಟ್ಟ ಹಾಗೂ ಮಿಸರಮಿತ್ರ ಎಂಬ ವಿದ್ವಾಂಸರು ಇವಳ ಸಮಕಾಲೀನರು. ದರ್ಶನಶಾಸ್ತ್ರದಲ್ಲಿ ಪಾರಾಂಗತಳು.

ಮಾನಿನಿದೇವಿ : ಉತ್ತರ ಬಂಗಾಲದಲ್ಲಿ 'ಇಂದ್ರೇಶ್ವರ ಚೂಡಾಮಣಿ' ಎಂಬ ಪ್ರಸಿದ್ಧನಾದ ಮಹಾಮಹೋಪಾಧ್ಯಾಯನ ಮಗಳು ಇವಳು. 'ಜಿಜ್ಞಾನವಾದ', 'ಧರ್ಮಶಾಸ್ತ್ರ' ಇವಳ ಕೃತಿಗಳು. ೨೧ ದಿವಸದ ಮಗುವಿನ ತಾಯಿ. ಗಂಡ ತೀರಿದ ತರುವಾಯ ಚಿತೆ ಏರಿದಳು.

ಇವರ ಜೊತೆಗೆ, ಸಂಸ್ಮರಣೀಯರಾದ ಬುದ್ಧಕಾಲೀನ ವಿದುಷಿಯರನ್ನು ನೆನೆಸುವುದು ನಮ್ಮ ಕರ್ತವ್ಯ.

ಆಮ್ರಪಾಲಿ	ಕ್ರಿ.ಪೂ. ೩ನೇ ಶತಮಾನದ ಸಮಯ.
ವಾಸವದತ್ತಾ	ಈ ಐವರು ಕುಳಿತು ಎದುರಿಗಿನ ಬುದ್ಧನ ಉಪದೇಶ
ಚಿತ್ರಲೇಖಾ	ಕೇಳುತ್ತಿರುವ ಶಿಲಾಫಲಕ ನಾಗಾರ್ಜುನ ಕುಂಡ ಉತ್ಖನನದಲ್ಲಿ
ವೈಶಾಲಿ ಹಾಗೂ	ದೊರೆತಿದೆ. ಮತ್ತು ಅಜಂತಾ, ಎಲ್ಲೋರಾ, ಔಬಾದ,
ಸುಜಾತಾ	ಗುಹಾಂತರ ಚೈತ್ಯ ವಿಹಾರಗಳಲ್ಲೂ ನೋಡ ಸಿಗುತ್ತವೆ.

ಕರ್ನಾಟಕದ ವಿದುಷಿಯರು
(ಸಾಹಿತ್ಯಿಕ)

ನಂ	ಹೆಸರು	ಊರು	ಸಂಕ್ಷಿಪ್ತ ವಿವರ
೧	ಲೀಲಾವತಿ	ಅಗರಖೇಡ (ಜಿ. ಬಿಜಾಪುರ)	ಭಾಸ್ಕರಾಚಾರ್ಯರ ಮಗಳು
೨	ಖನೆ	ಮೂಲ ಉಜ್ಜಯಿನಿ	ವರಾಹ ಮಿಹಿರನ ಸಮಾನ ವಿದ್ಯಾರ್ಥಿ ನಂತರ ಮಿಹಿರನ ಹೆಂಡತಿ ಆದಳು ಇಬ್ಬರೂ ವಿದ್ವಾಂಸರೇ
೩	ವಿಜಯಕಾಂತಾ	ಬಂಕಾಪುರ	ಬಂಕರಸನ (ರಾಷ್ಟ್ರಕೂಟರ ಮಾಂಡಲೀಕ) ತಾಯಿ.
೪	ಕಂತಿ	ದ್ವಾರಸಮುದ್ರ	(ಕ್ರಿ.ಶ. ೧೧೦೪-೪೯, ವಿಷ್ಣುವರ್ಧನ ಆಸ್ಥಾನ ವಿದುಷಿ.
೫	ನೀಲಾಂಬಿಕೆ	ಕಲ್ಯಾಣ	'ನೀಲವ್ವ' ಕರೆವ ಹೆಸರು. ಶ್ರೀ ಬಸವೇಶ್ವರನ ಧರ್ಮಪತ್ನಿ.
೬	ಬಿಜ್ಜಳದೇವಿ	ಬೇಲೂರು	ತಾಯಿಯಾಗಿ ಶಿವನನ್ನು ಮಗುವಾಗಿ ಮಾಡಿ ಸಲುಹಿದ ಶಿವಭಕ್ತೆ, ಕವಿಯತ್ರಿ.
೭	ಅತ್ತಿಮಬ್ಬೆ	ಲಕ್ಕುಂಡಿ	ಜಿನದೇವಾಲಯ ಕಟ್ಟಿಸಿದ ಮಹತಿ ಕವಿಯತ್ರಿ.
೮	ಕಾಳವ್ವೆ	ಶಿರಸಂಗಿ	ಕಲ್ಲಿನಿಂದ ಹಾಲನ್ನು ಕರೆದು ಶಿವನಿಗೆ ಉಣಬಡಿಸಿದಳು.

೯	ಅಕ್ಕಮಹಾದೇವಿ	ಉಡುತಡಿ ಹಾಗೂ ಕಲ್ಯಾಣ	ಶ್ರೀ ಬಸವೇಶ್ವರರ ಕಾಲೀನ ಶಿವಶರಣೆ ೧೨ನೇ ಶತಮಾನ
೧೦	ಮಲ್ಲಿಕಾ	ಹಂಪಿ	ಶ್ರೀಕೃಷ್ಣ ದೇವರಾಯನ ಕಾಲದ ವಿದುಷಿ ರಾಮಾಯಣ ರಚಿಸಿದಳು.
೧೧	ಮೋಹನಾಂಗಿ	ಹಂಪಿ	ಶ್ರೀಕೃಷ್ಣ ದೇವರಾಯನ ಮಗಳು. ಶ್ರೀರಾಮರಾಯನನ್ನು ಮದುವೆ ಆದಳು. ಸಹಗಮನ.
೧೨	ಮಹಾಲಕ್ಷ್ಮಿ	ಉಡುಪಿ	ಉಡುಪಿ ಚಾವಡಿ ಬ್ರಾಹ್ಮಣರ ಕುಟುಂಬದಲ್ಲಿ ಜನನ. ಕೃಷ್ಣಭಕ್ತೆ, ವಿದುಷಿ
೧೩	ಸಂಚಿಯ ಹೊನ್ನಮ್ಮ	ಯಳಂದೂರು ಮೈಸೂರು (ಮಂಡ್ಯ)	ಚಿಕ್ಕದೇವರಾಯನ ಹೆಂಡತಿಯಾದ ದೇವಮ್ಮನ ಗೆಳತಿ 'ಹದಿಬದೆಯ ಧರ್ಮ' ಸಾಹಿತ್ಯ ಕೃತಿ.
೧೪	ಮಧುರವಾಣಿ	ತಂಜಾವೂರು ಬೆಂಗಳೂರು	೧೭ನೆಯ ಶತಮಾನ ತಂಜಾವೂರಿನ ಶ್ರೀ ರಘುನಾಥ ಭೂಪಾಲನ ಅಸ್ಥಾನ ಪಂಡಿತ ತಾಳಪತ್ರದಲ್ಲಿ ರಾಮಾಯಣ ಬೆಂಗಳೂರಿನ ಮಾಲೇಶ್ವರ ವೇದಾಂತ ಮಂದಿರ ಲೈಬ್ರರಿಯಲ್ಲಿ ಈಗಲೂ ಇದೆ.

ಉಪಸಂಹಾರ : ವೇದ ಕಾಲದಿಂದ ಕ್ರಿ.ಶ. ೧೭ನೆಯ ಶತಮಾನದವರೆಗೆ ಭಾರತೀಯ ಕೆಲವು ವಿದ್ವತ್ ಮಹಿಳೆಯರು, ಕರ್ನಾಟಕವೂ ಒಳಗೊಂಡಂತೆ, ಸಂಸ್ಕೃತ ಹಾಗೂ ಉರ್ದು ಮತ್ತು ಪ್ರಾದೇಶಿಕ ಭಾಷೆಗಳಲ್ಲಿ, ಪುರುಷರಿಗೆ ಸಮಾಂತರವಾಗಿ ಕಾವ್ಯ, ಧಾರ್ಮಿರಕ ಗ್ರಂಥ ರಚಿಸಿ ವಿದುಷಿಯರೆನ್ನಿಸಿಕೊಂಡಿದ್ದಾರೆ. ಕಥೆ, ಕಾವ್ಯ, ಛಂದಸ್ಸು ವ್ಯಾಕರಣಗಳ ಜೊತೆಗೆ ಸಂಗೀತ (Classical Music) ನೃತ್ಯಗಳಲ್ಲೂ ಮಹಿಳೆಯರು ಭಾರತೀಯ ಸಂಸ್ಕೃತಿಯ ಅಡಿಗಲ್ಲಾಗಿ ವಿದುಷಿ ಎಂಬ ಅಭಿಧಾನದಿಂದ ಪ್ರಸಿದ್ಧರಾಗಿದ್ದಾರೆ. ಅವರನ್ನು ಈ ಪ್ರಬಂಧದಲ್ಲಿ ನೆನೆಹುದು ನನಗೊಂದು ಅಭಿಮಾನವೆನ್ನಿಸಿದೆ.

ಆಕರ ಗ್ರಂಥಗಳು

೧. ಪ್ರೊ. ಚ.ವಿ. ಮುಳಗುಂದ (ಸಂ), ಡಾ. ಜಿ.ಎಂ. ಹೆಗಡೆ (ಸ), ಸುವರ್ಣ ಕರ್ನಾಟಕ, ಸಮಾಜ ಮತ್ತು ಸಂಸ್ಕೃತಿ, ಸಾಹಿತ್ಯ ಪ್ರಕಾಶನ, ಕೊಪ್ಪೀಕರ ರಸ್ತೆ, ಹುಬ್ಬಳ್ಳಿ, ಪು. ೨೨೯, ೨೩೫, ೨೩೬, 'ಶಾಸನಗಳಲ್ಲಿ ಬೃಹತ್ ಕರ್ನಾಟಕದ ಮಹಿಳೆಯರ ಸಾಮಾಜಿಕ ಆರ್ಥಿಕ ಆಯಾಮಗಳು', ಲೇ. ಡಾ. ಚೆನ್ನಕ್ಕ ಪಾವಟೆ.

೨. ಪ್ರೊ. ಸಿ.ಕೆ. ನಾವಲಗಿ, 'ಬೇಂದ್ರೆ ಕಾವ್ಯದ ಮೇಲೆ ಜಾನಪದ ಪ್ರಭಾವ', ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩, ಪು. ೫೦, ೫೧, ೫೨.

೩. ಪ್ರಾ.ಮ.ಪ್ರ ಪೂಜಾರ, ಭಾರತೀಯ ವಿದುಷಿಯರು, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೧೯೮೫, ಪು. ೧೩-೨೯.

೪. ಅಹೋಬಲ ಶಂಕರ, ಭಾರತೀಯ ವಿದುಷಿ ಮೂಲ (ಬೆಂಗಾಲಿ), ಭಾಷಾಂತರ: ಶ್ರೀ ಅಹೋಬಲ ಶಂಕರ, ಬೆಂಗಳೂರು, ೧೯೮೦.

೫. ಡಾ. ಪಿ.ವಿ. ಕಾಣೆ, ಹಿಸ್ಟರಿ ಆಫ್ ಧರ್ಮಶಾಸ್ತ್ರ, ಇಂಡೋಲಜಿ (ಇಂಗ್ಲಿಷ್), 'ದಿ ಉಮೆನ್ ಇನ್ ಇಂಡಿಯಾ'.

೬ ಪ್ರೊ. ಆರ್.ಸಿ. ಮುಜುಮದಾರ್, ಹಿಸ್ಟರಿ ಆಫ್ ಇಂಡಿಯಾ ಆ್ಯಂಡ್ ಸೋಸಿಯಲ್ ಸ್ಟಡೀಸ್, (ಇಂಗ್ಲಿಷ್), 'ಸಹಗಮನ'.

೭. ಜವಾಹರ್‌ಲಾಲ್ ನೆಹರು, ಡಿಸ್ಕವರಿ ಆಫ್ ಇಂಡಿಯಾ (ಇಂಗ್ಲಿಷ್), 'ಡಿ ರೋಲ್ ಆಫ್ ಉಮೆನ್ ಇನ್ ನ್ಯಾಶನಲ್ ಮೂವಮೆಂಟ್'.

೮. ನಕ್ಷೆ ಹಾಗೂ ಚಿತ್ರಗಳು, ಈ ಪ್ರಬಂಧ ಲೇಖಕರು: ಡಾ. ಎಸ್.ಕೆ. ಜೋಷಿ ಅವರಿಂದ.

೯೨

ಬೋಳಿ ಬಂಗ್ಲೆ: ಸಂಶೋಧನಾತ್ಮಕ ನೋಟ

ಬಾಲಕೃಷ್ಣ ಹೆಗಡೆ*

ಕ್ರಿ.ಶ. ೧೮೩೧ರ ಪ್ರಸಿದ್ಧ ನಗರ ದಂಗೆಯ ಬಳಿಕ ಬ್ರಿಟಿಷರು ಅಂದಿನ ಮೈಸೂರು ರಾಜ್ಯದಲ್ಲಿ ಕಮೀಷನರ್ ಆಳ್ವಿಕೆ ಜಾರಿಗೊಳಿಸುವುದರ ಮೂಲಕ ಫೌಜುದಾರಿ ಪದ್ಧತಿಗೆ ಕೊನೆ ಹಾಡಿದರು. ಸುಗಮ ಆಡಳಿತಕ್ಕೋಸ್ಕರ ಓರ್ವ ಯುರೋಪಿಯನ ಸುಪರಿಂಟೆಂಡೆಂಟ್‌ನ ಸುಪರ್ದಿಯಲ್ಲಿ ಮೈಸೂರು ರಾಜ್ಯವನ್ನು ಅಷ್ಟಗ್ರಾಮ, ನಂದಿಗ್ರಾಮ ಮತ್ತು ನಗರ ಎಂಬ ಮೂರು ಕಂದಾಯ ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಆ ಮೂಲಕ ಈಗಿನ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನೊಳಗೊಂಡ "ನಗರ ಡಿವಿಜನ್"ನ್ನಿನ ಆಡಳಿತ ನೋಡಿಕೊಳ್ಳಲು ಯುರೋಪಿಯನ್ ಸೂಪರಿಂಟೆಂಡೆಂಟ್‌ನನ್ನು ಶಿವಮೊಗ್ಗ ನಗರದಲ್ಲಿ ನೇಮಿಸಲಾಯಿತು. ಕ್ರಿ.ಶ. ೧೮೩೧-೧೮೮೧ರ ಅವಧಿಯ ಕಮೀಷನರ್ ಆಡಳಿತದಲ್ಲಿ ಶಿವಮೊಗ್ಗದಲ್ಲಿ ಅನೇಕ ಸರ್ಕಾರಿ ಕಚೇರಿಗಳು, ಶಾಲೆಗಳು ಹಾಗೂ ವಿಶೇಷವಾಗಿ "ಬ್ರಿಟಿಷ ಬಂಗ್ಲೆ" ಎಂದು ಕರೆಯಲಾಗುತ್ತಿದ್ದ ಸುಂದರವಾದ ಬಂಗ್ಲೆಗಳು ನಿರ್ಮಾಣವಾದವು.

೧೯ನೇ ಶತಮಾನದ ಉತ್ತರಾರ್ಧದಲ್ಲಿ ನಗರ ಡಿವಿಜನ್ನಿನ ಯುರೋಪಿಯನ್ ಸೂಪರಿಂಟೆಂಡೆಂಟ್ ಆಗಿದ್ದ ಎಚ್.ಎಮ್. ಎಲಿಯಟ್ ಎಂಬಾತ ಕ್ರಿ.ಶ. ೧೮೪೯ರಲ್ಲಿ ಶಿವಮೊಗ್ಗದಲ್ಲಿ ಮನಮೋಹಕ ಬ್ರಿಟಿಷ ಬಂಗ್ಲೆಯೊಂದನ್ನು ನಿರ್ಮಿಸಿದ. ಶಿವಮೊಗ್ಗ ಕಸಬಾ ಹೋಬಳಿಯ ಗೋಪಾಳದ ಸರ್ವೆ ನಂ. ೩೮ರಲ್ಲಿ ೩೬.೧ ಎಕರೆ ವಿಶಾಲವಾದ ಜಾಗದಲ್ಲಿ ಈ ಬಂಗ್ಲೆ ತಲೆ ಎತ್ತಿ ನಿಂತಿದೆ. ವಾಸ್ತುಶಿಲ್ಪದ ದೃಷ್ಟಿಯಿಂದ ಈ ಬಂಗ್ಲೆ ನಿಖರವಾಗಿ ಕ್ಲಾಸಿಕಲ್ (ಹಿಂದೂ) ಮತ್ತು ಯುರೋಪಿಯನ್ ಗೋಥಿಕ್ ಶೈಲಿಯನ್ನು ಸಾಕ್ಷೀಕರಿಸುತ್ತದೆ.

ಈ ಬಂಗ್ಲೆಯ ಲಕ್ಷಣವನ್ನು ಸೂಕ್ಷ್ಮವಾಗಿ ಗಮನಿಸಿದರೆ ಶಿವಮೊಗ್ಗದಲ್ಲಿ ನಗರ ಡಿವಿಜನ್‌ನ ಯುರೋಪಿಯನ್ ಅಧಿಕಾರಿಗಳ ಸಾಮ್ರಾಜ್ಯಶಾಹಿ ರಾಜಕೀಯ ಅಧಿಕಾರ ಹಾಗೂ ನಿಯಂತ್ರಣಗಳನ್ನು ಈ ರೀತಿಯ ನಿರ್ಮಾಣಗಳ ಮೂಲಕ ಆರಂಭಿಸಿದ್ದರೆಂಬುದು ರುಜುವಾತಾಗುತ್ತದೆ. ಈ ರೀತಿಯ ಬಂಗ್ಲೆಗಳು ಭಾರತೀಯರು ಮತ್ತು ಬ್ರಿಟಿಷರ ನಡುವಿನ ಮಾನಸಿಕ ಮತ್ತು ಸಾಮಾಜಿಕ ಗಡಿರೇಖೆಯಂತೆ ಮಹತ್ತರ ಪಾತ್ರ ವಹಿಸಿವೆ.

ವಾಸದ ಮನೆಗಳ ಲಕ್ಷಣಗಳಾದ ಎತ್ತರದ ಬಾಗಿಲುಗಳು, ಜಗುಲಿಗೆ ಬರಲು ಸುದೀರ್ಘ ದಾರಿ, ಡ್ರಾಯಿಂಗ್ ರೂಮಿಗೆ ತಲುಪಲು ಅಗಲವಾದ ವರಾಂಡಾ, ಮೊದಲಾದವುಗಳು "ದೇಶೀಯ" ಅಂಶಗಳನ್ನು ಹೊಂದಿವೆ. ದಪ್ಪದಾದ ಅತ್ಯಂತ ಎತ್ತರ(ಸು. ೨೦ ಅಡಿ)ವಾದ ಗೋಡೆ, ಮೇಲ್ಛಾವಣಿ ಮೊದಲಾದ ಅಂಶಗಳು ಬೇಸಿಗೆಯಲ್ಲಿ ಉಷ್ಣ ಗಾಳಿ ತಡೆಯಲು ಮತ್ತು ಮಳೆಗಾಲದಲ್ಲಿ ಮಳೆ ನೀರುವ ಒಳಗೆ ಪ್ರವೇಶಿಸದಂತೆ ತಡೆಯುವ ಭಾರತೀಯ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. ಭಾರತೀಯ ಸಂಪ್ರದಾಯದ ಒಳಾಂಗಣವನ್ನು (ಇನ್ನರ್ ಕೋರ್ಟ ಯಾರ್ಡ) ಕುಟುಂಬದ ಸದಸ್ಯರಿಂದ ಮನೆಯ ಸೇವಕರನ್ನು ಪ್ರತ್ಯೇಕಗೊಳಿಸುವ "ಹಾಲ್" ಆಗಿ ಪರಿವರ್ತಿಸಲಾಗಿದೆ.

ಸಾಮಾನ್ಯವಾಗಿ ಅಧಿಕಾರ ಶ್ರೇಣಿಯನ್ವಯ ಹಿರಿಯ ಅಧಿಕಾರಿಗಳಿಗೆ ಉಳಿದವರಿಗಿಂತ ಸುಮಾರು ೧೫ ಪಟ್ಟು ಹೆಚ್ಚು ಭೂಮಿಯನ್ನು ಬಳಸುವ ರೂಢಿಯಿತ್ತು. ಇಂತಹ ವಿಸ್ತಾರವಾದ ಜಾಗವನ್ನು ಹಿರಿಯ ಅಧಿಕಾರಿಗಳು ಹೊಂದಿರುತ್ತಿದ್ದುದು ಬ್ರಿಟಿಷ ಅಧಿಕಾರಿಗಳು ಭಾರತೀಯರಿಗಿಂತ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಉನ್ನತ ಸ್ಥಾನದಲ್ಲಿದ್ದರೆಂಬುದನ್ನಷ್ಟೇ ಅಲ್ಲ ಬ್ರಿಟಿಷ ಆಡಳಿತದಲ್ಲಿ 'ಹೈರಾರ್ಕಿ"ಯನ್ನು ಬಿಂಬಿಸುವುದು ಅದರ ಉದ್ದೇಶವಾಗಿತ್ತು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ "ಹೈರಾರ್ಕಿ ಆದರ್ಶ" ಅಧಿಕಾರ ಮತ್ತು ನಿಯಂತ್ರಣಗಳನ್ನು ಮೇಳೈಸಿರುವ ವಾಸ್ತುಶಿಲ್ಪ ಈ "ಬಂಗ್ಲೆ"ಗಳಾಗಿದ್ದವು.

"ಬೋಳಿ ಬಂಗ್ಲೆ" ಈ ಹೆಸರು ಬಂದ ಬಗೆ

ಈ ರೀತಿ ಹೆಸರು ಬಂದಿರುವುದೂ ಒಂದು ಕುತೂಹಲಕಾರಿ ಅಂಶವೇ ಆಗಿದೆ. ಅಂದಿನ ಮೈಸೂರು ರಾಜ್ಯದ

* ಇತಿಹಾಸ ಪ್ರಾಧ್ಯಾಪಕರು, ಕಮಲಾ ನೆಹರು ಮಹಿಳಾ ಕಾಲೇಜು, ಶಿವಮೊಗ್ಗ-೫೭೭೨೦೧. ಮೊ. ೯೯೮೬೦೧೬೭೭

ಕಮೀಷನರರಿಂದ ನಗರ ಡಿವಿಜನ್ನಿನ ಸೂಪರಿಂಟೆಂಡೆಂಟ್‌ರು ಸರ್ಕಾರದ ಬೊಕ್ಕಸಕ್ಕೆ ಹಣ ಬರುವಂತೆ ಮಾಡಲು ಮನೆ ನಿವೇಶನಗಳನ್ನು ಹರಾಜಿನ ಮೂಲಕ ಮಾರಾಟ ಮಾಡಿ ಹಣ ಶೇಖರಣೆ ಮಾಡಲು ಅನುಮತಿ ಪಡೆದುಕೊಂಡು ಆರಂಭಿಕ ಹಂತದಲ್ಲಿ ಸೂಪರಿಂಟೆಂಡೆಂಟ್ ಅವರ ವಸತಿ ಗೃಹದಲ್ಲಿಯೇ ಹರಾಜು ಕೂಗುತ್ತಿದ್ದರು. ಭಾರತದಲ್ಲಿ ಹರಾಜು ಕೂಗುವ ಪದ್ಧತಿಗೆ "ಬೋಲಿ ಲಗಾನ್" ಎಂದು ಕರೆಯಲಾಗುತ್ತಿತ್ತು. ಯುರೋಪಿನ್ ಅಧಿಕಾರಿಯ ಮನೆಯಲ್ಲಿ ಈ ಪ್ರಕ್ರಿಯೆ ನಡೆಯುತ್ತಿದ್ದರಿಂದ ಆ ಮನೆಯನ್ನು "ಬೋಲಿ ಬಂಗ್ಲೆ", ಎಂತಲೂ ಆ ಸಂದರ್ಭದಲ್ಲಿ ಎತ್ತರದ ಯಾವುದೇ ಗಿಡಮರಗಳಿಲ್ಲದೇ ಬೋಳು ಗುಡ್ಡದಂತಿದ್ದ ಜಾಗದಲ್ಲಿ ಈ ಕಟ್ಟಡ ತಲೆ ಎತ್ತಿದ್ದರಿಂದ ವಾಡಿಕೆಯಲ್ಲಿ "ಬೋಳಿ ಬಂಗ್ಲೆ" ಎಂದು ಕರೆಯುವ ರೂಢಿ ಬಂತು.

ಈ ಬಂಗ್ಲೆಯಿಂದ ಈಗಿನ ಜಿಲ್ಲಾ ಪಂಚಾಯತ (ಈ ಕಟ್ಟಡದಲ್ಲಿ ೧೯೩೬ರಿಂದ ತಾಲೂಕಾ ಬೋರ್ಡ ಕಚೇರಿ ಕೆಲಸ ನಿರ್ವಹಿಸುತ್ತಿತ್ತು) ಮೂಲಕ ಶಿವಮೂರ್ತಿ ವೃತ್ತದವರೆಗಿನ ರಸ್ತೆಯನ್ನು "ಬೋಳಿ ಬಂಗ್ಲೆ" ರಸ್ತೆ ಎಂತಲೇ ಕರೆಯಲಾಗುತ್ತಿತ್ತು. ಈಗ ಈ ರಸ್ತೆಯನ್ನು ಕುವೆಂಪು ರಸ್ತೆ ಎಂದು ಕರೆಯಲಾಗುತ್ತಿದೆ. ದಿ. ೧೫/೦೨/೧೯೪೩ರಂದು ಇದೇ ತಾಲೂಕಾ ಬೋರ್ಡ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಹರಾಜಿನಲ್ಲಿ ಖರೀದಿಸಿದ ಸ್ಥಿರಾಸ್ಥಿಯ ಮಾರಾಟ ಕ್ರಯ ಪತ್ರದಲ್ಲಿ ಈ ರಸ್ತೆಯ ಹೆಸರನ್ನು "ಬೋಳಿ ಬಂಗ್ಲೆ" ರಸ್ತೆಯಲ್ಲಿರುವ ಎಂದೇ ದಾಖಲಿಸಲಾಗಿದೆ.

ಕಂಬೆರ್‌ಲ್ಯಾಂಡಿನ "ದ ವರ್ಕಿಂಗ್‌ಟನ್ ಆಯರನ್ ಆ್ಯಂಡ್ ಸ್ಟೀಲ್ ಕಂಪನಿ ಲಿಮಿಟೆಡ್"ನ ಜನರಲ್ ಮ್ಯಾನೇಜರ್ ಮತ್ತು ಏಜೆಂಟ್ ಆಫ್ ಇಂಡಿಯಾ ಇವರ ವಸತಿಗೃಹ

ಕ್ರಿ.ಶ. ೧೮೮೧ರಲ್ಲಿ ಕಮೀಷನರ್ ಆಳ್ವಿಕೆ ಕೊನೆಗೊಂಡಿತು. ಸೂಪರಿಂಟೆಂಡೆಂಟ್ ಹುದ್ದೆಯೂ ರದ್ದಾಯಿತು. ಅದರ ಜಾಗದಲ್ಲಿ ಪ್ರತಿ ಜಿಲ್ಲೆಗೊಬ್ಬರಂತೆ ಡಿವಿಜನಲ್ ಕಮೀಷನರ್ ಎಂಬ ಅಧಿಕಾರಿಗಳನ್ನು ನೇಮಿಸುವ ಪರಿಪಾಠ ಆರಂಭವಾಯಿತು. ಶಿವಮೊಗ್ಗದ ಕುಂಸಿ, ಪೈಥಾನ್ ಮತ್ತು ಶಂಕರಗುಡ್ಡ ಈ ಪ್ರದೇಶಗಳಲ್ಲಿ ಕ್ರಿ.ಶ. ೧೯೦೫ರಲ್ಲಿ "ದ ವರ್ಕಿಂಗ್‌ಟನ್ ಆಯರನ್ ಆ್ಯಂಡ್ ಸ್ಟೀಲ್ ಕಂಪನಿ ಲಿಮಿಟೆಡ್ ಭೋಗ್ಯಕ್ಕೆ (ಲೀಸ್) ಕಲ್ಲಿದ್ದಲು ಗಣಿಗಾರಿಕೆಗೆ ಅನುಮತಿ ಪಡೆದುಕೊಂಡಿತಲ್ಲದೆ ಯುನೈಟೆಡ್ ಸ್ಟೀಲ್ ಕಂಪನೀಸ್ ಲಿಮಿಟೆಡ್, ಶಿವಮೊಗ್ಗ ಎಂಬ ಹೆಸರಿನಿಂದ ಕಾರ್ಯಾಚರಣೆ ಆರಂಭಿಸಿತು. ಕ್ರಿ.ಶ. ೧೯೦೬ರ ಕೊನೆಯಲ್ಲಿ ಏಜೆಂಟ್ ಫಾರ್ ಇಂಡಿಯಾನೂ ಆದ ಕಂಪನಿಯ ಜನರಲ್ ಮ್ಯಾನೇಜರ್ ಸಿ.ಆರ್. ವೆಲೆಂಟಾಯಿನ್ ಎಂಬಾತ ಭಾರತಕ್ಕೆ ಬಂದು ಶಿವಮೊಗ್ಗದಲ್ಲಿದ್ದ "ಬೋಳಿ ಬಂಗ್ಲೆ"ಯನ್ನು ೧೯೧೮ರ ತನಕ ತನ್ನ ಅಧಿಕೃತ ವಾಸದ ಮನೆಯನ್ನಾಗಿ ಮಾಡಿ ಅಧಿಕಾರ ಚಲಾಯಿಸುತ್ತಾನೆ. ಇದರ ಕುರಿತು ಅಮೇರಿಕದಲ್ಲಿ ಕ್ರಿ.ಶ. ೧೮೯೧ರಿಂದ ಪ್ರಕಟವಾಗುತ್ತಿರುವ "ದ ಇಂಜಿನೀಯರ್" ಎಂಬ ಮ್ಯಾಗಝೈನ್‌ನ ೧೯೧೬ರಿಂದ ೧೯೨೬ರವರೆಗಿನ ಸಂಚಿಕೆಗಳಲ್ಲಿ ಈ ಬೋಳಿ ಬಂಗ್ಲೆ ಕುರಿತು ಫೋಟೋ ಸಹಿತ ಸ್ವಾರಸ್ಯಕರ ಮಾಹಿತಿಗಳು ಲಭ್ಯವಾಗುತ್ತವೆ.

"ಬಂಗ್ಲೆ"ಯ ಲಕ್ಷಣಗಳು

One of the most important features of this colonial Bunglow is an additional floor with multi-planned gabled roofs and monkey tops with a profusion of ornamentation. The monkey top was a pointed hood or canopy of tiles over a window composed of vertical wooden slats and topped of with a crest. Though the monkey top was often added as a touch to many buildings in the strictly classical style, it characterizes the Gothic style. The monkey top was ideal for the climate of Shivamogga. It helped to keep away the sun in summer and cold in winter and rainwater during monsoon from entering the house.

Other Features

* Drive away leading to the porch with elaborate trelliswork and Tuscan pillars, pierced parapets or balustrade railings and stone work at the wall corners and intricate floral or symbolic design in the pedimental front top.

* Cast Iron decoration such as weathercocks, intricate grill works and stained glass windows are some of the distinguished features.

* Since only the engineers who laid the plan for the building were British, but the craftsmen executing the design were locals.







* Plaster decoration, which is a typical feature of Indian architecture, is found on the bungalows.

* The roofing consisted of painted Mangalore tiles with design work done at the back.

* This Bungalow has copied some of the architectural designs of the Bungalow constructed by Sir Mark Cubbon in Bangalore which later on became the permanent residence of the Mysore Commissioner's. This is currently the residence of the Governor of Karnataka and is known as "Raj Bhavan".

ಸಿ.ಆರ್. ವೆಲೆಂಟೈನ್ ಕಂಪನಿ ಬಹಳ ಶ್ರೀಮಂತವಾಗಿದ್ದು ತನ್ನದೇ ಆದ ಟ್ರ್ಯಾಮ್ ವೇ, ೨ ಅಡಿ ಗೇಜ್ ರೈಲ್ವೇ ಹಳಿ, ಡಿಪೋ, ಮತ್ತು ಶಿವಮೊಗ್ಗ ನಗರ, ಕುಂಸಿ, ಶೆರೆಗೆರೆ ಮತ್ತು ಶಂಕರಗುಡ್ಡಗಳಲ್ಲಿ ರೈಲ್ವೆ ನಿಲ್ದಾಣಗಳನ್ನು ಹೊಂದಿದ್ದು ಇದನ್ನು ಮ್ಯಾಂಗನೀಸ್ ಲೈನ್ ಅಥವಾ ಮ್ಯಾಂಗನೀಸ್ ರೋಡ್ ಎಂದು ಕರೆಯಲಾಗುತ್ತಿತ್ತು ಎಂದು ಬಣ್ಣಿಸಲಾಗಿದೆ.

೧೯೩೦ರ ಹೊತ್ತಿಗೆ ವೆಲೆಂಟೈನ್ ಕಂಪನಿ ತನ್ನ ಕಾರ್ಯನ್ನು ಸ್ಥಗಿತಗೊಳಿಸಿದ್ದರಿಂದ ಇದರ ಸ್ಥಿರ, ಚರಾಸ್ತಿಗಳನ್ನು ಮೈಸೂರು ಸರ್ಕಾರ ವಹಿಸಿಕೊಂಡಿತು. ಬಳಿಕ ಮೈಸೂರು ಮಹಾರಾಜರು "ದ ಮೈಸೂರ್ ಮಿನೆರಲ್ಸ್ ಲಿಮಿಟೆಡ್" ಎಂಬ ಹೆಸರಿನಲ್ಲಿ ಹೊಸ ಕಂಪನಿಯೊಂದನ್ನು ಆರಂಭಿಸಿ ಗಣಿಗಾರಿಕೆಯನ್ನು ಮುಂದುವರಿಸಿದರು.

ಅಂದಿನ ಕಂಪನಿಯ ರೈಲ್ವೇ ಸ್ಟೇಷನ್ ಇಂದಿನ ಶಿವಮೊಗ್ಗದ ಮುಖ್ಯ ರೈಲ್ವೇ ಸ್ಟೇಷನ್ನಾಗಿದ್ದು ಇಂದು "ಪ್ರವಾಸಿ ಬಂಗ್ಲೆ" ಎಂದು ಕರೆಯುವ ಸರ್ಕಿಟ್ ಹೌಸ್ ಅಂದಿನ "ಬೋಳಿ ಬಂಗ್ಲೆ"ಯೇ ಆಗಿದೆ. ಲೋಕೋಪಯೋಗಿ ಇಲಾಖೆ ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ.

ಈ ಬಂಗ್ಲೆಯ ಒಂದು ಭಾಗ ತುಂಗಾ ಮೇಲ್ದಂಡೆ ಯೋಜನೆಯ ಕಚೇರಿ ಬಳಕೆಗೆ ನೀಡಲಾಗಿದೆ. ಇನ್ನೊಂದಷ್ಟು ಜಾಗವನ್ನು ಸುವರ್ಣ ಸಂಸ್ಕೃತಿ ಭವನಕ್ಕೆ ನೀಡಲಾಗಿದೆ. ಈಗ ಬೋಳಿ ಬಂಗ್ಲೆಯ ಮೇಲ್ಛಾವಣಿಯನ್ನು ಮಂಗಳೂರು ಹಂಚಿನಿಂದ ಆರ್.ಸಿ.ಸಿ.ಗೆ ಬದಲಾಯಿಸಲಾಗಿದೆ.

ಬೋಳಿ ಬಂಗ್ಲೆ ಈಗ ವಸಾಹತುಷಾಹಿ ಮತ್ತು ವಸಾಹತೋತ್ತರ ರಾಜಕೀಯ ಶಕ್ತಿ ಮತ್ತು ಶ್ರೀಮಂತಿಕೆಯ ಸಂಕೇತವಾಗಿ ನಿಂತಿದ್ದು ಶಿವಮೊಗ್ಗ ನಗರದ ಮುಖ್ಯವಾದ ಪಾರಂಪರಿಕ ಕಟ್ಟಡಗಳಲ್ಲೊಂದಾಗಿ ಜೀವಂತಿಕೆ ಮೆರೆಯುತ್ತಿದೆ.

[ಕೃತಜ್ಞತೆ: Sri Krishnappa, builder of the existing building, Dr.Jagadeesh Agasibagilavar]

ಆಕರ ಗ್ರಂಥಗಳು

೧. Southern India: Its History, People, Commerce and Industrial Resources (Arnold Wright-1918).

೬೩

ಸುರಪುರ ಸಂಸ್ಥಾನದ ಪಂಚಾಂಗ: ಚಾರಿತ್ರಿಕ ವಿಶ್ಲೇಷಣೆ

ಅಮರೇಶ ಯತಗಲ್*

ಸುರಪುರ ಸಂಸ್ಥಾನದ ಅರಸರು ತಮ್ಮದೇ ಆದ ನಂಬಿಕೆ–ಸಂಪ್ರದಾಯಗಳನ್ನು, ಆಚಾರ–ವಿಚಾರಗಳನ್ನು ಹೊಂದಿದ್ದರು. ಆ ಮೂಲಕ ತನ್ನ ಧಾರ್ಮಿಕ ಚಟುವಟಿಕೆಗಳನ್ನು ಪೂರೈಸುತ್ತಿದ್ದರು. ಇಂಥ ಧಾರ್ಮಿಕ ಚಟುವಟಿಕೆಗಳನ್ನು ನಿರ್ವಹಿಸುವಾಗ ಹಾಗೂ ಶುಭಕಾರ್ಯಗಳನ್ನು ಕೈಗೊಳ್ಳುವಾಗ, ದೇವರನ್ನು ಕೇಳುವ, ಪಂಚಾಂಗವನ್ನು ನೋಡುವ ಸಂಪ್ರದಾಯವು ಈ ಮನೆತನಗಳಲ್ಲಿ ಸಾಮಾನ್ಯವಾಗಿತ್ತು.

ಸುರಪುರ ಸಂಸ್ಥಾನದಲ್ಲಿ ಸುಮಾರು ಕ್ರಿ.ಶ. ೧೭೭೩ರಲ್ಲಿ 'ಸುರಪುರ ಪಂಚಾಂಗಂ' ಎಂಬ ಹೆಸರಿನಿಂದ ಈ ಪಂಚಾಂಗವನ್ನು ಪ್ರಾರಂಭಿಸಿದವರು ಸುರಪುರ ಸಂಸ್ಥಾನದ ಜೋಯಿಸರ ಮನೆದವರು. ಈ ಮನೆದವರು. ಈ ಮನೆತನದವರ ಹೆಸರು 'ಹೆಬ್ಬಾಳ' ಎಂದು. ಈ ಹೆಬ್ಬಾಳ ಒಂದು ಗ್ರಾಮವಾಗಿದ್ದು, ಇಂದಿನ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿದೆ. ಆರಂಭದಲ್ಲಿ ಶ್ರೀ ಶಂಕರಶಾಸ್ತ್ರಿ ಎಂಬುವವರು ಸುರಪುರಕ್ಕೆ ಬಂದು ನೆಲೆಸುತ್ತಾರೆ. ಇವರಿಗೆ ಸುರಪುರ ಸಂಸ್ಥಾನಿಕರು ಪಂಚಾಂಗವೊಂದನ್ನು ಪ್ರಾರಂಭಿಸಲು ಹೇಳುತ್ತಾರೆ.

ಶ್ರೀ ಶಂಕರಶಾಸ್ತ್ರಿಯವರ ಮನೆತನವು ಜ್ಯೋತಿಷ್ಯಶಾಸ್ತ್ರಕ್ಕೆ ಹೆಸರಾದುದಾಗಿತ್ತು. ಸುರಪುರ ಅರಸರ ಜನ್ಮಕುಂಡಲಿಯನ್ನು ಈ ಮನೆತನದವರೇ ಬರೆಯುತ್ತಿದ್ದರು. ಈ ಮನೆದವರಿಗೆ ಸಂಸ್ಥಾನದಲ್ಲಿ ಎಲ್ಲಿಲ್ಲದ ಗೌರವವಿತ್ತು. ನಾಲ್ವಡಿ ವೆಂಕಟಪ್ಪನಾಯಕನ ಜಾತಕವನ್ನು ಈ ಮನೆತದವರೇ ಬರೆದಿದ್ದರು. ಅದು ಸತ್ಯದಿಂದ ಕೂಡಿದ್ದುದು ಎಂಬುದಕ್ಕೆ ಕೆಳಗಿನ ಈ ಘಟನೆಯೊಂದನ್ನು ಹೇಳಲಾಗಿದೆ.

ರಾಣಿ ಈಶ್ವರಮ್ಮ ಮಂತ್ರಿಗೆ ಕಾಗದ ಪತ್ರಗಳ ಪೆಟ್ಟಿಗೆಯನ್ನು ತರಲು ಹೇಳುತ್ತಾರೆ. ಮಂತ್ರಿಯು ಪೆಟ್ಟಿಗೆಯಲ್ಲಿನ ಕಾಗದದ ಸುರುಳಿಯನ್ನು ತೆಗೆದು ಸುರಪುರ ಸಂಸ್ಥಾನದ ರೆಸಿಡೆಂಟನಾದ ಮೆಡೋಸ್ ಟೇಲರ್‌ನಿಗೆ ಕೊಡುತ್ತಾನೆ. ಆ ಸುರಳಿಯಲ್ಲಿ ರಾಜನ ಜಾತಕವಿರುತ್ತದೆ. ಅದನ್ನು ಬ್ರಾಹ್ಮಣನು ಓದಿ "ರಾಜನ ಜನನದ ವೇಳೆಯನ್ನು ಕಂಡುಹಿಡಿದು ಗ್ರಹಗಳ ಸ್ಥಿತಿಗತಿಯನ್ನು ವಿಚಾರ ಮಾಡಿ, ಅವುಗಳ ಫಲವನ್ನು ಅದರಲ್ಲಿ ಬರೆಯಲಾಗಿದೆ ಮತ್ತು ಆ ಫಲವು ಕೆಟ್ಟದ್ದಾಗಿದೆ" ಎಂದು ಹೇಳುತ್ತಾನೆ. ಅಲ್ಲದೇ ಈ ಜಾತಕದಲ್ಲಿ ರಾಜನು ಕೇವಲ ೨೪ ವರ್ಷಗಳ ಕಾಲ ಬದುಕುವುದನ್ನು ಬರೆದಿರುವುದಾಗಿ ತಿಳಿಸುತ್ತಾನೆ. ಈ ಜಾತಕವನ್ನು ಪರೀಕ್ಷೆ ಮಾಡಲು, ಇದರಲ್ಲಿಯ ಸತ್ಯವನ್ನು ತಿಳಿಯಲು ಜಾತಕವನ್ನು ನಾಸಿಕ್, ಕಾಶಿ ಮುಂತಾದೆಡೆಯಲ್ಲಿರುವ ಪಂಡಿತರುಗಳಿಗೆ ಕಳುಹಿಸುವರು. ಅವರಿಂದಲೂ ಸಹ ಇದೇ ಉತ್ತರ ಬಂದಿತು. ಇದನ್ನು ಬರೆದವರು ಸುರಪುರ ಪಂಚಾಂಗದ ಕರ್ತೃ ಶ್ರೀ ರಾಮಾಶಾಸ್ತ್ರಿಯವರು. ಇವರು ಸುರಪುರ ಪಂಚಾಂಗದ ಕರ್ತೃವಾದ ಹೆಬ್ಬಾಳ ನಾರಾಯಣಶಾಸ್ತ್ರಿಯವರ ಮುತ್ತಾತರು. ಅಂದರೆ ಶ್ರೀ ಶೇಷಶಾಸ್ತ್ರಿಯವರ ಅಜ್ಜನವರು[೧].

ಸುರಪುರ ಪಂಚಾಂಗವನ್ನು ಆರಂಭದಲ್ಲಿ ಮುದ್ರಣ ಸೌಕರ್ಯವು ಇಲ್ಲದ್ದರಿಂದ ಅದನ್ನು ಕೈಯಿಂದ ಬರೆಯುತ್ತಿದ್ದರು. ಇದನ್ನು ಬರೆಯುವ ಕಲಾಕಾರರು ಸಂಸ್ಥಾನದಲ್ಲಿದ್ದರು. ಇದು ಅಂದು ಸಂಸ್ಕೃತ ಭಾಷೆಯಲ್ಲಿ ಪ್ರಕಟವಾಗುತ್ತಿತ್ತು. ಕಾರಣ ಅಂದು ಸಂಸ್ಕೃತ ಬಲ್ಲವರು ಸಂಸ್ಥಾನದಲ್ಲಿದ್ದರು. ಹೀಗಾಗಿ ಸುರಪುರ ಸಂಸ್ಥಾನದ ಅರಸರ ಕಾಲದಲ್ಲಿ ಅನೇಕ ಸಂಸ್ಕೃತ ಕೃತಿಗಳು ಹೊರಬಂದಿದೆ. ಸಂಸ್ಕೃತ ಪಂಡಿತರುಗಳು ಆಸ್ಥಾನದಲ್ಲಿದ್ದು ಬರವಣಿಗೆಗಾಗಿ ಸಂಸ್ಕೃತವನ್ನು ಬಳಸುತ್ತಿದ್ದರು. ನಂತರ ಈ ಸಂಸ್ಥಾನವು ಪೇಶ್ವೆಯವರ ಅಧೀನಕ್ಕೆ ಬಂದಾಗ, ಮರಾಠಿ ಭಾಷೆಯು ಆಡಳಿತದಲ್ಲಿ ಪ್ರಮುಖವಾದ ಸ್ಥಾನವನ್ನು ಹೊಂದಿತು. ಹೀಗಾಗಿ ಸುರಪುರ ಪಂಚಾಂಗವನ್ನು ಕ್ರಿ.ಶ. ೧೮೮೦ರಿಂದ ಮರಾಠಿ ಭಾಷೆಯಲ್ಲಿ ಹೊರತಂದರು. ಮರಾಠಿಯ ಜೊತೆಜೊತೆಗೆ ಕನ್ನಡ ಭಾಷೆಯಲ್ಲಿಯೂ 'ಭುವನೇಶ್ವರಿ ಪಂಚಾಂಗ' ಎಂಬ ಹೆಸರಿನಿಂದ ಪ್ರಕಟವಾಯಿತು.

* ಸಹ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩ ೨೭೬. ಮೊ. ೯೯೭೨೮ ೪೧೨೫೬

ಸುರಪುರ ಸಂಸ್ಥಾನದ ಆಸ್ಥಾನದಲ್ಲಿದ್ದ ಕಲಾವಿದರು ಅದರಲ್ಲೂ ಮುಖ್ಯವಾಗಿ 'ಗರುಡಾದ್ರಿ' ಎಂಬ ಕಲಾಕಾರರ ಮನೆತನದವರಿಂದಲೇ ಈ ಪಂಚಾಂಗಕ್ಕೆ ಚಿತ್ರಗಳನ್ನು ಬಿಡಿಸಲಾಗಿದೆ. ಈ ಪಂಚಾಂಗದ ಪ್ರಾರಂಭದ ಪುಟದಲ್ಲಿ ಸರಸ್ವತಿ ಮತ್ತು ಗಣೇಶನ ಚಿತ್ರಗಳನ್ನು ಬರೆಯಲಾಗಿದೆ. ಅಲ್ಲದೇ ಸುರಪುರದ ಚಿತ್ರಕಲೆಯಲ್ಲಿ ಪ್ರಮುಖವಾಗಿ ಕಾಣುವ ಹೂ, ಬಳ್ಳಿ ಗಿಡಗಳ ಮಾದರಿಗಳನ್ನೂ ಚಿತ್ರಿಸಲಾಗಿದೆ. ಈ ಪಂಚಾಂಗದ ಚಿತ್ರರಚನೆಗಾಗಿ ಕೆಂಪು, ಹಳದಿ ಮತ್ತು ನೀಲಿ ವರ್ಣಗಳನ್ನು ಬಳಸುವುದರೊಂದಿಗೆ ಮಿಶ್ರ ವರ್ಣಗಳನ್ನೂ ಬಳಸಲಾಗಿತ್ತು.[೨] ಈ ಬಣ್ಣಗಳ ಬಳಕೆಯಿಂದ ತಯಾರಿಸಿದ ಪಂಚಾಂಗವೂ ಬಹಳ ಸುಂದರವಾಗಿ ಕಾಣುತ್ತಿತ್ತು.

ಸುರಪುರ ಪಂಚಾಂಗವನ್ನು ಅರಸರು ವಿವಿಧ ಸಂದರ್ಭಗಳಲ್ಲಿ ಬಳಸಿಕೊಳ್ಳುತ್ತಿದ್ದ ದೃಷ್ಟಾಂತಗಳು ದೊರೆಯುತ್ತವೆ. ಇಮ್ಮಡಿ ವೆಂಕಟಪ್ಪ ನಾಯಕ (ಕ್ರಿ.ಶ. ೧೭೭೩–೧೮೦೨)ನು ತನ್ನ ದಿನಚರ್ಯೆಯಲ್ಲಿ ಬರೆದಿಟ್ಟಿರುವಂತೆ "ರಾಜನು ಬೆಳಗಿನ ಎಲ್ಲಾ ಕ್ರಿಯಾವಿಧಿಗಳನ್ನು ಮುಗಿಸಿದ ಮೇಲೆ ದೇವರ ಮನೆಗೆ ಹೋಗಿ ಕುಳಿತುಕೊಳ್ಳುತ್ತಿದ್ದನು. ಆ ಸಮಯದಲ್ಲಿ ರಾಜಜೋಯಿಸನು ಆ ದಿನದ ಪಂಚಾಂಗವನ್ನು, ಗ್ರಹಗಳ ಬಲಾಬಲವನ್ನು ಹೇಳುತ್ತಿದ್ದನು.[೩] ಈ ಪಂಚಾಂಗವು ಸುರಪುರದ ಪಂಚಾಂಗವೇ ಆಗಿದೆ.

ಸುರಪುರ ಸಂಸ್ಥಾನದ ರಿಸಿಡೆಂಟ್‌ನಾಗಿದ್ದ ಮೆಡೋಸ್ ಟೇಲರನು ತನ್ನ ಕೃತಿಯಾದ "ದ ಸ್ಟೋರಿ ಆಫ್ ಮೈಯ್ ಲೈಫ್" ಕೃತಿಯಲ್ಲಿ ಜ್ಯೋತಿಷ್ಯಶಾಸ್ತ್ರದಲ್ಲಿ ಪರಿಣಿತಿಯನ್ನು ಪಡೆದ ಈ ಮನೆತನದ ಕುರಿತಾ ಕೆಲವು ಪರೀಕ್ಷೆಯ ಸಂದರ್ಭಗಳನ್ನು ದಾಖಲಿಸಿದ್ದಾನೆ. "ನಾನು ಒಂದು ಸ್ಥಳದಲ್ಲಿ ಟೆಂಟೊಂದನ್ನು ಹಾಕಿರುವೆನು. ಈ ಟೆಂಟಿನಿಂದ ನಾಳೆ ಯಾವ ದಿಕ್ಕಿನ ಬಾಗಿಲಿನಿಂದ ಹೊರಬರುವೆನೆಂದು ಹೇಳಬೇಕು" ಎಂದನು. ಅದಕ್ಕೆ ಜ್ಯೋತಿಷ್ಯರು ಒಪ್ಪಿಕೊಂಡರು. ಆದರೆ ಟೇಲರ್ ಜ್ಯೋತಿಷ್ಯರು ನಾಲ್ಕು ದಿಕ್ಕುಗಳಲ್ಲಿ ಯಾವುದಾದರೊಂದು ದಿಕ್ಕಿನ ಬಾಗಿಲಿನ ಹೆಸರನ್ನು ಹೇಳಬಹುದೆಂದು ತಿಳಿದು ಪೂರ್ವ ಮತ್ತು ಉತ್ತರ ಭಾಗದ ಮಧ್ಯದಲ್ಲಿ ಮತ್ತೊಂದು ಬಾಗಿಲನ್ನು ತೆರೆದು ಆ ಮೂಲಕ ಹೊರಬಂದಿದ್ದನು. ಈ ಕುರಿತಾಗಿ ಜ್ಯೋತಿಷ್ಯರನ್ನು ಕೇಳಿದಾಗ "ನೀವು ಈಶಾನ್ಯ ಭಾಗದಿಂದ ಬಂದಿರಿ" ಎಂದು ಹೇಳಿದರಂತೆ. ಆಗ ಮೆಡೋಸ್ ಟೇಲರ್‌ನಿಗೆ ಆಶ್ಚರ್ಯವಾಯಿತು.

ಶೇಷಶಾಸ್ತ್ರಿಯವರ ಚಿಕ್ಕಪ್ಪನವರಾದ ನಾರಾಯಣಶಾಸ್ತ್ರಿಯವರು ಮರಾಠಿಯಲ್ಲಿ ಈ ಪಂಚಾಂಗವನ್ನು ಪ್ರಕಟಿಸಿದರು. ಇವರೋರ್ವ ಸಂಗೀತಗಾರರೂ ಸಂಸ್ಕೃತ ಪಂಡಿತರೂ ಆಗಿದ್ದರು. ಅಲ್ಲದೇ ಜ್ಯೋತಿಷ್ಯ ಫಲಗಳ ನಿರೂಪಣೆಯಲ್ಲಿ ಸಿದ್ಧಹಸ್ತರಾಗಿದ್ದರು. ಅದರಂತೆ ಜ್ಯೋತಿರ್ವಿದ್ವಾನ್ ಶೇಷಶಾಸ್ತ್ರಿ ಹೆಬ್ಬಾಳರು ಸುರಪುರ ಪಂಚಾಂಗಕ್ಕೆ ಶ್ರೀ ಭುವನೇಶ್ವರಿ ಪಂಚಾಂಗವೆಂದು ಹೆಸರಿಟ್ಟರು. ಕಾರಣ ಇವರು ಕೆಲವು ದಿನಗಳ ಕಾಲ ಮೈಸೂರಿನ ಸಂಸ್ಕೃತ ಮಹಾರಾಜ ಪಾಠಶಾಲೆಯಲ್ಲಿ ವಿವಿಧ ದರ್ಶನಗಳ ಆಳವಾದ ಅಧ್ಯಯನ ಮಾಡಿದವರು. ಗೃಹಲಾಘವ, ಸೂರ್ಯಸಿದ್ಧಾಂತದ ಪ್ರಕಾರ ಗಣಿತವನ್ನು ಸಾಧಿಸಿ ಪಂಚಾಂಗವನ್ನು ಬರೆಯುವಲ್ಲಿ ನಿಷ್ಣಾತರಾಗಿದ್ದರು[೪].

ಕನ್ನಡದ ಬಗ್ಗೆ ಅಪಾರ ಅಭಿಮಾನವನ್ನು ಹೊಂದಿದ್ದ ಇವರು ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಕುರಿತಾದ ಆಳವಾದ ಅಧ್ಯಯನವನ್ನು ಕೈಗೊಂಡಿದ್ದರು. ಹೀಗಾಗಿ ಅಭಿಮಾನಕ್ಕಾಗಿ 'ಭುವನೇಶ್ವರಿ ಪಂಚಾಂಗ' ಎಂಬ ಪಂಚಾಂಗವನ್ನು ಪ್ರಾರಂಭಿಸಿದರು. ಹೀಗೆ ಹೆಬ್ಬಾಳ ಮನೆತನದವರಲ್ಲಿ ಮುಖ್ಯವಾಗಿ ಶೇಷಶಾಸ್ತ್ರಿ ಹೆಬ್ಬಾಳ, ರಾಮಾಶಾಸ್ತ್ರಿ ಹೆಬ್ಬಾಳ, ಶ್ರೀ ಶಂಕರಶಾಸ್ತ್ರಿ ಹೆಬ್ಬಾಳ, ಶ್ರೀ ನಾರಾಯಣಶಾಸ್ತ್ರಿ ಹೆಬ್ಬಾಳ' ಮುಂತಾದವರು. ಈ ಮನೆತನದ ವಂಶಸ್ಥರಾದ ರಾಮಶಾಸ್ತ್ರೀ ಹೆಬ್ಬಾಳರು ವಿಶ್ರಾಂತ ಪ್ರಾಧ್ಯಾಪಕರಾಗಿದ್ದು ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

೧೯೦೩ರಲ್ಲಿ ಒಂದು ವರ್ಷ ಸುರಪುರ ಪಂಚಾಂಗವು ಆರ್ಥಿಕ ತೊಂದರೆಯಿಂದ ಮುದ್ರಣವಾಗಲಿಲ್ಲ. ಪೂರ್ವದಿಂದಲೂ ಸುರಪುರ ಪಂಚಾಂಗವನ್ನು ಯಾಳಗಿ ಹಾಗೂ ಹೆಬ್ಬಾಳ ಮನೆತನದವರು ಕೂಡಿ ಮಾಡುತ್ತಿದ್ದರು. ಅವರಲ್ಲಿ ಸೋಮಶಾಸ್ತ್ರಿ ಯಾಳಗಿ, ಸೀತಾರಾಮಶಾಸ್ತ್ರಿ ಯಾಳಗಿ, ಶೇಷಶಾಸತ್ರಿ ಯಾಳಗಿ, ರಾಮಶಾಸ್ತ್ರಿ ಯಾಳಗಿ, ಮಂಗಳೂಮೂರ್ತಿ ಶಾಸ್ತ್ರಿಯಾಳಗಿ, ಕೇದಾರನಾಥಶಾಸ್ತ್ರಿಯ ಯಾಳಗಿ ಇವರುಗಳು ಈ ಪಂಚಾಂಗದ ಪ್ರಕಟಣೆಗಾಗಿ ಶ್ರಮಿಸಿದರು.

ಈ ಮನೆತನದವರಿಗೆ ಸುರಪುರ ಸಂಸ್ಥಾನದ ಅರಸರು ಇನಾಮು ಭೂಮಿಯನ್ನು ನೀಡಿದ್ದಾರೆ. ಇವರು ಇಂದಿಗೂ ಇನಾಮು ಭೂಮಿಯನ್ನು ಅನುಭವಿಸಿಕೊಂಡು ಹೋಗುತ್ತಿದ್ದಾರೆ. ಸುರಪುರದ ಅರಮನೆಯ ಎದುರುಗಡೆಯೇ ಇವರಿಗೆ ಒಂದು ಮನೆಯನ್ನು ನೀಡಿದ್ದರು. ಇಂದಿಗೂ ಇವರು ಸುರಪುರ ಸಂಸ್ಥಾನಿಕರ ಜನ್ಮಕುಂಡಲಿಯನ್ನು ಬರೆಯುತ್ತಾರೆ. ಸಾಂದರ್ಭಿಕವಾಗಿ ಪಂಚಾಂಗವನ್ನು ಹೇಳುತ್ತಾರೆ.

‘ಸುರಪುರ ಪಂಚಾಂಗ’ ಎಂದು ಹೆಸರಿದ್ದ ಸಂಸ್ಕೃತ ಭಾಷೆಯ ಪಂಚಾಂಗವು ಪ್ರಾರಂಭದಲ್ಲಿ ೧೫ ಪುಟಗಳದ್ದಾಗಿತ್ತು. ಪ್ರಾರಂಭದಲ್ಲಿ ಇದು ಕೈ ಬರಹದಿಂದ ಕೂಡಿತ್ತು. ಕೇವಲ ೨-೩ ಪ್ರತಿಗಳನ್ನು ಕೈಯಿಂದ ಬರೆಯುತ್ತಿದ್ದರು. ಸಂಸ್ಥಾನದ ಅಧೀನದ ವತನದಾರರು ಹಬ್ಬ-ಹರಿದಿನ, ತಮ್ಮೂರಿನ ಜಾತ್ರೆ ಇನ್ನೂ ಮುಂತಾದ ವಿಷಯಗಳನ್ನು ಬರೆದುಕೊಂಡು ಹೋಗುತ್ತಿದ್ದರು.

ನಂತರದಲ್ಲಿ ೫೦ ರಿಂದ ೬೦ ಪುಟಗಳಿಗೆ ಏರಿಸಲಾಯಿತು. ಲಿಥೋಗ್ರಾಫ್‌ನಿಂದ ಮೊದಲ್ಗೊಂಡು, ಅಚ್ಚಿನ ಮೊಳೆಗಳನ್ನು ಜೋಡಿಸಿ, ಕಂಪ್ಯೂಟರೀಕರಣದೊಂದಿಗೆ ಸದ್ಯ ೮೦ ಪುಟಗಳನ್ನು ಮೀರಿ ಈ ಪಂಚಾಂಗವನ್ನು ಮುದ್ರಿಸಲಾಗುತ್ತಿದೆ. ಮುದ್ರಣದಲ್ಲಿ ಪ್ರಗತಿ ಕಂಡ ಮೇಲೆ ಹೆಚ್ಚಿನ ಪ್ರತಿಗಳನ್ನು ಮುದ್ರಿಸಲಾಯಿತು. ಸದ್ಯ ಸಾವಿರಾರು ಪ್ರತಿಗಳು ಮುದ್ರಣಗೊಳ್ಳುತ್ತಿವೆ.

ಪ್ರಾರಂಭದಲ್ಲಿ ಸುರಪುರ ಅರಮನೆಯಿಂದ ಪ್ರಾರಂಭವಾದ ಈ ಪಂಚಾಂಗವು, ನಂತರ ಸುರಪುರ ಅಧೀನದ ಹಳ್ಳಿಗಳಿಗೆ ಪಸರಿಸಿತು. ಕೆಲವು ದಿನಗಳ ನಂತರ ರಾಜಾಕೃಷ್ಣಪ್ಪ ನಾಯಕರ ಕಾಲದಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಅದರಲ್ಲೂ ಮುಖ್ಯವಾಗಿ ತೆಲಂಗಾಣ, ಮರಾಠವಾಡ ಮತ್ತು ಕರ್ನಾಟಕದ ವಿವಿಧ ಭಾಗದಲ್ಲಿ ಪ್ರಚಾರದಲ್ಲಿತ್ತು. ಪೂನಾ ಪರಭಣಿ, ಹೈದರಾಬಾದ್, ಬೀದರ್, ಕಲಬುರಗಿ ಮತ್ತು ರಾಯಚೂರು ಭಾಗದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಈಗಲೂ ಈ ಭಾಗಗಳಲ್ಲಿ ಇದನ್ನು ಬಳಸುತ್ತಾರೆ. ಇಂದಿಗೂ ಕರ್ನಾಟಕದ ಕೆಲವು ಪಂಚಾಂಗಗಳು ಸುರಪುರದ ಪಂಚಾಂಗದ ವಿಷಯವನ್ನೇ ಅನುಸರಿಸುತ್ತಿವೆ. ಸೂಡಿಯ ಚಿದಂಬರ ಪಂಚಾಂಗ, ಗದಗಿನ ಪಂಚಾಂಗ[೫] ಇನ್ನೂ ಮುಂತಾದವುಗಳು.

ಅಂದಿನಿಂದ ಇಂದಿನವರೆಗೆ ಮುಂದುವರೆದಿರುವ ಸುರಪುರ ಪಂಚಾಂಗವು “ತಿಥಿ, ವಾರ, ನಕ್ಷತ್ರ, ಯೋಗ, ಭವಿಷ್ಯ, ವಾಸ್ತುಶಾಂತಿ, ಮುಹೂರ್ತ, ಶಿವಲಿಖಿತ ಚಕ್ರ, ವಧುವರರ ಸಾಲಾವಳಿ, ಕೋಷ್ಟಕ, ಮಕರ ಸಂಕ್ರಮಣ ವಿಚಾರ, ಹಸ್ತ ಸಾಮುದ್ರಿಕ, ಸ್ವಪ್ನ ಫಲ, ಹಲ್ಲಿ ಶಕುನ, ಅಂಗಸ್ಫುರಣ, ಒಕ್ಕಲುತನದ ವಿಷಯ, ಗೃಹವಾಸ್ತುಪ್ರಶ್ನೆ, ಉಪನಯನ ಮುಹೂರ್ತ, ಸೂರ್ಯ ಮತ್ತು ಚಂದ್ರಗ್ರಹಣ, ಗುರುಪುಷ್ಯಾಮೃತ, ಅಮವಾಸ್ಯೆ, ಹುಣ್ಣಿಮೆ, ಸಂಕಷ್ಟ ಚತುರ್ಥಿ, ಗುರುಗತ, ಶುಕ್ರಗತ, ಅಕ್ಷಾಂಶ, ರೇಖಾಂಶ ಮತ್ತು ದ್ವಾದಶಿಯ ಫಲ”[೬] ಇನ್ನೂ ಮುಂತಾದ ಅಂಶಗಳನ್ನು ಒಳಗೊಂಡಿದೆ.

ಅಲ್ಲದೇ ವಚನಕಾರರ ವಚನಗಳನ್ನು, ದಾಸರ ಪದಗಳನ್ನು, ಗಾದೆ ಮಾತುಗಳನ್ನು, ಹಿತ ನುಡಿಗಳನ್ನು, ನೀತಿ ಬೋಧನೆಯ ವಿಚಾರಗಳನ್ನು ಇತ್ತೀಚೆಗೆ ಮುದ್ರಿಸಲಾಗುತ್ತಿದೆ. ಉದಾಹರಣೆಗೆ ದಾಸರ ‘ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ’ ಇಂತಹ ಅಂಶಗಳನ್ನು ಪಂಚಾಂಗದ ಹಿಂಭಾಗದಲ್ಲಿ ಖಾಲಿ ಇರುವ ಸ್ಥಳದಲ್ಲಿ ಮುದ್ರಿಸುವರು. ಹೈದರಾಬಾದ್ ಕರ್ನಾಟಕದ ವಿವಿಧ ಪ್ರೇಕ್ಷಣೀಯ ಸ್ಥಳಗಳ ಇತಿಹಾಸ, ಮಹತ್ವದ ಅನೇಕ ದೇವಾಲಯಗಳ ಛಾಯಾಚಿತ್ರಗಳನ್ನು ಮುದ್ರಿಸಿ ಜನರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಅಲ್ಲದೇ ಒಳಪುಟಗಳಲ್ಲಿ ಶ್ರೀ ಗಣೇಶ, ಅರ್ಘ್ಯಮಂತ್ರಗಳು, ಶಿವಪಂಚಕೋಪವಾಸ, ಮೃತರ ಅರ್ಘ್ಯಗಳು, ಶ್ರೀ ಪ್ರಜ್ಞಾನಿವರ್ಧನಿ ಸ್ತೋತ್ರ, ಸೂರ್ಯ ನಮಸ್ಕಾರ ಮಂತ್ರ, ಭೂದೇವಿಯ ಪ್ರಾರ್ಥನೆ, ಮಕ್ಕಳ ದೃಷ್ಟಿದೋಷ ನಿವಾರಣ ಮಂತ್ರ, ಶ್ರೀ ಶಿವಸ್ತುತಿ, ಶ್ರೀ ತ್ರಿಪುರಾ ಸ್ತುತಿ, ಶ್ರೀ ಕಾರ್ತಿಕೇಯರನ್ನು ಸ್ತುತಿಸುವ ಬರಹಗಳನ್ನು ಮುದ್ರಿಸಲಾಗಿದೆ.

ಇಂದು ಸುರಪುರದಲ್ಲಿ ವಾಸವಾಗಿರುವ ಯಾಳಗಿಯ ಕೇದಾರನಾಥ ಶಾಸ್ತ್ರಿಗಳು ಜ್ಯೋತಿಷ್ಯವನ್ನು ಹೇಳುವ ಕಾಯಕದ ಮೂಲಕ ಪಂಚಾಂಗವನ್ನು ರಚಿಸುವ ಕಾರ್ಯವನ್ನೂ ಮಾಡುತ್ತಿದ್ದಾರೆ. ಪ್ರತಿ ವರ್ಷವೂ ಯುಗಾದಿಯ ದಿನದಂದು ಸುರಪುರದ ವಂಶಸ್ಥರು ಸುರಪುರದ ಅರಮನೆಯಲ್ಲಿ ಈ ಪಂಚಾಂಗವನ್ನು ಬಿಡುಗಡೆಗೊಳಿಸುವರು. ಸುರಪುರದ ಅರಸರಿಗೆ ಇದರ ಹನ್ನೊಂದು ಪ್ರತಿಗಳನ್ನು ನೀಡಲಾಗುತ್ತದೆ. ನಂತರ ಕರ್ನಾಟಕದ ವಿವಿಧ ಭಾಗಗಳಿಗೆ ಈ ಪಂಚಾಂಗವು ಮಾರಾಟಕ್ಕೆ ಹೋಗುತ್ತದೆ. ಶ್ರೀ ಕೇದಾರನಾಥ ಶಾಸ್ತ್ರಿಯವರು ಇದನ್ನು ರಚಿಸುತ್ತಾರೆ. ಅದನ್ನು ಮುದ್ರಿಸಿ ಮಾರಾಟ ಮಾಡುವ ಹಕ್ಕನ್ನು ತಾವೇ ಇಟ್ಟುಕೊಂಡಿದ್ದಾರೆ. ಕೆಲವು ದಿನಗಳವರೆಗೆ ರಂಗಂಪೇಟೆಯ ಆರ್ಯವೈಶ್ಯ ಸಂಘವು ಮುದ್ರಣ ಮತ್ತು ಮಾರಾಟ ಜವಾಬ್ದಾರಿ ಹೊತ್ತಿತ್ತು.

ಹೀಗೆ ಸುರಪುರದ ಅರಸರು ದೈವತ್ವದಲ್ಲಿ ಅಚಲವಾದ ಶ್ರದ್ಧಾಭಕ್ತಿಯನ್ನು ಹೊಂದಿದವರಾಗಿದ್ದುಕೊಂಡು, ಸಾಹಿತ್ಯ, ಸಂಸ್ಕೃತಿಯ ಕುರಿತು ಅಪಾರ ಕಳಕಳಿಯುಳ್ಳವರಾಗಿದ್ದರಿಂದ ಪಂಚಾಂಗವನ್ನು ಪ್ರಾರಂಭಿಸಿದವರು. ಈ ಮೂಲಕ ತಮ್ಮ ಆಧ್ಯಾತ್ಮಿಕ ಒಲವನ್ನು ತೋರ್ಪಡಿಸಿದರು. ಜೊತೆಗೆ ಆತ್ಮವಿಶ್ವಾಸವನ್ನು ಬೆಳೆಸುವಲ್ಲಿ ಸಹಕಾರಿಯಾಗುವಂತೆ ಇದನ್ನು ರೂಪಿಸಲು ಕಾರಣೀಕರ್ತರಾದರು. ಇದು ಈ ಮನೆತನದ ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವದ ಮೈಲುಗಲ್ಲಾಗಿದೆ.

ಅಡಿಟಿಪ್ಪಣಿಗಳು

೧. ಕಪಟರಾಳ ಕೃಷ್ಣರಾವ್, ಸುರಪುರ ಸಂಸ್ಥಾನ ಇತಿಹಾಸ, ೧೯೭೭, ಪುಟ ೧೭೧.

೨. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ, ಸುರಪುರ ಚಿತ್ರಕಲೆ, ಸರಚಂದ್ರ ಪ್ರಕಾಶನ, ಚಿತ್ತಾಪುರ, ೨೦೧೦, ಪು೧ ೮೩–೮೪.

೩. ಕಪಟರಾಳ ಕೃಷ್ಣರಾವ್, ಸುರಪುರ ಸಂಸ್ಥಾನ ಇತಿಹಾಸ, ೧೯೭೭, ಪುಟ ೧೨೭.

೪. ಡಾ. ಲಕ್ಷ್ಮೀಕಾಂತ ಮೊಹರೀರ, ಸಂಸ್ಕೃತ ಸಾಹಿತ್ಯಕ್ಕೆ ಸುರಪುರ ಸಂಸ್ಥಾನದ ಕೊಡುಗೆ, ಶ್ರೀ ಸುಶಮೀಂದ್ರ ಸೇವಾ ಪ್ರತಿಷ್ಠಾನ, ನಂಜನಗೂಡು, ೨೦೧೦, ಪುಟ ೧೯೬.

೫. ಶ್ರೀ ಕೇದಾರನಾಥಶಾಸ್ತ್ರಿ, ಪಂಚಾಂಗಕರ್ತರು, ಸುರಪುರ ಇವರ ಹೇಳಿಕೆಯಿಂದ.

೬ ನಾಗರಾಜ ಅಣ್ಣಪ್ಪ ಜಮದರಖಾನಿ, ಸುರಪುರ ಪಂಚಾಂಗದ ಮಹಿಮೆ, ಸುರಗಿರಿ, ಸ್ಮರಣ ಸಂಚಿಕೆ, ಸ್ವಾಗತ ಸಮಿತಿ, ಯಾದಗಿರಿ ಜಿಲ್ಲಾ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನ, ಸುರಪುರ, ಪುಟ ೪೯೭.

೬೪

ಕೊಪ್ಪಳದ ಗವಿಮಠದ ಮಹಾಯಾತ್ರೆ

ಹೆಚ್. ಚಂದ್ರಶೇಖರ*

ಪೀಠಿಕೆ

ಹಿಂದಿನ ಹೈದ್ರಾಬಾದ್ ಸಂಸ್ಥಾನದ ಕಾಲದಿಂದಲೂ ಇಂದಿಗೂ ಕೊಪ್ಪಳದ ಗವಿಮಠ ಸುಪ್ರಸಿದ್ಧ ಲಿಂಗಾಯತ ಧರ್ಮದ ಕೇಂದ್ರವಾಗಿದೆ. ಆದರೆ ಇದು ಹಿಂದೆ ಬೌದ್ಧಧರ್ಮದ ವಿಹಾರವಾಗಿತ್ತು. ನಂತರ ಜೈನ ಬಸದಿಯಾಗಿತ್ತು. ನಂತರ ಲಿಂಗಾಯತ ಧರ್ಮಕ್ಕೆ ಧರ್ಮಾಂತರಗೊಂಡಿತು. ಈ ಮಹಾಯಾತ್ರೆಯನ್ನು ಇಂದಿನ ಗವಿಮಠದ ಪರಿಸರದಲ್ಲಿ ಲಭ್ಯವಿರುವ ಶಾಸನಗಳ, ರೇಖಾಚಿತ್ರಗಳ ಮತ್ತು ಶಿಲ್ಪಗಳ ಆಧಾರಗಳಿಂದ ಗುರ್ತಿಸಲಾಗಿದೆ.

ಕೊಪ್ಪಳದ ಪ್ರದೇಶದಲ್ಲಿ ಪಾಲ್ಕಿ ಗುಂಡಿನ ಬಳಿಯಲ್ಲಿ ಬೃಹತ್ ಶಿಲಾಯುಗದ ಕಲ್ಗೋರಿಗಳಿವೆ. ಅಂದರೆ ಕ್ರಿ.ಪೂ. ೯೦೦-೨೦೦ ಅವಧಿಯಲ್ಲಿ ಈ ಪ್ರದೇಶದಲ್ಲಿ ಜನವಸತಿ ಇತ್ತು (ಸುಂಧರ, ಅ. ೧೯೭೬).[೧] ನಂತರ ಮೌರ್ಯ ಅಶೋಕನ ಕಾಲದಲ್ಲಿ ಈ ಪ್ರದೇಶ ಬೌದ್ಧ ಧರ್ಮದ ಕೇಂದ್ರವಾಗಿತ್ತು. ನಂತರ ಜೈನ ಧರ್ಮದ ಕೇಂದ್ರವಾಗಿತ್ತು. ಬಹುಶಃ ಕ್ರಿ.ಶ. ೧೧-೧೩ರ ಅವಧಿಯಲ್ಲಿ ಈ ಬಸದಿ ಶೈವ ಮಠವಾಯಿತು. ಕ್ರಿ.ಶ. ೧೫೨೧ರಲ್ಲಿ ಯಡಿಯೂರು ಸಿದ್ಧಲಿಂಗ ಯತಿಗಳು ಇಲ್ಲಿಗೆ ಬಂದಾಗ ಶೈವಧರ್ಮದಿಂದ ಲಿಂಗಾಯತ ಧರ್ಮಕ್ಕೆ ಧರ್ಮಾಂತರಗೊಂಡಿತು.

ಬೌದ್ಧ ಧರ್ಮದ ವಿಹಾರ

ಇಂದಿನ ಗವಿಮಠದ ಹಿಂಬದಿಯಲ್ಲಿ ಸುಪ್ರಸಿದ್ಧ ಅಶೋಕನ ಶಾಸನವಿದೆ. ಇದೂ ಅಲ್ಲದೆ ಮಳೆ ಮಲ್ಲಪ್ಪನ ಗುಡ್ಡದ ಮೇಲೆ ಇರುವ ಪಾಲ್ಕಿ ಗುಂಡಿನಲ್ಲಿಯೂ ಬುದ್ಧ ಧರ್ಮದ ಶಾಸನ ಇದೆ. ಮಠದ ಹಿಂಬದಿಯಲ್ಲಿರುವ ಬಾಲ್ಕೋನಿ (Balcony) ಆಕಾರದ ಗುಡಿನ ಕೆಳಗೆ ಅಶೋಕನ ಶಾಸನವು ಮಳೆಗಾಳಿಗೆ ಸಿಲುಕದೆ ಸುರಕ್ಷಿತವಾಗಿದೆ. ಹಾಗೆಯೇ ಪಾಲ್ಕಿ ಗುಂಡಿನಡಿಯಲ್ಲಿ (ಬಿಲ್ಲವಾಕಾರದ ಗುಂಡು) ಅಶೋಕನ ಶಾಸನ ಸುರಕ್ಷಿತವಾಗಿದೆ. ಅಶೋಕನು ಧರ್ಮಪ್ರಚಾರಕ್ಕೆ ಬುದ್ಧ ಸಂನ್ಯಾಸಿಗಳನ್ನು ಕಳಿಸುತ್ತಿದ್ದನು. ಜನನಿಬಿಡ ಪ್ರದೇಶಗಳಲ್ಲಿ ಬುದ್ಧ ಧರ್ಮದ ತತ್ತ್ವಗಳನ್ನು ತಿಳಿಸುವ ಶಾಸನಗಳನ್ನು ಕೆತ್ತಿಸುತ್ತಿದ್ದನೆಂಬುದು ಇತಿಹಾಸಕಾರರೆಲ್ಲರೂ ಒಪ್ಪುತ್ತಾರೆ. ಅಂದರೆ ಇತಿಹಾಸಪೂರ್ವ ಕಾಲದಲ್ಲಿದ್ದ ಕೊಪ್ಪಳ ಪ್ರದೇಶದಲ್ಲಿ ಅಶೋಕನ ಕಾಲಕ್ಕೆ (ಕ್ರಿ.ಪೂ. ೪-೩ನೇ ಶತಮಾನಕ್ಕೆ) ಬೌದ್ಧಧರ್ಮ ಪ್ರಸಾರದಲ್ಲಿತ್ತು. ಆಗ ಇಂದಿನ ಗವಿಮಠವು ಬೌದ್ಧವಿಹಾರವಾಗಿತ್ತು ಎಂದು ಊಹಿಸಿದರೆ ತಪ್ಪಾಗಲಾರದು (ಸುಂದರ ಅ. ೧೯೭೬).[೨]

ಜೈನ ಧರ್ಮ ಮತ್ತು ಬಸದಿ

ಬಹುಶಃ ಕ್ರಿ.ಶ. ೯ರ ಸುಮಾರಿಗೆ ಬೌದ್ಧಧರ್ಮ ಇಲ್ಲಿ ದುರ್ಬಲವಾಯಿತು, ಆಗ ಇಲ್ಲಿ ಜೈನಧರ್ಮ ಬಲವಾಗಿ ಬೇರೂರಿತು. ಇದಕ್ಕೆ ಆಧಾರಗಳು ಗವಿಮಠದ ಆವರಣದೊಳಗೂ, ಮಠದ ಹಿಂಬದಿಯಲ್ಲಿ ಕಲ್ಗುಂಡ ಮೇಲೆ ಕೆತ್ತಲಾಗಿರುವ ಜಿನಶಿಲ್ಪಗಳು. ಇಂದಿನ ಗವಿಮಠದ ಬಾಗಿಲಿನಿಂದ ಒಳಕ್ಕೆ ಪ್ರವೇಶ ಮಾಡಿದ ಕೂಡಲೇ ಗಚ್ಚಿನಲ್ಲಿ (Line Mortar) ಕಟ್ಟಲಾಗಿರುವ ಶಿಲ್ಪಗಳನ್ನು ಕಾಣುತ್ತೇವೆ. ಒಟ್ಟು ೨೪ ಕೋಷ್ಠಗಳಿವೆ. ಅವುಗಳಲ್ಲಿ ಬಿಡಿಸಲಾಗಿರುವ ತೀರ್ಥಂಕರ ಶಿಲ್ಪಗಳು ಮಳೆಗಾಳಿಗೆ ಸಿಲುಕಿ ಭಗ್ನಗೊಂಡಿವೆ. ಆದರೂ ಶಿಲ್ಪಗಳನ್ನು ಸ್ವಲ್ಪಮಟ್ಟಿಗೆ ಗುರ್ತಿಸಬಹುದು.

ಅಲ್ಲಿಂದ ಮುಂದೆ ಒಂದು ಚಿಕ್ಕ ಬಾಗಿಲನ್ನು ದಾಟಿ ಹೋದರೆ ಇನ್ನೊಂದು ಬಂಡೆ ಸಿಗುತ್ತದೆ. ಈ ಎರಡು ಬಂಡೆಗಳ ಮಧ್ಯ ಸುಮಾರು ಮೂರು ಅಡಿಯಷ್ಟು ಅಗಲದ ಕೊರಕಲು (crack) ಇದೆ. ಈ ಕೊರಕಲಿನಲ್ಲಿ ಇಳಿದರೆ ಎಡಗಡೆ ಒಂದು ಅಪೂರ್ಣ ಬಾಹುಬಲಿಯ ಶಿಲ್ಪ ಇದೆ. ಇದೊಂದು ಸೀಣುಕಲ್ಲಿನ ಬಂಡೆ (Gneisic Bounder) ಕಪ್ಪು ವರ್ಣದ ಖನಿಜಗಳು ಶೇಖರಗೊಂಡಿರುವುದರಿಂದ ಈ ಶಿಲ್ಪವನ್ನು ಸ್ಥಳೀಯರು ಬೆತ್ತಲಮ್ಮ ಎಂದು ಕರೆಯುತ್ತಾರೆ. ಅಷ್ಟೆ ಅಲ್ಲದೆ ಒಂದು ಕಬ್ಬಿಣದ ಮೊಳೆಗೆ ಹಸಿರು ವರ್ಣದ ಬಳೆಗಳನ್ನು ಹಾಕಿದ್ದಾರೆ. ಇದಿಷ್ಟು ಗವಿಮಠದ ಒಳಗಡೆ ಇರುವ ಜೈನಧರ್ಮದ ಕುರುಹುಗಳು.

* # ೭೭, ೬ನೇ ಕ್ರಾಸ್, ೬ನೇ ಮೇನ್, ಕೆ.ಹೆಚ್.ಬಿ. ಕಾಲೋನಿ, ೨ನೇ ಹಂತ, ಬಸವೇಶ್ವರನಗರ, ಬೆಂಗಳೂರು-೫೬೦೦೭೯. ಮೊ. ೯೪೪೯೪೦೬೭೪೬



ಗವಿಮಠದ ಹಿಂಬದಿಯಲ್ಲಿರುವ ಬಾಲ್ಕನಿಯಾಕಾರದಲ್ಲಿರುವ ಕಲ್ಲಾಸರೆಯಲ್ಲಿ ಕೆತ್ತಲಾಗಿರುವ ಅಶೋಕನ ಶಾಸನ.



ಜೈನ ತೀರ್ಥಂಕರರ ಶಿಲ್ಪಗಳ ಕೋಷ್ಠಗಳು ಎಡಬದಿಯ ಮೇಲೆ ಶಿವಲಿಂಗ ಇದೆ.

ಗವಿಮಠದ ಹಿಂಬದಿಯಲ್ಲಿರುವ ಅಶೋಕನ ಶಾಸನದ ಗುಂಡಿನ ಕೆಳಗೆ ನಿಷಧಿ ಶಿಲ್ಪಗಳಿವೆ. ಮುಕ್ಕೊಡೆಯ ಜಿನ ಶಿಲ್ಪ ಇದೆ.

ಕೊಪ್ಪಳ ನಗರ ಕೋಟೆಯ ಬಳಿ ಜೈನ ಬಸದಿಗಳಿವೆ. ಪಾರ್ಶ್ವನಾಥ ಬಸದಿ, ಮತ್ತಿತರ ತೀರ್ಥಂಕರರ ಅಪೂರ್ವ ಸುಂದರ ಶಿಲ್ಪಗಳಿವೆ. ಈ ಶಿಲ್ಪಗಳನ್ನು ಕಪ್ಪು ಒಡ್ಡು ಶಿಲೆಯಲ್ಲಿ (Black Doterit dysce) ಕಟೆಯಲಾಗಿದೆ. ಈ ಶಿಲ್ಪಗಳ



ಗವಿಮಠದ ಆವರಣದೊಳಗಿರುವ ಒಂದು ಸೀಣೆಕಲ್ಲಿನಲ್ಲಿ ಕೆತ್ತಲಾಗಿರುವ ಅಪೂರ್ವ ಬಾಹುಬಲಿ ಶಿಲ್ಪಿ.



ಬೆತ್ತಲಮ್ಮ ಎಂದು ಜನಪದರು ಕರೆಯುವ ಅಪೂರ್ಣ ಬಾಹುಬಲಿ ಶಿಲ್ಪ ಕೆಳಗೆ ಹಸಿರು ಬಳೆಗಳನ್ನು ನೇತು ಹಾಕಲಾಗಿದೆ.



ಗವಿಮಠದ ಹಿಂಬದಿಯ ಕಲ್ಲು ಗುಂಡಿನ ಮೇಲೆ ಕೆತ್ತಲಾಗಿರುವ ನಿಷಿಧಿ ಶಿಲ್ಪ.



ನಿಷಿಧಿ ಶಿಲ್ಪದ ಬಳಿಯೇ ಕೆತ್ತಲಾಗಿರುವ ಮಕ್ಕೊಡೆಯ ಜಿನಶಿಲ್ಪ.

ಕಾಲವನ್ನು ಕ್ರಿ.ಶ. ೧೦ನೇ ಶತಮಾನವೆಂದು ಗುರ್ತಿಸಲಾಗಿದೆ. ಇಂದಿಗೂ ಈ ಬಸದಿಯ ಸುತ್ತು ಮುತ್ತಲೂ ಸ್ಥಳೀಯ ಜೈನ ಸಮುದಾಯ ವಾಸಿಸುತ್ತದೆ.

ಶೈವಧರ್ಮ

ಕ್ರಿ.ಶ. ೯ನೇ ಶತಮಾನದಲ್ಲಿ ಆದಿಶಂಕರಾಚಾರ್ಯರು ಭಾರತದ ಉದ್ದಗಲಕ್ಕೂ ಪ್ರವಾಸ ಮಾಡಿ ಶೈವಧರ್ಮವನ್ನು ಪುನರುತ್ಥಾನಗೊಳಿಸಿದರು. ಬಹುಶಃ ಇದೇ ಅವಧಿಯಲ್ಲಿ ಕೊಪ್ಪಳ ಜೈನ ಬಸದಿಯು (ಇಂದಿನ ಗವಿ ಮಠ) ಶೈವ ಧರ್ಮಕ್ಕೆ ಮತಾಂತರಗೊಂಡಿತು. ಆಗಲೇ ವಿವರಿಸಲಾದ ತೀರ್ಥಂಕರರ ಕೋಷ್ಠಗಳ ಮಧ್ಯದಲ್ಲಿ ಒಂದು ಶಿವಲಿಂಗ ಕಾಣುತ್ತದೆ. ಶ್ರೀಮಠದ ಹಿಂದಿರುವ ಒಂದು ಕಲ್ಗುಂಡಿನ ಕೆಳಗೆ ಅಮೃತೇಶ್ವರ ದೇವಾಲಯ ಇದೆ. ಈ ದೇವಾಲಯದ ಒಳಕ್ಕೆ ಹೋದರೆ ಒಂದು ಶಿವಲಿಂಗ ಕಾಣುತ್ತದೆ. ಈ ಶಿವಲಿಂಗದ ಹಿಂಬದಿಯಲ್ಲಿ ೬೩ ದೀಪಗಳನ್ನು ಬಂಡೆಯಲ್ಲಿ ಕೆತ್ತಲಾಗಿದೆ. ಇವು ಅರುವತ್ತು ಮೂರು ಪುರಾತನರನ್ನು ಪ್ರತಿನಿಧಿಸುತ್ತವೆ. ಅಂದರೆ ಕ್ರಿ.ಶ. ೧೦-೧೧ರಲ್ಲಿ ಶೈವಧರ್ಮ ಗಟ್ಟಿಯಾಗಿ ಬೇರೂರಿತ್ತು.



ಗವಿಮಠದ ಹಿಂಬದಿಯಲ್ಲಿರುವ ಗ್ರಾನೈಟ್ ಬಂಡೆಯ ಗವಿಯೊಳಗಿರುವ ಅಮೃತೇಶ್ವರ ದೇವಸ್ಥಾನ.

ಲಿಂಗಾಯತ ಧರ್ಮದ ಪ್ರವೇಶ

ಕ್ರಿ.ಶ. ೧೦ರಿಂದ ಶೈವಧರ್ಮದ ಕೇಂದ್ರವಾಗಿ ಬೆಳದ ಈ ಮಠದ ಪ್ರದೇಶದಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಡೆದ ವಚನಕಾರರ ಪ್ರಭಾವ ಬಿದ್ದಿರುವುದಕ್ಕೆ ಕಾವ್ಯಗಳ ಆಧಾರಗಳಾಗಲೀ, ವಚನಗಳ ಆಧಾರಗಳಾಗಲೀ ಶಿಲ್ಪಗಳ ಆಧಾರಗಳಾಗಲೀ ಸದ್ಯಕ್ಕೆ ಲಭ್ಯವಿಲ್ಲ. ಹಾಗಿದ್ದರೆ ಶೈವಧರ್ಮದ ಮಠ ಅಥವಾ ಕೇಂದ್ರ, ಲಿಂಗಾಯತ ಧರ್ಮಕ್ಕೆ ಯಾವಾಗ ಮತಾಂತರಗೊಂಡಿತು? ಈ ಪ್ರಶ್ನೆಗೆ ಕೃಷ್ಣದೇವರಾಯನ ಕಾಲದ ಕಾಮಿಡಿಹಳ್ಳಿಯ ಶಾಸನ ಉತ್ತರಿಸುತ್ತದೆ (ಪರಮಶಿವಮೂರ್ತಿ ೨೦೧೦).[೩]

ಸದರಿ ಶಾಸನದಲ್ಲಿ ನಮೂದಿಸಲಾದ ತಿಥಿ ಕ್ರಿ.ಶ. ೧೫೨೧, ಏಪ್ರಿಲ್ ೧೭, ಬುಧವಾರಕ್ಕೆ ಸಮನಾಗುತ್ತದೆ. ಈ ಅವಧಿಯಲ್ಲಿ, ಕೃಷ್ಣದೇವರಾಯನ ರಾಣಿ ಚನ್ನಾದೇವಿಯು ಹಂಪೆಗೆ ಆಗಮಿಸಿದ್ದ ತೋಂಟದ ನಿರಂಜನ ದೇವರು ಮತ್ತು ಮಲ್ಲಿಕಾರ್ಜುನ ದೇವರು ಇವರ ಪಾದಪೂಜೆ ಮಾಡಿ ನಾಗಮಂಗಲ ಸ್ಥಳದ, ದಡಿಗದ ಸೀಮೆಯ ಕಾಮಿಡಿಯಹಳ್ಳಿಯನ್ನು ದಾನವಾಗಿ ನೀಡಿದಳು. ದಾನ ಪಡೆದ ತೋಂಟದ ನಿರಂಜನ ದೇವನು ಅಂದರೆ ಸುಪ್ರಸಿದ್ಧ ಲಿಂಗಾಯತ ಯತಿ ತೋಂಟದ ಸಿದ್ಧಲಿಂಗರೇ ಆಗಿದ್ದಾರೆ. ಕಾಮಿಡಿಹಳ್ಳಿಗೆ ಪೂರ್ವದ ಹೆಸರಾದ ಬಸವೋಜಯ್ಯಂಗಳಪುರವೆಂದು ಮರುನಾಮಕರಣ ಮಾಡಿ ಬಸವಣ್ಣನವರ ನಂತರ ಬಂದು ಲಿಂಗಾಯತ ಧರ್ಮಕ್ಕೆ ಪುನಃ ಚೈತನ್ಯ ತುಂಬಿದ ಯಡಿಯೂರು ಸಿದ್ಧಲಿಂಗೇಶ್ವರರಿಗೆ ದಾನ ಮಾಡಿದ್ದು ಸ್ಪಷ್ಟವಾಗಿ ದಾಖಲಾಗಿದೆ. ಈ ಶಾಸನದ ಇನ್ನೊಂದು ವಿಶೇಷತೆ ಏನೆಂದರೆ ತೋಂಟದ ಸಿದ್ಧಲಿಂಗರ ಜೀವಿತಾವಧಿಯಲ್ಲಿ (ಕ್ರಿ.ಶ. ೧೫೦೦–೧೫೮೪) ಬರೆಯಲಾದ ಪ್ರಪ್ರಥಮ ಶಾಸನ. ಈ ಕಾಮಿಡಿಹಳ್ಳಿಯು ಯಡಿಯೂರಿಗೆ ಸುಮಾರು ೧೫ ಕಿ.ಮೀ. ದೂರದಲ್ಲಿದೆ. ಈ ಹಳ್ಳಿಯ ಹೆಸರನ್ನು 'ಬಸವೋಜಯ್ಯಂಗಳಪುರ"ವೆಂದು ಮರುನಾಮಕರಣ ಮಾಡಿರುವುದು ಅತ್ಯಂತ ಉಚಿತವೆನಿಸುತ್ತದೆ.

ಹಂಪೆಗೆ ಧರ್ಮ ಪ್ರಚಾರ ಮತ್ತು ಪ್ರಸಾರ ಮಾಡುತ್ತಾ ಬಂದ ಯಡಿಯೂರು ಸಿದ್ಧಲಿಂಗೇಶ್ವರರು ಕೊಪ್ಪಳ ನಗರಕ್ಕೆ ಭೇಟಿ ನೀಡಿ ತಂಗಿರಬಹುದೆಂದು ಊಹಿಸಿದರೆ ಸರಿಯಾಗುತ್ತದೆ. ಈ ಸಂದರ್ಭದಲ್ಲಿ ಯಡಿಯೂರು ಸಿದ್ಧಲಿಂಗೇಶ್ವರರ ಪ್ರಭಾವಕ್ಕೆ ಒಳಗಾಗಿ ಶೈವಮಠವು ಲಿಂಗಾಯತ ಮಠವಾಗಿ (ವೀರಶೈವ ಮಠ) ಧರ್ಮಾಂತರವಾಯಿತು ಎಂದು ಹೇಳಿದರೆ ಇತಿಹಾಸಕ್ಕೂ ಮತ್ತು ಲಿಂಗಾಯತ ಧರ್ಮಕ್ಕೂ ಒಪ್ಪಿತವಾಗುತ್ತದೆ. ಅಲ್ಲಿಂದೀಚೆಗೆ ಗವಿಮಠವು ಗವಿಸಿದ್ಧೇಶ್ವರ ಮಠವಾಗಿ ಹೆಸರು ಪಡೆದು ನಾಡು, ನುಡಿಯ ಹಾಗೂ ಜನರ ಸೇವೆ ಮಾಡುತ್ತಾ ಬಂದಿದೆ. ಈಗ ಇದು ತ್ರಿವಿಧ ದಾಸೋಹದ ಪುಣ್ಯಕ್ಷೇತ್ರ.

ಶ್ರೀಮಠದ ಪರಂಪರೆಯ ಪೀಠಾಧಿಪತಿಗಳು

ಶ್ರೀಮಠ ಹೊರಡಿಸಿರುವ 'ಗವಿಶ್ರೀ ಸಂಪದ' ಎಂಬ ಕರಪತ್ರದಲ್ಲಿ ಇದುವರೆಗೆ ೧೭ ಗುರುಗಳು ಪೀಠಾಧಿಪತಿಗಳಾಗಿದ್ದಾರೆ. ಈಗಿರುವ ಸ್ವಾಮಿಗಳು ೧೮ನೇ ಪೀಠಾಧಿಪತಿಗಳು. ಪರಮಪೂಜ್ಯ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳೆಂದು ಹೆಸರುವಾಸಿ ಯಾಗಿದ್ದಾರೆ. ಶ್ರೀಮಠದ ಪೀಠಾಧಿಪತಿಗಳ ಹೆಸರುಗಳನ್ನು ಕೆಳಗೆ ಕೊಡಲಾಗಿದೆ.

೧. ಪರಮಪೂಜ್ಯ ಶ್ರೀ ರುದ್ರಮುನಿ ಮಹಾಸ್ವಾಮಿಗಳು.

೨. ಪರಮಪೂಜ್ಯ ಶ್ರೀ ಸಂಗಬಸವ ಚರಮೂರ್ತಿಗಳು.

೩. ಪರಮಪೂಜ್ಯ ಶ್ರೀ ಶಿವಲಿಂಗ ಮಹಾಸ್ವಾಮಿಗಳು.

೪. ಪರಮಪೂಜ್ಯ ಶ್ರೀ ಜ. ಚನ್ನವೀರ ಮಹಾಸ್ವಾಮಿಗಳು.

೫. ಪರಮಪೂಜ್ಯ ಶ್ರೀ ಕಾಶಿ ಕರಿಬಸವ ಮಹಾಸ್ವಾಮಿಗಳು.

೬. ಪರಮಪೂಜ್ಯ ಶ್ರೀ ಶಿವಲಿಂಗ ಮಹಾಸ್ವಾಮಿಗಳು.

೭. ಪರಮಪೂಜ್ಯ ಶ್ರೀ ಪುಟ್ಟಸು ಚನ್ನವೀರ ಮಹಾಸ್ವಾಮಿಗಳು.

೮. ಪರಮಪೂಜ್ಯ ಶ್ರೀ ಚನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು.

೯. ಪರಮಪೂಜ್ಯ ಶ್ರೀ ಸಂಗನಬಸವ ಮಹಾಸ್ವಾಮಿಗಳು.

೧೦. ಪರಮಪೂಜ್ಯ ಶ್ರೀ ಚನ್ನಬಸವ ಮಹಾಸ್ವಾಮಿಗಳು.

೧೧. ಪರಮಪೂಜ್ಯ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳು.

೧೨. ಪರಮಪೂಜ್ಯ ಶ್ರೀ ಹಿರಿ ಶಾಂತವೀರ ಮಹಾಸ್ವಾಮಿಗಳು.

೧೩. ಪರಮಪೂಜ್ಯ ಶ್ರೀ ಶಿವಶಾಂತ ವೀರ ಮಹಾಸ್ವಾಮಿಗಳು.

೧೪. ಪರಮಪೂಜ್ಯ ಶ್ರೀ ಮ.ನಿ.ಪ್ರ.ಜ. ಮರಿಶಾಂತವೀರ ಮಹಾಸ್ವಾಮಿಗಳು.

೧೫. ಪರಮಪೂಜ್ಯ ಶ್ರೀ ಮ.ನಿ.ಪ್ರ.ಜ. ಶಿವಶಾಂತವೀರ ಮಹಾಸ್ವಾಮಿಗಳು.

೧೬. ಪರಮಪೂಜ್ಯ ಶ್ರೀ ಮರಿಶಾಂತವೀರ ಮಹಾಸ್ವಾಮಿಗಳು.

(ಜನನ ೩-೧೨-೧೮೧೮, ಅಧಿಕಾರ ಗ್ರಹಣ ಡಿಸೆಂಬರ್ ೧೯೨೨, ಲಿಂಗೈಕ್ಯ ೦೧-೦೨-೧೯೬೭)

೧೭. ಪರಮಪೂಜ್ಯ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳು.

(ಈಗಿರುವ ಪೀಠಾಧಿಪತಿಗಳು)

ಈಗ ಶ್ರೀಮಠದ ಟ್ರಸ್ಟಿನ ಅಡಿಯಲ್ಲಿ ಒಟ್ಟು ೧೯ ವಿದ್ಯಾಸಂಸ್ಥೆಗಳು ಮತ್ತು ೫ ಇತರ ಸಂಸ್ಥೆಗಳನ್ನು ನಡೆಸಲಾಗುತ್ತದೆ. ಹೈದ್ರಾಬಾದ್ ಕರ್ನಾಟಕದ ಒಂದು ಅತ್ಯಂತ ಪ್ರಮುಖ ಮಠ ಶ್ರೀ ಗವಿಸಿದ್ಧೇಶ್ವರ ಮಠ ಎಂಬುದನ್ನು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಅಡಿಟಿಪ್ಪಣಿಗಳು

೧. ಸುಂದರ, ಅ. (೧೯೭೬), ಕೊಪ್ಪಳ, ಇತಿಹಾಸ ಪೂರ್ವಕಾಲ, ಗವಿದೀಪ್ತಿ, ಪು. ೧೫೭, ಶ್ರೀ ಗವಿಸಿದ್ದೇಶ್ವರ ಕೃಪಾ ಪೋಷಿತ ವಿದ್ಯಾರ್ಥಿ ಬಳಗ, ಶ್ರೀ ಗವಿಮಠ, ಕೊಪ್ಪಳ.

೨. ಸುಂದರ ಅ. (೧೯೭೬), ಕೊಪ್ಪಳ, ಪ್ರಾಚೀನ ಶಿಲ್ಪ, ಪ್ರಕಾಶಕರು ಅವರೇ. ಪು. ೧೫೪-೧೭೧.

೩. ಪರಮಶಿವಮೂರ್ತಿ ಡಿ.ವಿ. (೨೦೧೦), ಕೃಷ್ಣದೇವರಾಯನ ಶಾಸನಗಳು, ಕನ್ನಡ ವಿದ್ಯಾಲಯ, ಹಂಪಿ, ಪು. ೩೧-೩೨ ಮತ್ತು ೨೮೮-೨೯೦.

೬೫

ವಿದೇಶಿಯರ ನೋಟದಲ್ಲಿ ಕೋಲಾಟ

ಸೀಮಾ ಉಪಾಧ್ಯಾಯ*

ಪ್ರಾಚೀನ ಭಾರತದ ರಂಗಭೂಮಿಯು ಒಂದು ವಿಸ್ತಾರವಾದ ಕಲೆಯಾಗಿತ್ತು. ಅದರಲ್ಲಿ ಇತಿಹಾಸಕರ್ತ ಮಾತ್ರವಲ್ಲದೆ ನೃತ್ಯ, ಸಂಗೀತ, ಹಾಡುಗಾರಿಕೆ, ವಾದ್ಯಗಾರರು, ಚಿತ್ರಕಾರರು ಮತ್ತು ಬಹುಜ್ಞಾನವುಳ್ಳ ಕಲಾವಿದರನ್ನು ಹೊಂದಿತ್ತು. ನೃತ್ಯವು ಒಂದು ಭಾಷೆ. ಅದರಲ್ಲಿ ಬರುವ ಪ್ರತಿಯೊಂದು ಚಲನೆಯು ಒಂದು ಅಕ್ಷರ, ನೃತ್ಯದ ಸೌಂದರ್ಯವು, ಆ ಭಾಷೆಯನ್ನು ಅರಿಯಲು ಮತ್ತು ಭಾವನೆಯ ವಿಚಾರಗಳನ್ನು ಬಿಂಬಿಸಿದಾಗ ದೊರೆಯುತ್ತದೆ. ನೃತ್ಯವು ಸದಾಕಾಲಕ್ಕೆ ಜೀವನದ ಒಂದು ಸಮಗ್ರಕತಾವಶ್ಯಕವಾಗಿದೆ. ಭಾರತದ ಸಂಸ್ಕೃತಿಯ ಬಿಂಬವನ್ನು ನೃತ್ಯದಲ್ಲಿ ಕಾಣಬಹುದು. ನೃತ್ಯ ಒಂದು ಸರ್ವಾಂಗಿಣ ಕಲೆಯಾಗಿ, ದೈವೀ ಗುಣಗಳ ಅಗರವಾಗಿ ಜನರಿಗೆ ಸಂತೋಷ, ಮನರಂಜನೆ ಹಾಗೂ ಆತ್ಮಾನಂದವನ್ನು ನೀಡುವ ಸಾಧನವಾಗಿದೆ. ನೃತ್ಯವನ್ನು ಭಕ್ತಿಯಿಂದ, ಸೇವೆಯಿಂದ ಮತ್ತು ರಾಜನ ಆಸ್ಥಾನದಲ್ಲಿ ಪ್ರದರ್ಶನ ಕಲೆಯಾಗಿ ಪ್ರದರ್ಶನವಾಗುತ್ತಿತ್ತು.

ಇದನ್ನೇ ನಮ್ಮ ಕನ್ನಡದ ಆಸ್ತಿ ಡಾ. ದ.ರಾ. ಬೇಂದ್ರೆಯವರು ಸಹ ತಮ್ಮ ಕವನದಲ್ಲಿ ಹೇಳಿರುವುದು.

ಕುಣಿಯೋಣು ಬಾರಾ, ಕುಣಿಯೋಣು ಬಾ, ನಾನಲ್ಲ ನೀನಲ್ಲ, ನನ್ನಲ್ಲಿ ಸಾವಿಲ್ಲ ನೋವಿಲ್ಲ

ಇದ್ದದು ಮರೆಯೋಣ, ಇಲ್ಲದ್ದು ತೆರೆಯೋಣ ಹಾಲ್ಜೇನು ಸುರಿಯೋಣ, ಆ ಕ್ಷೀರ ಸಾಗರದಾನಂದದಾಗರ ತೆರಿ ತೆರೆದರ, ಹದಿನಾಲ್ಕು ಲೋಕಕ್ಕೆ ಚಿಮ್ಮಲಿ ಈ ಸುಖ ಹಿಗ್ಗಲಿ ಸಿರಿಮುಖ ಕುಣಿಯೋಣು ಬಾ. (ಔದುಂಬರ ಗಾಥೆ. ವಾಮನ ಬೇಂದ್ರೆ) ನೃತ್ಯವು ಒಂದು ನಿರ್ದಿಷ್ಟ ಕಾಲದಲ್ಲಿರುವ ಸಮಾಜದ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಇದು ಕೇವಲಮನರಂಜನೆಯ ಸಾಧನವಲ್ಲ ಜೀವನದ ಹಲವು ಮುಖಗಳನ್ನು ಸುಂದರವಾಗಿ ನಿರೂಪಿಸುವ ಸಾಧನವಾಗಿದೆ.

ಕ್ರಿ.ಶ. ೧೧-೧೬ನೇ ಶತಮಾನದಲ್ಲಿ, ಭಾರತದಲ್ಲಿ ಯಾವ ಶೈಲಿಯ ನೃತ್ಯವಿದ್ದಿತ್ತೆಂದು ಇದುವರೆಗೆ ಅಧ್ಯಯನ ನಡೆದಿರುವುದು ಅತ್ಯಲ್ಪವಾಗಿದೆ. ಖಚಿತವಾದ ದಾಖಲೆಗಳ ಆಧಾರ, ಸಂಶೋಧನಾ ಅಧ್ಯಯನದ ಚೌಕಟ್ಟಿನಲ್ಲಿ ಡಾ. ಚೂಡಾಮಣಿ ನಂದಗೋಪಾಲ್‌ರವರ 'Dance & Music in Temple architecture', ಡಾ. ತುಳಸೀರಾಮಚಂದ್ರರವರ 'ಪದಗತಿ ಪಾದಗತಿ', ಡಾ. ಕರುಣಾ ವಿಜಯೇಂದ್ರರವರ 'ಕರ್ನಾಟಕ ದೇವಾಲಯದಗಳಲ್ಲಿ ರಂಗಭೋಗ (ನೃತ್ಯ)' ಇವೆಲ್ಲದರದಿಂದ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ನೃತ್ಯಗಳ ಬಗ್ಗೆ ವಿವರಗಳು ದೊರೆಯುತ್ತವೆ. ಇವಲ್ಲದೆ ಅನೇಕ ಗ್ರಂಥಗಳು ನೃತ್ಯಕ್ಕೆ ಸಂಬಂಧಪಟ್ಟಂತೆ ಪ್ರಕಟವಾಗಿದೆ. ಈ ಗ್ರಂಥಗಳಲ್ಲಿ ನೃತ್ಯಗಳ ಬಗ್ಗೆ ಹೆಚ್ಚಿನ ವಿವರಗಳು ದೊರೆಯುತ್ತದೆ.

ಸಾಮಾನ್ಯ ಜನರ ಜೀವನದಲ್ಲಿ ಹಾಸು ಹೊಕ್ಕಿರುವ ನೃತ್ಯದ ಪ್ರಕಾರಗಳು ಯಾವ ಶೈಲಿಯೆಂಬುದು ಈವರೆಗೆ ಅಧ್ಯಯನ ನಡೆದೇ ಇಲ್ಲವೆಂದು ಹೇಳಬಹುದಾಗಿದೆ. ಹಲವು ವಿದ್ವಾಂಸರು ತಮ್ಮ ಸಂಶೋಧನೆಯ ಸಂದರ್ಭದಲ್ಲಿ ಶಾಸನ, ಶಿಲ್ಪ, ವಾಸ್ತುಶಿಲ್ಪಗಳಲ್ಲಿ ಇರುವಂತಹ ನೃತ್ಯದ ಬಗ್ಗೆ ಅನುಷಂಗಿಕವಾಗಿ ಪ್ರಸ್ತಾಪಿಸಿದ್ದಾರೆ, ಆದರೆ ಪ್ರವಾಸಿ ಕಥನಗಳಲ್ಲಿ ಬರುವ ಪ್ರವಾಸಿಗರು ಕಂಡಂತಹ ನೃತ್ಯಗಳ ಬಗ್ಗೆ ಯಾರು ಅಧ್ಯಯನಕ್ಕೆ ಬೆಳಕು ತೋರಿಲ್ಲವೆನ್ನಬಹುದು. ವಿದ್ವಾಂಸರು ತಮ್ಮ ಸೀಮಿತ ವ್ಯಾಪ್ತಿಯಲ್ಲಿ ನೃತ್ಯಗಳ ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಪ್ರವಾಸಿ ಕಥನದಲ್ಲಿ ಬರುವ ನೃತ್ಯಗಳ ಬಗೆಗೆ ಇನ್ನಷ್ಟು ವಿವರಗಳು ದೊರೆಕುವ ಸಾಧ್ಯತೆಗಳಿವೆ.

ಕ್ರಿ.ಶ. ೧೧-೧೬ನೆಯ ಶತಮಾನದಲ್ಲಿ ಕರ್ನಾಟಕ ರಾಜ್ಯಕ್ಕೆ ಬಂದಂತಹ ವಿದೇಶಿ ಪ್ರವಾಸಿಗರ ನೋಟದಿಂದ ಆಧರಿಸಿ ನರ್ತನಲೋಕ ಹಾಗೂ ಸಂಸ್ಕೃತಿಯ ಮೇಲೆ ಒಂದು ಪಕ್ಷಿನೋಟ ಬೀರುವ ಪ್ರಯತ್ನ ಮಾಡಲಾಗಿದೆ.

ಕೋಲಾಟ ಭಾರತದ ಎಲ್ಲಾ ವರ್ಗದ ಜನರ ಕುಣಿತ ಹಾಗೂ ಹಾಡಿನ ಮೂಲವಾಗಿದೆ. ಕೋಲಾಟವನ್ನು ಭರತಮುನಿಯು ತನ್ನ ನಾಟ್ಯಶಾಸ್ತ್ರದಲ್ಲಿ ದಂಡರಾಸಕ ಎಂದು ಉಲ್ಲೇಖಿಸಿದ್ದನ್ನು ಕಾಣಬಹುದು. ಈ ನೃತ್ಯವು ಮಾರ್ಗಿಯದಲ್ಲೂ ಹಾಗೂ ದೇಶಿಯದಲ್ಲೂ ಅಂದರೆ ಶಾಸ್ತ್ರಬದ್ಧವಾದ ನೃತ್ಯದಲ್ಲೂ ಹಾಗೂ ಜನಪದನೃತ್ಯದಲ್ಲೂ ನರ್ತಿಸುವುದನ್ನು ಕಾಣಬಹುದು.

* ಅಭಿನಯ ಸ್ಕೂಲ್ ಆಫ್ ಡ್ಯಾನ್ಸ್, # ೩೪/೬, ಕುಂಭಕೋಣಂ, ದೇಶಪಾಂಡೆ ನಗರ, ಹುಬ್ಬಳ್ಳಿ. ಮೊ. ೯೮೮೦೮೪೨೫೦೦

ಭಾರತದಲ್ಲಿ ಮಹಾರಾಷ್ಟ್ರ ಕರ್ನಾಟಕ, ಆಂಧ್ರ ಪ್ರದೇಶಗಳಲ್ಲಿ ಕೋಲಾಟವು ಬಹಳವಾದ ಪ್ರಸಿದ್ಧಿಯನ್ನು ಪಡೆದಿದೆ. ಮಧ್ಯಭಾರತದಲ್ಲಿ ಆಹಿರ್ ಚಮ್ಮಾರ್ ಜನರ ನೌಟಂಕಿ, ರಾಸ್, ಹೋಳಿ, ಎಂಬ ಕುಣಿತಗಳೂ, ಹಾಗೆಯೇ ಗುಜರಾತಿನ ಗರ್ಭಾ ನೃತ್ಯವು ಕೃಷ್ಣನ ರಾಸಕ್ರೀಡೆಯನ್ನು ಅನುಸರಿಸುವಂತಹುದು. ಪಂಜಾಬಿನ ದಂಡಿಯಾ ದೇಸಿ, ಸ್ವಾತಂತ್ರ್ಯಾನಂತರ ಪಾಕಿಸ್ತಾನಕ್ಕೆ ಸೇರಿದ ಪಂಜಾಬಿನ ಗಟ್ಕಾ ಢೋಲ್ ದಂಡಿಯಾನ್, ಹರಿಯಾಣದ ರಾಸಲೀಲಾ, ಇತ್ಯಾದಿಗಳು ಭಾರತ ದೇಶದ ಸಮಸ್ತ ಭಾಗದಲ್ಲಿಯೂ ಪಂಡಿತರಿಗೂ ಪಾಮರರಿಗೂ ಪ್ರಿಯವಾದ ಕೋಲಾಟ ಮಾತ್ರವಲ್ಲದೆ ಇನ್ನೂ ಅನೇಕ ನರ್ತನ ವಿಧಾನಗಳು ಕಂಡುಬರುತ್ತವೆ. ಇವುಗಳಲ್ಲಿ ಅನೇಕ ನೃತ್ಯ ಪ್ರಕಾರಗಳಿಗೆ ರಾಮಾಯಣ ಮಹಾಭಾರತ ಕಾಲದವರೆಗೂ ಇತಿಹಾಸವನ್ನು ಹೇಳುತ್ತಾರೆ. ಹಾಗೆಯೇ ದೆಹಲಿಯ ದಂಡಿಯಾರಾಸ್, ಕೇರಳದ ಕೋಲ್ ಕಳಿ, ಗೋವಾದ ಟೋನ್ಯಾಮೆಲ್, ಉತ್ತರ ಪ್ರದೇಶದ ಆಹಿರ್ (ಗೋವಳರು) ಜನಾಂಗದ ದಿವಾಲಿ, ಪೈದಂಡ, ಸಾಯಿರಾ, ರಾಜಸ್ತಾನದ ಗೈರ್ ಇಕ್ತಾಲೀ (ಇಕ್‌ತಾಲೀ ಎನ್ನುವುದು ಸಂಗೀತ ಶಾಸ್ತ್ರವು ಹೇಳುವ ಏಕತಾಲೀ ಪ್ರಬಂಧ ಹಾಗೂ ತಾಳ. ಇದರ ಅಂಗವು ಒಂದು ದ್ರುತ ಮಾತ್ರವಿತ್ತು). ತಮಿಳುನಾಡಿನ ಕಳಿ ಆಟ್ಟಂ, ಕೋಲಾಟ್ಟಂ, ಮಹಾರಾಷ್ಟ್ರದ ಕಲ, ಗುಜರಾತ್‌ನ ದಂಡರಾಸಕ, ರಾಸ ಮತ್ತು ಗರ್ಬಾ, ಪಂಜಾಬಿನ ದಾಂಕಾರ, ಕರ್ನಾಟಕದ ಕೋಲಾಟ, ಜಮ್ಮು ಕಾಶ್ಮೀರದ ಡೋಗ್ರೀ ಭಾಂಗ್ರಾ, ಬಿಹಾರದ ಝೂರ್ನೀ, ಹರಿಯಾಣದ ಸಾಂಗ್ ಮತ್ತು ರಾಸಲೀಲಾ, ವಂಗದೇಶದ ಕಾಟಿನಾಚ್, ಆಂಧ್ರಪ್ರದೇಶ ಹಾಗೂ ತೆಲಂಗಾಣದ ಕೋಲಾಟ್ಟಂ, ಕೋಲ್ ಕೋಲನ್ನಲು ಮತ್ತು ಕೋಲನ್ನಲು, ಒರಿಸ್ಸಾ, ರಾಜ್ಯದ ದಾರುವ ಖೊಂಡ್, ಅಸ್ಸಾಂನ ಬಿಹು, ಹಿಮಾಚಲ ಪ್ರದೇಶದ ದಂಡರಾಸ್, ಮಣಿಪುರದ ಜಾಗೋಯ್, ಸಿಕ್ಕಿಂನ ಲೊಯಂಬ, ಛತ್ತೀಸಗಢದ ಜ್ವಿರ್ಲಿಟಿ, ಅರುಣಾಚಲ ಪ್ರದೇಶ ಹಾಗೂ ತ್ರಿಪುರಾ ರಾಜ್ಯಗಳ ಸಯಿಲ (ಇದಕ್ಕೆ ದಂಡ ನಾಟಚ್ ಅಥವಾ ದಂಡರ್ ಪತೆ ಎಂಬ ಹೆಸರುಗಳೂ ಇವೆ). ಪಾಂಡಿಚೆರಿಯ ಚಿಂದು ಎಂಬ ಹೆಸರುಗಳನ್ನು ಹೊಂದಿ ಭಾರತ ದೇಶದ ಸಮಸ್ತ ಭಾಗದಲ್ಲಿಯೂ ಪಂಡಿತರಿಗೂ ಪಾಮರರಿಗೂ ಪ್ರಿಯವಾದ ಅನೇಕ ವಿಧಗಳ ಕೋಲಾಟ ನರ್ತನ ವಿಧಾನಗಳು ಕಂಡುಬರುತ್ತವೆ. ಮಿಜ್ಹೋರಾಮಿನ ಬೆಹ್ ಡೆನ್ ಖೇಮ್, ಪ್ಪಾರ್, ಜೈನ್ಪಿಯಾಸ್ ನೃತ್ಯಗಳ ಕೋಲುಗಳು ಪ್ಲೇಗ್‌ನಂತಹ ಕೆಟ್ಟ ರೋಗಮಾರಿಗಳನ್ನೂ, ಅನೇಕಾನೇಕ ದುಷ್ಟಶಕ್ತಿಗಳನ್ನೂ ಓಡಿಸುತ್ತದೆಂದು ನಂಬಿ ಪುರುಷರು ಕೋಲಾಟವಾಡುತ್ತ ನರ್ತಿಸುತ್ತಾರೆ. ಈ ಮೊದಲೇ ಉಲ್ಲೇಖಿಸಿದಂತೆ ಡೋಲಿನಂತಹ ಕೆಲವು ಲಯವಾದ್ಯಗಳೂ ಎಲ್ಲ ಕಡೆಗಳಲ್ಲಿಯೂ, ಕೆಲವೊಮ್ಮೆ ಅಪರೂಪವಾಗಿ ಕೊಳಲೂ, ಹಾಡುಗಾರಿಕೆಯೂ ಇರುತ್ತವೆ. ನರ್ತನಕಾರರು ಲಯವಾದ್ಯಗಳ ವಿವಿಧ ರೀತಿಯ ಪಾಟಾಕ್ಷರಗಳಿಗೆ, ಲಯಗತಿಗೆ ಪರಸ್ಪರವಾಗಿ ಕೋಲುಗಳನ್ನು ಬಡಿಯುತ್ತ, ಕಾಲುಗಳಲ್ಲಿ ಬೇರೆ ಬೇರೆ ಹೆಜ್ಜೆಗಳನ್ನು ಹಾಕುತ್ತ, ಮಂಡಲಗಳನ್ನು ರಚಿಸುತ್ತ ನರ್ತಿಸುತ್ತಾರೆ. ಪುರುಷರ ಕೋಲಾಟವು ಬಹುಪಾಲು ಯುದ್ಧದ ಹೋರಾಟದಲ್ಲಿ ಮಾಡಬಹುದಾದ ಕತ್ತಿವರಸೆ, ದಂಡದ ವರಸೆಗಳನ್ನು ನೆನಪಿಗೆ ತರುತ್ತವೆ. ಸ್ತ್ರೀಯರ ಕೋಲಾಟವೂ ಸೌಮ್ಯವಾಗಿದ್ದರೂ ಲಯವೈವಿಧ್ಯತೆಯಲ್ಲಿಯೂ, ದೇಹದ ಬಳುಕು, ಬಾಗುವಿಕೆಯಲ್ಲಿ ಪರಿಶ್ರಮವನ್ನು ಹೊಂದಿ ಲಯದಲ್ಲಿಯೂ ಮಂಡಲಗಳನ್ನು ರಚಿಸುವುದರಲ್ಲಿಯೂ ಪರಿಣತಿಯನ್ನು ಗಳಿಸಿರುತ್ತಾರೆ. ಉತರ ಭಾರತದಲ್ಲಿ ಆದಿವಾಸಿಗಳೂ, ಗುಡ್ಡಗಾಡು ಜನಾಂಗದವರೂ ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಪರಂಪರಾಗತವಾಗಿ ಬಂದ ನೃತ್ಯಗಳನ್ನು ಕಲಿಸುತ್ತಾರೆ. ಅವರಿಗದು ಅತ್ಯಗತ್ಯವಿರುವ ವಿದ್ಯೆ ಹಾಗೂ ಪರಂಪರಾನುಗತವಾಗಿ ಬಂದ ಹೆಮ್ಮೆಯ ಸಂಗತಿಯಾಗಿದೆ.

ಕೆಲವು ಪ್ರದೇಶಗಳಲ್ಲಿ ಕೋಲಾಟದ ಕೋಲುಗಳ ಸಪ್ಪಳವೇ ಹಾಡಿಗೆ ಪೂರಕವಾದರೇ, ಹಲವು ಭಾಗಗಳಲ್ಲಿ ಮದ್ದಳೆ, ಡಪ್ಪು, ತಬಲಾ, ಢಕ್ಕೆ ಹಾಗೂ ಕಂಚಿನ ತಾಳಗಳನ್ನು ಬಳಸುವುದು ಉಂಟು. ಕರಾವಳಿಯಲ್ಲಿ ಗುಮಟೆ ಹಾಗೂ ಜಾಗಟೆಯನ್ನು ಕೋಲಾಟಕ್ಕೆ ಹಿನ್ನೆಲೆಯಾಗಿ ಬಳಸುವುದು ಕಂಡುಬರುತ್ತದೆ. ಆದರೆ ಸಾಮಾನ್ಯವಾಗಿ ಎಲ್ಲಾ ಪ್ರಾಂತ್ಯಗಳಲ್ಲು ತಮಟೆಯನ್ನೆ ಹೆಚ್ಚಾಗಿ ಬಳಸುತ್ತಾರೆ. ಕೋಲಾಟದ ವೈವಿಧ್ಯದಲ್ಲಿ ಸುಮಾರು ಹತ್ತರಿಂದ ಹದಿನಾರು ಜನ ಕಲಾವಿದರು ಭಾಗವಹಿಸುವ, ಹಲವಾರು ವೈವಿಧ್ಯಗಳಿವೆ. ಕೋಲಾಟವನ್ನು ವಿಶೇಷ ದಿನಗಳಲ್ಲಿ, ಸಮಾರಂಭಗಳಲ್ಲಿ ಊರಜನಗಳೆಲ್ಲಾ ಸೇರಿ ಸಾಮೂಹಿಕವಾಗಿ ನರ್ತಿಸುತ್ತಾರೆ. ಕೋಲುಗಳನ್ನು ಎರಡೂ ಕೈಗಳಲ್ಲಿ ಹಿಡಿದು, ಕಾಲಿಗೆ ಗೆಜ್ಜೆಕಟ್ಟಿ, ವೃತ್ತಾಕಾರದಲ್ಲಿ ನಿಂತು, ಕುಳಿತು, ವಿವಿಧ ತಾಳ ವೈವಿಧ್ಯಗಳಿಂದ ಪ್ರಸ್ತುತಗೊಳ್ಳುವ ನೃತ್ಯಪ್ರಕಾರವಿದು. ಇಲ್ಲಿ ಅಭಿನಯಕ್ಕೆ ಪ್ರಾಧಾನ್ಯತೆಯಿಲ್ಲ, ಆದರೆ ತಾಳ-ಲಯ-ಗತಿಗಳೇ ಇದರ ಜೀವಾಳ. ಕೋಲಾಟದ ನೃತ್ಯಗಳು ವೈವಿಧ್ಯಮಯವಾದ ಲಯವನ್ನು ಅನುಸರಿಸುತ್ತಾ, ವಿವಿಧ ಗತಿಗಳಿಂದ, ತಿರುವುಗಳಿಂದ, ಕರ್ನಾಟಕದಲ್ಲೇ ನಾವು ೩೦೦ಕ್ಕೂ ಹೆಚ್ಚು ಬಗೆಯ ಕೋಲಾಟ ಪ್ರಕಾರಗಳನ್ನು ಕಾಣುತ್ತೇವೆ. ಹಿಮ್ಮೇಳ, ಮುಮ್ಮೇಳಗಳೊಂದಿಗೆ ಪ್ರಸ್ತುತಗೊಳ್ಳುವ ಕೋಲಾಟದ ಹಾಡುಗಳು ಹೆಚ್ಚಾಗಿ ಪುರಾಣ, ಮಹಾಕಾವ್ಯಗಳ ಪ್ರಸಂಗಳನ್ನು ಒಳಗೊಂಡಿರುತ್ತವೆ. 'ಚಿತ್ತಾರಗೊಂಬೆ ಕೋಲು', 'ಮುರಾಲು', 'ಸುತ್ತಾಡುವ ಕೋಲು', 'ಗೀರುಕೋಲು',

'ಚೆಂಡಾಡುವ ಕೋಲು', 'ತೇರುಕೋಲು', 'ಕಾದಲು ಗಾಪು ಕೋಲು', 'ಕುಕ್ಕರಗಾಲು ಕೋಲು', 'ಜಡೆ ಕೋಲು', 'ಎಳೆ ಕೋಲು', 'ಉಯ್ಯಾಲೆ ಕೋಲು', 'ಬಾಗ್ಗೋಲು', 'ದಂಡೆ ಕೋಲು', 'ಸೋಬಾನೆ ಕೋಲು', 'ಶಿವಗಂಗೆ ಕೋಲು', 'ಪಂಚವದನ ಕೋಲು', 'ಬಾನು ಕೋಲು', 'ಮಲಕಿನ ಕೋಲು', 'ಬೆಂಕಿಕೋಲು' ಮುಂತಾದ ವಿಧಗಳ ಕೋಲಾಟವು ಪ್ರಚಲಿತದಲ್ಲಿದೆ. (ಪ್ರೊ. ಜಯಾ-೩೬೨)

Curt Sachs ನ World History Of The Dance ನಲ್ಲಿ "Each dancer has two sticks, something like our drum sticks, which are struck together with a skilful twisting of the dancers to and fro. Very accurate as to from, with an accomplished technique, unbelievably exact, powerful and yet graceful" (ಪು. ೧೨೧)

ಹೀಗೆ ಕೋಲಾಟವನ್ನು ಯೋರೋಪ ಖಂಡದಲ್ಲಿ ಇರುವುದನ್ನು ವರ್ಣಿಸುತ್ತಾರೆ.

"Travel, it leaves you speechless then turns you into a story teller"- Ibn Battuta.

ಪ್ರವಾಸವು ಪ್ರವಾಸಿಗನನ್ನು ಮುಕಸ್ಮಿತವನ್ನಾಗಿ ಮಾಡಿ ಕಥೆಗಾರರನ್ನಾಗಿ ಪರಿವರ್ತಿಸುತ್ತದೆ. ಪ್ರವಾಸಿಗರ ದಾಖಲೆಗಳು ಬರೀ ಇತಿಹಾಸದ ದಾಖಲೆಗೆ ಮಾತ್ರ ಉಪಯುಕ್ತವಾಗುವುದಲ್ಲದೆ ನೃತ್ಯ ಲೋಕಕ್ಕೂ ಉಪಯುಕ್ತವಾಗುತ್ತದೆ.

ಇಂತಹ ಪ್ರವಾಸಿಗರಲ್ಲಿ ನಿಕೊಲೆ ಕೊಂತಿ, ಪಿಯತ್ರೊದೆಲ್ಲಾ ವೆಲ್ಲೆ ಯವರು ತಾವು ಭೇಟಿಕೊಟ್ಟಂತಹ ಸಮಯದಲ್ಲಿ ಕರ್ನಾಟಕದಲ್ಲಿ ಇದ್ದಂತಹ ನೃತ್ಯ ಶೈಲಿಯ ಬಗ್ಗೆ ವಿವರಿಸಿದ್ದಾರೆ.

ನಿಕೊಲೊ ಕೊಂತಿಯು ಭಾರತ ದೇಶಕ್ಕೆ ಭೇಟಿ ಕೊಟ್ಟಂತಹ ಸಮಯದಲ್ಲಿ ವಿಜಯನಗರದಲ್ಲಿ ಎರಡನೇ ದೇವರಾಯ ಆಳುತ್ತಿದ್ದನು. ಈತನು ವಿಜಯನಗರದಲ್ಲಿ ಮದುವೆಗಳನ್ನು ಬಹು ವೈಭವದಿಂದ ಮಾಡುತ್ತಾರೆ ಮತ್ತು ಬಂದ ಅತಿಥಿಗಳಿಗೆ ಭೋಜನ ಕೂಟಗಳನ್ನು ಏರ್ಪಡಿಸುತ್ತಾರೆ ಎನ್ನುತ್ತಾನೆ. ಹಾಗೆಯೇ ಕೆಲವರು ಹಾಡಿದರೆ, ಕೆಲವರು ತಮಗೆ ಬಂದ ರೀತಿಯಲ್ಲಿ ಕುಣಿಯುತ್ತಾರೆಂದು, ಬಣ್ಣದ ಕೋಲುಗಳನ್ನು ಹಿಡಿದು ಕೋಲಾಟವಾಡುತ್ತಾರೆ, ಇದನ್ನು ನೋಡಿ ತನಗೆ ಬಹಳಾ ಆನಂದವಾಯಿತೆನುತ್ತಾನೆ.

ಕ್ರಿ.ಶ. ೧೬೬೩ರಲ್ಲಿ ಇಟಲಿಯ ಪ್ರವಾಸಿ ಪಿಯತ್ರೊದೆಲ್ಲಾ ವೆಲ್ಲೆಯನ್ನು ವಿಠಲಾಶೆಣ್ಯೆಯವರು ಕೆಳದಿಯ ವೆಂಕಟಪ್ಪ ನಾಯಕರಿಗೆ ಪರಿಚಯಸುತ್ತಾನೆ. ಆತನು ಕೆಳದಿಗೆ ಭೇಟಿ ಕೊಟ್ಟಂತಹ ಸಮಯದಲ್ಲಿ ಕೋಲಾಟವು ಕೆಳದಿಯಲ್ಲಿ ರೂಢಿಯಲ್ಲಿದ್ದ ಪ್ರಸಿದ್ಧವಾದ ದೇಶಿನೃತ್ಯವೆಂದು ವಿವರಿಸುತ್ತಾನೆ. ವೆಲ್ಲೆ ತಾನು ಇಕ್ಕೇರಿಯ ಬೀದಿಯಲ್ಲಿ ಹೋಗುವಾಗ ಆತನು ಕಂಡ ಈ ನೃತ್ಯದ ಬಗ್ಗೆ ವಿವರಣೆಯನ್ನು ನೀಡುತ್ತಾನೆ. ಬೀದಿಯಲ್ಲಿ ಹುಡುಗಿಯರು ಗುಂಪುಗುಂಪಾಗಿ ಹೋಗುತ್ತಿದ್ದುದನ್ನು ಕಂಡೆವು ಎಂದು, ನಂತರ ಆ ಹುಡುಗಿಯರ ವೇಷಭೂಷಣಗಳನ್ನು ಹೀಗೆ ವರ್ಣಿಸುತ್ತಾನೆ, ಹುಡುಗಿಯರು ಸೊಂಟದಿಂದ ಕೆಳಕ್ಕೆ ಜರತಾರಿ ಹಾಕಿದ ರೇಷ್ಮೆ ಲಂಗ ಹಾಕಿಕೊಂಡಿದ್ದರು. ಮೇಲಕ್ಕೆ ಅಪ್ಪಟ ಬಿಳಿ ಹತ್ತಿ ಬಟ್ಟೆ ಅಥವಾ ಪಟಪಟೆ ಬಟ್ಟೆ ಹಾಕಿಕೊಂಡಿದ್ದರು. ಹೆಗಲ ಮೇಲೆ ಅಂಗವಸ್ತ್ರ ಹಾಕಿಕೊಂಡಿದ್ದರು ಎನ್ನುತ್ತಾನೆ. ನಂತರ ಆ ಹೆಣ್ಣುಮಕ್ಕಳು ತಮ್ಮ ತಲೆಯನ್ನು ಕಿರೀಟದಂತೆ ಅಲಂಕರಿಸಿಕೊಂಡಿದ್ದರು, ಕೆಲವರು ಹೂಗಳನ್ನು ಹೆಣೆದು ಇಳಿಯ ಬಿಟ್ಟುಕೊಂಡಿದ್ದರು ಎಂದು, ಅದು ಬಹು ಚೆಂದವಾಗಿತ್ತು ಎನ್ನುತ್ತಾನೆ. ಆ ಹುಡುಗಿಯರ ಕೈಯಲ್ಲಿ ಒಂದು ಗೇಣು ಅಥವಾ ಸ್ವಲ್ಪ ಹೆಚ್ಚು ಉದ್ದದ ಬಣ್ಣದ ಕೋಲುಗಳಿದ್ದುವು, ಇವರು ಡೋಲು ಮತ್ತು ಇತರ ವಾದ್ಯಗಳ ಬಡಿತದ ಜೊತೆಗೆ ಒಂದು ಹುಡುಗಿಯ ಹಾಡಿನ ಜೊತೆಗೆ ಮಿಕ್ಕ ಹುಡುಗಿಯರು ಕೋಲೆ, ಕೋಲೆ ಎಂದು ಏಳೆಂಟು ಸಲ ಹಾಡುತ್ತಾ ಕೋಲನ್ನು ಹುಯ್ಯುತ್ತಿದ್ದರು. ಈತನು ಹೇಳುತ್ತಾನೆ ಈ ಸನ್ನಿವೇಶವು ಬಹುಶಃ ಸಂತೋಷದ ಮಾತೆಂದು ಮತ್ತು ಆ ಎಂಟು ಹತ್ತು ಜನ ಹುಡುಗಿಯರು ಬೀದಿಯಲ್ಲಿ ಕೋಲಾಟ ಆಡಿಕೊಂಡು ಹೋಗುತ್ತಿದ್ದರು ಎಂದು ತನ್ನ ಪ್ರವಾಸ ಕಥನದಲ್ಲಿ ಬರೆದಿದ್ದಾನೆ. ಈ ಹುಡುಗಿಯರನ್ನು ಹಿಂಬಾಲಿಸಿ ಹಲವು ಹೆಂಗಸರು ಹೋಗುತ್ತಿದ್ದರು. ಅವರೆಲ್ಲರೂ ದೇವಸ್ಥಾನಕ್ಕೆ ತೆರಳಿ ಅಲ್ಲಿ ಸುತ್ತುಗಟ್ಟಿಕೊಂಡು ಕುಣಿದರು ಎಂದು ತನಗೆ ಗೊತ್ತಾಯಿತು ಎನ್ನುತ್ತಾನೆ. ಮತ್ತು ತಾನು ನವೆಂಬರ್ ೮ನೆಯ ತಾರೀಖಿನಂದು ಇದನ್ನು ನೋಡಿದ್ದನ್ನು, ಆ ದಿನ ಗೌರಿಹಬ್ಬವೆಂದು, ಅದನ್ನು ಆ ಹುಡುಗಿಯರು ಮೂರು ದಿನ ಆ ಹಬ್ಬವನ್ನು ಆಚರಿಸುತ್ತಾರೆಂದು ತಿಳಿಯಿತು ಎನ್ನುತ್ತಾನೆ.

ಈತನು ಇಕ್ಕೇರಿಗೆ ಭೇಟಿ ಕೊಟ್ಟಂತಹ ಸಮಯದಲ್ಲಿ ದೇವರ ರಥೋತ್ಸವ ನಡೆದಿರುವ ಬಗ್ಗೆ ಉಲ್ಲೇಖಿಸಿದ್ದಾನೆ. ಆತನು ರಥದ ಆಳತೆಯನ್ನು ರೋಮಿನ ಅತ್ಯಂತ ಅಗಲವಾದ ಬೀದಿಯಲ್ಲಿ ಸಾಗುವಂತಹದು ಎಂದು ವರ್ಣಿಸಿದ್ದಾನೆ. ರಥೋತ್ಸವ ಆದ ಸಂಜೆಯು ಉದ್ಯಾನವನದಲ್ಲಿ ಹುಡುಗಿಯರು ಗುಂಪುಗುಂಪಾಗಿ ಹಾಡುತ್ತಾ ಕುಣಿಯುತ್ತಾ ಇದ್ದರು

ಎಂದು, ತದನಂತರ ಕುಣಿಯುವುದೆಂದರೆ ಕೋಲನ್ನು ಹುಯ್ಯುತ್ತ ನಿಧಾನವಾಗಿ ಸುತ್ತುವುದು. ಮತ್ತೊಮ್ಮೆ ಕಾಲನ್ನು ಹಿಂದಕ್ಕೂ ಮುಂದಕ್ಕೂ ಹಾಕುತ್ತಾ ಬಗ್ಗ್ಯಾಡುತ್ತಿರೆಂದು, ಸದಾ ಒಬ್ಬರು ಹಾಡುವುದು, ಉಳಿದವರು ಕೋಲೆ, ಕೋಲೆ (cole,cole) ಎಂದು ಹೇಳುವುದು ರೂಢಿಯಲ್ಲಿತ್ತು ಎನ್ನುತ್ತಾನೆ. (p. ೨೦೧, The travels of Pietro Della Valle in India by Edward Grey).

ನವೆಂಬರ್ ೨೦ನೆಯ ತಾರೀಖು ಮಂಗಳವಾರ ವೆಲ್ಲೆ ಇಕ್ಕೇರಿಯ ದೇವಸ್ಥಾನಗಳಲ್ಲೆಲ್ಲಾ ದೀಪ ಬೆಳಗಿದ್ದನ್ನು ಉಲ್ಲೇಖಿಸಿದ್ದಾನೆ. ವಾದ್ಯಗಳ ಘೋಷ ಮತ್ತು ದೇವಸ್ಥಾನಗಳ ಮುಂದೆ ಪ್ರಾತಿಗಳ ಕುಣಿತವಿದ್ದು, ಪಲ್ಲಕ್ಕಿಗಳಲ್ಲಿ ವಿಗ್ರಹವನ್ನು ಇಟ್ಟು ಉತ್ಸವಕ್ಕೆ ಅನೇಕ ಉರಿಯುವ ಪತ್ತುಗಳು, ಛತ್ರಿ ಚಾಮರಗಳು, ನವಿಲುಗರಿಯ ಬೀಸಣಿಗೊಂಡು, ದೇವರ ಮೆರವಣಿಗೆ ಹೊರಟಿತೆಂದು ಹೇಳುತ್ತಾನೆ. ಈ ಸಮದರ್ಭದಲ್ಲಿ ನರ್ತಕಿಯರು ಕೋಲು ಹುಯ್ಯುತ್ತ ಗಂಡಸೊಬ್ಬನ ನೇತೃತ್ವದಲ್ಲಿ ಹಾಡಿ ಕುಣಿಯುತ್ತಿದ್ದರು ಎಂದು ಕೋಲಾಟದ ವಿವರಣೆ ಕೊಡುತ್ತಾನೆ.

ಈ ಪ್ರವಾಸಿಗರು ಕರ್ನಾಟಕಕ್ಕೆ ಭೇಟಿ ಕೊಟ್ಟಂತಹ ಸಮಯ ದಾಸ ಪಂಥವು ಉತ್ಕೃಷ್ಟ ಸ್ಥಿತಿಯಲ್ಲಿ ಇದ್ದಿತ್ತೆಂದು ದಾಖಲೆಗಳು ತಿಳಿಸುತ್ತವೆ. ಪುರಂದರದಾಸ, ಕನಕದಾಸ, ಮೋಹನದಾಸ, ವಾದಿರಾಜರು ಹೀಗೆ ಮುಂತಾದ ದಾಸರುಗಳು ಕೋಲ ಪದವೆಂದು ಕೋಲಾಟದ ಮೂಲಕ ತಮ್ಮ ಹರಿಭಕ್ತಿಯನ್ನು ತೋರಿಸಿದ್ದಾರೆ. ಹಾಗಾಗಿ ಕೋಲಾಟವು ಎಲ್ಲಾ ವರ್ಗದ ಜನಗಳಲ್ಲಿ ಒಂದು ಪ್ರಖ್ಯಾತವಾದ ನರ್ತನವಾಗಿತ್ತೆಂದು ತಿಳಿಯುತ್ತದೆ. ವಿಜಯನಗರ ರಾಜರ ಕಾಲದಲ್ಲಿ ದೇವರ ಪಲ್ಲಕ್ಕಿ ಮೆರವಣಿಗೆಯ ಮುಂದೆ ದೇವದಾಸಿಯರು ಕೋಲಾಟವಾಡಿಕೊಂಡು ತಮ್ಮ ನರ್ತನ ಸೇವೆಯನ್ನು ಕೊಡುತ್ತಿದ್ದರು ಎಂಬುದು Saskia c. Kersenboom ರವರ 'ನಿತ್ಯಸುಮಂಗಲಿ' ಗ್ರಂಥದಲ್ಲಿ ಹೇಳಿದ್ದಾರೆ. (p. ೧೩೫).

ಕೋಲಾಟವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅಂದರೆ ೧೧ನೆಯ ಶತಮಾನದ ಕಾಲದಿಂದಲೂ ಜನಸಾಮ್ಯನರಲ್ಲಿ ಇದ್ದಿತ್ತೆಂದು ಶಾಸನವು ಹೇಳುತ್ತದೆ. ಇದುವರೆಗೆ ತಿಳಿದಿರುವಂತೆ ತ್ರಿಪುರಾಂತಕೇಶ್ವರದ ಈ ಶಿಲ್ಪ ವಿವರಣೆಯು ಕೋಲಾಟವನ್ನು ಚಿತ್ರಿಸಿರುವ ಪ್ರಾಚೀನ ಶಿಲ್ಪವಾಗಿದೆ. (ಪು. ೧೭೧, ಕ.ದೇ.ರಂ (ನೃ). ಡಾ. ಕರುಣಾವಿಜಯೇಂದ್ರ)

ಅಂದರೆ ಪ್ರವಾಸಿಗರು ಉಲ್ಲೇಖಿಸಿರುವ ನೃತ್ಯಶೈಲಿಗಳು ಶಾಸನ, ಶಿಲ್ಪಗಳಲ್ಲಿ ಕಾಣಬಹುದು.

ಮೊದಲೇ ತಿಳಿಸಿರುವಂತೆ ನೃತ್ಯವು ಕೇವಲ ಮನರಂಜನೆಯ ಸಾಧನವಾಗಿರದೆ ಜೀವನದ ಹಲವು ಮುಖಗಳ ಪರಿಚರಿಸುವಂತಹ ಮಾರ್ಗವಾಗಿದೆ. ಕೋಲಾಟವು ಜನಗಳ ಮನಸ್ಸುಗಳನ್ನು ಒಂದುಗೂಡಿಸುವ ನೃತ್ಯವಾಗಿದೆ.

ವಿಶ್ವದಲ್ಲಿ ಕೋಲಾಟವನ್ನು ಜನಪದ ನೃತ್ಯವೆಂದು ಪರಿಗಣಿಸುವಾಗಲೇ ಭಾರತದಲ್ಲಿ ಅದಕ್ಕೆ ಶಾಸ್ತ್ರೀಯವಾದ ಸ್ಥಾನಮಾನವಿತ್ತು. ಅನೇಕ ಶಸ್ತ್ರಾಸ್ತ್ರಗಳ, ಯುದ್ಧದ ವರಸೆಗಳು (ಅಭ್ಯಾಸಕ್ಕಾಗಿ ರಚಿಸಿದ ರೀತಿ, ವಿನ್ಯಾಸಗಳು) ಆಟಗಳಾಗಿ, ನರ್ತನಗಳಾಗಿ ಪರಿಣಾಮ ಹೊಂದಿದಂತೆಯೇ ಕೋಲಾಟ ನೃತ್ಯದ ಉಗಮವೂ ಆಗಿರಬಹುದು. ಕೋಲಾಟವನ್ನು ಭರತನು ತನ್ನ ನಾಟ್ಯಶಾಸ್ತ್ರದಲ್ಲಿ ಉಲ್ಲೇಖಿಸಿ ಅದನ್ನು ಮಾರ್ಗಿನೃತ್ಯವೆಂತಲು ಅದನ್ನು ಶಿಲ್ಪಗಳು, ಶಾಸನಗಳು, ಪ್ರವಾಸಿ ಕಥನಗಳು ದೇಶಿನೃತ್ಯವೂ ಹೌದು ಎಂಬುದನ್ನು ತಿಳಿಸುತ್ತಾರೆ.

ಇದ್ದರಿಂದ ತಿಳಿಯುವುದೇನೆಂದರೆ ಮಾರ್ಗಿನೃತ್ಯದ ಜೊತೆಗೆ ದೇಶಿ ನೃತ್ಯವು ಜನರಿಗೆ ಆಕರ್ಷಣೆಯುಂಟು ಮಾಡುವ ವಿಷಯವಾಗಿತ್ತೆಂದು.

ಆಕರ ಗ್ರಂಥಗಳು

೧. ಪ್ರವಾಸಿ ಕಂಡ ಇಂಡಿಯಾ–೧, ಡಾ. ಎಚ್.ಎಲ್. ನಾಗೇಗೌಡ, ಐಬಿಎಚ್ ಪ್ರಕಾಶನ, ಬೆಂಗಳೂರು–೨೦೦೬.

೨. ಕರ್ನಾಟಕ ದೇವಾಲಯಗಳಲ್ಲಿ ರಂಗಭೋಗ (ನೃತ್ಯ), ಡಾ. ಕರುಣಾ ವಿಜಯೇಂದ್ರ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ೨೦೦೭.

೩. ನೃತ್ಯ ಲಕ್ಷಣ, ಪ್ರೊ. ಬಿ. ಜಯಾ. ಪ್ರಿಂಟ್–ಓ–ಗ್ರಾಫ್, ೨೦೦೯.

೪. World history of the dance, Curt sachs, The Norton Library publishers, New York.1965.

೫. The travel of Pietro della valle in India, Edward grey, Asian Educational Services, New Delhi,1991.

೬ Nitya Sumangali-Saskia c. Kersenboom, Motilal Banarsidass publishers pvt. limited, 2016.

೭. ಕರ್ನಾಟಕ ಜನಪದ ಕಲೆಗಳ ಕೋಶ, ಡಾ. ಹಿ.ಚಿ. ಬೋರಲಿಂಗಯ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫.

೮. ಔದುಂಬರ ಗಾಥೆ, ವಾಮನ ಬೇಂದ್ರೆ, ವರಕವಿ ಡಾ. ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ೨೦೦೩.

೯. ನಾಟ್ಯಶಾಸ್ತ್ರ–ಆದ್ಯ ರಂಗಚಾರ್ಯ, ನೀನಾಸಮ್ ರಂಗ ಶಿಕ್ಷಣ ಕೇಂದ್ರ, ಹೆಗ್ಗೋಡು, ೨೦೦೩.

೧೦. ಕೋಲಾಟ ಲೇಖನ–ಶ್ರೀಮತಿ ರೋಹಿಣಿ ಸುಬ್ರಮಣ್ಯಂ.

೬೩

ಹೈದರ್ ಮತ್ತು ಟಿಪ್ಪು ಕಾಲದಲ್ಲಿ ರಾಕೆಟ್ ತಂತ್ರಜ್ಞಾನ: ಕೆಲವು ವಿಚಾರಗಳು

ಹಂ.ಗು. ರಾಜೇಶ್*

ಕರ್ನಾಟಕದ ಚರಿತ್ರೆಯಲ್ಲಿ ಟಿಪ್ಪುಸುಲ್ತಾನನದು ವರ್ಣರಂಜಿತ ವ್ಯಕ್ತಿತ್ವ. ಈತನ ರಾಜಕೀಯ ನಡೆಗಳು ಬಹುಕುತೂಹಲ ಮೂಡಿಸುತ್ತವೆ. ದಕ್ಷಿಣ ಭಾರತದ ಸಾರ್ವಭೌಮತ್ವಕ್ಕಾಗಿ ಬ್ರಿಟಿಷರ ವಿರುದ್ಧ ಸೆಣಸಾಡಿ ಸೋತರೂ, ಅದಕ್ಕಾಗಿ ಅವನು ನಡೆಸಿದ ಹೋರಾಟ ಅವಿಸ್ಮರಣೀಯವಾದುದು. ಬಲಿಷ್ಠ ಸೈನ್ಯದ ಜೊತೆಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ರೂಪಿಸಿದನು. ಅದಕ್ಕಾಗಿ ದೇಶವಿದೇಶಗಳಿಂದ ತಂತ್ರಜ್ಞರನ್ನು ಮತ್ತು ತಂತ್ರಜ್ಞಾನವನ್ನು ಬರಮಾಡಿಕೊಂಡನು. ಅವನು ಸೇನೆಯಲ್ಲಿ ಬಳಸಿದ ತಂತ್ರಜ್ಞಾನದಲ್ಲಿ ವಿಶೇಷವಾದುದು ರಾಕೆಟ್ ತಂತ್ರಜ್ಞಾನ. ಟಿಪ್ಪುವು ರಾಕೆಟ್ ತಂತ್ರಜ್ಞಾನವನ್ನು ರೂಪಿಸಿ ಯುದ್ಧದಲ್ಲಿ ಬಳಸುವಲ್ಲಿ ಯಶಸ್ವಿಯಾದನು. ಆದರೆ, ಆ ಬಳಕೆ ಎಷ್ಟರಮಟ್ಟಿಗೆ ಯಶಸ್ಸನ್ನು ತಂದುಕೊಟ್ಟಿತು ಎಂಬುದನ್ನು ಪರಿಶೀಲಿಸುವುದು ಪ್ರಸ್ತುತ ಪ್ರಬಂಧದ ಉದ್ದೇಶವಾಗಿದೆ.

ರಾಕೆಟಿನ ಇತಿಹಾಸ: ಮದ್ದಿನ ಪುಡಿಯನ್ನು ಬಳಸಿ ಪ್ರಯೋಗಿಸುವ ಬಾಣದ ಬಳಕೆ ಭಾರತಕ್ಕೆ ಬಂದಿದ್ದು ಚೀನಾ ದೇಶದಿಂದ. ೧೩ನೆಯ ಶತಮಾನದಲ್ಲಿ ಚೀನಿಯರು ಈ ರಾಕೆಟ್ ಮಾದರಿಯ ಶಸ್ತ್ರಾಸ್ತ್ರವನ್ನು ಬಳಸಿದರು. ಇದು ಡೆಖನ್ ಮೂಲಕ ಭಾರತದಲ್ಲಿ ಪರಿಚಯಗೊಂಡಿತು. ಅಕ್ಬರನ ತೋಪುಖಾನೆಯಲ್ಲಿ ರಾಕೆಟ್‌ಗಳು ಇದ್ದವೆಂದು ಅಬುಲ್ ಫಜಲ್‌ನ ಬರಣಿಗೆಯಿಂದ ತಿಳಿದು ಬರುತ್ತದೆ. ಭಾರತೀಯ ಸೇನೆಯೊಳಗೆ ವ್ಯಾಪಕವಾಗಿ 'ಬಾಣ' ಎಂಬುದು ಪರಿಣಾಮಕಾರಿಯಾಗಿ ಪ್ರಯೋಗಕ್ಕೆ ಬಂದಿತು.[೧] ಯುರೋಪಿನಲ್ಲಿ ಮುರಟೋರಿ ಎಂಬ ಇಟಾಲಿಯ ವ್ಯಕ್ತಿಯು ೧೩೭೯ರಲ್ಲಿ ಸಿಡಿಮದ್ದಿನಿಂದ ಕೂಡಿದ 'ಬೆಂಕಿ ಬಾಣ' ಹೆಸರಿನಲ್ಲಿ ರಾಕೆಟ್ ಬಳಸಿದ. ಆದರೆ ಅದು ಯುದ್ಧದಲ್ಲಿ ಜನಪ್ರಿಯವಾಗಲಿಲ್ಲ ಎಂದು ಬಾಲಸುಬ್ರಮಣಿಯನ್ ಅವರು ದಾಖಲಿಸುತ್ತಾರೆ. ಅಲ್ಲದೆ, ಟಿಪ್ಪು ಪೂರ್ವದಲ್ಲಿ (ಮಧ್ಯಕಾಲೀನ ಸಂದರ್ಭದಿಂದ) ರಾಕೆಟ್‌ನ ಬಳಕೆ ಇದ್ದ ಕುರಿತು ಸಹ ಬೆಳಕು ಚೆಲ್ಲುತ್ತಾರೆ.

ರಾಕೆಟ್‌ನ ಪ್ರಾಚೀನತೆ ಕುರಿತು ಸಂಕ್ಷಿಪ್ತ ವಿವರವೊಂದು ಈ ರೀತಿ ಇದೆ. ಕ್ರಿ.ಶ. ೧೦೪೪ರಲ್ಲಿ ಚೀನಾದ ವು-ಚಿಂಗ್ ತ್ಸುಂಗ್-ಯೋ ಎಂಬಾತನು ಮೊದಲು ಸಿಡಿಮದ್ದಿನ ಪುಡಿಯನ್ನು ಕಂಡು ಹಿಡಿದನು. ಕ್ರಿ.ಶ. ೧೨೩೨ರಲ್ಲಿ ಕೈ-ಫೆಂಗ್-ಫ್ಯೂ ಮುತ್ತಿಗೆ ಹಾಕಿದ ಮಂಗೋಲರ ವಿರುದ್ಧ ಮೊಟ್ಟಮೊದಲ ಬಾರಿಗೆ ಚೀನಿಯರು ರಾಕೆಟ್‌ಗಳನ್ನು ಬಳಸಿದರು. ಇದನ್ನು ಚೀನಿಯರು 'ಫೈ ಹುವೋ ಷಿಯಾಂಗ್' ಎಂದು ಕರೆದರು. ಇದರ ಅರ್ಥ 'ಹಾರುವ ಬೆಂಕಿಯ ಬಾಣಗಳು' ಎಂಬುದಾಗಿತ್ತು. ಒಂದೇ ಬಾರಿಗೆ ನೂರು ಬಾಣದ ರಾಕೆಟ್‌ಗಳು ಚಿಮ್ಮುವಂತೆ ಮಾಡುವ ಕೌಶಲ್ಯವನ್ನು ಚೀನಿಯರು ಸಂಪಾದಿಸಿದ್ದರು. ೩೦೦-೪೦೦ ಹೆಜ್ಜೆಗಳಷ್ಟು ದೂರವನ್ನು ಈ ಬಾಣಗಳು ಬೇರೆ ಬೇರೆ ದಿಕ್ಕಿನಲ್ಲಿ ಕ್ರಮಿಸಬಲ್ಲವಾಗಿದ್ದವು. ಈ ರಾಕೆಟ್‌ಗಳ ತುದಿಗೆ ವಿಷವನ್ನು ಲೇಪಿಸುತ್ತಿದ್ದರು. ಕ್ರಿ.ಶ. ೧೨೮೦ರ ಅರೆಬಿಕ್ ಕೃತಿಗಳು ಸಿಡಿಮದ್ದು ಮತ್ತು ಚೀನಾದ ರಾಕೆಟ್‌ಗಳನ್ನು ಕುರಿತು ಉಲ್ಲೇಖಿಸುತ್ತವೆ. ಕ್ರಿ.ಶ. ೧೪೦೦ರ ಸಮಯಕ್ಕೆ ಸಿಡಿಮದ್ದು ಭಾರತಕ್ಕೆ ಬಂದಿತು. ಅಗ್ನಿಚೂರ್ಣ (ಸಿಡಿಮದ್ದು), ಅಗ್ನಿಬಾಣ (ರಾಕೆಟ್) ಮತ್ತು ಅಗ್ನಿಕ್ರೀಡಾ (ಸಿಡಿಮದ್ದಿನ ವಸ್ತುಗಳು) ಕುರಿತು ಅನೇಕ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ. ಕ್ರಿ.ಶ. ೧೭೮೦-೯೯ರವರೆಗೆ ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ರಾಕೆಟ್‌ಗಳನ್ನು ಬಳಸಿದರು (ದಾಸ್ ೨೦೧೧: ೪; ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆ ದಿ. ೧೮.೧೧.೨೦೦೬).

ರಾಕೆಟ್‌ಗಳ ನಿರ್ಮಾಣ ವಿಧಾನ: ೧೩ನೆಯ ಶತಮಾನದಲ್ಲಿ ಚೀನಿಯರು ಯುದ್ಧದಲ್ಲಿ ಬಳಸಿದ ರಾಕೆಟ್‌ಗಳನ್ನು ತಯಾರಿಸುವು ವಿಧಾನ ವಿಶಿಷ್ಟವಾಗಿತ್ತು. ಅವರು ಹಳದಿ ಬಣ್ಣದ ೧೬ ಮಡಿಕೆಗಳ ಕಾಗದವನ್ನು ೨ ಅಡಿಗಳ ಉದ್ದದ ನಳಿಗೆಯಂತೆ ಸುತ್ತುತ್ತಿದ್ದರು. ಇದ್ದಿಲು, ಕಬ್ಬಿಣ, ಪೋರ್ಸೆಲೈನ್, ಸಲ್ಫರ್, ಆರ್ಸೆನಿಕ್ ಮುಂತಾದವುಗಳ ಪುಡಿಯನ್ನು ತುಂಬಿ,

* # ೩೩/ಎ, ಐಟಿಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ ಅಂಚೆ, ಬೆಂಗಳೂರು-೫೬೦೦೯೧. ಮೊ. ೭೮೨೯೪೦೪೦೬೩

ಅದನ್ನು ಉದ್ದದ ಕಡ್ಡಿಗೆ ಬೆತ್ತಕ್ಕೆ ಸುತ್ತಿ ಬಳಸುತ್ತಿದ್ದರು. ಮುಂದಿನ ಹಂತದಲ್ಲಿ ಎರಡು ಗಿಣ್ಣುಗಳಿರುವಂತೆ ಬಿದಿರಿನ ಬೊಂಬನ್ನು ಕತ್ತರಿಸಿ, ಒಂದು ಬದಿಗೆ ತೂತನ್ನ ಕೊರೆದು ಅದಕ್ಕೆ ಸಿಡಿಮದ್ದನ್ನು ತುಂಬುತ್ತಿದ್ದರು. ನಂತರ ಅದನ್ನು ದೆಬ್ಬೆಯೊಂದಕ್ಕೆ ಕಟ್ಟಿ ಉಡಾಯಿಸುತ್ತಿದ್ದರು. ಆದರೆ, ಸುಧಾರಿತ ಮಾದರಿಯ ರಾಕೆಟ್‌ಗಳನ್ನು ಭಾರತೀಯರು ಬಳಕೆಗೆ ತಂದರು. ಉತ್ತಮ ಕಬ್ಬಿಣದಿಂದ ಮಾಡಿದ ಕೊಳವೆಗಳನ್ನು ಬಳಸಿ ರಾಕೆಟ್‌ಗಳನ್ನು ತಯಾರಿಸುತ್ತಿದ್ದ ಕಾರಣ ಭಾರತೀಯ ರಾಕೆಟ್‌ಗಳು ಯುದ್ಧದಲ್ಲಿ ಯಶಸ್ವಿಯಾದವು. ಕಬ್ಬಿಣದ ಕೊಳವೆಗಳನ್ನು ೧೦-೧೨ ಅಡಿ ಉದ್ದದ ಬಿದಿರಿನ ಬೆತ್ತಕ್ಕೆ ಬಿಗಿಯಲಾಗುತ್ತಿತ್ತು. ನಂತರ ಕೊಳವೆಯನ್ನು ಮದ್ದಿನಿಂದ ತುಂಬಲಾಗುತ್ತಿತ್ತು. ಅವುಗಳಿಗೆ ಬೆಂಕಿ ಇಟ್ಟು ಕೈಯಿಂದಲೇ ಹಾರಿಸಲಾಗುತ್ತಿತ್ತು. ಬೆಂಕಿಯ ಬಾಣದಂತೆ ಹಾರುತ್ತಿದ್ದ ಈ ರಾಕೆಟ್‌ಗಳು ಒಂದು ಕಿ.ಮೀ. ದೂರ ಕ್ರಮಿಸುತ್ತಿದ್ದವು (ಮೊಹಮ್ಮದ್ ೧೮೫೫: ೧೫೮; ಬಾಲಸುಬ್ರಮಣಿಯನ್ ೨೦೦೮: ೩೧೫-೧೬).

ಹೈದರ್ ಕಾಲದಲ್ಲಿ ರಾಕೆಟ್: ಎಸ್.ಕೆ. ದಾಸ್ ಅವರು ಹೈದರಾಲಿಯನ್ನು ರಾಕೆಟ್ ತಂತ್ರಜ್ಞಾನದ ಪ್ರವರ್ತಕ ಎಂದು ಕರೆಯುತ್ತಾರೆ. ಏಕೆಂದರೆ, ರಾಕೆಟ್ ತಂತ್ರಜ್ಞಾನವನ್ನು ಬಳಸುವುದರಲ್ಲಿ ಹೈದರ್ ಮೊದಲಿಗನಾಗಿದ್ದ. ಮೊದಲ ಬಾರಿಗೆ ಮದ್ದಿನ ಪುಡಿಯನ್ನು ತುಂಬಲು ಲೋಹದಿಂದ ಮಾಡಿದ ಕೊಳವೆಯನ್ನು ಬಳಕೆಗೆ ತಂದನು. ಈ ಕೊಳವೆಗಳು ೮ ಇಂಚು ಉದ್ದ, ೧.೫ ರಿಂದ ೩ ಇಂಚುಗಳವರೆಗೆ ವ್ಯಾಸವನ್ನು ಹೊಂದಿರುತ್ತಿದ್ದವು. ಇವನ್ನು ೪ ಅಡಿ ಉದ್ದದ ಬಿದಿರಿನ ಕೋಲಿಗೆ ಬಿಗಿಯುತ್ತಿದ್ದನು. ಇವು ಹಿಂದೆ ಬಳಸುತ್ತಿದ್ದ ಬಿದರಿನ ಬೊಂಬುಗಳಿಗಿಂತಲೂ ಹೆಚ್ಚು ಪಟ್ಟು ಗಡಸಾಗಿತ್ತು. ಲೋಹದ ಕೊಳವೆಗಳಲ್ಲಿ ಮದ್ದಿನ ದಹನಶೀಲತೆ ಮತ್ತು ಒತ್ತಡವು ಬಿದಿರಿನ ಕೊಳವೆಯ ರಾಕೆಟ್‌ಗಳಿಗಿಂತ ಹಲವು ಪಟ್ಟು ಹೆಚ್ಚಿರುತ್ತಿತ್ತು. ಆದ್ದರಿಂದ ಈ ರಾಕೆಟ್‌ಗಳು ೨.೪ ಕಿ.ಮೀ. ದೂರವನ್ನು ಕ್ರಮಿಸಬಲ್ಲವಾಗಿದ್ದವು. ಅಲ್ಲದೆ, ಹೈದರ್ ಈ ರಾಕೆಟ್‌ಗಳ ತುದಿಗೆ ಸ್ಫೋಟಕಗಳನ್ನು ಇಡುವ ಪದ್ಧತಿಯನ್ನೂ ತಂದನು. ಕಬ್ಬಿಣದ ಲೋಹದಿಂದ ಮಾಡಿದ ಕೊಳವೆಯ ರಾಕೆಟ್‌ಗಳು ತುಂಬಾ ಸರಳವಾಗಿದ್ದವು. ಇವುಗಳನ್ನು ಹಳ್ಳಿಯ ಯಾವನೇ ಕಮ್ಮಾರ ಕೂಡ ಸಿದ್ಧಪಡಿಸಬಹುದಾಗಿತ್ತು (ದಾಸ್, ೨೦೧೧: ೬-೭; ಸಿದ್ಧನಗೌಡರ್, ೨೦೧೦: ೩೪೯).

ಹೈದರಾಲಿಯ ಚಿಲ್ಲಂ ಬ್ರಾಮ್ ಕೋಟೆಯ ಮೇಲೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸೇನಾ ದಂಡನಾಯಕ ಕೂಟ್ ೧೭೮೦ರಲ್ಲಿ ರಾತ್ರಿಯ ವೇಳೆ ರಹಸ್ಯವಾಗಿ ಆಕ್ರಮಣ ನಡೆಸಿದನು. ಈ ಕೋಟೆಯ ಕಿಲ್ಲೇದಾರನಾದ ಯೂಸೂಫ್ ಖಾನನು ಒಳನುಸುಳುತಿದ್ದ ಬ್ರಿಟಿಷ್ ಸೈನಿಕರ ಮೇಲೆ ರಾಕೆಟ್ ದಾಳಿ ನಡೆಸಿದನು. ಈ ದಾಳಿಯಿಂದ ೩೦೦ಕ್ಕೂ ಹೆಚ್ಚು ಬ್ರಿಟಿಷ್ ಸೈನಿಕರು ಮರಣ ಹೊಂದಿದರು. ಅಲ್ಲದೆ, ಈ ಅನಿರೀಕ್ಷಿತ ಆಕ್ರಮಣದಿಂದ ಕಂಗಾಲಾಗಿ ಕಾಲ್ಕಿತ್ತರು. ಅಲ್ಲದೆ, ಪುಲ್ಲಿಲೂರು ಕದನದ ವೇಳೆ ಕೂಡ ಹೈದರಾಲಿಯು ಇದೇ ಕೂಟನ ಸೈನ್ಯಕ್ಕೆ ಅಗತ್ಯ ವಸ್ತುಗಳನ್ನು ಸರಬರಾಜಾಗುತ್ತಿದ್ದ ಬಂಡಿಗಳ ಮೇಲೆ ದಾಳಿ ನಡೆಸಿದನು. ಅಲ್ಲದೆ, ಮದ್ದು ಗುಂಡಿನ ದಾಸ್ತಾನು ಕೋಠಿಗೆ ರಾಕೆಟ್‌ನ ಬೆಂಕಿ ತಗುಲಿ ಸುಟ್ಟು ಹೋಯಿತು. ಪರಿಣಾಮವಾಗಿ ಬ್ರಿಟಿಷರು ಸೋಲನ್ನನುಭವಿಸಬೇಕಾಯಿತು (ದಾಸ್, ೨೦೧೧:೭-೮).

ಟಿಪ್ಪುಸುಲ್ತಾನ್ ಕಾಲದ ರಾಕೆಟ್‌ಗಳ ತಯಾರಿಕೆ: ಹೈದರನ ತರುವಾಯ ಅಧಿಕಾರಕ್ಕೆ ಬಂದ ಟಿಪ್ಪುವು ಸೈನ್ಯದಲ್ಲಿ ರಾಕೆಟ್ ಉಡಾಯಿಸುವ ಪಡೆಯನ್ನು ಹೆಚ್ಚಿಸಿದನು. ಅಲ್ಲದೆ, ತಾನು ಬರೆದ 'ಫತುಲ್ ಮುಜಾಹಿದ್ದೀನ್' ಎಂಬ ಸೇನಾ ಕೈಪಿಡಿಯಲ್ಲಿ ಪ್ರತಿ ಬ್ರಿಗೇಡಿಗೂ ೨೦೦ ಮಂದಿ ರಾಕೆಟ್ ಉಡಾವಣೆ ಮಾಡಬಲ್ಲ ಸೈನಿಕರಿರಬೇಕೆಂದು ಹೇಳಿದ್ದಾನೆ.

ಟಿಪ್ಪುವು ರಾಕೆಟ್ ಬಗೆಗೆ ತುಂಬಾ ಆಸಕ್ತಿ ಹೊಂದಿದ್ದನು. ಅವನು ಸಿಂಹಾಸನಕ್ಕೆ ಬಂದ ನಂತರ (೧೭೮೪) ರಾಕೆಟ್‌ನ ಪಾತ್ರವನ್ನು ಹೆಚ್ಚಿಸಿದನು. ಕೆಲವು ರಾಕೆಟ್‌ಗಳನ್ನು ಅಟ್ಟೋಮನ್ ಸುಲ್ತಾನನಿಗೂ ಸಹ ಕಳುಹಿಸಿ ಕೊಟ್ಟಿದ್ದನು. ೧೭೮೬ರಲ್ಲಿ ಟಿಪ್ಪುವಿನ ಸೈನ್ಯದಲ್ಲಿದ್ದ ಒಟ್ಟು ಬಾಣದಾಳುಗಳ ಸಂಖ್ಯೆ ೫೦೦೦. ೧೯೩೩ರಲ್ಲಿ ದಾಖಲಾಗಿರುವಂತೆ ಪ್ರತಿಯೊಂದು ಪದಾತಿದಳದ 'ಕುಶುನ್' (ತುಕಡಿ)ಗಳು ೧೯೩೨ ಸೈನಿಕರನ್ನು ಮತ್ತು ಒಬ್ಬ ಬಾಣದಾಳುವನ್ನು ಒಳಗೊಂಡಿರಬೇಕಿತ್ತು.[೨] ಟಿಪ್ಪು ಕೂಡ ಶತ್ರುಗಳ ಮೇಲೆ ಮಿಂಚಿನ ದಾಳಿ ನಡೆಸುವಾಗ ಕುದುರೆಯ ಮೇಲೆ ಕುಳಿತು ರಾಕೆಟ್‌ಗಳನ್ನು ಬಳಸುತ್ತಿದ್ದನು (ಬಾಲಸುಬ್ರಮಣಿಯನ್ ೨೦೦೮: ೩೧೯).

ಸಿಮೊನ್ ವೆರ್ರೆಟ್ ಅವರು ಟಿಪ್ಪು ಕಾಲದಲ್ಲಿ ನಿರ್ಮಿಸುತ್ತಿದ್ದ ರಾಕೆಟ್‌ಗಳನ್ನು ಕುರಿತು ಹೀಗೆ ದಾಖಲಿಸುತ್ತಾರೆ:


"೧೬ನೆಯ ಶತಮಾನದ ಭಾರತದಲ್ಲಿ ಸೈನ್ಯದಲ್ಲಿ ಬಳಸುವ ರಾಕೆಟ್‌ಗಳು ವಿಕಾಸ ಹೊಂದಿದವು. ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಅಧೀನದಲ್ಲಿ ಪ್ರಾಯಶಃ ರಾಜ್ಯದ ಉತ್ತರ ಭಾಗದಲ್ಲಿರುವ ತೀರ್ಥಹಳ್ಳಿಯ[೩] ಕೋಟೆಯಲ್ಲಿ ಉತ್ಪಾದನೆಯು ಹೆಚ್ಚಿತು. ಭಾರತೀಯ ಯುದ್ಧದ ರಾಕೆಟ್‌ಗಳು ಮೃದುವಾದ ಸುತ್ತಿಗೆಯ ಕಬ್ಬಿಣದ ಕೊಳವೆಯನ್ನು ಒಳಗೊಂಡಿದೆ. ಇದು

೮ ಇಂಚು ಉದ್ದ ಮತ್ತು ೬–೧೨ ಪೌಂಡ್ ತೂಗುತ್ತಿತ್ತು. ಒಂದು ಅಥವಾ ಎರಡು ಪೌಂಡ್‌ಗಳ ಸಿಡಿಮದ್ದನ್ನು ತುಂಬಲಾಗುತ್ತಿತ್ತು. ಕೊಳವೆಯನ್ನು ಬಿದಿರಿನ ಕೋಲಿಗೆ ಅಥವಾ ಸ್ಟೀಲ್ ಕತ್ತಿಯ ದೆಬ್ಬೆಗೆ ಸೇರಿಸಿ ಬಿಗಿಯಲಾಗುತ್ತಿತ್ತು." (೨೦೧೨: ೬೦೧–೬೦೨).

ಟಿಪ್ಪು ಕಾಲದಲ್ಲಿ ಎರಡು ಪ್ರಕಾರದ ರಾಕೆಟ್‌ಗಳನ್ನು ತಯಾರಿಸುತ್ತಿದ್ದರು. ಅವುಗಳೆಂದರೆ:

೧. ಆಕಾಶ ಬಾಣ (ಸ್ಕೈ ರಾಕೆಟ್), ೨. ಭೂ ಬಾಣ (ಗ್ರೌಂಡ್ ರಾಕೆಟ್)

ರಾಕೆಟ್‌ನ ಕಬ್ಬಿಣದ ನಳಿಗೆಯ ಉದ್ದ ಒಂದು ಅಡಿ ಮತ್ತು ನಳಿಗೆಯ ವ್ಯಾಸ ಒಂದು ಇಂಚು. ೧೦–೧೨ ಅಡಿಗಳ ಉದ್ದದ ಬಿದಿರಿನ ಕೋಲಿಗೆ ಮದ್ದು ತುಂಬಿದ ನಳಿಗೆಯನ್ನು ಬಿಗಿಯಾಗಿ ಕಟ್ಟಿ ಹಾರಿಸಲಾಗುತ್ತಿತ್ತು. ಈ ರಾಕೆಟ್‌ಗಳು ಭಾರಿ ಸದ್ದು ಮಾಡುತ್ತಾ ಶತ್ರುಗಳ ಪಾಳೆಯದ ಮೇಲೆ ಬೀಳುತ್ತಿದ್ದವು. ಈ ರಾಕೆಟ್‌ಗಳಲ್ಲಿ ವಾಯು ಮಾರ್ಗವಾಗಿ ಬಾಣಗಳಂತೆ ಹೋಗುವ ರಾಕೆಟ್‌ಗಳನ್ನು ಆಕಾಶ ಬಾಣ ಎಂತಲೂ, ಭೂಮಿಯ ಮೇಲೆ ಹಾವಿನಂತೆ ಅಂಕುಡೊಂಕಾಗಿ ಸಾಗುವ ರಾಕೆಟ್‌ಗಳನ್ನು ಭೂ ಬಾಣ ಅಂತಲೂ ಕರೆಯುತ್ತಿದ್ದರು.



ಟಿಪ್ಪುವಿನ ರಾಕೆಟ್‌ಗಳು

ಹೈದರಾಲಿಯು ಆರ್ಕಾಟಿನ ಸೇವೆಯುಲ್ಲಿದ್ದ ಸಂದರ್ಭದಲ್ಲಿ ರಾಕೆಟ್ ಬಳಕೆಯ ತಂತ್ರಜ್ಞಾನವನ್ನು ಹೈದರಾಲಿಯು ಕಲಿತಿರಬೇಕು ಅಥವಾ ಟಿಪ್ಪುವು ಚೀನಾ ಜೊತೆಗೆ ವ್ಯಾಪಾರ ಹೊಂದಿದ ಸಂದರ್ಭದಲ್ಲಿ ರಾಕೆಟ್‌ನ ಪರಿಚಯವಾಗಿರಬಹುದು. ಟಿಪ್ಪುಸುಲ್ತಾನನ ಆಳ್ವಿಕೆಯ ಸಂದರ್ಭದಲ್ಲಿ ರಾಕೆಟ್ ವಿನ್ಯಾಸದಲ್ಲಿ ಕೆಲವೊಂದು ಬದಲಾವಣೆಗಳನ್ನು ಕಂಡಿತು. ಕೊಳವೆ ವ್ಯಾಸವನ್ನು ಕಡಿಮೆ ಮಾಡಲಾಯಿತು ಮತ್ತು ಅದರ ಉದ್ದವನ್ನು ಹೆಚ್ಚಿಸಲಾಯಿತು. ಇದರ ಉದ್ದೇಶ ದೂರಗಾಮಿ ಗಮ್ಯವನ್ನು ತಲುಪುವಂತೆ ಮಾಡುವುದಾಗಿತ್ತು. ಟಿಪ್ಪು ಮಾದರಿಯ ರಾಕೆಟ್‌ನ ನಳಿಗೆಯು ೧೨ ಇಂಚು ಉದ್ದ ಮತ್ತು ಒಂದು ಇಂಚು ವ್ಯಾಸ ಮತ್ತು ಕಡ್ಡಿಯ ಉದ್ದ ೧೨ ಅಡಿಗಳು. ನಳಿಗೆಯನ್ನು ಸ್ಟೀಲ್‌ನಿಂದ ಮಾಡಿಸಲಾಯಿತು. ೧ ಕೆ.ಜಿ. ಸಿಡಿಮದ್ದನ್ನು ಒಳಗೊಂಡ ರಾಕೆಟ್‌ನ ತೂಕ ೨ ಕೆ.ಜಿ.ಗಳು. ರಾಕೆಟ್ ಸಾಗುವ ಅಂದಾಜು ದೂರ ೧–೧.೫ ಕಿ.ಮೀ.ಗಳಾಗಿದ್ದವು. ಬಹುತೇಕ ರಾಕೆಟ್‌ಗಳು ಸ್ಫೋಟಿಸುತ್ತಿದ್ದವು. ಇತರ ಕೆಲವು ರಾಕೆಟ್‌ಗಳ ತುದಿಯ ಮೊನೆಯು ಅರಿತವಾಗಿರುತ್ತಿತ್ತು. ಮತ್ತೆ ಕೆಲವು ರಾಕೆಟ್‌ಗಳ ಕೊನೆಯು ತೀಕ್ಷ್ಣವಾಗಿ ಇರಿಯುತ್ತಿತ್ತು. ಗಾಳಿಯು ಜ್ವಾಲೆಯಾಗಿ ಹೊತ್ತಿಯುರಿಯಲು ನೆರವಾಗುತ್ತಿತ್ತು (ಬಾಲಸುಬ್ರಮಣಿಯನ್ ೨೦೦೮: ೩೧೯; ಮೊಹಮ್ಮದ್ ೧೮೫೫: ೧೫೮)

ಟಿಪ್ಪು ರಾಕೆಟ್‌ನಲ್ಲಿ ಬಳಸಿದ ಮತ್ತೊಂದು ವಿಧಾನವೆಂದರೆ ಬಿದಿರಿನ ಬೆತ್ತದ ಬದಲು ಉಕ್ಕಿನ ಅಲಗು ಅಥವಾ ಖಡ್ಗಗಳಿಗೆ ಕೊಳವೆಗಳನ್ನು ಕಟ್ಟುತ್ತಿದ್ದನು. ಈ ರೀತಿ ಕಟ್ಟುವುದರಿಂದ ರಾಕೆಟ್ ಗಮ್ಯ ಸ್ಥಾನವನ್ನು ತಲುಪುವ ಹೊತ್ತಿಗೆ ಈ ಖಡ್ಗದ ಅಲಗುಗಳಿಂದಾಗಿ ಪಥ ವಿಚಲನೆಯಾಗಿ ಗರಗರನೆ ಬೀಸುತ್ತಾ, ಎದುರು ಸಿಕ್ಕಿದ್ದನ್ನು ಕತ್ತರಿಸುತ್ತಾ ಹೋಗುತ್ತಿತ್ತು. ಈ ರೀತಿಯ ರಾಕೆಟ್‌ಗಳು ಅಪಾಯಕಾರಿಯಾಗಿ ಪರಿಣಮಿಸಿದವು (ದಾಸ್ ೨೦೧೧:೯).



ಯುದ್ಧದಲ್ಲಿ ರಾಕೆಟ್‌ನ ಆಕ್ರಮಣದ ಸನ್ನಿವೇಶ (ನಾಸಾ)

ನಾಸಾದಲ್ಲಿ ಕಲಾಂ ಕಂಡ ಚಿತ್ರಪಟ: ಒಮ್ಮೆ ಮಾಜಿ ರಾಷ್ಟ್ರಪತಿಗಳೂ, 'ಕ್ಷಿಪಣಿ ವಿಜ್ಞಾನಿ' ಅಬ್ದುಲ್ ಕಲಾಂ ಅವರು ನಾಸಾಗೆ ಬೇಟಿ ನೀಡಿದಾಗ ಕರಿಯ ಜನರು ರಾಕೆಟ್‌ಅನ್ನು ಪ್ರಯೋಗಿಸುತ್ತಿರುವ ಚಿತ್ರವೊಂದನ್ನು ಗಮನಿಸಿ ಸನಿಹವಾಗಿ ನೋಡಿ ಅಚ್ಚರಿಗೊಂಡರಂತೆ. ಕಾರಣ ಟಿಪ್ಪುವಿನ ಸೈನಿಕರು ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಉಡಾಯಿಸುತ್ತಿದ್ದ ರಾಕೆಟ್‌ಗಳು ಅವಾಗಿದ್ದವು. ಕಲಾಂ ಅವರು ಈ ಅನುಭವವನ್ನು ಅಗ್ನಿಯ ರೆಕ್ಕೆಗಳು (೨೦೦೨) ಎಂಬ ತಮ್ಮ ಆತ್ಮಕಥನದಲ್ಲಿ ಹೀಗೆ ದಾಖಲಿಸಿದ್ದಾರೆ:

"ಇಲ್ಲಿ (ನಾಸಾ) ಹೊರ ಪ್ರಾಂಗಣದಲ್ಲಿ ವಿಜೃಂಭಿಸುತ್ತಿರುವ ಒಂದು ವರ್ಣಚಿತ್ರದ ದೃಶ್ಯ ನನ್ನ ಮನಸ್ಸಿನಲ್ಲಿ ಸದಾ ಹಸಿರಾಗಿದೆ. ಈ ವರ್ಣಚಿತ್ರದಲ್ಲಿ ಕೆಲವೊಂದು ರಾಕೆಟ್‌ಗಳು ಹಿಂಬದಿ ಬಯಲಲ್ಲಿ ಹಾರಾಡುತ್ತಿದ್ದುವು. ಇಂತಹ ಹಾರಾಡುವ ರಾಕೆಟ್‌ಗಳ ಚಿತ್ರ ಈ ಉಡ್ಡಯನದ ಕೇಂದ್ರದಲ್ಲಿ ತೀರಾ ಸಾಮಾನ್ಯ. ಆದರೆ ನನ್ನ ಗಮನಸೆಳೆದದ್ದು ಯಾವ ದೃಶ್ಯ ಎಂದರೆ ರಾಕೆಟ್‌ಗಳನ್ನು ಉಡ್ಡಯನದ ಕಾರ್ಯದಲ್ಲಿ ತೊಡಗಿದ್ದ ಸೈನಕರು ಬಿಳಿಯವರಾಗಿರಲಿಲ್ಲ. ಕಪ್ಪು ಚರ್ಮದವರಾಗಿದ್ದು ದಕ್ಷಿಣ ಏಷ್ಯ ಜನಾಂಗೀಯರಂತೆ ಕಾಣುತ್ತಿದ್ದರು. ನನ್ನ ಕುತೂಹಲ ತೀವ್ರಗೊಂಡು ತೀರಾ ಹತ್ತಿರದಿಂದ ಆ ಚಿತ್ರವನ್ನು ಗಮನಿಸಿದೆ. ಭೇಷ್! ಇದು ನಮ್ಮ ಟಿಪ್ಪುಸುಲ್ತಾನನ ಸೈನ್ಯ ಬ್ರಿಟಿಷರೊಂದಿಗೆ ಹೋರಾಡುತ್ತಿರುವುದು. ನಮ್ಮ ದೇಶದಲ್ಲೇ ಮರೆತುಹೋಗಿದ್ದ ಟಿಪ್ಪು ಇಲ್ಲಿ ವಿರಾಜಮಾನನಾಗಿದ್ದಾನೆ. ರಾಕೆಟ್ ಯುದ್ಧಕಲೆಯಲ್ಲಿ ನಾಸಾ ಭಾರತೀಯನೊಬ್ಬನನ್ನು ವೈಭವೀಕರಿಸಿದುದನ್ನು ನೋಡಿ ನಾನು ಸಂತೋಷಗೊಂಡೆ" (ಪು. ೫೩–೫೪).

ಶ್ರೀರಂಗಪಟ್ಟಣದಲ್ಲಿ ರಾಕೆಟ್ ಉಡಾವಣ ಅಂಕಣ: ಶ್ರೀರಂಗಪಟ್ಟಣ ಕೋಟೆಯ ಮೈಸೂರು ದ್ವಾರದಿಂದ ಒಳ ಪ್ರವೇಶಿಸಿದರೆ ಅನತಿ ದೂರದಲ್ಲಿ ಬಲಕ್ಕೆ ಚಾವಣಿ ಇಲ್ಲದ ಒಂದು ಕಟ್ಟಡವಿದೆ. ಅದೇ ಟಿಪ್ಪುವಿನ ರಾಕೆಟ್ ಉಡಾವಣಾ ವೇದಿಕೆ ಅಥವಾ ಆವರಣ. ಈ ವೇದಿಕೆಯು ೮೦ ಅಡಿ ಉದ್ದ ಹಾಗೂ ೪೦ ಅಡಿ ಅಗಲವಿದೆ. ದಕ್ಷಿಣದ ಗೋಡೆಯು ೩೫ ಅಡಿ ಎತ್ತರವಿದೆ. ಶ್ರೀರಂಗಪಟ್ಟಣದ ಪತನಾನಂತರ ಇದನ್ನು ಬ್ರಿಟಿಷರ ಸರ್ಪಗಾವಲು ಪಡೆಯು 'ಬಾಲ್ ಅಲೈ' (ಚೆಂಡನ್ನು

ಉರುಳಿಬಿಟ್ಟು ಎದುರು ನಿಲ್ಲಿಸಿರುವ ವಸ್ತುಗಳನ್ನು ಉರುಳಿಸುವ ಕ್ರೀಡೆ) ಅಂಕಣವಾಗಿ ಪರಿವರ್ತಿಸಿಕೊಂಡಿತು (ಎಂ.ಎ.ಆರ್ ೧೯೩೫: ೬೫).

ಉಪಸಂಹಾರ: ಟಿಪ್ಪುವಿನ ಅದ್ಭುತ ಅಸ್ತ್ರಕ್ಕೆ ಬ್ರಿಟಿಷರು ನಿಜವಾಗಿಯೂ ಗಾಬರಿಗೊಂಡರು. ಅವರೂ ಕೂಡ ಮೈಸೂರಿನ ರಾಕೆಟ್‌ಗಳನ್ನು ನಕಲು ಮಾಡಿ ಮೈಸೂರಿನ ಅಶ್ವದಳದ ಮೇಲೆ ಪ್ರಯೋಗಿಸಲು ಪ್ರಯತ್ನಿಸಿದರು. ಆದರೆ ಅದೇನು ಪ್ರಯೋಜನವಾಗಲಿಲ್ಲ. ಕಾರಣ ಟಿಪ್ಪುವು ತನ್ನ ಅಶ್ವಗಳಿಗೆ ರಾಕೆಟ್‌ಗಳು ಮಾಡುವ ಸದ್ದಿನ ತರಬೇತಿ ನೀಡಿದ್ದನು. ಆದ್ದರಿಂದ ಬ್ರಿಟಿಷರ ರಾಕೆಟುಗಳ ಶಬ್ದಗಳಿಗೆ ಟಿಪ್ಪುವಿನ ಸೈನ್ಯಗಳು ವಿಚಲಿತಗೊಳ್ಳುತ್ತಿರಲಿಲ್ಲ.

ಇಷ್ಟಾದರೂ, ರಾಕೆಟ್‌ಗಳು ನಿಜವಾಗಿಯೂ ಶತ್ರು ಪಾಳಯಕ್ಕೆ ಭಾರಿ ಹಾನಿಯುಂಟು ಮಾಡಿದವೇ ಎಂಬುದು ಮುಖ್ಯವಾದ ಪ್ರಶ್ನೆ. ಈ ರಾಕೆಟ್‌ಗಳಿಂದ ಜೀವಹಾನಿ ಅಷ್ಟಕ್ಕಷ್ಟೇ. ಆದರೆ, ಏಕಕಾಲಕ್ಕೆ ನೂರಾರು ಸಂಖ್ಯೆಯಲ್ಲಿ ಬೆಂಕಿಯನ್ನುಗುಳುತ್ತಾ ತೂರಿ ಬರುವ 'ಬಾಣಬಿರುಸು'ಗಳು ರಾತ್ರಿಯ ವೇಳೆ ಶತ್ರುಗಳಲ್ಲಿ ನಿಜಕ್ಕೂ ಆತಂಕಗೊಳಿಸಿ ಓಡುವಂತೆ ಮಾಡುತ್ತಿದ್ದವು. ಆದರೆ ಇವುಗಳಿಗೆ ತಗಲುತ್ತಿದ್ದ ವೆಚ್ಚ ಮಾತ್ರ ಅವುಗಳ ಉಪಯೋಗಕ್ಕಿಂತ ತುಂಬಾ ದುಬಾರಿಯಾಗಿರುತ್ತಿತ್ತು (ಮೊಹಮ್ಮದ್ ೧೮೫೫: ೧೫೮).

ಮಿಗಿಲಾಗಿ, ಟಿಪ್ಪುವಿಗೆ ಈ ರಾಕೆಟ್‌ಗಳು ನಿರ್ಣಾಯಕ ಯುದ್ಧದಲ್ಲಿ ಪ್ರತಿಕೂಲವಾಗಿಯೇ ಪರಿಣಮಿಸಿದವು. ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪುವು ಮರಣ ಹೊಂದುವ ಎರಡು ದಿನ ಮೊದಲು ಅಂದರೆ ಮೇ ೨, ೧೭೯೯ರಂದು ಬ್ರಿಟಿಷ್ ಸೈನಿಕನೊಬ್ಬ ಹಾರಿಸಿದ ಗುಂಡಿನಿಂದ ಕೋಟೆಯೊಳಗಿದ್ದ ರಾಕೆಟ್ ದಾಸ್ತಾನಿಗೆ ಬೆಂಕಿ ತಗುಲಿ ಸ್ಫೋಟಗೊಂಡಿತು. ಭಾರಿ ಕಾರ್ಮೋಡ ಮೇಲೆದ್ದಿತು. ಕಣ್ಣು ಕೋರೈಸುವ ಬಿಳಿಬಣ್ಣ ಹಂತಹಂತವಾಗಿ ಚಿಮ್ಮುತ್ತಿತ್ತು. ಈ ಅನಾಹುತದಲ್ಲಿ ಟಿಪ್ಪುವಿನ ಹಲವು ಸೈನಕರು ಸತ್ತಿರುವ ಸಾಧ್ಯತೆಗಳಿವೆ. ಮೇ ೪ರಂದು ಟಿಪ್ಪುವು ಮರಣ ಹೊಂದಿದ ಮೇಲೆ ಬ್ರಿಟಿಷರು ರಾಕೆಟ್ ಉಡಾವಣೆ ಮಾಡಲು ಬಳಸುತ್ತಿದ್ದ ೬೦೦ ಲಾಂಚರ್‌ಗಳನ್ನೂ, ಕೋಟೆಯೊಳಗಿಟ್ಟಿದ್ದ ೧೬೦೦ ರಾಕೆಟ್‌ಗಳನ್ನೂ ಪತ್ತೆಹಚ್ಚಿದರು. ಒಟ್ಟಾರೆ, ದುಭಾರಿ ಉತ್ಪಾದನಾ ವೆಚ್ಚವನ್ನು ಹೊಂದಿದ್ದ ರಾಕೆಟ್‌ಗಳು ಯುದ್ಧದಲ್ಲಿ ಟಿಪ್ಪುವಿಗೆ ನಿರೀಕ್ಷಿತ ನೆರವು ನೀಡುವಲ್ಲಿ ವಿಫಲವಾದಂತೆ ತೋರುತ್ತದೆ.

***

ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದ (೧೭೯೯) ತರುವಾಯ ಬ್ರಿಟಿಷ್ ಸೇನೆಯು ಶ್ರೀರಂಗಪಟ್ಟಣ ಸಮೀಪದ ತುರುಕನಹಳ್ಳಿಯ ಮತಾಪು ಕಾರ್ಖಾನೆಯಲ್ಲಿ ೭೦೦ ರಾಕೆಟ್‌ಗಳನ್ನು ವಶಪಡಿಸಿಕೊಂಡಿತು. ಅವುಗಳಲ್ಲಿ ಎರಡನ್ನು ರಾಯಲ್ ಆರ್ಟಿಲರಿ ಮ್ಯೂಸಿಯಂ, ಇಂಗ್ಲೇಂಡ್‌ನಲ್ಲಿ ಇರಿಸಲಾಗಿದೆ. ಇವುಗಳಲ್ಲಿ ಒಂದು ರಾಕೆಟ್‌ನ ಕೊಳವೆಯು ೫.೮ ಸೆಂ.ಮೀ. ವ್ಯಾಸವನ್ನು ಮತ್ತು ೨೫.೪ ಸೆಂ.ಮೀ. ಉದ್ದವನ್ನು ಹೊಂದಿದೆ. ಕೊಳವೆಯನ್ನು ೧.೦೨ ಮೀ. ಉದ್ದದ ಲೋಹದ ಕತ್ತಿಯೊಂದಕ್ಕೆ ಬಿಗಿಯಲಾಗಿದೆ. ಮತ್ತೊಂದು ೩.೭ ಸೆ.ಮೀ. ವ್ಯಾಸ ಮತ್ತು ೨೦ ಸೆ.ಮೀ. ಕೊಳವೆಯನ್ನು ಹೊಂದಿದೆ. ಅದನ್ನು ೧.೯ಮೀ. ಉದ್ದದ ಬಿದಿರಿನ ಬೆತ್ತಕ್ಕೆ ಬಿಗಿಯಲಾಗಿದೆ.

ಟಿಪ್ಪುಸುಲ್ತಾನನು ಬಳಸಿದ ರಾಕೆಟ್‌ಗಳನ್ನು ಅಂತಿಮವಾಗಿ ವಿಲಿಯಂ ಕಾಂಗ್ರೀವ್ಸ್ ನಕಲು ಮಾಡಿ ಯೂರೋಪಿನಲ್ಲಿ ರಾಕೆಟ್ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದನು. ಮೂಲ ದಾಖಲೆಯು ಕಾಂಗ್ರೇವ್ಸ್‌ನ ರಾಕೆಟ್‌ಗಳು ಭಾರತೀಯ ರಾಕೆಟ್‌ಗಳಿಗಿಂತಲೂ ಕಡಿಮೆ ದೂರವನ್ನು ಕ್ರಮಿಸುತ್ತಿದ್ದವು ಎಂದು ದಾಖಲಿಸಿದೆ. ಇದರರ್ಥ ಅತ್ಯುನ್ನತ ಗುಣಮಟ್ಟದ ರಾಕೆಟ್ ತಂತ್ರಜ್ಞಾನ ಭಾರತೀಯರದಾಗಿತ್ತು. ಕಾಂಗ್ರೇವ್ಸ್‌ನ ಪ್ರಸಿದ್ಧ ರಾಕೆಟ್ ಮೊದಲು ಬಳಕೆಯಾಗಿದ್ದು ೧೮೦೫ರಲ್ಲಿ ಬೊಲೋನ ವಿರುದ್ಧ. ೧೮೫೦ರ ನಂತರ ರಾಕೆಟ್‌ಗೆ ಒಂದು ನಿಕರತೆ ಬಂದನಂತರವೇ ಕಾಂಗ್ರೇವ್ಸ್‌ನ ರಾಕೆಟ್‌ಗಳು ಜನಪ್ರಿಯಗೊಂಡಿತ್ತು (ಬಾಲಸುಬ್ರಮಣಿಯನ್ ೨೦೦೮: ೩೧೮).

***

ಕೆಲವು ವರ್ಷಗಳ (೨೦೦೨ ಮತ್ತು ೨೦೦೭ರಲ್ಲಿ) ಹಿಂದೆ ಬಿದನೂರಿನ ಸಮೀಪ ಕೆಲವು ರಾಕೆಟ್‌ಗಳ ಅವಶೇಷಗಳು ದೊರೆತಿದ್ದವು. ಅವುಗಳನ್ನು ಶಿವಮೊಗ್ಗದ ಸರ್ಕಾರಿ ಮ್ಯೂಸಿಯಂನಲ್ಲಿ ಸಂಗ್ರಹಿಸಿಡಲಾಗಿದೆ ಎಂದು ಎಚ್.ಎಂ. ಸಿದ್ಧನಗೌಡರ್ ತಮ್ಮ ಲೇಖನವೊಂದರಲ್ಲಿ ದಾಖಲಿಸಿದ್ದಾರೆ. ಇವು ಮರದಲ್ಲಿ ನಿರ್ಮಿಸಿದ ರಾಕೆಟ್‌ಗಳಾಗಿರುವ ಸಾಧ್ಯತೆಗಳಿವೆ. ಪುನಃ ಕೆಲವು ತಿಂಗಳುಗಳ ಹಿಂದೆ.(ಜುಲೈ ೨೦೧೮ರಲ್ಲಿ) ಬಿದನೂರಿನ ಕೋಟೆಯ ಬಾವಿಯೊಂದರಲ್ಲಿ ಸಾವಿರಾರು ರಾಕೆಟ್ ಅವಶೇಷಗಳು ದೊರಕಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ (ದಿ ಟೈಮ್ಸ್ ಆಫ್ ಇಂಡಿಯಾ, ಜುಲೈ ೨೮, ೨೦೧೮).

ಇಲ್ಲಿ ದೊರಕಿರುವ ಕೊಳವೆಗಳಲ್ಲಿನ ಮದ್ದನ್ನು ಪೋಟಾಷಿಯಂ ನೈಟ್ರೇಟ್, ಇದ್ದಿಲು ಮತ್ತು ಮೆಗ್ನಿಷಿಯಂ ಪುಡಿಗಳಿಂದ ತಯಾರಿಸಿರುವುದಾಗಿ ಪತ್ರಿಕೆಯಲ್ಲಿ ವರದಿಯಾಗಿದೆ. ೧೨–೧೪ ಇಂಚುಗಳ ವಿವಿಧ ಅಳತೆಯ ರಾಕೆಟ್‌ಗಳು ಸಿಕ್ಕಿವೆ. ಕಬ್ಬಿಣದ ತುಕ್ಕು ಹಿಡಿದಿರುವ ಕೊಳವೆಗಳು ದೊರೆತಿವೆ. ಪ್ರಸ್ತುತ ಇವುಗಳನ್ನು ಶಿವಮೊಗ್ಗದ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಹಿಡಲಾಗಿದೆ. ಇವುಗಳ ಬಗೆಗೆ ಹೆಚ್ಚಿನ ಅಧ್ಯಯನಗಳು ನಡೆದರೆ ಹೈದರ್ ಮತ್ತು ಟಿಪ್ಪು ಕಾಲದ ರಾಕೆಟ್‌ಗಳ ಬಗೆಗೆ ಮತ್ತಷ್ಟು ವಿವರಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ.

ಅಡಿಟಿಪ್ಪಣಿಗಳು

೧. 'ಬಾಣ' ಎಂದು ಭಾರತೀಯರಲ್ಲಿ ಜನಪ್ರಿಯವಾಗಿರುವ ಶಬ್ದವು 'ವಾಣ" ಎಂಬ ಸಂಸ್ಕೃತಿ ಶಬ್ದದಿಂದ ಬಂದಿದೆ. ಅದರ ಅರ್ಥ ಬಾಣ. ಮಧ್ಯಕಾಲದಲ್ಲಿ ಮುಸ್ಲಿಂ ಇತಿಹಾಸಕಾರರು ರಾಕೆಟ್ ಅನ್ನು 'ತಕ್ಷ್', ಮತ್ತು 'ಹವಾಯ್' ಎಂದು ಕರೆದಿದ್ದಾರೆ. ಬಾಣದ ಕೆಲವು ಆರಂಭಿಕ ಹೆಸರುಗಳೆಂದರೆ: 'ತಿರ್–ಐ–ಹವಾಯ್' ಮತ್ತು 'ಹುಕ್ವ'. ರಾಕೆಟ್‌ಗಳನ್ನು ಟಿಪ್ಪುಸುಲ್ತಾನನು 'ಸುಹಾಬ್' (ಬೇಟೆಯ ನಕ್ಷತ್ರ) ಎಂದು ಕರೆಯುತ್ತಿದ್ದನು. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಪಟಾಕಿ ರಾಕೆಟ್‌ಗಳನ್ನು 'ಸೂರಬಾಣ' ಎಂದು ಕರೆಯುವುದು ರೂಢಿಯಲ್ಲಿದೆ. ಟಿಪ್ಪು ಹೆಸರಿಟ್ಟ 'ಸುಹಾಬ್' ಬಾಣವೇ ನಮ್ಮ ಜನಪದರಲ್ಲಿ 'ಸೂರಬಾಣ'ವಾಗಿರಬಹುದು. ಇನ್ನೂ ಒಂದು ಸಾಧ್ಯತೆಯನ್ನು ತಳ್ಳಿಹಾಕಲಾಗದು. ರಾಕೆಟ್ ಸುರ್ ಸುರ್ ಸದ್ದು ಮಾಡುತ್ತಾ ಹಾರುವುದರಿಂದ ಅದನ್ನು 'ಸೂರಬಾಣ' ಎಂಬ ಹೆಸರಿನಂದ ಕರೆದಿರಬಹುದು.

೨. ಕುಶನ್ ಅಂದರೆ ಸೈನಿಕ ತುಕಡಿ. ಇದು ೧೩೯೨ ಸೈನಿಕರನ್ನು ಮತ್ತು ಒಬ್ಬ ಬಾಣದಾಳನ್ನು ಹೊಂದಿರಬೇಕೆಂದು ವೆರ್ರೆಟ್ ಹೇಳಿದರೆ, ಐದು ಸಾವಿರ ಸೈನಿಕರನ್ನು ಒಳಗೊಂಡಿತ್ತು ಎಂದು ಸಿದಿಕ್ ನಕ್ವಿ ಅವರು ಅಭಿಪ್ರಾಯ ಪಟ್ಟಿದ್ದಾರೆ.

೩. ಬಹುಶಃ ತೀರ್ಥಹಳ್ಳಿಯಾಗಿರಲಾರದು. ಅದರ ಸಮೀಪದ ನಗರ ಅಥವಾ ಬಿದನೂರು ಆಗಿರುವ ಸಾಧ್ಯತೆಗಳಿವೆ. ಇತ್ತೀಚೆಗೆ (ಜುಲೈ, ೨೦೧೮) ನಗರದ ಸಮೀಪದ ಹಳೆಯ ಬಾವಿಯಲ್ಲಿ ಸಾವಿರಾರು ರಾಕೆಟ್‌ಗಳ ಅವಶೇಷಗಳು ದೊರೆತ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿದೆ. ಈ ಕುರಿತು ಮತ್ತಷ್ಟು ಅಧ್ಯಯನಗಳು ನಡೆಯಬೇಕಿದೆ.

ಆಕರ ಗ್ರಂಥಗಳು

೧. ಬಾಲಸುಬ್ರಮಣ್ಯಮ್ ಆರ್. ೨೦೦೮, ದಿ ಸಾಗ ಆಫ್ ಇಂಡಿಯನ್ ಕೆನಾನ್ಸ್, ನ್ಯೂಡೆಲ್ಲಿ: ಆರ್ಯನ್ ಬುಕ್ ಇಂಟರ್‌ನ್ಯಾಷನಲ್.

೨. ದಾಸ್ ಎಸ್.ಕೆ (ಅನು: ಟಿ.ಆರ್. ಅನಂತರಾಮು), ೨೦೧೧, ರಾಕೆಟ್: ಇತಿಹಾಸ–ವಿಜ್ಞಾನ–ತಂತ್ರಜ್ಞಾನ, ಬೆಂಗಳೂರು: ಪ್ರಿಸಮ್.

೩. ಮಹಮ್ಮದ್, ಗೋಲಮ್, ೧೮೫೫, ಹಿಸ್ಟ್ರಿ ಆಫ್ ಹೈದರ್ ಅಲಿ ಅಂಡ್ ಟಿಪ್ಪುಸುಲ್ತಾನ್, ಲಂಡನ್: ಥ್ಯಾಕರ್ ಅಂಡ್ ಕಂ.

೪. ಮೈಸೂರ್ ಆರ್ಕಿಯೋಲಜಿಕಲ್ ರಿಪೋರ್ಟ್, ೧೯೩೫.

೫. ಸಿದ್ಧನಗೌಡರ್ ಎಚ್.ಎಂ., ೨೦೧೦, 'ರಾಕೆಟ್ಸ್ ಆಫ್ ಹೈದರ್ ಅಂಡ್ ಟಿಪ್ಪು ಪಿರಿಯಡ್' (ಸಂ.) ಆರ್.ಗೋಪಾಲ್, ಟಿಪ್ಪು ಸುಲ್ತಾನ್ ದಿ ಟೈಗರ್ ಆಫ್ ಮೈಸೂರು, ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ: ಮೈಸೂರು.

೬ ವೆರೆಟ್, ಸಿಮೊನ್, ೨೦೧೨, 'ಟೆಕ್ನಾಲಜಿ ಆನ್ ದಿ ಸ್ಪಾಟ್: ದಿ ಟ್ರಯಲ್ ಆಫ್ ದಿ ಕಾಂಗ್ರೆವ್ ರಾಕೆಟ್ ಇನ್ ಇಂಡಿಯಾ ಇನ್ ದಿ ಅರ್ಲಿ ನೈಂಟೀನ್ತ್ ಸೆಂಚುರಿ', ಪ್ರಾಜೆಕ್ಟ್ ಮ್ಯೂಸ್ (ನಿಯತಕಾಲಿಕೆ), ಸಂ. ೫೩, ನಂಬರ್–೩, ಜುಲೈ ೨೦೧೨, ಪು.೫೯೮–೬೨೪.

೭. ದಿ ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆ ದಿ:೧೮.೧೧.೨೦೦೭.

೮. ದಿ ಟೈಮ್ಸ್ ಆಫ್ ಇಂಡಿಯಾ, ಜುಲೈ ೨೮, ೨೦೧೮

೬೭

ಮಧ್ಯಕಾಲೀನ ಕರ್ನಾಟಕ ಮತ್ತು ತೆರಿಗೆ ನಿರಾಕರಣ ಸಂದರ್ಭಗಳು

ಓ. ದೇವರಾಜ✷

ರಾಜ್ಯದ ಆದಾಯದ ಬಹುಭಾಗವು ತೆರಿಗೆಗಳಿಂದ ಬರುತಿತ್ತು. ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲವೇ ತೆರಿಗೆಗಳೆಂದು ಗೌತಮ ಸಂಹಿತೆ, ನಾರದ ಸಂಹಿತೆ ಮುಂತಾದ ಸ್ಮೃತಿಗಳು ಭಾವಿಸುತ್ತವೆ. ದಕ್ಷಿಣ ಭಾರತದ ತೆರಿಗೆಗಳನ್ನು ಅಧ್ಯಯನ ಮಾಡುವಾಗ ಎದ್ದು ಕಾಣುವ ಅಂಶವೆಂದರೆ ಅವುಗಳಲ್ಲಿ ಕಂಡುಬರುವ ಅಸಂಖ್ಯಾತ ತೆರಿಗೆಗಳು. ಅವುಗಳಲ್ಲಿ ಕೆಲವು ಅರ್ಥವಾಗುವುದಿಲ್ಲ. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಎಷ್ಟೋ ತೆರಿಗೆಗಳು ನಮಗೆ ಅರ್ಥವಾಗುವುದಿಲ್ಲ. ಪ್ರಭುತ್ವವು ವಿವಿಧ ಮೂಲಗಳಿಂದ ತೆರಿಗೆ ಸಂಗ್ರಹ ಮಾಡುವುದರ ಜೊತೆಗೆ ಖರ್ಚು-ವೆಚ್ಚಗಳನ್ನು ಸರಿತೂಗಿಸುತಿತ್ತು. ಭೂಮಿ, ವೃತ್ತಿ, ಆದಾಯ, ವಸ್ತುಗಳು ಮತ್ತು ಜಾತಿ ಮೇಲೆ ತೆರಿಗೆ ವಿಧಿಸುತ್ತಿತ್ತು. ತೆರಿಗೆಯ ಪ್ರಮಾಣವು ಒಂದೇ ಪ್ರಮಾಣದಲ್ಲಿ ಇರುತ್ತಿರಲಿಲ್ಲ. ಕೆಳಜಾತಿಗಳು ಸಹ ತೆರಿಗೆಯನ್ನು ಕೊಡಬೇಕಾಗಿತ್ತು. ಈ ಕುರಿತಂತೆ ಶಾಸನಗಳು ಮಾಹಿತಿ ನೀಡುತ್ತವೆ. ಈ ತೆರಿಗೆಗಳ ಪ್ರಮಾಣವು ಅಧಿಕವಾದಾಗ ಪ್ರಭುತ್ವದ ವಿರುದ್ಧ ರೈತರು, ಕೃಷಿಕಾರ್ಮಿಕರು, ಜನಸಾಮಾನ್ಯರು, ಕೆಳಜಾತಿಗಳು, ಬುಡಕಟ್ಟುಗಳು, ಸಮುದಾಯಗಳು ವಿರೋಧಿಸಿರುವ, ಪ್ರತಿಭಟಿಸಿರುವ ಪ್ರಸಂಗಗಳು ಚರಿತ್ರೆಯಲ್ಲಿ ಕಂಡುಬರುತ್ತವೆ.

ಮಧ್ಯಕಾಲೀನ ಕರ್ನಾಟಕದಲ್ಲಿ ವಿವಿಧ ರಾಜವಂಶಗಳು, ಸಾಮಂತ ಅರಸರು ಆಳ್ವಿಕೆ ನಡೆಸಿರುವುದರಿಂದ ತೆರಿಗೆ ಹಾಕುತ್ತಿದ್ದ ಪ್ರಮಾಣವು ವ್ಯತ್ಯಾಸವಾಗುತ್ತಿತ್ತು. ಈ ವ್ಯತ್ಯಾಸವು ಅಂದಿನ ಕೃಷಿ ಚಟುವಟಿಕೆಗಳನ್ನು ಅವಲಂಬಿಸಿತ್ತು. ತೆರಿಗೆ ನಿಗದಿಗೊಳಿಸುತ್ತಿದ್ದ ಅಧಿಕಾರಿಗಳನ್ನು ಯಾರು ನೇಮಿಸುತ್ತಿದ್ದರು? ಮಧ್ಯವರ್ತಿಗಳ ಕೈವಾಡದಿಂದ ತೆರಿಗೆಯ ಪ್ರಮಾಣವು ಏರುಪೇರಾಗುವ ಸಾಧ್ಯತೆಗಳೇನಾದರೂ ಕಂಡುಬರುತ್ತವೆಯೇ? ಮುಂತಾದ ಪ್ರಶ್ನೆಗಳು ಉದ್ಭವಿಸುತ್ತವೆ. ರೈತರಿಂದ ತೆರಿಗೆಗಳನ್ನು ಸಂಗ್ರಹಿಸಲು ಅಧಿಕಾರಿಗಳು ಸುಗ್ಗಿಯ ಕಾಲದಲ್ಲಿ ಬರುತ್ತಿದ್ದಂತೆ ಒಂದು ಶಾಸನ ತಿಳಿಸುತ್ತದೆ. ತೆರಿಗೆಗಳನ್ನು ಸಂಗ್ರಹಿಸುವುದು ಸುಲಭದ ಕಾರ್ಯವೇನೂ ಆಗಿರಲಿಲ್ಲ. ಅದರಲ್ಲಿಯೂ ತೆರಿಗೆಗಳನ್ನು ಅನ್ಯಾಯವಾಗಿ ಹೆಚ್ಚಿಸಿದಾಗ, ಕೇಳಬಾರದ ಕಡೆ ಕೇಳಿದಾಗ ಜನತೆಯು ಪ್ರತಿಭಟಿಸುವುದರ ಕುರುಹುಗಳು ಶಾಸನಗಳಿಂದ ತಿಳಿಯಪಡುತ್ತದೆ. ತೆರಿಗೆಗಳನ್ನು ಸರಿಯಾದ ಕಾಲ, ದೇಶ ಮತ್ತು ಸರಿಯಾದ ರೀತಿಯಲ್ಲಿ ಸಂಗ್ರಹಿಸಬೇಕೆಂದು ಮಹಾಭಾರತವು ತಿಳಿಸುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿದ್ದ ತೆರಿಗೆಗಳನ್ನು ಚಾಲುಕ್ಯರು ಹೆಚ್ಚಿಸಿದಾಗ ಬಾಳ್ಗುಳಿ ಎಂಬ ಊರಿನ ಪ್ರತಿನಿಧಿಗಳು ಅಹವಮಲ್ಲ ಚಕ್ರವರ್ತಿಯನ್ನು ಕಂಡು ತಮ್ಮ ಕಷ್ಟಗಳನ್ನು ಹೇಳಿಕೊಂಡು ಹಿಂದಿನ ತೆರಿಗೆಗಳನ್ನೇ ಪಾವತಿಸುತ್ತೇವೆ ಎಂದು ಚಕ್ರವರ್ತಿಯಿಂದ ಆಜ್ಞೆ ಹೊರಡಿಸುತ್ತಾರೆ. ಅಗ್ರಹಾರಗಳ ಆದಾಯವು ಅಲ್ಲಿ ವಾಸಿಸುವ ಬ್ರಾಹ್ಮಣರಿಗೆ ಸಂದಾಯವಾಗುತ್ತಿತ್ತು. ಇದನ್ನು ನಿರ್ಲಕ್ಷಿಸಿ ಮಹಾಮಂಡಳಿಕ ಬೂತಾರ್ಯನು ರೋಣಕ್ಕೆ ಬಂದು ಭತಾಯವನ್ನು (ಬಹುಶಃ ಭತ್ತಾಯ-ಭತ್ತದ ರೂಪವಾಗಿ ಕೊಡಬೇಕಾದ ತೆರಿಗೆ) ಕೊಡಬೇಕೆಂದು ಹಿಂಸಿಸಿದಾಗ ರೋಣದ ಪಂಪಯ್ಯ ಎಂಬ ಕೌಂಡಿನ್ಯ ಗೋತ್ರದ ವೈದಿಕನು ಅಲ್ಲಿನ ಮಹಾರಾಜರ ಅಪ್ಪಣೆ ಪಡೆದು ನಾನು ಒಂದು ಅಕ್ಷತೆಯನ್ನು ಕೊಡುವುದಿಲ್ಲವೆಂದು ನಿಶ್ಚಯಿಸಿ ಬೂತಾರ್ಯನ ವಿರುದ್ಧ ಹೋರಾಡಿ ಮಡಿಯುತ್ತಾನೆ. ಇದು ಪ್ರತಿಭಟನೆಯನ್ನು ಸೂಚಿಸುತ್ತಾದರೂ ಅಧಿಕಾರ ವರ್ಗದಲ್ಲಿ ಎಚ್ಚರಿಕೆಯನ್ನು ಮೂಡಿಸಿದಂತೆ ಕಂಡುಬರುವುದಿಲ್ಲ. ತಮಗಾದ ಅನ್ಯಾಯದ ವಿರುದ್ಧ ಅರಸನೆದುರು ನೇರವಾಗಿ ಪ್ರತಿಭಟನೆ ನಡೆಸಲು ಸಾಧ್ಯವಾಗದೇ ಇರುವಾಗ ಈ ಬಗೆಯ ಧೋರಣೆಗಳು ಕಂಡು ಬರುತ್ತವೆ. ಎಪಿಗ್ರಾಫಿಯಾ ಕರ್ನಾಟಕದ ಒಂದು ಶಾಸನದಲ್ಲಿ ಅಧಿಕಾರಿಯೊಬ್ಬರು ತೆರಿಗೆಯನ್ನು ಕೊಡುವಂತೆ ಹಿಂಸಿಸಿದಾಗ ಅದನ್ನು ಪ್ರತಿಭಟಿಸಿ ವೀರನೊಬ್ಬನು ಹೋರಾಡಿ ಮಡಿದಂತೆ ಚಿತ್ರಿತವಾಗಿದೆ. ಅಂದರೆ ಆಡಳಿತವು ತಮ್ಮ ಹಕ್ಕುಗಳನ್ನು ತುಳಿದು ಅನ್ಯಾಯವೆಸಗಿದಾಗ ಜನತೆಯು ಮೌನವಾಗಿ

✷ ಇತಿಹಾಸ ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು, ಹೊಸಬಂಡಿ ಹರ್ಲಾಪೂರ, ಕೊಪ್ಪಳ ಜಿಲ್ಲೆ-೫೮೩೨೩೪. ಮೊ. ೯೪೪೯೩೮೦೮೩೪

ಅದನ್ನು ಸಹಿಸಿಕೊಳ್ಳುತ್ತಿರಲಿಲ್ಲ. ಕೆಲವೊಮ್ಮೆ ಬಹಿರಂಗವಾಗಿ ಪ್ರತಿಭಟಿಸುತ್ತಿದ್ದರು ಎಂಬ ನಿದರ್ಶನಗಳು ಕಂಡುಬರುತ್ತವೆ. ಅತಿಯಾದ ತೆರಿಗೆಯನ್ನು ಹೇರುವುದರ ಮೂಲಕ ಹಳ್ಳಿಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕೆಂಬ ಅಧಿಕಾರಿಗಳ ಮತ್ತು ಗ್ರಾಮೀಣ ಪರಿಸರದ ಗಣ್ಯರು ಯತ್ನಿಸುತ್ತಿದ್ದರು. ಪ್ರಭುತ್ವ ಅಥವಾ ಭೂಮಾಲೀಕರ ವಿರುದ್ಧ ರೈತರು ಅಸಮಾಧಾನ ಹೊಂದುವುದು ಸರ್ವೆಸಾಮಾನ್ಯವಾಗಿತ್ತು. ಅಧಿಕಾರಿಗಳು ಅವರನ್ನು ಹಿಂಸಿಸುತ್ತಿದ್ದರು ಎನ್ನುವುದಕ್ಕೆ ಮೇಲಿನ ೧೧ನೇ ಶತಮಾನದ (ಬಿಕೆಐ–೯೨೪) ಶಾಸನ ಉತ್ತಮ ಉದಾಹರಣೆ.

ತೆರಿಗೆಯನ್ನು ಸಂಗ್ರಹಿಸುವವರು ಯಾರೇ ಆಗಿದ್ದರೂ, ಅವರು ತೆರಿಗೆಯನ್ನು ಪಾವತಿಸುವವರ ಸಮಸ್ಯೆಗಳಿಗೆ ಸ್ಪಂದಿಸುತ್ತಿರಲಿಲ್ಲ ಎನ್ನುವುದು ಸ್ಪಷ್ಟ. ಈ ಕಾರಣಕ್ಕಾಗಿ ಹಲವಾರು ಸಂದರ್ಭಗಳಲ್ಲಿ ಪ್ರತಿಭಟಿಸುವ ಲಕ್ಷಣಗಳು ಕಂಡುಬರುತ್ತಿದ್ದವು. ಅರಸೊತ್ತಿಗೆ ದರ್ಪಿಷ್ಠತೆ ಹಾಗೂ ಅಧಿಕಾರಿಗಳ ಅಧಿಕಾರಶಾಹಿತ್ವ ಪ್ರವೃತ್ತಿಗಳು ತೆರಿಗೆಯ ವಿಚಾರವಾಗಿ ಜನರಲ್ಲಿ ಭಯ ಹುಟ್ಟಿಸುವ ಸಾಧನವಾಗಿದ್ದವು. ಶಾಸನ ಮತ್ತು ಸಾಹಿತ್ಯದ ಆಧಾರಗಳು ತಿಳಿಸುವಂತೆ ಜನಸಾಮಾನ್ಯರು ತೊಂದರೆಗೆ ಒಳಪಟ್ಟಿರುವುದು ಎರಡು ವಿಚಾರಗಳಿಗೆ ತೆರಿಗೆ ಮತ್ತು ಬಿಟ್ಟಿಕಾರ್ಯಗಳಿಗೆ ಪಂಚಾಳರ ವೃತ್ತಿಯ ಮೇಲೆ (ಬಡಗಿ, ಕಮ್ಮಾರ, ಅಕ್ಕಸಾಲಿ, ಕಂಚುಗಾರ ಮತ್ತು ಶಿಲ್ಪಿ) ಅವರು ಉಪಯೋಗಿಸುತ್ತಿದ್ದ ಮೂಲವಸ್ತುವಿನ ಮೇಲೆ, ಉಪಕರಣಗಳ ಮೇಲೆ, ಉತ್ಪಾದಿತ ವಸ್ತುವಿನ ಮೇಲೆ, ವ್ಯಾಪಾರದ ಮೇಲೆ ಹಾಕುತ್ತಿದ್ದ ಸುಂಕಗಳ ಬಗ್ಗೆ ಅನೇಕ ಸಂದರ್ಭಗಳಲ್ಲಿ ಪ್ರತಿಭಟಿಸಿದ ವಿವರಗಳು ಕಂಡುಬರುತ್ತವೆ. ಈ ಕುರಿತು 'ಕಂಚಿಪುರಾಣ' ಸಾಹಿತ್ಯ ಕೃತಿಯು ಗಮನ ಸೆಳೆಯುತ್ತದೆ. ತೆರಿಗೆಯನ್ನು ಕೊಡಲು ನಿರಾಕರಿಸಿದ ಪಂಚಾಳದ ಕಂಚುಗಾರರು ಅರಸನ ಕೋಪಕ್ಕೆ ತುತ್ತಾಗಿ ಮರಣದಂಡನೆಗೆ ಒಳಗಾಗುತ್ತಾರೆ. ಅದೇ ರೀತಿಯಾಗಿ 'ಧರ್ಮಪಾಲ ವಿಜಯ' ಎಂಬ ತೆಲುಗು ಕೃತಿಯಲ್ಲಿ ಸಹ ತೆರಿಗೆ ಕೊಡಲು ನಿರಾಕರಿಸಿದ ಪಾಂಚಾಳರನ್ನು ನೆಲದಲ್ಲಿ ಹೂಳಿ ತಲೆಗಳನ್ನು ಕತ್ತರಿಸುತ್ತಾನೆ ಎಂಬ ವಿವರಗಳು ಆ ಕಾಲದ ಸಮಾಜವು ಬಿಟ್ಟಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ ಎಂಬುದನ್ನು ತಿಳಿಸುತ್ತದೆ.

ತೆರಿಗೆಗಳನ್ನು ಸಂಗ್ರಹಿಸುವಾಗ ರಾಜ್ಯದಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಅಕ್ರಮವಾಗಿ ತೆರಿಗೆಯನ್ನು ಸಂಗ್ರಹಿಸಿತ್ತಿದ್ದರೆಂದು ಗುಂಡ್ಲುಪೇಟೆ ಶಾಸನ ತಿಳಿಸುತ್ತದೆ. ಈ ಕುರಿತಂತೆ ಜನಸಾಮಾನ್ಯರಿಂದ ಅಕ್ರಮವಾಗಿ ಸಂಗ್ರಹಿಸುತ್ತಿದ್ದ ತೆರಿಗೆ ಅಧಿಕಾರಿಗಳನ್ನು ಕುರಿತು ಹೇಳುವಾಗ ವಿಜಯನಾರಾಯಣ ದೇವಾಲಯದ ಪಾರುಪತ್ಯಗಾರನು ತೆರಿಗೆಯನ್ನು ಅಕ್ರಮವಾಗಿ ಸಂಗ್ರಹಿಸಿದ ವಿಷಯ ಗೊತ್ತಾಗಿ ರುಸ್ತುಂಖಾನ್ ವೊಡೆಯನು ಸರಿಪಡಿಸಿದನೆಂದು ತಿಳಿದುಬರುತ್ತದೆ. ಬಹುತೇಕ ಶಾಸನಗಳಲ್ಲಿ ತೆರಿಗೆ ಮನ್ನ ಮಾಡಿರುವುದು ಉಲ್ಲೇಖವಾಗಿದೆ. ವಿಜಯನಗರ ಸಾಮ್ರಾಜ್ಯವು ಮೂರು ರೀತಿಯಲ್ಲಿ ಭೂಕಂದಾಯವನ್ನು ಸಂಗ್ರಹಿಸುತ್ತಿತ್ತು. ಮೊದಲನೆಯದಾಗಿ; ನೇರವಾಗಿ ರೈತರಿಂದ ಸಂಗ್ರಹ, ಎರಡನೆಯದಾಗಿ ಮಧ್ಯವರ್ತಿಗಳಿಂದ ಮತ್ತು ಒಟ್ಟಾರೆ ಹಳ್ಳಿಯಿಂದ ಈ ಅರಸರು ಭೂಕಂದಾಯ ಕುರಿತಂತೆ ಹಿಂದಿನವರ ನಿಯಮಗಳನ್ನೇ ಪಾಲಿಸಿದರು ಎಂದು ತಿಳಿದುಬರುತ್ತದೆ. ಬಳ್ಳಾರಿ ಜಿಲ್ಲೆಯ ಕೌತಾಳು ಎಂಬ ಹಳ್ಳಿಯ ಹನುಮಾನ್ ದೇವಾಲಯದಲ್ಲಿ ಕಂಡುಬಂದ ವಿಜಯನಗರ ಕಾಲದ (ಎಸ್‌ಐಐ–೧೫೩೩) ಶಾಸನವೊಂದರ ವಿಷಯವು ಸ್ವಾರಸ್ಯಕರವಾಗಿದೆ. ರಾಜನು ರೈತರಿಂದ ವಿಪರೀತ ತೆರಿಗೆ ವಸೂಲಿ ಮಾಡಿದ್ದರಿಂದ ಅನೇಕ ರೈತರು ಒಟ್ಟಾಗಿ ತುಂಗಭದ್ರೆಯನ್ನು ದಾಟಿ ವಲಸೆ ಹೋದರು. ಆಗ ರಾಜನು ಅವರು ಹಿಂತಿರುಗಿ ಬರುವಂತೆ ಕ್ರಮವಹಿಸಿ ಶೋಷಕ ಕ್ರಮಗಳಿಂದ ರಕ್ಷಿಸುವಂತೆ ಭರವಸೆ ನೀಡಿದನು. ತೆರಿಗೆಯ ಭಾರವು ಅಧಿಕವಾದಾಗ ಪ್ರತಿಭಟಿಸುವ ಅವಕಾಶಗಳಿದ್ದರೂ ಪ್ರಭುತ್ವದ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ ಎಂಬುದು ಮೇಲ್ನೋಟಕ್ಕೆ ವೇದ್ಯವಾಗುತ್ತದೆ. ಬಹುತೇಕ ತೀರ್ಪುಗಳು ಪ್ರಭುತ್ವದ ಪರವಾಗಿಯೇ ಇರುತ್ತಿದ್ದವು.

ವಿಜಯನಗರ ಕಾಲದ ಮತ್ತೊಂದು ಶಾಸನವು ತಿಳಿಸುವಂತೆ ಹಲವು ಕಾರಣಗಳಿಂದ ತೆರಿಗೆ ವಿನಾಯಿತಿಯನ್ನು ಪ್ರಭುತ್ವವು ಘೋಷಿಸುತ್ತಿತ್ತು. ನೀರಿನ ಅಭಾವ, ಪ್ರವಾಹ, ಸುಲಿಗೆ–ಲೂಟಿ, ಗ್ರಾಮದ ಹಾನಿಗೊಂಡ ಪರಿಸ್ಥಿತಿ, ರೈತರು ಜಮೀನನ್ನು ಬೀಳುಬಿಡುವುದು ಮತ್ತು ರಾಜನ ಪಟ್ಟಾಭಿಷೇಕದಂತಹ ಉತ್ಸವದ ಸಂದರ್ಭಗಳಲ್ಲಿ ತೆರಿಗೆ ವಿನಾಯಿತಿ ಇರುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಅಧಿಕ ತೆರಿಗೆ ಸಂಗ್ರಹ ಮಾಡಿ ರೈತರನ್ನು ಶೋಷಣೆ ಮಾಡುತ್ತಿದ್ದರು. ಮಲ್ಲಿಕಾರ್ಜುನ ಕಾಲದ ಒಂದು ಶಾಸನವು ಕ್ರಿ.ಶ. ೧೧೪೬ ಸ್ವಾರಸ್ಯಕರ ವಿಷಯವನ್ನು ತಿಳಿಸುತ್ತದೆ. ಅಕ್ರಮವಾಗಿ ತೆರಿಗೆ ವಸೂಲಿ ಮಾಡುತ್ತಿದ್ದ ಘಟನೆ ಅಲ್ಲಿದೆ. ರಾಜ್ಯದ ಕೆಲವು ಮಂತ್ರಿಗಳು ರೈತರಿಂದ ಬಲಾತ್ಕಾರವಾಗಿ ಕಾಣಿಕೆಗಳನ್ನು ಪಡೆಯುತ್ತಿದ್ದರು. ಇದರಿಂದ ಕಿರುಕುಳಕ್ಕೊಳಗಾದ ರೈತರೆಲ್ಲ ಒಟ್ಟಾಗಿ ಬೇರೆ ಪ್ರದೇಶಗಳಿಗೆ ಹೋದರು. ಈ ವಿಷಯ ತಿಳಿದ ರಾಜನು ಮಂತ್ರಿಗಳು ನಡೆಸುತ್ತಿದ್ದ ಈ ವಸೂಲಿಯನ್ನು ಆ ಕ್ಷಣದಿಂದಲೇ ರದ್ದುಪಡಿಸಿದನು. ಬಡರೈತರ ಹೊರೆಯನ್ನು ತಪ್ಪಿಸಿದನು. ಅಧಿಕಾರಿಗಳು ಪ್ರಜೆಗಳನ್ನು ಹಿಂಸೆ ಮಾಡಬಾರದು. ಇದರಿಂದ ರಾಜನ ಏಳಿಗೆಯಾಗುವುದಿಲ್ಲ ಎಂದು ನಂಬುತ್ತಿದ್ದರು.

ಇದೇ ಭಾವನೆಯನ್ನು ಅಮುಕ್ತಮಾಲ್ಯದಲ್ಲಿ ಶ್ರೀ ಕೃಷ್ಣದೇವರಾಯನು ವ್ಯಕ್ತಪಡಿಸಿದ್ದಾನೆ. ರಾಜನ ಅಭ್ಯುದಯವು ಸರಕಾರದ ಅಧಿಕಾರಿಗಳ ಪ್ರಾಮಾಣಿಕತೆ ಮೇಲೆ ನಿಂತಿದೆ. ಅಧಿಕಾರಿಗಳು ಜನರಿಗೆ ಹಿಂಸೆ ಕೊಡುತ್ತಿರುವುದು ರಾಜನಿಗೆ ಗೊತ್ತಾದರೆ ರಾಜನೇ ಅವರನ್ನು ಉಗ್ರವಾಗಿ ಶಿಕ್ಷಿಸುತ್ತಿದ್ದನು ಎಂದು ಬಾರ್ಬೋಸಾ ತಿಳಿಸುತ್ತಾನೆ. ಕೆಲವು ಸಾರಿ ಪ್ರಜೆಗಳು ತಮಗೆ ಅಧಿಕಾರಿಗಳಿಂದ ಅನ್ಯಾಯವಾದಾಗ ಸರಕಾರಕ್ಕೆ ಮನವಿ ಸಲ್ಲಿಸುತ್ತಿದ್ದರು. ಶ್ರೀರಂಗಪಟ್ಟಣದಲ್ಲಿ ಕೆಲವು ಹಳ್ಳಿಗಳಲ್ಲಿ ಕಣ್ಣಪ್ಪನಾಯಕನೆಂಬ ಪಾರುಪತ್ಯಗಾರನು ಹಿಂದಿನ ರೂಢಿಗೆ ವ್ಯತಿರಿಕ್ತವಾಗಿ ಅಡಿಕೆಮರಗಳ ಮೇಲೆ ತೆರಿಗೆಯನ್ನು ವಿಧಿಸಿ ಬಾಕಿಯನ್ನು ಪಾವತಿ ಮಾಡಬೇಕೆಂದು ಬಲತ್ಕಾರ ಮಾಡಿದಾಗ ಎಲ್ಲರೂ ಒಟ್ಟಾಗಿ ಅದನ್ನು ಪ್ರತಿಭಟಿಸಿರುವ ಉಲ್ಲೇಖ ಕ್ರಿ.ಶ. ೧೫೪೨ರ ಶಾಸನದಲ್ಲಿದೆ.

ದುಮ್ಮಿ ಗ್ರಾಮದ ಶಾಸನದಲ್ಲಿ ನೈಸರ್ಗಿಕ ಕಾರಣಕ್ಕೆ ದುಮ್ಮಿಯ ಕೆರೆಯು ಒಡೆದು ಹೋಗುತ್ತದೆ. ಇದರಿಂದಾದ ನಷ್ಟವನ್ನು ಅಧಿಕಾರಿಯಾದ ರಾಮಣ್ಣನಾಯಕನು ಜನರ ಮೇಲೆ ಹೊರಿಸುತ್ತಾನೆ. ಇದರಿಂದ ಕಂಗಾಲಾದ ಜನ ಹಣ ನೀಡದೆ ಊರನ್ನೇ ಬಿಡುತ್ತಾರೆ. ಯಾರು ಇಲ್ಲದ ಗ್ರಾಮ ಹಾಳಾದಾಗ ಮೇಲಾಧಿಕಾರಿಗಳ ಆದೇಶದಂತೆ ಆ ಕುಟುಂಬಗಳನ್ನು ಮತ್ತೆ ಕರೆತಂದು ವಾಸ ಮಾಡಲು ಅನುಕೂಲತೆಗಳನ್ನು ಏರ್ಪಡಿಸಿ ಅವರಿಂದ ಇನ್ನು ಯಾವುದೇ ರೀತಿಯ ನಷ್ಟವನ್ನು ವಸೂಲಿ ಮಾಡುವುದಿಲ್ಲವೆಂದು ಅವನು ಓಲೆಯನ್ನು ಬರೆದುಕೊಡುತ್ತಾನೆ. ಈ ಶಾಸನದಿಂಧ ಜನರ ಮೇಲೆ ಅಧಿಕಾರಿ ವರ್ಗ ಯಾವುದೇ ನಷ್ಟಕ್ಕೆ ಜನರೇ ಪರಿಹಾರ ಕೊಡುವ ರೀತಿಯಲ್ಲಿ ಮಾಹಿತಿ ನೀಡುತ್ತದೆ.

ಕ್ರಿ.ಶ. ೧೫೫೦ ಶಾಸನವು ದೇವಾಲಯದ ಪರಿಚಾರಕ ವರ್ಗದವರಾದ ಡೊಂಬರು, ಇತರೆ ಕೆಳಜಾತಿಗಳ ಮೇಲೆ ಹಾಕುತ್ತಿದ್ದ ಬಿಟ್ಟಿ, ಬಿರಾಂಡ, ತೆರಿಗೆಯಿಂದ ಮುಕ್ತಗೊಳಿಸಿರುವುದನ್ನು ತಿಳಿಸುತ್ತದೆ. ಅಂದರೆ ರಾಜ್ಯವು ಅವಶ್ಯಕತೆ ಇರುವಾಗ ಬಿಟ್ಟಿ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿತ್ತು. ಇದರಿಂದ ಹೆಚ್ಚುವರಿ ದುಡಿಮೆ ಸಹ ಮಾಡಬೇಕಾಗಿತ್ತು. ಇದರಿಂದ ಬಹುತೇಕ ಜನಸಮುದಾಯಗಳು ಕೆಲವು ಸಂದರ್ಭಗಳಲ್ಲಿ ಪ್ರತಿಭಟಿಸಿ ಅನಿವಾರ್ಯವಾಗಿ ರಾಜ್ಯದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿದ್ದಿತು. ರಾಜ್ಯವು ಅಧಿಕ ತೆರಿಗೆಗಳಿಂದ ನಲುಗುತ್ತಿದ್ದ ಸಮುದಾಯಗಳಿಗೆ ವಿನಾಯಿತಿ ನೀಡಿದ್ದನ್ನು ಶಾಸನ ಆಧಾರದ ಸಮೇತ ಗಮನಿಸಬಹುದು. ಕೃಷಿಕಾರ್ಮಿಕರು ಮಾಲೀಕರ ಹೊಲಗಳಲ್ಲಿ ಕೆಲಸ ಮಾಡುತ್ತ ಅದಕ್ಕೆ ಸಂವಾದಿಯಾಗಿ ತೆರಿಗೆಯನ್ನು ಪಾವತಿಸಿರುವ ಘಟನೆಗಳು ಚರಿತ್ರೆಯಲ್ಲಿ ಕಡಿಮೆಯೇನು ಇಲ್ಲ. ಹಾಗೆಯೇ ವೃತ್ತಿ ತೆರಿಗೆ, ಜಾತಿಗಳ ಮೇಲೆ ಹಾಕುತ್ತಿದ್ದ ತೆರಿಗೆ, ಕೃಷಿ ಮತ್ತು ಕೃಷಿಯೇತರ ತೆರಿಗೆಗಳು ಜನಸಾಮಾನ್ಯರಿಗೆ ಭಾರವಾಗಿದ್ದವು. ಅನಿವಾರ್ಯ ಸಂದರ್ಭಗಳಲ್ಲಿ ಪ್ರತಿಭಟಿಸಿದರೂ ಪ್ರಭುತ್ವದ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಿರುತ್ತಿರಲಿಲ್ಲ. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಸೈನಿಕ ಮತ್ತು ತೆರಿಗೆ ವಿಚಾರಗಳಿಗೆ ಜನಸಮುದಾದಯಗಳು ಹೆದರುತ್ತಿದ್ದವು. ಕೆಲವು ಸಂದರ್ಭಗಳಲ್ಲಿ ತೆರಿಗೆಯನ್ನು ನೀಡದೆ ಊರಿಗೆ ಪ್ರವೇಶಿಸಿದರೆ ಅವರನ್ನು ನಾಯಿ, ಗಾದರ್ಭ, ಚಂಡಾಲ ಮುಂತಾದ ಹೆಸರುಗಳಿಂದ ನಿಂದಿಸಿರುವ ವಿಷಯವನ್ನು ಶಾಸನಗಳು ತಿಳಿಯಪಡಿಸುತ್ತವೆ. ಬಹುಶಃ ಊರಿಂದ ಊರಿಗೆ ಜನಸಾಮಾನ್ಯರು ಬರುವ ಸಂದರ್ಭದಲ್ಲಿ ಸಹ ನಿರ್ದಿಷ್ಟ ತೆರಿಗೆಗಳನ್ನು ಕಟ್ಟಬೇಕಾಗಿತ್ತು.

ಆಕರ ಗ್ರಂಥಗಳು

೧. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೨.

೨. ಶಿವಣ್ಣ ಕೆ.ಎಸ್. (ಸಂ) ಕರ್ನಾಟಕ ಚರಿತ್ರೆ, ಸಂ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೩. ಪರಮಶಿವಮೂರ್ತಿ ಡಿ.ವಿ. (ಸಂ), ಕೃಷ್ಣದೇವರಾಯನ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೧೦.

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ಬಳ್ಳಾರಿ ಜಿಲ್ಲೆ.

೫. ಮೋಹನ್‌ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ಬಾಗಲಕೋಟೆ ಜಿಲ್ಲೆ.

೭. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನದ ಚಿತ್ರ, ಗೀತಾ ಬುಕ್ ಹೌಸ್, ಮೈಸೂರು, ೧೯೮೩.

೮. ಗುರುರಾಜಾಚಾರ್ಯ ಎಸ್., ಸಮ್‌ಆಸ್ಪೆಕ್ಟ್ಸ್ ಆಫ್ ಎಕನಾಮಿಕ್ ಆ್ಯಂಡ್ ಸೋಷಿಯಲ್ ಲೈಫ್ ಇನ್ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪.

೯. ಶಿವಣ್ಣ ಕೆ.ಎಸ್., ದಿ ಅಗ್ರೇರಿಯನ್ ಸಿಸ್ಟಮ್ ಆಫ್ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೮೩.

೧೦. ಎಪಿಗ್ರಾಫಿಯಾ ಕರ್ನಾಟಕ ಸಂಪುಟಗಳು, ಸಂ. ೧, ೧೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೧. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ ಸಂಪುಟಗಳು.

೯೮

ಕೆರೆ ನೀರಾವರಿ ವ್ಯವಸ್ಥೆ ಹಾಗೂ ಮದಗ ಕೆರೆಯ ಮಹತ್ವ

ನಾಗರಾಜ ಬಿ. ತಳವಾರ*

ಕರ್ನಾಟಕ ಪ್ರದೇಶದಲ್ಲಿ ಈಗಿರುವ ಕೆರೆಗಳ ಸಂಖ್ಯೆ ಸುಮಾರು ೩೦.೦೦೦ ಕರ್ನಾಟಕದ ಊರುಗಳ ಹೆಸರಿನಿಂದ ಈ ಸಂಖ್ಯೆಯಲ್ಲಿ ಉತ್ಪೇಕ್ಷೆ ಇಲ್ಲವೆನ್ನುವುದು ಸಿದ್ಧವಾಗುತ್ತದೆ. ಕೆರೆ, ಸಮುದ್ರ, ಸಂದಸಾಗರ & ಅವುಗಳಿಗೆ ಸಮಾನವಾದ ಹೆಸರು ಊರುಗಳ್ಳು ಸಾವಿರಾರು ಅಂತೆಯೇ ಹಾವೇರಿ ಪ್ರದೇಶದ ಮಧ್ಯಕಾಲೀನ ಕರ್ನಾಟಕದಲ್ಲಿ ನೀರಾವರಿ ಬೆಳೆಗಳನ್ನು ಕುರಿತು ಬ್ರಿಟನ್ನಿನ ಪ್ರಾನ್ಸಿಸ್ ಬುಖಾನನರವರು ಕ್ರಿ.ಶ. ೧೮೦೧ರಲ್ಲಿ ಕರ್ನಾಟಕದಲ್ಲಿ ಕರಾವಳಿ ಮಲೆನಾಡು ಮತ್ತು ಬಯಲು ಸೀಮೆಗಳಲ್ಲಿ ಸುಧಿರ್ಘ ಪ್ರಯಾಣ ಮಾಡಿ ಪ್ರತ್ಯಕ್ಷದರ್ಶಿಯಾಗಿ ಅನುಭವಗಳನ್ನು ತಮ್ಮ ಸರ್ವೇಕ್ಷಣ ವರದಿಯಲ್ಲಿ ವಿವರಿಸಿದ್ದಾರೆ ಬುಖಾನನರವರು ನೀಡಿರುವ ಮಾಹಿತಿಗಳು ಕ್ರಿ.ಶ. ೧೮೦೧ಕ್ಕೆ ಸಂಬಂಧಿಸಿದ್ದರು ಸಹ ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟ ಪದ್ಧತಿಗಳು ಹಲವು ಶತಮಾನಗಳಿಂದಲೂ ಅವಿರತವಾಗಿ ಮುಂದುವರಿದು ಬಂದಿರುವುದನ್ನು ಪರಿಗಣಿಸಬಹುದಾಗಿದೆ ಪ್ರಾಚೀನ ಕಾಲದಿಂದಲೂ ಕೃಷಿ ಪ್ರಧಾನವಾದ ಕರ್ನಾಟಕದ ಕೃಷಿ ಪದ್ಧತಿ, ನೀರಾವರಿ, ಹವಮಾನ ನೀರಾವರಿ (ಅವಲಂಬಿತ) ಬೆಳೆಗಳು, ಕೃಷಿ ಉಪಕರಣಗಳು ಪ್ರಚಲಿತದಲ್ಲಿರುವ ವೈವಿಧ್ಯಮಯ ಅಂಶಗಳನ್ನು ಕುರಿತು ಆ ಭಾಗಗಳಲ್ಲಿ ಸ್ವತಃ ಪ್ರಯಾಣ ಮಾಡಿರುವ ಬುಖಾನನ ವರದಿಗಳು ಉಪಯುಕ್ತವಾಗಿದೆ.

ಕೆರೆ ಕಟ್ಟಿಸುವುದು ಅವುಗಳನ್ನು ರಿಪೇರಿ ಮಾಡುವುದನ್ನು ಸದ್ಗತಿಯನ್ನು ನೀಡುವ ಧರ್ಮಕಾರ್ಯವೆಂದು ಶಾಸನಗಳು, ಧರ್ಮಶಾಸ್ತ್ರಗಳು ಪ್ರತಿಪಾದಿಸುತ್ತವೆ. ಕೆರೆಗಳು ಜೀವನಾಧಾರ ಹಾಗೂ ಸಮೃದ್ಧಿಗೆ ಕಾರಣವೆ ಎಂಬ ತಿಳುವಳಿಯೇ? ಈ ತಾತ್ವಿಕತೆಯ ಹಿಂದಿದ್ದುದ್ದು ಶಿವಶರಣ ಸಿದ್ದರಾಮನ ಪ್ರಸಂಗದಿಂದ ವಿದಿತವಾಗುತ್ತದೆ. ಅತಾನು ದೇವಾಲಯವನ್ನು ಕಟ್ಟಿಸುವುದಕ್ಕಿಂತ ಕೆರೆ ಕಟ್ಟಿಸುವುದೇ ನಿಜವಾದ ಧರ್ಮವೆಂದು ಪ್ರತಿಪಾದಿಸಿದನು. ಆದರೆ ಸಾಮಾನ್ಯವಾಗಿ ಜನರು ಇದನ್ನೊಂದು ಪುಣ್ಯ ಕಾರ್ಯವೆಂಬಂತೆ ಆಚರಿಸಿದರು. ಹಾಗಾಗಿ ಕೆರೆ ಹಾಗೂ ದೇವಾಲಯಗಳನ್ನು ತಾವು ಕಟ್ಟಿಸಿದ್ದೇವೆಂದು ಒಟ್ಟೊಟ್ಟಿಗೆ ಶಾಸನಗಲ್ಲಿ ಹೇಳಿಕೊಳ್ಳುತ್ತಿದ್ದರು. ಕೆರೆಯನ್ನು ಕಟ್ಟಿಸಿ ಅದರ ಮೊಗ್ಗಲಿಗೊಂದು ದೇವಾಲಯಗಳನ್ನು ಕಟ್ಟಿಸಿದ ಉದಾಹರಣೆಗಳ ಜೊತೆಗೆ ದೇವಾಲಯಗಳ ವಿಧಿಗಳಿಗಾಗಿ ಹಾಗೂ ನಿರ್ವಹಣೆಗಾಗಿ ರಾಜರಲ್ಲಿ ನಿವೇದಿಸಿ ದಾನಪಡೆದು ಕೆರೆ ಕಟ್ಟಿಸಿದ ಪ್ರಸಂಗಗಳಿದ್ದವು ಎಂದು ಗಮನಿಸಬಹುದಾಗಿದೆ.

ಮದಗ ಕೆರೆಯ ಮಹತ್ವ

ಹಾವೇರಿ (ಜಿ) ಹಿರೇಕೆರೂರ ತಾಲೂಕು ಮತ್ತು ಶಿವಮೊಗ್ಗ ಜಿಲ್ಲೆ ಶಿಕಾರ್ರಿರ ತಾಲ್ಲೂಕು ಗಡಿ ಕೂಡುವ ಭಾಗದಲ್ಲಿ ಕುಮದ್ವತಿ ನದಿಯ, ಎರಡು ನೈಸರ್ಗಿಕ ಗುಡ್ಡಗಳ ನಡುವಿನಲ್ಲಿ ಹರಿದು ಹೊಗುತ್ತದೆ. ಇಲ್ಲಿ ನದಿಗೆ ಮಣ್ಣಿನ ಏರಿಯನ್ನು ಹಾಕಿ ಮದಗದ ಕೆರೆಯನ್ನು ನಿರ್ಮಿಸಲಾಗಿದೆ.

ಕೆಳದಿ ಸದಾಶಿವನಾಯಕ (ಕ್ರಿ.ಶ. ೧೫೪೦-೧೫೬೫) ಬಂಕಾಪೂರದ ಮಾದಣ್ಣ ಒಡೆಯರ ಮೂಲಕ ಮದಗದ ಕೆರೆಯನ್ನು ಪೂರ್ಣ ಮಾಡಿದನೆಂದು ತಿಳಿಯಲಾಗಿದೆ. ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆ ಗೆಝಟಿಯರ ಮಾಹಿತಿಯಂತೆ ಈ ಕೆರೆಯ ಏರಿಯ ಆಳವಾದ ಕಡೆ ೮೦೦ ಅಡಿ ಅಗಲ & ೧೦೦ ಅಡಿ ಎತ್ತರ ಇದೆ. ಕೆರೆಗೆ ಎರಡು ತೂಬುಗಳಿದ್ದು ಈ ಎರಡೂ ಕೆರೆಯ ಬಲಭಾಗದಲ್ಲಿ ಇವೆ ಮೊದಲನೆಯ ತೂಬು ಸಮುದ್ರಮಟ್ಟಕ್ಕಿಂತ ೫೭೭.೮೩ ಮೀ. ಮತ್ತು ಎರಡನೆಯ ತೂಬು ೬೦೦.೦೦ ಮೀ. ಎತ್ತರದಲ್ಲಿ ಇದೆ ಮೊದಲನೆಯ ತೂಬು ಹದಿನಾರು ಕಂಬಗಳಿಂದ ಕೂಡಿದ್ದು ಸ್ಥಳೀಯರು ಇದನ್ನು ಕತ್ತರಿ ತೂಬು ಎಂದು ಕರೆಯುತ್ತಾರೆ. ಇದು ಕಸ ಕಡ್ಡಿ ಇತ್ಯಾದಿಗಳು ತೂಬಿನ ಒಳಹೋಗದಂತೆ ಕತ್ತರಿಸಿ ಹಾಕುತ್ತಿತ್ತೆಂದು ಹೇಳತ್ತಾರೆ. ಎರಡನೆಯ ತೂಬನಲ್ಲಿ ಒಂಬತ್ತು ಕಂಬಗಳಿರುವುದರಿಂದ ೪ ಅಗಳಿಗಳಿವೆ.

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಬ್ಬಳ್ಳಿ. ಮೊ. ೯೯೮೦೯೬೭೬೧೩

ತೂಬಿನ ಪ್ರತಿಯೊಂದು ಕಂಬವು ಒಂದೇ ರೀತಿಯ ಟ್ರಾಪ್ ಕಲ್ಲು ಆಗಿದ್ದು ಸುಮಾರು ೨೦೦ ಟನ್ನು ತೂಕ ಇರಬಹುದಾಗಿದ್ದು ಇದನ್ನು ಸ್ಥಳಕ್ಕೆ ತಂದು ಗುರುತ್ವಾಕರ್ಷಣೆ ಮಾತ್ರದಿಂದಲೇ ನಿಲ್ಲಿಸಿರುವುದು ಮಹಾಸಾಹಸ ಮತ್ತು ತಾಂತ್ರಿಕ ಕೌಶಲ್ಯ ಹೊಂದಿದವರು ಮಾಡಿದ ಕೆಲಸವಾಗಿದೆ. ಒಂದೇ ಬದಿಯಲ್ಲಿ ಎರಡು ತೂಬುಗಳಿದ್ದು ತೂಬುಗಳ ನಡುವಿನ ಮಟ್ಟವನ್ನು ಗಮನಿಸಬೇಕು ಎರಡನೆಯ ತೂಬಿನ ತಳಮಟ್ಟವು ಮೊದಲನೆಯ ತೂಬಿನ ತಳ ಮಟ್ಟಕ್ಕಿಂತ ೨೦.೦೦ ಮೀ. ಎತ್ತರದಲ್ಲಿದೆ ಮದಗದ ಕೆರೆಯಲ್ಲಿ ಹೆಚ್ಚಿನ ನೀರು ಬಂದಾಗ ಮೊದಲನೆಯ ತೂಬು ಸಂಪೂರ್ಣವಾಗಿ ನೀರಿನಲ್ಲಿ ಮುಳಗಿಹೊಗಿ ಅದರಿಂದ ಬರುವ ನೀರನ್ನು ನಿಯಂತ್ರಿಸಲು ಅಸಾಧ್ಯವಾಗುತ್ತದೆ. ಈ ಎರಡನೆಯ ತೂಬಿನಿಂದ ನೀರನ್ನು ಹಾಯಿಸಿ ಅದರ ತಳಮಟ್ಟ ಬಂದನಂತರವೇ ಮೊದಲನೆಯ ತೂಬಿನ ಮಾಳಿಗೆ ಕಾಣಬಹುದಾಗಿದ್ದು ಅನಂತರವೇ ನೀರನ್ನು ನಿಯಂತ್ರಿಸಬಹುದು. ಮೊದಲನೆಯ ತೂಬಿನ ತಳಮಟ್ಟ ೫೭೭.೮೫ ಮೀ ತೂಬಿನ ತಳದಿಂದ ಮಾಳಿಗೆ ೮೦೦ ಮೀ. ಸುಮಾರು ಒಟ್ಟು ೫೮೫.೮೩ ಮೀ. ಎರಡನೆಯ ತೂಬಿನ ತಳಮಟ್ಟ ೬೦೦.೦೦ ಮೀ. ಇವೆರಡು ಮಟ್ಟಗಳಲ್ಲಿನ ವ್ಯತ್ಯಾಸ ಸುಮಾರು ೧೪.೦೦ ಮೀ. ಇದೆ ಇಷ್ಟು ವ್ಯತ್ಯಾಸವಿರುವ ತೂಬಗಳ ನೀರು ನಿರ್ವಹಣೆಯ ಪರಿ ತಿಳಿಯದಾಗಿದೆ.

ತೂಬಗಳು ನಡುವಿನ ಎತ್ತರದ ವ್ಯತ್ಯಾಸವನ್ನು ಹೀಗೆ ವಿವರಿಸಬಹುದಾಗಿದೆ ಮದಗದ ಕೆರೆಯ ನಿರ್ಮಾಣ ಎರಡು ಹಂತಗಳಲ್ಲಿ ಆಗಿರಬೇಕು ಮೊದಲನೆಯ ಹಂತದಲ್ಲಿ ನದಿಯ ಮಲೆನಾಡು ಪ್ರವೇಶದಲ್ಲಿ ಹುಟ್ಟಿದರೂ ಬಹುಪಾಲು ಅದು ಹರಿಯುವುದು ಅರೆಮಲೆನಾಡು ಪ್ರದೇಶದಲ್ಲೇ ಮದಗಕ್ಕೆ ಬರುವಾಗ ಆಗಲೆ ೧೦೦ ಕಿ.ಮೀ. ಸಂಚರಿಸಿರುತ್ತದೆ. ಮೊದಲ ಹಂತದ ಏರಿಯು ೨೦.೦೦ ಮೀ. ಇರಬೇಕು (೭–೮ ಪುರುಷ ಎತ್ತರ) ಇದೆ.

ನದಿಯಲ್ಲಿ ಹೆಚ್ಚು ನೀರು ಕಂಡುಬಂದು ಕೆರೆಯು ಏರಿಯನ್ನು ಎತ್ತರಿಸಿದರೆ ಇದನ್ನು ಕೂಡಾ ಉಪಯೋಗಿಸಬಹುದಾಗಿ ಎಂದು ಕಂಡುಕೊಳ್ಳಲಾಯಿತು. ಆಗ ಏರಿಯನ್ನು ಮತ್ತೆ ಎತ್ತರ ಮಾಡುವ ಎರಡನೆ ಹಂತದ ಕೆಲಸ ಪ್ರಾರಂಭವಾಗಿದೆ. ಈಗ ಪೂರ್ಣಗೊಂಡ ಏರಿಯ ಎತ್ತರ ೩೩ ಮೀ. ಆಗಿದೆ (೧೦೦ ಅಡಿ ೧೨–೧೩ ಪುರುಷ ಪ್ರಮಾಣ) ಎರಡನೆಯ ತೂಬಿನ ಕಾಲುವೆಯಿಂದ ಎಡವಟ್ಟೆ ೭೦ ವಿಭಾಗದ ಗ್ರಾಮಗಳಿಗೂ ಮೊದಲನೆಯ ತೂಬಿನಿಂದ ಮಾಸೂರು ೧೨ ಮತ್ತು ರಟ್ಟಪ್ಪಳ್ಳಿ –೭೦ ವಿಭಾಗದ ಗ್ರಾಮಗಳಿಗೂ ನೀರುಣಿಸಲಾಗುತ್ತಿತ್ತು.

ಕ್ರಿ.ಶ. ೧೮೬೩ರಲ್ಲಿ ಈ ಕೆರೆಯ ನೀರು ತೂಬಿನ ಮಟ್ಟಕ್ಕಿಂತ ಕೆಳಗೆಯಿದ್ದು ಉಪಯೋಗಕ್ಕೆ ಬಾರದೆ ಇರುವುದನ್ನು ಕಂಡು ಬ್ರಿಟಿಷ ಇಂಜಿನಿಯರ ತಂಡವು ತುಬಿನಲ್ಲಿದ್ದ ಹೂಳನ್ನು ತೆಗೆಯಲು ಪ್ರಾರಂಭಿಸಿದರು ಹೀಗೆ ಎರಡು ಬದಿಯಲ್ಲಿ ಕಾರ್ಯ ಮಾಡುತ್ತಿರುವಾಗ ನೀರಿನ ಮಾರ್ಗಕ್ಕೆ ಹೊದಿಸಿದ್ದ ಕಲ್ಲು ಚಪ್ಪಡಿಗಳು ಒಡೆದು ಅಡ್ಡಲಾಗಿ ಬಿದ್ದಿರುವುದನ್ನು ಕಂಡರೂ ಚಪ್ಪಡಿಗಳನ್ನು ತೆರವು ಮಾಡಿ ಕಾಲುವೆಯನ್ನು ಸುಗಮ ಮಾಡಲು ಸೂಚಿಸಿದರೆ ಕಾರ್ಮಿಕರು ಅದನ್ನು ತೆಗೆದರೆ ಏರಿಯು ಕುಸಿಯುವುದೆಂಬ ಭಯ ವ್ಯಕ್ತಪಡಿಸಿದರು.

ಕೆರೆಯಲ್ಲಿ ಇದ್ದ ನೀರನ್ನು ಉಪಯೋಗಿಸಬೇಕೆಂದು ಇರುವ ತೂಬಿನ ಕೆಳಗಡೆ ಇನ್ನೊಂದು ಕಾಲುವೆಯನ್ನು ತೆಗೆದು ನೀರನ್ನು ಹೊರತಂದು ಈಗಲೂ ಉಪಯೋಗಿಸಲಾಗುತ್ತಿದೆ. ಕತ್ತರಿ ತೂಬಿನ ತಳಮಟ್ಟ ೫೭೭.೮೩ ಮೀ. ಇದಕ್ಕಿಂತ ಕೆಳಮಟ್ಟದಲ್ಲಿ ಈ ಕೋಡಿಯನ್ನು ನಿರ್ಮಿಸಲಾಗಿದೆ ಕೋಡಿಯಿಂದ ನೀರು ಕೆಳಕ್ಕೆ ಸಣ್ಣ ಜಲಪಾತವಾಗಿ ಧುಮ್ಮಿಕ್ಕುತ್ತಿದೆ.

ಮದಗದ ಕೆರೆಯು ವಿಫಲವಾಗುವ ಸಂದರ್ಭದಲ್ಲಿ ಹಳೆಯ ಕೋಡಿಯು ಕ್ಷೇಮವಾಗಿ ನೀರನ್ನು ಹೊರ ಕಳಹಿಸಲು ಸಾದ್ಯವಾಗದೇ ಅಸಾಧ್ಯ ಪ್ರವಾಹ ಬಂದು ಕೋಡಿಯ ಎರಡೂ ಬದಿಯ ಏರಿಯನ್ನು ಕೊರೆದು ಇಡೀ ಕೋಡಿಯನ್ನು ಹೊತ್ತೊಯಿರಬಹುದು. ಈಗ ಕೋಡಿಯಿರುವ ಭಾಗದಲ್ಲಿ ಯಾವುದೆ ಹಳೆಯ ಕೋಡಿಯ ಕುರುಹು ಕಾಣುವುದಿಲ್ಲ.

ಅಗಾಧ ಪ್ರಮಾಣದ ನೀರು ಸಂಗ್ರಹವಾಗಿರುವುದಕ್ಕೆ ನಮಗೆ ಜನಪದ ಹಾಡೊಂದರಲ್ಲಿ ಸುಳಿವು ದೊರಕುತ್ತವೆ. ಈ ಪ್ರದೇಶದಲ್ಲಿ ಮಾಯಾದಂಥೆ ಮಳೆಯೊಂದು ಬಂದು ಕೆರೆಯ ಏರಿಯು ಒಡೆಯುತ್ತದೆ. ಕೆರೆಯ ಏರಿಯನ್ನು ಭದ್ರಪಡಿಸಲು ೬೦೦೦ ವಡ್ಡರು ೩೦೦೦ ಗುದ್ದಲಿಗಳನ್ನು ತಂದು ಕಲ್ಲು ಕಲ್ಲಿಗೆ ಮಣ್ಣನ್ನು ಸುರಿದು ಆಡು ಕುರಿಗಳನ್ನು ಬಲಿ ನೀಡಿ ಮಂತ್ರವನ್ನು ಹಾಕಿಸಿದರೂ ಏರಿಯೂ ಕೊರಕಲನ್ನು ನಿಲ್ಲಿಸಲು ಸಾಧ್ಯವಾಗದೆ ಇರುವುದನ್ನು ಕವಿ ಚಿತ್ರಿಸಿದ್ದಾನೆ.

ಕುಮದ್ವತಿ ನದಿಯಲ್ಲಿ ಇಂದಿಗೂ ಹೆಚ್ಚಿನ ಪ್ರವಾಹ ಬರುವುದನ್ನು ಕಾಣುತ್ತೇವೆ ೯೦ ದಶಕದ ಆದಿಭಾಗದಲ್ಲಿ ಮದಗದ ಕೆರೆಗಿಂತ ೨೦ ಕಿ.ಮೀ. ಮೇಲ್ಬಾಗದಲ್ಲಿ ಇದೇ ಕುಮದ್ವತಿನದಿಗೆ ಸ್ವಾತಂತ್ರದ ನಂತರ ಕಟ್ಟಲಾಗಿರುವ ಅಂಜನಾಪುರ ಜಲಾಶಯದ ಕೋಡಿ ಹೆಚ್ಚಿನ ನೀರನ್ನು ಸಾಗಿಸದೆ ಏರಿಯು ಒಡೆದಿತ್ತು.

ಮದಗ ಕೆರೆಯ ಭಾಗದಲ್ಲಿ ಕೃಷಿ ನೀರಾವರಿ

ಹಿರೇಕೆರೂರ ಹಾಗೂ ಶಿಕಾರಿಪುರ ಭೌಗೋಳಿಕ ಪರಿಸರದಲ್ಲಿ ಮದಗ ಮಾಸೂರು ಬರುತ್ತದೆ. ಈ ಭಾಗದಲ್ಲಿ ಚಿಕ್ಕೆರೂರು, ಹಿರೇಕೆರೂರ, ಹಂಸಭಾವಿ, & ಹಳ್ಳೂರು ಇಲ್ಲಿ ಪ್ರಾಚೀನತಮವಾದ ಕೆರೆಗಳಿವೆ, ಅಲ್ಲದೆ ನಾಲೆ & ಕೆರೆ ಭಾವಿಗಳಿಂದ ವ್ಯವಸಾಯಕ್ಕೆ ನೀರಾವರಿ ಕಲ್ಪಿಸಲಾಗಿದೆ ಕುಮದ್ವತಿ ನದಿಗೆ ಅಡ್ಡವಾಗಿ ಕಟ್ಟಿರುವುದಲ್ಲಿ ಮದಗ ಮಾಸೂರು ಕೆರೆ, ಇದಲ್ಲದೆ ಈ ಭಾಗದಲ್ಲಿ (೬೦೦೧ ಅಧಿಕ ಸಣ್ಣ ಕೆರೆಗಳು ೧೦೦ ಕ್ಕೂ ಅಧಿಕ ನೀರಾವರಿ ಭಾವಿಗಳು ಈ ಪ್ರದೇಶದ ಜಲಸಂಪನ್ಮೂಲಗಳಾಗಿವೆ. ಅಲ್ಲದೆ ಮಣ್ಣನ್ನು ಅವಲೋಕಿಸುವುದಾದರೆ ಇಲ್ಲಿ ಕೆಂಪು & ಕಪ್ಪು ಮಿಶ್ರಿತ ಮಣ್ಣಿನಿಂದಲೂ ಕೂಡಿದೆ ಈ ಪ್ರದೇಶದಲ್ಲಿ ಭತ್ತ, ಜೋಳ, ಕಬ್ಬು, ಶೇಂಗಾ, ಹತ್ತಿ ಗೋವಿನ ಜೋಳ, ತೋಟದ ಬೆಳೆ ಹಾಗೂ ತೈಲಬೀಜಗಳನ್ನು ಬೆಳೆಯುತ್ತಾರೆ. ಹಾಗೂ ವ್ಯವಸಾಯದ ಜೊತೆಗೆ ಪಶುಪಾಲನೆಯೂ ಈ ಭಾಗದಲ್ಲಿ ಹೆಚ್ಚು ಇದೆ.

ಮದ್ರಾಸ್ ಮುಖ್ಯ ಇಂಜಿನಿಯರ್ ಡಬ್ಲೂ, ಎಂ ಎಲ್ಲಿಸ್ ಅವರ ಅಭಿಪ್ರಾಯದಲ್ಲಿ ದಕ್ಷಿಣ ಭಾರತದ ಬಹುತೇಕ ಕೆರೆಗಳ ಒಡ್ಡಿನ ಎತ್ತರ ೧೫ ಅಡಿ ಇದೆ. ಕೆಲವಡೆ ಅದು ೨೫-೩೦ ಅಡಿ ಎತ್ತರ ಇದ್ದು ವಿರಳವಾಗಿ ೩೫ ಅಡಿಗಿಂತಲೂ ಹೆಚ್ಚಿನ ಎತ್ತರ ಕಾಣಸಿಗುತ್ತಾದೆ. ೪೦ ಅಡಿಗಿಂತಲೂ ಹೆಚ್ಚಿನ ಎತ್ತರದ ಒಡ್ಡು ವೆಚ್ಚದಿಂದ ಕೂಡಿದ್ದು ಸಾಧುವಲ್ಲದ ಪ್ರಸ್ತಾವನೆ ಎನ್ನುತ್ತಾರೆ. ಮಧ್ಯಕಾಲಿನ ತಂತ್ರಜ್ಞಾನ ಸಂದರ್ಭದಲ್ಲಿ ಕೆರೆಯ ಎರಿಯ ಎತ್ತರಕ್ಕೆ ಮತ್ತು ಕೋಡಿ ನಿರ್ಮಾಣ ವಿಧಾನಕ್ಕೆ ಒಂದು ಮೀತಿಯಿತ್ತು ಹೆಚ್ಚಿನ ಎತ್ತರದ ಏರಿಗಳು ಒಡೆಯುತ್ತಿದ್ದವು ಎಂದು ಗಮನಿಸಬಹುದಾಗಿದೆ.

೨೦ನೇ ಶತಮಾನದ ಆಧಿಪೂರ್ವಭಾಗದಲ್ಲಿ ಸಣ್ಣ ಕೆರೆಗಳನ್ನು ಉಪೇಕ್ಷಿಸಿ ದೊಡ್ಡ ಕೆರೆಗಳು ಹಾಗೂ ನೀರಾವರಿಯತ್ತ ತಮ್ಮ ಲಕ್ಷವನ್ನು ಕೇಂದ್ರೀಕರಿಸಿದರು ಬಹುಶ ಸಣ್ಣ ಕೆರೆಗಳ ಅವನತಿ ಅಷ್ಟರ ನಂತರ ಪ್ರಾರಂಭವಾಯಿತು ಅಂದರೆ ಅದನ್ನು ಉಳಿಸಿಕೊಂಡು ಬಂದ ಸ್ಥಳೀಯ ವ್ಯವಸ್ಥೆಯನ್ನು ಆಕ್ರಮಿಸಿದ ಸರ್ಕಾರ ಪರಿಣಾಮಕಾರಿ ಬದಲಿ ವ್ಯವಸ್ಥೆಯನ್ನು ರೂಪಿಸಲು ವಿಫಲವಾಗಿ ನಿರಾಸಕ್ತಿ ತಳೆಯಿತು. ಈ ಕಾರ್ಯಕ್ರಮ ಈಗ ಎಲ್ಲಿಗೆ ಬಂದು ಮುಟ್ಟಿದೆಯೆಂದರೆ ಇಂದು ಕೆರೆಗಳಿಗಿಂತ ಅದನ್ನು ನಿರ್ವಹಿಸುವ ಸರ್ಕಾರಿ ಯಂತ್ರವೇ ಸಂಚಾರಕ್ಕೆ ಒಂದು ದೊಡ್ಡ ಹೊರೆಯಾಗಿದೆ.

ಪ್ರಸ್ತುತ ವಿದ್ಯಮಾನದಲ್ಲಿ ಕೆರೆಗಳ ಜೀರ್ಣೋದ್ಧಾರ ಮಾಡಲು ಸರ್ಕಾರ ಮುಂದಾದರೆ ಇಂದು ಪೂರ್ಣ ನೀರಾವರಿ ಸೌಲಭ್ಯ ಕೊಡದಿದ್ದರು ಅಂತರ್ಜಲ ಹೆಚ್ಚಳ ಮಾಡಲಿಕ್ಕೆ ಹಾಗೂ ಪಂಪಸೆಟ್ ನೀರಾವರಿಗೆ ಪೂರಕವಾಗಿ ಕೆಲಸ ಮಾಡಿದಂತೆ ಆಗುತ್ತದೆ. ಏಕೆಂದರೆ ಹಳ್ಳ ಕೊಳ್ಳ ಮತ್ತು ಕೆರೆಗಳ ಆಸುಪಾಸಿನಲ್ಲಿ ನೂರಾರು ಪಂಪಸೆಟ್‌ಗಳು ಕೇಂದ್ರೀಕೃತವಾಗಿದ್ದನ್ನು ನೋಡಬಹುದು, ಆಸುಪಾಸಿನಲ್ಲಿ ಇದರಿಂದ ಜನರಿಗೆ ಅವಶ್ಯಕವಾಗಿ ಕುಡಿಯುವ ನೀರು ನೀರಾವರಿ ಸೌಲಭ್ಯ ಕೊಟ್ಟಂತಾಗುತ್ತದೆ.

ಆಕರ ಗ್ರಂಥಗಳು

೧. ಆ. ಸುಂದರ. ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿ ಶಿಲ್ಪಿ, ಸಂ. ೧.

೨. ಎಂ.ಎ.ಆರ್. ೧೯೩೦ ನಂ. ೭೬, ಹಳೆ ಬನ್ನೂರು, ಶಿಕಾರಿಪುರ ತಾಲೂಕು.

೩. ಎಪಿಗ್ರಾಫಿಯಾ ಕರ್ನಾಟಿಕ (ಇಸ್ವಿ) ೧೨, ಶಿವಮೊಗ್ಗ ೩೦.

೪. ಜಿ.ಆರ್. ರಂಗಸ್ವಾಮಿಯ್ಯ "ಟ್ಯಾಂಕ್ಸ ಕನಸ್ಟ್ರಕ್ಷನ್ ಅಂಡ್ ಮೈಂಟೆನೆನ್ಸ್ ಇನ್ ಕರ್ನಾಟಕ ಡೂರಿಂಗ ದಿ ಹೊಯ್ಸಳ" ಪಿರಿಯಡ್ ಸ್ಟಡೀಸ್ ಇನ್ ಕರ್ನಾಟಕ.

೫. ಜಿ.ಎಸ್. ದೀಕ್ಷಿತ್ ಮತ್ತು ಇತರರು ಕರ್ನಾಟಕದಲ್ಲಿ ಕೆರೆ ನೀರಾವರಿ ಅನು ನೀಲತ್ತಹಳ್ಳಿ ಕಸ್ತೂರಿ ಹಂಪಿ : ಕವಿ ೨೦೦೦.

೬ ಡಾ. ರಾಜರಾಮ ಹೆಗಡೆ ಕೆರೆ ನೀರಾವರಿ ವ್ಯವಸ್ಥೆ ಒಂದು ಚಾರಿತ್ರಿಕ ವಿಶ್ಲೇಷಣೆ.

೭. ಆರ್. ಕುಪ್ಪಸ್ವಾಮಿ ಎಕನಾಮಿಕ ಕಂಡೀಷನ್ ಇನ್ ಕರ್ನಾಟಕ (ಕ್ರಿ.ಶ. ೯೭೩ರಿಂದ ೧೩೩೬) ಪ್ರ.ಕ.ಕ.ವಿ. ಧಾರವಾಡ ೧೯೭೩.

೮. ಡಾ. ಸೂರ್ಯನಾಥ ಕಾಮತ್ (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧ ಪ್ರ. ಕರ್ನಾಟಕ ಸರ್ಕಾರ.

೬೬

ಜಯಚಾಮರಾಜ ಒಡೆಯರ್ ಕಾಲದ ನೀರಾವರಿ ಚೌಕಟ್ಟು

ಟಿ.ವಿ. ನಾಗರಾಜ*

ಪರೋಕ್ಷ ಸಾರ್ವಭೌಮತೆಯ ನಡುವೆ ಅಸ್ತಿತ್ವ ಪಡೆದ ಮೈಸೂರು ಸಂಸ್ಥಾನ ಚಾರಿತ್ರಿಕ ನೆಲೆಯಲ್ಲಿ ವಿಶಿಷ್ಟ ಸ್ಥಾನ ಪಡೆಯಿತು. ಕಮೀಷನರುಗಳ ಆಡಳಿತ ಸ್ವರೂಪ ಒಂದು ಚೌಕಟ್ಟಾಗಿ ಪರಿವರ್ತನವಾಯಿತು. ಪ್ರತಿದಾನ ನಂತರ ಅನುಭವಿ, ದಕ್ಷ ದಿವಾನರುಗಳ ಸೇವೆ, ಮೈಸೂರು ಮಹಾರಾಜರು ತೋರಿದ ಬದ್ಧತೆ, ದೂರದೃಷ್ಟಿ, ಜನಪರ ಕಾಳಜಿ ಎಲ್ಲಾ ವಲಯಗಳಲ್ಲೂ ದಿಟ್ಟ ಪ್ರಗತಿಪರ ಹೆಜ್ಜೆಗಳು ಮೂಡಿಬಂದವು. ಹೀಗಾಗಿ "ಮೈಸೂರು" "ಮಾದರಿ ರಾಜ್ಯ" ಎಂಬ ಪರಿಕಲ್ಪನೆಗೆ ಒಳಗಾಗಿ ಹೊಸ ಮಜಲು ಆರಂಭಗೊಂಡಿತು. ಮೈಸೂರು ಅರಸ ಜಯಚಾಮರಾಜ ಒಡೆಯರ್ ಕಾಲಘಟ್ಟ ಅತ್ಯಂತ ಸಂದಿಗ್ಧ ಮತ್ತು ಸ್ಥಿತ್ಯಂತರ ಕಾಲವಾಗಿದ್ದಿತು. ೧೯೪೦ರ ಸೆಪ್ಟೆಂಬರ್ ೮ರಂದು ಅಧಿಕಾರಕ್ಕೆ ಬಂದ ಜಯಚಾಮರಾಜ ಒಡೆಯರ್ ೧೯೪೭ ಆಗಸ್ಟ್ ೧೫ರವರೆಗೆ, ನಂತರ ೧೯೫೦ ಜನವರಿ ೨೬ರಂದು ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

೧೯೫೦ರಿಂದ ೧೯೫೬ರವರೆಗೆ ರಾಜ ಪ್ರಮುಖರು, ನಂತರ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದರು. ಈ ಕಾಲಘಟ್ಟದ ಅಭಿವೃದ್ಧಿ ಆಯಾಮಗಳಲ್ಲಿ ನೀರಾವರಿ ವಲಯದ ವಿಕಸನದ ಪ್ರಕ್ರಿಯೆ ಹಲವು ವಿಶಿಷ್ಟ ಕಾರಣಗಳಾಗಿ ಗಮನ ಸೆಳೆಯುತ್ತದೆ. ಹೀಗಾಗಿ ಈ ಕಾಲಘಟ್ಟದ ನೀರಾವರಿ ಚೌಕಟ್ಟಿನ ಆಶಯ, ಕ್ರಿಯಾಯೋಜನೆಗಳು, ಅನುಷ್ಠಾನ, ಬಿಕ್ಕಟ್ಟುಗಳು ಹಾಗೂ ವಿಸ್ತರಣೆಯ ಪ್ರಕ್ರಿಯೆಗಳನ್ನು ಗ್ರಹಿಸುವ ಒಂದು ಪ್ರಯತ್ನವನ್ನು ಮಾಡಲಾಗಿದೆ.

ರಾಜ್ಯ ಪತ್ರಾಗಾರದಲ್ಲಿನ ಆಡಳಿತ ವರದಿಗಳು, ಪ್ರಜಾಪ್ರತಿನಿಧಿ ಸಭೆ ನಡಾವಳಿಕೆಗಳು, ಇಲಾಖಾ ವರದಿಗಳು ಸಮಕಾಲೀನ ಪ್ರಕಟಣೆಗಳು, ಮಹಾರಾಜರ ಪ್ರವಾಸ ಭಾಷಣಗಳು, ದಿವಾನರುಗಳು ಭಾಷಣಗಳು ಮತ್ತು ಪೂರಕ ಸಾಮಗ್ರಿ ಪ್ರಸ್ತುತ ಲೇಖನದ ಮುಖ್ಯ ಆಕರಗಳಾಗಿವೆ.

ರಾಜ್ಯದ ನೀರಾವರಿ ವ್ಯವಸ್ಥೆ ಪ್ರಾಚೀನ ಕಾಲದಿಂದಲೂ ಜನ ಸಮುದಾಯಗಳ ಸಕ್ರಿಯ ಪಾಲುಗಾರಿಕೆಯಿಂದಾಗಿ ಒಂದು ಪರಂಪರೆಯಾಗಿ ಬೆಳೆದುಬಂದಿದೆ. ಇಂತಹ ಕಾರ್ಯಗಳಿಗೆ ಪ್ರಭುತ್ವ ರಾಜರು, ಮಂತ್ರಿಗಳ, ಆಡಳಿತಾಧಿಕಾರಿಗಳು ವಿವಿಧ ಬಗೆಯ ಪ್ರೋತ್ಸಾಹದಾಯಕ ಕ್ರಮಗಳ ಮೂಲಕ ಪ್ರಾಯೋಜಕತ್ವದ ಸ್ವರೂಪ ನೀಡುತ್ತಾ ಬಂದಿರುವುದು ಕಂಡುಬಂದಿದೆ. ಹೀಗಾಗಿ ೧೯ನೇ ಶತಮಾನದ ವೇಳೆಗೆ ರಾಜ್ಯದಲ್ಲಿ ನೀರಾವರಿ ಚೌಕಟ್ಟು ವಿಸ್ತೃತವಾಗಿ ಬೆಳೆದುಬಂದಿದೆ. ಟಿಪ್ಪು ಪತನಾನಂತರ ರೂಪುಗೊಂಡ ಮೈಸೂರು ಸಂಸ್ಥಾನದಲ್ಲಿ ದಿವಾನ್ ಪೂರ್ಣಯ್ಯ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಕೃಷಿ ಮತ್ತು ನೀರಾವರಿಗೆ ಆದ್ಯತಾ ನೀತಿ ಅನುಸರಿಸಿದರು. ಕಮಿಷನರುಗಳ ಕಾಲದಲ್ಲಿ ಆದಾಯದ ಮೂಲಗಳಲ್ಲಿ ಒಂದಾಗಿ ಕೃಷಿಗೆ ಪೂರಕವಾದ ನೀರಾವರಿಗೆ ಸ್ವಲ್ಪಮಟ್ಟದ ಒತ್ತು ನೀಡಿದರೂ ಸಹ ಅದು ಕಂದಾಯ ಬಾಬ್ತಿನಲ್ಲಿ ಉಂಟಾಗಬಹುದಾದ ಸೋತಾ ತಡೆಯಲು ಉದ್ದೇಶಿಸಿತ್ತು. ಪ್ರತಿದಾನಾನಂತರ ಸಂಸ್ಥಾನದಲ್ಲಿ ತಲೆದೋರಿದ ಕ್ಷಾಮ ಬರಗಾಲಗಳು ಸಮಗ್ರ ನೀರಾವರಿ ನೀತಿಯ ಅವಶ್ಯಕತೆಯನ್ನು ಮತ್ತಷ್ಟು ಹೆಚ್ಚಿಸಿದವು. ಸಂಸ್ಥಾನದ ಭೌಗೋಳಿಕ ಹಿನ್ನೆಲೆಯಲ್ಲಿ ಸಾಧ್ಯವಾದ ಕಡೆಗಳಲ್ಲಿ ನೀರಾವರಿ ಕಾಮಗಾರಿಗಳು ಇದ್ದು ಹೊಸದಾಗಿ ನೀರಾವರಿ ಕಾಮಗಾರಿಗಾಗಿ ನಿವೇಶನ ಹುಡುಕುವುದೇ ಕೃಷಿ ಸಾಧ್ಯ. ಆದುದರಿಂದ ಪ್ರಸಕ್ತ ಅಸ್ತಿತ್ವದಲ್ಲಿರುವ ನೀರಾವರಿ ವ್ಯವಸ್ಥೆ ದುರಸ್ಥಿ ಮತ್ತು ನಿರ್ವಹಣೆ ಕೈಗೊಂಡರೆ ಸಾಕು" ಎಂಬ ಅಭಿಪ್ರಾಯಕ್ಕೆ ಸರ್ಕಾರ ಬರುತ್ತದೆ. ೧೯೧೦ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಸಾಮಾನ್ಯವಾದ ಹಾಗೂ ಸಾಧಾರಣ ಅಭಾವದ ಸ್ಥಿತಿಗಳಲ್ಲೂ ಕೆರೆ ನೀರಾವರಿ ಚೌಕಟ್ಟು ಪ್ರಯೋಜನಕಾರಿಯಾಗಿ ಕಂಡುಬಂದಿದೆ. ಹೀಗಾಗಿ ಭವಿಷ್ಯದಲ್ಲಿ ಬೃಹತ್ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕು ಎಂದು ಪ್ರತಿಪಾದಿಸುವುದರೊಂದಿಗೆ ನೀರಾವರಿ ನೀತಿಗೆ ಹೊಸ ಆಯಾಮ ದೊರೆಯಿತು. ಮುಂದೆ ಇದು ವಾಣಿವಿಲಾಸ ಜಲಾಶಯ, ಕೃಷ್ಣರಾಜಸಾಗರದಂತಹ ಬೃಹತ್ ಕಾಮಗಾರಿಗಳ ಅನುಷ್ಠಾನಕ್ಕೆ ಕಾರಣವಾಯಿತು. ಮಿರ್ಜಾ ಇಸ್ಮಾಯಿಲ್ ಸಹ ಇದೇ ನೀತಿಯನ್ನು ಮುಂದುವರಿಸುತ್ತಾ, ನೀರಾವರಿ ಕ್ಷೇತ್ರದ ವಿಸ್ತರಣೆಗೆ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡರು.

* ನಿವೃತ್ತ ಇತಿಹಾಸ ಪ್ರಾಧ್ಯಾಪಕರು, ಬೆಂಗಳೂರು. ಮೊ. ೯೪೪೯೧೧೨೭೬೪

ಪಾರಂಪರಿಕ ಕೆರೆಗಳ ನಿರ್ಮಾಣ, ದುರಸ್ಥಿ ಮತ್ತು ನಿರ್ವಹಣೆಗೆ ಅಲ್ಪಸ್ವಲ್ಪ ಗಮನ ನೀಡಿದರಾದರೂ, ಆದ್ಯತೆ ಬೃಹತ್ ಕಾಮಗಾರಿಗಳು ಮತ್ತು ನಾಲೆಗಳತ್ತ ಇದ್ದುದು ಕಂಡುಬಂದಿದೆ.

೧೯೩೯-೪೫ರ ಎರಡನೇ ಮಹಾಯುದ್ಧದ ಕಾಲಘಟ್ಟದಲ್ಲಿ ಜಗತ್ತಿನಾದ್ಯಂತ ಇದ್ದಂತಹ ತೀವ್ರ ಆರ್ಥಿಕ ಹಿನ್ನಡೆ, ಹಾಗೂ ಘೋರ ಯುದ್ಧದ ದುಷ್ಪರಿಣಾಮಗಳು ಜಗತ್ತಿನಷ್ಟು ಅಲ್ಲದೆ, ಭಾರತ-ಮೈಡೂರು ಸರ್ಕಾರಗಳನ್ನು ಆವರಿಸಿದ್ದವು. ಹೀಗಾಗಿ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿದ್ದ ನೀರಾವರಿ ಯೋಜನೆಗಳಿಗೆ ಹಣಕಾಸು ಒದಗಿಸುವುದು ದೊಡ್ಡ ಸವಾಲಿನ ಕಾರ್ಯವಾಗಿದ್ದಿತು. ಜಯಚಾಮರಾಜ ಒಡೆಯರ್ ಕಾಲದ ನೀರಾವರಿ ಚೌಕಟ್ಟನ್ನು ಎರಡು ಆಯಾಮಗಳಲ್ಲಿ ಗುರುತಿಸಬೇಕಾಗಿದೆ. (೧) ಯೋಜನಾ ಪೂರ್ವ ಹಾಗೂ ಯೋಜನಾ ನಂತರ.

ಯೋಜನಾಪೂರ್ವ

ಜುಲೈ ೧೯೪೦ರಲ್ಲಿ ಸರ್ಕಾರ ಕೆರೆಗಳ ನಿರ್ವಹಣೆಯ ಸ್ಥಿತಿಗತಿಗಳನ್ನು ಪರಿಶೀಲಿಸಿ ಸಣ್ಣ ಕೆರೆಗಳ ಪುನಶ್ಚೇತನಕ್ಕಾಗಿ ಸೂಕ್ತ ಸಲಹೆ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸಲು ಸಮಿತಿಯೊಂದನ್ನು ರಚಿಸಿತು. ಸಮಗ್ರ ವರದಿಯನ್ನು ಸಲ್ಲಿಸಿದ ಸಮಿತಿಯ ಶಿಫಾರಸ್ಸುಗಳನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ ಅನುಷ್ಠಾನಕ್ಕಾಗಿ ಕಾರ್ಯಯೋಜನೆ ರೂಪಿಸಿತು. ಸಮಿತಿಯ ಶಿಫಾರಸಿನ ಆಧಾರದಲ್ಲಿ ಆದೇಶ ಹೊರಡಿಸಿ, ಅದರಂತೆ ಸಣ್ಣ ಕೆರೆಗಳ ಪುನಶ್ಚೇತನಕ್ಕಾಗಿ ಹತ್ತು ಲಕ್ಷ ರೂ.ಗಳನ್ನು ಒದಗಿಸಬೇಕೆಂದು, ಹಾಗೂ ಕನಿಷ್ಠ ಹದಿನೈದು ವರ್ಷಗಳಲ್ಲಿ ಪುನಶ್ಚೇತನ ಅಗತ್ಯವೆನಿಸಿದ ಸಣ್ಣ ಕೆರೆಗಳನ್ನು ಉತ್ತಮ ನಿರ್ವಹಣಾ ಸ್ಥಿತಿಗೆ ಪುನಶ್ಚೇತನಗೊಳಿಸಲು ತೀರ್ಮಾನಿಸಿತು. ಈ ಹದಿನೈದು ವರ್ಷಗಳ ಕಾಲಮಿತಿ ದೀರ್ಘವಾದುದು ಏಕೆಂದರೆ, ಈ ಅವಧಿ ಪೂರ್ಣವಾಗುವ ವೇಳೆಗೆ ಪುನಶ್ಚೇತನಗೊಂಡ ಕೆರೆಗಳು ಪುನಃ ಪುನಶ್ಚೇತನಗೊಳಿಸಬೇಕಾದ ಸ್ಥಿತಿ ತಲುಪುವ ಸಂಭವವೇ ಹೆಚ್ಚಾಗಿದ್ದಿತು. ಕೆರೆ ನೀರಾವರಿ ಚೌಕಟ್ಟಿನ ಮುಖ್ಯ ಸಮಸ್ಯೆಯೆಂದರೆ ಸಮಿತಿ ಶಿಫಾರಸುಗಳನ್ನು ಸರ್ಕಾರ ಅನುಷ್ಠಾನಗೊಳಿಸಲೇ ಇಲ್ಲ. ಎರಡನೆಯದಾಗಿ, ಕಾರ್ಯಯೋಜನೆ ರೂಪಿಸುವಲ್ಲಿ ಆದಂತಹ ನಿದಾನಗತಿ, ಮೂರನೆಯದಾಗಿ ಇಂತಹ ಕಾಮಗಾರಿಗಳಿಗೆ ಮಂಜೂರಾತಿ ನೀಡುವಲ್ಲಿ ಇದ್ದಂತಹ ಅಧಿಕಾರ ಕುರಿತದ್ದು. ಇಲ್ಲಿ ಸರ್ಕಾರ ಅಧಿಕಾರವನ್ನು ವಿಕೇಂದ್ರಿಕರಿಸದೆ, ತನ್ನಲ್ಲೇ ಉಳಿಸಿಕೊಂಡಿದ್ದುದಾಗಿದೆ. ನಿಧಾನಗತಿಯೆ ಹೆಚ್ಚು ತೊಡಕಾಗಿ ಪರಿಣಮಿಸಿತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಕೆರೆಗಳ ಪುನಶ್ಚೇತನ ಕುರಿತಂತೆ ಪ್ರಸ್ತಾಪಿಸುತ್ತಾ "ಕಳೆದ ಹದಿನೈದು ವರ್ಷಗಳಿಂದ ಸಣ್ಣ ಕೆರೆ ಪುನಶ್ಚೇತನ ಕುರಿತಂತೆ ಚರ್ಚೆ ಮಾಡುತ್ತಲೇ ಇದ್ದೇವೆ. ಪ್ರಗತಿಯಾದುದು ಮಾತ್ರ ಇಲ್ಲ" ಎಂದು ತನ್ನ ಅಸಮಾಧಾನ ವ್ಯಕ್ತಪಡಿಸುತ್ತಾರೆ. ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಿಂದಲೂ "ತ್ರೈಮಾಸಿಕ" ಕಾರ್ಯಕ್ರಮ ಜಾರಿ ಇದ್ದರೂ ಸಹ ಯಶಸ್ಸು ಸಾಧಿಸಲೇ ಇಲ್ಲ. ಅಲ್ಬೀನಿಯನ್ ಬ್ಯಾನರ್ಜಿ ಕಾಲದಲ್ಲಿ ಭರವಸೆಗಳು ಕಂಡುಬಂದವಷ್ಟೆ. ಮಿರ್ಜಾ ಇಸ್ಮಾಯಿಲ್ ಅವರು ಸಹ ಸಮಸ್ಯೆಯ ಗಂಭೀರತೆ ಅರಿತು ವಿಶೇಷ ಸೂಚನೆಗಳನ್ನು ನೀಡಿದರೂ ಗಮನಾರ್ಹ ಪ್ರಗತಿ ಕಂಡುಬರಲಿಲ್ಲ.

೧೯೪೧ರಲ್ಲಿ ನವೆಂಬರ್ ೧೪ರಂದು ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದ ಜಯಚಾಮರಾಜ ಒಡೆಯರ್ ಕೋಲಾರ ನಗರಸಭೆಯಲ್ಲಿ ಮಾತನಾಡುತ್ತಾ "....ನಮ್ಮ ಜಿಲ್ಲೆ ಸಂಪೂರ್ಣವಾಗಿ ಕೆರೆಗಳನ್ನು ಅವಲಂಬಿಸಿದೆ. ಜನರ ಬದುಕು ಕೃಷಿ ಅಭಿವೃದ್ಧಿ ಕೆರೆಗಳ ನಿರ್ವಹಣೆಯನ್ನು ಅವಲಂಬಿಸಿದೆ ಎಂಬುದನ್ನು ನಮ್ಮ ಸಹಕಾರ ಮನಗೊಂಡಿದೆ. ಹೀಗಾಗಿ ಮುಂದಿನ ಕೆಲವು ವರ್ಷಗಳಲ್ಲಿ ನಾಲ್ಕು ನೂರು ಕೆರೆಗಳನ್ನು ಪುನಶ್ಚೇತನ ಮತ್ತು ದುರಸ್ತಿಗೊಳಿಸುವ ಆಲೋಚನೆ ಇದೆ" ಎಂಬ ಭರವಸೆ ನೀಡುತ್ತಾರೆ. ಹೀಗಾಗಿ ಜಯಚಾಮರಾಜ ಒಡೆಯರ್‌ರವರ ಕಾಲದಲ್ಲಿ ಸಹ ಕೆರೆಗಳ ಪುನಶ್ಚೇತನ ದುರಸ್ತಿ ಸರ್ಕಾರದ ನೀತಿಯಾಗಿದ್ದಿತು.

೧೯೪೯ರಲ್ಲಿ "Grow More Food" ಯೋಜನೆಯನ್ನು ಮೈಸೂರು ರಾಜ್ಯಕ್ಕೂ ವಿಸ್ತರಿಸಲಾಯಿತು. ಹಲವು ಯೋಜನೆಗಳನ್ನು ಈ ಕಾರ್ಯಕ್ರಮದಡಿಯಲ್ಲಿ ಸೇರ್ಪಡೆ ಮಾಡಲಾಯಿತು. ಅವುಗಳೆಂದರೆ-

೧) ಏತನೀರಾವರಿ ಯೋಜನೆಗಳು, ೨) ದೊಡ್ಡ ಕೆರೆಗಳ ನಿರ್ಮಾಣ, ೩) ಸಣ್ಣ ಕೆರೆಗಳ ಪುನಶ್ಚೇತನ, ೪) ಕೆರೆಗಳ ಹೂಳು ತೆಗೆಯುವ ಕಾರ್ಯ, ೫) ನದಿ-ಕೆರೆಗಳಿಗೆ ಪೂರಕ ನಾಲಾ ನಿರ್ಮಾಣ, ೬) ಭೂ ಅಭಿವೃದ್ಧಿ ಯೋಜನೆ.

ಕೇಂದ್ರ ಸರ್ಕಾರದ ಅನುದಾನಕ್ಕೆ ಒಳಪಟ್ಟು ಈ ಯೋಜನೆಗಳು ಸ್ವಲ್ಪಮಟ್ಟಿಗೆ ಚೇತರಿಕೆ ಪಡೆದವು.

ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಚಟುವಟಿಕೆಗಳು ರೈತರಿಗೆ ಬಾವಿಗಳನ್ನು ತೋಡಲು, ನೀರೆತ್ತುವ ಯಂತ್ರಗಳ ಸ್ಥಾಪನೆ, ಜೋಡಣೆ ನಿರ್ಮಾಣ, ದೊಡ್ಡ ನೀರಾವರಿ ಕಾಮಗಾರಿಗಳಿಗೆ ಅಂದಾಜು ವೆಚ್ಚ ಪಟ್ಟಿಗಳನ್ನು

ತಯಾರಿಸಲು, ತಾಂತ್ರಿಕ ಸಹಾಯ ನೀಡುವಷ್ಟು ಸೀಮಿತವಾಗಿದ್ದಿತು. ನೀರಾವರಿ ಉಪಸಮಿತಿ ನಡೆಸಿದ ಎರಡು ಸಭೆಗಳನ್ನು ನಡೆಸಿ, ಏತ ನೀರಾವರಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಬೇಕೆಂದು ಹಾಗೂ ಸಮುದಾಯ ಆಧಾರಿತ ಬೃಹತ್ ಪ್ರಮಾಣದ ಏತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಲು ಶಿಫಾರಸು ಮಾಡಿತು. ಬರ/ಕ್ಷಾಮದ ವಿರುದ್ಧವಾಗಿ 'ರಕ್ಷಣಾತ್ಮಕ' ವರ್ಗದ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು "ನೀರಾವರಿ ಅಭಿವೃದ್ಧಿ ನಿಧಿ"ಯಿಂದ ಜಾರಿಗೊಳಿಸಲು ತೀರ್ಮಾನ ಕೈಗೊಂಡಿತು. ಅವುಗಳೆಂದರೆ: ಮಾರ್ಕೊನಹಳ್ಳಿ ಜಲಾಶಯ, ಹೊನ್ನಮಾಚನಹಳ್ಳಿ, ತಿಪ್ಪಗಾನಹಳ್ಳಿ, ಮಾರ್ಕಂಡೇಯ ಜಲಾಶಯ, ಆಲಹಳ್ಳಿ, ಬೈರಮಂಗಲ, ಪರಶುರಾಮಪುರ, ಗುಡಿಹಳ್ಳಿ ಯೋಜನೆಗಳು ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿತು. ಆದರೆ ಇವುಗಳಲ್ಲಿ ನಾಲ್ಕು ಮಾತ್ರ ಆ ಆರ್ಥಿಕ ವರ್ಷದಲ್ಲಿ ಪೂರ್ಣಗೊಂಡವು. "ತ್ರೈಮಾಸಿಕ ಯೋಜನೆ" ಅನ್ವಯ ಕೆರೆಗಳ ಪುನಶ್ಚೇತನ ಕಾರ್ಯವನ್ನು ದೊಡ್ಡ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ತೀರ್ಮಾನ ಕೈಗೊಂಡರೂ, ಸಹ ಅನುಷ್ಠಾನಗೊಂಡಿದ್ದು ಮಾತ್ರ ಅಲ್ಪಪ್ರಮಾಣದ್ದಾಗಿದ್ದವು.

ಈ ಕಾಲಘಟ್ಟದಲ್ಲಿ ನೀರಾವರಿ ಅಚ್ಚುಕಟ್ಟಿನ ವಿಸ್ತರಣೆಗೆ ಪೂರಕವಾಗಿ ಅನುಷ್ಠಾನಗೊಂಡ ಕಾಮಗಾರಿಗಳಲ್ಲಿ ನಾಲಾಗಳು ಪ್ರಮುಖವಾದವು. ಇವುಗಳಲ್ಲಿ ಮುಖ್ಯವಾದವೆಂದರೆ:

ಭದ್ರಾ ಎಡದಂಡೆ ನಾಲಾ, ಶ್ರೀರಾಮದೇವರ ಉತ್ತರ ನಾಲಾ, ಅಂಜನಾಪುರ ನಾಲಾ, ಶಿಂಷಾ ಎಡದಂಡೆ ನಾಲೆ, ಮಂದಗೆರೆ ಎಡದಂಡೆ ನಾಲೆ, ಕಟ್ಟೇಪುರ ನಾಲೆ, ಕುಡ್ಲೂರಿನ ಎಡದಂಡೆ ನಾಲಾ, ಭದ್ರಾ ಬಲದಂಡೆ ನಾಲೆ.

ಅಂಜನಾಪುರದ ಬಲದಂಡೆ ನಾಲೆ ಆಗಿದ್ದವು. ಇವುಗಳಲ್ಲಿ ೩-೪ ನಾಲೆಗಳು ೧೯೪೩-೪೪ನೇ ಸಾಲಿಗೆ ಪೂರ್ಣಗೊಂಡಿದ್ದವು. ಉಳಿದಂತೆ ನಾಲೆಗಳು ವಿವಿಧ ಹಂತ ಅನುಷ್ಠಾನದ ಪ್ರಕ್ರಿಯೆಯಲ್ಲಿದ್ದವು. ಇದಕ್ಕೆ ಬಹುಮಟ್ಟಿನ ಕಾರ್ಯವೆಂದರೆ ತೀವ್ರ ಹಣಕಾಸಿನ ಮುಗ್ಗಟ್ಟು ಬಹುತೇಕ ನಾಲಾಗಳ ಕಾಮಗಾರಿಗಳನ್ನು ನಿಧಾನಗತಿಯಲ್ಲಿ ಇರಿಸಿದ್ದವು. ೧೯೫೦-೫೧ರ ವೇಳೆಗೆ ಸಂಸ್ಥಾನದಲ್ಲಿ ನಾಲೆಗಳಿಂದಲೇ ಸುಮಾರು ೨,೭೧,೮೩೦ ಎಕರೆ ಪ್ರವೇಶ ನೀರಾವರಿ ಸೌಲಭ್ಯ ವಿಸ್ತರಿಸಲ್ಪಟ್ಟಿತು.

ಯೋಜನಾ ನಂತರ

ಮೈಸೂರು ಸಂಸ್ಥಾನದಲ್ಲಿ ನೀರಾವರಿ ಸೌಕರ್ಯಗಳ ವಿಸ್ತರಣೆ ಮತ್ತು ಅಭಿವೃದ್ಧಿಗೆ ಅಪಾರ ಅಡಚಣೆಗಳಿದ್ದವು. ಹೀಗಾಗಿ ಪ್ರಥಮ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವ ಮುನ್ನ ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಸುಮಾರು ಹದಿನೇಳು ಲಕ್ಷ ಎಕರೆ ಪ್ರದೇಶ ನೀರಾವರಿ ಪಡೆದಿದ್ದಿತು. ಪ್ರಥಮ ಪಂಚವಾರ್ಷಿಕ ಯೋಜನೆಗೆ ಪೂರ್ವದಲ್ಲಿ, ರಾಜ್ಯದಲ್ಲಿ ಅನೇಕ ಹೊಸ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿತ್ತು. ಆದರೆ ತೀವ್ರ ಹಣಕಾಸಿನ ಅಡಚಣೆಗಳಿಂದಾಗಿ ಬಹುಪಾಲು ಯೋಜನೆಗಳು ನೆನೆಗುದಿಗೆ ಬಿದ್ದಿದ್ದವು. ೧೯೫೧ರಲ್ಲಿ ಆರಂಭಗೊಂಡ ಮೊದಲನೇ ಪಂಚವಾರ್ಷಿಕ ಯೋಜನೆಯಿಂದಾಗಿ ರಾಜ್ಯದಲ್ಲಿ ನೀರಾವರಿ ಯೋಜನೆಗಳ ಪ್ರಗತಿ ತೀವ್ರಗೊಳ್ಳಲು ಸಹಾಯಕವಾಯಿತು. ಹೀಗಾಗಿ ಅನುಷ್ಠಾನದ ವಿವಿಧ ಹಂತಗಳಲ್ಲಿದ್ದ, ಅನೇಕ ನೀರಾವರಿ ಯೋಜನೆಗಳನ್ನು ಮೊದಲ ಪಂಚವಾರ್ಷಿಕ ಯೋಜನೆಗೆ ಸೇರಿಸಿದ್ದಲ್ಲದೆ. ಇಂತಹ ಇನ್ನೂ ಹಲವು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಯಿತು. ಇಂತಹ ನೀರಾವರಿ ಯೋಜನೆಗಳನ್ನು ಮೂರು ಗುಂಪುಗಳಾಗಿ ವಿಭಜಿಸಲಾಗಿತ್ತು. ಮೊದಲನೆಯದಾಗಿ ೫ ಕೋಟಿ ರೂ.ಗಳಿಗಿಂತ ಹೆಚ್ಚಿನ ಮೊತ್ತದ ದೊಡ್ಡ ಯೋಜನೆಗಳು, ಎರಡನೆಯದಾಗಿ, ೧೦ ಲಕ್ಷ ಮೇಲ್ಪಟ್ಟು ೫ ಕೋಟಿ ರೂ.ವರೆಗಿನ ಕಾಮಗಾರಿಗಳನ್ನು ಮಧ್ಯಮ ಯೋಜನೆಗಳು, ಮೂರನೆಯದಾಗಿ ೧೦ ಲಕ್ಷಕ್ಕಿಂತ ಕಡಿಮೆ ವೆಚ್ಚದ ಕಾಮಗಾರಿಗಳನ್ನು ಸಣ್ಣ ನೀರಾವರಿ ಯೋಜನೆಗಳೆಂದು ವರ್ಗೀಕರಿಸಲಾಗಿದ್ದಿತು. ಈ ಮೂರು ಬಗೆಯ ಕಾಮಗಾರಿಗಳು ಪ್ರಥಮ ಪಂಚವಾರ್ಷಿಕ ಯೋಜನೆ ಅಡಿಯಲ್ಲಿ ಮುಂದುವರಿಸಲ್ಪಟ್ಟವು. ಇವುಗಳಲ್ಲಿ ತುಂಗಭದ್ರಾ, ಘಟಪ್ರಭಾ, ತುಂಗಾ ಮತ್ತು ನುಗು ಯೋಜನೆಗಳು ಸೇರಿದ್ದವು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಈ ಎಲ್ಲಾ ಯೋಜನೆಗಳಿಂದ ೧,೬೭೯.೬೪ ಲಕ್ಷ ಒದಗಿಸಲಾಗಿದ್ದು, ಈ ಪೈಕಿ ಯೋಜನೆ ಅಂತ್ಯದ ವೇಳೆಗೆ ಒಟ್ಟು ೧,೫೩೭.೫೭ ಲಕ್ಷ ವ್ಯಯವಾಗಿದ್ದಿತು. ಪ್ರಥಮ ಯೋಜನೆಯ ಅಂತ್ಯದ ವೇಳೆಗೆ ನಿರ್ಮಿಸಿದ ಒಟ್ಟು ನೀರಾವರಿ ಸಾಮರ್ಥ್ಯ ೧.೨೬ ಲಕ್ಷ ಎಕರೆಗಳಾಗಿದ್ದು, ಈ ಪೈಕಿ ನೀರಾವರಿಗೆ ಒಳಪಟ್ಟು ಜಮೀನಿನ ವಿಸ್ತೀರ್ಣ ಸುಮಾರು ೫೦,೦೦೦ ಎಕರೆ ಎಂದೂ ಅಂದಾಜಿಸಲಾಯಿತು. ಈ ಯೋಜನೆ ಅಡಿಯಲ್ಲಿ ಚಿಕ್ಕ ನೀರಾವರಿ ಕಾಮಗಾರಿಗಳಿಗೆ ಒಟ್ಟು ೨೪೫.೦೨ ಲಕ್ಷ ರೂ.ಗಳನ್ನು ಒದಗಿಸಲಾಗಿದ್ದಿತು. ಈ ಪೈಕಿ ಯೋಜನಾ ಅವಧಿಯಲ್ಲಿ ಸುಮಾರು ೨೪೩.೫೮ ಲಕ್ಷ ರೂ.ಗಳು ವ್ಯಯ ಆಗಿದ್ದಿತು. ಪಂಚವಾರ್ಷಿಕ ಯೋಜನೆ ಅಂಗವಾಗಿ ಕೈಗೊಂಡ ಕಾಮಗಾರಿಗಳಲ್ಲದೆ, ಯಥಾವತ್ತಾದ

ಆಯ-ವ್ಯಯದ ಅಂದಾಜು ಪಟ್ಟಿ ಪ್ರಕಾರ ಹಲವು ಕಾಮಗಾಗಿರಗಳನ್ನು ಕೈಗೊಳ್ಳಲಾಗಿದ್ದು, ಈ ಬಾಬಿನಲ್ಲಿ ಪುನಃ ೧೭೧.೭೯ ಲಕ್ಷ ರೂ. ವೆಚ್ಚವಾಗಿದ್ದಿತು. ಕಾರ್ಯಯೋಜನೆಯಂತೆ ರಾಜ್ಯದಾದ್ಯಂತ ಅನೇಕ ಹಳೆಯ ಕೆರೆಗಳನ್ನು ದುರಸ್ತಿ ಪಡಿಸಿದ್ದಲ್ಲಿದೆ. ಹಲವು ಹೊಸ ಕೆರೆ-ಕಟ್ಟೆಗಳನ್ನು ನಿರ್ಮಿಸಲಾಯಿತು. ಹೀಗಾಗಿ ಹಳೆಯ ಕಾಮಗಾರಿಗಳಿಂದ ೨,೫೯,೮೭೧ ಎಕರೆಗೆ ನಿಶ್ಚಿತ ನೀರಾವರಿ ಸೌಲಭ್ಯವನ್ನು ಹೊಸದಾಗಿ ೧,೧೬,೮೭೬ ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದಿತು.

ವಿಶೇಷ ನೀರು ಸರಬರಾಜು ವಿಭಾಗವನ್ನೇ ೧೯೫೪ರಲ್ಲಿ ಅನುಷ್ಠಾನಗೊಳಿಸಲಾಯಿತು. ಈ ವಿಭಾಗವನ್ನು ಮೈಸೂರು ಮತ್ತು ಬೆಂಗಳೂರು ನಗರಗಳಿಗೆ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದಲೇ ಸ್ಥಾಪಿಸಲಾಯಿತು. ಹೀಗಾಗಿ ಜಯಚಾಮರಜ ಒಡೆಯರು ಕಾಲಘಟ್ಟದಲ್ಲಿ ಬೆಂಗಳೂರು, ಮೈಸೂರು ನಗರಗಳು ನೀರು ಸರಬರಾಜು ಯೋಜನೆಗೆ ಒಳಪಟ್ಟವು.

ಜಯಚಾಮರಾಜ ಒಡೆಯರ್‌ರವರ ಆಡಳಿತಾವಧಿಯಲ್ಲಿ ನೀರಾವರಿ ಕ್ಷೇತ್ರದಲ್ಲಿ ಮುಂದುವರಿದ ಪರಂಪರೆ, ಮಹಾತ್ವಕಾಂಕ್ಷೆ ಅವರ ವಿಸ್ತರಣೆ ಮತ್ತು ಅಭಿವೃದ್ಧಿಯ ದಿಟ್ಟ ಹೆಜ್ಜೆಗಳು ಕಂಡುಬಂದರೂ ಸಹ, ಪ್ರತಿಕೂಲ ಸ್ಥಿತ್ಯಂತರಗಳಿಂದಾಗಿ ಗಮನಾರ್ಹ ಪ್ರಗತಿ ಕಂಡುಬರಲಿಲ್ಲ. ಎರಡನೆ ಮಹಾಯುದ್ಧದ ಪರಿಣಾಮಗಳು ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಜೊತೆಗೆ ಸ್ವಾತಂತ್ರ್ಯ ಸಂಗ್ರಾಮದ ವಿದ್ಯಮಾನಗಳು, ಪ್ರಭುತ್ವಕ್ಕೆ ಶಾಂತಿ-ಸುವ್ಯವಸ್ಥೆ ಒದಗಿಸುವುದರ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುವುದು ದುಸ್ತಿರವಾಗಿ ಪರಿಣಮಿಸಿತು. ಸ್ವಾತಂತ್ರ್ಯ ಹೋರಾಟದ ಜೊತೆಗೆ ಏಕೀಕರಣದ ಕೂಗು ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಜನಾಂದೋಲನ ಸರ್ಕಾರವನ್ನು ತುದಿಗಾಲಲ್ಲೇ ನಿಲ್ಲಿಸಿದವು. ಹೀಗಾಗಿ ೧೯೪೦ರ ದಶಕದಲ್ಲಿ ಮತ್ತು ನಂತರದ ವರ್ಷಗಳಲ್ಲಿ ಮೈಸೂರು ರಾಜ್ಯದ ನೀರಾವರಿ ಕ್ಷೇತ್ರ ಯೋಜನಾ ಪೂರ್ವದಲ್ಲಿ ಪ್ರಗತಿ ಕುಂಠಿತಗೊಂಡಿತ್ತೆಂದು ಅಭಿಪ್ರಾಯಪಡಬಹುದಾಗಿದೆ. ಯೋಜನಾ ನಂತರ ವರ್ಷಗಳಲ್ಲಿ ರಾಜ್ಯದ ನೀರಾವರಿ ವಲಯದಲ್ಲಿ ಹೊಸತೊಂದು ಆಯಾಮ ಗೋಚರಿಸಲಾರಂಭಿಸಿತು.

ಆಕರ ಗ್ರಂಥಗಳು

೧. Proceedings of the Mysore Representative Assembly (1940-1956).

೨. Proceedings of the Mysore Legislative council.

೩. Speeches of His Hights Maharajas of Mysour-Sri Jayachamaraja Wodeyor.

೪. Speeches of Dewan's of Mysore.

೫. Adminisrative Reports P.W.D. (Irrigation) (lauo-1956).

೬ Statistical Abstract of Mysore State. (1940-1956).

೭. Statistical Monograph on Water Resources Department in Karnataka, W.R.D., Bangalore.

೮. ಮೈಸೂರು ಸಂಸ್ಥಾನದಲ್ಲಿ ನೀರಾವರಿ (ಕೋಲಾರ ಜಿಲ್ಲೆ-ಒಂದು ಅಧ್ಯಯನ), ಡಾ. ಟಿ.ವಿ. ನಾಗರಾಜ. ಜನನಿ ಪ್ರಕಾಶನ, ಬೆಂಗಳೂರು-೯೮.

೯. ಕರ್ನಾಟಕದಲ್ಲಿ ಕೆರೆ ನೀರಾವರಿ : ಡಾ. ಜಿ.ಎಸ್. ದೀಕ್ಷಿತ್ ಮತ್ತು ಇತರರು.

೧೦. Season and Crop Reports (1940-1956).

೧೦೦

ಕರ್ನಾಟಕದಲ್ಲಿ ಕೃಷಿ ಇತಿಹಾಸದ ಆಕರಗಳು ಮತ್ತು ಅವುಗಳ ಅಧ್ಯಯನ (೧೭೯೯-೧೯೪೭)

ಸಿ.ಎಸ್. ನಾಗರಾಜ*

ಕರ್ನಾಟದಲ್ಲಿ ಕೃಷಿ ಇತಿಹಾಸವನ್ನು ಕುರಿತು ಅಧ್ಯಯನ ಕೈಗೊಳ್ಳಲು ಅನೇಕ ಸಂಶೋಧನಾತ್ಮಕ ಗ್ರಂಥಗಳು ಲಭ್ಯವಿದ್ದು ಇವುಗಳ ಸಹಾಯದಿಂದ ಕರ್ನಾಟಕದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಕೃಷಿಯ ಬೆಳವಣಿಗೆಯನ್ನು ತಿಳಿಯಬಹುದಾಗಿದೆ. ಪ್ರಾಗೈತಿಹಾಸಿಕ ಕಾಲದಲ್ಲಿ ಕೃಷಿಯ ನೆಲೆಗಳು, ಆ ಕಾಲದ ಪ್ರಮುಖ ಬೆಳೆಗಳು, ಕೃಷಿಕನ ಜೀವನ, ಕೃಷಿಯ ಉಪಕರಣಗಳು ಇವುಗಳಿಂದ ಪ್ರಾರಂಭವಾಗಿ ಮುಂದಿನ ಹಂತಗಳಲ್ಲಿ ಕಂಡುಬಂದ ಬದಲಾವಣೆಗಳ ಅಧ್ಯಾಯನ ಇತಿಹಾಸ ಸಂಶೋಧಕನಿಗೆ ಕುತೂಹಲವನ್ನುಂಟುಮಾಡುತ್ತದೆ. ಜೀವನ ಅವಶ್ಯಕ ಕಾರ್ಯವಾಗಿ ಪ್ರಾರಂಭವಾಗಿ ಕೃಷಿಯು ಇಂದು ಒಂದು ಬೃಹತ್ ಉದ್ಯಮವಾಗಿದೆ. ಆದರೆ ಇದೇ ವೇಳೆಯಲ್ಲಿ ತಲತಲಾಂತರದಿಂದ ಕೃಷಿ ಕಾಯಕದಲ್ಲಿ ನಿರತನಾದ ರೈತನ ಬದುಕು ಯಾವುದೇ ಸುಧಾರಣೆ ಕಾಣದೆ ಅನೇಕ ಸಮಸ್ಯೆಗಳಿಂದ ಕೂಡಿ ಬಡತನ ಹಾಗೂ ಶೋಷಿತ ಜೀವನ ನಡೆಸುತ್ತಿರುವುದು ವಿಪರ್ಯಾಸವೇ ಸರಿ. ವಸಹತುಶಾಹಿ ಆಡಳಿತ ಪರೋಕ್ಷವಾಗಿ ಮೈಸೂರು ರಾಜ್ಯಕ್ಕೆ ಕಾಲಿಟ್ಟ ನಂತರ ಕೃಷಿ ಕ್ಷೇತ್ರದಲ್ಲಿ ಕಂಡುಬಂದ ಬದಲಾವಣೆಗಳು ಮತ್ತು ಅದರ ಪರಿಣಾಮಗಳನ್ನು ವಿಶ್ಲೇಷಿಸಲಾಗಿದೆ.

೧೮೦೦ರಿಂದ ೧೮೦೧ರ ಅವಧಿಯಲ್ಲಿನ ಮೈಸೂರು ರಾಜ್ಯದ ಕೃಷಿ ಇತಿಹಾಸ ತಿಳಿಯಲು ಪ್ರಾನ್ಸಿಸ್ ಬುಕನನ್, ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರ ಅಂಡ್ ಮಲಬಾರ್ ಎಂಬ ಕೃತಿಯು ಮುಖ್ಯ ಆಕರವಾಗಿದೆ. ಭಾರತದ ಬ್ರಿಟೀಷ್ ಗೌರ್‍ನರ್ ಜನರಲ್ ಮಾರ್ಕ್ಸ್ ವೆಲ್ಲೆಸ್ಲಿ ಆದೇಶದ ಮೇರೆಗೆ ಬುಕನನ್ ದಕ್ಷಿಣ ಭಾರತದ ನೇರ ಆಡಳಿತದ ಬ್ರಿಟೀಷ್ ಭಾಗಗಳು ಮತ್ತು ಮೈಸೂರು ಒಡೆಯರ ಆಡಳಿತದ ಪ್ರದೇಶಗಳ ವ್ಯಾಪ್ತಿಯಲ್ಲಿನ ಕೃಷಿ, ಕಲೆ, ವಾಣಿಜ್ಯ, ಧಾರ್ಮಿಕ ಸಂಪ್ರದಾಯಗಳು, ಧರ್ಮ, ಜನಾಂಗ, ಉಡುಗೆ-ತೊಡುಗೆ ಮತ್ತು ಇತಿಹಾಸ, ಸ್ವಾಭಾವಿಕ ವಾಯುಗುಣ ಮತ್ತು ನಾಗರೀಕ ಸಮಾಜ ಮುಂತಾದ ವಿಷಯಗಳ ಬಗೆಗೆ ಅಧ್ಯಯನವನನ್ನು ಕೈಗೊಂಡನು. ತನ್ನ ಪ್ರಯಾಣವನ್ನು ೨೩ನೇ ಏಪ್ರಿಲ್ ೧೮೦೦ನೇ ಇಸವಿಯ ಮಧ್ಯಾಹ್ನ ಮದ್ರಾಸ್‌ನಿಂದ ಪ್ರಾರಂಭಿಸಿದನು. ಬುಕನನ್ ಅಧ್ಯಯನದ ವಿಷಯವನ್ನು ೩ ಸಂಪುಟಗಳ ಮೂಲಕ ಗ್ರಂಥವನ್ನು ಲಂಡನ್‌ನಲ್ಲಿ ಮುದ್ರಿಸಿ ೧೮೦೭ರಲ್ಲಿ ಹೊರತರಲಾಯಿತು. ಮೈಸೂರು ರಾಜ್ಯದ ಪ್ರದೇಶಗಳಲ್ಲಿನ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ತಿಳಿದುಕೊಳ್ಳಬಹುದು. ರಾಜ್ಯದ ವಿವಿಧ ಪ್ರದೇಶಗಳಲ್ಲಿನ ಪ್ರಮುಖ ಬೆಳೆಗಳು, ಕೃಷಿ ಭೂಮಿಯ ವ್ಯಾಪ್ತಿ, ಮಣ್ಣಿನ ಬಗೆಗಳು, ಹಳ್ಳಿಗಳಲ್ಲಿ ಕೃಷಿಭೂಮಿಯ ಪ್ರಮಾಣ, ಆಮದು ಮತ್ತು ರಫ್ತು ಪದಾರ್ಥಗಳು, ರೈತಾಪಿ ವರ್ಗ, ಶ್ರೀಮಂತ ರೈತರು ಮತ್ತು ಅವರು ಹೊಂದಿರುವ ಭೂಮಿಯ ಪ್ರಮಾಣ, ಭೂಮಿಯ ಒಡೆತನ, ಅದರಲ್ಲಿನ ಅಸಮಾನತೆ, ಕೃಷಿಕಾರ್ಮಿಕರ ಸ್ಥಿತಿ, ಅವರ ಕೂಲಿಯ ಪ್ರಮಾಣ, ಗೇಣಿ ಪದ್ಧತಿ, ಅಳತೆ ಮಾಪನಗಳು, ಕೃಷಿ ಉಪಕರಣಗಳು ಹಾಗೂ ನಾಲ್ಕನೇ ಆಂಗ್ಲ-ಮೈಸೂರು ಯುದ್ಧದಿಂದ ಕೃಷಿ ಕ್ಷೇತ್ರದ ಮೇಲಾದ ದುಷ್ಪರಿಣಾಮಗಳು ಬಗೆಗೆ ವಿಶ್ಲೇಷಿಸಲಾಗಿದೆ.

೧೭೯೯ರ ನಂತರದ ಅವಧಿಯಲ್ಲಿ ಮೈಸೂರು ಪ್ರಾಂತ್ಯದಲ್ಲಿ ಕೃಷಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿತ್ತು. ಒಂದು ಎಕರೆಗೆ ಉತ್ಪಾದನೆಯ ಪ್ರಮಾಣ ಕಡಿಮೆ ಇದ್ದು, ಹೆಚ್ಚಳಕ್ಕೆ ಅನೇಕ ಸಮಸ್ಯೆಗಳಿದ್ದವು. ದುಬಾರಿ ವೆಚ್ಚದ ಸಾರಿಗೆ ಮತ್ತು ಸೂಕ್ತ ಮಾರುಕಟ್ಟೆಯ ಅಲಭ್ಯತೆ ಇದ್ದದ್ದು ಪ್ರಮುಖ ಕಾರಣ. ಮತ್ತು ಭೂಮಿಯ ಉಳುಮೆಗೆ ಮರದ ನೇಗಿಲು ಬಳಕೆಯಿಂದಾಗಿ ಕೃಷಿ ಚಟುವಟಿಕೆಗಳು ತುಂಬಾ ನಿಧಾನವಾಗುತ್ತಿತ್ತು.[೧] ಯಾವುದೇ ಆಧುನಕ ಕೃಷಿ ಪದ್ಧತಿಗಳು ಇನ್ನು ಪರಿಚಿತವಾಗಿರಲಿಲ್ಲ. ಮಳೆ, ಕೆರೆ ಕಾಲುವೆಗಳ ನೀರನ್ನು ಕೃಷಿ ಅವಲಂಬಿಸಿತ್ತು. ಕೃಷಿಗಾಗಿ ೪/೧೦ನೇ ಭಾಗ ಮಾತ್ರ ಭೂಮಿಯ ಬಳಸಲಾಗುತ್ತಿತ್ತು, ಉಳಿದ ಭೂಮಿಯನ್ನು ಹಾಳುಬಿಡಲಾಗಿತ್ತು. ಸಣ್ಣ ಪ್ರಮಾಣದಲ್ಲಿ ನೀರಾವರಿ ವ್ಯವಸ್ಥೆ

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕೊಣಾಜೆ, ಮೊ. ೯೪೮೧೮೩೭೭೩೮

ಹೊಂದಿತ್ತು. ಹೈದರಾಲಿ ನಂತರ ಅಧಿಕಾರ ಸ್ವಿಕರಿಸಿದ ಟಿಪ್ಪು ಸುಲ್ತಾನ್ ರಾಜ್ಯವನ್ನು ಉತ್ತಮ ಅಭಿವೃದ್ಧಿಗೆ ಪ್ರಯ್ನಸಿದನು. ಆದರೆ ಬ್ರಿಟಿಷರೊಂದಿಗಿನ ನಿರಂತರ ಯುದ್ಧಗಳಿಂದಾಗಿ ಯುದ್ಧಪೀಡಿತ ಪ್ರದೇಶದ ರೈತರು ತಮ್ಮ ಕೃಷಿಭೂಮಿಯನ್ನು ತೊರೆದು ಹೋದರು.[೨] ಈ ಸಮಯದಲ್ಲಿ ಹಳ್ಳಿಗಳು, ಅಣೆಕಟ್ಟುಗಳು, ಕೆರೆಗಳು ನಾಶವಾದವು. ಈ ಯುದ್ಧವು ಕೃಷಿಕ್ಷೇತ್ರವನ್ನು ಹಲವಾರು ವರ್ಷಗಳ ಕಾಲ ತೊಂದರೆಗೀಡು ಮಾಡಿದವು.[೩] ೧೮೩೦ರ ವೇಳೆಯಲ್ಲಿ ಮೈಸೂರು ರಾಜ್ಯದ ಕೆಲವು ಪ್ರದೇಶಗಳಲ್ಲಿ ರೈತರ ಬಂಡಾಯ ರೂಪದಲ್ಲಿ ವ್ಯಕ್ತವಾಯಿತು. ಈ ಸಮಯದಲ್ಲಿ ಬೆಳೆ ಇಳುವರಿ ಕಡಿಮೆಯಾಗಿದ್ದು, ಮಾರುಕಟ್ಟೆಯಲ್ಲಿ ಕೃಷಿ ಬೆಲೆ ಕುಸಿತ ಜೊತೆಗೆ ಸರ್ಕಾರದ ಕಂದಾಯ ವಸೂಲಾತಿಗಾಗಿ ನಿರಂತರ ಒತ್ತಡ ಇವುಗಳಿಂದಾಗಿ ನಗರ ವಿಭಾಗದಲ್ಲಿ ಮೊಟ್ಟ ಮೊದಲು ಶಸ್ತ್ರಾಸ್ತ್ರ ದಂಗೆ ಪ್ರಾರಂಭವಾಗಿ ಡಿಸೆಂಬರ್ ೧೮೩೦ಯ ವೇಳೆಗೆ ಮೈಸೂರು ರಾಜ್ಯದ ಇತರೆ ಭಾಗಗಳಿಗೆ ಹರಡಿತು[೪]. ರೈತರ ಈ ಹೊರಾಟ ಮೈಸೂರಿನ ಒಡೆಯರು ತಮ್ಮ ಅಧಿಕಾರವನ್ನೇ ಕಳೆದು ಕೊಳ್ಳವಂತೆ ಮಾಡಿತು.

ಭಾರತದಲ್ಲಿ ವಸಹತು ಆಳ್ವಕೆ ಕಾಲಿಟ್ಟನಂತರ ಭಾರತ ಒಳಗೊಂಡಂತೆ ಕರ್ನಾಟಕ ವಸಹತುಶಾಹಿಗಳ ಪ್ರಭಾವಕ್ಕೆ ಕೃಷಿ ಕ್ಷೇತ್ರ ಒಳಪಟ್ಟಿತು. ಸಾಂಪ್ರದಾಯಿಕ ಕೃಷಿಯನ್ನು (ಆಹಾರ ಧಾನ್ಯಗಳು) ಪರಿವರ್ತಿಸಿ ವಾಣಿಜ್ಯ ಬೆಳೆಗಳ ಉತ್ಪಾದನೆಯನ್ನು ಪ್ರೇರೆಪಿಸಿತು. ರಬ್ಬರ್, ಹತ್ತಿ, ಹೊಗೆಸೊಪ್ಪು, ಮೆಣಸು, ರೇಷ್ಮೆ, ಸಕ್ಕರೆ, ಟೀ, ಕಾಫಿ, ಸಿಂಕೋನ, ಕೋಕೋ ಮುಂತಾದ ಬೆಳೆಗಳನ್ನು ವಾಣಿಜ್ಯ ಕೃಷಿ ಒಳಗೊಂಡಿತ್ತು.[೫] ಮೈಸೂರು ಪ್ರಾಂತ್ಯದಲ್ಲಿ ಬ್ರಿಟಿಷರ ನೇರ ಆಳ್ವಿಕೆಯಲ್ಲಿ ೧೮೩೧–೧೮೮೧ರ ಅವಧಿಯಲ್ಲಿ ಕೃಷಿ ವಾಣಿಜ್ಯಕ್ಕೆ ಹೆಚ್ಚು ಒತ್ತು ನೀಡಲಾಯಿತು.[೬] ಇದಕ್ಕೆ ಮುಖ್ಯ ಕಾರಣ ಅವು ನಗದು ಬೆಳೆಗಳಾಗಿದ್ದು, ಇವುಗಳನ್ನು ಕೈಗಾರಿಕೆಯ ಕಚ್ಚಾವಸ್ತುಗಳು ಮತ್ತು ಬಾಹ್ಯ ಮಾರುಕಟ್ಟೆಗಳಿಂದ ಬಂದ ಬೇಡಿಕೆಯ ಸಲುವಾಗಿ ಉತ್ಪಾದಿಸಲಾಯಿತು. ಸ್ಥಳೀಯ ಬಳಕೆಗಿಂತ ಮಾರುಕಟ್ಟೆಗಾಗಿ ಉತ್ಪಾದಿಸುವುದು ಅನಿವಾರ್ಯವಾಯಿತು. ಇದಕ್ಕೆ ದೊಡ್ಡ ಪ್ರಮಾಣದ ಹಣ ಅಗತ್ಯವನ್ನು ಸೃಸ್ಟಿಸಿತು. ಇದು ಕೃಷಿಯಲ್ಲಿ ಹೆಚ್ಚು ಹೆಚ್ಚು ಬಂಡವಾಳವನ್ನು ಆಕರ್ಷಿಸಿತು.[೭] ಕೃಷಿ ಆದಾಯ ಹೆಚ್ಚಿಸಲು ವಾಣಿಜ್ಯ ಬೆಳೆಗಳ ಉತ್ಪಾದನೆಗೆ ಕಮೀಷನ್ನರ ಕಾಲದಲ್ಲಿ ಹೆಚ್ಚಿನ ಪ್ರೋತ್ಸಹ ನೀಡಿದರು. ವಾಣಿಜ್ಯ ಬೆಳೆ ಬೆಳೆಯುವಂತೆ ರೈತರನ್ನು ಪ್ರೇರೇಪಿಸಲಾಯಿತು, ವಾಣಿಜ್ಯ ಬೆಳೆ ಬೆಳೆಯುವ ಸಲುವಾಗಿ ಕ್ಷೇತ್ರವನ್ನು ವಿಸ್ತರಿಸುವ ಪ್ರಯತ್ನ ಮಾಡಲಾಯಿತು, ಸಾಲಸೌಲಭ್ಯ, ಕೃಷಿ ಬ್ಯಾಂಕ್ ಸ್ಥಾಪನೆ, ನೀರಾವರಿ ಸೌಕರ್ಯ, ಮಾರುಕಟ್ಟೆ ವ್ಯವಸ್ಥೆ, ಸಾರಿಗೆ ಸಂಪರ್ಕದ ಅಭಿವೃದ್ಧಿ, (ರೈಲ್ವೆ, ರಸ್ತೆ) ನಗರಗಳ ಬೆಳೆವಣಿಗೆ,[೮] ಉತ್ತಮ ಉದ್ಯೋಗವನ್ನು ಅರಸಿ ನಗರಗಳ ಕಡೆಗೆ ಕಾರ್ಮಿಕರ ವಲಸೆ, ಹೆಚ್ಚಿನ ಸಂಬಳ, ಹಣದ ಬಳಕೆ, ಮುಂತಾದ ಬದಲಾವಣೆಗಳು ಕೃಷಿಯನ್ನಾಧರಿಸಿ ಇತರೆ ಕ್ಷೇತ್ರಗಳಲ್ಲಿ ಕಾಣಿಸಿಕೊಂಡವು. ಜೀವನಾಧಾರ ಬೇಸಾಯದಿಂದ ಬಂಡವಾಳ ಆಧಾರಿತ ವಾಣಿಜ್ಯ ಬೆಳೆಯುವ ಬದಲಾವಣೆ ಕೃಷಿಕ್ಷೇತ್ರದಲ್ಲಿ ಕಂಡುಬಂದಿತು. ಇದರಿಂದ ರಾಜ್ಯದಲ್ಲಿ ಆಹಾರ ಧಾನ್ಯಗಳ ಕೊರತೆ ಕಂಡುಬಂದಿತು. ಆಹಾರ ಧಾನ್ಯ ಬೆಳೆಯುವ ಭೂಮಿಯ ಪ್ರಮಾಣವೂ ಗಣನೀಯವಾಗಿ ಕಡಿಮೆಯಾಯಿತು. ವಾಣಿಜ್ಯ ಬೆಳೆ ಬೆಳೆಯಲು ಹೆಚ್ಚಿನ ಬಂಡವಾಳ ಅಗತ್ಯವಿದ್ದುದರಿಂದ ಸಾಲದ ರೂಪದಲ್ಲಿ ಪಡೆದ ಬಂಡವಾಳ ರೈತರನ್ನು ಸಾಲಗಾರರನ್ನಾಗಿ ಮಾಡಿದ್ದಲ್ಲದೆ ಸಾಲ ಮತ್ತು ಸಾಲದ ಮೇಲಿನ ಬಡ್ಡಿ ಕಟ್ಟಲು ಸಾಧ್ಯವಾಗದ ಸಣ್ಣ ಮತ್ತು ಮಧ್ಯವ ವರ್ಗದ ರೈತರು ತಮ್ಮ ಜಮೀನನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿದರೆ, ಇನ್ನೊಂದು ಕಡೆ ಸರ್ಕಾರ ನಿರಂತರವಾಗಿ ಕಂದಾಯ ಹೆಚ್ಚಿಸುತ್ತಿದ್ದರಿಂದ ಕಂದಾಯ ತೆರಲಾಗದ ಎಷ್ಟೋ ರೈತರು ಹಳ್ಳಿಯನ್ನು ತೊರೆಯುವ ಸಂದರ್ಭವನ್ನು ಸೃಷ್ಟಿಸಿತು. ರೈತವರ್ಗದಲ್ಲಿ ನಿರಂತರ ಶೋಷಣೆಯಿಂದ ಅವರಲ್ಲಿ ವ್ಯವಸ್ಥೆ ವಿರುದ್ಧ ಒಂದು ರೀತಿಯ ಅಸಮಾಧಾನ ಹೆಚ್ಚುತ್ತಾ ಹೊಯಿತು.

ಕೃಷಿಯಲ್ಲಿ ಬಂಡವಾಳಶಾಹಿ ಬೆಳವಣಿಗೆಯ ಪ್ರವೃತ್ತಿ ಮುಂದೆ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಬಂಡವಾಳಶಾಹಿ ಆಥವಾ ಶ್ರೀಮಂತ ಹಾಗೂ ಗ್ರಾಮೀಣ ಶ್ರಮೀಕ ಅಥವಾ ಕಾರ್ಮಿಕ ಎಂಬ ವಿರುದ್ಧ ವರ್ಗಗಳನ್ನು ಸ್ಥಾಪಿಸಿತು. ಈ ರೀತಿಯ ಬೆಳೆವಣಿಗೆಯಿಂದ ಕೃಷಿಯ ಮೇಲೆ ಎರಡು ರೀತಿಯ ವ್ಯತಿರಿಕ್ತ ಪರಿಣಾಮಗಳನ್ನುಂಟುಮಾಡಿತು. ಒಂದು ಧನಾತ್ಮಕ ಪರಿಣಾಮಗಳು ಮತ್ತೊಂದು ಋಣಾತ್ಮಕ ಪರಿಣಾಮಗಳಾಗಿ ವಿಶ್ಲೇಷಿಸಬಹುದು.

ಹೆಜಮನಿ ಅಥವಾ ಯಜಮಾನಿಕೆ ಎನ್ನುವ ಪರಿಭಾಷೆ ಆರಂಭದಲ್ಲಿ ಕಾರ್ಲ್‌ಮಾರ್ಕ್ಸ ಬಳಸಿದ್ದನು.[೯] ಆರ್ಥಿಕವಾಗಿ ಸದೃಢವಾಗಿರುವ ಒಂದು ವರ್ಗ ಬಲಹೀನವಾಗಿರುವ ಇನ್ನೊಂದು ವರ್ಗನ್ನು ತನ್ನ ಶಕ್ತಿ ಸಾಮರ್ಥ್ಯದ ಮೂಲಕ ದಮನ ಮಾಡುವ ಮತ್ತು ಆ ಮೂಲಕ ತನ್ನ ಅಧಿಕಾರನ್ನು ಸ್ಥಾಪಿಸುವ ಕ್ರಿಯೆಯನ್ನು 'ಹೆಜಮನಿ' ಎಂದು ಅರ್ಥೈಸಲಾಗಿದೆ.[೧೦] ಕೆಳ ವರ್ಗಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಶೋಷಣೆಗೆ ಗುರಿಪಡಿಸುತ್ತಿದ್ದು ಅದರ ವಿರುದ್ಧದ ಹೋರಾಟ ಹೇಗೆ ರೂಪಗೊಂಡಿತು ಎಂಬುದನ್ನು ರೈತದಂಗೆಗಳ ಮೂಲಕ ತಿಳಿಯಬಹುದು. ಮೈಸೂರು ರಾಜ್ಯದ

ಪರಿಸ್ಥಿತಿಯಲ್ಲಿ ಕಂಡುಬಂದ ರೈತದಂಗೆಗಳು ಶ್ರೀಮಂತ ವರ್ಗಗಳಾದ ಹಳ್ಳಿಯ ಜಮೀನ್ದಾರರು, ಪಟೇಲರು, ಶ್ಯಾನುಬೋಗರು ಮುಂತಾದ ಆಡಳಿತಾಧಿಕಾರಿಗಳ ದುರಾಡಳಿತ, ನಿರಂತರವಾಗಿ ಹೆಚ್ಚುತ್ತಿದ್ದ ಕಂದಾಯ ಹೊರೆ ತಳಲಾರದೆ ಆಡಳಿತದ ವಿರುದ್ದ ಸಂಘರ್ಷ ಸ್ಥಿತಿ ನಿರ್ಮಾಣವಾಗಿದ್ದರಿಂದ ಕಂದಾಯ ಬಾಕಿ ಹೆಚ್ಚತೊಡಗಿತು. ಸರ್ಕಾರ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡಿತು. ಜೊತೆಗೆ ರೈತ ಸುಸ್ತಿದಾರನಾಗಲು ಇನ್ನೊಂದು ಕಾರಣ ಕಂದಾಯ ನೀಡುವಲ್ಲಿ ಅವನ ಅಸಮರ್ಥತೆ.[೧೧] ಬಿಂಬಿತವಾಗಿದೆ.

ವಸಹತುಷಾಹಿ ಮತ್ತು ಬಂಡವಾಳಶಾಹಿ ಶಕ್ತಿಗಳು ಬೆಸೆದ ಹೊಸ ವ್ಯವಸ್ಥೆಯಿಂದಾಗಿ ರೈತವರ್ಗ ವಿಚಲಿತವಾದವು. ಹಳ್ಳಿವ್ಯವಸ್ಥೆಗೆ ಒಗ್ಗಿ ಹೋಗಿದ್ದ ರೈತರು ಈ ಹೊಸ ವ್ಯವಸ್ಥೆಯಿಂದಾಗಿ ಸಣ್ಣ ಮತ್ತು ಕೃಷಿ ಕಾರ್ಮಿಕರು ನಾನಾ ಸಮಸ್ಯೆಗೆ ಸಿಲುಕುವಂತಾಯಿತು. ಹೀಗೆ ವಸಹತುಷಾಹಿ ನೇರ ಮತ್ತು ಪರೋಕ್ಷ ಆಡಳಿತದಲ್ಲಿ ಕೃಷಿ ಹಾಗೂ ಕೃಷಿ ನಿರತ ರೈತವರ್ಗ ಅನೇಕ ಏಳುಬೀಳುಗಳನ್ನು ೧೭೯೯ರಿಂದ ೧೯೪೭ರ ಕಾಲಘಟ್ಟದಲ್ಲಿ ಕಾಣುವಂತಾಯಿತು.

ಅಡಿಟಿಪ್ಪಣಿಗಳು

೧. ಧರ್ಮಕುಮಾರ್, ಕೇಂಬ್ರಿಡ್ಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ ೨, ಪುಟ ಸಂ. ೩೬೪.
೨. ದಿ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ರೊಮೇಶ್ ದತ್ (ಪುಟ ೧೩೮).
೩. ಫ್ರಾನ್ಸಿಸ್ ಬುಕನನ್, ದಿ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರ, ಅಂಡ್ ಮಲಬಾರ್.
೪. ಬರ್ಟನ್ ಸ್ಟೈನ್, ಸೌತ್ ಏಷಿಯಾ ರೀಸರ್ಚ್, ಸಂ. ೫, ನಂ. ೧, ಮೇ ೧೯೮೫.
೫. ಕೆ.ಎಂ. ಲೋಕೇಶ್, ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು. (ಪುಟ ೭೦).
೬ ಎಸ್. ಚಂದ್ರಶೇಖರ್, ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು. (ಪುಟ ೧೭೯).
೭. ಡಾ. ತಿಮ್ಮನಹಳ್ಳಿ ವೇಣುಗೋಪಾಲ್, ರೈತರು ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳುವಳಿ ೧೮೮೧-೧೯೪೭.
೮. ಎಸ್. ಚಂದ್ರಶೇಖರ್, ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲುವು ನೆಲೆಗಳು. (ಪುಟ ೧೨೯).
೯. ಮುಜಾಫರ್ ಅಸಾದಿ, ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು.
೧೦. ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ಸಂ. ೧ ಹಂಪಿ.
೧೧. ಡಾ. ತಿಮ್ಮನಹಳ್ಳಿ ವೇಣುಗೋಪಾಲ್, ರೈತರು ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳುವಳಿ, ೧೮೮೧-೧೯೪೭.

ಆಕರ ಗ್ರಂಥಗಳು

೧. ಶ್ಯಾಮರಾವ್, ಮೊಡರ್ನ ಮೈಸೂರು, ಸಂಪುಟ ೧, ಹಿಗ್ಗಿನ್ ಬಾಥಮ್, ಬೆಂಗಳೂರು.
೨. ರೈಸ್ ಬಿ.ಎಲ್. ಮೈಸೂರು ಗೆಜೆಟಿಯರ್, ಸಂಪುಟ ೧, ೧೮೯೮.
೩. ಹಯವದನರಾವ್ ಸಿ, ಮೈಸೂರು ಗೆಜೆಟಿಯರ್, ಸಂಪುಟ ೩, ೧೯೨೯.
೪. ಧರ್ಮಕುಮಾರ್, ಕೇಂಬ್ರಿಡ್ಜ್ ಎಕನಾಮಿಕ್ ಹಿಸ್ಟರಿ ಆಫ ಇಂಡಿಯಾ, (೧೭೫೭-೧೯೭೦), ಒರಿಯಂಟ್ ಲಾಂಗ್ಮನ್ ಸಂಪುಟ ೨, ಪುಟ ಸಂ. ೩೬೪. (ದೆಹಲಿ ೧೯೪೮).
೫. ದಿ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ರೊಮೇಶ್ ದತ್. (ಪುಟ ೧೩೮).
೬ ಫ್ರಾನ್ಸಿಸ್ ಬುಕನನ್, ದಿ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರ, ಅಂಡ್ ಮಲಬಾರ್. ಸಂಪುಟ ೧, ೨, ೩, ಏಷಿಯನ್ ಎಜುಕೇಷನ್ ಸರ್ವಿಸ್, (ನ್ಯೂ ಡೆಲ್ಲಿ ೧೯೮೮).
೭. ಬರ್ಟನ್ ಸ್ಟೈನ್, ಸೌತ್ ಏಷಿಯಾ ರೀಸರ್ಚ್, ಸೇಜ್ ಪಬ್ಲಿಕೇಷನ್, ಸಂ. ೫, ನಂ. ೧, ಮೇ ೧೯೮೫.
೮ . ಕೆ.ಎರ್. ಲೋಕೇಶ್, ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲುವು ನೆಲೆಗಳು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
೯. ಎಸ್. ಚಂದ್ರಶೇಖರ್, ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
೧೦. ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ಸಂ. ೧ ಹಂಪಿ.
೧೧. ಮುಜಾಫರ್ ಅಸಾದಿ, ಕರ್ನಾಟಕದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲುವು ನೆಲೆಗಳು. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
೧೨. ಡಾ. ತಿಮ್ಮನಹಳ್ಳಿ ವೇಣುಗೋಪಾಲ್, ರೈತರು ಮೈಸೂರು ಅಧಿಕಾರಶಾಹಿ ಮತ್ತು ರಾಷ್ಟ್ರೀಯ ಚಳುವಳಿ ೧೮೮೧-೧೯೪೭. ಧಾತ್ರಿ ಪುಸ್ತಕ, (ಬೆಂಗಳೂರು, ೨೦೧೦).
೧೩. ಸೂರ್ಯನಾಥ್ ಕಾಮತ್, ಕರ್ನಾಟಕ ಗೆಜೆಟಿಯರ್ ಸಂಪುಟ ೨.

೧೦೧

ಪ್ರಾಚೀನ ಕರ್ನಾಟಕದ ಚರಿತ್ರೆಯಲ್ಲಿ ಅಲಕ್ಷಿತ ಸಮುದಾಯಗಳು: ಒಂದು ಸಮೀಕ್ಷೆ

ವಿರೂಪಾಕ್ಷಿ ಪೂಜಾರಹಳ್ಳಿ*

ಜನಸಮುದಾಯಗಳ ಜೀವನಕ್ರಮ, ಸಾಧನೆ, ವೈಶಿಷ್ಟ್ಯಗಳನ್ನು ಅಧ್ಯಯನ ಮಾಡುವುದೇ ಜನಾಂಗೀಯ ಇತಿಹಾಸವಾಗಿದೆ. ಇದರ ಅಂಗವಾಗಿ ಅಲಕ್ಷಿತ ಸಮುದಾಯಗಳನ್ನು ಸಂಶೋಧನೆ ಮಾಡುವ ಅಗತ್ಯವಿದೆ. ಹೀಗಾಗಿ ಕರ್ನಾಟಕ ಚರಿತ್ರೆಯನ್ನು ಅಲಕ್ಷಿತ ಸಮುದಾಯಗಳ ಮೂಲಕ ಸಮುದಾಯಗಳ ಮೂಲಕ ಪ್ರಾಚೀನ ಕರ್ನಾಟಕದ ಚರಿತ್ರೆಯನ್ನು ಪುನಾರಚನೆ ಮಾಡುವ ಅಗತ್ಯವಿದೆ. ಕ್ರಿ.ಶ. ೪ ರಿಂದ ೧೪ನೇ ಶತಮಾನದವರೆಗೆ ಕೆಲವು ಸಮುದಾಯಗಳು ಚರಿತ್ರೆಯಲ್ಲಿ ವಿಶೇಷ ಸ್ಥಾನಮಾನವನ್ನು ಪಡೆದಿವೆ. ಅಂದಿಗೆ ವೃತ್ತಿ ಮತ್ತು ಸಾಮಾಜಿಕ ಸ್ಥಾನಮಾನಕ್ಕೆ ಬೇಡಿಕೆ ಇತ್ತು. ಕುಲಕಸುಬು ಮಾಡುವವನು ಆಯಗಾರನಾಗಿ ಆರ್ಥಿಕ ಪ್ರಗತಿಯೊಂದಿಗೆ ಮುನ್ನೆಡದರೆ, ವ್ಯಾಣಿಜ್ಯ, ಕುಶಲಕರ್ಮಿಗಳು ಮತ್ತೊಂದು ಬಗೆಯಲ್ಲಿ ಪ್ರಗತಿಕಂಡರು. ಹೀಗೆ ಆರ್ಥಿಕ ಸದೃಢರಾದಂತೆ ಸಾಮಾಜಿಕ ಸ್ಥಾನಮಾನಗಳು ಬೆಳೆದುಬಂದವು ಪ್ರಭುತ್ವಕ್ಕೆ ಸವಾಲು ಒಡ್ಡುವಂತೆ ಕೆಲವು ಸಮುದಾಯಗಳ ಮುಖಂಡರು ಸಂಘರ್ಷ, ಹೋರಾಟ ಮಾಡಿರುವುದು ಸ್ಮರಣೀಯ.

ತಳವಾರ, ಓಲೆಕಾರ, ಬಡಗಿ, ಶಿಲ್ಪಿ, ಗೌಡ, ಪಟೇಲ, ಶಾನುಭೋಗ ಮೊದಲಾದ ಸಣ್ಣ-ಪುಟ್ಟ ವೃತ್ತಿ ಕಸುಬುಗಳು ನಾಡಿನ ಚರಿತ್ರೆ ಮೂಲಕ ಬೇರೆ ಬಗೆಯಲ್ಲಿ ಬೆಳೆದುಬಂದಿವೆ. ಶ್ರೇಣಿಗಳ ಮೂಲಕ ಇವರು ನಗರ, ಪಟ್ಟಣಗಳಲ್ಲಿ ಹೋಗಿ ನೆಲಸಿದರು. ವಾಣಿಜ್ಯ ಮಾರ್ಗಗಳು ಇವರಿಗ ಸಹಕಾರಿಯಾದವು. ಬಾದಾಮಿ ಚಾಲುಕ್ಯರ ಕಾಲದಲ್ಲಿ 'ಐಯ್ಯಾವೊಳೆ ಐನೂರ್ವರು' ಎಂಬುವುದು ವ್ಯಾಪಾರದ ಮಹಾಸಂಘಟನೆ ಆಗಿತ್ತು. ಈ ಕಾಲದ ಜನರು ಬೇಟೆ, ಪಶುಪಾಲನೆ, ಕೃಷಿ ಮೂಲಕ ಆರ್ಥಿಕ ಪ್ರಗತಿಯನ್ನು ಸಾಧಿಸಿದರು.

ರಾಜಪ್ರಭುತ್ವದಲ್ಲಿ ವಿಶೇಷವಾಗಿ ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರಿಂದ ಪಾಳೆಯಗಾರರ ಅವಧಿಯವರೆಗೆ ಅಂದರೆ ಕ್ರಿ.ಶ.೪ ರಿಂದ ೧೬-೧೭ ನೇ ಶತಮಾನದವರೆಗೆ ನಮ್ಮ ಸುತ್ತಮುತ್ತಲಿನ ಸಮುದಾಯಗಳ ಚರಿತ್ರೆ ಮತ್ತು ಸಂಸ್ಕೃತಿಯನ್ನು ದೇಶಿ ವಿದ್ವಾಂಸರಲ್ಲದೆ, ವಿದೇಶಿಯರಿಂದಲೂ ರಚನೆ ಆಗಿದ್ದು ಸ್ಪಷ್ಟ.

ಇಂದು ಅಲಕ್ಷಿತ ಸಮುದಾಯಗಳನ್ನು ಅಧ್ಯಯನ ಮಾಡುವ ಅಗತ್ಯ ಏಕೆ ಎಂಬ ಕಾಡುವುದು ಸಹಜ. ಅಲಕ್ಷಿತ ಎಂಬುದನ್ನು ಹೀಗೆ ಅರ್ಥೈಸಬಹುದಾಗಿದೆ. ಇಟಲಿಯ ಅಂಟೋನಿಯ ಗ್ರಾಂಪ್ರಿ 'ಸಬಾಲ್ಟರ್ನ್' ಎಂಬ ಆಂಗ್ಲ ಪದವನ್ನು ಬಳಸುತ್ತಾನೆ. ಇದು ಸೈನ್ಯದಲ್ಲಿರುವ ಕೆಳಹಂತದ ಅಧಿಕಾರಿಗಳನ್ನು ಸೂಚಿಸುತ್ತದೆ; ಚರಿತ್ರೆಯ ಕೆಳಹಂತದಲ್ಲಿ ಪಾತ್ರಧಾರಿಗಳಾದಂಥ ಜನರನ್ನು ಕುರಿತು ಅಲಕ್ಷಿತ ಚರಿತ್ರೆ ನಮಗೆ ತಿಳಿಸುತ್ತದೆ. ಅಲಕ್ಷಿತರ ಚರಿತ್ರೆ ರಚನೆ ಸಮಾಜಶಾಸ್ತ್ರ ಮತ್ತು ಚರಿತ್ರೆಯಿಂದ ಕೂಡಿದ್ದರೂ, ಸಾಮಾಜಿಕ ಚಳವಳಿಗಳು ಇದರ ಕೇಂದ್ರ ವಸ್ತು ವಿಷಯಗಳಾಗಿವೆ. ಚರಿತ್ರೆಯಲ್ಲಿ ಮಾರ್ಕ್ಸ್‌ವಾದಕ್ಕೂ ಸಬಾಲ್ಟರ್ನ್ ಚರಿತ್ರೆಗೂ ದ್ವಂದ್ವಗಳಿವೆ. ಊಳಿಗಮಾನ್ಯತೆ, ವಸಾಹತುಶಾಹಿ ಹಾಗೂ ಬಂಡವಾಳಶಾಹಿಗಳ ಬಗ್ಗೆ ಮಾರ್ಕ್ಸ್‌ವಾದಿಗಳು ವ್ಯಾಖ್ಯಾನ ಮಾಡಿದ್ದು, ಇದೇ ಮಾದರಿ ಅಲಕ್ಷಿತ ಚರಿತ್ರೆಕಾರರು ಅನುಸರಿಸುತ್ತಾರೆ. ಮಾರ್ಕ್ಸ್‌ವಾದಿಗಳು ಸಾಮಾಜಿಕ ಪರಿವರ್ತನೆಯ ಅಥವಾ ಬದಲಾವಣೆ ಎಂಬುದು ಒಂದು ವ್ಯವಸ್ಥೆಯಿಂದ ಮತ್ತೊಂದು ವ್ಯವಸ್ಥೆಗೆ ನಾಂದಿಯಾಗುತ್ತದೆ ಎನ್ನುತ್ತಾರೆ. ಹೊಸ ವರ್ಗವೊಂದರ ಉದಯದಿಂದ ರಾಜಕೀಯ ಮೇಲ್ವರ್ಗ ಅಥವಾ ರಾಷ್ಟ್ರೀಯ ಮಧ್ಯಮ ವರ್ಗಗಳು ಹುಟ್ಟಿಕೊಳ್ಳುತ್ತವೆ ಎಂಬ ಅಭಿಪ್ರಾಯವಾಗಿದೆ. ಅಲಕ್ಷಿತ ಚರಿತ್ರೆಕಾರರು ಚಾರಿತ್ರಿಕ ಘಟನೆಗಳನ್ನು ವಸಾಹತುಶಾಹಿ, ರಾಷ್ಟ್ರೀಯ ಚಳವಳಿ ಹಾಗೂ ಬೂರ್ಜ್ವಾ ರಾಷ್ಟ್ರೀಯವಾದಿಗಳು ಎಂದು ಮೇಲ್ವರ್ಗದವರ ಏಳಿಗೆಯ ಆಧಾರದೊಂದಿಗೆ ಚರ್ಚಿಸುತ್ತಾರೆ. ಅಂಚಿಗೆ ತಳ್ಳಲ್ಪಟ್ಟವರು, ಮುಖ್ಯವಾಹಿನಿಯಿಂದ ದೂರ ಉಳಿದವರು, ಆದಿವಾಸಿ, ಬುಡಕಟ್ಟು, ದಲಿತರು, ವಹಿಳೆಯರು ಅಲಕ್ಷೆಗೊಳಗಾದವರ ಪಟ್ಟಿಗೆ ಇಂಥ ಅನೇಕ ಅಲಕ್ಷಿತ ಸಮುದಾಯಗಳನ್ನು ಸೇರಿಸಬಹುದಾಗಿದೆ.

* ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.

ಅಲಕ್ಷಿತ ಸಮುದಾಯಗಳು : ಚಾರಿತ್ರಿಕ ಅವಲೋಕನ

ಚರಿತ್ರೆ ನೆಲೆಯಲ್ಲಿ ಮತ್ತು ಸಮುದಾಯ ಎಂಬ ಎರಡು ಬೇರೆ ಬೇರೆ ಪದಗಳನ್ನು ಅರ್ಥೈಸಿಕೊಳ್ಳುವ ಅಗತ್ಯವಿದೆ. ಅಲಕ್ಷಿತ ಎಂದರೆ ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವದಲ್ಲಿ ಮೇಲ್ವರ್ಗಗಳಿಂದ ತುಳತಕ್ಕೊಳಗಾದ, ಶೋಷಿತರನ್ನು, ಅಧಿಕಾರ ರಹಿತ, ಕೂಲಿ-ಕಾರ್ಮಿಕರು, ಬೇಟೆ-ಪಶುಪಾಲನೆಯನ್ನು ಮೈಗೂಡಿಸಿಕೊಂಡು ಏನೆಲ್ಲಾ ಕೊಡುಗೆ ನೀಡಿದರೂ ಎಲ್ಲ ಕೇತ್ರಗಳಲ್ಲಿ ಗಣನೆಗೆ ಬಾರದೇ ತಿರಸ್ಕೃತರಾದವರು ಅಥವಾ ಅಲಕ್ಷ್ಯಕ್ಕೊಳಗಾದವರನ್ನು ಸಬಾಲ್ಟರ್ನ್ ಸಿದ್ಧಾಂತದ ಹಿನ್ನೆಲೆಯಲ್ಲಿ ಗುರುತಿಸಬಹುದು. (ಹೆಚ್ಚಿನ ವಿವರಕ್ಕೆ ನೋಡಿ: ಸಬಾಲ್ಟರ್ನ್ ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಮರ್ಶೆ, ವಿಜಯ್ ಪೂಣಚ್ಚ ತಂಬಂಡ, ವಿರೂಪಾಕ್ಷಿ ಪೂಜಾರಹಳ್ಳಿ (ಸಂ), ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ ಪು. ೨೧೫ ರಿಂದ ೨೯೭).

ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ನೆಲೆಸಿದ್ದು, ಭಾಷೆ, ಸಂಸ್ಕೃತಿ, ನಾಗರೀಕತೆಯಿಂದ ಜೀವಿಸುವ ಜನರನ್ನು ಒಟ್ಟಾರೆಯಾಗಿ ಸಮುದಾಯ ಎನ್ನುತ್ತಾರೆ. ಈ ಬಗ್ಗೆ ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಪ್ರತ್ಯೇಕ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಇಲ್ಲಿ ಚಾರಿತ್ರಿಕವಾಗಿ ಸಮುದಾಯಗಳನ್ನು ಸೂಕ್ಷ್ಮವಾಗಿ ಪರಿಚಯಿಸಲಾಗುವುದು.

ಆದಿಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗಗಳಲ್ಲಿ ಬೇಟೆಗಾರರು ಪಶುಪಾಲಕರು ನೆಲೆಸಿದ ತಾಣಗಳನ್ನು ಗುರುತಿಸಲಾಗಿದೆ. ಹಾಗೆಯೇ ಮೌರ್ಯ, ಶಾತವಾಹನ, ಕದಂಬ, ಗಂಗ, ಬಾದಾಮಿ ಚಾಲುಕ್ಯರ ಅವಧಿಯಲ್ಲಿನ ಅಲಕ್ಷಿತ ಸಮುದಾಯಗಳನ್ನು ಬೆಳಕಿಗೆ ತರುವುದು ಇಂದಿನ ಅಗತ್ಯವಾಗಿದೆ. ಆದರೆ ಆಧಾರಗಳ ಕೊರತೆಯಿಂದ ಪ್ರಾಚೀನ ಕಾಲದ ಸಮುದಾಯಗಳನ್ನು ಕರಾರುವಕ್ಕಾಗಿ ವಿಶ್ಲೇಷಿಸುವುದು ಕಷ್ಟ ಸಾಧ್ಯ. ಈ ಅವಧಿಯಲ್ಲಿ ಜಾತಿ ಸಮುದಾಯಗಳ ನಿರ್ದಿಷ್ಟ ಸ್ವರೂಪ ಮತ್ತು ಸ್ಥಾನ ಪಡೆದಿರಲಿಲ್ಲ.

ಕ್ರಿ.ಶ. ೭ನೇ ಶತಮಾನದಿಂದ ೧೫ನೇ ಶತಮಾನದವರೆಗೆ ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರು, ಕಳಚೂರ್ಯರು, ಹೊಯ್ಸಳರು, ದೇವಗಿರಿ ಯಾದವರು, ವಾರಂಗಲ್ಲಿನ ಕಾಕತೀಯರು, ಕುಮ್ಮಟದುರ್ಗದ ನಾಯಕರು ಮತ್ತು ವಿಜಯನಗರ ಸಾಮ್ರಾಜ್ಯವನ್ನು ಗುರುತಿಸಬಹುದು. ಈ ಕಾಲಾವಧಿಯಲ್ಲಿನ ಜನಜೀವನವನ್ನು ವಿಶ್ಲೇಷಿಸುವಾಗ ಉತ್ತರ ಭಾರತದ ಆರ್ಯರು ದಕ್ಷಿಣ ಭಾರತದ ದ್ರಾವಿಡರು ಎಂಬ ಎರಡು ವರ್ಗಗಳನ್ನು ಕಾಣುತ್ತೇವೆ. ಇಲ್ಲಿ ಆರ್ಯ ಮತ್ತು ಅನಾರ್ಯರ ನಡುವಿನ ಜಾತಿ/ವರ್ಗ/ವರ್ಣ ವ್ಯತ್ಯಾಸಗಳನ್ನು ತಿಳಿಸುವಾಗ ನಾವು ಸ್ಪಷ್ಟವಾಗಿ ತೀರ್ಮಾನಿಸುವುದು ಶೋಷಣೆಗೊಳಗಾದ ದ್ರಾವಿಡರನ್ನು. ಶೂದ್ರರು ಆದಿಯಿಂದಲೂ ಶೋಷಣೆಗೊಳಗಾದವರು. ಹಾಗಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ತಮ್ಮ ಘನತೆ-ಗೌರವಕ್ಕಾಗಿ ಮಾತ್ರ ಚಾಲ್ತಿಯಲ್ಲಿದ್ದರು. ಶೋಷಿತರೊಂದಿಗೆ ಅವರ ಸಂಬಂಧ ಗೌಣ. ಪ್ರಾಚೀನ ಕಾಲದಲ್ಲಿ ನಡೆದಂಥ ವರ್ಣಸಂಕರಗಳು ಅನುಲೋಮ, ಪ್ರತಿಲೋಮ ವಿವಾಹಗಳು, ಸಂಕೀರ್ಣ ಜಾತಿಗಳ ಉಗಮ ಇವುಗಳನ್ನೆಲ್ಲ ಗಮನಿಸಿದರೆ ನಿಜಕ್ಕೂ ಸೋಜಿಗವಾಗುತ್ತದೆ. ಇಷ್ಟೊಂದು ಸಹಸ್ರಾರು ಬುಡಕಟ್ಟು ಜನರನ್ನು ಶೋಷಿತರನ್ನು, ಆಳುವ ವರ್ಗವನ್ನು ಹೊಂದಿರುವುದು ಅದರ ಅನೂಚಾನವಾಗಿ ಬಂದ ಜಾತಿ ಪರಂಪರೆ ಪ್ರತಿಬಿಂಬವಾಗಿ ಕಂಡುಬರುತ್ತದೆ.

ದಕ್ಷಿಣ ಭಾರತದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಪ್ರಮುಖ ನದಿಗಳ ಇಕ್ಕೆಲಗಳಲ್ಲಿ ಆದಿವಾಸಿಗಳು, ಗಿರಿಜನರು ನೆಲೆಸಿದ್ದ ಕುರುಹುಗಳಿವೆ. ನರ್ಮದಾ, ತಾಪಿ, ಗೋದಾವರಿ, ಭೀಮಾ, ದೋಣಿ, ಮಲಪ್ರಭಾ, ಕೃಷ್ಣಾ, ತುಂಗಭದ್ರಾ, ಕಾವೇರಿ ಮೊದಲಾದವುಗಳನ್ನು ಹೆಸರಿಸಬಹುದು. ಈ ನದಿಗಳ ಇಕ್ಕೆಲಗಳಲ್ಲಿ ಮಾನವನ ನಾಗರೀಕತೆ ಮತ್ತು ಸಂಸ್ಕೃತಿ ಇತ್ತೆಂಬುದಕ್ಕೆ ಮೃತ್ಪಾತ್ರೆಗಳು, ಮಡಕೆ ಚೂರುಗಳು, ಮಾನವನ ಅಸ್ಥಿಪಂಜರ, ರೇಖಾಚಿತ್ರಗಳು, ಶಿಲಾಯುಧಗಳನ್ನು ಸಾಕ್ಷೀಕರಿಸಲಾಗಿದೆ. ಭೀಮಾ, ಕೃಷ್ಣ, ತುಂಗಭದ್ರಾ ನದಿ ಪರಿಸರದ ಜನರು ಜೋರ್ವೆ ಸಂಸ್ಕೃತಿಗೆ ಸೇರಿದವರೆಂದು ಹೇಳಲಾಗಿದೆ.

ಜನರ ಸತತ ವಲಸೆಯಿಂದ ಸಿಂಧೂಕೊಳ್ಳದ ನಾಗರೀಕತೆ (ಸಂಸ್ಕೃತಿ)ಗೂ ಕರ್ನಾಟಕದಲ್ಲಿನ ನಾಗರೀಕತೆಗೂ ಸಂಬಂಧಗಳಿವೆ. ಸಾಮಾಜಿಕವಾಗಿ ಪುರೋಹಿತರು, ವರ್ತಕರು. ಕೃಷಿಕರು, ಕುಂಬಾರ, ಕಮ್ಮಾರಿಕೆ, ಕುಶಲಕರ್ಮಿಗಳು, ಪೂಜಾರಿಗಳಿದ್ದರು. ಇಂಥ ವೃತ್ತಿ ಮತ್ತು ಆಯಗಾರ ಸಂಸ್ಕೃತಿ ಪ್ರಾಚೀನ ಕಾಲದಿಂದಲೂ ಪ್ರಚಲಿತದಲ್ಲಿತ್ತು. ಎಲ್ಲೆಲ್ಲಿ ಇವರು ನೆಲೆಸಿದ್ದರೊ ಆ ಪರಿಸರದಲ್ಲಿ ಬೂದಿ ದಿನ್ನೆಗಳು ಕಂಡುಬಂದಿವೆ. ಪುರಾತತ್ವ ತಜ್ಞರಾದ ಅಲ್ಚಿನ್, ಡಾ.ಕೆ ಪದ್ದಯ್ಯ, ರಾಮಿರೆಡ್ಡಿ, ಮಜುಂದಾರ ಮತ್ತು ರಾಜಗುರು ಅಭಿಪ್ರಾಯಪಡುವಂತೆ, ದನಗಳ ಕೊಟ್ಟಿಗೆಯಲ್ಲಿನ ಸಗಣಿಯನ್ನೇ ಸುಟ್ಟು ಸಗಣಿ ಬೂದಿ ದಿನ್ನೆಗಳಾಗಿವೆ. ಹೀಗೆ ಇದನ್ನು ಕಬ್ಬಿಣದ ಸಲಕರಣೆಗಳನ್ನು ಮಾಡಲು ಉಪಯೋಗಿಸಿರಬಹುದು ಎನ್ನುತ್ತಾರೆ.

ಕರ್ನಾಟಕದಲ್ಲಿ ಇಂದಿಗೂ ಮೊಳಕಾಲ್ಲುರು ತಾಲೂಕಿನ ಕೋನಸಾಗರ, ಭಟ್ರಹಳ್ಳಿ, ಅಶೋಕ ಸಿದ್ಧಾಪುರ, ಬ್ರಹ್ಮಗಿರಿ, ಜಟಿಂಗರಾಮೇಶ್ವರ ಭಾಗಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸೇರಿದ ನೆಲೆಗಳಿವೆ. ಕೂಡ್ಲಿಗಿ ತಾಲೂಕಿನ ಕುಮತಿ ಹತ್ತಿರ ಇರುವ ಬೃಹದಾದಾರದ ಕಲ್ಗೋರಿಗಳು ಪ್ರಾಚೀನ ಬೇಡ ಬುಡಕಟ್ಟಿನ ಜನರು ಆರಾಧಿಸುತ್ತಾರೆ. ಕೂಡ್ಲಿಗಿ ತಾಲೂಕಿನ ಕುಮತಿ ಹತ್ತಿರ ಇರುವ ಬೃಹದಾಕಾರದ ಕಲ್ಗೋರಿಗಳು ಪ್ರಾಚೀನ ಬೇಡ ಬುಡಕಟ್ಟಿನ ಸಂಸ್ಕೃತಿಯನ್ನು ತಿಳಿಯಲು ಸಹಕಾರಿಯಾಗಿವೆ. ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ, ಸಂಗನಕಲ್ಲು ಪರಿಸರದಲ್ಲಿ ಬೋಯಾ ಗುಡಿಸಲುಗಳು ಉತ್ಖನನದಲ್ಲಿ ಬೆಳಕಿಗೆ ಬಂದಿವೆ. ಹಾಗಾಗಿ ಪ್ರಾಚೀನ ಬುಡಕಟ್ಟುಗಳಲ್ಲಿ ಬೇಡನಾಯಕರು ನೆಲಸಿದ್ದರೆಂಬುದಕ್ಕೆ ಈಗಲೂ ಇಲ್ಲಿ ಇವರು ಕಂಡುಬರುತ್ತಾರೆ.

ಪ್ರಾಚೀನ ಕರ್ನಾಟಕದ ಜನರು ಬೇಟೆ, ಪಶುಪಾಲನೆ, ಕೃಷಿಯಲ್ಲದೆ, ವಲಸೆ, ಒಕ್ಕಲುತನ, ಚಾಪೆ ಹೆಣೆಯುವುದು, ಕಲ್ಲು ಕುಟ್ಟುವುದು, ಮಣ್ಣು ಇಟ್ಟಿಗೆ ಮಾಡುವುದು ಬೇರೆ ಬೇರೆ ವೃತ್ತಿಗಳನ್ನು ಹೊಂದಿದ್ದರು. ನಾಗಾರ್ಜುನಕೊಂಡದ ಪ್ರಾಕೃತ ಭಾಷೆಯ ಚಿಕ್ಕ ಶಾಸನದಲ್ಲಿ ಮಹಾ ಸಾಮಂತ ಮತ್ತು ಮಹಾತಳವಾರ ವಾಸಿಷ್ಠಪುತ ಖಂಡ ಚೆಲಿಕಿ ರಮ್ಮಾಣಕ ಎಂಬ ಉಲ್ಲೇಖವಿದೆ (ಡಾ. ಅ. ಸುಂದರ–ಸಂ ೩.ಸಂ.೧, ೧೯೯೭, ಪು.೪೩೬). ತಳವರ್ಗಗಳು ನಿರ್ವಹಿಸಿದ್ದು ಸ್ಥಳೀಯ ಆಡಳಿತದಲ್ಲಿನ ಆಯಾಗಾರ ಪದ್ಧತಿಯು ಊಳಿಗಮಾನ್ಯ ವ್ಯವಸ್ಥೆಯ ಲಕ್ಷಣಗಳನ್ನು ಹೋಲುತ್ತದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ವೈದಿಕ ಹಾಗೂ ವರ್ಣಾಶ್ರಮ ವ್ಯವಸ್ಥೆ ಮುಂದುವರೆದಿತ್ತು. ಅಂದು ಬ್ರಾಹ್ಮಣರಿಗೆ ದಾನ–ದತ್ತಿಗಳನ್ನು ಕೊಟ್ಟು, ಯಜ್ಞ–ಯಾಗಾದಿಗಳನ್ನು ಮಾಡುತ್ತಿದ್ದರು.

ಈ ಕಾಲದಲ್ಲಿ ಕೃಷಿ ಅಭಿವೃದ್ಧಿಗೋಸ್ಕರ ದೊಡ್ಡ ದೊಡ್ಡ ಕೆರೆಗಳಲ್ಲಿ ದುರ್ಬಲರಿಗೆ, ಅಲಕ್ಷಿತರಿಗೆ, ಬಡವರಿಗೆ ಅನ್ನ ಛತ್ರಗಳನ್ನು ವೈದ್ಯ ಶಾಲೆಗಳನ್ನು ನಿರ್ಮಿಸುತ್ತಿದ್ದರು. (ಪು.೪೬೮ ಕ.ಚ. ಸಂ.೧). ವಿದ್ವತ್ ಜನರು ಅದೃಷ್ಟ ಹೀನ ಹಾಗೂ ಕೆಳವರ್ಗದ ಬಗ್ಗೆ ವಿಶಾಲ ಮನೋಭಾವವನ್ನು ತಳೆದಿದ್ದರು. ದಾನಕೊಟ್ಟ ಕ್ಷೇತ್ರದಲ್ಲಿಯ ಸಮಗಾರರನ್ನು ಮತ್ತು ಚಂಡಾಲರನ್ನು ದಾನ ತೆಗೆದುಕೊಂಡವರಿಂದ ಹೊರತುಪಡಿಸುತಿದ್ದರು. ಮತ್ತು ಸಮಗಾರ ವೃತ್ತಿಗೆ ತೆರಿಗೆ ವಿನಾಯಿತಿಯಿದ್ದಿತು (ಅದೇ ಪು. ೪೬೮). ವೈಶ್ಯರು ಕೃಷಿ ವ್ಯಾಪಾರ ಮಾಡುತ್ತಿದ್ದರು. ಮೋಚಿ, ಮಾದಿಗೆ, ಸಮಗಾರ ಸಮುದಾಯಗಳು ಗ್ರಾಮೀಣ ಆರ್ಥಿಕತೆಯನ್ನು ಇಮ್ಮಡಿಗೊಳಿಸಿದ್ದವು.

‘ಐಯ್ಯಾವೊಳೆ ಐನೂರ್ವರ’ ಎಂಬುದು ಒಂದು ವ್ಯಾಪಾರ ಶ್ರೇಣಿಯಾಗಿತ್ತು. ಅಂದಿನ ವರ್ತಕ ಸಮುದಾಯ, ಮಹಾಜನರನ್ನು ಈ ಮೂಲಕ ಅಧ್ಯಯನ ಮಾಡಬೇಕಾಗಿದೆ. (ನೋಡಿ: ಶೀಲಕಾಂತ ಪತ್ತಾರ: ಬಾದಾಮಿ: ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ)

ಕರ್ನಾಟಕವನ್ನಾಳಿದ ಕಿರು ಅರಸು ಮನೆತನಗಳಲ್ಲಿ ಅಭೀರರು ಶೂದ್ರರೆಂದು ಪತಂಜಲಿ ಮಹಾಭಾಷ್ಯದಲ್ಲಿ ತಿಳಿಸಿದ್ದಾನೆ. ಅನೇಕ ಇತಿಹಾಸಕಾರರು ಅಭೀರರನ್ನು ಶೂದ್ರರೆಂದು ವಿವರಿಸಿದ್ದಾರೆ. ಈ ಕಾಲಾವಧಿಯಲ್ಲಿ ಪುಂಡ್ರಕರು, ಕೇರಳಿಯರು, ಕಳಿಂಗರು, ಪುಳಿಂದರು, ಆಂಧ್ರರು, ವಿದರ್ಭರು, ಕುಂತಳರು ಇದ್ದರು. ಮಾರ್ಕಂಡೇಯ ಮತ್ತು ವಾಯುಪುರಾಣದಲ್ಲಿ ಅತಭ್ಯರು, ಶಬರರು, ವೈಧರ್ಬರು, ಗಂಡಕರು ಮತ್ತು ಅಭೀರರು ದಕ್ಷಿಣಾ ಪಥದ ನಿವಾಸಿಗಳೆಂದು ತಿಳಿಸಲಾಗಿದೆ.

೧. ಅಲಕ್ಷಿತ ಸಮುದಾಯಗಳಲ್ಲಿ ವಾರಾಂಗನೆಯರು, ತಲೆಹಿಡುಕರು, ವಿಷಕನ್ಯೆಯರು, ಹಾವಾಡಿಗರು ಮೊದಲಾದವರು ರಾಜಪ್ರಭುತ್ವದಲ್ಲಿ ಗೂಢಾಚಾರ ಕೆಲಸಕ್ಕೆ ನೇಮಕಗೊಳ್ಳುತ್ತಿದ್ದರು. ಆನಂತರ ಅವರು ವಿವಿಧ ಕುಲಕಸುಬುಗಳಿಗೆ ಸೀಮಿತಗೊಂಡರು. ಇವರನ್ನು ಅಧಿಕಾರ ಹೊಂದಿದವರು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದರು. ಶತ್ರುಗಳನ್ನು ಸಂಹಾರ ಮಾಡಲು ಇಂಥ ವರ್ಗಗಳ ಸಹಕಾರವನ್ನು ಬಯಸುತ್ತಿದ್ದರು.

೨. ಅಲಕ್ಷಿತರು ಶೋಷಿತರಾಗಿದ್ದರೆ ಹೊರೆತು ಅತ್ಯಂತ ಗುಲಾಮರಾಗಿರುವುದಿಲ್ಲ. ಏಕೆಂದರೆ ಇವರಲ್ಲಿ ರೂಢಿಯಲ್ಲಿದ್ದ ಸಹಗಮನ ಪದ್ಧತಿ, ಹಬ್ಬ–ಹರಿದಿನಗಳ ಆಚರಣೆ, ಕ್ರೀಡೆಗಳು, ಪಗಡೆ, ಜೂಜು, ಚೆಂಡಾಟ, ಬೇಟೆ, ಈಜು, ದೋಣಿಯಾಟ, ಬಿಲ್ಲು ಬಾಣ ಸ್ಪರ್ಧೆ, ಟಗರು, ಹೋರಿ, ಆನೆ, ಕುದುರೆ ಕಾಳಗಳಲ್ಲಿ ಸ್ತ್ರೀಪುರುಷರಿಬ್ಬರು ಭಾಗವಹಿಸುತ್ತಿದ್ದರು. ಸಾಮಾಜಿಕವಾಗಿ ಸಮಾನತೆ ಇರಲಿಲ್ಲ. ಆರ್ಥಿಕವಾಗಿ ಏರು–ಪೇರು ಇತ್ತು. ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದರು ಅಲಕ್ಷಿತರು.

೩. ಗುಪ್ತರ ಕಾಲಕ್ಕೆ ಹುಲಿ, ಆಶ್ವಮೇಧ, ಬಿಲ್ಲುಗಾರ, ಸಂಗೀತಜ್ಞ ಮೊದಲಾದ ಚಿನ್ಹೆಗಳಿರುವ ನಾಣ್ಯಗಳು ದೊರಕಿವೆ. ಬಿಲ್ಲುಗಾರ, ಹುಲಿಯನ್ನು ಕೊಲ್ಲುವ, ಕುದುರೆ ಸವಾರ, ಅಶ್ವಮೇಧಯಾಗ, ಆನೆ ಸವಾರ ಹುಲಿ ಬೇಟೆಗಾರನ

ಬಂಗಾರದ ನಾಣ್ಯಗಳು ಬೆಳಕಿಗೆ ಬಂದಿರುವುದರಿಂದ ಅಲಕ್ಷಿತತ ಸಮುದಾಯಗಳ ಜನರು ಕೆಲವು ನಿರ್ಣಾಯಕ ಕಾರ್ಯಗಳಲ್ಲಿ ತೊಡಗಿದ್ದರೆಂಬುದು ತಿಳಿಯುತ್ತದೆ. ಅಂದಿನ ರೂಢಿ, ಸಂಪ್ರದಾಯ, ಆಚರಣೆಗಳು ಇಂದಿಗೂ ಹಬ್ಬ–ಹರಿದಿನ, ಜಾತ್ರೆಗಳಲ್ಲಿ ಜೀವಂತ ಇರುವುದು ಗಮನಾರ್ಹ.

೪. ಅಲಕ್ಷಿತ ಸಮುದಾಯಗಳು ಹೆಚ್ಚಾಗಿ ಮಾಂಸಹಾರಿಗಳಾಗಿದ್ದು, ಮಧ್ಯಪಾನ ಮಾಡುತ್ತಿದ್ದರು. ಚಂಡಾಲರು ನಿಷೇಧಿತ ವಸ್ತುಗಳನ್ನು ಬಳಸುತ್ತಿದ್ದರು. ಕ್ರಿ.ಶ. ೭ನೇ ಶತಮಾನದ ಪೂರ್ವದಲ್ಲಿ ಅಲಕ್ಷಿತ ಸಮುದಾಯಗಳ ಅಪರಾಧಗಳ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ.

೫. ಅಲಕ್ಷಿತ ಸಮುದಾಯಗಳಿಂದ ರಾಜ್ಯದ ಬೊಕ್ಕಸ ತುಂಬುತ್ತಿತ್ತು ಎಂಬುದು ಸುಳ್ಳಲ್ಲ. ಏಕೆಂದರೆ, ಉತ್ಪಾದನೆ ಚಟುವಟಿಕೆ, ಚಿತ್ರಕಲೆ, ಶಿಲ್ಪ ದಂತ ಕೆತ್ತನೆ, ಒಡವೆ–ಪಾತ್ರೆ, ಮಡಕೆ ತಯಾರು ಮಾಡುತ್ತಿದ್ದವರು ಅಲಕ್ಷಿತ ಸಮುದಾಯದವರು.

೬. ಸಂಘ–ಸಂಸ್ಥೆಗಳ ನಿಯಂತ್ರಣದಲ್ಲಿ ವ್ಯಾಪಾರ, ಕೈಗಾರಿಕೆ, ಲೇವಾದೇವಿ, ನೇಯ್ಗೆ ಕಾರ್ಯ ನಡೆಯುತ್ತಿತ್ತು. ಗಾಣಿಗ, ವಡ್ಡ, ಕಲ್ಲು ಕುಟುಕರ ಸಂಘಗಳಿದ್ದವು.

೭. ಬಾದಾಮಿ ಚಾಲುಕ್ಯರ ಕಾಲದಲ್ಲಿ ನಾಲ್ಕು ವೃತ್ತಿ ನಿರತ ಜಾತಿಗಳ ಬಗ್ಗೆ ಹ್ಯೂಯೆನ್‌ತ್ಸಾಂಗ್ ಉಲ್ಲೇಖಿಸುತ್ತಾನೆ.

೮. ಗುಪ್ತರ ಕಾಲಕ್ಕೆ ಬುಡಕಟ್ಟುಗಳ ಉಪಟಳವನ್ನು ಹಲವು ರಾಜ್ಯಗಳು ಎದುರಿಸುತ್ತಿದ್ದವು.

೯. ಕರ್ನಾಟಕದಲ್ಲಿ ಹೊಯ್ಸಳರ ಕಾಲಕ್ಕೆ ತಳಸಮುದಾಯಗಳು ವಿವಿಧ ಜವಾಬ್ದಾರಿಯುತ ಹುದ್ದೆಗಳಲ್ಲಿದ್ದದ್ದು ತಿಳಿಯುತ್ತದೆ. ಅರಸರಿಗಾಗಿ ಅನೇಕ ಜನಸಾಮಾನ್ಯರು ವೀರಮರಣ ಹೊಂದಿದ್ದು ಈ ಕಾಲದಲ್ಲಿ ಬರುವ ಹೃದಯ ವಿದ್ರಾವಕ ಘಟನೆಗಳಲ್ಲೊಂದಾಗಿದೆ.

೧೦. ಕುಮಾರರಾಮ, ಕಂಪಿಲರಾಯರ ಆಳ್ವಿಕೆಯಲ್ಲಿ ದೊಂಬರು ಎಂಬ ಸಮುದಾಯದ ರತ್ನಾಜಿಯ ಪ್ರಸ್ತಾಪವಿದ್ದು, ಅಲಕ್ಷಿತ ಮಹಿಳೆ ಮತ್ತು ಸಮುದಾಯಗಳಿಗೆ ಆಸ್ಥಾನದಲ್ಲಿ ಪ್ರಾಶಸ್ತ್ಯವಿತ್ತು ಎಂದು ತಿಳಿಯುತ್ತದೆ.

೧೧. ವಿಜಯನಗರ ಕಾಲದಲ್ಲಿ ಬೇಟೆ, ಪಶುಪಾಲನೆ ಮತ್ತು ಕೃಷಿ ಚಟುವಟಿಕೆಗಳು ಚಾಲ್ತಿಯಲ್ಲಿದ್ದವು. ಬೇಡರು, ಅಂಬಿಗರು, ಕುರುಬರು, ಹೊಲೆಯ, ಮಾದಿಗ, ಲಂಬಾಣಿ ಮೊದಲಾದ ಸಮುದಾಯಗಳು ತಮ್ಮ ತಮ್ಮ ವೃತ್ತಿಯಲ್ಲಿ ಗಣನೀಯ ಪಾತ್ರವಹಿಸಿದ್ದವು.

ಮಧ್ಯಕಾಲೀನ ಕರ್ನಾಟಕದಲ್ಲಿ ಜಾತಿಸಮುದಾಯಗಳ ಸ್ಪಷ್ಟ ಚಿತ್ರಣ ಗೋಚರವಾಗುತ್ತದೆ. ಕುಲಕಸುಬು, ವೃತ್ತಿ, ಪ್ರವೃತ್ತಿ, ಆಯಗಾರ, ಊಳಿಗಮಾನ್ಯ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುವವರು ಹೆಚ್ಚಿದ್ದರು. ರಾಜ್ಯಾಳ್ವಿಕೆ ಮಾಡಿದ ಸಮುದಾಯಗಳು ಸೇವೆ ಸಲ್ಲಿಸಿದ ಸಮುದಾಯಗಳು ಎಲ್ಲ ಕೆಲಸಗಳನ್ನು ತಾವೇ ಮಾಡಿ ಗುರುತಿಸಿಕೊಳ್ಳದೆ ತಮ್ಮ ಪಾಡಿಗೆ ತಾವಿರುವ ಸಮುದಾಯಗಳಿದ್ದವು. ತಳವರ್ಗದ ಬಗ್ಗೆ ಹೆಚ್ಚಿನ ಉಲ್ಲೇಖಗಳಿಲ್ಲ.

ಆಕರ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ : ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕಸಾಅ, ಬೆಂಗಳೂರು.

೨. ಚಂದ್ರಕಾಂತ ಬಿಜ್ಜರಗಿ : ಕುರುಬರ ಹೆಜ್ಜೆಗಳು, ಅ.ರ.ಕು. ಸಂಘ, ಬೆಂಗಳೂರು.

೩. ಬಸವರಾಜ ಕುಂಚೂರು : ಕುಂಬಾರ ಜನಾಂಗ.

೪. ಪಾಂಡುಕುಮಾರ್ ಬಿ: ಒಕ್ಕಲಿಗರ ಇತಿಹಾಸ, ಒಕ್ಕಲಿಗರ ಸಂಘ, ಬೆಂಗಳೂರು.

೫. ಬೈರೇಗೌಡ: ಇರುಳಿಗರು, ಕಸಾಅ, ಬೆಂಗಳೂರು.

೬. ಬಾಲಗುರುಮೂರ್ತಿ, ಪ್ರತಾಪ ರಾ. ಬಹೂರೂಪಿ: ಬುಡ್ಗಜಂಗಮ, ಕಸಾಅ, ಬೆಂಗಳೂರು.

೭. ಯಲ್ಲಪ್ಪ ಬಹಿಮ್ಮಡಿ : ಚೆನ್ನದಾಸರು, ಕಸಾಅ, ಬೆಂಗಳೂರು.

೮. ವೆಂಕಟರಂಗೋಕಟ್ಟಿ (ಸಂ) ೧೯೯೩ ಗ್ಯಾಝೆಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು (ಕಾನಡಾ, ಧಾರವಾಡ, ಬಿಜಾಪುರ, ಬೆಳಗಾವಿ) ೧೮೮೩, ಗವರ್ನಮೆಂಟ್ ಪ್ರೆಸ್, ಮುಂಬಯಿ.

೯. ಗುಂಥರ್ ಸಂತಮ್ಮೇಶ್ : ೧೯೯೧, ಪ್ಯಾಸ್ಟೋರಲ್ ಡೆಯಿಟಿಸ್ ಇನ್ ವೆಸ್ಟರ್ನ್, ಇಂಡಿಯಾ.

೧೦. ಲಕ್ಕಪ್ಪಗೌಡ ಎಚ್.ಜೆ (ಸಂ) : ೨೦೦೦, ಕರ್ನಾಟಕದ ಬುಡಕಟ್ಟುಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೧. ಚಂದ್ರಪ್ಪ ಎನ್: ೧೯೯೩, ಮೊಂಡರ್ ಸಂಸ್ಕೃತಿ, ಕ.ಸಾ.ಅ. ಬೆಂಗಳೂರು.

೧೨. ಚಂದ್ರಶೇಖರ ಕಂಬಾರ (ಸಂ) : ೧೯೮೫, ಕನ್ನಡ ಜಾನಪದ ವಿಶ್ವಕೋಶ, ಸಂಪುಟ–೨, ಕಸಾಪ, ಬೆಂಗಳೂರು.

೧೩. ಬಸವರಾಜ ನೆಲ್ಲಿಸರ: ೧೯೮೪, ಸುಡುಗಾಡು ಸಿದ್ದರು, ಐಬಿಎಚ್ ಪ್ರಕಾಶನ, ಬೆಂಗಳೂರು.

೧೪. ನಾಯಕ ಡಿ.ಬಿ., ೧೯೯೩, ಲಂಬಾಣಿ ಸಂಸ್ಕೃತಿ, ಕಸಾಅ, ಬೆಂಗಳೂರು.

೧೫. ಪ್ರಹ್ಲಾದ ಬೆಟಗೇರಿ : ೧೯೯೩, ಅಡವಿ ಚೆಂಚರ ಸಂಸ್ಕೃತಿ, ಕಸಾಅ, ಬೆಂಗಳೂರು.

೧೬. ಪರಮಶಿವಯ್ಯ ಜಿ.ಶಂ: ೧೯೮೦, ದೊಂಬಿದಾಸರು, ಬುಕ್ ಹೌಸ್ ಪಬ್ಲಿಕೇಷನ್, ಬೆಂಗಳೂರು.

೧೭. ಪ್ರಶಾಂತ್ ಹೆಚ್.ಡಿ. (ಸಂ) : ೨೦೦೦, ಕರ್ನಾಟಕ ರಾಜ್ಯ ಕೋಶ–೪, ಬನಸಮುದಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಶಂಕರನಾರಾಯಣ ತೀ.ನಂ. : ೧೯೮೨, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯. ನಂಜುಡಯ್ಯ ಎಚ್.ವಿ. : ೧೯೦೬, ದ ಎತ್ನೋಗ್ರಫಿಕಲ್ ಸರ್ವೆ ಆಫ್ ಮೈಸೂರು, ಗವರ್ನಮೆಂಟ್ ಪ್ರೆಸ್, ಬೆಂಗಳೂರು.

೨೦. ಸಿಂಗ್ ಕೆ.ಎಸ್: ೧೯೯೪, ದ ಶೆಡ್ಯುಲ್ಡ್ ಟ್ರೈಬ್ಸ್, ಓ.ಯು.ಸಿ., ದಿಲ್ಲಿ.

೨೧. ಥರ್ಸ್ಟನ್ ಎಡ್ಗರ್ ಕೆ. ರಂಗಾಚಾರಿ : ೧೯೮೭, ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಎಇಎಸ್ ನವದೆಹಲಿ.

೨೨. ಅನಂತಕೃಷ್ಣಯ್ಯ ಅಯ್ಯರ್ ಎಲ್.ಕೆ : ೧೯೮೮, ದಿ ಮೈಸೂರು ಟ್ರೆಬ್ಸ್ ಅಂಡ್ ಕ್ಯಾಸ್ಟ್, ಮಿತ್ತಲ್ ಪಬ್ಲಿಕೇಷನ್ಸ್, ನವದೆಹಲಿ.

೨೩. ಡಂಗ ಡಿ.ಬಿ : ೧೯೮೮, ಜನಾಂಗ ಪರಿಚಯ, ಪೆರಿಯಾರ್ ಪ್ರಕಾಶನ, ಧಾರವಾಡ.

೨೪. ವಿರೂಪಾಕ್ಷಿ ಪೂಜಾರಹಳ್ಳಿ : ೨೦೦೭, ಬೇಟೆ ಮತ್ತು ಬೇಡರು, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ.

೨೫. ವಿರೂಪಾಕ್ಷಿ ಪೂಜಾರಹಳ್ಳಿ : ೨೦೦೯, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೬. ವಿರೂಪಾಕ್ಷಿ ಪೂಜಾರಹಳ್ಳಿ : ೨೦೧೫, ವಿಜಯನಗರ ಕಾಲದ ಸಂಸ್ಕೃತಿ, ಪ್ರಶಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಮಧ್ಯಕಾಲೀನ ಪಾಳೆಯಗಾರರ ಆಳ್ವಿಕೆಯಲ್ಲಿ (ಹರತಿ) ಸ್ಥಳಗೌಡರು, ಸೇನಭೋಗ, ತಳವಾರ, ಬೇಗಾರ, ದಳವಾಯಿಗಳು ಈ ಆಡಳಿತ ವಿಭಾಗಗಳ ನಿರ್ವಹಣೆಯನ್ನು ನಡೆಸುತ್ತಿದ್ದ ಅನುವಂಶಿಕ ಸ್ಥಳೀಯ ಅಧಿಕಾರಿಗಳಾಗಿದ್ದರು. (ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಹರತಿ ಪಾಳೆಯಗಾರರು, ಪು. ೧೬೫).

೧೦೨

ಪಂಚ ರಜತೋತ್ಸವ ಕಂಡ ಶಾಲೆ

ಸುಮಂಗಲಾ ಮೇಟಿ*

ಕರ್ನಾಟಕದಲ್ಲಿ ಶಾಲೆಗಳಿಗೆ ವಿಶಿಷ್ಟ ಮತ್ತು ವ್ಯಾಪಕವಾದ ಚರಿತ್ರೆಯಿದೆ. ಕರ್ನಾಟಕವು ಪಾಶ್ಚಾತ್ಯ ಸಂಪರ್ಕಕ್ಕೆ ಬರುವ ಪೂರ್ವದಲ್ಲಿ ಮಠಗಳೇ ಶಿಕ್ಷಣ ಕೇಂದ್ರಗಳಾಗಿದ್ದು, ಅಲ್ಲಿ ಪರಂಪರಾಗತ ದೇಶಿಯ ಪದ್ಧತಿಯ ಪ್ರಕಾರ ಧೂಳಾಕ್ಷರ, ಕಡತ, ಹಸ್ತಪ್ರತಿಗಳ ಮೂಲಕ ಓದು-ಬರಹಗಳ ಪರಿಚಯ ಮಾಡಿಕೊಡಲಾಗುತ್ತಿತ್ತು. ಅಂದು ವಿದ್ಯೆಗಾಗಿ ವಿದ್ಯಾರ್ಜನೆ ಎಂಬ ಪ್ರಮೇಯವಿದ್ದು, ಜನತೆಯಲ್ಲಿ ಜ್ಞಾನದಾಹವಿತ್ತು. ನಾಡಿನ ಆಡಳಿತ ವಹಿಸಿಕೊಂಡ ಬ್ರಿಟೀಷರು ದೇಶಿಯ ಶಿಕ್ಷಣ ಪದ್ಧತಿಯಲ್ಲಿ ದೋಷಗಳಿವೆ ಎಂದು ನಿರ್ಧರಿಸಿದರು.

ಮುಂಬೈ ಗೌರ್‍ನರ್ ಎಲ್ಫಿನಸ್ಟನ್ ಹೊಸ ರೀತಿಯ ಶಿಕ್ಷಣ ಜಾರಿಗೆ ತರುವಲ್ಲಿ ಆಸಕ್ತಿಯನ್ನು ತಳೆದು ಕ್ರಿ.ಶ. ೧೮೨೬-೨೮ರಲ್ಲಿ 'ಎಜುಕೇಷನ್ ಸೊಸೈಟಿ' ಮತ್ತು 'ನೇಟಿವ್ ಸ್ಕೂಲ್ ಆಂಡ ಬುಕ್ ಸೊಸೈಟಿಗಳ ಮೂಲಕ ಶಿಕ್ಷಣದ ಸೂತ್ರ ಸಪ್ತಕ ಅನುಷ್ಠಾನಕ್ಕೆ ತಂದರು. ಅಂದು ಉತ್ತರ ಕರ್ನಾಟಕದಲ್ಲಿ ಗುಜರಾತಿ, ಸಿಂಧಿ, ಉರ್ದು, ಕನ್ನಡ ಭಾಷೆಗಳಿದ್ದರೂ, ಮರಾಠಿ ಭಾಷೆಯ ಪ್ರಭಾವವೇ ಹೆಚ್ಚಿತ್ತು. ಕ್ರಿ.ಶ. ೧೮೬೪ರಲ್ಲಿ ವಿಲಿಯಂ ಅಲೆನ್ ರಸೆಲ್ ವಿದ್ಯಾಧಿಕಾರಿಯಾಗಿದ್ದನು. ಅವನು ಈ ಪ್ರದೇಶವು ಮೂಲತಃ ಕನ್ನಡದ್ದೆ. ಹಾಗಾಗಿ ಕನ್ನಡದಲ್ಲೇ ಶಿಕ್ಷಣ ನೀಡುವ ಮಹತ್ವಪೂರ್ಣ ನಿರ್ಣಯವನ್ನು ತಂದರು. ಇದರ ಪರಿಣಾಮವಾಗಿ ಸರಕಾರಿ ಕನ್ನಡ ಶಾಲೆಗಳ ಸಂಖ್ಯೆ ಕ್ರಮೇಣ ಹೆಚ್ಚಿತು. ಸರಕಾರಿ ಕಟ್ಟಡಗಳು ಇಲ್ಲದೇ ಇರುವ ಆ ಕಾಲದಲ್ಲಿ ದೇವಾಲಯ, ಸಮುದಾಯ ಭವನ, ಶ್ರೀಮಂತರ ಮನೆಗಳಲ್ಲೇ ಪಾಠ-ಪ್ರವಚನಗಳು ನಡೆಯುತ್ತಿದ್ದವು.

ದಕ್ಷಿಣ ವಿಭಾಗದ ಕಂದಾಯ ಆಯುಕ್ತರಾದ ಡಬ್ಲ್ಯೂ. ಹಾರ್ಟ್‌ರ ಶಿಫಾರಸ್ಸಿನ ಮೇರೆಗೆ ಕ್ರಿ.ಶ. ೧೮೬೪ರ ಡಿಸೆಂಬರ ೧ ರಂದು ಕಲಾದಗಿಯು ಜಿಲ್ಲಾಕೇಂದ್ರವಾಯ್ತು. ಕಲಾದಗಿ ಜಿಲ್ಲೆಯ ಪ್ರಮುಖ ಒಂಬತ್ತು ಪಟ್ಟಣಗಳಾದ ಬಾಗಲಕೋಟೆ, ಸಿಂದಗಿ, ಬಾಗೇವಾಡಿ, ಬದಾಮಿ, ಇಂಡಿ, ಮುದ್ದೇಬಿಹಾಳ, ಹುನಗುಂದ ಬಿಜಾಪೂರಗಳಲ್ಲಿ ೧೮೮೨-೮೩ರಲ್ಲಿ ೨೪ ಸರಕಾರಿ ಹಾಗೂ ೮ ಖಾಸಗಿ ಶಾಲೆಗಳಿದ್ದವು. ಈ ಜಿಲ್ಲೆಯಲ್ಲಿ ೧೨೬ ಶಾಲೆಗಳಿದ್ದವು. ಕಲಾದಗಿಯು ಹಲವಾರು ಐತಿಹಾಸಿಕ ಸಂಗತಿಗಳಿಂದ ಮಹತ್ವಪೂರ್ಣವಾಗಿದೆ. ಇಲ್ಲಿ ಕ್ರಿ.ಶ ೧೮೨೧ರಿಂದ ೧೮೯೦ರವರೆಗೆ ಕಲಾದಗಿಯಲ್ಲಿ ಅಧಿಕಾರ ನಿರ್ವಹಿಸಿದ ಅಧಿಕಾರಿಗಳ ಗೋರಿಗಳಿವೆ. ಕ್ರಿ.ಶ. ೧೮೨೧ರಲ್ಲಿ ಅಸುನೀಗಿದ ೩೩ ವರ್ಷದ ಕ್ಯಾಂಡರವುಡ್‌ನ ಗೋರಿಯ ಮೇಲೆ ಕುಲ್ಲಡಗಿ ಎಂಬ ಉಲ್ಲೇಖವಿದೆ. ಮುಂದೆ ಕ್ರಿ.ಶ. ೧೮೮೨ರ ಸುಮಾರಿಗೆ ಜಿಲ್ಲಾ ಕೇಂದ್ರಕ್ಕೆ ಬೇಕಾದ ಹೆಚ್ಚಿನ ಕಟ್ಟಡಗಳನ್ನು ಕಟ್ಟಲು ಬಾಂಬೆಯಿಂದ ವಾಸ್ತು ಶಾಸ್ತ್ರಜ್ಞನನ್ನು ಕರೆಸಿದರು. ಆತ ಕಲಾದಗಿಯಲ್ಲೆಲ್ಲ ಸುತ್ತಾಡಿ ಯೋಜನೆ ರೂಪಿಸಿದ. ಅನಂತರ ಬೊಂಬೆಗೆ ಹಿಂತಿರುಗುವಾಗ ವಿಜಯಪುರದಲ್ಲಿರುವ ಆದಿಲ್‌ಶಾಯಿ ಅರಸರ ಸುಸಜ್ಜಿತ ಕಟ್ಟಡಗಳನ್ನು ನೋಡಿ ಕಲಾದಗಿಯಲ್ಲಿ ಹೊಸ ಭವನಗಳನ್ನು ನಿರ್ಮಿಸುವ ಅಗತ್ಯವೇನಿದೆ. ವಿಜಯಪುರದಲ್ಲಿ ಸುಸಜ್ಜಿತ ಕಟ್ಟಡಗಳಿವೆ. ಎಂಬ ಕಾರಣವಾಗಿ ಕ್ರಿ.ಶ. ೧೮೮೪ರಲ್ಲಿ ಕಲಾದಗಿಯಿಂದ ಜಿಲ್ಲಾಕೇಂದ್ರವನ್ನು ಬಿಜಾಪೂರಕ್ಕೆ ವರ್ಗಾವಣೆ ಮಾಡಲಾಯಿತು.

ಅಖಂಡ ಬಿಜಾಪೂರ ಜಿಲ್ಲೆಯಲ್ಲಿ ಬಾಗಲಕೋಟೆ ಶೈಕ್ಷಣಿಕವಾಗಿ ಹಿಂದೆ-ಇಂದು ಮುಂದಿದೆ. ಬಾಗಲಕೋಟೆ ಜಿಲ್ಲೆಯ ಪಶ್ಚಿಮಕ್ಕೆ ಸು. ೧೮ ಕಿ.ಮೀ. ಅಂತರದಲ್ಲಿ ತುಳಸಿಗೇರಿ ಗ್ರಾಮವಿದೆ. ಈ ಗ್ರಾಮದಲ್ಲಿ ಕ್ರಿ.ಶ. ೧೮೮೭ರ ಮೇ ೨೪ರಲ್ಲಿ ಮಠವೊಂದರಲ್ಲಿ ಪ್ರಾರಂಭವಾದ ಶಾಲೆ, ಕೇವಲ ೧೨ ವಿದ್ಯಾರ್ಥಿಗಳನ್ನು, ಒಬ್ಬ ಶಿಕ್ಷಕನನ್ನು ಹೊಂದಿತ್ತು. ಅಂದು ಒಬ್ಬ ಶಿಕ್ಷಕನಿಂದ ಕೇವಲ ೧೨ ಜನ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ ಈ ಶಾಲೆ ಇಂದು ೧೨ ಜನ ಶಿಕ್ಷಕರನ್ನು, ಸು. ೨೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಒದಗಿಸುತ್ತಿದೆ. ಹೀಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಮಠದಲ್ಲಿ ಸ್ಥಳ ಸಾಲದಾದಾಗ ಗ್ರಾಮ ವಾಸಿಗರು ಹಾಗೂ ಶಿಕ್ಷಣ ಪ್ರೇಮಿಗಳು ಸ್ವತಂತ್ರ ಕಟ್ಟಡ ನಿರ್ಮಿಸಲು ಬಯಸಿದರು. ತುಳಸಿಗೇರಿಯವರಾದ ಹನುಮಂತಪ್ಪ ಉದ್ದಂಡಪ್ಪ ಪೂಜಾರವರು ಶಾಲೆಗಾಗಿ ೨೮ ಗುಂಟೆ ಜಮೀನನ್ನು ದಾನ ಮಾಡಿದರು. ಹೀಗಾಗಿ ಸುಸಜ್ಜಿತ

* ಪ್ರಾಧ್ಯಾಪಕರು, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ, ಮೊ. ೯೫೫೧೦೬೦೧೧೫

ಕಟ್ಟಡ ನಿರ್ಮಾಣವಾಯಿತು. ಸದ್ಯ ೨೨ ಕೋಣೆಗಳನ್ನು ಹೊಂದಿದೆ. ವೃತ್ತಿ ಶಿಕ್ಷಣ, ಶಾಲಾ ಕೈದೋಟ, ೧೧ ಕಂಪ್ಯೂಟರಗಳು, ದೃಕ್ ಶ್ರವಣೋಪಕರಣಗಳು, ವಿಶಾಲ ಮೈದಾನವನ್ನು ಹೊಂದಿದೆ.

ಈ ಶಾಲೆಯ ಆದರ್ಶ ಶಿಕ್ಷಕರಾದ ಶಂಕ್ರಪ್ಪ ದಾಸನ್ನವರ ಶಿಕ್ಷಣ ಪ್ರೇಮ, ಪರಿಸರ ಪ್ರೇಮ ಕಾರಣವಾಗಿ ಶಾಲಾ ಆವರಣ ಹಸಿರುಮಯವಾಗಿದೆ. ಅವರು ವಿವಿಧ ಬಗೆಯ ಔಷಧಿ ಗಿಡ, ಅಲಂಕಾರಿಕ ಗಿಡ, ತರಕಾರಿ ಗಿಡಗಳನ್ನು ಬೆಳೆಸಿದ್ದಾರೆ. ಇವರ ಪರಿಸರ ಪ್ರೇಮಕ್ಕಾಗಿ ಇವರಿಗೆ ಹಲವಾರು ಪ್ರಶಸ್ತಿ ದೊರೆತಿವೆ. 'ಸರಕಾರಿ ಹಿರಿಯ ಪ್ರಾಥಮಿಕ ಶಾಲೆ' ಎಂಬ ಹೆಸರಿನ ಶಾಲೆ 'ಕುವೆಂಪು ಶತಮಾನೋತ್ಸವ ಮಾದರಿ ಶಾಲೆ'ಯಾಗಿ ೨೦೦೫-೦೬ರಲ್ಲಿ ಪರಿವರ್ತನೆಗೊಂಡಿತು. ಈ ಶಾಲೆಗೆ "ಹಸಿರು ಶಾಲೆ"ಯೆಂಬ ಪ್ರಶಸ್ತಿ ಲಭಿಸಿದೆ. ಸು. ೧೩೦ ವರ್ಷಗಳ ಇತಿಹಾಸವನ್ನು ಹೊಂದಿದ ಈ ಶಾಲೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ವಿದ್ಯಾರ್ಜನೆಯ ಹಸಿವನ್ನು ತಣಿಸಿದೆ. ಉತ್ತರ ಕರ್ನಾಟಕದಲ್ಲಿ ಶತಮಾನವನ್ನು ಕಂಡ ಶಾಲೆಗಳು ಸಾಕಷ್ಟಿವೆ. ಈ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನದ ಅಗತ್ಯವಿದೆ.

ಆಕರ ಗ್ರಂಥಗಳು

೧. ಬಾಗಲಕೋಟೆ ಜಿಲ್ಲಾ ಸಂಸ್ಕೃತಿ, ಪ್ರ.ಸಂ: ಡಾ. ವಿ.ಎಸ್. ಕಟಗಿಹಳ್ಳಿಮಠ, ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬಾಗಲಕೋಟೆ ೨೦೧೪.

೨. ಗ್ಯಾಸೆಟಿಯರ್ ಆಫ್ ಇಂಡಿಯಾ, ಮೈಸೂರು ರಾಜ್ಯ ವಿಜಯಪುರ ಜಿಲ್ಲೆ, ಬಿ.ಎನ್. ಸತ್ಯನ್ ಸರಕಾರಿ ಪ್ರೆಸ್, ಬೆಂಗಳೂರು, ೧೯೬೬.

೧೦೩

ದಕ್ಷಿಣ ಭಾರತದಲ್ಲಿ ಮುಸ್ಲಿಂ ಸಮುದಾಯಗಳ ವಿಸ್ತರಣೆ

ಹೆಚ್.ಎಸ್. ಅಕ್ತರ್ ಖಾನಂ*

ಇಂದು ಜನಕೇಂದ್ರಿತ ಚರಿತ್ರೆ ತನ್ನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಜನರ ಚರಿತ್ರೆಯು ವಿವಿಧ ಜಾತಿ, ಮತ, ಪಂಥ, ವರ್ಣಗಳನ್ನು ಒಳಗೊಂಡ ವಿವಿಧ ಸಮುದಾಯಗಳ ಅಧ್ಯಯನವಾಗಿದೆ. ಸಮುದಾಯಗಳ ಕೇಂದ್ರಿತ ಚರಿತ್ರೆ ಅಧ್ಯಯನ ಕ್ರಮದಲ್ಲಿ ಹಲವಾರು ಜನಸಮುದಾಯಗಳು ಪ್ರಭುತ್ವ ಸ್ಥಾಪನೆ, ವಿಸ್ತರಣೆಯಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಬೀರಿದಂತಹ ಪಾತ್ರದ ಕುರಿತಂತಹ ಅಧ್ಯಯನಗಳು ಇಂದು ಹೆಚ್ಚು ಹೆಚ್ಚಾಗಿ ಚರಿತ್ರೆ ರಚನೆಯಲ್ಲಿ ಕಂಡುಬರುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರಾಚೀನ ಭಾರತದ ಚರಿತ್ರೆಯನ್ನು ವಿವಿಧ ಜನಸಮುದಾಯಗಳ ಜಾತಿ, ಧರ್ಮ ವರ್ಣಗಳಿಂದ ಕೂಡಿದ, ಅಸಮಾನತೆಯ ಶೋಷಿತ ಬಿಂಬಿಸಿದರೆ, ಮಧ್ಯಯುಗೀನ ಭಾರತ ಚರಿತ್ರೆಯಲ್ಲಿ ಮುಸ್ಲಿಂ ಪ್ರಭುತ್ವಗಳ ಆಳ್ವಿಕೆಯನ್ನು ಪರಿಚಯಿಸುವ ಹಿನ್ನೆಲೆಯಲ್ಲಿ ಸಾಮರಸ್ಯ ಕದಡುವ ಪ್ರಯತ್ನಗಳು ನಡೆದವು. ಹೀಗಿರುವಾಗ ಮುಸ್ಲಿಂ ಪ್ರಭುತ್ವವನ್ನು ವಿರೋಧಿಸುವಂತಹ ಚರಿತ್ರೆ ರಚನಾ ಕ್ರಮದಲ್ಲಿ ಜನಸಮೂಹಗಳ ಅಧ್ಯಯನಗಳು ನಿರ್ಲಕ್ಷ್ಯಕ್ಕೆ ಒಳಪಟ್ಟವು. ಈ ಹಿನ್ನೆಲೆಯಲ್ಲಿ ಈ ಸಂದರ್ಭದ ಮರೆಮಾಚಿದ ಅಥವಾ ನಿರ್ಲಕ್ಷ್ಯಕ್ಕೆ ಒಳಪಟ್ಟ ಮುಸ್ಲಿಂ ಸಮುದಾಯಗಳ ಅಧ್ಯಯನಗಳನ್ನು ಕೈಗೊಂಡಾಗ ತನ್ನದೇ ಆದಂತಹ ವಿಭಿನ್ನ ಸ್ವರೂಪದ ಚರಿತ್ರೆಯು ನಮ್ಮ ಮುಂದೆ ಕಾಣಿಸಿಕೊಳ್ಳುತ್ತದೆ. ಈ ರೀತಿಯಾದ ಅಧ್ಯಯನಗಳಲ್ಲಿ ವಿಜಯನಗರ ಚರಿತ್ರೆಯು ಒಂದಾಗಿ ಕಾಣಿಸಿಕೊಳ್ಳುತ್ತದೆ. ಹಾಗೆಯೇ ವಿಜಯನಗರ ಆಳ್ವಿಕೆಯ ಮುಸ್ಲಿಂ ಸಮುದಾಯಗಳು ಈ ಹಿನ್ನೆಲೆಯಲ್ಲಿ ತನ್ನದೇ ಆದಂತಹ ವೈಶಿಷ್ಟತೆಯನ್ನು ಪಡೆದುಕೊಂಡಿವೆ. ವಿಜಯನಗರ ಸಂದರ್ಭದ ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ಗುರುತಿಸಬೇಕಾದರೆ ಅವುಗಳ ಮೂಲವನ್ನು ತಿಳಿಯಬೇಕಾಗಿದೆ. ಹಾಗಾಗಿ ಏಷ್ಯಾದಲ್ಲಿ ಸ್ಥಾಪನೆಯಾದ ಇಸ್ಲಾಂ ಧರ್ಮದ ಹುಟ್ಟು, ಬೆಳವಣಿಗೆ ಹಾಗೂ ವಿಸ್ತರಣೆ ಕುರಿತು ಚರ್ಚಿಸುವ ಅಗತ್ಯತೆಯೂ ಇದೆ. ಅದರ ಮೂಲಕ ಭಾರತ ಹಾಗೂ ದಕ್ಷಿಣ ಭಾರತದಲ್ಲಿನ ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳ ಕುರಿತಂತಹ ಚರಿತ್ರೆಯನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಮಧ್ಯಕಾಲೀನ ವೇಳೆಗೆ ಇಡೀ ದಕ್ಷಿಣ ಭಾರತದಲ್ಲಿ ನೆಲೆನಿಂತಂತಹ ಹಲವು ಮುಸ್ಲಿಂ ಸಮುದಾಯಗಳನ್ನು ಅಧ್ಯಯನಕ್ಕೆ ಒಳಪಡಿಸಿ ಸಮಗ್ರ ರೀತಿಯ ವಿಜಯನಗರ ಚರಿತ್ರೆಯನ್ನು ಕಟ್ಟಿಕೊಡಬಹುದಾಗಿದೆ.

ದಕ್ಷಿಣ ಭಾರತದಲ್ಲಿ ವ್ಯಾಪಾರದ ಉದ್ದೇಶಕ್ಕಾಗಿ ಅರಬ್ ಮತ್ತು ಪರ್ಶಿಯದಿಂದ ವರ್ತಕರು ಇಸ್ಲಾಂ ಧರ್ಮದ ಸ್ಥಾಪನೆಗಿಂತ ಪೂರ್ವದಲ್ಲೇ ಇಲ್ಲಿ ಬಂದು ನೆಲೆಸಿದ್ದರು. ಈ ಬಗ್ಗೆ ವಿದ್ವಾಂಸನಾದ ಪ್ಲೀನಿ ಉಲ್ಲೇಖಿಸುವಂತೆ ಅರಬ್ಬರು ಭಾರತದೊಂದಿಗೆ ವ್ಯಾಪಾರಕ್ಕಾಗಿ ಕ್ರಿ.ಶ. ೧ನೇ ಶತಮಾನದಿಂದಲೇ ಸಂಪರ್ಕವನ್ನು ಹೊಂದಿದ್ದರು.[1] ಕ್ರಿ.ಶ. ೧ನೇ ಶತಮಾನದಲ್ಲಿನ ಅರಬ್ಬರ ವ್ಯಾಪಾರದ ದಾಖಲೆಯನ್ನು ಪರಿಶೀಲಿಸಿದರೆ ಅರಬ್ಬರ ವ್ಯಾಪಾರ ಸಂಬಂಧ ಕರಾವಳಿಯ ಜಿಲ್ಲೆಗಳಲ್ಲಿತ್ತು. ಬಾರಕೂರು, ಮಂಗಳೂರು, ಉಳ್ಳಾಲ, ಮಂಜೇಶ್ವರ ಮತ್ತು ಕಾಸರಗೂಡು ವ್ಯಾಪಾರ ಕೇಂದ್ರಗಳಾಗಿದ್ದು, ಈ ಪ್ರಾಂತ್ಯಗಳಲ್ಲಿ ಮುಸ್ಲಿಂ ಸಮುದಾಯ ಬೆಳವಣಿಗೆಯಾಯಿತೆಂದು ಗಣಪತಿರಾವ್ ಐಗಳ್ ತಿಳಿಸಿರುವರು.[2] ಈ ಸಮುದಾಯಗಳು ವ್ಯಾಪಾರದ ಆಕರ್ಷಣೆ, ರಾಜಪ್ರಭುತ್ವದ ಪ್ರೋತ್ಸಾಹ, ಮಿಶನರಿಗಳ ಪ್ರಭಾವ, ಸೂಫಿ ಸಂತರ ಬೋಧನೆಗಳು ಸಹ ಪ್ರಭಾವ ಬೀರಿ ಹಲವಾರು ಮುಸ್ಲಿಂ ಸಮುದಾಯಗಳ ಬೆಳವಣಿಗೆಗೆ ಕಾರಣವಾಯಿತು. ಇವರು ಆರಂಭದಲ್ಲಿ ಮಲಬಾರ್‌ನ ಕರಾವಳಿ ಮತ್ತು ಸಿಲೋನ್ ಪ್ರದೇಶದಲ್ಲಿ ಬಂದು ನೆಲೆಸಿದ್ದರು ಎಂದು ತಿಳಿಸಿದ್ದಾನೆ. ಕೋಸ್‌ಮಸ್ ಪ್ರಕಾರ ಕ್ರಿ.ಶ. ೪ನೇ ಮತ್ತು ೫ನೇ ಶತಮಾನದಲ್ಲಿ ಪರ್ಶಿಯಾ ಮತ್ತು ಸಿಲೋನ್ ನಡುವೆ ಕುದುರೆ ವ್ಯಾಪಾರವು ಭಾರತದ ಪಶ್ಚಿಮ ಕರಾವಳಿ ಮೂಲಕ ನಡೆಯುತ್ತಿತ್ತು ಎಂದಿದ್ದಾನೆ. ಮಲಬಾರ್ ಕರಾವಳಿ ತೀರಪ್ರದೇಶದಲ್ಲಿ ವರ್ತಕರಾಗಿ ಬಂದಿದ್ದ ಇವರು ಇಸ್ಲಾಂ ಧರ್ಮ ಸ್ವೀಕರಿಸಿದ ನಂತರ ಇಲ್ಲೆ ನೆಲೆನಿಂತರು. ರೋಲೇಂಡ್ಸನ ದಾಖಲೆಯಂತೆ ಅರಬ್ಬರು ಮಲಬಾರ್ ಕರಾವಳಿಯಲ್ಲಿ ಕ್ರಿ.ಶ. ೭ನೇ ಶತಮಾನದಲ್ಲಿ ನೆಲೆನಿಂತರು. ಸೌತ್ ಕೆನಾ ಮ್ಯಾನುವೇಲ್‌ನಲ್ಲಿ ತಿಳಿಸುವಂತೆ, 'ಕ್ರಿ.ಶ. ೭ನೇ ಶತಮಾನದಿಂದ

* ಪಿಎಚ್ ಡಿ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬. ಮೊ. ೯೪೮೧೭೧೭೪೧೪

ಮುಂದೆ ಫಾರ್ಸಿ ಮತ್ತು ಅರಬ್ಬೀ ವ್ಯಾಪಾರಿಗಳು ಭಾರತದ ಪಶ್ಚಿಮ ಕರಾವಳಿಯ ವಿವಿಧ ಬಂದರುಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಇಳಿದು ಸ್ಥಳೀಯ ಸ್ತ್ರೀಯರನ್ನು ಮದುವೆಯಾಗಿ ಇಲ್ಲೆ ನೆಲೆನಿಂತರು. ಕ್ರಿ.ಶ. ೯ನೇ ಹಾಗೂ ೧೦ನೇ ಶತಮಾನದ ಅರಬ್ ಬರಹಗಾರರಾದ ಇಡನಕುರ್ದದ್‌ಬಾ ಮತ್ತು ಹೌಕಲ್‌ರ ಬರಹಗಳಲ್ಲಿ ಅರಬ್ ವ್ಯಾಪಾರ ಬೆಳೆದು ಬಂದ ವಿಚಾರ ತಿಳಿಯಬಹುದಾಗಿದೆ.

ರಾಷ್ಟ್ರಕೂಟರು ಪೌರಾತ್ಯ ರಾಷ್ಟ್ರಗಳು ಮತ್ತು ಪೂರ್ವ ಕರಾವಳಿ ಪ್ರದೇಶಗಳ ಮೇಲೆ ನಿಯಂತ್ರಣವಿಟ್ಟುಕೊಂಡಿದ್ದ ಚೋಳರನ್ನು ದಮನ ಮಾಡಿದರು. ಇದಕ್ಕೆ ಪಾಂಡ್ಯರು, ಚೇರರು ಮತ್ತು ಸಿಂಹಳದ ಅರಸರು ಬೆಂಬಲಿಸಿದ್ದರು. ಇವರ ಕಾಲದಲ್ಲಿಯೂ ಅರಬ್ಬರು ಆತ್ಮೀಯರಾಗಿದ್ದು ತಮ್ಮ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಆರಂಭಿಕ ಹಂತದ ಅರಬ್ಬರ ವ್ಯಾಪಾರಿಗಳು ದಕ್ಷಿಣಭಾರತದ ಅರಸರ ಪ್ರೋತ್ಸಾಹ ಹಾಗೂ ರಾಜಾಶ್ರಯವನ್ನು ಪಡೆದಿದ್ದ ಬಗ್ಗೆ ದಾಖಲೆಗಳು ಕಂಡುಬರುತ್ತವೆ. ಕ್ರಿ.ಶ. ೯೨೬ರ ಥಾಣ ಜಿಲ್ಲೆಯಲ್ಲಿನ ಶಾಸನದ ಉಲ್ಲೇಖದಂತೆ ತಾಜಿಕ(ಅರಬ್ಬಿ)ನೊಬ್ಬ ರಾಷ್ಟ್ರಕೂಟರ ಪ್ರಾಂತ್ಯಾಧಿಕಾರಿಯಾಗಿ ನೇಮಕನಾಗಿದ್ದನು. ಈ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದು, ೩ನೇ ಇಂದ್ರನ ಕಾಲಕ್ಕೆ ಸಂಬಂಧಿಸಿದ್ದಾಗಿದೆ.[೩] ತುಜಿಕಾಸ್ ಮತ್ತು ತುರುಸ್ಕಾಸ್ ಎಂಬ ವ್ಯಾಪಾರಿ ವರ್ಗವು ಭಾರತದ ವಿವಿಧ ಭಾಗಗಳಲ್ಲಿ ಕಂಡುಬರುತ್ತಿದ್ದರು.[೪] ಕದಂಬರ ಆಳ್ವಿಕೆಯಲ್ಲಿ ಮುಸ್ಲಿಂ ಗವರ್ನರ್‌ನಾಗಿ ಮುಸ್ಲಿಂ ವರ್ತಕನನ್ನು ನೇಮಕ ಮಾಡಿದ್ದರು. ಮಹಮ್ಮದ್ ಎಂಬ ವ್ಯಕ್ತಿಯು ಆಡಳಿತಗಾರನಾಗಿ ಸೇವೆಸಲ್ಲಿಸಿದ್ದನು.[೫] ಈತನು ಸಂಯಾನ ಎಂಬ ಪ್ರದೇಶದ ಮೇಲೆ ಹಿಡಿತವನ್ನು ಸಾಧಿಸಿದ್ದನು. ಅಲ್ಲದೆ ಧಾರ್ಮಿಕತೆಯಲ್ಲಿ ಸಾಮರಸ್ಯವಾದಂತಹ ಮನೋಭಾವನೆಯನ್ನು ಹೊಂದಿದ್ದನು. ಇದಕ್ಕೆ ಮಹಮ್ಮದ್ ಕಾನದುಕ ಎಂಬ ಗ್ರಾಮದ ದೇವಾಲಯಕ್ಕೆ ಆ ಪ್ರದೇಶವನ್ನು ದಾನ ಮಾಡಿದನು ಎಂಬ ಉಲ್ಲೇಖ ಶಾಸನದಲ್ಲಿ ಕಂಡುಬರುತ್ತದೆ.[೬] ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಮುಸ್ಲಿಂ ವರ್ತಕರು ತಮ್ಮ ವ್ಯಾಪಾರವಹಿವಾಟಿಗೆ ಯಾವುದೇ ಅಡ್ಡಿ ಆತಂಕಗಳು ಇರಲಿಲ್ಲವೆಂದು ಅಲ್‌ಇದ್ರೀನಿ ತಿಳಿಸಿದ್ದಾನೆ. ೧೦೫೪ರ ಶಾಸನವೊಂದು ಗೋವಾದ ಕದಂಬ ರಾಜ ಒಂದನೇ ಜಯಕೇಶಿಯ ಅಂಗರಕ್ಷಕ ದಳದ ಮುಖ್ಯಸ್ಥ ಅರಬ್ಬಿ ವರ್ತಕನೆಂಬ ದಾಖಲೆಗಳಿವೆ.

ಅರಬ್‌ನಲ್ಲಿ ಖಲೀಫ ಅಬ್ಬಾಸಾಯಿದ್ ವಿದೇಶಿ ವ್ಯಾಪಾರಕ್ಕೆ ಉತ್ತೇಜನ ನೀಡಿ, ಇಸ್ಲಾಂ ಧರ್ಮದ ಪ್ರಚಾರ ಕಾರ್ಯವನ್ನು ಕೈಗೊಂಡನು. ಅಬ್ಬಾಸಾಯಿದ್‌ನ ನೇತೃತ್ವದಲ್ಲಿ ಇದ್ದಂತಹ ವರ್ತಕರು ಪರ್ಶಿಯಾ ಮತ್ತು ಭಾರತದ ಕರಾವಳಿ ತೀರಪ್ರದೇಶಗಳಲ್ಲಿ ತಮ್ಮ ಮುಸ್ಲಿಂ ವಸಾಹತು ನೆಲೆಗಳನ್ನು ಸ್ಥಾಪಿಸಿದರು. ಅರಬ್‌ರಲ್ಲಿ ಖಲೀಫ ಅಬ್ಬಾಸಾಯಿದ್ ಪ್ರಾಂತ್ಯಗಳಲ್ಲಿ ನಾಲ್ಕು ಪ್ರಮುಖ ಸಾಂಪ್ರದಾಯಿಕ ಒಳಪಂಗಡಗಳನ್ನು ಹೊಂದಿದ್ದವು. ಅವು ಮಾಲಿಕತ್, ಹನಫಿ, ಶಫಿಯಾ, ಮತ್ತು ಹನ್‌ಬಲಿ ಒಳಪಂಗಡಗಳಾಗಿ ಕಂಡುಬಂದಿದ್ದು ಇವು ಸುನ್ನಿ ಪಂಥಕ್ಕೆ ಸೇರಿದವುಗಳಾಗಿದ್ದವು. ಈ ನೆಲೆಯಲ್ಲಿ ಭಾರತದಲ್ಲಿ ನೆಲೆಸಿದ್ದ ಅರಬ್ ವರ್ತಕರು ಈ ಧಾರ್ಮಿಕ ಅನುಯಾಯಿಗಳ ಪ್ರಭಾವಕ್ಕೆ ಒಳಗಾಗಿ ಇಸ್ಲಾಂ ಧರ್ಮ ಸ್ವೀಕರಿಸಿದರು. ಇದರ ಮುಖಾಂತರ ಸ್ಥಳೀಯ ಜನಸಮೂಹವು ಈ ಧರ್ಮದ ಪ್ರಭಾವಕ್ಕೆ ಒಳಗಾಗಿ ಮತಾಂತರ ಹೊಂದಿದ್ದರು. ಪರಿಣಾಮವಾಗಿ ಅಧಿಕ ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯಗಳು ಈ ಭಾಗಗಳಲ್ಲಿ ಕಂಡುಬಂದವು.

ಇಸ್ಲಾಂ ಧರ್ಮ ಸ್ಥಾಪನೆಯಾದ ಹಲವು ದಶಕಗಳ ನಂತರದಲ್ಲಿ ಕರಾವಳಿ ಪ್ರದೇಶದಲ್ಲಿ ನೆಲೆನಿಂತ ಮುಸ್ಲಿಂ ವರ್ತಕರು, ಧಾರ್ಮಿಕ ಮಿಷನರಿಗಳಿಂದ ಈ ಪ್ರದೇಶದಲ್ಲಿ ಇಸ್ಲಾಂ ಧರ್ಮವು ವಿಸ್ತರಿಸಿಕೊಳ್ಳುತ್ತಾ ಹೋಯಿತು. ಇದರ ಪರಿಣಾಮವಾಗಿ ಸ್ಥಳೀಯ ಸಮುದಾಯಗಳು ರೂಪುಗೊಂಡವು. ಒಟ್ಟೋಮನ್ ಥಾಖಿಫಿ ಭಾರತಕ್ಕೆ ಬಂದ ಮೊದಲ ಮುಸ್ಲಿಮನು. ಈತನು ಕ್ರಿ.ಶ. ೬೩೬ರಲ್ಲಿ ಮಲಬಾರಿನ ಚೇರ್‌ಮನ್ ಆಸ್ಥಾನಕ್ಕೆ ಭೇಟಿ ನೀಡಿದ್ದನು. ಭಾರತದಲ್ಲಿ ಮೊಟ್ಟಮೊದಲ ಮಸೀದಿಯು ಸ್ಥಾಪಿತವಾಗಿದ್ದು ಕ್ರಿ.ಶ. ೬೨೯ರಲ್ಲಿ ಮಲಿಕ್‌ದಿನಾರ್‌ನಿಂದ ಕಟ್ಟಲ್ಪಟ್ಟಿತು.[೭] ಕ್ರಿ.ಶ. ೬೪೪ರಲ್ಲಿ ಮಲಬಾರ್ ಕರಾವಳಿಯ ಬಾರಕೂರ್ ಪ್ರದೇಶದಲ್ಲಿ ಮಲ್ಲಿಕ್–ಇಬನ್–ಹಚೀಬ್‌ನಿಂದ ಮಸೀದಿಯು ಸ್ಥಾಪಿತವಾಯಿತು. ಬಾರಕೂರನಲ್ಲಿ ಮಸೀದಿ ಕಟ್ಟಿಸಿ ಈ ಮಸೀದಿಯ ಮೇಲ್ವಿಚಾರಕನಾಗಿ ತನ್ನ ಮಗನಾದ ಇಬ್ರಾಹಿಮ್ ಇಬನ್ ಮಲಿಕ್‌ನನ್ನು ಖಾಜಿಯನ್ನಾಗಿ ನೇಮಿಸಿದನು. ನಂತರ ಬಾರಕೂರಿನಿಂದ ಮಂಗಳೂರಿಗೆ ಪ್ರಯಾಣ ಮಾಡಿ ಇಲ್ಲಿಯೂ ಒಂದು ಮಸೀದಿಯನ್ನು ನಿರ್ಮಿಸಿದನು. ಇಲ್ಲಿ ತನ್ನ ಇನ್ನೊಬ್ಬ ಮಗನಾದ ಮೂಸ ಇಬನ್ ಮಲಿಕ್‌ನನ್ನು ಖಾಜಿಯನ್ನಾಗಿ ನೇಮಕ ಮಾಡಿ, ಕಾಸರಗೂಡಿನಲ್ಲಿ ಕ್ರಿ.ಶ. ೬೪೪ರಲ್ಲಿ ಮಸೀದಿಯನ್ನು ನಿರ್ಮಾಣ ಮಾಡಿದನು. ಈ ರೀತಿಯಾಗಿ ಕ್ರಿ.ಶ. ೭ನೇ ಶತಮಾನದ ವೇಳೆಗೆ ಅತೀ ವೇಗದಲ್ಲಿ ಈ ಧರ್ಮ ಅನುಯಾಯಿಗಳ ಮೂಲಕ ಇಸ್ಲಾಂ ಧರ್ಮ ಹಬ್ಬಿತು. ಈ ಅನುಯಾಯಿಗಳಿಗೆ ಆ ಸಂದರ್ಭದಲ್ಲಿ ಆಳ್ವಿಕೆ ಮಾಡುತ್ತಿದ್ದ ರಾಜಪ್ರಭುತ್ವಗಳಿಂದ ಒಳಗಾಗಿ ಕೆಲವು ಪ್ರಭುತ್ವಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಉದಾಹರಣೆಯು ಸಹ ಕಂಡುಬರುತ್ತದೆ. ಆರ್.ಸಿ. ಮಜುಂದಾರ್ ಪ್ರಕಾರ ದಕ್ಷಿಣ ಭಾರತ ಮತ್ತು ಸಿಲೋನಿನಲ್ಲಿ ಇಸ್ಲಾಮಿ

ಪ್ರಭಾವವು ಕ್ರಿ.ಶ. ೭ನೇ ಶತಮಾನದಲ್ಲಿತ್ತು ಎಂದಿದ್ದಾನೆ. ಕ್ರಿ.ಶ. ೮೧೫ರಲ್ಲಿ ಕೋಡಂಗಲ್ಲಿನ ದೊರೆ ಪೆರುಮಾಳನು ಇಸ್ಲಾಂ ಧರ್ಮವನ್ನು ಸ್ವೀಕರಿಸಿ, ಮದೀನಾಕ್ಕೆ ಹೋಗಿ ಅಲ್ಲಿಂದ ಕಾಸರಗೂಡಿಗೆ ಮಲ್ಲಿಕ್-ಬಿನ್-ದೀನಾರ್ ಮುಸ್ಲಿಂ ಧಾರ್ಮಿಕ ಅನುಯಾಯಿಯನ್ನು ಕಾಸರಗೂಡಿಗೆ ಕಳುಹಿಸಿದನು. ಮಲ್ಲಿಕ್-ಬಿನ್-ದಿನಾರ್ ಮತ್ತು ಅವನ ಅನುಯಾಯಿಗಳು ಕರಾವಳಿಯುದ್ದಕ್ಕೂ ಮತಪ್ರಚಾರ ಮಾಡಿದರು. ಹಾಗೆಯೇ ಚೇರುಮನ್ ಪೆರುಮಾಳನ ನಂತರ ಬಂದ ೧ನೇ ಜಾಮೋರಿನ್ ದೊರೆ ತನ್ನ ರಾಜ್ಯದಲ್ಲಿ ಇಸ್ಲಾಮಿನ ಪ್ರಸಾರಕ್ಕೆ ಉತ್ತೇಜನ ನೀಡಿದ್ದನು. ಹೀಗೆ ದಕ್ಷಿಣ ಭಾರತದಲ್ಲಿ ಮುಸ್ಲಿಂ ಧರ್ಮವು ಪ್ರಭುತ್ವದ ಮೇಲೆ ಹಾಗೂ ಜನ ಸಾಮಾನ್ಯರ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿತ್ತು. ಹೀಗೆ ಅರಬ್ ಮತ್ತು ಪರ್ಶಿಯಾ ಮೂಲದಿಂದ ಭಾರತಕ್ಕೆ ಆಗಮಿಸಿದ ಮುಸ್ಲಿಮರು, ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಹೊಸ ಹೊಸ ಸಮುದಾಯಗಳ ರೂಪದಲ್ಲಿ ಗುರುತಿಸಿಕೊಂಡರು. ಇವುಗಳಲ್ಲಿ ವ್ಯಾಪಾರದ ಹಿನ್ನೆಲೆಯಲ್ಲಿ ಭಾರತಕ್ಕೆ ಬಂದ ಈ ಸಮುದಾಯಗಳು ವೃತ್ತಿ ಆಧಾರಿತ ಹಿನ್ನೆಲೆಯಲ್ಲಿಯೇ ಸಮುದಾಯಗಳ ರೂಪದಲ್ಲಿ ಗುರುತಿಸಿಕೊಂಡರು. ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತದಲ್ಲಿ ಕಂಡು ಬರುವ ಮುಸ್ಲಿಂ ಸಮುದಾಯಗಳೆಂದರೆ ಮಾಪಿಳ್ಳೆ, ಮರಕ್ಕರ್, ನವಾಯತ್, ಕೋಯಾ, ತುಳುಕ್ಕರ್, ಲಬ್ಬೆ, ನಾಹ(Naha), ಕೋಯಾಸ್(Kayas), ಬ್ಯಾರಿಗಳು,[೮] ಮುಖ್ಖದಂ, ದಖ್ಖನಿಗಳು. ಇವು ಸ್ಥಳೀಯವಾಗಿ ಗುರುತಿಸಿಕೊಂಡ ಸಮುದಾಯಗಳಾಗಿದ್ದು, ವ್ಯಾಪಾರಸ್ಥರಾಗಿ, ಉದ್ದಿಮೆದಾರರಾಗಿ, ಕುಶಲಕರ್ಮಿಗಳಾಗಿ ತಮ್ಮ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರು. ಹೀಗೆ ಈ ಸಮುದಾಯಗಳು ವಿಶೇಷವಾಗಿ ದಕ್ಷಿಣ ಭಾರತದ ಕರಾವಳಿ ಉದ್ದಕ್ಕೂ ಕಂಡುಬಂದವು. ಆ ಮೂಲಕ ಭಾರತೀಯ ಸಂಸ್ಕೃತಿಯೊಳಗಡೆ ತಮ್ಮ ಸಂಸ್ಕೃತಿಯನ್ನು ಹುಟ್ಟು ಹಾಕಿದರು.

ಈ ರೀತಿಯಾಗಿ ಜಾಗತಿಕ ಮಟ್ಟದಲ್ಲಿ ಪ್ರಭುತ್ವ ಮತ್ತು ಆರ್ಥಿಕತೆಯಲ್ಲಿ ಉಂಟಾದ ಸ್ಥಿತ್ಯಂತರಗಳು ಭಾರತದ ಪ್ರಭುತ್ವ, ಆರ್ಥಿಕ ಹಾಗೂ ಸಂಸ್ಕೃತಿಯ ಮೇಲೆ ಅನೇಕ ಪರಿಣಾಮಗಳನ್ನು ಬೀರುತ್ತವೆ. ಈ ಹಿನ್ನೆಲೆಯಲ್ಲಿ ವಿಜಯನಗರ ಪೂರ್ವದಲ್ಲಿಯೇ ಕಂಡುಬರುವ ಮುಸ್ಲಿಂ ಸಮುದಾಯಗಳು ಭಾರತದ ಆರ್ಥಿಕತೆಯಲ್ಲಿ ಹಾಗೂ ಪ್ರಭುತ್ವಗಳ ಸಂದರ್ಭಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದವು. ಭಾರತದಲ್ಲಿ ವರ್ತಕರಾಗಿ ಕಾಣಿಸಿಕೊಂಡ ಇವುಗಳು ಹಂತ ಹಂತವಾಗಿ ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಹಲವಾರು ವೃತ್ತಿಗಳಲ್ಲಿ ತೊಡಗಿಸಿಕೊಂಡರು. ಇದಕ್ಕೆ ಪೂರಕವಾಗಿ ವರ್ತಕರು, ವರ್ತಕ ಶ್ರೇಣಿಗಳು, ಆಮದು ಮತ್ತು ರಫ್ತು ವ್ಯಾಪಾರ, ಸಾಗಾಣಿಕೆಯ ಸೌಕರ್ಯಗಳು ಹೀಗೆ ಆರ್ಥಿಕ ರೂಪಾಂತರ, ವರ್ತಕ ಸಂಘಗಳ ಪಾತ್ರ ಮುಂತಾದವುಗಳು ಕಂಡುಬಂದವು.

ಅರಬ್ಬರು ಮತ್ತು ಪರ್ಶಿಯನ್ನರು ಕ್ರಿ.ಶ. ೪ನೇ ಶತಮಾನದಿಂದ ಹಿಡಿದು ೧೫ನೇ ಶತಮಾನದವರೆಗೆ ಜಾಗತಿಕ ಮಟ್ಟದ ಸಮುದ್ರ ವ್ಯಾಪಾರದ ಮೇಲೆ ಹಾಗೂ ಭಾರತದೊಂದಿಗೆ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಹಿಡಿದಿಟ್ಟುಕೊಂಡಿದ್ದರು. ನಂತರದಲ್ಲಿ ಕ್ರಿ.ಶ. ೧೪ನೇ ಶತಮಾನದಲ್ಲಿ ಟರ್ಕರ ಪತನಾನಂತರ ಯುರೋಪಿಯನ್ನರು ಭಾರತಕ್ಕೆ ಪ್ರವೇಶ ಪಡೆದರು. ಇಲ್ಲಿಂದಾಚೆಗೆ ಅರಬ್ಬರು ಹೊಂದಿದ್ದ ವ್ಯಾಪಾರದ ಏಕಸ್ವಾಮ್ಯತೆಯೂ ಕೈತಪ್ಪಿ ಹೋಗಿದ್ದರಿಂದ ಈ ಪ್ರದೇಶದಲ್ಲಿ ತಮ್ಮ ಪ್ರಾಬಲ್ಯವು ಕಡಿಮೆಯಾಯಿತು. ಮಧ್ಯಕಾಲೀನ ಭಾರತದ ಚರಿತ್ರೆಯಲ್ಲಿ ಈ ಸಮುದಾಯಗಳ ಅಸ್ಮಿತೆ ಹಾಗೂ ಸ್ಥಿತ್ಯಂತರಗಳ ಅಧ್ಯಯನಗಳನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕ್ರಿ.ಶ. ೧ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದ ಕಾಲಾವಧಿಯವರೆಗಿನ ಮುಸ್ಲಿಂ ಸಮುದಾಯಗಳ ಚಾರಿತ್ರಿಕತೆಯನ್ನು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಪೂರ್ವದವರೆಗೆ ಹೇಗೆ ಇತ್ತು ಎಂಬುದನ್ನು ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮುಸ್ಲಿಂ ಸಮುದಾಯಗಳು ವಿಜಯನಗರ ಪೂರ್ವದಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ ತಮ್ಮ ಸ್ಥಾನವನ್ನು ಪಡೆದುಕೊಂಡಿದ್ದನ್ನು ಇಲ್ಲಿ ಗುರುತಿಸಬಹುದು. ಈ ಮೇಲಿನ ವಿವರಣೆಯಿಂದ ಭಾರತದಲ್ಲಿ ನೆಲೆನಿಂತ ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ಎರಡು ಬಗೆಯಾಗಿ ವಿಭಾಗಿಸಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ. ಒಂದು ದಕ್ಷಿಣ ಭಾರತದಲ್ಲಿ ವ್ಯಾಪಾರದ ಹಿನ್ನೆಲೆಯಲ್ಲಿ ಭಾರತಕ್ಕೆ ಬಂದು ನೆಲೆಸಿದ ಮುಸ್ಲಿಂ ಸಮುದಾಯಗಳು. ಎರಡನೆಯದಾಗಿ ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದು ನೆಲೆಸಿದ ಮುಸ್ಲಿಂ ಸಮುದಾಯಗಳು. ವಿಜಯನಗರ ಚರಿತ್ರೆ ರಚನೆಯಲ್ಲಿ ಮುಸ್ಲಿಂ ಸಮುದಾಯಗಳು ಎರಡು ರೀತಿಯಾಗಿ ಗುರುತಿಸಬಹುದು. ಒಂದು ಪ್ರಭುತ್ವ ಕೇಂದ್ರಿತದಲ್ಲಿ ರಚನೆಯಾದ ಮುಸ್ಲಿಂ ಸಮುದಾಯಗಳು, ಇನ್ನೊಂದು ವೃತ್ತಿಯಾಧಾರಿತ ಅಥವಾ ಜನಸಾಮಾನ್ಯ ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳು. ಇವು ಅರಬ್ ಮತ್ತು ಪರ್ಶಿಯಾ ಮೂಲಗಳಿಂದ ಬಂದ ಮುಸ್ಲಿಂ ಸಮುದಾಯಗಳಾಗಿದ್ದು ತಮಿಳುನಾಡು, ಕೇರಳ ಮತ್ತು ಶ್ರೀಲಂಕಾ, ಕರ್ನಾಟಕ, ಆಂಧ್ರ ಪ್ರದೇಶಗಳಲ್ಲಿ ವಿಸ್ತರಣೆಗೊಳ್ಳುತ್ತಾ ಬಂದರು.

ಸಾಮಾನ್ಯ ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ಬೈದಾರ್ಸ್(ಕಲ್ಲುಕುಟಿಕ), ತಕರಾಸ್, ಮೊಮಿನ್ಸ್, ಪಿಂಜಾರ, ಲದಾಫ್, ದುದೆಕುಲಾ, ಮಾನಯಾರ, ಅತ್ತಾರ, ಪಟವೇರ, ಕಾಜಿ, ಕಲೈಗಾರ, ನಲಬಂದ, ಭಾದುನಜಾರ, ಚಪ್ಪರ್‌ಬಂದ್, ಕಸ್ಸಬ್, ಲಬ್ಬೇಸ್, ಬಾಗಬಾನ್.[೯] ಅಧ್ಯಯನದ ಅವಧಿಯಲ್ಲಿ ಸಿಕ್ಕಂತಹ ಕೆಲವು ಆಧಾರಗಳಿಂದ ಮಧ್ಯಕಾಲೀನ ಭಾರತದ ಸಂದರ್ಭದಲ್ಲಿನ ಸ್ಥಳೀಯ ಸಮುದಾಯಗಳನ್ನು ಹೀಗೆ ಗುರುತಿಸಬಹುದಾಗಿದೆ. ಪ್ರಭುತ್ವ ಕೇಂದ್ರಿತ ಹಿನ್ನೆಲೆಯಲ್ಲಿ ಮೇಲ್ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ಅಫಕಿಸ್, ದಖ್ಖನಿ, ಅಜಮಿಸ್, ಅರಬ್ಬರು, ಹಬಷಿಯರು, ತುರ್ಕರು, ಅಫಘಾನರು, ಶೇಖರು ಮತ್ತು ಸಯ್ಯದರು, ಪಠಾಣರು, ಸೈಯ್ಯಿದ್‌ಗಳು ಕಂಡುಬರುವರು. ವಿದ್ವಾಂಸರ ವರ್ಗದಲ್ಲಿ ಕಂಡುಬರುವ ಸಮುದಾಯಗಳೆಂದರೆ, ಪೊನ್ನಾನಿನ ಮುಖ್ದಂ, ಬಫಕೀರರು, ಜಫರೀರು ಪ್ರಮುಖವಾಗಿವೆ. ಈ ಸಮುದಾಯಗಳು ಅರಬ ಮೂಲದವರಾಗಿ ಕೇರಳದಲ್ಲಿ ಬಂದು ನೆಲೆನಿಂತವರು.

ಹೀಗೆ ಈ ಮೇಲಿನ ಎಲ್ಲಾ ಪ್ರಮುಖ ಸಮುದಾಯಗಳು ವಿಜಯನಗರ ಪೂರ್ವದಲ್ಲಿ ಕಂಡುಬಂದಿದ್ದು, ಈ ಸಮುದಾಯಗಳು ವಿಜಯನಗರ ಆಡಳಿತಾವಧಿಯಲ್ಲಿಯೂ ಸಹ ಹಾಗೆಯೇ ಮುಂದುವರೆದವು. ಮಧ್ಯಕಾಲೀನ ಭಾರತದ ಜನ ಕೇಂದ್ರಿತ ಚರಿತ್ರೆಯಲ್ಲಿ ಮುಸ್ಲಿಂ ಸಮುದಾಯಗಳು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಪ್ರದೇಶಗಳ ಮೂಲಕ ಭಾರತಕ್ಕೆ ಪ್ರವೇಶ ಪಡೆದವು. ಅಂತಹವುಗಳಲ್ಲಿ ಕೆಲವು ಉತ್ತರಭಾರತದಿಂದ ಪ್ರಭುತ್ವ ಕೇಂದ್ರಿತ ಹಿನ್ನೆಲೆಯಿಂದ ಬಂದವು. ಹಾಗೆಯೇ ದಕ್ಷಿಣ ಭಾರತಕ್ಕೆ ವ್ಯಾಪಾರದ ಹಿನ್ನೆಲೆಯಲ್ಲಿ ಕೆಲವು ಸಮುದಾಯಗಳು ಆಗಮಿಸಿದವು. ಇನ್ನೂ ಕೆಲವು ಧಾರ್ಮಿಕ ನೆಲೆಗಟ್ಟಿನಲ್ಲಿ ಬಂದರೂ, ತಮ್ಮದೇ ಆದಂತಹ ವೈಶಿಷ್ಟ್ಯತೆಯನ್ನು ಹೊಂದಿದ್ದವು. ಮುಸ್ಲಿಂ ಸಮುದಾಯಗಳಲ್ಲಿ ಸೂಫಿಗಳು, ಉಲೇಮಾಗಳು, ವರ್ತಕರು, ಕುಶಲಕರ್ಮಿಗಳು, ಕೃಷಿಕರು ಹೀಗೆ ವಿವಿಧ ವೃತ್ತಿಯಾಧಾರಿತವಾಗಿ ಅನೇಕರು ಏಳಿಗೆಗೆ ಬಂದರು.

ಅಡಿಟಿಪ್ಪಣಿಗಳು

೧. ವಿಕ್ಟರ್ ಎಸ್. ಡಿಸೋಜ್, ದಿ ನವಾಯತ್ಸ್ ಆಫ್ ಕೆನರಾ, ಕನ್ನಡ ರಿಸರ್ಚ್ ಇನ್ಸ್‌ಟಿಟ್ಯೂಟ್, ಧಾರವಾಡ, ೧೯೯೫, ಪು. ೫-೭.

೨. ವಸಂತ ಮಾಧವ್ ಕೆ.ಜಿ., ರಿಲಿಜಿಯಸ್ ಇನ್ ಕೋಸ್ಟಲ್ ಕರ್ನಾಟಕ, ನ್ಯೂಡೆಲಿ, ೧೯೮೫, ಪು. ೪.

೩. ಎಪಿಗ್ರಾಫಿಯ ಇಂಡಿಕ. ಸಂ. ೩೨, ಶಾ.ಸಂ. ೪ ಪು. ೫೫-೫೮.

೪. ಗೋಪಾಲ ಎಲ್., ದ ಎಕಾನಾಮಿಕ್ ಲೈಫ್ ಆಫ್ ನಾರ್ಥನ್ ಇಂಡಿಯಾ, ಪು. ೧೧೩-೧೧೫.

೫. ವಸಂತ ಮಾಧವ್ ಕೆ.ಜಿ., ಪೂರ್ವೋಕ್ತ, ಪು. ೩೬.

೬ ಎಪಿಗ್ರಾಫಿಯ ಇಂಡಿಕ. ಪೂರ್ವೋಕ್ತ, ಪು. ೪.

೭. ವಹಾಬ್ ದೊಡ್ಡಮನೆ ಎ., ಮುಸ್ಲಿಂ ಇನ್ ದಕ್ಷಿಣ ಕನ್ನಡ, ಗ್ರೀನ್ ವರ್ಡ್ಸ್ ಪಬ್ಲಿಕೇಷನ್ಸ್, ೧೯೯೩, ಪು. ೨೫.

೮. ವಿಕ್ಟರ್ ಎಸ್. ಡಿಸೋಜ್, ದಿ ನವಾಯತ್ಸ್ ಆಫ್ ಕೆನರಾ, ಕನ್ನಡ ರಿಸರ್ಚ್ ಇನ್ಸ್‌ಟಿಟ್ಯೂಟ್, ಧಾರವಾಡ, ೧೯೯೫, ಪು.೧೫-೨೦.

೯. ಸೈಯದ್ ಆಜಂ, ಮುಸ್ಲಿಂ ಸೊಸೈಟಿ ಇನ್ ಮಿಡಿವೆಲ್ ಕರ್ನಾಟಕ, ಯೂನಿವರ್ಸಿಟಿ ಆಫ್ ಮೈಸೂರು, ೧೯೮೬, ಪು. ೫೬.

ಅರಮನೆ ಜಿಲ್ಲೋ ಕಛೇರಿ ದಾಖಲೆಗಳು

ಜೆ.ವಿ. ಗಾಯತ್ರಿ*

ಮೈಸೂರು ಸಂಸ್ಥಾನವನ್ನಾಳಿದ ಒಡೆಯರ್‌ರವರ ಅಳ್ವಿಕೆಗೆ ಸಂಬಂಧಿಸಿದ ಸಹಸ್ರಾರು ದಾಖಲೆಗಳು ಮೈಸೂರು ಪತ್ರಾಗಾರದಲ್ಲಿ ಲಭ್ಯವಿದೆ. ಇವು ಮೈಸೂರು ಅರಸು ಮನೆತನದ ಇತಿಹಾಸ ಅವರ ಸಾಮಾಜಿಕ ಸಾಂಸ್ಕೃತಿಕ ಕೊಡುಗೆ, ಅಡಳಿತಾತ್ಮಕ ಸುಧಾರಣೆಗಳು ಮತ್ತು ರಾಜಕೀಯ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಉಪಯುಕ್ತ ಸಂಶೋಧನಾ ಸಾಮಾಗ್ರಿಗಳಾಗಿವೆ. ಈ ಪೈಕಿ ಅರಮನೆ ಜಿಲ್ಲಾ ಕಛೇರಿ ದಾಖಲೆಗಳು ಮೈಸೂರು ಮಹಾರಾಜರ ಅಡಳಿತ ಕಾಲದ ವಿಶೇಷವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಮತ್ತು ಜಯಚಾಮರಾಜ ಒಡೆಯರ್‌ರವರ ಕಾಲದ ಪಹರೆ, ಅಂಗರಕ್ಷಕ ಕಾವಲು ಸಿಪಾಯಿಗಳು, ಅವರ ವೈಯಕ್ತಿಕ ಮನವಿಗಳು ಸಮವಸ್ತ್ರ ಕೋವಿ, ಬಂದೂಕುಗಳು, ಶಿಕಾರಿ, ವಾದ್ಯಗೋಷ್ಠಿ, ಮೈಸೂರಿನ ಗರಡಿಗಳು, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದವುಗಳಾಗಿದ್ದು ಸಂಶೋಧನೆಗೆ ಬಳಕೆ ಮಾಡಬಹುದಾಗಿದೆ. ಹೀಗೆ ೧೮೯೬ರಿಂದ ೧೯೬೧ರವರೆಗೆ ಲಭ್ಯವಿರುವ ೧೬೮ ಜಿಲ್ಲಾ ಕಛೇರಿ ಕಡತಗಳು ಅಂದಿನ ಕಾಲದ ಹಲವಾರು ಕುತೂಹಲಕಾರಿ ಮಾಹಿತಿ ನೀಡುತ್ತವೆ.

ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ನಿಧನದ ನಂತರ ೧೮೬೮ ರಲ್ಲಿ ಮೇಜರ್ ಈ ಅಯಟ್‌ರು ಮಾಡಿದ ಅರಮನೆ ಒಪ್ಪಂದದಂತೆ ಅರಮನೆ ಜಿಲ್ಲಾ ಕಛೇರಿಯು ಒಂದು ಬಹುಮುಖ್ಯ ಇಲಾಖೆಯಾಗಿದ್ದು ಅನೇಕ ಜವಾಬ್ದಾರಿಯುತ ಕೆಲಸಗಳನ್ನು ಇಲ್ಲಿ ನಿರ್ವಹಿಸಲಾಗುತ್ತಿದ್ದವರನ್ನು 'ಭಕ್ಷಿ' ಎಂದು ಕರೆಯಲಾಗುತ್ತಿದ್ದರು. ಹತ್ತನೆಯ ಚಾಮರಾಜ ಒಡೆಯರ್‌ರವರ ಸಂಬಂಧಿಕರಾಗಿದ್ದ ಎ.ಚಾಮಪ್ಪಾಜಿ ಅರಸ್ ರವರು ಬಹಳ ವರ್ಷಗಳು ಜಿಲ್ಲಾ ಕಛೇರಿಯ ಭಕ್ಷಿಯಾಗಿದ್ದು ೧೯೨೭ರಲ್ಲಿ ಅವರು ನಿಧನರಾದಾಗ, ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಸಂಬಂಧಿಕರಾದ ಸರ್ದಾರ್ ವಿ.ವಿ ಸುಬ್ರಮಣ್ಯರಾಜೇ ಅರಸ್ ರವರನ್ನು ಭಕ್ಷಿಯಾಗಿ ನೇಮಿಸಲಾಯಿತು.

ಪ್ರಾರಂಭದಲ್ಲಿ ಜಿಲ್ಲಾ ಕಛೇರಿಯು ಅರಮನೆ ಅರೆಸೈನ್ಯ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದು ರಾಜೇವಾರ್ ಮತ್ತು ಭಲ್ಲೆ ಸೇನಾ ಬಲಗಳನ್ನೊಳಗೊಂಡಿತ್ತು. ಕೋಟೆ ಬಾಗಿಲು ಮತ್ತು ಅರಮನೆಗೆ ಕಾವಲು ನೀಡುವ ಕಿಲ್ಲೇಕಛೇರಿಯ ಒಂದು ಅರೆಸೇನಾಬಲಿ ಜಿಲ್ಲೋ ಕಛೇರಿಯ ಸುಪರ್ದಿನಲ್ಲಿತ್ತು. ಅರಮನೆಯ ಒಳ ಅವರಣಗಳಲ್ಲಿ ಮಾತ್ರ ನೇಮಿಸಲಾಗುತ್ತಿತ್ತು. ಭಲ್ಲೆ (ಈಟಿ ಸೈನಿಕರು)ಗಳು ಅರಮನೆಯ ದ್ವಾರಗಳಲ್ಲಿ ಕಾವಲಿನ ಕೆಲಸ ಮಾಡುತ್ತಿದ್ದರೂ, ವಿಶೇಷವಾಗಿ ಇವರು ಮಹಾರಾಜರ ರಾಣಿವಾಸದವರ ಮತ್ತು ರಾಜ ಬಂಧುಗಳ ಅಂಗರಕ್ಷಕರಾಗಿರುತ್ತಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ನಿಧನದ ನಂತರ (೧೮೬೮) ಜಿಲ್ಲಾ ಕಛೇರಿಯಲ್ಲಿ ೯೦ ರಾಜೇವಾರರು, ೨೧೦ ಭಲ್ಲೆ ಸೈನಿಕರು, ಮತ್ತು ಅರಮನೆ ವಾದ್ಯವೃಂದದೊಂದಿಗೆ ಸೇವೆ ಸಲ್ಲಿಸುತ್ತಿದ್ದರು. ದಸರಾ, ಮಹಾರಾಜರ ವರ್ಧಂತಿ, ಗಣ್ಯ ಅತಿಥಿಗಳ ಭೇಟಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಜಿಲ್ಲೋ ಕಛೇರಿಯ ೩೪೩ ಮಂದಿ ಸೈನಿಕರು ಬೆಂಗಾವಲು ನೀಡುತ್ತಿದ್ದರೆ, ಸಾಮಾನ್ಯ ದಿನಗಳಲ್ಲಿ ಖಾಸಜಿಲ್ಲಾದ ೪೨ ಮಂದಿ ಸೈನಿಕರು ರಾಜ ಮತ್ತು ರಾಣೀವಾಸದವರಿಗೆ ಬೆಂಗಾವಲು ನೀಡುತ್ತಿದ್ದರು. ರಾಜ ಮಂಶಸ್ಥರಲ್ಲಿ ಸಮೀಪದ ರಾಜ ಬಂಧುಗಳಿಗೆ ಮತ್ತು ಪರಕಾಲಿ ಮಠದ ಸ್ವಾಮಿಜಿಗಳಿಗೆ ಈ ಕಛೇರಿಯಿಂದ ಬೆಂಗಾವಲು ನೀಡಲಾಗುತ್ತಿತ್ತು.

ಜಿಲ್ಲೋ ಕಛೇರಿಯ ಮುಖ್ಯಸ್ಥನಾದ ಭಕ್ಷಿಯಡಿಯಲ್ಲಿ ರಾಜೇವಾರ್ ಮತ್ತು ಭಲ್ಲೆ ವಿಭಾಗಗಳಿದ್ದು, ರಾಜೇವಾರು ವಿಭಾಗವು ಒಬ್ಬ ಮೇಯರ್ ಹಾಗೂ ಒಬ್ಬ ಜಮಾದಾರ್‌ನ್ನು ಹಾಗೂ ಜಿಲ್ಲಾ ವಿಭಾಗವು ಒಬ್ಬ ತುಕಡಿದಾರ್ ಹಾಗೂ ಇಬ್ಬರು ರಿಸ್‌ಲಾದಾರ್‌ಗಳನ್ನು ಹೊಂದಿತ್ತು. ಭಲ್ಲೆಗಳನ್ನು ಖಾಸ್‌ಜಿಲ್ಲೋ ಗಾಗ್ರಿಜಿಲ್ಲೆ, ಕಟ್ಟಿನ ಭಲ್ಲೆ ಮತ್ತು ಬೆಳ್ಳಿ ರಾಜೇವಾರ್ ಭಲ್ಲೆಗಳೆಂದು ವಿಂಗಡಿಸಲಾಗಿತ್ತು. ಷಹಬ್ದಾರ್, ತೊಡಂಗದವರು, ಬಂದೂಕುದವರು, ಉಡಾಸ್ ಪಾವಡೆ ಮತ್ತು ಹಳೇ

* # ಎಫ್, ೨, ಶ್ರೀವರಕೃಷ್ಣ ಅಪಾರ್ಟ್‌ಮೆಂಟ್, ೩ನೇ ಮುಖ್ಯರಸ್ತೆ, ವಿ.ವಿ. ಮೊಹಲ್ಲಾ, ಮೈಸೂರು-೫೭೦೦೦೨. ಮೊ. ೯೪೪೮೨೪೭೯೧೪

ಪೈಕದವರು ಎಂಬ ಅತ್ಯಂತ ಹಳೆಯ ವಿಭಾಗವನ್ನು ಜಿಲ್ಲೋ ಕಛೇರಿಯಲ್ಲಿ ವಿಲೀನಗೊಳಿಸಲಾಗಿತ್ತು. ಈ ಹಳೆಯ ಪೈಕದವರು ಸಾಮಾನ್ಯವಾಗಿ ಕಾಲಾಳುಗಳಾಗಿದ್ದು ಸಡಿಲವಾದ ಚಲ್ಲಣ, ಉದ್ದನೆಯ ಬನಾತ್ ಕೋಟ್, ಸೊಂಟಕ್ಕೆ ಕಮ್ಮರ್‌ಬಂದ್, ತಲೆಗೆ ಕೆಂಪು ಪಾಗು ಧರಿಸುತ್ತಿದ್ದರು. ಇವರು ಉದ್ದನೆಯ ಮೀಸೆಗಳನ್ನು ಬಿಟ್ಟಿರುತ್ತಿದ್ದು, ಈ ಮೀಸೆಗಳ ನಿರ್ವಹಣೆಗಾಗಿ ಅರಮನೆಯಿಂದ ವಿಶೇಷ ಭತ್ಯೆ ನೀಡಲಾಗುತ್ತಿತ್ತು. ಈ ಹಳೆ ಪೈಕದ ಸೈನಿಕರು ಬಾಗಿರುವ ಖಡ್ಗಗಳನ್ನು ಉಪಯೋಗಿಸುತ್ತಿದ್ದರು.

ಬ್ರಿಟಿಷ್ ಕಮಿಷನರ್ ಅಗಿದ್ದ ಸರ್ ಮಾರ್ಕ್ ಕಬ್ಬನ್‌ರವರು ೨೬ ಏಪ್ರಿಲ್ ೧೮೩೮ರಲ್ಲಿ ನೀಡಿದ ವರದಿಯಂತೆ ಈ ಹಳೆಪೈಕದವರು ಗ್ರಾಮದ ತಳವಾರ, ತೋಟಿ, ನೀರಗಂಟಿ ಕಾವಲುಗಾರ, ಕಟ್ಟಬಿಡಿ ಜವಾನ್, ಉಂಬ್ಲಿದಾರ ಅಮರಗಾರ ಹುಲಗಾವಲಿ, ಅಂಕಮಾಲ, ಕಳ್ಳಕೊರಮ, ಪಟೇಲ ಮತ್ತು ಶ್ಯಾನುಬೋಗರಂತೆ ಗ್ರಾಮದ ಪೋಲಿಸ್ ಕರ್ತವ್ಯಗಳನ್ನು ಮೈಸೂರು ಒಡೆಯರ್ ಕಾಲದಿಂದ ನಿರ್ವಹಿಸುತ್ತಿದ್ದು ಇವರ ಸೇವೆ ಹೈದರ್ ಆಲಿ, ಟಿಪ್ಪುಸುಲ್ತಾನ್ ಮತ್ತು ಪೂರ್ಣಯ್ಯನವರ ಆಡಳಿತ ಕಾಲದಲ್ಲೂ ಮುಂದುವರೆದಿರುವುದಾಗಿ ತಿಳಿದು ಬರುತ್ತದೆ. ಆಗ ಈ ಹಳೆಪೈಕದವರಿಗೆ ವೇತನಕ್ಕೆ ಬರಲಾಗಿ ಇನಾಂಭೂಮಿಯನ್ನೋ ದವಸವನ್ನೋ ಕೊಡಲಾಗುತ್ತಿತ್ತು. ಅಂದಿನ ನಗರ ದೇಶದಲ್ಲಿ ಈಚಲು ಮರದಿಂದ ಸಾರಾಯಿ ಇಳಿಸುವವರನ್ನು ಸಹ ಹಳೆ ಪೈಕದವರೆಂದು ಕರೆಯಲಾಗುತ್ತಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸಂಸ್ಥಾನದ ಅಡಳಿತ ವಹಿಸಿಕೊಂಡ ಸ್ವಲ್ಪ ವರ್ಷಗಳಲ್ಲಿಯೇ ಜಿಲ್ಲಾ ಕಛೇರಿಯ ರಾಚೇವಾರ್, ಭಲ್ಲೆ ಮತ್ತಿತರ ಸಿಬ್ಬಂದಿ ಸಂಖ್ಯೆ ೫೧೩೭ಕ್ಕೆ ಏರಿತು. ಇವರಲ್ಲಿ ೧೧೦೩ ರಾಚೇವಾರ್ ಹಾಗೂ ೩೮೬ ಭಲ್ಲೆ ಸೇನಾ ಬಲ, ೨೪ ಮಂದಿ ಸಿಬ್ಬಂದಿಗಳು ಸೇವೆ ಸಲ್ಲಿಸುತ್ತಿದ್ದರು. ರಾಚೇವಾರು ಸಿಬ್ಬಂದಿಗಳಲ್ಲಿ ಘಾಟ್‌ಹಜರ್ ಮತ್ತು ಪಹರೆ ಕಾವಲುಗಾರರು ಸೇರಿದ್ದರು. ಭಲ್ಲೆ ಸೇವಾದಲ್ಲಿ ಹಳೇಪೈಕದವರು ಕರ್ನಾಟಕ ವಾದ್ಯವೃಂದ, ಗನ್‌ಸೆಟ್, ರೌಸ್‌ಮಾರ್ಚ್, ಗಸ್ತಿವಾಲಗ ಕೊಂಬಿನವರು ಹಲಗೆಯವರು, ಅಂಗಸಾಧಕ ತರಬೇತಿದಾರ, ಪಹರೆಯವರು ಮತ್ತು ಘಟಹಜರ್ ಪಹರೆಯವರು ಇದ್ದರು.

ರಾಚೇವಾರದವರು ಅರಮನೆಯ ದಂತದ ತೊಟ್ಟಿ, ಕರೀಕಲ್ಲು ತೊಟ್ಟಿ, ಚಾಮುಂಡಿ ತೊಟ್ಟಿಗಳಿಗೆ ಪಹರೆ ನೀಡುತ್ತಿದ್ದುದಲ್ಲದೆ ರಾಜ ಪರಿವಾರದ ರಾಜಕುಮಾರಿಯರ ಭವನಗಳಾದ ಜಯಲಕ್ಷ್ಮಿವಿಲಾಸ, ಕಾರಂಜಿ ವಿಲಾಸ, ಚೆಲುವಾಂಬ ವಿಲಾಸ ಗಳಿಗೆ ಕಾವಲು ಸೇವೆ ಸಲ್ಲಿಸುತ್ತಿದ್ದರು, ಇದಲ್ಲದೆ ಪರಕಾಲಮಠ, ಮಿಲಟರಿ ಭಕ್ಷಿ ಮನೆ, ಎ.ವಿ. ಸುಬ್ರಮಣ್ಯರಾಜೇ ಅರಸ್‌ರ ನಿವಾಸ ದೇವ ಪಾರ್ಥೀವ ಬಹದ್ದೂರ್, ನಂಜರಾಜ ಬಹುದ್ದೂರ್ ಮುಂತಾದ ರಾಜ ಬಂಧುಗಳ ನಿವಾಸಗಳಿಗೆ ಪಹರೆ ಸೇವೆ ಒದಗಿಸುತ್ತಿದ್ದರು.

ಭಲ್ಲೆ ಸಿಪಾಯಿಗಳು ಯುವರಾಜರ ವಾಸಗೃಹ, ಲೋಕರಂಜನ್ ಮಹಲ್ (ಬೇಸಿಗೆ ಅರಮನೆ), ಚಾಮರಾಜೇಂದ್ರ ಮಾಗಾಲಯ, ಜಗನ್‌ಮೋಹನ್ ಅರಮನೆ, ಅರಮನೆ ಅಂಬಾವಿಲಾಸ, ಅರಮನೆ ಚಂದ್ರಶಾಲಾ ತೊಟ್ಟಿ, ಖಜಾನೆ, ಅರಮನೆ ದ್ವಾರಗಳು, ಅರಸು ಬೋರ್ಡಿಂಗ್ ಶಾಲೆ, ಕರೋಹಟ್ಟಿ, ಪೋಲೊ ಮೈದಾನ, ದಿವಾನ್ ಪಿ.ಎನ್. ಕೃಷ್ಣಮೂರ್ತಿ ಬಂಗಲೆ, ಖಾಸ ಬೃಂದಾವನ, ಎಂ. ಕಾಂತರಾಜಾ ಅರಸ್ ನಿವಾಸ, ರಾಣಾ ಸಾಹೇಬ್ ಬಂಗ್ಲೆ (ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಮಾವಂದಿರು), ತಾವರೆಕಟ್ಟೆ, ವಸಂತ ಮಹಲ್, ಸಾಲಗೇರಿ, ವುಡ್‌ಯಾರ್ಡ್ (ಸ್ಯಾಂಡಲ್ ಕೋಟಿ), ವಾದ್ಯವೃಂದ, ಅರಮನೆ ಕಂಟ್ರೋಲರ್ ಪಿ.ಎನ್. ನರಸಿಂಹಯ್ಯಂಗಾರ್, ಡಿ. ಸುಬ್ಬಯ್ಯ, ತುಕಡಿದಾರ್ ಚಂದ್ರಭಾನ್, ಲೆಫ್ಟಿನೆಂಟ್ ಹೀಲ್, ರಾಜಮ್ಮ, ಅರಮನೆಯ ಉನ್ನತ ಅಧಿಕಾರಿಗಳ ಬಂಗ್ಲೆಗಳಿಗೆ ಪಹರೆ ಒದಗಿಸುತ್ತಿದ್ದರು.

ಮುಂದೆ ಜಯಚಾಮರಾಜ ಒಡೆಯರ್‌ರವರ ಕಾಲದಲ್ಲಿ (೧೯೪೦) ಜಿಲ್ಲಾ ಕಛೇರಿಯು ಕಿಲ್ಲೇ ಕಛೇರಿ ಭಕ್ಷಿಯವರ ಸುಪರ್ದಿನಲ್ಲಿದ್ದು ಒಬ್ಬ ಭಕ್ಷಿ, ಒಬ್ಬ ಗುರಿಕಾರ್, ಒಬ್ಬ ಲೆಕ್ಕಪರಿಶೋಧಕ, ಮೂವರು ಗುಮಾಸ್ತರು, ಒಬ್ಬ ಉಗ್ರಾಣ ಪಾಲಕ, ಮೂವರು ವರದಿಗಳು ಮತ್ತು ಇಬ್ಬರು ತೈನಾಥ್‌ಗಳನ್ನೊಳಗೊಂಡ ಕಛೇರಿ ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಿಸುತ್ತಿತ್ತು (ಕಡತಸಂಖ್ಯೆ ೩-೧೯೪೦).

ರಾಚೇವಾರ್, ಭಲ್ಲೆ ವಾದ್ಯವೃಂದ (ಬ್ಯಾಂಡ್) ಮುಂತಾದವರು ತುಕಡಿದಾರ್ ಕೆಳಗೆ ಕಾರ್ಯನಿರ್ವಹಿಸುತ್ತಿದ್ದರು. ರಾಚೇವಾರ್ ಸಿಬ್ಬಂಧಿಗಳನ್ನು ನಾಲ್ಕು ಶಾಖೆಗಳಾಗಿ ವಿಂಗಡಿಸಿದ್ದು ಪ್ರತಿ ಶಾಖೆಯಲ್ಲಿಯೂ ಮೂವರು ಹವಿಲ್ದಾರ್‌ಗಳು ಇಬ್ಬರು ನಾಯಕರು, ಒಬ್ಬ ಲ್ಯಾನ್ಸ್ ನಾಯಕ್ ಮತ್ತು ೧೯ ರಾಚೇವಾರದವರಿದ್ದು ಒಬ್ಬ ಮೆಯರ್ ಮತ್ತು ಒಬ್ಬ ಜಮಾದಾರ್‌ನ ಮೇಲ್ವಿಚಾರಣೆಗೆ ಒಳಪಟ್ಟಿತ್ತು. (ಕಡತಸಂಖ್ಯೆ ೩-೧೯೪೦).

ಭಲ್ಲೆ ಸಿಪಾಯಿಗಳನ್ನು ಎಂಟು ಹೋಬಳಿಗಳಾಗಿ ವಿಂಗಡಿಸಿದ್ದು ಇವುಗಳಿಗೆ ಇಬ್ಬರು ರಿಸಲ್ದಾರ್‌ಗಳನ್ನು ಮೇಲ್ವಿಚಾರಣೆಯಲ್ಲಿರಿಸಲಾಗಿತ್ತು. ಪ್ರತಿ ಹೋಬಳಿಯಲ್ಲಿ ಇಬ್ಬರು ದಫೇದಾರ್, ಇಬ್ಬರು ನಾಯಕರು, ಇಬ್ಬರು ಲ್ಯಾನ್ಸ್‌ನಾಯಕರು ಮತ್ತು ೨೫ ಒಲೋಕಾರರು ಇರುತ್ತಿದ್ದರು. ಹತ್ತನೆಯ ಚಾಮರಾಜ ಒಡೆಯರ್‌ರವರ ಕಾಲದಲ್ಲಿ ೪೦೦ ಹೋಬ್ಳಿದಾರರು ಸೇವೆ ಸಲ್ಲಿಸುತ್ತಿದ್ದುದಾಗಿ ತಿಳಿದುಬಂದಿದ್ದು, ಈ ಸಂಬಂಧಿತ ೪೦೦ ಹೋಬ್ಳಿದಾರರ ಪಟ್ಟಿ ಲಭ್ಯವಿದೆ. (ಕಡತ ೧-೧೮೮೬).

೧೮೪೦ರಲ್ಲಿ ಕರ್ನಾಟಕ ವಾದ್ಯವೃಂದ (ಬ್ಯಾಂಡ್)ದಲ್ಲಿಯೂ ಒಬ್ಬ ಬ್ಯಾಂಡ್ ಮಾಸ್ಟರ್ ಮುಖ್ಯಸ್ಥನಾಗಿದ್ದು ಒಬ್ಬ ಹವಿಲ್ದಾರ್, ಒಬ್ಬ ನಾಯಕ್, ಮೂವರು ಲ್ಯಾನ್ಸ್‌ನಾಯಕ್ ಮತ್ತು ೧೯ ವಾದಕರು ಇರುತ್ತಿದ್ದರು. ಈ ವಾದ್ಯವೃಂದದಲ್ಲಿ ಭಾರತೀಯ ಮತ್ತು ಹಿಂದೂಸ್ಥಾನಿ ಸಂಗೀತಕ್ಕೆ ಹೊಂದಿಕೊಳ್ಳುವ ಸಂಗೀತ ವಾದ್ಯಗಳಾದ ಪಿಟೀಲು, ವೀಣೆ, ಕೊಳಲು, ಕ್ಲಾರಿಯೋನೆಟ್, ವಾದಸ್ವರ ಮುಂತಾದವುಗಳು ಇದ್ದುದಲ್ಲದೆ ನುರಿತ ವೀಣಾವಾದಕರಾದ ವೀಣೆ ವೆಂಕಟಗಿರಿಯಪ್ಪನಂತಹ ವಿದ್ವಾಂಸರಿಂದ ಕೂಡಿತ್ತು. ಜಿಲ್ಲಾ ಕಛೇರಿಯ ಈ ವಾದ್ಯವೃಂದ ಮಹಾರಾಜರ ಅಜ್ಞೆಯ ಮೇರೆಗೆ ಮೈಸೂರಿನ ನಿಷಾದ್ ಭಾಗ್‌ನಲ್ಲಿ ಅಗಿಂದಾಗ್ಗೆ ತನ್ನ ವಾದ್ಯ ಘೋಷ್ಠಿಯೊಂದಿಗೆ ಸಾರ್ವಜನಿಕರಿಗೆ ಮನೋರಂಜನೆ ನೀಡುತ್ತಿತ್ತು. ಇದೇ ವಾದ್ಯವೃಂದ ಮುಂದೆ ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರೆತ ನಂತರ ೧೯೫೧ರ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ನವದೆಹಲಿಯಲ್ಲಿ ಬ್ಯಾಂಡ್ ಮಾಸ್ಟರ್ ಎನ್.ಜೆ. ಫರ್ನಾಂಡಿಸ್‌ರವರ ನೇತೃತ್ವದಲ್ಲಿ ಡೆಫ್ರಿಸ್, ಪೆರ್‍ರಾ, ರೋಡ್ರಿಗ್ಸ್, ಆಂಡೋಣಿ, ದಾಸಪ್ಪ, ಪ್ರೇಮ್‌ಸಿಂಗ್, ರಹಮಾನ್ ಬೇಗ್, ರಸೂಲ್‌ಷರೀಫ್, ಶೇಷಾದ್ರಿ, ಮುಂತಾದ ಸಂಗೀತಗಾರರನ್ನೊಳಗೊಂಡಂತೆ ಅತ್ಯುತ್ತಮ ವಾದ್ಯಗೋಷ್ಠಿ ಪ್ರದರ್ಶನ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು ಹಾಗೂ ರೂ. ೧೦,೩೭೨-೧೫-೦ನ್ನು ಸಂಭಾವನೆಯಾಗಿ ದೆಹಲಿಯ ಪಂಜಾಬ್ ಬೆಟಾಲಿಯನ್‌ನಿಂದ ಪಡೆದುಕೊಂಡಿತ್ತು (ಕಡತಸಂಖ್ಯೆ ೧೬-೧೯೫೧).

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಜಿಲ್ಲೋ ಕಛೇರಿಯ ಅಯವ್ಯಯದಲ್ಲಿ ಒಟ್ಟು ಖರ್ಚು ರೂ. ೭೯,೭೧/-೧೨-೪ (೧೯೨೭-೨೮) ಆಗಿದ್ದರೆ, ೧೯೩೦-೩೧ರಲ್ಲಿ ಒಟ್ಟು ರೂ.೮೦,೬೮೭ನ್ನು ವೆಚ್ಚಮಾಡಲಾಗಿರುತ್ತದೆ. ಮುಂದೆ ೧೯೫೦-೫೧ರ ಸಾಲಿನಲ್ಲಿ ರೂ. ೧,೮೮,೦೦೦ಗಳ ಅಯವ್ಯಯವನ್ನು ಮೀಸಲಿರಿಸಿದ್ದು ಇದರಲ್ಲಿ ವೇತನ, ಸಮವಸ್ತ್ರ, ಕೋವಿ, ಮದ್ದು ಮತ್ತು ಗುಂಡುಗಳು, ವಾದ್ಯಗಳ ಖರೀದಿ-ನಿರ್ವಹಣೆ, ದವಸ-ಧಾನ್ಯಗಳ ಸರಬರಾಜು ಮುಂತಾದ ಖರ್ಚಿನ ಬಾಬ್ತು ಒಳಗೊಂಡಿರುತ್ತಿತ್ತು (ಕಡತಸಂಖ್ಯೆ ೨-೧೯೩೦) (ಕಡತಸಂಖ್ಯೆ ೪-೧೯೫೧).

ರಾಚೇವಾರು, ಭಲ್ಲೆ, ವಾದ್ಯವೃಂದವಲ್ಲದೆ ಜಿಲ್ಲಾ ಕಛೇರಿಯಲ್ಲಿ ಮಹಾರಾಜರ ಪರಿವಾರದೊಂದಿಗೆ ಶಿಕಾರಿಗೆ ಹೋಗಿ ಬೆಂಗಾವಲು ನೀಡುವವರು, ಮೈಸೂರು ಅರಮನೆ, ಬೆಂಗಳೂರು ಅರಮನೆ ಮುಂತಾದ ರಾಜಕುಟುಂಬಸ್ಥರ ಕಟ್ಟಡಗಳಲ್ಲಿ ಕಟ್ಟಿರುವ ಜೇನನ್ನು ಚದುರಿಸುವವರು, ಹಾವಾಡಿಗರು, ಮಂಗಗಳನ್ನು ಹಿಡಿಯುವವರು, ವೈದ್ಯಕೀಯ ಗಿಡಮಾಲಿಕೆಗಳನ್ನು ಗುರುತಿಸುವವರು, ಅರಮನೆ ಆಯುಧಶಾಲೆಗೆ ಪಹರೆ ಕಾವಲು ನೀಡುವವರು ಇರುತ್ತಿದ್ದರು. ಶಿಕಾರಿಗೆ ಹೋಗುವ ಸಿಬ್ಬಂದಿಗಳು ಕಾಕನಕೋಟೆ, ಹೆಗ್ಗ ದೇವನಕೋಟೆ, ಖಾರಾಪುರ, ಕಡಬಗಂಡಿ, ಕುಂಸಿ, ಮುಂತಾದ ಕಾಡುಗಳಲ್ಲಿ ತಂಗಬೇಕಾದ್ದರಿಂದ ಇವರಿಗೆ ಪ್ರಥಮ ಚಿಕಿತ್ಸೆ ಸಿಗ್ನಲಿಂಗ್, ಸ್ಯಾಂಡ್ ಟೇಬಲ್ ಆಕ್ಷರ್ ಹಾಗೂ ಮಿಲಿಟರಿ ಪಂದ್ಯಾವಳಿಗಳಲ್ಲಿ ಸಾಕಷ್ಟು ತರಬೇತಿ ನೀಡಲಾಗುತ್ತಿತ್ತು. ಮಹಾರಾಜರ ವರ್ಧಂತಿ ಹಾಗೂ ಗಣ್ಯ ವ್ಯಕ್ತಿಗಳು ಮೈಸೂರಿಗೆ ಬೇಟಿ ನೀಡಿದ ಸಂದರ್ಭಗಳಲ್ಲಿ ಟಾರ್ಚ್‌ಕ್ಲಬ್ ನೃತ್ಯ, ವೀರ ಮಕ್ಕಳ ನೃತ್ಯ ಮತ್ತು ಹೈಲ್ಯಾಂಡ್ ನೃತ್ಯಗಳನ್ನು ಇವರು ಪ್ರದರ್ಶಿಸುತ್ತಿದ್ದರು. ಶಿಕಾರಿಗೆ ಹೋಗುವಾಗ ಗುಡಾರಗಳನ್ನು ಹಾಕಲು ಬೇಕಾದ ಉಪಕರಣಗಳು, ಕಂದೀಲು, ಸೊಳ್ಳೆಪರದೆ, ಟೋಪಿಗಳು, ಅಧಿಕಾರಿಗಳ ಶಿಕಾರಿ ಉಡುಪುಗಳು, ಬಕೆಟ್‌ಗಳು, ನೀರಿನ ಬಾಟ್ಲಿಗಳು, ಶಿಳ್ಳೆ (ವಿಸಲ್), ಇತ್ಯಾದಿಗಳನ್ನು ಒಯ್ಯುತ್ತಿದ್ದರು. ಕಡೂರು, ಭದ್ರಾವತಿ, ಶಿವಮೊಗ್ಗ, ಹಂಪಿ, ಶಾಸನಕೋಟೆ, ಹುಣಸೂರು ಮುಂತಾದ ಕಾಡುಗಳಲ್ಲಿ ಹಳ್ಳಗಳಲ್ಲಿ ಬಿದ್ದ ಹುಲಿ ಮುಂತಾದ ಕಾಡುಪ್ರಾಣಿಗಳನ್ನು ತಂದು ಮೈಸೂರಿನ ಚಾಮರಾಜೇಂದ್ರ ಮೃಗಾಲಯಕ್ಕೆ ಒಪ್ಪಿಸುವುದು, ಹುಲಿಯ ಚರ್ಮವನ್ನು ಹದಮಾಡಲು ಅಂದಿನ ಪ್ರಖ್ಯಾತ ಟ್ಯಾಕ್ಸಿ ಡರ್ಮಿಸ್ಟ್‌ರಾದ ವಾನ್ ಇಂಗೇನ್‌ರವರಿಗೆ ಒಯ್ದು ಒಪ್ಪಿಸುವುದು ಇತ್ಯಾದಿ ಕಾರ್ಯಗಳನ್ನು ಈ ಶಿಕಾರಿ ಸಿಬ್ಬಂದಿಗಳು ನಿರ್ವಹಿಸುತ್ತಿದ್ದು, ಇವರಿಗೆ ರೂ. ೧೦ನ್ನು ವಿಶೇಷ ಭತ್ಯೆಯಾಗಿ ನೀಡಲಾಗುತ್ತಿತ್ತು. (ಕಡತ ಸಂಖ್ಯೆ ೨-೧೯೩೦).

ಶಿವರಾತ್ರಿಯಂದು ಖಾಸ ಬೃಂದಾವನದಲ್ಲಿ ವಿಶೇಷ ಪೂಜೆಗಳನ್ನು ಏರ್ಪಡಿಸುವುದು, ಮೇಲುಕೋಟೆಯ ವೈರಮುಡಿ ಉತ್ಸವ, ಚಾಮುಂಡೇಶ್ವರಿ ರಥೋತ್ಸವ, ತೆಪ್ಪೋತ್ಸವ, ಅರಮನೆ ದೇವಸ್ಥಾನಗಳು ಹಾಗೂ ಮೈಸೂರಿನ ಕೆಲವು ದೇವಸ್ಥಾನಗಳಲ್ಲಿ ಜರುಗುವ ಉತ್ಸವಗಳಲ್ಲದೆ ಮೈಸೂರಿನ ಕೆಲವು ಮಸೀದಿಗಳಿಗೆ ಮಹಾರಾಜರು ನೀಡುತ್ತಿದ್ದ ರಾಜ ಮರ್ಯಾದೆಗಳೊಂದಿಗೆ ಭಾಗವಹಿಸಿ ಬೆಂಗಾವಲು ನೀಡುವ ಕರ್ತವ್ಯಗಳನ್ನು ಜಿಲ್ಲಾ ಕಛೇರಿ ಸಿಬ್ಬಂದಿ ನಿಭಾಯಿಸುತ್ತಿದ್ದರು. ಮಹಾರಾಜರ ವರ್ಧಂತಿ,

ದಸರಾ, ವಿವಾಹ ಮಹೋತ್ಸವಗಳು ಮುಂತಾದ ಪ್ರಮುಖ ಅರಮನೆ ಕಲಾಪಗಳಲ್ಲಿಯೂ ಇವರ ಸೇವೆಯನ್ನು ಬಳಸಲಾಗುತ್ತಿತ್ತು. (ಕಡತ ಸಂಖ್ಯೆ ೪-೧೯೫೧).

ಅರಮನೆಯ ಅಯುಧಶಾಲಾ ಮತ್ತು ಲಲಿತಾದ್ರಿ ಕಾಟೇಜ್‌ಗಳ ನಿರ್ವಹಣೆಯನ್ನು ಜಿಲ್ಲೋ ಕಛೇರಿ ಮಾಡುತ್ತಿತ್ತು. ಅರಮನೆ ನೆಲ ಅಂತಸ್ಥಿನ ಈಶಾನ್ಯ ಕೊಠಡಿಯಲ್ಲಿದ್ದ ಅಯುಧಶಾಲೆಯಲ್ಲಿದ್ದ (೧೮೯೭ರಲ್ಲಿ ಅರಮನೆ ಬೆಂಕಿಗೆ ಆಹುತಿಯಾದಾಗ) ಎಷ್ಟೋ ಹಳೆಯ ಆಯುಧಗಳು ನಾಶವಾಗುತ್ತವೆ. ಮುಂದೆ ೧೯೧೨ರಲ್ಲಿ ನೂತನ ಅರಮನೆ ಪುನರ್ ನಿರ್ಮಾಣವಾದಾಗ ಆಯುಧಶಾಲೆಯನ್ನು ಕರಿಕಲ್ಲು ತೊಟ್ಟಿಯಿಂದ ಗೊಂಬೆತೊಟ್ಟಿಗೆ ಪೂಜಾ ವಿಧಿಗಳನ್ನು ಕೈಗೊಂಡು ಸ್ಥಳಾಂತರಿಸಲಾಗುತ್ತದೆ. ೧೮೬೮ರಲ್ಲಿ ಮೇಜರ್ ಈಲಿಯಟ್‌ರವರು ಮಾಡಿದ ಒಪ್ಪಂದದಂತೆ ಆಗ ಆಯುಧಶಾಲೆಯಲ್ಲಿದ್ದ ಎಲ್ಲಾ ಆಯುಧಗಳ ಸೂಚಿಯೊಂದನ್ನು ಸಿದ್ಧಪಡಿಸಲಾಗಿರುತ್ತದೆ. ಇಲ್ಲಿ ಆನೇಕ ಹಳೆಯ ಚಾರಿತ್ರಿಕ ಮಹತ್ವವುಳ್ಳ ಮೈಸೂರಿನ ರಾಜರುಗಳು ಉಪಯೋಗಿಸುತ್ತಿದ್ದ ಆಯುಧಗಳಿದ್ದುದಲ್ಲದೆ, ಟಿಪ್ಪುಸುಲ್ತಾನ್‌ರ ಖಡ್ಗ, ಶಿವಾಜಿ ಮಹಾರಾಜರ ವ್ಯಾಘ್ರನಖ, ಕಂಠೀರವ ನರಸರಾಜ ಒಡೆಯರ್‌ರವರ ನಡುಪಟ್ಟಿ ಖಡ್ಗ ಬಹುಮುಖ್ಯವಾದವುಗಳಾಗಿವೆ. (* ಕಡತಸಂಖ್ಯೆ ೨-೧೯೩೦).

ಇಂತಹ ಸಿಬ್ಬಂದಿಗಳಲ್ಲಿದೆ ಜಿಲ್ಲೋ ಕಛೇರಿಯಲ್ಲಿ ರೆಜಿಮೆಂಟ್‌ನ ಪ್ರಾತಿನಿಧಿಕ ಪ್ರಾಣಿಯನ್ನು ಸಾಕುತ್ತಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ರಾಜಾ ಎಂಬ ಅಂಗೋರಾ ಮೇಕೆಯನ್ನು ಪ್ರತಿನಿಧಿಕ ಪ್ರಾಣಿ (ಮಸ್ಕಾಟ್)ಯಾಗಿ ಜಿಲ್ಲಾ ಕಛೇರಿ ರೆಜಿಮೆಂಟ್‌ನ ಕವಾಯತಿನಲ್ಲಿ ಅದನ್ನ ಮುಂದಾಳತ್ವದಲ್ಲಿ ತರಲಾಗುತ್ತಿತ್ತು. (೧೯೩೦) (ಕಡತಸಂಖ್ಯೆ ೨-೧೯೩೦).

ಇಂತಹ ಸಿಬ್ಬಂದಿಗಳನ್ನು ಹೊಂದಿದ್ದ ಜಿಲ್ಲಾ ಕಛೇರಿಗೆ ೧೯೪೨ರಲ್ಲಿ ಅರಮನೆ ಕಿಲ್ಲೇ ಕಛೇರಿಯಿಂದ ೨೬ ಮಂದಿಯುಳ್ಳ ಫಿರಂಗಿ ಸೇನೆ (ಅರ್ಟಿಲರಿ)ಯನ್ನು ವರ್ಗಾವಣೆ ಮಾಡಲಾಗುತ್ತದೆ. ಮುಂದೆ ಈ ಜಿಲ್ಲೋ ಸೈನ್ಯ ೧ ಜುಲೈ ೧೯೪೯ ರಿಂದ ಮಿಲಟರಿ ಇಲಾಖೆಯ ಸುಪರ್ದಿಗೆ ಒಳಪಡುತ್ತದೆ. ಮುಂದೆ ೧ ಏಪ್ರಿಲ್ ೧೯೫೨ರಲ್ಲಿ ಬಿ. ಜನಾರ್ಧನರಾವ್, ಕುಮಾರ್, ಹಸನ್ ಸಾಬ್, ಈರಯ್ಯ, ಷೇಕ್ ಉಸ್ಮಾನ್, ಮೊದಲಾದ ೬೮ ಮಂದಿ ನಂಬಿಕಸ್ಥ ಜಿಲ್ಲೋ ಸಿಬ್ಬಂದಿಯನ್ನು ಅರಮನೆ ಕಾವಲು ಕೆಲಸಕ್ಕೆ ಉಳಿಸಿಕೊಂಡು ಉಳಿದ ಸಿಬ್ಬಂದಿಗಳನ್ನು ಅರಮನೆ ಪಹರೆಯಿಂದ ಹಿಂಪಡೆದು ಅರಮನೆ ಜಿಲ್ಲೋ ಸೇನೆಯನ್ನು ಸರ್ಕಾರದ ಮೌಂಟೆಡ್ ಆರ್ಮ್ಡ್‌ರಿಸರ್ವ್ ಪೋಲಿಸ್ ಸೇವೆಯಲ್ಲಿ (ಎಂ.ಎ.ಆರ್.ಪಿ) ವಿಲೀನಗೊಳಿಸಲಾಯಿತು (ಕಡತ ಸಂಖ್ಯೆ ೧೩-೧೯೫೧).

ಇಂತಹ ಜಿಲ್ಲೋ ಕಛೇರಿಯ ಕಡತಗಳಲ್ಲಿ ಕೆಲವು ಕುತೂಹಲಕಾರಿ ಘಟನೆಗಳಿಗೆ ಸಂಬಂಧಿಸಿದ ಮಾಹಿತಿ ಲಭ್ಯವಿದೆ. ಅದರಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ೧೯೨೦ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಹೋದರಿ ರಾಜಕುಮಾರಿ ಚೆಲುವಾಜಮ್ಮಣ್ಣಿಯವರು ಚೆಲುವಾಂಬವಿಲಾಸ ಮಾನ್‌ಷನ್‌ನಲ್ಲಿ ಒಂದು ರಾತ್ರಿ ಮಲಗಿದ್ದಾಗ ಅವರ ಶಯನಗೃಹಕ್ಕೆ ಇಬ್ಬರು ಕಳ್ಳರು ನುಗ್ಗಿ ಅವರ ಪೈಕಿ ಸರ್ದಾರ್ ಎಂ. ಲಕ್ಷ್ಮೀಕಾಂತ ರಾಜೇ ಅರಸ್‌ರವರ ಪಲ್ಲಂಗದ ಪರದೆಯನ್ನು ಸರಿಸಿ ಅವರನ್ನು ನೋಡುತ್ತಿದ್ದಾಗ, ಎಚ್ಚರಗೊಂಡ ಸರ್ದಾರ್ ಜೋರಾಗಿ ಕಿರಿಚಿದರೂ ಯಾವ ಪರೆಯವನೂ ಬರುವುದಿಲ್ಲ ಎಲ್ಲಾ ನಿದ್ದೆ ಮಾಡುತ್ತಿರುತ್ತಾರೆ. ರಾಜಕುಮಾರಿ ತುಂಬಾ ಭಯಭೀತರಾಗಿ ಮಾರನೆಯ ದಿನ ತಮ್ಮ ಸಹೋದರ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರೊಂದಿಗೆ ಬೆಂಗಳೂರಿಗೆ ಸ್ವಲ್ಪ ದಿನಗಳು ತೆರಳುತ್ತಾರೆ. ಅರಮನೆ ಜಿಲ್ಲಾ ಪಹರೆಯೊಂದಿಗೆ ಸರ್ದಾರ್ ಲಕ್ಷ್ಮೀಕಾಂತ ರಾಜೇ ಅರಸ್‌ರವರು ಬೆಂಗಳೂರಿನ ಆಗಿನ ಪೋಲಿಸ್ ಕಮಿಷನರ್ ಆಗಿದ್ದ ಪಿ.ಎಫ್. ಚಾರಿಂಗ್ ರವರಿಗೆ ಪೋಲೀಸ್ ಪಹರೆಯ ವ್ಯವಸ್ಥೆ ಮಾಡಲು ಕೋರಿ ಪತ್ರ ಬರೆಯುತ್ತಾರೆ. (ಕಡತ ಸಂಖ್ಯೆ ೪-೧೯೨೦).

ಮತ್ತೊಂದು ಸಣ್ಣ ಪ್ರಸಂಗೆ ಚೆಲುವಾಂಬ ವಿಲಾಸ್ ಮ್ಯಾನ್‌ಷನ್‌ನಲ್ಲಿ ಜಿಲ್ಲಾ ಕಛೇರಿ ಪಹರೆಯವನೊಬ್ಬನಾದ ಶ್ರೀಕಂಠ ಎಂಬುವವನು ೧೧.೦೨.೧೯೩೬ರಂದು ಕಾವಲು ಕಾಯುತ್ತಿದ್ದಾಗ ಒಬ್ಬ ಮ್ಯಾನ್‌ಷನ್ ಸಿಬ್ಬಂದಿಯಿಂದ ಕಳ್ಳತನದಲ್ಲಿ ಒಂದು ಕೊಳಗ ಬಿತ್ತವನ್ನು ಪಡೆದು ಕೊಳ್ಳುತ್ತಿದ್ದಾಗ ಸಿಕ್ಕ ಬೀಳುತ್ತಾನೆ. ಆಗ ಅವನನ್ನು ೩ ತಿಂಗಳು ಅಮಾನತ್ತಿನಲ್ಲಿಡುವುದಲ್ಲಿದೆ ರೂ೩/-ನ್ನು ಅವನ ವೇತನದಲ್ಲಿ ಕಡಿತಗೊಳಿಸಲಾಗುತ್ತದೆ. ಇದರಲ್ಲಿ ಶಾಮೀಲಾಗಿದ್ದ ರಾಚೇವಾರರುಗಳಾದ ಪಾಪ ಮತ್ತು ನಾರಾಯಣದಾಸಪ್ಪ ಇವರುಗಳಿಗೆ ತಲಾ ಒಂದು ರೂಪಾಯನ್ನು ತಲುಬಿನಲ್ಲಿ ಕಡಿತಗೊಳಿಸಲಾಗುತ್ತದೆ. ಇವರ ಮೇಲಧಿಕಾರಿಯಾಗಿದ್ದ ಲ್ಯಾನ್ಸ್ ನಾಯಕ್ ಮುದ್ದು ಕೃಷ್ಣಂರಾಜು, ಈ ಪ್ರಕರಣವನ್ನು ವರದಿ ಮಾಡದೇ ಇದ್ದುದಕ್ಕೆ ಆತನಿಗೆ ಮೊದಲ ದರ್ಜೆ ರಾಚೇವಾರ್ ಹುದ್ದೆಗೆ ರೂ. ೧೩ ತಲಬಿನ ಮೇರೆಗೆ ಹಿಂಬಡ್ತಿ ನೀಡಲಾಗುತ್ತದೆ. (ಕಡತ ಸಂಖ್ಯೆ ೩-೧೯೩೫).

ಇನ್ನೊಮ್ಮೆ ಒಬ್ಬ ಭಲ್ಲೆ ಜವಾನ ಸಿದ್ದಗೋಣಿ ಎಂಬುವವನು ಅರಮನೆ ಮೋಟಾರು ಖಾನೆಯಲ್ಲಿ ಕಾವಲಿನಲ್ಲಿದ್ದಾಗ ಬದಲಿ ಬರುವಾತ ತಡವಾಗಿ ಬಂದಿದ್ದಕ್ಕೆ ಕೋಪದಿಂದ ಮುಖಕ್ಕೆ ಹೊಡೆದಿದ್ದರಿಂದ ಅವನ ಸಮವಸ್ತ್ರ ರಕ್ತಸಿಕ್ತವಾಗಿ ಹಾಳಾಗುತ್ತದೆ. ಅದಕ್ಕೆ ಈ ವರ್ತನೆಗೆ ಆತನಿಗೆ ಶಿಕ್ಷೆಯಾಗಿ ವೇತನದಲ್ಲಿ ಒಂದು ರೂಪಾಯನ್ನು ಕಡಿತಗೊಳಿಸಿ ರೂ. ೬ನ್ನು ವೇತನವಾಗಿ ನೀಡಲಾಗುತ್ತದೆ (ಕಡತಸಂಖ್ಯೆ ೭-೧೯೨೮).

ಜಿಲ್ಲೋ ಕಛೇರಿಯ ವಾದ್ಯ ವೃಂದದವರು ವಿಶೇಷ ಸಂದರ್ಭಗಳಲ್ಲಿ ವಾದ್ಯ ಗೋಷ್ಠಿ ನಡೆಸಿಕೊಡುವುದು ಅಂದು ಸರ್ವೆಸಾಮಾನ್ಯವಾಗಿತ್ತು. ಒಮ್ಮೆ ವಾದ್ಯವೃಂದದ ಮುಖ್ಯ ವಾದಕ ವೆಂಕಟಸ್ವಾಮಪ್ಪ ಎಂಬುವವನು ಗ್ವಾಲಿಯರ್ ಮಹಾರಾಜ ಸಿಂಧ್ಯರವರು ೧೯೩೬ರಲ್ಲಿ ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಗೌರವಾರ್ಥ ಏರ್ಪಡಿಸಿದ ವಾದ್ಯಗೋಷ್ಠಿಯಲ್ಲಿ ತನ್ನ ಸ್ನೇಹಿತ ಭೀಮಯ್ಯ ಎಂಬುವವನನ್ನು ಕರೆತಂದು ವಾದ್ಯ ವೃಂದದಲ್ಲಿ ವಾದಕರ ಮಧ್ಯೆ ಕೊಡಿಸಿಕೊಂಡಿರುವುದು ಮೇಲಧಿಕಾರಿಗಳ ಗಮನಕ್ಕೆ ಬರುತ್ತದೆ.

ಇನ್ನು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಅಪ್ತಕಾರ್ಯದರ್ಶಿ ಚಾರ್ಲ್ಸ್ ಟಾಡ್ ಹಂಟರ್‌ರವರು ಅರಮನೆ ಕಛೇರಿ ಆಪ್ತ ಕಾರ್ಯದರ್ಶಿ ತಂಬೂಚೆಟ್ಟಿಯವರಿಗೆ ೨೫.೭.೧೯೩೬ರಂದು ಪತ್ರ ಬರೆದು ದಂಡ ವಿಧಿಸಲು ಸೂಚಿಸಿರುತ್ತಾರೆ. ಅದರಂತೆ ಆತನಿಗೆ ರೂ. ೫ನ್ನು ದಂಡ ವಿಧಿಸಲಾಗುತ್ತದೆ. ಅದರೆ ಈ ಬಗ್ಗೆ ಆತ ನೀಡಿದ ವಿವರಣೆ ಏನೆಂದರೆ 'ತನ್ನ ಸ್ನೇಹಿತ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ದರ್ಶನವನ್ನು ಹತ್ತಿರದಿಂದ ಮಾಡಲು ಆಸೆಪಟ್ಟಿದ್ದರಿಂದ ಆತನನ್ನು ಕರೆ ತಂದೆ ಎಂದು (ಕಡತ ಸಂಖ್ಯೆ ೧-೧೯೩೬).

ಹೀಗೆ ದುರ್ವತನೆಗೆ ದಂಡ ಹಾಕಿದಂತೆಯೆ ೫-೧೦ ವರ್ಷಗಳು ಒಳ್ಳೆಯ ವರ್ತನೆಯೊಂದಿಗೆ ಸೇವೆ ಸಲ್ಲಿಸಿದವರಿಗೆ ಎರಡು ರೂಪಾಯಿ 'ಒಳ್ಳೆಯ ವರ್ತನೆ ತಲಬು' (ಗುಡ್ ಕಾನ್‌ಡಕ್ಟ್ ಪೇ) ನೀಡಲಾಗುತ್ತಿದ್ದುದು ವಿಶೇಷ. (ಕಡೆತ ಸಂಖ್ಯೆ ೫-೧೯೩೮).

ಜಿಲ್ಲೋ ಕಛೇರಿಯ ಭಲ್ಲೆ, ರಾಚೇವಾರದವರು, ವಾದ್ಯವೃಂದದವರ ವೈಯಕ್ತಿಕ ಮನವಿಗಳು, ಅರಮನೆ ಮರ್ಯಾದೆಗಳಿಗಾಗಿ ಸಲ್ಲಿಸಿದ ಕೋರಿಕೆಗಳು, ಸಿಬ್ಬಂದಿಗಳ ನೇಮಕಾತಿ, ವರ್ಗಾವಣೆ, ನಿವೃತ್ತಿ ವೇತನ, ಸಮವಸ್ತ್ರ, ಬೂಟುಗಳ ವಿತರಣೆ, ಗೃಹ ನಿರ್ಮಾಣ ಮುಂಗಡ, ಸರಬರಾಜುಗಳು ಮೊದಲಾದ ಅನೇಕ ಅಧಿಕ ಸಿಬ್ಬಂಧಿಗಳ ವೈಯಕ್ತಿಕ ಕಡತಗಳಿವೆ. ಜಿಲ್ಲಾ ಕಛೇರಿಯ ಆಡಳಿತ ವರದಿಗಳು ಲೆಕ್ಕಪತ್ರ ವರದಿಗಳು, ದೇಶ-ವಿದೇಶಗಳಿಂದ ಆಗಮಿಸುತ್ತಿದ್ದ ಗಣ್ಯರಿಗೆ ನೀಡುತ್ತಿದ್ದ ಉಡುಗೊರೆಗಳು, ಕೋವಿ-ಬಂದೂಕುಗಳ ಖರೀದಿ, ವಾದ್ಯಗಳ ಖರೀದಿ, ಉಡುಪುಗಳು, ಇತ್ಯಾದಿ ವಿಷಯಗಳಿಗೆ ಸಂಬಂದಿಸಿದಂತೆಯೂ ಮಾಹಿತಿ ಹೊಂದಿದೆ ಇನ್ನೂ ಕೆಲವು ಕಡತಗಳಿವೆ.

ಈ ಪೈಕಿ ಒಂದು ಕಡತ (ಕಡಿತ ಸಂಖ್ಯೆ ೧-೧೯೨೫) ಮೈಸೂರಿನಲ್ಲಿ ೧೯೨೫ರಲ್ಲಿ ೭೯ ಗರಡಿಗಳಿದ್ದುದಾಗಿ ಮಾಹಿತಿ ನೀಡುತ್ತದೆ. ಮೋಡಿ ಕನ್ನಡ ಲಿಪಿಯಲ್ಲಿರುವ ಯಾದಿಯಲ್ಲಿ ೭೯ಗರಡಿಗಳ ಬಗ್ಗೆ ವಿವರಗಳಿದ್ದು ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಅದರಂತೆ ಆಗ ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ಬೋರೆಗೌಡರ ಗರಡಿ, ಚೆಲುವೇಗೌಡರ ಗರಡಿ, ಮೇಟಗಳ್ಳಿಯಲ್ಲಿ ಕಾಳೇಗೌಡರ ಗರಡಿ, ಕನ್ನೇಗೌಡನ ಕೊಪ್ಪಲಿನಲ್ಲಿ ಬೋರಯ್ಯನ ಗರಡಿ, ಹುಚ್ಚನಗರಡಿ, ನಾಗೇಗೌಡನ ಗರಡಿ, ಪುಟ್ಟನ ಗರಡಿ, ಕ್ಯಾತಮಾರನಹಳ್ಳಿ ಮಾದನ ಗರಡಿ, ಜವರನ ಗರಡಿ, ಕನ್ನಂಬಾಡಿ ವೆಂಕಟಯ್ಯಗರಡಿ, ಕುರುಬರಹಳ್ಳಿ ರಾಮನಗರಡಿ, ಒಂಟಿಕೊಪ್ಪಲಿನ ಚನ್ನೇಗೌಡನ ಗರಡಿ, ಪಡುವಾರಹಳ್ಳಿ ಜನ್ನನ ಗರಡಿ, ಪಡುವಾರಹಳ್ಳಿ ಚನ್ನನ ಗರಡಿ, ಉಗ್ರೇಗೌಡನ ಗರಡಿ, ಈರಣ್ಣಗೆರೆ ಗೌಡಪ್ಪಯ್ಯನ ಗರಡಿ, ಗೊಲ್ಲಿಗೇರಿ ಗರಡಿ, ಲಷ್ಕರ್ ಮೋಹಲ್ಲಾ ಮಕಾನ್ ಕರೀಂಖಾನ್ ಗರಡಿ, ಚಲುವೇ ಅರಸಿನವರ ಗರಡಿ, ಕಲ್ಲುಕಟಿಕರಂಗನಗರಡಿ, ಗವಿರಂಗನ ಗರಡಿ, ಕಾಡಯ್ಯನ ಗರಡಿ ಮುಂತಾದ ಗರಡಿಗಳು, ಅಲ್ಲಿ ಕಸರತ್ತು ಅಂಗಸಾಧನೆ, ಕುಸ್ತಿ ನಡೆಯುತ್ತಿದ್ದವು. (ಕಡತ ಸಂಖ್ಯೆ ೧-೧೯೨೫).

ರಾಜಪರಿವಾರದ ರಕ್ಷಣೆಗೆ ಹಾಗೂ ಶಿಕಾರಿಗಳಲ್ಲಿ ಉಪಯೋಗಿಸುವ ಕೋವಿ, ಬಂದೂಕು, ಫಿರಂಗಿ ಗುಂಡುಗಳನ್ನು ಕಲ್ಕತ್ತಾದ ಥಿಯೊಬಾಲ್ಡ್ ಬ್ರದರ್ಸ್, ಲಯಾನ್ ಎಂಡ್ ಲಯಾನ್, ಮ್ಯಾನಟನ್ ಎಂಡ್ ಕಂಪೆನಿ ಹಾಗೂ ಮುಂಬೈನ ಗುಲಾಮ್ ಹುಸೇನ್ ಆಲಿಭಾಯ್ ಎಂಡ್ ಸನ್ಸನಿಂದ ಖರೀದಿಸಲಾಗುತ್ತಿತ್ತು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಶಿಕಾರಿಗಳಲ್ಲಿ ಬಿಳಸುತ್ತಿದ್ದ ಕೋವಿಗೆ ನೂರು ಸುತ್ತು ಗುಂಡು ಹೊಡೆಯಲು ರೂ. ೯೦ರಂತೆ ಗುಂಡುಗಳನ್ನು ೧೯೨೦ರಲ್ಲಿ ಲಯಾನ್ ಎಂಡ್ ಲಯಾನ್·ಕಂಪೆನಿಯಿಂದ ಖರೀದಿಸಲಾಗಿರುತ್ತದೆ. ಹಾಗೆಯೇ ೧೯೪೯ರ ರೂ. ೨೪.೮.೦೦ಗಳನ್ನು ಜಿಲ್ಲಾ ಕಛೇರಿಯಿಂದ ಪಾವತಿಸಲಾಗಿರುತ್ತದೆ. (ಕಡತಸಂಖ್ಯೆ ೨-೧೯೨೦, ೪-೧೯೩೧). ಈ ಕೋವಿ ಬಂದೂಕುಗಳು

ಕೆಟ್ಟು ಹೋದಾಗ ಅದರ ದುರಸ್ಥಿಯನ್ನು ಮೈಸೂರಿನ ಇರ್ವಿನ್ ರಸ್ತೆಯಲ್ಲಿದ್ದ ಅಣ್ಣಾಚಾರಿಯವರು ಮಾಡಿಕೊಡುತ್ತಿದ್ದರು. ಅದರಂತೆ ೧೯೨೨ರಲ್ಲಿ ಅರಮನೆ ಕೋವಿ ಸಂಖ್ಯೆ ೩೬೯ನ್ನು ರಿಪೇರಿ ಮಾಡಿ ಅದರ ಬಟನ್ ಪ್ಲೇಟ್, ರಬ್ಬರ್ ಬದಲಾಯಿಸಿ ಪಾಲಿಷ್ ಮಾಡಿದ್ದಕ್ಕೆ ರೂ. ೫೦ನ್ನು ಹಾಗೂ ಕೋವಿ ಸಂಖ್ಯೆ ೫೦೦ನ್ನು ಸರಿಮಾಡಿ ಸಿದ್ಧಪಡಿಸಿಕೊಡಲು ರೂ. ೧೧೦ನ್ನು ಅಣ್ಣಾಚಾರಿಯವರಿಗೆ ಪಾವತಿಸಿರುವ ಬಗ್ಗೆ ಕೆಲವು ಕಡತಗಳಲ್ಲಿ ಮಾಹಿತಿ ಲಭ್ಯವಿದೆ (ಕಡತಸಂಖ್ಯೆ ೧–೧೯೨೨).

ಹಾಗೆಯೇ ಜಿಲ್ಲೋ ಕಛೇರಿ ವಾದ್ಯವೃಂದಕ್ಕೆ ಬೇಕಾದ ವಾದ್ಯಗಳನ್ನು ಮುಂಬೈನ ಟಿ.ಎಸ್. ರಾಮಚಂದರ್ ಎಂಡ್ ಬ್ರದರ್ಸ್ ಎಂಬ ಮಾರಾಟಗಾರರಿಂದ ಖರೀದಿಸಲಾಗುತ್ತಿತ್ತು. ಪಿಟೀಲು ಕ್ಲಾರಿಯೋನೆಟ್ ಮುಂತಾದ ವಾದ್ಯಗಳಿಗೆ ತಂತಿಗಳನ್ನು ಹಾಕಿ ಕೊಡುವುದು, ರೀಡ್‌ಗಳನ್ನು ರಿಪೇರಿ ಮಾಡಿಕೊಡುವುದನ್ನು ಮುಂಬೈನ ಎಸ್. ರೋಸ್ ಎಂಬುವವರಿಗೆ ವಹಿಸಿಕೊಡಲಗಿತ್ತು. ಹೀಗೆ ರಿವೇರಿ ಮಾಡಿಕೊಟ್ಟಿದ್ದಕ್ಕೆ ೧೯೨೭ರಲ್ಲಿ ರೋಸ್‌ರವರಿಗೆ ರೂ. ೧೩೦ನ್ನು ಪಾವತಿಸಲಾಗಿರುತ್ತದೆ. (ಕಡತಸಂಖ್ಯೆ ೨–೧೯೨೭).

ಜಿಲ್ಲಾ ಕಛೇರಿಯ ರಾಚೇವಾರ್, ಭಲ್ಲೆ ಮುಂತಾದ ಸಿಬ್ಬಂದಿಗಳಿಗೆ ಸಮವಸ್ತ್ರಕ್ಕಾಗಿ ಬಟ್ಟೆಗಳನ್ನು ಖರೀದಿಸಿ ಮೈಸೂರಿನ ಅಶೋಕ ರಸ್ತೆಯಲ್ಲಿರುವ ದರ್ಜಿ ಬಿ. ಶಾಮರಾವ್‌ರವರಿಂದ ಹಾಗೂ ಅರಮನೆ ಅವಸರದ ಹೋಬ್ಳಿ ದರ್ಜಿಗಳಿಂದ ಉಡುಪುಗಳನ್ನು ಸಿದ್ಧಪಡಿಸಿ ವಿತರಿಸಲಾಗುತ್ತದೆ. ಹೀಗೆ ೧೯೩೦ರಲ್ಲಿ ಸಮವಸ್ತ್ರಕ್ಕಾಗಿ ರೂ. ೪೦೮೨–೮–೬ಗಳನ್ನು ಜಿಲ್ಲೋ ಕಛೇರಿಯಿಂದ ಖರ್ಚುಮಾಡಲಾಗಿರುತ್ತದೆ. ೫೪ ಇಂಚು ಅಗಲಿದ ಹಸಿರು ಸರ್ಜ್ ಬಟ್ಟೆಗೆ ಗಜ ಒಂದಕ್ಕೆ ರೂ. ೪ರಂತೆ ೨೦೦ಗಜ ಬಟ್ಟೆಯನ್ನು ಕಾನ್‌ಪುರ್‌ವುಲ್ಲನ್ ಮಿಲ್‌ನಿಂದ ೧೯೩೦ರಲ್ಲಿ ತರಿಸಿಕೊಳ್ಳಲಾಗಿರುತ್ತದೆ. ಹಸಿರುಲೇಸ್ ಬ್ಲೌಸ್, ಕೆಂಪು ಲೇಸ್ ನಿಕ್ಕರ್ ಬಾಕರ್, ಕೆಂಪು ಅಲ್ವಾನ್‌ಪಾಗು, ಹಸಿರು ಲೇಸ್ ಸರ್ಜ್ ಚರ್ಮದ ಬೆಲ್ಟ್, ಹೆಣಿಕೆಡವಾಳಿ ಹಿತ್ತಾಳೆ ಗುಂಡಿಗಳುಳ್ಳ ಬ್ಲೌಸ್‌ಗಳನ್ನು ಜಮಾದಾದಿ ಮೆಯರ್ ಮತ್ತು ಇತರೆ ಜಿಲ್ಲೋ ಕಛೇರಿ ಅಧಿಕಾರಿಗಳ ದಿರಿಸುಗಳಿಗೆ ಬಳಸಲಾಗುತ್ತಿತ್ತು. ಬಿಡದಿ ಊಳಿಗದವರಿಗೆ ಹಸಿರು ಸರ್ಜ್ ಸುರವಾನಿ ಉದ್ದನೆಯ ಕೋಟ್‌ಗಳನ್ನು ನೀಡಲಾಗುತ್ತಿತ್ತು. ಕೋಟ್‌ಗಳು, ಉದ್ದನೆಯ ಕೋಟುಗಳು ಸೋಟ್‌ಗಳು, ಷರ್ಟ್‌ಗಳು, ಡವಾಳಿ, ಕಮ್ಮರ್ ಬಂದ್, ಪಾಗುಧರಿಸುವುದು ಸಾಮಾನ್ಯವಾಗಿ ಈ ಕಛೇರಿಯ ಸಿಬ್ಬಂದಿ ದಿನನಿತ್ಯದ ದಿರಿಸಾಗಿರುತ್ತಿತ್ತು (ಕಡತಸಂಖ್ಯೆ ೪–೧೯೩೦).

ದಸರಾ, ವರ್ಧಂತಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಅರಮನೆಯಲ್ಲಿದ್ದ ಹಳೆಯ ಬೆಳ್ಳಿಯ ಸಾಮಾನುಗಳನ್ನು ಕರಗಿಸಿ ಬೆಳ್ಳಿಪೂಜಾಮಂಟಪ, ಕಾಲ್ಮಣೆ ಹಾಗೂ ಭಲ್ಲೆಗಳಿಗೆ ಬೆಳ್ಳಿಯ ಹಿಡಿಯನ್ನು ತಯಾರಿಸಲಾಗುತ್ತಿತ್ತು. (ಕಡತಸಂಖ್ಯೆ ೧–೧೯೧೩). ಹೊರ ರಾಜ್ಯಗಳಿಂದ ಅಗಮಿಸುತ್ತಿದ್ದ ರಾಜರು, ಬ್ರಿಟಿಷ್ ಅಧಿಕಾರಿಗಳು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ಕಾಣಿಕೆಯಾಗಿ ಒಪ್ಪಿಸಿದ್ದ ಹಳೆಯ ಬೆಳ್ಳಿ ಸಾಮಾನುಗಳನ್ನು (ಮೈಸರಾಯ್ ಲಾರ್ಡ್ ಡಾಲ್‌ಹೌಸಿಯವರು ಮೈಸೂರು ಮಹಾರಾಜರಿಗೆ ಕಾಣಿಕೆಯಾಗಿ ಒಪ್ಪಿಸಿದ್ದ ಬೆಳ್ಳಿ ಹಿಡಿಯಿರುವ ಚೌರಿಗಳನ್ನು ಹೊರತುಪಡಿಸಿ) ಅಗಿಂದಾಗ್ಗೆ ಕರಗಿಸಿ ತೂಕ ಮಾಡಿ ಹೊಸ ಉಪಕರಣಗಳನ್ನು ಸಿದ್ಧಪಡಿಸಿ ಅರಮನೆಯ ಇತರ ಇಲಾಖೆಗಳ ಅಗತ್ಯಾನುಸಾರವಾಗಿ ನೀಡಲಾಗುತ್ತಿತ್ತು (ಕಡತಸಂಖ್ಯೆ ೧–೧೯೧೫).

ಹಾಗೆಯೇ ಮೈಸೂರಿಗೆ ಅಗಮಿಸುವ ಗಣ್ಯರಿಗೆ ಅರಮನೆಯಿಂದ ಬೆಳ್ಳಿಯ ಷರ್ಟ್‌ಗುಂಡಿಗಳು, ಸ್ಕಾರ್ಫ್‌ಪಿನ್ನು, ಬೆಳ್ಳಿಯ ವಿವಿಧ ಆಕಾರಗಳ ಬಟ್ಟಲುಗಳು ಮುಂತಾದವುಗಳನ್ನು ಉಡುಗೊರೆಯಾಗಿ ನೀಡಲಾಗುತ್ತಿತ್ತು. ಇವುಗಳನ್ನು ತಯಾರುಮಾಡಿಕೊಡಲು ಬೆಂಗಳೂರಿನ ಪ್ರಸಿದ್ಧ ಬಾರ್ಟನ್ ಕಂಪನಿ, ಆಭರಣ ತಯಾರಕರಾದ ಕೃಷ್ಣಯ್ಯ ಶೆಟ್ಟಿ ಎಂಡ್ ಸನ್ಸ್, ಗೋವಿಂದಪ್ಪ ಎಂಡ್ ಸನ್ಸ್‌ರವರೊಂದಿಗೆ ಪತ್ರ ವ್ಯವಹಾರ ಕೈಗೊಂಡಿರುವುದು ತಿಳಿದು ಬರುತ್ತದೆ. (ಕಡತ ಸಂಖ್ಯೆ ೧–೧೯೦೭).

ಈ ಹಿನ್ನೆಲೆಯಲ್ಲಿ ಕಂಡುಬಂದ ಆಶ್ಚರ್ಯಕರ ಸಂಗತಿ ಏನೆಂದರೆ ೧೯೧೦ರಲ್ಲಿ ಮಹಾರಾಜಾ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಅಪೇಕ್ಷೆಯಂತೆ ಬಾರ್ಟನ್ ಕಂಪನಿಯಿಂದ ಬೆಳ್ಳಿ ಮುಲಾಮು ಹಾಕಿದ ೧೮" ಎತ್ತರದ ಕುಸ್ತಿ ಪೈಲ್ವಾನ್‌ನ ಪ್ರತಿಮೆಯನ್ನು ರೂ. ೪೫೦ರ ವೆಚ್ಚದಲ್ಲಿ ತಯಾರಿಸಿಕೊಂಡು ಅರಮನೆಗೆ ಪಡೆಯಲಾಗಿರುತ್ತದೆ.

ಇದಕ್ಕಾಗಿ ಅರಮನೆಯ ಒಬ್ಬ ಕುಸ್ತಿ ಪೈಲ್ವಾನ್‌ನ ಛಾಯಾಚಿತ್ರವನ್ನು ತೆಗೆಸಿ ಮುಂಚಿತವಾಗಿ ಬಾರ್ಟನ್ ಕಂಪೆನಿಗೆ ಕಳುಹಿಸಲಾಗಿರುತ್ತದೆ. ಈ ಸಂಬಂಧ ಜಿಲ್ಲಾ ಕಛೇರಿ ಭಕ್ಷಿ, ಅರಮನೆಯ ಕಂಟ್ರೋಲರ್ ಮುಂತಾದವರ ಹಲವಾರು ಪತ್ರಗಳು ದಾಖಲಾಗಿವೆ. (ಕಡತ ಸಂಖ್ಯೆ ೧–೧೯೦೭).

ಹೀಗೆ ಜಿಲ್ಲೋ ಕಛೇರಿಯಲ್ಲಿರುವ ೧೮೯೬ರಿಂದ ೧೯೬೧ರವರೆಗೆ ಲಭ್ಯವಿರುವ ೬೫ ವರ್ಷಗಳ ದಾಖಲೆಗಳು ಮಹಾರಾಜರ ಕಾಲಾವಧಿಯ ಸಾಮಾಜಿಕ ಅಡಳಿತಾತ್ಮಕ ರಾಜಕೀಯ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಬೆಳಕನ್ನು ಚೆಲ್ಲುವ ಮಹತ್ವಪೂರ್ಣ ಆಕರ ಸಾಮಗ್ರಿಗಳಾಗಿವೆ.

ಆಕರ ಗ್ರಂಥಗಳು

೧. ಬಿ. ರಾಮಕೃಷ್ಣರಾವ್, ಶ್ರೀಮನ್ಮಹಾರಾಜರ ವಂಶಾವಳಿ, ಭಾಗ I ಮತ್ತು II, ೧೯೧೬, ೧೯೨೨

೨. ಸಿ. ಹಯವದವರಾವ್, ಮೈಸೂರು ಗೆಜೆಟಿಯರ್, ಸಂಪುಟ ೪, ೧೯೨೯.

೩. ಡಾ. ಎಂ.ಎಸ್. ನಾಗರಾಜರಾವ್, ದಿ ಮೈಸೂರು ಪ್ಯಾಲೆಸ್ ಗೈಡ್, ೧೯೮೧.

೪. ಅರಮನೆ ಅಡಳಿತ ವರದಿಗಳು, ೧೮೬೮–೧೯೧೮,೧೯೨೭–೨೮, ೧೯೩೦–೬೧, ವಿಭಾಗಿಯ ಪತ್ರಾಗಾರ ಕಛೇರಿ, ಮೈಸೂರು.

೫. ಜಿಲ್ಲಾ ಕಛೇರಿ ಕಡತಗಳು, ೧೮೯೬–೧೯೬೧, ವಿಭಾಗೀಯ ಪತ್ರಾಗಾರ ಕಛೇರಿ ಮೈಸೂರು, (ಕಡತ ಸಂಖ್ಯೆಗಳನ್ನು ವಿಷಯಾನುಸಾರ ಪ್ರಬಂಧದಲ್ಲಿ ಉಲ್ಲೇಖಿಸಲಾಗಿದೆ.)

೬ ಎ ಗೈಡ್ ಟು ದಿ ಡಿವಿಜನಲ್ ಆರ್ಕೆವ್ಸ್ ಆಫೀಸ್, ವಿಭಾಗೀಯ ಪತ್ರಾಗಾರ, ಮೈಸೂರು, ೧೯೯೧.

ವಸಾಹತುಕಾಲೀನ ಅಂಚೆ ವ್ಯವಸ್ಥೆ: ಧಾರವಾಡ ಜಿಲ್ಲೆ

ಬಸಮ್ಮ ದಾನಪ್ಪಗೌಡ*

ಧಾರವಾಡ ಎಂಬ ಹೆಸರು ಒಂದು ಸಾವಿರ ವರ್ಷಗಳಷ್ಟು ಪ್ರಾಚೀನ. ಈ ನಗರದಲ್ಲಿನ ದುರ್ಗಾದೇವಾಲಯದಲ್ಲಿರುವ ಕ್ರಿ.ಶ. ೧೧೧೭ರ ಕನ್ನಡ ಶಾಸನದಲ್ಲಿ ಧಾರವಾಡ ಎಂಬ ಹೆಸರಿದೆ. ದಕ್ಷಿಣ ಮತ್ತು ಉತ್ತರ ಕರ್ನಾಟಕ ಭಾಗಗಳನ್ನು ಜೋಡಿಸುವ ಕೊಂಡಿಯಾಗಿದೆ. ಧಾರವಾಡವು ನೂಲಿನ ವಸಾಹತು ಎಂಬ ಅರ್ಥವನ್ನು ಹೊಂದಿದೆ. ಸ್ಥಳಪುರಾಣದಲ್ಲಿ ಮಲೆನಾಡಿಗೆ ಹೋಗಬೇಕಾದರೆ ಧಾರವಾಡವೇ ಮಾರ್ಗವಾದುದರಿಂದ 'ದ್ವಾರವಾಟ್' ಎಂಬ ಹೆಸರು ಬಂದಿದೆ. ಅದೇ ಮುಂದೆ ಧಾರವಾಡವಾಯಿತು. ಬ್ರಿಟಿಷರ ಆಳ್ವಿಕೆಗೊಳಪಟ್ಟ ಮೇಲೆ 'ಧಾರವಾರ್' ಆಗಿ ನಂತರ ಧಾರವಾಡ ಎಂದು ಕರೆಯಲ್ಪಟ್ಟಿತು.

ಮೊಘಲರ ದೊರೆಯಾದ ಔರಂಗಜೇಬನ ಮರಣದ ನಂತರ ಮರಾಠ ಪೇಶ್ವೆಗಳು ಪ್ರಬಲರಾಗಿ ಉತ್ತರ ಕರ್ನಾಟಕ ಭಾಷಿಕರ ಪ್ರಾಂತ್ಯಗಳ ಮೇಲೆ ಅಧಿಕಾರ ಪಡೆದರು. ತಮ್ಮ ತಮ್ಮಲ್ಲಿ ಹೊಡೆದಾಡುತ್ತಿದ್ದ ಪೇಶ್ವೆಗಳು ತಮ್ಮ ಸಹಾಯಕ್ಕಾಗಿ ಬ್ರಿಟಿಷರೊಂದಿಗೆ ಸ್ನೇಹ ಬೆಳೆಸುವ ಸಲುವಾಗಿ ಕ್ರಿ.ಶ. ೧೮೦೧ರಲ್ಲಿ ಮರಾಠ ಪೇಶ್ವೆ ಬಾಜೀರಾಯನು ಅವರಿಗೆ ಧಾರವಾಡ ಪ್ರಾಂತ್ಯವನ್ನು ನೀಡಿದನು. ಈ ಪ್ರಾಂತ್ಯವನ್ನು ನೀಡಿದ ನಂತರವೂ ಪೇಶ್ವೆ ಮತ್ತು ಬ್ರಿಟಿಷರ ನಡುವೆ ನಿರಂತರ ೧೬ ವರ್ಷಗಳ ಕಾಲ ಹೋರಾಟ ನಡೆಯಿತು. ಕೊನೆಗೆ ಕ್ರಿ.ಶ. ೧೮೧೭ರಲ್ಲಿ ಸೋತ ಪೇಶ್ವೆ ಬಾಜೀರಾಯನಿಂದ ಬ್ರಿಟಿಷರು ಎಲ್ಲ ಪ್ರಾಂತ್ಯಗಳನ್ನು ವಶಪಡಿಸಿಕೊಂಡರು. ಬಿಜಾಪುರ, ಬೆಳಗಾವಿ ಮತ್ತು ಧಾರವಾಡ ಪ್ರಾಂತ್ಯಗಳು ಬ್ರಿಟಿಷರ ಆಳ್ವಿಕೆಗೊಳಪಟ್ಟವು. ನಂತರ ಧಾರವಾಡವನ್ನು ಮುಂಬೈ ಕರ್ನಾಟಕ ಅಧಿಪತ್ಯಕ್ಕೆ ಒಳಪಡಿಸಲಾಯಿತು. ಈ ಅವಧಿಯಲ್ಲಿ ಬ್ರಿಟಿಷರು ಹಲವಾರು ಸುಧಾರಣೆಗಳನ್ನು ಜಾರಿಗೆ ತಂದರು. ಅವುಗಳಲ್ಲಿ ಪ್ರಮುಖವಾದದ್ದು ಅಂಚೆ ವ್ಯವಸ್ಥೆ.

ಧಾರವಾಡ ಅಂಚೆ ಕಚೇರಿ ಉತ್ತರ ಕರ್ನಾಟಕದಲ್ಲಿಯೇ ಅತಿ ಹಳೆಯದಾದ ಅಂಚೆ ಕಚೇರಿಯಾಗಿದೆ. ಕ್ರಿ.ಶ. ೧೮೩೦ರ ಮುಂಬೈ ಗೆಜೆಟ್ಟಿನ ಅಂಚೆ ಕಚೇರಿಯಾದಿಯಲ್ಲಿ ಧಾರವಾಡದ ಹೆಸರು ಕಂಡುಬರುತ್ತದೆ. ಇದರಿಂದ ಕ್ರಿ.ಶ. ೧೮೩೦ರ ಹೊತ್ತಿಗೆ ಧಾರವಾಡ ಅಂಚೆ ಕಚೇರಿ ಅಸ್ತಿತ್ವದಲ್ಲಿದ್ದ ಬಗ್ಗ ನಿಶ್ಚಿತ ದಾಖಲೆ ದೊರೆಯುತ್ತದೆ.

ದಕ್ಷಿಣ ಹಿಂದುಸ್ಥಾನದ ಅಂಚೆ ಇತಿಹಾಸದಲ್ಲಿ ಧಾರವಾಡಕ್ಕೆ ಪ್ರಮುಖ ಸ್ಥಾನವಿದೆ. ೧೮ನೇ ಶತಮಾನದ ಕೊನೆಯ ದಶಕದಲ್ಲಿ ಕಲಕತ್ತಾ, ಮುಂಬಯಿ ಮತ್ತು ಮದ್ರಾಸ್ ಜಿಪಿಓಗಳ ಪ್ರಾರಂಭದಿಂದ ಅಂಚೆ ವ್ಯವಸ್ಥೆಯು ಸಾರ್ವಜನಿಕರಿಗೆ ಮುಕ್ತ ಮಾಡಲ್ಪಟ್ಟಿತು. ಆಗ ಧಾರವಾಡವು ಮುಂಬಯಿ ಮತ್ತು ಮದ್ರಾಸ್ ಇಲಾಖೆಗಳ ಅಂಚೆಯನ್ನು ಜೋಡಿಸುವ ಕೊಂಡಿಯಾಗಿತ್ತು. ಕ್ರಿ.ಶ. ೧೮೦೨ ರಬೆಸಿನ್ ಒಪ್ಪಂದದಿಂದಾಗಿ ಧಾರವಾಡ ಜಿಲ್ಲೆಯಲ್ಲಿ ಬ್ರಿಟಿಷರ ಪ್ರವೇಶವಾಯಿತು. ಕ್ರಿ.ಶ. ೧೮೦೩ರಲ್ಲಿ ಮದ್ರಾಸಿನಿಂದ ಮುಂಬೈಗೆ ಬೆಂಗಳೂರು ಮತ್ತು ಧಾರವಾಡ ಮುಖಾಂತರ ಅಂಚೆ ರನ್ನರ್ ಮಾರ್ಗವನ್ನು ಪ್ರಾರಂಭವಾಯಿತು. ಪ್ರತಿ ರನ್ನರನ ಜೊತೆಗೆ ಒಬ್ಬ ಪಂಜು ಹಿಡಿಯುವವ ಮತ್ತು ಒಬ್ಬ ಡೊಳ್ಳು ಬಾರಿಸುವವ ಇರುತ್ತಿದ್ದರು. ಆಗ ಕಾಡು ಮೃಗಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ಇದು ಅವಶ್ಯವಾಗಿತ್ತು. ಧಾರವಾಡದಲ್ಲಿ ಮದ್ರಾಸ್ ಮತ್ತು ಮುಂಬೈ ಇಲಾಖೆಯ ಅಂಚೆ ಚೀಲಗಳು ವಿನಿಮಯವಾಗುತ್ತಿದ್ದವು. ಮುಂದೆ ಮಲಬಾರ ಕಡೆಯಿಂದ ಮುಂಬಯಿಗೆ ಹೋಗುವ ಟಪಾಲು ಮಂಗಳೂರು, ಹೊನ್ನಾವರ ಮಾರ್ಗವಾಗಿ ಧಾರವಾಡಕ್ಕೆ ಬಂದು ಅಲ್ಲೇ ಟಪಾಲು ಚೀಲಗಳು ಬದಲಾಗುತ್ತಿದ್ದವು.

ಮೊದಲು ಅಂಚೆ ಶುಲ್ಕ ತೂಕ ಮತ್ತು ಅಂತರದ ಮೇಲೆ ಆಧಾರಿಸಿತ್ತು ಮತ್ತು ಅದು ನಗದು ರೂಪದಲ್ಲಿ ಕೊಡಬೇಕಾಗುತ್ತಿತ್ತು. ಕ್ರಿ.ಶ. ೧೮೩೦ರಲ್ಲಿ ಧಾರವಾಡದಿಂದ ಮುಂಬೈಗೆ ೧ ತೊಲೆಯ ಪಾಕೀಟಿಗೆ ಸುಮಾರು ೦-೯-೦ ಆಣೆ (೫೬ ಪೈಸೆ) ಆಗುತ್ತಿತ್ತು ಮತ್ತು ಮದ್ರಾಸಕ್ಕೆ ೧೦ ಆಣೆ (೬೨ ಪೈಸೆ) ಆಗುತ್ತಿತ್ತು.

ಕ್ರಿ.ಶ. ೧೮೩೦ರಲ್ಲಿ ಧಾರವಾಡ ಜಿಲ್ಲೆ ರಚನೆ ಆದಾಗ ಅದು ಬೆಳಗಾವಿ ಮತ್ತು ವಿಜಾಪುರ ಜಿಲ್ಲೆಗಳ ದಕ್ಷಿಣ ಭಾಗವನ್ನೊಳಗೊಂಡಿತ್ತು. ಹುಬ್ಬಳ್ಳಿಯಲ್ಲಿ ಸಬ್‌ಕಲೆಕ್ಟರ್ ಇರುತ್ತಿದ್ದನು. ಕ್ರಿ.ಶ. ೧೮೩೮ರಲ್ಲಿ ಬೆಳಗಾವಿ ಜಿಲ್ಲೆ ರಚನೆಯಾಗಿ

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.ಮೊ. ೮೭೬೨೬೬೧೯೯೯



ಬ್ರಿಟಿಷ್ ಕಾಲದ ಅಂಚೆ ಕಚೇರಿ

ಇದರಲ್ಲಿ ವಿಜಾಪುರ ಜಿಲ್ಲೆ ಸೇರಲ್ಪಟ್ಟಿತು. ಕ್ರಿ.ಶ. ೧೮೮೪ರಲ್ಲಿ ವಿಜಾಪುರ ಜಿಲ್ಲೆ ರಚಿಸಲ್ಪಟ್ಟಿತು. ಇದರಿಂದಾಗಿ ಧಾರವಾಡ ಜಿಲ್ಲೆಯ ಅಂಚೆ ಇತಿಹಾಸವು ಸಮಗ್ರ ಉತ್ತರ ಕರ್ನಾಟಕದ ಇತಿಹಾಸವನ್ನು ಒಳಗೊಳ್ಳುತ್ತದೆ.

ಕ್ರಿ.ಶ. ೧೮೬೦ರ ಸುಮಾರಿಗೆ ಪುಣೆಯಿಂದ ಧಾರವಾಡಕ್ಕೆ ಚಕ್ಕಡಿ ಟಪಾಲು ಬರುತ್ತಿತ್ತು. ಕ್ರಿ.ಶ. ೧೮೭೦ರಲ್ಲಿ ಜಟಕಾದಿಂದ ಟಪಾಲು ಸಾಗಣೆ ಪ್ರಾರಂಭವಾಯಿತು. ಬೇಸಿಗೆಯಲ್ಲಿ ಮುಂಬೈಯಿಂದ ಕಾರವಾರಕ್ಕೆ ಹಡಗಿನಲ್ಲಿ ಟಪಾಲು ಬರುತ್ತಿತ್ತು. ಮತ್ತು ಅಲ್ಲಿಂದ ರನ್ನರ ಮೂಲಕ ಧಾರವಾಡಕ್ಕೆ ಬರುತ್ತಿತ್ತು. ಮುಂಬೈ ಗೆಜೆಟಿಯರ್ ಪ್ರಕಾರ ಕ್ರಿ.ಶ. ೧೮೮೫ರಲ್ಲಿ ಧಾರವಾಡ ಕಾರವಾರವನ್ನೊಳಗೊಂಡ ಪೋಸ್ಟಲ್ ಡಿವಿಜನ್ (ಅಂಚೆ ವಿಭಾಗ) ಧಾರವಾಡದಲ್ಲಿ ರಚಿತವಾಯಿತು.

ಕ್ರಿ.ಶ. ೧೮೮೫ರ ಧಾರವಾಡ ಗೆಜೆಟಿಯರ್ ಪ್ರಕಾರ ಧಾರವಾಡದಲ್ಲಿ ಆಗ ಪ್ರಧಾನ ಅಂಚೆ ಕಚೇರಿ ಮತ್ತು ಧಾರವಾಡ ಸಿಟಿ ಉಪ ಅಂಚೆ ಕಚೇರಿಗಳಿದ್ದವು. ಜಿಲ್ಲೆಯಲ್ಲಿ ೨೮ ಉಪ ಅಂಚೆ ಕಚೇರಿ ಇದ್ದವು. ಆಗ ಬ್ರ್ಯಾಂಚ್‌ಪೋಸ್ಟ್ ಆಫೀಸುಗಳನ್ನು ವ್ಹಿಲೇಜ್ ಆಫೀಸ್ ಎಂದು ಕರೆಯುತ್ತಿದ್ದರು. ಇಂಥ ೧೭ ವಿಲ್ಲೇಜ್ ಆಫೀಸಗಳು ಜಿಲ್ಲೆಯಲ್ಲಿದ್ದವು. ಧಾರವಾಡ ಅಂಚೆ ಕಚೇರಿಯು ಕ್ರಿ.ಶ. ೧೮೭೩ರಲ್ಲಿಯೇ ಪ್ರಧಾನ ಅಂಚೆ ಕಚೇರಿಯಾಗಿ ಮಾರ್ಪಟ್ಟಿತ್ತು. ಧಾರವಾಡ ನಗರದಲ್ಲಿ ಧಾರವಾಡ ಸಿಟಿ ಪೋಸ್ಟ ಆಫೀಸ್ ಅತಿ ಹಳೆಯ ನಗರದ ಪೋಸ್ಟ್ ಆಫೀಸ್ ಆಗಿತ್ತು.

ಸುಮಾರು ೧೮೯೦ರಿಂದ ರೇಲ್ವೆದಿಂದ ಅಂಚೆ ಸಾಗಣೆ ಸುರುವಾಯಿತು. ಆಗ ಒಂದು ಆರ್.ಎಂ.ಎಸ್. (ರೇಲ್ವೆ ಮೇಲ್ ಸರ್ವೀಸ್) ವಿಭಾಗವು ಪ್ರಾರಂಭಿಸಲ್ಪಟ್ಟಿತು. ಅದು ಆರ್.ಎಂ.ಎಸ್.ಎಚ್. ಡಿವಿಜನ್ ಎಂದು ಕರೆಯಲ್ಪಡುತ್ತಿತ್ತು. ಅದರ ಸುಪರಿಂಟೆಂಡೆಂಟರ ಮುಖ್ಯ ಕಚೇರಿ ಧಾರವಾಡದಲ್ಲಿತ್ತು. ಅದರ ಕಕ್ಷೆಯಲ್ಲಿ ಸದ್ಯದ ಕರ್ನಾಟಕದ ಎಲ್ಲ ಪ್ರದೇಶವೂ ಬರುತ್ತಿತ್ತು. ೧೯೨೦ರ ಸುಮಾರಿಗೆ ಈ ಆರ್.ಎಂ.ಎಸ್. ವಿಭಾಗವು ಮುಚ್ಚಲ್ಪಟ್ಟಿತು. ಅದರ ಹರಿಹರದವರೆಗಿನ ವಿಭಾಗವು ಮುಂಬೈ ವಿಭಾಗಕ್ಕೂ ಮತ್ತು ಹರಿಹರದಿಂದ ಬೆಂಗಳೂರವರೆಗಿನ ವಿಭಾಗವು ಮದ್ರಾಸಕ್ಕೂ ಸೇರಿಸಲ್ಪಟ್ಟಿತು. ಆ ಕಾಲದಲ್ಲಿಯೇ ಅಂಚೆ ನೌಕರರ ಸಂಬಳ ಎಷ್ಟೆಂಬುದರ ವಿವರವೂ ನೋಡುವಂತಿದೆ. ಪೋಸ್ಟಲ್ ಸುಪರಿಂಟೆಂಡೆಂಟ ರೂ. ३००, ಪೋಸ್ಟ ಕ್ಲಾರ್ಕ ೧೦. ವ್ಹಿಲೇಜ್ ಪೋಸ್ಟ ಮಸ್ತರ ३ ರೂಪಾಯಿ, ಪೋಸ್ಟ್‌ನ್ ೮ ರೂಪಾಯಿ.

ಧಾರವಾಡ ಅಂಚೆ ಕಚೇರಿಗೆ ಡೆಪ್ಯೂಟಿ ಚನ್ನಬಸಪ್ಪ, ದ.ರಾ. ಬೇಂದ್ರೆ, ಶಂ.ಬಾ. ಜೋಶಿ ಮೊದಲಾದ ಕನ್ನಡಮ್ಮನ ಸುಪುತ್ರರ ಸಂಬಂಧವಿದ್ದುದು ಒಂದು ವಿಶೇಷ. ಡೆಪ್ಯೂಟಿ ಚನ್ನಬಸಪ್ಪನವರು ೧೮೫೫ರಲ್ಲಿ ಪುಣೆಯಿಂದ ಬಂದ ಮೇಲೆ ಧಾರವಾಡ ಅಂಚೆ ಕಚೇರಿಯಲ್ಲಿ ಕೆಲವು ಕಾಲ ಕೆಲಸ ಮಡಿದರು ಎಂದು ಅವರ ಜೀವನಚರಿತ್ರೆಯಿಂದ ತಿಳಿದುಬರುತ್ತದೆ. ಅದರಂತೆಯೇ ಸುಮಾರು ೭೦ ವರ್ಷಗಳ ಹಿಂದೆ ದ.ರಾ. ಬೇಂದ್ರೆ ಮತ್ತು ಶಂ.ಬಾ. ಜೋಶಿಯವರು ಧಾರವಾಡ ಅಂಚೆ ಕಚೇರಿ ಅಧೀನದಲ್ಲಿದ್ದ ಸಾಧನಕೇರಿ ಶಾಖಾ ಅಂಚೆ ಕಚೇರಿಯಲ್ಲಿ ಕೆಲವು ದಿನ ಬ್ರ್ಯಾಂಚ ಪೋಸ್ಟ್ ಮಾಸ್ಟರರಾಗಿ ರಜೆಯ ಅವಧಿಯಲ್ಲಿ ಕೆಲಸ ಮಾಡಿದ್ದ ಬಗ್ಗೆ ದಾಖಲೆ ಇದೆ. ಈ ಕನ್ನಡ ಕಣ್ಮಣಿಗಳ ಸಂಪರ್ಕದಿಂದ ಧಾರವಾಡ ಅಂಚೆ ಕಚೇರಿಯ ಘನತೆ ಹೆಚ್ಚಿದೆ ಎಂದು ಹೇಳಬಹುದು.

ಧಾರವಾಡ ಪ್ರಧಾನ ಅಂಚೆ ಕಚೇರಿಯು ಈಗಿನ ಕಿತ್ತೂರ ಚೆನ್ನಮ್ಮ ಪಾರ್ಕ ಅಂಚೆ ಕಚೇರಿಯ ಕಟ್ಟಡದಲ್ಲಿ ಮೊದಲು ಇತ್ತು. ಈ ಕಟ್ಟಡವು ಮೊದಲು ಮಿಲಿಟರಿ ಬರಾಕ್ ಆಗಿದ್ದು ಆಮೇಲೆ ಅಂಚೆ ಕಚೇರಿಗೆ ಕೊಡಲ್ಪಟ್ಟಿತೆಂದು ಹೇಳಲಾಗಿದೆ. ಇದು ಧಾರವಾಡದಲ್ಲಿಯ ಅತೀ ಹಳೆಯ ಸರಕಾರಿ ಕಟ್ಟಡಗಳಲ್ಲೊಂದಾಗಿದೆ. ಈ ಕಟ್ಟಡಕ್ಕೆ ೧೮೮ ವರ್ಷಗಳಾದರೂ ಸದೃಢವಾಗಿ ಉಳಿದುಕೊಂಡಿದೆ. ಇದು ಬ್ರಿಟಿಷ ಇಂಜನೀಯರುಗಳ ತಾಂತ್ರಿಕತೆಯ ಉತ್ತಮ ಗುಣಮಟ್ಟವನ್ನು ತಿಳಿಸಿಕೊಡುತ್ತದೆ. ಇದೇ ಕಟ್ಟಡದ ಒಂದು ಭಾಗದಲ್ಲಿ ಕಿತ್ತೂರ ಚೆನ್ನಮ್ಮನನ್ನು ಕೆಲವು ದಿನ ಬಂದಿಯಾಗಿಡಲಾಗಿತ್ತೆಂದು ಪ್ರತೀತಿ ಇದೆ. ೧೯೭೧ ರಲ್ಲಿ ಧಾರವಾಡ ಪ್ರಧಾನ ಅಂಚೆ ಕಚೇರಿಯು ಈಗ ಸ್ಟೇಶನ್ ರಸ್ತೆಯಲ್ಲಿರುವ ಭವ್ಯಕಟ್ಟಡಕ್ಕೆ ಸ್ಥಳಾಂತರವಾಗಿದೆ.

ಆಧಾರ ಗ್ರಂಥಗಳು

೧. ವೆಂಕಟರಂಗೋಕಟ್ಟಿ (ಸಂ), ೧೮೯३, ಬಾಂಬೆ ಕರ್ನಾಟಕ ಗ್ಯಾಸೆಟಿಯರ್, ಮುಂಬೈ.

೨. ಸೂರ್ಯನಾಥ ಯು. ಕಾಮತ್, ೧೯೬೫, ಧಾರವಾಡ ಜಿಲ್ಲೆಗೆ ಜೆಟಿಯರ್, ಬೆಂಗಳೂರು.

३. ಕಟಗೇರಿ ನ.ಹ., ೨೦೦೭-೦೮, ಗತಕಾಲದ ಧಾರವಾಡ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ, ಧಾರವಾಡ.

೪. ಮೋಹನ್ ಕೃಷ್ಣ ರೈಕೆ., ೨೦೦೭, ವಸಾಹತುಶಾಹಿ ಮತ್ತು ನಗರೀಕರಣ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಹಾವನೂರು ಶ್ರೀನಿವಾಸ, ೨೦೦೦, ಹೊಸಗನ್ನಡದ ಅರುಣೋದಯ, ಕನ್ನಡ ಮಸ್ತಕ ಪ್ರಾಧಿಕಾರ, ಬೆಂಗಳೂರು.

೬ ಸೋಫಿಯಾ ಬೇಗಂ ಪಠಾಣ. ೨೦೦೬, ಮುನ್ಸಿಪಲ್ ಇಡ್ಮಿನಿಸ್ಟ್ರೇಶನ್ ಇನ್ ಬಾಂಬೆ ಕರ್ನಾಟಕ, ಮಹಾಪ್ರಬಂಧ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಗೋಪಾಲರಾವ್ ಎಚ್.ಎಸ್., ೧೯೯೬, ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೮. ಚಿನ್ನಸ್ವಾಮಿ ಸೋಸಲೆ ಎನ್., ೨೦೧೧, ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೯. James M. Campbell, 1884, Gazetteer of the Bombay Presidency, Dharwad, Vol. XXII.

೧೦೩

ಬ್ರಿಟಿಷ್ ಆಡಳಿತದಲ್ಲಿ ದೇಸಗತಿ ಮನೆತನಗಳು

ಎಚ್.ಈ. ಬಸವರಾಜಪ್ಪ*

ಪ್ರಸ್ತುತ ಲೇಖನದಲ್ಲಿ ಉತ್ತರ ಕರ್ನಾಟಕದಲ್ಲಿದ್ದ ದೇಸಗತಿ ಮನೆತನಗಳನ್ನು ಕುರಿತು ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ಭಾರತವನ್ನು ಬ್ರಿಟಿಷ್ ಸರಕಾರ ಸ್ವಾಧೀನಪಡಿಸಿಕೊಂಡ ನಂತರದ ಅತಿಮುಖ್ಯ ಪರಿಣಾಮವೆಂದರೆ ಉತ್ತರ ಕರ್ನಾಟಕ ಭಾಗದಲ್ಲಿದ್ದ ದೇಸಗತಿ ಮನೆತನಗಳು ಬದಲಾದ ಪರಿಸ್ಥಿತಿಗೆ ಅವರು ನಿರ್ವಹಿಸಿದ ಪಾತ್ರದಲ್ಲಿ ಅತ್ಯದ್ಬುತವಾದ ಬದಲಾವಣೆಯಾಯಿತು ಈ ದೆಸಗತಿ ಮನೆತನಗಳು ಹೊಸ ಸನ್ನಿವೇಶದಲ್ಲಿ ಜಮೀನ್ದಾರರು ಅಥವಾ ದೇಸಗತಿಗಳಾಗಿ ಮಾರ್ಪಾಟು ಹೊಂದಿದ್ದರು. ಬ್ರಿಟಿಷ ಆಡಳಿತದಲ್ಲಿ ಅವರು ಸ್ವಾತಂತ್ರ್ಯದ ಮಹಾತ್ವಾಕಾಂಕ್ಷೆಯನ್ನು ಹೊಂದುವ ಪರಿಸ್ಥಿತಿಯಲ್ಲಿ ಇರಲಿಲ್ಲ ಬದಲಾದ ಪರಿಸ್ಥಿತಿಯನ್ನು ಅವರು ವಸ್ತುನಿಷ್ಠವಾಗಿ ಇಷ್ಟಪಡಲು ಪ್ರಾರಂಭಿಸಿದ್ದರಲ್ಲದೆ ಬ್ರಿಟಿಷ ಸಾಮ್ರಾಜ್ಯ ಶಾಹಿಯನ್ನು ಬಿಟ್ಟರೆ ತಮಗೆ ಉಳಿಗಾಲವೇ ಇಲ್ಲವೆಂದು ನಂಬತೊಡಗಿದ್ದರು. ವಸಾಹತುಶಾಹಿ ಸರಕಾರದ ಇಚ್ಚೆಗನುಸಾರವಾಗಿ ಈ ಪ್ರಯೋಗ ಮುಂದುವರೆಯಿತು. ಬ್ರಿಟಿಷ್ ಭಾರತದ ಕಲೆಕ್ಟರಗಳು ಧಾರವಾಡ ಮತ್ತು ಬೆಳಗಾವಿ ಜಿಲ್ಲೆ ಸೇರಿದಂತೆ ಇತರ ಜಿಲ್ಲೆಗಳಲ್ಲಿಯೂ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಪ್ರಬಲವಾದ ಸ್ಥಳೀಯ ವ್ಯಕ್ತಿಗಳ ಭಾಗವಹಿಸುವಿಕೆ ಇಲ್ಲದೆ ಕಂದಾಯ ವಸೂಲಿ ಮಾಡುವ ಕೆಲಸ ಕಷ್ಟಸಾಧ್ಯವಾಗಿದ್ದ ಕಾರಣ ಈ ಉತ್ತರ ಕರ್ನಾಟಕದ ದೇಸಗತಿ ಮನೆತನಗಳು ಬ್ರಿಟಿಷ್‌ರಿಂದ ಭೂಶುಲ್ಕ ವಿಧಿಸುವ ಮನೆಗಂದಾಯವನ್ನು ಇನ್ನಿತರ ಹಕ್ಕುಗಳನ್ನು ಪಡೆದಿದ್ದವು.

ಭಾರತವನ್ನು ಬ್ರಿಟಿಷ್ ಸರಕಾರ ಸ್ವಾಧೀನಪಡಿಸಿಕೊಂಡ ನಂತರದ ಅತೀ ಮುಖ್ಯ ಪರಿಣಾಮವೆಂದರೆ ಎಲ್ಲ ಪಾರಂಪರಿಕ ಜಾತಿ ವರ್ಗಗಳನ್ನು ಮೀರಿ ಸೃಷ್ಟಿಯಾದ ಹೊಸ ಸಾಮಾಜಿಕ ವರ್ಗಗಳು ದಕ್ಷಿಣ ಭಾರತದ ಕೆಲವು ಪ್ರದೇಶದಲ್ಲಿ ಮತ್ತು ರಾಜ್ಯಗಳಲ್ಲಿ ಪಾರಂಪರಿಕವಾಗಿ ಕೆಲವು ಪಾಳೆಯಗಾರರು ಮತ್ತು ಆಳರಸರು ಮುಂದುವರಿದಾದರೂ ಸಮಾಜದಲ್ಲಿ ಅವರು ನಿರ್ವಹಿಸಿದ ಪಾತ್ರದಲ್ಲಿ ಅತ್ಯದ್ಭುತವಾದ ಬದಲಾವಣೆಯಾಯಿತು ಈ ದೃಷ್ಟಿಯಿಂದ ಉತ್ತರ ಕರ್ನಾಟಕದ ಭಾಗದಲ್ಲಿ ದೇಸಗತಿ ಮನೆತನಗಳು ಬ್ರಿಟಿಷ್ ಆಡಳಿತದ ಭಾಗಗಳಾಗಿ ಕಾರ್ಯನಿರ್ವಹಿಸಿರುವುದು ಸ್ಪಷ್ಟವಾಗಿದೆ. ಬ್ರಿಟಿಷ್ ಪೂರ್ವದ ಯುಗದಲ್ಲಿದ್ದ ದೇಸಗತಿ ಮನೆತನಗಳು ಹೊಸ ಸನ್ನಿವೇಶದಲ್ಲಿ ಬ್ರಿಟಿಷ್ ಆಳ್ವಿಕೆಗೆ ಹೊಂದಿಕೊಂಡು ಬದಲಾದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಬ್ರಿಟಿಷ್ ಸಾಮಾಜ್ಯ ಶಾಹಿಯನ್ನು ಬಿಟ್ಟರೆ ತಮಗೆ ಉಳಿಗಾಲವೇ ಇಲ್ಲವೆಂದು ತಿಳಿದ್ದರು.

ಉತ್ತರ ಕರ್ನಾಟಕ ಭಾಗದಲ್ಲಿ ಬ್ರಿಟಿಷ್ ಸರಕಾರ ಹೊಸ ಭೂಹಿಡುವಳಿಯನ್ನು ಜಾರಿಗೊಳಿಸಿದಾಗ ಹೊಸದಾದ ಭೂವಡೆಯರ ವರ್ಗವೆಂದು ನಿರ್ಮಾಣವಾಯಿತು. ಈ ವರ್ಗವೂ ಮೇಲ್ಜಾತಿಯವರಿಂದ ಕೂಡಿದುದಾಗಿತ್ತು. ರೈತವಾರಿ ಕ್ರಮದಿಂದ ಹೆಚ್ಚಿನ ಪ್ರಮಾಣದ ಭೂ ಒಡೆಯರನ್ನು ನಿರ್ಮಾಣ ಮಾಡುವದಲ್ಲದೆ, ಪ್ರತಿಯೊಬ್ಬ ರೈತನು ಏಕಕಾಲದಲ್ಲಿ ಯಜಮಾನ, ರೈತ ಮತ್ತು ಕಾರ್ಮಿಕನಾಗಿರುವಂತೆ ಯೋಜಿಸಲಾಗಿತ್ತು. ಇದರಲ್ಲಿ ಈ ದೇಸಗತಿ ಮನೆತನಗಳು ಸೇರಿದರು. ಉತ್ತರ ಕರ್ನಾಕಟದ ಪ್ರಮುಖ ದೇಸಗತಿ ಮನೆತನಗಳೆಂದರೆ ಹೀಗಿವೆ.

೧. ಬ್ರಾಹ್ಮಣ ದೇಸಾಯಿಗಳು ಉದಾಹರಣೆ: ಬಾಗಲಕೋಟೆ ಜಿಲ್ಲೆಯ ಮನ್ನಿಕೆರೆ ದೇಸಾಯಿ ಮತ್ತು ವಿಜಯಪುರ ಜಿಲ್ಲೆಯ ಅಗರಖೇಡ ಜಾಗೀರುದಾರರು.

೨. ಜೈನ ದೇಸಾಯಿಗಳು ಉದಾಹರಣೆ : ಬಾಗಲಕೋಟೆ ಜಿಲ್ಲೆಯ ತೇರದಾಳ, ಹನಗಂಡಿ ಮತ್ತು ಹಳಿಂಗಳಿ ದೇಸಾಯಿಗಳು

೩. ಕ್ಷತ್ರಿಯರು ಉದಾಹರಣೆ: ಬಾಗಲಕೋಟೆ ಜಿಲ್ಲೆಯ ಬೀಳಗಿ, ಹುನಗುಂದ, ಬದಾಮಿ ತಾಲೂಕಿನ ದೇಸಾಯಿಗಳು.

ಬ್ರಾಹ್ಮಣ, ಜೈನ, ಕ್ಷತ್ರಿಯ, ಲಿಂಗಾಯತ, ಗಾಣಿಗ, ಪಂಚಮಸಾಲಿ, ರೆಡ್ಡಿ ಮನೆತನದವರು.

* ಮುಖ್ಯಸ್ಥರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆ, ಬಿ.ಕೆ. ಮಹಾವಿದ್ಯಾಲಯ, ಚಿಕ್ಕೋಡಿ-೫೯೧೨೦೧.

ಈ ಮೇಲಿನ ಸಮುದಾಯದ ಪ್ರತಿನಿಧಿಗಳು ದೇಸಗತಿಗಳಾಗಿದ್ದರು ಇವರು ಬ್ರಿಟಿಷ್ ಕಾನೂನಿಂದ ಮಾನ್ಯವಾದ ನಿರಪೇಕ್ಷವಾದ ಮಾಲೀಕತ್ವದ ಹಕ್ಕುಗಳನ್ನು ಹೊಂದಿದ್ದ ಕಾರಣ ಈ ವರ್ಗದವರು ಗೇಣಿದಾರರ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿ ಅವರು ಅನೇಕ ಸಲ ಬಡ ಕೃಷಿಕರನ್ನು ಹಿಂಡಿ ಹಿಪ್ಪೆಮಾಡಿದ ಪ್ರಸಂಗವನ್ನು ಕಾಣಬಹುದಾಗಿದೆ.

ಈ ದೇಸಾಯಿಗಳು ಭೂಮಿಯ ಮೇಲೆ ಸಾಧಿಸಿದ ಒಡೆತನದ ಪರಿಣಾಮವಾಗಿ ಕೆಳಜಾತಿಯವರೆಗೆ ಸಾಂಪ್ರದಾಯಕವಾಗಿ ದಕ್ಕುತಿದ್ದ ಉತ್ಪನ್ನದ ಹಿಸ್ಸೆ ತಪ್ಪಿಹೋಯಿತು.

ಬ್ರಿಟಿಷ್ ಪೂರ್ವದಲ್ಲಿ ಉತ್ತರ ಕರ್ನಾಟಕದಲ್ಲಿ ಮೇಲ್ಜಾತಿಯವರ ಪ್ರಾಬಲ್ಯ ಹೆಚ್ಚು ಅಲಂಕಾರಿಕವೂ, ಆಚರಣಾತ್ಮಕವೂ ಆಗಿದ್ದದ್ದು ಭೂಮಿ ನಿಯಂತ್ರಣ ಪದ್ಧತಿಯನ್ನು ಬದಲಾಯಿಸಿದ ನಂತರ ಅವರ ಪ್ರಾಬಲ್ಯ ಇನ್ನೂ ಹೆಚ್ಚು ಸಮಗ್ರವೂ ಸದೃಢವೂ ಆಯಿತು. ಇದರ ಜೊತೆಗೆ ಹೊಸ ದೇಸಗತಿಗಳು ಬಲಿಷ್ಠ ಗುಂಪುಗಳನ್ನು ತಮ್ಮತ್ತ ಸೆಳಿದುಕೊಳ್ಳುವ ಉತ್ಸಾಹದಲ್ಲಿ ಅವರಿಗೆ ಮುಖ್ಯವಾದ ಪೋಲೀಸು ಮತ್ತು ಕಂದಾಯ ಸೇವೆ ಸ್ಥಾನಗಳನ್ನು ಬ್ರಿಟಿಷ್‌ರು ಕಲ್ಪಿಸಿಕೊಟ್ಟರು. ಬ್ರಿಟಿಷ್ ಆಡಳಿತಗಾರರು ಗ್ರಾಮೀಣ ಪ್ರದೇಶಗಳಲ್ಲಿ ನಿಜವಾದ ಅಧಿಕಾರದ ಮೂಲಗಳಲ್ಲಿವೆ ಎಂಬುದನ್ನು ಬಹಳ ಬೇಗ ಗುರುತಿಸಿದರಲ್ಲದೆ ಗ್ರಾಮದ ಮುಖಂಡ ಹಾಗೂ ಪಟೇಲ ಅಥವಾ ಶಾನುಭೋಗನ ಸ್ಥಾನವನ್ನು ಸದೃಢಗೊಳಿಸುವುದರ ಮೂಲಕ ತಮ್ಮ ಅನುಕೂಲಕ್ಕೆ ಪರಿಸ್ಥಿತಿಯನ್ನು ಬದಲಾಯಿಸಿಕೊಂಡರು ಸಾಮಾನ್ಯವಾಗಿ ಬುದ್ಧಿವಂತರ ಕುಟುಂಬದವರಿಂದ ಈ ಮಂದಿಯನ್ನು ಆರಿಸಲಾಗುತ್ತಿತ್ತು. ಹಾಗೆ ಮಾಡುವುದರಿಂದ ಗ್ರಾಮದವರು ಅವರ ಅಧಿಕಾರವನ್ನು ಒಪ್ಪುವ ಮನಸ್ಥಿತಿಯನ್ನು ಹೊಂದಿರುತ್ತಿದ್ದರು.

ಪಟೇಲರು ಅಥವಾ ಶಾನಭೋಗರು ಸರಕಾರದ ಆಡಳಿತದಲ್ಲಿ ಸಹಾಯ ಮಾಡುತ್ತಿದ್ದರಲ್ಲದೆ ಜನರಿಂದ ಕಂದಾಯ ವಸೂಲಿ ಮಾಡಿ ಸರಕಾರಕ್ಕೆ ಸಲ್ಲಿಸುತ್ತಿದ್ದರು. ಇಲ್ಲಿ ದೇಸಗತಿಗಳು ಪ್ರಮುಖ ಪಾತ್ರವಹಿಸುತ್ತಿದ್ದರಲ್ಲದೆ ಸರಕಾರದೊಂದಿಗೆ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಮೂಲಕ ತಮ್ಮ ಬಂಧು-ಬಾಂಧವರ ಯೋಗಕ್ಷೇಮವನ್ನು ಸಾಧಿಸುತ್ತಿದ್ದರು.

ಈ ದೇಸಗತಿ ಮನೆತನಗಳು ಸ್ಥಳೀಯ ಸರಕಾರದ ಪ್ರತಿನಿಧಿಗಳಾಗಿದ್ದರು. ಇವರ ಆಳಿದ ಪ್ರದೇಶವನ್ನು 'ಪರಗಣ' ಎನ್ನಲಾಗುತ್ತಿತ್ತು ಪರಗಣವು ಆಡಳಿತ ಸಮುದಾಯ ಕೇಂದ್ರವಾಗಿದ್ದು ಇದರ ಆಡಳಿತ ನೋಡಿಕೊಳ್ಳುತ್ತಿದ್ದವನೇ ದೇಸಾಯಿ ಪರಗಣದಲ್ಲಿ ದೇಸಾಯಿ ವಾಸಿಸುತ್ತಿದ್ದ ತನ್ನ ನಿಯಂತ್ರಣದಲ್ಲಿ ಪ್ರದೇಶವನ್ನು ಅನೇಕ ಉಪವಿಭಾಗಗಳಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರು.

ಸಿಂದಗಿ ತಾಲೂಕಿನ ದೇಸಗತಿ ಮನೆತನದ ಆಲಮೇಲದ ಶ್ರೀಯುತ ಶಿವಲಿಂಗರಾವ್ ದೇಶಮುಖರು ಮುಂಬಯ ಸರಕಾರ ೧೯೩೩ರ ನವ್ಹಂಬರ ೩೦ ರಂದು ಅತ್ಯುತ್ತಮ ಎಂಬ ಪ್ರಮಾಣ ಪತ್ರ ಹಾಗೂ ಸನದನ್ನು ನೀಡಿತು. ಅಲ್ಲದೆ ಬ್ರಿಟಿಷ್ ಸರಕಾರ ಜೂನ ೧೯೪೪ರಲ್ಲಿ ಬಹಾದ್ದೂರ ಎಂಬ ಪದವಿಯನ್ನು ದಯಪಾಲಿಸಿತು. ನಂತರ ಮುಂಬೈ ಪ್ರಾಂತ್ಯದ ಸರಕಾರವು ಇವರಿಗೆ ಗೌರವ ನ್ಯಾಯಾಧೀಶರ ಹುದ್ದೆಯನ್ನು ಅಲ್ಲದೆ ಬಿಜಾಪೂರ ನಗರ ಹಾಗೂ ತಾಲೂಕುಗಳ ಪ್ರಥಮ ದರ್ಜೆಯ ನ್ಯಾಯಾಧೀಶರನ್ನಾಗಿ ನಿಯುಕ್ತಗೊಳಿಸಿತು. ಇದು ಒಂದೇ ಅಲ್ಲ ಇಂತಹ ಅನೇಕ ಉದಾಹರಣೆಗಳು ಸಿಗುತ್ತವೆ. ಯೊರೋಪಿಯನ್ ಮಾದರಿಯಲ್ಲಿ ಬೆಳೆಯಲು ಪ್ರಾರಂಭಿಸಿದ್ದ ಹೊಸ ನ್ಯಾಯಾಂಗವು ಪ್ಲೀಡರಗಳು, ವಕೀಲರು ಮತ್ತು ಲಾಯರಗಳ ಒಂದು ವರ್ಗದ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಾದ್ದರಿಂದ ಇವರು ಸ್ವಾತಂತ್ರ್ಯವಾಗಿ ಕ್ರಮವಾಗಿ ದೇಸಗತಿಗಳು ಜಿಲ್ಲಾ ಪಟ್ಟಣಗಳಲ್ಲಿ ಮುಖ್ಯ ನ್ಯಾಯಾಲಯಗಳಲ್ಲಿ ಉದ್ಯೋಗ ಪ್ರಾರಂಭಿಸಬಹುದಾಗಿತ್ತು ಈ ವರ್ಗದ ಯಜಮಾನ್ಯ ಎಷ್ಟು ಪ್ರಾಬಲ್ಯವಾಗಿತ್ತೆಂದರೆ ಇಂಗ್ಲೀಷ ಭಾಷೆಯ ಅರಿವಿಲ್ಲದ ಯಾವ ವ್ಯಕ್ತಿಗೂ ತನ್ನ ಪ್ರದೇಶ ಅಥವಾ ವರ್ಗದ ಪರವಾಗಿ ಮಾತನಾಡಲು ಶಕ್ಯವಾಗುತ್ತಿರಲ್ಲ ಹಾಗಾಗಿ ಈ ದೇಸಗತಿ ಮನೆತನಗಳು ಹೊಸದಾದ ಶಿಕ್ಷಣ ವ್ಯವಸ್ಥೆ, ಅರ್ಥವ್ಯವಸ್ಥೆಯಲ್ಲಿ ಇವರ ಪಾತ್ರ ಗಣನೀಯವಾಗಿದ್ದತು.

ಬೆಳಗಾವಿ ಜಿಲ್ಲೆಯ ಚಚಡಿ ದೇಸಗತಿ ಮನೆತನದ ವೀರಭದ್ರ ದೇಸಾಯಿ ಪ್ರಮುಖರಾಗಿದ್ದು ವತನಕಾಯ್ದೆ ಪ್ರಕಾರ ಎಲ್ಲ ಜಮೀನನ್ನು ಮತ್ತೆ ಪಡೆಯುತ್ತಾರೆ ಸಮರ್ಥವಾಗಿ ಕಾರ್ಯನಿರ್ವಹಿಸಿ ಬ್ರೀಟಿಷ್ ಸರಕಾರದಿಂದ ಚಚಡಿಗೆ 'ಆನ್ರರಿ ಮ್ಯಾಜಿಸ್ಟ್ರೇಟ್' ಆಗಿ ನೇಮಕಗೊಂಡರು ನಂತರ ಮೂರನೇ ದರ್ಜೆಯ ಸರದಾರರೂ ಆದರು. ಬಾಂಬೆ ಪ್ರಾಂತ್ಯದ ದಕ್ಷಿಣ ಭಾಗದ ಪರವಾಗಿ ಬಾಂಬೆ ನ್ಯಾಯನಿರ್ಣಯ ಸಭೆಯಲ್ಲಿ ಸದಸ್ಯರಾಗಿ ನೇಮಕವಾಗಿದ್ದರು.

ಬ್ರಿಟಿಷ್ ಸರಕಾರವನ್ನು ವಿರೋಧಿಸಿದ ಕೆಲವು ದೇಶಗತಿಗಳು ಪೂರ್ಣ ಪ್ರಮಾಣದಲ್ಲಿ ನಾಶವಾದವು ೧೮೦೦ ರಲ್ಲಿ ದೋಂಡೋಜಿ ವಾಘನಿಗೆ ಸಹಾಯ ಮಾಡಿದನು ಎಂಬ ಕಾರಣದಿಂದಾಗಿ ತಲ್ಲೂರಿನ ದೇಸಾಯಿಯ ಮೇಲೆ ೧೮೦೦ ಆಗಸ್ಟ್ ೨೪ರಂದು ವೆಲ್ಲಸ್ಲಿಯು ಲೆಫ್ಟಿನಂಟ್ ಕರ್ನಲ್ ಮಾಂಟ್ರೋಸರನ್ ನೇತೃತ್ವದಲ್ಲಿ ಒಂದು ಸೈನ್ಯದ ತುಕಡಿಯನ್ನು

ಕಳುಹಿಸಿ ದಾಳಿ ಮಾಡಿದ್ದಲ್ಲದೆ ಅವನಲ್ಲಿರುವ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡನು ೧೮೨೪ ರಲ್ಲಿ ಬ್ರಿಟಿಷ್‌ರ ವಿರುದ್ಧ ಹೋರಾಡಿದ ಮೇಲೆ ಕಿತ್ತೂರು ರಾಣಿ ಚನ್ನಮ್ಮಾ ಸೇರಿದಂತೆ ಬ್ರಿಟಿಷರ ವಿರುದ್ಧ ಬಂಡಾಯ ಹೂಡಿದ ಸುರಪುರದ ವೆಂಕಟಪ್ಪ ನಾಯಕ ಹಾಗೂ ಜಮಖಂಡಿ ಸಂಸ್ಥಾನದ ಭೋಟುಸಿಂಗ್ ಮುಂತಾದವರು ಹೂಡಿದ ಬಂಡಾಯಕ್ಕೆ ಜಂಬಗಿಯ ದೇಸಾಯಿ ಬಸವಲಿಂಗಪ್ಪನು ಮದ್ದುಗುಂಡುಗಳ ಸರಬರಾಜು ಮಾಡಲು ಒಪ್ಪಿಗೆ ಸೂಸಿದನು. ಆದರೆ ಬ್ರಿಟಿಷ್‌ರ ವಿರುದ್ದದ ಒಳಸಂಚಿನ ಸೂಳಿವು ತಿಳಿದ ಸೋಲ್ಲಾಪೂರದ ಕಲೆಕ್ಟರನ್ನು ಬಸವಲಿಂಗಪ್ಪ ದೇಶಮುಖ ಹಾಗೂ ಆತನ ಮಗನನ್ನು ಬ್ರಿಟಿಷರು ದಸ್ತಗಿರಿ ಮಾಡಿದರು. ನಂತರ ದಂಗೆಯಲ್ಲಿ ಭಾಗವಹಿಸಿದ್ದು ಸಾಭಿತಾಗಿದ್ದರಿಂದ ಸೋಲ್ಲಾಪೂರದಲ್ಲಿ ಇವರಿಬ್ಬರಿನ್ನು ಗಲ್ಲಿರಿಸಲಾಯಿತು.

ಬ್ರಿಟಿಷ್ ಆಡಳಿತ ಅವಧಿಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಯಾವುದೇ ಜಮೀನ್ದಾರಿಯಾಗಲಿ ಜಮೀನ್ದಾರರ ಒಂದು ಶ್ರೇಣಿಯಾಗಲಿ ಸೇಷ್ಟಿಯಾಗಲಿಲ್ಲ ಎಂಬುದು ಆಸಕ್ತಿ ಕೆರಳಿಸುವ ಅಂಶವಾಗಿದೆ. ಬ್ರಿಟಿಷ್ ಸರಕಾರವೇನಾದರೂ ಈ ನಿಟ್ಟಿನಲ್ಲಿ ಕಾರ್ಯಕ್ರಮ ಕೈಗೊಂಡಿದ್ದರೆ ಆಗಲೇ ಆಸ್ತಿತ್ವದಲ್ಲಿದ್ದ ದೇಶಗತಿ ಮನೆತನಗಳನ್ನು ರಕ್ಷಿಸುವುದಾಕ್ಕಾಗಿಯೇ ಹೊರತು ಹೊಸತಾಗಿ ಏನನ್ನು ಸೃಷ್ಟಿಸುವುದಕ್ಕಲ್ಲ. ಬಹುತೇಕ ದೇಶಗತಿ ಮನೆತನಗಳು ಬ್ರಿಟಿಷ್ ಸರಕಾರದ ಪರವಾದ ದೋರಣೆಯನ್ನು ಹೊಂದಿದ್ದವು ಈ ದೇಶಗತಿಗಳಲ್ಲಿ ಹೆಚ್ಚಿನ ಪ್ರಮಾಣದ ಜಮೀನ್ದಾರಿ ಭೂಮಿಗಳನ್ನು ಹಂಚಿಕೊಂಡ ಉತ್ತರಾಧಿಕಾರಿಗಳು ಹೆಚ್ಚಿನ ಪ್ರಮಾಣದ ಕಂದಾಯ ತರಬೇಕಾಗಿದ್ದರಿಂದ ಅನೇಕ ಕಡೆಗಳಲ್ಲಿ ಸಾಮಾನ್ಯ ರೈತರಾಗಿ ಪರಿವರ್ತನೆ ಹೊಂದಿದ್ದರು. ಹೀಗಾಗಿ ಕೆಲವೇ ದೇಶಗತಿಗಳು ಬ್ರಿಟಿಷ್ ಪರ ನೀತಿಯ ಮೂಲಕ ಲಾಭಗಳಿಸಿ ಆಸ್ತಿತ್ವದಲ್ಲಿದ್ದವು.

ಆಕರ ಗ್ರಂಥಗಳು

೧. ಎಸ್. ಚಂದ್ರಶೇಖರ, ದಕ್ಷಿಣ ಭಾರತ (ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨. ಆಯ್.ಕೆ. ಪತ್ತಾರ, ದೇಸಗತಿ ಮನೆತನಗಳ ಕೊಡುಗೆಗಳು, Proceedings two days National Seminar V.M.S.R. Vastrad College Hungund, 2015.

೩. ಶ್ರೀಮತಿ ಶೈಲಜಾ ಎಸ್. ಕರಡಿ, ಬೆಳಗಾವಿ ಜಿಲ್ಲೆಯ ದೇಸಗತಿ ಮನೆತನಗಳು Proceedings two days National Seminar V.M.S.R. Vastrad College Hungund, 2015.

೪. ಸೂರ್ಯನಾಥ ಕಾಮತ್ (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಧಾರವಾಡ ಜಿಲ್ಲೆ) ಕರ್ನಾಟಕ ರಾಜ್ಯ ಸರಕಾರ, ೧೯೯೫.

೫. ಶೇಕದಾರ ವಿ.ಎಸ್. ವಿಜಾಪೂರ ಜಿಲ್ಲೆಯ ದೇಸಗತಿಗಳು, ಓಂಕಾರ ಪ್ರಕಾಶನ, ಧಾರವಾಡ, ೨೦೧೧.

೧೦೭

ಕಾಕಲವಾರ ದೇಶಮುಖ ಸಂಸ್ಥಾನ

ಪಾಟೀಲ ಬಸನಗೌಡ.ಎಸ್.ಹುಣಸಗಿ*

ವಿಜಯನಗರ ಸಾಮ್ರಾಜ್ಯ ಪತನಾನಂತರ ಅಸ್ತಿತ್ವಕ್ಕೆ ಬಂದ ಪ್ರಮುಖ ಅರಸು ಮನೆತನಗಳೆಂದರೆ ವೀರಶೈವ ಅರಸು ಮನೆತನಗಳು. ಇವರು ಸ್ವತಂತ್ರ ಅರಸರುಗಳೆಂದು ಹೇಳಲಾಗುತ್ತದೆ. ವೀರಶೈವ ಅರಸು ಮನೆತನಗಳಷ್ಟೇ ಅಲ್ಲದೆ, ಬೇಡ ಮನೆತನಗಳ ಅರಸರು ಸ್ವತಂತ್ರವಾಗಿ ಆಡಳಿತ ನಡೆಸಹತ್ತಿದರು. ವಿಶೇಷವಾಗಿ ಉತ್ತರಕರ್ನಾಟಕದಲ್ಲಿ ಬಹಮನಿ ಸಾಮ್ರಾಜ್ಯ ಹಾಗೂ ಮರಾಠಾ ಸಾಮ್ರಾಜ್ಯಗಳು ಆಳಿದ ನಂತರ ವೀರಶೈವ ದೇಸಾಯಿ, ದೇಶಮುಖ ಮನೆತನಗಳು ಹುಟ್ಟಿಕೊಂಡವು ಎಂದು ಸಂಶೋಧಕರಾದ ಡಾ. ಎಂ.ಎಂ. ಕಲಬುರ್ಗಿಯವರು ಹೇಳುತ್ತಾರೆ.


ಯಾದಗಿರಿ ತಾಲೂಕಿನ ಕಾಕಲವಾರ ದೇಶಮುಖ ಸಂಸ್ಥಾನವು ಯಾದಗಿರಿಯಿಂದ ಸುಮಾರು ೪೫ ಕಿ.ಮೀ. (ಗುರುಮಠಕಲ್‌ನಿಂದ ೫ ಕಿ.ಮೀ.) ಅಂತರದಲ್ಲಿದೆ. ಕಾಕಲವಾರ ಸಂಸ್ಥಾನಿಕ ಅರಸರು ವೀರಶೈವ ಧರ್ಮೀಯರೆಂದು ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿಯವರು ಅಭಿಪ್ರಾಯ ಪಡುತ್ತಾರೆ. ಕಲ್ಲೂರು, ಕೊಡಂಗಲ್, ಯಾಗಂಟಿ, ಮದನಾ, ಕಾಕಲವಾರ, ಚಿಂತಪಳ್ಳಿ, ಮಳಖೇಡ, ನೀರಗುಡಿ, ಹೇಮನೂರ, ಹಿರೋಳಿ, ಮುಂತಾದ ನೆಲೆಗಳು ವೀರಶೈವ ದೇಸಗತಿಗಳಾಗಿದ್ದವೆಂದು ಹೇಳುತ್ತಾರೆ.

ಕಾಕಲವಾರ ದೇಶಮುಖ ಸಂಸ್ಥಾನದ ಅರಸರನ್ನು ಅಲ್ಲಿನ ಸ್ಥಳೀಯರು ದೊರೆ, ದೊರಾ(ಆಂಧ್ರ) ಎಂದು ಕರೆಯುವರು. ದೊರೆ ಎಂದಾಕ್ಷಣ ಸುರಪುರದ ದೊರೆಗಳು ಥಟ್ಟನೆ ನೆನಪಾಗುವದು ಸಹಜ. ಸುರಪುರದ ದೊರೆಗಳು ಬೇಡ ಜನಾಂಗದವರಾಗಿದ್ದರೆ, ಕಾಕಲವಾರ ದೇಶಮುಖ ಸಂಸ್ಥಾನಿಕರು ವೀರಶೈವರಾಗಿದ್ದಾರೆ. ಯಾದಗಿರಿ, ಸೇಡಂ, ಕೊಡಂಗಲ್ (ಆಂಧ್ರ) ತಾಲೂಕಿನ ಹಲವು ಗ್ರಾಮಗಳು ದೇಶಮುಖ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿದ್ದವು. ಯಾದಗಿರಿ ತಾಲೂಕಿನ ಗುರುಮಠಕಲ್, ಮಿಠಾತಿಪಡಂಪಲ್ಲಿ, ನಾರಾಯಣಪುರ, ಚಂಡರಕಿ, ಪುಟಪಾಕ, ನಜರಾಪುರ, ಕೇಶ್ವಾರ, ಸೇಡಂ ತಾಲೂಕಿನ ಬುರುಗಪಲ್ಲಿ, ಚಂದಾಪುರ, ಮೋತಕಪಲ್ಲಿ, ಇಟ್ಕಾಲ, ಯಾನಾಗುಂದಿ, ಕಿಷ್ಟಾಪುರ ಹಾಗೂ ಆಂಧ್ರದ ಕೊಡಂಗಲ್ ತಾಲೂಕಿನ ಅಲೋವನಗರ, ದಾಮರಗಿದ್ದ, ಗುಂಡೆಪಲ್ಲಿ, ಕಾನಕುರ್ತಿ, ಮದ್ದೂರ, ಗಡಿಮಂಕನಹಳ್ಳಿ, ಮಲ್ಲರೆಡ್ಡಿಪಲ್ಲಿ, ಲಾವಾಕುರ್ತಿ, ನಗರದಪಲ್ಲಿ, ಪದಂಪಲ್ಲಿ, ಬರೆಪಲ್ಲಿ, ರೆಡ್ಡಿಪಲ್ಲಿ, ಸರಲ್, ತಿನಕುರ್ತಿ, ತೋಬಿದ್‌ಗಳಲ್ಲದೆ ಸುಮಾರು ೨೦೦ ಗ್ರಾಮಗಳು ದೇಶಮುಖ ಸಂಸ್ಥಾನದ ಅಧೀನಕ್ಕೊಳಪಟ್ಟಿದ್ದವು.

ರಾಜಾ ಲಕ್ಷ್ಮಣಪ್ಪ ದೇಶಮುಖ ಈ ಸಂಸ್ಥಾನದ ಮೂಲ ಪುರುಷರೆಂದು ತಿಳಿದುಬರುತ್ತದೆ. ಇವರ ಬಗ್ಗೆ ಹೆಚ್ಚಿನ ಮಾಹಿತಿಯೇನೂ ಲಭಿಸಿಲ್ಲ. ಆದರೆ ಇವರ ಮಗ ಮಲಭೂಪಾಲರೆಡ್ಡಿ ಹಾಗೂ ತದನಂತರ ಬಂದ ಅರಸರ ವಂಶಾವಳಿಯ ಮಾಹಿತಿ ಇದೆ.


ಈ ಸಂಸ್ಥಾನವು ಸುಮಾರು ೪೦೦ಕ್ಕೂ ಅಧಿಕ ವರ್ಷದ ಇತಿಹಾಸವನ್ನು ಹೊಂದಿದೆ. ಕಾಕಲವಾರನಲ್ಲಿ ವಿಶಾಲವಾದ ಜಾಗದಲ್ಲಿ ನಿರ್ಮಿಸಲಾಗಿರುವ ಅರಮನೆಯು ತನ್ನ ಗತ ವೈಭವವನ್ನು ಈಗಲೂ ಹೇಳುತ್ತಿದೆ. ಅರಮನೆ ಸುತ್ತ ಸುಮಾರು ೪ ಎಕರೆ ವಿಸ್ತಾರದಲ್ಲಿ ನಿರ್ಮಿಸಿದ ಕೋಟೆಗೋಡೆಗಳು, ಹುಡೆಗಳು (ಸುತ್ತಲೂ ಒಟ್ಟು ೬ ಇವೆ.) ಅಲ್ಪಸ್ವಲ್ಪ ಹಾಳಾಗಿವೆ. ವಿಶೇಷವಾಗಿ ಇಲ್ಲಿನ ಕೋಟೆಯು ಗಡುಸಾದ ಮಣ್ಣಿನಿಂದ ಕೂಡಿದೆ. ಅರಮನೆ ಪ್ರವೇಶ ದ್ವಾರದಲ್ಲಿ ಎತ್ತರವಾದ ನಗಾರಿಖಾನ್ ಇದೆ. ಇದರ ಮುಂಭಾಗಲ್ಲಿ ದರ್ಬಾರ್ ಹಾಲ್ ಇದೆ. ಹಿಂದೆ ಈ ಅರಸರು ಸಭೆ ನಡೆಸುತ್ತಿದ್ದ ಸ್ಥಳ ಅದು. ಎಡಬಲದಲ್ಲಿ ವೀಕ್ಷಣಾ ಕಮಾನುಗಳಿವೆ. ಕಟ್ಟಿಗೆಯಿಂದ ನಿರ್ಮಿಸಲಾಗಿರುವ ಸುಂದರ ಕಲಾಕೃತಿಗಳನ್ನು ಹೊಂದಿರುವ ದರ್ಬಾರ್ ಇಂದು ಅಕ್ಷರಶಃ ದನದ ಕೊಟ್ಟಿಗೆಯಾಗಿ ಪರಿವರ್ತಿತವಾಗಿದೆ. ಹಿಂದೆ ಇವರ ಕುಟುಂಬದಲ್ಲಿ ನೆರವೇರುತ್ತಿದ್ದ ಎಲ್ಲ ವಿವಾಹಗಳು ಇದೇ ದರ್ಬಾರ್ ಹಾಲ್‌ನಲ್ಲಿ ಜರುಗುತ್ತಿದ್ದವೆಂದು ರಾಜಾ ಲಕ್ಷ್ಮಣಪ್ಪ ದೇಶಮುಖ ಹೇಳುತ್ತಾರೆ.

* ಮೊ. ೯೯೦೦೭೭೧೪೩೭









ಪ್ರವೇಶ ದ್ವಾರದಲ್ಲಿ ಗಣೇಶ ಮೂರ್ತಿ ಕೆತ್ತಲಾಗಿದೆ. ಕಟ್ಟಿಗೆಯಲ್ಲಿ ನಿರ್ಮಿಸಲಾಗಿರುವ ಇಲ್ಲಿನ ಬಾಗಿಲುಗಳು, ಕಂಬಗಳ ಮೇಲೆ ಕೆತ್ತಲಾದ ಸುಂದರ ಕಲಾಕೃತಿಗಳು ಮನಮೋಹಕವಾಗಿವೆ. ಅರಮನೆಯಲ್ಲಿ ಈಗಲೂ ಕೂಡ ಯುದ್ಧ ಪರಿಕರಗಳನ್ನು ಕಾಣಬಹುದಾಗಿದೆ. ಕತ್ತಿ, ಭರ್ಚಿ, ಕಬ್ಬಿಣದ ಸರಪಳಿಗಳಿಂದ ಮಾಡಿದ ರಕ್ಷಣಾ ಕವಚಗಳು ಮುಂತಾದವುಗಳಿವೆ. ವಿಶೇಷವಾಗಿ ಮನೆಯಲ್ಲೇ "ತೋಪು" ಕೂಡ ಕಾಣಬಹುದಾಗಿದೆ. ಅತ್ಯಂತ ಬೈವಭವೋಪೇತವಾಗಿ ಆಡಳಿತ ನಡೆಸಿದ ಸಂಸ್ಥಾನವು ಇಂದು ನಿರ್ಲಕ್ಷಕ್ಕೆ ತುತ್ತಾಗಿರುವದು ಕಂಡು ಸ್ವತಃ ರಾಜಾ ಲಕ್ಷ್ಮಣಪ್ಪ ದೇಶಮುಖರವರು ವಿಷಾದಿಸುತ್ತಾರೆ.

ಹೈದ್ರಾಬಾದ್ ನಿಜಾಮನಿಗೂ ಈ ಸಂಸ್ಥಾನಕ್ಕೂ ಆಗಾಗ ಸಣ್ಣಪುಟ್ಟ ಘರ್ಷಣೆಗಳಾಗುತ್ತಿದ್ದವೆಂದು ಹೇಳುತ್ತಾರೆ. ಆಂಧ್ರದ ಗಡಿಭಾಗದ ಹಳ್ಳಿಗಳು, ಯಾದಗಿರಿ, ಸೇಡಂ ತಾಲೂಕಿನ ಹಲವು ಗ್ರಾಮಗಳಲ್ಲಿ ಇವರು ನಿರ್ಮಿಸಿದ ಕೋಟೆಗಳನು ಕಾಣುತ್ತೇವೆ. ಹಿಂದಿನ ಅರಸರು ಕಾಕಲವಾರದಲ್ಲಿ ಅರಮನೆ ಇರಿಸಿಕೊಂಡಿದ್ದರೂ, ಆಡಳಿತ ಕೇಂದ್ರವನ್ನು ಗುರುಮಠಕಲ್‌ನಿಂದ ನಡೆಸುತ್ತಿದ್ದರು. ಬಹುಶಃ ಸುತ್ತಲಿನ ಗ್ರಾಮಗಳಿಗೆ ಹತ್ತಿರದ ಪಟ್ಟಣ ಪ್ರದೇಶವಾದ್ದರಿಂದ ಆಡಳಿತ ಕೇಂದ್ರವನ್ನು ಗುರುಮಠಕಲ್‌ನಲ್ಲಿ ಸ್ಥಾಪಿಸಿದ್ದಿರಬೇಕು. ಗಂಡಭೇರುಂಡ ಈ ಸಂಸ್ಥಾನದ ರಾಜಲಾಂಛನವಾಗಿದೆ. ಈ ಸಂಸ್ಥಾನದ ಕುರಿತಾಗಿ ಹೆಚ್ಚಿನ ಅಧ್ಯಯನದ ನಡೆಯುವ ಅಗತ್ಯವಿದೆ.

೧೦೮

ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತ, ವಾಸ್ತವ್ಯ ಭೂಗೋಳ: ಒಂದು ಅವಲೋಕನ (ಕ್ರಿ.ಶ. ೧೬-೧೮ನೇ ಶತಮಾನ)

ಸುಜಾತಾ*

ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸವನ್ನು ಗಮನಿಸಿದಾಗ ಇಲ್ಲಿ ವಿವಿಧ ಧರ್ಮದ ಪ್ರವೇಶ, ಪರಿಣಾಮವಾಗಿ ವಿವಿಧ ಧಾರ್ಮಿಕ ನೆಲೆಗಳ ಉಗಮ, ಬೆಳವಣಿಗೆ, ಜನಸಮುದಾಯಗಳ ವಾಸ್ತವ್ಯ ನೆಲೆಗಳನ್ನು ಗಮನಿಸಬಹುದಾಗಿದೆ. ಭಾರತದ ಚರಿತ್ರೆಯಲ್ಲಿ ಕೆಳದಿ ಸಂಸ್ಥಾನದ ಇತಿಹಾಸವು ಕ್ರಿ.ಶ. ೧೫೦೦ರಿಂದ ಕ್ರಿ.ಶ. ೧೭೬೩ರವರೆಗೆ ದಕ್ಷಿಣ ಭಾರತದ ಕರಾವಳಿಯ ಬಹು ಭಾಗವನ್ನೊಳಗೊಂಡು ಆಳ್ವಿಕೆಗೆ ಒಳಪಟ್ಟಿದುದನ್ನು ಇತಿಹಾಸಕಾರರು ತೋರಿಸಿಕೊಟ್ಟಿದ್ದಾರೆ. ಉತ್ತರ ಕನ್ನಡದ ಕಾರವಾರ, ಅಂಕೋಲದಿಂದ ಹಿಡಿದು ಕೇರಳದ ಬಿಲಿಯಾಪಟಮ್‌ವರೆಗಿನ ಭೂಭಾಗದವರೆಗೆ ಇವರ ಆಡಳಿತ ವ್ಯಾಪ್ತಿಯನ್ನಾಗಿ ಕಾಣಬಹುದಾಗಿದೆ. ಕೆಳದಿ ಕಾಲದಲ್ಲಿ ದಕ್ಷಿಣ ಕನ್ನಡ ಕರಾವಳಿ ಭೂಭಾಗವು ಪೋರ್ಚುಗೀಸ್, ಡಚ್, ಇಂಗ್ಲಿಷ್, ಅರೇಬಿಯನರ ವ್ಯಾಪಾರಿ ಚಟುವಟಿಕೆಗಳಿಗೆ ಭೂ ವೇದಿಕೆಯಾದವು.[೧]

ಮಂಗಳೂರು

ಕೆಳದಿ ಅರಸರು ಮಂಗಳೂರನ್ನು ಪ್ರಾಂತ್ಯ[೨]ವಾಗಿ ಪ್ರಾದೇಶಿಕ ಆಡಳಿತ ಘಟಕವಾಗಿ ವಿಭಾಗಿಸಿದ್ದರು. ಕ್ರಿ.ಶ. ೧೫೫೮ರಲ್ಲಿ ಸದಾಶಿವ ನಾಯಕನು ಮಂಗಳೂರಿನ ರಾಜ್ಯಪಾಲನಾದನು. ಕ್ರಿ.ಶ. ೧೫೬೩ರಲ್ಲಿ ಮಂಗಳೂರು ಸದಾಶಿವ ನಾಯಕನ ನೇರ ಆಳ್ವಿಕೆಗೆ ಒಳಗಾಯಿತು.[೩] ವಿಜಯನಗರ ಕಾಲದಲ್ಲಿಯೇ ಮಿಶನರಿಗಳು ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿ ಇಲ್ಲಿನ ಸಾಂಸ್ಕೃತಿಕ ಇತಿಹಾಸಕ್ಕೆ ತಮ್ಮ ಕೊಡುಗೆಯನ್ನಿತ್ತಿದ್ದರು. ಮಂಗಳೂರು ಮಿಶನರಿಗಳಿಗೆ ಧಾರ್ಮಿಕ, ಆರ್ಥಿಕ ಚಟುವಟಿಕೆಯ ಕೇಂದ್ರವಾಗಿ ಪರಿಣಮಿಸಿತ್ತು. ಕೆಳದಿ ಕಾಲದಲ್ಲಿ ಮಿಶನರಿ ಚಟುವಟಿಕೆಗಳು ಮುಂದುವರಿದವು. ಕ್ರಿ.ಶ. ೧೫೮೭ರ ಶಾಸನದ ಪ್ರಕಾರ ಮಂಗಳೂರಿನ ಸುತ್ತಮುತ್ತ ಕ್ರೈಸ್ತರು ಬೇಸಾಯ ಮಾಡುತ್ತಿದ್ದರು ಎನ್ನಲಾಗಿದೆ.[೪] ಡೆಲ್ಲಾವೆಲ್ಲಿಯು ಮಂಗಳೂರಿನಲ್ಲಿ ಡೆಲ್ ರೊಸಾರಿಯೋ ಚರ್ಚ್ ಮಂಗಳೂರಿನ ಕೋಟೆಯ ಒಳಗೆ ಇದ್ದಿತ್ತು ಎನ್ನುತ್ತಾನೆ. ಇಟಲಿ ದೇಶದ ಪ್ರವಾಸಿಗ ಪಿತ್ರೋ ಡೆಲ್ಲಾವೆಲ್ಲಿಯು ಕಂಡಿರುವಂತೆ ಕ್ರಿ.ಶ. ಹದಿನೇಳನೆಯ ಶತಮಾನದಲ್ಲಿ ಮಂಗಳೂರಿನ ಬಂದರಿನ ಒಳಗೆ ಅವರ್ ಲೇಡಿ ಆಫ್ ದಿ ಮೋಸ್ಟ್ ಹೋಲಿ ರೋಸಂ, ಮಿಸೆರ್ರಿಕಾಡ್ರಿಯ, ಸೈಂಟ್ ಫ್ರಾನ್ಸಿಸ್ ಆಫ್ ಅಸ್ಸಿಸಿ ಮೊದಲಾದ ಚರ್ಚ್‌ಗಳಿದ್ದವು ಎಂದಿರುತ್ತಾನೆ.[೫] ಕ್ರಿ.ಶ. ೧೬೮೦ರಲ್ಲಿ ಥಾಮಸ್ ಡಿ ಕ್ಯಾಸ್ಟ್ರೋ ಬಿಷಪ್‌ನು 'ಚರ್ಚ್ ಆಫ್ ಅವರ್ ಲೇಡಿ ಆಫ್ ಮಿರಾಕಲ್ಸ್'ನ್ನು ಸ್ಥಾಪಿಸಿದನು.[೬] ಇದು ಮಿಲಗ್ರಿಸ್ ಚರ್ಚ್ ಎಂದೇ ಕರೆಯಲ್ಪಟ್ಟಿತು. ಅಲ್ಲದೆ ರೋಮಿನ ಪವಿತ್ರ ಮಠಾಧಿಪತ್ಯವು ಬಿಷಪ್ ಥಾಮಸ್ ಡಿ ಕ್ಯಾಸ್ಟ್ರೋನನ್ನು ಮಂಗಳೂರಿಗೆ ಕಳುಹಿಸಿತು.[೭] ಒಟ್ಟಿನಲ್ಲಿ ಈ ಅಂಶಗಳು ಮಂಗಳೂರು ಕೆಳದಿ ಕಾಲದಲ್ಲಿ ಪ್ರಮುಖ ಕ್ರೈಸ್ತ ಧಾರ್ಮಿಕ ನೆಲೆಯಾಗಿ ಪರಿಣಮಿಸಿರುವುದನ್ನು ಕಾಣಬಹುದಾಗಿದೆ.

ಕಲ್ಯಾಣಪುರ

ಕ್ರಿ.ಶ. ೧೮ನೆಯ ಶತಮಾನದಲ್ಲಿ ಮಿಶನರಿ ಚಟುವಟಿಕೆಗಳನ್ನು ಕಲ್ಯಾಣಪುರದಲ್ಲಿ ಕಾಣಿಸಿಕೊಂಡಿದ್ದವು. ಕಲ್ಯಾಣಪುರವು ಕ್ರೈಸ್ತ ಧರ್ಮದ ಚಟುವಟಿಕೆಯ ಪ್ರಮುಖ ಕೇಂದ್ರವಾಗಿ ಒಂದು ಶತಮಾನಗಳಷ್ಟು ಕಾಲ ಚಾರಿತ್ರಿಕವಾಗಿ ಬೆಳವಣಿಗೆಯನ್ನು ಕಂಡಿತು. ಕ್ರಿ.ಶ. ೧೭೬೩ರ ವರೆಗೂ ಬಾರಕೂರಿನಲ್ಲಿ ಕಲ್ಯಾಣಪುರದಿಂದಲೇ ನಿರ್ವಹಿಸುತ್ತಿದ್ದ ಒಂದು ಆರಾಧನಾ ಮಂದಿರವಿತ್ತು. ಇದು ಕ್ಯಾಥಲಿಕ್ ಸಮುದಾಯವನ್ನೊಳಗೊಂಡ ಸಮುದಾಯದ ಆರಾಧನಾ ಮಂದಿರವಾಗಿತ್ತು. ಈ ಚರ್ಚ್‌ನಿಂದ ಗೋವಾ ರಾಚೋಲ್ ಸೆಮಿನರಿಗೆ ಪಾದ್ರಿ ತರಬೇತಿ ಪಡೆಯಲು ಅಭ್ಯರ್ಥಿಗಳನ್ನು ಕಳುಹಿಸಲಾಗುತ್ತಿತ್ತು ಮತ್ತು ಪಾದ್ರಿಗಳಾಗಿ ನೇಮಿಸಲ್ಪಡುತ್ತಿದ್ದರು.[೮] ಪೋರ್ಚುಗೀಸರು ಕ್ರಿ.ಶ. ೧೬೭೮ರಲ್ಲಿ ಉಡುಪಿಯ ಕಲ್ಯಾಣಪುರದಲ್ಲಿ ಒಂದು ಚರ್ಚ್ ನಿರ್ಮಾಣ

* ಸಂಶೋಧನಾ ವಿದ್ಯಾರ್ಥಿನಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮೊ. ೯೦೦೮೮೯೬೬೬೩

ಮತ್ತು ಕೋಟೆ ಕಟ್ಟುವಲ್ಲಿ ಅನುಮತಿ ಪಡೆದುಕೊಂಡರು.[೯] ಒಟ್ಟಿನಲ್ಲಿ ಕಲ್ಯಾಣಪುರವು ಕ್ರಿ.ಶ. ೧೭ನೆಯ ಶತಮಾನದಲ್ಲಿ ಕ್ರೈಸ್ತ ಧಾರ್ಮಿಕ ನೆಲೆಯಾಗಿತ್ತೆನ್ನಬಹುದಾಗಿದೆ.

ಕುಂದಾಪುರ

ಪೋರ್ಚುಗೀಸರು ಕುಂದಾಪುರದಲ್ಲಿ ಕ್ರಿ.ಶ. ೧೫೬೯ರಲ್ಲಿ ಕೋಟೆ ನಿರ್ಮಿಸಿದರು ಎನ್ನಲಾಗಿದೆ.[೧೦] ಶಿವಪ್ಪನಾಯಕನು ಪೋರ್ಚುಗೀಸರನ್ನು ಕುಂದಾಪುರ ಕೋಟೆಯಿಂದ ಹೊರ ಹಾಕಿದನು. ಕ್ರಿ.ಶ. ೧೬೭೧ರಲ್ಲಿ ಪೋರ್ಚುಗೀಸರು ಸೋಮಶೇಖರ ನಾಯಕನೊಂದಿಗೆ ಮತ್ತೆ ಒಪ್ಪಂದವನ್ನು ಮಾಡಿಕೊಂಡು ಕುಂದಾಪುರದಲ್ಲಿ ವ್ಯಾಪಾರವನ್ನು ಮುಂದುವರಿಸಿದರು.[೧೧] ಕೆಳದಿ ಕಾಲದಲ್ಲಿ ಕುಂದಾಪುರ ಸುತ್ತಮುತ್ತ ಪೋರ್ಚುಗೀಸ್ ವಾಸ್ತವ್ಯ ನೆಲೆಗಳು ಹುಟ್ಟಿಕೊಂಡಿರುವುದು ಗೋಚರಿಸುತ್ತದೆ. ಈ ವಾಸ್ತವ್ಯ ನೆಲೆಗಳನ್ನು ಕೆಳದಿ ವೀರಪ್ಪನಿಗೆ ಬಿಟ್ಟುಕೊಡುವ ಕುರಿತು ಹೇಳಲಾಗಿದೆ. ಈ ಒಪ್ಪಂದದಲ್ಲಿ ಈ ನೆಲೆಗಳಿಗೆ ೪ ಗ್ರಾಮಗಳನ್ನು ಬಿಟ್ಟುಕೊಡಬೇಕೆಂದು ಒಪ್ಪಲಾಯಿತು.[೧೨] ಡೆಲ್ಲಾವೆಲ್ಲಿಯು ಕುಂದಾಪುರವನ್ನು ಲೋವರ್ ಬಾರ್ಸಿಲೋರ್ ಎಂಬುದಾಗಿ ಕರೆದಿರುತ್ತಾನೆ ಮತ್ತು ಕುಂದಾಪುರವು ಉತ್ತಮ ಸ್ಥಿತಿಯ ಮಾರ್ಗವನ್ನು ಹೊಂದಿದ್ದು, ಜನಸಂಖ್ಯೆಯಿಂದ ತುಂಬಿತ್ತು ಎಂದಿರುತ್ತಾನೆ.[೧೩] ಎರಡನೇ ವೆಂಕಟಪ್ಪನಾಯಕನ ಆಡಳಿತ ಸಂದರ್ಭ ಡಚ್ಚರು ಬಾರ್ಸಿಲೋರ್ (ಕುಂದಾಪುರ) ನಲ್ಲಿ ಫ್ಯಾಕ್ಟರಿಯನ್ನು ಸ್ಥಾಪಿಸಿದರು.[೧೪] ಅಲ್ಲದೆ ಕ್ರಿ.ಶ. ೧೬೬೩–೧೬೬೮ರ ಅವಧಿಯಲ್ಲಿ ಡಚ್ಚರು ಕರಾವಳಿ ಪ್ರದೇಶಗಳಾದ ಮಂಗಳೂರು, ಹೊನ್ನಾವರ, ಕುಂದಾಪುರದಲ್ಲಿ ತಮ್ಮ ಅಸ್ಥಿತ್ವವನ್ನು ಗಟ್ಟಿಗೊಳಿಸುವಲ್ಲಿ ಪ್ರಯತ್ನಿಸಿದರು.

ಉಳ್ಳಾಲ

ಮಂಗಳೂರು ತಾಲೂಕು ೮–೧೦ ಕಿ.ಮೀ. ದಕ್ಷಿಣಕ್ಕೆ ಕರಾವಳಿ ತೀರ ಪ್ರದೇಶ ಉಳ್ಳಾಲವು ಒಂದು ಚಾರಿತ್ರಿಕ ಹಿನ್ನೆಲೆಯುಳ್ಳ ಪ್ರದೇಶ. ಕ್ರಿ.ಶ. ೧೫ನೆಯ ಶತಮಾನದಲ್ಲಿ ಉಳ್ಳಾಲವು ಪೋರ್ಚುಗೀಸರ ವಶವಾಯಿತು. ಫ್ರಾನ್ಸಿಸ್ಕರನರು ಕ್ರಿ.ಶ. ೧೫೨೬ರಲ್ಲಿ 'ಲೇಡಿ ಆಫ್ ಮರ್ಸಿ' ಎಂಬ ಚರ್ಚ್‌ನ್ನು ಇಲ್ಲಿ ಸ್ಥಾಪಿಸಿದರು.[೧೫]

ಫರಂಗಿಪೇಟೆ

ಫರಂಗಿಪೇಟೆಯು ಮಂಗಳೂರಿನಿಂದ ಪೂರ್ವಕ್ಕೆ ಬಂಟ್ವಾಳ ತಾಲೂಕಿನ ಒಂದು ಚಿಕ್ಕ ಗ್ರಾಮವಾಗಿದ್ದು, ಚಾರಿತ್ರಿಕ ಮಹತ್ವದ ಪ್ರದೇಶವಾಗಿದೆ. ಕ್ರಿ.ಶ. ೧೬ನೆಯ ಶತಮಾನದ ಆದಿ ಭಾಗದಲ್ಲಿ ಪೋರ್ಚುಗೀಸರು ಈ ಭಾಗದಲ್ಲಿ ನೆಲೆಸಿ ಫರಂಗಿಪೇಟೆ ಎಂಬ ಹೆಸರಾಯಿತೆಂದು ತಿಳಿದುಬರುತ್ತದೆ. ಫರಂಗಿಪೇಟೆಯು ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಫ್ರಾನ್ಸಿಸ್ಕನ್ ಮಿಶನರಿಯವರಿಂದ ಫರಂಗಿಪೇಟೆಯು ಒಂದು ಕ್ರೈಸ್ತ ನೆಲೆಯಾಗಿ ಪರಿಣಮಿಸಿತ್ತು. ಫರಂಗಿಪೇಟೆಯಲ್ಲಿ (ಕ್ರಿ.ಶ. ೧೫೨೬ ನೇತ್ರಾವತಿ ನದಿ ತಟದಲ್ಲಿ) 'ಸೇಂಟ್ ಫ್ರಾನ್ಸಿಸ್ ಆಫ್ ಅಸ್ಸಿಸಿ' ಚರ್ಚ್‌ನ್ನು ಕ್ರಿ.ಶ. ಹದಿನಾರನೆಯ ಶತಮಾನದ ಆದಿ ಭಾಗದಲ್ಲಿ ನಿರ್ಮಿಸಲಾಯಿತು.[೧೬] ಕ್ರಿ.ಶ. ೧೬೨೩ರಲ್ಲಿ ಭಾರತಕ್ಕೆ ಭೇಟಿ ನೀಡಿದ ಇಟಲಿ ದೇಶದ ಪ್ರವಾಸಿ ಪಿಯಾತ್ರೋ ಡೆಲ್ಲಾವಲ್ಲಿ ತನ್ನ ವರದಿಯಲ್ಲಿ ಈ ಚರ್ಚ್‌ನ್ನು ಹೆಸರಿಸಿದ್ದಾನೆ.[೧೭] ಫರಂಗಿಪೇಟೆಯು ಕ್ರೈಸ್ತ ಧಾರ್ಮಿಕ ನೆಲೆ ಹಾಗೂ ಕ್ರೈಸ್ತ ವಾಸ್ತವ್ಯ ನೆಲೆಯಾಗಿ ಕೆಳದಿ ಕಾಲದಲ್ಲಿ ಗುರುತಿಸಿಕೊಂಡಿತ್ತೆನ್ನಬಹುದಾಗಿದೆ.

ಬಸ್ರೂರು

ಬಸ್ರೂರು ಕುಂದಾಪುರ ತಾಲೂಕಿನಲ್ಲಿದೆ. ಬಸ್ರೂರು ವರಾಹಿ ನದಿ ತೀರದ ಪ್ರದೇಶವಾಗಿದ್ದು, ವ್ಯಾಪಾರಿ ಚಟುವಟಿಕೆಯ ಪ್ರಮುಖ ಕೇಂದ್ರವಾಗಿತ್ತು. ಪೋರ್ಚುಗೀಸ್ ಆಗಮನವು ಕರಾವಳಿ ಕರ್ನಾಟಕದಲ್ಲಿ ಅನೇಕ ಬದಲಾವಣೆಯನ್ನು ತಂದಿತು. ರಾಜಕೀಯ, ಆರ್ಥಿಕ ಬದಲಾವಣೆಯ ಜೊತೆಗೆ ಸಾಂಸ್ಕೃತಿಕ ಜಗತ್ತಿಗೂ ಅದು ಬೆರೆತು ಬೆಳವಣಿಗೆಯನ್ನು ಕಂಡಿತ್ತು. ಕ್ರಿ.ಶ. ೧೬ನೆಯ ಶತಮಾನದ ಕೊನೆಗೆ (ಕ್ರಿ.ಶ. ೧೫೭೦) ಕರಾವಳಿ ಕರ್ನಾಟಕ ಬಸ್ರೂರು ಪ್ರದೇಶವು ಪೋರ್ಚುಗೀಸ್ ವ್ಯಾಪಾರಕ್ಕೆ ತೆರೆದುಕೊಂಡಿತ್ತು. ಪೋರ್ಚುಗೀಸರು ಬಸ್ರೂರು, ಕುಂದಾಪುರ ಈ ಭಾಗಗಳಲ್ಲಿ ತಮ್ಮ ಚಟುವಟಿಕೆಯನ್ನು ಆರಂಭಿಸುವ ಮೊದಲು ಕುಂದಾಪುರ ಸಮುದ್ರ ಅಳಿವೆಯ ಸುತ್ತಮುತ್ತ ಪ್ರದೇಶದಲ್ಲಿ ಸೆಟ್ಟಿ ಸಮುದಾಯ ಮತ್ತು ಬಸ್ರೂರಿನಲ್ಲಿ ಸಾರಸ್ವತ ಸಮುದಾಯಗಳು ಪ್ರಮುಖ ವ್ಯಾಪಾರಿ ವರ್ಗವಾಗಿ ಕಂಡುಬಂದಿರುತ್ತವೆ. ಕ್ರಿ.ಶ. ೧೫೭೦ರ ಕಾಲಾವಧಿಯಲ್ಲಿ ಬಸ್ರೂರಿನಲ್ಲಿ ಸಣ್ಣ ಪ್ರಮಾಣದ ಪೋರ್ಚುಗೀಸ್ ವಾಸ್ತವ್ಯ ನೆಲೆಗಳು ಹುಟ್ಟಿದವು. ಕ್ರಿ.ಶ. ೧೫೭೦ ಮತ್ತು ೧೫೮೦ರಲ್ಲಿ ಈ ವ್ಯಾಪಾರಿ ವರ್ಗಗಳು ಪೋರ್ಚುಗೀಸರೊಂದಿಗೆ ಪ್ರತಿರೋಧವನ್ನು ವ್ಯಕ್ತಪಡಿಸಿದರು.[೧೮] ಕ್ರಿ.ಶ. ೧೫೭೪ರ ಬಸ್ರೂರು ಪ್ರದೇಶದಲ್ಲಿ ಚರ್ಚ್ ನಿರ್ಮಾಣವಾಯಿತು.[೧೯] ಡೆಲ್ಲಾವೆಲ್ಲಿಯು ಬಸ್ರೂರಿಗೆ ಬಾರ್ಸಿಲೋರ್ ಎಂದಿರುತ್ತಾನೆ.[೨೦]

ಮೊಡಂಕಾಪು

ಮೊಡಂಕಾಪು ಬಂಟ್ವಾಳ ತಾಲೂಕಿನಲ್ಲಿದೆ. ಮೊಡಂಕಾಪು ಕೆಳದಿ ಕಾಲದಲ್ಲಿ ಕ್ರೈಸ್ತ ಸಮುದಾಯಗಳನ್ನು ಹೊಂದಿದ ಕೇಂದ್ರವಾಗಿತ್ತು. ಬೆಳ್ತಂಗಡಿಯ ಬಂಗ ರಾಜ್ಯದ ಮೊಡಂಕಾಪು ಗ್ರಾಮದ ಕ್ರೈಸ್ತ ಜನಸಮುದಾಯದ ಬಗ್ಗೆ ಕ್ರಿ.ಶ. ೧೫೮೭ರ ಶಾಸನ ಉಲ್ಲೇಖಿತ ದಾಖಲೆಯನ್ನು ಇತಿಹಾಸಕಾರ ಸಿಲ್ವಾ ಸೆವರೈನ್ ತಿಳಿಸುತ್ತಾರೆ.[೨೧]

ಬಂಟ್ವಾಳ

ಬಂಟ್ವಾಳವು ಒಂದು ಕ್ರೈಸ್ತ ನೆಲೆಯಾಗಿತ್ತು. ಕ್ರಿ.ಶ. ೧೬೮೧ರಲ್ಲಿ ಫಾದರ್ ಜೋಸೆಫ್‌ನ ಪತ್ರದಲ್ಲಿ ಬಂಟ್ವಾಳ ಮತ್ತು ಅರ್ಕುಳದಲ್ಲಿ ಕ್ರಿಶ್ಚಿಯನ್ ಸಮುದಾಯವೊಂದು ಹಬ್ಬ ಸಂದರ್ಭ ಮಂಗಳೂರಿನ ಚರ್ಚ್‌ಗೆ ಬಂದಿರುವ ಕುರಿತು ಹೇಳಿರುತ್ತಾನೆ.[೨೨] ಎಂದರೆ ಬಂಟ್ವಾಳದ ಅನೇಕ ಭಾಗಗಳು ಕ್ರೈಸ್ತ ಜನಸಮುದಾಯಗಳನ್ನು ಹೊಂದಿದ ವಾಸ್ತವ್ಯ ನೆಲೆಗಳಾಗಿ ಗುರುತಿಸಬಹುದಾಗಿದೆ.[೨೩]

ತಾಳಿಪಾಡಿ

ಮೂಲಿಕೆ ಸಮೀಪದ ತಾಳಿಪಾಡಿಯು ಪ್ರಮುಖ ಕ್ರೈಸ್ತ ಧಾರ್ಮಿಕ ನೆಲೆಯಾಗಿತ್ತು. ಪ್ರೊಟೆಸ್ಟೆಂಟ್ ಪಂಥ ಇಲ್ಲಿ ಬೆಳೆದು ಬಂತು. ಮೂಲಿಕೆ ಸಮೀಪದ ತಾಳಿಪಾಡಿಯಲ್ಲಿ ಇಗರ್ಜಿ ಕಟ್ಟಲು ಸಾವಂತರಸರು ಧನಸಹಾಯ ನೀಡಿದ್ದರೆನ್ನಲಾಗಿದೆ. ಇದು ಇಲ್ಲಿನ ತಾಳೆ ಓಲೆ ಬರಹದಿಂದ ತಿಳಿದುಬಂದಿದೆ.[೨೪]

ಒಟ್ಟಿನಲ್ಲಿ ಕೆಳದಿ ಕಾಲದಲ್ಲಿ ದಕ್ಷಿಣ ಜಿಲ್ಲೆಯ ಅನೇಕ ಭೂ ಭಾಗಗಳು ಕೆಳದಿ ಚಾರಿತ್ರಿಕ ಕಾಲಘಟ್ಟದ ಕ್ರೈಸ್ತ ಧಾರ್ಮಿಕ ಹಾಗೂ ವಾಸ್ತವ್ಯ ನೆಲೆಗಳಾಗಿ ಮಹತ್ವವನ್ನು ಪಡೆದುಕೊಂಡಿವೆ. ಈ ಭೂಭಾಗಗಳು ಕರಾವಳಿ ತೀರ, ನದಿ ತಟಗಳ ವ್ಯಾಪಾರಿ ನೆಲೆಯಾಗಿದ್ದು ಈ ಜನಸಮುದಾಯಗಳನ್ನು ಆಕರ್ಷಿಸಿತ್ತು. ಮಂಗಳೂರು, ಕಲ್ಯಾಣಪುರ, ಕುಂದಾಪುರ, ಉಳ್ಳಾಲ ಇವುಗಳು ಕರಾವಳಿ ತೀರ ಪ್ರದೇಶಗಳಾಗಿದ್ದು, ಬಸ್ರೂರು, ಫರಂಗಿಪೇಟೆ, ತಾಳಿಪಾಡಿ, ಬಂಟ್ವಾಳ ಇವುಗಳು ನದಿ ತೀರದ ಪ್ರದೇಶಗಳಾಗಿವೆ. ಆರ್ಥಿಕ, ವ್ಯಾಪಾರಿ ಚಟುವಟಿಕೆಗಳಿಗೆ ಪೂರಕವಾಗಿ ಗುರುತಿಸಿಕೊಂಡಿರುವ ಈ ನೆಲೆಗಳು ಯುರೋಪಿಯನರನ್ನು ಆಕರ್ಷಿಸಿ ಈ ಪ್ರದೇಶಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡು ಸಮುದಾಯವೊಂದರ ನೆಲೆಗೊಳ್ಳುವಿಕೆಗೂ ಕಾರಣವಾಗಿ ಇಲ್ಲಿನ ಸಾಂಸ್ಕೃತಿಕ ಇತಿಹಾಸಕ್ಕೆ ಕೊಡುಗೆಯನ್ನಿತ್ತಿವೆ.

ಅಡಿಟಿಪ್ಪಣಿಗಳು

೧. ಕೆಳದಿ ಗುಂಡಾಜೋಯಿಸ್, ಕೆಳದಿ ಇತಿಹಾಸದಲ್ಲಿ ಫ್ರೆಂಚರು, ಇನ್, ಪಿ.ವಿ. ಕೃಷ್ಣಮೂರ್ತಿ, ದೇವರಾಜಸ್ವಾಮಿ, (ಸಂ) ಇತಿಹಾಸ ದರ್ಶನ, ಸಂ. ೨೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೧೨, ಪು. ೩೩೦.

೨. ಚಿಟ್ನೀಸ್ ಕೆ.ಎನ್., ಕೆಳದಿಯ ರಾಜ್ಯಭಾರ ಪದ್ಧತಿ, ಇನ್, ಕೆಳದಿ ಐತಿಹಾಸಿಕ ನಿಬಂಧಗಳು, ಕೆಳದಿ, ೧೯೮೯, ಪು. ೭೫.

೩. ಶಾಸ್ತ್ರಿ ಬಿ.ಎಸ್. ಕೆಳದಿ ಅರಸರು ಹಾಗೂ ಪೋರ್ಚುಗೀಸರು, ಧಾರವಾಡ, ೧೯೭೨, ಪು. ೧೮.

೪. ಕೆ.ಜಿ. ವಸಂತ ಮಾಧವ, ರಿಲಿಜಿಯನ್ ಇನ್ ಕೋಸ್ಟಲ್ ಕರ್ನಾಟಕ (೧೫೦೦-೧೭೬೩), ವಿಜಯ ಕಾಲೇಜು ಮೂಲ್ಕಿ, ಪು. ೧೦೫.

೫. ಫಿಡೆಲಿಸ್ ಪಿಂಟೊ, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ, (೧೫೦೦-೧೭೬೩), ಮಂಗಳೂರು, ಪು. ೧೩೮.

೬. ಸಿಲ್ವಾ ಸೆವೆರಿನ್, ಹಿಸ್ಟರಿ ಆಫ್ ಕ್ರಿಸ್ಚಿಯಾನಿಟಿ ಇನ್ ಕೆನರಾ, ೧೯೫೪, ಪು. ೬೮.

೭. ಫಿಡೆಲಿಸ್ ಪಿಂಟೊ, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ (೧೫೦೦-೧೭೬೩) ಮಂಗಳೂರು, ೧೯೯೯, ಪು. ೧೪೦.

೮. ಫಿಡೆಲಿಸ್ ಪಿಂಟೊ, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ (೧೫೦೦-೧೭೬೩) ಮಂಗಳೂರು, ೧೯೯೯, ಪು. ೧೪೦.

೯. ಜಾನ್ ಸ್ಟರಕ್, ಮದ್ರಾಸ್ ಡಿಸ್ಟರಿಕ್ಟ್ ಮ್ಯಾನ್ಯುವಲ್ಸ್ ಸೌತ್ ಕೆನರಾ, ಸಂ. ೧, ಮದ್ರಾಸ್ ಸುಪರಿಂಟೆಂಡೆಂಟ್ ಗವರ್ನಮೆಂಟ್ ಪ್ರೆಸ್, ೧೮೯೪, ಪು. ೭೩.

೧೦. ಶಾಸ್ತ್ರಿ.ಬಿ.ಎಸ್.ಕೆಳದಿ ಅರಸರು ಹಾಗೂ ಪೋರ್ಚುಗೀಸರು, ಧಾರವಾಡ, ೧೯೭೨, ಪು. ೫.

೧೧. ಸೂರ್ಯನಾಥ ಕಾಮತ್, ಟ್ರೇಡ್ ಎಟ್ ಕನ್ನಡ ಪೋರ್ಟ್ಸ್, (೧೫೦೦-೧೮೦೦), ಎ. ರಾಜೇಂದ್ರಪ್ಪ (ಸಂ), ಕರ್ನಾಟಕ ಹಿಸ್ಟರಿ, ಇಟ್ಸ್ ಪೀಪಲ್ ಅಂಡ್ ಕಲ್ಚರ್, ಸೆಂಟನರಿ ಪಬ್ಲಿಕೇಷನ್ಸ್, ಸಂ. ೨, ಮಿಥಿಕ್ ಸೊಸೈಟಿ, ೨೦೦೯, ಪು. ೧೫೩.

೧೨. ಶಾಸ್ತ್ರಿ.ಬಿ.ಎಸ್., ಕೆಳದಿ ಅರಸರು ಹಾಗೂ ಪೋರ್ಚುಗೀಸರು, ಧಾರವಾಡ, ೧೯೭೨, ಪುಟ ೫೪-೫೫.

೧೩. ಜಾನ್ ಸ್ಟರಕ್, ಮದ್ರಾಸ್ ಡಿಸ್ಟರಿಕ್ಟ್ ಮ್ಯಾನುವಲ್ಸ್ ಸೌತ್ ಕೆನರಾ, ಸಂ. ೧, ಮದ್ರಾಸ್ ಸೂಪರಿಂಟೆಂಡೆಂಟ್ ಗವರ್ನಮೆಂಟ್ ಪ್ರೆಸ್, ೧೮೯೪, ಪುಟ ೭೦-೭೧.

೧೪. ಸೂರ್ಯನಾಥ ಯು. ಕಾಮತ್, ಟ್ರೇಡ್ ಎಟ್ ಕನ್ನಡ ಪೋರ್ಟ್ಸ್ (೧೫೦೦-೧೮೦೦), ಇನ್, ಎಸ್. ರಾಜೇಂದ್ರಪ್ಪ (ಸಂ), ಕರ್ನಾಟಕ ಹಿಸ್ಟರಿ, ಇಟ್ಸ್ ಪೀಪಲ್ ಅಂಡ್ ಕಲ್ಚರ್, ಸಂ. ೨, ಸೆಂಟನರಿ ಪಬ್ಲಿಕೇಷನ್ಸ್, ಮಿಥಿಕ್ ಸೊಸೈಟಿ, ಬೆಂಗಳೂರು, ೨೦೦೯, ಪು. ೧೪೯.

೧೫. ಫಿಡೆಲಿಸ್ ಪಿಂಟೊ, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ (೧೫೦-೧೭೬), ಮಂಗಳೂರು, ೧೯೯೯, ಪು. ೧೩೮.

೧೬. ಫಿಡೆಲಿಸ್ ಪಿಂಟೊ, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ (೧೫೦೦-೧೭೬೩) ಮಂಗಳೂರು, ೧೯೯೯, ಪು. ೧೩೮.

೧೭. ಜಿಲಾನಿ.ಎಸ್, ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೨೦೦೭, ಪು. ೮೭೮.

೧೮. ಸಂಜಯ್ ಸುಬ್ರಹ್ಮಣ್ಯ, ದಿ ಪೊಲಿಟಿಕಲ್ ಇಕಾನಮಿ ಆಫ್ ಕಾಮರ್ಸ್: ಸದರ್ನ್ ಇಂಡಿಯಾ, ೧೫೦೦-೧೬೫೦, ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೧೯೯೦, ಪು. ೫೮.

೧೯. ಕೆ.ಜಿ. ವಸಂತ ಮಾಧವ, ರಿಲಿಜಿಯನ್ ಇನ್ ಕೋಸ್ಟಲ್ ಕನಾಟಕ (೧೫೦೦-೧೭೬೩), ವಿಜಯ ಕಾಲೇಜು ಮುಲ್ಕಿ, ಪು. ೧೦.

೨೦. ಎಡ್ವರ್ಡ್ ಗ್ರೇ, ದಿ ಟ್ರಾವೆಲ್ಸ್ ಆಫ್ ಪಿತ್ರೋ ಡೆಲ್ಲಾವೆಲ್ಲೆ ಇನ್ ಇಂಡಿಯಾ, ಸಂ. ೨, ಏಷಿಯನ್ ಎಜುಕೇಷನಲ್ ಸರ್ವೀಸಸ್ ನ್ಯೂ ದೆಹಲಿ, ಮದ್ರಾಸ್, ೧೯೯೧, ಪು. ೨೯೭, ಜಾನ್ ಸ್ಟರಕ್, ಮದ್ರಾಸ್ ಡಿಸ್ಟರಿಕ್ಟ್ ಮ್ಯಾನುವಲ್ಸ್ ಸೌತ್ ಕೆನರಾ, ಸಂ. ೧, ಮದ್ರಾಸ್ ಸೂಪರಿಂಟೆಂಡೆಂಟ್ ಗವರ್ನಮೆಂಟ್ ಪ್ರೆಸ್, ೧೮೯೪, ಪು. ೭೧.

೨೧. ಸಿಲ್ವಾ ಸೆವರನ್ ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆನರಾ, ಕಾರವಾರ, ೧೯೬೧, ಪುಟ ೬೫-೬೬.

೨೨. ಸಿಲ್ವಾ ಸೆವರನ್, ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಇನ್ ಕೆರನಾ, ಕಾರವಾರ, ೧೯೬೧, ಪುಟ ೬೫-೬೬.

೨೩. ಸೂರ್ಯನಾಥ ಕಾಮತ್, ದಕ್ಷಿಣ ಕನ್ನಡದ ಮೇಲೆ ಕೆಳದಿ ಪ್ರಭುತ್ವ, ಇನ್, ದೀಕ್ಷಿತ್.ಜಿ.ಎಸ್. (ಸಂ), ಕೆಳದಿ ಐತಿಹಾಸಿಕ ನಿಬಂಧಗಳು, ಕೆಳದಿ, ೧೯೮೯, ಪು. ೯೩.

೨೪. ಕೆ.ಜಿ. ವಸಂತ ಮಾಧವ, ಮೂಲಿಕೆ ಸಾವಂತರು ಐತಿಹಾಸಿಕ ವಿಶ್ಲೇಷಣೆ, ಇನ್, ಹೆರಂಜೆ ಕೃಷ್ಣಭಟ್ಟ, ಎಸ್.ಡಿ. ಶೆಟ್ಟಿ (ಸಂ), ತುಳು ಕರ್ನಾಟಕ ಅರಸು ಮನೆತನಗಳು, ಕರ್ನಾಟಕ ರಾಜ ಸಂಸ್ಥಾನಗಳು-೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು. ೨೨೦.

ಜಾಗತಿಕ ಸಮರ ಮತ್ತು ಬಾಸೆಲ್ ಮಿಶನ್ ಶಿಕ್ಷಣ ವ್ಯವಸ್ಥೆ

ಅಶೋಕ್ ರಾಕೇಶ್ ಡಿ'ಸೋಜ*

ಬಾಸೆಲ್ ಮಿಶನ್ ಪಶ್ಚಿಮ ಜರ್ಮನಿ ಮತ್ತು ಸ್ವಿಜರ್‌ಲ್ಯಾಂಡಿನ ಬೇರೆ ಬೇರೆ ಕ್ರೈಸ್ತ ಪಂಗಡಗಳ ಹಾಗೂ ಸಭಾ ಸಂಪ್ರದಾಯಗಳಿಗೆ ಸೇರಿದ (ಲೂಥರನ್ ಸಂಪ್ರದಾಯ, ಪುನ ಸ್ಥಾಪನಾ ಸಂಪ್ರದಾಯ, ಸ್ವಿಂಗ್ಲಿಯನನ್ ಸಂಪ್ರದಾಯ) ಕೆಲವು ಕ್ರೈಸ್ತರು ೧೮೧೫ರಲ್ಲಿ ಸ್ವಿಜರ್‌ಲ್ಯಾಂಡಿನ ಬಾಸೆಲ್‌ನಲ್ಲಿ ಸಂಘಟಿಸಿದ ಒಂದು ಮಿಶನರಿ ಸಂಸ್ಥೆಯಾಗಿತ್ತು.[೧] ಇದು ಸ್ವತಂತ್ರವಾದ ಹಾಗೂ ಸ್ವಯಂ ಸೇವಾ ಮನೋಭಾವದ ಮಿಶನರಿ ಸಂಘವಾಗಿದ್ದು, ಇದು ಯಾವುದೆ ಸರಕಾರದ ಅಥವಾ ರಾಜ್ಯದ ಚರ್ಚಿನ ಭಾಗವಾಗಿರಲಿಲ್ಲ.[೨] ಬಾಸೆಲ್ ಮಿಶನಿಗೆ ಆರಂಭದಲ್ಲಿ ನೇರವಾಗಿ ಮಿಶನರಿ ಚಟುವಟಿಕೆಗಳನ್ನು ಆರಂಭಿಸುವ ಉದ್ದೇಶವಿರಲಿಲ್ಲ. ಅದರ ಬದಲು ಮಿಶನರಿಗಳನ್ನು ತರಬೇತುಗೊಳಿಸಿ ಅವರನ್ನು ಇತರ ಯುರೋಪಿನ ಮಿಶನ್ ಸಂಘಗಳಿಗೆ ಒದಗಿಸುವ ಉದ್ದೇಶವನ್ನು ಹೊಂದಿತ್ತು.[೩] ಈ ಉದ್ದೇಶಕ್ಕಾಗಿ ೨೬ನೇ ಆಗಸ್ಟ್ ೧೮೧೬ರಲ್ಲಿ ೭ ಮಂದಿ ವಿದ್ಯಾರ್ಥಿಗಳೊಂದಿಗೆ ರೆವೆ. ಸಿ.ಸಿ. ಬ್ಲೂಮ್‌ಹಾರ್ಟ್‌ರವರ ನಾಯಕತ್ವದಲ್ಲಿ ಒಂದು ಸೆಮಿನರಿಯು ಆರಂಭವಾಗುತ್ತದೆ.[೪] ಹೀಗೆ ೧೮೧೬ರಿಂದ ೧೮೨೧ರವರೆಗೆ ಬಾಸೆಲ್ ಮಿಶನ್ ತನ್ನ ತರಬೇತುಗೊಂಡು ಮಿಶನರಿಗಳನ್ನು ಇತರ ಮಿಶನರಿ ಸಂಘಗಳಿಗೆ ಒದಗಿಸುವ ಕಾರ್ಯದಲ್ಲಿ ತೊಡಗಿತ್ತು.

೧೮೨೧ರಲ್ಲಿ ಬಾಸೆಲ್ ಮಿಶನ್ ದಕ್ಷಿಣ ರಷ್ಯಾದ ಪ್ರದೇಶದಲ್ಲಿ ನೇರವಾದ ತನ್ನ ಮಿಶನರಿ ಚಟುವಟಿಕೆಯನ್ನು ಆರಂಭಿಸುತ್ತದೆ. ರಷ್ಯಾದ ಒಂದನೇ ಅಲೆಗ್ಸಾಂಡರನ ಬೆಂಬಲದೊಂದಿಗೆ ೧೮೨೧ರಲ್ಲಿ ಆರಂಭವಾದ ಮಿಶನ್ ಕಾರ್ಯ ಬಹು ದೀರ್ಘಕಾಲ ಮುಂದುವರಿಯದೇ ೧೮೩೫ರಲ್ಲಿ ಅಂತ್ಯವನ್ನು ಕಾಣುತ್ತದೆ.[೫] ೧೯೨೮ರಲ್ಲಿ ಬಾಸೆಲ್ ಮಿಶನ್ ಪಶ್ಚಿಮ ಆಫ್ರಿಕಾದ ಗೋಲ್ಡ್ ಕೋಸ್ಟ್‌ನಲ್ಲಿ ಹಾಗೂ ಆಫ್ರಿಕಾದಲ್ಲಿನ ಜರ್ಮನ್ ವಸಾಹತುವಾದ ಕೆಮೆರೂನ್‌ನಲ್ಲಿ ೧೮೮೬ರಲ್ಲಿ ತನ್ನ ಮಿಶನ್ ಕಾರ್ಯವನ್ನು ಆರಂಭಿಸುತ್ತದೆ. ಆಫ್ರಿಕಾದ ಮಿಶನರಿ ಕಾರ್ಯಾಚರಣೆಯು ಬಾಸೆಲ್ ಮಿಶನ್‌ಗೆ ಬಹಳಷ್ಟು ಕಷ್ಟ ನಷ್ಟಗಳನ್ನು ತಂದೊಡ್ಡಿದ್ದನ್ನು ಗಮನಿಸಬಹುದು.[೬] ಆದರೂ ಅದು ತನ್ನ ಇಲ್ಲಿನ ಮಿಶನ್ ಕಾರ್ಯವನ್ನು ಮುಂದುವರಿಸುತ್ತದೆ. ಬಾಸೆಲ್ ಮಿಶನ್ ೧೮೪೭ರಲ್ಲಿ ಚೀನಾದಲ್ಲೂ ತನ್ನ ಕಾರ್ಯವನ್ನು ಆರಂಭಿಸುತ್ತದೆ. ಅದೇ ರೀತಿ ಮಿಶನ್ ಬೋರ್ನಿಯೋದಲ್ಲೂ ಮಿಶನರಿ ಕಾರ್ಯವನ್ನು ನಡೆಸಿತ್ತು.

೧೮೩೩ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಭಾರತವನ್ನು ಎಲ್ಲಾ ದೇಶಗಳ ಮಿಶನರಿಗಳಿಗೂ ಮುಕ್ತವಾಗಿರಿಸಿದ ಸಂದರ್ಭದಲ್ಲಿ ಬಾಸೆಲ್ ಮಿಶನ್ ಭಾರತದಲ್ಲಿ ತನ್ನ ಕಾರ್ಯವನ್ನು ಆರಂಭಿಸಲು ನಿರ್ಧರಿಸುತ್ತದೆ. ಈ ಉದ್ದೇಶದೊಂದಿಗೆ ಲಂಡನ್ ಮಿಶನರಿ ಸೊಸೈಟಿ ಹಾಗೂ ಚರ್ಚ್ ಮಿಶನರಿ ಸೊಸೈಟಿಗಳೊಂದಿಗೆ ಚರ್ಚಿಸಿ ಬಾಸೆಲ್ ಮಿಶನ್ ತನ್ನ ಮಿಶನರಿಗಳನ್ನು ದಕ್ಷಿಣ ಭಾರತದ ಮಲಬಾರ್ ಹಾಗೂ ದಕ್ಷಿಣ ಕೆನರಾಕ್ಕೆ ಕಳುಹಿಸಲು ನಿರ್ಧರಿಸುತ್ತದೆ. ಈ ಪ್ರದೇಶಗಳಲ್ಲಿ ಯಾವುದೇ ಪ್ರೊಟೆಸ್ಟೆಂಟ್ ಮಿಶನರಿಗಳು ಕಾರ್ಯಾಚರಿಸದೆ ಇರುವುದರಿಂದ ಬಾಸೆಲ್ ಮಿಶನ್ ಈ ಪ್ರದೇಶಗಳಲ್ಲಿ ಕಾರ್ಯಚರಿಸಲು ನಿರ್ಧರಿಸುತ್ತದೆ. ಮಂಗಳೂರಿನ ಬಲ್ಮಠವು ಬಾಸೆಲ್ ಮಿಶನಿನ ಕೇಂದ್ರವಾಗುತ್ತದೆ ಹಾಗೂ ಇದು ಭಾರತದಲ್ಲಿ ಬಾಸೆಲ್ ಮಿಶನಿನ ಮೊದಲ ನೆಲೆಯಾಗಿದೆ.[೭] ಹೀಗೆ ೧೮೩೪ರಲ್ಲಿ ಆರಂಭವಾದ ಬಾಸೆಲ್ ಮಿಶನಿನ ಮಿಶನರಿ ಕಾರ್ಯ ನಿರಂತರವಾಗಿ ಬೆಳೆದು, ವಿಸ್ತರಿಸುತ್ತ ಹೋಗುತ್ತದೆ. ಮಿಶನಿನ ಪ್ರಗತಿಯು ೧೯೧೪ರವರೆಗೆ ಯಾವುದೇ ಅಡೆತಡೆಗಳಿಲ್ಲದೆ ಮುಂದುವರಿಯುತ್ತದೆ. ಬಾಸೆಲ್ ಮಿಶನ್ ಈ ಕಾಲಾವಧಿಯಲ್ಲಿ ಹಲವು ಮಿಶನ್ ಠಾಣ್ಯಗಳನ್ನು ಹಾಗೂ ಉಪಠಾಣ್ಯಗಳನ್ನು ಸ್ಥಾಪಿಸುತ್ತದೆ. ಅದು ಮುಖ್ಯವಾಗಿ ದಕ್ಷಿಣ ಕೆನರಾ, ಉತ್ತರ ಕೆನರಾ (ಹೊನ್ನವರ), ದಕ್ಷಿಣ ಮರಾಠ, ಕೊಡಗು, ಮಲಬಾರ್ ಮತ್ತು ನೀಲಗಿರಿ ಪ್ರದೇಶಗಳಲ್ಲಿ ತನ್ನ ಕಾರ್ಯವನ್ನು ೧೯೧೪ರವರೆಗೆ ನಿರ್ವಹಿಸಿತ್ತು.[೮] ಆದರೆ ೧೯೧೪ರಲ್ಲಿ ಜಾಗತಿಕ ಯುದ್ಧದ ಆರಂಭವು ಬಾಸೆಲ್ ಮಿಶನಿನ ಕಾರ್ಯಾಚರಣೆಗೆ ತಡೆಯಾಗುತ್ತದೆ. ಭಾರತವು ಬ್ರಿಟಿಷ್ ವಸಾಹತುವಾಗಿದ್ದು, ಬಾಸೆಲ್ ಮಿಶನ್‌ನಲ್ಲಿ ಕಾರ್ಯಾಚರಿಸುತ್ತಿದ್ದ ಬಹುಪಾಲು ಮಿಶನರಿಗಳು ಜರ್ಮನರಾಗಿದ್ದರು. ಆದುದರಿಂದ ಮಿಶನಿನ ಎಲ್ಲಾ ರೀತಿಯ

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಆಳ್ವಾಸ್ ಕಾಲೇಜು, ಮೂಡಬಿದಿರೆ, ಮೊ. ೮೭೬೨೩೯೫೭೫೬

ಕಾರ್ಯಾಚರಣೆಯ ಹಾಗೂ ಮಿಶನರಿಗಳ ಮೇಲೆ ನಿರ್ಬಂಧವನ್ನು ವಿಧಿಸಿದ ಬ್ರಿಟಿಷ್ ವಸಾಹತು ಸರಕಾರ, ಅದರ ಸಂಪೂರ್ಣ ಕಾರ್ಯಾಚರಣೆಯ ಮೇಲೆ ತನ್ನ ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತದೆ. ಇದು ಬಾಸೆಲ್ ಮಿಶನ್ ಹುಟ್ಟುಹಾಕಿದ್ದ ವಿಸ್ತ್ರತವಾದ ಶಿಕ್ಷಣ ವ್ಯವಸ್ಥೆಯ ಪತನಕ್ಕೆ ಕಾರಣವಾಗುತ್ತದೆ. ಜಾಗತಿಕ ಸಮರದಿಂದಾಗಿ ಮಿಶನಿನ ಶಿಕ್ಷಣ ವ್ಯವಸ್ಥೆಯ ಮೇಲಾಗಿರುವ ಪರಿಣಾಮಗಳನ್ನು ವಿವರಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಭಾರತದಲ್ಲಿ ಬಾಸೆಲ್ ಮಿಶನನ್ನು ನಿರ್ಬಂಧಗೊಳಿಸಿದ ಕಾಲಾವಧಿಯಲ್ಲಿ ಅದು ಹಲವಾರು ವಿಭಿನ್ನ ರೀತಿಯ ಶಾಲೆಗಳನ್ನು ನಿರ್ವಹಿಸುತಿತ್ತು. ಸರಕಾರಿ ದಾಖಲೆಗಳ ಪ್ರಕಾರ ಬಾಸೆಲ್ ಮಿಶನ್ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಒಂದು ಕಾಲೇಜು, ಒಂದು ಟ್ರೈನಿಂಗ್ ಶಾಲೆ (Training school), ೧೧ ಹುಡುಗರ ಸೆಕೆಂಡರಿ ಶಾಲೆಗಳು, ೨ ಹುಡುಗಿಯರ ಸೆಕೆಂಡರಿ ಶಾಲೆಗಳು, ೧೩೬ ಹುಡುಗರ ಪ್ರಾಥಮಿಕ ಶಾಲೆಗಳು, (elementary schools for boys) ಮತ್ತು ೧೪ ಹುಡುಗಿಯರ ಪ್ರಾಥಮಿಕ ಶಾಲೆಗಳನ್ನು ಹೊಂದಿತ್ತು. ಇವುಗಳಲ್ಲಿ ಕಾಲೇಜು ಮತ್ತು ಟ್ರೈನಿಂಗ್ ಶಾಲೆಯು ಮಲಬಾರ್ ಜಿಲ್ಲೆಯಲ್ಲಿತ್ತು. ಹುಡುಗರ ಆರು ಸೆಕೆಂಡರಿ ಶಾಲೆಗಳು (3 high shools and 3 incomplete secondary schools), ಒಂದು ಹುಡುಗಿಯರ ಹೈಸ್ಕೂಲ್, ಸುಮಾರು ೫೦ ಪ್ರಾಥಮಿಕ ಶಾಲೆಗಳು ಮಲಬಾರ್ ಜಿಲ್ಲೆಯಲ್ಲಿದ್ದವು.[೯] ಹುಡುಗರ ೫ ಸೆಕೆಂಡರಿ ಶಾಲೆಗಳು (2 High schools and 3 incomplete secondary schools), ಒಂದು ಹುಡುಗಿಯರ ಹೈಸ್ಕೂಲ್ ಹಾಗೂ ಸುಮಾರು ೭೦ ಪ್ರಾಥಮಿಕ ಶಾಲೆಗಳು ದಕ್ಷಿಣ ಕೆನರಾ ಜಿಲ್ಲೆಯಲ್ಲಿದ್ದವು. ಸುಮಾರು ೩೦ ಪ್ರಾಥಮಿಕ ಶಾಲೆಗಳು ನೀಲಗಿರಿಯಲ್ಲಿದ್ದುವು. ಅದೇ ರೀತಿ ೬ ಶಾಲೆಗಳು ಕೊಡಗಿನಲ್ಲಿ ಮತ್ತು ಸುಮಾರು ೯ ಶಾಲೆಗಳು ಮುಂಬಾಯಿ ಪ್ರಾಂತ್ಯದ ಧಾರವಾಡ ಮತ್ತು ಬಿಜಾಪುರಗಳಿದ್ದವು. ಈ ಮೇಲಿನ ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸಲು ಮಿಶನ್ ಒಟ್ಟು ೨,೪೩,೨೫೪ ರೂಪಾಯಿಗಳನ್ನು ವೆಚ್ಚ ಮಾಡುತಿತ್ತು.[೧೦] ಈ ಒಟ್ಟು ವೆಚ್ಚವನ್ನು ಬೇರೆ ಬೇರೆ ಮೂಲಗಳ ಸಹಾಯದಿಂದ ಮಿಶನ್ ಭರಿಸುತಿತ್ತು. ಶಾಲೆಗಳಲ್ಲಿ ಸಂಗ್ರಹಿಸಿದ ಶುಲ್ಕಗಳ (Fees) ಮೂಲಕ ೧,೦೪,೫೯೧ ರೂಪಾಯಿಯನ್ನು ಸರಕಾರವು ಅದರ ಬೇರೆ ಬೇರೆ ಶಾಲೆಗಳಿಗೆ ನೀಡುತ್ತಿದ್ದ ಅನುದಾನದ ಮೂಲಕ ೬೦,೧೮೯ ರೂಪಾಯಿಗಳನ್ನು ಹಾಗೂ ಮಿಶನ್ ಸ್ವತಃ ೭೮,೪೯೪ ರೂಪಾಯಿಗಳನ್ನು ಶೈಕ್ಷಣಿಕ ವ್ಯವಸ್ಥೆಗೆ ವೆಚ್ಚ ಮಾಡುತ್ತಿತ್ತು.[೧೧]

ಯುದ್ಧ ಆರಂಭವಾದ ಕಾಲದಲ್ಲಿ ಸರಕಾರ ಹಾಗೂ 'ಮದ್ರಾಸ್ ಎಜುಕೇಶನಲ್ ಕೌನ್ಸಿಲ್' (Madras Educational Council) ಬಾಸೆಲ್ ಮಿಶನಿನ ಶೈಕ್ಷಣಿಕ ಸಂಸ್ಥೆಗಳಿಗೆ ನೀಡಿದ್ದ ಮನ್ನಣೆ ಹಾಗೂ ಅನುದಾನವನ್ನು ಹಿಂಪಡೆಯುತ್ತದೆ. ಆದರೆ 'ಮಿಶನರಿ ಎಜುಕೇಶನಲ್ ಕೌನ್ಸಿಲ್ ಆಪ್ ಸೌತ್ ಇಂಡಿಯಾ'ವು (Missionary Educational Council of South India) ಮಧ್ಯ ಪ್ರವೇಶ ಮಾಡಿ, ಮಿಶನ್ ಶಾಲೆಗಳ ಸಂಪೂರ್ಣ ಜವಾಬ್ದಾರಿಯನ್ನು ತಾತ್ಕಾಲಿಕವಾಗಿ ವಹಿಸಿಕೊಳ್ಳುವ ಭರವಸೆ ನೀಡಿದ ಮೇಲೆ ಮದ್ರಾಸ್ ಸರಕಾರ ಮಿಶನ್ ಶಾಲೆಗಳಿಗೆ ನೀಡಿದ್ದ ಮನ್ನಣೆ ಹಾಗೂ ಅನುದಾನವನ್ನು ಮುಂದುವರಿಸುತ್ತದೆ ಹಾಗೂ ಈ ಅನುಮೋದನೆಯನ್ನು ೧೯೧೯ ಮಾರ್ಚ್ ೩೧ರವರೆಗೆ ವಿಸ್ತರಿಸುತ್ತದೆ.[೧೨] ಬಾಸೆಲ್ ಮಿಶನನ್ನು ಸಂಪೂರ್ಣವಾಗಿ ನಿರ್ಬಂಧಿಸಿದ ಕಾರಣದಿಂದ ನ್ಯಾಶನಲ್ ಮಿಶನರಿ ಕೌನ್ಸಿಲ್ ಬದಲಿ ವ್ಯವಸ್ಥೆಯನ್ನು ರೂಪುಗೊಳಿಸುವವರೆಗೆ ಅದರ ಎಲ್ಲಾ ಶೈಕ್ಷಣಿಕ ಜವಾಬ್ದಾರಿಗಳು 'ಮಿಶನರಿ ಎಜುಕೇಶನಲ್ ಕೌನ್ಸಿಲ್ ಆಪ್ ಸೌತ್ ಇಂಡಿಯಾ'ದ ನಿಯಂತ್ರಣದಲ್ಲಿರುತ್ತವೆ. ಈ ಕಾಲಾವಧಿಯ ನಂತರ ಬಾಸೆಲ್ ಮಿಶನಿನ ಶೈಕ್ಷಣಿಕ ಸಂಸ್ಥೆಗಳು ಪತನದತ್ತ ಮುಂದುವರಿಯುತ್ತವೆ. ನ್ಯಾಶನಲ್ ಮಿಶನರಿ ಕೌನ್ಸಿಲ್ ರೂಪುಗೊಳಿಸಿದ ಹೊಸ ಯೋಜನೆಯ ಅನುಸಾರ ಬಾಸೆಲ್ ಮಿಶನ್ ಶೈಕ್ಷಣಿಕ ಸಂಸ್ಥೆಗಳು ಬೇರೆ ಬೇರೆ ಮಿಶನ್‌ಗಳಿಗೆ ಹಂಚಿ ಹೋಗುತ್ತವೆ. ದಕ್ಷಿಣ ಕೆನರಾ ಹಾಗೂ ದಕ್ಷಿಣ ಮರಾಠದ ಜವಾಬ್ದಾರಿಗಳು ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ಸೇರುತ್ತವೆ. ಬಹಳಷ್ಟು ಹಣಕಾಸಿನ ತೊಂದರೆಯಿಂದ ಬಳಲುತ್ತಿದ್ದ ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ಈ ಎಲ್ಲಾ ಶಾಲೆಗಳನ್ನು ಸಮರ್ಪಕವಾಗಿ ಮುಂದುವರಿಸಲು ಸಾಧ್ಯವಾಗುವುದಿಲ್ಲ. ೧೯೧೬ರಲ್ಲಿ ಮಿಶನನ ಒಟ್ಟು ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆಯು ೧೯೧ ಇದ್ದು[೧೩], ೧೯೧೭ರಲ್ಲಿ ಅದು ೧೬೩ಕ್ಕೆ[೧೪] ಕುಸಿಯುತ್ತದೆ. ೧೯೧೮ರ ಕಾಲಾವಧಿಯಲ್ಲಿ ಬಾಸೆಲ್ ಮಿಶನಿಗೆ ಸೇರಿದ್ದ ೧೫೩ ಶೈಕ್ಷಣಿಕ ಸಂಸ್ಥೆಗಳಿರುತ್ತವೆ.[೧೫] ಮತ್ತೊಂದೆಡೆ ೧೯೧೬ರಲ್ಲಿ ೧೪ ಹೈಸ್ಕೂಲುಗಳಿದ್ದು, ೧೯೧೮ರ ಕಾಲಕ್ಕೆ ಅವು ೧೧ಕ್ಕೆ ಇಳಿಕೆಯಾಗುವುದನ್ನು ಗಮನಿಸಬಹುದು. ೧೯೨೩ರ ಕಾಲಾವಧಿಯಲ್ಲಿ ಕೋಮನ್‌ವೆಲ್ತ್ ಟ್ರಸ್ಟ್ ನೀಡುತ್ತಿದ್ದ ಹಣಕಾಸಿನ ನೆರವು ೪೭,೦೦೦ದಷ್ಟು ಕಡಿತವಾಗಿ ಕೇವಲ ರೂ.೨೨,೦೦೦ ಗಳು ಕೆನರೀಸ್ ಇವ್ಯಾಂಜಲಿಕಲ್ ಮಿಶನಿಗೆ ದೊರಕುತ್ತವೆ. ಇದು ಮುಖ್ಯವಾಗಿ ಮಿಶನಿನ ಶೈಕ್ಷಣಿಕ ವ್ಯವಸ್ಥೆಯ ಮೇಲೆ ಗುರುತರವಾದ ಪರಿಣಾಮವನ್ನು ಬೀರುತ್ತದೆ.[೧೬] ೧೯೨೪ರ ಕಾಲಾವಧಿಯಲ್ಲಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ನಿರ್ವಹಿಸುತ್ತಿದ್ದ ಶೈಕ್ಷಣಿಕ ಸಂಸ್ಥೆಗಳು ಬಹಳಷ್ಟು ಕೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಕಾರಣವೆಂದರೆ ಆ ಕಾಲದಲ್ಲಿ ಕೋಮನ್‌ವೆಲ್ತ್ ಟ್ರಸ್ಟ್‌ನಿಂದ

ಬರುತ್ತಿದ್ದ ಹಣಕಾಸಿನ ಸಹಾಯ ಸಂಪೂರ್ಣವಾಗಿ ನಿಂತು ಹೋಗುತ್ತದೆ. ಆ ಸಂದರ್ಭದಲ್ಲಿ ಅದು ಮಂಗಳೂರಿನಲ್ಲಿದ್ದ ತನ್ನ ಒಂದು ಹೈಸ್ಕೂಲನ್ನು ಮುಚ್ಚುವ ಚಿಂತನೆಯನ್ನು ಮಾಡುತ್ತದೆ. ದಕ್ಷಿಣ ಕೆನರಾದಲ್ಲಿನ ಅದರ ಶಾಲೆಗಳ ಸಂಖ್ಯೆಯು ೪೫ರಿಂದ ೩೦ಕ್ಕೆ ಕುಸಿಯುತ್ತದೆ.[೧೭] ಹೀಗೆ ಒಟ್ಟಾರೆಯಾಗಿ ಬಾಸೆಲ್ ಮಿಶನನ ನಂತರದ ಕಾಲದಲ್ಲಿ ಅದು ಸ್ಥಾಪಿಸಿದ್ದ ಶಿಕ್ಷಣ ಸಂಸ್ಥೆಗಳು ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುತ್ತವೆ ಹಾಗೂ ಹಲವಾರು ಶಾಲೆಗಳು ಮುಚ್ಚಲ್ಪಡುತ್ತವೆ.

ಬಾಸೆಲ್ ಮಿಶನ್ ಮಲಬಾರ್ ಪ್ರದೇಶದ ಕ್ಯಾಲಿಕಟ್‌ನಲ್ಲಿ (Calicut) ಹೊಂದಿದ್ದ, ಮಲಬಾರ್ ಕ್ರಿಶ್ಚಿಯನ್ ಕಾಲೇಜನ್ನು (Malabar Christian College) ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ (Madras Christian College) ಜವಾಬ್ದಾರಿಗೆ ವಹಿಸಲಾಗುತ್ತದೆ. ಇದರ ಮೇಲ್ವಿಚಾರಣೆಯಲ್ಲಿ ಕಾಲೇಜು ಸಾಕಷ್ಟು ಪ್ರಗತಿಯನ್ನು ದಾಖಲಿಸುತ್ತದೆ. ಮಲಬಾರ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ವಿಜ್ಞಾನ ತರಗತಿಗಳನ್ನು ಮುಂದುವರಿಸುವಂತೆ ಸಹಾಯಕವಾಗಲು ಒಂದು ಹೊಸ ಕಟ್ಟದ ಅವಶ್ಯಕತೆಯನ್ನು ಮನಗಂಡು ೧೯೨೪ರ ಕಾಲಾವಧಿಯಲ್ಲಿ ಸುಮಾರು ೧,೦೦,೦೦೦ ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸಲಾಗುತ್ತದೆ. ಈ ಯೋಜನೆಯು ಬಾಸೆಲ್ ಮಿಶನಿಗೆ ಯುದ್ಧ ಆರಂಭವಾಗುವ ಮೊದಲೇ ಇತ್ತು. ಇದಕ್ಕಾಗಿ ಈ ಮೇಲಿನ ಮೊತ್ತದ ಅರ್ಧದಷ್ಟು ಸರಕಾರದಿಂದ ಪಡೆದು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ ವತಿಯಿಂದ ೨೫,೦೦೦ನ್ನು ಸೇರಿಸಿ, ಉಳಿದ ಮೊತ್ತದ ಸಂಗ್ರಹಣೆಗೆ ಮಲಬಾರ್‌ನಲ್ಲಿನ ಧಾರ್ಮಿಕ ಉಪಯೋಗಕ್ಕೆ ಅಗತ್ಯವಿಲ್ಲದ ಕೆಲವು ಆಸ್ತಿಗಳನ್ನು ಮಾರಾಟ ಮಾಡಿ ಯೋಜನೆಯನ್ನು ಸಾಕಾರಗೊಳಿಸುವ ಚಿಂತನೆ ಇರುತ್ತದೆ.[೧೮] ಇದಕ್ಕೆ ಪೂರಕವಾಗುವಂತೆ ೧೯೨೫ರಲ್ಲಿ ಬ್ರಿಟಿಷ್ ಸರಕಾರವು ಮಲಬಾರ್‌ನಲ್ಲಿದ್ದ, ಸಿ ವ್ಹಿವ್ ಭಂಗ್‌ಲೋ (Sea view bungalow) ವನ್ನು ಮಾರಾಟ ಮಾಡಲು ಅನುಮತಿಯನ್ನು ನೀಡಿರುವುದನ್ನು ಗಮನಿಸಬಹುದು.[೧೯]

೧೯೨೮ರ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ಶಾಲೆಗಳ ಪರಿಸ್ಥಿತಿಯು ಯುದ್ಧದ ಮೊದಲಿನ ಪರಿಸ್ಥಿತಿಗಿಂತ ಭಿನ್ನವಾಗಿತ್ತು. ಯುದ್ಧಕ್ಕೆ ಮೊದಲು ೧೯೧೪ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಿಶನ್ ಶಾಲೆಗಳ ಸಂಖ್ಯೆ ೬೫ ಆಗಿದ್ದು, ೧೯೨೮ರಲ್ಲಿ ೪೭ಕ್ಕೆ ಇಳಿದಿತ್ತು. ದಕ್ಷಿಣ ಮರಾಠ ಪ್ರದೇಶದಲ್ಲಿ ಬಾಸೆಲ್ ಮಿಶನ್‌ಗೆ ೧೯೧೪ರಲ್ಲಿ ೩೪ ಶಾಲೆಗಳಿದ್ದು, ೧೯೨೮ಕ್ಕೆ ಅವುಗಳ ಸಂಖ್ಯೆ ೨೮ಕ್ಕೆ ಇಳಿದಿತ್ತು. ಹೀಗೆ ೧೯೨೮ರ ಕಾಲಾವಧಿಯಲ್ಲಿ ಬಾಸೆಲ್ ಮಿಶನ್ ವಶದಲ್ಲಿದ್ದ ಶಾಲೆಗಳ ಸಂಖ್ಯೆ ೭೫ ಆಗಿತ್ತು. ೧೯೧೪ರಲ್ಲಿ ಇವುಗಳ ಸಂಖ್ಯೆ ೯೯ ಆಗಿತ್ತು. [ಮಲಬಾರ್ ಹೊರತುಪಡಿಸಿ] ಈ ಪ್ರಕಾರ ೨೪ ಶಾಲೆಗಳು ಮಿಶನಿನ ಕೈ ತಪ್ಪಿ ಹೋಗಿದ್ದವು. ಶಾಲೆಗಳು ಕಡಿಮೆಯಾಗಿರುವುದು ಮಾತ್ರವಲ್ಲದೇ ವಿದ್ಯಾರ್ಥಿಗಳ ಸಂಖ್ಯೆಯೂ ಬಹಳಷ್ಟು ಕಡಿಮೆಯಾಗಿತ್ತು. ೧೯೧೪ರ ಕಾಲಾವಧಿಯಲ್ಲಿ ದಕ್ಷಿಣ ಕನ್ನಡದಲ್ಲಿನ ಶಾಲಾ ಮಕ್ಕಳ ಸಂಖ್ಯೆ ೬೩೩೦ ಆಗಿದ್ದರೆ, ೧೯೨೮ರಲ್ಲಿ ಅದು ೫೪೯೩ಕ್ಕೆ ಇಳಿದಿತ್ತು. (ಉತ್ತರ ಕನ್ನಡ ಮತ್ತು ಕೊಡಗು ಬಿಟ್ಟು) ದಕ್ಷಿಣ ಮರಾಠದಲ್ಲಿ ೧೯೧೪ರಲ್ಲಿ ಮಕ್ಕಳ ಸಂಖ್ಯೆ ೨೮೪೫ರಷ್ಟಿದ್ದರೆ, ೧೯೨೮ಕ್ಕೆ ಅದು ೨೧೬೯ಕ್ಕೆ ತಗ್ಗಿರುತ್ತದೆ. ಹೀಗೆ ಒಟ್ಟಾರೆಯಾಗಿ ವಿದ್ಯಾರ್ಥಿಗಳ ಸಂಖ್ಯೆಯು ೧೫೧೪ರಷ್ಟು ಕಡಿಮೆಯಾಗಿರುತ್ತದೆ. ಮತ್ತೊಂದೆಡೆ ಸರಕಾರ, ಬೋರ್ಡುಗಳ, ಖಾಸಗಿ ವ್ಯಕ್ತಿಗಳ ಅಥವಾ ಸೊಸೈಟಿಗಳ ಆಡಳಿತೆಯೊಳಗಿರುವ ಶಾಲೆಗಳ ಸಂಖ್ಯೆಯಲ್ಲಿ ಯಾವುದೇ ಕಡಿತವಾಗದೇ, ಅದು ಏರಿಕೆಯಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೧೪ರಲ್ಲಿ ೬೦೦ರಷ್ಟಿದ್ದ ಇತರ ಶಾಲೆಗಳ ಸಂಖ್ಯೆ ೧೯೨೮ರಲ್ಲಿ ೧೦೬೧ ಕ್ಕೆ ಏರಿಕೆಯಾಗಿರುತ್ತದೆ.[೨೦] ೧೯೨೮ರಲ್ಲಿ ಬಾಸೆಲ್ ಮಿಶನ್ ಮರಳಿ ಬಂದು, ಅದರ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಪ್ರಯತ್ನಿಸುತ್ತದೆ. ಆದರೆ, ಅದು ತನ್ನ ಮೊದಲಿನ ಛಾಪನ್ನು ಗಳಿಸಲು ಸಾಧ್ಯವಾಗುವುದಿಲ್ಲ.

ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಗಣನೀಯವಾದ ಬದಲಾವಣೆಗಳನ್ನು ತರಲಿಲ್ಲ. ಬದಲು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಈ ಇದ್ದ ಶಾಲೆಗಳನ್ನೇ ಮುಂದುವರಿಸಲು ಕಷ್ಟಪಟ್ಟಿತ್ತು. ಕೆನರೀಸ್ ಇವ್ಯಾಂಜಲಿಕಲ್ ಮಿಶನಿನ ಕಾಲದಲ್ಲಿ ಬಾಸೆಲ್ ಮಿಶನ್ ಹುಟ್ಟು ಹಾಕಿದ್ದ ಬಲಾಢ್ಯವಾದ ಶಿಕ್ಷಣ ವ್ಯವಸ್ಥೆಯು ಪತನದತ್ತ ಚಲಿಸುವುದನ್ನು ಕಂಡ ಬಾಸೆಲ್ ಮಿಶನ್ ಕ್ರೈಸ್ತರು ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳ ಮೇಲೆ ಪ್ರಬಲ ಟೀಕೆಗಳನ್ನು ಮಾಡುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಶಿಕ್ಷಣ ಕ್ಷೇತ್ರದಲ್ಲಿ ವಿಫಲವಾದುದರಿಂದ ಅದರ ಮಿಶನರಿಗಳು ಸ್ಥಳೀಯ ಕ್ರೈಸ್ತರಿಂದ ವಿರೋಧಿಸಲ್ಪಡುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನರಿಗಳು ಬಾಸೆಲ್ ಮಿಶನ್ ಬೆಳೆಸಿದ್ದ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸಿದ್ದಾರೆ ಎಂಬ ಗುರುತರವಾದ ಆರೋಪವನ್ನು ಮಾಡಿದ್ದ ಕ್ರೈಸ್ತರು, ಬಾಸೆಲ್ ಮಿಶನ್ ಕಾಲದಲ್ಲಿ ಹಲವು ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳಿದ್ದವು. ಹೈಸ್ಕೂಲನ್ನು ಕಾಲೇಜನ್ನಾಗಿ ಮಾರ್ಪಡಿಸಬೇಕೆಂಬ ಆಲೋಚನೆಯೂ ಇತ್ತು. ಆ ಆಲೋಚನೆಗಳು ಮತ್ತು ಶಾಲೆಗಳು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಎಲ್ಲಿಗೆ ಹೋದವು? ಎಂದು ಪ್ರಶ್ನಿಸುತ್ತಾ, ಇದಕ್ಕೆ ಉತ್ತರ ಕಂಡುಕೊಳ್ಳಲು ಒಂದು ವಾರ್ಷಿಕ ವರದಿಯು ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ

ಕಂಡು ಬರುವುದಿಲ್ಲ ಎಂದು ಖಂಡಿಸುತ್ತಾರೆ. ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಾಲದಲ್ಲಿ ಶಾಲೆಗಳ ಸಂಖ್ಯೆ ಗಣನೀಯವಾಗಿ ಕುಸಿದಿದ್ದು, ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಹೇಗೆ ಮಿಶನ್ ಕ್ಷೇತ್ರದಲ್ಲಿ ಹಿಂದೆ ಬಿದ್ದಿದೆಯೋ, ಅದೇ ರೀತಿ ಶಿಕ್ಷಣ ಕ್ಷೇತ್ರದಲ್ಲೂ ಹಿಂದೆ ಬಿದ್ದಿದೆ ಎಂದು ಬಾಸೆಲ್ ಮಿಶನ್ ಕ್ರೈಸ್ತರು ಟೀಕಿಸುತ್ತಾರೆ. ಯುದ್ಧ ಕಾಲದಲ್ಲಿ ಬಾಸೆಲ್ ಮಿಶನ್ ಎದುರಿಸಿದ ಈ ರೀತಿಯ ಅಪಾರವಾದ ಹಿನ್ನಡೆಗೆ ಒಂದು ರೀತಿಯಲ್ಲಿ ಅದರ ಮಿಶನ್ ಹಾಗೂ ಮಿಶನರಿ ನೀತಿಗಳೇ ಕಾರಣವಾದವು ಎಂದು ಹೇಳಬಹುದು. ಏಕೆಂದರೆ ಮಿಶನ್ ಭಾರತೀಯ ಕ್ರೈಸ್ತರಿಗೆ ನಾಯಕತ್ವದ ಬಗ್ಗೆ ತಿಳುವಳಿಕೆ ನೀಡಿ, ಜವಾಬ್ದಾರಿಯನ್ನು ವಹಿಸಿಕೊಟ್ಟಿರಲಿಲ್ಲ. ಮಿಶನರಿಗಳು ಸ್ಥಳೀಯ ಪಾಸ್ಟರ್‌ಗಳಿಗೆ ಸ್ವತಂತ್ರ ಜವಾಬ್ದಾರಿಯನ್ನು ನೀಡಿರಲಿಲ್ಲ. ಬಾಸೆಲ್ ಮಿಶನ್ ತನ್ನ ಕ್ರೈಸ್ತರಿಗೆ, ತನ್ನ ಶಾಲೆಗಳಲ್ಲಿ ಶಿಕ್ಷಕರಾಗುವ, ಕ್ಲರ್ಕ್‌ಗಳಾಗುವ ತರಬೇತಿಯನ್ನು ಹಾಗೂ ಕೈಗಾರಿಕಾ ಕಾರ್ಯಗಳಿಗೆ ಬೇಕಾಗುವ ವಿಭಿನ್ನ ಕೌಶಲ್ಯಗಳಲ್ಲಿ ತರಬೇತಿಯನ್ನು ಒದಗಿಸಿತು. ಈ ರೀತಿ ಬಾಸೆಲ್ ಮಿಶನ್ ತನ್ನ ಕ್ರೈಸ್ತರನ್ನು ಹಾಗೂ ತರಬೇತಿ ಪಡೆದ ಇತರರನ್ನು ತನ್ನ ಪ್ರಬಲ ನಿಯಂತ್ರಣದಲ್ಲಿರಿಸಿಕೊಂಡಿತ್ತು. ಮಿಶನಿನ ಹಾಗೂ ಚರ್ಚಿನ ಸಂಪೂರ್ಣ ಆಡಳಿತ ನಿರ್ವಹಣೆ ಮಿಶನರಿಗಳ ಕೈಯಲ್ಲೇ ಕೇಂದ್ರೀಕೃತವಾಗಿತ್ತು. ಮಿಶನಿನ ಕಾರ್ಯ ಚಟುವಟಿಕೆಗಳ ಮೇಲೆ ಬಾಸೆಲ್ ಹೋಮ್ ಕಮಿಟಿಯು ತನ್ನ ನೇರ ನಿಯಂತ್ರಣವನ್ನು ಹೊಂದಿತ್ತು.

ಅಡಿಟಿಪ್ಪಣಿಗಳು

೧. *ಡಿ. ಪಿ. ಶೆಟ್ಟಿಯಾನ್, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲಾ ಸಭೆಗಳ ಸರ್ವ ಸದಸ್ಯರ ಅವಗಾಹನೆಗೆ, ಪುಟ ೨.*

೨. ದಿ ವರ್ಕ್ ಆಫ್ ದಿ ಬಾಸೆಲ್ ಮಿಶನ್ ಇನ್ ಇಂಡಿಯಾ, ಎ ಸ್ಟೇಟ್ ಮೆಂಟ್, ಗೋಡ್ವಿನ್ ಶಿರಿ(ಸಂಪಾದಿತ), *ಹೋಲಿನೇಸ್ ಇನ್ ಕ್ರೈಸ್ಟ್*, ದಿ ಕರ್ನಾಟಕ ತಿಯೊಲಾಜಿಕಲ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಮಂಗಳೂರು, ೧೯೮೫, ಪುಟ ೫–೬.

೩. The original object of the Basel mission society was the training of missionaries for similar societies for engaging their services abroad. The Rotterdam of Holland, the church missionary society of England, London missionary society, Wesleyan Baptist society of England, church of Scotland mission, North German missionary Society, Leipzig Lutheran mission were some of the missions with which connections were formed for that purpose.

೪. ಡಾ. ವಿಜಯ ಕುಮಾರ್, *ಕರ್ನಾಟಕದಲ್ಲಿ ಪ್ರೊತೆಸ್ತಾಂತ ಮಿಷನ್ನುಗಳ ಚರಿತ್ರೆ*, ಕನ್ನಡ ದೈವಜ್ಞಾನ ಸಾಹಿತ್ಯ ಸಮಿತಿ, ಮಂಗಳೂರು, ೨೦೦೪, ಪುಟ ೧೧೨–೧೧೩. ಜ್ಯಾಕ್ಸ್ ರೋಸಲ್, ಟ್ರ್ಯಾಕಿಂಗ್ ಕ್ರಿಶ್ಚಿಯಾನಟಿ ವರ್ಲ್ಡ್‌ವೈಡ್, (ಜೀವನ ಚರಿತೆ–ಫ್ರೆಂಚ್‌ನಿಂದ ಇಂಗ್ಲೀಷಿಗೆ ಭಾಷಾಂತರ – ಜೋನ್ ಎಮ್.ಲೈಲ್), ಏಷ್ಯಾನ್ ಟ್ರೇಡಿಂಗ್ ಕಾರ್ಪೊರೇಶನ್, ಬೆಂಗಳೂರು, ೨೦೧೦, ಪುಟ ೫೨.

೫. ಜ್ಯಾಕ್ಸ್ ರೋಸೆಲ್, *ಪೂರ್ವೋಕ್ತ*, ಪುಟ ೫೪.

As the international situation eased up and the supporters of the newly established Basel mission grew in strength, its committee began to think of a missionary venture of their own. One of the first was the Caucasus mission (1822-1835) among the missionaries sent out there was Feliciana Zaremba, a Russian count of Polish origin who had renounced his titles and was among the first trainees in Basel, the missionaries according to the agreement reached with the minister of Foreign Affairs of the Tsar, were to assist the German and Swiss settlers, who were encouraged by Tsar Alexander I to migrate out of their impoverished countries to southern Russia (Caucasus and the River Volga region) to assist the Eastern orthodox Armenian church in its revival and convey the message of the Gospel to the Tartar Muslims.

But in Russia the Basel mission had only a partial success. The Russian czar Nicholas continuously showed an unfriendly attitude due to the frequent complaints lodged with him by Armenian clegy against the Basel missioners. Consequently the Basel mission closed down all of its work in southern Russia by 1835. ಎ. ಶೊಸ್ಸರ್, *ಬಾಸೆಲ್ ಮಿಶನ್ ಸಂಘದ ನೂರು ವರ್ಷದ ಚರಿತ್ರೆಯು*, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, ೧೯೧೫, ಪುಟ ೧೦–೧೧.

೬ ಎ ಶೊಸ್ಸರ್, *ಪೂರ್ವೋಕ್ತ*, ಪುಟ ೧೧–೧೩.

The mission success in the African countries was also partial. Its work was frustrated by coastal fever to which several missionaries succumbed.

೭. *ಕರ್ನಾಟಕ ಕ್ರೈಸ್ತ ಬಂಧು*, ಸಂಪುಟ ೩, ಸಂಚಿಕೆ ೮, ಮಂಗಳೂರು, ೧೬ನೇ ಅಕ್ಟೋಬರ್, ೧೯೩೪, ಪುಟ ೧೬೩–೧೬೪.

The whole of Balmatta area was the Govt. property with several Govt. buildings and offices in it. In 1837 when there Coorg Rebellion Broke out, the rebels come to Mangalore and burn down all the govt. buildings and offices,

before they were crushed. Then in September 1840 the madras Govt. auctioned the place, which was bought by H. M. Blair, Esq. the collector of Kanara. As he was very good friend for the Basel missionaries, he donated the whole area to the Basel German Evangelical mission in the same year.

೮. ೧೯೧೪ ರವರೆಗೆ ಬಾಸೆಲ್ ಮಿಶನ್ ಸ್ಥಾಪಿಸಿದ್ದ ಮಿಶನ್ ಠಾಣ್ಯಗಳೆಂದರೆ ಮಂಗಳೂರು (೧೮೩೪), ಮೂಲ್ಕಿ (೧೮೪೫), ಉಡುಪಿ (೧೮೫೪), ಕಾರ್ಕಳ (೧೮೭೨), ಬಸ್ರೂರು (೧೮೭೬), ಕಾಸರಗೋಡು (೧೮೮೬), ಪುತ್ತೂರು (೧೯೦೦), ಮರ್ಕೇರ (೧೮೭೦), ಅನಂದಪುರ್ (೧೮೫೬), ಹೊನ್ನಾವರ (೧೮೪೫), ದಾರವಾಡ (೧೮೩೭), ಹುಬ್ಬಳ್ಳಿ (೧೮೩೯), ಬೇಟಗೇರಿ (೧೮೪೧), ಗುಳೇದಗುಡ್ಡ (೧೮೫೧), ಬಿಜಾಪುರ (೧೮೫೫), ಕ್ಯಾನ್ನನೂರು (೧೮೪೧), ತಲಚೇರಿ (೧೮೩೯), ಕೊಂಬ್ಲಾ (೧೮೪೯), ಕ್ಯಾಲಿಕಟ್ (೧೮೪೨), ಮಂಜೇರಿ (೧೯೦೮), ಕೋಡಕಲ್ (೧೮೫೭), ವಾನಿಯನ್ ಕುಲಮ್ (೧೮೮೬), ಪಾಲ್‌ಘಾಟ್ (೧೮೫೮), ಕೈತಿ (೧೮೪೬), ಕಾಲ್‌ಹಟ್ಟಿ (೧೯೦೭), ಕೋಟಗಿರಿ (೧೮೬೭). ದಿ ೭೪th ರಿಪೋರ್ಟ್ ಆಫ್ ದಿ ಬಾಸೆಲ್ ಜರ್ಮನ್ ಇವಾಂಜಲಿಕಲ್ ಮಿಶನ್ ಇನ್ ಸೌತ್ ವೆಸ್ಟರ್ನ್ ಇಂಡಿಯಾ ಫಾರ್ ದಿ ಇಯರ್ ೧೯೧೩, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, ೧೯೧೪, ಪುಟ ೭–೧೩.

೯. ಜಿ.ಓ. ನಂ. ೩೬೬, (ಮಿಸಲೇನಿಯಸ್), ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನ್‌ಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, ೩೦ನೇ ಏಪ್ರಿಲ್, ೧೯೧೮, ಪುಟ ೪–೫.

೧೦. ಮದ್ರಾಸ್ ಪ್ರಾಂತ್ಯದಲ್ಲಿದ್ದ ಬಾಸೆಲ್ ಮಿಶನಿನ ಶೈಕ್ಷಣಿಕ ಸಂಸ್ಥೆಗಳಿಗೆ ಅದು ಮಾಡುತ್ತಿದ್ದ ಖರ್ಚು ವೆಚ್ಚ.

ಶಾಲೆಗಳು	ಸಂಖ್ಯೆ	ಒಟ್ಟು ವೆಚ್ಚ	ಶುಲ್ಕ	ಅನುದಾನ	ಮಿಶನ್ ಮಾಡುತ್ತಿದ್ದ ವೆಚ್ಚ
ಹುಡುಗರ ಸೆಕೆಂಡರಿ ಶಾಲೆಗಳು	೧೧	೧,೦೫,೧೬೪	೭೨,೫೪೨	೧೬,೨೦೫	೧೬,೪೧೭
ಹುಡುಗಿಯರ ಸೆಕೆಂಡರಿ ಶಾಲೆಗಳು	೦೨	೧೨,೬೨೫	೩,೭೨೮	೪,೦೮೪	೪,೮೧೩
ಹುಡುಗರ ಪ್ರಾಥಮಿಕ ಶಾಲೆಗಳು	೧೩೬	೮೩,೬೮೧	೧೨,೯೩೩	೨೮,೩೩೮	೪೨,೪೧೦
ಹುಡುಗಿಯರ ಪ್ರಾಥಮಿಕ ಶಾಲೆಗಳು	೧೪	೧೧,೫೪೯	೧,೦೩೭	೩,೮೪೮	೬,೬೬೪
ಕಾಲೇಜು	೧	೨೩,೭೧೮	೧೪,೩೫೧	೪,೦೪೭	೫,೩೨೦
ಟ್ರೈನಿಂಗ್ ಶಾಲೆ	೧	೬,೫೧೭	–	೩,೬೪೭	೨,೮೭೦
ಒಟ್ಟು	೧೬೫	೨,೪೩,೨೫೪	೧,೦೪,೫೯೧	೬೦,೧೬೯	೭೮,೪೯೪

೧೧. ಜಿ. ಓ. ನಂ. ೩೬೬, ಪೂರ್ವೋಕ್ತ, ಪುಟ ೧೭.

೧೨. ಅದೆ, ಪುಟ ೧೮. ಪೀಟರ್ ವಿಲ್ಸನ್ ಪ್ರಭಾಕರ್, *ದಿ ಬಾಸೆಲ್ ಮಿಶನ್ ಇನ್ ಸೌತ್ ಕೆನರಾ (೧೮೩೪–೧೯೪೭)*, ಜೂನ್ ೧೯೮೮, ಪುಟ ೨೬೩. *ದಿ ಹರ್ವೆಸ್ಟ್ ಪಿಲ್ಡ್*, ಸಂಪುಟ–XXXVI, ನಂ. ೧೨, ಡಿಸೆಂಬರ್ ೧೯೧೬, ಪುಟ ೪೬೦.

೧೩. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ –XXXVII, ನಂ. ೭, ಜುಲೈ, ೧೯೧೭, ಪುಟ ೨೮೧–೨೮೨.

೧೪. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ –XXXVIII, ನಂ. ೭, ಆಗಸ್ಟ್ ೧೯೧೮, ಪುಟ ೩೨೧–೩೨೨.

೧೫. *ದಿ ಹರ್ವೆಸ್ಟ್ ಫಿಲ್ಡ್*, ಸಂಪುಟ –XXXIX, ನಂ. ೧೧, ನವೆಂಬರ್ ೧೯೧೯, ಪುಟ ೪೪೧–೪೪೨.

೧೬. ರಿಪೋರ್ಟ್ ಆಫ್ ದಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಮಿಟಿ ಫೋರ್ ದಿ ಇಯರ್ ಎಂಡಿಂಗ್ ಜುಲೈ ೩೧, ೧೯೨೪, ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಲ್ ರಿವ್ಹಿವ್, ಸಂಪುಟ–XLIV, ನಂ. ೧೨, ಡಿಸೆಂಬರ್, ೧೯೨೪, ಪುಟ ೪೮೫.

೧೭. ರಿಪೋರ್ಟ್ ಆಫ್ ದಿ ಕೆನರೀಸ್ ಇವ್ಯಾಂಜಲಿಕಲ್ ಮಿಶನ್ ಕಮಿಟಿ ಪೋರ್ ದಿ ಇಯರ್ ಎಂಡ್ಡಿಂಗ್, ಜುಲೈ ೩೧, ೧೯೨೪, ಪೂರ್ವೋಕ್ತ, ಪುಟ ೪೮೫.

೧೮. ರಿಪೋರ್ಟ್ ಆಫ್ ಕಮಿಟಿ ಓನ್ ಜರ್ಮನ್ ಮಿಶನ್ಸ್ ಆಫ್ ದಿ ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಲ್ ಆ್ಯಂಡ್ ದಿ ಮೆಡ್ರಾಸ್ ಕ್ರಿಶ್ಚಿಯನ್ ಕೌನ್ಸಲ್, ನ್ಯಾಶನಲ್ ಕ್ರಿಶ್ಚಿಯನ್ ಕೌನ್ಸಲ್ ರಿವ್ಹಿವ್, ಸಂಪುಟ–XLIV, ನಂ. ೧೨, ಡಿಸೆಂಬರ್, ೧೯೨೪, ಪುಟ ೪೮೪.

೧೯. ಜಿ.ಓ. ನಂ. ೫೨, (ಮಿಸಲೇನಿಯಸ್), ಪಬ್ಲಿಕ್ ಡಿಪಾರ್ಟ್‌ಮೆಂಟ್, ಗವರ್ನ್‌ಮೆಂಟ್ ಆಫ್ ಮೆಡ್ರಾಸ್, ಮೆಡ್ರಾಸ್, ೧೪ನೇ ಜನವರಿ, ೧೯೨೫, ಪುಟ ೧.

೨೦. *ಕ್ರೈಸ್ತ ಹಿತವಾದಿ*, ಸಂಪುಟ ೫, ಸಂಚಿಕೆ ೨, ಮಂಗಳೂರು, ೧೬ನೇ ಜುಲೈ, ೧೯೨೮, ಪುಟ ೧೨.

೧೧೧

ಬಾದಾಮಿ ಪರಿಸರದಲ್ಲಿ ವಸಾಹತು ಕಾಲದ ಸ್ಮಾರಕಗಳು

ಲೋಕಣ್ಣ ಭಜಂತ್ರಿ*

ಬಾಗಲಕೋಟೆ ಜಿಲ್ಲೆಯು ಒಂದು ಐತಿಹಾಸಿಕ ಸ್ಥಳವಾಗಿ ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ಹೆಸರು ಪಡೆದುಕೊಂಡಿದೆ. ಬಾಗಲಕೋಟೆ ಇಡೀ ಜಿಲ್ಲೆಯು ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ದೇವಗಿರಿಯ ಯಾದವ ಮನೆತನ ಮತ್ತು ದ್ವಾರಸಮುದ್ರದ ಹೊಯ್ಸಳ, ವಿಜಯನಗರ, ವಿಜಯಪುರ ಆದಿಲ್‌ಶಾಹಿ ಹಾಗೂ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು.

ಕ್ರಿ.ಶ. ೧೬೮೬ರಲ್ಲಿ ಬಿಜಾಪೂರ(ಇಂದಿನ ವಿಜಯಪುರಕ್ಕೆ ಮೊದಲು ಬಿಜಾಪೂರ ಎಂದು ಕರೆಯಲಾಗುತ್ತಿತ್ತು) ರಾಜ್ಯವನ್ನು ಮೊಗಲ್ ಚಕ್ರವರ್ತಿ ಔರಂಗ್‌ಜೇಬನು ವಶಪಡಿಸಿಕೊಂಡನು. ಕ್ರಿ.ಶ. ೧೭೨೩ರ ನಂತರ ಹೈದರಾಬಾದ್ ನಿಜಾಮ ಉಲ್‌ಮುಲ್ಕನ ಅಧಿಪತ್ಯಕ್ಕೆ ವಿಜಯಪುರ ರಾಜಧಾನಿ ಒಳಗಾಯಿತು. ಕ್ರಿ.ಶ. ೧೭೬೦ರಲ್ಲಿ ವಿಜಯಪುರ ಮರಾಠರ ವಶಕ್ಕೆ ಹೋಯಿತು. ಮುಂದೆ ಕ್ರಿ.ಶ. ೧೭೬೪ರಿಂದ ೧೭೭೫ರ ವರೆಗೆ ಸವಣೂರು ನವಾಬರ ಅಧೀನದಲ್ಲಿದ್ದು ನಂತರ ಪೇಶ್ವೆಯವರ ವಶಕ್ಕೆ ಬಂದಿತು. ಕ್ರಿ.ಶ. ೧೭೭೮ರ ವೇಳೆಗೆ ವಿಜಯಪುರ ರಾಜ್ಯ ಮೈಸೂರಿನ ಹೈದರಾಲಿಯ ಕೈ ಸೇರಿ ಅವನ ಸಾಮಂತನಾದ ಸವಣೂರು ನವಾಬನ ಅಧೀನಕ್ಕೆ ಮತ್ತೇ ಒಳಗಾಯಿತು. ಕ್ರಿ.ಶ. ೧೭೯೨ರ ಶ್ರೀರಂಗಪಟ್ಟಣದ ಒಪ್ಪಂದ ಪ್ರಕಾರ ವಿಜಯಪುರ ಮತ್ತೇ ಮರಾಠರ ಕೈಸೇರಿತು. ಕ್ರಿ.ಶ. ೧೮೧೦ರಲ್ಲಿ ಪೇಶ್ವೆ ಬಾಜಿರಾಯಿ ವಿಜಯಪುರ ಪ್ರದೇಶವನ್ನು ನೀಲಕಂಠರಾವ್ ಸುಬೇದಾರನಿಗೆ ಒಪ್ಪಿಸಿದನು.

ಕ್ರಿ.ಶ. ೧೮೧೮ರಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿ ಸರ್ ಥಾಮಸ್ ಮನ್ರೋ ಬೃಹತ್ತಾದ ಬ್ರಿಟಿಷ್ ಸೈನ್ಯದೊಂದಿಗೆ ಬಾದಾಮಿ ಪ್ರದೇಶಕ್ಕೆ ಮುತ್ತಿಗೆ ಹಾಕಿ ಬಾದಾಮಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನು ವಶಪಡಿಸಿಕೊಂಡನು. ನಂತರ ಬಾಗಲಕೋಟೆ ಪ್ರದೇಶ ಹವೇಲಿ, ಕಲಾದಗಿ ಹಾಗೂ ಇತರ ಪ್ರದೇಶಗಳು ಸಂಪೂರ್ಣವಾಗಿ ಕ್ರಿ.ಶ. ೧೮೧೮ ಮೇ ೧೭ರಂದು ಬ್ರಿಟಿಷ್‌ರ ಕೈವಶವಾದವು. ಕ್ರಿ.ಶ. ೧೮೧೮ರಿಂದ ೧೮೩೭ರ ವರೆಗೆ ಬಾಗಲಕೋಟೆ, ಬಾದಾಮಿ, ಹುನಗುಂದ ತಾಲೂಕುಗಳು ಧಾರವಾಡ ಕಲೆಕ್ಟರೇಟ್ ಅಧಿಕಾರಿಗಳ ಅಧೀನದಲ್ಲಿದ್ದವು. ಮುಧೋಳ ಘೋರ್ಪಡೆ ಸಂಸ್ಥಾನ, ಜಮಖಂಡಿ ಪಟವರ್ಧನ ಸಂಸ್ಥಾನಗಳು ತಮ್ಮ ರಾಜತ್ವವನ್ನು ಮುಂದುವರೆಸಿದವು.

ದಕ್ಷಿಣ ಭಾಗದ ಬ್ರಿಟಿಷ್ ಸಾಮ್ರಾಜ್ಯದ ಕಂದಾಯ ಆಯುಕ್ತನಾದ ಡಬ್ಲು ಹಾರ್ಟನ್ ಸಲಹೆಯಂತೆ ಆಡಳಿತದ ಅನುಕೂಲಕ್ಕಾಗಿ ಇಂಡಿ, ಹಿಪ್ಪರಗಿ, ವಿಜಾಪೂರ, ಮನಗೂಳಿ, ಮುದ್ದೇಬಿಹಾಳ, ಬಾಗಲಕೋಟೆ, ಬಾದಾಮಿ ಹಾಗೂ ಹುನಗುಂದಗಳನ್ನೊಳಗೊಂಡು "ಕಲಾದಗಿ ಕಲೆಕ್ಟರೇಟ್" ಕ್ರಿ.ಶ. ೧೮೬೪ ಡಿಸೆಂಬರ್ ೧ರಂದು ರಚನೆ ಮಾಡಲಾಯಿತು. ಬೀಳಗಿ ಉಪ ತಾಲೂಕಾಗಿ ಹಾಗೂ ಮುಧೋಳ, ಜಮಖಂಡಿ ಪ್ರದೇಶಗಳು ಸಂಸ್ಥಾನಗಳಾಗಿ ಆಡಳಿತ ನಡೆಸಿದವು.

ಕ್ರಿ.ಶ. ೧೮೭೬ರಲ್ಲಿ ಕರ್ನಲ್ ಸೆಂಟ್ ಕ್ಲಾರ್ ವಿಲ್ಕಿನ್ಸನು ಆಡಳಿತದ ದೃಷ್ಟಿಯಿಂದ ಕಲಾದಗಿ ಪ್ರದೇಶಗಿಂತ ವಿಜಯಪುರವೇ ಜಿಲ್ಲಾ ಕೇಂದ್ರವಾಗಲು ಯೋಗ್ಯವೆಂದು ಸಲಹೆ ನೀಡಿದನು. ವಿಜಯಪುರದಲ್ಲಿ ಆದಿಲ್‌ಷಾಹಿ ಕಾಲದ ಕಟ್ಟಡಗಳು ಅನಾಥವಾಗಿ ಬಿದ್ದಿದ್ದವು. ಕ್ರಿ.ಶ. ೧೮೭೭ರ ಭೀಕರ ಬರಗಾಲ ದಿಂದಾಗಿ ಕ್ರಿ.ಶ. ೧೮೭೯ರವರೆಗೆ ಬರಪರಿಹಾರಕ್ಕೆ ಬರಗಾಲ ಕಾಮಗಾರಿಯನ್ನು ಬ್ರಿಟಿಷ್ ಅಧಿಕಾರಿಗಳು ಕೈಗೊಂಡರು. ತದನಂತರ ಕ್ರಿ.ಶ. ೧೮೭೯ರಿಂದ ೧೮೮೫ರವರೆಗೆ ವಿಜಯಪುರದಲ್ಲಿ ಹಾಳುಬಿದ್ದಿದ್ದ ಕಟ್ಟಡಗಳ ದುರಸ್ತಿ ಕಾರ್ಯ ನಡೆಯಿತು. ಅಂತಿಮವಾಗಿ ಕಲಾದಗಿ ಜಿಲ್ಲೆಯನ್ನು ಕ್ರಿ.ಶ. ೧೮೮೫ರಲ್ಲಿ ವಿಜಯಪುರಕ್ಕೆ ವರ್ಗಾಯಿಸಲಾಯಿತು. ಈ ಸಮಯದಲ್ಲಿ ಬಾಗಲಕೋಟೆ ಒಂದು ತಾಲೂಕಾಗಿ ಗುರುತಿಸಿಕೊಂಡಿತು.

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿವಿ, ಹಂಪಿ, ವಿದ್ಯಾರಣ್ಯ–೫೮೩೨೭೬. ಮೊ. ೯೯೧೬೮೭೭೨೩೦

ಈಗಿನ ಬಾಗಲಕೋಟೆ ಜಿಲ್ಲೆಯೂ ಕಲಾದಗಿಯ ಜಿಲ್ಲೆಯಾಗಿ ಸುಮಾರು ೬೭ ವರ್ಷಗಳ ಕಾಲ (ಕ್ರಿ.ಶ. ೧೮೧೮–೧೮೮೫ರ ವರೆಗೆ) ಬ್ರಿಟಿಷರ ಆಡಳಿತದ ಅವಧಿಯಲ್ಲಿ ಸುಮಾರು ೨೧ ವರ್ಷಗಳ ಕಾಲ (ಕ್ರಿ.ಶ. ೧೮೬೪–೧೮೮೫) ಸೈನಿಕ ನೆಲೆ(ಕಂಟೋನ್ಮೆಂಟ್)ಯಾಗಿ ಜಿಲ್ಲಾ ಕೇಂದ್ರವಾಗಿ ಅಸ್ತಿತ್ವದಲ್ಲಿತ್ತು. ಈ ಅವಧಿಯಲ್ಲಿ ಬ್ರಿಟಿಷರು ಬಾಗಲಕೋಟೆ ಸುತ್ತಮುತ್ತಲಿನ ಪರಿಸರದಲ್ಲಿ ಹಾಗೂ ಜಿಲ್ಲೆಯ ವ್ಯಾಪ್ತಿಯಲ್ಲಿ ಹಲವಾರು ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಯಲ್ಲಿದ್ದ ಮುಧೋಳ, ಜಮಖಂಡಿ, ಔರಾದ್, ಕುರಂದವಾಡ ಮತ್ತು ಸಾಂಗಲಿ ಸಂಸ್ಥಾನಗಳು ಕ್ರಿ.ಶ. ೧೯೪೮ರಲ್ಲಿ ವಿಜಯಪುರ ಜಿಲ್ಲೆಗೆ ಸೇರಿಸಲಾಯಿತು. ಇದು ಕ್ರಿ.ಶ. ೧೯೪೭ರಿಂದ ಮುಂಬಯಿ ಪ್ರಾಂತ್ಯದ ಒಂದು ಜಿಲ್ಲೆಯಾಗಿತ್ತು. ಕ್ರಿ.ಶ. ೧೯೫೬ರ ರಾಜ್ಯಗಳ ಪುನರ್ವಿಂಗಡಣೆಯಾದಾಗ ವಿಜಯಪುರ ಕರ್ನಾಟಕ ರಾಜ್ಯಕ್ಕೆ ಸೇರಿತು. ನಂತರ ವಿಜಯಪುರ ಜಿಲ್ಲೆಯಿಂದ ಪ್ರತ್ಯೇಕಗೊಂಡು ಬಾಗಲಕೋಟೆ ಜಿಲ್ಲೆಯನ್ನು ಕ್ರಿ.ಶ. ೧೯೯೭ ಆಗಸ್ಟ್ ೧೫ರಂದು ರಚಿಸಲಾಯಿತು. ಬಾಗಲಕೋಟೆ, ಬಾದಾಮಿ, ಬೀಳಗಿ, ಹುನಗುಂದ, ಜಮಖಂಡಿ, ಮುಧೋಳ ಒಟ್ಟು ಆರು ತಾಲೂಕು ಸೇರಿಕೊಂಡು ಅಖಂಡ ನೂತನ ಬಾಗಲಕೋಟೆ ಜಿಲ್ಲೆಯಾಗಿ ರಚನೆಗೊಂಡಿತು.

ಬಾಗಲಕೋಟೆ ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ೩೫ ಕಿ.ಮೀ. ಅಂತರದಲ್ಲಿ ಬಾದಾಮಿ ಪಟ್ಟಣವಿದೆ. ಚಾಲುಕ್ಯರ ರಾಜಧಾನಿಯಾಗಿ ಕಲೆ, ಸಾಹಿತ್ಯ, ವಾಸ್ತುಶಿಲ್ಪ ಕಲೆಗೆ ಹೆಸರುವಾಸಿಯಾಗಿ ಚರಿತ್ರೆಯಲ್ಲಿ ದಾಖಲಾಗಿದೆ. ಬ್ರಿಟಿಷರು ತಮ್ಮ ಆಡಳಿತದ ಅವಧಿಯಲ್ಲಿ ಬಾದಾಮಿ ಪರಿಸರದಲ್ಲಿ ವಸಾಹತು ಶೈಲಿಯ ಸ್ಮಾರಕಗಳಾದ ಚರ್ಚ್, ನಿರೀಕ್ಷಣಾ ಮಂದಿರ, ಸೇತುವೆ, ಆಸ್ಪತ್ರೆ, ಶಾಲೆ, ಆಡಳಿತ ಕಚೇರಿ, ಅಧಿಕಾರಿಗಳ ವಸತಿಗೃಹಗಳನ್ನು ನಿರ್ಮಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿ ವಸಾಹತುಕಾಲದ ಕೆಲವೊಂದು ಸ್ಮಾರಕಗಳು ನೆಲಸಮಗೊಳ್ಳಲಿದ್ದು, ಅದೇ ಸ್ಥಳದಲ್ಲಿ ಕಾಂಕ್ರೀಟ್ ಕಟ್ಟಡಗಳು ಕೆಲವೇ ತಿಂಗಳುಗಳಲ್ಲಿ ನಿರ್ಮಾಣ ಮಾಡುವ ಯೋಜನೆಯನ್ನು ಸರ್ಕಾರ ರೂಪಿಸಿದೆ. ಹಾಗಾಗಿ ಅಳಿವಿನಂಚಿನಲ್ಲಿರುವ ಹಾಗೂ ಭೂಗರ್ಭದಲ್ಲಿ ಮಣ್ಣಾಗಲಿರುವ ಬಾದಾಮಿ ಪರಿಸರದಲ್ಲಿ ವಸಾಹತುಕಾಲದ ಸ್ಮಾರಕಗಳನ್ನು ಗುರುತಿಸಿ, ಕ್ಷೇತ್ರಕಾರ್ಯ ಕೈಗೊಂಡು, ವಸಾಹತುಕಾಲದಲ್ಲಿ ನಿರ್ಮಾಣಗೊಂಡ ಸ್ಮಾರಕಗಳ ರಚನೆಗೆ ಮೂಲ ಉದ್ದೇಶ, ಚರಿತ್ರೆ, ವಾಸ್ತುಶೈಲಿ, ರಚನಾ ವಿನ್ಯಾಸ ಹಾಗೂ ಸ್ಥಳೀಯರ ಪ್ರತಿರೋಧ ಇತ್ಯಾದಿ ವಿಷಯಗಳ ಕುರಿತು ಚರ್ಚಿಸಿ ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ವಿಶ್ಲೇಷಿಸಿ ದಾಖಲಿಸುವುದಾಗಿದೆ.

ಆಡಗಲ್: ಬಾದಾಮಿ ತಾಲೂಕಿನ ಆಡಗಲ್ ಗ್ರಾಮ ಬಾದಾಮಿ ರೈಲ್ವೆ ನಿಲ್ದಾಣದ ಹತ್ತಿರದಲ್ಲಿದೆ. ಆಡಗಲ ಗ್ರಾಮದಲ್ಲಿ ಬ್ರಿಟೀಷರು ಒಂದು ಚರ್ಚ್ ಕಟ್ಟಿಸಿದ್ದಾರೆ. ಬಾದಾಮಿ ರೈಲ್ವೆ ನಿಲ್ದಾಣಕ್ಕೆ ಹತ್ತಿರದಲ್ಲಿದೆ. ಹುಬ್ಬಳ್ಳಿ ರೈಲ್ವೆ ನಿಲ್ದಾಣದಿಂದ ಗದಗ ಮಾರ್ಗವಾಗಿ ಬಾದಾಮಿಗೆ ಬ್ರಿಟಿಷ್ ಅಧಿಕಾರಿಗಳು ಬರುತ್ತಿದ್ದರು. ಇಲ್ಲಿಯೇ ಬ್ರಿಟಿಷ್ ಅಧಿಕಾರಿಗಳು ತಂಗಲು ಬಾದಾಮಿ ರೈಲ್ವೆ ನಿಲ್ದಾಣದ ಪಕ್ಕದಲ್ಲಿ ನಿರೀಕ್ಷಣಾ ಮಂದಿರ ನಿರ್ಮಿಸಿದ್ದಾರೆ. ಬ್ರಿಟೀಷ ಅಧಿಕಾರಿಗಳು ತಂಗಲು ನಿರೀಕ್ಷಣಾ ಮಂದಿರ, ಆಡಗಲ್ ಚರ್ಚ್, ಬಾದಾಮಿ ರೈಲ್ವೆ ನಿಲ್ದಾಣ ಎಲ್ಲವೂ ೧ ಕಿ.ಮೀ. ದೂರ ಅಂತರದಲ್ಲಿವೆ. ನಿರೀಕ್ಷಣಾ ಮಂದಿರದಲ್ಲಿ ವಸತಿ ಮಾಡಿದ ಅಧಿಕಾರಿಗಳಿಗೆ ಮತ್ತು ಇಲ್ಲಿಯ ಬ್ರಿಟಿಷ ಅಧಿಕಾರಿಗಳಿಗೆ ಪ್ರಾರ್ಥನೆ ಮಾಡುವ ಸದುದ್ದೇಶದಿಂದ ಮುಂದಾಲೋಚನೆಯಿಂದ ಬ್ರಿಟಿಷರು ಆಡಗಲ ಗ್ರಾಮದಲ್ಲಿ ಚರ್ಚ್ ನಿರ್ಮಿಸಿದ್ದಾರೆ. ಆದರೆ ಚರ್ಚ್ ಇಂದು ಹೊಸ ರೂಪ ಪಡೆದುಕೊಂಡು, ಸಣ್ಣಪುಟ್ಟ ದುರಸ್ತಿ ಕಾರ್ಯಗಳು ಆಗಾಗ ನಡೆದುದರಿಂದ ಚರ್ಚ್ ಸುವ್ಯವಸ್ಥೆಯಿಂದ ಕೂಡಿದೆ. ಕ್ರೈಸ್ತ ಮತದ ಅನುಯಾಯಿಗಳ ಕುಟುಂಬಗಳು ಪ್ರಸ್ತುತ ಆಡಗಲ್‌ದಲ್ಲಿ ಕೇವಲ ಬೆರಳೆಣಿಕೆಯಷ್ಟಿವೆ ಎಂದು ಹೇಳಬಹುದು.

ಮೇಲಿನ ಹಲಕುರ್ಕಿ: ಹಲಕುರ್ಕಿ ಗ್ರಾಮದಲ್ಲಿ ಕ್ರಿ.ಶ. ೧೮೮೪ರಲ್ಲಿ ಪ್ರಾರ್ಥನಾ ಮಂದಿರ (ಚರ್ಚ್) ಸ್ಥಾಪನೆಗೊಂಡಿತು. ಬಾದಾಮಿ, ಕೆರೂರು ರಸ್ತೆ ಮಾರ್ಗದಿಂದ ಎಡಗಡೆ ೨ ಕಿ.ಮೀ. ದೂರದಲ್ಲಿರುವ ಗ್ರಾಮ ಮೇಲಿನ ಹಲಕುರ್ಕಿ, ಕೆಳಗಿನ ಹಲಕುರ್ಕಿ ಬಾದಾಮಿ–ಕೆರೂರು ಹೆದ್ದಾರಿಗೆ ಹೊಂದಿಕೊಂಡಿದೆ. ಚರ್ಚ್‌ನ್ನು ಗಾರೆಗಚ್ಚು, ಕಲ್ಲು, ಸೀಮೆ ಸುಣ್ಣದಿಂದ ಕಟ್ಟಲಾಗಿದೆ. ಮುಂಭಾಗದ ಮೇಲ್ಭಾಗದಲ್ಲಿ ಸಿಲುಬೆ, ಒಳಗಡೆ, ಸಭಾಂಗಣ, ವೇದಿಕೆ, ಬಲಿಪೀಠ ಒಳಗೊಂಡಿದೆ. ಚಿಕ್ಕದಾದ ಗ್ರಾಮ ಇದಾಗಿರುವುದರಿಂದ ಸುಮಾರು ೧೦ ರಿಂದ ೨೦ ಕುಟುಂಬಗಳು ಮಾತ್ರ ಕ್ರೈಸ್ತರಾಗಿದ್ದಾರೆ. ಈ ಚರ್ಚ್ ಸಹ ಪ್ರೊಟೆಸ್ಟಂಟ್ ಪಂಗಡಕ್ಕೆ ಸೇರಿದ್ದು, ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಕೆಳಗಿನ ಹಲಕುರ್ಕಿಯಲ್ಲಿ ಬ್ರಿಟಿಷರು ನಿರ್ಮಿಸಿದ ಸ್ಮಾರಕಗಳು ಕಂಡುಬರುವುದಿಲ್ಲ. ಬಾದಾಮಿ ತಾಲೂಕಿನ ಹಳ್ಳಿಗಳಾದ ಹಲಕುರ್ಕಿ, ಮುಷ್ಠಿಗೇರಿ, ಆಡಗಲ, ಪಟ್ಟದಕಲ್ಲು ಈ ಸ್ಥಳಗಳಲ್ಲಿಯೇ ಚರ್ಚ್‌ಗಳು ಯಾಕೆ ನಿರ್ಮಾಣವಾದವು? ಎಂಬ ಪ್ರಶ್ನೆ ಇದೆ.

ನಿರೀಕ್ಷಣಾ ಮಂದಿರ (ಬಾದಾಮಿ ರೈಲು ನಿಲ್ದಾಣ): ಹುಬ್ಬಳ್ಳಿ ರೈಲು ನಿಲ್ದಾಣದಿಂದ ಗದಗ ಮಾರ್ಗವಾಗಿ ಬಾದಾಮಿ ರೈಲು ನಿಲ್ದಾಣಕ್ಕೆ ಬ್ರಿಟಿಷ ಅಧಿಕಾರಿಗಳು ಬರುತ್ತಿದ್ದರು. ಮುಂದೆ ಈ ರೈಲು ಮಾರ್ಗ ಬಾಗಲಕೋಟೆ, ವಿಜಯಪುರ, ಸೋಲಾಪುರ, ಪುಣೆ, ಮುಂಬಯಿ ನಗರಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗವಾಗಿದೆ. ಬ್ರಿಟಿಷ್ ಅಧಿಕಾರಿಗಳಿಗಾಗಿ ತಂಗಲು

ವ್ಯವಸ್ಥಿತವಾದ ನಿರೀಕ್ಷಣಾ ಮಂದಿರ(ಐ.ಬಿ.)ವು ರೈಲು ನಿಲ್ದಾಣದ ಪಕ್ಕದಲ್ಲಿ ನಿರ್ಮಾಣವಾಗಿದೆ. ಸುತ್ತಲೂ ಗಿಡಮರಗಳಿಂದ ಆವೃತ್ತವಾದ ಈ ಕಟ್ಟಡ ಸ್ಥಳೀಯವಾಗಿ ದೊರೆಯುವ ಕೆಂಪು ಮಿಶ್ರಿತ ಶಿಲೆ, ಗಾರೆಗಚ್ಚು, ಸೀಮೆ ಸುಣ್ಣದ ಮಿಶ್ರಣದಿಂದ ನಿರೀಕ್ಷಣಾ ಮಂದಿರ ಕಟ್ಟಿದ್ದಾರೆ. ಮುಖ್ಯ ಬ್ರಿಟಿಷ ಅಧಿಕಾರಿ ತಂಗಲು ಪ್ರತ್ಯೇಕ ವಿಶ್ರಾಂತಿ ಕೊಠಡಿ, ಊಟದ ಮನೆ, ಚಿಕ್ಕದಾದ ಸಭಾ ಭವನ, ಶೌಚಾಲಯ ಎಲ್ಲವನ್ನು ಒಳಗೊಂಡು ಪರಿಸರಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ಬ್ರಿಟಿಷರು ತಮಗೆ ಅನುಕೂಲಕರವಾಗಿರುವಂತೆ ನಿರ್ಮಿಸಿದ್ದಾರೆ. ಕಟ್ಟಡದ ಮೇಲ್ಭಾಗಕ್ಕೆ ಕಟ್ಟಿಗೆಯ ಹೊದಿಕೆಯ ಮೇಲೆ ಮಂಗಳೂರು ಹೆಂಚು ಹಾಕಲಾಗಿದೆ. ಇದರಿಂದ ಮಳೆಗಾಲ ಮತ್ತು ಬೇಸಿಗೆ ಕಾಲಕ್ಕೆ ಪ್ರತಿಕೂಲವಾಗಿರುವಂತೆ ಈ ಸ್ಮಾರಕ ನಿರ್ಮಿಸಿದ್ದಾರೆ. ಇಂದು ಈ ಕಟ್ಟಡದ ಕಾರ್ಯ ಚಟುವಟಿಕೆಗಳು ಸ್ಥಗಿತಗೊಂಡಿದ್ದರಿಂದ ಅಳಿವಿನಂಚಿನಲ್ಲಿದೆ. ನಿರೀಕ್ಷಣಾ ಮಂದಿರದಲ್ಲಿ ಕೆಲಸಗಾರರಿಗಾಗಿ ಪ್ರತ್ಯೇಕ ಕೊಠಡಿಗಳು ಸಹ ಇಲ್ಲಿವೆ. ಆದರೆ ಈ ಬಂಗ್ಲೆ ದಿನದಿಂದ ದಿನಕ್ಕೆ ಅವಸಾನದತ್ತ ಸಾಗುತ್ತಿದೆ. ಈ ಸ್ಮಾರಕದಲ್ಲಿ ಕೆಲವು ವರ್ಷ ಆಡಗಲ ಸರಕಾರಿ ಪ್ರೌಢಶಾಲೆಯಾಗಿ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ಆಶ್ರಯ ನೀಡಿತ್ತು. ಹೊಟಗಿ-ಗದಗ ಮೀಟರ್ ಗೇಜ್ ರೈಲು ಮಾರ್ಗ (ಪೂರ್ವ ಡೆಕ್ಕನ್) ರಚನೆಯ ಸಂದರ್ಭದಲ್ಲಿ ಬಾದಾಮಿ ರೈಲು ನಿಲ್ದಾಣದ ಹತ್ತಿರ ನಿರೀಕ್ಷಣಾ ಮಂದಿರವನ್ನು ಬ್ರಿಟಿಷ ಅಧಿಕಾರಿಗಳು ನಿರ್ಮಿಸಿದ್ದಾರೆ. ಈ ರೈಲು ಮಾರ್ಗ ನಿರ್ಮಾಣ ಕಾರ್ಯವು ಬರಗಾಲ ಕಾಮಗಾರಿಯಾಗಿ ಕ್ರಿ.ಶ. ೧೮೭೯ರ ಏಪ್ರಿಲ್ ತಿಂಗಳಲ್ಲಿ ಆರಂಭಿಸಿತ್ತಾದರೂ, ಅನಿವಾರ್ಯ ಕಾರಣದಿಂದ ತಟಸ್ಥವಾಗಿ, ಮುಂದೆ ಮುಂಬಯಿ ಸರಕಾರ ೧೮೮೧ರ ನವೆಂಬರ ತಿಂಗಳಲ್ಲಿ ರೈಲು ಕಾಮಗಾರಿ ಪುನರಾರಂಭಿಸಿ ೧೮೮೪ರ ಅಕ್ಟೋಬರ್ ೧ರಂದು ಈ ರೈಲು ಕಾಮಗಾರಿಯ ನಿರ್ವಹಣೆಯನ್ನು ಸದರನ್ ಮರಾಠ ರೈಲ್ವೆ ಕಂಪನಿಗೆ ವಹಿಸಿಕೊಟ್ಟಿತು. ಗದಗ-ಹೂಟಗಿ ರೈಲು ಸಂಚಾರವು ಕ್ರಿ.ಶ. ೧೮೮೪ರಲ್ಲಿ ಆರಂಭಗೊಂಡಿತು. ಹತ್ತಾರು ವರ್ಷಗಳಿಂದೀಚೆಗಷ್ಟೆ ಈ ರೈಲು ಮಾರ್ಗ ಬ್ರಾಡಗೇಜ್ ಮಾರ್ಗವಾಗಿ ಪರಿವರ್ತನೆಗೊಂಡಿದೆ.

ನಿರೀಕ್ಷಣಾ ಮಂದಿರ ಬಾದಾಮಿ: ಚಾಲುಕ್ಯರ ರಾಜಧಾನಿ ಬಾದಾಮಿಯು ವಿಶ್ವವಿಖ್ಯಾತ ಪ್ರವಾಸಿ ತಾಣವಾಗಿದೆ. ಬನಶಂಕರಿ ಶಿವಯೋಗಮಂದಿರ, ಮಹಾಕೂಟ, ಪಟ್ಟದಕಲ್ಲು, ಐಹೊಳೆ ಇತ್ಯಾದಿ ಪ್ರೇಕ್ಷಣೀಯ ಮತ್ತು ಐತಿಹಾಸಿಕ ಸ್ಥಳಗಳ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಬ್ರಿಟಿಷರು ಮಾರು ಹೋಗಿ ಆಕರ್ಷಿತರಾಗಿದ್ದರು. ಹಾಗಾಗಿ ಬಾದಾಮಿಯಲ್ಲಿ ಕ್ರಿ.ಶ. ೧೯೦೮ರಲ್ಲಿ ವ್ಯವಸ್ಥಿತವಾದ ನಿರೀಕ್ಷಣಾ ಮಂದಿರ ನಿರ್ಮಿಸಿದರು. ಬಾದಾಮಿ ಪರಿಸರದಲ್ಲಿ ಐತಿಹಾಸಿಕ ಸ್ಮಾರಕಗಳನ್ನು ನೋಡಲು ಮತ್ತು ಅಧ್ಯಯನಿಸಲು ಅನೇಕ ಬ್ರಿಟಿಷ ಅಧಿಕಾರಿಗಳು ಬಾದಾಮಿಗೆ ಬರುತ್ತಿದ್ದರು. ಹಾಗಾಗಿ ತಮ್ಮ ಅನುಕೂಲಕ್ಕಾಗಿ ಗಾಳಿ, ಬೆಳಕು ವ್ಯವಸ್ಥಿತವಾಗಿ ಬರುವಂತೆ ನಿರೀಕ್ಷಣಾ ಮಂದಿರ ನಿರ್ಮಿಸಿದರು. ಈ ಕಟ್ಟಡ ತಳವಿನ್ಯಾಸದ ಮುಂಭಾಗ ವೃತ್ತಾಕಾರದಲ್ಲಿದ್ದು, ಸ್ಥಳೀಯವಾಗಿ ದೊರೆಯುವ ಕೆಂಪು ಮಿಶ್ರಿತ ಶಿಲೆ, ಗಾರೆಗಚ್ಚು, ಸೀಮೆಸುಣ್ಣ ಉಪಯೋಗಿಸಿ ಕಟ್ಟಿದ್ದಾರೆ. ಕಟ್ಟಡದ ಮೇಲ್ಭಾಗಕ್ಕೆ ಕಟ್ಟಿಗೆಯ ಚಾಟು ಹಾಕಿ ಮೇಲು ಹೋದುಕೆಯಾಗಿ ಮಂಗಳೂರು ಹೆಂಚು ಹಾಕಿದ್ದಾರೆ. ಅಡುಗೆ ಮನೆ, ವಿಶ್ರಾಂತಿ ಕೊಠಡಿ, ಸಭಾಭವನ, ಕೆಲಸಗಾರರಿಗೆ ಪ್ರತ್ಯೇಕ ಕೊಠಡಿಗಳೂ ಸಹ ಇಲ್ಲಿ ನಿರ್ಮಿಸಿದ್ದಾರೆ. ಈ ನಿರೀಕ್ಷಣಾ ಮಂದಿರ ಪ್ರಸ್ತುತ ದಿನಗಳವರೆಗೆ ಎಲ್ಲಿಯೂ ಸಹ ಸಣ್ಣ ಬಿರುಕು ಬಿಡದೇ ಗಟಿಮುಟ್ಟಾಗಿದ್ದು, ದಿನನಿತ್ಯ ಪ್ರವಾಸಿಗರಿಗೆ ಆಶ್ರಯ ನೀಡಿ ತನ್ನ ಅವಿರತ ಸೇವೆ ಸಲ್ಲಿಸುತ್ತಿದೆ. ಈ ನರೀಕ್ಷಣಾ ಮಂದಿರದ ಪಕ್ಕದಲ್ಲಿ ಕೆಲವು ವರ್ಷಗಳ ಹಿಂದೆ ದೊಡ್ಡದಾದ ಹೊಸ ನಿರೀಕ್ಷಣಾ ಮಂದಿರವು ನಿರ್ಮಾಣಗೊಂಡಿದ್ದು, ಇದು ಸಹ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರವಾಸಿ ಮಂದಿರಗಳು ೧೮೬೪ರವರೆಗೆ ಅಂಚೆ ಕಚೇರಿಯ ಖಾತೆಯ ಅಧೀನದಲ್ಲಿರುತ್ತಿದ್ದವು. ಪ್ರವಾಸಿ ಮಂದಿರಗಳಲ್ಲಿ ಟಪಾಲು ಚಕ್ಕಡಿಯ ಎತ್ತು, ಟಾಂಗಾ ಕುದುರೆಗಳನ್ನು ಬದಲಾಯಿಸುವ ವ್ಯವಸ್ಥೆ ಇರುತ್ತಿತ್ತು. ಪ್ರವಾಸಿ ಮಂದಿರಗಳನ್ನು ಕಾದಿಡುವ ಬಗ್ಗೆ ಸರಕಾರಿ ಅಧಿಕಾರಿಗಳು ಪೋಸ್ಟ್ ಮಾಸ್ಟರ್‌ರಿಗೆ ಪತ್ರ ಬರೆದುಕೊಳ್ಳಬೇಕಾಗುತ್ತಿತ್ತು. ಇದೇ ಕಾರಣದಿಂದ ಪ್ರವಾಸಿ ಮಂದಿರಗಳಿಗೆ 'ಡಾಕ್ ಬಂಗ್ಲೆ' ಎಂದು ಕರೆಯಲಾಗುತ್ತಿತ್ತು.

ತಾಲೂಕು ಆಡಳಿತ ಕಚೇರಿ: ಥಾಮಸ್ ಮನ್ರೊ ಬಾದಾಮಿ ಬಂಡಾಯವನ್ನು ಅಡಗಿಸಿದ ಮೇಲೆ ಬಾದಾಮಿಯು ಇನ್ನು ಮುಂದೆ ತನ್ನ ಅಧೀನದಲ್ಲಿರಬೇಕು ಎಂಬ ಮೂಲ ಉದ್ದೇಶದಿಂದ ಆಡಳಿತ ಕಾರ್ಯಾಲಯವನ್ನು ಬಾದಾಮಿಯ ಮಧ್ಯ ಭಾಗದಲ್ಲಿ ನಿರ್ಮಿಸಿದನು. ಕ್ರಿ.ಶ. ೧೯೦೪ರಲ್ಲಿ ಬ್ರಿಟಿಷರು ತಮ್ಮ ಆಡಳಿತದ ಕಚೇರಿಯನ್ನು ಸ್ಥಾಪಿಸಿದರೆಂಬುದು ಇಲ್ಲಿ ಕಾಂಪೌಂಡಿನ ಮುಖ್ಯ ದ್ವಾರಬಾಗಿಲಿಗೆ ಅಳವಡಿಸಿರುವ ಶಾಸನದಿಂದ ಗೊತ್ತಾಗುತ್ತದೆ. ಬ್ರಿಟಿಷರು ಆಡಳಿತ ಕಚೇರಿ, ಅಂಚೆ ಕಚೇರಿ, ಸೆರೆಮನೆ(ಜೈಲು) ಇವೆಲ್ಲಾ ಕಟ್ಟಡಗಳನ್ನು ಒಂದೇ ಸ್ಥಳದಲ್ಲಿ ನಿರ್ಮಿಸಿದ್ದಾರೆ. ಈ ವಸಾಹತು ಕಾಲದ ಸ್ಮಾರಕಗಳಲ್ಲಿ ಇಂದಿಗೂ ಸಹ ತಾಲೂಕು ಪಂಚಾಯಿತಿ ಕಾರ್ಯಾಲಯ, ತಾಲೂಕು ಉಪಕಾರಾಗೃಹ(ಜೈಲು), ಖಜಾನೆ ಇಲಾಖೆ, ಹಳೇ ಪೊಲೀಸ ಕಚೇರಿ ಎಲ್ಲವೂ ಇಂದಿಗೂ ಸಹ ಕಾರ್ಯನಿರ್ವಹಿಸುತ್ತಿವೆ. ಆದರೆ ಸರಕಾರದ ಆದೇಶದ ಪ್ರಕಾರ ಈ



ನಿರೀಕ್ಷಣಾ ಮಂದಿರ, ಬಾದಾಮಿ, ರೈಲು ನಿಲ್ದಾಣ



ನಿರೀಕ್ಷಣಾ ಮಂದಿರ, ಬಾದಾಮಿ



ಕ್ರೈಸ್ತ ದೇವಾಲಯ (ಚರ್ಚ್), ಮೇಲಿನ ಹಲಕುರ್ಕಿ



ಭದ್ರತಾ ಕೊಠಡಿ, ಬಾದಾಮಿ

ಎಲ್ಲಾ ವಸಾಹತು ಕಾಲದ ಸ್ಮಾರಕಗಳನ್ನು ಕೆಡವಿ ನೆಲಸಮ ಮಾಡಿ ಇದೇ ಸ್ಥಳದಲ್ಲಿ ಹೊಸ ಕಾಂಕ್ರೀಟ್ ಕಟ್ಟಡಗಳು ನಿರ್ಮಿಸುವ ಯೋಜನೆಯನ್ನು ಈಗಾಗಲೇ ಸಿದ್ಧಪಡಿಸಿದ್ದಾರೆ. ಬ್ರಿಟಿಷರು ನಿರ್ಮಿಸಿದಂತಹ ಈ ಸ್ಮಾರಕಗಳು ಇನ್ನು ಗಟ್ಟಿಮುಟ್ಟಾಗಿವೆ. ಏಕೆಂದರೆ ಕೆಂಪುಶಿಲೆ, ಸೀಮೆ ಸುಣ್ಣ, ಗಾರೆಗಚ್ಚು ಮಿಶ್ರಣದಿಂದ ಈ ಸ್ಮಾರಕ ನಿರ್ಮಿಸಿದ್ದಾರೆ. ಸೆರೆಮನೆಗೆ ಅಳವಡಿಸಿದ ಕಟ್ಟಿಗೆ, ಕಬ್ಬಿಣದ ಸರಳು ನೋಡಿದರೆ ಆಶ್ಚರ್ಯವಾಗುತ್ತಿದೆ. ಆದರೆ ಜನಸಂಖ್ಯೆ ಹೆಚ್ಚಳದಿಂದ ಹೊಸದಾದ ದೊಡ್ಡ ದೊಡ್ಡ ಕಟ್ಟಡಗಳ ಅವಶ್ಯಕತೆ ಏನೋ ಇದೆ ನಿಜ. ಆದರೆ ಈ ಮೂಲ ಸ್ಮಾರಕಗಳನ್ನು ಬೇರೆ ಸ್ಥಳದಲ್ಲಿ ಸ್ಥಳಾಂತರಿಸಿ ಮೂಲ ಸ್ವರೂಪದ ಕಟ್ಟಡಗಳನ್ನು ನಿರ್ಮಿಸಬೇಕು ಎಂಬುದು ಸ್ಥಳೀಯರ ಹಾಗೂ ಇತಿಹಾಸ ಆಸಕ್ತರ ಅಭಿಪ್ರಾಯವಾಗಿದೆ.

ಪೊಲೀಸ್ ವಸತಿಗೃಹಗಳು: ಬಾದಾಮಿಯಲ್ಲಿ ತಾಲೂಕು ಆಡಳಿತ ಕಚೇರಿಯ ಹತ್ತಿರದಲ್ಲಿ ಪೊಲೀಸ್ ವಸತಿಗೃಹಗಳಿವೆ. ಈ ವಸತಿ ಗೃಹಗಳನ್ನು ಕೂಡಾ ಬ್ರಿಟಿಷರು ತಮ್ಮ ಆಡಳಿತ ಸಿಬ್ಬಂದಿ ವರ್ಗದವರ ವಸತಿಗಾಗಿ ನಿರ್ಮಿಸಿದ್ದಾರೆ. ಆದರೆ ಇಂದು ಇವೆಲ್ಲಾ ವಸತಿಗೃಹಗಳು ಪೊಲೀಸ್ ವಸತಿಗೃಹಗಳಾಗಿವೆ. ಹಳೆಯ ಕಟ್ಟಡಗಳಿಗೆ ಆಧುನಿಕ ಸ್ಪರ್ಶ ನೀಡಿ ಜೀರ್ಣೋದ್ಧಾರ ಕಾರ್ಯವನ್ನು ಹಲವಾರು ಬಾರಿ ಕೈಗೊಂಡಿದ್ದರಿಂದ ಮೂಲ ಕಟ್ಟಡದ ಸ್ವರೂಪ ಕಣ್ಮರೆಯಾಗಿದೆ. ಬ್ರಿಟಿಷರು ತಮಗೆ ಅನುಕೂಲಕ್ಕಾಗಿ ಆಡಳಿತ ಕಚೇರಿ ಮತ್ತು ವಸತಿಗೃಹಗಳು ಹತ್ತಿರದಲ್ಲಿಯೇ ನಿರ್ಮಿಸಿದ್ದಾರೆ. ಇದರಿಂದ ಆಡಳಿತದ ಕಾರ್ಯಭಾರ, ನಿರ್ವಹಣೆ ಸುಲಭವಾಗಲಿ ಎಂಬುದು ಬ್ರಿಟಿಷರ ಮುಂದಾಲೋಚನೆಯಾಗಿರಬಹುದು. ಬಾದಾಮಿ ಪರಿಸರದಲ್ಲಿ

ಬ್ರಿಟಿಷರು ಹೆಚ್ಚಾಗಿ ಸ್ಥಳೀಯವಾಗಿ ದೊರೆಯುವಂತಹ ಕೆಂಪು ಮಿಶ್ರಿತ ಶಿಲೆ, ಸೀಮೆಸುಣ್ಣ, ಗಾರೆಗಚ್ಚು, ಕಟ್ಟಿಗೆಯನ್ನು ಉಪಯೋಗಿಸಿ ನಿರ್ಮಿಸಿದ್ದಾರೆ. ಮೇಲು ಹೊದಿಕೆಗೆ ಮಂಗಳೂರಿನ ಹೆಂಚು ತಂದು ಹಾಕಿದ್ದಾರೆ. ಇವೆಲ್ಲ ಸ್ಮಾರಕಗಳ ನಿರ್ಮಾಣದ ನೀಲನಕ್ಷೆಯನ್ನು ತಯಾರಿಸಿದವರು ಬ್ರಿಟಿಷ ಅಧಿಕಾರಿಗಳು. ಆದರೆ ಕಟ್ಟಡ ಕಟ್ಟಿದವರು ಸ್ಥಳೀಯ ಶ್ರಮಿಕ ಜನತೆ ಎಂಬುದು ಇಲ್ಲಿ ಮುಖ್ಯವಾದ ಅಂಶವಾಗಿದೆ. ಎಲ್ಲೆಲ್ಲಿ ಸ್ಥಳೀಯರು ಬ್ರಿಟಿಷರಿಗೆ ಪ್ರತಿರೋಧ ಧ್ವನಿ ಎತ್ತುತ್ತಿದ್ದರೋ ಅಲ್ಲಿ ಹೋಗಿ ಆ ಪ್ರತಿಭಟನೆಯನ್ನು ನಿಗ್ರಹಿಸುವ ಕೆಲಸಕಾರ್ಯದಲ್ಲಿ ಬ್ರಿಟಿಷರು ತುಂಬಾ ಚಾಣಾಕ್ಷತನದಿಂದ ಕೆಲಸಕಾರ್ಯವನ್ನು ಚಾಚು ತಪ್ಪದೇ ನಿರ್ವಹಿಸುತ್ತಿದ್ದರು.

ಅಂಚೆ ಕಚೇರಿ: ವಾರನ್ ಹೇಸ್ಟಿಂಗ್ಸ್ ಕಾಲದಲ್ಲಿ ಕಲಕತ್ತಾ (೧೭೭೪)ರಲ್ಲಿ ಜಿಪಿಓ ಆರಂಭಗೊಂಡು ಅಂಚೆ ಸೌಕರ್ಯ ಸಾರ್ವಜನಿಕರಿಗೆ ಮುಕ್ತವಾಗಿ ಲಭಿಸುವಂತಾಯಿತು. ನಂತರ ಮದ್ರಾಸ್ (೧೭೮೬) ಹಾಗೂ ಮುಂಬಯಿ (೧೭೮೭)ಯಲ್ಲಿ ಜಿ.ಪಿ.ಓ.ಗಳನ್ನು ಆರಂಭಿಸಲಾಯಿತು. ಮುಂದೆ ೧೮೩೭ರಲ್ಲಿ ಸಮಸ್ತ ಭಾರತಕ್ಕೂ ಏಕರೂಪದ ಅಂಚೆ ಕಾಯಿದೆ ಜಾರಿಗೆ ಬಂದಿತು. ಬಾಗಲಕೋಟೆ ಜಿಲ್ಲೆಯ ಬಾದಾಮಿ ಹಾಗೂ ಕಲಾದಗಿ ಗ್ರಾಮಗಳಲ್ಲಿದ್ದ ಅಂಚೆ ಕಚೇರಿಗಳೊಂದಿಗೆ ಮದ್ರಾಸ್ ಜಿಪಿಓ ೧೮೩೩ರ ವೇಳೆಗಾಗಲೇ ಸಂಪರ್ಕವನ್ನು ಹೊಂದಿತು. ಮದ್ರಾಸ್‌ನಿಂದ ಜಿಲ್ಲೆಯ ಈ ಸ್ಥಳಗಳಿಗೆ ರವಾನೆಯಾಗುತ್ತಿದ್ದ ಪ್ರತಿ ಟಪಾಲಿಗೆ ಕ್ರಮವಾಗಿ ೧೪, ೧೫ ಹಾಗೂ ೧೨ ಅಣೆ ಅಂಚೆ ಶುಲ್ಕ ಮೀಸಲಾಗುತ್ತಿತ್ತೆಂದು ೧೮೩೩ರ ಪೋರ್ಟ್‌ಸೆಂಟ್ ಜಾರ್ಜ್ ಗೆಜೆಟ್ ದಾಖಲಿಸಿದೆ. ಬ್ರಿಟಿಷರು ಸ್ಥಾಪಿಸಿದ ಅಂಚೆ ಕಚೇರಿ ಇಂದು ಬಾದಾಮಿಯಲ್ಲಿ ಹಲವಾರು ಬಾರಿ ಜೀರ್ಣೋದ್ಧಾರವಾದರೂ ಸಹ ವಸಾಹತು ಶೈಲಿಯಿಂದ ಕಂಗೊಳಿಸುತ್ತಿದೆ.

ಆಸ್ಪತ್ರೆ: ಬಾದಾಮಿಯಲ್ಲಿ ತಾಲೂಕು ಅಭಿವೃದ್ಧಿ ಮಂಡಳಿಯ ದವಾಖಾನೆಯಾಗಿ ೧೯೨೦ರಲ್ಲಿ ಸ್ಥಾಪನೆಗೊಂಡಿತು. ಮುಂದೆ ೧೯೮೯ರಲ್ಲಿ ಸಮುದಾಯ ಆರೋಗ್ಯ ಕೇಂದ್ರವಾಗಿ ಪರಿವರ್ತನೆಗೊಂಡಿದೆ. ಬ್ರಿಟಿಷರು ತಾವು ವಾಸ್ತವ್ಯವಿರುವ ಪ್ರದೇಶಗಳಲೆಲ್ಲಾ ಆಂಗ್ಲಸೇನೆಗೆ ಮಾತ್ರ ಸೀಮಿತವಾಗಿದ್ದ ಆಧುನಿಕ ವೈದ್ಯಪದ್ಧತಿ (ಆಲೋಪತಿ) ಹಂತ ಹಂತವಾಗಿ ಬ್ರಿಟಿಷ ಅಧಿಕಾರಿಗಳ ಸಹಯೋಗದೊಂದಿಗೆ ಸ್ಥಳೀಯರಿಗೂ ದೊರಕುವಂತಾಯಿತು. ಇಂದಿನ ಬಾದಾಮಿಯ ಸರಕಾರಿ ಆಸ್ಪತ್ರೆ ಜೀರ್ಣೋದ್ಧರಗೊಂಡು ಎಲ್ಲರಿಗೂ ವೈದ್ಯಕೀಯ ಸೇವೆಯನ್ನು ಒದಗಿಸುವ ತಾಣವಾಗಿದೆ.

[ಈ ಪ್ರಬಂಧ ಸಿದ್ಧಪಡಿಸಲು ಮಾರ್ಗದರ್ಶನ ಮಾಡಿದ ಡಾ. ವಾಸುದೇವ ಬಡಿಗೇರ ಗುರುಗಳಿಗೆ, ಡಾ. ಶೀಲಾಕಾಂತ ಪತ್ತಾರ ಗುರುಗಳಿಗೆ, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಗುರುಮಾತೆಯರಾದ ಶ್ರೀಮತಿ ಶಾಂತಾ ಎ. ಕರಡಿಗುಡ್ಡ ಅವರಿಗೆ, ಚರ್ಚುಗಳ ಮೇಲ್ವಿಚಾರಕರು ಮತ್ತು ಫಾದರ್‌ಗಳಾದ ಡಾ. ಎಂ.ಎನ್. ಹಂಚಿನಮನಿ, ಜಾನ್ಸನ್ ಜೋಗಳ, ಕ್ರಿಸ್ತಾನಂದ, ಯಶವಂತ ಹದ್ದನವರ್, ಯಶವಂತ ಕೊಳಚಿ, ಚಂದ್ರು ಹೂಲಗೇರಿ, ಸುರೇಶ ನಾಯ್ಕರ, ಮುಷ್ಠಿಗೇರಿ ಗ್ರಾಮದವರಾದ ಫಕೀರಪ್ಪ ಭಜಂತ್ರಿ, ಸಹೋದರರಾದ ಭುಜಂಗ, ಶ್ರೀಕಾಂತ, ವಿಠ್ಠಲ, ಕೃಷ್ಣಾ, ಬಸವರಾಜ, ದುರುಗಣ್ಣ ಇವರೆಲ್ಲರನ್ನೂ ಪ್ರೀತಿಯಿಂದ ನೆನೆಯುತ್ತೇನೆ.]

ಆಧಾರ ಗ್ರಂಥಗಳು

೧. ಮುನಿಸ್ವಾಮಿ ಆರ್.(ಸಂ). ೧೯೯೯, ಬಿಜಾಪುರ ಜಿಲ್ಲೆ (ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨. ದೇವರಕೊಂಡಾರೆಡ್ಡಿ(ಸಂ.), ೨೦೦೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯, ಬಾಗಲಕೋಟೆ ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩. ವಿಜಯಕುಮಾರ ಕಟಗಿಹಳ್ಳಿಮಠ(ಸಂ), ೨೦೧೪, ಬಾಗಲಕೋಟೆ ಜಿಲ್ಲಾ ಸಂಸ್ಕೃತಿ, ಬಾಗಲಕೋಟ ಜಿಲ್ಲಾ ೪ನೇ ಕನ್ನಡ ಸಾಹಿತ್ಯ ಸಮ್ಮೇಳನ, ಸ್ವಾಗತ ಸಮಿತಿ, ಮುಧೋಳ.

೪. ಗೋಪಾಲ್ ಆರ್.(ಸಂ)., ೨೦೧೧, ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೫. ನಂದಿಮಠ ಎಸ್.ಸಿ., ೨೦೦೯, ಕನ್ನಡ ನಾಡಿನ ಚರಿತ್ರೆ (ಭಾಗ-೨), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬ ಸ್ವಾಮಿ ಐ.ಅಂತಪ್ಪ, ೨೦೦೧, ಉತ್ತರ ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಉಗಮ (೧೮೦೦ ಕ್ಕೂ ಹಿಂದೆ), ಕಥೋಲಿಕ್ ಕ್ರೈಸ್ತರ ಕನ್ನಡ ಸಾಹಿತ್ಯ ಸಂಘ, ಬೆಂಗಳೂರು.

೭. ತಲ್ವಾಡಿ ಬಿ.ಎಸ್., ೧೯೯೯, ಕರ್ನಾಟಕ ಚರ್ಚುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಜೋಸೆಫ್ ರಾಯ್ (ಇಂಪ್ರಿಮೇಟರ್), ೨೦೧೧, ಪವಿತ್ರ ಬೈಬಲ್, ಕರ್ನಾಟಕ ಪ್ರಾಂತೀಯ ಕಥೋಲಿಕ್ ಧರ್ಮಾಧ್ಯಕ್ಷರುಗಳ ಮಂಡಳೀ (ಕೆ.ಆರ್.ಸಿ.ಬಿ.ಸಿ.), ಬೆಂಗಳೂರು.

೧೧೧

ವಸಾಹತುಕಾಲೀನ ಕಲೆ ಮತ್ತು ವಾಸ್ತುಶಿಲ್ಪ: ಬಳ್ಳಾರಿ ಜಿಲ್ಲೆ

ಬಿ.ಪಿ. ಸಣ್ಣಪಾಲಯ್ಯ*

ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತೀಯ ಜನರು ಸಾಧಿಸಿದ ಪ್ರಗತಿಯನ್ನು ವಿಶ್ಲೇಷಿಸಿದರೆ, ಜೀವನ ಮತ್ತು ಸಮಾಜದಲ್ಲಿ ಪಾಶ್ಚಿಮಾತ್ಯರ ಪ್ರಭಾವಕ್ಕೊಳಗಾಗದೇ ಉಳಿದಿರುವ ಯಾವ ಅಂಶವೂ ಇಲ್ಲವೆಂಬುವುದು ತಿಳಿಯುತ್ತದೆ. ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಶಿಕ್ಷಣ, ಮುದ್ರಣ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಉಂಟಾದ ಬದಲಾವಣೆಯು ಅಷ್ಟೇ ಕ್ರಾಂತಿಕಾರಕವಾಗಿತ್ತು. ಏಕೆಂದರೆ, ಈ ಅಂಶಗಳು ಭಾರತವನ್ನು ಮಧ್ಯಯುಗದಿಂದ ಆಧುನಿಕ ಯುಗಕ್ಕೆ ಪರಿವರ್ತನೆಗೊಳ್ಳುವಂತೆ ಮಾಡಿರುವುದರಿಂದ ಹಿಂದಿನ ಸಾವಿರ ವರ್ಷಗಳಲ್ಲಿ ಕಂಡು ಬರದಿದ್ದಷ್ಟು ದೊಡ್ಡ ಬದಲಾವಣೆ ಈ ಶತಮಾನದಲ್ಲಾಗಿದೆ. ಇದು ನಮ್ಮ ಸಂಸ್ಕೃತಿಯ ಮೇಲೆ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವವನ್ನು ಸೂಚಿಸುತ್ತದೆ.

ಗ್ರೀಸ್ ಜಗತ್ತಿಗೆ ನೀಡಿದ ಅತ್ಯಂತ ವಿಶಿಷ್ಟವೆನಿಸಿದ ತನ್ನ ಮೂರು ಕೊಡುಗೆಗಳನ್ನು ನೀಡಿತು. 'ಒಂದು: ಮೊದಲು ಅಭಿವೃದ್ಧಿಗೊಳಿಸಿದುದು–ವಿಜ್ಞಾನ ಮತ್ತು ತತ್ವಜ್ಞಾನ. ಎರಡು: ವ್ಯಾಪಾರಕ್ಕಾಗಿ ಭೇಟಿ ನೀಡುವ ಸ್ಥಳಗಳೇ ಹೊಸ ವಿಚಾರಗಳ ಜನ್ಮಸ್ಥಳಗಳಾದವು'.[೧] ಮೂರು: ಗೀಸ್‌ನಲ್ಲಿ ಅಭಿವೃದ್ಧಿ ಹೊಂದಿದ ವಾಸ್ತುಶಿಲ್ಪದ ಮೂರು ಶೈಲಿಗಲಾದ ಡೋರಿಕ್, ಐಯೋನಿಕ್ ಮತ್ತು ಕಾರಿಂಥಿಯನ್. ಪ್ರಾಚೀನ ಗೀಸ್‌ನಲ್ಲಿ ಡೋರಿಕ್, ಐಯೋನಿಕ್ ಮತ್ತು ಕಾರಿಂಥಿಯನ್ ಎಂಬ ಹೆಸರಿನ ಸಮುದಾಯಗಳು, ನಗರಗಳು ಹಾಗೂ ಬಂದರು ಕೇಂದ್ರಗಳಿದ್ದವು. ಈ ಪ್ರದೇಶದಲ್ಲಿ ನೆಲೆಸಿರುವ ಹಾಗೂ ಗ್ರೀಕ್ ಭಾಷೆಯನ್ನಾಡುವ ಸಮುದಾಯಗಳನ್ನು ಇವೇ ಹೆಸರುಗಳಿಂದ ಕರೆಯಲಾಗುತ್ತಿತ್ತು. ಈ ಮೂರು ನಗರಗಳಿಂದ ಇತರ ರಾಷ್ಟ್ರಗಳಿಗೆ ವ್ಯಾಪಾರ ಭೂಮಾರ್ಗಗಳು ಹಾದು ಹೋಗಿದ್ದ ಕಾರಣಕ್ಕಾಗಿ ಇಲ್ಲಿನ ಜನರು ಭೂಮಾಲಿಕರಾಗಿ, ವರ್ತಕರಾಗಿ, ಕಲಾ ಆಸಕ್ತರಾಗಿ ಹಾಗೂ ರಾಜಕೀಯ ಪ್ರಭುತ್ವದಲ್ಲಿ ಅಭಿವೃದ್ಧಿ ಹೊಂದಿದ್ದರಿಂದ ಇಲ್ಲಿನ ಸಂಸ್ಕೃತಿಯು ಇತರ ರಾಜ್ಯ-ರಾಷ್ಟ್ರದ ಮೇಲೆ ಪ್ರಭಾವ ಬೀರಿರುವುದು ಕಂಡುಬಂದಿದೆ.

ಯೂರೋಪಿಯನ್ ವಾಸ್ತುಶಿಲ್ಪವು ಭಾರತದಲ್ಲಿ ಮೊದಲು ಪ್ರಾರಂಭವಾದುದು ೧೮೫೭ರ ಪ್ರಥಮ ಸ್ವಾತಂತ್ರ್ಯ ಸಮರದ ನಂತರ. ಏಕೆಂದರೆ, ಅವರ ಆಳ್ವಿಕೆಯು ಭಾರತದಲ್ಲಿ ಭದ್ರವಾಗಿ ನೆಲೆಯೂರಿದ ಮೇಲೆಯೇ ಎನ್ನಬಹುದು. ಇದಕ್ಕೂ ಪೂರ್ವದಲ್ಲಿ ಅವರ ವಾಸ್ತುಶಿಲ್ಪದ ಪ್ರಭಾವ ಇರಲಿಲ್ಲವೆ? ಇತ್ತು, ಆರಂಭದಲ್ಲಿ ಅವರು ಕೇವಲ ಧಾರ್ಮಿಕ ವಾಸ್ತುಶಿಲ್ಪಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದರು. ಏಕೆಂದರೆ, ಯೂರೋಪಿಯನ್ನರಾದ ಪೋರ್ಚುಗೀಸರು, ಡಚ್ಚರು, ಇಂಗ್ಲಿಷರು ಮತ್ತು ಫ್ರೆಂಚರು ಇವರು ಭಾರತಕ್ಕೆ ಬಂದದ್ದು ವ್ಯಾಪಾರಿಗಳಾಗಿ, ಹಾಗಾಗಿ ಅವರು ಮೊದಲು ಕೈಗಾರಿಕಾ ಕಾರ್ಖಾನೆಗಳನ್ನು ಸ್ಥಾಪಿಸಿದ್ದರು. ಇವುಗಳಲ್ಲಿ ಸಿದ್ಧಪಡಿಸಿದ ವಸ್ತುಗಳ ಮಾರಟಕ್ಕಾಗಿ ವಸಾಹತು ನೆಲೆಗಳನ್ನು ಅಥವಾ ಕೋಠಿಗಳನ್ನು ಸ್ಥಾಪಿಸಲು ಪೈಪೋಟಿಯಲ್ಲಿ ನಿರತರಾಗಿದ್ದರು. ಈ ಪೈಪೋಟಿಯಲ್ಲಿ ಬ್ರಿಟಿಷರು ಮೇಲುಗೈ ಸಾಧಿಸಿದ್ದ ಕಾರಣಕ್ಕಾಗಿ, ಇವರ ಜೊತೆಯಲ್ಲಿದ್ದ ಕ್ರೈಸ್ತಮಿಶನರಿಗಳು ಮೊಟ್ಟ ಮೊದಲು ಧಾರ್ಮಿಕ ಪ್ರಾರ್ಥನಾ ಮಂದಿರಗಳನ್ನು ಸ್ಥಾಪಿಸುವಲ್ಲಿ ನಿರತರಾಗಿದ್ದರು. ಇದಕ್ಕೂ ಪೂರ್ವದಲ್ಲಿ ಮಿಶನರಿಗಳಿಗೆ ಭಾರತದಲ್ಲಿ ಪ್ರವೇಶ ಇರಲಿಲ್ಲ, ೧೮೧೩ರ ಕಾಯ್ದೆಯು ಅವರ ಧರ್ಮ ಪ್ರಸಾರಕ್ಕೆ ಮುಕ್ತ ಪ್ರವೇಶ ನೀಡಿದ್ದರಿಂದ ಭಾರತದಾದ್ಯಂತ ಕ್ರೈಸ್ತಧರ್ಮ ಹರಡಿಕೊಂಡಿತು. ಬ್ರಿಟಿಷರು ಭಾರತದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪಿಸಿದ ನಂತರ ಅವರು ತಮ್ಮ ಆಡಳಿತದ ಅನುಕೂಲಕ್ಕಾಗಿ ಭಾರತದಾದ್ಯಂತ ಆಡಳಿತ, ರಕ್ಷಣಾ, ಧಾರ್ಮಿಕ, ಶಿಕ್ಷಣ ಮತ್ತು ಸಾರ್ವಜನಿಕ ಕಟ್ಟಡಗಳನ್ನು ತಮ್ಮ ತಾಯ್ನಾಡಿನಲ್ಲಿ ಪ್ರಚಲಿತವಾಗಿದ್ದ ಕಲಾ ಶೈಲಿಗಳಾದ ಗಾಥಿಕ್, ಡೋರಿಕ್, ಐಯೋನಕ್ ಮತ್ತು ಕಾರಿಂಥಿಯನ್ ಶೈಲಿಯಲ್ಲಿ ನಿರ್ಮಾಣ ಮಾಡಿದರು. ಕ್ರಿ.ಶ. ೧೮೦೦ರಲ್ಲಿ ಬಳ್ಳಾರಿ ಪ್ರದೇಶವು ಈಸ್ಟ್ ಇಂಡಿಯಾ ಕಂಪನಯ ನೇರ ಆಳ್ವಿಕೆಗೆ ಒಳಪಟ್ಟಾಗ ಬಳ್ಳಾರಿಯು ಮದ್ರಾಸ್ ಪ್ರಾಂತ್ಯದಲ್ಲಿಯೇ ದೊಡ್ಡ ಸೈನಿಕ ನೆಲೆಯಾಗಿತ್ತು. ಹಾಗಾಗಿ ಬ್ರಿಟಿಷರು ಸೈನಿಕ ಕಾರ್ಯಾಚರಣೆಗಾಗಿ ಹಾಗೂ ಆಡಳಿತ ನಿರ್ವಹಣೆಗಾಗಿ, ತಮ್ಮದೇ ಆದ ಶೈಲಿಯಲ್ಲಿ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಅವುಗಳಲ್ಲಿ ಕೆಲವು ಪ್ರಸ್ತುತವು ಕಾರ್ಯನಿರ್ವಹಣೆಯಲ್ಲಿವೆ.

* ಸೂರಮ್ಮನಹಳ್ಳಿ, ಚಿಕ್ಕೋಬನಹಳ್ಳಿ ಅಂಚೆ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಮೊ. ೭೩೫೯೭೩೯೭೧೬

ಬಳ್ಳಾರಿ ಪರಿಸರದಲ್ಲಿ ಭಾರತಾಂಗ್ಲ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡ ಕಟ್ಟಡಗಳು ಕೇವಲ ಡೋರಿಕ್, ಐಯೋನಿಕ್, ಕಾರಿಂಥಿಯನ್ ಮತ್ತು ಗಾಥಿಕ್ ವಾಸ್ತುಶೈಲಿಯನ್ನು ಒಳಗೊಂಡಿದ್ದಲ್ಲದೆ, ಪ್ರಾದೇಶಿಕ ಹಾಗೂ ಪರಿಸರಕ್ಕೆ ಅನುಗುಣವಾಗಿ ಕಟ್ಟಡಗಳನ್ನು ಆಕಾಶಕ್ಕೆ ಮುಗಿಲು ಮುಟ್ಟುವ ಹಾಗೆ ಎತ್ತರವಾಗಿ ನಿರ್ಮಿಸಿರುವುದು ಕಂಡುಬರುತ್ತವೆ. ಈ ಶೈಲಿಯ ಕಟ್ಟಡಗಳಿಗೆ ಬಳಸಿದ ಬಿಡಿ ವಾಸ್ತುಭಾಗಗಳ ಆಕೃತಿಯ ಸ್ವಭಾವ, ಗುಣಗಳಂತೆ ಐಯೋಪ್ಯ ಶೈಲಿಯ ಶುದ್ಧ ರೂಪದ ಅಳವಡಿಕೆ, ಜೋಡಿಸುವ ವಿಧಾನವನ್ನು ಆಧರಿಸಿ ವಾಸ್ತುಸೌಂದರ್ಯ ನಿರ್ಧಾರಿತವಾಗುತ್ತದೆ. ಅದೇ ರೀತಿ ಒಂದು ಕಂಬದಿಂದ ಮತ್ತೊಂದು ಕಂಬದ ನಡುವಿನ ಅಂತರ, ಗೋಡೆಗಳ ನಡುವಿನ ದೂರವನ್ನು ದುಂಡು ಇಲ್ಲವೆ ಮೊನಚು ಕಮಾನುಗಳು ಹಾದು ಒಂದು ಗೂಡಿಸುವ ವಿಧಾನ, ಕಂಬ ಗೋಡೆಗಳಿಗೆ ಕಾರಣೆ ಮಾಡಿ, ಅವುಗಳ ಮೇಲೆ ಅಲ್ಲಲ್ಲಿ ಉಬ್ಬಿದ ದಂಡೆ, ಹಿಂಜರಿಕೆ, ಮುಂಜರಿಕೆ, ಹೂಬಳ್ಳಿ, ಜ್ಯಾಮಿತಿ ವಿನ್ಯಾಸಗಳನ್ನು ಗಾರೆಯಲ್ಲೆ ರೂಪಿಸಿ, ಅವುಗಳ ಚೆಲುವೆಯನ್ನು ಹೆಚ್ಚಿಸುವ ವಿಧಾನ, ಗೋಡೆಯ ಬುಡದಲ್ಲಿ ಮಣ್ಣಿನ ಚಿತ್ತಾರದ ಫಲಕಗಳನ್ನು ಸಂಯೋಜಿಸುವುದು ಕಂಡುಬರುತ್ತದೆ. ಕಟ್ಟಡಗಳ ಮೇಲ್ಚಾವಣಿಯು ಗೋಳಾಕಾರದಲ್ಲಿದ್ದು, ಕಿಟಗಿ ಹಾಗೂ ಬಾಗಿಲುಗಳಿಗೆ ಬಣ್ಣ ಬಣ್ಣದ ಗಾಜುಗಳನ್ನು ಅಳವಡಿಸಿರುವುದು ಕಂಡುಬರುತ್ತವೆ. ಇವುಗಳ ಜೊತೆಗೆ ವಿಶೇಷವಾಗಿ ಕಬ್ಬಿಣ, ಮರದ ತೀರು, ಗಾರೆ, ಸುಣ್ಣ, ಸಿಮೆಂಟ್ ಹಾಗೂ ಮಂಗಳೂರು ಹೆಂಚು ಇತ್ಯಾದಿ ವಸ್ತುಗಳನ್ನು ಹೆಚ್ಚು ಬಳಸಿ ಕಟ್ಟಲ್ಪಟ್ಟಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಬ್ರಿಟಿಷರು ನಿರ್ಮಿಸಿರುವ ಕಟ್ಟಡಗಳನ್ನು ನಾನು ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಪ್ರಕಾರ ಅವರು ಎರಡು ಬಗೆಯ ಸ್ಥಳವನ್ನು ಆಯ್ಕೆ ಮಾಡಿಕೊಂಡಿರುವುದನ್ನು ಗಮನಸಲಾಗಿದೆ.

ಒಂದು ಗಿರಿ-ಬೆಟ್ಟ : ಬಳ್ಳಾರಿ ಪರಿಸರವು ವಸಾಹತುಶಾಹಿ ಆಳ್ವಿಕೆಯ ಕಾಲಾವಧಿಯಲ್ಲಿ ಅತಿ ಹೆಚ್ಚು ಬಿಸಿಲಿನ ವಾತಾವರಣ, ಕ್ಷಾಮ ಮತ್ತು ಬರಗಾಲಕ್ಕೆ ಒಳಗಾಗಿದ್ದರಿಂದ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಲವು ಬ್ರಿಟಿಷ್ ಅಧಿಕಾರಿಗಳು ಈ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಕಾಯಿಲೆಗಳಿಗೆ ತುತ್ತಾದರು. ಉದಾ: 'ಪೆಮಿನ್ ಕಮಿಷನ್' ಸಮಿತಿಯ ಸದಸ್ಯರಾಗಿ ಬಳ್ಳಾರಿ ಜಿಲ್ಲೆಗೆ ಆಗಮಿಸಿದ ಡಬ್ಲ್ಯೂ.ಆರ್. ಕ್ಯೂಂಬೆಸ್‌ರವರು ಪಕ್ಕೆಬಾವು ರೋಗಕ್ಕೆ ತುತ್ತಾಗಿ ಹೊಸಪೇಟೆಯಲ್ಲಿ ನಿಧನರಾಗಿದ್ದರು. ಇಂತಹ ಅನಾರೋಗ್ಯಕ್ಕೆ ಒಳಗಾದ ಅನೇಕ ಅಧಿಕಾರಿಗಳು ಹಾಗೂ ಸೈನಿಕರು ವಿಶ್ರಾಂತಿ ಪಡೆಯುವುದಕ್ಕಾಗಿ ಬ್ರಿಟಿಷರು ಸಂಡೂರಿನ ಘೋರ್ಪಡೆ ವಂಶಸ್ಥರಿಂದ ರಾಮನಮಲೈ ಅಥವಾ ರಾಮಘಡ ಬೆಟ್ಟವನ್ನು ಆಕ್ರಮಿಸಿ, ಅಲ್ಲಿ ನಿಸರ್ಗಧಾಮವನ್ನಾಗಿ ಮಾಡಿಕೊಂಡು, ವಿಶ್ರಾಂತಿ ಪಡೆದಿರುವುದು ಪ್ರಸ್ತುತ ಭೂತಬಂಗಲೆಯಾಗಿ ಪಾಳು ಬಿದ್ದಿರುವ ಕಟ್ಟಡಗಳಿಂದ ದೃಢಪಟ್ಟಿದೆ.

ಎರಡನೆಯದು ಸಮತಟ್ಟಾದ ಪ್ರದೇಶ : ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕಾಗಿ, ಸೈನಿಕ ಕಾರ್ಯಾಚರಣೆಗಾಗಿ ಮತ್ತು ಇಲ್ಲಿನ ಸಂಪತ್ತನ್ನು ತಮ್ಮ ತಾಯ್ನಾಡಿಗೆ ರವಾನಿಸಲು ಅನುಕೂಲವಾಗುವಂತಹ ಸ್ಥಳವನ್ನು ಆಯ್ಕೆ ಮಾಡಿಕೊಂಡಿದ್ದರು. ಇಲ್ಲಿ ಆಡಳಿತ, ರಕ್ಷಣೆ, ನ್ಯಾಯಾಲಯ ಕಟ್ಟಡಗಳು ಹಾಗೂ ಸಾರಿಗೆ ಮತ್ತು ಸಂಪರ್ಕಕ್ಕಾಗಿ ರೈಲ್ವೆ ಸ್ಟೇಷನ್‌ನ್ನು ನಿರ್ಮಿಸಿಕೊಂಡಿದ್ದರು. ಪ್ರಸ್ತುತ ಬಳ್ಳಾರಿ ನಗರದ ಕೇಂದ್ರಭಾಗದಲ್ಲಿ, ಕಂಟೋನ್ಮೆಂಟ್, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಸಿರುಗುಪ್ಪ, ಆಲೂರು, ಆದೋನಿ ಮತ್ತು ರಾಯದುರ್ಗ ಈ ಎಲ್ಲಾ ಆಯಾಕಟ್ಟಿನ ಸ್ಥಳಗಳಲ್ಲಿ ಬ್ರಿಟಿಷರು ನಿರ್ಮಿಸಿರುವ ಕಟ್ಟಡಗಳು ಇಂದಿಗೂ ಜೀವಂತವಾಗಿವೆ.

ಧಾರ್ಮಿಕ ಕಟ್ಟಡಗಳು : ಕ್ರೈಸ್ತಧರ್ಮದ ಒಂದು ಧಾರ್ಮಿಕ ಸಂಸ್ಥೆಯನ್ನು ಚರ್ಚ್ ಅಥವಾ ಧರ್ಮಸಭೆ ಎಂದು ಕರೆಯಲಾಗಿದೆ. ಧರ್ಮಸಭೆ ಎಂದರೆ, ಕ್ರಿಸ್ತನ ಮೂಲಕವಾಗಿ ದೇವರ ದಿವ್ಯ ಜೀವನದಲ್ಲಿ ಪಾಲ್ಗೊಳ್ಳುವವರ ಒಂದು ಸಂಘಟಿತ ಸಮೂಹ. ಚರ್ಚ್ ಪದದ ವ್ಯುತ್ಪತ್ತಿ ಸ್ವಾರಸ್ಯಕರವಾಗಿದೆ. 'ಕಾಹಾಲ್' ಎಂಬ ಹೀಬ್ರೂಪದ ಗೀಕ್ ಭಾಷೆಯಲ್ಲಿ ಎಕ್ಲೇಸಿಯಾ ಎಂದಾಗಿ, ಇಂಗ್ಲಿಷಿನಲ್ಲಿ 'ಚರ್ಚ್' {Church}[೨] ಎಂದಾಗಿದೆ. ಕಾಹಾಲ್ ಎಂದರೆ, ದೇವರು ಕರೆ ನೀಡಿದುದರಿಂದ ಕ್ರೈಸ್ತ ಜನತೆ ಒಂದಾಗಿ ಸೇರಿರುವುದು, ಈ ಜನತೆಯ ಐಕ್ಯ, ಉದ್ದೇಶ, ದೇವರ ಉಪಾಸನೆ, ಇವೆಲ್ಲ ಅರ್ಥಗಳು ಮುಖ್ಯವಾಗಿ ಕಾಹಾಲ್ ಪದದಲ್ಲಿ ಅಡಕವಾಗಿದೆ. ಚರ್ಚ್ {Church} ಎಂಬ ಇಂಗ್ಲಿಷ್ ಪದಕ್ಕೆ ಕ್ರೈಸ್ತರ ಆರಾಧನೆಯ ಸ್ಥಳ ಅಥವಾ ದೇಗುಲವನ್ನು ಚರ್ಚ್ ಎಂದು ಕರೆಯುತ್ತಾರೆ. ತಮಿಳು ಭಾಷೆಯಲ್ಲಿ 'ತಿರುಸಭೆ' ಎಂಬ ಪದ ಪ್ರಯೋಗವಾಗಿದೆ. 'ತಿರು' ಎಂಬ ತಮಿಳು ಪದಕ್ಕೆ ಶ್ರೀ, ಪವಿತ್ರ, ಶ್ರೇಷ್ಠವಾದ[೩] ಎಂಬರ್ಥಗಳಿವೆ. ಒಟ್ಟಾರೆಯಾಗಿ ಚರ್ಚ್‌ನ್ನು ಗುಡಿ, ಮಠ, ದೇವಾಲಯ, ಇಗರ್ಜಿ, ಕತೀಡ್ರಲ್ ಎಂಬ ಇತ್ಯಾದಿ ಪದಗಳಿಂದ ಕರೆಯಲಾಗುತ್ತಿದೆ. ವಸಾಹತು ಕಾಲಾವಧಿಯಲ್ಲಿ ಬಳ್ಳಾರಿ ನಗರದಲ್ಲಿ ನಿರ್ಮಾಣಗೊಂಡ ಧಾರ್ಮಿಕ ಕಟ್ಟಡಗಳೆಂದರೆ, ೧೮೧೮ರಲ್ಲಿ ಜಾನ್ ಹ್ಯಾಂಡ್ಸ್ ಸ್ಮಾರಕ ದೇವಾಲಯ, ೧೮೧೧ರಲ್ಲಿ ಹೋಲಿ ಟ್ರಿನಿಟಿ ಚರ್ಚ್, ೧೮೧೬ರಲ್ಲಿ ಕ್ರೈಸ್ಟ್ ದ ಕಿಂಗ್ ಚರ್ಚ್, ೧೮೪೧ರಲ್ಲಿ ಆಲ್ ಸೋಲ್ ತಮಿಳು ಚರ್ಚ್, ೧೮೮೪ರಲ್ಲಿ ಸಿ.ಎಸ್.ಐ. ತೆಲುಗು ಚರ್ಚ್, ಕ್ರಿಸ್ತರಾಜ ಸಭೆ: ಹೊಸಪೇಟೆ, ಇತ್ಯಾದಿ ಪ್ರಾರ್ಥನಾ ಮಂದಿರಗಳನ್ನು

ಗಾಥಿಕ್ ಶೈಲಿಯಲ್ಲಿ ನಿರ್ಮಿಸಿರುವುದನ್ನು ಗಮನಿಸಲಾಗಿದೆ. ಧಾರ್ಮಿಕ ಕಟ್ಟಡಗಳ ತಳಹದಿಯು ಯೇಸುವಿನ ಶಿಲುಬೆಯಾಕಾರದಲ್ಲಿದ್ದು, ಅರ್ಧವೃತ್ತಾಕಾರದ ಹಿಂಚಾಚು ಅಥವಾ ಚಚ್ಚೌಕಾರದ ಬಲಿಪೀಠ ಅಥವಾ ಪುಲ್‌ಪೀಠ, ಮಧ್ಯಾಂಗಣ ಮತ್ತು ಮುಖಮಂಟಪವನ್ನು ಒಳಗೊಂಡಿರುತ್ತವೆ. ಚರ್ಚ್‌ಗಳ ವಿಶಾಲವಾದ ಒಳಅಂಕಣವನ್ನು ಮತ್ತು ಪೂಜಾ ವೇದಿಕೆಯನ್ನು ಬೆಳಗಿಸಲು, ಸೂಕ್ತವಾದ ಬೆಳಕನ್ನು ನೀಡಲು ಚರ್ಚ್ ಗೋಡೆಗಳಲ್ಲಿ ಬಾಗಿಲು-ಕಿಟಕಿಗಳನ್ನು ಹೆಚ್ಚು ಹೆಚ್ಚು ಅಳವಡಿಸಲಾಗಿರುತ್ತದೆ.

ಶಿಕ್ಷಣ ಸಂಸ್ಥೆಗಳು : ಭಾರತದಲ್ಲಿ ವಸಾಹತುಶಾಹಿ ಆಳ್ವಿಕೆಯ ಪರಿಣಾಮ ಮತ್ತು ಅವರ ಸಂಪರ್ಕದಿಂದಾಗಿ ನಮಗೆ ಆಧುನಿಕ ಶಿಕ್ಷಣ ಪರಿಚಯವಾಯಿತು. ಇದರಿಂದ ಆಧುನಿಕ ಶಿಕ್ಷಣಕ್ಕೆ ಸ್ಪಷ್ಟ ರೂಪರೇಷೆಗಳನ್ನು ನೀಡಿ, ಪಠ್ಯಕ್ರಮ, ಪರೀಕ್ಷೆ ಮುಂತಾದ ಕ್ರಮಗಳನ್ನು ಅಳವಡಿಸಿ, ಶಾಲೆಗಳನ್ನು ಸ್ಥಾಪಿಸುವ ಮೂಲಕ ಶಿಕ್ಷಣವನ್ನು ಒದಗಿಸಿದ ಕೀರ್ತಿ ಕ್ರೈಸ್ತ ಮಿಷನರಿಗಳಿಗೆ ಸಲ್ಲುತ್ತದೆ. ಇವರು ಸ್ಥಾಪಿಸಿದ ಶಾಲಾ ಕಟ್ಟಡಗಳು ಹೆಚ್ಚು L ಹಾಗೂ U ಆಕಾರದಲ್ಲಿ ನಿರ್ಮಿಸಿರುವುದನ್ನು ಗಮನಿಸಲಾಗಿದೆ. ಈ ಕಟ್ಟಡಗಳ ನಿರ್ಮಾಣಕ್ಕೆ ಮಿಷನರಿಗಳ ಜೊತೆಗೆ, ಬ್ರಿಟಿಷ್ ಸರ್ಕಾರ ಮತ್ತು ಪ್ರಗತಿಪರ ಭಾರತೀಯ ಚಿಂತಕರು ಕೂಡ ಪ್ರಮುಖ ಕಾರಣರಾದರು. ಒಟ್ಟಾರೆಯಾಗಿ ಬ್ರಿಟಿಷರು ಬಳ್ಳಾರಿಯಲ್ಲಿ ಕೇವಲ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕ್ಷೇತ್ರದಲ್ಲಿ ಬದಲಾವಣೆ ಮಾಡಿದ್ದಲ್ಲದೆ, ಕಲೆ ಮತ್ತು ವಾಸ್ತುಶಿಲ್ಪದಲ್ಲಿಯೂ ಕೂಡ ತಮ್ಮದೇ ಆದ ಚಹರೆಗಳನ್ನು ಬಿತ್ತರಿಸಿರುವುದನ್ನು ಗಮನಿಸಲಾಗಿದೆ.

ಅಡಿಟಿಪ್ಪಣಿ

೧. ವಿಲ್ ಡ್ಯೂರಾಂಟ್ {ಮೂಲ}, ಪ್ರಧಾನ ಗುರುದತ್ತ {ಅನು}{ಪ್ರ.ಸಂ.}, ೨೦೦೮, ನಾಗರಿಕತೆಯ ಕಥೆ ಗ್ರೀಸ್ ಜನಜೀವನ {ಸಂಪುಟ-೨}, ಪುಟ ೧೪೮.

೨. ಕನ್ನಡ ವಿಶ್ವಕೋಶ, ೧೯೭೪, ಪುಟ ೧೮೫.

೩. ತಲ್ವಾಡಿ ಬಿ.ಎಸ್., ೨೦೧೪, ದಕ್ಷಿಣ ಕರ್ನಾಟಕದ ಕ್ರೈಸ್ತ ಜನಪದ ಸಾಹಿತ್ಯ, ಪುಟ ೫೨.

೪. ಜಾನ್ ಕೆಲ್‌ಶಲ್, ೧೮೭೨, ಮ್ಯಾನ್ವುಲ್ ಆಫ್ ದಿ ಬಳ್ಳಾರಿ ಡಿಸ್ಟ್ರಿಕ್ಟ್ , ಕರ್ನಾಟಕ ಸರ್ಕಾರ, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೫. ಕ್ಷೇತ್ರಕಾರ್ಯ.

೧೧೨

ದ್ವಿತೀಯ ಮಹಾಯುದ್ಧ ಕಾಲದ ಮೈಸೂರು ಸಂಸ್ಥಾನದ ರೈಲ್ವೆ ಅಭಿವೃದ್ಧಿ

ಬಿ.ಪಿ. ಕುಮಾರ್*

ಮೈಸೂರಿನ ಒಡೆಯರ ಆಳ್ವಿಕೆ ಕರ್ನಾಟಕದ ಇತಿಹಾಸದಲ್ಲಿ ಗಮನಾರ್ಹ ಕಾಲಘಟ್ಟ. ಈ ಕಾಲಾವಧಿಯಲ್ಲಿ ಬ್ರಿಟೀಷರ ಪ್ರವೇಶವಾದರೂ, ಪ್ರಗತಿಗೆ ಹಾಕಿದ ಹೆಜ್ಜೆಗಳು ಸದಾ ನೆನಪಿಸಿಕೊಳ್ಳಲೇಬೇಕಾದವು. ಶಿಕ್ಷಣ, ಕೈಗಾರಿಕೆ, ಸಾರಿಗೆ, ಕೃಷಿ ಮುಂತಾದ ಕ್ಷೇತ್ರಗಳು ಪ್ರಗತಿಯ ಗುರಿ ಇಟ್ಟುಕೊಂಡು ಮುನ್ನಡೆದವು. ಇದೇ ಸಂದರ್ಭದಲ್ಲಿ ಬ್ರಿಟೀಷರ ಅಧಿಪತ್ಯ, ಎರಡು ಮಹಾಯುದ್ಧಗಳು ರಾಜ್ಯದ ಬೆಳವಣಿಗೆಯ ಮೇಲೆ ಹಲವು ಪ್ರಯೋಗಗಳು ಹಾಗೂ ಬದಲಾವಣೆಗಳನ್ನು ಕಾಣುವಂತಹ ಪರಿಸ್ಥಿತಿಯನ್ನು ಎದುರುಗೊಳ್ಳಬೇಕಾಯಿತು. ಮನುಷ್ಯನ ನರನಾಡಿಗಳಂತಿರುವ ಸಾರಿಗೆ ಸಂಪರ್ಕವು ಸಂಸ್ಥಾನದ, ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿತು. ಅಂತೆಯೇ ದೇಶ ಹಾಗೂ ಮೈಸೂರು ಸಂಸ್ಥಾನದಲ್ಲಿ ಸಾರಿಗೆಯ ಭಾಗವಾಗಿರುವ ರೈಲ್ವೆ ಹಲವಾರು ಸವಾಲುಗಳೊಂದಿಗೆ ಅಭಿವೃದ್ಧಿಯಾಗಿದ್ದು ಬಹಳಷ್ಟು ಅನುಕೂಲಕರ ವಾತಾವರಣ ಸೃಷ್ಟಿ ಮಾಡಿತು. ದ್ವಿತೀಯ ಮಹಾಯುದ್ಧಾವಧಿಯಲ್ಲಿ ಮೈಸೂರು ಸಂಸ್ಥಾನದ ರೈಲ್ವೆ ಅಭಿವೃದ್ಧಿಯನ್ನು ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಭಾರತದಲ್ಲಿ ರೈಲುಗಳನ್ನು ಕೈಗಾರಿಕೆಗಳ ಹಿನ್ನೆಲೆಯಲ್ಲಿ, ಪ್ರಯಾಣಿಕರ ಅನುಕೂಲಕ್ಕೆ ಅಭಿವೃದ್ಧಿಪಡಿಸಲಾಗಿದೆ. ಅಂತೆಯೇ ಮೊದಲ ರೈಲು ಸಂಪರ್ಕ ೧೮೩೭ರಲ್ಲಿ ಮದ್ರಾಸ್‌ನಲ್ಲಿ ಆರಂಭವಾಯಿತು. ಅದು ಗ್ರಾನೈಟ್ ಕಲ್ಲನ್ನು ಸರಬರಾಜು ಮಾಡಲು ಮದ್ರಾಸಿನ ರೆಡ್‌ಹಿಲ್‌ನಿಂದ, ಚಿಂತಾದ್ರಿ ಪೇಟೆಯ ಸೇತುವೆಯವರೆಗೆ (೧೮೩೭) ಮೊದಲು ಚಲಿಸಿತು. ಮೊದಲ ಪ್ಯಾಸೆಂಜರ್ ರೈಲು ೧೮೫೩ರಲ್ಲಿ ಬಾಂಬೆ–ಥಾಣೆ ನಡುವೆ ಸಂಚರಿಸಿದ್ದು ತಿಳಿದಿರುವ ವಿಷಯ. ಪೂರ್ವ ಭಾರತದ ಮೊದಲ ರೈಲು ೧೮೫೪ರಲ್ಲಿ ಕಲ್ಕತ್ತ (ಹೌರಾ)–ಹೂಗ್ಲಿ ನಡುವೆ (೨೪ ಮೈಲಿ) ಸಂಚರಿಸಿತು. ಹಳೆಯ ಮೈಸೂರಿನ ಪ್ರದೇಶದಲ್ಲಿ ೧೮೫೯ರಲ್ಲಿ ಬೆಂಗಳೂರು–ಮದ್ರಾಸ್ ನಡುವೆ ಮೊದಲನೆ ಬ್ರಾಡ್‌ಗೇಜ್‌ರೈಲು ಮಾರ್ಗವು ಹಾಕಲ್ಪಟ್ಟಿತು. ಇದು ೧೮೬೪ರಲ್ಲಿ ಸಾರ್ವಜನಿಕರಿಗೆ ಸಂಚಾರಕ್ಕೆ ತೆರೆಯಲ್ಪಟ್ಟಿತು. ೧೮೬೩–೬೪ರ ವೇಳೆಗೆ ಬೆಂಗಳೂರಿನಿಂದ ತುಮಕೂರಿಗೆ ರೈಲ್ವೆ ಮಾರ್ಗ ಹಾಕಲು ಸಮೀಕ್ಷಾ ಕಾರ್ಯ ಆರಂಭವಾಯಿತು. ೧೮೭೭–೭೮ರಲ್ಲಿ ಸಂಸ್ಥಾನವು ಬೆಂಗಳೂರು–ಮೈಸೂರು ರೈಲ್ವೆ ಮಾರ್ಗ ಹಾಕುವ ಯೋಜನೆ ಕೈಗೊಂಡಿತು. ಮದ್ರಾಸ್ ರೈಲ್ವೆ ಕಂಪನಿ, ಮರಾಠ ರೈಲ್ವೆ ಕಂಪನಿಗಳು ರೈಲ್ವೆ ಹಳಿ ಸಮೀಕ್ಷೆ, ಅಂದಾಜು ವೆಚ್ಚ, ನಿರ್ಮಾಣದ ಜವಾಬ್ದಾರಿ ನಿರ್ವಹಿಸುತ್ತಿದ್ದವು.

ಸುಣ್ಣದಕಲ್ಲಿನ ಗಣಿ, ಕಬ್ಬಿಣದ ಅದಿರು, ಮ್ಯಾಂಗನೀಸ್, ಮರ–ಮಟ್ಟು ಮುಂತಾದವುಗಳ ಸರಬರಾಜಿಗೆ ರೈಲು ಹಳಿಗಳನ್ನು ಖಾಸಗಿ ನಿಯಮಿತ ಸಂಸ್ಥೆಗಳಿಗಾಗಿ ನಿರ್ಮಿಸಲಾಯಿತು. ಜೊತೆಜೊತೆಯಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿಯೂ ರೈಲು ಸಂಪರ್ಕಗಳನ್ನು ಸಂಸ್ಥಾನದಲ್ಲಿ ನಿರ್ಮಿಸಲಾಯಿತು. ಸಾಮಾನ್ಯವಾಗಿ ಮಹಾಯುದ್ಧಗಳ ಅವಧಿಯಲ್ಲಿ ರೈಲ್ವೆ ಕ್ಷೇತ್ರ ಸೊರಗಬಹುದು, ಯುದ್ಧ ಬೇಡಿಕೆ ಪೂರೈಕೆಗೆ ಬೆಳೆಯಲೂಬಹುದು ಅಥವಾ ಯುದ್ಧಕ್ಕಾಗಿ ಕಾರ್ಮಿಕರು ದುಡಿಯ ಬೇಕಾಗಬಹುದು ಎಂಬ ಅಭಿಪ್ರಾಯಗಳಿರುತ್ತವೆ.

ದ್ವಿತೀಯ ಮಹಾಯುದ್ಧದ ಹಿಂದಿನ ದಶಕ ಹಾಗೂ ಯುದ್ಧಾವಧಿಯ ದಶಕದ, ಸಂಸ್ಥಾನದಲ್ಲಿ ಆದಂತಹ ರೈಲ್ವೆ ಕ್ಷೇತ್ರದ ಹಲವು ಚಟುವಟಿಕೆಗಳು ಭಾರತದಪೂರ್ವ ಭಾಗದ ಕಲ್ಕತ್ತ, ಅಸ್ಸಾಂ ಹಾಗೂ ಬರ್ಮಾ ಮುಂತಾದ ಕಡೆಗಳಲ್ಲಿ, ರೈಲ್ವೆ ಕ್ಷೇತ್ರ ಹಲವು ಏರುಪೇರುಗಳನ್ನು ಕಂಡಿತು. ಯುದ್ಧಾವಧಿಯಲ್ಲಿ ಹಲವು ಪ್ರಬಲ ಯುದ್ಧ ಸಂಬಂಧೀ ಬದಲಾವಣೆಗಳಾದದ್ದು ಕಂಡು ಬರುತ್ತದೆ. ಆದರೆ ಮೈಸೂರು ಸಂಸ್ಥಾನದಲ್ಲಿ ಬೇಡಿಕೆಗಿಂತಲೂ, ಸೌಲಭ್ಯಗಳ ವಿಸ್ತರಣೆ, ಪಕ್ಕದ ರಾಜ್ಯಗಳಿಗೆ ಸಂಪರ್ಕ ವಿಸ್ತರಣೆ, ಟ್ರ್ಯಾಂವೇಗಳನ್ನು ಮುಚ್ಚಿರುವುದು ಅಥವಾ ಅಭಿವೃದ್ಧಿಪಡಿಸುವುದು. ಮಹಿಳೆಯರ ಸುರಕ್ಷಿತ ಪ್ರಯಾಣಕ್ಕೆ

---

* ಮುಖ್ಯಸ್ಥರು, ಇತಿಹಾಸ ವಿಭಾಗ, ಎ.ವಿ.ಕೆ. ಮಹಿಳಾ ಕಾಲೇಜು, ಪಿ.ಜೆ. ಬಡಾವಣೆ, ದಾವಣಗೆರೆ. ಮೊ. ೯೪೮೧೦೯೩೬೩

ಸೂಚನೆ, ರೈಲ್ವೆ ಭದ್ರತಾ ಆಯೋಗ, ರೈಲ್ವೆ ಕಾರ್ಯಾಗಾರಗಳ ಸ್ಥಾಪನೆ, ರೈಲ್ವೆ ನೌಕರರಿಗೆ ಬೋನಸ್, ಡಿ.ಎ. ಮುಂದುವರಿಕೆ, ಮೈಸೂರು ಸ್ಟೇಟ್ ರೈಲ್ವೆ ಎಂಪ್ಲಾಯೀಸ್ ಅಸೋಸಿಯೇಷನ್ (೧೯೪೨) ನೋಂದಣಿ, ಕೆಲ ರೈಲು ಗಾಡಿಗಳ ರದ್ದತಿ, ರೈಲ್ವೆದರ ಹೆಚ್ಚಳ ಹೀಗೆ ಹಲವಾರು ವಿಷಯಗಳನ್ನು ಗಮನಿಸಬಹುದಾಗಿದೆ.

ದ್ವಿತೀಯ ಯುದ್ಧ ಪೂರ್ವ ಮತ್ತು ಯುದ್ಧಾವಧಿಯ ದಶಕಗಳಲ್ಲಿ ಮೈಸೂರು ಸಂಸ್ಥಾನದಲ್ಲಾದ ರೈಲ್ವೆ ಚಟುವಟಿಕೆಯು, ದಿ: ೦೧-೦೧-೧೯೩೨ ರಿಂದ ಬೆಂಗಳೂರಿನಲ್ಲಿ 'ರೈಲ್ವೆ ಭದ್ರತಾ ಆಯೋಗ'ದ ದಕ್ಷಿಣ ವಿಭಾಗದ ಕಛೇರಿಯು ಕೆಲಸ ಆರಂಭಿಸಿತು. ಸಂಚಾರಕ್ಕೆ ಮುನ್ನ ಮಾರ್ಗಗಳ ಪರೀಕ್ಷೆ, ಕಾಲಕಾಲಕ್ಕೆ ದಾರಿಗಳ ತಪಾಸಣೆ, ಸಂಚಾರ ಯೋಗ್ಯತೆ ದೃಢೀಕರಣ ಮುಂತಾದ ಕೆಲಸಗಳನ್ನು ಈ ಆಯೋಗ ಮಾಡಬೇಕಾಗಿತ್ತು.

೧೯೩೮ರಲ್ಲಿ ಮೈಸೂರು ರೈಲ್ವೆಯ ಒಂದು ಭಾಗವಾಗಿ, ಮೈಸೂರಿನಲ್ಲಿ 'ರೈಲ್ವೆ ಕಾರ್ಯಾಗಾರವು' ಸ್ಥಾಪಿತವಾಯಿತು. ಅದು ಬಿಡಿಭಾಗಗಳ ತಯಾರಿಕೆ, ಸವೆದ ಭಾಗಗಳ ದುರಸ್ತಿ ಮುಂತಾದ ಕೆಲಸಗಳನ್ನು ಮಾಡಬೇಕಾಗಿತ್ತು. ೧೯೪೭ರಲ್ಲಿ ಹೆಚ್.ಎ.ಎಲ್. ಸಂಸ್ಥೆಯು ರೈಲು ಬಂಡಿಗಳ ವಿಭಾಗಗಳನ್ನು ಪ್ರಾರಂಭ ಮಾಡಿತು. ಟ್ರ್ಯಾಂವೇ (ಕೈಗಾರಿಕಾ ಕಚ್ಚಾ ವಸ್ತು, ಸುಣ್ಣದ ಕಲ್ಲು ಇತ್ಯಾದಿ ಸಾಗಿಸುವುದು) ರದ್ದು ಹಾಗೂ ಸಂಪರ್ಕ ಕಲ್ಪಿಸಲಾಯಿತು. ಉದಾಹರಣೆಗೆ ೧೯೩೮ರಲ್ಲಿ ಭದ್ರಾವತಿ-ಜೋಳದಾಳ್ ಟ್ರ್ಯಾಂವೇ (೧೯.೩ ಕಿ.ಮೀ)ಯನ್ನು ಬಡಿಗುಂಡ ಸುಣ್ಣದ ಕಲ್ಲು ಗಣಿ ಪ್ರದೇಶಕ್ಕೆ ಸಂಪರ್ಕ ಕಲ್ಪಿಸಿದರೆ, ೧೯೪೯ರಲ್ಲಿ ಭದ್ರಾ ಜಲಾಶಯದಲ್ಲಿ ೩೬.೨ ಮೈಲಿ ರೈಲು ಮಾರ್ಗ ಮುಳುಗಿದ್ದರಿಂದ ಈ ಮಾರ್ಗವನ್ನು ಮುಚ್ಚಲಾಯಿತು. ಪಕ್ಕದ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಮಾರ್ಗಗಳ ಸಮೀಕ್ಷೆಯ ಕಾರ್ಯ ನಡೆಯಿತು. ೧೯೩೮ರಲ್ಲಿ ಶಿಡ್ಲಘಟ್ಟ-ಹೊಸೂರು (ತಮಿಳುನಾಡು), ೧೯೪೭ರಲ್ಲಿ ಬೆಂಗಳೂರು-ಕಡಪ (ಆಂಧ್ರ)ಗಳ ಸಮೀಕ್ಷೆ ನಡೆಸಲಾಯಿತು. ಯುದ್ಧಾವಧಿಯಲ್ಲಿ ಮೈಸೂರು-ಚಾಮರಾಜನಗರ, ಚಿಕ್ಕಜಾಜೂರು-ಚಿತ್ರದುರ್ಗ, ತಾಳಗುಪ್ಪ-ಸಾಗರ (ರೈಲು ಸಂಖ್ಯೆ ೧೯ ಮತ್ತು ೨೦) ಮುಂತಾದ ರೈಲುಗಳು ರದ್ದಾದವು.

೧೯೩೬ರಲ್ಲಿ ಮೈಸೂರು-ಅರಸೀಕೆರೆ ಷಟಲ್ ರೈಲನ್ನು ಆರಂಭಿಸಿದರೆ, ೧೯೩೮ರಲ್ಲಿ ಅರಸೀಕೆರೆ-ಹರಿಹರ ಷಟಲ್ ರೈಲನ್ನು ಆರಂಭಿಸಲಾಯಿತು. ೧೯೩೯ರಲ್ಲಿ ಟ್ರೈನ್ ನಂ. ೫೫ ಮತ್ತು ೫೬ರ ಅರಸೀಕೆರೆ-ಹರಿಹರ ರೈಲನ್ನು ಹುಬ್ಬಳ್ಳಿಗೆ ವಿಸ್ತರಿಸಲಾಯಿತು. ಈ ವಿಸ್ತರಣೆ ಯುದ್ಧ ಸಂಬಂಧಿ ಸಲಕರಣೆಗಳ ಸರಬರಾಜಿಗಲ್ಲ. ಇದು ಅಂಚೆ ಸರಬರಾಜಿನ ಗುರಿ ಇಟ್ಟುಕೊಂಡು ವಿಸ್ತರಿಸಲ್ಪಟ್ಟ ರೈಲಾಗಿದೆ. ೧೯೩೮-೩೯ನೇ ಸಾಲಿನಲ್ಲಿ ಹೈಡ್ರೋ-ಎಲೆಕ್ಟ್ರಿಕ್ ಸ್ಕೀಂಗೆ ಅವಶ್ಯವಿರುವ ಸಾಮಾನುಗಳನ್ನು ಸರಬುರಾಜು ಮಾಡಲು ಸಾಗರ-ತಾಳಗುಪ್ಪ ರೈಲ್ವೆ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಯಿತು.

೧೯೪೦ರಲ್ಲಿ ಪ್ರಯಾಣಿಕರಿಗೆ ೧ ಆಣೆ, ಗೂಡ್ಸ್ ರೈಲಿನ ದರದಲ್ಲಿ ೨ ಆಣೆದರವನ್ನು ಹೆಚ್ಚಿಸಲಾಯಿತು. ಈ ದರ ಹೆಚ್ಚಳ ಯುದ್ಧ ಸಂಬಂಧೀ ಹೆಚ್ಚಳವಲ್ಲ. ದಾಖಲಾತಿಗಳ ಪ್ರಕಾರ (ಮೈಸೂರು ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ಸ್) ಈ ದರ ಹೆಚ್ಚಳ ಕಾರ್ಯ ನಿರ್ವಹಣಾ ವೆಚ್ಚದ ಹೆಚ್ಚಳವೇ ಹಿನ್ನೆಲೆಯಾಗಿತ್ತು.

೧೯೪೦ರಲ್ಲಿ ಮೈಸೂರು ದಸರಾ ಹಾಗೂ ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕದಲ್ಲಿ ಪಾಲ್ಗೊಳ್ಳುವವರಿಗೆ ರಿಟರ್ನ್ ಟಿಕೆಟ್ ವಿತರಿಸುವ ವ್ಯವಸ್ಥೆ ಜಾರಿಯಾಯಿತು.

೧೯೪೧-೪೨ರ ಸಾಲಿನಲ್ಲಿ ಮೈಸೂರು-ಅರಸೀಕೆರೆ, ಮೈಸೂರು-ಚಾಮರಾಜನಗರ, ಅರಸೀಕೆರೆ-ಹರಿಹರ ವಿಭಾಗಗಳ ರೈಲುಗಳ ಓಡಾಟವನ್ನು ನಿಲ್ಲಿಸಲಾಯಿತು. ಈ ಕ್ರಮವು ಕಲ್ಲಿದ್ದಲು ಬಳಕೆಯನ್ನು ಕಡಿಮೆ ಮಾಡುವ ಉದ್ದೇಶವಾಗಿತ್ತೆಂದು ೧೯೪೧-೪೨ರ ಮೈಸೂರು ಅಡ್ಮಿನಿಸ್ಟ್ರೇಟೀವ್ ವರದಿ ಸ್ಪಷ್ಟಪಡಿಸುತ್ತದೆ. ೧೯೪೬ರಲ್ಲಿ ಮೈಸೂರು ಸ್ಟೇಟ್ ರೈಲ್ವೆ ಎಂಪ್ಲಾಯೀಸ್ ಅಸೋಸಿಯೇಷನ್, (೧೯೪೨ರ ಲೇಬರ್ ಆಕ್ಟ್ ಪ್ರಕಾರ) ನೋಂದಾಯಿಸಲ್ಪಟ್ಟಿತು. ಕಾರ್ಮಿಕರ ಹಿತರಕ್ಷಣೆಗೆ ಅವಶ್ಯವಿರುವ ಕ್ರಮವನ್ನು ಸಂಸ್ಥಾನ ಕಲ್ಪಿಸಿದ್ದು ಪ್ರಮುಖ ಪ್ರಯತ್ನವೆನ್ನಲೇಬೇಕು. ಯುದ್ಧಾವಧಿಯಲ್ಲಿ ಇಂತಹ ಬೆಳವಣಿಗೆಯಿಂದ ಕಾರ್ಮಿಕರ ಶೋಷಣೆ ನಡೆದಿರುವುದಿಲ್ಲವೆನ್ನಬಹುದು.

೧೯೪೧ರ ಫೆಬ್ರವರಿ ತಿಂಗಳಿನಲ್ಲಿ ಇಟಲಿಯ ೨೨೦೦ ಯುದ್ಧ ಕೈದಿಗಳನ್ನು ವಿಶೇಷ ರೈಲಿನಲ್ಲಿ ಬೆಂಗಳೂರಿಗೆ ಕರೆತರಲಾದ ಮಾಹಿತಿ ದೊರೆಯುತ್ತದೆ. ಹೀಗೆ ರೈಲಿನಲ್ಲಿ ಬಂದ ಇಟಲಿಯ ಕೈದಿಗಳನ್ನು ಬೆಂಗಳೂರಿನಿಂದ ೨೦ ಮೈಲಿ ದೂರದಲ್ಲಿದ್ದ ಬೈರಮಂಗಲ ಕ್ಯಾಂಪಿಗೆ ಕಳುಹಿಸಲಾಯಿತು.

ಯುದ್ಧಾ ನಂತರವೂ ಸಂಸ್ಥಾನವು ಹಲವು ಕ್ರಮಗಳನ್ನು ಕೈಗೊಂಡಿತು. ಅದರಂತೆ ಮೈಸೂರು-ಚಾಮರಾಜನಗರ ಸೇರಿದಂತೆ ೫ ಮುಖ್ಯ ರೈಲುಗಳನ್ನು ಪುನರ್ ಆರಂಭಿಸಲು ಕ್ರಮ ಕೈಗೊಳ್ಳಲಾಯಿತು. ಯುದ್ಧ ಕಾಲದಲ್ಲಿ ರೈಲ್ವೆ

ಕಾರ್ಮಿಕರು ನೀಡಿದ ಶ್ರಮವನ್ನು ಗುರುತಿಸಲಾಯಿತು. ಅದರಂತೆ ಗೆಜೆಟೆಡ್‌ಯೇತರ ಅಧಿಕಾರಿಗಳಿಗೆ ಯುದ್ಧ ಮತ್ತು ವಿಜಯದ ಬೋನಸ್ ಆಗಿ ೨ ತಿಂಗಳ ವೇತನವನ್ನು ನೀಡಲಾಯಿತು. ಸಂಸ್ಥಾನದ ಯುದ್ಧ ಭಾಗಿ ಸೇವೆಯಲ್ಲಿದ್ದ ರೈಲ್ವೆ ಕಾರ್ಮಿಕರಿಗೆ ಇದೊಂದು ಉತ್ತಮ ಕೊಡುಗೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಅಲ್ಲದೆ ಇದೇ ಸಂದರ್ಭದಲ್ಲಿ ಡಿ.ಎ.ಯನ್ನು ಸಹ (ಯುದ್ಧಾವಧಿಯಲ್ಲಿ) ರೈಲ್ವೆ ಕಾರ್ಮಿಕರಿಗೆ ವರ್ಧಿಸುವ ಕ್ರಮದಂತೆ ವಿತರಿಸಲಾಗಿತ್ತು.

ಮಹಿಳಾ ಪ್ರಯಾಣಿಕರ ಸುರಕ್ಷತೆ ಬಗ್ಗೆಯೂ ಈ ಅವಧಿಯಲ್ಲಿ ಕ್ರಮ ಕೈಗೊಳ್ಳಲಾಗಿತ್ತು. ರೈಲು ಗಾಡಿಗಳ ಗಾರ್ಡ್‌ಗಳು ಹಾಗೂ ಟಿಕೇಟ್ ಪರಿವೀಕ್ಷಕರು ಮಹಿಳಾ ಪ್ರಯಾಣಿಕರನ್ನು ಗಮನಿಸಿ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಆದೇಶ ನೀಡಲಾಗಿತ್ತು. ಯುದ್ಧಾನಂತರ ಸಂಸ್ಥಾನದಲ್ಲಿ ೧೭ ಯೋಜನೆಗಳು ಜಾರಿಯಾದವು. ಈ ಯೋಜನೆಗಳನ್ನು ೫ ವರ್ಷಗಳಾವಧಿಯಲ್ಲಿ ೯೫೭ ಲಕ್ಷ ರೂಗಳನ್ನು ತೊಡಗಿಸಲು ಕ್ರಮ ಕೈಗೊಳ್ಳಲಾಯಿತು. ಅವುಗಳ ವ್ಯಾಪ್ತಿಯಲ್ಲಿ ೨೭ ರೈಲು ಇಂಜಿನ್‌ಗಳನ್ನು ಕೊಳ್ಳುವುದು, ೬೯೩ ವ್ಯಾಗನ್‌ಗಳನ್ನು, ಸ್ಲೀಪರ್‌ಗಳನ್ನೂ ಕೊಳ್ಳುವುದು ಮುಂತಾದ ಯೋಜನೆ ಇತ್ತು.

ಹೀಗೆ ಮೈಸೂರು ಸಂಸ್ಥಾನವು ದ್ವಿತೀಯ ಮಹಾಯುದ್ಧಾವಧಿಯಲ್ಲಿ, ಬ್ರಿಟೀಷರ ಪರವಾಗಿರುವುದರ ಜೊತೆಯಲ್ಲೇ, ರಾಜ್ಯದ ರೈಲ್ವೆಯ ಅಭಿವೃದ್ಧಿಗೆ ನಿರಂತರ ಪ್ರಯತ್ನ ಮಾಡಿರುವುದು ಮೆಚ್ಚಬಹುದಾದ ಪ್ರಯತ್ನ ಎನ್ನಬಹುದು.

ಆಕರ ಗ್ರಂಥಗಳು

೧. ಮೈಸೂರು ಸಂಸ್ಥಾನದ ಆಡಳಿತ ವರದಿಗಳು.
೧೯೩೯-೪೦, ೧೯೪೦-೪೧, ೧೯೪೧-೪೨, ೧೯೪೨-೪೩
೧೯೪೩-೪೪, ೧೯೪೪-೪೫, ೧೯೪೫-೪೬, ೧೯೪೬-೪೭

೨. ಸೂರ್ಯನಾಥ ಯು. ಕಾಮತ್ (ಸಂ) –ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೨.

೩. ಎಸ್. ಅನೀಸ್ ಸಿರಾಜ್ (ಮು.ಸಂ), ಡಾ. ಎನ್.ಎನ್. ಚಿಕ್ಕಮಾಧು, ಲೇಖಕರು, ಮೈಸೂರು ತಾಲೂಕು ಗ್ಯಾಸೆಟಿಯರ್.

೪. ಎಸ್. ಅನೀಸ್ ಸಿರಾಜ್ (ಮು.ಸಂ), ಡಾ. ಮಂಜುಳಾ ಹುಲ್ಲಹಳ್ಳಿ, ಲೇಖಕರು, ನಂಜನಗೂಡು ತಾಲೂಕು ಗ್ಯಾಸೆಟಿಯರ್.

೫. ಹಯವದನರಾವ್, ಮೈಸೂರು ಗ್ಯಾಸೆಟಿಯರ್.

೧೧೩

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುಲಕುಂದ ಗ್ರಾಮದ ಪಾತ್ರ

ಬಿ.ಎಸ್. ಭಜಂತ್ರಿ*

ಹುಲಕುಂದ ಈಗ ಬೆಳಗಾಂವ ಜಿಲ್ಲೆಯ ರಾಮದುರ್ಗ ತಾಲೂಕಿನ ಕಡೆಯ ಗ್ರಾಮ. ಇದು ಸ್ವಾತಂತ್ರ್ಯ ಪೂರ್ವದಲ್ಲಿ ಇದೇ ಜಿಲ್ಲೆಯ ಗೋಕಾಕ ತಾಲೂಕಿನ ಕಡೆಯ ಗ್ರಾಮವಾಗಿದೆ.

ಬೆಳಗಾವಿ ಪ್ರದೇಶವು ೧೭ನೇ ಶತಮಾನದ ಕೊನೆಯ ವೇಳೆಗೆ ಮರಾಠರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೬೭೬ರಲ್ಲಿ ಶಿವಾಜಿ ರಾಮದುರ್ಗ ಕೋಟೆಯನ್ನು ನಿರ್ಮಿಸುತ್ತಾನೆ. ಕ್ರಿ.ಶ. ೧೬೯೨ರಲ್ಲಿ ಔರಂಗಜೇಬನು ಈ ಕೋಟೆಯನ್ನು ವಶಪಡಿಸಿಕೊಂಡನು. ಕ್ರಿ.ಶ. ೧೭೦೭ರಲ್ಲಿ ಮರಾಠರು ಮತ್ತೆ ಮರಳಿ ಪಡೆಯುತ್ತಾರೆ. ಕ್ರಿ.ಶ. ೧೭೮೫ರಲ್ಲಿ ಟಿಪ್ಪುಸುಲ್ತಾನ ಆಡಳಿತಕ್ಕೆ ಒಳಪಡುವದು. ಕ್ರಿ.ಶ. ೧೮೧೦ರಲ್ಲಿ ಕೊಲ್ಲಾಪುರ ರಾಮರಾವ್ ದಾದಾಜಿ ಭಾವೆ ಮಗನಾದ ನಾರಾಯಣರಾವ ಎರಡನೆಯ ಬಾಜಿರಾಯನಿಂದ ೮೭,೩೮೫ ರೂ.ಗಳಿಗೆ ೪೧ ಹಳ್ಳಿಗಳನ್ನು ಒಳಗೊಂಡ ರಾಮದುರ್ಗ ರಾಜ್ಯವನ್ನು ಪಡೆದುಕೊಂಡನು. ಈಗ ಬೆಳಗಾಂವ ಜಿಲ್ಲೆಯಲ್ಲಿ ಎರಡು ಭಾಗಗಳಾಗುತ್ತವೆ. ಹುಲಕುಂದ ಗ್ರಾಮವು ೨ನೇ ಬಾಜಿರಾಯನ ಆಡಳಿತದಲ್ಲಿಯೇ ಉಳಿಯುತ್ತದೆ. ರಾಮದುರ್ಗ ರಾಜ್ಯವು ನಾರಾಯಣರಾವನ ಆಡಳಿತಕ್ಕೆ ಒಳಪಡುವದು.

೨ನೇ ಬಾಜಿರಾಯನು ತನ್ನ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳನ್ನು ಒಂದೊಂದು ದೇಶಗತಿಗಳನ್ನಾಗಿ ವಿಂಗಡಿಸಿ, ಒಬ್ಬೊಬ್ಬರ ಆಡಳಿತಗಾರರನ್ನು ನಿಯಮಿಸಿದನು. ಆ ದೇಶಗತಿಗಳಲ್ಲಿ ಈ ಭಾಗದಲ್ಲಿ ಕೌಜಲಗಿ, ಕುರಬೆಟ್, ಯರಗಟ್ಟಿ, ಸಾಲಹಳ್ಳಿ, ಮನ್ನಾಪೂರ ಮತ್ತು ಹೊಸಕೋಟೆ ಮುಂತಾದವು. ಈ ದೇಶಗತಿಗಳು ೬೦ರಿಂದ ೧೨೦ ಹಳ್ಳಿಗಳ ಆಡಳಿತವನ್ನು ಒಳಗೊಂಡಿದ್ದವು. ಅವುಗಳಲ್ಲಿ ಹುಲಕುಂದ ಗ್ರಾಮವು ಕೌಜಲಗಿ ದೇಶಗತಿಗೆ ಒಳಪಡುವದು. "ಕೌಜಲಗಿ ದೇಶಗತಿಯ ಆಡಳಿತದಲ್ಲಿ ಹಲವಾರು ಜನ ದೇಸಾಯಿಯವರು ಆಡಳಿತ ನಡೆಸಿದ್ದರು. ಅವರಲ್ಲಿ ಇತ್ತೀಚಿನವರಾದ ಹೆಬ್ಬುಲಿ, ಗಿರಿಯಪ್ಪ, ಭೀಮಪ್ಪ, ಅಂಬರೀಶವರ್ಮ ಮತ್ತು ರವಿವರ್ಮರು ಪ್ರಮುಖರು. ಈ ದೇಶಗತಿ ಪ್ರದೇಶವು ೬ ಹರದಾರಿ ಅಗಲ ೨೪ ಹರದಾರಿ ಉದ್ದವಾಗಿತ್ತು. ಈ ದೇಸಾಯಿಗಳ ಅಧಿಕಾರವು ೧೯೫೧ರವರೆಗೆ ಇತ್ತು. ಆದರೆ ಇದೇ ವೇಳೆಗೆ ಭಾರತ ಸ್ವಾತಂತ್ರ್ಯ ಪಡೆದು ರಾಜ್ಯ ವಿಂಗಡನೆ ಮಾಡಿದರು.[೧] ಅಂದಿನಿಂದ ಹುಲಕುಂದ ಸರಕಾರದ ಆಡಳಿತಕ್ಕೆ ಒಳಪಟ್ಟಿತು.

ಕ್ರಿ.ಶ. ೧೯೪೮ರಲ್ಲಿ ರಾಮದುರ್ಗ ರಾಜ್ಯವನ್ನು ವೆಂಕಟರಾವನ ಮಗ ರಾಮರಾವ ಬ್ರಿಟಿಷರ ಅನುಮತಿಯಿಲ್ಲದೆ ರಾಜ್ಯಭಾರ ಮಾಡುತ್ತಿದ್ದನು. ಇದೇ ಸಮಯದಲ್ಲಿ ಗೋಕಾಕ ಮತ್ತು ರಾಮದುರ್ಗ ತಾಲೂಕುಗಳನ್ನು ಮರುವಿಂಗಡಿಸಲಾಯಿತು. ಆಗ ಇವನ ಆಡಳಿತದಲ್ಲಿ ಇದ್ದ ೪೨ ಹಳ್ಳಿಗಳಲ್ಲಿ ೩೩ ಹಳ್ಳಿಗಳನ್ನು ಬೇರ್ಪಡಿಸಿ ರಾಮದುರ್ಗ ತಾಲೂಕನ್ನು ಮರು ವಿಂಗಡಿಸಲಾಯಿತು. ಈ ಪೂರ್ವದಲ್ಲಿ ಕೇವಲ ೨೬ ಹಳ್ಳಿಗಳಿಂದ ಕೂಡಿದ ರಾಮದುರ್ಗ ತಾಲೂಕಿಗೆ ಗೋಕಾಕ ತಾಲೂಕಿನ ತೊಂಡಿಕಟ್ಟಿ, ಬುದ್ನಿ, ಹೊಸಕೋಟೆ, ಗುತ್ತಿಗೊಳಿ, ಹುಲಕುಂದ, ಕಮಕೇರಿ ಮತ್ತು ಕುನ್ನಾಳ ಗ್ರಾಮಗಳನ್ನು ಸೇರಿಸಲಾಯಿತು.[೨] ಭೀಮಕವಿ ತಮ್ಮ ಒಂದು ಲಾವಣಿಯಲ್ಲಿ

> **ಗೋಕಾಕ ತಾಲೂಕಿನ ಹುಲಕುಂದ ಚಂದ**
> **ಲೋಕನಾಯಕ ಭೀಮೇಶನ ಕವಿಚಂದ**[೩]

ಈ ಹೇಳಿಕೆಯ ಕೂಡ ಹುಲಕುಂದ ಗೋಕಾಕ ತಾಲೂಕಿಗೆ ಒಳಪಟ್ಟಿತೆಂಬುದು ತಿಳಿಸುತ್ತದೆ. ಒಟ್ಟಿನಲ್ಲಿ ಕ್ರಿ.ಶ. ೧೯೫೦ರಿಂದ ಹುಲಕುಂದ ಗ್ರಾಮವು ರಾಮದುರ್ಗ ತಾಲೂಕಿಗೆ ಒಳಪಟ್ಟಿರುವದು.

ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಇಡೀ ಭಾರತ ದೇಶವನ್ನು ವ್ಯಾಪಿಸಿಕೊಂಡಿರುವಂತೆ ಅದು ಕುಂದರ ನಾಡಿನ ಕೊನೆಯ ಗ್ರಾಮವಾದ ಹುಲಕುಂದಕ್ಕೂ ತಲುಪಿತ್ತು. "ಈ ವೇಳೆಯಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರು, ದೇಶಭಕ್ತರು

* ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ–೫೮೦೦೦೧.

ದೇಶಕ್ಕಾಗಿ ತಮ್ಮ ಸೇವೆ ಸಲ್ಲಿಸಿರುತ್ತಾರೆ. ಕ್ರಿ.ಶ. ೧೯೦೦ರಿಂದಲೇ ಇಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಅನೇಕ ಘಟನೆಗಳು ನಡೆಯುತ್ತಿದ್ದವೆಂದು ಇಲ್ಲಿರುವ ಜನರು ಹೇಳುತ್ತಾರೆ. ಆದರೆ ನನಗೆ ದೊರೆತ ಮಾಹಿತಿಗಳ ಪ್ರಕಾರ ಕ್ರಿ.ಶ. ೧೯೨೦ರ ವೇಳೆಗೆ ಈ ಭಾಗದಲ್ಲಿ ದೊಂಡೋ ಎಲ್ಲೋ ಕುಲಕರ್ಣಿ ಹಾಗೂ ಗುರುನಾಥ ಕುಲಕರ್ಣಿ ಹಿರೇಕೊಪ್ಪದಲ್ಲಿ ಅಂದರೆ ಹುಲಕುಂದ ಸಮೀಪದ ಒಂದು ಹಳ್ಳಿ, ಇಲ್ಲಿ ಪಿಕೆಟಿಂಗ, ಶಿಂದಿ ಕುಡಿದವರ ಮೆರವಣಿಗೆ ಮತ್ತು ಪ್ರತಿ ದಿನ ಪ್ರಭಾತಪೇರಿ ನಡೆಸುತ್ತಿದ್ದರು."[೪] ಈ ಚಳುವಳಿಯಲ್ಲಿ ಹುಲಕುಂದದ ರಾಜೇಸಾಬ್ ಅತ್ತಾರ, ಹಣಮಂತಪ್ಪ ಬ. ಮಿರ್ಜಿ ಮತ್ತು ಕಲ್ಲಪ್ಪ ಸ. ಬೂದಿ, ಸೈದುಸಾಬ್. ಅ. ಅಲ್ಲಿಸಾಹೇಬ್ನವರ, ಸಂಗಯ್ಯ ಕಾ. ಸಂಬಾಳ, ಭೀಮಪ್ಪ ರಾ. ಶೇಷಣ್ಣನವರ, ರಾಮಪ್ಪ ಸಂ. ಬೆಟಗೇರಿ, ಬಸಪ್ಪ ಸಂ. ಬೆಟಗೇರಿ (ಭೀಮಕವಿ) ಮತ್ತು ರಾಮನಗೌಡ ಬ. ಪಾಟೀಲ ಭಾಗವಹಿಸಿದ್ದರು. ಜನವಿರೋಧಿ ಬ್ರಿಟೀಷರ ದಬ್ಬಾಳಿಕೆಯನ್ನು ವಿರೋಧಿಸುವಂತೆ ಜನರನ್ನು ಹುರಿದುಂಬಿಸುತ್ತಿದ್ದರು. ಇದೇ ವೇಳೆಗೆ ಇಲ್ಲಿ ಖಾದಿ ಉತ್ಪಾದನೆಯೂ ಪ್ರಾರಂಭವಾಗಿತ್ತು. ಕ್ರಿ.ಶ. ೧೯೩೦ರ ಸುಮಾರಿಗೆ ಸಿದ್ಧರಾಯ ಪೂಜೇರ ಹುಲಕುಂದಕ್ಕೆ ಬಂದು ಉಪ್ಪು ಮಾರಿದನು. ಆಗ ಈ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರಾದ ಹಣಮಪ್ಪ ಮ. ಮುಂಬರೆಡ್ಡಿ, ರಾಜೇಸಾಬ್ ಅತ್ತಾರ ಉಪ್ಪು ಖರೀದಿಸಿ ಕಾಯ್ದೆಭಂಗ ಮಾಡಿದರು. ಹೀಗೆ ಹುಲಕುಂದ ಗ್ರಾಮವು ಸಂಪೂರ್ಣವಾಗಿ ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾಯಿತು.

ಇದೇ ವೇಳೆಗೆ ಹುಲಕುಂದ ಸಮೀಪದ ತೊಂಡಿಕಟ್ಟ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಜನರು ಅಲ್ಲಿಯ ಅಜ್ಜಪ್ಪ ಬಟಕುರ್ಕಿ ಅವರ ಪ್ರೋತ್ಸಾಹದಿಂದ ಜನರ ತಂಡವೊಂದು ಕಹಳೆ, ಹಲಗೆ ಸಹಿತ ಪ್ರಭಾತಪೇರಿ ಹೊರಟು ಹುಲಕುಂದಕ್ಕೆ ಬಂದರು. ಅವರ ಜೊತೆಯಲ್ಲಿ ಹುಲಕುಂದದ ಹಣಮಪ್ಪ ಮುಂಬರೆಡ್ಡಿ, ರಾಜೇಸಾಬ ಅತ್ತಾರೆ ಹನಮಂತಪ್ಪ ಮಿರ್ಜಿ, ವೆಂಕಪ್ಪ ರಾ. ಪಾಟೀಲ, ಕಾತರಕಿ ಮತ್ತು ಕಲ್ಲಪ್ಪ ಬೂದಿ ಸೇರಿಕೊಂಡು ಭಾಗೋಜಿಕೊಪ್ಪದಲ್ಲಿ ಸಿಂದಿ ಸೆರೆ ಅಂಗಡಿಗಳಲ್ಲಿನ ಮಧ್ಯವನ್ನು ನಾಶ ಮಾಡಿ, ಚಾವಡಿ ಮತ್ತು ಶ್ರೀಗಂಧದ ಕಟ್ಟಿಗೆ ಸುಟ್ಟರು. ಚಿಪ್ಪಲಕಟ್ಟಿ ಶಾಲೆಗೆ ಬೆಂಕಿ ಹಚ್ಚಿ ಅಲ್ಲಿಂದ ಯಾಡವಾಡಕ್ಕೆ ಹೋಗಿ ಸರಕಾರಿ ಬಂಗ್ಲೆ ಸುಟ್ಟರು.

ಇತ್ತ ಹುಲಕುಂದ ಗ್ರಾಮದಲ್ಲಿಯೂ ಕೂಡ ಪ್ರತಿದಿನ ಪೋಸ್ಟ್ ಪೆಟ್ಟಿಗೆ ತಂದಿಟ್ಟಾಗ ಅದು ಮಾಯವಾಗುತ್ತಿತ್ತು (ಬಾವಿ ಕಾಣುತ್ತಿತ್ತು) ಈ ಕೆಲಸ ಮಾಡಿದ ರಾಮಚಂದ್ರ ಸಿಂಪಿ ಡೆಟಿನ್ಯೂ (ವಿಚಾರಣಾ ಕೈದಿ) ಆಗಿ ೧೧ ತಿಂಗಳು ಜೈಲಿನಲ್ಲಿ ಇರಬೇಕಾಯಿತು. ತಮ್ಮಣ್ಣ ಯ. ಬಾಗಾರ ಹುಲಕುಂದ ಶಾಲಾ ದಫ್ತರ ಸುಟ್ಟರು. ಈ ಎಲ್ಲ ಕಾರ್ಯಗಳು ಅಣುಗುರೂಜಿ ಜಿದರಿ ಅವರ ಸಲಹೆಯಂತೆ ನಡೆಯುತ್ತಿದ್ದವು. ಈ ಗ್ರಾಮದ ಕಾರ್ಯಕರ್ತರು ಕ್ರಿ.ಶ. ೧೯೪೨ರ ಆಗಸ್ಟ್‌ನಲ್ಲಿ ಹುಲಕುಂದ ಸಮೀಪದ ಕುನ್ನಾಳ ಗ್ರಾಮದಲ್ಲಿ ಬೇಕಾಯ್ದೇಶೀರ ಸಭೆ ಮಾಡಿದರು. ಇದರ ನಿಮಿತ್ಯ, ಅವರ ಮೇಲೆ 'ವಾರಂಟ್' ಹುಟ್ಟಿತು. ವಾರಂಟ್ ಇದ್ದವರ ಬಂಧನಕ್ಕೆಂದು ಪೊಲೀಸರು ಬರುತ್ತಾರೆ. ಆಗ ಕಾರ್ಯಕರ್ತರ ಸುಳಿವು ದೊರೆಯದ್ದರಿಂದ ಪೊಲೀಸರು ಊರ ಜನರಿಗೆ ನಾನಾ ರೀತಿ ಹಿಂಸೆ ಕೊಡಲಾರಂಭಿಸುತ್ತಾರೆ. ಇದನ್ನು ಸಹಿಸದ ಕಾರ್ಯಕರ್ತರು ಊರಿನ ಹಿರಿಯರ ಸಲಹೆಯಂತೆ ಪೊಲೀಸರಿಗೆ ಶರಣಾದರು. ಮುಂದೆ ಇವರ ಮೇಲೆ ಖಟ್ಲೆ ನಡೆದು ಶಿಕ್ಷೆ ಆಯಿತು.

ವೈಯಕ್ತಿಕ ಸತ್ಯಾಗ್ರಹದಲ್ಲಿ ಊರ ರಾಜೇಸಾಹೇಬ ಅತ್ತಾರ ಅವರಿಗೆ ಆರು ತಿಂಗಳು. ಉಳಿದ ಹಣಮಂತಪ್ಪ ಬ. ಮಿರ್ಜಿ, ಕಲ್ಲಪ್ಪ ಸ. ಬೂದಿ, ಸೈದುಸಾಬ್. ಅ. ಅಲ್ಲಿಸಾಹೇಬ್ನವರ, ಸಂಗಯ್ಯ ಕಾ. ಸಂಬಾಳ, ಭೀಮಪ್ಪ ರಾ. ಶೇಷಣ್ಣವರ, ರಾಮಪ್ಪ ಸಂ. ಬೆಟಗೇರಿ, ಬಸಪ್ಪ ಸಂ. ಬೆಟಗೇರಿ (ಭೀಮಕವಿ) ಮತ್ತು ರಾಮನಗೌಡ ಬ. ಪಾಟೀಲ ಈ ಎಂಟೂ ಜನರಿಗೆ ತಲಾ ನಾಲ್ಕು ನಾಲ್ಕು ತಿಂಗಳು ಶಿಕ್ಷೆ ಆಯಿತು.[೫]

ಒಂದು ಸಲ "ಕಾರ್ಯಕರ್ತರು ಜೈಲಿನಲ್ಲಿ ಇರುವಾಗ ಮಾಮಲೇದಾರರು ವಾರಲೋನ್ ಸಂಗ್ರಹ ಮತ್ತು ಸೈನ್ಯಭರ್ತಿಗಾಗಿ ಊರಿಗೆ ಬಂದರು. ಅವರಿಗೆ ಯಾವುದೇ ಸಹಕಾರ ಸಿಗದೆ ಸಭೆ ನಡೆಸಲು ಅಸಮರ್ಥರಾದರು. ಹುಲಕುಂದ ಶಾಲಾ ಮಾಸ್ತರರಾದ ಗೊ.ವೆ. ಪಾಟೀಲರ ಪ್ರಯತ್ನದಿಂದ ಆದ ಈ ಅಸಹಕಾರದಿಂದ ಬಂದವರಿಗೆ ನೀರು ಕೂಡ ಸಿಗದೇ ಹೋಯಿತು.[೬]

ಹೀಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದು ಕಡೆಯಿಂದ ಸ್ವಾತಂತ್ರ್ಯ ಹೋರಾಟಗಾರರು ಧುಮುಕಿದರೆ ಮತ್ತೊಂದು ಕಡೆ ಲಾವಣಿಕಾರರು ಹಾಗೂ ಲಾವಣಿ ಹಾಡುಗಾರರು ಧುಮುಕುವರು. ಹುಲಕುಂದ ಒಬ್ಬ ಶಾಲಾ ಶಿಕ್ಷಕರಿಂದ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿ ಪಡೆದ ಹಣಮಂತಪ್ಪ ಬ. ಮಿರ್ಜಿ, ಕಲ್ಲಪ್ಪ ಸ. ಬೂದಿ ಎಂಬ ತರುಣರು ಗ್ರಾಮೀಣ ಜನತೆಯಲ್ಲಿ ರಾಷ್ಟ್ರಪ್ರೇಮ ಮೂಡಿಸಲು ಹಾಗೂ ಬ್ರಿಟೀಷರ ದಬ್ಬಾಳಿಕೆಯನ್ನು ವಿರೋಧಿಸುವಂತೆ ಜನತೆಯಲ್ಲಿ

ಶಕ್ತಿ ತುಂಬಲು ಮುಂದಾದರು. ಆಗ ಅಶಿಕ್ಷಿತ ಜನತೆಗೆ ತಿಳಿಯುವ ಅವರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಮಾಡುವ ಮತ್ತು ಸಮಾಜದ ಸನ್ನಿವೇಶಕ್ಕೆ ತಕ್ಕಂತೆ ಪದಗಳನ್ನು ರಚಿಸುವಂತಹ ಸಹಜ ಕವಿತ್ವ ಶಕ್ತಿ ಪಡೆದ ಅದೇ ಊರಿನ ಭೀಮಕವಿಯತ್ತ ಅವರ ಗಮನ ಹರಿಯಿತು.

ಈ ವೇಳೆಗಾಗಲೇ ಭೀಮಕವಿ ಬೆಳಗಾಂವ ಜಿಲ್ಲೆಯ ಸವದತ್ತಿ ತಾಲೂಕಿನ ಮುರಗೋಡ ಹೊಸೂರಿನಲ್ಲಿದ್ದರು. ಅಲ್ಲಿ ಗಾಂಧೀಜಿ ಹಾಗೂ ವಿನೋಬಾಜಿಯವರ ಪರಮ ಶಿಷ್ಯರಾದ ಶ್ರೀ ಶಿದ್ರಾಮ ಗುರೂಜಿ ಹರಕುಣಿ ಆಶ್ರಮ ಕಟ್ಟಿಕೊಂಡು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಭೀಮಕವಿ ಕೂಡ ಇಲ್ಲಿಯೇ ಇದ್ದು ೧೯೩೦ರಲ್ಲಿ ಅದೇ ಗ್ರಾಮದ ಮಲ್ಲಪ್ಪ ಮೂಗಬಸು ಮತ್ತು ಸೋಮಲಿಂಗಪ್ಪ ದೊಡವಾಡ ಸಂಗಡ ಸೇರಿ "ಗಾಂಧೀಗೀತ ಮೇಳ"ಕ್ಕೆ ರಾಷ್ಟ್ರೀಯತೆಯ ಶಿಕ್ಷಣ ಕೊಟ್ಟು ಮೇಳ ತಯಾರಿಸಿದರು. ಭೀಮಕವಿ ಮೂಲತಃ ಸ್ವಾತಂತ್ರ್ಯ ಹೋರಾಟಗಾರರು. ೧೯೪೨ರಲ್ಲಿ ಮಹಾತ್ಮ ಗಾಂಧೀಜಿಯವರ ಸಂದೇಶದಂತೆ ರಾಷ್ಟ್ರೀಯತೆಗೆ ಸಂಬಂಧಿಸಿದ ಪದಗಳನ್ನು ರಚಿಸಿ, ಹಾಡುವದರ ಮೂಲಕ ಅನೇಕ ವೈಯಕ್ತಿಕ ಸತ್ಯಾಗ್ರಹಿಗಳನ್ನು ಜೈಲಿಗೆ ಕಳಿಸಿ ಕೊನೆಗೆ ತಾವು ಮುರಗೋಡ ಹೊಸೂರದಲ್ಲಿ ಸತ್ಯಾಗ್ರಹ ಮಾಡಿ ನಾಲ್ಕು ತಿಂಗಳ ಕಾಲ ಕಾರಾಗೃಹ ವಾಸ ಮಾಡಿ ಬಂದರು.

ಕ್ರಿ.ಶ. ೧೯೩೦ರಲ್ಲಿ ಹಣಮಂತಪ್ಪ ಮಿರ್ಜಿ ಮತ್ತು ಕಲ್ಲಪ್ಪ ಬೂದಿ ತೊಂಡಿಕಟ್ಟಿ ಅಜ್ಜಪ್ಪನವರ ಜೊತೆಯಲ್ಲಿ ಕುಮರಿ ಆಶ್ರಮಕ್ಕೆ ಹೋಗಿ ಗಾಂಧೀಜಿಯವರ ದರ್ಶನ ಪಡೆದು ಖಾದಿ ಧರಿಸುವ ವ್ರತ ಹಿಡಿದರು. ನಂತರ ಊರಿಗೆ ಬಂದು ಊರಲ್ಲಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರಿಗೆ ಸ್ವಾತಂತ್ರ್ಯದ ಕಲ್ಪನೆಯೇ ಗೊತ್ತಿಲ್ಲವೆಂಬುದನ್ನು ಅರಿತು ಅವರಲ್ಲಿ ರಾಷ್ಟ್ರೀಯತೆಯನ್ನು ತುಂಬುವ ಉದ್ದೇಶದಿಂದ ಮುರಗೋಡ ಹೊಸೂರಿಗೆ ಹೋಗಿ ಭೀಮಕವಿಯನ್ನು ಕರೆದುಕೊಂಡು ಬಂದರು. ತಮ್ಮ ಜೊತೆಯಲ್ಲಿ ಮತ್ತೊಬ್ಬ ಮಿತ್ರರರಾದ ಸಂಗಯ್ಯ ಕಾ. ಸಂಬಾಳ ಕರೆದುಕೊಂಡು ನಾಲ್ಕು ಜನ ಸೇರಿ "ಹುಲಕುಂದ ಗೆಳೆಯರ ಬಳಗ" ಕಟ್ಟಿ "ಆಝಾದ ಗೀಗೀ ಮೇಳ" ಹುಟ್ಟು ಹಾಕಿದರು. ಈ ಮೇಳದಲ್ಲಿ ತಾವೇ ಸ್ವತಃ ಸ್ವಾತಂತ್ರ್ಯದ ವಿಷಯಕ್ಕೆ ಸಂಬಂಧಿಸಿದ ಲಾವಣಿ ಮತ್ತು ಗೀ ಗೀ ಪದಗಳನ್ನು ಕಟ್ಟಿ ಹಾಡುವದರ ಮೂಲಕ ಹಳ್ಳಿ ಹಳ್ಳಿಗೆ ಹೋಗಿ ಸ್ವಾತಂತ್ರ್ಯದ ಕಿಡಿ ಹೊತ್ತಿಸಿದರು. ಅಕ್ಷರದ ಗಂಧವೇ ಗೊತ್ತಿರದ ಅಂದಿನ ಎಷ್ಟೋ ಜನರು ಇವರ ಹಾಡುಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಈ ಮೇಳದಡಿಯಲ್ಲಿ ಗೆಳೆಯರ ಬಳಗ ಕೇವಲ ಬೆಳಗಾಂವ ಜಿಲ್ಲೆಯಲ್ಲಿ ಕರ್ನಾಟಕದ ಪ್ರತಿಯೊಂದು ಜಿಲ್ಲೆಗಳಲ್ಲಿ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ದಿಲ್ಲಿಯವರೆಗೂ ಹೋಗಿ ಕಾರ್ಯಕ್ರಮ ನೀಡಿ ಬಂದಿರುತ್ತಾರೆ. "ಮಾಡಿ ಇಲ್ಲವೆ ಮಡಿಯಿರಿ" ಆಂದೋಲನದಲ್ಲಿ ಭಾಗವಹಿಸಿ ಅಜ್ಞಾತವಾಸದಲ್ಲಿ ಇದ್ದು ಜಮಖಂಡಿ ತಾಲೂಕಿನ ತೇರದಾಳದಲ್ಲಿ ಬಂಧಿಸಲ್ಪಟ್ಟು ಒಂಬತ್ತು ತಿಂಗಳು ಕಾರಾಗೃಹದಲ್ಲಿದ್ದರು.[೭]

ಈ ಕಾರಾಗೃಹದಿಂದ ಮುಕ್ತರಾಗಿ ಭೀಮಕವಿ ಗೆಳೆಯರ ಗುಂಪಿನೊಡನೆ ವಿಜಾಪುರ ಜಿಲ್ಲೆಯಲ್ಲಿ ಹಲವಾರು ಸಾರ್ವಜನಿಕ ಸಭೆಗಳನ್ನು ನಡೆಸಿ ಬಂದರು. ಇದೇ ವೇಳೆಗೆ ಚಿತ್ರದುರ್ಗ ಮತ್ತು ನಳದುರ್ಗ ಪ್ರದೇಶದಲ್ಲಿ "ರಜಕಾರ ಹಾವಳಿ" ಪ್ರಾರಂಭವಾಗಿತ್ತು. ಇದು ಹಿಂದೂ-ಮುಸ್ಲಿಂರಲ್ಲಿ ಮತಾಭಿಮನದ ಹಾವಳಿಯಾಗಿತ್ತು. ಆ ಕಾರಣ ಅನೇಕ ಕಗ್ಗೊಲೆಗಳು ನಡೆಯುತ್ತಿದ್ದವು. ಆ ಪ್ರದೇಶದಲ್ಲಿ ಶಾಂತಿ ಕಾಪಾಡಲು ಇವರನ್ನು ಕಳುಹಿಸಲಾಯಿತು. ಇವರು ಅಲ್ಲಿ ಯಾವ ಧರ್ಮಕ್ಕೂ ಕಟ್ಟುಬೀಳದೆ ಅಲ್ಲಿಯ ಜನರಲ್ಲಿ ರಾಷ್ಟ್ರಪ್ರೇಮ ಮತ್ತು ಸ್ವಾತಂತ್ರ್ಯದ ಮಹತ್ವ ಮೂಡಿಸುವಲ್ಲಿ ಯಶಸ್ವಿಯಾದರು. ಹೀಗೆ ಆ ಪ್ರದೇಶದಲ್ಲಿ ಮತಾಭಿಮಾನ ತೊಡೆದು ಹಾಕಿ ಶಾಂತಿ ನೆಲೆಸುವಂತೆ ಮಾಡಿದರು. ಇವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿ ಮಹಾರಾಷ್ಟ್ರದ ಅಕ್ಕಲಕೋಟ, ದುದುಣಿ, ಜತ್, ಸಲಗರ ಮುಂತಾದವುಗಳು ಕರ್ನಾಟಕಕ್ಕೆ ಸೇರಬೇಕೆಂದು ಪ್ರಚಾರ ಮಾಡಿ ಬಂದರು.

ಕ್ರಿ.ಶ. ೧೯೫೭ ಮತ್ತು ಮೇ ೨೪ರಂದು ಪೂಜ್ಯ ವಿನೋಬಾಜಿಯವರು ಕರ್ನಾಟಕಕ್ಕೆ ಬರುವ ಪೂರ್ವದಲ್ಲಿ ಭೂದಾನ ಪ್ರಚಾರ ಕಾರ್ಯ ನಡೆಯುತ್ತಿದ್ದವು. ಆ ಕಾರ್ಯಕ್ರಮದ ಜಾಹೀರ ಸಭೆಯ ಮುಂಚಿತ ಪ್ರಾಚಾರಾರ್ತವಾಗಿ ಇವರ ಗೀಗೀ ಮೇಳದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಸಂತ ವಿನೋಬಾಜಿಯವರು ಕರ್ನಾಟಕಕ್ಕೆ ಬರುವವರೆಗೂ ಈ ಪ್ರಚಾರ ಕಾರ್ಯ ನಡೆಯಿತು. ಕ್ರಿ.ಶ. ೧೯೫೭ ಸೆಪ್ಟೆಂಬರ್ ೨೧ ಮತ್ತು ೨೨ರಂದು ಮೈಸೂರು ಸಮೀಪ ಇಲವಾಲದಲ್ಲಿ ನಡೆದ ಐತಿಹಾಸಿಕ ಗ್ರಾಮದಾನ ಸಮ್ಮೇಳನದಲ್ಲಿ ಸಂತ ವಿನೋಬಾಜಿ ಪಾಲ್ಗೊಂಡರು. ಈ ಸಮ್ಮೇಳನದಲ್ಲಿ ಭೀಮಕವಿಯೂ ಭಾಗವಹಿಸಿ ಹಾಡುವವರ ಮೂಲಕ ಕೂಡಿದ ಜನರನ್ನು ಮಂತ್ರಮುಗ್ಧರನ್ನಾಗಿಸಿದರು. ಇವರ ಹಾಡುಗಳಿಗೆ ಮಾರು ಹೋದ ವಿನೋಬಾಜಿಯವರು ಭೀಮಕವಿಯನ್ನು ತಮ್ಮ ಸಂಗಡ ಕರೆದುಕೊಂಡು ನಡೆದರು. ಮತ್ತೆ ಅದೇ ಮೈಸೂರಿನಲ್ಲಿ

ನಡೆದ "ಅಖಿಲ ಭಾರತ ಭೂದಾನ ಕಾರ್ಯಕರ್ತರ ಸಭೆಯಲ್ಲಿಯೂ ಭಾಗವಹಿಸಿದ್ದರು. ಹೀಗೆ ಕರ್ನಾಟಕದಲ್ಲಿ ಅಷ್ಟೇ ಅಲ್ಲ ಭಾರತದ ಹಲವು ಕಡೆಗಳಲ್ಲಿ ಭಾಗವಹಿಸಿ ತಮ್ಮ ಲಾವಣಿಗಳ ಮೂಲಕ ಜನರ ಮನಸ್ಸನ್ನು ಸೆರೆಹಿಡಿದು ಅವರನ್ನು ಭೂದಾನದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಕೊನೆಯಲ್ಲಿ ಕ್ರಿ.ಶ. ೧೯೬೮ರ ಸುಮಾರಿಗೆ ಭೀಮಕವಿ ತಾವು ದೈಹಿಕವಾಗಿ ಅನಾರೋಗ್ಯದಲ್ಲಿದ್ದರೂ ಶ್ರೀ ವಿನೋಬಾಜಿಯವರ ಜೊತೆಯಲ್ಲಿ ಹೋಗಿ ದೆಹಲಿ ಸಮೀಪ ನಡೆದ ಒಂದು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಈ ಹುಲಕುಂದದಲ್ಲಿ ಆಗಿ ಹೋದ ಇನ್ನೋರ್ವ ಲಾವಣಿಕಾರ ಶಿವಲಿಂಗಕವಿ ಕೂಡ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಲ್ಲಿಸಿದ ಸೇವೆ ಅಪ್ರತಿಮವಾದುದು. ಈ ಕವಿ ಹೆಚ್ಚಾಗಿ ಸವದತ್ತಿ ತಾಲೂಕು ಚಿಕ್ಕುಂಬಿಯಲ್ಲಿ ಇರುತ್ತಿದ್ದರು. ಕ್ರಿ.ಶ. ೧೯೪೨ರಲ್ಲಿ ಅವರು ಅಲ್ಲಿಂದಲೇ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಭೂಗತವಾಗಿದ್ದುಕೊಂಡು ನಡೆಸುತ್ತಿದ್ದರು. ಇದೇ ವೇಳೆಯಲ್ಲಿ ಸಂಪಗಾಂವಿ ವಾಲಿ ಚನ್ನಪ್ಪನವರು ಪೊಲೀಸರಿಂದ ತಪ್ಪಿಸಿಕೊಂಡು ಸ್ತ್ರೀ ವೇಷದಲ್ಲಿ ಬಂದು ಇವರ ಮಠದಲ್ಲಿ ವಾಸವಾಗಿದ್ದರು. ಅವರ ಜೊತೆಯಲ್ಲಿ ಈ ಭಾಗದ ಸ್ವಾತಂತ್ರ್ಯ ಯೋಧರಾದ ಹೆಬ್ಬಾಳ ಹನುಮಂತಗೌಡ, ಕಿತ್ತೂರ ಬಸಪ್ಪ ಮತ್ತು ಶಿವಲಿಂಗಕವಿಗಳ ಲಾವಣಿ ಮೇಳದವರಾದ ಹಂಚಿನಾಳ ಸೈದು, ಗಂಗವ್ವ ಮಣಿಕಟ್ಟಿ, ಕಲ್ಲಪ್ಪ ಹಿರೇಕುಂಬಿ, ಅನ್ನಪ್ಪ ಸೌಂದತ್ತಿ, ಗಂಗವ್ವ ಎಡ್ರಾಂವಿ, ಚನ್ನಪ್ಪ ಉಗರಗೋಳ ಮುಂತಾದವರು ಮಠದಲ್ಲಿಯೇ ಇರುತ್ತಿದ್ದರು. ಇವರೆಲ್ಲ ಮಠದಿಂದಲೇ ಸ್ವಾತಂತ್ರ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರು.

ಈ ಸುದ್ದಿ ಕೆಲವು ದುಷ್ಟ ಜನರಿಂದ ಸವದತ್ತಿ ಪಿಎಸ್ಐ ವಾಂಡಕರ್ ಅವರಿಗೆ ಗೊತ್ತಾಗುತ್ತದೆ. ಈ ಹತ್ತು ಜನರ ಮೇಲೆ ವಾರಂಟ್ ತೆಗೆದುಕೊಂಡು ಸೈನ್ಯ ಸಮೇತ ಚಿಕ್ಕುಂಬಿಗೆ ಬಂದರು. ಇಡೀ ಸೈನ್ಯವನ್ನು ಚಿಕ್ಕುಂಬಿ ಸುತ್ತಲು ನಿಲ್ಲಿಸುತ್ತಾನೆ. ತಾನು ಮಾತ್ರ ಕೆಲವು ಸೈನಿಕರನ್ನು ಕರೆದುಕೊಂಡು ಶಿವಲಿಂಗ ಕವಿಗಳಿದ್ದ ಮಠಕ್ಕೆ ಬರುತ್ತಾನೆ. ಬಂದ ಪಿಎಸ್ಐ ನೇರವಾಗಿ ಕವಿಗಳನ್ನೇ "ಶಿವಲಿಂಗಕವಿ"ಗಳೆಲ್ಲಿ ಎಂದು ಕೇಳುತ್ತಾನೆ. ಆಗ ಕವಿಗಳು ಅವನನ್ನು ನೋಡಿ 'ಏನಾಗಬೇಕು ? ನಾನೇ ಆ ಶಿವಲಿಂಗಕವಿ' ಎಂದು ಹೇಳುತ್ತಾರೆ. ಆಗ ಇವರ ಮುಖ ನೋಡಿದ ತಕ್ಷಣ ಪಿಎಸ್ಐ ಪೌರುಷವೆಲ್ಲ ಇಳಿದು ಹೋಗುತ್ತದೆ. ಆ ಕ್ಷಣದಲ್ಲಿಯೇ ಶಿವಲಿಂಗಕವಿ ಅವನ ಮೇಲೆ ಒಂದು ಲಾವಣಿ ಪದ್ಯ ರಚಿಸಿ ಮೇಳದವರಿಂದ ಹಾಡಿಸುತ್ತಾರೆ. ಆ ಪದ ಕೇಳಿದ ವಾಂಡಕರ್ ಶಿವಲಿಂಗ ಕವಿಗಳಿಗೆ ಶರಣಾಗಿ ೧೦೧ ರೂ. ದಕ್ಷಿಣೆಯಿಟ್ಟು ತಪ್ಪಾಯಿತೆಂದು ಕ್ಷಮೆ ಕೇಳಿ ಸೈನ್ಯ ಸಮೇತ ಮರಳಿ ಹೋಗುತ್ತಾನೆ. ಅಂತಹ ಅದ್ಭುತವಾದ ಕವಿತ್ವಶಕ್ತಿ ಅವರದಾಗಿತ್ತು.

ಈ ರೀತಿ ಹುಲಕುಂದ ಗ್ರಾಮದಲ್ಲಿ ಒಂದು ಕಡೆಯಿಂದ ಲಾವಣಿಕಾರರು ಹಾಗೂ ಲಾವಣಿ ಹಾಡುಗಾರರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡರೆ ಇನ್ನೊಂದು ಕಡೆಯಿಂದ ಹಲವಾರು ಸ್ವಾತಂತ್ರ್ಯ ಯೋಧರು ಭಾಗವಹಿಸಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ವದ ಪಾತ್ರ ವಹಿಸಿ ಅಗಾಧ ಸೇವೆ ಸಲ್ಲಿಸಿದ್ದಾರೆ. ಅದೇ ವೇಳೆಗೆ ತೊಂಡಿಕಟ್ಟಿ ಅಜ್ಜಪ್ಪ ಬಟಕುರ್ಕಿ ಅವರೊಡನೆ ಸಹಕರಿಸಿ ಆ ಭಾಗದಿಂದ ಒಂದು ಲಕ್ಷ ಹಣವನ್ನು ಗಾಂಧೀ ಸ್ಮಾರಕ ನಿಧಿಗೆ ಸಂಗ್ರಹಿಸಿ ಕಳುಹಿಸಲಾಯಿತು. ಹೀಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ "ಹುಲಕುಂದ" ಗ್ರಾಮದ ಪಾತ್ರ ಅಮೋಘವಾಗಿದೆ.

ಅಡಿಟಿಪ್ಪಣಿಗಳು

೧. ಅಡಿವೆಪ್ಪ ಅ. ಹವಾಲ್ದಾರ, ಕೌಜಲಗಿ ಲ್ಲೇಖ ಡಾ. ಬಿ.ಎಸ್. ಭಜಂತ್ರಿ ಹುಲಕುಂದದ ಲಾವಣಿ ಸಂಪ್ರದಾಯ, ಪು. ೬೪.

೨. (ಸಂ) ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಪತ್ರ, ಬೆಳಗಾಂವ ಜಿಲ್ಲೆ, ಪು. ೭೦.

೩. ತಲ್ಲೂರು ರಾಯನಗೌಡರು ಪಾಟೀಲ (ಸಂ) "ಏನೇನು ಚೆಂದ" ಜನಪದ ರಾಷ್ಟ್ರೀಯ ಗೀತೆಗಳು ಪು. ೫೯.

೪. (ಸಂ) ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಪು. ೧೧೧೨.

೫. (ಸಂ) ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಪು. ೧೧೧೯.

೬ (ಸಂ) ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಪು. ೧೧೧೧.

೭. ಕವಿಯ ಸ್ವಹಸ್ತಪ್ರತಿಯಿಂದ ಉಲ್ಲೇಖ ಡಾ. ಬಿ.ಎಸ್. ಭಜಂತ್ರಿ ಹುಲಕುಂದದ ಲಾವಣಿ ಸಂಪ್ರದಾಯ ಪು. ೬೪.

ಆಕರ ಗ್ರಂಥಗಳು

೧. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಪತ್ರ, ಬೆಳಗಾಂವ ಜಿಲ್ಲೆ.

೨. ತಲ್ಲೂರು ರಾಯನಗೌಡರು ಪಾಟೀಲ, (ಸಂ) ಜನಪದ ರಾಷ್ಟ್ರೀಯ ಗೀತೆಗಳು, ಜನತಾ ಸೇವಕ ಸಮಾಜ ಬೈಲಹೊಂಗಲ, ೧೯೪೭.

೩. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗೀತಾ ಬುಕ್ ಹೌಸ್, ಮೈಸೂರು, ೧೯೭೪.

೪. ಡಾ. ಎಂ.ಎಸ್. ಸುಂಕಾಪುರ, ಜಾನಪದ ಸಾಹಿತ್ಯ ದರ್ಶನ ಭಾಗ-೫, ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ, ೧೯೮೦.

೫. ಡಾ. ಬಸವರಾಜ ಮಲಶೆಟ್ಟಿ, ವೀರಶೈವ ಪುಣ್ಯ ಪುರುಷರು ಸಂ. ೧, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ-ಗದಗ ೧೯೮೩.

೬ ಬಿ.ಎಸ್. ಭಜಂತ್ರಿ, ಹುಲಕುಂದ ಭೀಮಕವಿ: ಒಂದು ಅಧ್ಯಯನ, (ಎಂ. ಫಿಲ್ ಕಿರು ಪ್ರಬಂಧ), ವರ್ಷಾ ಪಬ್ಲಿಕೇಷನ್, ಧಾರವಾಡ, ೨೦೦೯.

೭. ಡಾ. ಬಿ.ಎಸ್. ಭಜಂತ್ರಿ, ಹುಲಕುಂದದ ಲಾವಣಿ ಸಂಪ್ರದಾಯ (ಪಿ.ಎಚ್.ಡಿ. ಮಹಾಪ್ರಬಂಧ), ಚೈತನ್ಯ ಪ್ರಕಾಶನ, ಪಂಚಗಾಂವ, ೨೦೦೨.

೧೧೪

ಆರ್.ಎನ್. ಡಾಬ್ಸ್‌ರವರ ಜೀವನ ಚರಿತ್ರೆಯಲ್ಲಿ ತುಮಕೂರು-ಚಿತ್ರದುರ್ಗ ಜಿಲ್ಲೆ ಇತಿಹಾಸ

ಬಿ. ನಂಜುಂಡಸ್ವಾಮಿ*

ಕರ್ನಾಟಕ ರಾಜ್ಯದ ಇತಿಹಾಸವನ್ನು ತಿಳಿಸುವಂತಹ ಕೆಲವು ಗ್ರಂಥಗಳನ್ನು ಜಿಲ್ಲಾಧಿಕಾರಿಗಳು, ಡಿವಿಷನ್ ಕಮೀಷನರ್‌ಗಳು ಬರೆದಿರುವಂತಹದು ಅಂತಹ ಒಂದು ಮಹತ್ತ್ವವಾದ ಪುಸ್ತಕ REMINISENCES OF LIFE IN MYSORE, SOUTH AFRICA AND BURMAH BY MAJOR - GENERAL R.S. DOBBS ವನ್ನು ಬರೆದಿದ್ದು. ಈ ಪುಸ್ತಕವನ್ನು Google ನಿಂದ Down Load ಮಾಡಿ ಅಧ್ಯಯನ ಮಾಡಲಾಯಿತು. ಈ ಪುಸ್ತಕದಲ್ಲಿ ಮೊದಲನೇ ಭಾಗ ಮೈಸೂರು ವಿಭಾಗ, ನಮಗೆ ಮುಖ್ಯವಾಗಿ ಬೇಕಾಗಿರುವುದು ಇದೇ ವಿಭಾಗ. ಇದರಲ್ಲಿ ಹದಿನಾಲ್ಕು ಅಧ್ಯಾಯಗಳಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ತುಮಕೂರು ಭಾಗದ ಬಗ್ಗೆ ಇಷ್ಟು ವಿವರ ಲಭ್ಯವಿದೆ.

ಟಿಪ್ಪುಸುಲ್ತಾನರು ೧೭೯೯ರಲ್ಲಿ ಮರಣಾನಂತರ ಮೈಸೂರು ದೇಶವು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಬಂದ ಮೇಲೆ, ತುಮಕೂರು ಪ್ರಾಂತವು ಮಧುಗಿರಿ ಪೌಜುದಾರಿಗೆ ಸೇರಿತು. ೧೮೩೧ರಲ್ಲಿ ಕಂಪನಿಯವರು ರಾಜ್ಯವನ್ನು ವಹಿಸಿಕೊಂಡಾಗ, ಮೈಸೂರು ದೇಶವು ಎಂಟು ಜಿಲ್ಲೆಗಳಾಗಿ ವಿಭಾಗಿಸಲ್ಪಟ್ಟಿತು. ತುಮಕೂರು ಒಂದು ಜಿಲ್ಲೆಯಾಗಿ ಚಿತ್ರದುರ್ಗ ಡಿವಿಜನ್ನಲ್ಲಿ ಸೇರಿಸಲ್ಪಟ್ಟಿತು. ೧೮೬೩ರಲ್ಲಿ ಚಿತ್ರದುರ್ಗ ಡಿವಿಜನ್ನಿನಿಂದ ಕಿತ್ತು ತುಮಕೂರನ್ನೇ ನಂದಿದುರ್ಗ ಡಿವಿಜನ್ನಿಗೆ ಸೇರಿಸಿದರು. ೧೮೮೨ರಲ್ಲಿ ತುಮಕೂರು ಜಿಲ್ಲೆಯನ್ನು ಬಡಾಯಿಸಿ, ಚಿತ್ರದುರ್ಗ ಜಿಲ್ಲೆಯನ್ನು ತಪ್ಪಿಸಿ ಚಿತ್ರದುರ್ಗವನ್ನು, ತುಮಕೂರಿನ ಒಂದು ಸಬ್ ಡಿವಿಜನ್ನಾಗಿ ಮಾಡಿದರು. ೧೮೮೬ರಲ್ಲಿ ಚಿತ್ರದುರ್ಗವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಪುನಃ ಮಾಡಿದರು. ಆದರೆ ಅದುವರೆಗೂ ಚಿತ್ರದುರ್ಗ ಜಿಲ್ಲೆಗೆ ಸೇರಿದ ಪಾವಗಡವನ್ನು, ತುಮಕೂರು ಜಿಲ್ಲೆಯಲ್ಲಿಯೇ ಉಳಿಸಿಬಿಟ್ಟರು. ೧೮೩೧-೧೮೮೧ರವರೆಗೆ ಮೈಸೂರು ದೇಶವನ್ನು ಆಳಿದ ಕಮೀಷನರುಗಳ ಕಾಲದಲ್ಲಿ ತುಮಕೂರು ಪಟ್ಟಣವು ಆಡಳಿತ ಪ್ರಾಧಾನ್ಯತೆಯನ್ನು ಪಡೆದುದಲ್ಲದೆ... (ಟಿ.ಜಿ. ಗುಬ್ಬಿಹುಚ್ಚಪ್ಪ ತುಮಕೂರು ಇವರು "ತುಮಕೂರು ಪೌರದಿನಾಚರಣೆ ಸ್ಮರಣ ಸಂಚಿಕೆ ೨೬.೩.೧೯೬೦, ಪ್ರಕಟಣೆ ತುಮಕೂರು ಪುರಸಭೆ)

Major General R.S. Dobbs ಅವರು ಇನ್ನೂ ಎರಡು ಪುಸ್ತಕ ಬರೆದಿದ್ದು ಆ ಪುಸ್ತಕಗಳ ಹೆಸರು "A brief Sketchof the Life of Gen. Charles A. Browne" "Reminisences of Chirisian Life in India" ಎಂದು ಹೆಸರು prefaceನಲ್ಲಿ ಡಾಬ್ಸರವರು ಈ ರೀತಿ ಬರೆದಿದ್ದಾರೆ.

My principal object as regards Mysore is to present to my many Indian friends and to others interested in India, A brief life-like sketch of a disorganised native state, when first brought under British Rule, and the Gradual Civilisation of that state under was known as the "Non-Regulation System"

ಡಾಬ್ಸರವರು ಚಿತ್ರದುರ್ಗ ಡಿವಿಜನಲ್ಲಿ ಕಮೀಷನರ್ ಆಗಿದ್ದಾಗ ಅಷ್ಟಗ್ರಾಮ ಡಿವಿಜನಲ್ಲಿ Capatain Chalmers, ಮತ್ತು Nuggere ನಗರ ಒಡಿ Stokes ಅವರು ಕಮೀಷನರ್ ಆಗಿದ್ದರು. ಇವರ ಬಗ್ಗೆ ಡಾಬ್ಸರವರು ಈ ರೀತಿ ಹೇಳಿದ್ದಾರೆ. "Capatain Chalmers, Mr stokes were my friends, to whose brilliant abilities and great experience, I looked for guidence"

ನನ್ನ ಪತ್ನಿ ಜೊತೆ ೧೮೩೪ರಲ್ಲಿ ಬೆಂಗಳೂರಿಗೆ ಬಂದು ಮೈಸೂರು ಕಮೀಷನರ್ ಆಫೀಸಿನಲ್ಲಿ ಕೆಲಸಕ್ಕೆ ಸೇರಿಕೊಂಡೆ. ಈ ಕೆಲಸ ನನಗೆ ಸಂಪೂರ್ಣ ಹೊಸದು, ನನ್ನ ಆಫೀಸನಲ್ಲಿ ಇದ್ದ ಸ್ನೇಹಿತರು, ಕ್ಯಾಪ್ಟನ್‌ಗಳು, ಕ್ಲರ್ಕ್‌ಗಳು, ಕಾರ್ಯದರ್ಶಿಗಳು, ಕಮೀಷನರುಗಳ ಬಹಳ ಪ್ರೀತಿಯಿಂದ ಬರಮಾಡಿಕೊಂಡರು.

* ಪಂಡಿತ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಶಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು-೫೭೨೧೦೨. ಮೊ. ೯೮೮೦೯೯೬೧೯೬

ಮೈಸೂರು ಕಮೀಷನ್ ಆಫೀಸ್‌ನಲ್ಲಿ ಇದ್ದ ನೌಕರರು ಮತ್ತು ಅವರ ಹೆಂಡತಿಯರು, ಪ್ರತಿ ಭಾನುವಾರ ಪ್ರಾರ್ಥನಾ ಸಭೆಗಳಿಗೆ ಮೇಜರ್. Brien's ಮನೆಯಲ್ಲಿ ಸೇರಿಕೊಳ್ಳುತ್ತಾರೆ. ನಾನು ೧೮೨೮ರಲ್ಲಿ ಬೆಂಗಳೂರಿಗೆ ಬಂದಾಗ ಮೇಜರ್ O.Brien's ಮನೆಯಲ್ಲಿ ಅತಿಥಿಯಾಗಿ ಕೆಲವು ದಿನ ಇದ್ದಾಗ ಇವರೆಲ್ಲರ ಪರಿಚಯವಾಗಿತ್ತು. ನಾನು ಬೆಂಗಳೂರು ಬಿಟ್ಟು ಬೇರೆ ಕಡೆ ಹೋದೆ. ಈಗ ಪ್ರತಿ ಭಾನುವಾರ ಪ್ರಾರ್ಥನಾ ಸಭೆ ಕ್ಯಾಪ್ಟನ್ ಕ್ಲರ್ಕ್ ಮನೆಯಲ್ಲಿ ನಡೆಯುತ್ತೆ. ಅದೇ ರೀತಿ ಲಂಡನ್ ಮಿಶನ್‌ಗೆ ಸೇರಿದ ಸಣ್ಣ ಚರ್ಚ್‌ನಲ್ಲಿ ವಾರಕ್ಕೆ ಒಂದು ಸಾರಿ ಸೇರಿಕೊಂಡಾಗ, ಒಬ್ಬರನ್ನು ಒಬ್ಬರು ಮಾತನಾಡಿಸುವುದು. ಮನಸ್ಸಿಗೆ ಮುದ ಕೊಡುವಂತಹದು. ಬೈಬಲ್ ಸೇವೆಗೆ ಕಛೇರಿ ಸಮಯ ಮುಗಿದ ಮೇಲೆ, ಸಂಜೆ ಐದು ಗಂಟೆ ನಂತರ ನಾನು ತೊಡಗಿಸಿಕೊಂಡೆ.

ಸೊಲ್ಲಾಪುರದಲ್ಲಿ ೧೮೨೮-೨೯ರ ತನಕ ಸೇವೆ ಸಲ್ಲಿಸಿದೆ. ಆ ನಂತರ ಮದ್ರಾಸ್ ಆ ನಂತರ ಬೆಂಗಳೂರಿಗೆ ಬಂದೆ. ನಾನು ಮದ್ರಾಸ್‌ನಲ್ಲಿ ೧೮೨೯ರಲ್ಲಿ ಕೆಲವು ತಿಂಗಳು ಇದ್ದಾಗ ಭಾನುವಾರದ ಶಾಲೆಗಳನ್ನು ನಡೆಸಿದೆ. ನಾನು ಮದ್ರಾಸಕ್ಕೆ ಬರುವವರಗೆ ಇಂತಹ ಶಾಲಾ ವ್ಯವಸ್ಥೆ ಮದ್ರಾಸ್ ಅಂತಹ ದೊಡ್ಡ ನಗರದಲ್ಲಿ ಇರಲಿಲ್ಲ. ಬ್ರಿಟೀಷರು ಮದ್ರಾಸ್‌ನಲ್ಲಿ ವಾಸ ಮಾಡದ ಕಂಟೋನ್ಮೆಂಟ್‌ನಲ್ಲಿ ಆಗಲಿ ಕೋಟೆ ಪ್ರದೇಶದಲ್ಲಿ ಆಗಲಿ ಭಾನುವಾರದ ಬೈಬಲ್ ಶಾಲಾ ವ್ಯವಸ್ಥೆ ಇರಲಿಲ್ಲ.

ನಾನು (ಡಾಬ್ಸ್) ಮೊದಲ ಹದಿನಾಲ್ಕು ತಿಂಗಳು ಬೆಂಗಳೂರು ಕಮೀಷನರ್ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಾ ಇದ್ದೆ. ಜೊತೆಗೆ ಬೈಬಲ್ ಪ್ರಸಾರದ ಮಿಶನ್ ಸೇವೆಯಲ್ಲಿಯೂ ತೊಡಗಿಸಿಕೊಂಡಿದ್ದೆ. ನನ್ನ ಜೊತೆ ಅನೇಕ ಯುರೋಪಿಯನ್ನರು ಸಹಕರಿಸುತ್ತಾ ಇದ್ದರು. ಆಗಸ್ಟ್ ೧೮೩೫ "The Chief Commissioner" ಆಫೀಸ್‌ನವರು ನನ್ನ ಸೂಪರಿಡೆಂಟ್ ಆಗಿ ಚಿತ್ರದುರ್ಗ ಡಿವಿಜನ್‌ಗೆ ವರ್ಗಾಹಿಸಿದರು. ನಾನು ಹೋಗುವುದಿಲ್ಲ ಎಂದು ಹಠ ಮಾಡಿದೆ. ನಾಲ್ಕು ದಿವಸದ ನಂತರ 'Colonel Cubbon' ಅವರೇ ಕೊಠಡಿಗೆ ಕರೆಸಿಕೊಂಡು 'Governor General' ಆಫೀಸಿನಿಂದ ಆದೇಶ ಬಂದಿದೆ. ನನ್ನ ಕೈಯಲ್ಲಿ ಏನೋ ಇಲ್ಲ. ನೀವು ಈ ಕ್ಷಣವೆ ಚಿತ್ರದುರ್ಗಕ್ಕೆ ಹೋಗಿ Mr. Popham ಅವರಿಂದ ಅಧಿಕಾರ ಸ್ವೀಕಾರ ಮಾಡಿ ಅವರನ್ನು ಮುಕ್ತರನ್ನಾಗಿ ಮಾಡಬೇಕು ಎಂದು ಹೇಳಿದರು. ಅವರ ಆಜ್ಞಾನುಸಾರವಾಗಿ ಹೋಗಿ "Assuming Charge" ಅರ್ಥಾತ್ ಅಧಿಕಾರ ಸ್ವೀಕಾರ ಮಾಡಿ, Mr. Popham ಅವರು ಕೆಲವು ದಿನ ಉಳಿದುಕೊಂಡು ಆಡಳಿತದ ವಿವರಗಳನ್ನು ತಿಳಿಸಿಕೊಟ್ಟರು.

ಮುಮ್ಮಡಿ ಕೃಷ್ಣರಾಜ ಒಡೆಯರವರಿಂದ ಆಡಳಿತ ಹಿಂಪಡೆದ ನಂತರ ಕ್ರಿ.ಶ. ೧೮೩೪ರಲ್ಲಿ ಬೆಂಗಳೂರಿನಲ್ಲಿ Chief Commissioner ಇರುತ್ತಾ ಇದ್ದರು. ಆಡಳಿತ ಅನುಕೂಲತೆಗಾಗಿ ನಾಲ್ಕು ವಿಭಾಗಗಳನ್ನು ಮಾಡಲಾಯಿತು. ಅದರಲ್ಲಿ ಚಿತ್ರದುರ್ಗ ವಿಭಾಗ ಒಂದು. ಯುವ ಬ್ರಿಟಿಷ್ ಅಧಿಕಾರಿಯಾಗಿ ಅಧಿಕಾರ ಸ್ವೀಕಾರ ಮಾಡಿದೆ. ನಾನು ಅಧಿಕಾರ ಸ್ವೀಕಾರ ಮಾಡಿದಾಗ ರಸ್ತೆಗಳು, ಸೇತುವೆಗಳು ಇರಲಿಲ್ಲ.

ಚಿತ್ರದುರ್ಗ ಡಿವಿಜನ್ ಮುಖ್ಯಸ್ಥಳ ಅರ್ಥಾತ್ ಆಡಳಿತ ಕೇಂದ್ರ ತುಮಕೂರು, ಕಡಬಕ್ಕೆ ತುಮಕೂರು ಇಪ್ಪತ್ತು ಮೈಲಿ ದೂರ ಇರುವುದು. ನಾನು ರಸ್ತೆ ಮೇಲೆ ನಡೆದು ಹೊರಟರೆ ನನ್ನ ಹೆಂಡತಿ ಪಲ್ಲಕ್ಕಿಯಲ್ಲಿ ಬರುತ್ತಾ ಇದ್ದಳು. ದಾರಿಯಲ್ಲಿ ಸಿಕ್ಕುವ ಹಳ್ಳಿಯ ಮುಖ್ಯಸ್ಥರು ತಳಿರು ತೋರಣ, ಕಮಾನ್ ಕಟ್ಟಿ ಸ್ವಾಗತಿಸುತ್ತಾ ಇದ್ದರು. ನನ್ನನ್ನು ಸ್ವಾಗತಿಸುವುದಕ್ಕೆ ದೇವದಾಸಿಯರು ಬಂದು ನೃತ್ಯ ಮಾಡುತ್ತಾ ಆರತಿ ಮಾಡಿ ಸ್ವಾಗತಿಸುತ್ತಾ ಇದ್ದರು. ದೇವದಾಸಿ ಪದ್ಧತಿಯನ್ನು ಟೀಕಿಸುತ್ತಾ ಈ ಮಾತನ್ನು ಹೇಳಿದ್ದಾರೆ. "These woman, though called, the wives of the gods, were brought up by the Brahamin priests to a life of immorality."

ಕಡಬದಲ್ಲಿ ರಾತ್ರಿ ಗುಡಾರದಲ್ಲಿ ಮಲಗಿದ್ದೆ. ಬೆಳಿಗ್ಗೆ ಸೂರ್ಯನ ಬೆಳಕು ಕಣ್ಣಿಗೆ ಬಿದ್ದ ತಕ್ಷಣ ಎಚ್ಚರವಾಯಿತು. ನನ್ನ ಬಟ್ಟೆ ಗುಡಾರದ ಒಳಗೆ ಹೊರಗೆ ಕತ್ತರಿಸಿ ಕಳ್ಳರು ಒಳಗೆ ಬಂದು ನಾನು ಬರೆಯಲು ಉಪಯೋಗಿಸುವ ಮೇಜನ್ನು ಹೊತ್ತಿಕೊಂಡು ಹೋಗಿದ್ದರು. ಆದರೆ ಅದು ಹೊರಗೆ ಬಿದ್ದಿತ್ತು. ಇನ್ನು ಯಾವ ವಸ್ತುವನ್ನು ಕಳ್ಳರು ಎತ್ತಿಕೊಂಡು ಹೋಗಿರಲಿಲ್ಲ. ನಾನು ಅಂತಹ ದೀರ್ಘವಾದ ನಿದ್ದೆಯನ್ನು ಮಾಡುವವನಲ್ಲ. ಕಳ್ಳ ನನ್ನ ಮಂಚದ ಹತ್ತಿರ ಇದ್ದ ಮೇಜನ್ನು ಆ ಕಗ್ಗತ್ತಲಿನಲ್ಲಿ ಹೇಗೆ ಹೊತ್ತುಕೊಂಡು ಹೋದ ಎಂದು ನನಗೆ ಆಶ್ಚರ್ಯವಾಯಿತು. ಕಳ್ಳರಿಗೆ ನಾನು ಮುಖ್ಯ ನ್ಯಾಯಾಧೀಶ ಎಂದು ಗೊತ್ತಾಗಿ, ಹೆದರಿ ಏನೋ ತೆಗೆದುಕೊಳ್ಳದೆ ಹೋಗಿದ್ದಾರೆ. ಇಂತಹ ಕಳ್ಳರ ಪಡೆ ತುಮಕೂರು, ಮಧುಗಿರಿ ಪರಿಸರದಲ್ಲಿ ಇದ್ದರು. ಈ ಹಿಂದೆ ಮದ್ದಗಿರಿಯಲ್ಲಿ, ವಿಜಯನಗರದ ದೊರೆ ಬಂದಾಗ ಅವರಿಗೆ ಎಚ್ಚರವಾಗದಂತೆ ಮಂಚ ಸಮೇತ ಎತ್ತಿಕೊಂಡು ಬೆಟ್ಟಕ್ಕೆ ಬಂದ ಕಳ್ಳರ ಗುಂಪಿನ ಬಗ್ಗೆ ದಾಖಲೆ ಇದೆ.

ಕಡಬದಿಂದ ಚಿಕ್ಕನಾಯಕನಹಳ್ಳಿಗೆ ಹೋದೆ. ಅಂದಿಗೆ ಚಿಕ್ಕನಾಯಕನಹಳ್ಳಿ ಬಹಳ ಶ್ರೀಮಂತ ಗ್ರಾಮವಾಗಿತ್ತು. ನಮ್ಮ ಗುಡಾರವನ್ನು ಬೃಹತ್ ಆಲದ ಮರದ ಕೆಳಗೆ ಹಾಕಲಾಯಿತು. ಆ ಮರ ಎಷ್ಟು ದೊಡ್ಡದು ಇತ್ತು ಅಂದರೆ ಒಂದುದೊಡ್ಡ ಮಿಲಿಟರಿ ಪಡೆಯನ್ನು ಇಳಿಸುವಷ್ಟು ಬೃಹತ್ತಾಗಿ ಇತ್ತು. ನಾನು ಚಿಕ್ಕನಾಯಕನಹಳ್ಳಿಗೆ ಹೋದಾಗ ದಸರಾ ಹಬ್ಬ. ಚಿಕ್ಕನಾಯಕನಹಳ್ಳಿ ಬ್ರಾಹ್ಮಣರ ಹೆಣ್ಣುಮಕ್ಕಳು ಬಂದು ನನ್ನ ಗುಡಾರ ಮುಂದೆ ನನ್ನ ಬಾಗಿಲಲ್ಲಿ ಕೂರಿಸಿ ಅನೇಕ ಸುಂದರವಾದ ಹಾಡುಗಳನ್ನು ಹಾಡಿದರು. ಆ ಹೆಣ್ಣು ಮಕ್ಕಳು ಇನಾಮು ಕೇಳಿದಾಗ, ಮೂರ್ತಿ ಪೂಜೆ ಮಾಡುವವರಿಗೆ ನಾವು ಪ್ರೋತ್ಸಾಹ ಕೊಡುವುದಿಲ್ಲ, ಎಂಬ ಮಾತನ್ನುಹೇಳಿದ್ದು ದಾಖಲಾಗಿದೆ. ಅಂದಿನ ದಿನ ಬೈಬಲ್ ಅಧ್ಯಯನ ಮಾಡುವವರಿಗೆ ವಿಗ್ರಹ ಪೂಜೆ ಮಾಡುವವರಿಗೆ ಸಹಾಯ-ಸಹಕಾರ ಪ್ರೋತ್ಸಾಹ ಕೊಡುವುದು ತಪ್ಪು ಅನ್ನುವ ಭಾವನೆ ಅಂದಿನ ವಿದೇಶಿ ಜನರಲ್ಲಿ ಇತ್ತು.

ನನ್ನ ಮೊದಲ ಸಂಚಾರದಲ್ಲಿ ಸಾಮಾನ್ಯ ನಾಗರಿಕರಿಗೆ ಕಳ್ಳಕಾಕರರ ಬಗ್ಗೆ ಇರುವ ಭಯದ ಅರಿವು ಆಯಿತು. ದಾರಿಯಲ್ಲಿ ನಡೆದು ಹೋಗುವ ಪ್ರಯಾಣಿಕರಿಗೆ ಹುಲಿ, ಚಿರತೆ, ಕರಡಿ, ಕಾಡುಹಂದಿ, ಹೆಬ್ಬಾವು, ವಿಷದ ಹಾವುಗಳ ಭಯ ರಾತ್ರಿ ಪ್ರಯಾಣ ಮಾಡುವ ವ್ಯಾಪಾರಸ್ಥರಿಗೆ ಅಥವಾ ಪ್ರಯಾಣಿಕರಿಗೆ ಕಳ್ಳಕಾಕರ ಭಯ, ಆ ಕಾರಣ ಅವರುಗಳು ನೇರವಾದ ರಸ್ತೆಯಲ್ಲಿ ಹೋಗದೆ ದಾರಿಯಲ್ಲಿ ಸಿಗುವ ಜನವಸತಿ ಇರುವ ಹಳ್ಳಿಗಳ ಮುಖಾಂತರ ಹೋಗುತ್ತಾ ಇದ್ದರು. ದುಷ್ಟಪ್ರಾಣಿಗಳಿಂದ ಮತ್ತು ದರೋಡೆಕೋರರಿಂದ ರಕ್ಷಣೆ ಪಡೆಯಲು ಈ ರೀತಿ ಸ್ವಲ್ಪ ದೂರವಾದರು, ಪ್ರಯಾಣ ಮಾಡುತ್ತಾ ಇದ್ದರು.

ನಾನು ಕೇಂದ್ರಸ್ಥಾನಕ್ಕೆ ಮೊದಲ ಸಂಚಾರವನ್ನು ಮುಗಿಸಿಕೊಂಡು ಬಂದ ಮೇಲೆ ತುಮಕೂರು ನಗರದ ಗಣ್ಯಮಾನ್ಯರ ಸಭೆಯನ್ನು ಇವರ ಜೊತೆ, ಈ ಹಿಂದೆ ಸರ್ಕಾರಿ ಕೆಲಸ ಮಾಡಿದ ನಿವೃತ್ತ ನೌಕರರನ್ನು ಸೇರಿಸಿ ಕಳ್ಳಕಾಕರ, ಪುಂಡುಕೋರರ, ದರೋಡೆಕೋರರನ್ನು ನಿಯಂತ್ರಿಸಿ ಅವರಿಗೆ ಯಾವ ರೀತಿ ಶಿಕ್ಷೆ ಕೊಡಬೇಕು ಎಂಬುದನ್ನು ಚರ್ಚಿಸಿದೆ ಎಂದಿದ್ದಾರೆ. ಈ ಮೇಲಿನ ಉಲ್ಲೇಖದಿಂದ ಚಿತ್ರದುರ್ಗ ಡಿವಿಜನ್ ಮುಖ್ಯ ಕೇಂದ್ರ ಸ್ಥಳ ತುಮಕೂರು ಆಗಿತ್ತು ಎಂದು ತಿಳಿದುಬರುತ್ತದೆ. ಡಾಬ್ಸರವರ ಕಾಲದಲ್ಲಿ ಕಳ್ಳರನ್ನು ಸಂಪೂರ್ಣ ಹತೋಟಿಗೆ ತೆಗೆದುಕೊಂಡಿದ್ದು ದಾಖಲಾಗಿದೆ.

ಅಂದಿನ ದಿನಗಳಲ್ಲಿ ಹುಲಿ, ಚಿರತೆ ಇವುಗಳನ್ನು ಬೇಟೆಯಾಡುತ್ತಾ ಇದ್ದರು. ಚಿತ್ರದುರ್ಗ ಡಿವಿಜನ್‌ನ ಒಂದು ತಾಲ್ಲೂಕು ಅಮಲದಾರನಾಗಿದ್ದ ಲಿಂಗಯ್ಯಗೌಡ ಹುಲಿಯನ್ನು ಯಾವ ರೀತಿ ಖೆಡ್ಡದಲ್ಲಿ ಕೆಡವಬಹುದು ಎಂಬುದನ್ನು ವಿವರಿಸಿದ್ದಾನೆ. ಬೇಟೆ ಮುಖಾಂತರ ಮತ್ತು ಖೆಡ್ಡದ ಮುಖಾಂತರ ನಲವತ್ತೆಂಟು ಹುಲಿಗಳನ್ನು ಕೊಲ್ಲಲಾಯಿತು. ಒಂದು ದಿನ ಬೆಳಿಗ್ಗೆ ಕೊಂದ ನಾಲ್ಕು ಹುಲಿಗಳನ್ನು ತಂದಿದ್ದರು. ನಗರ ಸಬ್‌ಡಿವಿಜನ್ ಸೂಪರಿನ್‌ಡೆಂಟ್ ಆಗಿದ್ದ Mr. Stokes ಅವರು ಹುಲಿ ಖೆಡ್ಡದ ವಿಧಾನ ತಿಳಿದುಕೊಂಡು ಅವರು ೭೦ ಹುಲಿಗಳನ್ನು ಕೊಂದರಂತೆ. ಈ ಎಲ್ಲಾ ವಿಷಯವನ್ನು ಡಾಬ್ಸ ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಒಂದು ಭಾನುವಾರ ನನ್ನ ಗೃಹ ಕಛೇರಿ ಮನೆಯಲ್ಲಿ 'ಕ್ರೈಸ್ತ ದೇವತಾ ಆರಾಧನೆ' ನಡೆಸಲಾಗುತ್ತಿತ್ತು. ಸಂಪೂರ್ಣ ನಿಶ್ಯಬ್ದ ಎಲ್ಲರೂ ಮೌನ ಧ್ಯಾನದಲ್ಲಿ ಇರುವಾಗ, ತಮಟೆ ಒಡೆದುಕೊಂಡು ಕೇಕೆ ಹಾಕುತ್ತಾ ಹಳ್ಳಿಯ ಜನ ಮೆರವಣಿಗೆಯಲ್ಲಿ ಒಂದು ದೊಡ್ಡ ಹುಲಿಯನ್ನು ಬೇಟೆಯಲ್ಲಿ ಕೊಂದು ಹೊತ್ತಿಕೊಂಡು ಬಂದಿದ್ದರು. ಆ ಹುಲಿಯನ್ನು ನನ್ನ ಮನೆಗೆ ನಾಲ್ಕು ಮೈಲಿ ದೂರ ಇರುವ ಹಳ್ಳಿಯಲ್ಲಿ ಬೇಟೆಯಾಡಿದ್ದು ಹಳ್ಳಿಯ ಜನಕ್ಕೆ ಈ ದಿನ ಭಾನುವಾರ ಕಛೇರಿ ಇರುವುದಿಲ್ಲ ಎಂಬ ವಿಷಯ ತಿಳಿಯದೆ ಬಂದುಬಿಟ್ಟಿದ್ದರು. ಭಾನುವಾರ ವಿಶೇಷ ದೈವಸಭೆ ಮುಗಿದ ಮೇಲೆ ನಾವೆಲ್ಲಾ ನೋಡಿದೆವು. ಹೆಬ್ಬುಲಿ, ಅದನ್ನು ಹಳ್ಳಿಯವರು ತದ ನಂತರ ತೆಗೆದುಕೊಂಡು ಹೋಗಿ ಚರ್ಮವನ್ನು ಸುಲಿದು ಹದಮಾಡಿ ತಂದುಕೊಟ್ಟರು. ನಾನು ಆ ಹುಲಿಚರ್ಮವನ್ನು SCOTLAND ನನ್ನ ಬಂಧುಗೆ ಕಾಣಿಕೆಯಾಗಿ ಕೊಟ್ಟೆ.

ಚಿತ್ರದುರ್ಗ ಕಮೀಷನರ್ ಆಫೀಸ್ ಈ ಹಿಂದೆ ಕಟ್ಟಿದ ಚಿತ್ರದುರ್ಗ ಪಾಳೆಯಗಾರರ ಅರಮನೆಯಲ್ಲಿ ನಡೆಯುತ್ತಾ ಇದ್ದ ವಿಷಯವನ್ನು ಡಾಬ್ಸ ದಾಖಲಿಸಿದ್ದಾರೆ. ಈ ಅರಮನೆ ಈಗ ಸರ್ಕಾರಿ ಮಹಿಳಾ ಕಾಲೇಜು ಇದ್ದ ಜಾಗದಲ್ಲಿ ಇತ್ತು. ಅರಮನೆಯನ್ನು ನಾವು ಸರಿಯಾಗಿ ರಿಪೇರಿ ಮಾಡಿಸಿ ಕಾಪಾಡದೆ ಇದ್ದುದರಿಂದ ಅದನ್ನು ಯಥಾವತ್ತಾಗಿ ರಕ್ಷಿಸಲು ಸಾಧ್ಯವಾಗಲಿಲ್ಲ. ಚಿತ್ರದುರ್ಗದ ಶಾಸನತಜ್ಞರು ಮತ್ತು ಇತಿಹಾಸಕಾರರಾದ ಡಾ. ಬಿ. ರಾಜಶೇಖರಪ್ಪನವರು ಈ ಅರಮನೆಯನ್ನು "ದ್ಯಾಮವ್ವ ನಾಗತಿ ಅರಮನೆ" ಎಂದು ಕರೆಯುತ್ತಾ ಇದ್ದರು. ಇದನ್ನು ಕಟ್ಟಿಸಿದವರು ಭರಮಣ್ಣ ನಾಯಕ. ಚಿತ್ರದುರ್ಗ ಪಾಳೆಪಟ್ಟು ಅಳಿದು ಹೋದ ಮೇಲೆ ಟಿಪ್ಪುಸುಲ್ತಾನ್ ಕೆಲವುದಿನ ಈ ಅರಮನೆಯಲ್ಲಿ ತಂಗಿದ್ದರಿಂದ "ಟಿಪ್ಪು ಮಹಲ್" ಎಂದು ಸಹ ಕರೆಯುತ್ತಾ ಇದ್ದರಂತೆ ಎಂಬ ಮಾಹಿತಿಯನ್ನು ನೀಡಿದರು.

ಡಾಬ್ಸರವರು ಚಿತ್ರದುರ್ಗದಲ್ಲಿ ಮುಕ್ಕಾಂ ಮಾಡಿದಾಗ ಬಳ್ಳಾರಿಯಿಂದ ಇಬ್ಬರು ಯುವ ಆಫೀಸರ್‌ಗಳು ಅತಿಥಿಗಳಾಗಿ ಡಾಬ್ಸರವರ ಮನೆಗೆ ಬಂದಿದ್ದರು. ಆ ಇಬ್ಬರು ಯುವ ಅಧಿಕಾರಿಗಳು ಚಿತ್ರದುರ್ಗ ಸಮೀಪದ ಹನ್ನೆರಡು ಮೈಲಿ ದೂರ ಇರುವ ಕಾಡಿಗೆ ಶಿಖಾರಿಗೆ ಹೋದಾಗ, ಕರಡಿ ಒಬ್ಬ ಯುವ ಅಧಿಕಾರಿ ಮೇಲೆ ಆಕ್ರಮಣ ಮಾಡಿತ್ತು. ಇನ್ನೊಬ್ಬ ಅಧಿಕಾರಿ ಹಳ್ಳಿಯ ಹೈದನ ಕೈಯಲ್ಲಿ ಸಣ್ಣ ಕಾಗದದಲ್ಲಿ "Huges has been wounded by a Bear" ಎಂದು ಬರೆದು ಕಳುಹಿಸಿದ್ದ. ಕರಡಿಯಿಂದ ಕಚ್ಚಿಸಿಕೊಂಡು ಬಹಳಷ್ಟು ತೊಂದರೆಗೆ ಈಡಾದ ವ್ಯಕ್ತಿಯನ್ನು ಔಷಧೋಪಚಾರದಿಂದ ನೋಡಿಕೊಂಡವನು Mr. Xaiver. ತದ ನಂತರ ಯುವ ಅಧಿಕಾರಿ ತನ್ನ ಸೈನ್ಯ ಘಟಕಕ್ಕೆ ವಾಪಸ್ಸು ಆರೋಗ್ಯವಾಗಿ ಹೋದ.

ತುಮಕೂರು ನಗರ ದೇವರಾಯನದುರ್ಗದ ಕಾಡಿನಲ್ಲಿ ಮೂರು ಪ್ರಭೇದದ ಜಿಂಕೆಗಳನ್ನು ನೋಡಬಹುದು. ಸಾಂಬಾರ್ ಜಿಂಕೆ, ಮೈಯೆಲ್ಲಾ ಬಿಳಿ ಚುಕ್ಕೆಗಳು ಇರುವ ಜಿಂಕೆ. ಸಾಮಾನ್ಯವಾದ ಜಿಂಕೆ. ಈ ಮೂರು ಪ್ರಭೇದಗಳ ಜಿಂಕೆ ದೇವರಾಯನದುರ್ಗದ ಕಾಡಿನಲ್ಲಿ ಸಮೃದ್ಧವಾಗಿ ಇವೆ. ಡಾಬ್ಸರವರೆ ದೇವರಾಯನದುರ್ಗದ ಮೇಲ್ಭಾಗದಲ್ಲಿ ಅತಿಥಿ ಗೃಹವನ್ನು ಕಟ್ಟಿದ್ದು.

ದೇವರಾಯನದುರ್ಗದ ಬೆಟ್ಟವನ್ನು ನೋಡಬರುವ ಎಲ್ಲರಿಗೂ ತೆರೆದಿಟ್ಟೆ. ಈ ಬೆಟ್ಟದಲ್ಲಿ ಎಲ್ಲಾ ವಿಧವಾದ ಕ್ರೂರ ಪ್ರಾಣಿಗಳು ವಾಸ ಮಾಡುತ್ತಾ ಇವೆ. ಹುಲಿಗಳು ಮಾತ್ರ ಬೇರೆ ಬೇರೆ ಕಾಡು ಪ್ರದೇಶದಿಂದ ದೇವರಾಯನದುರ್ಗಕ್ಕೆ ವಲಸೆ ಬರುತ್ತವೆ. ಇಲ್ಲಿನ ದಟ್ಟವಾದ ಕಾಡು ಕಾಡುಪ್ರಾಣಿಗಳ ವಾಸಕ್ಕೆ ತಕ್ಕದಾಗಿ ಇದೆ.

ದೇವರಾಯನದುರ್ಗದಲ್ಲಿ ಚುಕ್ಕೀ ಇರುವ ಜಿಂಕೆಗಳು ಹೆಚ್ಚು ಇಲ್ಲ. ಆದರೆ ಅದರ ಮಾಂಸ ಬಹಳ ಮೃದು. ಇತ್ತೀಚೆಗೆ ಇಡೀ ದೇಶದಲ್ಲಿ ಎಲ್ಲಾ ವಿಧವಾದ ಜಿಂಕೆಗಳು ಸಂಖ್ಯೆಯಲ್ಲಿ ಚೆನ್ನಾಗಿ ವೃದ್ಧಿಸಿಕೊಂಡಿವೆ. ಜಿಂಕೆಗಳನ್ನು ಬೇಟೆಯಾಡಲು ದೇವರಾಯನದುರ್ಗಕ್ಕೆ ಬಹಳಷ್ಟು ಜನ ಬರುತ್ತಾರೆ. ಒಂದು ದಿನ ದೇವರಾಯನದುರ್ಗದಲ್ಲಿ ವಾಸ್ತವ್ಯ ಮಾಡಿದಾಗ ಬೆಳಗ್ಗೆ ಸೂರ್ಯೋದಯ ಸಮಯದಲ್ಲಿ ನಾನು ಇನ್ನು ಗುಡಾರದಲ್ಲಿ ಮಲಗಿದ್ದೆ. ನಾನು ಕಣ್ಣು ಬಿಟ್ಟು ನೋಡುವ ಸಮಯಕ್ಕೆ ಗುಂಡಿನ ಶಬ್ದ ಕೇಳಿತು. ಬೆಂಗಳೂರಿನಿಂದ ಬಂದ ಯುವ ಅಧಿಕಾರಿ ಜಿಂಕೆಗಳನ್ನು ಬೇಟೆಯಾಡಿ ಇನ್ನೂರು ಜಿಂಕೆತಲೆಗಳನ್ನು ಸಂಗ್ರಹಿಸಿಕೊಂಡಿದ್ದ. ಜಿಂಕೆ ಮಾಂಸ ನಾಲ್ಕಾಣಿ ಕೆ.ಜಿ.ಯಂತೆ ತುಮಕೂರಿನಲ್ಲಿ ಮಾರಾಟ ಮಾಡಲಾಗುತ್ತದೆ.

ಚಿತ್ರದುರ್ಗ ಪಾಳೆಯಗಾರರನ್ನು ಯುದ್ಧದಲ್ಲಿ ಸೋಲಿಸಿ ಅವರ ಆಡಳಿತವನ್ನು ಕಿತ್ತುಕೊಂಡವನು ಹೈದರಾಲಿ. ಚಿತ್ರದುರ್ಗ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟ ಒಟ್ಟು ಪ್ರದೇಶವನ್ನು ಹೈದರಾಲಿ ತನ್ನ ವಶಕ್ಕೆ ತೆಗೆದುಕೊಂಡ. ಚಿತ್ರದುರ್ಗ ಪಾಳೆಯಗಾರರ ವಂಶಸ್ಥರು ಚದುರಿಹೋದರು.

ಚಿತ್ರದುರ್ಗ ಪಾಳೆಯಗಾರ ರಾಜವಂಶಸ್ಥರಿಗೆ ಮಾಸಾಶನವನ್ನು ಕೊಡುತ್ತಾ ಬರಲಾಯಿತು. ರಾಜ ವಂಶಸ್ಥರ ಜೀವನ ಬಹಳ ಕಷ್ಟಕರವಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಗೆ ಪಟ್ಟವಾದ ಮೇಲೆ ಬ್ರಿಟೀಷ್ ರೆಸಿಡೆಂಟ್‌ನ ನೇತೃತ್ವದಲ್ಲಿ ಅಳಿದು ಉಳಿದ ಪಾಳೆಯಗಾರರ ವಂಶಸ್ಥರಿಗೆ ಮಾಸಾಶನವನ್ನು ಕೊಡುತ್ತಾ ಬಂದರು. ಅವರೆಲ್ಲ ಸರ್ಕಾರ ಹೇಳಿದ ಜಾಗದಲ್ಲೆ, ವಾಸ ಮಾಡಿಕೊಂಡು ಇರಬೇಕಾಗಿತ್ತು. ಅವರು ತಮ್ಮ ಸ್ವಂತ ಸ್ಥಳಕ್ಕೆ ಹೋಗಬೇಕಾದರೆ ಸರ್ಕಾರದ ಅದರಲ್ಲೂ ಬ್ರಿಟೀಷ್ ರೆಸಿಡೆಂಟ್‌ನ ಅಪ್ಪಣೆ ಇಲ್ಲದೆ ಹೋಗುವಂತಿರಲಿಲ್ಲ.

ಬ್ರಿಟೀಷರು ಮೈಸೂರು ರಾಜ್ಯದ ಆಡಳಿತವನ್ನು ನೇರವಾಗಿ ತಮ್ಮ ಕೈಗೆ ತೆಗೆದುಕೊಂಡಿದ್ದು ಕ್ರಿ.ಶ. ೧೮೩೧ರಲ್ಲಿ, ಆ ಸಮಯದಲ್ಲಿ ಎಲ್ಲಾ ಪಾಳೆಯಗಾರರನ್ನು ಮೈಸೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಈ ಸ್ಥಳಾಂತರ ಪಾಳೆಯಗಾರರಿಗೆ ಇಷ್ಟವಿರಲಿಲ್ಲ.

೧೮೪೯ರಲ್ಲಿ ಚಿತ್ರದುರ್ಗ ಪಾಳೆಯಗಾರರ ವಂಶಕ್ಕೆ ಸೇರಿದ ಏಳು ಜನ ಬ್ರಿಟೀಷ್ ಸರ್ಕಾರದ ಮೇಲೆ ತಿರುಗಿ ಬಿದ್ದು ಅವರನ್ನು ಭಾರತ ದೇಶದಿಂದಲೇ ಓಡಿಸಲು ನಿರ್ಧರಿಸಿದರು. ಈ ಹಿಂದೆ ಯುದ್ಧ ಮಾಡಿದ ವೀರಯೋಧರ ವಂಶಸ್ಥರು ಕೈಯಲ್ಲಿ ಕೆಲಸವಿಲ್ಲದೆ ಬೇಸಾಯ ಮಾಡಿಕೊಂಡು ಇದ್ದರು. ಇವರನೆಲ್ಲಾ ಒಂದುಗೂಡಿಸಿ ಬ್ರಿಟೀಷರ ಮೇಲೆ ಯುದ್ಧ ಸಾರಲು ನಿರ್ಧರಿಸಿದರು. ಐವತ್ತು ಜನ ಬಲಾಢ್ಯ ಬೇಡ ಜನಾಂಗ ನಾಯಕರು ಬೆಂಗಳೂರಿನಿಂದ ತಪ್ಪಿಸಿಕೊಂಡು ಚಿತ್ರದುರ್ಗ ದೊಡ್ಡೇರಿ ತಲುಪಿದರು. ಮುಂದಿನ ಭಾಗವನ್ನು ಯಥಾವತ್ತಾಗಿ ಕೊಡುತ್ತೇನೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಈ ವಿಷಯ ಸರಿಯಾಗಿ ದಾಖಲಾಗಿಲ್ಲ.

.... These would be rebels accompanied by some by some fifty recruits escaped from Bangalore, and proceeded to the town of Dodairy, twenty-five miles from chittledroog, where they scattered their proclamations, and at night assembled some thousands of their hereditary followers. An express reached me next day reporting their proceedings. I subsequently learned that before daylight all, except their hired servants, had returned to their villages, and that the polligars marched towards Chitledroog. On receiving the first report, I sent off expresses to the chief commissioner, the superidents of astragram, and Nuggur; and to the Magistrate of the Bellary District communicating the fact of the rising.

I also sent an express to the officer commanding the regiment at Hurryhur (ಹರಿಹರ) and requested him to send two companies of sepoys to chittledroog. This course I considred necessary, because the rebels, probably, would endevour to occupy that fortified position. They, however, being pressed by the Chittledroog police, crossed the frontier into the Nuggur Division. On Sunday morning my magistrate munshi came early to report that no intelligence had arrived during the night, and to apply for orders. I replied I had none to give; but shortly after he left me, and while I was praying to God for guidance, the conviction flashed across my mind that the rebels would be met by the Nuggur police, that they would recross the border, and take up a position on certain hills a few miles from Holalkerry (one hundred miles from Toomkoor, where I was). So strong was my conviction, that I at once sent for the munshi and sent an express to the native officer commanding the irregular cavalry stationed in the Chittledroog fort, directing him to proceed without delay to the hills indicated, where he probably would find the Polligars. The express reached this officer late at night; he lost no time, and accompanied by Lieut. Harkness, a young officer attached to the companies which had come from Hurryhur, started before daylight.

On this occasion a circumstance occurred which showed the reliance placed by the natives on a British officer. The officer in command of the cavalry, a fine spirited Mussulman, placed himself and his regiment under the orders of the young volunteer.

After a march of twenty-five miles, they reached Holalkerry about noon the following day, and were there informed by two detectives that the rebels had taken up a position on the hills referred to. The native officer proposed that men and horses should have a little rest, and get some refresment before proceeding further. "No", replied young Harkness, "let us not delay one moment, the enemy will get word of our approach, and escape." They accordingly pressed on, and completely surprised the rebels. One half of the men dismounted, and led by Harkness, ascended the hill and captured all the Polligars and their followers, who made but feeble resistance. Thus, through the prompt measures taken, and the activity of the police, and the energy of this young officer, the rising was suppressed without a single village being plundered, or a drop of blood shed. I never for a moment had any apprehension of a rising amongst the people, but I dreaded the gathering of robbers and men of bad character, who might plunder the people in the name of the Polligars.

ಈ ಘಟನೆ ಬಗ್ಗೆ ವಿವರವಾದ ಮಾಹಿತಿ ೧೯೨೦ರ ತನಕ ದೊರೆಯುತ್ತಾ ಇತ್ತು. ಸ್ಥಳೀಯ ಇತಿಹಾಸಜ್ಞರು ಸ್ವಲ್ಪ ಶ್ರಮ ವಹಿಸಿದ್ದರೆ ಈ ಘಟನೆ ಬಗ್ಗೆ ವಿವರವಾಗಿ ಬರೆದಿದ್ದರೆ. ಭಾರತೀಯ ಸ್ವಾತಂತ್ರ್ಯ ಇತಿಹಾಸಕ್ಕೆ ಈ ದೊಡ್ಡ ಘಟನೆ ದಾಖಲಾಗಬೇಕಾಗಿತ್ತು. ದಾಖಲಾಗದೆ ಹೋಯಿತು. ಚಿತ್ರದುರ್ಗ ಪರಿಸರದ ಇತಿಹಾಸಜ್ಞರು ಈ ಬಗ್ಗೆ ಇನ್ನಷ್ಟು ವಿಷಯ ಸಂಗ್ರಹಿಸಿ ಹೆಚ್ಚಿನ ವಿವರವನ್ನು ಮಹಾಜನತೆಗೆ ನೀಡಲಿ.

ದಕ್ಷಿಣ ಭಾರತದಲ್ಲಿ ರಸ್ತೆ ಮಾಡಲು ಪ್ರಾರಂಭ ಮಾಡಿದ್ದು ೧೮೩೫ರಲ್ಲಿ ಹೈದರಾಬಾದ್–ಮದ್ರಾಸ್ ರಸ್ತೆ ನಿರ್ಮಾಣವಾಗಿದ್ದು ೧೮೩೧ರಲ್ಲಿ ಆದರೆ ರಸ್ತೆ ಪಕ್ಕ ನೀರು ಹರಿಯಲು ಸರಿಯಾದ ವ್ಯವಸ್ಥೆ ಇರಲಿಲ್ಲ. ಮದ್ರಾಸ್–ಬೆಂಗಳೂರು ರಸ್ತೆ ಅಷ್ಟು ಸರಿಯಾಗಿ ನಿರ್ಮಾಣವಾಗಿರಲಿಲ್ಲ. ಬೆಂಗಳೂರು–ಮೈಸೂರು ರಸ್ತೆ ಸಹ ಅಷ್ಟೇ Defective ಆಗಿತ್ತು ಎಂದಿದ್ದಾರೆ.

ನನ್ನ ಕಾಲದಲ್ಲಿ ತುಮಕೂರು–ದಾವಣಗೆರೆ ರಸ್ತೆ ನಿರ್ಮಾಣವಾಯಿತು. ಆ ರಸ್ತೆ ಚಿತ್ರದುರ್ಗದ ಮೂಲಕ ಹೋಗಿದ್ದರಿಂದ ಬಹಳ ಅನುಕೂಲವಾಯಿತು. ಒಟ್ಟು ೧೨೭ ಮೈಲಿ ರಸ್ತೆ ನಿರ್ಮಾಣವಾಯಿತು. ನನ್ನ ಆಡಳಿತ ಕಾಲದಲ್ಲಿ ಮೂರು Bridge ಕಟ್ಟಲು ರಸ್ತೆ ನಿರ್ಮಾಣ ಸಮಯದಲ್ಲಿ ಇಲಾಖೆಯವರು ಅನುಮತಿ ಕೊಟ್ಟರು ಎಂದಿದ್ದಾರೆ.

ಹಿರಿಯೂರು ಹತ್ತಿರ ೪೩೬ ಅಡಿ ಉದ್ದದ ಸೇತುವೆ ಕಟ್ಟಿಸಿದ್ದು ಇದರ ಉದ್ಘಾಟನೆಗೆ Col Cubbon ಅವರು ಹಿರಿಯೂರಿಗೆ ಬಂದಿದ್ದು ಅವರ ಜೊತೆಗೆ Chief Engineer ಸಹ ಬಂದಿದ್ದು ದಾಖಲಿಸಿದ್ದಾರೆ.

ಚಿತ್ರದುರ್ಗ ಡಿವಿಷನಲ್ಲಿ ಆರು ಸಾವಿರ ಹೊಸದಾಗಿ ಕೆರೆಗಳನ್ನು ಕಟ್ಟಿಸಲಾಯಿತು. ಇವುಗಳನ್ನು ಜನಸಾಮಾನ್ಯರ ಲೋಕಸೇವಾ ನಿಧಿಯಿಂದ ರಿಪೇರಿ, ಮಾಡುತ್ತಾ ಬರಲಾಗಿತ್ತು. ಈ ಖರ್ಚು ವೆಚ್ಚವನ್ನು ಮಹಾರಾಜರು ಕೊಡುತ್ತಾ ಇದ್ದರು. ಇದಕ್ಕೆ ಕಂದಾಯ ಇಲಾಖೆಯವರು ಹೆಚ್ಚಿನ ಅನುದಾನವನ್ನು ಕೊಡುತ್ತಾ ಇದ್ದರು ಎಂದಿದ್ದಾರೆ.

ವೇದಾವತಿ ಅಥವಾ ಹಿರಿಯೂರು ನದಿ ಬೆಟ್ಟದ ಮೇಲ್ ಹರಿದು ಬರುತ್ತದೆ. ಈ ನದಿ ಹಿರಿಯೂರಿಗೆ ಹತ್ತು ಮೈಲಿ ದೂರದಲ್ಲಿ ಇದೆ. ಮಾರಿಕಣಿವೆ ಅಣೆಕಟ್ಟು ೧೮೫೫ರಲ್ಲಿ ಯೋಜನೆಗೆ ಯೋಚಿಸಲಾಯಿತು. ಈ ಅಣೆಕಟ್ಟಿನ ಸುತ್ತಳತೆ. ಅರವತ್ತು ಮೈಲಿ ಸುತ್ತಳತೆ ಇದ್ದು ಈ ಅಣೆಕಟ್ಟಿನಿಂದ ಐದುಲಕ್ಷ ಎಕರೆ ಪ್ರದೇಶಕ್ಕೆ ನೀರು ಕೊಡಿಸುವಷ್ಟು ನೀರು ಸಂಗ್ರಹವಾಗುತ್ತದೆ. ಈ ಅಣೆಕಟ್ಟು ಕಟ್ಟಡಕ್ಕೆ Sir Maric Cubbon ಅವರು ಬಹಳ ಆಸಕ್ತಿ ವಹಿಸಿದರು. ಅಂದಿನ ಮುಖ್ಯ ಇಂಜಿನಿಯರ್ Colunel Green ಅವರು ಅಷ್ಟೇ ಆಸಕ್ತಿಯಿಂದ ಕೆಲಸ ಮಾಡಿದರು. ನಾನು ನನ್ನ ಸ್ನೇಹಿತ Sir Arthur Cotton ಜೊತೆ ಹಿರಿಯೂರು ಅಣೆಕಟ್ಟು ಕಟ್ಟುವ ಪ್ರದೇಶಕ್ಕೆ ಹೋದೆ. ಮುಂದೆ ಕಾಗದ ಪತ್ರಗಳು ಓಡಾಡಿದವು. ಆ ಅಣೆಕಟ್ಟಿನ ಅಂದಾಜು ವೆಚ್ಚ ಸಿದ್ಧಪಡಿಸಲಾಯಿತು.

The Madras Irrigation Company ಅವರಿಗೆ ಅಣೆಕಟ್ಟು ಕಟ್ಟಲು ಗುತ್ತಿಗೆ ಕೊಡಲಾಯಿತು. ಡಾಬ್ಸ ಕಾಲದಲ್ಲಿ ಮಾರಿಕಣಿವೆ ಅಣೆಕಟ್ಟು ಕಟ್ಟಲಾಗಲಿಲ್ಲ. ಅವರು ಈ ರೀತಿ ಬರೆದಿದ್ದಾರೆ. "The failure of this project (Generally known as the Maury Cannai) was the greatest disappointment I ever has in public life" ಎಂದಿದ್ದಾರೆ.

ಮಾರಿಕಣಿವೆ ಇತಿಹಾಸಕ್ಕೆ ಬಹಳ ಗಟ್ಟಿಯಾದ ಮಾಹಿತಿ ಇಲ್ಲಿ ಲಭ್ಯವಾಗುತ್ತದೆ. ಬೆಂಗಳೂರು ಸ್ಯಾಂಕಿಕೆರೆ ಹೆಸರು ಬಂದದ್ದು ಬ್ರಿಟೀಷ್ ಆಡಳಿತದ Chief Engineer ಹೆಸರಿಂದ ಎಂದು ತಿಳಿದು ಬಂತು. ಕುಣಿಗಲ್ ಹತ್ತಿರದ ಪುಣ್ಯಕ್ಷೇತ್ರದ ಹೆಸರನ್ನು ಡಾಬ್ಸ ಬರೆದಿಲ್ಲ. ಕುಣಿಗಲ್ ಹತ್ತಿರ ಇರುವುದು ಎಡೆಯೂರು ಇರಬಹುದು. ಅಂದೇ ಮಂಡೆಗೆ ಇಷ್ಟು ಹಣ ಎಂದು ಸರ್ಕಾರ ನಿರ್ಧರಿಸಿದ್ದು ಮಂಡೆಯಿಂದ ಬಂದ ಕೂದಲು ಹರಾಜು ಪ್ರಕ್ರಿಯೆ ಬಗ್ಗೆ ಸಹ ಮಾಹಿತಿ ಇದೆ. ದೇವರಾಯನದುರ್ಗದ ಲಕ್ಷ್ಮೀನರಸಿಂಹಸ್ವಾಮಿ ದರ್ಶನಕ್ಕೆ ಬಂದ ಭಕ್ತರು ಪೂಜೆ ಮಾಡಿಸಲು ಹಣ ಕೊಡಬೇಕಾಗಿತ್ತು. ಈ ವಿಷಯವನ್ನು ಡಾಬ್ಸ ದಾಖಲಿಸಿದ್ದಾರೆ. ಆ ಹಣ ಸರಕಾರಕ್ಕೆ ಸೇರುತ್ತಾ ಇತ್ತು.

ಡಾಬ್ಸರವರು ನೇರವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರವರನ್ನು ಟೀಕಿಸಿರುವುದು ಅವರ ಬರಹದಲ್ಲಿ ಕಾಣಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ತಾಲ್ಲೂಕುಗಳು ರಚನೆಯಾಗಿದ್ದು. ಪ್ರತಿಯೊಂದು ತಾಲ್ಲೂಕುಗಳಲ್ಲಿ ಅಮಲ್ದಾರರು ಇರುತ್ತಾ ಇದ್ದರು. ಅವರು ತಾಲ್ಲೂಕು ಆಡಳಿತ ನಡೆಸುತ್ತಾ ಕಂದಾಯವನ್ನು ಸಂಗ್ರಹಿಸಿ ಕೇಂದ್ರ ಆಡಳಿತಕ್ಕೆ ಕಳುಹಿಸುತ್ತಾ ಇದ್ದರು. ಅಮಲುದಾರುಗಳಿಗೆ ಪೊಲೀಸ್, ತಾಲ್ಲೂಕು ನ್ಯಾಯಾಧೀಶ ಜೊತೆಗೆ ಕಂದಾಯ ಇಲಾಖೆಯ ಮುಖ್ಯಸ್ಥನಾಗಿ ಕೆಲಸ ಮಾಡುತ್ತಾ ಇದ್ದುದರಿಂದ ಅನೇಕ ವಿಧವಾದ ದುರಾಡಳಿತಕ್ಕೆ ಅವಕಾಶವಾಗಿತ್ತು ಎಂದಿದ್ದಾರೆ. ಡಾಬ್ಸರವರು ಬ್ರಿಟೀಷ್ ಆಡಳಿತಕ್ಕೆ ಸೇರಿದವರು ಅವರ ಬರವಣಿಗೆಯಲ್ಲಿ ಸ್ಥಳೀಯ ಆಡಳಿತ ನಡೆಸುತ್ತಾ ಇದ್ದ ಮಹಾರಾಜರ ಬಗ್ಗೆ ಒಳ್ಳೇ ಅಭಿಪ್ರಾಯವಿರಲಿಲ್ಲ. ಅದಕ್ಕೆ ಎಲ್ಲವನ್ನು ಗುಮಾನಯಿಂದ ನೋಡುತ್ತಾ ಬಂದಿದ್ದಾರೆ.

ಅಂದಿನ ದಿನ ಕಾಲರಾದಿಂದ ಜನಸಾಮಾನ್ಯರು ಬಹಳ ತೊಂದರೆಪಟ್ಟರು. ಒಂದೇ ದಿನ ಎಪ್ಪತ್ತು ಜನ ಕಾಲರಾದಿಂದ ಸತ್ತು ಹೋದದ್ದು ದಾಖಲಿಸಿದ್ದಾರೆ. ಹೆಣ ಸಾಗಿಸುವುದಕ್ಕೆ ಕೂಲಿಗಳು ಸಹ ಸಿಗದೆ ಇರುವುದು ಹೇಳಿದ್ದಾರೆ. ಈ ಸಮಯ ದಲ್ಲಿ ಹದಿನೇಳು ಜನ ಇಂಗ್ಲೀಷ್ ಅಧಿಕಾರಿಗಳು ಕಾಲರಾದಿಂದ ತೊಂದರೆಗೆ ಒಳಗಾದರು. ಅಂದಿನ ಕಾಲದಲ್ಲಿ ಅಂಟುಜಾಡ್ಯ ಕಾಯಿಲೆ ಕಾಲರಾದಿಂದ ಎಳನೂರು ಜನ ಸ್ಥಳೀಯರು ಸತ್ತುಹೋದರು ಈ ಘಟನೆ ನಡೆದದ್ದು ೧೮೩೭-೩೮ರಲ್ಲಿ.

ಡಾಬ್ಸರವರು ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಜಗದ್ಗುರು ಶಬ್ದವನ್ನು High Priests ಎಂದು ಭಾಷಾಂತರ ಮಾಡಿದ್ದಾರೆ. ದಕ್ಷಿಣ ಭಾರತದಲ್ಲಿ ಬಹಳ ಪ್ರಸಿದ್ಧಿಯಾದ ಮಠ. ಮಠದ ಭಕ್ತರಿಗೆ ಭಕ್ತಿಗಿಂತ ಭಯ ಜಾಸ್ತಿ. ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳು, ಆಡಳಿತ ನಡೆಸುತ್ತಿರುವ ಬ್ರಿಟೀಷ್ ಅಧಿಕಾರಿಗಳು ಬಹಳ ಗೌರವ ಕೊಡಬೇಕು ಎಂದು ಅಪೇಕ್ಷಿಸುತ್ತಾರೆ ಎಂದು ಡಾಬ್ಸರವರು ಬರೆದಿದ್ದಾರೆ. ಮಿಶನರಿ ಮನೋಭಾವದ ಡಾಬ್ಸರವರಿಗೆ ಅನ್ಯ ಧರ್ಮದ ಧರ್ಮಪ್ರಚಾರಕರನ್ನು ಕಂಡರೆ ಅವರಲ್ಲಿ ಇರುವ ಒಳ್ಳೇ ಗುಣಗಳಿಗಿಂತ ಒಂದು ತರಹದ ತಾತ್ಸಾರ ಭಾವನೆಯನ್ನು ಕಾಣುತ್ತೇವೆ.

ನಾನು ಚಿತ್ರದುರ್ಗ ಡಿವಿಜನ್ ಅಧಿಕಾರಕ್ಕೆ ಬರುವ ಸ್ವಲ್ಪ ಕಾಲದ ಮುಂಚೆ, ಚಿತ್ರದುರ್ಗ ಮುರುಘಾಮಠದ ಜಗದ್ಗುರು ಲಿಂಗೈಕ್ಯರಾಗಿದ್ದರು. ಅವರು ಇಡೀ ಭಾರತದೇಶದ ಲಿಂಗಾಯತ ಜನಾಂಗಕ್ಕೆ ಜಗದ್ಗುರುಗಳು ಅವರು

ಚಿತ್ರದುರ್ಗ ಪೇಟೆಯಿಂದ ಮೂರು ಮೈಲಿ ದೂರದಲ್ಲಿ ಇರುವ ಮಠದಲ್ಲಿ ಲಿಂಗೈಕ್ಯರಾಗಿದ್ದರು. ಜಗದ್ಗುರು ಪೀಠಕ್ಕೆ ಬರಲು ಹಲವು ಜನ ಸ್ವಾಮಿಗಳು ಬಹಳ ಪೈಪೋಟಿ ನಡೆಸುತ್ತಾ ಇದ್ದರು. ಸರ್ಕಾರದ ಅಧಿಕಾರಿಗಳ ಸಹಾಯ ಪಡೆದು ಜಗದ್ಗುರು ಪೀಠವನ್ನು ಅಲಂಕರಿಸಲು ಅಂದಿನ ಸೂಪರಿನ್‌ಡೆಂಟ್ ಆಗಿದ್ದ Mr. Popham ಅವರಿಗೆ ಹಣದ ಆಸೆಯನ್ನು ತೋರಿಸಲಾಗಿತ್ತು ಎಂದಿದ್ದಾರೆ.

ಚಿತ್ರದುರ್ಗ ಬೃಹನ್‌ಮಠದ ಜಗದ್ಗುರು ಪೀಠವನ್ನು ಅಲಂಕರಿಸಲು ನಡೆಯುತ್ತಾ ಇರುವ ಕೋಲಾಹಲವನ್ನು ವಿವರವಾಗಿ Chief Commissioner ಅವರಿಗೆ ತಿಳಿಸಿದೆ. ಅವರು ಸಂಪೂರ್ಣ ವಿವರ ಪಡೆದು, ಈ ಹಿಂದೆ ಜಗದ್ಗುರುಗಳನ್ನು ಯಾವ ರೀತಿ ಆಯ್ಕೆ ಮಾಡುತ್ತಾ ಇದ್ದರು ಎಂಬ ವಿವರವನ್ನು ಪಡೆದು, ಚುನಾವಣೆ ಮೂಲಕ ಜಗದ್ಗುರುಗಳನ್ನು ಆಯ್ಕೆ ಮಾಡುವಂತೆ ಆದೇಶ ನೀಡಿದರು. ಈ ಚುನಾವಣೆಯಲ್ಲಿ ಮತ ಹಾಕುವವರು ಕಟ್ಟಾ ಭಕ್ತರು, ರಾಜಮನೆತನದವರು ಮತ್ತು ಶಾಖಾಮಠದ ಸ್ವಾಮಿಗಳು ಎಂದು ನಿರ್ಧರಿಸಿ, ಇಂತಹ ದಿವಸ ಮುರುಘಾಮಠದಲ್ಲಿ ಜಗದ್ಗುರುವನ್ನು ಆಯ್ಕೆ ಮಾಡಲು ಚುನಾವಣೆ ನಡೆಸಲಾಗುತ್ತದೆ ಎಂದು ಪ್ರಕಟಿಸುವಂತೆ ಆದೇಶ ನೀಡಿದರು.

ಚುನಾವಣೆ ನಡೆದು ಜಗದ್ಗುರುವನ್ನು ಭಕ್ತಜನ, ವಿರಕ್ತಮೂರ್ತಿಗಳು, ರಾಜಮನೆತನದ ಭಕ್ತರು ಮತವನ್ನು ಹಾಕಿ ಚುನಾಯಿಸಿದರು. ನಾನು ಚುನಾವಣೆ ನಂತರ ಚಿತ್ರದುರ್ಗಕ್ಕೆ ಸರ್ಕಾರದ ಕೆಲಸಕ್ಕೆ ಹೋದಾಗ, ಹೊಸದಾಗಿ ಬಂದ ಜಗದ್ಗುರುಗಳು ಸಂಸ್ಥಾನಕ್ಕೆ ಬರುವಂತೆ ಆಹ್ವಾನವನ್ನು ಕೊಟ್ಟರು. ಹಲವು ಬಾರಿ ಹೇಳಿಕಳುಹಿಸಿದರು. ಸರ್ಕಾರದ ವಿಭಾಗದ ಮುಖ್ಯಸ್ಥನಾದ ನನ್ನ ನೋಡಲು ಹೊಸದಾಗಿ ಚುನಾಯಿತರಾದ ಜಗದ್ಗುರುಗಳು ಬರಬಹುದು ಎಂದು ನಾನು ಅಂದುಕೊಂಡಿದ್ದೆ. ಆದರೆ ಹೊಸದಾಗಿ ಜಗದ್ಗುರುವಾದ ಸ್ವಾಮಿ ನನ್ನ ನೋಡಲು ಬರಲಿಲ್ಲ. ನಾನು ಬೃಹನ್‌ಮಠಕ್ಕೆ ಹೋಗಲಿಲ್ಲ.

ಬಹಳ ದಿವಸದ ನಂತರ ಒಂದು ವಿಶೇಷವಾದ ಘಟನೆ ನಡೆಯಿತು. ನಾನು ಕುದುರೆ ಮೇಲೆ ಸವಾರಿ ಮಾಡುತ್ತಾ ಬೃಹನ್‌ಮಠದ ಮುಂದೆ ಸಾಗುವಾಗ ಪರಮಪೂಜ್ಯ ಮುರುಘಾ ಜಗದ್ಗುರುಗಳು ತಮ್ಮ ಶಾಖಾಮಠದ ಸ್ವಾಮಿಗಳೊಂದಿಗೆ ಮತ್ತು ಭಕ್ತರೊಂದಿಗೆ ನಿಂತಿದ್ದರು. ನನ್ನ ನೋಡಿದ ಜಗದ್ಗುರುಗಳು ಬೃಹನ್‌ಮಠಕ್ಕೆ ಬನ್ನಿ ಎಂದು ಹೇಳಿದರು. ನಾನು ಒಬ್ಬನೇ ಇದ್ದೆ. ಹಿಂದೆ ನಾಲ್ಕಾರು ಸಾರಿ ಕರೆದರು ಮಠಕ್ಕೆ ಹೋಗಲು ಆಗಿರಲಿಲ್ಲ. ಆ ದಿನ ಒಪ್ಪಿಗೆ ಸೂಚಿಸಿ ಬೃಹನ್‌ಮಠಕ್ಕೆ ಹೋದೆ. ಜಗದ್ಗುರುಗಳು ದರ್ಶನ ಕೊಡುವ ಸದರದಲ್ಲಿ ಒಂದು ಜಗದ್ಗುರುಗಳ ಸಿಂಹಾಸನ ಮತ್ತು ಒಂದು ಸಾಮಾನ್ಯ ಕುರ್ಚಿ ಇತ್ತು. ಮಠದಲ್ಲಿ ಇದ್ದ ಜಗದ್ಗುರುಗಳ ಪರಿಚಾರಕರು ನನ್ನನ್ನು ನೋಡಿ ತಾವು ಇಲ್ಲಿ ದಯಮಾಡಿಸಿ ಎಂದು ಸಾಮಾನ್ಯ ಕುರ್ಚಿ ತೋರಿಸಿದರು. ನಾಣು ಅವರ ಮಾತನ್ನು ಕೇಳಿಸಿಕೊಳ್ಳದವನಂತೆ ಸಿಂಹಾಸನದ ಮೇಲೆ ಕುಳಿತುಕೊಂಡೆ. ನಾನು ಕುಳಿತಿದ್ದು ನೋಡಿದ "ಜಗದ್ಗುರುಗಳು" ಏನೋ ಮಾತನಾಡದೆ ಅವರ ಅಸಂತೋಷವನ್ನು ಹೊರಗೆ ಹಾಕದೆ ಸಾಮಾನ್ಯ ಕುರ್ಚಿಯ ಮೇಲೆ ಕುಳಿತುಕೊಂಡರು. ಚಿತ್ರದುರ್ಗ ಜನತೆ ಈ ವಿಷಯ ತಿಳಿದು "Diplomatic Victory" ಎಂದು ಹೇಳಿದರಂತೆ.

ಚಿತ್ರದುರ್ಗ ಮುರಿಘಾ ಜಗದ್ಗುರುಗಳು ದಕ್ಷಿಣ ಭಾರತದ ತುಂಬಾ ಸಂಚಾರ ಮಾಡುತ್ತಾರೆ. ಅವರು ಸಂಚಾರ ಮಾಡುವಾಗ ಹಲವು ಆನೆಗಳು, ಒಂಟೆಗಳು, ಐನೂರು ಜನ ಸಿಬ್ಬಂದಿ ಇದರಲ್ಲಿ ಶಾಖಾಮಠದ ಸ್ವಾಮಿಗಳು, ವೇದಘೋಷಕರು, ಸಹಾಯಕರು, ಶಿವಪೂಜಾ ಸಿಬ್ಬಂದಿ, ಪ್ರಸಾದ ಸಿದ್ಧ ಮಾಡುವವರು, ಸೇವಕರು ಎಲ್ಲಾ ಇರುತ್ತಾ ಇದ್ದರು. ತಮ್ಮ ಶಿಷ್ಯರ ಹತ್ತಿರ ಕಾಣಿಕೆ ಸಂಗ್ರಹ ಮಾಡಿಕೊಂಡು ಬರುತ್ತಾ ಇದ್ದರು. ಶಿಷ್ಯರು ಸರ್ಕಾರಿ ಕೆಲಸದಲ್ಲಿ ಇದ್ದರೆ ಎರಡು ತಿಂಗಳ ಸಂಬಳ ಕೊಡಬೇಕಾಗಿ ಇತ್ತಂತೆ. (ನನ್ನ ಪ್ರಕಾರ ಎರಡು ತಿಂಗಳ ಕೊಡುವುದು ಅಸಾಧ್ಯ.)

ನಾನು ದೇವರಾಯನದುರ್ಗಕ್ಕೆ ಮೊದಲು ಭೇಟಿ ಕೊಟ್ಟಾಗಲೆ ಬಹಳ ಸುಂದರವಾದ ದೊಡ್ಡ ದೇವಾಲಯವನ್ನು ನೋಡಿದ್ದೆ. ಅಲ್ಲಿದ್ದ ಐದು ಜನ ಪೂಜಾರಿಗಳು ದೇವಸ್ಥಾನದ ಒಳಗೆ ಬರಲು ಹೇಳಿದರು. ಗರ್ಭಗುಡಿ ಹತ್ತಿರದ ಮುಖಮಂಟಪದಲ್ಲಿ ನಿಂತು ದೇವರದರ್ಶನ ಮಾಡಿದ್ದೆ. ಒಂದು ದಿನ ನನ್ನ ಸ್ನೇಹಿತರ ಜೊತೆ ದೇವಸ್ಥಾನಕ್ಕೆ ಹೋದೆ. ಅವರನ್ನು ಕಂಡ ಪೂಜಾರಿ ನಮ್ಮ ದೊಡ್ಡ ದೊರೆ ಫರಂಗಿ ದೇಶದವರನ್ನು ದೇವಸ್ಥಾನದ ಒಳಗೆ ಬಿಡಬೇಡ ಎಂದು ಹೇಳಿದ್ದಾರೆ ಎಂದು ಹೇಳಿದ. ಆಗ ನಾನು ಕುಡಿದು ಪೂಜೆ ಮಾಡುವ ಪೂಜಾರಿಯಿಂದ ದೇವಸ್ಥಾನದ ಪಾವಿತ್ರ್ಯತೆ ಇರುತ್ತದೆ. ಫರಂಗಿ ದೇಶದವರು ದೇವಸ್ಥಾನಕ್ಕೆ ಬಂದರೆ ದೇವಸ್ಥಾನ ಅಪವಿತ್ರವಾಗುತ್ತಾ ಎಂದು ಪ್ರಶ್ನಿಸಿದೆ.

ಅರ್ಚಕರು, ಪೂಜಾರರು, ಮಂತ್ರಪುಷ್ಪದವರು, ನೈವೇದ್ಯ ಸಿದ್ಧಪಡಿಸುವವರು ನನ್ನ ನೋಡಿ ದಯಮಾಡಿ ಒಳಗೆ ಬನ್ನಿ ಎಂದು ವಿನಂತಿಸಿಕೊಂಡರು. ಆದರೆ ನಾನು ನನ್ನ ಸ್ನೇಹಿತರು ಒಳಗೆ ಹೋಗಲಿಲ್ಲ. ದೊಡ್ಡದೊರೆ ಎಂದರೆ ಮುಮ್ಮಡಿ ಕೃಷ್ಣರಾಜ ಒಡೆಯರವರು ಅವರು ಅರ್ಚಕರಿಗೆ ಯುರೋಪಿಯನ್ನರನ್ನು ದೇವಸ್ಥಾನದ ಒಳಗೆ ಬಿಡಬೇಡ ಎಂದು ಹೇಳಿರಬೇಕು.

ನನ್ನನ್ನು ೧೮೬೦ನೇ ಇಸವಿಯಲ್ಲಿ ಬೆಂಗಳೂರಿಗೆ ವರ್ಗಾವಣೆ ಮಾಡಿದರು. ನನ್ನ ಕೇಂದ್ರ ಸ್ಥಾನ ಬೆಂಗಳೂರು ಆಗಿತ್ತು. ನಾನು ಮೊದಲು ಬೆಂಗಳೂರಿಗೆ ಬಂದದ್ದು ೧೮೨೮ರಲ್ಲಿ. ೧೮೩೫ರಲ್ಲಿ ನನ್ನ ಚಿತ್ರದುರ್ಗ ಡಿವಿಜನ್ ಕಮೀಷನರ್‌ನಾಗಿ ಮಾಡಿದರು.

ಸರ್ ಮಾರ್ಕ್ ಕಬ್ಬನ್‌ರವರ ಆರೋಗ್ಯ ೧೮೬೧ರಲ್ಲಿ ಬಹಳ ಬಿಗಡಾಯಿಸಿತು. ಏಪ್ರಿಲ್ ೧೮೬೧ರಲ್ಲಿ ಅವರು ಇಂಗ್ಲೇಡಿಗೆ ಹಡಗಿನಲ್ಲಿ ಪ್ರಯಾಣ ಮಾಡುವಾಗ ೨೩ ಏಪ್ರಿಲ್ ೧೮೬೧ರಂದು ಅವರ ಪ್ರಾಣಪಕ್ಷಿ ಹಾರಿಹೋಯಿತು. Dr. Cambell ಅವರು ದೇಹವನ್ನು ಸುರಕ್ಷಿತವಾಗಿ ಇಂಗ್ಲೇಡ್‌ಗೆ ತೆಗೆದುಕೊಂಡು ಹೋಗಿ ಅವರ ಮನೆತನದ ಸ್ಮಶಾನದಲ್ಲಿ ಸಮಾಧಿ ಮಾಡಲಾಯಿತು. ಡಾಬ್ಸರವರ ಪುಸ್ತಕದಲ್ಲಿ ಸರ್ ಮಾರ್ಕ್ ಕಬ್ಬನ್‌ರವರ ಬಗ್ಗೆ ಸಾಕಷ್ಟು ಮಾಹಿತಿ ಇದೆ.

ಕಮಿಷನರ್ ಆಡಳಿತ ಪ್ರಾರಂಭವಾದಾಗ ಬೆಂಗಳೂರು ಅಬಕಾರಿ ಸುಂಕ ೧೮೩೨ರಲ್ಲಿ ೩,೬೦೦ ಪೌಂಡ್ಸ್ ಅಷ್ಟು ಇತ್ತು. ೧೮೬೧ರಲ್ಲಿ ೨೦,೦೦೦ ಪೌಂಡ್ಸ್ ಅಷ್ಟು ಆಯಿತು.

ಡಾಬ್ಸರವರು ತಮ್ಮ ಅನುಭವವನ್ನು ಈ ರೀತಿ ಹಂಚಿಕೊಂಡಿದ್ದಾರೆ. ಇಂಗ್ಲೀಷ್ ಆಡಳಿತಗಾರರಷ್ಟೆ ಸ್ಥಳೀಯ ಅಧಿಕಾರಿಗಳು ಸಹ ಆಡಳಿತ ನಡೆಸುವಲ್ಲಿ ಶಕ್ತರಾಗಿದ್ದಾರೆ ಎಂಬ ಅಭಿಪ್ರಾಯ ನೀಡಿದ್ದಾರೆ. ೧೬ ಮಾರ್ಚ್ ೧೮೬೬ ಕಬ್ಬನ್ ಅವರ ವಿಗ್ರಹದ ಅನಾವರಣವಾಯಿತು. ಆ ಎಲ್ಲಾ ವಿವರವನ್ನು ಪುಸ್ತಕದಲ್ಲಿ ಕೊಡಲಾಗಿದೆ. ಕಬ್ಬನ್ ವಿಗ್ರಹದ ಅನಾವರಣ ಮಾಡಿದವರು Mr. Bowring ಅಂದಿನ Chief Commissioner ರವರು. ಡಾಬ್ಸರವರು ಸರ್ಕಾರಿ ಕೆಲಸದಿಂದ ನಿವೃತ್ತಿಯಾದಾಗ ಅವರಿಗೆ ಅರ್ಪಿಸಿದ ಬೆಳ್ಳಿ ಕರಂಡದ ಮೇಲೆ ಈ ರೀತಿ ಕೆತ್ತಲಾಗಿತ್ತು.

"Address prsented to colonel R.S. Dobbs, Mysore Commission, on the 30th of March 1867, by the European community of Bangalore, on the occasion of his leaving India."

ಇದೇ ರೀತಿ ಸ್ಥಳೀಯರು ಡಾಬ್ಸರವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಇಟ್ಟುಕೊಂಡಿದ್ದರು. ಆ ಬಗ್ಗೆ ಪುಸ್ತಕದಲ್ಲಿ ಈ ರೀತಿ ಬರೆಯಲಾಗಿದೆ. "On Saturday afternoon, the 6th April 1867, A farewell address was presented to colonel R.S. Dobbs in the centre hall of the Government High School ಅಂದು ಅರ್ಪಿಸಿದ ಇಂಗ್ಲೀಷ್‌ನಲ್ಲಿ ಅಭಿನಂದನಾ ಪತ್ರ ವಾಚಿಸಿದ್ದು ಶ್ರೀ ಮರಿಗುಣಯ್ಯ, ಕನ್ನಡದಲ್ಲಿ ಶ್ರೀ ಯತಿರಾಜಲು ನಾಯ್ಡು ಹಿಂದೂಸ್ಥಾನಿಯಲ್ಲಿ ಶ್ರೀ ಅಬ್ದುಲ್ ಖಾದರ್ ಸಾಹೇಬ.

ಡಾಬ್ಸರವರ ಸೇವೆಯನ್ನು ಗುರುತಿಸಿ ಅವರ ಸೇವೆ ನಮ್ಮ ಪ್ರಾಚೀನ ಕಾಲದ ಹಳ್ಳಿಯ ಮುಖ್ಯಸ್ಥನಾದ ಡಾಬ್ಸ ಸಾಹೇಬರವರನ್ನು **"ಹಳ್ಳಿಯ ಗೌಡ"** ಎಂದು ಆತ್ಮೀಯವಾಗಿ ಕರೆದಿದ್ದಾರೆ. ಈ ಎಲ್ಲಾ ಅಭಿನಂದನಾ ಸಮಾರಂಭದ ವಿಷಯ ಸ್ಪಷ್ಟವಾಗಿ ತಿಳಿದು ಬಂದಿದ್ದು "Bangalore Spectator" ಇಂಗ್ಲೀಷ್ ಪತ್ರಿಕೆಯಿಂದ. ಡಾಬ್ಸರವರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ.

.... The union of all classes and all castes in doing me honour shows that I have not been altogether unsuccessful in carrying out a system of impartiality in administering justice and dispensing patronage-........

.......Although returning to my native land, Mysore will always possess a full share of my own and Mrs. Dobbs' thoughts and affections, and we will ever rejoice in the prosperity and happiness of all classes, above all in the increase of knowledge, morality, and true religion. I would again thank you from my heart,and bid you an affectinate farewell in my own and Mrs. Dobbs' name."

ಡಾಬ್ಸರವರ ಪುಸ್ತಕ ಯಥಾವತ್ತಾಗಿ ಕನ್ನಡಭಾಷೆಗೆ ಭಾಷಾಂತರವಾಗಬೇಕು. ನಮ್ಮ ಯುವ ವಿದ್ವಾಂಸರು ಇನ್ನಷ್ಟು ಸೂಕ್ಷ್ಮವಾಗಿ ಅಧ್ಯಯನ ಮಾಡಬೇಕು.

೧೧೫

ವಸಾಹತುಷಾಹಿ-ಪೂರ್ವ ಕೊಡಗು ಹಾಗೂ ಲೆಫ್ಟಿನೆಂಟ್ ಕಾನರ್‌ನ ಪ್ರವಾಸ ವೃತ್ತಾಂತ

ಎಮ್.ಎಮ್. ಮೀನಾಕ್ಷಿ*

ಕೊಡಗಿನ ಕುರಿತು ಮಾಹಿತಿ ಹಾಗು ಇತಿಹಾಸ ಸೃಷ್ಟಿಯಲ್ಲಿ ವಸಾಹತುಷಾಹಿ ಅಕ್ರಮಣಕಾರರು ಮಹತ್ತರ ಪಾತ್ರವಹಿಸಿರುತ್ತಾರೆ. ಬ್ರಿಟಿಷರು ಕೊಡಗು ಪ್ರಾಂತ್ಯವನ್ನು ಗೆದ್ದದ್ದು ಮಾತ್ರವಲ್ಲ ಅದರ ಇತಿಹಾಸವನ್ನು ಕೂಡ ಕಟ್ಟಿಕೊಟ್ಟರು. ತಾವು ನಿರೂಪಿಸಿದ ಚರಿತ್ರೆಯೆ ನಿಜವಾದ ಚರಿತ್ರೆಯೆಂದು ಸಾಧಿಸಿದರು. ಇವರು, ಪ್ರಾಂತ್ಯದ ನೆಲ, ಜನರು, ಸಂಸ್ಕೃತಿಗಳ ಕುರಿತು ಅಧ್ಯಯನ ಮಾಡಿದ್ದು ಮಾತ್ರವಲ್ಲ, ಅವುಗಳ ಕುರಿತು, ಗುರುತುಗಳನ್ನು, ಪ್ರತಿಮೆಗಳನ್ನು ಹುಟ್ಟುಹಾಕಿದರು. ಇವುಗಳು ಕೊಡಗರ ರಾಜಕೀಯ ಹಾಗು ಸಾಮಾಜಿಕ ಜೀವನದಲ್ಲಿ ದೀರ್ಘ ಕಾಲದಿಂದ ನೆಲೆನಿಂತು, ಇಂದೂ ಪ್ರಭಾವ ಬೀರುತ್ತಿವೆ.

ವಸಾಹತುಷಾಹಿ ಬರಹಗಾರರು, ತಮ್ಮ ಸುಪರ್ದಿಗೆ ಬಂದ ಪ್ರದೇಶಗಳ ಬಗ್ಗೆ ಮಾಹಿತಿ ಕಲೆಹಾಕಿ ಅವುಗಳ ಆಧಾರದ ಮೇಲೆ ಚರಿತ್ರೆಯನ್ನು ಆಡಳಿತಾತ್ಮಕ ಉದ್ದೇಶಗಳಿಗೆ ಬರೆದರೂ ಅದರ ಹಿಂದೆ ಸಾಮ್ರಾಜ್ಯಷಾಹಿ ಕಾರ್ಯಸೂಚಿಗಳಿದ್ದವೆನ್ನುವುದು ಸತ್ಯ.

ಕೊಡಗಿನ ಇತಿಹಾಸ ನಿರ್ಮಿಸಲು ನಮಗೆ ಇರುವ ಒಂದು ಬಹುಮುಖ್ಯವಾದ ಆಕರವೆಂದರೆ ವಿದೇಶಿ ಪ್ರವಾಸಿಗರ ಪ್ರವಾಸಿ ಕಥನಗಳು, ಅನುಭವಗಳು, ಸರ್ವೇಕ್ಷಣಾ/ ಸಮೀಕ್ಷಾ ವರದಿಗಳು, ಮುಂತಾದವು. ಇವುಗಳು ಸ್ಥಳೀಯ ಸಮಾಜ, ಸಂಸ್ಕೃತಿ, ಇತಿಹಾಸ, ಆರ್ಥಿಕತೆ, ರಾಜಕೀಯ ವ್ಯವಸ್ಥೆಗಳು, ಜನಾಂಗಿಕ ಅಂಶಗಳು, ಇವೇ ಮುಂತಾದ ವಿಷಯಗಳ ಕುರಿತು ಸ್ಥಳೀಯ ಬರವಣಿಗೆಗಳಿಗಿಂತ ಭಿನ್ನ ಭಿನ್ನವಾದ ಗ್ರಹಿಕೆಗಳನ್ನು ಅಭಿಪ್ರಾಯಗಳನ್ನು, ಅನಿಸಿಕೆಗಳನ್ನು, ಮಾಹಿತಿಯನ್ನು ನೀಡುತ್ತಾ ನಮ್ಮಲ್ಲಿ ವಿಮರ್ಷಾತ್ಮಕ ದೃಷ್ಟಿಕೋನಗಳನ್ನು ಮೂಡಿಸುತ್ತವೆ. ಕೊಡಗಿನ ಸಂದರ್ಭದಲ್ಲಿ ಅಂತಹ ಒಂದು ಮುಖ್ಯ ದಾಖಲೆ ಹಾಗೂ ಆಕರ ಲೆಫ್ಟಿನೆಂಟ್ ಕಾನರ್ ಎಂಬ ಸರ್ವೇಕ್ಷಣಗಾರನ ವರದಿ ***'ಮೆಮ್ವಾರ್ ಆಫ್ ದಿ ಕೊಡುಗು ಸರ್ವೇ ಕಾಮನ್ಲಿ ರಿಟನ್ ಕೂರ್ಗ್.'***

ಲೆ. ಕಾನರ್‌ನು ಮದ್ರಾಸ್ ರಾಯಲ್ ಇಂಜಿನಿಯರ್ಸ್ ಇಲಾಖೆಗೆ ಸೇರಿದ ಒಬ್ಬ ಸರ್ವೇಕ್ಷಣಾಗಾರನಾಗಿದ್ದು ಎರಡನೇ ಲಿಂಗರಾಜನ (೧೮೧೧-೨೦) ಕಾಲದಲ್ಲಿ, ಅವನ ಅಹ್ವಾನದ ಮೇರೆಗೆ ಕೊಡಗು ಪ್ರಾಂತ್ಯದ ಸ್ಥಳ ವಿವರಣೆಗೆ ಸಂಬಂಧಿಸಿದಂತೆ ಸ್ಥಳವಿವರಣಾ (ಟೊಪಾಗ್ರಾಫಿಕಲ್) ಸರ್ವೇಯನ್ನು ಸುಮಾರು ಎರಡು ವರ್ಷಗಳ ಅವಧಿಯಲ್ಲಿ (೧೮-೧೭) ಮಾಡಿ ವರದಿ ಸಲ್ಲಿಸುತ್ತಾನೆ. ಕೊಡಗನ್ನು ಕನ್ನಡದಲ್ಲಿ 'ಕೊಡುಗು' ಎಂದು, ಇಂಗ್ಲಿಷ್‌ನಲ್ಲಿ 'ಕೂರ್ಗ್' ಎಂದು ಕರೆಯುತ್ತಾನೆ. ಅಂದಿನ ಕೊಡಗು ಪ್ರಾಂತ್ಯ ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ ಭಾಗಗಳಾದ ಪುತ್ತೂರು ಹಾಗೂ ಸುಳ್ಯ ತಾಲೂಕುಗಳನ್ನು ಒಳಗೊಂಡಿತ್ತು.

'ಮೆಮ್ವಾರ್ ಆಫ್ ಕೊಡುಗು ಸರ್ವೆ' ವರದಿಯು ಕಾನರ್‌ನ ವೃತ್ತಿ ನೈಪುಣ್ಯತೆಗಳಿಗೆ, ದೈಹಿಕ ಹಾಗೂ ಮಾನಸಿಕ ಶಕ್ತಿ, ಶ್ರಮ, ಬದ್ಧತೆ, ಚಿಕಿತ್ಸಕ ನೋಟ, ಆಳವಾದ ಗ್ರಹಿಕೆ, ಮುಂತಾದಗುಣಗಳಿಗೆ ಶ್ರೇಷ್ಠ ಉದಾಹರಣೆಯಾಗಿದೆ. ಗಿರಿಕಂದರಗಳ, ದಟ್ಟ ಅರಣ್ಯಗಳ, ನದಿ ತೊರೆಗಳ, ದುರ್ಗಮ ನಾಡುಗಳ, ವೈವಿಧ್ಯ ಪ್ರಾಣಿ ಸಂಕುಲದ, ಸಹಿಸಲಸಾಧ್ಯ ವಾತಾವರಣದ ಪ್ರಾಂತ್ಯವಾದ ಕೊಡಗನ್ನು ಎರಡು ವರ್ಷಗಳಲ್ಲಿ, ಅದರ ಉದ್ದಗಲಕ್ಕೂ ತಿರುಗಾಡಿ ವಿವಿಧ ಅಂಶಗಳ ಕುರಿತು ಅಂದರೆ ಅದರ ಭೌಗೋಳಿಕ ಲಕ್ಷಣಗಳು, ಜನಸಂಖ್ಯೆ, ರಾಜಕೀಯ ವ್ಯವಸ್ಥೆ, ಭೂ ಹಿಡುವಳಿಗಳು; ಆರ್ಥಿಕತೆ, ಕೈಗಾರಿಕೆ, ಕೃಷಿ, ಗುಲಾಮ ವ್ಯವಸ್ಥೆ, ಜಾತಿ ಪದ್ಧತಿಗಳು, ಸಸ್ಯ ಹಾಗೂ ಪ್ರಾಣಿ ಸಂಕುಲಗಳು, ಧಾರ್ಮಿಕ ನಂಬಿಕೆಗಳು, ಕುಟುಂಬ ವ್ಯವಸ್ಥೆ, ಪ್ರಾಂತ್ಯದ ನೆಲೆ ಹಾಗು ಅದರ ಸೈನಿಕ ಲಾಭಗಳು, ತೆರಿಗೆ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ವ್ಯಾಪಾರ, ಕೃಷಿ ಉತ್ಪನ್ನಗಳು,

* ಸಹಾಯಕ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು-೫೭೫೦೦೧. ಮೊ. ೯೪೮೦೦೧೬೨೪೩.

ಅಮದು-ರಫ್ತು, ರಾಜರ ಆಡಳಿತದ ಸ್ವರೂಪ, ಇತಿಹಾಸ, ಮೈಸೂರು ಸುಲ್ತಾನರು ಹಾಗೂ ಹಾಲೇರಿ ರಾಜರ ಸಂಬಂಧ, ಬ್ರಿಟಿಷ್-ಕೊಡಗು ಸಂಬಂಧ, ಎರಡನೇ ಲಿಂಗರಾಜನ ಪಿತೂರಿಗಳು ಹಾಗೂ ಅವನಿಂದ ರಾಜ್ಯದ ವಶಪಡಿಸಿಕೊಳ್ಳುವಿಕೆ, ಹಾಗು ಅಂಕಿಅಂಶಗಳಿಂದ ಪಟ್ಟಿಗಳು, ಇವೇ ಮುಂತಾದ ಭಾಗಗಳನ್ನೊಂದಿದ ವರದಿಯನ್ನು ನೀಡುತ್ತಾನೆ. ಹತ್ತೊಂಬತ್ತನೇ ಶತಮಾನದ ಆದಿ ಭಾಗದಲ್ಲಿ ಕೊಡಗಿನ ಕುರಿತು ಇರುವ ಒಂದು ಅಮೂಲ್ಯ ದಾಖಲೆಯಂದರೆ 'ಕೊಡುಗು ಸರ್ವೇ' ಎನ್ನಬಹುದು.

ಈ ಸರ್ವೇಕ್ಷಣಾ ವರದಿಯ ಒಟ್ಟು ಬ್ರಿಟಿಷರ ಸಾಮ್ರಾಜ್ಯಷಾಹಿ ಧೋರಣೆಗೆ ಪೂರಕವಾಗಿದೆ. ಕಾನರನು ಕೊಡಗು ಪ್ರಾಂತ್ಯವನ್ನು ಹೆಚ್ಚಾಗಿ, ಸೈನಿಕ ಅಭಿರುಚಿ, ದೃಷ್ಟಿಕೋನಗಳಿಂದಲೆ ಮೌಲ್ಯಮಾಪನ ಮಾಡುತ್ತಾನೆ. ಅಲ್ಲದೆ ಅರಸು ಮನೆತನದ ಆಳ್ವಿಕೆ ಹಾಗೂ ಸರ್ಕಾರ ಮತ್ತು ರಾಜನ ಕುರಿತು ಕಠಿಣ ಮಾತುಗಳಲ್ಲಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾನೆ. ಅವನ ಅಭಿಪ್ರಾಯದಲ್ಲಿ ಸರ್ಕಾರದ ಇಡೀ ನೀತಿಯು ಒಂದು ರೀತಿಯಲ್ಲಿ ನಂಜಿನ ಮನೋಭಾವನೆಯಿಂದ ಕೂಡಿದೆ; ಎಲ್ಲಾ ಹೊರಗಿನವರನ್ನು ಮುಖ್ಯವಾಗಿ ಐರೋಪ್ಯರನ್ನು ಅಪರಿಮಿತ ಸಂಶಯದಿಂದ ಕಾಣಲಾಗುತ್ತದೆ; ಇದನ್ನು ತಾನೂ ಕೂಡ ಅಪಾರವಾಗಿ ಅನುಭವಿಸಿದ್ದೇನೆ; ತಾನೆಂದೂ ಸ್ಥಳೀಯರೊಂದಿಗೆ ಮುಕ್ತವಾಗಿ ಮಾತನಾಡಲು ಸಾಧ್ಯವಾಗಲೇ ಇಲ್ಲ; ಏಕೆಂದರೆ ತನ್ನನ್ನು ಸದಾ ಕಾವಲು ಭಟರು ಕಾಯುತ್ತಿದ್ದರು; ತನ್ನ ದಿನದ ಚಟುವಟಿಕೆಗಳ ಕುರಿತು ನತ್ಯವು ಮಡಿಕೇರಿಯಲ್ಲಿದ್ದ ರಾಜನಗೆ ಮಾಹಿತಿ ಹೋಗುತ್ತಿತ್ತು. ಎಲ್ಲಾ ನಮೂನೆಗಳಲ್ಲಿ ತನ್ನನ್ನು ದಾರಿ ತಪ್ಪಿಸಲು ಮೋಸಗಾರಿಗೆಯನ್ನು ಉಪಯೋಗಿಸಲಾಗುತ್ತಿತ್ತು; ಹೀಗಾಗಿ ತಾನು ತನ್ನ ಮಾಹಿತಿಗಳನ್ನು ತನಗೆ ದೊರೆತ ಅಲ್ಪ ದಾಖಲೆಗಳಿಂದ ಸಂಗ್ರಹಿಸಬೇಕಾಯ್ತು. ಆದುದರಿಂದ, ಅದು ನಿರೀಕ್ಷೆಗಿಂತ ಕಡಿಮೆ ಇರಬಹುದೆಂದು ಆರಂಭದಲ್ಲಿಯೇ ಬರೆಯುತ್ತಾನೆ.

ಎರಡು ಭಾಗಗಳನ್ನೊಂದಿರುವ ತನ್ನ ವರದಿಯಲ್ಲಿ ಕಾನರನು ಮೇಲಣ ಕೊಡಗನ್ನು 'ಅಚ್ಚ ಕೊಡಗು' ಹಾಗೂ ಪುತ್ತೂರು ಹಾಗೂ ಸುಳ್ಯ ಭಾಗವನ್ನು 'ಕೆಳಗಣ ಕೊಡಗು' ಎಂದು ಕರೆಯುತ್ತಾ ಎರಡು ಪ್ರದೇಶಗಳ ನಡುವೆ, ಬೆಳೆಗಳು, ಭೂಹಿಡುವಳಿ, ಜನರ ಜೀವನ ಪದ್ಧತಿ, ಭೂಮಿಯಲ್ಲಿ ಖಾಸಗಿ ಹಕ್ಕುಗಳು ಮತ್ತು ಸೈನಿಕ ಹಿಡುವಳಿ, ಜನರ ತೋರ್ಪಡಿಕೆ, ಇತ್ಯಾದಿಗಳಲ್ಲಿ ಕಂಡು ಬರುವ ಸಾಮ್ಯತೆ ಹಾಗೂ ಭಿನ್ನತೆಗಳ ಬಗ್ಗೆ ಬರೆಯುತ್ತಾ ಕೊಡಗು ವಿವಿಧ ರೀತಿಯಲ್ಲಿ ಭಿನ್ನವಾದ ಪ್ರದೇಶ ಎಂದು ಅಭಿಪ್ರಾಯ ಪಡುತ್ತಾನೆ.

ಕೊಡಗಿನ ಭೂ ಹಿಡುವಳಿ ವ್ಯವಸ್ಥೆಯನ್ನು ಅಧ್ಯಯನ ಮಾಡಿದ ಅವನು ಇಲ್ಲಿ ಕೊಡಗರಿಗಿದ್ದ ಖಾಸಗಿ ಹಕ್ಕುಗಳು ಅಥವಾ ಭೂಮಿಯಲ್ಲಿ ಇರುವ ವಯಕ್ತಿಕ ಹಕ್ಕನ್ನು ಚರ್ಚಿಸುತ್ತಾ ಕೊಡಗರು ತಮ್ಮ ಭೂಮಿಯನ್ನು ಮಾರುವಂತಿಲ್ಲ ಅಥವಾ ವಿಭಜಿಸುವಂತಿಲ್ಲ; ತಲತಲಾಂತರದಿಂದ ಭೂಮಿಯನ್ನು ಸ್ಥಿರವಾದ ಹಕ್ಕುಗಳನ್ನು ಅನುಭವಿಸುತ್ತಿದ್ದಾರೆ; ರಾಜನು ಕೊಡಮಾಡಿದ ಭೂಮಿಯನ್ನು ವಿಭಜಿಸಲು ಅಥವಾ ಮಾರಲು ರಾಜನ ಅನುಮತಿ ಅಗತ್ಯವಾಗಿತ್ತು; ಭೂಹಿಡುವಳಿ ವ್ಯವಸ್ಥೆಯು ಸೈನಿಕ ಹಿಡುವಳಿಯಾಗಿದ್ದು ಮೂಲನಿವಾಸಿಗಳು, ಅಂದರೆ ಕೊಡಗರು ಈ ವ್ಯವಸ್ಥೆಯಲ್ಲಿ ಭೂಮಿಯನ್ನು ಹೊಂದಿದ್ದು, ಇತರ ಎಲ್ಲಾ ತೆರಿಗೆಗಳ ಹೊರೆಯಿಂದ ಅವರು ವಿನಾಯತಿ ಪಡೆದಿದ್ದಾರೆಂದು, ಸೈನಿಕ ಸೇವೆಯು ಈ ಹಿಡುವಳಿಗೆ ಸೇರಿಕೊಂಡಿದ್ದು ಇದು ಕೊಡಗರ ಹವ್ಯಾಸ ಹಾಗೂ ಗುಣಗಳಿಗೆ ಪೂರಕವಾಗಿದೆ ಎಂದು ಅಭಿಪ್ರಾಯ ಪಡುತ್ತಾನೆ. ಇದೊಂದು ವಿಶೇಷ ಮಾನ್ಯತೆಯ ಚಿನ್ಹೆ ಎಂದು ಭಾವಿಸಿದ ಕೊಡಗರು ಸೈನಿಕ ಸೇವೆಯನ್ನು ತಪ್ಪದೆ ಬದ್ಧತೆಯಿಂದ ನೀಡುತ್ತಿದ್ದಾರೆ ಎಂದು ಬರೆಯುತ್ತಾನೆ. ಕಾನರನು ಈ ಮಾತು ಇಂದೂ ಕೂಡ ಕೊಡಗಿನ ವಿಶಿಷ್ಟ ಭೂಹಿಡುವಳಿಯಾದ 'ಜಮ್ಮ'ದ ಹಿಡುವಳಿಗಾರರಿಗೆ ಅವರಿಗಿರುವ ಹಕ್ಕುಗಳನ್ನು ಉಳಿಸಿಕೊಳ್ಳಲು ಬೆಂಬಲವನ್ನು ನೀಡುತ್ತದೆ ಎಂದು ಹೇಳಬಹುದು.

ಕೊಡಗಿನಲ್ಲಿ ಬಳಸಲಾಗದೆ ಇರುವ ಭೂಮಿಯನ್ನು ಕೃಷಿಗಾಗಿ ಕೈಗೆತ್ತಿಕೊಳ್ಳಲು ಸರ್ಕಾರವು ಎಲ್ಲಾ ರೀತಿಯ ಪ್ರೋತ್ಸಾಹವನ್ನು ಜನರಿಗೆ ನೀಡಿದರೂ, -ತೆರಿಗೆ ಮಾನ್ಯ ಕೂಡ, ಜನರು ಅವುಗಳನ್ನು ತೆಗೆದುಕೊಳ್ಳಲು ಮುಂದೆ ಬರುತ್ತಿಲ್ಲ ಹಾಗೂ ಕೊಡಗಿಗೆ ಹೊರಗಿನಿಂದ ವಲಸಿಗರು ಕೂಡ ಬರಲು ತಯಾರಿಲ್ಲವೆಂದು ಕಾನರನು ಬರೆಯುತ್ತಾನೆ; ಏಕೆಂದರೆ ಒಂದು, ವಾತಾವರಣ; ಎರಡನೆಯದು, ಈ ಪರ್ವತವಾಸಿಗಳ ಬಗ್ಗೆ ಅವರ ತಾತ್ಸಾರ; ಮೂರನೆಯದು, ಕೊಡಗಿನಲ್ಲಿ ಆಕರ್ಷಣೆಗಳ ಕೊರತೆ. ಅಲ್ಲದೆ, ಕೊಡಗಿನ ಸರ್ಕಾರದ ಬಗ್ಗೆ ಇರುವ ಭೀತಿ ಕೂಡ ಒಂದು ಬಲವಾದ ಕಾರಣವೆನ್ನುತ್ತಾನೆ.

ಅಲ್ಲದೆ ಇನ್ನೊಂದು ಮುಖ್ಯವಾದ ಅಂಶದ ಕುರಿತು ಲೆಫ್ಟಿನೆಂಟ್ ಕಾನರನು ಚರ್ಚಿಸುತ್ತಾನೆ. ಒಂದೆಡೆ ಕೊಡಗಿಗೆ ಜನರು ವಲಸೆ ಬರಲು ಹೆಚ್ಚಿನ ಆಕರ್ಷಣೆಗಳಿಲ್ಲ ಎಂದು ಹೇಳಿದರೆ; ಇನ್ನೊಂದೆಡೆ ಮೈಸೂರು ಸುಲ್ತಾನರ ದಾಳಿಗಳಿಂದಾಗಿ

ಕೊಡಗಿನಲ್ಲಿ ಈ ವಿಶಿಷ್ಟ ಬುಡಕಟ್ಟು ತನ್ನ ಸಂಖ್ಯೆಯಲ್ಲಿ ತೀವ್ರವಾದ ಕುಂಟಿತವನ್ನು ಕಂಡಿದೆಯೆಂದು ಹೇಳುತ್ತಾನೆ. ಆದರೆ, ದೊಡ್ಡ ವೀರರಾಜೇಂದ್ರನು ಕೊಡಗಿನಲ್ಲಿ ಮತ್ತೆ ಜನವಾಸ್ತವ್ಯವನ್ನು ವೃದ್ಧಿಸಲು ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶಗಳಿಂದ ಕ್ರೂರ ವಿಧಾನಗಳ ಮೂಲಕ ಜನರನ್ನು ಕೊಂಡೊಯ್ದು ಕೊಡಗಿನಲ್ಲಿ ನೆಲೆ ನಿಲ್ಲಿಸಿದನೆಂದು ಮತ್ತು ಅವರು ಆ ಪ್ರಾಂತ್ಯವನ್ನು ಬಿಟ್ಟು ಹೋಗದಂತೆ ಕ್ರೂರ ವಿಧಾನಗಳ ಮೂಲಕ ತಡೆದನೆಂದು ಅಭಿಪ್ರಾಯ ಪಡುತ್ತಾನೆ. ತಾನು ನಡೆಸಿದ ಸರ್ವೇಕ್ಷಣೆಯಂತೆ ೧೮೧೭-೧೭ರ ಸಂದರ್ಭದಲ್ಲಿ ಕೊಡಗಿನ ಒಟ್ಟು ಜನಸಂಖ್ಯೆ ಸುಮಾರು ೪೦,೦೦೦ ಎಂದು ಅಂದಾಜಿಸಿ ಹೇಳುತ್ತಾ, ಹೀಗಾಗಿ ಕೊಡಗು ಬಹಳ ತೆಳ್ಳಗೆ ಹರಡಲ್ಪಟ್ಟ ಜನಸಂಖ್ಯೆಯನ್ನು ಹೊಂದಿತ್ತೆನ್ನುತ್ತಾನೆ. ಕೊಡಗರು ಪುರಾತನ ಜನಾಂಗವಾಗಿದ್ದು ಅವರೊಂದು ಬುಡಕಟ್ಟು ಎಂದು ಬಣ್ಣಿಸುತ್ತಾನೆ. ಕೊಡಗರು ಹೊರಗಿನ ದೇಶದಿಂದ ಬಂದಿರಬಹುದೇ? ಎಂಬ ಕುರಿತು ಇಂದು ನಡೆಯುತ್ತಿರುವ ಚರ್ಚೆಗೆ ಅಂದೇ ಉತ್ತರ ನೀಡಿದ್ದಾನೆ ಎನ್ನಬಹುದು.

ಈ ಗುಡ್ಡಗಾಡು ಪ್ರಾಂತ್ಯದ ಜನರು, ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಗುಡ್ಡ ಬೆಟ್ಟಗಳಿಂದ ಸುತ್ತುವರಿದು, ವ್ಯಾಪಾರದ ಆಮಿಷ ಅಥವಾ ಪ್ರೋತ್ಸಾಹವಿಲ್ಲದೆ ದೀರ್ಘಕಾಲದಿಂದ ಒಟ್ಟಿಗೆ ಬಾಳಿರುವುದರಿಂದ ಅವರಲ್ಲಿ ಭಿನ್ನ ಬೇಧಗಳು ಮಾಯವಾಗಿ ಒಂದ ಬದಲಾಗದ ಜನಾಂಗವಾಗಿ ಉಳಿದಿದೆ ಎನ್ನುತ್ತಾನೆ. ರಾಜರ ನೀತಿ ಕೂಡ ನೆರೆಹೊರೆಯವರೊಂದಿಗೆ ಸಂಪರ್ಕ ಕಡಿದು ಹಾಕಿ ಅವರನ್ನು ಪ್ರತ್ಯೇಕವಾಗಿಟ್ಟು ಅವರು ಪೂರ್ತಿ ಕೃಷಿಯ ಕಡೆಗೆ ಒತ್ತು ನೀಡುವಂತೆ ಮಾಡಿದೆ ಎನ್ನುತ್ತಾ, ಈ ಜನಾಂಗವು ಯಾವುದೇ ವಿದೇಶಿ ಪ್ರಭಾವಕ್ಕೆ ಒಳಗಾಗದೆ, ಜಾತಿಗಳ ಪರಿಧಿಯಲ್ಲಿ ಬರುವುದಾದರೂ ಅದು ತನ್ನ ಭೌಗೋಳಿಕ ಪ್ರದೇಶದ ಹೆಸರಿನಿಂದ (ಕೊಡಗರು) ಆಸ್ಮಿತೆಯನ್ನು ಪಡೆದಿರುವುದು ಅಚ್ಚರಿಯನ್ನುಂಟು ಮಾಡುತ್ತದೆ ಎಂದು ಬರೆಯುತ್ತಾನೆ. ಅವರು ಸ್ವಾಭಾವಿಕವಾಗಿ ಚುರುಕು ಹಾಗೂ ಬುದ್ಧಿವಂತರಾಗಿದ್ದು, ಕಠಿಣ ಹವ್ಯಾಸಕ್ಕೆ ಕ್ರಿಯಾಶೀಲತೆ ಹಾಗೂ ಶ್ರಮಕ್ಕೆ ಪ್ರಸಿದ್ಧರಾಗಿದ್ದಾರೆ. ಅವರು, ಊಳಿಗಮಾನ್ಯ ವಿಧೇಯತೆಗೆ ಹಾಗೂ ತಮ್ಮ ನಾಯಕರ ಕುರಿತು ಭಕ್ತಿಗೆ ಕೂಡ ಹೆಸರಾಗಿದ್ದು ಪ್ರತೀ ಕರ್ತವ್ಯವನ್ನು ಶ್ರದ್ದೆಯಿಂದ ಮಾಡುತ್ತಾರೆ ಎನ್ನುತ್ತಾನೆ. ರಾಜನ ಮೇಲೆ ಕೊಡಗರು ತೋರಿಸುತ್ತಿರುವ ಅನನ್ಯ ವಿಧೇಯತೆ, ಅವನ ಬಗ್ಗೆ ಅತೀವ ತಾತ್ಸರ ಹೊಂದಿದ್ದ ಕಾನರ್‌ನಿಗೆ ಅಚ್ಚರಿಯನ್ನುಂಟು ಮಾಡುತ್ತದೆ. ಕೊಡಗರ ಸೈನಿಕ ಉತ್ಸಾಹವನ್ನು ಕಾನರನು ಅತೀವವಾಗಿ ಹೊಗಳುತ್ತಾನೆ. ಇದು ಕೊಡಗರಿಗೆ ಅತ್ಯಂತ ಉನ್ನತ ಗುಣವಾಗಿದ್ದು ಬಾಲ್ಯದಿಂದಲೇ ಶಸ್ತ್ರಾಸ್ತ್ರವನ್ನು ಹೊಂದಿರುತ್ತಾರೆಂದು, ಒಂದೊ ಅವರು ಸೈನಿಕರು ಅಥವಾ ಕೃಷಿಕರಾಗಿದ್ದು ಅದು ಅವರ ಸ್ವಾಭಾವಿಕ ವೃತ್ತಿಗಳಾಗಿದೆ ಎಂದು ವರದಿ ನೀಡುತ್ತಾನೆ.

ಕೊಡಗರ ಶಿಕ್ಷಣದ ಕುರಿತು ಮಾತನಾಡುತ್ತಾ ಪಶು ಸಂಗೋಪನೆಯ ಬಗ್ಗೆ ಸ್ವಲ್ಪ ಮಾಹಿತಿ ಹಾಗೂ ತರಬೇತಿ ಪಡೆಯುವುದೇ ಅವರ ಏಕಮಾತ್ರ ಶಿಕ್ಷಣ ಎಂದು ಬರೆಯುತ್ತಾನೆ.

ಬಹುಪತಿತ್ವ, ಅಥವಾ ಒಂದು ಕುಟುಂಬದ ಸದಸ್ಯರು ಒಬ್ಬಳೇ ಪತ್ನಿಯನ್ನು ಹೊಂದಿರುವ ಪದ್ಧತಿಯನ್ನು ನಾವು ಕೊಡಗಿನಲ್ಲಿ ಕಾಣಬಹುದೆಂದು ಕಾನರ್ ಹೇಳುತ್ತಾ ಇದೊಂದು ಅಸಾಮಾನ್ಯ ಹಾಗು ಹೇಯ ಪದ್ದತಿ ಎನ್ನುತ್ತಾ, ಅದು ಒಂದು ರೀತಿಯಲ್ಲಿ 'ಕಮ್ಯುನಿಸಂ ಆಫ್ ವಿಮೆನ್' ಎನ್ನುತ್ತಾನೆ. ಇದನ್ನು ಮುಂದೆ ರೆವೆರೆಂಡ್ ಮ್ಯೋಗ್ಲಿಂಗ್ ಕೂಡ ಉಲ್ಲೇಖಿಸುತ್ತಾರೆ. ಇವನ ಹೇಳಿಕೆಯು ಬ್ರಿಟಿಷ್ ಆಡಳಿತದಲ್ಲಿದ್ದ ಕೊಡವ ಅಧಿಕಾರಿಗಳ ತೀವ್ರ ಟೀಕೆಗೆ ಒಳಗಾಗುವುದನ್ನು ಕಾಣಬಹುದು. ಬ್ರಿಟಿಷರು ಕೊಡಗನ್ನು ವಶಪಡಿಸಿಕೊಂಡನಂತರ ಅಸ್ತಿತ್ವಕ್ಕೆ ಬಂದ ಕೊಡವ ಮಧ್ಯಮ ವರ್ಗಕ್ಕೆ ಈ ಹೇಳಿಕೆಯು ಅಪಮಾನಕಾರಕವಾಗಿ ಕಂಡುಬಂದಿತು. ೧೮೭೦ರ ದಶಕದಲ್ಲಿ ಕೊಡಗಿನಲ್ಲಿ ಅಧಿಕಾರಿಯಾಗಿದ್ದ ರೆವೆರೆಂಡ್ ರಿಕ್ಟರ್‌ನು ಈ ಕುರಿತು ಅಧ್ಯಯನ ಮಾಡಿ 'ಅಂತಹ ಪದ್ದತಿ ಹಿಂದೆ ಇತ್ತೊ ಇಲ್ಲವೊ ಗೊತ್ತಿಲ್ಲ; ಆದರೆ ಇಂದು ಇದು 'ಒಂದು ರಾಷ್ಟ್ರೀಯ ವಿಧಿಯಾಗಿ' ಖಂಡಿತ ಇಲ್ಲವೆಂದು ವಾದಿಸಿ ಕೊಡವ ಜನಾಂಗವನ್ನು ಸಮಧಾನಿಸಲು ಪ್ರಯತ್ನಿಸಿದನು.

ಕೊಡಗಿನ ರಾಜಪ್ರಭುತ್ವವನ್ನು ಸಂಪೂರ್ಣ ಸರ್ವಾಧಿಕಾರಿತ್ವ ಎಂದು ಬಣ್ಣಿಸುತ್ತಾ, ಪ್ರಜೆಗಳಿಗೆ ಅಲ್ಪ ಸ್ವಲ್ಪ ಹಕ್ಕುಗಳು ಹಾಗೂ ಸ್ವಾತಂತ್ರ್ಯವಿತ್ತೆಂದು ಅವನು ವಾದಿಸುತ್ತಾನೆ. ಆದರೆ ರಾಜ ಪ್ರದರ್ಶಿಸುತ್ತಿದ್ದ ದರ್ಪ, ಹಿಂಸೆ, ನಿರಂಕುಶತೆ, ಆತನ ವಯಕ್ತಿಕ ನೆಲೆಯಲ್ಲಿ ಕಂದು ಬರುತ್ತಿತ್ತೇ ಹೊರತು, ಶ್ರೇಣಿಕೃತ ಅಧಿಕಾರಿಗಳ ವರ್ಗದಲ್ಲಿ ಅದು ಪ್ರಕಟಗೊಳ್ಳುತ್ತಿರಲಿಲ್ಲ ಎನ್ನುತ್ತಾನೆ, ಆದರೂ ರಾಜಪ್ರಭುತ್ವವು ಅಪಾರ ಕ್ರೌರ್ಯದಿಂದ ಕೂಡಿತ್ತೆಂದು ಅಭಿಪ್ರಾಯಪಡುತ್ತಾನೆ. ಬ್ರಿಟಿಷರೊಂದಿಗೆ ರಾಜನ ಸಂಬಂಧದ ಕುರಿತು ಹೇಳುತ್ತಾ, ಈಗಿನ ರಾಜ, ತನ್ನ (ಕಾನರನ) ಚಟುವಟಿಕೆಗಳ ಕುರಿತು ತೋರುತ್ತಿದ್ದ ನಂಜು ಹಾಗೂ ಸಂಶಯವನ್ನು ನೋಡಿ ಅವನು ಬ್ರಿಟಿಷರಿಂದ ದೂರ ಹೋಗುತ್ತಿದ್ದಾನೆ ಎಂದು ಹೇಳುತ್ತಾನೆ.

ರಾಜನ ಒಟ್ಟಾರೆ ಆಡಳಿತದ ಬಗ್ಗೆ ಅಭಿನಂದನೆಯ ಮಾತನ್ನು ಆಡುತ್ತಾ, ಜನರ ಉತ್ಪಾದನೆಗಳಲ್ಲಿ ಸರ್ಕಾರದ ಪಾಲು ಕಡಿಮೆಯಿದೆ; ಜೀವನಕ್ಕೆ ಅವಶ್ಯವಾದ ವಸ್ತುಗಳು ಧಾರಾಳವಾಗಿ ದೊರೆಯುತ್ತಿವೆ; ಪ್ರಜೆಗಳು ನೆಮ್ಮದಿ ಹಾಗು ಸಂತೋಷದಿಂದಿದ್ದಾರೆ ಎಂದು ಹೇಳುತ್ತಾನೆ. ಆದರೆ ಸಮೃದ್ಧಿಯು ವೃದ್ಧಿಸುತ್ತಿರುವ ಮಹತ್ವದ ಚಿನ್ಹೆಗಳು ಕಂಡು ಬರುತ್ತಿಲ್ಲ ಎಂದು ಅಭಿಪ್ರಾಯ ಪಡುತ್ತಾನೆ. ಕೊಡಗರ ದೇಶವು ಆಕ್ರಮಣಕ್ಕೆ ಕನಿಷ್ಠ ಆಕರ್ಷಣೆಗಳನ್ನು ಹೊಂದಿದೆ; ಅದರ ಪರ್ವತಗಳು ಅದನ್ನು ವಶಪಡಿಸಿಕೊಳ್ಳುವ ವಿರುದ್ದ ಭದ್ರತೆಯನ್ನು ನೀಡುತ್ತದೆ ಎಂದು ಒಂದೆಡೆ ನಮೂದಿಸುವ ಅವನು, ಮಡಿಕೇರಿ ಪಟ್ಟಣವನ್ನು ವಶಪಡಿಸಿಕೊಳ್ಳಬೇಕೆಂದಾದಲ್ಲಿ ಅದನ್ನು ಮಾಡುವುದು ಅಸಾಧ್ಯವೇನಲ್ಲಎಂಬುದಾಗಿ ಕೂಡ ಹೇಳುತ್ತಾನೆ.

ಬ್ರಿಟಿಷರು ಕೊಡಗನ್ನು ವಶಪಡಿಸಿಕೊಳ್ಳುವ ಕೇವಲ ಹದಿನಾರು ವರ್ಷಗಳ ಮೊದಲು ಕೊಡಗಿಗೆ ಭೇಟಿ ನೀಡಿದ ಕಾನರನು ತನ್ನ ಪುಸ್ತಕದಲ್ಲಿ ಕೊಡಗು ಪ್ರಾಂತ್ಯವು ಸೈನಿಕವಾಗಿ ಎಷ್ಟು ಶಕ್ತಿಶಾಲಿಯಾಗಿದೆ? ಅದರ ಸಂಪನ್ಮೂಲಗಳೇನು? ಬ್ರಿಟಿಷರು ಆಕ್ರಮಣ ಮಾಡಿ ವಶಪಡಿಸಿಕೊಳ್ಳುವುದಿದ್ದರೆ ಅದನ್ನು ಹೇಗೆ ಮಾಡಬಹುದು; ಒಂದು ವೇಳೆ ತುರ್ತು ಪರಿಸ್ಥಿತಿಯಲ್ಲಿ ರಾಜನ ಸಹಾಯ ಬೇಕಾದರೆ ಎಷ್ಟು ದೊಡ್ಡ ಸೈನ್ಯವನ್ನು ಅವನು ಒಗ್ಗೂಡಿಸಬಹುದು? ಕೊಡಗಿನ ವಶಪಡಿಸಿಕೊಳ್ಳುವಿಕೆ ಎಷ್ಟರ ಮಟ್ಟಿಗೆ ಬ್ರಿಟಿಷರಿಗೆ ಲಾಭ? ಕೊಡಗರ ಹೋರಾಟದ ತಂತ್ರಗಳೇನು? ಗೆರಿಲ್ಲಾ ಯುದ್ದದಲ್ಲಿ ಪಳಗಿದ ಕೊಡಗರು ಬಯಲು ಭೂಮಿಯ ಯುದ್ದಕ್ಕೆ ಎಷ್ಟು ಅರ್ಹರು? ಹೀಗೆ ಹಲವು ಪ್ರಶ್ನೆಗಳನ್ನು ಎತ್ತುತ್ತಾ ಉತ್ತರಗಳನ್ನು ನೀಡುತ್ತಾನೆ. ಕೊಡಗು ಬ್ರಿಟಿಷರ ಅವಲಂಬಿತ ರಾಜ್ಯವಾಗಿದ್ದು ಆಂತರಿಕ ಸ್ವಾಯತ್ತತೆ ಮಾತ್ರ ಹೊಂದಿದೆ ಎಂದು ಹೇಳುತ್ತಾ ಬ್ರಿಟಿಷರ ಅಧೀನದಲ್ಲಿ ರಾಜ ಪ್ರಭುತ್ವ ಮುಂದುವರಿಯಬಹುದು ಎಂದು ಅಭಿಪ್ರಾಯಪಡುತ್ತಾನೆ.

ಒಟ್ಟಾರೆ ಹೇಳುವುದಾದರೆ, ಲೆಫ್ಟಿನೆಂಟ್ ಕಾನರ್‌ನ ಬರವಣಿಗೆ ಹಾಗೂ ಸರ್ವೇಕ್ಷಣೆಯು ಒಂದು ಮಹತ್ವಪೂರ್ಣ ದಾಖಲೆಯಾಗಿದ್ದು, ಆಧುನಿಕ ಪೂರ್ವ ಕೊಡಗಿನ ಇತಿಹಾಸ ಕಟ್ಟುವಲ್ಲಿ ಅಮೂಲ್ಯವಾದ ಆಕರವಾಗಿದೆ. ಅನಂತರದ ಬರಹಗಾರರು ವ್ಯಾಪಕವಾಗಿ ಇವನ ಕೃತಿ ಹಾಗು ಮಾಹಿತಿ, ಹಾಗು ಅಭಿಪ್ರಾಯಗಳನ್ನು ತಮ್ಮ ಲೇಖನಗಳಲ್ಲಿ ಉಲ್ಲೇಖಿಸಿರುತ್ತಾರೆ.

ಕೊಡಗಿಗೆ ಸಂಬಂಧಿಸಿದಂತೆ ಸಮಕಾಲೀನ ಸಂದರ್ಭದಲ್ಲಿ ನಡೆಯುತ್ತಿರುವ ಹಲವು ಚರ್ಚೆಗಳಿಗೆ ಅವನ ದಾಖಲೆ ಹಾಗು ಅಭಿಪ್ರಾಯಗಳಲ್ಲಿ ಉತ್ತರಗಳನ್ನು ಕಾಣಬಹುದು. ಕೊಡಗು ದೇಶದ ಮೇಲೆ ಆಕ್ರಮಣ ಮಾಡಲು ಯಾವುದೇ ಆಕರ್ಷಣೆಗಳು ಕಂಡುಬರುವುದಿಲ್ಲ ಎಂದು ಕಾನರ್ ೧೮೧೭ರಲ್ಲಿ ಹೇಳಿದರೂ ೧೮೩೪ರಲ್ಲಿ ಬ್ರಿಟಿಷರು ಕೊಡಗನ್ನು ವಶಪಡಿಸಿಕೊಂಡು ಭಾರತಕ್ಕೆ ಸ್ವಾತಂತ್ರ್ಯ ಸಿಗುವವರಗೂ ತಮ್ಮಲ್ಲಿ ಉಳಿಸಿಕೊಂಡದ್ದು ಒಂದು ವಿಪರ್ಯಾಸವೇ ಸರಿ.

೧೧೬

ಸ್ವಾತಂತ್ರ್ಯ ಹೋರಾಟಗಾರ ಬಾಬಾಸಾಹೇಬ ಬಾಗೇವಾಡಿ

ಎಮ್.ಎಚ್. ಮೊಕಾಶಿ* ಪ್ರಭು.ಎ.ಕೋಟ್ಯಾಳ**

ಬಿಜಾಪುರ ಜಿಲ್ಲೆಯ ತಾಲೂಕುಗಳಲ್ಲಿ ಒಂದು ಇಂಡಿ ತಾಲ್ಲೂಕು. ಇದರಲ್ಲಿ ಬರುವ ಒಂದು ಚಿಕ್ಕ ಗ್ರಾಮವೇ ಹಾವಿನಾಳ. ಇಂಡಿಯಿಂದ ೪೦ ಕಿ.ಮೀ. ದೂರದಲ್ಲಿದೆ ಇದು ಶರಣ ಕಲ್ಲಯ್ಯನವರು ಬಾಳಿ ಬೆಳಗಿದ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಬಾಬಾ ಸಾಹೇಬ ಬಾಗೇವಾಡಿಯವರು ೨೧ ಸೆಪ್ಟಂಬರ್ ೧೯೨೧ರಂದು ಜನಿಸಿದರು. ತಂದೆ ಶ್ರೀಶಾಂತಿನಾಥ; ತಾಯಿ ಶ್ರೀಮತಿ ಬಾಯಿ. ಮೂಲತಃ ಕೃಷಿ ಉದ್ಯೋಗ. ಬಾಬಾಸಾಹೇಬರವರು ಊರಿನ ಸರಕಾರಿ ಶಾಲೆಯಲ್ಲಿ ಶಿಕ್ಷಣವನ್ನು ಪೂರೈಸಿದರು. ಇಲ್ಲಿ ಇವರಿಗೆ ಗುರುಗಳಾದ ಶ್ರೀ ಪುಟ್ಟಂಭಟ್ಟರವರ ಆಶೀರ್ವಾದ ದೊರೆಯಿತು.

ಬಾಬಾ ಸಾಹೇಬರ ಚಿಕ್ಕಪ್ಪನವರು ನೇಮಿನಾಥ. ಇವರು ಇಂಡಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಆಗ ಬಾಬಾ ಸಾಹೇಬ ಇವರ ಜೊತೆಯಲ್ಲಿ ಇಂಡಿಗೆ ಹೋದರು. ಕೆಲ ದಿನಗಳ ನಂತರ ಇವರು ವ್ಯಾಪಾರ ನಿಮಿತ್ಯ ಕುಟುಂಬ ಸಮೇತರಾಗಿ ಸೊಲ್ಲಾಪುರಕ್ಕೆ ಹೋದರು. ಇವರೊಂದಿಗೆ ಬಾಬಾ ಸಾಹೇಬರವರು ಹೋದರು. ಇದೇ ಸಂದರ್ಭದಲ್ಲಿ (೧೯೩೬-೩೭) ಸ್ವಾತಂತ್ರ್ಯದ ಚಳುವಳಿ ಜೋರಾಗಿತ್ತು. ಆಗಾಗ ಸಭೆ, ಸಮಾರಂಭ, ಹೋರಾಟಗಳು ನಡೆದಿರುತ್ತಿದ್ದವು. ಬಾಬಾ ಸಾಹೇಬರವರ ಮನಸ್ಸು ಮೆಲ್ಲಗೆ ಚಳುವಳಿಯ ಕಡೆಗೆ ಹರಿಯತೊಡಗಿತು. ಇದೇ ಸಂದರ್ಭದಲ್ಲಿ ಗಾಂಧೀಜಿ, ನೆಹರು, ಸಾನೆ ಗುರುಜಿ ಮೊದಲಾದ ರಾಷ್ಟ್ರದ ಮುಖಂಡರನ್ನು ಕಾಣುವ ಭಾಗ್ಯ ದೊರೆಯಿತಲ್ಲದೇ ಅವರ ಭಾಷಣಗಳನ್ನು ಕೇಳುವ ಸೌಭಾಗ್ಯ ಕೂಡ ದೊರೆತಿದ್ದರಿಂದ ಬಾಬಾ ಸಾಹೇಬರ ಹೃದಯದಲ್ಲಿ ದೇಶಾಭಿಮಾನದ ಬೀಜ ಕುಡಿಯೊಡೆದು ಪಲ್ಲವಿಸಹತ್ತಿತ್ತು. ಚಳುವಳಿ ಎಲ್ಲಿದೆಯೋ ಅಲ್ಲೆಲ್ಲ ತಿರುಗಿ ಬಾವುಟ ಹಿಡಿದು ಹಾಜರಿರುತ್ತಿದ್ದರು. ಜನರು ಇವರನ್ನು ಕುರಿತು "ನೋಡಾಕ ತಟಕ ಅದಾನ ಏನ್ ಜಿಗಟ ಅದಾನ" ಎನ್ನುತ್ತಿದ್ದರು. ಗಾಂಧೀಜಿಯವರ 'ಹರಿಜನ', ತಿಲಕರ 'ಕೇಸರಿ' ಅಲ್ಲದೇ 'ನವಕರ್ನಾಟಕ' ಮೊದಲಾದ ಪತ್ರಿಕೆಗಳನ್ನು ಓದುತ್ತಿದ್ದರು. ಇವರಿಗೆ ಕನ್ನಡ, ಮರಾಠಿ, ಹಿಂದಿ ಭಾಷೆಗಳು ಗೊತ್ತಿದ್ದವು. ಹೀಗಾಗಿ ಈ ಎಲ್ಲ ಪತ್ರಿಕೆಗಳನ್ನು ಓದಲು ಅನುಕೂಲವಾಯಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶ

ಸೊಲ್ಲಾಪುರದ ಅನೇಕ ದೇಶಭಕ್ತರ ಸಹವಾಸದಿಂದ ಬಾಬಾ ಸಾಹೇಬರವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದರು. ಅವರಲ್ಲಿ ಡಾ. ಅಂತ್ರೋಳಕರ, ಶ್ರೀತುಳಸೀದಾಸ ಜಾಧವ, ಶ್ರೀಸಿದ್ರಾಮಪ್ಪ ಫಲಾರೆ, ಶ್ರೀ ಹುಸೇನಸಾಬ ತಾಸಗಾಂವ, ಶ್ರೀ ಬಸಪ್ಪ ಯಳಮೇಲಿ ಮೊದಲಾದವರು ಬಾಬಾ ಸಾಹೇಬರು ಶುದ್ಧ ಖಾದಿ ಧಾರಿಯಾಗಿ ಗಾಂಧೀ ಧರ್ಮವನ್ನು ಸ್ವೀಕರಿಸಿದರು. ರಾಟಿಯಿಂದ ನೂಲು ತೆಗೆಯುವುದು ಖಾದೀ ಪ್ರಚಾರ ಮಾಡುವುದು ಅಲ್ಲದೇ ಖಾದಿ ಬಟ್ಟೆಗಳನ್ನು ಹೊತ್ತು ಊರೂರು ಮಾರುವುದು ಇವರ ಕಾಯಕವಾಯಿತು. ಇದೇ ಸಂದರ್ಭದಲ್ಲಿ ಸೊಲ್ಲಾಪುರದ ಸ್ವಾತಂತ್ರ್ಯ ಯೋಧರಾದ ಮಲ್ಲಪ್ಪ ಧನಶೆಟ್ಟಿ, ಕುರುಬನ ಹುಸೇನಿ, ಸಾರಡಾ, ಹಾಗೂ ಅಂಬದಾಸ ಶಿಂಧೆ ಎಂಬುವವರನ್ನು ಬ್ರಿಟೀಷರು ಗಲ್ಲಿಗೇರಿಸಿದರು. ಈ ಸುದ್ದಿಯನ್ನು ಕೇಳಿದ ತಕ್ಷಣವೇ ಬಾಬಾ ಸಾಹೇಬರವರು ಬ್ರಿಟಿಷರನ್ನು ಎದುರಿಸಿ ಅವರನ್ನು ಸಂಹಾರ ಮಾಡುವ ಪಣ ತೊಟ್ಟರು.

ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗಿ

೧೯೪೧ರಲ್ಲಿ ಗಾಂಧೀಜಿಯವರು ದೇಶದ ಜನರಿಗೆ ವೈಯಕ್ತಿಕ ಸತ್ಯಾಗ್ರಹ ಆರಂಭಿಸಲು ಕರೆ ಕೊಟ್ಟರು. ಇದರಲ್ಲಿ ಲಕ್ಷಾನುಗಟ್ಟಲೆ ದೇಶಭಕ್ತರು ಭಾಗವಹಿಸಿದರು. ಬಾಬಾ ಸಾಹೇಬ ಹಾಗೂ ಯಳಮೇಲಿ ಸೇರಿ ವಿನಂತಿ ಪತ್ರ ಕಳಿಸಿ

* ಅತಿಥಿ ಉಪನ್ಯಾಸಕರು, ಪದವಿಪೂರ್ವ ಕಾಲೇಜು, ಹೊನ್ನುಟಗಿ-೫೮೬೧೦೪. ವಿಜಯಪುರ ತಾ.ಜಿ. ಮೊ. ೯೬೪೨೧೬೬೮೦೬
** ೫೦, ಹರಕಾರಿ ಬಡಾವಣೆ, ವಜ್ರಹನುಮಾನ ನಗರ, ವಿಜಯಪುರ-೫೮೬೧೦೧ ಮೊ. ೮೮೦೬೨೬೬೮೯

ವೈಯಕ್ತಿಕ ಸತ್ಯಾಗ್ರಹ ಆರಂಭಿಸಲು ಕರೆ ಕೊಟ್ಟರು. ಇದರಲ್ಲಿ ಲಕ್ಷಾನುಗಟ್ಟಲೆ ದೇಶಭಕ್ತರು ಭಾಗವಹಿಸಿದರು. ಬಾಬಾ ಸಾಹೇಬ ಹಾಗೂ ಬಸಪ್ಪ ಯಳಮೇಲಿ ಸೇರಿ ವಿನಂತಿ ಪತ್ರ ಕಳಿಸಿ ವೈಯಕ್ತಿಕ ಸತ್ಯಾಗ್ರಹ ಪ್ರಚಾರ ಮಾಡಲು ಪ್ರಾಂತೀಯ ಕಮಿಟಿಯಿಂದ ಪರವಾನಗಿ ಪಡೆದರು. ಅದರಂತೆ ಸೊಲ್ಲಾಪುರ, ಬಾರ್ಸಿವ, ಮಾಡಾ ಮೊದಲಾದ ಗ್ರಾಮಗಳಲ್ಲಿ ಸಂಚರಿಸಿ ಪ್ರಚಾರ ಮಾಡಿದರು. ಹೀಗೆ ನಿರಂತರವಾಗಿ ಪ್ರಚಾರದಲ್ಲಿರುವಾಗ ಬಸಪ್ಪ ಯಳಮೇಲಿಯವರು ಅನಾರೋಗ್ಯಕ್ಕೆ ತುತ್ತಾದರು ಆಗ ಅನಿವಾರ್ಯವಾಗಿ ಸ್ವತಃ ಹಳ್ಳಿ ಹಳ್ಳಿಗೆ ತಿರುಗಾಡಬೇಕಾಯಿತು. ಅಲ್ಲದೇ ಪೊಲೀಸರು ಇವರನ್ನು ಸಂಶಯದಿಂದ ಬೆನ್ನತ್ತಿದ್ದರು. ಅಲ್ಲದೇ ವರದಿಯನ್ನು ಕೊಡಲು ಪ್ರಾಂತೀಯ ಕಾಂಗ್ರೆಸ್ ಕಚೇರಿ ಪುಣೆಗೆ ಹೋಗಬೇಕಾಗಿತ್ತು. ಪ್ರಯಾಣಕ್ಕೆ ದುಡ್ಡಿರಲಿಲ್ಲ. ಆದರೂ ಕೈಯಲ್ಲಿ ಝುಂಡಾ ಹಿಡಿದು, ಹೆಗಲಿಗೊಂದು ಬ್ಯಾಗು ಹಾಕಿಕೊಂಡು ಸಾಗಿದರು. ದೇಶಭಕ್ತನೊಬ್ಬನು ಮಾರ್ಗ ಮಧ್ಯೆ ಇವರಿಗೆ ಸಹಾಯ ಮಾಡಿದ್ದರಿಂದ ಕಡಿಮೆ ಸಮಯದಲ್ಲಿ ಪುಣೆ ತಲುಪಿದರು. ಅಲ್ಲಿ ಬೆಳಿಗ್ಗೆ ಡಾ. ಬಾ. ಲಾಗೂ ಅವರ ಮನೆಗೆ ತಲುಪಿ ಅವರ ಮುಖಾಂತರ ಪ್ರಚಾರದ ವರದಿಯನ್ನು ಪ್ರಾಂತೀಯ ಕಚೇರಿಗೆ ಕಳಿಸುವಂತೆ ಹೇಳಿ, ಸೊಲ್ಲಾಪುರದಲ್ಲಿ ಸತ್ಯಾಗ್ರಹ ಮಾಡಲು ಗಾಂಧೀಜಿಯವರ ಅನುಮತಿ ಕೊಡಿಸಬೇಕೆಂದು ಕೇಳಿಕೊಂಡು ಸೊಲ್ಲಾಪುರಕ್ಕೆ ಮರಳಿದರು. ಒಂದು ವಾರದ ನಂತರ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಯಾದ ಶ್ರೀ ಮಹಾದೇವ ದೇಸಾಯಿಯವರಿಂದ ಅನುಮತಿ ಪತ್ರ ದೊರೆಯಿತು. ಸೊಲ್ಲಾಪುರದ ಕಲೆಕ್ಟರ್‌ರವರಿಗೆ ಮುಂಚಿತವಾಗಿ ತಿಳಿಸಿ ಅಲ್ಲಿನ ಮದಲಾ ಮಾರುತಿ ಚೌಕಿನಲ್ಲಿ ಝುಂಡಾ ಎತ್ತಿ ಹಿಡಿದು "ಭಾರತಕ್ಕೆ ಸ್ವಾತಂತ್ರ್ಯ ಬೇಕು, ಇದು ನನ್ನ ಜನ್ಮಸಿದ್ದ ಹಕ್ಕು" ಇಂಥ ಹಲವಾರು ಘೋಷಣೆಗಳನ್ನು ಮಾಡುತ್ತಿದ್ದಂತೆಯೇ ಪೊಲೀಸರು ಬಾಬಾ ಸಾಹೇಬರನ್ನು ಬಂಧಿಸಿ ನ್ಯಾಯಾಲಯಕ್ಕೆ ಕರೆದೊಯ್ದರು ಅಲ್ಲಿ ಅವರಿಗೆ ೬ ತಿಂಗಳು ಶಿಕ್ಷೆಯನ್ನು ನೀಡಲಾಯಿತು.

ಜೈಲಿನಿಂದ ಬಿಡುಗಡೆಯಾದ ನಂತರ ಪುನಃ ಸತ್ಯಾಗ್ರಹ ಮಾಡಲು ತಿಳಿಸಲಾಯಿತು. ಬಾಬಾ ಸಾಹೇಬ ಅದರಂತೆ ಮತ್ತೆ ಸತ್ಯಾಗ್ರಹ ಮಾಡಿದರು. ಪೊಲೀಸರು ಮತ್ತೆ ಬಂಧಿಸಿ ವಿಜಾಪುರ ಜೈಲಿಗೆ ಕಳಿಸಿದರು. ಅಲ್ಲಿ ಬಸಯ್ಯಾ ಪುರಾಣಿಕ, ಡಾ. ಬಿ.ಕೆ. ನಾಗೂರ ಮೊದಲಾದ ದೇಶಾಭಿಮಾನಿಗಳೊಂದಿಗೆ ಚರ್ಚಿಸಲು ಅನುಕೂಲವಾಯಿತು. ಒಂದು ವಾರದ ನಂತರ ಯರವಡಾ ಜೈಲಿಗೆ ವರ್ಗಾಯಿಸಲಾಯಿತು. ಅಲ್ಲಿ ಬಾಲಸಿಂಗ್ ಮಾಸ್ತರರು, ಚನ್ನಬಸಪ್ಪಾ ಅಂಬಲಿ, ಸಿದ್ದಪ್ಪಾ ನಿಂಬರಗಿ, ಆರ್.ಜಿ. ದುಬೆ, ಅಣ್ಣು ಗುರೂಜಿ ಮೊದಲಾದ ನೇತಾರರ ಪರಿಚಯವಾಯಿತು. ಜೈಲಿನಲ್ಲಿ ಯಾವುದೇ ಕೋಮು ಭಾವನೆ ಇರಲಿಲ್ಲ. ಏಕತೆ ಮನೆ ಮಾಡಿತ್ತು.


ಚಲೇಜಾವ್ ಚಳುವಳಿಯಲ್ಲಿ ಭಾಗಿ

ಚಲೇಜಾವ್ ಸತ್ಯಾಗ್ರಹದಿಂದ ಬ್ರಿಟಿಷ್ ಸರ್ಕಾರವು ಆಡಳಿತ ನಡೆಸುವುದು ಕಠಿಣವಾಯಿತು. ಆದರೆ ಅದು ತನ್ನ ದಬ್ಬಾಳಿಕೆ, ದೌರ್ಜನ್ಯದಿಂದ ಹಿಂದೆ ಸರಿಯಲಿಲ್ಲ. ಆಗ ಗಾಂಧೀಜಿಯವರು ತಮ್ಮ ಕೊನೆಯ ಅಸ್ತ್ರವಾಗಿ ೯ ಆಗಸ್ಟ್ ೧೯೪೨ರಂದು 'ಚಲೇಜಾವ್ ಚಳುವಳಿ'ಯನ್ನಾರಂಭಿಸಲು ದೇಶಬಾಂಧವರಿಗೆ ಕರೆ ಕೊಟ್ಟರು. ಇದು 'ಕ್ವಿಟ್ ಇಂಡಿಯಾ ಮೂವ್‌ಮೆಂಟ್' ಅಥವಾ 'ಭಾರತ ಬಿಟ್ಟು ತೊಲಗಿ' ಎಂಬ ಹೆಸರಿನಿಂದ ಪ್ರಸಿದ್ಧಿಯಾಯಿತು. ಇದರಲ್ಲಿ ಭಾಗವಹಿಸಲು ಬಾಬಾ ಸಾಹೇಬ ಬಾಗೇವಾಡಿಯವರು ಸಿದ್ಧರಾದರು. ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಯಾರು ಭಾಗವಹಿಸುವರೋ ಅವರ ಆಸ್ತಿ-ಪಾಸ್ತಿಗಳನ್ನು ಜಪ್ತಿ ಮಾಡುವುದು, ಅವರ ಕುಟುಂಬಕ್ಕೆ ತೊಂದರೆ ಕೊಡುವುದು ಸಾಗಿತ್ತು. ಹೀಗಾಗಿ ತಮ್ಮಲ್ಲೆ ಆಸ್ತಿಯ ಮೇಲಿನ ಹಕ್ಕನ್ನು ತಮ್ಮ ತಂದೆ ತಾಯಿಗೆ ಬಿಟ್ಟುಕೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಮುಂದಾದರು.

ಬಾಬಾ ಸಾಹೇಬರವರು ಬಹಳ ಧೈರ್ಯವಂತರು, ಅನ್ಯಾಯವನ್ನು ಸಹಿಸಲಾರರು. ಇವರು ೬ ಆಗಸ್ಟ್ ೧೯೪೨ರಂದು ಸಾಗಿ ೮ ಆಗಸ್ಟ್‌ರಂದು ಸೊಲ್ಲಾಪುರಕ್ಕೆ ಬಂದರು. ಇದೇ ಸಂದರ್ಭದಲ್ಲಿ ಗಾಂಧೀಜಿ, ನೆಹರು, ರಾಜಾಜಿ, ಪಟೇಲ್ ಮೊದಲಾದ ನಾಯಕರನ್ನು ಬ್ರಿಟೀಷ್ ಸರ್ಕಾರ ಬಂಧಿಸಿದ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಆಗ ಬಾಬಾ ಸಾಹೇಬರು ಸೊಲ್ಲಾಪುರದಲ್ಲಿ ಚಳುವಳಿಯನ್ನು ನಡೆಸಲು ಮುಂದಾದರು. ಆಗ ಮಲ್ಲಯ್ಯ ಮಾಳಕೋಟಗಿಯವರು ಬಾಬಾ ಸಾಹೇಬರವರ ಸಹಾಯಕ್ಕೆ ಬಂದರು. ಒಟ್ಟು ೪ ಜನರು ಸೇರಿ ಸೊಲ್ಲಾಪುರದಲ್ಲಿ ಚಲೇಜಾವ್ ಚಳುವಳಿಗೆ ಚಾಲನೆ ನೀಡಿದರು. ೯ ಆಗಸ್ಟ್ ೧೯೪೨ರಂದು ಒಂದು ದೊಡ್ಡ ತಿರಂಗಾ ಧ್ವಜವನ್ನು ಖರೀದಿಸಿ 'ಮಹಾತ್ಮ ಗಾಂಧೀಜಿಯವರಿಗೆ ಜಯವಾಗಲಿ', 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಹಲವಾರು ಘೋಷಣೆಗಳನ್ನು ಕೂಗುತ್ತ ಪ್ರಮುಖ ರಸ್ತೆಗಳಲ್ಲಿ ತಿರುಗಾಡಿ ಟಿಳಕಚೌಕದಲ್ಲಿ ಭಾಷಣ ಮಾಡುತ್ತಿರುವಾಗ ಪೊಲೀಸರು ಬಾಬಾ ಸಾಹೇಬರಿಗೆ ಲಾಠಿಯಿಂದ ಹೊಡೆದರು. ಆಗ ಅಲ್ಲಿಂದ ತಪ್ಪಿಸಿಕೊಂಡು ಬಂದು ಚಾಟಿ ಗಲ್ಲಿ, ಭುಸಾರ ಗಲ್ಲಿ ಮೊದಲಾದ ಓಣಿಗಳಲ್ಲಿ ಘೋಷಣೆಗಳನ್ನು ಕೂಗುತ್ತಿರುವಾಗ ಪೊಲೀಸರು ಇವರನ್ನು

ಹಾಗೂ ಇವರ ಮೂರು ಜನ ಸ್ನೇಹಿತರನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆತಂದರು. ಮರುದಿನ ಮ್ಯಾಜಿಸ್ಟ್ರೇಟ್‌ರವರ ಮುಂದೆ ಹಾಜರುಪಡಿಸಿದಾಗ ಅವರು ೧ ವರ್ಷ ೬ ತಿಂಗಳುಗಳ ಶಿಕ್ಷೆ ಹಾಗೂ ೫೦೦ ರೂಪಾಯಿ ದಂಡ ವಿಧಿಸಿದರು. ಇವರನ್ನು ಸೊಲ್ಲಾಪುರ ಜೈಲಿಗೆ ತಂದು ನಂತರ ಅಲ್ಲಿಂದ ವಿಜಾಪುರ ಜೈಲಿಗೆ ಸಾಗಿಸಿದರು. ಅಲ್ಲಿ ಅಂಚೆ ಕಚೇರಿ, ಪೋಸ್ಟ್ ಆಫೀಸುಗಳನ್ನು ಸುಟ್ಟ, ರೈಲು ಹಳಿಗಳನ್ನು ಕಿತ್ತ ಮೊದಲಾದ ಯೋಧರಿಂದ ಜೈಲು ತುಂಬಿತ್ತು. ಜೈಲಿನಲ್ಲಿ ಹಣಮಂತರಾಯ ಮೊಹರೆ, ಸುನಗದ ಎಸ್.ಬಿ. ಪಾಟೀಲ್, ಬಿ.ಜಿ. ನಿರಾಳೆ, ಮೊದಲಾದವರ ಪರಿಚಯವಾಯಿತು. ನಂತರ ಬಾಬಾ ಸಾಹೇಬರವರನ್ನು ವಿಸಾಪುರ ಜೈಲಿಗೆ ಸಾಗಿಸಿದರು. ಅಲ್ಲಿ ಬಾಲಪ್ಪ ಬೋಂದೊರಡೆ, ಹುಸೇನಸಾ ತಾಸಗಾಂವಕರ, ಸಂಗಪ್ಪ ಉಳಿಗಡ್ಡಿ, ಮಲ್ಲಪ್ಪ ಎಂಡಿಗೇರಿ ಮೊದಲಾದವರ ಪರಿಚಯವಾಯಿತು. ಇಲ್ಲಿಂದ ವರ್ಲಿ ಜೈಲಿಗೆ ಸ್ಥಳಾಂತರಿಸಲಾಯಿತು. ಅಲ್ಲಿ ಸರ್ವಶ್ರೀ ಸಹಸ್ರಬುದ್ಧಿ ಅಣ್ಣಾಸಾಹೇಬರು, ಡಾ. ದಾಂಡೇಕರ, ನಾಗಪುರದ ಅಣ್ಣಾಸಾಹೇಬ ದಾಸ್ತಾನಾ, ಶ್ರೀಮರುಳಾರಾಧ್ಯ ಶಾಸ್ತ್ರಿಗಳು ಮೊದಲಾದ ಗಾಂಧೀಜಿಯವರ ನಿಕಟವರ್ತಿಗಳೊಂದಿಗೆ ಚರ್ಚಿಸುವ ಅವಕಾಶ ದೊರೆಯಿತು. ಇಲ್ಲಿನ ಚಳುವಳಿಗಾರರ ಮೇಲೆ ಪೊಲೀಸರು ಹಲ್ಲೆ ಮಾಡುತ್ತಿದ್ದರು. ಇದನ್ನು ಖಂಡಿಸಿ ಉಪವಾಸ ಸತ್ಯಾಗ್ರಹವನ್ನು ಮಾಡಲಾಯಿತು. ಆಗ ಹಲವರನ್ನು ಶಿಕ್ಷೆಗೆ ಗುರಿಪಡಿಸಲಾಯಿತು. ಅದರಲ್ಲಿ ಬಾಬಾ ಸಾಹೇಬರ ಕೈಗಳಿಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಜೆ.ಜೆ. ಆಸ್ಪತ್ರೆಗೆ ದಾಖಲು ಮಾಡಲಾಯಿತು. ಅಲ್ಲಿ ಇವರಿಗೆ ಅಪೆಂಡಿಕ್ಸ್ ಇದೆ ಆಪರೇಷನ್ ಮಾಡಬೇಕೆಂದು ವೈದ್ಯರು ಹೇಳಿದರು. ಅದರಂತೆ ಆಪರೇಷನ್‌ಗೆ ಮೂರು ದಿನಗಳು ಇರುವಾಗ 'ಲೋಕಮಾನ್ಯ' ಮರಾಠಿ ಪತ್ರಿಕೆಯ ಸಂಪಾದಕರಾದ ಶ್ರೀ ಬಾಪಟ್‌ರವರು ಇವರನ್ನು ಕಾಣಲು ಬಂದು ಇಲ್ಲಿ ಆಪರೇಷನ್ ಮಾಡಿಸುವುದು ಬೇಡ ಇಲ್ಲಿಂದ ಆದಷ್ಟು ಬೇಗನೆ ಪರಾರಿಯಾಗು, ನಾನು ನಿಮಗೆ ಬೇರೆಡೆಗೆ ಇದರ ವ್ಯವಸ್ಥೆ ಮಾಡಿಸುತ್ತೇನೆ ಎಂದು ಹೇಳಿದರು. ಅವರ ಮಾರ್ಗದರ್ಶನದಂತೆ ಬೆಳಿಗ್ಗೆ ೪ ಗಂಟೆಗೆ ಸ್ನಾನದ ಕೋಣೆಯ ಕಿಟಕಿಯ ಮುಖಾಂತರ ಮೇಲಂತಸ್ಥಿನಿಂದ ಕೆಳಗೆ ಜಿಗಿದು ಪರಾರಿಯಾದರು. ಬೆಳಿಗ್ಗೆ ಬಾಬಾ ಸಾಹೇಬರ ಪರಾರಿ ಸುದ್ದಿ ಹರಡುತ್ತಿದ್ದಂತೆಯೇ ಇವರಿಗೆ ಹಿಡಿದು ಕೊಟ್ಟವರಿಗೆ ಬಹುಮಾನವನ್ನು ಘೋಷಿಸಲಾಯಿತು. ದೈಹಿಕವಾಗಿ ಕ್ಷೀಣರಾಗಿದ್ದ ಬಾಬಾ ಸಾಹೇಬರು ಮರುದಿನ ದೇಶಭಕ್ತರಾದ ರಾಜ ಭಾವುರವರನ್ನು ಭೇಟಿ ಮಾಡಿದರು. ಇವರ ಪರಿಸ್ಥಿತಿಯನ್ನು ಕಂಡು ಶೀಘ್ರವೇ ಡಾ. ಬಾಳಿಗಾರವರನ್ನು ಭೇಟಿ ಮಾಡಿಸಿದರು. ಅವರು ಅಪೆಂಡಿಕ್ಸ್ ಆಪರೇಷನನ್ನು ಬೇಗನೇ ಮಾಡಿಕೊಳ್ಳುವುದು ಒಳ್ಳೆಯದೆಂದು ಸಲಹೆ ನೀಡಿ ಅದರಂತೆ ಬಾಬಾ ಸಾಹೇಬರವರ ವೇಷ ಹಾಗೂ ಹೆಸರನ್ನು ಬದಲಿಸಿ ಮುಂಬಯಿಯ ಕೆ.ಇ.ಎ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿಸಿದರು. ಕೆಲ ದಿನಗಳು ವಿಶ್ರಾಂತಿ ಪಡೆಯಲು ವೈದ್ಯರು ಸೂಚಿಸಿದರು. ಆದರೆ ಇವರಿಗೆ ದೇಶಸೇವೆಯೇ ಪ್ರಮುಖವಾಗಿತ್ತು. ಹೀಗಾಗಿ "ಸತ್ತರೆ ಸ್ವರ್ಗ, ಬದುಕಿದರೆ ದೇಶ ಸೇವೆ" ಎಂದು ತಿಳಿದು ಅಲ್ಲಿಂದ ಹೊರಟೇಬಿಟ್ಟರು. ಆದರೆ ಕೆಲ ದಿನಗಳ ನಂತರ ಅವರ ಆರೋಗ್ಯ ಚಿಂತಾಜನಕವಾಗಿತ್ತು. ಬೆಳಿಗ್ಗೆ ಬಾಪಟ್‌ರವರನ್ನು ಭೇಟಿ ಮಾಡಿದರು. ಅವರು ಬಾಬಾ ಸಾಹೇಬರನ್ನು ಚರ್ಚ್ ಗೇಟ್ ಬಳಿಯಿರುವ ಖಾದಿ ಭಂಡಾರಕ್ಕೆ ಕರೆದುಕೊಂಡು ಬಂದರು. ಅಲ್ಲಿ ದತ್ತುಬಾಯಿ ಹಟಂಗಡಿಯವರು ವೈದ್ಯರನ್ನು ಕರೆಸಿ ಚಿಕಿತ್ಸೆ ಕೊಡಿಸಿದರು. ಆಗ ಅಲ್ಲಿಗೆ ಯರವಡಾ ಜೈಲಿನಿಂದ ಬಿಡುಗಡೆಯಾದ ಗದಗಿನ ಯೋಧರಾದ ನರಸಿಂಗಪ್ಪನವರು ಬಂದರು. ಆಗ ಇಬ್ಬರೂ ಭಿಕ್ಷುಕರಂತೆ ನಟಿಸುತ್ತ ರೈಲಿನ ಮೂಲಕ ಬಿಜಾಪುರಕ್ಕೆ ಬಂದರು. ಅಲ್ಲಿ ನಿರಾಳೆರವರ ಸಹಾಯ ಪಡೆದರು. ನಂತರ ಸಾವಿತ್ರವ್ವ ಹೊನ್ನಪ್ಪಾಜಿ ಆಳುರವರ ಮನೆಯಲ್ಲಿ ೨ ತಿಂಗಳು ಗುಣಮುಖವಾಗುವವರೆಗೆ ಆಶ್ರಯ ಪಡೆದರು. ಡಾ. ನಾಗೂರ್‌ರವರು ಇವರಿಗೆ ಸೂಕ್ತ ಚಿಕಿತ್ಸೆ ನೀಡಿದರು. ಇಲ್ಲಿಗೆ ಬಾಲಸಿಂಗ್ ಮಾಸ್ತರ, ಅಲ್ಲಾವುದ್ದೀನಸಾಬ್, ಕಾದೀಮಸಾಬ ಟೇಲರ್ ಮೊದಲಾದ ಸ್ವಾತಂತ್ರ್ಯ ಯೋದರು ಬಂದು ಹೋರಾಟದ ಬಗ್ಗೆ ಚರ್ಚಿಸುತ್ತಿದ್ದರು.


ಬಾಬಾ ಸಾಹೇಬರ ಸುಳಿವು ಯಾರೋ ದೇಶದ್ರೋಹಿಗಳು ಬ್ರಿಟೀಷ್ ಪೊಲೀಸರಿಗೆ ನೀಡಿದ್ದರಿಂದ ಬಿಜಾಪುರದಿಂದ ಶೀಘ್ರವೇ ಲಿಂಗದಳ್ಳಿಗೆ ತೆರಳಿ ಅಲ್ಲಿ ಬಸವಂತರಾಯರವರ ನೆರವು ಪಡೆದರು. ಅಲ್ಲಿಂದ ೨ ವಾರಗಳ ನಂತರ ಮುಂದಿನ ಹೋರಾಟದ ಬಗ್ಗೆ ಚರ್ಚಿಸಲು ರೈಲಿನ ಮೂಲಕ ಸೊಲ್ಲಾಪುರಕ್ಕೆ ಬಂದು ಸಾಳುಂಕೆ ಹಾಗೂ ಕೇಶವಲಾಲ್ ಶಹಾರವರನ್ನು ಭೇಟಿ ಮಾಡಿದರು. ಅಲ್ಲಿ ಪೊಲೀಸರ ಬಂಧನದ ಭೀತಿಯಿಂದ ಚಡಚಣಕ್ಕೆ ಬಂದರು. ಅಲ್ಲಿ ಬಾಬುರಾವ್ ಗಾಳಿಯವರನ್ನು ಭೇಟಿಯಾದಾಗ ಅವರು ಪೊಲೀಸರು ನಿಮ್ಮ ಬಗ್ಗೆ ಇಲ್ಲಿ ವಿಚಾರಿಸುತ್ತಿದ್ದಾರೆ ಶೀಘ್ರವಾಗಿ ಇಲ್ಲಿಂದ ಬೇರೆಡೆಗೆ ತೆರಳಲು ತಿಳಿಸಿದರು. ರಾತ್ರಿ ಸ್ವಲ್ಪ ಸಮಯ ರಾಮಚಂದ್ರ ರಾಟೀರವರ ತೋಟದಲ್ಲಿ ತಂಗಿದ್ದು ಬೆಳಿಗ್ಗೆ ಬಿಜಾಪುರಕ್ಕೆ ಬಂದು ಅಲ್ಲಿಂದ ಅಹ್ಮದನಗರಕ್ಕೆ ಹೋದರು ಅಲ್ಲಿ ಬಾಬಾ ಸಾಹೇಬರನ್ನು ಪೊಲೀಸರು ಬಂಧಿಸಿ ಮುಂಬಯಿಗೆ ಕರೆತಂದು ಮಡಗಾಂವ ಕೋರ್ಟ್‌ನಲ್ಲಿ ಹಾಜರುಪಡಿಸಿದರು. ಅಲ್ಲಿ ಉಗ್ರವಾದ ಶಿಕ್ಷೆಗೆ ಗುರಿಪಡಿಸಲಾಗಿ ಇವರಿಗೆ ಬಾಯಕಲಾ ಜೈಲಿಗೆ ತಂದು ಕಏ ಕಾಲುಗಳಿಗೆ ಬೇಡಿ ತೊಡಿಸಲಾಯಿತು. ೩ ದಿನಗಳ ನಂತರ ಬಿಜಾಪುರ ಜೈಲಿಗೆ ಸ್ಥಳಾಂತರ ಮಾಡಲಾಯಿತು. ದಾರಿ



ಶ್ರೀ ಮೊರಾರ್ಜಿ ದೇಸಾಯಿಯವರೊಂದಿಗೆ ಬಾಬಾ ಸಾಹೇಬ ಬಾಗೇವಾಡಿಯವರು ದಿನಾಂಕ: ೮.೯.೧೯೭೮ರಲ್ಲಿ



ಶ್ರೀ ರಾಮಕೃಷ್ಣ ಹೆಗಡೆಯವರು ಬಾಬಾ ಸಾಹೇಬರವರನ್ನು ಸತ್ಕರಿಸುತ್ತಿರುವುದು



೨೫ನೇ ಸ್ವಾತಂತ್ರ್ಯೋತ್ಸವದ ವರ್ಷಾಚರಣೆ ಸಂದರ್ಭದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರಿಂದ ತಾಮ್ರಪತ್ರ ನೀಡಿಕೆ

ಮಧ್ಯದಲ್ಲಿ ಬಾಬಾ ಸಾಹೇಬರೊಂದಿಗೆ ೪೦ ಯೋಧರು ಪೊಲೀಸ್ ವಾಹನದಲ್ಲಿದ್ದರು. ಇವರೆಲ್ಲರೂ ಸೇರಿ ದೇಶಭಕ್ತಿ ಗೀತೆಗಳನ್ನು ಹಾಡುತ್ತ ಸಾಗಿದರು.

ಈ ಹಿಂದೆ ಯರವಡಾ ಜೈಲಿನಲ್ಲಿದ್ದಾಗ "ಬಡಾಬೇಡಿ" (ಮೇಲ್ಭಾಗದಲ್ಲಿ ತೂಗಿಬಿಟ್ಟ ಕಬ್ಬಿಣದ ಬಳೆಗಳಿಗೆ ಬೇಡಿ ಹಾಕಿದ ಎರಡೂ ಕೈಗಳನ್ನು ಹಾಕಿ ಅವುಗಳಿಗೆ ಕೀಲಿ ಹಾಕಿ ಹಲವು ಗಂಟೆಗಳವರೆಗೆ ನಿಲ್ಲುವ ಶಿಕ್ಷೆಯಾಗಿದೆ) ಶಿಕ್ಷೆಯನ್ನು ಅನುಭವಿಸಿದ್ದರು. ಅಲ್ಲದೇ "ಗಂಜಿ ಶಿಕ್ಷಾ" (ದಿನಕ್ಕೆ ಮೂರು ಬಾರಿ ಕೇವಲ ಸ್ವಲ್ಪ ಗಂಜಿಯನ್ನು ಮಾತ್ರ ನೀಡುವುದು) ಎಂಬ ಶಿಕ್ಷೆಯನ್ನು ಅನುಭವಿಸಿದ್ದರು. ಹಾಗೂ ಇವರು "ಕಪಡಾ ನಿಷೇಧ" (ತಟ್ಟಿನ ಚಡ್ಡಿ, ತಟ್ಟಿನ ಸಣ್ಣ ಅಂಗಿ)ವನ್ನು ಧರಿಸುವ ಶಿಕ್ಷೆಯನ್ನು ಅನುಭವಿಸಿದ್ದರು. ಇವರು ಅವುಗಳಿಗೆ ಪ್ರತಿರೋಧ ಒಡ್ಡಲಿಲ್ಲ. ಬಾಬಾ ಸಾಹೇಬರವರು 'ನನ್ನನ್ನು ಬಲಿಕೊಟ್ಟರೂ ಪರವಾಗಿಲ್ಲ ನನ್ನ ದೇಶಕ್ಕೆ ಸ್ವಾತಂತ್ರ್ಯ ಬೇಕು' ಎಂದು ಹೇಳುತ್ತಿದ್ದರು. ಹೀಗಾಗಿಯೇ ಇವರ ತ್ಯಾಗ, ಬಲಿದಾನವನ್ನು ಮೆಚ್ಚಿ ಅವರನ್ನು ಬಿಜಾಪುರದ ಗಾಂಧಿ ಎಂದು ಕರೆಯುತ್ತಿದ್ದರು.

ಬಿಜಾಪುರ ಜೈಲಿನಲ್ಲಿದ್ದಾಗ ಇವರೊಂದಿಗೆ ಸಿದ್ದಪ್ಪ ನಿಂಬರಗಿ, ಚನ್ನಬಸಪ್ಪ ಅಂಬಲಿ, ಸ.ಚ. ಮಿರ್ಜಿ, ಡುಂಡಪ್ಪ ಹುಣಶ್ಯಾಳ ಮೊದಲಾದ ದೇಶಪ್ರೇಮಿಗಳಿದ್ದರು. ೧೯೪೫ರಲ್ಲಿ ಬಾಬಾ ಸಾಹೇಬರವರು ಜೈಲು ಶಿಕ್ಷೆಯನ್ನು ಪೂರೈಸಿ ಬಿಡುಗಡೆಯಾದ ನಂತರ ಇಂಡಿ ತಾಲ್ಲೂಕಿನ ತಾಂಬಾ ಗ್ರಾಮದ ಕಸ್ತೂರಿಬಾಯಿಯವರೊಂದಿಗೆ ವಿವಾಹವಾಯಿತು. ಆಗ ಇವರ ವಯಸ್ಸು ಸುಮಾರು ೨೪ ವರ್ಷಗಳು. ಚಡಚಣಕ್ಕೆ ಬಂದು ಅಲ್ಲಿ ಸಾಹಿತಿಗಳಾದ ಸಿಂಪಿ ಲಿಂಗಣ್ಣ, ಜೀವರಾಜಭಾಯಿ ಜೋಶಿ, ಪುಂಡಲೀಕ್ ಲಾಳಸಂಗಿ, ಅಪ್ಪಾಸಾಹೇಬ ಮುತ್ತಿನ, ತದ್ದೇವಾಡಿಯ ದುಂಡಪ್ಪ ಉಪ್ಪಾರ ಹೀಗೆ ಹಲವಾರು ಸಮಾಜಸೇವಕರು, ದೇಶಪ್ರೇಮಿಗಳೊಂದಿಗೆ ಸೇರಿ ದೇಶದ ಹಲವು ಪ್ರಮುಖ ವಿಚಾರಗಳ ಬಗ್ಗೆ ಚರ್ಚಿಸುತ್ತಿದ್ದರು.

ಸ್ವಾತಂತ್ರ್ಯ ಬಂದ ನಂತರ ಸಂಸ್ಥಾನ ವಿಲೀನೀಕರಣ ಸಂದರ್ಭದಲ್ಲಿ ಜತ್ತ ಸಂಸ್ಥಾನದ ವಿಲೀನೀಕರಣದಲ್ಲಿ ಪ್ರಮುಖವಾದ ಪಾತ್ರವಹಿಸಿದರು. ಬಾಬಾ ಸಾಹೇಬರವರು ತಮ್ಮ ನೆಚ್ಚಿನ ಕಾಯಕವಾದ ಕೃಷಿಯನ್ನು ಮುಂದವರಿಸಿ ೧೨ ಏಪ್ರಿಲ್ ೨೦೦೬ರಲ್ಲಿ ನಿಧನರಾದರು.

ಸಾರ್ವಜನಿಕ ಸೇವಾ ಕಾರ್ಯಗಳು

೧. ಹಾವಿನಾಳ ಗ್ರಾಮದ ಸಹಕಾರಿ ಸೇವಾ ಸಂಘದ ಚೇರಮನ್ ಆಗಿ ೪ ವರ್ಷ ಕಾರ್ಯ.

೨. ಇಂಡಿಯ ಎಪಿಎಂಸಿ ನಿರ್ದೇಶಕರಾಗಿ ಕೆಲ ಸಮಯ ಕಾರ್ಯ.

೩. ಜಿಲ್ಲಾ ಗೃಹ ರಕ್ಷಕದಳದಲ್ಲಿ ಡಾ. ಎಚ್.ಐ. ಸಾಸನೂರರವರೊಂದಿಗೆ ಸೇವೆ.

೪. ಪಾನ ಪ್ರತಿಬಂಧಕ ಕಮಿಟಿಯ ಸದಸ್ಯರಾಗಿ ಸೇವೆ.

೫. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯನಾಗಿ ಸೇವೆ.

೬. ಜಿಲ್ಲಾ ಖಾದಿ ಬೋರ್ಡ್ ಚೇರಮನರಾಗಿ ಸೇವೆ.

೭. ಜಿಲ್ಲಾ ಅಲ್ಪಸಂಖ್ಯಾತ ಕಮಿಟಿಯ ಸದಸ್ಯರಾಗಿ ಸೇವೆ.

೮. ವಿಜಾಪುರ ನಗರದ ಶಾಂತಲಾ ಕಮಿಟಿಯ ಸದಸ್ಯರಾಗಿ ಸೇವೆ.

೯. ಜಿಲ್ಲಾ ಸ್ವಾತಂತ್ರ್ಯಯೋಧರ ಸಂಘದ ಅಧ್ಯಕ್ಷರಾಗಿ ಹಲವು ವರ್ಷಗಳವರೆಗೆ ಸೇವೆ.

೧೦. ಸ್ವಾತಂತ್ರ್ಯ ದಿನಾಚರಣೆಯ ಸಲಹಾ ಸಮಿತಿಯ ಸದಸ್ಯರಾಗಿ ಸೇವೆ.

೧೧. ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯ ಸದಸ್ಯರಾಗಿ ಸೇವೆ.

ಬಾಬಾ ಸಾಹೇಬರವರು ಸ್ವತಃ ನೂತ ನೂಲಿನಿಂದ ಖಾದಿ ಬಟ್ಟೆಗಳನ್ನು ತಯಾರಿಸಿ ಧರಿಸುತ್ತಿದ್ದರು. ಅಲ್ಲದೇ ಇತರರಿಗೆ ಖಾದಿ ಧರಿಸಲು ಹೇಳುತ್ತಿದ್ದರು. ಹೀಗಾಗಿ ಮಹಾರಾಷ್ಟ್ರ ಚರಕಾ ಸಂಘದವರು ಇವರಿಗೆ "ಸ್ವಾವಲಂಬಿ" ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಹೀಗೆ ಅಸಂಖ್ಯಾತ ಪ್ರಶಸ್ತಿಗಳು ದೊರೆತಿವೆ. ಅಲ್ಲದೇ ೨೫ನೇ ಸ್ವಾತಂತ್ರ್ಯೋತ್ಸವದ ವರ್ಷಾಚರಣೆ ಸಂದರ್ಭದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಇವರಿಗೆ ತಾಮ್ರ ಪತ್ರವನ್ನು ನೀಡಿ ಗೌರವಿಸಿದ್ದಾರೆ.

[ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಮಾಹಿತಿಯನ್ನು ನೀಡಿದ ಶ್ರೀ ಬಾಬಾ ಸಾಹೇಬ ಬಾಗೇವಾಡಿಯವರ ಮಗ ಶ್ರೀ ಎಷ್.ಬಿ. ಬಾಗೇವಾಡಿ ಹಾಗೂ ಮೊಮ್ಮಗನಾದ ನೇಮಿನಾಥ ಎಸ್. ಬಾಗೇವಾಡಿ ಹಾಗೂ ಡಾ. ಜಿ.ಡಿ. ಕೊಟ್ನಾಳರವರಿಗೆ ಕೃತಜ್ಞತೆಗಳು].

ಆಕರ ಗ್ರಂಥಗಳು

೧. ಎಂ.ವೈ. ಸಾವಂತ, 'ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಹೋರಾಟ', ಪ್ರಸಾರಾಂಗ, ಕವಿವಿ, ಧಾರವಾಡ.

೨. ಡಾ. ಸೂರ್ಯನಾಥ.ಕಾಮತ್, 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು', ತೃತೀಯ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೩. ಪ್ರೊ. ಬಿ. ಷೇಕ್ ಅಲಿ, (ಸಂ). 'ಕರ್ನಾಟಕ ಚರಿತ್ರೆ', ಪ್ರಸಾರಾಂಗ, ಕವಿವಿ, ಹಂಪಿ.

೪. ಡಾ. ಸಂಗಮನಾಥ ಲೋಕಾಪೂರ, 'ಚಿಕ್ಕರೂಗಿಯ ಚಳುವಳಿಗಾರರು'.

೫. ಈಶ್ವರಚಂದ್ರ ಚಿಂತಾಮಣಿ 'ನನ್ನ ಕಥೆ ಮತ್ತು ವ್ಯಥೆ' ಜೈನ ಅಧ್ಯಯನ ಸಂಸ್ಥೆ, ಶ್ರವಣಬೆಳಗೊಳ.

೬. ಡಾ. ಸೂರ್ಯನಾಥ.ಕಾಮತ್., 'ಕರ್ನಾಟಕ ಸಂಕ್ಷಿಪ್ತ ಇತಿಹಾಸ', ಎಂಸಿಸಿ ಪಬ್ಲಿಕೇಷನ್ಸ್, ಬೆಂಗಳೂರು.

೧೧೭

ಭಿನ್ನಡಿಯಲ್ಲಿನ ದೇವಾಲಯ ಮತ್ತು ಸ್ಮಾರಕಶಿಲ್ಪಗಳು

ಕೆ.ಎನ್. ಸುಪ್ರೀತ*

ಭಿನ್ನಡಿ ಗ್ರಾಮವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನಲ್ಲಿದೆ. ಹೊಯ್ಸಳರ ಮೂಲಸ್ಥಾನವಾದ ಈ ತಾಲೂಕು ಹಲವು ಐತಿಹಾಸಿಕ ಮಹತ್ವದ ಸ್ಥಳಗಳನ್ನು ಒಳಗೊಂಡಿದೆ. ಪ್ರಸ್ತುತ ಭಿನ್ನಡಿಯಲ್ಲಿ ಕಂಡುಬಂದಿರುವ ಅಪ್ರಕಟಿತ ಕನ್ನೇರಮ್ಮ ದೇವಾಲಯ ಹಾಗೂ ಸ್ಮಾರಕಶಿಲ್ಪಗಳನ್ನು ಕುರಿತು ದಾಖಲಿಸುವುದು ಲೇಖನದ ಉದ್ದೇಶವಾಗಿದೆ. ಭಿನ್ನಡಿಯ ಸುತ್ತಲೂ ಆವರಿಸಿರುವ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಕನ್ನೇರಮ್ಮ ಎಂಬ ದೇಗುಲ ಇದೆ. ಹಾಗೂ ಈ ದೇಗುಲದ ಸಮೀಪದಲ್ಲಿ ಹೊಸದಾಗಿ ಈಶ್ವರ ದೇವಾಲಯವನ್ನು ನಿರ್ಮಿಸಲಾಗಿದೆ. ಈ ಎರಡು ದೇವಾಲಯಗಳು ಪೂರ್ವಾಭಿಮುಖವಾಗಿವೆ. ಇವುಗಳ ವಾಸ್ತು ಲಕ್ಷಣ ಸರಳವಾಗಿದ್ದು, ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಾಣ ಮಾಡಲಾಗಿದೆ. ಕನ್ನೇರಮ್ಮ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಒಂದು ಅಂಕಣದಿಂದ ಕೂಡಿರುವ ಚಿಕ್ಕದಾದ ಗರ್ಭಗೃಹವನ್ನು ಮಾತ್ರ ಕಾಣಬಹುದು. ಗರ್ಭಗೃಹದ ಮೇಲೆ ಸರಳವಾದ ಶಿಖರವಿದೆ. ದೇವಾಲಯದ ಒಳಭಾಗದಲ್ಲಿ ಯಾವುದೇ ಮೂರ್ತಿ ಇಲ್ಲ. ಇದನ್ನು ಯಾರ ಕಾಲದಲ್ಲಿ ರಚನೆ ಮಾಡಲಾಗಿದೆ ಎಂಬುದನ್ನು ಖಚಿತವಾಗಿ ಹೇಳಲು ಯಾವುದೇ ಲಿಖಿತ ದಾಖಲೆಗಳಿಲ್ಲವಾದರೂ ದೇವಾಲಯದ ವಾಸ್ತು ರಚನಾ ವಿನ್ಯಾಸದ ಆಧಾರದ ಮೇಲೆ ವಿಜಯನಗರೋತ್ತರ ಕಾಲದಲ್ಲಿ ನಿರ್ಮಿಸಲಾದ ದೇವಾಲಯವೆಂದು ಹೇಳಬಹುದು.

ಮೂಡಿಗೆರೆ ತಾಲೂಕಿನ ಹಲವು ಹಳ್ಳಿಗಳಲ್ಲಿ ಮತ್ತು ಭಿನ್ನಡಿಯ ಸುತ್ತ-ಮುತ್ತಲಿನ ಗ್ರಾಮಗಳಲ್ಲಿ ಸುಗ್ಗಿ ಹಬ್ಬವನ್ನು ಪ್ರತಿ ವರ್ಷವು ಆಚರಿಸುತ್ತಾರೆ. ಭೈರವ ಬಾಗಿನ ಪುಸ್ತಕದಲ್ಲಿ ಪ್ರಕಟಗೊಂಡಿರುವ ವೈ.ಸಿ. ಭಾನಮತಿಯವರು ಕೊಟ್ರಗೆರೆ ಸುಗ್ಗಿ ಹಬ್ಬ ಮತ್ತು ಸುತ್ತಲೂ ಹಳ್ಳಿಗಳಲ್ಲಿ ಆಚರಿಸುತ್ತಿರುವ ಹಬ್ಬವನ್ನು ಹೋಲಿಕೆ ಮೂಡಿದಾಗ ಸುಗ್ಗಿ ಹಬ್ಬ ನಡೆಸುವ ಗುಡಿಗಳು ಹೆಚ್ಚಿನದಾಗಿ ಭಿನ್ನಡಿ ಗುಡಿಗಳಂತೆಯೇ ಇವೆ. ಸುಗ್ಗಿ ಹಬ್ಬವು ಕೂಡ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು, ಹೊಯ್ಸಳ ಕಾಲದಿಂದಲೂ ಈ ಆಚರಣೆ ರೂಢಿಯಲ್ಲಿತ್ತು ಎಂದು ತಿಳಿಯುತ್ತದೆ.

ಸ್ಥಳೀಯರು ಹೇಳುವಂತೆ ಊರಿನಲ್ಲಿ ಹೆಣ್ಣು ಮಕ್ಕಳಿಗೆ ವಿವಾಹ ನಿಶ್ಚಯವಾದಾಗ, ವಿವಾಹಕ್ಕೆ ಬೇಕಾದ ಒಡವೆಗಳಿಗಾಗಿ ಭಿನ್ನಡಿಯಲ್ಲಿನ ಕೆರೆಯಲ್ಲಿ ಸ್ನಾನಮಾಡಿ, ಮಡಿಯಿಂದ ಕನ್ನೇರಮ್ಮ ಗುಡಿಗೆ ಪೂಜೆ ಮಾಡಿ ಆಭರಣಗಳಿಗಾಗಿ ಪ್ರಾರ್ಥಿಸಿದಾಗ ದೇವಿ ಆಭರಗಳನ್ನು ನೀಡುತ್ತಿದ್ದಳು, ಒಮ್ಮೆ ಒಬ್ಬಳು ಆಭರಣಗಳನ್ನು ಹಿಂತಿರುಗಿಸುವಾಗ ಮೂಗುತ್ತಿಯನ್ನು ತಾನೆ ಇಟ್ಟುಕೊಂಡ ಕಾರಣ ಕನ್ನೇರಮ್ಮ ಅಂದಿನಿಂದ ಒಡವೆಯನ್ನು ನೀಡದೆ ಮಹಿಳೆಯರ ಮೇಲೆ ಮುನಿಸಿಕೊಂಡಳು ಅಂದಿನಿಂದ ಇಲ್ಲಿಯವರೆಗೂ ಸ್ತ್ರೀಯರು ದೇವಾಲಯ ಪ್ರವೇಶ ಮಾಡುವುದಿಲ್ಲ. ಪುರುಷರಿಗೆ ಮಾತ್ರ ಪ್ರವೇಶವಿದೆ. ಹೀಗೆ ಭಿನ್ನವಾಗಿ ನಡೆದುಕೊಂಡ ಕಾರಣಕ್ಕೆ ಭಿನ್ನಡಿಯೆಂದು ಸ್ಥಳನಾಮ ಬಂದಿರುವ ಸಾಧ್ಯತೆ ಇದೆ. ಸ್ಥಳೀಯರು ಹೇಳುವ ಐತಿಹ್ಯದಿಂದ ಮದುವೆ ಆಗದೆ ಇರುವ ಕನ್ಯೆಯರಿಗೆ ಆಭರಣಗಳನ್ನು ನೀಡುತ್ತಿದ್ದರಿಂದ ಕನ್ನೇರಮ್ಮ ಎಂಬ ಹೆಸರು ಈ ದೇವತೆಗೆ ಬಂದಿರಬಹುದು. ಕನ್ನೆಯರ+ಅಮ್ಮ= ಕನ್ನೇಯರಮ್ಮ ಆಗಿದೆ. ಕನ್ನೆಕುಮಾರಿ ಅಥವಾ ಕನ್ನೇರಮ್ಮ ಎಂದರೆ ಪಾರ್ವತಿಯ ಇನ್ನೊಂದು ಹೆಸರು. ಮೊದಲೇ ಹೇಳಿದಂತೆ ಸುಗ್ಗಿಹಬ್ಬ ವಿಶೇಷವಾಗಿ ಪರಮೇಶ್ವರ ಮತ್ತು ಪಾರ್ವತಿಯರ ಆರಾಧನೆ ಮಾಡುವ ಹಬ್ಬವಾಗಿದೆ. ಕನ್ನೇರಮ್ಮ ಗುಡಿಗೆ ಹೋಗುವ ದಾರಿಯಲ್ಲಿ ಮಂಟಪ ಮತ್ತು ದೀಪಸ್ತಂಭವಿದೆ. ದೀಪ ಸ್ತಂಭದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ದೀಪಸ್ತಂಭಕ್ಕೆ ಸುಗ್ಗಿ ಹಬ್ಬದ ಸಂದರ್ಭದಲ್ಲಿ ಬೆಳೆದ ಬೆಳೆಗಳನ್ನು ಅದಕ್ಕೆ ಎಸೆಯುವ ಪದ್ದತಿ ಇಂದಿಗೂ ಕಾಣಬಹುದು.

ಭಿನ್ನಡೆಯಲ್ಲಿನ ಹೊಯ್ಸಳ ವೀರಗಲ್ಲು

ಭಿನ್ನಡೆಯ ಅವಶೇಷಗಳಿರುವ ಸ್ಥಳದಲ್ಲಿ ಅರಳಿ ಮರದ ಕೆಳಗೆ ವೀರಗಲ್ಲು ಇದೆ. ಜನರು ಈ ವೀರಗಲ್ಲನ್ನು ಧಾರ್ಮಿಕ ಭಾವನೆಯಿಂದ ಪೂಜಿಸುತ್ತಾರೆ. ವೀರಗಲ್ಲು ಕಟ್ಟೆಯ ಮೇಲೆ ಅರ್ಚಕರನ್ನು ಹೊರತುಪಡಿಸಿ ಬೇರೆ ಯಾರು

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ಹಂಪಿ, ವಿದ್ಯಾರಣ್ಯ-೫೮೩೨೭೬.

ಹೋಗಬಾರದು ಎಂಬ ಮನಸ್ಥಿತಿ ಹೊಂದಿದ್ದಾರೆ. ವೀರಗಲ್ಲಿನ ಲಕ್ಷಣ ಗಮನಿಸಿದಾಗ ಸೂಕ್ಷ್ಮ ಕೆತ್ತನೆ, ಆಭರಣಗಳನ್ನು, ಶೈಲಿಯ ಆಧಾರದ ಮೇಲೆ ೧೨-೧೩ನೇ ಶತಮಾನಕ್ಕೆ ಸಂಬಂಧಿಸಿದ ಹೊಯ್ಸಳರ ಕಾಲದ ವೀರಗಲ್ಲು ಎಂದು ಗುರುತಿಸಬಹುದು. ವೀರಗಲ್ಲು ೪ ಅಡಿ ಎತ್ತರ, ೨.೬ ಅಡಿ ಅಗಲವಿದ್ದು ಮೂರು ಹಂತಗಳನ್ನು ಒಳಗೊಂಡಿದೆ. ಕೆಳ ಹಂತದಲ್ಲಿ ವೀರನ ಕೈಗಳಲ್ಲಿ ಖಡ್ಗ ಮತ್ತು ಗುರಾಣಿ ಆಯುಧಗಳನ್ನು ಹಿಡಿದು ಶತ್ರು ಪಡೆಯೊಂದಿಗೆ ಹೋರಾಡುವ ದೃಶ್ಯವನ್ನು ಚಿತ್ರಿಸಿದ್ದಾರೆ ಹಾಗೂ ಸೊಂಟದಲ್ಲಿ ಕಟಾರಿ ಹಿಡಿದಿರುವುದನ್ನು ಗಮನಿಸಬಹುದು. ಈ ಹಂತದಲ್ಲಿ ಆರು ಜನರಿದ್ದು ಎಲ್ಲರ ಕೈಯಲ್ಲಿ ಖಡ್ಗ ಮತ್ತು ಗುರಾಣಿ ಆಯುಧಗಳಿವೆ. ಎದುರಾಳಿಗಳು ಅಶ್ವಪಡೆಯ ಮೇಲಿಂದ ಹೋರಾಟ ಮಾಡುತ್ತಿದ್ದಾರೆ. ಮಲೆನಾಡು ಭಾಗದಲ್ಲಿ ಅಶ್ವಧಳವನ್ನು ಯುದ್ಧ ಸಂದರ್ಭದಲ್ಲಿ ಬಳಸಿರುವುದನ್ನು ತಿಳಿಯಬಹುದು. ಮೊದಲನೆಯ ಹಂತದಲ್ಲಿ ವೀರನ ಹಿಂದೆ ಒಬ್ಬ ಸೈನಿಕನಿದ್ದಾನೆ. ಎರಡನೆಯ ಹಂತದಲ್ಲಿ ಯುದ್ಧದಲ್ಲಿ ಸಾವನ್ನಪ್ಪಿದ ವೀರನು ಮಂಟಪದಲ್ಲಿ ಧ್ಯಾನಸಕ್ತನಾಗಿ ಕುಳಿತುಕೊಂಡಿದ್ದಾನೆ, ಇಬ್ಬರು ಅಪ್ಸರೆಯರು ಚಾಮರಸೇವೆಯಿಂದ ದೇವಲೋಕಕ್ಕೆ ಕರೆದೊಯ್ಯುತ್ತಿರುವರು. ಮೇಲಿನ ಹಂತದಲ್ಲಿ ವೀರನು ಶಿವಲಿಂಗ ಪೂಜೆಯನ್ನು ಮಾಡುತ್ತಿರುವ ದೃಶ್ಯಕಂಡು ಬರುತ್ತದೆ. ಇದೇ ಹಂತದಲ್ಲಿ ಇನ್ನೂ ಇಬ್ಬರು ಕೌಪಿನ ತೊಟ್ಟಿಕೊಂಡು ಪೂಜಿಸುತ್ತಿದ್ದಾರೆ. ಇವರನ್ನು ಸ್ಥಾನಾಧಿಪತಿ ಮತ್ತು ಕಾಳಮುಖಯತಿಗಳು ಎಂದು ಹೇಳಬಹುದು. ಮೇಲಿನ ಹಂತದಲ್ಲಿ ಸೂರ್ಯ ಚಂದ್ರರನ್ನು ಚಿತ್ರಿಸಿದ್ದಾರೆ. ಎಡಭಾಗದಲ್ಲಿ ನಂದಿಶಿಲ್ಪವಿದೆ.

ಸುಗ್ಗಿ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಶೌರ್ಯ ಸಾಹಸದ ಪ್ರತೀಕವಾಗಿ ವಿಶಿಷ್ಟವಾದ ಕುಣಿತವನ್ನು ಮಾಡುತ್ತಾರೆ. ತಮ್ಮ ಪೂರ್ವಿಕರ ಯುದ್ಧದ ಖಡ್ಗಗಳನ್ನು ಹಿಡಿದು ಡೋಲು, ತಮಟೆಗಳ ಬಡಿತದ ಗತ್ತಿಗೆ ಸರಿಯಾಗಿ ಕುಣಿಯುತ್ತಾರೆ. ಇದರಲ್ಲಿ ಸಾಲು ಕುಣಿತ, ಬೇಟೆಕುಣಿತಗಳನ್ನು ಕಾಣಬಹುದು. ಈ ಆಚರಣೆಯನ್ನು ಗಮನಿಸಿದಾಗ ಸುಗ್ಗಿ ಹಬ್ಬದ ಆಚರಣೆಯೊಂದಿಗೆ ವೀರ ಮರಣ ಹೊಂದಿದ ತಮ್ಮ ಪೂರ್ವಿಕರನ್ನು ನೆನೆದು ಅವರಿಗೆ ಗೌರವ ಸೂಚಿಸುತ್ತಾರೆ. ಇಂಥಾ ಸುಗ್ಗಿ ಆಚರಿಸುವ ಹಲವು ಸ್ಥಳಗಳಲ್ಲಿ ವೀರಗಲ್ಲುಗಳನ್ನು ಕಾಣಬಹುದು.

ಭಿನ್ನಡೆಯಿಂದ ಬಣಕಲ್ ಮುಖ್ಯರಸ್ತೆಗೆ ಕೂಡುವ ರಸ್ತೆಯ ಮಧ್ಯದಲ್ಲಿ ದಿನೇಶ್ ಎಂಬುವವರ ಮನೆಯ ಬೇಲಿಯಲ್ಲಿ ಎರಡು ವೀರಗಲ್ಲು ಮತ್ತು ಒಂದು ವೀರಮಾಸ್ತಿಗಲ್ಲು ದೊರೆತಿದೆ. ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿರುವ ಇವುಗಳು ಸುಮಾರು ಕ್ರಿ.ಶ. ೧೩-೧೪ನೇ ಶತಮಾನಕ್ಕೆ ಸಂಬಂಧಿಸಿವೆ ಎಂದು ಹೇಳಬಹುದು.

ವೀರಮಾಸ್ತಿಗಲ್ಲು: ಒಂದು ಹಂತದಲ್ಲಿರುವ ಈ ವೀರ ಮಾಸ್ತಿಗಲ್ಲು ೩.೬ ಅಡಿ ಎತ್ತರ ಮತ್ತು ೨.೨ ಅಡಿ ಅಗಲವಾಗಿದ್ದು ಮಣ್ಣಿನಲ್ಲಿ ಹುದುಗಿ ಹೋಗಿದೆ. ವೀರನ ಎಡಕೈಯಲ್ಲಿ ಬಿಲ್ಲು ಮತ್ತು ಬಲಗೈಯಲ್ಲಿ ಬಾಣವನ್ನು ಹಿಡಿದುನಿಂತಿದ್ದಾನೆ. ಪಕ್ಕದಲ್ಲಿ ಸ್ತ್ರೀಯು ಎರಡು ಕೈಗಳನ್ನು ಮೇಲಕ್ಕೆತ್ತಿದ್ದಾಳೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಚಿತ್ರಿಸಿದ್ದಾರೆ.

ವೀರಗಲ್ಲು: ಈ ವೀರಗಲ್ಲು ಒಂದು ಹಂತದಾಗಿದ್ದು ೧.೧ ಅಡಿ ಎತ್ತರವಾಗಿದ್ದು ಸ್ವಲ್ಪಭಾಗ ಮಣ್ಣಿನಲ್ಲಿ ಹುಗಿದು ಹೋಗಿದೆ. ೧.೬ ಅಡಿ ಅಗಲವಿದ್ದು ವೀರಗಲ್ಲಿನ ಎಡಭಾಗದಲ್ಲಿ ಸ್ವಲ್ಪಭಾಗ ಒಡೆದು ಹೋಗಿದೆ. ಒಬ್ಬ ವೀರನಿದ್ದು ಬಲಕೈಯಲ್ಲಿ ಖಡ್ಗ ಮತ್ತು ಎಡಕೈಯಲ್ಲಿ ಗುರಾಣಿ ಹಿಡಿದು ಯುದ್ಧದಲ್ಲಿ ಹೋರಾಟ ಮಾಡುವಂತೆ ಚಿತ್ರಿಸಿದ್ದಾರೆ. ಮೇಲ್ಭಾಗದಲ್ಲಿ ಅಸ್ಪಷ್ಟವಾಗಿ ಸೂರ್ಯ ಚಂದ್ರರನ್ನು ಗುರುತಿಸಬಹುದು.

ವೀರಗಲ್ಲು: ಇದು ಒಂದು ಹಂತದ ವೀರಗಲ್ಲು ಆಗಿದ್ದು, ಚೌಕಾಕಾರದೊಳಗೆ ವೀರನನ್ನು ಚಿತ್ರಿಸಿದ್ದಾರೆ. ೪ ಅಡಿ ಎತ್ತರ ಹಾಗೂ ೧.೧ ಅಡಿ ಅಗಲವಾಗಿದೆ. ವೀರನು ಕೈಯಲ್ಲಿ ಖಡ್ಗ ಮತ್ತು ಗುರಾಣಿ ಹಿಡಿದು ಯುದ್ಧದಲ್ಲಿ ಹೋರಾಡುತ್ತಿದ್ದಂತೆ ಚಿತ್ರಿಸಲಾಗಿದೆ.

ವೀರಗಲ್ಲು: ಮೀನಾಕ್ಷಿಯವರ ಮನೆಯಿಂದ ಸ್ವಲ್ಪ ದೂರದಲ್ಲಿ ಗದ್ದೆಯ ಬಯಲಿನಲ್ಲಿ ಸಂಪಿಗೆ ಮರದ ಕೆಳಗೆ ವೀರಗಲ್ಲು ಕಂಡುಬಂದಿದ್ದು ಎರಡು ಹಂತಗಳಿಂದ ಕೂಡಿದೆ. ಆದರೆ ಅತೀಯಾದ ಮಳೆ ಹಾಗೂ ಗಾಳಿಯಿಂದಾಗಿ ಪಾಚಿಕಟ್ಟಿ ಶಿಲ್ಪಗಳು ಅಸ್ಪಷ್ಟವಾಗಿದ್ದು ಗುರುತಿಸಲು ಅಸಾಧ್ಯವಾಗಿದೆ. ಈ ಪ್ರದೇಶದ ವೀರಗಲ್ಲುಗಳನ್ನು ಗಮನಿಸಿದಾಗ ಎರಡು ರೀತಿಯ ವೀರಗಲ್ಲುಗಳು ಕಂಡು ಬಂದಿದ್ದು, ಅವುಗಳ ಕಾಲಮಾನ ಬೇರೆ-ಬೇರೆಯಾಗಿದೆ. ಇದರಿಂದಾಗಿ ಬೇರೆ-ಬೇರೆ ರಾಜ ಮನೆತನದ ಆಳ್ವಿಕೆಗೆ ಈ ಸ್ಥಳ ಒಳಪಟ್ಟಿತ್ತು ಎಂದು ಅಭಿಪ್ರಾಯಪಡಬಹುದು. ಒಟ್ಟಾರೆಯಾಗಿ ಬಿನ್ನಡೆಯಲ್ಲಿ ಕಂಡುಬಂದಿರುವ ದೇವಾಲಯ ಹಾಗೂ ಸ್ಮಾರಕ ಶಿಲ್ಪಗಳು ಈ ಪರಿಸರದ ಸಾಂಸ್ಕೃತಿಕ ಮಹತ್ವವನ್ನು ತಿಳಿಯಲು ಸಹಕಾರಿಯಾಗಿವೆ.



ಭಿನ್ನಡಿ ಕನ್ನೇರಮ್ಮ ಗುಡಿ



ಕನ್ನೇರಮ್ಮ ಗುಡಿಯ ಹಿಂಭಾಗ







ದೀಪಸ್ತಂಭ



ಹೊಯ್ಸಳರ ಕಾಲದ ವೀರಗಲ್ಲು



ವೀರಮಾಸ್ತಿಗಲ್ಲು





ಭಿನ್ನಡಿಯಲ್ಲಿರುವ ವೀರಗಲ್ಲುಗಳು

[ಕ್ಷೇತ್ರ ಕಾರ್ಯದಲ್ಲಿ ಭಾಗವಹಿಸಿ, ಸಹಕರಿಸಿದ ನನ್ನ ತಂದೆ–ತಾಯಿಗಳಾದ ಶ್ರೀಮತಿ ಶ್ರೀ ದಾಕ್ಷಾಯಿಣಿ ನಾಗೇಶ್, ಸಹೋದರ ಸುಮಂತ್ ಕೆ.ಎನ್., ಸ್ನೇಹಿತ ಸುರೇಂದ್ರ ಅವರಿಗೂ ಹಾಗೂ ಪಿ.ಹೆಚ್.ಡಿ ಮಾರ್ಗದರ್ಶಕರಾಗಿ ಸ್ಫೂರ್ತಿ ನೀಡುತ್ತಿರುವ ಡಾ. ಸಿ. ಮಹದೇವ ಅವರಿಗೂ ಕೃತಜ್ಞತೆಗಳು].

ಆಧಾರಸೂಚಿ

೧. ಕಲಬುರ್ಗಿ ಎಂ.ಎಂ., ೨೦೧೧, 'ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು', ಸಪ್ನ ಬುಕ್ ಹೌಸ್, ಬೆಂಗಳೂರು.
೨. ಚಿದಾನಂದಮೂರ್ತಿ ಎಂ., ೨೦೦೮, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೩. ಚೆನ್ನಕ್ಕ ಎಲಿಗಾರ., ೧೯೭೭, 'ಮಾಸ್ತಿಗಲ್ಲು', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೪. ಜಯಪ್ಪಗೌಡ ಡಿ. ಎಸ್., ೧೯೯೯, 'ಬೈರವ ಬಾಗಿನ', ಚಿಕ್ಕಮಗಳೂರು ಜಿಲ್ಲಾ ಒಕ್ಕಲಿಗರ ಸಂಘ, ಚಿಕ್ಕಮಗಳೂರು.
೫. ಮಂಜುನಾಥ ಎಂ.ಜಿ., ೨೦೧೧, 'ಮಾಸ್ತಿಗಲ್ಲು, ವೀರಗಲ್ಲು ಮತ್ತು ನಿಸಿದಿ ಶಾಸನಗಳು', ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾಲಯ, ಮೈಸೂರು.
೬ ಶೇಷಶಾಸ್ತ್ರಿ ಆರ್., ೨೦೦೪, 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೭. ವಕ್ತೃಗಳ ವಿವರ: ಅಣ್ಣೇಗೌಡ್ರು (೭೦), ಮೋಹನ್ (೩೨), ಮೀನಾಕ್ಷಿ (೫೭).

೧೧೮

ಚಿತ್ರದುರ್ಗ ಜಿಲ್ಲೆಯ ವಿಶೇಷ ವೀರಗಲ್ಲು ಮಾಸ್ತಿಗಲ್ಲುಗಳು

ಕೆ.ಟಿ. ಮಹಂತೇಶ*


ಇತಿಹಾಸದ ವಿವಿಧ ರೀತಿಯ ಮಜಲುಗಳನ್ನು ಹೊಂದಿರುವ ಚಿತ್ರದುರ್ಗ ಜಿಲ್ಲೆ ಕರ್ನಾಟಕದ ಇತಿಹಾಸ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿದೆ.

ಒಂದು ನಾಡಿನ ಅಥವಾ ಪ್ರದೇಶದ ಇಲ್ಲವೆ ಸ್ಥಳದ ಚರಿತ್ರೆಯ ರಚನೆ ಮಾಡಬೇಕಾದರೆ ಆಧಾರಗಳು ಬಹುಮುಖ್ಯ. ಆಧಾರಗಳಲ್ಲಿ ಶಾಸನಗಳಷ್ಟೇ ವೀರಗಲ್ಲು, ಮಾಸ್ತಿಗಲ್ಲುಗಳು ಸಹ ಪ್ರಮುಖವಾಗಿವೆ. ವೀರಗಲ್ಲು, ಮಾಸ್ತಿಗಲ್ಲುಗಳು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಇತಿಹಾಸವನ್ನು ತಿಳಿಯಪಡಿಸುತ್ತವೆ. ಹಾಗೆಯೆ ಸಾಂಸ್ಕೃತಿಕ ಪರಿಸರವನ್ನು ಅರ್ಥ ಮಾಡಿಕೊಳ್ಳುವಾಗ ಸ್ಥಳೀಯ ಜನರ ನಂಬಿಕೆ, ಆಚರಣೆ, ಐತಿಹ್ಯ, ರೂಢಿಗಳನ್ನು ಅರ್ಥ ಮಾಡಿಕೊಳ್ಳುವುದು ಬಹುಮುಖ್ಯ. ಚಿತ್ರದುರ್ಗ ಜಿಲ್ಲೆಯಲ್ಲಿ ನಾಯಕ ಮತ್ತು ಗೊಲ್ಲ ಬುಡಕಟ್ಟು ಸಮುದಾಯಗಳು ಹೆಚ್ಚಾಗಿದ್ದು ಬುಡಕಟ್ಟು ಸಂಸ್ಕೃತಿಯಾದ, ವೀರರ ಆರಾಧನೆ, ವಿವಿಧ ಆಚರಣೆ ಸಂಪ್ರದಾಯಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ. ವೀರರು ಜೀವದ ಹಂಗನ್ನು ತೊರೆದು ತೋರುವ ಸ್ವಾಮಿ ನಿಷ್ಠೆ, ವೀರತನದ ಪ್ರದರ್ಶನ ಮೆಚ್ಚುವಂತದ್ದಾಗಿದೆ. ವೀರರ ಪರಾಕ್ರಮ ಕೇವಲ ಬಲ ತೋರ್ಪಡಿಸುವುದೇ ಆಗಿರದೆ, ಸಾಮಾಜಿಕ ನಿಷ್ಠೆ, ಸ್ವಾಭಿಮಾನ, ಗೌರವ, ಧಾರ್ಮಿಕತೆ ಪ್ರಮುಖವಾಗಿ ಕಾಣಬರುತ್ತದೆ.

ಕರ್ನಾಟಕ ರಾಜ್ಯದಲ್ಲಿಯೇ ವಿಶಿಷ್ಟವಾದ ಕೆಲವು ವೀರ ಮಾಸ್ತಿಗಲ್ಲುಗಳು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆಯುತ್ತವೆ. ಅವುಗಳೆಂದರೆ ಹಿರಿಯೂರು ತಾಲ್ಲೂಕು ವೇಣಕಲ್ಲುಗುಡ್ಡ ಗ್ರಾಮದ ಕುಂಬಾರ ಮತದ ಶಿವಣ್ಣ ಮನೆಯ ಹಿಂಭಾಗದಲ್ಲಿ ಬೃಹತ್ತಾದ ಎರಡು ಹುಟ್ಟು ಬಂಡೆಗಳಿವೆ ಇವೆರಡು ಬಂಡೆಗಳ ಮಧ್ಯದಲ್ಲಿ ಮಾನವ ನಡೆದಾಡುವಷ್ಟು ಸ್ವಲ್ಪ ಜಾಗವಿದೆ. ಬಲಭಾಗದ ಬೃಹತ್ ಬಂಡೆಯ ಮೇಲೆ ವೀರ ಮಾಸ್ತಿಯರ ಒಂದು ಹಂತದ ಶಿಲ್ಪಕೆತ್ತನೆ ಬಂಡೆಯ ಮಧ್ಯಭಾಗದಲ್ಲಿ ಕೆತ್ತನೆ ಮಾಡಲಾಗಿದೆ. ಈ ವೀರ ಮಾಸ್ತಿ ಶಿಲ್ಪದಲ್ಲಿ ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಬಲಗೈಯಲ್ಲಿ ಬಾಣಗಳನ್ನು ಹಿಡಿದು ಕೈ ಮೇಲಕ್ಕೆತ್ತಿದ್ದಾನೆ. ವೀರನ ಎಡಭಾಗಕ್ಕೆ ಮುಡಿಯನ್ನು ಕಟ್ಟಿದ್ದು ಕಿವಿಯಲ್ಲಿ ಕರ್ಣಕುಂಡಲಗಳನ್ನು ಎರಡು ಕೈಯಲ್ಲಿ ಕಡಗ, ತೋಳಬಂಧಿ ಧರಿಸಿದ್ದು, ಸೊಂಟದಲ್ಲಿ ಬಾಯ ಒಂದನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನು ಮೇಲ್ಗಚ್ಚೆಯನ್ನು ಧರಿಸಿದ್ದು, ಕಾಲಲ್ಲಿ ಕಾಲಂದಿಗೆ ಇದೆ. ವೀರನು ದೊಡ್ಡದಾದ ಮೀಸೆಯನ್ನು ಬಿಟ್ಟಿದ್ದು ಕೊರಳಲ್ಲಿ ಕೊರಳಹಾರ ಧರಿಸಿದ್ದಾನೆ. ಎರಡು ಭುಜಗಳಿಂದ ಮೊಣಕಾಲಿನವರೆಗೂ ಹೂವಿನ ದಂಡೆಯನ್ನು ಇಳಿಬಿಡಲಾಗಿದೆ. ವೀರನ ಬಲಭಾಗದಲ್ಲಿ ಮಾಸ್ತಿಯನ್ನು ಕೆತ್ತಲಾಗಿದ್ದು ಮಾಸ್ತಿ ಎರಡು ಕೈಗಳನ್ನು ಮೇಲಕ್ಕೆತ್ತಿ ಹಿಡಿದಿದ್ದಾಳೆ. ಎರಡು ಕೈಗಳಲ್ಲಿ ಯಾವುದೋ ವಸ್ತುಗಳನ್ನು ಹಿಡಿದಿದ್ದು ಅದು ಅಸ್ಪಷ್ಟವಾಗಿದೆ. ತಲೆಯ ಹಿಂಭಾಗದಲ್ಲಿ ಕೇದಿಗೆ ಧರಿಸಿದ್ದು ಎರಡು ಕೈಗಳಲ್ಲಿ ಬಳೆ ತೋಳ್ಬಂದಿ ಕೊರಳಲ್ಲಿ ಹಾರ ನೆರಿಗೆಯುಳ್ಳ ಸೀರೆ ಹಾಗೂ ಮುಂಭಾಗದಲ್ಲಿ ಕುಚ್ಚುಗಳನ್ನು ಧರಿಸಿದ್ದಾಳೆ. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆ ಮಾಡಲಾಗಿದೆ. ಈ ವೀರ ಮಾಸ್ತಿ ಶಿಲ್ಪ ದೊಡ್ಡದಾದ ಹುಟ್ಟು ಬಂಡೆಯಲ್ಲಿ ಕೆತ್ತನೆ ಮಾಡಿರುವುದರಿಂದ ವಿಶಿಷ್ಟವಾದ ಶಾಸನ ಶಿಲ್ಪವಾಗಿದೆ.

ಇದೇ ತಾಲ್ಲೂಕಿನ ತವಂದಿ ಗ್ರಾಮದಲ್ಲಿರುವ ಮಾಸ್ತಿಗಲ್ಲು ಮೂರು ಹಂತಗಳನ್ನು ಹೊಂದಿದ್ದು ಮೊದಲನೇ ಹಂತದಲ್ಲಿ ಹೋರಾಟದ ದೃಶ್ಯಗಳನ್ನು ಕೆತ್ತನೆ ಮಾಡಲಾಗಿದೆ. ಎಡಭಾಗದಲ್ಲಿ ವೀರನು ವೈರಿಯೊಂದಿಗೆ ಹೋರಾಡಲು ಕುದುರೆಯಿಂದ ಕೆಳಗಿಳಿದಿದ್ದು ಎದುರಾಳಿಯೂ ಕುದುರೆಯಿಂದ ಕೆಳಗಿಳಿದು ಹೋರಾಡುತ್ತಿದ್ದಾನೆ. ವೀರನು ವೈರಿಯ ತಲೆ ಕತ್ತರಿಸುತ್ತಿರುವ ದೃಶ್ಯದ ಕೆತ್ತನೆಯಿದೆ. ವೀರನ ಹಿಂಭಾಗ ಅಲಂಕರಿಸಲಾದ ಕುದುರೆ, ಕುದುರೆ ಹಿಂಭಾಗ ಮತ್ತೊಬ್ಬ ವೀರ ಬಲಗಾಲನ್ನುಮಡಿಚಿದ್ದು ಬಿಲ್ಲನ್ನು ಬಲಗೈಯಲ್ಲಿ ಕತ್ತಿ ಹಿಡಿದಿದ್ದು ಬೆನ್ನಿನ ಹಿಂಭಾಗದ ಬತ್ತಳಿಕೆಯಲ್ಲಿ ಬಾಣಗಳನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನು ಹಿಂಭಾಗಕ್ಕೆ ತಿರುಗಿ ನೋಡುತ್ತಿದ್ದು ವೀರನ ಬೆನ್ನಿನ ಮೇಲೆ ಮತ್ತೊಬ್ಬ ವೀರನ ಕುದುರೆಯ

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ. ಮೊ. ೯೪೪೮೭೨೮೫೯೨



ಮಾಸ್ತಿಗಲ್ಲು ತವಂದಿ ಹಿರಿಯೂರು (ತಾ)



ಬೃಹತ್ ಬಂಡೆ ವೀರಗಲ್ಲು ವೇಣುಕಲ್ಲುಗುಡ್ಡ



ವೀರಗಲ್ಲು ನಾಗಗೊಂಡನಹಳ್ಳಿ ಚಳ್ಳಕೆರೆ (ತಾ)



ವೀರಗಲ್ಲು ನಾಗಗೊಂಡನಹಳ್ಳಿ ಚಳ್ಳಕೆರೆ (ತಾ)



ವೀರಗಲ್ಲು ಭೈರಾಪುರ, ಮೊಳಕಾಲ್ಮೂರು (ತಾ)

ಎಡಗಾಲಿನಿಂದ ತುಳಿಯುತ್ತಿರುವ ಕುದುರೆಯ ಮೇಲೆ ವೀರನು ಉದ್ದವಾದ ಭರ್ಜಿಯನ್ನು ಹಿಡಿದು ತಿವಿಯಲು ಸಜ್ಜಾಗಿರುವಂತೆ ಚಿತ್ರಿಸಲಾಗಿದೆ ವೀರನು ಉದ್ದನೆಯ ಕಿರೀಟವನ್ನು ಧರಿಸಿರುವುದರಿಂದ ಹಾಗೂ ಇವನ ಹಿಂಭಾಗದಲ್ಲಿ ರಾಜ ಪರಿವಾರದವರು ರಾಜ ದಂಡವನ್ನು ಹಿಡಿದು ನಿಂತಿರುವುದರಿಂದ ವೀರನು ಯಾವುದೋ ರಾಜ ಅಥವಾ ರಾಜ ಪರಿವಾರದವನಾಗಿರಬಹುದೆಂದು ಊಹಿಸ ಬಹುದು ಜೊತೆಗೆ ಮೂರು ಕುದುರೆಗಳನ್ನು ಸಹ ಅಲಂಕಾರ ಗೊಳಿಸಲಾಗಿರುವುದರಿಂದ, ರಾಜಮನೆತನಕ್ಕೆ ಸೇರಿದ ಕುದುರೆಗಳಾಗಿರಬಹುದಾಗಿದೆ.

ಎರಡನೇ ಹಂತದಲ್ಲಿ ರಾಜ ಪರಿವಾರದವನೊಬ್ಬ ವೀರನ ಏಳು ಜನ ಹೆಂಡತಿಯರನ್ನು ಅಲಂಕರಿಸಿದ ಕುದುರೆಯ ಮೇಲೆ ಕೂರಿಸಿ ಅಗ್ನಿಕೊಂಡದ ಕಡೆಗೆ ಕರೆ ತರುತ್ತಿದ್ದಾನೆ. ಕುದುರೆಯ ಮೇಲೆ ಕುಳಿತಿರುವ ಏಳು ಜನ ಸ್ತ್ರೀಯರು ತಮ್ಮ ಎರಡು ಕೈಗಳಲ್ಲಿ ಏನನ್ನೋ ಹಿಡಿದು ಮೇಲಕ್ಕೆತ್ತಿ ಹಿಡಿದಿದ್ದಾರೆ. ಏಳು ಕುದುರೆಯ ಮುಂಭಾಗದಲ್ಲಿ ಒಬ್ಬ ಪುರುಷನನ್ನ ಕೆತ್ತನೆ ಮಾಡಲಾಗಿದ್ದು ಇವನ ಬಲಗೈಯನ್ನು

ಮೇಲಕ್ಕೆತ್ತಿದ್ದು ಎಡಗೈಯನ್ನು ಇಳಿಬಿಟ್ಟಿದ್ದಾನೆ. ಇವನ ನಂತರ ಏಳು ಸ್ತ್ರೀಯರು ಒಬ್ಬರ ಮೇಲೆ ಒಬ್ಬರು ಹೆಗಲ ಮೇಲೆ ಕೈಹಾಕಿಕೊಂಡು ಕೊಂಡಕ್ಕೆ ಹಾರಲು ಸಿದ್ದರಾಗಿದ್ದಾರೆ. ಏಳು ಜನ ಸ್ತ್ರೀಯರ ಎರಡು ಕಾಲುಗಳ ಕೆಳಗೆ ಕಲ್ಲಿನ ಅಥವಾ ಮರದ ದುಂಡಾದ ಚಕ್ರವನ್ನು ಕೆತ್ತಿದ್ದು ಚಕ್ರದ ಮೇಲ್ಭಾಗದಲ್ಲಿ ಮರದಿಂದ ತಯಾರಿಸಿದ ಅಥವಾ ಕಲ್ಲಿನಿಂದ ತಯಾರಿಸಿದ ಮಣೆಯನ್ನು ಹಾಸಲಾಗಿದೆ. ಈ ಮಣೆಗೆ ಮಧ್ಯದಲ್ಲಿ ಚಕ್ರವಿರುವುದರಿಂದ ಕಾಲನ್ನು ಇಟ್ಟಕಡೆ ಕೆಳಗೆ ಹೋಗುತ್ತದೆ ಮತ್ತೊಂದು ಭಾಗ ಮೇಲೇಳುತ್ತದೆ. ಮೇಲಕ್ಕೆ ಹೋದ ಭಾಗಕ್ಕೆ ಕಾಲಿಟ್ಟರೆ ಅದು ಕೆಳಕ್ಕೆ ಹೋಗುತ್ತದೆ. ಇದರ ಮುಂದೆ ಅಗ್ನಿಕೊಂಡ ನಿರ್ಮಿಸಿರುವುದರಿಂದ ಸ್ತ್ರೀ ಕೊಂಡಕ್ಕೆ ಜಾರಿ ಬೀಳುತ್ತಿದ್ದಳು. ಅದರ ಮೇಲೆ ಜಾರುವ ಮರ ಅಥವಾ ಕಲ್ಲಿನ ಹಲಗೆಯನ್ನು ಕೊಂಡದ ಪಕ್ಕದಲ್ಲಿ ನಿರ್ಮಿಸಲಾಗಿದೆ ಸ್ತ್ರೀ ಕೊಂಡಕ್ಕೆ ಹಾಯುವ ಮುನ್ನ ಈ ಹಲಗೆ ಮೇಲೆ ನಿಂತು ಹಲಗೆಯಿಂದ ಜಾರಿ ಕೊಂಡಕ್ಕೆ ಬೀಳುವಂತೆ ವ್ಯವಸ್ಥೆ ಮಾಡಲಾಗಿದೆ. ಈ ರೀತಿಯ ಜಾರುವ ಮಣೆ ಬೇರಾವ ಮಾಸ್ತಿಗಲ್ಲುಗಳಲ್ಲಿ ದೊರೆಯುವುದಿಲ್ಲ. ಏಳು ಜನ ಸ್ತ್ರೀಯರ ಮುಂಭಾಗದಲ್ಲಿ ಉರಿಯುತ್ತಿರುವ ಅಗ್ನಿಕೊಂಡ ನಿರ್ಮಿಸಿ ಕೊಂಡದ ಮುಂಭಾಗದ ಮತ್ತು ಸುತ್ತಲೂ ದೊಡ್ಡದಾದ ಬಾಳೆಗಿಡ ಕಟ್ಟಲಾಗಿದೆ. ಬಾಳೆಗಿಡ ಇರುವುದರಿಂದ ಬಹುಷಃ ಅಗ್ನಿಕೊಂಡದ ಸುತ್ತಲೂ ಬಾಳೆಕಂದು ಕಟ್ಟಿ ಹೂವಿನ ಅಲಂಕಾರಗಳನ್ನು ತಳಿರು ತೋರಣಗಳನ್ನು ಕಟ್ಟಿ ಶೃಂಗರಿಸುತ್ತಿದ್ದರು ಇಲ್ಲವೆ ಬಾಳೆಯ ತೋಟದಲ್ಲಿ ಅಗ್ನಿಕೊಂಡ ನಿರ್ಮಾಣ ಮಾಡಿಕೊಂಡು ಕೊಂಡ ಹಾಯ್ದ ಬಗ್ಗೆ ಶಿಲ್ಪಿ ಹೇಳಲು ಚಿತ್ರಿಸಿರಬಹುದು. ಏಳು ಜನ ಮಾಸ್ತಿಯರ ಕಾಲಿನ ಕೆಳಗೆ ಮಣೆಗಳನ್ನು ಚಿತ್ರಿಸಲಾಗಿದೆ. ಈ ಮಣೆಯ ಮೇಲೆ ನಿಲ್ಲಿಸಿ ಒಬ್ಬರ ನಂತರ ಮತ್ತೊಬ್ಬರರಂತೆ ಏಳು ಜನ ಸ್ತ್ರೀಯರು ಕೊಂಡ ಹಾಯ್ದ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಮಾಸ್ತಿಗಲ್ಲು ಪ್ರಸ್ತುತವಾಗಿ ಕೆರೆಯ ಹಿಂಭಾಗದ ಅಡಿಕೆ ತೋಟದಲ್ಲಿ ಇದೆ.

ಮೂರನೇ ಹಂತದಲ್ಲಿ ಎಂಟು ಜನ ಮಾಸ್ತಿಯರು ಕೈ ಮುಗಿಯುತ್ತಾ ದ್ಯಾನಸಕ್ತರಾಗಿ ಸಾಲಾಗಿ ಕುಳಿತಿದ್ದಾರೆ. ಕೆಳಹಂತದಲ್ಲಿ ಏಳು ಜನ ಮಾಸ್ತಿಯರಿದ್ದಾರೆ ಇಲ್ಲಿ ಎಂಟು ಜನರನ್ನು ಚಿತ್ರಿಸಲಾಗಿದೆ. ಇವರ ಪಕ್ಕದಲ್ಲಿ ಯತಿ, ನಂದಿ, ಶಿವಲಿಂಗ ಮುಂಭಾಗದಲ್ಲಿ ಅಸ್ಪಷ್ಟ ಪ್ರಾಣಿಶಿಲ್ಪ ನಂತರ ಇಬ್ಬರು ಯತಿಯರು ಶಿಲ್ಪ ಕೆತ್ತನೆ ಮಾಡಲಾಗಿದೆ. ಈ ಮಾಸ್ತಿಗಲ್ಲಿನಲ್ಲಿ ಸೂರ್ಯ ಚಂದ್ರರ ಕೆತ್ತನೆ ಮಾಡಲಾಗಿಲ್ಲ.

ಮೊಳಕಾಲ್ಮೂರು ತಾಲ್ಲೂಕಿನ ಬೈರಾಪುರದ ಗ್ರಾಮದಲ್ಲಿ ಸುಮಾರು ಹತ್ತು ಅಡಿ ಇರುವ ವೀರಗಲ್ಲು ಮರಳು ಗ್ರಾನೈಟ್ ಶಿಲೆಯಿಂದ ಕೂಡಿದೆ ಎಲ್ಲಾ ವೀರಗಲ್ಲುಗಳಂತೆ ಮೂರು ನಾಲ್ಕು ಅಥವಾ ಐದು ಹಂತಗಳಾಗಿ ವಿಭಾಗಿಸಿಲ್ಲ ಕೆಳಭಾಗದಲ್ಲಿ ಹೋರಾಟದ ಶಿಲ್ಪ, ಇದರ ಮೇಲ್ಭಾಗದಲ್ಲಿ ವೀರನನ್ನು ದೇವಕನ್ಯೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದು, ನಂತರ ವೀರ ಕೈಮುಗಿಯುತ್ತಾ ಧ್ಯಾನಭಂಗಿಯಲ್ಲಿ ಕುಳಿತಿದ್ದು ವೀರನ ಎರಡು ಕಡೆ ದೇವಕನ್ಯೆಯರು ಗಾಳಿ ಬೀಸುತ್ತಿರುವ ಚಿತ್ರವನ್ನು ಕೆತ್ತನೆ ಮಾಡಲಾಗಿದೆ. ಜಿಲ್ಲೆಯಲ್ಲಿ ಇಷ್ಟು ಎತ್ತರದ ವೀರಗಲ್ಲು ಮತ್ತಾವ ಕಡೆಯು ದೊರೆಯುವುದಿಲ್ಲ.

ಈ ವೀರಗಲ್ಲಿನ ಶಿಲ್ಪಗಳು ಸಹಜವಾಗಿವೆ. ಮರಳು ಗ್ರಾನೈಟ್ ಕಲ್ಲಾಗಿರುವುದಿರಂದ ಸೂಕ್ಷ್ಮ ಕೆತ್ತನೆ ಅಸಾಧ್ಯವಾಗಿದೆ. ವೀರ ಸೊಂಟದಲ್ಲಿ ಕಚ್ಚೆಯನ್ನು ಧರಿಸಿದ್ದು ಬರಿಮೈಯಲ್ಲಿದ್ದಾನೆ ಎರಡು ಕೈಗಳಲ್ಲಿ ಉದ್ದವಾದ ಈಟಿಯನ್ನು ಹಿಡಿದಿದ್ದಾನೆ. ಸೊಂಟದಲ್ಲಿ ಬಾಕೊಂದನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನ ಬಲಗಾಲ ಕೆಳಗೆ ವೈರಿ ಸತ್ತುಬಿದ್ದಿದ್ದು ವೈರಿಯು ಎಡಗೈಲ್ಲಿ ಗುರಾಣಿ ಬಲಗೈಯಲ್ಲಿ ಕತ್ತಿಯನ್ನು ಹಿಡಿದುಕೊಂಡಿದ್ದಾನೆ. ವೀರನ ಮುಂದೆ ಒಬ್ಬ ಸ್ತ್ರೀ ಎಡಗೈಯಲ್ಲಿ ಗುರಾಣಿ ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಮುಂದಕ್ಕೆ ಹೋಗುತ್ತಿರುವಂತೆ ಚಿತ್ರಿಸಲಾಗಿದೆ.

ಎರಡನೇ ಹಂತದಲ್ಲಿ ವೀರನು ಎರಡು ಕೈಗಳನ್ನ ಕೆಳಗೆ ಇಳಿಬಿಟ್ಟಿರುವಂತೆ ವೀರನ ಎರಡು ತೋಳನ್ನು ಹಿಡಿದು ದೇವಕನ್ಯೆಯರು ಸ್ವರ್ಗಕ್ಕೆ ಕೊಂಡೊಯುತ್ತಿರುವ, ವೀರನ ಕಾಲಕೆಳಗೆ ಎತ್ತರವಾದ ಪೀಠದ ಮೇಲೆ ನಿಂತಿರುವಂತೆ ದೇವಕನ್ಯೆಯರನ್ನು ಅಲಂಕಾರಭರಿತವಾಗಿ ಚಿತ್ರಿಸಲಾಗಿದೆ.

ಮೂರನೇ ಹಂತದಲ್ಲಿ ಧ್ಯಾನಸಕ್ತನಾಗಿ ಕುಳಿತಿರುವ ವೀರ, ಕೈ ಮುಗಿಯುತ್ತಿರುವ ತಲೆಯ ಮೇಲೆ ತುರುಬು, ಕಿವಿಯಲ್ಲಿ ದೊಡ್ಡದಾದ ರಿಂಗುಗಳನ್ನು ಧರಿಸಿದ್ದಾನೆ. ದೇವಕನ್ಯೆಯರನ್ನು ಸಹಜವಾಗಿ ಶೃಂಗರಿಸಿ ಚಿತ್ರಿಸಲಾಗಿದೆ.

ಚಳ್ಳಕೆರೆ ತಾಲ್ಲೂಕು ನಾಗಗೊಂಡನಹಳ್ಳಿ ರಘುನಾಥ ಭಟ್ಟರ ಮನೆಯ ಹಿಂಭಾಗದ ಎನ್.ಪಿ. ಭೀಮಣ್ಣ ಇವರ ಜಮೀನಿನ ಬದುವಿನಲ್ಲಿರುವ ತುರಗೋಳ್ ವೀರಗಲ್ಲು ವಿಶಿಷ್ಟ ಮಾಹಿತಿಯನ್ನು ನೀಡುವುದಾಗಿದೆ. ಈ ವೀರಗಲ್ಲು ಒಂದೇ ಹಂತದಲ್ಲಿದ್ದು ೫೮ ಇಂಚು ಎತ್ತರ ೪೫ ಇಂಚು ಅಗಲದ್ದಾಗಿದ್ದು ಬಿಳಿಗ್ರಾನೈಟ್ ಶಿಲೆಯನ್ನು ಕೆತ್ತನೆಗೆ ಬಳಸಲಾಗಿದೆ. ಈ ವೀರಗಲ್ಲಿನಲ್ಲಿ ವೀರನು ಬಲಗೈಯಲ್ಲಿ ದನಗಳನ್ನು ಕಾಯಲು ಕೋಲನ್ನು ಹಿಡಿದಿದ್ದಾನೆ ಎಡಗೈಯನ್ನು ಕೆಳಗೆ ಇಳಿಬಿಡಲಾಗಿದ್ದು

ಅಗಲಿದ ಬೆರಳನ್ನು ಹೊಂದಿದ್ದು ಸೊಂಟದಲ್ಲಿ ವಸ್ತ್ರವನ್ನು ಮೊಣಕಾಲಿನವರೆಗೂ ಸುತ್ತಿದ್ದು ಮುಂಭಾಗದಲ್ಲಿ ಕಚ್ಚೆಯನ್ನು ಇಳಿಬಿಡಲಾಗಿದೆ, ಎರಡು ಕಾಲಲ್ಲಿ ಕಾಲ್ಗಡಗ ಎರಡು ಕೈಯಲ್ಲಿ ಬಳೆ, ತೋಳಬಂದಿ, ಕೊರಳಲ್ಲಿ ಹಾರ, ಕಿವಿಯೋಲೆ, ತಲೆ ಮೇಲೆ ತುರುಬನ್ನು ಚಿತ್ರಿಸಲಾಗಿದೆ. ಬಲಭಾಗದ ಕಾಲ ಬಳಿ ತಲೆ ಎತ್ತಿ ನಿಂತಿರುವ ತುರು ಬಲಗೈ ಪಕ್ಕದಲ್ಲಿ ತುರು ಎಡಗೈ ಹತ್ತಿರ ಮತ್ತೊಂದು ತುರು ತುರುವಿನ ಮೇಲ್ಭಾಗದಲ್ಲಿ ಜಿಲ್ಲೆಯಲ್ಲಿ ಇದುವರೆವಿಗೂ ಯಾವುದೇ ವೀರಗಲ್ಲಿನಲ್ಲಿ ದೊರೆತಿರದ ಒಂದು ಉದ್ದನೆಯ ಕೋಲಿನ ಎರಡು ತುದಿಗೆ ಹಗ್ಗದಿಂದ ಮಾಡಿದ ನೆಲುವು, ನೆಲುವಿನ ಮಧ್ಯಭಾಗದಲ್ಲಿ ಮಣ್ಣಿನ ಮಡಿಕೆಗಳನ್ನು ಒಂದರ ಮೇಲೆ ಒಂದನ್ನಿಟ್ಟಿರುವಂತೆ ಎರಡು ಭಾಗದಲ್ಲಿ ಎರಡೆರಡು ಮಡಿಕೆಗಳನ್ನು ಜೋಡಿಸಲಾಗಿದೆ. ವೀರಗಲ್ಲಿನಲ್ಲಿ ಅನೇಕ ಗೋವುಗಳನ್ನು ಕೆತ್ತನೆ ಮಾಡಿರುವುದರಿಂದ ವೀರನು ಅನೇಕ ಗೋ ಸಂಪತ್ತನ್ನು ಹೊಂದಿದ್ದು ಗೋವಿನಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಪಕ್ಕದ ಹಳ್ಳಿಗಳಿಗೋ ಅಥವಾ ಸಂತೆಗೋ ತೆಗೆದುಕೊಂಡು ಹೋಗುವಾಗ ಕಳ್ಳಕಾಕರಿಗೂ ವೀರನಿಗೂ ಹೋರಾಟ ನಡೆದು ವೀರನು ಮರಣ ಹೊಂದಿರುವ ಸಂಗತಿಯನ್ನು ಚಿತ್ರಿಸಿರಬಹುದೆಂದು ಅರ್ಥೈಸಬಹುದಾಗಿದೆ. ವೀರನು ಶಾಂತ ಮತ್ತು ಸೌಮ್ಯ ಮುಖವನ್ನು ಹೊಂದಿದ್ದು ಸಮಭಂಗಿಯಲ್ಲಿ ನಿಂತಿರುವಂತೆ ಚಿತ್ರಿಸಲಾಗಿದೆ.

ಇದೇ ಗ್ರಾಮದ ಇಂಟೂರು ಹನುಮಂತರೆಡ್ಡಿಯವರ ಜಮೀನಿನಲ್ಲಿ ಸಾಲಾಗಿ ನಿಲ್ಲಿಸಿರುವ ಒಟ್ಟು ಏಳು ವೀರಗಲ್ಲುಗಳಿವೆ. ಐದು ವೀರಗಲ್ಲುಗಳಲ್ಲಿ ವೀರನು ಶಸ್ತ್ರಾಸ್ತ್ರ ಹಿಡಿದು ನಿಂತಿರುವ ಒಂದೇ ಹಂತದಲ್ಲಿ ಚಿತ್ರಿಸಲಾಗಿದೆ. ಮತ್ತೊಂದು ವೀರಗಲ್ಲಿನಲ್ಲಿ ಹುಲಿಯೊಡನೆ ಹೋರಾಡುತ್ತಿರುವ ವೀರಗಲ್ಲು ಇದ್ದು ಇಲ್ಲಿ ಬಹುಮುಖ್ಯವಾಗಿ ಹೇಳಬೇಕೆಂದ ವೀರಗಲ್ಲೆಂದರೆ ಎಡಭಾಗದಿಂದ ಎರಡನೇ ವೀರಗಲ್ಲು ಜಿಲ್ಲೆಯಲ್ಲಿ ವಿಶಿಷ್ಟವಾದ ವೀರಗಲ್ಲಾಗಿದೆ. ಈ ವೀರಗಲ್ಲು ೩೪ ಇಂಚು ಎತ್ತರ ೩೮ ಇಂಚು ಅಗಲವಾದ ಒಂದೇ ಹಂತದ ವೀರಗಲ್ಲಾಗಿದೆ. ವೀರನು ಶತ್ರುಗಳೊಡನೆ ಹೋರಾಡಲು ಸನ್ನದ್ಧನಾಗಿ ಜೋಡೆತ್ತಿನ ಗಾಡಿಯ ಮೇಲೆ ನಿಂತು ಹೋಗುತ್ತಿರುವ ಚಿತ್ರದ ಕೆತ್ತನೆಯಿದೆ. ಎರಡು ಎತ್ತುಗಳನ್ನು ಗಾಡಿಯ ನೊಗಕ್ಕೆ ಹೂಡಿದ್ದು ಎರಡು ಎತ್ತಿನ ಹಗ್ಗಗಳನ್ನು ಎಡಗೈಯಲ್ಲಿ ಹಿಡಿದಿದ್ದಾನೆ. ಬಲಗೈಯಲ್ಲಿ ದೊಡ್ಡದಾದ ಕುಡುಗೋಲನ್ನು ಮೇಲಕ್ಕೆತ್ತಿ ಹಿಡಿದಿದ್ದಾನೆ ವೀರನು ಸೊಂಟದಿಂದ ಮೊಣಕಾಲಿನವರೆಗೂ ವೀರಗಚ್ಚೆ ಧರಿಸಿದ್ದು, ಮೇಲುಡಿಗೆಯನ್ನು ಸಹ ಧರಿಸಿದ್ದು ಕೊರಳಲ್ಲಿ ವಿವಿಧ ರೀತಿಯ ಹಾರಗಳನ್ನು ಧರಿಸಿದ್ದಾನೆ ಎರಡು ಕೈಗಳಲ್ಲಿ ತೋಳ್ಬಂದಿ ಕೈಕಡಗ ಕಾಲ್ಗಡಗ, ಕಿವಿಯೋಲೆ ತಲೆಯ ಮೇಲೆ ತುರುಬನ್ನು ಕೆತ್ತಲಾಗಿದೆ. ಬೆನ್ನಿನ ಹಿಂಭಾಗದಿಂದ ತೊಡೆಯವರೆಗೂ ಹಿಂಭಾಗದಲ್ಲಿ ಬಟ್ಟೆಯನ್ನು ಇಳಿಬಿಡಲಾಗಿದೆ. ಈ ವೀರಗಲ್ಲಿನ ಈ ವೀರನ ಎಡಗೈ ಮೇಲ್ಭಾಗದಲ್ಲಿ ಅಸ್ಪಷ್ಟವಾದ ಶಾಸನವನ್ನು ಕಾಣಬಹುದಾಗಿದೆ.

ಆಕರ ಗ್ರಂಥಗಳು

೧. ಶೇಷಶಾಸ್ತ್ರೀ.ಆರ್., ಕರ್ನಾಟಕದ ವೀರಗಲ್ಲುಗಳು.

೨. ಶೇಠೆ.ಬಿ.ಎಸ್., ಕರ್ನಾಟಕದಲ್ಲಿ ಸತಿಪದ್ಧತಿ.

೩. ರಾಜಶೇಖರಪ್ಪ.ಬಿ., ಇತಿಹಾಸ ಕಥನ.

೪. ಪರಶಿವಮೂರ್ತಿ.ಡಿ.ವಿ., ಕನ್ನಡ ಶಾಸನ ಶಿಲ್ಪ.

೫. ಚಿದಾನಂದಮೂತಿ.ಎಂ.,ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.

೧೧೯

ಕೊಪ್ಪಳ ಜಿಲ್ಲೆಯ ಬಂದೂಕು ವೀರಗಲ್ಲುಗಳು

ಗೀತಾ ಸಿ. ಪೊಲೀಸ್ ಪಾಟೀಲ*

ಭಾರತೀಯರು ಪ್ರಾಚೀನ ಕಾಲದಲೇ ಸಿಡಿಮದ್ದನ್ನು ಬಳಸಿದ್ದರು, ಅದನ್ನು ಮಹಾಭಾರತ, ಮುದ್ರಾರಾಕ್ಷಸ ಹಾಗೂ ಅಗ್ನಿಪುರಾಣ ಮೊದಲಾದ ಸಂಸ್ಕೃತ ಕಾವ್ಯಗಳಲ್ಲಿ ಕಾಣಬಹುದೆಂಬ ಅಭಿಪ್ರಾಯಗಳೂ ಇವೆ. ಈ ವಾದವನ್ನು ಮುಂದಿಡುವ ವಿದ್ವಾಂಸರೆಂದರೆ ಒಪರ್ಟ್, ವಿಲ್ಸನ್, ರಾಮದಾಸ್ ಸೇನ್ ಮತ್ತು ವಿ.ಆರ್. ದೀಕ್ಷಿತರ್ ಸಂಸ್ಕೃತ ಕಾವ್ಯಗಳಲ್ಲಿ ಉಲ್ಲೇಖಗೊಂಡಿರುವ ಶತಘ್ನಿ, ಕನಪ, ಆಯುರ್ವಘ್ನಿ, ನರಚ, ಲೋಹಯಂತ್ರ, ಕಾಲಚಕ್ರ, ಸರ್ವಘಾಟಿ, ದೀಧಿತಿ, ಸ್ಫುಲಿಂಗ, ಕದಿನಿ ಹಾಗೂ ಕೌಟಿಲ್ಯನು ಹೇಳುವ 'ಅಗ್ನಿಬಾಣ', ಕಾಮಂದಕ ಮತ್ತು ಶುಕ್ರನೀತಿಯಲ್ಲಿ ಬರುವ 'ನಲಿಕ' ಗಳನ್ನು ಸಿಡಿಮದ್ದಿನ ಆಯುಧಗಳೆಂದೂ ಹೇಳಲಾಗಿದೆ[೧]. ಕನ್ನಡ ಕಾವ್ಯಗಳಲ್ಲೂ ಇಂತಹ ಆಯುಧಗಳ ಉಲ್ಲೇಖಗಳಿವೆ. ಅವುಗಳೆಲ್ಲವೂ ೧೫ನೇ ಶತಮಾನದ ನಂತರದವು. ಈ ಕಾವ್ಯಗಳು ವ್ಯಕ್ತಪಡಿಸುವ ಫಿರಂಗಿ, ಗುಂಡುಗೋವಿ, ಮದ್ದಿನ ಪಟ್ಟಣ, ಶತಘ್ನಿ, ಉಪ್ಪಿನತಿತ್ತಿ, ಪೆಟಲು, ಕೈಗೋವಿ, ಭೂರಿಶತಗ್ನಿ, ತೋಪು ಇನ್ನು ಮುಂತಾದವುಗಳು ಸಿಡಿಮದ್ದಿನ ಸಮರ್ಥ ಬಳಕೆಯನ್ನು ಎತ್ತಿ ಹಿಡಿದಿವೆ[೨]. ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಕುರಿತು ಹೇಳುವ ಮುನ್ನ ಚರಿತ್ರೆಯ ಆಕರಗಳಾದ ಸಾಹಿತ್ಯ, ಶಾಸನ, ಸ್ಮಾರಕ, ವೀರಗಲ್ಲು, ಪ್ರವಾಸಿಗರ ವರದಿ ಮೊದಲಾದವುಗಳನ್ನು ಗಮನಿಸಿದ್ದಾಗ ಕ್ರಿ.ಶ. ೧೪ನೆಯ ಶತಮಾನದ ಪೂರ್ವದಲ್ಲಿ ಸಿಡಿಮದ್ದು ಬಳಕೆಯಾದ ಉಲ್ಲೇಖಗಳಿಲ್ಲ. ಚಿದಾನಂದಮೂರ್ತಿ ಅವರು ಕೂಡ ಸಿಡಿಮದ್ದಿನ ಬಳಕೆ ಪ್ರಾಚೀನ ಕರ್ನಾಟಕದಲ್ಲಿ ಇರಲಿಲ್ಲವೆಂಬುದನ್ನು ಒಪ್ಪುತ್ತಾರೆ. ಸಾಹಿತ್ಯದಲ್ಲಿ ಶಸ್ತ್ರಗಳ ಉಲ್ಲೇಖವಿದ್ದರೂ ಅವು ವಿಷಪೂರಿತ ಆಯುಧಗಳೆ ಹೊರತು ಸಿಡಿಮದ್ದು ಆಗಿರಲಿಲ್ಲ. ಶಾಸನ ಮತ್ತು ಪ್ರವಾಸಿ ವರದಿಗಳು ೧೪ನೆಯ ಶತಮಾನದಲ್ಲಿ ಸಿಡಿಮದ್ದು ಬಳಕೆಯಾಗಿರುವುದನ್ನು ಎತ್ತಿ ಹಿಡಿದಿವೆ. ಕ್ರಿ.ಶ. ೧೫ನೆಯ ಶತಮಾನದ ಪೂರ್ವ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಶಸ್ತ್ರಾಸ್ತ್ರಗಳೆಂದರೆ ಬಿಲ್ಲು-ಬಾಣ, ಕತ್ತಿ-ಗುರಾಣಿ, ಈಟಿ- ಭರ್ಚಿಗಳೇ ಆಗಿವೆ. ಇವುಗಳಲ್ಲಿ ಬಂದೂಕಗಳಿರುವುದಿಲ್ಲ. ಆದರೆ ವಿಜಯನಗರ ಮತ್ತು ನಂತರ ಕಾಲದ ವೀರಗಲ್ಲುಗಳಲ್ಲಿ ವೀರರು ತಮ್ಮ ಕೈಗಳಲ್ಲಿ ಕತ್ತಿಯ ಜೊತೆಗೆ ಬಂದೂಕುಗಳನ್ನು ಹಿಡಿದಿರುವರು. ಇಲ್ಲಿ ಬಂದೂಕಿನ ಉಪಯೋಗ ಕಂಡುಕೊಂಡಿದ್ದರು ವೀರರ ಬಳಿ ಕತ್ತಿ ಅಥವಾ ಬಾಕು, ಚೂರಿ ಇರುವುದು ಇಂದಿನ ಆಯುಧಗಳ ಪ್ರಭಾವವೇ ಇರಬೇಕು. ವಿಜಯನಗರ ಕಾಲಾವಧಿಯ ವೀರಗಲ್ಲುಗಳಲ್ಲಿ ಕಾಣಬರುವ ವಿಶೇಷ ಹಾಗೂ ವಿನೂತನ ಆಯುಧವಾದ ಬಂದೂಕು ಕಂಡುಬರುವುದರಿಂದ ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಕ್ರಿ.ಶ. ೧೪ನೆಯ ಶತಮಾನ ಅಂದರೆ ವಿಜಯನಗರ ಕಾಲದಲ್ಲಿ ಬಳಕೆಗೊಂಡಿತ್ತೆಂಬುದು ಸ್ಪಷ್ಟವಾಗಿದೆ.

ಬಂದೂಕವನ್ನು ಫಿರಂಗಿ, ಗುಂಡುಗೋವಿ, ಶತಘ್ನಿ ಮುಂತಾದ ಸಿಡಿಮದ್ದಿನ ಆಯುಧಗಳು ಹದಿನಾರನೆಯ ಶತಮಾನದಿಂದ ಈಚಿನ ಕಾವ್ಯಗಳಲ್ಲಿ ಯಥೇಷ್ಟವಾಗಿ ಕಾಣಿಸಿಕೊಳುತ್ತದೆ[೩]. ನ್ಯೂನಿಜ್ ಕೂಡ ಬಿಲ್ಲು-ಬಾಣ, ಕತ್ತಿ, ಗುರಾಣಿ, ಭಲ್ಲೆ, ಭರ್ಜಿಗಳು, ಕೋವಿಗಳು ಮತ್ತು ಫಿರಂಗಿಗಳನ್ನು ಹಾಗೂ ಪೋರ್ಚ್‌ಗೀಸರು ಬಳಸಿದ ವಿನೂತನ ಬಂದೂಕುಗಳ ವಿವರ ನೀಡುತ್ತಾನೆ[೪]. ಕ್ರಿ.ಶ. ೧೪-೧೫ನೇ ಶತಮಾನದ ಪೂರ್ವದಲ್ಲಿ ನಿರ್ಮಾಣವಾದ ವೀರಗಲ್ಲುಗಳಲ್ಲಿ ಕಾಣಬರುವ ಆಯುಧಗಳೆಂದರೆ ಕತ್ತಿ- ಗುರಾಣಿ, ಬಿಲ್ಲು-ಬಾಣ, ಈಟಿಗಳೇ ಆಗಿವೆ. ಆದರೆ ೧೫ನೇ ಶತಮಾನ ನಂತರದ ವೀರಗಲ್ಲುಗಳು ವಿಶಿಷ್ಟ ಬಗೆಯ ಆಯುಧವೊಂದನ್ನು ಪರಿಚಯಿಸುತ್ತದೆ. ಅಂತಹ ಆಯುಧವೆಂದರೆ ಬಂದೂಕು[೫]. ಇಂತಹ ಬಂದೂಕುಗಳ ಕುರಿತು ಕರ್ನಾಟಕದ ಮಂಡ್ಯದ ಸಾಸಲು, ಹಾವೇರಿಯ ಗುತ್ತಲ, ರಾಯಚೂರಿನ ಸಿಂಧನೂರು[೬] ಮತ್ತು ರಾಯಚೂರಿನ ಪ್ರಾಚ್ಯವಸ್ತು ಸಂಗ್ರಹಾಲಯ, ಜಿಲ್ಲಾ ಅಗ್ನಿಶಾಮಕದಳದ ಕಛೇರಿ ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಅವರ ಕಛೇರಿ ಆವರಣಗಳಲ್ಲಿ ಸುಮಾರು ಐವತ್ತಕ್ಕೂ ಮಿಗಿಲಾಗಿ ಬಂದೂಕನ್ನು ಹಿಡಿದು ನಿಂತಿರುವ ಹೋರಾಡುತ್ತಿರುವ ವೀರರ ವೀರಗಲ್ಲುಗಳಿವೆ[೭]. ಕೊಪ್ಪಳ, ನಿಟ್ಟಾಲಿ, ಆನೆಗುಂದಿ, ಗಂಗಾವತಿ, ಹಿರೇಜಂತಗಲ್ಲು, ಕಾರಟಗಿ, ಇಂದರಗಿ, ಹಟ್ಟಿ, ವಿಠಲಪುರ,

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬. ಮೊ. ೮೭೬೨೨೦೯೬೬



ಬಂದುಕು ಪ್ರಯೋಗಿಸುತ್ತಿರುವುದು, ಆಗಲಕೇರಿ



ಬೂದುಗುಂಪ

ಮಲ್ಲಾಪುರ, ಹಳೇಮುಸ್ಲೂರು, ಅಗಳಕೆರೆ, ತಿರುಮಲ್ಲಾಪುರ, ಗುಡದೂರ, ಜಮ್ಮಾಪುರ, ಕನಕಗಿರಿ ಮೊದಲಾದೆಡೆಗಳಲ್ಲಿ ಇವೆ. ಇವುಗಳ ಕುರಿತು ಕೊಪ್ಪಳ ಪ್ರದೇಶದಲ್ಲಿ ಕ್ಷೇತ್ರ ಕಾರ್ಯ ಕೈಗೊಂಡಾಗ ದೊರೆತ ಬಂದೂಕು ವೀರಗಲ್ಲುಗಳ ಮಹತ್ವವನ್ನು ಸಾದರಪಡಿಸುತ್ತಿದ್ದು, ಪ್ರಸ್ತುತ ಪ್ರಬಂಧದಲ್ಲಿ ವಿವೇಚಿಸಲಾಗುವುದು.

ಕೊಪ್ಪಳ ಜಿಲ್ಲೆಯಲ್ಲಿ ದೊರೆಯುವಂತ ಬಂದೂಕು ವೀರಗಲ್ಲುಗಳನ್ನು ಬಂದೂಕು ಹಿಡಿದುಕೊಂಡ ವೀರ, ಬಂದೂಕವನ್ನು ಪ್ರಯೋಗಿಸುತ್ತಿರುವ ವೀರ, ವೀರನ ಪಕ್ಕದಲ್ಲಿ ಬಂದೂಕು. ಈ ರೀತಿಯಾಗಿ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳ ವಿವರ ಪ್ರಸ್ತುತ ಪ್ರಬಂಧದಲ್ಲಿ ಈ ರೀತಿ ಇವೆ.

ಬಂದೂಕು ಹಿಡಿದುಕೊಂಡ ವೀರ

ಕೊಪ್ಪಳ ತಾಲೂಕಿನ ಹುಲಿಗಿ ಗ್ರಾಮದಲ್ಲಿನ ವೀರಗಲ್ಲೊಂದರಲ್ಲಿ ಇಬ್ಬರು ವೀರರು ತಮ್ಮ ಬಲಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದು, ಎಡಗೈಯಲ್ಲಿ ಬಂದೂಕನ್ನು ಹಿಡಿದು ನಿಂತಿದ್ದಾನೆ. ಇಲ್ಲಿಯ ಶಿಲ್ಪದಲ್ಲಿ ಬಂದೂಕವನ್ನು ದೊಡ್ಡದಾಗಿ ಚಿತ್ರಿಸಿದ್ದಾನೆ. ಇದೇ ತಾಲೂಕಿನ ಹಟ್ಟಿ ಗ್ರಾಮದಲ್ಲಿ ಬಂದೂಕವನ್ನು ಹಿಡಿದುಕೊಂಡು ನಿಂತ ವೀರಗಲ್ಲುವಿದ್ದು, ಬಲಗೈಯಲ್ಲಿ ಚೂರಿಯನ್ನು, ಎಡಗೈಯಲ್ಲಿ ಬಂದೂಕವನ್ನು ಹಿಡಿದುಕೊಂಡು ಚಲಿಸುವ ಭಂಗಿಯಲ್ಲಿ ವೀರನ ಶಿಲ್ಪವಿದೆ. ಈ ಶಿಲ್ಪದ ಹತ್ತಿರವೇ ಮತ್ತೊಂದು ವೀರಗಲ್ಲೊಂದರಲ್ಲಿ ಇಬ್ಬರು ವೀರರು ಇದ್ದು ಒಬ್ಬ ವೀರನು ಬಲಗೈಯಲ್ಲಿ ಚೂರಿಯನ್ನು, ಎಡಗೈಯಲ್ಲಿ ಬಂದೂಕವನ್ನು ಹಿಡಿದುಕೊಂಡು ಚಲಿಸುವ ಭಂಗಿಯಲ್ಲಿದ್ದಾನೆ. ಇವನ ಪಕ್ಕದಲ್ಲಿರುವ ಮತ್ತೊಬ್ಬ ವೀರನು ಬಲಗೈಯಲ್ಲಿ ಬಾಣವನ್ನು, ಎಡಗೈಯಲ್ಲಿ ಬಿಲ್ಲುವನ್ನು ಹಿಡಿದುಕೊಂಡು ಚಲಿಸುವ ಭಂಗಿಯಲ್ಲಿದ್ದಾನೆ. ಇದೇ ತಾಲೂಕಿನ ಇಂದ್ರಗಿ ಗ್ರಾಮದ ನೈಸರ್ಗಿಕ ಬಂಡೆಗೆ ಬಂದೂಕವನ್ನು ಹಿಡಿದುಕೊಂಡ ವೀರನ ಶಿಲ್ಪವಿದೆ. ವೀರನು ಸೊಂಟದಲ್ಲಿ



ಗುಡದೂರು



ಕಾರಟಗಿ

ಚಾಕುವಿದೆ. ಸ್ಥಳೀಯರು ಈ ಶಿಲ್ಪವನ್ನು ಮಿಂಚು ಬಂಡೆಪ್ಪ ಎಂದು ಕರೆಯುತ್ತಾರೆ. ಇದೇ ಗ್ರಾಮದ ಆಂಜನೇಯ ದೇವಾಲಯದ ಪಕ್ಕದಲ್ಲಿ ವೀರಗಲ್ಲುವಿದ್ದು, ಬಲಗೈಯಲ್ಲಿ ದೊಡ್ಡದಾದ ಬಂದೂಕುವಿದ್ದು, ಎಡಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡ ವೀರನನ್ನು ಉಗ್ರವಾಗಿ ತೋರಿಸಿದ್ದಾರೆ. ಕೊಪ್ಪಳದ ಮಿಟ್ಟಿಕೇರಿ ಓಣಿಯ ಆಂಜನೇಯ ದೇವಾಲಯದ ಪಕ್ಕದ ಗರಡಿ ಮನೆಯ ಹೊರ ಗೋಡೆಯ ಮೇಲೆ ಎರಡು ವೀರಮಾಸ್ತಿಗಲ್ಲುಗಳಿವೆ. ಮೊದಲನೇಯ ಶಿಲ್ಪದಲ್ಲಿ ವೀರನು ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಬಂದೂಕುಗಳನ್ನು ಹಿಡಿದ್ದಾನೆ. ಸೊಂಟಕ್ಕೆ ಚೂರಿ ಇದೆ. ಕಿವಿಗಳಲ್ಲಿ ಕಿವಿಯೋಲೆ, ತೋಳುಗಳಿಗೆ ತೋಳು ಬಂದಿ, ಕಾಲು ಮತ್ತು ಕೈಗಳಲ್ಲಿ ಕಡಗಗಳಿದ್ದು, ಕೊರಳಲ್ಲಿ ಪದಕವಿರುವ ಸರವಿದೆ. ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಖಂಡರಿಸಲಾಗಿದೆ. ಈ ಶಿಲ್ಪದ ಪಕ್ಕದಲ್ಲಿ ಮತ್ತೊಂದು ವೀರಮಾಸ್ತಿಗಲ್ಲು ಇದೆ. ವೀರನು ಚಲನೆಯ ಭಂಗಿಯಲ್ಲಿದ್ದು, ಎಡಗಾಲನ್ನು ಎಡಬದಿಗೆ ಮತ್ತೆ ಸ್ವಲ್ಪ ಮುಂದಕ್ಕೆ ಚಾಚಿ ನಂತಿದೆ. ಬಲಗಾಲು ಬಲಗಡೆಗೆ ಚಾಚಿರುವುದರಿಂದ ದೇಹವು ತ್ರಿಭಂಗಿಯಲ್ಲಿದೆ. ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಬಂದೂಕುಗಳನ್ನು ಹಿಡಿದಿದ್ದು, ವೀರನು ಸೊಂಟಕ್ಕೆ ಒಂದು ವಸ್ತ್ರವನ್ನು ಧರಿಸಿದ್ದಾನೆ. ತಲೆಯ ಮೇಲೆ ರುಮಾಲು ಇದೆ. ಸತಿಯು ತ್ರಿಭಂಗಿಯಲ್ಲಿದ್ದು ಬಲಗೈಯನ್ನು ಮೇಲೆತ್ತಿದ್ದಾಳೆ. ಎಡಗೈ ಕೆಳಗೆ ಇಳಿ ಬಿಟ್ಟಿದ್ದಾಳೆ. ತಲೆಯ ಮೇಲೆ ಮುಂಡಾಸು ರೀತಿಯ ದೊಡ್ಡ ರುಮಾಲು ಇದೆ. ಕೊರಳಲ್ಲಿ ಹಾರ, ಕೈಗಳಲ್ಲಿ ಬಳೆಗಳಿವೆ. ಕುಪ್ಪಸ ಮತ್ತು ಸೀರೆಯ ಉಡುಪುಗಳಿವೆ.

ಗಂಗಾವತಿ ತಾಲೂಕಿನ ಹಳೇ ಮುಸ್ಟೂರು ಗ್ರಾಮದಲ್ಲಿ ವೀರಗಲ್ಲು ಇದ್ದು ಬಲಗೈಯಲ್ಲಿ ಕತ್ತಿಯನ್ನು, ಎಡಗೈಯಲ್ಲಿ ಬಂದೂಕವನ್ನು ಹಿಡಿದು ನಿಂತಿದ್ದಾನೆ. ಈ ಶಿಲ್ಪದ ಹತ್ತಿರವೇ ಮತ್ತೊಂದು ವೀರಗಲ್ಲೊಂದರಲ್ಲಿ ವೀರನು ಬಲಗೈಯಲ್ಲಿ ಖಡ್ಗವನ್ನು ಮತ್ತು ಎಡಗೈಯಲ್ಲಿ ಬಂದೂಕುವನ್ನು ಹಿಡಿದು ನಿಂತಿದ್ದಾನೆ. ಇದೇ ತಾಲೂಕಿನ ವಿಠಲಾಪುರ ಗ್ರಾಮದಲ್ಲಿ ವೀರಗಲ್ಲಿದ್ದು, ಬಲಗೈಯಲ್ಲಿ ಛೂರಿಯನ್ನು, ಎಡಗೈಯಲ್ಲಿ ಬಂದೂಕನ್ನು ಹಿಡಿದು ನಿಂತಿದ್ದಾನೆ. ಇಲ್ಲಿ ಬಂದೂಕಿನ ವಿವರವನ್ನು ಶಿಲ್ಪಿ ಸೊಗಸಾಗಿ ನಿರೂಪಿಸಿದ್ದಾನೆ. ಇದೇ ತಾಲೂಕಿನ ಗುಡದೂರದಲ್ಲಿನ ವೀರಗಲ್ಲೊಂದರಲ್ಲಿ ಒಬ್ಬ ವೀರನು



ಕಾರಟಗಿ



ವಿಠಲಪುರ

ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ದೊಡ್ಡದಾದ ಬಂದೂಕುವನ್ನು ಹಿಡಿದುಕೊಂಡಿದ್ದಾನೆ. ಮತ್ತೊಬ್ಬ ವೀರನು ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿದ್ದಾನೆ. ಇದೇ ಗ್ರಾಮದ ಹೊಲವೊಂದರ ದೊಡ್ಡ ನೈಸರ್ಗಿಕ ಬಂಡೆಯಲ್ಲಿ ಹನ್ನೆರಡು ಜನ ವೀರರನ್ನು ಚಿತ್ರಿಸಿದ್ದಾರೆ. ಅದರಲ್ಲಿ ಎರಡನೇ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಬಂದೂಕವನ್ನು ಹಿಡಿದುಕೊಂಡಿರುವುದನ್ನು ಚಿತ್ರಿಸಿದ್ದಾರೆ. ಅದೇ ತಾಲೂಕಿನ ಹಿರೇಜಂತಗಲ್ಲು ಗ್ರಾಮದಲ್ಲಿ ಬಂದೂಕು ವೀರಗಲ್ಲು ಇದೆ. ಈ ಶಿಲ್ಪದಲ್ಲಿ ವೀರನ ಚಲಿಸುತ್ತಿರುವ ಭಂಗಿಯಲ್ಲಿದ್ದು, ತನ್ನ ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಬಂದೂಕನ್ನು ಹಿಡಿದುಕೊಂಡಿದ್ದಾನೆ. ವೀರನ ಕೊರಳಲ್ಲಿ ಸರಗಳಿವೆ. ಸೊಂಟಕ್ಕೆ ಸೊಂಟದ ಪಟ್ಟಿ ಕಟ್ಟಿಕೊಂಡಿದ್ದಾನೆ. ವೀರನ ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಖಂಡರಿಸಲಾಗಿದೆ. ಅದೇ ತಾಲೂಕಿನ ಕನ್ನೆರುಮಡು ಗ್ರಾಮದಲ್ಲಿ ವೀರಮಾಸ್ತಿಗಲ್ಲು ಇದೆ. ಈ ಶಿಲ್ಪದಲ್ಲಿ ಸತಿ ಮತ್ತು ಇಬ್ಬರು ವೀರರ ಶಿಲ್ಪವಿದ್ದು, ಇದರಲ್ಲಿ ಒಬ್ಬ ವೀರನು ಬಲಗೈಯಲ್ಲಿ ಏನು ಹಿಡಿದಿದ್ದಾನೆ ಎಂಬುದು ಸ್ಪಷ್ಟವಾಗಿ ಕಾಣುತ್ತಿಲ್ಲ. ಎಡಗೈಯಲ್ಲಿ ಬಂದೂಕುವನ್ನು ಹಿಡಿದುಕೊಂಡಿದ್ದಾನೆ. ಇದೇ ತಾಲೂಕಿನ ಕನಕಗಿರಿಯ ಯುದ್ಧಕ್ಕೆ ಹೊರಟ ದೃಶ್ಯದ ಶಿಲ್ಪದಲ್ಲಿ ಒಬ್ಬ ವೀರನು ಬಂದೂಕುವನ್ನು ಹಿಡಿದುಕೊಂಡಿದ್ದಾನೆ. ಇದೇ ತಾಲೂಕಿನ ಮೈಲಾಪುರ ಗ್ರಾಮದ ವೀರಗಲ್ಲಿನ ಮೊದಲನೆಯ ವೀರನು ಬಲಗೈಯಲ್ಲಿ ಚೂರಿಯನ್ನು ಎಡಗೈಯಲ್ಲಿ ಬಂದೂಕು ಹಿಡಿದುಕೊಂಡಿದ್ದಾನೆ. ಎರಡನೆಯ ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಈ ಇಬ್ಬರು ವೀರರು ಒಂದೇ ರೀತಿಯಲ್ಲಿ ಅಲಂಕಾರ ಮಾಡಿಕೊಂಡಿದ್ದಾರೆ. ತಲೆಗೆ ಪೇಟ ಸುತ್ತಿದ್ದು, ಕಿವಿಗಳಲ್ಲಿ ಕಿವಿಯೋಲೆಗಳನ್ನು ಹಾಕಿದ್ದಾರೆ. ವೀರರ ತೋಳುಗಳಿಗೆ ತೋಳುಬಂದಿ, ಕೊರಳಲ್ಲಿ ಪದಕವಿರುವ ಸರವಿದೆ. ಮೈಮೇಲೆ ಬಟ್ಟೆಯನ್ನು ಚಿತ್ರಿಸಿದೆ, ಸೊಂಟವನ್ನು ವಸ್ತ್ರದಿಂದ ಬಿಗಿಯಲಾಗಿದೆ. ಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾರೆ. ಇದೇ ತಾಲೂಕಿನ ಜುಮ್ಮಾಪುರ ಗ್ರಾಮದ ಹೊರಭಾಗದಲ್ಲಿನ ಯುದ್ಧಕ್ಕೆ ಹೊರಟ ಶಿಲ್ಪವಿದ್ದು, ಅದರಲ್ಲಿ ನಾಲ್ಕು ಜನ ವೀರರು ಬಂದೂಕುವನ್ನು ಹಿಡಿದುಕೊಂಡಿದ್ದು, ಕೆಳಭಾಗದಲ್ಲಿ ನಾಯಿಯನ್ನು ತೋರಿಸಿದ್ದಾರೆ.

ಬಂದೂಕವನ್ನು ಪ್ರಯೋಗಿಸುತ್ತಿರುವ ವೀರ

ಕೊಪ್ಪಳ ತಾಲೂಕಿನ ಅಗಳಕೆರಾದಲ್ಲಿ ವೀರನು ಬಂದೂಕವನ್ನು ಪ್ರಯೋಗ ಮಾಡುತ್ತಿರುವ ಚಿತ್ರಣವಿದೆ. ಇದೇ ತಾಲೂಕಿನ ತಿರುಮಲ್ಲಾಪುರದಲ್ಲಿ ವೀರಗಲ್ಲುವಿದ್ದು, ಈ ಶಿಲ್ಪದಲ್ಲಿ ನಿಂತ ಇಬ್ಬರು ವೀರರ ಶಿಲ್ಪಗಳಿವೆ. ಮೊದಲ ವೀರನು ಬಲಗೈಯಲ್ಲಿ ಖಡ್ಗ ಹಿಡಿದು ಮೇಲೆ ಎತ್ತಿದ್ದು, ಎಡಗೈಯಲ್ಲಿ ಚೂರಿ ಇದೆ. ಈ ಶಿಲ್ಪದ ಪಕ್ಕದಲ್ಲಿ ಮತ್ತೋಬ ವೀರನು ಚಲಿಸುವ ಭಂಗಿಯಲ್ಲಿದ್ದು, ಬಂದೂಕವನ್ನು ಪ್ರಯೋಗಿಸುತ್ತಿದ್ದಾನೆ. ಈ ಎರಡು ಶಿಲ್ಪಗಳು ವಿಶೇಷತೆಯಿಂದ ಕೂಡಿವೆ.

ವೀರನ ಪಕ್ಕದಲ್ಲಿ ಬಂದೂಕು

ಗಂಗಾವತಿ ತಾಲೂಕಿನ ಕಾರಟಗಿಯಲ್ಲಿ ಬಂದೂಕಿನ ಚಿತ್ರವಿರುವ ಎರಡು ವೀರಗಲ್ಲುಗಳಿದ್ದು, ಅದರಲ್ಲಿನ ಒಂದು ವೀರಗಲ್ಲಿನಲ್ಲಿ ಕುದುರೆಯ ಮೇಲೆ ಕುಳಿತು ಯುದ್ಧಕ್ಕೆ ಹೊರಟ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದು, ಗುರಾಣಿಯ ಮೇಲ್ಭಾಗದಲ್ಲಿ ಬಂದೂಕನ್ನು ಚಿತ್ರಿಸಿದ್ದಾನೆ. ಈ ರೀತಿಯಲ್ಲಿರುವ ಮತ್ತೊಂದು ಶಿಲ್ಪವು ಕುಷ್ಟಗಿ ತಾಲೂಕಿನ ತಾವರಗೇರಿ ಗ್ರಾಮದಲ್ಲಿ ಬಂದೂಕಿನ ಚಿತ್ರವಿರುವ ವೀರಗಲ್ಲೊಂದಿದ್ದು, ವೀರನು ಕುದುರೆ ಮೇಲೆ ಕುಳಿತಿದ್ದು, ಬಲಗೈಯಲ್ಲಿ ಕಿರುಗತ್ತಿದ್ದು, ಎಡಗೈಯಲ್ಲಿ ಕುದುರೆಯ ರಿಕಾಪು (ಮೂಗುದಾರ) ಹಿಡಿದ್ದಾನೆ. ಹಿಂಭಾಗದಲ್ಲಿ ಸೇವಕನು ಛಾಮರವನ್ನು ಹಿಡಿದುಕೊಂಡು ನಡೆಯುವ ಭಂಗಿಯಲ್ಲಿ ನಿಂತಿದ್ದಾನೆ. ಕುದುರೆಯ ಮುಂಭಾಗದಲ್ಲಿ ಸ್ಪಷ್ಟವಾಗಿ ಬಂದೂಕಿನ ಚಿತ್ರವನ್ನು ಚಿತ್ರಿಸಿದ್ದು, ಮೇಲ್ಭಾಗದಲ್ಲಿ ಪ್ರಭಾವಳಿ ಇದೆ.

ಗಂಗಾವತಿ ತಾಲೂಕಿನ ಹಳೆ ಕುಂಟೋಜಿಯಲ್ಲಿ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದ್ದಾನೆ. ಗುರಾಣಿಯ ಮೇಲ್ಭಾಗದಲ್ಲಿ ಬಂದೂಕನು ಚಿತ್ರಿಸಿದೆ. ಇದೇ ತಾಲೂಕಿನ ಕಾರಟಗಿ ಗ್ರಾಮದಲ್ಲಿ ಬಂದೂಕು ವೀರಗಲ್ಲುವಿದ್ದು, ವೀರನು ಬಲಗೈಯಲ್ಲಿ ಕತ್ತಿಯನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದು, ವೀರನ ಬಲಭಾಗದಲ್ಲಿ ಬಂದೂಕವನ್ನು ಚಿತ್ರಿಸಿದ್ದಾರೆ.

ಕೊಪ್ಪಳ–ರಾಯಚೂರು ಭಾಗಗಳಲ್ಲಿ ಬಂದೂಕುಧಾರಿ ವೀರಗಲ್ಲುಗಳು ಯಥೇಚ್ಛವಾಗಿರುವುದನ್ನು ಗಮನಿಸಿದರೆ ವಿಜಯನಗರ ಕಾಲದ ಬಹುತೇಕ ಯುದ್ಧಗಳು ಜರುಗಿದುದು ಈ ಪರಿಸರದಲ್ಲಿಯೇ ಎಂಬುದು ದೃಢವಾಗುತ್ತದೆ. ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಕೊಪ್ಪಳ ಪರಿಸರವು ಕೂಡಾ ಆ ಕಾಲದ ಹತ್ತು ಹಲವು ಸ್ಮಾರಕ ಶಿಲ್ಪಗಳನ್ನು ಒಳಗೊಂಡಿದೆ.

ಅಡಿಟಿಪ್ಪಣಿಗಳು

೧. ಸೋಮಶೇಖರ್. ಎಸ್.ವೈ., ೨೦೦೯, ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಪು. ೫೯.

೨. ಕೃಷ್ಣಶರ್ಮ ಬೆಟಗೇರಿ, ೧೯೮೩, ಕರ್ನಾಟಕ ಜನಜೀವನ, ಪು. ೨೮ ಮತ್ತು ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪು. ೧೦೭.

೩. ಚಿದಾನಂದಮೂರ್ತಿ ಎಂ., ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೩೧೦.

೪. ನಾಗೇಗೌಡ, ಎಚ್.ಎಲ್., ೧೯೬೬, ಪ್ರವಾಸಿ ಕಂಡ ಇಂಡಿಯಾ, ಸಂಪುಟ ೨.

೫. ಸೋಮಶೇಖರ್. ಎಸ್.ವೈ., ಪೂರ್ವೋಕ್ತ, ಪು. ೧೫೫.

೬ ಪರಮಶಿವಮೂರ್ತಿ, ಡಿ.ವಿ., ೧೯೯೯, ಕನ್ನಡ ಶಾಸನಶಿಲ್ಪ, ಪು. ೨೧೯.

೭. ಶೇಷಶಾಸ್ತ್ರಿ ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಪು. ೨೨೬.

೮. ಕ್ಷೇತ್ರ ಕಾರ್ಯದಿಂದ ಮಾಹಿತಿ ಸಂಗ್ರಹ.

೧೨೦

ಬಳಗಾನೂರಿನ ಬಿಡಿ ಶಿಲ್ಪಗಳು ಮತ್ತು ವೀರಗಲ್ಲುಗಳು

ರೆಡ್ಡಪ್ಪಹಳ್ಳಿ ಸಾಕಿನ*

ಬಳಗಾನೂರು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಒಂದು ಪ್ರಾಚೀನ ಗ್ರಾಮ ಇದು ಹಿರೇಹಳ್ಳದ ಬಲದಂಡೆಯ ಮೇಲಿದ್ದು, ಸಿಂಧನೂರಿನಿಂದ ಈಶಾನ್ಯ ದಿಕ್ಕಿನಲ್ಲಿ ಸುಮಾರು ಇಪ್ಪತ್ತೈದು ಕಿಲೊಮೀಟರ್ ಅಂತರದಲ್ಲಿದೆ. ಇದೊಂದು ಅಗ್ರಹಾರವಾಗಿದ್ದು, ಇಲ್ಲಿ ಅನೇಕ ಪ್ರಾಚೀನ ದೇವಾಲಯಗಳು ಶಾಸನಗಳಿದ್ದು, ಐತಿಹಾಸಿಕ ಪರಂಪರೆಗೆ ಸಾಕ್ಷಿಯಾಗಿವೆ.

ಅನೇಕ ದೇವತಾಮೂರ್ತಿಗಳು, ಶಿಲ್ಪಗಳು, ಚದುರಿದ್ದು ಅವುಗಳು ಸಾಮಾನ್ಯವಾಗಿ ದೇವಾಲಯಗಳ ಹೊರ ಭಾಗದ ಕಟ್ಟೆಯ ಮೇಲೆ, ಬಾವಿಕಟ್ಟೆಯ ಮೇಲೆ ಕಂಡುಬಂದಿವೆ. ವೀರಗಲ್ಲುಗಳು ದೇವಾಲಯದ ಮುಂಭಾಗದಲ್ಲಿವೆ.

ಜಿನ ಬಿಂಬಗಳು : ವೀರಭದ್ರೇಶ್ವರ ದೇವಾಲಯದ ಆಲದ ಕಟ್ಟೆಯ ಮೇಲೆ ಜಿನಬಿಂಬದ ರುಂಡಭಾಗವಿತ್ತು ಅದು ಆದಯ್ಯ ಅಮರಯ್ಯ ದೇವಸ್ಥಾನದ ಹಿಂದಿರುವ ಮನೆಯ ಬುನಾದಿ ತೆಗೆಯುವ ಕಾಲದಲ್ಲಿ ಪತ್ತೆಯಾಗಿತ್ತೆಂದು ತಿಳಿದುಬಂದಿತ್ತು. ಈ ಶಿಲ್ಪವು ಕಪ್ಪು ಕಲ್ಲಿನದಾಗಿದ್ದು ದುಂಡಾದ ಮುಖ ನೀಳವಾದ ಮೂಗು ಮತ್ತು ಕಿವಿ ಮಂದಹಾಸ ಬೀರುವ ತುಟಿ ಅಗಲವಾದ ಹಣೆ ಕಣ್ಣು ತಲೆಯ ಮೇಲೆ ಗುಂಗುರು ಕೂದಲು ಹೊಂದಿತ್ತು.

ಇನ್ನೊಂದು ಜೈನ ಉಬ್ಬು ಶಿಲ್ಪವು ಶಂಕರಬಂಡಿಯವರ ಮನೆಯ ಹತ್ತಿರದ ಬಾವಿಯ ಮೇಲಿತ್ತು.[೧] ಅದು ಕೆಂಪು ಮರಳುಕಲ್ಲು ಅಥವಾ ಸೇದಿ ಕಲ್ಲಿನ ರಚನೆಯಾಗಿತ್ತು. ರುಂಡ, ಭುಜ ಮತ್ತು ಸ್ವಲ್ಪ ಎದೆ ಭಾಗವನ್ನಷ್ಟೆ ಹೊಂದಿದ ಈ ಶಿಲ್ಪವು ಸ್ವಲ್ಪ ಹೆಚ್ಚು ಕಡಿಮೆ ಮೇಲಿನ ಶಿಲ್ಪವನ್ನು ಹೋಲುತ್ತಿತ್ತು.

ಶಿಲ್ಪಗಳು ಒಡೆದು ಹೋದ ಜೈನ ಮೂರ್ತಿ ಶಿಲ್ಪಗಳಾಗಿದ್ದು, ಅವು ಯಾವ ತೀರ್ಥಂಕರರ ಮೂರ್ತಿಗಳೆಂಬುದು ಸ್ಪಷ್ಟವಿಲ್ಲ. ಆದರೂ ಈ ಅಲ್ಪ ವಿವರಗಳಿಂದ ಅವು ಗೊಮ್ಮಟೇಶ್ವರ ವಿಗ್ರಹಗಳಿರಬಹುದೆಂದು ರಾಷ್ಟ್ರಕೂಟರ ಅಥವಾ ಕಲ್ಯಾಣಿ ಚಾಲುಕ್ಯರ ಕಾಲದ ರಚನೆ ಅವುಗಳಾಗಿರಬಹುದೆಂದು ಊಹಿಸಬಹುದು.

ಮದನಿಕೆ : ವೀರಭದ್ರೇಶ್ವರ ದೇವಾಲಯದ ಮೆಟ್ಟಿಲುಗಳ ಪಕ್ಕದಲ್ಲಿ ಬಾಗಿಲವಾಡದ ತುಂಡೊಂದು ಇದ್ದು, ವಜ್ರಾಲಂಕಾರದ ಪಟ್ಟಿಯ ಪಕ್ಕದಲ್ಲಿ ಮದನಿಕೆಯ ಶಿಲ್ಪವೊಂದಿದೆ. ಈ ಮದನಿಕೆಯು, ನಿಂತ ಭಂಗಿಯಲ್ಲಿದ್ದು, ಕಾಲ್ಗಡಗ ಸೀರೆ ತಲೆಯುಡುಗೆಗಳಿಂದ ಅಲಂಕೃತಗೊಂಡಿದ್ದಾಳೆ. ಎಡಗೈಯಲ್ಲಿ ಕಮಂಡಲ ಅಥವಾ ಹೂ ಬುಟ್ಟಿಯನ್ನು ಹಿಡಿದಿದ್ದಾಳೆ.

ಭೂತ ಮಾತ : ಬಡಿಗೇರ ಓಣಿಯಲ್ಲಿ ಶಂಕರಬಂಡಿಯವರ ಮನೆಯ ಹತ್ತಿರ ದುರುಗಮ್ಮನ ಚಿಕ್ಕ ಗುಡಿಯೊಂದಿದೆ ಇದರ ಕಟ್ಟೆಯ ಮೇಲೆ ಶಿಲ್ಪವೊಂದಿದ್ದು, ಸುಮಾರು ಒಂದುವರೆ ಅಡಿ ಎತ್ತರ, ಎಂಟು ಅಂಗುಲ ಅಗಲವಿದೆ. ಇದರ ಕಣ್ಣು ಕಿವಿ ಮೂಗು ಬಾಯಿ ಹಣೆ ತಲೆಕಟ್ಟು ಕೈಬೆರಳು ಪಾದ ಕಾಲ್ಬೆರಳುಗಳನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಕಿವಿಯಲ್ಲಿ ಕರ್ಣಕುಂಡಲಗಳಿವೆ.

ನಿಂತಬಂಗಿಯಲ್ಲಿರುವ ಈ ಶಿಲ್ಪವು ಎತ್ತರವಾದ ಕಾಲು ಅಸ್ಥಿಪಂಜರದಂತಹ ಎದೆ ಭಾಗ ಎತ್ತರವಾದ ಕುತ್ತಿಗೆಯನ್ನು ಹೊಂದಿದ್ದು, ನೋಡುಗರಿಗೆ ಭಯ ಹುಟ್ಟಿಸುವಂತಿದೆ. ಇದಕ್ಕೆ ಎರಡು ಕೈಗಳಿದ್ದು ಬಲಗೈ ಯಾವುದೋ ವಸ್ತುವೊಂದರ ಮೇಲಿದೆ. ಎಡಗೈ ಮನುಷ್ಯಾಕೃತಿಯ (ಬಹುಶಃ ಮಹಿಳೆ) ತಲೆಯ ಮೇಲಿದೆ. ಮಹಿಳೆಗೆ ಎರಡು ಕೈಗಳಿದ್ದು, ಒಂದು ಇಳಿಬಿಟ್ಟ ರೀತಿಯಲ್ಲಿದೆ. ಮತ್ತೊಂದು ತನ್ನ ಮೇಲಿಟ್ಟ ಕೈಯನ್ನು ಕಿತ್ತಿಹಾಕುವಂತಿದೆ. ಮುಖದಲ್ಲಿ ಭಯದ ಭಾವನೆಯಿದ್ದು, ಕುಳಿತ ಮಹಿಳೆ ಹೆದರಿ ಓಡುವ ಸ್ಥಿತಿಯಲ್ಲಿದೆ. ಶಿಲ್ಪಿಯು ಇದನ್ನು ಬಹುಚಮತ್ಕಾರಿಕವಾಗಿ ಕೆತ್ತಿದ್ದಾನೆ.

ಇದನ್ನು ಸ್ಥಳೀಯರು ದುರುಗಮ್ಮ ಎಂದು ಹೇಳುತ್ತಾರೆ. ಆದರೆ ಇದು ಭೂತ–ಪ್ರೇತದಂತೆ, ದುಷ್ಟ ಶಕ್ತಿಯಂತೆ ಕಾಣಿಸುತ್ತದೆ.

---

* ಬಳಗಾನೂರು, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ–೫೮೪೧೩೩.

ಗಣಪತಿ: ಲಕ್ಷ್ಮೀನಾರಾಯಣ ದೇವಾಲಯದ ಹತ್ತಿರವಿರುವ ಬಾವಿಯ ಮೇಲೆ ಗಣಪತಿಯ ಉಬ್ಬು ಶಿಲ್ಪವಿದೆ. ಕಪ್ಪುಕಲ್ಲಿನಲ್ಲಿ ಕೆತ್ತಿರುವ ಈ ಭಗ್ನ ವಿಗ್ರಹವು ಸುಮಾರು ಒಂದು ಅಡಿ ಅಗಲ, ಎರಡು ಅಡಿ ಎತ್ತರವಿದೆ. ಪೀಠರಹಿತನಾಗಿ ಕಾಲು ಮಡಚಿದ ಭಂಗಿಯಲ್ಲಿ ಕುಳಿತಿರುವ ಗಣಪತಿಯ ಹೊಟ್ಟೆಯು ಎದ್ದು ಕಾಣುವಂತಿದೆ. ಹೊಟ್ಟೆಗೆ ಹಾವನ್ನು ಬಿಗಿಯಲಾಗಿದೆ. ಯಜ್ಞೋಪವೀತವನ್ನು ಧರಿಸಲಾಗಿದೆ. ರುಂಡ ಹಾಗು ಸೊಂಡಿಲು ಕತ್ತರಿಸಿ ಹೋಗಿರುವ ಶಿಲ್ಪದ ಭುಜ ಮತ್ತು ಎದೆಯ ಮೇಲೆ ಮುತ್ತಿನ ಹಾರಗಳ ಅಲಂಕಾರವಿದೆ. ಇವನಿಗೆ ಮೂರು ಕೈಗಳು ಕಂಡುಬರುತ್ತಿದ್ದು, ಮೇಲಿನ ಬಲಗೈಯಲ್ಲಿ ಒಡೆದ ಅಂಕುಶವಿದೆ. ಕೆಳಗಿನ ಬಲಗೈ ಅಸ್ಪಷ್ಟವಾಗಿದ್ದು, ಪಾಶ ಹಿಡಿದಿರುವಂತಿದೆ. ಅಥವಾ ಅಭಯ ನೀಡುವಂತಿದೆ. ಎಡಗೈಯಲ್ಲಿ ಮೋದಕವಿದೆ. ಮೂರ್ತಿಯ ಕಾಲ್ಗಡಗ, ಕಾಲ್ಬೆರಳು ಸ್ಪಷ್ಟವಾಗಿವೆ. ಅವನ ಎರಡು ಬದಿಯಲ್ಲಿ ಕಂಬ ಮಾದರಿಯ ಅಲಂಕಾರವಿದೆ. ಇದೇ ಬಾವಿಯ ಮೇಲೆ ಸುರಳಿ ಮಾದರಿಯ ಅಲಂಕಾರಿಕ ಪಟ್ಟಿಯ ಮುರಿದ ಭಾಗವಿದೆ. ಅದು ಈ ಗಣಪತಿ ಶಿಲ್ಪದ ಭಾಗವಾಗಿದ್ದಿರಬಹುದಾದ ಸಾಧ್ಯತೆಯಿದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದ ಶಿಲ್ಪವಾಗಿರಬಹುದು.

ವಿಷ್ಣು : ನಗರೇಶ್ವರ ದೇವಾಲಯದ ಬಾವಿಯ ಮೇಲೆ ಕಪ್ಪು ಕಲ್ಲಿನ ನಿಂತ ಭಂಗಿಯ ಒಂದು ಸುಂದರ ಶಿಲ್ಪವಿದೆ. ಆದರೆ, ರುಂಡ, ಕೈ, ಮತ್ತು ಪಾದಗಳು ನಷ್ಟವಾಗಿವೆ. ಸುಮಾರು ಎರಡುವರೆ ಅಡಿ ಎತ್ತರ ಒಂದು ಅಡಿ ಅಗಲವುಳ್ಳ ಸಪೂರವಾದ ಶಿಲ್ಪಾಕೃತಿಯದು. ಇದರ ಎದೆಯ ಮೇಲೆ ಮುತ್ತಿನ ಅಲಂಕಾರವಿದೆ. ಯಜ್ಞೋಪವೀತದ ಕೆತ್ತನೆಯಿದೆ. ನಡುಬಂಧವು ಇಳಿಬಿಟ್ಟ ಮುತ್ತಿನ ತೋರಣಗಳಿಂದ ಬಹು ಅಲಂಕಾರಗೊಂಡಿದೆ.

ಇದು ಕಲ್ಯಾಣಿ ಚಾಲುಕ್ಯರ ಕಾಲದ ಮೂರ್ತಿಯೆಂಬುದು ಸ್ಪಷ್ಟ. ಬಹುಶಃ ವಿಷ್ಣು ಮೂರ್ತಿ ಇರಬಹುದು. ಇದೇ ನಗರೇಶ್ವರ ದೇವಾಲಯದ ಶಾಸನದಲ್ಲಿ[೬] ಮನೋಹರ ಚನ್ನಕೇಶವನ ಉಲ್ಲೇಖವಿದೆ. ಆ ಚನ್ನಕೇಶವ ಮೂರ್ತಿಯೆ ಈ ಭಗ್ನ ಶಿಲ್ಪವಾಗಿರುವ ಸಾಧ್ಯತೆಯುಂಟು.

ಸರಸ್ವತಿ : ಇದೇ ಬಾವಿಯ ಮೇಲೆ ಸುಮಾರು ಒಂದುವರೆ ಅಡಿ ಎತ್ತರ ಒಂದು ಅಡಿ ಅಗಲವುಳ್ಳ ಕಪ್ಪು ಕಲ್ಲಿನ ಶಿಲ್ಪವಿದ್ದು, ಕುಳಿತ ಭಂಗಿಯಲ್ಲಿದೆ. ಇದೂ ಕೂಡ ಭಗ್ನ ಸ್ಥಿತಿಯಲ್ಲಿದೆ. ಪದ್ಮಾಸನದಲ್ಲಿ ಕುಳಿತಿರುವ ದೇವಿಯ ಎಡಗೈ ಬಹುಶಃ ತಾಳೆಗರಿಯನ್ನು ಹಿಡಿದಿರುವಂತಿದೆ. ಬಲಗೈ ಬಹುಶಃ ಜಪಮಣಿಯನ್ನು ಹಿಡಿದಿರುವಂತಿದೆ. ದೇವತೆಯು ಕೊರಳಹಾರ ನಡುಬಂಧ ಕಾಲ್ಗಡಗಗಳಿಂದ ಅಲಂಕೃತಗೊಂಡಿದೆ. ರುಂಡ ಮತ್ತು ಕೈಗಳು ನಷ್ಟವಾಗಿವೆ. ದೇವತಾಮೂರ್ತಿ ಪೀಠದ ಮೇಲೆ ಪ್ರತಿಷ್ಠಾಪಿಸುವದಕ್ಕಾಗಿ ಕೆಳಗಡೆ ಕಲ್ಲಿನ ಗುಸಿ (ಸಿಕ್ಕಿಸುವ ಭಾಗ) ಇದ್ದು, ಅದರ ಮೇಲ್ಭಾಗವು ಕಚ್ಚು ಕಚ್ಚಾಗಿದ್ದು ಕಮಲದ ಹೂವಿನ ಮಾದರಿಯಲ್ಲಿದೆ. ಇದರ ಮೇಲೆ ಕುಳಿತ ದೇವತೆಯು ಬಹುಶಃ ಸರಸ್ವತಿ ಇರಬೇಕು. ಹಿಂದು ದೇವದೇವಿಯರು ಕೃತಿಯಲ್ಲಿ ನೀಡಿರುವ ರೇಖಾಚಿತ್ರ ಮತ್ತು ವಿವರಗಳನ್ನು[೭] (ಅವಳು ಅಸಾಧಾರಣ ರೂಪವತಿ, ಕರುಣಾಳು, ಶುದ್ಧ ಶ್ವೇತ ವಸ್ತ್ರವನ್ನುಟ್ಟು, ಬಿಳಿಯ ಹಂಸವೊಂದರ ಮೇಲೆ ಕುಳಿತಿರುವ ಅವಳು ತನ್ನ ನಾಲ್ಕು ಕೈಗಳಲ್ಲಿ ವೀಣೆ, ಅಕ್ಷಮಾಲೆ ಮತ್ತು ಪುಸ್ತಕವನ್ನು ಹಿಡಿದಿರುವಳು) ಈ ಶಿಲ್ಪವು ಬಹುತೇಕವಾಗಿ ಹೋಲುತ್ತದೆ. ಇದು ಕೂಡ ಕಲ್ಯಾಣಿ ಚಾಲುಕ್ಯರ ಕಾಲದ ಶಿಲ್ಪ.

ಮೇಲುಶಂಕರ ದೇವಾಲಯದ ಆಸುಪಾಸಿನಲ್ಲಿ, ಪ್ರಾಚೀನ ದೇವಾಲಯ ಲಕ್ಷಣದ ಶಿಲಾಪರಿಕರಗಳು ಅಲ್ಲಲ್ಲಿ ಬಿದ್ದಿವೆ. ಗಜಲಕ್ಷ್ಮೀ ಶಿಲ್ಪ, ಹಣೆಪಟ್ಟಿಯ ಮೆಲಿದ್ದ ಬೇರೆ ಬೇರೆ ವಿನ್ಯಾಸದ ನಾಲ್ಕೈದು ಶಿಖರಗಳ ಶಿಲ್ಪ ಪಟ್ಟಿಕೆ, ಆನೆಗಳ ಸಾಲಿನ ಶಿಲ್ಪಪಟ್ಟಿ ಇವುಗಳಲ್ಲಿ ಮುಖ್ಯವಾಗಿವೆ. ಇವುಗಳೆಲ್ಲ ಬಿಳಿಯ ಗ್ರ್ಯಾನೈಟ್ ಶಿಲೆಯ ರಚನೆಗಳು. ಇವು ಬಹುಶಃ ವಿಜಯನಗರದ ಕಾಲಕ್ಕೆ ಸೇರಿದವುಗಳಾಗಿವೆ.

ಲಜ್ಜಾಗೌರಿ : ಕೆಳಗಡೆಪೇಟೆ ಚೌಡಮ್ಮನ ದೇವಾಲಯದ ಆವರಣದ ಗೋಡೆಯಲ್ಲಿ ಲಜ್ಜಾಗೌರಿಯ ಶಿಲ್ಪವೊಂದು ಕಂಡು ಬಂದಿತ್ತು. ಯೋನಿ ಭಾಗವು ಎದ್ದು ಕಾಣುವಂತೆ ಕಾಲುಗಳನ್ನು ಅಗಲಿಸಿ ತೋರಿಸಲಾಗಿತ್ತು. ಲಜ್ಜಾಗೌರಿಯ ಮುಖವನ್ನು ವೃತ್ತಾಕಾರದಲ್ಲಿ ತೋರಿಸಿದ್ದು, ತಲೆಗೂದಲನ್ನು ಹಿಂದೆ ಕಟ್ಟಲಾಗಿದೆ. ಇದನ್ನು ಬಿಳಿ ಗ್ರ್ಯಾನೈಟ್ ಶಿಲೆಯಲ್ಲಿ ಕೆತ್ತಲಾಗಿದ್ದು, ಸುಮಾರು ಒಂದು ಅಡಿ ಅಗಲ ಒಂದುವರೆ ಅಡಿ ಎತ್ತರವಿದೆ.

ವೀರಗಲ್ಲುಗಳು : ಬಳಗಾನೂರಿನಲ್ಲಿ ಅನೇಕ ವೀರಗಲ್ಲುಗಳು ಕಂಡು ಬರುತ್ತವೆ. ಈ ವೀರಗಲ್ಲುಗಳು ಸಾಮಾನ್ಯವಾಗಿ ಮೂರು ಹಂತಗಳಿಂದ ಕೂಡಿದ್ದು, ಕೆಳ ಭಾಗದ ಶಿಲ್ಪಗಳು ಪ್ರಧಾನವಾಗಿ ಮೂಡಿಬಂದಿವೆ. ಆದರೆ ಇವುಗಳಾವಾವೂ ಲಿಪಿಯನ್ನು ಹೊಂದಿಲ್ಲ.

ಆದಯ್ಯ ಅಮರಯ್ಯ ಗುಡಿಯ ಮುಂದೆ ಮಣ್ಣಿನಲ್ಲಿ ಹೂತಿರುವ ವೀರಗಲ್ಲಿನ ಕೆಳ ಭಾಗದಲ್ಲಿ ವೀರನೊಬ್ಬ ಕತ್ತಿ–ಡಾಲು ಹಿಡಿದು ರಭಸದಿಂದ ಹೋರಾಡುತ್ತಿರುವಂತೆ ತೋರಿಸಲಾಗಿದೆ. ಇಲ್ಲಿ ಇವನ ಎದುರಾಳಿಗಳನ್ನು ತೋರಿಸಿಲ್ಲ.

ಇದರ ಮೇಲ್ಗಡೆ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವಂತೆ ತೋರಿಸಲಾಗಿದೆ. ಇದರ ಮೇಲಿನ ಭಾಗದಲ್ಲಿ ವೀರನು ಶಿವ ಸಾನಿಧ್ಯದಲ್ಲಿ ಕೈ ಮುಗಿದು ಕುಳಿತಿರುವಂತೆ ತೋರಿಸಲಾಗಿದೆ.

ವೀರಭದ್ರೇಶ್ವರ ದೇವಾಲಯದ ಮುಂದೆ ಎರಡು ವೀರಗಲ್ಲುಗಳಿವೆ. ಎರಡು ಹಂತವುಳ್ಳ ವೀರಗಲ್ಲಿನ ಕೆಳಭಾಗದಲ್ಲಿ ಬಿಲ್ಲು-ಬಾಣ ಹಿಡಿದು ಯುದ್ಧಕ್ಕೆ ಹೊರಟ ಇಬ್ಬರು ವೀರರನ್ನು ತೋರಿಸಲಾಗಿದೆ. ಪಕ್ಕದಲ್ಲಿ ದನಕರುಗಳನ್ನು ತೋರಿಸಲಾಗಿದೆ. ಅಂದರೆ ಇದೊಂದು ತುರುಗೋಳ್‌ಗೆ ಸಂಬಂಧಿಸಿದ ವೀರಗಲ್ಲು. ಮೇಲಿನ ಭಾಗದಲ್ಲಿ ಜಾಗೆಯ ಕೊರತೆಯಿಂದಾಗಿ ಎರಡುಹಂತದ ಶಿಲ್ಪಗಳನ್ನು ಒಂದರಲ್ಲೇ ಅಂದರೆ, ಅಪ್ಸರೆಯರೊಂದಿಗೆ ಸ್ವರ್ಗಕ್ಕೆ ಹೋಗುತ್ತಿರುವ ವೀರ, ಸೂರ್ಯ, ಚಂದ್ರ, ಈಶ್ವರ, ಪೂಜಾರಿ, ವೀರನನ್ನು ತೋರಿಸಲಾಗಿದೆ.

ಇನ್ನೊಂದು ವೀರಗಲ್ಲನ್ನು ಎರಡು ಹಂತದಲ್ಲಿ ಕೆತ್ತಲಾಗಿದೆ. ಕೆಳ ಭಾಗದಲ್ಲಿ. ಕತ್ತಿ-ಡಾಲು ಹಿಡಿದ ಇಬ್ಬರು ಯೋಧರು ಅದೇ ಬಗೆಯ ಆಯುಧ ಹಿಡಿದ ಕುದುರೆ ಸವಾರರೊಂದಿಗೆ ಕಾದಾಡುತ್ತಿರುವ ದೃಶ್ಯವಿದೆ. ಕಾಲಾಳುಗಳ ತಲೆಕಟ್ಟು ಕಿವಿ, ಕರ್ಣಕುಂಡಲ, ಕಡಗ, ದೋತರಗಳನ್ನು, ಎದುರಾಳಿಯ ಕುದುರೆಯ ಜೀನನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಕಾಲಾಳುಗಳ ಪೌರುಷಕ್ಕೆ ಸಾಕ್ಷಿ ಎಂಬಂತೆ ಎದುರಾಳಿಯ ಸವಾರರ ಕುದುರೆಯ ಕಾಲ್ಕೆಳಗೆ ಒರ್ವನು ಮಡಿದು ಬಿದ್ದಿರುವುದನ್ನು ತೋರಿಸಲಗಿದೆ. ಇದರ ಮೇಲ್ಭಾಗದಲ್ಲಿ ಶಿವನ ಸಾನಿಧ್ಯದಲ್ಲಿ ಇಬ್ಬರು ವೀರರು ಕುಳಿತಿರುವಂತೆ ತೋರಿಸಲಾಗಿದೆ.

ಇದೊಂದು ಕಾಲಾಳುಗಳು ಹೋರಾಡುತ್ತಿರುವ ಪ್ರಸಂಗ. ಅಂದರೆ ಅಸಮ ಬಲ ಹೋರಾಟದ ದೃಶ್ಯ. ಇಂತಹ ಸನ್ನಿವೇಶದಲ್ಲಿ ಪ್ರಾಣವನ್ನು ಕಳೆದುಕೊಂಡ ಯೋಧರ ನೆನಪಿಗಾಗಿ ನೆಟ್ಟ ವೀರಗಲ್ಲು ಇದಾಗಿದೆ. ಅಸಮಬಲ ಹೋರಾಟಗಳು ವಿಜಯನಗರದ ಕಾಲಕ್ಕೆ ಸಾಮಾನ್ಯವಾಗಿದ್ದವೆಂದು ಡಾ॥ ಎಸ್.ವಾಯ್. ಸೋಮಶೇಖರ ಅವರು ಅಭಿಪ್ರಾಯಪಟ್ಟಿದ್ದಾರೆ.[೪] ಮುಸ್ಲಿಮರ ದಾಳಿಗಳಿಂದಾಗಿ ಬಾರತದಲ್ಲಿ ಆವರೆಗೆ ಇದ್ದ ಸಾಂಪ್ರದಾಯಿಕ ಯುದ್ಧತಂತ್ರಗಳು (ನ್ಯಾಯ ಸಮ್ಮತ ಸಮಬಲ, ಧರ್ಮಯುದ್ಧ) ಕೊನೆಗೊಂಡು ಹೇಗಾದರೂ ಮಾಡಿ ಗೆಲ್ಲಲೇಬೇಕೆಂಬ ತಂತ್ರಗಾರಿಕೆಗಳು ಬೆಳೆದವು. ಬದಲಾದ ಯುದ್ಧಾಸ್ತ್ರಗಳು ಇದಕ್ಕೆ ಪ್ರೇರಣೆಯಾದವು. ಈ ವೀರಗಲ್ಲು ಸುಮಾರು ೧೩-೧೪ ನೇ ಶತಮಾನಕ್ಕೆ ಸೇರಿರಬಹುದಾಗಿದೆ.

ಆಂಜನೇಯ ದೇವಾಲಯದ ಆವರಣದಲ್ಲಿರುವ ಸ್ಮಾರಕ ಶಿಲೆಯೊಂದು ವಿಶಿಷ್ಠವಾಗಿದೆ. ಅದು ವೀರಗಲ್ಲಿನ ಮಾದರಿಯಲ್ಲಿ ಇದ್ದು, ಮೂರು ತಲಗಳಿಂದ ಕೂಡಿದೆ. ಕೆಳ ಭಾಗದಲ್ಲಿ ಕಾಲ್ತೊಡರಿಸಿಕೊಂಡು ನಿಂತಿರುವ ಕೃಷ್ಣನು ಕೊಳಲನ್ನು ಊದುತ್ತ ನಿಂತಿರುವಂತೆ ತೋರಿಸಲಾಗಿದೆ ಅವನ ಕೊಳಲಿನ ನಾದಕ್ಕೆ ಮನಸೋತು ಆಕಳುಗಳು ಆಲಿಸುತ್ತ ನಿಂತಿರುವಂತೆ ಎರಡು ಬದಿಯ ಅಂಚಿನಲ್ಲಿ ಸಾಲಿನಲ್ಲಿ ತೋರಿಸಲಾಗಿದೆ. ಇವನು ವಸ್ತ್ರ, ನಡುಬಂಧ, ತಲೆಗೆ ಮುಂಡಾಸನ್ನು ಧರಿಸಿದ್ದಾನೆ. ಕೊಳಲನ್ನು ಅಲಂಕರಿಸಲಾಗಿದೆ. ಸಾಮಾನ್ಯ ಗೊಲ್ಲನೊಬ್ಬನನ್ನು ಅಸಾಮಾನ್ಯ ಗೋಪಾಲನೊಂದಿಗೆ ಹೋಲಿಸಿ ತೋರಿಸಿರುವುದು ಈ ಸ್ಮಾರಕ ಶಿಲೆಯ ವಿಶೇಷತೆಯಾಗಿದೆ. ಆದರೆ ಇವನ ಮರಣಕ್ಕೆ ಕಾರಣವೇನೆಂಬುದು ಗೊತ್ತಾಗುತ್ತಿಲ್ಲ. ಇದರ ಮೇಲ್ಗಡೆ ಅಪ್ಸರೆಯರ ಜೊತೆಗೆ ವ್ಯಕ್ತಿ ಸ್ವರ್ಗಕ್ಕೆ ಹೊರಟಿರುವಂತೆ ಅನಂತರದಲ್ಲಿ ಶಿವ ಸಾನಿಧ್ಯದಲ್ಲಿ ಅವನು ಕುಳಿತಿರುವಂತೆ, ಪೂಜಾರಿ ಸೂರ್ಯ-ಚಂದ್ರರನ್ನು ಸಾಂಪ್ರಾದಾಯಿಕವಾಗಿ ತೋರಿಸಲಾಗಿದೆ.

೧ ಅಗ್ರಹಾರವಾಗಿದ್ದ ಬಳಗಾನೂರಿನಲ್ಲಿ ಸರಸ್ವತಿ ವಿಗ್ರಹವು ದೊರೆತಿರುವದು ಸಹಜವಾಗಿದೆ.

೨ ಬಳಗಾನೂರು ಮೂಲತಃ ಗೊಲ್ಲರ ಹಟ್ಟಿ ಎಂಬ ಜನಪ್ರತೀತಿಯನ್ನು ಇಲ್ಲಿಯ ಸ್ಮಾರಕ ಶಿಲೆಗಳು ಬೆಂಬಲಿಸುತ್ತವೆ[೫].

ಅಡಿಟಿಪ್ಪಣಿಗಳು

೧. ಡಾ. ಚೆನ್ನಬಸಪ್ಪ ಮಲಕಮದಿನ್ನಿಯವರು ತಮ್ಮ ಲೇಖನ ಜೈನ ಕೇಂದ್ರಗಳು (ಪುಟ ೫೪) ಈ ಶಿಲ್ಪದ ಬಗ್ಗೆ ನೀಡಿರುವ ವಿವರಗಳು ದೋಷಗಳಿಂದ ಕೂಡಿವೆ. (ಎಡದೋರೆ-ರಾಯಚೂರು ಜಿಲ್ಲಾ ದರ್ಶನ, ಸಂ. ಡಾ. ದಸ್ತಗಿರ ಸಾಬ ದಿನ್ನಿ, ಜೆ.ಎಲ್. ಈರಣ್ಣ) ರಾಯಚೂರು ೨೦೧೬.

೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. ೭, ರಾಯಚೂರು ಜಿಲ್ಲೆ, ಸಿಂಧನೂರು ೩೮.

೩. ಹಿಂದುದೇವದೇವಿಯರು {Hindu god and goddesses athour swamy harshananda}, ಅನುವಾಜಕರು: ಡಾ. ಹೆಚ್. ರಾಮಚಂದ್ರಸ್ವಾಮಿ ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು ಪುಟ ೮೩.

೪. ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ. ಡಾ. ಎಸ್.ವಾಯ್. ಸೋಮಶೇಖರ. ಚಿತ್ರದುರ್ಗ-೨೦೦೯. ಪುಟ ಸಂ. ೧೨೩.

೫. ಪಂಪಕಿರಣ (ಸ್ಮರಣ ಸಂಚಿಕೆ) ಸಂಪಾದಕರು ಕೇದಾರನಾಥ ಹಿರೇಮಠ, ಬಳಗಾನೂರು-೨೦೦೩.

೧೨೧

ಸುರುಪುರ ತಾಲೂಕಿನ ಮಲ್ಲಾ(ಬಿ) ಗ್ರಾಮದ ವೀರಗಲ್ಲುಗಳು ಹಾಗೂ ನಿಷಧಿಗಲ್ಲು

ನಿಂಗನಗೌಡ ಹ. ದೇಸಾಯಿ*

ತುರುಗೊಳಿನಲ್ಲಿ, ಪೆಣ್ಬುಯ್ಯಲ್ಲಿನಲ್ಲಿ, ಸ್ವಾಮಿಕಾರ್ಯದಲ್ಲಿ, ನೆಂಟನಿಗೆ ತೊಂದರೆ ಬಂದಾಗ, ಊರು ನಾಶವಾಗುವಾಗ ಯಾವನು ದೃಢ ನಿರ್ಧಾರ ಮಾಡಿ ತನ್ನ ಗಂಡುತನವನ್ನು ಮೆರೆಯುವುದಲ್ಲವೋ ಅವನು ಗಂಡಸಲ್ಲ ನಪುಂಸಕ. ಇದು ಮೇಲಿನ ಪದ್ಯದ ಅರ್ಥ. ಈ ಪದ್ಯವನ್ನು ಹತ್ತನೇ ಶತಮಾನದ ಕವಿ ರನ್ನ ತನ್ನ ಗದಾಯುದ್ಧ ಅಥವಾ ಸಾಹಸಭೀಮ ವಿಜಯ ಕಾವ್ಯದಲ್ಲಿ ದ್ರೌಪದಿಯ ಬಾಯಿಯಿಂದ ಈ ಮಾತನ್ನು ಹೇಳಿಸಿದ್ದಾನೆ. ಹೌದು ಹಿಂದಿನ ಕಾಲದಲ್ಲಿ ವೀರರು ಹೋರಾಡಿ ಗೆದ್ದರೆ ರಾಜ್ಯ, ಸತ್ತರೆ ವೀರಸ್ವರ್ಗ ಎಂಬ ಭಾವನೆಯಿಂದ ಯುದ್ದಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ರಾಜ್ಯ ಶತ್ರುಗಳ ವಶವಾಗುವುದನ್ನು ತಪ್ಪಿಸಲು, ಸ್ತ್ರೀಯರ ಮಾನ ಕಾಪಾಡಲು, ಗೋವುಗಳನ್ನು ರಕ್ಷಿಸಿಕೊಳ್ಳಲು ಊರಿನ ವೀರರು ಹೋರಾಡುತ್ತಿದ್ದರು. ಹೋರಾಟದಲ್ಲಿ ಮರಣವನ್ನಪ್ಪಿದ ವೀರರ ಸ್ಮರಣೆಗೆಂದು ಊರಲ್ಲಿ ವೀರಗಲ್ಲುಗಳನ್ನು ಸ್ಥಾಪಿಸುತ್ತಿದ್ದರು. ಇಂತಹ ವೀರಗಲ್ಲುಗಳು ಕರುನಾಡಿನಲ್ಲಿ ನಮಗೆ ಹೇರಳವಾಗಿ ದೊರೆತಿವೆ. ಇನ್ನೂ ಸಿಗುತ್ತವೆ ಕೂಡ. ಇದಕ್ಕೆ ಉದಾಹರಣೆಯೆಂದರೆ ಮಲ್ಲಾ(ಬಿ) ಗ್ರಾಮದಲ್ಲಿ ದೊರೆತ ವೀರಗಲ್ಲುಗಳು.

ಯಾದಗಿರಿ ಜಿಲ್ಲೆಯ ಸುರುಪುರು ತಾಲುಕಿನ ಮಲ್ಲಾ(ಬಿ) ಗ್ರಾಮದಲ್ಲಿ ನಮಗೆ ಆರು ವೀರಗಲ್ಲುಗಳು ಮತ್ತು ಒಂದು ನಿಷಧಿಗಲ್ಲು ದೊರೆತಿವೆ.ಅವುಗಳಲ್ಲಿ ಮೂರು ವೀರಗಲ್ಲು ಒಂದು ನಿಷಧಿಗಲ್ಲು ಚೆನ್ನಾಗಿದೆ. ಉಳಿದ ಮೂರು ವೀರಗಲ್ಲುಗಳು ಭಗ್ನಗೊಂಡಿವೆ.

ಸ್ಥಳನಾಮ : ಗ್ರಾಮದ ಹಿರಯರು ಹೇಳುವ ಪ್ರಕಾರ ಈ ಊರಲ್ಲಿ ಹಿಂದೆ ಮಲ್ಲಪ್ಪ ಎಂಬ ಶೂರ ವ್ಯಕ್ತಿ ಇದ್ದು ಆತ ಊರಿನ ಜನರಿಗೋಸ್ಕರ ಯುದ್ದದಲ್ಲಿ ಹೋರಾಡಿ ಮರಣ ಹೊಂದಿದನು ಅವನ ಸ್ಮರಣಾರ್ಥವಾಗಿ ಈ ಊರಿಗೆ ಮೊದಲು "ಮಲ್ಲು" ಎಂದು ಕರೆದರಂತೆ. ಮುಂದೆ ಬರು ಬರುತ್ತಾ "ಮಲ್ಲಾ" ಎಂದು ಆಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಮುಂದೆ ಹೈದ್ರಾಬಾದ್ ನಿಜಾಮರ ಆಳ್ವಿಕೆ ಕಾಲದಲ್ಲಿ ಮಲ್ಲಾ(ಬಿ) (ಬುರ್ಜ) ದೊಡ್ಡದು, ಮಲ್ಲಾ(ಕೆ) (ಕುರ್ದು) ಚಿಕ್ಕದು ಎಂಬ ನಾಮದಿಂದ ಕರೆಯಲಾಗಿದೆ ಎನ್ನುತ್ತಾರೆ. ಆದರೆ ಈ ಎರಡೂ ಗ್ರಾಮಗಳಿಗೆ ಆ ವೀರ ಮಲ್ಲಪ್ಪನ ಹೆಸರೇ ಇಡಲಾಗಿದೆ ಎನ್ನುತ್ತಾರೆ. ಇದಕ್ಕೆ ಪೂರಕವಾಗಿ ಈ ಗ್ರಾಮದಲ್ಲಿ ಆರು ವೀರಗಲ್ಲುಗಳು ದೊರೆತಿರುವುದು ಇವರ ಹೇಳಿಕೆಗೆ ಮತ್ತಷ್ಟು ಪುಷ್ಟಿ ಸಿಗುತ್ತದೆ ನಿಜ ಆದರೆ ಈ ಕುರಿತು ವೀರಗಲ್ಲುಗಳ ಮೇಲೆ ಯಾವುದೆ ಬರಹ (ಲಿಪಿ) ಇಲ್ಲವಾದ್ದರಿಂದ ನಿರ್ಧಾರಕ್ಕೆ ಬರಲು ಕಷ್ಟವಾಗುತ್ತದೆ.

ವೀರಗಲ್ಲುಗಳ ವಿವರ : ಸದ್ಯ ಊರ ಚಾವಡಿಯ ಬಳಿ ಇರುವ ಮೂರು ವೀರಗಲ್ಲುಗಳ ಜೊತೆ ಒಂದು ನಿಷಧಿಗಲ್ಲು ಕೂಡ ಸುರಕ್ಷಿತವಾಗಿದೆ.ಹನುಮಂತ ದೇವರ ಗುಡಿ ಬಳಿಯಿರುವ ಇನ್ನೂ ಮೂರು ವೀರಗಲ್ಲುಗಳು ತ್ರುಟಿತಗೊಂಡಿವೆ.

ಸುರಕ್ಷಿತವಾಗಿರುವ ಊರ ಚಾವಡಿಯ ಬಳಿ ಇರುವ ಮೂರು ವೀರಗಲ್ಲುಗಳು ಮೂರು ಪಟ್ಟಿಕೆಗಳನ್ನು ಒಳಗೊಂಡಿವೆ. ಎಲ್ಲಾ ವೀರಗಲ್ಲುಗಳ ಕೆಳಗಿನ ಪಟ್ಟಿಕೆಯಲ್ಲಿ ವೀರರು ದಾಳಿಕೋರರೊಂದಿಗೆ ಹೋರಾಡುವ ದೃಶ್ಯ ಕೆತ್ತಲಾಗಿದ್ದು, ಆಯುಧಗಳ ಚಿತ್ರ ಕೂಡ ಕೆತ್ತಲಾಗಿದೆ. ಮೂರು ವೀರಗಲ್ಲುಗಳ ಮಧ್ಯದ ಪಟ್ಟಿಕೆಯಲ್ಲಿ ಮಡಿದ ವೀರರನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ದೃಶ್ಯವನ್ನು ಕೆತ್ತಲಾಗಿದೆ. ಮೂರು ವೀರಗಲ್ಲುಗಳ ಮೇಲಿನ ಪಟ್ಟಿಕೆಯಲ್ಲಿ ಕಾಳಗದಲ್ಲಿ ಮಡಿದ ವೀರನು ಶಿವಲಿಂಗದ ಬಳಿ ಕೈ ಮುಗಿದು ಕುಳಿತಿರುವ ದೃಶ್ಯ ಸುಂದರವಾಗಿ ಕೆತ್ತಲಾಗಿದೆ. ಮೇಲ್ಭಾಗದಲ್ಲಿ ಈ ಮೂರು ವೀರಗಲ್ಲುಗಳ ಮೇಲೆ ಕುಂಭದ ಚಿತ್ರವನ್ನು ಕೆತ್ತಲಾಗಿದೆ. ಹಾಗೂ ಒಂದು ವೀರಗಲ್ಲಿನ ಕೆಳಭಾಗದಲ್ಲಿ ಗೋವುಗಳ

* ಸಹ ಶಿಕ್ಷಕರು, ಸ.ಬಾ. ಪ್ರೌಢಶಾಲೆ, ಕೆಂಭಾವಿ ತಾಲ್ಲೂಕು, ಸುರುಪುರ, ಮೊ. ೯೮೪೫೩೩೮೮೯೮



ಕ್ರಿ.ಶ. ೧೧-೧೨ ಶತಮಾನದ ವೀರಗಲ್ಲುಗಳು ಹಾಗೂ ಒಂದು ನಿಷಿಧಿಗಲ್ಲು

ಚಿತ್ರವನ್ನು ಕೆತ್ತಲಾಗಿದೆ. ಎಲ್ಲವನ್ನು ಗಮನಿಸಿದರೆ ಹಿಂದೆ ಈ ಊರಲ್ಲಿ ಗೋಗ್ರಹಣ ಆಗಿರುವ ಸಾಧ್ಯತೆ ಇದೆ. ಅಲ್ಲದೆ ಸಂಪತ್ತು ದೋಚಲು ಬಂದಾಗ ಹೋರಾಟ ಆಗಿರುವ ಸಾಧ್ಯತೆಯೂ ಇದೆ. ಈ ಮೂರು ವೀರಗಲ್ಲುಗಳ ಮೇಲೆ ಶಾಸನ ಇಲ್ಲವಾದ್ದರಿಂದ ಕಾಲ ನಿರ್ಧರಿಸುವುದು ಬಹು ಕಷ್ಟದ ಕೆಲಸ.

ನಿಷಧಿ ಗಲ್ಲು : ಈ ವೀರಗಲ್ಲುಗಳ ಮಧ್ಯದಲ್ಲಿ ಒಂದು ನಿಷಧಿಗಲ್ಲು ಇದೆ. ಈ ಕಲ್ಲು ಎರಡು ಪಟ್ಟಿಕೆಯಿಂದ ಕೂಡಿದ್ದು ಕೆಳಗಿನ ಪಟ್ಟಿಕೆಯಲ್ಲಿ ಸಲ್ಲೇಖನ ವ್ರತವನ್ನಾಚರಿಸಿ ಆದರ್ಶ ಮರಣವನ್ನಪ್ಪಿದ ಜೈನ ಗೃಹಿಣಿ (ಶ್ರಾವಕಿ) ಶಿಲ್ಪವನ್ನು ಕೆತ್ತಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ಜೀನನ ಶಿಲ್ಪವನ್ನು ಕೆತ್ತಲಾಗಿದೆ. ಕಪ್ಪು ಕಲ್ಲಿನಲ್ಲಿ ಕೆತ್ತಲಾದ ಈ ಕಲ್ಲು ೨.೫ ಅಡಿ ಎತ್ತರ ೨ ಅಡಿ ಅಗಲದಿಂದ ಕೂಡಿದೆ.

ಜೈನ ಧರ್ಮದವರು ಜನನವನ್ನು ಸಡಗರದಿಂದ ಸ್ವಾಗತಿಸುವಂತೆ ಸಾವನ್ನೂ ಉತ್ಸವದ ರೀತಿಯಲ್ಲಿ ಬರಮಾಡಿಕೊಳ್ಳುತ್ತಿದ್ದರು. ಅದಕ್ಕೆ ಸಲ್ಲೇಖನ ರೀತಿಯಿಂದ ಸಮಾಧಿ ಮರಣ ಹೊಂದುವುದಕ್ಕೆ ಮೃತ್ಯು ಮಹೋತ್ಸವ ಎಂದರು. ಬಹುಶಃ ಈ ಊರಲ್ಲಿ ಪಾರ್ಶ್ವನಾಥ ವಿಗ್ರಹ ದೊರೆತ್ತಿದ್ದರಿಂದ ಇಲ್ಲಿ ಜೈನ ಧರ್ಮೀಯರು ಇದ್ದರು ಎಂದು ತಿಳಿಯುತ್ತದೆ.

ಊರ ಮುಂದಿನ ಹಳ್ಳದಲ್ಲಿ ಒಂದು ಪಾಣಿಪೀಠ ಲಿಂಗವಿದೆ. ಸೂಗುರೇಶ್ವರ ಮಠದಲ್ಲಿ ಎರಡು ಗಣಪತಿ ವಿಗ್ರಹಗಳಿವೆ, ಹನುಮಂತ ದೇವರ ಗುಡಿಯ ಬಳಿ ಶಿವನ ಶಿಲ್ಪವಿದೆ.ಊರ ಚಾವಡಿ ಬಳಿ ಸಪ್ತಮಾತೃಕಾ ಶಿಲ್ಪವಿದೆ. ಇವೆಲ್ಲವೂ ಸದ್ಯ ತ್ರುಟಿತಗೊಂಡಿವೆ. ಸದ್ಯ ಊರಲ್ಲಿ ಸುರಕ್ಷಿತವಾಗಿರುವ ಐತಿಹಾಸಿಕ ದೇವಾಲಯ ಹಾಗೂ ಬಸದಿಗಳು ಒಂದೂ ಇಲ್ಲ. ಆದರೆ ಐತಿಹಾಸಿಕ ದೇವಾಲಯಕ್ಕೆ ಸಂಬಂಧಿಸಿದ ಕಂಬಗಳು, ಶಿಲ್ಪಗಳು ಮತ್ತು ದೇವಾಲಯದ ಬಿಡಿ ಭಾಗಗಳು ಊರ ಅಗಸಿ ಬಳಿ ಅಲ್ಲಲ್ಲಿ ಬಿದ್ದಿವೆ. ಅಲ್ಲದೇ ಹನುಮಂತ ದೇವರ ಗುಡಿಯ ಕಟ್ಟೆ ಮೇಲೆ ಒಂದು ಪಾರ್ಶ್ವನಾಥ ವಿಗ್ರಹ ಹಾಗೂ ಅದರ ಪಕ್ಕದಲ್ಲಿ ಜಿನಬಿಂಬ ವಿಗ್ರಹ ಇದೆ. ಇದೆಲ್ಲ ಗಮನಿಸಿದಾಗ ಈ ಊರಲ್ಲಿ ಹಿಂದೆ ಶೈವ ಹಾಗೂ ಜೈನ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು, ಬಸದಿಗಳು ಇದ್ದವು ಎಂದು ಅರಿಯಬಹುದಾಗಿದೆ.

ಒಟ್ಟಾರೆ ಮಲ್ಲಾ(ಬಿ) ಗ್ರಾಮವು ಕ್ರಿ.ಶ. ೧೧-೧೨ನೇ ಶತಮಾನದ ಅವಧಿಯಲ್ಲಿ ಪ್ರಮುಖ ಶೈವ, ಜೈನ ಧರ್ಮಗಳಿಗೆ ಆಶ್ರಯ ನೆಲೆಯಾಗಿತ್ತು ಎನ್ನಲು ಊರಲ್ಲಿ ಇರುವ ಶಿಲ್ಪಗಳು ಹಾಗೂ ಶಾಸನಗಳು ಪ್ರಮುಖ ಆಧಾರವಾಗಿ ನಮಗೆ ಕಾಣಸಿಗುತ್ತವೆ. ಸುರಕ್ಷಿತವಾಗಿ ರಕ್ಷಿಸಿದರೆ ಮುಂದಿನ ಪೀಳಿಗೆಗೆ ನೋಡಲು ಸಿಗುತ್ತವೆ. ಈ ಕಾರ್ಯವನ್ನು ಊರಿನವರು ಹಾಗೂ ಗ್ರಾಮ ಪಂಚಾಯಿತಿಯವರು ಆದಷ್ಟು ಬೇಗನೆ ಮಾಡಲೆಂದು ಆಶಿಸುತ್ತೇನೆ.

೧೨೨

ಮೂಡುಬಿದಿರೆಯ ವಿಶಿಷ್ಟ ಸ್ಮಾರಕಗಳು

ಸನ್ಮತಿ ಕುಮಾರ್*

"**ತು**ಳುದೇಶಕ್ಕೆ ವಿಶಿಷ್ಟಮಪ್ಪ ನಗರವಾಗಿ, ಜೈನ ಧರ್ಮದಾಗರವಾಗಿ, ಧರೆಯೊಳಗಂ ಪ್ರಸಿದ್ಧಿಪಡೆದೊಪ್ಪುವ" ನಗರವಾಗಿ ವೈಭವದ ಉತ್ತುಂಗಕ್ಕೇರಿದ ಮೂಡುಬಿದಿರೆಯು ಕರಾವಳಿ ಕರ್ನಾಟಕದ ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಕಲೆ, ವಾಸ್ತುಶಿಲ್ಪಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿದೆ. ಇಲ್ಲಿ ಕಂಡುಬರುವ ನೂರಾರು ಶಿಲಾಶಾಸನಗಳು, ದೇವಾಲಯಗಳು, ಬಸದಿಗಳು, ಕೆರೆಗಳು, ನಿಶಿಧಿಗಳು, ಸಮಾಧಿಗಳು ಹಾಗೂ ಅನೇಕ ಸ್ಮಾರಕಗಳು ಈ ನಗರದಲ್ಲಿ ಕಂಡು ಬರುತ್ತಿದ್ದು, ಇದು ಸಾಂಸ್ಕೃತಿಕ ಸಮೃದ್ಧಿಯ ಕಥೆಯನ್ನು ನಮ್ಮ ಮುಂದೆ ಪ್ರಸ್ತುತಪಡಿಸುತ್ತಿದೆ.

ಮೂಡುಬಿದಿರೆಯ ಇತಿಹಾಸ, ಸಂಸ್ಕೃತಿಗಳ ಅಧ್ಯಯನಕ್ಕೆ ಲಭ್ಯವಿರುವ ಆಧಾರಗಳು ಹಲವಾರು. ಇಲ್ಲಿ ನೂರಾರು ತಾಮ್ರ ಹಾಗೂ ಶಿಲಾಶಾಸನಗಳು ಸಿಕ್ಕಿವೆ. ಸುಮಾರು ೪೭ರಷ್ಟು ಶಾಸನಗಳನ್ನು ಭಾರತ ಸರಕಾರದ ಶಾಸನ ಶಾಸ್ತ್ರ ಇಲಾಖೆಯವರು ಪ್ರಕಟಿಸಿದ ಸೌತ್ ಇಂಡಿಯನ್ ಇನಿಸ್ಕ್ರಿಪಶನ್ಸ್‌ನ ಏಳನೇ ಸಂಪುಟದಲ್ಲಿ ಪ್ರಕಟಗೊಂಡಿವೆ[೧]. ಸುಮಾರು ಐದು ಸಾವಿರದಷ್ಟು ಅಮೂಲ್ಯ ಓಲೆ ಗ್ರಂಥಗಳ ಭಂಡಾರವು ರಮಾರಾಣಿ ಸಂಶೋಧನಾ ಕೇಂದ್ರದಲ್ಲಿ ಸಂಗ್ರಹಿಸಲ್ಪಟ್ಟಿದ್ದು ಸ್ಥಳೀಯ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

ನ್ಯಾಯ ಬಸದಿ: ಜೈನ ವಾಸ್ತುಶಿಲ್ಪದ ವಿಶಿಷ್ಟವಾದ ರಚನೆಗಳಲ್ಲಿ ನಿಶಿಧಿ ಮಂಟಪಗಳು ಪ್ರಮುಖವಾದವುಗಳು. ಇದು ಮೂಡುಬಿದಿರೆಯ ಕೋಡಂಗಲ್ಲಿನಲ್ಲಿರುವ ಶಿಲಾಮಂಟಪವಾಗಿದ್ದು, ಈಗ ನ್ಯಾಯ ಬಸದಿ ಎಂಬ ಹೆಸರಿನಿಂದ ಗುರುತಿಸಲ್ಪಡುತ್ತಿದೆ. ಇದು ಕೋಡಂಗಲ್ಲಿನ ಸಮಾಧಿ ಸ್ಥಾನದ ಶಾಸನ. ನ್ಯಾಯ ಬಸದಿಯ ಕಲ್ಲಿನ ಕಂಬದ ಮೇಲಿರುವ ಶಿಲಾ ಶಾಸನವು ಇದರ ನಿರ್ಮಾಣ ಕಾರ್ಯದ ಬಗ್ಗೆ ವಿವರಣೆಯನ್ನು ನೀಡುತ್ತದೆ.[೨]

"ಸ್ವಸ್ತಿ ಶ್ರೀ ವಿಜಯಭ್ಯುದಯ ಶಾಲಿವಾಹನ ಶಕ ವರ್ಷ ೧೫೫೯ನೆಯ ಭಾದ್ರಪದ ಶುದ್ಧ ಬಿದಿಗೆಯು ಚಂದ್ರವಾರ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಮೂಲಸಂಘ ಕುಂದಕುಂದಾನ್ವಯದ ಶ್ರೀ ಬಲತ್ಕಾರಗಣದ ಪಂಚಾಚಾರ ನಿರತ – ತ್ರೈವಿದ್ಯ ಚಕ್ರವರ್ತಿಗಳು ಲಬ್ಧಿಸಾರ ಗ್ರಂಥೋಪದೇಶ ಕರುಮಪ್ಪ ಶ್ರೀ ಮತ್ಸೇನಗಣದ ಮಹೇಂದ್ರಕೀರ್ತಿ ದೇವರ ಶಿಷ್ಯರೂ ತೌಳವದೇಶೋದ್ಭವರುಂ ಸಕಲಶಾಸ್ತ್ರ ಪಾರಾವಾರ ಪಾರಂಗತರುಂ ಉಭಯರತ್ನತ್ರಯಾರಾಧಕರುಂ ಮೂಲೋತ್ತರಗುಣ ಸಂಪನ್ನರುಂ ಘನರುಂದ್ರಸಾಂದ್ರ ತಪೋನಿರತರುಂ ಪರಮಕೀರ್ತೋಪದೇಶದಿಂ ಸಕಲ ಭವ್ಯಜೀವಗಳಿಗೆ ಸ್ಮಾರಕರುಮಪ್ಪ ನಿರ್ವಾಣದ ಚಂದ್ರಕೀರ್ತಿ ದೇವರುಗಳು ತಮ್ಮಾಯುಷ್ಯಾವಸಾನದೊಳು ಸನ್ಯಸನ ವಿಧಿಯಂ ಪಂಚಪರಮೇಷ್ಠಿಗಳ ಸ್ಮರಣಪೂರ್ವಕದಿಂದ ಧರ್ಮಧ್ಯಾನ ಪರಾಯಣರಾಗಿ ಸ್ವರ್ಗಸ್ಥರಾದರು. ಅವರ ಶಿಷ್ಯ ತಪಸ್ವಿಗಳು ಮೂಡುಬಿದಿರೆಯ ನಗರದ ಐದು ಸಾವಿರ ಹಲರು, ಗುರುಪಾದ ಸ್ಮರಣೆ ಭವ್ಯರ ಚಿತ್ತದಲ್ಲಿರಬೇಕೆಂದು ಸಕಲಭವ್ಯರ ಸಹಾಯದಿಂದ ಪೊಂತು ಸೆಟ್ಟಿ ಎಂಬಾತ ಭಕ್ತಿಯಿಂದ ಕಟ್ಟಿಸಿದ ನಿಷಿಧಿ ಮಂಟಪಕ್ಕೆ ಮಂಗಳಮಹಾಶ್ರೀ".

ಈ ಶಾಸನದ ವಿವರಣೆಯಂತೆ ಚತುರಸ್ರ ಅಧಿಷ್ಠಾನದ ಮೇಲೆ ಎಂಟು ಕಂಬಗಳನ್ನು ಜೋಡಿಸಿ, ಅದರ ಮೇಲೆ ಚಪ್ಪಟೆಯಾದ ಚಾಲುಕ್ಯ ಶೈಲಿಯ ಛಾವಣಿಯನ್ನು ಮಾಡಲಾಗಿದೆ. ಇದು ಅತ್ಯಂತ ಸರಳ ರಚನೆಯಾಗಿದ್ದು, ಯಾವುದೇ ಕೆತ್ತನೆಯ ಅಲಂಕಾರಗಳಿಲ್ಲ. ಇದನ್ನು ನ್ಯಾಯಬಸದಿಯೆಂದು ಕರೆಯುತ್ತಾರೆ. ತೆರೆದ ಆವರಣ ಹೊಂದಿದ್ದ ಇದು ಜನ ಸಾಮಾನ್ಯರ ವ್ಯಾಜ್ಯ ಪರಿಹಾರದ ಸ್ಥಳವೂ ಆಗಿದ್ದು, ಈ ಹೆಸರು ಬಂದಿದೆ. ಇದೊಂದು ನಿಶಿಧಿ ಮಂಟಪ. ಇದು ಮೂಲತಃ ಶ್ರೀ ಕುಂದಕುಂದಾನ್ವಯ ಶ್ರೀ ಬಲತ್ಕಾರಗಣದ ಅಗ್ರಗಣ್ಯ ಮುನಿಗಳಾದ, ಶ್ರೀಮತ್ ಪಾರ್ಶ್ವನಾಥ ಮಹೇಂದ್ರ ಕೀರ್ತಿ ದೇವರ ಶಿಷ್ಯರಾದ, ಮುನಿ ಪರಂಪರೆಗೆ ಸೇರಿದ ಹಾಗೂ ಸಕಲ ಭವ್ಯ ಜನರ ಗೌರವಾದರಗಳಿಗೆ ಪ್ರಾಪ್ತರಾದ ಚಂದ್ರಕೀರ್ತಿ ದೇವರು ಸನ್ಯಾಸಿ ವಿಧಿಯಿಂದ ಸ್ವರ್ಗಸ್ಥರಾದಾಗ ಅವರ ಸ್ಮಾರಕವಾಗಿ, ಅವರ ತಪಸ್ವಿ ಶಿಷ್ಯರು, ಬಿದಿರೆ ನಗರದ ಸಮಸ್ತ

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಆಳ್ವಾಸ್ ಕಾಲೇಜು, ವಿದ್ಯಾಗಿರಿ, ಮೂಡುಬಿದಿರೆ-೫೭೪೨೨೭.

ಭವ್ಯರ ಐದು ಸಾವಿರ ಹಲರ ಸಹಾಯದಿಂದ, ಜೈನ ಶ್ರೇಷ್ಠಿ ಪೊಂತು ಸೆಟ್ಟಿ ಎಂಬಾತ ನಿರ್ಮಿಸಿದ ನಿಶಿಧಿ ಮಂಟಪವೆಂದು ಇಲ್ಲಿರುವ ಶಿಲಾಶಾಸನವು ವಿವರಿಸುತ್ತದೆ.[೩]

ಕ್ರಿಸ್ತ ಶಕ ೧೬೩೭ರಲ್ಲಿ ನಿರ್ಮಿಸಲಾದ ನಿಸರ್ಗದ ಅಧ್ಬುತ – ರಮ್ಯ ಪರಿವೇಶವುಳ್ಳ, ಪ್ರಶಾಂತ ವಾತಾವರಣದ ಚಿರಂತನ ಸೌಂದರ್ಯನಿಧಿಯ ಈ ನ್ಯಾಯ ಬಸದಿಯು ಪ್ರಸಿದ್ಧ ಚಂದ್ರಕೀರ್ತಿ ಮುನಿಗಳ ನಿಶಿಧಿ ಮಂಟಪವು ಆಗಿರುವುದು ಗಮನಾರ್ಹವಾಗಿದೆ. ಒಳ್ಳೆಯ ಪರಂಪರೆಯನ್ನು ಹೊಂದಿರುವ ನ್ಯಾಯಬಸದಿಯು, ಪೂಜ್ಯ ಗಣಧರರ ಪಾದಪೀಠ (ಪೂಜ್ಯ ಚಂದ್ರಕೀರ್ತಿ ಮುನಗಳ ಚರಣ ಚಿಹ್ನೆಯು?). ಇದು ಮೂಡುಬಿದಿರೆ ಇತಿಹಾಸ, ಸಂಸ್ಕೃತಿಯ ಐತಿಹಾಸಿಕ ಕುರುಹುಗಳಲ್ಲಿ ಒಂದಾಗಿದ್ದು, ಜೈನ ವಾಸ್ತುಶಿಲ್ಪದ ಅದ್ಭುತ ಕಲಾಕೃತಿ ನಿಶಿಧಿ ಮಂಟಪವು ಜೈನ ಶಿಲ್ಪ ಕಲೆಯ ಅತ್ಯುನ್ನತ ವಿಶಿಷ್ಟವಾದ ರಚನೆ.

ಈ ನಿಶಿಧಿ ಸ್ಮಾರಕವನ್ನು ಇತಿಹಾಸದ ಕಾಲಗರ್ಭದಲ್ಲಿ ಕಲ್ಲಾಗಿ ಹೋಗದಿರಲು ಇತಿಹಾಸ ಪ್ರೇಮಿಗಳು ಸೇರಿ ಗಮನ ಹರಿಸುವುದು ಮತ್ತು ಪೂಜ್ಯ ಚಂದ್ರಕೀರ್ತಿ ಮುನಿಗಳ ಸ್ಮಾರಕವನ್ನು ಸಂರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಗೌರೀ ದೇವಾಲಯ : ಲಭ್ಯ ದಾಖಲೆಗಳ ಪ್ರಕಾರ ಮೂಡುಬಿದಿರೆಯ ಅತಿ ಪ್ರಾಚೀನ ಸ್ಮಾರಕಗಳ ಪೈಕಿ ದುರ್ಗಾದೇವಿಯ ಮಂದಿರ (ಗೌರಿ ದೇವಾಲಯ) ಅತ್ಯಂತ ಮಹತ್ವದ್ದು. ಈ ದೇವಾಲಯಕ್ಕೆ ಸಂಬಂಧಿಸಿದ ಅತಿ ಪ್ರಾಚೀನ ಶಾಸನ ಕ್ರಿ.ಶ. ೧೨೦೫ಕ್ಕೆ ದೊರಕಿದ್ದರೂ ಗಜಪುಷ್ಪಾಕಾರದ ಈ ದೇವಾಲಯದ ಗರ್ಭಗೃಹದ ಅವಶೇಷವನ್ನು ಪರಿಶೀಲಿಸಿ, ಈ ದೇವಾಲಯವು ಕ್ರಿ.ಶ. ೧೧ನೇ ಶತಮಾನಕ್ಕೆ ಅನ್ವಯಿಸಬಹುದಾದದ್ದೆಂದು ದಿ. ಡಾ. ಗುರುರಾಜಭಟ್ಟರು ಅಭಿಪ್ರಾಯಪಟ್ಟಿದ್ದಾರೆ. ನಾಲ್ಕು ಅಡಿ ಎತ್ತರದ ಕಗ್ಗಲ್ಲಿನಿಂದ ಕೊರೆಯಲ್ಪಟ್ಟಿರುವ ಮಹಿಷಾಸುರಮರ್ಧಿನಿ ವಿಗ್ರಹವು ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಶ್ರೇಷ್ಠ ಶಿಲ್ಪಗಳಲ್ಲಿ ಒಂದಾಗಿದೆ. ಬಾದಾಮಿ ಚಾಲುಕ್ಯರ ಶಿಲ್ಪ ಶೈಲಿಯನ್ನು ಹೋಲುತ್ತದೆ. "ವೃತ್ತಾಕಾರದ ವಿನ್ಯಾಸದ ಕೆಲವು ದೇವಾಲಯಗಳಿದ್ದರೂ ಬೌದ್ಧ ವಸ್ತುವನ್ನನುಕರಿಸುವ ಚೈತ್ಯಾಕಾರದ ದೇವಾಲಯಕ್ಕೆ ಇದೊಂದು ದೃಷ್ಟಾಂತ. ಆಲುಪ ಚಕ್ರವರ್ತಿ ಒಂದನೇ ಕುಲಶೇಖರನು ಗೌರೀ ದೇವಾಲಯಕ್ಕೆ ನೀಡಿದ ದಾನಗಳ ವಿಷಯದ ಕುರಿತಾಗಿ ಹೇಳುತ್ತದೆ[೪]. ಇತ್ತೀಚೆಗೆ ದೇವಾಲಯವು ಜೀರ್ಣೋದ್ಧಾರಗೊಂಡು ಹೊಸ ಕಳೆಯನ್ನು ಪಡೆದುಕೊಂಡಿದೆ.

ಚೌಟರ ಅರಮನೆ: ಮೂಡುಬಿದರೆಯಲ್ಲಿರುವ ಮತ್ತೊಂದು ಪ್ರಮುಖ ಸ್ಮಾರಕ ಚೌಟರ ಅರಮನೆ. ಈ ಅರಮನೆಯು ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ವವಾದದ್ದು. ಮೊದಲಿಗೆ ಪುತ್ತಿಗೆಯನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ನಡೆಸುತ್ತಿದ್ದ ಚೌಟರರಸರು ಕಾಲಾಂತರದಲ್ಲಿ ತಮ್ಮ ನೆಲೆಯನ್ನು ಮೂಡುಬಿದಿರೆಗೆ ಸ್ಥಳಾಂತರಿಸಿದಾಗ ಈಗಿರುವ ಚೌಟರ ಅರಮನೆ ನಿರ್ಮಾಣವಾಯಿತು. ಕ್ರಿ.ಶ. ೧೬೪೩ರಲ್ಲಿ ಈ ಅರಮನೆಯನ್ನು ನಿರ್ಮಿಸಲಾಗಿದೆ. ಕಾಷ್ಠಶಿಲ್ಪಕ್ಕೆ ಹೆಸರುವಾಸಿಯಾದ ಈ ಭವ್ಯ ಸೌಧದಲ್ಲಿ ಕಂಡುಬರುವ 'ಪಂಚನಾರೀತುರಗ' ಮತ್ತು 'ನವನಾರೀಕುಂಜರ'ದ ರಚನಾಚಾತುರ್ಯ ನೋಡುಗರನ್ನು ಮಂತ್ರಮುಗ್ಧಗೊಳಿಸುತ್ತದೆ[೫]. ಇದೇ ಕೆತ್ತನೆಯನ್ನು ಸಾವಿರ ಕಂಬದ ಬಸದಿಯ ಭವ್ಯವಾದ ಪ್ರವೇಶದ್ವಾರದ ಎಡ ಮತ್ತು ಬಲ ಬಾಗಿಲುಗಳ ಮೇಲೆಯೂ ಗಮನಿಸಬಹುದು. ಹುಲಿಮುಖದ ಚಾವಡಿ, ಹೊರಗಿನ ಚಾವಡಿ, ಪಟ್ಟದ ಚಾವಡಿ, ಒಡ್ಡೋಲಗ, ಅಂತಃಪುರ, ಸ್ನಾನದ ಕೊಳ, ಮಹಾದ್ವಾರ, ಅರಮನೆ ಬಾಗಿಲು, ಮುಂತಾದ ವಿಭಾಗಗಳನ್ನು ಹೊಂದಿದ್ದ ಚೌಟರ ಅರಮನೆ ಮೂಡುಬಿದಿರೆಯ ಇತಿಹಾಸದ ಪ್ರತ್ಯಕ್ಷ ಸಾಕ್ಷಿಗಳೂ ಹೌದು. ಕ್ರಿ.ಶ. ೧೫ನೇ ಶತಮಾನದಿಂದ ೨೦ನೇ ಶತಮಾನದವರೆಗೆ ಚೌಟರ ವಂಶದಲ್ಲಿ ೪೩ ಜನ ಅರಸರು ಆಳಿದರು. ಈಗಲೂ ಈ ಮನೆತನದ ವಂಶಜರೂ ಅರಮನೆಯ ಪಕ್ಕದಲ್ಲೇ ವಾಸವಾಗಿದ್ದಾರೆ. ಈಗ ಚೌಟರ ಅರಮನೆಯು ಪುರಾತತ್ವ ಇಲಾಖೆಯ ಅಧೀನದಲ್ಲಿದ್ದು, ಉತ್ತಮ ರೀತಿಯಲ್ಲಿ ಸಂರಕ್ಷಿಸಲ್ಪಟ್ಟಿದೆ.

ಕೋಟೆಬಾಗಿಲು: ಈ ಮೂಡುಬಿದಿರೆಯ ಪರಿಸರದಲ್ಲಿ ಕಂಡುಬರುವ ವಿಶಾಲವಾದ ಕೋಟೆ ನಿರ್ಮಾಣವಾದದ್ದು ಕೆಳದಿ ಅರಸರ ಕಾಲದಲ್ಲಿ. ಕೋಟೆಬಾಗಿಲು ಎಂಬಲ್ಲಿ ಕೆಳದಿ ಹಿರಿಯ ವೆಂಕಟಪ್ಪ ನಾಯಕ ನಿರ್ಮಿಸಿದ ಬೃಹತ್ ಕೋಟೆ ನಗರಕ್ಕೆ ಶತ್ರುಗಳಿಂದ ರಕ್ಷಣೆಯನ್ನು ಒದಗಿಸಿತ್ತು. ಲಿಂಗಣ್ಣ ಕವಿಯು ಕೆಳದಿ ನೃಪವಿಜಯದಲ್ಲಿ ಕೋಟೆಯ ಉಲ್ಲೇಖವಿದೆ. ಕೋಟೆಯು ಬೃಹತ್ ದ್ವಾರವನ್ನು ಹೊಂದಿದ್ದು, ಸುತ್ತಲೂ ಆಳುಗಂಡಿಗಳಿಂದ ಕೂಡಿದೆ. ಈಗ ಕೋಟೆ ಬೀಳುವ ಹಂತದಲ್ಲಿದ್ದು, ಕೋಟೆಯ ಒಳಗೆ ಅನೇಕ ಮನೆಗಳು ಅಕ್ರಮವಾಗಿ ತಲೆಯೆತ್ತಿವೆ.

ಪುರಾತನ ಕೊಳ: ಮೂಡುಬಿದಿರೆಯ ವಿವಿಧೆಡೆಗಳಲ್ಲಿ ೧೮ ಕೆರೆಗಳು ಕಂಡು ಬಂದಿವೆ. ಈ ಕೆರೆಗಳು ಬಸದಿ, ಮಠ, ದೇವಸ್ಥಾನಗಳಲ್ಲಿದ್ದು, ಇವು ಪ್ರಾಚೀನ ಧಾರ್ಮಿಕ ಹಿನ್ನೆಲೆಯಿಂದ ಮಹತ್ವವನ್ನು ಪಡೆದುಕೊಂಡಿದೆ. ಕೆರೆಗಳು ಹಿಂದಿನ

ಕಾಲದ ಜಲಸಂಪನ್ನ ಮೂಲಗಳಾಗಿದ್ದು ಜನರ ಜೀವನದ ಜೊತೆಯಾಗಿ ಸೇರಿಕೊಂಡು ಅವಿನಭಾವ ಸಂಬಂಧದೊಂದಿಗೆ ಬೆಸೆದುಕೊಂಡಿದೆ. ಕೆರೆಗಳ ವಾಸ್ತುರಚನೆ ಅತ್ಯಂತ ನೈಪುಣ್ಯತೆಯಿಂದ ನಿರ್ಮಾಣಗೊಂಡಿದೆ. ಈಗ ಕೆಲವು ಕೊಳಗಳು ಪುರಾತತ್ವ ಇಲಾಖೆಯ ಸುಪರ್ದಿಯಲ್ಲಿದ್ದು ಸ್ವಲ್ಪ ಮಟ್ಟಿಗೆ ರಕ್ಷಣೆಯನ್ನು ಹೊಂದಿದೆ.

ಮುಡಿಜಗಳು: ಮೂಡುಬಿದಿರೆಯ ಬೆಟಕೇರಿ ರಸ್ತೆಯ ಕೊನೆಯಲ್ಲಿರುವ ಪ್ರಾಚೀನ ಜೈನ ಸಮಾಧಿಗಳು ಶಿಲ್ಪಕಲೆಯ ದೃಷ್ಟಿಯಿಂದ ವಿಶಿಷ್ಟ ವಾಸ್ತುರಚನೆಗಳು. ಇದನ್ನು ಮುಡಿಜ ಅಥವಾ ಮುಡಿಂಜಗಳೆಂದು ಆಯಾ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇವುಗಳ ರಚನೆ ಟಿಬೆಟ್, ಚೀನಾ, ನೇಪಾಳ ಮೊದಲಾದೆಡೆಗಳಲ್ಲಿರುವ ಬೌದ್ಧ ಪಗೋಡಗಳಿಗೆ ಹೋಲುತ್ತದೆ ಎಂಬುದು ಇತಿಹಾಸ ತಜ್ಞರ ಅಭಿಮತ[೬]. ಮೂರು, ಐದು ಹಾಗೂ ಏಳು ಹಂತಗಳಲ್ಲಿ ಪಿರಮಿಡ್ ಆಕಾರವನ್ನು ಹೋಲುವಂತೆ ನಿರ್ಮಿಸಲಾದ ಮುರಗಲ್ಲಿನ ಈ ಸಮಾಧಿಗಳನ್ನು ಶಾಸನಗಳಲ್ಲಿ ಮುಡಿಜ ಎಂದು ಕರೆಯಲಾಗಿದೆ. ಕೆಂಪು ಕಲ್ಲುಗಳನ್ನು ಬಳಸಿ ರಚಿಸಲಾದ ಇವುಗಳಲ್ಲಿ ಚತುರಸ್ರ ಅಧಿಷ್ಠಾನ, ಅದರ ಮೇಲೆ ಸ್ವಲ್ಪ ಎತ್ತರಕ್ಕೆ ಚಿಕ್ಕ ಗೋಡೆಗಳು, ಅವುಗಳ ಮೇಲೆ ದ್ರಾವಿಡ ಶೈಲಿಯ ಶಿಖರಗಳು ಕಂಡು ಬರುತ್ತವೆ. ಮುಡಿಜಗಳು ವಿಜಯನಗರ ಕಾಲಕ್ಕೆ ಸೇರಿದ್ದು, ಕೆಲವು ಸಮಾಧಿಗಳು ಶಾಸನಗಳನ್ನು ಹೊಂದಿವೆ.

ಎರಡು ಸಮಾಧಿಗಳಲ್ಲಿ ಕಂಡು ಬರುವ ಶಾಸನಗಳು ಈ ರೀತಿಯಲ್ಲಿವೆ. ಮೊದಲನೆಯದು ಬ್ರಹ್ಮಚಾರಿ ಮಡೆದೇವರು ಸೆಟ್ಟಿಯವರಿಗೆ ಕಟ್ಟಿಸಿದ ಮುಡಿಜವೆಂದು ಉಲ್ಲೇಖಿಸಿದರೆ, ಎರಡನೆಯದು ಚಾರುಕೀರ್ತಿ ಪಂಡಿತ ಅಯ್ಯಗಳ ಶಿಷ್ಯರಾದ ವರ್ಧಮಾನ ಅಣ್ಣಗಳ ಶಿಷ್ಯ ಬಾಗಿಸೆಟ್ಟಿ ಬಳಿಯ ಯಳವೆಯ ಸೆಟ್ಟಿ ಕಾಂತಣ ಸೆಟ್ಟಿ ಕಟ್ಟಿಸಿದ ಮುಡಿಜ ಎಂದಿದೆ. ಇಲ್ಲಿ ಜೈನ ವ್ಯಾಪಾರಿ ಸಮುದಾಯದಲ್ಲಿ ಪ್ರಚಲಿತವಿದ್ದ 'ಬಳಿಯ' ಪ್ರಸ್ತಾವವಿದೆ. ಮೂರನೆಯದು ಭಾಷೆ ಸಂಸ್ಕೃತವಾಗಿದ್ದು ಲಿಪಿ ಮಾತ್ರ ಕನ್ನಡವಾಗಿದೆ. ದೇಶೀ ಗಣದ ಪ್ರಭೆಂದು ಯತಿಯ ಪ್ರಸ್ತಾವ ಮಾಡುವ ಇದು ಬಹುಶ: ಅವರಿಗಾಗಿ ಶಿಷ್ಯರು ಕಟ್ಟಿಸಿದ ಮುಡಿಜವಾಗಿರಬೇಕು ಮತ್ತು ಅನೇಕ ಸ್ವಾಮಿಗಳ ಮುಡಿಜಗಳು ಸಹಾ ಇಲ್ಲಿ ಕಟಲ್ಪಟ್ಟಿದೆ. ಪ್ರಸ್ತುತ ಇಲ್ಲಿ ೨೩ ಮುಡಿಜಗಳಿದ್ದು ೨ ಭಾಗಶಃ ನಾಶಗೊಂಡಿದೆ. ಇತ್ತೀಚೆಗೆ ಭಾರತದ ಪುರಾತತ್ವ ಇಲಾಖೆಯು ಮುಡಿಜಗಳ ಸುತ್ತಲೂ ರಕ್ಷಣಾ ಬೇಲಿಗಳನ್ನು ನರ್ಮಿಸಿ ಸುರಕ್ಷಿತವಾಗಿ ಉಳಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಚರ್ಚ್‌ಗಳು: ಮೂಡುಬಿದಿರೆಯಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಕ್ರೈಸ್ತ ಧರ್ಮೀಯರಿದ್ದು, ಕ್ಯಾಥೋಲಿಕ್ ಧರ್ಮವನ್ನು ಅನುಸರಿಸುತ್ತಾರೆ. ಮೂಡುಬಿದಿರೆ ವಾರ್ಡ್‌ನಲ್ಲಿ ಒಟ್ಟು ೧೧ ಚರ್ಚ್‌ಗಳಿವೆ. ಇದರಲ್ಲಿ ೧೬ನೇ ಶತಮಾನದ್ದ ಪೋರ್ಚುಗೀಸರಿಂದ ನಿರ್ಮಿತವಾದ ಹೊಸಬೆಟ್ಟಿನ ಸಂತ ಕ್ರೂಸ್ ಚರ್ಚ್ ಬಹಳ ಪ್ರಸಿದ್ಧ ಹಾಗೂ ವಾಸ್ತುಶಿಲ್ಪದ ನೆಲೆಯಲ್ಲಿ ಮಹತ್ವದಾಗಿದೆ. ಆಲಂಗಾರ್ ಚರ್ಚ್ ಮತ್ತು ಕಾರ್ಪಸ್ ಚರ್ಚ್ ಪ್ರಸಿದ್ಧ ಇಗರ್ಜಿಗಳಾಗಿವೆ.

ಮಾನಸ್ತಂಭ: ಬಸದಿಗಳ ಎದುರು ಎತ್ತರವಾದ ಶಿಲಾ ವೇದಿಕೆಯಲ್ಲಿ ಉನ್ನತವಾದ ಮಾನಸ್ತಂಭಗಳ ಸ್ಥಾಪನೆ ಜೈನ ವಾಸ್ತುಶಿಲ್ಪದ ವೈಶಿಷ್ಟ್ಯಗಳಲ್ಲೊಂದು. ತುಳುನಾಡಿನಲ್ಲಿ ಸುಮಾರು ಇಪ್ಪತ್ತಕ್ಕಿಂತಲೂ ಹೆಚ್ಚು ಕಡೆಗಳಲ್ಲಿ ಇಂತಹ ಮಾನಸ್ತಂಭಗಳನ್ನು ಗುರುತಿಸಲಾಗಿದೆ. ಈ ಪೈಕಿ ಆರು ಮಾನಸ್ತಂಭಗಳು ಮೂಡುಬಿದಿರೆಯಲ್ಲೇ ಕಂಡು ಬರುವುದು ಗಮನಾರ್ಹ. ತ್ರಿಭುವನ ತಿಲಕ ಚೂಢಮಣಿ ಬಸದಿ, ಕಲ್ಲು ಬಸದಿ, ಲೆಪ್ಪದ ಬಸದಿ, ಚೋಳ ಸೆಟ್ಟಿ ಬಸದಿ, ವಿಕ್ರಮಸೆಟ್ಟಿ ಬಸದಿ, ಮತ್ತು ಬಡಗ ಬಸದಿ. ಬಸದಿಯ ಎದುರು ಉನ್ನತವಾದ ಮಾನಸ್ತಂಭಗಳಿವೆ. ಹಿಂದೆ ಗುರುಬಸದಿಯ ಎದುರಿನಲ್ಲಿ ಮಾನಸ್ತಂಭ ಇತ್ತು ಎನ್ನಲಾಗುತ್ತಿದ್ದರೂ ಈಗ ಅಂತಹ ಕುರುಹುಗಳೇನೂ ಅಲ್ಲಿ ಕಾಣಿಸುತ್ತಿಲ್ಲ. ಈ ಬಸದಿಯ ಮಾನಸ್ತಂಭದ ಕೆಳಗಿನ ಭಾಗದಲ್ಲಿ ಹನುಮಾನ ಮತ್ತು ಗೋಪಾಲಕೃಷ್ಣನ ಉಬ್ಬುಶಿಲ್ಪಗಳನ್ನು ಕೆತ್ತಲಾಗಿರುವುದು ಇದರ ವಿಶೇಷತೆ. ಹನುಮಾನನ ಉಬ್ಬುಶಿಲ್ಪವು ವಿಜಯನಗರ ಶೈಲಿಯಲ್ಲಿರುವುದು ಇವುಗಳ ಕಾಲಮಾನವನ್ನು ನಿರ್ಧರಿಸುವ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ[೭]. ಮಾನಸ್ತಂಭದ ಮೇಲೆಯ ಭಾಗದಲ್ಲಿ ಚೌಕಾಕರದ ಕೋಣೆಗಳಿದ್ದು, ನಾಲ್ಕು ಸುತ್ತಲೂ ಜಿನಬಿಂಬದ ಮೂರ್ತಿಗಳಿವೆ.

ಜೈನ ವಾಸ್ತುಶಿಲ್ಪದ ಕೇಂದ್ರವಾಗಿ, ಸಾಂಸ್ಕೃತಿಕ ನೆಲೆವೀಡಾಗಿ ಬೆಳಗಿದ ಮೂಡುಬಿದಿರೆಯ ಕೀರ್ತಿ ನಾಡಿನ ಜನಮನದಲ್ಲಿ ಶಾಶ್ವತವಾಗಿ ಉಳಿವಂಥದು. ತುಳುನಾಡಿನ ಧರ್ಮ, ಸಂಸ್ಕೃತಿ, ಕಲೆ ಹಾಗೂ ಸಾಹಿತ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಈ ನಗರದ ವೈಭವವನ್ನು ಶಾಸನಕವಿಯೋರ್ವ 'ನಾಲಿಗೆ ಯಾರಿಗುಂಟು ಪೊಗಳಲ್ ನೆರೆ ವೇಣುಪುರ ಪ್ರಭಾವಮಂ' ಎಂದು ವರ್ಣಿಸಿರುವುದು ಉಚಿತವೂ, ಔಚಿತ್ಯಪೂರ್ಣವೂ ಆಗಿದೆ. ಪ್ರಾಚೀನತೆಯನ್ನು ಉಳಿಸಿಕೊಂಡೆ ಆಧುನಿಕ ವೇಷ ತೊಟ್ಟಿರುವ ಮೂಡುಬಿದಿರೆ ಸಂದರ್ಶಿಸಬೇಕಾದ ಪ್ರೇಕ್ಷಣೀಯ ಸ್ಥಳ ಎಂಬುದರ ಬಗ್ಗೆ ಎರಡು ಮಾತಿಲ್ಲ.

ಅಡಿಟಿಪ್ಪಣಿಗಳು

೧. South Indian Inscriptions, Vol. VII, ಶಾಸನ ನಂ. ೧೯೬-೨೨೦.

೨. South Indian Inscriptions, Vol. VII.

೩. ಡಾ. ದೇವರಕೊಂಡಾರೆಡ್ಡಿ, ಡಾ. ಜಯಪ್ರಕಾಶ ಮಾವಿನಕುಳಿ (ಸಂ), ತುಳುನಾಡಿನ ಜೈನ ಶಾಸನಗಳು, (ಬಿಡಿ ಲೇಖನ, ಡಾ. ಶೈಲಾ. ಯು. ತುಳುನಾಡಿನ ನಿಶಿದಿ ಸ್ಮಾರಕಗಳು) ಪುಟ ೬೦-೬೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೪.

೪. ಡಾ. ಪುಂಡಿಕ್ಯಾ ಗಣಪಯ್ಯ ಭಟ್, ತೌಳವ, ತುಳುನಾಡಿನ ಇತಿಹಾಸ, ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳ ಸಂಕಲನ, ಪುಟ ೮೩, ಸಿಂಧೂರ ಪ್ರಕಾಶನ, ಮೂಡುಬಿದಿರೆ. ೧೯೯೭.

೫. ಡಾ. ಪುಂಡಿಕ್ಯಾ ಗಣಪಯ್ಯ ಭಟ್, ತೌಳವ, ತುಳುನಾಡಿನ ಇತಿಹಾಸ, ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳ ಸಂಕಲನ, ಪುಟ ೮೭, ಸಿಂಧೂರ ಪ್ರಕಾಶನ, ಮೂಡುಬಿದಿರೆ. ೧೯೯೭.

೬. ಡಾ. ದೇವರಕೊಂಡಾರೆಡ್ಡಿ, ಡಾ. ಜಯಪ್ರಕಾಶ ಮಾವಿನಕುಳಿ (ಸಂ), ತುಳುನಾಡಿನ ಜೈನ ಶಾಸನಗಳು, (ಬಿಡಿ ಲೇಖನ, ಡಾ. ಶೈಲಾ.ಯು. ತುಳುನಾಡಿನ ನಿಶಿದಿ ಸ್ಮಾರಕಗಳು) ಪುಟ ೬೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೭. ಡಾ. ಪುಂಡಿಕ್ಯಾ ಗಣಪಯ್ಯ ಭಟ್, ಮೂಡುಬಿದಿರೆಯ ಜಿನಾಲಯಗಳು ಒಂದು ಅವಲೋಕನ, ಪುಟ ೯೦-೯೧, ಮೂಡುಬಿದಿರೆ, ೨೦೦೪.

೧೨೩

ಬೇತೂರಿನ ಪ್ರಾಚ್ಯಾವಶೇಷಗಳು

ಸಂತೇಬೆನ್ನೂರು ಸುಮತೀಂದ್ರ ನಾಡಿಗ್*

ದಾವಣಗೆರೆ ಜಿಲ್ಲಾ ಕೇಂದ್ರದ ದಕ್ಷಿಣಕ್ಕೆ ಸುಮಾರು೧೦ ಕಿ.ಮೀ. ದೂರ ಇರುವ ಒಂದು ಗ್ರಾಮ ಬೇತೂರು ಇಲ್ಲಿ ಹೆಚ್ಚಿನ ವೀಳೇದೆಲೆ ಬೆಳೆಯುವುದರಿಂದ ಈ ಗ್ರಾಮಕ್ಕೆ ಎಲೆಬೇತೂರು ಎಂದು ಕರೆಯಲಾಗುತ್ತದೆ. ಇಲ್ಲಿರುವ ಶಾಸನಗಳಲ್ಲಿ ಇದನ್ನು ಬೆಲ್ತೂರು ಎಂದು ಕರೆಯಲಾಗಿದ್ದು ಇದೊಂದು ಪ್ರಾಚೀನ ಅಗ್ರಹಾರವಾಗಿದೆ. ಕಲ್ಯಾಣ ಚಾಲುಕ್ಯರ ಮಾಂಡಲಿಕ ಕ್ರಿ.ಶ. ೧೧೦೭ರಲ್ಲಿ ಇಲ್ಲಿದ್ದ ಸರ್ಪೇಶ್ವರ ದೇವಾಲಯದ ಪೂಜಾ ಕೈಂಕರ್ಯಗಳಿಗಾಗಿ ನೀಲಕಂಠ ಪಂಡಿತರಿಗೆ ಈ ಗ್ರಾಮವನ್ನು ಪರಮೇಶ್ವರ ದತ್ತಿಯಾಗಿ ಕೊಡಮಾಡಿದ್ದನ್ನು ಇಲ್ಲಿನ ಒಂದು ಶಾಸನ ತಿಳಿಸುತ್ತದೆ.

ಉಚ್ಚಂಗಿ ದುರ್ಗದಿಂದ ಆಳುತ್ತಿದ್ದ ಉಚ್ಚಂಗಿ ಪಾಂಡ್ಯರ ದೊರೆ ತ್ರಿಭುವನ ಮಲ್ಲ ಪಾಂಡ್ಯ ತನ್ನ ಒಂದು ನೆಲಬೀಡಾಗಿ ಈ ಬೇತೂರನ್ನು ಮಾಡಿಕೊಂಡು ರಾಜ್ಯವಾಳುತ್ತಿದ್ದುದಾಗಿ ದಾಖಲೆಗಳಿಂದ ತಿಳಿದು ಬರುತ್ತದೆ ಹಾಗಾಗಿ ಇದನ್ನು ಪಾಂಡ್ಯರ ಬೇತೂರು ಎಂದು ಇತಿಹಾಸಕಾರರು ಗುರುತಿಸಿದ್ದಾರೆ. ದಾವಣಗೆರೆ ತಾಲೂಕಿನಲ್ಲಿ ಹೆಚ್ಚಿನ ಶಿಲಾಶಾಸನ ಇರುವ ಗ್ರಾಮವೇ ಇದಾಗಿದ್ದು, ಇಲ್ಲಿನ ೭ ಶಾಸನಗಳನ್ನು ಚಿತ್ರದುರ್ಗ ಶಾಸನ ಸಂಪುಟದಲ್ಲಿ ಪ್ರಕಟಿಸಿದ್ದು, ಇದಲ್ಲದೆ ಈಚೆಗೆ ೨ ಶಾಸನ ಪ್ರಕಟವಾಗಿದೆ. ಈ ಗ್ರಾಮದಲ್ಲಿ ೧೦ಕ್ಕೂ ಹೆಚ್ಚು ವೀರಗಲ್ಲು ಶಾಸನಗಳಿದ್ದು ಅವುಗಳಲ್ಲಿ ೩ ಮಾತ್ರ ಪ್ರಕಟವಾಗಿವೆ. ಬಹಳಷ್ಟು ವೀರಗಲ್ಲು ಶಾಸನಗಳು ಸವೆದು, ಓದಲಾಗದೆ ತೃಟಿತವಾಗಿವೆ.

ಪ್ರಸ್ತುತ ಈ ಗ್ರಾಮದ ಉತ್ತರದಿಕ್ಕಿನಲ್ಲಿರುವ ಕಲ್ಲೇಶ್ವರ ದೇವಸ್ಥಾನ ಕಲ್ಯಾಣ ಚಾಲುಕ್ಯರ ಕಾಲದ ನಿರ್ಮಾಣವಾಗಿದ್ದು ನಂತರ ಉಚ್ಚಂಗಿ ಪಾಂಡ್ಯರ ಕಾಲದಲ್ಲಿ ವಿಸ್ತರಿಸಿರುವುದು ಕಂಡುಬರುತ್ತದೆ. ಈ ದೇವಾಲಯ ಗರ್ಭಗುಡಿ, ಅಂತರಾಳ, ನವರಂಗ, ಮುಂದೆ ೧೬ ಕಂಬಗಳಿಂದ ಕೂಡಿದ ತೆರೆದ ಸಭಾ ಮಂಟಪವನ್ನೊಳಗೊಂಡಿದೆ. ದೇವಾಲಯ ಗರ್ಭಗುಡಿಯ ಮೇಲಿರುವ ಗೋಪುರ ಶಿಥಿಲವಾಗಿದ್ದು ಕದಂಬನಾಗರ ಶೈಲಿಯಲ್ಲಿದೆ. ಗರ್ಭಗುಡಿಯ ಒಳಭಾಗ ೧೦ ಅಡಿ ಚೌಕಾಕಾರವಿದ್ದು ಮಧ್ಯದಲ್ಲಿ ಈಶ್ವರ ಲಿಂಗವಿದೆ. ಈ ಲಿಂಗದ ಎದುರು ಅಂತರಾಳದಲ್ಲಿ ಕುಸರಿ ಕೆತ್ತನೆಯಿಂದ ಕೂಡಿದ ಸುಂದರ ಚಿಕ್ಕ ನಂದಿ ವಿಗ್ರಹವಿದೆ. ಗರ್ಭಗುಡಿಯ ಬಾಗಿಲ ಎಡಕ್ಕೆ ೪ ಅಡಿ ಎತ್ತರದ ಸುಂದರ ಸರಸ್ವತಿ ವಿಗ್ರಹವಿದೆ. ಸ್ಥಳೀಯರು ಗಾಯತ್ರಿ ವಿಗ್ರಹ ಎಂದು ಕರೆಯುತ್ತಾರೆ. ಈ ಸರಸ್ವತಿ ವಿಗ್ರಹದ ಮುಂದಿನ ಬಲಕೈಯಲ್ಲಿ ಅಕ್ಷರಮಾಲೆ, ಹಿಂಬದಿಯ ಬಲಕೈಯಲ್ಲಿ ಶೂಲ, ಎಡ ಮುಂದಿನ ಕೈಯಲ್ಲಿ ತಾಳೆಪತ್ರ, ಎಡ ಹಿಂಬದಿ ಕೈಯಲ್ಲಿ ಪಾಶ ಹೊಂದಿದ್ದು, ಮಕರ ಪ್ರಭಾವಳಿ ಹೊಂದಿದೆ. ಕಲ್ಯಾಣ ಚಾಲುಕ್ಯ ಶೈಲಿಯ ಈ ವಿಗ್ರಹ ಜಟಾಮುಕುಟ, ಶಿಲಾಭರಣ, ಕರ್ಣ ಕುಂಡಲ, ಕಂಠಾಭರಣ, ಭುಜಸರ, ಕಟಿಬಂಧ, ಕೈಕಡಗ, ಬಳೆ, ಬೆರಳುಂಗುರ ಕೂಡಿದ್ದು ಸುಂದರ ಕೆತ್ತನೆಯಾಗಿದೆ.

ದೇವಾಲಯದ ನವರಂಗವೂ ಸುಂದರ ಕೆತ್ತನೆಯಿಂದ ಕೂಡಿದೆ. ಈ ದ್ವಾರ ಬಂಧದಲ್ಲಿ ಗಜಲಕ್ಷ್ಮೀ ಉಬ್ಬುಶಿಲ್ಪ, ಲತಾ ಸುರಳಿ, ಶಾಖ ಸ್ತಂಭ, ಪದ್ಮಶಾಖಗಳಿಂದ ಅಲಂಕೃತವಾಗಿದೆ ನವರಂಗದ ಬಾಗಿಲ ಎಡಗಡೆ ಸುಂದರ ನವಿಲಿನ ಮೇಲೆ ಆಸೀನನಾದ ಸುಬ್ರಹ್ಮಣ್ಯ ವಿಗ್ರಹವಿದ್ದರೆ, ಬಲಗಡೆ ಕೆಳಗಿನ ಭಾಗ ಸರ್ಪರೂಪದಲ್ಲಿಯೂ, ದೇಹದ ಮೇಲ್ಭಾಗ ಮನುಷ್ಯ ರೂಪದಲ್ಲಿಯೂ, ಜಟಾಮುಕುಟ, ಶಿಲಾಭಾರಣ, ಕಂಠಾಭರಣ, ಭುಜಸರ ಇತ್ಯಾದಿಗಳಿಂದ ಅಲಂಕೃತವಾದ ನಾಗಕನ್ನಿಕೆಯ ವಿಗ್ರಹವಿದೆ. ಸುಮಾರು ೨½ ಅಡಿ ಎತ್ತರವಿರುವ ಈ ವಿಗ್ರಹದ ಕೈಯಲ್ಲಿ ಖಡ್ಗ, ಗುರಾಣಿ ಹೊಂದಿದ್ದು ತಲೆ ಮೇಲೆ ಏಳು ಹೆಡೆ ಸರ್ಪವಿದೆ.

ನವರಂಗದ ಎಡಗೋಡೆಗೆ ಹೊಂದಿ ಕೊಂಡಂತೆ ಸಪ್ತ ಮಾತೃಕೆಯರ ವಿಗ್ರಹಗಳಿವೆ ೮ ಅಡಿ ಉದ್ದದ ಒಂದೇ ಶಿಲಾ ಪಟ್ಟಿಕೆಯಲ್ಲಿ ೧½ ಅಡಿ ಎತ್ತರದ ಕುಳಿತ ಭಂಗಿಯಲ್ಲಿರುವ ಬ್ರಾಹ್ಮೀ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿಯರ ವಿಗ್ರಹದ ಜೊತೆಗೆ ಕುಳಿತ ಭಂಗಿಯ ವೀರಭದ್ರನ ವಿಗ್ರಹವೂ ಇದೆ. ಪಟ್ಟಿಕೆಯ ಕೆಳಗೆ ಅವರವರ

* ಪತ್ರಕರ್ತ (ನಿವೃತ್ತ), ಸಂತೇಬೆನ್ನೂರು-೫೭೭೫೫೨. ದಾವಣಗೆರೆ ಜಿಲ್ಲೆ-೫೭೭೫೫೨. ಮೊ. ೯೯೦೦೨೪೩೭೮೦

ವಾಹನಗಳನ್ನು ಉಬ್ಬು ಶಿಲ್ಪದಲ್ಲಿ ಬಿಡಿಸಲಾಗಿದೆ. ಸಾಮಾನ್ಯವಾಗಿ ಸಪ್ತ ಮಾತೃಕೆಯರ ಪಟ್ಟಿಯಲ್ಲಿ ಭೈರವ, ಗಣಪತಿ ಇರುತ್ತವೆ ಆದರೆ ಇಲ್ಲಿ ಭೈರವನ ಬದಲಿ ವೀರಭದ್ರನ ಕುಳಿತ ಭಂಗಿ ವಿಗ್ರಹವಿದ್ದು ಗಣಪತಿ ಪ್ರತ್ಯೇಕವಾಗಿರಬೇಕು ಅದನ್ನು ಈಗ ಮೂಲ ಈಶ್ವರಲಿಂಗದ ಕೆಳಗೆ ಇಟ್ಟಿರುತ್ತಾರೆ.

ನವರಂಗದ ಬಹು ಮುಖ್ಯ ರಚನೆ ಎಂದರೆ ನಾಲ್ಕು ನಯಗೊಳಿಸಿದ ಕಂಬದ ಮೇಲೆ ಸುಮಾರು ೭ ಅಡಿ ಚೌಕಾಕಾರದ ಭುವನೇಶ್ವರಿಯ ಛತ್ತಿನಲ್ಲಿ ಬಿಡಿಸಿರುವ ಅಷ್ಟ ದಿಕ್ಪಾಲಕರ ಉಬ್ಬು ಶಿಲ್ಪಗಳು ಸಾಮಾನ್ಯವಾಗಿ ಅಷ್ಟ ದಿಕ್ಪಾಲಕರ ವಿಗ್ರಹಗಳನ್ನು ಕೇವಲ ವಾಹನ ಸಮೇತರಾಗಿ ಕೆತ್ತಲಾಗಿರುತ್ತದೆ. ಆದರೆ ಇಲ್ಲಿ ಅಷ್ಟ ದಿಕ್ಪಾಲಕರನ್ನು ವಾಹನದ ಜೊತೆಗೆ ಅವರವರ ಪತ್ನಿಯರ ಸಮೇತ ಕುಳಿತಿರುವಂತೆ ಬಿಡಿಸಿರುವುದರ ಜೊತೆಗೆ ಅವರ ಪರಿವಾರ ಸಮೇತ ಚಿತ್ರಿಸಲಾಗಿದೆ. ಕೆಳಗಿನಂತೆ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರ ಉಬ್ಬು ಶಿಲ್ಪ ಬಿಡಿಸಲಾಗಿದೆ.

ಇಲ್ಲಿನ ದಿಕ್ಪಾಲಕರ ಭೀತ್ರಿ ಚಿತ್ರಗಳನ್ನು ನೋಡಿದಾಗ ತುಮಕೂರು ಜಿಲ್ಲೆಯ ಆರುಳುಗುಪ್ಪೆಯ ದಿಕ್ಪಾಲಕರ ಭಿತ್ರಿ ಚಿತ್ರಗಳು ನೆನಪಿಗೆ ಬರುತ್ತವೆ. ಅಷ್ಟಾದಿಕ್ಪಾಲಕರ ಪಟ್ಟಿಕೆಯ ನಡುವೆ ಸುಂದರ ಗಜಾಸುರ ಮರ್ಧನ, ಶಿನತಾಂಡವ (ನಟರಾಜನ) ನೃತ್ಯ ಭಂಗಿಯ ಶಿಲ್ಪ ಬಿಡಿಸಲಾಗಿದೆ. ೧೦ ಕೈನ ಈ ನಟರಾಜ ಅಪಸ್ಮಾರ ಪುರುಷನ ಮೇಲೆ ನೃತ್ಯ ಮಾಡುವಂತೆ ತೋರಿಸಲಾಗಿದ್ದು, ಸರ್ವಾಲಂಕೃತವಾಗಿದ್ದು, ಕೈಗಳಲ್ಲಿ ವಿವಿಧ ಆಯುಧವನ್ನು ಹಿಡಿದಿರುವಂತಲ್ಲದೆ ಅವನ ಸುತ್ತ ನಂದಿ, ಭೃಂಗಿ, ನೃತ್ಯಗಾರರ ಮುಂತಾದ ಶಿವಗಣಗಳನ್ನು ಸುಂದರವಾಗಿ ಬಿಡಿಸಲಾಗಿದೆ. ಇದು ಕಲಾ ಸಂಪತ್ತಿನ ಅಮೋಘ ರಚನೆಯಾಗಿದ್ದು ವೈಶಿಷ್ಟಪೂರ್ಣವಾಗಿದೆ. ಇಲ್ಲಿನ ದಿಕ್ಪಾಲಕರ ಭಿತ್ತಿಗಳಲ್ಲಿ ಕೆಲವು ವಿಗ್ರಹ ಭಂಜಕರಿಂದ ಹಾಳಾಗಿದ್ದು ಉಳಿದವು ಸುಂದರವಾಗಿವೆ.

ನವರಂಗಕ್ಕೆ ಹೊಂದಿಕೊಂಡಂತೆ ೨೦ ಕಂಬಗಳಿಂದ ಕೂಡಿದ ೧೬ ಅಂಕಣಗಳ ಸಭಾ ಮಂಟಪವಿದೆ. ಇದನ್ನು ನಂತರ ನಿರ್ಮಿಸಿದಾಗಿ ಕಂಡುಬರುತ್ತದೆ. ಸಭಾಮಂಟಪದ ಪಶ್ಚಿಮ ದಿಕ್ಕಿಗೆ ಸಾಲಾಗಿ ೧೦ ವೀರಗಲ್ಲುಗಳನ್ನು ನಿಲ್ಲಿಸಲಾಗಿದೆ. ಸಭಾ ಮಂಟಪದ ಒಳಗೆ ಎಡಗಡೆ ಭಿನ್ನವಾದ ಗಣಪತಿ ವಿಗ್ರಹವಿದೆ. ದೇವಾಲಯದ ಮುಂಭಾಗ ವಿಗ್ರಹವಿದ್ದು ಇದು ಸಹ ವಿಶಿಷ್ಟವಾಗಿದೆ. ಮಹಿಷಮರ್ದಿನಿ ೮ ಕೈಗಳನ್ನು ಹೊಂದಿದ್ದು ಕೆಳಗಡೆ ಮಹಿಷಾಸುರನ ಮನುಷ್ಯಕಾರದ ದೇಹ ಕೋಣದ ದೇಹದಿಂದ ಹೊರಗೆ ಬರುವಂತೆ ಕೆತ್ತಲಾಗಿದೆ. ಪಕ್ಕದಲ್ಲಿ ಕಡಿದ ಕೋಣನ ತಲೆ ಇದೆ ಚಾಮುಂಡಿ ವಿಗ್ರಹದ ಕೈಯಲ್ಲಿ ತ್ರಿಶೂಲ, ಪರಶು, ಕತ್ತಿ ಮುಂತಾದ ಆಯುಧ, ರುಂಡಮಾಲೆ ಇತ್ಯಾದಿಗಳಿಂದ ಅಲಂಕೃತವಾಗಿದೆ. ಈ ಶಿಲ್ಪದ ಪಕ್ಕದಲ್ಲಿ ಗಜಲಕ್ಷ್ಮೀ ಇರುವ ಕಲ್ಲೊಂದಿದ್ದು ಅದನ್ನು ಬಾಣಂತಿ ಕಲ್ಲೆಂದು ಸ್ಥಳೀಯರು ಕರೆಯುತ್ತಾರೆ. ಬಸರಿ ಹೆಂಗಸರಿಗೆ ಹೆರಿಗೆ ಕಷ್ಟವಾದರೆ ನಿಂತಿರುವ ಕಲ್ಲನ್ನು ಬೀಳಿಸಿ ಮತ್ತು ನಿಲ್ಲಿಸಿದರೆ ಅವರ ಹೆರಿಗೆ ಸುಸೂತ್ರವಾಗಿ ಆಗುತ್ತದೆಂಬ ನಂಬಿಕೆ ಅಲ್ಲಿಯ ಜನರಲ್ಲಿದೆ.

ಈ ಬೇತೂರು ಹಿಂದೆ ಜೈನರ ಪ್ರಭಾವಕ್ಕೆ ಒಳಗಾಗಿತ್ತೆಂಬುದರ ಕುರುಹಾಗಿ ಅಲ್ಲಿನ ಸಮಗದ್ದುಗೆ ಸಂಗಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾಲದಲ್ಲಿ ಕುಳಿತ ಬಂಗಿಯ ೩ ಅಡಿಎತ್ತರದ ಮೂರು ತೀರ್ಥಂಕರರ ವಿಗ್ರಹಗಳು ಸಿಕ್ಕಿವೆ. ಜೊತೆಗೆ ಕುಷ್ಮಾಂಡಿನಿ ಪದ್ಮಾವತಿಯರ ಭಿನ್ನ ವಿಗ್ರಹಗಳು ಸಿಕ್ಕಿದ್ದು ಅವುಗಳನ್ನು ದೇವಾಲಯದ ಪಕ್ಕದ ಕಟ್ಟೆಯ ಮೇಲಿಡಲಾಗಿದೆ. ಆ ಗ್ರಾಮದಲ್ಲಿ ದೊರೆತ ಒಂದು ಜೈನ ಶಾಸನ ಚಾಳುಕ್ಯ ವಿಕ್ರಮ ಶಕ ೩೩ನೇ ಪ್ರಜಾಪತಿ ಸಂ॥ದಲ್ಲಿ ಕೂಚರಸ ಅಲ್ಲಿ ಲಕ್ಷ್ಮೀ ಜಿನಾಲಯ ಪ್ರತಿಷ್ಠಾಪಿಸಿ ಸಮೀಪದ ಹುಣಸೇಹಳ್ಳಿ ಗ್ರಾಮವನ್ನು ಶ್ರೀ ಪದ್ಮನಾಭ ಭಟ್ಟಾರಕರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಅಲ್ಲದೆ ಅಲ್ಲಿನ ಪಾರ್ಶ್ವನಾಥ ಬಸದಿಗೆ ಕೆಲವು ದಾನ ನೀಡಿದ್ದನ್ನು ಸೂಚಿಸುತ್ತದೆ. ಆದರೆ ಈಗ ಆ ಗ್ರಾಮದಲ್ಲಿ ಪಾರ್ಶ್ವನಾಥ ಬಸದಿ ಇಲ್ಲ. ಈಗ ಕೇವಲ ೧-೨ ಜೈನ ಕುಟುಂಬಗಳು ಮಾತ್ರ ಈ ಗ್ರಾಮದಲ್ಲಿ ವಾಸವಾಗಿವೆ.

ಈ ಗ್ರಾಮದಲ್ಲಿ ಕಲ್ಲೇಶ್ವರ ದೇವಸ್ಥಾನವಲ್ಲದೆ ಅನೇಕ ಪ್ರಾಚೀನ ದೇವಾಲಯಗಳಿದ್ದು ಅವುಗಳೆಲ್ಲಾ ಈಗ ನವೀಕರಣಗೊಂಡಿವೆ. ಅವುಗಳಲ್ಲಿ ಪ್ರಮುಖವಾದದ್ದು ಸುಗ್ರೀವ ದೇವಾಲಯ ರಾಜ್ಯದಲ್ಲಿರುವ ಕೆಲವೇ ಸುಗ್ರೀವ ದೇವಾಲಯಗಳಲ್ಲಿ ಇಲ್ಲಿರುವುದು ಒಂದು, ಈಗ ಹೊಸ ಮೂರ್ತಿ ಪ್ರತಿಷ್ಠಾಪಿಸಿದ್ದು ಮೂಲ ವಿಗ್ರಹ ದೇವಾಲಯದ ಹಿಂಭಾಗದಲ್ಲಿಡಲಾಗಿದೆ.

ಗ್ರಾಮದ ಕಾಳಿಕಾಂಬ ದೇವಾಲಯದ ಮುಂದೆ ಒಂದು ಮಹಾಸತಿಕಲ್ಲು ಇದೆ ಅಲ್ಲಿನ ಮಾರಮ್ಮನ ದೇವಾಲಯದ ಮುಂದೆ ಒಂದು ಚಕ್ರ ಬಿಡಿಸಿರುವ ಕಲ್ಲೊಂದಿದ್ದು ಅದನ್ನು ಧರ್ಮಚಕ್ರ ಎಂದು ಕರೆಯುತ್ತಾರೆ.

ಕಲ್ಲೇಶ್ವರ ದೇವಸ್ಥಾನದ ದಕ್ಷಿಣಕ್ಕೆ ನೆಟ್ಟಿರುವ ೬೩ಸಾಲುಗಳ ದ್ವಿಮುಖ ಶಾಸನದಂತೆ ಚಾಲುಕ್ಯ ದೊರೆ ವಿಜಯಾದಿತ್ಯ ದೇವರು ನೊಳಂಬವಾಡಿ ೩೨೦೦೦ ಆಳುತ್ತಿದ್ದಾಗ ಅವನ ಮಹಾ ಸಾಮಂತ ಉದಿಯಾದಿತ್ಯ ೯೮೮ನೇ ಪರಾಭನ















ಸಂ॥ದ (೧೦೬೬) ಭಾದ್ರಪದ ಅಮಾವಾಸ್ಯೆ ಮಂಗಳವಾರ ಸೂರ್ಯಗ್ರಹಣ ಕಾಲದಲ್ಲಿ ಶ್ರೀ ಮೂಲಸ್ಥಾನ ಮಹಾದೇವನ ರಂಗಭೋಗಕ್ಕೆ ಕೆಲವು ದಾನ ಕೊಟ್ಟಿರುವುದನ್ನು ತಿಳಿಸುತ್ತದೆ. ಬಹುಶಃ ಈ ಮಹಾದೇವ ದೇವಸ್ಥಾನವೇ ಈಗಿನ ಕಲ್ಲೇಶ್ವರ ದೇವಾಲಯವಾಗಿರಬೇಕು.

ಇದೇ ಗ್ರಾಮದ ಸರ್ಪದ ದಿಬ್ಬದಲ್ಲಿ ಸಿಕ್ಕ ೪೩ ಸಾಲುಗಳ ಶಿಲಾಶಾಸನ ವಿಕ್ರಮ ಶಕ ೩೩ನೇ ಸರ್ವಧಾರಿ ಸಂ॥ದ ಪಂಚಮಿ ಬುಧವಾರ ಉತ್ತರಾಯಣ ಸಂಕ್ರಮಣ (೧೪-೧-೧೧೦೭) ಸರ್ಪೇಶ್ವರ ದೇವರ ದೀಪ ನೈವೇದ್ಯಕ್ಕೆ ನೀಲಕಂಠ ಭಟ್ಟರಿಗೆ ಪರಮೇಶ್ವರ ದತ್ತಿಯಾಗಿ ಆ ಗ್ರಾಮ ಕೊಟ್ಟಿದ್ದನ್ನು ತಿಳಿಸುತ್ತದೆ.

ಅದೇ ಗ್ರಾಮದಲ್ಲಿ ರಾಮೇಶ್ವರ ದೇವಾಲಯ ಇತ್ತೆಂದು ರೈಸರು ಪ್ರಕಟಿಸಿದ ಒಂದು ಶಾಸನದಲ್ಲಿ ದಾಖಲಿಸಲಾಗಿದೆ. ಆದರೆ ಅಲ್ಲಿಈಗ ರಾಮೇಶ್ವರ ದೇವಾಲಯವಿಲ್ಲ. ಆದರೆ ಆ ಶಾಸನದಿಂದ ಆ ಗ್ರಾಮ ಒಂದು ಅಗ್ರಹಾರವಾಗಿತ್ತೆಂಬ ವಿಚಾರ ಮಾತ್ರ ತಿಳಿದುಬರುತ್ತದೆ. ಆ ಗ್ರಾಮದ ಇನ್ನೊಂದು ಶಾಸನ ೧೦೩೩ನೇ ಖರ ಸಂ॥ರ ಮಾಘ ಬಹಳ

ಮಂಗಳವಾರ ಸೂರ್ಯಗ್ರಹಣ ಕಾಲದಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲದೇವರ ಮಹಾಮಂಡಳೇಶ್ವರ ವಿಜಯ ಪಾಂಡ್ಯ ದೇವರ ಸಾಮಂತ ಹೆಮ್ಮಡಿ ಉದಯಾದಿತ್ಯ ಆತನ ಪ್ರಧಾನ ದಂಡನಾಯಕ ಬೊಮ್ಮಯ್ಯ ಬೆಲ್ಲೂರು ದೇಮೇಶ್ವರ, ಸಂಗಮೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ಹೀಗೆ ಹಲವಾರು ದೇವಾಲಯಗಳು ಉಲ್ಲೇಖ ಅಲ್ಲಿನ ಹಲವಾರು ಶಾಸನಗಳಲ್ಲಿದ್ದುರೂ ಆ ದೇವಾಲಯಗಳಾವೂ ಈಗ ಕಂಡು ಬರುವುದಿಲ್ಲ. ಆದರೆ ಆ ಗ್ರಾಮದಲ್ಲಿ ದೊರತ ಎಲ್ಲಾ ಶಿಲಾಶಾಸನ, ವೀರಗಲ್ಲುಗಳನ್ನು ಇಲ್ಲಿನ ಕಲ್ಲೇಶ್ವರ ದೇವಾಲಯದ ಬಳಿ ಈಗ ಒಂದಡೆ ನಿಲ್ಲಿಸಲಾಗಿದೆ.

ಆಕರ ಗ್ರಂಥಗಳು

೧. ಎಪಿಗ್ರಾಫಿಯಾ ಕರ್ನಾಟಕ ಬಿ.ಎಲ್. ರೈಸ್ (೧೯೦೩), ಸಂಪುಟ ೧೧, ಚಿತ್ರದುರ್ಗ.

೨. ಇತಿಹಾಸ ದರ್ಶನ, ನಂ. ೨೨, ೨೫, ೨೯, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೩. ಸಂಶೋಧನಾ ಸಿರಿ (ಎಂ.ವಿ. ಶ್ರೀನಿವಾಸ್ ಅಭಿನಂದನ ಗ್ರಂಥ), ೨೦೧೬, ಮನೋಜ್ಞಾ ಪ್ರಕಾಶನ, ಬೆಂಗಳೂರು.

೪. ದಾವಣಗೆರೆ ಜಿಲ್ಲೆ ಇತಿಹಾಸದ ಕೆಲವು ಹೆಜ್ಜೆಗಳು (೨೦೧೦), ಸುಮತೀಂದ್ರ ನಾಡಿಗ್, ವಿಜಯ ಯುವಕ ಸಂಘ, ಸಂತೇಬೆನ್ನೂರು.

೫. ದಾವಣಗೆರೆ ಇದು ನಮ್ಮ ಜಿಲ್ಲೆ (೨೦೦೧), ಟಿ ಗಿರಿಜ, ನಿಹಾರಿಕಾ ಪ್ರಕಾಶನ, ದಾವಣಗೆರೆ.

೬ ಹರತಿಸಿರಿ (೧೯೮೭), ವಾಲ್ಮೀಕಿ ಸಾಹಿತ್ಯ ಸಂಪದ, ಚಿತ್ರದುರ್ಗ.

ಬೇಗೂರಿನ ಪ್ರಾಚ್ಯಾವಶೇಷಗಳು

ಬಿ.ಟಿ. ಚಾರುಲತಾ* ಕೆ. ರೇವಣಸಿದ್ದಯ್ಯ**

ಬೇಗೂರು ಗ್ರಾಮವು ತಾಲೂಕು ಕೇಂದ್ರ ಕುಣಿಗಲ್‌ನಿಂದ ೫ ಕಿ.ಮೀ. ದೂರದಲ್ಲಿದ್ದು, ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ. ಕುಣಿಗಲ್ ಪ್ರದೇಶವನ್ನು ಗಂಗರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ನಾಡಪ್ರಭು ಕೆಂಪೇಗೌಡರ ವಂಶಸ್ಥರು ಹಾಗೂ ಮೈಸೂರು ಒಡೆಯರು ಆಳ್ವಿಕೆ ನಡೆಸಿದ್ದಾರೆ. ಇವರ ಆಡಳಿತದ ಕುರುಹುಗಳಾಗಿ ದೇವಾಲಯಗಳು, ಮೂರ್ತಿಶಿಲ್ಪಗಳು, ಕೋಟೆ-ಕೊತ್ತಲಗಳು ಹಾಗೂ ಕೆರೆ-ಕಟ್ಟೆಗಳು ನಿರ್ಮಾಣಗೊಂಡಿವೆ.

ಹೊಯ್ಸಳ ಅರಸ ವೀರರಾಮನಾಥನ ಕ್ರಿ.ಶ. ೧೨೯೨ರ ಶಾಸನವು ಬೇಗೂರು ಗ್ರಾಮದ ಬಗ್ಗೆ ಸಿಗುವಂತಹ ಪ್ರಥಮ ಚಾರಿತ್ರಿಕ ಅಂಶವಾಗಿದೆ. ವೀರರಾಮನಾಥನು ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಕುಂದಣಿ ನಾಡಿನಲ್ಲಿ ಆಡಳಿತ ನಡೆಸುತ್ತಿದ್ದನು. ಹೊಯ್ಸಳ ಅರಸ ಸೋಮೇಶ್ವರನು (ಕ್ರಿ.ಶ. ೧೨೩೫-೫೩) ತನ್ನ ಮಕ್ಕಳಿಬ್ಬರಿಗೂ ರಾಜ್ಯವನ್ನು ಹಂಚಿಕೊಡುವಾಗ ತುಮಕೂರು ಪ್ರಾಂತ್ಯಕ್ಕೆ ಸೇರಿಕೊಂಡಂತೆ ಊರ್ಡಿಗೆರೆಯಿಂದ ಹೆಬ್ಬೂರಿನವರೆಗಿನ ಪ್ರದೇಶಗಳನ್ನು ೩ನೇ ನರಸಿಂಹನಿಗೂ (ಕ್ರಿ.ಶ. ೧೨೫೩-೯೨), ಕುಣಿಗಲ್ ಮತ್ತು ತಮಿಳುನಾಡಿನ ಭಾಗಗಳನ್ನು ವೀರರಾಮನಾಥನಿಗೂ (ಕ್ರಿ.ಶ .೧೨೫೩-೯೫) ಹಂಚಿಕೊಟ್ಟಿದ್ದನು.[೧] ಈ ಮೇಲಿನ ಅಂಶವನ್ನು ಗಮನಿಸಿದಾಗ ಹೊಯ್ಸಳರ ಆಳ್ವಿಕೆಯಲ್ಲಿ ಕುಣಿಗಲ್ ನಾಡಿನ ಪಾತ್ರವಿತ್ತೆಂದು ತಿಳಿದುಬರುತ್ತದೆ. ಬೇಗೂರಿನ ಚನ್ನಿಗರಾಯ ದೇವಾಲಯದಲ್ಲಿ ೪ ತಮಿಳು ಲಿಪಿಯ ಶಾಸನಗಳಿದ್ದು ವೀರರಾಮನಾಥನನ್ನು ಉಲ್ಲೇಖಿಸಿವೆ. ವೀರರಾಮನಾಥನ ಆಡಳಿತ ಅವಧಿಯಲ್ಲಿ ಕುಣಿಗಲ್ ನಾಡು ತಮಿಳು ಭಾಷೆಯ ಪ್ರಭಾವಕ್ಕೆ ಒಳಗಾಗಿದ್ದು, ಆತನ ಅಧಿಕಾರಿಗಳು ತಮಿಳು ಲಿಪಿಯ ಶಾಸನಗಳನ್ನು ಹಾಕಿಸಿರುವ ಉದಾಹರಣೆಗಳು ಅನೇಕ ಕಡೆ ಕಂಡುಬರುತ್ತವೆ.

ಬೇಗೂರಿನ ಸ್ಥಳನಾಮದ ವಿವೇಚನೆ: ಗಂಗರ ಆಡಳಿತ ಅವಧಿಯಲ್ಲಿ ಅಸ್ತಿತ್ವದಲ್ಲಿದಂತಹ ಕುಣಿಗಲ್ ನಾಡು ಎಂಬ ಆಡಳಿತ ವಿಭಾಗವು ಹೊಯ್ಸಳರ ಕಾಲಕ್ಕೂ ಮುಂದುವರೆದಿದೆ. ಬೇಗೂರು ಗ್ರಾಮದ ಶಾಸನಗಳಲ್ಲಿ ಕುಣಿಗಲ್ ನಾಡಿನ ವೆಪ್ಪೂರು ಚತುರ್ವೇದಿಮಂಗಲ ಎಂದು ಉಲ್ಲೇಖಿಸಲಾಗಿದೆ. ಈ ಶಾಸನನದ ಉಲ್ಲೇಖದಿಂದ ಬೇಗೂರಿನ ಪ್ರಾಚೀನ ಹೆಸರು ವೆಪ್ಪೂರು ಎಂಬುದನ್ನು ಸ್ಪಷ್ಟಪಡಿಸುತ್ತದೆ. ವೆಂಪೂರು=ಬೇಗೂರು, ವೆಪ್ಪೂರು ಎಂಬುದು ತಮಿಳು ಪದ, ವೇಂಪು+ಊರು=ವೆಂಪೂರು. ವೇಪ ಅಂದರೆ ಬೇವು, ಬೇವಿನ ಸಸ್ಯದ ಹಿನ್ನೆಲೆಯಲ್ಲಿ ಬೇಗೂರು ಎಂಬ ಸ್ಥಳನಾಮವು ಬಂದಿದೆ ಎಂಬುದಾಗಿ ಇತಿಹಾಸ ತಜ್ಞರಾದ ಪಿ.ವಿ. ಕೃಷ್ಣಮೂರ್ತಿ ಅವರು ಮಾಹಿತಿ ನೀಡಿದರು.[೨] ವೆಪ್ಪೂರು ಜನಸಾಮಾನ್ಯರ ಬಳಕೆಯಲ್ಲಿ ವೆಪ್ಪೂರು=ಬೇಗೂರು ಎಂದಾಗಿದೆ.

ಚನ್ನಿಗರಾಯ ದೇವಾಲಯದ ನಿರ್ಮಾಣ: ಬೇಗೂರು ಗ್ರಾಮದ ಚನ್ನಿಗರಾಯ ದೇವಾಲಯದ ಮುಖಮಂಟಪದಲ್ಲಿ ತಮಿಳು ಲಿಪಿಯ ೪ ಶಾಸನಗಳಿದ್ದು, ಹೊಯ್ಸಳ ಅರಸ ವೀರರಾಮನಾಥನು ಕ್ರಿ.ಶ. ೧೨೯೨ರಲ್ಲಿ ಕುಣಿಗಲ್ ನಾಡಿನ ವೆಪ್ಪೂರು ಚತುರ್ವೇದಿಮಂಗಲಕ್ಕೆ ದಾನ ನೀಡಿರುವ ಬಗ್ಗೆ ಉಲ್ಲೇಖಿಸುತ್ತದೆ.[೩]

ಈ ಶಾಸನದ ಸ್ವಲ್ಪಭಾಗವು ತೃಟಿತಗೊಂಡಿದ್ದು ಕ್ರಿ.ಶ. ೧೨೯೨ರಲ್ಲಿ ಹೊಯ್ಸಳ ಅರಸ ವೀರರಾಮನಾಥನ ಆಡಳಿತ ಅವಧಿಯಲ್ಲಿ ಚನ್ನಿಗರಾಯ ದೇವಾಲಯವು ನಿರ್ಮಾಣವಾಗಿರಬಹುದು. ಪೂರ್ವಾಭಿಮುಖವಾಗಿರುವ ಚನ್ನಿಗರಾಯ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆ ಮುಖಮಂಟಪಗಳಿಂದ ಕೂಡಿದೆ. ಚಚ್ಚೌಕವಾದ ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಸುಮಾರು ೪ ಅಡಿ ಎತ್ತರದ ಕೇಶವನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಬೇಲೂರಿನ ಚನ್ನಕೇಶವ, ಕೈದಾಳದ ಚನ್ನಕೇಶವ ಹಾಗೂ ಬೇಗೂರಿನ ಚನ್ನಕೇಶವನ ಶಿಲ್ಪಕ್ಕೂ ಸಾಮ್ಯತೆ ಇರುವುದರಿಂದ ಈ ೩ ಶಿಲ್ಪಗಳನ್ನು ಒಬ್ಬನೇ ಶಿಲ್ಪಿ ಕಂಡರಿಸಿದ್ದಾನೆ ಎಂಬುದು ಸ್ಥಳೀಯ ಪ್ರತೀತಿಯಿದೆ. ಚತುರ್ಭುಜದಾರಿಯಾದ

* ಇತಿಹಾಸ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಚಳ್ಳಕೆರೆ-೫೭೭೫೨೨. ಚಿತ್ರದುರ್ಗ ಜಿಲ್ಲೆ. ಮೊ. ೯೬೮೬೧೮೦೬೨೦

** ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ವಿದ್ಯಾರಣ್ಯ-೫೮೩೨೭೬. ಮೊ. ೮೯೭೧೭೩೪೪೨೦೦



ಬೇಗೂರು ಗ್ರಾಮದಲ್ಲಿರುವ ಚನ್ನಿಗರಾಯ ದೇವಾಲಯ



ಶಿಥಿಲಾವಸ್ಥೆಯಲ್ಲಿರುವ ದಕ್ಷಿಣ ಪಾರ್ಶ್ವದ ಭಿತ್ತಿಯ ಭಾಗ



ಇಟ್ಟಿಗೆಯಿಂದ ನಿರ್ಮಾಣವಾಗಿರುವ ತೊಟ್ಟಿ ಮತ್ತು ತೂಬಿನ ಕಂಬ




ಕೆರೆ ಏರಿಯ ಮೇಲಿರುವ ವೀರಗಲ್ಲುಗಳು



ಮೂಲಗರ್ಭಗೃಹದಲ್ಲಿನ ಚನ್ನಕೇಶವನ ಮೂರ್ತಿಶಿಲ್ಪ



ದೇವಾಲಯದ ಉತ್ತರ ಪಾರ್ಶ್ವದ ಭಿತ್ತಿಯ ಭಾಗ



ನೀರನ್ನು ಹೊರಹಾಕುವ ಕೆರೆಯ ತೂಬಿನ ರಚನೆ

ಚನ್ನಕೇಶವನು ಶಂಖ, ಚಕ್ರ, ಗದಾ ಹಾಗೂ ಅಭಯ ಹಸ್ತದಿಂದ ಕೂಡಿದ್ದು, ಪಾದದ ಎಡ ಮತ್ತು ಬಲಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯ ಶಿಲ್ಪಗಳಿವೆ. ಅಂತರಾಳದ ಬಾಗಿಲುವಾಡವು ಸಾಧಾರಣವಾಗಿದ್ದು ಎಡ ಮತ್ತು ಬಲಭಾಗದಲ್ಲಿ ಜಯ-ವಿಜಯರೆಂಬ ದ್ವಾರಪಾಲಕರ

ಶಿಲ್ಪಗಳಿವೆ. ನವರಂಗವು ನಾಲ್ಕು ಕಂಬಗಳಿಂದ ಕೂಡಿದ್ದು, ಸಿಲಿಂಡರಿನ ಆಕೃತಿಯಲ್ಲಿವೆ. ಮೇಲ್ಛಾವಣಿಯಲ್ಲಿ ಭುವನೇಶ್ವರಿಯ ಕೆತ್ತನೆ ಇದೆ. ಮುಖ್ಯಪ್ರವೇಶ ದ್ವಾರವು ಅನೇಕ ಶಾಖೆಗಳಿಂದ ಕೂಡಿದ್ದು, ತೆರೆದ ಮುಖಮಂಟಪವನ್ನು ಹೊಂದಿದೆ. ದೇವಾಲಯದ ಮುಂಭಾಗ ಬಲಿಪೀಠ ಹಾಗೂ ಗರುಡಗಂಬವನ್ನು ಕಾಣಬಹುದಾಗಿದೆ. ಗರುಡಗಂಬವು ಸುಮಾರು ೩೦ ಅಡಿ ಎತ್ತರವಾಗಿದ್ದು ಶಂಖ, ಚಕ್ರ, ತಿರುನಾಳ ಹಾಗೂ ಪದ್ಮದ ಕೆತ್ತನೆಗಳಿವೆ. ದೇವಾಲಯದ ಹೊರಗಿನ ರಚನೆಯು ಅಧಿಷ್ಠಾನ, ಭಿತ್ತಿ ಹಾಗೂ ಕಪೋತದಿಂದ ಕೂಡಿದ್ದು, ಭಿತ್ತಿಯು ಅರ್ಧಗಂಬಗಳು ಹಾಗೂ ದೇವಕೋಷ್ಠಕಗಳಿಂದ ಅಲಂಕೃತಗೊಂಡಿದೆ. ದೇವಾಲಯದ ನಿರ್ಮಾಣದಲ್ಲಿ ಗ್ರಾನೈಟ್ ಶಿಲೆ ಮತ್ತು ಗಾರೆಗಚ್ಚನ್ನು ಬಳಸಲಾಗಿದೆ.[೪]

ಬೇಗೂರು ಕೆರೆ: ಕೆರೆಯ ನಿರ್ಮಾಣದ ಬಗ್ಗೆ ಯಾವುದೇ ದಾಖಲೆಗಳಿಲ್ಲದಿದ್ದರು, ಅದೇ ಗ್ರಾಮದ ಚನ್ನಿಗರಾಯ ದೇವಾಲಯದಲ್ಲಿ ಹೊಯ್ಸಳ ಅರಸ ವೀರರಾಮನಾಥನ ಕ್ರಿ.ಶ. ೧೨೯೩ರ ಶಾಸನವಿದೆ. ಈತನು ಕುಣಿಗಲ್ ನಾಡಿನ ವೆಪ್ಪೂರು ಚತುರ್ವೇದಿಮಂಗಲವಾದ ಇಂದಿನ ಬೇಗೂರು ಗ್ರಾಮಕ್ಕೆ ದಾನ ನೀಡಿರುವ ಬಗ್ಗೆ ಉಲ್ಲೇಖವಿದೆ. ಚನ್ನಿಗರಾಯ ದೇವಾಲಯ ಮತ್ತು ಕೆರೆಯನ್ನು ಈತನೇ ಕಟ್ಟಿಸಿರುವುದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ ಹೊಯ್ಸಳ ಅರಸ ವೀರರಾಮನಾಥನು ಕ್ರಿ.ಶ. ೧೨೮೭ರಲ್ಲಿ ಹೊನ್ನುಡಿಕೆ ಗ್ರಾಮದ ಜನಾರ್ಧನಸ್ವಾಮಿ ದೇವಾಲಯವನ್ನು ಕಟ್ಟಿಸಿರುವುದನ್ನು ಶಾಸನವೊಂದು ಉಲ್ಲೇಖಿಸಿದೆ. ಈ ಶಿಲಾಶಾಸನವು ತಮಿಳು ಲಿಪಿಯಲ್ಲಿದ್ದು ಹೊಯ್ಸಳ ಅರಸ ಶ್ರೀರಾಮನಾಥದೇವರಸರು ರಾಜಧಾನ ಕುಂದಣಿಯ ಬೀಡಿನಲ್ಲಿ ಸುಖಶಾಂತಿಯಿಂದ ರಾಜ್ಯವನ್ನು ಆಳುತ್ತಿರುವಾಗ ಶ್ರೀಮನ್ಮಹಾಪ್ರಧಾನಂ ಮಾಂಡಲೀಕನಾದ ಕಂಪಯಧನಾಯಕರು ಮರುಗಲಿ ನಾಡಿನಲ್ಲಿ ಕೆರೆಯನ್ನು ಕಟ್ಟಿಸಿ ಹೊನ್ನುಡಿಕೆಯ ಚೊಕ್ಕಪೆರುಮಾಳು ದೇವರಿಗೆ ಪ್ರಾರ್ಥನೆಯಾಗಿ ಅಮೃತಪಡಿಗೆ ಕೆರೆಯ ಹಿಂಭಾಗದ ಗದ್ದೆ ಭೂಮಿಯನ್ನು ದಾನ ನೀಡಿರುವುದನ್ನು ಉಲ್ಲೇಖಿಸಿದೆ.[೫] ಹಾಗಾಗಿ ವೀರರಾಮನಾಥನು ಕುಣಿಗಲ್ ನಾಡಿನ ವೆಪ್ಪೂರು ಚತುರ್ವೇದಿ ಮಂಗಲವಾದ ಇಂದಿನ ಬೇಗೂರಿನಲ್ಲಿ ಕ್ರಿ.ಶ. ೧೨೯೩ರಲ್ಲಿ ಚನ್ನಿಗರಾಯ ದೇವಾಲಯ ಮತ್ತು ಕೆರೆಯನ್ನು ಕಟ್ಟಿಸಿದ್ದಾನೆ.

ಬೇಗೂರು ಕೆರೆಯು ಸುಮಾರು ೨೮೩ ಹೆಕ್ಟೇರ್‌ನಷ್ಟು ಕೃಷಿ ಭೂಮಿಗೆ ನೀರುಣಿಸುವ ಸಾಮರ್ಥ್ಯವನ್ನು ಹೊಂದಿದ್ದು, ಕೆರೆಯ ಅಚ್ಚುಕಟ್ಟು ೪೪೪ ಹೆಕ್ಟೇರ್ ವಿಸ್ತೀರ್ಣವಿದೆ.[೬] ಈ ಕೆರೆಯು ಸರಣಿ ಕೆರೆಗಳ ಸಾಲಿಗೆ ಸೇರಿದ್ದು, ಹುತ್ರಿ ಕೆರೆ, ಹಾಲುವಾಗಿಲ ಕೆರೆ, ಕಲ್ಯಾಣಮ್ಮನ ಕೆರೆ ಹಾಗೂ ಯಲಿಯೂರು ಕೆರೆಗಳು ತುಂಬಿ ಬೇಗೂರು ಕೆರೆಯನ್ನು ಪ್ರವೇಶಿಸಿ ಮುಂದೆ ಕುಣಿಗಲ್ ಚಿಕ್ಕಕೆರೆಯನ್ನು ಸೇರಿಕೊಳ್ಳುತ್ತದೆ.

ಬೇಗೂರು ಕೆರೆಯು ಹೊಯ್ಸಳ ಶೈಲಿಯ ರಚನಾ ವಿನ್ಯಾಸದಲ್ಲಿ ನಿರ್ಮಾಣವಾಗಿದ್ದು, ತೂಬಿನ ಅಡಿಪಾಯಕ್ಕೆ ಸುಟ್ಟಿರುವ ಇಟ್ಟಿಗೆಯನ್ನು ಬಳಸಿ, ಆಯತಾಕಾರದಲ್ಲಿ ತೊಟ್ಟಿಯನ್ನು ನಿರ್ಮಿಸಲಾಗಿದೆ.[೭] ತೂಬಿನ ಕಂಬದ ಮೇಲೆ ಗಜಲಕ್ಷ್ಮಿ, ಚನ್ನಕೇಶವನ ಶಿಲ್ಪ, ಗಣಪತಿ, ಅಂಸಪಕ್ಷಿ ಹಾಗೂ ಆಂಜನೇಯನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ.

ಕೆರೆಯ ಏರಿಯನ್ನು ಪೂರ್ವಕ್ಕೆ ಅಭಿಮುಖವಾಗಿ ಕಟ್ಟಲಾಗಿದ್ದು, ಸ್ಥಳೀಯವಾಗಿ ಸಿಗುವಂತಹ ಕಲ್ಲುಗುಂಡುಗಳನ್ನು ಬಳಸಿಕೊಳ್ಳಲಾಗಿದೆ. ಏರಿಯ ಉದ್ದ ೧.೮ ಕಿ.ಮೀ. ಎತ್ತರ ೭ ಮೀ. ಇದೆ. ಏರಿಯನ್ನು ನೀರಿನ ಒತ್ತಡದಿಂದ ರಕ್ಷಿಸಲು ಕಟುವಾಡವನ್ನು ನಿರ್ಮಿಸಲಾಗಿದೆ. ಬೇಗೂರು ಗ್ರಾಮದ ಕೋಡಿಯು ೭೫ ಮೀಟರ್ ಹಾಗೂ ಹಾಗೂ ಮಲ್ಲಾಘಟ್ಟ ಕೋಡಿಯು ೧೦೫ ಮೀಟರ್ ಉದ್ದವನ್ನು ಹೊಂದಿದೆ. ಹಾಗೆಯೇ ೨ ಕಾಲುವೆಗಳನ್ನು ಒಳಗೊಂಡಿದ್ದು, ಬಲದಂಡೆ ಕಾಲುವೆಯು ೨.೫ ಕಿ.ಮೀ. ಹಾಗೂ ಎಡದಂಡೆ ೧.೫ ಕಿ.ಮೀ. ಉದ್ದವನ್ನು ಹೊಂದಿದೆ. ಪ್ರಸ್ತುತ ೨ ತೂಬುಗಳು ಕಾರ್ಯನಿರ್ವಹಿಸುತ್ತಿವೆ. ಬೇಗೂರು, ಕೂತಾರಹಳ್ಳಿ, ಕುರುಪಾಳ್ಯ, ಮಲ್ಲಾಘಟ್ಟ, ಬಿದನಿಗೆರೆ, ಕೊತ್ತಿಪುರ, ಹನುಮಾಪುರ ಹಾಗೂ ಸುತ್ತಮುತ್ತಲ ಗ್ರಾಮದ ರೈತರು ಕೆರೆ ನೀರಾವರಿಯ ಪಲಾನುಭವಿಗಳಾಗಿದ್ದಾರೆ. ಕೆರೆ ಏರಿಯ ಮೇಲೆ ೨ ವೀರಗಲ್ಲು ಹಾಗೂ ಕೆರೆ ಕೋಡಿಯಲ್ಲಿ ವಿಜಯನಗರೋತ್ತರ ಕಾಲಾವಧಿಯ ಆಂಜನೇಯ ದೇವಾಲಯವಿದೆ.

ಆಂಜನೇಯ ದೇವಾಲಯವು ಉತ್ತರಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ಸುಮಾರು ೬ ಅಡಿ ಎತ್ತರದ ಆಂಜನೇಯನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಆಂಜನೇಯನು ಗ್ರಾಮದ ಕಡೆಗೆ ಮುಖಮಾಡಿದ್ದು, ಗ್ರಾಮದ ರಕ್ಷಕನಂತೆ ನೆಲೆಗೊಂಡಿದ್ದಾನೆ. ಕೆರೆಯು ತುಂಬಿದಾಗ ಹಂದಿ ಬಲಿ, ತೆಪ್ಪೋತ್ಸವ ಹಾಗೂ ಅನ್ನಸಂತರ್ಪಣೆಯನ್ನು ಮಾಡಲಾಗುತ್ತದೆ. ಬೇಗೂರು ಕೆರೆಯು ಹೇಮಾವತಿ ಅಚ್ಚುಕಟ್ಟು ನೀರಾವರಿ ಇಲಾಖೆಯ ವ್ಯಾಪ್ತಿಗೆ ಸೇರಿದ್ದು, ಹೇಮಾವತಿ ನಾಲೆಯ ಸಂಪರ್ಕವನ್ನು ಕಲ್ಪಿಸಲಾಗಿದೆ.

ವೀರಗಲ್ಲುಗಳು: ಬೇಗೂರು ಕೆರೆ ಏರಿಯ ಮೇಲೆ ೪ ಅಡಿ ಎತ್ತರ ಮತ್ತು ೨ ೧/೨ ಅಡಿ ಅಗಲ ವಿಸ್ತೀರ್ಣದ ವೀರಗಲ್ಲಿದ್ದು ಮೂರು ಹಂತಗಳಿಂದ ಕೂಡಿದೆ. ೧ನೇ ಹಂತದ ಸ್ವಲ್ಪಭಾಗವು ಮಣ್ಣಿನಿಂದ ಮುಚ್ಚಿಹೋಗಿದೆ. ವೀರಯೋಧನೊಬ್ಬ

ಬಲಗೈಯಲ್ಲಿ ಈಟಿಯನ್ನು ಹಿಡಿದು ನಿಂತಿದ್ದಾನೆ. ಆತನ ಎಡ ಮತ್ತು ಬಲಭಾಗದಲ್ಲಿ ಇಬ್ಬರು ಸ್ತ್ರೀಯರು ನಿಂತಿದ್ದಾರೆ. ಒಬ್ಬಳು ಬಲಗೈಯನ್ನು ಮೇಲೆ ಎತ್ತಿದ್ದಾಳೆ ಮತ್ತೊಬ್ಬಳು ಬಲಗೈಯಲ್ಲಿ ಕಮಂಡಲ ಹಿಡಿದಿದ್ದಾರೆ. ೨ನೇ ಹಂತದಲ್ಲಿ ವೀರ ಹಾಗೂ ಆತನ ದರ್ಮಪತ್ನಿಯರ ಸಮೇತ ಧ್ಯಾನಸಕ್ತರಾಗಿ ಕುಳಿತಿದ್ದಾರೆ. ೩ನೇ ಹಂತದಲ್ಲಿ ಶಿವಲಿಂಗ, ನಂದಿ, ಸೂರ್ಯ ಚಂದ್ರರ ಚಿತ್ರ ಬಿಡಿಸಲಾಗಿದ್ದು ಶೈವ ಯತಿಯೊಬ್ಬ ಶಿವಲಿಂಗವನ್ನು ಪೂಜಿಸುತ್ತಿದ್ದಾನೆ.

ಬೇಗೂರಿನ ಚನ್ನಿಗರಾಯ ದೇವಾಲಯದಲ್ಲಿನ ಶಾಸನಗಳು ಕುಣಿಗಲ್ ನಾಡಿನ ಬಗ್ಗೆ ಉಲ್ಲೇಖಿಸಿದ್ದು, ಹೊಯ್ಸಳರ ಆಡಳಿತ ಅವಧಿಯಲ್ಲಿ ವೆಪ್ಪೂರು ಚತುರ್ವೇದಿಮಂಗಲ ಪ್ರಸಿದ್ದ ಅಗ್ರಹಾರವಾಗಿದ್ದು, ಶಾಸನಗಳು ತ್ರುಟಿತವಾಗಿರುವುದರಿಂದ ದಾನ ನೀಡಿರುವ ಬಗೆಗೆ ಸ್ಪಷ್ಟವಾದ ಮಾಹಿತಿ ಸಿಗುತ್ತಿಲ್ಲ. ಬೇಗೂರು ಕೆರೆಯು ಹೊಯ್ಸಳ ಶೈಲಿಯ ರಚನೆಯನ್ನು ಹೋಲುತ್ತಿದ್ದು, ವೀರರಾಮನಾಥನ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ ಎಂಬುದು ಖಚಿತವಾಗುತ್ತದೆ.

ಅಡಿಟಿಪ್ಪಣಿಗಳು

೧. ಜಿ.ಟಿ. ಜಯರಾಮಯ್ಯ., ಕುಣಿಗಲ್ ನಾಡು (ಲೇ), ಬಿ. ನಂಜುಂಡಸ್ವಾಮಿ (ಸಂ), ಕಲ್ಪಸಿರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨, ಪು. ೩೨೩, ೩೨೪.

೨. ಇತಿಹಾಸ ಸಂಶೋಧಕರಾದ ಪಿ.ವಿ. ಕೃಷ್ಣಮೂರ್ತಿ ಅವರು ಬೇಗೂರು ಸ್ಥಳನಾಮದ ಬಗ್ಗೆ ನೀಡಿದ ಮಾಹಿತಿ.

೩. ಬಿ.ಎಲ್. ರೈಸ್ (ಸಂ)., ತುಮಕೂರು ಜಿಲ್ಲೆಯ ಶಾಸನ ಸಂಪುಟ ೧೨, ಕುಣಿಗಲ್ ಶಾಸನ ಸಂಖ್ಯೆ ೧೨, ೧೩. ೧೪, ೧೬.

೪. ರೇವಣಸಿದ್ದಯ್ಯ ಕೆ., ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್ ಪ್ರೌಢಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪, ಪು. ೪೧.

೫. ಎಚ್.ಎಸ್. ಗೋಪಾಲರಾವ್., ಹೊನ್ನುಡಿಕೆ ಪರಿಸರದ ಶಾಸನಗಳು (ಲೇ), ಬಿ. ನಂಜುಂಡಸ್ವಾಮಿ (ಸಂ)., ಕಲ್ಪಸಿರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨, ಪು. ೩೦೮.

೧೨೫

ಸಣಬನಹಳ್ಳಿಯ ಐತಿಹಾಸಿಕ ಕುರುಹುಗಳು

ಎಸ್.ಆರ್. ಪ್ರಸನ್ನಕುಮಾರ್*

ಸಣಬನಹಳ್ಳಿ ಗ್ರಾಮವು ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೋಕಿನ ಒಂದು ಸಣ್ಣಗ್ರಾಮ. ಈ ಗ್ರಾಮವು ಸುಮಾರು ೨೪೨.೫ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಈ ಗ್ರಾಮ ೪೮೮ ಜನಸಂಖ್ಯೆ ಹೊಂದಿದ ಈ ಸ್ಥಳದ ಇತಿಹಾಸವು ಶಿಲಾಯುಗದಿಂದ ಪ್ರಾರಂಭವಾಗಿ ಪ್ರಸ್ತುತ ಸಮಯದವರೆಗೆ ಬೆಳೆದುಕೊಂಡು ಬಂದಿದೆ.

ಇಲ್ಲಿಕಂಡು ಬರುವ ಬಟ್ಟಲಾಕೃತಿ (Cup Marks) ಚಿಹ್ನೆ ಹಾಗೂ ತೋಡು (groove) ಚಿಹ್ನೆಗಳು ಪುರಾತತ್ವ ಅಧ್ಯಯನಕ್ಕೆ ಸುಳಿವು ನೀಡುತ್ತಿವೆ. ಇಲ್ಲಿನ ವೀರಗಲ್ಲುಗಳು ಈ ಸ್ಥಳದ ಐತಿಹಾಸಿಕ ಶ್ರೀಮಂತಿಕೆಯನ್ನು ಹಾಗೂ ಮುಂದಿನ ಅಧ್ಯಯನಕ್ಕೆ ಮಾರ್ಗದರ್ಶಕಗಳಾಗಿ ನಿಂತಿವೆ. ಪ್ರಸ್ತುತ ಜಾನಪದ ಕಥೆಗಳು ಆ ಪ್ರದೇಶದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಂಶಗಳ ಪ್ರತಿಬಿಂಬಗಳಾಗಿರುತ್ತವೆ. ಈ ಸ್ಥಳವು ಜುಂಜಪ್ಪ ಎಂಬ ಗೋಪಾಲಕನ ಪ್ರಸಿದ್ಧ ಜಾನಪದ ಕಥೆಯೊಂದಿಗೆ ಬೆಸೆದುಕೊಂಡಿದ್ದು, ಇಲ್ಲಿನ ಐತಿಹಾಸಿಕ ಕುರುಹುಗಳು ಈ ಕಥೆಯೊಂದಿಗೆ ತಳುಕು ಹಾಕಿಕೊಂಡು ಹೆಚ್ಚಿನ ಅಧ್ಯಯನಕ್ಕೆ ಸಂಶೋಧಕರನ್ನು ಆಕರ್ಷಿಸುತ್ತಿವೆ. ನನ್ನ ಪ್ರಸ್ತುತ ಮಂಡಿಸುತ್ತಿರುವ ಪ್ರಬಂಧವು ಸಣಬನಹಳ್ಳಿ ಸ್ಥಳದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಂಶಗಳ ಕೇಂದ್ರಿಕೃತ ಪ್ರಬಂಧವಾಗಿದೆ.

ಭೌಗೋಳಿಕವಾಗಿ ಸಣಬನಹಳ್ಳಿಯು ಅಷ್ಟೇನು ಸಮತಟ್ಟಲ್ಲದ ಅರೆ ನೀರಾವರಿ ಕೃಷಿ ಆಧಾರಿತ ಸಮಶೀತೋಷ್ಣ ವಲಯದಒಂದು ಪುಟ್ಟ ಹಳ್ಳಿಯಾಗಿದ್ದು, ಗ್ರಾಮದ ಅವಶ್ಯಕತೆಗಾಗಿ ಎರಡು ಮಳೆಯಾಶ್ರಿತ ಕೆರೆಗಳು ಹಾಗೂ ಒಂದು ಚಿಕ್ಕಕಟ್ಟೆಯನ್ನು ಹೊಂದಿರುವ ಗ್ರಾಮ. ಗ್ರಾಮದಲ್ಲಿ ನಾಲ್ಕು ದೇವಾಲಯಗಳಿದ್ದು ಅವುಗಳ ಜೀರ್ಣೋದ್ಧಾರ ಹಲವು ಬಾರಿ ನಡೆದಿರುವುರಿಂದ ದೇವಾಲಯಗಳ ಕಾಲ ಗುರ್ತಿಸುವುದು ತುಸು ಕಷ್ಟ. ಆಂಜನೇಯ ದೇವಾಲಯದ ಆಂಜನೇಯ ಮೂರ್ತಿಯ ಆಧಾರಿತವಾಗಿ ಅದು ೧೬ನೇ ಶತಮಾನಕ್ಕೂ ಹಿಂದಿನದೆಂದು ಊಹಿಸಬಹುದು. ಅಲ್ಲದೆ ಈಶ್ವರದೇವಾಲಯ, ಚಿಕ್ಕಮುರದಮ್ಮ ಗ್ರಾಮದೇವತೆ ಹಾಗೂ ಜುಂಜಪ್ಪ ದೇವಾಲಯಗಳಿವೆ. ಈ ದೇವಾಲಯಗಳಲ್ಲಿ ಜುಂಜಪ್ಪ ದೇವಾಲಯದ ಆವರಣದಲ್ಲಿ ಕಂಡುಬರುವ ಕೃತಕ ಚಿಹ್ನೆಗಳು ಹಾಗೂ ಶಿಲ್ಪಕಲಾಕೃತಿಗಳು ಗ್ರಾಮದ ಐತಿಹಾಸಿಕ ಪರಂಪರೆಗೆ ಹಿಡಿದ ಕೈಗನ್ನಡಿಯಂತಿವೆ.

ಜುಂಜಪ್ಪ ದೇವಾಲಯದ ಆವರಣದಲ್ಲಿ ಕಂಡುಬರುವ ಎರಡು ತೋಡು (ಗ್ರೂವ್) ಚಿಹ್ನೆಗಳನ್ನು ಕೆಲವು ತಜ್ಞರು ಶಿಲಾಯುಧಗಳ ತಯಾರಿಕೆಯ ಕಾರಣದಿಂದ ನಿರ್ಮಿತವಾದವುಗಳೆಂದು ಅಭಿಪ್ರಾಯಪಟ್ಟರೆ ಮತ್ತೆ ಕೆಲವರು ಅನ್ಯಕಾರ್ಯನಿಮಿತ ಸೃಷ್ಟಿಯಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆ ಎರಡು ಚಿಹ್ನೆಗಳ ಗಾತ್ರವನ್ನು ನೋಡುವು ದಾದರೆ ಅವುಗಳೆರಡು ಅಕ್ಕಪಕ್ಕದಲ್ಲೆ ಇದ್ದು, ಪಶ್ಚಿಮಾಭಿಮುಖವಾಗಿ ನಿಂತು ನೋಡುವಾಗ ಎಡಗಡೆಯ ಚಿಹ್ನೆಯ ಗಾತ್ರವು ಅಗಲ ೯ ಸೆಂ.ಮೀ. ಉದ್ದ ೧೭ ಸೆಂ.ಮೀ. ಆಳ ೬ ಸೆಂ.ಮೀ. ಮತ್ತು ಪರಿಧಿಯು ೪೧ ಸೆಂ.ಮೀ. ಇದ್ದು, ಬಲಗಡೆಯ ಚಿಹ್ನೆಯು ಅಗಲ-೧೦ ಸೆಂ.ಮೀ. ಉದ್ದ-೧೯ ಸೆಂ.ಮೀ. ಆಳ-೭ ಸೆಂ.ಮೀ. ಮತ್ತು ಪರಿಧಿಯು ೪೬ ಸೆಂ.ಮೀ. ಇದ್ದು, ಗ್ರಾನೈಟ್ ಬಂಡೆಯ ಮೇಲೆ ಇವುಗಳನ್ನು ಸೃಷ್ಟಿಸಲಾಗಿದ್ದು, ಒಳಭಾಗವು ಅತ್ಯಂತ ನುಣುಪಾಗಿದ್ದು, ಮೇಲ್ಭಾಗವು ಒರಟಾಗಿದೆ.

ಈ ಪ್ರದೇಶದಲ್ಲಿ ಯಾವುದೇ ಶಿಲಾಯುಧಗಳು ದೊರೆತಿರುವುದಿಲ್ಲ. ಆದರೆ ಈ ಗ್ರಾಮದಿಂದ ಪಶ್ಚಿಮಕ್ಕೆ ಸುಮಾರು ೩ ಕಿ.ಮೀ. ದೂರದಲ್ಲಿರುವ ಹೂವಿನಕಟ್ಟೆ ಗ್ರಾಮದಲ್ಲಿ ಸಂಶೋಧಕರಾದ ಕೆ.ಬಿ. ಶಿವತಾರಕರವರು ಶಿಲಾಯುಧಗಳನ್ನು ಪತ್ತೆ ಹಚ್ಚಿದ್ದು ಪುರಾತತ್ವ ದೃಷ್ಟಿಕೋನ ಬಲಗೊಳ್ಳಲು ನೆರವಾಗಿದೆ. ಅಲ್ಲದೆ ಉತ್ಖನನ ಕೈಗೊಂಡಲ್ಲಿ ಕುರುಹುಗಳು

* ಕಿರಿಯ ಸಂಶೋಧನಾರ್ಥಿ, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-೫೭೨೧೦೩. ಮೊ. ೯೪೮೩೭೨೨೬೫೯೧

ಪತ್ತೆಯಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ದೇವಾಲಯದ ಎಡಭಾಗದಲ್ಲಿ ಕಂಡುಬರುವ ಮಹಾಸತಿ ಹಾಗೂ ವೀರಗಲ್ಲುಗಳು, ಪಾದ ಮುದ್ರೆ ಹಾಗೂ ನಾಗರ ಶಿಲ್ಪಗಳು ಅಧ್ಯಯನದ ವಸ್ತುಗಳಾಗಿವೆ.

ಮಹಾಸತಿ ಶಿಲ್ಪವು ಅತ್ಯಂತ ನಾಜೂಕಿನ ಕೆತ್ತನೆಯಿಂದ ಕೂಡಿರುವ ವೀರನೊಂದಿಗಿರುವ ಸತಿಯ ಶಿಲ್ಪ ಕಾಣಬಹುದಾಗಿದೆ. ಈ ಶಿಲ್ಪವು ೩೮ ಸೆಂ.ಮೀ. ಅಗಲ ಹಾಗೂ ೬೮ ಸೆಂ.ಮೀ. ಎತ್ತರವಾಗಿದ್ದು, ಶಿಲ್ಪದಲ್ಲಿರುವ ವೀರನು ಸತಿಯ ಬಲಭಾಗದಲ್ಲಿ ನಿಂತಿದ್ದು, ಸತಿ ತನ್ನ ಎಡಗೈಯನ್ನು ಎತ್ತಿಹಿಡಿದಿದ್ದಾಳೆ. ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಹಾಗೂ ಲಿಂಗಗಳ ಕೆತ್ತನೆಗಳನ್ನು ಗುರ್ತಿಸಬಹುದಾಗಿದೆ. ಈ ವಿಗ್ರಹದ ಪಕ್ಕದಲ್ಲಿ ಅಷ್ಟೇನು ಸ್ಪಷ್ಟ ಕೆತ್ತನೆ ಇಲ್ಲದ ನಾಗ ಶಿಲ್ಪವಿದೆ.

ಈ ಶಿಲ್ಪದ ನಂತರದ ಸ್ಥಾನದಲ್ಲಿ ಮತ್ತೊಂದು ವಿಶಿಷ್ಟ ಶಿಲ್ಪವಿದ್ದು, ಈ ಶಿಲ್ಪದಲ್ಲಿ ಒಬ್ಬ ಸ್ತ್ರೀಯು ತನ್ನ ಬಲಗೈನ್ನು ಮೇಲಕ್ಕೆ ಎತ್ತಿದ್ದು, ಅವಳ ಎಡಭಾಗದಲ್ಲಿ ಒಬ್ಬ ಪುರುಷನು ಕೈ ಮುಗಿದ ಭಂಗಿಯಲ್ಲಿದ್ದಾನೆ. ಈ ಶಿಲ್ಪವು ೪೭ ಸೆಂ.ಮೀ. ಅಗಲ ಹಾಗೂ ೬೦ ಸೆಂ.ಮೀ. ಎತ್ತರವಾಗಿದೆ.

ಈ ಶಿಲ್ಪಕಲಾಕೃತಿಯ ಪಕ್ಕದ ಮತ್ತೊಂದು ಶಿಲ್ಪದಲ್ಲಿ ಒಬ್ಬ ವೀರನು ಬಿಲ್ಲು ಬಾಣಗಳನ್ನು ಹಿಡಿದು ನಿಂತಿದ್ದು, ಅವನ ಎಡಭಾಗದಲ್ಲಿ ಇಬ್ಬರು ಮಹಿಳೆಯರು ತಮ್ಮ ಒಂದೊಂದು ಕೈಗಳನ್ನು ಎತ್ತಿ ಹಿಡಿದು ನಿಂತಿದ್ದು, ಅವರ ಆಕೃತಿಗಳಲ್ಲಿನ ಭಿನ್ನತೆಯು ಹಿರಿಯ ಹಾಗು ಕಿರಿಯ ಪತ್ನಿಯರೆಂಬ ಪ್ರತೀಕಗಳಾಗಿವೆ. ಈ ಶಿಲ್ಪದಲ್ಲೆ ಇರುವ ಮತ್ತೊಬ್ಬ ಸ್ತ್ರೀ ಶಿಲ್ಪವು ವೀರನ ಸೇವಕಿಯಾಗಿರಬಹುದು. ಈ ಶಿಲ್ಪವು ೬೦ ಸೆಂ.ಮೀ. ಉದ್ದ ಮತ್ತು ೬೦ ಸೆಂ.ಮೀ. ಅಗಲವಾಗಿದೆ.

ಈ ಶಿಲ್ಪ ಸರಣಿಗಳ ಮತ್ತೊಂದು ಪಾರ್ಶ್ವದಲ್ಲಿನ ಕಡೆಯ ಶಿಲ್ಪವು ಪಾದ ಮುದ್ರೆಗಳದ್ದಾಗಿದೆ. ಈ ಮುದ್ರೆಗಳು ೧೪ ಸೆಂ.ಮೀ. ಅಗಲ ಹಾಗೂ ೧೭ ಸೆಂ.ಮೀ. ಉದ್ದವಾಗಿದ್ದು. ಇದು ಜನರ ಕಾಲ್ಪನಿಕ ನಾಯಕನ ಆರಾಧನೆಯ ಪ್ರತಿಬಿಂಬವಾಗಿ ಕಂಡುಬರುತ್ತಿದೆ. ಈ ಶಿಲ್ಪಗಳ ರಚನೆ ಹಾಗು ಬಳಸಿರುವ ಶಿಲೆಗಳ ಆಧಾರಿತವಾಗಿ ಇವು ಸುಮಾರು ಕ್ರಿ.ಶ. ೧೬ ಅಥವಾ ೧೭ನೇ ಶತಮಾನಕ್ಕೆ ಸೇರಿದ್ದವಾಗಿರಬಹುದು.

ಈ ದೇವಾಲಯದಲ್ಲಿನ ಈ ಕೃತಕ ಚಿಹ್ನೆಗಳು ಹಾಗೂ ಇಲ್ಲಿನ ಶಿಲ್ಪಕಲಾಕೃತಿಗಳ ಬಗ್ಗೆ ಸ್ಥಳೀಯ ಜನರು ಅತ್ಯಂತ ಶ್ರದ್ಧಾಪೂರ್ವಕವಾದ ನಂಬಿಕೆಯನ್ನು ಹೊಂದಿದ್ದು, ಈ ನಂಬಿಕೆಗೆ ಪೂರಕವಾಗಿ ಒಂದು ಜಾನಪದ ಕಥೆಯು ಚಾಲ್ತಿಯಲ್ಲಿದೆ. ಜುಂಜಪ್ಪನೆಂಬ ಈ ಪ್ರದೇಶದ ಗೊಲ್ಲ ಸಮುದಾಯಕ್ಕೆ ಸೇರಿದ ಒಬ್ಬ ಜನಪ್ರಿಯ ಜಾನಪದ ನಾಯಕನು ಸಾವಿರಾರು ಗೋವುಗಳ ಪಾಲನೆ ಮಾಡುತ್ತಿದ್ದು ಅವನ ಸೋದರ ಮಾವಂದಿರ ಕೆಂಗಣ್ಣಿಗೆ ಗುರಿಯಾಗುತ್ತಾನೆ. ಜುಂಜಪ್ಪನ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿ ಅವನ ನೆಚ್ಚಿನ ಬಸವನನ್ನು ಜುಂಜಪ್ಪ ಇಲ್ಲದಿದ್ದಾಗ ಹಿಡಿದು ಅದನ್ನು ಚೇಳೂರಿಗೆ ರವಾನಿಸಿ ಅದನ್ನು ಕೊಲ್ಲಲು ತೀರ್ಮಾನಿಸುತ್ತಾರೆ. ಈ ವಿಷಯ ತಿಳಿದು ಜುಂಜಪ್ಪ ತನ್ನ ನೆಚ್ಚಿನ ಬಸಯ್ಯನನ್ನು ಕೊಳಲನ್ನೂದುವ ಮೂಲಕ ಕರೆದಾಗ ಆ ಬಸವ ತನ್ನನ್ನು ಕಟ್ಟಿದ ಕಲ್ಲಿನ ಕಂಬ ಮುರಿದು ಆ ಕಂಬದ ಜೊತೆಗೆ ಅಲ್ಲಿಂದ ಜಿಗಿದಾಗ ಮೊದಲ ಜಿಗಿತದಲ್ಲಿ ಸಣಬನಹಳ್ಳಿ ಗ್ರಾಮದ ಬಂಡೆ ಮೇಲೆ ತನ್ನ ಮಂಡಿಗಳನ್ನು ಊರಿ ನಂತರ ಎರಡನೆ ಜಿಗಿತಕ್ಕೆ ಮಂಚಲ ದೊರೆಯ ಗುಡ್ಡಕ್ಕೆ ಜಿಗಿದು ಅಲ್ಲಿ ಆ ಕಲ್ಲಿನ ಕಂಬವನ್ನು ಇರಿಸಿತು ಎಂಬ ನಂಬಿಕೆ ಇದೆ. ಹೀಗೆ ಆ ಬಸವ ಊರಿದ ಪಾದಗಳೆ ಈಗಿನ ಕೃತಕ ಚಿಹ್ನೆಗಳಾಗಿವೆ. ಅವುಗಳನ್ನು ನಿರಂತರವಾಗಿ ಪೂಜಿಸಿಕೊಂಡು ಅಲ್ಲಿನ ಜನರು ಪ್ರತಿವರ್ಷ ಚಂದ್ರಮಾನ ಯುಗಾದಿ ನಂತರದ ದಿನ ಜಾತ್ರೆಯನ್ನು ನಡೆಸಿಕೊಂಡು ಬಂದಿದ್ದಾರೆ.

ಈ ಗ್ರಾಮದಿಂದ ಉತ್ತರಕ್ಕೆ ತಾಳಿಕೊಪ್ಪ ಗ್ರಾಮಕ್ಕೆ ಹೋಗುವ ದಾರಿಯ ಎಡಭಾಗದಲ್ಲಿ ಗ್ರಾಮದಿಂದ ಸು. ೪೦೦ ಮೀ. ದೂರದಲ್ಲಿ ಕೆರೆಯ ಸಮೀಪ ಒಂದು ಶಿಲ್ಪವಿದ್ದು, ಈ ಶಿಲ್ಪದಲ್ಲಿ ಒಬ್ಬ ಸ್ತ್ರೀ ಒಂದು ಮಗುವನ್ನು ತನ್ನ ಎಡಗಡೆ ಕಂಕುಳಲ್ಲಿ ಎತ್ತಿಕೊಂಡಿದ್ದು, ಆಕೆಗೆ ಸುರಾಂಗನೆಯರು ಚಾಮರ ಬೀಸುತ್ತಿದ್ದಾರೆ. ಮೇಲಿನ ಸ್ಥರದಲ್ಲಿ ಶಿವಲಿಂಗ ಇಬ್ಬರು ಸೇವಕಿಯರು ಹಾಗೂ ನಂದಿಯನ್ನು ಕಾಣಬಹುದಾಗಿದ್ದು, ಈ ಗ್ರಾಮದಲ್ಲಿ ಯಾವುದೇ ಶಾಸನಗಳಾಗಲಿ, ಹಸ್ತಪ್ರತಿಗಳಾಗಲಿ ಇದುವರೆಗೆ ಕಂಡುಬಂದಿಲ್ಲ. ಆದರೆ ಈ ಗ್ರಾಮದ ಹೆಸರಿಗೆ ಸಂಬಂಧಿಸಿದಂತೆ ನೆರೆಯ ಎರಡು ಗ್ರಾಮಗಳ ಶಾಸನದಲ್ಲಿ ಕಾಣಬಹುದಾಗಿದೆ. ಗ್ರಾಮದ ಪಶ್ಚಿಮಕ್ಕಿರುವ ಪಿನ್ನೇನಹಳ್ಳಿಯಲ್ಲಿ ದೊರೆತಿರುವ ಒಂದು ಶಾಸನವು ಕೊಂಡಪ್ಪಯ್ಯನವರು ಬನಹಳ್ಳಿ ಗ್ರಾಮವನ್ನು ತಿರುಮಲ ದೇವರ ಪೂಜಾ ಕಾರ್ಯಕ್ಕಾಗಿ ದತ್ತಿ ನೀಡುವ ಬಗ್ಗೆ ಉಲ್ಲೇಖವಿದೆ. ಅಲ್ಲದೆ ಗ್ರಾಮದ ಉತ್ತರ ಭಾಗಕ್ಕಿರುವ ತಾಳಿಕೊಪ್ಪದಲ್ಲಿ ದೊರೆತ ಶಾಸನವೊಂದರಲ್ಲಿ ಶಾಸನವಿರುವ ದಕ್ಷಿಣಕ್ಕೆ ಬನಹಳ್ಳಿ ಇದೆ ಎಂದು ಉಲ್ಲೇಖಿಸಿದೆ.

ಸ್ಥಳನಾಮಕ್ಕೆ ಸಂಬಂಧಿಸಿದಂತೆ ನೆರೆಯ ತಾಳೆಕೊಪ್ಪ ಮತ್ತು ಪಿನ್ನೇನಹಳ್ಳಿ ಶಾಸನಗಳ ಉಲ್ಲೇಖಗಳಲ್ಲಿ ಕಂಡು ಬರುವ ಬನಹಳ್ಳಿಯೇ ಸಣಬನಹಳ್ಳಿ ಎಂದು ಹೇಳಲು ಸ್ಥಳೀಯರು ಹೇಳುವಂತೆ ಈ ಗ್ರಾಮದ ಒಡೆಯರಾಗಿದ್ದ ಸಣ್ಣಪ್ಪನವರಿಂದ ಈ ಗ್ರಾಮಕ್ಕೆ ಸಣಬನಹಳ್ಳಿ (ಸಣ್ಣಪ್ಪನ ಬನಹಳ್ಳಿ) ಎಂಬ ಹೆಸರು ಬಂದಿದೆ ಎಂಬುದು ತರ್ಕಬದ್ಧವಾಗಿಯೇ ಇದೆ.

ಆಕರ ಗ್ರಂಥಗಳು

೧. ಶಿವತಾರಕ ಕೆ.ಬಿ. ೨೦೧೧, 'ಕರ್ನಾಟಕದ ಪುರಾತತ್ವ ನೆಲೆಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪುಟ ಸಂಖ್ಯೆ ೨೮೬.

೨. ಚಂದ್ರಶೇಖರ ಕಂಬಾರ (ಮು.ಸಂ.) ಚಲುವರಾಜು (ಸಂ.) ೧೯೯೭, ಬುಡಕಟ್ಟು ಮಹಾಕಾವ್ಯ ಮಾಲೆ, 'ಜುಂಜಪ್ಪ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೩. ರೈಸ್ ಬಿ.ಎಲ್. ೧೯೦೪, ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ XII ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು.

೪. ಶೇಷಶಾಸ್ತ್ರಿ ಆರ್. ೨೦೦೪, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨೬

ಹುಲಿಕೆರೆಯ ಸ್ಮಾರಕಗಳು

ಟಿ. ಓಂಕಾರಪ್ಪ* ಹೆಚ್.ಎಂ. ತಿಪ್ಪೇಶ**

ಹುಲಿಕೆರೆಯು ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಒಂದು ಚಿಕ್ಕಗ್ರಾಮ. ರಾಷ್ಟ್ರೀಯ ಹೆದ್ದಾರಿ ಹದಿಮೂರಕ್ಕೆ ಹೊಂದಿಕೊಂಡಂತೆ ಇರುವ ಖಾನಹೊಸಹಳ್ಳಿ ಇದರ ಹೋಬಳಿ ಕೇಂದ್ರವಾಗಿದೆ.

ಜನಸಾಮಾನ್ಯರ ಬಾಯಿಯಲ್ಲಿ ಉಳಿದಿರುವ ಮೌಖಿಕ ಕಥನಗಳನ್ನು ಆಧರಿಸಿ ಸ್ಥಳನಾಮವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಪ್ರಾಚೀನ ಕಾಲದಲ್ಲಿ ಗ್ರಾಮದ ಸುತ್ತಲೂ ದಟ್ಟವಾದ ಕಾನನವಿದ್ದು ಈ ಕಾನನದ ಮಧ್ಯ ಸಾಕಷ್ಟು ದೊಡ್ಡ ದೊಡ್ಡ ಗುಂಡುಗಳು ಇದ್ದವು. ಅವುಗಳ ಸಂಧುಗಳಲ್ಲಿ ಹುಲಿಯೊಂದು ವಾಸವಾಗಿದ್ದರಿಂದ ಹಾಗೂ ಆ ಗುಂಡುಗಳಿರುವ ಪ್ರದೇಶದಲ್ಲಿ ನೀರು ಹರಿದು ಬರುತ್ತಿದ್ದರಿಂದ ನೀರಿಗೆ ಅಡ್ಡಲಾಗಿ ಕೆರೆಯೊಂದನ್ನು ಕಟ್ಟಿಸಲಾಯಿತು. ಇದರಿಂದ ಈ ಕೆರೆಗೆ 'ಹುಲಿಕೆರೆ' ಎಂಬ ಹೆಸರು ಬಂದಿರುವ ಸಾಧ್ಯತೆಯಿದೆ[೧] ಹುಲಿಕೆರೆ ಎಂಬ ಪದದ ಅರ್ಥವನ್ನು ಬಿಡಿಸಿದಾಗ ಹುಲಿ+ಕೆರೆ ಎಂಬ ಎರಡು ಬೇರೆ ಬೇರೆ ಅರ್ಥವನ್ನು ಸೂಚಿಸುವ ಪದಗಳಾಗಿದ್ದು, ಅವುಗಳನ್ನು ಕೂಡಿಸಿದಾಗ ಹುಲಿಕೆರೆ ಎಂದಾಗುತ್ತದೆ. ಒಂದರ್ಥದಲ್ಲಿ ಹುಲಿ ಎಂದರೆ, ಇಕ್ಕಾಟದ ಪ್ರದೇಶ ಇನ್ನೊಂದು ಅರ್ಥದಲ್ಲಿ ವ್ಯಾಘ್ರ ಎಂಬ ಅರ್ಥವಿದೆ. ಕೆರೆ ಎಂದರೆ, ಏರಿಯನ್ನು ಕಟ್ಟಿಸಿ ನೀರನ್ನು ಸಂಗ್ರಹಿಸುವ ಸ್ಥಳವಾಗಿದೆ. ಕರ್ನಾಟಕದ ಇತರ ಭಾಗಗಳಲ್ಲಿಯೂ ಸಹ ಹುಲಿಕೆರೆ ಎಂಬ ಸ್ಥಳನಾಮವುಳ್ಳ ಹಲವು ಗ್ರಾಮಗಳಿವೆ.[೨] ಈ ಪ್ರದೇಶದಲ್ಲಿ ಪ್ರಾಗ್ಯೈತಿಹಾಸಿಕ ಕುರುಹುಗಳು ಕಂಡುಬಂದಿವೆ. ಈ ಗ್ರಾಮದಿಂದ ಈಶಾನ್ಯ ದಿಕ್ಕಿಗೆ ಸುಮಾರು ೧೨ ಕಿ.ಮೀ. ದೂರದಲ್ಲಿರುವ 'ಜುಮ್ಮೋಬನಹಳ್ಳಿಯ ಪಿಕಪ್‌ಹಳ್ಳದ ಬಳಿಯ ದಂಡೆಯ ಮೇಲಿನ ಜಮೀನೊಂದರಲ್ಲಿ ಆದಿಹಳೆಯ ಶಿಲಾಯುಗಕ್ಕೆ ಸೇರಿದ ಶಿಲಾಕೊಡಲಿ ಹಾಗೂ ಇದೇ ಹಳ್ಳದ ಮತ್ತೊಂದು ದಂಡೆಯ ಬದಿಯಲ್ಲಿ ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ ಉಪಕರಣಗಳನ್ನು ಪತ್ತೆ ಹಚ್ಚಿರುವುದರಿಂದ[೩] ಈ ಪ್ರದೇಶವು ಸಹ ಆದಿಹಳೆಯ ಶಿಲಾಯುಗದಿಂದ ಸೂಕ್ಷ್ಮ ಶಿಲಾಯುಗ ಕಾಲದಿಂದಲೂ ಜನ ವಸತಿ ಇತ್ತೆಂದು ತಿಳಿಯುತ್ತದೆ.

ಹುಲಿಕೆರೆ ಗ್ರಾಮದಿಂದ ೩ ಕಿ.ಮೀ. ಅಂತರದಲ್ಲಿ 'ಸುಣ್ಣಮರಡಿ'[೪] ಎನ್ನುವ ಸ್ಥಳದಲ್ಲಿ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ವಿವಿಧ ಉಪಕರಣಗಳು, ಕಪ್ಪು-ಕೆಂಪುವರ್ಣದ ಮಡಕೆ ಭಾಗಗಳು, ಸಮಾಧಿ ಅವಶೇಷಗಳು ಕಂಡು ಬಂದಿರುವುದರಿಂದ ಶಿಲಾಯುಗದ ವಿವಿಧ ಕಾಲಘಟ್ಟದಲ್ಲಿ ಜನವಸತಿ ಇತ್ತೆಂದು ಗುರುತಿಸಬಹುದು. ಅದೇ ರೀತಿ ಈ ಗ್ರಾಮದ ಹೋಬಳಿಯ ವ್ಯಾಪ್ತಿಯಲ್ಲಿ ಕಲ್ಲಹಳ್ಳಿ, ಮಾಳೆಹಳ್ಳಿ, ಕುಮತಿ, ಹುಲಿಕುಂಟೆ, ಹುರುಳಿಹಾಳು ಮುಂತಾದ ಪ್ರಾಗ್ಯೈತಿಹಾಸಿಕ ನೆಲೆಗಳು ಕಂಡುಬರುವುದರಿಂದ ಹುಲಿಕೆರೆ ಗ್ರಾಮ ಪರಿಸರವು ಸಹ ಪ್ರಾಗ್ಯೈತಿಹಾಸಿಕ ಮಹತ್ವವನ್ನು ಹೊಂದಿತ್ತೆಂದು ತಿಳಿಯುತ್ತದೆ.

ಪ್ರಾಗಿತಿಹಾಸ ಕಾಲಘಟ್ಟದ ಬಳಿಕ ದೊರಕುವ ಆಕರಗಳು ಕಲ್ಯಾಣ ಚಾಲುಕ್ಯರ ಕಾಲ ಮತ್ತು ಅದರ ನಂತರ ಕಾಲಘಟ್ಟದ್ದಾಗಿದೆ. ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ದೇವಾಲಯ ಮತ್ತು ಇತರ ಕುರುಹುಗಳು ಇರುವುದರಿಂದ ಪ್ರಾಯಶಃ ಇವರ ಆಳ್ವಿಕೆಯ ಕಾಲದಿಂದಲೇ ಇಲ್ಲಿನ ಚರಿತ್ರೆಯನ್ನು ತಿಳಿಯಬಹುದಾಗಿದೆ. ಹಾಗೂ ವಿಜಯನಗರ ಕಾಲದ ಮತ್ತು ವಿಜಯ ನಗರೋತ್ತರಕಾಲದ ಸ್ಮಾರಕ ಅವಶೇಷಗಳು ಕಂಡುಬಂದಿವೆ. ಇವುಗಳಿಂದ ಗ್ರಾಮದ ಚರಿತ್ರೆಯು ಕಲ್ಯಾಣ ಚಾಲುಕ್ಯರ ಕಾಲದಿಂದ ವಿಜಯನಗರೋತ್ತರ ಕಾಲದವರೆಗೆ ಚಾರಿತ್ರಿಕ ಮಹತ್ವವನ್ನು ಪಡೆದಿತ್ತು ಎಂದು ತಿಳಿಯಬಹುದು.

ಹುಲಿಕೆರೆ ಗ್ರಾಮದಲ್ಲಿ ಕಲ್ಲೇಶ್ವರ, ಆಂಜನೇಯ ದೇವಾಲಯ ಹಾಗೂ ವೀರಭದ್ರೇಶ್ವರ ದೇವಾಲಯಗಳು ಪ್ರಮುಖವಾಗಿವೆ.

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕವಿವಿ, ಹಂಪಿ, ವಿದ್ಯಾರಣ್ಯ-೫೮೩೨೭೬. ಮೊ. ೯೪೮೦೨೮೦೩೧೩
** ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕವಿವಿ, ಹಂಪಿ, ವಿದ್ಯಾರಣ್ಯ-೫೮೩೨೭೬. ಮೊ. ೯೪೮೩೧೩೯೪೫೭

ಕಲ್ಲೇಶ್ವರ: ದೇವಾಲಯವು ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೊಂದಿದೆ. ಕೆರೆಯ ಹಿಂಬದಿಯಲ್ಲಿ ಪೂರ್ವಾಭಿಮುಖವಾಗಿರುವ ಇದು ಕಣಶಿಲೆಯಲ್ಲಿ ನಿರ್ಮಿಸಿದ 'ತ್ರಿಕೂಟಾಚಲ ದೇವಾಲಯ'ವಾಗಿದೆ.[೫] ಇದರಲ್ಲಿ ಮೂರು ಗರ್ಭಗೃಹಗಳಿದ್ದು, ಪೂರ್ವಾಭಿಮುಖವಾಗಿರುವ ಪ್ರಧಾನ ದೇಗುಲದಲ್ಲಿ ಉದ್ಬವಲಿಂಗ, ಉತ್ತರಭಿಮುಖವಾಗಿರುವ ದೇಗುಲದಲ್ಲಿ ಭೈರವಶಿಲ್ಪ ಹಾಗೂ ದಕ್ಷಿಣಾಭಿಮುಖವಾಗಿರುವ ಗುಡಿಯಲ್ಲಿ ವಿಷ್ಣುಶಿಲ್ಪವಿದೆ. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗಮಂಟಪವನ್ನು ಒಳಗೊಂಡಿದೆ. ಹಾಗೂ ಮೇಲ್ಚಾವಣಿಯಲ್ಲಿ ಭುವನೇಶ್ವರಿ ಕೆತ್ತನೆ ಮಾಡಲಾಗಿದೆ. ನವರಂಗಮಂಟಪದಲ್ಲಿ ನಂದಿಶಿಲ್ಪ ಹಾಗೂ ನಾಲ್ಕು ಸ್ತಂಭಗಳಿದ್ದು ಅವುಗಳು ಸುಂದರವಾದ ಅಲಂಕಾರಗಳಿಂದ ಕೂಡಿವೆ. 'ಸ್ತಂಭಗಳ ರಚನೆಯು ಪೀಠ, ಪಾದ, ದಂಡ, ಘಟ, ಫಲಕ, ಭೋದಿಗೆಗಳಿಂದ ಕೂಡಿದೆ.'[೬] ಎರಡೂ ಗರ್ಭಗೃಹಗಳ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬು ಶಿಲ್ಪ ಇರುವುದು ಕಂಡುಬರುತ್ತದೆ. ಆದರೆ ದಕ್ಷಿಣಾಭಿಮುಖವಾಗಿರುವ ಗರ್ಭಗುಡಿಯ ಬಾಗಿಲವಾಡದ ಲಲಾಟದಲ್ಲಿ ಮಾತ್ರ ಪೂರ್ಣಕುಂಭವಿದೆ. ಗರ್ಭಗೃಹಗಳ ದ್ವಾರಪಟ್ಟಿಕೆಯ ಕೆಳಭಾಗದಲ್ಲಿ ದ್ವಾರಪಾಲಕರ ಶಿಲ್ಪಗಳನ್ನು ರಚಿಸಲಾಗಿದೆ. ಮುಖ್ಯ ಗರ್ಭಗೃಹ ಎಡ ಮತ್ತು ಬಲ ಭಾಗದಲ್ಲಿ ಕೋಷ್ಟಕಗಳಿದ್ದು ಅವುಗಳಲ್ಲಿ ಗಣೇಶ ಮತ್ತು ನಂದಿ ಶಿಲ್ಪವನ್ನು ಇರಿಸಲಾಗಿದೆ. ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಹಾಗೂ ಪ್ರಸ್ತರ ಭಾಗಗಳನ್ನು ಹೊಂದಿದೆ. ಇತ್ತೀಚೆಗೆ ದೇವಾಲಯವನ್ನು ಜೀರ್ಣೋದ್ದಾರಗೊಳಿಸಿ ಶಿಖರಗಳನ್ನು ನಿರ್ಮಿಸಲಾಗಿದೆ. 'ಕ್ರಿ.ಶ ೧೩ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಕಾಲವಧಿಯಲ್ಲಿ ನಿರ್ಮಿಸಲಾಗಿದೆ.'[೭]

ಆಂಜನೇಯ ದೇವಾಲಯವನ್ನು ಗ್ರಾಮದ ಊರಬಾಗಿಲು ಮುಂದೆ ದಕ್ಷಿಣಾಭಿಮುಖವಾಗಿ ನಿರ್ಮಿಸಲಾಗಿದೆ. ಇದು ಕಣಶಿಲೆಯಲ್ಲಿ ವಿಜಯನಗರ ಕಾಲಾವಧಿಯಲ್ಲಿ ನಿರ್ಮಿಸಿದ ಏಕಕೂಟ ದೇವಾಲಯ. ಇತ್ತೀಚೆಗೆ ಗ್ರಾಮಸ್ಥರು ಈ ದೇವಾಲಯವನ್ನು ಜೀರ್ಣೋದ್ದಾರಗೊಳಿಸಿದ್ದಾರೆ. ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವಿದೆ. ಗರ್ಭಗೃಹದಲ್ಲಿ ಆಂಜನೇಯ ಶಿಲ್ಪವಿದೆ. ಹಾಗೂ ದೇವಾಲಯದ ಮುಂಭಾಗದಲ್ಲಿ ಗರುಡ ಸ್ತಂಭವಿದೆ.

ವೀರಭದ್ರೇಶ್ವರ ದೇವಾಲಯವು ಗ್ರಾಮದಿಂದ ೩ ಕಿ.ಮೀ. ದೂರದಲ್ಲಿ ಪಶ್ಚಿಮ ದಿಕ್ಕಿಗೆ 'ಸುಣ್ಣಮರಡಿ' ಎನ್ನುವ ಸ್ಥಳದಲ್ಲಿದೆ. ಈ ಸ್ಥಳವು ಇಂದು ಹಾಳೂರಾಗಿದ್ದು, ದೇವಾಲಯವು ಮಾತ್ರ ಕಂಡುಬರುತ್ತದೆ. ಏಕಕೂಟ ದೇವಾಲಯವನ್ನು 'ಸುಣ್ಣಮರಡಿ ವೀರಭದ್ರೇಶ್ವರ ದೇವಾಲಯ' ಎಂದು ಕರೆಯಲಾಗುತ್ತದೆ. ಪೂರ್ವಭಿಮುಖವಾಗಿ ವಿಜಯನಗರೋತ್ತರಕಾಲದಲ್ಲಿ ನಿರ್ಮಿಸಲಾಗಿದೆ. ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ವೀರಭದ್ರ ಶಿಲ್ಪವಿದೆ. ದೇವಾಲಯದಲ್ಲಿ 'ಅಧಿಷ್ಟಾನ, ಭಿತ್ತಿ, ಪ್ರಸ್ತರ, ಶಿಖರ, ಗ್ರೀವ ಮತ್ತು ಸ್ತೂಪಿಗಳು ಎಂಬ ಷಡ್ವರ್ಗ'ಗಳನ್ನು[೮] ಒಳಗೊಂಡಿದೆ ಈ ಶಿಖರವನ್ನು ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಕಟ್ಟಲಾಗಿದೆ. ಇತ್ತೀಚೆಗೆ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ದೇವಾಲಯದ ಕೆಲವು ಭಾಗಗಳನ್ನು ನವೀಕರಿಸಲಾಗಿದೆ.

ಮೂರ್ತಿಶಿಲ್ಪಗಳು

ಉದ್ಭವ ಲಿಂಗ: ಕಲ್ಲೇಶ್ವರ ದೇವಾಲಯದ ಪ್ರಧಾನ ದೇಗುಲದಲ್ಲಿ ಉದ್ಭವ ಲಿಂಗವಿತ್ತು. ಆದರೆ ದೇವಾಲಯವನ್ನು ಜೀರ್ಣೋದ್ಧಾರ ಗೊಳಿಸಿದ ಸಂದರ್ಭದಲ್ಲಿ ಲಿಂಗವನ್ನು ನೆಲದ ಅಡಿಯಲ್ಲಿ ಸೇರಿಸಿ ಅದರ ಮೇಲೆ ಹೊಸ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ.

ಭೈರವ ಶಿಲ್ಪ: ಕಲ್ಲೇಶ್ವರ ದೇವಾಲಯದ ಉತ್ತರಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಭೈರವ ಶಿಲ್ಪವು ಸಮಭಂಗಿಯಲ್ಲಿದೆ. ಇದರ ಎತ್ತರ ೨.೬ ಅಡಿ ಅಗಲ ೧.೬ ಅಡಿ ಅಗಲ ವಿಸ್ತೀರ್ಣವನ್ನು ಹೊಂದಿದೆ. ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟಿರುವ ಭೈರವನ ಎಡಕೈಯಲ್ಲಿ ತ್ರಿಶೂಲ, ಬ್ರಹ್ಮಕಪಾಲ ಮತ್ತು ಕಪಾಲದಿಂದ ಹೊರಸೂಸುವ ರಕ್ತವನ್ನು ಹೀರಲು ಹಾತೊರೆಯುವ ನಾಯಿಯನ್ನು ಕಾಣಬಹುದು.[೯] ಹಾಗೆಯೇ ಬಲಗೈಯಲ್ಲಿ ಡಮರು, ಖಡ್ಗ ವಿದೆ. ಹಾಗೂ ಶಿಲ್ಪದ ಬಲಭಾಗದಲ್ಲಿ ದಕ್ಷನ ಶಿಲ್ಪವಿದೆ. ಈ ಭೈರವನ ಕೊರಳಲ್ಲಿ ಅಕ್ಷಮಾಲೆಯನ್ನು ಮತ್ತು ವಿಶೇಷವಾಗಿ ಶಿಲ್ಪದ ಪೀಠಭಾಗದಲ್ಲಿ ಲಿಪಿ ಇರುವುದನ್ನು ಗುರುತಿಸಲಾಗಿದೆ. ಒಟ್ಟು ೧೭ ಅಸ್ಪಷ್ಟ ಅಕ್ಷರಗಳಿಂದ ಕೂಡಿರುವ ಬರಹವು ಪ್ರಾಯಶಃ ಈ ಶಿಲ್ಪವನ್ನು ಕೆತ್ತಿದ ಶಿಲ್ಪಿಯ ಹೆಸರನ್ನಾಗಲಿ ಅಥಾವ ಕೆತ್ತಿಸಿದವರ ಹೆಸರನ್ನಾಗಲಿ ಹೊಂದಿರುವ ಸಾಧ್ಯತೆಯಿದೆ.

ವಿಷ್ಣು ಶಿಲ್ಪ: ಈ ಶಿಲ್ಪವು ಕಲ್ಲೇಶ್ವರ ದೇವಾಲಯದಲ್ಲಿ ದಕ್ಷಿಣಾಭಿಮುಖವಾಗಿರುವ ಗರ್ಭಗುಡಿಯಲ್ಲಿದೆ. ಎತ್ತರದ ಪೀಠದ ಮೇಲೆ ಸಮ ಭಂಗಿಯಲ್ಲಿರುವ ಈ ಶಿಲ್ಪದಲ್ಲಿ ಎರಡು ಕೈಗಳಲ್ಲಿ ಶಂಖ, ಚಕ್ರ, ಮತ್ತು ಉಳಿದರೆಡು ಕೈಗಳಲ್ಲಿ




ಕಲ್ಲೇಶ್ವರ ದೇವಾಲಯ (ಹುಲಿಕೆರೆ)



ನವರಂಗ ಮಂಟಪ




ವೀರಭದ್ರೇಶ್ವರ ದೇವಾಲಯ (ಸುಣ್ಣಮರಡಿ)



ಭೈರವ ಶಿಲ್ಪ



ವಿಷ್ಣು ಶಿಲ್ಪ



೭. ತುರುಗೋಳ್ ವೀರಗಲ್ಲು



೮. ವೀರಗಲ್ಲು (ದೇವಾಲಯದ ಒಳಗಡೆ)

ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಇದರ ಎತ್ತರ ೨.೧/೨ ಅಡಿ, ಅಗಲ ೨ ಅಡಿ ಇದೆ. ಪೀಠ ಭಾಗದಲ್ಲಿ ಉಬ್ಬು ಶಿಲ್ಪವಿದ್ದು ಅಸ್ಪಷ್ಟವಾಗಿದೆ.

ವೀರಭದ್ರೇಶ್ವರ ಶಿಲ್ಪ: ಸುಣ್ಣಮರಡಿಯ ವೀರಭದ್ರೇಶ್ವರ ದೇವಾಲಯದ ಗರ್ಭಗುಡಿಯಲ್ಲಿರುವ 'ವೀರಭದ್ರನ ಶಿಲ್ಪವು ಸಮಭಂಗಿಯಲ್ಲಿದೆ,'[೧೦] ಕಿರೀಟಧಾರಿಯಾಗಿರುವ ವೀರಭದ್ರನ ಕೈಗಳಲ್ಲಿ ಖಡ್ಗ, ಬಿಲ್ಲು, ಬಾಣವನ್ನು ಹೊಂದಿದೆ. ಹಾಗೂ ಅಲಂಕೃತ ಪ್ರಭಾವಳಿಯನ್ನು ಹೊಂದಿರುವ ಈ ಶಿಲ್ಪವು ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟಿದೆ. ಇದರ ಎತ್ತರ ೪.೫ ಅಡಿ, ಅಗಲ ೨.೫ ಅಡಿ ವಿಸ್ತೀರ್ಣ ಹೊಂದಿದೆ. ಇದು ಶೈವ ಶಿಲ್ಪವಾಗಿದೆ.

ವೀರಗಲ್ಲುಗಳು

೧. **ತುರುಗೋಳ್ ವೀರಗಲ್ಲು:** ಕಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿರುವ ಈ ವೀರಗಲ್ಲನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಇದರ ಎತ್ತರ ೩.೧/೫ ಅಡಿ, ಅಗಲ ೧.೧/೫ ಅಡಿ ವಿಸ್ತೀರ್ಣ ಹೊಂದಿದೆ. ಮೂಲವಾಗಿ ಇದು ಕೆರೆ ಏರಿಯ ಹಿಂಬದಿಯ ಮಾಗಣಿಯಲ್ಲಿ ಹೂತು ಹೋಗಿತ್ತು. ಆದರೆ ಗ್ರಾಮಸ್ಥರು ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸುವ ಸಂದರ್ಭದಲ್ಲಿ ಸಂರಕ್ಷಣೆಯ ದೃಷ್ಟಿಯಿಂದ ದೇವಾಲಯದ ಮುಂದೆ ತಂದಿಟ್ಟಿದ್ದಾರೆ. ಇದೊಂದು ತುರುಗೋಳ್ ವೀರಗಲ್ಲಾಗಿದ್ದು, ಅದರಲ್ಲಿ ಮೂರು ಹಂತಗಳಿವೆ. ಮೊದಲ ಹಂತದಲ್ಲಿ ತುರುಗಳನ್ನು ಸಂರಕ್ಷಿಸುವ ಸಲುವಾಗಿ ವೀರನು ಬಲಭಾಗದಲ್ಲಿ ಬಿಲ್ಲನ್ನು ಹಿಡಿದು ಹೋರಾಡುತ್ತಿರುವ ದೃಶ್ಯವಿದೆ. ಹಾಗೂ ಶತ್ರು ಪಕ್ಷದವರು ಎಡಭಾಗದಿಂದ ಹೋರಾಡುತ್ತಿರುವ ದೃಶ್ಯವನ್ನು ಕಂಡರಿಸಲಾಗಿದೆ. ಎರಡನೆಯ ಹಂತದಲ್ಲಿ ತುರುಗಳ ಸಂರಕ್ಷಣೆಗಾಗಿ ಕಾದಾಡಿ ಮಡಿದ ವೀರನನ್ನು ಅಪ್ಸರೆಯರು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಿರುವ ಸನ್ನಿವೇಶವಿದೆ. ಕೊನೆಯ ಅಥವಾ ಅಂತಿಮ ಹಂತದಲ್ಲಿ ವೀರನು ಕೈಲಾಸದಲ್ಲಿ ಶಿವನ ಸನ್ನಿದಿಯಲ್ಲಿ ದ್ಯಾನ ಮಗ್ನನಾಗಿ ಕುಳಿತಿರುವಂತೆ ಕಂಡರಿಸಲಾಗಿದೆ. ಇದರ ಶೈಲಿಯ ಆಧಾರದಿಂದ ಕ್ರಿಶ ಸು.೧೨ನೇ ಶತಮಾನದದಲ್ಲಿ ರಚಿಸಲಾದ ತುರ್‌ಗೋಳ್ ವೀರಗಲ್ಲು.

೨. ವೀರಗಲ್ಲುಗಳು

೧. ಕಲ್ಲೇಶ್ವರ ದೇವಾಲದ ಒಳಗಡೆ ನಿಲ್ಲಿಸಿರುವ ವೀರಗಲ್ಲನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಇದರ ಎತ್ತರ ೩ ಅಡಿ, ಅಗಲ ೨ ಅಡಿ ವಿಸ್ತೀರ್ಣ ಹೊಂದಿದೆ. ಇದರಲ್ಲಿ ಮೂರು ಹಂತಗಳಿವೆ. ಮೊದಲ ಹಂತದಲ್ಲಿ ವೀರನು ಬಲಭಾಗದಲ್ಲಿ ಬಿಲ್ಲನ್ನು ಹಿಡಿದು ಹೋರಾಡುತ್ತಿರುವ ದೃಶ್ಯವಿದೆ. ಹಾಗೂ ಶತ್ರು ಪಾಳೆಯದವರು ಎಡಭಾಗದಿಂದ ಹೋರಾಡುತ್ತಿರುವ ದೃಶ್ಯವನ್ನು ಕಂಡರಿಸಲಾಗಿದೆ. ಎರಡನೆಯ ಹಂತದಲ್ಲಿ ಮಡಿದ ವೀರನನ್ನು ಅಪ್ಸರೆಯರು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಿರುವ ಸನ್ನಿವೇಶವಿದೆ. ಅಂತಿಮ ಹಂತದಲ್ಲಿ ವೀರನು ಕೈಲಾಸದಲ್ಲಿ ಶಿವನ ಸನ್ನಿಧಿಯಲ್ಲಿ ಧ್ಯಾನ ಮಗ್ನನಾಗಿ ಕುಳಿತಿರುವಂತೆ ಕಂಡರಿಸಲಾಗಿದೆ. ಇದರ ಶೈಲಿಯ ಆಧಾರದಿಂದ ಕ್ರಿ.ಶ. ೧೨ನೇ ಶತಮಾನದಲ್ಲಿ ರಚಿಸಲಾದ ವೀರಗಲ್ಲು ಎಂದು ಹೇಳಬಹುದು.

೨. ಹುಲಿಕೆರೆ ಗ್ರಾಮದ ಕೆರೆಯ ದಂಡೆಯ ದಕ್ಷಿಣ ದಿಕ್ಕಿಗಿರುವ ಮತ್ತೊಂದು ವೀರಗಲ್ಲಿನಲ್ಲಿಯೂ ಮೂರು ಹಂತಗಳಿವೆ. ಮೊದಲನೆಯ ಹಂತದಲ್ಲಿ ಶಿಲ್ಪದ ಬಲಭಾಗದಲ್ಲಿ ವೀರ ಮತ್ತು ಎಡಭಾಗದಲ್ಲಿ ಇಬ್ಬರು ಶತ್ರುಗಳನ್ನು ಚಿತ್ರಿಸಲಾಗಿದೆ. ವೀರನು ಎಡಗೈಯಲ್ಲಿ ಶತ್ರುವಿನ ಶಿರವನ್ನು ಹಿಡಿದಿದ್ದು, ಬಲ ಕೈಯಲ್ಲಿ ಆಯುಧವೊಂದನ್ನು ಹಿಡಿದು ಶತ್ರುವಿನ ಶಿರವನ್ನು ಕತ್ತರಿಸಲು ಮುಂದಾಗಿರುವ ಸನ್ನಿವೇಶವಿದೆ. ಈ ದೃಶ್ಯವನ್ನು ಕಂಡು ಮತ್ತೋರ್ವ ಶತ್ರುವು ಹೋರಾಟದಿಂದ ತಪ್ಪಿಸಿಕೊಂಡು ಹೋಗುತ್ತಿರುವವನು. ಎರಡನೆಯ ಹಂತದಲ್ಲಿ ಮಡಿದ ವೀರನನ್ನು ದೇವಕನ್ನೆಯರು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯವನ್ನು ಕಂಡರಿಸಲಾಗಿದೆ. ಕೊನೆಯ ಹಂತದಲ್ಲಿ ವೀರನು ಕೈಲಾಸದಲ್ಲಿ ಶಿವನ ಸನ್ನಿಧಿಯಲ್ಲಿ ಧ್ಯಾನಸಕ್ತನಾಗಿ ಕುಳಿತಿರುವ ಸನ್ನಿವೇಶವಿದೆ. ಶೈಲಿಯ ಆಧಾರದಿಂದ ಕ್ರಿ.ಶ. ಸು. ೧೫-೧೬ನೆಯ ಶತಮಾನದಲ್ಲಿ ನಿರ್ಮಾಣವಾದದ್ದು ಎಂದು ಗುರುತಿಸಬಹುದಾಗಿದೆ.

ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಿಸಿದ ಕಲ್ಲೇಶ್ವರ ದೇವಾಲಯವು ಈ ಗ್ರಾಮದ ಪ್ರಾಚೀನ ದೇವಾಲಯವೆಂದು ಗುರುತಿಸಲಾಗಿದೆ. ಹಾಗೂ ಆಂಜನೇಯ, ವೀರಭದ್ರೇಶ್ವರ ದೇವಾಲಯಗಳು ನಂತರ ಕಾಲದಲ್ಲಿ ನಿರ್ಮಿಸಲ್ಪಟ್ಟಿವೆ. ದೇವಾಲಯಗಳಲ್ಲಿರುವ ಮೂರ್ತಿಶಿಲ್ಪಗಳು, ವೀರಗಲ್ಲುಗಳನ್ನು ಗುರುತಿಸಲಾಗಿದೆ. ಇದರಿಂದ ಕಿ.ಶ. ಸು. ೧೦೦೦ ವರ್ಷಗಳಿಂದಲೂ ಈ ಗ್ರಾಮ ಪರಿಸರವು ಜನವಸತಿ ಮತ್ತು ಸಾಂಸ್ಕೃತಿಕ ಕೇಂದ್ರವಾಗಿರುವುದು ಸ್ಪಷ್ಟವಾಗುತ್ತದೆ.

ಅಡಿಟಿಪ್ಪಣಿಗಳು

೧. ಕರಿಬಸಪ್ಪ ಎ., ೨೦೦೨, 'ಬಳ್ಳಾರಿ ಜಿಲ್ಲೆಯ ಐತಿಹ್ಯಗಳು', (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ ಹಂಪಿ. ಪು. ೧೨೩.

೨. 'ಕರ್ನಾಟಕ ಗ್ರಾಮ ಸೂಚಿ', ೧೯೮೫, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಪು. ೧೪೭.

೩. ತಿಪ್ಪೇಸ್ವಾಮಿ. ಹೆಚ್., ೨೦೦೦, 'ಕೂಡ್ಲಿಗಿ ತಾಲ್ಲೂಕಿನಲ್ಲಿ ಪ್ರಾಗೈತಿಹಾಸಿಕ ನೆಲೆಗಳು', ಇತಿಹಾಸ ದರ್ಶನ, ಸಂ. ೧೬, ಪು. ೧-೨.

೪. ಶ್ರೀನಿವಾಸ ಎಲ್., ೨೦೧೦, 'ಹಂಪಿ ಪರಿಸರದ ಆದಿಮಾನವನ ನೆಲೆಗಳು', ಪು. ೫೫.

೫. ಅ) ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ್ ಎಸ್.ವೈ., ಮಾಡಲಗೆರೆ ಕೋಟ್ರೇಶ, ೧೯೯೯, 'ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ,' ಪು. ೨೦೧.

ಆ) ೧೯೯೫-೯೬ ಇಂಡಿಯನ್ ಆರ್ಕಿಯಾಲಾಜಿಕಲ್ ರಿವ್ಯೂವ್ ಪು. ೨೯.

೬ ಅಪರ್ಣ ಕೂ.ಸ., ೧೯೯೯, 'ದೇವಾಲಯ ವಾಸ್ತುಶಿಲ್ಪ ಪರಿಚಯ', ಪು. ೮೫.

೭. ಸುರೇಶ ಕೆ.ಎಂ., ಪೂರ್ವೋಕ್ತ, ಪು. ೨೦೨.

೮. ಅಪರ್ಣ ಕೂ.ಸ., ಪೂರ್ವೋಕ್ತ, ಪು. ೮೫.

೯. ಸುರೇಶ ಕೆ.ಎಂ., ಪೂರ್ವೋಕ್ತ, ಪು. ೨೦೨.

೧೦. ರವಿ ಎನ್.ಎಮ್ ಮತ್ತು ವೃಷಬೇಂದ್ರಚಾರ್ ಎ., ೧೯೯೮, ಮುನ್ನಡೆಯಲ್ಲಿ ಕೂಡ್ಲಿಗಿ (ಸಮಗ್ರ ತಾಲ್ಲೂಕು ದರ್ಶನ) ಪು. ೫.

೧೨೭

ಆಲೂರಿನ ಚಾರಿತ್ರಿಕ ನೆಲೆ ಒಂದು ಶೋಧನೆ

ಎಂ.ಹೆಚ್. ವಿಜಯಕುಮಾರ್*

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿರುವ ಆಲೂರು ಗ್ರಾಮವು ಜಿಲ್ಲಾ ಕೇಂದ್ರದಿಂದ ಈಶಾನ್ಯ ದಿಕ್ಕಿನಲ್ಲಿ ೧೩.೬ ಕಿ.ಮೀ. ದೂರದಲ್ಲಿ ಈ ಗ್ರಾಮವು ನೆಲೆಸಿದೆ. ಈ ಗ್ರಾಮದ ಚಾರಿತ್ರಿಕ ಹಿನ್ನೆಲೆಯನ್ನು ಅರಿಯಲು ಇರುವ ಸಾಮಗ್ರಿಯಲ್ಲಿ ಪ್ರಕಟಿತ ಸಾಹಿತ್ಯಗಳ ಜೊತೆಯಲ್ಲಿ ಶಿಲಾಶಾಸನಗಳು, ಮಾಸ್ತಿಕಲ್ಲುಗಳು, ದೇವಾಲಯ ಸ್ಮಾರಕಗಳು ಆದಿಮಾನವನ ನೆಲೆಯ ಅವಶೇಷಗಳು ಪುರಾತತ್ವ ಸ್ಮಾರಕಗಳು ಮತ್ತು ಈಚೆಗೆ ನನ್ನ ಕ್ಷೇತ್ರಕಾರ್ಯದಲ್ಲಿ ಪತ್ತೆಯಾದ ಪ್ರಾಚೀನ ಅವಶೇಷಗಳನ್ನು ಗುರುತಿಸುವುದರ ಜೊತೆಗೆ ಚಾರಿತ್ರಿಕ ನೋಟವೊಂದನ್ನು ಕೊಡಲು ಇಲ್ಲಿ ಯತ್ನಿಸಿದ್ದೇನೆ.

ಆಲೂರು ಗ್ರಾಮದ ಸ್ಥಳನಾಮ

ಆಲೂರು ಎನ್ನುವ ಹೆಸರು ಕುತೂಹಲಕಾರಿಯಾದುದು. ಭಾಷಾಶಾಸ್ತ್ರೀಯವಾಗಿ ಈ ಗ್ರಾಮ ನಾಮವನ್ನು ವಿಶ್ಲೇಷಿಸುವುದಾದರೆ ಆಲ+ಊರು=ಆಲೂರು. ಕನ್ನಡ ಶಬ್ಧಕೋಶ ನಿಘಂಟುವಿನಲ್ಲಿನ ಅರ್ಥವನ್ನು ಅವಲೋಕಿಸಿದಾಗ ಈ ರೀತಿ ಅರ್ಥವಿದೆ. ಆಲ(ಕ)ನಾ. ೧. ಆಲದಮರ ನ್ಯಗ್ರೋಧ, ೨. ಕೆಂಪುಕಮಲ, ೩. ಗೋಳಿಮರ, ೪. ಚೇಳಿನ ಕೊಂಡೆ, ವಟವೃಕ್ಷ, ಮಾರಳತೆ ಎಂಬ ಅರ್ಥವನ್ನು ಪರಿಶೀಲಿಸಿದರೆ ಆಲ ಎಂಬುದು ಪೂರ್ವಪದ ಇದರ ಅರ್ಥ ಆಲದಮರ, ಬೋಧಿವೃಕ್ಷ, ಅರಳಿಮರ ಎಂಬ ಜಾತಿಯ ಮರಗಳು ಈ ಭಾಗದಲ್ಲಿ ಅಧಿಕವಾಗಿ ಇವೆ. ಉತ್ತರಾರ್ಧಪದ ಊರು ಅಂದರೆ ಆಲದಮರಗಳ ಸಮೀಪವೇ ಜನವಸತಿ ಗ್ರಾಮವಾದ ಊರು ಬೆಳೆದು ಬಂದಿರುವುದರಿಂದ ಪ್ರಸ್ತುತ ಈ ಗ್ರಾಮಕ್ಕೆ ಆಲೂರು ಎಂಬ ಸ್ಥಳನಾಮವಿರಬಹುದು. ಪ್ರಸ್ತುತ ಈ ಗ್ರಾಮದಲ್ಲಿ ಆಲದಮರದ ಕುರುಹುಗಳಿಗೆ ಆಡು ಮಾತಿನಿಂದ ಆಲೂರು ಎಂಬ ರೂಪವನ್ನು ಪಡೆದಿದೆ. ಕರ್ನಾಟಕದಲ್ಲಿ ೨೭ ಆಲೂರುಗಳಿವೆ ಯಾವ ಊರಿನಲ್ಲೂ ಪುರಾಣ ಚರಿತ್ರೆ ಜನಪದ ವಿಷಯಗಳಿಲ್ಲ ಎಂಬುದರ ಕುರಿತು ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ.

ಆಲದಮರದಮ್ಮ

ಏಳು ಜನ ಅಮ್ಮಂದಿರಲ್ಲಿ ಮೊದಲನೆಯವರು ಕೆಲವು ಮನೆತನದವರು ಮಾತ್ರ ಪೂಜಿಸುತ್ತಾರೆ. ಕೆಲವರು 'ಮುನಿಯಪ್ಪ' ಹೆಸರಿನಿಂದ ಪೂಜಿಸುತ್ತಾರೆ. ಇವರ ವಾಸ ಆಲದಮರ ಅಥವಾ ಹುತ್ತ ಕೊಳ್ಳಿ ದೆವ್ವಗಳ ಮಧ್ಯೆ ಮೆರವಣಿಗೆ ಹೋಗುವ 'ಜಡೆಮುನಿ' ಯೇ ಈ ಮುನಿಯಪ್ಪನೆಂದು ಹೇಳುತ್ತಾರೆ. ಮುನಿಯಪ್ಪ ಹುತ್ತ, ಕಲ್ಲು, ದಿಬ್ಬ ಅಥವಾ ಚಿಕ್ಕ ಗುಡಿಗಳಲ್ಲಿ ವಾಸ ಮಾಡುತ್ತಾನೆ. ಈ ಸ್ಥಳದ ಸುತ್ತಮುತ್ತ (ನಾಲ್ಕು ಫಜ) ಇರುವ ಜಾಗವನ್ನು ಬೀಳು (ಉಳುಮೆ ಮಾಡುವುದಿಲ್ಲ) ಬಿಟ್ಟಿರುತ್ತಾರೆ. ಆತನನ್ನು ಪೂಜಿಸದಿದ್ದರೆ ಇಡೀ ಬೆಳೆಯನ್ನು ನಾಶ ಮಾಡುತ್ತಾನೆಂಬ ಭಯವಿರುವುದರಿಂದ ವರ್ಷಕ್ಕೊಮ್ಮೆ ಎಡೆಯಿಟ್ಟು ಪೂಜೆ ಮಾಡುತ್ತಾರೆ.

ಬೃಹತ್ ಶಿಲಾಯುಗದ ಕುರುಹುಗಳು

ಚಿನ್ನಪ್ಪರ ಹಳ್ಳ, ಈ ಹಿಂದೆ ಚಿನ್ನದ ನಾಣ್ಯಗಳು ಇದೇ ನಿವೇಶನದಲ್ಲಿ ದೊರೆತಿರುವ ಕಾರಣದಿಂದ ಈ ಪ್ರದೇಶಕ್ಕೆ ಚಿನ್ನಪ್ಪರ ಹಳ್ಳ ಎಂದು ಕರೆಯುತ್ತಾರೆಂದು ಸ್ಥಳೀಯರು ಹೇಳುತ್ತಾರೆ. ಇದು ಜಮೀನಿನ ಪ್ರದೇಶ ಇಲ್ಲಿ ಉಳುಮೆ ಮಾಡುತ್ತಿರುವಾಗ ಬೃಹತ್ ಗಾತ್ರದ ಕಾವಿ ಬಣ್ಣದ ಸುಟ್ಟ ಇಟ್ಟಿಗೆ (ಜಂಬಿಟ್ಟಿಗೆ) ಆಕಾರದಲ್ಲಿ ಸುಮಾರು ೧೦ ಇಂಚು ಅಗಲ ೨೨ ಇಂಚು ಉದ್ದ ೩ ಇಂಚು ದಪ್ಪ ಇಟ್ಟಿಗೆಗಳು ದೊರೆತಿವೆ. ಅಲ್ಲದೇ ಕಾವಿ ಬಣ್ಣದ ದಪ್ಪನೆಯ ಮಡಕೆ ಚೂರುಗಳು ಹಾಗೂ ಬೃಹತ್ ಗಾತ್ರದ ಕಲ್ಲಿನ ಚಪ್ಪಡಿಗಳು ಶಿಲಾ ಸಮಾಧಿಗಳು, ಬೀಸುವ ಕಲ್ಲುಗಳು, ಒರಳು ಕಲ್ಲುಗಳು, ರುಬ್ಬುವ

* ಪ್ರಾಂಶುಪಾಲರು, ಇತಿಹಾಸ ವಿಭಾಗ, ಎಸ್.ಎಂ.ಎಸ್. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ-೫೭೭೦೦೪. ಮೊ. ೯೪೪೯೪೯೨೫೪೧

ಕಲ್ಲುಗಳು ಇನ್ನೂ ಮೊದಲಾದ ಪ್ರಾಗ್ಯೈತಿಹಾಸಿಕ ಕುರುಹುಗಳು ದೊರೆತಿವೆ. ಈ ನಿವೇಶನ ಕ್ರಿ.ಪೂ.ದ ಮಾನವನ ನೆಲೆಯೆಂಬ ಮಾಹಿತಿಯನ್ನು ಸಾಕ್ಷೀಕರಿಸಿದೆ.

ಚಾರಿತ್ರಿಕ ನೆಲೆಯಲ್ಲಿ ಆಲೂರು

ದಾವಣಗೆರೆ ಪ್ರದೇಶದ ಹಿನ್ನೆಲೆ ಅತ್ಯಂತ ಪುರಾತನವಾದುದು ಕ್ರಿ.ಪೂ. ೩ನೇ ಶತಮಾನದಿಂದ ಮೌರ್ಯರ ಆಳ್ವಿಕೆಗೆ ಒಳಪಟ್ಟ ಈ ಭಾಗವು ಚಿತ್ರದುರ್ಗ ಪರಿಸರದಲ್ಲಿ ಮೌರ್ಯರ ಕಾಲದ ಶಾಸನಗಳು ಪತ್ತೆಯಾಗಿವೆ. ಆಲೂರು ಸಮೀಪದಲ್ಲಿರುವ ಅಸಗೋಡು (ಜಗಳೂರು ತಾಲ್ಲೂಕು) ಗ್ರಾಮವು ಪ್ರಾಚೀನ ಕಾಲದಿಂದಲೂ ರಾಜಧಾನಿ ನಗರವಾದ ಉಚ್ಚಂಗಿದುರ್ಗದಿಂದ ೨೦ ಮೈಲಿ ಅಳತೆಯಲ್ಲಿದೆ. ಇದರ ಸಮೀಪದಲ್ಲಿಯೇ ಮೌರ್ಯರ ಕುಟ್ರೆ ಎಂಬ ಬೃಹತ್ ಶಿಲಾಸಮಾಧಿಗಳಿವೆ. ಹಿಂದಿನ ರಾಜಮನೆತನಗಳ ಜೊತೆಗೆ ವಿಜಯನಗರ ಸಾಮ್ರಾಜ್ಯ ಮತ್ತು ಚಿತ್ರದುರ್ಗ ಪಾಳೆಯಗಾರರು ಹಾಗೂ ಮೈಸೂರು ಪ್ರಾಂತ್ಯದ ಹೈದರಾಲಿ ಟಿಪ್ಪು ಅವರ ಅಧೀನದ ವ್ಯಾಪ್ತಿಗೂ ಇದು ಒಳಪಟ್ಟಿತ್ತು. ಹೀಗಾಗಿ ಈ ಭಾಗದಲ್ಲಿ ಹಲವು ಪುರಾತತ್ವ ಅವಶೇಷಗಳು ಪತ್ತೆಯಾಗಿವೆ ಅವುಗಳಲ್ಲಿ ಮುಖ್ಯವಾಗಿ ಶೈವ, ವೈಷ್ಣವ, ಪಾಶುಪತ, ಕಾಳಮುಖ, ಲಾಕುಲೀಶ ಮೊದಲಾದ ಧಾರ್ಮಿಕ ಪಂಥಗಳಿಗೆ ಸಂಬಂಧಿಸಿದ ಶಿಲ್ಪಗಳು ಪತ್ತೆಯಾಗಿವೆ.

ಈ ಗ್ರಾಮದ ಏಳು ಭಾಗದಲ್ಲಿ ಆಂಜನೇಯ ಶಿಲ್ಪಗಳ ಮೂರ್ತಿ ಇರುವ ಚಿಕ್ಕ ಚಿಕ್ಕ ದೇವಾಲಯಗಳಿರುವುದು ಒಂದು ವಿಶೇಷವಾಗಿದೆ. ಸ್ಥಳೀಯರು ಈ ಬಗ್ಗೆ ಏಳು ಗ್ರಾಮಗಳು ಈ ಗ್ರಾಮದ ಸುತ್ತಲೂ ಇರುವ ಬಗ್ಗೆ ಐತಿಹ್ಯಗಳನ್ನು ಹೇಳುತ್ತಾರೆ. ಉಚ್ಚಂಗಿ ಪಾಂಡ್ಯರ ಅಧೀನಕ್ಕೆ ಈ ಆಲೂರು ಗ್ರಾಮ ಒಳಪಟ್ಟಿದ್ದರಿಂದ ವೈಷ್ಣವ ಆರಾಧನೆಗಾಗಿ ಆಂಜನೇಯ ಆರಾಧ್ಯ ದೈವವಾಗಿರುವ ಸಾಧ್ಯತೆ ಇದೆ. ಹಾಗೂ ವಿಷ್ಣು, ಸೂರ್ಯ ಶಿಲ್ಪಗಳು ಸಹ ದೊರೆತಿವೆ. ಇದೇ ರೀತಿ ಶಿವನ ಆರಾಧನೆಗೆ ಸಂಬಂಧಿಸಿದ ಈಶ್ವರ ದೇವಾಲಯ, ನಂದಿವಿಗ್ರಹ, ಬೇಡರ ಕಣ್ಣಪ್ಪ, ಗಣೇಶ ಮೂರ್ತಿ, ನಾಗಶಿಲ್ಪ ಮೂರ್ತಿಗಳು ದೊರೆತಿವೆ. ಭಗ್ನವಾದ ಜೈನ ಬೌದ್ಧ ವಿಗ್ರಹಗಳು ಸಹ ದೊರೆತಿರುವುದರಿಂದ ಧಾರ್ಮಿಕ ಸಮನ್ವತೆಯನ್ನು ಕಾಣಬಹುದಾಗಿದೆ. ಶಕ್ತಿದೇವತೆ ಬುಡಕಟ್ಟು ಸಂಸ್ಕೃತಿ ಅಥವಾ ಕೆಳವರ್ಗದವರನ್ನು ಹೆಚ್ಚು ಪೂಜಿಸಲ್ಪಡುವುದರಿಂದ ಮಹಿಷ ಮರ್ಧಿನಿಯಾದ ಶಕ್ತಿದೇವಿ ಮೂರ್ತಿ ಶಿಲ್ಪವು ದೊರೆತಿದೆ. ಚಿತ್ರದುರ್ಗ ಪಾಳೆಯಗಾರರ ಆರಾಧ್ಯ ದೇವತೆ ಉಚ್ಚಂಗೆಮ್ಮ ದೇವಾಲಯವಿರುವುದು ಇಲ್ಲಿನ ವಿಶೇಷ. ಚೌಡಮ್ಮ ದೇವಾಲಯ ಹಲವು ವೀರಗಲ್ಲು ಮಹಾಸತಿ ಕಲ್ಲುಗಳು ಇಲ್ಲಿನ ಪುರಾತನ ಇತಿಹಾಸವನ್ನು ಹೇಳುತ್ತದೆ.

ಉಚ್ಚಂಗಿದುರ್ಗದಿಂದ ಹುಲುಸು ತಂದ ಹರಿಜನರ ಮೈಲಪ್ಪನ ಸ್ಮಾರಕ

ದಲಿತರ ಮನೆಯ ನಾಯಕನಾದ ಮೈಲಪ್ಪ ಉಚ್ಚಂಗಿದುರ್ಗದಲ್ಲಿ ಸಾಗಿದ ಜಾತ್ರೆಯ ಸಂದರ್ಭದಲ್ಲಿ ಅಲ್ಲಿನ ಹುಲುಸನ್ನು ಆಲೂರು ಗ್ರಾಮದ ಗಡಿ ದಾಟಿ ಉಚ್ಚಂಗಿದುರ್ಗದವರ ದಾಳಿಗೆ ಬಲಿಯಾಗಿ ಪ್ರಾಣತ್ಯಾಗ ಮಾಡಿದ ಇದರ ಸಂಕೇತವಾಗಿ ಆತ ವೀರಮರಣ ಹೊಂದಿದ ನೆನಪಿಗಾಗಿ ವೀರಗಲ್ಲನ್ನು ನೆಟ್ಟರು. ಸ್ಥಳೀಯರು ಈ ಸ್ಥಳವನ್ನು "ಗೊಂಬೆಕಲ್ಲು" ಹೊಲವೆಂದು ಆಲೂರಿನವರು ಕರೆಯುತ್ತಾರೆ.

ಪಾಳೆಯಗಾರರ ಅವಧಿಯಲ್ಲಿ ಆಲೂರು ಕೋಟೆಯ ಸ್ಮಾರಕಗಳು

ಕ್ರಿ.ಶ. ೧೭೮೯ರಿಂದ ೧೭೨೧ರವರೆಗೆ ಬಿಚ್ಚುಗತ್ತಿ ಭರಮಣ್ಣನಾಯಕ ಚಿತ್ರದುರ್ಗ ಪಾಳೆಯಗಾರರಲ್ಲಿ ಪ್ರಮುಖನಾಗಿದ್ದ. ಕ್ರಿ.ಶ. ೧೬೯೦ರಲ್ಲಿ ಚಿತ್ರದುರ್ಗದ ಆಜನ್ಮ ವೈರಿಗಳೆನಿಸಿದ ಹರಪನಹಳ್ಳಿ ಮತ್ತು ಬಿದನೂರಿನವರು ದುರ್ಗದ ಸೀಮೆ ಅಣಜಿಯನ್ನು ಮುತ್ತಿ ಆಕ್ರಮಿಸಿಕೊಂಡರು ಮರುವರ್ಷವೆ ಹಾವನೂರು, ಗುಡೇಕೋಟೆ, ಅನಂತಪುರ, ಜರಿಮಲೆ, ತರಿಕೆರೆ ಮೊದಲಾದ ಸಂಸ್ಥಾನಿಕರನ್ನು ದುರ್ಗಕ್ಕೆ ಕರೆಸಿ ಅದನ್ನು ಮರುಆಕ್ರಮಿಸಕೊಳ್ಳಲಾಯಿತು. ಈ ಅವಧಿಯಲ್ಲಿ ದುರ್ಗದ ಸಂಸ್ಥಾನವು ಪ್ರಬಲಿಸಿತು. ಅವುಗಳಲ್ಲಿ ಆಲೂರು ಗ್ರಾಮದಲ್ಲಿ ನಿರ್ಮಾಣವಾದ ಪಾಳೆಯಗಾರರ ಕಾಲದ ಕೋಟೆ, ಬತ್ತೇರಿ ಮಹಾದ್ವಾರಗಳು (ಅಗಸಿಬಾಗಿಲು) ದಿಡ್ಡಿಬಾಗಿಲುಗಳು. ೩೦ ಅಡಿ ಆಳದ ಚೌಕಾಕಾರದ ಬಾವಿ, ತೂಗು ಉಯ್ಯಾಲೆ ಮಂಟಪ ಮೊದಲಾದ ಸ್ಮಾರಕ ಮತ್ತು ದೇವಾಲಯಗಳನ್ನು ಇಲ್ಲಿ ಅವಲೋಕಿಸಬಹುದು.

ಉಚ್ಚಂಗಿದುರ್ಗದಿಂದ ಚಿತ್ರದುರ್ಗಕ್ಕೆ ಉತ್ಸವಾಂಬೆ ವಿಗ್ರಹ ತಂದಿದ್ದು


ಚಿತ್ರದುರ್ಗದ ಪಾಳೆಯಗಾರರ ಕುಲದೇವತೆ ಉಚ್ಚಂಗಿದುರ್ಗದ ಉಚ್ಚಂಗೆಮ್ಮ (ಉತ್ಸಾವಾಂಬೆ) ವಿಗ್ರಹ ತಂದು ನೆಲೆಸಬೇಕೆಂಬ ಬಯಕೆ ಉಚ್ಚಂಗಿದುರ್ಗ, ಹರಪನಹಳ್ಳಿ ವಶದಲ್ಲಿರುವುದರಿಂದ ಹರಪನಹಳ್ಳಿಯವರು ದಕ್ಷಿಣೋತ್ತರವಾಗಿ



ಮಹಿಷಮರ್ಧಿನಿ



ಸೂರ್ಯಶಿಲ್ಪ




ಸುಟ್ಟ ಇಟ್ಟಿಗೆ



ಬೇಡರ ಕಣ್ಣಪ್ಪ



ಒರಳಕಲ್ಲು



ಮಡಿಕೆ ಚೂರುಗಳು

ಹಬ್ಬಿರುವ ಎರಡು ಗುಡ್ಡಗಳನ್ನು ದಾಟಿ ಎರಡು ಬಾರಿ ದೇವಿ ವಿಗ್ರಹ ತರಲು ಹೋಗಿ ವಿಫಲರಾಗಿದ್ದರು. ಚಿತ್ರದುರ್ಗದರು ಭರಮಣ್ಣನಾಯಕ ಸೈನ್ಯದೊಂದಿಗೆ ದೇವಿ ವಿಗ್ರಹ ತರಲು ಆಲೂರಿಗೆ ಬಂದು ಬಿಡಾರ ಹೂಡಿದರು. ತನ್ನ ಕುಲದೇವರಾದ ಉತ್ಸವಾಂಬೆ ವಿಗ್ರಹವನ್ನು ಏನಾದರೂ ಮಾಡಿ ತರಲೇಬೇಕೆಂದು ಸೈನ್ಯದ ಜೊತೆಗೆ ವೆಂಕಣ್ಣನೆಂಬ ಜೋಯಿಸರೊಂದಿಗೆ ತಂತ್ರಗಾರಿಕೆ ನಡೆಸಿ ಚಾಣಕ್ಷತನದಿಂದ ವಿಗ್ರಹವನ್ನು ವಶ ಮಾಡಿಕೊಂಡರು. ಇದರ ಸಂತೋಷವಾಗಿ ಭರಮಣ್ಣನಾಯಕ ವೆಂಕಣ್ಣಜೋಯಿಸರಿಗೆ ಆಲೂರನ್ನು ಉಂಬಳಿ ಬಿಟ್ಟರೆಂದು ಹಿರಿಯರು ಹೇಳುತ್ತಾರೆ. ಆಲೂರಿನಲ್ಲಿರುವ ಒಂದು ಗುಂಡಿಗೆ ವೆಂಕಣ್ಣ ಬಾವಿಯೆಂದು ಕರೆಯುವರು. ಉಚ್ಚಂಗೇಮ್ಮ ದೇವಾಲಯ ಆಲೂರಿನಲ್ಲಿ ಪ್ರಮುಖ ಆರಾಧ್ಯ ದೈವವಾಗಿ ಒಂದು ಸ್ಮಾರಕವಾಗಿದೆ.

ಆಲೂರಿನ ದೇವದಾಸಿ ಕೆಂಚವ್ವ

ಹಿಂದಿನ ಕಾಲದಲ್ಲಿ ರಾಜ ಮಹಾರಾಜರುಗಳು ಸಮಾಜಸೇವಾ ಕಾರ್ಯ ಕೈಗೊಂಡಂತೆ ಸೂಳೆಯರು ಸಹ ಇತಿಹಾಸದಲ್ಲಿ ಸಮಾಜಸೇವೆ ಮಾಡುತ್ತಾ ಕೆರೆ, ಕಾಲುವೆ, ಬಾವಿ, ಪೂಜಾ ಮಂದಿರ, ಜನೋಪಕಾರಿ ಕಾರ್ಯಗಳನ್ನು ಕೈಗೊಂಡ ಉದಾಹರಣೆಗಳು ಅನೇಕ ಅದರಲ್ಲಿ ಸೂಳೆಕೆರೆ ಶಾಂತವ್ವಳಂತೆ, ಆಲೂರಿನ ದೇವದಾಸಿ ಕೆಂಚವ್ವ ಸಹ ಒಬ್ಬಳು ಆಕೆಯು ತನ್ನ ಪಾಪದ ಪ್ರಾಯಶ್ಚಿತ್ತದಿಂದ ಪಾರಾಗಿ ಪುಣ್ಯ ಸಂಪಾದನೆಗಾಗಿ ಒಂದು ಗೋಕಟ್ಟೆ ನಿರ್ಮಿಸಿದ ಸ್ಮಾರಕ ಈ ಗ್ರಾಮದಲ್ಲಿದೆ.

ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿ ಆಲೂರು

ಹರಪನಹಳ್ಳಿ ಪಾಳೆಯಗಾರರಿಗೆ ಸದಾ ಅಣಜಿ, ಬಿಳಿಚೋಡು, ಆಲೂರು ಸಮೀಪವಿದ್ದುದರಿಂದ ಪಾಳೆಯಗಾರರು ಇಲ್ಲಿಯ ಕೋಟೆಗಳ ಮೇಲೆ ಸದಾ ತೋಪುಗಳನ್ನು ಇಡುತ್ತಿದ್ದರು. ಚಿಕ್ಕಣ್ಣ ನಾಯಕರ ಕಾಲದಲ್ಲಿ ಕಣಕುಪ್ಪೆ ಅತ್ಯಂತ ವೈಭವದ ಸ್ಥಿತಿಯಲ್ಲಿದ್ದಾಗ ಆಲೂರು ಕಣಕುಪ್ಪೆ ಚಿತ್ರನಾಯಕನ ಆಡಳಿತಕ್ಕೆ ಒಳಪಟ್ಟಿತ್ತು ನಂತರ ಚಿತ್ರದುರ್ಗ ಹೈದರನ ಕೈವಶವಾದಾಗ ಕಣಕುಪ್ಪೆಯಲ್ಲಿ ಸೈಯದ್ ಹುಸೇನಿಯನ್ನು ಕಿಲ್ಲೇದಾರರನ್ನಾಗಿ ನೇಮಿಸಿದ್ದರು. ಈತನು ಆಲೂರಿನಲ್ಲಿರುವ ತೋಪನ್ನು ಕಣಕುಪ್ಪೆಗೆ ತರಿಸಿಕೊಂಡಿದ್ದನು.

[ಆಲೂರು ಗ್ರಾಮದ ಎಂ. ಗಂಗಪ್ಪ, ಶಿಕ್ಷಕರು, ಗ್ರಾಮದ ಐತಿಹಾಸಿಕದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹಾಗೂ ಛಾಯಾಚಿತ್ರಗಳನ್ನು ಸಂಗ್ರಹಿಸಿ ಕೊಟ್ಟಿರುತ್ತಾರೆ. ನಮ್ಮ ವಿದ್ಯಾರ್ಥಿ ಗಜೇಂದ್ರ ಇವರು ಸಹ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಹೆಚ್ಚಿನ ಸಹಕಾರ ನೀಡಿರುತ್ತಾರೆ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.]

ಆಕರ ಗ್ರಂಥಗಳು

೧. ಡಾ. ಮೈಸೂರು ನಾಗರಾಜ ಶರ್ಮ್, ೨೦೧೧, ಪುರಾತತ್ವ ಪರ್ಯಟನೆ (ಸಂಶೋಧನಾ ಲೇಖನಗಳ ಸಂಚಯ) ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨. ಪ್ರೊ. ರಾಮ್ ಶರಣ್ ಶರ್ಮ (ಮೂಲ) ಎನ್.ಪಿ. ಶಂಕರನಾರಾಯಣರಾವ್ (ಅನು), ೧೯೯೭, ಪ್ರಾಚೀನ ಭಾರತ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩. ಪ್ರೊ. ಬಿ. ಷೇಕ್ ಅಲಿ, ಪ್ರೊ. ಬಿ. ಸುರೇಂದ್ರರಾವ್, (ಸಂ), ೧೯೯೭, ಕರ್ನಾಟಕ ಚರಿತ್ರೆ, ಸಂ. ೨, ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ.

೪. ಟಿ. ಗಿರಿಜಾ (ಲೇ), ೨೦೦೧, ದಾವಣಗೆರೆ ಇದು ನಮ್ಮ ಜಿಲ್ಲೆ, ನಿಹಾರಿಕ ಪ್ರಕಾಶನ ೪೯, ೧/ಬಿ, ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ–೦೨.

೫. ಲಕ್ಷ್ಮಣ್ ತೆಲಗಾವಿ, ಡಾ. ಎಂ.ವಿ. ಶ್ರೀನಿವಾಸ (ಸಂ), ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ.

೬ ಪ್ರೊ. ಬಿ. ರಾಜಶೇಖರಪ್ಪ (ಲೇ), ೨೦೦೧, ಇತಿಹಾಸ ಕಥನ, ಚಿತ್ರದುರ್ಗ ಪರಿಸರದ ಇತಿಹಾಸ ಕುರಿತು ಸಂಶೋಧನೆ ಪ್ರಬಂಧಗಳು, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.

೭. ಡಾ. ದೇವರಕೊಂಡರೆಡ್ಡಿ, ಪ್ರೊ. ಜಿ.ಕೆ. ದೇವರಾಜಸ್ವಾಮಿ (ಸಂ), ೨೦೧೬, ಇತಿಹಾಸ ದರ್ಶನ, ಸಂ. ೩೧, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು.

೮. ಎಂ. ಗಂಗಪ್ಪ (ಸಂ), ೨೦೧೫, ದಾವಣಗೆರೆ ಜಿಲ್ಲೆಯ ಆಲೂರಿನ ದರ್ಶನ, ಪ್ರಕಾಶಕರು, ಎಂ. ಗಂಗಪ್ಪನವರು, ಆಲೂರು, ದಾವಣಗೆರೆ.

ಮಚ್ಚೇರಿಯ ಕಲ್ಲೇಶ್ವರಸ್ವಾಮಿ (ವಜ್ರೇಶ್ವರ) ದೇವಾಲಯ ಒಂದು ಅವಲೋಕನ

ಬಿ.ಆರ್. ಜಗನ್ನಾಥ* ಸಿ.ಈ. ಲೋಕೇಶ**

ಚಿಕ್ಕಮಗಳೂರು ಜಿಲ್ಲೆಯ ಮಚ್ಚೇರಿ ಗ್ರಾಮವು ಉತ್ತರಕ್ಕೆ ತರೀಕೆರೆ ತಾಲೂಕು ದಕ್ಷಿಣಕ್ಕೆ ಅರಸೀಕೆರೆ ತಾಲೂಕು ಪೂರ್ವಕ್ಕೆ ಹೊಸದುರ್ಗ ಮತ್ತು ಪಶ್ಚಿಮಕ್ಕೆ ಚಿಕ್ಕಮಗಳೂರು ತಾಲೂಕುಗಳಿಂದ ಆವರಿಸಿಕೊಂಡಿದೆ. ಮಚ್ಚೇರಿ ಗ್ರಾಮವು ಪ್ರಾಗೈತಿಹಾಸಿಕ ಕಾಲದಿಂದಲೂ ಕೂಡ ಜನವಸತಿಯ ಪ್ರದೇಶವಾಗಿತ್ತು ಎಂಬುವುದಕ್ಕೆ ಅಲ್ಲಿ ದೊರೆತಿರುವ ಅನೇಕ ಐತಿಹಾಸಿಕ ಕುರುಹುಗಳು ಸಾಕ್ಷಿಯಾಗಿವೆ. ಹೀಗಾಗಿ ಪ್ರಸ್ತುತ ಈ ಗ್ರಾಮದಲ್ಲಿ ಯೋಗನರಸಿಂಹಸ್ವಾಮಿ ದೇವಾಲಯ, ಕೇಶವ ದೇವಾಲಯ ಮತ್ತು ಕಲ್ಲೇಶ್ವರ (ವಜ್ರೇಶ್ವರ) ಸ್ವಾಮಿ ದೇವಾಲಯಗಳು ಕಂಡುಬರುತ್ತವೆ. ಇವುಗಳಲ್ಲಿ ಅತ್ಯಂತ ಪ್ರಾಚೀನ ದೇವಾಲಯವೆಂದರೆ ಕಲ್ಲೇಶ್ವರ (ವಜ್ರೇಶ್ವರ) ಸ್ವಾಮಿ ದೇವಾಲಯ. ಈ ದೇವಾಲಯವನ್ನು ನಿರ್ಮಾಣ ಮಾಡಿದ ಬಗ್ಗೆ ಯಾವುದೇ ರೀತಿಯ ಸ್ಪಷ್ಟ ಆಧಾರಗಳು ಇದುವರೆಗೂ ಲಭ್ಯವಾಗಿಲ್ಲ.

ಈ ದೇವಾಲಯವು ಮಚ್ಚೇರಿಯಿಂದ ಬೆಳ್ಳೂರಿಗೆ ಹೋಗುವ ರಸ್ತೆಯ ಉತ್ತರ ಭಾಗದಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣ ಮಾಡಲಾಗಿದ್ದು ಇದೊಂದು ತ್ರಿಕೂಟ ದೇವಾಲಯವಾಗಿದೆ. ಇದು ಮೂರು ಗರ್ಭಗೃಹ, ಒಂದು ಸುಖನಾಸಿ, ಒಂದು ನವರಂಗ ಮತ್ತು ಮುಖ ಮಂಟಪವನ್ನು ಹೊಂದಿದೆ. ಆದರೆ, ಇದರಲ್ಲಿರುವ ಮುಖ್ಯ ಗರ್ಭಗೃಹವೆಂದರೆ ಪಶ್ಚಿಮದ ಗರ್ಭಗೃಹವಾಗಿದ್ದು ಇದಕ್ಕೆ ಮಾತ್ರ ಸುಖನಾಸಿಯಿದ್ದು, ಉಳಿದ ಉತ್ತರ, ದಕ್ಷಿಣದ ಗರ್ಭಗೃಹದ ಮುಂದೆ ಯಾವುದೇ ತರನಾದ ಸುಖನಾಸಿ ಕಾಣಬರುವುದಿಲ್ಲ. ಆದ್ದರಿಂದ ಈಗಾಗಲೇ ಈ ದೇವಾಲಯ ಶಿಥಿಲಾವಸ್ಥೆಯಲ್ಲಿದ್ದು, ಉತ್ತರ ಮತ್ತು ದಕ್ಷಿಣದ ಗರ್ಭಗೃಹಗಳು ಸಂಪೂರ್ಣವಾಗಿ ನಶಿಸಿಹೋಗಿವೆ. ಈ ದೇವಾಲಯವು ನಿಖರವಾಗಿ ಯಾವಾಗ ನಿರ್ಮಾಣಗೊಂಡಿತು ಎಂಬುದು ಸ್ಪಷ್ಟವಿಲ್ಲ. ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪದ ಆಧಾರದಿಂದ ಇದರ ನಿರ್ಮಾಣದ ಕಾಲಘಟ್ಟವನ್ನು ಹೊಯ್ಸಳರ ಕಾಲಕ್ಕೆ ಕೊಂಡಯ್ಯಬಹುದು ಆದರೂ ಈ ದೇವಾಲಯದಲ್ಲಿ ಇರುವ ಒಂದು ಶಾಸನದ ಆಧಾರದಿಂದ ಇದು ಹೊಯ್ಸಳರ ದೊರೆ ವಿಷ್ಣುವರ್ಧನನ ಆಳ್ವಿಕೆಯ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿದೆ ಎಂಬುದು ತಿಳಿದುಬರುತ್ತದೆ.

ಗರ್ಭಗೃಹವು ಸುಮಾರು ಎಂಟು ಅಡಿ ಉದ್ದ ಮತ್ತು ಎಂಟು ಅಡಿ ಅಗಲವಾಗಿದ್ದು ಸರಳವಾಗಿದೆ. ಇಲ್ಲಿ ಸುಮಾರು ಒಂದು ಅಡಿ ಪಾಣಿ ಪೀಠದ ಮೇಲೆ ಮೂರು ಅಡಿ ಎತ್ತರದ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು, ಬಹಳ ಮನೋಹರವಾಗಿದೆ. ಈ ಗರ್ಭಗುಡಿಯ ಮೇಲ್ಭಾಗದಲ್ಲಿ ಭುವನೇಶ್ವರಿಯನ್ನು ಕೆತ್ತಲಾಗಿದೆ. ಗರ್ಭಗುಡಿಯ ಬಾಗಿಲು ಸರಳವಾಗಿದ್ದು, ಯಾವುದೇ ಅಲಂಕರಣಗಳಿಂದ ಕೂಡಿಲ್ಲ. ಸುಖನಾಸಿಯು ಸಹ ಗರ್ಭಗುಡಿಯ ಅಳತೆಯಷ್ಟೆ ಉದ್ದ ಮತ್ತು ಅಗಲವಾಗಿದ್ದು ಇದು ಸಹ ಸರಳವಾಗಿದೆ.

ಗರ್ಭಗೃಹ ಎಡಭಾಗದ ಗರ್ಭಗುಡಿಯು ಸರಳವಾಗಿದ್ದು ದ್ವಾರಬಂಧವನ್ನು ಹೊಂದಿದೆ. ಆದರೆ ಇಲ್ಲಿ ಯಾವುದೇ ಮೂರ್ತಿ ಶಿಲ್ಪಗಳಿಲ್ಲ. ಹಾಗೆಯೇ ಬಲಭಾಗದ ಗರ್ಭಗುಡಿಯಲ್ಲಿಯೂ ಸಹ ಯಾವುದೇ ಶಿಲ್ಪಗಳಿಲ್ಲ. ಸುಖನಾಸಿಯ ದ್ವಾರದ ಇಕ್ಕೆಲಗಳ ಎಡಭಾಗದಲ್ಲಿ ಮೂರ್ತಿ ಶಿಲ್ಪ ಹಾಗೂ ಬಲಭಾಗದಲ್ಲಿ ಷಣ್ಮುಖನು ನವಿಲಿನ ಮೇಲೆ ಕುಳಿತಿರುವ ಮೂರ್ತಿ ಶಿಲ್ಪವಿದೆ.

ಸುಖನಾಸಿ ಗರ್ಭಗೃಹದಷ್ಟೆ ಉದ್ದ ಮತ್ತು ಅಗಲವಾಗಿದ್ದು, ಸರಳವಾಗಿದೆ. ಇದರಲ್ಲಿ ಯಾವುದೇ ಮೂರ್ತಿ ಶಿಲ್ಪಗಳು ಕಾಣಬರುವುದಿಲ್ಲ. ಮೇಲ್ಛಾವಣಿಯಲ್ಲಿ ವೃತ್ತಕಾರವಾಗಿ ಬಿಡಿಸಲಾಗಿರುವ ಪದ್ಮಪುಷ್ಪವಿದೆ. ಸುಖನಾಸಿ ಬಾಗಿಲ ಪಟ್ಟಿಕೆಗಳಲ್ಲಿ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬.

** ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು–೫೭೦೦೦೬.

ಯಾವುದೇ ರೀತಿಯ ಅಲಂಕರಣದ ಕೆತ್ತನೆ ಕಂಡುಬರುವುದಿಲ್ಲ. ಬಾಗಿಲು ಸರಳವಾಗಿದೆ. ಉತ್ತರ ಮತ್ತು ದಕ್ಷಿಣದ ಗರ್ಭಗುಡಿಗಳು ಸಂಪೂರ್ಣವಾಗಿ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಬಿದ್ದುಹೋಗಿವೆ. ಆದರೆ ಬಾಗಿಲ ಪಟ್ಟಿಕೆಗಳು ಈಗಲೂ ಹಾಗೆಯೇ ಉಳಿದುಕೊಂಡಿದೆ. ಇವುಗಳಲ್ಲಿ ಯಾವುದೇ ರೀತಿಯ ಅಲಂಕರಣದ ಕೆತ್ತನೆ ಕಾಣಬರುವುದಿಲ್ಲ ಮತ್ತು ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಂಡುಬರುವುದಿಲ್ಲ.

ನವರಂಗವು ೨೪ ಅಡಿ ಅಗಲ ಮತ್ತು ೪೪ ಅಡಿ ಉದ್ದದಿಂದ ಕೂಡಿದ್ದು, ಒಟ್ಟು ದಶ ಕಂಬಗಳನ್ನು ಒಳಗೊಂಡಿದೆ. ಮಧ್ಯಭಾಗದ ನಾಲ್ಕು ಕಂಬಗಳು ವೃತ್ತಾಕಾರವಾಗಿದ್ದು, ಕ್ರಮವಾಗಿ ಪೀಠ, ಪಾದ, ಜಂಗ, ಕಪೋತಗಳನ್ನು ಹೊಂದಿವೆ. ಈ ಕಂಬಗಳು ವೃತ್ತಾಕಾರವಾಗಿ ನುಣುಪಾಗಿವೆ. ಈ ಕಂಬಗಳಿಗೆ ಅನ್ವಯಿಸುವಂತೆ ದಕ್ಷಿಣ ಮತ್ತು ಉತ್ತರ ದಿಕ್ಕಿಗೆ ಎರಡು ದ್ವಾರಗಳಿವೆ. ಈ ನಾಲ್ಕು ಕಂಬಗಳ ಮಧ್ಯಭಾಗದಲ್ಲಿ ನಂದಿಯ ಶಿಲ್ಪಗಳಿವೆ. ಇದರ ಮೇಲ್ಭಾಗದಲ್ಲಿ ಕಮಲದ ಪುಷ್ಪದ ಆಕಾರದಲ್ಲಿ ಭುವನೇಶ್ವರಿ ಇದೆ. ಇನ್ನುಳಿದ ಆರು ಕಂಬಗಳು ಸರಳವಾಗಿದ್ದು, ಅವು ಕೂಡ ವೃತ್ತಾಕಾರವಾಗಿವೆ. ಈ ಕಂಬಗಳು ಕೂಡ ಪೀಠ, ಪಾದ, ಬೋಧಿಗೆಯನ್ನು ಹೊಂದಿದ್ದು, ಸರಳವಾಗಿ ವೃತ್ತಾಕಾರವಾಗಿದೆ.

ಮೂರು ಗರ್ಭಗೃಹಗಳಿಗೂ ಹೊಂದಿಕೊಂಡಂತೆ ಈ ನವರಂಗವನ್ನು ಮಧ್ಯದಲ್ಲಿ ನಿರ್ಮಿಸಲಾಗಿದೆ. ಚೌಕಕಾರವಾಗಿರುವ ಈ ನವರಂಗವು ಸುಮಾರು ೨೪ ಅಡಿ ಅಗಲ ೪೪ ಮತ್ತು ಅಡಿ ಉದ್ದವಾಗಿವೆ. ಇದರ ಮಧ್ಯದಲ್ಲಿ ಹೊಯ್ಸಳ ಶೈಲಿಯ ನಕ್ಷತ್ರಕಾರದ ನಾಲ್ಕು ಕಂಬಗಳಿವೆ. ಇವುಗಳಿಗೆ ಹೊಂದಿಕೊಂಡಂತೆ ಇತರ ಹೊಯ್ಸಳ ಶೈಲಿಯಲ್ಲಿರುವ ೮ ಕಂಬಗಳು ಕಂಡುಬರುತ್ತವೆ. ಇವುಗಳು ಕ್ರಮವಾಗಿ ಪೀಠ, ಪಾದ, ಜಂಗ, ಕಪೋತಗಳನ್ನು ಹೊಂದಿರುವಂತೆ ರಚಿಸಿ ಮೇಲ್ಛಾವಣಿಗೆ ಆಸರೆಯಾಗಿ ನಿಲ್ಲಿಸಲಾಗಿದೆ.

ನವರಂಗದ ನಾಲ್ಕು ಕಂಬಗಳ ಮಧ್ಯದಲ್ಲಿ ನಂದಿಯನ್ನು ಶಿವನಿಗೆ ಎದುರಾಗಿ ಪ್ರತಿಷ್ಠಾಪಿಸಲಾಗಿದೆ. ಮತ್ತೊಂದು ನವರಂಗದ ಮೇಲ್ಛಾವಣಿಯ ಮಧ್ಯದಲ್ಲಿ ನಕ್ಷತ್ರಕಾರವಾಗಿರುವ ಭುವನೇಶ್ವರಿ ಇದೆ. ನವರಂಗದ ಪಶ್ಚಿಮದಲ್ಲಿ ಅಂದರೆ ಸುಖನಾಸಿಯ ಎಡ ಮತ್ತು ಬಲ ಭಾಗದಲ್ಲಿ ಗಣೇಶ ಮತ್ತು ಸುಬ್ರಹ್ಮಣ್ಯನ ಮೂರ್ತಿಗಳನ್ನು ಇರಿಸಲಾಗಿದೆ. ನವರಂಗದ ದಕ್ಷಿಣ ಭಾಗದ ಗೋಡೆಯ ಮುಂದೆ ಕೆಲವು ನಾಗಶಿಲ್ಪಗಳನ್ನು ಇರಿಸಲಾಗಿದೆ. ನವರಂಗಕ್ಕೆ ಉತ್ತರ ಮತ್ತು ದಕ್ಷಿಣದಲ್ಲಿ ಒಂದೊಂದು ಬಾಗಿಲುಗಳಿವೆ. ನವರಂಗದ ಬಾಗಿಲುಗಳ ಪಟ್ಟಿಕೆಗಳು ಸರಳವಾಗಿವೆ. ಯಾವುದೇ ರೀತಿಯ ಅಲಂಕರಣದ ಕೆತ್ತನೆ ಕಾಣಬರುವುದಿಲ್ಲ. ಇದು ಸರಳವಾಗಿದೆ.

ನವರಂಗದ ಮಧ್ಯದ್ವಾರದ ಮುಂದೆ ಎರಡು ಕಂಬಗಳ ಮೇಲೆ ಮೇಲ್ಛಾವಣಿ ಮಾಡಿ ರಚಿಸಲಾಗಿರುವ ಮುಖಮಂಟಪವಿದೆ. ಮುಕ್ತವಾಗಿರುವ ಈ ಮುಖಮಂಟಪದ ಇಕ್ಕೆಲಗಳಲ್ಲಿ ಜಗತಿಯನ್ನು ಮಾಡಲಾಗಿದೆ. ಮೇಲ್ಛಾವಣಿಯ ಮಧ್ಯದಲ್ಲಿ ಭುವನೇಶ್ವರಿ ಇದ್ದು, ನಕ್ಷತ್ರಕಾರವಾಗಿ ರಚಿಸಲಾಗಿದೆ.

ದೇವಾಲಯವು ಸಂಪೂರ್ಣವಾಗಿ ಭಗ್ನಗೊಂಡಿದ್ದು, ದೇವಾಲಯದ ಮುಂಭಾಗದ ಗೋಡೆಗೆ ಸೇರಿಸಿದ ಅವಶೇಷಗಳು ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಕ್ರಮವಾಗಿ ಅದಿಷ್ಠಾನ, ಭಿತ್ತಿ, ಕಪೋತ ಹಾಗೂ ಶಿಖರದ ಭಾಗವನ್ನು ಹೊಂದಿವೆ.

ಕಂಠ ಹಾಗೂ ಅದಿಷ್ಠಾನ ಭಾಗವು ಸರಳವಾಗಿದ್ದು, ಉಪಾನ, ಕುಮುದ, ಗಳ, ಕಪೋತ ಭಾಗಗಳನ್ನು ಹೊಂದಿದ್ದು ಸರಳವಾಗಿದೆ. ಕುಮುದವು ವೃತ್ತ ಕುಮುದವನ್ನು ಹೊಂದಿದೆ.

ಭಿತ್ತಿಯು ಸರಳವಾಗಿದ್ದು, ಭಿತ್ತಿಯ ಮೇಲ್ಭಾಗದಲ್ಲಿ ಅರೆಗಂಬಗಳಿವೆ. ಕಪೋತವು ಕೂಡ ಸರಳವಾಗಿದ್ದು, ಭಿತ್ತಿಯಿಂದ ಮುಂಚಾಚಿದೆ. ಕಪೋತದ ಮೇಲೆ ಹಾರವಿದ್ದಂತೆ ಕಾಣಬರುತ್ತದೆ. ಶಿಖರವು ಸಂಪೂರ್ಣವಾಗಿ ಭಗ್ನಗೊಂಡಿದ್ದು, ಶಿಖರದ ಅವಶೇಷಗಳಾದ ಇಟ್ಟಿಗೆ, ಗಾರೆ ಸ್ವಲ್ಪಮಟ್ಟಿಗೆ ಕಾಣುತ್ತದೆ. ದೇವಾಲಯದ ಶಿಖರದ ಮೇಲ್ಭಾಗದಲ್ಲಿ ಸಂಪೂರ್ಣವಾಗಿ ಹುಲ್ಲಿನ ರಾಶೀಯೇ ಬೆಳೆದು ನಿಂತಿದೆ.

ನವರಂಗಕ್ಕೆ ಎದುರಾಗಿ ಉತ್ತರದ ಭಾಗವು ಸರಳವಾಗಿದ್ದು, ಈ ದ್ವಾರದ ಇಕ್ಕೆಲಗಳಲ್ಲಿ ಕಕ್ಷಾಸನವಿದೆ. ಈ ದ್ವಾರದ ಲಲಾಟ ಬಿಂಬದ ಮೇಲೆ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ ಮತ್ತು ದ್ವಾರಬಂದುವು ಸರಳವಾಗಿದೆ. ದಕ್ಷಿಣದ್ವಾರವು ಕೂಡ ಉತ್ತರದ್ವಾರದ ಶೈಲಿಯಲ್ಲಿಯೇ ಇದೆ. ಈ ದ್ವಾರದಲ್ಲಿಯೂ ಕೂಡ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ.

ಒಟ್ಟಾರೆಯಾಗಿ ಈ ಮೇಲೆ ವಿವರಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ದೇವಾಲಯಕ್ಕೆ ಬಳಸಲಾಗಿರುವ ಕಲ್ಲು ನವರಂಗದಲ್ಲಿರುವ ಕಂಬಗಳ ಶೈಲಿ ಮತ್ತು ಶಿಲ್ಪಗಳ ಆಧಾರದಿಂದ ಈ ದೇವಾಲಯವನ್ನು ಹೊಯ್ಸಳರ ದೊರೆ





ಮಚ್ಚೇರಿ ಗ್ರಾಮದ ಕಲ್ಲೇಶ್ವರಸ್ವಾಮಿ (ವಜ್ರೇಶ್ವರ) ದೇವಾಲಯ




ವಜ್ರೇಶ್ವರ ದೇವಾಲಯದ ನವರಂಗ



ನವರಂಗದ ಕಂಬ




ಗಣೇಶ ಮತ್ತು ಸುಬ್ರಹ್ಮಣ್ಯನ ಮೂರ್ತಿಗಳು



ನಂದಿ



ದೇವಾಲಯದ ಭಿತ್ತಿ



ದೇವಾಲಯದ ಪಾರ್ಶ್ವನೋಟ

ವಿಷ್ಣುವರ್ಧನನ ಕಾಲದಲ್ಲಿ ನಿರ್ಮಿಸಲಾಗಿದೆಯೆಂದು ಹೇಳಬಹುದು. ಇದಕ್ಕೆ ಆಧಾರವಾಗಿ ಚಿಕ್ಕಮಗಳೂರು ಗೆಜೆಟಿಯರ್‌ನಲ್ಲಿ [ಪುಟಸಂಖ್ಯೆ ೬೦೪] ತಿಳಿಸಿರುವ ಪ್ರಕಾರ ಈ ದೇವಾಲಯವನ್ನು ವಿಷ್ಣುವರ್ಧನ ನಿರ್ಮಿಸಿದನೆಂದು ಹಾಗೂ ವಿಷ್ಣುವರ್ಧನನ ಮಂತ್ರಿಯಾದ ಬೊಪ್ಪದೇವನು ಹಾಗೂ ೨ನೇ ಬಲ್ಲಾಳನು ಈ ದೇವಾಲಯದ ಜೀರ್ಣೋದ್ಧಾರಕ್ಕೆ ದಾನ ನೀಡಿದ ಬಗ್ಗೆ ಮಾಹಿತಿ ತಿಳಿದುಬರುತ್ತದೆ.

ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಪಾರಂಪರಿಕ ಕಟ್ಟಡದಲ್ಲಿ ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಸಂಪದ್ಭರಿತವಾಗಿದ್ದು ಈ ದೇವಾಲಯವು ಸಂಪೂರ್ಣವಾಗಿ ನಶಿಸುವ ಹಂತದಲ್ಲಿದೆ.

ಆಕರ ಗ್ರಂಥಗಳು

೧. ಶ್ರೀಕಂಠಶಾಸ್ತ್ರಿ ಎಸ್., ಹೊಯ್ಸಳ ವಾಸ್ತುಶಿಲ್ಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೫.

೨. William Coelho, The Hoysala Vamsa, Bombay, 1950.

೩. Sharma,S.R., Jainism and Karnataka Culture, Meerut, 1989.

೪. Sheik Ali B., The Hoysala Dynasty, Mysore, 1972.

೫. Srinivasan K.R., Temples of South India, New Delhi, 1985.

೬ Ghosh, A., The Jaina Art and Architecture, Delhi, 1974.

೧೨೯

ತೆಕ್ಕಲಕೋಟೆಯ ಅಮರೇಶ್ವರ ದೇವಾಲಯ

ಸಿ.ಎಮ್. ಮನೋಹರ*

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆಯು ಧಾರ್ಮಿಕ ಸೌಹಾರ್ದತೆಯಲ್ಲಿ ತನ್ನದೇ ಆದ ಸ್ಥಾನವನ್ನು ಒಳಗೊಂಡಿದೆ. ಈ ಭಾಗವು ಕಲ್ಯಾಣ ಚಾಲುಕ್ಯರು, ವಿಜಯನಗರ ಸಾಮ್ರಾಜ್ಯ, ಬಹಮನಿ ಸಾಮ್ರಾಜ್ಯ, ಮೈಸೂರು ಸುಲ್ತಾನರು ಮತ್ತು ಹಂಡೆ ಪಾಳೆಯಗಾರರು ಮುಂತಾದ ರಾಜವಂಶಗಳಿಂದ ಆಳ್ವಿಕೆಗೆ ಒಳಪಟ್ಟಿದ್ದು ತನ್ನದೇ ಆದ ಧಾರ್ಮಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಇದಕ್ಕೆ ಸಾಕ್ಷಿ ಎಂಬಂತೆ ವರವಿನ ಮಲ್ಲೇಶ್ವರ ದೇವಾಲಯ, ಚೆನ್ನಕೇಶವ ದೇವಾಲಯ, ಕಾಡಸಿದ್ದೇಶ್ವರ ದೇವಾಲಯ, ಉದಯದೇವರ ಗುಡಿ ಇನ್ನೂ ಅನೇಕ ದೇವಾಲಯಗಳನ್ನು ಒಳಗೊಂಡಿದೆ. ಇವುಗಳಲ್ಲಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣಗೊಂಡಂತಹ ನೆಲ ಅಮರೇಶ್ವರ ದೇವಾಲಯವು ಉಳಿದ ದೇವಾಲಯಗಳಿಗಿಂತ ವಿಶಿಷ್ಟತೆಯನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಪ್ರಬಂಧದಲ್ಲಿ ನೆಲ ಅಮರೇಶ್ವರ ದೇವಾಲಯವನ್ನು ಕುರಿತು ಚರ್ಚಿಸಲಾಗಿದೆ.

ದೇವಾಲಯದ ವೈಶಿಷ್ಟ್ಯತೆಗಳು


* ನೆಲದಲ್ಲಿ ಹುದುಗಿದ್ದು ಮಣ್ಣು ಅಗೆಯುವಾಗ ಗೋಚರವಾದ್ದರಿಂದ "ನೆಲ" ಎನ್ನುವ ಪದವನ್ನು ಜೋಡಿಸಿ ನೆಲ ಅಮರೇಶ್ವರ ದೇವಾಲಯ ಎಂದು ಇಲ್ಲಿನ ಜನಪದರು ಕರೆಯುತ್ತಿದ್ದಾರೆ.
* ತೆಕ್ಕಲಕೋಟೆಯಲ್ಲಿ ಎಲ್ಲಿಯೂ ಕಾಣದಂತಹ ಅಪರೂಪದ ಹಾಗೂ ಶಿವಪಾರ್ವತಿಯ ಸಮೇತವಾದ ಅದ್ಭುತ ಮೂರ್ತಿಯನ್ನು ಒಳಗೊಂಡಿದೆ.
* ಕಲ್ಯಾಣ ಚಾಲುಕ್ಯರ ಶೈಲಿಯಿಂದ ನಿರ್ಮಿತವಾಗಿದೆ.
* ಇಲ್ಲಿ ದೊರೆತಿರುವ ಶಾಸನವು ತೆಕ್ಕಲಕೋಟೆಯಲ್ಲಿನ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯನ್ನು ಪ್ರಚುರಪಡಿಸುತ್ತದೆ.

ಈ ದೇವಾಲಯವು ನೆಲದಲ್ಲಿ ಹೂತುಹೋಗಿದ್ದು ಇಲ್ಲಿನ ಜನರು ಆಕಸ್ಮಿಕವಾಗಿ ಮಣ್ಣು ಅಗೆಯುವಾಗ ಕಂಡುಬಂದಿದೆ. ಆದ್ದರಿಂದ ಈ ದೇವಾಲಯಕ್ಕೆ ನೆಲ ಅಮರೇಶ್ವರ ದೇವಾಲಯ ಎಂದು ಹೆಸರು ಬಂದಿದೆ.

ಶ್ರೀ ವರವಿನ ಮಲ್ಲೇಶ್ವರ ದೇವಾಲಯಲದಲ್ಲಿ ದೊರೆತಂತಹ ನಾಲ್ಕು ಶಾಸನಗಳಲ್ಲಿ ಒಂದು ಶಾಸನವು ವಿಜಯನಗರದ ಆಳ್ವಿಕೆಯ ಸಂಬಂಧವನ್ನು ಒಳಪಟ್ಟಿದ್ದು ನೆಲ ಅಮರೇಶ್ವರ ದೇವಾಲಯದ ಬಳಿ ದೊರೆತ ಶಾಸನವೂ ಸಹಾ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕುರುಹು ಆಗಿರುತ್ತದೆ. ತೆಕ್ಕಲಕೋಟೆಯ ಅಮರೇಶ್ವರ ದೇವಸ್ಥಾನದಲ್ಲಿ ದೊರೆತ ಕ್ರಿ.ಶ. ೧೫೧೧ರ ಶಾಸನದಲ್ಲಿ ಶ್ರೀ ಕೃಷ್ಣದೇವರಾಯರಿಗೆ ಧರ್ಮವಾಗಬೇಕೆಂದು ತೆಕ್ಕಲಕೋಟೆಗೆ ಸಂಬಂಧಿಸಿದ ಗ್ರಾಮಗಳ ಸುಂಕವನ್ನು ಮನ್ನಮಾಡಿದ ಉಲ್ಲೇಖವಿದೆ. ಈ ಶಾಸನದಲ್ಲಿ ತೆಕ್ಕಲಕೋಟೆಯನ್ನು 'ಹೆಕ್ಕಲುಕೋಟೆ' ಎಂದು ಕರೆಯಲಾಗಿದ್ದು, ಶಾಪಾಶಯದಲ್ಲಿ ಧರ್ಮಕ್ಕೆ ತಪ್ಪಿದವನು 'ಮನೋ ಅಭಿಮಾನವಿಲ್ಲದವನು' ಎಂಬ ಅಪರೂಪದ ಮಾತು ಇರುವುದು ಈ ಶಾಸನದಲ್ಲಿ ಕಂಡುಬರುತ್ತದೆ. ಪ್ರಸ್ತುತ ಈ ಶಾಸನವು ಕೋಟೆ ಆವರಣದಲ್ಲಿನ ನೇತಾಜಿ ಸುಭಾಷ್ ಚಂದ್ರಬೋಸ್ ಬಾಲಕಿಯರ ಪ್ರೌಢಶಾಲೆಯ ಮುಂಭಾಗದಲ್ಲಿ ನಿಲ್ಲಿಸಲಾಗಿದೆ.

ಈ ದೇವಾಲಯನ್ನು ಕ್ರಿ.ಶ. ೧೫೧೧ರಲ್ಲಿ ಜಕರಾಯನು ಶಿವನಿಗೆ ಕಾಣಿಕೆಯಾಗಿ ಮತ್ತು ವಿಜಯನರದ ಅರಸ ಶ್ರೀಕೃಷ್ಣದೇವರಾಯರಿಗೆ ಗೌರವ ಸೂಚಕವಾಗಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ದೇವಸ್ಥಾನವು ಪೂರ್ವಾಭಿಮುಖವಾಗಿದ್ದು ಕಲ್ಯಾಣ ಚಾಲುಕ್ಯರ ಶೈಲಿಯನ್ನು ಹೊಂದಿದೆ. ಆಲಯದ ಮುಂಭಾಗದಲ್ಲಿ ವೀರನಾಯಕನ

* ಸಂಶೋಧನಾರ್ಥಿ, ೧೧ನೇ ವಾರ್ಡ್, ಆಶ್ರಯ ಕಾಲೋನಿ, ತೆಕ್ಕಲಕೋಟೆ-೫೮೩೧೨೨. ಮೊ. ೯೧೩೮೧೪೫೫೮೩



ದೇವಾಲಯದ ಪ್ರವೇಶ ದ್ವಾರ

ಬಾವಿಯನ್ನು ಪಾಳೆಯಗಾರರ ಅವಧಿಯಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ ಹಾಗೂ ಸಭಾಮಂಟಪಗಳಿಂದ ಕೂಡಿದ್ದು ದೇವಾಸ್ಥಾನದ ಮುಖ್ಯದ್ವಾರದಲ್ಲಿ ಸಭಾ ಮಂಟಪವನ್ನು ಕಾಣುತ್ತೇವೆ.



ಶಾಸನ



ಅಮರೇಶ್ವರನ ವಿಗ್ರಹ

ಸಭಾಮಂಟಪದಲ್ಲಿ ಅರ್ಧ ಅಡಿ ಎತ್ತರ ೧೦ ಅಡಿ ಉದ್ದ ಮತ್ತು ೧೦ ಅಡಿ ಅಗಲದ ರಂಗಮಂಟಪವಿದೆ. ಇದರ ಮಧ್ಯಭಾಗದಲ್ಲಿ ಮೂರು ಅಡಿ ಎತ್ತರದ ಐದು ಅಡಿ ಉದ್ದದ ನಂದಿ ವಿಗ್ರಹವಿದೆ. ರಂಗಮಂಟಪದ ಮೇಲ್ಛಾವಣಿಯ ಒಳಮೈಯಲ್ಲಿ ಭುವನೇಶ್ವರಿ ಇದೆ. ಸಭಾಮಂಟಪದ ಮಧ್ಯಭಾಗದಲ್ಲಿ ನಾಲ್ಕು ಕಂಬಗಳಿದ್ದು ಈ ಕಂಬಗಳಲ್ಲಿ ಪೀಠ, ದಿಂಡು ಮತ್ತು ವೃತ್ತಾಕಾರದ ಬೋದಿಕೆಗಳನ್ನು ಒಳಗೊಂಡಿದೆ.

ರಂಗಮಂಟಪದ ಎಡಬದಿಯಲ್ಲಿ ದಕ್ಷಿಣದ್ವಾರವಿದ್ದು ಆ ಸ್ಥಳದಲ್ಲಿ ಗಣಪತಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹದ ಬಲಗೈಯಲ್ಲಿ ಕೊಡಲಿ ಇದ್ದು ಕೆಳಗಿನ ಬಲಗೈಯಲ್ಲಿ ಮುರಿದ ದಂತವಿರುತ್ತದೆ. ಎಡಗೈಯಲ್ಲಿ ರುದ್ರಾಕ್ಷಿಯ ಸರವಿದ್ದು ಕೆಳ ಎಡಗೈಯಲ್ಲಿ ಮೋದಕ (ಕಡುಬು) ಇರುತ್ತದೆ. ಗಣಪತಿಯ ತಲೆಯ ಮೇಲೆ ಕಿರೀಟವಿದ್ದು ಅದರ ಮೇಲ್ಭಾಗದಲ್ಲಿ ಪ್ರಭಾವಳಿಯನ್ನು ಹೊಂದಿರುತ್ತದೆ.

ಈ ಗಣಪತಿಯ ವಿಗ್ರಹದ ಎಡಬದಿಯಲ್ಲಿ ಒಂದು ಭೈರವನ ವಿಗ್ರಹವಿದೆ. ಈ ವಿಗ್ರಹವು ಕುಳಿತಿದ್ದು, ಕೇಶರಾಶಿ ಉಂಗುರು ಕೂದಲಿನಿಂದ ಕೂಡಿರುತ್ತದೆ. ಎರಡೂ ಕಿವಿಗಳಲ್ಲಿ ಕರ್ಣಕುಂಡಲಗಳಿದ್ದು ಬಲಗೈಯಲ್ಲಿ ಕೊಡಲಿ ಇರುತ್ತದೆ. ಕಾಲುಗಳಿಗೆ ತಲಾ ನಾಲ್ಕು ಕಡಗಗಳನ್ನು ಧರಿಸಲಾಗಿರುತ್ತದೆ. ಸಭಾಮಂಟಪದ ಬಲಬದಿಯಲ್ಲಿ ಇನ್ನೊಂದು ವಿಗ್ರಹವಿದ್ದು ಅದು ಧ್ವಂಸಗೊಂಡಿರುತ್ತದೆ ಅದರ ಆಕಾರವು ಅಮರೇಶ್ವರನನ್ನು ಹೋಲುತ್ತದೆ.

ಗರ್ಭಗೃಹ ಮತ್ತು ಸಭಾಮಂಟಪದ ಮಧ್ಯಭಾಗದಲ್ಲಿ ತೆರೆದ ಸುಕನಾಸಿಯನ್ನು ಹೊಂದಿದ್ದು ಮೇಲ್ಛಾವಣಿಯಲ್ಲಿ ಭುವನೇಶ್ವರಿ ಒಳಗೊಂಡಿರುತ್ತದೆ.

ಗರ್ಭಗೃಹದ ದ್ವಾರಬಾಗಿಲಿನ ಮೇಲೆ ಗಜಲಕ್ಷ್ಮಿ ಉಬ್ಬುಶಿಲ್ಪವಿದ್ದು ದ್ವಾರಪಾಲಕರ ಸ್ಥಳದಲ್ಲಿ ಎರಡೂ ಬದಿಯಲ್ಲಿ ಭದ್ರ ಮತ್ತು ಭದ್ರಕಾಳಿಯರ ಉಬ್ಬುಶಿಲ್ಪವಿರುತ್ತದೆ. ಗರ್ಭಗೃಹವು ಹತ್ತು ಅಡಿ ಉದ್ದ ಮತ್ತು ಹತ್ತು ಅಡಿ ಅಗಲದ ವ್ಯಾಪ್ತಿಯನ್ನು ಒಳಗೊಂಡಿದ್ದು ಚೌಕಾಕಾರದ ಪಾಣಿವಾಟದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಶಿವಲಿಂಗದ ಹಿಂದುಗಡೆ ಮೂರು ಅಡಿ ಎತ್ತರದ ಅಮರೇಶ್ವರನ ವಿಗ್ರಹವಿದ್ದು ಸುಖಾಸೀನನಾಗಿರುತ್ತಾನೆ. ಅಮರೇಶ್ವರನು ತನ್ನ ಎಡತೊಡೆಯ ಮೇಲೆ ಪಾರ್ವತಿಯನ್ನು ಕುಳ್ಳಿರಿಸಿಕೊಂಡಿದ್ದು ತನ್ನ ನಾಲ್ಕು ಕೈಗಳ ಮೂಲಕ ಬಲಗೈಯಲ್ಲಿ ತ್ರಿಶೂಲ ಮತ್ತು ಡಮರುಗವನ್ನು ಹಿಡಿದಿದ್ದು ಎಡಗೈಯಲ್ಲಿ ನಾಗರಹಾವನ್ನು ಹಿಡಿದಿರುತ್ತಾನೆ ಹಾಗೆಯೇ ಮುಂದಿನ ಎರಡೂ ಕೈಗಳಲ್ಲಿ ಬಲಗೈಯು ಅಭಯಹಸ್ತವನ್ನು ಬಿಂಬಿಸಿದ್ದು ಎಡಗೈಯನ್ನು ಪಾರ್ವತಿಯ ಭುಜವನ್ನು ಹಿಡಿದಿರುತ್ತಾನೆ. ಪಾರ್ವತಿಯ ಕೇಶಾಲಂಕಾರವು ತುರುಬಿನಿಂದ ಕೂಡಿರುತ್ತದೆ.

ಒಟ್ಟಾರೆಯಾಗಿ ಈ ನೆಲ ಅಮರೇಶ್ವರ ದೇವಾಲಯವು ತೆಕ್ಕಲಕೋಟೆಯಲ್ಲಿರುವ ಶೈವದೇವಾಲಯಗಳಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನ ಹಾಗೂ ಭಿನ್ನತೆಯನ್ನು ಒಳಗೊಂಡಿದೆ. ದೇವಾಲಯವು ಗುಹೆಯಂತಿರುವ ಕಾರಣ ಅಲ್ಲಿನ ಜನರು ಪ್ರವೇಶಿಸಲು ಹಿಂಜರಿಯುತ್ತಿದ್ದಾರೆ.

ಆಕರ ಗ್ರಂಥಗಳು

೧. ಸಿರುಗುಪ್ಪ ತಾಲೂಕಿನ ಐತಿಹಾಸಿಕ ಸಿರಿ, ಜೆ. ಶಂಕರ.

೨. ತೆಕ್ಕಲಕೋಟೆ ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ), ಮಡ್ಡೇರು ಸಿದ್ದಯ್ಯ.

೩. ಸಿರುಗುಪ್ಪ ತಾಲೂಕಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಡಾ. ಎನ್.ರಾಮಕೃಷ್ಣಯ್ಯ.

೪. ಕವಿವಿ ಶಾಸನ ಸಂಪುಟ ೧, ಸಂ. ದೇವರಕೊಂಡಾರೆಡ್ಡಿ.

೧೩೦

ಹನುಮನಹಳ್ಳಿಯ ಶ್ರೀ ಚಂದ್ರಮೌಳೇಶ್ವರ ದೇವಾಲಯ

ಎಚ್. ತಿಪ್ಪೇಸ್ವಾಮಿ*

ಹಂಪಿಯ ಚಕ್ರತೀರ್ಥದ ಬಳಿಯ ರಾಮ ಲಕ್ಷ್ಮಣ ದೇವಾಲಯಕ್ಕೆ ಅಭಿಮುಖವಾಗಿ ಹರಿಯುವ ತುಂಗಭದ್ರ ನದಿಯ ಉತ್ತರದ ದಂಡೆಯ ಮೇಲೆ ಶ್ರೀ. ಚಂದ್ರ ಮೌಳೇಶ್ವರ ದೇವಾಲಯವಿದೆ. ಈ ದೇವಾಲಯ ಪ್ರಸ್ತುತ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಹನುಮನಹಳ್ಳಿಯ ಋಷ್ಯಮೂಖ ಪರ್ವತದಲ್ಲಿದೆ. ಈ ದೇವಾಲಯವನ್ನು ದಕ್ಷಿಣ ಭಾಗದಲ್ಲಿ ಹಂಪಿಯಿಂದ ಹರಿದುಬರುವ ತುಂಗಭದ್ರ ನದಿ ಮತ್ತು ಉತ್ತರ ಭಾಗದಲ್ಲಿ ಇದೇ ನದಿಯ ಮತ್ತೊಂದು ಭಾಗ (ಸಾಣಪುರದಿಂದ ಹರಿದು ಬರುವ) ಸುತ್ತುವರಿದಿದೆ. ಈ ದೇವಾಲಯ ನೋಡಲು ದ್ವೀಪದಂತಿದ್ದು, ನದಿ ನೀರು ಎರಡು ಕಡೆ ಸುತ್ತುವರಿದಿರುವುದರಿಂದ ಹಂಪಿ ಕಡೆಯಿಂದ ಇಲ್ಲಿಗೆ ಬರವವರು ಸದಾ ಹರಿಗೋಲು ಬಳಸಿ ಬರಬೇಕಾಗುತ್ತದೆ. ಅದೇ ರೀತಿ ಹನುಮನಹಳ್ಳಿ ಕಡೆಯಿಂದ ಬರುವವರು ಬೇಸಿಗೆ ಹೊರತುಪಡಿಸಿ ಉಳಿದ ದಿನಗಳಲ್ಲಿ ಅವರು ಸಹಾ ಹರಿಗೋಲು ಬಳಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಲೇಖನವು ಈ ಕೆಳ ಕಂಡ ಉದ್ದೇಶಗಳನ್ನು ಹೊಂದಿದೆ.

೧) ಅಪಾಯದಂಚಿನಲ್ಲಿರುವ ಈ ದೇವಾಲಯದ ವಾಸ್ತು ವೈಶಿಷ್ಟತೆ ಮತ್ತು ಅಲ್ಲಿರುವ ಕೆಲ ವಿಶಿಷ್ಟ ಶಿಲ್ಪಗಳನ್ನು ವ್ಯವಸ್ಥಿತವಾಗಿ ಗುರುತಿಸುವುದು.

೨) ಈ ದೇವಾಲಯದ ರಕ್ಷಣೆಗಾಗಿ ವಿಶೇಷವಾಗಿ ನಿರ್ಮಿಸಿರುವ ರಕ್ಷಣಾ ಮತ್ತು ಆವರಣಾ ಗೋಡೆ (Encloser wall/ Embankment Wall) ಯ ವಿಶೇಷತೆಯನ್ನು ದಾಖಲಿಸುವುದು.

೩) ಈ ದೇವಾಲಯಕ್ಕೆ ಸಂಬಂಧಿಸಿದ ಸ್ಥಳೀಯ ಐತಿಹ್ಯಗಳನ್ನು ಗುರುತಿಸುವುದು.

೪) ಜಿಂದಾಲ್ ಉಕ್ಕು ಕಾರ್ಖಾನೆಯವರು ಕರ್ನಾಟಕ ಸರ್ಕಾರ ಮತ್ತು ಗ್ಲೋಬಲ್ ಹೇರಿಟೇಜ್ ಸಹಕಾರದೊಂದಿಗೆ ಕೈಗೆತ್ತಿಕೊಂಡ ಉತ್ಖನನ ಮತ್ತು ಸಂರಕ್ಷಣಾ ಕಾರ್ಯವನ್ನು ಸಂಕ್ಷಿಪ್ತವಾಗಿ ಮತ್ತು ಪೂರಕವಾಗಿ ದಾಖಲಿಸುವುದು.

ಸ್ಥಳೀಯ ಐತಿಹ್ಯ

ಇಲ್ಲಿರುವ ಬೆಟ್ಟವು ಋಷಿಗಳ ಮುಖ ಮತ್ತು ಗಡ್ಡದಂತೆ ಮುಂದಕ್ಕೆ ಚಾಚಿ ಕೊಂಡಿರುವ್ಯದರಿಂದ ಇದನ್ನು ಋಷ್ಯಮುಖ, ಋಷ್ಯಮೂಖಪರ್ವತ ಎಂದು ಕರೆಯುತ್ತಾರೆ. ಇಲ್ಲಿ ಹಿಂದೆ ಅನೇಕ ಸಾಧು ಸಂತರು ವಾಸವಾಗಿದ್ದರಂತೆ, ಅಲ್ಲದೆ ಇದು ರಾಮಾಯಣ ಕಾಲದ ಸುಗ್ರೀವನ ನಿವಾಸ ಸ್ಥಾನವಾಗಿತ್ತು, ಇಲ್ಲಿಯೇ ರಾಮ-ಸುಗ್ರೀವ, ಜಾಂಬವಂತ, ಹನುಮಂತರ ಭೇಟಿಯಾಯಿತು. ಮತ್ತು ಇಲ್ಲಿಂದಲೇ ವಾಲಿಯ ಸಂಹಾರವಾಯಿತು ಮತ್ತು ಇಲ್ಲಿಯೇ ಸುಗ್ರೀವನ ಪಟ್ಟಾಭಿಷೇಕವಾಗಿ ಪ್ರಜಾ ಪರಿಪಾಲನೆ ಮಾಡಿದನೆಂದು ಸ್ಥಳೀಯರು ಹೇಳುತ್ತಾರೆ[೧]. ಈ ಪ್ರದೇಶ ರಾಜ ಮಹಾರಾಜರ ಕಾಲದಲ್ಲಿ ಒಂದು ರಹಸ್ಯ ತಾಣವಾಗಿತ್ತು. ಇಲ್ಲಿಗೆ ವಿಜಯನಗರದ ಅರಸರು ಕೆಲ ಪ್ರಮುಖ ರಹಸ್ಯ ಮಾತುಕತೆಗಳನ್ನು ನಡೆಸಲು ಬರುತ್ತಿದ್ದರೆಂದು ಹೇಳಲಾಗುತ್ತದೆ. ವಿಜಯ ನಗರದ ಸಂಗಮ ದೊರೆಗಳ ಕಾಲದಲ್ಲಿ ನಿರ್ಮಿತವಾದ ಈ ದೇವಾಲಯ ಆರಂಭಿಕ ವಿಜಯನಗರ ಶೈಲಿಯಲ್ಲಿದ್ದು, ಕಲೆ ಮತ್ತು ವಾಸ್ತು ಶಿಲ್ಪದ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿದೆ. ಆನೆಗೊಂದಿ ರಾಜರ ಮತ್ತು ವಿಜಯನಗರದ ಅರಸರ ಮನೆ ದೈವವಾಗಿದ್ದು[೨] ಈ ದೇವಾಲಯಕ್ಕೆ ಅ ಮನೆತನದವರು ಭೇಟಿ ನೀಡುತ್ತಿದ್ದರು ಅಲ್ಲದೇ ಕೆಲ ರಹಸ್ಯ ಮಾತುಕತೆಗಳನ್ನು ಇಲ್ಲಿಯೇ ನಡೆಸುತ್ತಿದ್ದರೆಂಬ ಪ್ರತೀತಿ ಇಲ್ಲಿದೆ.

ದೇವಾಲಯ ವಾಸ್ತು ವೈಶಿಷ್ಟತೆ

ದೇವಾಲಯದ ವಿವಿಧ ವಾಸ್ತು ಭಾಗಗಳು ಮತ್ತು ಅವುಗಳ ವೈಶಿಷ್ಟತೆಯನ್ನು ವ್ಯವಸ್ಥಿತವಾಗಿ ಅರಿಯಲು ದೇವಾಲಯದ ಒಳ ಭಾಗದ ಅಲಂಕಾರ ಮತ್ತು ದೇವಾಲಯದ ಹೊರ ಭಾಗದ ಅಲಂಕಾರಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅದಕ್ಕೆ ಸಂಬಂಧಿಸಿದ ವಿವರಗಳು ಈ ಮುಂದಿವೆ.

* ಇತಿಹಾಸ ಮತ್ತು ಪುರಾತತ್ವ ವಿಭಾಗ, ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ-೫೮೩೧೦೪.

೧. **ದೇವಾಲಯದ ಒಳ ಭಾಗದ ಅಲಂಕಾರ :** ಚಂದ್ರ ಮೌಳೀಶ್ವರ ದೇವಾಲಯದ ಚೌಕಕಾರದ ಗರ್ಭ ಗುಡಿಯಲ್ಲಿ ಈಗ ಮೂಲ ಮೂರ್ತಿ ಇಲ್ಲ.[೬] ಇದರ 'ವಿತಾನ'ದಲ್ಲಿ ಅರಳಿದ ಪದ್ಮದ ಅಲಂಕಾರವಿದೆ. ಇದರ ದ್ವಾರದಲ್ಲಿ 'ಅಲಂಕೃತ' ಶೈವ ದ್ವಾರಪಾಲಕರಿದ್ದು, ಅದರ 'ಲಲಾಟ'ದಲ್ಲಿ ನಾಟ್ಯ ಗಣೇಶನ ಶಿಲ್ಪವಿದೆ. ದ್ವಾರದಲ್ಲಿ ಲತಾ, ಹೂಬಳ್ಳಿ, ವಜ್ರ, ಲತಾ ಶಾಖೆಗಳಿವೆ. ಗರ್ಭಗುಡಿ ಮುಂಭಾಗದಲ್ಲಿರುವ ಅಂತರಾಳದ ದ್ವಾರವೂ ಸಹಾ ಗರ್ಭಗುಡಿಯ ದ್ವಾರ & ಲಲಾಟದಂತೆ ಅಲಂಕೃತವಾಗಿದೆ.

ಇದರ ಮುಂಭಾಗದಲ್ಲಿ ತೆರದ ಅರ್ಧ ಮಂಟಪವಿದ್ದು, ಅದರ ಮುಂಭಾಗಕ್ಕೆ ನವರಂಗವಿದೆ. ನವರಂಗದಲ್ಲಿ ಸುತ್ತಲೂ ಕಕ್ಷಾಸನವಿದ್ದು, ಅದರ ಮಧ್ಯದಲ್ಲಿ ನಾಲ್ಕು ಬೃಹತ್ ಚೌಕ, ವೃತ್ತಾಕಾರದ ಕಂಬಗಳಿವೆ. ಇದರ ಚೌಕಕಾರದ ಪಟ್ಟಿಕೆಯ ನಾಲ್ಕು ಮುಖದಲ್ಲೂ ಪುಷ್ಪ, ಹೂಬಳ್ಳಿ, ನಂದಿ, ಯತಿ, ವೀರಭದ್ರ, ಗಣೇಶ, ಮಾಲಾ, ಅಲಂಕಾರ ಮೊದಲಾದ ಶಿಲ್ಪಗಳ ಅಲಂಕಾರವಿದೆ. ಇಲ್ಲಿನ ಬಲಭಾಗದಲ್ಲಿರುವ ಕಂಭದ ಮೇಲಿನ ಚೌಕಕಾರದ ಪಟ್ಟಿಕೆಯಲ್ಲಿ ಆಕರ್ಷಕ ಒಂದು ನಂದಿ ಶಿಲ್ಪವಿದೆ. ಈ ನಂದಿ ನಿಂತಿರುವಂತೆ ಕೆತ್ತಲಾಗಿದ್ದು, ಅದರ ಹಿಂಬದಿಯಲ್ಲಿ ಒಂದು ರಾಜ ಛತ್ರಿಯನ್ನು ಸಹಾ ಅಲಂಕೃತವಾಗಿ ಕೆತ್ತಲಾಗಿದೆ. ಹಂಪಿಯಲ್ಲಿರುವ ದೇವಾಲಯಗಳಲ್ಲಿ ಈ ರೀತಿಯ ಶಿಲ್ಪ ಎಲ್ಲಿಯೂ ಕಂಡು ಬರುವುದಿಲ್ಲ. ಅದು ಕೇವಲ ಈ ದೇವಾಲಯದಲ್ಲಿ ಮಾತ್ರ ಕಂಡುಬರುತ್ತಿರುವುದು ವಿಶೇಷವಾಗಿದೆ. ಪ್ರಾಯಶಃ ಇದು ರಾಜ ಪರಿವಾರದವರಿಗೆ ಈ ದೇವಾಲಯ ಸೀಮಿತವಾಗಿತ್ತೆಂಬುದನ್ನು ಇದು ಸೂಚಿಸುತ್ತದೆ. ಕಂಭಗಳ ಫಲಕ ಭಾಗ ವೃತ್ತಕಾರವಾಗಿದ್ದು, ಅದರ ಮೇಲ್ಭಗದಲ್ಲಿ ಪುಷ್ಪ ಅಲಂಕೃತ ಬೋದಿಗೆಗಳಿವೆ. ಕಂಭಗಳ ನಾಲ್ಕು ಬದಿಯಲ್ಲಿ ಇಳಿಬಿದ್ದ ಕಮಲದ ಮೊಗ್ಗಿನ ಅಲಂಕಾರವಿದೆ. ಇಲ್ಲಿನ ತೊಲೆಗಳ ಮೇಲೆ ಪುಷ್ಪ ದಳಗಳ ಅಲಂಕಾರವನ್ನು ಮಾಡಲಾಗಿದೆ. ನವರಂಗದ ಮಧ್ಯ ಭಾಗದಲ್ಲಿರುವ ಭುನೇಶ್ವರಿಯಲ್ಲಿ ಅರಳಿದ ಪದ್ಮದ ಅಲಂಕಾರವಿದ್ದು, ಅದರ ಮಧ್ಯಭಾಗದಲ್ಲಿ ಕೆಳಬಾಗಿದ ಮೊಗ್ಗಿನ ಅಲಂಕಾರವನ್ನು ಶಿಲ್ಪಿ ಬಹು ಸೂಕ್ಷ್ಮ ಮತ್ತು ಆಕರ್ಷಣೆಯಾಗಿ ಮಾಡಿದ್ದಾನೆ. ಇದೇ ನವರಂಗದ ಉತ್ತರದ ಪ್ರವೇಶ ದ್ವಾರದ ಕಡೆ ಇರುವ ಮುಚ್ಚಿಗೆಯಲ್ಲಿ ಪರಸ್ಪರ ಎದುರಾಗಿ ಗೋಡೆಗೆ ಅಂಟಿ ಕೊಂಡಂತಿರುವ ಎರಡು 'ಹಲ್ಲಿ'ಗಳನ್ನು ಇಲ್ಲಿ ಕೆತ್ತಿರುವುದು ವಿಶೇಷವಾಗಿದೆ.

ನವರಂಗವನ್ನು ಪ್ರವೇಶಿಸಲು ಉತ್ತರ ಮತ್ತು ದಕ್ಷಿಣದಲ್ಲಿ ಎರಡು ಪ್ರವೇಶ ದ್ವಾರಗಳಿವೆ. ಉತ್ತರದಲ್ಲಿರುವ ಪ್ರವೇಶ ದ್ವಾರದಲ್ಲಿ ಅಲಂಕೃತ ಶೈವ ದ್ವಾರಪಾಲಕರಿದ್ದಾರೆ. ಕಿರೀಟ ಧರಿಸಿರುವ ಈ ದ್ವಾರಪಾಲಕರು ಆಲೀಡ ಭಂಗಿಯಲ್ಲಿ ಸ್ಥಾನೀಕರಾಗಿದ್ದು, ಸರ್ವಾಲಾಂಕೃತರಾಗಿದ್ದಾರೆ. ಇವರ ಮೇಲಿನ ಕೈಗಳಲ್ಲಿ ತ್ರಿಶೂಲ, ಡವರುಗಳಿದ್ದು, ಕೆಳಗಿನ ಒಂದು ಕೈ ಕಟ್ಯಾವಲಂಬಿತವಾಗಿದ್ದು, ಮತ್ತೊಂದು 'ಚಿನ್ಮುದ್ರೆ' ರೀತಿಯಲ್ಲಿದೆ. ಇವರ ಕಾಲಿನ ಭಾಗದಲ್ಲಿ ಹೆಡೆ ಬಿಚ್ಚಿದ ಸರ್ಪದ ಅಲಂಕಾರವಿದೆ. ಇಲ್ಲಿರುವ ಲಲಾಟದಲ್ಲಿ 'ಯಕ್ಷನ' ಶಿಲ್ಪವಿದೆ. ಇಲ್ಲಿನ ದ್ವಾರ ಶಾಖೆಗಳಲ್ಲಿ ಪುಷ್ಪ ಲತಾ, ವಲ್ಲಿ ಬಂಥ, ವಜ್ರ ಮತ್ತು ಪುಷ್ಪ ಶಾಖೆಗಳ ಅಲಂಕಾರ ವಿದ್ದು, ನಯನ ಮನೋಹರವಾಗಿದೆ. ದಕ್ಷಿಣದ ದ್ವಾರದಲ್ಲಿಯೂ ಇದೇ ರೀತಿಯ ಅಲಂಕಾರವಿದ್ದು, ಇಲ್ಲಿನ ಲಲಾಟದಲ್ಲಿ ಅರಳಿದ ಪುಷ್ಪದ ಅಲಂಕಾರವನ್ನು ಮಾಡಲಾಗಿದೆ.

ಇದರ ಮುಂಭಾಗಕ್ಕೆ (ದಕ್ಷಿಣ ಭಾಗದಲ್ಲಿ) ಭಗ್ನವಾಗಿ ಸಂಪೂರ್ಣ ಬಿದ್ದಿರುವ ಮುಖ ಮಂಟಪವಿದೆ. ಆಯತಕಾರವಾಗಿರುವ ಈ ಮುಖ ಮಂಟಪವು ತೆರದ ರೀತಿಯಲ್ಲಿದ್ದು, ಇಲ್ಲಿ ತುಂಡು ತುಂಡಾಗಿ ಬಿದ್ದಿರುವ ಕಂಭಗಳಿವೆ. ಅವು ಚೌಕಕಾರವಾಗಿದ್ದು, ನಾಲ್ಕು ಮುಖಗಳನ್ನು ಹೊಂದಿವೆ. ಇವುಗಳ ಮೇಲೆ ಯಾಳಿ, ಗಣೇಶ, ಪುಷ್ಪ, ಹೂಬಳ್ಳಿ, ಸೂರ್ಯ, ಯೋಗಿ, ಚಂದ್ರ, ನಾಗಬಂಧ, ಹಟಯೋಗಿ, ದ್ಯಾನಮಗ್ನ ಯೋಗಿ, ಹಟಯೋಗಿ ನೃತ್ಯಗಾರರು & ವಾದ್ಯಗಾರರ ಶಿಲ್ಪಗಳಿದ್ದು, ಅವು ಆಕರ್ಷಣೀಯವಾಗಿವೆ.

೨. ದೇವಾಲಯದ ಹೊರಭಾಗದ ಅಲಂಕಾರ : ದೇವಾಲಯದ ಅಧಿಷ್ಠಾನದಲ್ಲಿ ಕಂಪ, ಗಳ, ವೇದಿ, ಕುಮುದಗಳ ಪಟ್ಟಿಕೆಗಳಿದ್ದು, ಸಾಧಾರಣಾ ಅಲಂಕಾರದಿಂದ ಕೂಡಿವೆ. ಇದರಲ್ಲಿ ಅಧೋ–& ಉದೋ ಮುಖ ಪದ್ಮಗಳ ಅಲಂಕಾರವಿದ್ದು. ಇದರಲ್ಲಿ ಪುಷ್ಪ ದಳಗಳ ಅಲಂಕಾರವನ್ನು ಮಾಡಲಾಗಿದೆ. ಭಿತ್ತಿಯ ಪೂರ್ವ ಭಾಗದಲ್ಲಿ ಮಷ್ಪ ಜಾಲಂಧ್ರವಿದ್ದು, ಇದರಲ್ಲಿರುವ ಪ್ರತಿ ಕಿಂಡಿಗಳಿಂದ ಪ್ರತಿನಿತ್ಯ ಮತ್ತು ವಿಶೇಷವಾಗಿ ಮಕರ ಸಂಕ್ರಾಂತಿಯಂದು ಸೂರ್ಯನ ಬೆಳಕು ಗರ್ಭಗುಡಿಯಲ್ಲಿರುವ ಮೂಲ ಮೂರ್ತಿಗೆ ಬೀಳುವ ರೀತಿ ವ್ಯವಸ್ಥೆ ಮಾಡಿರುವುದು ಇಲ್ಲಿನ ಮುಖ್ಯ ವೈಶಿಷ್ಟ್ಯತೆಯಾಗಿದೆ.[೭] ವೈಜ್ಞಾನಿಕವಾಗಿ ಅಲೋಚಿಸಿ ಈ ರೀತಿ ಮಾಡಿರುವ ಕ್ರಮ ನಿಜಕ್ಕೂ ಶ್ಲಾಘನೀಯವಾದ ವಿಚಾರ. ಭಿತ್ತಿಯ ಮಧ್ಯಭಾಗದಲ್ಲಿ ಕೂಷ್ಠಗುಡಿಗಳಿದ್ದು, ಅವುಗಳ ಮೇಲೆ ಮೂಲ ಶಿಖರದ ಅಲಂಕಾರ (ಶಾಲಾ, ಕೂಟ)ವನ್ನು ಮಾಡಲಾಗಿದೆ. ಅಲ್ಲದೆ ಇದೇ ಭಿತ್ತಿಯಲ್ಲಿ ಕುಡ್ಯ ಸ್ತಂಭಗಳ ಮತ್ತು ಕುಂಭ ಪಂಜರಗಳ ಅಲಂಕಾರವಿದ್ದು, ಅವುಗಳ ಮೇಲೆ ಕೀರ್ತಿ ಮುಖಗಳ, ಮಕರಯುಕ್ತ ಪ್ರಭಾವಳಿಗಳ











ಅಲಂಕಾರವಿದ್ದು, ಅವುಗಳ ಮಧ್ಯಭಾಗದಲ್ಲಿ ಯಕ್ಷ / ಕುಬ್ಜರ ಅಲಂಕಾರಗಳಿವೆ. ಇಲ್ಲಿನ ಕುಂಭ ಪಂಜರಗಳಲ್ಲಿ ಬಳೆ ಮತ್ತು ಮಣಿಸರಗಳ ಅಲಂಕಾರಗಳಿದ್ದು, ಅತ್ಯಂತ ನಯನ ಮನೋಹರವಾಗಿದೆ. ಇಲ್ಲಿನ ಪ್ರಹಾರ ಮತ್ತು ಕಪೋತ ಭಾಗದಲ್ಲಿ ಹೂ ಬಳ್ಳಿಗಳ ಹಾಗೂ ಕೀರ್ತಿ ಮುಖಗಳ ಅಲಂಕಾರವಿದ್ದು, ಗಮನಾರ್ಹವಾಗಿದೆ. ಗರ್ಭಗುಡಿಯ ಉತ್ತರ ಭಾಗಕ್ಕೆ 'ಮಕರಯುಕ್ತ ಪ್ರನಾಳ'ವಿದ್ದು, ಅತ್ಯಂತ ಅಲಂಕೃತವಾಗಿದೆ. ಗರ್ಭಗುಡಿಯ ಮೇಲೆ ಮೂರು 'ತಳ'ಗಳಿರುವ (ಅಂತಸ್ತು) ವಿಜಯನಗರ ಶೈಲಿಯ ಶಿಖರವಿದ್ದು, ಅದರಲ್ಲಿನ ಗಾರೆ ಶಿಲ್ಪಗಳು ಅವಸಾನಗೊಂಡಿರುವುದು ವಿಪರ್ಯಾಸ, ಇಲ್ಲಿ ಅಳಿದುಳಿದಿರುವ ಕೂಟ, ಶಾಲಗಳ ಅಲಂಕಾರಗಳಿದ್ದು, ಮನಸೂರೆಗೊಳ್ಳುತ್ತವೆ.[೫]

ಪರಿವಾರ ದೇವಾಲಯಗಳು : ಈ ದೇವಾಲಯದ ಎಡಭಾಗಕ್ಕೆ ಪಾರ್ವತಿ ದೇವಾಲಯವಿದೆ. ಅದರ ಪಕ್ಕದಲ್ಲಿ ಸುಗ್ರೀವನ ದೇವಾಲಯವಿದೆ. ಅದರ ಸಮೀಪದಲ್ಲಿ ನಾಲ್ಕು ಮಂಟಪಗಳು ಒಚಿದೇ ಸಾಲಿನಲ್ಲಿವೆ, ಇಲ್ಲಿಯೇ ಶಿವಲಿಂಗ, ಭೈರವ, ನಂದಿ, ಯಕ್ಷಿಯರ ಮೊದಲಾದ ಭಗ್ನ ಮೂರ್ತಿಗಳಿವೆ. ಈ ಎಲ್ಲಾ ಭಾಗಗಳನ್ನು ಸುತ್ತುವರಿದಂತೆ ಮೂರು ಹಂತದಲ್ಲಿ ನಿರ್ಮಿಸಿರುವ ಪ್ರಕಾರಗೋಡೆ ಇದೆ. ಇದನ್ನು ಪ್ರವೇಶಿಸಲು ದಕ್ಷಿಣದಲ್ಲಿ ಮೆಟ್ಟಿಲುಗಳಿವೆ. ಈ ಎಲ್ಲಾ ಭಾಗಗಳ ಸುತ್ತಲೂ (ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಮಾತ್ರ) ತುಂಗಭದ್ರ ನದಿಯ ಪ್ರವಾಹದಿಂದ ದೇವಾಲಯಕ್ಕೆ ಅಪಾಯ ಉಂಟಾಗದಿರಲೆಂದು ನಿರ್ಮಿಸಿದ ತಡೆಗೋಡೆ ಇದೆ. ಇದನ್ನು ಕೋಟೆ ರೀತಿಯಲ್ಲಿ ನಿರ್ಮಿಸಿರುವುದು ವಿಶೇಷವಾಗಿದೆ.[೬]

ಬಳ್ಳಾರಿ ಜಿಲ್ಲೆಯ ತೋರಣಗಲ್ಲಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಿಂದಾಲ್ ಉಕ್ಕು ಕಾರ್ಖನೆಯವರು ಕರ್ನಾಟಕ ಸರ್ಕಾರ ಮತ್ತು ಗ್ಲೋಬಲ್ ಹೇರಿಟೇಜ್ ಸಹಕಾರದೊಂದಿಗೆ ಉತ್ಖನನ ಮತ್ತು ಸಂರಕ್ಷಣಾ ಕಾರ್ಯವನ್ನು ಕೈಗೆತ್ತಿಕೊಂಡಿದೆ.

ಫೆಭ್ರುವರಿ ೨೦೦೪ರಿಂದ ಜೂನ್ ತಿಂಗಳ ೨೦೦೪ರವರೆಗೆ ಕನ್ನಡ ವಿಶ್ವವಿದ್ಯಾಲಯದ ಪುರಾತತ್ವ ವಿಭಾಗದ ಪ್ರವಾಚಕರಾಗಿದ್ದ ದಿವಗಂತ ಡಾ. ಬಾಲಸುಬ್ರಮಣ್ಯರವರು ಮತ್ತು ನಾನು ಈ ಭಾಗದ ಉತ್ಖನನ

ಕೈಗೊಂಡು ಮಣ್ಣಿನಲ್ಲಿ ಮುಚ್ಚುಹೋಗಿದ್ದ ಕೆಲ ವಾಸ್ತು ಭಾಗಗಳನ್ನು ಮೊದಲು ಗುರುತಿಸಲಾಯಿತು[೭]. ಇದರ ಆಧಾರದ ಮೇಲೆ ೨೦೦೬ರಲ್ಲಿ ವಾಸ್ತು ತಜ್ಞೆ ಆಬಾನಾರಯಣ್ ಮತ್ತು ಸುಧೀರ್ ದೇಶಪಾಂಡೆ ಮತ್ತು ಇತರರ ಸಲಹೆಯಂತೆ ದೇವಾಲಯದ ಸಂರಕ್ಷಣಾ ಕಾರ್ಯವನ್ನು ಕೈಗೆತ್ತಿಕೊಳ್ಳಲಾಯಿತು. ಶಿವಮೊಗ್ಗದ ಗುತ್ತಿಗೆದಾರರಾದ ಶ್ರೀ.ವಿಜಯಕುಮಾರ್ ಇದರ ಗುತ್ತಿಗೆ ಪಡೆದು ಕಟ್ಟಡದ ಕಾಮಗಾರಿಯನ್ನು ೨೦೦೬-೨೦೧೦ ರವರೆಗೆ ನಡೆಸಿ ೨ ಹಂತದ ಕೆಲಸ ಕಾರ್ಯಗಳನ್ನು ಅಂದರೆ ಕೆಳಗಿನ ಮತ್ತು ಮೇಲಿನ ರಕ್ಷಣಾ ಗೋಡೆಗಳ ತಡೆಗೋಡೆ ಸಂರಕ್ಷಣಾ ಕಾರ್ಯ ಪೂರ್ಣಗೊಳಿಸಿದ್ದಾರೆ[೮]. ಸಂಬಂಧಿಸಿದ ಇಲಾಖೆಗಳ ಅನುಮತಿ ದೊರೆತ ನಂತರ ೩ನೇ ಹಂತದಲ್ಲಿ ದೇವಾಲಯದ ಮುಖಮಂಟಪ, ಭಿತ್ತಿ ಮತ್ತು ಶಿಖರದ ಜೀರ್ಣೋದ್ಧಾರ ಕಾರ್ಯಗಳನ್ನು ಹಮ್ಮಿಕೊಳ್ಳಲು ಯೋಜಿಸಲಾಗಿದೆ.

ವಿಜಯನಗರ ಸಾಮ್ರಾಜ್ಯ ಆಸ್ತಿತ್ವಕ್ಕೆ ಬರುವ ಮೊದಲಿನಿಂದಲೂ ಮತ್ತು ಆನಂತರವೂ ಇಲ್ಲಿನ ಋಷ್ಯಮೂಖ ಪರ್ವತವು ಸಾಕಷ್ಟು ಮಹತ್ವ ಪಡೆದಿತ್ತು ಎಂಬುದನ್ನು ಇಲ್ಲಿನ ಪುರಾತತ್ವ ಆಕರಗಳು ಸ್ಪಷ್ಟಪಡಿಸುತ್ತವೆ. ಹತ್ತಾರು ವಾಸ್ತು ವೈಶಿಷ್ಟಗಳನ್ನು ತನ್ನ ಒಡಾಳದಲ್ಲಿ ಹುದುಗಿಸಿಟ್ಟುಕೊಂಡಿರುವ ಮತ್ತು ಧಾರ್ಮಿಕ ದೃಷ್ಟಿಯಿಂದ ಸಾಕಷ್ಟು ಪವಿತ್ರ ಸ್ಥಾನ ಪಡೆದ ಈ ದೇವಾಲಯ ರಾಜ ಪರಿವಾರದವರ ದೇವಾಲಯವಾಗಿತ್ತೆಂದು ಇಲ್ಲಿರುವ ಶಿಲ್ಪವನ್ನು ಆಧರಿಸಿ ಹೇಳಬಹುದಾಗಿದೆ. ದೇವಾಲಯದ ಉಳಿದ ಸಂರಕ್ಷಣಾ ಕಾರ್ಯಗಳು ಆದಷ್ಟು ಶೀಘ್ರವಾಗಿ ಪೂರ್ಣಗೊಂಡು ಚಾರಿತ್ರಿಕ ಆಕರವಾದ ಈ ದೇವಾಲಯವನ್ನು ಮುಂದಿನ ಪೀಳಿಗೆಗೆ ತುರ್ತಾಗಿ ಉಳಿಸಿಕೊಡಬೇಕಾದ ಅವಶ್ಯಕತೆ.

ಅಡಿಟಿಪ್ಪಣಿಗಳು

೧. ಶ್ರೀ. ಮೀನಗಾರ ಮಲ್ಲಪ್ಪ, (೬೭) ಹುಲಗಪ್ಪ, (೨೭) ಹನುಮನಹಳ್ಳಿ ಇವರು ನೀಡಿದ ಮಾಹಿತಿ. ಇವರು ಇದರ ಎದರು ಭಾಗದಲ್ಲಿ ಬರುವ (ಆನೆಗುಂದಿ) ಬೆಟ್ಟವನ್ನು ತೋರಿಸಿ ಅದು ವಾಲಿಕಾಷ್ಠ (ವಾಲಿ ಸತ್ತುಬಿದ್ದಿರುವ) ಎನ್ನುತ್ತಾರೆ.

೨. ಡಾ. ಎಚ್. ತಿಪ್ಪೇಸ್ವಾಮಿ. ಹಂಪಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಸ್ಮಾರಕಗಳ ವರದಿ. ಸಂ. ೩.

೩. ಇದರ ಭಗ್ನ ಭಾಗಗಳು (ಲಿಂಗದ ತ್ರುಟಿತ ಭಾಗಗಳು) ಈ ದೇವಾಲಯದ ಬಳಿ ಉಳಿದಿವೆ.

೪. ಇಲ್ಲಿರುವ ಕಿಂಡಿಗಳಲ್ಲಿ ಒಂದೊಂದು ಕಿಂಡಿಗಳಲ್ಲಿ ಒಂದೊಂದು ದಿನ ಬೆಳಕು ಬೀಳುವ ವ್ಯವಸ್ಥೆಯನ್ನು ಸೂರ್ಯನ ಹುಟ್ಟನ್ನು (ನಿತ್ಯದ ಉದಯ) ಅವಲಂಬಿಸಿ ವೈಜ್ಞಾನಿಕವಾಗಿ ಮಾಡಲಾಗಿದೆ.

೫. ಅಬಾನಾರಯಣ್ ಮತ್ತು ಇತರರು ಕನ್ಸರ್ವೇಷನ್ ರಿಪೋರ್ಟ ಆಫ್ ಚಂದ್ರ ಮೌಳೇಶ್ವರ ಟೆಂಪಲ್.

೬ ಡಾ. ಎಚ್. ತಿಪ್ಪೇಸ್ವಾಮಿ. ಅದೇ.

೭. ನೋಡಿ ಚಂದ್ರಮೌಳೇಶ್ವರ ದೇವಾಲಯದ ಉತ್ಖನನದ ವರದಿ.

೮. ಪುರಾತತ್ವವಿದರಾದ ಡಾ. ಸಮಕ್.ಎಸ್.ಜಿ. ಮತ್ತು ಅಭಿಯಂತರರಾದ ಡಾ. ಜಗದೀಶ್‌ರವರು ನೀಡಿದ ಸಲಹೆಗಳ ಮೇಲೆ ಸಂರಕ್ಷಣಾ ಕಾರ್ಯ ಮಾಡಿದ್ದಾರೆ.

ಆಕರ ಗ್ರಂಥಗಳು

೧. Anila Verghes - 2002, **Hampi Monumental Legacy,** Oxford University Press, New Delhi.

೨. Diwakar.R.R. & Karmarkar D.P. **Vijayanagara Sexcentenary commomration Volum,** Dharwar.

೩. George Michell - 1990, **Vijayanagara Architectural Inventory of the Urban Core,** Vol. 1 & 2 Directorate of Archaeology & Museums, Mysore

೪. Mahalingam. T.V.,1957, **Administration and Social Life under Vijayanagara ,** Part-I &II, University of madras, Madras.

೫. Narasimhaih.B,1992,**Vijayanagara Significance Of Remains of Cetidel,** Book India Publishers & co. Delhi.

೬ Robert Sewell, 1900, **A Forgetten Empire (Vijayanagara),** Swan Sinnon Shilon & co, London

೭. Setter.s,1990,**Hampi A Medieval Metropolis,** Kalayatra, Bangalore

೮. Patil C.S. and Vinoda Patil. 1997, **Inscriptions of Bellary Districts,** Directorate of Archaeology and Museum, Mysore.

೯. ಡಾ.ದೇವರ ಕೊಂಡಾರೆಡ್ಡಿ, (ಸಂ.), ೨೦೦೦, **ಕನ್ನಡ ವಿವಿ ಶಾಸನ ಸಂ.೩ ಹಂಪಿ ಶಾಸನಗಳು,** ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ.

೧೦. ಡಾ. ಪುರುಷೋತ್ತಮ ಬಿಳಿಮಲೆ, ೧೯೯೬, **ಹಂಪಿ ಜಾನಪದ,** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಡಾ. ತಿಪ್ಪೇಸ್ವಾಮಿ.ಎಚ್. ೨೦೦೬, **ಹಂಪಿ ಪ್ರಾಧಿಕರ ವ್ಯಾಪ್ತಿಯ ಸ್ಮಾರಕಗಳು,** ಮಾಲತೇಶ ಪ್ರಕಾಶನ, ಬೆಂಗಳೂರು.

೧೨. ಡಾ. ಶ್ರೀಕಂಠಯ್ಯ, ೧೯೮೬, **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ,** ಮೈಸೂರು.

೧೩. ಡಾ. ಸೋಮಶೇಖರ್.ಎಸ್.ವೈ., ೨೦೦೯, **ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ,** ಸಂಚಿಕೆ ಪ್ರಕಾಶನ, ಚಿತ್ರದುರ್ಗ.

೧೩೧

ಉಗ್ನಿಕೇರಿಯ ಐತಿಹ್ಯಗಳು, ಕಲಾ ಸ್ಮಾರಕಗಳು

ಕೆ.ಸಿ. ಮಲ್ಲಿಗವಾಡ*

ಹೆದ್ದಾರಿಯಲ್ಲಿ ಉಗ್ನಿಕೇರಿ ಕತ್ತರಿ ಕ್ರಾಸ್ ಇದ್ದು ನಾಲ್ಕು ಗ್ರಾಮಗಳಿಗೆ ಹೋಗುವ ಮಾರ್ಗಸೂಚಿಯಲ್ಲಿ ಪಶ್ಚಿಮಕ್ಕೆ ಹಿರೇಹೊನ್ನಿಹಳ್ಳಿ, ಪೂರ್ವಕ್ಕೆ ಮಿಶ್ರಿಕೋಟಿ, ಉತ್ತರಕ್ಕೆ ಹುಬ್ಬಳ್ಳಿ, ದಕ್ಷಿಣಕ್ಕೆ ಕಲಘಟಗಿ ಕಾರವಾರ ಬೃಹತ್ ಹೆದ್ದಾರಿ ಇರುತ್ತದೆ. ಇದರ ಮಧ್ಯದಲ್ಲಿರುವ ಬಲಭಾಗದಲ್ಲಿ ಅರ್ಧ ಕಿ.ಮೀ. ಚಲಿಸಿದರೆ ಸಿಗುವುದೇ ಉಗ್ನಿಕೇರಿ ಗ್ರಾಮ. ಸುತ್ತಲೂ ವಿಶಾಲವಾದ ಜಾಗವಿದ್ದು ಊರ ಸುತ್ತಲೂ ಕಲ್ಲು ಕಣಿವೆಗಳು ಸ್ಟೋನ್ ಕ್ರಶರ್‌ಗಳ ಧೂಳು, ಕರ್ಕಶ ಶಬ್ದಗಳ ಮಧ್ಯದಲ್ಲಿರುವ ಗ್ರಾಮವು ನೋಡಲು ಬಲು ಸೊಗಸಾಗಿ ಕಾಣುತ್ತದೆ. ಊರ ಸುತ್ತಲೂ ಕಬ್ಬು, ಭತ್ತ, ಗೋವಿನ ಜೋಳ, ಸೋಯಾಬೀನ್, ತೆಂಗಿನ ತೋಟಗಳು ಕಂಗೊಳಿಸುತ್ತವೆ ಮತ್ತು ಅಲ್ಲಲ್ಲಿ ಇಟ್ಟಿಗೆ ಭಟ್ಟಿಗಳೂ ಕಾಣಸಿಗುತ್ತವೆ. ಹೀಗೆ ಹತ್ತು ಹಲವು ವೈಶಿಷ್ಟ್ಯತೆಗಳ ವೈಭವೀಕರಣದ ಊರೇ ಉಗ್ನಿಕೇರಿ.

ಗ್ರಾಮದ ಪ್ರಾಚ್ಯಾವಶೇಷಗಳು

ಉಗ್ನಿಕೇರಿಯಲ್ಲಿ ಕ್ರಿ.ಶ. ೧೧-೧೩ನೇ ಶತಮಾನಗಳ ಅವಧಿಗೆ ಹೊಂದಿಕೊಂಡಿರುವಂತೆ ಇಲ್ಲೊಂದು ಕಲ್ಯಾಣ ಚಾಲುಕ್ಯರ ಕಾಲದ ಶ್ರೀ ಕಲ್ಮೇಶ್ವರ ದೇಗುಲವಿದೆ. ಇದನ್ನು ಭಕ್ತರು ಕ್ರಿ.ಶ. ೨೦೧೧ರಲ್ಲಿ ಜೀರ್ಣೋದ್ಧಾರ ಮಾಡಲು ನೆಲಸಮಗೊಳಿಸಿದ್ದಾರೆ. ಈಗ ಇದೊಂದು ಅವಶೇಷವಾಗಿ ಮಾತ್ರ ಉಳಿದಿದೆ. ಗರ್ಭಗುಡಿ, ನವರಂಗ, ಸಭಾಮಂಟಪ ಇದ್ದು ಮುಂದಿನ ಭಾಗವು ಇತ್ತೀಚಿನ ೧೫-೧೬ನೇ ಶತಮಾನದಲ್ಲಿ ಜೀರ್ಣೋದ್ಧಾರವಾಗಿ ಪುನಃ ನಿರ್ಮಾಣವಾಗಿದೆ. ಇಲ್ಲಿ ಮಣ್ಣಿನ ಗೋಡೆಗಳನ್ನು ನಿರ್ಮಿಸಲಾಗಿದ್ದು ಎಡಬಲಗಳಲ್ಲಿರುವ ಗೋಡೆಗಳು ಥೆರ್ರಿ ಕಲ್ಲಿನಿಂದ ಕಟ್ಟಲಾಗಿದೆ. ನಿರ್ಮಾಣಕ್ಕೆ ಗಚ್ಚು ಹಾರೆ, ಕಲ್ಲುಗಳನ್ನು ಬಳಸಿ ಶಿಲ್ಪಿ ಅತ್ಯುತ್ತಮವಾಗಿ ನಿರ್ಮಾಣಗೊಳಿಸಿದ್ದಾರೆ. ಎಡಬಲಗಳಲ್ಲಿ ಜಾಲಾಂಧ್ರಗಳನ್ನು ಅಳವಡಿಸಿ ದೇಗುಲಕ್ಕೆ ಗಾಳಿ ಬೆಳಕಿನ ವ್ಯವಸ್ಥೆ ಮಾಡಿದ್ದಾರೆ. ಮಧ್ಯದಲ್ಲಿರುವ ಸಭಾಮಂಟಪ, ಸುತ್ತಲಿರುವ ಪ್ರದಕ್ಷಿಣಾ ಪಥ, ದೇಗುಲದ ನೈಪುಣ್ಯತೆ ಹಾಗೂ ಅಂದವನ್ನು ಹೆಚ್ಚಿಸಲಾಗಿದೆ. ೨೦ ಅಡಿ ಅಗಲಳತೆಯುಳ್ಳ ಸಭಾಮಂಟಪ ಅತ್ಯಾಕರ್ಷಕವಾಗಿ ಕಂಗೊಳಿಸುತ್ತಿದೆ. ಕೆತ್ತನೆ ಕಂಬಗಳ ಶಿಲಾಮಂಟಪವಿದೆ. ಕಂಬಗಳು ಮಧ್ಯದ ಕಂಬಗಳು ವೃತ್ತಾಕಾರವಾಗಿ ನುಣುಪಾಗಿ ಹೊಳೆಯುತ್ತವೆ. ಮಧ್ಯದಲ್ಲಿರುವ ಸಭಾಮಂಟಪದ ಕಂಬಗಳಿಲ್ಲ. ನಾಲ್ಕು ಗೋಡೆ ಗಂಬಗಳು ಅರ್ಧ ಸುಳಿವನ್ನು ಹೊಂದಿದ್ದು ಕಂಡುಬರುತ್ತದೆ. ಮಧ್ಯದಲ್ಲಿರುವ ಸಭಾಮಂಟಪದ ಕಂಬಗಳಲ್ಲಿ ಮೇಲ್ಭಾಗದಲ್ಲಿ ತೊಲೆ, ಬೋದುಗಳು ಸುಂದರವಾದ ಕುಸುರಿ ಕೆತ್ತನೆಯಿಂದ ನಿರ್ಮಿಸಿದ್ದ ಮಧ್ಯಭಾಗದಲ್ಲಿ ಗಗ್ಗರಿಯಾಕಾರವಾಗಿ ಕೆತ್ತಲ್ಪಟ್ಟಿವೆ. ಮಧ್ಯದಲ್ಲಿ ಉಳಿದ ಸ್ಥಳವು ವಿವಿಧ ಕುಂಜ, ಸುರಳಿ ಹೆತ್ತವೆಯಲ್ಲಿ ನಿರ್ಮಿಸಿದ ಸುಂಧರ ಹೂಗೊಂಚಲು ಅಂದವಾಗಿ ಕೆತ್ತನೆ ಮಾಡಿದ ಚಿಕ್ಕದಾಗಿ ಕಂಬಗಳಲ್ಲಿ ಅಷ್ಟಕೋನಾಕೃತಿಯಲ್ಲಿ ಬಿಡಿಸಲಾದ ಕಲಾಕೃತಿಗಳು ಪ್ರೇಕ್ಷಕನನ್ನು ಮಜುಭೂತಾದ ನಾಲ್ಕು ಗಗ್ಗರಿ ಗಂಬಗಳು ಕೆಳಗಡೆ ಶಿಲಾ ಸರಪಳಿಯಿಂದ ಅಲಂಕೃತಗೊಂಡಿವೆ. ಮೇಲ್ಭಾಗದಲ್ಲಿ ಅಷ್ಟಕೋನಾಕೃತಿಯ ಶಿಲಾ ಗಡಿಗೆಗಳು, ಮಧ್ಯದಲ್ಲಿ ಗುಂಡುಗಳು, ಗುಡುಗಡಗಿ, ಮಧ್ಯದಲ್ಲೊಂದು ಶಿಲಾಲತೆ ಸಾಲು ಇದ್ದು ಇದರ ಮೇಲಿರುವ ತೊಲೆ ಬೋದುಗೆಗಳು ಸಹ ಅತ್ಯಂತ ಸುಂದರವಾಗಿ ಅಲಂಕೃತಗೊಂಡಿವೆ. ತೊಲೆಗಳಲ್ಲಿ ಕುದುರೆ, ಮುಖ್ಯ ಆನೆ ಮುಖ, ಸಿಂಹದ ಮುಖ, ಲಾಲಿಸಿದ್ದಾಳೆ. ಮೊದಲಾದ ಪ್ರಾಣಿಗಳನ್ನು ಕಟಿಸಿದ್ದಾರೆ. ಬೋದುಗೆಗಳಲ್ಲಿ ಗೋಡಂಬಿ, ಮಾವಿನಹಣ್ಣುಗಳನ್ನು ಬಿಡಿಸಿ ದೇಗುಲಕ್ಕೆ ವಿಶೇಷ ಕಳೆ ತಂದಿದ್ದಾರೆ.

ಇದರ ನಂತರ ಕಂಡುಬರುವುದು ಪ್ರವೇಶ ದ್ವಾರ. ಇಲ್ಲಿ ಶಿಲ್ಪಿ ತನ್ನ ಕುಶಲಕಲೆಯ ಕೈಚಳಕವನ್ನು ಎತ್ತಿ ತೋರಿಸಿದ್ದಾನೆ. ಪ್ರವೇಶದ್ವಾರವು ವಿಶಾಲವಾಗಿದ್ದು, ಅಳತೆಗೆ ತಕ್ಕಂತೆ ೭' ಎತ್ತರವಾಗಿ ೩' ಅಲಗವಾಗಿ ನಿರ್ಮಿಸಿದ ದ್ವಾರದ ಬಾಗಿಲವಾಡಗಳಲ್ಲಿ ಮನೋಹರವಾದ ಕೆತ್ತನೆಗಳನ್ನು ಬಿಡಿಸಲಾಗಿದೆ. ದ್ವಾರಬಂಧದಲ್ಲಿ ಸುಂದರವಾದ ಲತೆ ಪುಷ್ಪಗುಚ್ಛ ಅದರ ಮಧ್ಯಭಾಗದಲ್ಲಿ

* ತಾವಲಗೇರಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ. ಮೊ. ೯೯೭೨೯೫೫೩೯೯೬

ಸಹಸ್ರದಳ ಕಮಲವಿದೆ. ಕಳೆಗಳಲ್ಲಿ ಗಿಳಿ, ನವಿಲು, ರತ್ನದ ಕೋಗಿಲೆಗಳ ಚಿಕ್ಕ ಚಿಕ್ಕ ವಿಗ್ರಹಗಳನ್ನು ಬಿಡಿಸಿ ಹಣೆಪಟ್ಟಿಯ ಅಂದವನ್ನು ಹೆಚ್ಚಿಸಲಾಗಿದೆ. ಬಾಗಿಲು ಚೌಕಟ್ಟುಗಳ ಎಡಬಲಗಳಲ್ಲಿ ಮಕರತೋರಣ ಬಿಡಿಸಲಾಗಿದೆ. ಮೊಸಳೆ ಬಾಯಿಯ ನಾಲಗೆಯಲ್ಲಿ ಹೂಬಳ್ಳಿ ಲತಾ ಕುಂಚ, ಬಳ್ಳಿಯ ಮಧ್ಯಭಾಗದಲ್ಲಿ ಹುಲಿ, ಶಾರ್ದೂಲ, ಗಜ, ವೃಷಭಗಳಂತಹ ಪ್ರಾಣಿಗಳನ್ನು ಬಿಡಿಸಿ ಅವುಗಳು ಓರೆಯಾಗಿ ಕಾಣುವಂತೆ ವ್ಯವಸ್ಥೆಗೊಳಿಸಲಾಗಿದೆ. ಗುಂಡುಗಳ ಸಾಲು ಜೋಡು ದಪ್ಪೆಗಳನ್ನು ಜೋಡಿಸಿ ಚೌಕಟ್ಟಿನಲ್ಲಿ ಚಿತ್ತಾಕರ್ಷಕವಾದ ಚಿತ್ರಗಳನ್ನು ಬಿಡಿಸಿ ಅದಕ್ಕೆ ವಿಶೇಷವಾದ ಮೆರಗು ಬರುವಂತೆ ಶಿಲ್ಪಿ ಅವುಗಳನ್ನು ಸುರಳಿಗೆತ್ತನೆ ಮೂಲಕ ಅಲಂಕೃತಗೊಳಿಸಿದ್ದಾನೆ. ಹಲವು ವಿಸ್ಮಯಗಳನ್ನು ಬಾಗಿಲಿನಲ್ಲಿ ಅಳವಡಿಸಿ ಸೈ ಅನ್ನಿಸಿಕೊಂಡಿದ್ದಾನೆ.

ದೇವಾಲಯದ ಗರ್ಭಗೃಹವು ಚಿಕ್ಕದಾಗಿದ್ದು ಒಳಭಾಗದಲ್ಲಿ ಸ್ಥಾವರ ಲಿಂಗವಿದ್ದು ಶಿಲಂಕೃತಗೊಳಿಸಿದ್ದಾನೆ. ಮೇಲ್ಭಾಗದಲ್ಲಿ ಅಷ್ಟ ಕೋನಾಕೃತಿಯ ಗೋಪುರವಿದ್ದು ಅವುಗಳ ಮೇಲ್ಗತ್ತಿನಲ್ಲಿ ಕಮಲ ದಳದ ಹೂವನ್ನು ಬಿಡಿಸಿದ್ದಾನೆ ಗಂಟೆ ಕಟ್ಟಲು ಕಮಲದ ಹೂವಿನ ಮಧ್ಯಭಾಗದಲ್ಲಿ ಕೊಂಡಿಯನ್ನು ಅಳವಡಿಸಲಾಗಿದೆ.

ಗರ್ಭಗೃಹದ ಬಾಗಿಲು ಚೌಕಟ್ಟುಗಳು ಅಲ್ಪಸ್ವಲ್ಪ ಕೆತ್ತನೆಗಳಿಂದ ಕೂಡಿದ್ದು ಹಣೆಪಟ್ಟಿಯು ಮಧ್ಯದಲ್ಲೊಂದು ತಾವರೆ ಹೂ ಬಿಡಿಸಲಾಗಿದ್ದ ಎಡಬಲಗಳಲ್ಲಿ ಸುರಳಿಗೆತ್ತನೆ ಮಾಡಲಾಗಿದೆ. ಬಾಗಿಲುವಾಡೆಗಳಲ್ಲಿ ಗುಂಡಿನ ಸಾಲು ಜೋಡುದಪ್ಪೆಗಳನ್ನು ಬಿಡಿಸಲಾಗಿದೆ. ಗರ್ಭಗೃಹದ ಒಳಭಾಗದ ಎಡಬಲ ಗೋಡೆಗಳಲ್ಲಿ ಸಣ್ಣ ಸಣ್ಣ ಮಾಡುಗಳನ್ನು ಬಿಟ್ಟಿದ್ದಾರೆ. ಬಹುತೇಕ ಇದನ್ನು ಪೂಜಾ ಸಾಮಗ್ರಿಗಳನ್ನು ಸಂಗ್ರಹಿಸಿಡಲು ಅನುಕೂಲ ಕಟ್ಟಿಸಿದಂತೆ ಕಂಡುಬರುತ್ತದೆ.

ದೇವಾಲಯದ ಮುಂಭಾಗದಲ್ಲಿ ಎಡಭಾಗದಲ್ಲಿ ಒಂದು ಬೃಹತ್ ವೀರಗಲ್ಲನ್ನು ನಿಲ್ಲಿಸಲಾಗಿದೆ. ಅದರಂತೆ ಬಲಭಾಗದಲ್ಲಿ ಬಹು ಎತ್ತರವಾದ ೬ ೧/೨ ಅಡಿ ಎತ್ತರವಾದ ಶಿಲಾಶಾಸನದ ಕಲ್ಲನ್ನು ನಿಲ್ಲಿಸಲಾಗಿದೆ. ಆದರೆ ಈ ಶಿಲಾಶಾಸನವು ಮಳೆ, ಗಾಳಿಗೆ ಸವೆದು ಹೋಗಿ ಓದಲು ಅಸಾಧ್ಯವಾದಂತಾಗಿದೆ.

ಉಗ್ನಿಕೇರಿ ಗ್ರಾಮದ ಪ್ರಾಚ್ಯಾವಶೇಷಗಳು : ೧. ಶ್ರೀ ಕಲ್ಮೇಶ್ವರ ದೇವಾಲಯ, ೨. ಶ್ರೀ ಬಸವಣ್ಣದೇವರ ಗುಡಿ, ೩. ಶ್ರೀ ಉಡಚಮ್ಮದೇವಿ ಗುಡಿ, ೪. ಶ್ರೀ ಹನುಮಂತ ದೇವರ ಗುಡಿ, ೫. ಶ್ರೀ ಗುಳ್ಳ ಲಕ್ಕಮ್ಮ (ಗಜಲಕ್ಷ್ಮಿ), ೬. ಶ್ರೀ ಕರೆಮ್ಮದೇವಿ ದೇಗುಲ, ೭. ಶ್ರೀ ಕಾಶೀ ವಿಶ್ವೇಶ್ವರ ದೇಗುಲ, ೮. ಶ್ರೀ ಸಿದ್ಧಾರೂಡ ಮಠ, ೯. ಶ್ರೀ ಘಟಿಗೆ ಬಸವಣ್ಣ, ೧೦. ವೀರಗಲ್ಲುಗಳು, ೧೧. ಶಿಲಾಶಾಸನಗಳು ೧೨. ಹಿರಿಯ ಕೆರೆ, ೧೩. ತ್ರುಟಿತ ಗಣೇಶ, ನಂದಿ, ವಿಗ್ರಹಗಳು, ೧೪. ಶ್ರೀ ಮೂಕೇಶ್ವರ ದೇವಾಲಯ ಮತ್ತು ೧೫. ಹುಡೆ.

ಶ್ರೀ ಹನುಮಂತ ದೇವರ ಗುಡಿ (ದೇವಸ್ಥಾನ)

ಇದೊಂದು ಇಷ್ಟಾರ್ಥ ಸಿದ್ಧಿ ಶ್ರೀ ಹನುಮಂತ ದೇವಸ್ಥಾನ ದಕ್ಷಿಣಾಭಿಮುಖವಾಗಿದೆ. ಇದೊಂದು ಪ್ರಾಚೀನ ದೇವಾಲಯ ಕ್ರಿ.ಶ. ೧೭ನೇ ಶತಮಾನಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿರುವ ಪ್ರಾಚೀನ ಕಲಾಸ್ಮಾರಕಗಳು ದೇವಾಲಯದ ಐತಿಹ್ಯವನ್ನು ಬಿಂಬಿಸಲು ಸಹಕಾರಿಯಾಗಿದೆ.

ದೇವಾಲಯವನ್ನು ಶಿಲೆಯಲ್ಲಿ ನಿರ್ಮಿಸಿ ಪೂಜಿಸುತ್ತಿದ್ದಾರೆ. ಸುತ್ತಲೂ ಅರ್ಚಕರು ವಾಸಿಸಲು ಪ್ರತ್ಯೇಕ ಮನೆ, ಚಿಕ್ಕ ಉಗ್ರಾಣಗಳನ್ನು ನಿರ್ಮಿಸಲಾಗಿತ್ತು. ಶ್ರೀ ಹನುಮಂತ ದೇವರ ದೇಗುಲವು ಆಳರಸರ ಆರಾಧ್ಯ ದೇವರಾಗಿದ್ದರಿಂದ ಪವಾಡ ಹನುಮಂತ ದೇವರೆಂದೇ ಖ್ಯಾತಿ ಹೊಂದಿದ್ದಾನೆ. ಹಿಂದಿನಿಂದಲೂ ಈ ದೇವಸ್ಥಾನಕ್ಕೆ ಭೂದಾನಗೈದ ಉಲ್ಲೇಖಗಳಿವೆ. ಮೊದಲು ಸುಮಾರು ೩೦ ಅಡಿ ಉದ್ದ ೨೦ ಅಡಿ ಅಗಲವಾಗಿತ್ತು ಇದು ದುರ್ಬಲಗೊಂಡಿದ್ದರಿಂದ ಇತ್ತೀಚಿನ ದಿನಗಳಲ್ಲಿ ದೇಗುಲವನ್ನು ನೆಲಸಮಗೊಳಿಸಿ ಜೀರ್ಣೋದ್ಧಾರಗೊಳಿಸಿ ಸಿಮೆಂಟ್ ಉಸುಕಿನಿಂದ ಚಿಕ್ಕದಾದ ದೇವಾಲಯ ನಿರ್ಮಿಸಿ ಅಚ್ಚುಕಟ್ಟಾಗಿ ಇಟ್ಟುಕೊಂಡಿದ್ದಾರೆ.

ಗರ್ಭಗೃಹ ಒಂದೇ ಇದ್ದು ಅಲ್ಲಿಯೇ ದೇವರ ವಿಗ್ರಹವಿದೆ. ದಕ್ಷಿಣಕ್ಕೆ ಮುಖ ಮಾಡಿದ್ದು, ಬಲಗಡೆ ಅಭಯಹಸ್ತ ಎಡೆಗಡೆ ಗದೆ ಇದ್ದು ಮೈಮೇಲೆ ಕಂಡುಬಂದು ಮುಂಗೈಯಲ್ಲಿ ಕಡಗ ಎಡಗೈನಲ್ಲಿ ಅಲಂಕೃತ ಗದೆ, ಭುಜದ ಮೇಲೆ ವಸ್ತ್ರ, ಕೊರಳಲ್ಲಿ ಕಂಠಹಾರ, ಲಿಂಗ, ಎದೆಯಲ್ಲಿ ಕವಚನಗಳನ್ನು ಧರಿಸಿ ರಟ್ಟೆಯಲ್ಲಿ ಅಲಂಕೃತ ತೋಳ ಆಭರಣ, ಪಾದದ ಮೇಲೆ ಕಾಲ್ಗಡಗ, ಕೈಯುಂಗುರ, ಕಿವಿಯೋಲೆ ಮೊದಲಾದವುಗಳನ್ನು ಧರಿಸಿ ಆಕಾಶದಲ್ಲಿ ಚಲಿಸುವಂತಹ ಶೈಲಿಯಲ್ಲಿದ್ದು ಪಾದದ ಕೆಳಗೆ ಶನಿಮಹಾತ್ಮನನ್ನು ತುಳಿದು ತಲೆ ಮೇಲೆ ಕಾಲಿಟ್ಟಿರುವಂತೆ ಬಿಡಿಸಿದೆ. ಹೀಗೆ ಎಲ್ಲ ಅವಯವಗಳನ್ನು ಅಳತೆಗೆ ತಕ್ಕಂತೆ ಶಿಲ್ಪಿ ಕೆತ್ತಿ ನಯನಗೊಳಿಸಿದ್ದಾನೆ.



ಭೈರವಮೂರ್ತಿ



ಓಣಿಯಲ್ಲಿ ಮಧ್ಯವರ್ತಿ ಸ್ಥಳದಲ್ಲಿ ಶ್ರೀ ಹನುಮಂತ ದೇವರ ದೇಗುಲವಿದ್ದು ಇದರ ಎಡಭಾಗದಲ್ಲಿ ಭಕ್ತರು ಒಂದು ಶಿಲಾಶಾಸನವನ್ನು ನಿಲ್ಲಿಸಿದ್ದಾರೆ. ಇದು ಕ್ರಿ.ಶ. ೧೧೭೧ರಲ್ಲಿ ಕಲ್ಯಾಣದ ಚಾಲುಕ್ಯರ ಅರಸ ೩ನೇ ಸೋಮೇಶ್ವರನು ಹೊರಡಿಸಿದನೆಂದು ಇದರ ಸಾರಾಂಶವೇನೆಂದರೆ "ಪಡೆವಳ ವಿಜಯಾದಿತ್ಯನು ಮೂಕೇಶ್ವರ ದೇವರಿಗೆ ನೀಡಿದ ಭೂದಾನ"ದ ವಿಚಾರವನ್ನು ತಿಳಿಸುತ್ತದೆ.



ಕಲ್ಮೇಶ್ವರ ದೇವಸ್ಥಾನದ ಸ್ಥಾವರಲಿಂಗ ಅಷ್ಟಕೋನಾಕೃತಿಯಲ್ಲಿದೆ



ಚಾಲುಕ್ಯರ ಕಾಲದ ವೀರಗಲ್ಲು

ಇದರಂತೆ ಇದೇ ಸ್ಥಳದಲ್ಲಿ ಇನ್ನೊಂದು ಇದರ ಸಮಕಾಲೀನ ಶಾಸನವೊಂದನ್ನು ಹೊರಡಿಸಲಾಗಿದೆ. ಗೋವಾ ಕದಂಬರ ಅರಸ ೩ನೇ ಜಯಕೇಶಿ ಹೊರಡಿಸಿದ ಶಾಸನದ ಸಾರಾಂಶವೂ ಕೂಡ ಚಾಲುಕ್ಯರ ಶಾಸನದ ವಿಷಯವನ್ನೇ ತಿಳಿಸುತ್ತಿದ್ದರಿಂದ ಸಮಕಾಲದ ಎರಡೂ ಶಾಸನಗಳ ಕಾಲಮಾನ ೧೧೭೧ ಇದ್ದು, ಇದು ಈ ಗ್ರಾಮದ ಜೀರ್ಣೋದ್ಧಾರಕ್ಕಾಗಿ ಅಲ್ಲಿರುವ ಮೂಕೇಶ್ವರನ ಪೂಜೆಗೆ ಎಣ್ಣೆ ದೀವಿಗೆಗಾಗಿ ಚಾಲುಕ್ಯರ ಅರಸ ವಿಜಯಾದಿತ್ಯನು ಗುರು ಸ್ಮರಣಾರ್ಥ ಭೂಮಿಯನ್ನು ದಾನ ಮಾಡಿದನಲ್ಲದೆ ಭಕ್ತಾದಿಗಳೆಲ್ಲರಿಗೆ ಅನ್ನ ಸಂತರ್ಪಣೆ ಮಾಡಿದನೆಂದು ತಿಳಿಸಲಾಗಿದೆ.

ಶ್ರೀ ಉಚ್ಚಮ್ಮದೇವಿ ದೇಗುಲ

ಪೂರ್ವಾಭಿಮುಖವಾಗಿದೆ ಈಗ ಜೀರ್ಣೋದ್ಧಾರಗೊಂಡಿದೆ. ಇದೊಂದು ಪ್ರಾಚೀನ ಕಾಲದ ದೇವಾಲಯ ಸುಮಾರು ೧೦-೧೨ನೇ ಶತಮಾನಕ್ಕೆ ಸಂಬಂಧಿಸಿದ್ದಾಗಿದ್ದು ಮೂಲ ದೇಗುಲದ ಅವಶೇಷಗಳನ್ನು ಪಕ್ಕದಲ್ಲಿಡಲಾಗಿದೆ. ಅವೆಲ್ಲ ತ್ರುಟಿತಗೊಂಡಿದೆ. ಅಲ್ಲಿರುವ ಪೀಠ, ಗಣೇಶ ವಿಗ್ರಹ, ಬಾಗಿಲುವಾಡ (ತ್ರುಟಿತ) ಸಿಂಹದ ಮುಖಗಳು ಅಲ್ಲಲ್ಲಿ ಚದುರಿದಂತೆ ಬಿದ್ದಿವೆ. ಉಡಚಮ್ಮ ದೇವಿಯ ಶಿಲ್ಪ ವಿಗ್ರಹವು ನಿಂತ ಭಂಗಿಯಲ್ಲಿದೆ. ದ್ವಿಭುಜಗಳನ್ನು ಹೊಂದಿದೆ. ಶಿಲೆಯಲ್ಲಿ ಅಭಯಹಸ್ತ, ಪಾದ, ಮುಖಗಳನ್ನು ಬಿಡಿಸಲಾಗಿದೆ. ಸುಮಾರು ಕ್ರಿ.ಶ. ೧೨ನೇ ಶತಮಾನದ ಆದಿಯಲ್ಲಿ ನಿರ್ಮಾಣಗೊಂಡಿರುವ ಕುರುಹುಗಳು ಕಂಡು ಬರುತ್ತಿವೆ ಎನ್ನಲಾಗಿದೆ.

ಈ ದೇಗುಲದಲ್ಲಿ ಗರ್ಭಗೃಹ, ವಿಶಾಲವಾದ ಹಜಾರ, ಪ್ರವೇಶದ್ವಾರಗಳಿವೆ. ಮುಂದೆ ಪ್ರದಕ್ಷಿಣಾ ಪಥವಿದ್ದು ವಿಶಾಲವಾದ ಗರ್ಭಗೃಹವಿದ್ದು ಇಲ್ಲಿ ದುರ್ಗಾದೇವಿಯ ವಿಗ್ರಹವು ಕಂಡುಬರುತ್ತದೆ. ಆದರೆ ಇದು ಇತ್ತೀಚಿನ ದಿನಗಳಲ್ಲಿ ಭಕ್ತರು ಕಟ್ಟಿಗೆಯಿಂದ ನಯವಾಗಿ ತಯಾರಿಸಿ ಪೂಜೆಗೆ ಅಣಿಗೊಳಿಸಿದ್ದಾರೆ. ಇದೂ ಕೂಡಾ ಪ್ರಸಿದ್ಧವಾದದ್ದು. ಗ್ರಾಮೀಣ ಜನರು ಇದನ್ನು ದ್ಯಾಮಮ್ಮನ ವಿಗ್ರಹವೆಂದು ಕರೆಯಲಾಗಿದೆ. ನಿಂತ ಭಂಗಿಯಲ್ಲಿರುವ ವಿಗ್ರಹ ಯಾವುದೇ ವಾಹನವನ್ನು ಏರಿರದೆ ಭೂಮಿಯ ಮೇಲೆ ಹಾಗೆಯೇ ಉಗ್ರರೂಪ ತಳೆದು ನಿಂತಿದ್ದಾಳೆ. ಅಷ್ಟ ಭುಜಗಳನ್ನು ಹೊಂದಿ ಪ್ರತಿ ಕೈಯಲ್ಲಿಯೂ ಡಾಲು, ಗದೆ, ಖಡ್ಗ, ತ್ರಿಶೂಲ, ಬಾಣ, ಆಯುಧಗಳನ್ನು ಹೊಂದಿದ್ದು, ಯುದ್ಧಕ್ಕೆ ಸನ್ನದ್ಧಳಾಗಿರುವಂತೆ ತೋರುತ್ತಿದೆಯಾದರೂ ಬಲಗೈ ಅಭಯ ಹಸ್ತವನ್ನು ಹೊಂದಿದ್ದು ಶಾಂತಿ ಸಮಾಧಾನದ ಸೂಚನೆ ಕಂಡುಬರುತ್ತದೆ. ಕಟ್ಟಿಗೆ ವಿಗ್ರಹ ಸುಮಾರು ಆರು ಅಡಿ ಎತ್ತರವಾಗಿದ್ದು ೪ ಅಡಿ ಅಗಲವಾಗದೆ ಶಾಂತ ಸ್ವರೂಪದ ಮುಖ, ಅಭಯಹಸ್ತಗಳಿವೆ. ಇದೇ ಗರ್ಭಗೃಹದಲ್ಲಿ ಮತ್ತೊಂದು ಉದ್ಭವವಾಗಿರುವ ಶಿಲಾ ವಿಗ್ರಹವು ಚಿಕ್ಕದಾಗಿದೆ. ಈ ಮೂರ್ತಿಯು ಶ್ರೀ ಉಡಚಮ್ಮದೇವಿ ವಿಗ್ರಹದ ಮುಂಭಾಗದಲ್ಲಿ ಪ್ರತಿಷ್ಠಾಪಗೊಂಡಿದೆ.

ಗ್ರಾಮದೇವಿ ವಿಗ್ರಹ (ದ್ಯಾಮಮ್ಮನ ಮೂರ್ತಿ)

ಪ್ರತಿ ಗ್ರಾಮದಲ್ಲಿರುವಂತೆ ಗ್ರಾಮದ ಮಧ್ಯದಲ್ಲಿರುವ ದ್ಯಾಮಮ್ಮ ದೇವಸ್ಥಾನವು ಭಕ್ತರ ಆರಾಧ್ಯ ದೇವತೆಯಾಗಿದ್ದಾಳೆ. ಸ್ಥಳೀಯವಾಗಿ ಗ್ರಾಮ ದೇವತೆ ಎಂದು ಕರೆಯಲಾಗಿದೆ. ಶ್ರೀ ದೇವಿ ವಿಗ್ರಹ ನಿಂತ ಭಂಗಿಯಲ್ಲಿದ್ದು ಕಟ್ಟಿಗೆಯಿಂದ ತಯಾರಿಸಲಾಗಿದೆ. ಅಷ್ಟಭುಜಗಳನ್ನು ಹೊಂದಿದ್ದ ತ್ರಿಶೂಲ, ಖಡ್ಗ, ಗದೆ, ಡಾಲು, ಕತ್ತಿ, ಚಕ್ರ, ಬಿಲ್ಲು, ಬಾಣ ಮೊದಲಾದ ಆಯುಧಗಳನ್ನು ಹೊಂದಿದ್ದಾಳೆ. ಪಾದಗಳು ನಯನಮನೋಹರವಾಗಿವೆ. ಶ್ರೀ ದೇವಿಗೆ ಕೆಂಪು ವರ್ಣದ ಸೀರೆ ಕುಪ್ಪಸ, ಮೂಗುತಿ ನಡಪಟ್ಟಿ ಕಂಠಹಾರ, ಎದೆಗವಚ, ಕೈಬಳೆ, ನಾಗಾಭರಣ, ಕಿರೀಟ ತಿರಳುಂಗುರಗಳನ್ನು ಧರಿದಂತೆ ಇದೆ.

ಗುಳ್ಳಲಕ್ಕಮ್ಮ ದೇವಸ್ಥಾನ (ಲಕ್ಷ್ಮಿದೇಗುಲ)

ಹುಬ್ಬಳ್ಳಿ ಧಾರವಾಡ ಹೆದ್ದಾರಿಯಲ್ಲಿ ಪಶ್ಚಿಮಾಭಿಮುಖವಾಗಿ ನಿರ್ಮಾಣಗೊಂಡಿದೆ. ಮೊದಲು ಇಲ್ಲೊಂದು ಗಜಲಕ್ಷ್ಮಿ ವಿಗ್ರಹದ ಶಿಲೆ (ಕಲ್ಲು) ಇತ್ತು. ೧೦ x ೧೦ ಆಯತಾಕಾರದ ದೇವಾಲಯ ಈಗ ಜೀರ್ಣೋದ್ಧಾರಗೊಂಡಿದ್ದು ಅಳಿದುಳಿದ ಅವಶೇಷಗಳ ಆಧಾರದ ಮೇಲಿಂದ ಇದೊಂದು ಪ್ರಾಚೀನ ಕಾಲದ ದೇವಾಲಯವಾಗಿತ್ತೆನ್ನಬಹುದು. ಇತ್ತೀಚಿನ ದಿನಗಳಲ್ಲಿ ಭಕ್ತರು ಪುನರ್ನಿರ್ಮಾಣ ಕಾರ್ಯ ಮಾಡುವಾಗ ಗರ್ಭಗೃಹವೊಂದನ್ನು ನಿರ್ಮಿಸಿ ಅಲ್ಲೊಂದು ಗದ್ದಿಗೆ ನಿರ್ಮಿಸಿ ಅದರ ಮೇಲೆ ಸಪ್ತಶಿಲೆಗಳನ್ನು ಅಂದರೆ ೭ ದುಂಡುಗಲ್ಲುಗಳನ್ನು ಇಟ್ಟು ಅವುಗಳನ್ನು ಪೂಜೆ ಮಾಡುತ್ತಾರೆ.

ಹಿರೇಕೆರೆ

ಈ ಗ್ರಾಮದ ಪ್ರಾಚೀನತೆ ಸಾರುವ ಪ್ರಮುಖವಾದ ಅವಶೇಷವೇ ಈ ಹಿರಯ ಕೆರೆ. ಮೊದಲು ಇಲ್ಲಿನ ಕೆರೆಯ ಮಡಿಗೆ ಅಳವಡಿಸಿದ ಕಲ್ಲಿನಲ್ಲಿ ಕಲ್ಯಾಣ ಚಾಲುಕ್ಯರ ಅರಸ ೩ನೇ ಸೋಮೇಶ್ವರನು ಬೃಹತ್ ಕೆರೆ ನಿರ್ಮಿಸಿ ಅದನ್ನು

ರೈತಾಪಿ ಜನರಿಗೆ ನೀರಾವರಿ ಸೌಲಭ್ಯ ಕಲ್ಪಿಸಿ ಇದರ ಆದಾಯವು ಚೌಡೇಶ್ವರಿ ದೇವಿಯ ಎಣ್ಣೆದೀವಿಗೆ ಹಾಗೂ ದೇಗುಲ ನಿರ್ಮಾಣಕ್ಕೆ ಸಲ್ಲಬೇಕೆಂದು ಶಾಸನದ ಕಲ್ಲನ್ನು ಕೆರೆಯ ಮಟಿಯಲ್ಲಿ gate ಅಳವಡಿಸಿ ಇದು ಅಜರಾಮರವಾಗಿರಲೆಂದು ತಿಳಿಸಿದ್ದನು. ಆದರೆ ಈ ಶಾಸನ ಕಾಣುತ್ತಿಲ್ಲ.

ಹೀಗೆ ಉಗ್ನಿಕೇರಿಯ ಗ್ರಾಮದ ಪ್ರಾಚ್ಯಾವಶೇಷಗಳು ಜನ ಜನಿತವಾಗಿ ಇತಿಹಾಸದ ಪುಟಗಳ್ನು ಸೇರಿ ನಾಡಿನ ಉದ್ದಗಲದಲ್ಲಿ ಪಸರಿಸಿದೆ ಎನ್ನಲು ಹಲವಾರು ಪ್ರಾಚೀನ ಅವಶೇಷಗಳ ಆಧಾರಸ್ಥಂಬಗಳೇ ಸಾಕ್ಷಿಯಾಗಿವೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ವೀರಗಲ್ಲುಗಳು

ಈ ಗ್ರಾಮದಲ್ಲಿ ಒಟ್ಟು ಮೂರು ವೀರಗಲ್ಲುಗಳಿವೆ. ಈಗಿರುವ ಈ ಕಲ್ಲು ಶ್ರೀ ಕಲ್ಮೇಶ್ವರ ದೇವಸ್ಥಾನದ ಆವರಣದಲ್ಲಿ ಅನಾಥವಾಗಿ ಬಿದ್ದಿದೆ. ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲು ಮೂಲ ದೇಗುಲವನ್ನು ನೆಲಸಮಗೊಳಿಸಿದ್ದಾರೆ. ಗೋಡೆಗಳ ಮಣ್ಣಿನ ಅವಶೇಷಗಳ ಅಡಿಯಲ್ಲಿದ್ದ ಕಲ್ಲನ್ನು ಹೊರತೆಗೆದು ಪರೀಕ್ಷಿಸಲಾಗಿ ಕಲ್ಯಾಣದ ಚಾಲುಕ್ಯರ ಕಾಲದ್ದಾಗಿದ್ದು ೧೧೮೦-೧೨೦೦ ಅವಧಿಯಲ್ಲಿ ನಿರ್ಮಾಣಗೊಂಡಿದ್ದಾಗಿದೆ.

ವೀರಗಲ್ಲು ೩ ಪಟಿಕೆಗಳನ್ನು ಹೊಂದಿದೆ. ೬ ಅಡಿ ಎತ್ತರ, ೩ ಅಡಿ ಅಗಲವಾಗಿದೆ. ೫ ಅಡಿ ದಪ್ಪವಾಗಿದೆ. ಕೆಳಗಿನ ಪಟ್ಟಿಕೆಯಲ್ಲಿ ವೀರನು ಯುದ್ಧದಲ್ಲಿ ತೊಡಗಿದ್ದಾನೆ. ಕೈಯಲ್ಲಿ ಬಿಲ್ಲು ಬಾಣ, ಎದುರುಗಡೆ ವೈರಿಯು ಅಶ್ವಾರೋಹಿಯಾಗಿದ್ದು ಕೈಯಲ್ಲಿ ಈಟಿ ಒಂದು ಕೈಯಲ್ಲಿ ಲಗಾಮು ಹಿಡಿದಿದ್ದು ಪರಸ್ಪರರು ತಮ್ಮ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತಿದ್ದಾರೆ. ಇವರಿಬ್ಬರ ಮಧ್ಯದಲ್ಲಿ ಒಬ್ಬ ಸೈನಿಕ ವೀರನ ಎದುರು ನಿಂತು ಖಡ್ಗದಿಂದ ಹೊಡೆಯುತ್ತಿದ್ದಾನೆ. ಎಡಗೈಯಲ್ಲಿ ಡಾಲು ಹಿಡಿದು ಹೋರಾಡುತ್ತಿದ್ದಾನೆ. ಈ ಹೋರಾಟದಲ್ಲಿ ವೀರನು ಮಡಿದು ವೀರ ಸ್ವರ್ಗವನ್ನು ಹೊಂದಿದ್ದನ್ನು ಕಾಣಬಹುದು.

೨ನೇ ಪಟ್ಟಿಕೆಯಲ್ಲಿ ವೀರನನ್ನು ದೇವಕನ್ನಿಕೆಯರು ವಾದ್ಯ ಬಾರಿಸುತ್ತ ನೃತ್ಯ ಮಾಡುತ್ತ ಸ್ವರ್ಗಾರೋಹಣ ಮಾಡುತ್ತಿದ್ದಾರೆ. ವೀರನು ಮಧ್ಯಭಾಗದಲ್ಲಿದ್ದ ಎಡ ಬಲದಲ್ಲಿದ್ದ ದೇವಕನ್ನಿಕೆಯರ ಹೆಗಲ ಮೇಲೆ ಕೈ ಹಾಕಿ ಸ್ವರ್ಗದತ್ತ ಮುನ್ನಡೆಯುತ್ತಿದ್ದರೆ ಬಲಭಾಗದಲ್ಲಿ ಕಲಾಕಾರ ಮೃದಂಗ ಬಾರಿಸುತ್ತಿದ್ದು ಕಂಡುಬರುತ್ತಿದೆ.

೩ನೇ ಪಟ್ಟಿಕೆಯಲ್ಲಿ ವೀರನು ಬಲಭಾಗದಲ್ಲಿ ಕುಳಿತಿದ್ದಾನೆ. ಕೈ ಮುಗಿದು ಧ್ಯಾನಾಸಕ್ತನಾಗಿದ್ದಾನೆ. ಮಧ್ಯಭಾಗದಲ್ಲಿ ಶಿವಲಿಂಗವನ್ನು ಪೂಜಿಸುತ್ತಿದ್ದ ಪೂಜಾರಿ ಕೈಯಲ್ಲಿ ಜಾಗಟೆ ಹಿಡಿದು ಬಾರಿಸುತ್ತಿದ್ದಾನೆ. ಎಡಭಾಗದಲ್ಲಿ ನಂದಿ ವಿಗ್ರಹವಿದ್ದು ಮಲಗಿದ ಭಂಗಿಯಲ್ಲಿದ್ದು ಬಲಗಾಲನ್ನು ಮುಂದೆ ಮಾಡಿ ಎಡಗಾಲು ಮಡಚಿ ಮಲಗಿದ್ದಾನೆ. ಇದಕ್ಕೆ ಪ್ರತ್ಯೇಕವಾದ ಕಮಾನನ್ನು ನಿರ್ಮಿಸಿದ್ದಾರೆ.

ತ್ರುಟಿತ ವೀರಗಲ್ಲು: ಗ್ರಾಮದ ಮಧ್ಯಭಾಗದ ರಸ್ತೆ ಮಧ್ಯದಲ್ಲಿರುವ ಈ ವೀರಗಲ್ಲು

ಇದು ಮೂರು ಪಟ್ಟಿಕೆಗಳನ್ನು ಹೊಂದಿದೆ ಸುಮಾರು ಐದು ಅಡಿ ಎತ್ತರ ಎತ್ತರವಾಗಿದೆ. ಕೆಳಗಿನ ಪಟ್ಟಿಕೆಯಲ್ಲಿ ವೀರನನ್ನು ಸತಿಯರು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ.

೨ನೇ ಪಟ್ಟಿಯಲ್ಲಿ ಇಬ್ಬರು ದೇವಕನ್ನಿಕೆಯರು ಎಡಬಲದಲ್ಲಿ ನಿಂತು ನೃತ್ಯ ಮಾಡುತ್ತಾ ಮೇಲೆ ಹೋಗುತ್ತಿರುವುದು ಗೋಚರವಾಗುತ್ತಿದೆ. ಇಲ್ಲಿ ಕೇವಲ ೨ ಜನ ಸ್ತ್ರೀಯರು ಅಲಂಕಾರ ಮಾಡಿಕೊಂಡು ಎಡಬಲ ಕೈಗಳಿಂದ ವೀರನನ್ನು ಕರೆದೊಯ್ಯುತ್ತಿರುವುದು ಸ್ಪಷ್ಟವಾಗಿದೆ. ೩ನೇ ಪಟ್ಟಿಕೆಯಲ್ಲಿ ವಿಶಾಲವಾದ ಸ್ಥಳವಿದ್ದು ಬಲಭಾಗದಲ್ಲಿ ಇಬ್ಬರು ದಂಪತಿಗಳು ಕೈ ಮುಗಿದು ಧ್ಯಾನದಲ್ಲಿ ಕುಳಿತಿರುವುವುದು ಮಧ್ಯದಲ್ಲಿ ಶಿವಲಿಂಗವಿದ್ದು ಪೂಜಾರಿ ಪೂಜಿಸುತ್ತಿದ್ದಾನೆ. ಎಡಭಾಗದಲ್ಲಿ ನಂದಿಯು ಮಲಗಿದ ಭಂಗಿಯಲ್ಲಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಮುದ್ರೆಗಳಿದ್ದು ಮಧ್ಯದಲ್ಲಿರುವ ಚಿತ್ರಣ ಸ್ಪಷ್ಟವಾಗಿಲ್ಲ ಎಡಭಾಗದ ಕಲ್ಲು ತ್ರುಟಿತಗೊಂಡಿದೆ.

ಸ್ಥಾನಿಕ ಭೈರವ ಅಥವಾ ನಿಂತ ಭೈರವ

ಇದೊಂದು ನಿಂತ ಭಂಗಿಯಲ್ಲಿರುವ ಭೈರವೇಶ್ವರನ ವಿಗ್ರಹ ಸುಮಾರು ೪ ಅಡಿ ಎತ್ತರ ೨ ಅಡಿ ಅಗಲವಾಗಿರುವ ಸುಂದರವಾದ ಉಬ್ಬು ಕೆತ್ತನೆಯಿಂದ ಕೂಡಿದೆ. ಚತುರ್ಭುಜಗಳನ್ನು ಹೊಂದಿ ಮುಂದಿನ ಬಲಗೈಯಲ್ಲಿ ಖಡ್ಗವಿದೆ ಬಲಗೈ ೨ನೇ ಕೈಯಲ್ಲಿ ಡಮರುಗವಿದೆ. ಎಡಗೈ ಮುಂದಿನದು ರುಂಡಮಾಲೆ ಹಿಡಿದು ಅದರ ಜುಟ್ಟು ಕೂದಲು ಹಿಡಿದು

ತೂಗಾಡಿಸುತ್ತಿದ್ದಾನೆ. ಹಿಂದಿನ ಎಡಗೈಯಲ್ಲಿ ಕಳಸವಿದೆ. ಸುಂದರವಾದ ಮುಖ ಕವಿಗಳಲ್ಲಿ ಕಿವಿಯೋಲೆ ಧರಿಸಿದ್ದು ತಲೆಯಲ್ಲಿ ಕೇಶಾಲಂಕಾರದ ಜಡೆ ಇದೆ. ತಲೆಯ ಮೇಲ್ಭಾಗದಲ್ಲಿ ಕಿರೀಟವಿದೆ. ಸೂಕ್ಷ್ಮವಾದ ತಲಾ ಕೌಶಲ್ಯದಿಂದೊಡಗೂಡಿದೆ.

ಭೈರವನ ಕೆಳಗಡೆ ರಾಕ್ಷಸರು ನೃತ್ಯದಲ್ಲಿ ತೊಡಗಿದ್ದಾರೆ. ಇವರು ಬೆತ್ತಲೆಯಾಗಿ ವಾದ್ಯ ಬಾರಿಸುತ್ತಿದ್ದುದು ಕಂಡುಬರುತ್ತದೆ. ಕೊರಳಲ್ಲಿ ರುಂಡಮಾಲೆ ಧರಿಸಿದ್ದು ಪಾದದ ಕೆಳಭಾಗದಲ್ಲಿ ಭೈರವನ ವಾಹನ ಚೇಳು ಇದ್ದು ಕೆಲ ಭಾಗಗಳು ತ್ರುಟಿತಗೊಂಡಿದ್ದು ಕಂಟಾಭರಣ, ಕಾಲಿನಲ್ಲಿ ಸರಪಳಿ, ನಡದಲ್ಲಿ ನಡಪಟ್ಟಿ ಕೈಕಡಗ, ಭುಜದ ಕೈಯಲ್ಲಿ ನಾಗಾಭರಣ ಧರಿಸಿದ್ದಾನೆ. ನಡದಲ್ಲಿ ಸೊಂಟ ಪಟ್ಟಿ ಧರಿಸಿ ತನ್ನ ಮಾನ ರಕ್ಷಿಸಿಕೊಂಡಿದ್ದಾನೆ.

ಖಾಜನಗೌಡರ ದೌಲತ್ ಮಹಲ್

ರೇಖಾ ಬಿ. ಪಾಟೀಲ*

ಅದ್ಭುತ ಕಲಾಕಸ್ತೂರಿ, ವಿನ್ಯಾಸದ ಮೂಲಕ ರಾಯಚೂರಿನ ಐತಿಹಾಸಿಕ ಸ್ಮಾರಕವಾಗಿ ಖಾಜನಗೌಡರ ದೌಲತ್ ಮಹಲ್ ಪ್ರಸಿದ್ಧಿ ಪಡೆದಿದೆ. ಇಂದಿಗೂ ನೋಡುಗರ ಆಕರ್ಷಣೆ ಕೇಂದ್ರವಾಗಿರುವ ಮಹಲ್‌ನಲ್ಲಿ ಕುಸುರಿಯಿಂದ ಕೂಡಿದ ಕಟ್ಟಿಗೆಯ ಕಂಬಗಳನ್ನು ಒಳಗೊಂಡಿರುವ ಮಹಲನಲ್ಲಿ ೪೦ಕ್ಕೂ ಹೆಚ್ಚು ಕೊಠಡಿಗಳಿದ್ದು ಕಿನ್ನಾಳದ ಕಲೆಯ ಚಿತ್ರಗಳನ್ನು ಗೋಡೆಗಳ ಮೇಲೆ ಬಿಡಿಸಲಾಗಿದೆ. ಹಿಂದಿನ ಕಾಲದಲ್ಲಿಯೇ ವೈಜ್ಞಾನಿಕವಾಗಿ ಬೆಳಕು ಎಲ್ಲೆಡೆ ಹರಡುವಂತೆ ಮಾಡಲಾಗಿರುವುದು. ಮಹಲ್‌ನ ವೈಶಿಷ್ಟ್ಯತೆ, ಹೈದರಾಬಾದ ನಿಜಾಮನ ಆಡಳಿದಲ್ಲಿ ೧೪ ಜಿಲ್ಲೆಗಳ ಅಬಕಾರಿ ಗುತ್ತೆದಾರರಾಗಿದ್ದ ಖಾಜನಗೌಡರು ತಮ್ಮ ಆಡಳಿತ ಮತ್ತು ವಹಿವಾಟಿಗಾಗಿ ಕಾರ್ಯಲಯದ ಅವಶ್ಯಕತೆಗಾಗಿ ಮಹಲನ್ನು ನಿರ್ಮಾಣ ಮಾಡಿದ್ದರೆಂದು ಹೇಳಲಾಗುತ್ತದೆ.

ಎರಡು ಶತಮಾನಗಳ ಹತ್ತಿರ ಹತ್ತಿರಕ್ಕೆ ಪುರಾತನವಾದ ಈ ಮನೆ ಐತಿಹಾಸಿಕ ಅದ್ವಿತಿಯವಾದ ವಾಸ್ತು ವಿನ್ಯಾಸ, ಗಾರೆ–ಗಚ್ಚಿನ ಕುಶಲತೆ, ಕಾಷ್ಟ–ಶಿಲ್ಪ ದೇಶಿಯ ಚಿತ್ರಗಾರಿಕೆ, ಇತ್ಯಾದಿ ಲಕ್ಷಣಗಳನ್ನೊಳಗೊಂಡ ಈ ಮನೆ ನೋಡುಗರನ್ನು ಆಕರ್ಷಿಸುತ್ತದೆ.

ರಾಯಚೂರು ಹೃದಯ ಭಾಗದಂತಿರುವ ಸರದಾರ ವಲ್ಲಭ್ ಬಾಯಿ ಪಟೇಲ ರಸ್ತೆಯ ಮುಖಾಂತರ ಎರಡು ಮೂರು ಫರ್ಲಾಂಗು ದೂರ ಸಾಗುವಷ್ಟರಲ್ಲಿಯೇ ಪೂರ್ವದಿಸೆಯಲ್ಲಿ ನಿಮ್ಮನ್ನು ಕೈ–ಬೀಸಿ ಕರೆಯುವದು. ಈ ಸಿರಿಮನೆ. ಪೂರ್ವಭಿಮುಖವಾಗಿರುವ ಈ ಕಟ್ಟಡ ಮೂರು ಅಂತಸ್ತುಗಳನ್ನು ಒಳಗೊಂಡಿದ್ದು ಒಂಭತ್ತು ಅಂಕಣಗಳಿವೆ. ಹೆಬ್ಬಾಗಿಲಿನ ಇಕ್ಕೆಲಗಳಲ್ಲಿ ನಾಲ್ಕು–ನಾಲ್ಕು ಅಂಕಣಗಳನ್ನು ಒಳಗೊಂಡಿದೆ. ಭವ್ಯವಾದ ಹೆಬ್ಬಾಗಿಲನ್ನು ದಾಟಿಕೊಂಡು ಒಳ ಹೋದರೆ ಕಿನ್ನರ ಲೋಕವನ್ನೆ ಕಂಡಂತಹ ಅನುಭವವಾಗುವುದು. ಹದಿನಾರು ಚೌಕುಕಂಭಗಳೊಂದಿಗೆ ಸುತ್ತುವರೆದಿರುವ ಈ ಸಿರಿಮನೆ, ಈ ಭಾಗದ ವಾಸ್ತು ವಿನ್ಯಾಸಗಾರರ ಮತ್ತು ಕಲಾವಿದರ ಜಾಣ್ಮೆಗೆ ಒಂದು ಉತ್ತಮ ಮಾದರಿಯಂತಿದೆ. ಕಡು ಬೇಸಿಗೆಯಲ್ಲು ತಂಪಾಗಿರಿಸುವ ಈ ಮನೆ ಆಧುನಿಕ ಕಾಲದ ವಾತಾಯನದ ವ್ಯವಸ್ಥೆಯಂತಿದೆ. ಈ ಹಜಾರದಲ್ಲಿ ಒಳಕೋಣೆಗೆ, ಉಪ ಕೋಣೆಗಳಿಗೆ ಹೋಗುವ ಬಾಗಿಲುಗಳಿವೆ. ಮೇಲೆ ಹತ್ತುವುದಕ್ಕಾಗಿಯೇ ಮೆಟ್ಟಲುಗಳಿವೆ. ಈ ಮನೆಯ ನಿರ್ಮಾಣದ ಬಹು ದೊಡ್ಡ ವಿಶೇಷತೆಯೆಂದರೆ ಛತ್ತಿನ ಭಾರವನ್ನು ಗೋಡೆಗೆ ಮಾತ್ರ ಸೀಮಿತಗೊಳಿಸದೆ ಎಲ್ಲಾ ತೊಲೆಗಳಿಗೂ ವಿತರಿಸುವ ವಾಸ್ತುವಿನ ಜಾಣ್ಮೆಯನ್ನು ನಾವಿಲ್ಲಿ ಕಾಣಬಹುದು.

ಗಾರೆಗಚ್ಚಿನ ಕಾರ್ಯ: ಗಾರೆಯು ಪ್ರಾಚೀನ ಕಾಲದಿಂದ ಇತ್ತೀಚಿನ ಸಿಮೆಂಟು ಬರುವವರೆಗೂ ಜಾರಿಯಲ್ಲಿದ್ದ ಬಹುದೊಡ್ಡ ಮಾಧ್ಯಮವಾಗಿದೆ. ಸುಣ್ಣದಕಲ್ಲು, ಹಳೆಯ ಬೆಲ್ಲ, ಲೋಳೆಸರ, ಕೊಳಿತ ಬಾಳೆಹಣ್ಣುಗಳನ್ನು ಮತ್ತು ಗರಸು ಮಣ್ಣು ಇನ್ನಿತರ ವಸ್ತುಗಳನ್ನು ಸೇರಿಸಿ ಸ್ಥಳಿಯವಾಗಿ ತಯಾರಿಸಲಾಗುತ್ತಿತ್ತು. ಖಾಜಾನಗೌಡರ ಮನೆಯು ಈ ಗಾರೆಗಚ್ಚಿನಿಂದ ಪೂರ್ಣಗೊಂಡಿದೆ. ಕಿಡಕಿ, ಬಾಗಿಲು, ಗೋಡೆ, ಮನೆಯ ಮೇಲಿನ ಛಾವಣಿ, ನೀರಿನ ಹರಿಗಾಗಿ ಈ ಗಾರೆಯನ್ನು ಸಮೃದ್ಧವಾಗಿ ಬಳಿಸಲಾಗಿದೆ. ಹಾಗೆಯೇ ಖಾಜಾನಗೌಡರ ಮನೆಯ ಹೊರ ಭಾಗದ ಅಲಂಕಾರಕ್ಕಾಗಿ, ಈ ಗಾರೆಯನ್ನು ಬಳಸಿಕೊಳ್ಳಲಾಗಿದೆ.


ಮೂರು ಅಂತಸ್ತುಗಳನ್ನು ಒಳಗೊಂಡ ಈ ಮನೆಯಲ್ಲಿ ನಲವತ್ತು ಕೊಠಡಿಗಳಿವೆ, ದೇಶಿಯ ಮರಗಳನ್ನು, ಹೊರದೇಶದ ತೇಗ, ಬೀಟೆ ಮತ್ತು ಹೊನ್ನೆಯ ಮರಗಳನ್ನು ಬಳಸಿಕೊಳ್ಳಲಾಗಿದೆ. ವಿಶೇಷವಾಗಿ ಮನೆಯ ಕಂಭ, ಬೋದಿಗೆ, ಕಿಡಕಿ. ಬಾಗಿಲುಗಳಿಗೆ ದೇಶಿಯ ಬೇವು, ಜಾಲಿ ಮತ್ತು ನಲಮದ್ದು ಮತ್ತು ಸಾಗುವಾನಿ ಬಳಸಿಕೊಳ್ಳಲಾಗಿದೆ.

ಮೊದಲಿನ ಕೆಳ ಅಂತಸ್ತಿನಲ್ಲಿ ಎಂಟು ಭುಜಗಳ ಕಂಬಗಳನ್ನು ಬಳಸಿದರೆ, ಹೊರಗಡೆ ಇರುವ ಮೊಗಸಾಲೆಯ ಕಟ್ಟೆಯ ಅಲಂಕಾರಕ್ಕೆ ಚೌಕುಬೋದಿಗೆ ಮತ್ತು ಚೌಕುಕಂಭಗಳನ್ನು ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ಭಾರ ಹೊರುವ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಎಲ್.ವಿ.ಡಿ. ಮಹಾವಿದ್ಯಾಲಯ, ರಾಯಚೂರು. ಮೊ. ೮೭೩೨೪೩೮೪೪೭



ಖಾಜನಗೌಡರ ದೌಲತ್‌ಮಹಲ್



ಖಾಜನಗೌಡರ ಮನೆಯೊಳಗಿನ ಕಲಾಕೃತಿಗಳು



ಖಾಜನಗೌಡರ ಮನೆಯ ಕಾಷ್ಟಶಿಲ್ಪ





ವಿಶೇಷ ಚಿತ್ರಗಳು

ಕಂಭಗಳಿಗೆ ಭಾರವು ಸಮನಾಗಿ ವಿತರಣೆಯಾಗುವಂತೆ ವಿಶಾಲವಾದ ಬೋದಿಗೆಗಳನ್ನು ನಾಲ್ದೇಸೆಗಳಲ್ಲಿ ಬಳಸಲಾಗಿದೆ. ಕಿಟಕಿ ಕಂಬಗಳ ಮೇಲೆ ನಾಜೂಕಾದ ಚಿತ್ರಗಳನ್ನು ಕಾಣಬಹುದು. ಇನ್ನುಳಿದ ಸಾಮಾನ್ಯ ಕಿಟಕಿ ಕಮಾನು ಬಾಗಿಲುಗಳಿಗೆ ದೇಶಿಕಲೆಯ ಕಂಪನ್ನು ಕಾಣಬಹುದು. ಬೋದಿಗೆಯ ಕಂಭಗಳಲ್ಲಿ ಹೂ, ಎಲೆ ಬಳ್ಳಿ, ಗಿಳಿ, ಹುಲಿ ಮತ್ತು ಬಾಳೆಯ ಗೊನೆಯ ತುದಿಯಲ್ಲಿರುವ ಮೊಗ್ಗನ್ನು ಕಾಣಬಹುದು. ಬಾಗಿಲಿನ ಮೇಲೆ ಬಹುಶಃ ಕಡಗಮ್ ದೊಡ್ಡಿಯ ಹತ್ತಿರವಿದ್ದ ಅವರ ತೋಟದಲ್ಲಿ ಗಿಡ, ಮರ, ಹೂ, ಬಳ್ಳಿ, ಗಿಳಿ, ಹುಲಿ ಮತ್ತು ಬಾಳೆ ಗೊನೆಯ ತುದಿಯಲ್ಲಿರುವ ಮೊಗ್ಗಿನ ಚಿತ್ರಗಳನ್ನು ಅತ್ಯಂತ ಸುಂದರವಾಗಿ ಕಾಣಬಹುದು. ಅಲ್ಲದೆ ಚಿರಪರಿಚಿತ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಕಾಣಬಹುದು.

ಈ ಹಿಂದೆ ತಿಳಿಸಿರುವಂತೆ ಗಾರೆಗಚ್ಚನ್ನು ಬಳಸಿ ನಿರ್ಮಿಸಿದ್ದು. ಆದರೆ ಈ ಮನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಲ್ಲಲ್ಲಿ ಸೀಸದ ಕಡ್ಡಿಯಿಂದ ಮೋಡಿ ಅಕ್ಷರಗಳಲ್ಲಿ ದೇವತಾ ಶ್ಲೋಕಗಳನ್ನು ಅದರಲ್ಲೂ ವಿಶೇಷವಾಗಿ ವಿಷ್ಣು ಪರವಾದ ಶ್ಲೋಕಗಳನ್ನು ಕಾಣಬಹುದು. ಖಾಜಾನಗೌಡರ ಮನೆದೇವರು ದೇವದುರ್ಗ ತಾಲ್ಲೂಕಿನ ಮಾನಸಗಲ್ಲಿನ ರಂಗನಾಥ ಸ್ವಾಮಿ ದೇವರಾಗಿರುವ ಕಾರಣ·ಮನೆಯ ತುಂಬ ವಿಷ್ಣು ಮತ್ತು ಮಹಾಭಾರತದ ದೃಶ್ಯಗಳನ್ನು ಕಾಣುತ್ತೇವೆ.

ಬಣ್ಣಗಾರಿಕೆ: ಈ ಸಿರಿಮನೆಯ ಬಣ್ಣಗಾರಿಕೆಯೂ ಅತ್ಯಂತ ವಿಶೇಷವಾಗಿದೆ. ಇಲ್ಲಿನ ಚಿತ್ರಗಳಿಗೆ ನೈಸರ್ಗಿಕ ವರ್ಣಗಳನ್ನೇ ಬಳಸಿಕೊಡಿದ್ದಾರೆ. ಬಿಳಿಯ ಬಣ್ಣವನ್ನು ಶಂಖ, ಸಮುದ್ರ ತಡೆಯ ಕಪ್ಪೆಯ ಚಿಪ್ಪುಗಳನ್ನು ಬಳಸಿದರೆ. ಕಪ್ಪು ಕಾಡಿಗೆಗಾಗಿ ಚಿಮಣಿ ಎಣ್ಣೆಯ ದೀಪಗಳನ್ನು ಬಳಸಿದ್ದು ಆ ಬಣ್ಣಗಳು ಅಚ್ಚಳಿಯದೆ ಉಳಿಯುವಂತೆ ವರ್ಣಗಳೊಂದಿಗೆ ಕೋಳಿಯ ಮೊಟ್ಟೆಯಲ್ಲಿರುವ ಬಿಳಿಯ ದ್ರವವನ್ನು ಸೇರಿಸಿ ವರ್ಣದ ಜಿಗುಟತನಕ್ಕಾಗಿ ಬಳಸಿಕೊಡಿದ್ದಾರೆ.

ಮನೆಯಾದ್ಯಂತ ಮೂರು ಅಂಗುಲಗಳ ವಿಸ್ತಾರದಲ್ಲಿ ಹೂ-ಬಳ್ಳಿಗಳಿರುವ ಪಟ್ಟಿಕೆಗಳು ಹರಡಿಕೊಂಡಿವೆ. ಹೂ ಕುಂಡಗಳ ಚಿತ್ರಗಳು ಅಲ್ಲಲ್ಲಿ ಕಂಡುಬರುತ್ತವೆ. ಹೂವಿನ ಎಲೆಗಳು ಇರುವಂತೆ ಹಾರಾಡುವ ಗಿಳಿಗಳ ಹಿಂಡು ಇದೆ. ಹಾಗೆ ಇತ್ತಿಚಿನ ಅಲಂಕಾರಗಳಲ್ಲಿ ಬಳಸುವ ಶಂಖಾಕೃತಿಯ ಮರಗಳು, ನೀರಕ್ಕಿಗಳು, ಹಂಸಗಳು ಇತ್ಯಾದಿ ಸುಂದರ ಚಿತ್ರಗಳನ್ನು ಕಾಣಬಹುದು.

ಹಾಗೆಯೇ ಮುಂದುವರೆದು ನೋಡಿದರೆ ಖಾಜಾನಗೌಡರ ಮನೆಯ ತುಂಬೆಲ್ಲಾ ಶ್ರೀಕೃಷ್ಣನ ವಿವಿಧ ಆಕಾರಗಳ ಚಿತ್ರಗಳನ್ನು ಕಾಣಬಹುದು. ಕೃಷ್ಣನ ತುಂಟುತನದ ಚಿತ್ರಗಳು, ಮಹಾಭಾರತದ ನಾಯಕ ಹೀಗೆ ಕೃಷ್ಣನನ್ನು ಹಲವು ವರ್ಣಗಳಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ. ವಿಶೇಷವಾಗಿ ಗೋಪಿಯರ ಸೀರೆ ಹರಣದ ಚಿತ್ರ, ಸ್ನಾನ ಮಾಡುತ್ತಿರುವ ಗೋಪಿಯರ ಆಲದ ಮರದ ಇಕ್ಕೆಲಗಳಲ್ಲಿ ನಾಲ್ಕು-ನಾಲ್ಕು ಜನರಂತೆ ನಿಂತು ಕೊಡಿದ್ದಾರೆ. ಈ ಎಲ್ಲಾ ಮಹಿಳೆಯರು ವಿಭಿನ್ನ ಬಗೆಯ ವಸ್ತ್ರಾಭರಣಗಳನ್ನು ಧರಿಸಿದ್ದಾರೆ. ನೀರಿನ ಆಳದಲ್ಲಿ ಮೀನು, ಹಾವು, ಕಪ್ಪೆಗಳು ಹರಿದಾಡುತ್ತಿವೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕನ್ನಡದ ಅನೇಕ ಕವಿಗಳು ತಮಗೆ ಆಶ್ರಯ ನೀಡಿದ ಅರಸರನ್ನು ನಾಯಕನನ್ನಾಗಿ ರೂಪಿಸಿರುವಂತೆ ಕನ್ನಡದ ಕಲಾವಿದರು ಕೂಡಾ ತಮ್ಮ ಆಶ್ರಯದಾತನನ್ನು ಇಲ್ಲಿ ಕೃಷ್ಣನಂತೆ ಚಿತ್ರಿಸಿಕೊಂಡಿದ್ದಾರೆ. ಖಾಜಾನಗೌಡರಿಗೆ ಮೀಸೆಗಳಿದ್ದ ಕಾರಣ ಆತನನ್ನು ಬಾಲ ಗೋಪಾಲನಿಗೆ ಹೋಲಿಸಿ ರಚನಾತ್ಮಕವಾಗಿ ಮೀಸೆಯುಳ್ಳ ಕೃಷ್ಣನನ್ನಾಗಿ ಚಿತ್ರಿಸಿದ್ದಾರೆ. ಇಷ್ಟೆಲ್ಲಾ ಸುಂದರವಾಗಿ ಚಿತ್ರಿಸಿದ ಈ ಕಲಾವಿದರ ಬಗ್ಗೆ ತಿಳಿಯುವುದಾದರ ಈ ಕಲಾವಿದರು ಯಾರು ಎಂಬುದರ ಬಗ್ಗೆ ಹಲವು ವಿದ್ವಾಂಸರು ಹಲವು ರೀತಿಯಲ್ಲಿ ಚರ್ಚಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ಶಾಂತರಸರಂತಹ ಹಿರಿಯರು ಇವರನ್ನು ಗರುಡಾದ್ರಿ ಮನೆತನದ ಸುರಪುರದ ಕಲಾವಿದರು ಎಂದು ಅಭಿಪ್ರಾಯಪಡುತ್ತಾರೆ.

ಇತ್ತೀಚಿನ ಸಂಶೋಧನೆಗಳ ಪ್ರಕಾರ ಮನೆಯೊಳಗಿನ ಎಲ್ಲಾ ಚಿತ್ರಗಳು ಮೂರು ಅಡಿಗಳಿಗಿಂತಲೂ ಚಿಕ್ಕದಾದ ವಿಸ್ತಾರದಲ್ಲಿ ಚಿತ್ರಿತಗೊಡಿವೆ. ಆದ್ದರಿಂದ ಇವು ಸುರಪುರದ ಬಾನಾದ್ರಿಯವರ ಕೃತಿಗಳಲ್ಲಿ ಏಕೆಂದರೆ ಸಾಮಾನ್ಯವಾಗಿ ಬಾನಾದ್ರಿಯವರ ಚಿತ್ರಗಳು ಆರು ಅಡಿಗಳಿಗಿಂತ ದೊಡ್ಡದಾಗಿರುತ್ತವೆ. ಹಾಗಾಗಿ ಈ ಚಿತ್ರಗಳನ್ನು ಬಿಡಿಸಿದವರು ಕೊಪ್ಪಳ ತಾಲ್ಲೂಕಿನ ಕಿನ್ನಾಳು ಗ್ರಾಮದವರು. ಕೊಪ್ಪಳದ ಸಾಲಾರಜಂಗ ಜಾಗೀರದಾರರಿಗೂ ಈ ಕಲಾವಿದರಿಗೂ ಒಡನಾಟವಿರುವುದರಿಂದ ಈ ಕಲಾವಿದರನ್ನು ಹೈದರಾಬಾದಗೆ ಕರೆದುಕೊಂಡು ಹೋಗುವ ಮತ್ತು ಪರ್ಷಿಯಾ ದೇಶದಿಂದ ಕಲಾವಿದರನ್ನು ಕೊಪ್ಪಳಕ್ಕೆ ಆಮಂತ್ರಿಸುವುದು ಅಂದಿನ ಶಿಷ್ಟಾಚಾರವಾಗಿತ್ತು.

ವಿದೇಶದಿಂದ ಅನೇಕ ಕಲಾವಿದರು ಕಿನ್ನಾಳು ಕಲಾವಿದರ ಕಲಾಕೃತಿಗಳನ್ನು ಮೆಚ್ಚಿಕೊಂಡಂತೆ ಅವರ ಕಲಾವಂತಿಕೆಯನ್ನು ಮೆಚ್ಚಿಕೊಂಡಿದ್ದರು. ಅದಕ್ಕಾಗಿಯೇ ಅವರಿಗೆ ಪರ್ಷಿಯಾದ ಮೂಲದ ಲಜಾವಾರ ಬಂಗಾರದ ಬಣ್ಣಗಾರಿಕೆಯ ಬಗೆಗೆ ತರಬೇತಿ ನೀಡಿದಂತೆ ಈ ವಿದೇಶದ ತಾಂತ್ರಿಕ ಅಲಂಕಾರವನ್ನು ನಾವು ಈ ಮನೆಯ ಎರಡನೆ ಅಂತಸ್ತಿನ ಛತ್ತಿನಲ್ಲಿ ಕಾಣಬಹುದು. ಇದರಿಂದ ಚಿತ್ರಗಾರಿಕೆಯನ್ನು ಬದುಕನ್ನಾಗಿಸಿಕೊಂಡ ಅಸಂಖ್ಯಾತ ಕಲಾವಿದರು ಇಲ್ಲಿ ಇದ್ದರೆಂಬುದು ಸತ್ಯದ ಸಂಗತಿ.

ಆಕರ ಗ್ರಂಥಗಳು

೧. ಕರ್ನಾಟಕ ಗೆಜೆಟಿಯರ ಭಾಗ ಮೂರು- ಕರ್ನಾಟಕ ರಾಜ್ಯ ಸರ್ಕಾರ.

೨. ವಿಜಯವಾಣಿ ವಿಶೇಷ ಸಂಚಿಕೆ, ಎಡೆದೊರೆ ಸಿರಿ.

೩. ರಾಯಚೂರು ಜಿಲ್ಲಾ ದರ್ಶನ, ಡಾ. ಮೃತ್ಯುಂಜಯ ಹೊರಕೇರಿ, ಡಾ. ಬಸವಲಿಂಗ ಸೊಪ್ಪಿಮಠ.

೪. ಇತಿಹಾಸ ದರ್ಶನ, ಎಂ. ಕೇಶವಭಟ್ಟ.

೫. ಡಾ. ಎಚ್.ಎನ್. ಚಿತ್ರಗಾರ, ಲೇಖನದ ಸಂಗ್ರಹ, ಜನ ಕೂಗು ವಿಶೇಷ ಸಂಚಿಕೆ.

೧೩೩

ಗುಡಗುಂಟಿ–ಗುಂತಗೋಳ ಸಂಸ್ಥಾನಗಳ ಜನಪದ ಸಾಹಿತ್ಯ

ಶಿವರಾಜ ಯತಗಲ್*

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಿಂದ ೧೯ ಕಿ.ಮೀ. ದೂರದಲ್ಲಿರುವ ಗುಡಗುಂಟಿಯಲ್ಲಿ ಸಂಸ್ಥಾನಿಕರು ಆಳ್ವಿಕೆ ಮಾಡಿದ್ದಾರೆ. ಸುರಪುರ ಮತ್ತು ಗುಡಗುಂಟಿ ಸಂಸ್ಥಾನಕರು ಒಂದೇ ಮೂಲಕ್ಕೆ ಸೇರಿದವರು.

ಜಕ್ಕಪ್ಪ ನಾಯಕನಿಗೆ ಇಬ್ಬರು ಮಕ್ಕಳು. ಗಡ್ಡಿಲಿಂಗನಾಯಕ ಮತ್ತು ಗಡ್ಡಿಪಿಡ್ಡನಾಯಕ.ಗಡ್ಡಿಪಿಡ್ಡ ನಾಯಕ ಸುರಪುರ ಸಂಸ್ಥಾನದ ಸ್ಥಾಪಕನಾದರೆ, ಗಡ್ಡಿ ಲಿಂಗನಾಯಕ ಗುಡಗುಂಟಿ ಸಂಸ್ಥಾನದ ಸ್ಥಾಪಕ. ಕ್ರಿ.ಶ. ೧೬೮೬ರಲ್ಲಿ ಸ್ಥಾಪಿಸಿದನು. ಈತನ ನಂತರ ಜಡಿಸೋಮಪ್ಪ ನಾಯಕ, ಇಮ್ಮಡಿ ಲಿಂಗನಾಯಕ, ಸೋಮಪ್ಪನಾಯಕ, ರಾಣಿ ಕಾಟಮ್ಮ, ರಾಜಾ ಜಡಿಸೋಮಪ್ಪನಾಯಕ, ರಾಣಿ ಗೌರಮ್ಮ, ರಾಜಾ ತಿಪ್ಪರಾಜಾ ಜಡಿಸೋಮ ನಾಯಕ (೧೯೦೧-೧೯೫೬) ಮುಂತಾದವರು ಆಳ್ವಿಕೆ ಮಾಡಿದ್ದಾರೆ.

ಈ ಮನೆತನದ ಕುರಿತು ಆಕರಗಳ ಕೊರತೆ ಇರುವುದರಿಂದ ಇಲ್ಲಿಯವರಗೆ ವ್ಯವಸ್ಥಿತವಾಗಿ ಅಧ್ಯಯನಗಳಾಗಿಲ್ಲ. ಡಾ. ಅಮರೇಶಯತಗಲ್, ಡಾ. ಚನ್ನಬಸವ ಹಿರೇಮಠ ಇವರುಗಳು ಒಂದೆರಡು ಲೇಖನಗಳನ್ನುಬರೆದಿರುವುದನ್ನು ಹೊರತುಪಡಿಸಿದರೆ ಉಳಿದಂತೆ ಯಾವುದೇ ಸಂಶೋಧನೆಗಳಾಗಿಲ್ಲ. ಅಲ್ಲದೇ ಈ ಲೇಖನಗಳು ಕೇವಲ ರಾಜಕೀಯ ಚರಿತ್ರೆಯನ್ನು ಮಾತ್ರ ಕಟ್ಟಿಕೊಡುತ್ತವೆ. ಆದರೆ ನಾನು ಈ ಸಂಸ್ಥಾನದ ಅಧೀನದ ಹಳ್ಳಿಗಳಿಗೆ ನನಗೆ ದೊರೆತ ಜನಪದ ಸಾಹಿತ್ಯವು ಈ ಸಂಸ್ಥಾನದಚರಿತ್ರೆಗೆ ಪೂರಕವಾದ ಕೆಲವು ಮಾಹಿತಿಗಳನ್ನು ನೀಡುತ್ತದೆ.

ಗುಡಗುಂಟಿ ಅರಸರ ಆರಾಧ್ಯದೈವ ಗುಡಗುಂಟಿಯ ಶ್ರೀ ಅಮರೇಶ್ವರ. ಈ ದೇವರ ಹೆಸರಿನಿಂದಲೇ ಇಂದು ಈ ಸ್ಥಳವನ್ನು 'ಅಮರೇಶ್ವರ' ಎಂದೂ ಮತ್ತು ಇದು ಗುಡಗುಂಟಿ ಸಂಸ್ಥಾನದ ಅಧೀನದಲ್ಲಿದ್ದುದರಿಂದ ಗುಂತಗೋಳದ ಸಂಸ್ಥಾನಿಕರಿಗೆ ಮನೆದೇವರು. ಅಂದಿನಿಂದ ಇಂದಿನವರೆಗೆ ಈ ಜಾತ್ರೆಯಲ್ಲಿ ಗುಂತಗೋಳದ ಅರಸರು ಭಾಗವಹಿಸುವುದಿಲ್ಲ. ಕಾರಣ ಗುಡಗುಂಟಿ ರಾಜಾಸೋಮಪ್ಪನಾಯಕರ ಕಾಲದಲ್ಲಿ ಆತನ ಮಡದಿ ರಾಣಿ ಬಸ್ಸಮ್ಮ ಗುಂತಗೋಳದವಳಾಗಿದ್ದಳು. ಆಕೆ ತವರುಮನೆಗೆ ಹೋಗುವಾಗ ಆಕೆಯ ಗಂಡ ಅರಸ ರಾಜಾಸೋಮಪ್ಪನಾಯಕ "ಗುಡಗುಂಟಿಯ ಅಮರೇಶ್ವರನ ಜಾತ್ರೆಯಲ್ಲಿ ನಿಮ್ಮ ಮನೆತನದವರು ನಡೆಸಿಕೊಡುವ ಕಾರ್ಯಕ್ರಮಗಳನ್ನೆಲ್ಲಾ ನಮಗೆ ಬಿಟ್ಟುಕೊಡಲು ಕೇಳಿಕೊಂಡು ಬಾ" ಎಂದು ತಾಕೀತು ಮಾಡಿ ಕಳುಹಿಸಿದ್ದರಂತೆ. ಆ ಪ್ರಕಾರ ರಾಣಿ ತಮ್ಮ ತಂದೆಯಿಂದ ಅಮರೇಶ್ವರನ ಜಾತ್ರೆಯಲ್ಲಿ ಗುಂತಗೋಳದ ಅರಸರಿಗೆ ಸಲ್ಲುವ ಎಲ್ಲಾ ಮರ್ಯಾದೆಗಳನ್ನು ಪಡೆದುಕೊಂಡು ಬಂದ ಮೇಲೆ ಗುಡಗುಂಟಿ ಅರಸರೇ ಈ ಜಾತ್ರೆಯಲ್ಲಿ ಭಾಗವಹಿಸುತ್ತಿದ್ದರು.

ಅಂದಿನಿಂದ ಇಂದಿನವರೆಗೆ ಪ್ರತಿವರ್ಷ ಹೋಳಿ ಹುಣ್ಣಿಮೆಯ ದಿನ (ಫಾಲ್ಗುಣ ಮಾಸದ ಶುಕ್ಲ ಪೌರ್ಣಿಮೆಯಂದು) ಅಮರೇಶ್ವರನ ಜಾತ್ರೆ ಜರುಗುತ್ತದೆ.

ಈ ಸಂಪ್ರದಾಯವು ಇಂದಿಗೂ ಮುಂದುವರೆದುಕೊಂಡು ಬಂದಿದೆ. ಈ ಅರಸು ಮನೆತನದವರು ಈ ಕಳಸದ ಉತ್ಸವದಲ್ಲಿ ಭಾಗವಹಿಸಿ ಹಿಂದಿನಿಂದ ನಡೆದುಕೊಂಡು ಬಂದಿರುವ ವಿಧಿವಿಧಾನಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಿದ್ದಾರೆ. ಅಂದು ಸಾಯಂಕಾಲ ಅಮರೇಶ್ವರದಲ್ಲಿ ಅಮರೇಶ್ವರನ ರಥೋತ್ಸವ. ಈ ರಥೋತ್ಸವಕ್ಕೆ ಗುಡಗುಂಟಿಯ ಅರಸರು ಆಗಮಿಸುತ್ತಿದ್ದರು.

ಈ ಎಲ್ಲಾ ಮಾಹಿತಿಯನ್ನು ತಿಳಿಸಿಕೊಡುವ ಡೊಳ್ಳಿನ ಹಾಡೊಂದು, ಗುಡಗುಂಟಿ ಪಶ್ಚಿಮಕ್ಕೆ ೧೨ ಕಿ.ಮೀ. ಅಂತರದಲ್ಲಿರುವ ರಾಮದುರ್ಗ ಎಂಬ ಊರಿನಲ್ಲಿ ಶ್ರೀ ದುರುಗಪ್ಪ ಬಡಿಗೇರ ಅವರು ಈಗಲೂ ಹಾಡುತ್ತಾರೆ.ಈ ಹಾಡಿನಲ್ಲಿ ಗುಡಗುಂಟಿ ಸಂಸ್ಥಾನದ ಅರಸರಾದ ರಾಜಾ ತಿಪ್ಪರಾಜ ನಾಯಕರು ಭಾಗವಹಿಸಿದ ಕುರಿತಾದ ಮಾಹಿತಿಯನ್ನು ನೀಡುತ್ತದೆ. ಅದು ಇಂತಿದೆ:

* ಕಸಬಾ ಲಿಂಗಸೂಗೂರು, ತಾ. ಲಿಂಗಸೂಗೂರು, ಜಿ. ರಾಯಚೂರು-೫೮೪೧೨೨. ಮೊ. ೯೦೧೯೮೬೭೮೮೬

ಗುಡಗುಂಟಿ ಸಂಸ್ಥಾನದೊಳಗ ತಿಪ್ಪರಾಜರಿದ್ದಾರೋ
ಬೆಳಗ ಮುಂಜಾನೆ ಎದ್ದಾರೋ, ಜಾಮಜಳಕ ಮಾಡ್ಯಾರೋ
ನಾಲ್ಕು ಅಗಸಿ ಸೈನಿಕರನ್ನ ರಾಜವಾಡೆಗೆ ಕರಿಸ್ಯಾರೋ
ನಾಲ್ಕು ಅಗಸಿ ಸೈನಕರು ರಾಜವಾಡೆಗೆ ಬಂದಾರೋ
ರಾಜವಾಡೆಗೆ ಬಂದಾರೋ, ಸಲಾಮು ಹೊಡೆದು ನಿಂತಾರೋ

ಈ ಹಾಡಿನಲ್ಲಿ ರಾಜಾ ತಿಪ್ಪರಾಜ ನಾಯಕರು ಹಾಗೂ ಗುಡಗುಂಟಿ ಅರಮನೆಯ ಉಲ್ಲೇಖವಿದೆ. ರಾಜಾ ತಿಪ್ಪರಾಜನಾಯಕರು ರಾಜಾ ಜಡಿಸೋಮಪ್ಪ ನಾಯಕರ ಮಗನಾಗಿದ್ದರು. ಇವರು ಅರಮನೆಗೆ ಸೈನಿಕರನ್ನು ಕರೆಯಿಸಿದುದು ಹಾಗೂ ಸೈನಿಕರು ಅರಸನಿಗೆ ಸಲಾಮು ಹೊಡೆದ ಕುರಿತಾದ ವಿವರ ಇದೆ. ನಂತರದಲ್ಲಿ ಹಾಡಿನ ನುಡಿಯಲ್ಲಿ,

ತಿಪ್ಪರಾಜರು ಮೂವತ್ತು ಮೊಳದ ರುಂಬಾಲು ಸುತ್ತ್ಯಾರೋ
ಮೋಡಿ ಹೊಡೆದು ಸುತ್ಯಾರೋ, ಶಿರಪೇಟ ಇಟ್ಟಾರೋ
ಕುದುರೆಗೆ ಜೀನ ಬಿಗದಾರೋ, ಕುದುರೆ ಮ್ಯಾಗ ಕುಂತಾರೋ
ಚೋಪದಾರರು ಬಂದಾರೋ, ಬೆಳ್ಳಿ ಬೆತ್ತ ಹಿಡಿದಾರೋ
ರಾಜವಾಡೆ ಬಿಟ್ಟಾರೋ, ಅಮರಯ್ಯನ ಕಡೆ ಹೊಂಟಾರೋ।

ಇಲ್ಲಿ ರಾಜಾ ತಿಪ್ಪರಾಜ ನಾಯಕರ ಉಡುಗೆ-ತೊಡುಗೆಯ ಮಾಹಿತಿ ಇದೆ. ಅವರು ತಲೆಯ ಮೇಲೆ ರುಮಾಲು ಸುತ್ತಿರುವುದನ್ನು ಹಾಗೂ ಶಿರಪೇಟ ಇಟ್ಟಿರುವ ಕುರಿತಾದ ವಿವರಣೆ ಇದೆ. ಇವರು ಕುದುರೆಯ ಮೇಲೆ ಕುಳಿತಾಗ ಚೋಪದಾರರು ಎಂಬ ವರ್ಗ ಬೆಳ್ಳಿ ಬೆತ್ತವನ್ನು ಹಿಡಿದ ಮಾಹಿತಿ ಸಿಗುತ್ತದೆ. ನಂತರ ಇವರು ಅಮರೇಶ್ವರನ ಕಡೆಹೊರಟ ವಿವರ ಇದೆ. ಇಂದಿಗೂ ಈ ಚೋಪದಾರರು ಎಂಬಹೆಸರಿನ ಮನೆತನ ಗುಡಗುಂಟಿಯಲ್ಲಿದೆ. ಇಂದಿಗೂ ಇವರು ಹಬ್ಬ-ಹರಿದಿನಗಳಲ್ಲಿ ತಮ್ಮ ಸೇವೆಯನ್ನು ಮುಂದುವರೆಸುತ್ತಿದ್ದಾರೆ.

ಈ ಹಾಡಿನಲ್ಲಿ ಬರುವ 'ಅಮರಯ್ಯ' ಎಂದರೆ 'ಅಮರೇಶ್ವರ' ದೇವರು. ಈ ದೇವರು ಗುಡಗುಂಟಿ ಸಂಸ್ಥಾನದ ಆರಾಧ್ಯ ದೇವರು ಎಂಬಿತ್ಯಾದಿ ಐತಿಹಾಸಿಕ ಅಂಶಗಳಿರುವುದನ್ನು ಗಮನಿಸಬಹುದಾಗಿದೆ.

ಗುಂತಗೋಳ ಸಂಸ್ಥಾನ

ಗುಂತಗೋಳ ಸಂಸ್ಥಾನ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಪಶ್ಚಿಮಕ್ಕೆ ೩೦ ಕಿ.ಮೀ. ಅಂತರದಲ್ಲಿದೆ. ಈ ಮನೆತನದ ಕುರಿತಾಗಿ ಆಕರಗಳು ಲಭ್ಯವಿಲ್ಲದ ಕಾರಣ ಸ್ಥಳೀಯ ಸ್ಮಾರಕಗಳು ಹಾಗೂ ಮೌಖಿಕ ಮಾಹಿತಿಗಳನ್ನು ಆದರಿಸಿ ಡಾ. ಅಮರೇಶ ಯತಗಲ್ ಅವರು ಕಿರು ಲೇಖನವನ್ನು ಬರೆದಿದ್ದಾರೆ.

ಗುಂತಗೋಳ ನಾಯಕರು ಕ್ರಿ.ಶ. ೧೪೯೧ ರಿಂದ ೧೯೪೮ರವರೆಗೆ ಆಳ್ವಿಕೆ ಮಾಡಿದ್ದಾರೆ. ಗುಂತಗೋಳದ ನಾಯಕರು ಬಿಜಾಪುರದ ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ (ಕ್ರಿ.ಶ. ೧೪೮೯-೧೬೮೬) ನಿರ್ಲಕ್ಷಿಸಲ್ಪಟ್ಟ ಪ್ರದೇಶದಲ್ಲಿ ಒಂದು ಸಂಸ್ಥಾನವನ್ನು ಸ್ಥಾಪಿಸಿದರು. ಬ್ರಿಟಿಷ್ ಮತ್ತು ಹೈದ್ರಾಬಾದ್ ನಿಜಾಮರ (ಕ್ರಿ.ಶ. ೧೭೨೪-೧೯೪೮) ದಬ್ಬಾಳಿಕೆಯ ಮಧ್ಯೆ ಸಮರ್ಥವಾಗಿ ಆಳ್ವಿಕೆ ನಡೆಸಿದುದು ವಿಶೇಷವಾಗಿದೆ. ಗುಂತಗೋಳದ ನಾಯಕರು ಮೊದಲಿಗೆ ಬಿಜಾಪುರದ ಆದಿಲ್‌ಶಾಹಿಗಳ ಅಧೀನರಾಗಿದ್ದರು. ಆದಿಲ್‌ಶಾಹಿಗಳು ತಮ್ಮ ಅಧೀನದವರಿಗೆ ಜಹಗೀರು ಹಾಕಿಕೊಡುತ್ತಿದ್ದರು. ಆಯಾ ಜಹಗೀರುಗಳಿಗೆ ಮುಖಂಡರಾದವರನ್ನು "ಜಹಗೀರುದಾರರು" ಎಂದು ಕರೆಯುತ್ತಿದ್ದರು. ಹೀಗಾಗಿ ಇವರು ಮೊದಲು ಜಹಗೀರುದಾರರಾಗಿದ್ದರು. ನಂತರ ಔರಂಗಜೇಬನು ಬಿಜಾಪುರವನ್ನು ಮುತ್ತಿ ಸಿಕಂದರನನ್ನು ಸೆರೆಹಿಡಿದು ಆದಿಲ್‌ಶಾಹಿಗಳ ಆಳ್ವಿಕೆಯನ್ನು ಸಮಾಪ್ತಿಗೊಳಿಸಿದ ಮೇಲೆ ಇವರು ಸ್ವತಂತ್ರವಾಗಿ ಆಳ್ವಿಕೆ ಮಾಡಿದರು.ಇವರು ಮೊದಲು ಕೃಷ್ಣಾನದಿಯ ನಡುಗಡ್ಡೆಯಾದ ಜಲದುರ್ಗದಲ್ಲಿ ಆಳ್ವಿಕೆ ಪ್ರಾರಂಭಿಸಿದರು. ಜಲದುರ್ಗವೇ ಇವರ ಮೊದಲ ರಾಜಧಾನಿ. ಗುಂತಗೋಳ ಆದಿಲ್‌ಶಾಹಿಗಳ ಕಾಲದಲ್ಲಿ ಖೈದಿಗಳಿಗೆ ಶಿಕ್ಷೆ ನೀಡುವ ಸ್ಥಳವಾಗಿ ಪರಿವರ್ತನೆಯಾದ ತರುವಾಯ ಇವರು ಗುಂತಗೋಳಕ್ಕೆ ಬಂದು ನೆಲೆಸಬೇಕಾಯಿತು.

ಗುಂತಗೋಳ ಸಂಸ್ಥಾನದ ಮೂಲಪುರುಷ ಕಾಳಭೈರವನಾಯಕ. ಈತನ ಸಮಾಧಿ ಗುಂತಗೋಳದಲ್ಲಿದೆ. ಅದನ್ನು ಈಗಲೂ 'ಕಾಳಭೈರವನಾಯಕನ ಗಚ್ಚಿನಕಟ್ಟೆ' ಎಂದು ಕರೆಯುತ್ತಾರೆ. ಗುಂತಗೋಳದ ನಾಯಕ ಅರಸರಲ್ಲಿ ರಾಜಾ ಅಮರಪ್ಪನಾಯಕ, ರಾಜಾ ಬಸಪ್ಪನಾಯಕ, ರಾಜಾ ಇಮ್ಮಡಿ ಅಮರಪ್ಪನಾಯಕ, ರಾಜಾ ಶ್ರೀನಿವಾಸನಾಯಕ, ರಾಜಾ ಇಮ್ಮಡಿಬಸಪ್ಪನಾಯಕ, ರಾಜಾ ರಾಯಪ್ಪನಾಯಕ, ರಾಜಾ ಮುಮ್ಮಡಿ ಅಮರಪ್ಪನಾಯಕ, ರಾಜಾ ಇಮ್ಮಡಿ ರಾಯಪ್ಪನಾಯಕ, ರಾಜಾ ನರಸಿಂಹನಾಯಕ ಇವರುಗಳು ಪ್ರಮುಖರಾಗಿದ್ದಾರೆ.



ಗುಡಗುಂಟಿ ಅಮರೇಶ್ವರ



ಗುಂತಗೋಳ ರಾಜಾ ಕಾಳಭೈರವ ಸಮಾಧಿ

ಹೀಗೆ ಗುಡಗುಂಟಿ ಮತ್ತು ಗುಂತಗೋಳ ಸಂಸ್ಥಾನಗಳ ಕುರಿತು ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಅನೇಕ ಜನಪದ ಹಾಡುಗಳು ಲಭ್ಯವಾದವು. ಈ ಹಾಡುಗಳಲ್ಲಿ ಈಗಾಗಲೇ ಈ ಮನೆತನಗಳ ಕುರಿತಾದ ರಾಜಕೀಯ ಚರಿತ್ರೆಯಲ್ಲಿ ಬರುವ ಅರಸರು ಹಾಗೂ ರಾಣಿಯರ ಹೆಸರುಗಳು ಉಲ್ಲೇಖಿತಗೊಂಡಿವೆ. ಉದಾಹರಣೆಗೆ ಗುಡಗುಂಟಿಯ–ರಾಜಾ ತಿಪ್ಪರಾಜ ನಾಯಕರು, ರಾಣಿ ಬಸಮ್ಮ ಹಾಗೂ ಗುಂತಗೋಳದ ರಾಜಾ ರಾಯಪ್ಪ ನಾಯಕ ಮುಂತಾದವರು ಪ್ರಮುಖರಾಗಿದ್ದಾರೆ. ಈ ಜನಪದ ಸಾಹಿತ್ಯದಲ್ಲಿ ಉಲ್ಲೇಖವಾದ ಅರಸರು ಹಾಗೂ ರಾಣಿಯರ ಕುರಿತಾಗಿ ಈ ಮನೆತನದ ವಂಶಾವಳಿಯಲ್ಲಿಯೂ ಗುರುತಿಸಬಹುದಾಗಿದೆ. ಈ ಜಾನಪದ ಹಾಡುಗಳು ಈ ಸಂಸ್ಥಾನಗಳ ರಾಜಕೀಯ ಚರಿತ್ರೆಗಿಂತ, ಸಾಂಸ್ಕೃತಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಈ ಸಂಸ್ಥಾನಗಳ ಅರಸರ ನಂಬಿಕೆ–ಸಂಪ್ರದಾಯಗಳು, ಉಡುಗೆ–ತೊಡುಗೆಗಳು, ಹಬ್ಬ ಉತ್ಸವಗಳು, ಆಹಾರ ಪದ್ಧತಿ, ರಾಜ ವೈಭವ, ಆಡಳಿತ ಮುಂತಾದವುಗಳ ವಿವರಣೆಗಳು ಸಿಗುತ್ತವೆ.

ಈ ಹಾಡುಗಳಲ್ಲಿ ಬರುವ ಅನೇಕ ಸ್ಮಾರಕಗಳು ಇಂದಿಗೂ ನೋಡಲು ಸಿಗುತ್ತವೆ. (ಉದಾಹರಣೆಗೆ ಅಮರೇಶ್ವರ ದೇವಾಲಯ, ಕಡೆ ಬಸವಣ್ಣ ದೇವಾಲಯ, ಅಮರೇಶ್ವರ ಹೊಂಡ, ರಾಜಾ ಕಾಳಭೈರವನ ಸಮಾಧಿ ಮುಂತಾದವುಗಳು) ಇಂದಿಗೂ ಈ ಮನೆತನದ ವಂಶಸ್ಥರು ಗುಡಗುಂಟಿ ಹಾಗೂ ಗುಂತಗೋಳದಲ್ಲಿ ವಾಸವಾಗಿದ್ದಾರೆ. ಅವರು ಈ ಹಾಡಿನಲ್ಲಿ ಬರುವ ಅನೇಕ ಹಬ್ಬ–ಉತ್ಸವಗಳಲ್ಲಿ ಇಂದಿಗೂ ಭಾಗವಹಿಸುತ್ತಾರೆ. ಹೀಗೆ ಲಭ್ಯವಿರುವ ಈ ಜನಪದ ಹಾಡುಗಳನ್ನು ಈಗಾಗಲೇ ಲಭ್ಯವಿರುವ ಆಕರಗಳೊಂದಿಗೆ ಹಾಗೂ ರಾಜಕೀಯ ಚರಿತ್ರೆಯೊಂದಿಗೆ ತುಲನೆ ಮಾಡಿ ವಸ್ತುನಿಷ್ಠವಾದ ಅಂಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. ಇನ್ನೂ ಈ ಸಂಸ್ಥಾನಗಳ ಸುತ್ತಮುತ್ತಲಿನ ಗ್ರಾಮಗಳಿಗೆ ಕ್ಷೇತ್ರಕಾರ್ಯವನ್ನು ಕೈಗೊಂಡರೆ ಅನೇಕ ಸ್ಮಾರಕಗಳು, ಮೌಖಿಕವಾದ ಮಾಹಿತಿಗಳು ಲಭ್ಯವಾಗುವುದರಲ್ಲಿ ಎರಡು ಮಾತಿಲ್ಲ.

ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ಬಿ.ಎಂ.ಶ್ರೀ ಪ್ರತಿಷ್ಠಾನ ಆವರಣ, ೩ನೇ ಮುಖ್ಯರಸ್ತೆ, ನರಸಿಂಹ ರಾಜಾ ಕಾಲೋನಿ,
ಬೆಂಗಳೂರು – ೫೬೦ ೦೧೯

೨೦೧೭–೧೮ನೆಯ ಸಾಲಿನ ವಾರ್ಷಿಕ ವರದಿ

ಸದಸ್ಯ ಬಂಧುಗಳೇ,

ಕರ್ನಾಟಕ ಇತಿಹಾಸ ಅಕಾದೆಮಿಯ ೩೨ನೆಯ ವಾರ್ಷಿಕ ಸಮ್ಮೇಳನಕ್ಕಾಗಿ ನಾವೆಲ್ಲಾ ಬಾಗಲಕೋಟೆಯ ಜಿಲ್ಲೆಯ ಬಾದಾಮಿ ತಾಲ್ಲೂಕು ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆಯ ಸಭಾಂಗಣದಲ್ಲಿ ಸಮಾವೇಶಗೊಂಡಿದ್ದೇವೆ. ಕಳೆದ ಮೂವತ್ತೆರಡು ವರ್ಷಗಳಲ್ಲಿ ಅಕಾದೆಮಿಯ ಅಭ್ಯುದಯದಲ್ಲಿ ನಿರಂತರವಾಗಿ ಸಹಕರಿಸುತ್ತಾ ಬಂದಿರುವ ಎಲ್ಲರಿಗೂ ಅನಂತ ಧನ್ಯವಾದಗಳು. ಕಳೆದ ೩೧ ಸಮ್ಮೇಳನಗಳಿಗೆ ಆಶ್ರಯ ನೀಡಿ ಅಕಾದೆಮಿಯನ್ನು ಪೋಷಿಸಿರುವ ಎಲ್ಲಾ ಸಂಘ ಸಂಸ್ಥೆ ಹಾಗೂ ಧರ್ಮಪೀಠಗಳಿಗೆ ಅಕಾದೆಮಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಐತಿಹಾಸಿಕ ಪರಂಪರೆ ಉಳಿಸಿ–೨೦೧೭

೨೦೧೭ನೇ ಸಾಲಿನ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮ ಉದ್ಘಾಟನಾ ಸಮಾರಂಭವನ್ನು ದಿನಾಂಕ ೩೦–೦೮–೨೦೧೭ರ ಬುಧವಾರ ಬೆಳಗ್ಗೆ ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾ ವಿದ್ಯಾಲಯ ಹರಿಹರ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ಶ್ರೀ ರವಿಕುಮಾರ್ ನವಲಗುಂದ ಇವರ ಮುಂದಾಳತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವರ್ಷವೂ ಎಂದಿನಂತೆ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆರ್ಥಿಕ ಸಹಯೋಗವು ದೊರೆತಿತ್ತು.

ಈ ಕಾರ್ಯಕ್ರಮಕ್ಕೆ ಹರಿಹರದಲ್ಲಿರುವ ಮತ್ತು ಸುತ್ತಮುತ್ತಲಿನ ಪದವಿ ಹಾಗೂ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳೂ ಹಾಗೂ ಉಪನ್ಯಾಸಕರೂ, ಹರಿಹರ ಸುತ್ತಮುತ್ತಲಿನ ಇತಿಹಾಸ ಆಸಕ್ತರೂ ಆಗಮಿಸಿದ್ದರು. ಇವರನ್ನು ವಿ.ಬಿ. ಕೊಟ್ರೇಶಪ್ಪ ಶಿಕ್ಷಕರು, ಸಾಹಿತ್ಯ ಸಂಗಮ ಕೋಶಾಧ್ಯಕ್ಷರು. ಇವರು ಎಲ್ಲರಿಗೂ ಸ್ವಾಗತ ಕೋರಿದರು.

ಕಾರ್ಯಕ್ರಮವು ಕಾಂತಪ್ಪ ಶ್ರೇಷ್ಠಿ ಕಾಲೇಜಿನ ಎರಡನೇ ಬಿ.ಕಾಂ. ವಿದ್ಯಾರ್ಥಿನಿ ಕು. ಭೂಮಿಕಾ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಕಾಂತೇಶ್‌ರೆಡ್ಡಿ ಗೋಡಿಹಾಳ, ಉಪನ್ಯಾಸಕರು ಇವರು ಪರಂಪರೆಉಳಿಸಿ ಕಾರ್ಯಕ್ರಮ ಕುರಿತು ಲಾವಣಿ ಹಾಡಿದರು. ನಂತರ ಪ್ರೊ. ಜಿ.ಕೆ ದೇವರಾಜಸ್ವಾಮಿ, ಪ್ರಧಾನ ಕಾರ್ಯದರ್ಶಿ ಕ.ಇ.ಅ. ಅವರು ಅಕಾದೆಮಿಯ ಧ್ಯೇಯೋದ್ದೇಶ ಹಾಗೂ ಮೂವತ್ತೊಂದು ವರ್ಷಗಳಿಂದ ಕ.ಇ.ಅ. ನಡೆದು ಬಂದ ದಾರಿಯನ್ನು ಸಂಪಕ್ಷಿಪ್ತವಾಗಿ ವಿವರಿಸಿದರು. 'ಪರಂಪರೆ ಉಳಿಸಿ' ಕಾರ್ಯ ಕ್ರಮದ ಅವಶ್ಯಕತೆ, ಮಹತ್ವ ಹಾಗೂ ಮುಂದೆ ಯುವ ಪೀಳಿಗೆಯವರ ಕರ್ತವ್ಯವನ್ನು ಸಂಕ್ಷೇಪ್ತವಾಗಿ ತಿಳಿಸಿದರು, ಎಲ್ಲಾ ಆಹ್ವಾನಿತರಿಗೂ ಉಪನ್ಯಾಸಕರಿಗೂ ಎಲ್ಲರಿಗೂ ಅಕಾದೆಮಿಯ ಪರವಾಗಿ ಸ್ವಾಗತ ಕೋರಿದರು. ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪಶ್ರೇಷ್ಠಿ ಪ್ರಥಮ ದರ್ಜೆಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಸ್.ಎಸ್. ಪ್ಯಾಟಿ ಇವರು ಜ್ಯೋತಿ ಬೆಳಗಿಸುವುದರ ಮೂಲಕ ಐತಿಹಾಸಿಕ ಪರಂಪರೆ ಉಳಿಸಿ – ೨೦೧೭ರ ಕಾರ್ಯಕ್ರಮಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು.

ವಿದ್ಯಾರ್ಥಿಗಳು ಪ್ರಾರಂಭಿಕ ಹಂತದಲ್ಲಿ ಅವರ ಕುಟುಂಬದ ಪೂರ್ವಿಕರ ಬಗ್ಗೆ ಮಾಹಿತಿ ಸಂಗ್ರಹಿಸುವಿಕೆ, ಗ್ರಾಮದ ಇತಿಹಾಸ, ಸ್ಮಾರಕ ವಿವರ ಕಲೆಹಾಕುವುದು ಹಾಗೆಯೇ ಅವುಗಳ ಸಂರಕ್ಷಣೆ ಬಗ್ಗೆ ಕಾಳಜಿವಹಿಸುವುದು. ಈ ಮೂಲಕ ತಮ್ಮಲ್ಲಿ ಐತಿಹಾಸಿಕ ಪರಂಪರೆಗಳ ರಕ್ಷಣೆಯ ಅಭಿಯಾನ ಪ್ರಾರಂಭಿಸಬಹುದೆಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ಶ್ರೀಯುತ ಡಾ. ನರಸಿಂಹಪ್ಪ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹರಿಹರ ಇವರು, ಐತಿಹಾಸಿಕ ಪರಂಪರೆ ಉಳಿಸಿ–೨೦೧೭ರಭಿತ್ತಿ ಪತ್ರ ಬಿಡುಗಡೆ ಮಾಡಿದರು. ಅದಲ್ಲದೆ ಪ್ರತಿ ಯೊಬ್ಬರೂ ತಮ್ಮ ನಾಡಿನ ಸಂಸ್ಕೃತಿಯನ್ನು ಪ್ರೀತಿಯಿಂದ ಸಂರಕ್ಷಿಸಿಕೊಂಡು ಕಟ್ಟುವಲ್ಲಿ ಐತಿಹಾಸಿಕ ಪರಂಪರೆ ಮಹತ್ವದ್ಧಾಗಿದೆ ಎಂದು ತಿಳಿಸಿದರು. ಐತಿಹಾಸಿಕ ಸ್ಮಾರಕಗಳು ರಾಷ್ಟ್ರದ ಸ್ವತ್ತು ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಹೊಣೆ ಎಂದರು.

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಭಾಗವಾಗಿ, ವಿಶೇಷವಾಗಿ ಸ್ಮಾರಕಗಳನ್ನು ರಕ್ಷಣೆಮಾಡಿದವರನ್ನು ಗೌರವಿಸಲಾಗುತ್ತದೆ. ಈ ವರ್ಷ ಶ್ರೀಯುತ ಸ್ವಾಮಿಗೌಡ, ಹಾಸನ ಜಿಲ್ಲೆಯ ದುದ್ದ ಹೋಬಳಿ. ಇವರನ್ನು ಗೌರವಿಸಿ ಸನ್ಮಾನಿಸಲಾಯಿತು. ಸ್ವಾಮಿಗೌಡರು ಹಾಸನ ಜಿಲ್ಲೆಯ ಹೊನ್ನವಾರದ ಶ್ರೀ ಚನ್ನಕೇಶವ ದೇವಾಲಯದ ಸಂರಕ್ಷಣಾ ಕಾರ್ಯದಲ್ಲಿ

ತೊಡಗಿಸಿಕೊಂಡು ಸ್ಥಳೀಯರ ಹಾಗೂ ಸರ್ಕಾರದಿಂದ ಬಂದ ಸ್ವಲ್ಪ ಸಹಾಯದಿಂದ ದೇವಾಲಯವನ್ನು ಸಂಪೂರ್ಣ ಜೀರ್ಣೋದ್ಧಾರ ಮಾಡಿದ್ದಲ್ಲದೆ ದೇವರನ್ನು ಪ್ರತಿಷ್ಠಾಪಿಸಿದರು. ಸುತ್ತಮುತ್ತಲಿನ ಹಳ್ಳಿಯಲ್ಲಿ ಸ್ಮಾರಕಗಳ ರಕ್ಷಣೆಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರನ್ನು ಗೌರವಿಸಿ ಸನ್ಮಾನಿಸಲಾಯಿತು. ಸ್ವಾಮಿಗೌಡ ಮಾತನಾಡಿ ಅಕಾದೆಮಿಗೆ ವಂದನೆ ಸಲ್ಲಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಡಿ.ಎಂ. ಮಂಜುನಾಥಯ್ಯ ಉಪನ್ಯಾಸಕು ಹಾಗೂ ಅಧ್ಯಕ್ಷರು ಸಾಹಿತ್ಯ ಸಂಗಮ ಹರಿಹರ ಇವರು, ಅಕಾದೆಮಿಯೊಂದಿಗೆ ಪರಂಪರೆ ಉಳಿಸಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಂತೋಷವನ್ನು ಉಂಟುಮಾಡಿದೆ. ಪರಂಪರೆ ಉಳಿಸುವಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು.

ಶ್ರೀ ಎಚ್. ಕೊಟ್ರೇಶ್ ಸಂಚಾಲಕರು ಸಮಾಜ ವಿಜ್ಞಾನ ವೇದಿಕೆ ಹರಿಹರ ಇವರು, ನಾಣ್ಯಗಳ ಸಂಗ್ರಹಣೆ, ಸಂರಕ್ಷಣೆ ಅವುಗಳ ಇತಿಹಾಸಿಕ ಮಹತ್ವ ಕುರಿತು ಪರಂಪರೆ ಕಟ್ಟುವಲ್ಲಿ ಮುಖ್ಯವಾದವುಗಳೆಂದು ತಿಳಿಸಿದರು. ಶಾಸನ, ಲಿಪಿ, ಸ್ಮಾರಕಗಳ ಕುರಿತು ವಿದ್ಯಾರ್ಥಿಗಳಿಗೆ ಅವುಗಳ ಮಹತ್ವಗಳನ್ನು ತಿಳಿಸಿದರು. ಕಾರ್ಯ ಕ್ರಮದ ಮೊದಲಿಗೆ ಹರಿಹರೇಶ್ವರ ದೇವಾಲಯ ಮತ್ತು ಮಣ್ಣೆ ಬಗ್ಗೆ, ಗಂಗರ ಸ್ಮಾರಕಗಳ ಬಗ್ಗೆ ಸಾಕ್ಷ್ಯ ಚಿತ್ರವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕರಾದ ಶ್ರೀ ವ.ಬಿ. ಕೊಟ್ರೇಶಪ್ಪ ಸಾಹಿತ್ಯ ಸಂಗಮದ ಕೋಶಾಧಿಕಾರಿ ಇವರು ನಡೆಸಿಕೊಟ್ಟರು. ಸಮಾಜ ವಿಜ್ಞಾನ ವೇದಿಕೆಯ ಸಂಚಾಲಕರಾದ ಶ್ರೀ ಎಚ್. ಕೊಟ್ರೇಶಪ್ಪ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಇದೇ ದಿನ ಸಂಜೆ ೫ ಗಂಟೆಗೆ ಕಾಂತಪ್ಪ ಶ್ರೇಷ್ಠಿ ಪ.ಪೂ. ಕಾಲೇಜು ಮತ್ತು ಪ್ರೌಢಶಾಲಾ ಸಭಾಂಗಣದಲ್ಲಿ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಪ.ಪೂ. ವಿದ್ಯಾರ್ಥಿಗಳಿಗೆ 'ಇತಿಹಾಸದ ಮಹತ್ವ' ಹಾಗೂ ಭೋಧನಾ ಕ್ರಮವನ್ನು ಕುರಿತು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿಯವರು ಉಪನ್ಯಾಸ – ಸಂವಾದ ಕಾರ್ಯಾಕ್ರಮ ಏರ್ಪಡಿಸಲಾಗಿತ್ತು. ಮೇಲಿನ ಕಾರ್ಯಕ್ರಮಗಳಿಗೆ ಹರಿಹರ ದಾವಣಗೆರೆ ಸುತ್ತ ಮುತ್ತಲಿನ ಸ್ಥಳಗಳಿಂದ ಇತಿಹಾಸ ಅಕಾದೆಮಿಯ ಸದಸ್ಯರು ಆಗಮಸಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

ಪ್ರಸ್ತುತ ಸಾಲಿನಲ್ಲಿ ಹರಿಹರದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ ವತಿಯಿಂದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ಉದ್ಘಾಟನೆಗೊಂಡು ಈ ವರ್ಷದಲ್ಲಿ ವಿಶೇಷ ಭಿತ್ತಿ ಪತ್ರ ಅನಾವರಣದ ನಂತರ ರಾಜಾದ್ಯಂತ ವಿವಿಧ ಸ್ಥಳಗಳಲ್ಲಿ ಐತಿಹಾಸಕ ಪರಂಪರೆ ಉಳಿಸಿ ಕಾರ್ಯಕ್ರಮಗಳು ನಡೆದಿವೆ. ಆ ಕರ್ಾಕ್ರಮಗಳ ವಿವರವನ್ನಿಲ್ಲಿ ನೀಡಲಾಗಿದೆ.

ದಿನಾಂಕ : ೦೭–೧೨–೨೦೧೭ ರಿಂದ ೧೩–೦೪–೨೦೧೮ರ ಬಳ್ಳಾರಿ

ಶ್ರೀಯುತ ವೈ. ಹನುಮಂತ ರೆಡ್ಡಿ ಬಳ್ಳಾರಿ ಇವರು ಸದರಿ ದಿನಾಂಕಗಳಂದು ಬಳ್ಳಾರಿಯ ಶಾಲಾ ಕಾಲೇಜುಗಳಿಗೆ ತೆರಳಿ ಅಕಾಡೆಮಿಯ ಪರವಾಗಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡುಕೊಂಡು. "ಐತಿಹಾಸಿಕ ಪರಂಪರೆ ಉಳಿಸಿ" ಕಾರ್ಯಕ್ರಮವನ್ನು ಈ ಕೆಳಕಂಡಂತೆ ನೆಡಸಿ, ವಿದ್ಯಾರ್ಥಿಗಳಲ್ಲಿ, ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಕಾರ್ಯಮಾಡಿದ್ದಾರೆ.

ದಿನಾಂಕ	ಸ್ಥಳ	ಅಧ್ಯಕ್ಷತೆ	ಉಪನ್ಯಾಸಕರು	ಅತಿಥಿಗಳು
೦೭–೧೨–೨೦೧೮	ಕಲ್ಲು ಕುಂಭಾಗ್ರಮ, ಸರ್ಕಾರಿ ಪ್ರೌಢಶಾಲೆ ಎಮ್ಮಿಗನೂರು ಸ.ಪ.ಪೂ ಕಾಲೇಜ್	ವಿ. ಲಕ್ಷ್ಮಯ್ಯ ಮುಖ್ಯೋಪಾಧ್ಯಾಯರು ಶ್ರೀಮತಿ ಎ.ಎಂ.ಜಯಶ್ರೀ ಪ್ರಾಚಾರ್ಯರು	ವೈ ಹನುಮಂತರೆಡ್ಡಿ ವೈ ಹನುಮಂತರೆಡ್ಡಿ	ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪನ್ಯಾಸಕರು ವಿದ್ಯಾರ್ಥಿಗಳು
೮–೧೨–೨೦೧೭	ಕುರುಗೋಡು ಸ.ಪ.ಪೂ. ಕಾಲೇಜ್	ಶ್ರೀ. ಕೆ.ನಾಗಭೂಷಣ ಪ್ರಾಚಾರ್ಯರು	ವೈ ಹನುಮಂತರೆಡ್ಡಿ	ಉಪನ್ಯಾಸಕರು ವಿದ್ಯಾರ್ಥಿಗಳು
೧೨–೧೨–೨೦೧೭	ಸಿರಿವಾರ ಗ್ರಾಮ ಸರ್ಕಾರಿ ಪ್ರೌಢಶಾಲೆ	ಪಿ. ಸಾಯಿಬಣ್ಣ ಮು.ಗು. ಉಪಾಧ್ಯಾಯರು	ವೈ ಹನುಮಂತರೆಡ್ಡಿ	ಶಿಕ್ಷಕರು ಮತ್ತು ವಿದ್ಯಾರ್ಥಿಗಳು
೨೦–೧೨–೨೦೧೭	ಬಳ್ಳಾರಿ ಕೋಟೆ ಪ್ರದೇಶ ಸರ್ಕಾರಿ ಪ್ರೌಢಶಾಲೆ	ಶ್ರೀ ರಾಮಾಂಜನೇಯ ಉಪಾಧ್ಯಾಯರು	ವೈ ಹನುಮಂತರೆಡ್ಡಿ	ಉಪಾಧ್ಯಾಯರು ಶಾಲಾಭಿವೃದ್ಧಿ ಸಮಿತಿ ಸದಸ್ಯರು

೨೭-೧೨-೨೦೧೭	ಬಳ್ಳಾರಿ ಬಾಪೂಜಿನಗರ ದ. ಸರ್ಕಾರಿ ಪ್ರೌಢಶಾಲೆ	ಮು.ಗು.ಯಂ. ಮನೋಹರ್ ಉಪಾಧ್ಯಾಯರು	ವೈ ಹನುಮಂತರೆಡ್ಡಿ	ಶಾಲಾಭಿವೃದ್ಧಿ ಸಮಿತಿ ಸದಸ್ಯರು
೧೨-೦೧-೨೦೧೮	ಮೋಕಗ್ರಾಮ ಪ.ಪೂ ಕಾಲೇಜ್	ಡಿ, ಹೊನ್ನೂರಾಲಿ ಪ್ರಾಚಾರ್ಯರು	ವೈ ಹನುಮಂತರೆಡ್ಡಿ	ಉಪನ್ಯಾಸಕರು ಉಪಾಧ್ಯಾಯರು
೦೨-೦೨-೨೦೧೮	ಸಾರಗುಪ್ಪ ಸರ್ಕಾರಿ ಪದವಿ ಕಾಲೇಜ್	ಶ್ರೀ ಬಸವರಾಜ್ ಪ್ರಾಚಾರ್ಯರು	ವೈ ಹನುಮಂತರೆಡ್ಡಿ	ಉಪಾಧ್ಯಾರು ವಿದ್ಯಾಥಿಗಳು
೦೨-೦೨-೨೦೧೮	ತೆಕ್ಕಲ ಕೋಟೆ ಸರ್ಕಾರಿ ಪದವಿ ಕಾಲೇಜ್	ಮಾನಕರಿ ಶ್ರೀನಿವಾಸಾಚಾರ್ ಪ್ರಾಚಾರ್ಯರು	ವೈ ಹನುಮಂತರೆಡ್ಡಿ	ಉಪನ್ಯಾಸಕರು ವಿದ್ಯಾರ್ಥಿಗಳು
೧೦-೦೨-೨೦೧೮	ಬಳ್ಳಾರಿ ಗಾಂಧಿನಗರ	ಚಿಟ್ಟಮ್ಮ ಮು.ಗು.	ವೈ ಹನುಮಂತರೆಡ್ಡಿ	ಶಿಕ್ಷಕರು ಮತ್ತು ವಿದ್ಯಾರ್ಥಿಗಳು
೧೩-೦೪-೨೦೧೮	ಕೊಟ್ಟೂರು ಸ್ವಾಮಿ ಶಿಕ್ಷಕರ ಶಿಕ್ಷಣ ಮಹಾ ವಿದ್ಯಾಲಯ	ಶ್ರೀ ಹಿರೇಮಠ ಪ್ರಾಚಾರ್ಯರು	ವೈ ಹನುಮಂತರೆಡ್ಡಿ	ಪ್ರಾಧ್ಯಾಪಕರು ವಿದ್ಯಾರ್ಥಿಗಳು





ದಿನಾಂಕ : ೧೫-೦೯-೨೦೧೭ ಚಿತ್ರದುರ್ಗ

ಪರಂಪರೆ ಉಳಿಸಿ ಕಾರ್ಯಕ್ರಮದ ಅಡಿಯಲ್ಲಿ, ಚಿತ್ರದುರ್ಗದ ವಿದ್ವಾಂಸರಾದ ಶ್ರೀ ಎಚ್. ಶ್ರೀಶೈಲ ಆರಾಧ್ಯ ಅವರು 'ಪರಂಪರೆ ಉಳಿಸಿ' ಭಿತ್ತಿ ಪತ್ರಗಳನ್ನು ಪ್ರದರ್ಶಿಸಿದ್ದಲ್ಲದೆ ಪರಂಪರೆ ರಕ್ಷಣೆ ಬಗ್ಗೆ ವಿದ್ಯಾರ್ಥಿಗಳಿಗೆ. ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಆರಾಧ್ಯ ಅವರು ಭಿತ್ತ ಪತ್ರಗಳನ್ನು ವಿಜ್ಞಾನ ಕಾಲೇಜು, ಯೂನಿಯನ್ ಬ್ಯಾಂಕ್, ಟೌನ್‌ಕ್ಲಬ್, ಕ್ಲಬ್‌ಕ್ಯಾಟೀನ್, ಉಪಾದ್ಯ ಹೋಟೆಲ್, ಬಸವೇಶ್ವರ ಮೆಡಿಕಲ್‌ಕಾಲೇಜ್, ರಾಮದೇವ್ ಯೋಗಶಿಬಿರ, ವಾಸವಿ ವಿದ್ಯಾಸಂಸ್ಥೆ ಮುಂತಾದ ಕಡೆಗಳಲ್ಲಿ ಪ್ರದರ್ಶಿಸಿ ಜನ ಜಾಗೃತಿ ಮೂಡಿಸಿದ್ದಾರೆ. ಸ್ವತಃ ಕರಪತ್ರಗಳನ್ನು ಮುದ್ರಿಸಿ ಹಂಚಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದಾರೆ.

ದಿನಾಂಕ : ೧೮-೦೧-೨೦೧೭, ಹುಲಕೋಟಿ

ಗದಗಿನ ಸರ್ಕಾರಿ ಪ್ರಥಮ ದರ್ಜೆಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಮತ್ತು ಕರ್ನಾಟಕ ಇತಿಹಾಸ ಅಕಾದೆಮಿ ಸಂಯುಕ್ತ ಆಶ್ರಯದಲ್ಲಿ ದಿನಾಂಕ ೧೮-೦೧-೨೦೧೭ರಂದು ಐತಿಹಾಸಿಕ ಪರಂಪರೆ ಉಳಿಸಿಕಾರ್ಯಕ್ರಮವನ್ನು ಪ್ರೊ. ಗರಗ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಯಿತು. ಪ್ರಾಚಾರ್ಯರಾದ ಡಾ. ಎಸ್.ಎಫ್‌ಸಿ ಸಿದ್ನೇಕೊಪ್ಪ ಅವರು ದೇವಾಲಯ, ನಾಣ್ಯ, ಹಸ್ತಪ್ರತಿ ಮೊದಲಾದವುಗಳನ್ನು ರಕ್ಷಣೆ ಮಾಡಬೇಕಾದ ಅವಶ್ಯಕತೆ ತಿಳಿಸಿದರು. ಮುಖ್ಯ ಅತಿಥಿಗಳಾದ ಡಾ. ವಿ.ಕೆ. ದ್ಯಾಮನ ಗೌಡರು ಮಾತನಾಡಿ ಸ್ಮಾರಕಗಳ ರಕ್ಷಣೆಯಿಂದ ಪರಂಪರೆ ಕಟ್ಟಲು ಸಾಧ್ಯವೆಂದು ತಿಳಿಸಿದರು. ಡಾ.

ಎಸ್. ಎಮ್. ಮಠ್ ಅವರು, ಶಾಸನಗಳ ಮಹತ್ವವನ್ನು ಕುರಿತು ಮಾತನಾಡಿದರು. ಇತಿಹಾಸ ಸಂಶೋಧಕರಾದ ಡಾ. ಅಪ್ಪಣ ಹಂಜೆ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ನಿವೃತ್ತ ಮುಖ್ಯೋಪಾದ್ಯಾಯರಾದ ಶ್ರೀ ಎಸ್.ಎನ್. ಪಂಚಭಾವಿ ಮತ್ತು ಕೃಷಿತಜ್ಞರಾದ ಸುರೇಶ್‌ಗೌಡ ಪಾಟೀಲ್ ಅವರು ಉಪಸ್ಥಿತರಿದ್ದರು. ಉಪನ್ಯಾಸಕರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.





ದಿನಾಂಕ : ೦೯-೦೩-೨೦೧೭ ಶನಿವಾರ ಸಂತೆ ಕೊಡಗು

ಭಾರತೀ ವಿದ್ಯಾಸಂಸ್ಥೆ ಪ್ರಥಮ ದರ್ಜೆ ಕಾಲೇಜು ಶನಿವಾರಸಂತೆ ಮತ್ತು ಕರ್ನಾಟಕ ಇತಿಹಾಸ ಅಕಾದೆಮಿ(ರಿ) ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಸ್.ಎಂ. ಉಮಾಶಂಕರ್, ಪ್ರಾಂಶುಪಾಲರು ಇವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ, ಅಕಾದೆಮಿಯ ಕಾರ್ಯಕಾರಿ ಸಮಿತಿಯ ಶ್ರೀ ಗುರುಶಾಂತಪ್ಪ, ಅವರು ಭಾಗವಹಿಸಿದ್ದರು. ಪುರಾತನ ಹಾಗೂ ಇಂದಿನ ಇತಿಹಾಸ ಕುರುಹುಗಳನ್ನು ಅಧ್ಯಯನ ಮಾಡಿ ಅದನ್ನು ಉಳಿಸುವ ಕುರಿತಾಗಿ ವಿದ್ಯಾರ್ಥಿಗಳಿಗೆ ಗುರುಶಾಂತಪ್ಪ ಅವರು ಮನದಟ್ಟು ಮಾಡಿದರು. ಹಾಗೂ ಕೊಡಗಿನ ಸ್ಥಳೀಯ ಇತಿಹಾಸವನ್ನೇ ವಿದ್ಯಾರ್ಥಿಗಳಿಗೆ ತಿಳಿಸಿದರು. ಪ್ರಾಂಶುಪಾಲರಾದ ಶ್ರೀ ಉಮಾಶಂಕರ್ ಪರಂಪರಾಗತ ಸಂಸ್ಕೃತಿ, ಇತಿಹಾಸ ಅದರ ರಕ್ಷಣೆ ಮತ್ತು ಕಟ್ಟುವ ಬಗ್ಗೆ ವಿವರಿಸಿದರು. ಉಪನ್ಯಾಸಕರು, ಆಡಳಿತ ಮಂಡಳಿ ಸದಸ್ಯರು ಹಾಜರಿದ್ದರು.

ದಿನಾಂಕ : ೦೯-೦೩-೨೦೧೭ ಕೂಡ್ಲಿಪೇಟೆ ಕೊಡಗು

ಕೂಡ್ಲಿ ಪೇಟೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಪಾಂಶುಪಾಲರಾದ ಶ್ರೀ ಎಂ.ಆರ್. ನಿರಂಜನ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಮುಖ್ಯ ಅತಿಥಿಗಳಾಗಿ ಅಕಾದೆಮಿಯ ಸಮಿತಿಯ ಶ್ರೀ ಗುರುಶಾಂತಪ್ಪ ಇವರು ಭಾಗವಹಿಸಿದ್ದರು. ಪರಂಪರೆ ಕಟ್ಟುವಲ್ಲಿ ಐತಿಹಾಸಿಕ ಸ್ಮಾರಕಗಳು ನಾಣ್ಯಗಳು ಹಸ್ತಪ್ರತಿಗಳು ಮುಂತಾದವು ಮಹತ್ವವಾದವುಗಳು ಎಂದು



ವಿವರಿಸಿದರು. ಹಾಗೂ ಪರಂಪರೆಯ ಕಟ್ಟುವಲ್ಲಿ ಎಲ್ಲರ ಜವಾಬ್ದಾರಿಯ ಮಹತ್ವವನ್ನು ಕುರಿತು ತಿಳಿಸಿದರು. ಕಾಲೇಜು ವಿದ್ಯಾರ್ಥಿವೃಂಧ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ದಿನಾಂಕ : ೨೭-೦೧-೨೦೧೮ ಯಳಸೂರು ಹಾಸನ

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಶ್ರೀ ಮೋಹನ್ ಕೆ.ವಿ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಕಾದೆಮಿಯ ಸಮಿತಿ ಸದಸ್ಯರಾದ ಶ್ರೀ ಗುರುಶಾಂತಪ್ಪ ಅವರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು. ಸ್ಮಾರಕ ದೇವಾಲಯ ನಾಣ್ಯ ಹಸ್ತಪ್ರತಿ ಕುರಿತು ಮಾತನಾಡಿ, ಅದರ ಮಹತ್ವ ಹಾಗೂ ಪರಂಪರೆ ಕಟ್ಟುವಲ್ಲಿ ನಮ್ಮ ಜವಾಬ್ದಾರಿ

ತಿಳಿಸಿದರು. ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ್ ವೈ.ಎಸ್. ಹಾಗೂ ಸದಸ್ಯರಾದ ಬಿ.ಎಸ್. ಸಂಗಮೇಶ್, ಬಿ.ಎಸ್. ಚಂದ್ರಶೇಖರ್, ರವಿತೇಜ್ ಸೈಯದ್ ಅಲಿ, ಹಾಗೂ ಚಂದ್ರಶೇಖರ್ ಭಾಗವಹಿಸಿದ್ದರು.

ದಿನಾಂಕ : ೧೬-೦೩-೨೦೧೮ ಕಳಸ ಚಿಕ್ಕಮಗಳೂರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಳಸ ಹಾಗೂ ಇತಿಹಾಸ ಅಕಾದೆಮಿ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಐತಿಹಾಸಿಕ ಪಂಪರೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹಂಪಿ ವಿ.ವಿ. ಸಂಶೋಧನಾ ವಿದ್ಯಾರ್ಥಿನಿ ಕು. ಸುಪ್ರಿತ ಕೆ.ಎಸ್. ಇವರ ನೇತೃತ್ವದಲ್ಲಿ ಕಾಲೇಜಿನ ಇತಿಹಾಸ ವಿಭಾಗದ ಪರಂಪರೆ ಕೂಟದ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ. ಶ್ರೀ ವಿನಯ ಕುಮಾರ್ ಶೆಟ್ಟಿ ಎಸ್. ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಅ.ರಾ. ರಾಧಕೃಷ್ಣ ಇವರು ನೆರವೇರಿಸಿದರು. ಅತಿಥಿಗಳಾಗಿ ಆಗಮಿಸಿದ್ದ ಮೇಕನಗದ್ದೆ ಲಕ್ಷಣಗೌಡರು. ಐತಿಹಾಸಿಕ ಸ್ಮಾರಕಗಳ ಮಹತ್ವ ಹಾಗೂ ರಕ್ಷಣೆ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಸುಪ್ರೀತ ಕೆ.ಎಸ್. ಅವರು ಪ್ರಾತ್ಯಕ್ಷಿಕೆ ಉಪನ್ಯಾಸ ನೀಡಿದರು. ಹಾಗೂ ಅವುಗಳ ರಕ್ಷಣೆ ಕುರಿತು ತಿಳಿಸಿದರು.




ದಿನಾಂಕ : ೩೦-೦೬-೨೦೧೮ ಮೈಸೂರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿದ್ಧಾರ್ಥನಗರ ಮೈಸೂರು ಇವರು ಪರಂಪರೆ ಕೂಟದ ವತಿಯಿಂದ ಪ್ರಾಂಶುಪಾಲರಾದ ಶ್ರೀ ದಿವಾಕರ್ ಅವರ ನೇತೃತ್ವದಲ್ಲಿ ಗ್ರಾಮದ ಸ್ಮಾರಕಗಳು ಸಂರಕ್ಷಣೆಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಡಾ, ಉಷಾರಾಣಿ ಅವರು ಸ್ಮಾರಕಗಳ ರಕ್ಷಣೆ ಕುರಿತು ಸಾದೃಶ್ಯವಾಗಿ ವಿವರಿಸಿದರು. ವಿದ್ಯಾರ್ಥಿಗಳು ಸ್ಮಾರಕಗಳನ್ನು ಸ್ವಚ್ಛಗೊಳಿವಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದರು.




ದಿನಾಂಕ : ೨೭-೦೮-೨೦೧೮ ರಿಂದ ೦೧-೦೯-೨೦೧೮ ರಾಮನಗರಜಿಲ್ಲೆ.

ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು ಕ.ಸಾ.ಪ. ರಾಮನಗರ ಜಿಲ್ಲೆ ಮತ್ತು ಸಹೃದಯ ಪ್ರತಿಷ್ಠಾನ ಮಾಗಡಿ ಇವರ ಸಂಯುಕ್ತ ಆಶ್ರಯದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ದಿನಾಂಕ ೨೭-೦೮-೨೦೧೮ ರಿಂದ ೦೧-೦೯-೨೦೧೮ರ ವರೆಗೆ ಸದರಿ ಜಿಲ್ಲೆಯ ವಿವಿಧ ಕಾಲೇಜುಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ೨೭.೮.೨೦೧೮ರಂದು ಸೋಮವಾರ, ಮಹಿಳಾ ಸರ್ಕಾರಿ ಕಾಲೇಜು ಮದ್ದೂರಿನಲ್ಲಿ ಶ್ರೀ ಟ.ರಾಮೇಗೌಡ ನಿವೃತ್ತ ಪ್ರಾಂಶುಪಾಲರು ಇವರು ನೆರವೇರಿಸಿದರು. ಮುಖ್ಯ ಅಥಿತಿಗಳಾಗಿ ಶ್ರೀ ತೈಲೂರು ವೆಂಕಟಕೃಷ್ಣ. ಸಾಹಿತಿ ಮತ್ತು ಇತಿಹಾಸ ತಜ್ಞರು ಇವರು ಆಗಮಿಸಿದ್ದರು. ಶ್ರೀ ಮಹಮದ್ ಕಲಂ ಇತಿಹಾಸ ಸಂಶೋಧಕರು ಅತಿಥಿಗಳಾಗಿ ಆಗಮಿಸಿದು ಸ್ಥಳೀಯ ಇತಿಹಾಸದ ಬಗ್ಗೆ ಬೆಳಕು ಚೆಲ್ಲಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಚ್. ಕೃಷ್ಣೇಗೌಡ ಪ್ರಾಂಶುಪಾಲರು ಇವರು ವಹಿಸಿದ್ದು ಐತಿಹಾಸಿಕ ಪರಂಪರೆ ಹಾಗೂ ಅವುಗಳ ರಕ್ಷಣೆ ಕುರಿತು ಮಾತನಾಡಿದರು.

ಈ ಎಲ್ಲಾ ಕಾರ್ಯಕ್ರಮದ ರೂವಾರಿಗಳಾಗಿ ಡಾ. ಮುನಿರಾಜಪ್ಪ ಅಧ್ಯಕ್ಷರು ಸಹೃದಯ ಪ್ರತಿಷ್ಠಾನ. ಶ್ರೀ ಸಿಂ.ಲಿಂ ನಾಗರಾಜು, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ ರಾಮನಗರ ಜಿಲ್ಲೆ ಆಶ್ರಯದಲ್ಲಿ ಶ್ರೀ ಎಲ್ಲೇಗೌಡ ಬೆಸಗರ ಹಳ್ಳಿ, ಸದಸ್ಯರು, ಕರ್ನಾಟಕ ಇತಿಹಾಸ ಅಕಾದೆಮಿ ಇವರುಗಳು ಕಾರ್ಯಕ್ರಮ ಯೋಜಿಸಿದ್ದಾರೆ.

ಐತಿಹಾಸಿಕ ಪರಂಪರೆ ಉಪನ್ಯಾಸ ಕಾರ್ಯಕ್ರಮ – ರಾಮನಗರಜಿಲ್ಲೆ

ದಿನಾಂಕ/ಸಮಯ	ಸ್ಥಳ	ಅಧ್ಯಕ್ಷತೆ	ಅತಿಥಿ ಉಪನ್ಯಾಸ
೨೭-೦೮-೨೦೧೮ ಮ. ೧-೦೦ ಗಂಟೆಗೆ	ಸರ್ಕಾರಿ ಪದವಿ ಪೂರ್ವ ಕಾಲೇಜು ಕುದೂರು	ಶ್ರೀ ಸಿ. ಕಾಂತರಾಜು ಪ್ರಾಂಶುಪಾಲರು	ಪ್ರೊ. ತಿಮ್ಮಹನುಮಯ್ಯ ಸ.ಪ್ರ.ದ. ಕಾಲೇಜು, ಮಾಗಡಿ
೨೮-೦೮-೨೦೧೮ ಮ. ೧-೦೦ ಗಂಟೆಗೆ	ಸರ್ಕಾರ ಪದವಿ ಪೂರ್ವ ಕಾಲೇಜು, ಕನಕಪುರ	ಶ್ರೀ ನಾಗರಾಜು ಪ್ರಾಂಶುಪಾಲರು	ಡಾ. ಹೆಚ್.ಜಿ.ಪಾರ್ಥಸಾರಥಿ ರೂರಲ್ ಕಾಲೇಜು, ಕನಕಪುರ
೨೯-೦೮-೨೦೧೮ ಮ. ೧-೦೦ ಗಂಟೆಗೆ	ಸರ್ಕಾರ ಪದವಿ ಪೂರ್ವ ಕಾಲೇಜು, ಮಾಗಡಿ	ಶ್ರೀ ನಾಗಣ್ಣ ಪ್ರಾಂಶುಪಾಲರು	ಡಾ. ಚಿಕ್ಕಚನ್ನಯ್ಯ ಸ.ಪ್ರ.ದ. ಕಾಲೇಜು, ರಾಜಾಜಿನಗರ, ಬೆಂಗಳೂರು
೨೯-೦೮-೨೦೧೮ ಮ. ೧೨-೩೦ ಗಂಟೆಗೆ	ಹೆಚ್.ಜಿ. ಚನ್ನಪ್ಪ ಪ.ಪೂ. ಕಾಲೇಜು, ಹುಲಿಕಟ್ಟೆ	ಶ್ರೀ ಗೋವಿಂದರಾಜುಎಂ.ಸಿ. ಪ್ರಾಂಶುಪಾಲರು	ಡಾ. ಹೆಚ್. ಕೃಷ್ಣೇಗೌಡ ಪ್ರಾಂಶುಪಾಲರು, ಮ.ಸ. ಕಾಲೇಜು, ಮದ್ದೂರು
೨೯-೦೮-೨೦೧೮ ಮ. ೧೨-೩೦ ಗಂಟೆಗೆ	ರೂರಲ್ ಪ.ಪೂ. ಕಾಲೇಜು ಕನಕಪುರ	ಶ್ರೀ ಆಂಜಿನಪ್ಪ ಪ್ರಾಂಶುಪಾಲರು	ಪ್ರೊ. ಎಸ್.ಪಿ. ರಮೇಶ್ ರೂರಲ್ ಕಾಲೇಜು, ಕನಕಪುರ
೩೦-೮-೨೦೧೮ ಮ. ೧೧-೦೦ ಗಂಟೆಗೆ	ಸರ್ಕಾರಿ ಪದವ ಪೂರ್ವ ಕಾಲೇಜು ರಾಮನಗರ	ಶ್ರೀ ರಂಗಸ್ವಾಮಿಗೌಡ ಪ್ರಾಂಶುಪಾಲರು	ಡಾ. ಟಿ.ಎಸ್. ವೆಂಕಟೇಶ್ ಯು.ಜಿ.ಸ. ಪೋಸ್ಟ್ ಡಾಕ್ಟರಲ್ ಫೆಲೋ ತುಮಕೂರು, ವಿ.ವಿ. ತುಮಕೂರು.
೩೧-೦೮-೨೦೧೮ ಮ. ೧೧-೦೦ ಗಂಟೆಗೆ	ಶ್ರೀ ಸಿದ್ದಗಂಗಾ ಪ.ಪೂ. ಕಾಲೇಜು ಗುಡೇಮಾರನಹಳ್ಳಿ (ಕೈಮರ)	ಶ್ರೀ ಕೃಷ್ಣಪ್ಪ ಪ್ರಾಂಶುಪಾಲರು	ಶ್ರೀ ಚಂದ್ರಮಾಗಡಿ ಸಾಹಿತಿಗಳು
೩೧-೦೮-೨೦೧೮ ಬೆ. ೧೧-೦೦ ಗಂಟೆಗೆ	ಸರ್ಕಾರಿ ಪ.ಪೂ. ಕಾಲೇಜು ಚನ್ನಪಟ್ಟಣ	ಡಾ. ವಿ. ವೆಂಕಟೇಶ್ ಪ್ರಾಂಶುಪಾಲರು	ಡಾ. ಟಿ.ಎಸ್. ವೆಂಕಟೇಶ್ ಯು.ಜಿ.ಸಿ. ಪೋಸ್ಟ್ ಡಾಕ್ಟರಲ್ ಫೆಲೋ ತುಮಕೂರು, ವಿ.ವಿ.
೩೧-೦೮-೨೦೧೮ ಮ. ೩-೦೦ ಗಂಟೆಗೆ	ಸರ್ಕಾರಿ ಪ್ರೌಢಶಾಲೆ ಶಿವನಹಳ್ಳಿ	ಶ್ರೀಮತಿ ಪ್ರಭಾವತಿ ಮುಖ್ಯೋಪಾಧ್ಯಾಯರು	ಲೆಫ್ಟಿನೆಂಟ್ ವಿಜಯೇಂದ್ರ ರೂರಲ್ ಕಾಲೇಜು, ಕನಕಪುರ
೦೧-೦೯-೨೦೧೮ ಬೆ. ೧೧-೦೦ ಗಂಟೆಗೆ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ	ಪ್ರೊ. ವೃಷಬೇಂದ್ರಮೂರ್ತಿ ಪ್ರಾಂಶುಪಾಲರು	ಡಾ. ಎಂ. ಗೋವಿಂದಪ್ಪ ರೂರಲ್ ಕಾಲೇಜು, ಕನಕಪುರ

ಇಲ್ಲಿನ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಸಮಾರೋಪ ಸಮಾರಂಭವು ದಿನಾಂಕ ೦೧-೦೯-೨೦೧೮ ಶನಿವಾರ ಸರ್ಕಾರಿ ಪ್ರ.ದ.ಕಾಲೇಜು ಮಾಗಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪ್ರೊ. ಎಚ್. ಆರ್. ಮೂರ್ತಿ ಅವರು ನಿರ್ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎನ್. ಶಿವಕುಮಾರ್ ಕ.ಆ.ಸೇ. ಮಾನ್ಯ ತಹಶೀಲ್ದಾರ್, ಮಾಗಡಿ ತಾಲ್ಲೂಕು ಶ್ರೀಮತಿ ಕಲ್ಪನ ಶಿವಣ್ಣ, ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು. ಮಾಗಡಿ ಹಾಗೂ ಡಾ. ಎಸ್. ಕೆ. ಅರುಣಿ ಪ್ರಾಂತೀಯ ನಿರ್ದೇಶಕರು ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ ಬೆಂಗಳೂರು. ಇವರುಗಳು

ಆಗಮಿಸಿದ್ದರು. ಪರಂಪರೇ ಸಂಸ್ಕೃತಿ, ಸ್ಮಾರಕ, ನಾಣ್ಯ, ಹಸ್ತಪ್ರತಿ ಕೆರೆಕಟ್ಟೆ ಇವುಗಳ ಮಹತ್ವ ಹಾಗೂ ರಕ್ಷಿಸುವಲ್ಲಿ ನಮ್ಮ ಮುಂದಿರುವ ಜವಾಬ್ದಾರಿ ಬಗ್ಗೆ ಅತಿಥಿಗಳು ತಿಳಿಸಿದರು. ಒಟ್ಟೂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರಾಂಶುಪಾಲರು, ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿದ್ದವರಿಗೆಲ್ಲರಿಗೂ ವಂದನೆ ಸಲ್ಲಿಸಲಾಯಿತು.

ದಿನಾಂಕ: ೨೨-೦೮-೨೦೧೮ ಉಡುಪಿ

ಮುಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜು, ಶಿರ್ವ ಹಾಗೂ ಕರ್ನಾಟಕ ಇತಿಹಾಸ ಅಕಾಡೆಮಿಯ ಸಂಯುಕ್ತ ಆಶ್ರಯದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಅಭಿಯಾನದ ಅಂಗವಾಗಿ ಪಳ್ಳಿಯ ಬೃಹತ್ ಶಿಲಾಯುಗ ಕಾಲದ ಸಮಾಧಿ ನೆಲೆಯಲ್ಲಿ ಒಂದು ದಿನದ ಶ್ರಮದಾನ-ಪ್ರಾತ್ಯಕ್ಷಿಕೆ ಮತ್ತು ಅಧ್ಯಯನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪಳ್ಳಿಯ ಶ್ರೀ ಜಗದೀಶ್ ಹೆಗ್ಡೆ ಯವರು ಸಾವಿರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿದ ಇಂತಹ ಸ್ಮಾರಕವನ್ನು ರಕ್ಷಿಸಿ ಕಾಪಾಡುವುದು ಮತ್ತು ಇಲ್ಲಿ ನಡೆಯುತ್ತಿರುವ ಕಲ್ಲುಗಣಿಕಾರಿಕೆಯನ್ನು ತತ್‌ಕ್ಷಣವೇ ನಿಲ್ಲಿಸಿ, ಇದನ್ನು ಚಾರಿತ್ರಿಕ ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರ ಮತ್ತು ಜನಪ್ರತಿನಿಧಿಗಳು ಕೂಡಲೇ ಕಾರ್ಯಪ್ರವರ್ತರಾಗಬೇಕೆಂದು ಆಗ್ರಹಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಕಾಲೇಜಿನ ಸಹಪ್ರಾಧ್ಯಾಪಕ ಮತ್ತು ಕರ್ನಾಟಕ ಇತಿಹಾಸ ಅಕಾಡೆಮಿಯ ಜಿಲ್ಲಾಧ್ಯಕ್ಷ ಪ್ರೊ. ಟಿ. ಮುರುಗೇಶಿಯವರು ನಮ್ಮ ಚರಿತ್ರೆ ಮತ್ತು ಸಂಸ್ಕೃತಿಯ ಬೇರುಗಳಾಗಿರುವ ಇಂತಹ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸುವುದರ ಜೊತೆಗೆ ಅವುಗಳನ್ನು ನಮ್ಮ ಯುವಜನಕ್ಕೆ ಪರಿಚಯಿಸುವ ಮತ್ತು ಅವುಗಳ ಮಾಹಿತಿಯನ್ನು ಒದಗಿಸುವ ಸಲುವಾಗಿ ಇಂತಹ ಕಾರ್ಯಕ್ರಮಗಳನ್ನು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಪ್ರೊ. ಮಂಜುನಾಥ್ ಕೆ.ಜಿ.ಯವರು ವಹಿಸಿದ್ದರು.

ಕು. ಸಿಂಧು ಸ್ವಾಗತಿಸಿದರು, ಕಾರ್ಯಕ್ರಮಕ್ಕೆ ಸಹಕರಿಸಿದ ಕಾಲೇಜಿನ ಪ್ರಾಕ್ತನ ವಿದ್ಯಾರ್ಥಿಗಳಾದ ನಾಗಭೂಷಣ್ ಮತ್ತು ಕೋಡು ಧೀರಜ್ ಶೆಟ್ಟಿಯವರನ್ನು ಅಭಿನಂದಿಸಲಾಯಿತು. ನಂತರ, ಬೃಹತ್ ಶಿಲಾಯುಗ ಕಾಲದ ಸಮಾಧಿ ಸ್ಮಾರಕದ ಸುತ್ತ ಬೆಳೆದಿದ್ದ ಕಳೆಯನ್ನು ಕಿತ್ತು ವಿದ್ಯಾರ್ಥಿಗಳು ಸ್ಮಾರಕವನ್ನು ಸ್ವಚ್ಚಗೊಳಿಸಿದರು. ಕು. ಸುಶ್ಮಿತ ಧನ್ಯವಾದ ಸಮರ್ಪಿಸಿದರು.



ದಿನಾಂಕ : ೩೧.೦೮.೨೦೧೮ ಕನಮಡಿ, ವಿಜಯಪುರ

ವರಸಿದ್ಧಿ ವಿನಾಯಕ ಪ್ರಾಥಮಿಕ ಪ್ರೌಢಶಾಲೆ ಕನಮಡಿಯಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಶ್ರೀಪಿ.ಎ.ಕೊಟ್ಯಾಳ ಇವರು ಉದ್ಘಾಟಿಸಿದರು. ವಿದ್ಯಾರ್ಥಿಗಳು ಲಾವಣಿಯನ್ನು ಹಾಡಿದರು. ಮಕ್ಕಳೊಂದಿಗೆ ಐತಿಹಾಸಿಕ ವಿಷಯ ಕುರಿತು ಪ್ರಶ್ನೋತ್ತರ ನಡೆಸಿದರು. ಕೊನೆಯಲ್ಲಿ ಶಿಕ್ಷಕಿ ರಶ್ಮಿ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



ದಿನಾಂಕ : ೦೯-೦೯-೨೦೧೮ ಬಾರಕೂರು, ಉಡುಪಿ

ಐತಿಹಾಸಿಕ ಕೇಂದ್ರವಾದ ಬಾರಕೂರಿನ ಕಲ್ಲು ಚಪ್ಪರದಲ್ಲಿ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡರೆಡ್ಡಿ ಅವರು ಡೊಳ್ಳುವಾದ್ಯ ಬಾರಿಸುವುದರ ಮೂಲಕ 'ನಮ್ಮನಡಿಗೆ ಬಾರಕೂರಿನ ಕಡೆಗೆ' ಜಾಥಾವನ್ನು ಉದ್ಘಾಟಿಸಿದರು. ಉಡುಪಿ ಜಿಲ್ಲೆಯ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಘೋಷಣೆ ಫಲಕ ಹೊತ್ತು ಕೂಗುವುದರ ಮೂಲಕ ಜಾತಾದಲ್ಲಿ ಭಾಗವಹಿಸಿ ಜನರಲ್ಲಿ ಜಾಗೃತಿ ಮೂಡಿಸಿದರು. ಸಭಾಕಾರ್ಯಕ್ರಮದಲ್ಲಿ ಡಾ. ಇಂದಿರಾ ಹೆಗ್ಡೆಯವರು, ಪಿ.ಪಿ.ಸಿ. ಕಾಲೇಜಿನ ಪ್ರಾಂಶುಪಾಲರಾದ ಡಾ. ಜಗದೀಶ್ ಶೆಟ್ಟಿಯವರು, ಶಿರ್ವ ಎಂ.ಎಸ್.ಆರ್.ಎಸ್. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕರುಣಾಕರ್ ನಾಯಕ್ ಭಾಗವಹಿಸಿದ್ದರು ಸಂಶೋಧಕರಾದ ಶ್ರೀ ಶ್ರೀಧರ್‌ಭಟ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಇತಿಹಾಸ ಅಕಾದೆಮಿಯ ಕಾರ್ಯಕಾರೀ ಸಮಿತಿಸದಸ್ಯರು ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರಾದ ಪ್ರೊ. ಟಿ. ಮುರುಗೇಶಿಯವರು ಪ್ರಾಸ್ತಾವಿಕವಾಗಿ ಸ್ಮಾರಕ, ಅವಶೇಷಗಳ ರಕ್ಷಣೆ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರೊ. ಪ್ರಶಾಂತ್ ಶೆಟ್ಟಿ, ಪ್ರೊ. ದಾಮೋದರ್ ಶೆಟ್ಟಿಗಾರ್ ಹಾಗೂ ಪ್ರೊ. ಮಮತಾ ಪೂಜಾರಿ ಭಾಗವಹಿಸಿದ್ದರು. ಅನಿವಾಸಿ ಭಾರತೀಯರಾದ ಶ್ರೀ ಪ್ರಶಾಂತ್ ದುಬೈ ಸಚಿನ್‌ಶೆಟ್ಟಿ ಆಸ್ಟ್ರೇಲಿಯಾ ಪಳ್ಳಿಯ ಜಗದೀಶ್ ಹೆಗ್ಡೆ ಅವರನ್ನು ಅಭಿನಂದಿಸಲಾಯಿತು.





ದಿನಾಂಕ : ೧೨-೦೯-೨೦೧೮ ಬೆಟ್ಟಂಪಾಡಿ, ಪುತ್ತೂರು

ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಬೆಟ್ಟಂಪಾಡಿಯ ಎನ್.ಎಸ್.ಎಸ್. ಘಟಕವು ಕರ್ನಾಟಕ ಇತಿಹಾಸ ಅಕಾದೆಮಿಯ ಇತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಅಡಿಯಲ್ಲಿ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳ ಜಾತಾದೊಂದಿಗೆ ಜೇಂದ್ರ್ ತೀರ್ಥ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಬೇಂದ್ರೆ ತೀರ್ತದ ಕಲ್ಯಾಣಿಯಲ್ಲಿ ಕಟ್ಟಿದ್ದ ಹೂಳನ್ನು ತೆಗೆದು ಸುತ್ತಲೂ ಸ್ವಚ್ಛಗೊಳಿಸಿದರು. ಕಣ್ಮರೆಯಾಗಿದ್ದ ಬಿಸಿನೀರಿನ ಸೆಲೆ ಮತ್ತೆ ಯಥಾಸ್ಥಿತಿಯನ್ನು ಪಡೆದುಕೊಂಡಿದೆ. ಸ್ಥಳೀಯರು ಇದರಿಂದ ಸಂಭ್ರಮಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾ.ಪಂ. ಸದಸ್ಯೆ ಮೀನಾಕ್ಷಿ ಮಂಜುನಾಥ್ ವಹಿಸಿದ್ದರು. ಅತಿಥಿಗಳಾಗಿ ಇರ್ದೆ ಜೇಂದ್ರ್‌ತೀರ್ಥ ಶಿವಾಜಿ ಫ್ರೇಂಡ್ಸ್‌ನ ರಕ್ಷಣ್ ರೈ, ಸುಬ್ರಹ್ಮಣ್ಯ ಭಟ್ ಆಗಮಿಸಿದ್ದರು.

ಪ್ರಾಂಶುಪಾಲರಾದ ರಾಧಾಕೃಷ್ಣ ಭಟ್ ಎನ್. ಅವರು ಉಪಸ್ಥಿತರಿದ್ದು ಇತಿಹಾಸಿಕ ಸ್ಮಾರಕಗಳ ಬಗ್ಗೆ ವಿವರಿಸಿದರು. ಡಾ. ಮುರುಳಿ ಮತ್ತು ರಶ್ಮಿ ಜಿ.ಆರ್. ಇವರು ಕಾರ್ಯಕ್ರಮ ಸಂಯೋಜಿಸಿದ್ದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಡಾ. ಪೊಡಿಯರಾಮ ಕೆ. ಹರಿಪ್ರಸಾದ್ ಎಸ್, ಡಾ. ಕಾಂತೇಶ್ ಸಂಣಿಗಮ್ಮನವರ, ಮಂಜುಳದೇವಿ ಪಿ, ಮಮತ, ಡಾ. ನಿರೀಕ್ಷಣ್ ಸಿಂಗ್ ಗೌಗಿ ಎಸ್. ಕೆ. ದೇವರಾಜ್ ಆರ್. ಉದಯರಾಜ್ ಎಸ್. ಇವರುಗಳು ಸಕ್ರಿಯವಾಗಿ ತೊಡಗಿಸಿಕೊಂಡು ಕಾರ್ಯಕ್ರಮದ ಯಶಸ್ಸಿಗೆ ಪಾತ್ರರಾದರು. ಸುಮಾರು ೧೧೨ ಜನ ವಿದ್ಯಾರ್ಥಿಗಳು ಭಾಗವಹಿಸಿದ್ದು ಹದಗೆಟ್ಟಿದ್ದ ಪುಣ್ಯಕ್ಷೇತ್ರಕ್ಕೆ ಬಿಸಿನೀರುತರುವಲ್ಲಿ ಶ್ರಮವಹಿಸಿದ್ದರು.





ದಿನಾಂಕ : ೧೫-೦೯-೨೦೧೮ ಕೆಂಬಾವಿ

ದಿನಾಂಕ : ೧೫-೦೯-೨೦೧೮ ಶನಿವಾರ (೧೨) ರಂದು ಕೆಂಭಾವಿಯ ಬಾಪುಗೌಡ ಪದವಿ ಮಹಾವಿದ್ಯಾಲಯದಲ್ಲಿ "ಐತಿಹಾಸಿಕ ಪರಂಪರೆ ಉಳಿಸಿ" ಸಮಾರಂಭವನ್ನು ನಿವೃತ್ತ ಶಿಕ್ಷಕ ಜಿ.ಎನ್. ರೋಡಲಬಂಡಿ ಉದ್ಘಾಟಿಸಿದರು. ಮುಖ್ಯ ಉಪನ್ಯಾಸಕರಾಗಿ ನಿಂಗನಗೌಡ ದೇಸಾಯಿ ಪರಸನಹಳ್ಳಿಯವರು ಮಾತನಾಡಿ "ಪ್ರಾಚೀನ ದೇವಾಲಯಗಳು ನಾಡಿನ ಸಂಪತ್ತು "ಅವುಗಳ ರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದರಿ ಆಗಿದೆ ಎಂದರು. ಪ್ರಾಂಶುಪಾಲರಾದ ಪಾರ್ವತಿ ಚಾಪುಗೌಡ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ವಿಶ್ವನಾಥ ಅಬ್ಬೆ ತುಮುಕೂರು ಭಾಗವಹಿಸಿದ್ದರು.

ದಿನಾಂಕ ೨೦-೦೯-೨೦೧೮ ಗುರುವಾರ ೧೦.೩೦ಕ್ಕೆ ಮುದ ನೂರ ಸರಕಾರಿ ಪ್ರೌಢಶಾಲೆಯಲ್ಲಿ ನಡೆದ "ಐತಿಹಾಸಿಕ ಪರಂಪರೆ ಉಳಿಸಿ ಸಮಾರಂಭದಲ್ಲಿ ಮುಖ್ಯ ಉಪನ್ಯಾಸಕರಾಗಿ ನಿಂಗನಗೌಡ ದೇಸಾಯಿ ಪರಸನಹಳ್ಳಿ ಸಂಶೋಧಕರು



ಮಾತನಾಡಿ "ಮೂದನೂರ ನಲ್ಲಿ ೨೧ ಶಾಸನಗಳು ದೊರೆತಿದ್ದು ಅವುಗಳ ಹಾಗೂ ಇಲ್ಲಿ ಐತಿಹಾಸಿಕದೇವಾಲಯಗಳ ರಕ್ಷಣೆ ಮಾಡುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ. ಎಂದರು. ಮೂದನೂರು ಗ್ರಾಮ ಹಿಂದೆ "ಅಗ್ರಹಾರವಾಗಿತ್ತು" ಎಂದು ತಿಳಿಸಿದರು. ಅಧ್ಯಕ್ಷತೆ ಶ್ರೀ ಎಂ.ಬಿ. ಪಾಟೀಲ ಮುಖ್ಯಗುರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಮಲ್ಲಣ್ಣ, ಸತೀಶ, ರಮೇಶ, ಶಂಕರ ನಾಯಕ್ ಶಿಕ್ಷಕರು ಭಾಗವಹಿಸಿದರು.

ದಿನಾಂಕ : ೧೮.೦೯.೨೦೧೮ ಹೊನ್ನುಟಗಿ : ವಿಜಯಪುರ

೨೦೧೮-೧೯ ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ "ಐತಿಹಾಸಿಕ ಪರಂಪರೆ ಉಳಿಸಿ" ಎಂಬ ಕಾರ್ಯಕ್ರಮವನ್ನು ಸರಕಾರಿ ಪದವಿ ಪೂರ್ವಕಾಲೇಜು, ಹೊನ್ನುಟಗಿ ಗ್ರಾಮದಲ್ಲಿ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಸಹಯೋಗದೊಂದಿಗೆ ದಿನಾಂಕ ೧೮-೦೯-೨೦೧೮ ರಂದು ಬೆಳಿಗ್ಗೆ ಕಾಲೇಜಿನಲ್ಲಿ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಶ್ರೀ ಆರ್.ಎಂ. ಕೌಲಗಿಯವರು ವಹಿಸಿಕೊಂಡಿದ್ದರು. ಪ್ರಾರ್ಥನೆಯೊಂದಿಗೆಕಾರ್ಯಕ್ರಮ ಪ್ರಾರಂಭವಾಯಿತು. ಉದ್ಘಾಟನಾಕಾರ್ಯಕ್ರಮವನ್ನು ಇತಿಹಾಸ ಉಪನ್ಯಾಸಕರಾದ ಶ್ರೀಮತಿ ಎಸ್.ಎ. ಪಾಟೀಲರವರು ನೆರವೇರಿಸಿದರು. ಅತಿಥಿಉಪನ್ಯಾಸಕರಾದ ಶ್ರೀ ಎಂ.ಎಚ್. ಮೊಕಾಶಿಯವರು ಮಾತನಾಡಿದರು. ಸಕಲ ಉಪನ್ಯಾಸಕ ಮತ್ತು ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು. ಕೊನೆಗೆ ವಂದನಾರ್ಪಣೆಯನ್ನು ಉಪನ್ಯಾಸಕರಾದ ಶ್ರೀ ಎಸ್. ಜಿ. ಹೂಗಾರರವರು ನೇರವೇರಿಸಿದರು.




ದಿನಾಂಕ : ೨೦-೦೯-೨೦೧೮ ಕನಕದಾಸ ಶಿಕ್ಷಣ ಸಮಿತಿ, ಬೆಳಗಾವಿ

ಬೆಳಗಾವಿಯ ವೀರಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ, ನೆಹರು ನಗರ ಇವರು "ಐತಿಹಾಸಿಕ ಪರಂಪರೆ ಉಳಿಸಿ" ಕಾರ್ಯಕ್ರಮವನ್ನು ದಿನಾಂಕ : ೨೦-೦೯-೨೦೧೮ ರಂದು ಡಾ. ಬಿ.ಜಿ. ಧಾರವಾಡ ಸಹಾಯಕ ಪ್ರಧ್ಯಾಪಕರು ಡಾ. ಜಿ.ಆರ್. ಕೋಟ್ರೇಶಣ್ಣವರ ಸಹಾಯಕ ಪ್ರಾಧ್ಯಪಕರು, ಡಾ. ಎಂ.ಆರ್. ಭಟ್. ಸಹಾಯಕ ಪ್ರಾಧ್ಯಾಪಕರು ಹಸನಭಾಷಾ ತೆಗ್ಗಿನಮನಿ, ಇವರುಗಳು ಕಾರ್ಯಕ್ರಮ ಸಂಯೋಜಿಸಿದ್ದರು. ಬೆಳಗಾವಿನಗರದಲ್ಲಿ ವಿದ್ಯಾರ್ಥಿಗಳಿಂದ "ಐತಿಹಾಸಿಕ ಪರಂಪರೆ ಉಳಿಸಿ ಜಾತಾ ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಈರಣ್ಣ ತಟ್ಟಿಮನಿ ಅವರ ಪ್ರಾರ್ಥನೆ ಹಾಗೂ ಲಕ್ಷಿರಾಹುಲ ಮತ್ತು ಅನುಪಮಾ ಶಿವನಗೋಳ ಅವರಿಂದ ಸ್ವಾಗತ ಪರಿಚಯಿಸಿದರು ಡಾ. ಬಿ.ಜಿ. ಧಾರವಾಡ ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಪ್ರೊ. ಶ್ರೀಕಾಂತ ಶಾನವಾಡ ಉಪನ್ಯಾಸಕರು ಬೆನನ್ಸ್ಮಿತ್ ಪದವಿ ಪೂರ್ವ ಮಹಾವಿದ್ಯಾಲಯ ಇವರು ವಹಿಸಿದ್ದರು. ರೇಖುಷಾನಾಯಿಕ ಸಂಗಡಿಗರು ಲಾವಣಿ ಹಾಡಿದರು. ಜ್ಯೋತಿಗಡೆನ್ನವರ, ಈರಣ್ಣ ತಟ್ಟಿಮನಿ, ದೀಪಾ ತೇಲಿ ಇವರು ಐತಿಹಾಸಿಕ ಪರಂಪರೆ ವಿಚಾರವನ್ನು ಹಂಚಿಕೊಂಡರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎ.ಎಲ್. ಪಾಟೀಲ ವಹಿಸಿದ್ದರು. ಸೌಮ್ಯಶ್ರೀ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.




ಮೂವತ್ತೊಂದನೆಯ ವಾರ್ಷಿಕ ಸಮ್ಮೇಳನ

ಕರ್ನಾಟಕ ಇತಿಹಾಸ ಅಕಾದೆಮಿಯು ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ ಶ್ರೀ ಗವಿಸಿದ್ಧೇಶ್ವರ ಪದವಿ ಮಹಾವಿದ್ಯಾಲಯ ಕೊಪ್ಪಳ, ಬಿ.ಸಿ. ಪಾಟೀಲ ಟ್ರಸ್ಟ್ ಕೊಪ್ಪಳ, ಹಾಗೂ ಕರ್ನಾಟಕ ರಾಜ್ಯಪ್ರಾಚ್ಯ ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರ ಸಹಯೋಗದೊಂದಿಗೆ ೨೦೧೭ ಅಕ್ಟೋಬರ್ ೨೮ರಿಂದ ೩೦ರವರೆಗೆ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ೩೧ನೇ ವಾರ್ಷಿಕ ಸಮ್ಮೇಳನಕ್ಕೆ ಕೊಪ್ಪಳ ಗವಿಸಿದ್ದೇಶ್ವರ ಮಠವು ಆಶ್ರಯ ನೀಡಿತ್ತು.

ದಿನಾಂಕ ೨೮-೧೦-೨೦೧೭ನೇ ಶನಿವಾರ ಬೆಳಿಗ್ಯೆ ೧೦.೩೦ಕ್ಕೆ ಶ್ರೀ ಗವಿಸಿದ್ಧೇಶ್ವರ ಪದವಿ ಮಹಾವಿದ್ಯಾಲಯ ಕೊಪ್ಪಳದಲ್ಲಿ ಉದ್ಘಾಟನಾ ಸಮಾರಂಭ ಏರ್ಪಟ್ಟಿತ್ತು. ಕುಮಾರಿ ವಿಭಾ ಮತ್ತು ವರ್ಷಿಣಿ ಅವರ ಪ್ರಾರ್ಥನೆ ಮತ್ತು ನಾಡ ಗೀತೆಯೊಂದಿಗೆ ಬಿ.ಸಿ. ಪಾಟೀಲ ಟ್ರಸ್ಟ್‌ನ ಸಿ.ಬಿ. ಪಾಟೀಲ್ ಅವರು ಅತಿಥಿಗಳಿಗೆ ಹಾಗೂ ಎಲ್ಲರಿಗೂ ಸ್ವಾಗತ ಕೋರಿದರು. ಕರ್ನಾಟಕ ಇತಿಹಾಸ ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ಅಕಾದೆಮಿಯ ಚಟುವಟಿಕೆಗಳ ಬಗ್ಗೆ ಪ್ರಾಸ್ತಾವಿಕ ವಿಷಯಗಳನ್ನು ತಿಳಿಸಿದರು.

ಡಾ. ವೀರಣ್ಣ ರಾಜೂರ, ಖ್ಯಾತ ಸಂಶೋಧಕರು, ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿ.ವಿ. ಧಾರವಾಡ ಇವರು ಜ್ಯೋತಿ ಬೆಳಗಿಸುವ ಮೂಲಕ ೩೧ನೇ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿದರು. ಸಂಶೋಧನೆಯ ಮಹತ್ವ, ಸಾಹಿತ್ಯ ಹಸ್ತಪ್ರತಿ ಶಾಸನ, ಸಂಸ್ಕೃತಿ ಇತ್ಯಾದಿ ಸಂಶೋಧನೆಗಳು ನಡೆಯುತ್ತಿರುವ ಬಗ್ಗೆ ಹಾಗೂ ಆಗಬೇಕಾದ ಶೋಧಗಳ ಬಗ್ಗೆ ತಿಳಿಸಿದರು. ಅಕಾದೆಮಿಯ ಸಂಶೋಧನಾ ಲೇಖನಗಳು ಮಹತ್ವದ್ದಾಗಿದ್ದು, ಅವುಗಳ ಬಗ್ಗೆಯೇ ಪಿಎಚ್.ಡಿ. ಕೂಡಾ ಮಾಡಬಹುದೆಂದು ಮನದಟ್ಟು ಮಾಡಿದರು.

ಡಾ. ದೇವರಕೊಂಡಾರೆಡ್ಡಿ ಹಾಗೂ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ಸಂಪಾದಿಸಿದ "ಇತಿಹಾಸ ದರ್ಶನ" ೩೨ನೇ ವಾರ್ಷಿಕ ಸಂಪುಟವನ್ನು ಡಾ. ಶ್ರೀನಿವಾಸ ವಿ. ಪಾಡಿಗಾರ, ನಿವೃತ್ತ ಪ್ರಾಧ್ಯಾಪಕರು ಕರ್ನಾಟಕ ವಿ.ವಿ. ಧಾರವಾಡ ಇವರು ಬಿಡುಗಡೆ ಮಾಡಿದರು.

ಡಾ. ಆರ್. ಗೋಪಾಲ್, ನಿರ್ದೇಶಕರು ರಾಜ್ಯಪ್ರಾಚ್ಯವಸ್ತು, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಇವರು ಸದಸ್ಯರಾದ ಶ್ರೀ ರೆಡ್ಡಪ್ಪಹಳ್ಳಿ ಅವರ 'ರಾಯಚೂರು ಕೋಟೆ' ಹಾಗೂ ಡಾ. ಶ್ಯಾಮಲಾ ಸಿ. ಆರ್. ಅವರ ಪೂರ್ವ ಕರ್ನಾಟಕದ ಪಾಳೆಗಾರರು ಒಂದು ಅಧ್ಯಯನ ಕೃತಿಗಳನ್ನು ಬಿಡುಗಡೆ ಮಾಡಿದರು.

ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಡಾ. ಕೆ.ಎಂ. ಲೋಕೇಶ್, ಕುಲಸಚಿವರು ಮಂಗಳೂರು ವಿ.ವಿ. ಸಿ.ಬಿ. ಪಾಟೀಲ್ ನಿವೃತ್ತ ಪುರಾತತ್ವಜ್ಞರು, ಭಾರತೀಯ ಪುರಾತತ್ವ ಇಲಾಖೆ, ಇವರು ಉಪಸ್ಥಿತರಿದ್ದರು.

ಡಾ. ಬಾ.ರಾ. ಗೋಪಾಲ್ ಅವರ ನೆನಪಿನ ಹೆಸರಿನಲ್ಲಿ ನೀಡುವ ಶಾಸನ ತಜ್ಞರ ಪ್ರಶಸ್ತ್ರಿಯು ರೂ. ೧೦,೦೦೦/- ನಗದನ್ನು ಶಾಸನ ಮತ್ತು ಇತಿಹಾಸ ತಜ್ಞರಾದ **ಡಾ. ಎಂ.ಜಿ. ಮಂಜುನಾಥ್,** ನಿರ್ದೇಶಕರು ಪ್ರಸಾರಾಂಗ ಮೈಸೂರು ವಿ.ವಿ. ಮೈಸೂರು. ಅವರಿಗೆ ಗಣ್ಯರೆಲ್ಲರೂ ಸೇರಿ ಪ್ರಶಸ್ತಿನೀಡಿ ಗೌರವಿಸಿ ಅಭಿನಂದಿಸಿದರು.

ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಅವರ ನೆನಪಿನಲ್ಲಿ ನೀಡುವ "ಇತಿಹಾಸ ಸಂಸ್ಕೃತಿಶ್ರೀ" ಪ್ರಶಸ್ತಿಯನ್ನು **ಡಾ. ಶ್ರೀನಿವಾಸ ಎಚ್. ರಿತ್ತಿ.** ಶಾಸನ ತಜ್ಞರು ಹಾಗೂ ಹಿರಿಯ ವಿದ್ವಾಂಸರು, ಧಾರವಾಡ ಇವರಿಗೆ ಪ್ರಶಸ್ತಿಯನ್ನು ಕಾರ್ಯಕ್ರಮದ ನಂತರದಲ್ಲಿ ಅವರ ಸ್ವಗೃಹದಲ್ಲಿ ಧಾರವಾಡದ ವಿದ್ವಾಂಸರೊಂದಿಗೆ ಡಾ. ದೇವರಕೊಂಡಾರೆಡ್ಡಿ ಹಾಗೂ ಬೈಸಾನಿ ರುಕ್ಮಣಮ್ಮ ರತ್ನಂ ಶೆಟ್ಟಿ ಟ್ರಸ್ಟ್‌ನ ಶ್ರೀ ಅಶೋಕ್ ಕುಮಾರ್ ಅವರು ಪ್ರಶ್ರಸ್ತಿ ನೀಡಿ ಗೌರವಿಸಿದರು.

ಶ್ರೀಮತಿ ವಿ. ಗೌರಮ್ಮ ಶ್ರೀ ಗಂಗಾಧರಯ್ಯ ಇವರ ಹೆಸರಿನಲ್ಲಿ ಅವರ ಮಕ್ಕಳಾದ ಡಾ. ಎಂ.ಜಿ ನಾಗರಾಜ್ ಶ್ರೀಮತಿ ಪದ್ಮಾ ವಿರೂಪಾಕ್ಷಯ್ಯ ಮತ್ತು ಡಾ. ಎಂ.ಜಿ. ಚಂದ್ರಕಾಂತ್ ಇವರುಗಳು ಸ್ಥಾಪಿಸಿರುವದತ್ತಿಯಿಂದ 'ಸಂಶೋಧನಶ್ರೀ' ಪ್ರಶಸ್ತಿಯನ್ನು ಹಾಗೂ ರೂ.೨೫,೦೦೦/- ನಗದನ್ನು **ಪ್ರೊ. ಲಕ್ಷ್ಮಣ ತೆಲಗಾವಿ,** ಇತಿಹಾಸ ತಜ್ಞರು ಹಾಗೂ ನಿವೃತ್ತ ಪ್ರಾಧ್ಯಾಪಕರು ಕನ್ನಡ ವಿ.ವಿ. ಹಂಪಿ ಇವರಿಗೆ ಸಮ್ಮೇಳನಾಧ್ಯಕ್ಷರು ಗಣ್ಯರೊಡಗೂಡಿ ಪ್ರಶಸ್ತಿ ಪ್ರಧಾನ ಮಾಡಿದರು.

ಅರಸೀಕೆರೆ ಮೇಲಣ ಮಠದ ಶ್ರೀ ಎಸ್. ಸಿದ್ದಣಯ್ಯ ಮತ್ತು ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ ನೀಡುವ 'ನೊಳಂಬ ಶ್ರೀ' ಪ್ರಶಸ್ತಿಯು ಹಾಗೂ ರೂ. ೧೦,೦೦೦/- ಗಳನ್ನು **ಡಾ. ಕೆ.ಆರ್. ಬಸವರಾಜು** ನಿವೃತ್ತ ಪ್ರಾಧ್ಯಾಪಕರು ತಿಪಟೂರು ಇವರಿಗೆ ನೀಡಿ ಗೌರವಿಸಲಾಯಿತು.

ಕರ್ನಾಟಕದ ನಾಯಕ ಅರಸರ ಇತಿಹಾಸ ಸಂಶೋಧನೆಯಲ್ಲಿ ಸಾಧನೆಗೈದ ವಿದ್ವಾಂಸರಿಗೆ ಪ್ರೊ. ಲಕ್ಷ್ಮಣ ತೆಲಗಾವಿ ಹೆಸರಿನಲ್ಲಿ ಸ್ಥಾಪಿಸಿರುವ ದತ್ತಿಯಿಂದ "ನಾಯಕಶ್ರೀ' ಪ್ರಶಸ್ತಿಯ ಹಾಗೂ ರೂ. ೧೦,೦೦೦/- ನಗದನ್ನು **ಡಾ. ಸಿ.ಆರ್. ಶ್ಯಾಮಲ** ಇತಿಹಾಸ ಸಂಶೋಧಕರು, ಮುಂಬೈ ಇವರಿಗೆ ನೀಡಿ ಗೌರವಿಸಲಾಯಿತು.

ಡಾ. ಪದಯ್ಯ ಸ್ಥಾಪಿಸಿದ ದತ್ತಿಯಿಂದ ನೀಡುವ ಡಾ. ಎಂ. ಎಚ್. ಕೃಷ್ಣ ಮೆರಿಟ್ ಅವಾರ್ಡ ಪ್ರಶಸ್ತಿ (ಅತ್ಯುತ್ತಮ ಪ್ರಾಗೈತಿಹಾಸಿಕ ಲೇಖನಕ್ಕೆ) **ಡಾ. ಎಸ್. ವೈ ಸೋಮಶೇಖರ್,** ಸಹ ಪ್ರಾಧ್ಯಾಪಕರು ಕನ್ನಡ ವಿ.ವಿ. ಹಂಪಿ. ಅವರಿಗೆ ಪ್ರಶಸ್ತಿಯ ಹಾಗೂ ರೂ ೨೦೦೦/- ನಗದನ್ನು ನೀಡಿ ಗೌರವಿಸಲಾಯಿತು.

ಇತಿಹಾಸ ಅಕಾದೆಮಿಯ ೩೧ನೇ ವಾರ್ಷಿಕ ಸಮ್ಮೇಳನದ ಸಾರ್ವಾಧ್ಯಕ್ಷ ಪದವಿಯ ಗೌರವಕ್ಕೆ ಪಾತ್ರರಾದ ಡಾ. ಪಿ.ಎನ್. ನರಸಿಂಹಮೂರ್ತಿ ಶಾಸನತಜ್ಞರು ಹಾಗೂ ಸಂಶೋಧಕರು ಮಂಡ್ಯ ಅವರ ಕಿರುಪರಿಚಯವನ್ನು ಸಭೆಗೆ ಮಾಡಿಕೊಡಲಾಯಿತು. ೩೧ನೇ ವಾರ್ಷಿಕ ಸಮ್ಮೇಳನ ಸರ್ವಾಧ್ಯಕ್ಷ ಪದವಿ ಗೌರವಕ್ಕೆ ಪಾತ್ರರಾಗಿದ್ದ, ಶಾಸನತಜ್ಞರು, ಖ್ಯಾತ ಸಂಶೋಧಕರೂ ಆದ ಡಾ. ಪಿ.ಎನ್. ನರಸಿಂಹ ಮೂರ್ತಿ ಅವರು ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು. ಸಂಶೋಧನೆ ಶಾಸನಗಳ ಅಧ್ಯಯನ ಪ್ರಕಟಣೆ ಹಾಗೂ ಶಾಸನಗಳ ಪನರ್ ವಿಮರ್ಶೆಗಳ ಅವಶ್ಯಕತೆ ಬಗ್ಗೆ ತಿಳಿಸಿದರು. ಯುವಸಂಶೋಧಕರು ಆಸಕ್ತಿಯಿಂದ ವಸ್ತು ನಿಷ್ಠ ಸಂಶೋಧನೆ ಮಾಡಬೇಕೆಂದು ತಿಳಿಸಿದರು. ಶಾಸನ ಅಧ್ಯಯನದ ಜೊತೆಗೆ ಶಾಸನ ಸಂಪುಟಗಳೂ ಹೆಚ್ಚಿನ ರೀತಿಯಲ್ಲಿ ಬರಬೇಕೆಂದು ತಿಳಿಸಿದರು. ೩೧ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಮಾಡಿದ ಇತಿಹಾಸ ಅಕಾದೆಮಿಗೆ ಕೃತಜ್ಞತೆ ಸಲ್ಲಿಸಿದರು.

ವಿಶೇಷ ಆಹ್ವಾನಿತರಾಗಿದ್ದ **ಶ್ರೀ ವೇಮುಗಲ್ ಸೋಮಶೇಖರ್** ಹಿರಿಯ ವಿದ್ವಾಂಸರು ಬೆಂಗಳೂರು ಇವರು ಅಕಾದೆಮಿಯಲ್ಲಿ ಸಕ್ರಿಯವಾಗಿ ಪ್ರಾರಂಭದಿಂದ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಲ್ಲದೆ. ಇತಿಹಾಸ, ಶಾಸನ, ಸಮಾಜಿಕ ಸಂಶೋಧನೆಗಳನ್ನು ಕೈಗೊಂಡವರು ಇವರನ್ನು ವಿಶೇಷವಾಗಿ ೩೧ನೇ ವಾರ್ಷಿಕ ಸಮ್ಮೇಳನದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಾಕೊಂಡಾರೆಡ್ಡಿ ಅವರು ವಹಿಸಿದ್ದರು. ಕಾರ್ಯಕ್ರಮವನ್ನು ಪ್ರೊ. ಜಿ.ಕೆ. ದೇವರಾಜ ಸ್ವಾಮಿ ಅವರು ನಿರ್ವಹಿಸಿದರು.

ಅಕಾದೆಮಿಯ ಹಿಂದಿನ ಸಮ್ಮೇಳನ ೨೦೧೬-೧೭ನೇ ಶೈಕ್ಷಣಿಕ ಸಾಲಿನಲ್ಲಿ ಸದಸ್ಯರು ಪಿಎಚ್‌ಡಿ/ಡಿ.ಲಿಟ್ ಪದವಿ ಪಡೆದು ಗೌರವಕ್ಕೆ ಪಾತ್ರರಾದ ಸದಸ್ಯಗಣ್ಯರಿಗೆ ಗಣ್ಯ ಅತಿಥಿಗಳು ಸನ್ಮಾನಿಸಿದರು. ಸನ್ಮಾನಕ್ಕೆ ಪಾತ್ರರಾದ ಪ್ರತಿ ಅಭ್ಯರ್ಥಿಗೂ ತಲಾ ರೂ. ೫೦೦/-ರನ್ನು ನೀಡಿ ಪ್ರಶಸ್ತಿ ಪತ್ರದೊಂದಿಗೆ ಗೌರವಿಸಲಾಯಿತು. ಇದಕ್ಕಾಗಿ ತುಮಕೂರಿನ ಶ್ರೀ ರಾಜನ್ ಅವರು ಅಕಾದೆಮಿ ಮೇಲಿನ ಪ್ರೀತಿಯಿಂದ ಅಕಾದೆಮಿಯಲ್ಲಿ ಪುದುವಟ್ಟನ್ನು ಸ್ಥಾಪಿಸಿರುವುದನ್ನು ಶ್ಲಾಘಿಸಬಹುದಾಗಿದೆ.

ಉದ್ಘಾಟನಾ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಅತಿಥಿಗಳಿಗೆ ಹಾಗೂ ಎಲ್ಲರಿಗೂ ಪ್ರಧಾನಕಾರ್ಯದರ್ಶಿ ಪ್ರೊ. ಜಿ.ಕೆ. ದೇವರಾಜಸ್ವಾಮಿ ಅವರು ವಂದನಾರ್ಪಣೆ ಮಾಡುವ ಮೂಲಕ ಉದ್ಘಾಟನಾ ಕಾರ್ಯಕ್ರಮ ಮುಕ್ತಾಯವಾಯಿತು.

ಪಿ.ಎಚ್‌ಡಿ ಮತ್ತು ಡಿ.ಲಿಟ್ ಪದವಿ ಪಡೆದ ಸನ್ಮಾನಿತರು

ಕ್ರ. ಸಂ.	ಪಿಎಚ್.ಡಿ./ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯವರ್ಷ
೧	ಶಿವರಾಜ ನಾಗಪ್ಪ, ಯತಗಲ್	ಡಾ. ಕೃಷ್ಣ ನಾಯಕ	ಬರಗೂರು ರಾಮಚಂದ್ರಪ್ಪ ಅವರ ಕಥೆ ಕಾದಂಬರಿಗಳಲ್ಲಿ ಮಹಿಳಾ ಸಂವೇದನೆ	ಕನ್ನಡ ವಿಶ್ವವಿದ್ಯಾಲಯ ಧಾರವಾಡ ೨೦೧೭
೨	ಟಿ.ಎಲ್. ಜಗದೀಶ್	ಡಾ. ಎಂ.ಜಿ. ಮಂಜುನಾಥ	ಶಾಸನಗಳ ಹಿನ್ನೆಲೆಯಲ್ಲಿ ಮೈಸೂರು: ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೧೫೦೦ರಿಂದ ೧೮೦೦ರವರೆಗೆ)	ಮೈಸೂರು ವಿ.ವಿ ೨೦೧೬
೩	ಗಾಯಿತ್ರಿ ಆರ್. ಕೊಟೆಣ್ಣವರ	ಡಾ.ವೆಂಕೋಬ ನಾರಯಣಪ್ಪ	Astudy of attitude towards Secondary teaching profession in relation to secondary school teachers articipation in school administration adjustment and personality	ಅಕ್ಕಮಹಾದೇವಿ ವಿ.ವಿ. ವಿಜಯಪುರ ೨೦೧೭
೪	ಬಸವರಾಜ ಜಿ. ಧಾರವಾಡ		A Study of school organisational climate i relation to teacher efficacy and academic achievement of secondary school students in Belgaum District	ದಕ್ಷಿಣ ಭಾರತ್ ಹಿಂದಿ ಪ್ರಚಾರ್ ಸಭಾ, ಮದ್ರಾಸ್ ೨೦೧೭
೫	ಮಂಜಣ್ಣ ಪಿ.ಬಿ.	ಡಾ. ಎಸ್.ವೈ. ಸೋಮಶೇಖರ್	ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ	ಕನ್ನಡ ವಿ.ವಿ., ಹಂಪಿ ೨೦೧೭
೬	ದೊಡ್ಡಪ್ಪ ಬಿ.ಎನ್.	ಡಾ. ಎಸ್.ಜಿ. ಸಾಮಕ್	The Temple Administration in Malnad Region during 1500-1800	ದ್ರಾವಿಡ ವಿ.ವಿ. ಕುಪ್ಪಂ ೨೦೧೭
೭	ರವೀಶ ಜಿ.ಎನ್.	ಡಾ. ವಾಸುದೇವ ಬಡಿಗೇರ	ತುಮಕೂರು ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ	ಕನ್ನಡ ವಿ.ವಿ., ಹಂಪಿ ೨೦೧೭
೮	ವಿರೂಪಾಕ್ಷಿ ಎನ್.ಬಿ.	ಡಾ. ಎಫ್.ಟಿ. ಹಳ್ಳಿಕೇರಿ	ಕರ್ನಾಟಕ-ಆಂಧ್ರಪ್ರದೇಶದ ಗಡಿನಾಡ ಕುರುಬ ಸಮುದಾಯ: ಸಾಂಸ್ಕೃತಿಕ ಅಧ್ಯಯನ	ಕನ್ನಡ ವಿ.ವಿ., ಹಂಪಿ ೨೦೧೭

೯	ಮಂಜುನಾಥ್ ಪಾಟಿಲ್	ಡಾ. ವಾಸುದೇವ ಬಡಿಗೇರ	ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ	ಕನ್ನಡ ವಿ.ವಿ. ಹಂಪಿ ಹಂಪಿ, ೨೦೧೭
೧೦	ಬಸವರಾಜ ಶಿ ಅನಗವಾಡಿ	ಡಾ. ಎಸ್. ಸಿ. ಪಾಟೀಲ	ಬಸವಣ್ಣನವರನ್ನು ಕುರಿತ ವರ್ಣಚಿತ್ರಕಲೆ: ವಿಶ್ಲೇಷಣಾಧ್ಯಯನ	ಕನ್ನಡ ವಿ.ವಿ. ಹಂಪಿ ೨೦೧೭
೧೧	ಲೋಕೇಶ್ ಆರ್.	ಡಾ. ಬಿ.ಪಿ. ಆಶಾಕುಮಾರಿ	ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ	ಮೈಸೂರು ವಿ.ವಿ. ೨೦೧೭
೧೨	ಶ್ರೀನಿವಾಸ ಬಿ.ಕೆ.	ಪ್ರೊ. ಕೃಷ್ಣಮೂರ್ತಿ ಹನೂರು	ಕೆ. ಮರುಳ ಸಿದ್ದಪ್ಪ ಅವರ ಸಾಹಿತ್ಯ	ಮೈಸೂರು ವಿ.ವಿ. ೨೦೧೭
೧೩	ಸುರೇಶ್‌ಗೌಡ ಪಿ.ಗೌಡರ	ಡಾ. ಶಿವಾನಂದ ಕೆಳಗಿನಮನಿ	ಬೇಂದ್ರೆ ಕಾವ್ಯದಲ್ಲಿ ದೇಸಿನೆಲೆಗಳು	ಕುವೆಂಪು ವಿ.ವಿ. ೨೦೧೬
೧೪	ಶಿಲ್ಪ ಎಸ್.	ಡಾ. ಎಂ.ಜಿ. ಮಂಜುನಾಥ್	ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರ: ಸಾಂಸ್ಕೃತಿಕ ಅಧ್ಯಯನ	ಮೈಸೂರು ವಿ.ವಿ. ೨೦೧೭
೧೫	ಮುನಿರಾಜು ಎಸ್.	ಡಾ. ಕೆ. ಮೋಹನ್ ಕೃಷ್ಣ ರೈ	ವಸಾಹತು ಕರ್ನಾಟಕದ ಕಂಟೋನ್ಮೆಂಟುಗಳು – ಸಾಮಾಜಿಕ ಆರ್ಥಿಕ ಹಾಗೂ ಮಿಲಿಟರಿ ನೆಲೆಗಳ ಅಧ್ಯಯನ	ಕನ್ನಡ ವಿ.ವಿ. ಹಂಪಿ ೨೦೧೭
೧೬	ಡಾ. ಮಹೇಂದ್ರ ಕುಮಾರ್	ಡಾ. ಎ.ಎಸ್. ಪ್ರಭಾಕರ್	ಇರುಳಿಗರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಒಂದು ಅಧ್ಯಯನ ರಾಮನಗರ ಜಿಲ್ಲೆ ಅನುಲಕ್ಷಿಸಿ	ಕನ್ನಡ ವಿವಿ, ಹಂಪಿ ಹಂಪಿ ೨೦೧೭
೧೭	ಡಾ. ಸಂಧ್ಯಾ ವಿ.	ಡಾ.ಸಬೀಹ ಭೂಮಿಗೌಡ	ಆಧುನಿಕ ಪೂರ್ವಸಾಹಿತ್ಯಕ್ಕೆ ಕರ್ನಾಟಕದ ಅರಸಿಯರ ಕೊಡುಗೆ	ಮಂಗಳೂರು ವಿ.ವಿ. ೨೦೧೭
೧೮	ಡಾ. ಸಂದೀಪ್ ವಿ.	ಡಾ. ಸುಚೇತನ ನವರತ್ನ	ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯ ಪ್ರತಿನಿಧಿಕರಣ	ಕನ್ನಡ ವಿವಿ ಹಂಪಿ ಹಂಪಿ, ೨೦೧೭
೧೯	ಡಾ. ಮಲ್ಲಿಕಾರ್ಜುನಪ್ಪ ಜೆ.ಕೆ.	ಡಾ. ಕೊಟ್ರೇಶ್	ಹರಪ್ಪನಹಳ್ಳಿ ಪಾಳೇಗಾರರು ಒಂದು ಐತಿಹಾಸಿಕ ಅಧ್ಯಯನ	ಕನ್ನಡ ವಿವಿ, ಹಂಪಿ ೨೦೧೭
೨೦	ಡಾ. ಸಣ್ಣಪಾಲಯ್ಯ	ಡಾ. ಎಫ್.ಟಿ. ಹಳ್ಳಿಕೇರಿ	ಸರೂರು ಹಾಲುಮತ ಸಂಪ್ರದಾಯ ಸಾಂಸ್ಕೃತಿಕ ಅಧ್ಯಯನ	ಕನ್ನಡ ವಿವಿ, ಹಂಪಿ ೨೦೧೭
೨೧	ಡಾ. ಬಿ. ಕೃಷ್ಣಪ್ಪ	ಡಾ. ಕೆ. ಪ್ರಭು	ಹಿರಿಯೂರು ತಾಲೂಕಿನ ಇತಿಹಾಸ ಮತ್ತು ಸಂಸ್ಕೃತಿ	ಮೈಸೂರು ವಿ.ವಿ. ೨೦೧೭

೩೧ನೇ ವಾರ್ಷಿಕ ಸಮ್ಮೇಳನದಲ್ಲಿ ನಡೆದ ಗೋಷ್ಠಿಗಳಲ್ಲಿ ಅಧ್ಯಕ್ಷತೆ ವಹಿಸಿದ್ದವರು ಹಾಗೂ ನಿರ್ವಹಣೆ ಮಾಡಿದವರು ಗೋಷ್ಠಿಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಗೋಷ್ಠಿಗಳ ಅಧ್ಯಕ್ಷತೆ: ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಎಫ್.ಟಿ. ಹಳ್ಳಿಕೇರಿ ಡಾ. ರವೀಂದ್ರನಾಥ್, ಡಾ. ಬಿ. ರಾಜಶೇಖರಪ್ಪ, ಡಾ. ಲಲಿತಾಂಬ, ಡಾ. ಅಮರೇಶ್‌ಯತಗಲ್ ಡಾ. ಗಣಪತಿ ಗೌಡ, ಡಾ. ಕೊಟ್ರೇಶ್ ಎಂ., ಡಾ. ಪೂಜಾರಹಳ್ಳಿ ವಿರೂಪಾಕ್ಷಿ, ಡಾ. ಎಚ್.ಎಂ. ಉಷಾರಾಣಿ, ಡಾ. ಕಲವೀರ ಮನ್ವಾಚಾರ್, ಡಾ. ಎಂ.ಜಿ. ಮಂಜುನಾಥ್, ಡಾ. ಶಿವರುದ್ರಸ್ವಾಮಿ, ಎಸ್.ಎಂ. ಪ್ರೊ. ಮುರುಗೇಶಿ, ಪ್ರೊ. ಆನಂದ ಆರ್., ಅವರುಗಳು ಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು.

ಗೋಷ್ಠಿಗಳ ನಿರ್ವಹಣೆ: ಡಾ. ಸಂಧ್ಯಾ ವಿ. ದತ್ತ ಪ್ರಸನ್ನ, ಶ್ರೀ ಶೈಲ ಮನಗುತ್ತಿ, ಮಹಂತೇಶ್ ಕುತನಿ, ತಿಪ್ಪೇಶ್, ಎಚ್.ಎಂ., ಮಂಜನಾಯ್ಕ ಆರ್. ಡಾ. ಪದ್ಮಜಾ ದೇಸಾಯಿ, ಲೋಕಣ್ಣ ಭಜಂತ್ರಿ, ಅಕ್ತರ್‌ಖಾನಂ ಹೆಚ್.ಎಸ್., ಡಾ. ಮಂಜುಳಾ ಆಚಾರಿ ರೇವಣಸಿದ್ಧಯ್ಯ ಕೆ, ಸತೀಶ್‌ಕುಮಾರ್ ಬಿ.ವಿ. ಡಾ. ಸನ್ಮತಿ ಕುಮಾರ್ ಅವರುಗಳು ಗೋಷ್ಠಿ ನಿರ್ವಹಣೆ ಮಾಡಿದರು.

ಸಮಾರೋಪ ಸಮಾರಂಭ

ದಿನಾಂಕ : ೩೦-೧೦-೨೦೧೭ ಸೋಮವಾರ ಸಂಜೆ ೪.೩೦ಕ್ಕೆ ಸಮಾರೋಪ ಸಮಾರಂಭವು ಕೊಪ್ಪಳದ ಗವಿಸಿದ್ದೇಶ್ವರ ಮಹಾವಿದ್ಯಾಲಯದ ಸಭಾಂಗಣದಲ್ಲಿ ಏರ್ಪಟ್ಟಿತ್ತು. ಕುಮಾರಿ ವಿಭಾ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಬಿ.ಸಿ ಪಾಟೀಲ್ ಟ್ರಸ್ಟ್ ಕೊಪ್ಪಳದ ಶ್ರೀ ಸಿ.ಬಿ. ಪಾಟೀಲ ಪುರಾತತ್ವವಿಧರು ಅವರು ಪ್ರಾಸ್ತಾವಿಕ ನುಡಿಗಳೊಂದಿಗೆ ಅತಿಥಿಗಳಿಗೆ ಸ್ವಾಗತ ಕೋರಿದರು. ಸಮರೋಪ ಭಾಷಣ ಮಾಡಲು ಆಗಮಿಸಿದ್ದ ಡಾ. ಬಿ.ರಾಜಶೇಖರಪ್ಪನವರು ಸಂಶೋಧಕರು, ನಿವೃತ್ತ ಪ್ರಾಧ್ಯಾಪಕರು ಇವರು ಸಮ್ಮೇಳನದ ವ್ಯವಸ್ಥೆ ಹಾಗೂ ಪ್ರಬಂಧಗಳ ವಿಷಯಗಳ ಮೇಲೆಬೆಳಕು ಚೆಲ್ಲಿದರು. ಹಾಗೂ ಅಕಾದೆಮಿಯ ಒಟ್ಟು ಕಾರ್ಯವನ್ನು ಶ್ಲಾಘಿಸಿದರು.

ಮುಖ್ಯ ಅತಿಥಿಗಳಾಗಿ ಡಾ. ಎ.ವಿ. ಬಳ್ಳೊಳ್ಳಿ ಪ್ರಸಿದ್ಧ ಮಕ್ಕಳ ತಜ್ಞರು ಇವರು ಭಾಗವಹಿಸಿ ಅಕಾದೆಮಿಯ ಸಮ್ಮೇಳನದ ವ್ಯವಸ್ಥೆ ಹಾಗೂ ಸಂಶೋಧನಾ ಪ್ರಬಂಧಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಪ್ರೊ. ಮನೋಹರ ದಾಧ್ಮಿ. ಪ್ರಾಂಶುಪಾಲರು ಶ್ರೀ ಗವಿಸಿದ್ಧೇಶ್ವರ ಪದವಿ ಮಹಾವಿದ್ಯಾಲಯ, ಇವರು ತಮ್ಮ ಸಂಸ್ಥೆಯ ಆಶ್ರಯದಲ್ಲಿ ಕಾರ್ಯಕ್ರಮ ವಿಶೇಷವಾಗಿತ್ತು ಎಂದು ಸಂತಸ ವ್ಯಕ್ತಪಡಿಸಿದರು. ಸೋಮಲಾಪುರ ಮಲ್ಲಿಕಾರ್ಜುನ ಅವರು ಭಾಗವಹಿಸಿದ್ದರು. ಇವರು ಆಡಳಿತಾಧಿಕಾರಿಯಾಗಿದ್ದು. ನಮ್ಮ ಸಂಸ್ಥೆಯಲ್ಲಿ ಇಂತಹ ಕಾರ್ಯಕ್ರಮ ವ್ಯವಸ್ಥಿತ ಹಾಗೂ ಜ್ಞಾನ ವರ್ಧಕವಾಗಿರುವುದು ಕಾಲೇಜಿಗೆ ಬಂದು ಘನತೆಯನ್ನು ತಂದಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಬಿ.ಸಿ. ಪಾಟೀಲ ಟ್ರಸ್ಟ್‌ನ ಶ್ರೀ ಸಿ.ಬಿ. ಪಾಟೀಲ್ ಅವರು ಎಲ್ಲಾ ಕಾರ್ಯಕ್ರಮದ ರೂವಾರಿಗಳಾಗಿದ್ದರು. ತಮ್ಮ ತಾಯಿ ಸುಂಮಗಲಾ ಪಾಟೀಲ್ ಅವರ ಹೆಸರಿನಲ್ಲಿ ಪುದುವಟ್ಟು ಸ್ಥಾಪಿಸುವುದಾಗಿ ತಿಳಿಸಿದರು. ಅದು ಮಹಿಳೆಯರಿಗೆ ಮಾತ್ರವಾಗಿದ್ದು. ಇತಿಹಾಸ, ಸಂಸ್ಕೃತಿ ಸಂಬಂಧಿಸಿದ ಸಂಶೋಧನೆಗೆ ಪ್ರಶಸ್ತಿಯಾಗಿ ರೂ. ೧೦, ೦೦೦/– ನಗದನ್ನು ಕೊಡುವುದಾಗಿ ವಿವರಿಸಿದರು. ೨೦೧೭ನೇ ಸಾಲಿನ ಮೊದಲ ಪ್ರಶಸ್ತಿಯನ್ನು ಸಿ.ಬಿ. ಪಾಟೀಲರು ಮೊದಲನೆಯದಾಗಿ **ಶ್ರೀಮತಿ ಸೀತಾಲಕ್ಷ್ಮಿರಾವ್**. ಬೆಂಗಳೂರು ಅವರಿಗೆ ಕೊಟ್ಟು ಅತಿಥಿಗಳೊಂದಿಗೆ ಗೌರವಿಸಿದರು.

ಅಕಾದೆಮಿಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವರಿಗೆ ಸಿ.ಬಿ. ಪಾಟೀಲ್ ಅವರು ಗೌರವಿಸಿದರು. ಹಾಗೆಯೇ ಅಕಾದೆಮಿಯ ಪರವಾಗಿ ಸಮ್ಮೇಳನದಲ್ಲಿ ಕೆಲಸಗಳನ್ನು ಮಾಡಿದ, ಅಡಿಗೆ ಮಾಡಿದವರೆಲ್ಲರನ್ನು ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ದೇವರಕೊಂಡಾರೆಡ್ಡಿ ಅವರು ಸಮ್ಮೇಳನದ ಯಶಸ್ಸಿಗೆ ಕಾರಣರಾದವರಿಗೆ ಕೃತಜ್ಞತೆ ಸಲ್ಲಿಸಿದರು. ಸದರಿ ಮಠ, ಸಂಸ್ಥೆಗಳಿಗೆ ಕೃತಜ್ಞತೆ ಸಲ್ಲಿಸಿದರು. ಶ್ರೀ ಸಿ.ಬಿ. ಪಾಟೀಲ ಅವರ ಯೋಜನೆಯಿಂದ ಕಾರ್ಯಕ್ರಮ ಯಶಸ್ವಿಯಾಯಿತೆಂದು ಪಾಟೀಲ್ ಅವರನ್ನು ಗೌರವಿಸಲಾಯಿತು. ಅಕಾದೆಮಿಯ ಪರವಾಗಿ ಪ್ರೊ. ದೇವರಾಜಸ್ವಾಮಿ ಪ್ರಧಾನ ಕಾರ್ಯದರ್ಶಿ ಅವರು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದವರೆಲ್ಲರಿಗೂ ಅತಿಥಿಗಳಿಗೂ ವಂದನೆಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳನ್ನು ಸನ್ಮಾನಿಸಲಾಯಿತು. ಇಲ್ಲಿಗೆ ೩೦ನೇ ವಾರ್ಷಿಕ ಸಮ್ಮೇಳನವು ಮುಕ್ತಾಯವಾಯಿತು.

೨೦೧೭-೧೮ನೇ ಸಾಲಿನ ೩೧ನೇ ಸರ್ವಸದಸ್ಯರ ಸಭೆಯ ವರದಿ

ದಿನಾಂಕ : ೨೮-೧೦-೨೦೧೭ರ ಭಾನುವಾರದಂದು ಸಂಜೆ ೬.೦೦ ಗಂಟೆಗೆ ಅಕಾದೆಮಿಯ ೩೧ನೇ ವಾರ್ಷಿಕ ಸರ್ವಸದಸ್ಯರ ಸಭೆಯು, ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯದ ಸಭಾಂಗಣ, ಕೊಪ್ಪಳದಲ್ಲಿ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಕಾದೆಮಿಯ ಎಲ್ಲಾ ಸದಸ್ಯರಿಗೂ, ದಿನಾಂಕ: ೧-೧೦-೨೦೧೭ರ ಸುತ್ತೋಲೆಯಲ್ಲಿ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರವನ್ನು ಮತ್ತು ಕಾರ್ಯಸೂಚಿಯನ್ನು (agenda) ಅಂಚೆ ಮೂಲಕ ತಿಳಿಸಲಾಗಿತ್ತು. ಕಾರ್ಯಸೂಚಿಯಂತೆ ಜರುಗಿದ ಸಭೆಯ ನಡಾವಳಿಗಳನ್ನು ಮತ್ತು ವರದಿಯನ್ನು ಇಲ್ಲಿ ದಾಖಲಿಸಿದೆ.

ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರನ್ನು ಸಭೆಗೆ ಆಹ್ವಾನಿಸಿ, ಎಲ್ಲರೂ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಶ್ರೀ ಜಿ.ಕೆ. ದೇವರಾಜಸ್ವಾಮಿಯವರು, ಸಭೆಗೆ ವಿನಂತಿಸಿಕೊಂಡರು. ನಂತರ ಸಭೆಯ ಅಧ್ಯಕ್ಷತೆಯನ್ನುವಹಿಸಿಕೊಂಡು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡುವಂತೆ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿಯವರನ್ನು ಮತ್ತು ಹಾಜರಿದ್ದ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರನ್ನು ವೇದಿಕೆಗೆ ಆಹ್ವಾನಿಸಿದರು. ಎಲ್ಲಾ ಸದಸ್ಯರಿಗೂ ೨೦೧೬-೧೭ನೇ ಸಾಲಿನ ವಾರ್ಷಿಕ ವರದಿ, ಪರಿಶೋಧಿತ ಲೆಕ್ಕ ಪತ್ರಗಳ ವರದಿ, ಅಂದಾಜು ಆಯ-ವ್ಯಯ ಪತ್ರಗಳನ್ನು ನೀಡಲಾಗಿತ್ತು. ಸಭೆಯಲ್ಲಿ ೧೦೮ ಸದಸ್ಯರು ಉಪಸ್ಥಿತರಿದ್ದರು.

ಸಭೆಯ ನಡಾವಳಿಗಳು

೧. ಅಗಲಿದ ಸದಸ್ಯರಿಗೆ ಸಂತಾಪ ಸೂಚಕ ಮತ್ತು ಶ್ರದ್ಧಾಂಜಲಿ ಸಮರ್ಪಣೆ :

ಕಳೆದ ಸರ್ವಸದಸ್ಯರ ಸಭೆಯ ನಂತರ ಈವರೆಗೆ ನಮ್ಮನ್ನು ಅಗಲಿರುವ ಅಕಾದೆಮಿಯ ಸದಸ್ಯರು ಹಾಗೂ ರಾಷ್ಟ್ರದ/ನಾಡಿನ ಗಣ್ಯವ್ಯಕ್ತಿಗಳ ನಿಧನಕ್ಕಾಗಿ ಸಭೆಯು ಒಂದು ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಿ ಮೃತರ ಆತ್ಮಕ್ಕೆ ಸದ್ಗತಿ ಕೋರಲಾಯಿತು. ಪ್ರೊ. ದೇವರಾಜಸ್ವಾಮಿಯವರು ಅಗಲಿದ ಸದಸ್ಯರ ಮತ್ತು ಗಣ್ಯವ್ಯಕ್ತಿಗಳ ಹೆಸರುಗಳನ್ನು ಸಭೆಗೆ ಪ್ರಾರಂಭದಲ್ಲಿ ತಿಳಿಸಿದ್ದರು.

ಅಕಾದೆಮಿಯ ಸದಸ್ಯರುಗಳು

೧. ಶ್ರೀ ಕಲ್ಲನಗೌಡ ತಿಪ್ಪನಗೌಡ ಪಾಟೀಲ, ಬೆಳದದಿ, ಗದಗ., ೨. ಡಾ. ಚನ್ನಕ್ಕ ಪಾವಟೆ, ಧಾರವಾಡ, ೩. ಶ್ರೀ ತೇಲಿ.ಎಸ್. ಎ. ಸಿಂಧಗಿ, ವಿಜಯಪುರ, ೪. ಶ್ರೀ ದೇವೇಂದ್ರ ಮಾಧವನವರ್-ಹೊಳೆ ಆಲೂರು, ಗದಗ, ೫. ಶ್ರೀ ಸುಬ್ರಮಣ್ಯಂ, ಬೆಂಗಳೂರು, ೬. ಶ್ರೀ ಚಂದ್ರಪ್ಪ ಎಚ್.ಬಿ. ಬಸವಾಪಟ್ಟಣ, ದಾವಣಗೆರೆ, ೭. ಶ್ರೀ ಜಯಪ್ರಕಾಶ ದತ್ತಾತ್ರೇಯ ಕಬ್ಬೂರ, ಕಲ್ಲೋಳಿ, ಬೆಳಗಾವಿ, ೮. ಶ್ರೀ ಎಂ. ಚಂದ್ರಪ್ಪ, ತುಮಕೂರು.

೧. ರಾಷ್ಟ್ರದ/ನಾಡಿನ ಗಣ್ಯ ವ್ಯಕ್ತಿಗಳು

೧. ಸತೀಶ್ ಚಂದ್ರ ಇತಿಹಾಸಕಾರರು, ೨. ಗಿರಿಜಾದೇವಿ ಸಂಗೀತಕಾರರು

೨. ೨೦೧೬-೧೭ನೇ ಸಾಲಿನ ವಾರ್ಷಿಕ ವರದಿ ವಾಚನ ಮತ್ತು ಅಂಗೀಕಾರ

ಶ್ರೀ ದೇವರಾಜಸ್ವಾಮಿಯವರು ಸಭೆಗೆ, ಸರ್ವಸದಸ್ಯರ ಸಭೆಯ ದಿನಾಂಕ ೦೧-೧೦-೨೦೧೭ರ ತಿಳುವಳಿಕೆ ಪತ್ರವನ್ನು ಮತ್ತು ಕಾರ್ಯಸೂಚಿಯನ್ನು ಸಭೆಗೆ ವಾಚನ ಮಾಡಿದರು. ಅಕಾದೆಮಿಯು ೨೦೧೬-೧೭ರಲ್ಲಿ ಕೈಗೊಂಡ ಪ್ರಮುಖವಾದ ಕಾರ್ಯ ಚಟುವಟಿಕೆಗಳನ್ನು ಸಭೆಗೆ ತಿಳಿಸಿ, ಸದಸ್ಯರು ಕೇಳಿದ ಮಾಹಿತಿಯನ್ನು ಮತ್ತು ಸಮಜಾಯಿಶಿಯನ್ನು

ನೀಡಿದ ನಂತರ, ಸಭೆಯು ವಾರ್ಷಿಕ ವರದಿಯನ್ನು ಅಂಗೀಕರಿಸಿತು. ಶ್ರೀ ಎಂ.ಎನ್. ಪ್ರಭಾಕರ್, ಮೈಸೂರು ಇವರ ವಾರ್ಷಿಕ ವರದಿಯ ಅಂಗೀಕಾರಕ್ಕೆ ಒಪ್ಪಿಗೆ ಸೂಚಿಸಿದರು. ಶ್ರೀ ಸುಮತೀಂದ್ರ ನಾಡಿಗ್, ಸಂತೆಬೆನ್ನೂರು ಇವರು ಅನುಮೋದಿಸಿದರು.

ಇದೇ ಸಂದರ್ಭದಲ್ಲಿ ಇತರ ಜಿಲ್ಲೆಗಳಲ್ಲಿ ಆಯೋಜಿಸಿದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಬಗ್ಗೆ, ಸದಸ್ಯರು ಒಂದು ವರದಿಯನ್ನು ಮತ್ತು ಕೆಲವು ಛಾಯಾಚಿತ್ರಗಳನ್ನು ತಪ್ಪದೇ ಅಕಾದೆಮಿಗೆ ಕಳುಹಿಸಿದಲ್ಲಿ, ಅವೆಲ್ಲವನ್ನೂ ಪ್ರಕಟಿಸಲು ಸಾಧ್ಯವಾಗುವುದೆಂದು ತಿಳಿಸಿ, ಕಾರ್ಯಕ್ರಮಗಳ ವೈವಿಧ್ಯತೆಯನ್ನು ಗುರುತಿಸಬಹುದೆಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

೩. ೨೦೧೬–೧೧ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ ಅಂದಾಜು ಆಯವ್ಯಯ ಪಟ್ಟಿ ಮತ್ತು ಸ್ವೀಕಾರ

ಅಕಾದೆಮಿಯ ಸಹ ಕೋಶಾಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಿ.ಎಸ್. ಅವರು ಅಕಾದೆಮಿಯ ೨೦೧೬–೧೭ರ ಅದಾಯದ ಮೂಲಗಳು ಮತ್ತು ಖರ್ಚು ವೆಚ್ಚಗಳ ಬಗ್ಗೆ ದೀರ್ಘವಾದ ವಿವರಗಳನ್ನ ನೀಡಿ, ದಾನಿಗಳ ಪಟ್ಟಿಯನ್ನು ಸಹ ಸಭೆಗೆ ತಿಳಿಸಿದರು. ದಾನದ ಸ್ವರೂಪದಲ್ಲಿ ಬರುತ್ತಿರುವ ಆದಾಯದ ಮೂಲವನ್ನು ಮುಂಬರುವ ವರ್ಷಗಳಲ್ಲಿ ಹೆಚ್ಚಿಸಬೇಕಾದ ಅವಶ್ಯಕತೆಯನ್ನು ಸಭೆಗೆ ಮನದಟ್ಟುಮಾಡಿದರು. ಹಾಗೆಯೇ ದಾನ ನೀಡುವಾಗ ದಾನಿಗಳ ಪ್ಯಾನ್ ಸಂಖ್ಯೆಯನ್ನು ಪಡೆಯದೇ ಇದ್ದರೆ ೮೦ಜಿ ಸೌಲಭ್ಯ ಪಡೆಯಲು ತಡವಾಗಬಹುದೆಂದು ತಿಳಿಸಿದರು.

೨೦೧೬–೧೭ರ ಸಾಲಿನಲ್ಲಿ ಇತಿಹಾಸ ದರ್ಶನಕ್ಕೆ ಮತ್ತು ವಾರ್ಷಿಕ ಸಮ್ಮೇಳನಕ್ಕೆ ಐ.ಸಿ.ಎಚ್.ಆರ್. ನವದೆಹಲಿ ಸಂಸ್ಥೆಗೆ ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಿದ್ದು ಅರ್ಜಿಗಳು ಎಲ್ಲಾ ರೀತಿಯಿಂದ ಸಮರ್ಪಕವಾಗದ್ದರೂ ಸಹ, ಐ.ಸಿ.ಎಚ್.ಆರ್., ನವದೆಹಲಿ, ಅನುದಾನ ಬಿಡುಗಡೆ ಮಾಡಲಿಲ್ಲವೆಂದು ತಿಳಿಸಿದರು. ರಾಜ್ಯ ಸರ್ಕಾರದ ಅನುದಾನ ಶೀಘ್ರವಾಗಿ ಬಾರದೆ, ವರ್ಷದ ಅಂತ್ಯದಲ್ಲಿ ಅನುದಾನ ಬಿಡುಗಡೆ ಮಾಡಿದ್ದರಿಂದ ಕಳೆದ ವರ್ಷ ಸಮ್ಮೇಳನದ ವೆಚ್ಚಕ್ಕಾಗಿ ಎಫ್.ಡಿ. ಮೇಲೆ ಸಾಲ ಪಡೆದು, ಖರ್ಚನ್ನು ನಿಭಾಯಿಸಿದ ಬಗ್ಗೆ ಸಭೆಗೆ ತಿಳಿಸಿದರು. ಯಾವ ಖಾತೆಯಲ್ಲೂ ಖರ್ಚು / ವೆಚ್ಚವು ನಿಗದಿತ ಮಿತಿಯಲ್ಲಿದ್ದುದನ್ನು ತಿಳಿಸಿದರು.

ಕಳೆದ ಎರಡು ವರ್ಷಗಳಿಂದ ಅಂಚೆ ವೆಚ್ಚದ ಖರ್ಚು ಏರುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿ Academy website, Whatsapp groupಗಳಾದ ಆಧುನಿಕ ಸಾಧನಗಳ ಉಪಯೋಗ ಮಾಡಿಕೊಂಡು ಖರ್ಚನ್ನು ಕಡಿಮೆಗೊಳಿಸಬಹುದೆಂದು ತಿಳಿಸಿ, ಅಕಾದೆಮಿಯ ಎಲ್ಲಾ ಸದಸ್ಯರೂ ಈ ನಿಟ್ಟಿನಲ್ಲ ಕೈಜೋಡಿಸಬೇಕೆಂದು ಮನವಿ ಮಾಡಿದರು. ಸದಸ್ಯರೆಲ್ಲರೂ ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಿದ ಮಾಹಿತಿಯನ್ನು ಗಮನಿಸುತ್ತಿರಬೇಕೆಂದು ವಿನಂತಿಸಿದರು. ೨೦೧೭–೧೮ರ ಆಯವ್ಯಯ ಪಟ್ಟಿಗಳ ವಿವರ ಮತ್ತು ಕಾರಣಗಳನ್ನು ತಿಳಿಸಿದ ನಂತರ ಸಭೆಯು :–

ಅ) ೨೦೧೬–೧೭ನೇ ಸಾಳಿನ ಪರಿಶೋಧಿತ ಲೆಕ್ಕಪತ್ರಗಳನ್ನು ಅಂಗೀಕರಿಸಬಹುದೆಂದು ಒಮ್ಮತದಿಂದ ಒಪ್ಪಿಗೆ ನೀಡಿತು. ಸೂಚನೆ ಶ್ರೀ ಎಂ.ಎನ್. ಪ್ರಭಾಕರ್, ಮೈಸೂರು ಮತ್ತು ಅನುಮೋದಿಸಿದವರು ಶ್ರೀ ಎಚ್.ಎಸ್. ಉಷಾರಾಣಿ, ಮೈಸೂರು.

ಆ) ೨೦೧೭–೧೮ರ ಆ ವ್ಯಯ ಪಟ್ಟಿಯನ್ನೂ ಸಹ ಸಭೆ ಅಂಗೀಕರಿಸಿತು. ಸೂಚಿಸಿದವರು: ಶ್ರೀ ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ಅನುಮೋದನೆ: ಡಾ. ಎನ್. ಆರ್. ಲಲಿತಾಂಬ, ಬೆಂಗಳೂರು, ಅವರು.

೪. ಲೆಕ್ಕಪರಿಶೋಧಕರನ್ನು ಮುಂದುವರೆಸುವ ಬಗ್ಗೆ

ಮೆಸರ್ಸ್ ಗಣೇಶ್ ಶೆಟ್ಟಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು. ಇವರು ಅಕಾದೆಮಿಯ ಲೆಕ್ಕಗಳನ್ನು ಪರಿಶೋಧಿಸಿ ಸಮಯಕ್ಕೆ ಸರಿಯಾಗಿ (೩೧ಮೇ ೨೦೧೭) ವರದಿ ನೀಡಿದ್ದನ್ನು ಸಭೆಗೆ ತಿಳಿಸಲಾಯಿತು. ಮೆಸರ್ಸ್ ಗಣೇಶ್ ಶೆಟ್ಟಿ ಚಾರ್ಟಡ್ ಅಕೌಂಟ್ಸ್, ಬೆಂಗಳೂರು, ಅವರ ಸೇವೆಯನ್ನೇ ಮುಂದುವರೆಸಲು ಹಾಗೂ ಕಳೆದ ವರ್ಷ ನೀಡಿದ ಸಂಭಾವನೆಯನ್ನೇ ಅವರಿಗೆ ನೀಡಲು ಒಪ್ಪಿಗೆ ನೀಡಿತು. ವಿಷಯ ಸೂಚನೆ: ಶ್ರೀ ಪಿ.ವಿ. ವಿಜಯಕುಮಾರ್, ಅನುಮೋಧನೆ: ಶ್ರೀಮತಿ ಭಾರತಿ.

೫. ಅಕಾದೆಮಿಯಲ್ಲಿರುವ ದತ್ತಿ ವಿವರ ಮತ್ತು ದಾನಿಗಳ ಪಟ್ಟಿ

೨೫ನೇ ಅಕ್ಟೋಬರ್ ೨೦೧೭ರವರೆಗೆ ಅಕಾದೆಮಿಯಲ್ಲಿ ಸ್ಥಾಪಿಸಿದ ವಿವಿಧ ದತ್ತಿಗಳ ಸ್ಥಾಪನೆಯ ದಿನಾಂಕ, ದಾನಿಗಳ ವಿವಿರ, ಅವರ ಆಶಯ, ನಿಧಿಯ ಸ್ವರೂಪ, ಮೊತ್ತ, ಬರುತ್ತಿರುವ ಆದಾಯ ಮತ್ತು ಖರ್ಚು-ವೆಚ್ಚಗಳ ಸಕಲ ವಿವರವನ್ನೂ ಸಭೆಗೆ ಅಂಕಿ, ಅಂಶಗಳ ವಿವರೊಂದಿಗೆ ಮಂಡಿಸಿದರು. ಕಳೆದ ಸಮ್ಮೇಳನ ನಂತರ ಈ ವರೆಗಿನ ದಾನಿಗಳ ವಿವರವನ್ನು ಸಹ ಸಭೆಗೆ ಬಿಡುಗಡೆಮಾಡಿದರು.

೬. ಮಂಡನೆಯಾದ ಠರಾವುಗಳು

ಡಾ. ಜ್ಞಾನಾನಂದ ಇವರು ಮಂಡಿಸಿದ ಠರಾವು ಸಂಕ್ಷಿಪ್ತವಾಗಿ ಇಲ್ಲಿ ಉಲ್ಲೇಖಿಸಲಾಗಿದೆ.

ವಿಷಯ : ಶಿಲ್ಪಗುರುಕುಲಕೇಂದ್ರ ಕಾಲೇಜು, ಕಲಾಗ್ರಾಮ, ಜ್ಞಾನಭಾರತಿ ಅಂಚೆ, ಬೆಂಗಳೂರು-೫೬೦೦೫೬, ಹೀಗೆ ೨೦೧೦ ರಿಂದಲೂ ಸರ್ಕಾರದ ಅನುದಾನದಿಂದ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕದಲ್ಲೇ ಈ ಸಂಸ್ಥೆ ಕರ್ನಾಟಕದ ಸಾಂಪ್ರದಾಯಿಕ ಮರಕೆತ್ತನೆ, ಶಿಲಾ ಮತ್ತು ತಗಡು ಕೆತ್ತನೆ, ಸಾಂಪ್ರದಾಯಿಕ ಪ್ರತಿಮಾಶಿಲ್ಪ (ಬಿ.ಎಫ್.ಎ.) ದೇವಾಲಯ ನಿರ್ಮಾಣ, ಶಿಲ್ಪದ ಪದವೀ ಪಠ್ಯ ಭೋಧನೆ ಹೀಗೆ ಹಲವಾರು ಶಿಸ್ತಿನ ಕೋರ್ಸ್‌ಗಳನ್ನು ನಡೆಸಿಕೊಂಡು ಬರುತ್ತಿರುವ ಪಾರಂಪಾರಿಕ ಏಕೈಕ ಕಾಲೇಜಾಗಿ ಅಸ್ತಿತ್ವದಲ್ಲಿದೆ. ಈ ಕಾರಣದಿಂದ ಈ ಸಂಸ್ಥೆಯನ್ನು ಉಳಿಸಿಕೊಂಡು ಮುಂದುವರೆಸುವ ಯೋಜನೆಗಳನ್ನು ರೂಪಿಸಬೇಕೆಂದು ಮತ್ತು ನೀಡುತ್ತಿರುವ ಅನುದಾನವನ್ನು ಮುಂದುವರೆಸಬೇಕೆಂದು ಮಂಡನೆಯಾದ ಠರಾವು.

ದೀರ್ಘವಾದ ಮತ್ತು ಗಹನವಾಗಿ ಚರ್ಚಿಸಿದ ನಂತರ, ಸರ್ಕಾರದ ಸಂಬಂಧ ಪಟ್ಟ ಇಲಾಖೆಗೆ [ಕನ್ನಡ ಮತ್ತು ಸಂಸ್ಕೃತಿ ಇಲಾಖೆ] ಈ ವಿಷಯದ ಬಗ್ಗೆ ಪತ್ರ ಬರೆಯಲು ಅಧ್ಯಕ್ಷರಿಗೆ ಬಿಡಲಾಯಿತು. ಸೂಚಿಸಿದವರು ಶ್ರೀ ಹಂ.ಗು. ರಾಜೇಶ್. ಅನುಮೋಧಿಸಿದವರು : ಡಾ. ಸಾಮಕ್

೭ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೆ ಬಂದ ಇತರ ವಿಷಯಗಳು:

ಅ) ೨೦೧೮ರಲ್ಲಿ ೩೨ನೇ ವಾರ್ಷಿಕ ಸಮ್ಮೇಳವನ್ನು ನಡೆಸುವ ವಿಷಯ:

೨೦೧೮ರ ಅಕಾದೆಮಿಯ ಸಮ್ಮೇಳನವನ್ನು ನಡೆಸಲು ಶಿವಮೊಗ್ಗ ಮತ್ತು ಶಿವಯೋಗ ಮಂದಿರ, ಬಾದಾಮಿ, ಈ ಎರಡೂ ಕಡೆಗಳಿಂದ ಬೇಡಿಕೆ ಬಂದಿದ್ದವು. ಸರ್ವ ಸದಸ್ಯರ ಸಭೆಯಲ್ಲಿ ಇದನ್ನು ಮಂಡಿಸಿದಾಗ, ವಿವರವಾಗಿ ಚರ್ಚಿಸಿ, ೨೦೧೮ರಲ್ಲಿ ೩೨ನೇ ವಾರ್ಷಿಕ ಸಮ್ಮೇಳನವನ್ನು ಬಾದಾಮಿ ಶಿವಯೋಗ ಮಂದಿರದಲ್ಲಿ ನಡೆಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಆ) ಅಕಾದೆಮಿಯಲ್ಲಿ ದತ್ತಿ ನಿಧಿಗಳನ್ನು ಸ್ಥಾಪಿಸುವ ಬಗ್ಗೆ:

ಅಕಾದೆಮಿಯ ವಾರ್ಷಿಕ ಸಭೆಯಲ್ಲಿ ಕೆಲವು ಸದಸ್ಯರು, ನಿರ್ದಿಷ್ಟ ಮೊತ್ತದ ಪ್ರಶಸ್ತಿ ಮೊತ್ತವನ್ನು ಮಾತ್ರ ವಾರ್ಷಿಕವಾಗಿ ನೀಡಲು ಮುಂದು ಬಂದಾಗ, ಅದನ್ನು ಸಭೆಯಲ್ಲಿ ಚರ್ಚಿಸಲಾಯಿತು. ವಾರ್ಷಿಕ ಪ್ರಶಸ್ತಿ ಮೊತ್ತವನ್ನು ನೀಡುವ ಬದಲು, ಅದಕ್ಕೆ ಸರಿಹೊಂದುವ ಬಡ್ಡಿ ಹಣ ಬರುವಂತೆ, ಮೂಲ ದತ್ತಿಯನ್ನೇ ಸ್ಥಾಪಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

೮. ಅಧ್ಯಕ್ಷರ ಭಾಷಣ:

ಅಕಾದೆಮಿಯ ೩೧ನೇ ಸಮ್ಮೇಳನವನ್ನು ಕೊಪ್ಪಳದಲ್ಲಿ ನಡೆಸುವ ಪ್ರಸ್ತಾವನೆಯು ಶ್ರೀ ಸಿ.ಬಿ. ಪಾಟೀಲರಿಂದ ಅಕ್ಟೋಬರ್ ೨೦೧೬ರಲ್ಲಿ ಬಂದು, ಅವರ ಅನುಪಸ್ಥಿತಿಯಲ್ಲೂ ಎಲ್ಲಾ ತರಹದ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಿದ ಅವರ ಕಾರ್ಯಕ್ಷಮತೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಬಾಳೆಹೊನ್ನೂರು ರಂಭಾಪುರಿ ಜಗದ್ಗುರುಗಳು ಅಕಾದೆಮಿಯ ಮೇಲಿನ ಪ್ರೀತಿ ಮತ್ತು ಗೌರವವನ್ನು ಮುಂದುವರೆಸಿ, ಹದಿಮೂರು ವರ್ಷಗಳಿಂದಲೂ ಇತಿಹಾಸ ದರ್ಶನ ಸಂಪುಟದ ಮುದ್ರಣ ವೆಚ್ಚಾಕ್ಕಾಗಿ ಪ್ರತೀ ವರ್ಷವೂ ರೂ ೨೫.೦೦೦/- ಕರಾರುವಕ್ಕಾಗಿ ನೀಡುತ್ತಿರುವ ಬಗ್ಗೆ ಅಭಿನಂದಿಸಿದರು.

ಅಕಾದೆಮಿಯಲ್ಲಿ ದತ್ತಿನಿಧಿಗಳ ಸಂಖ್ಯೆಯು ಹೆಚ್ಚುತ್ತಿರುವ ಬಗ್ಗೆ ಮಾತನಾಡುತ್ತಾ, ದಾನಿಗಳು ಅಕಾದೆಮಿಯ ಬಗ್ಗೆ ಹೊಂದಿರುವ ನಂಬಿಕೆ, ಮತ್ತು ಮುಕ್ತವಾದ ವ್ಯವಹಾರವೇ ಕಾರಣವೆಂದು ಹೇಳಿ, ದತ್ತಿನಿಧಿ ದಾನಿಗಳನ್ನು ಅಭಿನಂದಿಸಿದರು. ಅಕಾದೆಮಿಯ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರಲ್ಲದೆ, ಹೊರಗಿನಿಂದ ಸಹಕರಿಸುತ್ತಿರುವ

ಶ್ರೀಮತಿ ವೀಣಾ, ಶ್ರೀಮತಿ ಮಧುರಾ, ಶ್ರೀಮತಿ ವರಲಕ್ಷ್ಮೀ, ಮುಂತಾದವರ ಸೇವೆಯನ್ನು ಸ್ಮರಿಸಿದರು. ಇವರಲ್ಲದೆ ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ. ಮನೋಹರ ದಾದ್ಮಿಯವರನ್ನು ಪದವಿ ಪೂರ್ವ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್ ಮತ್ತು ಎರಡೂ ಸಂಸ್ಥೆಗಳ ಅಧ್ಯಾಪಕರ ಹಾಗೂ ಆಡಳಿತ ವರ್ಗದ ಸಹಕಾರವನ್ನು ಸ್ಮರಿಸಿದರು. ಇದಲ್ಲದೆ ಕೊಪ್ಪಳದ ಸಮ್ಮೇಳನದ ಯಶಸ್ಸಿಗೆ ಸಹಕರಿಸಿದ ಡಾ. ಬಳ್ಳುಳ್ಳಿ, ಶ್ರೀ ಸಿ.ಬಿ. ಪಾಟೀಲ್ ಸೋದರರು ಹಾಗೂ ಅವರ ಕುಟುಂಬ ವರ್ಗ, ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಮಲ್ಲಿಕಾರ್ಜುನ ಸೋಮಲಾಪುರ, ಇವರೆಲ್ಲರ ಸಹಕಾರವನ್ನು ಸ್ಮರಿಸಿದರು.

೯. ಕೃತಜ್ಞತೆ:

ಅಕಾದೆಮಿಯ ೩೧ನೇ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ, ಎಲ್ಲಾ ಸದಸ್ಯರಿಗೂ ಸಂತೋಷವಾಗುವಂತೆ ಮೂರೂ ದಿನಗಳ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯ ಕೊಪ್ಪಳ; ಅಲ್ಲಿನ ಅಧ್ಯಾಪಕವರ್ಗ, ಆಡಳಿತವರ್ಗ, ಸಿಬ್ಬಂದಿ ಮತ್ತು ಸ್ವಯಂ ಸೇವಕರಾಗಿ ಬಂದು ಸಹಾಯ ನೀಡಿದ ವಿದ್ಯಾರ್ಥಿ ವೃಂದಕ್ಕೆ ಶ್ರೀ ದೇವರಾಜ ಸ್ವಾಮಿಯವರು ಕೃತಜ್ಞತೆಯನ್ನು ಸಲ್ಲಿಸಿದರು. ಮೂರು ದಿನಗಳ ಊಟೋಪಚಾರದ ಜವಾಬ್ದಾರಿಯನ್ನು ಯಾವ ಲೋಪವೂ ಬಾರದಂತೆ ನಿರ್ವಹಿಸಿದ ಶ್ರೀ ಬಿ.ಸಿ. ಪಾಟೀಲ್ ಟ್ರಸ್ಟ್‌ನ ನಿರ್ವಾಹಕ ಟ್ರಸ್ಟೀ ಶ್ರೀ ಸಿ.ಬಿ. ಪಾಟೀಲ್, ಅವರ ಸಹೋದರರೂ ಹಾಗೂ ಕುಟುಂಬ ವರ್ಗದವರಿಗೂ ಅಭಿನಂದನೆ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಈ ಸಮ್ಮೇಳನಕ್ಕೆ ಆರ್ಥಿಕ ನೆರವನ್ನು ನೀಡಲು ಸಮ್ಮತಿಸಿರುವ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು (ICHR) ನವದೆಹಲಿ, ಮತ್ತು ರಾಜ್ಯ ಪ್ರಾಚ್ಯವಸ್ತು, ಸಂಗ್ರಹಾಲಯಗಳು, ಮತ್ತು ಪಂಪರೆ ಇಲಾಖೆ, ಮೈಸೂರು, ಇವರಿಗೂ ಕೃತಜ್ಞತೆ ತಿಳಿಸಿದರು.

ಕಾರ್ಯಕಾರಿ ಸಮಿತಿ ಸಭೆಗಳು

೨೦೧೭-೧೮ನ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಸಭೆಗಳು ಒಟ್ಟು ೩ ಬಾರಿ ನಡೆದಿದೆ. ಸದಸ್ಯರು ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಖುದ್ದು ಹಾಜರಿದ್ದು ಅಥವಾ ಪತ್ರದ ಮೂಲಕ ಇಲ್ಲದೆ ದೂರವಾಣಿ ಎಸ್.ಎಂ.ಎಸ್. ವಿದ್ಯುನ್ಮಾನ ಟಪಾಲುಗಳ ಮೂಲಕ ಸೂಚನೆ, ಒಪ್ಪಿಗೆಗಳನ್ನು ನೀಡಿ ಅಕಾದೆಮಿಯ ಯಶಸ್ಸಿಗೆ ಸಹಕರಿಸುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು.

ಅಕಾದೆಮಿಯ ಸದಸ್ಯ ಬಲ : ಸಮ್ಮೇಳನದ ಆರಂಭದ ವೇಳೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ಆಜೀವ ಸದಸ್ಯತ್ವ ಹೊಂದಿರುವವರು ಒಟ್ಟು : ೧೯೯೦

ಕ್ಷೇತ್ರಕಾರ್ಯ ಪ್ರವಾಸ : ಕರ್ನಾಟಕ ಇತಿಹಾಸ ಅಕಾದೆಮಿಯ ಬೆಂಗಳೂರಿನ ಸದಸ್ಯರು ಹಾಗೂ ಸದಸ್ಯೇತರರು ದಿನಾಂಕ ೧೪ ರಿಂದ ೧೭ ಜುಲೈ ೨೦೧೮ರಲ್ಲಿ ಒಟ್ಟು ನಾಲ್ಕು ದಿನಗಳ ಪ್ರವಾಸ ಹಮ್ಮಿಕೊಂಡಿದ್ದರು. ಒಟ್ಟು ೨೨ ಜನರು ಪ್ರವಾಸದಲ್ಲಿ ಪಾಲ್ಗೊಂಡಿದ್ದರು. ಶ್ರೀಮತಿ ಡಾ. ಸಂಧ್ಯಾ ವಿ. ಅವರ ನೇತೃತ್ವದಲ್ಲಿ ಪ್ರವಾಸವನ್ನು ಹಾವೇರಿ. ಚೌಡದಾನಪುರ, ಕುರುವತ್ತಿ, ಹಾನಗಲ್ಲು, ಗಳಗನಾಥ, ನದಿಹರಳಹಳ್ಳಿ, ಕಲಕೇರಿ, ಗೆಜ್ಜೆಹಳ್ಳಿ, ಕಾಗಿನೆಲೆ, ಹೆರೂರು ಕದರ ಮಂಡಲಗಿ ಮುಂತಾದ ಸ್ಥಳಗಳಿಗೆ ಹಮ್ಮಿಕೊಳ್ಳಲಾಗಿತ್ತು. ಪ್ರವಾಸದಲ್ಲಿ ಡಾ. ದೇವರಕೊಂಡಾರೆಡ್ಡಿ ಅವರು ಮಾರ್ಗದರ್ಶನ ಹಾಗೂ ದೇವಾಲಯಗಳ ಬಗಗಿನ ಇತಿಹಾಸ, ವಾಸ್ತು ಶಿಲ್ಪ ಮುಂತಾದವುಗಳ ಬಗ್ಗೆ ವಿವರಣೆಯನ್ನು ಆಯಾ ಸ್ಥಳಗಳಲ್ಲಿ ನೀಡಿದರು. ಇದರಿಂದ ಪ್ರವಾಸವು ಜಾನಪ್ರದವೂ ಯಶಸ್ವಿಯೂ ಆಗಿತ್ತು.

WEBSITE : ಅಕಾದೆಮಿಯ ವೆಬ್‌ಸೈಟ್ ನಿರ್ವಹಣೆಯನ್ನು ಶ್ರೀಮತಿ ಸೀತಾಲಕ್ಷ್ಮೀರಾವ್ ಅವರು ನಿರ್ವಹಿಸುತ್ತಿದ್ದು, ಹೊಸ ವೆಬ್‌ಸೈಟ್ ರೂಪಿಸಿದ್ದಾರೆ. ಕಾರಣ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಷಯ ತಲುಪಿಸುವುದರಿಂದ, ವಿಶೇಷವಾಗಿ ರೂಪಿಸಿದೆ. ಇತಿಹಾಸ ದರ್ಶನದ ಈ ವರೆಗಿನ ೩೨ ಸಂಪುಟಗಳ ಎಲ್ಲಾ ಲೇಖನಗಳನ್ನೂ ವೆಬ್‌ಸೈಟ್‌ನಲ್ಲಿ ಹಾಕಿದೆ. ಹೆಸರು, ಊರು, ಹಾಗೂ ವಿಷಯಾಧಾರಿತವಾಗಿ ಹುಡುಕಬಹುದಾಗಿದೆ. ಹಲವಾರು ವಿಷಯ, ಛಾಯಾಚಿತ್ರದಿಂದ ಒಳಗೊಂಡಿದೆ. ಸಂಸ್ಕೃತಿ, ಸಂಶೋಧಕರಿಗೆ ಆಕರಗಳು ಪ್ರಮುಖವಾಗಿ ದೊರೆಯುತ್ತಿದ್ದು. ವಿದ್ವಾಂಸರಿಂದ ಪ್ರಶಂಸೆಗೆ ಪಾತ್ರವಾಗಿದೆ.

Website ನ್ನು ಬದಲಾವಣೆಯೊಂದಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ತಲುಪಿಸುವ ಹೆಚ್ಚಿನ ಯೋಜನೆಯ ಕೆಲಸಗಳು ನಡೆಯುತ್ತಿದೆ. ಈ ವೆಬ್‌ಸೈಟ್‌ಗಾಗಿ ಡಾ. ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಯು ಅಕಾದೆಮಿಯಲ್ಲಿ ರೂ. ೧,೧೦,೦೦೦ಗಳನ್ನು ದತ್ತಿಯನ್ನು ಇಟ್ಟಿದೆ. ಇದರಿಂದ ಬರುವ ಬಡ್ಡಿಯಿಂದ Website ನಿರ್ವಹಣೆ ಮಾಡಲಾಗುತ್ತದೆ.

ಕೃತಜ್ಞತೆಗಳು

ಕರ್ನಾಟಕ ಇತಿಹಾಸ ಅಕಾದೆಮಿಯನ್ನು ಸೋದರ ಸಂಸ್ಥೆ ಎಂಬಂತೆ ಪರಿಗಣಿಸಿ ಸಹಕರಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ೨೦೧೭ರ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಶ್ರಯ ನೀಡಿ ಸಹಕರಿಸಿರುವ ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಹರಿಹರ ಹಾಗೂ ಸಾಹಿತ್ಯ ಸಂಗಮ (ರಿ) ಹರಿಹರ, ದಾವಣಗೆರೆ ಜಿಲ್ಲೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಪಾದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಶ್ರೀ ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಶ್ರೀ ಅಶೋಕ್‌ಕುಮಾರ್, ವಾಗ್ದೇವಿ ಮುದ್ರಣಲಯದ ಶ್ರೀ ಪ್ರಭು ಮತ್ತು ಸಿಬ್ಬಂದಿವರ್ಗ ಬಾ.ರಾ. ಗೋಪಾಲ್ ಕುಟುಂಬ ವರ್ಗ, ಸಮ್ಮೇಳನಾಧ್ಯಕ್ಷರು ಗೌರವ ಸ್ಮರಣ ಫಲಕವನ್ನು ಪ್ರಾಯೋಜಿಸಿರುವ ಶ್ರೀ ಕೆ. ಅಭಿಶಂಕರ ಕುಟಂಬವರ್ಗ, 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿಯನ್ನು ಪ್ರಾಯೋಜಿಸುತ್ತಿರುವ ಬೈಸಾನಿ ಶ್ರೀಮತಿ ರುಕ್ಮಣಮ್ಮ ಶ್ರೀ ರತ್ನಂಶೆಟ್ಟಿ ಟ್ರಸ್ಟ್‌ನವರಿಗೆ ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯ ಸ್ಮರಣ ಫಲಕವನ್ನು ಪ್ರಾಯೋಜಿಸುತ್ತಿರುವ ಶ್ರೀ ವೇಮಗಲ್ ಸೋಮಶೇಖರ್ ಪಿ.ಎಚ್.ಡಿ. ಪದವೀದರರಿಗೆ ಉತ್ತೇಜನ ನೀಡುವ ಸಲುವಾಗಿ ದತ್ತಿ ಸ್ಥಾಪಿಸಿರುವ ಶ್ರೀ ರಾಜನ್ ತುಮಕೂರು, ವೆಬ್‌ಸೈಟ್. ನಿರ್ವಹಣೆ ಮಾಡಲು ದತ್ತಿ ಸ್ಥಾಪಿಸಿರುವ ಡಾ. ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಗೆ ಸೂರ್ಯನಾಥ್ ಕಾಮತ್ ನೆನಪಿನ ಸೂರ್ಯ ಕೀರ್ತಿ ಪ್ರಶಸ್ತಿಗೆ ದತ್ತಿ ಸ್ಥಾಪಿಸಿರುವ ಶ್ರೀಮತಿ ಅರ್ಚನ ಎಸ್.ರಾವ್ ಅವರಿಗೆ ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಅವರ ಮಕ್ಕಳಾದ ಡಾ. ಎಂ. ಜಿ. ನಾಗರಾಜ್, ಶ್ರೀಮತಿ ಎಂ.ಜಿ. ಪದ್ಮವಿರೂಪಾಕ್ಷಯ್ಯ, ಡಾ. ಎಂ.ಜಿ. ಚಂದ್ರಕಾಂತ್ ಅವರುಗಳು 'ಸಂಶೋಧನ ಶ್ರೀ' ಪ್ರಶಸ್ತಿಗಾಗಿ ದತ್ತಿ ನೀಡಿದ್ದಾರೆ. ಪ್ರಾಗೈತಿಹಾಸಿಕ ಲೇಖನಕ್ಕೆ ಡಾ. ಎಂ.ಎಚ್. ಕೃಷ್ಣ ಮೆರಿಟ್ ಅವಾರ್ಡಗಾಗಿ ದತ್ತಿ ನೀಡಿರುವ ಪ್ರೊ. ಕೆ. ಪದ್ದಯ್ಯ ಪುಣೆ ಅವರಿಗೆ 'ನಾಯಕಶ್ರೀ' ಪ್ರಶಸ್ತಿಗೆ ದತ್ತಿ ನೀಡಿರುವ ಪ್ರೊ. ಲಕ್ಷ್ಮಣ ತೆಲಗಾವಿ ಧಾರವಾಡ ಅವರಿಗೆ, ಡಾ. ಶ್ರೀನಿವಾಸ ಹಾವನೂರ ನೆನಪಿನ ಪ್ರಶಸ್ತಿಗಾಗಿ ದತ್ತಿ ನೀಡಿರುವ ಡಾ. ಸಿ.ಆರ್. ಶ್ಯಾಮಲ ಅವರಿಗೆ, ಬಿ.ಸಿ. ಪಾಟೀಲ್ ಟ್ರಸ್ಟ್ ಕೊಪ್ಪಳ ಇವರು ಸ್ಥಾಪಿಸಿರುವ ಸುಮಂಗಲಾಪಾಟೀಲ್ ಅವರ ಹೆಸರಿನಲ್ಲಿ ಸ್ತ್ರೀಯರಿಗಾಗಿ ಕೊಡುವ ಪ್ರಶಸ್ತಿಗೆ ದತ್ತಿ ನೀಡಿರುವ ಶ್ರೀ ಸಿ.ಬಿ. ಪಾಟೀಲ್ ಅವರಿಗೆ ಈ ಮೇಲಿನ ಎಲ್ಲರಿಗೂ ಅಕಾದೆಮಿಯು ಅಭಾರಿಯಾಗಿದೆ. ಇತಿಹಾಸ ದರ್ಶನ ವಾರ್ಷಿಕ ಸಂಚಿಕೆಯ ಮುದ್ರಣಕ್ಕೆ ಆಶೀರ್ವಾದ ಪೂರ್ವಕವಾಗಿ ಪ್ರತಿವರ್ಷದಂತೆ ಈ ವರ್ಷವೂ (೨೦೧೭) ರೂ ೨೫.೦೦೦/– (ಇಪ್ಪತ್ತೈದು ಸಾವಿರ) ನೆರವು ನೀಡಿರುವ ಬಾಳೆಹೊನ್ನೂರಿನ ಶ್ರೀ ಮದ್ರಂಭಾಪುರಿ ಮಹಾಸಂಸ್ಥಾನದ ಜ. ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ. ಮಹಾಸ್ವಾಮೀಜಿ ಅವರಿಗೆ ಅಕಾದೆಮಿಯ ೩೧ನೇ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಸಮ್ಮೇಳನದ ಯಶಸ್ಸಿಗೆ ಕಾರಣರಾದ. ಎಸ್.ಜಿ.ವ್ಹಿ.ವ್ಹಿ. ಟ್ರಸ್ಟ್‌ನ ಶ್ರೀ ಗವಿಸಿದ್ದೇಶ್ವರ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಕೊಪ್ಪಳ, ಬಿ.ಸಿ. ಪಾಟೀಲ ಟ್ರಸ್ಟ್, ಕೊಪ್ಪಳ ಇಲ್ಲಿಯ ಆಡಳಿತಾಧಿಕಾರಿಗಳು ಹಾಗೂ ಇತರ ಕಾರ್ಯಕರ್ತರಿಗೂ ಅಕಾದೆಮಿಯು ಅಭಾರಿಯಾಗಿದೆ. ಕೊಪ್ಪಳದ ಗವಿಸಿದ್ದೇಶ್ವರ ಮಠದ, ಪರಮ ಪೂಜ್ಯ ಶ್ರೀ ಮ.ನಿ.ಪ್ರ.ಜ. ಶ್ರೀ ಗವಿಸಿದ್ದೇಶ್ವರ ಮಹಾ ಸ್ವಾಮಿಗಳು ಇವರ ಆಶೀರ್ವಾದವನ್ನು ಅಕಾದೆಮಿಯು ಕೃತಜ್ಞತೆಯಿಂದ ಸ್ವೀಕರಿಸಿದೆ.

ಇತಿಹಾಸದರ್ಶನ ಸಂಚಿಕೆಯ ೩೩ನೆಯ ಸಂಪುಟವನ್ನು ಸಂಪಾದಿಸಿ ಕೊಟ್ಟಿರುವ ಸಂಪಾದಕರಾದ ದೇವರಕೊಂಡಾರೆಡ್ಡಿ, ಜಿ.ಕೆ. ದೇವರಾಜಸ್ವಾಮಿ ಅವರಿಗೆ ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರಾದ ಶ್ರೀ ಕೆ.ಎಸ್. ಮಂಜು ಹಾಗೂ ಸಿಬ್ಬಂದಿ ವರ್ಗದವರಿಗೆ, ಇತಿಹಾಸ ದರ್ಶನ ಪ್ರಾರಂಭದಿಂದಲೂ ಅಂದವಾಗಿ ಡಿ.ಟಿ.ಪಿ. ಮಾಡುತ್ತಿರುವ ಸುಬ್ರಮಣ್ಯ ಅವರಿಗೆ ಹಾಗೂ ಶ್ರೀಮತಿ ಮಾಲಾ ಲಕ್ಷ್ಮೀ ಮುದ್ರಣಾಲಯ ಅವರಿಗೆ, ಅಕಾದೆಮಿಯ ಕೆಲಸಗಳಲ್ಲಿ ಸಹಾಯಮಾಡುತ್ತಿರುವ ಶ್ರೀ ಗುರುಪ್ರಸಾದ್ ಬಿ.ವಿ. ಡಾ. ಸಂಧ್ಯಾ ಶ್ರೀ ರಾಜಶೇಖರ್ ಕೆ.ಎಲ್. ಹಾಗೂ

ಶ್ರೀಮತಿ ನಿರ್ಮಲಾ ಎಸ್.ವೈ.., ಡಾ. ನಳಿನಿ, ಭಾರತಿ, ರೇಣುಕಸ್ವಾಮಿ ಒಡೆಯರ್ ಬಿ.ಈ. ಮುಂತಾಗಿ ಸಹಕರಿಸಿದ ಎಲ್ಲಾ ಸದಸ್ಯರಿಗೂ ಅಕಾದೆಮಿಯು ಆಭಾರಿಯಾಗಿದೆ,

ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ

ದೇವರಕೊಂಡಾರೆಡ್ಡಿ
ಅಧ್ಯಕ್ಷರು

ಎಂ.ಜಿ. ನಾಗರಾಜ್
ಎಚ್.ಎಸ್. ಗೋಪಾಲರಾವ್
ಉಪಾಧ್ಯಕ್ಷರುಗಳು

ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ

ಶ್ರೀ ಎಂ.ಬಿ. ಪಾಟೀಲ
ಕೋಶಾಧಿಕಾರಿ

ಶ್ರೀ ಕೆ.ಎಲ್. ರಾಜಶೇಖರ್
ಶ್ರೀಮತಿ ಸಂಧ್ಯಾ
ಕಾರ್ಯದರ್ಶಿಗಳು

ಕಾರ್ಯಕಾರಿ ಸಮಿತಿ ಸದಸ್ಯರುಗಳು

(೨೩.೧೦.೨೦೧೬ರಲ್ಲಿ ಆಯ್ಕೆಯಾದವರು)

ಅಧ್ಯಕ್ಷರು

ಡಾ॥ ದೇವರಕೊಂಡಾರೆಡ್ಡಿ

ಉಪಾಧ್ಯಕ್ಷರು

ಡಾ॥ ಎಂ.ಜಿ. ನಾಗರಾಜ್

ಡಾ॥ ಎಚ್.ಎಸ್. ಗೋಪಾಲರಾವ್

ಪ್ರಧಾನ ಕಾರ್ಯದರ್ಶಿ

ಪ್ರೊ. ಜಿ.ಕೆ. ದೇವರಾಜಸ್ವಾಮಿ

ಕಾರ್ಯದರ್ಶಿಗಳು

ಶ್ರೀ ಕೆ.ಎಲ್. ರಾಜಶೇಖರ್

ಶ್ರೀಮತಿ ಸಂಧ್ಯಾ ವಿ.

ಕೋಶಾಧ್ಯಕ್ಷರು

ಶ್ರೀ ಎಂ.ಬಿ. ಪಾಟೀಲ್

ಸದಸ್ಯರು

ಡಾ॥ ಎ.ಕೆ. ಶಾಸ್ತ್ರಿ, ಶಿರಸಿ

ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಶ್ರೀ ಪ್ರಭಾಕರ್ ಎಂ.ಎನ್., ಮೈಸೂರು

ಡಾ॥ ಅಮರೇಶ್ ಯತಗಲ್, ಬಿಜಾಪುರ

ಪ್ರೊ. ಮುರುಗೇಶಿ ಟಿ., ಉಡುಪಿ

ಡಾ॥ ಹನುಮಾಕ್ಷಿ ಗೋಗಿ, ಧಾರವಾಡ

ಶ್ರೀ ಬಸವರಾಜ್ ಟಿ.ಎಚ್.ಎಂ. ಬಳ್ಳಾರಿ

ಶ್ರೀ ಕಲ್ಲಪ್ಪ ಮಹದೇವಪ್ಪ ಗರಗ, ಗದಗ

ಶ್ರೀ ಸಿ.ಬಿ. ಪಾಟೀಲ, ಕೊಪ್ಪಳ

ಶ್ರೀ ಸಿದ್ದಗಿರಿ ಓ.ಎಲ್. ಚಂದ್ರೇಗೌಡ, ಚಿಕ್ಕಮಗಳೂರು

ಪ್ರೊ. ಲಕ್ಷ್ಮಣ್ ತೆಲಗಾವಿ, ಧಾರವಾಡ

ಡಾ॥ ಎಫ್.ಟಿ. ಹಳ್ಳಿಕೇರಿ, ಯಾದಗಿರಿ

ಡಾ॥ ಲಿಂಗರಾಜು, ಮಂಡ್ಯ

ಡಾ॥ ಚಂದ್ರಶೇಖರ್ ಎಚ್. ಬೆಂಗಳೂರು

ಶ್ರೀ ಸುಮತೀಂದ್ರ ನಾಡಿಗ್, ದಾವಣಗೆರೆ

ಶ್ರೀ ಗುರುಪ್ರಸಾದ್ ಬಿ.ಎಸ್., ಬೆಂಗಳೂರು

ಶ್ರೀ ಗುರುಶಾಂತಪ್ಪ ವಿ.ಪಿ., ಬೆಂಗಳೂರು

ಡಾ. ಎಸ್.ಕೆ. ಮೇಲಾಕಾರ, ಧಾರವಾಡ

ಶ್ರೀ ಇಷ್ಟಲಿಂಗ ಶಿರಸಿ, ಬಾದಾಮಿ

ಅಕಾದೆಮಿಯಲ್ಲಿ ಈವರೆಗೂ ಸ್ಥಾಪಿಸಿರುವ ದತ್ತಿಗಳ ವಿವರ

ಕ್ರಸಂ.	ದತ್ತಿನಿಧಿಯನ್ನು ನೀಡಿರುವವರ ವಿವರ/ದತ್ತಿಯ ವಿವರ	ದತ್ತಿ ನಿಧಿ ಮೊತ್ತ	ಪ್ರಾರಂಭದ ವರ್ಷ
1.	ಡಾ॥ ಬಾ.ರಾ.ಗೋಪಾಲ್ ನೆನಪಿನ ದತ್ತಿ ನಿಧಿ–ಶಾಸನ ತಜ್ಞರಿಗೆ	1,10,000	2001
2.	ಡಾ॥ ಅಭಿಶಂಕರ್ ಅವರ ನೆನಪಿನಲ್ಲಿ ನೀಡುತ್ತಿರುವ ಸಮ್ಮೇಳನಾಧ್ಯಕ್ಷರ ಸ್ಮರಣಿಕೆ ಮತ್ತು ಸನ್ಮಾನ	20,000	1998
3.	ಶ್ರೀ ಕೆ. ರಾಜನ್, ತುಮಕೂರು– ಪಿಎಚ್.ಡಿ ಪಡೆದ ವಿದ್ಯಾರ್ಥಿಗಳಿಗೆ ಉತ್ತೇಜನವಾಗಿ ನೀಡುವ ನಗದು ಬಹುಮಾನ	50,000	2014
4.	ಡಾ॥ ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿಯವರು ನೀಡಿರುವ ದತ್ತಿ (ವೆಬ್‌ಸೈಟ್‌ನ ವಾರ್ಷಿಕ ನಿರ್ವಹಣಾ ವೆಚ್ಚ ಬರಿಸಲು)	1,10,000	2016
5.	ಶ್ರೀಮತಿ ಅರ್ಚನ. ಎಸ್. ರಾವ್ ಅವರು ನೀಡಿರುವ ದಿ॥ ಡಾ॥ ಸೂರ್ಯನಾಥ್ ಕಾಮತ್ ಅವರ ನೆನಪಿನ 'ಸೂರ್ಯಕೀರ್ತಿ' ದತ್ತಿ ನಿಧಿ ಪ್ರಶಸ್ತಿ	50,000	2016
6.	ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಅವರ ಮಕ್ಕಳಾದ ಡಾ॥ ಎಂ.ಜಿ. ನಾಗರಾಜ್, ಶ್ರೀಮತಿ ಎಂ.ಜಿ. ಪದ್ಮ ವಿರೂಪಾಕ್ಷಯ್ಯ ಮತ್ತು ಡಾ॥ ಎಂ.ಜಿ. ಚಂದ್ರಕಾಂತ್ ಅವರುಗಳು ಸ್ಥಾಪಿಸಿರುವ "ಸಂಶೋಧನ ಶ್ರೀ" ಪ್ರಶಸ್ತಿ (ಶ್ರೇಷ್ಠ ಸಂಶೋಧಕರಿಗೆ ನೀಡುವ ಪ್ರಶಸ್ತಿ)	3,05,000	2016
7.	ಡಾ. ಕೆ. ಪದ್ದಯ್ಯ, ಪುಣೆ, 30ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರು ಇವರು ಸ್ಥಾಪಿಸಿರುವ 'ಡಾ॥ ಎಂ.ಎಚ್. ಕೃಷ್ಣ' ಮೆರಿಟ್ ಅವಾರ್ಡ್ ನಗದು ದತ್ತಿ ಪ್ರಶಸ್ತಿ (ಅತ್ಯುತ್ತಮ ಪ್ರಾಗೈತಿಹಾಸಿಕ ಲೇಖನಕ್ಕೆ)	30,000	2016
8.	ಬಿ.ಸಿ. ಪಾಟೀಲ ಟ್ರಸ್ಟ್ ಕೊಪ್ಪಳ, ಇವರು ಸ್ಥಾಪಿಸಿರುವ 'ಶ್ರೀಮತಿ ಸುಮಂಗಲಾ ಪಾಟಿಲ' ದತ್ತಿಪ್ರಶಸ್ತಿ (ಮಹಿಳಾ ಸಂಶೋಧಕರಿಗಾಗಿ)	1,00,000	2017
9.	ಡಾ. ಸಿ.ಆರ್., ಶ್ಯಾಮಲ ಅವರು ಸ್ಥಾಪಿಸಿರುವ 'ಡಾ. ಶ್ರೀನಿವಾಸ ಹಾವನೂರ' ಸ್ಮರಣಾರ್ಥ ದತ್ತಿ ಪ್ರಶಸ್ತಿ	1,40,000	2018
	ಒಟ್ಟು	**9,15,000**	

ದಿನಾಂಕ 11.10.2017ರಿಂದ 10.10.2018ವರೆಗೆ ದಾನಿಗಳ ಪಟ್ಟಿ


ಕ್ರ.ಸಂ.	ದಾನಿಗಳು	ಮೊತ್ತ ರೂ.
1.	ಶ್ರೀಮದ್ರಂಭಾಪುರಿ ಮಠ, ಬಾಳೆಹೊನ್ನೂರು	25,000
2.	ಶ್ರೀ ಟಿ.ಎಂ.ಎಚ್. ಬಸವರಾಜ್, ಬಳ್ಳಾರಿ	2000
3.	ಡಾ. ದೇವರಕೊಂಡಾರೆಡ್ಡಿ, ಬೆಂಗಳೂರು	7,500
4.	ಪ್ರೊ. ದೇವರಾಜ ಸ್ವಾಮಿ, ಬೆಂಗಳೂರು	7,500
5.	ಶ್ರೀಮತಿ ಕೆ. ಭಾರತಿ	20,000
6.	ಕ್ಷೇತ್ರ ಕಾರ್ಯಪ್ರವಾಸ ಕೈಗೊಂಡ ಸದಸ್ಯರಿಂದ, ಬೆಂಗಳೂರು	5,450
7.	ಎಸ್. ಸುಮಾ, ಬೆಂಗಳೂರು	4,300
8.	ಕೆ. ಎಸ್. ಮಂಜು, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು	20,000
	ಒಟ್ಟು	**91,750**

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಆಡಳಿತ ಮಂಡಲಿಯ ಸದಸ್ಯರು ೨೦೧೬–೨೦೧೯


ಡಾ॥ ಜಿ.ಎಸ್. ಧೀಕ್ಷಿತ್
ಗೌರವ ಅಧ್ಯಕ್ಷರು (೨೦೦೪ರ ವರೆಗೆ)


ಡಾ॥ ಸೂರ್ಯನಾಥ ಕಾಮತ್
ಗೌರವ ಅಧ್ಯಕ್ಷರು


ಡಾ॥ ದೇವರಕೊಂಡಾರೆಡ್ಡಿ
ಕಾರ್ಯಾಧ್ಯಕ್ಷರು


ಡಾ॥ ಎಂ.ಜಿ. ನಾಗರಾಜ್
ಉಪಾಧ್ಯಕ್ಷರು


ಡಾ॥ ಎಚ್.ಎಸ್. ಗೋಪಾಲರಾವ್
ಉಪಾಧ್ಯಕ್ಷರು



ಶ್ರೀ ಎಂ.ಬಿ. ಪಾಟೀಲ್
ಕೋಶಾಧ್ಯಕ್ಷರು


ಪ್ರೊ. ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ


ಶ್ರೀ ಕೆ.ಎಲ್. ರಾಜಶೇಖರ್
ಕಾರ್ಯದರ್ಶಿ


ಡಾ. ಶ್ರೀಮತಿ ಸಂಧ್ಯಾ. ವಿ
ಕಾರ್ಯದರ್ಶಿ

ಕಾರ್ಯಕಾರಿ ಸಮಿತಿ ಸದಸ್ಯರು


ಡಾ॥ ಎ.ಕೆ. ಶಾಸ್ತ್ರಿ
ಸಿರಸಿ


ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ
ರಾಯಚೂರು


ಶ್ರೀ ಪ್ರಭಾಕರ್ ಎಂ.ಎನ್.
ಮೈಸೂರು


ಡಾ॥ ಅಮರೇಶ್ ಯತಗಲ್
ಬಿಜಾಪುರ


ಪ್ರೊ. ಮುರುಗೇಶಿ ಓ.
ಉಡುಪಿ


ಡಾ॥ ಹನುಮಾಕ್ಷಿ ಗೋಗಿ
ಧಾರವಾಡ


ಶ್ರೀ ಟಿ.ಎಚ್.ಎಂ. ಬಸವರಾಜ
ಬಳ್ಳಾರಿ


ಶ್ರೀ ಕಲ್ಲಪ್ಪ ಮಹದೇವಪ್ಪ ಗರಗ
ಗದಗ


ಶ್ರೀ ಸಿ.ಬಿ. ಪಾಟೀಲ,
ಕೊಪ್ಪಳ


ಶ್ರೀ ಸಿದ್ದಗಿರಿ ಓ.ಎಲ್. ಚಂದ್ರೇಗೌಡ
ಚಿಕ್ಕಮಗಳೂರು


ಪ್ರೊ. ಲಕ್ಷ್ಮಣ್ ತೆಲಗಾವಿ
ಧಾರವಾಡ


ಡಾ॥ ಎಫ್.ಟಿ. ಹಳ್ಳಿಕೇರಿ,
ಹಂಪಿ


ಡಾ. ಲಿಂಗರಾಜು
ಮಂಡ್ಯ


ಡಾ. ಚಂದ್ರಶೇಖರ್ ಎಚ್.
ಬೆಂಗಳೂರು


ಶ್ರೀ ಸುಮತೀಂದ್ರ ನಾಡಿಗ್
ದಾವಣಗೆರೆ


ಶ್ರೀ ಗುರುಪ್ರಸಾದ್ ಬಿ.ಎಸ್.
ಬೆಂಗಳೂರು


ಶ್ರೀ ಗುರುಶಾಂತಪ್ಪ ವಿ.ಪಿ.
ಬೆಂಗಳೂರು


ಡಾ. ಎಸ್.ಕೆ. ಮೇಲಾಕಾರ
ಧಾರವಾಡ


ಶ್ರೀ ಇಷ್ಟಲಿಂಗ ಶಿರಸಿ
ಬಾದಾಮಿ

ಕರ್ನಾಟಕ ಇತಿಹಾಸ ಅಕಾದೆಮಿ(ರಿ.)

ಬೆಂಗಳೂರು

ಸಹಯೋಗ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು



ಐತಿಹಾಸಿಕ ಪರಂಪರೆ ಉಳಿಸಿ ಭಿತ್ತಿ ಪತ್ರ - 2018

ISBN : 978-81-921255-8-9

9 788192 125589

www.karnatakaitihasaacademy.org

karnatakaitihasaacademy25@gmail.com

itihasaacademy.blogspot.in